Reg. No. B. 1270

Monday June 7th, 1926.

ವರ್ಷ ೧೦

ಸಂಚಿಕೆ ೩೩

ಕಾನಡಾವೃತ್ತ.

THE KANARA NEWS.

ಪತ್ರದ ದರಗಳು.

ಮುಂಚಿಯಲ್ಲಿ ಆದಾವು ರೂಪಾಯಿ 2-4-0

ಹಿನೆಯಾರ್ದರಿಂದ ರೂ. 3-0-0.

ಅಂಚೆವೆಚ್ಚ ಸಹಿತ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ [illegible] (೧೫ ಎಳೆ ಸಾಲು) ಆ ಸಾಲುಗಳವರೆಗೆ ರೂ. 1-0- ಆ ಸಂಕ್ರ ಪ್ರತಿಸಾಲಿಗೆ 0-2-0. [illegible]

ಮುದ್ರಿಸಲ್ಪಡುವವು. [illegible] ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವವು

[illegible] ।
[illegible] ।

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

(ಕುಮಟಾ—ಕಾನಡಾವೃತ್ತ, ಸೋಮವಾರ, ತಾರಿಖು 2 ಮೂಹೆ ಜೂನ ಸನ್ ೧೯೨೬ ನೇ ಇಸವಿ.)

हिंदुस्थानातील रहिवाश्यांस ज्याप्रमाणे हिंदुस्थानची हवा मानवते त्याप्रमाणे हें औषध हिंदुस्थानातील लोकांस ज्यास्त फायदेशीर आहे

द्राक्षासव- [illegible] किंमत २ रुपये,

रामबाण औषधें

सर्दी नाहीशी करणारें,

भूक वाढविणारें

श्वासोच्छ्वास साफ करणारें,

झोंप आणणारें,

शक्ति देणारें,

तेजस्वीपणा आणणारें,

विश्वास करिकरि

कर्नाटकात मागवा,

संडुफार्मास्युटिकलवर्क्स लिमिटेड,

मुंबई नं. १३

एजंट— मेसर्स पंडित आणी कंपनी,

तीर्थहळ्ळी

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

[illegible]

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ ಎ,

ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ ಆಕಾರದ / ನಕ್ಷೆಯ / ಸಂಬಂಧಿತ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭,



[illegible] ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ [illegible] ನಿರ್ದೋಷ ಯಂತ್ರರಚನೆ !! [illegible] ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುವದೆ ಯಾವದೇ ಆಕಾರದ, ನಕ್ಷೆಯ ಸಂಬಂಧಿತ [illegible] ಬೆಲೆ ರೂಪಾಯಿ ೭ ಮಾತ್ರ !

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ.— Swan House: P B 603 P T Madras

ಅತ್ಯಲ್ಪವಿವೆ!

ಕೇವಲ

ಉಚಿತ

ಉಚಿತ

ಉಚಿತ

ಕೇವಲ

ಉಚಿತ

[illegible] ಗ್ಯಾರಂಟಿ [illegible] ಗಡಿಯಾರ [illegible]

ಬರೇ ರೂಪಾಯಿ ೫

[illegible] MADRAS

ಗಾಂಧೀ ಪೂರ್ಣಿಮೆಯಿಂದ ಹೊಸ ವರ್ಷ ಪ್ರಾರಂಭ।

ಸಚಿತ್ರ ಜಯಕರ್ನಾಟಕ ಮಾಸಪತ್ರಿಕೆ

ಸಂಪಾದಕ— ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಬಂಧ [illegible], ಜೀವನಚರಿತ್ರೆ ಮುಂತಾದವುಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಬರುತ್ತವೆ. ವರ್ಷದ ವರ್ಗಣಿ [illegible] ಪ್ರಕಾರದ ೩೦ [illegible] ವರ್ಗಣಿ ರೂ ೫-೮-೦

ವ್ಯವಸ್ಥಾಪಕ ಜಯಕರ್ನಾಟಕ, ಧಾರವಾಡ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ- ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ- ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ. ಪ್ರಯಾಣಿಕರಿಗೆ [illegible] ಸ್ಟೇಶನುಗಳಲ್ಲೂ ವಸತಿ ವ್ಯವಸ್ಥೆ ಮಾಡಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa
PROPRIETOR

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ [illegible], ಹಿತ [illegible], ಎಲ್ಲ ತರದ ಜ್ವರ, ಸ್ವಂಗಸ್ತ್ರೆ, ಬಿಳಿಸ್ರಾವ, [illegible], ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, [illegible] ಮೂಲವ್ಯಾಧಿ, ನರ, [illegible], ಕಣ್ಣಿನರೋಗ, [illegible], ಗರ್ಭಾಶಯದ ಎಲ್ಲ ರೋಗ ಪ್ರಮೇಹ, [illegible] ಬಾಲಗ್ರಹ [illegible], [illegible] ಜರ್ಮನ, ಅಮೇರಿಕನ, ಫ್ರೆಂಚ ಇಂಗ್ಲಿಷ [illegible] ಪೇಟೆಂಟ ಔಷಧಗಳು [illegible] ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ [illegible], [illegible] ಸ್ಪಿರಿಟ [illegible], [illegible], ಮೋಟರಿನ [illegible], [illegible] ಸಿಗುವವು ನಮ್ಮಲ್ಲಿದ್ದ [illegible] ಅವಶ್ಯಕ ಸಾಮಾನು [illegible]

ಎಸ್ ಎಲ್ ಧಾಕಪ್ಪ ಮತ್ತು ಬ್ರದರ.
ಶಿರಸಿ.

अगदीं फुकट.
वैद्यविद्या.

[illegible] आणि पूर्ण सुखाचा सरळ [illegible] "वैद्यविद्या" नावाचा मोठा आयुर्वेदीक पुस्तकाची नवीन आवृत्ति बाहेर पडली आहे. हे पुस्तक कींमत व पोष्ट खर्च घेतल्या शिवाय अगदीं फुकट पाठविण्यांत येते. तरी हे पुस्तक आजच मागवा.

प्रमेहावर रामबाण औषध.
मेहमर्दनचूर्ण.

हें चूर्ण फक्त तीन दिवस लागोपाठ घेतल्याने लघ्वीस होणारी आग, लघवी थांबून थांबून होणें व्याधि या औषधाच्या सेवनानें एकदम बरे होतात.

कि. १० तोळ्यांच्या डब्यास रु. १.

राजवैद्य नारायणजी केशवजी, जामनगर (काठेवाड).

कुमटा एजन्ट— माधव सांतप्पा शेणवी, बेलकेरी.

ರಾಗದ ಪೆಟ್ಟಿಗೆಗಳು

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಕೈಪೆಟ್ಟಿಗೆ ಕಿಂ. [illegible]
೨. [illegible] ಕಾಲು ಪೆಟ್ಟಿಗೆ ಕಿಂ. [illegible]
೩. ತಬಲೆ ಜೋಡಿ ಕಿಂ. [illegible]
೪. ಹಾರ್ಮೋನಿಯಮ [illegible] ಕಿಂ [illegible] ತಬಲೆ [illegible] ಕಿಂ. [illegible]

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ [illegible] ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:— ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ ೨೬೩ ಕಾಳಬಾದೇವಿ ಮುಂಬಯಿ

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರಿಷ್ಟಮಧು.

[illegible] ಮತ್ತು ಧಾತುವೃದ್ಧಿಕಾರಕ.

ಈ [illegible] ಬಹಳ [illegible] ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು [illegible] ಕೂಡ ಅರ್ಧ ಗಂಟೆಯಂತೆ ಪ್ರವರ್ಧಮಾನವಾಗುವದು. ನಿಜವಾದ [illegible] ಅನುಭವಕ್ಕೆ ಬರುವದು. [illegible] ಶಕ್ತಿಯು [illegible] ಉಲ್ಲಸಿತವಾಗುವದು. [illegible] ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ [illegible] ಒಂದಾಗುವದು— [illegible] ಶರೀರವು [illegible] ದಿವಸದಲ್ಲಿ [illegible] ಸ್ತ್ರೀಪುರುಷರು ಈ ದ್ರಾಕ್ಷಾರಿಷ್ಟ ಮಧುವಿನ ಸೇವನ ಮಾಡಿ [illegible] ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು [illegible] ದಿವಸದಲ್ಲಿ [illegible] ಅನ್ನ ಪಚನವಾಗಿ [illegible] ಹಸಿವೆ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. [illegible] ಎಷ್ಟೇ ದಿವಸದ [illegible] ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. [illegible] ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. [illegible] ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ [illegible] ಬಾಟಲಿಗಳ ಕಿಮ್ಮತ್ತು [illegible] ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ [illegible] ಬೀಳುವದಿಲ್ಲ. [illegible] ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. [illegible] ಬೇರೆ ಬೀಳುವದು. [illegible] ಬಾಟ್ಲಿಗೆ ೧—೦ [illegible] ಬಾಟ್ಲಿಗೆ [illegible] ೧೩೯—೦

ವ್ಯವಸ್ಥಾಪಕ— ದ್ರಾಕ್ಷಾರಿಷ್ಟಮಧು ಆಫೀಸ, ಪೋ. [illegible], ಜಿ. [illegible]

ಪುರುಷಾರ್ಥ.

ಎರಡು ಚಿತ್ರಗಳು.

(೨)

[ಅನುವಾದಕ:— ಅಜ್ಞಾತ.]

ಹಿಂದಿನ ಸಂಚಿಕೆಯಲ್ಲಿ ಪುರುಷಾರ್ಥದ ಪಾಶ್ಚಾತ್ಯ ಚಿತ್ರವು ವರ್ಣಿಸಲ್ಪಟ್ಟಿತ್ತು. ಇಂದಿಗೆ ಅರ್ವಾಚೀನ ಭಾರತ ದೇಶದಲ್ಲಿ ಸಂಭವಿಸಿದ ಒಂದು ಚಿತ್ರವನ್ನು ಕೊಡುತ್ತೇನೆ. ಎರಡು ಚಿತ್ರಗಳ ಸಾರಾಂಶವನ್ನು ಸಂಕ್ಷಿಪ್ತವಾಗಿ ಹೇಳಬಹುದು. ಪಾಶ್ಚಾತ್ಯ ಪುರುಷಾರ್ಥದ ಚಿತ್ರವು ಪಾಶ್ಚಾತ್ಯ ಯಜ್ಞದ ಒಂದು ಮಾದರಿಯು. ಪಾಶ್ಚಾತ್ಯರಲ್ಲಿ ಮುಖ್ಯವೆಂದರೆ *Bread labour* ಎಂದರೆ ಹೊಟ್ಟೆಗಾಗಿ ಕಾಯಕಷ್ಟ ಮಾಡುವರು. ನಮ್ಮಲ್ಲಿಯ ಪುರುಷಾರ್ಥ ಚಿತ್ರದಲ್ಲಿ ಶ್ರೀಮದ್ಭಗವದ್ಗೀತೆಯೊಳಗಿನ ಯಜ್ಞದ ಕಲ್ಪನೆಯು ಪ್ರತಿಬಿಂಬಿತವಾಗಿದೆ. ಕೌಂಟ್ ಟಾಲ್‌ಸ್ಟಾಯ್‌ರವರು "ನ್ಯಾಯವಾಗಿ ದುಡಿದು ಹೊಟ್ಟೆ ತುಂಬಿಕೋ" ಎಂಬ ಕ್ರಿಸ್ತನ ಉಪದೇಶವನ್ನೇ ವಿವರಿಸುತ್ತಾರೆ. ಕಾಯಕಷ್ಟ ಮಾಡದ ಹೊರತು ಮಾನವನಿಗೆ ರೊಟ್ಟಿ ತಿನ್ನುವ ನ್ಯಾಯ್ಯ ಹಕ್ಕು ಪ್ರಾಪ್ತವಾಗುವದಿಲ್ಲೆಂಬ ಸಿದ್ಧಾಂತವನ್ನು ಇವರು ರಚಿಸಿದ್ದಾರೆ. ನಮ್ಮಲ್ಲಿಯಾದರೋ, ಶ್ರೀಮದ್ಭಗವದ್ಗೀತೆಯು ಯಜ್ಞದ ವ್ಯಾಪ್ತಿಯನ್ನು ಹೆಚ್ಚಾಗಿ ಬೆಳೆಸಿದೆ. ಬರೇ ತನ್ನ ಹೊಟ್ಟೆಗಾಗಿ ಶರೀರವನ್ನು ದಣಿಸುವದಷ್ಟೇ ಯಜ್ಞವಲ್ಲ, ಪರರಿಗಾಗಿ ತನ್ನ ಶರೀರವನ್ನು ದಣಿಸುವದೇ ಯಜ್ಞವೆಂದು ಗೀತೆಯು ಉಪದೇಶಿಸುತ್ತದೆ. ಇದೇ ಶ್ರೇಷ್ಠ ಕಾರ್ಯವೆಂದೂ ಎಣಿಸಲ್ಪಟ್ಟಿದೆ. ನಾನೀಗ ಬಣ್ಣಿಸಲಿಚ್ಛಿಸುವ ಪುರುಷಾರ್ಥದ ಚಿತ್ರವು ಉಚ್ಚತರಗತಿಯ ಯಜ್ಞದ ಮಾದರಿಯು. ಕಳೆದ ಸಂಚಿಕೆಯಲ್ಲಿ ವ್ಯಾಪಾರ ನಡಿಸುವವನು ಸ್ವಂತ ಉದ್ಯೋಗ ಮಾಡುತ್ತಿರುವಾಗಲೇ ವಕೀಲಿಯ ಅಭ್ಯಾಸ ನಡಿಸಿದನು; ಸಾವಿರಾರು ಪೌಂಡು ಸಂಪತ್ತನ್ನು ಗಳಿಸಿದನು, ಜನತೆಗೆ ನೆರವಾದನು; ಮುಂತಾದ ಹಕೀಕತು ಹೇಳಲ್ಪಟ್ಟಿದೆ. ಪುರುಷಾರ್ಥದ ಎರಡನೇ ಚಿತ್ರದಲ್ಲಿ ಸಾವಿರಾರು ರೂಪಾಯಿ ಗಳಿಸುವ ಅಭಿಲಾಷೆಯು ನಿಮಗೆ ಕಾಣದು; ವಕೀಲ ಅಥವಾ ಬ್ಯಾರಿಸ್ಟರನಾಗುವ ವಿಚಾರವೂ ಇರುವದಿಲ್ಲ. ಆದರೆ, ನಮ್ಮಲ್ಲಿಯ ಪುರುಷಾರ್ಥಿಗೆ ಪರೋಪಕಾರ ಪ್ರವೃತ್ತಿಯನ್ನೇ ಪರಮಾವಧಿಗೆ ಮುಟ್ಟಿಸಿ ಎಲ್ಲಿಯೂ ತನಗೆ ಪರೋಪಕಾರದ ಹೊಗಳಿಕೆಯನ್ನಾಕ್ರಮಿಸಬಹುದೆಂಬುದನ್ನು ಸ್ವಾನುಭವದಿಂದ ಸಿದ್ಧ ಮಾಡಿ ತೋರಿಸುವದಿತ್ತು. ಆತನು ನಾಟಕ ನೋಡುವವನಲ್ಲ; ಮಹಾಬಲೇಶ್ವರ, ಕಾಶ್ಮೀರ ಇತ್ಯಾದಿ ಪ್ರವಾಸ ಕೈಕೊಳ್ಳುವವನಲ್ಲ; ಶ್ರೀಮಂತನು ಸ್ವತಃ ತುಂಬಿಕೊಳ್ಳ ಹಣ ಕಳಿಸುವವನಲ್ಲ; ಬಡವ, ದೀನನು. ಅನಾಥರಾದ ಬಡಬಗ್ಗರಿಗೋಸ್ಕರ ಲಕ್ಷಾವಧಿ ಗಜ ನೂಲು ನೂತು ರಾಷ್ಟ್ರೀಯ ಮಹಾಸಭೆಗೆ ಅರ್ಪಿಸಲು ಆತನು ಸಂಕಲ್ಪ ಮಾಡಿದ್ದನು.

ಮಾನ್ಯರಾದ ಶ್ರೀ ಜವೇರಭಾಯಿಯವರು ೧ ವರುಷದವರೆಗೆ ಸತತವಾಗಿ ನೂಲು ತೆಗೆಯುವೆನೆಂದು ಮಹಾಯಜ್ಞವನ್ನು ಮುಗಿಸಿದರು. ಈಗ ಅನೇಕ ವಿಚಾರಗಳೂ, ಅನೇಕ ಪ್ರಶ್ನೆಗಳೂ ನನಗೆ ಸೂಚಿಸಿದವು. ಇಂಗ್ಲಿಷ ರಾಜ್ಯವನ್ನು ನಿಯಮಿತ ಅವಧಿಯೊಳಗೆ ಕಿತ್ತಿಹಾಕುವವನಿಗೆ ಅಥವಾ ಆಕಾಶಯಾನದಲ್ಲಿ ಹಾರಿಕೊಂಡು ಪ್ರವಾಸ ಮಾಡುವವನಿಗೆ ಯುರೋಪ ಖಂಡದೊಳಗಿನ ವರ್ತಮಾನ ಪತ್ರಕರ್ತರು ಗಂಟುಬಿದ್ದು ತರತರದ ಪ್ರಶ್ನೆಗಳನ್ನು ಮಾಡುವಂತೆ, ನಾನಾದರೂ ಶ್ರೀ ಜವೇರಭಾಯಿಯವರಿಗೆ ಭೆಟ್ಟಿಯಾಗಿ ಯಜ್ಞದ ಕುರಿತು ಪ್ರಶ್ನೆ ಕೇಳಬೇಕೆಂದು ನನಗನಿಸಿತು. ಈ ವಿಚಾರದಿಂದ ಶ್ರೀ ಜವೇರಭಾಯಿಯವರಿಗೆ ನಾನು ಅನೇಕ ಪ್ರಶ್ನೆಗಳನ್ನು ಬರೆದು ಕಳುಹಿಸಿದೆನು. ಅವುಗಳಿಗೆ ಅವರು ವಿವರವಾಗಿ ಉತ್ತರ ಕಳುಹಿದರು. ಅವನ್ನೇ ಇಲ್ಲಿ ಪ್ರಶ್ನೋತ್ತರರೂಪದಿಂದ ಕೊಟ್ಟಿರುವೆನು:—

"ತಮಗೀ ಯಜ್ಞದ ವಿಚಾರವು ಎಲ್ಲಿಂದ ಬಂತು?"

"೧೯೨೪ನೇ ಬೆಳಗಾವಿಯಲ್ಲಿ ಜರುಗಿದ ಮಹಾಸಭೆಯ ಅಧಿವೇಶನದ ಕಾಲಕ್ಕೆ ೩ ದಿನ ನಮ್ಮ ಕಾಲೆಯು ಅಸಹ್ಯವಾದವನ್ನು ಮಾಲಿಸಿತ್ತು. ಆ ದಿನಗಳಲ್ಲಿ ನಾನು ನೂಲುವ ಪ್ರಯೋಗಗಳನ್ನು ಪ್ರಾರಂಭಿಸಿದೆನು. ಸರಾಸರಿಯಾಗಿ ದಿನಾ ೩೦೦೦ ಗಜ ನೂಲು ತಯಾರಾಯಿತು. ಇದನ್ನೇ ೧ ತಿಂಗಳ ತನಕ ನಡಿಸಬೇಕೆಂದು ನನಗೆ ತೋರಿತು. ೧ ತಿಂಗಳು ಮುಗಿದ ಬಳಿಕ, ೧ ವರ್ಷದ ತನಕ ಯಜ್ಞ ನಡಿಸುವ ವಿಚಾರವಾಯಿತು."

"ಒಂದು ವರ್ಷದ ವರೆಗೆ ತಾವು ಈ ಯಜ್ಞವನ್ನು ಅಖಂಡವಾಗಿ ನಡಿಸಿದಿರಿ; ಇದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿದೆ! ಈ ಯಜ್ಞ ನಡೆದಿರುವಾಗ ನಿಮ್ಮ ನಿತ್ಯ ವ್ಯವಹಾರದ ವ್ಯವಸ್ಥೆಯು ಹ್ಯಾಗಿತ್ತು? ಇದೇ ಅವಧಿಯಲ್ಲಿ ಇದಕ್ಕೇನೂ ವಿಘ್ನ ಬರಲಿಲ್ಲವೋ?"

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಉದ್ದವಾದ, ಗುಂಗುರು ಗುಂಗುರಾಗಿರುವ ನೀಲಿವರ್ಣದಿಂದ ನಿಬಿಡವಾದ ಕೇಶವು ಯಾವ ನಾರಿಯು ತಾನೇ ಬಯಸಲೊಲ್ಲಳು? ಹೀಗಿದ್ದ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ, ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವದೆಯೋ ಹಾಗೆಯೇ ಮಾನಸಿಕ ಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತದೆ. ಈ ಆಯಿಲ್ ಹಚ್ಚಿಕೊಳ್ಳುವದರಿಂದ ತಲೆ ತಂಪಾಗಿ ನೆನಪು ಚನ್ನಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತದೆ. ಕೂದಲುಗಳು ಅದನು ತಲೆಯ ತೊಳೆದ ಬಳಿಕ ಎಂದಿಗೂ ಜಿಗುಟುಬಿದ್ದು ಹೋಗಲಾರವು, ಅದರೆ, ಅವು ಮೃದುವಾಗಿ ಬೆಳೆದು ದಪ್ಪವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಾರೆ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ೩,ಸಾರ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ ಅನೇಕ ಸಾವಿರಾರು ಗೃಹಸ್ಥರು ಉಪಯೋಗಿಸುವಾದ ಶಿಫಾರಸು ಪತ್ರಗಳೂ ದೊರಕಿವೆ

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10 0 ವಿ. ಪಿ. ಖರ್ಚ 0-14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಲ್ಪಟ್ಟಿದೆ. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ವಿಶೇಷ ಮನಸ್ಸನ್ನು ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ ಮಿಡಿಯಂ ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co**

16, Market, **BOMBAY 2**

«ಅಖಂಡವೆಂದು ಹೇಳಲಿಕ್ಕಾಗದು. ಅಂತು ೧೬ ತಿಂಗಳು ಯಜ್ಞವನ್ನು ನಡಿಸಿದೆನು. ಪ್ರಯೋಗಕ್ಕಾಗಿ ೧ ತಿಂಗಳು ಆಗಲಿದ್ದರಿಂದ ಯಜ್ಞವನ್ನು ೭ ತಿಂಗಳು ಹೆಚ್ಚು ನಡಿಸಿದೆನು. ಆರಂಭದಿಂದ ತಿಂಗಳಲ್ಲಿ ಎಲ್ಲಿಯಾದರೂ ಒಂದು ದಿನ ಪರಊರಿಗೆ ಹೋಗಬೇಕಾಗುತ್ತಿತ್ತು. ಇದರ ಲೆಕ್ಕವು ಸರಿ ಇಡಲ್ಪಟ್ಟಿದೆ. ಪ್ರವಾಸ ಹಾಗು ರೋಗಗಳ ಕಾರಣ ಅಧಿಕ ವರುಷದಲ್ಲಿ ೪೪ ದಿನ ಸಂಕಲ್ಪದಂತೆ ನನ್ನಿಂದ ನೂಲಲಾಗಲಿಲ್ಲ. ಆದರೂ, ದಿನಾ ಕೆಲವು ನಿಮಿಷ ವೇಳೆಯಲ್ಲಿ ನಾನು ನೂತಿದ್ದೇನೆ. ಮಂಚಕ್ಕೆ ಹಿಡಿದಾಗ ಸ್ವಲ್ಪ ಸಿಗದಿದ್ದರೆ, ಹಾಸಿಗೆಯ ಮೇಲೆ ನೂತೆನು. ೪ ದಿನ ಹೊಲಗೆಲಸ ಬಿಟ್ಟು, ಬಿತ್ತನೆ, ಕೊಯ್ಲು, ಒಕ್ಕಲು ಇವುಗಳ ಮೂಲಕ ಈ ದಿನಗಳಲ್ಲಿ ಸ್ವಲ್ಪವಾಗಿ ನೂತೆನು.

«ತಾವಾದರೋ ಲೆಕ್ಕವನ್ನು ನಿರಂತರವಾಗಿ ಇಟ್ಟಿರುತ್ತೀರಿ. ಹೀಗೆ ನಿಯಮಿತವಾಗಿ ನಡಿಸುವ ಕಾಲಕ್ಕೆ ಎಂದಾದರೂ ಅಸ್ವಸ್ಥರಾಗಲಿಲ್ಲವೋ?"

«೧೩ ತಿಂಗಳುಗಳಲ್ಲಿ ಒಟ್ಟು ೩ ದಿನ ಜ್ವರವು ನನ್ನ ಬೆಟ್ಟಿಗೆ ಬಂದಿತ್ತು. ಆದರೂ, ಆ ಸಮಯ ದಿನಾ ೩ ತಾಸು ನೂತಿರುವೆನು."

«ಇದಾದರೋ, ತಮ್ಮ ನೂಲುವ ವೇಗವೆಷ್ಟು ಸರಾಸರಿ ತೆಗೆದರೆ, ದಿನಾ ೩-೪ ಸಾವಿರ ಗಜ ನೂಲು. ನೂತಂತಾಗುತ್ತದೆ. ಅಂದ ಮೇಲೆ ದಿನಾಲು ೧೦ ತಾಸಾದರೂ ತಾವು ನೂಲುತ್ತಿರಬೇಕು, ತಮಗೆ ಬೇರೆ ಉದ್ಯೋಗಗಳಿಲ್ಲವೇ? ಅದರ ಮಾಹಿತಿ ಕೊಡುವಿರಾ?"

«ಸಂತೋಷವೇ ಸರಿ, ನನ್ನ ಶಾಲೆಯಂತು ಇದೆ. ಹೊಲಗೆಲಸದ ಸಂಗತಿಯನ್ನು ಹೇಳಿದೆನಷ್ಟೆ. ಹಾಗೆ ಮನೆ ನೂಲುವದಕ್ಕೋಸ್ಕರ ಹತ್ತಿ ಅರಿಯುವ ಹಿಂಜುವ, ಹಂಜಿ ಮಾಡುವ ಕೆಲಸವನ್ನೆಲ್ಲ ನಾನೇ ಮಾಡುತ್ತೇನೆ. ದಿನಾ ೬ ತಾಸು ಶಾಲೆ ನಡೆಯುತ್ತದೆ. ವಾರದಲ್ಲಿ ೧ ದಿವಸ ರಜೆ ಹಬ್ಬ ಮುಂತಾದವುಗಳ ಬಗ್ಗೆ ಇದೇ ವರ್ಷದಲ್ಲಿ ಇನ್ನು ೩೯ ದಿನ ರಜೆ ಸಿಗುತ್ತದೆ. ಬೇಸಿಗೆಯ ರಜೆ ಮುಂತಾದ ಸೂಟಿಗಳು ನಮ್ಮ ಶಾಲೆಯಲ್ಲಿ ಕೊಡುವದಿಲ್ಲ. ಹಳ್ಳಿಗರಿಗೆ ತಿಂಗಳುಗಟ್ಟಲೆ ರಜೆಗಳು ಸಮ್ಮತವಿರುವದಿಲ್ಲ."

«ನೂಲುವದಕ್ಕೆ ದಿನಾ ಸರಾಸರಿ ೧೦ ತಾಸು. ಶಾಲೆಗೆ ೬ ತಾಸು. ಹೀಗೆ ೧೬ ತಾಸು ಕಳೆದವು, ಅಂದ ಮೇಲೆ ಶೌಚ, ಸ್ನಾನ, ಊಟ, ನಿದ್ರೆ, ಅಭ್ಯಾಸ, ಪತ್ರ ಮುಂತಾದವುಗಳ ಬಗ್ಗೆ ಸಮಯ ಸಿಕ್ಕುವದೆಂತು? ನನಗೆ ತೋರುವದಿಲ್ಲ. ಹತ್ತಿ ಅರಿಯುವದು ಹಿಂಜುವದು ಮುಂತಾದ ಕೆಲಸಗಳನ್ನು ತಾವೇ ಮಾಡುತ್ತೀರೆಂದು ಹೇಳಿದ್ದರಿಂದ ಇದೆಲ್ಲ ಕೇಳಿ ಮನುಷ್ಯನು ಚಕಿತನಾಗುತ್ತಾನೆ."

«ಹೌದು, ಇದೇನು ಅಸಾಧ್ಯವಾದ ಮಾತಲ್ಲ. ಬೇರೆ ಕೆಲಸ ಇದ್ದಾಗ ನೂಲುವ ಕೆಲಸವು ಸ್ವಲ್ಪ ಕಡಿಮೆ ಆಗುತ್ತದೆ. ಮೇಲೆ ಹೇಳಿದ ಮುಂತಾದವುಗಳಿಗಾಗಿ ಎಷ್ಟು ಹೊತ್ತು ಹೋಗುತ್ತದೆಂಬುದನ್ನು ಬರೆದು ತಿಳಿಸುವೆನು. ಹೊಲದಲ್ಲಿ ಹತ್ತಿ ಬಿಡಿಸುವ ಮುಂತಾದವುಗಳ ಬಗ್ಗೆ ಕೊಡುತ್ತೇನೆ. ಶಾಲೆಗೆ ಅದೇ ದಿನ ರಜೆಯಿದ್ದಾಗ ನಾನು ಹತ್ತಿ ಬಿಡಿಸುತ್ತೇನೆ. ಬೆಳಗಿನ ೪ ಘಂಟೆಗೆ ಎದ್ದು ೬ ಘಂಟೆಗೆ ಹೊಲಕ್ಕೆ ಹೋಗುತ್ತೇನೆ. ಅದರ ಮುಂದೆ ಹತ್ತಿ ಬಿಡಿಸಿಕೊಂಡು ಮಧ್ಯಾಹ್ನ ೧೨ ಘಂಟೆಗೆ ತಿರುಗಿ ಬರುತ್ತೇನೆ. ಹೀಗೆ ಮಾಘ-ಫಾಲ್ಗುಣ ೨ ತಿಂಗಳುಗಳಲ್ಲಿ ನನಗೆ ಬೇಕಾಗುವಷ್ಟು (೩೦೦ ಪೌಂಡು) ಹತ್ತಿಯನ್ನು ನಾನು ಹೊಲದಲ್ಲಿ ಬಿಟ್ಟಿದೆನು. ಹೀಗೆ ಹೊತ್ತು ಹೋಗಿ ನೂಲುವ ಕೆಲಸವು ಕಡಿಮೆಯಾಗಿದೆ. ನಿಜ. ಮಾಘ ಮಾಸದಲ್ಲಿ ಕೆಲವು ದಿನ ೪೧ ಸಾವಿರ ಗಜ ನೂತರೆ ಕೆಲವು ದಿನ ೩ ಸಾವಿರ ಗಜ ಅಥವಾ ಇದಕ್ಕೂ ಕಡಿಮೆ. ನೂಲುತ್ತಿದೆ. ಹಿಂದಿನ ತಿಂಗಳೂ ನೂಲುವ ಕೆಲಸವು ಕಡಿಮೆಯಾಗಿತ್ತು. ಮಾಘ-ಫಾಲ್ಗುನ-ಚೈತ್ರ ಮಾಸಗಳಲ್ಲಿ ಹಿಂಜುವ ಕೆಲಸವನ್ನು ತೀರಿಸಿಕೊಂಡೆನು. ಹತ್ತಿಗೆಯ ನನಗೆ ಹಂಜೆಯನ್ನು ಸುತ್ತಿಕೊಡುತ್ತಿದ್ದಳು. ಪ್ರೌಢವಯಸ್ಕಳಾದರೂ ಮುಗಿದ ಬಳಿಕ, ನಾನು ಭರದಿಂದ ನೂಲುತ್ತಿದ್ದೆನು. ತಿಂಗಳಿಗೆ ೧ ಲಕ್ಷ ಗಜಕ್ಕಿಂತ ಹೆಚ್ಚು ನೂತಿದ್ದೇನೆ. ೧೩ ತಿಂಗಳುಗಳಲ್ಲಿ ೧೧,೧೧,೮೩೫ ಗಜ ನೂಲು ನೂತೆನು. ೮ ಲಕ್ಷ ಗಜ ನೂಲನ್ನು ರಾಷ್ಟ್ರೀಯ ಸಭೆಗೆ ಅರ್ಪಿಸಿದೆನು. ಉಳಿದ ನೂಲನ್ನು ನನಗಾಗಿ ಇಟ್ಟುಕೊಂಡೆನು."

«ಇವೆಲ್ಲ ಹಕೀಕತು ಬಹಳ ಚಮತ್ಕಾರಿಕವಿದೆ. ಇದರ ಮೇಲಿಂದ ಇನ್ನೂ ಕೇವಲ ಪ್ರಶ್ನೆ ಕೇಳಬೇಕೆಂದು ಎನಿಸುತ್ತದೆ. ಅಂತರಾತ್ಮನ ಶಾಂತಿಗಾಗಿ ಸಮಯವನ್ನಿಟ್ಟದ್ದು ಕಾಣುವದಿಲ್ಲವಲ್ಲ!"

«ಹೌದು, ನನ್ನ ಅಂತರಾತ್ಮನು ಅಖಂಡವಾಗಿ ಸಮಾಧಾನದಿಂದಿದ್ದನು. ೩-೪ ತಿಂಗಳ ತನಕ ನನ್ನ ಹೆಂಡತಿಯು ಊರಲ್ಲಿದ್ದಿಲ್ಲ. ಆಗ ನಾನು ಹಾಲು-ರೊಟ್ಟಿ ತಿಂದು ಬಾಳಿಕೊಂಡೆನು. ಹಗಲಿಗೆ ೩ ಸಾರೆ ತಿನ್ನುತ್ತಿದ್ದೆನು. ಬೇಕಾದಷ್ಟು ಹಿಟ್ಟನ್ನು ನಾನೇ ಬೀಸಿಕೊಳ್ಳುತ್ತಿದ್ದೆನು. ಹೆಂಡತಿಯು ಬಂದ ಬಳಿಕ ನಾನು ಇತರ ಜನರು ತಿನ್ನುವ ಆಹಾರ ತಿನ್ನುತ್ತಿದ್ದೆನು. ಸಾಯಂಕಾಲದಲ್ಲಿ ಲಘು ಭೋಜನವನ್ನು ಮಾಡುತ್ತಿದ್ದೆನು. ಆರೋಗ್ಯ ದೃಷ್ಟಿಯಿಂದ ಇದು ಶ್ರೇಷ್ಠ ಇರಬೇಕು. ಇದರಿಂದ ರಾತ್ರಿ ಗಾಢವಾದ, ಸ್ವಸ್ಥವಾದ ನಿದ್ರೆ ಬರುತ್ತಿತ್ತು. ನಾನು ನಿಯಮಿತವಾಗಿ ದಿನಾ ೧೦೦ ಸೂರ್ಯನಮಸ್ಕಾರ, ೨೦೦ ಬೈಠಕ, ೫-೬ ಪ್ರಕಾರದ ದಂಡಿಯ ವ್ಯಾಯಾಮ, ಹೀಗೆ ವ್ಯಾಯಾಮ ಮಾಡುತ್ತಿದ್ದೆನು. ಹೊಲಗೆಲಸಗಳಲ್ಲಿ ತೊಡಗಿದಾಗ ವ್ಯಾಯಾಮ ಮಾಡುತ್ತಿದ್ದಿಲ್ಲ. ಅಸ್ವಸ್ಥನಿದ್ದಾಗ, ಉಪವಾಸ ಮಾಡಿ ನಾನು ೩ ತಾಸು ನೂಲುತ್ತಿದ್ದೆನು."

«ಹಾಗಾದರೆ, ತಮ್ಮ ದಿನ ಚರ್ಯೆಯ ಕ್ರಮವನ್ನು ನನಗೆ ಸ್ವಲ್ಪ ಹೇಳುವಿರಾ?"

«ಪ್ರತಿಕಾಲ ೩-೪ ಘಂಟೆಗೆ ಏಳುತ್ತೇನೆ. ರಾತ್ರಿ ಕೆಲಸ ಮುಗಿಸುತ್ತೇನೆ. ಶಾಲೆಗೆ ಹೋಗುವ ಮುಂಚೆ ೬೦೦ ಗಜ ನೂಲುತ್ತೇನೆ. ಮಧ್ಯಾಹ್ನದಲ್ಲಿ ಶಾಲೆ ಬಿಟ್ಟ ಮೇಲೆ ಮನೆಗೆ ಬಂದು ಹತ್ತಿ ಹಿಂಜುತ್ತೇನೆ. ಹಿಂಜುವದಿಲ್ಲದಿದ್ದರೆ ೧೫೦೦ ಗಜ ನೂಲುತ್ತೇನೆ. ಶಾಲೆ ಮುಗಿದ ಬಳಿಕ ೧೫೦೦ ಗಜ ನೂಲುತ್ತೇನೆ. ಶಾಲೆಯ ಕೆಲಸ ೬ ತಾಸು, ೩ ತಾಸು ನಿದ್ರೆ, ೧ ತಾಸು ವ್ಯಾಯಾಮ, ೮ ತಾಸು ನೂಲುವ ಕೆಲಸ, ೨ ತಾಸು ಸ್ನಾನ, ಊಟ ಇತ್ಯಾದಿ. ರಜೆಯ ದಿನಗಳಲ್ಲಿ ಶಾಲೆಯಿಲ್ಲದಿದ್ದರೆ, ಹಿಂಜುವ ಕೆಲಸವಿಲ್ಲದಿದ್ದಾಗ ೧೨ ತಾಸು ನೂಲುತ್ತಿದ್ದೆನು. ವರ್ಷಾದಲ್ಲಿ ೩ ದಿನ ನಾನು ಸಾವಿರಾರು ಗಜ ನೂಲಬೇಕಾದ ಸಂಕಲ್ಪವನ್ನು ನಾನು ತಾಳ್ಮೆಯಿಂದ ನಡಿಸಿಕೊಳ್ಳುತ್ತಿದ್ದೆ. ಉತ್ತಮ ಪ್ರತಿಯ ೧೩ ಕಾಲಗಳ ನನ್ನ ಬಳಿ ಸಿದ್ಧವಿದ್ದವು. ನೂಲುವ ಗತಿಯು ತಾಸಿಗೆ ೪೦೦ ಗಜವಿತ್ತು. ಒಮ್ಮೊಮ್ಮೆ ೫೦೦-೬೦೦ ಗಜ ವೇಗದಿಂದ ನೂತದ್ದೂ ಉಂಟು. ಗಾಂಧಿಜಯಂತಿಯ ದಿನ ಒಂದೇ ಸಲ ೨೨ ತಾಸಿನ ವರೆಗೆ ನೂತು ೮ ಸಾವಿರ ಗಜ ನೂಲು ಅರ್ಪಿಸಿದ್ದೇನೆ."

«ಇಷ್ಟು ಮಾಹಿತಿಯೂ ತಮಗೆ ಓದಲು ಸಮಯ ಸಿಗುತ್ತದೋ?"

«ಬಹಳ ಸಮಯ ಸಿಗುತ್ತಿರಲಿಲ್ಲ, ಕೆಲವು ಸಾರೆ ಹಿಂದಿನವರನ್ನು ಓದಲು ಅನುಕೂಲವಿತ್ತು. ನನ್ನ ಜೊತೆಗೆ ಇರುವ ಶಾಲೆಯೊಳಗಿನ ಶಿಕ್ಷಕರೊಬ್ಬರು ಭಗವದ್ಗೀತೆ ಮುಂತಾದ ತತ್ವಗಳನ್ನು ಓದಿ ಹೇಳುತ್ತಿದ್ದರು."

«ಇಷ್ಟು ಮಾಹಿತಿಯು ನನಗೆ ಸಾಕು. ತಮಗೆ ಈ ಕೆಲಸವನ್ನು ನೆರವೇರಿಸಿದ್ದಕ್ಕಾಗಿ ಅಭಿಮಾನವೂ,ಆಖಂಡ ಆನಂದವೂ ಉಂಟಾಗುತ್ತಿರಬೇಕು."

«ಅಹುದು, ಈ ಯಜ್ಞವನ್ನು ಯಶಸ್ವಿಯಾಗಿ ಮಾಡುಗಾಣಿಸಿದವೆಂಬ ಹಿಗ್ಗು ಈಗ ನನ್ನ ಹೃದಯವನ್ನು ತುಂಬುತ್ತಿದೆ. ಈ ಯಜ್ಞದಿಂದ ನನ್ನಲ್ಲಿ ಅವರ್ಣನೀಯವಾದ ಶಾಂತಿಯುಂಟಾಗಿದೆ. ನನ್ನ ಏಕಾಗ್ರತೆಯು ಶಕ್ತಿಯೂ, ನಿರ್ಧಾರ ಶಕ್ತಿಯೂ ವಿಕಾಸಹೊಂದಿದವು. ಇದು ಅದ್ವಿತೀಯವಾದ ಲಾಭವು. ಅದಕ್ಕಿಂತ ಮುಂಚಿತವಾಗಿ ನನ್ನ ಬಾಳುಯು ಅನಿಯಮಿತವಾಗಿತ್ತು, ಅವ್ಯವಸ್ಥಿತವಿತ್ತು. ಆದರೆ ಕಾರ್ಯವು ನನ್ನ ತಮೋನಿದ್ರೆಯನ್ನು ದೂರ ಮಾಡಿ ಜ್ಞಾನ ಕಿರಣವನ್ನು ಪ್ರದೀಪಿಸಿತು. ವಿಕಾರ, ಉದ್ವೇಗಗಳ ತೆರೆಗಳಿಂದ ನನ್ನನ್ನು ಪಾರಗಾಣಿಸಿ, ಶಾಂತಿಯನ್ನೀಯಿತು. ಈ ವರ್ಷದ ಈ ಮಹಾಯಜ್ಞವು ನನ್ನ ಹುಟ್ಟಿಗೆ ಒಂದು ಕ್ಷೇತ್ರವೇ ಆಗಿದೆ. ಬಹಳ ಹೊತ್ತನ್ನು ನಾವು ನಿರರ್ಥಕ ಕಳೆಯುತ್ತೇವೆ. ಅದನ್ನು ಉಪಯೋಗ ಮಾಡಬಹುದು. ಪ್ರತಿಯೊಂದು ಕ್ಷಣವನ್ನು ಸದುಪಯೋಗ ಮಾಡಿದರೆ ಸಾಧ್ಯವಾದರೂ ಎಲ್ಲಿ ಪ್ರವೇಶ ಸಿಕ್ಕೀತು?"

«ಉಪಕಾರವಾಯಿತು ಅಪ್ಪಣೆಯಿರಲಿ."

ಬಳ್ಳಾರಿಯೊಳಗಿನ ಪರಿಷತ್ತುಗಳು.

ಬಳ್ಳಾರಿಯಲ್ಲಿ ನಡೆದ ಅನೇಕ ಪರಿಷತ್ತುಗಳ ಸಮಾಚಾರವನ್ನು ವಿವರವಾಗಿ ಕೊಡುವದು ನಮಗೆ ಶಕ್ಯವಿಲ್ಲ. ಆದರೂ, ಕೆಲವು ಮಹತ್ವದ ಪರಿಷತ್ತುಗಳು ನೆರವೇರಿಸಿದ ಕಾರ್ಯದ ಸ್ಥೂಲ ಸ್ವರೂಪವನ್ನು ನಾವು ಉಲ್ಲೇಖ ಮಾಡಬೇಕಾಗಿದೆ.

ರಾವಸಾಹೇಬ ಹಳಕಟ್ಟಿಯವರು ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿ ಮಾಡಿದ ಭಾಷಣವು ಮನನೀಯವಿತ್ತು. ಕರ್ನಾಟಕದ ಸಂಸ್ಕೃತಿ, ಕನ್ನಡ ಭಾಷೆಯ ಪ್ರಸಾರ, ಕರ್ನಾಟಕದ ಇತಿಹಾಸ ಮುಂತಾದವುಗಳನ್ನೆಲ್ಲ ಜೀರಿ ಕರ್ನಾಟಕದ ಅಭಿಮಾನವನ್ನು, ಕರ್ನಾಟಕ ಪ್ರಾಂತದ ವೈಶಿಷ್ಟ್ಯವನ್ನೂ ಉಂಟು ಮಾಡಲು ಕರ್ನಾಟಕಸ್ಥರು ಪ್ರಯತ್ನಿಸಬೇಕೆಂದು ಅಧ್ಯಕ್ಷರು ಬೋಧಿಸಿದರು. ಕನ್ನಡ ಗ್ರಂಥ, ವರ್ತಮಾನಪತ್ರಗಳನ್ನು ಕರ್ನಾಟಕಸ್ಥರು ಅಭಿಮಾನದಿಂದ ಓದಬೇಕೆಂದರು. ಸುಶಿಕ್ಷಿತರೆಂದೆನಿಸಿಕೊಳ್ಳುವವರು ತಮ್ಮ ಕರ್ತವ್ಯವನ್ನು ಭಕ್ತಿಯಿಂದ ಪಾಲಿಸಿದರೆ, ಕನ್ನಡದ ವರ್ಚಸ್ಸು ವಿಶೇಷವಾಗಿ ಬೆಳೆಯುವದೆಂದೂ ಅಧ್ಯಕ್ಷರು ಉದ್ಘೋಷಿಸಿದರು. ಪರಿಷತ್ತಿನಲ್ಲಿ ಮಂಜೂರಾದ ಎರಡು ಠರಾವುಗಳು ಪ್ರಾಮುಖ್ಯವಾದವುಗಳು:— ಹೊಸ ಸ್ಥಿತಿಯಲ್ಲಿ ಕನ್ನಡ ಭಾಷೆಯಲ್ಲಿ ಉಪಯೋಗ ಮಾಡಬೇಕಾದ ಇಂಗ್ಲಿಷ, ಮರಾಠಿ ಮುಂತಾದ ಪಾರಿಭಾಷಿಕ ಶಬ್ದಗಳಿಗೆ ತತ್ಸಮ ಶಬ್ದಗಳನ್ನು ರಚಿಸುವದು. ಸಾಹಿತ್ಯ ಸಮ್ಮೇಲನದ ಕಾರ್ಯವನ್ನು ಪ್ರಸಾರ ಮಾಡಲಿಕ್ಕೆ ಅನುಕೂಲವಾದ ವ್ಯವಸ್ಥೆ ಮಾಡುವದು.

ಭಗಿನೀ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಕಮಲಾದೇವಿ ಚಟ್ಟೋಪಾಧ್ಯಾಯರವರ ಭಾಷಣವು ಚಿತ್ತವೇಧಕವಾಯಿತು. ಹಿಂದೂ ಸ್ತ್ರೀಯರಿಗೆ ಪಾತಿವ್ರತ್ಯ ಧರ್ಮವೇ ಪರಮ ಶ್ರೇಷ್ಠವಾಗಿರುವದೆಂಬುದನ್ನು ವಿಸ್ತಾರಪೂರ್ವಕವಾಗಿ ವರ್ಣಿಸಿದರು. ಕುಂದಾಪುರದ ಶ್ರೀ ಉಮಾಬಾಯಿಯವರು ಭಗಿನೀ ಮಂಡಳದ ಕಾರ್ಯದರ್ಶಿಯರು. ಇವರಿಗೆ ಕನ್ನಡ ಬರುತ್ತಿದ್ದಿಲ್ಲ; ಕನ್ನಡ ಕಲಿತು ಸಮ್ಮೇಲನದಲ್ಲಿ ಇವರು ಮಾಡಿದ ಭಾಷಣವು ಮನನೀಯವಿದೆ. ಸ್ತ್ರೀಯರ ಕಾರ್ಯಕ್ಷೇತ್ರವು ಗೃಹಕಕ್ಷೆಯನ್ನೇ ವ್ಯಾಪಿಸಿಕೊಂಡಿರದೆ, ರಾಷ್ಟ್ರದಷ್ಟು ಅದರ ಕಾರ್ಯವ್ಯಾಪ್ತಿಯಿದೆ. ರಾಷ್ಟ್ರಕಾರ್ಯವನ್ನು ಕೈಕೊಂಡ ಸಾಹಸಿಗರಿಗೆ ನೆರವಾಗುವದು ಸ್ತ್ರೀಯರ ಕರ್ತವ್ಯವು. ಸ್ವದೇಶಿ, ಖಾದಿಯ ಪ್ರಸಾರ, ಬಾಲಶಿಕ್ಷಣ ಮುಂತಾದವುಗಳಲ್ಲಿ ಸ್ತ್ರೀಯರು ಅಂತಃಕರಣಪೂರ್ವಕವಾಗಿ ಪುರುಷರಿಗೆ ನೆರವಾದರೆ, ರಾಷ್ಟ್ರಕಾರ್ಯವು ಶೀಘ್ರವೇ ನೆರವೇರುವದು. ಹೀಗೆ, ಕೆಲವು

ಕರ್ನಾಟಕದ ನಗರ ಮಂಡಳದವರು ಪ್ರಾಂತಿಕ ಭಗಿನಿ ಪರಿಷದವು. ಈ ವರ್ಷದಲ್ಲಿ ಎರಡು ಹೊಸ ಭಗಿನೀಮಂಡಳವನ್ನು ಸ್ಥಾಪಿಸಬೇಕು; ಹುಬ್ಬಳ್ಳಿ, ಬಿಜಾಪುರ ಹಾಗು ಅಥಣಿಗಳಲ್ಲಿ ಭಗಿನಿ ಮಂಡಳದವರು ಹೊರಡಿಸಿದ ಕನ್ಯಾಶಾಲೆಗಳನ್ನು ನಡಿಸುವದನ್ನು ನೋಡಿ, ಪರಿಷತ್ತು ಆನಂದ ವ್ಯಕ್ತಪಡಿಸಿ, ಸ್ತ್ರೀಶಿಕ್ಷಣದ ಪ್ರಸಾರಕಾರ್ಯವನ್ನು ಇತರ ಮಂಡಳಗಳೂ ಪ್ರಾರಂಭಿಸಬೇಕಾಗಿ ಪರಿಷತ್ತು ಪ್ರಾರ್ಥಿಸಿತು. ಓದು ಬರಹ ಬರದ ಭಗಿನಿಯರಿಗೆ ಸುಶಿಕ್ಷಿತ ಭಗಿನಿಯರು ಕಥಾನಿರೂಪಣ ವೃತ್ತಪತ್ರಗಳ ವಾಚನ ಮುಂತಾದವುಗಳಿಂದ ದೇಶಸ್ಥಿತಿಯನ್ನು ತಿಳಿಸಬೇಕು, ರಾಷ್ಟ್ರಕಾರ್ಯಕ್ಕೆ ಪ್ರವೃತ್ತ ಮಾಡಬೇಕು. ಭಗಿನಿಯರೆಲ್ಲರೂ ಖಾದಿಯನ್ನೇ ಧರಿಸಬೇಕು. ಸ್ವದೇಶಿ ಸಾಮಗ್ರಿಗಳನ್ನು ಉಪಯೋಗಿಸಬೇಕು. ರಾಷ್ಟ್ರೀಯ ಸಪ್ತಾಹದಂಥ ವಿಶೇಷ ಪ್ರಸಂಗಗಳಲ್ಲಿ ಭಗಿನಿಯರೂ ಖಾದಿ ಪ್ರಸಾರ ಕಾರ್ಯವನ್ನು ಪ್ರಯತ್ನಪೂರ್ವಕವಾಗಿ ನಡಿಸಬೇಕು.

ಸಂಪಾದಕರ ಪರಿಷತ್ತಿಗೆ ಪರಿಷತ್ತಿನ ಕರೆದ ಭಾಗದ ಅದೊಂದು ವಿಚಾರವಿನಿಮಯ ಮಾಡುವದಕ್ಕೋಸ್ಕರವಾಗಿತ್ತು. ಸರಕಾರವು ಸಂಪಾದಕರ ಹಕ್ಕಿನಮೇಲೆ ಪುನಃ ಪುನಃ ನಡಿಸುವ ದಾಳಿಯನ್ನು ಪರಿಹರಿಸಲಿಕ್ಕೆ ಅಖಿಲ ಕರ್ನಾಟಕದ ಪತ್ರಿಕೆಗೆ ಅವಶ್ಯವಾದ ಉಪಾಯಗಳನ್ನೆಲ್ಲ ಐಕ್ಯಮತ್ಯದಿಂದ ಮುಂದುವರಿಸಲಿಕ್ಕೆ ಪರಭಾಷೆಯೊಳಗಿನ ಹೊಸ ರಾಜಕೀಯ ಶಬ್ದಗಳಿಗೆ ಒಂದೇ ಮಾದರಿಯ ಶಬ್ದಗಳನ್ನು ಉಪಯೋಗಿಸುವ ನಿರ್ಧಾರ ಮಾಡಲಿಕ್ಕೆ ಸಂಪಾದಕರ ಸಂಘದ ನಿರ್ಮಾಣವಾಗಬೇಕೆಂದು ನಿರ್ಧಾರವಾಯಿತು.

ಕರ್ನಾಟಕ ವಿಶ್ವವಿದ್ಯಾಲಯದ ಪರಿಷತ್ತಿನಲ್ಲಿ ಅಖಿಲ ಕರ್ನಾಟಕದೊಳಗಿನ ಪ್ರಮುಖರು ಮಂಡಳವನ್ನೊಂದು ಸ್ಥಾಪಿಸಿ ವಿಶ್ವವಿದ್ಯಾಲಯದ ಸ್ಥಾಪನೆಯ ಯತ್ನ ನಡಿಸಬೇಕು; ಈ ಮಂಡಳದಲ್ಲಿ ೧೦೦ ರ ವರೆಗೆ ಸಭಾಸದರಿರಬೇಕು. ೭ ಮಂದಿಯ ಕಾರ್ಯಕಾರಿ ಮಂಡಳವೊಂದು ಇರಬೇಕು. ವಿಶ್ವವಿದ್ಯಾಲಯದ ಘಟನೆಯನ್ನು ಸಿದ್ಧಪಡಿಸಲಿಕ್ಕೆ ಒಂದು ಮಂಡಳವು ನೇಮಿಸಲ್ಪಟ್ಟಿತು. ಇಡೀ ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವಿರಬೇಕು. ಮೈಸೂರ ವಿಶ್ವವಿದ್ಯಾಲಯವೇ ಕರ್ನಾಟಕದ ವಿಶ್ವವಿದ್ಯಾಲಯವಾಗುವಂತೆ ಪ್ರಯತ್ನ ಮಾಡಬೇಕು.

ವಿವಿಧ ಸಂಗ್ರಹ.

ಸನಾತನಿ ಮುಸಲ್ಮಾನ!

ಕೊಂಕಣಪಟ್ಟಿಯಲ್ಲಿ ಒಂದು ತಾಲೂಕಿನೊಳಗೆ ಒಬ್ಬ ಮುಸಲ್ಮಾನ ಗೃಹಸ್ಥನಿದ್ದಾನೆ. ಆತನು ಚಲೋ ಮನೆತನಸ್ಥನು. ವಯೋವೃದ್ಧನಿದ್ದಾನೆ. ಊರಲ್ಲಿಯೂ ಆತನಿಗೆ ಚಲೋ ಮರ್ಯಾದೆಯಿದೆ. ಇವನಿಗೆ ನಮ್ಮ ಸನಾತನ ಧರ್ಮದ ಅಭಿಮಾನವು ಬಹಳವಿದೆ. ೧೩೦-೧೪೦ ಕಾಲಾಂತರಗಳ ಸುದ್ದಿಯನ್ನು ಆತನು ಹೇಳಿ ತನ್ನ ಸನಾತನ ಅಂತಃಕರಣವನ್ನು ವ್ಯಕ್ತಪಡಿಸುತ್ತಾನೆ. ಮೂಲಬ್ರಾಹ್ಮಣನೀತನು. ಮುಸಲ್ಮಾನ ರಾಜ್ಯದಲ್ಲಿ ಬಲಾತ್ಕಾರದಿಂದ ಧರ್ಮಾಂತರ ಹೊಂದಿದವನು. ಇತ್ತ ಕೆಲವು ದಿನಗಳ ಪರಿಯಂತ ಇವನ ಮನೆಗೆ ನೆರೆಹೊರೆಯ ಬ್ರಾಹ್ಮಣರು ಮದುವೆ ಮುಂಜಿ ಪ್ರಸಂಗದಲ್ಲಿ ತೆಂಗಿನಕಾಯಿ, ಅನಿವಾರಗಳನ್ನು ಕಳುಹುತ್ತಿದ್ದರು. ಇದೆಲ್ಲ ಕಥೆ ಹೇಳಿ, ಮುಸಲ್ಮಾನ ಗೃಹಸ್ಥರು ಮರುಗುವದೇನಂದರೆ:— "ಧರ್ಮಾಂತರ ಹೊಂದಿದ ನಮ್ಮ ಸನಾತನಿಗಳನ್ನು ಪುನಃ ಹಿಂದೂ ಧರ್ಮದಲ್ಲಿ ಸೇರಿಸಿಕೊಳ್ಳಲು ಧರ್ಮಾಂತರ ಹೊಂದಿದ ಸಮಯವೇ ಪುನೀತ ಮಾಡುವ ಯೋಜನೆಯಾಗಿದ್ದರೆ ಬಹಳ ಹಿತವಾಗುತ್ತಿತ್ತು" ಈ ಕಥೆಯನ್ನು ಹೇಳುವ ಕಾರಣವೇನು? ಈ ಮುಸಲ್ಮಾನ ಗೃಹಸ್ಥರಿಗೆ ಲೋಕಮಾನ್ಯರ ಗೀತಾರಹಸ್ಯದ ಮೇಲೆ ವಿಶೇಷ ಪ್ರೀತಿ ಹುಟ್ಟಿದೆಂದು ಈ ಗ್ರಂಥವು ಪ್ರಸಿದ್ಧವಾದಾಗ ಅದನ್ನು ಇವರು ಕೊಂಡುಕೊಂಡು ಅಭ್ಯಾಸಮಾಡುತ್ತಿದ್ದರು. ಅದೇ ಊರಿನ ಒಬ್ಬ ಸೊನಗಾರ ಜಾತಿಯ ಗೃಹಸ್ಥರಿಗೆ ಗೀತಾರ್ಥ ತಿಳಕೊಳ್ಳುವ ಕುತೂಹಲ ವಿಶೇಷ. ಗೀತಾರಹಸ್ಯವು ಒಳಿಗುಳ್ಳಿಗಳಿಗೆ: ರಹಸ್ಯದೀಪಿಕೆಯನ್ನೋದಿ ಸಮಾಧಾನ ಮಾಡಿಕೊಳ್ಳುತ್ತಿದ್ದರು. ಇತರಿಗೂ ಮುಸಲ್ಮಾನರಿಗೂ ಒಂದು ದಿವಸ ಗಂಟುಬಿತ್ತು. ತಿಲಕ ಪ್ರಶ್ನೆಗಳಾದ ಬಳಿಕ, ಗೀತಾರಹಸ್ಯದ ಪ್ರತಿಯೊಂದು ಆ ಮುಸಲ್ಮಾನ ಗೃಹಸ್ಥರ ಕಡೆ ಇರುವದೆಂದು ಈ ಸೊನಗಾರರಿಗೆ ತಿಳಿದು ಬಂತು. ಅದನ್ನು ಅವರ ಕಡೆಯಿಂದ ತಂದು ಇಟ್ಟುಕೊಂಡು ಬಿಟ್ಟರು. ಕೆಲವು ತಿಂಗಳಾದ ಬಳಿಕ ಮುಸಲ್ಮಾನ ಗೃಹಸ್ಥರು ಗೀತಾರಹಸ್ಯದ ಕುರಿತ ಪ್ರಸ್ತಾಪಿಸಿದರೆ, "ನೀವು ಇಸ್ಲಾಮ ಪಂಥದವರು, ನಿಮಗೇಕೆ ಗೀತಾರಹಸ್ಯ?" ಎಂದು ಸೊನಗಾರರು ಉತ್ತರವಿತ್ತು ಗೀತಾರಹಸ್ಯವನ್ನು ಖಾಯಂವಾಗಿ ಇಟ್ಟುಕೊಳ್ಳಲಿಚ್ಛಿಸಿದರು. ಮುಸಲ್ಮಾನರು ಸಿಟ್ಟಿಗೇಳಲು ಅವರ "ಗೀತಾರಹಸ್ಯ"ವು ಅವರಿಗೆ ದೊರೆಯಿತು. ಮುಸಲ್ಮಾನರ ಶರೀರದಲ್ಲಿ ಹರಿಯುವ ಸನಾತನ ರಕ್ತ ನೋಡಿರಿ!

***

ಅನ್ಯೋನ್ಯದ ಕಥೆ

ಇಲ್ಲಿಗೆ ಬಂದ ಶ್ರೀ ವಿನಾಯಕ ಮಹಾರಾಜ ಬ್ರಹ್ಮಚಾರಿಗಳು ಕಾಶ್ಮೀರದೊಳಗಿನ ಒಂದು ಕಥೆಯನ್ನು ಹೇಳಿದ್ದರು. ಕಾಶ್ಮೀರದಲ್ಲಿ ಮುಸಲ್ಮಾನರಿಗೂ, ಹಿಂದೂಗಳಿಗೂ ಅತ್ಯಂತ ಸ್ನೇಹಭಾವವು ಈಗಲೂ ನಡೆಯುತ್ತದೆ. ಮುಸಲ್ಮಾನರು ಧರ್ಮಾಂತರದ ದಾಳಿಯನ್ನೆಬ್ಬಿಸಿ ಹಾವಳಿ ನಡಿಸಿದಾಗ, ಕಾಶ್ಮೀರದೊಳಗಿನ ಸನಾತನ ಕುಟುಂಬದವರು ಈ ಹಾವಳಿಯೊಳಗಿಂದ ಪಾರಾಗಲು ಒಂದು ಉಪಾಯ ಮಾಡಿದರು. ಸನಾತನ ಧರ್ಮದ ಮೇಲೆ ಅತ್ಯಂತ ಅಭಿಮಾನವಿದ್ದವರು ತಮ್ಮ ಕುಟುಂಬದ ಧರ್ಮರಕ್ಷಣಕ್ಕಾಗಿ ಇಸ್ಲಾಮ ವೇಷವನ್ನು ಧರಿಸಿಕೊಂಡು ಹೊರಜಗಲಿಯ ಮೇಲೆ ಕೂತುಕೊಳ್ಳುತ್ತಿದ್ದರು. ಸನಾತನ ಧರ್ಮಕ್ಕಾಗಿಯೇ ಇವರು ಸನಾತನ ಧರ್ಮವನ್ನು ತ್ಯಜಿಸಬೇಕಾಯಿತು. ಹೀಗೆ ಸ್ಥಿತಿ ಇದ್ದದರಿಂದ ಅಲ್ಲಿ ಮುಸಲ್ಮಾನರಿಗೂ ಸನಾತನಿಗಳಿಗೂ ಅನ್ಯೋನ್ಯದ ವ್ಯವಹಾರವು ಈಗಲೂ ನಡೆಯುತ್ತದೆ. ಹೀಗೆ ಸನಾತನ ಧರ್ಮದೊಳಗಿಂದಲೇ ಇಸ್ಲಾಮ ಧರ್ಮವನ್ನು ಅಂಗೀಕರಿಸಿದ ಮಂದಿಗಳು ಹೇರಳವಿರುವರು. ಹೊರಗಿನ ವೇಷವು ಇಸ್ಲಾಮವೆಂದು ತೋರಿದಾಗ್ಯೂ ಅಂತಃಕರಣವು ಸನಾತನವಾಗಿದ್ದ ಈ ಜನರಿಗೆ ಪುನೀತ ಮಾಡಿಕೊಳ್ಳುವದು ನಿಹಿತವು.

***

ಮುಂಬಯಿಯಲ್ಲಿ
ಗೋವಧೆಯಿಂದ ಒದಗುವ ನಷ್ಟ.

ಮುಂಬಯಿಯಲ್ಲಿ ಹಾಲು ವಿಕ್ರಯವಾಗುತ ೧೨-೧೩ ಪಟ್ಟು ಹುಟ್ಟು ಬೀಳುತ್ತದೆ. ಡಾ॥ ಹೊರೆಮಾನ್ ಮುಂಬಯಿಯಲ್ಲಿ ಸಿಗುವ ೧೪೦೦ ನಮೂನೆಯ ಹಾಲನ್ನು ಪೃಥಕ್ಕರಿಸಿ ನೂರಕ್ಕೆ ಮುಕ್ಕಾಲ ನಮೂನೆಗಳ ಹಾಲಿನಲ್ಲಿ ನೀರು ಮಿಶ್ರಣವಾಗಿರುತ್ತದೆಂದು ಪ್ರಕಟಿಸಿರುವರು. ಶೇಕಡಾ ೫೦ ಪ್ರಕಾರದ ಹಾಲಗಳಲ್ಲಿ ಹೊಲಸು ಇರುತ್ತದೆ. ಇಂಥ ಹೊಲಸು ಹಾಲನ್ನು ಮುಂಬಯಿಯಲ್ಲಿ ಜನರು ಸರಾಸರಿಯಿಂದ ೮ ತೊಲೆ ಸೇವಿಸುತ್ತಾರೆ, ವಿಲಾಯತಿಯಲ್ಲಿ ಚಲೋ ೨೫ ತೊಲೆ ಹಾಲು ಸೇವಿಸಲಿಕ್ಕಾಗುತ್ತದೆ ೧೯೧೫ ನೇ ಇಸವಿಯಲ್ಲಿ ಮುಂಬಯಿಯಲ್ಲಿ ೩೦ ಸಾವಿರ ಗ್ಯಾಲನು ಹಾಲು ಸಿಗುತ್ತಿತ್ತು. ೭ ವರ್ಷಗಳಲ್ಲಿ _ ಸಾವಿರ ಗ್ಯಾಲನು ಹಾಲಿನ ಪೂರೈಕೆಯು ತಗ್ಗಿತು. ಇದರಿಂದ ಶಿಶುಗಳು ಹೇರಳವಾಗಿ ಮಡಿದವು, ಹರೆಯದವರ ಶಕ್ತಿ ಕುಂದಿದರು. ಇದಕ್ಕೆ ಗೋವಧೆಯೇ ಕಾರಣವು. ದನಗಳು ಬತ್ತಿದ ಕೂಡಲೆ ಅವನ್ನು ಕೊಲೆಗಡುಕರಿಗೆ ಮಾರುತ್ತಾರೆ. ಸಾಮಾನ್ಯವಾಗಿ ಶೇಕಡಾ ೭೫ ದನ್ನು ಬತ್ತಿದ ದನಗಳ ಕೊಲೆಯಾಗುತ್ತದೆಂದು ಹೇಳಬಹುದು. ೧೯೧೪-೧೫ನೇ ಇಸ್ವಿಯಲ್ಲಿ ಬಾಂದ್ರಾದೊಳಗಿನ ಕೊಲೆಮನೆಯಲ್ಲಿ ೪೪೧೭೭ ಆಕಳು ಹಾಗು ೮೫೭೪ ಎಮ್ಮೆ ಹೀಗೆ ದನಗಳ ಕೊಲೆಯಾಯಿತು. ಅದೇ ವರ್ಷದಲ್ಲಿ ಕುರ್ಲಾದೊಳಗಿನ ಕೊಲೆಮನೆಯಲ್ಲಿ ೩೬೦೦ ಎಮ್ಮೆಗಳು ಕೊಲ್ಲಲ್ಪಟ್ಟವು. ಕುರ್ಲದೊಳಗಿನ ಎಮ್ಮೆಗಳು ಬಹಳ ಹಾಲು ಕೊಡುತ್ತವೆ. ಅವುಗಳನ್ನು ಮುಂಬಯಿಯ ಗೌಳಿಗರು ತರುತ್ತಾರೆ. ಬತ್ತಿದ ಕೂಡಲೆ, ಅವನ್ನು ಕೊಲೆಗಡುಕರಿಗೆ ಮಾರಿ ಬಿಡುತ್ತಾರೆ. ಇದರಿಂದ ಬತ್ತಿದ ಆಕಳು ಮುಂದೆ ಈಯುವ ಪ್ರಸಂಗವೇ ಇಲ್ಲದಂತಾಗಿ ಗೋವುಗಳ ಸಂಖ್ಯೆಯು ತಗ್ಗುತ್ತದೆ. ಮತ್ತು ದಿನ ಹೋದ ಹಾಗೆ ಗೋವುಗಳ ಕ್ರಯವು ಏರುತ್ತ ಹೋಗುತ್ತದೆ. ಮುಂಬಯಿಯಂಥ ಪಟ್ಟಣಗಳಲ್ಲಿ ದನಗಳಿಗೆ ಒಣಮೇವು ಮತ್ತು ಹೆಚ್ಚಾಗಿ ಕಾಳು-ಕಡಿಗಳನ್ನು ಹಾಕುತ್ತಾರೆ; ಮೇವಿಗಾಗಿ ಹೊರಬಿಡುವದಿಲ್ಲ. ಹೀಗೆ ಕಟ್ಟಿಗಳ ಮೇಲೆಯೇ ದನಗಳು ಮಲಗಬೇಕಾಗುತ್ತದೆ. ಈ ಪ್ರಕಾರದಿಂದ ದನಗಳ ಆರೋಗ್ಯವು ಕೆಡುತ್ತದೆ. ಕಾಳು-ಕಡಿ ಮುಂತಾದ ಸಾಮಗ್ರಿಗಳ ಮೇಲೆ ದನಕರುಗಳ ನಿರ್ವಾಹವಾಗಬೇಕಾದ್ದರಿಂದ ಗೌಳಿಗರು ಹೆಚ್ಚಾಗಿ ನಿರ್ದಯರಾಗಿ ಹಾಲು ಹಿಂಡುತ್ತಾರೆ. ಕರುವಿಗೆ ಕುಡಿಯಲು ಹಾಲನ್ನಿಡುವದಿಲ್ಲ. ಹಿಮ್ಮೊಮ್ಮೆ ಕರುವಿನ ಉಪದ್ರವವನ್ನು ಪರಿಹರಿಸಿಕೊಳ್ಳುವದಕ್ಕಾಗಿ ಗೊಬ್ಬರ ಹೊಂಡದಲ್ಲಿ ಕರುಗಳನ್ನು ಜೀವಂತವಿರುವಾಗಲೇ ಹೂಳಿ ಬಿಡುತ್ತಾರೆಂದು ಮುಂಬಯಿ ಸರಕಾರದವರ ೧೯೧೬ ನೇ ಇಸ್ವಿಯಲ್ಲಿ ಪ್ರಕಟಿಸಿದ ಹಾಲು ಪೂರೈಕೆಯ ವಿಚಾರ ವರದಿಯಲ್ಲಿ ಪ್ರಸಿದ್ಧವಾಗಿದೆ. ಇವೆಲ್ಲ ಕಾರಣಗಳ ಮೂಲಕ ಚಲೋ ಹಾಲು ಕೊಡುವ ದನಕರುಗಳ ಸಂಖ್ಯೆಯು ತಗ್ಗಿದೆ. ೧೨ ವರುಷಗಳ ಹಿಂದೆ ೫೦ ರೂಪಾಯಿಗಳಿಗೆ ಚಲೋ ಕರಾಚಿ ಆಕಳು ಸಿಗುತ್ತಿತ್ತು; ಈಗ ಆ ಜಾತಿಯ ಆಕಳು ೧೫೦ ರೂಪಾಯಿ ಕೊಟ್ಟರೂ ಸಿಗುವದಿಲ್ಲ. ೧೨ ವರುಷಗಳ ಹಿಂದೆ ದಿಲ್ಲಿಯ ಎಮ್ಮೆಯು ೧೫೦ ರೂಪಾಯಿಗೆ ಬರುತ್ತಿತ್ತು. ಈಗ ಅದೇ ಎಮ್ಮೆಗೆ ೨೦೦ ರೂಪಾಯಿ ಬೀಳುತ್ತದೆ. ಹೀಗೆ ದನಗಳ ಕ್ರಯ ಹೆಚ್ಚುತ್ತಿದೆ; ಹಾಲು ತುಟ್ಟಿಯಾಗುತ್ತ ನಡೆದಿದೆ.

ಕಾನಡಾವೃತ್ತ.

ಮಿತಿ ಕ್ಷಯ ಸಂ। ವೈಶಾಖ ಬ। ೧೨ ಶೇ, ಸೋಮವಾರ

ಬ್ರಿಟಿಶರ ಔದಾರ್ಯ.

ಇಜಿಪ್ತದೊಳಗಿನ ದಬ್ಬಾಳಿಕೆ

ನಮ್ಮ ಬ್ರಿಟಿಶ ಜನಾಂಗವು ಸ್ವಾತಂತ್ರ್ಯಪ್ರಿಯವೆಂದೂ, ಲೋಕಜಾಗ್ರತಿಯಾದ್ದರಿಂದ್ಲೇ ಭರತ ಖಂಡಕ್ಕೆ ಸ್ವರಾಜ್ಯವನ್ನರ್ಪಿಸಲು ಒಗ್ಗಾಲಿನ ಮೇಲೆ ತಯಾರಿರುವರೆಂದೂ ಹೇಳುತ್ತಾರೆ. ಭೂತಲದ ಮೇಲೆಲ್ಲ ಪಾಶ್ಚಾತ್ಯ ಸುಧಾರಣೆಯು ಶಂಖವನ್ನು ಊದಿ, ಭೂತಲದ ಮೇಲಿನ ಜನರನ್ನೆಲ್ಲ ಉದ್ಧರಿಸಲು ಬ್ರಿಟಿಶರು ಟೊಂಕ ಕಟ್ಟಿರುವರೆಂದೂ ಹೇಳುತ್ತಾರೆ. ಬ್ರಿಟಿಶರು ಈ ಕುರಿತು ಜಗತ್ತಿನಲ್ಲೆಲ್ಲ ಡಂಗುರವನ್ನು ಸಾರುತ್ತಾರೆ. ಇದೇ ಸಮಯ ಇಜಿಪ್ತ ದೇಶದಲ್ಲಿ ಬ್ರಿಟಿಶರು ಪ್ರಜೆಗಳನ್ನು ದಪ್ಪಿ ಸ್ವಾರ್ಥಪರಾಯಣರಾಗಿ ದುಡಿಯುವ ಕಥೆಯನ್ನು ವಾಚಕರು ಅರಿತುಕೊಳ್ಳುವದು ಉತ್ತಮ.

ಇಜಿಪ್ತದೊಳಗಿನ ಪ್ರಜೆಗಳು ಝಗಲೂಲ ಪಾಶಾರವರ ನೇತೃತ್ವದಲ್ಲಿ ತಮ್ಮ ರಾಜ್ಯಕಾರಭಾರವನ್ನು ಸ್ವಾಧೀನಪಡಿಸಿಕೊಳ್ಳಲು ಇತ್ತ ಕೆಲವು ವರ್ಷಗಳಿಂದ ನಿರ್ಧಾರದಿಂದ ದುಡಿಯುತ್ತಿರುವರು. ಝಗಲೂಲ ಪಾಶಾರವರಿಗೆ ಕಾಯಿದೆ ಕೌನ್ಸಿಲಿನಲ್ಲಿ ಪ್ರಜೆಗಳು ವಿಪರೀತ ಬಹುಮತದಿಂದ ಪ್ರತಿನಿಧಿಗಳಾಗಿ ಕಳುಹಿಸಿದರು. ಝಗಲೂಲ ಪಾಶಾರವರು ಸ್ವದೇಶದ ಕಾರಭಾರವನ್ನು ಸ್ವಾಧೀನಪಡಿಸಿಕೊಳ್ಳಲು ಸಭ್ಯ ಉಪಾಯ ಮಾಡುತ್ತಿದ್ದಾಗ, ಪಕ್ಕನೆ ಅಲ್ಲಿಯ ಸರ್ವಾಧಿಪತಿಗಳಾದ ಸರ್ ಲೀ ಸ್ಟೆಕ್‌ರವರ ಕೊಲೆಯಾಯಿತು. ಬ್ರಿಟಿಶರಿಗೊಂದು ನೆವ ಸಿಕ್ಕಿತು; ಕೂಡಲೆ ಈ ಕೊಲೆಗೆ ಇಜಿಪ್ತ ದೇಶದ ಪ್ರಜೆಗಳನ್ನೆಲ್ಲ ಹೊಣೆಗಾರರಾಗಿ ಹಿಡಿದು, ಝಗಲೂಲರವರ ಕಾರಕೀರ್ದಿಯು ಮುಗಿದು, ಅಷ್ಟಾಗಲು ದ ನಿರಂಕುಶ ಕಾರಭಾರಕ್ಕೆ ಪ್ರಾರಂಭವಾಯಿತು. ಸ್ಟೆಕ್‌ರವರ ಕೊಲೆಗೂ, ಇಜಿಪ್ತ ದೇಶದ ಸಾಮಾನ್ಯ ಪ್ರಜೆಗಳಿಗೂ, ರಾಷ್ಟ್ರೋದ್ಧಾರದ ಪ್ರಯತ್ನಗಳಿಗೂ ಏನೇನೂ ಸಂಬಂಧವಿಲ್ಲೆಂದು ಝಗಲೂಲ ಪಾಶಾದಿ ರಾಷ್ಟ್ರಪ್ರಮುಖರು ಸಾರಿಹೇಳಿದರೂ ಬ್ರಿಟಿಶರು ಒಪ್ಪದೆ, ತಮ್ಮ ಅಗ್ರಹವನ್ನೇ ಸ್ಥಾಪಿಸಿಕೊಂಡರು. ಹೀಗೆ ಇತ್ತ ೧-೨ ವರುಷ ಇಜಿಪ್ತ ದೇಶದಲ್ಲಿ ನಿರಂಕುಶ ಕಾರಭಾರವು ನಡೆದಿತ್ತೆಂದು ಹೇಳಿದರೆ, ವಸ್ತುಸ್ಥಿತಿಯ ವಿಪರ್ಯಾಸವಾಗದು.

ಈಗ ಅಲ್ಲಿಯ ಸರ್ವಾಧಿಪತಿಗಳು, ನಮ್ಮಲ್ಲಿಯ ಮುಂಬಯಿ ಪ್ರಾಂತಾಧಿಪತ್ಯವನ್ನು ತೀರಿಸಿಕೊಂಡು ಹೋದ ಜೋರ್ಜ ಲೊಯ್ಡರವರು. ಗಾಂಧಿಯವರನ್ನು ಸಜೀವ ಹೂಗಿಯುವ ಅದ್ಭುತ ಪ್ರಯೋಗ ಮಾಡಿ ತೋರಿಸಿದ ಸಾಹಸಿಗರು ಈಗ ಝಗಲೂಲ ಪಾಶಾರವರ ಗದ್ದ ಹಿಡಿಯ ಹತ್ತಿರುವರು. ಸದ್ಯಕ್ಕೆ ಇಜಿಪ್ತದಲ್ಲಿ ಹೊಸ ಇಲೆಕ್ಷನು ಮುಗಿಯಿತು. ಝಗಲೂಲ ಪಾಶಾರವರಿಗೆ ವಿರೋಧವಾಗಿ ತಂಡೋಪತಂಡಗಳು ಮಿತಿಮೀರಿ ಯತ್ನ ಮಾಡಿದರೂ, ಝಗಲೂಲ ಪಾಶಾರವರ ಲೋಕನಾಯಕತ್ವವನ್ನು ಅಂತ್ಯಪಡಿಸಲು ಅವರಿಂದಾಗಲಿಲ್ಲ. ಹೊಸ ಇಲೆಕ್ಷನದಲ್ಲಿ ಬಂದಲ್ಲಿ ೩ ಪಾಲು ಪ್ರತಿನಿಧಿಗಳು ಝಗಲೂಲ ಪಾಶಾರವರ ಪಕ್ಷದವರು. ಇದರಿಂದ ಝಗಲೂಲ ಪಾಶಾರವರಿಗೆ ಪ್ರಧಾನಪದದಲ್ಲಿ ಆರೂಢ ಮಾಡಿದ್ದರೆ ಇಜಿಪ್ತ ದೇಶದ ಕಾರಭಾರವನ್ನು ಸಾಗಿಸುವದು ಕಷ್ಟಪ್ರದವು. ಪಾಶಾರವರು ಇಜಿಪ್ತ ದೇಶದ ಕಾರಭಾರವನ್ನು ಕೈಕೊಳ್ಳಲು ಒಗ್ಗಾಲಿನ ಮೇಲೆ ತಯಾರಿರುವರು. ಅದಕ್ಕಾಗಿಯೇ ಅವರು ಹಗಲಿರುಳು ದುಡಿಯುತ್ತಿರುವರು. ಆದರೆ, ಅವರಿಗೆ ಬ್ರಿಟಿಶರ ಬಂಧನದಲ್ಲಿ ಕಾರಭಾರವನ್ನು ನಡಿಸುವದು ಇಷ್ಟವಿಲ್ಲ. ಇಜಿಪ್ತ ದೇಶಕ್ಕೆ ಸ್ವಾತಂತ್ರ್ಯವನ್ನಿತ್ತರೆ, ಸಂತೋಷದಿಂದ ರಾಜ್ಯಾಡಳಿತವನ್ನು ನಡಿಸಲು ಪಾಶಾರವರು ಸಿದ್ಧರಾಗಿರುವರು.

ಇತ್ತ ಬ್ರಿಟಿಶರು ಇಜಿಪ್ತ ದೇಶಕ್ಕೆ ಸ್ವರಾಜ್ಯವನ್ನರ್ಪಿಸಲು ಸಿದ್ಧರಿರುವರು. ಆದರೆ, ಆ ಸ್ವರಾಜ್ಯದೊಳಗಿಂದ ಕೆಲವು ವಜಾಬಾಕಿಯಾಗಬೇಕಾಗಿದೆ. ಸೂದಾನ್ ಪ್ರದೇಶದ ಆಧಿಪತ್ಯವು ಬ್ರಿಟಿಶರ ವಶದಲ್ಲಿರಬೇಕು. ಸುಯೇಜ್ ಕಾಲುವೆಯನ್ನು ಕಾಪಾಡುವ ಅಧಿಕಾರವು ಬ್ರಿಟಿಶರ ಸ್ವಾಧೀನವಿರಬೇಕು. ಇಜಿಪ್ತ ದೇಶದೊಳಗಿನ ಬ್ರಿಟಿಶ ಮತ್ತು ಇತರ ದೇಶದವರ ಸಂರಕ್ಷಣೆಕ್ಕಾಗಿ ಈಗಲೇ ವಿಶೇಷ ಕಾನೂನುಗಳ ನಿರ್ಮಾಣವಾಗಬೇಕು. ಪರದೇಶದ ದಾಳಿಯಾದ್ದರಿಂದ ಇಜಿಪ್ತ ದೇಶವನ್ನು ಸಂರಕ್ಷಿಸುವ ಜವಾಬದಾರಿಯು ಬ್ರಿಟಿಶರದಿರಬೇಕು. ಅದಕ್ಕಾಗಿ ಇಜಿಪ್ತ ದೇಶದಲ್ಲಿ ಬ್ರಿಟಿಶ ಸೈನ್ಯವಿರಬೇಕು. ಬ್ರಿಟಿಶ ಸೈನ್ಯದ ಖರ್ಚನ್ನು ಸಹಜವಾಗಿ ಇಜಿಪ್ತ ದೇಶದವರೇ ತರಬೇಕು. ಇತ್ಯಾದಿ ರಕಮುಗಳನ್ನು ಸ್ವರಾಜ್ಯದೊಳಗಿಂದ ವಜಾ ಮಾಡಿದರೆ, ಬಾಕಿ ಉಳಿದದ್ದನ್ನು ಇಜಿಪ್ತದೊಳಗಿನ ಪ್ರಜೆಗಳು ಶಾಂತಿ ಸಮಾಧಾನಪೂರ್ವಕವಾಗಿ, ಆಚಂದ್ರಾರ್ಕ ಸಂತೋಷದಿಂದ ಅನುಭವಿಸಬಹುದು. ಹಟಮಾರಿಗಳಾದ ಪಾಶಾರವರು, ಇದು ಸ್ವದೇಶದ ಅಪಮಾನವೆಂದು, ಔದಾರ್ಯವಂತ ಬ್ರಿಟಿಶರ ಸ್ವರಾಜ್ಯ ಕಾಣಿಕೆಯನ್ನು ಧಿಕ್ಕರಿಸುತ್ತಾರೆ.

ಸ್ವರಾಜ್ಯದಲ್ಲಿ ಸ್ವದೇಶ ರಕ್ಷಣಕ್ಕಾಗಿ ಬ್ರಿಟಿಶ ಸೈನ್ಯದ ಮೇಲೆ ಅವಲಂಬಿಸಬೇಕಾದ ಬಳಿಕ, ಸ್ವರಾಜ್ಯವೆಲ್ಲುಳಿಯಿತು? ಬ್ರಿಟಿಶರು ಇದೇ ಪ್ರಕಾರ ಸ್ವರಾಜ್ಯ ನಡಿಸುತ್ತಿರುವರೇನು! ಸೂದಾನ್‌ದಂಥ ವಿಪುಲವಾಗಿ ಹತ್ತಿ ಬೆಳೆಯುವ ಪ್ರದೇಶವನ್ನು ಬ್ರಿಟಿಶರಿಗೆ ಒಪ್ಪಿಸಿ, ಪಾಶಾರವರು ಮಾಡುವದೇನು? ಸುಯೇಜ್ ಕಾಲುವೆಯು ಇಜಿಪ್ತ ದೇಶದ ಕಕ್ಷೆಯೊಳಗಿನದು. ಅದನ್ನು ಸಂರಕ್ಷಿಸಲು ಇಜಿಪ್ತ ದೇಶವು ಬದ್ಧವಿದೆ. ಅದನ್ನು ಬ್ರಿಟಿಶರಿಗೆ ಒಪ್ಪಿಸದಿದ್ದರೆ, ಇಜಿಪ್ತ ದೇಶವು ಬ್ರಿಟಿಶರಿಗೆ ಯಾವಾಗಲೂ ತಲೆ ಬಗ್ಗಿಸಿಕೊಂಡು ಉಳಿಯಬೇಕಾಗುವದು. ಒಳಗಿನ ತಿರುಳನ್ನಿಟ್ಟುಕೊಂಡು, ಹೊರ ಸಿಪ್ಪೆಯನ್ನು ಒಗೆದು ಅದಕ್ಕೆ ಸ್ವರಾಜ್ಯವೆಂದು ಸಂಬೋಧಿಸಿದರೆ, ಮರುಳಾಗುವವರು ಪಾಶಾರವರಲ್ಲ.

ಇದರಿಂದ ಇಜಿಪ್ತ ದೇಶದಲ್ಲಿ ಇಕ್ಕಟ್ಟಿನ ಸ್ಥಿತಿಯುಂಟಾಗಿದೆ. ಹುರುಳಿನ ಸ್ವರಾಜ್ಯವನ್ನು ಕೊಟ್ಟ ಹೊರತು, ಪಾಶಾರವರು ಮಂತ್ರಿಪದವನ್ನು ಸ್ವೀಕರಿಸಲು ತಯಾರಿಲ್ಲ; ಅದನ್ನು ಕೊಡದೆ ಅಲ್ಲಿಯ ರಾಜ್ಯಾಡಳಿತೆಯನ್ನು ಸುಸೂತ್ರವಾಗಿ ನಡಿಸಲು ಸಾಧ್ಯವಿಲ್ಲ; ಹೀಗೆ ಸ್ಥಿತಿಯುಂಟಾಗಿದೆ. ಗಾಂಧಿಜೀಯವರಿಗೆ ಜೀವಂತ ಹೂಗಿಯಬೇಕೆಂಬ ಬಡಿವಾರ ಬಡಿಯುವ ಜೋರ್ಜ ಲೊಯ್ಡರವರ ಮೇಲೆ ಈಗ ಝಗಲೂಲ ಪಾಶಾರವರನ್ನು ಜೀವಂತ ಹೂಗಿಯುವ ಪ್ರಸಂಗ ಬಂದೊದಗಿದೆ. ತೋಡಿ ತೋಡಿ ಮಣ್ಣು ಹಾಕಿದರೂ, ಪಾಶಾರವರು ಮತ್ತೂ ಕಳೆಯುತ್ತಿತ್ತಾರೆ. ಪಾಶಾರವರು ಹಟಮಾರಿಗಳೆಂದು ರೊಯ್ಟರ ಚಿತ್ರಗುಪ್ತರು ಪ್ರಸಿದ್ಧಪಡಿಸಿರುವರು. ಬ್ರಿಟಿಶರು ಸ್ವಾಭಿಮಾನಿಗಳಾಗಿ, ಪಾಶಾರವರಂತ ಆಚರಿಸಿದ್ದರೆ, ಬ್ರಿಟಿಶರು ಸ್ಥಿರಮನಸ್ಕರೆಂದು ಈ ಸುದ್ದಿಗಾರರೇ ಡಂಗುರ ಸಾರುತ್ತಿದ್ದರು. ಇರಲಿ.

ಒಂದು ಮಾತನ್ನು ನಾವು ಹೇಳಿದರೆ, ಬ್ರಿಟಿಶರ ಔದಾರ್ಯ ಯಜ್ಞದ ಪೂರ್ಣಾಹುತಿಯಾಗುವದು. ಪಾಶಾರವರ ನಿರ್ಧಾರವನ್ನು ಭಂಗಪಡಿಸುವದಕ್ಕಾಗಿ, ಪ್ರಜೆಗಳಿಗೂ ಬೆದರಿಸುವದಕ್ಕಾಗಿ ಬ್ರಿಟಿಶರು ತ್ರಿದಂಡೀ ಅಸ್ತ್ರಸನ್ಯಾಸದ ವೇಷವನ್ನಿಳಿಸಿ, ವಿಲಾಯತಿಯಿಂದ "ರಿಝೊಲ್ಯೂಶನ್" ಯಾನೆ ನಿರ್ಧಾರವೆಂಬ ಯುದ್ಧದ ಹಡಗುಪಡೆಯನ್ನು ಕಳುಹಿ ಇಜಿಪ್ತ ದೇಶದವರ ಸ್ವಾತಂತ್ರ್ಯ ಅಪಹಾರದ ನಿರ್ಧಾರವನ್ನು ಪ್ರಕಟಿಸಿರುವರು. ಇನ್ನೂ ಅನೇಕ ಹಡಗುಪಡೆಗಳು ಕ್ಷಣಾರ್ಧದಲ್ಲಿ ಹೊರಡಲು ತಯಾರಿರುವವಂತೆ. ಸಾಮ್ರಾಜ್ಯದ ಮಂತ್ರಿಮಂಡಳಕ್ಕೂ, ಸರ್ವಾಧಿಪತಿ ಲೊಯ್ಡರವರಿಗೂ ಗುಪ್ತಪತ್ರವ್ಯವಹಾರವು ನಡಿಯುತ್ತಲಿದೆ. ಮೇ ೩೧ ನೇ ಸೋಮವಾರಕ್ಕೆ ಮಧ್ಯರಾತ್ರಿಯವರೆಗೆ ವಿಲಾಯತಿಯ ಪ್ರಧಾನಮಂಡಳದವರು ಗುಪ್ತವಾಗಿ ಆಲೋಚನೆ ನಡಿಸಿ ಲೊಯ್ಡರವರಿಗೆ ಮುಂದಿನ-ಆಚಾರ ವಿಚಾರಗಳನ್ನು ಸೂಚಿಸಿ

ಪ್ರಾರಂಭ ವದಂತಿ. ಬ್ರಿಟಿಶರ ಔದಾರ್ಯದ ಸತ್ವಪರೀಕ್ಷೆಯು ಇನ್ನೊಮ್ಮೆ ಈಜಿಪ್ತ ದೇಶದಲ್ಲಿ ಆಗಿರುತ್ತಿದೆ. ಶಸ್ತ್ರಸನ್ಯಾಸ ಪರಿಷತ್ತು, ರಾಷ್ಟ್ರಸಂಘ ಮುಂತಾದವುಗಳ ವಿಧ್ವಂಸನ ಭೂತಲದ ಮೇಲಿನ ಯುದ್ಧಮೂಲಕ ಅನರ್ಥವನ್ನು ಬಗೆಹರಿಸಲು ಉಪಾಯಯೋಜನೆ ಮಾಡುವ ಬ್ರಿಟಿಶರೇ ಸಾಮ್ರಾಜ್ಯ ಪ್ರಜೆಗಳಾದ ಈಜಿಪ್ತ ದೇಶದವರ ರಾಷ್ಟ್ರಕಾಂಕ್ಷೆಯನ್ನು ದಬ್ಬಿಹಾಕಲು ಈ ಪ್ರಕಾರ ಯೋಜಿಸುವದು ಅವರಿಗೆ ಎಂದೂ ಭೂಷಣಾಸ್ಪದವಲ್ಲ. ಇದರಿಂದ ಬ್ರಿಟಿಶರ ಪ್ರತಿಷ್ಠೆಯು ಭೂತಲದ ಮೇಲೆ ಎಂದೆಂದಿಗೂ ಮಿಗಿಲಾಗದು. ಈ ಕಥೆಯ ಮೇಲಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರಕಬೇಕಾದರೆ ಮಾಡತಕ್ಕ ಪ್ರಯತ್ನದ ಪರಿಮಾಣದ ಕಲ್ಪನೆಯಾಗುವಂತಿದೆ.

ಸ್ಫುಟ ಸೂಚನೆಗಳು.

೧. ಪುಣೆಯ ವಸಂತ ವ್ಯಾಖ್ಯಾನಮಾಲೆಯಲ್ಲಿ ಕಾಶೀ ಕ್ಷೇತ್ರದೊಳಗಿನ ಹಿಂದೂ ವಿಶ್ವವಿದ್ಯಾಲಯದ ಪ್ರೊ| ಎಸ್. ಎನ್. ಗೋಡಬೋಲೆಯವರು "ಹಿಂದೀ ಉದ್ಯೋಗ-ಧಂದೆಗಳ ಉತ್ಪತ್ತಿ ಹಾಗು ಪ್ರಗತಿ" ಈ ವಿಷಯದ ಕುರಿತು ಮಾತಾಡುವಾಗ, ಬ್ರಿಟಿಶ ಹಾಗು ಜರ್ಮನ ರಾಷ್ಟ್ರಗಳು ತಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಮಾಡಿದ ಪ್ರಯತ್ನಗಳನ್ನು ವಿವರಿಸಿದರು. ಅದರಂತೆಯೇ ಭಾರತೀಯರು ದೇಶಕಾಲೋಚಿತ ತಿದ್ದುಪಾಟುಗಳನ್ನೇರ್ಪಡಿಸಿ ಮುಂದರಿದರೆ, ಕಲ್ಯಾಣವಾಗುವದೆಂದೂ ಬೋಧಿಸಿದರು. ಇಂಗ್ಲಂಡದ ಪ್ರಗತಿಯ ಕಥೆಯನ್ನು ಮೊಟ್ಟಮೊದಲು ನಾವು ಅವಲೋಕಿಸುವಾ. ನೇಪೋಲಿಯನ್‌ನ ಯುದ್ಧಮೂಲಕವಾಗಿ ಫ್ರಾನ್ಸ, ಜರ್ಮನಿ, ಮುಂತಾದ ದೇಶಗಳು ಬಡವಾದವು. ಇಂಗ್ಲಂಡದ ವ್ಯಾಪಾರವು ಮಿಗಿಲಾಯಿತು. ೧೭೮೦ ರಲ್ಲಿ ಇಂಗ್ಲಂಡದ ವ್ಯಾಪಾರವು ೧ ಕೋಟಿ ೮೫ ಲಕ್ಷ ಪವನುಗಳದಿತ್ತು. ಸಂಟ ಹೆಲೀನಾ ನಡುಗಡ್ಡೆಯಲ್ಲಿ ೧೮೨೧ ನೇ ಇಸ್ವಿಯಲ್ಲಿ ನೆಪೋಲಿಯನನು ಸೆರೆಯಾಳಾದಾಗ ವ್ಯಾಪಾರವು ೯ ಕೋಟಿ ೨೮ ಲಕ್ಷದ್ದಾಯಿತು. ೩೦ ವರುಷಗಳಲ್ಲಿ ೧೯.೩ ಕೋಟಿಗೆ ಹಾರಿತು. ಈಗಂತೂ ಅಬ್ಜ, ಖರ್ವಗಳಿಂದ ವ್ಯಾಪಾರದ ಅಂಕೆಗಳನ್ನು ಎಣಿಸಬೇಕಾಗಿದೆ. ಇದಕ್ಕೆ ಕಾರಣವೇನು? ಅರ್ಥಶಾಸ್ತ್ರಜ್ಞರು ಸಂರಕ್ಷಕ ಪದ್ಧತಿಯನ್ನು ದೇಶದಲ್ಲಿ ಪ್ರವರ್ತಿಸಿದರು; ರಸಾಯನ ಶಾಸ್ತ್ರಜ್ಞರು ಸಂಶೋಧನ ಪ್ರಯೋಗ ಮಾಡಿ ಅವುಗಳ ಉಪಯುಕ್ತತೆಯನ್ನು ಜನರಿಗೆ ಬೋಧಿಸಿದರು, ಸಾವುಕಾರರು "ಸಾಹಸೇ ಶ್ರೀಃ ಪ್ರತಿವಸತಿ" ಎಂಬ ಉಕ್ತಿಯಂತೆ ಸಂಶೋಧನ ಪ್ರಯೋಗಗಳಿಗಾಗಿ ತಮ್ಮ ದ್ರವ್ಯಸಂಚಯವನ್ನು ವೆಚ್ಚ ಮಾಡಿ, ಪ್ರಯೋಗಗಳ ಸಾರ್ಥಕ ಮಾಡಿದರು. ಇಂಗ್ಲಿಷ ಪ್ರಜೆಗಳಾದರೂ ನಿರ್ಧಾರದಿಂದಲೂ, ಹಿಕ್ಕೇ ದೂರದೃಷ್ಟಿಯಿಂದಲೂ ಇಂಗ್ಲಂಡದಲ್ಲೇ ತಯಾರಾದ ಸಾಮುಗ್ರಿಗಳನ್ನು ಅಭಿಮಾನದಿಂದ ಕೊಂಡುಕೊಂಡು ಉದ್ಯೋಗಗಳನ್ನು ಭದ್ರವಾಗಿ ಪ್ರಸ್ಥಾಪಿಸಿದರು. ಕೈಗಾರಿಕೆಗಳು ಬಾಲ್ಯಾವಸ್ಥೆಯಲ್ಲಿದ್ದಾಗ ಹೆಚ್ಚು ಬೆಲೆಯನ್ನು ಪ್ರಜೆಗಳು ತೆತ್ತದ್ದು ಉಂಟು. ಹೀಗೆ ಬ್ರಿಟಿಶರು ತಮ್ಮಲ್ಲಿಯ ಉದ್ಯೋಗಗಳನ್ನು ರಕ್ಷಿಸಿಗೊಂಡರು.

೨. ಮಹಾಯುದ್ಧದಿಂದ ಬ್ರಿಟಿಶ ಉದ್ಯೋಗಗಳ ಸೆಲಗಟ್ಟು ಸಡಿಲಿಸಿತು. ಅದಕ್ಕಾಗಿ ಬ್ರಿಟಿಶರು ೧೯೨೪ನೇ ಇಸ್ವಿಯಲ್ಲಿ "ಬ್ರಿಟಿಶ ಎಂಪಾಯರ ಎಗ್ಝಿಬಿಶನ್ ಫೆಡರೇಶನ್" ಯಾನೆ ಬ್ರಿಟಿಶ ಸಾಮ್ರಾಜ್ಯದ ಪ್ರದರ್ಶನ ಸಾಹಚರ್ಯವೆಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇಂಗ್ಲಂಡದ ಅಥವಾ ಇಂಗ್ಲಂಡ ಸಾಮ್ರಾಜ್ಯದ ವ್ಯಾಪಾರವನ್ನು ಅಪ್ರತಿಹತವಾಗಿ ನಡಿಸುವದೇ ಈ ಸಂಸ್ಥೆಯ ಮುಖ್ಯ ಹೇತುವು. ಯುವರಾಜರು ಈ ಸಂಸ್ಥೆಯ ಅಧ್ಯಕ್ಷರು. ಪರರಾಷ್ಟ್ರ ಮಂತ್ರಿಗಳಾದ ಸ| ಚೇಂಬರಲೇನರವರೂ, ವಸಾಹತಿಯ ಮಂತ್ರಿಗಳಾದ ಕರ್ನಲ್ ಎಮೇರಿಯವರೂ ಈ ಸಂಸ್ಥೆಯ ಪ್ರಮುಖ ಚಾಲಕರು. ಸಂಸ್ಥೆಗೆ ೫೦೦ ಕ್ಕಿಂತ ಹೆಚ್ಚು ಸಭಾಸದರಾಗಿರುವರು. ಈ ಸಂಸ್ಥೆಯಲ್ಲಿ ದೊಡ್ಡ ದೊಡ್ಡ ರಸಾಯನ ಶಾಸ್ತ್ರಜ್ಞರಿರುವರು; ಕಾರಖಾನೆಯ ಯಜಮಾನರಿರುವರು, ಲಕ್ಷಾಧೀಶರಿರುವರು; ಮುತ್ಸದ್ದಿಗಳಿರುವರು, ಅರ್ಥಶಾಸ್ತ್ರಜ್ಞರಿರುವರು; ವ್ಯಾಪಾರ ವ್ಯವಹಾರಶಾಸ್ತ್ರಜ್ಞರಿರುವರು. ಇಂಗ್ಲಂಡದ ವ್ಯಾಪಾರವು ಸರ್ವತೋಮುಖವಾಗಿ ಮಿಗಿಲಾಗಬೇಕೆಂದು ಇವರೆಲ್ಲರೂ ದುಡಿಯುವವರೇ. ವರ್ಷಕ್ಕೆ ೩ ಲಕ್ಷ ರೂಪಾಯಿ ಇದ್ದಾಗ್ಯೂ, "ನಮಗೆ ಬೇಕಾದದ್ದು ನಿಮ್ಮ ಕೆಲಸವು; ವರ್ಗಣಿಯು ಅಷ್ಟು ಅವಶ್ಯವಿಲ್ಲ" ವೆಂದು ಸಂಸ್ಥೆಯು ಸಭಾಸದರೊಡನೆ ಬೇಡುತ್ತದೆ. ಸ್ವಲ್ಪ ವರ್ಗಣಿಯನ್ನು ಕೊಡಿಸಿ, ಮುಖಂಡರು ಬೇಡಿದ್ದಾದರೂ ಇದೇ ಅಲ್ಲವೆ! "ಬರೇ ಇಂಗ್ಲಂಡದಲ್ಲಿ ಅಥವಾ ಸಾಮ್ರಾಜ್ಯದಲ್ಲಿ ತಯಾರಾದ ಸಾಮಗ್ರಿಯನ್ನೇ ನೀವು ಕೊಂಡುಕೊಳ್ಳಬೇಕು," ಎಂದು ಸಂಸ್ಥೆಯು ಸಭಾಸದರಿಗೆ ಸಾರಿ ಡಂಗುರಿಸುತ್ತಿದೆ. ಇದರಿಂದ ಪರರಾಷ್ಟ್ರಗಳ ದ್ವೇಷ ಬಾಗುವದಿಲ್ಲೆಂದು ನಮ್ಮಲ್ಲಿಯ ಜಾಹಿಯ ವಿರೋಧಕರು ಇನ್ನಾದರೂ ಅರಿತುಕೊಳ್ಳಲಿ.

---

೩. ಜರ್ಮನಿಯಲ್ಲಿಯೂ ಶಾಸ್ತ್ರೀಯ ಸಂಶೋಧನ ಸಂರಕ್ಷಣ, ಮಹನೀಯರ ಔದಾರ್ಯ, ಸಾವುಕಾರರ ದ್ರವ್ಯ ಇವುಗಳ ಸಾಧನದಿಂದ ಉದ್ಯೋಗದ ಅಭಿವೃದ್ಧಿಯು ಸ್ಪಷ್ಟವಾಗಿ ಕಾಣುತ್ತದೆ. ಬ್ರಿಟಿಶರು ಹಿಂದುಸ್ಥಾನಕ್ಕೆ ದೇಸಾಯಿಯೇ ಯೋಗ್ಯವೆಂದು ಹೇಳುತ್ತಾರೆ, ಜರ್ಮನಿಗೂ ದೇಸಾಯಿ ರಾಷ್ಟ್ರವೆಂದು ಇಂಗ್ಲಿಷ ಅರ್ಥಶಾಸ್ತ್ರಜ್ಞರಾದ ಕೋಬ್ಡೆನ್‌ರವರು ಉದ್ಗರಿಸಿ, ಜರ್ಮನ ದೇಶವು ಔದ್ಯೋಗಿಕ ಪ್ರಯತ್ನಗಳಿಗೆ ಅಪಾತ್ರವೆಂದು ಕೂಡ ಬರೆದಿಟ್ಟರು. ಜರ್ಮನರು ಇದಕ್ಕೆ ಸೊಪ್ಪು ಹಾಕಲಿಲ್ಲ. ಅಲ್ಲಿಯ ಭೂಮಿಯು ತೀರ ಬಂಜರು ಇದ್ದಿತ್ತು. ಪ್ರಯೋಗಗಳಿಂದ ಚಳಿಯ ಬೀಜಗಳನ್ನು ಸಂಪಾದಿಸಿ, ಗೊಬ್ಬರ ಹಾಕಿ ಭೂಮಿಯನ್ನು ಸುಧಾರಿಸಿ ದೇಸಾಯಿಯನ್ನು ಸಮಸ್ತ ತರದಿಂದ ಸಮೃದ್ಧಪಡಿಸಿದರು. ಜರ್ಮನಿಯಲ್ಲಿ ಈಗ ಒಂದಕ್ಕೆ ಮಿಕ್ಕ ದೇಸಾಯ ಪ್ರಯೋಗ ಶಾಲೆಗಳಿವೆ. ಈ ಶಾಲೆಗಳಲ್ಲಿ ಬೀಜ-ಗೊಬ್ಬರ ಮುಂತಾದ ತರತರದ ಶೋಧಗಳು ಹಚ್ಚಲ್ಪಡುತ್ತವೆ. ಜರ್ಮನ ಶಾಸ್ತ್ರಜ್ಞರ ಸಂಶೋಧನದಿಂದಲೇ ಅಲ್ಲಿಯ ದೇಸಾಯಿಗಾರರು ೩೦ ಕೋಟಿ ರೂಪಾಯಿಗಳ ಸಕ್ಕರೆಯನ್ನು ಹುಟ್ಟಿಸುತ್ತಾರೆ. ಈ ಸಕ್ಕರೆಯ ವ್ಯವಸಾಯದಿಂದ ದನಗಳಿಗೆ ಪೌಷ್ಟಿಕವಾದ ಮೇವು ಸಿಗುತ್ತದೆ; ಉತ್ತಮ ಪ್ರತಿಯ ಗೊಬ್ಬರ ಸಾಮುಗ್ರಿಯೂ ಈ ಸಕ್ಕರೆಯ ತಯಾರಾಗುವಾಗಲೇ ತಯಾರಾಗುತ್ತದೆ. ಕಾಕಂಬಿಯಂಥ ಅಲ್ಪ ಬೆಲೆಯ ಸಾಮುಗ್ರಿಯಿಂದ ಮದ್ಯಾರ್ಕ, ಆಸವ, ಸುಗಂಧಿ ದ್ರವ್ಯ ಮುದ್ದು ಮುಂತಾದವುಗಳು ತಯಾರಾಗುತ್ತವೆ. ೩ ಲಕ್ಷ ರೂಪಾಯಿ ವೆಚ್ಚ ಮಾಡಿ ೧೫ ಲಕ್ಷ ರೂಪಾಯಿಗಳನ್ನು ಹುಟ್ಟಿಸುವ ಅನೇಕ ರಸಾಯನ ಶಾಲೆಗಳು ಜರ್ಮನಿಯಲ್ಲಿ ಅನೇಕವಿವೆ. ಇವುಗಳನ್ನೆಲ್ಲ ವಿವರಿಸಿ, ಪ್ರೊ| ಗೋಡಬೋಲೆಯವರು ಹಿಂದುಸ್ಥಾನದಲ್ಲಿಯೂ ಇದೇ ಪ್ರಕಾರ ಸಂಶೋಧಕರೂ, ಅರ್ಥಶಾಸ್ತ್ರಜ್ಞರೂ, ಉಂಡಾಗಿಸಿಯವರೂ ಸಾವುಕಾರರೂ ಒಟ್ಟಾಗಿ ದುಡಿದರೆ, ದೇಶದೊಳಗಿನ ಕೈಗಾರಿಕೆಗಳು ಅಭಿವೃದ್ಧಿ ಹೊಂದುವವೆಂದೂ, ಭಾರತೀಯರೆಲ್ಲರೂ ಅಭಿಮಾನದಿಂದ ಸ್ವದೇಶದಲ್ಲಿ ತಯಾರಾದ ಸಾಮುಗ್ರಿಗಳನ್ನೇ ಕೊಂಡುಕೊಳ್ಳಬೇಕೆಂದೂ, ಅದಕ್ಕಾಗಿ ಪ್ರಸಂಗ ಬಿದ್ದರೆ ಹೆಚ್ಚು ಹಣವನ್ನು ಸಹ ಕೊಡಬೇಕೆಂದೂ ಬೋಧಿಸಿದರು. ಇಷ್ಟು ಮುತ್ತು ನೋಡಿಯಾದರೂ ನಾವು ಬುದ್ಧಿಗಲಿಯಬಹುದಲ್ಲವೇ!

---

೪. ಬೆಳಗಾವಿಯ ಜಿಲ್ಹಾ ಬೋರ್ಡಿನ ಪ್ರಕರಣವು ವಿಪರೀತವಾಗಿ ಪರಿಣಮಿಸಬಹುದೆಂದು ನಮಗೆ ತೋರುತ್ತದೆ. ಹಳೇ ಅಧ್ಯಕ್ಷರಾದ ಶ್ರೀ| ಪಂಡಿತಪ್ಪಾ ಚಿಕ್ಕೋಡಿಯವರೂ, ಹೊಸ ಅಧ್ಯಕ್ಷರಾದ ಶ್ರೀ| ಎಸ್. ಎನ್. ಅಂಗಡಿಯವರೂ ತಮ್ಮ ತಮ್ಮ ಸಭೆಯ ಹಕೀಕತನ್ನು ಕಲೆಕ್ಟರರಿಗೆ ಬರೆದು ತಿಳಿಸಿರುವರು. ಕಲೆಕ್ಟರರು ಯಾರ ಬದಿಗೆ ಹಿಲಿದರೆಂದು ಇನ್ನೂ ತಿಳಿದಿಲ್ಲ. ಕಲೆಕ್ಟರರ ನಿರ್ಣಯವಾದ ಬಳಿಕ, ನ್ಯಾಯಕೋರ್ಟಿನಲ್ಲಿ ಈ ರೀತಿ ಮೊಕದ್ದಮೆಗಳು ದಾಖಲಾಗುವ ತಯಾರಿಯಾಗಿರುವದಾಗಿಯೂ ಸುದ್ದಿ ಇದೆ. ನಮಗಂತೂ ಇದನ್ನೆಲ್ಲ ಕೇಳಿ ಅತ್ಯಂತ ವ್ಯಸನವಾಗಿದೆ. ಸ್ಥಾನಿಕ ಸ್ವರಾಜ್ಯದ ಸ್ವರಾಜ್ಯ ಬಾತಶಾಲೆಗಳಿಂದ ನಮ್ಮಲ್ಲಿ ಪಕ್ಷಭೇದ, ಜಾತಿ ಮುಂತಾದ ಪೃಥಕ್ಕರಣ ಕ್ರಮವೇ ಪ್ರಾಮುಖ್ಯವಾಗಿ ಹಿಡಿಗಿಬಂದಿದೆಂದು ಹೇಳಿದರೆ, ಅಯಥಾರ್ಥವಾಗದು. ಅಧ್ಯಕ್ಷರಾಗಲಿಕ್ಕೆ ಕಲೆಕ್ಟರರ ಅಥವಾ ನ್ಯಾಯಕೋರ್ಟುಗಳ ಸಹಾಯವನ್ನು ಪಡೆಯಬೇಕಾದ ಪ್ರಸಂಗದಲ್ಲಿ ಅಧ್ಯಕ್ಷಸ್ಥಾನದ ಗೌರವವೂ, ಮರ್ಯಾದೆಯೂ ಎಲ್ಲಿ ಉಳಿಯಿತು? ಮೊದಲಿನ ಸಭೆಯು ಅಕ್ರಮವೆಂದೆಣಿಸಿದರೂ, ಹೊಸ ಇಲೆಕ್ಷನಿನಲ್ಲಿ ಆರಿಸಿ ಬಂದ ಸಭಾಸದರು ಶ್ರೀ| ಚಿಕ್ಕೋಡಿ ಪಂಡಿತಪ್ಪನವರಿಗೆ ಬೆಂಬಲ ಕೊಟ್ಟಿದ್ದರೆ, ಶ್ರೀ| ಪಂಡಿತಪ್ಪನವರ ಅಧ್ಯಕ್ಷಾವತಾರದ ಸಮಾಪ್ತಿಯ ಸಮಯ ಬಂದಂತಾಗುವದು ಹೆಚ್ಚು ಶೋಭೆಯಲ್ಲವೇ? ಶ್ರೀ| ಅಂಗಡಿಯವರಿಗೆ ಇನ್ನೊಂದು ಭೀತಿ. ಹೊಸ ಸಭೆಯಾದರೆ ತಮಗೆ ಅಧ್ಯಕ್ಷಸ್ಥಾನವು ಸಿಗಲಿಕ್ಕಿಲ್ಲೆಂದು ಅವರ ತರ್ಕವಿದ್ದಂತೆ ತೋರುತ್ತದೆ. ಹೀಗೆ ಅವರು ಅನುಮಾನಿಸುವದಾದರೆ, ಅನಿಶ್ಚಿತವಾಗಿ ಬಹುಮತದಿಂದ ಸಂಪಾದಿಸಿದ ಅಧ್ಯಕ್ಷರ ಅಧಿಕಾರದಿಂದ ೩ ವರ್ಷಗಳ ತನಕ ಬೋರ್ಡಿನ ಕೆಲಸವನ್ನು ಹ್ಯಾಗೆ ಸಾಗಿಸಬಲ್ಲರು? ಯಾವ ರೀತಿಯಿಂದ ವಿಚಾರಿಸಿದರೂ, ನ್ಯಾಯಕೋರ್ಟಿನಿಂದ ಈ ಸೂತ್ರ ನಿರ್ಣಯವು ದೊರಕಲಿಕ್ಕಿಲ್ಲ. ಶ್ರೀ| ಪಂಡಿತಪ್ಪನವರ ಅಧ್ಯಕ್ಷಾಧಿಕಾರವನ್ನು ಮುಂದರಿಸಲು ನ್ಯಾಯಕೋರ್ಟಿನಿಂದ ಸಾಧ್ಯವಿಲ್ಲ; ಶ್ರೀ| ಅಂಗಡಿಯವರಿಗೆ ಬಹುಮತದ ಸಭಾಸದರು ಪ್ರತಿಕೂಲರಾಗಿದ್ದರೆ, ಅವರನ್ನು ಅನುಕೂ-

ಲರಾಗಿ ಪರಿಣಮಿಸುವ ... ನ್ಯಾಯಾ ಲೋಚಕರಾಗಳಿಗಿದ್ದ ಇಂಥ ಪ್ರಸಕ್ತಿಯಲ್ಲಿ ಹಟ್ಟಿಳ್ಳಿ ಯು "ಶ್ರೀ ... " ಕರ್ತರು ಅಭಿಪ್ರಾಯಿಸುತ್ತಿ ವಂತೆ, ಶ್ರೀ ಚಿಕ್ಕ ...-ಲಂಗಡಿಯವರ ನಿರ್ಧರ ಕವಾದ ಕಾಗು ಅಪಾಯಕರವಾದ ದುರಾಗ್ರಹವ ನ್ನು ಹಿಡಿಯದೆ ಕಂದಾಯನಿಂದಲೇ ಈ ಪ್ರಕರಣವ ನ್ನು ಇತ್ಯರ್ಥಪಡಿಸಿಕೊಳ್ಳಬೇಕಾಗಿ ನವ್ಯ ಅಗ್ರ ಹವಿದೆ. ಜಿಲ್ಲಾ ಬೋರ್ಡಿನ ಅಧ್ಯಕ್ಷರಂಗತಕ್ಕವ ರು ಹೀಗೆ ಬಡವಾದ ಪರು ಬೆಂಗಾವಿಗೆ ಭೂಷಣ ವಲ್ಲ ಮಹನೀಯರಿಗೂ ಭೂಷಣವಲ್ಲ. ...ರಕ್ಕ್ಯು ಹೆಚ್ಚಿಗೆ ನಾವೇನು ಹೇಳಬಲ್ಲೆವು?

ಸ್ಥಾನಿಕ ವೃತ್ತಾಂತ.

ಕುಮಟಾ— ... ಮಳೆ ಸ್ವಲ್ಪ ... ಕಾಣಿಸಿದೆ. ಕಳೆ ವಿಪರೀತ ಬಾಧಿಗಳಿಲ್ಲ ... ಅನೇಕ ಕಡೆಗಳಲ್ಲಿ ಸೇರಿದ್ದವೆ ... ಊರಲ್ಲ ಮೈಲಿ, ... ರೋಗ ... ...

ಪರೀಕ್ಷೆ ಇಲ್ಲಿಯ ... ವೇಳು ಪ್ರತಿಗೆಯ ... ಪ್ರಾಥಮಿಕ ... ಚಿಕ್ಕ ... ಮುಂಚಿತವಾಗಿ ... ದಾವ ... ಶಿಕ್ಷಕಿಯರುಗಳು ... ನೇ ತಾರೀಖಿಗೆ ಪ್ರಾರಂಭವಾಗುವ

ಹುಬ್ಬಳ್ಳಿಯ ... ಕಳೆದ ವರ್ಷದಿಂದ ... ಕಟ್ಟಲು ... ಪ್ರಾರಂಭ ... ಖಾತೆಯವರು ... ತಮ್ಮ ... ಕೊಂಡಿರುವರು ... ಕಂಟ್ರಾಕ್ಟ್ ... ವೇಳೆಯಲ್ಲಿ ... ಸ್ವಾಧೀನ ಮಾಡಿಕೊಳ್ಳಬೇಕಾ... ಪೂರ್ವ ಯೋಜನೆಯಂತೆ ಈ ಕೆಲಸವು ಕಳೆದ ಮಾರ್ಚ ... ತಿಂಗಳ ... ಮುಗಿಯಬೇಕಾಗಿತ್ತು. ... ತಿಂಗಳ ... ಅವಧಿ ... ಆದರೆ ... ಇಲ್ಲ. ... ಪಡೆದ ... ಕಟ್ಟಡದ ... ಖಾತೆಯವರು ... ಕೆಲಸದ ... ವ್ಯರ್ಥ ... ಹೆಚ್ಚಾಗುತ್ತದೆ. ... ತಿಂಗಳಲ್ಲಿ ... ಕೆಲಸ ... ತಿಂಗಳ ... ಹುಬ್ಬಳ್ಳಿ ... ಕಾಣಿಸುತ್ತಿಲ್ಲ. ಈಗ ಪುನಃ ... ಸ್ಥಗಿತವಾದ ಸ್ಥಳದಿಂದ ತಿಳಿಯಬರುತ್ತದೆ. ಇಂಜನಿಯರ ಖಾತೆಯ ... ಜನರ ಮೇಲೆ ತೆರಿಗೆಯನ್ನು ಹೇರುವ ... ಇಂಜನಿಯರ ಖಾತೆಯವರು ಈ ... ತಯಾರಾಗುವ ವರೆಗೆ ... ಪ್ರಯಾಣಿಕರಿಗಿದ್ದ ಉಚಿತವಾಗಿ ... ಇದರಿಂದ ... ಶೀಘ್ರವೇ ... ಉತ್ತೇಜನ ಸಿಗುವದು. ಜನರ ಮೇಲಿನ ... ದು ಸಂಕೆ ... ಪ್ರತಿಷ್ಠೆ ... ಮನ್ನಣೆ ... ತಿಂಗಳು ... ರೂಪಾಯಿಗೆ ... ತಿಂಗಳ ... ಇಂಜನಿಯರ

ಖಾತೆಯವರಿಗೆ ೫೦೦ ರೂ ಪ್ರಾಪ್ತವಾಗಿದೆ. ಇದನ್ನು ಲಕ್ಷಿಸಿ ಖಾತೆಯವರು ಉಚಿತವಾಗಿ ಪ್ರಯಾಣಿಕರ ನ್ನು ದಾಟಿಸ ಬಾರದೇನು?

... ಜಿಲ್ಲೆಯ ಅಂದಳೆಯ ಶ್ರೀ ಗಣೇಶ ... ಇಲ್ಲಿಯ ಶ್ರೀ ... ದೇವಸ್ಥಾನದಲ್ಲಿ ... ಪೆಟ್ಟಿಗೆಯನ್ನು ತಯಾರಿಸುವ ಕ್ರಮವನ್ನು ಪ್ರಯೋಗ ಮಾಡಿ ತೋರಿಸಿದರು. ... ಪೆಟ್ಟಿಗೆಯ ಮೂಲಕ ಲಕ್ಷಾ ... ರೂಪಾಯಿಗಳು ಪರದೇಶಕ್ಕೆ ಹೋಗುತ್ತವಾಗಿ ... ಈ ... ಹಿಂದುಸ್ಥಾನದಲ್ಲಿ ಹೊ ... ಲಾಭವಾಗುವದಾಗಿಯೂ ಶ್ರೀ ... ಇವರು ರಟ್ಟಿನಿಂದ ಬೆಂಕಿ ಪೆಟ್ಟಿಗೆಯನ್ನು ತಯಾರಿಸುತ್ತಾರೆ, ರಟ್ಟನ್ನು ಕೊಯ್ಯ ... ಶ್ರೀ ... ... ಒಂದು ... ಸ್ವ ... ಕಟ್ಟರು.

ಇಲ್ಲಿನ ಗಿಬ್ಬ ಹ್ಯಾಸ್ಕೂಲಿನ ವಿದ್ಯಾರ್ಥಿಗಳಾದ ... ಪಿ ... ಎಚ್. ... ಇವರು ... ಪರೀಕ್ಷೆಯಲ್ಲಿ ಉತ್ತೀರ್ಣ ರಾಗಿದ್ದಾರೆ.

ಸ ಭಾರ ಸ್ವೀಕಾರ

ಜಯಕರ್ನಾಟಕ— ವೈಶಾಖ ... ಸಂಪಾದಕ ... ಪ್ರಕಾಶಕ— ಶ್ರೀ ... ವೆಂಕಟ... , ಧಾರವಾಡ. ವಾರ್ಷಿಕ ... ರೂಪಾಯಿ ...

ಸುಬೋಧ— ... ತಿಂಗಳ ಪತ್ರಿಕೆ ... ಪ್ರಕಾಶಕ— ಶ್ರೀ ಎಂ ರಾಮರಾವ, ಬೆಂಗಳೂರ ಸಿಟಿ ... ಚಂದಾ ರೂ ...

ಹೊನ್ನಾವರ— ... ವಿಪರೀತ ಬೀಳುತ್ತದೆ ... ಹೊರ ... ಗ್ರಾಮದಲ್ಲಿ ಅಡಿಕೆ ... ಕೊಳೆ ... ಕಡಿಮೆ ... ಆಗದೇ ... ಒಕ್ಕಲಿಗರು ... ಬೆಳೆಯ ... ಲಕ್ಷಣಗ ... ಊರಲ್ಲಿ ... ಬೇಸಿಗೆ ... ಬಹಳ ಕಡೆ, ... ಪರಿಸಿದ್ದಾರೆ.

... ಹಳ್ಳಿಗಳಲ್ಲಿ ... ಗದ್ದಲ ... ದೇಯುಲ್ಲ ... ಪೊಲೀಸ ... ಈ ಬಗ್ಗೆ ... ತಕ್ಕೊಳ್ಳಬೇಕು.

ತೋಡೂರ— ... ಹೋತಗಳಿ ... ಬಿದ್ದಿದೆ ... ನೇ ರಾತ್ರಿಗೆ ... ಇತ್ತ ಕಡೆ ಊರ ಊರಲ್ಲಿ ಛಂಡಿ ಹಬ್ಬಕ್ಕೆ ಪ್ರಾರಂಭವಾಗಿದೆ

ಇಲ್ಲಿಯ ಲೋಕಪ್ರಿಯ ಪಾಟೀಲರಾದ ಮ| ರಾ| ಪುರ ಸೋತ್ರನು ರಾಮಚಂದ್ರ ... ಇವರು ... ನೇ ರಾತ್ರಿ ... ಸವಾರಳ್ಳಿ ... ಯೊಳಗೆ ಬಾವು ... ಕಾರವಾರದ ಆಸ್ಪತ್ರೆ ಯಲ್ಲಿಯೇ ಸ್ವರ್ಗಸ್ಥರಾದರೆಂದು ತಿಳಿಸಲು ಬಹಳೇ ವಿಷಾದವೆನಿಸುತ್ತದೆ. ಇವರು ... ಸಾ ಕರಿಗೆ ... ಪ್ರಥಮವಾಗಿ ... ಊರಲ್ಲಿ ... ಇಂಗ್ಲೀಷ ಶಾ ಲೆಯನ್ನು ತೆರೆದು ಉಳಿಸಿದರು. ಕಡೆಗೆ ಮೊದಲಿನ

ಪಾಟೀಲರಾದ ಇವರ ಚಿಗಪ್ಪನವರು ತೀರಿಕೊಂಡ ಮೇಲೆ ಇವರು ಮನೆಯಲ್ಲಿಯೇ ಬಂದು ಉಳಿದರು ಮತ್ತು ಲೋಕಾಗ್ರಹದ ಮೇಲಿಂದ ಈ ಊರ ಪಾಟೀ ಲಕನವನ್ನು ಕೈಕೊಂಡರು. ಇವರಿಗೆ ಸಂತತಿ ಇದ್ದಿದ್ದ ಮಕ್ಕಳು ಹುಟ್ಟಿ ಹುಟ್ಟಿ ಸಾಯುತ್ತಿದ್ದ ಕಾರಣ ಹಿಂದು ತರದ ವೈರಾಗ್ಯವೇ ಹುಟ್ಟಿತ್ತು. ಇವರು ಹಳ್ಳೀ ಇಂ ಗ್ಲೀಷು ಕಲಿತವರಿದ್ದು ಸಂಸ್ಕೃತದಲ್ಲಿ ಹಳ್ಳೀ ಅಂತರಂಗ ತಿಳಿದ್ದರು. ಇವರು ಇಂಗ್ಲ ಭಾಷೆಯನ್ನು ಕಲಿತವರಿದ್ದ ರೂ, ತಮ್ಮ ಧರ್ಮದಲ್ಲಿ ಇವರಿಗೆ ಹಳ್ಳೀ ಶ್ರದ್ಧೆ ಇತ್ತು. ಇಲ್ಲಿಯ ಕೆಲವು ವರ್ಷಗಳಿಂದ ಜೀರ್ಣ ಸ್ಥಿತಿಯಲ್ಲಿದ್ದ ಶ್ರೀ ಭೂಮಿ ದೇವತೆಯ ದೇವಸ್ಥಾನವನ್ನು ಇವರೇ ಮುಂದರಿಸಿಕೊಂಡು ವಿಶೇಷತಃ ತಮ್ಮ ಕುಟುಂಬದ ವರ ಸಹಾಯದಿಂದಲೇ ಕಟ್ಟಲು ಶುರು ಮಾಡಿ, ಪೂರ್ಣ ಮಾಡಿದರ. ಇವರ ಮರಣದಿಂದ ಊರೊ ಳಗಿನ ಎಲ್ಲಾ ಜನರಿಗೆ ಸಹ ಅತಿಶಯ ದುಃಖವೆನಿಸು ತ್ತದೆ. ಕಾಲಚಕ್ರಕ್ಕೆ ಉಪಾಯವಿಲ್ಲ. ಮೃತರಿಗೆ ಸದ್ಗತಿ ಪ್ರಾಪ್ತಿಯಾಗಲೆಂದು ಪರಮಾತ್ಮನ ಕಡೆಗೆ ನಮ್ಮೆಲ್ಲರ ... ಬೇಳಿಕೆಯಿದೆ.

ವೃತ್ತಸಾರ.

— ಕಲಕತ್ತೆಯಲ್ಲಿ ಶ್ರೀ ರಾಜರಾಜೇಶ್ವರೀ ದೇವಿಯ ಮೆರವಣಿಗೆಯನ್ನು ವಾದ್ಯಘೋಷದಿಂದ ಸಾಗಿಸಲು ಅಡ್ಡಿಯಾ ದ್ದರಿಂದ ಭಜಕರು ಪಲ್ಲಕ್ಕಿಯನ್ನು ಅಲ್ಲಿಯೇ ಬಿಟ್ಟು ನಡ ದರು. ಪೋಲೀಸರು ತಮ್ಮ ರಕ್ಷಣ ಮಾಡದ ಬಗ್ಗೆ ಸರ್ವ ದಿಶಗಳಿಗೆ ... ತಿಳಿಸಲಾಗಿದೆ. ಭಾರತೀಯರ ಸ್ವಾಧೀನ!

— ಸಿಂಧ ಪ್ರಾಂತದ ಲಾರ್ಕಾನಾ ಜಿಲ್ಹೆಯಲ್ಲಿ ಎರಡು ಗ್ರಾ ಮಗಳು ಸಮೂಲ ನಾಶವಾದವು. ಕರಾಚಿಯಲ್ಲಿ ಬೆಂಕಿ ಏಳಲಾರಂಭವಾಗಿವೆ. ಮೂರು ದಿನ ಮೂರು ಕಡೆ ಬೆಂಕಿ ಯ ಪ್ರಾದುರ್ಭಾವವಾಯಿತು. ನಷ್ಟವೇನು ವಿಶೇಷವಾ ಗಲಿಲ್ಲ.

— ಮಿರಜಾಪುರವು ಮದ್ರಾಸದಿಂದ ೩೦ ಮೈಲು ದೂರ ವಿದೆ. ಅಲ್ಲಿ ರಥೋತ್ಸವವಿತ್ತು. ಒಬ್ಬ ಹುಡುಗನು ರಥದ ಕೆಳಗೆ ಬಿದ್ದನು. ಅತನನ್ನು ಬದುಕಿಸಲು ಬಳಿಯ ಕೆಲವು ಮಾನಸಿಗರು ಯತ್ನ ಮಾಡುತ್ತಿರುವಾಗ, ಮಾನಸಿಗರೇ ರಥದ ಕೆಳಗೆ ಬಿದ್ದು ಪರಲೋಕವನ್ನೈದಿದರು. ವಿಧಿಘಟನೆ!

ಕಲಕತ್ತೆಯೊಳಗಿನ ಮಾರವಾಡಿ ಸಮಾಜದವರು ತಮಗೆ ಬಂದೂಕು ಲಾಯಸನ್ಸಗಳನ್ನು ಕೊಡಬೇಕೆಂ ದು ಸರಕಾರದ ಹತ್ತಿರ ಬೇಡಿಕೊಂಡಿದ್ದಾರೆ. ಸ್ವಸಂ ರಕ್ಷಣಕ್ಕೆ ತಮ್ಮನ್ನು ತಯಾರಿಸದಿದ್ದರೆ ದೊಂಬಿಯಲ್ಲಿ ತಮ್ಮ ರಕ್ಷಣವಾಗಲಾರದೆಂದು ಮಾರವಾಡಿಯರ ಹೇಳಿಕೆ

— ದಕ್ಷಿಣ ಆಫ್ರಿಕೆಯೊಳಗಿನ ಮೂಲ ನಿವಾಸಿಗಳು ಯು ರೋಪಿಯನ್ ಹೆಂಗಸರ ಮೇಲೆ ಅತ್ಯಾಚಾರಗಳನ್ನು ... ತ್ತಿದ್ದುದರಿಂದ, ಅದರನ್ನು ಸಂರಕ್ಷಿಸುವದಕ್ಕಾಗಿ ದಕ್ಷಿಣ ಆಫ್ರಿಕೆಯ ಸರಕಾರವು ಹೊಸ ಕಾಯಿದೆಯನ್ನು ಮಾಡ ಲಿಕ್ಕಿದೆ

— ಬೆಂಗಳೂರು ಮ್ಯುನಿಸಿಪಾಲಿಟಿಯವರು ತಮ್ಮಲ್ಲಿ ಯ ನೌಕರರಿಗೆ ... ಹಂಚುವ ವ್ಯ ವಸ್ಥೆ ಮಾಡಿರುವರು.

— ಕಲಕತ್ತೆಯ ಕೆಂಬೆಲ್ ಚಿಕಿತ್ಸಾಲಯದಲ್ಲಿ ... ಜೆನ್ ನ್ ಪ್ರಯೋಗವನ್ನು ಅಜಾಗ್ರತೆಯಿಂದ ನಡಿಸಿದ ... ೫ ಜನ ರೋಗಿಗಳು ಮೃತಪಟ್ಟರು!

— ಮೈಸೂರಿನಲ್ಲಿ ಜೂನ ೩ನೇ ತಾರೀಖಿಗೆ ಒಂದು ವೇಳೆ ಯ ವರೆಗೆ ಬಿರುಗಾಳಿ ಬೀಸಿ, ವಿಪರೀತ ಮಳೆ ಸುರಿಯಿ ತು. ದೀಪಸ್ತಂಭಗಳೂ, ಸಾಲಮರಗಳೂ ನೆಲಕುರುಳಿದ ವು, ಮನೆಯ ಮಾಡಗಳ ಹಂಚುಗಳೂ ಹಾರಿಹೋದವು

— ಆಸಾಮದೊಳಗಿನ ರಾಷ್ಟ್ರೀಯ ಸಭೆಯ ತಯಾರಿಯು ಭರದಿಂದ ನಡೆದಿದೆ ಸಭಾಮಂಟಪವು ಗೌಹತಿನಗರದಿಂದ ೪ ಮೈಲು ದೂರ ಕಟ್ಟುವ ಯೋಜನೆಯಾಗಿದೆ

— ಜಾತಿನಿಷ್ಠ ದೊಂಬಿಗಳಾಗುವ ಪ್ರದೇಶದಲ್ಲಿ ಲೋಕಲ್ ಬೋರ್ಡ, ಶಾಸನ ಕೌನ್ಸಿಲು ಮುಂತಾದವುಗಳಿಗಿದ್ದ ಮತದಾನದ ಅಧಿಕಾರವನ್ನು ಸರಕಾರವು ಸೆಳೆಕೊಳ್ಳಬೇಕೆಂದು ನಾತೇಜಬಹಾದ್ದೂರ ಸಪ್ರೂರವರ ಸೂಚನೆ! ಇದಕ್ಕೆ ನಮ್ಮ ಪಂಡಿತ ಮೋತೀಲಾಲರವರು ಅಲಹಾಬಾದಿನಲ್ಲಿರುವರು' ಜ್ಞಾತಿಯೊಳಗಿನ ದೊಂಬಿಗಳ ನಿವಾರಣಕ್ಕಾಗಿ ನಾ| ತೇಜಬಹಾದ್ದೂರ ಸಪ್ರೂರವರು ಸೂಚಿಸಿದ ಉಪಾಯ!'

— ಕಳೆದ ಜನವರಿಯಿಂದ ಮಾರ್ಚ ಕೊನೆ ವರೆಗಿನ ಮೂರು ತಿಂಗಳುಗಳಲ್ಲಿ ರೂಪಾಯಿ ೭೪೯ ಗಳ ಖಾದಿ ಹುಟ್ಟಿತು ೧೨೮೦೬ ರೂಪಾಯಿಗಳ ಖಾದಿಯು ಮಾರಾಟವಾಯಿತು ಹಿಂದುಸ್ಥಾನದಲ್ಲಿ ೪೬೫೨೪ ರೂಪಾಯಿಗಳ ಖಾದಿ ಹುಟ್ಟಿತು, ೭೧೫೦೩ ರೂಪಾಯಿಗಳ ಖಾದಿಯು ಮಾರಾಟವಾಯಿತು

— ಗುಜರಾಥದ ರಾಷ್ಟ್ರೀಯ ಶಿಕ್ಷಣಾಲಯದಲ್ಲಿ ಪತ್ರಿಕಾ ಶಾಲೆ, ಬಡಿಗ ಶಾಲೆ, ನೇಯ್ಗೆ, ಬಣ್ಣದ ಶಾಲೆ ಮುಂತಾದ ಕೈಗಾರಿಕೆಗಳ ವರ್ಗಗಳು ಪ್ರಾರಂಭವಾಗುವವು

— ತಿರುಪತಿಯ ಶ್ರೀ ವೆಂಕಟ್ರಮಣ ದೇವಾಲಯದಲ್ಲಿ ಉತ್ಸವ ಪ್ರತಿಯೊ ಅಕ್ಕಿ ೪೪೦೦೦ ಸೇರು, ಸಾವಕ್ಕಿ(?) ಅಂಗಡಿಯ ಅಕ್ಕಿ ೧೮೦೦೦೦, ತುಪ್ಪ ೮೪೦೦೦,ಎಣ್ಣೆ ೨೦೦೦೦ ಹೀಗೆ ವರ್ಷಕ್ಕೆ ವೆಚ್ಚವಾಗುತ್ತದೆ. ಮೈಗೆ ಹಚ್ಚಲಿಕ್ಕೆ ೯೦೦ ಸೇರು ಕೇಶರ, ೧೮೦ ಸೇರು ಪಚ್ಚಕರ್ಪೂರ, ೧೬೦ ವಂಶಾಕ(?) ಕಸ್ತೂರಿ ಬೇಕಾಗುತ್ತದೆ ಶ್ರೀ ವೆಂಕಟ್ರಮಣ ದೇವರ ವೈಭವ ಕೇಳಿ!

— ಬಿಹಾರ ಸರಕಾರದ ಪಾಟ್ನಾದಲ್ಲಿ ಸದ್ಯಕ್ಕೆ ಹೊರಡಿಸಿದ ಜಿಂಕಿಪಟ್ಟಿಗೆಯ ಕಾರಖಾನೆಯಲ್ಲಿ ದಿನಾ ೧೩೦ಗ್ರೋಸ್ (ಗ್ರೋಸ್ = ೧೪೪) ಪೆಟ್ಟಿಗೆಗಳು ತಯಾರಾಗುತ್ತಿವೆ ಈ ವರೆಗೆ ೪೦೧೦ ಗ್ರೋಸ್ ಪೆಟ್ಟಿಗೆಗಳು ತಯಾರಾಗಿವೆ

— ಲಾಹೋರದಲ್ಲಿ ಪಂಜಾಬ ವಿಶ್ವವಿದ್ಯಾಲಯದ ಬಿ ಎ ಎಮ್ ಎ ಪರೀಕ್ಷೆಯ ವಿದ್ಯಾರ್ಥಿಗಳು ಬರೆಕೊಟ್ಟ ಸುಮಾರು ೩೦೦ ಪರೀಕ್ಷೆಯ ಉತ್ತರಗಳು ಕಳವಾಗಿ ಹೋಗಿವೆ ಇನ್ನೇನೂ ಕಳುವಾಗಲಿಲ್ಲ

— ಭಡೋಚ ಮುನಿಸಿಪಾಲಿಟಿಗೂ ಸ್ಕೂಲ ಬೋರ್ಡಿಗೂ ತಿಕ್ಕಾಟವಾಗಹತ್ತಿದೆ. ಭಡೋಚ ಮುನಿಸಿಪಾಲಿಟಿಯು ಸ್ಕೂಲ ಬೋರ್ಡಿನವರು ತಮ್ಮ ಅಧಿಕಾರದ ೧-೨-೩ನೇ ಇಯತ್ತೆಗಳಲ್ಲಿ ಗುಜರಾಥದ ರಾಷ್ಟ್ರೀಯ ವಿದ್ಯಾಲಯದವರು ಪ್ರಕಟಿಸಿದ ಪಾಠದ ಪುಸ್ತಕಗಳನ್ನು ಹಚ್ಚಿದ್ದರು ನಾಲ್ಕನೇ ಇಯತ್ತೆಗೆ ಹಚ್ಚಿದ್ದ ಪುಸ್ತಕವನ್ನು ಕಡಿಮೆ ಮಾಡಿದ ಹೊರತು ಸರಕಾರವು ಗ್ರಾಂಟು ಕೊಡುವದಿಲ್ಲೆಂದು ಹಟ ಹಿಡಿದುಕೊಂಡು ಕೂತುಕೊಂಡಿತು. ಸ್ಕೂಲಬೋರ್ಡಿನವರು ಉಪಾಯ ಕಾಣದೆ ನಾಲ್ಕನೇ ಪುಸ್ತಕವನ್ನು ಕಡಿಮೆ ಮಾಡಿದರು ಸರಕಾರವು ಗ್ರಾಂಟು ಕೊಟ್ಟಿತು! ಮುನಿಸಿಪಾಲಿಟಿಯವರು ಮತ್ತೆ ಮುಂದಾಗಿ ೧-೨ನೇ ಇಯತ್ತೆಗಳಲ್ಲಿ ಹಚ್ಚಿದ ರಾಷ್ಟ್ರೀಯ ಪುಸ್ತಕಗಳನ್ನು ಕಡಿಮೆ ಮಾಡಬೇಕೆಂದು ಬಹುಮತದಿಂದ ನಿರ್ಣಯಿಸಿದರು ಅದನ್ನು ಮನ್ನಿಸಲು ಸ್ಕೂಲ ಬೋರ್ಡಿನವರು ಒಪ್ಪಲಿಲ್ಲ ಆದದರಿಂದ ಸರಕಾರವು ಕೊಟ್ಟ ಗ್ರಾಂಟಿನ ಹಣವನ್ನು ಸ್ಕೂಲಬೋರ್ಡಿಗೆ ಕೊಡಿಸಲು ನಿರಾಕರಿಸಿದರು ಇಯತ್ತೆಗಳಿಗೆ ಕ್ರಮಿಕ ಪುಸ್ತಕಗಳನ್ನು ಹಚ್ಚ ಹೇಳುವ ಅಧಿಕಾರವು ಮುನಿಸಿಪಾಲಿಟಿಗಿರುವದಿಲ್ಲ ಸರಕಾರವು ಕೊಟ್ಟ ಗ್ರಾಂಟಿನ ರಕಮನ್ನು ಪ್ರಥಮಿಕ ಶಿಕ್ಷಣ ಕಾಯಿದೆಯಂತೆ ಸ್ಕೂಲಬೋರ್ಡಿಗೆ ಒಪ್ಪಿಸಲು ಮುನಿಸಿಪಾಲಿಟಿಯು ಬದ್ಧವಿದೆ ಆದದರಿಂದ ಸರಕಾರವು ಕೊಟ್ಟ ಗ್ರಾಂಟನ್ನು ಸ್ಕೂಲಬೋರ್ಡಿಗೆ ಕೊಡಿಸದಿದ್ದರೆ, ಸ್ಕೂಲಬೋರ್ಡಿನವರು ಮುನಿಸಿಪಾಲಿಟಿಯ ಮೇಲೆ ಫಿರ್ಯಾದಿ ಮಾಡಲು ತಯಾರ ಮಾಡುತ್ತಿರುವರು! ಅಲ್ಲಿನವರಿಗಿಂತ ಸ್ಥಾನಿಕ 'ಸ್ವರಾಜ್ಯ' ದವರು ರಾಷ್ಟ್ರೀಯ ಗ್ರಂಥದ ಮೇಲೆ ವಿಶೇಷ ಕಟಾಕ್ಷವನ್ನಿಟ್ಟರುವರು!

— ತಿರುವಾಂಕೂರಿನ ಗೌಡ ಸಾರಸ್ವತ ಬ್ರಾಹ್ಮಣ ಪರಿಷತ್ತಿನ ಅಧಿವೇಶನವು ಕಳೆದ ತಾ, ೨೯-೩೦ನೆಯ ತಾರೀಖು ಕೆ ಶ್ರೀನಿವಾಸ ಪೈ ಬಿ ಎ, ಬಿ ಎಲ್, ರವರ ಅಧ್ಯಕ್ಷತೆಯಲ್ಲಿ ಜರುಗಿತು

— ಮದ್ರಾಸದೊಳಗಿನ ವೇಶ್ಯಾಗೃಹಗಳನ್ನು ಕಿತ್ತುಹಾಕಬೇಕೆಂದು ಮದ್ರಾಸ ಸರಕಾರದ ಯೋಚನೆ ಹಿಂದೆ ಸ್ಥಾನದೊಳಗಿನ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯ ವೇಶ್ಯೆಗಳ ಪಿಡುಗುಗಳನ್ನು ನಿರ್ಮೂಲಿಸಲು ರಾಷ್ಟ್ರಸಂಘವು ಒಂದು ಮಂಡಳವನ್ನು ನೇಮಿಸಲಿಕ್ಕಿರುವದಾಗಿ ಮದ್ರಾಸಿನ 'ಹಿಂದೂ' ಪತ್ರಿಕೆಯು ಪ್ರಕಟಿಸಿದೆ

— 'ಜ್ಞಾನಪ್ರಕಾಶ ನಾಗ. ಪ್ರಚಾರಭೂಷಣ' ಸಂಸ್ಥೆಗಳಿಗೆ ಬೆಂಕಿಯು ಅನಾಹುತದಿಂದ ಒದಗಿದ ಅಪಘಾತದಿಂದ ಪಾರಾಗುತ್ತಲು ಪುಣೆಯಲ್ಲಿ ವರ್ತಮಾನಪತ್ರಕಾರರು ಸಹಿಸಿದ ರೂಪಾಯಿ ೧೨೫೦೦ ರ ಪಟ್ಟಿಗೆ ಎತ್ತಿಕೊಡಿಸಿದರು ಭಾರತಸೇವಕ ಸಮಾಜದ ಸಭಿಕರಾಗಿ ಕೆಲವರ ರೂಪಾಯಿಗಳು ಬಂದಿವೆ ಪುಣೆಯ ಪ್ರಕಾಶ ಮಂಡಳಿಯವರು ೫೦೧ ರೂಪಾಯಿಗಳನ್ನು ಕಳಿಸಿದರು. ಬೆಂಕಿಯಿಂದ ಕೈ ಬಿಡಿಸಿಕೊಂಡ ಗ್ರಂಥಕಾರರ ಕೈ ಬರಹ(?)ದ ಮಹತ್ವದ ಕಾಗದ ಪತ್ರಗಳೂ ಹೊಸ ಗ್ರಂಥಗಳ ಹಸ್ತಪ್ರತಿಗಳೂ ನಷ್ಟವಾದವು ಅಲ್ಲಿ ಹೊರಡುವ ಸರ್ವಂಟ ಆಫ ಇಂಡಿಯಾ ಪತ್ರಿಕೆಯ ಸ್ವತಂತ್ರ 'ದಂಗ ಇಂಡಿಯನ' ಮುದ್ರಣಾಲಯದಲ್ಲಿ ಮುದ್ರಿಸಿಕೊಳ್ಳುವ ವ್ಯವಸ್ಥೆ ಮಾಡಲಾಗಿದೆ ಮುದ್ರಕರು ಸಮಾಜದ ಅಧ್ಯಕ್ಷರಾದ ಶಾಸ್ತ್ರಿಗಳಿಗೆ ಬರೆದಿರುವರು

— ಅಟಲಾಂಟಿಕ ಮಹಾಸಾಗರದ ದಂಡೆಯ ಮೇಲಿಂದ ಒಂದು ದೊಡ್ಡ ಜಾಹೀರಾತು ತಂತಿಯಿಲ್ಲದ ಸಂದೇಶವಾಹಕ ಯಂತ್ರದಿಂದ ಅನೇಕ ಖಂಡಗಳಲ್ಲಿ ಕೇಳಿಸಲಾಯಿತು ಒಂದು ಚಿಕ್ಕ ಈ ಸಂದೇಶದಲ್ಲಿ ಕಳೆದು ಹೋಯಿತು ಸಂಪತ್ತನ್ನು ಕೊಳ್ಳುವ ಸ್ಥಳದೊಳಗಿನ ಯಂತ್ರದಿಂದ ಲಕ್ಷ್ಯಕೊಡಿರಿ ಆ ಲಕ್ಷ್ಯಕೊಡುವದರಿಂದ ೫ ನಿಮಿಷಗಳಲ್ಲಿ ಪತ್ತೆ ಹಚ್ಚಲಾಯಿತು'

— ೧೯೨೭ ನೇ ಇಸ್ವಿಯಲ್ಲಿ ಇಂಗ್ಲಂಡಕ್ಕೆ ದೊಡ್ಡ ಕಷ್ಟ ಪ್ರಾಪ್ತವಾಗುವದೆಂದು ಒಬ್ಬ ಭವಿಷ್ಯವಾದಿಯು ಹೇಳಿದ

— ಮದ್ರಾಸ ಪಟ್ಟಣದಲ್ಲಿ ಬಿಸಿಲು ಕಠಿಣವಾಗಿದೆ ಮೇ ೨೯-೩೦-೩೧ನೇಗೆ ವಿಪರೀತ ಬಿಸಿಲು ಬಿದ್ದಿತು ಬ್ರಿಟಿಷ ಕೋಲ ಎಂಬ ಸೈನಿಕರೊಬ್ಬರು ಬಿಸಿಲಿನ ತಾಪವನ್ನು ತಾಳಲಾರದೆ ಸಿಡಿಗುಂಡಿನಿಂದ ಬಾಯಲ್ಲಿ ಹೊಡಕೊಂಡು ಪ್ರಾಣಬಿಟ್ಟ, ಕೈಯಲ್ಲಿದ್ದ ಪಿಸ್ತೂಲಿನಿಂದ ಆತ್ಮಹತ್ಯವನ್ನು ಮಾಡಿದನು

— ಚೀನ ದೇಶದ ಶಾಂಘಾಯ ಪಟ್ಟಣದಲ್ಲಿ ಪುನಃ ವಿದ್ಯಾರ್ಥಿಗಳ ಮೆರವಣಿಗೆಗೆ ಆತಂಕವಾಗಿ ದೊಂಬಿಗಳಾಗುತ್ತಿರುವವು ಮೇ ೩೦ನೇ ರವಿವಾರ ರಾತ್ರಿ ವಿದ್ಯಾರ್ಥಿಗಳು ಪರಸ್ಪರ ಕೊಲೆ ಮಾಡಿದರು. ಕೆಲವು ಪರದೇಶಿಯರು ಒಂದು ಮನೆಯನ್ನು ಆಶ್ರಯಿಸಿದ್ದರು ಆ ಮನೆಗೂ ಮುತ್ತಿಗೆಯಾಯಿತು'

— ಕಟಕ ಪಟ್ಟಣದಲ್ಲಿ ಮೇ ೨೯ನೇ ಶನಿವಾರ ಅಪರಾಹ್ನ ದವರೆಗೆ ಭಯಂಕರವಾದ ಗಾಳಿ ಬೀಸಿ ಇಬ್ಬರು ಮಡಿದರು ಊರಲ್ಲಿ ಒಂದೂ ಮನೆಯು ನೆಟ್ಟಗೆ ನಿಂತುಕೊಳ್ಳಲಿಲ್ಲ

— ಬೇಸಿಗೆಯದ ಹಿಗ್ಗ್ ಮೈಸೂರ ಸಂಸ್ಥಾನದ ಪೆಲ್ಲಾಂಪೂರ ಎಂಬಲ್ಲಿ ಬೇಸಾಯಗಾರರೊಳಗೆ ದೊಂಬಿಯಾಗಿ ೧೩ ಮಂದಿಗಳಿಗೆ ಗಾಯಗಳಾಗಿವೆ ೩೫ ಮಂದಿಗಳಿಗೆ ಶಿಕ್ಷೆ ವಿಧಿಸಲಾಗಿದೆ

— ಬ್ರಹ್ಮದೇಶದ ಅರಾಕಾನ ಪ್ರದೇಶದಲ್ಲಿ ಬಿರುಗಾಳಿಯಿಂದ ೨೫೦ ಜನರು ಮಡಿದರು ನಷ್ಟವೆಂದು ಹೇಳುತ್ತಾರೆ, ದನಕರುಗಳೆಲ್ಲವೂ ಯಮಸದನಕ್ಕೆ ಹೋದವು.

— ಮಹಾತ್ಮರು ಆಗಸ್ಟ ತಿಂಗಳಲ್ಲಿ ರಾಯಲ ದೇಶದಲ್ಲಿ ಸೇರಲಿಕ್ಕಿದ್ದ ವಿದ್ಯಾರ್ಥಿ ಪರಿಷತ್ತಿಗೆ ಹೋಗಲಿಕ್ಕಿದ್ದರೆಂದು ಒಂದು ಸುದ್ದಿ.

ಪ್ರತಾಪಗಢದೊಳಗಿನ ಶ್ರೀ ದೇವೀ ಮಂದಿರವು ೧೯೨೬ನೇ ಸಾಲಿನಲ್ಲಿ ಸಭಾಮಂಟಪ ಸಹಿತ ಸುಟ್ಟು ೩ ಲಕ್ಷ ನಷ್ಟವಾಗಿತ್ತು ಸಾತಾರೆಯ ಮಹಾರಾಜ ಸಾಹೇಬರ ಶ್ರೀಮತಿ ತಾರಾಬಾಯಿಯವರು ಆ ಮಂದಿರವನ್ನು ಕಟ್ಟಿಸಲಿಕ್ಕೆ ಒಂದು ಕಮೀಟಿಯನ್ನು ನೇಮಿಸಿದ್ದರು ೨ ಲಕ್ಷ ರೂಪಾಯಿಗಳು ಒಟ್ಟುಗೂಡಿವೆ

— ಕಲಕತ್ತೆಯೊಳಗಿನ ದೊಂಬಿಗೆ ಬಹುಮಟ್ಟಿಗೆ ಪುಂಡರೇ ಕಾರಣವೆಂದು ಸರಕಾರದ ಗ್ರಹಿಕೆಯಾಗಿ, ಅನೇಕ ಮದ್ಯದ ಅಂಗಡಿಗಳು ನಿಲ್ಲಿಸಲ್ಪಟ್ಟವೆ ಇದೊಂದು ಒಳಿತು ದೊಂಬಿಯಿಂದಾದಗಿತು.

— ತ್ರಾವಣಕೋರದ ಸಂಸ್ಥಾನದವರು ತಮ್ಮ ಸಂಸ್ಥಾನದಲ್ಲಿ ಹೊರಡುವ ವರ್ತಮಾನಪತ್ರಗಳೆಲ್ಲ ೫೦೦ ರೂಪಾಯಿಗಳ ಠೇವು ಇಡಬೇಕೆಂದು ಕಾನೂನು ಮಾಡಿರುವರು

ವಿಠೋಬಾಲ ಎಂಬ ಒಂದು ಗ್ರಾಮದಲ್ಲಿ ೨೫ ಮಂದಿ ದೊಂಬಿಗಾರರು ಸಶಸ್ತ್ರರಾಗಿ ನಡುರಾತ್ರಿಯಲ್ಲಿ ಒಂದು ಮನೆಯನ್ನು ಒಳಹೊಕ್ಕು, ಯಜಮಾನನಿಗೆ ಹೊಡೆದು ೬ ಸಾವಿರ ರೂಪಾಯಿಗಳನ್ನು ಕೊಂಡೊಯ್ದರು

— ಡಾ| ಫೋರೆಸ್ಟರವರು ಒಂದು ಅದ್ಭುತ ಶೋಧವನ್ನು ಮಾಡಿರುವರು. ಕೆಲವು ಚಿತ್ರಪಟಗಳಲ್ಲಿ ಅಭಿನಯಗಳು ಕಾಣುತ್ತವೆ, ಫೋನೋಗ್ರಾಫದಲ್ಲಿಯು ಗದ್ಯ-ಪದ್ಯಗಳು ಕೇಳಿಬರುತ್ತವೆ, ಫೋರೆಸ್ಟರವರು ಅಭಿನಯ ಹಾಗು ಗಾಯನಗಳನ್ನು ಒಮ್ಮೆಲೇ ಅಡಕಗೊಳಿಸುವ ಚಿತ್ರಪಟಗಳನ್ನು ತಯಾರಿಸಿರುವರು ಇದೊಂದು ದೊಡ್ಡ ಶೋಧ!

— ನಮ್ಮ ಕೊಂಕಣಪಟ್ಟಿಯೊಳಗಿನ ನಾಗೋಟಣಾ ಎಂಬಲ್ಲಿ ಒಂದು ಮದ್ಯದ ಅಂಗಡಿಯಿದೆ. ಈ ಅಂಗಡಿಯಲ್ಲಿ ಅಸ್ಪೃಶ್ಯರು ಮದ್ಯ ಕುಡಿದರೆಂತೆ. ಸ್ಪೃಶ್ಯ ವರ್ಗದೊಳಗಿನ ಕೆಲವರು ಈ ಅಂಗಡಿಗೆ ಬಹಿಷ್ಕಾರ ಹಾಕಿದರು ಅಂಗಡಿಕಾರನಿಗೆ ಒಂದು ದೊಡ್ಡ ಸಂಕಟವಾಯಿತು. ಪುಣ್ಯಾತ್ಮ ಬ್ರಾಹ್ಮಣರೊಬ್ಬರು ಹೇರಳ ದಕ್ಷಿಣೆ ಕೊಂಡು, ಮದ್ಯವನ್ನೂ, ಅಂಗಡಿಯನ್ನೂ ಪುನೀತ ಮಾಡಿ ಸ್ಪೃಶ್ಯರಿಂತವನ್ನು ಹೋಗಲಾಡಿಸಿದರು ಎಂಥ ಬ್ರಾಹ್ಮಣನಿವನು!'

— ಕೊಲ್ಹಾಪುರದ ಮುನಿಸಿಪಾಲಿಟಿಯವರು ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಬೇಕೆಂದು ವಿಚಾರ ಮಾಡುತ್ತಿರುವರು. ಪೇಟೆ ಪೇಟೆಯಲ್ಲಿ ಒಂದೊಂದು ಶಿಕ್ಷಣ(?) ಮಂದಿರವನ್ನು ತೆರೆಯಬೇಕೆಂದೂ ಅವರ ಆಲೋಚನೆ ಅದು ಕೈಗೂಡಿದರೆ ಬಡಬಾಲಕರಿಗೆ ಬಹಳ ಒಳಿತು

BATLIBOI'S
Accountancy Training Institute
Recognised by
The G. D. A. Board
Offers best training in Accounting Banking Company Management and Secretarial Work and Theory and Practice of Commerce
Best staff, Individual attention
fee moderate, and payable by instalments.
Send for Prospectus at Yusuf Buildings, Churchgate street Fort, Bombay
You are invited to make thorough enquiry before joining.
TUITION BY POST
IS OUR SPECIALITY.

ಮಹಾತ್ಮರ ಆತ್ಮಚರಿತ್ರೆ.

ಎರಡನೇ ಸರ್ಗ

(೨) ನನ್ನ ಸಂಸಾರಾರಂಭ.

ನನ್ನ ಅಣ್ಣನು ನನ್ನ ಮೇಲೆ ಬಹು ದೊಡ್ಡ ಆಶೆ ಮಾಡಿದ್ದನು. ದ್ರವ್ಯಾರ್ಜನೆ ಮೊದ್ದಸ್ತಿಕೆ ಹಾಗು ಕೀರ್ತಿಗಳನ್ನು ಆತನು ವಿಪರೀತವಾಗಿ ಬಯಸುತ್ತಿದ್ದನು. ಆತನು ಔದಾರ್ಯವಂತನು, ಬಹಳ ಔದಾರ್ಯವಂತನು. ಇದರಿಂದ ಆತನ ಒಳ್ಳೆ ಗೆಳೆಯರ ಗುಂಪು ವಿಶೇಷ. ಗೆಳೆಯರ ಮಧ್ಯಸ್ಥಿಕೆಯಿಂದ ನನಗೆ ವಕೀಲಿಕೆ ಸಿಗುವದೆಂದು ಆತನು ಎಣಿಸಿದ್ದನು. ನನಗೆ ಬಹಳ ವಕೀಲಿಕೆ ದೊರಕಿ ಹೇರಳ ಸಂಪಾದನೆಯಾಗುವದೆಂದು ಆತನು ಎಣಿಸಿ ಮನೆಯ ಖರ್ಚನ್ನು ವಿಪರೀತವಾಗಿ ಬೆಳೆಸಿಬಿಟ್ಟಿದ್ದನು. ನನಗೆ ವಕೀಲಿಕೆ ಸಿಗುವ ಪೂರ್ವತಯಾರಿಯನ್ನೆಲ್ಲ ಆತನು ಪರಿಶ್ರಮಪೂರ್ವಕವಾಗಿ ಮಾಡಿದ್ದನು.

ಪರದೇಶಪ್ರಯಾಣದ ಮೂಲಕ ನನ್ನ ಜಾತಿಯಲ್ಲಾದ ಕೋಲಾಹಲವು ಇನ್ನೂ ಶಾಂತವಾಗಿದ್ದಿಲ್ಲ. ಇದರಿಂದ ಜಾತಿಯಲ್ಲಿ ಎರಡು ಪಕ್ಷಗಳಾಗಿದ್ದವು. ಒಂದು ಪಕ್ಷವು ಕೂಡಲೆ ನನ್ನನ್ನು ಜಾತಿಯಲ್ಲಿ ಸೇರಿಸಿಕೊಂಡಿತು. ನನ್ನನ್ನು ಜಾತಿಯ ಹೊರಗೇ ಇಡಬೇಕೆಂದು ಇನ್ನೊಂದು ಪಕ್ಷದವರು ಹಟಹಿಡಿದರು. ಜಾತಿಯಲ್ಲಿ ಸೇರಿಸಿಕೊಳ್ಳಲೊಪ್ಪಿದ ಪಕ್ಷದವರ ಹೇಳಿಕೆಯಂತೆ, ನನ್ನ ಅಣ್ಣನು ರಾಜಕೋಟಿಗೆ ಹೋಗುವ ಮುಂಚಿತವಾಗಿ ನನ್ನನ್ನು ನಾಶಿಕಕ್ಕೆ ಒಯ್ದನು. ಪಾವನವಾದ ನದಿಯಲ್ಲಿ ಸ್ನಾನ ಮಾಡಿಸಿದನು. ರಾಜಕೋಟಿಗೆ ಹೋದ ಬಳಿಕ, ಜಾತಿಯವರಿಗೊಂದು ಭೋಜನ ಕೊಟ್ಟನು. ಇವೆಲ್ಲ ನನಗೆ ಸೇರಲಿಲ್ಲ. ನನ್ನ ಮೇಲೆ ನನ್ನ ಅಣ್ಣನ ಪ್ರೀತಿ ವಿಶೇಷ. ಅದರಂತೆಯೇ ಅಣ್ಣನ ಮೇಲೆ ನನ್ನ ಭಕ್ತಿಯೂ ಹೆಚ್ಚು. ಆದರಿಂದ ಆತನ ಹೇಳಿಕೆಯನ್ನೇ ಪ್ರಾಧಾನ್ಯವಾಗಿ ನಾನು ಮನ್ನಿಸಿ ಆತನಿಗೆ ಅಧೀನನಾಗಿ ನಾನು ನಡೆಕೊಂಡೆನು. ನನ್ನನ್ನು ಸೇರಿಸಿಕೊಳ್ಳಲೊಪ್ಪದ ಜಾತಿಯ ಬಣದಲ್ಲಿ ಸೇರಲು ನಾನೆಂದೂ ಯತ್ನ ಮಾಡಲಿಲ್ಲ. ಆ ಬಣದ ವ್ಯಕ್ತಿಗಳ ವಿಷಯವಾಗಿ ನನಗೆಂದೂ ದ್ವೇಷವುಂಟಾಗಲಿಲ್ಲ. ಕೆಲವರಂತು ನನಗೆ ದೂರ ಮಾಡಹತ್ತಿದರು. ನಾನೂ ಅವರ ಗೊಡವೆಗೆ ಹೋಗಲಿಲ್ಲ. ಜಾತಿಬಹಿಷ್ಕಾರದ ಬಂಧನಗಳನ್ನೆಲ್ಲ ನಾನು ಪಾಲಿಸಿದೆನು. ಈ ಮೂಲಕ ನನ್ನ ಮಾವ, ಅತ್ತೆ, ತಂಗಿ, ಭಾವ ಮೊದಲಾದ ಸಂಬಂಧಿಗಳ್ಯಾರೂ ನನಗೆ ಆಮಂತ್ರಿಸುತ್ತಿರಲಿಲ್ಲ. ಅವರ ಮನೆಗಳಲ್ಲಿ ನೀರು ಕುಡಿಯಲಿಕ್ಕೆ ಸಹ ನಾನೊಪ್ಪಲಿಲ್ಲ. ಅಂತರಂಗದಿಂದ ನನ್ನ ನೆಂಟರು ಈ ಪ್ರತಿಬಂಧವನ್ನು ಮುರಿಯಲಿಕ್ಕೆ ತಯಾರಿದ್ದರು. ಆದರೆ, ಬಹಿರಂಗದಿಂದ ನಾನು ಮಾಡಲಾಗದ ಕೆಲಸವನ್ನು ಅಂತರಂಗದಿಂದ ಮಾಡುವದು ನನ್ನ ತತ್ವಕ್ಕೆ ವಿರೋಧವಾಗಿತ್ತು.

ಹೀಗೆ ನಾನು ಜಾತಿ ನಿಯಮಗಳನ್ನು ಜಾಗ್ರತೆಯಾಗಿ ಪಾಲಿಸಿದ್ದರಿಂದ ಜಾತಿಯವರು ನನಗೆಂದೂ ಉಪದ್ರವ ಕೊಡಲಿಲ್ಲ. ನಾನು ಬಹಿಷ್ಕೃತನೆಂದು ನನ್ನನ್ನು ಎಣಿಸುವ ಬಣದವರೂ ನನಗೆ ಪ್ರೀತಿಯಿಂದಲೂ, ಔದಾರ್ಯದಿಂದಲೂ ನಡಿಸಿಕೊಂಡರು. ನನ್ನ ಕೆಲಸದಲ್ಲಿಯೂ ಅವರು ನನಗೆ ನೆರವಾದರು. ಆದರೆ, ಜಾತಿಗಾಗಿ ನನ್ನಿಂದೇನಾದರೂ ಸೇವೆ ಮಾಡಿ ತಂದು ಅವರೆಂದೂ ಎಣಿಸಲಿಲ್ಲ. ಅವರಿಗೆ ಪ್ರತೀಕಾರ ಮಾಡದ್ದರಿಂದ ಇವೆಲ್ಲ ಒಳ್ಳೇ ಪರಿಣಾಮವಾಯಿತೆಂದು ನಾನು ನಂಬುತ್ತೇನೆ. ಜಾತಿಯಲ್ಲಿ ಸೇರಲಿಕ್ಕೆ ನಾನು ಪ್ರಯತ್ನಪಟ್ಟಿದ್ದರೆ, ಮತ್ತಿಷ್ಟು ಬಣಗಳನ್ನು ಮಾಡಲು ನಾನು ಯತ್ನಿಸಿದ್ದರೆ, ಜಾತಿಯವರಿಗೆ ಪ್ರಕ್ಷುಬ್ಧಗೊಳಿಸಿದ್ದರೆ, ಅವರು ನನ್ನ ಮೇಲೆ ಸೇಡು ತೀರಿಸಿಕೊಳ್ಳಲುದ್ಯುಕ್ತರಾಗುತ್ತಿದ್ದರು, ಮತ್ತು ಈ ಉಪದ್ರವಗಳಿಗಿಂತ ಸುರಕ್ಷಿತವಾಗಿರದೆ ಹುದಲು ವಿಲಾಯತಿಯಿಂದ ಹಿಂದಿರುಗಿದ ನಾನು ಕೋಲಾಹಲದಲ್ಲಿ ಸಿಲುಕಿಕೊಳ್ಳುತ್ತಿದ್ದೆ, ಅನೇಕ ಪ್ರಕಾರದ ಕಪಟಗಳನ್ನೂ ಆಚರಿಸುತ್ತಿದ್ದೆ.

ನನ್ನ ಹೆಂಡತಿಯೊಡನೆ ಇರುವ ನನ್ನ ಸಂಬಂಧಗಳು ಇನ್ನೂ ನನಗೆ ಇಷ್ಟವಾಗುವಂತಿದ್ದಿಲ್ಲ. ವಿಲಾಯತಿಯಲ್ಲಿ ಉಳಕೊಂಡಾಗ್ಯೂ ನನ್ನ ಮತ್ಸರವು ದೂರವಾಗಲಿಲ್ಲ. ಚಿಕ್ಕ ಚಿಕ್ಕ ವಿಷಯಗಳಲ್ಲಿಯೂ ನಾನು ಮತ್ಸರ ಮಾಡುತ್ತಿದ್ದೆ, ಸಂಶಯಪಡುತ್ತಿದ್ದೆ. ಇದರಿಂದ ನನ್ನ ಯಾವ ಮನೋರಥವೂ ಕೈಗೂಡಲಿಲ್ಲ. ನನ್ನ ಹೆಂಡತಿಯು ಓದ ಬರಹ ಕಲಿಯಬೇಕೆಂದೂ ಅವಳ ಅಭ್ಯಾಸದಲ್ಲಿ ನಾನು ನೆರವಾಗಬೇಕೆಂದೂ ನನ್ನ ಮನೋನಿಶ್ಚಯವಾಗಿತ್ತು. ಇದಕ್ಕೆ ನನ್ನ ಸ್ತ್ರೀಲಾಂಪಟ್ಯವೇ ಅಡ್ಡ ಬಂತು. ನನ್ನ ದೋಷಕ್ಕಾಗಿ ನನ್ನ ಹೆಂಡತಿಯು ಕಷ್ಟಪಡಬೇಕಾಯಿತು. ಒಮ್ಮೆ ಅವಳನ್ನು ನಾನು ತವರುಮನೆಗೆ ಕಳಿಸಲುದ್ಯುಕ್ತನಾದೆ ಮತ್ತು ಅವಳು ಬಹಳ ಕಷ್ಟಕ್ಕೊಳಗಾದ ನಂತರ ನಾನು ಅವಳನ್ನು ಬರಮಾಡಿಕೊಳ್ಳಲು ಸಮ್ಮತಿಪಟ್ಟೆ. ಇದೆಲ್ಲ ಕೇವಲ ಮೂರ್ಖತನವೆಂದು ಬಳಿಕ ನನಗೆ ತಿಳಿಯಿತು.

ಬಾಲಶಿಕ್ಷಣದ ಸುಧಾರಣೆ ಮಾಡಬೇಕೆಂದು ನನ್ನ ಸಂಕಲ್ಪವಿತ್ತು. ನನ್ನ ಅಣ್ಣನಿಗೆ ಮಕ್ಕಳಿದ್ದರು. ನಾನು ವಿಲಾಯತಿಗೆ ಹೋಗುವಾಗ ಹುಟ್ಟಿದ ಮಗುವು ಈಗ ೪ ವರ್ಷ ಪ್ರಾಯದ ಮಗನಾಗಿದ್ದನು. ಈ ಚಿಕ್ಕ ಬಾಲಕರಿಗೆ ಶಾರೀರಿಕ ವ್ಯಾಯಾಮ ಮಾರ್ಗಗಳನ್ನು ಕಲಿಸಿ ಅವರನ್ನು ಸದೃಢವಾಗಿ ಮಾಡಬೇಕೆಂದು ನಾನು ಕಲ್ಪಿಸಿಟ್ಟೆ. ನಾನು ಸ್ವತಃ ಅವರಿಗೆ ಮಾರ್ಗದರ್ಶಕನಾಗಿ ಕಲ್ಯಾಣ ಮಾಡಬೇಕೆಂದೂ ನನ್ನ ಬಯಕೆ ಇತ್ತು. ನನ್ನ ಅಣ್ಣನೂ ನನ್ನ ವಿಚಾರಕ್ಕೆ ಬೆಂಬಲವಿತ್ತನು. ಸಾಧಾರಣ ಮಟ್ಟಿಗೆ ನನ್ನ ಪ್ರಯತ್ನವು ನೆರವೇರಿತು. ನನಗೆ ಚಿಕ್ಕ ಮಕ್ಕಳೊಡನೆ ಸಹವಾಸ ಮಾಡುವದೇ ವಿಶೇಷ ಪ್ರೀತಿ. ಅವರೊಡನೆ ಆಟವಾಡುವ ಚೇಷ್ಟೆ ಮಾಡುವ ಪ್ರವೃತ್ತಿಯು ಇನ್ನೂ ನನ್ನಲ್ಲಿ ಉಳಿದಿದೆ. ಅಂದಿನಿಂದ ನಾನು ಚಿಕ್ಕ ಬಾಲಕರ ಶಿಕ್ಷಣವನ್ನು ಚಲೋ ರೀತಿಯಿಂದ ನಡಿಸಬಲ್ಲೆನೆಂದು ನನಗೆ ತೋರುತ್ತಿದೆ.

ಆಹಾರದಲ್ಲಿಯೂ ಸುಧಾರಣೆ ಮಾಡುವದು ಅವಶ್ಯವಿತ್ತು. ಚಹಾ ಹಾಗು ಕಾಫಿಗಳು ನಮ್ಮ ಮನೆಯಲ್ಲಿ ಈ ಮೊದಲೇ ಬಿಡಾರು ಹೂಡಿದ್ದವು. ನಮ್ಮ ಮನೆಯಲ್ಲಿ ಇಂಗ್ಲಿಷ ರೀತಿ ಇರಬೇಕೆಂದು ಅಲ್ಲಿಯಿಂದ ನನ್ನ ಅಣ್ಣನು ತಯಾರಿ ಮಾಡಿದ್ದನು. ಅದಕ್ಕಾಗಿ ಚೀನೀ ಮಣ್ಣಿನ ಪಾತ್ರೆಗಳನ್ನು ಕೊಂಡುಕೊಂಡಿದ್ದನು. ನನ್ನ ಸುಧಾರಣೆಯಿಂದ ನನ್ನ ಅಣ್ಣನ ಪೂರ್ವತಯಾರಿಗೆ ಕಳಸ ಹಾಕಿದಂತಾಯಿತು. ಚಹಾ-ಕಾಫಿಗಳನ್ನು ಹೊರದೂಡುವದಕ್ಕಾಗಿ ನಾನು ತೋಕ ಗೋಧಿ ಹಾಗು ಕೋಕೋಗಳಿಗೆ ಪ್ರವೇಶ ಕೊಟ್ಟೆನು. ಇದರಿಂದ ಚಹಾ ಕಾಫಿಗಳಂತೆ ಇವೂ ಬಿಡಾರು ಹೂಡಿದವು. ಬೂಟುಗಳೂ ಮೊಟ್ಟೆ ಜೋಡಿಗಳೂ ನಮ್ಮಲ್ಲಿದ್ದವು. ಯುರೋಪಿಯನ್ ಪೋಷಾಕನ್ನು ಧರಿಸಲಾರಂಭಿಸಿದರೆ, ನಾನು ಸಂಪೂರ್ಣವಾಗಿ ಮುಗಿಸಿದವನಾದೆ.

ಹೀಗೆ ಖರ್ಚು ಬೆಳೆದ ಬಳಿಕ ದಿನಾ ಹೊಸ ಹೊಸ ಸಾಮಗ್ರಿಗಳಿಗೆ ಪ್ರವೇಶವಾಗುತ್ತಿತ್ತು. ಮನೆಯ ಬಾಗಿಲಲ್ಲಿ ಆಯಾಸಪಟ್ಟು ದೊಡ್ಡದೊಂದು ಬಿಳೇ ಆನೆಯನ್ನೇ ಕಟ್ಟಿದಂತಾಗಿತ್ತು. ಅದಕ್ಕೆ ತಗಲುವ ಖರ್ಚು ಎಲ್ಲಿಂದ ಬರಬೇಕು? ರಾಜಕೋಟದಲ್ಲಿ ವಕೀಲಿಕೆ ನಡಿಸಹತ್ತಿದರೆ ನಿಶ್ಚಯವಾಗಿ ನನ್ನ ನಗೆಗೇಡಾಗುತ್ತಿತ್ತು. ನನಗೆ ಸಾಮಾನ್ಯ ವಕೀಲಿಯ ಜ್ಞಾನವಿದ್ದಿಲ್ಲ. ಆದರೂ ಸಾಮಾನ್ಯ ವಕೀಲರಿಗೆ ಕೊಡುವದಕ್ಕಿಂತ ೧೦ ಪಾಲು ಫೀಯನ್ನು ನಾನು ಅಪೇಕ್ಷಿಸುತ್ತಿದ್ದೆ. ನನ್ನ ವಕೀಲಿಕೆ ನಡೆಯುವ ಮೂರ್ಖ ಪಕ್ಷಗಾರರ್ಯಾರೂ ಸಿಗಲಿಲ್ಲ. ಒಮ್ಮೆ ಅಂಥ ಪಕ್ಷಗಾರರು ಸಿಕ್ಕಿದರೂ, ಅಜ್ಞಾನಿಯಾದ ನಾನು ಹೆಮ್ಮೆ ಹಾಗು ಠಕ್ಕತನವನ್ನು ಆಚರಿಸಿ ಮಾನವ ಜಾತಿಗೆ ನನ್ನಿಂದ ಸಲ್ಲಬೇಕಾದ ಋಣವನ್ನು ಹೆಚ್ಚಿಸಬೇಕೇನು?

ಮುಂಬಯಿಗೆ ಹೋಗಿ ಹೈಕೋರ್ಟಿನಲ್ಲಿ ಕೆಲವು ಕಾಲ ಅನುಭವ ಪಡೆಯಬೇಕೆಂದು ಗೆಳೆಯರು ಉಪದೇಶಿಸಿದರು. ಹಿಂದುಸ್ಥಾನದೊಳಗಿನ ಕಾಯಿದೆಯನ್ನು ಅಭ್ಯಾಸ ಮಾಡಿ ಸ್ವಲ್ಪ ವಕೀಲಿಕೆಯನ್ನು ನಡಿಸಲಿಕ್ಕಾಗಿ ಗೆಳೆಯರು ಉಪದೇಶ ಮಾಡಿದರು. ಈ ಸೂಚನೆಯನ್ನು ಮನ್ನಿಸಿ ನಾನು ಮುಂಬಯಿಗೆ ಹೊರಟೆನು.

ಅಲ್ಲಿ ನನ್ನ ಸಂಸಾರವನ್ನು ಪ್ರಾರಂಭಿಸಿದೆನು. ನನ್ನೊಡನೆ ಅಡಿಗೆ ಭಟ್ಟನೊಬ್ಬನನ್ನು ತಂದಿದ್ದೆನು. ನನ್ನಷ್ಟೇ ಅವನು ನಿರರ್ಥಕ ಪ್ರಾಣಿಯು. ಅವನು ಬ್ರಾಹ್ಮಣನು. ಅವನಿಗೆ ಆಳೆಂದು ನಡಿಸಿಕೊಳ್ಳದೆ ಮನೆಯವನಂತೆ ನಡಿಸಿಕೊಂಡೆನು. ಅವನು ನೀರನ್ನಿಷ್ಟು ಹೊಯ್ದುಕೊಳ್ಳುತ್ತಿದ್ದನು, ಮೈಯನ್ನು ತೊಳಕೊಳ್ಳುತ್ತಿದ್ದಿಲ್ಲ. ಅವನ ಧೋತರವೂ, ಜನಿವಾರವೂ ತೀರ ಹೊಲಸಾಗಿದ್ದವು. ಧರ್ಮಶಾಸ್ತ್ರಗಳ ಗಂಧಗಾಳಿ ಅವನಿಗಿದ್ದಿಲ್ಲ. ಆದರೆ, ಅವನಿಗಿಂತ ಚಲೋ ಅಡಿಗೆಭಟ್ಟನನ್ನು ಸಂಪಾದಿಸುವ ಬಗೆ ಇದ್ದಿಲ್ಲ.

"ಒಳ್ಳೇದು ರವಿಶಂಕರನೇ, (ಅಡಿಗೆ ಭಟ್ಟನ ಹೆಸರು) ನಿನಗೆ ಅಡಿಗೆ ಮಾಡಲು ಬರುತ್ತಿರಲಿಕ್ಕಿಲ್ಲ, ಸಂಧ್ಯಾವಂದನೆಯು ನಿನಗೆ ಗೊತ್ತಿರಬೇಕು " ಇತ್ಯಾದಿ ನಾನು ಅವನಿಗೆ ಕೇಳುತ್ತಿದ್ದೆ.

" ಸಂಧ್ಯೆಯೋ! ನೇಗಿಲವೇ ನನ್ನ ಸಂಧ್ಯೆ, ಮತ್ತು ಗುದ್ದಲಿಯೂ ನನ್ನ ತೀರ್ಥದ ಸಟಲು. ಈ ನಮೂನೆಯ ಬ್ರಾಹ್ಮಣನು ನಾನು. ನೀವು ಅನುಗ್ರಹಿಸಿದರೆ, ನನ್ನ ಬಾಳ್ವೆ, ಇಲ್ಲದಿದ್ದರೆ ಬೇಸಾಯವನ್ನೇ ಮಾಡಿ ಹೊಟ್ಟೆ ಹೊರಕೊಳ್ಳುವೆನು "

ಇದರಿಂದ ನಾನು ರವಿಶಂಕರನ ಶಿಕ್ಷಕನಾದೆ. ಸಮಯವು ಬೇಕಷ್ಟು ಇತ್ತು. ಅಡಿಗೆಯ ಕೆಲಸವನ್ನು ಅರ್ಧದಷ್ಟು ನಾನೇ ಮಾಡಹತ್ತಿದೆನು. ಶಾಕಾಹಾರ ಕ್ರಮಗಳಲ್ಲಿ ಇಂಗ್ಲಿಷ ಪ್ರಯೋಗಗಳನ್ನು ಪ್ರಾರಂಭಿಸಿದೆನು. ಒಂದು ಸ್ಟೋವನ್ನು ಕೊಂಡುಕೊಂಡು ರವಿಶಂಕರನೊಡನೆ ಅಡಿಗೆಯನ್ನು ಪ್ರಾರಂಭಿಸಿದೆನು. ಸಹಭೋಜನ ಮಾಡಲು ನನಗಾಗಲಿ, ರವಿಶಂಕರನಿಗಾಗಲಿ ಸಂಕೋಚವಿದ್ದಿಲ್ಲ. ಇದರಿಂದ ನಮ್ಮ ಸಂಸಾರವು ಸೊಗಸಿನಿಂದ ಸಾಗಿತು. ಒಂದೇ ಮಾತ್ರ ಅಡ್ಡಿಯಿತ್ತು. ರವಿಶಂಕರನು ಎಷ್ಟೂ ಹೇಳಿದರೂ, ತನ್ನ ಹೊಲಸು ಪ್ರಕಾರಗಳನ್ನು ಬಿಡುತ್ತಿದ್ದಿಲ್ಲ. ಪದಾರ್ಥಗಳನ್ನು ಹೊಲಸಾಗಿ ಮಾಡುತ್ತಿದ್ದನು.

ಹೀಗೆ ಮುಂಬಯಿಯಲ್ಲಿ ನಾಲ್ಕೈದು ತಿಂಗಳು ಕಳೆಕಳೆಯಬೇಕಾದರೆ, ನನಗೆ ಸಾಕಾಯಿತು. ಖರ್ಚು ಬೆಳೆಯುತ್ತಿತ್ತು. ಅದಕ್ಕೆ ತಕ್ಕದಾಗಿ ಉತ್ಪನ್ನವೇನು ಹುಟ್ಟುತ್ತಿದ್ದಿಲ್ಲ.

ಹೀಗೆ ನನ್ನ ಸಂಸಾರವು ಉಪಕ್ರಮಿಸಿತು. ಬೆರಿಸ್ಟರಿಯ ಉದ್ಯೋಗವು ಹೊಲಸು ಕೆಲಸವೆಂದು ನನಗನಿಸಿತು. ಆಡಂಬರವೇ ವಿಶೇಷ, ಜ್ಞಾನವು ತೀರ ಕಡಿಮೆ. ನನಗಂತು ತಲೆಯ ಮೇಲೆ ದೊಡ್ಡದೊಂದು ಹೊರೆ ಇಟ್ಟಂತಾಯಿತು.

S. L. C. Examination Result

Kumta High School.

(*Matric & S L C*) Gangolli N. A., Kasabekar K. V., Naik P. F., Coutinho X. S., Parvatikar K. V., Nadkarni V. S., Baindur G. S., Wagh K. A. (*Matric*) Dhume N. B., Divekar S. R., Gaitonde K. G., Kasabekar T. J., Mahale N. B., Mahishi V. R., Mujumdar S. P., Mujumdar S. M., Nadghar M. V., Nadkarni U. R., Palekar D. G., Phatarphekar V. S., Telang A. S., Wagh J. B., Wagh P. V., Kaisare M. V., Malvade G. S.,

K R Narvorkar G. W, R N, Iwalli M S, Desai M Prabhu D B, Gokhale B G K V, Shetti N V

High School.

(S. L. L) A S Nadkarni, Mudur N P Pai, G M, S N Prabhu, (*Matric*) R Kamat, P G Pai, S J. Gon- R R Mantri, A A Sab Landit B V. Sorab, (*Final*) P Padiyar, N V Prabhu. (*Intermediate*) S D Nadkarni, D Nayal, J S. Nayak, S Hotni

ತಿಂಗ ತಿಂಗಳಿಗೆ ಖರ್ಚು ಬೆಳೆಯುತ್ತಿತ್ತು. ಹೊರಗೆ ಬೆರಿಸ್ಟರನ ಪಾಟಿ ಹಚ್ಚಿ ಅಂತರಂಗದಲ್ಲಿ ಬೆರಿಸ್ಟರಿಯ ಉದ್ಯೋಗಕ್ಕಾಗಿ ತಯಾರಿ ಮಾಡುತ್ತಿರುವ ಸ್ಥಿತಿಯನ್ನು ನೋಡಿ ನನಗೆ ಸಮಾಧಾನವಾಗಲಿಲ್ಲ. ಇದರಿಂದ ನನ್ನ ಅಭ್ಯಾಸವು ಏಕಾಗ್ರಚಿತ್ತದಿಂದ ನಡೆಯಲಾಗಲಿಲ್ಲ. ಪುರಾವೆಯ ಕಾಯಿದೆಯ ಸಲುವಾಗಿ ನನಗೆ ಸ್ವಲ್ಪ ಸೇರಿತ. ಮೇನನವರ ಹಿಂದೂ ಕಾಯಿದೆಯನ್ನು ತನ್ಮಯನಾಗಿ ಓದಿದೆನು. ಆದರೆ ಪ್ರಕರಣವನ್ನು ನಡಿಸುವ ಧೈರ್ಯವು ನನಗೆ ಪ್ರಾಪ್ತವಾಗಲಿಲ್ಲ. ಮದಲಗಿತ್ತಿಯು ಹೊಸದಾಗಿ ಗಂಡನ ಮನೆಗೆ ಬಂದಂತೆ ನನ್ನ ಸ್ಥಿತಿಯಾಯಿತು. ನಾನು ಅಷ್ಟು ದೀನನಾದೆ.

ಇದೇ ಸಮಯಕ್ಕೆ ನಾನು ಮಮೀಬಾಯಿ ಎಂಬುವಳ ವಕಾಲತನ್ನು ಕೊಂಡೆನು. ಅದು ಸ್ಮಾಲ ಕಾಜ ಸಂಬಂಧವಾಗಿತ್ತು. "ವಕಾಲತು ತಂದುಕೊಟ್ಟ ದಲಾಲರಿಗೆ ದಲಾಲಿ ಕೊಡಬೇಕು" ಎಂದು ನನಗೆ ಹೇಳಲಾಯಿತು. ಅದು ಶಕ್ಯವಾಗದೆಂದು ನಾನು ಸ್ಪಷ್ಟಪೂರ್ವಕ ಹೇಳಿದೆನು.

"ಆದರೆ, ಫೌಜದಾರಿ ಮೊಕದ್ದಮೆಗಳಲ್ಲಿ ದೊಡ್ಡ ವಕೀಲರಾದ ಅಂಥಿಂಥವರು, ತಿಂಗಳಿಗೆ ೩-೪ ಸಾವಿರ ರೂಪಾಯಿ ಸಂಪಾದಿಸುವವರು ಕೂಡ ದಲಾಲಿ ಕೊಡುತ್ತಾರೆ."

'ಅವರಿಗೆ ಸರಿಸಮನಾಗಲು ನನ್ನ ಬಯಕೆಯಿಲ್ಲ. ತಿಂಗಳಿಗೆ ೩೦೦ ರೂಪಾಯಿ ಸಿಕ್ಕಿದರೆ ನನಗೆ ಸಾಕು. ನನ್ನ ತಂದೆಯವರಿಗಾದರೂ ಇದಕ್ಕಿಂತ ಹೆಚ್ಚು ಸಿಗುತ್ತಿರಲಿಲ್ಲ.'

"ಆದರೆ, ಆ ದಿನಗಳು ಕಳೆದುಹೋದವು. ಮುಂಬಯಿಯೊಳಗೆ ಖರ್ಚಿನ ಮಾನವು ಭಯಂಕರ ಏರಿದೆ. ನಿಮಗೆ ವ್ಯವಹಾರಚಾತುರ್ಯವಿರಬೇಕು."

ಆದರೆ, ಎಷ್ಟು ಹೇಳಿದರೂ ನಾನು ಕೇಳಲಿಲ್ಲ. ನಾನು ದಲಾಲಿ ಕೊಡಲಿಲ್ಲ. ಆದರೆ ಮಮೀಬಾಯಿಯ ಮೊಕದ್ದಮೆಯು ನನಗೆ ಸಿಕ್ಕೇ ಸಿಕ್ಕಿತು. ಆ ಮೊಕದ್ದಮೆಯು ಸುಲಭವಿತ್ತು. ೩೦ ರೂಪಾಯಿಗಳನ್ನು ನನ್ನ ಫೀಯೆಂದು ನಾನು ಆಕರಿಸಿದೆನು. ಆ ಮೊಕದ್ದಮೆಯು ಒಂದು ದಿನದಲ್ಲಿ ಮುಗಿಯುವಹಾಗಿತ್ತು.

ಸ್ಮಾಲಕಾಜ ಕೋರ್ಟಿನಲ್ಲಿ ಇದೇ ನನ್ನ ಪ್ರಥಮ ಪ್ರವೇಶವು. ನಾನು ಪ್ರತಿವಾದಿ ಪಕ್ಷದಿಂದ ಹಾಜರಾಗಿದ್ದೆ. ಆದ್ದರಿಂದ ವಾದಿಯ ಸಾಕ್ಷಿಗಾರರಿಗೆ ಉಲ್ಟಾ ಸವಾಲು ಮಾಡಬೇಕಾಗಿತ್ತು. ನಾನು ಎದ್ದುನಿಂತೆ. ಆದರೆ ಕಾಲುಗಳು ನಡುಗಹತ್ತಿದವು. ತಲೆ ತಿರುಗಹತ್ತಿತು, ಇಡೀ ಕೋರ್ಟೇ ನನ್ನಂತೆಯೇ ತಿರುಗುತ್ತದೆಂದು ನನಗೆ ಭಾಸವಾಯಿತು. ಏನು ಪ್ರಶ್ನೆ ಕೇಳಬೇಕೆಂದು ನನಗೆ ಸೂಚಲಿಲ್ಲ. ನ್ಯಾಯಾಧೀಶರು ಹಾಸ್ಯ ಮಾಡಿರಬೇಕು. ವಕೀಲರಿಗಂತು ಇದರಿಂದ ವಿನೋದವಾಯಿತು. ಆದರೆ ನನಗಂತು ಏನೂ ಕಾಣಲಿಲ್ಲ. ನಾನು ಕುಳಿತುಕೊಂಡೆ. ಪ್ರತಿವಾದಿಯ ಪ್ರತಿನಿಧಿಯ ಹತ್ತರ ನನ್ನಿಂದ ಮೊಕದ್ದಮೆಯನ್ನು ನಡಿಸಲಾಗದೆಂದು ಹೇಳಿ ಪಟೇಲರಿಗೆ ನಡಿಸಲು ಕೊಡಲಿಕ್ಕೆ ಹೇಳಿದೆನು. ನನಗೆ ಕೊಟ್ಟ ಫೀಯನ್ನು ತಿರುಗಿ ಕೊಡುತ್ತೇನೆಂದೂ ಹೇಳಿದೆನು. ೫೧ ರೂಪಾಯಿ ಕೊಟ್ಟು ಪಟೇಲರಿಗೆ ವಕಾಲತ ಕೊಡಲಾಯಿತು. ಅವರಿಗೆ ಈ ಮೊಕದ್ದಮೆಯು ಒಂದು ಆಟದಷ್ಟು ಸುಲಭವಾಗಿತ್ತು. ನಾನು ಕೋರ್ಟಿನಿಂದ ಬಿಡುಗಡೆಯಾದ ಹೊರಟು ಬಂದೆನು. ನನ್ನ ಪಕ್ಷಗಾರಳು ಗೆದ್ದಳೋ, ಸೋತಳೋ ನನಗೆ ಒಂದೂ ಗೊತ್ತಿಲ್ಲ. ನನಗೆ ನಾಚಿಕೆಯೆಂಬಾಯಿತು. ಇನ್ನು ಮುಂದೆ ಪ್ರಕರಣಗಳನ್ನು ನಡಿಸುವಷ್ಟು ಧೈರ್ಯ ಪ್ರಾಪ್ತವಾಗುವ ವರೆಗೆ ಮೊಕದ್ದಮೆಗಳನ್ನು ಕೈಕೊಳ್ಳಬಾರದೆಂದು ನಾನು ನಿರ್ಧರಿಸಿದೆನು. ದಕ್ಷಿಣ ಆಫ್ರಿಕೆಗೆ ಹೋಗುವ ವರೆಗೆ ನಾನು ಕೋರ್ಟಿನ ಮೆಟ್ಟಲನ್ನು ಹತ್ತಲಿಲ್ಲ. ಇದೇನು ಮೊಟ್ಟ ತ್ಯಾಗವಲ್ಲ. ಹಾಗೆ ಮೆಟ್ಟಲ ಹತ್ತುವ ಪ್ರಸಂಗವೂ ನನಗೆ ಬರಲಿಲ್ಲ. ನನಗೆ ವಕಾಲತ ಕೊಟ್ಟು ಮೊಕದ್ದಮೆಗಳಲ್ಲಿ ಸೋಲುವ ಮೂರ್ಖರು ಯಾರೂ ಇದ್ದಿಲ್ಲ.

ಆದರೂ, ಮುಂಬಯಿಯಲ್ಲಿರುವಾಗಲೇ ಇನ್ನೊಂದು ಪ್ರಕರಣವು ನನಗೆ ಸಿಕ್ಕಿತು. ಇದೊಂದು ಅರ್ಜಿಯನ್ನು ಬರೆಯುವ ಪ್ರಕರಣವಾಗಿತ್ತು. ಪೋರಬಂದರದಲ್ಲಿ ಒಬ್ಬ ಮುಸಲ್ಮಾನನ ಭೂಮಿಯು ಜಪ್ತಾಗಿತ್ತು. ಅವನು ತಂದೆಯ ಯೋಗ್ಯತಾವಂತ ಮಗನೆಂದು ನನ್ನೆಡೆಗೆ ಬಂದನು. ಅವನ ಹೇಳಿಕೆಯಲ್ಲಿ ವಿಶೇಷ ಕಸ್ವು ಕಾಣಿಸಲಿಲ್ಲ. ಆದರೆ ಅವನ ಬಗ್ಗೆ ಅರ್ಜಿಯನ್ನು ತಯಾರಿಸಲು ನಾನು ಒಪ್ಪಿಕೊಂಡೆ. ಛಾಪಿಸುವ ಖರ್ಚನ್ನು ಅವನು ಸಹಿಸಬೇಕೆಂದು ಗೊತ್ತಾಗಿತ್ತು. ನಾನು ಅದನ್ನು ಬರೆದೆನು, ಮಿತ್ರರಿಗೆ ಓದಿ ತೋರಿಸಿದೆನು. ಅವರು ಪಾಸಾಗಿ ಹೇಳಿದರು, ಇದರ ಮೇಲಿಂದ ಅರ್ಜಿ ಬರೆಯುವಷ್ಟು ಪಾತ್ರತೆಯು ನನ್ನಲ್ಲಿ ಬಂತೆಂದು ತಿಳಿದು ನನಗೆ ಸ್ವಲ್ಪ ಧೈರ್ಯ ಬಂತು. ನಿಜವಾಗಿಯೂ ನಾನು ಅರ್ಜಿ ಬರೆಯಲು ಯೋಗ್ಯನಿದ್ದೆ.

ಫೀ ತೆಗೆದುಕೊಳ್ಳದೆ ನಾನು ಅರ್ಜಿಗಳನ್ನು ತಯಾರಿಸಹತ್ತಿದ್ದರೆ, ನನಗೆ ಬೇಕಾದಷ್ಟು ಕೆಲಸ ಸಿಗುತ್ತಿತ್ತು. ಆದರೆ ಇದರಿಂದ ಖರ್ಚಿಗೆ ಹಣ ಸಿಗುತ್ತಿರಲಿಲ್ಲ. ಆದ್ದರಿಂದ ಶಿಕ್ಷಕವೃತ್ತಿಯನ್ನು ಕೈಕೊಳ್ಳಬೇಕೆಂದು ನಾನು ಆಲೋಚಿಸಿದೆ. ನನಗೆ ಇಂಗ್ಲೀಷು ಚೆನ್ನಾಗಿ ಬರುತ್ತಿತ್ತು. ಯಾವದೊಂದು ಶಾಲೆಯಲ್ಲಿ ಮೆಟ್ರಿಕ್ಯುಲೇಶನ್ ಹುಡುಗರಿಗೆ ನಾನು ಪ್ರೀತಿಯಿಂದ ಇಂಗ್ಲೀಷ ಕಲಿಸಬಹುದಿತ್ತು. ಈ ತರದಿಂದ ಕೆಲವಷ್ಟಾದರೂ ಖರ್ಚು ಸಾಗುತ್ತಿತ್ತು. ವರ್ತಮಾನಪತ್ರಗಳಲ್ಲಿ ಈ ಪ್ರಕಾರದ ಒಂದು ಜಾಹೀರನ್ನು ನಾನು ನೋಡಿದೆನು. 'ಒಬ್ಬ ಇಂಗ್ಲೀಷ ಶಿಕ್ಷಕರು ಬೇಕು - ದಿನಾ ೧ ತಾಸು ಕಲಿಸುವದು— ೭೫ ರೂಪಾಯಿ ಸಂಬಳ' ಹೆಸರಾದ ಹೈಸ್ಕೂಲಿನ ಜಾಹೀರಾತದು! ನಾನು ಅರ್ಜಿ ಮಾಡಿದೆನು. ನನಗೆ ಭೆಟ್ಟಿಯಾಗಲು ಹೇಳಿದರು. ಅಲ್ಲಿ ನಾನು ಬಹು ದೊಡ್ಡ ಆಶೆಯಿಂದ ಹೋದೆನು. ಮುಖ್ಯಾಧ್ಯಾಪಕರಿಗೆ ನಾನು ಗ್ರ್ಯಾಜ್ಯುಏಟನಲ್ಲವೆಂದು ತಿಳಿದ ಮೇಲೆ ಅವರು ವಿಷಾದಪ್ರದರ್ಶಿಸಿ ನನಗೆ ನೇಮಿಸಿಕೊಳ್ಳಲು ಒಪ್ಪಲಿಲ್ಲ. 'ಆದರೆ, ನಾನು ಲೆಟಿನ್ ಭಾಷೆಯನ್ನು ಕಲಿತು ಲಂಡನ್ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದೇನೆ.'

'ಅಹುದು, ಆದರೆ ನಮಗೆ ಗ್ರ್ಯಾಜ್ಯುಏಟರೇ ಬೇಕು.'

ನಾನು ನಿರುಪಾಯನಾದೆ. ನನ್ನ ಗತಿಯೇನೆಂದು ತಿಳಿಯದೆ ಬಹಳ ವ್ಯಸನಪಟ್ಟೆ. ನನ್ನ ಅಣ್ಣಂದಿರಿಗೂ ಬಹಳ ವ್ಯಸನವಾಯಿತು. ಮುಂಬಯಿಯಲ್ಲಿ ಹೆಚ್ಚು ಕಾಲ ಕಳೆಯುವದರಿಂದ ಪ್ರಯೋಜನವಿಲ್ಲೆಂದು ನಮ್ಮಿಬ್ಬರ ಮತವಾಯಿತು. ನನ್ನ ಅಣ್ಣಂದಿರು ರಾಜಕೋಟದಲ್ಲಿ ಸಣ್ಣ ವಕೀಲರಿದ್ದರು. ಅವರು ರಾಜಕೋಟದಲ್ಲಿ ಉಳಿಯುತ್ತಿದ್ದರು. ಆವರು ಅರ್ಜಿ ಮುಂತಾದವುಗಳನ್ನು ಬರೆಯುವ ಕೆಲಸವನ್ನು ನನಗೆ ಕೊಡಿಸಬಹುದಾಗಿತ್ತು. ಮತ್ತೊಂದು ಮಾತಿತ್ತು. ರಾಜಕೋಟದಲ್ಲಿ ಏಕತ್ರ ಮನೆಯಂತು ಇದ್ದೇ ಇತ್ತು. ಮುಂಬಯಿಯೊಳಗಿಂದ ಬಿಡಾರವನ್ನು ಕಳಚಿದರೆ, ಬಹಳ ಖರ್ಚು ಉಳಿತಾಯವಾಗುವ ಹಾಗಿತ್ತು. ನನಗೆ ಈ ಸೂಚನೆಯು ಸರಿದೋರಿತು. ಹೀಗೆ ಮುಂಬಯಿಯಲ್ಲಿ ೬ ತಿಂಗಳು ಉಳಿದು ನನ್ನ ಬಿಡಾರನ್ನು ಕಳಚಿದೆನು.

ನಾನು ಮುಂಬಯಿಯಲ್ಲಿರುವಾಗ ಹೈಕೋರ್ಟಿಗೆ ಹೋಗುತ್ತಿದ್ದೆ. ಅಲ್ಲಿ ಜ್ಞಾನಪ್ರಾಪ್ತಿಯಾಯಿತೆಂದು ನಾನೇನು ಹೇಳಲಾರೆ. ಏಕೆಂದರೆ ಜ್ಞಾನಪ್ರಾಪ್ತಿ ಮಾಡಿಕೊಳ್ಳಲು ಬೇಕಾಗುವಷ್ಟು ಜ್ಞಾನವು ನನಗೆ ಪ್ರಾಪ್ತವಾಗಿದ್ದಿಲ್ಲ. ಅನೇಕಾವರ್ತಿ ಅಲ್ಲಿಯ ವಾದಗಳನ್ನು ಗ್ರಹಿಸುವದೂ ಕಠಿಣವಾಗಿ ನಾನು ತೂಕಡಿಸುತ್ತಿದ್ದೆ. ನನ್ನಂತೆ ತೂಕಡಿಸುವವರೂ ಇದ್ದರು. ಆದ್ದರಿಂದ ನನಗೆ ಅಷ್ಟು ನಾಚಿಕೆ ಎನಿಸಲಿಲ್ಲ. ಹೈಕೋರ್ಟಿನಲ್ಲಿ ಕೂತುಕೊಂಡು ತೂಗಡಿಸುವದು ಒಂದು ಪ್ರಕಾರದ ದೊಡ್ಡಸ್ತನ (*fashionable*) ವೆಂದು ತೋರಹತ್ತಿತ್ತು. ಮುಂಬಯಿಯಲ್ಲಿ ಈಗಲೂ ನನ್ನಂತೆ ವಕಾಲತು ಇಲ್ಲದ ಬೆರಿಸ್ಟರರಿದ್ದರೆ, ಅವರಿಗೆ ಅಲ್ಲಿ ನಡೆಕೊಳ್ಳುವ ಬಗ್ಗೆ ವ್ಯವಹಾರಿಕ ಸೂಚನೆಯನ್ನು ನಾನು ಕೊಡುತ್ತೇನೆ. ನಾನು ಗಿರಗಾಂವಿನಲ್ಲಿ ಉಳಕೊಳ್ಳುತ್ತಿದ್ದೆನು. ಆದರೆ, ಟಾಂಗೆಯಲ್ಲಾಗಲಿ ಟ್ರೇಮಿನಲ್ಲಾಗಲಿ ಕೂತುಕೊಂಡು ನಾನು ಹೋಗುತ್ತಿದ್ದಿಲ್ಲ. ಹೈಕೋರ್ಟಿಗೆ ನಡೆದು ಹೋಗುವ ನೇಮವನ್ನಿಟ್ಟಿದ್ದೆ. ಸಾಧಾರಣವಾಗಿ ೪೫ ಮಿನಿಟು ನನಗೆ ತಗಲುತ್ತಿದ್ದವು, ಮತ್ತು ತಿರುಗಿ ಹೋಗುವಾಗಲೂ ನಡಕೊಂಡೇ ಹೋಗುತ್ತಿದ್ದೆನು. ಬಿಸಿಲು ತಾಪವನ್ನು ಸಹಿಸಲು ನಾನು ಅಭ್ಯಾಸ ಮಾಡಿದ್ದೆ. ಹೀಗೆ ಕೋರ್ಟಿಗೆ ನಡಕೊಂಡು ಹೋಗುವದರಿಂದ ನನಗೆ ಹಣ ಉಳಿಯಿತು ಮತ್ತು ಅನೇಕ ಮಿತ್ರರು ಅಸ್ವಸ್ಥ ಬೀಳುತ್ತಿದ್ದಾಗ ಒಂದಾವರ್ತಿ ಸಹ ನಾನು ಅಸ್ವಸ್ಥ ಬೀಳುವ ಪ್ರಸಂಗ ಬಂದಂತೆ ನನಗೆ ತೋರುವದಿಲ್ಲ. ಮುಂದೆ ಹಣಸಂಪಾದನೆಯಾಗುವಾಗಲೂ, ಕಾಲ್ನಡಿಗೆಯಿಂದಲೇ ಆಫೀಸಿಗೆ ಹೋಗಿ ಬರುವ ಅಭ್ಯಾಸವನ್ನಿಟ್ಟಿದ್ದೆನು. ಆ ಅಭ್ಯಾಸದ ಸುಫಲಗಳನ್ನು ನಾನು ಈಗಲೂ ಉಣ್ಣುತ್ತಿದ್ದೇನೆ.

— ತಂಜಾವರ ಜಿಲ್ಲೆಯ ತಿರುವಲೂರ ಗ್ರಾಮದಲ್ಲಿ ರಥೋತ್ಸವದ ಸಮಯ ಶ್ರೀ ತ್ಯಾಗರಾಜ ದೇವರ ದೊಡ್ಡ ರಥಕ್ಕೆ ಬೆಂಕಿಬಿದ್ದು ಇಡೀ ರಥವು ಸುಟ್ಟು ಬೂದಿಯಾಯಿತು. ೨ ಆಳುಗಳೂ ಬೆಂದುಬೆಂಡಾದವು. ಶ್ರೀ ದೇವರ ಮೂರ್ತಿಯನ್ನು ಕಾಪಾಡಿಕೊಳ್ಳಬೇಕಾದರೆ ಸಾಕುಬೇಕಾಯಿತು.

— ಮಹಾತ್ಮ ಗಾಂಧಿಯವರು ಕ್ರೀವಲೆಂಡದ ವಿದ್ಯಾರ್ಥಿ ಪರಿಷತ್ತಿಗೆ ಹೋಗುವದಿಲ್ಲವಾಗಿ ನಿಶ್ಚಯಾತ್ಮಕ ಸುದ್ದಿ.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ

ಆಯುರ್ವೇದ ಸಂಗ್ರಹಾಲಯ.

ಶಾಸ್ತ್ರೋಕ್ತ ತಯಾರಿಸಿದ ಕುಪಿಕ್ಷ ರಸಾಯನಗಳು.

೧. **ಸವಿೀರ ಪನ್ನಗ**— ಇವು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು. ಹೊಟ್ಟೆ ಉದ್ವೇಗ, ಹೊಟ್ಟೆಯೊಳಗಿನ ನಾನಾ ಪ್ರಕಾರದ ಪೀಡನೆ, ಸನ್ನಿಪಾತ ವಿಕಾರಗಳ ಲ್ಲಿಹಲುಬೋಣ, ಕಿಮ್ಮಂತೆ ಪಿಡ್ಯಾದೋಣ ಮುಂತಾದ ೮೦ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ.

ತೊಲಿ ೧ಕ್ಕೆ ರೂ ೬-೮-೦

೨. **ಮಲ್ಲಸಿಂಧೂರ**—ಮಹಾಶ್ವಾಸ, ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ಹಲುಬೋಣ, ಕಫಕ್ಷಯ, ಇಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು-ದಮ್ಮು, ಕಂಪು, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಗಳಿಗೆಯೊಳಗೆ ರೋಗಿಯು ವಾಸಿಯಾಗುತ್ತಾನೆ.

ತೊಲಿ ೧ಕ್ಕೆ ರೂ. ೭-೦-೦

೩ **ಸುವರ್ಣರಾಜ ವಂಗೇಶ್ವರ**—ಉಪದಂಶಗಳ ಶೇಷವಿಕಾರ, ಪರಮಾ, ಧಾತು ಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುನಷ್ಟ, ಸ್ವಪ್ನಾವಸ್ಥೆ, ಅಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧಗಳ ಸಮಸ್ತ ವಿಕಾರಗಳನ್ನ ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನು ಕಾಂತಿಯನ್ನೂ ಕೊಡುತ್ತದೆ ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ, ಇದರಿಂದ ಏನೊಂದೂ ಉಪದ್ರವವಾಗ ವದಿಲ್ಲ.

ತೊಲಿ ೧ಕ್ಕೆ ರೂ ೩-೦-೦

೪. **ವ್ಯಾಧಿಹರಣ ರಸ**—ಉಪದಂಶ, (ಗರಮಿ ರೋ) ಫಿರಂಗೋಪದಂಶ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಅವಯವು, ವಾತರಕ್ತ, ಭಯಂಕರ ವಾತವಿಕಾರ, ಪ್ರಾಮುಖ್ಯವಾಗಿ ಉಪದಂಶಗಳಿಗೆ ಮುಂದಾಗಿ ಆಗುವ ದಮ್ಮು, ಕಮ್ಮು, ಸಿಬ್ಬೆ ... ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಇನ್ನಾವದೂ ಇಲ್ಲ

ತೊಲಿ ೧ಕ್ಕೆ ರೂ ೭-೦-೦

೫. **ಸೂತಶೇಖರ**— ಸನ್ನಿಪಾತ, ಪ್ಲೇಗ, ಮೂರ್ಛೆ, ಹಲುಬುವ ವಿಕಾರ (ಭ್ರಮೆ) ಶ್ವಾಸ ಕೆಮ್ಮಂತೆ ಪಿಡ್ಯಾಡುವದು, ಹೊಟ್ಟೆನೋವು, ಆಮ್ಲಪಿತ್ತ ಮುಂತಾದ ವಾತ ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದು ಸಾಮಾನ್ಯವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ.

ತೊಲಿ ೧ಕ್ಕೆ ರೂ ೬-೮-೦

ಇವಲ್ಲದೆ, ತರತರದ ಚೂರ್ಣ, ಘೃತ, ಅವಲೇಹ ಆಸವ, ಮಾತ್ರೆ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ದರಿಗೆ ದೊರೆಯುತ್ತವೆ

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ಏರ್ಪಾಡು ಮಾಡಿರುತ್ತೇವೆ

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದ್ದಲ್ಲಿ ಉತ್ತರದ ಬಗ್ಗೆ ಸ್ಟಾಂಪು ಜೊತೆಗಿಟ್ಟು ಈ ಕೆಳಗಿನ ಪತ್ತೆಗೆ ಬರೆಕೊಳ್ಳತಕ್ಕದ್ದು

ಪತ್ತೆ:— **ಶ್ರೀ। ಗಜಾನನ ಅಪ್ಪು ಭಟ್ಟ ವೇದೇಶ್ವರ,**

ಆಯುರ್ವೇದಿಕ ವೈದ್ಯ,

ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ.)

ಬೇಕಾದರು ಬೇಕು! ಬೇಡೆಂದರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯದ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಫರ್ನೀಚರುಗಳು ಸಿಗುತ್ತದೆ.

ನಮ್ಮ ವಿಳಾಸ—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ

"ಸರಸ್ವತೀ"

ಇಡೀ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟವಾಗುವ ಉತ್ತಮವಾದ ತಿಂಗಳಿನ ಮಾಸಪತ್ರಿಕೆ ಇದೊಂದೇ.

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಓದತಕ್ಕ ವಿಷಯಗಳ ಮಾತ್ರ 40 ಪುಟಗಳಿವೆ. ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಶೀಲಾ" ಎನ್ನುವ ಕಾದಂಬರಿಯೂ, 'ಶಹಾಜಹಾನ' ಎನ್ನುವ ನಾಟಕವೂ ಸಾಹಿತ್ಯ-ರಸೋಜ್ಞ-ಕವನ್ಯಾಕ್ಯ ಪಡಿ-ಮುತ್ತಿನ ಸರ ಚಾರು ಚರಿತಾವಳಿ-ಗೃಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಕಿಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು ಚಂದಾದಾರರಿಗೆ "ಶಾರದಾ ಗ್ರಂಥಮಾಲೆ" ಯಲ್ಲಿ ಇದುವರೆಗೆ ಪ್ರಕಟವಾಗಿರುವ 'ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದೂ ಭಾಗ್ಯೋದಯ-ರಣಕೇಸರಿ' ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವದರಿಂದ ಪ್ರಕಟಣೆಗೆ ಅತ್ಯುತ್ತಮವಾದ ಪತ್ರಿಕೆ ವಾರ್ಷಿಕ ಚಂದಾ ರೂ 3-0-0 ಮಾತ್ರ ವಿದ್ಯಾರ್ಥಿಗಳಿಗೂ, ವಾಚನ ಶಾಲೆಗಳಿಗೂ ರೂ 2-0-0 ಮಾತ್ರ

ವಿಳಾಸ — "ಸರಸ್ವತೀ" ಕಾರ್ಯಾಲಯ,

ಚಾಮರಾಜಪೇಟೆ, ಬೆಂಗಳೂರು ಸಿಟಿ

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ರುಚಿಯಾಗಿದ್ದು, ಸುವಾಸಿಕವಿರುತ್ತದೆ ಇದರ ಸೇವನದಿಂದ ಬಾಯಿಯು ಹೊಲಸು ವಾಸನೆ ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ, ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ ಬೇಕು, ೧ ಪುಡಿ ಕಿಂ ರೂ ೦-೦-೬, ೨೫ರ ಕಿಂ ರೂ ೦-೯-೦, ೧೦೦ ಕಿಂ ರೂ ೨-೦-೦, ೫೦೦ ಪುಡಿಗಳ ಕಿಂ. ರೂ ೯-೦-೦; ೧೦೦೦ ೧೭-೦-೦, ವಿ. ಪಿ. ಖರ್ಚು ವಗೈರೆ ಪ್ರತ್ಯೇಕ.

ಸುಗಂಧಿ ನಶ್ಯ.—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದಿದು, ಇದರಿಂದ ಶೈತ್ಯ, ಥಂಡಿ, ಅರತಲೆಶೂಲೆ ಮುಂತಾದವುಗಳು ಕೂಡಲೆ ಕಡಿಮೆಯಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ರೂ ೦-೪-೦; ೧ ಡಜನ್ ಡಬ್ಬಿ ಕಿಂ ರೂ ೩-೦-೦.ವಿ ಪೋ. ಖರ್ಚು ಬೇರೆ.

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳನ್ನು ನಮ್ಮಲ್ಲಿ ತಯಾರಿರುತ್ತವೆ ಕಿಮ್ಮತ್ತಿನ ವಿಷಯಕ್ಕೆ ಬರೆದು, ಪುರಮತ್ ನೋಡಿ ಮಾಲಿಗೆ ಆರ್ಡರ ಕೊಡಬಹುದು ಇದರ ಹೊರತು, ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು, ಖರೀದಿ ಮಾಡಿಕೊಳ್ಳುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು

ಪತ್ತೆ:- **ಎಸ್. ಬಿ. ಕದಂ,**

ಬೀಡಿ ಮತ್ತು ತಂಬಾಕು ಜರ್ದಾ ದುಕಾನ,

ಮು ಪೋ. ನಿಪ್ಪಾಣಿ, ಜಿ. ಬೆಳಗಾಂವ.

ಚೆವರಲೆಟ್
ಮೋಟಾರಕಾರ್ ಏಜನ್ಸಿ ಕನರಾ



ನಾವು ಹೊಸ ಚೆವರಲೆಟ್ ಮೋಟಾರಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸ್ವತಃ ಅಥವಾ ಪತ್ರದ್ವಾರಾ ಸಮಾಚಾರ ತಿಳಕೊಳ್ಳಬಹುದು.

ಸೋಲಏಜಂಟ:— ಎಸ್. ಎಲ್. ಧಾಕಪ್ಪೆ ಮತ್ತು ಬ್ರದರ್ಸ, ಶಿರ್ಶಿ

ಕುಮಟಾ ಏಜಂಟ:— ಜಿ. ಡಿ. ಮಾಳಗಿಕರ, ಎಂಡ್ ಕೊ.

ಜಿ. ಡಿ. ಮ. ಪೆಟ್ರೋಲ ನಮ್ಮಲ್ಲಿ ದೊರೆಯುತ್ತದೆ; ಪರ್‍ಲೆಕ್ಸ್ ಹಾಗೂ ಪಿ...ನ ಮೋಟಾರ ಹಾಗೂ ಸಾಯಕಲ್ ಟಾಯರ-ಟ್ಯೂಬ ಮತ್ತು ಸಾಮಗ್ರಿಗಳ ದೊರೆಯುವವು.

ಸೂಚನೆ:— ನಮ್ಮಲ್ಲಿ ವ್ಯಾಕ್ಯೂಮಾಟಿಂಗ ಕೆಲಸವು ಉತ್ತಮವಾಗಿಯೂ, ಪ್ರಾಮಾಣಿಕತನದಿಂದಲೂ ಮಾಡಿಕೊಡಲ್ಪಡುತ್ತದೆ. ಇದಲ್ಲದೆ, ನಮ್ಮಲ್ಲಿಂದ ಮುಂಬಯಿಯ ಪ್ರಸಿದ್ಧ ರೇಗೋ ಕಂಪನಿಯ ಉತ್ತಮ ಹೊದಿಕೆಗಳು ಪೂರೈಸಲ್ಪಡುತ್ತವೆ. ಅಗತ್ಯವಿದ್ದವರು ಸ್ವತಃ ಅಥವಾ ಪತ್ರದ್ವಾರಾ ವಿಚಾರಿಸಿ ತಿಳಕೊಳ್ಳಬಹುದು.

G. D. Malgikar & Co.
KUMTA.

ಪ್ರಯಾಣಿಕರಿಗೆ
ವಿಶೇಷ ಅನುಕೂಲ

ನೇಮಿಸಿದ ಮೋಟಾರ ಮೋಟಾರಿನ ವ್ಯವಸ್ಥೆ ಹಾಗೂ ಬಸಿಗೆ, ಕಾರ, ಪಾಸಿಂಜರ ಲಾರಿ ವ್ಯವಸ್ಥೆ. ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ:— ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರ್ಶಿ, ಹುಬ್ಬಳ್ಳಿ; ಗೋಕರ್ಣದಿಂದ ಅಂಕೋಲಾ, ಕಾರವಾರ

ಟೀಪು:— ಟಿಕೇಟು ಮುಂದಾಗಿ ರಿಸರ್ವ ಮಾಡಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ದೀಕ್ಷಿತ್ರ, ಮೋಟರ ಏಜಂಟ,
ಕುಮಟಾ (ಉತ್ತರ ಕನ್ನಡ)

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿಕಸ ಜರಿ ಸೀರೆ, ಶಾಲ್, ಕಾಶ್ಮೀರ್ ಶಾಲು, ಸ್ಪಟಿಕದ ಮಣಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ ಸ್ಪಟಿಕಮಣಿ ಮೊದಲಾದ ಮಾಲೆಗಳು ಸಿಗುತ್ತವೆ. ಕ್ಯಾಟಲಾಗ ಕೋರುವವರಿಗೆ ಧರ್ಮಾರ್ಥವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯರು ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ
ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪುಕ್ಕಟೆ ಕಳಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ. ೪ ಅಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ರ— ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ. ೯ ೫೧೦, ಪಾರ್ಕ ಟೌನ, ಮದರಾಸ



ಸರಕಾರದಿಂದ ಪೇಟಂಟ ಪಡೆದ
ಮಲ್ಹಾರ ಕಪ್ಪಲಿ.

ತೋಟಿಗರಿಗೆ ಬಹು ಅನುಕೂಲವಾಗಿರುವದು

ಇದು **mild steel** ವೆಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು. ಎತ್ತುಗಳಿಗೆ ಬಹಳೇ ಹಗುರ ಹೋಗುತ್ತದೆ. ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ನಿರ್ಮಾಣ ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರು ಹೋಗುವಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ.

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ ಮಾಸಪತ್ರಿಕೆ.

ಸಂಪಾದಕ— ಶ್ರೀ। ಬಾಗಲ ಲಕ್ಷ್ಮಣರಾಯರು. ವಾಙ್ಮಯ ವಿಶಾರದ
ಮಾದರಿಸಂಚಿಕೆ ಪುಕ್ಕಟೆ ದೊರೆಯುವದು. ವಾರ್ಷಿಕ ಚಂದಾ ರೂ. ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

ಅಮೃತಾಂಜನ.



ಇದರ ಉಪಯೋಗದಿಂದ, ವಾತವೇದನ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಇದರಿಂದ ಎಲ್ಲ ಪ್ರಕಾರದ ವೇದನಗಳು, ಕೆಮ್ಮು, ಬೇನೆ, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಬಳಸುವವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಡಬ್ಬಿಗೆ ೧೦ ದಿ. ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ. ಪ್ರೋಪ್ರೈಟರ. ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta.

Reg. No. M 1270

Monday June 21st, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೭

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಇತರ ಸ್ಥಳಗಳಿಂದ ರೂ. 3-0-0.

ಟ. ಖ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ವ್ಯಾಖ್ಯಾನ (೧೫ ಎಲ್ ಅಕ್ಷರ) ೮ ಸಾಲುಗಳವರೆಗೆ ರೂ. 1-0-

೮ ಸಂತ್ರ ಪ್ರತಿಸಾಲಿಗೆ 0-2-0.

ಜಿಡಿಂಗದ ಸಾಲು ಎಷ್ಟು ದೊಡ್ಡವಿರುವವೋ ಆ ಮಾನದಿಂದ ಅಷ್ಟುಸಾಲುಗಳು ಹಿಡಿದುಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯಾರ ಯಾ ಸಮಕ್ಷ ತೀರ್ಪಲ್ಪಡುವದು.

यदपरिहितकर्ता श्रेयसा जाति लोके अनवरहितकर्ता नश्यते पार्थिवेन्द्रः।
इति महति विरोधे वर्तमाने समाने नृपतिरुभयपक्षार्थं दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೨೧ ನೆಯ ಜೂನ ಸನ್ ೧೯೨೬ ನೇ ಇಸವಿ.)

हिंदुस्थानांतील रहिवाशांस त्याप्रमाण हिंदुस्थानची हवा त्याप्रमाणेंच हें औषध हिंदुस्थान.तील लोकांस ज्यास्त फायदेशीर आहे.

द्राक्षासव- वीट रतलची किंमत २ रुपये;

रामबाण औषधें

सर्दी घालविणारें,

भूक वाढविणारें,

श्वासोच्छ्वास साफ करणारें,

झोंप आणणारें,

शक्ति देणारें,

तजेलेपणा आणणारें,

विश्वास वाचिकर

क्याटलाग मागवा,

पंडुफार्मास्युटिकलवर्क्स लिमिटेड, मुंबई नं. १३

एजंट— मेसर्स पंडित आणी कंपनी, तीर्थहळ्ळी.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. *B. A.*

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಏ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



ಒಂದೇ ಒಂದು ತಿಂಗಳ ಒಳಗೆ, ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಆಶ್ಚರ್ಯಕರ ಚಲನೆ! ನಿರ್ದೋಷ ಯಂತ್ರರಚನೆ!! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನ್ನು ಉತ್ಕೃಷ್ಟ ಲೇಸು ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ವಿಳಾಸ:— **Swan House: P B 508 P T Madras**

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ತ್ರಯ ೫ ತೊಲಿ ಬಾಟ್ಲಿ ೧ ಕ್ಕೆ ೦—೧೨—೦. [illegible] ಸುವಾಸಿಕ [illegible] ೧೦ ತೊಲಿ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ [illegible] ತೊಲಿಯ ಬಾಟ್ಲಿ ೧ ಕ್ಕೆ ೦—೮—೦. [illegible] ಚೌಷ್ಟಿಕ, ಶಕ್ತಿವರ್ಧಕ [illegible] ೨೦ ತೊಲಿಯ ಡಬ್ಬಿ ೧ ಕ್ಕೆ ೧—೪—೦ ೧ ತೊಲಿಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ —೫೦—೦. [illegible] ಸುವಾಸಿಕ ಮಸಕರಂದ ತೈಲ ೫ ತೊಲಿಯ ಬಾಟ್ಲಿ ೧ ಕ್ಕೆ ೦—೧೨—೦ ಹುಗದ [illegible] ತೊಲಿ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ [illegible] ಯೋಗ್ಯ ಕಿಂಮತಿಗೆ ಸಿಗುವವು. [illegible] ಪ್ರತ್ಯೇಕ

ಕೆರೇಶ್ವರ [illegible] ಹಿಂಗಿನ ದುಕಾನ
ಅವಳಿಬಾಜಾರ, ಕುಮಟಾ.

ಅತ್ಯಲ್ಪನಿವೆ! ಕೇವಲ ಉಚಿತ



ಉಚಿತ ಉಚಿತ ಕೇವಲ ಉಚಿತ

"ತಾರಾ" ಲೀವರ ರಿಜಿಸ್ಟರ್ಡ್ ಪೊಕೆಟ್ ವೊಚ್ಚು ೧೮ ಕೆರೆಟ್ ರೋಲ್ಡ ಗೋಲ್ಡಿನದು. [illegible] ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಕಾರರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವರಿಗೆ ನಾವು ನಮ್ಮ "ಟಿ" ರಿಜಿಸ್ಟರ್ಡ್ [illegible] ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ [illegible]. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ [illegible] "ತಾರಾ" ಲೀವರ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್‌ವೊಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫.

CAPTAIN WATCH CO, P. B 265, MADRAS

[illegible] ಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

[illegible] | ಜಯಕರ್ನಾಟಕ (ಮಾಸಪತ್ರಿಕೆ)

ಸಂಪಾದಕ-- [illegible]

ಇದರಲ್ಲಿ ಮಾಧ್ಯಮಿಕ ಸಾಹಿತ್ಯ [illegible] ಇತ್ಯಾದಿ ವಿಷಯಗಳು ಬರುವವು. [illegible]

ಕಾರ್ಯದರ್ಶಿ ಜಯಕರ್ನಾಟಕ ಧಾರವಾಡ

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ [illegible] ಮುಂತಾದ ಎಲ್ಲ [illegible] ಗುಣವಾಗಿ ಸಿಗುವವು.

[illegible]

ಎಸ್ ಎಲ್ ಧಾಕಪ್ಪ ಮತ್ತು ಬ್ರದರ.

ಶಿರಸಿ

ರಾಗದ ಪೆಟ್ಟಿಗೆಗಳು.

ನಾಟಕ ಸಾಮಾನು:-

ತಬಲೆ, ಡಕ್ಕೆ ಪಸ್ಪೆರೆ

[illegible] ಸಿಂಗಲ್ ರೂ [illegible]

[illegible] ರೂ [illegible]

[illegible] ರೂ [illegible]

[illegible] ರೂ [illegible]

[illegible]

ನಾಟಕದ ಬಗ್ಗೆ [illegible] ದೊರಕುವದು

ಗೋಪಾಳ ಸಖಾರಾಮ ಮತ್ತು ಕಂಪನಿ

[illegible] ವಿಠ್ಠಲವಾಡಿ ಎದುರಿಗೆ,

ಕಾಳಬಾದೇವಿ ರೋಡ,

ಮುಂಬಯಿ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಸಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಸಿ- ಸಿದ್ದಾಪುರ ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ. ಪ್ರಯಾಣಿಕರಿಗೆ [illegible] ವದಕ್ಕೆ ಎಲ್ಲಾ [illegible] ಮಾಡಿದೆ

[illegible] ತಿಳಿದ ಕೊಳ್ಳಬಹುದು

M. Manjappa

PROPRIETOR.

अगदीं फुकट.

वैद्यविद्या.

आम्ही [illegible] आणि पूर्ण सुखाचा सरळ रस्ता दाखविणारे "वैद्यविद्या" नावाचे मराठा आयुर्वेदीय पुस्तकाची नवीन आवृत्ति बाहेर पडली आहे, हे पुस्तक कामत व पोष्ट खर्च घेतल्या शिवाय अगदीं फुकट पाठविण्यात येते, तरी हे पुस्तक आजच मागवा

प्रमेहावर रामबाण औषध.

मेहमर्दनचूर्ण.

हे चूर्ण फक्त तीन दिवस लागोपाठ घेतल्याने लघवीस होणारी आग, लघवी थांबून थांबून होणे व्याधि या औषधाच्या सेवनानें एकदम बंद होतात.

कि. १० तोळ्याच्या डब्यास रु. १.

राजवैद्य नारायणजी केशवजी, जामनगर (काठेवाड).

[illegible] एजन्ट— माधव मानप्पा शणवी, बेलकेरी.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟುಗಳ ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತ [illegible] ಮತ್ತು ಧಾತುವೃದ್ಧಿಕಾರಕ

ಈ ಮಧುವು [illegible] ರುಚಿಕರವಾಗಿಯೂ ಇರುತ್ತದೆ [illegible] ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ [illegible] ದ್ರಾಕ್ಷಾರ್ಕಮಧು [illegible]

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ [illegible] ಬೆಳಗಾಂವ

ಸೂತ್ರ ರಹಸ್ಯ.

ನೂಲಿನ ಮಹಾತ್ಮ್ಯೆ.

(೧)

ಶಿಷ್ಯ:– ಗುರುಗಳೇ! ಮಹಾತ್ಮರು ರಾಜಕಾರಣದೊಳಗಿಂದ ಅಂಗಣವನ್ನು ಹಿಂದೆಗೆದುಕೊಂಡರೆಂದೂ ಫಕ್ತ ಚರಕಾ, ನೂಲು, ಖಾದಿ ಇವುಗಳಲ್ಲೇ ವಿಶೇಷವಾಗಿ ಮನಸ್ಸನ್ನು ಹಾಕಿರುವರೆಂದೂ ತಿಳಿದುಬರುತ್ತದೆ. ನೂಲಿನಲ್ಲಿ ಅಷ್ಟೇನು ಮಹತ್ವವಿದೆ?

ಗು:— ಅರೇ! ನೀವೆಲ್ಲಾ "ಯಂಗ ಇಂಡಿಯಾ," "ನವಜೀವನ," ಓದುವ್ರಿ, ಈ ರಿವ್ಯೂ, ಆ ಪುಸ್ತಕ, ಈ ಪುಸ್ತಕಗಳನ್ನು ಓದುತ್ತೀರಿ. ಇನ್ನೂ ನೂಲಿನ ಮಹತ್ವವು ತಿಳಿಯಲಿಲ್ಲವೇ? ಅರ್ಥದ ಮರ್ಮವನ್ನರಿಯದೆ ವ್ಯರ್ಥವಷ್ಟೆ...!

ಶಿಷ್ಯ:— ಸರಿ! ಸರಿ! ನಿಜ! ವ್ಯರ್ಥ!! ವ್ಯರ್ಥ! ಮಹಾತ್ಮರವರ ಲೇಖನಗಳು ಗಹನವಾದವುಗಳು. ಸೂತ್ರರೂಪವವು. ಅವು ವಿಶಾಲವಾದ ಶ್ರೇಷ್ಠ, ಪವಿತ್ರ, ಕ್ಷೇಮಕರ, ವಿಶೇಷ ಜ್ಞಾನದಿಂದ ತುಂಬಿತುಳುಕುತ್ತಿರುವವು. ಅದು ಸತ್ಯವಾದಾಗ್ಯೂ "ನೂಲಿನಿಂದ ಸ್ವರಾಜ್ಯ" ಈ ಮಾತು ಸತ್ಯವೆಂದು ನನಗಂತೂ ಕಾಣುವದಿಲ್ಲ. ಮಹಾತ್ಮರು ನಮ್ಮಂತೆ ಅವಿವೇಕಿಗಳಲ್ಲ. ಅದು ನಿಜವು. ಸಾಮಾನ್ಯರೋ, ಮಾತಿಗೆ ತೆರಪಿಲ್ಲ. ವಿಚಾರ-ಸಾಧಕ ಬಾಧಕ ವಿಚಾರ ಮಾಡುವ ಮೊದಲೇ ಏನಾದರೂ ಮಾತಾಡಿ ಬಿಡುವದು ನಂತರ ವಿಚಾರಕ್ಕೆ ಪ್ರಾರಂಭವಾಯಿತು. ಮೊದಲಿಗೆ ಮಾತಾಡುವದು ನಂತರ ವಿಚಾರ ಮಾಡುವದು. ಇದು ಮೂರ್ಖತನದ ಲಕ್ಷಣವು. ಆದರೆ, ಮಹಾತ್ಮರು ಯಾವದಾದರೊಂದು ಸಂಗತಿಯನ್ನು, ಜನರೆದುರಿಗೆ ಇಡುವ ಮೊದಲೇ, ಸ್ವತಃ ಚೆನ್ನಾಗಿ ನಿಷ್ಪಕ್ಷಪಾತದೃಷ್ಟಿಯಿಂದ ವಿಚಾರ ಮಾಡಿ, ಇಷ್ಟಮಿತ್ರರೊಡನೆ ವಾದಿಸಿ, ಅಖಂಡನಿಯಮವೆಂದು ನಿಶ್ಚಯಿಸಿಕೊಳ್ಳುವರು, ನಂತರವೇ ಬಾಯಿದೆರೆಯುವರು; ಜನರೆದುರಿಗೆ ಇಡುವರು. ಇದು ನಿಶ್ಚಿತವಾದದ್ದು; ಇದೂ ನಮಗೆ ತಿಳಿದಿರುತ್ತದೆ. ಆದಾಗ್ಯೂ ನೂಲಿಗೂ ಸ್ವರಾಜ್ಯಕ್ಕೂ, ಅರ್ಥಾರ್ಥ ಯಾವ ಸಂಬಂಧವೂ— ನಮ್ಮ ಅಲ್ಪ ಬುದ್ಧಿಗ್ಯಾಕವಲ್ಲದು— ಕಾಣುವದಿಲ್ಲ ಅಪ್ಪಾ! ಈ ಎರಡೂ ಶಬ್ದಗಳಿಂದ ನಮ್ಮ ಮನಸ್ಸಿನಲ್ಲಿ ಬರುತ್ತಲಿದೆ ನನಗೆ ಮಾತ್ರ ಈ ಸಂಶಯ ಬರುತ್ತಿದೆಂತಲ್ಲ ಮೊನ್ನೆ ಒಂದು ಸಭೆಯಲ್ಲಿ, ನಮ್ಮ ಡಿ. ಸಿ. ಸಿ ದ ಪ್ರೆಸಿಡೆಂಟರಿಗೆ ಒಬ್ಬರು ಇದೇ ಪ್ರಶ್ನೆಯನ್ನು ಮಾಡಿದರು. ಅದಕ್ಕೆ ಅವರು ೧ ತಾಸಿನ ವರೆಗೆ ಏನೇನೋ ಹೇಳಿ ಬಿಡಗುಟ್ಟಿದರು. ಅದರಿಂದ ನನಗಂತೂ ಸಮಾಧಾನವಾಗಲಿಲ್ಲ. ಪ್ರಶ್ನೆ ಮಾಡಿದವರಿಗೆ ಸಮಾಧಾನವಾಯಿತೋ ಇಲ್ಲೋ, ದೇವರಿಗೂ ಅವರಿಗೆ ಗೊತ್ತು. ಸಭೆಯಲ್ಲಿ ಕುಳಿತವರೂ ಮುಂತಾದವರೂ ಸಿಂಗಲ್ ಪಟ್ಟಿಲ್ ಗ್ರೇಜುಏಟರೂ ಇದ್ದರು. ಯಾರೂ ಸಮರ್ಪಕವಾಗಿ ಪ್ರತಿಪಾದಿಸಿ ಸಂಶಯ ನಿವೃತ್ತಿ ಮಾಡಲಿಲ್ಲ. ಅವರ ಮುಖಚರ್ಯೆಯಿಂದ ಅವರಿಗೂ ನನ್ನಂತೆ ಸಂಶಯವಿದ್ದಂತೆ ಸಹಜವಾಗಿ ಯಾರೂ ಹೇಳುವಂತೆ ಇದ್ದರು. ಇಂಥಿಂಥ ವಿದ್ವಾಂಸರ ಸ್ಥಿತಿ ಹೀಗೆ! "ಅರ್ಥದ ಮರ್ಮವನರಿಯದೆ" ಹೇಳುವದು!! ನಂನಂಥವರ ಪಾಡೇನು!!'

ಗುರು:— ಹೌದಪ್ಪಾ! ಹೌದು ನೀನು ಹೇಳುವದು ಸಟೆಯಲ್ಲ. ನನ್ನ ಅನುಭವಕ್ಕೂ ಈ ವಿದ್ವಾಂಸರ ಗುಣ ಬಂದಿದೆ. ಅದು ಹ್ಯಾಗೆಂದರೆ, ಇವರಲ್ಲಿ ಸೇರಿದವರಲ್ಲಿ ಕೆಲವರು ಬರೇ ಸ್ವಾರ್ಥಿಗಳು. ಇವರ ದೃಷ್ಟಿ ಬರೇ ಹಣದ ಕಡೆಗೆ ಇರುವದು. ಹಲವರು ಕೀರ್ತಿ, ಖ್ಯಾತಿಯ ಕಡೆಗೆ ಲಕ್ಷ್ಯವುಳ್ಳವರು. ಸದಾ ಇವರ ಲಕ್ಷ್ಯವು ಸ್ತುತಿಯ ಕಡೆಗೆ ಇರುವದು. ಇದರಿಂದ ಹೊಗಳಿದರೆ ಏಳುವರು, ಕುಣಿಯುವರು, ತೆಗಳಿದರೆ ಬೀಳುವರು, ದಣಿಸುವರು. ಹಣವಿನ ಕೊರತೆ ಇಂತಹದಲೆ ಅನೇಕರು. ಮುಂದೆ ಬರುವರೇ? ಜನಸೇವೆಯೋ ದೇಶಸೇವೆಯು— ದೇವರ ಸೇವೆಯ— ಧರ್ಮವು. ನಿರಿಚ್ಛ ಸ್ವಾರ್ಥತ್ಯಾಗ— ಎಂದು ಭಾವಿಸಿ ಸೇರಿದವರು ಅಪರೂಪವಾಗಿರುವರು. ಇಂಥವರು ಹೇಳಿದ್ದನ್ನು, ದಾಖಲಿಸಲ್ಕೆ, ಮಾಡುವಂಥವರಿಗೆ ಹೇಳಲಿಕ್ಕೆ ಸಿದ್ಧರಿರುವರು. ಇಂಥ ನಿರಭಿಮಾನಿಗಳು ಮುಂಭಾವನಕ್ಕೆ ಬಳಗಾಗುವದಿಲ್ಲ. ದೇಶಸೇವೆಯಾದರಾಯಿತು. ಎಂದು ಕಪ್ಪಂಬಾದಷ್ಟು ಈಗಲಾದರೂ ಕಾರ್ಯ ಮಾಡುತ್ತಲಿದ್ದಾರೆ. ಬಾಕಿಯುಳಿದಲ್ಲವೆಷ್ಟೋ ಜನರು "ನಮಗೇನು ಮಾಡಬೇಕೆಂದು ತಿಳಿಯುವದೂ" ಇಲ್ಲ. ಮಹಾತ್ಮರು ಹೇಳಿದಂತೆ ಆಚರಿಸುವದೂ ಇಲ್ಲ. ಬಹುತರವಾಗಿ ಎಲ್ಲ ಮಂದಿ ಇಂಥವರೇ. ಅಜ್ಞರೋ, ಅಜ್ಞರು ತುಂಬಿದಾನಿಗಳು ವಿಚಾರ, ಪೂರ್ಣವಿಚಾರ ಮಾಡುವ ಮೊದಲೇ ಬಾಯಿಗೆ ಬಂದದ್ದು ಏನಾದರೂ ನುಡಿದು ಬಿಡುವರು ತಾವು ನುಡಿದದ್ದು ನಿರರ್ಥಕ, ಅನರ್ಥಕರವೆಂದು ತಿಳಿದು ಬಂದಾಗ್ಯೂ ಹಟವನ್ನು ಬಿಡರು. ದೇಶಕಾರ್ಯಕ್ಕೆ ವಿಘ್ನ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ಸಿಬಿತವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲು ಉಪಕಾರವಾದರೋ

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಕದ ಬೇನೆಯು ತಗ್ಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನು ಹಚ್ಚದ ತಂಪಾಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕಳೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಲ ಒಂದು ಬಾರಿ "ಕಾಮಿನಿಯಾ ಆಯಿಲ" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ ಇತರ ಸಾವಿರಾರು ಗೃಹಸ್ಥರು ಅಭಿನಂದನಾದ ಮಾನಪತ್ರಗಳೂ ದೊರಕಿವೆ

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10 0 ವಿ. ಪಿ ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾಗಿದ್ದು ಇದರಲ್ಲಿ ಮದಿರೆಯ (ಆಲ್ಕೋಹೋಲ) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಚಿನಲ್ಲಿ ಈ ದ್ರವ್ಯದ ಕೆಲವು ಹನಿಗಳನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ ದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುತ್ತದೆ. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ ಮಿಡಿಯಂ ಸೀಸೆ 1 ಕ್ಕೆ 0 12 0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0

Address: **The Anglo Indian Drug & Chemical Co**

16, Market, **BOMBAY 2**

ಬಂದರೂ ಅವರು ನೋಡುವವರಲ್ಲ ದೇಶ ಮುಳುಗಿದ ರೂ ಅಡ್ಡಿಯಿಲ್ಲ. ತಮ್ಮ ಮಾತು ಮೇಲು ಮಾಡಲು ಪ್ರಯತ್ನಿಸುವರು. ಇಂಥವರಲ್ಲಿ ವಿಶೇಷವಾಗಿ ಸುಶಿಕ್ಷಿತರೆಂದೆನಿಸಿಕೊಳ್ಳುವ ವಿದ್ಯಾವಂತರೇ ಹೆಚ್ಚಿಗೆ ಬಂದಿರುವರು. ಇದು ನಮ್ಮ ಮತ್ತು ನಮ್ಮ ದೇಶದ ದುರ್ದೈವವು. ಈ ತರದ ದುಷ್ಟತನವನ್ನು ಎಷ್ಟು ವರ್ಣಿಸಿದರೂ ತೀರದು. ಹಿಂದೆ ಮುಂದೆ ನೋಡದೆ ಮುಂದೆ ಬರಲಿಕ್ಕೂ ಅವರು ತಯಾರ! ದುರಭಿಮಾನದಿಂದ— ಹಟದಿಂದ— ವಿಘ್ನಗಳನ್ನುಂಟು ಮಾಡಲಿಕ್ಕೂ ತಯಾರ! ತಾವೇ ದೇಶ ಸತ್ಕಾರ್ಯವನ್ನು ಕೆಡಿಸಿ, ಬೇರೆಯವರ ಮೇಲೆ ನಿಷ್ಕಾರಣ ಕೆಸರನ್ನು ಎಸೆಯಲಿಕ್ಕೂ ತಯಾರ!" ಶಿಷ್ಯಾ ಸಾಕು ಇಂಥವರ ಸಂಗತಿ. ಇವರು ಯಮದೇವರ ಮುಂದೆ ಹೋದಾಗ ಏನು ಹೇಳುವರೋ ಇರಲಿ ಸಾಕು, ಅವರ ಸಂಗತಿ ಈಗ ನಿನ್ನ ಪ್ರಶ್ನೆಯ ಕಡೆಗೆ ಹೊರಳುವಾ «ನೋಡುವದರಿಂದೇನು ಪ್ರಯೋಜನ"— «ನೋಡಿನ ಮಹಾತ್ಮ್ಯ— ರಹಸ್ಯ' ವೇನು' ಇವೇ ನಿನ್ನ ಪ್ರಶ್ನೆಗಳಷ್ಟೆ?

ಶಿಷ್ಯ — ಹೌದು, ಅಯ್ಯಾ ಹೌದು ಅದನ್ನು ಆಸ್ಪ ನಮಗೆ ಬಾಲಕರಿಗೆ ತಿಳಿಯುವಂತೆ ವಿವರವಾಗಿ ಹೇಳಬೇಕು ಸಹಜವಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ತಿಳಿಸಿ ಹೇಳಬೇಕು

ಗು:— ನೀವೆಲ್ಲವರು ಇತಿಹಾಸಾದಿಗಳನ್ನು ಓದಿರುವಿರಿ ಈ ವಿಷಯವಾಗಿ ನಡೆದ ಸಂಗತಿಗಳು ನಿಮಗೆ ಗೊತ್ತಿಲ್ಲವೆಂತಿಲ್ಲ. ಎಷ್ಟೋ ಸಂಗತಿಗಳು ಗೊತ್ತಿವೆ ನಮ್ಮ ದೇಶದಲ್ಲಿ ಪರದೇಶದ್ವರ ಕಾರಖಾನೆಗಳು ಬೆಳೆದಂತೆ ಅವರ ರಾಜ್ಯವೂ ಬೆಳೆಯಿತು ಅವರ ರಾಜ್ಯ ವಿಸ್ತರಿಸಿದಂತೆ ಅವರ ವ್ಯಾಪಾರವೂ ಬೆಳೆಯಿತು ಈ ಪರದೇಶಸ್ಥರ ಕೋಟೆಗಳ ಸುತ್ತುಮುತ್ತು, ಅವರು ನಾನಾ ತರದ ಗಿರಣಿಗಳನ್ನು ಒಳ್ಳೇ ಚೆಟ್ಟು ರೀತಿಯಿಂದ ಕೂಡಿಸಿದರು ಈ ಕೂಡಿಸಿದ ಗಿರಣಿಗಳಲ್ಲಿ ಮುಖ್ಯತಃ ನೇಕಾರರನ್ನೇ ಅತಿಶಯವಾಗಿ ಕೂಡಿಸಿದ್ದರು ಈ ಕಲನೇಕಾರರಿಂದ ಮಾಡಿಸಲ್ಪಟ್ಟ ಒಳ್ಳೇ ಕಲಾಕೌಶಲ್ಯದ ಅರಿವೆಯನ್ನು, ಇಂಗ್ಲಂಡವನ್ನೂ ತನ್ನು ಬಿಟ್ಟು, ಯುರೋಪಖಂಡಕ್ಕೆಲ್ಲ ಕಳಹಿಸಿ ಮಾರಿ ಮಿತಿಯಿಲ್ಲದ ಹಣವನ್ನು ಸಂಪಾದಿಸುತ್ತಿದ್ದರು ಈ ಹಣದ ಬಲದ ಮೇಲೆ ಇಲ್ಲಿ ನಮ್ಮ ಬಾಂಧವರನ್ನೇ ಸೈನಿಕರನ್ನಾಗಿ ಮಾಡಿಕೊಂಡು ನಮ್ಮ ಬಾಂಧವರಿಂದಲೆ ನಮ್ಮನ್ನು ಸೋಲಿಸಿ ರಾಜ್ಯವನ್ನು ಗಳಿಸಿಕೊಳ್ಳುತ್ತಿದ್ದರು ಇಷ್ಟೇ ಅಂತಲ್ಲ, ಯುರೋಪದಲ್ಲಿ ಸಹ ಇಲ್ಲಿಯ ವ್ಯಾಪಾರದಿಂದ ಸಂಪಾದಿಸಿದ ಹಣದ ಬಲದ ಮೇಲೆ ಇಂಗ್ಲಿಷರ ಸ್ವಾತಂತ್ರ್ಯ ಬೆಳೆಯುತ್ತ ಹೋಗುತ್ತಿತ್ತು ಅವರ ಶಕ್ತಿಯು ಮತ್ತು ರಾಜ್ಯದ ಬೆಳವಣಿಗೆಗೆ ನಮ್ಮ ದೇಶದ ವ್ಯಾಪಾರವೇ ಮುಖ್ಯ ಕಾರಣವಾಯಿತು. ನೆಪೋಲಿಯನನಿಗೆ ಮಾತ್ರ ಇವರ ಮರ್ಮ — ಅವರ ಶಕ್ತಿ ಬೆಳೆಯುವ ಮರ್ಮ— ತಿಳಿದಿತ್ತು ಅದರಿಂದಲೇ ಅವನು, ತಾನು ಸೋಲಿಸಿದ ಯುರೋಪದೊಳಗಿನ ಅರಸರ ಸಂಗಡ ಕರಾರುಗಳನ್ನು ಮಾಡಿಕೊಳ್ಳುವಾಗ, "ಇಂಗ್ಲೀಷರ ಮಾಲು ತೆಗೆದುಕೊಳ್ಳಬಾರದು," ಎಂಬ ಕಲಮನ್ನು ಕರಾರಿನಲ್ಲಿ ಎಂದೂ ಹಾಕದೇ ಬಿಡುತ್ತಿದ್ದಿಲ್ಲ' ಈ ಎಲ್ಲ ಹಕೀಕತ್ತುಗಳನ್ನು ನೀವು ಇತಿಹಾಸದಲ್ಲಿ ಓದಿಲ್ಲವೇ! ಇರಲಿ ಇವೇ ಕಾರಖಾನೆಗಳು ನಮ್ಮ ಪಾರತಂತ್ರ್ಯಕ್ಕೂ ದಾರಿದ್ರ್ಯಕ್ಕೂ ಕಾರಣಗಳಾದವು. ಸಾರಾಂಶ, ಹಿಂದೆ ಮುಂದೆ ವಿಚಾರ ಮಾಡಿ, ಸಾಧಕಬಾಧಕಗಳನ್ನು ಲಕ್ಷಕ್ಕೆ ತಂದು ಕಾರ್ಯಗಳ ಕಾರಣಗಳನ್ನು ತರ್ಕಿಸಿ, ನಿಶ್ಚಯಿಸಿದ ಸಿದ್ಧಾಂತಗಳನ್ನು ಸ್ಥಾಪಿಸುವಷ್ಟು ಜ್ಞಾನಶಕ್ತಿಯು ನಿಮ್ಮಲ್ಲಿ ಇನ್ನೂ ಬಂದಿಲ್ಲ. ನಿಮ್ಮ ಬುದ್ಧಿ ಇನ್ನೂ ಪರಿಪಕ್ವವಾಗಿರುವದಿಲ್ಲ. ಇದರಲ್ಲೇನೂ ಆಶ್ಚರ್ಯವಿಲ್ಲ. ಕೂದಲುಗಳು ಪಕ್ವವಾಗಿವೆ, ಶರೀರಸ್ಥ ಧಾತುಗಳೆಲ್ಲಾ ಹಸಾಗಿವೆ, ಬುದ್ಧಿಯು ಸಹ ಹಣ್ಣಿಗೆ ಬಂದಿದೆ ಹೀಗಿದ್ದು, ಈ ರೀತಿ ಸರ್ವತೋಪರಿ ಎಲ್ಲ ತರದಿಂದ ಸಂಪೂರ್ಣವಾಗಿ ಪರಿಪಕ್ವತೆಗೆ ಬಂದ ಸುಶಿಕ್ಷಿತರು, ಇಂಥ ವಿಷಯಗಳ ಕಡೆಗೆ ಸ್ವಲ್ಪ ಹೊತ್ತಾದರೂ ಲಕ್ಷ ಕೊಡದಿದ್ದದ್ದು ಮಾತ್ರ ಆಶ್ಚರ್ಯಕರವು, ಬಾಂಧವ ನಾಶ್ಯದವೂ, ಅಕ್ಷಮ್ಯವೂ ಆಗಿರುವದು. ಇರಲಿ ನಾನು ಮಾಡಿದ ಭರಭರಾಟಿ ಹೇಳುತ್ತ ಹೊರಟರೆ, ಚನ್ನಾಗಿ ನಿಮ್ಮ ಧ್ಯಾನದಲ್ಲಿ ಉಳಿದು ಉಳಿಯುವದು ಕಠಿಣವಾದ ಕಾರಣ, ಹಾಗೆ ಮಾಡದೆ, ನಿಮಗೆ ತಿಳಿಸಿರುವ ಪ್ರಶ್ನೆಗಳನ್ನು ಮಾಡಿ ಬಳಿಕ, ನಿಮ್ಮ ಬಾಯಿಯಿಂದಲೇ ಉತ್ತರಗಳನ್ನು ಹೊಂದಿಸಿ ತರುವ ಯತ್ನ ಮಾಡುವೆನು. ಅಂದರೆ, ನಿಮಗೆ ಸುಲಭವಾಗಿ ತಿಳಿಯುವಂತಿದೆ ಸಾವಧಾನಚಿತ್ತದಿಂದ ಕೇಳಿ ಮುಂದಿನ ಪ್ರಶ್ನೆಗಳಿಗೆ ನಿಮಗೆ ಸೂಚಿಸಿದ ಉತ್ತರಗಳನ್ನು ಕೊಡಿರಿ

(ಅಪೂರ್ಣ — ಅರೀತಯ್ಯಾ.)

ಜಾತಿಗಳ ಸ್ಥಿತಿ.

(ಮಹಾತ್ಮಾ ಗಾಂಧಿಯವರ ಲೇಖದ ಅನುವಾದ.)

[ಲೇಖಕ- ಅಜ್ಞಾತ.]

ನಾಗಪೂರಿನ ಬಂಧುಗಳ ಸಮ್ಮೇಲನವು ಕಲಕತ್ತೆಯಲ್ಲಿತ್ತು ಅಲ್ಲಿ ನನಗೆ ನಿಮಂತ್ರಿಸಿಕೊಂಡು ಹೋಗಿದ್ದರು ಒಬ್ಬ ವ್ಯಕ್ತಿ ಸುಧಾರಣೆಯೇ ಅಲ್ಲಿಯ ವಿಷಯವಾಗಿತ್ತು ಮತ್ತು ಅದಕ್ಕೆ ಸಂಬಂಧಪಟ್ಟ ಅನೇಕ ಪ್ರಶ್ನೆಗಳು ಚರ್ಚಿಸಲ್ಪಡುತ್ತಿದ್ದವು. ಇಂಥ ಸ್ಥಳದಲ್ಲಿ ನಾನು ಒಂದು ಭಾಷಣವನ್ನು ಕೊಡಲಿ! ಸುಧಾರಣೆಯನ್ನು ಕುರಿತ ನನ್ನ ಅಭಿಪ್ರಾಯದ ಬದಲಾಗಿ, ನಾನು ಬಹಿಷ್ಕಾರದ ಸಿದ್ಧಾಂತದ ಕರಿತೇ, ಅವರ ಮುಂದೆ ಮಾತಾಡಿದೆನು. ಬಹಿಷ್ಕಾರ-ಶಸ್ತ್ರವು ಅವರಲ್ಲಿ ಭಯಂಕರ ಸ್ವರೂಪವನ್ನು ತಾಳಿತ್ತೆಂಬುದು ನಾನು ಕೇಳಿದ್ದೆನು ಮತ್ತು ಈ ಮೂಲಕ ಪರಸ್ಪರರಲ್ಲಿ ವಿಷವು ಹಬ್ಬಿಕೊಂಡಿತ್ತು ಈ ಭಾಷಣದ ವಿಷಯವು ಪ್ರತಿಯೊಂದು ಸಮಾಜಕ್ಕೆ ಸಂಬಂಧಪಟ್ಟದ್ದಾದ್ದರಿಂದ, ಇಲ್ಲಿ ಅದನ್ನು ಕೊಡುತ್ತೇನೆ.

ಬಹಿಷ್ಕಾರ ಶಸ್ತ್ರವು ನಿರ್ಮಲಚಿತ್ತ ಮನುಷ್ಯನಿಂದ ಉಪಯೋಗಿಸಲ್ಪಟ್ಟರೆ ಮಾತ್ರ, ಅದರ ಉಪಯೋಗವಾಗುತ್ತದೆ. ಇಲ್ಲವಾದರೆ ಅದು ಕೇವಲ ಹಿಂಸೆಯ ಸ್ವರೂಪವನ್ನು ತಾಳಿಕೊಂಡು, ಅದನ್ನು ಉಪಯೋಗಿಸುವವನನ್ನೂ, ಮತ್ತು ಯಾರ ಮೇಲೆ ಉಪಯೋಗಿಸಲ್ಪಡುತ್ತದೋ ಅವನನ್ನೂ ಕೂಡಾ, ಅದು ನಾಶ ಕೊಳ್ಳುವದು

ಸದ್ಯದಲ್ಲಾದರೋ, ನಮ್ಮಲ್ಲಿ ಈ ಶಸ್ತ್ರವನ್ನು ಉಪಯೋಗಿಸುವ ಪಾತ್ರತೆ ಉಳಿದಿಲ್ಲ. ಏನು! ಯಾವನೊಬ್ಬ ತಂದೆಯು ತನ್ನ ಹತ್ತು ವರ್ಷದ ವಿಧವೆಯಾದ ಹುಡುಗಿಯ ಪುನರ್ವಿವಾಹ ಮಾಡಿದ್ದಲ್ಲಿ, ಅದರಿಂದ, ಅವನನ್ನೂ, ಆತನ ಹುಡುಗಿಯನ್ನೂ, ಮತ್ತು ಅವಳ ಲಗ್ನ ಮಾಡಿಕೊಳ್ಳುವವನನ್ನೂ, ಜಾತಿಯ ಹೊರಗಿಡುವವರಲ್ಲಿ ಪುಣ್ಯವುಂಟೇ? ಪ್ರತ್ಯುತ, ಯಾರು ಅನೀತಿಯನ್ನು ಆಚರಿಸುತ್ತಾರೋ, ಯಾರು, ಸಾರ್ವಜನಿಕವಾಗಿ ವ್ಯಭಿಚಾರವನ್ನಾಚರಿಸುತ್ತಾರೋ, ಮದ್ಯ ಮಾಂಸವನ್ನು ಸೇವಿಸುತ್ತಾರೋ, ಅವರ ಬಹಿಷ್ಕಾರ ಮಾಡುತ್ತೀವೋ? ಯಾರು ವಿಚಾರದಿಂದ ವ್ಯಭಿಚಾರ ಮಾಡುತ್ತಾನೋ, ಅವನ ಬಗ್ಗೆ ಯೇನ? ಸಾರಾಂಶ, ಯಾವ ವರೆಗೆ ನಮ್ಮಲ್ಲಿ ಶುದ್ಧಿಯಾಗಿಲ್ಲವೋ ಆ ವರೆಗೆ, ಯಾರು ಯಾರ ಬಹಿಷ್ಕಾರ ಹಾಕುವದು ಯೋಗ್ಯವಾದೀತು? ಅರ್ಥಾತ್ ಯಾರೂ ಯಾರ ಬಹಿಷ್ಕಾರ ಹಾಕಲು ಯೋಗ್ಯರಿಲ್ಲ.

ಬಹಿಷ್ಕಾರದ ಪರಿಣಾಮವಾದರೋ, ಹೊಸ ಜಾತಿಗಳನ್ನು ಅಸ್ತಿತ್ವದಲ್ಲಿ ತರುವ ಸ್ವರೂಪವನ್ನು ತಾಳಿಕೊಳ್ಳುತ್ತದೆ. ಈ ದಿವಸದ ಪಕ್ಷಗಳೇ, ನಾಳೆ ಜಾತಿಗಳಾಗಿ ಕಟ್ಟುತ್ತವೆ. ಅದ್ದರಿಂದ, ಈ ಯುಗದಲ್ಲಿ, ಜ್ಞಾತಿಯು ಸಂಕರವಾಗಿ ಹೋಗಿದೆಯೋ, ಅಂಥಲ್ಲಿ, ಬಹಿಷ್ಕಾರವು ಸರ್ವಥಾ ಅನಿಷ್ಟವಿರುತ್ತದೆ.

ವರ್ಣಾಶ್ರಮವು ಧರ್ಮವಿರುತ್ತದೆ. ಅನೇಕ ಜಾತಿಗಳು ಧರ್ಮವಲ್ಲ. ವರ್ಣಾಶ್ರಮದ ರಕ್ಷಣೆಯು ಇಷ್ಟವು; ಜಾತಿಗಳ ನಾಶವು ಇಷ್ಟವು. ಅದ್ದರಿಂದ ಸುಧಾರಕರಿಗೆ ಉತ್ತೇಜನ ಕೊಡುವದು ಕರ್ತವ್ಯವಿರುತ್ತದೆ. ಏನು ಬೇಕಾದ್ದು ಮಾಡಿದರೂ, ಈ ಪ್ರಕಾರದ ಸುಧಾರಣೆಯನ್ನು ತಡೆಸುವದು ಶಕ್ಯವಿಲ್ಲ. ಯಾಕಂದರೆ, ಹಿಂದೂಧರ್ಮದಲ್ಲಿ ಬಹಳೇ ಹೊಲಸು ಸಂಚಯವಾಗಿದೆ ಮತ್ತು ಈಗ ನಾಲ್ಕೂ ಕಡೆಯಲ್ಲಿ ಜಾಗೃತಿಯುಂಟಾಗಿದೆ.

ಇಂಥ ಪ್ರಸಂಗದಲ್ಲಿ, ಸುಧಾರಣೆಗೆ ಧರ್ಮದ ಸ್ವರೂಪವನ್ನು ಕೊಡುವದೇ ಜಾಣತನವಾಗಿರುತ್ತದೆ. ಆದರೆ ಸುಧಾರಣೆಯು ಮನಸ್ಸಿಗೆ ಬಾರದಂಥಾದ್ದೆಂದು ಕಂಡ ಪ್ರಸಂಗದಲ್ಲಿ ಕೂಡಾ, ಬಹಿಷ್ಕಾರವು ಅನಿಷ್ಟವೇ ಇರುತ್ತದೆ

ಯಾವನು ಬಹಿಷ್ಕಾರ ಹಾಕಲ್ಪಟ್ಟಿರುತ್ತಾನೋ, ಅವನಾದರೋ, ಮರ್ಯಾದಾತಿಕ್ರಮಣ ಮಾಡದ ಕೂಡದು; ವಿವೇಕದಿಂದ ನಡೆಯಬೇಕು; (ಪರಸ್ಪರ ಪಕ್ಷಗಳ) ವಿಷವು ಬೆಳೆಯದಂತೆ ಜಾಗ್ರತೆ ಇರಬೇಕ; ಮತ್ತು ತನ್ನ ನೀತಿಯ ವಿಷಯದಲ್ಲಿ ಸ್ಥಿರನಾಗಿರತಕ್ಕದ್ದೆಂದು ಹೇಳಿ, ಈ ಬಹಿಷ್ಕಾರ ಪ್ರಕರಣವನ್ನು ಪೂರ್ಣ ಮಾಡುತ್ತೇನೆ.

ಜಾಹೀರಾತು.

ದೇಶಭಾಷಾಭಿಮಾನಿಗಳೇ— ಧಾರೇಶ್ವರ (ಉತ್ತರ ಕನ್ನಡ)ದಿಂದ ಹೊರಡಲಿಕ್ಕಿದ್ದ "ಕರ್ನಾಟಕ ಸುಕಾವ್ಯ ರತ್ನಮಾಲಾ" ತೃತೀಯ ಮಣಿಯಾದ "ಪರಶುರಾಮ ರಾಮಾಯಣ" ದ ಎರಡನೆಯ ಭಾಗವು ಈಶಾನುಗ್ರಹದಿಂದ ಇದೇ ಬರುವ ಗಣೇಶ ಚತುರ್ಥಿ ಸಮಯಕ್ಕೆ ಪ್ರಕಟವಾಗುವದು. ಪುಸ್ತಕಾಲು ಬೆಲೆಗೆ ಮಣಿಗಳನ್ನಪೇಕ್ಷಿಸುವವರು ಆರಾಣೆ ಪ್ರವೇಶ ಧನವನ್ನಿತ್ತು ಹಿಂದಿನ ಎರಡೂ ಮಣಿಗಳನ್ನು ಪಡೆಯಬೇಕಾಗಿ ಅಪೇಕ್ಷಿಸುವ,

ಕಾರ್ಯದರ್ಶಿ, ಕರ್ನಾಟಕ ಸುಕಾವ್ಯರತ್ನಮಾಲಾ,

ಪೋ. ಧಾರೇಶ್ವರ. (ಉ. ಕನ್ನಡ)

ಜಾಹೀರಾತು.

ಪ್ರಸಿದ್ಧ ಕೇರಳ ಜ್ಯೋತಿಷ ಶಾಸ್ತ್ರಜ್ಞರಾದ

ಕೇ. ಸಿ. ನಾರಾಯಣ ಶಾಸ್ತ್ರಿಗಳು

ಶಿರ್ಸಿಯಲ್ಲಿ ಮುಕ್ಕಾಂ ಮಾಡಿರುವರು.

ನಮ್ಮಿತ್ತ ಕಡೆ ಕೇರಳ ಜ್ಯೋತಿಷ್ಯವನ್ನು ಹೇಳಿ ಹೆಸರಾದ ಕೇ. ಸಿ ನಾರಾಯಣ ಶಾಸ್ತ್ರಿಗಳು ತಮ್ಮ ದೇಶಸಂಚಾರವನ್ನು ಮುಗಿಸಿ, ಗೆಳೆಯರ ಸೂಚನೆ ಮೇರೆಗೆ ಶಿರ್ಸಿಯಲ್ಲಿ ಮುಕ್ಕಾಂ ಮಾಡಿರುವರು. ಜಾತಕ, ಪ್ರಶ್ನೆ ಮೊದಲಾದವುಗಳನ್ನು ತಿಳಿಯ ಬಯಸುವವರು ನಾರಾಯಣ ಶಾಸ್ತ್ರಿಗಳವರಿಗೆ ಭೆಟ್ಟಿಯಾಗಿ ಲಾಭ ಹೊಂದಬೇಕು

ಪತ್ತೆ:- **ಕೇ. ಸಿ. ನಾರಾಯಣ ಶಾಸ್ತ್ರಿ,**

ಕೇರಳ ಜ್ಯೋತಿಷಿ, ಶಿರ್ಸಿ, (ಉತ್ತರ ಕನ್ನಡ)

ಪ್ರಾಥಮಿಕ ಶಿಕ್ಷಣ

ಮುಂಬಯಿ ಸರಕಾರದ ಧೋರಣ.

ಮುಂಬಯಿ ಸರಕಾರವು, ಕೌನ್ಸಿಲು ಸಭಾಸದರಾದ ರಾ| ಸುರ್ವೆಯವರ ಸೂಚನೆಯಂತೆ ನೇಮಿಸಿದ ಕಮೀಟಿಯವರು ಸೂಚಿಸಿದ ಸಂಬಳದ ಯೋಜನೆಯನ್ನು ಕಳೆದ ಸಂಚಿಕೆಯಲ್ಲಿ ನಿವೇದಿಸಿರುವೆವು. ಕಮೀಟಿಯವರು ಮಾಡಿದ ವರದಿಯ ತಾತ್ಪರ್ಯವನ್ನು ಇವರತಿ ಕೊಟ್ಟಿರುವೆವು:--

೧೯೨೪ನೇ ಇಸ್ವಿ ಮಾರ್ಚ ತಿಂಗಳಿನಲ್ಲಿ ಸಾಠೇ-ಪರಾಂಜಪೆ ಕಮೀಟಿಯವರು ಸೂಚಿಸಿದ ಸಂಬಳದ ಯೋಜನೆಯನ್ನು ಸರಕಾರವು ಅಂಗೀಕರಿಸಬೇಕೆಂದು ನಮ್ಮಲ್ಲಿಯ ಪ್ರಾಂತಿಕ ಕೌನ್ಸಿಲು ಸಭಾಸದರಾದ ರಾ| ಜಿ. ಬಿ. ಪ್ರಧಾನರವರು ಸೂಚಿಸಿದರು. ಅದಕ್ಕೆ ರಾ| ಸುರ್ವೆಯವರು ಈ ಕೆಳಗಿನ ಉಪಸೂಚನೆಯನ್ನು ಸೂಚಿಸಿದರು. ರಾ| ಪ್ರಧಾನರವರ ಸೂಚನೆಯ ವಿಚಾರವನ್ನು ಸದ್ಯಕ್ಕೆ ತಹಕೂಬ ಇಡಬೇಕ; ಮತ್ತು ಬಿನ್‌ಸರಕಾರಿ ಸಭಾಸದರ ಬಹುಮತವಿದ್ದ ಮಂಡಳವನ್ನೊಂದು ನೇಮಿಸಿ, ಈ ಕೆಳಗಿನ ಪ್ರಶ್ನೆಯ ವಿಚಾರ ಮಾಡತಕ್ಕದ್ದು.

(೧) ಸಾಠೇ-ಪರಾಂಜಪೇಯವರು ಸೂಚಿಸಿದ ಸಂಬಳದ ಯೋಜನೆಯನ್ನು ಸರಕಾರವು ಅಂಗೀಕರಿಸಿದರೆ, ಪ್ರಾಥಮಿಕ ಶಿಕ್ಷಣದ ವಿಸ್ತಾರಕ್ಕೆ ತಡೆ ಬಿದ್ದೀತೇನು ?

(೨) ಈ ಸಂಬಳದ ಯೋಜನೆಯನ್ನಕ್ಕೆ ಕೊಂಡರೆ, ಅದಕ್ಕಾಗಿ ತಗಲುವ ಹಣ ತೆರಲು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಸಮರ್ಥವಿರುವವೇನು ?

(೩) ಮಿತಖರ್ಚತೆಯ ಮೂಲಕ ಯಾವ ಯಾವ ಪ್ರದೇಶಗಳಲ್ಲಿ ವಿಶೇಷ ವ್ಯವಸ್ಥೆ ಮಾಡಬೇಕ ?

ಈ ಠರಾವನ್ನು ಕಾಯಿದೆ ಕೌನ್ಸಿಲು ಪಾಸು ಮಾಡಿತು. ಇದಕ್ಕನುಸರಿಸಿ ಮುಂಬಯಿ ಸರಕಾರವು ಒಂದು ಕಮೀಟಿಯನ್ನು ನೇಮಿಸಿತು. ಈ ಕಮೀಟಿಯ ಸಭಾಸದರು:—ಶಿಕ್ಷಣ ಖಾತೆಯ ದಿವಾಣರು; ಸ್ಥಾನಿಕ ಸ್ವರಾಜ್ಯ ಖಾತೆಯ ದಿವಾಣರು; ಶಿಕ್ಷಣ ಖಾತೆಯ ಡ್ಯಾರೆಕ್ಟರರು; ಮೌಲವಿ ರಫಿಯುದ್ದೀನ ಅಹಮ್ಮದ, ರಾ| ಆರ್. ಬಿ. ಶಿಂದೆ, ರಾ| ಎಚ್. ಬಿ. ಶಿವದಾಸಾನಿ, ರಾ| ಜಿ. ಬಿ. ಪ್ರಧಾನ ಈ ಕಮೀಟಿಯವರು ಮಾಡಿದ ಶಿಫಾರಸುಗಳ್ಯಾವವೆಂದರೆ:-

(೧) ಸಾಠೇ-ಪರಾಂಜಪೇಯವರ ಸಂಬಳದ ಯೋಜನೆಯನ್ನು ಅಂಗೀಕರಿಸಿದರೆ, ಈಗಿರುವ ಶಿಕ್ಷಕರಿಗೆ ೨೧ ಲಕ್ಷ, ೧೮ ಸಾವಿರ ರೂಪಾಯಿ ಹೆಚ್ಚು ಕೊಡಬೇಕಾಗುವದೆಂದು ನಮಗೆ ತಿಳಿದುಬಂದಿದೆ. ಜಿಲ್ಹಾ ಲೋಕಲ್ ಬೋರ್ಡುಗಳ ಪಾಲಿಗೆ ೧೬ ಲಕ್ಷ ೫೦ ಸಾವಿರ ರೂಪಾಯಿ ಬೀಳುತ್ತದೆ. ಈ ಖರ್ಚನ್ನೆಲ್ಲ ಸರಕಾರವೇ ಸಹಿಸಬೇಕಾಗುವದು. ಪ್ರಾಥಮಿಕ ಶಿಕ್ಷಣಕ್ಕೆ ಈ ಸಂಸ್ಥೆಗಳು ಈಗ ಖರ್ಚು ಮಾಡುತ್ತಿರುವ ರಕಮು ೧೪ ಲಕ್ಷವಿರುತ್ತದೆ. ೧೦ ಲಕ್ಷ ಲೋಕಲ್ ಫಂಡಿನಿಂದ; ೫ ಲಕ್ಷ ಫೀ ಉತ್ಪನ್ನದಿಂದ. ಇದರೊಳಗೆ ಪ್ರಾಂತಿಕ ಸರಕಾರವು ಕೊಡುತ್ತಿರುವ ಗ್ರಾಂಟನ್ನು ಹಿಡಿಯಲಿಲ್ಲ. ಲೋಕಲ್ ಬೋರ್ಡ ಶಾಲೆಗಳಿಗೆ ೧ ಕೋಟಿ ರೂಪಾಯಿ ಖರ್ಚು ಬರುತ್ತದೆ. ಅದಕ್ಕೆ ಲೋಕಲ್ ಬೋರ್ಡಿನವರು ತಮ್ಮ ಪಾಲಿನ ಬಾಬತು ಕೊಡತಕ್ಕ ರಕಮು ೧೪ ಲಕ್ಷ. ಈ ಹಣದೊಳಗಿಂದ ಹೊಸ ಯೋಜನೆಗಾಗಿ ಖರ್ಚು ಮಾಡುವದು ಸಾಧ್ಯವಿಲ್ಲ.

ಸಾಠೇ-ಪರಾಂಜಪೆ ಯೋಜನೆಗಾಗಿ ಜಿಲ್ಹಾ ಬೋರ್ಡಿನವರು ಕೆಲವು ಹಣ, ಪ್ರಾಂತಿಕ ಸರಕಾರವು ಕೆಲವು ಹಣ, ಹೀಗೆ ವ್ಯವಸ್ಥೆ ಮಾಡಬೇಕೆಂದು ಸೂಚಿಸೋಣಾಗಿದೆ. ಹಾಗೆ ಮಾಡುವದಿದ್ದಲ್ಲಿ ಜಿಲ್ಹಾ ಬೋರ್ಡಿನವರು ಹೊಸದಾಗಿ ಎತ್ತುವಳಿ ಮಾಡಿದ ತೆರಿಗೆಯೊಳಗಿಂದ ಇದಕ್ಕಾಗಿ ಹಣ ತೆರಬೇಕಾಗುವದು. ಎಂಟು ಜಿಲ್ಹಾ ಬೋರ್ಡುಗಳು ಈ ಕುರಿತು ತಗಲುವ ಖರ್ಚಿನ ತಮ್ಮ ಅಂಶವನ್ನು ತೆರಲು ಒಪ್ಪಿರುವವು. ಆದರೆ, ಹೊಸದಾಗಿ ಆಕರಿಸಿದ ತೆರಿಗೆಗಳಿಂದ ಹುಟ್ಟುವ ಉತ್ಪನ್ನವನ್ನು ಜಿಲ್ಹಾ ಬೋರ್ಡುಗಳು ಪ್ರಾಥಮಿಕ ಶಿಕ್ಷಣದ ವಿಸ್ತಾರಕ್ಕಾಗಿ ಉಪಯೋಗಿಸಬೇಕೆಂದು ಕಮೀಟಿಯವರ ಅಭಿಪ್ರಾಯವಿದೆ. ಮತ್ತು ಈಗಿರುವ ಶಾಲೆಗಳಿಗಾಗಿ ಈ ರಕಮಿನೊಳಗಿಂದ ಖರ್ಚು ಮಾಡಬಾರದಾಗಿಯೂ ಕಮೀಟಿಯವರ ಅಭಿಪ್ರಾಯವಿದೆ.

ಇದರ ಮೇಲಿಂದ ಸಾಠೇ-ಪರಾಂಜಪೇಯವರ ಯೋಜನೆಗಾಗಿ ಸರಕಾರವು ಜಿಲ್ಹಾ ಬೋರ್ಡುಗಳಿಗೆ ೧೬ ಲಕ್ಷ ೫೦ ಸಾವಿರ ರೂಪಾಯಿಗಳನ್ನು ತೆರಬೇಕೆಂದು ಸಿದ್ಧವಾಯಿತು. ಇನ್ನು ಮ್ಯೂನಿಸಿಪಾಲಿಟಿಗಳ ವಿಚಾರ ಮಾಡುವ. ಸಾಠೇ ಪರಾಂಜಪೇಯವರ ಸಂಬಳದ ಪ್ರಮಾಣವನ್ನು ಅಂಗೀಕರಿಸಿದರೆ, ಶಿಕ್ಷಕರಿಗೆ ೩ ಲಕ್ಷ ೮೬ ಸಾವಿರ ರೂಪಾಯಿ ತೆರಬೇಕು. ಅರ್ಧ ರಕಮನ್ನು ಮ್ಯೂನಿಸಿಪಾಲಿಟಿಯವರ ಸಹಿಸಬೇಕಾಗುತ್ತದೆ. ಆದರೆ, ಪ್ರಾಥಮಿಕ ಶಿಕ್ಷಣ ಕಾಯಿದೆಯಂತೆ ಪ್ರಾಥಮಿಕ ಶಿಕ್ಷಣದ ಆಡಳಿತೆಯನ್ನು ಲೋಕಲ್ ಅಥೋರಿಟಿ ಯಾನೆ ಸ್ಥಳಿಕ ಅಧಿಕಾರಿಗಳಿಗೆ ಒಪ್ಪಿಸಿದ ಬಳಿಕ, ಚಿಕ್ಕ ಚಿಕ್ಕ ಮ್ಯೂನಿಸಿಪಾಲಿಟಿಗಳ ಶಾಲೆಗಳನ್ನು ಜಿಲ್ಹಾ ಲೋಕಲ್ ಬೋರ್ಡುಗಳು ನಡಿಸ ಹತ್ತಿ ವತ್ತಕ್ಕೆ ಖರ್ಚನ್ನು ಸರಕಾರವು ಸಹಿಸಬೇಕಾಗುವದು. ಹೀಗೆ ಸಾಠೇ-ಪರಾಂಜಪೇಯವರ ಯೋಜನೆಯಂತೆ ಸರಕಾರವು ಕೊಡತಕ್ಕ ಖರ್ಚಿನ ಅಂಶವು ಒಟ್ಟಿಗೆ ಹೆಚ್ಚಾಗುವದು. ಮ್ಯೂನಿಸಿಪಾಲಿಟಿಯ ಅಂಶಕ್ಕೆ ಬರುವ ಖರ್ಚಿನ ರಕಮಿನೊಳಗಿಂದ ಸುಮಾರು ೫ ಲಕ್ಷ ೩೦ ಸಾವಿರ ರೂಪಾಯಿಗಳನ್ನು ಸರಕಾರವು ತೆರಬೇಕಾಗುವದು. ೧೫೩ ಮ್ಯೂನಿಸಿಪಾಲಿಟಿಗಳಲ್ಲಿ ೪೮ ಮ್ಯೂನಿಸಿಪಾಲಿಟಿಗಳು ತಮ್ಮ ಅಂಶಕ್ಕೆ ಬರುವ ಖರ್ಚನ್ನೆಲ್ಲ ತೆರಲು ಒಪ್ಪಿಕೊಂಡಿರುವವು. ಸಾಠೇ-ಪರಾಂಜಪೇ ಯೋಜನೆಯನ್ನು ಅಂಗೀಕರಿಸಿದರೆ, ಸರಕಾರವು ೧೮ ಲಕ್ಷ, ೫೦ ಸಾವಿರ ರೂಪಾಯಿಗಳನ್ನು ಹೆಚ್ಚು ಖರ್ಚು ಮಾಡಬೇಕಾಗುವದು. ಇಷ್ಟು ಹೆಚ್ಚು ಖರ್ಚು ಮಾಡಿದಾಗ್ಯೂ, ಒಂದೂ ಹೊಸ ಶಾಲೆಯಾಗಲಿಕ್ಕಿಲ್ಲ; ಒಬ್ಬ ವಿದ್ಯಾರ್ಥಿಯೂ ಸಹ ಹೆಚ್ಚಾಗಲಿಕ್ಕಿಲ್ಲ. ಇದ್ದಷ್ಟೇ ಶಿಕ್ಷಕರಿಗಾಗಿ ಇಷ್ಟು ಖರ್ಚಾಗುವದು.

ಈ ರಕಮಿನಿಂದ ೪-೫ ಸಾವಿರ ಹೊಸ ಶಾಲೆಗಳನ್ನು ನಿರ್ಮಿಸಿ ೧ ಲಕ್ಷ ಹೊಸ ವಿದ್ಯಾರ್ಥಿಗಳ ವ್ಯವಸ್ಥೆ ಮಾಡುವ ಹಾಗಿದೆಯೆಂದು ಕಮೀಟಿಯವರು ಹೇಳಿದ್ದಾರೆ.

ಸಾಠೇ-ಪರಾಂಜಪೇಯವರ ಯೋಜನೆಯಿಂದ ಪ್ರಾಥಮಿಕ ಶಿಕ್ಷಣದ ಭವಿಷ್ಯದ ಖರ್ಚನ್ನು ಕಮೀಟಿಯವರು ವಿಚಾರ ಮಾಡಿದರು. ಪ್ರಾಥಮಿಕ ಶಿಕ್ಷಣ ಕಾಯಿದೆಯಂತೆ ಲೋಕಲ್ ಅಥೋರಿಟಿ ಯಾನೆ ಸ್ಥಳಿಕ ಅಧಿಕಾರಿಗಳು ಪ್ರಾಥಮಿಕ ಶಿಕ್ಷಕರ ಸಂಬಳದ ಪ್ರಮಾಣವನ್ನು ನಿಶ್ಚಯಿಸಲು ನಿಯಮಗಳನ್ನು ಮಾಡಬೇಕೆಂದು ವಿಧಿಸೋಣಾಗಿದೆ. ಆ ಕಾಯಿದೆಯಲ್ಲಿ ಪರಮಾವಧಿಯ ಸಂಬಳವೆಷ್ಟು ಕೊಡಬೇಕು ? ಕನಿಷ್ಠ ಸಂಬಳವೆಷ್ಟು ಕೊಡಬೇಕು ? ಎಂಬುದು ಹೇಳಲ್ಪಟ್ಟಿದೆ. ಈ ಪ್ರಮಾಣದೊಳಗೆ ಅಲ್ಲಿಯ ಅಧಿಕಾರಿಗಳು ಸಂಬಳವನ್ನು ನಿರ್ಣಯಿಸಬಹುದು. ಸಾಠೇ-ಪರಾಂಜಪೇಯವರ ಯೋಜನೆಯನ್ನು ಪುರಸ್ಕರಿಸಿದರೆ, ಅವರು ಹೊಸ ಶಿಕ್ಷಕರಿಗೆ ಹೆಚ್ಚಿನ ಪ್ರಮಾಣದ ಮೇಲೆ ಸಂಬಳ ಕೊಡಬೇಕಾಗುವದು.

ಆದ್ದರಿಂದ ಕಮೀಟಿಯವರ ಅಭಿಪ್ರಾಯವೇನಂದರೆ:— ಸಾಠೇ-ಪರಾಂಜಪೇಯವರ ಯೋಜನೆಯನ್ನು ಪುರಸ್ಕರಿಸಿದ್ದಲ್ಲಿ ಪ್ರಾಥಮಿಕ ಶಿಕ್ಷಣದ ವಿಸ್ತಾರಕ್ಕೆ ಅಡ್ಡಿ ಬರುವದು. ಇದ್ದ ಶಿಕ್ಷಕರಿಗೆ ಕೊಡಬೇಕಾಗಿದ್ದ ಹೆಚ್ಚು ಖರ್ಚಿನ ಆತಂಕವೊಂದೇ ಅಲ್ಲ; ಹೊಸ ಶಿಕ್ಷಕರಿಗೆ ಕೊಡಬೇಕಾಗಿದ್ದ ಹೆಚ್ಚು ಸಂಬಳದಿಂದಲೂ ಆತಂಕವಾಗುವ ಹಾಗಿದೆ.

(೨) ಮೊದಲನೇ ಪ್ರಶ್ನೆಯ ವಿಚಾರ ಮಾಡುವಾಗಲೇ ಜಿಲ್ಹಾ ಲೋಕಲ್ ಬೋರ್ಡುಗಳ ಮೇಲೆ ಬರುವ ಪೂರ್ಣ ಖರ್ಚನ್ನು ಸರಕಾರವೇ ತೆರಬೇಕಾಗುವದೆಂದು ಕಮೀಟಿಯವರು ಹೇಳಿರುವರು. ಈ ಸಂಸ್ಥೆಗಳು ಹೊಸ ತೆರಿಗೆಯನ್ನು ಎತ್ತುವಳಿ ಮಾಡಿ ಹೆಚ್ಚು ಉತ್ಪನ್ನವನ್ನು ಮಾಡಬಹುದು. ಆದರೆ, ಶಿಕ್ಷಣದ ವ್ಯಾಪ್ತಿಯ ಖರ್ಚಿನಲ್ಲಿ ಅವು ಆ ಖರ್ಚನ್ನು ತೆರಬೇಕಾದ್ದರಿಂದ ಸಾಠೇ-ಪರಾಂಜಪೇಯವರ ಯೋಜನೆಗಾಗಿ ಯಾವದೇ ಖರ್ಚನ್ನು ತೆರುವ ಸಾಮರ್ಥ್ಯವು ಅವಕ್ಕಿರುವದಿಲ್ಲ. ಕೆಲವು ಮ್ಯೂನಿಸಿಪಾಲಿಟಿಗಳು ತಮ್ಮ ಪಾಲನ್ನು ತೆರಲು ಸಮರ್ಥವಿರುವವೆಂದು ಕಮೀಟಿಯವರ ಅಭಿಪ್ರಾಯವಿದೆ.

(೩) ಮುಂಬಯಿ ಸಬರ್ಬನ್ ಡಿಸ್ಟ್ರಿಕ್ಟ, ಠಾಣೆ, ಕಲ್ಯಾಣ, ವಸಯಿ, ಪುಣೆ, ಅಹಮ್ಮದಾಬಾದ, ಕರಾಚಿ ಈ ಪಟ್ಟಣಗಳಲ್ಲಿ ವಿಶೇಷ ವ್ಯವಸ್ಥೆ ಮಾಡಬೇಕು. ಇನ್ನೂ ಕೆಲವು ಸ್ಥಳಗಳಿರಬಹುದು. ಇಂಥ ಕಡೆಗಳಲ್ಲಿ ಸ್ಥಳಿಕ ಭತ್ತೆ ಕೊಡಬೇಕು.

(೪) ಪ್ರಾಥಮಿಕ ಶಿಕ್ಷಕರಿಗೆ ಕೊಡಬೇಕಾಗಿದ್ದ ಸಂಬಳದ ಯೋಜನೆಯ ಕುರಿತು ನಾವು ಕೆಲವು ಸೂಚನೆ ಮಾಡುವೆವು. ಟೈಮ್ಸ್ಕೇಲಿನಂತೆ ಪರಮಾವಧಿಯ ಸಂಬಳದ ಪ್ರಮಾಣವು ತೀರ ಕಡಿಮೆಯೆಂದು ನಮಗೆ ತೋರುತ್ತದೆ. ಹೆಚ್ಚು ಯೋಗ್ಯತೆಯುಳ್ಳವರಿಗಂತೂ ಇದು ತೀರ ಕಡಿಮೆಯೇ. ಆದ್ದರಿಂದ ಹೆಡ್‌ಮಾಸ್ತರರಿಗೆ ಯೋಗ್ಯ ಭತ್ತೆ ಕೊಡಬೇಕೆಂದು ನಮ್ಮ ಸೂಚನೆ.

ಈ ಭತ್ತೆಗಳು ಶಾಲೆಯ ಸ್ಥಿತಿ ಹಾಗು ವ್ಯಾಪ್ತಿಗಳ ಮೇಲೆ ಅವಲಂಬಿಸಿರಬೇಕು. ಹೆಡ್ ಮಾಸ್ತರರು ಕಾಯಂ ಹಾ ಬದ್ಲಿ ಇವನಾಗಿರಲಿ, ಈ ಭತ್ತೆಗಳನ್ನು ಕೊಡಬೇಕು. ಭತ್ತೆಗಳು ವಿಶೇಷ ಸಂಬಳವೆಂದು ಎಣಿಸಿ ರಜೆಯ ಸಮಯದ ಕೊಡತಕ್ಕ ಭತ್ತೆ, ಪೆನ್ಶನು ಕೊಡುವಾಗ ಈ ಹೆಡ್ ಮಾಸ್ತರ ಭತ್ತೆಗಳ ವಿಚಾರವಾಗಬೇಕು.

ಶಿಫಾರಸು ಮಾಡಿದ ಭತ್ತೆಗಳ ಪ್ರಮಾಣವೇನಂದರೆ:—

(೯ ನೇ ಪಾನಿನ ಮೇಲೆ ಮುಂದರಿಸಿದೆ.)

ಕಾನಡಾವೃತ್ತ.

ಮಿತಿ ಜ್ಯೇಷ್ಠ [illegible] ಸೋಮವಾರ

ಪ್ರಾಥಮಿಕ ಶಿಕ್ಷಣ.

ನಮ್ಮ ಮುಂಬಯಿ ಸರಕಾರದವರು ನೇಮಿಸಿದ ಸುರ್ವೇ ಕಮೀಟಿಯವರ ಶಿಫಾರಸುಗಳನ್ನು ನಾವು ಬೇರೊಂದೆಡೆಯಲ್ಲಿ ಪ್ರಕಟಿಸಿರುವೆವು. ಇಂದಿಗೆ ಅವುಗಳ ವಾಚನದಿಂದ ಉಂಟಾದ ಕೆಲವು ವಿಚಾರಗಳನ್ನು ನಮೂದಿಸಲಿಚ್ಛಿಸುವೆವು. ಪ್ರಾಥಮಿಕ ಶಿಕ್ಷಕರ ಸಂಬಳದ ಯೋಜನೆಯನ್ನು ವಿಚಾರಿಸುವ ನೆವ ಮಾಡಿ ಕಮೀಟಿಯವರು ಪ್ರಾಥಮಿಕ ಶಿಕ್ಷಣದ ಸರಕಾರಿ ಧೋರಣವನ್ನೇ ವ್ಯಕ್ತ ಮಾಡಿರುವರು. ಶಿಕ್ಷಕರ ಸಂಬಳದ ಯೋಜನೆಗಿಂತ ಈ ವಿಷಯಕ್ಕೆ ವಿಶೇಷ ಪ್ರಾಧಾನ್ಯ ಬಂದಿರುವದೆಂದು ಹೇಳಿದರೆ, ಅತಿಶಯೋಕ್ತಿಯಾಗಾದು. ಸಂಬಳದ ಯೋಜನೆಯು ದೋಷಪೂರ್ಣವಿದ್ದು, ಅದರಿಂದೊದಗುವ ಗೊಂದಲವನ್ನು ಕಳೆದ ಸಂಚಿಕೆಯಲ್ಲಿ ನಾವು ವಿವರಿಸಿರುವೆವು. ಸಾಮಾನ್ಯ ಶಿಕ್ಷಕರಿಗೆ ಈ ಯೋಜನೆಯಿಂದ ಲಾಭವೇನಿಲ್ಲ. ಹೆಡಮಾಸ್ತರರಿಗೆ ಗನೇ ಅಸಿಸ್ಟಂಟರಿಗೆ ಕೆಲವಿಷ್ಟು ದುಡ್ಡು ಸಿಗಬಹುದು. ಅದನ್ನವರು ಅಂಗೀಕರಿಸುವದು ಸ್ವಾಭಿಮಾನದದ್ದು ಅಷ್ಟು ಶ್ರೇಯಸ್ಕರವು ಅಲ್ಲ. ಸರಕಾರವು ಇಂಥ ಯೋಜನೆಯನ್ನು ಪುರಸ್ಕರಿಸುವದೂ ಹಿತಕರವಲ್ಲ. ಇಷ್ಟು ನಾವು ಹೇಳಿ, ಈ ಶಿಫಾರಸುಗಳೊಳಗಿನಿಂದ ಪ್ರಾಥಮಿಕ ಶಿಕ್ಷಣದ ಸರಕಾರಿ ಧೋರಣವನ್ನಷ್ಟು ವಿಮರ್ಶಿಸಲಿಚ್ಛಿಸುವೆವು.

ಕಮೀಟಿಯು ಮಾಡಿದ ಶಿಫಾರಸುಗಳನ್ನೆಲ್ಲ ಸರಕಾರವು ಸಂಪೂರ್ಣವಾಗಿ ಅಂಗೀಕರಿಸಿದ. ಇಷ್ಟು ಭಾಗ್ಯವು ಈ ಕಮೀಟಿಗೆ ಪ್ರಾಪ್ತವಾಗಿದೆ. ಇದರ ಮೇಲಿಂದ ಈ ಕಮೀಟಿಯಲ್ಲಿ ಸರಕಾರಿ ಧೋರಣದ ಪುರಸ್ಕಾರವಾಯಿತೆಂದು ನಾವು ಬೇರೆ ಹೇಳಬೇಕಾಗಿಲ್ಲ. ಕಮೀಟಿಗೆ ವಿಚಾರ ಮಾಡಹೇಳಿದ ಮೊದಲಿನ ಎರಡು ಪ್ರಶ್ನೆಗಳ ಪಟ್ಟಿಯೋಜನೆಯನ್ನು ವಿಚಾರಿಸಿರಿ. ಈ ಎರಡು ಪ್ರಶ್ನೆಗಳಿಂದ ಹೊರಡುವ ಅರ್ಥವನ್ನು ಪರಿಶೀಲಿಸಿದರೆ, ಸರಕಾರದ ಅಂತರಂಗವು ಸ್ಪಷ್ಟವಾಗುತ್ತದೆ. ಸಾಠೇ-ಪರಾಂಜಪೇಯವರ ಸಂಬಳದ ಯೋಜನೆಯನ್ನು ಸರಕಾರವು ಮಂಜೂರ ಮಾಡಿದ್ದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾಪ್ತಿಗೆ ಆತಂಕವಾಗುವದೇನು? ಈ ಸವಾಲಿನ ಅರ್ಥವನ್ನು ಸಾಮಾನ್ಯ ಭಾಷೆಯಲ್ಲಿ ನಾವು ಹೇಳುವೆವು. ಸಾಠೇ-ಪರಾಂಜಪೇಯವರು ಶಿಫಾರಸು ಮಾಡಿದಂತೆ ಸಂಬಳ ಕೊಟ್ಟರೆ, ಪ್ರಾಥಮಿಕ ಶಿಕ್ಷಣಕ್ಕೆ ತಡೆ ಬೀಳುವದೆಂಬು ಸರಕಾರದ ಅಭಿಪ್ರಾಯವಾಗಿದೆ. ಅದಕ್ಕೆ ತಲೆತೂಗದಿಸಲು ಸರಕಾರಕ್ಕೊಂದು ಕಮೀಟಿ ಬೇಕಾಗಿತ್ತು. ಇನ್ನೊಂದು ಪ್ರಶ್ನೆ ಕೇಳಿರಿ. ಈ ಯೋಜನೆಯನ್ನು ಮಂಜೂರ ಮಾಡಿದರೆ ಲೋಕಲ್ ಬೋರ್ಡ-ಮ್ಯುನಿಸಿಪಾಲಿಟಿಗಳು ಅದಕ್ಕೆ ಹಣ ತೆರಲು ಸಮರ್ಥವಿರುವವೇನು? ಈ ಸವಾಲಿನ ಅರ್ಥವನ್ನು ಎರಡು ರೀತಿಯಲ್ಲಿ ಮಾಡಬಹುದು. ಸಂಬಳ ಕೊಡಬೇಕಾದರೆ, ಅದನ್ನು ಲೋಕಲ್ ಬೋರ್ಡ ಹಾಗು ಮ್ಯುನಿಸಿಪಾಲಿಟಿಗಳು ಪರಸ್ಪರ ತೆರಬೇಕು. ಅವರಿಗೆ ತೆರುವ ಸಾಮರ್ಥ್ಯವಿಲ್ಲದರೆ, ಸಾಠೇ-ಪರಾಂಜಪೇ ಯೋಜನೆಯನ್ನು ಕಮೀಟಿಯವರು ರದ್ದುಪಡಿಸಬೇಕು. ಕಮೀಟಿಯವರು ಈ ಗರ್ಭಿತಾರ್ಥಗಳನ್ನು ಲಕ್ಷಿಸಿ ಸಾಠೇ-ಪರಾಂಜಪೇಯವರ ಯೋಜನೆಯನ್ನು ರದ್ದುಪಡಿಸಿರುವರು.

ಈ ಎರಡು ಸವಾಲುಗಳ ಮೇಲಿಂದಲೂ, ನಾವು ಬೇರೆ ಕಡೆಯಲ್ಲಿ ಕೊಟ್ಟ ಕಮೀಟಿಯವರ ಶಿಫಾರಸುಗಳ ಮೇಲಿಂದಲೂ ಪ್ರಾಥಮಿಕ ಶಿಕ್ಷಣದ ಜವಾಬದಾರಿಯನ್ನು ಅಂಗೀಕರಿಸಲು ನಮ್ಮ ಮುಂಬಯಿ ಸರಕಾರವು ತಯಾರಿಲ್ಲವೆಂದು ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣವೇನೆಂದು ಬಲ್ಲಿರಾ? ನಮ್ಮ ಸರಕಾರಕ್ಕೆ ಹಣದ ಅಡಚಣಿ ಬಹಳ. ಪ್ರಾಥಮಿಕ ಶಿಕ್ಷಕರಿಗೆ ಸಾಲಿಯಾನ ತೆರಬೇಕಾದ ೧೬ ಲಕ್ಷ ರೂಪಾಯಿಗಳನ್ನು ತೆರಲು ಸರಕಾರದ ಹತ್ತರ ಹಣವಿಲ್ಲ; ಮ್ಯುನಿಸಿಪಾಲಿಟಿ-ಲೋಕಲ್ ಬೋರ್ಡುಗಳ ಹತ್ತರವೂ ಹಣವಿಲ್ಲ. ಹೀಗೆ ಹಣದ ಪೇಚಾಟವಿದ್ದದರಿಂದ ಸರಕಾರವು ನಿರುಪಾಯವಾಗಿ ಸಾಠೇ ಪರಾಂಜಪೇ ಯೋಜನೆಯನ್ನು ಧಿಕ್ಕರಿಸಿರುವರು. ಸರಕಾರದ ಹತ್ತರ, ಬೆಸ್ಟರ [illegible], ವಿಲಾಯತೆ, ಅಳೆದಸಿಗೆ ಪ್ರವಾಸ ಭತ್ತೆ, ಕುದುರೆ ಭತ್ತೆ ಮೊದಲಾದ ಜಾತಿ ಪ್ರಕಾರದ ಭತ್ತೆ ಕೊಡಲು ಹಣವಿದೆ. ಕಲೆಕ್ಟರ, ಕಮೀಶನರ, ಸೆಕ್ರೆಟರಿ, ಗವ್ಹರ್ನರ, ಗವ್ಹರ್ನರ ಜನರಲ್ ಮೊದಲಾದ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಬಡತಿ ಭತ್ತೆ ಕೊಡಲು ಕೋಶವು ತುಂಬಿ ಬಿದ್ದಿದೆ, ಸೈನ್ಯಖರ್ಚ ಏರಿಸಲಿಕ್ಕೆ ದ್ರವ್ಯ ಸಂಗ್ರಹವಿದೆ; ಗವ್ಹರ್ನರ, ಗವ್ಹರ್ನರ ಜನರಲ್‌ರವರಂಥ ಬಾದಶಹರ ಪ್ರತಿನಿಧಿಗಳಿಗೆ ಈ ವರೆಗೆ ಇಲ್ಲದ ರಜೆಯ ಕ್ರಮಗಳನ್ನೇರ್ಪಡಿಸಿ ಹಣ ತೆರಲು ಅನುಕೂಲವಿದೆ; ಆದರೆ, ಪ್ರಾಥಮಿಕ ಶಿಕ್ಷಣದಂಥ ಪ್ರಜಾಶಿಕ್ಷಣ ಕಾರ್ಯಕ್ಕಾಗಿ ಸರಕಾರದ ಹತ್ತರ ಹಣವಿಲ್ಲ. ಶಿಕ್ಷಕರಿಗೆ ಯೋಗ್ಯ ಸಂಬಳ ಕೊಡಲಿಕ್ಕೂ ಹಣವಿಲ್ಲ. ಪ್ರಜೆಗಳಿಗೆ ಶಿಕ್ಷಣ ಕೊಟ್ಟು ಸುಸಂಪನ್ನ ಮಾಡುವದು ಸರಕಾರದ ಕರ್ತವ್ಯಕಕ್ಷೆಯಲ್ಲಿ ಬರುವದಿಲ್ಲೆಂದು ಆಳರಸರ ಅಭಿಪ್ರಾಯವಿರುವದೆಂಬುದು ಸ್ಪಷ್ಟವಾಗುತ್ತಿದೆ. ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕಾಗಿ ಸರಕಾರವು ದುಡಿಯುತ್ತದೆಂಬ ದೊಡ್ಡ ಮಾತೂ ಇದರಿಂದ ನಿರರ್ಥಕವೆಂದು ಸ್ಪಷ್ಟವಾಗುವದಿಲ್ಲೇನು?

ಅದಿರಂತಿರಲಿ. ಕಮೀಟಿಯವರು ತಮ್ಮ ಶಿಫಾರಸುಗಳನ್ನು ಮಾಡುವಾಗ ನಮೂದಿಸಿದ ಒಂದು ವಿಚಾರವನ್ನು ನೋಡಿ, ಮನಸ್ಸು ಹೇಸುತ್ತದೆ. ಸಾಠೇ-ಪರಾಂಜಪೇಯವರ ಯೋಜನೆಯಂತೆ ಈಗಿನ ಶಿಕ್ಷಕರಿಗೇ ೧೬ ಲಕ್ಷ ರೂಪಾಯಿ ತೆರಬೇಕಾಗುತ್ತದೆ. ಹೀಗೆ ಅವರಿಗೆ ತೆರದೆ, ಈ ಹಣವನ್ನು ಸಂಗ್ರಹಿಸಿದರೆ, ೪—೫ ಸಾವಿರ ಶಾಲೆಗಳನ್ನು ಸ್ಥಾಪಿಸಬಹುದು; ೧ ಲಕ್ಷ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನಕ್ಕೆ ಅನುಕೂಲ ಮಾಡಿಕೊಡಬಹುದು; ಈ ಉದ್ಗಾರವನ್ನೋದಿ ಹಲವು ಕಲ್ಪನೆಗಳು ನಮಗುಂಟಾಗುತ್ತವೆ. ಶಿಕ್ಷಕರಿಗೆ ಸಾಠೇ-ಪರಾಂಜಪೇಯವರ ಯೋಜನೆಯಂತೆ ಸಂಬಳ ಕೊಡುವದು ಧರ್ಮಕ್ಕಾಗಿಯೋ ಅಥವಾ ಸೇವೆಯ ಪ್ರತಿಫಲವೋ? ಶಿಕ್ಷಕರ ಸೇವೆಗೆ ತಕ್ಕ ಸಂಬಳ ಸಿಗುವದಿಲ್ಲೆಂದು ಸಾಠೇ ಪರಾಂಜಪೇಯವರು ಸಂಬಳವನ್ನು ತಯಾರಿಸಿದರೋ? ಅಥವಾ ಶಿಕ್ಷಕರಿಗೆ ಧರ್ಮ ಮಾಡಬೇಕೆಂಬ ಔದಾರ್ಯ ಬುದ್ಧಿಯಿಂದ ಸರಕಾರಿ ಹಣದ ವಿನಿಯೋಗ ಮಾಡಹೇಳಿದರೋ? ಕಮೀಟಿಯವರು ಉತ್ತರ ಕೊಡಬಲ್ಲರೇನು? ಶಿಕ್ಷಕರಿಗೆ ಬಡತಿ ಕೊಡದೆ ಉಳಿಯಬಹುದಾದ ಹಣದಿಂದ ಶಿಕ್ಷಣದ ಪ್ರಸಾರ ಮಾಡುವದಾದರೆ, ಶಿಕ್ಷಕರು ಅಷ್ಟು ತ್ಯಾಗವನ್ನು ಸಹಿಸಲಿಕ್ಕೂ ತಯಾರಿರುವರು. ಕಮೀಟಿಯವರು ಮಾಡಿದ ಶಿಫಾರಸುಗಳಂತೆ ಶಿಕ್ಷಕರಿಗೆ ಈಗ ಸಿಗುವ ರೂ. ೪-೪॥ ಲಕ್ಷ. ಉಳಿದ ಹಣದಿಂದ ಸರಕಾರವು ಶಾಲೆಗಳನ್ನು ಸ್ಥಾಪಿಸಿ ತೋರಿಸಲಿ! ಇಲ್ಲದಿದ್ದರೆ, ಈ ತರ್ಕವೆಲ್ಲ ಶಿಕ್ಷಕರಿಗೆ ಮೋಸ ಹಾಕುವ ಉಪಾಯವೆಂದು ಪ್ರಜೆಗಳಿಗೆ ಹೇಳಲಿಕ್ಕೆ ಆಸ್ಪದವಾಗುವದು.

ಮತ್ತೂ ಒಂದು ಮಾತಿದೆ. ಶಿಕ್ಷಕರಿಗೆ ಕೊಡಬೇಕಾದ ಬಡತಿಯ ಹಣದಿಂದ ಶಿಕ್ಷಣದ ಪ್ರಸಾರ ಮಾಡಬರುವಂತೆ, ಇತರ ಖಾತೆಗಳ ನೌಕರರಿಗೆ ಕೊಟ್ಟ ಬಡತಿಯ ಹಣದಿಂದಲೂ ಶಿಕ್ಷಣ ಪ್ರಸಾರವಾಗಬಹುದು; ಅದಾದರೂ ಹಣವೇ. ಈ ವಿಚಾರವು ಸರಕಾರಕ್ಕೆ ಆ ಸಮಯ ಯಾಕೆ ಹೊಳೆಯಲಿಲ್ಲ, ಶಿಕ್ಷಕರ ಸಂಬಳವನ್ನು ಅಪಹರಿಸಿ ಶಿಕ್ಷಣದ ಪ್ರಸಾರ ಮಾಡಬೇಕೆಂದು ಸರಕಾರದ ವಿಚಾರವಿರುವದೇನು? ಹೀಗಿದ್ದರೆ, ಆ ಶಿಕ್ಷಣ ಪ್ರಸಾರವು ನಮಗೆ ಬೇಡ. ಗುರುಗಳ ಸಂತೋಷದಿಂದ ಸಂಪಾದಿಸಿದ ವಿದ್ಯೆಯೇ ಶಿಷ್ಯರಿಗೆ ಸಾರ್ಥಕವಾಗುತ್ತದಲ್ಲದೆ, ಗುರುಗಳನ್ನು ದಣಿಸಿ ಸಂಪಾದಿಸಿದ ವಿದ್ಯೆಯು ಎಂದೆಂದಿಗೂ ಶ್ರೇಯಸ್ಕರವಲ್ಲವೆಂದು ನಾವು ಒತ್ತಿ ಹೇಳುವೆವು. ಕಮೀಟಿಯವರ ವಿಚಾರ

ದಂತೆ ನಾವು ಉಳಿತಾಯದ ವಿಚಾರ ಮಾಡ ಹೋದರೆ, ಬಹಳ ಉಳಿತಾಯವಾಗುವಂತಿದೆ. ಯಾರೂ ಉಣ್ಣದಿದ್ದರೆ ಬಹಳ ಲಾಭವಾಗುವದು; ಶಿಕ್ಷಕರು ಸಂಪೂರ್ಣವಾಗಿ ನಿಃಸ್ವಾರ್ಥಿಗಳಾಗಿ ವಿದ್ಯಾದಾನ ಮಾಡಿದರೆ, ಪ್ರಜೆಗಳೆಲ್ಲರೂ ಸುಶಿಕ್ಷಿತರಾಗುವರು; ಪ್ರಜೆಗಳಿಗೆ ವಿದ್ಯಾದಾನವನ್ನು ಮಾಡಿದ ಶ್ರೇಯಸ್ಸು ಸರಕಾರಕ್ಕೆ ಕೂತಲ್ಲಿ ಪ್ರಾಪ್ತವಾಗುವದು. ಕಮೀಟಿಯಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳಿದ್ದರು; ದೊಡ್ಡ ದೊಡ್ಡ ಸಂಬಳ ತಿನ್ನುವವರಿದ್ದರು. ಇವರು ಸ್ವಲ್ಪ ಆತ್ಮನಿರೀಕ್ಷಣೆ ಮಾಡಿ ತಮ್ಮ ತಮ್ಮ ಸಂಬಳಗಳನ್ನೇ ಈಗಿನ ಪ್ರಾಥಮಿಕ ಶಿಕ್ಷಕರ ಸಂಬಳದಷ್ಟು ಇಳಿಸಿಕೊಂಡು, ಉಳಿದದ್ದನ್ನು ಸರಕಾರಕ್ಕೆ ಒಪ್ಪಿಸಿದರೆ, ಶಿಕ್ಷಕರಿಗೆ ಹೇಳುವ ತ್ಯಾಗದ ಪಾಠವು ಫಲಿಸುತ್ತಿತ್ತು. ಶಿಕ್ಷಕರೂ, ಮನುಷ್ಯರೇ; ಅಧಿಕಾರಿಗಳಾದರೂ ಮನುಷ್ಯರೇ. ವಿಲಾಸ ಸಾಮಗ್ರಿಗಳನ್ನು ತೊರೆದರೆ ಇವರಂತೆ ಅವರೂ ಬಾಳ್ವೆ ಮಾಡಿಕೊಂಡು ಉಳಿಯಬಹುದಲ್ಲವೇ!

ಸ್ಫುಟ ಸೂಚನೆಗಳು.

೧. ಪರಮಾತ್ಮನ ಲೀಲೆಗಳು ಅಗಾಧವಿರುವವೆಂದು ಹೇಳುತ್ತಾರೆ; ನಮ್ಮ ಅಳರಸರ ಲೀಲೆಗಳಾದರೂ ಅಗಾಧವೇ. ಅಳರಸರಿಗೆ ತಲೆಯಲ್ಲಿ ಹೊಕ್ಕರೆ ಅವರು ಏನನ್ನಾದರೂ ಮಾಡುತ್ತಾರೆ. ಇದೇನು ಬರೇ ವಿನೋದಕ್ಕಾಗಿ ಹೇಳುವದಲ್ಲ. ಮೇಜರ ಫೋರ್ಗ್ಸನ್ ಎಂಬ ಸೈನ್ಯಖಾತೆಯವರಿಗೆ ನೌಕರಿ ಕೊಡಬೇಕಾಗಿತ್ತು. ಯಾವ ಸ್ಥಳವೂ ಸಿಗಲಿಲ್ಲ. ಆಗ 'ಪ್ರೊಟೆಕ್ಟರ ಇಮಿಗ್ರ್ಯಾನರ' ಯಾನೆ ಜಲಶೋಧಕರೆಂಬ ಜಾಗವನ್ನಿತ್ತು ತಿಂಗಳಿಗೆ ೩—೪ ಸಾವಿರ ರೂಪಾಯಿ ಇವರಿಗೆ ಕೊಟ್ಟರು. ಸಸ್ಯಶಾಸ್ತ್ರ ಸಂಭವಿಸಿದ ಇನ್ನೊಂದು ಕಥೆಯೂ ಇದೇ ಪ್ರಕಾರವಿರುತ್ತದೆ. ಮಿ|| ಫಿನ್ಲೇ ಶಿರಾಸ ಎಂಬವರು ಬಂಗಾಲದ ಶಿಕ್ಷಣ ಖಾತೆಯೊಳಗಿನವರು. ಇವರಿಗೆ ಮುಂಬಯಿ ಸರಕಾರವು ಆದುದು ಮಾಡಿ "ಡೈರೆಕ್ಟರ ಆಫ್ ಲೇಬರ" ಯಾನೆ ಕೂಲಿಕಾರರ ಆಲೋಚಕರಾಗಿ ನೇಮಿಸಿಕೊಂಡಿತು. ಮಿ|| ಶಿರಾಸರವರಿಗೂ, ಮುಂಬಯಿಯ ಕೆಲವು ಗಿರಣಿ ಸಾವುಕಾರರಿಗೂ ಕೂಡಿಬರಲಿಲ್ಲ. ಕೆಲಕಾಲದ ಬಳಿಕ, ಮಿ|| ಶಿರಾಸರವರು ರಜೆ ಕೊಂಡರು. ಆತ್ತ ಕೂಲಿಕಾರರ ಆಲೋಚಕ ಖಾತೆಯಲ್ಲಿ ಅವರಿಗೆ ಕೆಲಸ ಸಿಗಲಿಲ್ಲ. ಅದರಿಂದ ಅವರಿಗೆ ಗುಜರಾಥ ಕಾಲೇಜಿನಲ್ಲಿ 'ಸುಪರನ್ಯೂಮರರಿ' ಅರ್ಥಶಾಸ್ತ್ರದ ಅಧ್ಯಾಪಕರಾಗಿ ನೇಮಿಸಲಾಯಿತು. 'ಸುಪರನ್ಯೂಮರರಿ' ಶಬ್ದದ ಅರ್ಥವನ್ನು ವಾಚಕರು ಗಮನಿಸತಕ್ಕದ್ದು. ಕೆಲಸಕ್ಕೆ ಯಾವ ನೇಮಣೂಕಿಯು ಅವಶ್ಯವಿಲ್ಲವೋ ಅಂಥ ಅನವಶ್ಯಕವಾದ ಪ್ರಸಕ್ತಿಯಲ್ಲಿ ಆದ ನೇಮಣೂಕಿಗೆ 'ಸುಪರನ್ಯೂಮರರಿ' ಎಂದು ಹೇಳುತ್ತಾರೆ. ಈ ನೇಮಣೂಕಿಯನ್ನು ಮಾಡುವಾಗ ನಮ್ಮ ಪ್ರಾಂತಿಕ ಸರಕಾರಕ್ಕೆ ಹಣದ ಉಳಿತಾಯವಾಗುವ ವಿಚಾರ ತೋರಲಿಲ್ಲ. ಮುಂದಿನ ಕಥೆ ಹೇಳುತ್ತೇವೆ. ಈ ನೇಮಣೂಕಿಯಾದದ್ದು ಕಳೆದ ಎಪ್ರಿಲ್ ತಿಂಗಳಿನಲ್ಲಿ. ಈ ಸಮಯ ಗುಜರಾಥ ಕಾಲೇಜಿನಲ್ಲಿ ಪ್ರೊ|| ದಿವಾತಿಯಾ ಎಂಬ ಹಿಂದೀ ಅರ್ಥಶಾಸ್ತ್ರಜ್ಞರು ಮುಖ್ಯಾಧ್ಯಾಪಕ ಅಧಿಕಾರವನ್ನು ನೋಡುತ್ತಿದ್ದರು. ಅವರಿಗಿಂತ 'ಸುಪರನ್ಯೂಮರರಿ' ಮಿ|| ಶಿರಾಸರವರ ಸಂಬಳವೇ ಹೆಚ್ಚು. ಹೀಗೆ ಎರಡು ತಿಂಗಳು ಹೋದವು. ನಿನ್ನೆ ತಾ|| ೨೦ನೇ ದಿನದಿಂದ ಮಿ|| ಶಿರಾಸರವರು ಮುಖ್ಯಾಧ್ಯಾಪಕ ಅಧಿಕಾರವನ್ನು ನಡಿಸಬೇಕೆಂದು ಗೊತ್ತಾಗಿದೆ. ಮಿ|| ದಿವಾತಿಯಾರವರು ಗುಜರಾಥ ಕಾಲೇಜಿನಲ್ಲಿ ೧೫ ವರ್ಷಗಳಿಂದ ಅಧ್ಯಾಪಕರಿದ್ದರು, ಕಳೆದ ವರ್ಷ ಮುಖ್ಯಾಧ್ಯಾಪಕ ಅಧಿಕಾರವನ್ನು ನಡಿಸಿ ವಿದ್ಯಾರ್ಥಿಗಳಿಗೆ ಪ್ರಿಯರಾಗಿದ್ದರು. ಗುಜರಾಥ ಕಾಲೇಜಿನಲ್ಲಿ ಇಷ್ಟು ಕೆಲಸ ಮಾಡಿದ ಯೋಗ್ಯತಾವಂತ ಪುರುಷರು ಇನ್ನಿಲ್ಲ. ಆದರೂ, ಪ್ರೊ|| ದಿವಾತಿಯಾರವರ ಮೇಲೆ ಹಿಂದು ವರುಷ ಸಹ ಶಿಕ್ಷಣ ಕೊಡದ ಮಿ|| ಶಿರಾಸರವರಿಗೆ ಅನಾವಶ್ಯಕವಾಗಿ ತಂದು ನೇಮಿಸಿಕೊಳ್ಳುವದು ಅಳರಸರ ಅಗಾಧ ಲೀಲೆಯಲ್ಲವೇ? ಇಷ್ಟು ಹೇಳಿದ ಬಳಿಕ, ಮಿ|| ಶಿರಾಸರವರು ಗೌರವರ್ಣದವರೆಂದು ಹೇಳಬೇಕೇ?

---

೨. ಕೊಲ್ಹಾಪುರದ ಮಹಾರಾಜರು ಸಾಮಾಜಿಕ ಕಾಯಿದೆಯನ್ನೊಂದು ಏರ್ಪಡಿಸಿರುವರು: ೧೦ ವರುಷದೊಳಗಿನ ಹುಡುಗಿಯರಿಗೆ ಅಥವಾ ೧೪ ವರುಷದೊಳಗಿನ ಹುಡುಗರಿಗೆ ಮದುವೆ ಮಾಡಿದರೆ, ಪಾಲಕರಿಗೆ ೨ ಸಾವಿರ ರೂಪಾಯಿಗಳ ಶಿಕ್ಷೆ ವಿಧಿಸಲ್ಪಡುವದು. ಬಾಲವಿವಾಹದ ಅನರ್ಥವನ್ನು ಲಕ್ಷಿಸಿದರೆ, ಇಂಥ ಹಿಂದು ಕಾಯಿದೆಯನ್ನೇ ಪಡಿಸುವದು ಅವಶ್ಯವೆಂದು ಅನೇಕರು ಅಭಿಪ್ರಾಯಪಟ್ಟಿರುವರು. ೧೯೨೧ನೇ ಇಸ್ವಿಯ ಖಾನೇಸುಮಾರಿಯಿಂದ, ಹಿಂದುಸ್ಥಾನದಲ್ಲಿ ೧೦ ವರುಷದೊಳಗಿನ ೧ ಲಕ್ಷ ೧೭ ಸಾವಿರ ಬಾಲವಿಧವೆಯರಿದ್ದರೆಂದು ತಿಳಿಯುತ್ತದೆ. ಇದನ್ನು ಕೇಳಿ ಕಂಬನಿ ಕರಗಿ ನೀರಾಗುತ್ತದೆ. ಸಂಸಾರವೆಂದರೇನು? ಗಂಡನೆಂದರೇನು? ಹೆಂಡತಿಯೆಂದರೇನು? ಪತಿ-ಪತ್ನಿಗಳ ಧರ್ಮವೇನು? ಎಂದು ತಿಳಿಯದ ಅಜ್ಞ ಬಾಲ-ಬಾಲಕಿಯರಿಗೆ, ದೂರದೃಷ್ಟಿಯಿಲ್ಲದ ತಾಯಿ-ತಂದೆಗಳು ಕೇವಲ ತಮ್ಮ ನೇತ್ರಾನಂದವನ್ನು ಪೂರೈಸಿಕೊಳ್ಳಲು, ವಿವಾಹಗ್ರಂಥಿಯಿಂದ ಕಟ್ಟಿ ಪ್ರಪಂಚದಲ್ಲಿ ಬಿಟ್ಟುಬಿಡುವದು ಕೇವಲ ಲಜ್ಜಾಸ್ಪದವು. ಇದರಿಂದ ಸನಾತನ ಸಮಾಜವು ಕ್ಷೀಣವಾಗಿ ಕಳೆಗುಂದಿದೆ; ಚೈತನ್ಯಹೀನವಾಗಿದೆ. ಈ ಸಮಯ ಕೊಲ್ಹಾಪುರದ ಮಹಾರಾಜರು ಈ ತರದ ಪ್ರತಿಬಂಧವನ್ನು ಹಾಕಿ ಸಮಾಜಕ್ಕೊಂದು ಉಪಕಾರ ಮಾಡಿರುವರು. ಕೃತ್ರಿಮ ಪ್ರತಿಬಂಧಗಳನ್ನು ಸರಕಾರವು ಸಮಾಜಕ್ಕೆ ವಿಧಿಸುವ ಇಷ್ಟಾನಿಷ್ಟ ವಿಷಯವು ಸಂಕೀರ್ಣವಿದ್ದು, ಆ ದೃಷ್ಟಿಯಿಂದ ಈ ಕಾಯಿದೆಯ ಸಮಾಲೋಚನವಾಗಲಿಲ್ಲ. ಆದರೂ, ಧರ್ಮಾಧಿಕಾರಿಗಳು ಧರ್ಮರಕ್ಷಣಕ್ಕಾಗಿ ಅವಶ್ಯವಾದ ಧರ್ಮಜಾಗೃತಿಯನ್ನು ಕೈಕೊಳ್ಳದಿರುವಾಗ, ಧರ್ಮಬಂಧನಗಳು ಮೂಢ ಕಲ್ಪನೆಗಳ ಮೂಲಕ ಶಿಥಿಲವಾದಾಗ, ರಾಜ್ಯಾಧಿಕಾರಿಗಳು ಇಂಥ ಪ್ರತಿಬಂಧಗಳನ್ನು ಕೈಕೊಂಡರೆ, ಅವುಗಳನ್ನು ನಾವು ಸಂತೋಷದಿಂದ ಒಪ್ಪಿಕೊಳ್ಳಲು ತಯಾರಿರುವೆವು. ಇಷ್ಟು ಹೇಳಿ, ಕೊಲ್ಹಾಪುರದ ಮಹಾರಾಜರು ಹೊಸ ಕಾಯಿದೆಯನ್ನೇ ಪಡಿಸಿ ಮಾಡಿದ ಬಾಲವಿವಾಹ ಪ್ರತಿಬಂಧವನ್ನು ಸ್ವಾಗತೀಕರಿಸುವೆವು.

೩. ಮುಂಬಯಿ ಸರಕಾರವು ಖರ್ಚಿನಲ್ಲಿ ಮಿತವ್ಯಯ ಮಾಡಲು ಪುನಃ ಆಲೋಚಿಸಿಯದೆ. ಮುಂಬಯಿ ಸರಕಾರವು ಹಿಂದೆ ಹಿಂದು ಕಮೀಟಿಯನ್ನು ನೇಮಿಸಿ ಖರ್ಚನ್ನು ತಗ್ಗಿಸಲು ಸೂಚನೆ ಮಾಡಹೇಳಿತ್ತು. ಅದರಂತೆ ರಾ|| ಸಿ. ಎಸ್. ಗಾಂಧಿ ಮುಂತಾದ ಸಭಾಸದರು ವಿಚಾರಿಸಿ ಕೆಲವು ಸೂಚನೆಗಳನು ಮಾಡಿದರು. ಈ ಸೂಚನೆಗಳನ್ನು ಪ್ರಾಂತಿಕ ಸರಕಾರವು ಅಂಗೀಕರಿಸಲಿಲ್ಲ. ಕೌನ್ಸಿಲಿನೊಳಗಿನ ಸಭಾಸದರು ಒತ್ತಾಯ ಪಡಿಸಲು ಪ್ರಾಂತಿಕ ಸರಕಾರವು ನಿರುಪಾಯವಾಗಿ ೫೦ ಲಕ್ಷ ರೂಪಾಯಿಗಳ ಖರ್ಚನ್ನು ತಗ್ಗಿಸಿತು. ಉಳಿದ ಸೂಚನೆಗಳನ್ನು ಅಂಗೀಕರಿಸಿ ಖರ್ಚನ್ನು ಇನ್ನೂ ತಗ್ಗಿಸಲು ಪ್ರಜೆಗಳು ಬೇಡಿಕೊಂಡಾಗಲ್ಯೂ ಸರಕಾರವು ಒಪ್ಪಲಿಲ್ಲ. ಈಗ ಮಿ|| ಜೇ. ಎ. ಶಿಲಿಡಿ ಎಂಬವರನ್ನು ಖರ್ಚು ತಗ್ಗಿಸುವ ಉಪಾಯ ಸೂಚಿಸಲು ಮುಂಬಯಿ ಸರಕಾರವು ನೇಮಿಸಿದೆ. ಮಿ|| ಶಿಲಿಡಿಯವರಿಗೆ ಸಂಬಳ-ಭತ್ತೆ ಮುಂತಾದವುಗಳನ್ನು ತೆತ್ತು ಸರಕಾರವು ಮಿತವ್ಯಯ ಮಾಡಿದಂತಾಯಿತು. ನಿಜವಾಗಿ ಸರಕಾರಕ್ಕೆ ಖರ್ಚನ್ನು ತಗ್ಗಿಸುವದಿದ್ದರೆ, ರಾ|| ಸಿ. ಎಸ್. ಗಾಂಧಿ ಮುಂತಾದ ನೇಮಸ್ಥರು ಸೂಚಿಸಿದ ಸೂಚನೆಗಳನ್ನೇ ಅಂಗೀಕರಿಸಲು ಅಡ್ಡಿ ತೋರಿರುವದಿಲ್ಲ. ಹೀಗಿದ್ದು, ಮಿ|| ಶಿಲಿಡಿಯವರನ್ನು ಹೊಸದಾಗಿ ನೇಮಿಸುವದು ಮಿತವ್ಯಯದ ವೇಷವಲ್ಲವೇ?

---

೪. ಮೈಸೂರ ಸರಕಾರವು ತಮ್ಮ ಸಂಸ್ಥಾನದಲ್ಲಿ ಖಾದಿಯ ಪುರಸ್ಕಾರವನ್ನು ಹೆಚ್ಚರದಿಂದ ಸಾಗಿಸಲು ಮುಕ್ತವಾಗಿರುವದು. ನೂಲು ಹಾಗು ನೇಯ್ಗೆಗಳ ಪ್ರದರ್ಶನಗಳಿಗಾಗಿ ಹಾಗು ವಂದ್ಯಾಟಗಳಿಗಾಗಿ ತಗಲುವ ಖರ್ಚಿನ ಅರ್ಧಾಂಶವನ್ನು ಮೈಸೂರ ಸರಕಾರವು ತೆರಲು ಸಿದ್ಧವಾಗಿದೆ. ಇದಲ್ಲದೆ, ಸದ್ಯಕ್ಕೆ ಸೇರಿದ ಜಿಲ್ಹಾ ಪರಿಷತ್ತಿನಲ್ಲಿ ಮೈಸೂರಿನ ಜಿಲ್ಹಾ ಬೋರ್ಡಿನ ಅಧ್ಯಕ್ಷರಾದ ಡೆಪ್ಯುಟಿ ಕಮೀಶನರರು ನೂಲುವ ಉದ್ಯೋಗವನ್ನು ಬಡಬಗ್ಗರಲ್ಲಿ ಪ್ರಸಾರ ಮಾಡಿದರೆ, ಬಡಬಗ್ಗರಿಗೆ ಉಪಕಾರವಾಗುವದೆಂದರು. ಈ ಕುರಿತು ಸರಕಾರದೊಡನೆ ಗ್ರಾಮಗಳೊಳಗಿನ ಸಾವುಕಾರರೂ ಪಾಟೀಲ ಬುದ್ಧಿವಂತರೂ ನೆರವಾಗಬೇಕೆಂದರು. ಇದರೆತ್ತರೂ ಪ್ರದರ್ಶನಗಳನ್ನು ಸೇರಿಸಿ ಗ್ರಾಮಗಳಲ್ಲಿ ತಯಾರಾಗುವ ಅರಿವೆಯ ಪ್ರದರ್ಶನ ಮಾಡಬೇಕೆಂದರು. ಮತ್ತು ಮ್ಯುನಿಸಿಪಾಲಿಟಿಯವರೂ, ಗ್ರಾಮಪಂಚರೂ, ಸಹಕಾರಿಸಂಘಗಳೂ ಕೈರಾಟಗಳನ್ನು ಸಂಗ್ರಹಿಸಿ ಜನರಿಗೆ ಪೂರೈಸಬೇಕೆಂದರು. ಹಾಗು ಪ್ರತಿಯೊಂದು ಗ್ರಾಮದಲ್ಲಿ ಕನಿಷ್ಠ ಒಬ್ಬ ಕುಶಲ ನೇಕಾರನನ್ನು ನೇಮಿಸಿಕೊಂಡು ಅವನ ಕಡೆಯಿಂದ ನೆರೆಹೊರೆಯಲ್ಲಿ ತಯಾರಾದ ನೂಲನ್ನು ನೇಯಿಸಬೇಕೆಂದರು. ಇದರಿಂದ ವರ್ಷ ೧೫ಕ್ಕೆ ನೂಲುಗಾರರಿಗೆ ಕನಿಷ್ಠ ೧ ರೂಪಾಯಿಯಾದರೂ ಉತ್ಪನ್ನವಾಗುವದೆಂದರು. ಇದರ ಮೇಲಿಂದ ಮೈಸೂರ ಸರಕಾರವು ಖಾದಿಯ ಪ್ರಸಾರವನ್ನು ಮನಮುಟ್ಟಿ ಕೈಕೊಳ್ಳಲು ಮುಕ್ತವಾಗಿರುವದೆಂದು ಸ್ಪಷ್ಟವಾಗುತ್ತದೆ. ಇದನ್ನು ನೋಡಿ ನಮಗೆ ಆನಂದವಾಗುತ್ತದೆ. ಮೈಸೂರ ಸರಕಾರವು ನಮ್ಮ ಬ್ರಿಟಿಶ ಸರಕಾರಕ್ಕೆ ಇದೊಂದು ಅನುಕರಣೀಯವಾದ ಉದಾಹರಣೆಯನ್ನು ಹಾಕಿಕೊಟ್ಟಿದೆ.

೫. ನಮ್ಮ ಸ್ಕೂಲ ಬೋರ್ಡಿನಲ್ಲಿ ಸಮ್ಮಿಶ್ರ ಮಾಡಿದ ವರ್ಗಾವರ್ಗಿಯೊಳಗಿನ ಗಂಧವು ನಾವ ಕಾಶವಾಗಿ ಹೊರಬೀಳಹತ್ತಿದೆ. ಕಾರವಾರದ 'ವಿಚಾರಿ' ಪತ್ರಿಕೆಯಲ್ಲಿ ಸ್ಕೂಲ ಬೋರ್ಡಿನ ಚೀಫ ಆಫೀಸರರು ಬದಲಿ ಮಾಡುವ ಶಿಕ್ಷಕರ ಹೆಸರುಗಳನ್ನು ಮುಂದಾಗಿ ಪ್ರಕಟಿಸಿದ್ದರಿಂದ ಸ್ಕೂಲ ಬೋರ್ಡಿನವರು ೬ ೭ ಮಂದಿ ಸಭಾಸದರ ಛತ್ರಿಯನ್ನು ಹಿಡಿಯುವದಕ್ಕಾಗಿ ನೂರಾರು ಮಂದಿ ಶಿಕ್ಷಕರನ್ನು ಬದಲಿ ಮಾಡಿದರೆಂದು ಪ್ರಕಟವಾಗಿತ್ತಷ್ಟೇ. ಈ ಸಂಗತಿಯನ್ನನು ಲಕ್ಷಿಸಿ, ಬಲ್ಲವರೊಬ್ಬರು ತಿಳಿಸುವದೇನಂದರೆ.— ಸ್ಕೂಲ ಬೋರ್ಡಿನ ಚೀಫ ಆಫೀಸರರಾದ ಮಿ| ಪೆರೂರರವರು ನಾಶಿಕೆಯಿಂದ ೨೦-೩೦ ಮಂದಿ ಶಿಕ್ಷಕರಿಗೆ ಬದಲಿ ಮಾಡಬೇಕೆಂದು ಶಿಫಾರಸು ಮಾಡಿದ್ದರು. ಆದರೆ ಇಷ್ಟು ಬದಲಿ ಮಾಡಬೇಕಾಗಿದೆ ಹೆಸರುಗಳನ್ನು ಕೊಡಬೇಕು. ಹೀಗೇ ಕೊಡಬೇಕ ಎಂದು ಸ್ಕೂಲ ಬೋರ್ಡಿನ ಸಭಾಸದರ ಅರ್ಜಿ ಮಾಡಿದರ ಆ ಬಯಕೆಯನ್ನು ಅಲ್ಲಗಳೆದು ಪ್ರಕಟಿಸಲಿಕ್ಕೆ ಮಿ| ಪೆರೂರರವರಿಗೆ ಸಾಧ್ಯವಾಗಲಿಲ್ಲ. ಅದರಿಂದ ಸ್ಕೂಲ ಬೋರ್ಡಿನ ಸಭಾಸದರ ಸಂಬಂಧವೆಂಬವರು ಶಿಕ್ಷಕರಾಗಿ ವಿವೇಕಶೂನ್ಯರಾಗಿ ಬದಲಿ ಮಾಡಿದರೆ ಅಷ್ಟರಿಂದ ನಮ್ಮ ತಕರಾರು ನಡೆಸುತ್ತಿರುವ ಅತ್ಯಂತ ವ್ಯಸನವಾಗುತ್ತದೆ. ಈ ಹಕೀಕತ್ತನ್ನು ಬಲ್ಲವರು ಹೇಳದಿದ್ದರೆ ನಾವೆಂದೂ ಒಪ್ಪುತ್ತಿದ್ದಿಲ್ಲ. ಇದರಲ್ಲಿ ಜಿಲ್ಲಾ ಬೋರ್ಡಿನ ಸಭಾಸದರು ಈ ಕುರಿತು ವಿಶೇಷ ಲಕ್ಷ್ಯಕೊಡಬೇಕಾಗಿ ನಮ್ಮ ಬಿನ್ನಹ ಇದೆ. ಸ್ಕೂಲ ಬೋರ್ಡಿನ ಆಫೀಸರಿಗೆ ಕೆಲವು ಸವಾಲುಗಳನ್ನು ಕೇಳಬಹುದು. ಈ ವರೆಗೆ ಸಾಮಾನ್ಯವಾಗಿ ವರ್ಷಕ್ಕೆಷ್ಟು ಬದಲಿಗಳಾಗುತ್ತಿದ್ದವು? ಈ ವರುಷ ಎಷ್ಟು ಬದಲಿಗಳಾಗಬೇಕೆಂದು ಚೀಫ ಆಫೀಸರರು ಶಿಫಾರಸು ಮಾಡಿದ್ದರು? ಈ ವರುಷ ಎಷ್ಟು ಬದಲಿಗಳಾದವು? ಅದಕ್ಕೆ ಕಾರಣವೇನು? ಬಗಾರ ಮಾಡಿದ ಮೇಲಿನ ಅಷ್ಟು ಬದಲಿಗಳಾದವು? ಘಟ್ಟದ ಕೆಳಗೆ ಮತ್ತು ಘಟ್ಟದ ಮೇಲೆ ಸಾಧಾರಣ ೫ ಮೈಲಿನ ಒಳಗೆ ಅಲ್ಲಿಂದಲ್ಲೇ ಎಷ್ಟು ಬದಲಿಗಳಾದವು? ಈ ಬಗ್ಗೆ ಪ್ರಯಾಣ ಭತ್ತೆ ಎಷ್ಟು ತಗಲಿತು? ವರ್ಷಕ್ಕೆ ಎಷ್ಟು ತಗಲುತ್ತಿತ್ತು? ಈ ವರ್ಷ ಎಷ್ಟು ಪ್ರವಾಸ ಭತ್ತೆಯಷ್ಟು? ಇದಕ್ಕೆ ಹಿಡಿದರೆ ಇದನ್ನು ಕೊಡುವವರ್ಯಾರು? ಮುಂತಾದ ಪ್ರಶ್ನೆಗಳನ್ನು ಜಿಲ್ಲಾ ಬೋರ್ಡಿನ ಸಭಾಸದರು ಕೇಳಿ, ಅನ್ಯಾಯಮಾಡಿ ಸ್ಕೂಲ ಬೋರ್ಡಿನ ಸಭಾಸದರ ಅಧಿಕಾರವಂದವನ್ನು ಇಳಿಸಬೇಕು. ಸ್ಕೂಲ ಬೋರ್ಡಿನ ಮೆಂಬರರ ಅಧಿಕಾರಪ್ರದರ್ಶನ ಮಾಡಲಿಕ್ಕೆ ಜಿಲ್ಲಾ ಬೋರ್ಡಿನವರು ಶಿಕ್ಷಕರಾಗೆ ಹಣ ಕೊಟ್ಟರೆ, ಬಡ ಪ್ರಜೆಗಳು ತೆರಿಗೆಯನ್ನು ಕೊಟ್ಟು ಸಾಯಬೇಕಾಗುವದು

---

೬ ಇದೇ ವಿಷಯ ನಾಲ್ಕು ಮಾತು ಬರೆಯಲಿಚ್ಛಿಸುವೆವು. ಜಿಲ್ಲಾ ಬೋರ್ಡಿಗೆ ಹಣದ ಅಡಚಣಿ ಹೆಚ್ಚು. ಜಿಲ್ಲಾ ಬೋರ್ಡಿನ ಹೊಸ ಘಟನೆಯಿಂದ ಪ್ರಾಥಮಿಕ ಶಿಕ್ಷಣದ ಖರ್ಚು ಹೆಚ್ಚು ಬರುವದು. ಮೆಂಬರರಿಗೂ, ಅಧ್ಯಕ್ಷ-ಉಪಾಧ್ಯಕ್ಷರಿಗೂ ಭತ್ತೆ ಕೊಡಬೇಕು. ಅನೇಕ ಲೋಕೋಪಕಾರಿ ಕೆಲಸಗಳೂ ನಡೆಯಬೇಕು. ಇದಕ್ಕೆಲ್ಲ ಹಣ ಬೇಕು. ಜಿಲ್ಲಾ ಲೋಕಲ್ ಬೋರ್ಡಿನ ಉತ್ಪನ್ನವನ್ನು ಹೆಚ್ಚಿಸುವ ಕುರಿತು ವಿಸ್ತಾರಪೂರ್ವಕವಾಗಿ ಯಥಾವಕಾಶ ಈ ಮುಂದೆ ಬರೆಯಬಯಸುವೆವು. ಸದ್ಯಕ್ಕೆಂದು ಒಂದು ಸೂಚನೆಯನ್ನು ನಾವು ಮಾಡಬಯಸುವೆವು. ಅಧ್ಯಕ್ಷರಾದ ಶ್ರೀ|| ಗೋಖಲೆಯವರು ಬೋರ್ಡಿನ ಆಯ ವ್ಯಯವನ್ನು ಲಕ್ಷಿಸಿ, ಖರ್ಚಿನ ವಿವರಗಳನ್ನೆಲ್ಲ ಸೂಕ್ಷ್ಮವಾಗಿ ಆಲೋಚಿಸಿ, ಯಾವ ಯಾವ ಖರ್ಚಿನ ಬಾಬುಗಳನ್ನು ತಗ್ಗಿಸಬೇಕು, ಎಂಬುದನ್ನು ಸಹಕಾರಿ ಸಭಾಸದರೊಡನೆ ಆಲೋಚಿಸಬೇಕಾಗಿ ವಿನಂತಿ. ಅವಶ್ಯವಿದ್ದರೆ, ಮುಂಬಯಿಯ ಮ್ಯುನಿಸಿಪಾಲಿಟಿಯವರು ಮಾಡಿದಂತೆ, ಕೆಲವು ಸಭಾಸದರ ಒಂದು ಮಂಡಳವನ್ನು ನೇಮಿಸಿಕೊಳ್ಳಬಹುದು. ಶ್ರೀ|| ಗೋಖಲೆಯವರಿಗೆ ನಮ್ಮ ಜಿಲ್ಲೆಯೊಳಗಿನ ಸ್ಥಿತಿಗತಿಯು ಪರಿಚಯವಿದೆ. ಒಂದು ದಮಡಿ ಇನ್ನು ಕರ ತೆರುವ ಸಾಮರ್ಥ್ಯವು ಜನರಲ್ಲಿರುವದಿಲ್ಲ. ಇಂಥ ಸ್ಥಿತಿಯಲ್ಲಿ ಅನಾವಶ್ಯಕ ಖರ್ಚಿನ ಬಾಬುಗಳನ್ನೆಲ್ಲ ನಿರ್ದಯದಿಂದ ತಗ್ಗಿಸಿ ಲೋಕೋಪಕಾರ ಮಾಡಬೇಕಾಗಿ ನಮ್ಮದೊಂದು ಬಿನ್ನಹ.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮಳೆಯು ವಿಪರೀತ ಸುರಿಯಿತು. ಬಿಸಿಲೂ ಬೀಳುತ್ತಿತ್ತು. ಮಾರ್ಗಗಳಲ್ಲಿ ಬೆಳದು ಹೋದವು. ಮ್ಯುನಿಸಿಪಾಲಿಟಿಯವರು ಇತ್ತ ಅನುಗ್ರಹ ಮಾಡುವದಿಲ್ಲ. ಒಕ್ಕಲಿಗರು ಹೊಲಗಳಸದಲ್ಲಿ ತೊಡಗಿರುವರು. ಈ ವಾರದಲ್ಲಿ ಮಳೆ ೨೦.೪೧ ಇಂಚ, ಈ ವರೆಗೆ ಒಟ್ಟು ೩೯.೪೭ ಇಂಚು ಮಳೆಯಾಯಿತು.

ಸ್ವ|| ವಾ|| ಶ್ರೀ|| ಶಾಸ್ತ್ರಿಗಳ ನಿಧನದಿಂದ ಖಾಲಿಯಾದ ಜಿಲ್ಲಾ ಬೋರ್ಡಿನ ಒಂದು ಜಾಗಕ್ಕಾಗಿ ೬ ಮಂದಿ ಉಮೇದ್ವಾರರು ನಿಂತಿರುವರು:— ರಾ|| ನರಸಿಂಹ ಗೋವಿಂದ ಶ್ಯಾನಭಾಗ, ವಕೀಲ, ಕುಮಟಾ; ಗೋಪಾಲಕೃಷ್ಣ ಕುಪ್ಪ ಹೆಗಡೆ ಹಗಡೆ, ಸೀತಾರಾಮ ಗಣಪತ ಭಾಗ್ವತ, ಕುಮಟಾ; ಗಂಗಾಧರ ಗಣಪಯ್ಯ ಶ್ಯಾನಭಾಗ ಕಲಭಾಗಕರ, ಕುಮಟಾ; ಶ್ರೀಪಾದ ವೆಂಕಟೇಶಯಾಜಿ ಕಲ್ಯಾಣಪುರಕರ, ವಕೀಲ, ಕುಮಟಾ, ಪುಂಡಲೀಕ ಕೆ. ಪಗಿರಿ ಶ್ಯಾನಭಾಗ, ಚಿತ್ರಗಿ.

ಸಾಭಾರ ಸ್ವೀಕಾರ.

ಸರಸ್ವತೀ— ಮೇ ತಿಂಗಳ ಸಂಚಿಕೆ. ಸಂಪಾದಕಿ— ಶ್ರೀಮತಿ ಆರ್ ಕಲ್ಯಾಣಮ್ಮ, ಚಾಮರಾಜಪೇಟೆ, ಬೆಂಗಳೂರು. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೩-೦-೦, ವಿದ್ಯಾರ್ಥಿಗಳಿಗೆ ರೂ. ೨

ಸ್ವಧರ್ಮ— ಸಂಪುಟ ೩, ಸಂಚಿಕೆ ೨. ಸಂಪಾದಕ- ಶ್ರೀ|| ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಬಿ.ಎ., ಧಾರವಾಡ. ಪ್ರಕಾಶಕ— ಶ್ರೀ|| ಬಿ ವ್ಹಿ ಬುರ್ಲಿ, ಕರ್ನಾಟಕ ಮುದ್ರಣಾಲಯ, ಮಾಳಮಡ್ಡಿ ಧಾರವಾಡ.

The Volunteer— Monthly. June issue. Edited and published by Dr. N. S Hardiker, at the "Volunteer" office, Hubli Annual subscription Rs. 3-0 0 only.

- ದೀನಬಂಧು ಎಂಡ್ರ್ಯೂಸರವರು ಸಾಗರಿಯುತ್ತಿದ್ದಾರೆ.

— ತಿರಪುರದಲ್ಲಿ ಬೆಂಕಿಹೆಟ್ಟಿಗೆಯ ಕಾರಖಾನೆಯೊಂದು ಹೊರಟಿದೆ

ವೃತ್ತಸಾರ.

— ತಮಿಳನಾಡು ಪ್ರಾಂತಿಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಡಾ|| ವರದರಾಜುಲು ನಾಯುಡುರವರು ಪ್ರಾಂತಿಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷಸ್ಥಾನಕ್ಕೆ ರಾಜಿನಾಮೆಯನ್ನಿತ್ತಿರುವರು. ಬರುವ ಕೌನ್ಸಿಲು ಚುನಾವಣೆಯಲ್ಲಿ ಸರಕಾರಿ ಕಿತಾಬುಗಳಿದ್ದವರನ್ನು ರಾಷ್ಟ್ರೀಯ ಸಭೆಯ ಕಡೆಯಿಂದ ಉಮೇದ್ವಾರರಾಗಿ ನಿಲ್ಲಿಸಿದ್ದು ಅಯೋಗ್ಯವೆಂದು ಅವರ ಅಭಿಮತ.

— ವರಿಷ್ಠ ಕಾಯದೆ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ|| ವಿಠ್ಠಲಭಾಯಿ ಪಟೇಲರವರು ಸರ್ವಾಧಿಪತಿಗಳೊಡನೆ ಜೂನ ೧೧ನೇ ತಾರೀಖಿಗೆ ಮಾತಾಡಿದರು. ವಿಷಯವ್ಯಾವುದೆಂದು ತಿಳಿಯಲಿಲ್ಲ.

— ರಾಷ್ಟ್ರಸಂಘಕ್ಕೆ ಹಿಂದುಸ್ಥಾನವು ವರ್ಷಕ್ಕೆ ೧೪೦೦೦೦ ಪವನು ತೆರಬೇಕು. ದೇಶದಲ್ಲಿ ನಮಗೆ ಸ್ವಾತಂತ್ರ್ಯವಿಲ್ಲದಿದ್ದರೂ, ಬ್ರಿಟಿಶರ ಕೃಪೆಯಿಂದ ಸ್ವತಂತ್ರ ರಾಷ್ಟ್ರಗಳ ಸಂಘದಲ್ಲಿ ನಮಗೆ ಪ್ರಾತಿನಿಧಿಕ ಅಧಿಕಾರವಿದೆ! ಈ ತೆರುವ್ಯಾರಾದರೂ ಬೇಕಲ್ಲವೇ?

— ಬಿಹಾರದ ಆರಾ ಪ್ರಾಂತದಲ್ಲಿ ಅನೇಕ ಅಸ್ಪೃಶ್ಯರು ಕ್ರಿಸ್ತಮತಕ್ಕೆ ಸೇರಿದ್ದರು. ಅವರು ಈಗ ಪುನಃ ಸನಾತನ ಧರ್ಮದಲ್ಲಿ ಸೇರಬಯಸಿ, ಪಂಡಿತ ಮದನ ಮೋಹನ ಮಾಲವೀಯರವರಿಗೆ ಆ ಪ್ರಕಾರ ಬರೆದುಕೊಂಡಿರುವರು.

ಬಂಗಾಲದಲ್ಲೆಲ್ಲ ದೇಶಬಂಧುಗಳ ಪುಣ್ಯತಿಥಿಯು ಜುಲೈ ೫ನೇ ತಾರೀಖಿಗೆ ಆಚರಿಸಲ್ಪಡುವದು. ಅದಿನ ಅವರ ವರ್ಷ ಶ್ರಾದ್ಧವಾಗುವದಿದೆ. ಕಳೆದ ಜೂನ ೧೬ನೇಗೆ ಮುಂಬಯಿ, ಮದ್ರಾಸ ಮುಂತಾದ ಕಡೆಗಳಲ್ಲಿ ದೇಶಬಂಧುಗಳ ಪುಣ್ಯಸ್ಮರಣೆಯಾಯಿತು.

— ಬಂಗಾಲದ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಸಭೆಯಲ್ಲಿ ಕಳೆದ ವಾರ ದೊಡ್ಡದೊಂದು ಗೊಂದಲವಾಗಿ ಕೊನೆಗೆ ಶ್ರೀ|| ಸೇನಗುಪ್ತರಿಗೆ ಅನುಕೂಲವಾದ ಸಭಾಸದರೇ ಕಾರ್ಯಕಾರಿ ಮಂಡಳದಲ್ಲಿ ನೇಮಿಸಲ್ಪಟ್ಟರು. ಈ ಕುರಿತು ಶ್ರೀ|| ಸೇನಗುಪ್ತರಿಗೆ ಅನುಕೂಲವಾದ ಲೇಖವನ್ನು ಸಂಪಾದಕರು ಬರೆದಿಟ್ಟಿದ್ದರು. ಅದನ್ನು ಪತ್ರಿಕೆಯ ಡೈರೆಕ್ಟರರು ಕಡಿಸಿದರು. ಸಂಪಾದಕರು ರಾಜಿನಾಮೆಯನ್ನಿತ್ತರು!

— ಈ ವರುಷ ೨ನೇ ಎಲ್.ಎಲ್.ಬಿ. ಪರೀಕ್ಷೆಗೆ ೪೫೭ ಮಂದಿ ಉಮೇದ್ವಾರರು ಕೂತುಕೊಂಡಿದ್ದರು. ಅವರಲ್ಲಿ ೧೬೩ ಮಂದಿಗಳು ಉತ್ತೀರ್ಣರಾದರು.

— ಪ್ರಿವ್ಹಿ ಕೌನ್ಸಿಲಿನವರು ಮುಂಬಯಿ ಹಸನ ವಿರುದ್ಧ ಸಯ್ಯದ ಮಹಮ್ಮದ ಝುವಾನರವರ ಅಪೀಲಿನಲ್ಲಿ ವಾದ್ಯಘೋಷದ ಕುರಿತು ಮಹತ್ವದ ನಿರ್ಣಯವನ್ನೊಂದು ಕೊಟ್ಟಿರುವರು. ವಾದ್ಯಘೋಷದಿಂದ ಸಾರ್ವಜನಿಕ ಮಾರ್ಗಗಳ ಮೇಲೆ ಮೆರವಣಿಗೆ ತೆಗೆಯುತ್ತ ಹೋಗುವದು ಧಾರ್ಮಿಕ ಪ್ರಜೆಗಳ ಹಕ್ಕಾಗಿದ್ದು, ಅದನ್ನು ಪ್ರತಿಬಂಧಿಸುವ ಅಧಿಕಾರವು ಯಾರಿಗೂ ಇರುವದಿಲ್ಲ. ಹೀಗೆ ಪ್ರತಿಬಂಧವಾದಲ್ಲಿ ಆ ಕುರಿತು ಸಿವಿಲ್ ಕೋರ್ಟುಗಳಲ್ಲಿ ದಾವೆ ಮಾಡಲಿಕ್ಕೆ ಹಕ್ಕಿರುತ್ತದೆ. ವಾದ್ಯಘೋಷಕ್ಕೆ ತಡೆ ಮಾಡುವ ಮಹಮ್ಮದೀಯ ಬಾಂಧವರು ಇದರಿಂದ ಶಕ್ಯ ಬೋಧಗೊಳ್ಳಲಿ.

— ಧಾರ ಸಂಸ್ಥಾನದ ನ್ಯಾಯಾಸನದಲ್ಲಿ ದಾಖಲ ಮಾಡಿದ ಒಂದು ದಾವೆಯು ಈಗ ೧೫ ವರ್ಷಗಳಿಂದ ನಿಕಾಲೆಯಾಗದೆ ಬಿದ್ದಿದೆ. ಮನೆ ಹಾಗು ಭೂಮಿಯ ಕಬ್ಜೆಯ ಬಗ್ಗೆ ಈ ದಾವೆಯಾಗಿತ್ತು. ವಾದಿಯು ಸತ್ತನು; ಅವನ ಹೆಂಡತಿಯು ವಾದಿಯಲ್ಲಿ ಸೇರಿದಳು. ಆದರೂ ದಾವೆ ನಿಕಾಲೆಯಾಗುವದಿಲ್ಲ. ಮನೆ ಹಾಗು ಹೊಲ ಜಮೀನಗಳ ಭೋಗವು ದಂಪತಿಗಳಿಗೆ ೧೫ ವರ್ಷಗಳಿಂದಿಲ್ಲ. ಎಂಥ ನ್ಯಾಯದಾನವಿಯು ತುರುಕಿ ಕೊಡುತ್ತಿದೆ!

— ಪಾಠಶಾಲೆಯ ಗಳಿಗೆ ಸಹಾಯ ಮಾಡುವದಕ್ಕಾಗಿ ಮದ್ರಾಸ ಸರಕಾರವು ೧,೩೦,೦೦೦ ರೂಪಾಯಿಗಳನ್ನು ಮಂಜೂರ ಮಾಡಿರುವದು.

— ನಾಗಪಟ್ಟಣದಲ್ಲಿ ಬೆಂಕಿಬಿದ್ದು ೨೦ ಮನೆಗಳು ನಾಶವಾದವು. ಮದ್ರಾಸದ ರಾಯಪುರದಲ್ಲಿ ಬೆಂಕಿಬಿದ್ದು ಸಾವಿರಕ್ಕೆ ಮಿಕ್ಕಿ ಗುಡಿಸಲುಗಳು ಸುಟ್ಟು ಹೋದವು. ೬ ಸಾವಿರ ರೂಪಾಯಿಗಳ ನಷ್ಟ. ಲಾಹೋರದ ಉಗಿಬಂಡಿಯ ಕಾರಖಾನೆಯಲ್ಲಿ ಬೆಂಕಿಬಿದ್ದು ಲಕ್ಷಾವಧಿ ರೂಪಾಯಿಗಳ ನಷ್ಟ.

— ಕಾರೇಪಾಡದಲ್ಲಿ ಹಿರೇಲ ಎಂಬ ಗ್ರಾಮವಿದೆ ಇಲ್ಲಿ ಒಂದು ಪಾಷಾಣದ ಶಿವಮೂರ್ತಿ ಹಾಗು ಪ್ರಾಚೀನ ಶಿಲ್ಪ ದೊರಕಿದೆ. ಶಿವಮೂರ್ತಿಯು ಮನೋಹರವಿದೆ.

— ನಂದಿದುರ್ಗದ ಗಣಿಯಲ್ಲಿ ಒಂದು ಬಂಡೆಗಲ್ಲಿನ ಸ್ಫೋಟವಾಗಿ ಎರಡು ಮಂದಿಗಳು ಮರಣಪಟ್ಟರು.

— ಶ್ರೀ ಶ್ರೀನಿವಾಸರಾವ ಕೌಜಲಗಿಯವರು ರಾಷ್ಟ್ರೀಯ ಸಭೆಗೆ ಸಭಾಸದರನ್ನು ಕೂಡಿಸುವವರಿಗೆ ಪಾರಿತೋಷಕಗಳನ್ನು ಕೊಡಮಾಡಿರುವರು. ಸಪ್ಟಂಬರ ತಿಂಗಳ ೩೦ನೇ ತಾರೀಖಿನೊಳಗೆ ಎಲ್ಲಕ್ಕೂ ಹೆಚ್ಚು ಸಭಾಸದರನ್ನು ಕೂಡಿಸುವವರಿಗೆ ರೂಪಾಯಿ ೩೫, ೧೦೦೦ಕ್ಕೆ ಮಿಕ್ಕಿ ಸಭಾಸದರನ್ನು ಕೂಡಿಸುವ ಪ್ರತಿಯೊಬ್ಬನಿಗೆ ರೂಪಾಯಿ ೨೫, ೫೦೦ಕ್ಕೆ ಮಿಕ್ಕಿ ಕೂಡಿಸುವ ಪ್ರತಿಯೊಬ್ಬನಿಗೆ ರೂಪಾಯಿ ೧೦, ೩೦೦ಕ್ಕೆ ಮಿಕ್ಕಿ ಕೂಡಿಸುವ ಪ್ರತಿಯೊಬ್ಬನಿಗೆ ರೂಪಾಯಿ ೫, ಹೀಗೆ ಪಾರಿತೋಷಕಗಳು ಹಂಚಲ್ಪಡುವವು

— ಇದೇ ಬರುವ ಜ್ಯೇಷ್ಠ ವ|| ೧೩ರಿಯು ಕರ್ನಾಟಕದ ಶ್ರೀವಿದ್ಯಾರಣ್ಯರವರ ಪುಣ್ಯತಿಥಿಯು. ಇದನ್ನು ಸಮಸ್ತ ಕರ್ನಾಟಕಸ್ಥರೂ ಪಾಲಿಸಬೇಕಾಗಿ ಬಿನ್ನಹ.

— ಆಸಾಮ ಪ್ರಾಂತದ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ದೇಶಬಂಧುಗಳ ಧರ್ಮಪತ್ನಿಯರಾದ ವಾಸಂತೀ ದೇವಿಯವರಿಗೆ ಅರ್ಪಿಸಲು ಸ್ವಾಗತ ಕಮೀಟಿಯವರ ವಿಚಾರವಿದೆ

— ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ಇದೇ ಬರುವ ಆಗಸ್ಟ ತಿಂಗಳು ಮುಗಿಯುವದರೊಳಗೆ ೩೦ ಸಾವಿರ ಸಭಾಸದರನ್ನು ಕೂಡಿಸಬೇಕೆಂದು ನಿರ್ಧರಿಸಿರುವರು. ನಮ್ಮ ಜಿಲ್ಲೆಯಲ್ಲಿ ೨ ಸಾವಿರ ಸಭಾಸದರನ್ನು ಕೂಡಿಸಬೇಕಾಗಿದೆ

— ಕಯಂಕುಳಂ ಎಂಬಲ್ಲಿ ತಿರುವಾಂಕೋಡಿನ ಗೌಡಸಾರಸ್ವತ ಬ್ರಾಹ್ಮಣರ ಸಭೆಸೇರಿ “ಸಾರಸ್ವತ ಬೋಧಿನಿ” ಎಂಬ ಮಾಸಪತ್ರಿಕೆಯನ್ನು ವಾರಪತ್ರಿಕೆಯನ್ನಾಗಿ ಹೊರಡಿಸಬೇಕೆಂದೂ, ಕೊಚ್ಚಿಯೊಳಗಿನ ತಿರುಮಲ ದೇವಸ್ಥಾನದ ಆಡಳಿತೆಯನ್ನು ಕೊಚ್ಚಿಯೊಳಗಿನ ಸರಕಾರದ ಕೈಯೊಳಗಿಂದ ಸ್ವಾಧೀನ ಪಡಿಸಿಕೊಳ್ಳಬೇಕೆಂದೂ ತೀರ್ಮಾನವಾಗಿದೆ ಮಂಗಳೂರಿನ ಹ್ಯಾಕೋರ್ಟ ವಕೀಲರಾದ ಶ್ರೀ|| ಶ್ರೀನಿವಾಸ ಪೈಗಳವರು ಸಭಾಧ್ಯಕ್ಷರಿದ್ದರು.

— ಇಂಗ್ಲಂಡದಿಂದ ಹಿಂದುಸ್ಥಾನಕ್ಕೆ ವಿಮಾನದಿಂದ ೮ ದಿನಗಳಲ್ಲಿ ಪ್ರಯಾಣ ಮಾಡುವ ವ್ಯವಸ್ಥೆಯಾಗಿದೆ ಇದೇ ಬರುವ ಜನವರಿಯಿಂದ ಈ ವ್ಯವಸ್ಥೆಯು ಅಮಲಿನಲ್ಲಿ ಬರುವದು.

— ಕಲಕತ್ತೆಯಲ್ಲಿ ಬಿಸಿಲು ತಾಪದಿಂದ ೧೯ನೇ ತಾರೀಖಿಗೆ ಇಬ್ಬರು ಸತ್ತರು. ಮದ್ರಾಸದಲ್ಲಿ ಒಬ್ಬರು ಸತ್ತರು

— ಮದ್ರಾಸ ಸರಕಾರವು ೩೦೦ ಗ್ರಾಮಗಳಲ್ಲಿ ಶಾಲೆಗಳನ್ನು ಸ್ಥಾಪಿಸುವ ನಿರ್ಧಾರ ಮಾಡಿರುವದು ಶಾಲೆಗೆ ೧೫೦ ರೂಪಾಯಿಗಳಂತೆ ಸರಕಾರವು ಗ್ರಾಂಟು ಕೊಡುವದು.

— ಬೆಳಗಾವಿಯ ಜಿಲ್ಲಾ ಬೋರ್ಡಿನ ಪ್ರಕರಣವು ನ್ಯಾಯಾಸನವನ್ನು ಪ್ರವೇಶಿಸಿತು ಜಿಲ್ಲಾ ಬೋರ್ಡಿನ ಇಬ್ಬರು ಸಭಾಸದರು ಬೋರ್ಡಿನ ಹಳೇ ಅಧ್ಯಕ್ಷರಾದ ಶ್ರೀ|| ಚಿಕ್ಕೋಡಿಯವರ ಮೇಲೂ, ಹೊಸ ಅಧ್ಯಕ್ಷರಾದ ಶ್ರೀ|| ಅಂಗಡಿಯವರ ಮೇಲೂ ಹಾಗು ಚೀಫ ಆಫೀಸರರ ಮೇಲೂ ದಾವೆ ಮಾಡಿರುವರು.

— ಮುಂಬಯಿಯ ಕಾಮಾಟಿಪುರದಲ್ಲಿ ಮಾಳಿಗೆಯ ಮೇಲೆ ಒಬ್ಬ ಹುಡುಗನು ರಾತ್ರಿ ಮಲಗಿದ್ದನು, ಮೋಟಾರ ಲೋರಿಯು ಹೋಗಿ ಅವನ ತಲೆ ಒಡೆದು ಅವನು ಮರಣಪಟ್ಟನು.

— ಮ್ಯುನಿಸಿಪಾಲಿಟಿಯವರು ಸಾರ್ವಜನಿಕವಾಗಿ ಸತ್ಕಾರ ಮಾಡಬೇಕಾದರೆ ಅದರ ಖರ್ಚಿಗಾಗಿ ಕಲೆಕ್ಟರರ ಅಪ್ಪಣೆಯನ್ನು ಮುಂದಾಗಿ ಪಡೆಕೊಳ್ಳಬೇಕು. ಹಾಗೆ ಅಪ್ಪಣೆ ಪಡೆಯದೆ ಖರ್ಚು ಮಾಡಿದರೆ, ಅದಕ್ಕೆ ಸಮ್ಮತಿ ಕೊಟ್ಟ ಸಭಾಸದರೇ ಜವಾಬದಾರ ಆಗತಕ್ಕದ್ದೆಂದು ಮುಂಬಯಿ ಸರಕಾರದವರು ಸರ್ಕ್ಯೂಲರವನ್ನು ಹೊರಡಿಸಿರುವರು

— ಸೊಲ್ಲಾಪುರದಲ್ಲಿ ಪ್ರಚಂಡ ಬಿರುಗಾಳಿ ಎದ್ದು ನೂರಾರು ಮಂದಿಗಳು ಗಾಯಪಟ್ಟರು, ಒಬ್ಬಿಬ್ಬರು ಮರಣಪಟ್ಟರು.

— ರೇವಾ ಸಂಸ್ಥಾನದ ಮಹಾರಾಜರು ಸದ್ಯಕ್ಕೊಂದು ಬಿಳೇ ವರ್ಣದ ಹುಲಿಯನ್ನು ಕೊಂದರು. ಈ ವರೆಗೆ ಮಹಾರಾಜರವರು ೨೯೧ ಹುಲಿಗಳ ಬೇಟೆಯಾಡಿದಂತಾಯಿತು!

— ಅಖಿಲ ಭಾರತೀಯ ದೇಶಬಂಧು ದಾಸರವರ ಸ್ಮಾರಕ ನಿಧಿಗೆ ರೂ. ೧,೬೩ ಲಕ್ಷ ಸಂಗ್ರಹವಾಗಿದೆ

— ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ಲಂಚ ತಿಂದ ಆರೋಪದ ಮೇಲೆ ಮೂರು ಮಂದಿಗಳಿಗೆ ಪದಭ್ರಷ್ಟ ಮಾಡಿದೆ

— ತ್ರಾವಣಕೋರದಲ್ಲಿ ಮುದ್ರಣಾಲಯಗಳ ಮೇಲೆ ಹೊರಡಿಸಿದ ಹೊಸ ಕಾಯಿದೆಯನ್ನು ಮಹಾರಾಣಿಯವರೊಡನೆ ಚರ್ಚಿಸಲಿಕ್ಕಾಗಿ ವೃತ್ತಪತ್ರಕರ್ತರ ಪ್ರತಿನಿಧಿಗಳು ಮಹಾರಾಣಿಯವರ ಸಮಯ ಹಾರೈಸಿದ್ದರು ಅದಕ್ಕಾಗಿ ಸಮಯ ಕೊಡಲು ಮಹಾರಾಣಿಯವರು ಒಪ್ಪಲಿಲ್ಲ.

— ರಾವಲಪಿಂಡಿಯಲ್ಲಿ ಸೀಕರ ಗುರುವಿನ ಉತ್ಸವವು ವಾದ್ಯ ಘೋಷದಿಂದ ಮಸೀದೆಯ ಮುಂದಿನಿಂದ ಸಾಗುತ್ತಿರುವಾಗ ಮುಸಲ್ಮಾನರಿಗೂ, ಸೀಕರಿಗೂ ವಿಕೋಪವಾಗಿ ದೊಡ್ಡದೊಂದು ದೊಂಬಿಯಾಯಿತು. ೧೧ ಮಂದಿ ಮುಸಲ್ಮಾನರು, ಇಬ್ಬರು ಹಿಂದೂಗಳು, ಒಬ್ಬ ಸೀಕರು ಮಡಿದರು ೪೬ ಮಂದಿಗಳಿಗೆ ಗಾಯಗಳಾಗಿವೆ. ಹೇರಳ ನಷ್ಟ

— ಮುಂಬಯಿ ಹ್ಯಾಕೋರ್ಟಿನ ಜಜ್ಜರಾದ ನ್ಯಾಯಮೂರ್ತಿ ಮಿರ್ಝಾ ಮೊದಲಾದ ಮುಸ್ಲಿಮ ಸಂಘದ ಸಭಾಸದರ ಮೇಲೆ, ಸಂಘದವರು ಬಾಡಿಗೆಗೆ ಕೊಂಡ ಕಟ್ಟಡದ ಕಬಜೆ ಕೊಳ್ಳಲು ಮಾಲಕರು ದಾವೆ ಮಾಡಿದ್ದರು ನ್ಯಾಯಮೂರ್ತಿ ಮಿರ್ಝಾರವರ ತಕರಾರನ್ನು ರದ್ದುಪಡಿಸಿ, ನ್ಯಾಯಮೂರ್ತಿ ಕೆಂಪರವರು ನ್ಯಾಯಮೂರ್ತಿ ಮಿರ್ಝಾರವರ ಮೇಲೆ ಕಬಜೆ ಕೊಡಿಸಿ ಡಿಕ್ರಿ ಮಾಡಿರುವರು.

— ಜೆನಿವಾದಲ್ಲಿ ಪ್ರಚಂಡ ಬಿರುಗಾಳಿ ಬೀಸಿ ೩ ಮಂದಿಗಳು ಮಡಿದರು ಅನೇಕರಿಗೆ ಗಾಯಗಳಾಗಿವೆ. ಹೇರಳ ಧನಗಳು ಸತ್ತುಹೋದವು. ತೋಟಗಳೊಳಗಿನ ಮರಗಳೆಲ್ಲ ಬಿದ್ದು ನಷ್ಟ!

— ನಮ್ಮ ಜಿಲ್ಲೆಯ ರಾ|| ಕೃಷ್ಣ ರಾಮಚಂದ್ರ ಹಳದೀಪುರಕರ, ಅನಂತ ನಾರಾಯಣ ಕಾಮತ, ಡಿ. ಎಸ್. ಚಂದಾವರಕರ ಇವರು ಈ ವರುಷದ ೨ನೇ ಎಲ್. ಎಲ್. ಬಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು

— ಮುಂಬಯಿ ವಿಶ್ವವಿದ್ಯಾಲಯದೊಳಗಿನ ಪುಸ್ತಕಾಲಯದಲ್ಲಿ ಈ ವರೆಗೆ ಒಂದೂ ಕನ್ನಡ ಪುಸ್ತಕವಿದ್ದಿಲ್ಲ. ಈ ಬಾಬದ ೫೦೦ ರೂಪಾಯಿಗಳು ಮಂಜೂರಾಗಿವೆ.

— ಮೈಸೂರ ಸಂಸ್ಥಾನದ ದೊಡ್ಡಬಳ್ಳಾಪುರದಲ್ಲಿ ಒಬ್ಬ ಹೆಂಗಸಿಗೆ ೯ ವರುಷದ ಪ್ರಾಯದ ಮಗನೊಬ್ಬನು ಹಾಗು ೯ ತಿಂಗಳ ಕೂಸು ಹೀಗೆ ಇಬ್ಬರಿರುವರು. ಹೊಟ್ಟೆಗೆ ಅನ್ನವಿಲ್ಲದೆ ಆಕೆಯು ಬಹಳ ಬಳಲಿದಳು. ಅಸಹ್ಯವಾಗಲು, ಕೂಸನ್ನೆತ್ತಿಕೊಂಡು ಬಾವಿಯಲ್ಲಿ ಹಾರಿದಳು. ಮಗನು ಅಳುತ್ತ ಹೋಗಿ ಅದೇ ಬಾವಿಯಲ್ಲಿ ಬಿದ್ದನು. ಇದನ್ನು ನೋಡಿ ಕೆಲವರು ಬಾವಿ ಹಾರಿ ಮೂವರನ್ನೂ ಬದುಕಿಸಿದರು.

— ಬಂಗಾಲ ಪ್ರಾಂತದ ಜೆಸಾಲ ಗ್ರಾಮದಲ್ಲಿ ಒಂದು ಹಿಂದೂ ದೇವಾಲಯವಿದ್ದು, ಅದರ ಬಳಿ ಒಂದು ಮರವಿದೆ. ಮುಸಲಮಾನನೊಬ್ಬನು ಆ ಮರ ಹತ್ತಿ ಹಣ್ಣುಗಳನ್ನು ಎಂಜಲು ಮಾಡಿ ದೇವಸ್ಥಾನದಲ್ಲಿ ಒಗೆಯುತ್ತಿದ್ದನು ಅರ್ಚಕನು ವಿನಯದಿಂದ ಹೇಳಿನೋಡಿದನು ಆದರೂ, ಅವನು ಕೇಳಲಿಲ್ಲ. ಕೆಲ ಸಮಯ ಹೋಯಿತು. ಅಷ್ಟರಲ್ಲಿ, ಥಟ್ಟನೆ ಮುಸಲ್ಮಾನನು ಕುಳಿತಿದ್ದ ಮರದ ಟೊಂಗೆಯು ಮುರಿದು ಮುಸಲ್ಮಾನನು ಬಿದ್ದು ಕಾಲು ಮುರಕೊಂಡನು. ಉಪಚಾರ ಮಾಡಿದರೂ ಆತನನ್ನು ಬದುಕಿಸಿಕೊಳ್ಳಲಾಗಲಿಲ್ಲ

ಪ್ರಾಥಮಿಕ ಶಿಕ್ಷಣ.

ಮುಂಬಯಿ ಸರಕಾರದ ಧೋರಣ.

(೫ ನೇ ಪಾನಿನಿಂದ ಮುಂದರಿಸಿದ್ದು.)

ವಿದ್ಯಾರ್ಥಿಗಳು	ಹೆಡ್ ಮಾಸ್ತರರ ಭತ್ತೆ.
೭೫ರ ವರೆಗಿದ್ದರೆ	೫ ರೂಪಾಯಿ
೭೬ ರಿಂದ ೧೫೦ರ ವರೆಗೆ	೧೦ ರೂಪಾಯಿ.
೧೫೧ ರಿಂದ ೨೫೦ರ ವರೆಗೆ	೧೫ ರೂಪಾಯಿ
೨೫೬ ರಿಂದ ೩೦೦ಕ್ಕೆ ಮಿಕ್ಕಿದರೆ	೨೫ ರೂಪಾಯಿ.

೧೫೦ ವಿದ್ಯಾರ್ಥಿಗಳಿಗೆ ಮಿಕ್ಕಿದ್ದ ಶಾಲೆಯೊಳಗಿನ ಮೊದಲನೇ ಅಸಿಸ್ಟಂಟರಿಗೆ ೫ ರೂಪಾಯಿ ಭತ್ತೆ ಸಿಗುವದು ೨೫೦ಕ್ಕೆ ಮಿಕ್ಕಿದ್ದರೆ, ೧೦ ರೂಪಾಯಿ ಭತ್ತೆ ಸಿಗುವದು.

ಇದಲ್ಲದೆ, ಕಮಿಟಿಯವರು ಸಿಂಧ ಪ್ರಾಂತಕ್ಕೆ ಹೆಚ್ಚಿನ ಭತ್ತೆಯನ್ನು ಶಿಫಾರಸು ಮಾಡಿರುವರು. ಉರ್ದು ಮತ್ತು ಅಸ್ಪೃಶ್ಯ ವರ್ಗದ ಶಾಲೆಗಳಲ್ಲಿ ಪ್ರತಿ ೪೦ ಮಂದಿ ವಿದ್ಯಾರ್ಥಿಗಳಿಗೆ ೫ ರೂಪಾಯಿಗಳಂತೆ ಹೆಡ್ ಮಾಸ್ತರರಿಗೆ ಭತ್ತೆ ಕೊಡಲಾಗುವದು.

ಅತ್ಯದ್ಭುತ! ಅತ್ಯದ್ಭುತ!!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲಿಕ್ಸಿರ್ ಆಫ್ ಲೈಫ್

ಅಂದರೆ, ಸರ್ವ ರೋಗ ನಾಶಕ, ಸರ್ವಾರೋಗ್ಯದಾಯಕ. ಅಜೀರ್ಣ ತಲೆನೋವು, ವಾಂತಿ, ಅತಿಸಾರ, [illegible], ಕಾಲರಾ, ಜ್ವರ, ಕಿವಿನೋವು, ಸ್ತ್ರೀವ್ಯಾಧಿಗಳು ಇವೆಲ್ಲವುಗಳನ್ನು ಹೊಡೆದು ಚೆಲ್ಲುವ ಒಂದೇ ರಾಮಬಾಣವಿದು! ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ!! ಒಂದು ಸೀಸೆಯೊಯ್ದರೆ, ಒಬ್ಬ ಡಾಕ್ಟರನಿದ್ದಂತೆಯೇ!!!

ಒಂದು ಸೀಸೆಗೆ ರೂ. ೧-೮-೦. ಸಣ್ಣ ಸೀಸೆಗೆ ರೂ. ೦-೮-೦ ಟಪಾಲ್ ಖರ್ಚು ಬೇರೆ.

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ:- ಜೀವನಾಧಾರ ಡಿಪೋ, ಹುಬ್ಬಳ್ಳಿ

ಮಹಾತ್ಮರ ಆತ್ಮಚರಿತ್ರೆ

(೪) ಮೊದಲನೇ ಅನಿಷ್ಟ ಪ್ರಸಂಗ

ನಿರಾಶನಾಗಿ ನಾನು ಮುಂಬಯಿ ಬಿಟ್ಟು ರಾಜಕೋಟೆಗೆ ಹೋದೆನು. ಅಲ್ಲಿ ನನ್ನದೊಂದು ಆಫೀಸನ್ನು ನಿಲ್ಲಿಸಿದೆನು. ಇಲ್ಲಿ ನನ್ನ ಉದ್ಯೋಗವು ಸಾಧಾರಣವಾಗಿ ನಡೆಯಿತು. ಅರ್ಜಿ ಬಿನ್ನಹಪತ್ರ ಮುಂತಾದವುಗಳನ್ನು ಬರೆದುಕೊಟ್ಟು ತಿಂಗಳಿಗೆ ಸರಾಸರಿಯಾಗಿ ೩೦೦ ರೂಪಾಯಿ ದುಡಿಯುತ್ತಿದ್ದೆ. ಇದೇನು ನನ್ನ ಚಾತುರ್ಯದ ಫಲವಲ್ಲ. ಆದರೆ ನನಗೆ ಅಲ್ಲಿ ದೊರೆತ ದೊಡ್ಡವರ ಆಶ್ರಯದ ಕಾರಣವು. ನನ್ನ ಅಣ್ಣನ ಪಾಲುಗಾರನಿಗೆ ಖಾಯಂ [illegible] ಇತ್ತು. ಆತನು ಮಹತ್ವದ್ದೆಂದು ತೋರಿದ ಅರ್ಜಿಗಳನ್ನೆಲ್ಲ ತಮ್ಮಲ್ಲಿ [illegible] ದೊಡ್ಡ ಬ್ಯಾರಿಸ್ಟರ ಅರ್ಜಿಗಳನ್ನೆಲ್ಲ [illegible] ನನ್ನ ಪಾಲಿಗೆ ಬೀಳುತ್ತಿತ್ತು.

ಮುಂಬಯಿಯಲ್ಲಿದ್ದಾಗ ದಲ್ಲಾಲಿ ಕೊಡಬಾರದೆಂದು ನಾನು ನಿರ್ಧಾರ ಮಾಡಿದ [illegible] ಬೇಕಾಯಿತು. ಮುಂಬಯಿಯ ಸ್ಥಿತಿ ಬೇರೆ, ಇಲ್ಲಿಯ ಸ್ಥಿತಿ ಬೇರೆ [illegible] ಯಲ್ಲಿ ವಕೀಲರು ಕಂಡು ಕೊಡುವ ದಲ್ಲಾಲಿ ದಲ್ಲಾಲಿ ಕೊಡಬೇಕಾಗಿತ್ತು. ಇಲ್ಲಿ ಸಾಹೇಬರಿಗೆ ದಲ್ಲಾಲಿ ಕೊಡಬೇಕು [illegible] ವಕೀಲರಿಗೆ ಎಂದು ಹೇಳಲಾಯಿತು. ಮತ್ತು [illegible] ಯಂತೆ ಇಲ್ಲಿಯೂ ಬ್ಯಾರಿಸ್ಟರಲ್ಲದೂ ಒಂದು ಪ್ರಮಾಣದಿಂದ ವಕೀಲರಿಗೆ ದಲ್ಲಾಲಿ ಕೊಡುತ್ತಿದ್ದರು. [illegible] ನು ನನ್ನೊಡನೆ ಮಾಡಿದ ತರ್ಕಕ್ಕೆ ನನ್ನಿಂದ ಪ್ರತ್ಯುತ್ತರ ಕೊಡಲಾಗಲಿಲ್ಲ. ಆತನ ವಾದವೇನೆಂದರೆ — "ನಾನು ಇನ್ನೊಬ್ಬ ವಕೀಲರೊಡನೆ ಪಾಲಿನಲ್ಲಿ ವಕೀಲಿ ನಡೆಸುತ್ತೇನೆ. ನೀನು ನಮಗೆ [illegible] ದ ಸಂಬಂಧಗಳನ್ನೆಲ್ಲ ನಿನಗೆ ಕೊಡಬೇಕೆಂದು ನನ್ನ ಮನಸ್ಸಾಗಿ [illegible] ಹೇಳಬೇಕು. ನೀನು ನನ್ನ ಪಾಲಿನ [illegible] ಗೆ ದಲ್ಲಾಲಿ ಕೊಡಲು [illegible] ಸಿದರೆ ನಾನು ನಿನ್ನ ಪಾಲಿನಲ್ಲಿ ವೀಳಬೇಕಾಗುವದು. [illegible] ನಾನು ಕೊಡುವದರಿಂದ ನಿನಗೆ [illegible] ದೊರೆಯುವದೆಂದು ನನಗೂ ಆದರೊಳಗೊಂದು ಪಾಲು ಸಿಗುತ್ತದೆ. ನನ್ನ ಪಾಲು ನಿನಗೆ ಸಿಗುವದೇನು? ನಿನಗೆ ಕೊಟ್ಟ ಪ್ರಕರಣವನ್ನೇ ಆತನು ಬೇರೊಬ್ಬ ಬ್ಯಾರಿಸ್ಟರನಿಗೆ ಕೊಟ್ಟರೆ ಆತನಿಗೆ ದಲ್ಲಾಲಿ ಸಿಕ್ಕೇ ಸಿಗುತ್ತದೆ." ಈ ತರ್ಕಕ್ಕೆ ನಾನು ಒಲಿದೆನು. ಬ್ಯಾರಿಸ್ಟರ ಉದ್ಯೋಗವನ್ನು ನಡೆಸಬೇಕಾದರೆ ದಲ್ಲಾಲಿಯನ್ನು ಕೊಡಬಾರದೆಂಬ ತತ್ವದ ಆಗ್ರಹ ಹಿಡಿಯಬಾರದೆಂದು ನನಗೆ ತೋರಿತು. ಹೀಗೆ ನಾನು ತರ್ಕಿಸಿದನು. ಮತ್ತು [illegible] ಸ್ಪಷ್ಟವಾಗಿ ಹೇಳಿದ ಪಕ್ಷದಲ್ಲಿ ಆದರೆ ಇನ್ನೊಬ್ಬನಿಗೂ ನಾನು ದಲ್ಲಾಲಿಯನ್ನು ಕೊಟ್ಟ ನೆನಪೇನು ನನಗೆ ಕಾಣುವದಿಲ್ಲ.

ಹೀಗೆ ನನ್ನ ಜೀವನ ನಿರ್ವಾಹನ ಸಾಗುತ್ತಿತ್ತು. ಈ ಸಮಯದಲ್ಲಿ ಅನಿಷ್ಟಕರವಾದ ಮೊದಲನೇ ಘೋರ ಪ್ರಸಂಗವು ನನ್ನ ಮೇಲೆ ಬಂತು. ಬ್ರಿಟಿಶ ಅಧಿಕಾರಿಯ ಗುಣಗಳನ್ನು ನಾನು ಕೇಳಿ ತಿಳಿದಿದ್ದೆ. ಆದರೆ ಪ್ರತ್ಯಕ್ಷ ಅವನಿಗೆ ನಾನು ಭೆಟ್ಟಿಯಾಗಿರಲಿಲ್ಲ.

ಪೋರಬಂದರದ ರಾಣಾಸಾಹೇಬರು (ಅವರೀಗ ತೀರಿಕೊಂಡಿದ್ದಾರೆ) ಗಾದಿಯನ್ನೇರುವ ಮೊದಲು ನನ್ನ ಅಣ್ಣನು ಅವರ ಕಾರ್ಯದರ್ಶಿ ಹಾಗು ಸಲಹೆಗಾರನಾಗಿದ್ದನು. ಆ ಅಧಿಕಾರ ನಡೆಸುತ್ತಿದ್ದಾಗ ಅಣ್ಣನು ರಾಣಾಸಾಹೇಬರಿಗೆ ದುರಾಲೋಚನೆ ಹೇಳಿಕೊಟ್ಟನೆಂದು ನನ್ನ ಅಣ್ಣನ ಮೇಲೊಂದು ಆರೋಪ ಬಂದಿತ್ತು. ಬ್ರಿಟಿಶ ಪೊಲಿಟಿಕಲ್ ಏಜಂಟನು ಇದರ ಬಗ್ಗೆ ವಿಚಾರ ನಡೆಸಿ ಅವನಿಗೆ ನನ್ನ ಅಣ್ಣನ ಮೇಲೆ ಸಿಟ್ಟು. ಈ ಏಜಂಟರು ನಾನು ಇಂಗ್ಲಂಡದಲ್ಲಿದ್ದಾಗ ಸಾಮಾನ್ಯವಾಗಿ ನನ್ನ ಪರಿಚಯದವರಾಗಿದ್ದರು. ಕೆಲಮಟ್ಟಿಗೆ ಸ್ನೇಹವೂ ಇತ್ತು. ಈ ಗೆಳೆತನದ ಪ್ರಯೋಜನ ಪಡೆದು ನಾನು ನನ್ನ ಅಣ್ಣನ ಪಕ್ಷದಿಂದ ನಾಲ್ಕು ಮಾತು ಹೇಳಿ, ಏಜಂಟನ ಮನಸ್ಸಿನೊಳಗುಂಟಾದ ಕಲ್ಪನೆಗಳನ್ನು ಹೋಗಲಾಡಿಸಬೇಕೆಂದು ನನ್ನ ಅಣ್ಣನ ಅಭಿಪ್ರಾಯ. ಇದು ನನಗೆಷ್ಟಕ್ಕೂ ಸೇರಲಿಲ್ಲ. ಇಂಗ್ಲಂಡದಲ್ಲಿ ಅನಾಯಾಸವಾಗಿ ಒದಗಿಬಂದ ಸಾಮಾನ್ಯ ಗೆಳೆತನದ ಪ್ರಯೋಜನವನ್ನು ನಾನು ಪಡೆಯಬಾರದೆಂದು ನನ್ನ ವಿಚಾರ. ಅಣ್ಣನು ನಿಜವಾಗಿ ಅಪರಾಧ ಮಾಡಿದ್ದರೆ ನಾನು ಹೇಳಿದ್ದು ಪ್ರಯೋಜನ ಸಿರದು. [illegible] ಅವನು ನಿರಪರಾಧಿಯಾಗಿದ್ದರೆ ಆ ಬಗ್ಗೆ ಅರ್ಜಿಯನ್ನು ಸಾದರಪಡಿಸಲು [illegible] ನಿರ್ದೋಷಿಯಾಗಿ ಬರುವನು. ಅಣ್ಣನಿಗೆ ನನ್ನ ಉಪದೇಶವು ಸರಿದೋರಲಿಲ್ಲ. ಆತನು ಹೇಳಿದ್ದೇನೆಂದರೆ — "ಕಾಠೇವಾಡದೊಳಗಿನ ಸ್ಥಿತಿಯನ್ನು ನೀನು ಅರಿತವನಲ್ಲ. ಇನ್ನೂ ಜಗತ್ತಿನ ಪರಿಸ್ಥಿತಿಯು ನಿನಗೆ ಗೊತ್ತಿಲ್ಲ. ಕೇವಲ ವಶೀಲಿಯಿಂದಲೇ ಇಲ್ಲಿ ಕಾರ್ಯ ಸಾಗುತ್ತದೆ. ನೀನು ನನ್ನ ತಮ್ಮನು. ನಿನಗೆ ಆ ಏಜಂಟರ ಗುರುತಿರುವದು. ನೀನು ಎರಡು ಮಾತು ಹೇಳಬಹುದಾದ ಹಾಗೆ ಇರುವಾಗ ಕರ್ತವ್ಯ ತಪ್ಪಿ ನಡೆಯುವದು ನಿನಗೆ ಯೋಗ್ಯವಲ್ಲ."

ಆದಕ್ಕೆ ನನ್ನಿಂದ ಮೀರಲಾಗಲಿಲ್ಲ. ಆದುದರಿಂದ ನಾನು ಅಲ್ಲಿಗೆ ಹೋದೆನು. ಏಜಂಟರ ಬಳಿಗೆ ಹೋಗಲು ನನಗೆ ಯಾವದೇ ಪ್ರಕಾರದ ಅಧಿಕಾರವಿಲ್ಲವೆಂದು ನಾನು ಅರಿತಿದ್ದೆ. ಹೀಗೆ ಹೋಗುವದರಿಂದ ನನ್ನ ಸ್ವಾಭಿಮಾನಕ್ಕೆ ಧಕ್ಕೆ ಬರುವದೆಂಬುದೂ ನನ್ನ ತಿಳುವಳಿಕೆಯಾಗಿತ್ತು. [illegible] ಬಿಟ್ಟು ನಾನು ಭೆಟ್ಟಿಯ [illegible] ನಾನು ಒಳ್ಳೆ [illegible] ನೆನಪು ಮಾಡಿಕೊಟ್ಟೆನು. ಕಾಠೇವಾಡ ಇಂಗ್ಲಂಡವು ಬೇರೆ ಬೇರೆ. [illegible] ಬೇರೆ ಮತ್ತು ನಾನು ತಿಳಿದುಕೊಂಡ ಪ್ರಕಾರ [illegible] ಏಜಂಟ [illegible] ಭಿನ್ನವಿತ್ತೆಂದರೆ ಆದರೆ [illegible] ದರ್ಪದಿಂದ ಅವರ ಮುಖವು [illegible] ಹೀಗೆ [illegible] ಬಲಪ್ರಯೋಗ ಮಾಡಿ ನೀನು ಬಂದಿಲ್ಲವೋ? ಎಂಬಂತೆ ಅವರು ನನ್ನ ಮುಖ ನೋಡಿದರು. ಇಷ್ಟರಲ್ಲಿ ನಾನು [illegible] ಹೇಳತೊಡಗಿದೆನು. ಸಾಹೇಬರು ಸಿಟ್ಟಾದರು. "ನಿನ್ನ ಅಣ್ಣನು ಒಳಸಂಚುಗಾರನು. ನಿನ್ನಿಂದ ನಾನು ಕೇಳಬೇಕಾದದ್ದು ಏನೂ ಇಲ್ಲ. ನಿನ್ನ ಅಣ್ಣನು ಏನಾದರೂ ಹೇಳುವದಿದ್ದಲ್ಲಿ ನಿಯಮದ ಪ್ರಕಾರ ಅರ್ಜಿ ಮಾಡಲಿ." ಈ ಉತ್ತರವು ನನಗೆ ಸಾಕಾಗಿತ್ತು. ಯೋಗ್ಯವಿತ್ತು. ಆದರೆ ಸ್ವಾರ್ಥಕ್ಕೆ ಕಣ್ಣುಗಳಿಲ್ಲ. ನನ್ನ ಮಾತನ್ನು ಹೇಳತೊಡಗಿದೆನು. ಸಾಹೇಬರು ಎದ್ದು "ನೀನೀಗ ಹೋಗಬೇಕು" ಎಂದು ನುಡಿದರು.

ನನ್ನ ಹೇಳಿಕೆಯನ್ನು ಸಂಪೂರ್ಣವಾಗಿ ಕೇಳಿ [illegible] ಎಂದು ನಾನು ಹೇಳಿದೆ. ಇದರಿಂದ ಅವರು ಮತ್ತಷ್ಟು ಸಿಟ್ಟಾದರು. ಜವಾನನು ಬರಲು ನನಗೆ ಬಾಗಿಲ ಹೊರಗೆ ತಳ್ಳಲು ಹೇಳಿದರು. ಇಷ್ಟಾದರೂ ನಾನು ನನ್ನ ಮಾತನ್ನು ಬಡಬಡಿಸುತ್ತಿದ್ದೆ. ಜವಾನನು ಬಂದು ನನ್ನ ಹೆಗಲು ಹಿಡಿದು ನನಗೆ ಕೋಣೆಯ ಹೊರಗೆ ತಳ್ಳಿದನು.

ಸಾಹೇಬರು ಹೊರಟರು. ಜವಾನನೂ ಹೋದನು. ನಾನು ಗುಣಗುಟ್ಟುತ್ತ ಮನೆಗೆ ಹೋದೆನು. ನನಗೆ ಸಿಟ್ಟು ಬಂದಿತ್ತು. ಹಕೀಕತ್ತನ್ನೆಲ್ಲ ಬರೆದು ಒಂದು ಪತ್ರವನ್ನು ಸಾಹೇಬರಿಗೆ ಬರೆದೆನು. ಅದರ ತಾತ್ಪರ್ಯವೇನಂದರೆ "ನೀವು ನನಗೆ ಅಪಮಾನ ಮಾಡಿದ್ದೀರಿ. ಜವಾನನ ಕೈಯಿಂದ ನನ್ನ ಮೈಮೇಲೆ ಕೈಹಾಕಿಸಿದಿರಿ. ಈ ಕುರಿತು ನೀವು ಯೋಗ್ಯ ಸಮಾಧಾನ ಮಾಡದಿದ್ದರೆ ನಿಮ್ಮ ವಿರುದ್ಧ ನಾನು ಫಿರ್ಯಾದು ನಡಿಸುವೆನು."

ಸವಾರನೊಡನೆ ಕೂಡಲೆ ನನಗೆ ಉತ್ತರ ಬಂದದ್ದೇನಂದರೆ — "ನೀವು ಅಸಭ್ಯ ವರ್ತನ ಮಾಡಿದಿರಿ. ನಾನು ನಿಮಗೆ ಹೋಗಹೇಳಿದರೂ ನೀವು ಹೋಗಲಿಲ್ಲ. ಆದದರಿಂದ ನಿರುಪಾಯನಾಗಿ ನಿಮಗೆ ಹೊರಹಾಕಲು ಜವಾನಗೆ ಆಜ್ಞೆ ಮಾಡಬೇಕಾಯಿತು. ಜವಾನನು ನಿಮಗೆ ಹೊರಗೆ ಹೋಗಹೇಳಿದರೂ, ನೀವು ಹೋಗಲಿಲ್ಲ. ಆದ್ದರಿಂದ ನಿಮಗೆ ಹೊರಹಾಕಲು ತಕ್ಕ ಬಲವನ್ನು ಆತನು ಉಪಯೋಗಿಸಬೇಕಾಯಿತು. ನಿಮಗೆ ಯುಕ್ತ ಕಂಡ ಫಿರ್ಯಾದು ನಡಿಸಬಹುದು."

ಈ ಉತ್ತರ ಪತ್ರವನ್ನು ಕಿಸೆಯಲ್ಲಿಟ್ಟುಕೊಂಡು ಮನೆಗೆ ಮರಳಿ ಬಂದೆ. ಮತ್ತು ಅಣ್ಣನಿಗೆ ನಡೆದ ಹಕೀಕತ್ತೆಲ್ಲ ವಿವರಿಸಿದೆನು. ಅಣ್ಣನಿಗೆ ಬಹಳ ವ್ಯಸನವಾಯಿತು. ನನಗೆ ಸಮಾಧಾನ ಮಾಡುವ ಬಗೆ ಹರಿಯದಾಯಿತು. ಸಾಹೇಬರ ಮೇಲೆ ಯಾವ ಫಿರ್ಯಾದು ನಡಿಸಬೇಕೆಂದು ನನಗೆ ತೋಚಲಿಲ್ಲ. ಅಣ್ಣನು ತನ್ನ ಗೆಳೆಯನಾದ ವಕೀಲನೊಡನೆ ಆಲೋಚನೆ ಮಾಡಿದನು. ಅದೇ ಸಮಯ ಒಂದು ಪ್ರಕರಣಕ್ಕಾಗಿ ಸರ್ ಫಿರೋಜಶಹಾ ಮೆಹತಾರವರು ರಾಜಕೋಟೆಗೆ ಬಂದಿದ್ದರು. ಆದರೆ ನನ್ನಂಥ ಹೊಸ ಬ್ಯಾರಿಸ್ಟರನು ಅವರ ಭೆಟ್ಟಿ ಪಡೆಕೊಳ್ಳಲು ಧೈರ್ಯ ಬರುವ ಬಗೆ ಹೇಗೆ? ಆದರಿಂದ ಅವರಿಗೆ ಕರತಂದಿದ್ದ ರಾಜಕೋಟೆಯೊಳಗಿನ ವಕೀಲರ ಮುಖಾಂತರ ನನ್ನ ಪ್ರಕರಣದ ದಾಖಲೆಗಳನ್ನು ಅವರಿಗೆ ಕಳುಹಿ ಉಪಾಯ ಕೇಳಕಳಿಸಿದೆನು. ಅವರು ಹೇಳಿಕಳಿಸಿದ್ದೇನಂದರೆ —

"ಗಾಂಧಿಗೆ ಹೇಳಿರಿ. ಇಂಥ ಪ್ರಕಾರಗಳು ಅನೇಕ ವಕೀಲರಿಗೂ ಬ್ಯಾರಿಸ್ಟರರಿಗೂ ಆಗಾಗ ಸಂಭವಿಸುತ್ತವೆ. ಇಂಗ್ಲಂಡದಿಂದ ಇತ್ತೀಚೆಗೆ ಆತನು ಮರಳಿ ಬಂದಿದ್ದಾನೆ. ಆತನ ಸ್ವಭಾವವು ಸ್ವಲ್ಪ ಉಗ್ರವಿದೆ. ಬ್ರಿಟಿಶ ಅಧಿಕಾರಿಗಳ ಪರಿಚಯವು ಆತನಿಗಿರುವದಿಲ್ಲ. ಇಲ್ಲಿ ಸಂಪಾದನೆ ಮಾಡಿಕೊಂಡು ಸುಖದಿಂದ ಕಾಲ ಕಳೆಯಬೇಕೆಂದಿದ್ದರೆ, ಆತನು ಈ ಕಾಗದವನ್ನು ಹರಿದು ಹಾಕಿ ಅಪಮಾನವನ್ನು ಸಹಿಸಲಿ. ಸಾಹೇಬರ ಮೇಲೆ ಫಿರ್ಯಾದು ನಡಿಸಿ ಪ್ರಯೋಜನವಿಲ್ಲ. ಆದರೆ ಸ್ವತಃ ತನ್ನದೇ ನಾಶ ಮಾಡಿಕೊಳ್ಳುವನು. ವ್ಯವಹಾರವನ್ನು ಇನ್ನೂ ಆತನು ಕಲಿಯುವವನಿದ್ದಾನೆಂದು ಆತನಿಗೆ ಹೇಳಿರಿ."

ಈ ಉಪದೇಶವು ನನಗೆ ವಿಷದಂತೆ ಕಹಿಯಾಗಿತ್ತು. ಆದರೂ ನಾನು ಸಹಿಸಬೇಕಾಯಿತು. ಈ ಅಪಮಾನವ [illegible] ಬಗೆ ಹೊಟ್ಟೆಯಲ್ಲಿಟ್ಟುಕೊಂಡು ಲಾಭ ಪಡೆದೆನು. "ಇನ್ನು ಮುಂದೆ ಎಂದೂ ಇಂಥ ಸ್ಥಿತಿಯಲ್ಲಿ ನಾನು ಬೀಳಲಿಕ್ಕಿಲ್ಲ. ಗೆಳೆತನದಿಂದ ಈ ಪರಿಯ ಅಯೋಗ್ಯವಾದ ಲಾಭ ಪಡೆಯಲು ನಾನೆಂದೂ ಯತ್ನ ಮಾಡಲಿಕ್ಕಿಲ್ಲ" ಎಂದು ನಾನು ನಿರ್ಧಾರ ಮಾಡಿದೆನು. ಅಂದಿನಿಂದ ಆ ನಿರ್ಧಾರದ ಭಂಗವು ಈವರೆಗೆ ಒದಗಿಬರಲಿಲ್ಲ. ಈ ಘೋರ ಪ್ರಸಂಗದಿಂದ ನನ್ನ ಪ್ರಪಂಚದ ಧೋರಣವು ಬದಲಾಯಿತು.

BATLIBOI'S

Accountancy Training Institute

Recognised by

The G. D. A. Board

Offers best training in Accounting Banking Company Management and Secretarial Work and Theory and Practice of Commerce

Best staff, Individual attention fee moderate, and payable by instalments

Send for Prospectus at Yusuf Buildings Churchgate street Fort, Bombay

You are invited to make thorough enquiry before joining

TUITION BY POST IS OUR SPECIALITY

ಶ್ರೀ ಕ್ಷೇತ್ರ ಗೋಕರ್ಣದಲ್ಲಿ

ಆಯುರ್ವೇದ ಸಂಗ್ರಹಾಲಯ.

ಶಾಸ್ತ್ರೋಕ್ತ ತಯಾರಿಸಿದ ಕುಪಿಕ್ವ ರಸಾಯನಗಳು.

೧. ಸಮೀರ ಪನ್ನಗ—ಇದು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು ಹೊಟ್ಟೆ ಉಬ್ಬೋಣ, ಹೊಟ್ಟೆಯೊಳಗಿನ ನಾನಾ ಪ್ರಕಾರದ ಪೀಡನೆ, ಸನ್ನಿಪಾತ ವಿಕಾರಗಳಲ್ಲಿ ಹಲುಬೋಣ, ಸೆಕ್ಕಂತೆ ಹಿಡಿಯುವಿಕೆ ಇಣ ಮುಂತಾದ ೫೦ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ
ತೊಲೆ ೧ಕ್ಕೆ ರೂ ೬ ೮-೦

೨. ಮಲ್ಲಸಿಂಧೂರ—ಮಹಾಶ್ವಾಸ, ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ಹಲುಬೋಣ, ಕಫಕ್ಷಯ, ಇಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು ದಮ್ಮು, ಕಂಪ, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ ೩-೪ ಗಳಿಗೆಯೊಳಗೆ ರೋಗಿಯು ವಾಸಿಯಾಗುತ್ತಾನೆ
ತೊಲೆ ೧ಕ್ಕೆ ರೂ ೬-೦ ೦

೩ ಸುವರ್ಣರಾಜ ವಂಗೇಶ್ವರ—ಉಪದಂಶದ ಜಂತುವಿಕಾರ ಪರಮಾ, ವಾತು ಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುವಷ್ಟ, ಸ್ವಪ್ನದೋಷ, ಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧಗಳ ಸಮಸ್ತ ವಿಕಾರಗಳನ್ನು ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನು ಕಾಂತಿಯನ್ನೂ ಕೊಡುತ್ತದೆ ಪ್ರಮೇಹಗಳ ಮೇಲೆ ಇದು ಗುಣಕಾರಿಯಾದ ಔಷಧವು ಬೇರೊಂದಿಲ್ಲ ಇದರಿಂದ ಏನೊಂದೂ ಉಪದ್ರವವಾಗುವದಿಲ್ಲ.
ತೊಲೆ ೧ಕ್ಕೆ ರೂ ೩-೦-೦

೪ ವ್ಯಾಧಿಹರಣ ರಸ—ಉಪದಂಶ (ಗರಮಿ ಯು) ಫಿರಂಗಿ ರೋಗ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಆಮವಾಯು, ವಾತರಕ್ತ, ಧಾತು ಶರೀರ ವಾತವಿಕಾರ ಪ್ರಾಯಶ್ಚಿತ್ತವಾಗಿ ಉಪದಂಶಗಳಿಗೆ ಮರುವಾಗಿ ಆಗುವ ದಮ್ಮು, ಕೆಮ್ಮು, ಸಿಕ್ಕಿ... ಇವುಗಳ ಮೇಲೆ ಇದು ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಇದೊಂದೇ ಇದ್ದು
ತೊಲೆ ೧ಕ್ಕೆ ರೂ ೨ ೦ ೦

೫ ಸೂತಶೇಖರ—ಸನ್ನಿಪಾತ, ಪ್ಲೇಗ, ಮೂರ್ಛೆ, ಹಲುಬುವ ವಿಕಾರ (ಭ್ರಮೆ) ಶ್ವಾಸ ಕಾಸ ಹಿಡಿಯುವದು, ಹೆಚ್ಚಿನ ಶೋಷ, ಅಪಚಿತ್ತ ಪಂಡು ವಾತ-ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವು ಸಂಗ್ರಹವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ
ತೊಲೆ ೧ಕ್ಕೆ ರೂ ೬-೮-೦

ಅಲ್ಲದೆ, ತರತರದ ಚೂರ್ಣ ಘೃತ, ಅವಲೇಹ, ಆಸವ, ಅರಿಷ್ಟ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ಏರ್ಪಾಟು ಮಾಡಿರುತ್ತೇವೆ

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದಲ್ಲಿ ಉತ್ತರದ ಬಗ್ಗೆ ಸ್ಟಾಂಪು ಜೋಡಿಸಿ ಈ ಕೆಳಗಿನ ಪತ್ತೆಗೆ ಬರೆಯತಕ್ಕದ್ದು

ಪತ್ತೆ — ಶ್ರೀ ಗಜಾನನ ಅಪ್ಪು ಭಟ್ಟ ವೇದೇಶ್ವರ,
ಆಯುರ್ವೇದಿಕ ವೈದ್ಯ,
ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ)

ಬಿಡಬೇಡಿರಿ ಬೇಗ! ಬಿಡಬೇಡಿರಿ ಬೇಗ!!

ನಮ್ಮಲ್ಲಿ

ಅತಿ ಮನೋಹರವಾದ

ತೀರ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯದ ಪೆಟ್ಟಿಗೆಗಳು, ಡ್ರೆಸ್ಸಿಂಗ ಪೆಟ್ಟಿಗೆಗಳೂ, ಆಫೀಸ ಟೇಬಲ್‌ಗಳೂ, ರೂಕಿಂಗ ಚೇರುಗಳೂ ಮುಂತಾದ ಯಾವತ್ತು ಕಟ್ಟಿಗೆ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ —

ದಿ ನೋರ್ಥಕೆನರಾ ಟ್ರೇಡಿಂಗ್ ಕಂಪನಿ.

ಶಾಂತಿ ಭವನ,

ಕಾರವಾರ

"ಸರಸ್ವತೀ"

ಇಡೀ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ಕೃಷ್ಟವಾದ ತಿಳಿಗನ್ನಡ ಮಾಸಪತ್ರಿಕೆ ಇದೊಂದೇ

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಓದತಕ್ಕ ವಿಷಯಗಳು ಮಾತ್ರ 40 ಪುಟಗಳವೆ ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಖಲೀಲಾ" ಎನ್ನುವ ಕಾದಂಬರಿಯೂ, 'ಶಹಾಜಹಾನ' ಎನ್ನುವ ನಾಟಕವೂ ಸಾಹಿತ್ಯಸರೋಜ-ಕನ್ಯಾಕೈಪಿಡಿ ಮುಂತಿನ ಸರಣಿಗಳು ಚರಿತಾವಳಿ-ಗೃಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ ಬಾಲಿಕೆಯರಿಗೂ ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುತ್ತವೆ ಕುಂದಾಪುರದ ಶ್ರೀ ವಾಗ್ದೇವಿ ಭವನದಲ್ಲಿ ಇದು ವರೆಗೆ ಪ್ರಕಟವಾಗಿರುವ ಇಂದಿರೆ ನಿರ್ಮಲೆ-ಸ್ನೇಹಲತೆ ಪ್ರಿಯಂವದೆ ಹಿಂದೂ ವಾರ್ಷಿಕ ... ಮೊದಲಾದ ಗ್ರಂಥಗಳೂ ಮುಂದ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು ಕರ್ನಾಟಕದಲ್ಲೆಲ್ಲ ಪ್ರಚಾರವಾಗಬೇಕೆಂದು ಪ್ರಕಟನೆಗೆ ಆವಶ್ಯಕವಾದ ಪತ್ರಿಕೆ ವಾರ್ಷಿಕ ಚಂದಾ ರೂ 3 0 0 ಮಾತ್ರ ವಿದ್ಯಾರ್ಥಿಗಳಿಗೂ ವಾಚನಶಾಲೆಗಳಿಗೂ ರೂ 2-0 0 ಮಾತ್ರ

ವಿಳಾಸ — "ಸರಸ್ವತೀ" ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ಸಿಟಿ

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ಸ್ವಾದವಿದ್ದು, ಸುವಾಸಿಕವಿರುತ್ತದೆ ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ ಹುಳ ಇವು ನಾಶವಾಗಿ ಹಲ್ಲುಗಳು ಬಳಿ ಶಕ್ತಿಯಾಗುತ್ತವೆ ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ತೊಳ್ಳಬೇಕು ೧ ಪುಡಿ ಕಿಂ ರೂ ೦ ೬, ೨೫ರ ಕಿಂ ರೂ ೦-೯ ೦, ೧೦೦ ಕಿಂ ರೂ ೧ ೦-೦, ೫೦೦ ಪುಡಿಗಳ ಕಿಂ ರೂ ೯ ೦ ೦, ೧೦೦೦ ೧೭ ೦ ೦ ಟ. ಪೋ. ಖರ್ಚು ವಗೈರೆ ಪ್ರತ್ಯೇಕ

ಸುಗಂಧಿ ನಶ್ಯ—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು ಇದರಿಂದ ಶೈತ್ಯ, ಥಂಡಿ, ಅರೆತಲೆನೋವು ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ ಒಮ್ಮೆ ಪರೀಕ್ಷಿಸಿ ಖಾತ್ರಿ ಮಾಡಿಕೊಳ್ಳಿರಿ ೧ ಡಬ್ಬಿ ಕಿಂ ರೂ ೦ ೪-೦, ೧ ಡಜನ್ ಡಬ್ಬಿ ಕಿಂ ರೂ ೨ ೦ ೦ ಪೋ ಖರ್ಚು ಬೇರೆ

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ ಕಿಮ್ಮತ್ತಿನ ವಿಷಯಕ್ಕೆ ಬರೆದ, ಪ್ರರವಕ್ ನೋಡಿ ಪತ್ರ ಆರ್ಡರ ಕೊಡಬಹುದು. ಇದರ ಹೊರತು ನಮ್ಮಲ್ಲಿಯ ಬಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ ಬೇರೆ ಕಡೆ ಸ್ವಾದವಿರುವ ತಂಬಾಕನ್ನು ಯೋಗ್ಯ ದರದಿಂದ ಕೊಂಡು ಖರೀದಿ ಮಾಡಿಕೊಳ್ಳುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು

ಪತ್ತೆ — ಎಸ್. ಬಿ. ಕದಂ,
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು ಪೋ ನಿಪ್ಪಾಣಿ, ಜಿ ಬೆಳಗಾಂವ

ಚವರಲೆಟ್
ಮೋಟಾರಕಾರ್ ಏಜನ್ಸಿ, ಕನಡಾ



ನಾವು ಹೊಸ ಚವರಲೆಟ್ ಮೋಟರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗ ... ಕೊಡುತ್ತೇವೆ ... ಮಾಡಿಕೊಳ್ಳಬೇಕು.

ಸೋಲಏಜಂಟ್— ಎಸ್. ಎಲ್. ಭಾಕೆಸ್ಸ ಮತ್ತು ಬ್ರದರ್ಸ, ಶಿರ್ಸಿ

ಕುಮಟಾ ಏಜಂಟ — ಜಿ. ಡಿ. ಮಾಲಗಿಕರ ಎಂಡ್ ಕೊ

ಬಿ. ಸಿ. ಸ್ಪೆ... ಟೈರ, ಡನ್‌ಲೋಪ್ ... ಹಾಗು ... ಸಾಮಗ್ರಿಗಳೂ ...

ಸೂಚನೆ:— ನಮ್ಮಲ್ಲಿ ... ಉತ್ತಮವಾಗಿದ್ದು ... ಕೊಡಲ್ಪಡುತ್ತದೆ ... ವರ್ತಮಾನ ಪತ್ರ ... ಮಾಡಿಕೊಳ್ಳಬೇಕು.

G. D. Malgikar & Co,
KUMTA

ಪ್ರಯಾಣಿಕರಿಗೆ
ವಿಶೇಷ ಅನುಕೂಲ

ಸೇವಿಸಿದ ಹೊತ್ತಿಗೆ ಮೋಟರ ವ್ಯವಸ್ಥೆ ... ಅದಿಗೆ, ... ಈ ಕೆಳಗಿನಂತೆ ಮೋಟಾರ ... ಗೋಕರ್ಣದಿಂದ ಕುಮಟಾ, ... ಗೋಕರ್ಣದಿಂದ ... ಟಿಪ್ಪು— ಟಿಕೇಟು ... ಪತ್ರವ್ಯವಹಾರ ಮಾಡಬೇಕು.

ಅನಂತ ... ಮೋಟರ ಏಜಂಟ
ಕುಮಟಾ (ಉತ್ತರ ಕನ್ನಡ)

S U. Narayanacharya & CO
Chaukamba, BENARES CITY.



ನಮ್ಮಲ್ಲಿ ... ಶಾಲು ... ರುದ್ರಾಕ್ಷಿ, ಕಸೂರಿ, ಲಿಂಗಗಳೂ ... ಸಿಗುತ್ತವೆ ... ಕೇಳುವವರಿಗೆ ಧರ್ಮವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ ಮಕ್ಕಳ ... ಚೌಕಂಬಾ, ಕಾಶೀಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಜೀ. ಯವರ
ಸುಗಂಧಿ ನಶ್ಯದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ... ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ... ಯೋಗ್ಯತಾಪತ್ರಗಳನ್ನು ಕೊಟ್ಟಿದ್ದಾರೆ ... ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ... ನೆಗಡಿ, ತಲೆಶೂಲೆ, ... ಕಣ್ಣುಗಳಲ್ಲಿ ... ವ್ಯಾಧಿಗಳು ಪರಿಹಾರವಾಗುವವಲ್ಲದೆ, ... ಈ ಸುಗಂಧ ನಶ್ಯದ ಪುಡಿಯಲ್ಲಿ ... ಅನೇಕ ... ಔಷಧವಾಗಿ ಉಪಯೋಗಿಸುತ್ತಾರೆ. ...

... ಡಜನ್ ... ರೂ ೨-೮-೦. ... ೦-೮-೦ ... ಮದರಾಸ



ಸರಕಾರದಿಂದ ಪೆಟಂಟ ಪಡೆದ
ಮ.ಲ್ಲಾರ ಕಪ್ಪಲಿ.

ತೋಟಗಳಿಗೆ ಬಹು ಅನುಕೂಲವಾಗಿರುವದು

ಇದು mild stee'ದ ಜಾತಿಯ ... ಮಾಡಲ್ಪಟ್ಟಿರುವದು ... ಕಪ್ಪಲಿ ... ರಚನೆಯುಳ್ಳ ... ಕೇಳಿರಿ.

ಹೆಚ್ಚಿನ ವಿವರಕ್ಕೆ ... ಬರೆಯಿರಿ

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ ಮಾಸಪತ್ರಿಕೆ.

ಸಂಪಾದಕ— ಶ್ರೀ ಬಾಲ ... ರಾಯರು, ... ವಾರ್ಷಿಕ ವರ್ಗಣಿ ರೂ ೧-೮-೦

ಕಿರ್ಲೋಸ್ಕರ ಬಂಧು ಲಿಮಿಟೆಡ್, { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಅಮೃತಾಂಜನ.



ಇದರ ಉಪಯೋಗದಿಂದ, ತಲೆನೋವು, ... ಇತ್ಯಾದಿ ವ್ಯಾಧಿಗಳ ಮೇಲೆ, ... ಇದರ ಉಪಯುಕ್ತತೆಯು ಸಹಜವಾಗಿ ... ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ... ಸಂಧಿವಾತ ... ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ... ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ... ವಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪ್ಪೋ. ಫೋರ್ಟ ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta

Reg. No. B 1270

iday June 28th, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೮.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಹೊರಗಿನವರಿಂದ
ರೂ. 3-0-0.
ವಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಪ್ರಾಕಾ ಪ್ರ್ಯಾಪಿಕ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-
೮ ಸಂಕ್ರ ಪ್ರತಿಸಾಲಿಗೆ 0-2-0.
ಜಾಹಿರಾತಿನ ಸಾಲು ಎಷ್ಟು ಜಾಗ ಹಿಡಿಯುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

स्वपतिहितकर्ता हेच्छता जाति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೨೮ ಮಾಹೆ ಜೂನ ಸನ್ ೧೯೨೬ ನೇ ಇಸವಿ.)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- पौंड रतलची किंमत २ रुपये;

रामबाण औषधें —

सर्दि घालविणारें,
खोकला घालविणारें,
छातीस साफ करणारें,
झोंप आणणारें,
शक्ति देणारें,
तरतरीतपणा आणणारें,

—— पिण्यास रुचिकर.

क्याटलाग मागवा,

पंडुफार्मास्युटिकलवर्क्स लिमिटेड,
मुंबई नं. १२

एजंट— मेसर्स पंडित आणि कंपनी,
तीर्थहळ्ळी.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. *B. A.*
Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.
ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭:



ಬರೇ ಒಂದು ತಿಂಗಳ ಬಗ್ಗೆ ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ ಅತ್ಯುತ್ತಮ ಚಾಲನೆ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತವೆ ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನು ಉತ್ಕೃಷ್ಟ ಲೇಸು ಪಟ್ಟೆಯ ಸಹಿತ ಉಚಿತವಾಗಿ ಕೊಡುತೇವೆ ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P R 603 P T Madra**

ಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ರಿಂದ ಸುವಾಸಿಕ ಕಸ್ತೂರಿ ಹಿಂಗು ೧೮ ತೊಲೆ ಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ ೫ ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿಕಾರಕ ಸ್ತು ಪೌಷ್ಟಿಕ, ಶಕ್ತಿವರ್ಧಕ ಕಲವಾ ೪೦ ತೊಲೆ ಡಬ್ಬಿ ೧ ಕ್ಕೆ ೧—೪—೦. ೧ ತೊಲೆಯ ಹಿಂಗಿ ಡಬ್ಬಿಗಳು ಡಜನ್ ೧ ಕ್ಕೆ —೫—೦. ಹಲ್ಲಿಗೆ ಹಚ್ಚುವ ಸುವಾಸಿಕ ಮುಸಕರಾಜ ತೈಲ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಹುಳದ ಪುಡಿ ತೊಲೆ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ನಾನಾ ತರದ ಜಾಂಬ ಊದಬತ್ತಿಗಳು ಯೋಗ್ಯ ದರಕ್ಕೆ ಸಿಗುವವು ಟಪಾಲ ಖರ್ಚು ಪ್ರತ್ಯೇಕ

ಕೆರೇಕರ ಕಾಬೂಲೀ ಹಿಂಗಿನ ದುಕಾನ

ಪರಪೇಟ ಬಜಾರ, ಕುಮುಟಾ.

ಅತ್ಯಲ್ಪವಿವೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

"ತಾರಾ" ಲೀವರ ರಿಜಿಸ್ಟರ್ಡ ಪೊಕೆಟ್ ವಾಚು ೧೮ ಕೆರೆಟ್ ರೋಲ್ಡ ಗೋಲ್ಡಿನದು. ಮುಚ್ಚಳಗಳ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಗಾರರು ಅಚ್ಚು ಹಾಕಿದಿರುವರು. ಈ ಗಡಿಯಾರ ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಿಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತೇವೆ ಇದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್‌ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫.

CAPTAIN WATCH CO, P. B 365, MADRAS

ಗೌರೀಹುಣ್ಣಿವೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ | ಜಯಕರ್ನಾಟಕ | ಮಾಸಪತ್ರಿಕೆ

ಸಂಪಾದಕ— ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ ಮಾಸಿಕ ಐತಿಹಾಸಿಕ ಚರಿತ್ರೆ ಆರ್ಥಿಕ ಸಾಹಿತ್ಯದ ವಿಷಯಗಳು ಬರುವವು. ಪ್ರಸಿದ್ಧ ಲೇಖಕರು, ಚಿತ್ರಕಾರರು ಕನ್ನಡದಲ್ಲಿ ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳು ಬರುತ್ತವೆ. ಮಾದರಿ ಪ್ರತಿ ಉಚಿತ ೩೦ ಪುಟಗಳು. ವರ್ಗಣಿ. ರೂ ೩-೮-೦

ಕಾರ್ಯನಿರ್ವಾಹಕ ಜಯಕರ್ನಾಟಕ ಧಾರವಾಡ

ರೋಗದಿಂದ ಸಡಲಬೇಡಿರಿ.

ನಮ್ಮಲ್ಲಿ ಜಂತ ಚೂರಣ, ಶೀತ ಜ್ವರ, ಎಲ್ಲ ತರದ ಜ್ವರ, ಗ್ರಹಣಿ, ಅತಿಸಾರ, ಕೆಮ್ಮು, ದಮ್ಮು, ಕಫ, ಅಗ್ನಿಮಾಂದ್ಯ ಮೊದಲಾದ ರೋಗಗಳು, ವಾತ, ಪಿತ್ತ, ಕಪಟ, ಪ್ರಮೇಹ, ಗರ್ಭಾಶಯದ ಎಲ್ಲ ರೋಗ, ಸ್ತ್ರೀಯರ ರೋಗ, ಬಾಲಗ್ರಹ, ಮತ್ತು ಎಲ್ಲ ರೋಗಗಳಿಗೆ ಗುಣ ಬರುವ ಔಷಧ, ಚೂರ್ಣ, ಗುಳಿಗೆ, ಆಂಗ್ಲ ಪೇಟೆಂಟ್ ಔಷಧಗಳು, ಸ್ವಲ್ಪ ದರದಲ್ಲಿ ಸಿಗುವವು

ಇದಲ್ಲದೆ ಎಲ್ಲ ತರದ ಸೀಸೆಗಳು, ಔಷಧಗಳ ತ್ವರಿತ ಸಾಮಾನ, ಶಿಲ್ಪ ಸಾಮಾನ, ಮೋಟಾರ ಸಾಮಾನು ಕಡಿಮೆ ದರದಲ್ಲಿ ಸಿಗುವವು. ಒಮ್ಮೆ ಬಂದು ನೋಡಿರಿ.

ಎಸ್ ಎಲ್ ಧಾಕಪ್ಪ ಮತ್ತು ಬ್ರದರ್.

ಶಿರಸಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರಸಿ- ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರಸಿ- ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ.

ಪ್ರಯಾಣಿಕರಿಗೆ ಅನುಕೂಲವಾಗುವಂತೆ ಎಲ್ಲ ಸ್ಟೇಶನುಗಳಲ್ಲೂ ಏಜಂಟರ ನೇಮಕ ಮಾಡಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ಕೇಳಬಹುದು

M. Manjappa

PROPRIETOR.

अगदीं फुकट.

वैद्यविद्या.

आरोग्यसंपत्ति आणि पूर्ण सुखाचा सरळ रस्ता दाखविणारे "वैद्यविद्या" नावाच्या मोठ्या आयुर्वेदीक पुस्तकाची नवीन आवृत्ति बाहेर पडली आहे. हे पुस्तक कीमत व पोष्ट खर्च घेतल्या शिवाय अगदी फुकट पाठविण्यात येते. तरी हे पुस्तक आजच मागवा.

प्रमेहावर रामबाण औषध.

मेहमर्दनचूर्ण.

हें चूर्ण फक्त तीन दिवस लागोपाठ घेतल्याने लघवीस होणारी आग, लघवी थांबून थांबून होणें व्याधि या औषधाच्या सेवनानें एकदम बरे होतात.

कि. १० तोळ्याच्या डब्यास रु. १.

राजवैद्य नारायणजी केशवजी, जामनगर (काठेवाड).

कुमटा एजन्ट— **माधव सांतप्पा शेणवी, बेलेकेरी.**

ರಾಗದ ಪೆಟ್ಟಿಗೆಗಳು.

ನಾಟಕ ಸಾಮಾನು:- ತಬಲೆ, ಡಕ್ಕೆ ವಗೈರೆ



೧. ಕೈಪೆಟ್ಟಿಗೆ ಸಿಂಗಲ ರೀಡ. ೩೫, ೩೦, ೪೦, ೫೫ ೬೦

೨. ,, ಡಬಲ ರೀಡ ೬೦, ೭೫, ೫೦, ೬೦, ೧೦೦.

೩. ಕಾಲುಪೆಟ್ಟಿಗೆ ,, ೭೫, ೬೫, ೭೫, ೧೦೦, ೧೨೫, ೧೫೦

೪. ತಬಲೆ (ತಾಮ್ರದ ಡಗ್ಗಾ ಸಹ) ಜೋಡಿ ೧೫, ೨೦

ಹಾರ್ಮೋನಿಯಂ ಗ್ರಾಮ ರೂ. ೧॥

ತಬಲೆ ಗ್ರಾಮ ರೂ ೧॥ ಆಣೆ.

ಮಾಹಿತಿ ಬಗ್ಗೆ ಕ್ಯಾಟಲಾಗು ಪ್ರತ್ಯೇಕ ದೊರೆಯುವದು.

ಗೋಪಾಳ ಸಖಾರಾಮ ಮತ್ತು ಕಂಪನಿ

ನಂ. ೨೮೮, ವಿಠ್ಠಲವಾಡಿ ಎದುರಿಗೆ,

ಕಾಳಬಾದೇವಿ ರೋಡ,

ಮುಂಬಯಿ

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು. ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕ ಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ರುಚಿಯಾಗಿಯೂ ಪುಷ್ಟಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ಮೂತ್ರಪಿಂಡ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು. ೬೦ ೭೦ ವರ್ಷದ ಮುದುಕರ ಕೂಡ ತರುಣರಂತೆ ಪ್ರವರ್ಧಮಾನರಾಗುವರು. ನಿಜವಾಗಿ ಒಂದೇ ಸಮಯದಲ್ಲಿ ಅನುಭವಕ್ಕೆ ಬರುವದು. ಜನನೇಂದ್ರಿಯದೊಳಗಿನ ಶಕ್ತಿಯು ಹೋದ ವ್ಯಕ್ತಿಗಳ ಪುರುಷತ್ವವು ಪುನಃ ಉದ್ದೀಪನವಾಗುವದು. ಮನುಷ್ಯಜೀವನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಯೌವನವು ತಡೆಯುವದು — ಬರಲಾರ ಹಾಗೂ ಕಾಸಿಂದ ದಣಿದಂಥ ಶರೀರವು ನಿರೋಗವಾಗುವದು. ಮೂರೇ ದಿವಸದಲ್ಲಿ ಗುಣ ಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಮೊದಲಾದ ರೋಗಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟವಾದಮೇಲೆ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುತದೆ. ವೃದ್ಧಿಯಲ್ಲಿ ಎಷ್ಟೋ ದಿವಸದ ಕಾಯಿಲೆ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಬಂಧೀ ರೋಗ ಬರುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ನಡಿಯುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇ ರೋಗವಿದ್ದರೆ ೪ ಬಾಟಲಿಯಿಂದ ಗುಣ ಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧| ರೂಪಾಯಿ ನಾಲ್ಕು ಬಾಟಲಿಯ ಕಿಮ್ಮತ್ತು ೪—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ತಮನ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲಖರ್ಚು ಬೇರೆ ಬೀಳುವದು ವಿ.ಪಿ. ಕಳಿಸಲು ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ ೫ ಬಾಟ್ಲಿಗೆ ೧೩—೦

ಮ್ಯಾನೇಜರ— ದ್ರಾಕ್ಷಾರ್ಕ ಮಧು ಆಫೀಸ. ಪೋ. ನಿಪ್ಪಾಣಿ ಜಿ. ಬೆಳಗಾಂವ

ಸೂತ್ರ ರಹಸ್ಯ.

ನೂಲಿನ ಮಹಾತ್ಮ್ಯ

(೨)

ಗು:— ನಮ್ಮ ದೇಶಕ್ಕೆ ಅರಿವೆ ಅಂಚಡಿ-ಎಲ್ಲೆಲ್ಲಿಂದ ಬರುತ್ತದೆ?

ಶಿ: — ಮೆಂಚೆಸ್ಟರದಿಂದ.

ಗು.— ಅಂದರೆ ಯಾವ ದೇಶದಿಂದ?

ಶಿ: ಇಂಗ್ಲಂಡದಿಂದ.

ಗು: - ಇಂಗ್ಲಂಡ ಒಂದೇ ದೇಶದಿಂದ ಮಾತ್ರ ಬರುತ್ತದೋ? ಬೇರೆ ಅನ್ಯ ದೇಶಗಳಿಂದ ಬರುತ್ತದೆ?

ಶಿ:— ಜಪಾನದಿಂದ ಸ್ವಲ್ಪ ಮತ್ತು ಬೇರೆ ದೇಶಗಳಿಂದ ಅಲ್ಪವಾಗಿ ಬರುತ್ತಿರಬಹುದು. ಆದರೆ ಬಹಳವಾಗಿ ಎಲ್ಲ ಅರಿವೆಯನ್ನು ಕಳುಹಿಸುವವರು ಮುಖ್ಯವಾಗಿ ಬ್ರಿಟಿಶರು.

ಗು: — ಎಲ್ಲ ಅರಿವೆ — ಪೂರ್ಣವಾಗಿ ನೂತು, ನೇದು ತಯಾರಿಸಿದ ಅರಿವೆ — ನಮಗೆ ಬೇಕಾದಷ್ಟೆಲ್ಲ — ಸಂಪೂರ್ಣವಾಗಿ ಪರದೇಶದಿಂದೇ ಬರುತ್ತದೋ?

ಶಿ:— ಅಹುದು.

ಗು:— ನಿಶ್ಚಯವಾಗಿ?

ಶಿ:— ನಿಶ್ಚಯವಾಗಿ.

ಗು: ನಾನಾ ತರದ ಸೆರಗುಗಳಿಂದಲೂ, ಅಂಚುಗಳಿಂದಲೂ, ಶೋಭಿಸುವ ಸೀರೆ ಮತ್ತು ಖಣ ಇವು ಹೆಂಗಸರಿಗೆ ಬೇಕಾದ ಅರಿವೆ ಮತ್ತು ಅದರಂತೆ ಕಚ್ಚೆ - ಅಂಚಿನ — ಧೋತರ, ಜರತಾರಿ ಶಲ್ಲೆ, ರುಮಾಲು ಮುಂತಾದ ಗಂಡಸರಿಗೆ ಬೇಕಾದ ಅರಿವೆ ಸಹ ಪರದೇಶದಿಂದ ನೇದು ಬರುತ್ತವೆಯೋ?

ಶಿ: ಇಲ್ಲ.

ಗು:— ಹಾಗಾದರೆ ಅವನ್ನು ಯಾರು ನೇಯುತ್ತಾರೆ?

ಶಿ: — ನಮ್ಮ ದೇಶದೊಳಗಿನ ನೇಕಾರರು.

ಗು.— ಅಂದ ಮೇಲೆ ಪರದೇಶದಿಂದ ಎಲ್ಲ ನೇದ ಅರಿವೆ ಬರುವದಿಲ್ಲ, ಏನಾಯಿತು.

ಶಿ.— ಅಹುದು.

ಗು. — ಹಾಗಾದರೆ, ಪರದೇಶದಲ್ಲೇ ನೂತ ನೂಲಿನಿಂದ ನೇದ ಅರಿವೆ ನಮ್ಮಲ್ಲಿಗೆ ಪರದೇಶದಿಂದ ಎಷ್ಟು ಪರಿಮಾಣದಲ್ಲಿ ಬರುತ್ತಿರಲಿಕ್ಕೆ ಸಾಕು? ಮತ್ತು ನಮ್ಮ ದೇಶ ನೇಕಾರರು ಎಷ್ಟು ಅರಿವೆಯನ್ನು ನೇಯುತ್ತಿರಲಿಕ್ಕೆ ಸಾಕು?

ಶಿ. — ನಾನೆಷ್ಟೆಂದು ಹೇಳಲಿ?

ಗು.— ಇಷ್ಟು ಹೆಚ್ಚು-ಕಡಿಮೆ ಅಂದಾಜನ್ನಾದರೂ ಹೇಳಲಾರೆಯಾ?

ಶಿ.— ಪರದೇಶದಿಂದ ನೇದು ಇಲ್ಲಿಗೆ ಬರುವ ಅರಿವೆ ಅಂಚಡಿ ಅರ್ಧ ಪರಿಮಾಣದಲ್ಲಿ ಮತ್ತು ಇಲ್ಲಿಯ ನೇಕಾರರು ನೇಯುವದು ಅರ್ಧ ಪರಿಮಾಣವೆಂದು ಅಂದಾಜು ಕಟ್ಟಿದರೆ, ಅದು ತಪ್ಪಾಗದೆಂದು ನಾನು ತಿಳಿಯುತ್ತೇನೆ.

ಗು. — ಅದು ಅರ್ಧ, ಇದು ಅರ್ಧ ಎಂತಲೇ ಹಿಡಿ. ಅರ್ಧ ಅರಿವೆಯನ್ನು ನೇಯುವಷ್ಟು ಅದರೂ ನೇಕಾರರು ಈ ದೇಶದಲ್ಲಿರುತ್ತಲ್ಲವೇ?

ಶಿ.— ನಿಜವಾಗಿ ಇದ್ದಾರೆ.

ಗು:— ಬಾಕಿ ಉಳಿದ ಅರ್ಧವನ್ನು ನಮ್ಮಲ್ಲಿಯ ನೇಕಾರರು ನೇಯಲಾರರೇ?

ಶಿ:— ಅವರಿಂದ ನೇದು ಸಾಗಿಸಲಿಕ್ಕೆ ನೇಯುತ್ತಿದ್ದಿಲ್ಲವೇ?

ಗು.— ಈ ನೇಕಾರರಿಗೆ ಬೇಕಷ್ಟು ನೇಯ್ಗೆಯ ಕೆಲಸ ಸಿಗುತ್ತದೋ ಹ್ಯಾಗೆ?

ಶಿ.— ಸಿಗುತ್ತಿರಬೇಕು.

ಗು.— ಖಂಡಿತವಾಗಿ ಸಿಗುತ್ತದೆಯೇ?

ಶಿ.— ಸಿಗುತ್ತಿರಬೇಕು.

ಗು.— ವಿಷಯ ಸಂದೇಹವಿಲ್ಲವಲ್ಲವೇ?

ಶಿ. — ಸಂಶಯವಿಲ್ಲವೆನ್ನಬಹುದು.

ಗು. — ಹಾಗಿದ್ದರೆ ನಮ್ಮಲ್ಲಿಯ ನೇಕಾರರು ಬೇಕಷ್ಟು ಕೆಲಸ-ಉದ್ಯೋಗವಿಲ್ಲದರಿಂದ ತಮ್ಮ ಕುಲಕಸಬಾದ ಮಗ್ಗಗಳನ್ನು ಬಿಟ್ಟುಕೊಟ್ಟು, ಕಟ್ಟಿಗೆ ಕಡಿಯುವ ಕೂಲಿಕಾರರೂ, ಹೊಲ ತಮ್ಮ ಹೋಗುವ ಒಕ್ಕಲಿಗರೂ ಆಗಿರುವದಾಗಿ ನೀನು ಕೇಳಿಲ್ಲವೇ? ಓದಿಲ್ಲವೇ?

ಶಿ.— ಅಹುದು, ಖರವಾಯಿತು.

ಗು. — ಈ ಸಾರವೇ, ಈ ಭಯಂಕರ ಸ್ಥಿತಿಯೇ, "ನಾವು ಹ್ಯಾಗೆ ಇದ್ದೆವು, ಈಗ ನಾವು ಹ್ಯಾಗೆ ಇದ್ದೇವೆ" ಎಂಬೀ ಪ್ರಶ್ನವೇ, ಎಲ್ಲ ತರದಿಂದ ನಮ್ಮ ನಾಶಕ್ಕೆ ಹೀನ ತೆಗೆ ಕಾರಣವಾಗಿರುತ್ತದೆ. ಈ ದುಷ್ಟ ಘಾತಕೀ ಮಂದಿ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ ನೀಳವಾದುದರಿಂದ ನಿಬಿಡವಾದ ಕೇಶ ರಾಶಿಯನ್ನು ಯಾವ ಹೆಣ್ಣು ತಾನೇ ಬಯಸುವದಿಲ್ಲ? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿ ಕೊಡತಕ್ಕ ಉಪಕರಣವಾದದ್ದೇ

ಕಾಮಿನಿಯಾ ಆಯಿಲ್ ರಜಿಸ್ಟರ್ಡ

ಈ ತಯಾರಿ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮಸ್ತಕದ ಬೇನೆಯು ಹಗುರಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚುವದರಿಂದ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅಲ್ಲದೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವು ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವ ... ಒಂದೇ ಒಂದು ಬಾರಿ 'ಕಾಮಿನಿಯಾ ಆಯಿಲ್' ಉಪಯೋಗಿಸಿ ... ಈ ಎಣ್ಣೆಯ ಶ್ರೇಷ್ಠತೆಯು ... ನಮಗೆ ... ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವು ... ಸಾವಿರಾರು ಗೃಹಸ್ಥರು ... ಪ್ರಶಂಸಾಪತ್ರಗಳು ದೊರೆತಿವೆ

ಕ್ರಯ :— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10 0 ವಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! ರಜಿಸ್ಟರ್ಡ.

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ... ಅತ್ಯುತ್ತಮವಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಲ್ಪಟ್ಟಿದೆ. ಇದರಲ್ಲಿ ಮದ್ಯಸಾರದ (ಅಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ... ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ... ಸ್ವರ್ಗೀಯವಾದದೆಂದು ... ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ... ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0 8 0; 1 ಡ್ರಾಮಿನ ಮಿಡಿಯಂ ಸೀಸೆ 1 ಕ್ಕೆ 0 12 0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0. ಅಂಚೆಯ ವೆಚ್ಚ ಬೇರೆ 0 4 6

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address: **The Anglo Indian Drug & Chemical Co**

16, Market, **BOMBAY 2**

ನಮ್ಮ ಬೆನ್ನನ್ನು ಇನ್ನೂ ಬಿಡಬಾರದೇ! ನಮ್ಮ ದುರ್ದೈವ! ದುರ್ದೈವ ನಮ್ಮ ದೇಶದ್ದು. ಇರಲಿ! ನಮಗೆ ಸಾಕಷ್ಟು ಅರಿವೆಯನ್ನು ನೇಯಲಿಕ್ಕೆ ಬೇಕಷ್ಟು ನೇಕಾರರು ನಮ್ಮ ದೇಶದಲ್ಲಿಲ್ಲ ಕಡೆಯಲ್ಲಿ ಇರುವರಲ್ಲವೇ?

ಶಿ.— ಇದ್ದಾರೆ; ಬೇಕಷ್ಟು ಇದ್ದಾರೆ.

ಗು.— ಅಂದಮೇಲೆ ನೇಕಾರರಿಗೆ ಬೇಕಷ್ಟು ಕೆಲಸ ಸಿಗದೆ ಅವರು ಕಷ್ಟ-ನಷ್ಟ ಬಡುತ್ತಿರುವರಲ್ಲವೇ?

ಶಿ.— ಹೌದು.

ಗು.— ಅರ್ಥಾತ ಅದರಿಂದ ಉದ್ಯೋಗ ಅವರಿಗೆ ಸಿಗುತ್ತದೆ; ಇದರ ಶ್ರೇಯಸ್ಸು ಭಾಗ್ಯ ಯಾರಿಗೆ?

ಶಿ.— ಸ್ತ್ರೀಯರಿಗೆ.

ಗು.— ಸ್ತ್ರೀಯರಿಗೆ ಯಾಕೆ ಇದರ ಶ್ರೇಯಸ್ಸು?

ಶಿ.— ಸ್ತ್ರೀಯರಿಗೆ ಅಲ್ಲದೆ ಮತ್ತ್ಯಾರಿಗದ್ಯಾ ಇದರ ಶ್ರೇಯಸ್ಸು?

ಗು.— ಹೌದಪ್ಪಾ, ಸ್ತ್ರೀಯರಿಗೆ. ನಿಜವಾಗಿ ಸ್ತ್ರೀಯರಿಗೆ ಇದರ ಭಾಗ್ಯ ಸಲ್ಲತಕ್ಕದ್ದು. ಅರ್ಥಾತದರೂ ಕೆಲಸ ನೇಕಾರರಿಗೆ ಸಿಗುತ್ತದೆ. ಅದು ಯಾವ ಕಾರಣದಿಂದ ಸಿಗುತ್ತದೆ?

ಶಿ.— ಕಾರಣವೇನೆಂದು ನಾನು ಹೇಳಲಾರೆನು. ತಾವೇ ದಯಮಾಡಿ ತಿಳಿಸಹೇಳಬೇಕು.

ಗು.— ಸ್ತ್ರೀಯರು ಏನನ್ನು ಉಡುತ್ತಾರೆ? ತೊಡುತ್ತಾರೆ?

ಶಿ.— ಸೀರೆ-ಕುಪ್ಪಸಗಳನ್ನು.

ಗು.— ಇವು ಪರದೇಶದಿಂದ ಬರುವದಿಲ್ಲವೇ?

ಶಿ.— ಇಲ್ಲ.

ಗು.— ಯಾಕೆ?

ಶಿ.— ಯಾಕೋ ಏನೋ?

ಗು.— ಇದರ ಕಾರಣ ಏನೆಂದರೆ ಪುರುಷರಂತೆ ಅವರ ರುಚಿ ಬದಲಿಸದೆ ಇದ್ದಂತೆ ಇದೆ.

ಶಿ.— ರುಚಿಯೆಂದರೇನು?

ಗು.— ರುಚಿಯೆಂದರೆ ನಮೂನೆ.

ಶಿ.—ಅಂದರೇನು?

ಗು.— ನಮೂನೆಯೆಂದರೆ, ಸೀರೆಗಳ ಮುಂತಾದವುಗಳ ಅಂಚೂ, ಸೆರಗೂ. ಸೆರಗೂ-ಅಂಚೂ ಗಿರಣಿಗಳಲ್ಲಿ ಆಗಲಿಕ್ಕಿಲ್ಲ, ಪರದೇಶದವರಿಂದ ಕೈಮಗ್ಗದ ಮೇಲೆ ಮಾಡಲು ಶಕ್ಯವಿಲ್ಲ. ಒಂದಾನು ಪಕ್ಷ ಪರದೇಶದವರು ಪ್ರಯತ್ನ ಮಾಡಿದರೂ, ಅಷ್ಟು ಅಂದ-ಚಂದದ ಸುಂದರವಾದ ಅಂಚೂ, ಸೆರಗುಗಳೂ ಅವರಿಂದ ಮಾಡಲು ಶಕ್ಯವಿಲ್ಲ. ಜರತಾರಿ ಮುಂತಾದ ಕಡೆಯಿಂದ ಇಲ್ಲಿಗೆ ಬರುವ ರಾಮ, ಕೃಷ್ಣ ಮುಂತಾದ ಚಿತ್ರಗಳಂತೆ ಅಂದಗೆಟ್ಟವುಗಳೇ ಆಗುತ್ತಿರುವವು. ರಾಜಾ ರವಿವರ್ಮರ ಚಿತ್ರಗಳ ಸೌಂದರ್ಯಕ್ಕೂ ಜರ್ಮನ ಚಿತ್ರಗಳ ಅಂದಕ್ಕೂ ಎಷ್ಟು ಅಂತರವೋ, ಅಷ್ಟೇ ಅಂತರವು. ಪರದೇಶದಿಂದ ಬರುವ ಅಂಚಿನ ಧೋತರ ಪಂಜೆಗಳಿಗೂ, ಇಲ್ಲೇ ನೇಯಲ್ಪಟ್ಟ ಧೋತರ-ಪಂಜೆಗಳಿಗೂ ಅದೆ. ಅದೇ ನಮೂನೆ; ಅದೇ ರುಚಿಯು. ಹೆಂಗಸರ ಮತ್ತು ಕೆಲವರುಗಳ ಗಂಡಸರ, ರುಚಿಯೂ ಕೆಟ್ಟಿರುವದಿಲ್ಲ. ಇದೇ ನಮ್ಮ ಭಾಗ್ಯ, ಭಾಗ್ಯ. ಇದರಿಂದಲೇ ನಮ್ಮ ನೇಕಾರರಿಗೆ ಅಷ್ಟಾದರೂ ಉದ್ಯೋಗ ಸಿಕ್ಕಿ ನೇಕಾರರ ಕುಲಕಸಬು ನೇಕಾರಿಕೆ ಜೀವಂತವಿದೆ.

ಶಿ.... ಅಯ್ಯೋ ಪಾಪ! ರುಚಿ—ಬದಲಾವಣೆಯಲ್ಲಿ ಇಷ್ಟು ಅನರ್ಥೋತ್ಪಾದಕ ಭಯಂಕರ ಶಕ್ತಿ ಇದ್ದೀತೆಂದು ನಮ್ಮ ಕಲ್ಪನೆ ಇದ್ದಿಲ್ಲ! ಸ್ವಪ್ನದಲ್ಲಿಯೂ ಇಂದಿಲ್ಲ!!

ಗು.... ರುಚಿ ಬದಲಾಯಿಸಲ್ಪಟ್ಟದ್ದರಿಂದ ಹ್ಯಾಗೆ ಗಂಡಾಂತರಗಳಿಗೊಳಗಾಗಬೇಕಾಗುತ್ತದೆಂಬುದನ್ನು ವಿವರಿಸಲಿಕ್ಕೆ ದೊಡ್ಡದೊಂದು ಗ್ರಂಥವನ್ನೇ ಬರೆಯಬೇಕಾದೀತು. ಮನಸಾಗಳ ರುಚಿ ಬದಲಾಯಿಸಲ್ಪಟ್ಟು ಟೀ, ಕಾಫಿ ಬರು ಮಾಡಿದವು. ಅದರಿಂದ ಟೀ, ಸಕ್ಕರೆ, ಬಿಸ್ಕೀಟು ಮುಂತಾದವುಗಳ ಬಗ್ಗೆ ಎಷ್ಟು ಕೋಟಿ ರೂಪಾಯಿಗಳು ಪರದೇಶಕ್ಕೆ ನಾವು ಬಗೆ ಕಳುಹಿಸಿಕೊಡುತ್ತೇವೆಂಬುದನ್ನು ಲಕ್ಷ್ಯಕ್ಕೆ ತರ್ರಿ. ಹೆಂಗಸರು ರುಚಿಯನ್ನು ಬದಲಾಯಿಸಿದ್ದರೆ ಮತ್ತೇನು ಕೇಳುವದಿತ್ತು? ಭಯಂಕರ ಅನರ್ಥವೇ ಒದಗಿಬರುತ್ತಿತ್ತು. ಅವರ ರುಚಿ ಬದಲಾಯಿಸಲಿಲ್ಲ ಇದು ನಮ್ಮ ದುರ್ದೈವದಲ್ಲಿ ಸುದೈವವೇ ಸರಿ! ಪರದೇಶಗಳಿಗೆ ಹೋಗಬಹುದಾಗಿದ್ದ ೧೦-೧೫ ಕೋಟಿ ರೂಪಾಯಿಗಳನ್ನು ಬರೀ ಹೆಂಗಸರು ತಮ್ಮ ರುಚಿ ಸ್ಥೈರ್ಯದಿಂದ ತಡೆದು ನಿಲ್ಲಿಸಿರುವರೆಂದು ನಾವು ಆನಂದದಿಂದ ಒಪ್ಪಿಕೊಳ್ಳುವ ಮಾತಾಗಿದ್ದು ಇದು ಸ್ತ್ರೀ ಸಮಾಜಕ್ಕೆ ಬಹಳೇ ಭೂಷಣವಾಗಿರುತ್ತದೆ. ನಿರ್ಮೆ ಮುಂತಾದ ಸಂಗತಿಗಳಲ್ಲಿ ಅವರ ವರ್ತನವು ಹ್ಯಾಗೂ ಇದ್ದರೂ, ಈ ವಿಷಯದಲ್ಲಿ ಅವರನ್ನು ಎಷ್ಟು ಹೊಗಳಿದರೂ, ಗೌರವಿಸಿದರೂ ಕಡಿಮೆಯೇ ಸರಿ.

ಶಿ... ಸ್ತ್ರೀ, ಸ್ತ್ರೀ, ಸ್ತುತ್ಯವು, ಸ್ತುತ್ಯವು ನಾವು ಸಹ, ನಮ್ಮ ಬದಲಾಯಿಸಿದ ರುಚಿಯನ್ನು, ಬಿಟ್ಟುಕೊಟ್ಟು, ಹಿರಿಯರಂತೆ ಅಂಚಿನ ಧೋತರ-ಪಂಜೆಯನ್ನು ಉಡತೊಡಗಿದರೆ, ೧೦-೧೫ ಕೋಟಿಯು ಉಳಿತಾಯವಾಗಿ, ತಮ್ಮ ಪರಂಪರಾಗತವಾದ ನೇಯುವ ಧಂದೆಯಿಂದ ಬಡಿಸಲ್ಪಟ್ಟ ಕೂಲಿಕಾರರನ್ನಾಗಿ ಮಾಡಲ್ಪಟ್ಟ, ಮತ್ತು ಇತ್ತಲಾಗಿ ಹೊಟ್ಟೆ ಹೊರಕೊಳ್ಳಲು ಸಹ ಅಸಮರ್ಥರಾಗಿದ್ದ, ಬಡ ದುರ್ದೈವಿ ನೇಕಾರ ಬಂಧುಗಳಿಗೆ ಹೊಟ್ಟೆತುಂಬ ಅನ್ನವಾದರೂ ಸಿಕ್ಕೀತು. ಮತ್ತು ಅವರ ಹೊಟ್ಟೆ ಹೊತ್ತ ಅನ್ನದಾನದ ಪುಣ್ಯ ಸಿಕ್ಕೀತು. ಹೊಟ್ಟೆಗಿಲ್ಲದವರಿಗೆ ಮಾಡಿದ ಅನ್ನದಾನವೇ ಸಾತ್ವಿಕವು ಪುಣ್ಯಪ್ರದವು.

ಗು.... ಪುಣ್ಯಪ್ರದವು ಪುಣ್ಯ ಸಿಕ್ಕೀತು. ಅನಿಷ್ಟಕ್ಕೆ? ೫೦ ಕೋಟಿಯ ಉಳಿತಾಯವಾದೀತು. ನಮ್ಮ ನಾಲಿಗೆ ಪುಣ್ಯವು ಬಂದೀತು. ಇದಕ್ಕೆ ನಿಜವಿದ್ದಾಗ್ಯೂ ನೂಲಿನ ಮಹತ್ವ ಇನ್ನೂ ವಿಶಿಷ್ಟವಾದದ್ದಿರುತ್ತದೆ. ನೇಕಾರರಿಗೆ ಉದ್ಯೋಗ ಸಿಕ್ಕುವದರಿಂದ ಕೆಲವರುಗಳಿಗೆ ಹಿತವಾದಾಗ್ಯೂ, ನಾವು ನೂತನದ ನಮ್ಮ ಸ್ವರಾಜ್ಯ ಸಾಧನೆಯು ಹಾದಿಯನ್ನು ನಾವು ಹಿಡಿದಂತೆ ಆಗಲಾರದು.

ಶಿ.... ಅದು ಹ್ಯಾಗನ್ನು?

ಗು.... ತಮ್ಮ ನಾವು ಬದಲಾಯಿಸಿದ ರುಚಿಯನ್ನು ಮತ್ತೆ ತಿರುಗಿ ಬದಲಾಯಿಸಿದರೆ, ನೇಕಾರರಿಗೆ ನೇಯಲಿಕ್ಕೆ ಸಿಕ್ಕಿ ಹೊಟ್ಟೆಗೆ ಸಿಕ್ಕೀತು. ಆದರೆ ನೇಕಾರರು ನೂಲನ್ನು ಎಲ್ಲಿಂದ ತರಬೇಕು?

ಶಿ.... ನೂಲನ್ನು ಪರದೇಶದಿಂದ ತಂದರೇನಾಯಿತು?

ಗು.... ಸಾಕು! ಇಷ್ಟೇ ಸಾಕು!! ಪರದೇಶದವರ ನೂಲು ಬಂದನ್ನೇ ತೆಗೆದುಕೊಂಡರೆ ಸಾಕು!!! ಮಾರಾಟಗಾರರು ಹೇಳುವದರ ಮರ್ಮವು ಇಲ್ಲೇ ಅದೆ!!! ನಮ್ಮ ನನ್ನ, ನಮ್ಮ ದೇಶವನ್ನೂ ಈ ಚಿಕ್ಕದಾದ ಜನುಗಾಗಿ ಕಾಡಿಸುವ ನೂಲೇ ಹೆಡಮುರಿಗೆ ಬಿಗಿದು ಕಟ್ಟಿ ಕೆಡವಿರುವದು. ನಮ್ಮ ಸ್ವಾತಂತ್ರ್ಯನಾಶಕ್ಕೂ ಪಾರತಂತ್ರ್ಯಕ್ಕೂ, ಪೂರ್ಣವಾಗಿಂದಲೂ ಅನ್ನಿಸಬಹುದು, ಈ ಸೂತ್ರವೇ ಕಾರಣವಾಗಿರುವದು. ಎಷ್ಟು ದಿವಸಗಳ ವರೆಗೆ ನಾವು ಈ ಪರದೇಶ ನೂಲನ್ನು ತೆಗೆದುಕೊಳ್ಳುವೆವೋ, ಅಷ್ಟು ಕಾಲದ ವರೆಗೆ ನಾವು ಸ್ವತಂತ್ರರೆಂದಿಗೂ ಆಗಲಾರೆವು. ಪಾರತಂತ್ರ್ಯದಾಸ್ಯದಲ್ಲಿಯೇ ಈ ನೂಲಿನಿಂದ ಕಟ್ಟಲ್ಪಟ್ಟು ನಾವು ಕೊಳೆಸಲ್ಪಡುವೆವು. ಇದನ್ನೇ ನಿಮಗೆ ತಿಳಿಸಿ ಹೇಳುವದೂ, ನೀವು ತಿಳಕೊಳ್ಳುವದೂ, ಅತಿ ಮಹತ್ವದ ಮುಖ್ಯವಾದ ಸಂಗತಿಯಾಗಿದೆ. ಈ ಪರದೇಶ ನೂಲು, ನೂಲು-ಅರಿವೆ-ಅಂಚಡಿ—ಇತ್ಯಾದಿಗಳೇ ನಮ್ಮ ಪಾರತಂತ್ರ್ಯವನ್ನು ಸ್ಥಿರಗೊಳಿಸುತ್ತಿವೆ. ಇದನ್ನು ನಾವು ಸರ್ವ ಕಾಲದಲ್ಲಿ ಎಲ್ಲರೂ ನೆನಪಿನಲ್ಲಿಟ್ಟುಕೊಂಡು, ಮರೆಯದೆ, ಅದಕ್ಕೆ ತಕ್ಕ ಉಪಾಯವನ್ನು ಯೋಜನೆ ಮಾಡುವದು ಸದ್ಯಕ್ಕೆ ಅತ್ಯಗತ್ಯವಾಗಿದೆ. ಇರಲಿ! ರುಚಿ ಬದಲಾವಣೆಯಿಂದ ನಮ್ಮ ದೇಶಕ್ಕೆ ಎಷ್ಟು ಭಯಂಕರ ಹಾನಿ ತಟ್ಟಿ ಅದೆ! ಇದು ನಿಮ್ಮ ಲಕ್ಷ್ಯಕ್ಕೆ ಬಂದಿತಲ್ಲ?

ಶಿ.... ಅಹುದು, ಪೂರ್ಣವಾಗಿ ರುಚಿ ಬದಲಾಯಿಸದೇ ಇದ್ದದರಿಂದ ಕೆಲ ಮಟ್ಟಿಗೆ ಅವರೂ ನೇಕಾರರಿಗೆ ಹೊಟ್ಟೆಗೆ ಸಿಗುತ್ತಿಗೆ; ಇದು ಲಕ್ಷ್ಯಕ್ಕೆ ಬಂತು. ಮತ್ತು ನಮ್ಮ ರುಚಿಗೆ ಸರಿಯಾಗಿ ಬೇಕಾದ ಅರಿವೆ-ಅಂಚಡಿಗಳು ನಮ್ಮ ನೇಕಾರರ ವಿನಹಾ ಬೇರೆಯವರಿಗೆ ನೇಯಬಾರುವದಿಲ್ಲ; ನಮ್ಮ ದೇಶ ನೇಕಾರರೇ ನೇಡ ಅರಿವೆಯನ್ನೇ ನಾವು ಉಪಯೋಗಿಸುವದರಿಂದ ಮತ್ತಿಷ್ಟು ನಮ್ಮ ಹಿತವಾಗುವದು. ಇದು ಸಹ ಲಕ್ಷ್ಯಕ್ಕೆ ಬಂತು.

ಗು.... ಲಕ್ಷದಲ್ಲಿ ಉಳಿದೀತಲ್ಲ?

ಶಿ.... ಉಳಿಯುವದು.

ಗು.... ನಮಗೆ ಮರೆಯುವ ರೋಗ ಹತ್ತಿ ಅದೆ; ಅಂತಲೇ, ನೆನಪು ತಿರಿಗಿ ಮಾಡಬೇಕಾಯಿತು.

ಶಿ.... ಇಲ್ಲ, ಎಂದೆಂದಿಗೂ ಮರೆಯುವದಿಲ್ಲ.

ಗು.... ಇರಲಿ! ದೇಶ ನೇಕಾರರಿಂದ ನೇಯಲ್ಪಡುವ ಅರಿವೆಯ ಬಗ್ಗೆ ಬೇಕಾದ ನೂಲು, ಪರದೇಶದಲ್ಲೇ ನೂತು ನೇದು ತಯಾರಾದ ಅರಿವೆ-ಅಂಚಡಿ ಪರದೇಶದಿಂದ ನಮ್ಮ ದೇಶಕ್ಕೆ ಎಷ್ಟು ಬೆಲೆಯವು ಬರುತ್ತವೆ?

ಶಿ.... ನಿಶ್ಚಿತವಾಗಿ ಇಂತಿಷ್ಟೆಂದು ನಾನು ಹೇಳಲಾರೆನು. ಆದಾಗ್ಯೂ ೬೫-೭೦ ಕೋಟಿ ರೂಪಾಯಿಯ ಅರಿವೆ-ಅಂಚಡಿ ಮುಂತಾದ ಜವಳಿ ಮತ್ತು ನೂಲು ಕೂಡಿ ಬರುತ್ತಾವೆಂದು ಹೇಳುತ್ತಾರೆ.

ಗು.... ಅದಿರಲಿ! ಎಷ್ಟೆ ಇಲ್ಲ, ಅರಿವೆತ್ತರು-ಅರಿವೆತ್ತೇ ಕೋಟಿಯ ನೂಲಿನ, ನೂಲಿನಿಂದ ತಯಾರಾದ ಜವಳಿ ಬರುತ್ತದೆಂದು ಹಿಡಿಯೂಣ. ನೀವು ತರಿಸ ' ಈ ಅರವತ್ತು ಕೋಟಿಯ ಜವಳಿಗೆ ನೀವೇನಾದರೂ ಕೊಡಬೇಕಾಗುತ್ತದೋ? ಪುಕ್ಕಟೆಯಾಗಿ ಬರುತ್ತದೆ?

ಶಿ.... ಇದೆಂಥ ಪ್ರಶ್ನೆ! ಹಣ ಕೊಡದವನಿಗೆ ಪುಕ್ಕಟೆಯಾಗಿ ಯಾರೂ ಕೊಟ್ಟಾರೇ!!

ಗು.... ಹಾಗಾದರೆ ಜವಳಿಯ ಬದಲಾಗಿ ಅವರಿಗೆ ನೀವು ಏನೇನು ಕೊಡುತ್ತೀರಿ?

ಶಿ.... ನಾವು ರೂಪಾಯಿಗಳನ್ನು ಕೊಡುತ್ತೇವೆ.

ಗು.... ನಿಮ್ಮ ದೇಶದ ರೂಪಾಯಿಗಳು ಪರದೇಶದಲ್ಲಿ ನಡೆಯುತ್ತವೆಯೋ?

ಶಿ.... ನಡಿಯುವದಿಲ್ಲ. ಅದು ನಡಿಯದಿದ್ದರೆ, ಪವನು ಕೊಡುತ್ತಿರಲಿಕ್ಕೆ ಸಾಕು; ಪುಕ್ಕಟೆಯಾಗಿ ಸಿಗುವದಿಲ್ಲ.

ಗು.... ಹಿಂದುಸ್ಥಾನದಲ್ಲಿ ಪವನು, ಅಲ್ಲದೆ ಬಂಗಾರದ ನಾಣ್ಯ ಮುಖ್ಯವಲ್ಲ, ಇದು ನಿಮಗೆ ಗೊತ್ತಿದೆ; ಅಲ್ಲವೇ?

ಶಿ.... ಹೌದು, ಆದರೂ, ಪವನು ನಡಿಯುತ್ತಿವೆಯಲ್ಲ!

ಗು.... ಪ್ರತಿ ವರ್ಷ ೬೦ ಕೋಟಿಯ ಪವನುಗಳನ್ನು ಜವಳಿಯ ಬಗ್ಗೆ ಕೊಡಲಿಕ್ಕೆ ಛಾಪಿಸಿದ ಪವನುಗಳು ಬೇಕಲ್ಲ? ಅಷ್ಟು ಪವನುಗಳು ಛಾಪಿಸಿಸಿದ್ದು ಇಲ್ಲ! ಛಾಪಿಸುವದೂ ಇಲ್ಲ!!

ಶಿ.... ಪವನುಗಳಿಲ್ಲದಿದ್ದರೆ, ಬಂಗಾರ ಕೊಡುತ್ತಾರೆ.

ಗು.... ಅಯ್ಯೋ! ಅಪ್ಪಾ!! ಬಂಗಾರವೆಲ್ಲಿ ನಮ್ಮ ದೇಶ ಬಿಟ್ಟು ನಡೆಯಿತು ನೋಡಿ ಅದೆ!

ಶಿ.... ರೂಪಾಯಿಗಳು ನಡಿಯುವದಿಲ್ಲ; ಪವನುಗಳು ಛಾಪಿಸಲಿಲ್ಲ; ಬಂಗಾರ - ಮೊದಲೇ ಏಳು ಸಮುದ್ರ ದಾಟಿ ಅದೆ! ಅರಿವೆಯಂತೂ ಬರುತ್ತಲೇ ಇದೆ! ಏನಾದರೂ ಕೊಡದಿದ್ದರೆ ಅದು ಹ್ಯಾಗೆ ಬಂದೀತು! ಹಾಗಾದರೆ ನಾವೇನು ಕೊಡುತ್ತೇವೆ?

ಗು.... ನಾವೇನಾದರೂ ಕೊಡುತ್ತೇವೆ; ಕೊಡಬೇಕಾಗುತ್ತದೆ. ಅದು ಏನಿರಲಿಕ್ಕೆ ಸಾಕು?

ಶಿ.... ಇದೊಂದು ಗೂಢ ಪ್ರಶ್ನೆಯೇ, ಸರಿ! ಇದನ್ನು ನಾನು ಬಿಡಿಸಲಾರೆ.

ಗು.... ಪರದೇಶಗಳಿಗೇನೇನು ವ್ಯಾಪಾರ ನಡಿಯುತ್ತದೆ, ಅದು ನಾಣ್ಯಗಳನ್ನು ಕೊಟ್ಟು ಎಂದೂ ಯಾವ ದೇಶದಲ್ಲೂ ನಡಿಯುವದಿಲ್ಲ. ಜಿನಸಿಗೆ ಬದಲಾಗಿ ಜಿನಸು ಕೊಡಬೇಕಾಗುತ್ತದೆ. ಅಂದ ಮೇಲೆ ನಾವು ಯಾವ್ಯಾವ ಜಿನಸುಗಳನ್ನು ಪರದೇಶದವರಿಗೆ ಕೊಡುತ್ತೇವೆ; ಅಲ್ಲದೆ ಕಳಿಸುತ್ತೇವೆ. ಇದನ್ನು ಸ್ಮರಿಸಿ ನೋಡು

ಶಿ.... ನಾವು ಕೊಡುವ, ಕಳುಹಿಸುವ ಜಿನಸುಗಳೆಂದರೆ. ಅಕ್ಕಿ, ಗೋದಿ, ಹರಳು, ಎಳ್ಳು, ಚರ್ಮ ಮುಂತಾದವುಗಳು.

ಗು.... ಅರಿವೆಯನ್ನು ತರುವದಕ್ಕಾಗಿ, ಅಕ್ಕಿ, ಗೋದಿ, ಹರಳೆ, ಎಳ್ಳು, ಕಾಸಬಿ ಮುಂತಾದ್ದನ್ನು ಕೊಡುತ್ತೇವೆ ಅಲ್ಲವೇ! ಹುಟ್ಟಿ ತರದೋಗಿ ಹೊಟ್ಟೆಗೂ ಕಳಕೊಂಡೆ

ವಲ್ಲ!! ಹುಟ್ಟೆಯೂ ಇಲ್ಲ; ಹೊಟ್ಟೆಯೂ ಇಲ್ಲ!!! ಹಿಡಿದದ್ದೂ ಹೋಯಿತು; ಮುಟ್ಟಿದ್ದೂ ಹೋಯಿತು! ಎರಡೂ ಹೋಯಿತು!! ಇಚ್ಛೆಯೂ ಇಲ್ಲ; ಸುಖವೂ ಇಲ್ಲ!!!

ಶಿ... ಅರೇರೇ! ಅಯ್ಯೋ ಪಾಪ!! ಅಂತಲೇ, ಒಂದು ವರುಷವಾದರೂ ಬರಗಾಲ ತಪ್ಪಿಲ್ಲ. ಎಷ್ಟು ಕಷ್ಟಪಟ್ಟರೂ ಹೊಟ್ಟೆಗೆ ಸಾಲದು, ಬಟ್ಟೆಗೆ ಸಾಲದು.

ಗು.... ಇಷ್ಟೇ ಅಲ್ಲ, ಪಾರತಂತ್ರ್ಯಕ್ಕೂ, ಪಾರತಂತ್ರ್ಯದೊಳಗೆ ಇನ್ನೂ ಬಿಗಿಯಾಗುತ್ತ ಹೋಗಲಿಕ್ಕೂ ಈ ಪರದೇಶೀ ಅರಿವೆ ನೂಲುಗಳೇ ಕಾರಣವಾಗಿವೆ!!!

ಶಿ... ಅದು ಹ್ಯಾಗಯ್ಯಾ?

ಗು... ಅದೇ ಮುಖ್ಯ ಪ್ರಶ್ನೆಯು; ಅದನ್ನೇ ವಿವರಿಸುವೆನು.

ಶಿ... ಪರದೇಶದ ಅರಿವೆಯೇ ನಮ್ಮ ಪಾರತಂತ್ರ್ಯಕ್ಕೆ ಕಾರಣವಾಗಿದೆಯೇ?

ಗು... ಹೌದು, ಹೌದು, ನಮ್ಮ ಅಜ್ಞಾನ, ನಮ್ಮ ಮೂರ್ಖತನ, ನಮ್ಮ ಸ್ವಾಭಿಮಾನಶೂನ್ಯತೆ, ನಮ್ಮ ಮತಾಂಧ ಪ್ರವೃತ್ತಿ ಕಾರಣಗಳಿದ್ದರೂ, ಈ ಪರದೇಶಿ ಅರಿವೆಯೇ; ನೂಲೇ ಮುಖ್ಯವಾಗಿ, ಬಹು ಅಂಶದಿಂದ ಕಾರಣವಾಗಿದೆ; ಎಂತೆಂದರೆ..."ನೂಲೇ, ದೇಶೋಪಕಾರವೆಂದು ಸಾರಿರಿ; ದೇವಕಾರ್ಯವೆಂದು ಸಾರಿರಿ; ಧರ್ಮಕಾರ್ಯವೆಂದು ಸಾರಿರಿ; ಬರಗಾಲ ನಿವಾರಣೆಯ ಸಾಧನವೆಂದು ಸಾರಿರಿ. ಬಡ ದೇಶಬಾಂಧವರ ಮರಣ, ಅಕಾಲ ಮರಣವನ್ನು ತಪ್ಪಿಸುವ ಸಾಧನವೆಂದು ಸಾರಿರಿ; ಸ್ವಾತಂತ್ರ್ಯ ಸಿದ್ಧಿಗೋಪಾಯವೆಂದಾದರೂ ಸಾರಿರಿ, ಇತರರಿಗೆ ಅನ್ನದಾನ ಮಾಡಿದ ಪುಣ್ಯ ದೊರಕುವದೆಂದಾದರೂ ಸಾರಿರಿ." ಎಂದು ಮಹಾತ್ಮರು ತಿರುಗಿ, ಸಾರಿ ಸಾರಿ, ಪದೇ ಪದೇ ಹಗಲಿರುಳು ಸಕಾಲ-ಅಕಾಲವೆಂದು ನೋಡದೆ ಸಾರುತ್ತಿರುವರು, ಹೇಳುತ್ತಿರುವರು.

ಶಿ... ಇವುಗಳನ್ನೆಲ್ಲಾ ಸಾಧಿಸುವಷ್ಟು, ಹಾಗಾದರೆ ಈ ನೂಲಿನಲ್ಲಿ ಅಷ್ಟೇನು ಮಹತ್ವವಿದೆ?

ಗು... ಪರದೇಶೀ ಗಿರಣಿಗಳಿಂದಲೂ ಈ ನೂಲನ್ನು ತೆಗೆಯುವ ಬಗ್ಗೆ ಇದ್ದಾವೆ. ರೈಲಗಾಡಿ ಕಬ್ಬಿಣದ ಕಂಬಿಗಳ ಮೇಲೆ ನಡೆದಿರುವದಿಲ್ಲ! ನಮ್ಮ ಧೋತರ, ಸೀರೆಯ ಕಂಬಿಗಳ ಮೇಲೆ, ಪರದೇಶಿ ನೂಲಿನ ಕಂಬಿಗಳ ಮೇಲೆ ನಡೆಯುತ್ತದೆ. ಈ ನೂಲಿನ ಆಧಾರದಮೇಲೆ ನಡೆಸಲ್ಪಡುತ್ತವೆ!!!

ಶಿ... ನೂಲಿನ ಆಧಾರದಮೇಲೆ ರೈಲಗಾಡಿ ನಡೆದಿರುವದೇ? ಲೋಹ-ಕಂಬಿಗಳು ಬೇಡವೇ?

ಗು.. ಬೇಡ, ಬೇಡ, ಈ ನೂಲೇ ಆಧಾರವನ್ನು ಕೊಡುತ್ತದೆ. ರೈಲು ಅಂತ ಯಾಕೆ! ಪರದೇಶಿ ಆಗಬೋಟು, ಪರಕೀಯರ ಅಜಸ್ರ ಕಾರಖಾನೆಗಳು, ಇಪ್ಪತ್ತೆಯ ಸೇನೆ, ಆಗಬೋಟು—ರೈಲುಗಳಿಗೆ ಬೇಕಾದ ಇಂಜಿನು ಮಾಡುವ ಮತ್ತು ತೋಪುಗಳನ್ನು ಮಾಡುವ ಕಾರಖಾನೆ ಮುಂತಾದ ಪರದೇಶದವರ ಅನೇಕ ಕಾರಖಾನೆಗಳು, ಈ ನೂಲಿನ ಆಧಾರದ ಮೂಲಕವೇ ನಡೆದಿವೆ! ಈ ನೂಲಿನ ಆಧಾರ ತಪ್ಪಿತೆಂದರೆ, ಅವೆಲ್ಲಾ ನಿರಾಧಾರವಾಗಿ ತಟಸ್ಥವಾಗಿ ನಿಂತು ಹೋಗುವವು!!

ಶಿ.... ಅದು ಹ್ಯಾಗೆ? ನನಗೆ ಅಂತೂ ಇದೊಂದು ಕಲ್ಪಿತ ಕಾದಂಬರಿ ಕಥೆಯಂತೆ ತೋರುತ್ತದೆ!

ಗು.— ಅಲ್ಲಪ್ಪಾ, ಚನ್ನಾಗಿ ಲಕ್ಷಕೊಟ್ಟು ಕೇಳಿರಿ; ಅಂದರೆ ಅದು ಕಲ್ಪಿತ ಕಟ್ಟುಕಥೆಯಲ್ಲ, ನಮ್ಮೆದುರಿಗೆ ಕಣ್ಣೆದುರಿಗೆ ನಡೆದಿರುವ ಸಂಗತಿಯಾಗಿದೆ. ಸಾಕ್ಷಿ ದಿವ್ಯದೃಷ್ಟಿಯಿಂದ ನೋಡಿದರೆ ಮಾತ್ರ, ನಮ್ಮೆದುರಿಗೆ ನಿಚ್ಚಳವಾಗಿ ಹೊಳೆಯುವದು. ಕಣ್ಣು ತೆರೆದು ನೋಡಿದರೆ ಎಲ್ಲೋ ಕಾಣುವದು! ನೋಡುವವರೇ ಇಲ್ಲ!' ಆಲಸ್ಯಗೇಡಿಗಳು. ತಿಳಿಗೇಡಿಗಳು ಕಣ್ಣುಬಿಟ್ಟು ನೋಡುವದುಂಟೇ? ಅಷ್ಟನ್ನು ತಿಳಿಸಿಕೊಳ್ಳುವರು! ಹೋಗಿ ನಿವಾರಿಸಿಕೊಳ್ಳುವ ಬುದ್ಧಿ ಇಲ್ಲ !! ಅಜ್ಞಾನ !!!

ಅಪೂರ್ಣ

ಆಹಾರ ನಿಯಮಗಳು.

ಭೋಜನನಿಯಮ.—ಮುಂಜಾನೆ ಮೇಲೆ ಸಮಾಧಾನವುಳ್ಳವನಾಗಿ ಸುಖವಾಗಿ ಕುಳಿತು ಅನ್ನದ ಮೇಲೆಯೇ ಮನಸಿಟ್ಟು ಹಸಿವೆಯಾಗಿದ್ದರೆ ಊಟದ ಕಾಲದಲ್ಲಿ ತನ್ನ ದೇಹಕ್ಕೆ ಹಿತವಾದ, ಲಘುವಾದ, ಸ್ನಿಗ್ಧ (ಜಿಡ್ಡುಳ್ಳ) ದ್ರವಯುಕ್ತವಾದ ಬಿಸಿಯಾದ ಆಹಾರವನ್ನು, ಶಾಸ್ತ್ರಮಾರ್ಗವನ್ನು ಅರಿತವನಾಗಿ ಪ್ರಮಾಣಕ್ಕೆ ಮೀರದೆ ಊಟಮಾಡಬೇಕು.

ಪ್ರಮಾಣ:-

ಶುಚಿರ್ಜ್ಯೇಷ್ಠಸ್ತ್ವಮಾಸೀನಃ ಸಮದೇಹೋsನ್ನತತ್ಪರಃ |
ಕಾಲೇ ಸಾತ್ಮ್ಯಂ ಲಘು ಸ್ನಿಗ್ಧಂ ಕ್ಷಿಪ್ರಮುಷ್ಣಂ ದ್ರವೋತ್ತರಂ ||
ಬುಭುಕ್ಷಿತೋsನ್ನಮಶ್ನೀಯಾತ್ ಮಾತ್ರಾವದ್ವಿದಿತಾಗಮಃ |

ಎಲ್ಲಾ ಕಾರಣಗಳಿಂದಲೂ ಮೇಲೆ ಹೇಳಿದ ಪ್ರಮಾಣ ತಪ್ಪಿಹೋಗಿರೋಣವೇ ಮೊದಲಾದ ದೋಷಗಳು ಸಂಭವಿಸದಂತೆ ಇರುವ ಚೆನ್ನಾಗಿ ಪಾಕವಾಗಿರುವ, ಆಯಾಯ ಪದಾರ್ಥಗಳ ಗುಣಗಳಿಂದ ಕೂಡಿರುವ ಆಹಾರವನ್ನು ಹಗಲು-ರಾತ್ರಿಗಳಲ್ಲಿ ಕಾಲದೇಶಾದಿಗಳನ್ನು ವಿಚಾರ ಮಾಡಿ ಎರಡು ವೇಳೆ ಊಟಮಾಡಬೇಕು.

ತಸ್ಮಾತ್ ಸುಸಂಸ್ಕೃತಂ ಯುಕ್ತ್ಯಾ ದೋಷೈರಷ್ಟಾಭಿರ್ವರ್ಜಿತಂ |
ಯಥೋಕ್ತಗುಣಸಂಪನ್ನಮುಪಸೇವೇತ ಭೋಜನಂ ||
ವಿಭಜ್ಯ ಕಾಲದೇಶಾದೀನ್ ಕಾಲಯೋರುಭಯೋರಪಿ |

ರಾತ್ರಿಭೋಜನ ನಿಯಮ

ರಾತ್ರಿ ಮೊದಲನೇ ಯಾಮದಲ್ಲಿ ಊಟಮಾಡಬೇಕು. ಮಧ್ಯಾಹ್ನಕ್ಕಿಂತಲೂ ರಾತ್ರಿಯ ಊಟವು ಕಮ್ಮಿ ಪ್ರಮಾಣದಲ್ಲಿಯೇ ಇರಬೇಕು. ಸುಲಭವಾಗಿ ಜೀರ್ಣವಾಗತಕ್ಕ ಪದಾರ್ಥಗಳನ್ನು ತಿನಬೇಕು.

ಪ್ರಮಾಣ:—

ರಾತ್ರೌ ಚ ಭೋಜನಂ ಕುರ್ಯಾತ್ ಪ್ರಥಮ ಪ್ರಹರಾಂತರೇ |
ಕಿಂಚಿದೂನಂ ಸಮಶ್ನೀಯಾತ್ ದುರ್ಜರಂ ತತ್ರ ವರ್ಜಯೇತ್ ||

ಹಗಲು ಊಟದ ನಿಯಮ

ಹಗಲು ಮೊದಲನೇ ಯಾಮದೊಳಗೆ ಊಟಮಾಡಬಾರದು. ಅವರೆ ಎರಡನೇ ಯಾಮವನ್ನು ಮೀರಿ ಊಟಮಾಡಬಾರದು. ಮೊದಲನೇ ಯಾಮದಲ್ಲಿ ರಸವು ಉತ್ಪತ್ತಿಯಾಗುವದು. ಎರಡು ಯಾಮದ ವೇಳೆಯೂ ಊಟ ಮಾಡದಿದ್ದರೆ ಬಲಹಾನಿಯಾಗುವದು.

ಪ್ರಮಾಣ:—

ಯಾಮಮಧ್ಯೇ ನ ಭೋಕ್ತವ್ಯಂ ಯಾಮಯುಗ್ಮಂ ನ ಲಂಘಯೇತ್ |
ಯಾಮಮಧ್ಯೇ ರಸೋತ್ಪತ್ತಿರ್ಯಾಮಯುಗ್ಮಾದ್ಬಲಕ್ಷಯಂ ||

ವಿ. ಸೂ. ಪ್ರಾತಃಕಾಲ ಅವಲಕ್ಕಿ, ರವೆ, ಉಪ್ಪಿಟ್ಟು, ದೋಸೆ, ಇತರ ಪದಾರ್ಥಗಳೇ ಮೊದಲಾದ ಗುರುವಾದ ಆಹಾರವನ್ನು ತೆಗೆದುಕೊಂಡು ಕಾಫಿ-ಚಹಾಗಳನ್ನು ಕುಡಿಯುವ ಅಭ್ಯಾಸವುಳ್ಳವರು ಈ ಮೇಲ್ಕಂಡ ನಿಯಮಕ್ಕೆ ಗಮನಕೊಡಬೇಕು. ಹಿಂದಿನ ದಿವಸ ರಾತ್ರಿ ಊಟವಾದ ನಂತರ ಮಾರನೆಯ ದಿನ ಮಧ್ಯಾಹ್ನದವರೆಗೂ ಊಟಮಾಡಬಾರದೆಂದು ಆಯುರ್ವೇದ ನಿಯಮವು ಸಾರುತ್ತದೆ. ಸಾಯಂಕಾಲದೊಳಗೆ ಊಟಮಾಡುವ ನಿಯಮವುಳ್ಳ ನಮ್ಮ ದೇಶದ ಜೈನರಿಗೂ, ವಿಲಾಯತಿ ಜನರಿಗೂ ಬೆಳಗಿನ ಫಲಾಹಾರಾದಿಗಳು ಹಿತವಾಗುವದಲ್ಲದೆ, ಇತರರಿಗೆಲ್ಲಾ ಬೆಳಗಿನ ಆಹಾರವು ಅನಾರೋಗ್ಯಕರವಾಗುವದರಲ್ಲಿ ಸಂಶಯವಿಲ್ಲ. ಬೆಳಿಗ್ಗೆ ೭ ಘಂಟೆಗೆ ಕಾಫಿ-ತಿಂಡಿ, ೧೦ ಘಂಟೆಗೆ ಊಟ, ಮಧ್ಯಾಹ್ನ ಎರಡು ಘಂಟೆಗೆ ಮತ್ತು ಐದು ಘಂಟೆಗೆ ಫಲಾಹಾರ, ರಾತ್ರಿ ಊಟ ಈ ರೀತಿಯಾದ ಅಭ್ಯಾಸವನ್ನು ಈಗಿನ ಹಲವು ವಿದ್ಯಾರ್ಥಿಗಳು ಮಾಡುವವರಾಗಿರುವುದರಿಂದ ಬಹು ಮಂದಿ ಅಗ್ನಿಮಾಂದ್ಯ ವ್ಯಾಧಿಗೆ ಗುರಿಯಾಗಿ ನರಳುತ್ತಿರುವರು.

ಭೋಜನಾನಂತರ ದಂತಶೋಧನ.

ಶ್ಲೋ॥ ದಂತಾಂತರಗತಂ ಚಾನ್ನಂ ಶೋಧನೇನಾಹರೇಚ್ಛನೈಃ । ಕುರ್ಯಾದನಾಹೃತಂ ತದ್ಧಿ ಮುಖಸ್ಯಾನಿಷ್ಟಗಂಧತಾಂ ॥

ಹಲ್ಲುಗಳ ನಡುವಿನ ಸಂದಿಗಳಲ್ಲಿ ಆಹಾರವನ್ನು ಮೆಲ್ಲಗೆ ಹುಲ್ಲುಕಡ್ಡಿ ಮೊದಲಾದವುಗಳಿಂದ ತೆಗೆಯಬೇಕು. ಹೀಗೆ ತೆಗೆಯದಿದ್ದರೆ ಈ ಪದಾರ್ಥವು ಬಾಯಿಯಲ್ಲಿ ನಾತವನ್ನುಂಟುಮಾಡುವದು.

ಊಟವಾದನಂತರ ಆಚರಿಸಬೇಕಾದ ವಿಧಿಗಳು.

ಊಟವಾದ ನಂತರ ಊಟದ ಆಯಾಸವು ತೀರುವವರೆಗೂ ರಾಜನಂತೆ ಸುಖವಾಗಿ ಕುಳಿತುಕೊಳ್ಳಬೇಕು. ಅನಂತರ ನೂರು ಹೆಜ್ಜೆಯಷ್ಟು ಅಡ್ಡಾಡಿ ಎಡಮಗ್ಗುಲಾಗಿ ಮಲಗಿಕೊಳ್ಳಬೇಕು. ಭೋಜನಮಾಡಿದವನು ಮನಸ್ಸಿಗೆ ಹರ್ಷವಾಗುವಂತೆ ಗಾನ, ಸುವಾಸನಾದ್ರವ್ಯ, ರಮ್ಯವಾದ ವಸ್ತುವಿನ ನೋಟ ಮುಂತಾದವನ್ನು ಸೇವಿಸಬೇಕು. ಹೀಗೆ ಮಾಡುವದರಿಂದ ಊಟಮಾಡಿದ ಆಹಾರವು ಜೀರ್ಣಿಸುವ ಸ್ಥಿತಿಗೆ ಬರುವದು. ಮನಸ್ಸಿಗೆ ಹರ್ಷವನ್ನುಂಟು ಮಾಡದ ಯಾವ ಶಬ್ದ, ರೂಪ, ರಸ, ಸ್ಪರ್ಶ ಇವುಗಳನ್ನು ಸೇವಿಸಲಾಗದು, ದ್ರವಪದಾರ್ಥಗಳನ್ನು ಊಟದ ಕೊನೆಯಲ್ಲಿ ಸೇವಿಸಿದಾಗ ಶಯನಾಸನಗಳನ್ನು ಅಪೇಕ್ಷಿಸಬಾರದು. ಊಟವಾದ ನಂತರ ಬೆಂಕಿ, ಬಿಸಿಲು, ಓಡಾಡೋಣ, ಗಾಡಿ, ಕುದುರೆ ಸವಾರಿ ಇವುಗಳನ್ನು ಮಾಡಬಾರದು.

ಪ್ರಮಾಣ:- (ಸುಶ್ರುತ)

ಭುಂಕ್ತ್ವಾ ರಾಜವದಾಸೀತ ಯಾವದನ್ನಕ್ಲಮೋ ಗತಃ | ತತಃ ಪದಶತಂ ಗತ್ವಾ ವಾಮಪಾರ್ಶ್ವೇನ ಸಂವಿಶೇತ್ || ಶಬ್ದರೂಪರಸಾನ್ ಗಂಧಾನ್ ಸ್ಪರ್ಶಾಂಶ್ಚ ಮನಸಃ ಪ್ರಿಯಾನ್ | ಭುಕ್ತವಾನುಪಸೇವೇತ ತೇನಾನ್ನಂ ಸಾಧು ತಿಷ್ಠತಿ || ಶಯನಂ ಚಾಸನಂ ವಾಪಿ ನೇಚ್ಛೇದ್ವಾಪಿ ದ್ರವೋತ್ತರಂ | ನಾಗ್ನ್ಯಾತಪೌ ನ ಪ್ಲವನಂ ನ ಯಾನಂ ನಾಪಿ ವಾಹನಂ ||

ಊಟ ಮಾಡಿದ ನಂತರ ಸ್ವಲ್ಪ ಹೊತ್ತು ವ್ಯಾಯಾಮವನ್ನು, ಮೈಥುನವನ್ನು, ನಿದ್ರೆಯನ್ನು, ಗಾಡಿ ಮುಂತಾದ ಪ್ರಯಾಣವನ್ನು, ಯುದ್ಧ, ಹಾಡುವಿಕೆ, ಓದುವಿಕೆ ಇವುಗಳನ್ನೂ ಸಹ ಬಿಡಬೇಕು.

ಶ್ಲೋ॥ ವ್ಯಾಯಾಮಂ ಚ ವ್ಯವಾಯಂ ಚ ಧಾವನಂ ಯಾನಮೇವ ಚ | ಯುದ್ಧಂ ಗೀತಂ ಚ ಪಾಠಂ ಚ ಮುಹೂರ್ತಂ ಭುಕ್ತವಾಂಸ್ತ್ಯಜೇತ್ ||

ವಿ. ಸೂ. ಈಗಿನ ವಿದ್ಯಾರ್ಥಿಗಳು ೧೦ ಘಂಟೆಗೆ ಊಟ ಮಾಡಿ ಹಿಡಿದ ಬಿಸಿಲಲ್ಲಿ ವೇಗವಾಗಿ ಸ್ಕೂಲುಗಳಿಗೆ ಹೋಗಿ ಪಾಠವನ್ನು ಕಲಿಯಲುಪಕ್ರಮಿಸುವರು. ಈ ಪದ್ಧತಿಯು ಆರೋಗ್ಯದೃಷ್ಟಿಯಿಂದ ಎಷ್ಟು ಕೆಡುಕಾದುದೆಂದು ಪ್ರತಿಯೊಬ್ಬರೂ ಲಕ್ಷದಲ್ಲಿಡಬೇಕು. ಶೀತ ದೇಶದಲ್ಲಿ ಅತಿ ಚಳಿಯಾದುದರಿಂದ ಈ ರೀತಿ ಪದ್ಧತಿಯನ್ನು ಆಚರಿಸುವ ಸಂಭವ ಉಂಟು. ಉಷ್ಣ ದೇಶದಲ್ಲಿ ಈ ಪದ್ಧತಿಯು ಅನಾರೋಗ್ಯಕರವೆಂದು ಸ್ಪಷ್ಟವಾಗುತ್ತದೆ. ಭರತಖಂಡದಲ್ಲಿ ಈಗಿನ ವಿದ್ಯಾರ್ಥಿಗಳಲ್ಲಿ ನೂರಕ್ಕೆ ತೊಂಬತ್ತು ಜನರಂತೆ ಅನಾರೋಗ್ಯವುಳ್ಳವರಾಗಿದ್ದಾರೆಂದು ಬಹು ಜನರು ಅಭಿಪ್ರಾಯಪಡುತ್ತಾರೆ. ಈ ವಿಧವಾದ ಅನಾರೋಗ್ಯಕ್ಕೆ ಮೇಲಿನ ಆರೋಗ್ಯಕ್ರಮದ ಅತಿಕ್ರಮವೇ ಕಾರಣವಾಗಿರಬೇಕು. ಇದರ ಪರಿಹಾರವನ್ನು ಪ್ರತಿಯೊಬ್ಬರೂ ಯೋಚಿಸುವದು ಒಳ್ಳೇದು. — ಶ್ರೀ ಧನ್ವಂತರಿ.

ಕಾನಡಾವೃತ್ತ.

ಮಿತಿ ಕ್ಷಯ ಸಂ। ಜ್ಯೇಷ್ಠ ಶು ೨ ನೇ ಸೋಮವಾರ

ಬೆಂಚಿನ ಪುನರುದ್ಧಾರ.

ಕಾರವಾರ ತಾಲೂಕಿನ ೬ ಕಡೆಗಳಲ್ಲಿದ್ದ ಬೆಂಚ ಕೋರ್ಟುಗಳನ್ನು ಪುನರುದ್ಧರಿಸಲು ನಮ್ಮ ಜಿಲ್ಲಾಧಿಪರಾದ ಮಿ। ಮೋರ್ಗನ್‌ಸಾಹೇಬರು ಆಲೋಚನೆ ನಡೆಸಿರುವರಾಗಿ ಕಾರವಾರದ ಒಬ್ಬ ಸುದ್ದಿಗಾರರು ನಮಗೆ ತಿಳಿಸುತ್ತಾರೆ. ಇದನ್ನು ಕೇಳಿ ನಮಗೆ ಆಶ್ಚರ್ಯವಾಗಿರುವದು! ಬೆಂಚ ಕೋರ್ಟುಗಳ ಅವಳತೆಯನ್ನು, ಅವರು ಕೊಡತಕ್ಕ ನ್ಯಾಯಾನ್ಯಾಯದ ಅನುಭವವನ್ನು ಸರಕಾರವೂ, ಪ್ರಜೆಗಳೂ ಅನುಭವಿಸಿದ ಬಳಿಕ, ಜಿಲ್ಲಾಧಿಪರಾದ ಮಿ। ...ಗರವರ ಕಾರಕೀರ್ದಿಯಲ್ಲಿ ಅವು ನಷ್ಟವೆ ಅಂತರ್ಧಾನ ಹೊಂದಿರುವವು. ಹೀಗಿದ್ದು ಅವುಗಳನ್ನು ಈಗ ಪುನಃ ಉದ್ಧರಿಸುವ ವಿಚಾರವು ನಡೆದಿ ವಿಚಾರವು ಆಕಾರದಲ್ಲಿ ಪರಿಣಮಿಸುವ ಪೂರ್ವದಲ್ಲಿಯೇ ಈ ಕುರಿತು ಸ್ಪಷ್ಟವಾಗಿ ಪದದಿಂದ ನಾವು ಕೆಲವು ವಿಚಾರಗಳನ್ನು ಇಂದು ನಮೂದಿಸಬಿಚ್ಛಿಸುವೆವು. ಅವನ್ನು ಜಿಲ್ಲಾಧಿಪರು ಪರಾಂಬರಿಸಬೇಕಾಗಿ ಬಿನ್ನ ವಿನಂತಿ.

ಬೆಂಚ ಕೋರ್ಟುಗಳ ಸ್ಥಾಪನೆಯಿಂದ ಸರಕಾರಕ್ಕೊದಗುವ ಲಾಭದ ವಿಚಾರ ಮಾಡುವ. ಪ್ರಜೆಗಳಿಗೆ ನ್ಯಾಯದಾನ ಮಾಡುವದು ಸರಕಾರದ ಕರ್ತವ್ಯವು. ಅದನ್ನು ಮಾಡುವಿಕೆ ಜನರು ಪ್ರತ್ಯಕ್ಷವಾಗಿ ಸಿಗುವದರ ತಿಳಿಯ ಕೊಟ್ಟು ನ್ಯಾಯಾಧಿಕಾರಕ್ಕೆ ಹಚ್ಚಿದ ಜನರಿಗೆ ಬೇರೆ ಕೆಲಸಗಳಿಗೆ ಹಚ್ಚಲು ಸರಕಾರಕ್ಕೆ ಅನುಕೂಲವಾಗುತ್ತದೆ. ಪ್ರಜೆಗಳಿಗೊಂದು ಸ್ವರಾಜ್ಯ ಕೊಟ್ಟ ಪ್ರಯತ್ನ ಕಾರ್ಯದಲ್ಲಿ ಸಿಗುತ್ತದೆ. ಅಧಿಕಾರ ಸಂಪಾದಿಸಿ, ಅಜ್ಞ ಪ್ರಜೆಗಳಲ್ಲಿ ಗೌರವ ಸಂಗ್ರಹಿಸಬಿಚ್ಛಿಸುವ ಅಧಿಕಾರಲೋಲುಪರಾದ ಸ್ವಪ್ರತಿಷ್ಠಾಪರರಿಗೆ ಒಂದು ಹುದ್ದೆ ಕೊಟ್ಟು ಸತ್ಕರಿಸಿದಂತಾಗುತ್ತದೆ, ಮೇಲೆ ನ್ಯಾಯಾನ್ಯಾಯದ ಕುರಿತು ದೂರು ಬಂದರೆ, “ನೀವೇ ಮೆಜಿಸ್ಟ್ರೇಟರು, ನೀವೇ ಆರಿಸಿದವರು. ಅಧಿಕಾರವನ್ನು ನಿಮ್ಮ ಸ್ವಚಿತ್ತದಿಂದ ನಿಮ್ಮ ಮೆಜಿಸ್ಟ್ರೇಟರು ನಡೆಸದ ಬಳಿಕ, ನೀವು ಸ್ವರಾಜ್ಯವನ್ನು ಹ್ಯಾಗೆ ನಡೆಸಿರಿ? ” ಎಂಬ ಪ್ರಶ್ನೆಯನ್ನು ಸ್ವರಾಜ್ಯಕಾಂಕ್ಷಿ ಪ್ರಜೆಗಳಿಗೆ ಕೇಳಸಿಗುತ್ತದೆ. ಕೆಲವಂಶರಾದ ಜನರು ಸ್ಥಳಿಕಅಧಿಕಾರಿಗಳ ಮರ್ಜಿ ಸಂಪಾದನೆಗೆ ಹೋಗುವದಿಲ್ಲ. ಅದರಿಂದ ಅವರಿಗೆ ಈ ಅಧಿಕಾರ ಸಿಗುವದಿಲ್ಲ ಈ ಮಾತು ಯಾರಿಗೂ ಹೇಳಿಯುವದಿಲ್ಲ. ಸರಕಾರಿ ಅಧಿಕಾರಿಗಳ ಸ್ತುತಿಪಾಠಕರಿಗೆ ಅಧಿಕಾರಿಗಳ ಆಗಮನವನ್ನು ಹಾರೈಸಿ ಸಲಾಮು ಹೊಡೆಯುವವರಿಗೆ ಇಂಥ ಬೆಂಚ ಕೋರ್ಟಿನ ಅಧಿಕಾರವು ಪ್ರಾಪ್ತವಾಗುತ್ತದೆಂದು ಬೆಂಚ ಮೆಜಿಸ್ಟ್ರೇಟರ ಪರಿಚಯವಿದ್ದವರು ಹೇಳುವರು.

ಬೆಂಚ ಕೋರ್ಟುಗಳಿಂದ ಪ್ರಜೆಗಳಿಗೇನು ಲಾಭವಿಲ್ಲ ಮೇಲಾಗಿ ಕೇಳಿದರೆ ನಷ್ಟವೇ. ನ್ಯಾಯದಾನದ ಮಾಹಿತಿಯಿಲ್ಲದ, ಅಧಿಕಾರ ಪಾತ್ರತೆಯಿಲ್ಲದ ಅಥವಾ ಸರಕಾರಿ ಬೆನ್ನನು ಹೊಂದಿ ಅಧಿಕಾರ ನಿವೃತ್ತರಾದ ಪ್ರಾಯ ಗಳೆದವರು ಬೆಂಚ ಮೆಜಿಸ್ಟ್ರೇಟರಾಗುತ್ತಾರೆ ಇವರಿಂದ ನ್ಯಾಯದಾನವಾಗುವದು ತೀರ ದುಸ್ತರವು. ಸಾರಾಸಾರ ವಿಚಾರ ಮಾಡಲು ಇವರು ಅನರ್ಹರು. ಇಂಥವರು ಬೆಂಚ ಕೋರ್ಟಿನಲ್ಲಿ ಪ್ರೈಕೋರ್ಟಿನಂತೆ ಗೊಡ್ಡದೊಂದು ನ್ಯಾಯಕೋರ್ಟಿನ ರಂಗಸ್ಥಳವನ್ನೇ ಪಾಲಿಸಿ ಮೇಲೆ ಮಾಡುವರೆ ಜನರ ಕೇಳಿಕೆ-ಕೇಳಿಕೆಗಳ ಮೇಲಿಂದ ಅಭಿಪ್ರಾಯವನ್ನು ಠರಾಯಿಸಿಕೊಂಡು ನ್ಯಾಯದಾನ ಮಾಡುವದೂ ಉಂಟು. ಇದರಿಂದ ಯಾವ ಪ್ರಕಾರದ ನ್ಯಾಯ ಸಿಕ್ಕೀತು?

ಬೆಂಚ ಕೋರ್ಟುಗಳಲ್ಲಿ ಪಕ್ಷಪಾತವಾಗಲಿಕ್ಕೆ ಮತ್ತೊಂದು ಕಾರಣವಿದೆ: “ಊರಿದ್ದಲ್ಲಿ ಹೊಲಗೇರಿ ” ಎಂಬ ನ್ಯಾಯದಂತೆ, ಊರೂರುಗಳಲ್ಲಿ ಪಕ್ಷ ಪ್ರತಿಪಕ್ಷಗಳು ಇದ್ದೇ ಇರುವವು. ಕಾಲಪರಿಣಾಮ ಪಕ್ಷಗಳೊಳಗಿನ ಜನರು ಬೆಂಚ ಕೋರ್ಟಿನ ಆಸನಗಳನ್ನು ಸಂಗ್ರಹಿಸಿದರೆ, ಪ್ರತಿಪಕ್ಷದ ಜನರಿಗೆ ದಣಿಸಿ ತೀರದು, ದಣಿಸಿರಬೇಕು ದಣಿಸಬೇಕೆಂದು ಹೇಳಿಯುತ್ತಾರೆ. ಸ್ವಪಕ್ಷದ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಲಿಕ್ಕೂ ಪ್ರತಿಪಕ್ಷಿಗಳಿಗೆ ಬಲ್ಲಿಕ್ಕೂ ಇದೊಂದು ರಾಯರು ಕೊಟ್ಟ ದೀವಟಿಗೆಯಾಗಿ ಪರಿಣಮಿಸುತ್ತದೆ.

ಸರಕಾರಿ ಪೆನ್ಶನರರಿಗೆ ಅಧಿಕಾರ ಸಿಕ್ಕರೆ, ಮತ್ತೊಂದು ಕಷ್ಟ. ಅಧಿಕಾರ ನಡಿಸಲು ಅಪಾತ್ರರೆಂದು ಇವರಿಗೆ ಪೆನ್ಶನು ಕೊಡಹೋಗಿರುತ್ತದೆ. ಸಾರಾಸಾರ ವಿಚಾರ ಮಾಡುವಷ್ಟು ಬುದ್ಧಿಶಕ್ತಿಯು ಇವರಲ್ಲಿರುವದಿಲ್ಲ. ಮುದಿ ಪ್ರಾಯದ ವಿಕಾರಗಳೆಲ್ಲ ಇವರಲ್ಲಿ ಉಂಟಾಗುತ್ತವೆ ಶೀಘ್ರಕೋಪ, ಹಟಮಾರಿತನ ಮುಂತಾದ ವಿಕಾರವುಳ್ಳವರ ಮೂಲಕ ಇವರೊಡನೆ ಮಾತಾಡುವದು ಕಠಿಣವೇ! ಸಿಟ್ಟಿನ ಭರದಲ್ಲಿ ಶಿಕ್ಷೆ ಕೊಟ್ಟುಬಿಟ್ಟರೆ, ಅನುಭವಿಸಿ ತೀರಬೇಕಾಗುತ್ತದೆ. ವಿಚಾರ ಮಾಡ ಮಷ್ಟು ಬುದ್ಧಿಯಿಲ್ಲವೆಂದು ಹೇಳಲು ಉಪಾಯವಿರುವದಿಲ್ಲ; ಯಾಕಂದರೆ, ದೊಡ್ಡ ದೊಡ್ಡ ಸರಕಾರಿ ಅಧಿಕಾರಗಳನ್ನು ಇವರು ನಡಿಸಿದಂಥವರಿರುತ್ತಾರೆ. ಹೀಗೆ ನಾಲ್ಕೂ ಬದಿಗಳಿಂದ ಬಾಯಿ ಮುಚ್ಚಿಕೊಂಡು ಪ್ರಜೆಗಳು ಪೆಟ್ಟು ತಿನ್ನಬೇಕಾಗುತ್ತದೆ.

ಬೆಂಚಕೋರ್ಟಿನಿಂದಪೋಲೀಸರಿಗೊಂದು ಸುಲಭವಾದ ನ್ಯಾಯಾಸನ ದೊರಕುತ್ತದೆ. ಪೋಲೀಸ ಆಕ್ಟ, ಕೆಟಲ್ ಟ್ರೆಸ್‌ಪಾಸ ಆಕ್ಟ, ಮುಂತಾದ ಚಿಕ್ಕ ಚಿಕ್ಕ ಕಾಯಿದೆಗಳನ್ವಯ ಖಟ್ಲೆಗಳೇ ಖಟ್ಲೆಗಳು! ಇದಕ್ಕೆ ಸರಕಾರಿ ಅಂಕಿಗಳೇ ಸಾಕ್ಷಿ. ನಮ್ಮಲ್ಲಿ ಬೆಂಚ ಕೋರ್ಟುಗಳಿದ್ದಾಗ ಪೋಲೀಸ ಖಟ್ಲೆಗಳೆಷ್ಟಾದವು! ಬೆಂಚ ಕೋರ್ಟಿನ ಪೂರ್ವದಲ್ಲಿ ಎಷ್ಟು ಖಟ್ಲೆಗಳಾಗುತ್ತಿದ್ದವು! ಬೆಂಚ ಕೋರ್ಟುಗಳು ನಾಶ ಹೊಂದಿದ ಬಳಿಕ, ಎಷ್ಟು ಖಟ್ಲೆಗಳಾದವು? ಎಂಬುದನ್ನೆಲ್ಲ ವಿಚಾರಿಸಿದರೆ, ಪೋಲೀಸರ ಹಾವಳಿಯು ಸ್ವರೂಪವು ನಮ್ಮ ಜಿಲ್ಲಾಧಿಪರಿಗೆ ಹೊಳೆಯದಿರದು. ಬೆಂಚ ಕೋರ್ಟುಗಳಿಂದ ಪ್ರಜೆಗಳಿಗೊದಗುವ ಲಾಭವಿದು.

ಬೆಂಚ ಕೋರ್ಟಿನ ವಿಷಯ ಈ ಹಿಂದೆ ನಾವೆರಡು ಲೇಖಗಳನ್ನೇ ಪ್ರಕಟಿಸಿ, ಅಲ್ಲಾಗುವ ಸ್ಥಿತಿಯನ್ನು ನಾವು ವಿವರಿಸಿರುವೆವು. “ಅಠಾಠಾಣೇ ದಂಡ ಕೇಲೇ ಪಾಹಿಜೇ” ಎಂಬ ಒಂದೇ ಮಂತ್ರದಿಂದ ನೂರಾರು ಖಟ್ಲೆಗಳನ್ನು ನಿರ್ಣಯ ಮಾಡುವ ಗುಜರಾಥದೊಳಗಿನ ಒಂದು ಬೆಂಚ ಕೋರ್ಟಿನ ವ್ಯವಹಾರವನ್ನು ನಮ್ಮ ತಾ. ೨೨ ೨ ೧೯೨೬ ನೇ ಸಂಚಿಕೆಯಲ್ಲಿ ವರ್ಣಿಸಿರುವೆವು. ಆರೋಪಿಯು ಮುಂದಾದ ಕೂಡಲೆ, “ತ್ಯಾನೇಂ ಕಾಯ ಕೇಲೇಂ ”ಎಂದು ನ್ಯಾಯಮೂರ್ತಿಗಳು ಬೊಗ್ಬಿರಿಯುವದೂ, “ತ್ಯಾನೇಂ ಗಾಡಿ ದಾವೀ ಬಾಜೂವರ ನಾಹೀಂ ಹಾಂಕಲೀ” ಎಂದು ಪ್ರೊಸಿಕ್ಯೂಟಿಂಗ ಆಫೀಸರರು ಉತ್ತರಿಸುವದೂ, “ಗಾಡಿ ದಾವೀ ಬಾಜೂವರ ಕಶಾಲಾ ನಾಹೀಂ ಹಾಂಕಲೀ ” ಎಂದು ಬೆಂಚ ಕೋರ್ಟು ಸವಾಲು ಮಾಡುವದೂ, ಆರೋಪಿಯು ಶಬ್ದವನ್ನುಚ್ಚರಿಸುವ ಮೊದಲೇ ನ್ಯಾಯಮೂರ್ತಿಗಳು “ ಅಠಾಠಾಣೇ ದಂಡ ಕೇಲೇ ಪಾಹಿಜೇ” ಎಂದು ದಂಡ ವಿಧಿಸುವದೂ, ಮುಂತಾದ ಪ್ರಕಾರಗಳು ಬೆಂಚ ಕೋರ್ಟುಗಳಲ್ಲಿ ವಾಡಿಕೆಯಾಗಿ ಒದಗುತ್ತವೆ. ಇಂಥ ಸ್ಥಿತಿಯಲ್ಲಿ ನ್ಯಾಯ ಸಿಗುವ ಬಗೆ ಹೇಗೆ!

ಬೆಂಚ ಕೋರ್ಟಿನ ನ್ಯಾಯದ ಕುರಿತು ನಾವು ತಾ. ೨೧ ೯ ೧೯೨೬ ನೇ ಸಂಚಿಕೆಯಲ್ಲಿ ಕೆಲವು ವಿಚಾರಗಳನ್ನು ಪ್ರದರ್ಶಿಸಿರುವೆವು. ಅವನ್ನು ನಮ್ಮ ಜಿಲ್ಲಾಧಿಪರು ವಿಚಾರಿಸಬೇಕಾಗಿ ನಮ್ಮ ಬಿನ್ನಹವಿರುವದು. ಬೆಂಚ ಕೋರ್ಟಿನ ಮೆಜಿಸ್ಟ್ರೇಟರ ಬಗ್ಗೆ ಇನ್ನೊಂದು ವಿಚಾರವನ್ನು ನಮೂದಿಸುವದು ಯುಕ್ತವು. ಬೆಂಚ ಮೆಜಿಸ್ಟ್ರೇಟರಿಗೆ ಸರಕಾರಿ ಸಂಬಳ ಸಿಗುವದಿಲ್ಲ. ಅಂದರೆ, ಅವರ ಸರಕಾರಿ ನೌಕರರಲ್ಲ; ಕೇವಲ ಪರೋಪಕಾರ ಮಾಡಲು ಉದ್ಯುಕ್ತರಾದ ಪುಣ್ಯಾತ್ಮರವರು! ಇದರಿಂದ ಇವರ ಮೇಲೆ ಸರಕಾರದ ಅಂಕೆಯಿರುವದಿಲ್ಲ. ಹೊತ್ತಿಗೆ ಸರಿಯಾಗಿ ಬರದಿದ್ದರೆ, ದೂರಲಿಕ್ಕೂ ಆಸ್ಪದವಿಲ್ಲ, ಅವರು ಬಂದಾಗ

ಜನರು ಹಾಜರಾಗಬೇಕು.' ಈ ಪ್ರಕಾರದಿಂದ ಬೆಂಚ ಕೋರ್ಟಿನಲ್ಲಿ ಅವ್ಯವಸ್ಥೆ ನಡೆಯುತ್ತದೆ. ಮತ್ತೊಂದು ಮಾತು. ಬೆಂಚ ಕೋರ್ಟು ಸ್ವರಾಜ್ಯವಾದ್ದರಿಂದ ಈ ಸ್ವರಾಜ್ಯದ ಖರ್ಚನ್ನು ಪ್ರಜೆಗಳೇ ಕೊಡಬೇಕು. ಕಾರಕೂನ ಮುಂತಾದ ಸರಂಜಾಮನ್ನೆಲ್ಲ ಮ್ಯುನಿಸಿಪಾಲಿಟಿಯವರೇ ಕೊಡಬೇಕಾಗುತ್ತದೆ. ಇದೊಂದು ಪ್ರಜೆಗಳ ಮೇಲೆ ಹೊರಿಸುವ ಹೊಸ ಹೊರೆಯು. ಸರಕಾರದ ಕರ್ತವ್ಯಕ್ಕಾಗಿ ಮ್ಯುನಿಸಿಪಾಲಿಟಿಯವರು ತಮ್ಮ ಹಣವನ್ನು ವೆಚ್ಚ ಮಾಡಬೇಕಾಗುತ್ತದೆ. ಮ್ಯುನಿಸಿಪಾಲಿಟಿಗಳಿಗೆ ಹಣದ ಅಡಚಣೆಯಿರುವ ಸಮಯ, ಈ ಹೊಸ ಖರ್ಚನ್ನು ತೆರುವದು ಕಷ್ಟಪ್ರದವು.

ಹೀಗೆಲ್ಲ ಸ್ಥಿತಿಯಿರಲು, ಬೆಂಚ ಕೋರ್ಟುಗಳನ್ನು ಪುನರುದ್ಧರಿಸುವದು ಎಂದಿಗೂ ಕ್ಷೇಮಕರವಲ್ಲ. ಅವುಗಳಿಂದ ಸ್ಥಳಿಕ ಅಧಿಕಾರಿಗಳ ಮರ್ಜಿ ಸಂಪಾದಿಸುವ ಅಧಿಕಾರಲೋಲುಪರ ವ್ಯವಸ್ಥೆಯಾಗುತ್ತಿದ್ದಾಗ್ಯೂ, ಪ್ರಜೆಗಳ ದೃಷ್ಟಿಯಿಂದ ಈ ವಿಷಯವನ್ನು ಮಿ| ಮೊಂಗೊಮೆರಿಯವರು ವಿಚಾರ ಮಾಡಬೇಕು. ಮಿ| ಮಶೇಕರವರು ಡಿ| ಡೆಪ್ಯುಟಿ ಕಲೆಕ್ಟರರಿದ್ದಾಗ ನಮ್ಮ ಕುಮಟಾ ಮ್ಯುನಿಸಿಪಾಲಿಟಿ ಅಧ್ಯಕ್ಷರಿದ್ದರು. ಅಧ್ಯಕ್ಷ ಅಧಿಕಾರದಿಂದ ಮ್ಯುನಿಸಿಪಾಲಿಟಿಯ ಆಡಳಿತೆಯ ರಿಪೋರ್ಟುಗಳಲ್ಲಿ ಅವರು ಬರೆದ ವಿಚಾರಗಳನ್ನು ಮಿ| ಮೊಂಗೊಮೆರಿಯವರು ನೋಡಬೇಕು. ಬೆಂಚ ಕೋರ್ಟುಗಳ ಆಡಳಿತೆಯ ಪ್ರತ್ಯಕ್ಷ ಅನುಭವದಿಂದ ಮಿ| ಮಶೇಕರರು ಬೆಂಚ ಕೋರ್ಟುಗಳಿಂದ ಹಿತವಿಲ್ಲೆಂಬ ಅಭಿಪ್ರಾಯಪಟ್ಟಾಗ, ಜಿಲ್ಹಾಧಿಕಾರಿಗಳಿದ್ದ ಮಿ| ಹೇಗರವರು ಶಾಂತಿಯಿಂದ ಈ ಕೋರ್ಟುಗಳನ್ನು ಲಗುಬಗೆಯಿಂದ ಕಿತ್ತೊಗೆದಾಗ, ಅವನ್ನು ಈಗ ಪುನರುದ್ಧರಿಸುವ ವಿಚಾರ ಮಾಡಬಾರದಾಗಿ ಮಿ| ಮೊಂಗೊಮೆರಿಯವರಿಗೆ ನಾವು ಮುಂದಾಗಿ ಸೂಚಿಸುವೆವು.

ಸ್ಫುಟ ಸೂಚನೆಗಳು.

೧. ನಮ್ಮೀ ಭರತಖಂಡದಲ್ಲಿ ಸದ್ಯಕ್ಕೆ ಹಿಂದೂ-ಮುಸಲ್ಮಾನರ ಕಲಹ, ಶೀಖ-ಮುಸಲ್ಮಾನರ ಕಲಹ ಮುಂತಾದ ಅನಿಷ್ಟ ಪ್ರಕಾರಗಳು ಆಗಿಂದಾಗ ಒದಗುತ್ತವೆ. ಕಲಕತ್ತೆಯಲ್ಲಿ ಒಮ್ಮೆ ದೊಂಬಿಯಾಯಿತು; ಅದು ನಿಲ್ಲುವಷ್ಟರಲ್ಲಿ ಇನ್ನೊಂದು ದೊಂಬಿಯಾಯಿತು. ರಾವಲಪಿಂಡಿಯಲ್ಲಿ ಮತ್ತೊಮ್ಮೆ ದಂಗೆ. ಕಲಕತ್ತೆಯಲ್ಲಿ ಹಿಂದೂ-ಮುಸಲ್ಮಾನರಲ್ಲಿ ದಂಗೆ; ರಾವಲಪಿಂಡಿಯಲ್ಲಿ ಶೀಖ-ಮುಸಲ್ಮಾನರಲ್ಲಿ ದಂಗೆ. ಇಷ್ಟು ಹೊತ್ತು ದಂಗೆಯಾಗಲು ಕಾರಣವೇನೆಂಬ ತಿಳಿಯಿತೇ? ವಾದ್ಯಘೋಷ, ಮೆರವಣಿಗೆಯ ಗದ್ದಲ; ವಾದ್ಯಘೋಷದ ಗದ್ದಲವನ್ನು ನಿಲ್ಲಿಸುವದಕ್ಕಾಗಿ ದೊಂಬಿ ಕಲ್ಲೋಲವು ಎದ್ದೇಳುತ್ತದೆ. ಇದು ದೇಶದ ದುರ್ದೈವವಲ್ಲವೇ! ಸಾರ್ವಜನಿಕ ರಸ್ತೆಯ ಮೇಲಿಂದ ಧರ್ಮಗಳ ಸಂಪ್ರದಾಯದಂತೆ ವಾದ್ಯಘೋಷ ನಡೆಯುತ್ತಿದ್ದಾಗ ಬಂಧುಭಾವವನ್ನು ಮರೆತು, ದೊಂಬಿಯಿಂದೊದಗುವ ಕಲ್ಲೋಲವನ್ನೂ, ಅನರ್ಥವನ್ನೂ ವಿಚಾರಿಸದೆ, ಥಟ್ಟನೆ ವಿಕಾರವಶರಾಗಿ ದೊಂಬಿಯನ್ನೆಬ್ಬಿಸುವದು ಎಂದೆಂದಿಗೂ ಶ್ರೇಯಸ್ಕರವಲ್ಲ. ಮುಖಂಡರು ಹೇಳಿದಂತೆ, ಬಡಿದಾಟ ಮಾಡಿಕೊಂಡ ಬಳಿಕ ಬಡಿದಾಟದಿಂದ ಪ್ರಶ್ನೆಯ ನಿರ್ಣಯ ಮಾಡಿಕೊಳ್ಳುವದು ಅಸಾಧ್ಯವೆಂದು ಪ್ರಜೆಗಳಿಗೆ ಹೊಳೆದ ಬಳಿಕ, ವಾದ್ಯಘೋಷದ ಪ್ರಶ್ನೆಯು ತಾನಾಗಿ ನಿರ್ಣಯ ಹೊಂದುವದೆಂಬ ಮಾತನ್ನು ನಾವು ಒಪ್ಪುವೆವು. ಅದರಿಂದ ಇಂಥ ಧರ್ಮಾಂಧ ದೊಂಬಿಗಳ ಉಲ್ಲೇಖವನ್ನು ನಾವು ವಿಶೇಷವಾಗಿ ಮಾಡುವದಿಲ್ಲ; ಇರಲಿ.

---

೨. ಸದ್ಯಕ್ಕೆ ಮದ್ರಾಸ ಇಲಾಖೆಯೊಳಗಿನ ಗಂಜಾಮ ಜಿಲ್ಹೆಯ ಕಲೆಕ್ಟರರಾದ ಮಿ| ಗಿಲೆಸ್ಪಿಯವರು ತಮ್ಮ ಕ್ರೈಸ್ತ ಬಾಂಧವರಿಗೆ ಕೊಟ್ಟ ಉಪದೇಶದ ಹುಕುಮನ್ನು ಉಲ್ಲೇಖಿಸಲಿಚ್ಛಿಸುವೆವು. ಅಟವಾಕುರವೆಂಬ ಗ್ರಾಮದಲ್ಲಿ ಒಂದು ಗಿರಿಯ ಮೇಲೆ ಶ್ರೀ ವೆಂಕಟರಮಣನ ದೇವಾಲಯವನ್ನು ಕಟ್ಟಿಸಲು ಅಲ್ಲಿಯ ವೈಷ್ಣವ ಭಕ್ತರು ಯೋಜಿಸಿದರು. ಇತ್ತ ಆ ಕುರಿತು ಮಿ| ಗಿಲೆಸ್ಪಿಯವರ ಅಪ್ಪಣೆ ಬೇಡಿದರು. ದಿನ್ನೆಯ ಕೆಳಗೆ ಕ್ರೈಸ್ತರ ಕೇರಿಯೊಂದಿದೆ. ಶ್ರೀ ವೆಂಕಟರಮಣನ ದೇವಾಲಯದ ಕಟ್ಟೋಣದ ಸುದ್ದಿಯನ್ನು ಕೇಳಿದ ಕೂಡಲೆ, ಕೇರಿಯೊಳಗಿನ ಕ್ರೈಸ್ತರು ಧರ್ಮಬಾಂಧವರಾದ ಮಿ| ಗಿಲೆಸ್ಪಿಯವರಿಗೆ ಅರ್ಜಿ ಮಾಡಿಕೊಂಡು ತಿಳಿಸಿದ್ದೇನೆಂದರೆ:— " ದೇವಾಲಯವನ್ನು ಕಟ್ಟಿಕೊಟ್ಟರೆ ಅಲ್ಲಿ ನಡೆಯುವ ವಿನಿಯೋಗಗಳಿಂದ ನಮಗೆ ಉಪದ್ರವವಾಗುವದು; ಓಲಗ, ಮಂಗಳಾರತಿ, ಉತ್ಸವ ಮುಂತಾದ ವಿನಿಯೋಗಗಳು ರಾತ್ರಿಯಲ್ಲಿ ನಡೆಯುವವು; ನಮಗೆ ನಿದ್ರಾಭಂಗವಾಗಿ ಉಪದ್ರವವಾಗುವದು." ಕ್ರೈಸ್ತ ಧರ್ಮಬೋಧಕರಾದ ಪಾದ್ರಿಗಳೂ ಕ್ರೈಸ್ತರ ಬೆನ್ನಿಗೆ ನಿಂತುಕೊಟ್ಟರು. ಆದರೂ, ಕಲೆಕ್ಟರರಾದ ಮಿ| ಗಿಲೆಸ್ಪಿಯವರು ನಿರ್ಮಲಚಿತ್ತದಿಂದ ಈ ಪ್ರಶ್ನೆಯನ್ನು ವಿಚಾರಿಸಿ ಧರ್ಮಬಾಂಧವರಿಗೆ ಬರೆದದ್ದೇನೆಂದರೆ:— " ಪ್ರಾಮುಖ್ಯವಾಗಿ ರಾತ್ರಿ ಸಮಯ ದೇವಾಲಯದಿಂದ ಉಪದ್ರವವಾಗುತ್ತದೆಂದು ನೀವು ದೂರುತ್ತೀರಿ; ಗದ್ದಲದಿಂದ ಸ್ವಲ್ಪ ಉಪದ್ರವವಾಗುವದು ಸಹಜವಿದೆ. ಕಾಯಿದೆಯ ಕಲಮುಗಳನ್ನು ಹುಡುಕುತ್ತ ಹೋದರೆ, ಗದ್ದಲದ ಕುರಿತು ಆಕ್ಷೇಪ ಮಾಡಲು ನಿಮಗೆ ಆಧಾರ ಸಿಗಬಹುದು. ರವಿವಾರ ಹಾಗು ಬೇರೆ ಹಬ್ಬದ ದಿನಗಳಲ್ಲಿ ನಿಮ್ಮ ಇಗರ್ಜಿಗಳಲ್ಲಿ ಬಾರಿಸುತ್ತಿರುವ ಘಂಟಾಘೋಷದಿಂದ ಅನೇಕರಿಗೆ ಉಪದ್ರವವಾಗುತ್ತಿದೆ. ಸಹನಶೀಲತೆ ಹಾಗು ದಯಾಶೀಲತೆಗಳು ಸಮಸ್ತ ಧರ್ಮಗಳ ಮೂಲತತ್ವಗಳಿವೆ. ಅದರಿಂದ ನೀವು ಪರಧರ್ಮ ಬಾಂಧವರ ಧರ್ಮವಿಷಯದ ಗದ್ದಲವನ್ನು ಸಹಿಸಲು ಕಲಿಯಬೇಕು." ಮಿ| ಗಿಲೆಸ್ಪಿಯವರು ಸಮಯೋಚಿತ ಉದ್ಗಾರಗಳನ್ನೋದಿ ವಾಚಕರಿಗೆ ಅತಿ ಹರುಷವಾಗುವದು. ಜಿಲ್ಹಾಧಿಕಾರಿಗಳು ಹೀಗೆ ವಿಚಾರಶೀಲರಾದರೆ, ನಿರ್ಮಲಚಿತ್ತರಾದರೆ, ಪ್ರಜೆಗಳಿಗೆ ಹಿತಾಹಿತಗಳನ್ನು ಬೋಧಿಸಲು ಉದ್ಯುಕ್ತರಾದರೆ, ಅವರವರ ಆಧಿಪತ್ಯದಿಂದ ನಮಗೇನು ತೊಂದರೆ ಸಂಭವಿಸದು. ಸುರಾಜ್ಯವು ಸ್ವರಾಜ್ಯಕ್ಕಿಂತಲೂ ಸರಿಹೋಲದೆಂಬ ಮಾತು ಸತ್ಯವಿದ್ದರೂ, ಮಿ| ಗಿಲೆಸ್ಪಿಯವರಂಥ ಅಧಿಕಾರಿಗಳ ಆಡಳಿತೆಯಲ್ಲಿ ಪ್ರಜೆಗಳಿಗೆ ಬಾಳ್ವೆ ಮಾಡಲು ಎಂದೂ ಅಸಂತೋಷವಾಗದು. ಅಧಿಕಾರಿಗಳ ಬೆಂಬಲವಿದ್ದ ಬಳಿಕ ಪರಧರ್ಮದ ಮೇಲೆ ಬಲಾತ್ಕಾರ ಮಾಡಲಿಕ್ಕೂ ಹಿಂದು ಮುಂದಿಯದ ಪ್ರತಿಕೂಲವೇ. ಇಂಥ ಸುವಿಚಾರಗಳನ್ನು ಅಧಿಕಾರಸ್ಥರೂ ಆಚಾರದಲ್ಲಿ ಪರಿಣಮಿಸಿದರೆ, ಹಿಂದೂ-ಮುಸಲ್ಮಾನರೊಳಗೆ ದೊಂಬಿಯು ಏಳಲಿಕ್ಕಿಲ್ಲ; ಹಿಂದಾದರೂ ಎದ್ದರೂ ಅಲ್ಲಿಂದಲ್ಲೇ ಸಮಾಧಾನ ಹೊಂದುವದು.

---

೩. ಹಿಂದೂ ಮುಸಲ್ಮಾನರೊಳಗಿನ ಯಾದವಿಯ ಕುರಿತು ನಾವೆಷ್ಟೆಂದರೂ ನಾವು ಬರೆಯಲೇಬೇಕಾಗುತ್ತದೆ. ಅಷ್ಟು ಭೀಷಣ ಪ್ರಕಾರಗಳು ಸಂಭವಿಸುತ್ತವೆ. ಹಿಂದೂಗಳಿಗೆ ಮುಸಲ್ಮಾನರ ಮೇಲೆ ವಿಶ್ವಾಸವಿಲ್ಲ. ಹಿಂದೂ ಧರ್ಮಾಚಾರಗಳಿಗೆ ಪ್ರತಿಬಂಧಿಸಲು ಮುಸಲ್ಮಾನರು ಹಾತೊರೆಯುತ್ತಾರೆಂದು ಹಿಂದೂಗಳ ಕಲ್ಪನೆ; ಮುಸಲ್ಮಾನರಿಗೂ ಹಿಂದೂಗಳ ಮೇಲೆ ವಿಶ್ವಾಸವಿಲ್ಲ. ಮಸೀದೆಗಳ ನೆರೆಹೊರೆಯಲ್ಲಿ ಬೇಕೆಂದು ವಾದ್ಯಘೋಷ ಮಾಡಿ, ಇಸ್ಲಾಮ ಧರ್ಮದ ಅನಾದರವನ್ನು ಹಿಂದೂಗಳು ಮಾಡುತ್ತಾರೆಂದು ಮುಸಲ್ಮಾನರ ಗ್ರಹಿಕೆ; ಇಂಥ ಸ್ಥಿತಿಯಲ್ಲಿ ರಾಮಲಕ್ಷ್ಮಣರಂತೆ ಬಂಧುಭಾವದಿಂದ ಇರುವ ಬದಲು ಇಬ್ಬರೂ ಸುಂದೋಪಸುಂದ ಅಸುರರಂತೆ ಬಡಿದಾಡಿಕೊಳ್ಳುತ್ತಿರುವರು. ಒಕ್ಕೀದದ ಸಮಯ ದಿಲ್ಲಿಯಲ್ಲಿ ಎಲ್ಲವೂ ಶಾಂತ ರೀತಿಯಿಂದ ಜರುಗಿತೆಂದು ಮೊಟ್ಟಮೊದಲಿನ ಸುದ್ದಿ. ಬುಧವಾರಕ್ಕೇ ಬಹದಾಪವಾಯಿತು. ಕಾರಣವನ್ನು ಕೇಳಿದರೆ, ಹಿಮ್ಮೆ ನಗೆ ಬರುತ್ತದೆ; ವಿಚಾರಿಸಿದರೆ ವಿಷಾದವಾಗುತ್ತದೆ. ನಾಯಬಾಜಾರ ಎಂಬ ಕೇರಿಯು ಹಿಂದೂಗಳದು; ಆ ಕೇರಿಯೊಳಗಿಂದ ಕಾಮಧೇನುರೂಪವಾದ ಗೋವನ್ನು ಮುಸಲ್ಮಾನರು ವಧಸ್ಥಾನಕ್ಕೆ ಒಯ್ಯುತ್ತಿದ್ದರೆಂದು ಕಿಡಿಗೇಡಿ ಮಂದಿಗಳು ಹುಯಿಲೆಬ್ಬಿಸಿದರು. ಅಲ್ಪಾವಕಾಶದಲ್ಲಿಯೇ ನಾಯಬಜಾರದ ಮಾರ್ಗದ ಮೇಲೆ ಜನಸಂದಣಿ ಕೂಡಿತು. ಮೆಜಿಸ್ಟ್ರೇಟರು ಬಂದರು; ಪೋಲೀಸ ಸುಪರಿಂಟೆಂಡೆಂಟರು ಬಂದರು; ಪೋಲೀಸರೂ ಬಂದರು. ಪರಿಪರಿಯಿಂದ ಜನರಿಗೆ ಹೇಳಿ, ಕಿಡಿಗೇಡಿ ಜನರ ಸುದ್ದಿ ನಿರಾಧಾರವಾದದ್ದೆಂದು ತಿಳಿಸಿ ಹೇಳಿದರು. ಜನರಿಗೆ ತಮ್ಮ ತಮ್ಮ ಕೆಲಸಗಳಿಗಾಗಿ ಹೋಗಲು ಮನವೊಲಿಸಿದರು. ವಿನೋದ ನೋಡಬಂದವರಿಗೆ ವಿನೋದ ವಿಷಯವು ಇಲ್ಲದ ಬಳಿಕ, ಲಗುಬಗೆಯಿಂದ ಅವರು ಹೋಗಲು ಉದ್ಯುಕ್ತರಾದರು. ಇಷ್ಟರಲ್ಲಿ ಕೇಳಿರಿ; ಟಾಂಗೆಗೆ ಕಟ್ಟಿದ ಕುದುರೆಯು ಜನರ ಗಾಬರಿ ನೋಡಿ ಬೆದರಿತು, ಓಡಿತು. ಮತ್ತು ಟಾಂಗೆಯನ್ನು ಒಬ್ಬನ ಮೈಮೇಲಿಂದ ಹಾಯ್ದು ಬಿಟ್ಟಿತು. ಜನಸಂದಣಿಯಲ್ಲೆಲ್ಲ ಗದ್ದಲವೇ ಗದ್ದಲ. ದಂಗೆಯಾಯಿತೆಂದು ಸುದ್ದಿ ಹಬ್ಬಿತು. ಬಳಿಯಲ್ಲಿದ್ದ ಚಾಂದಣೀ ಚೌಕದಲ್ಲಿ ಸೋಟೆಗಳಿಂದಲೂ, ಕಲ್ಲುಗುಂಡುಗಳಿಂದಲೂ ಜನರು ಬಡಿದಾಡಿಕೊಂಡರು. ಅಷ್ಟರಲ್ಲಿ ಸೈನಿಕರು ಬಂದು ಜನಸಂದಣಿಯನ್ನು ಚದುರಿಸಿದರು. ಕ್ರಿ. ಪ್ರೊ. ಕೋಡ ೧೪೪ ನೇ ಕಲಮಿನನ್ವಯ ಸಾರ್ವಜನಿಕ ಸ್ಥಳಗಳ ಮೇಲೆ ಹತ್ತು ಮಂದಿ ಜನರು ಕೂಡದಂತೆ ಪ್ರತಿಬಂಧಕ ಹುಕುಮನ್ನು ಕೊಟ್ಟರು. ನೋಡಿರಿ, ಇದೇ ದೇಶದ ಹಣೆಬರಹ! ಬೆದರಿದ ಕುದುರೆಯು ಒಬ್ಬನ ಮೈಮೇಲಿಂದ ಹಾರಿಹೋದರೆ ದೊಂಬಿಯಾಯಿತು; ವೈರಿಗಳು ಬಂದರು: ಎಂಬ ಗ್ರಹಿಕೆ ಮಾಡಿಕೊಳ್ಳುವಷ್ಟು ನಾವು ದುರ್ಬಲಚಿತ್ತರಾದ ಬಳಿಕ, ನಾವು ಧರ್ಮಾಭಿಮಾನಿಗಳು, ಧರ್ಮರಕ್ಷಕರು, ಧರ್ಮಾಚಾರಿಗಳು ಎಂಬ ಮಾತು ಉಳಿಯಿತೇನು? ಧರ್ಮರಕ್ಷಕನಾಗಬೇಕಾದ

೨. "ನಾನು ಸಾರ್ವಭೌಮನಾದರೆ!" ಎಂಬ ಸವಾಲನ್ನು ಮಹಾತ್ಮರು ಎತ್ತಿ ನುಡಿದದ್ದೇನೆಂದರೆ:- "ನಾನು ಸಾರ್ವಭೌಮನಾದರೆ, ವರ್ಣ, ಜಾತಿ, ಪಂಥಭೇದಗಳನ್ನೆಲ್ಲ ಲೆಕ್ಕಿಸದೆ ಇಡೀ ಭೂತಲಕ್ಕೆ ಸ್ನೇಹಭಾವದಿಂದ ಕೈಮುಂದೆ ಮಾಡುವೆನು. ಹಿಂದುಸ್ಥಾನದಲ್ಲಿ ಪ್ರಾಬಲ್ಯವನ್ನು ಭದ್ರಪಡಿಸಿಕೊಳ್ಳುವದಕ್ಕಾಗಿ ಇದ್ದ ಸೈನಿಕರನ್ನೆಲ್ಲ ಬರಖಾಸ್ತ ಮಾಡುವೆನು; ಕಳ್ಳರು, ಸುಳ್ಳರು, ಮುಂತಾದ ಕೇಡುಗರಿಂದ ಪ್ರಜೆಗಳ ರಕ್ಷಣೆಗೆ ಅವಶ್ಯವಿದ್ದಷ್ಟು ಪೋಲೀಸರನ್ನು ಇಟ್ಟುಕೊಳ್ಳುವೆನು; ಹಿಂದುಸ್ಥಾನ ಹಾಗು ಅಫಘಾನರ ಸರಹದ್ದಿಯ ಮೇಲಿರುವ ಪುಂಡರಿಗೆ ನಾನು ಲಂಚ ಕೊಟ್ಟು, ಭರತಖಂಡದ ಸಂರಕ್ಷಣೆ ಮಾಡಲೆಳಸಲಿಕ್ಕಿಲ್ಲ; ಅವರ ಅವರೊಡನೆ ಸ್ನೇಹಭಾವ ಬೆಳಿಸಿ, ಅವರಿಗೆ ಉದ್ಯೋಗಕ್ಕೆ ಹಚ್ಚಿ, ಪುಂಡತನದ ಪ್ರವೃತ್ತಿಯ ಪರಿಹಾರ ಮಾಡುವೆನು; ಹಿಂದುಸ್ಥಾನದೊಳಗೆ ವಾಸಿಸುವ ಸಮಸ್ತ ಯುರೋಪಿಯನ್‌ರಿಗೂ ನಾನು ಪಾಲನ ಮಾಡುವೆನು; ಅವರು ಮಾಡುವ ಪ್ರಾಮಾಣಿಕ ಸಾಹಸಗಳಿಗೆಲ್ಲ ಆಶ್ರಯಕೊಡುವೆನು; ಪರದೇಶಿ ಅರಿವೆಯ ಮೇಲೆ ಪ್ರತಿಬಂಧಕ ತೆರಿಗೆಯನ್ನು ಹೇರುವೆನು; ಖಾದಿಯ ಪುರಸ್ಕಾರಕ್ಕಾಗಿ ಸರಕಾರಿ ಖಾತೆಯನ್ನು ನಿರ್ಮಿಸುವೆನು; ಮದ್ಯದ ಅಮದಿಗೆ ತಡೆಹಾಕುವೆನು; ದೇಶದೊಳಗಿನ ಮದ್ಯದ ಭಟ್ಟಿಗಳನ್ನು ಮುಚ್ಚುವೆನು; ಔಷಧೋಪಯೋಗಕ್ಕೆ ಮದ್ಯವು ಅವಶ್ಯವಿರುವದೆಂದು ಸಿದ್ಧವಾದರೆ, ಅಷ್ಟರ ಮಟ್ಟಿಗೆ ಮದ್ಯದ ತಯಾರಿಗೆ ತಡೆಹಾಕಲಿಕ್ಕಿಲ್ಲ; ನೀತಿಗ್ರಾಹ್ಯವಾದ ಸಮಸ್ತ ಧರ್ಮಗಳನ್ನೂ ನಾನು ಪಾಲಿಸುವೆನು; ಹಿಂದೂಗಳಿಗೆ ಪ್ರವೇಶ ಸಿಗುವ ದೇವಾಲಯಗಳಲ್ಲಿಯೂ, ಶಾಲೆಗಳಲ್ಲಿಯೂ ಅಸ್ಪೃಶ್ಯರಿಗೆ ನಾನು ಎಡೆ ಕೊಡುವೆನು. ಹಿಂದೂ-ಮುಸಲ್ಮಾನರ ಪ್ರತಿನಿಧಿಗಳಿಗೆ ಕರೆಯುವೆನು; ಜೇಬಿನಲ್ಲಿದ್ದ ಚಿಕ್ಕ ಪುಟ್ಟ (ಅಧಿಕಾರದ) ಬತ್ತರಿ ತುಂಡುಗಳನ್ನೂ, ಬರವಾದುವ ಶಸ್ತ್ರಗಳನ್ನೂ ಅಪಹರಿಸಿ, ಒಂದು ಕೋಣೆಯಲ್ಲಿ ಹಾಕಿ ಭದ್ರವಾಗಿ ಕೀಲಿಹಾಕಿ ಬಿಡುವೆನು; ಆ ಕೋಣೆಯೊಳಗೆ ಪ್ರತಿನಿಧಿಗಳು ವಿಚಾರಮಾಡಿ, ಕಲಹ ಕಾರಣಗಳ ನಿವಾರಣೆ ಮಾಡಿಕೊಂಡ ಬಳಿಕ, ಅವರಿಗೆ ನ ಮು ಗಡೆ ಮಾಡುವೆನು;" ಮಹಾತ್ಮರು ಇನ್ನೂ ಅನೇಕ ಉಪಾಯಯೋಜನೆ ಮಾಡಿರುವರು. ಅವರ ಕೈಗೆ ಸಾರ್ವಭೌಮ ಅಧಿಕಾರವು ದೊರಕುವ ಸಂಭವವಿರುವದಿಲ್ಲವಾದ್ದರಿಂದ ತಮ್ಮ ಲೇಖನವನ್ನು ಅಷ್ಟಕ್ಕೇ ಮುಗಿಸಿರುವರು. ಆದರೆ ಪರಮಾತ್ಮನ ಲೀಲೆಯನ್ನು ತಿಳಿದವರಾರು? ಮುಂಬಯಿಯ ಸ್ಮಾಲ-ಕಾಜ ಕೋರ್ಟಿನಲ್ಲಿ ೫ ಸವಾಲು ಮಾಡಲು ತಲೆ ತಿರುಗಿದ ಮಿ| ಗಾಂಧಿಯವರು ೧೯೨೧ ನೇ ಇಸ್ವಿಯಿಂದ ಸ್ವರಾಜ್ಯದ ಶ್ರೇಷ್ಠ ಪರಿಷ್ಕರ್ತರಾಗಿ ಪರಿಣಮಿಸಿ ಭರತಖಂಡದ ಮೋಹನ ಮೂರ್ತಿಯಾಗಿ ಪರಿಣಮಿಸುವರೆಂದು ಆ ಕಾಲಕ್ಕೆ ಯಾರಾದರೂ ಎಣಿಸಿದ್ದರೇ! ಭರತಖಂಡದ ದೈವವು ಅನುಗ್ರಹಿಸಿದರೆ, ಮಹಾತ್ಮರಿಗೆ ಸಾರ್ವಭೌಮಪದವು ಪ್ರಾಪ್ತವಾಗಲು ಅವಕಾಶವಿರುವದೇನು? ಇರಲಿ, ಮಹಾತ್ಮರು ರಾಷ್ಟ್ರೀಯ ಸರಕಾರದ, ಸ್ಥೂಲಸ್ವರೂಪವನ್ನು ರಚಿಸುವಾಗ, ಪ್ರಚಲಿತ ರಾಜ್ಯಪದ್ಧತಿಯೊಳಗಿನ ದೋಷಗಳನ್ನೆಲ್ಲ ಒಕ್ಕಟ್ಟಿಗೆ ಶೋಧಿಸಿರುವರಲ್ಲವೇ?

---

೩. ಸದ್ಯಕ್ಕೆ ಹಾಯಕೋರ್ಟಿನಲ್ಲಿ ಪೋಲೀಸರು ಮಾಡಿದ ಒಂದು ಗೌಪ್ಯದ ಸ್ಫೋಟವಾಯಿತು. ಸುರತ ಜಿಲ್ಹೆಯ ಸೆಶನ್ ಜಡ್ಜರಲ್ಲಿ ದೋರಾಭಾಯಿ ಕಾಶೀಭಾಯಿ ಅಮೀನ ಎಂಬ ಫೌಜದಾರರು ನಡಿಸಿದ ಒಂದು ಗುಪ್ತ ಪ್ರಕರಣದ ಅದ್ಭುತ ಕಥೆಯು ನ್ಯಾಯಮೂರ್ತಿಗಳಾದ ಫೋಸೆಟ್ ಹಾಗೂ ಮಡಗಾಂವಕರರ ಮುಂದೆ ನಿವೇದಿಸೋಣಾಯಿತು. ಫೌಜದಾರರ ಕೃತ್ರಿಮವು ಮನಸೆಳೆಯುವದಿದೆ. ಸುರತ ಜಿಲ್ಹೆಯ ಓಲಪಾಡ ತಾಲೂಕಿನ ಉಮರಾಚೆ ಗ್ರಾಮದ ನರೋತ್ತಮನೆಂಬವನಿಗೂ, ಅದೇ ಗ್ರಾಮದ ಗಣಪತ ಎಂಬವನ ಹೆಂಡತಿಯಾದ ರಾಮಿ ಎಂಬವಳಿಗೂ ಅನ್ಯೋನ್ಯ ಹಿತವಿತ್ತು; ರಾಮಿಯು ಹೀಗೆ ಭ್ರಷ್ಟಳಾಗಿದ್ದಳು. ಅವಳಿಗೆ ಚಿಕ್ಕ ಮಕ್ಕಳಮೇಲೆ ಬಹಳ ಪ್ರೀತಿ ಇತ್ತು. ವಿಷಯಲಂಪಟಳಾಗಿ ಗ್ರಾಮಾಂತರಕ್ಕೆ ಹೋಗಲು ಅವಳ ಒಪ್ಪಿಗೆ ಇದ್ದಿಲ್ಲ. ನರೋತ್ತಮನಿಗೆ ಉಮರಾಚಿ ಗ್ರಾಮದಲ್ಲಿ ಗಂಡನ ಸಮಕ್ಷ ರಾಮಿಯೊಡನೆ ರಮಿಸಲು ಸಹಜವಾಗಿ ತೊಡಕುಗಳುಂಟಾದವು. ಇಬ್ಬರೂ ಕೂಡಿ ದೇಶಾಂತರಕ್ಕೆ ಹೋಗಿ, ಮನಸ್ವಿ ವಿಷಯೋಪಭೋಗ ಮಾಡುವಾ, ಎಂದು ನರೋತ್ತಮನು ಪರಿಪರಿಯಿಂದ ಹೇಳಿ ನೋಡಿದನು. ಬಾರಿ-ಬಾರಿಗೂ ರಾಮಿಯು ಒಲ್ಲೆಂದಳು. ಒಂದು ದಿನ ರಾಮಿಯು ಹೊಲದ ದಂಡೆಗೆ ಬಿಟ್ಟಿಗಳನ್ನು ಕಟ್ಟಿಕೊಂಡು ಮನೆಗೆ ಹಿಂತಿರುಗುತ್ತಿದ್ದಳು; ಹಾದಿಯಲ್ಲಿಯೇ ಈ ವಿಷಯಲಂಪಟ ಪಿಶುನು ಪುನಃ ಅಲ್ಲಿಂದಲ್ಲೇ ಪಾರಾಗಲು ಹೇಳಿದನು. ಅಲ್ಲಗಳೆದ ಕೂಡಲೆ, ಅವಳನ್ನು ಕೊಂದುಬಿಟ್ಟನು. ಗ್ರಾಮದಲ್ಲೆಲ್ಲ ನರೋತ್ತಮನೇ ಕೊಲೆಪಾತಕಿ ಎಂದು ಸುದ್ದಿ ಹರಡಿತು. ಕೊಲೆಪಾತಕದ ಸುದ್ದಿಯನು ಅಡಗಿಸಿಡುವದು ಎಂದಾದರೂ ಸಾಧ್ಯವೇ!

---

೪. ಪೋಲೀಸರು ಪ್ರವೇಶ ಗೈದರು; ಪ್ರಕರಣವು ಉಪಸ್ಥಿತವಾಯಿತು. ನರೋತ್ತಮನ ತಂದೆಯಾದ ಮಯಾಜೀವನನು ಫೌಜದಾರರಾದ ದೋರಾಭಾಯಿಯವರ ಅನುಗ್ರಹವನ್ನು ೩೫೦ ರೂಪಾಯಿ ಕೊಟ್ಟು ಸಂಪಾದಿಸಿದನು. ರಾಮಿಯ ಗಂಡನಾದ ಗಣಪತಿಗೆ ೩೦೦ ರೂಪಾಯಿ ಕೊಡೋಣಾದವು. ಇಷ್ಟಕ್ಕೆ ಪ್ರಕರಣವು ನಿಲ್ಲದೆಂದು ಭಾವಿಸಿ, ಸರಕಾರ ವೈದ್ಯರಾದವರ ಅನುಗ್ರಹವನ್ನು ಸಂಪಾದಿಸುವದಕ್ಕಾಗಿ ಅವರಿಗೆ ೫೦ ರೂಪಾಯಿಗಳು ಕೊಡೋಣಾದವು. ಬಳಿಕ ರಾಮಿಯ ಶವದ ಚಿಕಿತ್ಸೆಯಾಯಿತು, ಡಾಕ್ಟರರು ಮರಣದ ಕಾರಣವನ್ನು ಹೇಳಿದ್ದೇನೆಂದರೆ:— "ಇದು ಶ್ವಾಸಕಟ್ಟಿ ಮರಣವಾಗಿರಬೇಕು. ಅಪಸ್ಮಾರ ಯಾ ಬೇರೆ ವಿಕಾರದಿಂದ ಶ್ವಾಸಕಟ್ಟಿದ್ದಾಗಬೇಕು. ಹೀಗೆದ ಬಟ್ಟೆಗಳು ಮೋರೆಯ ಮೇಲೆ ಬಿದ್ದು ಶ್ವಾಸಕಟ್ಟಿರಬೇಕು." ಇತ್ಯಾದಿ ಡಾಕ್ಟರ ಅಭಿಪ್ರಾಯ ಕೊಂತು, ಫೌಜದಾರರು ತಮ್ಮ ಹಿಂದಿನ ಡೈರಿಯನ್ನೆಲ್ಲ ಅಳಿದು, ಹೊಸ ಡೈರಿಯನ್ನು ತಯಾರಿಸಿದರು. ಫೌಜದಾರರ ಹುಟ್ಟಿಗೆ ದ್ರವ್ಯಲೋಭದಿಂದ ಪ್ರಕರಣವು ಶಾಂತವಾಯಿತು.

೫. ಆದರೆ ಕೊಲೆಯನ್ನು ಅಡಗಿಸಿದರೆ ಮನುಷ್ಯನ ಸಾಗಿರುವದೇನು? ಸ್ತ್ರೀಹತ್ಯದ ಪಾತಕವು ಸ್ಫುಟವಾಗದಿರುವದೇ! ಕೆಲ ತಿಂಗಳುಗಳ ಬಳಿಕ ಒಂದು ಸಿನಾಂವಿ ಪತ್ರವು ಡಿ| ಪೋಲೀಸ ಸುಪರಿಂಟೆಂಡರ ಕೈಸೇರಿತು. ಸುಪರಿಂಟೆಂಡರು ಸ್ವತಃ ಚೌಕಶಿಯನ್ನು ಪ್ರಾರಂಭಿಸಿ ಈ ಒಳಸಂಚನ್ನು ಹೊರಗೆಡಹಿ ಲಂಚ ಕೊಟ್ಟವರನ್ನೂ, ಲಂಚತಿಂದವರನ್ನೂ ನ್ಯಾಯಾಸನಕ್ಕೆ ಎಳೆದು ತಂದರು. ನ್ಯಾಯಮೂರ್ತಿಗಳು ಡಾಕ್ಟರರಿಗೆ ದೋಷಮುಕ್ತರನ್ನಾಗಿಸಿದರು. ಉಳಿದವರಿಗೆ ಒಂದೊಂದು ವರ್ಷದ ಶಿಕ್ಷೆ ವಿಧಿಸಿದರು. ಖೊಟ್ಟಿ ಕಾಗದ-ಪತ್ರಗಳನ್ನು ತಯಾರಿಸಿದ ಬಗ್ಗೆ ಫೌಜದಾರರಿಗೆ ೫೦೦ ರೂ. ಗಳ ಹೆಚ್ಚಿನ ದಂಡ ವಿಧಿಸಲಾಯಿತು. ಫೌಜದಾರರು ಮಾಡಿದ ಕೃತ್ಯವು ಪರಮಾವಧಿಯ ಶಾಸನಾರ್ಹವಿದ್ದಾಗ್ಯೂ ಫೌಜದಾರರ ೩೦ ವರುಷದ ಸೇವೆಯನ್ನು ಲಕ್ಷಿಸಿ, ಶಿಕ್ಷೆಯನ್ನು ಒಂದು ವರ್ಷಕ್ಕೇ ಇಳಿಸಿದರು. ಮುಂಬಯಿ ಸರಕಾರವು ಶಿಕ್ಷೆಯನ್ನು ಹೆಚ್ಚಿಸಬೇಕೆಂದು ಮಾಡಿದ ಅರ್ಜಿಯನ್ನು ನ್ಯಾಯಮೂರ್ತಿಗಳು ಮನ್ನಿಸಿ ಶಿಕ್ಷೆಯನ್ನು ೨ ವರ್ಷಕ್ಕೇರಿಸಿದರು. ಇಂಥ ಅಪರಾಧಗಳು ಬೈಲಿಗೆ ಬರುವದು ಅಪರೂಪವೆಂದು ನ್ಯಾಯಮೂರ್ತಿಗಳು ನಮೂದಿಸಿದ ಅಭಿಪ್ರಾಯವನ್ನು ಎಲ್ಲರೂ ಮನ್ನಿಸುವರು. ಫೌಜದಾರ, ಡಾಕ್ಟರ, ಮುಂತಾದ ಅಧಿಕಾರಿಗಳು ಕೂಡಿ ಕೊಲೆಯನ್ನು ಅಡಗಿಸಲು ಮಾಡಿದ ಯತ್ನಗಳೂ ಕೂಡ ನಿರರ್ಥಕವಾಗಿ, ಪಾಪಕ್ಕೆ ಪಾಡು ಒದಗುತ್ತದೆಂಬ ಸಿದ್ಧಾಂತವು ಸ್ಪಷ್ಟವಾಗಿದೆ. ಪೋಲೀಸರು ಇನ್ನುಮುಂದೆ ಜಾಗ್ರತರಾಗಿರಬೇಕು.

---

೬. ಜಿಲ್ಲಾ ಲೋಕಲ್‌ಬೋರ್ಡಿನಿಂದ ನಮ್ಮೆಡೆಗೆ ಬಂದ ಮಾಹಿತಿಪತ್ರಿಕೆಯಲ್ಲಿ ಲೋಕಲ್‌ಬೋರ್ಡಿನ ಉತ್ಪನ್ನವನ್ನು ಏರಿಸುವದು ಯಾಕೆ ಅಗತ್ಯವಾಗಿದೆ ಎಂಬುದು ಅಪ್ರತ್ಯಕ್ಷವಾಗಿ ಸೂಚಿಸಲ್ಪಟ್ಟಿದೆ. ಪ್ರಾಥಮಿಕ ಶಿಕ್ಷಣದ ಹೊರೆಯನ್ನು ಜಿಲ್ಲಾ ಬೋರ್ಡ ಹೊತ್ತುಕೊಂಡಿದೆ. ಈ ಶಿಕ್ಷಣವನ್ನು ಸಕ್ತಿಯಿಂದ ಇದ್ದಿವೆ ಸ್ವೇಚ್ಛಾ ಪದ್ಧತಿಯಿಂದ ವಿಸ್ತರಿಸಬೇಕು. ವಿಸ್ತರಿಸಿದ ಶಿಕ್ಷಣದ ವೆಚ್ಚದ ½ ಪಾಲನ್ನು ಜಿಲ್ಲಾ ಬೋರ್ಡ ಪ್ರಾಥಮಿಕ ಶಿಕ್ಷಣದ ಕಾಯಿದೆಯಂತೆ ಭವಿಷ್ಯದಲ್ಲಿ ಸಹಿಸಬೇಕಾಗುವದು. ವೆಚ್ಚವು ಏರಿದ ಮೇಲೆ ಉತ್ಪನ್ನವನ್ನು ಲೋಕಲ್ಫಂಡಿನಿಂದ ಏರಿಸಬೇಕೆಂದು ಅಧ್ಯಕ್ಷರು ಸೂಚಿಸುತ್ತಾರೆಂಬಂತೆ ತೋರುತ್ತದೆ. ಆದರೆ ಈ ತರ್ಕಶಾಸ್ತ್ರವು ಬಹಳೇ ಕುಂಠಿತವಾದೆ. ಈಗಿದ್ದ ಇತರೇ ವೆಚ್ಚವನ್ನು ತಗ್ಗಿಸಿ, ಅದರಿಂದಾಗುವ ಉಳಿತಾಯಗಳೊಳಗಿಂದ ಇನ್ನು ಮುಂದೆ ಏರುವ ಶಿಕ್ಷಣದ ವೆಚ್ಚವನ್ನು ಪೂರೈಸಲು ಸಾಧ್ಯವಿಲ್ಲೆಂದು ಯಾರೂ ಸಿದ್ಧಪಡಿಸಲಿಲ್ಲ. ಈ ಮಾತು ಹಾಗಿರಲಿ. ಇನ್ನು ಭೂಮಿಯ ಮೇಲಿನ ಕಂದಾಯದ ಮೇಲೆ ಆಗಿದ್ದ ರೂಪಾಯಿಗೆ ಒಂದಾಣೆಯಂತಿರುವ ಲೋಕಲ್‌ಫಂಡ ತೆರಿಗೆಯನ್ನು ಮತ್ತೂ ಏರಿಸಬೇಕೆಂದರೆ, ಆದಾಯಕ್ಕಿಂತ ಬಲಿಕೊಟ್ಟಂತೆಯೇ ಸರಿ. ಏರಿಸಿದ ತೆರಿಗೆಯು ಬೇಸಾಯಗಾರರ ತಲೆಯ ಮೇಲೆ ಬೀಳುವದು. ಬೇಸಾಯಗಾರರಿಗೆ ಆದಾಯವಂದಿಗಳಿಲ್ಲೆಂದು ಬಲಿಕೊಟ್ಟು ಲೋಕಲ್‌ಫಂಡು ಏರಿಸಿದರೆ ಈ ಏರಿಸಿದ ಉತ್ಪನ್ನವನ್ನು ಪ್ರಾಥಮಿಕ ಶಿಕ್ಷಣದ ಖರ್ಚಿಗೇ ವೆಚ್ಚಮಾಡಬೇಕೆಂದು ಲೋಕಲ್‌ಬೋರ್ಡ ಕಾಯಿದೆಯಲ್ಲಿ ಎಲ್ಲಿದೆ! ಈ ಏರಿದ ಉತ್ಪನ್ನವನ್ನು ಶಿಕ್ಷಣಕ್ಕಾಗಿ ವೆಚ್ಚಮಾಡತಕ್ಕದ್ದೆಂದು ನಿರ್ಬಂಧನೆಯು ಕಾಯಿದೆಯಲ್ಲಿ ಇಲ್ಲದಾಗ ೩ ವರ್ಷಕ್ಕೊಮ್ಮೆ ಹೊಸ ಹೊಸದಾಗಿ ರಚಿಸಲ್ಪಡುವ ಮಂಡಲದಲ್ಲಿ ಈ ನಿರ್ಬಂಧನೆಯು ಶಾಶ್ವತವಾಗಿ ಪಾಲಿಸಲ್ಪಡುವದೆಂದು ಹೊಣೆಕೊಡುವವರ್ಯಾರು? ಈಗಿನ ಮಾಹಿತಿ ಪತ್ರಿಕೆಯೊಳಗಣ ಸೂಚನೆಯ ತರ್ಕಶಾಸ್ತ್ರಕ್ಕೆ ಇದೊಂದು ದೊಡ್ಡ ಆಕ್ಷೇಪವು ಇದ್ದೇ ಇದೆ. ಹಿಟ್ಟಿಗೆ ಲೋಕಲ್‌ಫಂಡು ತೆರಿಗೆಯನ್ನು ಏರಿಸುವ ಸೂಚನೆಯನ್ನು ನಾವೇನು ಸಮರ್ಥಿಸಲಾಗದು. ಮೊದಲು ಈಗಿದ್ದ ವೆಚ್ಚವನ್ನು ತಗ್ಗಿಸಬೇಕು. ಅಬಕಾರಿ, ಕಸ್ಟಮ್, ಇತರ ಫಂಡ್, ಜಂಗಲ ಇವುಗಳ ಉತ್ಪನ್ನದ ಮೇಲೆ ಲೋಕಲ್‌ಫಂಡ ತೆರಿಗೆಯು ಯೋಗ್ಯ ಪ್ರಮಾಣದಿಂದ ಆಕರಿಸಲ್ಪಡಬೇಕು. ಇದೆಲ್ಲ ತೀರಿದ ಮೇಲೆ ಮತ್ತೂ ವೆಚ್ಚಕ್ಕೆ ಹಣ ಸಾಲದಿದ್ದರೆ, ಕೊನೆಗೆ ಲೋಕಲ್‌ಫಂಡು ಏರಿಸುವ ಮಾತು ಇದೇ ನ್ಯಾಯವಾದ ಕ್ರಮವೆಂದು ನಮ್ಮ ಮತವಿದೆ.

ಸ್ಥಾನಿಕ ವೃತ್ತಾಂತ

ಕುಮಟಾ— ಈ ವಾರದಲ್ಲಿ ಜೋರಾದ ಮಳೆ ಸುರಿಯಿತು. ಹವೆಯಲ್ಲಿ ಚಳಿಯ ತಂಪು ಉಂಟಾಗಿದೆ. ಈ ವಾರದಲ್ಲಿ ೧೫-೫೭ ಇಂಚು ಮಳೆ. ಈ ವರೆಗೆ ಅಂತು ೫೧-೫೭ ಇಂಚು ಮಳೆ ಬಿತ್ತು.

ಜುಲೈ ತಾ. ೩ನೇ ಶನಿವಾರಕ್ಕೆ ಇಲ್ಲಿಯ ಸಹಕಾರಿಗಳು ಸಹಕಾರಿ ಸುಗ್ಗಿ ಕಟ್ಟಿದರು. ಮುಂಜಾವಿಗೆ ಕನ್ನಡ ಶಾಲೆಯ ವಿದ್ಯಾರ್ಥಿಗಳ ಮೆರವಣಿಗೆಯು ಮೆರವಣಿಗೆಯು ನಡೆಯುತ್ತಿರುವಾಗ ರಾವಬಹಾದ್ದೂರ ಕಲ್ಯಾಣಪೂರಕರರು ಅಲ್ಲಲ್ಲಿ ನಿಲ್ಲಿಸಿ, ಹುಡುಗರ ಕಡೆಯಿಂದ "ಸಹಕಾರಕ್ಕೆ ಜಯವಿರಲಿ" ಎಂಬ ಜಯಘೋಷವನ್ನು ಮಾಡಿಸುತ್ತಿದ್ದರು. ಇದನ್ನು ನೋಡಿದವರು ಪ್ರಾಯ ಕಳೆದ ಮುದುಕರೂ ಪ್ರಾಯ ಬರದ ಅಜ್ಞಾನಿ ಬಾಲಕರೂ ಒಂದೇ ಬುದ್ಧಿಯವರೆಂದು ಉದ್ಗರಿಸುತ್ತಿದ್ದರು. ಮೆರವಣಿಗೆಯು ಕನ್ನಡ ಶಾಲೆಯಲ್ಲಿ ಮುಗಿದಬಳಿಕ ಹುಡುಗರಿಗೆ ಬತ್ತಾಸುಗಳು ಹಂಚಲಾಗಿದ್ದವು. ಪ್ರಮುಖರಿಗೆ ಚಹಾಪಾನದ ಕೊಡೋಣಾಗಿ, ಸಹಕಾರದ ಪ್ರಸಾರ ಮಾಡಲಾಯಿತು. ಸಾಯಂಕಾಲಕ್ಕೆ ರಾವಬಹಾದ್ದೂರ ಕಲ್ಯಾಣಪೂರಕರರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿತು. ಶಾಲೆ ಹುಡುಗ-ಹುಡುಗಿಯರ ಗದ್ಯ ಪದ್ಯಗಳಾದವು. ಕೆಲವು ಭಾಷಣಗಳಾದ ಬಳಿಕ, ರಾವಬಹಾದ್ದೂರರು ಸಹಕಾರಿಯ ಮೇಲೆ ದೇಸ್ಮೆಶ ದೇಶವನ್ನು ತೋರಿಸಿ, ಸಹಕಾರದ ಮಹತ್ವವನ್ನು ಬಣ್ಣಿಸಿದರು. ಅಧ್ಯಕ್ಷರ ಆಭಾರ, ಪ್ರೇಕ್ಷಕರ ಆಭಾರ ಮುಂತಾದ ವಿಧಿಗಳಾದ ಬಳಿಕ ಸಮಾರಂಭವು ಮುಗಿಯಿತು. ಅಸಹಕಾರದಲ್ಲಿ ಶಾಲೆಯ ಹುಡುಗರ ಪ್ರವೇಶವಾಗಬಾರದೆಂದು ನಿಷೇಧಿಸುವ ಧೋರಣಕ್ಕೆ 'ಸಹಕಾರದ ಸುಗ್ಗಿ'ಯಲ್ಲಿ ಯಾಕೆ ಪ್ರವೇಶ ಸಿಗಲಿಲ್ಲ ಎಂಬುದೊಂದು ಪ್ರಶ್ನೆ. ನೆರೆಯ ಹೆಗಡೆಯಲ್ಲಿಯೂ ಶನಿವಾರಕ್ಕೆ ಸಹಕಾರ ಸುಗ್ಗಿಯ ಉತ್ಸವವು ನೆರವೇರಿತು.

ಕುಮಟಾ ಮ್ಯುನಿಸಿಪಾಲಿಟಿಯವರು ಜನರಲ್ ಹವಿಕೊಟೆಯಲ್ಲಿ ಮೇ| ಅಯ್ಯರರೊಳಗೆ ಹೊನ್ನಾಂವ ಮಾರ್ಗವನ್ನು ಕಟ್ಟಿಸಬೇಕೆಂದು ನಿರ್ಧರಿಸಿದ್ದರು. ಇನ್ನೂತನಕ ಮಾರ್ಗದ ಕೆಲಸ ಪ್ರಾರಂಭವಾಗಿಲ್ಲವೆಂದು ಹೊನ್ನಾವರ ರೋಡಿನ ಬಸ್ಸು ಮುಕದಮರು ಬರೆಯುತ್ತಾರೆ.

ಉಡುಪಿ ತಾಲೂಕ ಫಜ್ಮಾವಾರು ಗ್ರಾಮದ ಅಷ್ಟ ಪಂಡಿತ ಅಗ್ನಿಹೋತ್ರಿ ಗೋಪಿ ದ ಸುಬ್ರಾಯಭಟ್ಟ ಎಂಬ ಜ್ಯೋತಿಷ್ಯ ಮಂತ್ರಶಾಸ್ತ್ರ ವಿಶಾರದರು ಇಲ್ಲಿಯ ಕುಂಭೇಶ್ವರ ದೇವಾಲಯದಲ್ಲಿ ಬಂದಿರುವರು. ಇವರಿಗೆ ಶ್ರೀ ಕಾಶೀಕ್ಷೇತ್ರದ ಶ್ರೀ ಭಾರತಧರ್ಮ ಮಹಾಮಂಡಳದವರು 'ದೈವಜ್ಞರತ್ನ'ವೆಂಬ ಕಿತಾಬನ್ನು ಅರ್ಪಿಸಿರುವರು. ಇವರ ಮುಕ್ಕಾಮು ಇಲ್ಲಿ ಸ್ವಲ್ಪ ದಿವಸಗಳಿರುವದು.

ಅಂಕೋಲಾ— ಇತ್ತ ಮಳೆ ಜೋರಾಗಿ ಬೀಳುತ್ತಿದೆ. ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರಾದ ಶ್ರೀ|| ಗೋಪಿಯವರು ಇಲ್ಲಿಯ ಜಿಲ್ಲಾ ಬೋರ್ಡಿನ ಮೆಂಬರರಾದ ರಾ| ವಿಶ್ವನಾಥ ಪ್ರಭು ಹಾಗು ರಾ| ಭಾಸ್ಕರರಾವ ಸುಜೀವ ದಾಂಡೇಕರರೊಡನೆ ಪುಂಜಗೇರಿ ಮತ್ತು ಸಂಕಪತ್ತಳಗಳ ಸಂಕಗಳನ್ನು ನೋಡಿದರು. ಸಂಕಗಳ ದುರಸ್ತಿಯನ್ನು ಶೀಘ್ರವೇ ಕೈಕೊಳ್ಳಬೇಕು.

ಇಲ್ಲಿಯ ಸಹಕಾರಿ ಸಂಘದ ಸಭೆಯಲ್ಲೊಂದು ಗದ್ದಲು. ಕಳೆದ ರವಿವಾರ-ಸೋಮವಾರ ಸಂಘದ ಸಭೆಯು ಮೂರಾವರ್ತಿ ಸೇರಿತು. ರವಿವಾರ ಸಾಯಂಕಾಲಕ್ಕೆ ಒಮ್ಮೆ, ಸೋಮವಾರ ಬೆಳಿಗ್ಗೆ ಇನ್ನೊಮ್ಮೆ, ಅದೇ ದಿನ ಸಾಯಂಕಾಲಕ್ಕೆ ಮತ್ತೊಮ್ಮೆ ಹೀಗೆ ಮೂರು ಬಾರಿ ಸಭೆ ಸೇರಿತು. ಬಹಳ ವಾದವಾಯಿತು. ಸಭಾಸದರಿಗೆ ಲಾಭ ಹಂಚುವ ವಿಷಯ ಬಹಳ ಕರ್ಕಶವಾದದ್ದು. ೧೧ ರಂತೆ ಲಾಭ ಹಂಚಬೇಕೆಂಬ ಸೂಚನೆಯೂ ಸಮ್ಮತವಾಗಲಿಲ್ಲ. ಈ ವರುಷ ಏನೂ ಲಾಭ ಹಂಚಬಾರದೆಂಬ ಸೂಚನೆಯು ಬಿದ್ದುಹೋಯಿತು. ಅಂತು ಗೊಂದಲವೇ ಗೊಂದಲ.

ಇಲ್ಲಿಯ ಡಿಪೋದಲ್ಲಿ ಉರವಲ ಕಟ್ಟಿಗೆ ಇಲ್ಲ. ಈ ಕುರಿತು ಟಪಾಲುಕಟ್ಟಿಯ ಮಾಸ್ತರರು ಡಿವ್ಹಿಜನಲ್ ಫಾರೆಸ್ಟ ಆಫೀಸರರಿಗೆ ಬರೆಕೊಂಡರೆ ಪರವಾನಿಗೆ ತೆಗೆಯಲಿಕ್ಕೆ ಆಜ್ಞಾಪಿಸುತ್ತಾರೆ. ಈ ಮಳೆಗಾಲದಲ್ಲಿ ಪರವಾನಿಗೆ ತೆಗೆದು ಏನು ಮಾಡುವದು? ಕಾಲವಶಾತ್ ಯಾರಾದರೂ ದೈವಾಧೀನರಾದರೆ ಪರವಾನಿಗೆ ತೆಗೆದು ಉತ್ತರವು ಆಗುವವರೆಗೆ ಭೂಭಾರ ಹಾಕಿದ ಎಂದಿಗೆ ಹೊಣೆಗಾರರ್ಯಾರು?

ಕಾರವಾರ:— ಈ ವಾರದಲ್ಲಿ ಇತ್ತ ಸರಿಯಾಗಿ ಮಳೆ ಬೀಳುತ್ತಿದೆ. ಕಾಳು ಕಡಿಗಳ ದರವು ಏರಿಕೆಯಲ್ಲಿತ್ತು. ಅಷ್ಟರಲ್ಲಿ ಮಳೆ ಬಿದ್ದದರಿಂದ ದರವು ಅಷ್ಟಕ್ಕೆ ತಡೆದು ನಿಂತಿದೆ.

ರಾ|| ಮಂಜುನಾಥ ವಿಠ್ಠಲ ಕಾಕಿಣಿಯವರಿಗೆ ಮೊನ್ನೆ "ರಾವಸಾಹೇಬ" ಕಿತಾಬು ದೊರಕಿದೆ.

ಸಹಕಾರಿ ಸಂಘದ ಸಭೆಯು ಶ್ರೀ| ಮಾಧವ ಮಂಜುನಾಥ ಶಾನಭಾಗರ ಅಧ್ಯಕ್ಷತೆಯಲ್ಲಿ ಸೇರಿತು. ಕಳೆದ ವರುಷದ ಆಯವ್ಯಯ ಪತ್ರಿಕೆಯು ಮಂಜೂರಾಯಿತು. ಸಂಘದ ಚೇರಮನರು ದಿವಾಣಿ ಕೋರ್ಟಿನಲ್ಲಿ ಸಾಲವನ್ನು ವಸೂಲ ಮಾಡಿಕೊಳ್ಳುವದಕ್ಕಾಗಿ ಮಾಡಿದ ದಾವೆಗಳು ದಿವಾಣಿ ಕೋರ್ಟಿಗೆ ಅಧಿಕಾರವಿಲ್ಲೆಂದು ತಿರಸ್ಕರಿಸಲ್ಪಟ್ಟಿದ್ದವು. ಚೇರಮನರು ಪ್ರಾಮಾಣಿಕ ಬುದ್ಧಿಯಿಂದ ದಾವೆಯನ್ನು ದಾಖಲು ಮಾಡಿದ್ದರಿಂದ ಆ ಕುರಿತು ಒದಗಿದ ನಷ್ಟವನ್ನು ಸಂಘವು ಸಹಿಸಬೇಕೆಂದು ಗೊತ್ತಾಯಿತು. ಸಂಘದಲ್ಲಿ ಠೇವು ಇಟ್ಟವರಿಗೆ ಸಂಘದ ಉತ್ಪನ್ನದೊಳಗಿಂದ ಶೇಕಡಾ ೧೫ ರಷ್ಟು ಬಡ್ಡಿಯನ್ನು ಹಂಚಬೇಕೆಂದು ಗೊತ್ತಾಯಿತು.

ಕಳವಾದ ಖುನಿ ಪ್ರಕರಣದಲ್ಲಿ ಪೋಲೀಸರು ಒಬ್ಬ ಕ್ರೈಸ್ತ ಜಾತಿಯ ಹೆಂಗಸಿಗೆ ಹಿಡಿದು ಬಿಟ್ಟಿದ್ದ ಸಿರುವರ ಚಂತಿವೆಯಲ್ಲಿ ಹಿಡಿಗಿದ ಬೆಲೀಫರು ಪ್ರಕರಣದ ಪತ್ತೆಯು ಇನ್ನೂ ಆಗಲಿಲ್ಲ. ಪೋಲೀಸರ ಸ್ವಲ್ಪ ಉದ್ಯೋಗಿಯಾಗಲಿ, ಮಿ| ಮೋಂಗೋ ನೆಂಯವರು ಡಿ| ಮೆಜಿಸ್ಟ್ರೇಟರಾದ್ದರಿಂದ ಅವರ ಕ ಡೆ ಫಿರ್ಯಾದಿ ಅಪೀಲ ಮಾಡುವ ಕಷ್ಟವಾಗ ದು ಬಲು ದೊಡ್ಡ ಕಷ್ಟವಾಗಿದೆ ಅಪೀಲು ದಾ ಖಲು ಪಡಿಸಿದ ಕೂಡಲೆ ಕೆಳಕೋರ್ಟಿನಿಂದ ಮೂ ಲ ಕಾಗದ ಪತ್ರಗಳನ್ನು ತರಿಸ ಪಡಿಸಿ ಪ್ರಾಸ್ತಾವಿಕ ವಿಚಾರ ಸದ ಯ ಕಾಗದ ಪತ್ರಗಳ ನಕಲು ಮಾಡಬೇಕಾದರೆ, ಮೂಲ ಕೋರ್ಟಿನ ಕಾಗದ ಪತ್ರಗಳ ಮಂಜೂರಿ ಸಿಕ್ಕ ಬಳಿಕವೇ ಕಾಗ ಪತ್ರ ಇದರಿಂದ ಜನರಿಗೊಂದು ದೊಡ್ಡ ಕಷ್ಟ ನಷ್ಟ. ಪ್ರಾಸ್ತಾವಿಕ ವಿಚಾರಣೆಯಲ್ಲಿಯೇ ಅನೇಕ ಅಪೀಲುಗಳು ತಳ್ಳಿಹೋಗುತ್ತವೆ.

ಶಿರ್ಸಿ— ಸದ್ಯಕ್ಕೆ ಬಂದ ಡಾ| ರಾಮರಾವ ಕಲ್ಲಿಯವರು ನೇತ್ರರೋಗದ ಮೇಲೆ ಚಲೋ ಚಿಕಿತ್ಸೆ ಮಾಡುತ್ತಾರೆ ಕಣ್ಣಿಗೆ ಪರೆ ಬಂದ ಜನರಿಗೆ ಶಸ್ತ್ರಪ್ರಯೋಗದಿಂದ ಪರೆಯನ್ನು ತೆಗೆದು ಗುಣಮಾಡಿಕೊಡುತ್ತಾರೆ ಹೀಗೆ ಇಬ್ಬರಿಗೆ ಗುಣವಾಗಿಯದೆ ಈ ಪ್ರಯೋಗಗಳು ಅಲ್ಲಿನ ಪಾಂಡಿತ ಚಿಕಿತ್ಸಾಲಯದಲ್ಲಿ ನಡೆಯುತ್ತವೆ

ರಾವಸಾಹೇಬ ನೆಟ್ಟೂರ ಹನುಮಂತಗೌಡರವರು ಬೆಗಳೂರಿಗೆ ಹೋದಾಗ ಬೆಗಳೂರಿನ ಅಸ್ಪೃಶ್ಯ ವಿದ್ಯಾರ್ಥಿಯನಾದ ಬರಮಾ ಜೀವಪ್ಪಾ ಮೇತ್ರಿ ಎಂಬ ಹುಡುಗನ ಆತುರವನ್ನು ವಿದ್ಯಾಪ್ರೇಮವನ್ನೂ ನೋಡಿ, ಅಲ್ಲಿಯ ತ್ರೀ ಮಾರ್ಕಾಂಬು ಹೈಸ್ಕೂಲಿನಲ್ಲಿ ಅತನಿಗೆ ಉಚಿತವಾಗಿ ಶಿಕ್ಷಣ ಸಿಗುವಂತೆ ವ್ಯವಸ್ಥೆ ಮಾಡಲೊಪ್ಪಿದ್ದಾರೆ, ಎಂದು ಮುಂಡಗೋಡ ಪೇಠಾ ಹೊಸಕೊಪ್ಪದ ರಾ| ಅಡಿವೆಪ್ಪನವರು ತಿಳಿಸುತ್ತಾರೆ

ಜಿಲ್ಹಾ ಕಾಂಗ್ರೆಸ ಕಮೀಟಿಯು ವಿಶೇಷ ಮಹಾಸಭೆಯು ಜುಲೈ ತಾರೀಖು ೨೩ ನೇಗೆ ಇಲ್ಲಿಯ ಕಾಂಗ್ರೆಸ ಕಮೀಟಿಯ ಕಚೇರಿಯಲ್ಲಿ ಸೇರಲಿಕ್ಕಿದೆ. ಆ ಸಮಯ ಪ್ರಾಂತಿಕ ಶಾಸನ ಕೌನ್ಸಿಲಿಗೆ ಕಾಂಗ್ರೆಸ ಪಕ್ಷದ ಉಮೇದ್ವಾರರ ನೇಮಣೂಕಿಯಾಗುವದು. ಇತರ ವಿಷಯಗಳೂ ಚರ್ಚಿಸಲ್ಪಡುವವು

ಇಲ್ಲಿಯ ತಾಲೂಕ ಲೋಕಲ್ ಬೋರ್ಡಿನ ಎಕ್ಸಂಬಿ ಗ್ರೂಪದ ಮೆಂಬರರಾದ ರಾ| ಸುಬ್ಬುಭಟ್ಟ ಗೋವಿಂದ ಭಟ್ಟರವರು ಮರಣಪಟ್ಟದ್ದರಿಂದ ಅವರ ಸ್ಥಳದಲ್ಲಿ ಮೆಂಬರರನ್ನಾರಿಸುವ ಕೆಲಸವು ತಾ ೨೭-೯-೩೮ ನೇಗೆ ಎಕ್ಸಂಬಿ ಗ್ರಾಮದಲ್ಲಿ ನಡೆಯುವದು. ನೇಮಣೂಕಿ ಪತ್ರಗಳನ್ನು ೧೯ ತಾರೀಖಿನೊಳಗೆ ಕಳಿಸಿಕೊಡಬೇಕು

— ಕಾಂಘೋಯದಲ್ಲಿ ಅರಿವೆಯ ಗಿರಣಿಗಳೊಳಗಿನ ಜನ ಕೂಲಿಕಾರರು ಸಂಪು ಮಾಡಿರುವರು ಅರಳಿಯ ಗೆಂಟುಗಳಿಗೆ ಬೆಂಕಿ ಹಚ್ಚಿದರು, ಬೆಂಕಿ ನಂದಿಸುವ ಯಂತ್ರಕ್ಕೆ ಕಲ್ಲನ್ನೆಸೆದರು ೨೦ ಜನರಿಗೆ ಸೆರೆಹಿಡಿದಿರುವರು

ವೃತ್ತಸಾರ.

— ತೇಹರಾನದೊಳಗಿನ ಕೋರ್ಟಾಧಿಕಾರಿಗಳ ಅಂತರ್ನಿಕ್ರಿಯೆಗಳಿಗೆ ಒಬ್ಬರು ಗುಂಡು ಹಾರಿ ಕೊಂದರು, ಆ ಒಳಿಕ, ತಾವೂ ಗುಂಡು ಹಾರಿಕೊಂಡು ಸತ್ತರು.

— ಗುಜರಾಥ ಪ್ರಾಂತದಲ್ಲಿ ೩ ವರ್ಷಗಳಿಂದ ಸರಿಯಾಗಿ ಮಳೆಯಿಲ್ಲ ಜೂನ ೩೦ನೇ ತಾರೀಖಿನ ವರೆಗೂ ಮಳೆಯಿಲ್ಲ. ನೆರೆಹೊರೆಯ ಗೌಳಿಗರು ದನಕರುಗಳನ್ನು ಕಟ್ಟಿಕೊಂಡು ಅಹಮ್ಮದಾಬಾದಿಗೆ ಬಂದಿರುವರು ಅವುಗಳಿಗಾಗಿ ಮುನ್ಸಿಪಾಲಿಟಿ ಮ್ಯಾನೇಜರರು ೧೦ ಸಾವಿರ ರೂಪಾಯಿಗಳನ್ನು ಅರ್ಪಿಸಿರುವರು

— ದೇಶಬಂಧುಗಳ ಒಬ್ಬರೇ ಮಗಂದಿರಾದ ಶ್ರೀ ಚಿರರಂಜನ ದಾಸರವರು ಕಳೆದ ತಾ. ೩೦ನೇ ರವಿವಾರಕ್ಕೆ ಹೃದ್ರೋಗದಿಂದ ಕಾಲವಾದರು. ಚಿರಂಜನ ದಾಸರವರ ಪ್ರಾಯವು ಮರಣ ಸಮಯಕ್ಕೆ ಬರೇ ೩೭ ವರುಷ! ವಾಸಂತಿದೇವಿಯವರ ಮೇಲೆ ದೊಡ್ಡದೊಂದು ಕಷ್ಟ ಬಂತು"

— ೩೫ ವರ್ಷಗಳ ಹಿಂದೆ ಹಿಂದುಸ್ಥಾನದಲ್ಲಿ ೨೦ ಕೋಟಿ ದನಗಳಿದ್ದವು ಈಗ ೯ ಕೋಟಿ ಇವೆ! ನಮ್ಮ ಗೋಧನದ ವೈಭವ ಕೇಳಿರಿ

— ಆಫ್ರಿಕೆಯಲ್ಲಿ ಕೈರೋ ಅಂದರೆ, ಉತ್ತರ ತುದಿ, ಕೇಪಟೌನ ಅಂದರೆ, ದಕ್ಷಿಣ ತುದಿ, ಮಧ್ಯದ ಅಂತರವು ೫೨೯೦ ಮೈಲು ಈ ಪ್ರವಾಸವನ್ನು ನಾಲ್ಕು ವಿಮಾನಗಳು ೬೩ ತಾಸುಗಳಲ್ಲಿ ನೆರವೇರಿಸಿದವು

— ಬೆಳಗಾವಿಯ ಲೋಕಪ್ರಿಯ ವಕೀಲರಾದ ಶ್ರೀ ಅನಂತರಾವ ಮಾಡಗೇರಿಯವರು ಬುಧವಾರ ತಾರೀಖು ೨೯ ನೇಗೆ ವೈಕುಂಠವಾಸಿಗಳಾದರು'

— ಮೈಸೂರಿನ ಪ್ರಜಾಪ್ರತಿನಿಧಿಸಭೆಯು ಸಂಸ್ಥಾನಗಳಲ್ಲಿ ಗೋವಧವನ್ನು ಪ್ರತಿಬಂಧಿಸಬೇಕೆಂದು ಠರಾವಿಸಿದೆ ಕೆಲಕ್ಕೆ ಹಿಂದೂ ಪ್ರಮುಖರು ವಿರೋಧ ಮಾಡಿದ್ದು ಶೋಚನೀಯವು!

— ಬಂಗಾಲ ಪ್ರಾಂತದ ಕೋಮಿಲ್ಲಾ ಪಟ್ಟಣದಲ್ಲಿ ಕಳೆದ ೩೦ನೇ ತಾರೀಖಿಗೆ ಭಯಂಕರ ಬಿರುಗಾಳಿ ಬೀಸಿ ಬಹಳ ಅನರ್ಥ ಮಾಡಿದೆ. ಮನೆಗಳ ತಗಡುಗಳು ಗಾಳಿಪಟಗಳಂತೆ ಹಾರ್ಯಾಡಿದವು. ಸಿಡಿಲು ಬಡಿದು ಒಬ್ಬ ಸ್ತ್ರೀ ಹಾಗು ಹುಡುಗಂತವರು ಮಡಿದರು!

— ಆಸಾಮ ಪ್ರಾಂತದ ಪ್ರಮುಖರಾದ ಶ್ರೀ ಜೆ ಜಿ ಘೋಕನ್‌ರವರು ಶಿಲಾಂಗದ ಮ್ಯುನಿಸಿಪಾಲಿಟಿಯಲ್ಲಿ ಭಾಷಣ ಮಾಡುತ್ತಿದ್ದರು ಒಮ್ಮೆಲೇ ಕಾಲೆತಿರುಗಿ ಬಿದ್ದರು ಮನೆಗೆ ಒಯ್ದ ಮೇಲೆ ಪ್ರಾಣೋತ್ಕ್ರಮಣವಾಯಿತು ಮರಣ ಸಮಯ ೯೪ ವರುಷ ಪ್ರಾಯ!

— ನೆಲ್ಲೂರ ಜಿಲ್ಹೆಯೊಳಗಿನ ತಾಲೂಕ ಬೋರ್ಡುಗಳು ಖಾದಿಯ ಪ್ರಚಾರ ಮಾಡಬೇಕೆಂದು ಜಿಲ್ಹಾ ಪರಿಷತ್ತು ನಿರ್ಧರಿಸಿದೆ

— ಧಾರವಾಡ ಜಿಲ್ಹೆಯ ಕುರುಬರ ದೇವಸ್ಥಾನದಲ್ಲಿ ಬಾಲಕ ಮೊಳ ಶಿಕ್ಷಣವನ್ನು ಒತ್ತಾಯದಿಂದ ಉಪಕ್ರಮಿಸಬೇಕಾಗಿ ಠರಾವಪಾಸಾಗಿದೆ, ಗೋವುಗಳ ರಕ್ಷಣೆಯು ಅಗತ್ಯ ನಿರ್ಧಾರವಾಗಿರುವದು, ಪ್ರಾಥಮಿಕ ಶಿಕ್ಷಣಕ್ಕೆ ಸಾರ್ವದಾಂಜಲಿಯಿಂದ 'ಶಿಕ್ಷಾರಸ ಮಾಡಿದಂತೆ ಸಂಬಳ ಕೊಡಬೇಕೆಂದು ಗೊತ್ತಾಗಿದೆ, ಕುರುಬರಿಗೆ ಬಂಜರು ಬಿದ್ದ ಭೂಮಿ, ಕುರಿಗಳ ಮೇವಿಗೆ ಅಡವಿ, ಕಂಬಳಿ ಲೈಸನ್ಸಗಳ ಅಗತ್ಯ ಬೇಡಿಕೆಯಾಗಿದೆ, ಈ ಠರಾವುಗಳು ಎಲ್ಲರಿಗೆ ಸಮ್ಮತವಿವೆ

— ಮೈಸೂರಿನ ನರಸೀಪುರದಲ್ಲಿ ಕಡಿಯರು ನರಸಿಂಹಸ್ವಾಮಿ ದೇವಾಲಯದಲ್ಲಿ ಪ್ರವೇಶ ಸಿಗುವದಕ್ಕಾಗಿ ಸತ್ಯಾಗ್ರಹವನ್ನಾರಂಭಿಸಿರುವರು ಸತ್ಯಾಗ್ರಹಿಗಳಿಗೆ ಸರಕಾರದಿಂದ ಪೀಡೆಯಾಗದಂತೆ ಎಚ್ಚರಿಕೆ ಇಡಲ್ಪಡುವದಾಗಿ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಶ್ರೀ ಗೋಪಾಲಕೃಷ್ಣಯ್ಯರಿಗೆ ಉತ್ತರ ದೊರಕಿದೆ

— ಜಾವಾ ದ್ವೀಪದೊಳಗಿನ ಪಿಡಂಗ ಎಂಬ ಊರ ಪಟ್ಟಣವು ಜುಲೈ ೧ನೇ ತಾರೀಖಿಗೆ ಧಕ್ಕನೆ ಕುಸಿದುಬಿದ್ದು ೩೦೦ಕ್ಕೆ ಮಿಕ್ಕಿ ಜನರು ಸತ್ತರು ಉಗಿಬಂಡಿಯೊಂದು ಹೊರಬೀಳು ತಯಾರಾಗಿತ್ತು, ಅದು ಧಕ್ಕನೆ ಹೂಳಿಹೋಯಿತು

—ರಶಿಯಾ ದೇಶದೊಳಗಿನ ವೊಲ್ಗೋನಿಯಾ ಎಂಬಲ್ಲಿ ಪೋಲೀಸ ಜನರು ಕಬಕಿಯ ಪ್ರಯೋಗ ಮಾಡುತ್ತಿರುವಾಗ, ಒಂದು ಗುಂಡು ಧಕ್ಕನೆ ಒಡೆದು ೩೬ ಜನರನ್ನು ಕೊಂದಿತು. ೪೧ ಮಂದಿಗಳಿಗೆ ಘಾಯಗಳಾದವು.

— ಮದ್ರಾಸದ ಇನ್‌ಕಮ್ ಟಾಕ್ಸ ಆಫೀಸಿನಲ್ಲಿದ್ದ ಗ್ಯಾಸಿಗೆ ಬೆಂಕಿ ತಗಲಿ ಆಫೀಸಿನೊಳಗಿನ ಕಿಡಿಕಿಗಳೆಲ್ಲ ಚೂರು ಚೂರು'

— ಮುಂಬಯಿಯ ಬೆರಿಸ್ಟರ ಮುಕುಂದರಾವ ಜಯಕರರವರಿಗೆ ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿಗಳಾಗಲು ಸರಕಾರವು ನಿಮಂತ್ರಿಸಿತ್ತಂತೆ ಬೆರಿಸ್ಟರ ಜಯಕರರವರು ನಿರಾಕರಿಸಿದರಾಗಿ ಸುದ್ದಿ.

— ಲೋಕಲ್ ಬೋರ್ಡು ಹಾಗು ಮ್ಯುನಿಸಿಪಾಲಿಟಿಗಳ ಪರಿಷತ್ತು ಪುಣೆಯೊಳಗಿನ ನಗರಭವನದಲ್ಲಿ ಜುಲೈ ತಾ ೨೧ ಹಾಗು ೨೪ ನೇಗೆ ಸೇರಲಿಕ್ಕಿದೆ

— ಕಲಕತ್ತೆಯ ವಿಶ್ವವಿದ್ಯಾಲಯದವರು ಕಾಲೇಜಿನ ಅಭ್ಯಾಸಕ್ರಮವನ್ನು ದೇಶಭಾಷೆಯಲ್ಲಿ ಕಲಿಸಬೇಕೆಂದು ನಿರ್ಧರಿಸಿರುವದು ವಿದ್ಯಾರ್ಥಿಗಳ ಮೇಲಿನ ಪರಭಾಷೆಯನ್ನು ಕಲಿಯುವ ದೊಡ್ಡದೊಂದು ಹೊರೆಯು ಇಳಿದಂತು

BATLIBOI'S

Accountancy Training Institute

Recognised by

The G. D. A. Board

Offers best tra ning in Accounting, Banking, Company Management and Secretarial Work and Theory and Practice of Commerce

Best staff, Individual attention fee moderate, and payable by instalments.

Send for Prospectus at Yusuf Buildings, Churchgate street, Fort, Bombay

You are invited to make thorough enquiry before joining.

TUITION BY POST
IS OUR SPECIALITY.

ಅತ್ಯದ್ಭುತ! ಅತ್ಯದ್ಭುತ!!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲಿಕ್ಸಿರ್ ಆಫ್ ಲೈಫ್

ಅಂದರೆ, ಸರ್ವ ರೋಗ ನಾಶಕ, ಸರ್ವಾರೋಗ್ಯದಾಯಕ ಅಜೀರ್ಣ ತಲೆನೋವು, ವಾಂತಿ, ಅತಿಸಾರ, ಜ್ವರ, ಕಾಲರಾ, ಜ್ವರ, ಕಿವಿನೋವು, ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಹೊಡೆದು ಚೆಲ್ಲುವ ಒಂದೇ ರಾಮಬಾಣವಿದು! ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ!! ಒಂದು ಸೀಸೆಯಿದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ!!!

ಒಂದು ಸೀಸೆಗೆ ರೂ ೧-೮-೦ ಸಣ್ಣ ಸೀಸೆಗೆ ರೂ ೦ ೮-೦ ಟಪಾಲು ಖರ್ಚು ಬೇರೆ

ಜೀವನಾಧಾರ ಡಿಪೋ, ಮೈಸೂರು

ಬ್ರಾಂಚ.- ಜೀವನಾಧಾರ ಡಿಪೋ, ಹುಬ್ಬಳ್ಳಿ

ಮಹಾತ್ಮರ ಆತ್ಮಚರಿತ್ರ

(೬) ನಾತಾಲಕ್ಕೆ ಮುಟ್ಟಿದೆನು

ಇಂಗ್ಲೆಂಡಕ್ಕೆ ಹೋಗುವಾಗ ನನಗೆ ಬಹಳ ವಿರಹತಾಪವುಂಟಾಗಿತ್ತು. ಅಷ್ಟು ವಿರಹತಾಪವು ದಕ್ಷಿಣ ಆಫ್ರಿಕೆಗೆ ಹೋಗುವಾಗ ನನಗೊದಗಲಿಲ್ಲ. ನನ್ನ ತಾಯಿಯು ಮೊದಲೇ ತೀರಿಕೊಂಡಿದ್ದಳು; ಪ್ರಪಂಚದ ಕೆಲವು ಜ್ಞಾನವು ನನಗೆ ಪ್ರಾಪ್ತವಾಗಿತ್ತು. ಪರದೇಶಗಳಿಗೆ ಪ್ರಯಾಣ ಮಾಡುವ ಅಭ್ಯಾಸವೂ ನನಗುಂಟಾಗಿತ್ತು. ರಾಜಕೋಟದಿಂದ ಮುಂಬಯಿಗೆ ಹೋಗುವದಾದರೂ ಹೊಸ ಸಂಗತಿಯಲ್ಲ.

ಈ ಬಾರಿ ಹೆಂಡತಿಯನ್ನು ಬಿಟ್ಟು ಹೋಗಬೇಕಾದರೆ, ಬಹಳ ಕಷ್ಟವೆನಿಸಿತು. ಇಂಗ್ಲೆಂಡದಿಂದ ಮರಳಿ ಬಂದ ಬಳಿಕ, ನಮಗೊಂದು ಕೂಸು ಹುಟ್ಟಿತ್ತು. ಈಗಲೂ ನಮ್ಮೊಳಗಿನ ಪ್ರೀತಿಯು ವಿಷಯಲಂಪಟತೆಯದೇ ಎನಿಸಬಹುದು. ಆದರೂ ನಾವು ಕ್ರಮವಾಗಿ ನಿರಪೇಕ್ಷರಾಗುತ್ತಿದ್ದೆವು. ಯುರೋಪ ಖಂಡದಿಂದ ಮರಳಿ ಬಂದ ತರುವಾಯ ನಾವು ಗಂಡಹೆಂಡರು ಒಟ್ಟಿಗೆ ಇದ್ದದ್ದೇ ಬಹಳ ಅಪರೂಪ. ನಾನು ಇತ್ತ ಅವಳಿಗೆ ಕಲಿಸಲಾರಂಭಿಸಿದೆ. ನನ್ನ ಕಲಿಸೋಣವೇನು ಸರಿಯಾಗಿ ಸಾಗುತ್ತಿರಲಿಲ್ಲ. ಇದರಿಂದ ನನ್ನ ಹೆಂಡತಿಯು ಸ್ವಲ್ಪ ಸುಧಾರಿಸಹತ್ತಿದ್ದಳು. ಆದರಿಂದ ನಾವಿಬ್ಬರೂ ಈ ಸುಧಾರಣೆಗಳನ್ನು ಮುಂದರಿಸಲು ಒತ್ತಟ್ಟಿಗೆ ಇರಬೇಕಾಗಿತ್ತು. ಆದರೆ, ನಾನು ದಕ್ಷಿಣ ಆಫ್ರಿಕೆಗೆ ಹೊರಟೆ. ಹೆಂಡತಿಯಿಂದ ಅಗಲುವದು ಅಷ್ಟು ಅಸಹ್ಯವಾಗಲಿಲ್ಲ. "ಒಂದು ವರುಷದಲ್ಲಿ ನಾನು ಮರಳಿ ಬರುವೆನು. ಒಟ್ಟುಗೂಡಿ ಸಂಸಾರ ಮಾಡುವಾ," ಎಂದು ಹೆಂಡತಿಗೆ ಸಮಾಧಾನ ಹೇಳಿ, ನಾನು ರಾಜಕೋಟದಿಂದ ಮುಂಬಯಿಗೆ ಬಂದೆ. "ದಾದಾ ಅಬ್ದುಲ್ಲಾ" ಕಂಪನಿಯ ಏಜಂಟರು ನನಗೆ ಬೋಟು ಟಿಕೀಟು ತಗಿಸಿ ಕೊಡಬೇಕಾಗಿತ್ತು. ಆದರೆ ಬೋಟಿನ ಮೇಲೆ ಮಲಗುವ ಕೋಣೆಗಳೆಲ್ಲ ತುಂಬಿಹೋಗಿದ್ದವು. ಆ ಬೋಟಿನಿಂದ ನಾನು ಹೋಗದಿದ್ದರೆ, ಮುಂಬಯಿಯಲ್ಲಿ ನಿಷ್ಕಾರಣವಾಗಿ ಕಾಲಹರಣ ಮಾಡಬೇಕಾಗುತ್ತಿತ್ತು. ಏಜಂಟರು ನುಡಿದದ್ದೇನಂದರೆ — "ನಾವು ಬಹಳ ಯತ್ನ ಮಾಡಿದೆವು; ಆದರೆ, ೧ನೇ ತರಗತಿಯ ಟಿಕೀಟು ಸಿಗಲಿಲ್ಲ; ನೀವು ಹಡಗಿನ ಅಂತಸ್ತಿನ ಮೇಲೆ ಕೂತುಕೊಂಡು ಹೋಗಲಿಕ್ಕೆ ಒಪ್ಪಿದರೆ ವ್ಯವಸ್ಥೆ ಮಾಡುತ್ತೇವೆ, ಊಟವನ್ನು ಹಡಗದ ಸಲೂನಿನಲ್ಲಿ ಕೊಳ್ಳಬಹುದು." ೧ನೇ ತರಗತಿಯಲ್ಲಿ ನಾನು ಪ್ರವಾಸ ಮಾಡುವ ಆ ದಿವಸಗಳವು. ಬ್ಯಾರಿಸ್ಟರನು ಅಂತಸ್ತಿನ ಪ್ರಯಾಣಿಕನಾಗಿ ಹೋಗುವದು ಹೇಗೆ? ಆದರಿಂದ ನಾನು ಹಾಗೆ ಹೋಗಲು ಒಪ್ಪಲಿಲ್ಲ. ೧ನೇ ತರಗತಿಯ ಟಿಕೀಟು ಸಿಗಲಾರದೆಂಬ ಮಾತಿನಲ್ಲಿ ನನಗೆ ನಂಬಿಗೆಯುಂಟಾಗಲಿಲ್ಲ. ಏಜಂಟರು ಸಟೆಯನ್ನಾಡಬಹುದೆಂದು ನನಗೆ ತೋರಿತು. ಏಜಂಟರ ಅಪ್ಪಣೆ ಪಡೆದು, ನಾನೇ ಆ ಟಿಕೀಟಿನ ಖಟಪಟಿ ಮಾಡಹತ್ತಿದೆನು. ನಾನು ಹಡಗದ ಮೇಲೆ ಹೋಗಿ ಹಡಗದ ಯಜಮಾನನನ್ನು ಭೆಟ್ಟಿಕೊಂಡೆ. ಅವನು ಮರೆಮಾಚದೆ ನುಡಿದದ್ದೇನಂದರೆ: — "ಹೀಗೆ ಯಾವಾಗಲೂ ಹಡಗದ ಮೇಲೆ ಗದ್ದಲವಾಗುವದಿಲ್ಲ, ಆದರೆ, ಮೊಝಾಂಬಿಕ್‌ದ ಗವರ್ನರ್ ಜನರಲ್‌ರು ಈ ಹಡಗದಿಂದ ಪ್ರಯಾಣ ಮಾಡುತ್ತಿರುವದರಿಂದ ೧ನೇ ತರಗತಿಯ ಸ್ಥಾನಗಳೆಲ್ಲ ತುಂಬಿಹೋಗಿವೆ."

"ನನಗೆ ಹ್ಯಾಗಾದರೂ ಮಾಡಿ ನೀವು ಸ್ಥಳ ಕೊಡಲಾರಿರೇನು?" ಎಂದು ನಾನು ಕೇಳಿದೆನು.

ನನಗೆ ಮೇಲಿನಿಂದ ಕೆಳತನಕ ಅವರು ನೋಡಿದರು, ಹಾಗು ನಕ್ಕರು. "ಒಂದು ಉಪಾಯವಿದೆ; ನನ್ನ ಕೋಣೆಯಲ್ಲಿ ಒಂದು ಹೆಚ್ಚಿನ ಜಾಗವಿದೆ; ಅದನ್ನು ಪ್ರಯಾಣಿಕರಿಗೆ ಕೊಡುವ ವಾಡಿಕೆಯಿಲ್ಲ; ಆದರೆ, ಅದನ್ನು ನಿಮಗೆ ಕೊಡಲು ನಾನು ತಯಾರಿದ್ದೇನೆ."

ನಾನು ಅವರ ಉಪಕಾರ ಮನ್ನಿಸಿ ಏಜಂಟರ ಕಡೆಯಿಂದ ಆ ಟಿಕೀಟನ್ನು ಪಡಕೊಂಡೆ. ೧೮೯೩ನೇ ಇಸ್ವಿಯ ಎಪ್ರಿಲ್ ತಿಂಗಳಲ್ಲಿ ದಕ್ಷಿಣ ಆಫ್ರಿಕೆಯೊಳಗೆ ನನ್ನ ವಿಧಿಘಟನೆಯನ್ನು ನೋಡಲು ನಾನು ಹುರುಪಿನಿಂದ ಪ್ರಯಾಣ ಮಾಡಿದೆನು.

ಲಾಮೂ ಎಂಬ ಮೊದಲನೇ ಬಂದರವು. ಅಲ್ಲಿ ನಾವು ೧೩ ದಿವಸಗಳಲ್ಲಿ ಮುಟ್ಟಿದೆವು. ಇಷ್ಟರತ್ತಿಗೆ ನಾನೂ, ಕಪ್ತಾನರೂ ದೊಡ್ಡ ಗೆಳೆಯರಾಗಿದ್ದೆವು. ಕಪ್ತಾನರಿಗೆ ಚದುರಂಗದ ಆಟವಾಡುವದು ಬಹಳ ಪ್ರೀತಿ. ಆದರೆ, ಆ ಆಟವನ್ನು ಅವರು ಆಗ ಮಾತ್ರ ಕಲಿತಿದ್ದರು. ಆ ಆಟವನ್ನಾಡಲು ಅವರಿಗೊಬ್ಬರು ಬೇಕಾಗಿದ್ದರು. ಜೊತೆಗಾರನು ತಮಗಿಂತ ಆಟದ ಕಡಿಮೆ ಮಾಹಿತಿಯುಳ್ಳವನಿದ್ದರೆ, ಅವರಿಗೆ ಇಷ್ಟವಿತ್ತು. ಆದರಿಂದ ಅವರು ನನ್ನನ್ನು ನಿಮಂತ್ರಿಸಿದರು. ಈ ಆಟದ ವಿಷಯ ನಾನು ಬಹಳ ಪ್ರಶಂಸೆ ಕೇಳಿದ್ದೆ. ಆದರೆ, ನಾನು ಆ ಕುರಿತು ಎಂದೂ ಪ್ರಯತ್ನ ಮಾಡಿರಲಿಲ್ಲ. ಈ ಆಟವನ್ನಾಡುವದರಿಂದ ಬುದ್ಧಿಗೆ ಬಹಳ ಕೆಲಸ ಸಿಗುತ್ತದೆಂದು ಈ ಆಟವನ್ನಾಡಿದವರು ಹೇಳುತ್ತಿದ್ದರು. ಕಪ್ತಾನರು ಇದನ್ನು ನನಗೆ ಕಲಿಸುತ್ತೇವೆಂದರು. ನಾನು ಬಹಳ ಸಹನಶೀಲನಿದ್ದೆ. ಆದರಿಂದ ನಾನು ಅವರ ಶಿಷ್ಯನಾದೆ. ಬಾರಿಬಾರಿಗೂ ನಾನು ಸೋಲುತ್ತಿದ್ದೆ. ಇದರಿಂದ ನನಗೆ ಕಲಿಸಲು ಅವರಿಗೆ ಹೊಸ ಹುರುಪು ಬರುತ್ತಿತ್ತು. ಈ ಆಟವು ನನಗೆ ಬಹಳ ಸೇರಿತು. ಆದರೆ, ನಾನು ಹಡಗದ ಮೇಲೆ ಮಾತ್ರ ಇದನ್ನಾಡಿದೆನಷ್ಟೆ, ಇನ್ನು ಯಾವ ಕಡೆಯಲ್ಲಿಯೂ ಇದನ್ನಾಡಲಿಲ್ಲ. ಕಾಯಿಗಳ ಸ್ಥಾನದ ಎಷ್ಟು ಜ್ಞಾನವು ನನಗೆ ಬಂದಿತ್ತು. ಲಾಮೂ ಬಂದರದಲ್ಲಿ ಹಡಗವು ಲಂಗರ ಹಾಕಿ ೩-೪ ತಾಸು ನಿಂತಿತು. ನಾನು ಬಂದರವನ್ನು ನೋಡಲು ಕೆಳಗಿಳಿದುಕೊಂಡೆ. ಕಪ್ತಾನರೂ ದಂಡೆಗೆ ಹೋಗಿದ್ದರು. ಆದರೆ, ಬಂದರವು ಸುರಕ್ಷಿತವಲ್ಲದ್ದರಿಂದ ಬೇಗನೆ ಮರಳಬೇಕೆಂದು ಅವರು ನನಗೆ ಮುಂಜಾಗ್ರತೆ ನೀಡಿದ್ದರು.

ಲಾಮೂ ಬಂದರವು ಒಂದು ಚಿಕ್ಕ ಪಟ್ಟಣವು. ನಾನು ಟಪಾಲಕಚೇರಿಗೆ ಹೋದೆ. ಅಲ್ಲಿ ಹಿಂದೀ ಕಾರಕೂನರನ್ನು ನೋಡಿ ನನಗೆ ಸಂತೋಷವಾಯಿತು. ಅವರೊಡನೆ ನಾಲ್ಕು ಮಾತುಗಳನ್ನಾಡಿದೆ. ಆಫ್ರಿಕೆಯ ಮೂಲ ನಿವಾಸಿಗಳನ್ನೂ ಅಲ್ಲಿ ನಾನು ನೋಡಿದೆನು. ನಡೆ-ನುಡಿಗಳ ಪರಿಚಯ ಮಾಡಿಕೊಳ್ಳಲು ಯತ್ನಿಸಿದೆನು. ಇದಕ್ಕೆ ಕೆಲ ಹೊತ್ತು ಕಳೆಯಿತು. ಅಂತಸ್ತಿನ ಮೇಲಿದ್ದ ಕೆಲವು ಪ್ರಯಾಣಿಕರೊಡನೆ ನಾನು ಪರಿಚಯ ಮಾಡಿಕೊಂಡಿದ್ದೆ. ಅವರೂ ಬಂದರಕ್ಕಿಳಿದಿದ್ದರು. ಬಂದರದ ಮೇಲೆ ಅಡಿಗೆ ಮಾಡಿಕೊಂಡು ಸಮಾಧಾನದಿಂದ ಊಟ ಮಾಡಬೇಕೆಂದು ಅವರ ಇರಾದೆಯಿದ್ದಿತು. ಊಟ ತೀರಿಸಿಕೊಂಡು ಅವರು ಹಡಗಕ್ಕೆ ಹೋಗಲು ತಯಾರಾಗಿ, ಒಂದು ದೋಣಿಯ ಮೇಲೆ ಕೂತುಕೊಂಡರು. ಬಂದರದಲ್ಲಿ ನೀರಿನ ಸೆಳವು ಬಹಳ. ಮತ್ತು ನಮ್ಮ ದೋಣಿಯ ಮೇಲೆ ಹೆಚ್ಚಾಗಿ ಜನರು ತುಂಬಿದ್ದರು. ನೀರಿನ ಸೆಳತವು ವಿಪರೀತವಾದ್ದರಿಂದ ದೋಣಿಯನ್ನು ಹಡಗದ ನಿಚ್ಚಣಿಗೆಗೆ ಹಚ್ಚುವದು ಅಶಕ್ಯವಾಗಿತ್ತು. ನಮ್ಮ ದೋಣಿಯು ನಿಚ್ಚಣಿಗೆಗೆ ತಾಗುವಷ್ಟರಲ್ಲಿ ಜಲಪ್ರವಾಹವು ಅದನ್ನು ಹಿಂದಕ್ಕೆ ಸೆಳೆಯುತ್ತಿತ್ತು. ಹಡಗದ ಮೊದಲನೇ ಸಿಳ್ಳು ಆಯಿತು; ನನಗೆ ಬಹಳ ಬೇಜಾರವಾಯಿತು. ಹಡಗದ ಮೇಲಿಂದ ಕಪ್ತಾನರು ನಮ್ಮ ಅವಸ್ಥೆಯನ್ನು ನೋಡುತ್ತಿದ್ದರು. ಇನ್ನು ೫ ನಿಮಿಷ ನಿಲ್ಲಲು ಅವರು ಆಜ್ಞೆ ಮಾಡಿದರು. ಹಡಗದ ಹತ್ತರ ಇನ್ನೊಂದು ದೋಣಿಯಿತ್ತು. ಅದನ್ನು ನನ್ನ ಗೆಳೆಯರೊಬ್ಬರು ನನಗಾಗಿ ೧೦ ರೂಪಾಯಿ ಬಾಡಿಗೆ ಮಾಡಿಕೊಂಡರು. ಈ ದೋಣಿಯ ಮೇಲೆ ನಾನು ಹತ್ತಿಕೊಂಡೆ. ಹಡಗದ ನಿಚ್ಚಣಿಗೆಯು ಮೇಲೆ ಎಳೆದಿತ್ತು. ಆದರಿಂದ ನನಗೆ ಹಗ್ಗದಿಂದ ಮೇಲಕ್ಕೆತ್ತಿಕೊಂಡರು. ಕೂಡಲೆ, ಹಡಗವು ಹೊರಟಿತು. ಉಳಿದ ಪ್ರಯಾಣಿಕರೆಲ್ಲ ಹಿಂದೇ ಉಳಿದರು. ಕಪ್ತಾನರ ಮುಂಜಾಗ್ರತೆಯ ಅರ್ಥವು ನನಗಾಗ ಹೊಳೆಯಿತು.

ಲಾಮೂ ಬಂದರದ ಬಳಿಕ, ಮೊಂಬಾಸಕ್ಕೆ ಹೋದೆವು. ಅಲ್ಲಿಂದ ಝಾಂಝಿಬಾರಕ್ಕೆ ಹೋದೆವು. ಝಾಂಝಿಬಾರದಲ್ಲಿ ೮-೧೦ ದಿವಸ ಉಳಕೊಂಡೆವು. ಆ ಬಳಿಕ, ಇನ್ನೊಂದು ಹಡಗದ ಮೇಲೆ ಹತ್ತಿಕೊಂಡೆವು.

ಕಪ್ತಾನರಿಗೆ ನನ್ನ ಮೇಲೆ ಬಹಳ ಪ್ರೀತಿಯುಂಟಾಯಿತು. ಆದರೆ, ಅದರಿಂದ ಅನಿಷ್ಟ ಪರಿಣಾಮವೊಂದಾಯಿತು. ನನಗೂ, ಇಂಗ್ಲಿಷ ಗೆಳೆಯರೊಬ್ಬರಿಗೂ ತಮ್ಮೊಡನೆ ಹೊರಬದಿಗೆ ಅಡ್ಡಾಡಹೋಗಲು ಕಪ್ತಾನರು ನಿಮಂತ್ರಿಸಿದರು. ಅವರ ಬೋಟಿಯಲ್ಲಿ ಕೂತು ನಾವು ಮೂವರೂ ದಂಡೆಗೆ ಹೋದೆವು. ಹೊರಬದಿಗೆ ಅಡ್ಡಾಡಹೋಗುವ ಅರ್ಥವು ನನಗೆ ತಿಳಿಯಲಿಲ್ಲ. ಕಪ್ತಾನರಿಗೂ ನಾನು ಇಂಥ ವಿಷಯಗಳಲ್ಲಿ ಎಷ್ಟರ ಮಟ್ಟಿಗೆ ಮೂರ್ಖನಿದ್ದೇನೆಂಬುದು ತಿಳಿಯಲಿಲ್ಲ. ಒಬ್ಬ ದಲಾಲನು ನಮಗೆ ನಿಗ್ರೋ ಹೆಂಗಸರ ಕೇರಿಗೆ ಒಯ್ದನು. ಒಬ್ಬೊಬ್ಬರಿಗೆ ಒಂದೊಂದು ಕೋಣೆಯು ತೋರಿಸಲಾಯಿತು. ನನಗೆ ಬಹಳ ನಾಚಿಕೆಯುಂಟಾಯಿತು; ನಾನು ಮೂಕನಾದೆ. ನಾನು ಹೋದ ಕೋಣೆಯಲ್ಲಿದ್ದ ಹೆಂಗಸಿಗೆ ಏನೇನು ವಿಚಾರ ಬಂದಿರಬಹುದು ಪರಮಾತ್ಮನಿಗೇ ಗೋಚರ. ಕಪ್ತಾನರು ಕರೆದ ಕೂಡಲೆ, ನಾನು ಹೊರಗೆ ಬಂದೆ; ಒಳಗೆ ಹೋದಂತೆ ಹೊರಬಂದೆ. ನಾನು ನಿರಪರಾಧಿಯೆಂಬುದು ಅವರಿಗೆ ತಿಳಿಯಿತು. ಮೊಟ್ಟಮೊದಲು, ನನಗೆ ಬಹಳ ಲಜ್ಜೆಯುಂಟಾಯಿತು. ಆದರೆ, ಇಂಥ ವಿಷಯಗಳನ್ನು ವಿಚಾರ ಮಾಡುವದೇ ನನಗೆ ಭಯಂಕರವಾದ್ದರಿಂದ ಲಜ್ಜೆಯು ಕ್ರಮವಾಗಿ ಅಳಿದುಹೋಯಿತು. ಸ್ತ್ರೀದರ್ಶನದಿಂದ ನನ್ನ ಬುದ್ಧಿಯು ಚಂಚಲವಾಗದಿದ್ದ ಬಗ್ಗೆ ಶ್ರೀ ದೇವರ ಉಪಕಾರ ಮನ್ನಿಸುವೆನು. ನನ್ನ ಮನೋದೌರ್ಬಲ್ಯ ನೋಡಿ ನನಗೆ ಬೇಸರವುಂಟಾಯಿತು: ಕೋಣೆಯಲ್ಲಿ ಹೋಗುವದಿಲ್ಲವೆಂದು ಹೇಳುವಷ್ಟು ಧೈರ್ಯವು ನನಗೆ ಪ್ರಾಪ್ತವಾಗಲಿಲ್ಲ.

ಇದು ಮೂರನೇ ಬಾರಿ. ಅನೇಕ ತರುಣರು ಮೊದಲು ನಿರಪರಾಧಿಗಳಿದ್ದರೂ, ಬಳಿಕ, ನಾಚಿಕೆಯ ವಿಪರೀತ ಕಲ್ಪನೆಯಿಂದ ಪಾಪದಲ್ಲಿ ಬೀಳುತ್ತಾರೆ. ಸುರಕ್ಷಿತವಾಗಿ ನಾನು ಒಂದು ದೊಡ್ಡ ಸಾಹಸ ಮಾಡಿದೆನೆಂದು ನನಗನಿಸುವದಿಲ್ಲ. ಕೋಣೆಯಲ್ಲಿ ಪ್ರವೇಶಿಸಲು ನಿರಾಕರಿಸಿದ್ದರೆ ಮಾತ್ರ, ನನಗೆ ಭೂಷಣವಿತ್ತು. ನನ್ನನ್ನು ಕಾಪಾಡಿದ ಬಗ್ಗೆ ನಾನು ದಯಾಘನ ಪರಮಾತ್ಮನನ್ನು ಕೊಂಡಾಡಬೇಕು. ಈ ಸಂಗತಿಯಿಂದ ನಾನು ಪರಮಾತ್ಮನಲ್ಲಿ ವಿಶೇಷ ಭಕ್ತಿಯುಳ್ಳವನಾದೆ. ಕೆಲಮಟ್ಟಿಗೆ ಸುಳ್ಳು ನಾಚಿಕೆಗೀಡಾಗಿ ಕೋಣೆಯಲ್ಲಿ ಪ್ರವೇಶಿಸುವ ವಿಚಾರವನ್ನು ತೊಲಗಲಿಕ್ಕೂ ಅನುಕೂಲವಾಯಿತು.

ಈ ಬಂದರದಲ್ಲಿ ನಾವು ಒಂದು ವಾರದ ವರೆಗೆ ಇರಬೇಕಿತ್ತು. ನಾನು ಪಟ್ಟಣದಲ್ಲಿ ಕೋಣೆಗಳನ್ನು ಬಾಡಿಗೆಗೆ ಕೊಂಡು ಉಳಕೊಂಡೆ. ನೆರೆಹೊರೆಯಲ್ಲಿ ಅಡ್ಡಾಡಿ ಪ್ರದೇಶವನ್ನು ನೋಡಿದೆ. ಝಾಂಝಿಬಾರದೊಳಗೆ ವನಶ್ರೀಯು ವಿಪುಲ. ಆ ಕಲ್ಪನೆ ಬರಬೇಕಾದರೆ, ಮಲಬಾರವನ್ನೇ ನೋಡಬೇಕು. ರಾಕ್ಷಸಿ ಆಕಾರದ ಮರಗಳನ್ನೂ, ಅವುಗಳ ಫಲಗಳನ್ನೂ ನೋಡಿ, ನಾನು ಆಶ್ಚರ್ಯಗೊಂಡೆ. ಆ ಬಳಿಕ, ನಾವು ಮೋಝಾಂಬಿಕ್ಕಿಗೆ ಹೋದೆವು ಅಲ್ಲಿಂದ ನಾತಾಲಿಗೆ ಹೋಗಿ ಮುಟ್ಟಬೇಕಾದರೆ, ಮೇ ಅಖೈರಾಯಿತು.

— ನಿರುದ್ಯೋಗವನ್ನು ನಿವಾರಿಸುವದಕ್ಕಾಗಿ ತಿರುವಾಂಕೋಡಿನ ಸರಕಾರವು ಒಂದು ಹೊಸ ಉಪಾಯವನ್ನು ಯೋಜಿಸಿದೆ: ಔದ್ಯೋಗಿಕ ಶಾಲೆಗಳಲ್ಲಿ ತೇರ್ಗಡೆ ಹೊಂದಿ ಹೊರಬೀಳುವ ವಿದ್ಯಾರ್ಥಿಗಳಿಗೆ ಸರಕಾರವು ೧೦ ಎಕರೆ ಭೂಮಿಯನ್ನು ಕೊಡುವದು; ಮತ್ತು ಸ್ವತಂತ್ರ ಉದ್ಯೋಗಕ್ಕಾಗಿ ಮೇಲೆ ರೂಪಾಯಿ ೨೦೦ನ್ನು ಕೊಡುವದು. ಐದು ವರ್ಷಗಳು ಕಳೆದ ಬಳಿಕ, ಆ ಭೂಮಿಯು ವಿದ್ಯಾರ್ಥಿಯದೇ ಆಗುತ್ತದೆ. ಬ್ರಿಟಿಶ ಸರಕಾರವು ಹೀಗೆಯೇ ಉಪಕ್ರಮಿಸಿದರೆ, ಬೇಕಾರಿ ತಪ್ಪಿಸುವ ವಿಚಾರಕ್ಕೆ ಹೆಚ್ಚು ಉಳಿತಾಯವಾಗುವದು.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ

ಆಯುರ್ವೇದ ಸಂಗ್ರಹಾಲಯ.

ಶಾಸ್ತ್ರೋಕ್ತ ತಯಾರಿಸಿದ ಕುಪಿಸ್ಥ ರಸಾಯನಗಳು.

೧. ಸಮೀರ ಪನ್ನಗ—ಇದು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು. ಹೊಟ್ಟೆ ಉಬ್ಬರ, ಹೊಟ್ಟೆಯೊಳಗಿನ ನಾನಾ ಪ್ರಕಾರದ ಪೀಡನೆ, ಸನ್ನಿಪಾತ ವಿಕಾರಗಳಲ್ಲಿ ಹಲುಬೋಣ, ಸಿಕ್ಕಂತೆ ಹಿಡ್ಯಾಡೋಣ ಮುಂತಾದ ಎಂ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ.

ತೊಲೆ ೧ಕ್ಕೆ ರೂ. ೬-೮-೦.

೨. ಮಲ್ಲಸಿಂಧೂರ—ಮಹಾಶ್ವಾಸ, ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ಹಲುಬೋಣ, ಕಫಕ್ಷಯ, ಇಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು-ದಮ್ಮು, ಕಂಪು, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಗಳಿಗೆಯೊಳಗೆ ರೋಗಿಯು ವಾಸಿಯಾಗುತ್ತಾನೆ.

ತೊಲೆ ೧ಕ್ಕೆ ರೂ. ೭-೦-೦

೩. ಸುವರ್ಣರಾಜ ವಂಗೇಶ್ವರ—ಉಪದಂಶಗಳ ಶೇಷವಿಕಾರ, ಪ್ರಮೇಹ, ಧಾತು ಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುನಷ್ಟ, ಸ್ವಪ್ನಾವಸ್ಥೆ, ಅಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧಗಳ ಸಮಸ್ತ ವಿಕಾರಗಳನ್ನು ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನೂ, ಕಾಂತಿಯನ್ನೂ ಕೊಡುತ್ತದೆ. ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ. ಇದರಿಂದ ಸಣ್ಣೊಂದೂ ಉಪದ್ರವವಾಗ ವದಿಲ್ಲ.

ತೊಲೆ ೧ಕ್ಕೆ ರೂ. ೬-೦-೦

೪. ವ್ಯಾಧಿಹರಣ ರಸ—ಉಪದಂಶ, (ಗರಮಿ ರೋಗ) ಫಿರಂಗೀಉಪದಂಶ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಆಮವಾಯು, ವಾತರಕ್ತ, ಭಯಂಕರ ವಾತವಿಕಾರ, ಪ್ರಾಯಶ್ಯ ವಾಗಿ ಉಪದಂಶಗಳಿಗೆ ಮುಂದಾಗಿ ಆಗುವ ದಮ್ಮು, ಕೆಮ್ಮು, ನಿಶ್ಶಕ್ತಿ ಇವುಗಳ ಮೇಲೆ ಇಷ್ಟು ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಇನ್ನಾವುದೂ ಇಲ್ಲ.

ತೊಲೆ ೧ಕ್ಕೆ ರೂ. ೭-೦-೦.

೫. ಸೂತಶೇಖರ—ಸನ್ನಿಪಾತ, ಪ್ಲೇಗ, ಮೂರ್ಛೆ, ಹಲುಬುವ ವಿಕಾರ (ಭ್ರಮೆ) ಶ್ವಾಸ ಸಿಕ್ಕಂತೆ ಹಿಡ್ಯಾಡುವವು, ಹೊಟ್ಟೆನೋವು, ಅಮ್ಲಪಿತ್ತ ಮುಂತಾದ ವಾತ-ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದು. ಸಾಮಾನ್ಯವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ.

ತೊಲೆ ೧ಕ್ಕೆ ರೂ. ೬-೮-೦.

ಇವಲ್ಲದೆ, ತರತರದ ಚೂರ್ಣ, ಘೃತ, ಅವಲೇಹ, ಆಸವ, ಮಾತ್ರೆ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ದರಕ್ಕೆ ದೊರೆಯುತ್ತವೆ.

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ಏರ್ಪಾಟು ಮಾಡಿರುತ್ತೇವೆ.

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದಲ್ಲಿ ಉತ್ತರದ ಬಗ್ಗೆ ಸ್ಟಾಂಪು ಜೋಡಿಸಿ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು.

ಪತ್ತೆ:— **ಶ್ರೀ ಗಜಾನನ ಅಪ್ಪು ಭಟ್ಟ ವೇದೇಶ್ವರ,**

ಆಯುರ್ವೇದಿಕ ವೈದ್ಯ,

ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ.)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಸೀಸೀ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡ್ರೆಸ್ಸಿಂಗ್ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೋರ್ಥ್ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ

"ಸರಸ್ವತೀ"

ಇಡೀ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ತಮವಾದ ಸಚಿತ್ರ ಮಾಸಪತ್ರಿಕೆ ಇದೊಂದೇ.

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಓದತಕ್ಕ ವಿಷಯಗಳು ಮಾತ್ರ 40 ಪುಟಗಳಿವೆ. ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಶೀಲೆ" ಎನ್ನುವ ಕಾದಂಬರಿಯೂ, 'ಶಹಾಜಹಾನ'ಎನ್ನುವ ನಾಟಕವೂ ಸಾಹಿತ್ಯಸರೋಜ-ಕನ್ಯಾಕೈಪಿಡಿ-ಮುತ್ತಿನ ಸರ-ಚಾರು ಚರಿತಾವಳಿ-ಗೃಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಕಿಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ಚಂದಾದಾರರಿಗೆ "ಶಾರದಾ ಗ್ರಂಥಮಾಲೆ"ಯಲ್ಲಿ ಇದು ವರೆಗೆ ಪ್ರಕಟವಾಗಿರುವ 'ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದೂ ಆರೋಗ್ಯೋದಯ-ರಣಕೇಸರಿ' ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು. ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವದರಿಂದ ಪ್ರಕಟಣೆಗೆ ಅತ್ಯುತ್ತಮವಾದ ಪತ್ರಿಕೆ. ವಾರ್ಷಿಕ ಚಂದಾ ರೂ. 3-0-0 ಮಾತ್ರ. ವಿದ್ಯಾರ್ಥಿಗಳಿಗೂ, ವಾಚನ ಶಾಲೆಗಳಿಗೂ ರೂ 2-0-0 ಮಾತ್ರ

ವಿಳಾಸ:— "ಸರಸ್ವತೀ" ಕಾರ್ಯಾಲಯ,

ಚಾಮರಾಜಪೇಟೆ, ಬೆಂಗಳೂರು ಸಿಟಿ.

ಚವರಲೆಟ್

ಮೋಟಾರಕಾರ್ ಏಜನ್ಸಿ, ಕನರ



ನಾವು ಹೊಸ ಚವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಮಾರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ:—**ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ, ಶಿರ್ಸಿ**

ಕುಮಟಾ ಏಜಂಟ:- **ಜಿ. ಡಿ. ಮಳಗಿಕರ ಎಂಡ್ ಕೊ.**

ಬಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ದೊರಕುತ್ತದೆ; ಡನ್‌ಲೊಪ್ ಹಾಗು ಮಿಶಲಿನ ಮೋಟಾರ ಹಾಗು ಸಾಯಕಲ್ ಟಾಯರ ಟ್ಯೂಬ ಇತ್ಯಾದಿ ಸಾಮಗ್ರಿಗಳ ಯೋಗ್ಯದರಲತಿಸಿದ ಪೂರೈಸುತ್ತೇವೆ

G. D. Malgikar & Co,
KUMTA

ಗೆಳೆಯರ ಗುಂಪಿನ.

ಕನ್ನಡ] # ಸ್ವಧರ್ಮ. [ವಾರಪತ್ರಿಕೆ

ಸಂಪಾದಕರು:- ದ. ರಾ. ಬೇಂದ್ರೆ. ಬೀ. ಎ.

ವಾರ್ಷಿಕ ವರ್ಗಣಿ ೩-೦-೦

ಸಮಾಜದಲ್ಲಿ ಶಾಂತಿತೃಪ್ತಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ. ಅಂಥ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ

ಮಾಳಮಡ್ಡಿ, ಧಾರವಾಡ.

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕ ವಿರುತ್ತದೆ ಇದರ ಸೇವನದಿಂದ ಬಾಯಿಯು ಕೆಂಪು ಆಗುವದು, ವೇದನೆ ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು. ೧ ಪುಡಿ ಕಿಂ. ರೂ. ೦-೦-೬, ೨ ಡಜನ ಕಿಂ ರೂ. ೦-೯-೦ ೧೦೦ ಕಿಂ ರೂ ೬-೦-೦, ೫೦೦ ಪುಡಿಗಳ ಕಿಂ ರೂ ೯-೦-೦; ೧೦೦೦ ೧೭-೦-೦, ಟ. ಪೆ ಖರ್ಚ ಗಿರಾಕಿ ಪ್ರತ್ಯೇಕ

ಸುಗಂಧಿ ನಶ್ಯ— ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದಿದ್ದು, ಇದರಿಂದ ಶ್ಲೇಷ್ಮ ಥಂಡಿ, ಅರ್ಧತಲೆನೋವು ಮುಂತಾದ ರೋಗಗಳು ಕೂಡಲೇ ನಾಶವಾಗಿ ತಲೆಯು ಹಗುರವಾಗಿ ಹುರುಪಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿ ಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ರೂ ೦-೪-೦. ೧ ಡಜನ್ ಡಬ್ಬಿ ಕಿಂ ರೂ ೩-೦-೦ ಪೆ. ಪೋ. ಖರ್ಚ ಬೇರೆ

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ ಕಿಮ್ಮತ್ತಿನ ವಿಷಯ ಪತ್ರ ಬರೆದು ಪ್ರತ್ಯಕ್ಷ ನೋಡಿ ಮನ್ನಾರ್ಡರ ಕಳಿಸಬಹುದು. ಇದರ ಹೊರತು, ನಮ್ಮಲ್ಲಿಯು ಬಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಒದುತ್ತದೆ. ಬೆಳಗಾದ ನಮೂನೆಯು ತಂಬಾಕನ್ನು ಬೇಕಾದವರು ಕೊಂಡು, ಖರೇದಿ ಮಾಡಿಕೊಳ್ಳಬಹುದು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು.

ಪತ್ತೆ:— **ಎಸ್. ಬಿ. ಕದಂ,**

ಬೀಡಿ ಮತ್ತು ತಂಬಾಕು ಜರ್ದಾ ದುಕಾನ,

ಮು ಪೋ ಸಿದ್ದಾಪುರ, ಜಿ ಬೆಳಗಾಂವ.

ಸುಲಭ ಕ್ರಯ! ಸುಲಭ ಕ್ರಯ!!

ಡಾ॥ ಕ್ಷ. ರ ಜೀ. ಬೀ ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿ

(Registered Trade Mark.)

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು, ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಕೆಯನ್ನು ಮಿಶ್ರಮಾಡಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಜನಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪ್ಯಾಕೆಟ್ ಕಳಿಸಲಾಗುವದು.

ಒಂದು ಡಬ್ಬಿಗೆ ಕ್ರಯ ರೂ ೦-೪-೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯವಿಟ್ಟು ಸರ್ವ ಹೆಸರನ್ನೂ ಪತ್ತೆಯನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಮೌಂಟರೋಡ್, ಮದ್ರಾಸ.



ಸರಕಾರದಿಂದ ಪೇಟೆಂಟು ಪಡೆದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಬಹು

ಅನುಕೂಲವಾಗಿರುವದು

ಇದು **mild steel**ವೆಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು. ಎತ್ತುಗಳನ್ನು ಬಹಳ ಹಗುರ ಹೋಗುತ್ತದೆ. ಇದರೊಳಗಿಂದ ಒಂದು ಹನಿ ಸಹ ನೀರ ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರ ಹೋಗುವಲ್ಲಿ ಬರುವ ಹಾನಿಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ.

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ ಮಾಸಪತ್ರಿಕೆ.

ಸಂಪಾದಕ— ಶ್ರೀ ಬಾಗಲ ಲಕ್ಷ್ಮಣರಾಯರು, ವಾಙ್ಮಯ ವಿಶಾರದ

ಮಾದರಿ ಸಂಚಿಕೆ ಪುಕ್ಕಟೆ ದೊರೆಯುವದು. ವಾರ್ಷಿಕ ಚಂದಾ ರೂ. ೧-೮-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ.

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಮೋಟರು ಸ್ಟ್ಯಾಂಡ ಹಾಗೂ

ಅಡಿಗೆ, ಊಟ, ವಾಸದ ಒಳ್ಳೆ ಜೋಡಣೆ, ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆ ಇದೆ—

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರಸಿ, ಹುಬ್ಬಳ್ಳಿ. ಗೋಕರ್ಣದಿಂದ ಅಂಕೋಲಾ, ಕಾರವಾರ

ಟಿಪ್ಪ:— ಟಿಕೇಟು ಮುಂದಾಗಿ ಪಡೆಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ಹಳದೀಪುರ,

ಮೋಟರ ಏಜಂಟ,

ಕುಮಟಾ (ಉತ್ತರ ಕನ್ನಡ)

S. U. Narayanacharya & CO.
Chaukamba, BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿ ಕಣ ಜರಿ ಸೀರೆ, ಕಾಶ್ಮೀರ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ ಲಿಂಗಗಳು, ಸ್ಫಟಿಕಮಣಿ ಮೊದಲಾದವುಗಳು ದೊರೆಯುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂಬುದು ಅದನ್ನು ಉಪಯೋಗಿಸಿ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ; ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta.

Reg. No. B 1270

Monday July 12th, 1926.

ವರ್ಷ ೧೦.

ಕಾನಡಾವೃತ್ತ.

ಸಂಚಿಕೆ ೪೦.

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಕುನೆಯಾರ್ಡರಿಯಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪ್ರೈಕದ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0.

೮ ನಂತ್ರ ಪ್ರತಿಸಾಲಿಗೆ 0-2-0.

ಜಾಹಿರಾತಿನ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಖಾಸಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೧೨ ಮಾಹೆ ಜುಲೈ ಸನ್ ೧೯೨೬ ನೇ ಇಸವಿ.)

हिंदुस्थानांतील रहिवाशांस ज्यामुळे हिंदुस्थानची हवा मानवते तेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत २ रुपये;

रामबाण औषधें

सर्दि घालविणारें,

भूक वाढविणारें,

श्वासोच्छ्वास साफ करणारें,

झोंप आणणारें,

शक्ति देणारें,

तेजस्वीपणा आणणारें,

पिण्यास रुचिकर.

क्याटलाग मागवा,

बेंगाल केमिकल फार्मास्युटिकल वर्क्स लिमिटेड,

मुंबई नं: १३

एजंट— मेसर्स पंडित आणी कंपनी,

तीर्थहळ्ळी.

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಗಂಜಿ ಸುವಾಸಿಕ ಕಾಪೂರಿ ಹಿಂಗು ೧೦ ತೊಲೆ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ ॥. ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿ ಕಾರಕ ... ಚೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲೆ ... ಡಬ್ಬಿ ೧ ಕ್ಕೆ ೧—೪—೦, ೧ ತೊಲೆಯ ಹಿಂಗಿ... ಡಬ್ಬಿಗಳು ಡಜನ್ ೧ ಕ್ಕೆ —೩೬—೦. ತಲೆಗೆ ... ಸುವಾಸಿಕ ಮಸಕರಾಜ ತೈಲ ೫ ತೊಲೆ ... ಬಾಟ್ಲಿ ೧ ಕ್ಕೆ ೦—೧೨—೦ ಹುಳದ ಪ್ರೌಡ ... ತೊಲೆ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ... ತರದ ಗಂಜಿ ಉಪಚಾರಗಳು ಯೋಗ್ಯ ಕಿಂ... ಗೆ ಸಿಗುವವು. ಟಪಾಲ ಖರ್ಚ ಪ್ರತ್ಯೇಕ.

ಕೆರೇಕರ ಕಾಪೂರೀ ಹಿಂಗಿನ ದುಕಾನ

ಜನರಲಬಾಜಾರ, ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. *B. A.*

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,

ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



ಬರೇ ಒಂದು ತಿಂಗಳ ಬಗ್ಗೆ. ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಗಡಿಯಾರವನು ಉತ್ಕೃಷ್ಟ ರೇಷ್ಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 503 P T Madra**

ಅತ್ಯಲ್ಪವಿವೆ! ಉಚಿತ

ಕೇವಲ ಉಚಿತ



ಉಚಿತ ಕೇವಲ ಉಚಿತ

ತಾರಾ" ಲೀವರ ರಿಜಿಸ್ಟರ್ಡ ಪೊಕೆಟ್ ವೊಚ್ಚು ೧೮ ಕರೆಟ್ ರೋಲ್ಡ ಗೋಲ್ಡಿನದು. ತಯಾರಿಸಿದವರು ... ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರದವರು ಅಚ್ಚು ಹಾಕಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವದರಿಗೆ ನಾವು ನಮ್ಮ "ಸ" ರಿಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತೇವೆ. ಇದು ... ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಗುಣ ... "ತಾರಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್‌ವೊಚ್ ಗಡಿಯಾರಗಳಿಗೆ ಕೇವಲ ಬರೇ ರೂಪಾಯಿ ೫.

CAPTAIN WATCH CO. P. B 285. MADRAS.

ಗಾಂಧೀಪೂರ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ ಮಾಸಪತ್ರಿಕೆ

ಸಂಪಾದಕ—ಆಲೂರ ವೆಂಕಟರಾಯರು.

ಇದರಲ್ಲಿ ಆಧ್ಯಾತ್ಮಿಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು; ಪ್ರಬಂಧ ಪರಿಚಯ, ಜೀವನಚರಿತ್ರೆ ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳು ಬರುತ್ತವೆ. ಡೆಮಿ ೮ ಪುಟಗಳು. ವರ್ಗಣಿ. ರೂ. ೫–೮–೦

ಕಾರ್ಯನಿರ್ವಾಹಕ ಜಯಕರ್ನಾಟಕ, ಧಾರವಾಡ.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಬಂತು ಚಂದಾಬು, ಪಿಕ ಬುಲಾಬು ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾಮಿಣಿ ವಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ ಮಲಬದ್ಧತೆ ಮೂಲವ್ಯಾಧಿ, ನರ, ವಾತ, ತಲೆನೋವು, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ ಗರ್ಮಿ) ಬಾಲಗ್ರಹ, ಇಸ್ಬು, ಗಜಕರ್ಣಗಳಿಗೆ ಖಂಡಿತ ಗುಣ. ಬರುವ ಜರ್ಮನ ಅಮೇರಿಕನ, ಫ್ರೆಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇವಲ್ಲದೆ ಎಲ್ಲ ತರದ ಸ್ಟೇಶನರಿ, ಪರಫ್ಯೂಮರಿ ಸ್ಪೋರ್ಟ್ಸ ಸಾಮಾನು, ಟೆನ್ನಿಸ್, ಫುಟ್‌ಬ್ಯಾಲ, ಸುವರ್ಣ ಪೌಡರ, ಮೋಟಾರ ಬಿಡಿ ಭಾಗಗಳು, ಸಾಬೂನ ಕಂಪನಿಗಳಿಂದ ಸಿಗುವವು ನಮ್ಮಲ್ಲಿದ್ದ ನಿಮಗೆ ಅವಶ್ಯವಿರುವ ಸಾಮಾನು ದೂರ ದೇಶದಿಂದ ತರಿಸಿಕೊಡಲಾಗುವದು

ಎಸ್ ಎಲ್ ಧಾಕಪ್ಪ ಮತ್ತು ಬ್ರದರ, ಶಿರಸಿ

ವಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:-

ತಬಲೆ, ಡಕ್ಕೆ ವಗೈರೆ



೧ ಸೈಪೆಟ್ಟಿಗೆ ಸಿಂಗಲ ರೂ. ೨೫, ೩೦, ೪೦, ೫೫, ೬೦

೨ ,, ಡಬಲ ರೂ. ೯೦, ೪೫, ೫೦, ೬೦, ೧೦೦.

೩ ಕಾಲಪೆಟ್ಟಿಗೆ, ರೂ ೬೫ ೭೫, ೧೦೦, ೧೩೦, ೧೮೦

೪ ತಬಲೆ (ತಾಮ್ರದ ಡಗ್ಗಾ ಸಹಿತ) ರೂ ೧೬, ೧೮, ೨೦

ಹಾರ್ಮೋನಿಯಮ್ ಗ್ಯಾಡ ಕಿಂ. ರೂ. ೧॥.

ತಬಲೆ ಗ್ಯಾಡ ಕಿಂ. ೧೨ ಆಣೆ.

ನಾಟಕಿ ಬಗ್ಗೆ ಕ್ಯಾಟಲಾಗು ಪುಕ್ಕಟೆ ದೊರಕುವದು.

ಗೋಪಾಳ ಸಖಾರಾಮ ಮತ್ತು ಕಂಪನಿ

ನಂ. ೩೮೮, ವಿಠ್ಠಲವಾಡಿ ಎದುರಿಗೆ,

ಕಾಳಬಾದೇವಿ ರೋಡ,

ಮುಂಬಯಿ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ- ಸಿದ್ದಾಪುರ- ಗೇರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ. ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನಗಳಲ್ಲೂ ಒಳ್ಳೆ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa
PROPRIETOR.

अगदीं फुकट.

वैद्यविद्या.

आरोग्यसंपत्ति आणि पूर्ण सुखाचा सरळ रस्ता दाखविणारे "वैद्यविद्या" नावाचा मोठा आयुर्वेदीक पुस्तकाची नवीन आवृत्ति बाहेर पडली आहे, हे पुस्तक कीमत व पोष्ट खर्च घेतल्या शिवाय अगदी फुकट पाठविण्यात येते. तरी हे पुस्तक आजच मागवा.

प्रमेहावर रामबाण औषध.

मेहमर्दनचूर्ण.

हे चूर्ण फकत तीन दिवस लागोपाठ घेतल्याने लघवीस होणारी आग, लघवी थांबून थांबून होणे व्याधि या औषधाच्या सेवनाने एकदम बरे होतात.

कि. १० तोळ्याच्या डब्यास रु. १.

राजवैद्य नारायणजी केशवजी, जामनगर (काठेवाड).

कुमठा एजन्ट- माधव मांतप्पा शेणवी, वेलेकेरी.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮಶಕ್ತಿ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತುವು ಬಂದಾಗುವದು — ಪರಮಾ ಹಾಗೂ ಗರ್ಮಿಯಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಕೆಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩–೧೨–೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಪೋಸ್ಟೇಜ ಬೀಳುವದಿಲ್ಲ. ಹನ್ನೆರಡು ಬಾಟಲಿಗಳ ಕಿಮ್ಮತ್ತು ೧೨–೦–೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಪೋಸ್ಟೇಜ ಬೇರೆ ವೀಪಿಯಿಂದ ಪೋಸ್ಟೇಜ ಕೂಡಿಸಿಬಂದಲ್ಲಿ ಬಾಟ್ಲಿಗೆ ೧–೧೨–೦ ೩ ಬಾಟ್ಲಿಗೆ ೩–೦–೦ ಹನ್ನೆರಡಕ್ಕೆ ೧೩–೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ. ಬೆಳಗಾಂವ

ಸತ್ಯಾಗ್ರಹವೂ, ಜ್ಞಾತಿಸುಧಾರಣೆಯೂ.

ಮಹಾತ್ಮರ ಲೇಖದ ಅನುವಾದ.

(ಕೆಳದ ಸಂಚಿಕೆಯಿಂದ ಮುಂದರಿಸಿದ್ದು)

ಹೀಗೆ ಮಾಡುತ್ತಾ ಮಾಡುತ್ತಾ, ಸೇವೆಮಾಡುವ ಪ್ರಸಂಗಗಳಲ್ಲಿ ಜ್ಞಾತಿಬಂಧುಗಳ ಸೇವೆ ಮಾಡುತ್ತಿದ್ದಂತೆ, ಆದರೆ ಅದರ ಪ್ರತಿಫಲದ ಅಪೇಕ್ಷೆಯನ್ನಿಡದೆ ನಡೆದಂತೆ, ಇತರರು, ಸುಧಾರಣಾಪಂಥಕ್ಕೆ ಕೂಡಿಕೊಳ್ಳುವರೆಂಬುದೂ, ಅವರು ಅವನಂತೆ ಅಸಹಕಾರ ಮಾಡದಿದ್ದರೂ, ಅವರ ಸಹಾನುಭೂತಿ, ಪ್ರೇಮ ಇವು ಅವನ ಕಡೆಗೇ ಇರುವವೆಂಬುವದು ಅವನಿಗೆ ಕಂಡುಬರುವದು. × × × ಯಾಕಂದರೆ, ಈ ಸಂಯಮೀ ತರುಣನು, ಯಾರು ತನ್ನ ಇಷ್ಟ ಸುಧಾರಣೆಗೆ ಸಹಾಯ ಮಾಡುವದಿಲ್ಲವೋ, ಅಥವಾ ಕೇವಲ ವಿಚಾರದಲ್ಲಿ ಮಾತ್ರ ತನ್ನ ಸಂಗಡ ಕೂಡಿ ಕೊಳ್ಳುತ್ತಾರೆ, ಆದರೆ ತಾವು ಮಾಡಿದಂತೆ ಜ್ಞಾತಿಯವರ ಕೂಡ ಅಸಹಕಾರ ಮಾಡುವದಿಲ್ಲವೋ ಅಂಥ ಬಾಂಧವರನ್ನು ದ್ವೇಷಿಸದೆ, ಅವರ ವಿಷಯದಲ್ಲಿ ಅಬಾಧಿತ ಪ್ರೇಮವನ್ನೇ ಇಟ್ಟುಕೊಂಡು, ಅವರ ಮನಸ್ಸನ್ನು ಇಂದಲ್ಲ ನಾಳೆ ತನ್ನ ಕಡೆಗೆ ಎಳಕೊಳ್ಳಲು ಶಕ್ತನಾಗುವನು. ಪ್ರೇಮವು ಹಿಂದು ಅಮೌಲ್ಯ (अमोल्य) ಮಣಿ ಇರುವದು. ಇದರಿಂದ ಎಲ್ಲವೂ ಸಾಧ್ಯವಾಗುವದು ಇದು ಅವನ ನಿತ್ಯ ಅನುಭವಕ್ಕೆ ಬರುವದು. ಆದರೆ, ಈ ಅಸಂಭವವಾಗಲು ಕಾಲ ತಾಗಿದರೂ, ಅವನು ಮಾತ್ರ ತಾಳ್ಮೆಯನ್ನು ಕಳಕೊಳ್ಳದೆ, ಪ್ರೇಮದೀಪದ ಫಲವು, ಅಗಣಿತ ಪ್ರೇಮಫಲವೇ ಎಂಬ ಮಾತನ್ನು ದೃಢವಾಗಿ ನಂಬಿ ತನ್ನ ಪ್ರೇಮವೃತ್ತಿಯನ್ನ ಅಚಲವಾಗಿಟ್ಟುಕೊಳ್ಳತಕ್ಕದ್ದು.

ನನಗೆ ಬಂದ ಪತ್ರದಲ್ಲಿ ಕೇಳಿರುವದೇನಂದರೆ.— ಇಂಥ ತಪಸ್ವಿ ಅಸಹಕಾರಿಯು ಜ್ಞಾತಿಭೋಜನದ ಮತ್ತು ತ್ಯಾಗ ಮಾಡಿರುತ್ತಾನೋ, ಆ ತ್ಯಾಗದಲ್ಲಿ, ಜ್ಞಾತಿಯೊಳಗಣ ತನ್ನ ಮಿತ್ರವರ್ಗದವರ ಕೂಡ ಸಹಭೋಜನತ್ಯಾಗ ಮಾಡುವದು ಸಮಾವೇಶವಾಗುತ್ತದೋ? ಖರೆ ಸಂಗತಿ ಹೀಗೆ ಆಗುವ ಸಂಭವವಿರುತ್ತದೆ. ಜ್ಞಾ ಪವಿತ್ರವಾದ ಇವನಿಂದ ತ್ಯಾಗವ್ರತ (ಅಸಹಕಾರ ಮಾಡುತ್ತೇನೆಂಬ ನಮ್ರತಾಪೂರ್ವಕ ಪತ್ರ) ಜ್ಞಾತಿಯವರಿಗೆ ಮುಟ್ಟಿದ ಕೂಡಲೇ, ಮುಖ್ಯಸ್ಥರು ಸಿಟ್ಟಿಗೇಳುವರೋ, ಆ ಈ ತ್ಯಾಗಿಯನ್ನು ಜ್ಞಾತಿಯಿಂದ ಬಹಿಷ್ಕೃತ ಮಾಡಿ, ಅವನ ಕೂಡ ಯಾರು ಅನ್ನ ನೀರು ಸಂಬಂಧ ಮಾಡುವರು, ಯಾ ವಿವಾಹ ಸಂಬಂಧ ಮಾಡುವರೋ ಅವರನ್ನು ಕೂಡಾ ಬಹಿಷ್ಕೃತ ಮಾಡುವೆವೆಂತಾ ಜಾಹೀರ ಮಾಡ್ಯಾರು, ಈ ಪ್ರಕಾರ ಜಾತಿ ಬಹಿಷ್ಕಾರದ ಹುಕುಮು ಆದ ಪ್ರಸಂಗದಲ್ಲಿ ಸದರ ತ್ಯಾಗಿಯು, ಉಘಡ ರೀತಿಯಾಗಲೀ, ಯಾರಿಗೂ ತಿಳಿಯದಂತೆಯಾಗಲೀ, ಜ್ಞಾತಿಯ ಅವನ ಮಿತ್ರರು ಅವನಿಗೆ ಊಟಕ್ಕೆ ಕರೆದರೂ ಕೂಡಾ, ಅವರಲ್ಲಿ ಊಟಕ್ಕೆ ಹೋಗದಿರುವದು ಅವನ ಧರ್ಮವಿರುತ್ತದೆ. ಯಾರಾದರೂ ಜ್ಞಾತಿಬಾಂಧವನು, ವಿಚಾರಪೂರ್ವಕವಾಗಿ ಅಸಹಕಾರದಲ್ಲಿ ಕೂಡಿದರೆ, ಅವನ ಸ್ವೀಕಾರ ಅವನು ಅವಶ್ಯ ಮಾಡತಕ್ಕದ್ದು. ಮತ್ತು ಹೀಗೆ ಆಗುವ ಸಂಭವ ಸಹ ಇರುತ್ತದೆ.

ಆದರೆ ಸಾಮಾನ್ಯವಾಗಿ ಹೀಗೆ ಹೇಳಬಹುದಲ್ಲಾ:- ಮಿತ್ರರ ಕೂಡಾ ಭೋಜನವ್ಯವಹಾರದ ತ್ಯಾಗ ಮಾಡುವ ಪ್ರಸಂಗವೇ ಅವನಿಗೆ ಬರಲಿಕ್ಕಿಲ್ಲ. × × × ಆದರೆ, ಯಾರು ಕನ್ಯಾವಿಕ್ರಯ ಪಸಂದ ಮಾಡುತ್ತಾರೋ, ಅವನಲ್ಲಿಯ ನಿಮಂತ್ರಣವನ್ನು ಅವನು ಎಂದೂ ಸ್ವೀಕರಿಸಕೂಡದು.

ಇವರ ಮೇಲಿಂದ ನಮಗೆ ಕಂಡು ಬರುವದೇನಂದರೆ.—

(೧) ಅಸಹಕಾರಗಳನ್ನು ಅಂಗೀಕರಿಸುವದಕ್ಕಿಂತ ಮುಂಚೆ ಲೋಕಮತಕ್ಕೆ ಶಿಕ್ಷಣ ಕೊಡುವ ಅನೇಕ ಅಡಿಗಳನ್ನು ತೆಗೆದುಕೊಳ್ಳಬೇಕು.

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷ ಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯು ತಂಪು ಹೊಂದುತ್ತದೆ. ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ್ಯವಾಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ

೧/೬ ಔನ್ಸಿಗೆ	ರೂ.	೨—೦—೦
೧/೪ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆಲ್ಕೋಹೋಲ ಯಾಸೆ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082. **BOMBAY.**

(೨) ಅಸಹಕಾರಿಯಲ್ಲಿ ಕ್ರೋಧರಹಿತರಾಗಿ, ವಿರೋಧೀ ಜನರ ಬೈಗಳನ್ನು ವಗೈರೆ ಸಹಿಸಿಕೊಳ್ಳುವ ಶಕ್ತಿ ಇರಲಿಕ್ಕೆ ಬೇಕು

(೩) ಅಸಹಕಾರದಲ್ಲಿ ಪ್ರೇಮವೇ ಇರತಕ್ಕದ್ದು

(೪) ಅಸಹಕಾರವನ್ನಂಗೀಕರಿಸಿದ ನಂತರ, ಮೂಲಸ್ಥಾನ (ಊರು) ವನ್ನು ಬಿಡಕೂಡದು

(೫) ಅಸಹಕಾರಿಯು ಕಠಿಣ ಸಂಯಮವನ್ನು ಪಾಲಿಸತಕ್ಕದ್ದು.

(೬) ಅಸಹಕಾರಿಗೆ ಸ್ವೇತ ಸಾಧನ ವಿಷಯದಲ್ಲಿ ಪೂರ್ಣ ಶ್ರದ್ಧೆ ಇರಬೇಕು.

(೭) ಅಸಹಕಾರಿಯು ಫಲವನ್ನು ಕುರಿತು ತೀರ್ಥ ಯಾ ವಿರಕ್ತನಿರಬೇಕು

(೮) ಅಸಹಕಾರಿಯು ವಿಶೇಷವು ಅರಿವಿನಲ್ಲಿ ವಿವೇಕವೂ, ವಿಚಾರವೂ, ನಮ್ರತೆಯೂ ಇರಲಿಕ್ಕೆ ಬೇಕು

(೯) ಅಸಹಕಾರ ಮಾಡುವ ಅಧಿಕಾರವು ಗಾಂಧಿ ಧರ್ಮವಾದಿ ... ಪ್ರಾಪ್ತವಾಗುವದಿಲ್ಲ ಅಧಿಕಾರವಿಲ್ಲದೆ ಮಾಡಿದ ಅಸಹಕಾರವು ನಿಷ್ಫಲವಾಗುವದು

ಮೇಲೆ ಹೇಳಿದ ನಿಯಮಗಳ ಪಾಲನವು ಬಹುಶಃ ಅಶಕ್ಯವಿದೆಯೆಂದು ಕೆಲವರಿಗೆ ಯಾ ಬಹಳ ಜನರಿಗೆ ಅನಿಸುವದೆಂಬುವದೇನೋ ನಿಜವು. ಆದರೆ ಸಾಮಾನ್ಯ ಹೊರತು ಕೂಡ ಅಸಹಕಾರವು ಅಶಕ್ಯವೆ? ಹಿಂದೆ ನಾವು ಹೇಳಿದ ಯಾವ ಪ್ರಸಂಗವನ್ನು ಕುರಿತು ವಿಚಾರ ಮಾಡಿದೆವೋ ಆ ಪ್ರಸಂಗದಲ್ಲಿ ಸದರ ಕಷ್ಟವಿದ್ದ ಪ್ರಹ್ಲಾದ ಕರ್ತಾ ಇದ್ದ ... ಭಕ್ತ ಪ್ರಹ್ಲಾದನು ತಾನೇ ಸ್ವತಃ, ತಾನೇ ಸಿದ್ಧಿಯ ಇರುವನು. ಅವನಲ್ಲಿ ಕುಂದುಗಳಿದ್ದಾವೆ, ಅವನ ಹಣೆಯಲ್ಲಿ ನಿರಾಶೆಯೇ ಬರೆದಿಟ್ಟದೆ ಎಂದು ತಿಳಿಯಬೇಕಿತ್ತು ಅದಕ್ಕೆ ಇಂಥ ಸ್ವತಂತ್ರ ಸಹಕಾರಿ... ಅಸಹಕಾರದ ಆರಂಭದ ಪ್ರಥಮ ಬುದ್ಧಿ ಲಕ್ಷಣವು ಅದರ ಆರಂಭ ಮಾಡಿದ ನಂತರ ದೇಹ ಪಾತವಾದರೂ, ಪಶ್ಚಾತ್ತಾಪ ಮಾಡತಕ್ಕದ್ದು

... ಪ್ರಶ್ನೆ ಕಾದಿಸಿ... ಇಂಥ ಸಂಯಮವನ್ನು ಪಾಲಿಸಿ, ... ಸಂಸ್ಥೆಯಲ್ಲಿ ಸಾಧನೆ ಮಾಡಿ ... ಕಾದ್? ಹೀಗೆ ... ನವಗೆ ಅನೇಕ ಜಾತಿಗಳ ... ಪ್ರತಿಪಾದಿಸುವದಿದ್ದರಿಂದ ... ದೋಷಗಳ ... ಲಕ್ಷ ಕೊಡ ... ಕೆಲವರು ಹೇಳ್ಯಾರು? ಈ ... ಅಸ್ಥಾನದಲ್ಲಿ ... ಅಸಹಕಾರದ ಮಾತು ಸ್ವಲ್ಪ ಯೋಗ್ಯವೆಂದು ಎಣಿಸುತ್ತೇವೆಂದ ಮೇಲೆ, ಯಾವ ವರೆಗೆ ಜಾತಿಗಳು ಇರುತ್ತವೋ ಅಲ್ಲಿಯ ವರೆಗೆ, ಜಾತಿಗಳ ವಿಷಯದಲ್ಲಿ ಕೂಡ ಅಸಹಕಾರವು ಯೋಗ್ಯವೆಂದೇ ಅನಬೇಕು

— ಅಜ್ಞಾತ

— ವೈಯಲ್ಲಿ ಕಸ ಬಂದವರು ದಿನ ... ಯೋಜನವನ್ನು ಮೂರು ದಿನಗಳ ವರೆಗೆ ... ಕೊಂಡರೆ ಅಪತೋಷವು ಹೋಗುತ್ತದೆಂದು ಒಬ್ಬ ಆಯುರ್ವೇದ ವೈದ್ಯರು ಬರೆಯುತ್ತಾರೆ

— ವರಿಷ್ಠ ಕಾಯಿದ ಕೌನ್ಸಿಲು ಹಾಗು ಕೌನ್ಸಿಲ್ ಆಫ್ ಸ್ಟೇಟ್ ಸಭೆಗಳ ಅಧಿವೇಶನಗಳು ಆಗಸ್ಟ ತಾ ೧೭ ನೇದಿ ಸಿಮುಲಾ ಪಟ್ಟಣದಲ್ಲಿ ಸೇರುವವು

ಸೂತ್ರ ರಹಸ್ಯ.

ನೂಲಿನ ಮಹಾತ್ಮ್ಯ.

ಲೇಖಕ — ಸೀತಾರಾಮ.

(ಸಂಚಿಕೆ ೩೮ನೇಯಿಂದ ಸಾಗಿಬಂದದ್ದು)

(೨)

ಶಿಷ್ಯ — ಗುರುಗಳೇ! ಈ ಹೊತ್ತು ಒಳ್ಳೇ ಅವಕಾಶವಿದೆ ಸಾವಕಾಶದಿಂದ "ಸೂತ್ರ ರಹಸ್ಯ" ವನ್ನು ಮುಂದರಿಸಬೇಕಾಗಿ ಬೇಡಿಕೊಳ್ಳುತ್ತೇನೆ. ರಹಸ್ಯ — ಸುರಸವಾದ ರಹಸ್ಯವೇ ಎಂತ ನನಗಂತೂ ತೋರುತ್ತಿದೆ. ಹಿಂದಿನ ಸಂವಾದವಾಗಿ ಈ ಹೊತ್ತಿಗೆ ೧೫ ದಿನಗಳಾದವು

ಗು — ಹದಿನೈದು ಹದಿನೈದು ದಿವಸಗಳಾದವೇ! ಅದೆಷ್ಟೋ ಪಾಪ ... ಈ ೧೫ ದಿವಸಗಳಲ್ಲಂತೂ ... ಸ್ವಲ್ಪ ಕಾಲವೇ! ಈ ಅಲ್ಪ ಕಾಲದ ೧೫ ದಿವಸಗಳಲ್ಲಿ ನಮ್ಮ ದೇಶದಿಂದ ವಿದೇಶಸ್ಥರು ಎಷ್ಟೋ ದ್ರವ್ಯಾಪಹಾರ ಮಾಡಿದರಲ್ಲಾ! ಈ ವಿಚಾರವು ಮನಸ್ಸಿನಲ್ಲಿ ಬಂದರೆ ಚಿತ್ತ ಭ್ರಮಿಸುವದು ... ಮೈ ಕಂಪಿಸುವದು ಈ ಹದಿನೈದು ಹದಿನೈದು ದಿನಗಳಲ್ಲಿ ಕನಿಷ್ಟ ಪಕ್ಷಕ್ಕೆ ೫೦ ಕೋಟಿ ರೂಪಾಯಿಗಳು ನಮ್ಮಿಂದ ಹೊರಬಿದ್ದಿವೆ. ... ಈ ಪ್ರಕಾರದ ದ್ರವ್ಯಶೋಷಣವು ಭಯಂಕರವೂ ಅನಿಷ್ಟಕರವೂ ಹಾನಿಕರವೂ ಅಸಹ್ಯಕರವೂ ಆಗಿ ಚಿತ್ತದಿಂದ ಸಹಿಸಲು ಅಸಾಧ್ಯ ನಮ್ಮ ಮುಖ್ಯ ದೇಶದಿಂದ ಈ ... ಲಕ್ಷಕ್ಕೆ ಬಂದಿಲ್ಲವೇ? ದುರ್ದೈವ!

ಈ ದ್ರವ್ಯಶೋಷಣವನ್ನು ತಡೆಯಲು ನಮ್ಮ ಬಳಿ ... ನೂಲಿನಲ್ಲೇ ಇರುವದು. ಉಳಿದ ಯಾವ ಉಪಾಯವೂ ಕಾಣುವದಿಲ್ಲ. ಏನು ಮಾಡಿದರೂ ಈ ಹಾನಿಕರ ದ್ರವ್ಯಶೋಷಣವು ನಿಲ್ಲಲಿಕ್ಕಿಲ್ಲ. ... ನಮ್ಮ ದೇಶದೊಳಗಿಂದ ವರುಷ ೬೦-೭೦ ಕೋಟಿ ರೂಪಾಯಿಗಳು ಹೊರಬೀಳುತ್ತಾವೆಂದು ಅರ್ಥಶಾಸ್ತ್ರದಲ್ಲಿ ... ಕೆಲವರು ೬೦-೬೫ ಕೋಟಿಗಳೆನ್ನುತ್ತಾರೆ ... ಈ ಭೇದವಿದೆ ... ಮತ್ತೊಬ್ಬರ ಮಾತನ್ನು ಸರಿ ... ಯಾವದಕ್ಕೂ ತಾಳ ಮೇಳವಿಲ್ಲ ೬೦ ... ಕೋಟಿ ರೂಪಾಯಿಗಳು ನಮ್ಮಿಂದ ನಿಶ್ಚಿತ ... ಸಂದೇಹವಿಲ್ಲೆಂದು ... ಬಹುಮುತವಿದೆ ಎಂದು ತೋರುತ್ತದೆ. ೬೦ ಕೋಟಿ ಎಂದೇ ಹಿಡಿದು ಗಣಿತ ಮಾಡುವಾ ಮತ್ತು ಏನು ನಿಷ್ಪನ್ನವಾಗುತ್ತದೆ ಎಂದು ವಿಚಾರ ಮಾಡುವಾ ವರುಷಕ್ಕೆ ೬೦ ಕೋಟಿಯೆಂದರೆ ತಿಂಗಳಿಗೆ ೫ ಕೋಟಿ. ಪ್ರತಿದಿನ ೧೬ ಲಕ್ಷ ರೂಪಾಯಿಗಳ ... ಮತ್ತು ಮಿನಿಟಿಗೆ ೧ ಸಾವಿರ ... ನಿಮಿಷ ... ಟಿಕ್ ಟಿಕ್ ಅನ್ನುವದರಲ್ಲಿ ಬಂದೊಂದು ... ಸ್ಥಿತಿಯಿಂದ ಹಾರುತ್ತಾರುತ್ತಾ ... ನಿ ... ಗಂಟೆಗಳಲ್ಲಿ ... ಪ್ರವಾಹದ ಜಲಾಶಯದ ... ಈ ದ್ರವ್ಯ ಶೋಷಣೆ ... ಬೀಜವಾಗಿರುತ್ತದೆ. ಎಲೈ ಮಾತೇ ಹಿಂದುಜನನೀ! ಈ ದ್ರವ್ಯಶೋಷಣೆಯಿಂದ ನೀನು ಸುವರ್ಣ ಭೂಮಿಯಾಗಿ ... ನೀನು ಗೌರವನ್ನಾಗಿ ... ಇನ್ನೂ ... ಇದು ನಿನ್ನ ಸ್ಥಿತಿ ಮತ್ತು ಗತಿ!!! ಈ ದ್ರವ್ಯಶೋಷಣೆ ಈ ಹೊತ್ತು-ನಿನ್ನೆ, ಈಗ ಕನಿಷ್ಟ ಸಾವಿರ-ನೂರು ... ವರುಷ ಗಳಿಂದ ಬಂದೇ ಇದೆ ಈ ದ್ರವ್ಯಶೋಷಣವು ನಡೆದಿದ್ದೇ, ... ಚಕ್ರವರ್ತಿ ಕೋಟಿ ... ನಿನ್ನನ್ನು ಯಾವ ದೇಶದವರು ಆಳಲಿಲ್ಲ! ಜಯಾನ ಬಿಟ್ಟು, ಎಲ್ಲರೂ ನಿನ್ನ ಮೇಲೆ ಬರುತ್ತಾ ನಡೆಸಿದರೇ. ಹೀಗೆ ನಿನ್ನ ಸ್ವಾತಂತ್ರ್ಯ ನಷ್ಟವಾಗ... ಈಗಂತೂ ನಷ್ಟಪ್ರಾಯವಾಗಿದೆ. ನಿನ್ನ ಶಕ್ತಿಪಾತವಾಗಿವೆ ... ಜ್ಞಾನವು ಹ್ರಾಸವಾಗಿ ... ಶ್ಲೇಗ, ಕಾಲೆರಾ, ಮಲೇರಿ

ಯಾ ಮುಂತಾದ ... ದಿನಗಳಲ್ಲಿ ಇದ್ದೇ ಇದೆ. ಇದನ್ನೆಲ್ಲಾ ಇಷ್ಟು ದೀರ್ಘ ಕಾಲದ ವರೆಗೆ ನೀನು ಹ್ಯಾಗೆ ಸಹಿಸಿದಿ? ಮತ್ತೆ ಸಹಿಸುವಿ? ಅಸಹ್ಯ! ಅಸಹ್ಯ! ನಿನ್ನ ಮಕ್ಕಳ ವಿಪತ್ತೇ, ನಿನ್ನ ಸಂಪತ್ತೇ? ದೇಶದಲ್ಲಿ ನೆಲಸಿಹ ಕ್ಷಾಮದ ಮೇಲೆ ನಿನಗೆ ಅಷ್ಟು ಪ್ರೇಮವೇ? ನಮಗುಂಟಾಗುವ ರೋಗಗಳು ನಿನಗೆ ಭೋಗಗಳಾಗಿವೆಯೇ? ನಮ್ಮ ಆಕ್ರಂದವನ್ನು ನೋಡಿ ನಿನಗೆ ಆನಂದವಾಗುತ್ತದೇನು? ನಮಗೊದಗುವ ಸಂಕಷ್ಟಗಳಿಂದ ನಿನಗೆ ಇಷ್ಟವೆಂದೆನಿಸುತ್ತೀಯಾ? ನಮ್ಮ ದುಃಖಗಳನ್ನು ನೋಡಿ ನಿನಗೆ ಸುಖವಾಗುತ್ತದೇ? ಇಲ್ಲಿಲ್ಲ. ನಮ್ಮ ವಿಪತ್ತು ಆಪತ್ತುಗಳನ್ನು ನೋಡಿ ನೋಡಿ ನಿನಗೆ ಹ್ಯಾಗೆ ಸಮಾಧಾನವಾದೀತು? ಇವೆಲ್ಲ ವಿಪತ್ತಾದಿಗಳು ನಿನ್ನ ವೈಭವದ—ಸ್ವರಾಜ್ಯದ—ಸಂಪಾದನೆಯ ಹಿಗ್ಗೆ ಒದಗಿದ್ದರೆ ಒಳ್ಳೇದಿತ್ತು, ನಿನಗೂ ಒಳ್ಳೇದೆನಿಸುತ್ತಿತ್ತು. ನಮಗೂ ಆನಂದವನ್ನುಂಟುಮಾಡುತ್ತಿತ್ತು ನಿನಗೂ ಆನಂದವಾಗುತ್ತಿತ್ತು. ನಾವೂ ಆನಂದದಿಂದ ಸಹಿಸುತಿದ್ದೆವು. ನೀನೂ ಸುಖದಿಂದ ಸಹಿಸಿಕೊಳ್ಳುತ್ತಿದ್ದೆ. ನಮ್ಮ ವಿಪತ್ತುಗಳನ್ನೆಲ್ಲ ನೋಡಿ ನಿನಗೆಂದೆಂದಿಗೂ ಆನಂದವಾಗಲಾರದು. ಈ ಮಾತು ನಿಜವು, ಮತ್ತೂ ಸಹಿಸುವದು ಅಶಕ್ಯ. ಈ ಮಾತು ಅಷ್ಟೇ ನಿಜವಾದದ್ದು. ವಿಧೀಶ ಕಾಲವು ಬಂದು ಒದಗಿದೆ. ಕಾಲನ ಕೃತಿಯು ಆಶ್ಚರ್ಯ ಮತ್ತು ಅಜ್ಞೇಯವಾದದ್ದು. ಯಾವ ಕಾರಣ ದಿಂದ್ಯಾಕಾಗಲೊಲ್ಲದು ಹ್ಯಾಂಗಾದರೂ ಮಾಡಿ ನೀನು ಸಹಿಸಿದಿ ಇರಲಿ ಒಳಿತಾಯಿತು, ಯೋಗ್ಯವಾಯಿತು. ತಾಳಿದವ ಬಾಳಿಯಾನು ಹೇ ಮಾತೇ, ತಾಳು ಮತ್ತೂ ಬಾಳು ತಾಳು ಬಾಳು ... ತಾಳು ಬಾಳು ಸಹನಶೀಲತೆ ಇದೊಂದು ಶ್ರೇಷ್ಠ ಗುಣವು ಸಹಿಸುವದರಿಂದಲೇ — ತಾಳುವದರಿಂದಲೇ ನಮ್ಮ, ನಮ್ಮ ... ಸ್ವತಂತ್ರವಾದ ನಿನ್ನ ಹಿತವೂ ಆಗುವದೆಂಬುದು ನಿಃಸಂದೇಹವಾಗಿ ನಿಜವಾಗಿರುತ್ತದೆ. ನಿನ್ನ ಕಲ್ಯಾಣವಾಗಬೇಕು, ಆದರಿಸಿದರೆ ಲೋಕದ ಕಲ್ಯಾಣವಾಗಬೇಕು, ಎಲ್ಲಾ ಮಾನವ ಮಾತ್ರದ ಕಲ್ಯಾಣವಾಗಬೇಕು. ಹೀಗೆ, ಇದೇ ದೇವರ ಇಚ್ಛೆ. ಇಂಬೇಕೆಂತ ಕಾಣುತ್ತದೆ. ಇದಕ್ಕೆ ಮುಗಿದ ... ಚಿನ್ನಗಳು ಲೋಕಶಾಂತಿ ತೋರ ... ನಮಗೂ ಶಾಂತತೆ, ಪೂರ್ಣ ಶಾಂತತೆ ಬೇಕು. ಪರರಾಷ್ಟ್ರಗಳಿಗೂ ಶಾಂತತೆ ಬೇಕು ಸರ್ವರಿಗೂ ಶಾಂತತೆ ಬೇಕು ನಮ್ಮ ವಿಶ್ವರಣ ತಪ್ಪಿಸಿಕೊಳ್ಳುವದಕ್ಕೆ ನಮಗೆ ಶಾಂತತೆ ಬೇಕು. ಮತ್ತು ಪರದೇಶಸ್ಥರಿಗೆ ನಮ್ಮ ವಿತ್ತಹರಿಸಲಿಕ್ಕೆ ದೇಶದಲ್ಲಿ ಶಾಂತತೆ ಬೇಕೇಬೇಕು. ಇಬ್ಬರ ಚಿತ್ತ ವಿತ್ತದ ಕಡೆಗೆ! ಇಷ್ಟನೇ ಚಿತ್ತ ವಿತ್ತದ ಸಂಗತಿ ನಿನ್ನ ಚಿತ್ತಕ್ಕೆ ಬಂತೇ

ಶಿ — ಚಿತ್ತಕ್ಕೆ ಬಂತಯ್ಯಾ ಬಂತು. ಚಿತ್ತಿತಯ್ಯಾ ಚಿತ್ತು ಮನನ್ನು ಮನ್ನಿಸಿತು

ಗು — ಎಲೈ ಬಾಲಕ! ಜಲಿಯನ್‌ವಾಲಾಬಾಗವು ನಮ್ಮ ಜಲವಲದ ಬಾಲನೆಯು ಕಾರಣವಾಗಿತ್ತು. ಚೌರಿ ಚೌರ ಮಹಾತ್ಮರ ಶಾಂತತೆಯ ಉಪದೇಶವನ್ನು ಚೌರಿ ಚೌರದ ಹಾಗಿ ಮಾಡಿ ಜೋರ ಮಾಡಿತು. ಸದ್ಯ ಕಲ್ಲ ಕತ್ತೀ ನಮ್ಮ ಕತ್ತಿಗೆಯು ಕತ್ತೇ ಒತ್ತುವ ಕಲ್ಲಾಗಿದೆ ಆಗ ಸ್ಥಳಿದೆ ನಾನು ಹೇಳಿದ್ದು ಚೆನ್ನಾಗಿ ಧ್ಯಾನದಲ್ಲಿ ಬಂತೇ. ನಮ್ಮ ಬ್ಯುರೋಕ್ರಸಿಯುಕಿಂತ ನಮಗೆ ಶಾಂತತೆಯು ಅತೀ ಅಗತ್ಯವಿದೆ. ಶಾಂತತೆಯನ್ನು ಶಸ್ತ್ರ, ಶಕ್ತಿ ಹಿಂಸೆಗಳಿಂದ ಅಲ್ಲ, ಶಾಂತ ರೀತಿಯಿಂದ, ಧರ್ಮ, ನೀತಿಗಳಿಗೆ ಅನುಸರಿಸಿ ರಚನೆಯನ್ನು ಇಟ್ಟು ಕಾಯಕೊಳ್ಳುವದೇ ಈ ಹೊತ್ತಿನ ನಮ್ಮ ಮಹತ್ವದ, ಮುಖ್ಯ ಆದ್ಯ ಕರ್ತವ್ಯವಾಗಿರುತ್ತದೆ. ನಮ್ಮಲ್ಲಿಯ ಜ್ಞಾನಪ್ರಸಾರಕ್ಕೆ ಶಾಂತತೆ ಬೇಕು, ನಮ್ಮಲ್ಲಿ ಒಕ್ಕಟ್ಟು ಮಾಡಿಕೊಳ್ಳಲಿಕ್ಕೂ ಶಾಂತತೆ ಬೇಕು, ನೂಲುವದೇ ಮುಂತಾದ ಉದ್ಯೋಗಗಳು ಸುರಳಿತವಾಗಿ ಸಾಗಿಸಲಿಕ್ಕೂ ಶಾಂತತೆ ಅತಿ ಅಗತ್ಯದಿಂದ ಬೇಕು. ಮತ್ತು ಯಾವದೇ ರೀತಿಯಿಂದ ಆಲೋಚಿಸಿದರೂ, ನಮ್ಮ ಹಿತದ, ಉನ್ನತಿಯ ಪ್ರತಿಯೊಂದು ಕಾರ್ಯ ಸಾಧನ ಸಾಧಿಸಿಕೊಳ್ಳಲಿಕ್ಕೆ ಶಾಂತತೆ ಬೇಕೇ ಬೇಕು

ಶಾಂತತೆಯ ಹೊರತು ನಮ್ಮದೇನೂ ಹಿತವಾಗಲಾರದು, ಇದನ್ನು ನಾವು ಚನ್ನಾಗಿ ಲಕ್ಷದಲ್ಲಿಡತಕ್ಕದ್ದು. ಹಿಂಸೆಯ ಕಡೆಗೆ ಕಣ್ಣೆತ್ತಿ ನೋಡಬಾರದು, ಹಿಂಸೆಯ ವಿಚಾರವನ್ನು ತೊಲಗಬೇಕು. ಅಹಿಂಸಾವ್ರತವನ್ನು ದೃಢವಾಗಿ ಪಾಲಿಸುವದಗತ್ಯವದೆ. ವಂದೇ ಮಾತರಂ! ಎಲೈ ಶಾಂತಿ ದೇವತೆಯೇ! ಶ್ವೇತವರ್ಣದ ನಿನ್ನ ಮೂಲ ರೂಪವು ಗೌರ, ಶಾಂತಿಯೇ ಇದೆ. ಅಂದೇ ನೀನು ಶಾಂತತಾಮಯಿಯೂ ನಿನ್ನ ಧರ್ಮವು ಶಾಂತಿಯನ್ನೀಯುವ ಶಾಂತಿಪ್ರಿಯ ಧರ್ಮವಾಗಿರುವದರಿಂದ ನೀನು ಶಾಂತತಾಪ್ರಿಯಳೂ ಶಾಂತತೆಯನ್ನು ಸಂಸ್ಥಾಪಿಸುವವಳೂ, ಪ್ರಸಾರಗೊಳಿಸುವವಳೂ ಇದ್ದೀಯೋ !! ಆದುದರಿಂದಲೇ ನೀನು ಬಹು ಕಾಲದಿಂದ ಒದಗಿದ ದುಃಖಗಳನ್ನು ನುಂಗಿ ಸಹಿಸಿ ತಾಳಿದಿ. ಬಾಳಿದಿ. ಮುಂದೂ ತಾಳುವಿ, ಬಾಳುವಿ. ಎಂದೇ ಶಾಂತಸಾಗರನಾದ ಕ್ರೈಸ್ತಸ್ವಾಮಿಗಿಂತಲೂ ಹೆಚ್ಚು ಶ್ರೇಷ್ಠನಾದ ಮಹಾತ್ಮನನ್ನು ಹೆತ್ತು ಧನ್ಯಳಾಗಿರುತ್ತೀ !!! ಮಹಾತ್ಮರಾದರೋ, ಚೋಂಬಾದಿ ಹಿಂಸಾವಾದವನ್ನು ಖಂಡಿಸಿರುವರು. ಅಹಿಂಸೆಯ ಚಕ್ರವನ್ನು ತಿರುವುತ್ತ ನಿನ್ನ ಮುಕ್ತತೆಯ ಸೂತ್ರವನ್ನು ತೆಗೆಯುತ್ತಿರುವರು. ನಮ್ಮನ್ನು ಚಕ್ರ ತಿರುಗಿಸಲಿಕ್ಕೂ, ಮುಕ್ತತೆಯ ಸೂತ್ರವನ್ನು ತೆಗೆಯಲಿಕ್ಕೂ ಮಾರ್ಗ ಉಪದೇಶಿಸುತ್ತಿರುವರು. ಎಲೈ! ಮಾತ್ಕೃಭೂಮಿ, ಮುಕ್ತತೆಯ ಇಂಥ ಸುಲಭ ಸಾಧನೆಯನ್ನು ಮಾಡಲಾರದ ನಾವು ಮತ್ತೇನು ಮಾಡೇವು ? ದೇವೀ ಭುವನವು ನಮೋಹಿಸೀ! ನೀನು ಇಚ್ಛಿಸಿದ- ಆಜ್ಞಾಪಿಸಿದ ಮತ್ತು ನಿನ್ನ ಸತ್ಪುತ್ರರಾದ ಮಹಾತ್ಮರು ಆಜ್ಞಾಪಿಸಿ ಉಪದೇಶಿಸಿದ ಚರಕಾ ತಿರುಗಿಸಿ ಸೂತ್ರವನ್ನು ಧರಿಸಿ, ಜಗತ್ತು ಮುಕ್ತತೆಯ ಸುಲಭ ಮಾರ್ಗವನ್ನು ನಮ್ಮೆಲ್ಲರಿಗೂ ಆಕ್ರಮಿಸಲು ಸದ್ಬುದ್ಧಿಯನ್ನು ಇತ್ತು ಉದ್ಧರಿಸು. ಅಮ್ಮಾ! ಸರ್ವರ್ಕ್ಯ ಸಕಲ ಶಾಂತತೆಯನ್ನು ಕಾಯುವವಳೂ, ಪಾಲಿಸುವವಳೂ, ನಮ್ಮ ಈಗಿನ ಕರ್ತವ್ಯಕರ್ಮಗಳಲ್ಲಿ ಇವೇ ಮುಖ್ಯವಾದವುಗಳಾಗಿರುತ್ತವೆ. ಇದು ತಿಳಿಯಿತೋ ? ನಿಮ್ಮ ಲಕ್ಷದಲ್ಲಿ ಉಳಿದೀತೋ ?

೩ — ತಿಳಿಯಿತು, ಉಳಿದೀತು.

ಗು — ಇರಲಿ, ಉಳಿಯಲಿ, ಹಿಂದಿನ ಸಂವಾದದಲ್ಲಿ ಯಾವ್ಯಾವ ವಿಷಯಗಳನ್ನು ವಿವರಿಸಿದ್ದೆನು. ಅವನ್ನು ನೀವು ನೆನಪಿನಲ್ಲಿಟ್ಟಿರುವಿರಾ, ಹೇಳುವಿರಾ ?

೩ — ಮಾತಿನ ರೀತಿಯು ಬದಲಾದಂತೆ ವಿಷಯಗಳು ಬದಲಾಗಿರುವವು ಮತ್ತು ಸಂವಾದ ಪದ್ಧತಿಯಲ್ಲಿ ಹೀಗಾಗುವದೇ. ಮುಖ್ಯ ವಿಷಯ ಬಿಟ್ಟುಕೊಟ್ಟಿರುವಿರಿ, ಆ ನಂತರ ವಿಷಯಗಳು ಸೇರುವೆ ಬರುತ್ತವೆ. ಅವು ಮುಖ್ಯ ವಿಷಯಕ್ಕೆ ಪೋಷಕವಾಗಿರಬೇಕು. ಅಂದರಾಯಿತು. ಅಷ್ಟಿಷ್ಟು ನೀವು ವಿವರಿಸಿದ ವಿಷಯಗಳಲ್ಲಿಯ, ನಮ್ಮ ತಿಳುವಳಿಕೆಯಂತೆ ಯಾರಿಗೂ ಅಲ್ಲದು, ಅದೂರ್ತತೆಗಳನ್ನು ಪೂರ್ಣಗೊಳಿಸಿಕೊಳ್ಳುವ ಬಗ್ಗೆ ಸಂಶಯಗಳನ್ನು ನಿವೃತ್ತಿಸಿಕೊಳ್ಳುವ ಬಗ್ಗೆ, ನಾವು ಪ್ರಶ್ನಿಸುತ್ತಿದ್ದೇವೆ

" ಸೀತಾರಾಮ "

ಅಮೇರಿಕದಲ್ಲಿ ಮದ್ಯಪಾನನಿಷೇಧ.

[ಇದು ಸಿ ರಾಜಗೋಪಾಲಾಚಾರ್ಯರು ಬರೆದ ಲೇಖನದಿಂದ ಸಂಗ್ರಹಿಸಲ್ಪಟ್ಟಿದೆ]

ಅಮೇರಿಕದಲ್ಲಿ ಮದ್ಯಪಾನನಿಷೇಧ ವಿಷಯಕವಾದ ಠರಾವು ಮಂಜೂರಾದ ಮೇಲೆ ಜನರು ಮದ್ಯಪಾನವನ್ನು ಬಿಟ್ಟುಬಿಡಲಿಲ್ಲ, ಅದರ ಬದಲಾಗಿ ಮೊದಲಿಗಿಂತಲೂ ಹೆಚ್ಚಾಗಿ ಈ ದುರ್ವ್ಯಸನಕ್ಕೆ ಬಲಿ ಬೀಳುವರೆಂದು ಅನೇಕರು ಹೇಳುವದುಂಟು. ಆದರೆ ಸತ್ಯ ಸ್ಥಿತಿಯನ್ನು ನೋಡಿದ ಪಕ್ಷದಲ್ಲಿ ಹೀಗೆ ಹೇಳುವುದಕ್ಕೆ ಆಧಾರವಿಲ್ಲವೆಂದು ಕಂಡುಬರುವುದು. ಈ ಕಾನೂನನ್ನು ಜಾರಿಗೆ ತಂದು ನಾಲ್ಕು ವರ್ಷ ನಿಷೇಧಕ್ಕಾಗಿ ಕೆಲಸ ಮಾಡಿದ ಮೇಲೆ ೧೯೨೪ ನೇ ಇಸವಿ ಮೇ ೩೦ಕ್ಕೆ ಇದರಿಂದಾದ ಫಲಾಫಲಗಳನ್ನು ವಿವೇಚಿಸುವುದಕ್ಕೆ ಒಂದು ಕಮಿಟಿಯು ಸ್ಥಾಪಿಸಲಾಯಿತು. ಅವರು ಕೊಟ್ಟ ರಿಪೋರ್ಟನ್ನು ನೋಡಿದರೆ, ಒಬ್ಬ ಮಂದಿಯ ಹೊರತಾಗಿ ಅಭಿಪ್ರಾಯವು, ಎಂದರೆ ನಿಷೇಧದ ಠರಾವು ಜಾರಿಯಾದ ಮೇಲೆ ಮದ್ಯಪಾಯಿಗಳ ಸಂಖ್ಯೆ ಕಡಿಮೆಯಾಗಿರುವುದೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ

೧೯೨೩ ನೇ ಇಸವಿಯಲ್ಲಿ ಪ್ಯಾರಿಸ್ ಪಟ್ಟಣದಲ್ಲಿ ಮದ್ಯಪಾನೋತ್ತೇಜಕವಾದೊಂದು ಗುಪ್ತ ಸಭೆಯು ಫ್ರಾನ್ಸ್ ದೇಶದಲ್ಲಿ ಕೂಡಿತು. ಮದ್ಯಪಾನವು ಹೆಚ್ಚುವಂತೆ ಮಾದಕ ಪದಾರ್ಥಗಳ ಮಾರಾಟವು ಹೆಚ್ಚುವಂತೆ ಮಾಡುವದೇ ಅವರ ಉದ್ದೇಶವು. ಅವರು ಇದಕ್ಕೆ ಲಕ್ಷಾವಧಿ ಹಣವನ್ನು ಕೂಡಿಸಿದ್ದರು. ಯುರೋಪ ಖಂಡದಲ್ಲಿ ಮದ್ಯಪಾನನಿಷೇಧಕ್ಕೆ ಆಸ್ಪದ ದೊರೆಯಬಾರದೆಂದೂ, ಮುಖ್ಯವಾಗಿ ಅಮೇರಿಕದಲ್ಲಿ ಆ ಠರಾವು ಇರುವುದರಿಂದ ಅದರ ವಿರುದ್ಧವಾಗಿ ಕೆಲಸ ಮಾಡುವುದೇ ಅವರ ಮುಖ್ಯ ಕಾರ್ಯವಾಗಿತ್ತು. ಈ ರೀತಿಯಲ್ಲಿ ಆತ್ಮಲಾಭವನ್ನು ನೋಡುವ ಕೆಲ ಜನರಿಂದ ಮಾತ್ರ ಅಮೇರಿಕದ ವಿಷಯವಾಗಿ ಸುಳ್ಳು ಅಭಿಪ್ರಾಯಗಳು ಜನರಲ್ಲಿ ಹುಟ್ಟಿದವು.

ನಿಷೇಧ ಠರಾವು ಜಾರಿಗೆ ಬಂದ ದರ ಸತ್ಪರಿಣಾಮವು ಅನೇಕ ವಿಷಯಗಳಲ್ಲಿ ಕಂಡು ಬರುತ್ತದೆಂದು, ಆ ವಿಷಯವನ್ನು ವಿಚಾರಿಸಲು ಸ್ಥಾಪಿತವಾದ ಕಮಿಟಿಯು ಅಭಿಪ್ರಾಯವಾಗಿರುವುದು. ಅವಕ್ಕೆ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಬಹುದು.

(೧) ಸೆವಿಂಗ್ಸ್ ಬ್ಯಾಂಕುಗಳಲ್ಲಿ ಜನರು ಇಡುವ ಹಣವು ನಿಷೇಧ ಠರಾವಿನ ಪೂರ್ವದಲ್ಲಿದ್ದುದಕ್ಕಿಂತ ನಾಲ್ಕರಷ್ಟು ಹೆಚ್ಚಾಗಿದೆ. ಜನರ ಉಳಿತಾಯವು ಹೆಚ್ಚುತ್ತಾ ಬರುತ್ತಿದೆಯೆಂದು ಬ್ಯಾಂಕುಗಳ ಯಜಮಾನರೂ ಸ್ವಾನುಭವದಿಂದ ಹೇಳುವರು. (೨) ಜೀವವಿಮೆಗಳ ಸಂಖ್ಯೆಯೂ ಹೆಚ್ಚಾಗಿರುವುದು, ಇದೂ ನಿಷೇಧದ ಪರಿಣಾಮವೆಂದು ಬಲ್ಲವರು ಹೇಳುವರು. (೩) ಸಾಧಾರಣರಲ್ಲಿ ಹಣವು ಹೆಚ್ಚಿರುವುದರಿಂದ ಕಟ್ಟಡಗಳ ಸಂಖ್ಯೆಯು ಬೆಳೆಯುತ್ತಿವೆ. ಮೊದಲು ಸಣ್ಣ ಮನೆಯನ್ನು ಬಾಡಿಗೆಗೆ ಮಾಡಿಕೊಂಡಿದ್ದವನು ಈಗ ಅದರ ಯಜಮಾನನು, ಚಿಕ್ಕ ಕೋಣೆಯಲ್ಲಿ ವಾಸಿಸುತ್ತಿದ್ದವನು ಈಗ ಭವ್ಯ ಮಂದಿರದಲ್ಲಿ ವಾಸಿಸುತ್ತಿರುವನು. (೪) ಜೀವನದ ಶರಗತಿ ಹೆಚ್ಚಿ ಕೈಗಾರಿಕೆ ಅಭಿವೃದ್ಧಿಗೊಂಡಿರುವುದು. ಅದರ ವಿಭಾಗವೂ ಸರಿಯಾಗಿ ಆಗುತ್ತಿರುವುದು, (೫) ಕುಡಿತದಿಂದ ಉಂಟಾಗುವ ಕೊಲೆ-ಕಳವುಗಳು ಕಡಿಮೆಯಾಗಿರುವುವು.

ಮದ್ಯಪಾನ ನಿಷೇಧದ ಪರಿಣಾಮವಾಗಿ ಅಮೇರಿಕಕ್ಕೆ ಎಷ್ಟೆಲ್ಲಾ ಪ್ರಯೋಜನಗಳು ಆಗುತ್ತಿರುವಾಗ, ಅಲ್ಲಿ ಮದ್ಯಪಾಯಿಗಳ ಸಂಖ್ಯೆಯು ಹೆಚ್ಚಾಗಿರುವುದೆಂಬಿವೇ ಮೊದಲಾದ ವಾರ್ತೆಗಳನ್ನು ಹಬ್ಬಿಸುವುದು, ಸ್ವಾರ್ಥಿಗಳ ಕೆಲಸವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆಸ್ಟ್ರೇಲಿಯಾ ಸರಕಾರದಿಂದ ನಿಯುಕ್ತರಾದ ಥೋಮಸ್ ವ್ರೋಕರ್ ಎಂಬವರು, ಅಮೇರಿಕಕ್ಕೆ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನು ಸ್ವತಃ ಪರೀಕ್ಷಿಸಿ ತಮ್ಮ ಅಭಿಪ್ರಾಯವನ್ನು ಹೀಗೆ ಕೊಟ್ಟಿರುವರು. ಸರಿಯಾದ ಸಂಸ್ಥೆಗಳಿಲ್ಲದೆ ಕೇವಲ ಕಾನೂನಿನ ಸಹಾಯದಿಂದಲೇ 'ಪಾನನಿಷೇಧವನ್ನುಂಟು ಮಾಡಿದುದರಿಂದ ಅಮೇರಿಕಕ್ಕೆ ಎಷ್ಟೋ ಪ್ರಯೋಜನಗಳಾಗಿವೆ. ಅಮೇರಿಕಕ್ಕೆ ಇವರಿಂದ ಆದ ಆರ್ಥಿಕ ಲಾಭವು ವಿಪುಲವಾಗಿದೆ " ಇದರಿಂದ ಅಮೇರಿಕದಲ್ಲಿ ಮದ್ಯಪಾನ ನಿಷೇಧದ ಇಂದಿನ ನಿಜವಾದ ಸ್ಥಿತಿಯನ್ನು ತಿಳಿದುಕೊಳ್ಳಬಹುದು

— ನವಯುಗ.

— ಬರೋಡೆಯ ಮಹಾರಾಜರು ದಿಲ್ಲಿಯಲ್ಲಿ ಒಂದು ರಾಜಭವನವನ್ನು ಕಟ್ಟಿಸುವವರಿದ್ದಾರೆ. ಇದಕ್ಕೆ ೮ ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ಮಹಾರಾಜರ ನಿರ್ಧಾರವಾಗಿದೆ!

ಅತ್ಯದ್ಭುತ ! ಅತ್ಯದ್ಭುತ !!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲಿಕ್ಷಿರ್ ಆಫ್ ಲೈಫ್

ಅಂದರೆ, ಸರ್ವ ರೋಗ ನಾಶಕ, ಸರ್ವಾರೋಗ್ಯದಾಯಕ ಅಜೀರ್ಣ ತಲೆನೋವು, ವಾಂತಿ, ಅತಿಸಾರ, ಜ್ವರ, ಕಾಲರಾ, ಜ್ವರ, ಕಿವಿನೋವು, ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಹೊಡೆದು ಚಲ್ಲುವ ಒಂದೇ ರಾಮಬಾಣವಿದು ' ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ !! ಒಂದು ಸೀಸೆಯಿದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ !!!

ಒಂದು ಸೀಸೆಗೆ ರೂ ೧ ೮-೦ ಸಣ್ಣ ಸೀಸೆಗೆ ರೂ ೦ ೮-೦. ಟಪಾಲ ಖರ್ಚು ಬೇರೆ.

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ:- ಜೀವನಾಧಾರ ಡಿಪೋ, ಹುಬ್ಬಳ್ಳಿ

BATLIBOI'S
Accountancy Training Institute
Recognised by
The G. D. A. Board

Offers best training in Accounting, Banking, Company Management and Secretarial Work and Theory and Practice of Commerce

Best staff, Individual attention fee moderate, and payable by instalments.

Send for Prospectus at Yusuf Buildings, Churchgate street, Fort, Bombay.

You are invited to make thorough enquiry before joining.

TUITION BY POST
IS OUR SPECIALITY

ಕಾನಡಾವೃತ್ತ.

ಶ್ರೀ ಕ್ಷಯ ಸಂ॥ ಆಷಾಢ ಶು॥ ೨ ಗೆ ಸೋಮವಾರ

ಲೋಕಲ್ ಫಂಡಿನ ಏರಿಕೆ

(ಲೇಖಾಂಕ ೨)

ಜಿಲ್ಹಾ ಲೋಕಲ್ ಬೋರ್ಡಿನ ಅಧ್ಯಕ್ಷರಾದ ಶ್ರೀ॥ ಗೋಪಿ ಮಹಾಬಳೇಶ್ವರ ಭಟ್ಟರವರ ಲೋಕಲ್ ಫಂಡಿನ ಏರಿಕೆಯ ಸೂಚನಾಪತ್ರಿಕೆಯನ್ನು ವಿಮರ್ಶಿಸುವಾಗ ಕಳೆದ ಪತ್ರಿಕೆಯಲ್ಲಿ ನಾವು ಕೆಲವು ವಿಚಾರಗಳನ್ನು ಪ್ರದರ್ಶಿಸಿದ್ದೆವು. ಇಂದಿಗೆ ಅದೇ ವಿಷಯದ ಕುರಿತು ಇನ್ನು ಸ್ವಲ್ಪ ಮಾತುಗಳನ್ನು ನಮೂದಿಸಬಿಚ್ಛಿಸುವೆವು.

ಸನಾತನ ಧರ್ಮಾಭಿಮಾನಿಗಳಾದ ನಮ್ಮ ವಾಚಕರು ಮಹಾಭಾರತದೊಳಗಿನ ಚಕ್ರವ್ಯೂಹದ ಕಥೆಯನ್ನು ಕೇಳಬಹುದು. ಪಾಂಡವರ ಪುತ್ರನಾದ ಅಭಿಮನ್ಯುವು ಚಕ್ರವ್ಯೂಹದಲ್ಲಿ ಸಿಲುಕಿದ ಕಥೆಯನ್ನೂ ವಾಚಕರು ಅರಿಯಬಹುದು. ಅಭಿಮನ್ಯುವು ಗರ್ಭದಲ್ಲಿದ್ದಾಗ ಭಗವಾನ್ ಶ್ರೀ ಕೃಷ್ಣ ಪರಮಾತ್ಮನು ಚಕ್ರವ್ಯೂಹಪ್ರವೇಶದ ಮಾರ್ಗವನ್ನು ಮಾತ್ರ ಆತನಿಗೆ ನಿವೇದಿಸಿದ್ದನಂತೆ. ಮುಂದೆ ಅಭಿಮನ್ಯುವಿನ ಪ್ರಕಾಶದ ಅರಿವುಂಟಾಗಿ ಆತನು ಚಕ್ರವ್ಯೂಹರಚನೆಯ ಕಥೆಯನ್ನು ಅರ್ಥಕ್ಕೇ ತಡಿಸಿದನೆಂದು ಹೇಳುತ್ತಾರೆ. ಅದಿಂತಿರಲಿ.

ಲೋಕಲ್ ಫಂಡಿನ ಏರಿಕೆಯ ವಿಚಾರ ಮಾಡುವಾಗ, ಅಭಿಮನ್ಯು ಚಕ್ರವ್ಯೂಹ ಕಥೆಯು ನೆನಪಾಗುತ್ತದೆ. ಚಕ್ರವ್ಯೂಹದಲ್ಲಿ ಸೇರುವಷ್ಟು ಜ್ಞಾನ ಪ್ರಾಪ್ತವಾದಂತೆ ಅಳಿರಸುವ ವಿಧಾಯರ್ದಿಂದಲೂ, ಪುಣ್ಯದಿಂದಲೂ ನಮ್ಮ ಜಿಲ್ಹಾ ಲೋಕಲ್ ಬೋರ್ಡಿಗೆ ಲೋಕಲ್ ಫಂಡನ್ನು ಏರಿಸುವ ಅಧಿಕಾರಪ್ರಾಪ್ತಿಯಾಗಿರುವದು. ಜಿಲ್ಹಾ ಲೋಕಲ್ ಬೋರ್ಡ ಕಾಯಿದೆಯ ೬೫ ನೇ ಕಲಮಿನಲ್ಲಿ ೧ ಆಣೆಯಿಂದ ೨ ಆಣೆಯ ತನಕ ಲೋಕಲ್ ಫಂಡನ್ನು ಏರಿಸಲು ಜಿಲ್ಹಾ ಬೋರ್ಡಿಗೆ ಸ್ವಾತಂತ್ರ್ಯವಿದೆ. ಕರವನ್ನು ಏರುವ ಸ್ವಾತಂತ್ರ್ಯವು ಜಿಲ್ಹಾ ಬೋರ್ಡಿಗೆ ದೊರಕಿದಂತೆ, ಕರಗಳನ್ನು ತಗ್ಗಿಸುವ ಯಾ ಸಂಪೂರ್ಣವಾಗಿ ಬಿಟ್ಟುಬಿಡುವ ಸ್ವಾತಂತ್ರ್ಯವು ನಮ್ಮ ಜಿಲ್ಹಾ ಬೋರ್ಡಿಗಿರುವದೇನು? ಮುಂದೆ ಯಾವದೇ ಕಾಲದಲ್ಲಿ ಜಿಲ್ಹಾ ಲೋಕಲ್ ಬೋರ್ಡಿನ ಸಾಂಪತ್ತಿಕ ಸ್ಥಿತಿಯು ಅಭ್ಯುದಯ ಹೊಂದಿದರೆ, ಲೋಕಲ್ ಫಂಡನ್ನು ತಗ್ಗಿಸುವ ಅಧಿಕಾರವು ಲೋಕಲ್ ಬೋರ್ಡ ಕಾಯಿದೆಯ ಯಾವ ಕಲಮಿನಲ್ಲಿಯೂ ತೋರಿಸಲ್ಪಟ್ಟಿರಲಿಲ್ಲ. ಒಮ್ಮೆ ಈ ಕಲಮಿನಂತೆ ಲೋಕಲ್ ಫಂಡಿನ ದರವನ್ನು ಇಮ್ಮಡಿ ಏರಿಸಿಕೊಂಡರೆ, ಲೋಕಲ್ ಫಂಡ ಏರಿಕೆಯ ನಮ್ಮ ಸ್ವರಾಜ್ಯವು ಅಂದೇ ತೀರಿತು! ಮುಂದೆ ಹೋಗಲಿಕ್ಕೆ ನಮಗೆ ಇಂಬಿಲ್ಲ, ಹಿಂಜರಿಯಲಿಕ್ಕೆ ಅಸ್ಪದವಿಲ್ಲ.

ಅಧ್ಯಕ್ಷರಾದ ಶ್ರೀ॥ ಗೋಪಿಯವರು ಈ ವಿಚಾರಗಳನ್ನೆಲ್ಲ ಅರಿತುಕೊಂಡಿರಬೇಕಿತ್ತು, ಅರಿತುಕೊಂಡಿರುವರೆಂದರೆ ನಮ್ಮ ಗ್ರಹಿಕೆಯಿದೆ. ಲೋಕಲ್ ಫಂಡಿನ ಏರಿಕೆಯ ಪ್ರಶ್ನೆಯು ತೀರ ಮಹತ್ವದ್ದಿದೆ. ಆ ಕುರಿತು ಸಭೆಯನ್ನು ನಿಮಂತ್ರಿಸುವ ಮುಂಚೆ ಸಭಾಸದರೊಡನೆ ಆಲೋಚಿಸಿ, ಸಂಪೂರ್ಣ ವಿಚಾರದಿಂದ ಸಭೆಯನ್ನು ನಿಮಂತ್ರಿಸುವದು ಉಚಿತವು. ಈಗಲಾದರೂ ಸಭೆಯ ನಿಮಂತ್ರಣ ಪತ್ರಿಕೆಯನ್ನು ರದ್ದುಪಡಿಸಿ, ಮುಂದೆ ಯಥಾವಕಾಶ ಈ ಕುರಿತು ಆಲೋಚಿಸಲು ಸಾಕಷ್ಟು ಸಮಯವಿದೆ.

ಲೋಕಲ್ ಫಂಡ ಏರಿಕೆಯ ವಿಚಾರ ಮಾಡುವ ಮುಂಚೆ ಜಿಲ್ಹಾ ಬೋರ್ಡಿನವರು ನಮ್ಮ ಜಂಗಲ ಪ್ರದೇಶದ ಕಡೆಗೆ ದೃಷ್ಟಿಯನ್ನು ತಿರುಗಿಸಬೇಕು. ಜಂಗಲ ಖಾತೆಯ ಧೂರ್ತರೊಬ್ಬರು ೧೯೩೬ ನೇ ಇಸ್ವಿಯ ಮೇ ತಿಂಗಳಲ್ಲಿಯೇ ಲೋಕಲ ಫಂಡಿನ ಏರಿಕೆಯ ಕನಸು ಬಿದ್ದಂತೆ ತೋರುತ್ತದೆ. ಜಂಗಲ ಖಾತೆಯ ಧೂರ್ತರೊಬ್ಬರು ಕಾರವಾರದ 'ವಿಚಾರಿ' ಪತ್ರಿಕೆಯ ತಾ ೨೧—೫—೧೯೩೬ ನೇ ಸಂಚಿಕೆಯಲ್ಲಿ ಒಂದು ಲೇಖವನ್ನು ಅಧಿಕಾರಿಗಳ ಪ್ರೇರಣೆಯಿಂದ ಬರೆದಿರಬೇಕೆಂಬ ಸಂಶಯವು ನಮಗೆ ಬಂದದರಿಂದ ಆ ಲೇಖದೊಳಗಿನ ವಿಚಾರ ಪರಂಪರೆಯನ್ನು ನಮ್ಮ ವಾಚಕರಿಗೆ ನಿವೇದಿಸಿ ಆ ಕುರಿತು ನಮ್ಮ ವಿಚಾರಗಳನ್ನು ನಮೂದಿಸುವದು ಯುಕ್ತವು.

ಮೊಟ್ಟಮೊದಲ, 'ವಿಚಾರಿ'ಯೊಳಗಿನ ಲೇಖಕರು ಭೂಮಿಯ ಹುಟ್ಟುವಳಿ ಹಾಗು ತೀರ್ವೆಯ ಪ್ರಮಾಣವನ್ನು ವಿಚಾರಿಸಿರುವರು. ತೀರ್ವೆಯನ್ನು ಆಕರಿಸಬೇಕಾದರೆ, ಸ್ಥಳೀಕ ಕಾಲಿಯ ಮಾಸ, ಹವಾಮಾನ, ಪೇಟೆಯ ಸಾನ್ನಿಧ್ಯ ಮುಂತಾದವುಗಳ ವಿಚಾರದಿಂದ ತೀರ್ವೆಯು ನಿಶ್ಚಿತವಾಗಿರುವದೆಂದು ಲೇಖಕರು ಉದ್ಧರಿಸಿ, ಸಾಮಾನ್ಯವಾಗಿ ೪ ರೂಪಾಯಿ ಉತ್ಪನ್ನವಿದ್ದ ಭೂಮಿಗೆ ೧ ರೂಪಾಯಿಯ ತೀರ್ವೆ ಇರುವದೆಂದು ಸಾಮಾನ್ಯ ಪ್ರಮಾಣ ಹಿಡಿದು ಮುಂದಾಗಿರುವರು. ಲಂಡ ರೆವ್ಹಿನ್ಯೂ ಹಾಗು ಫಾರೆಸ್ಟ ಕಾಯಿದೆಗಳನ್ವಯ ವ್ಯಕ್ತಿಗಳಿಗೆ ಒಪ್ಪಿಸಿದ ಭೂಮಿಯಲ್ಲಿ ಸರಕಾರದ ಮಾಲ್ಕಿಯಿರುತ್ತದೆ. ಸರಕಾರವು ಸಮಸ್ತ ಅಡವಿಯ ಯಜಮಾನನಾಗಿರುತ್ತದೆ. ಕಾನಡಾ ಜಿಲ್ಹೆಯೊಳಗಿನ ಅಡವಿಯಿಂದ ವರ್ಷಕ್ಕೆ ೨೫ ಲಕ್ಷ ರೂಪಾಯಿಗಳ ಹುಟ್ಟುವಳಿಯಾದರೆ, ತೀರ್ವೆಯಿಂದ ಬರೇ ೧೦ ಲಕ್ಷ ರೂಪಾಯಿಗಳು ಹುಟ್ಟಬಹುದು. ತೋರಿಕೆಗೆ ಜಂಗಲ ಉತ್ಪನ್ನವು ೨॥ ಪಟ್ಟು ಹೆಚ್ಚಿಗೆಯಾಗಿ ತೋರುತ್ತದೆ. ಆದರೆ ಜಂಗಲ ಉತ್ಪನ್ನವನ್ನು ಪೃಥಕ್ಕರಿಸಬೇಕು. ಜಂಗಲು ಸರಕಾರದ ಮಾಲ್ಕಿಯದು. ಆದರಿಂದ ಸರಕಾರಕ್ಕೆ ೨೫ ಲಕ್ಷ ರೂಪಾಯಿಗಳಿಂದ ಸಿಗುವ ಮಾಲ್ಕಿಯ ಉತ್ಪನ್ನವನ್ನು ಮಾತ್ರ ಶೋಧಿಸಬೇಕು. ಉರುವಲ ಕಟ್ಟಿಗೆಯನ್ನು ಮಣ ೧ ಕ್ಕೆ ೪ ಯಾ ೫ ಆಣೆಯಂತೆ ಮಾರುತ್ತಾರೆ. ಆದರೆ, ಇದರೊಳಗೆ ಸರಕಾರಕ್ಕೆ ಸಿಗುವ ಮಾಲ್ಕಿಯು ಬರೇ ೪ ಪೈ! ಒಂದು ತಲೆಹೊರೆ ಕಟ್ಟಿಗೆಗೆ ೪ ಪೈ ಫೀ ಅದೆ. ಸರಕಾರಿ ಕೋಶಕ್ಕೆ ಜಮೆಯಾಗುವ ೨೫ ಲಕ್ಷ ರೂಪಾಯಿಗಳು ಕಟ್ಟಿಗೆಯ ಮಾರಾಟದ ದರದಂತಿರುತ್ತದೆ, ಹೊರತು, ಸರಕಾರಿ ಉತ್ಪನ್ನವಲ್ಲ. ಇದರಿಂದ ೨೫ ಲಕ್ಷದ ಮೇಲೆ ನಾವು ಯಾವದೇ ಎಣಿಕೆಯನ್ನು ಮಾಡುವದು ತಪ್ಪು. ೨೫ ಲಕ್ಷಗಳೊಳಗಿಂದ ಸರಕಾರಕ್ಕೆ ತಗಲುವ ಖರ್ಚನ್ನು ನಾವು ವಜಾ ಕಳೆಯಬೇಕು. ಅದನ್ನು ಅಂದಾಜು ಮಾಡುವದು ಕಠಿಣವು. ಆದರೆ, ಸರಕಾರಕ್ಕೆ ೪ ಪೈ ಉತ್ಪನ್ನ ಸಿಗುವ ತಲೆಹೊರೆ ೧೮ ಬೆಲೆ ೪ ಆಣೆಯೆಂದು ಹಿಡಿದರೆ, ೧೨ ದುಡ್ಡುಗಳಲ್ಲಿ ೧ ದುಡ್ಡು ಸರಕಾರದ ಹುಟ್ಟುವಳಿಯೆಂದಾಯಿತು. ಆದರೆ ಈ ಪ್ರಮಾಣವನ್ನು ಸಹ ಹಿಡಿಯದೆ ಸರಕಾರಕ್ಕೆ ನೂರರಲ್ಲಿ ಎರಡು ಪಾಲು ಖರ್ಚಿಗೆ ಕಳೆದು, ಒಂದು ಪಾಲು ಹುಟ್ಟುವಳಿಯಾಗುತ್ತದೆಂದು ಲೇಖಕರು ದೊಡ್ಡ ಮನಸ್ಸಿನಿಂದ ಅಂದಾಜು ಮಾಡಿರುವರು. ಈ ಅಂದಾಜಿನಂತೆ ೨೫ ಲಕ್ಷ ರೂಪಾಯಿಗಳಲ್ಲಿ ೮ ಲಕ್ಷ ೩೩ ಸಾವಿರ ರೂಪಾಯಿಗಳು ಸರಕಾರದ ಹುಟ್ಟುವಳಿಯೆಂದಾಯಿತು. ಈ ರಕಮು ಖರ್ಚ ಕಳೆದು ಉಳಿದ ಹುಟ್ಟುವಳಿಯು. ತೀರ್ವೆಯನ್ನು ಆಕರಿಸಬೇಕಾದರೆ, ಹುಟ್ಟುವಳಿಯ ಲೆಖ್ಖ ಮಾಡಿ ನಾಲ್ಕರಲ್ಲಿ ಒಂದು ಪಾಲು ತೀರ್ವೆ ಹೇರುತ್ತಾರೆ. ಅಂದರೆ, ಹುಟ್ಟುವಳಿಯಲ್ಲಿ ಮೂರು ಪಾಲು ಒಡೆಯನಿಗೆ, ಒಂದು ಪಾಲು ಸರಕಾರಕ್ಕೆ. ಸರಕಾರವೇ ಬೆಟ್ಟದ ಅಧಿಪತಿಯಾಗಿರುವದೆಂದು, ಬೆಟ್ಟದಿಂದ ಸಿಗುವ ಒಡೆತನದ ಹಕ್ಕಿಗೆ ಬಾಧೆ ತಪ್ಪಲಾರದು. ಅಂದರೆ, ೮,೩೩,೩೩೩ ರೂಪಾಯಿಗಳಲ್ಲಿ ೬,೨೫,೦೦೦ ರೂಪಾಯಿಗಳು ಒಡೆತನದ ಹಕ್ಕಿನವು ಹೋಗಲಾಗಿ, ಬಾಕಿ ಉಳಿದ ೨,೦೮,೩೩೩ ರೂಪಾಯಿಗಳು ತೀರ್ವೆ ಲೆಕ್ಕಕ್ಕೆ ಉಳಿದವು. ೨೫ ಲಕ್ಷ ರೂಪಾಯಿಗಳಲ್ಲಿ ಸರಕಾರಕ್ಕೆ ಸಲ್ಲುವ ತೀರ್ವೆಯು ಇದೇ. ಈ ತೀರ್ವೆಯ ಮೇಲೆ ೧ ಆಣೆ ಲೋಕಲ್ ಫಂಡು ಹಿಡಿದರೆ, ಸರಕಾರವು ಕೊಡಬೇಕಾದ ಲೋಕಲ್ ಫಂಡಿನ ರಕಮು ರೂ ೧೩,೦೨೧

ಆಗುತ್ತದೆ. ಆದರೆ, ಸರಕಾರವು ಜಿಲ್ಲಾ ಬೋರ್ಡಿಗೆ ೨೫ ಸಾವಿರ ರೂಪಾಯಿಗಳನ್ನು ಕೊಡುತ್ತದೆ. ಇದು ಸರಕಾರದ ಔದಾರ್ಯವು. ಇದಕ್ಕಾಗಿ ಜಿಲ್ಲಾ ಬೋರ್ಡಿನವರು ಸರಕಾರದ ಉಪಕಾರವನ್ನು ಮನ್ನಿಸಬೇಕು. ಜಂಗಲ ಖಾತೆಯ ಹುಟ್ಟುವಳಿಯ ಮೇಲಿನ ದೃಷ್ಟಿ ತಿರುವಿ, ಹೊಸ ಕರಗಳನ್ನು ಹೇರಿಕೊಂಡು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಪ್ರಸಾರದ ವಿಚಾರ ಮಾಡಬೇಕು.

'ವಿಚಾರಿ'ಯೊಳಗಿನ ಲೇಖಕರ ಅಂಬೋಣವನ್ನು ವಿಸ್ತಾರಪೂರ್ವಕವಾಗಿ ಮುದ್ರಿಸಿಕೊಟ್ಟಿರುವೆವು. ಸರಕಾರದ ತರ್ಕಗಳೆಲ್ಲ ಈ ಲೇಖದಲ್ಲಿ ಒಳಗೊಂಡಿವೆ. ಅವನ್ನು ನಾವು ಪರಾಂಬರಿಸಿ ಖಂಡಿಸಿದರೆ, ಜಂಗಲ ಹುಟ್ಟುವಳಿಯ ಮೇಲೆ ಲೋಕಲ್ ಫಂಡವನ್ನು ಸೆಳಕೊಳ್ಳಲು ನಾವು ಪಾತ್ರರಾಗುವೆವು. ಸರಕಾರಿ ತರ್ಕಗಳ ವಿವರಣೆಯಲ್ಲಿಯೇ ಸ್ಥಳವ್ಯಾಪ್ತಿಯಾದ್ದರಿಂದ, ಈ ಕುರಿತು ಮುಂದೆ ಯಥಾವಕಾಶ ವಿಮರ್ಶಿಸುವೆವು.

ಸ್ಫುಟ ಸೂಚನೆಗಳು.

೧. ಕರ್ನಾಟಕ ಸಿಂಹಾಸನಸ್ಥಾಪನಾಚಾರ್ಯರಾದ ಶ್ರೀಮದ್ವಿದ್ಯಾರಣ್ಯರ ಪುಣ್ಯತಿಥಿಯನ್ನು ನಮ್ಮ ಧಾರವಾಡದ ಬಂಧುಗಳು ಕಳೆದ ಜ್ಯೇಷ್ಠ ವ| ೧೩ ಕ್ಕೆ ವಿಜೃಂಭಣೆಯಿಂದ ಪಾಲಿಸಿದರು. ಮಂಗಳೂರ ಕಡೆ ಶ್ರೀ ವಿದ್ಯಾರಣ್ಯರ ಪುಣ್ಯತಿಥಿಯ ಪಾಲನವಾಗುವದಿಲ್ಲ, ಇದು ಶೋಚನೀಯವು. ಶ್ರೀ ವಿದ್ಯಾರಣ್ಯರವರು ನಮ್ಮ ಕರ್ನಾಟಕದ ಉದ್ಧಾರಕರು. ಸಾಲುವ ಬದಿಯಿಂದ ಧರ್ಮಗ್ಲಾನಿಯಾದಾಗ, ಇಸ್ಲಾಮು ಧರ್ಮದ ದೊಡ್ಡ ಬಿರುಗಾಳಿ ಬೀಸಿದಾಗ, ಕರ್ನಾಟಕ ಕುಲಗುರುಗಳಾದ ಶ್ರೀ ವಿದ್ಯಾರಣ್ಯ ಸ್ವಾಮಿಗಳವರು ಹುಕ್ಕ-ಬುಕ್ಕರಿಗೆ ಆಶ್ರಯವನ್ನಿತ್ತು ಕರ್ನಾಟಕದಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ಸ್ಥಾಪಿಸಿ, ಸ್ವಧರ್ಮರಕ್ಷಣ ಮಾಡಿದರು, ಸ್ವರಾಜ್ಯವನ್ನು ಸ್ಥಾಪಿಸಿದರು. ಇಂಥ ಪುಣ್ಯಪುರುಷರ ಪುಣ್ಯತಿಥಿಯನ್ನು ಕರ್ನಾಟಕಸ್ಥರೆಲ್ಲರೂ ಐಕ್ಯಮತ್ಯದಿಂದ ಪಾಲಿಸಬೇಕು. ಪಾಲಿಸಿ ಶ್ರೀ ವಿದ್ಯಾರಣ್ಯರಂಥ ಭರತ ಖಂಡದ ಉದ್ಧಾರಕರು ಮತ್ತೀ ಭರತ ಭೂಮಿಗೆ ಪ್ರಾಪ್ತವಾಗಲೆಂದೂ, ಭರತ ಖಂಡದ ಉದ್ಧಾರಕ್ಕಾಗಿ, ಸ್ವಧರ್ಮದ ಪರಿಪಾಲನಕ್ಕಾಗಿ ಶ್ರೀ ವಿದ್ಯಾರಣ್ಯರವರಂಥ ದೇಶೋದ್ಧಾರಕ ಪುರುಷರ ಆಜ್ಞಾಧಾರಕರಾಗಿ ನಡೆಯುವಷ್ಟು ಬುದ್ಧಿಸಾಮರ್ಥ್ಯವನ್ನು ನಮಗೆ ದಯಪಾಲಿಸಬೇಕೆಂದೂ ನಾವು ಜಗತ್ಪಾಲಕನೆಡೆಗೆ ಅನನ್ಯ ಭಾವದಿಂದ ಬೇಡಿಕೊಳ್ಳಬೇಕು. ಕರ್ನಾಟಕದ ಏಕೀಕರಣ, ಕರ್ನಾಟಕ ವಿಶ್ವವಿದ್ಯಾಲಯ ಮುಂತಾದ ಕರ್ನಾಟಕ ಉದ್ಧಾರಕ ಯೋಜನೆಗಳು ಅಭಿವೃದ್ಧಿಗೆ ಬರಬೇಕಾದರೆ, ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ ಶ್ರೀ ವಿದ್ಯಾರಣ್ಯರ ಪುಣ್ಯಸ್ಮರಣೆಯನ್ನು ನಾವು ನಿತ್ಯವೂ ಜಪಿಸಬೇಕು, ಅಂದರೆ ಮಾತ್ರ ಕರ್ನಾಟಕವು ಒಂದೇ ಎಂಬ ಭಾವನೆಯು ನಮ್ಮಲ್ಲಿ ಉಂಟಾಗುವದು. ಇಷ್ಟು ನಿಕಟ ಸಂಬಂಧವು ಶ್ರೀ ವಿದ್ಯಾರಣ್ಯರವರಿಗೂ, ಕರ್ನಾಟಕರಿಗೂ ಇರುವದು. ಕರ್ನಾಟಕದ ಅಭಿಮಾನಿಗೆ ಶ್ರೀ ವಿದ್ಯಾರಣ್ಯರು ಪರಮ ಪೂಜ್ಯವಾದ ದೈವತವು, ಶ್ರೀ ವಿದ್ಯಾರಣ್ಯರವರಿಗೆ ಕರ್ನಾಟಕದ ಉದ್ಧಾರವು ಅತ್ಯಂತ ಪ್ರಿಯಕರವಾದದ್ದು, ಇದರಿಂದ ಕರ್ನಾಟಕದೊಳಗಿನ ಪ್ರಜೆಗಳೆಲ್ಲರೂ ಶ್ರೀ ವಿದ್ಯಾರಣ್ಯರ ಮಹಾತ್ಮ್ಯವನ್ನರಿತುಕೊಂಡು, ಶ್ರೀಗಳ ಪುಣ್ಯಸ್ಮರಣೆಯಿಂದ ಕರ್ನಾಟಕದ ಉದ್ಧಾರವನ್ನು ಸಾಧಿಸಲುದ್ಯುಕ್ತರಾಗಬೇಕಾಗಿ ನಮ್ಮ ಪ್ರಾರ್ಥನೆ ಇದೆ.

---

೨. ಇತ್ತೀಚೆ ಪರಸ್ಪರ ಸಹಕಾರದ ದೊಡ್ಡದೊಂದು ಮರುಳು ದೇಶದಲ್ಲಿ ಆಳರಸರ ಆಶ್ರಯದಿಂದ ನಡೆದಿದೆ. ಸಹಕಾರದಿಂದ ಸಾಧಿಸಿದ ಪ್ರಜಾಕಲ್ಯಾಣದ ರಾಶಿಯೇನೆಂದು ಸಹಕಾರಿಗಳಿಗೂ ಗೊತ್ತಿಲ್ಲ, ಅವರ ನಮೂನೆ ನೋಡಿದರೆ, ಪ್ರಜಾಕಲ್ಯಾಣಕ್ಕಾಗಿ ಅವರು ದುಡಿಯುತ್ತಾರೆಂದು ಹೇಳಲಿಕ್ಕೂ ಬರುವದಿಲ್ಲ. ಆತ್ಮಗೌರವಕ್ಕಾಗಿ, ಆಳರಸರ ಕೃಪಾಪ್ರಸಾದಕ್ಕಾಗಿ ಇವರ ಪರಸ್ಪರ ಸಹಕಾರದ ಲೋಕಕಲ್ಯಾಣದ ವೇಷ ಬರಕೊಳ್ಳುತ್ತಾರೆ. ಸಹಕಾರಿ ಖಾತೆಯವರಿಗೊಂದು ರಿಪೋರ್ಟ ಬರೆಯಬೇಕಾಗುತ್ತದೆ. 'ಅಲ್ಲೊಂದು ಸಹಕಾರ ಸಂಘವಾಯಿತು. ಸಹಕಾರಿ ಸಂಸ್ಥೆ ಹುಟ್ಟಿತು ತಮ್ಮ ಪರಿಶ್ರಮದಿಂದ ವಿಜೃಂಭಣೆಯಿಂದ ಸಾಗಿತು. ಬೆಂಡವಾದ್ಯ ತಂದಿದ್ದರು, ಬೆಂಡು-ಬತ್ತಾಸು ಹಂಚಿದ್ದರು. ದೊಡ್ಡ ದೊಡ್ಡ ಉಪನ್ಯಾಸಗಳಾದವು. ಮಹಾಜನರು ಸಭೆಗೆ ಬಿಜಯಸಿದ್ದರು' ಮುಂತಾದ ರಿಪೋರ್ಟುಗಳನ್ನು ಮೇಲೆ ಕಳುಹಿ, ಖಾತೆಯವರು ತಮ್ಮ ಬೆನ್ನುಬಡಕೊಳ್ಳುತ್ತಾರೆ. ಬೆಂಡವಾದ್ಯ, ಬೆಂಡು-ಬತ್ತಾಸುಗಳ ಖರ್ಚನ್ನು ಕೊಡುವವರು ಪರಸ್ಪರ ಸಹಕಾರಿ ಸಂಘದವರು. ಬಡತಿ ಪಡಕೊಳ್ಳುವವರು, ಬಹುಮಾನ ಪಡೆಯುವವರು ಖಾತೆಯ ಅಧಿಕಾರಿಗಳು. ಖಾತೆಯವರಿಗೆ ಬಡತಿ ಸಿಕ್ಕಿದ ಹಾಗೆ ದೇಶದಲ್ಲಿ ಸಹಕಾರಪ್ರಸಾರವಾಗಿ ಪ್ರಜಾಕಲ್ಯಾಣವಾಯಿತೆಂದು ಆಳರಸರು ಮನಸ್ಸೋರಾಜ್ಯ ಮಾಡಿದರಾಯಿತು.

---

೩. ಇಷ್ಟೆಲ್ಲ ಸಹಕಾರದ ಪುರಾಣವನ್ನು ನಾವು ಹೇಳಿದ್ದನ್ನು ನೋಡಿ, ಸಹಕಾರಭಕ್ತರು ರೇಗಿಗೇಳುವರು. ಕಂತೆಬ್ರಹ್ಮಾತುರವವರ ಹಣೇಬರಹವು ಹಾಗಾಗಲೂ ಇದೆ. ಆದರೆ, ಪರಸ್ಪರ ಸಹಕಾರಕ್ಕೆ ಪರಸ್ಪರ ನಿಂದೆ ಮಾಡುವ ಸರಕಾರಿ ಗ್ರಂಥಾಧಾರವು ನಮಗೊಂದು ದೊರಕಿದೆ. ಸಂಯುಕ್ತ ಪ್ರಾಂತದ ಸರಕಾರವು 'ಓಕಡೆನ್ ಕಮಿಟಿ'ಯೆಂಬ ಒಂದು ವಿಚಾರಣಾ ಮಂಡಳವನ್ನು ಪರಸ್ಪರ ಸಹಕಾರದ ಪರಾಂಬರಿಕೆಗಾಗಿ ನೇಮಿಸಿತ್ತು. ಈ ಕಮಿಟಿಯವರು ಪ್ರಾಂತದೊಳಗಿನ ಸಹಕಾರದ ಪ್ರಕಾರಗಳನ್ನೆಲ್ಲ ಆಲೋಚಿಸಿ ಬರೆಯುವದೇನಂದರೆ — "ಸಮಸ್ತ ಕಾರ್ಯಗಳು ಅವ್ಯವಹಾರಿಕವಾಗಿ ನಡೆದಿವೆ, ಅಜಾಗ್ರತೆಯು ಹೆಚ್ಚಾಗಿದೆ, ಅನಾಸ್ಥೆಯು ಹೇರಳವಾಗಿದೆ, ಸಹಕಾರಿ ಕಾರ್ಯವನ್ನು ಕೈಕೊಂಡವರು ಈ ಕೆಲಸಕ್ಕೆ ಅಪಾತ್ರರಿದ್ದಾರೆ. ಅವರಿಗೆ ಹ್ಯಾಗೆ ಕೆಲಸ ಮಾಡಬೇಕೆಂಬುದು ತಿಳಿಯುವದಿಲ್ಲ. ಕಾರಭಾರಿಗಳು ಸ್ವಾರ್ಥಿಗಳೂ, ನೀತಿಭ್ರಷ್ಟರೂ ಇರುವರು" ಹೀಗಾಗಲು ಕಾರಣವೇನು? ಅದಕ್ಕೂ 'ಓಕಡೆನ್' ಮಂಡಳದವರು ಉತ್ತರವನ್ನಿತ್ತಿರುವರು. "ತಕ್ಕ ತಪಾಸಣೆಯಿಲ್ಲ. ವ್ಯವಸ್ಥೆಯೂ ಇಲ್ಲ, ಪ್ರಜೆಗಳೊಳಗೆ ಸಹಕಾರದ ಜ್ಞಾನಪ್ರಸಾರವಾಗಲಿಲ್ಲ. ಸಹಕಾರಿ ಸಂಘಗಳಿಗೆ ತಕ್ಕದಾದ ಕಾರಕೂನರು ಸಹ ದೊರೆಯುವದಿಲ್ಲ." 'ಓಕಡೆನ್' ಮಂಡಳದವರು ಸಂಯುಕ್ತ ಪ್ರಾಂತದೊಳಗಿನ ಸಹಕಾರದ 'ಪರ್ಯಾಲೋಚನದಿಂದ ನಮೂದಿಸಿದ ಅಭಿಪ್ರಾಯವಿದು! ಸಾಮಾನ್ಯವಾಗಿ ಸಂಯುಕ್ತ ಪ್ರಾಂತದೊಳಗಿನ ವ್ಯವಸ್ಥೆಯೇ ಅಖಿಲ ಭರತ ಖಂಡದಲ್ಲಿರುವದೆಂದು ನಾವು ಎಣಿಸಬಹುದು. ಹೀಗೆ ಎಣಿಸಿದರೆ, ಸಹಕಾರದಿಂದ ಆಳರಸರು ಭರತ ಖಂಡಕ್ಕೆ ಮಾಡಿದ ಉಪಕಾರದ ಹೊರೆಯು ಅರಿವಾಗುವದಿಲ್ಲವೇ?

ಸ್ಥಾನಿಕ ವೃತ್ತಾಂತ.

ಕುಮಟಾ— ಇತ್ತೀಚೆಗೆ ಮೇಘರಾಜನು ಸಾಯಹಾಗಿ ಅನುಗ್ರಹಿಸುತ್ತಿರುವನು. ಕಳೆದ ವಾರದಲ್ಲಿ ವಿಶೇಷ ಮಳೆ ಸುರಿಯಿತು; ಗಾಳಿಯೂ ಬೀಸುತ್ತಿತ್ತು. ಈ ಮೂಲಕ ನಮ್ಮ ಅಘನಾಶಿನಿ ನದಿಗೆ ಒಂದೆರಡು ದಿನಗಳ ವರೆಗೆ ಸಣ್ಣ ನೆರೆಕಟ್ಟಿತ್ತು. ಆದರೆ, ಅದರಿಂದ ವಿಶೇಷ ನಷ್ಟವಾಗಲಿಲ್ಲ. ಈ ವಾರದಲ್ಲಿ ೫-೪೫ ಇಂಚು ಮಳೆ ಈ ವರೆಗೆ ಅಂತು ೫೭-೦೨ ಇಂಚು ಮಳೆಯಾಯಿತು.

ಇಲ್ಲಿಯ ಶ್ರೀ ವಿಠೋಬ ದೇವಸ್ಥಾನದಲ್ಲಿ ವಾರ್ಷಿಕೆಯ ಭಜನೆ ಸಪ್ತಾಹವು ಜರಗಿ ಬುಧವಾರಕ್ಕೆ ಮಂಗಲೋತ್ಸವವು ನೆರವೇರಿತು.

ಇಲ್ಲಿಯ ಶ್ರೀ ಕುಂಭೇಶ್ವರ ದೇವಾಲಯದಲ್ಲಿ ಗೋಕರ್ಣ ಶೃಂಗೇರಿ ಮಠದ ವೇದಮೂರ್ತಿ ರಾಮಚಂದ್ರಶಾಸ್ತ್ರಿಗಳು ನಿನ್ನೆ ಆಷಾಢ ಶುದ್ಧ ೨ಗೆಯಿಂದ ಆನಂದ ರಾಮಾಯಣವನ್ನು ನಿರೂಪಿಸಹತ್ತಿರುವರು. ಭಾವಿಕರಿಗೆ ಸುಸಂಧಿ!

ಸಾಭಾರ ಸ್ವೀಕಾರ.

ಜಯಕರ್ನಾಟಕ—ಜ್ಯೇಷ್ಠ ಮಾಸದ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ—ಶ್ರೀ| ಆಲೂರ ವೆಂಕಟರಾಯರು, ಧಾರವಾಡ. ವಾರ್ಷಿಕ ವರ್ಗಣಿ ರೂ. ೫—೮—೦

ಆಯುರ್ವೇದ— ಮಾಸ ಪತ್ರಿಕೆ. ಜ್ಯೇಷ್ಠ ಸಂಚಿಕೆ. ಸಂಪಾದಕರು-ವಿದ್ವಾನ್ ಪಿ. ಸೂರ್ಯನಾರಾಯಣ ಶಾಸ್ತ್ರಿ, ಆಯುರ್ವೇದ ಭೂಷಣ, ಪ್ರಕಾಶಕರು— ಜೇ. ರಘುಪತಿರಾವ್ ಬ್ರದರ್ಸ್, ತೀರ್ಥಹಳ್ಳಿ. ವಾರ್ಷಿಕ ವರ್ಗಣಿ ರೂ ೨-೮-೦

ಸುಬೋಧ— ಜ್ಯೇಷ್ಠ ಮಾಸದ ಸಂಚಿಕೆ. ಸಂಪಾದಕ—ಶ್ರೀ| ಎಂ. ರಾಮರಾವ್, ಬೆಂಗಳೂರು ಸಿಟಿ ವಾರ್ಷಿಕ ವರ್ಗಣಿ ರೂ. ೧-೮-೦

ಸರಸ್ವತೀ— ಜ್ಯೇಷ್ಠ ಸಂಚಿಕೆ. ಸಂಪಾದಕಿ— ಶ್ರೀಮತಿ ಆರ್. ಕಲ್ಯಾಣಮ್ಮ, ಚಾಮರಾಜ ಪೇಟೆ, ಬೆಂಗಳೂರು ಸಿಟಿ. ವಾರ್ಷಿಕ ವರ್ಗಣಿ ರೂಪಾಯಿ ೨-೦-೦

ಗಮಾನಂದ ಶ್ರೀಯುತ ಕೆರೋಡಿ ಸುಬ್ಬರಾವ್, ಬಿ. ಎ., ಇವರು ಲೇಖಿಸಿ ರಚಿಸಿ ಮುದ್ರಿಸಿರುವ ಈ ಕೆಳಗಿನ ಉತ್ಕೃಷ್ಟ ಗ್ರಂಥಗಳು:—

ಸಮೂಲ ಭಾಷಾಂತರ— ಬೆಲೆ ೦-೬-೦

ಅನುಕೂಲ ಸಿಂಧು— ,, ೦-೨-೦

ದ್ರೌಪದಿಯ ಉದಯರಾಗ- ೦-೩-೦

ಶ್ರೀಕೃಷ್ಣ ಚೋಗುಳ— ,, ೦-೧-೦

ವಿಳಾಸ -ಗಮಾನಂದ ಶ್ರೀ| ಕೆರೋಡಿ ಸುಬ್ಬರಾವ್, ಬಿ ಎ.
ಕುಂದಾಪುರ, ಉಡುಪಿ ಪೋಸ್ಟ್.

ಹೊನ್ನಾವರ— ಮಳೆ ಚನ್ನಾಗಿ ನಡೆಸುತ್ತಿದೆ. ಒಕ್ಕಲಿಗರು ನೆಟ್ಟಿಗೆಲಸಕ್ಕೆ ತೊಡಗಿರುವರು. ಹೊಳೆಗೆ ನೆರೆ ಕಟ್ಟಿದೆ. ಊರಲ್ಲಿ ಹೊರಕಡೆ ಉಪಹತಿಯುಂಟು. ಅಕ್ಕಿಯ ಧಾರಣೆಯಲ್ಲಿ ಹೆಚ್ಚು-ಕಡಿಮೆಯಾಗಿಲ್ಲ. ಕಾಳ-ಕಡಿಯ ದರವು ಕುಗ್ಗುತ್ತಿದೆ. ಈ ವರೆಗೆ ೫೫ ಇಂಚು ಮಳೆ ಬಿತ್ತು.

ಇಲ್ಲಿಯ ಅಬಕಾರಿಯ ರೋಮನ್ ಪಿಂಟೋ ಇವರ ಮನೆಯಲ್ಲಿ ಕಳವಾಯಿತು. ಕಳವಾದ ದಾಗಿನೆಗಳು ಬಳಿಯಲ್ಲಿಯೇ ದೊರಕಿದ ಸುದ್ದಿ ಇದೆ. ಪೋಲೀಸರ ಚೌಕಶಿ ನಡೆದಿದೆ.

ಊರಲ್ಲಿ ದತ್ತಾತ್ರೇಯ ಭಜನೆ ಸಮ್ಮೇಲನಗಳು ನಡೆದಿವೆ. ಪೋಲೀಸರು ಅವುಗಳನ್ನು ನಿರ್ಮೂಲಿಸಬೇಕು. ಉಪಾಯ ಮಾಡಬೇಕು. ಕೆಸರಾದ ಕೂಡ್ಲ ಕೃಷ್ಣ ಪೋಲೀಸ ಪಟೇಲರಲ್ಲಿ ಮಾರಿ ಕೊಡಲಿಕ್ಕೆ ಕಳ್ಳಿಪ್ಪಟಿಸಿದ ಅಕಸಿ ೬ ತಿಂಗಳ ಕಠಿಣ ಸಜೆಯಾಯಿತು.

ಕಾರವಾರ— ಮ... ಡಗೋಡದ ಶಿರ್ಸಿ ಕಾಕಡದ ಸಹಕಾರಿ ಸಂಘದ ಚೇರಮನ್ ಹಾಗು ಕಾರ್ಯದರ್ಶಿಗಳ ಮೇಲೆ ಫೌಜದಾರಿ ಹಚ್ಚಿಯಾಗಿ, ಕಾರ್ಯದರ್ಶಿಗೆ ೬ ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿದೆ. ಚೇರಮನ್ನರು ದೋಷಮುಕ್ತರಾಗಿರುವರು.

ಮಿ। ಬಿಡೇಯುವರು ಕಲೆಕ್ಟರರಾದಾಗ ಇಲ್ಲಿ ಒಂದು ಪ್ರವಾಹ ಬಿತ್ತು. ಕಲೆಕ್ಟರರು ಕೆಲವು ದಿವಸಗಳ ಕಚೇರಿಗೆ ಬರುತ್ತಿದ್ದರು. ಅದೇ ವ್ಯವಹಾರವನ್ನು ಹಾಗಿನ ಕಲೆಕ್ಟರರಾದ ಮಿ। ಮೊಂಗೊಮೆರಿಯವರು ಮುಂದರಿಸುವರು. ಕಚೇರಿಗೆ ಸೋಮವಾರ, ಬುಧವಾರ ಮಾತ್ರ ಬರುತ್ತಾರೆ. ಆ ಎರಡು ದಿವಸಗಳಲ್ಲಿ ಕಲೆಕ್ಟರರಿಗೆ ಕಾಣಬೇಕಾದರೆ, ಮುಂದಾಗಿ ಅರ್ಜಿ ಕಳಿಸಿಕೊಳ್ಳಬೇಕು. ಮಹಾಜನ ಸಾಮಾನ್ಯರು ಮಧ್ಯಾಹ್ನ ೧೧ ರಿಂದ ೩ ಘಂಟೆ ವರೆಗೆ ಕಾಣಬೇಕು. ಮತ್ತು ಈ ಕಚೇರಿಯು ಕೆಲಸವೂ ಹೀಗೆಯೇ ನಡೆದಿದೆ. ಇದರಿಂದ ಕಕ್ಷಿಗಾರರಿಗೆ ಬಹಳ ತೊಂದರೆ ಯಾಗುತ್ತಿದೆ. ಸರ್ಕಾರದವರು ಕಚೇರಿಯನ್ನು ದಿನಾ ೧೧ ರಿಂದ ೬ ರ ವರೆಗೆ ನಡೆಸಬೇಕೆಂಬುದೇ ಜನರು ಮೊರೆಯಿಡುವರು. ಇತ್ತ ಲಕ್ಷ್ಯಕೊಡಬೇಕು.

ಸಹಕಾರಿ ದಿವಸವು ಮಿ. ಕಾರ್ನೊರಜರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಿ। ಕಾರ್ಟನೂರವರು ಸಹಕಾರದಿಂದ ಬಂಧುಭಾವ ಉಂಟಾಗುತ್ತದೆಂದು ನುಡಿದರೆ, ಕೆಲವು ಭಾಷಣಗಳಾದವು. ಈಗಿನ ಸಹಕಾರಿ ಸಂಘಗಳಿಂದ ಸಾಲಗಾರರ ಸಾಲದ ಹೊರೆಯು ಕುಗ್ಗಲಿಲ್ಲವೆಂದು ಕೆಲವರು ಅಭಿಪ್ರಾಯಪಟ್ಟರು. ಗಿರಾಕಿಗಳ ಸಂಘ, ಹುಟ್ಟುವಳಿ ಮಾಡುವವರ ಸಂಘಗಳನ್ನು ಸ್ಥಾಪಿಸಿ ದಲಾಲರ ಹೆಬ್ಬಾರೆಯುವನ್ನು ಮುರಿಯಬೇಕೆಂದು ಕೆಲವರು ವಾದಿಸಿದರು. ನಾಟೀಕಟ್ಟಿಯ ಉತ್ಪನ್ನ ಸಹಕಾರಿ ಸಂಘದಿಂದ ಉತ್ಪನ್ನ ತಿನ್ನುವವರಿಗೆ ಉಂಟಾದ ಲಾಭವನ್ನು ಉಪನ್ಯಾಸಕರು ವಿಚಾರಿಸಲಿಲ್ಲೆಂಬಂತೆ ತೋರುತ್ತದೆ. ಮತ್ತೊಂದು ವಿಚಾರವು ಸಭೆಯಲ್ಲಿ ಹೇಳೋಣಾಯಿತು. ಮನೆಜಿಂಗ ಕಮೀಟಿಗೆ ಆರಿಸಿಹೋಗುವ ಸಭಾಸದರು ನಿಸ್ಪೃಹರಿದ್ದು, ಪ್ರಾಮಾಣಿಕರಿರಬೇಕೆಂದು ಹೇಳೋಣಾಯಿತು. ಕಮೀಟಿಯೊಳಗಿನ ಆಸನವು ಸ್ವಾರ್ಥಸಾಧಕವಾಗಿ ಪರಿಣಮಿಸಿರುವದೆಂದೂ ಕೆಲವರು ಹೇಳಿದರು.

ಇಲ್ಲಿಯ ಸ್ಕೂಲ ಬೋರ್ಡಿಗೆ ಸರಕಾರಿ ಸಭಾಸದರ ನೇಮಣೂಕಿಯು ಇನ್ನೂ ಆಗಿರುವದಿಲ್ಲ. ನೇಮಣೂಕಿಯು ನಿಯಮಗಳಂತೆ ಜಿಲ್ಲಾಧಿಪತಿಗಳು ಹೆಸರುಗಳನ್ನು ಶಿಫಾರಸು ಮಾಡಬೇಕಂತೆ. ವಿದ್ಯಾಖಾತೆಯ ಡಾಯರೆಕ್ಟರರು ನೇಮಿಸಬೇಕಂತೆ! ನೇಮಿಸುವ ಅಧಿಕಾರವು ಡಾಯರೆಕ್ಟರರಿಗಿದೆ! ಶಿಫಾರಸು ಮಾಡುವ ಅಧಿಕಾರವು ಜಿಲ್ಹಾಧಿಪರಿಗಿದೆ! ಜಿಲ್ಹಾಧಿಪರು ಶಿಫಾರಸು ಮಾಡಿದ ಮಂದಿಗಳಿಂದ ಡಾಯರೆಕ್ಟರರು ತಮಗೆ ಬೇಕಾದ ಮಂದಿಗಳನ್ನು ನೇಮಿಸಬೇಕು! ಆದರೆ ನಮ್ಮ ಜಿಲ್ಹಾಧಿಪರೂ, ಡಾಯರೆಕ್ಟರರೂ ಅಧಿಕಾರಕ್ಕಾಗಿ ಬಡಿದಾಡುತ್ತಿರುವರಾಗಿ ದೃಷ್ಟಿಸುದ್ದಿ! 'ಮೊಟ್ಟಮೊದಲು ಎಷ್ಟು ಮಂದಿಗಳನ್ನು ನೀವು ನೇಮಿಸುತ್ತೀರಿ ಎಂದು ನಮಗೆ ತಿಳಿಸಿರಿ. ಅಷ್ಟೇ ಮಂದಿಗಳ ಹೆಸರುಗಳನ್ನು ನಾನು ಶಿಫಾರಸು ಮಾಡುತ್ತೇನೆ' ಎಂದು ಜಿಲ್ಹಾಧಿಪರು ಡಾಯರೆಕ್ಟರರಿಗೆ ಬರೆದು ಡಾಯರೆಕ್ಟರರ ಅಧಿಕಾರವನ್ನು ಅಪಹರಿಸಲು ಹೊಂಚು ಹಾಕುತ್ತಿರುವರು. ಶಿಫಾರಸು ಮಾಡಿದವರ ಹೆಸರುಗಳೊಳಗಿಂದ ನೇಮಣೂಕಿ ಮಾಡುವ ಅಧಿಕಾರ ನನ್ನದೆಂದು ಡಾಯರೆಕ್ಟರರು ಹೇಳುತ್ತಾರೆ. ಹೀಗೆ ಡಾಯರೆಕ್ಟರ ಹಾಗು ಕಲೆಕ್ಟರರೊಳಗಣ ಬಡಿದಾಟದ ಮೂಲಕ ಹೊಸ ಸ್ಕೂಲ ಬೋರ್ಡಿನ ಘಟನೆಯಾಗದೆ ಉಳಿದಿದೆ. ಇಲೆಕ್ಷನು ಆಗಿ ೩ ತಿಂಗಳುಗಳಾಗುತ್ತ ಬಂದವು! ಸರಕಾರವು ಇತ್ತ ಕಡೆ ಶೀಘ್ರವೇ ಲಕ್ಷ್ಯಗೊಡಬೇಕು.

ವೃತ್ತಸಾರ.

— ಜಂಜಿರಾ ಸಂಸ್ಥಾನದ ದಾಂಡಗುರಿ ಗ್ರಾಮದಲ್ಲಿ ಹುಲಿಯೊಂದು ಬಹಳ ಉಪದ್ರವ ಕೊಡುತ್ತಿದ್ದನು. ಒಕ್ಕಲಿಗರು ಬಹು ಕೌಶಲ್ಯದಿಂದ ಅದನ್ನು ಸಜೀವ ಹಿಡಿದು ಮುರುಡಿಯ ರಾಜಬಾಗಕ್ಕೆ ತಂದುಕೊಟ್ಟರು. ಆ ಅಧಿಕಾರಿಗಳು ಸಂತೋಷಪಟ್ಟರಾಗಿ ಒಕ್ಕಲಿಗರಿಗೆ ೧೫ ರೂಪಾಯಿ ಇನಾಮು ಕೊಟ್ಟರು! ಒಕ್ಕಲಿಗರಿಗೆ ಹುಲಿ ಹಿಡಿದು ತರಲಿಕ್ಕೆ ೪೩ ರೂಪಾಯಿ ಖರ್ಚು ತಗಲಿತು! ಇನಾಮು ಸಾಕೋ ಬೇಕು!!

— ಶ್ರೀ ಕಾಶೀ ಕ್ಷೇತ್ರದೊಳಗಿನ ಆರೋಗ್ಯ ಸಂಸ್ಥೆಯವರು ನೇರಿಸುವ ೩ ಮೈಲು ಈಜುವ ಶರ್ಯತ್ತಿನಲ್ಲಿ ರಾ। ಕೇಶವಚಂದ್ರ ಚಕ್ರವರ್ತಿ, ನಾರಾಯಣದಾಸ, ಮನೋಲಾಲರವರು ಅನುಕ್ರಮವಾಗಿ ೧—೨—೩ ನೇ ಸ್ಥಾನಗಳನ್ನು ಪಡೆದರು. ಚಿನ್ನದ ಪದಕ ಮುಂತಾದ ಪಾರಿತೋಷಕಗಳು ಹಂಚೋಣಾದವು. ಭಾಗೀರಥೀ ನದಿಯ ತೀರ್ಥಘಾಟಿನಿಂದ ದಾಸಾಶ್ವಮೇಧ ಘಾಟದ ವರೆಗಿನ ಮೂರು ಮೈಲು ಅಂತರವನ್ನು ದಾಟಬೇಕಾಗಿತ್ತು. ಈ ಶರ್ಯತ್ತನ್ನು ನೋಡಲು ನೂರಾರು ಮಂದಿಗಳು ಭಾಗೀರಥೀ ನದಿಯ ಮೇಲೆ ನೇರಿದ್ದರು.

— ಸಿಂಧ ಪ್ರಾಂತದ ಹೆಸರಾದ ಲೋಕನಾಯಕರಾದ ಪೀರ ಗುಲಾಮ ಮುಜಾಹಿದರವರಿಗೆ ಪೋಲೀಸರು ಹೈದರಾಬಾದದಲ್ಲಿ ನೆರೆಹಿಡಿದರು. ಇದರಿಂದ ಜನರು ಇವರಿಗೆ ಕಾಳುಕಡಿಯನ್ನು ಕೊಡುವದಿಲ್ಲ. ಪೋಲೀಸರಿಗೂ, ಅಂಗಡಿಕಾರರಿಗೂ ಬಡಿದಾಟವಾಯಿತಂತೆ!

— ಬಂಗಾಲ ಪ್ರಾಂತಿಕ ಕೊಂಗ್ರೆಸ ಕಮಿಟಿಯು ಬಾಲಕರಲ್ಲಿ ಮತಭೇದವಾಗಿ ಕಲಹವೆದ್ದಿತ್ತು. ಶ್ರೀ। ಸರೋಜಿನಿ ನಾಯಡು, ಶ್ರೀ। ಶ್ರೀನಿವಾಸ ಅಯ್ಯಂಗಾರ, ಪಂಡಿತ ಮೋತೀಲಾಲ ನೆಹರೂರವರು ಕಲಕತ್ತೆಗೆ ಹೋಗಿ ಸಂಧಾನ ಮಾಡಿರುವರು! ಸಂತೋಷದ ಸುದ್ದಿ!!

— ಅಖಿಲ ಮುಸಲ್ಮಾನ ಸಂಘದ ಬಿಜ್ಜಾಪುರ ಶಾಖೆಯ ಮಹಾಸಭೆಯು ಜುಲೈ ತಾರೀಖು ೨೫ ನೇಗೆ ಬಿಜ್ಜಾಪುರದೊಳಗಣ ಸಂಘದ ಕಚೇರಿಯಲ್ಲಿ ನೇರಲಿಕ್ಕಿದ್ದಿದೆಂದು ಮ.ನೆಜಿಂಗ ಡಾಯರೆಕ್ಟರರಾದ ಶ್ರೀ। ನಾಗೇಶ ಗಣೇಶ ಹೆಗಡೆ ದೊಡ್ಡನೆ ಇವರು ತಿಳಿಸುತ್ತಾರೆ. ಸಭೆಯಲ್ಲಿ ೬ ತಿಂಗಳ ಅಢಾವೆಯ ಪತ್ರಕವನ್ನೋದುವರು, ಸಂಘದ ಮುಂದಿನ ಅಭಿವೃದ್ಧಿಯ ವಿಚಾರವಾಗುವದೂ ಉಂಟು.

— ಚಂದ್ರನಗರದಲ್ಲಿ ಶ್ರೀ। ಸರಲಾದೇವಿ ಚೌಧರಾಣೀಯವರು ಕನ್ಯಾ ಶಾಲೆಯ ಆಸಾಮರಣ ಸಮಾರಂಭವನ್ನು ಮಾಡಿದರು. ಈ ಶಾಲೆಯಲ್ಲಿ ಗಾಯನ, ಹೊಲಿಗೆ, ಚಿತ್ರಕಲೆ, ಶುಶ್ರೂಷೆ ಮುಂತಾದ ಗೃಹಿಣೀ ಶಿಕ್ಷಣ ಕೊಡಲ್ಪಡುವದು.

— ಪ್ರಾಂತಿಕ ಕಾರ್ಯದರ್ಶಿಗಳಾದ ಶ್ರೀ। ಎನ್. ಎಸ್. ಹರ್ಡೀಕರರವರು ತಿಳಿಸುವದೇನೆಂದರೆ:— ಜೂನ ೧೧ ರಿಂದ ೨೯ ನೇ ವರೆಗಿನ ನಾಲ್ಕು ವಾರಗಳಲ್ಲಿ ೧೦೩ ಕೊಂಗ್ರೆಸ ಸಭಾಸದರನ್ನೂ ೬೩ ಮಂದಿ ಹಿಂದುಸ್ಥಾನಿ ಸೇವಾದಲದ ಸದಸ್ಯರನ್ನೂ ನೇರಿಸಿರುವರು. ಇನ್ನು ೮೨೯೭ ಮಂದಿ ಕೊಂಗ್ರೆಸ ಸಭಾಸದರನ್ನೂ, ೪೩೨ ಹಿಂದುಸ್ಥಾನಿ ಸೇವಾದಲದ ಸದಸ್ಯರನ್ನೂ ಕೂಡಿಸಬೇಕು. ಕೊಡಗು, ಮಂಗಳೂರು ಹಾಗು ಕಾರವಾರ ಜಿಲ್ಹೆಯವರು ಉತ್ಸಾಹದಿಂದ ದುಡಿಯುವದಿಲ್ಲ.

— ಸಾತಾರೆಯ 'ಜಗಲೇ ಗ್ಲಾಸ ವರ್ಕ್ಸ'ದವರು 'ಪ್ರಭಾಕರ' ಕಂದೀಲುಗಳನ್ನು ತಯಾರಿಸಿರುವರು. ಅವುಗಳನ್ನು ಜನರು ಉಪಯೋಗಿಸಿ ನೋಡಬಹುದು.

— ವಿಲಾಯತಿಯ ಪಾರ್ಲಮೆಂಟಿನಲ್ಲಿ ಕೂಲಿಕಾರರ ಕಾಯ್ದೆಯ ಘನಘೋರ ಚರ್ಚೆ ನಡೆಯಿತು. ಕೂಲಿಕಾರ ಪಕ್ಷದವರು ಸೋತರು. ಬ್ರಿಟಿಶ ಸರಕಾರಿ ಪಕ್ಷದವರಿಗೂ ಕೂಲಿಕಾರ ಪಕ್ಷದವರಿಗೂ ಬಡಿದಾಟವಾಯಿತು. ಕೆಲ ಹೊತ್ತಿನ ಬ್ರಿಟಿಶ ಸಭಾಭವನವು ಯುದ್ಧಭೂಮಿಯಾಯಿತಂತೆ! ಆದರೂ ಬ್ರಿಟಿಶರು ಸ್ವರಾಜ್ಯ ನಡಿಸಲು ಪಾತ್ರರು!!

— ಹಿಂದೂ ಸಂವತ್ಸರದಂತೆ ಜುಲೈ ೨೫ ನೇಗೆ ಪುಣೆಯಲ್ಲಿ ಲೋಕಮಾನ್ಯರ ಪುಣ್ಯತಿಥಿಯ ನಿಮಿತ್ತ ಬಡಬಗ್ಗರಿಗೆ ಭೋಜನ ಕೊಡಲ್ಪಡುವದು.

— ಮುಂಬಯಿಯಲ್ಲಿ ಜೂನ ೨೯ ನೇಗೆ ಭಯಂಕರ ಮಳೆ ಮತ್ತು ಗಾಳಿ! ಮರವೊಂದು ಕಿತ್ತು ಗುಡಿಸಲಿನ ಮೇಲೆ ಬಿದ್ದು ಒಳಗಿದ್ದ ಹರಿಯ ಮುಕುಂದರಾಯನ ಸೊಂಟ ಮುರಿದು ಅತನು ಸ್ವರ್ಗಲೋಕ ಪ್ರಯಾಣ ಮಾಡಿದನು.

— ಅಮೇರಿಕೆಯ ಜೋಜ್ ಜಾನ್‌ಸ್ಟನ ಎಂಬುವರು ೩೦ ದಿನಗಳ ವರೆಗೆ ನಿರಾಹಾರಿಯಾಗಿರುವರು! ಈತನು ೧೦೦೦ ಮೈಲು ದೂರ ಕಾಲ್ನಡೆ ಮಾಡಬೇಕೆಂಬ ಸಂಕಲ್ಪ ಮಾಡಿ ಜುಲೈ ತಾರೀಖು ೧ನೇಯಿಂದ ಶಿಕಾಗೋ ಪಟ್ಟಣದಿಂದ ಹೊರಟಿರುವನು. ಈತನು ದಿನಾ ೩೦ ಬಾಟ್ಲಿ ನೀರನ್ನು ಮಾತ್ರ ಕುಡಿಯುತ್ತಾನೆ. ೩೫ ಮೈಲುಗಳಂತೆ ನಡೆಯುತ್ತಾನೆ. ದಿನಾ ಮೂರು ಹೊತ್ತು ಸಿಗರೆಟು ಸೇದುವನೆಂದು ತನ್ನಿಷ್ಟನ ೧೦೦ ಸಿಗರೆಟುಗಳನ್ನು ಕೊಂಡಿರುವನು. ಉಪೋಷಣದಿಂದ ಆರೋಗ್ಯವೂ ಶಾರೀರಿಕ ಬಳವಣಿಗೆಯೂ ಆಗುವವೆಂದು ಸಿದ್ಧಪಡಿಸಲು ಲಂಘನ ಹಾಗು ದೇಶಪರ್ಯಟನವನ್ನು ಈತನು ಕೈಕೊಂಡಿರುವನಂತೆ!

— ಅಮೇರಿಕೆಯ ಫಿಲಾಡೆಲ್ಫಿಯಾದಲ್ಲಿ ಸದ್ಯಕ್ಕೆ ಪ್ರದರ್ಶನವು ನೇರಲಿಕ್ಕಿದೆ. ಈ ಪ್ರದರ್ಶನದಲ್ಲಿ ತೋರಿಸಲು ಕಡಾಜಹಾನ ಬಾದಶಹರ ಸಂಪತ್ತಿಯಾದ ಮುಮತಾಜಮಹಾಲರವರ ಅಮೂಲ್ಯವಾದ ನೀಲಮಣಿಯನ್ನು ಕಳೆದ ಗುರುವಾರಕ್ಕೆ ಶಿಕಾಗೋ ಪಟ್ಟಣದಿಂದ ಭದ್ರ ಕಾವಲು ಮಾಡಿ ಒಯ್ದರು!

— ಸಮಾರ್ಥಿಸಿ ಇವಿಸ್ ದೊರೆಗಳ ತಂದೆಯವರಾದ ಹೇಲಿಫಕ್ಸ ದೊರೆಗಳು ವೃತ್ತವೃಥವನ್ನು ನೋಡಲು ಭರತಭೂಮಿಗೆ ಬರುತ್ತಿರುವರು. ಭರತಭೂಮಿಯೊಳಗೆ ೫ ರಾಜನಿಷ್ಠೆಯ ಪ್ರದರ್ಶನ ಮಾಡಲು ಸುಸಂಧಿ ದೊರಕಿತು! ದೊರೆಗಳಿಗೆ ಭಾರತೀಯ ಅತಿಥ್ಯಧರ್ಮಕ್ಕನುಸರಿಸಿ ಕಾಣಿಕೆ ಮುಂತಾದ ಬಹುಮಾನಗಳ ತಯಾರಿಯನ್ನು ಈಗಲೇ ಮಾಡುವದುಚಿತವು.

— ಮುಂಬಯಿಯ ಹೆಸರಾದ ಕೇಟ ಉಪವಾಸ ಸೋಮನಿಯವರು ಕಳೆದ ಸೋಮವಾರಕ್ಕೆ ಅನಪೇಕ್ಷಿತವಾಗಿ ನಿಧನ ಹೊಂದಿದರು. ರಾತ್ರಿ ನಿತ್ಯದಂತೆ ಊಟ ಮಾಡಿ ಮಲಗಿದ್ದರು. ಹೆಂಡತಿಯು ಹತ್ತರ ಬೆಳಗಿನ ೭॥ ಘಂಟೆಗೆ ಎಬ್ಬಿಸಲು ಹೇಳಿದ್ದರು. ಮುಂಜಾವಿಗೆ ಎಬ್ಬಿಸಹೋಗಲು ಪ್ರತ್ಯುತ್ತರ ಬರಲಿಲ್ಲ! ವೈದ್ಯರಾಜರ ಹೇಳಿಕೆಯಲ್ಲಿ ಶರೀರಸ್ವಾಮಿಯು ದೇಹವನ್ನು ತ್ಯಾಗ ಮಾಡಿದವನಾಗಿ ತಿಳಿಯಿತು! ಮುಂಬಾಪುರಿಯ ಮೇಲೆ ದೊಡ್ಡದೊಂದು ಅನರ್ಥ!! ಮುಂಬಯಿಯೊಳಗಿನ ರಾಷ್ಟ್ರೀಯ ಚಾಪಲ್ಯದ ಅತ್ಯಂತ ಕೇಟ ಉಪವಾಸ ಸೋಮನಿಯವರು. ಇವರು ಟಿಳಕ ಸ್ವರಾಜ್ಯ ನಿಧಿಗೆ ೨ ಲಕ್ಷ ರೂಪಾಯಿಗಳ ನ್ನಿತ್ತಿದ್ದರು. ವಿದ್ಯಾರ್ಥಿಗಳಿಗೂ, ಬಡಬಗ್ಗರಿಗೂ ಬಿಡಾರದಿಂದ ಪ್ರತ್ಯಕ್ಷ ಸಹಾಯವನ್ನೀಯುತ್ತಿದ್ದರು! ಬಡಬಗ್ಗರ ಗೋಳು. ಕೊಂಗ್ರೆಸ ಕಾರ್ಯಕಾರಿ ಮಂಡಳವು ಕೇಟ ಸೋಮನಿಯವರ ರಾಷ್ಟ್ರಸೇವೆಯನ್ನು ನಮೂದಿಸಿ, ರಾಷ್ಟ್ರದುಃಖವನ್ನು ವ್ಯಕ್ತಪಡಿಸಿರುವದು. ಕೇಟ ಸೋಮನಿಯವರ ಮೃತ್ಯುಕಾರಣವನ್ನು ಶೋಧಿಸುವದಕ್ಕಾಗಿ ಅವರ ಹೊಟ್ಟೆಯು ರಸಾಯನಶಾಸ್ತ್ರಜ್ಞರ ಕಡೆಗೆ ಕಳುಹಿಸಲಾಗಿದೆ. ರಾಷ್ಟ್ರದ ದುರ್ದೈವ!

— ಬೆಳಗಾವಿಯ ಜಿಲ್ಲಾ ಬೋರ್ಡಿನವರು ಸಾಷ್ಟಾಂಗ ನಮಸ್ಕಾರದ ವ್ಯಾಯಾಮವನ್ನು ಪ್ರಾರಂಭಿಸಬೇಕೆಂದು ಠರಾಯಿಸಿರುವರು. ನಮ್ಮ ಜಿಲ್ಲಾ ಬೋರ್ಡಿನವರೂ ವಿಚಾರಿಸಲಿ.

— ಮುಂಬಯಿಯ ಸರ್ ಫಿರೋಜಶಹಾರವರ ರಾಜಕಾರಣಕ್ಷೇತ್ರದಲ್ಲಿ ಸಹಕಾರಿಗಳಾದ ಶ್ರೀ ಹರಿ ಸೀತಾರಾಮ ದೀಕ್ಷಿತರವರು ವಿಲೇಪಾರ್ಲೆಯಿಂದ ಮುಂಬಯಿಗೆ ಹೋಗುತ್ತಿದ್ದಾಗ ಉಗಿಬಂಡಿಯಲ್ಲಿಯೇ ಹೃದಯವಿಕಾರದಿಂದ ದೇಹಾವಸಾನ ಹೊಂದಿದರು. ಇವರು ಮುಂಬಯಿಯ ಶೆರೀಫ್ ನೆನಿಸಿಕೊಂಡಿದ್ದು, ಇತ್ತ ೧೫ ವರ್ಷಗಳಿಂದ ಸಾರ್ವಜನಿಕ ಕಾರ್ಯದಲ್ಲಿ ಪ್ರವೇಶಗೈಯುತ್ತಿರಲಿಲ್ಲ!

— ಅಹಮದಾಬಾದ ಮ್ಯುನಿಸಿಪಾಲಿಟಿಯ ಸಭಾಸದರು ಅಲ್ಲಿಯ ಚಹಾಪಾನದ ಕೋಣೆಯಲ್ಲಿ ಮ್ಯುನಿಸಿಪಲ್ ವಿಷಯಗಳ ಮೇಲೆ ಮಾತಾಡುತ್ತ ಕುಳಿತಿದ್ದರು. ಮಾತಿಗೆ ಮಾತು ನಡೆಯುತ್ತಿರುವಾಗ ಒಬ್ಬ ಸಭಾಸದರಾದ ಡಾ॥ ಕ.ಬೇರಡಾಸ ಹರಗೋವಿಂದದಾಸರವರಿಗೆ ಪಿತ್ತ ಕೆರಳಿ, ಇನ್ನೊಬ್ಬ ಸಭಾಸದರಾದ ಡಾ॥ ಹಿಮ್ಮತಲಾಲ ಸಾಹೇಬರವರಿಗೆ ಕಾಲ್ಕಿಗೆ ಹಿಡಿಸಿದರಂತೆ! ಈ ಕುರಿತು ಡಾ॥ ಹಿಮ್ಮತಲಾಲರವರು ಡಾ॥ ಕುಬೇರದಾಸರವರ ಮೇಲೆ ಫಿರ್ಯಾದವನ್ನು ದಾಖಲಪಡಿಸಿರುವರು!

— ಗಣಿತ ಶಾಸ್ತ್ರಜ್ಞರೆಂದು ಖ್ಯಾತಿಗೊಂಡ ಪ್ರಿನ್ಸಿಪಾಲ ರ ಘು ನಾ ಥ ರಾ ವ ಪ ರಾಂ ಜ ಪೇ ಯ ವ ರ ಮಗನಾದ ಕುಮಾರ ಶಕುಂತಲಾ ಪರಾಂಜಪೇಯವರು ಮುಂಬಯಿ ವಿಶ್ವವಿದ್ಯಾಲಯದ ಬಿ ಎಸ್ ಸಿ. ಪರೀಕ್ಷೆಯಲ್ಲಿ ಮೇಲ್ತರಗತಿಯಲ್ಲಿ ಉತ್ತೀರ್ಣರಾಗಿರುವದು ಅವರಿಗೆ ಹಿಂದುಸ್ಥಾನ ಸರಕಾರವು ಸಾಲಿಯಾನ ೨೦೦ ಪೌಂಡಿನ ಸ್ಕಾಲರ್‌ಶಿಪ್ಪಿನ ವೃತ್ತಿಯನ್ನು ಮೂರು ವರ್ಷಗಳ ವರೆಗೆ ಕೊಡಲಿರುವದು. ಕುಮಾರಿಯವರು ಗಣಿತ ವಿಷಯದ ಅಭ್ಯಾಸಕ್ಕಾಗಿ ಇಂಗ್ಲಂಡಕ್ಕೆ ಹೋಗಲಿರುವರು.

— ಕೊಲ್ಹಾಪುರ ನಗರ ಇಂಗ್ಲಿಷ ಸ್ಕೂಲಿನಲ್ಲಿ ವಿದ್ಯಾರ್ಥಿಗಳು ನಿತ್ಯವೂ ೩೦ ಮಿನಿಟು ನಮಸ್ಕಾರ ಹಾಕಿ ವ್ಯಾಯಾಮ ಮಾಡಬೇಕೆಂದು ಠರಾವಾಗಿದೆ.

— ಬಂಗಾಲ ಪ್ರಾಂತಿಕ ಕೊಂಗ್ರೆಸ ಕಮೀಟಿಯ ಸಭಾಸದರಾದ ಕಲಕತ್ತೆಯ ಮಿ॥ ಮೊರೆಸೋರವರಿಗೆ ಒಂದು ಮೂರ್ತಿಯು ದೊರಕಿದೆ. ಅದರೊಳಗಿರುವ ನೀರಿನಲ್ಲಿ ಒಂದು ಚಿಕ್ಕ ಮೂರ್ತಿಯು ಕಾಣುತ್ತದಂತೆ! ಮೂರ್ತಿಯ ತಲೆಯ ಮೇಲೆ ಬಿಳೀ ಪಗಡಿ, ಮೈಮೇಲೆ ಬಿಳಿ ವಸ್ತ್ರ, ಮೂರ್ತಿಯ ಮೋರೆಯು ನಸುಗಪ್ಪು! ಇದನ್ನು ಮಿ॥ ಮೊರೆಸೋರವರು ಜನರಿಗೆ ತೋರಿಸುತ್ತಿರುವರು.

— ಮದ್ರಾಸದಲ್ಲಿ ಅರ್ಧ ಲಕ್ಷ ರೂಪಾಯಿ ಬಂಡವಲು ಹಾಕಿ ಕಾಚಿನ ಕಾರಖಾನೆಯನ್ನು ಸ್ಥಾಪಿಸಿರುವರು. ಕಟ್ಟೋಣ ಕಾರ್ಯವು ನಡೆದಿದೆ. ಸಾಮಾನು ಆಗೋಸ್ತ ತಿಂಗಳಲ್ಲಿ ತಯಾರಾಗುವವು. ಕಂಪನಿಯ ಹೆಸರು, "ನೆಶನಲ್ ಗ್ಲಾಸ ವರ್ಕ್ಸ ಅಫ್ ಮದ್ರಾಸ ಲಿಮಿಟೆಡ್."

— ಮೈಸೂರ ಶ್ರೀಮಹಾರಾಜರ ಕನ್ಯೆಯರಾದ ಶ್ರೀಮತಿ ರಾಜಕುಮಾರಿ ಲೀಲಾವತಿಯವರ ವಿವಾಹ ಮಹೋತ್ಸವವು ಕಳೆದ ೨೦ ನೇ ಭಾನುವಾರಕ್ಕೆ ವಿಜೃಂಭಣೆಯಿಂದ ನೆರವೇರಿತು. ಕಲ್ಲಕ್ಕೆಯ ಅವಿಮಾಗೆರಸರ ವಂಶಜರಾದ ಶ್ರೀಮಾನ್ ಬಸವರಾಜ ಅರಸರವರು ಮದುಮಗರಾಗಿ ಇದ್ದರು. ವಿವಾಹವಾದ ಬಳಿಕ 'ಸೋಮವಾರ ರಾತ್ರಿ ಆನೆಯ ಅಂಬಾರಿಯ ಮೇಲೆ ಕುಳ್ಳಿರಿಸಿ ವೈಭವದಿಂದ ಮೆರೆಸಿದರು! ಮೈಸೂರಿನಲ್ಲೆಲ್ಲ ಆನಂದವೇ ಆನಂದ!

— ೧೯೩೫ ನೇ ಇಸ್ವಿಯಲ್ಲಿ ಮುಂಬಯಿ ಇಲಾಖೆಯಲ್ಲಿ ೧೩೮೧ ಜನರು ಕಾಡುಪ್ರಾಣಿ ಹಾಗು ಹಾವುಗಳಿಗೆ ತುತ್ತಾದರು. ಇವುಗಳಲ್ಲಿ ಹಾವುಕಚ್ಚಿ ೧೩೫೫ ಮಂದಿ ಸತ್ತರು.

— ಮದ್ರಾಸದ ಮಾಯಾವರಮ್ ದೊಳಗಿನ ಮುಸಲ್ಮಾನರ ಪರಿಷತ್ತು ಹುಡುಗಿಯರ ಶಾಲೆಯಲ್ಲಿ ಕೈರಾಟೆಯನ್ನು ಪ್ರಾರಂಭಿಸಬೇಕೆಂದು ಠೀವಮಾನಿಸಿದೆ.

— ಬಂಗಾಲ ಪ್ರಾಂತದ ಚಿಟ್ಟಗಾಂವದಲ್ಲಿ ಒಂದು ವೈದ್ಯಶಾಲೆಯನ್ನು ಸ್ಥಾಪಿಸಲು ಚಂದ್ರನಗರದ ಬಾಬು ಹರಿಹರ ಶೇಟರವರು ೧೫ ಲಕ್ಷ ರೂಪಾಯಿಗಳನ್ನರ್ಪಿಸಿರುವರು.

— ಅಬಿಸ್ಸೀನಿಯ ದೇಶದ ಕೇರೋ ಪಟ್ಟಣದಲ್ಲಿ ಜೂನ ತಾ. ೨೬ ನೇ ಭಯಂಕರ ಭೂಕಂಪವಾಯಿತು. ೪೦೦೦ ಮನೆಗಳು ನೆಲಸಮವಾದವು; ೩೪ ಮಸೀದೆಗಳಿಗೆ ಪೆಟ್ಟಾಗಿದೆ, ೧೧೦ ಮಂದಿಗಳು ಮಡಿದರು; ೬೦ ಮಂದಿಗಳು ಘಾಯಪಟ್ಟಿರುವರು.

— ಕಲಕತ್ತೆಯ ಮುನಿಸಿಪಾಲಿಟಿಯವರು ಸೌ। ಸರೋಜಿನೀ ದೇವಿಯವರಿಗೆ ತಾ. ೬ ನೇಗೆ ಮಾನಪತ್ರ ಕೊಟ್ಟರು; ಪುಣೆಯ ಮುನಿಸಿಪಾಲಿಟಿಯವರು ಸರ್ವಾಧಿಪತಿಗಳಿಗೆ ಮಾನಪತ್ರ ಕೊಡುವ ನಿರ್ಧಾರ ಮಾಡಿರುವರು. ಧಾರವಾಡದ ಪ್ರತಿಸಹಕಾರದ ಪರಿಣಾಮವೇನಿದು?

— ಕಲಕತ್ತೆಯ ಬಳಿ ಮಾಲ್ದಾದೊಳಗಿನ ಕಾಳೀ-ಸರಸ್ವತೀ ಹಾಗು ಶಕ್ತಿ ದೇವಿಯ ಮೂರ್ತಿಗಳನ್ನು ಯಾರೋ ಅಧಮರು ಒಡೆದು ಕೆಡಿಸಿದರಂತೆ! ೧೦೦೦೦ ಹಿಂದೂಗಳು ಮಾತ್ಸರ್ಯದಿಂದ ಮೂರ್ತಿಗಳ ಮರವಣಿಗೆ ಮಾಡಿ ಪ್ರಾಣಪ್ರತಿಷ್ಠ ಮಾಡಿದರು!

— ಪಾಟಿಯಾಲ ಟಿಂಕ್ಕರ ಯೂಸುಫ ಇವರು ೧೬ ಲಕ್ಷ ರೂಪಾಯಿಗಳನ್ನು ಕೊಟ್ಟು, ಮುಸಲ್ಮಾನರ ಅನಾಥಾಲಯವನ್ನು ಸ್ಥಾಪಿಸಬೇಕಾಗಿಯೂ, ಧಾರ್ಮಿಕ ಮತ್ತು ವಿದ್ಯೋದಿಕ ಶಿಕ್ಷಣವನ್ನು ಕೊಡಬೇಕಾಗಿಯೂ ವಿಧಿಸಿರುವರು.

— ಇಟಾಲಿಯೊಳಗಿನ ಫೋಗ್ಗಿಯಾ ಪ್ರಾಂತದಲ್ಲಿ ಭೂಕಂಪದಿಂದ ೨೦೦೦ ಮನೆಗಳು ನಷ್ಟವಾದವು ಒಬ್ಬರು ಸತ್ತರು; ಅನೇಕರಿಗೆ ಘಾಯಗಳಾಗಿವೆ.

— ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆಯು ಕಲಕತ್ತೆಯಲ್ಲಿ ಕಳೆದ ವಾರದಲ್ಲಿ ಜರುಗಿತು. ಹಿಂದೂ-ಮುಸಲ್ಮಾನರ ಐಕ್ಯರಕ್ಷಣೆಕ್ಕಾಗಿ ರಾಷ್ಟ್ರೀಯ ಸಭೆಯವರು ವಾರ್ತಾಪ್ರಸಾರಕ ಸಂಸ್ಥೆಯನ್ನು ಸ್ಥಾಪಿಸಲು ಠೀವಮಾನ ಮಾಡಿರುವರು. ವರಿಷ್ಠ ಕಾಯಿದೆ ಕೌನ್ಸಿಲು ಹಾಗು ಪ್ರಾಂತಿಕ ಕಾಯಿದೆ ಕೌನ್ಸಿಲುಗಳಿಗೆ ಕೊಂಗ್ರೆಸ ಕಡೆಯ ಉಮೇದವಾರರನ್ನು ನೇಮಿಸಲಾಯಿತು.

— ಅಹಮದಾಬಾದದಲ್ಲಿ ಇಬ್ಬರು ಸರ್ಪವನ್ನು ಕೊಲ್ಲಿಸಿದರು. ಆ ಕುರಿತು ಜಾತಿಯವರು ಅವನಿಗೆ ಬಹಿಷ್ಕಾರ ಹಾಕಿದರು. ಬಹಿಷ್ಕಾರದಿಂದ ಮಾನಹಾನಿಯಾಯಿತೆಂದು ಬಹಿಷ್ಕೃತರು ಫಿರ್ಯಾದು ಕೊಡುವರು.

— ಕೈ ನೂಲಿನ ಖಾದಿಯ ಮೇಲೆ ಯಾವದೇ ಪ್ರಕಾರದ ಕರದ ಎತ್ತುವಳಿ ಮಾಡಬಾರದೆಂದು ಧುಳೆ ಮ್ಯುನಿಸಿಪಾಲಿಟಿಯು ನಿರ್ಧರಿಸಿದೆ.

ನೋಟೀಸು.

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದರೆ:-

ನನ್ನ ಪತಿಗಳಾದ ಶೇಷಗಿರಿ ಗಣಪಯ್ಯ ಶೆಟ್ಟಿ ಇವರು ಮದ್ಯ ವ್ಯಸನಕ್ಕೆ ಬಿದ್ದು ನಮ್ಮ ಪಿತ್ರಾರ್ಜಿತ ಆಸ್ತಿಯನ್ನು ಪರಾಧೀನ ಮಾಡಬೇಕೆಂಬ ವಿಚಾರದಲ್ಲಿರುತ್ತಾರೆಂಬ ಸಂಗತಿ ನನ್ನ ಕೇಳಿಕೆಯಲ್ಲಿ ಬಂದಿದೆ. ಸದ್ರಿ ಆಸ್ತಿಯು ನನ್ನ ಪತಿಗಳ ಸ್ವಾರ್ಜಿತದ್ದು ಅಲ್ಲ; ಪಿತ್ರಾರ್ಜಿತದ್ದು ಆಗಿರುವದು. ನನ್ನ ಹೊಟ್ಟೆಯಲ್ಲಿ ೫ ವರುಷದ ಅಪ್ರಾಯಸ್ಥ ನಾಗೇಶನೆಂಬ ಹುಡುಗನಿದ್ದು, ಸದ್ರಿ ಆಸ್ತಿಗೆ ಸದ್ರಿ ಅಪ್ರಾಯಸ್ಥನೇ ಹಕ್ಕುದಾರನಿರುವನು. ಹೀಗಿರುತ್ತಾ ಮಂದಮತಿಯವರಾಗಿ ವ್ಯಸನಕ್ಕೆ ಬಿದ್ದ ನನ್ನ ಪತಿಗಳು ಜನರ ದುರ್ಬೋಧನೆಗೆ ಮರುಳಾಗಿ ಸಾಲಾ ವಗೈರೆ ಮಾಡಿದರೆ ಅಥವಾ ಸದ್ರಿ ಆಸ್ತಿಯನ್ನು ಅಡವು, ಕ್ರಯ ಮಾಡಿ ಪರಾಧೀನ ಮಾಡಿದರೆ, ಅದು ಯಾವ ತರದಿಂದಲೂ ನಮ್ಮ ಆಸ್ತಿಯ ಮೇಲೆ ಸಿದ್ಧವಾಗಲಿಕ್ಕಿಲ್ಲ. ತಿಳಿಯುವದು.

ಕುಮಟಾ, ತಾ. ೮-೭-೧೯೩೬.

ಈ ಎಡಗೈ ಹೆಬ್ಬೆಟ್ಟಿನ ಗುರುತು ವೈಶ್ಯ ಜಾತಿಯ ಅಪ್ರಾಯಸ್ಥ ರಕ್ಷಕ ತಾಯಿ

ರತಿ ಕೋಂ ಶೇಷಗಿರಿ ಗಣಪಯ್ಯ ಶೆಟ್ಟಿ ಇವಳದಾಗಿರುತ್ತದೆ.

ನೋಟೀಸು.

ಅಪ್ರಾಯಸ್ಥ ವೆಂಕಾ ವೆಂಕಟ್ರಮಣನಾಯ್ಕ ಮತ್ತು ಅಪ್ರಾಯಸ್ಥ ರಾಮಕೃಷ್ಣ ವೆಂಕಟ್ರಮಣ ನಾಯ್ಕ ಪಕ್ಷಕ ತಾಯಿ ಸಣ್ಣಮ್ಮ ಕೋಂ ವೆಂಕಟ್ರಮಣ ನಾಯ್ಕ ಸಾಕೀನ ತೊರ್ಕೆ ಇವಳು ಇದರ ಮೂಲಕ ಎಲ್ಲಾ ಜನರಿಗೆ ಜಾಹೀರ ಮಾಡುವದೇನಂದರೆ:-

ನನ್ನ ಮಗ ದೊಡ್ಡಯ್ಯಾ ವೆಂಕಟ್ರಮಣ ನಾಯ್ಕ ಈತನು ಈಗ ವಿಲೀಕತೆಗೆ ಮಾತ್ರ ಪ್ರಾಯಕ್ಕೆ ಬಂದಿರುವದಾಗ್ಯೂ ಅಪ್ರಬುದ್ಧನಿದ್ದು, ಈಗ ಶಿಕ್ಷ ಶಿಕ್ಷಿದ ಹಾಗೆ ಜನರ ಧುಲತಾಪಿಗೆ ಹೊಳಪಟ್ಟು ಬೋಕಳ ಸಾಲ ವಗೈರೆ ಮಾಡಿದ್ದಾನಾಗಿಯೂ, ಮತ್ತು ಅದೇ ರೀತಿ ಮುಂದೆ ಸಹಾ ಅವನ ಅಪ್ರಾಯಸ್ಥ ಸಹೋದರರಾದ ವೆಂಕಾ ಮತ್ತು ರಾಮಕೃಷ್ಣ ಇವರ ಹಕ್ಕಿಗೆ ಬಾಧಕ ಬರುವಂತೆ ಆಸ್ತಿ ಸಹಾ ಪರಾಧೀನ ಮಾಡುವವನಿದ್ದಾನಾಗಿಯೂ ಕೂಡಾ ತಿಳಿಯುತ್ತದೆ. ಕುಟುಂಬದ ವ್ಯವಹಾರ ಅವನ ತಾಬೆ ಇರದೆ, ನನ್ನ ತಾಬೆ ಇರುತ್ತದೆ. ಕುಟುಂಬದ ಹಿತದ ಬಗ್ಗೆ ಯಾವದೇ ವ್ಯವಹಾರ ಅವನು ನಡಿಸೋದಿಲ್ಲಾ. ಕಾರಣಾ ಯಾರಾದರೂ ಅವನಿಗೆ ನಿಜವಾಗಿ ಸಾಲ ಕೊಟ್ಟದ್ದು ಇದ್ದಲ್ಲಿ, ಆ ಸಾಲಕ್ಕೆ ಅವನು ಮತ್ತು ಅವನ ಅಂಶದ ಆಸ್ತಿ ಮಾತ್ರ ಜವಾಬದಾರ ಅದೀತು ಶಿವಾಯ್ ನನ್ನ ಬಾಕಿ ಇಬ್ಬರು ಮಕ್ಕಳ ಅಂಶ ವ ನನ್ನ ಭುಕ್ತಾಂಶದ ಹಕ್ಕು ಯಾವದೇ ರೀತಿಯಿಂದ ಜವಾಬದಾರ ಆಗಿರಲಿಕ್ಕಿಲ್ಲಾ. ತಿಳಿಯುವದು

ತೊರ್ಕೆ, ತಾರೀಖು ೨-೭-೧೯೩೬.

✠ ಸಣ್ಣಮ್ಮ ಕೋಂ ವೆಂಕಟ್ರಮಣ ನಾಯ್ಕ ಇವಳ ಹೆಬ್ಬೆಟ್ಟಿನ ಠ.ಜು ರಕ್ಷಕ ನಾತೆಯಿಂದ.

ಮಹಾತ್ಮರ ಆತ್ಮಚರಿತ್ರ

(೭) ಕೆಲವು ಅನುಭವಗಳು.

ಡರ್ಬಾನವು ನಾತಾಲದೊಳಗಿನ ಬಂದರವು, ಇದಕ್ಕೆ ನಾತಾಲದ ಬಂದರವೆಂದೂ ನುಡಿಯುತ್ತಾರೆ ಅಬ್ದುಲ್ಲಾ ಶೆಟ್ಟರು ನನಗೆ ಇಳಿಸಿಕೊಳ್ಳಲು ಬಂದಿದ್ದರು ಹಡಗವು ಬಂದರದಲ್ಲಿ ಸೇರಿದಾಗ ತಮ್ಮ ತಮ್ಮ ಗೆಳೆಯರಿಗೆ ಭೆಟ್ಟಿಯಾಗಲು ಜನರು ಹಡಗವನ್ನೇರಿದರು ನಾನು ಇದನ್ನೆಲ್ಲ ನೋಡುತ್ತಿದ್ದೆ ಹಿಂದೀಯರಿಗೆ ಇಲ್ಲಿ ವಿಶೇಷ ಮರ್ಯಾದೆ ಇಲ್ಲವೆಂದು ಆಗಲೇ ನನಗೆ ಹೊಳೆಯಿತು ಅಬ್ದುಲ್ಲಾ ಶೆಟ್ಟರೊಡನೆ ನಡೆಕೊಳ್ಳುವಾಗ ಆತನ ಪರಿಚಯವುಳ್ಳವರು ಕೂಡ ಕೆಲವು ಅಸಭ್ಯ ವರ್ತನ ತೋರಿಸುತ್ತಿದ್ದರು, ಅದನ್ನು ನೋಡಿ ನನಗೆ ತೀರ ವ್ಯಸನವಾಯಿತು ಅಬ್ದುಲ್ಲಾ ಶೆಟ್ಟರಿಗೆ ಇಂಥ ವರ್ತನವು ರೂಢಿಯಾಗಿ ಹೋಗಿತ್ತು ನನ್ನ ಕಡೆ ಕೆಲವರು ಕುತೂಹಲದಿಂದ ನೋಡಿದರು. ನನ್ನ ಉಡಿಗೆ-ತೊಡಿಗೆಗಳಿಂದ ನಾನು ಎಲ್ಲರಿಗೂ ಪ್ರತ್ಯೇಕವಾಗಿ ಕಾಣುತ್ತಿದ್ದೆ ನಾನು ಲಾಂಗಿಯನ್ನು ಹಾಕಿಕೊಂಡಿದ್ದೆ, ತಲೆಗೆ ಬಂಗಾಲದೊಳಗಿನ 'ಪಗಡಿ' ನಂತಹ ರೀತಿಯ ರುಮಾಲನ್ನು ಸುತ್ತಿಕೊಂಡಿದ್ದೆ

ನನಗೆ ಕಂಪನಿಯ ಬಿಡಾರಕ್ಕೆ ಒಯ್ದರು. ಅಲ್ಲಿ ಅಬ್ದುಲ್ಲಾ ಶೆಟ್ಟರ ಕೋಣೆಯ ಹತ್ತಿರದಲ್ಲಿಯೇ ನನಗೊಂದು ಬೇರೆ ಕೋಣೆಯನ್ನು ಕೊಟ್ಟಿದ್ದರು ನನಗೆ ಶೆಟ್ಟರ ಮಾತು ತಿಳಿಯುತ್ತಿದ್ದಿಲ್ಲ, ಶೆಟ್ಟರಿಗೆ ನನ್ನ ಮಾತು ತಿಳಿಯುತ್ತಿದ್ದಿಲ್ಲ ಶೆಟ್ಟರ ಅಣ್ಣನು ಪಟಂಬೈಯಿಂದ ನನ್ನ ಕಡೆ ಕೆಲವು ಪತ್ರಗಳನ್ನು ಕೊಟ್ಟಿದ್ದನು ಅದನ್ನೋದಿ ಶೆಟ್ಟರು ದಿಗಿಲುಬಿದ್ದರು ಅಣ್ಣಂದಿರು (ಬಹಳ ಖರ್ಚಿನ) ಬಿಳೇ ಆನೆಯನ್ನೇ ಕಳಿಸಿದ್ದಾರೆಂದು ಅವರ ಗ್ರಹಿಕೆಯಾಯಿತು ನನ್ನ ಉಡಿಗೆ-ತೊಡಿಗೆಯು ನನ್ನನ್ನು ತಿಂದುಣ್ಣುವ, ಯುರೋಪಿಯನ್‌ರಂತೆ ಬಹಳ ಖರ್ಚಿನವನೆಂದು ಅವರಿಗೆ ಕೂಡಲೆ ಹೊಳೆಯಿತು ಆ ಸಮಯ ನನಗೆ ಕೆಲಸ ಮಾಡಗೊಡಲು ಯಾವದೊಂದೂ ವಿಶೇಷ ವಿಷಯವಿರಲಿಲ್ಲ ಟ್ರಾನ್ಸವಾಲದಲ್ಲಿ ಅವರ ದಾವೆಯು ನಡೆದಿತ್ತು, ಅಲ್ಲಿ ಕೂಡಲೆ ನನಗೆ ಕಳಿಸಿದರೂ ಪ್ರಯೋಜನವಿದ್ದಿಲ್ಲ ನನ್ನ ಯೋಗ್ಯತೆಯೇನು? ನಾನು ಎಷ್ಟರ ಮಟ್ಟಿಗೆ ಪ್ರಾಮಾಣಿಕನು? ನನ್ನನ್ನು ನಂಬಬಹುದೋ ಹೇಗೆ? ಎಂಬ ವಿಷಯಗಳನ್ನು ಶೆಟ್ಟರು ಅರಿತಿದ್ದಿಲ್ಲ ನನ್ನನ್ನು ಕಾಯಲು ಅವರು ಪ್ರಿಟೋರಿಯಾದಲ್ಲಿರುತ್ತಿದ್ದಿಲ್ಲ, ಪ್ರತಿವಾದಿಯರು ಪ್ರಿಟೋರಿಯಾದಲ್ಲಿರುತ್ತಿದ್ದರು ನನಗೆ ಅವರು ತಮ್ಮ ದೊಡ್ಡಸ್ತನ ತೋರಿಸಿ ಅಯೋಗ್ಯವಾದ ವಜನು ಹಾಕಿ ನನ್ನನ್ನು ತಮ್ಮ ಕಡೆ ಒಲಿಸಿಕೊಳ್ಳುವ ಸಂಭವವಿರುವದೆಂದೂ ಅವರ ಗ್ರಹಿಕೆಯಾದ ತು ದಾವೆಗೆ ಸಂಬಂಧಿಸಿದ ಕೆಲಸವನ್ನು ನನಗೆ ಕೊಡದಾಗಿದ್ದರೆ, ನನಗೆ ಕೊಡುವಂಥ ಮತ್ತಾವ ಕೆಲಸವಿತ್ತು? ಉಳಿದ ಕೆಲಸವನ್ನೆಲ್ಲ ಕಾರಕೂನರು ವಿಶೇಷ ರೀತಿಯಿಂದ ಮಾಡುವದಾಗಿದ್ದರು ತಪ್ಪಿದ್ದರೆ ಕಾರಕೂನರಿಗೆ ಶಾಸನ ಮಾಡಬಹುದಿತ್ತು ನಾನು ತಪ್ಪು ಮಾಡಿದರೆ ನನಗೂ ಶಾಸನ ಮಾಡಬಹುದಿತ್ತೇನು? ಹೀಗೆ ದಾವೆಯ ಕೆಲಸವಿಲ್ಲದಿದ್ದರೆ ನನಗೆ ಅವರು ನಿರರ್ಥಕವಾಗಿ ಸಾಕಬೇಕಾಗುತ್ತಿತ್ತು

ಅಬ್ದುಲ್ಲಾ ಶೆಟ್ಟರಿಗೆ ಅಕ್ಷರಜ್ಞಾನವಿಲ್ಲೆಂದು ಹೇಳಬಹುದು ಆದರೆ, ಅವರಿಗೆ ವ್ಯವಹಾರದ ಅನುಭವವು ಹೇರಳ ಅವರ ಬುದ್ಧಿಯು ಬಹಳ ತೀಕ್ಷ್ಣವಿತ್ತು ವರ್ತಕರ ವ್ಯವಹಾರಕ್ಕೆ ಬೇಕಾಗುವಷ್ಟು ಇಂಗ್ಲಿಷ ಭಾಷೆಯ ಜ್ಞಾನವನ್ನು ಅವರು ಬಾಯಿ ಮಾತಿನಿಂದಲೇ ಸಂಪಾದಿಸಿದ್ದರು ಅಷ್ಟೇ ಜ್ಞಾನದಿಂದ ಅವರದೆಲ್ಲ ಕೆಲಸವು ಸಾಗುತ್ತಿತ್ತು ಆ ಇಂಗ್ಲೀಷಿನಿಂದ ಬ್ಯಾಂಕುಗಳ ಮ್ಯಾನೇಜರ ಹಾಗು ಯುರೋಪಿಯನ್ ವರ್ತಕರೊಡನೆ ಅವರು ವ್ಯವಹಾರ ಮಾಡುತ್ತಿದ್ದರು ದಾವೆಯ ಹಕೀಕತನ್ನು ವಕೀಲರಿಗೆ ಹೇಳಲಿಕ್ಕೂ ಈ ಇಂಗ್ಲೀಷು ಸಾಕಾಗುತ್ತಿತ್ತು ಅಲ್ಲಿರುವ ಭಾರತೀಯರೆಲ್ಲ ಇವರಿಗೆ ಅತ್ಯಾದರದಿಂದ ನಡಿಸಿಕೊಳ್ಳುತ್ತಿದ್ದರು ಆ ಕಾಲಕ್ಕೆ ಇವರ ಕಂಪನಿಯು ಬಹಳ ದೊಡ್ಡ ಕಂಪನಿಯಾಗಿತ್ತು ಇಷ್ಟೆಲ್ಲ ಗುಣ ಸನ್ನಿವೇಶವಿದ್ದರೂ ಅವರು ಸಂಶಯಿ ಸ್ವಭಾವದವರಿದ್ದರು

ಶೆಟ್ಟರಿಗೆ ಇಸ್ಲಾಮು ಧರ್ಮದ ಅಭಿಮಾನ ಬಹಳ ಇಸ್ಲಾಮು ತತ್ವಜ್ಞಾನವನ್ನು ತಿಳಿಸಿ ಹೇಳುವದ ಅವರಿಗೊಂದು ಪ್ರೀತಿ ಅವರಿಗೆ ಅರಬೀ ಭಾಷೆ ಬರುತ್ತಿದ್ದಿಲ್ಲ ಆದರೂ ಕುರಾಣ ಹಾಗೂ ಇತರ ಇಸ್ಲಾಮು ಧರ್ಮದ ವಾಙ್ಮಯದ ಜ್ಞಾನವು ತಕ್ಕಮಟ್ಟಿಗಿತ್ತು ಹೇರಳ ಉದಾಹರಣೆಯನ್ನು ಅವರು ಅಲ್ಲಿಂದಲ್ಲೇ ಹೇಳುತ್ತಿದ್ದರು ಅವರ ಸಹವಾಸದಿಂದ ಇಸ್ಲಾಮು ಧರ್ಮದ ಜ್ಞಾನವು ನನಗೆ ತಕ್ಕಮಟ್ಟಿಗೆ ದೊರೆಯಿತು ನಾವು ಗೆಳೆಯರಾದ ಬಳಿಕ ಧಾರ್ಮಿಕ ವಿಷಯಗಳ ಮೇಲೆ ಬಹುಕಾಲದವರೆಗೆ ಮಾತಾಡುತ್ತ ಕೂಡ್ರುತ್ತಿದ್ದೆವು

ನಾನು ಬಂದು ಮುಟ್ಟಿದ ೨—೩ ದಿನಗಳಲ್ಲಿ ಅವರು ನನಗೆ ಡರ್ಬಾನದ ಕೋರ್ಟನ್ನು ತೋರಿಸಲು ಒಯ್ದರು ಅಲ್ಲಿ ಅನೇಕರಿಗೆ ಪರಿಚಯ ಮಾಡಿಕೊಟ್ಟ ಬಳಿಕ ನನಗೆ ತಮ್ಮ ವಕೀಲರ ಬಳಿ ಕೂಡ್ರಿಸಿದರು ಮೆಜಿಸ್ಟ್ರೇಟರು ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದರು. ಕೊನೆಗೆ ಮೆಜಿಸ್ಟ್ರೇಟರು ನನಗೆ ರುಮಾಲನ್ನು ತೆಗೆಯಲು ಆಜ್ಞಾಪಿಸಿದರು ನಾನೊಪ್ಪಲಿಲ್ಲ ಕೋರ್ಟಿನೊಳಗಿಂದ ಹೊರಬಂದೆ

ಹೀಗೆ ಇಲ್ಲಿಯೂ ನನಗೆ ಕಾದಾಡುವ ಪ್ರಸಂಗ ಬಂತು ಕೆಲವು ಜಾತಿಯ ಭಾರತೀಯರು ಇಲ್ಲಿ ರುಮಾಲನ್ನು ತೆಗೆಯಬೇಕಾಗಿತ್ತು ಇದರ ಕಾರಣವನ್ನು ಅಬ್ದುಲ್ಲಾ ಶೆಟ್ಟರು ನನಗೆ ಹೇಳಿದರು ಮುಸಲ್ಮಾನ ಉಡಿಗೆ-ತೊಡಿಗೆಗಳನ್ನು ಧರಿಸುವವರು ರುಮಾಲನ್ನು ಹಾಕಿಕೊಂಡರೆ ಅಡ್ಡಿಯಿಲ್ಲ ಆದರೆ ಉಳಿದ ಭಾರತೀಯರೆಲ್ಲರೂ ಕೋರ್ಟಿನಲ್ಲಿ ಪ್ರವೇಶಿಸಿದ ಕೂಡಲೇ, ರುಮಾಲನ್ನು ತೆಗೆಯಲೇ ಬೇಕು

ಈ ಸೂಕ್ಷ್ಮ ಭೇದವನ್ನು ತಿಳಿಸಬೇಕಾದರೆ ನಾನು ಕೆಲ ವಿವರಗಳನ್ನು ಹೇಳಬೇಕು ೨-೩ ದಿನಗಳಲ್ಲಿಯೇ ನನಗೆ ಇಲ್ಲಿಯ ಭಾರತೀಯರೊಳಗೆ ಬಿನ್ನ ಭಿನ್ನ ತಂಡುಗಳಿರುವವೆಂದು ತಿಳಿದು ಬಂತು. ಮುಸಲ್ಮಾನ ವರ್ತಕರು 'ಅರಬ' ರೆಂದು ಹೇಳಿಸಿಕೊಳ್ಳುತ್ತಿದ್ದರು ಹಿಂದೂ-ಪಾರ್ಸಿ ಕಾರಕೂನರ ತಂಡವೇ ಬೇರೆ ಹಿಂದೂ ಕಾರಕೂನರಿಗೆ ಅಲ್ಲಿಯೂ ಇಲ್ಲ ಇಲ್ಲಿಯೂ ಇಲ್ಲ ಅರಬ ವರ್ತಕರೊಡನೆ ಅವರು ಸೇರಿದರೆ ಅವರಿಗೆ ತಕ್ಕಮಟ್ಟಿಗೆ ಆಸ್ಪದವಿತ್ತು ಪಾರ್ಸಿ ಕಾರಕೂನರು ತಾವು ಇರಾಣದವರೆಂದು ಹೇಳಿಸಿಕೊಳ್ಳುತ್ತಿದ್ದರು ಈ ಮೂರೂ ವರ್ಗಗಳಲ್ಲಿ ಪರಸ್ಪರ ಸಾಮಾಜಿಕ ಬಂಧನಗಳಿದ್ದವು ಆದರೆ ಕರಾರುಬದ್ಧ ಹಾಗು ಕರಾರಿನಿಂದ ಬಿಡುಗಡೆಹೊಂದಿದ ತಮಿಳ, ತೆಲಗು ಹಾಗು ಉತ್ತರ ಹಿಂದುಸ್ಥಾನದೊಳಗಿನ ಕೂಲಿಕಾರರ ಸಂಖ್ಯೆಯು ಹೇರಳವಿತ್ತು ಇವರ ವರ್ಗವೇ ಬೇರೆ ಕರಾರುಬದ್ಧ ಕೂಲಿಕಾರರೆಂದರೆ ೫ ವರ್ಷಗಳ ವರೆಗೆ ಚಾಕರಿ ಮಾಡುವ ಕರಾರು ಮಾಡಿ ನಾತಾಲಿಗೆ ಹೋದವರು ಇವರಿಗೆ 'ಗಿರಮಿಟಿಯಾ' ಎಂದು ಕರೆಯುತ್ತಿದ್ದರು ಯಾಕಂದರೆ, ಇಂಗ್ಲಿಷ 'ಎಗ್ರೀಮೆಂಟ' (ಕರಾರು) ಎಂಬ ಶಬ್ದಕ್ಕೆ 'ಗಿರಮಿಟ' ಹೇಳುತ್ತಿದ್ದರು. ಈ ವರ್ಗದೊಡನೆ ಮೇಲೆ ಹೇಳಿದ ಮೂರೂ ವರ್ಗದವರೂ ಬರೇ ಕೆಲಸದ ಸಂಬಂಧವನ್ನಿಟ್ಟಿದ್ದರು ಅಲ್ಲಿಯ ಇಂಗ್ಲೀಷರು ಇವರಿಗೆ 'ಕೂಲಿ'ಗಳೆಂದು ಹೇಳುತ್ತಿದ್ದರು ಅಲ್ಲಿಯ ಭಾರತೀಯರೊಳಗೆ ಕೂಲಿಮಾಡಿ ಹೊಟ್ಟೆ ಹೊರಕೊಳ್ಳುವವರೇ ಹೆಚ್ಚಿದ್ದರಿಂದ ಎಲ್ಲ ಭಾರತೀಯರೂ 'ಕೂಲಿ'ಯವರೆಂದು ಸಂಬೋಧಿಸಲ್ಪಡುತ್ತಿದ್ದರು ಅಥವಾ "ಸಾಮಿ" ಎಂದೂ ಕರೆಯಲ್ಪಡುತ್ತಿದ್ದರು "ಸಾಮಿ" ಎಂಬ ತಮಿಳ ಶಬ್ದವು ಸಾಮಾನ್ಯವಾಗಿ ತಮಿಳ ಹೆಸರುಗಳ ಅಂತ್ಯದಲ್ಲಿ ಈ ಶಬ್ದವಿರುತ್ತದೆ ಇದು ಸಂಸ್ಕೃತ "ಸ್ವಾಮಿ" ಶಬ್ದದ ರೂಪ "ಸ್ವಾಮಿ" ಯೆಂದರೆ, ಒಡೆಯ ಅದರಿಂದ 'ಸಾಮಿ" ಯೆಂದು ಹೇಳಿದ ಕೂಡಲೆ ಭಾರತೀಯನಿಗೆ ಸಿಟ್ಟು ಬಂದಾಗ, ಆತನು ವಿನೋದಿ ಗೃಹಸ್ಥನಾಗಿದ್ದರೆ, ಅದಕ್ಕೆ ಪ್ರತ್ಯುತ್ತರವಾಗಿ ಈ ಪ್ರಕಾರ ಉತ್ತರ ಕೊಡುತ್ತಿದ್ದನು "ನೀನು ನನಗೆ 'ಸಾಮಿ'ಯೆಂದು ಕರೆಯಬಹುದು, ಆದರೆ, 'ಸಾಮಿ' ಶಬ್ದದ ಅರ್ಥವು ಒಡೆಯನೆಂದಾಗುತ್ತದೆಂಬುದನ್ನು ನೀನು ಮರೆತುಬಿಡುತ್ತೀ ನಾನು ನಿನ್ನ ಒಡೆಯನಲ್ಲ!" ಇದನ್ನು ಕೇಳಿದೊಡನೆ ಕೆಲ ಇಂಗ್ಲಿಷ ಮಂದಿಗಳು ಸುಮ್ಮನಾಗುತ್ತಿದ್ದರು ಇನ್ನು ಕೆಲವರು ರೇಗಿಗೆದ್ದು ಬೈಯ್ಯುತ್ತಿದ್ದರು ಪ್ರಸಂಗ ಬಿದ್ದರೆ, ಚಲೋ ಬಡಿಯುತ್ತಿದ್ದರು ಅವರಿಗೆ 'ಸಾಮಿ' ಯೆಂದರೆ ತಿರಸ್ಕಾರದರ್ಶಕ ಶಬ್ದವಾಗಿತ್ತು! ಅದರ ಅರ್ಥವನ್ನು ಯಜಮಾನನೆಂದು ಮಾಡುವದು ಅವರಿಗೆ ಬಂದ ಅಪಮಾನವು

ಇದರಿಂದ ನನಗೆ 'ಕೂಲಿ ಬೆರಿಸ್ಟರ' ನೆಂದು ಹೇಳುತ್ತಿದ್ದರು ವರ್ತಕರಿಗೆಲ್ಲ 'ಕೂಲಿ ವರ್ತಕ' ರೆಂದು ಹೇಳುತ್ತಿದ್ದರು ಹೀಗೆ ಕೂಲಿ ಶಬ್ದದ ಮೂಲ ಅರ್ಥವು ಮರೆಯಾಗಿ, ಅದು ಸಮಸ್ತ ಭಾರತೀಯರ ಅಭಿಧಾನವಾಯಿತು ಮುಸಲ್ಮಾನ ವರ್ತಕರು ಇದನ್ನು ಕೇಳಿದೊಡನೆ ಸಿಟ್ಟಿಗೆದ್ದು ನುಡಿಯುವದೇನಂದರೆ —"ನಾನು ಕೂಲಿಯಲ್ಲ ನಾನು ಅರಬನು " ಅಥವಾ 'ನಾನು ವರ್ತಕನು " ಇಂಗ್ಲಿಷರು ಸಭ್ಯ ಗೃಹಸ್ಥರಿದ್ದರೆ ಕ್ಷಮೆಯನ್ನೂ ಬೇಡುತ್ತಿದ್ದರು ಇಂಥ ಸ್ಥಿತಿಯಲ್ಲಿ ರುಮಾಲನ್ನು ಧರಿಸುವದು ಒಂದು ದೊಡ್ಡ ಮಹತ್ವದ ಸಂಗತಿಯಾಗಿತ್ತು ರುಮಾಲನ್ನು ತೆಗೆದಿಟ್ಟುಕೊಳ್ಳುವದೂ ಸ್ವಾಭಿಮಾನವನ್ನು ಕಳಕೊಳ್ಳುವದೂ ಒಂದೇ ಆದರಿಂದ ರುಮಾಲನ್ನು ತ್ಯಜಿಸಿ ಇಂಗ್ಲಿಷ ಹೆಟ್ಟನ್ನು ಧರಿಸಿ ಅಪಮಾನ ಮಾನ ವಿವಾದದೊಳಗಿಂದ ನಾನು ಪಾರಾಗಬಯಸಿದೆನು ಆದರೆ ಅಬ್ದುಲ್ಲಾ ಶೆಟ್ಟರಿಗೆ ಈ ಸೂಚನೆಯು ಸೇರಲಿಲ್ಲ ಅವರು ನುಡಿದದ್ದೇನಂದರೆ — 'ನೀವು ಹೀಗೆ ಮಾಡಿದರೆ ಅದರಿಂದ ಕೇಡಾಗುವದು ರುಮಾಲನ್ನು ಧರಿಸುವ ಭಾರತೀಯರಿಗೆ ನೀವು ಸಂಕಟದಲ್ಲಿ ಸಿಲಕಿಸುವಿರಿ ನಿಮಗೆ ರುಮಾಲು ಚಲೋ ಶೋಭಿಸುತ್ತದೆ ಇಂಗ್ಲಿಷ ಹೆಟ್ಟನ್ನು ಧರಿಸಿದರೆ, ನೀವು ಖಾನಾವಳಿಯೊಳಗಿನ ಬಡಿಸುವ ಆಳಿನಂತೆ ಕಾಣುವಿರಿ'

ಇದು ಕೆಲಮಟ್ಟಿಗೆ ವ್ಯವಹಾರಿಕ ಜಾಣತನವು, ದೇಶಾಭಿಮಾನವು ಮತ್ತು ಕೆಲಮಟ್ಟಿಗೆ ಕ್ಷುದ್ರ ಬುದ್ಧಿಯಿಂದಲೂ ಹೇಳಬಹುದು ಜಾಣತನವಂತು ಸ್ಪಷ್ಟ ಕಾಣುತ್ತದೆ ದೇಶಾಭಿಮಾನವಿಲ್ಲದಿದ್ದರೆ, ಅವರು ರುಮಾಲಿನ ಆಗ್ರಹ ಎಂದೂ ಹಿಡಿಯುತ್ತಿದ್ದಿಲ್ಲ ಖಾನಾವಳಿಯೊಳಗಿನ ಆಳಿನ ಉಲ್ಲೇಖದಿಂದ ಒಂದು ತರದ ಕ್ಷುದ್ರತನವು ವ್ಯಕ್ತವಾಗುತ್ತದೆ ಕರಾರುಬದ್ಧ ಕೂಲಿಕಾರರಲ್ಲಿಯೂ ಹಿಂದೂ ಮುಸಲ್ಮಾನ ಕ್ರಿಶ್ಚನ್ ಎಂಬ ಮೂರು ವರ್ಗಗಳಿದ್ದವು ಕ್ರಿಶ್ಚನ್‌ರೆಂದರೆ, ಕರಾರು ಬದ್ಧ ಭಾರತೀಯ ಕೂಲಿಕಾರರ ಧರ್ಮಾಂತರ ಹೊಂದಿದ ಮಕ್ಕಳು ೧೮೯೩ ನೇ ಇಸ್ವಿಯಲ್ಲಿಯೇ ಇವರ ಸಂಖ್ಯೆಯು ಬಹಳವಿತ್ತು ಇವರು ಖಾನಾವಳಿಗಳಲ್ಲಿ ಬಡಿಸುವ ಕೆಲಸ ಮಾಡುತ್ತಿದ್ದರು ಇಂಗ್ಲಿಷ ಹೆಟ್ಟಿನ ಟೀಕೆ ಮಾಡುವಾಗ ಅಬ್ದುಲ್ಲಾ ಶೆಟ್ಟರು ಉಲ್ಲೇಖ ಮಾಡಿದ ವರ್ಗವು ಇದು' ಖಾನಾವಳಿಯಲ್ಲಿ ಬಡಿಸುವ ಕೆಲಸವು ತೀರ ಅಪಮಾನಾಸ್ಪದವೆಂದು ಎಣಿಸಲ್ಪಡುತ್ತಿತ್ತು ಈಗಲೂ ಅನೇಕರು ಹಾಗೆಯೇ ಎಣಿಸುತ್ತಾರೆ ಒಟ್ಟಿಗೆ ಅಬ್ದುಲ್ಲಾ ಶೆಟ್ಟರ ಅಭಿಪ್ರಾಯವು ನನಗೆ ಸೇರಿತು ಕೋರ್ಟಿನಲ್ಲಿ ಸಂಭವಿಸಿದ ಹಕೀಕತನ್ನು ವರ್ತಮಾನಪತ್ರದಲ್ಲಿ ಕೊಟ್ಟು ಕೋರ್ಟಿನಲ್ಲಿ ರುಮಾಲನ್ನು ಧರಿಸುವದು ಯುಕ್ತವೆಂದು ನಾನು ಪ್ರತಿಪಾದಿಸಿದೆನು ವರ್ತಮಾನಪತ್ರಗಳಲ್ಲಿ ವಾದಕ್ಕೆ ಪ್ರಾರಂಭವಾಯಿತು ನನಗೆ "ಅನಿಷ್ಟ ಅಭ್ಯಾಗತ"ನೆಂದು ಸಂಬೋಧಿಸಲಾಯಿತು ಹೀಗೆ ನಾನು ಹೋಗಿ ಮುಟ್ಟಿದ ಕೆಲವು ದಿನಗಳಲ್ಲಿಯೇ ಅನಪೇಕ್ಷಿತವಾಗಿ ನನ್ನ ಜಾಹೀರಾತು ಕೊಟ್ಟಂತಾಯಿತು ಕೆಲವರು ನನಗೆ ಬೆಂಬಲವನ್ನು ಕೊಟ್ಟರು, ನಾನು ಕೋರ್ಟಿನಲ್ಲಿ ರುಮಾಲು ಹಾಕಿಕೊಂಡು ಒಳಹೋದ ಧೈರ್ಯವನ್ನು ನೋಡಿ, ಇನ್ನು ಕೆಲವರು ನನ್ನನ್ನು ನಿರ್ದಯದಿಂದ ಟೀಕಿಸಿದರು

ದಕ್ಷಿಣ ಆಫ್ರಿಕೆಯನ್ನು ತ್ಯಜಿಸುವ ವರೆಗೆ ನಾನು ರುಮಾಲನ್ನೆ ಸುತ್ತಿಕೊಳ್ಳುತ್ತಿದ್ದೆನೆಂತು ಸುಪಾಠ್ಯವಾಗಿ ಹೇಳಬಹುದು ದಕ್ಷಿಣ ಆಫ್ರಿಕೆಯಲ್ಲಿ ನಾನು ಶಿರೋಭೂಷಣವನ್ನು ಯಾವಾಗ, ಯಾಕೆ ತ್ಯಜಿಸಿದೆನೆಂಬುದನ್ನು ನಾನು ಮುಂದೆ ವಿವರಿಸುವೆನು

ಶ್ರೀ ಕ್ಷೇತ್ರ ಗೋಕರ್ಣದಲ್ಲಿ
ಆಯುರ್ವೇದ ಸಂಗ್ರಹಾಲಯ.
ಶಾಸ್ತ್ರೋಕ್ತ ತಯಾರಿಸಿದ ಕುಪಿಸ್ಥ ರಸಾಯನಗಳು.

೧. ಸಮೀರ ಪನ್ನಗ—ಇವು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು. ಹೊಟ್ಟೆ ಉದ್ವೇಗ, ಹೊಟ್ಟೆಯೊಳಗಿನ ನಾನಾ ಪ್ರಕಾರದ ಪೀಡನೆ, ಸನ್ನಿಪಾತ ವಿಕಾರಗಳಲ್ಲಿ ಹಲುಬೋಣ, ಶಿಕ್ಕಂತೆ ಒಡ್ಯಾಡೋಣ ಮುಂತಾದ ೬೦ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ.

ತೊಲೆ ೧ಕ್ಕೆ ರೂ. ೬-೮-೦

೨. ಮಲ್ಲಸಿಂಧೂರ—ಮಹಾಶ್ವಾಸ, ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ಹಲುಬೋಣ, ಕಫಕ್ಷಯ, ಇಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು-ದಮ್ಮು, ಕಂಪು, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಗಳಿಗೆಯೊಳಗೆ ರೋಗಿಯು ವಾಸಿಯಾಗುತ್ತಾನೆ.

ತೊಲೆ ೧ಕ್ಕೆ ರೂ ೬-೦ ೦

೩ ಸುವರ್ಣರಾಜ ವಂಗೇಶ್ವರ—ಉಪದಂಶಗಳ ಶೇಷವಿಕಾರ, ಪರಮಾ, ಧಾತುಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುನಷ್ಟ, ಸ್ವಪ್ನಾವಸ್ಥ, ಅಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧಗಳ ಸಮಸ್ತ ವಿಕಾರಗಳನ್ನು ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನು ಕಾಂತಿಯನ್ನು ಕೊಡುತ್ತದೆ. ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ. ಇದರಿಂದ ಏನೊಂದೂ ಉಪದ್ರವವಾಗುವದಿಲ್ಲ.

ತೊಲೆ ೧ಕ್ಕೆ ರೂ ೬-೦-೦

೪. ವ್ಯಾಧಿಹರಣ ರಸ—ಉಪದಂಶ, (ಗರಮಿ ಯು) ಫಿರಂಗೋಪದಂಶ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಆಮವಾಯು, ವಾತರಕ್ತ, ಭಯಂಕರ ವಾತವಿಕಾರ, ವ್ರಣಮುಖ್ಯವಾಗಿ ಉಪದಂಶಗಳಿಗೆ ಮುಂದಾಗಿ ಆಗುವ ದಮ್ಮು, ಕೆಮ್ಮು, ನಿಶ್ಶಕ್ತಿ ಇವುಗಳ ಮೇಲೆ ಇಷ್ಟು ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಇನ್ನಾವುದೂ ಇಲ್ಲ

ತೊಲೆ ೧ಕ್ಕೆ ರೂ ೭-೦ ೦

೫. ಸೂತಶೇಖರ— ಸನ್ನಿಪಾತ, ಪ್ಲೇಗ, ಮೂರ್ಛೆ, ಹಲುಬುವ ವಿಕಾರ (ಭ್ರಮೆ) ಶ್ವಾಸ ಶಿಕ್ಕಂತೆ ಒಡ್ಯಾಡುವದು, ಹೊಟ್ಟೆನೋವು. ಆಮ್ಲಪಿತ್ತ ಮುಂತಾದ ವಾತ ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದು. ಸಾಮಾನ್ಯವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ

ತೊಲೆ ೧ಕ್ಕೆ ರೂ. ೬-೮-೦

ಇವಲ್ಲದೆ, ತರತರದ ಚೂರ್ಣ, ಘೃತ, ಅವಲೇಹ, ಆಸವ, ಕ್ವಾಥ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ವಿಚಾರ ಮಾಡಿರುತ್ತೇವೆ

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದ್ದಲ್ಲಿ ಉತ್ತರದ ಬಗ್ಗೆ ಸ್ಟ್ಯಾಂಪು ಜೊತೆಗಿಟ್ಟು ಈ ಕೆಳಗಿನ ಪತ್ತೆಗೆ ಬರೆಕೊಳ್ಳತಕ್ಕದ್ದು

ಪತ್ತೆ — **ಶ್ರೀ ಗಜಾನನ ಅಪ್ಪು ಭಟ್ಟ ವೇದೇಶ್ವರ,**

ಆಯುರ್ವೇದಿಕ ವೈದ್ಯ,

ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ.)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ತೀಕ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ—

ದಿ ನೋರ್ಥಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ

"ಸರಸ್ವತೀ"

ಇಡೀ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ಕೃಷ್ಟವಾದ ತಿಂಗಳ ಮಾಸಪತ್ರಿಕೆ ಇದೊಂದೇ

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಓದತಕ್ಕ ವಿಷಯಗಳು ಮಾತ್ರ 40 ಪುಟಗಳಿವೆ. ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಶೀಲಾ" ಎನ್ನುವ ಕಾದಂಬರಿಯೂ, 'ಕಹೂಜಾಸಾಕ'ಎನ್ನುವ ನಾಟಕವೂ ಸಾಹಿತ್ಯಸರೋಜ-ಕಥಾಕಲ್ಪವಲ್ಲಿ-ಮುತ್ತಿನ ಸರ-ಚಾರುಚರಿತಾವಳೀ-ಗೃಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಕಿಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ಚಂದಾದಾರರಿಗೆ "ಶಾರದಾ ಗ್ರಂಥಮಾಲೆ"ಯಲ್ಲಿ ಇದುವರೆಗೆ ಪ್ರಕಟವಾಗಿರುವ 'ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದೂ ಭಾಗ್ಯೋದಯ-ರಣಕೇಸರಿ' ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು. ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವದರಿಂದ ಪ್ರಕಟಣೆಗೆ ಅತ್ಯುತ್ತಮವಾದ ಪತ್ರಿಕೆ. ವಾರ್ಷಿಕ ಚಂದಾ ರೂ. 3-0-0 ಮಾತ್ರ. ವಿದ್ಯಾರ್ಥಿಗಳಿಗೂ, ವಾಚನ ಶಾಲೆಗಳಿಗೂ ರೂ 2-0 0 ಮಾತ್ರ

ವಿಳಾಸ.— "ಸರಸ್ವತೀ" ಕಾರ್ಯಾಲಯ,

ಚಾಮರಾಜಪೇಟೆ, ಬೆಂಗಳೂರು ಸಿಟಿ.

ಚವರಲೆಟ್

ಮೋಟಾರಕಾರ್ ಏಜನ್ಸಿ, ಕೆನರಾ

ನಾವು ಹೊಸ ಚವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ — **ಎಸ್. ಎಲ್ ಧಾಕಪ್ಪ**

ಮುಕ್ತಾ ಬ್ರದರ್ಸ, ಶಿರ್ಸಿ

ಕುಮಟಾ ಏಜಂಟ **ಜಿ. ಡಿ. ಮಳಗಿಕರ**

ಎಂಡ್ ಕೊ.

ಬಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲೊಪ್ ಹಾಗು ಏ.ಜಲಿನ ಮೋಟಾರ ಹಾಗು ಸಾಯಕಲ್ ಟಾಯರ ಟ್ಯೂಬ ಇತ್ಯಾದಿ ಸಾಮಗ್ರಿಗಳ ಯೋಗ್ಯ ದಲಾಲಿಯಿಂದ ಪೂರೈಸುತ್ತೇವೆ

G. D. Malgikar & Co,
KUMTA

ಗೆಳೆಯರ ಗುಂಪಿನ.

ಕನ್ನಡ] **ಸ್ವಧರ್ಮ.** [ಮಾಸಪತ್ರಿಕೆ

ಸಂಪಾದಕರು - ದ ರಾ ಬೇಂದ್ರೆ ಬೀ. ಎ

ವಾರ್ಷಿಕ ವರ್ಗಣಿ ೩—೦—೦

ಸಮಾಜದಲ್ಲಿ ಕ್ರಾಂತಿಪುಷ್ಟಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿಯು ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ ಇಂಥ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊಗುವದೇ ಸ್ವಧರ್ಮದ ಗುರಿ ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ.

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕ ವಿರುತ್ತದೆ ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸು ವವರು ಅವಶ್ಯವಾಗಿ ಅನುಭವ ಕೊಳ್ಳಬೇಕು. ೧ ಪುಡಿ ಕಿಂ. ರೂ.೦-೦-೬, ೨೫ರ ಕಿಂ ರೂ ೦-೯-೦, ೧೦೦ ಕಿಂ ರೂ. ೨-೦-೦; ೫೦೦ ಪುಡಿಗಳ ಕಿಂ ರೂ ೯-೦-೦, ೧೦೦೦ ೧೭-೦-೦, ಟ. ಪೆ ಖರ್ಚು ವಗೈರೆ ಪ್ರತ್ಯೇಕ

ಸುಗಂಧಿ ನಶ್ಯ:—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದಿದ್ದು, ಇದರಿಂದ ಶೈತ್ಯ, ಘಂಡಿ, ಅರತಲೆನೋವ ಮುಂತಾದವುಗಳು ಕೂಡಲೆ ಮಾಯ ವಾಗಿ ತಲೆಯು ಹಗುರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದ ರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿ ಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ರೂ. ೦-೪-೦. ೧ ಡಜನ್ ಡಬ್ಬಿ ಕಿಂ ರೂ ೩-೦-೦.ವಿ. ಪೋ. ಖರ್ಚು ಬೇರೆ

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳ ನಮ್ಮಲ್ಲಿ ತಯಾರಿರುತ್ತವೆ ಕಿಮ್ಮತ್ತಿನ ವಿಷಯಕ್ಕೆ ಬರೆದು, ಪ್ರರವತ್ ನೋಡಿ ವರ್ಡಾಲಿಗೆ ಆರ್ಡರ ಕೊಡಬಹುದು. ಇದರ ಹೊರತು, ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ. ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದರಾವಲಿ ಕೊಂಡು, ಖರೇದಿ ಮಾಡಿಕೊಳ್ಳಬಹುದು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು.

ಪತ್ತೆ:- **ಎಸ್. ಬಿ. ಕದಂ,**
ಬೀಡಿ ಮತ್ತು ತಂಬಾಕು ಜರ್ದಾ ದುಕಾನ.
ಮು॥ ಪೋ. ನಿಪ್ಪಾಣಿ, ಜಿ. ಬೆಳಗಾಂವ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯಾವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿ

(Registered Trade Mark.)

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ದಬ್ಬಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ— ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ. ಬಾ ೫೧೦, ಜಾರ್ಜಟೌನ, ಮದರಾಸ



ಸರಕಾರದಿಂದ ಪೇಟಂಟ ಪಡೆದ

ಮಲ್ಹಾರ ಕಪ್ಪಲಿ.

ತೋಟಗರಿಗೆ ಬಹು

ಅನುಕೂಲವಾಗಿರುವದು

ಇದು **mild steel**ವೆಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು. ಎತ್ತುಗಳಿಗೆ ಬಹಳೇ ಹಗರು ಹೋಗುತ್ತದೆ. ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರ ದೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ ಮಾಸಪತ್ರಿಕೆ.

ಸಂಪಾದಕ— ಶ್ರೀ। ಬಾಗಲ ಲಕ್ಷ್ಮಣರಾಯರು, ವಾಙ್ಮಯ ವಿಶಾರದ

ಮಾದರಿ ಸಂಚಿಕೆ ಪುಕ್ಕಟೆ ದೊರೆಯುವದು. ವಾರ್ಷಿಕ ಚಂದಾ ರೂ. ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ.

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ಸೇವಿಸಿನ ಮೊತ್ತಿಗ ಮೋಟರಿನ ವ್ಯವಸ್ಥೆ

ಹಾಗೂ

ಅಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ—

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ; ಗೋಕರ್ಣದಿಂದ ಅಂಕೋಲಾ, ಕಾರವಾರ.

ಟೀಪು:— ಟಿಕೇಟು ಮುಂದಾಗಿ ಪಡಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ಸಶಿಹಿತ್ತಲ,
ಮೋಟರ ಏಜಂಟ,
ಕುಮಟಾ (ಉತ್ತರ ಕನ್ನಡ)

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲೆಗಳ ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಧರ್ಮಾರ್ಥವಾಗಿ ಕಳಿಸಲಾದೀತು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ ಪುತ್ರ ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಅಮೃತಾಂಜನ.



ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನು ಉಪಯೋಗಿಸುತಿರುವವು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg. No. B 1270

Monday July 19th, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೧.

ವತ್ಸದ ವರ್ಗಣಿ.

ಕುಮಟೆಯಲ್ಲಿ ಆಗಾವು

ರೂಪಾಯಿ 2-4-0.

ಹೊರಗಿನವರಿಗೆ ಪೋಸ್ಟೇಜ ಸಹಿತ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಮ್ಯಾಟರ ಪ್ರತಿ ಸಾಲಿಗೆ (೧೨ ಎಟ್ ಉದ್ದ) ೪ ಸಾಲುಗಳವರೆಗೆ ರೂ. 1-0- ಆ ನಂತರ ಪ್ರತಿಸಾಲಿಗೆ 0-2-0. ಹೆಚ್ಚಿನ ಸಾಲು ಎಷ್ಟು ಹೋಗಿರುವವೋ ಆ ಮಾನದಿಂದ ಆಪ್ಪು ಸಾಲುಗಳು ಹಿಡಿಯಲ್ಪಡುವವು.

ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿ ನಿರ್ಣಯ ಮಾಡಲ್ಪಡುವದು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೯ ಮಾಹೆ ಜುಲೈ ಸನ್ ೧೯೨೬ ನೇ ಇಸವಿ.)—

हिंदुस्थानांतील रहिवाशांस उष्णमानांत हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत २ रुपये;

रामबाण औषधें —

सर्दि घालविणारें,
मूक वाढविणारें,
शौच्यास साफ करणारें,
झोंप आणणारें,
शक्ति देणारें,
तजेलीपणा आणणारें,

पिण्यांस रुचिकर

कॅटलाग मागवा,

मंडुफार्मास्युटिकलवर्क्स लिमिटेड,

मुंबई नं: १२

एजंट— मेसर्स पंडित आणी कंपनी,

तीर्थहळ्ळी

ಎಲ್ಲಾ ರೋಗಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೊಲಿ ಬಾಟ್ಲಿ ೧ ಕ್ಕೆ ೦—೧೨—೦. ಕಾಂತಿ ಸುವಾಸಿಕ ಕಾಮಿನಿ ಹಿಂಗು ೧೦ ತೊಲಿ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ .॥. ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿ ಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲಿಯ ಡಬ್ಬಿ ೧ ಕ್ಕೆ ೧—೪—೦. ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ —೩೦—೦. ತಲೆಗೆ ಹಾಕುವ ಸುವಾಸಿಕ ಪುಷ್ಕರಾದ ತೈಲ ೫ ತೊಲಿಯ ಬಾಟ್ಲಿ ೧ ಕ್ಕೆ ೦—೧೨—೦. ಹುಳದ ಪ್ರೊಮ ತೊಲಿ ೧ ಕ್ಕೆ ೦—೮—. ಇವಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಕಾಂತಿ ಊದಬತ್ತಿಗಳು ಯೋಗ್ಯ ದರದಲ್ಲಿ ಸಿಗುವವು ಟಪಾಲ ಖರ್ಚು ಪ್ರತ್ಯೇಕ.

ಕೆಳಗಿನ ಕಾಮಿನೀ ಹಿಂಗಿನ ದುಕಾನ

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,

ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



ಇದೇ ಒಂದು ತಿಂಗಳ ಬಗ್ಗೆ. ನಾವು ಈ ದರದನ್ನು ಕೊಡುವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ !! ಧರಿಸುವವರಿಗೆ ಯೋಗ್ಯ ಹಾಗು ರಮ್ಯ !!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತವೆ. ಯಾವುದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನ್ನು ಉತ್ಕೃಷ್ಟ ಲೇದು ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 503 P T Madras**

ಅತ್ಯಲ್ಪವಿವೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

ಹಾರು" ಲೀವರ ರಿಜಿಸ್ಟರ್ಡ ಪೋಕೆಟ್ ವಾಚ್ಚು ೧೮ ಕೆರೆಟ್ ರೋಲ್ಡ ಗೋಲ್ಡಿನವು. ಮುಂಬಯಿಲ್ಲಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವವೆಂದು ಗಡಿಯಾರಗಾರರು ಅಚ್ಚು ಹಾಕಿದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ಸಣ್ಣ "ಸಿ" ರಜಿಸ್ಟರ್ಡ ಪ್ಯಾಂಟಿಸನ್ನು ಉಚಿತವಾಗಿ ಕೊಡುತ್ತೇವೆ. ಇದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಗುಡ್ ಹಾಗು "ಹಾವಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೋಕೆಟ್‌ವಾಚ್ ಗಡಿಯಾರಗಳಿಗೆ ಕೊಡಿರಿ ಬರೇ ರೂಪಾಯಿ ೫.

ಗೌರೀಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ ಮಾಸಪತ್ರಿಕೆ

ಸಂಪಾದಕ- ಆಲೂರ ವೆಂಕಟರಾಯರು

ಇದರಲ್ಲಿ ಮಾಧ್ಯಮಿಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಜೇನುಗೂಡು ಮುಂತಾದವುಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳು ಇರುತ್ತವೆ. ವಾರ್ಷಿಕ ರಿಪ್ಪ್ಯ ಆಕಾರದ ೩೦ ಪುಟಗಳು ವರ್ಗಣಿ ರೂ ೫-೮-೦

ಕಾರ್ಯದರ್ಶಿ ಜಯಕರ್ನಾಟಕ ಧಾರವಾಡ.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಪಂಜಾಬು ಗುಟಾಬು, ಶಿಶು ಬಾಲಕರ ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾವಿಳೆ ದಮ್ಮು ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ ಮೂಲವ್ಯಾಧಿ, ನರ, ನಾಡಿ, ಕಲಿಮಜ್ಜ ಪ್ರದರ ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗರ್ಮಿ) ಬಾಲಗ್ರಹ, ಖಜ್ಜಿ, ಗಜಕರ್ಣಗಳಿಗೆ ಖಾತ್ರಿ ಗುಣ ಬರುವ ಜರ್ಮನ ಅಮೇರಿಕನ, ಫ್ರೆಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇದಲ್ಲದೆ ಎಲ್ಲ ತರದ ಸೇಶನರಿ, ಸರಪ್ಯೂಮರಿ ಸ್ಪ್ಯಾಕಲ ಸಾಮಾನು, ಫೀಲ್ಡಸ್ಪೋರ್ಟ್ಸ್, ಸುವರಲೆಟ್, ಪೆರೀಸ ಮೋಟಾರ ಬಂಡಿಗಳು, ಸುಲಭದ ದರದಿಂದ ಸಿಗುವವು ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡುತ್ತೇವೆ.

ಎಸ್ ಎಲ್ ಧಾಕಪ್ಪ ಮತ್ತು ಬ್ರದರ.

ಶಿರಶಿ

ರಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:-

ತಬಲೆ, ಡಕ್ಕೆ ವಗೈರೆ



೧ ಪೆಟ್ಟಿಗೆ-ಸಿಂಗಲರೀಡ ೨೫, ೩೦, ೪೦, ೫೦, ೬೦

೨ ,, -ಡಬಲ ರೀಡ ೪೦, ೪೫ ೫೦ ೬೦, ೧೦೦

೩ ಕಾಲು ಪೆಟ್ಟಿಗೆ,, ರೂ ೬೫, ೭೫, ೧೦೦, ೧೨೦, ೧೫೦

೪ ತಬಲೆ (ಸಾಮ್ರದಡಕ್ಕೆ ಸಹಿತ) ರೂ ೧೬, ೧೨, ೮೦

ಶಾವೋಕೇಸಿಂಯಸ್ ಗ್ಯಾಡ ಕಿಂ ರೂ ೧॥

ತಬಲೆ ಗ್ಯಾಡ ಕಿಂ ೧೨ ಆಣೆ

ನಾಟಕಿ ಬಗ್ಗೆ ಕ್ಯಾಟಲಾಗು ಪ್ರತ್ಯೇಕ ದೊರೆಯುವದು

ಗೋಪಾಳ ಸಖಾರಾಮ ಮಲ್ಕ ಕಂಪನಿ

ನಂ ೩೮೮, ವಿಠ್ಠಲವಾಡಿ ಎದುರಿಗೆ,

ಕಾಳಬಾದೇವಿ ರೋಡ,

ಮುಂಬಯಿ

ಟಿ. ಎಸ್. ಮೋಟರ ಸರ್ವಿಸ. ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ- ಸಿದ್ದಾಪುರ ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ.

ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಥಳಗಳಲ್ಲೂ ವ್ಯವಸ್ಥೆ ಮಾಡಿದೆ

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ವಿಚಾರಿಸಬಹುದು

M. Manjappa

PR PRIETOR

आयुर्वेद फुकट.

वैद्यविद्या

औषधयोजना आणि पूर्ण सुखाचा सरळ रस्ता दाखविणारे 'वैद्यविद्या' नावाचा मोठा आयुर्वेदीक पुस्तकाचा नवीन आवृत्ति बाहर पडली आहे. हे पुस्तक कीमत व पोस्ट खर्च घेतल्या शिवाय अगदी फुकट पाठविण्यात येते तरी हें पुस्तक आजच मागवा

प्रमेहावर रामबाण औषध.

मेहमर्दनचूर्ण.

हे चूर्ण फक्त तीन दिवस लागोपाठ घेतल्याने लघवीस होणारी आग, लघवी थांबून थांबून होणे वगैरे या ओषधाच्या सेवनाने एकदम बरे होतात

१४ १० तोळ्याच्या डब्यास रु १.

राजवैद्य नारायणजी केशवजी जामनगर (काठियावाड)

कुमटा एजन्ट- माधव सातप्पा शेणवी, बेलेकेरी

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮಶಕ್ತಿ ಕೂಡ ತರುಣರಂತೆ ಪ್ರವರ್ಧಮಾನವಾಗುವದು ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದ ಶಿಥಿಲತೆಯು ಹೋಗಿ ದೃಢವಾಗಿ ವೀರ್ಯಸ್ಖಲನವು ಇಲ್ಲದಂತಾಗುವದು ಮಲಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತು ಬಂದಾಗುವದು — ಬರಿದಾದ ದೇಹದ ಕಾಂತಿ ವೃದ್ಧಿಯಾಗಿ ಶರೀರವು ನಿರೋಗವಾಗುವದು ಕೆಲವೇ ದಿವಸದಲ್ಲಿಗುಣಬರುವದು ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚೆನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು ಮೈಯಲ್ಲಿ ಎಷ್ಟೇ ದಿವಸದ ತಾಪ ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೪—೦—೦ ಮೂರು ಬಾಟಲಿಗಳನ್ನು ಒಂದೇ ಸಾರೆ ಕೊಳ್ಳುವವರು ಅಂದರೆ ಟಪಾಲ ಖರ್ಚು ಕೊಡಬೇಕಾಗುವದಿಲ್ಲ ಹನ್ನೆರಡು ಬಾಟಲಿಗಳ ಕಿಮ್ಮತ್ತು ೧೫—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು ಪಾರ್ಸಲ ಕಳಿಸುವದಕ್ಕೆ ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ ಹನ್ನೆರಡಕ್ಕೆ ೧೫—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ಸಿದ್ದಾಪುರ ಜಿ. ಬೆಳಗಾಂವ

ವಿವಿಧ ಸಂಗ್ರಹ.

ನಾಯಿ ಕಚ್ಚಿದ ಖಟ್ಲೆ

ಫ್ರಾನ್ಸದೊಳಗಿನ ದಿವಾಣಿ ಕೋರ್ಟಿನಲ್ಲಿ ಒಂದು ನಾಯಿ ಕಚ್ಚಿದ ಖಟ್ಲೆಯ ತನಿಖಿಯಾಯಿತು. ಮ್ಯುನಿಸಿಪಾಲಿಟಿಯ ತೆರಿಗೆಯನ್ನೊಬ್ಬರು ಕೊಡಲಿಲ್ಲ. ಆ ಕುರಿತು ತೆರಿಗೆಯನ್ನು ವಸೂಲ ಮಾಡಲು ಟೆಕ್ಸ ಕಲೆಕ್ಟರರು ಅವರ ಮನೆಗೆ ಹೋದರು. ಒಡನೆ ಒಬ್ಬ ಪೋಲೀಸ ಶಿಪಾಯಿಯನ್ನೂ, ಮ್ಯುನಿಸಿಪಲ್ ಸಭಾಸದರನ್ನೂ ಕರಕೊಂಡಿದ್ದರು. ಟೆಕ್ಸ ಕಲೆಕ್ಟರರು ಮನೆಯೊಳಗೆ ಹೋದಾಗ ಯಜಮಾನನಿದ್ದಿಲ್ಲ. ಒಳ ಸೇರುವ ಮುಂಚೆ ಒಳಗಿದ್ದವರಿಗೆ ಇವರು ತಾವು ಬರುವ ಸುದ್ದಿಯನ್ನೂ ಕೊಡಲಿಲ್ಲ. ಹೊರಬದಿಗೆ ನಾಯಿಯಿತ್ತು. ಅದು ಟೆಕ್ಸ ಕಲೆಕ್ಟರರಿಗೆ ಕಚ್ಚಿತು. ಟೆಕ್ಸ ಕಲೆಕ್ಟರರು ನಷ್ಟವನ್ನು ಭರಮಾಡಿಕೊಳ್ಳುವರೆ ಮೊಕದ್ದಮೆಯನ್ನು ಹೂಡಿದರು. ಟೆಕ್ಸ ಕಲೆಕ್ಟರರು ಮುಂದಾಗಿ ಸೂಚನೆ ಕೊಡದೆ ಮನೆಯೊಳಗೆ ಸೇರಿದ್ದೇ ತಪ್ಪು. ಅವರು ವಿವೇಕಹೀನರಾದರು, ತಕ್ಕ ಜಾಗ್ರತೆ ಕೊಳ್ಳಲಿಲ್ಲ, ಅವರ ತಪ್ಪಿನಿಂದ ಒದಗಿದ ಪರಿಣಾಮಗಳಿಗೆ ನಾಯಿಯ ಮಾಲೀಕರು ಜಬಾಬದಾರರಾಗಲಾರರೆಂದು ತೀರ್ಪಾಯಿತು. ಅಪೀಲಿನಲ್ಲಿ ಮತ್ತೊಂದು ವಿಚಾರ ಮಾಡಿ ನ್ಯಾಯಮೂರ್ತಿಗಳು ೩೦೦ ಫ್ರೆಂಕು ನಷ್ಟವನ್ನು ನಾಯಿಯ ಮಾಲೀಕರಿಂದ ಕೊಡಿಸಿದರು. ನಾಯಿಯು ಕಾಡು ಪ್ರಾಣಿಯು, ಆದರಿಂದ ಜನರನ್ನು ಕಾಪಾಡಲು ಮಾಲೀಕರು ತಕ್ಕ ಉಪಾಯಯೋಜನೆ ಮಾಡಬೇಕು. ಮೂಲದರೂ ಹಗಲಿಗೆ ಮನೆಗೆ ಹೋಗಿದ್ದರು. ತಮ್ಮ ಕರ್ತವ್ಯವನ್ನು ಜರುಗಿಸಲು ಅವರು ಹೋಗಿದ್ದರು. ನಾಯಿಯ ಕಡತದಿಂದ ಅವರ ಉಡಿಗೆ-ತೊಡಿಗೆಗಳು ಕೆಟ್ಟು ಹೋದವು. ಹೀಗೆ ಆದ ತೀರ್ಪಿನ ಮೇಲೆ ಅಪೀಲಾಗುವ ಸಂಭವವಿದೆ. ನಾಯಿಯ ಕಚ್ಚೋಣದಿಂದ ಒದಗಿದ ಖಟ್ಲೆಯ ಕಥೆ ಕೇಳಿರಿ!

**

ಫಕೀರನ ಅದ್ಭುತಗಳು!

ಇಜಿಪ್ತದೊಳಗಿನ ಒಬ್ಬ ಫಕೀರರಾದ ರಹಮಾನ ಬೇಯವರು ಲಂಡನಿನೊಳಗಿನ ಸವೋಯ್ ಹೋಟೆಲಿನಲ್ಲಿ ಅದ್ಭುತ ಚಮತ್ಕಾರಗಳನ್ನು ಮಾಡಿತೋರಿಸಿದರು. ಕೈ ಕಾಲು-ಮೈಯನ್ನೆಲ್ಲ ಒಮ್ಮೆಲೇ ಬಿಗಿಮಾಡಿಕೊಂಡು ದೇಹ ಬದಿಗೆ ಧನುಷ್ಯಾಕಾರವಾಗಿ ಬಗ್ಗಿಸಿ ಮತ್ತು ಕುತ್ತಿಗೆಯನ್ನೂ, ಕಾಲುಗಳನ್ನೂ ಹೂವಿನ ಮೊಳೆಯ ಮೇಲೆ ಇಟ್ಟುಕೊಂಡು ತೋರಿಸಿದರು. ಬಳಿಕ ಗಲ್ಲಗಳಿಗೆ ಸೂಜಿಗಳನ್ನು ಚುಚ್ಚಿಕೊಂಡರು. ನೆತ್ತರಬರಲಿಲ್ಲ. ತೋಳುಗಳಿಗೆ ಚುಚ್ಚಿಕೊಂಡರು. ಆದರೂ ನೆತ್ತರ ಬರಲಿಲ್ಲ. ಎದೆಗೆ ಚುಚ್ಚಿಕೊಂಡರು ಆದರೂ ನೆತ್ತರ ಬರಲಿಲ್ಲ! ಮೊಳೆಗಳ ಮೇಲೆ ಮಂತ್ರಪ್ರಯೋಗ ಮಾಡಿ ಅವುಗಳಿಗೆ ಕಾಲು ಅಗಲಾಡಗೊಡಲಿಲ್ಲ. ಒಬ್ಬನ ಮೇಲೆ ಮಂತ್ರಪ್ರಯೋಗ ಮಾಡಿ, ಪದಗಳನ್ನು ಹಾಡಿಸಿದರು, ಕುಣಿಸಿದರು, ಸೊಂಟದ ವರೆಗೆ ಉಡಿಗೆ-ತೊಡಿಗೆಗಳನ್ನೆಲ್ಲ ತೆಗೆದುಕೊಂಡು ಶರಪಂಜರದ ಮೇಲೆ ಮಲಗಿಕೊಂಡರು, ಹೊಟ್ಟೆಯ ಮೇಲೆ ಒಬ್ಬ ಮನುಷ್ಯನು ನಿಂತುಕೊಂಡಿದ್ದನು. ಆದರೆ ಅವರಿಗೆ ಅಪಾಯವೇನೂ ಆಗಲಿಲ್ಲ. ಬಳಿಕ, ಅವರು ನಡುಗಿ ಶ್ವಾಸ ಕೊಂಡು, ಧನುಷ್ಯಾಕೃತಿ ಶರೀರವನ್ನು ನೆಟ್ಟಗೆ ಮಾಡಿದರು. ಆ ಮೇಲೆ ತಮ್ಮ ಪರಿವಾರದವರಿಂದ ಸೂಜಿಗಳನ್ನು ಗಲ್ಲಗಳಿಗೆ ಚುಚ್ಚಿಕೊಂಡು ಬಾಯಿ ವರೆಗೆ ತಂದರು, ಎದೆಯ ಮೇಲಿಂದ ಚುಚ್ಚಿಕೊಂಡು ಮಾಂಸ ತೆಗೆದುಕೊಂಡರು, ಮತ್ತೂ ಸೂಜಿಗಳನ್ನು ಚುಚ್ಚಿಕೊಂಡರು, ಹೀಗೆ ಕೊನೆಯಲ್ಲೆಲ್ಲ ಸಾವಧಾನ ಚಿತ್ತದಿಂದ ಆಡ್ಡಾಡಿದರು, ಮತ್ತು ಹಾಗೆಯೇ ಅವುಗಳನ್ನು ತೆಗೆದುಕೊಂಡರು. ಹುಂತು ನೆತ್ತರ ಬೀಳಲಿಲ್ಲ. ತೋಳಿನ ಮೇಲೆ ಒಂದೆರಡು ನೆತ್ತರ ಕಾಣುತ್ತಿತ್ತು ಅಷ್ಟೇ! ಸಂಯಮವು ಅಲ್ಪಾಂಶದಿಂದಾದರೂ ಅಪೂರ್ಣವಾಗಿದ್ದರೆ, ನೆತ್ತರ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು !

ಆದರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚೆಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂದಲಿ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ

ಎಲ್ಲಾ ಚೆಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ಒಕ್ಕೆ ರೂ.		೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦ ೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

—— ೦ ——

೩ ಔಂಸಿಗೆ ರೂ		೨—೦—೦
೩ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦-೧೨- ೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!! "

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಯಾವದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ನಾನಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲ ಜಾತಿ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY**

ವು ಹರಿಯುತ್ತಿತ್ತೆಂದು ಫಕೀರರು ಹೇಳಿದರು. ಪ್ರೇಕ್ಷಕರೊಳಗಿನವರೊಬ್ಬರು ಸತ್ಯವನ್ನು ತಿಳಕೊಳ್ಳುವದಕ್ಕಾಗಿ ಚೂಪಾದ ಮೊಳೆಗಳ ಹಾಸಿಗೆಯನ್ನೊಂದು ತಯಾರಿಸಿ, ಅದರ ಮೇಲೆ ಫಕೀರರಿಗೆ ಮಲಗ ಹೇಳಿದರು. ಮೇಲೊಬ್ಬ ಕಸುವುಳ್ಳವನ ಹೊಟ್ಟೆಯ ಮೇಲೆ ಹತ್ತಿಕೊಂಡು ಒತ್ತಿದನು. ಬಹಳವಾಗಿ ಒತ್ತಿದನು. ಹುಂಡು ನೆತ್ತರ ಬರಲಿಲ್ಲ. ಬೆನ್ನ ಮೇಲೆಲ್ಲ ಒತ್ತಿದ ಕುರುಹು ಕಾಣುತ್ತಿದ್ದವು. ಆ ಬಳಿಕ, ಪರರ ಮನಸ್ಸಿನಲ್ಲಿರುವ ವಿಚಾರಗಳನ್ನು ಹೇಳುವ ಪ್ರಯೋಗಗಳಾದವು. ಪ್ರೇಕ್ಷಕರಲ್ಲಿ ವರ್ತಮಾನಪತ್ರಕರ್ತರೊಬ್ಬರಿದ್ದರು. ಅವರಿಗೆ ಇಷ್ಟ ಕಂಡ ಕೆಲವು ಮಾತುಗಳನ್ನು ಫಕೀರರು ಬರೆಯ ಹೇಳಿದರು. ಮತ್ತು ಅವುಗಳ ಮೇಲೆಯೇ ಧ್ಯಾನಸ್ಥರಾಗ ಹೇಳಿದರು. ಬಳಿಕ, ಫಕೀರನು ಪಾತ್ರರಿಗೆ ಇತ್ತಿಯಂತೆ ಕೋಣೆಯಲ್ಲಿ ಕುಳಿತಾಗ ಅವರು ಬರೆದ ಪ್ರೇಕ್ಷಕರೊಬ್ಬರ ಸಿಗರೇಟಿನ ನಳಿಗೆಯನ್ನು ತೆಗೆದುಕೊಂಡ. ಒಂದರು ಪತ್ರಕರ್ತರು ಒರೆದಷ್ಟನ್ನು ಅವರ ನೋಡಿದ್ದಿಲ್ಲ. ಇನ್ನೊಬ್ಬರಿದ್ದರು. ಅವರು ಮನಸ್ಸಿನಲ್ಲಿ ಒಂದು ವಿಚಾರಮಾಡಿ ಗಟ್ಟಿ ಕುಳಿತರು. ಯಾರೂ ಸನ್ನೆಯೂ ಮಾತಾಡಲಿಲ್ಲ. ತಮ್ಮ ಮನಸ್ಸಿನಲ್ಲಿದ್ದುದನ್ನು ಫಕೀರರಿಗೆ ಸಡೆಯ ಹೇಳಿದರು. ಫಕೀರರು ಕೋಣೆಯ ಸುತ್ತಲೂ ಕಣ್ಣಾಡಿಸಿ ಒಬ್ಬ ಪ್ರೇಕ್ಷಕನ ಕಿಸೆಯೊಳಗಿಂದ ಗಡಿಯಾರವನ್ನು ತೆಗೆದು ಸಮಯ ಹೇಳಿದರು. ಇದನ್ನೆಲ್ಲ ನೋಡಿ, ಎಲ್ಲರೂ ಚಕಿತರಾದರು.

***

ತಿಬೇಟದೊಳಗಿನ ದ್ರೌಪದಿಯರು!

ತಿಬೇಟದೊಳಗಿನ ವಿವಾಹಪದ್ಧತಿಯನ್ನು ಕೇಳಿದರೆ, ನಮ್ಮ ವಾಚಕರಿಗೆ ಆಶ್ಚರ್ಯವಾಗದಿರದು. ತಿಬೇಟದೊಳಗಿನ ಕಾಯಿದೆಯಂತೆ ಹಿರೇ ಮಗನೇ ಭಾಗ್ಯವಂತನು. ಅವನೇ ಪಿತ್ರಾರ್ಜಿತ ಸೊತ್ತಿಗೆಲ್ಲ ಹಕ್ಕುದಾರನೆನಿಸುತ್ತಾನೆ. ಮದುವೆ ಮಾಡಿಕೊಳ್ಳುವ ಅಧಿಕಾರವೂ ಅವನದೇ. ಆತನ ಹೆಂಡತಿಯು ಎಲ್ಲ ಸಹೋದರರ ಹೆಂಡತಿಯು. ಹುಟ್ಟುವ ಮಕ್ಕಳೆಲ್ಲ ಹಿರೇ ಮಗನವೆಂದು ಎಣಿಸಲ್ಪಡುತ್ತವೆ. ಉಳಿದ ಸಹೋದರರಿಗೆ ಚಿಗಪ್ಪನೆಂದು ಅವರು ಸಂಬೋಧಿಸುತ್ತಾರೆ. ಅಲ್ಲಿಯ ವಿವಾಹ ಪದ್ಧತಿಯ ಶಾಸ್ತ್ರವೇ ಬಹಳ ಸಂಕೀರ್ಣವಿದೆ. ಅದರಿಂದ ಅಲ್ಲಿ ಸಶಾಸ್ತ್ರ ವಿವಾಹಗಳಾಗುವದು ಬಹಳ ಕಠಿಣವು. ವಿವಾಹಪದ್ಧತಿಯನ್ನು ಕೇಳುತ್ತೇವೆ. ಸಾಮಾನ್ಯವಾಗಿ ಇಲ್ಲಿ ವಿವಾಹವಾಗುವ ವಯಸ್ಸು ೨೦ ರಿಂದ ೨೫ ರ ವರೆಗೆ. ವರನ ತಾಯಿ-ತಂದೆಗಳು ವಧುವಿನ ಶೋಧ ನಡಿಸುತ್ತಾರೆ. ಸಮಾನ ಸ್ಥಿತಿಯ ವಧುವಿನ ಶೋಧವಾದ ಬಳಿಕ, ಮಧ್ಯಸ್ಥರೊಬ್ಬರು ಮದುವೆಯ ವಿಷಯ ಇತ್ತಿತ್ತಲಾಗಿಯೂ ಮಾತಾಡಿ ನಿಶ್ಚಯಿಸುತ್ತಾರೆ. ಮಧ್ಯಸ್ಥರೇ ಎಲ್ಲ ಕಾರ್ಯವನ್ನು ಒದಗಿಸಬೇಕು. ವಧುವಿನ ತಾಯಿ-ತಂದೆಗಳು ಪುರೋಹಿತರನ್ನೂ, ಜ್ಯೋತಿಷಿಗಳನ್ನೂ ವಿಚಾರಿಸಿ ಅವರು ಅನುಕೂಲ ಅಭಿಪ್ರಾಯ ಕೊಟ್ಟರೆ ಮಧ್ಯಸ್ಥರ ವಿಚಾರದಿಂದ ಮುಹೂರ್ತ ನಿಶ್ಚಯಿಸುತ್ತಾರೆ. ಬಳಿಕ, ವಧೂ-ವರ ಪಕ್ಷದವರು ಮಿರವಣಿಗೆ ಮುಂತಾದ ಸರಂಜಾಮುಗಳನ್ನು ತಯಾರಿಸುತ್ತಾರೆ. ಮದುವೆಯ ದಿನ ಚಪ್ಪರವು ಸುಶೋಭಿತವಾಗಿ ಶೃಂಗರಿಸಲ್ಪಡುತ್ತದೆ. ಸ್ತ್ರೀ-ಪುರುಷರು ಚಿನ್ನ ಹೂವು ಮುಂತಾದವುಗಳನ್ನು ಧರಿಸಿಕೊಳ್ಳುತ್ತಾರೆ. ಬಳಿಕ, ವರ ಪಕ್ಷದವರು ದಿಬ್ಬಣ ಹೊರಡಿಸಿ ಅಶ್ವಾರೂಢರಾಗಿ ವಧುವಿಗೆ ಕರೆತರಲು ಹೋಗುತ್ತಾರೆ. ಅಲ್ಲಲ್ಲಿ ದಿಬ್ಬಣ ನಿಂತು ಯಥೇಷ್ಟ ತಿಂಡಿಗಳನ್ನು ತಿನ್ನುತ್ತಾರೆ. ಪಾನೀಯಗಳನ್ನು ಕುಡಿಯುತ್ತಾರೆ. ಹೀಗೆ ಸಂಭ್ರಮದಿಂದ ಹೊರಟು ವಧುವಿಗೆ ಎದುರುಗೊಳ್ಳುತ್ತಾರೆ. ವಧುವು ಚಿತ್ರೋಕ್ತಾಭರಣ ಭೂಷಿತಳಾಗಿ ಸಂಭ್ರಮದಿಂದ ಬರುತ್ತಾಳೆ. ಅವಳ ಮೋರೆಯ ಮೇಲೆ ಪರದೆ ಇರುತ್ತದೆ. ಬಳಿಕ, ಅವಳನ್ನೂ ಅವಳ ಕಡೆಯವರನ್ನೂ ಕರಕೊಂಡು ವರಪಕ್ಷದ ಚಪ್ಪರದಲ್ಲಿ ಪ್ರವೇಶಿಸಹೋದಾಗ, ಅಲ್ಲಿ ಬಾಗಿಲುಗಳು ಮುಚ್ಚಿಕೊಂಡಿರುತ್ತವೆ. ಕಾವಲಗಾರನು ಪ್ರವೇಶ ಮಾಡಗೊಡವದಿಲ್ಲ. ಬಳಿಕ, ವಧುವು ಬಂದಾಗ ತಾಳೆ ಕಾವಲುಗಾರನು ಬಿಡುತ್ತಾನೆ. ಆ ಬಳಿಕ ಹೊರಬಿಡುವರಿಗೂ ಒಳಬರುವವರಿಗೂ ವಾದ-ವಿವಾದಗಳು ನಡೆಯುತ್ತವೆ. ವಾದದಲ್ಲಿ ಒಳಬರುವವರು ಸೋಲುತ್ತಾರೆ. ಬಳಿಕ ಬಾಗಿಲುಗಳು ತೆರೆಯಲ್ಪಡುತ್ತವೆ. ವರನ ತಾಯಿಯು ಹಾಲಿನ ಜೊತೆಗೆ ಹಾಗು ಸಕ್ಕರೆಗಳನ್ನು ತಂದು ವಧುವಿಗೆ ಹಂಚುತ್ತಾಳೆ. ಬಳಿಕ, ವಿವಾಹಮಂಟಪದ ಬಳಿಗೆ ವಧೂ-ವರರ ವಿವಾಹವಾಗತಕ್ಕದ್ದು. ವಧುವಿಗೆ ವರನು ವಸ್ತ್ರವೂ ಒಂದು ಆಭರಣವನ್ನು ಕೊಡುತ್ತಾನೆ. ವಧುವಿನ ಕಡೆಯವರು ಕೊಡತಕ್ಕ ವಸ್ತ್ರ ಚಿತ್ರಣಗಳಾಗಿವೆ. ಹೀಗೆ ಅಲ್ಲಿಯ ವಿವಾಹಗಳು ಬಹಳ ಸಂಭ್ರಮದಿಂದ ನಡೆಯುತ್ತವೆ.

***

ತಿಬೇಟದೊಳಗಿನ ಗೃಹವ್ಯವಸ್ಥೆ.

ಈ ವಿವಾಹದಲ್ಲಿ ಗೊತ್ತದೊಂದು ಚಮತ್ಕಾರವಿದೆ. ಕೊನೆತನಕ ವಧೂ ಪಕ್ಷದವರಾಗಲಿ, ವರಪಕ್ಷದವರಾಗಲಿ, ವರ ಯಾರು? ವಧೂ ಯಾರು? ಎಂದು ಹೇಳಲಿಕ್ಕಿಲ್ಲ. ಇಷ್ಟರ ಭೆಟ್ಟಿಯಾದ ವೇಳೆಯೇ ದಂಪತಿಗಳ ಅರಿವಾಗಬೇಕು. ಅದರಿಂದ ಇಲ್ಲಿ ಬಹಳ ಘಟಸ್ಫೋಟಗಳೂ ಆಗುತ್ತವೆ. ವಿವಾಹ ಕಾಲದಲ್ಲಿ ದಂಪತಿಗಳೊಳಗೆ ಕರಾರು ಆಗುತ್ತದೆ. ಕರಾರಿನಲ್ಲಿ ಒಂದು ಶರ್ತು ಹಾಕಿ ಇಟ್ಟರೂ ಬೇಕಾದಾಗ ಘಟಸ್ಫೋಟ ಮಾಡಿಕೊಳ್ಳಬಹುದೆಂದು ವಿಧಿಸುತ್ತಾರೆ. ಘಟಸ್ಫೋಟದ ಕ್ರಮವಂತೂ ತೀರ ಸುಲಭವು. ವರನು ಮದುವೆಯ ಕಾಲಕ್ಕೆ ಕೊಟ್ಟ ಒಡೆಯ ಮೇಲಿನ ಚಿನ್ನಾಭರಣವನ್ನು ಗಂಡನು ತೆಗೆದುಕೊಂಡರೆ, ಹೆಂಡತಿಯು ತ್ಯಾಗಮಾಡಿದಂತಾಯಿತು. ಹೆಂಡತಿಯು ತೆಗೆದು ಅದನ್ನು ಗಂಡನ ಕೈಯಲ್ಲಿ ಕೊಟ್ಟರೆ, ಗಂಡನ ತ್ಯಾಗಮಾಡಿದಂತಾಯಿತು. ಅಲ್ಲಿಯ ಒಂದೇ ಹೆಂಗಸಿಗೆ ಒಬ್ಬರ ಮುಂದಿ ಗಂಡಂದಿರುವದರಿಂದ ಅಲ್ಲಿಯ ಹೆಂಗಸರಿಗೆ ಬಹಳ ಕಷ್ಟವಾಗುತ್ತದೆಂದು ಯಾರೂ ತಿಳಿಯಲಾಗದು. ತಿಬೇಟದೊಳಗಿನ ಹೆಂಗಸರು ಗೃಹಸ್ವಾಮಿಯರು. ಗಂಡಂದಿರು ದುಡಿದ ದುಡಿತವನ್ನೆಲ್ಲ ಅವಳಿಗೆ ಒಪ್ಪಿಸಬೇಕು, ಲೆಖ್ಖಾ ಚೋಖ ಕೊಡಬೇಕು. ಗಂಡಂದಿರಿಗೆ ಹಣ ಬೇಕಾದರೆ, ಅವಳಿಂದ ಬೇಡಿಕೊಳ್ಳಬೇಕು. ಯಾರಾದರೊಬ್ಬ ಗಂಡನು ಸೋಮಾರಿಯಾದರೆ, ಅಥವಾ ಅತನಿಗೆ ತಕ್ಕಷ್ಟು ಕೆಲಸ ಮಾಡದೆ ವ್ಯಂಗಳ್ಳನಾದರೆ, ಹೆಂಡತಿಯು ಬುದ್ಧಿ ಹೇಳುತ್ತಾಳೆ, ಕೇಳದಿದ್ದರೆ ಘಟಸ್ಫೋಟ ಮಾಡಿ ಮನೆಯ ಹೊರಗೆ ಹಾಕುತ್ತಾಳೆ. ತಿಬೇಟದೊಳಗಿನ ಸ್ತ್ರೀಯರು ವಿಶ್ವಾಸದಿಂದ ಮನೆಗೆಲಸಗಳನ್ನು ಸಾಗಿಸುತ್ತಾರೆ. ಗಂಡಂದಿರು ಹೆಂಡತಿಗೆ ವಿಧೇಯರಾಗಿ ನಡಕೊಳ್ಳಬೇಕು. ಯಾವದಾದರೂ ಕೆಲಸವನ್ನು ಗಂಡಂದಿರು ಕೈಕೊಳ್ಳಬೇಕಾದರೆ, ಹೆಂಡತಿಯ ಅನುಮತಿಯನ್ನು ಪಡಕೊಳ್ಳಬೇಕು. ಗಂಡಂದಿರು ಒಮ್ಮೊಮ್ಮೆ ಮನೆಯ ಯಜಮಾನತನವನ್ನು ನಡಿಸುವದೂ ಉಂಟು. ಆದರೆ, ಇದು ಅಪವಾದಕರವು. ಗಂಡಂದಿರು ವಿಶೇಷ ಸಾಹಸಿಗರಿದ್ದರೆ ಮಾತ್ರ, ಹೆಂಡತಿಯನ್ನು ನಿಯಂತ್ರಿಸುತ್ತಾರೆ. ತಿಬೇಟದೊಳಗಿನ ಸಮಾಜ ಸ್ಥಿತಿಯನ್ನು ಕೇಳಿ ನಮ್ಮ ವಾಚಕರು ದಂಗಾಗುವರು! ಪ್ರಕೃತಿಭೇದದಂತೆ, ದೇಶಭೇದದಂತೆ ವೇಷಾಚಾರಗಳು ಭಿನ್ನವಾಗಿರುತ್ತವೆ.

***

ಕಾಡು ಖಾತೆಯ ಕಾಡು ಪದ್ಧತಿ!

ದಕ್ಷಿಣ ಕನ್ನಡಜಿಲ್ಲೆಯಲ್ಲಿಯ ಗೋಚರಾವು ವಸೂಲಿಯ ಒಂದು ಪ್ರಕಾರವನ್ನು ಉಡುಪಿಯ ಶ್ರೀ| ಶಿನ್ನಪ್ಪ ತೋಲಾರರವರು 'ಕಂಠೀರವ' ಪತ್ರಿಕೆಯಲ್ಲಿ ಪ್ರಕಟಿಸಿರುವರು. ಇಲ್ಲಿ ಬಾಲ ೧ ರ ೩ ಆಣೆಯಂತೆ ಗೋಚರಾವು ಆಕಾರವಿದೆ. ಆದರೆ, ಬಾಲ ೧ರ ೬ ಆಣೆಯಂತೆ ಗೋಚರಾವನ್ನು ಕಾಡು ಖಾತೆಯವರು ಎತ್ತುತ್ತಾರೆ. ಬೇಸಾಯಗಾರರು ಸುಮ್ಮನೆ ತೆರುತ್ತಿರುವರು. ಇದರ ಕಾರಣವನ್ನು ಶ್ರೀ| ಶಿನ್ನಪ್ಪ ತೋಲಾರರವರು ಅರುಹಿರುವರು. ೩ ಆಣೆ ಕೊಳ್ಳುವದು ಮೇವಿಗಾಗಿ. ಇನ್ನು ೩ ಆಣೆ ಕೊಳ್ಳುವದು ಹೊಣೆಯಾಗಿ. ಯಾವ ಬಗ್ಗೆ ಹೊಣೆ? ಗೋಚರಾವ ಫೀಯನ್ನು ತೆತ್ತು ಮೇಯುವಲ್ಲಿ ದನಗಳು ಕಾಡು ಖಾತೆಯ ನಿಯಮಗಳನ್ನು ಪಾಲಿಸಿ ಮೇಯುವವು ಎಂಬ ಭದ್ರತೆಗೆ ಈ ಹಣ ಹೊಣೆಯಂತೆ! ಕಾಡು ಖಾತೆಯ ನಿಯಮಗಳನ್ನು ಉಲ್ಲಂಘಿಸಿದರೆ ಕಾಯಿದೆಯಂತೆ ಶಿಕ್ಷೆ ಮಾಡಬರುತ್ತದೆ. ಆದರೂ, ನಮ್ಮ ಕಾಡು ಖಾತೆಯವರಿಗೆ ೩ ಆಣೆ ಹೊಣೆ ಬೇಕು. ಇದನ್ನು ಕೇಳಿ, ವಾಚಕರು ನಮ್ಮಲ್ಲಿಯ ಕಾಡು ಖಾತೆಯ ಉಪಕಾರ ಸ್ಮರಿಸದಿರಲು ಆಗುವು ಮಾಡಲಿಕ್ಕಿಲ್ಲೆಂದು ಎಲ್ಲಿ? ನರ ಕಡೆಯಿಂದ ಹೊಣೆ ಕೊಳ್ಳುವದೂ, ಬಾಲ ೧ಕ್ಕೆ ೨ ಆಣೆಯಂತೆ ಭದ್ರತೆ ಹಣ ಎತ್ತುವಲ್ಲಿ ಮಾಡುವದೂ ಹಿಂದೇ ಮಾಡಲಿಕ್ಕಿಲ್ಲವೇ? ಈ ೩ ಆಣೆಯು ಗಂಟು ೧ ವರ್ಷವಾದ ಬಳಿಕ ಮರಳಿ ಸಿಗುತ್ತದಂತೆ! ಅದು ಸಿಗಬೇಕಾದರೆ, ಫೊರೆಸ್ಟರ ಅಥವಾ ರೇಂಜ ಆಫೀಸರರ ಕಚೇರಿಯ ಬಾಗಿಲುಗಳನ್ನು ಎಡತಾಕಬೇಕು. ಒಮ್ಮೊಮ್ಮೆ ಅವುಗಳನ್ನು ಜಂಗಲ ಪಂಚಾಯತು ಅಧ್ಯಕ್ಷರ ಮಧ್ಯಮಾನ ಜನರಿಗೆ ಹಂಚುತ್ತಾರೆ. ಈ ಅಧ್ಯಕ್ಷರ ಸಮಯ ಸಿಗುವದು ತೀರ ಅಪರೂಪ. ೩ ಆಣೆ ಬಿಡುವದು ಉಚಿತ, ಅವರ ಮರ್ಜಿ ಸಂಪಾದಿಸುವದು ಬಹಳ ಕಠಿಣ. ಹೀಗೆ ಗೋಚರಾವು ಫೀ ೩ ಆಣೆ ಇದ್ದರೂ, ೬ ಆಣೆಯಂತೆ ಎತ್ತುವಿಕೆಯಾಗುತ್ತದೆ, ಜನರೂ ಸುಮ್ಮನೆ ತೆರುತ್ತಾರೆ. ಈ ಬಗ್ಗೆ ನಮ್ಮ ಬೇಸಾಯಗಾರರ ಮನೋದೌರ್ಬಲ್ಯಕ್ಕೆ ಮರುಗಬೇಕೋ? ಅಥವಾ ಕಾಡು ಖಾತೆಯ ಕಾಡುತನವನ್ನು ಧಿಕ್ಕರಿಸಬೇಕೋ?

— ದಕ್ಷಿಣ ಆಫ್ರಿಕೆಯ ಭಾರತೀಯರ ಲೋಕನಾಯಕರಾದ ಶ್ರೀ| ಎಂ ಎ ದೇಸಾಯಿಯವರು ಜುಕೋಬಾದಲ್ಲಿ ಹೃದಯರೋಗದಿಂದ ಜುಲೈ ೧೫ ನೇ ತಾರೀಖಿಗೆ ತೀರಿಕೊಂಡರು. ಮೆಂಬಾಸಾ ನೈರೋಬಿ ಮುಂತಾದ ಪಟ್ಟಣಗಳಲ್ಲಿ ಶೋಕಪ್ರದರ್ಶಕ ಹರತಾಳ ಆಚರಣೆಯಾಯಿತು. ಭಾರತೀಯರ ದುರ್ದೈವ.

ಪ್ರಾಥಮಿಕ ಶಿಕ್ಷಕರಿಗೆ ದಿವಾಣರ ಆಶೀರ್ವಾದ.

ಶಿಕ್ಷಣ ಖಾತೆಯ ದಿವಾಣರಾದ ಬಾಧವರರು ವಿಜಾಪುರಕ್ಕೆ ಹೋಗಿದ್ದರು. ಆ ಸಮಯ ವಿಜಾಪುರ ಜಿಲ್ಲೆಯ ಶಿಕ್ಷಕಮಂಡಳವೊಂದು ದಿವಾಣರ ಭೆಟ್ಟಿ ಕೊಂಡಿತು. ಆ ಸಮಯ ನಡೆದ ಸಂಭಾಷಣದ ಮುಖ್ಯಾಂಶವನ್ನು ಈ ಕೆಳಗೆ ಕೊಟ್ಟಿವೆ.-

ದಿವಾಣ—ಹೇಳಿರಿ, ನೀವು ಬರುವ ಉದ್ದೇಶವೇನು?

ಶಿಕ್ಷಕರು— ಈಗಿನ ಭತ್ತೆಯ ಪದ್ಧತಿಯಿಂದ ಕೆಲವು ಶಿಕ್ಷಕರಿಗೆ ಮಾತ್ರ ಲಾಭವಾಗುವ ಹಾಗಿದೆ ಉಳಿದವರಿಗೇನೂ ಲಾಭವಿಲ್ಲ. ಅದನ್ನು ರದ್ದುಮಾಡಿ, ಸಾಠೇ-ಪರಾಂಜಪೆ ಯೋಜನೆಯನ್ನು ಮಂಜೂರ ಮಾಡಲು ನಾವು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.

ದಿ— ಶಿಕ್ಷಕರು ಸರಿಯಾಗಿ ಕೆಲಸಮಾಡುವದಿಲ್ಲೆಂದು ನಾವು ಕೇಳುತ್ತೇವೆ. ಅದರಿಂದ ಈಗಿನ ಭತ್ತೆಯ ಪದ್ಧತಿಯನ್ನು ಕಲ್ಪಿಸಿರುವರು.

ಶಿ—ಅಯ್ಯಾ, ಆ ರಿಪೋರ್ಟಿನಲ್ಲಿ ಏನೂ ತಥ್ಯಾಂಶವಿಲ್ಲ, ಪೂರನ್ನು ನಾವು ಗೃಹೀತ ಹಿಡಿದರೆ ಇನ್ನಷ್ಟು ಮೇಲ್ತಪಾಸಕರನ್ನು ನೇಮಿಸಿರಿ. ಮತ್ತು ಚಲೋ ಕೆಲಸ ಮಾಡದ ಶಿಕ್ಷಕರ ಬಡತಿಯನ್ನು ನಿಲ್ಲಿಸಿರಿ

ದಿ—ಹೌದು, ನಿಮ್ಮ ಅಂದೋಲಣವು ಸಿದ್ಧವಿರುತ್ತದೆ. ಬಡತಿಯನ್ನು ಎಲ್ಲರಿಗೂ ಒಂದೇ ಪ್ರಮಾಣದಿಂದ ಕೊಟ್ಟರೆ ಮನಮುಟ್ಟಿ ದುಡಿಯಲು ಪ್ರೇರಣೆ ಎಲ್ಲಿದೆ? ಸಾಮಾನ್ಯವಾಗಿ ದುಡಿಯುವ ಶಿಕ್ಷಕರಿಗೆಲ್ಲ ಬಡತಿ ಸಿಗುವದು ಎಲ್ಲರೂ ಮನಃಪೂರ್ವಕವಾಗಿ, ಸಮಾಧಾನಕರವಾಗಿ ದುಡಿಯಬೇಕೆಂದು ಎಲ್ಲಿದೆ? ಸಿಲೆಕ್ಶನ್ ಗ್ರೇಡು ಸಿಕ್ಕಿದ ಶಿಕ್ಷಕರ ಮಮೂನೆ ನೋಡಿರಿ. ಅವರು ಮನಮುಟ್ಟಿ ದುಡಿಯುವದಿಲ್ಲೆಂದು ನಾನು ಕೇಳುತ್ತೇನೆ. ಕಾರಣವು ಸುಲಭವಿದೆ ಇನ್ನು ಅವರಿಗೆ ಬಡತಿ ಸಿಗುವ ಆಶೆಯಿಲ್ಲ, ಸಂಬಳ ಕಡಿಮೆಯಾಗುವ ಭೀತಿಯೂ ಇಲ್ಲ. ಅದರಿಂದ ಮನಃಪೂರ್ವಕವಾಗಿ ದುಡಿಯುವಂತೆ ಶಿಕ್ಷಕರಿಗೆ ಉತ್ತೇಜಿಸಲು ಈ ಯೋಜನೆಯಾಗಿರುವದು.

ಶಿ—ಅಯ್ಯಾ, ಧಾರವಾಡದ ಟ್ರೇನಿಂಗ ಕಾಲೇಜನ್ನು ಮುಚ್ಚಿ ೨ ನೇ ಹಾಗು ೩ ನೇ ವರ್ಷದ ಟ್ರೇಂಡ ಶಿಕ್ಷಕರಿಗೆ ಕಡಿಮೆ ಮಾಡಿದ್ದರಿಂದ ಶಿಕ್ಷಣ ಕಾರ್ಯಕ್ಕೆ ಬಾಧೆ ತಟ್ಟಲಿಲ್ಲೇನು!

ದಿ—ನನಗೆ ಹಾಗೆ ತೋರುವದಿಲ್ಲ. ಟ್ರೇಂಡ ಶಿಕ್ಷಕರ ಸಂಖ್ಯೆಯು ಈಗಲೇ ಹೆಚ್ಚಿದೆ ಇನ್ನು ಆ ಸಂಖ್ಯೆಯನ್ನು ಬೆಳೆಸಬೇಕಾಗಿಲ್ಲ.

ಶಿ—ಈಗ ಫ್ರೀ ಸರ್ಟಿಫಿಕೇಟುಗಳು ಸಿಕ್ಕುವದಿಲ್ಲ ಆ ಪದ್ಧತಿಯನ್ನು ಪುನಃ ಪ್ರಾರಂಭಿಸಬೇಕು.

ದಿ—ಹಾಗಾಗದು. ಟ್ರೇಂಡ ಶಿಕ್ಷಕರ ಸಂಖ್ಯೆಯು ಮೊದಲೇ ಬೆಳೆದಿದೆ. ಅದನ್ನು ಹೆಚ್ಚಿಸಿ ಫಲವೇನಿಲ್ಲ.

ಶಿ—ಅಯ್ಯಾ, ಕೆಲವು ಮ್ಯುನಿಸಿಪಾಲಿಟಿ ಹಾಗು ಲೋಕಲ್ ಬೋರ್ಡುಗಳಲ್ಲಿ ಅನ್‌ಟ್ರೇಂಡ್ ಶಿಕ್ಷಕರಿಗೆ ಸಿಗುವ ಪ್ರಥಮ ಪಗಾರು ೧೫ ಇರುತ್ತದೆ. ಅದನ್ನು ೩೫ ರೂಪಾಯಿಗಳಿಗೆ ಏರಿಸಬೇಕು

ದಿ—ಮ್ಯುನಿಸಿಪಾಲಿಟಿ ಹಾಗು ಲೋಕಲ್ ಬೋರ್ಡಿನವರು ನೋಡಿಕೊಳ್ಳುವರು.

ಶಿ—ಅಯ್ಯಾ, ತಾಲೂಕ ಶಾಲೆಗಳ ಹೆಡ್ ಮಾಸ್ತರರು ಹೆಚ್ಚು ಜವಾಬ್ದಾರಿ ವಹಿಸಬೇಕಾಗುತ್ತದೆ. ಅದರಿಂದ ಅವರಿಗೆ ಹೆಚ್ಚು ಭತ್ತೆ ಕೊಡಬೇಕು.

ದಿ—ಅದೂ ಲೋಕಲ್ ಬೋರ್ಡುಗಳ ಕೆಲಸ

ಶಿ—ಈ ಮ್ಯುನಿಸಿಪಾಲಿಟಿಯವರು ಸಾಠೇ-ಪರಾಂಜಪೆ ಯೋಜನೆಯನ್ನು ಅಂಗೀಕರಿಸಿರುವರು. ಸದ್ಯಕ್ಕೆ ಈ ಕುರಿತು ಸರಕಾರಕ್ಕೆ ಬರೆಕೊಳ್ಳುವವರಿದ್ದಾರೆ

ದಿ—ವಿಪತ್ತಿ ಇಲ್ಲ

ಶಿ— ಭತ್ತೆ ಬಗ್ಗೆ ಇನ್ನು ಕೆಲವು ಮಾತಾಡುವದಿದೆ

ದಿ— ಸಂಕೋಚವಿಲ್ಲದೆ ಹೇಳಿರಿ.

ಶಿ— 'ಕೇಸರಿ' ಕರ್ತರು ಭತ್ತೆ ಕುರಿತು ಹಿಂದೆ ಚರ್ಚೆ ಮಾಡಿದ್ದರು. ಹಾಜರಿಯ ಮೇಲಿದ್ದ ಹುಡುಗರ ಸಂಖ್ಯೆಯ ಮೇಲೆ ಭತ್ತೆ ಕೊಡಬೇಕೋ ಅಥವಾ ಹಾಜರಿದ್ದ ಹುಡುಗರ ಸಂಖ್ಯೆಯ ಮೇಲಿಂದ ಕೊಡಬೇಕೋ? ಯಾವ ಅನುಮಾನವು ನಿಜವು?

ದಿ— ನಿಮಗೆ ಬೇಕಾದ್ದನ್ನು 'ಕೇಸರಿ'ಯಿಂದ ಕೇಳಿಕೊಳ್ಳಿರಿ.

ಶಿ— ಇಲ್ಲ. ಹಾಗೆ ನಾವು ಕೇಳಲಿಲ್ಲ 'ಕೇಸರಿ'ಯ ಅಭಿಪ್ರಾಯವನ್ನು ತಮಗೆ ಹೇಳಲಿಚ್ಛಿಸಿ ಆ ಚರ್ಚೆಯಿಂದ ನಮ್ಮಲ್ಲಿ ಸಂಶಯ ಉಂಟಾಗಿದೆ ಅದನ್ನು ದೂರಪಡಿಸಿದರೆ ಉಪಕಾರವಾಗುವದು

ದಿ— ಹಾಜರಿಯ ಮೇಲಿದ್ದ, ಹುಡುಗರ ಸಂಖ್ಯೆಯ ಮೇಲಿಂದ ನಿಮಗೆ ಭತ್ತೆ ಸಿಗುವದು

ಶಿ— ಅಯ್ಯಾ, ಈಗಿನ ಭತ್ತೆಯ ಯೋಜನೆಯಿಂದ ಶಿಕ್ಷಕ ವರ್ಗದಲ್ಲಿ ಮತ್ಸರಬುದ್ಧಿ ಉಂಟಾಗುವದೆಂದು ನಮ್ಮ ಪ್ರಾಮಾಣಿಕ ಮತವಿದೆ ಇದರಿಂದ ಕ್ಷೇಮವಿಲ್ಲ

ದಿ—ಆಶ್ಚರ್ಯ! ಅದು ಹೇಗೆ?

ಶಿ— ಅದೊಂದು ಪ್ರಕಾರದ ಮೇಲಾಟವಲ್ಲವೇ?

ದಿ:— ಸರಿ. ಆದರೆ, ಮೇಲಾಟದಿಂದ ಶಿಕ್ಷಣಕ್ಕೆ ಅಡ್ಡಿಯಾಗುತ್ತದೆಂದು ಕೇಳಿ ಆಶ್ಚರ್ಯವಾಗುತ್ತದೆ. ಇನಾಮು ಹಾಗು ಪಾರಿತೋಷಕಗಳನ್ನು ಕಲ್ಪಿಸುವ ಕಾರಣವೇನು? ಅವುಗಳಿಂದ ವಿಶೇಷವಾಗಿ ದುಡಿಯಲು ಪ್ರೇರಣೆಯಾಗುತ್ತದಲ್ಲವೇ?

ಶಿ:— ನಮಗೆ ಒಪ್ಪಿಗೆ ಆದರೆ, ಇದರಿಂದ ಶಿಕ್ಷಕರ ಸಮಾಧಾನವೃತ್ತಿಗೆ ತೊಂದರೆ ಬರುವದು.

ದಿ:— ಅಂದರೆ, ಸಿದ್ಧಿಯೇನು?

ಶಿ:— ರಾಯರೇ ಹಾಗಲ್ಲ, ಸಮಾಧಾನವೆಂದರೆ, ನಿಷ್ಠೆಯಲ್ಲ. ಶಿಕ್ಷಕರಲ್ಲಿ ಈ ಮೂಲಕ ಒಂದು ಹಳಹಳಿಯುಂಟಾಗುವದು. ಭತ್ತೆಯ ಯೋಜನೆಯೆಂದರೆ, ಬರಗಾಲಪೀಡಿತ ಜನಸಂದಣಿಯಲ್ಲಿ ಒಬ್ಬಿಬ್ಬರಿಗೆ ಅನ್ನದಾನ ಮಾಡುವದು, ಉಳಿದವರಿಗೆ ಬಿಡುವದು; ಇದರಿಂದ ಅವರ ಸಮಾಧಾನವು ಕೆಡುವದು.

ದಿ — ಈ ಭತ್ತೆಯ ಯೋಜನೆಯನ್ನು ರದ್ದು ಮಾಡಬೇಕೆಂದು ನಿಮ್ಮ ಇಚ್ಛೆಯಿದೆ, ಸಾಠೇ-ಪರಾಂಜಪೆಯವರ ಯೋಜನೆಯು ನಿಮಗೆ ಬೇಕು. ಅದನ್ನು ನೀವು ಕೌನ್ಸಿಲಿನಲ್ಲಿ ಬೇಕಾದರೆ ಸೂಚಿಸಿರಿ. (ಕೊನೆಗೆ ದಿವಾಣರು ನುಡಿದದ್ದೇನಂದರೆ,) ನಿಮ್ಮ ಅಭಿಪ್ರಾಯಗಳನ್ನೆಲ್ಲ ಸ್ಪಷ್ಟವಾಗಿ ಹೇಳಿದ ಬಗ್ಗೆ ನನಗೆ ಸಂತೋಷವಾಯಿತು ಆದರೆ, ಅನ್ನಸಂಗ್ರಹವು ಬಹಳ ಕಡಿಮೆಯಿದೆ ಅನ್ನವನ್ನು ಬೇಡುವವರು ಬಹಳ ಮಂದಿಗಳಿದ್ದಾರೆ. ಆದರಿಂದ ಎಲ್ಲರಿಗೂ ಸಮಾಧಾನ ಮಾಡುವದು ಕಠಿಣವು. ಇನ್ನು ನೀವು ಹೆಚ್ಚಿಗೆ ಇದರೊಳಗೆ ತಲೆ ಹಾಕಬೇಡಿರಿ. ಮತ್ತು ನೀವು ಕರ್ತವ್ಯಪರಾಯಣರಾಗಿ, ಇಂಗ್ಲಂಡದಂಥ ಸುಧಾರಿಸಿದ ರಾಷ್ಟ್ರಗಳಲ್ಲಿಯೂ ಶಿಕ್ಷಕರ ಸಾಂಪತ್ತಿಕ ಸ್ಥಿತಿಯು ನಿಮ್ಮಷ್ಟೇ ಕಠಿಣವಿದೆ ನೀವು ಕಡಿಮೆ ಸಂಬಳ ಕೊಂಡು ಬಹಳ ದುಡಿಯುತ್ತೀರೆಂದು ಸರಕಾರಕ್ಕೆ ಅರಿವಿದೆ, ಎಂದು ನಾನು ನಿಮಗೆ ಆಶ್ವಾಸನವನ್ನೀಯುತ್ತೇನೆ. ಈ ಮುಂದಿನ ಪೀಳಿಗೆಗಳ ಭವಿಷ್ಯವು ನಿಮ್ಮ ಸ್ವಾಧೀನವಿದೆ ಈಗಿನ ಸ್ಥಿತಿಯಲ್ಲಿಯೇ ಸಂತೃಪ್ತರಾಗಿದ್ದು, ನಮ್ಮ ಮಾತೃಭೂಮಿಯ ಸೇವೆಗಾಗಿ ಪ್ರಯತ್ನ ಮಾಡಿರಿ.

BATLIBOI'S
Accountancy Training Institute
Recognised by
The G. D. A. Board

Offers best training in Accounting, Banking, Company Management and Secretarial Work and Theory and Practice of Commerce

Best staff, Individual attention, fee moderate, and payable by instalments.

Send for Prospectus at Yusuf Buildings, Churchgate street Fort, Bombay.

You are invited to make thorough enquiry before joining.

TUITION BY POST
IS OUR SPECIALITY.

ಅತ್ಯದ್ಭುತ! ಅತ್ಯದ್ಭುತ!!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲಿಕ್ಝಿರ್ ಆಫ್ ಲೈಫ್

ಅಂದರೆ, ಸರ್ವ ರೋಗ ನಾಶಕ, ಸರ್ವಾರೋಗ್ಯದಾಯಕ ಅಜೀರ್ಣ ತಲೆನೋವು, ವಾಂತಿ, ಅತಿಸಾರ, ಜ್ವರ, ಕಾಲರಾ, ಜ್ವರ, ಹೊಟ್ಟೆನೋವು, ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಹೊಡೆದು ಚಲ್ಲುವ ಒಂದೇ ಔಷಧಿಯಿದು! ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ!! ಒಂದು ಸೀಸೆಯಿದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ!!!

ದೊಡ್ಡ ಸೀಸೆಗೆ ರು. ೧-೮-೦. ಸಣ್ಣ ಸೀಸೆಗೆ ರು. ೦-೮-೦ ಟಪಾಲ ಖರ್ಚು ಬೇರೆ.

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ:- **ಜೀವನಾಧಾರ ಡಿಪೋ,** ಹುಬ್ಬಳ್ಳಿ

ಕಾನಡಾವೃತ್ತ.

ಮಿತಿ ಕ್ಷಯ ಸಂ। ಆಷಾಢ ಶು। ೯ ಮಿ, ಸೋಮವಾರ

ಲೋಕಲ್ ಫಂಡಿನ ಏರಿಕೆ

(ಲೇಖಾಂಕ ೨.)

'ವಿಚಾರಿ' ಕರ್ತರಾದ ಮಿ। ಶೇಕ ಅಡಮ್‌ರವರ ವಿಚಾರಪರಂಪರೆಯನ್ನು ಓದಿ, ವಿಖ್ಯಾತ ಶೇಖ ಮಹಮ್ಮದರವರ ಅವಿಚಾರಪರಂಪರೆಯಿಂದ ಒಗೆಗಿದ ಅನರ್ಥದ ಅರಿವುಂಟಾಗುತ್ತದೆ ಮಣ್ಣು ಗಡಿಗೆ ಪಾತ್ರೆಗಳನ್ನು ಬಂದರವೇಲೊಂದು ಸಾಲಾಗಿ ಇರಿಸಿ, ತನ್ನ ಒಂಗ್ಯದ ದೊಡ್ಡದೊಂದು ಮಂದಿರವನ್ನು ಮನೋರಾಜ್ಯದಲ್ಲಿ ರಚಿಸಿಕೊಂಡು, ಧನದ ಮದ ಯುವತಿ ಮದ, ಸುತರ ಮದ ಮುಂತಾದ ಮದಗಳಿಂದ ಯುಕ್ತನಾಗಿ ಭಾಗ್ಯವಂತ ಕಲ್ಪನಾಸಾಮ್ರಾಜ್ಯದಲ್ಲಿ ತೇಲಾಡುತ್ತಿರುವಾಗ, ಸರದಾರರ ಮರ್ಯಾದ ತನ್ನ ಹಂಡತಿಯನ್ನು ಒದೆಯುವ ಭರದಲ್ಲಿ, ಗಡಿಗೆ ಪಾತ್ರೆಗಳಿಗೆ ಒದೆದು, ತನ್ನ ಭಾಗ್ಯರಾಶಿಯನ್ನೇ ಅವನು ಕಳಕೊಂಡಿದ್ದನಂತೆ! 'ವಿಚಾರಿ'ಯ ಮಿ। ಶೇಕ ಆದಮ್‌ರವರೂ ಇದೇ ಕಲ್ಪನಾ ಸಾಮ್ರಾಜ್ಯವನ್ನು ರಚಿಸಿರುವರೆಂದರೆ, ಅತಿಶಯೋಕ್ತಿಯಾಗದು

ವಿಚಾರಿ' ಕರ್ತರು ನುಡಿವಂತೆ, ತೀರ್ವೆಯು ಸಿಕ್ಕ ಉತ್ಪನ್ನದ ಚತುರ್ಥಾಂಶವಲ್ಲ ತೀರ್ವೆಯು ನಾಲ್ಕು ಪಾಲು ಹುಟ್ಟುವಳಿಯು ಬೇಸಾಯಗಾರರಿಗ ಸಿಗುವದಿಲ್ಲ ಹಾಗೆ ಸಿಕ್ಕಿದರೆ, ಬೇಸಾಯಗಾರರು ಕಷ್ಟ ಕಂಗೆಟ್ಟು ಹೋಗುತ್ತಿದ್ದಿಲ್ಲ ನಮ್ಮ ಲೆಕ್ಕಕೆಗೆ ಆಧಾರವ್ಯಾವದೆಂದು ವಾಚಕರು ಸಹಜವಾಗಿ ಕೇಳುವರು ಮುಂಬಯಿ ಸರಕಾರವು ಪ್ರಸ್ತುತ ತೀರ್ವೆ ಪದ್ಧತಿಯ ಆಲೋಚನೆ ಮಾಡಲು ಒಂದು ಕಮೀಟಿಯನ್ನು ನೇಮಿಸಿತ್ತು ಪ್ರಾಂತಿಕ ಕಾಯಿದೆ ಕೌನ್ಸಿಲಿನ ಸಭಾಸದರಾದ ರಾವಸಾಹೇಬ ದಾದೂಭಾಯಿ ದೇಸಾಯಿಯವರು ಆ ಕಮೀಟಿಯ ಒಬ್ಬ ಸಭಾಸದರು ಕಮೀಟಿಯ ರಿಪೋರ್ಟ ತಯಾರಾಗಿ ಸರಕಾರಕ್ಕೆ ಸಾದರವಾಗಿದೆ, ಇನ್ನೂ ರಿಪೋರ್ಟ ಪ್ರಕಟವಾಗಿಲ್ಲ, ಆದರೆ ರಾವಸಾಹೇಬ ದಾದೂಭಾಯಿಯವರು ಬರೆದ ಬನ್ನ ಮತಪತ್ರಿಕೆಯೊಳಗಿನ ಮುಖ್ಯಾಂಶಗಳು ಪ್ರಕಟವಾಗಿದೆ. ತೀರ್ವೆ ಪದ್ಧತಿಯಿಂದಲೇ ಬೇಸಾಯವು ಕ್ರಮವಾಗಿ ಕಳೆಗುಂದಿತೆಂದೂ, ತೀರ್ವೆಯನ್ನು ಆಕರಿಸುವಾಗ ಸರಕಾರವು ಅತ್ಯಂತ ಸ್ವಾರ್ಥಪರಾಯಣವಾಗುತ್ತದೆಂದೂ, ಬೇಸಾಯಗಾರರಿಗೆ ದುಡಿತಕ್ಕೆ ತಕ್ಕ ಮುನಾಫೆ ಸಿಗಗೊಡುವದಿಲ್ಲೆಂದೂ ಅಭಿಪ್ರಾಯಪಟ್ಟಿರುವರು ತೀರ್ವೆ ಪದ್ಧತಿಯು ಬ್ರಿಟಿಶರಿಗೆ ಅಭಿಮಾನಾಸ್ಪದವಲ್ಲೆಂದೂ ನಮೂದಿಸಿ, ಅದನ್ನು ಆದಷ್ಟು ಬೇಗನೇ ಕಿತ್ತೊಗೆದು ಪುನರ್ಘಟಿಸಬೇಕೆಂದು ಅಭಿಪ್ರಾಯಪಟ್ಟಿರುವರು. ತೀರ್ವೆಯು ಪದ್ಧತಿಯು ವಿಷಯವು ದೊಡ್ಡದಿದ್ದು, ಆ ಕುರಿತು ಮುಂದೆ ನಾವೊಂದು ಲೇಖಮಾಲೆಯನ್ನು ಬರೆಯುವ ಸಂಕಲ್ಪ ಮಾಡಿರುವೆವು ಅದಿಂತಿರಲಿ

ರಾವಸಾಹೇಬ ದಾದೂಭಾಯಿಯವರು ಪ್ರಜೆಗಳಿಗೆ ಸಿಗುವ ಗಂಟಿನ ಅಂಕಣೆಯನ್ನು ಹೇಳಿರುವರು. ಅದನ್ನಿಷ್ಟು ವಾಚಕರಿಗೆ ನಿವೇದಿಸುವದು ಅವಶ್ಯವು

ಸೆಟ್ಲಮೆಂಟ ಕಮೀಶನರರು ತೀರ್ವೆ ಆಕರಿಸುವಾಗ ಪ್ರಜೆಗಳಿಗೆ ಸಿಗುವ ಮುನಾಫೆಯನ್ನು ಲಕ್ಷಕ್ಕೆ ತರುವದಿಲ್ಲ ಅತಿವೃಷ್ಟಿ–ಅನಾವೃಷ್ಟಿಗಳಿಂದೊದಗುವ ವಿಪತ್ತುಗಳನ್ನೂ ಲಕ್ಷಿಸುವದಿಲ್ಲ ಸಾಮಾನ್ಯ ಒಂದು ವರುಷದ ಸ್ಥಿತಿಯನ್ನು ಲಕ್ಷಿಸಿ, ತೀರ್ವೆಯನ್ನು ಆಕರಿಸುತ್ತಾರೆ ಈಗಿನ ಪದ್ಧತಿಯಂತೆ ಸೂಕ್ಷ್ಮವಾಗಿ ಪರ್ಯಾಲೋಚಿಸಿದರೆ ಹಣ ಕೊಟ್ಟು ಕೊಂಡ ಭೂಮಿಗೆ ಶೇಕಡಾ ೪ ರಂತೆ ಬಡ್ಡಿ ಸಿಗಬೇಕಾದರೆ, ಸಾಕು ಬೇಕಾಗುತ್ತದೆ ಶ್ರೇಷ್ಠ ತರಗತಿಯ ಭೂಮಿಯಿಂದರೆ, ೪ ರಂತೆ ಬಡ್ಡಿ ಬೀಳುತ್ತದೆ ಸಾಮಾನ್ಯ ಪ್ರತಿಯ ಭೂಮಿಗೆ ೩ ರಂತೆ ಬಡ್ಡಿ ಬೀಳುತ್ತದೆ ಅದಕ್ಕೂ ಕಡಿಮೆ ಬೀಳುವದೂ ಉಂಟು ಇಂದಲ್ಲಿ ೩ ಪಾಲು ಒಡೆಯಗೆ ಸಿಗುವ ಮುನಾಫೆಯು ಎಲ್ಲಿಂದ ಬರಬೇಕು? ಸರಕಾರವು ಕೂಡ ಶೇಕಡಾ ೫ ೬ ರಂತೆ ಬಡ್ಡಿ ತೆರುತ್ತಿರುವಾಗ ಶೇಕಡಾ ೪ ರಂತೆ ಬಡ್ಡಿ ಸಿಗುವದು ಲಾಭವೋ? ನಷ್ಟವೋ? ವಿಚಾರಿ'ಯು ವಿಚಾರ ಮಾಡಿ ಹೇಳಲಿ ಶೇಕಡಾ ೬ ರಂತೆ ಮೂಲಧನದ ಮೇಲೆ ಬಡ್ಡಿ ಕಳೆದು, ಸರಕಾರಕ್ಕೆ ತೀರ್ವೆ ಕೊಟ್ಟು ತೀರ್ವೆಯ ಮೂರು ಪಟ್ಟು ಮುನಾಫೆ ಬೇಸಾಯಗಾರರಿಗೆ ಉಳಿದರೆ, ನಮ್ಮ ಜಂಗಲ ಖಾತೆಯವರು ಲೋಕಲ್ ಬೋರ್ಡಿಗೆ 'ವಿಚಾರಿ'ಯ ಪೈದರೀ ಲೆಖ್ಖದಂತೆ, ೧೩,೦೦೦ ರೂಪಾಯಿಗಳನ್ನು ಕೆತ್ತದ ಸಾಕು, ಇನ್ನು ೧೨,೦೦೦ ರೂಪಾಯಿಗಳ ಧರ್ಮ ಬೇಡ ಜಂಗಲ ಖಾತೆಗೊಂದು ನೀತಿ, ಪ್ರಜೆಗಳಿಗೊಂದು ನೀತಿ ಮಾಡಬೇಕೆಂದು ನಮ್ಮ ಅಂಬೋಣವಿಲ್ಲ ಆದರೆ, ಜಂಗಲ ಖಾತೆಯಿಂದ ಸರಕಾರವು ೩ ಪಾಲು ಲಾಭ ಇಟ್ಟುಕೊಳ್ಳುವಂತೆ, ಪ್ರಜೆಗಳಿಗೂ ಅದೇ ಪ್ರಕಾರ ಇಟ್ಟುಕೊಳ್ಳಲು ಉಪಾಯಯೋಜನೆ ಮಾಡಲಿ ನಾವು ಸಂತೋಷದಿಂದ ಲೋಕಲ್ ಫಂಡನ್ನು ಏರಿಸಿಕೊಳ್ಳಲು ಅನುಮತಿ ಕೊಡುವೆವು ಈ ಮಾತು ಈ ಮುಂದೆ.

ಆದರೆ, ತೀರ್ವೆಯು ಮುನಾಫೆಯನ್ನು ಲಕ್ಷಿಸಿ ಆಕರಿಸಲ್ಪಡಾಗಲಿಲ್ಲ. ಭೂಮಿಯ ಸ್ಥಿತಿ, ಸುತ್ತುಮುತ್ತಲಿನ ಸ್ಥಿತಿ, ಪೇಟೆಯ ಸಾನ್ನಿಧ್ಯ, ಮಾರ್ಗಗಳ ಅನುಕೂಲ್ಯ ಮುಂತಾದವುಗಳನ್ನು ನುಲಕ್ಷಿಸಿ, ಸೆಟ್ಲಮೆಂಟ ಕಮೀಶನರರ ಮರ್ಜಿಯಂತೆ ಆಕರಿಸಿದ್ದಿರುತ್ತದೆ ಬೆಳೆಯಾಗಲಿ, ಬಂಜರು ಬೀಳಲಿ, ಬೆಳೆ ಕೆಡಲಿ, ಬೆಳೆ ಹುಟ್ಟಲಿ, ದರ ಇಳಿಯಲಿ ಅಥವಾ ಏರಲಿ, ಮುನಾಫೆಯಾಗಲಿ ಬಿಡಾ ಆಗದಿರಲಿ, ಅದರ ಗೊಡವೆ ಸರಕಾರಕ್ಕಿಲ್ಲ. ನಿಯಮಿತ ತೀರ್ವೆಯನ್ನು ತಪ್ಪದೆ ನಾವು ಕೆತ್ತರಾಯಿತು ತೀರ್ವೆಯನ್ನು ಆಕರಿಸುವಾಗ ಆದಷ್ಟು ಸರಕಾರಕ್ಕೆ ಅನುಕೂಲವಾದ ಸ್ಥಿತಿಯೇ ಗೃಹೀತ ಹಿಡಿಯಲ್ಪಡುವದರಿಂದ ಬೇಸಾಯಗಾರರು ತೀರ್ವೆ ಕೆತ್ತು ಹಿಂಡಿಹಿಪ್ಪೆಯಾಗುತ್ತಾರೆ ಗ್ರಾಮಗಳೆಲ್ಲ ಹಾಳುಬಿದ್ದವೆ ಬೇಸಾಯಗಾರರು ಗತಿಗೆಟ್ಟು ಹೋದರು. ಇದಕ್ಕೆ ನಮ್ಮ ಜಿಲ್ಹೆಯೇ ಸಾಕ್ಷಿ. ಬೇಸಾಯದಿಂದ ವರ್ಷಕ್ಕೆ ೩ ಪಾಲು ಲಾಭ ಸಿಗುತ್ತಿದ್ದರೆ, ಬೇಸಾಯಗಾರರೆಲ್ಲರೂ ಆನೆಯ ಮೇಲೆ ಅಂಬಾರಿ ಹಾಕಿಕೊಂಡು ಸಂಭ್ರಮದಿಂದ ಮೆರೆಯುತ್ತಿದ್ದರು ೧ ಆಣೆ ಲೋಕಲ್ ಫಂಡು ಕೇಳಿದರೆ, ೨ ಆಣೆಗಳನ್ನು ತಾವಾಗಿ ಕೆರುತ್ತಿದ್ದರು ಹೀಗೆ ಶೋಚನೀಯ ಸ್ಥಿತಿಯಲ್ಲಿ ಬೇಸಾಯಗಾರರಿರುವಾಗ, ಅಡವಿಯು ದಾಕ್ರ ಬೆಳೆಯುತ್ತ ನಡೆದದೆ ೧೩,೦೦೦ ರೂಪಾಯಿ ಕೆರುವ ಜಂಗಲ ಖಾತೆಯವರು ೨೫,೦೦೦ ರೂಪಾಯಿ ಕೆರುತ್ತಿದ್ದರೆ, ಇಷ್ಟೊತ್ತಿಗೆ ಅದು ಬಡಬಿದ್ದು ನಾಮಶೇಷವಾಗುತ್ತಿತ್ತು ಆದರೆ, ಜಂಗಲ ಖಾತೆಯು ವಿಪರೀತವಾಗಿ ಬೆಳೆಯುತ್ತ ನಡೆದಿರುವದರ ಮೇಲಿಂದ ೨೫,೦೦೦ ರೂಪಾಯಿ ಕೆತ್ತು ಅದಕ್ಕೇನು ನಷ್ಟವಿಲ್ಲವೆಂದು ನಾವು ತಿಳಿಯಬಹುದು

ಅನುಮಾನವನ್ನೇ ಮಾಡುತ್ತ ಕೂಡ್ರುವದೇಕೆ! ಮುನಾಫೆಯ ಮೇಲೆ ತೀರ್ವೆಯೂ ಇಲ್ಲ, ಮುನಾಫೆಯ ಮೇಲಿಂದ ಜಂಗಲ ಖಾತೆಯು ಲೋಕಲ್ ಫಂಡನ್ನು ಕೆರುವದೂ ಬೇಡ. ಗ್ರಾಮಗಳ ೪ ಪಾಲು ಕಾಡು ಇರುವದಲ್ಲವೇ! ತೀರ್ವೆ ಕೂಡ್ರಿಸಿದಂತೆ ಕಾಡಿಗೆಲ್ಲ ಆಕಾರ ಕಟ್ಟುವದು, ಮತ್ತು ಅದರ ಮೇಲೆ ರೂಪಾಯಿಗೊಂದಾಣೆಯಂತೆ ಲೋಕಲ್ ಫಂಡನ್ನು ಕೊಳ್ಳುವದು ಅದು ಎಷ್ಟಾಗುತ್ತದೋ, ಅಷ್ಟೇ ರಕಮನ್ನು ಲೋಕಲ್ ಬೋರ್ಡಿಗೆ ಜಂಗಲ ಖಾತೆಯು ಕೆತ್ತರಾಯಿತು ೨೫,೦೦೦ ರೂಪಾಯಿಗಳ ಸೋತ್ತಿ ಬೇಡ ಅದರಿಂದ ಜಂಗಲ ಖಾತೆಗೆ ನಷ್ಟವೆಂದು 'ವಿಚಾರಿ' ಕರ್ತರು ಹೇಳುತ್ತಾರೆ, ನಮಗೆ ನಷ್ಟವೆಂದು ನಾವು ಹೇಳುತ್ತೇವೆ ಅದರಿಂದ ಈ ಗೊಡವೆಯನ್ನೇ ಬಿಟ್ಟುಕೊಟ್ಟು, ಸರಕಾರವು ಇತರ ಭೂಮಿಗೆ ತೀರ್ವೆ ಕಟ್ಟುವಂತೆ ಜಂಗಲ ಭೂಮಿಗೆ ಲೋಕಲ್‌ಬೋರ್ಡಿನವರು ಸರಕಾರಕ್ಕೆ ತೀರ್ವೆ ಕಟ್ಟಹೇಳಬೇಕು ಸುಮ್ಮನೆ ಗೃಹೀತಗಳನ್ನು ನಮಗನುಕೂಲವಾದಂತೆ ಹಿಡಿದು ಲೆಖ್ಖ ಮಾಡುವದರಲ್ಲಿ ಪ್ರಯೋಜನವೇನಿದೆ? 'ವಿಚಾರಿ' ಕರ್ತರಿಗೆ ನಮ್ಮ ಸೂಚನೆಯು ಮಾನ್ಯವಾಗುವದೆಂದು ನಾವು ನಂಬುವೆವು ಅವರು ಮನ್ನಿಸಿದರೆ, ಸರಕಾರ

ವು ಮನ್ನಿಸುವರೆಂದು ನಾವು ನಿಶ್ಚಯವಾಗಿ ತಿಳಿಯುವೆವು.

'ವಿಚಾರಿ'ಯ ಸಮಾಚಾರ ಕೊಂಚ ಬಳಿಕ, ಲೋಕಲ್ ಬೋರ್ಡಿನವರು ಏರಿಕೆಯ ವಿಚಾರವನ್ನು ಈಗಾಗಲೇ ಯಾಕೆ ಕೊಳ್ಳಬಾರದೆಂಬ ಬಗ್ಗೆ ಮತ್ತೊಂದು ಕಾರಣವನ್ನು ನಮೂದಿಸಿ, ಈ ಲೇಖಾಂಶವನ್ನು ಮುಗಿಸುವೆವು. ತೀರ್ವೆ ಪದ್ಧತಿಯ ಪುನರ್ಘಟನೆಯ ವಿಚಾರವು ಈಗ ನಡೆದಿದೆ, ಪುನರ್ಘಟನೆಯಿಂದ ತೀರ್ವೆ ಹೆಚ್ಚಾಗುವ ಸಂಭವವಿದೆಂದು ರಾವಸಾಹೇಬ ಬಾಡೂಭಾಯಿಯವರ ಭಿನ್ನ ಮತಪತ್ರಿಕೆಯ ಮೇಲಿಂದ ತಿಳಿಯುತ್ತದೆ. ಸರಕಾರಕ್ಕನುಕೂಲವಾಗಿ ಮೇಜರ್ ರಿಪೋರ್ಟ ಸಾದರಾಗಿರುವದರಿಂದ ಹೆಚ್ಚಿಗೆಯಾಗಿ ತೀರ್ವೆ ತೆರಲು ಬೇಸಾಯಗಾರರು ಈಗಾಗಲೇ ಟೊಂಕ ಕಟಬೇಕು. ತೀರ್ವೆ ಹೆಚ್ಚಾದರೆ, ತಾನಾಗಿ ಲೋಕಲ್ ಫಂಡೂ ಹೆಚ್ಚಾಗುತ್ತದೆ ತೀರ್ವೆ ಮಂಡಳದ ರಿಪೋರ್ಟಿನ ವಿಚಾರವು ಸತ್ವಕ್ಕೆ ಕಾಯಿದೆ ಕೌನ್ಸಿಲಿನಲ್ಲಿ ಆಗುವದಿದೆ. ತೀರ್ವೆಯೊಡನೆ ಲೋಕಲ್ ಫಂಡು ಏರಿದರೆ, ಇನ್ನು ಏರಿಸುವ ಅವಶ್ಯ ಕಂಡಲ್ಲಿ ಮಾತ್ರ ಲೋಕಲ್ ಫಂಡನ್ನು ಏರಿಸಬಹುದಲ್ಲವೇ! ಅದರಿಂದ ತೀರ್ವೆ ಮಂಡಳದ ರಿಪೋರ್ಟಿನ ವಿಚಾರದಲ್ಲಿ ತಡೆದಿರುವಾಗ, ಲೋಕಲ್ ಫಂಡಿನ ಏರಿಕೆಯನ್ನು ಮುಂದಾಗಿ ವಿಚಾರಿಸುವದು ಅಪ್ರಶಸ್ತವು. ಅನಕ ವರೆಗೆ ತಡೆದರೆ, ಕಾನಡಾ ಜಿಲ್ಲೆಯ ಮೇಲೆ ಮುಗಿಲು ಕುಸಿದು ಬೀಳುವದೆಂದು ನಮಗೆ ತೋರುವದಿಲ್ಲ, ಲೋಕಲ್ ಬೋರ್ಡಿನಲ್ಲಿ ಸಭಾಸದರಾಗಿ ಹೋದವರಿಗೂ ತೋರಲಿಕ್ಕಿಲ್ಲವೆಂದು ನಾವು ನೆರೆ ನಂಬಿರುವೆವು.

ಸ್ಫುಟ ಸೂಚನೆಗಳು.

೧ ದೇಶಬಂಧುಗಳ ಪುಣ್ಯಸ್ಮರಣೆಯನ್ನು ಮುಂಬಯಿ, ಕಲಕತ್ತಾ ಮೊದಲಾದ ಪಟ್ಟಣಗಳು ಜುಲೈ ತಾ. ೧೧ ನೇ ರವಿವಾರಕ್ಕೆ ಭಕ್ತಿಯಿಂದ ಪಾಲಿಸಿ, ನಮಗೆ ಸ್ವರಾಜ್ಯ ಪ್ರಾಪ್ತಿ ಮಾಡಿಕೊಳ್ಳಲು ಸಾಮರ್ಥ್ಯವನ್ನು ದಯಪಾಲಿಸಬೇಕೆಂದು ದೇಶಬಂಧುಗಳೊಡನೆ ಭಕ್ತಿಯಿಂದ ಬೇಡಿಕೊಂಡರು. ದೇಶಬಂಧುಗಳು ಬಡಬಗ್ಗರಿಗೆಲ್ಲ ಔದಾರ್ಯದಿಂದ ನೆರವಾದ ಹಕೀಕತನ್ನೂ, ಮಾತೃಭೂಮಿಗಾಗಿ ಅವರು ಅನುಭವಿಸಿದ ಕಷ್ಟಗಳನ್ನೂ ಉಪನ್ಯಾಸಕರು ವಿವರಿಸಿರುವರು. ಚರಕಾ ಹಾಗು ಖಾದಿಯ ಪುರಸ್ಕಾರಗಳಿಂದ ದೇಶಬಂಧು ದಿನವನ್ನು ಸಾಗಿಸಬೇಕೆಂದು ಮಹಾತ್ಮರ ಅಪ್ಪಣೆಯನ್ನಿತ್ತಿದ್ದರು, ದೇಶಬಂಧುಗಳ ಪುಣ್ಯಸ್ಮರಣೆಯ ಕಾಲದಲ್ಲಿಯಾದರೂ, ರಾಷ್ಟ್ರೀಯ ಸಭೆಯವರು ಮತಭೇದಗಳನ್ನೆಲ್ಲ ಬದಿಗೊತ್ತಿ ಐಕ್ಯಮತದಿಂದ ರಾಷ್ಟ್ರಕಾರ್ಯವನ್ನು ಪುರಸ್ಕರಿಸಬೇಕಾಗಿ ಸ್ವತಂತ್ರ ಪಕ್ಷದ ಶ್ರೀ| ಬಿಪಿನಚಂದ್ರ ಪಾಲರವರು ಉದ್ಗರಿಸಿದರು ಕಲಕತ್ತೆಯಲ್ಲಿ ಮೆರವಣಿಗೆಗಳೂ, ಸಭೆಗಳೂ ನಡೆದವು. ಆದರೆ, ಒಂದು ಸಂಗತಿಯನ್ನು ಹೇಳಲಿಕ್ಕೆ ನಮಗೆ ಅತ್ಯಂತ ವ್ಯಸನವಾಗುತ್ತದೆ. ಜುಲೈ ೧೧ ನೇ ತಾರೀಖಿಗೆ ದೇಶಬಂಧುಗಳ ಮನೆಯಲ್ಲಿ ದೇಶಬಂಧುಗಳ ವರ್ಷಶ್ರಾದ್ಧವಾಯಿತು. ಅದೇ ಸಮಯ ದೇಶಬಂಧುಗಳ ವರಪುತ್ರರಾದ ಚಿರರಂಜನ ದಾಸರವರ ಉತ್ತರಕ್ರಿಯೆಯೂ ಸಾಂಗವಾಯಿತು. ಎರಡೂ ಕ್ರಿಯೆಗಳನ್ನು ದೇಶಬಂಧುಗಳ ಪತ್ನಿಯರಾದ, ಚಿರರಂಜನ ದಾಸರ ಮಾತೋಶ್ರೀಯವರಾದ ಶ್ರೀಮತಿ ವಾಸಂತಿ ದೇವಿಯವರು ನೆರವೇರಿಸಿದರು. ಈ ಅವಸ್ಥೆಯನ್ನು ಕೇಳಿ, ಕರಳು ಕರಗಿ ನೀರಾಗುತ್ತದೆ. ಒಂದು ವರುಷದಲ್ಲಿ ವಾಸಂತಿ ದೇವಿಯವರ ಹಣೇಬರಹವು ಎಷ್ಟು ಸ್ಥಿತ್ಯಂತರ ಹೊಂದಿತೆಂದು ನೋಡಿ! ಮಾನವ ಸಂಸಾರವು ಬೊಬ್ಬುಳಿಯಂತೆ ಅನಿತ್ಯವಾದದ್ದೆಂದು ತೋರುವದು ಇದಕ್ಕಾಗಿಯೇ! ಭಾರತೀಯರ ದುರ್ದೈವ. ಮತ್ತೇನು!!

೨. ಮುಂಬಯಿಯ ಪೋಲೀಸ ಕಮೀಶನರರಾದ ಮಿ| ಕೆಲಿಯವರು ೧೯೨೫ ನೇ ಇಸ್ವಿಯ ಪೋಲೀಸ ರಿಪೋರ್ಟನ್ನು ಸರಕಾರಕ್ಕೆ ಸಾದರಪಡಿಸುವಾಗ ನಮೂದಿಸಿದ ಉದ್ಗಾರಗಳನ್ನು ನಮ್ಮ ಸರಕಾರವು ಮನಮುಟ್ಟಿ ಪರಾಂಬರಿಸಬೇಕು. ಪೋಲೀಸರು ತಮ್ಮ ಕೆಲಸವನ್ನು ಕರ್ತವ್ಯಪರಾಯಣರಾಗಿ ನಡಿಸದಿದ್ದರೆ, ಆ ಪಾಪವನ್ನು ಬಡ ಪ್ರಜೆಗಳ ತಲೆಯ ಮೇಲೆ ಹೊರಿಸಿ ಪೋಲೀಸರು ಪಾರಾಗುತ್ತಾರೆ. ಊರಲ್ಲೊದಗುವ ಕಳುವು, ದರೋಡೆ, ಕೊಲೆ ಮುಂತಾದ ಅಪರಾಧಗಳನ್ನು ಕಂಡುಹಿಡಿದು ಅಪರಾಧಿಗಳಿಗೆ ಶಾಸನ ಮಾಡಲು ನೇಮಿಸಿದ ಪೋಲೀಸರೇ ಮೈಗಳ್ಳರಾಗಿ ಅಪರಾಧಗಳನ್ನು ಕಂಡುಹಿಡಿಯುವದಿಲ್ಲ. ಕೆಲವೆಡೆಯಲ್ಲಿ ಪೋಲೀಸರ ಆಶ್ರಯದಲ್ಲಿಯೇ ಅಪರಾಧಿಗಳು ಅಭಿವೃದ್ಧಿಗೈಯುತ್ತಾರೆ. ಪೋಲೀಸರು ಪ್ರಖ್ಯಾತದೇವಿಗೆ ಆಶ್ರಯವನ್ನಿತ್ತು ಸಲಹಿದ ಕುರಿತು ಮಿ| ಕೆಲಿಯವರು ನಿರ್ದಯದಿಂದ ದಂಡಿಸಿದ್ದನ್ನು ವಾಚಕರು ಅರಿತಿರುವರು. ಇಂಥ ಠಕ್ಕ ಹಾಗೂ ಅಪ್ರಾಮಾಣಿಕ ಪೋಲೀಸರಿಗೆ ಪ್ರಜೆಗಳು ನೆರವಾಗುವರೇನು! ಪ್ರಜೆಗಳು ಪೋಲೀಸರಿಗೆ ನೆರವಾಗದ ಜವಾಬದಾರಿಯು ಪೋಲೀಸರದೇ ಎಂದು ಮಿ| ಕೆಲಿಯವರು ನಮೂದಿಸಿರುವರು ಮಿ| ಕೆಲಿಯವರ ಶಬ್ದಗಳನ್ನೇ ಎತ್ತಿಕೊಡುವೆವು. ಅಪರಾಧಿ ಪೋಲೀಸರಿಗೆ ಮಾಡಿದ ಶಾಸನವನ್ನು ಉಲ್ಲೇಖಿಸಿ ಮಿ| ಕೆಲಿಯವರು ಬರೆಯುವದೇನಂದರೆ — "ಮೈಗಳ್ಳತನ, ಅಡಾಗ್ರಹ, ಹಾಗು ಅಪ್ರಾಮಾಣಿಕತನದಿಂದ ನಿಜವಾದ ಕಲ್ಯಾಣವಾಗುವದಿಲ್ಲೆಂದು ಪೋಲೀಸರು ಈ ಶಾಸನಗಳ ಮೇಲಿಂದ ಅರಿತುಕೊಂಡರೆ, ಈ ಮುಂದೆ ಹಿತವಾಗಬಹುದು. ಪ್ರಜೆಗಳು ಪೋಲೀಸರಿಗೆ ನೆರವಾಗುವದಿಲ್ಲವೆಂದೊಂದು ಸಾಮಾನ್ಯ ದೂರು ಇದೆ ಆ ದೂರೇನು ಸಟೆಯಲ್ಲ. ಆದರೆ ಆ ದೋಷಕ್ಕೆ ಪ್ರಜೆಗಳೇ ಸಂಪೂರ್ಣವಾಗಿ ಜವಾಬದಾರರಲ್ಲ ಪೋಲೀಸರು ಪ್ರಜೆಗಳ ವಿಶ್ವಾಸಪಾತ್ರರಾದ ಹೊರ್ತು, ಪ್ರಜೆಗಳಿಗೂ, ಪೋಲೀಸರಿಗೂ ಸಹಕಾರವಾಗದು. ಪ್ರಜೆಗಳ ವಿಶ್ವಾಸವನ್ನು ಪೋಲೀಸರು ಇನ್ನೂ ಸಂಗ್ರಹಿಸಿಲ್ಲ ಪೋಲೀಸರು ಪ್ರಾಮಾಣಿಕರೆಂದು ಪ್ರಜೆಗಳ ನಂಬಿಗೆ ಇಲ್ಲ. ಇದಲ್ಲದೆ ಅನೇಕಾವರ್ತಿ ಪೋಲೀಸರು ಅಸಭ್ಯತನದಿಂದ ಪ್ರಜೆಗಳನ್ನು ನಡಿಸಿಕೊಳ್ಳುತ್ತಾರೆ ಪೋಲೀಸರ ಕಳಂಕವನ್ನು ತೊಳೆಯಬೇಕಾದರೆ ಕಲಂಕ ತರುವ ಪೋಲೀಸರಿಗೆ ನಿರ್ದಯದಿಂದ ದಂಡಿಸಬೇಕು." ಪೋಲೀಸರೇ ದೇವರು, ಪೋಲೀಸ ತಪ್ಪೆಯೆಂದರೆ ಅವರೊಳಗೆ ಶಿಕ್ಷೆಯಾಗಲೇ ಬೇಕು ಎಂಬ ಸಿದ್ಧಾಂತಗಳನ್ನೆಲ್ಲ ಮಿ| ಕೆಲಿಯವರು ಅಲ್ಲಗಳೆದು, ಪೋಲೀಸರಾದರೂ ಸ್ಖಲನಶೀಲ ಪ್ರಾಣಿಗಳಿದ್ದು ಅವರನ್ನು ನಿಯಂತ್ರಿಸುವದವಶ್ಯವೆಂದು ಧ್ವನಿಸಿರುವರು. ಅಲ್ಲಲ್ಲಿಯ ಮೆಜಿಸ್ಟ್ರೇಟರು ಪೋಲೀಸರ ವರ್ತನವನ್ನು ಲಕ್ಷಿಸಿ, ಹಾದಿ ತಪ್ಪಿದಲ್ಲಿ ಕೂಡಲೆ ಕಿವಿ ಹಿಡಿದು ಹಾದಿಗೇರಿಸಿಕೊಡತಕ್ಕದ್ದು ಇಲ್ಲವಿದ್ದರೆ ಮೆಜಿಸ್ಟ್ರೇಟರು ಪೋಲೀಸರ ಕೈಗೊಂಬೆಗಳೆಂದು ಲೋಕಾಪವಾದವಾಗುವದು. ಅಲ್ಲಲ್ಲಿಯ ಮೆಜಿಸ್ಟ್ರೇಟರೂ, ಪೋಲೀಸ ಅಧಿಕಾರಿಗಳೂ ಮಿ| ಕೆಲಿಯವರ ಉದ್ಗಾರಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ನಡೆದು ಪ್ರಜಾಕಲ್ಯಾಣವನ್ನು ಸಾಧಿಸಬೇಕು.

೩. ಸದ್ಯಕ್ಕೆ ಮುದ್ರಿತ ಇರಾಖೆಯೊಳಗಿನ ಕಲೆಕ್ಟರರಾದ ಮಿ|| ಗಿರಿಬಿಟೆಯವರು ಕ್ರೈಸ್ತ ಬಾಂಧವರಿಗೆ ಕೊಟ್ಟ ಉಪದೇಶ ಹೇಳಿ, ಅಧಿಕಾರಿಗಳು ಪ್ರಜಾವತ್ಸಲರಾದರೆ, ಒದಗುವ ಕಲ್ಯಾಣವನ್ನು ನಾವು ನಮೂದಿಸಿದ್ದೆವು ಇಂದಿಗೆ ಬಿಹಾರ ಪ್ರಾಂತದ ಫುಲವಾರಿಶರೀಫ್‌ದಲ್ಲಿ ಸರಕಾರಿ ಅಧಿಕಾರಿಗಳ ಉಪೇಕ್ಷೆಯಿಂದ ಒದಗಿದ ಅನರ್ಥವನ್ನು ಹೇಳಬೇಕಾಗಿದೆ. ಫುಲವಾರಿಯಲ್ಲಿ ಹಿಂದೆ ವಾದ್ಯಘೋಷದ ಬಗ್ಗೆ ತಂಟೆ ನಡೆದಿತ್ತು. ಹಿಂದೂಗಳು ೧೮೭೩ನೇ ಇಸ್ವಿಯಲ್ಲಿ ಒಂದು ದಾವೆಯನ್ನು ದಾಖಲ ಮಾಡಿ, ಸಾರ್ವಜನಿಕ ಮಾರ್ಗದ ಮೇಲಿಂದ ವಾದ್ಯದೊಡನೆ ತಮಗೆ ಮೆರೆಯುತ್ತ ಹೋಗುವ ಅಧಿಕಾರವಿರುವದೆಂದು ಪ್ರತಿಪಾದಿಸಿದರು, ಮಹಮ್ಮದೀಯರು ಮಸೀದೆಯ ಮುಂದುಗಡೆಯ ಮಾರ್ಗಗಳ ಮೇಲೆ ವಾದ್ಯಘೋಷ ಮಾಡುವ ಅಧಿಕಾರವಿಲ್ಲೆಂದರು. ಬಳಿಕ, ಇತ್ತಟ್ಟಿನಲ್ಲಿಯೂ ಸಂಧಾನವಾಗಿ ಹಿಂದೂಗಳು ಮಾರ್ಗಗಳ ಮೇಲೆ ವಾದ್ಯಘೋಷದೊಡನೆ ಮೆರೆಯುತ್ತ ಹೋಗುವಾಗ, ಮಹಮ್ಮದೀಯರು ಆತಂಕಪಾತದಾರರಾಗಿಯೂ, ಮಸೀದೆಯ ಮುಂದುಗಡೆ ಇದ್ದಷ್ಟು ಮಾರ್ಗಗಳ ಮೇಲೆ ಮಾತ್ರ, ವಾದ್ಯವನ್ನು ಹಿಂದೂಗಳು ನಿಲ್ಲಿಸಿ, ಮಸೀದೆಯನ್ನು ದಾಟಿದ ಮೇಲೆ ಹಿಂದೂಗಳು ಪುನಃ ವಾದ್ಯಘೋಷ ಮಾಡಬಹುದೆಂದೂ ನಿಶ್ಚಯವಾಯಿತು. ಈ ಸಂಧಾನದಂತೆ, ಅಲ್ಲಿಯ ಹಿಂದೂ-ಮುಸಲ್ಮಾನರು ಸುಖದಿಂದ ನಡಕೊಂಡು ಬಂದರು. ಹಿಂದೂ-ಮುಸಲ್ಮಾನರ ದೊಂಬಿಯ ಕಲಂಕವು ಆ ಊರಿಗಾಗಲಿಲ್ಲ.

೪ ಅಲ್ಲಿಯ ಕಮೀಶನರ ದೊರೆಗಳಿಗೆ ಇದು ಸಹನವಾಗಲಿಲ್ಲವೋ ಏನೋ, ಹಿಂದೂಗಳಿಗೆ ಮಸೀದೆಯ ಮುಂದುಗಡೆಯ ಮಾರ್ಗದ ಮೇಲೆ ಸಹ ವಾದ್ಯದೊಡನೆ ಮೆರವಣಿಗೆ ಹೊರಡಿಸಲು ಲೈಸನ್ಸು ಕೊಟ್ಟರು. ಹಿಂದೂಗಳಿಗೊಂದು ಹಕ್ಕಿನ ಸನದು ಸಿಕ್ಕಂತಾಯಿತು, ಮುಸಲ್ಮಾನರಲ್ಲಿ ಅಸಂತೋಷ ಹುಟ್ಟಿತು ಬಾಬು ರಾಜೇಂದ್ರ ಪ್ರಸಾದರವರು ಪಾಟಣಾ ಪಟ್ಟಣದಿಂದ ಫುಲವಾರಿಗೆ ಹೋಗಿ ೧೮೭೩ ನೇ ಇಸ್ವಿಯ ಸಂಧಾನವನ್ನು ಪಾಲಿಸಲು ಹಿಂದೂ ಪ್ರಮುಖರಿಗೆ ಪರಿಪರಿಯಿಂದ ಹೇಳಿಕೊಂಡಾಗ್ಯೂ, ಒಬ್ಬಿಬ್ಬ ಧುರೀಣರು ಒಲ್ಲೆಂದರು. ಒಬ್ಬರ ವರ್ತನವು ಸಂಶಯಾಸ್ಪದವಿರುವದೆಂದು ಬಾಬು ರಾಜೇಂದ್ರ ಪ್ರಸಾದರವರು ನಮೂದಿಸುತ್ತಾರೆ. ಸಂಶಯಾಸ್ಪದನೆಂದರೆ, ಅವರಿಗೆ ಅಧಿಕಾರಿಗಳೇ ಎಬ್ಬಿಸುತ್ತಾರೆಂದು ರಾಜೇಂದ್ರ ಪ್ರಸಾದರವರ ಗ್ರಹಿಕೆಯಾಗಿದೆ. ಹಿಂದೂ-ಮುಸಲ್ಮಾನರೊಳಗೆ ದೊಂಬಿಯಾದ ಹೊರತು

ಅಧಿಕಾರಿಗಳಿಗೆ ತಮ್ಮ ಪ್ರತಿಷ್ಠೆಯನ್ನು ಸಿದ್ಧಮಾಡಿ ಸ್ವರಾಜ್ಯವನ್ನು ಹಳಿಯುವಿಗೆ ಪವಿತ್ರ ಇಷ್ಟವಿದ್ದರೆ ಪ್ರತಿ ವಾರಿಯಲ್ಲಿ ಈವರೆಗಿನ ನಡಾವಳಿಗೆ ಪ್ರತಿಕೂಲವಾಗಿ ಕಪಿಲಶನರ [illegible] ಕೊಡುವ ಕಾರಣವೇನು ? [illegible] ಹಿಂದೂ-ಮುಸಲ್ಮಾನರೊಳಗಿನ ವಿಚಾರಣೆಯು ಅಧಿಕಾರಿಗಳ [illegible] ಸಿಲುಕಬಾರ ದು [illegible] ಜೇಂದ್ರ ಪ್ರಸಾದರವರ [illegible] ಇದನ್ನು [illegible] ಪ್ರ [illegible] ದೊರಕ [illegible] ರಾಜ್ಯಸೂತ್ರ ಗಳನ್ನು ಚಲಿಸ [illegible] ಸಂತಾರವಾದರೂ ವಿಚಾರಿ ಸಿದ [illegible] ದಾಗಿದೆ

[illegible] ಹೊಸಪ್ಪನ [illegible] ವರ್ಗದ [illegible] ಹೊಸಪ್ಪನವರಿಂದ [illegible] ಮೈಲು [illegible] ಹೊಸಪ್ಪನವರ [illegible] ವರೆಗೆ ೧೧ [illegible] ಹೊಸಪ್ಪನವರ [illegible] ಹೊಸಪ್ಪನವರಿಂದ [illegible] ಅಧಿಕ, [illegible] ಲಕ್ಷ್ಮಿ [illegible] ಪರಿಲಿಕನ್ನು ವಿಪರೀತ [illegible], ಈ ಮಾರ್ಗದ ಕುರಿತು ಸರಕಾರ ದ [illegible] ಸರಕಾರಿ [illegible] ರೂಪಾಯಿ [illegible] ವ್ಯವಹಾರಿಕ ಅನುಭವಿಕರ ಅಂದಾ [illegible] ಸರಕಾರ ಕ್ಕೆ [illegible] ಕೊಳ್ಳುತ್ತದೆ ಕೋರಿಗೆ [illegible] ವರೆಗಿನ ಗ್ರಾಮಗ ಳ [illegible] ತಲೀ ಮಾರ ಗಳ ದೊಡ್ಡ [illegible] ಈ ಮಾರ್ಗವಾದರೆ, ಈ ಗ್ರಾಮಗಳ [illegible] ಅನುಕೂಲವಾಗಿ, ಅಲ್ಲಿ ವಾಸಿಸುವ ರೈತರಿಗೆ ಲಾಭವಾಗುವ ಹಾಗಿದೆ ಮಾ ರ್ಗವಿಲ್ಲದ [illegible] ಬಿಟ್ಟುಕೊಂಡು ಉಳಿಯ ಬೇಕಾ [illegible] ೧೦೦೦ ಎಕರೆ ಭೂಮಿಯು ಬಂಜರು ಬಿದ್ದಿದೆ, ಮಾರ್ಗವಾದ ರೆ ಹಿಕ್ಕಲುಗಳ [illegible] ಅಡ್ಡಿಯೇನಿಲ್ಲ ಬಯಲುಸೀಮೆ ಕೊಂಕಣ ಮರಾಠಿ ಜನರಿದ್ದು, ಅವರು ಉಳಿದವರನ್ನು ಕಂಡುಕೊಂಡ, ಭೂಮಿ ಯನ್ನು [illegible] ತಾವು ಲಾಭ ಹೊಂದುವರ, ಸರಕಾರಕ್ಕೂ ಲಾಭವಾಗುವದು. ಸರಕಾರಕ್ಕೆ ರೈತ ರ ಅರ್ಜಿಯು ಸರಿಯಲ್ಲೆಂದು ತೋರಿದರೆ, ಆ ಮಾರ್ಗ

ದ ರಚನೆಯನ್ನು ತಯಾರಿಸಿ, ಅದರಂತೆ ರಚನೆ ಮಾ ಡುವ ಬಗ್ಗೆ ಕಂಟ್ರಾಕ್ಟರರಿಂದ ಟೆಂಡರ ಗಳನ್ನು ಕೇಳ ಬೇಕು, ಯಾರ ಕಡಿಮೆ ರಕಮಿನ ಟೆಂಡರು ಕೊಡುವ ವರಿಗೆ ಕಂಟ್ರಾಕ್ಟ ಕೊಟ್ಟರೆ ತೀರಿತು. ಅಂತು ಈ ೭ ಮೈಲು ಮಾರ್ಗವನ್ನು ಆದಷ್ಟು ಬೇಗನೆ ಸರಕಾರ ವು ಕೈಕೊಳ್ಳಬೇಕೆಂದು ನಮ್ಮ ಆಗ್ರಹದ ಬಿನ್ನಹ.

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಆಷಾಢ ಮಾಸವೆಂದು ಯಾರೂ ಹೇಳಲಾರರು, ಹಗಲಿಗೆ ಚೊಕ್ಕ ಬಿಸಿಲು ಬೀಳುತ್ತಿದೆ. ಚಳಿಯಿಂದ ಬೆವರುತ್ತಿವೆ, ಒಕ್ಕಲಿಗರು ನಟ್ಟಿ ಕೆಲಸದಲ್ಲಿ ತೊಡಗಿರುವರು. ಈ ವಾರದಲ್ಲಿ ೭.೬೮ ಇಂಚು ಮಳೆ ಬಿತ್ತು. ಈ ವರೆಗೆ ಅಂತು ೬೯-೬೦ ಇಂಚು ಮಳೆಯಾಯಿತು.

ಮಹಸ್ವಾಮಿಯ ಬಾಂಧವರ ಮೆಹರಮ್ ಹಬ್ಬ ದ ಗಲಾಟೆ. ಕೇರಿ ಕೇರಿಗಳಲ್ಲಿ ಹುಲಿಗಳ ಉಪದ್ರವ. ಇವರ ಬಳಿ ಶಸ್ತ್ರಾಸ್ತ್ರಗಳಿಲ್ಲವೆಂದು ತಿಳಿದರೋ ಏನೋ. ಮೊಹರಮ್ಮಿನಲ್ಲಿ ಹುಲಿಗಳು ಹಾರ್‍ಯಾಡುತ್ತಿವೆ !

ಇಲ್ಲಿನ ಶಾಲೆಯ ಮುಖ್ಯಾಧ್ಯಾಪಕರಾದ ರಾ|| ಗಣಪತಿ ಸದಾಶಿವ ನೀಲೀಶ್ವರರವರು ತಾರೀಖು ೧೦ನೇಗೆ ಸಾವಿರಾರು ಹುಡುಗರಿಗೆ ಪ್ರಾಥಮಿಕ ಶಿಕ್ಷಣ ಕೊಟ್ಟ ಕೆಲಸದಿಂದ ನಿವೃತ್ತರಾದರು. ಈ ಕುರಿತು [illegible] ಸಭೆಸೇರಿ, ನೀಲೀಶ್ವರ ಮಾಸ್ತರ ರ [illegible] ಬ್ರತಿಪೂರ್ವಕವಾಗಿ ಸನ್ಮಾನಿಸಿ ಕಳಿಸಿದರ

ಸಾಭಾರ ಸ್ವೀಕಾರ.

The Volunteer — Monthly. July issue Editor and Publisher — Dr N S Hardiker, Hubli Annual Subscription Rs 3/ only Post free

ಕಾರವಾರ— ನಾಗರಿಕರೊಬ್ಬರು ತಿಳಿಸುವದೇ ನೆಂದರೆ — ನಿಮ್ಮ ತಾ ೨೧-೬-೧೯೩೭ ನೇ ಸಂಚಿ ಕೆಯಲ್ಲಿ ಸ್ಕೂಲ ಬೋರ್ಡಿನವರು ಮಾಡಿದ ವರ್ಗಾ ವರ್ಗಿಗಳ ಕುರಿತು ಬರೆದ ಮಾಹಿತಿಯು ಸರಿಯಾದ್ದ ಲ್ಲ ಸರಕಾರಿ ನೌಕರಿಯಲ್ಲಿ ಸೇರ ಪವರು ತನಗೆ ಅ ನುಕೂಲವಿದ್ದಲ್ಲಿಯೇ ಉಳಿಯಬೇಕೆಂದು ಅಪೇಕ್ಷೆ ಮಾಡಬಾರದು, ಗುಮಾಸ್ತನನ್ನು ನೇಮಿಸಿದ್ದಲ್ಲಿ ಅಲ ನು ಹೋಗಲು ತಯಾರಿರಬೇಕು ಘಟ್ಟದ ಮೇಲೆ ಬದಲಿ ಮಾಡಿದ ಕೆಲವು ವರ್ಗಾವರ್ಗಿಗಳ ಬಗ್ಗೆ ನೀ ವು ಆಕ್ಷೇಪ ಮಾಡಿದ್ದೀರಿ ಈ ಕುರಿತು ನಾನು ಬೋರ್ಡಿ ನ ಜವಾಬದಾರ ಅಧಿಕಾರಿಗಳೊಡನೆ ಚೌಕಶಿಮಾಡಿ ದೆನು ಅವರು ಹೇಳಿದ್ದೇನೆಂದರೆ:— ಈ ಹಿಂದೆಯೇ ಬದಲಿ ಮಾಡಬೇಕಾಗಿತ್ತು ತಾವು ಕಡಮಾಡಿ ಬದ ಲಿ ಮಾಡಿರುವ ಘಟ್ಟದ ಮೇಲಿನ ಬಹಳ ಕಾಲದ ಹಿಂದೆ ವರ್ಗವಾದವರ ಘಟ್ಟದ ಮೇಲೆಯೇ ಕೊಳೆ ಯುತ್ತ ಬಿದ್ದಿರುವರು ಇದರಿಂದ ಅವರ ವೃತ್ತಿಯು ಕೂಡ ಕೆಟ್ಟಿತು, ಹಳಿಯಾಳ ತಾಲೂಕಿನಲ್ಲಿ ಹಿಬ್ಬ ಶಿಕ್ಷಕರಿಗಂತು ಮರಳು ಹಿಡಿಯುವ ತಯಾರಿಯಾ ಗಿತ್ತು ವರ್ಗಾವರ್ಗಿಯಿಂದ ಅವನಿಗೆ ಸ್ವರ್ಗಪ್ರಾಪ್ತಿ ಯಾದಂತಾಗಿದೆ ಈ ಸ್ಥಿತಿಯಲ್ಲಿ ವರ್ಗಾವರ್ಗಿ ಮಾಡಿದ ಬಗ್ಗೆ ಬೋರ್ಡಿಗೆ ಯಾರೂ ದೂರಲಾಗ ದು. ಈ ಕುರಿತು ತಗಲಿದ ಖರ್ಚನ್ನು ನಾವು ಎಣಿ ಸುವದಿಲ್ಲ ಯಾಕೆಂದರೆ, ಕಾರಭಾರವು ಸರಿ ರೀತಿಯಿಂದ ನಡೆಯಬೇಕಾದರೆ, ನಾವು ಹಣ ತೆರಲು ಸಿದ್ಧರಾಗಿರಬೇಕು ಎಡ್ಮಿನಿಸ್ಟ್ರೇಟಿವ್ ಆಫೀಸರರು ೨೦-೩೦ ಮಂದಿಗಳ ವರ್ಗಾವರ್ಗಿಯನ್ನು ಸೂಚಿಸಿ ದ್ದರೆಂಬ ಮಾತೂ ಪೂರ್ಣವಾಗಿ ಖರೆಯಲ್ಲ ಹೀಗೆ ಅವರು ಸೂಚಿಸಿದ್ದು ಮೊದಲನೇ ಸಭೆಯಲ್ಲಿ. ಎರಡ ನೇ ಸಭೆಯಲ್ಲಿ ವರ್ಗಾವರ್ಗಿಯ ಆಲೋಚನೆ ನಡೆ ದಾಗ, ಎಡ್ಮಿನಿಸ್ಟ್ರೇಟಿವ್ ಆಫೀಸರರೇ ತಾವಾಗಿ ವರ್ಗಾವರ್ಗಿಗಳನ್ನು ಸೂಚಿಸಿದರು. ೫ ವರ್ಷ ಘಟ್ಟ ದಮೇಲೆ ಸರ್ವೀಸಾದ ಶಿಕ್ಷಕರಿಗೆಲ್ಲ ಘಟ್ಟದ ಕೆಳಗೆ ವರ್ಗ ಮಾಡಬೇಕೆಂದು ಎಡ್ಮಿನಿಸ್ಟ್ರೇಟಿವ್ ಆಫೀಸರರು ಸೂಚಿಸಿದ್ದರು. ಹೀಗಿನ ಪರಿಸ್ಥಿತಿಯಲ್ಲಿ ಬೋರ್ಡಿನವ ರು ವರ್ಗಾವರ್ಗಿ ಮಾಡಿದ್ದು ಯೋಗ್ಯವೆಂದು ನೀವೇ ಒಪ್ಪುವಿರಿ

ಕಲೆಕ್ಟರರಾದ ಮಿ| ಭಿಡೇಯವರು ನಿತ್ಯವೂ ಆಫೀ ಸಿಗೆ ಬರುತ್ತಿದ್ದರೆಂದು ಕಲೆಕ್ಟರ ಆಫೀಸಿನ ಮಾಹಿತಿ ಯಿದ್ದವರು ತಿಳಿಸುತ್ತಾರೆ.

ಶಿರ್ಶಿ— ಜಿಲ್ಲಾ ಬೋರ್ಡಿನ ಸಭಾಸದರಾದ ಮಿ| ರಾಮರಾವ ಬಸಪ್ಪನವರ ಮೇಲೆ ನಡೆದ ಖಟ್ಲೆ ಯು ಶಿರ್ಶಿ ಮೆಜಿಸ್ಟ್ರೇಟ ಕೋರ್ಟಿನಲ್ಲಿ ತಾರೀಖು ೧೭-೫-೧೯೩೭ ನೇಗೆ ವಿಚಾರಕ್ಕಿಟ್ಟಿತ್ತು. ಅದೇ ದಿವಸವೇ ಜಿಲ್ಲಾ ಬೋರ್ಡಿನ ಸಭೆಯಿತ್ತು. ಸಭೆಗಾಗಿ ಮಿ| ಬಸಪ್ಪನವರು ಕಾರವಾರಕ್ಕೆ ಹೋಗಿದ್ದರು. ಖ ಟ್ಲೆಯ ವಿಚಾರ ಕಾಲಕ್ಕೆ ಗೈರಹಾಜರ ಇದ್ದ ಬಗ್ಗೆ ಶಿರ್ಶಿ ಮೇಜಿಸ್ಟ್ರೇಟರು ಮಿ| ಬಸಪ್ಪನವರಿಗೆ ರೂಪಾಯಿ ೫೦೦ ದಂಡಮಾಡಿದ್ದರು. ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ಅಪೀಲಿನಲ್ಲಿ ಈ ರಕಮನ್ನು ರೂಪಾಯಿ ೫೦ ಕ್ಕೆ ಇ ಳಿಸಿದರು, ಖಟ್ಲೆಯು ಸೆಶನಿಗೆ ಕಳುಹಿಸಲ್ಪಟ್ಟದೆ

ವೃತ್ತಸಾರ.

— ಕೋಯಿಮತ್ತೂರ ಮ್ಯುನಿಸಿಪಾಲಿಟಿಯವರ ಆಗ್ರಹ ವನ್ನು ಮನ್ನಿಸಿ ಸರಕಾರವು ಭೂಕಂದಾಯವನ್ನು ಶೇಕ ಡಾ ೨೫ರಂತೆ ಇಳಿಸಿರುವದು. ಶಿಕ್ಕಿದಷ್ಟು ಪುಣ್ಯ !

— ಕಲಕತ್ತೆಯಲ್ಲಿ ಸಾರೋದಾ ದಾಸೀ ಎಂಬ ಹುಡುಗಿ ಯು ಇತ್ತ ೬ ವರುಷಗಳ ವರೆಗೆ ಹುಡುಗನಂತೆ ನಟಿಸು ತ್ತಿದ್ದಳು. ಕಳೆದ ಜುಲೈ ೧೪ ನೇ ತಾರೀಖಿಗೆ ಅವಳು ಕೆಲ ಅನ್ನವನ್ನು ಕಳವು ಮಾಡಿದಳೆಂದು ಆಲಿ ಪುರ ಪೋಲೀಸ ಮೆಜಿಸ್ಟ್ರೇಟರಲ್ಲಿ ಪೋಲೀಸರು ಫಿರ್ಯಾ ದು ಮಾಡಿರುವರು " ಹಸಿವೆಯಾಯಿತು, ಅದರಿಂದ ತಾನು ಕದ್ದೆ " ಎಂದು ಅವಳು ನುಡಿದಳು ಮೆಜಿಸ್ಟ್ರೇ ಟರ ಕರಳು ಕರಗಿತು ೩೦ ರೂಪಾಯಿಗಳ ಜಾಮೀನು ಕರಾರು ಬರಕೊಂಡು ಅವಳಿಗೆ ಬಿಟ್ಟರು

— ಕಳೆದ ಮೇ ತಿಂಗಳಿನಲ್ಲಿ ಕರ್ನಾಟಕದಲ್ಲಿ ೩೪೫೦ ರೂಪಾಯಿಗಳ ಖಾದಿ ಹುಟ್ಟುವಳಿಯಾಯಿತು, ೫೦೪೦ ರೂಪಾಯಿಗಳ ಖಾದಿಯು ಮಾರಾಟವಾಯಿತು ಜನವರಿ ಯಿಂದ ೧೪,೪೫೦ ರೂಪಾಯಿಗಳ ಖಾದಿಯು ಹುಟ್ಟುವಳಿ ಯಾಯಿತು, ಹಾಗು ೨೬,೨೮೨ ರೂಪಾಯಿಗಳ ಖಾದಿ ವಿಕ್ರಯವಾಯಿತು

— ಮುಂಬಯಿಯ ಪ್ರೇಮಜಿ ಭಾನಜಿ ಎಂಬ ಶಾಳುಕಡಿ ಯ ಸಾವುಕಾರರು ಗುರುವಾರ ರಾತ್ರೆ ೮|| ಘಂಟೆಗೆ ಪೇಟೆ ಯಿಂದ ಮನೆಗೆ ಹೋಗುತ್ತಿದ್ದರು ಅವರ ಬಳಿ ೧೧ ಸಾವಿರ ರೂಪಾಯಿಗಳ ಗಂಟು ಇತ್ತು. ೪ ಮಂದಿ ಆಳುಗಳು ಜೊತೆಗಿದ್ದರು ಥಟ್ಟನೆ ಯಾರೋ ಕರೆದಂತಾಯಿತು ಇವರು ನಿಂತರು. ಒಳಿತಾ ಸಶಸ್ತ್ರ ಜನರು ಬಂದು ಅವ ರಿಗೆ ಹೊಡೆದು ೧೧,೦೦೦ ರೂಪಾಯಿಗಳನ್ನು ಕೊಂಡು ಹೋದರು ಅದರ ಪತ್ತೆ ಇಲ್ಲ, ಇವರು ಮೋಟಾರಿ ನೊಳಗಾಗಿ ಬಂದಿದ್ದರಂತೆ

— ಮಾರ್ಥೆನ ಎಂಬ ಗ್ರೀಕ್ ದೇಶದ ವೀರ ಸ್ತ್ರೀಯು ದಂಗೆಗಾರರಿಗೆ ಇದಿರಾಗಿ ಅವರನ್ನು ಸೋಲಿಸಿದ ಬಗ್ಗೆ ಸಾರ್ವಭೌಮರು ಪ್ರಸನ್ನರಾಗಿ ಅವಳಿಗೆ ತಮ್ಮ ಪರ್ಧಾಂತಿ ಮಹೋತ್ಸವದ ಟ್ರೀಕ್ಸ್‌ಫರ್ ಬಂದು ಚಿನ್ನದ ಥಡಿಯಾದ ಹಾಗು ಸನ್ಮಾನಪತ್ರಿಕೆಯನ್ನು ಅರ್ಪಿಸಿರುವರು! ಆದ ಕ್ಕಿಂತ ಕೆಲವು ಭೂಮಿ ಬಿಟ್ಟರೆ ಒಳಿತಾಗುತ್ತಿತ್ತು!

— ಶ್ರೀ ಟಿ. ಗೋ. ಮಹೇಂದ್ರಶೇಖರರವರು ಉದಗಾಂವದ 'ಹಿಂದೂ' ಪತ್ರಿಕೆಗೆ ತಿಳಿಸುವದೇನೆಂದರೆ.— "ವೆಂಕಟಗಿರಿಯ ಅಧಿಪತಿಯಾದ ಶ್ರೀ ವೆಂಕಟಾಚಲಪತಿ ಬಾಲಾಜಿ ಮಹಾರಾಜರವರು ಭಕ್ತ ಜನರಿಗೆ ಒಮ್ಮೆ ಸರ್ಪವೇಷದಿಂದಲೂ, ಇನ್ನೊಮ್ಮೆ ವೃದ್ಧ ವೇಷದಿಂದಲೂ ದರ್ಶನವನ್ನಿತ್ತು, ಅಲ್ಪಾವಕಾಶದಲ್ಲಿಯೇ ದುಷ್ಟರ ನಿಗ್ರಹಕ್ಕಾಗಿ, ಸೃಷ್ಟಿಯ ಪರಿಪಾಲನಕ್ಕಾಗಿ ಕಲ್ಕಿಯ, ಅವತಾರ ಕೊಳ್ಳುವೆನಾಗಿ ಹೇಳಿದರಂತೆ." ಪರಮಾತ್ಮ ಕಲ್ಕಿಯ ಅವತಾರ ಕೊಂಡು ಭರತ ಭೂಮಿಯನ್ನುದ್ಧರಿಸು

— ದೇಶಬಂಧು ದಿನವನ್ನು ದಿಲ್ಲಿಯ ಹಿಂದೂ-ಮುಸಲ್ಮಾನರು ಕೂಡಿಯೇ ಪಾಲಿಸಿದರು. ದೇಶಬಂಧುಗಳ ಐಕ್ಯಧ್ಯೇಯವನ್ನು ಪಾಲಿಸುವದಕ್ಕಾಗಿ ಡಾ॥ ಅನ್ಸಾರಿಯವರು ಹಿಂದೂ ಮತ್ತು ಮುಸ್ಲೀಮ ಲೀಗ ಸಂಘಗಳ ತಮ್ಮ ಸಭಾಸದ ಅಧಿಕಾರಿಗಳಿಗೆ ರಾಜೀನಾಮೆ ಕೊಟ್ಟಿತ್ತು, ಇನ್ನು ಮುಂದೆ ಜಾತಿ ಸಂಸ್ಥೆಗೆಳಿಗೆ ಸಭಾಸದರಾಗಲಿಕ್ಕಿಲ್ಲೆಂದು ಪ್ರತಿಜ್ಞೆ ಮಾಡಿದರು! ಧರ್ಮಾಭಿಮಾನದಿಂದ ತುಂಬಿ ತುಳುಕುವ ಹಿಂದೂ ಮುಸಲ್ಮಾನರು ಇದರಿಂದ ತಕ್ಕ ಬುದ್ಧಿಗಲಿಯಬೇಕು.

— ದಕ್ಷಿಣ ಆಫ್ರಿಕದೊಳಗಿನ ಭಾರತೀಯರ ಸ್ಥಿತಿಯು ಕಾರಿತು ವಿಚಾರ ಮಾಡುವ ಪರಿಷತ್ತು ಹಿಂದುಸ್ಥಾನದಲ್ಲಿಯೇ ಸೇರಿಸುವ ನಿಶ್ಚಯವಾಗಿರುವದಂತೆ!

— ಪಾಲಿಟಾಣಾ ಸಂಸ್ಥಾನದೊಳಗಿನ ಶತ್ರುಂಜಯ ಪರ್ವತವು ಜೈನರ ಪ್ರಿಯಾತ್ರಸ್ಥಳವು. ಇಲ್ಲಿ ಹೋಗಬೇಕಾದರೆ ಜೈನ ಮುತಸ್ಸರು ವರ್ಷಕ್ಕೆ ೧ ಲಕ್ಷ ರೂಪಾಯಿಗಳನ್ನು ಪಾಲಿಟಾಣಾ ದರಬಾರಕ್ಕೆ ಕೊಡಬೇಕೆಂದು ಸಂಸ್ಥಾನದ ಬ್ರಿಟಿಶ ಏಜಂಟರಾದ ವಿಟ್ಟೊಟ್ಸನವರು ತೀರ್ಪು ಕೊಟ್ಟಿರುವರು. ಇದನ್ನು ಕೇಳಿದೊಡನೆ ಅಹಮ್ಮದಾಬಾದ-ಮುಂಬಯಿ ಪಟ್ಟಣಗಳಲ್ಲಿ ಜೈನರು ಹರತಾಳನ್ನಾಚರಿಸಿ ನಿಷೇಧಪ್ರದರ್ಶನ ಮಾಡಿದರು

— ಮುಂಬಯಿಯ ಸರಕಾರಿ ವಕೀಲರಾದ ರಾ॥ ಎಸ್ ಎಸ್. ಪಾಟಕರ ಹಾಗು ಬೆರಿಸ್ಟರರಾದ ರಾ॥ ಕಲ್ಯಾಣಜೀವನ ಇವರೀರ್ವರಿಗೆ ಒಂದು ವರ ಷದ ವರೆಗೆ ಮುಂಬಯಿಯ ಹ್ಯಾಕೋರ್ಟಿನ ನ್ಯಾಯಾಧೀಶರಾಗಿ ನೇಮಿಸಿರುವರು ಈ ಕುರಿತು ಈರ್ವರಿಗೆ ಮುಂಬಯಿಯ ವಕೀಲ ಬೆರಿಸ್ಟರರು ಅಭಿನಂದಿಸಿದರು

— ಕಲಕತ್ತೆಯೊಳಗಿನ ದತ್ತ ರಸಾಯನಿಕ ಶಾಲೆಯಲ್ಲಿ ಸ್ಫೋಟವಾಗಿ ಮೂರಿಗಳು ಮೃತರಾದರು. ಸುಪ್ರಸಿದ್ಧ ರಸಾಯನಶಾಸ್ತ್ರಜ್ಞರಾದ ಶ್ರೀ ನಲಿನೀಕಾಂತ ಗುಪ್ತರವರೂ ಮರಣ ಹೊಂದಿದರು ವಿಧಿಘಟನೆ!

— ಜರ್ಮನ ಸೈನ್ಯಾಧಿಕಾರಿಯಾದ ಲೆಂಡನಬರ್ಗರವರ ದಾಹಕಾರಣಕಾಯರ್ಸುಹಲ್ಯರ ಮಾಲಕ ಪತಿ ಸವಾಗಮ ಪಡೆಯಲು ಶಕ್ತಿಯಾದ್ದರಿಂದ ವಿವಾಹಬಂಧನವನ್ನು ತುಂಡರಿಸಬೇಕೆಂದು ಅವರ ಪತ್ನಿಯರು ಫಿಟಸ್ಫೋಟದ ಬಗ್ಗೆ ದಾವೆ ತಂದಿದ್ದರು! ದಾವೆಯಂತೆ ವಿಕ್ರಿಯಾಗಿರುವದು!'

— ನಾಗಪುರದ ಮ್ಯುನಿಸಿಪಾಲಿಟಿಯಲ್ಲಿ ರಾ॥ ಕನ್ನಯ್ಯಾಲಾಲ ಎಂಬುವರು ಸರ್ವಾಧಿಪತಿಗಳಿಗೆ ಮಾನಪತ್ರ ಕೊಡಬೇಕೆಂಬ ಸೂಚನೆ ತರುವವರಿದ್ದರು. ಈ ಕುರಿತು ಸಭೆ ಸೇರಿತ್ತು. ಸಭೆಯಲ್ಲಿ ಇವರು ಸೂಚನೆಯ ಸ್ಯೇ ಮುಂದೊತ್ತಲಿಲ್ಲ. 'ಇನ್ಯಾರೂ ಸೂಚಿಸಲಿಲ್ಲ. ಹೀಗೆ ಮಾನಪತ್ರದ ಅಪಮಾನವು ದೂರವಾಯಿತು.

— ವಿಲಾಯತಿಯೊಳಗಿನ ದೊರೆಗಳ ಸಭೆಯಲ್ಲಿ ಹಿಂದುಸ್ಥಾನ ವಿಷಯಕ ಚರ್ಚೆಯು ಜುಲೈ ೨೦ನೇಗೆ ಜರಗುವದಿದೆ

— ಬಂಗಾಲದ ದೇಶಬಂಧು ಸ್ಮಾರಕ ಮಂಡಳದವರು ಗ್ರಾಮಸಂಘಟನೆಯ ಉಪಾಯಗಳ ಕುರಿತು ನಿಬಂಧಗಳನ್ನು ಬರೆದು ಕಳಿಸಬೇಕೆಂದು ಜಾಹೀರನಾಮೆಯನ್ನು ಹೊರಡಿಸಿರುವರು.

— ಅಖಿಲ ಭಾರತೀಯ ದೇಶಬಂಧು ಸ್ಮಾರಕ ನಿಧಿಗೆ ರೂ ೧,೬೬,೨೬೯-೬-೧೧ ಜಮೆ ಯಾಗಿದೆ

— ಗೌಹತಿಯಲ್ಲಿ ಸೇರಲಿಕ್ಕಿದ್ದ ರಾಷ್ಟ್ರೀಯ ಸಭೆಯ ಸ್ವಾಗತ ಕಮಿಟಿಯ ಅಧ್ಯಕ್ಷಸ್ಥಾನಕ್ಕೆ ಶ್ರೀ ಟಿ. ಆರ್ ಫೂಕನರವರು ನೇಮಿಸಲ್ಪಟ್ಟಿರುವರು.

— ಪಂಜಾಬ ಕಾಯಿದೆ ಕೌನ್ಸಿಲಿನ ಅಧಿವೇಶನವು ತಾರೀಖು ೧೬ ನೇ ಯಿಂದ ಪ್ರಾರಂಭವಾಗುವದಿದೆ. ಅದೇ ದಿನ ಹೊಸ ಸರ್ವಾಧಿಪತಿ ಇರ್ವಿನ್ ದೊರೆಗಳ ಭಾಷಣವಾಗುವದಿದೆ

— ಮದ್ರಾಸದಲ್ಲಿ ಇಲೆಕ್ಷನಿನ ಬಗ್ಗೆ ಸಭೆಸೇರಬಾರದೆಂದು ಪೋಲೀಸ ಕಮೀಶನರು ಪ್ರತಿಬಂಧಕ ಹುಕುಮನ್ನು ಹೊರಡಿಸಿದ್ದಾರೆ ಇಲೆಕ್ಷನು ಸಭೆಗಳಿಂದ ಸಾರ್ವಜನಿಕ ಸಂರಕ್ಷಣೆಗೆ ಬಾಧೆ ಬರುತ್ತದಂತೆ! ಶಾಭಾಸ್.

— ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ನೌಕಾಖಾತೆಯ ಮದ್ದಿನ ಉಗ್ರಾಣದಲ್ಲಿ ದೊಡ್ಡದೊಂದು ಸ್ಫೋಟವಾಗಿ ನೆರೆಹೊರೆಯಲ್ಲಿದ್ದ ೨೦೦ ಕಟ್ಟಡಗಳು ಸುಟ್ಟು ಹೋದವಲ್ಲದೆ ಸುಮಾರು ೬೦ ಮಂದಿಗಳಿಗೆ ಘಾಯಗಳಾಗಿವೆ, ಅನೇಕ ಗ್ರಾಮಗಳಿಗೂ ಪೆಟ್ಟಾಗಿದೆ

— ಚೀನ ದೇಶದಲ್ಲಿ ಪುನಃ ಯಾದವಿಯು ಪ್ರಾರಂಭವಾಗಿದೆ

— ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ಸಭಾಸದರು ಬರೆದು ತಂದ ಭಾಷಣಗಳನ್ನು ಓದಲಾಗದೆಂದೂ, ಕೌನ್ಸಿಲಿನಲ್ಲಿ ಅಲ್ಲಿಂದಲ್ಲೇ ಮಾತಾಡಬೇಕೆಂದೂ ಅಧ್ಯಕ್ಷರು ಹೇಳಿ, ಬರೆದಂತೆ ಸಭಾಸದರೊಬ್ಬರಿಗೆ ಅಡ್ಡಿ ಮಾಡಿದರು.

— ಜರ್ಮನಿಯ ರಾಜಧಾನಿಯಾದ ಬರ್ಲಿನದಲ್ಲಿ ೩೦ ಜನವಿದ್ದ ಕಟ್ಟೋಣದ ವಿಮಾನ ಕುಸಿದುಬಿದ್ದು ೧೬ ಮಂದಿ ಮರಣಪಟ್ಟರು, ೫೦ ಕ್ಕೆ ವಿಕ್ಕ ಘಾಯಪಟ್ಟಿರುವರು.

— ಕೊಟ್ಟೆಯಲ್ಲಿ ಸದ್ಯಕ್ಕೆ ಹುಟ್ಟಿದ ಮಗುವಾಗಿ ಒಂದು ವಿಚಿತ್ರ ಕೂಸು ಹುಟ್ಟಿದೆ ಈ ಕೂಸಿಗೆ ಒಂದು ಕಿರೀಟದ, ಕಿರೀಟು ಹಲವು ಬಣ್ಣ ಗಳಿದ್ದು, ಆರು ಬೆರಳುಗಳಿವೆ. ಹಲ್ಲುಗಳಿವೆ ಕೂಸು ಕೇವಲ ಹತ್ತು ದಿನದಲ್ಲಿಯೇ ಮೃತಿಯನ್ನೈದಿತು! ಪರಮಾತ್ಮನ ಲೀಲೆ!

— ವಿಖ್ಯಾತ ಸರ್ ಜಗದೀಶಚಂದ್ರ ಬೋಸರವರ ಜ್ಞಾನಕ್ಕೆ ಮೆಚ್ಚಿ ಬೆಲ್ಜಿಯಮ ಅರಸರು ಅವರಿಗೆ ಬಹಳ ಮಾನ್ನಿಸಿದರು

— ಇಂದೂರಕ್ಕೆ ಉಪ-ಪಿಯ ಶ್ರೀ ಸ್ವಾಮಿಮಠಾಧೀಶರು ಬಿಜಮಂಗೈದರು ಅಲ್ಲಿ ಸ್ತ್ರೀಗಳಿಗೆ ಹಲೋ ಮಾನ್ಯತೆ ಸಿಕ್ಕಿತು

— ನಿಜಾಮ ರಾಜ್ಯದಲ್ಲಿ ಈಗ ಹಗಲು ಲೂಟಿ ನಿಜಾಮರು ಸಾಹುಕಾರರು ದೇಶ ಸಂಚಾರಕ್ಕೆ ಹೊರಟಿರುವರು ಅವರಿಗೆ ಕಾಣಿಕೆಗಳನ್ನು ಸಂಪಾದಿಸಿಕೊಡುವದಕ್ಕಾಗಿ ಅಲ್ಲಲ್ಲಿಯ ತಹಶೀಲದಾರರು ಖರಿದಾರಿಯಿಂದ ಯಥೇಚ್ಛವಾಗಿ ಲಕ್ಷಾವಧಿ ರೂಪಾಯಿಗಳನ್ನು ಎತ್ತುತ್ತಿರುವರು. ಆಧಾರ ಪುರದೊಳಗಿನ ದೇಶಮುಖರಿಗೆ ಮರಕ್ಕೆ ಕಟ್ಟಿಹಾಕಿ ಹಣ ವಸೂಲ ಮಾಡಲಾಯಿತು. ಈ ಕುರಿತು ತಂತಿಯಿಂದ ಸುದ್ದಿ ಹೊರ ಹೋಗಬಾರದೆಂದು ತಂತಿ ಆಫೀಸಿನ ಮೇಲೆ ಗುಪ್ತ ಪೋಲೀಸ ಖಾತೆಯವರು ಕಾವಲನ್ನಿಟ್ಟಿದ್ದರು. ರಾಜಾ ಭಗೀ ಪ್ರಜೇಲಾ ಪ್ರಜೆಗಳು ಮೊರೆ ಇಡುವ

— ಅಹಮ್ಮದಾಬಾದ ಮ್ಯುನಿಸಿಪಾಲಿಟಿಯವರು ಹ.ತ.ಗಿಯರ ಶಾಲೆಯಲ್ಲಿ ನೂಲಿನ ವರ್ಗವನ್ನೊಂದಿಡಬೇಕೆಂದು ಠರಾಯಿಸಿರುವರು.

— ಕೃಷ್ಣದೇಶದ ನಾಸ್ಸಿವ ನದಿಗೆ ನೆರೆಬಂದು ಧಡದ ಮೇಲಿ ಅನೇಕ ಗ್ರಾಮಗಳು ಹಾಳಾಗಿಹೋದವು

— ಅಹಮದಾಬಾದದಲ್ಲಿ ಜುಲೈ ೧೪ ನೇ ತಾರೀಖಿಗೆ ವಿಪರೀತ ಮಳೆಬಿದ್ದು ಊರೊಳಗಿನ ಬೀದಿಗಳಲ್ಲೆಲ್ಲ ನೀರೇ ನೀರು. ತಗ್ಗು ಭೂಮಿಗಳಲ್ಲಿ ದೋಣಿಗಳು ನಡೆಯಹತ್ತಿದವು!

— ಬೆಳಗಾವಿಯ ಜಿಲ್ಲಾ ಬೋರ್ಡಿನ ದಾವೆಯಲ್ಲಿ ಹೊಸ ಅಧ್ಯಕ್ಷರಾದ ರಾವಬಹಾದ್ದೂರ ಅಂಗಡಿಯವರ ಮೇಲೆ ಬೆಳಗಾವಿಯ ಫರ್ಸ್ಟ ಕ್ಲಾಸ ಜಡ್ಜರು ಹಂಗಾಮಿ ತಾಕೀದನ್ನು ಕೊಟ್ಟು, ಅಂಗಡಿಯವರು ಅಧ್ಯಕ್ಷ ಅಧಿಕಾರವನ್ನು ನಡಿಸಬಾರದಾಗಿಯೂ ದಾವೆಯ ನಿಕಾಲೆಯಾಗುವ ವರೆಗೆ ರಾ॥ ತಂಬಿತಪ್ಪನವರೇ ಅಧ್ಯಕ್ಷರಾಗಿರಬೇಕಾಗಿಯೂ ವಿಧಿಸಿರುವರು ವಿಚಾರವು ಆಗಸ್ಟ ೧೦ನೇ ತಾರೀಖಿಗೆ ಜರಗುವದಿದೆ

— ಬಂಗಾಲದ ಸುಪ್ರಸಿದ್ಧ ಗಾಯನವಿಶಾರದರಾದ ಶ್ರೀ ದಿಲೀಪ ಕುಮಾರ ರಾಯ್‌ರವರಿಗೆ ಫ್ರಾನ್ಸ ದೇಶದ ವಿಶ್ವಾಸ ರೋಮನ ರೋಲೆಂಡರವರು ನಿಮಂತ್ರಿಸಿರುವರು!

ಅಹಮ್ಮದಾಬಾದ ಮ್ಯುನಿಸಿಪಾಲಿಟಿಯು ವೆ ನೆಕಂಗ ಕಮಿಟಿಯವರಲ್ಲಿ ಅತ್ಯಂತಗಳುಂಟಾಗಿ ಮ್ಯುನಿಸಿಪಾಲಿಟಿಯ ಕೆಲಸವು ಹಾಳುಬಿದ್ದಿದೆ. ಈ ಕುರಿತು ವ್ಯವಸ್ಥೆ ಮಾಡಲು ಅಧ್ಯಕ್ಷರು ವಿಶೇಷ ಸಭೆಯನ್ನು ಕರೆದಿರುವರು. ಸಭಾಸದರು ಜಗದಾಡಲು ಮ್ಯುನಿಸಿಪಾಲಿಟಿಯಲ್ಲಿ ಅರಸಿ ಹೋಗಿದ್ದರೇನು?

— ಶ್ರೀ ರಾಜರಾಜೇಶ್ವರಿ ದೇವರಉತ್ಸವವನ್ನು ಕಲಕತ್ತೆಯ ಹಿಂದೂಗಳು ಕಳೆದ ಗುರುವಾರಕ್ಕೆ ಹೊರಡಿಸಿದಾಗ ಪುನಃ ಮುಸಲ್ಮಾನರು ಹಿಂದುಗಳ ಮೇಲೆ ಸಾಗಿಹೋಗಿ ದೊಂಬಿಯಾಯಿತು! ಹಿಂದೂಗಳು ಸರಕಾರಕ್ಕೆ ತಂತಿ ಮಾಡಿರುವರು" ವಿನು ಪ್ರಯೋಜನ?

ಮಹಾತ್ಮರ ಆತ್ಮಚರಿತ್ರ.

(೧೧ನೇ ಪುಟದಿಂದ ಮುಂದರಿಸಿದ್ದು)

ನ್ನು ಪರಿಹರಿಸಲು ನಾನು ಯತ್ನ ಮಾಡಬೇಕು. ಅದಕ್ಕಾಗಿ ಕಷ್ಟಗಳನ್ನು ಸಹಿಸಬೇಕು. ವರ್ಣದ್ವೇಷದ ಪರಿಣಾಮವಾಗುವಂತೆ ಅನ್ಯಾಯಪರಂಪರೆಯನ್ನು ದೂರ ಪಡಿಸಲು ನಾನು ಯತ್ನ ಮಾಡಬೇಕು

ಆದರಿಂದ ಎಂಡನೇ ಬಂಡಿಯಿಂದಲೇ ಪ್ರಿಟೋರಿಯಾಕ್ಕೆ ಹೋಗುವ ನಿರ್ಧಾರ ಮಾಡಿದೆನು.

ಮಾರನೇ ದಿನ ಬೆಳಿಗ್ಗೆ ಆಗಿಬಂಡಿಯ ಜನರಲ್ ಮೆನೇಜರರಿಗೆ ದೊಡ್ಡ ತಂತಿಯನ್ನೊಂದು ಕಳುಹಿದೆನು, ಅಬ್ದುಲ್ಲಾ ಶೆಟ್ಟರಿಗೂ ತಿಳಿಸಿದೆನು. ಅಬ್ದುಲ್ಲಾ ಶೆಟ್ಟರು ಜನರಲ್ ಮೆನೇಜರರ ಭೆಟ್ಟಿಕೊಂಡರು. ಮೆನೇಜರರು ರೇಲ್ವೆ ಅಧಿಕಾರಿಗಳ ವರ್ತನವನ್ನು ಸಮರ್ಥಿಸಿದರು; ಆದರೆ, ಮಾರಿಟ್ಸಬರ್ಗದೊಳಗಿನ ಸ್ಟೇಶನ್ ಮಾಸ್ತರರಿಗೆ ನನ್ನನ್ನು ಮುಕ್ಕಾಮಿಗೆ ಕಳುಹಲು ತಿಳಿಸಿದ್ದೇನಾಗಿ ನನಗೆ ಹೇಳಿದರು. ಅಬ್ದುಲ್ಲಾ ಶೆಟ್ಟರು ಮಾರಿಟ್ಸಬರ್ಗದೊಳಗಿನ ಹಿಂದೀ ವರ್ತಕರಿಗೂ, ಗೆಳೆಯರಿಗೂ ಆ ಊರ ಕಡೆಯೊಳಗಿನ ಗೆಳೆಯರಿಗೂ ನನ್ನನ್ನು ಕಾಣಲಿಕ್ಕೆ ನನ್ನ ಉಪಚಾರ ಮಾಡಲಿಕ್ಕೆ ತಿಳಿಸಿದರು ಅವರು ಸ್ಟೇಶನ್ನಿನಲ್ಲಿ ಬಂದು ತಮ್ಮ ಕಷ್ಟಗಳನ್ನು ಹೇಳಿ, ನನ್ನನ್ನು ಸಮಾಧಾನಪಡಿಸಲೆತ್ನಿಸಿದರು; ಮತ್ತು ನನಗೊದಗಿದ ಕಷ್ಟಗಳು ಸಾಮಾನ್ಯವಾದವುಗಳೆಂದು ಹೇಳಿದರು ೧ನೇ ಯಾ ಎರಡನೇ ತರಗತಿಯಲ್ಲಿ ಪ್ರಯಾಣ ಮಾಡುವ ಹಿಂದೀಯರಿಗೆ ಆಗಿಬಂಡಿಯ ಅಧಿಕಾರಿಗಳಿಂದಲೂ, ಗೌರಿ ಪ್ರಯಾಣಿಕರಿಂದಲೂ ಮಾತಿಕೆಯಾಗಿ ತೊಂದರೆಗಳುಂಟಾಗುತ್ತವೆಂದು ಅವರು ಹೇಳಿದರು

ಹೀಗೆ ಪರಸ್ಪರ ಕಷ್ಟ ಕಥೆಗಳನ್ನು ಕೇಳುತ್ತ ಆ ದಿನ ಕಳೆಯಿತು ಸಾಯಂಕಾಲಕ್ಕೆ ಆಗಿಬಂಡಿಯು ಬಂತು. ನನ್ನ ಬಗ್ಗೆ ಒಂದು ಆಸನವು ಕಾದಿಟ್ಟಿತ್ತು. ದರ್ಬಾನದಲ್ಲಿ ಹಾಸಿಗೆಯ ಟಿಕೀಟು ಕೊಳ್ಳಲೊಪ್ಪಿದ್ದಿಲ್ಲ, ಇಲ್ಲಿ ಅದನ್ನು ಕೊಂಡುಕೊಂಡೆನು ಹೀಗೆ ನಾನು ಚಾರ್ಲ್ಸಟೌನಿಗೆ ಮುಟ್ಟಿದೆನು

ಮಹಾತ್ಮರ ಆತ್ಮಚರಿತ್ರ

(೮) ಪ್ರಿಟೋರಿಯಾ ಪ್ರವಾಸ.

ಡರ್ಬಾನದಲ್ಲಿರುವ ಕ್ರೈಸ್ತ ಹಿಂದೀಯರೊಡನೆ ನನ್ನ ಪರಿಚಯವಾಯಿತು. ಕೋರ್ಟಿನಲ್ಲಿ ಮಿ; ಪೊಲ ಎಂಬವರು ಭಾಷಾಂತರ ಮಾಡಿ ಹೇಳುತ್ತಿದ್ದರು, ಅವರು ರೋಮನ್ ಕೆಥೋಲಿಕ್ ಜಾತಿಯವರು. ಸುಭಾನ ಗೊಡ್‌ಫ್ರೆ ಎಂಬವರ ಪರಿಚಯವೂ ನನಗುಂಟಾಯಿತು. ಸಭಾನ ಗೊಡ್‌ಫ್ರೆ ಎಂಬವರು ಪ್ರೊಟೆಸ್ಟೆಂಟ ಮಿಶನದಲ್ಲಿ ಶಿಕ್ಷಕರಿದ್ದರು. ಇವರು ೧೯೨೪ ನೇ ವರ್ಷ ವರುಷದಲ್ಲಿ ಹಿಂದ ದಕ್ಷಿಣ ಆಫ್ರಿಕೆಯ ನಿಯೋಗದಲ್ಲಿ ಸಭಾಸದ ರಾಗಿದ್ದ ಜೇಮ್ಸ ಗೊಡ್‌ಫ್ರೆಯವರ ತಂದೆಯವರು. ಇದೇ ಸಮಯ ಪಾರ್ಸಿ ರುಸ್ತುಮಜಿ ಹಾಗು ಆದಮಜಿ ಮಿಯಾಖಾನರವರ ಗುರುತು ನನಗುಂಟಾಯಿತು. ಆ ಸಮಯ ಈ ಗೆಳೆಯರೆಲ್ಲರೂ ವ್ಯವಹಾರದ ಹೊರತಾಗಿ ನನ್ನ ಭೆಟ್ಟಿಯಾಗುತ್ತಿದ್ದರು. ಆ ಬಳಿಕ, ನಾನು ಅವರೊಡನೆ ಪಡೆದ ಗೆಳೆತನ ಸಂಪಾದಿಸಿದ ಕಥೆಯನ್ನು ಮುಂದೆ ಹೇಳುವೆ.

ಹೀಗೆ ಹೆಚ್ಚು ಸ್ನೇಹಿತರನ್ನು ನಾನು ಸಂಗ್ರಹಿಸುತ್ತಿರುವಾಗ ಕಂಪನಿಯ ವಕೀಲರು ಕಂಪನಿಗೆ ಬರೆದದ್ದೇನೆಂದರೆ — ದಾವೆಯ ವಿಚಾರದ ತಯಾರಿಯನ್ನು ನಡಿಸಬೇಕಾಗಿದೆ. ಅಬ್ದುಲ್ಲಾ ಶೆಟ್ಟರಿಗೆ ಸ್ವತಃ ಪ್ರಿಟೋರಿಯಾಕ್ಕೆ ಹೋಗಬೇಕು, ಅಥವಾ ಒಬ್ಬ ಪ್ರತಿನಿಧಿಯನ್ನು ಕಳಿಸಬೇಕು.

ಅಬ್ದುಲ್ಲಾ ಶೆಟ್ಟರ ಪತ್ರವನ್ನು ನನಗೆ ಓದಗೊಟ್ಟರು. ನಾನು ಪ್ರಿಟೋರಿಯಾಕ್ಕೆ ಹೋಗಲು ತಯಾರಿರುವೆನೇನೆಂದು ನನಗೆ ಕೇಳಿದರು. ನಾನು ನುಡಿದದ್ದೇನೆಂದರೆ: — ಪ್ರಕರಣದ ಮಾಹಿತಿಯನ್ನು ನಿಮ್ಮಿಂದ ಪಡೆಕೊಂಡ ಬಳಿಕ ನಾನು ಹೇಳಬಲ್ಲೆನು. ಸದ್ಯಕ್ಕೆ ಅಲ್ಲಿ ಹೋಗಿ ನಾನು ಏನು ಮಾಡಬೇಕೆಂದೂ ನನಗೆ ತಿಳಿಯುವದಿಲ್ಲ." ಇದನ್ನು ಕೇಳಿ ಅಬ್ದುಲ್ಲಾ ಶೆಟ್ಟರು ಪ್ರಕರಣವನ್ನು ತಿಳಿಸಲು ಕಾರಕೂನರನ್ನು ಆಜ್ಞೆ ಮಾಡಿದರು. ನಾನು ಪ್ರಕರಣವನ್ನು ಕಲಿಯ ಆರಂಭಿಸಿದೆನು. ಆರಂಭದಿಂದಲೇ ನಾನು ಕಲಿಯ ಬೇಕಾಯಿತು. ಝಾಂಜಿಬಾರದಲ್ಲಿ ನನಗೆ ಬಹಳ ದಿನ ಉಳಕೊಳ್ಳಲಾಗಲಿಲ್ಲ. ಅಲ್ಲಿ ಉಳಕೊಂಡಷ್ಟು ದಿನ ಕೋರ್ಟಿನಲ್ಲಿ ಮೊಕದ್ದಮೆಗಳನ್ನು ನಾನು ಕೇಳಹೋಗಿದ್ದೆ. ಪಾರಸಿ ವಕೀಲರೊಬ್ಬರು ಸಾಕ್ಷಿಗಾರರಿಗೆ ಜಮಾ-ಖರ್ಚಿನ ಮೇಲೆ ಪ್ರಶ್ನೆ ಕೇಳುತ್ತಿದ್ದರು. ನಾನಂತು ದಿಗಿಲಾಗಿದ್ದೆ. ಜಮಾಖರ್ಚನ್ನು ನಾನು ಶಾಲೆಯಲ್ಲಿ ಕಲಿತಿದ್ದಿಲ್ಲ. ವಿಲಾಯತಿಯಲ್ಲಿಯೂ ಕಲಿತಿದ್ದಿಲ್ಲ.

ಇಲ್ಲಿ ದಕ್ಷಿಣ ಆಫ್ರಿಕೆಗೆ ನಾನು ಬಂದ ಪ್ರಕರಣವು ಜಮಾಖರ್ಚಿನ ಲೆಕ್ಕದ್ದು. ಲೆಕ್ಕದ ಮಾಹಿತಿಯುಳ್ಳವರಿಗೆ ಪ್ರಕರಣವು ತಿಳಿಯುವ ಹಾಗಿದೆ ತಿಳಿಸಿಹೇಳುವ ಹಾಗಿದೆ. ಕೆಲವು ಬಾರಿ ಬರೆದರೆ ಕೆಲವು ಜಮೆ ಖರ್ಚು, ಮುಂತಾದ ಶಬ್ದಗಳನ್ನು ಕಾರಕೂನರು ಹೇಳುತ್ತ ನಡೆದಿದ್ದರು. ನನಗೇನೂ ತಿಳಿಯುತ್ತಿದ್ದಿಲ್ಲ. ಬಂದದ್ದು 'ಪಿ ನೋಟ' ಎಂದು ಬರೆದಿತ್ತು. ಹಾಗೆಂದರೇನೆಂದು ನನಗೆ ತಿಳಿಯುದಿಲ್ಲ. ಕಾರಕೂನರಿಗೆ ನನ್ನ ಅಗಾಧ ಜ್ಞಾನ ಹೇಳಿದೆನು. 'ಪಿ ನೋಟ' ಎಂದರೆ ಪ್ರೊಮಿಸರಿ ನೋಟು ಎಂದು ಅವನು ಹೇಳಿದನು. ಜಮಾ-ಖರ್ಚಿನ ಪುಸ್ತಕವನ್ನೊಂದು ಕೊಂಡು ನಾನು ಅಭ್ಯಾಸ ಮಾಡಿದೆನು. ಆಗ ನನಗೆ ಸ್ವಲ್ಪ ಧೈರ್ಯ ಬಂದಿತು. ಪ್ರಕರಣವು ತಿಳಿಯಿತು. ಅಬ್ದುಲ್ಲಾ ಶೆಟ್ಟರಿಗೆ ಜಮಾ ಖರ್ಚು ಬರೆಯಬರುತ್ತಿದ್ದಿಲ್ಲ. ಆದರೆ, ತುಂಬಾ ವ್ಯವಹಾರಿಕ ಜ್ಞಾನವಿತ್ತು. ಅದರಿಂದ ಜಮಾ-ಖರ್ಚಿನೊಳಗಿನ ಗೂಢ ಪ್ರಶ್ನೆಗಳನ್ನೆಲ್ಲ ಅವರು ಸಹಜವಾಗಿ ಬಿಡಿಸುತ್ತಿದ್ದರು. ಪ್ರಿಟೋರಿಯಾಕ್ಕೆ ಹೋಗಲು ತಯಾರಿದ್ದೇನೆಂದು ನಾನು ಹೇಳಿದೆನು.

"ನೀವು ಎಲ್ಲಿ ಉಳಕೊಳ್ಳುವಿರಿ?" ಎಂದು ಶೆಟ್ಟರು ಕೇಳಿದರು. "ನೀವು ಎಲ್ಲಿ ಹೇಳುತ್ತೀರೋ ಅಲ್ಲಿ ಉಳಕೊಳ್ಳುತ್ತೇನೆ," ಎಂದು ನಾನು ಹೇಳಿದೆನು.

ಆಗ ಶೆಟ್ಟರು ಹೇಳಿದ್ದೇನಂದರೆ: — "ಹಾಗಾದರೆ, ನಾನು ನಮ್ಮ ವಕೀಲರಿಗೆ ಬರೆಯುತ್ತೇನೆ ನಿಮ್ಮ ಬಿಡಾರದ ವ್ಯವಸ್ಥೆಯನ್ನು ಅವರು ಮಾಡುವರು. ನನ್ನ ಮೇಮನ್ ಗೆಳೆಯರಿಗೂ ಬರೆಯುತ್ತೇನೆ. ಆದರೆ, ಅವರೊಡನೆ ನೀವು ಉಳಕೊಳ್ಳುವದು ಇಷ್ಟವಲ್ಲ. ನಮ್ಮ ವಿರುದ್ಧ ಪಕ್ಷದವರ ಪ್ರತಿಷ್ಠೆಯು ಪ್ರಿಟೋರಿಯಾದಲ್ಲಿ ವಿಶೇಷವಿದೆ. ಯಾರೊಬ್ಬರು ನಮ್ಮ ಖಾಸಗಿ ಪತ್ರಗಳನ್ನು ಓದಿದರೆ, ನಮಗೆ ಹೇರಳ ನಷ್ಟವಾಗುವದು. ಅವರನ್ನು ದೂರ ಮಾಡಿದಷ್ಟು ನಮಗೊಳಿತು."

"ನಿಮ್ಮ ವಕೀಲರು ಹೇಳಿದ್ದಲ್ಲಿ ನಾನು ಉಳಕೊಳ್ಳುತ್ತೇನೆ; ಅಥವಾ ಸ್ವತಂತ್ರ ಬಿಡಾರನ್ನಾದರೂ ಸಂಪಾದಿಸಿಕೊಳ್ಳುತ್ತೇನೆ. ನೀವು ಚಿಂತೆ ಬೇಡ. ನಮ್ಮ ಗುಟ್ಟನ್ನು ಯಾರೂ ಅರಿಯಲಾರರು. ಆದರೆ, ಪರಪಕ್ಷದ ಪರಿಚಯ ಮಾಡಬೇಕೆಂಬ ಇಚ್ಛೆ ಇದೆ. ಅವರೊಡನೆ ಗೆಳೆತನ ಸಂಪಾದಿಸಿ ಸಾಧ್ಯವಿದ್ದರೆ ಪ್ರಕರಣವನ್ನು ನಮ್ಮೊಳಗೆ ರಾಜಿಯಿಂದ ನಿಕಾಲ ಮಾಡಿಕೊಳ್ಳಲು ಯತ್ನಪಡುವೆನು. ಎಷ್ಟಾದರೂ ತಯ್ಯಬಶೆಟ್ಟರು ನಿಮ್ಮ ಆಪ್ತರೇ."

ಶೇಟ ತಯ್ಯಬ ಹಾಜೀಖಾನ ಮಹಮ್ಮದರವರು ಅಬ್ದುಲ್ಲಾಶೆಟ್ಟರ ಸಮೀಪದ ಸಂಬಂಧಿಕರಿದ್ದರು.

ರಾಜಿಯಿಂದ ನಿಕಾಲೆ ಮಾಡುವ ಉಲ್ಲೇಖ ಕೇಳಿ ಅಬ್ದುಲ್ಲಾ ಶೆಟ್ಟರಿಗೆ ಸ್ವಲ್ಪ ಆಶ್ಚರ್ಯವಾಯಿತು. ಆದರೆ, ಡರ್ಬಾನಿನಲ್ಲಿ ನಾನಿಳಿದು ೬-೭ ದಿನಗಳಿದ್ದು, ನಮ್ಮಿಬ್ಬರಿಗೆ ಪರಸ್ಪರ ಪರಿಚಯವಾಗಿತ್ತು. ನಾನೊಂದು ಬಿಳೇ ಆನೆಯೆಂಬ ಅವರ ಗ್ರಹಿಕೆಯೂ ದೂರವಾಗಿತ್ತು. ಅದರಿಂದ ಅವರು ಅಂದದ್ದೇನಂದರೆ: —

"ಹೌದು. ನನಗೆ ಹೊಳೆಯಿತು. ಕೋರ್ಟಿನಿಂದ ರಾಜಿ ಮಾಡುವದು ಬಹಳ ಇಷ್ಟವು. ಆದರೆ ನಾವೆಲ್ಲರೂ ಸಂಬಂಧಿಕರಿದ್ದೇವೆ. ಪರಸ್ಪರರ ಅಂತರಂಗವನ್ನು ಪರಸ್ಪರರು ಅರಿತಿರುವರು. ರಾಜಿಗೆ ಒಪ್ಪುವವರು ತಯ್ಯಬ ಶೆಟ್ಟರಲ್ಲ; ನಾವು ಅಜಾಗರೂಕರಾಗಿದ್ದರೆ, ನಮ್ಮಿಂದ ಪರಮಾವಧಿಯ ಸ್ವಾರ್ಥ ಸಾಧಿಸಿಕೊಂಡು ನಮಗೆ ಸಂಪೂರ್ಣವಾಗಿ ಸೋಲಿಸಿಬಿಡುವರು. ಅದರಿಂದ ಬೇಕಾದ ವಿಚಾರಮಾಡಿ ಯಾವುದಕ್ಕೂ ಕೈಹಾಕಿರಿ."

"ಅದರ ಗೊಡವೆ ನಿಮಗೆ ಬೇಡ," ಎಂದು ನಾನು ಅಂದೆ.

"ಪ್ರಕರಣದ ಕುರಿತು ತಯ್ಯಬ ಶೆಟ್ಟರೊಡನೆ ಅಥವಾ ಬೇರೆ ಯಾರೊಬ್ಬರೊಡನೆ ನಾನು ಮಾತಾಡಬೇಕಾಗಿಲ್ಲ. ಇಬ್ಬರೂ ರಾಜಿಯಿಂದ ನಿಕಾಲೆ ಮಾಡಿಕೊಳ್ಳುವದುಚಿತವೆಂದು ನಾನವರಿಗೆ ಸೂಚಿಸುವೆನು. ಅನಾವಶ್ಯಕವಾಗಿ ಕೋರ್ಟಿನ ವ್ಯವಹಾರ ನಡಿಸುವದು ಶಕ್ಯವಿದೆಂದೂ ನಾನು ಹೇಳುವೆನು."

ಡರ್ಬಾನಕ್ಕೆ ಮುಟ್ಟಿದ ೭ನೇ ಯಾ ೮ನೇ ದಿನ ನಾನು ಡರ್ಬಾನದಿಂದ ಹೊರಟೆ. ೧ ನೇ ತರಗತಿಯ ಟಿಕೀಟು ನನ್ನ ಬಗ್ಗೆ ಕೊಳ್ಳಲಾಗಿತ್ತು. ಹಾಸಿಗೆ ಬೇಕಾದರೆ ೫ ಶಿಲಿಂಗು ಬೇರೆಯಾಗಿ ಹೆಚ್ಚು ಕೊಡಬೇಕಾಗಿತ್ತು. ಹಾಸಿಗೆಯ ಟಿಕೀಟು ಕೊಟ್ಟು ನಾನು ಹಾಸಿಗೆಯೊಂದನ್ನು ಪಡೆಯಬೇಕೆಂದು ಅಬ್ದುಲ್ಲಾ ಶೆಟ್ಟರು ಒತ್ತಾಯ ಮಾಡಿದರು. ನಾನು ಹಟವಾದಿಯಾದೆ; ಅಭಿಮಾನಿಯಾದೆ. ೫ ಶಿಲಿಂಗು ಉಳಿಸುವದಕ್ಕಾಗಿ ನಾನು ಒಲ್ಲೆಂದೆ. ಅಬ್ದುಲ್ಲಾ ಶೆಟ್ಟರು ನನಗೆ ಮುಂಜಾಗ್ರತೆ ಕೊಟ್ಟದ್ದೇನಂದರೆ: — "ನೋಡಿ, ಇದು ಹಿಂದುಸ್ಥಾನ ದೇಶವಲ್ಲ, ದೇವರ ಅನುಗ್ರಹದಿಂದ ನಮಗೇನು ಕಡಿಮೆ ಇಲ್ಲ, ನಿಮಗೆ ತಗಲುವ ಸಾಹಿತ್ಯದಲ್ಲಿ ಕೊರತೆ ಮಾಡಿಕೊಳ್ಳಬೇಡಿ."

ನಾನು ಅವರ ಉಪಕಾರ ಮನ್ನಿಸಿ ಚಿಂತೆಮಾಡಬೇಡಿರೆಂದು ಹೇಳಿದೆನು. ಪಕ್ಕ ಉಗಿಬಂಡಿಯು ನಾತಾಲದ ರಾಜಧಾನಿಯಾದ ಮಾರಿಟ್ಸಬರ್ಗ ಪಟ್ಟಣಕ್ಕೆ ರಾತ್ರಿ ೯ ಘಂಟೆಗೆ ಮುಟ್ಟಿತು. ಈ ಸ್ಟೇಶನಿನಲ್ಲಿ ಪ್ರಯಾಣಿಕರಿಗೆ ಹಾಸಿಗೆಗಳನ್ನು ಪೂರೈಸುತ್ತಿದ್ದರು. ಉಗಿಬಂಡಿಯ ಆಳೊಬ್ಬನು ಬಂದು ಹಾಸಿಗೆ ಬೇಕೇನೆಂದು ಕೇಳಿದನು. "ಬೇಡ; ನನ್ನೊಡನೆ ಒಂದು ಹಾಸಿಗೆಯಿದೆ," ಎಂದು ನಾನು ಹೇಳಿದ ಮೇಲೆ ಅವನು ಹೋದನು. ಒಬ್ಬ ಪ್ರಯಾಣಿಕರೊಬ್ಬರು ಬಂದು ನನ್ನನ್ನು ಮೇಲಿನಿಂದ ಕೆಳತನಕ ದಿಟ್ಟಿಸಿ ನೋಡಿದರು. ನಾನು ಕಪ್ಪು ಮನುಷ್ಯನೆಂದು ಅವರಿಗೆ ತಿಳಿಯಿತು. ಇದು ತಿಳಿದೊಡನೆ ಅವರ ಚಿತ್ತವು ಕ್ಷುಭಿಸಿತು. ಕೂಡಲೆ ಹೊರಹೋಗಿ, ಒಬ್ಬಿಬ್ಬ ರೇಲ್ವೆ ಅಧಿಕಾರಿಗಳನ್ನು ಕರಕೊಂಡು ನನ್ನ ಡಬ್ಬಿಗೆ ಬಂದರು. ಎಲ್ಲರೂ ಸುಮ್ಮನೆ ನಿಂತುಕೊಂಡಿದ್ದರು. ಅಷ್ಟರಲ್ಲಿ ಇನ್ನೊಬ್ಬ ಅಧಿಕಾರಿಯು ನನ್ನಲ್ಲಿಗೆ ಬಂದು, "ನನ್ನ ಜೊತೆಗೆ ಬನ್ನಿ, ನೀವು ಹಿಂದಿನ ಡಬ್ಬಿಯಲ್ಲಿ ಕೂತುಕೊಳ್ಳಬೇಕು," ಎಂದನು.

"ಆದರೆ, ನಾನು ೧ ನೇ ತರಗತಿಯ ಟಿಕೀಟು ತಗೊಂಡಿದ್ದೇನೆ" ಎಂದು ನಾನಂದೆ.

"ಪರವಾಯಿಲ್ಲ, ನೀವು ಹಿಂದಿನ ಡಬ್ಬಿಗೆ ಹೋಗಲೇಬೇಕು, ಎಂದು ನಾನು ಸಾರಿಹೇಳುತ್ತೇನೆ" ಎಂದು ಅವನು ಪ್ರತ್ಯುತ್ತರವನ್ನಿತ್ತನು.

"ನಾನೂ ಸಾರಿ ಹೇಳುತ್ತೇನೆ. ಈ ಡಬ್ಬಿಯಿಂದ ಪ್ರವಾಸ ಮಾಡಲು ಡರ್ಬಾನದಲ್ಲಿಯೇ ನನಗೆ ಅಪ್ಪಣೆ ದೊರೆತಿದೆ. ನಾನು ಇದೇ ಡಬ್ಬಿಯಲ್ಲಿಯೇ ಕೂತು ಹೋಗುವೆನು"

"ಆಗದು, ನೀನು ಹೋಗಲಾಗದು. ಈ ಡಬ್ಬಿಯನ್ನು ನೀನು ಬಿಡಬೇಕು. ಇಲ್ಲದಿದ್ದರೆ, ಪೋಲೀಸ ಸಿಪಾಯಿಯನ್ನು ಕರೆದು ನಿನಗೆ ಹೊರತಳ್ಳಬೇಕಾಗುವದು," ಎಂದು ಆ ಅಧಿಕಾರಿಯು ನುಡಿದನು.

"ಒಳ್ಳೇದು, ಅತನೇ ಬಂದು ನನ್ನನ್ನು ಹೊರತಳ್ಳಲಿ ನಾನಾಗಿ ಹೊರಹೋಗುವದಿಲ್ಲ."

ಪೋಲೀಸ ಸಿಪಾಯಿಯು ಬಂದು ನನ್ನ ಕೈರಟ್ಟೆ ಹಿಡಿದು ನನ್ನನ್ನು ಹೊರನೂಕಿದನು. ಸಾಮಾನಿನ ಗಂಟು ಹೊರಬೀಳಹೋಗಾಯಿತು. ಬೇರೆ ಡಬ್ಬಿಗೆ ಹೋಗಲು ನಾನೊಪ್ಪಲಿಲ್ಲ. ನಾನು ಸ್ಟೇಶನಿನ ಮುಂತಸ್ಥರ ಕೋಣೆಯಲ್ಲಿ ಹೋಗಿ ಕೂತುಕೊಂಡೆ. ನನ್ನೊಡನೆ ನನ್ನ ಕೈಚೀಲವನ್ನೊಂದು ಕೊಂಡಿದ್ದೆ, ಉಳಿದ ಸಾಮಾನೆಲ್ಲ ಅಲ್ಲೇ ಬಿಟ್ಟೆ, ಉಗಿಬಂಡಿಯವರು ಆ ಸಾಮಾನನ್ನು ತಮ್ಮ ಸ್ವಾಧೀನ ಪಡಕೊಂಡರು.

ಆಗ ಚಳಿಗಾಲ, ದಕ್ಷಿಣ ಆಫ್ರಿಕೆಯ ಉನ್ನತ ಪ್ರದೇಶದಲ್ಲಿ ಬಹಳ ಚಳಿ. ಮಾರಿಟ್ಸಬರ್ಗ ಪಟ್ಟಣವು ಬಹು ಉನ್ನತ ಪ್ರದೇಶದಲ್ಲಿದೆ. ಅಲ್ಲಿ ಬಹಳ ಚಳಿ ಬೀಳುತ್ತಿತ್ತು. ನನ್ನ ನಿಲುವಂಗಿಯು ಬೇರೆ ಗಂಟಿನಲ್ಲಿತ್ತು. ಆ ಕುರಿತು ಅಲ್ಲಿಯ ಅಧಿಕಾರಿಗಳೊಡನೆ ಕೇಳಿದರೆ, ಅವರಲ್ಲಿ ನನ್ನ ಅವಮಾನ ಮಾಡುತ್ತಾರೇನೆಂದು ತಿಳಿದು, ನಾನು ಚಳಿಯಿಂದ ನಡುಗುತ್ತ ಕೂತುಕೊಂಡೆ. ಆ ಕೋಣೆಯಲ್ಲಿ ದೀಪವಿದ್ದಿಲ್ಲ. ನಡುವಿನ ರಾತ್ರಿಯ ಸಮಯ ಪ್ರಯಾಣಿಕರೊಬ್ಬರು ನನ್ನೆಡೆಗೆ ಬಂದರು. ನನ್ನೊಡನೆ ಮಾತಾಡಬಯಸುತ್ತಿರುವಂತೆ ತೋರುತ್ತದೆ. ಆದರೆ, ನನಗೆ ಮಾತಾಡುವ ಮನಸ್ಸಿದ್ದಿಲ್ಲ.

ನನ್ನ ಕರ್ತವ್ಯವೇನೆಂದು ನಾನು ವಿಚಾರಿಸಹತ್ತಿದೆನು. ನನ್ನ ಹಕ್ಕುಗಳಿಗಾಗಿ ನಾನು ಹೋರಾಡಬೇಕೋ ಜನ್ಮಭೂಮಿಗೆ ಮರಳಬೇಕೋ? ಅಥವಾ ಅವಮಾನಗಳನ್ನೆಲ್ಲ ಸಹಿಸಿ ಪ್ರಿಟೋರಿಯಾ ಪಟ್ಟಣಕ್ಕೆ ಹೋಗಿ ಪ್ರಕರಣವನ್ನೆಲ್ಲ ತೀರಿಸಿಕೊಂಡು ಹಿಂದುಸ್ಥಾನಕ್ಕೆ ಮರಳಬೇಕೋ? ಕರ್ತವ್ಯವನ್ನು ಪೂರೈಸದೆ ಹಿಂದುಸ್ಥಾನಕ್ಕೆ ಮರಳುವದು ಹೇಡಿತನವು, ನಾನೀಗ ಸಹಿಸಬೇಕಾದ ಕಷ್ಟವು ವರ್ಣದ್ವೇಷದ ಘೋರ ರೋಗದ ಲಕ್ಷಣವಾಗಿರುವದು. ಸಾಧ್ಯವಿದ್ದ ಮಟ್ಟಿಗೆ ಆ ರೋಗ

(ಮುಂದೆ ೯ ನೇ ಪಾನು ನೋಡಿರಿ)

ಶ್ರೀ ಕ್ಷೇತ್ರ ಗೋಕರ್ಣದಲ್ಲಿ

ಆಯುರ್ವೇದ ಸಂಗ್ರಹಾಲಯ.

ಶಾಸ್ತ್ರೋಕ್ತ ತಯಾರಿಸಿದ ಕುಪಿಸ್ಥ ರಸಾಯನಗಳು.

೧, **ಸಮೀರ ಪನ್ನಗ**— ಇದು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು. ಹೊಟ್ಟೆ ಉಬ್ಬರಣ, ಹೊಟ್ಟೆಯೊಳಗಿನ ನಾನಾ ಪ್ರಕಾರದ ಬೇನೆ, ಸನ್ನಿಪಾತ ವಿಕಾರಗಳಲ್ಲಿ ಹಲುಬೋಣ, ಸೆಳ್ತಂತೆ ಹಿಡ್ಯಾಡಿಸೀಣ ಮುಂತಾದ ೮೦ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ.

ತೊಲೆ ೧ಕ್ಕೆ ರೂ. ೬-೮-೦.

೨. **ಮಲ್ಲಸಿಂಧೂರ**—ಮಹಾಶ್ವಾಸ. ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ಹಲುಬೋಣ, ಕಫಕ್ಷಯ, ಇಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು-ದಮ್ಮು, ಸಂಧು, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಗಳಿಗೆಯೊಳಗೆ ರೋಗಿಯು ವಾಸಿಯಾಗುತ್ತಾನೆ.

ತೊಲೆ ೧ಕ್ಕೆ ರೂ. ೭-೦ ೦

೩. **ಸುವರ್ಣರಾಜ ವಂಗೇಶ್ವರ**—ಉಪದಂಶಗಳ ಸೇವವಿಕಾರ, ಪರಮಾ, ಧಾತು ಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುನಷ್ಟ, ಸ್ವಪ್ನನಷ್ಟ, ಅಜೀರ್ಣ ಜ್ವರ, ದೌರ್ಬಲ್ಯತೆ, ಮೂತ್ರ ಹಾಗು ಧಾತುಸಂಬಂಧಗಳ ಸಮಸ್ತ ವಿಕಾರಗಳನ್ನ ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನೂ, ಕಾಂತಿಯನ್ನೂ ಕೊಡುತ್ತದೆ. ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ, ಇದರಿಂದ ಏನೊಂದೂ ಉಪದ್ರವವಾಗ ಪದಿಲ್ಲ.

ತೊಲೆ ೧ಕ್ಕೆ ರೂ. ೩-೦-೦

೪. **ವ್ಯಾಧಿಹರಣ ರಸ**— ಉಪದಂಶ, (ಗರಮಿ ಯು) ಇರ ಗೋಪದಂಶ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಆಮವಾಯು, ವಾತರಕ್ತ, ಭಯಂಕರ ವಾತವಿಕಾರ, ಪ್ರಾಮುಖ್ಯವಾಗಿ ಉಪದಂಶಗಳಿಗೆ ಮುಂದಾಗಿ ಆಗುವ ದಮ್ಮು, ಕೆಮ್ಮು, ಸಿಕ್ಕೊತ್ತಸ್ಯ ಇವುಗಳ ಮೇಲೆ ಇಷ್ಟು ಶೀಘ್ರವಾಗಿ ಉಪಚಾರ ಮಾಡುವ ವ್ಯಾಧಿಹರಣ ಮಾಡುವ ರಸಾಯನವು ಇನ್ನಾವುದೂ ಇಲ್ಲ.

ತೊಲೆ ೧ಕ್ಕೆ ರೂ. ೭-೦ ೦.

೫. **ಸೂತಶೇಖರ**— ಸನ್ನಿಪಾತ, ಪ್ಲೇಗ್, ಮೂರ್ಛೆ, ಹಲುಬುವ ವಿಕಾರ (ಪ್ರಮೆ) ಶ್ವಾಸ, ಸೆಳ್ತಂತೆ ಹಿಡ್ಯುವದು, ಹೊಟ್ಟೆನೋವು, ಜದ ಅಪಿತ್ತ ಮುಂತಾದ ವಾತ-ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದು. ಸಾಮಾನ್ಯವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ

ತೊಲೆ ೧ಕ್ಕೆ ರೂ. ೬-೮-೦.

ಇವಲ್ಲದೆ, ತರತರದ ಚೂರ್ಣ, ಘೃತ, ಅವಲೇಹ, ಆಸವ, ಪಾಕ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ.

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ಏರ್ಪಾಟು ಮಾಡಿದ್ದೇವೆ.

ಮೇಲಿನ ಎಲ್ಲ ಸಂಗತಿಗಳ ಕುರಿತ ಹೆಚ್ಚಿನ ವಿವರ ಬೇಕಾದಲ್ಲಿ ಉತ್ತರದ ಸಲುವಾಗಿ ಸ್ಟ್ಯಾಂಪು ಜೊತೆಗಿಟ್ಟು ಈ ಕೆಳಗಿನ ಪತ್ತೆಗೆ ಬರೆಕೊಳ್ಳತಕ್ಕದ್ದು.

ಪತ್ತೆ — ಶ್ರೀ॥ ಗಜಾನನ ಅಪ್ಪು ಭಟ್ಟ ವೇದೇಶ್ವರ,

ಆಯುರ್ವೇದಿಕ ವೈದ್ಯ,

ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ.)



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಸೀಸೆ ಕಟ್ಟಿಗೆಯ

ದೇವರ ಮಂಟಪಗಳೂ,

ತೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ತಿಜೋರೀ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ: —

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,

ಬಂಡಿ ಭವನ,

ಕಾರವಾರ

"ಸರಸ್ವತೀ"

ಇಡೀ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ಕೃಷ್ಟವಾದ ತಿಂಗಳಿನ ಮಾಸಪತ್ರಿಕೆ ಇದೊಂದೇ.

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಓದತಕ್ಕ ವಿಷಯಗಳು ಮಾತ್ರ 40 ಪುಟಗಳಿವೆ. ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಶೀಲಾ" ಎನ್ನುವ ಕಾದಂಬರಿಯೂ, 'ಶಹಾಜಹಾನ'ಎನ್ನುವ ನಾಟಕವೂ ಸಾಹಿತ್ಯಪರಿಷತ್-ಗಲ್ಪ-ಕೈಪಿಡಿ-ಮುಕ್ತಿನ ಸರ-ಚಾರು ಚರಿತಾವಳಿ-ಗೃಹವಿಜ್ಞಾನ-ವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಿಕೆಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ಚಂದಾದಾರರಿಗೆ "ಶಾರದಾ ಗ್ರಂಥಮಾಲೆ"ಯಲ್ಲಿ ಇದು ವರೆಗೆ ಪ್ರಕಟವಾಗಿರುವ 'ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದೂ ಸಾಗ್ರೋದಯ-ರಣಕೇಸರಿ' ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು. ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವದರಿಂದ ಪ್ರಕಟನೆಗೆ ಅತ್ಯುತ್ತಮವಾದ ಪತ್ರಿಕೆ. ವಾರ್ಷಿಕ ಚಂದಾ ರೂ. 3-0-0 ಮಾತ್ರ. ವಿದ್ಯಾರ್ಥಿಗಳಿಗೂ, ವಾಚನಶಾಲೆಗಳಿಗೂ ರೂ 2-0-0 ಮಾತ್ರ

ವಿಳಾಸ.— "ಸರಸ್ವತೀ" ಕಾರ್ಯಾಲಯ,

ಚಾಮರಾಜಪೇಟೆ, ಬೆಂಗಳೂರು ಸಿಟಿ.

ಚವರಲೆಟ್

ಮೋಟಾರಕಾರ್ ಏಜನ್ಸಿ, ಕೆನರಾ



ನಾವು ಹೊಸ ಚವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಸರಿಸಿ ಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲ ಏಜಂಟ —**ಎಸ್. ಎಲ್. ಘಾಟಪ್ಪ ಮತ್ತು ಬ್ರದರ್ಸ, ಶಿರಸಿ**

ಕುಮಟಾ ಏಜಂಟ. **ಜಿ. ಡಿ. ಮಳಗಿಕರ ಎಂಡ್ ಕೊ.**

ಬಿ. ಪಿ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲೊಪ್ ಹಾಗು ಮಿಚಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮುಗ್ರಿಗಳ ಯೋಗ್ಯಬೆಲೆಯಿಂದ ಪೂರೈಸುತ್ತೇವೆ

G. D. Malgikar & Co.

KUMTA.

ಗೆಳೆಯರ ಗುಂಪಿನ.

ಕನ್ನಡ] **ಸ್ವಧರ್ಮ.** [ವಾರಪತ್ರಿಕೆ

ಸಂಪಾದಕರು:-ದ ರಾ. ಬೇಂದ್ರೆ. ಬಿ. ಎ

ವಾರ್ಷಿಕ ವರ್ಗಣಿ ೩—೦—೦

ಸಮಾಜದಲ್ಲಿ ಶಾಂತಿತೃಪ್ತಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೆಳಸಿಗೆ ಸುವಿಚಾರವೇ ಸರಿಯಾದ ಸಾಧನ. ಇಂಥ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊರಬರೇ ಸ್ವಧರ್ಮದ ಗುರಿ ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿ .

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ಕಡೇವಿದ್ದು, ಸುವಾಸಿಕ ವಿರುತ್ತದೆ ಇದರ ಸೇವನದಿಂದ ಬಾಯಿಯ ಕೆಟ್ಟ ಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು. ೧ ಪುಡಿ ಕಿಂ ರೂ.೦-೦-೬, ೩ಡಿರ ಕಿಂ ರೂ. ೦-೯-೦ ೧೦೦ ಕಿಂ ರೂ ೨-೦-೦; ೫೦೦ ಪುಡಿಗಳ ಕಿಂ. ರೂ ೯-೦-೦, ೧೦೦೦ ೧೭ ೦-೦, ಟ. ಪೆ ಖರ್ಚು ವಗೈರೆ ಪ್ರತ್ಯೇಕ.

ಸುಗಂಧಿ ನಶ್ಯ:—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದಿದ್ದು, ಇದರಿಂದ ಶೈತ್ಯ, ಥಂಡಿ, ಅರತಲೆನೋವು ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿ ಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ರೂ. ೦-೪-೦; ೧ ಡಜನ್ ಡಬ್ಬಿ ಕಿಂ ರೂ ೩-೦-೦ ಪೆ. ಪೋ ಖರ್ಚು ಬೇರೆ

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳ ನಮ್ಮಲ್ಲಿ ತಯಾರಿರುತ್ತವೆ ಕಿಮ್ಮತ್ತಿನ ವಿಷಯಕ್ಕೆ ಬರೆದ, ಪುರವತ್ ನೋಡಿ ಮಾಲಿಗೆ ಆರ್ಡರ ಕೊಡಬಹುದು. ಇದರ ಹೊರತು, ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ, ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು, ಖರೀದಿ ಮಾಡಿಕೊಡುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು

ಪತ್ತೆ:— **ಎಸ್. ಬಿ. ಕದಂ,**
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು: ಪೋ. ನಿಪ್ಪಾಣಿ, ಜಿ. ಬೆಳಗಾಂವ.

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ಸೇವಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ
ಹಾಗೂ
ಅಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ
ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ:—

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ; ಗೋಕರ್ಣದಿಂದ ಅಂಕೋಲಾ, ಕಾರವಾರ

ಟೀಪು:— ಟಿಕೀಟು ಮುಂದಾಗಿ ತಕ್ಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ಶಿರೋಡಕರ,
ಮೋಟರ ಏಜಂಟ,
ಕುಮಟಾ (ಉತ್ತರ ಕನ್ನಡ)

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾತರದ ರೇಶ್ಮೆ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಕರವೀರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲೆಗಳು ಸಿಗುತ್ತವೆ ಕ್ಯಾಟಲಾಗ ಕೇಳುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣ ಆಚಾರ್ಯ
ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ. ಯಾದವ

ಸುಗಂಧಿ ನಶ್ಯದ ಪುಡಿ

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಹೇಳಲ್ಪಟ್ಟ ೯೩ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಠರಾಗ್ನಿ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಟಿಕೆಟ್ ಕಳಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ ಪಿ. ೦-೮-೦ ದಯವಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ— ಗುರುಬಸವ ಆಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪೋರ್ಟಟೌನ, ಮದರಾಸ

ಸರಕಾರದಿಂದ ಪೇಟೆಂಟ ಪಡೆದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಬಹು ಅನುಕೂಲವಾಗಿರುವದು

ಇದು mild steelವೆಂಬ ಜಾತಿಯ ಕಬ್ಬಿಣ ತೆಗೆದಿರುವ ಮಾಡಲ್ಪಟ್ಟಿರುವದು. ಎತ್ತುಗಳಿಗೆ ಬಹಳೇ ಹಗುರು ಹೋಗುತ್ತದೆ. ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಯಿಂದ ನೀರ ಡೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ.

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ ಮಾಸಪತ್ರಿಕೆ.

ಸಂಪಾದಕ— ಶ್ರೀ ಬಾಗಲ ಲಕ್ಷ್ಮಣರಾಯರು, ಸಾಹಿತ್ಯ ವಿಶಾರದ
ಮಾದರಿ ಸಂಚಿಕೆ ಪುಕ್ಕಟೆ ದೊರೆಯುವದು. ವಾರ್ಷಿಕ ಚಂದಾ ರೂ. ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೪೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತಿರುವರು ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ನೆಗಡಿ, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುವವರು ಇದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಪೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg. No. B 1870

Monday July 26th, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೨.

ವರ್ಗಣಿ [illegible] [illegible] ರೂಪಾಯಿ 2-4-0 ... ರೂ. 3-0-0. ... ರೂಪಾಯಿ 3-2-0. ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ ... ರೂ. 1-0- ... 0-2-0. ...

परपरितहितकर्ता ... भवति लोके ... पार्थिवेन्द्रः।
इति महति विरोधे ... समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೨೬ ನೆಯ ಜುಲೈ ಸನ್ ೧೯೨೬ ನೇ ಇಸವಿ.)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतली किंमत २ रुपये;

रामबाण औषधें
सर्दि घालविणारें,
भूक वाढविणारें,
श्वासोच्छ्वास साफ करणारें,
झोंप आणणारें,
शक्ति देणारें,
तजरतीपणा आणणारें,

पिण्यास रुचिकर,
कॅटलाग मागवा,

पंडुफार्मास्युटिकलवर्क्स लिमिटेड,
मुंबई नं. १३

एजंट— मेसर्स पंडित आणि कंपनी,
तीर्थहळ्ळी.

ಎಲ್ಲಾ ನೋವುಗಳಿಗೆ ದಿವ್ಯೌಷಧವು
ವಾತಹಾರಿ ತೈಲ.

[illegible]

ಕೆರೇಕರ ಕಾಟೂರೀ ಹಿಂಗಿನ ದುಕಾನ
ಅವರ್ಸಬಾಜಾರ, ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.
Jewellers, KUMTA.
ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬಿಗೆಯ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.
ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



[illegible]

ಅಲ್ಪವೇ ಇವೆ; ಈಗಲೇ ಬರೆಯಿರಿ.

ವಿಳಾಸ:— Swan House: P B 603 P T Madras

ಅತ್ಯಲ್ಪ ಬೆಲೆ! ಕೇವಲ ಉಚಿತ



ಉಚಿತ ಉಚಿತ ಕೇವಲ ಉಚಿತ

[illegible]

CAPTAIN WATCH CO, P. B 265, MADRAS

ಗೌರೀಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ [ಮಾಸಪತ್ರಿಕೆ

ಸಂಪಾದಕ—ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ ಜೀವನಕಾಟ್ಯ ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಇರುತ್ತವೆ. ವಾರ್ಷಿಕ ವರ್ಗಣಿ ರೂ ೩—೮—೦

— ಮ್ಯಾನೇಜರು ಜಯಕರ್ನಾಟಕ ಧಾರವಾಡ

ರೋಗದಿಂದ ನರಳಬೇಡಿರಿ

ನಿಮ್ಮಲ್ಲಿ ಜಂತು ಜಾತಿಯು, ಪಿತ್ತ ಜಾತಿಯು ಎಲ್ಲ ತರದ ಜ್ವರ, ಜ್ವರಗಟ್ಟಿ, ಚಳಿಜ್ವರ, ಗಂಟಲ ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ಸಂಧಿವಾತ, ನರ, ವಾತ, ಕಲಿಮಲತ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ ಉಪದಂಶ, ಬಾಲಗ್ರಹ, ಖಜ್ಜಿ, ಗಜಕರ್ಣಗಳಿಗೆ ಮಂತ್ರ ತಂತ್ರ ಬರುವ ಜರ್ಮನ ಅಮೇರಿಕನ ಫ್ರೆಂಚ ಇಂಗ್ಲಿಷ ಪೇಟೆಂಟ ಔಷಧಗಳು ಅಗ್ಗವಾಗಿ ಸಿಗುವವು

ಇವಲ್ಲದೆ ಎಲ್ಲ ತರದ ಸೀಶನರಿ ವಗೈರೆ ಸ್ಟೇಶನರಿ ಸಾಮಾನು, ಹಿಟ್ಟು ಸೋಪು, ಹೇರ್ ಆಯಿಲ್, ಮೋಟಾರು ಸಾಮಾನು, ಬಂಡಿಗಳು ಸಿಗುವವು ನಮ್ಮಲ್ಲಿದ್ದ ಸಾಮಾನು ದೇಶ ದೇಶದಿಂದ ತರಿಸಿಕೊಡಲಾಗುತ್ತದೆ.

ಎಸ್ ಎಲ್ ಧಾಕಪ್ಪ ಮತ್ತು ಬ್ರದರ್ಸ,
ಶಿರಸಿ

ರಾಗದ ಪೆಟ್ಟಿಗೆಗಳು.

ನಾಟಕ ಸಾಮಾನು:—
ತಬಲೆ, ಡಕ್ಕೆ ವಗೈರೆ



೧ ಪೆಟ್ಟಿಗೆ-ಸಿಂಗಲ ರೀಡ ೩೫, ೩೦, ೪೦ ೫೦, ೬೦
೨ ,, -ಡಬಲ ರೀಡ ೪೦, ೪೫, ೫೦, ೬೦, ೧೦೦
೩ ಕಾಲುಪೆಟ್ಟಿಗೆ ,, ರೂ ೬೫, ೭೫, ೧೦೦, ೧೫೦
೪ ತಬಲೆ (ತಾಮ್ರದ ಡಗ್ಗ ಸಹಿತ) ರೂ ೧೬, ೧೮, ೨೦
ಹಾರ್ಮೋನಿಯಮ್ ರಿಪೇರಿ ರೂ ೧॥
ತಬಲೆ ೧ ರಿಂದ ೨ ವರೆಗೆ
ಮಾಹಿತಿಗಾಗಿ ಕ್ಯಾಟಲಾಗು ಪುಕ್ಕಟೆ ದೊರೆಯುವದು

ಗೋಪಾಳೆ ಸಹಾರಾಮ ಮತ್ತು ಕಂಪನಿ
ಸಂ ೫೮೦ ವಿಠ್ಠಲವಾಡಿ ಎದುರಿಗೆ
ಕಾಳಬಾದೇವಿ ರೋಡ,
ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ
ಜೋಗ
ರೆಗ್ಯುಲರ್
ಸರ್ವಿಸ್



ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ ಮುಂಡಗೋಡ ಶಿರ್ಸಿ ಕುಮಟಾ ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಸಿ- ಸಿದ್ದಾಪುರ- ಗೇರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ. ಪ್ರಯಾಣಿಕರಿಗೆ ಅನುಕೂಲವಾಗುವಂತೆ ಎಲ್ಲ ಸ್ಟೇಶನಗಳಲ್ಲೂ ಏಜಂಟರ ನಿಯಾಮಕ ಮಾಡಿದೆ
ಹೆಚ್ಚಿನ ಮಾಹಿತಿಯನ್ನು ಏಜಂಟರಿಂದ ತಿಳಿದುಕೊಳ್ಳಬಹುದು

M. Manjappa
Proprietor.

अगर्दी फुकट.
वैद्यविद्या

आरोग्यसंपत्ति आणि पूर्ण सुखाचा सरळ रस्ता दाखविणारा वैद्यविद्या नावाचा मोठा अ युर्वेदीक पुस्तकाचा नवीन आवृत्ति बाहेर पडली आहे. हे पुस्तक किंमत व पोष्ट खर्च घेतल्या शिवाय अगर्दी फुकट पाठविण्यात येते तरी हे पुस्तक आजच मागवा

प्रमेहावर रामबाण औषध.
मेहमर्दनचूर्ण.

हे चूर्ण फकत तीन दिवस लागोपाठ घेत ल्याने लघवीस होणारी आग, लवकर धातू जाणे व्याधि या औषधाच्या सेवनाने एकदम बरे होतात.

कि. १० तोळ्याच्या डब्यास रु १.

राजवैद्य नारायणजी केशवजी, जामनगर (काठेवाड)
कुमठा एजन्ट— माधव मातप्पा शेणवी, बेलेकेरी

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸ್ವಾದಿಷ್ಟವಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದ ಬೇನೆಯು ಹೋಗುವದು ೬೦ ೭೦ ವರ್ಷದ ಮುದಿ ತರ ಕಾಯಕಾಂತ ಕಾಣ ತರುಣರಂತೆ ಪ್ರವರ್ಧಮಾನವಾಗುವದು ನಿಜವಾ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ವ್ಯಾಕುಳ ಪಡುವರಿಗೆ ಶಕ್ತಿಯು ಇಲ್ಲದಂತಾಗುವದು ವೀರ್ಯಸ್ಖಲನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ದುರ್ಬಲತೆ ತುಂಬುವದು — ವಿರಸವೂ ಹಾಗೂ ಕಾನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಇವರು ದಿವಸದಲ್ಲಿ ಎಷ್ಟು ಬಾರಿ ಕಾಲು ಕೈ ತೊಳೆದು ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಗೋದಾವರೀ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ನೋಡಬೇಕೆಂದರೆ ಒಂದು ಬಾಟಲಿ ತರಿಸಿ ನೋಡಿರಿ ಮಧುವಿನ ಉಪಯೋಗ ಎಷ್ಟೇ ದಿವಸದ ಕಾಲ ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ ಪ್ರತಿದಿವಸ ತೆಗೆದುಕೊಳ್ಳುವ ಕಾರಣದಿಂದ ಹೊಸಬರೆಂದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣವಾಗುವದು ಶೀಘ್ರ ರೋಗವಿದ್ದರೆ ೩ ಬಾಟಲಿಯಿಂದ ಗುಣವಾಗುವದು ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೪—೦—೦ ಮೂರು ಬಾಟಲಿಗಳನ್ನು ಒಂದೇ ಸಾರ್ತಿಗೆ ತರಿಸುವವರಿಗೆ ಪೋಸ್ಟೇಜ ಹಚ್ಚಲಾಗುವದಿಲ್ಲ ಐದು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಕೊಡುವೆವು. ಟಪಾಲ ಖರ್ಚು ಬೇರೆ ಬೀಳುವದು ಪೋಸ್ಟೇಜ ಕಮಿಷನ್ ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ ಪಾರ್ಸಲ ೫—೦

ಮ್ಯಾನೇಜರ— ದ್ರಾಕ್ಷಾರ್ಕಮಧು. ಆಫೀಸ ಶ್ರೀ ಸಿದ್ದೇಶ್ವರ ಜಿ ಬೆಳಗಾಂವ

ಘುರೀಣರ ಧೂರ್ತತನ !

ಲೋಕಲ್ ಫಂಡಿನ ಏರಿಕೆಯ ಕುರಿತು ಧುರೀಣ' ನು "ಲೋಕಲ್ ಫಂಡು ಏರಿಸ ಬೇಕೇ? ಏಕೆ?" ಎಂಬ ಸದರು ಕೊಟ್ಟು ಬರೆದ ಲೇಖವೇನಂದರೆ.—

ಉತ್ತರ ಕನ್ನಡ ಜಿಲ್ಲೆಯ ಲೋಕಲ್ ಬೋರ್ಡಿನ ಸಭೆಯು ಇದೇ ಬರುವ ಆಗಸ್ಟ ತಿಂಗಳ ೧೫ಕ್ಕೆ ಕಾರವಾರದಲ್ಲಿ ಕೂಡಬೇಕೆಂದು ಅಧ್ಯಕ್ಷರು ನೋಟೀಸು ಹೊರಡಿಸಿದ್ದಾರೆ. ಈ ಸಭೆಯಲ್ಲಿ ಈಗೆ ರೂಪಾಯಿಗೆ ಒಂದಾಣೆಯಿದ್ದ ಲೋಕಲ್ ಫಂಡನ್ನು ಎರಡಾಣೆಗೆ ಏರಿಸಬೇಕೇ ಎಂಬ ಪ್ರಶ್ನೆಯು ವಿಚಾರವಾಗತಕ್ಕದ್ದಿದೆ. ಇದು ಮಹತ್ವದ ಪ್ರಶ್ನೆಯಾಗಿರುವುದರಿಂದ ಈ ಕುರಿತು ಮೆಂಬರರು ಚೆನ್ನಾಗಿ ವಿಚಾರ ಮಾಡಬೇಕಾಗಿರುವುದಲ್ಲದೆ ಲೋಕಮತವೂ ಜಾಗ್ರತಿ ಹೊಂದುವುದು ಅವಶ್ಯವಿದೆ. ಈ ಘಳಿಗೆಯ, ವಿಚಾರಶೀಲರೂ ಆದ ಲೋಕಪಕ್ಷೀಯರು ತಮ್ಮ ವಿಚಾರಗಳನ್ನು ಮುಂದಿಡುವುದೂ ಯುಕ್ತವಾಗಿದೆ.

ಲೋಕಲ್ ಬೋರ್ಡಿನ ಅಧ್ಯಕ್ಷರು ತಮ್ಮ ನೋಟೀಸಿನಲ್ಲಿ ಸೂಚಿಸಿದಂತೆ ಉತ್ತರ ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಸಾರದ ಬಗ್ಗೆ ಲೋಕಲ್ ಬೋರ್ಡಿನವರು ಪ್ರಯತ್ನಪೂರ್ವಕ ಮಾಡಿಕೊಳ್ಳುವುದು ಅವಶ್ಯವಿದೆ. ಈ ವಿಷಯದಲ್ಲಿ ಅಲ್ಪ ವೆಚ್ಚದಿಂದ ಶಾಲೆಗಳಿಲ್ಲದ ಹಳ್ಳಿಗಳಲ್ಲಿ ಹೇಗೆ ಶಿಕ್ಷಣಪ್ರಸಾರ ಮಾಡಬಹುದೆಂಬುದೂ ವಿಚಾರಣೀಯವಾಗಿದೆ. ಆದರೆ ಉತ್ತರ ಕನ್ನಡದಲ್ಲಿ ಶಿಕ್ಷಣದಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚಿನ ಮಹತ್ವದ ಪ್ರಶ್ನೆಯೆಂದರೆ ಆರೋಗ್ಯ ರಕ್ಷಣೆಯು. ಈ ವಿಷಯದಲ್ಲಿ ಈಗಿನ ಶೋಚನೀಯ ಸ್ಥಿತಿಯನ್ನುದ್ದೇಶಿಸಿ ಇನ್ನೊಂದೆಡೆ ಚರ್ಚಿಸಿದ್ದೇವೆ. ಜನತೆಯು ಶಿಕ್ಷಣವನ್ನು ಹಿಂದಕ್ಕಿಡಬಹುದು. ಆದರೆ ಜನರ ಸಾವು-ಬದುಕಿನ ಪ್ರಶ್ನೆಯಾದ ಆರೋಗ್ಯ ರಕ್ಷಣೆಯನ್ನು ಹಿಂದಕ್ಕಿಡಲು ಶಕ್ಯವಿಲ್ಲ. ಹಾಗೆ ಮಾಡಿದರೆ ಆತ್ಮಘಾತಮಾಡಿಕೊಂಡಂತಾಗುವುದು.

ಆರೋಗ್ಯರಕ್ಷಣೆ ಮತ್ತು ಶಿಕ್ಷಣಪ್ರಸಾರ ಇವೆರಡು ಉದ್ದೇಶಗಳನ್ನು ಕೃತಿಯಲ್ಲಿ ತರುವುದಕ್ಕೆ ದ್ರವ್ಯಸಹಾಯವು ಬೇಕೇ ಬೇಕು. ಉತ್ತರ ಕನ್ನಡವು ಒಂದು ಜಿಲ್ಲೆ. ಕರ್ನಾಟಕದ ಪ್ರದೇಶಾನ್ವಯ ಎಲ್ಲ ಜಿಲ್ಲೆಗಳಿಗಿಂತ ಇಲ್ಲಿ ಹೆಚ್ಚು ಕರದ ಭಾರವು ಬೆಳೆದಿದೆ. ಆದರೆ ಲೋಕಲ್ ಬೋರ್ಡಿನ ಉತ್ಪನ್ನ ಬೆಳೆಸದಿದ್ದರೆ ಮೇಲಿನ ಉದ್ದೇಶಗಳು ಸಾಧಿಸಲಾರವು. ಜಂಗಲ ಖಾತೆಯವರು ಉತ್ತರ ಕನ್ನಡದಿಂದ ಲಾಭಹೊಂದುತ್ತಿರುವ ಒಂದು ಎಕ್ರೆ ಅಡವಿಯ ಮೇಲೆ ಒಂದಾಣೆಯಂತೆ ಕೊಟ್ಟರೂ ಒಂದು ಲಕ್ಷಕ್ಕಿಂತ ಹೆಚ್ಚಿಗೆ ಹಣ ಸಿಕ್ಕಬಹುದು. ಹಾಗೆ ಕೊಡುವುದು ಸಮಂಜಸವಾಗಿದೆ. ಲೋ|| ಬೋ|| ದವರು ಈ ಕುರಿತು ಅವಶ್ಯವಾಗಿ ಪ್ರಯತ್ನಿಸಬೇಕು. ಆದರೆ ಬೋರ್ಡಿನವರು ಈ ಬಾಬದ ಆಕಾಶದ ಕಣ್ಣಿಗೆ ಕೊಡುವುದು ಯತ್ನಸಾಧ್ಯವಾಗಲಿಕ್ಕಿಲ್ಲ. ಈ ದ್ರವ್ಯದ ಮೇಲೆ ಆಗ್ರಹ ಮಾಡುವುದಕ್ಕೂ ಬೋರ್ಡಿನವರಲ್ಲಿ ಸತ್ತೆಯಿಲ್ಲ. ಅಪ್ರತ್ಯಕ್ಷ ಕರವನ್ನು ಕೆಲ ಮಟ್ಟಿಗೆ ಕಟ್ಟಬಹುದಾದರೂ, ಅದರ ಪರಿಣಾಮವು ಬಡವರ ಮೇಲೇ ಬೀಳುವುದು. ಆದರಿಂದ ಲೋಕಲ್ ಬೋರ್ಡಿನವರಿಗೆ ಶಕ್ಯವಿದ್ದ ಮತ್ತು ಸುಲಭವಾದ ಝರಿ (Source) ಯೆಂದರೆ ಲೋಕಲ್ ಫಂಡನ್ನು ಏರಿಸುವದೊಂದೇ ವಿನಾ ಬೇರೆಯಿಲ್ಲ.

ಆರೋಗ್ಯರಕ್ಷಣೆ ಮತ್ತು ಶಿಕ್ಷಣ ಈ ಎರಡು ವಿಧಾಯಕ ಕಾರ್ಯಗಳಿಗೆ ಲಕ್ಷಗಟ್ಟಲೆ ರೂಪಾಯಿಗಳಿದ್ದರೂ ಬೇಕು. ಆದರೆ ಹಾಸಿಗೆಗೆ ತಕ್ಕ ಕಾಲು ನೀಡತಕ್ಕದ್ದಾಗಿರುವದರಿಂದ ಮೆಟ್ಟಿಲಿನಿಂದ ಗಟ್ಟಿಯಾದ ಹೆಜ್ಜೆಯಿಟ್ಟು ಪ್ರಗತಿ ಮಾಡುವುದೇ ಜಾಣತನವು. ನ್ಯಾಯಕ್ಕೆ ಗಡ್ಡ ಬೀಸುವದು ಉಚಿತವಲ್ಲ. ಲೋಕಲ್ ಬೋರ್ಡಿನ ಖರ್ಚನ್ನಿ ವನ್ನು ಸರಕಾರವು ಸಹಿಸುವುದು. ಉತ್ತರ ಕನ್ನಡದಲ್ಲಿ ಲೋಕಲ್ ಫಂಡಿನಿಂದ ೬೨ ಸಾವಿರ ರೂ. ಉತ್ಪನ್ನವಾಗುತ್ತದೆ. ಈಗ ಪುನಃ ಒಂದಾಣೆ ಏರಿಸಿ, ಎರಡಾಣೆಗೆ ಮುಟ್ಟಿಸಿದರೆ ಪುನಃ ೬೨ ಸಾವಿರ ರೂಪಾಯಿಗಳು ಬರಬೇಕು. ಆಗ ಸರಕಾರದವರು ಅದರ ಅಪ್ಪಟಿ ಅಂದರೆ ೧೨೬ ಸಾವಿರ ರೂಪಾಯಿಗಳನ್ನು ಕೊಡುವರು. ಅಂತೂ ಒಟ್ಟಿಗೆ ೧೮೬ ಸಾವಿರ ರೂ. ಬೋರ್ಡಿಗೆ ಆದಾಯವಾಗುವುದು. ಆದರೆ ಒಮ್ಮೆಗೆ ಒಂದಾಣೆ ಏರಿಸುವುದು ಗ್ರಾಹ್ಯವಾಗಲಿಕ್ಕಿಲ್ಲ. ರೈತರಿಗೆ ಒಮ್ಮೆಗೇ ಭಾರವೆನಿಸಬಹುದೆಂದೂ ನಮಗೆ ತೋರುತ್ತಿದೆ. ಆದರಿಂದ ಈಗಿನ ಮಟ್ಟಿಗೆ ಅರ್ಧ ಆಣೆಯನ್ನು ಮಾತ್ರ ಏರಿಸಬಹುದೆಂದು ನಮ್ಮ ಸೂಚನೆಯಿದೆ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ್ಯ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವುದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ಹಚ್ಚಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರೆತು ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

——೦——

೪ ಔನ್ಸಿಗೆ	ರೂ.	೨—೦—೦
೧ ಔನ್ಸಿಗೆ	,,	೦—೯—೦
೧ ಡ್ರ್ಯಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಮತ್ತು ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY**

ಅಧೀನಕರಿಸುವನ್ನು ಪರಿಸಿದರೆ ೩೧ ಸಾವಿರ ರೂಪಾಯಿ ಹುಟ್ಟುವುದು, ಸರಕಾರದಿಂದ ೬೨ ಸಾವಿರ ರೂಪಾಯಿಗಳು ಸಿಕ್ಕುವವು. ಅರ್ಥಾತ್ ೯೩ ಸಾವಿರ ರೂಪಾಯಿಗಳು ಈ ಯೋಜನೆಯಿಂದ ಕೂಡುವವು. ಈ ಹಣವು ಸಂಪೂರ್ಣವಾಗಿ ಆರೋಗ್ಯರಕ್ಷಣೆ ಮತ್ತು ಪ್ರಾಥಮಿಕ ಶಿಕ್ಷಣ ಪ್ರಸಾರಗಳ ಬಗ್ಗೆ ವೆಚ್ಚವಾಗಬೇಕೆಂದು ನಮ್ಮ ಸೂಚನೆ. ಉತ್ತರ ಕನ್ನಡದ ಹಳ್ಳಿಗಳಲ್ಲಿ ಯಾವ ತರದ ಅನಾರೋಗ್ಯ ಸ್ಥಿತಿಯಿದೆ, ಅದನ್ನು ಹೇಗೆ ಹೋಗಲಾಡಿಸಬೇಕು ಎಂಬ ಕುರಿತು ಅನುಭವಿಕರ ಮತ್ತು ತಜ್ಞರ ಸಲಹೆಯಿಂದ ಯೋಜನೆಯನ್ನು ತಯಾರಿಸಿ ಕಾರ್ಯಾರಂಭ ಮಾಡಿಸಬೇಕು. ಮತ್ತು ಶಾಲೆಗಳಿಲ್ಲದ ಚಿಕ್ಕ ಚಿಕ್ಕ ಹಳ್ಳಿಗಳಲ್ಲಿ ನಿಯಮಿತ ವೆಚ್ಚದಿಂದ ಸಾಕ್ಷರತೆಯ ಪ್ರಸಾರವನ್ನು ಮಾಡುವ ಸುಲಭ ಉಪಾಯ ಯಾವುದು ಎಂಬುದನ್ನೂ ಅನುಭವಿಕರ ಸಹಾಯದಿಂದ ಕಂಡುಹಿಡಿದು ಆ ಬಗ್ಗೆಯೂ ಒಂದು ಯೋಜನೆಯನ್ನು ತಯಾರಿಸಬೇಕು. ಮತ್ತು ಈ ಎರಡು ವಿಧಾಯಕ ಕಾರ್ಯಗಳಿಗೆ ಅಧೀನಕರಿಸುವದರಿಂದ ದೊರೆಯಬಹುದಾಗುವ ೯೩ ಸಾವಿರ ರೂಪಾಯಿಗಳನ್ನು ಎರಡು ಭಾಗ ಮಾಡಿ ಹಂಚಿಕೊಡಬೇಕು.

ಸಾರಾಂಶವೇನಂದರೆ— (೧) ಲೋಕಲ್ ಫಂಡನ್ನು ಅಧೀನಕರಿಸುವದರಿಂದ ಪರಿಸಿದ ವಿನಾ ಬೇರೆ ಉಪಾಯವು ತೋರುವದಿಲ್ಲ. (೨) ಇದರಿಂದ ಬರುವ ಆದಾಯವು ಬೇರೆ ಬಾಬತ್ತಿಗೆ ವೆಚ್ಚವಾಗಬಾರದು. ಅಥವಾ ಜನತೆಯ ಮೇಲೆ ಕರದ ಭಾರವು ಹೆಚ್ಚಾಗಬಾರದು. (ಈ ಹಿಂದೆ ಲೋಕಲ್ ಬೋರ್ಡಿನ ಹಣವು ಸರಕಾರದಿಂದ ಸಿಕ್ಕುವ ಇದ್ದ ಹಣದ ಸಮೇತ ಪೂರ್ಣವಾಗಿ (೧) ಹಳ್ಳಿಗಳ ಆರೋಗ್ಯರಕ್ಷಣೆ ಮತ್ತು (೨) ಹಳ್ಳಿಗಳ ಶಿಕ್ಷಣಗಳ ಬಗ್ಗೆ ವೆಚ್ಚವಾಗಬೇಕೆಂದು ನಿರ್ದಿಷ್ಟಪಡಿಸತಕ್ಕದ್ದು. ಇದು ನಮ್ಮ ಪ್ರಾಮಾಣಿಕ ಮತವು. ಲೋ. ಬೋ. ಮೆಂಬರರು ಇದನ್ನು ಗಮನಿಸುವರೆಂದು ನಂಬುತ್ತೇವೆ.

***

ಹುಡುಕುವಿರಾ ?!

ಒಬ್ಬ ಶಿಕ್ಷಕನುಳ್ಳ ಒಂದು ಶಾಲೆಯ ವಾರ್ಷಿಕ ವೆಚ್ಚವು ಸಾಮಾನ್ಯವಾಗಿ ಉತ್ತರ ಕರ್ನಾಟಕದಲ್ಲಿ ೩೦೦ ರಿಂದ ೬೦೦ ರೂ ವರೆಗೂ ಬರುತ್ತಿರುವುದು. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಹಳ್ಳಿ ಶಾಲೆಗಳಲ್ಲಿ ಹಾಜರೀ ಪುಸ್ತಕದಲ್ಲಿ ೨೦-೩೦ ಹುಡುಗರ ಸಂಖ್ಯೆಯಿದ್ದರೂ, ೮-೫ ಹುಡುಗರು ಮಾತ್ರ ಶಾಲೆಗೆ ಬರುತ್ತಿರುವುದು ವ್ಯಕ್ತವಾಗುತ್ತಿದೆ. ಅಂಥಲ್ಲಿ ಒಬ್ಬೊಬ್ಬ ಹುಡುಗನ ಬಗ್ಗೆ ವರ್ಷಕ್ಕೆ ೬೦—೧೦೦ ರೂ ವರೆಗೆ ಖರ್ಚು ಮಾಡಿದಂತಾಗುವುದು. ಹೀಗಾದರೆ ಇದು ಸಾರ್ವಜನಿಕ ದ್ರವ್ಯದ ಅಪವ್ಯಯವೆಂದು ತಿಳಿದ ಬೇಕು. ಈ ಕುರಿತು ನಿಯಮ, ನಿರ್ಬಂಧಗಳನ್ನು ಮಾಡಿ ಊರಜನರನ್ನು ಎಚ್ಚರಿಸಿ ಶಿಕ್ಷಕರನ್ನೂ ಹತೋಟಿಯಲ್ಲಿಡುವುದು ಅವಶ್ಯವಿಲ್ಲವೇ ?

[ಕಾನಡಾ ದುರೀಣ, ತಾ ೧೩—೭—೩೬

BATLIBOI'S
Accountancy Training Institute
Recognised by
The G. D. A. Board

Offers best training in Accounting, Banking, Company Management and Secretarial Work and Theory and Practice of Commerce.

Best staff. Individual attention. Fee moderate, and payable by instalments.

Send for Prospectus at Yusuf Buildings Churchgate street, Fort, Bombay.

You are invited to make thorough enquiry before joining.

TUITION BY POST
IS OUR SPECIALITY.

ಲೋಕಮಾನ್ಯರ ಪುಣ್ಯಸ್ಮರಣೆ.

(ಶ್ರೀ|| ದಾಮೋದರ ವಿನಾಯಕ ಬಾಪಟ ಇವರು ಪ್ರಕಟಿಸಿದ
" ಲೋಕಮಾನ್ಯಾಂಚೇ ಆಠವಣೀ ವ ಆಖ್ಯಾಯಿಕಾ " ಎಂಬ ಗ್ರಂಥದ ಆಧಾರದಿಂದ.)

ಪುಣೆಯ ಡೆಪ್ಯುಟಿ ಕಲೆಕ್ಟರ ಪೆನ್ಶನರಾದ ರಾ|| ಅಣ್ಣಾ ಸಾಹೇಬ ದೀವಾಣದೇಶಪಾಂಡೆ ಹೇಳುವದೇನಂದರೆ — " ನಾವು ಹುಡುಗರು ೧೪ ೧೫ ವರ್ಷ ಪ್ರಾಯದವರಿದ್ದಾಗ ಪರ್ವತಿಯ ಕಡೆಗೆ ತಿರುಗಾಡ ಹೋಗಿದ್ದೆವು. ಅಲ್ಲಿ ಇಬ್ಬರು ಕೂಡಿ ಕೆಲವು ಮಾಗಿದ ಹಣ್ಣಿನ ಗೊಂಚಲುಗಳನ್ನು ಕೆಡಹಿದೆವು. ಅಷ್ಟರಲ್ಲಿ ಮಾಲಿಕನ ತೋಟವನ್ನು ಕಾಯುವ ಪೋರನು ಬಂದು ನಮಗೆ ಬಹಳ ಹೆದರಿಸಹತ್ತಿದನು. ಆಗ ಬಾಳನು ಮುಂದಾದನು. " ತಪ್ಪು ಯಾರದು ? " ಎಂದು ಪ್ರಶ್ನಿಸಲು, " ಯಾರದೆಂದರೆ ? ನಿಮ್ಮದು. " ಎಂದು ಪೋರನು ಉತ್ತರಕೊಟ್ಟನು. " ನಿಮ್ಮದ್ದಲ್ಲವೋ? ನಿಮ್ಮದೆಂದರೆ, ನಮ್ಮಲ್ಲಿ ಕೈ ತಪ್ಪೇ ! " ಬಳಿಕ ಶಾಂತಿ ಪೋರನ ೧೫ ಸ್ಥಿತಿಯನ್ನು ಆ ಪೋರಗೆ ಕೇಳಿ ತಿಳಿಸಬೇಕು ? ಪೋರನು ಶಾಂತನಾದನು. ಕಟ್ಟಕಡೆಗೆ ನಾವೆಂದೆವು. ಈ ಹಣ್ಣಿನ ಕಡೆಯ ಮಾಲೀಕರಿಗೆ ನಿನ್ನ ಪರವಾಗಿ ಮಾತ್ರ ಕೊಡುವೆವು, " ಎಂದು ಬಾಳನು ಪೋರಗೆ ಹೇಳಿದನು. "

***

ರಾ| ಅಣ್ಣಾ ಸಾಹೆಬರು ಇನ್ನೊಂದು ಕಥೆಯನ್ನು ಹೇಳಿದ ಬಗೆ ಇದು ಏನಂದರೆ—(ಲೋಕಮಾನ್ಯರು ವಿಲಾಯತಿಗೆ ಹೋಗುವ ಮೊದಲು ಕೇಸರಿ ಪತ್ರಿಕೆಯ ಸಂಪಾದಕರಾಗಿ) ಆಗಿನ ಗವ್ಹರ್ನರ ವೆಲಿಂಗ್ಟನ್ ಸಾಹೇಬರು ಅವರನ್ನು ಭೆಟ್ಟಿಗೆ ಕರೆದರು. " ಸ್ವತಃ ಗವ್ಹರ್ನರರೇ ಗಂಟುಬಿದ್ದಿದರಿಂದ ಅವರೊಡನೆ ನಾನು ಸ್ಪಷ್ಟವಾಗಿಯೂ, ನಿರ್ಭೀಡತೆಯಿಂದಲೂ ಮಾತಾಡಿದೆನು," ಎಂದು ಲೋಕಮಾನ್ಯರು ನನಗೆ ಹೇಳಿದರು. "Well, Mr Tilak, from this I could clearly see that you mean to uproot the British Government by resorting to any unconstitutional and revolutionary means " (ನಿಮ್ಮ ಮಾತಿನ ಮೇಲಿಂದ ಬೇಕಾದ ಬೇರೆ ಹಾಗು ಕ್ರಾಂತಿಕಾರಕ ಸಾಧನಗಳಿಂದ ಬ್ರಿಟಿಶ ಸರಕಾರವನ್ನು ನೀವು ಬುಡಮೇಲು ಕಿತ್ತಿ ಒಗೆಯಲು ಬಯಸುತ್ತೀರೆಂದು ನನಗೆ ಸ್ಪಷ್ಟವಾಗಿ ತೋರುತ್ತದೆ.) ಟಿಳಕರು ಸ್ಪಷ್ಟವಾಗಿಯೂ, ಸರಳವಾಗಿಯೂ ಹೇಳಿಬಿಟ್ಟಿದ್ದೇನಂದರೆ:— "Yes Sir, if I could, I would But it is impossible, impracticable and even suicidal for us to follow such rash methods in the present state of the country and therefore I must try my best in constitutionally but vehemently and desperately fighting with the Government to reach the goal." (ಸಾಹೇಬರೇ ಹೌದು, ಶಕ್ಯವಿದ್ದರೆ ನಾನು ಹಾಗೆಯೇ ಮಾಡುತ್ತಿದ್ದೆ. ಆದರೆ, ಪ್ರಸ್ತುತ ಪರಿಸ್ಥಿತಿಯಲ್ಲಿ ಆ ಉಪಾಯಗಳನ್ನು ಅನುಸರಿಸಲು ನಮ್ಮ ದೇಶಸ್ಥಿತಿಯು ಅನುಕೂಲವಿಲ್ಲ. ಅವನ್ನು ನಾವು ಸ್ವೀಕರಿಸುವದು ಅಶಕ್ಯವಿದೆ, ಅವ್ಯವಹಾರಿಕವಿದೆ; ಆತ್ಮಘಾತಕವಿದೆ. ಆದ್ದರಿಂದ ಸನದಶೀರ ಮಾರ್ಗಗಳನ್ನು ಅವಲಂಬಿಸಿ ನಾನು ಕಾದಾಡುತ್ತ ಯತ್ನಿಸುವೆನು; ಆದರೆ, ಧ್ಯೇಯಸಾಧನೆಗಾಗಿ ಜೀವದ ಪರಿವೆಯಿಲ್ಲದೆ ಆವೇಶದಿಂದ ನಾನು ಕಾದಾಡದಿರಲಾರೆನು.)

***

ದೇಶಭಕ್ತ ಭಾವೂಸಾಹೇಬ ಲವಾಟೇಯವರು ಬರೆಯುವದೇನಂದರೆ - (ಪುಣೆಯ ನ್ಯೂ ಇಂಗ್ಲಿಷ ಶಾಲೆಯನ್ನುದ್ದೇಶಿಸಿ) " ನಮ್ಮ ಶಾಲೆಯೊಳಗಿನ ಶಿಕ್ಷಕವರ್ಗದಲ್ಲಿ ಟಿಳಕರು ತೀರ ನಿಷ್ಕಪಟ ಹಾಗು ಸಭ್ಯಸ್ವಭಾವದವರು. ತಾವಾಯಿತು, ತಮ್ಮ ಕೆಲಸವಾಯಿತು ಈ ತರದವರೆಂದು ನಮ್ಮ ತಿಳಿಕೆ. ಆದರೆ, ಈ ಸಮುದ್ರವು ಕ್ಷುಬ್ಧವಾಗದವರೆಗೆ ಇದರ ಶಾಂತಿಯು ನೋಡತಕ್ಕಂಥಾದ್ದಿತ್ತು. ಶಾಲೆಯೊಳಗೆ ಕಾಶೀನಾಥ ಹಾಗು ಬಾಳ ಎಂಬ ಪೇದೆಗಳಿದ್ದರು. ಒಮ್ಮೆ ಶಾಲೆಯಲ್ಲಿ ಇವರು ಕಳವು ಮಾಡಿದರು. ಟಿಳಕರಿಗೆ ಮನುಷ್ಯರ ಪರೀಕ್ಷೆ ಮಾಡುವ ಕಲೆಯು ವಿಶೇಷವಾಗಿ ಗೊತ್ತಿತ್ತು......... ..ಕಡೆಗೆ ಟಿಳಕರೇ ನಿಷ್ಣಾತ ಪೋಲೀಸ ಅಧಿಕಾರಿಯಂತೆ ಕಳವಾದ ಮಾಲಿನ ಸಹಿತ ಇಬ್ಬ ಪೇದೆಗಳನ್ನು ಹಿಡಿದರು! " ಕಳವು ಮಾಡಿದ್ದಕ್ಕೆ ಒಪ್ಪು, ಇನ್ನು ಮುಂದೆ ಹೀಗೆ ಮಾಡಲಿಕ್ಕಿಲ್ಲೆಂದು ಶ್ರೀಪಾಂಡುರಂಗ ದೇವರ ಆಣೆ ಕೊಳ್ಳು, ಅಂದರೆ, ಬಿಟ್ಟುಬಿಡುತ್ತೇನೆ " ಎಂದು, ಮೊದಲು ಟಿಳಕರು ಸೌಮ್ಯ ನುಡಿಗಳಿಂದ ಎಷ್ಟೂ ಹೇಳಿದರೂ, " ನಮಗೇನೂ ಗೊತ್ತಿಲ್ಲ "ವೆಂದು ಪೇದೆಗಳು ಹೇಳತೊಡಗಿದರು. ಆಗ ಟಿಳಕರು ನರಸಿಂಹಾವತಾರವನ್ನು ಧರಿಸಿದರು. ಶಾಲೆಯ ಎರಡನೇ ಮೇಲುಪ್ಪರಿಗೆಯ ಮೇಲಿಂದ ಕವಿವಾತದ ಟೆಕ್ಡಿಯ ಮಾರುತೀ ಗುಡಿಯ ತನಕ ಟಿಳಕ-ಆಗಾಶೆಕರ ಇವರಿಬ್ಬರು ಈ ಕಪರ್ ಶಿಪಾಯಿಗಳನ್ನು ಹೊಡೆಯುತ್ತ ಒಡೆಯುತ್ತ ಎಳಕೊಂಡು ಹೋಗಿ ಪೋಲೀಸರ ಸ್ವಾಧೀನಕೊಟ್ಟರು. ಲೋಕಮಾನ್ಯರ ನ್ಯಾಯನಿಷ್ಠುರ ವೃತ್ತಿಯು ಇದರಿಂದ ಸ್ಫುಟವಾದರೆ, ಅವರ ಹೃದಯವು ಕುಸುಮಕ್ಕಿಂತಲೂ ಮೃದುವಾಗಿತ್ತೆಂದು ಮುಂದಿನ ಹಕೀಕತಿನ ಮೇಲಿಂದ ತಿಳಿಯುವದು. ಆ ಇಬ್ಬ ಶಿಪಾಯಿಗಳ ಮೇಲೆ ಖಟ್ಲೆಯಾಗಿ ಅವರಿಗೆ ಶಿಕ್ಷೆ ಹಾಗು ದಂಡ ವಿಧಿಸಲಾಯಿತು, ಟಿಳಕರಿಗೆ ಇದು ತಿಳಿದ ಕೂಡಲೆ, ಆಗಾಶೆಕರಿಗೆ ಸಹ ತಿಳಿಸದೆ, ತಮ್ಮ ಕೈಯೊಳಗಿಂದ ಆ ಕಪರ್ ದಂಡದ ರೂಪಾಯಿಗಳನ್ನು ಶಾಲೆಯೊಳಗಿನ ಸೇವಕನ ಕೈಯಲ್ಲಿ ಕೊಟ್ಟು ಆ ಶಿಪಾಯಿಯ ತಮನಿಗೆ ಮುಟ್ಟಿಸಿದರು. ಹಾಗು ಮುಂದಿನ ತಿಂಗಳ ಶಿಪಾಯಿಯರ ಅರ್ಧ ಪಗಾರವನ್ನು ರೀತಿಯಂತೆ ಶಾಲಾ ಕಚೇರಿಯೊಳಗಿಂದ ಒಯ್ಯಲು ಅವರ ಹೆಂಡಂದಿರಿಗೆ ಓರೆದು ತಿಳಿಸಲು ಕಾರಕೂನರಿಗೆ ಅವರು ಹೇಳಿದರು.

***

" ಮುಮುಕ್ಷು " ಪತ್ರಿಕೆಯ ಸಂಪಾದಕರಾದ ಶ್ರೀ|| ಲಕ್ಷ್ಮಣ ರಾಮಚಂದ್ರ ಪಾಂಗಾರಕರವರು ಬರೆಯುವದೇನಂದರೆ.— ಒಮ್ಮೆ ನಾನು, ಇನ್ನೊಬ್ಬ ಗೃಹಸ್ಥರು ಹಾಗು ಲೋಕಮಾನ್ಯರು ಸಿಂಹಗಡಕರರ ವಾಡೆಯಲ್ಲಿ ಕುಳಿತಿದ್ದೆವು ಆಗ ಟಿಳಕರು ಹೇಳಿದ್ದೇನಂದರೆ:- 'ನಾನು ಸಂಧ್ಯಾದಿ ನಿತ್ಯಕರ್ಮಗಳನ್ನು

ಮಾಡುವದಿಲ್ಲವೆಂದು ಜನರು ನನಗೆ ಧರ್ಮಲಂಡನೆಂದು ತಿಳಿಯುತ್ತಾರೆ. ಆದರೆ, ಪ್ರತಿ ದಿನ ನಾನು ಮಹಾಭಾರತದ ಒಂದು ಅಧ್ಯಾಯವನ್ನು ಓದುತ್ತೇನೆ; ಅಥವಾ ಭಗವದ್ಗೀತೆಯ ಶ್ಲೋಕವನ್ನು ಚಿಂತಿಸುತ್ತೇನೆ. ಹೀಗೆ ಮಾಡುವದು ಧರ್ಮವಿಹಿತ ಕರ್ಮವು. ಹಾಗಾದರೆ, ನಾನು ಧರ್ಮಲಂಡನೇಕೆ?

***

ಶ್ರೀ| ಶಾಂಗಾರಕರರವರು ಇನ್ನೊಂದು ಕಥೆಯನ್ನು ಹೇಳಿರುವರು. ಟಿಳಕರು ಮೊದಲಿನಿಂದ ಕರ್ಮಠ ಬ್ರಾಹ್ಮಣರಲ್ಲ. ಅವರು ತಮ್ಮ ಮಗನ ಹುಡುಗಿಯ ವಿವಾಹವನ್ನು ಬಹಳ ತಡಮಾಡಿಯೇ ಮಾಡಿದರು. ೬ನೇ ಹುಡುಗಿಯು ೧೨ ವರ್ಷದವಳಾಗಿದ್ದಳು. ಆಗ ಅವಳಿಗೆ ಮದುವೆಯಾಗಿದ್ದಿಲ್ಲ. ಒಂದು ದಿನ ನಾವು ಅವರಲ್ಲಿ ಮಾತಾಡುತ್ತ ಕೂತಿದ್ದೆವು. ಟಿಳಕರು ಮಹಾಭಾರತದೊಳಗಿನ ಕೆಲವು ಸಂಗತಿಗಳನ್ನು ಹೇಳುತ್ತಿದ್ದರು. ಹುಡುಗಿಯು ಬಳಿಯಲ್ಲಿದ್ದಳು. "ಈ ಹುಡುಗಿಗೆ ನಾನು ಎಷ್ಟರ ಮಟ್ಟಿಗೆ ಶಿಕ್ಷಣ ಕೊಟ್ಟಿದ್ದೇನೆಂದು ನೀವು ಬಲ್ಲಿರೇನು?" ಎಂದು ಟಿಳಕರು ನನಗೆ ಕೇಳಲು, "ನಾವು ಗೊತ್ತಿಲ್ಲ" ವೆಂದೆವು. ಕೂಡಲೆ ಅವರು ಆಕೆಗೆ "ಸಾವಿತ್ರೀಗೀತ"ವನ್ನು ಹಾಡಿ ತೋರಿಸ ಹೇಳಿದರು. "ನಾನು ಆಕೆಯ ಕಡೆಯಿಂದ ಮೋರೋಪಂತರ "ಸಾವಿತ್ರೀಗೀತ-ರುಕ್ಮಿಣೀಗೀತ"ಗಳನ್ನು ಬಾಯಿಪಾಠ ಮಾಡಿಸಿದ್ದೇನೆ. ಸದ್ಯದಲ್ಲಿ "ಸೀತಾಗೀತ"ದ ಪಾಠ ನಡೆದಿರುತ್ತದೆ. ರಾಮಾಯಣ-ಮಹಾಭಾರತದೊಳಗಿನ ಎಲ್ಲಾ ಕಥೆಗಳು ಇವಳಿಗೆ ಗೊತ್ತಿವೆ. ನಮ್ಮಲ್ಲಿ ಕಥೆ, ಕೀರ್ತನ ಯಾ ವ್ಯಾಖ್ಯಾನಗಳಾದರೆ, ಈಕೆಗೆ ತಿಳಕೊಳ್ಳಲು ಕಠಿಣವಾಗಲಾರದು," ಎಂದು ಟಿಳಕರು ಉದ್ಗರಿಸಿದರು.

***

ಗ್ರಂಥಕರ್ತರಾದ ಶ್ರೀ|| ಸದಾಶಿವ ವಿನಾಯಕ ಬಾಪಟರವರು ಬರೆಯುವದೇನಂದರೆ:— ಬಂಗಾಲ ಪ್ರಾಂತದ ಇಬ್ಭಾಗವಾದ ಮೂಲಕ ರಾಷ್ಟ್ರವು ಪ್ರಕ್ಷುಬ್ಧವಾಗಿತ್ತು. ಈ ಕ್ಷೋಭವನ್ನು ಸಾಮಾನ್ಯ ಜನರಲ್ಲಿಯೂ ಕೂಡ ಹಬ್ಬಿ ಮುಟ್ಟಿಸಲಿಕ್ಕೆ ಯಾವ ಉಪಾಯ ಯೋಜನೆ ಮಾಡಬೇಕೆಂದು 'ಕೇಸರಿ'ಯ ಸಹಕಾರಿ ಸಂಪಾದಕರಾದ ಶ್ರೀ| ಭಾವೇ ಹಾಗು ಹಲಕೆಲವು ಗೃಹಸ್ಥರು ಲೋಕಮಾನ್ಯರೊಡನೆ ಆಲೋಚನೆ ಕೇಳ ಹೋಗಿದ್ದರು. ಆ ಸಮಯ ನಾನೂ ಹೋಗಿದ್ದೆ. ಲೋಕಮಾನ್ಯರು ಉದ್ಗರಿಸಿದ್ದೇನಂದರೆ:- "ರಾಷ್ಟ್ರಕ್ಕಾಗಿ ನೀವು ಫಕೀರರಾಗಲು ತಯಾರಿದ್ದೀರೋ? ಹಾಗಿದ್ದರೆ, ರಾಷ್ಟ್ರೋನ್ನತಿಯಾಗಲಿಕ್ಕೆ ದೇರು. ಸುಮ್ಮನೆ ಆಲೋಚನೆಯನ್ನು ಯಾಕೆ ಕೇಳುತ್ತೀರಿ? ಬುದ್ಧಿಶಾಲಿಯಾದ ಬ್ರಾಹ್ಮಣರ ಹುಡುಗರು ಮಹಾರಾಷ್ಟ್ರದಲ್ಲಿ ರಾಮದಾಸರ ಶಿಷ್ಯರಂತೆ ಫಕೀರರಾಗಿ ತಿರುಗಾಡುವ ಹೊತ್ತು ಈಗ ಬಂದಿರುವದು. ಉದ್ಯೋಗಿಗಳಾಗಿರಿ"

***

ಶ್ರೀ| ಬಾಳಕೃಷ್ಣ ಗಣೇಶ ಖಾಪರ್ಡೆಯವರು ಬರೆಯುವದೇನಂದರೆ:— "ಲೋಕಮಾನ್ಯರು ವರ್ಹಾಡ ಪ್ರಾಂತದಲ್ಲಿ ಸಂಚಾರ ಮಾಡಿದಾಗ, ಕಾರಂಜಾ ಎಂಬ ಗ್ರಾಮದೊಳಗಿನ ಒಂದು ಭವ್ಯವಾದ ವಾಡೆಯಲ್ಲಿ ವೈಭವಕ್ಕೆ ತಕ್ಕ ಉಳಕೊಳ್ಳುವ ವ್ಯವಸ್ಥೆಯನ್ನು ಊರವರು ಅವರಿಗಾಗಿ ಮಾಡಿದ್ದರು. ಮಲಗುವ ಗಾದಿಗಳು, ಜರತಾರಿಯುಕ್ತವಾದ ಪಲಂಗು, ಎರಡು ಹೊತ್ತು ಮಿಷ್ಟಾನ್ನಭೋಜನ ಈ ಪ್ರಕಾರ ಅಲ್ಲಿ ವ್ಯವಸ್ಥೆ ಇತ್ತು. ಲೋಕಮಾನ್ಯರ ಜೊತೆಗಿದ್ದವರೆಲ್ಲರೂ ಪ್ರಯಾಣದಿಂದ ಬೇಸತ್ತುಹೋಗಿದ್ದರು. ಮುಂದಿನ ಪ್ರಯಾಣ ಕಾರ್ಯಕ್ರಮವನ್ನು ಒಂದು ದಿನ ಮುಂದೂಡಿ, ಇಲ್ಲಿಯ ಮುಕ್ಕಾಮಿನ ಅವಧಿಯನ್ನೇ ಒಂದು ದಿನ ಬೆಳೆಸಬೇಕೆಂದು ಎಲ್ಲರ ಅಭಿಪ್ರಾಯವಾಯಿತು. ಆದರೆ, ಈ ಸೂಚನೆಯನ್ನು ಲೋಕಮಾನ್ಯರಿಗೆ ಅರುಹುವರಾರು? ನಾನು ಆ ಕೆಲಸವನ್ನು ಅಂಗೀಕರಿಸಿದೆನು. ಮಾತಿನ ಪ್ರಸಂಗ ಬಂದಾಗ, ಆ ಸೂಚನೆಯನ್ನು ಅವರಿಗೆ ಹೇಳಿದೆನು. ಆಗ ಅವರು ನಕ್ಕರು. "ಇಷ್ಟು ಬೇಗನೆ ನೀವು ಸುಖಕ್ಕೆ ಮೋಹಪಟ್ಟಿರಾ! ಮಿಷ್ಟಾನ್ನಕ್ಕೆ ಮರುಳು ಬಿದ್ದಿರಾ!! ಕಾರ್ಯಕ್ರಮವನ್ನು ಬದಲಿಸಿ ನಮಗೆ ಪ್ರಾಪ್ತವಾಗುವ ಸುಖದಿಂದ ಸಾವಿರಾರು ಜನರಿಗೆ ಕಷ್ಟವಾಗುವದು; ಅನೇಕರು ಒಂದು ಮಾಳಿ ಹೋಗಬೇಕಾಗುವದು. ಇದರ ಗೊಡವೆ ನಿಮಗಿಲ್ಲೇನು? ಕಾರ್ಯಕ್ರಮವನ್ನು ಬದಲಿಸಬರುವದಿಲ್ಲ" ಎಂದು ಲೋಕಮಾನ್ಯರು ಉದ್ಗರಿಸಲು, "ತಮ್ಮ ಪ್ರಕೃತಿಯ ಹಿತಕ್ಕಾಗಿಯೇ ನಾವು ಈ ಸೂಚನೆ ಮಾಡಿದ್ದೆವು" ಎಂದು ನಾನು ಉತ್ತರಕೊಟ್ಟೆನು. ಆಗ, "ಓಹೋ! ಇಂಗ್ಲಿಷ ಪರೋಪಕಾರದ ಭಾಷೆಯು ಸಂಪೂರ್ಣವಾಗಿ ನಿಮ್ಮ ಪರಿಚಯದ್ದಾಗಿದೆ," ಎಂಬ ಪ್ರತ್ಯುತ್ತರವು ಅವರಿಂದ ಬಂತು. ಮನೆಯ ಯಜಮಾನರಿಗೆ ಲೋಕಮಾನ್ಯರು ಎರಡು-ಮೂರಾವರ್ತಿ ಸ್ವತಃ ಕರೆದು, 'ನೇಮಿಸಿದ ಹೊತ್ತಿಗೆ ಸನ್ನನೆ ಹೊರಡುವನು; ಕಾರ್ಯಕ್ರಮವನ್ನು ನಾನು ಬದಲಿಸುವದಿಲ್ಲ' ವೆಂದು ಖಂಡಿತವಾಗಿ ನುಡಿದರು. ಆ ಹೊತ್ತಿಗೇ ಗಂಟುಮೊಟ್ಟೆ ಕಟ್ಟಿಕೊಂಡು, ಎಲ್ಲರೂ ಮಾರ್ಗಕ್ರಮಣ ಮಾಡಬೇಕಾಯಿತು."

***

ಶ್ರೀ| ಸೀತಾರಾಮ ಕೇಶವ ದಾಮಲೇಯವರು ಬರೆಯುವದೇನಂದರೆ— "ಲೋಕಮಾನ್ಯರು ಸಾಮಾಜಿಕ ಧಾರಣೆಗೆ ಪ್ರತಿಕೂಲರೆಂಬ ಸಂಶಯ ಪ್ರತಿಕ್ರಿಯೆಯನ್ನು ಹಲವರು ಎಬ್ಬಿಸುತ್ತಾರೆ. ಇದರಿಂದ ಅವರ ಕುರಿತು ಅನೇಕ ತಪ್ಪು ತಿಳುವಳಿಕೆಗಳುಂಟಾಗಿವೆ. ೧೯೦೮ನೇ ಇಸ್ವಿಯ ಮೇ ತಿಂಗಳಲ್ಲಿ ಲೋಕಮಾನ್ಯರು ವರ್ಹಾಡದಲ್ಲಿ ಸಂಚಾರ ಮಾಡುವಾಗ ಸಂಭವಿಸಿದ ಒಂದು ಸಂಗತಿಯನ್ನು ಹೇಳಿದರೆ, ತಪ್ಪು ತಿಳುವಳಿಕೆಯು ದೂರವಾಗುವದಾಗಿದೆ: ಅಕೋಲಾದಲ್ಲಿ ಲೋಕಮಾನ್ಯರು ಮುಕ್ಕಾಂ ಮಾಡಿದ್ದರು. ಲೋಕಮಾನ್ಯರಿಗೆ ತಾಂಬೂಲ ಸಮರ್ಪಿಸಿ ಸತ್ಕರಿಸಬೇಕೆಂದು ಅಲ್ಲಿಯ ಅಂತ್ಯಜರು ಯೋಜಿಸಿದರು. ಅಲ್ಲಿಯ ಅಂತ್ಯಜ ಸಮಾಜವು ಒಕ್ಕಟ್ಟು ಮಾಡಿಕೊಂಡು ಮದ್ಯಪಾನವನ್ನು ತ್ಯಜಿಸಿ ಆಗ ಎರಡು ತಿಂಗಳುಗಳಾಗಿದ್ದವು. ಅಂತ್ಯಜರ ತರ್ಫೆನಿಂದ ತಾಂಬೂಲ ಸಮಾರಂಭಕ್ಕೆ ಕರೆಯಲು ಸುಧಾರಕ ಪಕ್ಷದ ಪ್ರಸಿದ್ಧ ಬಿ. ಎ., ಎಲ್‌ಎಲ್. ಬಿ. ವಕೀಲರು ಲೋಕಮಾನ್ಯರ ಕಡೆಗೆ ಬಂದರು. ಟಿಳಕರು ಏನೂ ಅನುಮಾನ ಮಾಡಲಿಲ್ಲ, ತಾಂಬೂಲ ಸ್ವೀಕಾರಕ್ಕೆ ಒಪ್ಪಿ ಬಹಿರಂಗದಿಂದ ಅಂತ್ಯಜರ ಕೇರಿಯಲ್ಲಿಯೇ ಹೋಗಿ ಉಪನ್ಯಾಸವಾದ ಬಳಿಕ, ತಾಂಬೂಲವನ್ನು ಸ್ವೀಕರಿಸಿದರು.

***

ಲೋಕಮಾನ್ಯರ ಹಿರೇ ಮಗಳಾದ ಶ್ರೀ| ದುರ್ಗಾಬಾಯಿ ಕೇತಕರವರು ಬರೆಯುವದೇನಂದರೆ — 'ಕೇಸರಿ'ಯ ಸಲುವಾಗಿ ದಾದಾ (ಟಿಳಕ) ರವರು ಲೇಖಗಳನ್ನು ಯಾವಾಗಲೂ ಸೋಮವಾರ ಮಧ್ಯಾಹ್ನದಲ್ಲಿ ದೊಡ್ಡಕ್ಕೆ ಹೇಳುತ್ತಿದ್ದರು. ಅದನ್ನು ಯಾರಾದರೂ ಕಾರಕೂನರು ಬರಕೊಳ್ಳುತ್ತಿದ್ದರು. ಬಳಿಯಲ್ಲಿದ್ದ ಕೋಣೆಯಲ್ಲಿ ನಾವು ಒಮ್ಮೊಮ್ಮೆ ಕೇಳುತ್ತ ಕೂತುಕೊಳ್ಳುತ್ತಿದ್ದೆವು. ಆಗ ದಾದಾರವರು ನಮಗೆ ನಗುಮೋರೆಯಿಂದ ಅನ್ನುತ್ತಿದ್ದರೇನಂದರೆ:— "ಅಡಿಗೆ ತಯಾರಾಗುತ್ತಿದ್ದಾಗಲೇ ಅದರ ರುಚಿ ನೋಡಬಾರದು. 'ಕೇಸರಿ' ಯನ್ನು ಛಾಪಿಸಿ ಆದಮೇಲೆ ಓದಿರಿ!"

***

ಲೋಕಮಾನ್ಯರ ಕಿರಿ ಮಗಳಾದ ಶ್ರೀ| ಮಥುರಾಬಾಯಿ ಸಾನೇಯವರು ಬರೆಯುವದೇನಂದರೆ:— ಅವರ (ಟಿಳಕರ) ಜೀವನವು ತೀರ ಸಾಮಾನ್ಯವಿದ್ದಾಗ್ಯೂ ವ್ಯವಸ್ಥೆಯಿಂದ ನಡೆಯಬೇಕಾಗಿತ್ತು. ಮಂಡಾಲೆಯಿಂದ ಮರಳಿಬಂದ ಮೇಲೆ ಅವರಿಗೆ ಮಧುಮೇಹದ ವಿಕಾರವು ತೀವ್ರವಾಯಿತ; ಸಕ್ಕರೆ, ಅನ್ನ ಮುಂತಾದ ನಿತ್ಯದ ಊಟದ ಪದಾರ್ಥಗಳನ್ನೂ ಅವರು ತ್ಯಜಿಸಬೇಕಾಯಿತು. ಅವಶ್ಯವಿದ್ದ ತೀವ್ರವಾದ ಪಥ್ಯವನ್ನು ಅವರು ಒಮ್ಮೆಲೇ ಪ್ರಾರಂಭಿಸಿದರು. ಅಪಥ್ಯವಿದ್ದ ಪದಾರ್ಥಗಳೊಳಗಿನ ಯಾವದೊಂದನ್ನಾದರೂ ಅಲ್ಪಾಂಶದಿಂದ ಸಹ ಎಂದೂ ತಿನ್ನ ಬಯಸಲಿಲ್ಲ. ಪಥ್ಯದ ಪದಾರ್ಥಗಳನ್ನೇ ಅವರು ಬಹಳ ರುಚಿಯಿಂದ ತಿನ್ನುತ್ತಿದ್ದರು. "ಅಪ್ಪಾ, ನಿಮಗೆ ಈ ಊಟ ಹ್ಯಾಗೆ ಸೇರುತ್ತದೆಂದು" ನಮ್ಮೊಳಗಿನವರ್ಯಾರಾದರೂ ಕೇಳಿದರೆ, ಅವರು ನುಡಿಯುವದೇನಂದರೆ:— "ನೀವು ತಿನ್ನುವದಕ್ಕೆ ಜೀವಿಸುತ್ತೀರಿ; ನಾನಾದರೋ ಜೀವಿಸುವದಕ್ಕೋಸ್ಕರ ತಿನ್ನುತ್ತೇನೆ." ಇದು ನಿಜವಾದದ್ದೇ. ನಾಲಿಗೆಯು ಅವರ ಸ್ವಾಧೀನವಿರದಿದ್ದರೆ, ಕೊನೆಯ ೧೨ ವರುಷಗಳೊಳಗಿನ ಕಾರ್ಯವನ್ನು ಪಾರಗಾಣಿಸುವದು ಅವರಿಗೆ ಬಹುಮಟ್ಟಿಗೆ ಅಶಕ್ಯವಾಗುತ್ತಿತ್ತು.

ಜಾಹೀರ ವಿನಂತಿ.

ಇದರ ಮೂಲಕ ಕುಮಟಾ ತಾಲೂಕಿನಲ್ಲಿಯ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದರೆ-

ಇದೇ ಬರುವ ತಾರೀಕು 3—8—1926 ನೇ ಮಂಗಳವಾರ ದಿವಸ ಮಧ್ಯಾಹ್ನ 4 ಘಂಟೆಯ ಸಮಯಕ್ಕೆ ಕುಮಟಾ ತಾಲೂಕ ಲೋಕಲ್ ಬೋರ್ಡ ಆಫೀಸಿನಲ್ಲಿ ಲೋಕಲ್ಫಂಡನ್ನು ಬರಿಸುವವರ ವಿಷಯದಲ್ಲಿ ಹಾಗೂ ಯಾವ ಯಾವ ಊರುಗಳಲ್ಲಿ ಹೊಸ ಶಾಲೆಗಳನ್ನು ಸ್ಥಾಪಿಸಬೇಕೆಂಬ ಬಗ್ಗೆ ವಗೈರೆ ವಿಷಯಗಳ ಕುರಿತು ವಿಚಾರ ಮಾಡುವ ದೆಸೆಯಿಂದ ಈ ಬೋರ್ಡಿನ ಜನರಲ್ ಕಮಿಟಿಯು ಕೂಡುವದಿದೆ. ಕಾರಣ ಈ ವಿಷಯದಲ್ಲಿ ಯಾರ್ಯಾರಿಗೆ ತಮ್ಮ ತಮ್ಮ ಅಭಿಪ್ರಾಯವನ್ನು ತಿಳಿಸತಕ್ಕದ್ದಿರುತ್ತದೋ ಅವರವರು ಸ್ವತಃ ಯಾ ತಮ್ಮ ತರ್ಫೆನ ಪ್ರತಿನಿಧಿಗಳ (ward members) ಮುಖಾಂತರ ತಮ್ಮ ತಮ್ಮ ಹೇಳಿಕೆಯನ್ನು ಸದ್ರಿ ಕಮಿಟಿಯು ಮುಂದೆ ಬಂದು ತಿಳಿಸಬೇಕಾಗಿ ವಿನಂತಿ ಅದೆ.

ಕುಮಟಾ,
ತಾ.24-7-1926.

Vishweshwar T. Hegde,
President,
T. L. B. Kumta.

ಕಾನಡಾವೃತ್ತ.

ಮಿತಿ ಕ್ಷಯ ಸಂ॥ ಆಷಾಢ ಬ॥ ೧ ದೆ, ಸೋಮವಾರ.

ಲೋಕಲ್ ಫಂಡಿನ ಏರಿಕೆ

(ಲೇಖಾಂಕ ೪)

‘ಧುರೀಣ’ರ ಧೂರ್ತತನವನ್ನು ಹೊರಗೆಡಹುವ ಮುಂಚೆ ಒಂದು ಕಥೆಯನ್ನು ಹೇಳುವದು ಪ್ರಸಂಗೋಚಿತವು. ಗ್ರಾಮಾಂತರದಲ್ಲಿ ಒಂದು ದೊಡ್ಡ ಗದ್ದೆ ಬೈಲಿತ್ತು; ಮಧ್ಯದಲ್ಲಿ ದೊಡ್ಡ ಜಟಕನ ಬನ. ಜಟಕನ ಬನದಲ್ಲಿ ದೊಡ್ಡ ದೊಡ್ಡ ಮರಗಳಿದ್ದವು, ಮರಗಳಿಂದ ಗದ್ದೆ ಸಾಗುವಳಿಗೆ ಪ್ರತಿಕೂಲವಾಗುತ್ತಿತ್ತು. ಮರಗಳನ್ನು ಕಡಿಯಲು ಒಕ್ಕಲಿಗರಿಗೆ ಒಡೆಯರಿಂದ ಹೇಳಿದರೂ, ಪಾಪಭೀರು ಒಕ್ಕಲಿಗರು “ಅಲ್ಲಿ ಜಟಕನ ಬನವಿದೆ, ಅದನ್ನು ಕಡಿದರೆ, ನಮ್ಮ ಪರಿಣಾಮವಿಲ್ಲ,” ಎಂದು ಹೇಳತೊಡಗಿದರು. ಒಡೆಯರು ಬಲು ಧೂರ್ತರಿದ್ದರು. ಅವರ ಕೈಯಿಂದಲೇ ಅವರ ಮನವೊಲಿಸದಿದ್ದರೆ, ಭೂಮಿಯು ಬಂಜರು ಬೀಳುವದೆಂದು ಆಲೋಚಿಸಿ ನುಡಿದದ್ದೇನಂದರೆ — “ನಿಮ್ಮ ಹೇಳಿಕೆಗೆ ನನ್ನದೂ ಒಪ್ಪಿಗೆಯಿದೆ, ನಿಮ್ಮ ಜಟಕ ದೇವರಿಗೇ ಪ್ರಸಾದ ಹಚ್ಚಿ ಕೇಳುವ. ಜಟಕ ದೇವರು ಮರ ಕಡಿಯಲಿಕ್ಕೆ ಹುಕುಮು ಕೊಟ್ಟರೆ, ನಿಮ್ಮ ಆಕ್ಷೇಪವಿದೆಯೋ?” ‘ಜಟಕ ದೇವರು ಹುಕುಮು ಕೊಟ್ಟರೆ, ಸಮ್ಮದೇಶ್ತಿ!’ ಎಂದು ಎಲ್ಲರೂ ಹಿರಿ ಹಿರಿ ಹಿಗ್ಗಿದರು. ಜಟಕ ದೇವರ ಮೇಲೆ ಒಡೆಯರಿಗೂ ಭಕ್ತಿ ಇರುವದೆಂದು ನೋಡಿ, ಅವರಿಗೆ ಸಂತೋಷವಾಯಿತು. ಜಟಕ ದೇವರ ತಲೆಯ ಮೇಲಿನ ಪ್ರಸಾದವನ್ನು ಕೊಂಡು, ಒಡೆಯರು ಎರಡು ಪುಡಿಗಳನ್ನು ತಯಾರಿಸಿದರು. ಒಂದು ಕೆಂಪು; ಒಂದು ಬಿಳಿದು. ಮತ್ತು ಅವುಗಳನ್ನು ಜಟಕ ದೇವರ ಮುಂದಿಟ್ಟು, ಭಕ್ತಿಭಾವದಿಂದ ಹೇಳಿಕೊಂಡಿದ್ದೇನಂದರೆ - “ಜಟಕ ದೇವರೇ, ನಾವೆಲ್ಲರೂ ಸಾಷ್ಟಾಂಗ ನಿನಗೆರಗುತ್ತೇವೆ. ಈ ಮರವನ್ನು ಬುಡಗೂಡಿ ಕಡಿಯಬೇಕೆಂದು ನಿನ್ನ ಸಂಕಲ್ಪವಿದ್ದರೆ, ಕೆಂಪು ಪುಡಿಯನ್ನು ದಯಪಾಲಿಸು, ಒಂದು ಹೊಳ ಬಿಟ್ಟು ಕಡಿಯಬೇಕೆಂದಿದ್ದರೆ, ಬಿಳೇ ಪುಡಿಯನ್ನು ದಯಪಾಲಿಸು” ಅಜ್ಞಾನಿ ಒಕ್ಕಲಿಗರಿಗೆ ಇದರ ಮರ್ಮ ತಿಳಿಯಲಿಲ್ಲ, ಇತ್ತ ಜಟಕ ದೇವರು ಸಂಕಟದಲ್ಲಿ ಬಿದ್ದರು. ಕಡಿಯಬೇಡವೆಂದು ಆಜ್ಞೆ ಮಾಡಲಿಕ್ಕೆ ಎದುರಿಗೆ ಮೂರನೇ ಪುಡಿಯೇ ಇಲ್ಲದಿದ್ದರೆ, ಮಾಡುವದೇನು? ಕೊಂದು ಹಾಕುವ ಊರಲ್ಲಿ ಸುಲಿಕೊಂಡು ಹೋಗುವದೇ ಶ್ರೇಷ್ಠವೆಂದು ಎಣಿಸಿ, ಬಿಳೇ ಪುಡಿಯನ್ನೇ ಜಟಕ ದೇವರು ದಯಪಾಲಿಸಿದರಂತೆ! ಹೊಳ ಇಟ್ಟು ಕಡಿಯಲಿ, ಬುಡಗೂಡಿ ಕಡಿಯಲಿ, ಹ್ಯಾಗಿದ್ದರೂ ಮರದಿಂದ ಒದಗುವ ನಷ್ಟವು ತಪ್ಪಿತು. ಒಕ್ಕಲಿಗರ ಮೂಢ ಭಕ್ತಿಯನ್ನೂ ಆದರಿಸಿದಂತಾಯಿತು.

ಇನ್ನೊಂದೆಡೆ ಪುಡಿ ಕೊಟ್ಟ ನಮ್ಮ ‘ಧುರೀಣ’ದ ಲೇಖವನ್ನೋದಿ, ಇದೇ ಕಥೆಯು ನೆನಪಾಗುತ್ತದೆ. “ಲೋಕಲ್ ಫಂಡನ್ನು ಏರಿಸಬೇಕೇ? ಏಕೆ?” ಎಂಬ ಸದರಿನಿಂದ ಬರೆದ ಲೇಖದಲ್ಲಿ ಲೋಕಲ್ ಫಂಡ ಏರಿಸುವ ಕಾರಣವು ಹೇಳಲ್ಪಡಲಿಲ್ಲ. ಜಟಕ ದೇವರಿಗೆ ಪ್ರಸಾದ ಹಚ್ಚಿದಂತೆ ಪ್ರಸಾದ ತೆಗೆಯಲಾಗಿದೆ. ಶಿಕ್ಷಣಕ್ಕೆ ಹಣ ಬೇಕು. ಆರೋಗ್ಯರಕ್ಷಣೆಗೆ ಹಣ ಬೇಕು, ಇನ್ನಿತರ ಲೋಕೋಪಕಾರಿ ಕಾರ್ಯಗಳಿಗೂ ಹಣ ಬೇಕು, ಮನುಷ್ಯನ ಸಂಸಾರದಲ್ಲಿ ಹಣ ವೆಚ್ಚ ಮಾಡಿದ ಹೊರತು, ಯಾವದೇ ಕೆಲಸವನ್ನು ಪುರಸ್ಕರಿಸಲಾಗುವದಿಲ್ಲ. ಇದನ್ನೆಲ್ಲ ಸರ್ವರೂ ಅರಿತ ಸಂಗತಿಯೇ. ಆದರೆ, ಲೋಕಲ್ ಫಂಡನ್ನು ಏರಿಸಬೇಕಾದರೆ, ಏರಿಸಬೇಕೆಂದು ಪ್ರತಿಪಾದಿಸುವವರು ಬೋರ್ಡಿನ ಆಯವ್ಯಯವನ್ನು ಚನ್ನಾಗಿ ಪರ್ಯಾಲೋಚಿಸಬೇಕು. ವ್ಯಯದಲ್ಲಿ ಯಾವ ಯಾವ ಬಾಬುಗಳನ್ನು ತಗ್ಗಿಸಬರುವ ಹಾಗಿದೆ? ಆಯದಲ್ಲಿ ಯಾವ ಯಾವ ಬಾಬುಗಳನ್ನು ವಿಶೇಷ ಜಾಗ್ರತೆಯಿಂದ ಬಡಬಗ್ಗರಿಗೆ ಹೊರೆಯಾಗದಂತೆ ಉತ್ಪನ್ನವನ್ನು ಬೆಳೆಸುವ ಹಾಗಿದೆ? ಹೊಸ ಖರ್ಚು ಎಷ್ಟು ತಗಲುವ ಹಾಗಿದೆ? ಮುಂತಾದ ಚರ್ಚೆಯನ್ನು ಧುರೀಣರು ಮಾಡಿದ್ದರೆ, ಲೇಖಕ್ಕೆ ಸದರು ಶೋಭಿಸುತ್ತಿತ್ತು. ಆದ್ದರಿಂದ ಏರಿಸಬೇಕೆಂದು ಹೇಳುವಾಗ, ಹೀಗೆ ಯಾವದೇ ಚರ್ಚೆ ಮಾಡದೆ, ಒಮ್ಮೆಗೇ ೧ ಆಣೆ ಏರಿಸುವದು ಗ್ರಾಹ್ಯವಾಗಲಿಕ್ಕಿಲ್ಲೆಂದೂ, ರೈತರಿಗೆ ಒಮ್ಮೆಲೇ ಭಾರವೆನಿಸಬಹುದೆಂದೂ ಸೂಚಿಸಿ, ಅರ್ಧಾಣೆಯ ಸೋಡ್ತಿ ತೆಗೆದಿರುವದು ಧುರೀಣರ ಕರ್ತವ್ಯವಲ್ಲ. ಜಟಕ ದೇವರಿಗೆ ಪ್ರಸಾದ ಹಚ್ಚುವ ಧೂರ್ತ ಒಡೆಯರೂ, ಧುರೀಣರೂ ಒಂದೇ ಪಂಕ್ತಿಯವರಲ್ಲವೇ?

ಇನ್ನೊಂದು ಮಾತೇನಂದರೆ, ಲೋಕಲ್ ಫಂಡನ್ನು ಏರಿಸಿ ಹಣ ಗಳಿಸುವದು ‘ಸುಲಭವಾದ ಝುರಿ’ಯಂತೆ. ಯಾಕೆ ಸುಲಭವು? ರೈತರು ಕರ ತೆತ್ತು ಹಿಂತಿ ಹಿಪ್ಪೆಯಾದರೂ, ಏರೇರಿಸಿದ ಕರಗಳನ್ನು ಸಾಲ-ಶೂಲವಾದರೂ ತೆಗೆದು ತುಂಬುತ್ತಾರೆಂದು, ಅವರ ಮೇಲೆ ಇನ್ನಿಷ್ಟು ಕರ ಹೇರುವದು ಧರ್ಮವೇನು? ಅಜಾಪುತ್ರನಿಗೆ ಬಲಿ ಕೊಡುವದು ಅಧರ್ಮವೆಂದು ಧರ್ಮಿಷ್ಠರು ಪ್ರತಿಪಾದಿಸುತ್ತಿದ್ದಾಗ, ಅಜಾಪುತ್ರರೋಪಾದಿಯಲ್ಲಿದ್ದ ಬೇಸಾಯಗಾರರಿಗೆ ಸುಲಿದು ಹಣ ಬಿಟ್ಟು ಮರಪುವದು ಎಂದೂ ಶ್ರೇಯಸ್ಕರವಲ್ಲ. ಧುರೀಣರು ದುರ್ಬಲರ ಬೆಂಬಲಕ್ಕಿರಬೇಕು. ಅದೇ ಧುರೀಣರಿಗೆ ಶೋಭೆ, ಧುರೀಣತನಕ್ಕೂ ಶೋಭೆ. ಸುಲಭ ಸಂಗತಿಗಳನ್ನು ಯಾರೂ ಕೈಕೊಳ್ಳುತ್ತಾರೆ, ಅದಕ್ಕೆ ಧುರೀಣರು ಬೇಡ. ಜಂಗಲ ಖಾತೆಯವರಿಂದ ಒದಗುವ ಕಷ್ಟಗಳಿಂದ ಕಾನಡಾ ಜಿಲ್ಲೆಯ ಉದ್ಧಾರ ಮಾಡಲು ಜನ್ಮವನ್ನೆತ್ತಿದ್ದೆಂದು ಬಡ ಬೇಸಾಯಗಾರರಿಗೆ ಡಂಗುರ ಸಾರಿ ಹೇಳುವ ‘ಧುರೀಣ’ವು ಜಂಗಲ ಖಾತೆಯವರಿಂದ ಹೆಚ್ಚು ಹಣ ಪಡೆಯಲು ಬೋರ್ಡಿನವರಲ್ಲಿ ಶಕ್ತಿಯಿಲ್ಲವೆಂಬ ನಿರಾಶೆಯ ಉಪದೇಶವನ್ನು ಮಾಡಲಾಗದು. ಹೊಸ ಬೋರ್ಡುಗಳು ಲೋಕಪ್ರತಿನಿಧಿಗಳವು. ಲೋಕಪ್ರತಿನಿಧಿಗಳು ಸರಕಾರಕ್ಕೆ ಸಾರಿ ಹೇಳಬೇಕೇನಂದರೆ — “ಜನರ ಕಡೆಯಿಂದ ತೀರ್ವೆಯ ರೂಪಾಯಿಗೊಂದಾಣೆಯಂತೆ ನೀವು ನಮಗೆ ಲೋಕಲ್ ಫಂಡನ್ನು ಕೊಡುತ್ತೀರಿ, ಹಾಗೆಯೇ ನಿಮ್ಮ ಜಂಗಲ ಭೂಮಿಗಳ ಮೇಲೆ ತೀರ್ವೆಯನ್ನಾಕರಿಸಿರಿ, ಮತ್ತು ನಮಗೆ ಒಂದಾಣೆಯಂತೆ ಲೋಕಲ್ ಫಂಡು ತೆರಿರಿ. ಇದಕ್ಕೆ ಕಾಯಿದೆಯ ಆಧಾರವೂ ಇದೆ. ಲೋಕಲ್ ಬೋರ್ಡ ಆಕ್ಟಿನ ೯೫ನೇ ಕಾನೂನಿನ (ಬ) ಕಲಮಿನನ್ವಯ ತೀರ್ವೆ ಆಕರಿಸಲ್ಪಡದ ಸಂಗತಿಯಲ್ಲಿ, ತೀರ್ವೆ ಸಿಗಬಹುದಾದ ರಕಮಿನ ಮೇಲೆ ರೂಪಾಯಿಗೊಂದಾಣೆಯಂತೆ ಲೋಕಲ್ ಫಂಡನ್ನು ತೆರಬೇಕೆಂದು ಸ್ಪಷ್ಟವಾಗಿ ನಮೂದಿದೆ. ಈ ಕಲಮಿನಂತೆ ತೀರ್ವೆ ಆಕರಿಸಿರಿ ಮತ್ತು ನಮಗೆ ಲೋಕಲ್ ಫಂಡು ತೆರಿರಿ.” ಧುರೀಣರು ಹೇಳುವಂತೆ, ಶಕ್ತಿಯಿಲ್ಲವೆಂದೂ, ನಮ್ಮ ಬಾಂಧವರನ್ನೇ ಸುಲಿಯತಕ್ಕದ್ದು ಸುಲಭವಾದದ್ದೆಂದೂ ಪ್ರತಿಪಾದಿಸುವದು ಬರೇ ಹೇಡಿತನವು. ಶೌರ್ಯದಿಂದ ಲೋಕಧುರೀಣರಾಗುವವರಿಗೆ ಎಂದಿಗೂ ಇದು ಶೋಭಿಸತಕ್ಕಂಥಾದ್ದಲ್ಲ. ಶಕ್ತಿಯಿಲ್ಲವೆಂದು ಆ ಗೊಡವೆಯನ್ನೇ ನಾವು ಬಿಟ್ಟುಬಿಟ್ಟರೆ, ನಮ್ಮ ಉದ್ಧಾರವೆಂದಾದರೂ ಆಗಬಹುದೇ?

ಆದರೆ, ಧುರೀಣರ ಸೋಡ್ತಿಯಲ್ಲಿ ಅರ್ಥವಿದೆ. ಧೂರ್ತತನದಿಂದ ಈ ಸೋಡ್ತಿಯು ತೆಗೆಯಲ್ಪಟ್ಟಿದೆ. ಒಂದಾಣೆ ವರೆಗೆ ಏರಿಸಬಹುದೆಂಬ ಕಾಯಿದೆಯಿದ್ದರೂ, ಹಾಗೆ ಏರಿಸಿದ ಬೋರ್ಡುಗಳು ತೀರ ಕಡಿಮೆ. ಲೋಕಲ್ ಫಂಡನ್ನು ಏರಿಸಬಾರದೆಂದು ಪ್ರತಿಪಾದಿಸಿ, ಅಧಿಕಾರಿಗಳ ಕ್ಷೋಭ ಸಂಪಾದಿಸಲಿಕ್ಕೆ ‘ಧುರೀಣ’ವು ತಯಾರಿಲ್ಲ, ಒಂದಾಣೆಯನ್ನು ಏರಿಸಬೇಕೆಂದು ಹೇಳುವಷ್ಟು ಧೈರ್ಯ ಮಾಡಿದರೆ, ಇತ್ತ ಧುರೀಣತನಕ್ಕೆ ಬಾಧೆ ತಟ್ಟುತ್ತದೆ. ಆದರಿಂದ ಹಳ್ಳಿಗರ ಆರೋಗ್ಯದ ಕುರಿತು ಅಲ್ಲಿಷ್ಟು ಬಿಸುಸುಯ್ದು, ಲೋಕಲ್ ಬೋರ್ಡಿಗೆ ಶಕ್ತಿಯಿಲ್ಲವೆಂದು ಇಲ್ಲಿಷ್ಟು ಸಹತಾಪವನ್ನು ವ್ಯಕ್ತಪಡಿಸಿ, ಶಿಕ್ಷಣವನ್ನು ಪುರಸ್ಕರಿಸಿದಂತೆ ಮಾಡಿ, ಜಂಗಲ ಖಾತೆಯ ವಿಸ್ತಾರವನ್ನು ನಮೂದಿಸಿ ಕೊನೆಗೆ ದುರ್ಬಲರಿಗೆ ಘಾತ ಮಾಡುವ ಲೋಕಲ್ ಫಂಡನ್ನು ಏರಿಸುವ ಸುಲಭವಾದ ಝುರಿಯನ್ನು ಪ್ರತಿಪಾದಿ

ಯನ್ನು ಪ್ರತಿಪಾದಿಸಿರುವರು. "ಅಕ್ಕಿ ಸಿಂಬಾಗಬಾರದು; ಅಕ್ಕನ ಮಕ್ಕಳು ಬಡವಾಗಬಾರದು," ಎಂಬಂತೆ ಎರಡು ದೋಣಿಗಳ ಮೇಲೆ ಕಾಲಿಡುವವರ ನಿಜ ರೂಪವು ಇಕ್ಕಟ್ಟಿನ ಸಂದರ್ಭದಲ್ಲಿ ವ್ಯಕ್ತವಾಗದಿರುವದಿಲ್ಲ. ಇರಲಿ.

ಲೋಕಲ್ ಫಂಡನ್ನು ಏರಿಸಿದರೆ, ಏರಿಸಿದ ಇಮ್ಮಡಿ ಸರಕಾರಿ ಗ್ರಾಂಟು ಸಿಗುತ್ತದೆಂಬ ಧುರೀಣರ ಹೇಳಿಕೆಯು ಸಾಧಾರವಲ್ಲ. ಖರ್ಚು ಮಾಡಿದ ರಕಮಿನ ಕ್ಕೆ ರಕಮನ್ನು ಸರಕಾರವು ಕೊಡುತ್ತದೆ. ಸರಕಾರು ಕ್ಕೆ ಖರ್ಚಿನ ಅಂಕವನ್ನು ಕೊಡುತ್ತಾರೆಂದು ನಾವು ದಿಕ್ಕಿಲ್ಲದೆ ಖರ್ಚು ಮಾಡುತ್ತ ಹೋಗುವದು ಎಂದಾದರೂ ಸಮಾಜಸವಾದೀತೇನು? ದಿಕ್ಕಿಲ್ಲವೆಂದು ನಾವು ಮುದ್ದಾಂ ನಮೂದಿಸಿರುವೆವು. ಅದಕ್ಕೆ 'ಧುರೀಣ'ದ್ದೇ ಒಂದು ಸಾಕ್ಷಿ ಕೊಟ್ಟುಬಿಡುವೆವು. 'ಧುರೀಣ'ದೊಳಗಿ ಒಂದು ತುಣುಕುಮಿಣುಕನ್ನು ಬೇರೊಂದೆಡೆಯಲ್ಲಿ ಪ್ರಕಟಿಸಿರುವೆವು. ಅದರ ವಾಚನದಿಂದ ಪ್ರತ್ಯೇಕ ಶಾಲೆಗಳಿಗಾಗಿ ಸಾರ್ವಜನಿಕ ದ್ರವ್ಯದ ಅಪವ್ಯಯವಾಗುವ ಮಾದರಿಯು ವಾಚಕರಿಗೆ ಹೊಳೆಯುವಂತಿದೆ. ಈ ರೀತಿ ಶಾಲೆಗಳನ್ನು ನಡಿಸುವದು ಅಪವ್ಯಯವೆಂದು ಧುರೀಣರೇ ಹೇಳಿದ ಬಳಿಕ, ಆ ಪ್ರಕಾರ ನಡೆಯುವ ಶಾಲೆಗಳೆಷ್ಟು! ಅವುಗಳಿಂದ ಜನರಿಗೊದಗುವ ಜ್ಞಾನಪ್ರಸಾರವೆಷ್ಟು? ಎಂಬುದನ್ನೆಲ್ಲ ಆಲೋಚಿಸಿ, ಆ ಕುರಿತು ವ್ಯವಸ್ಥೆ ಮಾಡುವ ಮುಂಚೆ, 'ಸುಲಭವಾದ ಛುರಿ'ಯೆಂದು ಲೋಕಲ್ ಫಂಡನ್ನು ಏರಿಸುವದು ಬರೇ ಅನ್ಯಾಯವೆಂದು ಧುರೀಣರಾದರೂ ಒಪ್ಪಬೇಕು. ಛುರಿಯು ಧುರೀಣರಿಗೆ ಸುಲಭವಾದರೂ, ಜನರಿಗೆ ಮಾತ್ರ ಕಷ್ಟವೆಂದು ನಾವು ಪ್ರಾಮಾಣಿಕವಾಗಿ ನಮೂದಿಸಿ, ಈ ಲೇಖಾಂಶವನ್ನು ಮುಗಿಸುವೆವು.

ಸ್ಫುಟ ಸೂಚನೆಗಳು.

೧. ಲೋಕಮಾನ್ಯರು ಸ್ವರ್ಗಸ್ಥರಾಗಿ ಇಂದಿಗೆ ೬ ವರ್ಷಗಳು ಮುಗಿದವು. ಲೋಕಮಾನ್ಯರ ಪುಣ್ಯಸ್ಮರಣೆಯನ್ನು ದೇಶಬಾಂಧವರೆಲ್ಲರೂ ಭಕ್ತಿಯಿಂದ ಈ ವಾರದಲ್ಲಿ ಮಾಡಿ ಕೃತಕೃತ್ಯರಾಗುವರು. ಲೋಕಮಾನ್ಯರ ಪುಣ್ಯಸ್ಮರಣೆಯ ಲಾಭವು ನಮ್ಮ ವಾಚಕರಿಗೂ ಉಂಟಾಗಬೇಕೆಂದು ಹಬ್ಬ ಗೆಳೆಯರು ಕಳುಹಿದ ಶ್ರೀ| ಸದಾಶಿವ ವಿನಾಯಕ ಬಾಪಟರವರ ಗ್ರಂಥದೊಳಗಿನ ಕೆಲವು ಉಲ್ಲೇಖಗಳನ್ನು ನಾವು ಬೇರೊಂದೆಡೆಯಲ್ಲಿ ಕೊಟ್ಟಿರುವೆವು. ಅದರ ಮೇಲಿಂದ ಲೋಕಮಾನ್ಯರಂಥ ಲೋಕೋತ್ತರ ಪುರುಷರ ಅಂತರಂಗದ ಅರಿವು ವಾಚಕರಿಗುಂಟಾಗುವದು. ಲೋಕಮಾನ್ಯರ ಕೀರ್ತಿಯ ಮಂಗಳಂವಿರಾಡ ಸ್ವ| ಮಧುರಾಚಾಯಿ ಸಾಸೇಯವರು ಬರೆದಂತೆ, ಲೋಕಮಾನ್ಯರಂಥ ಲೋಕೋತ್ತರ ಪುರುಷರು ಇಂದ್ರಿಯಸಂಯಮನ ಮಾಡಿಕೊಂಡು ಲೋಕೋಪಕಾರಿ ಕಾರ್ಯಗಳನ್ನು ಮಾಡಿಗಾಣಿಸುತ್ತಾರೆ. ಇಂದ್ರಿಯಸುಖಗಳಿಗೆ ಅವರು ಮೋಹಪಡದೆ, ಅವುಗಳನ್ನು ಅಧಿಃಪತಿಗೊಳಿಸಿಕೊಂಡು ಲೋಕಕಾರ್ಯಕರ್ತರಾಗುತ್ತಾರೆ. ಶ್ರೀ| ಆಪಟೆಯವರು ಬರೆದಿಟ್ಟ ಇನ್ನೊಂದು ಉಲ್ಲೇಖವು ಸಂಸ್ಮರಣೀಯವಿದೆ; ಮನನೀಯವಿದೆ. ಲೋಕೋತ್ತರ ಪುರುಷರು "ಸಂಪತ್ತೌ ಚ ವಿಪತ್ತೌ ಚ ಮಹತಾಮೇಕರೂಪತಾ" ಎಂಬ ವಚನದಂತೆ, ಸಂಪತ್ತಿನಲ್ಲಿಯೂ, ವಿಪತ್ತಿನಲ್ಲಿಯೂ ನಿಶ್ಚಲ ವೃತ್ತಿಯನ್ನು ಧರಿಸಿಕೊಂಡು ಕೈಕೊಂಡ ಕಾರ್ಯವನ್ನು ಪುರಸ್ಕರಿಸುತ್ತಾರೆ. ಲೋಕಮಾನ್ಯರಷ್ಟು ನಿಶ್ಚಲ ವೃತ್ತಿಯನ್ನಾಗಲಿ, ಸಂಯಮ ಶಕ್ತಿಯನ್ನಾಗಲಿ ನಮ್ಮಂಥ ಸಾಮಾನ್ಯ ಮಾನವರು ಅನುಸರಿಸುವದು ಸುಲಭ ಸಾಧ್ಯವಲ್ಲ. ಆದರೆ ಅವುಗಳನ್ನು ಆಗಿಂದಾಗ ಸ್ಮರಿಸಿ ಸಂಯಮಬಲವನ್ನೂ, ಅಚಲವೃತ್ತಿಯನ್ನೂ ಬೆಳೆಸಿಕೊಳ್ಳಲೆತ್ನಿಸುವದು ನಮ್ಮ ಕರ್ತವ್ಯವು. ಪ್ರಯತ್ನಗಳಿಗೆ ಯಶಕೊಡುವವನು ಪರಮಾತ್ಮನಿದ್ದಾನೆ. ಲೋಕಮಾನ್ಯರನ್ನು ಸ್ಮರಿಸಿ, ಲೋಕಮಾನ್ಯರ ಗುಣಗಳನ್ನು ಅಂಗೀಕರಿಸಲು ಲೋಕಮಾನ್ಯರ ಪುಣ್ಯತಿಥಿಯ ಮುಹೂರ್ತದಲ್ಲಿ ನಾವೆಲ್ಲರೂ ನಿರ್ಧಾರ ಮಾಡಿ ಉದ್ಧಾರ ಹೊಂದಲೆತ್ನಿಸುವ.

---

೨. ದೇಶಭಕ್ತ ಲಾಲಾ ಲಜಪತರಾಯರು ಜಿನೇವಾದಲ್ಲಿ ಕೂಲಿಕಾರರ ಪರಿಷತ್ತಿಗೆ ಹೋಗಿರುವರು. ಅಲ್ಲಿಂದ ಅವರು ಭೂತಲದ ಮೇಲೆ ಶಾಂತತೆಯ ಸಾಮ್ರಾಜ್ಯವನ್ನು ನೆಲೆಗೊಳಿಸಲಿಕ್ಕೆ ಜನ್ಮವನ್ನೆತ್ತಿದ ರಾಷ್ಟ್ರಸಂಘದ ಹಕೀಕತನ್ನು ಬರೆದಿರುವರು. ಅದು ಮನನೀಯವಿದೆ. ರಾಷ್ಟ್ರಸಂಘದಲ್ಲಿ ಪ್ರತಿನಿಧಿಯಾಗಿ ಕೂತುಕೊಳ್ಳುವ ಅಧಿಕಾರವು ಹಿಂದುಸ್ಥಾನಕ್ಕೆ ಪ್ರಾಪ್ತವಾಗಿದೆ. ಈ ಅಧಿಕಾರಸ್ವರೂಪವನ್ನೂ ಲಜಪತರಾಯರು ವರ್ಣಿಸಿರುವರು. ಲಜಪತರಾಯರು ಬರೆಯುವದೇನಂದರೆ:— (ರಾಷ್ಟ್ರಸಂಘಕ್ಕೆ) ಹಿಂದುಸ್ಥಾನವು ಕೊಟ್ಟ ಕಾಣಿಕೆಯ ಬಗ್ಗೆ ಬಹಳ ಪ್ರಶಂಸೆಯಾಯಿತು. ರಾಷ್ಟ್ರಸಂಘದ ಸಭಾಮಂದಿರಕ್ಕೆ ತಗಲಿದ ಕಟ್ಟಿಗೆಯನ್ನೆಲ್ಲ ಹಿಂದುಸ್ಥಾನ ಸರಕಾರವೇ ಕೊಟ್ಟಿತು. ಇದು ಬ್ರಿಟಿಶ ರಾಷ್ಟ್ರದ ಕಾಣಿಕೆಯೆಂದು ಲಂಡನದ 'ಟೈಮ್ಸ್' ಪತ್ರಿಕೆಯು ನುಡಿಯುತ್ತದೆ. ಇದೇ ಸತ್ಯವು. ಭಾರತೀಯ ಪ್ರಜೆಗಳು ಈ ಕಾಣಿಕೆಯನ್ನು ಮಾಡಿದ್ದಿಲ್ಲ. ಬ್ರಿಟಿಶ ಸರಕಾರವೇ ಈ ಕಾಣಿಕೆಗೆ ಕಾರಣವು; ಮತ್ತು ರಾಷ್ಟ್ರಸಂಘವು ಅವರದೇ ಕಾಣಿಕೆ ಎಂದು ಎಣಿಸುತ್ತದೆ. ಖರ್ಚನ್ನು ಮಾತ್ರ ಹಿಂದುಸ್ಥಾನ ಸರಕಾರವು ತೆತ್ತಿತು. ಕೀರ್ತಿಯೂ ಬ್ರಿಟಿಶರಿಗೆ; ಅದರಿಂದ ಒದಗುವ ಲಾಭವೂ ಬ್ರಿಟಿಶರಿಗೆ! ರಾಷ್ಟ್ರಸಂಘದ ಖರ್ಚಿಗೂ ಹಿಂದುಸ್ಥಾನವು ಹೇರಳ ಹಣವನ್ನು ತೆರುತ್ತದೆ. ಆ ಮಾನದಿಂದ ಹಿಂದುಸ್ಥಾನಕ್ಕೆ ಸಿಗುವ ಪ್ರತಿಫಲವು ತೀರ ಕಡಿಮೆ. ಆಂತರರಾಷ್ಟ್ರೀಯ ಕೂಲಿಕಾರರ ಪರಿಷತ್ತಿನಲ್ಲಾಗಲಿ, ರಾಷ್ಟ್ರಸಂಘದಲ್ಲಾಗಲಿ ಹಿಂದೀಯರಿಗೆ ಮಹತ್ವದ ಸ್ಥಾನವೊಂದು ಪ್ರಾಪ್ತವಾಗಲಿಲ್ಲ. ರಾಷ್ಟ್ರಸಂಘವೆಂದರೆ, ಹಿಂದುಸ್ಥಾನಕ್ಕೊಂದು ಬಿಳಿಯಾನೆಯಾಗಿದೆ; ರಾಷ್ಟ್ರಸಂಘಕ್ಕೆ ಪ್ರತಿ ವರುಷ ಹಿಂದುಸ್ಥಾನದಿಂದ ಪ್ರತಿನಿಧಿಗಳು ಕಳಿಸಲ್ಪಡುತ್ತಾರೆ ಆದರೆ, ಹಿಂದೀ ಪ್ರಜೆಗಳಿಗೆ ಅವರನ್ನಾರಿಸುವ ಅಧಿಕಾರವಿಲ್ಲ. ಹೀಗೆ ಅದರಿಂದೊದಗುವ, ಒದಗಬಹುದಾದ ಶಿಕ್ಷಣವು ಕೂಡ ಹಿಂದೀಯರಿಗೆ ಸಿಗುವದಿಲ್ಲ. ಮೂವರು ಪ್ರತಿನಿಧಿಗಳು ಕಳಿಸಲ್ಪಡುತ್ತಾರೆ ಒಬ್ಬರು ಸಂಸ್ಥಾನಿಕರು; ಎರಡನೆಯವರು ನಿವೃತ್ತ ಬ್ರಿಟಿಶ ಅಧಿಕಾರಿಗಳು; ಮೂರನೆಯವರು ಸರಕಾರ ಮರ್ಜಿಯ ಹಿಂದೀಯರು. ಸಂಸ್ಥಾನಿಕ ಪ್ರತಿನಿಧಿಗಳಿಗಾಗಲಿ, ನಿವೃತ್ತ ಬ್ರಿಟಿಶ ಅಧಿಕಾರಿಗಳಿಗಾಗಲಿ ರಾಷ್ಟ್ರಸಂಘದಿಂದ ಅನುಭವ ಪ್ರಾಪ್ತವಾಗಬೇಕೆಂದಿಲ್ಲ; ಇವರಿಗೆ ಸಿಕ್ಕ ಅನುಭವವೇ ನಿರುಪಯುಕ್ತವಿರುತ್ತದೆ. ಇದರಿಂದ ಆಂತರರಾಷ್ಟ್ರೀಯ ಕೂಲಿಕಾರರ ಪರಿಷತ್ತಿನಲ್ಲಿ ಹಿಂದೀಯರಿಗೆ ಆಂತರರಾಷ್ಟ್ರೀಯ ಶಿಕ್ಷಣ ದೊರೆಯಲು ಕಲವು ಇಂಡಿರುವದ ಅದರಿಂದ ಈ ಪರಿಷತ್ತಿಗೆ ಕಳಿಸಲ್ಪಡುವವರೆಲ್ಲರೂ ಭಾರತೀಯರಾಗಿರಬೇಕು. ವರಿಷ್ಠ ಕಾಯಿದೆ ಕೌನ್ಸಿಲು ಈ ಕುರಿತು ತಕ್ಕ ಜಾಗ್ರತೆ ವಹಿಸಬೇಕು.

---

೩. ಲಾಲಾ ಲಜಪತರಾಯರು ಬರೆದ ಹಕೀಕತು ನಮ್ಮ ಬ್ರಿಟಿಶ ರಾಜನೀತಿಯನ್ನು ಉದಾಹರಿಸುತ್ತದೆ. ರಾಷ್ಟ್ರಸಂಘದಲ್ಲಿ ಹಿಂದುಸ್ಥಾನಕ್ಕೆ ಪ್ರಾತಿನಿಧಿಕ ಹಕ್ಕು ಸಿಕ್ಕಿತು. ಭೂಮಂಡಲದೊಳಗಿನ ಸ್ವತಂತ್ರ ರಾಷ್ಟ್ರಗಳ ಪ್ರತಿನಿಧಿಗಳ ಖುರ್ಚಿಗೆ ತಾಗಿ ಖುರ್ಚಿ ಹಾಕಿ ಕುಳಿತುಕೊಳ್ಳುವ ದೊಡ್ಡದೊಂದು ಅಧಿಕಾರವು ಹಿಂದುಸ್ಥಾನಕ್ಕೆ ಔದಾರ್ಯವಂತ ಬ್ರಿಟಿಶರು ದಯಪಾಲಿಸಿದರು; ಎಂಬರ್ಥದ ದೊಡ್ಡ ದೊಡ್ಡ ಜಾಹೀರಾತುಗಳು ಹಿಂದುಸ್ಥಾನದಲ್ಲಿ ಹಂಚಲ್ಪಟ್ಟವು. ಹೀಗೆ ಅಲ್ಲಿ ಜಾಹೀರಾತು ಕೊಟ್ಟರೂ, ರಾಷ್ಟ್ರಸಂಘಕ್ಕೆ ಹಿಂದುಸ್ಥಾನದ ಗುರುತಿಲ್ಲ. ನಮ್ಮ ಕಾಣಿಕೆಗಳೆಲ್ಲ ಬ್ರಿಟಿಶರಾಷ್ಟ್ರದ ಲೆಕ್ಕಕ್ಕೆ ಜಮೆಯಾಗಿರುತ್ತವೆ. ಅದರ ಪ್ರತಿಫಲವೂ, ಪ್ರಶಂಸೆಯೂ ಬ್ರಿಟಿಶರ ಪಾಲಿಗೇ; ಖರ್ಚು ಮಾಡುವದು ಮಾತ್ರ ಹಿಂದುಸ್ಥಾನ ಸರಕಾರದ ಕೋಶದೊಳಗಿಂದ. ಲಜಪತರಾಯರು ನುಡಿಯುವಂತೆ, ಇದು ಸ್ವಾಭಾವಿಕವು. ಕೊಡುವ ಕೈಯು ಹಿಂದುಸ್ಥಾನ ಸರಕಾರವಾದರೂ, ಪ್ರೇರಕ ಅಂತರಾತ್ಮನು ಬ್ರಿಟಿಶರೇ. ಇಸಾಪನೀತಿ ಕಥೆಯೊಳಗಣ 'ರಾಕ್ಷಸನೂ, ಕುಳ್ಳನೂ' (Giant and the dwarf) ಎಂಬಂತೆ ನಮ್ಮ ಹಿಂದುಸ್ಥಾನದ ಗತಿಯಾಗಿದೆ. ಖರ್ಚು ತೆತ್ತು ಖರ್ಚಿನಷ್ಟು ಮರ್ಯಾದೆಯು ನಮಗೆ ಸಿಗುವದಿಲ್ಲ; ಖರ್ಚಿನ ಪ್ರತಿಫಲವೂ ಸಿಗುವದಿಲ್ಲ; ನಾವು ಖರ್ಚು ಕೊಟ್ಟೆವೆಂದು ಹೇಳುವ ಹಾಗಿಲ್ಲ. ಬ್ರಿಟಿಶರ ಸಹವಾಸದಿಂದ ನಮಗೆ ಪ್ರಾಪ್ತವಾದ ಪ್ರತಿಷ್ಠೆಯ ಸ್ವರೂಪವಿದು.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮೇಘರಾಜನು ಚಲೋ ಅನುಗ್ರಹಿಸಿದನು. ಮಕ್ಕಿ ಗದ್ದೆಗಳಲ್ಲಿ ನೀರಾಯಿತು. ನಟ್ಟಿಯ ಕೆಲಸವು ತೀರುತ್ತಬಂತು. ಈ ವಾರದಲ್ಲಿ ೧೧-೪೮ ಇಂಚು ಮಳೆಬಿತ್ತು. ಒಟ್ಟು ೭೩-೧೮ ಇಂಚು ಮಳೆಯಾಯಿತು.

ಜಿಲ್ಹಾ ಲೋಕಲ್ ಬೋರ್ಡಿನ ಇಲೆಕ್ಷನಿನ ಗಡಬಡಿಯು ನಡೆದದೆ. ಇಲೆಕ್ಷನು ಜುಲೈ ೩೧ನೇ ತಾರೀಖಿಗೆ ಕುಮಟಾ, ಕಾಗಾಲ, ಗೋಕರ್ಣ, ಹಿರೇಗುತ್ತಿ, ಮಿರ್ಜಾನ, ಉಪ್ಪಿನಪಟ್ಟಣ ಹಾಗು ಕೂಜಳ್ಳಿಗಳಲ್ಲಿ ಜರುಗುವದು. ಒಂದೇ ಜಾಗದ ಚುನಾವಣೆಯಾಗಲಿರುವದರಿಂದ ಮತದಾರರಿಗೆ ಒಂದೇ ವೋಟಿರುವದು. ಯುಕ್ತ ಕಂಡ ಉಮೇದ್ವಾರರ ಹೆಸರು ಹಾಗು ಚಿಹ್ನೆಗಳ ಮುಂದಿನ ಕಲಮಿನಲ್ಲಿ ಗುಣಿಲೆ ಚಿಹ್ನೆ ಹಾಕಿ ಮತ ಕೊಡಬೇಕು. ರಾ| ಶ್ರೀಪಾದ ವೆಂಕಟೇಶ ಯಾಜ್ಞ

ಕಲ್ಯಾಣಪುರಕರರು ತಮ್ಮ ಉಮೇದ್ವಾರಿ ಅರ್ಜಿಯನ್ನು ಹಿಂತೆಗೆದುಕೊಂಡರು.

ಇಲ್ಲಿಯ ಚಿತ್ರಿಗೆ ಶಾಲೆಯ ಮಾಸ್ತರರಾದ ರಾ ಶಿವರಾಮ ಗೋವಿಂದ ಭಟ್ಟರವರು ಕಳೆದ ರವಿವಾರ ತೀರಿಕೊಂಡರು. ಚಿತ್ರಿಗೆ ಶಾಲೆಯಲ್ಲಿ ಇವರೊಬ್ಬರೇ ಶಿಕ್ಷಕರಿದ್ದರು. ಇವರು ತೀರಿಕೊಂಡದ್ದರಿಂದ ಅಲ್ಲಿಯ ಶಾಲೆಯ ವ್ಯವಸ್ಥೆಯ ಕುರಿತು ಎರಡು ದಿವಸಗಳು ಶಾಲೆಯ ಹುಡುಗರಂತೆ ಜಗಳವಾಡುತ್ತಿದ್ದವರು. ಇಂಥ ಪ್ರಸಕ್ತಿಯಲ್ಲಿ ಹಂಗಾಮಿ ವ್ಯವಸ್ಥೆ ಮಾಡಲು ಮ್ಯುನಿಸಿಪಾಲಿಟಿ ಯಾ ತಾಲೂಕ ಲೋಕಲ್ ಬೋರ್ಡುಗಳಿಗೆ ಅಧಿಕಾರ ಕೊಡುವದು ಪ್ರಶಸ್ತ.

ಶ್ರೀ ಗೋಕರ್ಣ ಕ್ಷೇತ್ರದೊಳಗಣ ಶ್ರೀ ರಾಮ ತೀರ್ಥವನ್ನು ಕುಂಭಾರವಾಡೆಯ ಶ್ರೀ ಶಾಂಡಿಲ್ಯ ಮಹಾರಾಜರವರು ಚಂದವಾಗಿ ಕಟ್ಟಿಸಿರುವರು. ಶ್ರೀ ರಾಮ ದೇವಾಲಯದ ಜೀರ್ಣೋದ್ಧಾರ ಮಾಡಬೇಕೆಂದೂ ಶ್ರೀ ಶಾಂಡಿಲ್ಯ ಮಹಾರಾಜರು ಸಂಕಲ್ಪಿಸಿರುವರು. ಔದಾರ್ಯವಂತರು ದ್ರವ್ಯಸಹಾಯವನ್ನಿತ್ತು ಮಹಾರಾಜರ ಕಡೆಯಿಂದ ಆ ಕಾರ್ಯವನ್ನು ನೆರವೇರಿಸಿಕೊಳ್ಳಬೇಕಾಗಿ ಕ್ಷೇತ್ರಸ್ಥರೊಬ್ಬರು ಬಿನ್ನೈಸುತ್ತಾರೆ.

ಹೊನ್ನಾವರ— ಕೆಲವು ದಿವಸ ಜೋರಿನ ಮಳೆ ಬಿದ್ದದ್ದರಿಂದ ರೈತರೆಲ್ಲರೂ ಚಿಂತಾತುರರಾಗಿದ್ದರು. ಆದರೆ ಈಗ ... ನೆಯಿಂದ ಜಡಿಮಳೆಗೆ ಪ್ರಾರಂಭವಾಯಿತು. ಮುಸಲ್ಮಾನ ಬಾಂಧವರ ಮೋಹರಮ್ಮ ಹಬ್ಬವು ಮಳೆಯಿಲ್ಲದೆ ಸಾಂಗವಾಗಿ ನೆರವೇರಿತು. ಹೊರಕಡೆ ಬೇಸಾಯ ಜೋರಾಗಿದೆ. ಪ್ರತಿ ದಿನ ಒಂದೆರಡು ಮರಣಗಳು ಆಗುತ್ತವೆ. ಶ್ರೀ ಶಂಕರರಾವ ನಾಗರಕಟ್ಟೆ ಇವರು ತಾ. ... ನೇ ರಾತ್ರಿ ಅವಿಚಿಂದಲೇ ಸ್ವರ್ಗಸ್ಥರಾದರು.

ಅಂಕೋಲಾ— ಇಲ್ಲಿಯ ತಾಲೂಕ ಲೋಕಲ ಬೋರ್ಡಿನ ಸ್ಪೆಶಲ ಮೀಟಿಂಗು ಕಳೆದ ತಾರೀಖು ೨೦ ಕ್ಕೆ ಲೋಕಲಫಂಡ ವಸೂಲಿಯ ವಿಚಾರದ ಬಗ್ಗೆ ಕೂಡಿತ್ತು. ಮತ್ತು ಆ ವಿಷಯದಲ್ಲಿ ಚರ್ಚೆಯಾಗಿ ಲೋಕಲಫಂಡವನ್ನು ಈಗ ಇದ್ದಕ್ಕಿಂತ ಹೆಚ್ಚಿಗೆ ವಸೂಲಿಮಾಡಬಾರದಾಗಿ ಬಹುಮತದಿಂದ ಠರಾವು ಪಾಸಾಯಿತು. ನಮ್ಮ ತಾಲೂಕಿನಲ್ಲಿ ಬೇಸಾಯದ ಭೂಮಿಗಿಂತ ಜಂಗಲ ಪ್ರದೇಶವು ನಾಲ್ಕು ಪಾಲಿನಿಂದ ಹೆಚ್ಚಿಗೆ ಇದ್ದು, ಜಂಗಲ ಖಾತೆಯಿಂದ ಸರಕಾರಕ್ಕೆ ಬಹಳೇ ಉತ್ಪನ್ನವಿದ್ದು ಮಾಲಕರ ... ಮತ್ತು ... ವಗೈರೆ ಉತ್ಪನ್ನದೊಳಗಿಂದ ರೂಪಾಯಿಗೆ ಒಂದು ಆಣೆಯಂತೆ ಲೋಕಲಫಂಡು ಸರಕಾರದವರು ಕೊಡಬೇಕಾಗಿಯೂ ... ತರಾಯಿಸಲ್ಪಟ್ಟಿತು.

ಪುಣೆಯಲ್ಲಿ ಕೂಡಲಿಕ್ಕಿದ್ದ ಸ್ಥಾನಿಕ ಸ್ವರಾಜ್ಯ ಪರಿಷತ್ತಿಗೆ ಇಲ್ಲಿಯ ಟಿ. ಎಲ್ ಬಿ ಮೆಂಬರರಾದ ಶ್ರೀ ... ಪ್ರಭುರವರು ಹೋಗಿರುವರು.

ಲೋ. ಬೋ. ದ ಮೆಂಬರರು ಭತ್ತ ವಗೈರೆ ... ದೆ ಹಾಕದೆ ... ಕೆಲಸ ಮಾಡಬೇಕೆಂದು ಕೆಲವು ಮೆಂಬರರು ಈ ... ದಲು ಪ್ರೆಸಿಡೆಂಟರಿಗೆ ಒರಕೊಂಡ ಲೇಖಿ ಅರ್ಜಿಯ ವಿಚಾರವು ಇನ್ನೂ ಆಗಲಿಲ್ಲ. ಕಳೆದ ಸಭೆಯಲ್ಲಿ ಅದರ ವಿಚಾರ ಮಾಡಬೇಕಾಗಿ ಒಬ್ಬ ಮೆಂಬರರು ಪ್ರೆಸಿಡೆಂಟರಿಗೆ ಸೂಚಿಸಿದಲ್ಲಿ, ಸದರಿ ವಿಷಯವನ್ನು ... ಸಿನ ಕಮಿಟಿಯಲ್ಲಿ ಚರ್ಚೆಗೆ ತರುತ್ತೇವಾಗಿ ಹೇಳಿದರಂತೆ. ಆದರೆ ಲೋ। ಬೋ। ದ ಕಾಲಂ ... ನೇ ಪೋಟ ಕಲಂ ... ದರ ಅನ್ವಯ ... ದಿವಸದೊಳಗೆ ಸದರಿ ಅರ್ಜಿಯ ವಿಚಾರ ಮಾಡಬೇಕಿತ್ತು. ಈ ಕಡೆಗೆ ಪ್ರೆಸಿಡೆಂಟರು ಲಕ್ಷ್ಯ ಕೊಡುತ್ತಾರೇನು?

ಇಲ್ಲಿಯ ಮೊದಲ ಮುನ್ಸಿ ಕಳೆದ ... ಕೈ ... ಯಿಂದ ಪಾರುಗೊಂಡಿತು.

ಶಿರಸಿ— ಇಲ್ಲಿಯ ಶ್ರೀ ... ಕೃಷ್ಣ ... ಕ್ರೈ ... ದೇವಾ ... ಗಳಲ್ಲಿ ಭಜನೆ ಸಪ್ತಾಹ ಮಹೋತ್ಸವವು ಒಳ್ಳೇ ಸಂಭ್ರಮದಿಂದ ನಡೆದಿತು.

ಕಡವಾಡ ಗ್ರಾಮದ ಪಟೇಲರು ರಾತ್ರಿ ಮೋಟಾರುಗಳು ಓಡಾಡುವದರಿಂದ ಅಪಘಾತವಾಗುವ ಸಂಭವವಿದೆಂದು ರಿಪ್ಪೋರ್ಟ ಮಾಡಿ ಮೋಟಾರಗಳ ರಾತ್ರಿಯ ಓಡಾಟವನ್ನು ನಿಲ್ಲಿಸಿದರು. ಇಲ್ಲಿಯ ನಾಗರಿಕರು ಠೀಕೆ ಕಟ್ಟಿ ... ಕಲೆಕ್ಟರ ಸಾಹೇಬರು ಇತ್ತ ಲಕ್ಷ ಕೊಡಬೇಕು.

ರಾ। ನರಸಿಂಹ ಅನಂತ ನಾಯಕರವರು ತಿಳಿಸುವದೇನಂದರೆ — ಖಾದಿಯಂತು ಪೇಟೆಯ ಹಲವು ಅಂಗಡಿಕಾರರಲ್ಲಿ ಜವಾನರ ಒಂದು ಬಟ್ಟೆಯ ವ್ಯಾಪಾರವಾಗುತ್ತದೆ. ಜನರು ಪರಾಂಬರಿಸಿ ಖಾದಿಯನ್ನೇ ಖರೀದಿ ಮಾಡಬೇಕು. ಶುದ್ಧ ಖಾದಿಯು ಕಾರವಾರದ ರಾ। ಎಸ್. ಎಸ್. ... ಇವರಲ್ಲಿ ದೊರೆಯುತ್ತದೆ. ಖಾದಿಯನ್ನು ಅಪೇಕ್ಷಿಸುವವರು ಇವರಲ್ಲಿಯೇ ಖಾದಿಯನ್ನು ಖರೀದಿ ಮಾಡಬೇಕು.

ಶಿರ್ಸಿ— ಇಲ್ಲಿಯ ಸಬಜಡ್ಜ ಕೋರ್ಟಿನ ಕೆಲಸವನ್ನು ... ತಿಂಗಳಿಂದ ನಡೆಯುವ ಹುಕೂಮು ಆಗಿತ್ತು. ಅದನ್ನು ಹೀಗೆ ಮಾಡಬಾರದಾಗಿ ಜನರ ಅರ್ಜಿ ಹೋಗಿರುವದು.

ಶ್ರೀ ಮಾರೆಮ್ಮನ ದೇವಸ್ಥಾನದ ... ಒಬ್ಬನು ತನ್ನ ಸೊಸೈಟಿಯಲ್ಲಿನ ... ರೂಪಾಯಿಗಳನ್ನು ತೆಗೆದು, ಅವನ್ನು ... ಕೈಸ್ವಾಧೀನ ... ಹಸ್ತಕ್ಕೆ ಕೊಟ್ಟದ್ದರಿಂದ ... ವಿಶೇಷವಾಗಿ ... ಶ್ರೀ ... ರಾಜಿನಾಮೆ ಕೊಟ್ಟಿರುವರಾಗಿ ವದಂತಿ.

ಹ್ಯಾಸ್ಕೂಲಿನ ಹಿಂದೆ ... ವೇಶ್ಯಾಗೃಹಗಳಿದ್ದು ಅವುಗಳ ಮೂಲಕ ಪ್ರೌಢ ವಿದ್ಯಾರ್ಥಿಗಳು ಕೆಡುವ ಸಂಭವವು ಬಹಳೇ ಇರುತ್ತದೆ.

ಮೋಹರಮ್ಮದಲ್ಲಿ ಕೆಲವು ಮಹಮ್ಮದೀಯರು ತಮ್ಮ ದೇವರನ್ನು ತೆಗೆದುಕೊಂಡು ಹೋಗುತ್ತಿರಲು, ಮುಂದೆ ಶ್ರೀ ಕೃಷ್ಣ ಮೋಟಾರ ಬರಲು ಎಲ್ಲರೂ ಕೆಳಗೆ ಇಳಿಯಬೇಕೆಂದು ಹಟ ಹಿಡಿದರು. ಆದರೆ, ಒಳಗೆ ಕೂತವರು ಅದಕ್ಕೆ ಕಬೂಲ ಮಾಡದೆ, ಕೆಲವು ಹೊತ್ತು ತಕರಾರು ನಡೆದು ಕಡೆಗೆ ಯಾರೂ ಇಳಿಯದೆ ಅದನ್ನು ಬದಿಯಿಂದ ತಿರುಗಿಸಿಕೊಂಡು ಹೋದರು. ಇದೇನು ದುರಾಗ್ರಹ!

ಜಿಲ್ಲಾ ಕೊಂಗ್ರೆಸ ಕಮಿಟಿಯವರು ಶ್ರೀ ಮಂಜುನಾಥ ಭಟ್ಟ ಕಕೀಲ ಇವರಿಗೆ ... ಸಭೆಯ ತರ್ಫೆನಿಂದ ಮುಂಬಯಿ ಪ್ರಾಂತಿಕ ಕಾಯದೆ ಕೌನ್ಸಿಲಿಗೆ ನಿಲ್ಲಿಸಬೇಕೆಂದು ನಿರ್ಧರಿಸಿರುವರು.

ಒಬ್ಬರು ತಿಳಿಸುವದೇನಂದರೆ:—

ಶಿರ್ಸಿ ಸಿದ್ದಾಪುರ ತಾಲೂಕುಗಳಲ್ಲಿ ಕಾಡು ಆನೆಗಳಿಂದ ರೈತರಿಗೂ ಅವರ ಬೆಳೆಗೂ ಬಹಳ ಲುಕ್ಸಾನು ಆಗಿರುವದರಿಂದ ಆನೆಗಳನ್ನು ನಾಶಪಡಿಸುವ ಬಗ್ಗೆ ನೇಮಕವಟ್ಟ ... ಹೊಸ್ಪಾವದಲ್ಲಿ ಇದ್ದು ಆವಶ್ಯವಿದ್ದಾಗ್ಯೂ ಶಿರ್ಸಿ ಸಿದ್ದಾಪುರ ತಾಲೂಕುಗಳಲ್ಲಿ ಕಾಡು ಆನೆಗಳನ್ನು ನಾಶಪಡಿಸುವದಕ್ಕೆ ಉಪಯೋಗವಾಗುತ್ತಿಲ್ಲವೆಂಬ ಸಂಗತಿ ಈಗಿನ ಕಾನಡಾ ಕಲೆಕ್ಟರರಾದ ಮೆಕಬರ್ನಿ ಮೊಂಗೊಮೇರಿ ಸಾಹೇಬರಿಗೆ ಖಾತ್ರಿಯಾಗಿ, ಅವರು ಸರಕಾರಕ್ಕೆ ಬರೆದು ಸದರಿ ಎರಡು ತಾಲೂಕಗಳ ಬಗ್ಗೆ ಬೇರೆ ಒಂದು ಬಂದೂಕು ಹಚ್ಚಿ ಶಿರ್ಸಿಯ ತಾಲೂಕ ಕಚೇರಿಯಲ್ಲಿ ಇಟ್ಟಿರುತ್ತಾರೆ. ಮತ್ತು ಅದರ ಉಪಯೋಗ ಮಾಡುವ ಬಗ್ಗೆ ಯೋಗ್ಯರೆಂತಾ ರಾವಸಾಹೇಬ ಎಸ್. ಎಸ್. ಪಾಟೀಲ, ಡಿಸ್ಟ್ರಿಕ್ಟ್ ಏಜ್ಯುಕೇಶನ ಬೋರ್ಡ ಪ್ರೆಸಿಡೆಂಟರು ಶಿಫಾರಸು ಮಾಡಿದ ಪ್ರಕಾರ ಎ. ... ದರ ಸಾಹೇಬ ನಾಕೀನ ಶಿರ್ಸಿ ಮತ್ತು ರಾಜೇಶ್ರೀ ... ರಾವ ಕಾನಿಟಕರ ನಾಕೀನ ... ಇವರ ಹೆಸರಿಗೆ ಲೈಸನ್ಸ ಸಹಾ ಕೊಟ್ಟಿರುತ್ತಾರೆ. ಆನೆ ಹೊಡೆದವರಿಗೆ ಸರಕಾರದಿಂದ ... ರೂಪಾಯಿ ಇನಾಮು ಸಿಗುತ್ತದೆ ... ಬಹು ಮೌಲ್ಯವಾದ ಆನೆಯ ದಂತಗಳೂ ಅವರಿಗೆ ಸಿಗುತ್ತವೆ, ಎಂತಾ ಕೇಳುತ್ತೇನೆ. ಮತ್ತು ಆನೆ ಹೊಡೆಯುವ ಬಗ್ಗೆ ಹೋಗುತ್ತಿರುತ್ತಾ ತಗಲುವ ಮೋಟಾರ ಖ್ಯಾರ್ಚ ಮತ್ತು ದಿನ ಒಂದಕ್ಕೆ ಒಂದು ರೂಪಾಯಿ ಭತ್ತೆ ಕೊಡುವದಕ್ಕೆ ಮುಚಕೂರ ಡಿಸ್ಟ್ರಿಕ್ಟ ಫಂಡು ಎಸೋಶಿಯೇಶನ್‌ದವರು ಒಪ್ಪಿರುತ್ತಾರೆ, ಹೀಗಿದ್ದು, ಶಿರ್ಸಿಯಿಂದ ೧೨ ಮೈಲು ದೂರದಲ್ಲಿರುವ ಸಿದ್ದಾಪುರ ತಾಲೂಕ ತ್ಯಾಗ್ಲಿ ಫಿರ್ಕಾ ಮತ್ತಿಹಳ್ಳಿ ಗ್ರಾಮಕ್ಕೆ ಹೋಗಿ ಆನೆಗಳನ್ನು ಹೊಡೆಯುವದಕ್ಕೆ ಒಂದನೇಯವನು ತನಗೆ ಈಗ ಹಬ್ಬವೆಂತಲೂ, ಹಬ್ಬ ತೀರಿದ ಮೇಲೆ ಮೂರು ದಿವಸ ಜರೂರಿಯಿಂತಿ ಕೆಲಸವಿರುವದರಿಂದ ಆಗುವದಿಲ್ಲ ಎಂತಲೂ, ಎರಡನೇಯವರು ತಾವು ಆಜಾರಿ ಇದ್ದೇವೆಂತಲೂ ಹೇಳಿ ಹೋಗಲಿಲ್ಲ. ಹೀಗಾಗಿ ಸದರಿ ಮತ್ತಿಹಳ್ಳಿಯಲ್ಲಿ ಆನೆಯಿಂದ ಬಾಧೆಪಡುವ ಬಡರೈತರಿಗೆ ಏನೂ ಉಪಯೋಗವಾಗಲಿಲ್ಲ. ಆನೆಯು ... ಅವರ ಮನೆಗಳಲ್ಲಿ ಹೊಕ್ಕು ಅಲ್ಲಿರುವ ಭತ್ತ ಬೆಲ್ಲ ವಗೈರೆ ನಾಶಪಡಿಸಿ ಅವರಿಗೆ ಬಹಳೇ ಲುಕ್ಸಾನು ಆಗಿ ಇದೆ. ಆದ್ದರಿಂದ ಈ ಬಗ್ಗೆ ನಮ್ಮ ದಯಾಳುಗಳಾದ ಮೆಕಬರ್ನಿ ಕಲೆಕ್ಟರ ಸಾಹೇಬ ... ರು ಇವರು ವಿಚಾರ ಮಾಡಿ ನ್ಯಾಯ ಕೊಡಬೇಕೆಂದು ಬೇಡುತ್ತೇನೆ.

ವೃತ್ತಸಾರ.

— ಹಿಂದೂ-ಮುಸಲ್ಮಾನರೊಳಗಿನ ಐಕ್ಯಭಾವನಕ್ಕಾಗಿ ಹಿಂದೂ ಬಾಂಧವರ ಗೃಹಕೆಗಳಿಗೆ ಬಾಧೆ ತರಬಾರದೆಂದು ಪಾಟ್ನಾ ಮುಸಲ್ಮಾನರು ಪಾಟೀದಿಯ ಮುಂದಾಗಳಿಯ ... ಮಧ್ಯಸ್ಥೋಪರಿಂದ ಮೆರವಣಿಗೆ ಅನುಮತಿಯನ್ನಿತ್ತರು. ನಿಜವಾದ ಇಸ್ಲಾಮು ಧರ್ಮಿಗಳೆಂದರೆ ಇವರೇ!

— ಇದೇ ಬರುವ ಅಗಸ್ಟ ತಿಂಗಳ ಕೊನೆಯ ವಾರದಲ್ಲಿ ಕಲಕತ್ತೆಯಲ್ಲಿ ಅಖಿಲ ಭಾರತೀಯ ಸಂಸ್ಕೃತ ಪರಿಷತ್ತು ನೆರಲಿಕ್ಕಿದೆ. ಮಹಾಮಹೋಪಾಧ್ಯಾಯರಾದ ಡಾ॥ ಗಂಗಾನಾಥ ಝಾರವರು ಅಧ್ಯಕ್ಷರಾಗಿರುವರು.

— ಸಿವಿಲ್ಲಾ ಪಟ್ಟಣದ ನೆರೆ ಹೊರೆಯ ಕಾಡು ಪ್ರದೇಶದಲ್ಲಿ 'ರೀತ' ಎಂಬುವೊಂದು ಪದ್ಧತಿಯಿದೆ. ಈ ಪದ್ಧತಿಯಂತೆ ಗಂಡನು ತನ್ನ ಹೆಂಡತಿಯನ್ನು ಯಾರಿಗೂ ವಹಿಸಿ ತನ್ನ ಸಂಬಂಧವನ್ನು ತುಂಡರಿಸಬಹುದು! ಈ ಪದ್ಧತಿಯನ್ನು ನಿರ್ಮೂಲಿಸಬೇಕೆಂದು ಇಲ್ಲಿಯ ಸಂಸ್ಥಾನಿಕರ ಪರಿಷತ್ತಿನಲ್ಲಿ ನಿರ್ಣಯವಾಗಿರುವದು.

— ಸಿಂಧ ಪ್ರಾಂತದ ಥರಪಾರಕರ ಜಿಲ್ಲೆಯ ಸಂಘರ ಗ್ರಾಮದಲ್ಲಿ ಒಂದು ವೀರ ಕಥೆಯು ಸಂಭವಿಸಿತು. ಮೂರು ಕಳ್ಳರು ಅಪರಾತ್ರಿಗೆ ಮನೆಯನ್ನು ಸೇರಿ ತನ್ನ ಕೋಣೆದು ಕಳವು ಮಾಡಿಕೊಂಡು ಒಯ್ಯುತ್ತಿದ್ದರು. ಒಳಗೆ ಮೂವರು ಹೆಂಗಸರಿದ್ದರು. ಒಬ್ಬಳು ಥಟ್ಟನೆ ಎಚ್ಚತ್ತಳು. ಒಬ್ಬ ಕಳ್ಳನು ಗೋಡೆಯ ಮೇಲಿಂದ ಹಾರುತ್ತಿದ್ದನು. ಅವಳು ಆ ಕಳ್ಳನನ್ನು ಹಿಡಿದಳು. ಉಳಿದ ಇಬ್ಬರು ಹೆಂಗಸರೂ ಎಚ್ಚತ್ತರು. ಕಳ್ಳನನ್ನು ಬಿಡಿಸಲು ಇನ್ನೊಬ್ಬ ಕಳ್ಳನು ಬಂದನು. ಕಳ್ಳರಿಗೂ ಹೆಂಗಸರಿಗೂ ಘನಘೋರ ಸಂಗ್ರಾಮವಾಯಿತು. ಕಳ್ಳರ ಹತ್ತರ ಖಡ್ಗವಿತ್ತು, ಸೊಟ್ಟೆಯಿತ್ತು. ಅವರು ಹೆಂಗಸರಿಗೆ ಹೊಡೆದರು. ಆದರೂ ಹೆಂಗಸರು ಹಿಡಿದ ಕಳ್ಳನನ್ನು ಬಿಡದೆ, ಒಂದು ಕಂಬಕ್ಕೆ ಕಟ್ಟಿಹಾಕಿದರು. ನಿರುಪಾಯವಾಗಿ ಉಳಿದ ಇಬ್ಬರು ಕಳ್ಳರು 'ಯಃ ಪಲಾಯತಿ ಸ ಜೀವತಿ' ಎಂಬ ಆಲೋಚನೆ ಮಾಡಿ ಓಡಿದರು. ಹೆಂಗಸರ ಮನೆಯು ಗ್ರಾಮದ ಒಂದು ಮೂಲೆಯ ಲ್ಲಿದ್ದು ಯಾವಾಗಲೂ ನೆರೆಯ ... ದ ನೆರೆಹೊರೆಯವರ್ಯಾರೂ ನೆರವಾಗಬಂದಿದ್ದಿಲ್ಲ.

— ಜುನಾಗಡ ಸಂಸ್ಥಾನದಲ್ಲಿ ಜಾಕೋಬ ಎಂಬುವನೊಂದು ಗ್ರಾಮವಿದೆ. ಇಲ್ಲಿ ಭಗವಾನ್ ಶೇಷಶಾಯಿ ವ ಪ್ರತಿಮೆಯೊಂದು ಸಿಕ್ಕಿರುವದು. ೬೦ ಮಣ ಭಾರವಿರುವದು. ಇದರ ಕೆಳಗೆ ಅನೇಕ ಶಾಸನಗಳು ದೊರೆತಿವೆ. ಇವು ಸಂವತ್ ೧೦೩೭ ನೇ ಸುಮಾರಿನವೆಂದು ಕ್ಯಾಪ್ಟನ್ ಶಿಲಾಲೇಖಗಳಿಂದ ತಿಳಿಯಬರುತ್ತದೆ. ಇಳಿಯಲ್ಲಿಯೇ ಒಂದು ದೊಡ್ಡ ಮನೆಯಿರುವದೆಂದು ಒಂದು ತಾಮ್ರಲೇಖದಿಂದ ತಿಳಿಯುತ್ತದೆ. ಈ ಶಿಲಾಲೇಖವು ೯೦೦ ವರ್ಷ ಪುರಾತನವು. ಪೂರ್ವ ಬಂಗಾಲದ ಪಹಾಡಪುರ ಗ್ರಾಮದಲ್ಲಿಯೂ ಪುರಾತನ ಒಂದು ಸುಂದರವಾದ ದೇವಾಲಯವು ವ್ಯಕ್ತವಾಗಿದೆ. ಉತ್ಕೃಷ್ಟವಾದ ಸಕ್ಷದವೆ. ಈ ಕೆಲಸವು ೮೯೦ ನೇ ಸಾಲಿನಲ್ಲಿ ಕಾಶೀಪಾದ ಅರಸರಾದ ಮೊದಲನೇ ಮಹೇಂದ್ರಪಾಲರವರ ಕಾಲದವೆಂದು ಹೇಳುತ್ತಾರೆ!

— ಶಾಕೇಮಾಡದಲ್ಲಿ ವಿಪರೀತ ಮಳೆ ಸುರಿಯಿತು. ಮಂಗರವಾಡೆಯೆಂಬ ಇಡೀ ಗ್ರಾಮವೇ ಬಳೆದು ಹೋಯಿತು. ಇದೇ ೨೫ ಮಂದಿಗಳು ಬಿದ್ದಿದರು!

— ವಿಲಾಯತಿಯಲ್ಲಿ ‹ ಪಂಚ ' ವೆಂಬುವದು ಪತ್ರಿಕೆಗಳನ್ನು ಪ್ರಕಟಿಸುವ ಕಾರ್ಯಾಲಯಕ್ಕೆ ಬೆಂಕಿಬಿದ್ದು ೫೦೦೦೦ ಪವನು ನಷ್ಟ!

— ವಿಜಾಪುರ ಜಿಲ್ಲೆಯಲ್ಲಿ ಹೆಂಗಸರಿಗೆ ಒಂದು ಪ್ರಕಾರದ ವ್ಯಾಧಿಯು ಹಬ್ಬುತ್ತಿದೆ. ವ್ಯಾಧಿಯಿಂದ ಕೈಕಾಲುಗಳು ನಿಸ್ತೇಜವಾಗುತ್ತವಂತೆ! ದಿನ ಬೆಳೆದಂತೆ ವ್ಯಾಧಿಗಳ ಪ್ರಕಾರಗಳೂ ಬೆಳೆದವು!

— ತುರಗೋಡದಲ್ಲಿ ಶ್ರೀ ವಿದ್ಯಾರಣ್ಯರ ಉತ್ಸವದ ಪ್ರೀತ್ಯರ್ಥ ಅಲ್ಲಿಯ ಬ್ರಾಹ್ಮಣರುಗಳು ೧ ಲಕ್ಷ ಗಾಯತ್ರಿ ಜಪ ಮಾಡಿದರು.

— ನೀಲಗಿರಿಯೊಳಗಿನ ತಾತು ಜಾತಿಯವರ ದುಃಸ್ಥಿತಿಯನ್ನು ಕಂಡು ಮದ್ರಾಸ ಸರಕಾರವು ಅಲ್ಲಿಯ ಮದ್ಯದಂಗಡಿಗಳನ್ನು ನಿಲ್ಲಿಸಿದರು. ಈಗ ಅಲ್ಲಿಯವರು ಚಹಾ ಕುಡಿಯ ಹತ್ತಿರುವರು. ಬಾಟ್ಲಿ ಹೋಗಿ ಕಪ್ಪು ಬಂತು!

— ಬಂಗಾಲದ ಪಾಬ್ನಾ ಪಟ್ಟಣದಲ್ಲಿ ಹಿಂದೂ-ಮುಸಲ್ಮಾನರ ದೊಂಬಿ ನಡೆದು ಅವರ್ಣನೀಯವಾದ ಅತ್ಯಾಚಾರಗಳು ನಡೆದವು. ೫೦೦ ಮಂದಿಗಳು ಸೆರೆಬಿದ್ದಿರುವರು!

— ಉತ್ತರ ಹಿಂದುಸ್ಥಾನದಲ್ಲಿ ‹ ಜ್ವಾಲಾಮುಖಿ ' ಎಂಬುದೊಂದು ಹಿಂದೂ ದೇವಾಲಯವಿದೆ. ಅದರ ಅರ್ಚಕರು ಮುಸಲ್ಮಾನರಂತೆ! ಎರೆಂತ ಪ್ರಕಾರ?

— ಗ್ರಂಥಕರ್ತರಿಗೆ ಆಶ್ರಯ ಕೊಡಬೇಕೆಂದು ಮೈಸೂರಲ್ಲಿ ‹ ದೇವರಾಜಬಹದ್ದೂರ ನಿಧಿ ' ಯು ಸಂಗ್ರಹಿಸಲ್ಪಟ್ಟಿದೆ. ‹ ಶ್ರೀಕೃಷ್ಣರಾಜೇಂದ್ರ ಚರಿತ್ರೆ ' ಯನ್ನು ಬರೆದದ್ದಕ್ಕಾಗಿ ಆಸ್ಥಾನ ವಿದ್ವಾನ್ ಶ್ರೀಕಂಠ ಶಾಸ್ತ್ರಿಗಳಿಗೂ, ‹ ಮಹಾಲಿಂಗ ರಂಗಕವಿ ಅನುಭವಾಮೃತ ' ವನ್ನು ಬರೆದದ್ದಕ್ಕಾಗಿ ಶ್ರೀ ಹೊಸಕೆರೆ ಚಿದಂಬರಯ್ಯನವರಿಗೂ ೩೦೦–೩೦೦ ರೂಪಾಯಿಗಳ ಬಹುಮಾನಗಳು ಕೊಡೋಣಾದವು!

— ಕೊಲಂಬೊಕ್ಕೆ ಸಮೀಪದಲ್ಲಿ ಒಂದು ದೇವಾಲಯದಲ್ಲಿ ೬೫ ವರ್ಷ ವಯಸ್ಸಿನ ಸದಾಯರ ಎಂಬ ತಮಿಳ ಗೃಹಸ್ಥನು ಜಗಿಯಲ್ಲಿದ್ದ ತೀರ್ಥ ಪ್ರಾಶನದಿಂದ ೪೧ ದಿನ ಉಪವಾಸ ಮಾಡಿದರು. ಇನ್ನು ೧೦ ದಿನ ಉಪವಾಸ ಮಾಡಬೇಕೆಂದು ಸಂಕಲ್ಪಿಸಿರುವರು! ಧನ್ಯರು!

— ಇಂಗ್ಲಂಡದ ದೇವರಾಜರ ಸತಿಯರಿಗೆ ಮದುವೆಯಾಗಬೇಕೆಂದು ಕುವರಾರು ೩೦ ಸಾವಿರ ಕನ್ಯೆಯರು ಮನವ್ಯಸ್ಥಿಕೆ ನಡಿಸಿದರು!

— ಇಸಾಸು ಕಾಯಿದೆ ಮಂಡಳದ ಪ್ರತಿನಿಧಿ ಸಕ್ಸೇನವನ್ನು ಉತ್ತಾಯದಿಂದ ಪ್ರಾರಂಭಿಸಬೇಕೆಂಬ ಠರಾವು ಸ್ವೀಕರಿಸಿರುವದು. ಸಕ್ಸೇನವನ್ನು ಉತ್ತಾಯದಿಂದ ಪ್ರಾರಂಭಿಸಬೇಕಾದರೆ, ಹೊಸ ಶಾಲೆಗಳನ್ನು ಎಷ್ಟು ಕಟ್ಟಬೇಕಂತೆ! ಪ್ರತ್ಯಕ್ಷ ಖರ್ಚು ತಗ್ಗಬಾರದಂತೆ!! ಯಾಕೆ? ಕರವನ್ನೇ ಹೇರಬೇಕೆಂಬ ಉತ್ತಾಯವೇಕೆ? ಕರ ಹೇರಿದ ಮೇಲೆ ಪ್ರಾಥಮಿಕ ಶಿಕ್ಷಣಕ್ಕೆ ದುಃಖ ಇಲ್ಲೇನು?

— ಸಾರ್ವಜನಿಕ ಬಾವಿಗಳಲ್ಲಿ ನೀರು ಸೇದಲು ಹರಿಜನರಿಗೆ ಹಕ್ಕಿರುವದಾಗಿ ಅಹಮದನಗರ ಕೋರ್ಟಿನವರು ತೀರ್ಪು ಕೊಟ್ಟಿರುವರು.

— ಬ್ರಿಟಿಶ ಬೈಬಲ ಸೊಸೈಟಿಯವರು ಕಳೆದ ವರ್ಷದಲ್ಲಿ ೧ ಕೋಟಿ ೪ ಲಕ್ಷ ಬೈಬಲ ಪ್ರತಿಗಳನ್ನು ಹಂಚಿದರು. ೫೬೭ ಭಾಷೆಗಳಲ್ಲಿ ಕೂಡಿ ಇಷ್ಟು ಪ್ರತಿಗಳು ಹಂಚೋಣಾದವು. ಹಿಂದೂ ಧರ್ಮದ ಪ್ರಸಾರವೆಲ್ಲಿದೆ?

— ಅಮೇರಿಕೆಯ ರಾಜಧಾನಿಯಾದ ನ್ಯೂಯೋರ್ಕ ಬಳಿ ನಡೆದ ಬಹಳ ದೊಡ್ಡದೊಂದು ಅನರ್ಥ! ಮದ್ದುಗುಂಡಿನ ಕಾರಖಾನೆಗೆ ಬೆಂಕಿ ಬಿದ್ದು ೫೦ ಮಂದಿಗಳು ಸುಡಿದರು, ೧೦೦ ಮಂದಿಗಳು ಗಾಯಪಟ್ಟರು; ೧ ಕೋಟಿ ರತ್ತಲು ಮದ್ದು ಹಾಗು ೧ ಲಕ್ಷ ಗುಂಡು ಸುಟ್ಟು ಹೋದವು; ಸ್ಫೋಟವು ೩೫ ಮೈಲು ದೂರ ಕೇಳುತ್ತಿತ್ತಂತೆ! ೨೦೦ ಕಟ್ಟಡಗಳು ನೆಲಸಮವಾದವು. ಅಷ್ಟರಲ್ಲಿ ಮೇಘರಾಜನು ಅನುಗ್ರಹಿಸಿದ್ದರಿಂದ ಅಗ್ನಿನಾರಾಯಣನು ಶಾಂತನಾದನು!

— ಸಂದರ್ಶ್ಯ ಪ್ರಾಂತದ ಬರೇಲಿಯಲ್ಲಿ ಶ್ರೀ ಕೃಷ್ಣ ಸಹಾಯ ಎಂಬ ವಕೀಲರ ಮಗನು ಇವರಿಗೆ ಒಬ್ಬ ಜನಿಸಿದ್ದಾನೆ; ಅವನಿಗೆ ೪ ವರ್ಷ ವಯಸ್ಸು. ಚಿಕ್ಕ ಬಾಲಕನು ತನ್ನ ಪೂರ್ವಜನ್ಮದ ಕಥೆಯನ್ನೆಲ್ಲ ನೆನಪಿನಿಂದ ಹೇಳುತ್ತಾನಂತೆ! ಶ್ರೀಕಾಶೀಕ್ಷೇತ್ರದಲ್ಲಿ ತನ್ನ ಮನೆಯಿತ್ತು; ತನ್ನ ತಾಯಿ-ತಂದೆಗಳು ಅಂಥವರಿದ್ದರು; ಇತ್ಯಾದಿ ಚಿಕ್ಕ ಚಿಕ್ಕ ವಿವರಗಳನ್ನು ಕೂಡ ಆತನು ಕೂಡ ನಡೆದಂತೆ ಹೇಳುತ್ತಾನಂತೆ!! ಎಂಥ ಚಮತ್ಕಾರವಿದು.

— ಉತ್ತರ ಹಿಂದುಸ್ಥಾನದ ಭೋಗಾಂವ ಎಂಬಲ್ಲಿ ಒಬ್ಬ ಮುಸಲ್ಮಾನನು ತನ್ನ ಚಿಕ್ಕ ಬಾಲಕನನ್ನು ಕೊಂದು ತಿಂದನಂತೆ! ಕೊನೆ ಮಾತಕದ ಖಟ್ಲೆಯಾಯಿತು. ಅಲ್ಲಾನ ಆಜ್ಞೆಯಾದ್ದರಿಂದ ತಾನು ಪುತ್ರವಧೆ ಮಾಡಿದನೆಂದು ಆತನು ಹೇಳಿದನು!

— ಪುಣೆಯ ಮುನಿಸಿಪಾಲಿಟಿಯವರು ಸರ್ವಾಧಿಪತಿಗಳಿಗೆ ಮಾನಪತ್ರ ಕೊಡುವವರಿದ್ದರು. ಆ ಕಾರಣ ಮಾನಪತ್ರದ ಬಗ್ಗೆ ಕೆಲವರು ದುಃಖಿತರಾಗಿತ್ತು. ಖರ್ಚು ಮಂಜೂರಾಗಬೇಕಾದರೆ, ಕ್ಲಿ ಮಂದಿ ಸಭಾಸದರು ಸಮ್ಮತಿಸಬೇಕು. ಇಷ್ಟು ಜನರ ಕೊರತೆಯಿಂದ ಮಾನಪತ್ರದ ವಿಷಯ ಬಿದ್ದಾಯಿತು. ಪುಣೆಯು ಪದವಿಗೆ ಬಂದಿಯಿತು!

— ರಂಗೂನದಿಂದ ವಿಶಾಖಪಟ್ಟಣಕ್ಕೆ ಒಂದು ಹಡಗ ಹೋಗಿತ್ತು; ಭೂಮಧ್ಯ ಸಮುದ್ರದಲ್ಲಿ ಒಂದು ಮಗ್ಗುಲಿಗೆ ಬೆಂಕಿ ಹತ್ತಿತು. ಮೂರು ದಿನಗಳ ವರೆಗೆ ಸತತ ಪರಿಶ್ರಮ ಮಾಡಿ ಬೆಂಕಿ ನಂದಿಸಲಾಯಿತು. ಕೆಲವು ಪ್ರಯಾಣಿಕರು ಈ ಮೂರು ದಿನಗಳಲ್ಲಿ ನೀರಿನ ಕೂಡ ಕುಡಿದಿರಲಿಲ್ಲ! ಇದೆಂಥ ಪ್ರಾಣಿಗಳು!

— ಶ್ರೀಕಾಶೀಕ್ಷೇತ್ರದಲ್ಲಿ ಅತ್ತೆಯು ಸೊಸೆಗೆ ಜನಾನ ಎಣ್ಣೆ ಹಾಕಿ ಬೆಂಕಿ ಕೊಟ್ಟು ನಿರ್ದಯದಿಂದ ಕೊಂದಳು. ಪೋಲೀಸರು ಮನೆಯವರನ್ನೆಲ್ಲ ಸೆರೆಮನೆಯಲ್ಲಿರಿಸಿರುವರು. ಎಂಥ ಸಂಸಾರವಿದು!

— ವಿಮಾನದಿಂದ ಒಬ್ಬ ಅಮೇರಿಕನನು ೫೫ ದಿನಗಳಲ್ಲಿ ಪೃಥ್ವಿಪ್ರದಕ್ಷಿಣೆಯನ್ನು ಮಾಡಿದನು!

— ಝಾಲಾವಾಡಾ ಸಂಸ್ಥಾನದಲ್ಲಿ ವೇಶ್ಯೆಯರಿಗೆ ಅಲ್ಪ ಸರಕಾರಿ ಕೋಶದಿಂದ ಸಿಗುತ್ತಿದೆ. ವಿಶೇಷ ಪ್ರಸಂಗಗಳಲ್ಲಿ ನೃತ್ಯಗಾಯನ ನಡೆದಾಗ ಇನಾಮು ಸಿಗುತ್ತಿತ್ತು. ಈಗ ಹೊಸ ಹುಕುಮು ಹೊರಟಿದೆ: ಪ್ರತಿ ಬುಧವಾರಕ್ಕೆ ವೇಶ್ಯೆಯರೆಲ್ಲರೂ ದರಬಾರದಲ್ಲಿ ಬಂದು ಕುಣಿಯಬೇಕು. ಈ ಬಗ್ಗೆ ಅವರಿಗೆ ಇನಾಮು ಸಿಗದು; ಹೋಗದಿದ್ದರೆ, ಶಾಸನವಿದೆ. ಮನೆಯಿಂದ ಕಾಣೆಯಾಗುವಳು.

— ಕಲಕತ್ತೆಯ ಬಂಕಿಮಚಂದ್ರ ರಾಯ ಎಂಬ ಹುಡುಗನು ಸರಕಾರಿ ನೌಕರಿಯನ್ನು ಸಂಪಾದಿಸಲು ಬಹಳ ಪ್ರಯತ್ನ ಮಾಡಿದನು; ಆತನಿಗೆ ನೌಕರಿ ಸಿಗಲಿಲ್ಲ. ಕೊನೆಗೆ ವಿಷಪ್ರಯೋಗ ಮಾಡಿಕೊಂಡು ಸತ್ತನು. ಇವನಾದರೋ ಕಲಕತ್ತೆಯ ಯುನಿವರ್ಸಿಟಿಯಿಂದ ಎಮ್. ಎಸ್. ಸಿ ವರೆಗಿನ ಎಲ್ಲ ಪರೀಕ್ಷೆಗಳಲ್ಲಿ ಮೊದಲನೇ ನಂಬರು ಬಂದಿದ್ದನು. ಸದ್ಯಕ್ಕೆ ಸಂಶೋಧನ ಮಾಡುತ್ತಿದ್ದನು. ಎಂಥ ದುರ್ಬುದ್ಧಿ! ಎಂಥ ಗತಿ! ನೋಡಿರಿ.

ಅತ್ಯದ್ಭುತ! ಅತ್ಯದ್ಭುತ!!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲೆಕ್ಸಿರ್ ಆಫ್ ಲೈಫ್

ಅಂದರೆ, ಸರ್ವ ರೋಗ ನಾಶಕ, ಸರ್ವಾರೋಗ್ಯದಾಯಕ. ಅಜೀರ್ಣ ತಲೆನೋವು ವಾಂತಿ, ಅತಿಸಾರ, ಜ್ವರ, ಕಾಲರಾ, ಜ್ವರ, ಕಿವಿನೋವು, ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಹೊಡೆದು ಚೆಲ್ಲುವ ಒಂದೇ ರಾಮಬಾಣವಿದು!
ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ'' ಒಂದು ಸೀಸೆಯಿದ್ದರೆ, ಒಬ್ಬ ಡಾಕ್ಟರನ ಅವಶ್ಯಕತೆಯೇ'!!
ಒಂದು ಸೀಸೆಗೆ ರೂ. ೧–೮–೦. ಸಣ್ಣ ಸೀಸೆಗೆ ರೂ. ೦ ೮–೦. ಟಪಾಲ ಖರ್ಚು ಬೇರೆ.

ಜೀವನಾಧಾರ ಡಿಪೋ, ಮೈಸೂರು

ಬ್ರಾಂಚ.— ಜೀವನಾಧಾರ ಡಿಪೋ, ಹುಬ್ಬಳ್ಳಿ.

ಚೆವರಲೆಟ್

ಮೋಟಾರಕಾರ್ ಏಜನ್ಸಿ, ಕೆನರಾ

ನಾವು ಹೊಸ ಚೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲ ಏಜಂಟ:—ಎಸ್. ಎಲ್. ಧಾಕೆಪ್ಪ ಮತ್ತು ಬ್ರದರ್ಸ, ಶಿರ್ಶಿ

ಕುಮಟಾ ಏಜಂಟ:— ಜಿ. ಡಿ. ಮಳಗಿಕರ ಎಂಡ್ ಕೊ.

ಡಿ. ಹಿ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲಪ್ ಹಾಗು ಮಿಚಲಿನ ವೆಂಕಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮಗ್ರಿಗಳು ಯೋಗ್ಯ ದರದಿಂದ ಪೂರೈಸುತ್ತೇವೆ

G. D. Malgikar & Co,
KUMTA.

ಮಹಾತ್ಮರ ಆತ್ಮಚರಿತ್ರೆ.

(೯) ಮತ್ತಷ್ಟು ಕಷ್ಟಗಳು.

ಮುಂಜಾವಿಗೆ ಉಗಿಬಂಡಿಯು ಚಾರ್ಲ್ಸ್‌ಟೌನಿಗೆ ಮುಟ್ಟಿತು. ಆ ಕಾಲದಲ್ಲಿ ಚಾರ್ಲ್ಸ್‌ಟೌನಿನಿಂದ ಜೋಹಾನ್ಸಬರ್ಗದ ವರೆಗೆ ಉಗಿಬಂಡಿಯು ಏರ್ಪಾಟಾಗಿದ್ದಿಲ್ಲ. ಕುದುರೆ ಗಾಡಿಯಿಂದ ಹೋಗಬೇಕಾಗಿತ್ತು. ಸ್ಟೆಂಡರ್ಟನ್ನಿನಲ್ಲಿ ಕುದುರೆ ಗಾಡಿಯು ರಾತ್ರಿ ನಿಂತು, ಮಾರನೇ ದಿನ ಜೋಹಾನ್ಸಬರ್ಗಕ್ಕೆ ಹೋಗುತ್ತಿತ್ತು. ಕುದುರೆ ಗಾಡಿಯ ಟಿಕೇಟನ್ನು ನಾನು ಮೊದಲೇ ಕೊಂಡುಕೊಂಡಿದ್ದೆ. ಮಾರಿಟ್ಝಬರ್ಗದಲ್ಲಿ ಉಳಿದು ಒಂದು ದಿನ ತಡೆದದ್ದರಿಂದ ಆ ಟಿಕೇಟು ರದ್ದಾಗಿದ್ದಿಲ್ಲ. ಇದಲ್ಲದೆ ಅಬ್ದುಲ್ಲಾ ಶೇಟ್ಟರು ಚಾರ್ಲ್ಸ್‌ಟೌನಿನ ಕುದುರೆ ಗಾಡಿಯ ಏಜಂಟನಿಗೆ ಮೊದಲೇ ತಿಳಿಸಿದ್ದರು.

ಆದರೆ ಏಜಂಟನಿಗೆ ಒಂದು ನೆವ ಬೇಕಾಗಿತ್ತು. ನಾನು ಪರಕೀಯನೆಂದು ಅವನಿಗೆ ತಿಳಿದ ಮೇಲೆ "ನಿಮ್ಮ ಟಿಕೇಟು ರದ್ದಾಗಿದೆ" ಎಂದು ಅವನು ಹೇಳಿದನು. ನಾನು ಯೋಗ್ಯ ಉತ್ತರವನ್ನೇ ಕೊಟ್ಟೆ. "ಗಾಡಿಯಲ್ಲಿ ಸ್ಥಳ ಸಂಕೋಚವೆಂದು" ಅವನು ಹೇಳಿದ್ದು. ಆದರೆ ಅದು ವಾಸ್ತವ ಕಾರಣವಲ್ಲ. ಪ್ರಯಾಣಿಕರೆಲ್ಲ ಗಾಡಿಯ ಒಳಗಡೆ ಕೂಡ್ರಿಸಬೇಕಾಗಿತ್ತು. ಆದರೆ, ನಾನು ಕೂಲಿ ಮತ್ತು ಪರಕೀಯನು. ಆದುದರಿಂದ ಗೌರವಾನ್ವಿತ ಪ್ರಯಾಣಿಕರೊಡನೆ ಒಳಕ್ಕೆ ಕೂಡ್ರಿಸುವದು ಯೋಗ್ಯವಲ್ಲೆಂದು [illegible] ಗಾಡಿಯವನ ವಿಚಾರವಾಯಿತು. ಗಾಡಿಯ ಎಡ [illegible] ಬದಿಗೆ ಆಸನಗಳಿರುತ್ತಿದ್ದವು. ಒಂದರ ಮೇಲೆ ಗಾಡಿಯವನು ಕೂತುಕೊಳ್ಳುತ್ತಿದ್ದನು. ಇಂದು ಅವನು ಒಳಕ್ಕೆ ಕೂತುಕೊಂಡು, ತನ್ನ ಆಸನವನ್ನು ನನಗೆ ಕೊಟ್ಟನು. ಇದು ತೀರ ಅನ್ಯಾಯವೆಂದೂ ಅಪಮಾನವೆಂದೂ ನನಗನಿಸಿತು. ಆದರೆ ಅದನ್ನು ನುಂಗುವದೇ ಶ್ರೇಯಸ್ಕರವೆಂದು ನಾನು ಎಣಿಸಿದೆ. ಬಲಾತ್ಕಾರದಿಂದ ಒಳಕ್ಕೆ ಹೋಗಿ ಕೂತುಕೊಳ್ಳುವ ಸಾಮರ್ಥ್ಯವು ನನ್ನಲ್ಲಿದ್ದಿಲ್ಲ. ಈ ವರ್ತನವನ್ನು ನಿಷೇಧಿಸಿದರೆ ಗಾಡಿಯು ನನ್ನನ್ನು ಬಿಟ್ಟುಹೋಗುತ್ತಿತ್ತು. ಹೀಗೆ ಮತ್ತೊಂದು ದಿನ ತಡವಾಗುತ್ತಿತ್ತು. ನಾನು ಇಲ್ಲಿ ಹೀಗೆ ಉಳಕೊಂಡರೆ ಮಾರನೇ ದಿನ ಏನು ಸಂಭವಿಸುವದೆಂದು ಯಾರು ಹೇಳುವರು. ಆದುದರಿಂದ ನನ್ನ ಚಿತ್ತಕ್ಷೋಭವಾದರೂ ವಿವೇಕದಿಂದ ನಾನು ಅಲ್ಲೇ ಕೂತುಕೊಂಡೆ.

ಅನುಮಾನ ೩ ಘಂಟೆಗೆ ಗಾಡಿಯು ಪಾರ್ಡೆಕೋಫ್ ಪಟ್ಟಣಕ್ಕೆ ಮುಟ್ಟಿತು. ಗಾಡಿಯವನಿಗೆ ಬೀಡಿ ಸೇದ [illegible] ಬಂತು, ಆತನು [illegible] ಪಡೆದು [illegible] ಗಾಡಿ ಹೊಡೆಯುವವನ ಕಡೆಯಿಂದ ಹೊಲಸು ಗೋಣಿಪಾಟನ್ನು ಇಸಕೊಂಡ, ಕಾಲಿಡುವ ಹಲಿಗೆಯ ಮೇಲೆ ಅದನ್ನು ಹಾಸಿ ನನಗೆ ನುಡಿದದ್ದೇನೆಂದರೆ — « ಸ್ವಾಮಿ, ನೀನು ಇದರ ಮೇಲೆ ಕೂತುಕೋ. ಗಾಡಿ ಹೊಡೆಯುವವನ ಹತ್ತಿರ ನನಗೆ ಕೂತುಕೊಳ್ಳಬೇಕಾಗಿದೆ.» ಈ ಅಪಮಾನವನ್ನು ನನ್ನಿಂದ ಸಹಿಸಲಾಗಲಿಲ್ಲ. ನಾನು ಭೀತಿಯಿಂದ ನಡುಗುತ್ತ ನುಡಿದದ್ದೇನೆಂದರೆ, "ಇಲ್ಲಿ ನನಗೆ ನೀವೇ ಕೂಡ್ರಹೇಳಿದಿರಿ, ನಿಜವಾಗಿ ನೋಡಿದರೆ ನೀವು ನನಗೆ ಒಳಕ್ಕೆ ಕೂಡ್ರಲು ಸ್ಥಳ ಕೊಡಬೇಕಾಗಿತ್ತು. ನಾನು ಆ ಅಪಮಾನವನ್ನು ಸಹಿಸಿದೆನು. ಹೊರಗೆ ಕೂತುಕೊಂಡು ಬೀಡಿ ಸೇದಬೇಕೆಂಬುದರಿಂದ ನಿಮ್ಮ ಕಾಲಬುಡದಲ್ಲಿ ನಾನು ಕೂತುಕೊಳ್ಳಬೇಕೇನು? ನಾನು ಅಲ್ಲಿ ಕೂತುಕೊಳ್ಳಲಿಕ್ಕಿಲ್ಲ. ಆದರೆ, ಒಳಕ್ಕೆ ಕೂಡ್ರಲು ಸಿದ್ಧನಾಗಿದ್ದೇನೆ."

ಹೀಗೆ ನಾನು ತಡೆತಡೆದು ಅಂಜಿ, ಅಂಜಿ ಮಾತಾಡುತ್ತಿರುವಾಗ, ಅವನು ಬಂದು ನನ್ನ ಕೆನ್ನೆಯ ಮೇಲೆ ಜೋರಾಗಿ ಹೊಡೆಯುತ್ತಿದ್ದನು. ಕೈರಟ್ಟೆ ಹಿಡಿದು ಎಳೆಯಲೆತ್ನಿಸಿದನು. ನಾನು ಕುದುರೆ ಗಾಡಿಯ ಹಿತ್ತಾಳೆಯ ಕಂಬಿಗಳನ್ನು ಘಟ್ಟಿಯಾಗಿ ಹಿಡಕೊಂಡೆನು. [illegible] ಕೈಬಿಡಬೇಕೆ [illegible] ಘಟ್ಟಿಯಾಗಿ ಹಿಡಕೊಂಡೆ. ಪ್ರಯಾಣಿಕರು ಈ ನೋಟವನ್ನು ನೋಡುತ್ತಿದ್ದರು. ಗಾಡಿಯವನು ನನಗೆ ಬಯ್ಯುತ್ತಿದ್ದನು, ಎಳೆಯುತ್ತಿದ್ದನು, ಹೊಡೆಯುತ್ತಿದ್ದನು. ನಾನು ನಿಶ್ಚಲನಿದ್ದೆ. ಅವನು ಬಲಶಾಲಿಯಾಗಿದ್ದನು. ನಾನು ದುರ್ಬಲನಿದ್ದೆ. ಕೆಲವು ಪ್ರಯಾಣಿಕರ ಕರುಳು ಕರಗಿತು. ಅವರು ಉದ್ಗರಿಸಿದ್ದೇನೆಂದರೆ — "ಎಲೈ, ಅವನಿಗೆ ಬಿಡು. ಹೊಡೆಯಬೇಡ. ಅವನದೇನು ತಪ್ಪಿಲ್ಲ. ಅವನ ಮಾತು ನಿಜವು. ಅವನಿಗೆ ಅಲ್ಲಿ ಸ್ಥಳ ಸಾಲದಿದ್ದರೆ ಅವನು ನಮ್ಮೊಡನೆ ಬಂದು ಒಳಕ್ಕೆ ಕೂಡ್ರಲಿ." "ನಿಮಗೆ ಎಂತೇಕೆ" ಎಂದು ಗಾಡಿಯವನು ಒದರಿದನು. ಆದರೆ ಅವನಿಗೆ ನಾಚಿಕೆಯಾಯಿತು. ನನಗೆ ಹೊಡೆಯುವದನ್ನು ಬಿಟ್ಟನು. ನನ್ನ ಕೈರಟ್ಟೆಯನ್ನು ಬಿಟ್ಟ. ನನಗೆ ಮತ್ತಷ್ಟು ಬೈದ. ಇನ್ನೊಂದು ಬದಿಗೆ ಕೂತಕೊಂಡ ಆಳಿಗೆ ಕಾಲಿಡುವ ಹಲಿಗೆಯ ಮೇಲೆ ಕೂಡ್ರಹೇಳಿ ಗಾಡಿಯವನು [illegible] ಕೊಂಡನು.

ಪ್ರಯಾಣಿಕರು ತಮ್ಮ ತಮ್ಮ ಸ್ಥಳಗಳಲ್ಲಿ ಕೂತ [illegible] ಗಾಡಿಯು ಹೊರಟಿತು. ನನಗಂತು [illegible] ವಿಕ್ಟೋರಿಯಾ ಪಟ್ಟಣಕ್ಕೆ ಜೀವಂತ [illegible] ಗಾಡಿಯವನು ಆಗಿಂದಾಗ ನನ್ನ ಮೇಲೆ ದೃಷ್ಟಿಕ್ಷೇಪ ಮಾಡುತ್ತಿದ್ದನು. ಗಾಡಿಯವನು ನನಗೆ [illegible] ತೋರಿಸಿ, "ಎಚ್ಚರಿಕೆ, ಸ್ಟೆಂಡರ್ಟನ್ನಿಗೆ [illegible] ಆ ವೇಳೆ ನಿನಗೆ ತೋರಿಸುತ್ತೇನೆ" ಎಂದು ಗದರಿಸುತ್ತಿದ್ದನು. ನಾನು ಸುಮ್ಮನೆ ಕೂತುಕೊಂಡೆ. ನನಗೆ ರಕ್ಷಣೆಯಾಗಲು ಪರಮಾತ್ಮನಿಗೆ ಪ್ರಾರ್ಥಿಸುತ್ತಿದ್ದೆ.

ಕತ್ತಲೆಯಾದ ಬಳಿಕ ನಾವು ಸ್ಟೆಂಡರ್ಟನ್ನಿಗೆ ಮುಟ್ಟಿದೆವು. ಅಲ್ಲಿ ಕೆಲವು ಭಾರತೀಯರನ್ನು ನೋಡಿ ನನಗೆ ದಣಿವಾರಿಸಿದಂತಾಯಿತು. ನಾನು ಕೆಳಗಿಳಿದ ಕೂಡಲೆ, ಆ ಗೆಳೆಯರು ಅಂದದ್ದೇನೆಂದರೆ — "ನಿಮ್ಮನ್ನು ಇಸಿಕೊಳ್ಳಲು ನಾವು ಇಲ್ಲಿ ಬಂದಿದ್ದೇವೆ. ಇಸಾ ಶೇಟ್ಟರ ಅಂಗಡಿಗೆ ನಿಮ್ಮನ್ನೊಯ್ಯುವೆವು. ಅಬ್ದುಲ್ಲಾ ಶೇಟ್ಟರು ನಮಗೊಂದು ತಂತಿ ಮಾಡಿದ್ದರು." ನನಗೆ ಸಂತೋಷವಾಯಿತು. ನಾವೆಲ್ಲರೂ ಶೇಟ್ ಇಸಾ ಹಾಜಿ ಸುಮಾರರವರ ಅಂಗಡಿಗೆ ಹೋದೆವು. ಶೇಟ್ಟರೂ, ಅವರ [illegible] ನನ್ನ ಸುತ್ತುಮುತ್ತು [illegible]. ನಾನು ನಡೆದ ಹಕೀಕತ್ತನ್ನೆಲ್ಲ ಅವರಿಗೆ ತಿಳಿಸಿದನು. ಅದನ್ನು ಕೇಳಿ ಅವರಿಗೆ ವ್ಯಸನವಾಯಿತು. [illegible] ಕಷ್ಟಗಳನ್ನು ನನಗೆ ಅವರು ತಿಳಿಸಿ ಸಮಾಧಾನಪಡಿಸಿದರು.

ಗಾಡಿ ಕಂಪನಿಯ ಏಜಂಟನಿಗೆ [illegible] ನಾನು ತಿಳಿಸಬಯಸಿದೆನು. ನಡೆದ ಹಕೀಕತ್ತನ್ನು ಎಲ್ಲ ವರ್ಣಿಸಿ ಅವರಿಗೊಂದು ಪತ್ರ ಬರೆದೆನು. ಗಾಡಿಯವನ [illegible] ಮಾತುಗಳನ್ನು ವಿಸ್ತಾರವಾಗಿ ನಮೂದಿಸಿ, ಬೇರೆ ಪ್ರಯಾಣಿಕರೊಡನೆ ನನಗೂ ಗಾಡಿಯ ಒಳಗಡೆಗೆ ಮಾರನೇ ದಿನ ಕೂಡ್ರಿಸುವ ವ್ಯವಸ್ಥೆ ಮಾಡಬೇಕಾಗಿ ನಾನು ಬರೆದೆನು. ಏಜಂಟನು ಬರೆದ ಉತ್ತರವೇನೆಂದರೆ — "ಸ್ಟೆಂಡರ್ಟನ್ನಿನಿಂದ ಹೊರಡುವ ಗಾಡಿಯು ದೊಡ್ಡದು, ಆ ಗಾಡಿಯು ಬೇರೆ [illegible] ವ್ಯವಸ್ಥೆಯಲ್ಲಿರುತ್ತದೆ. ನೀವು ಆಕ್ಷೇಪಿಸಿದ ಮನುಷ್ಯನು ನಾಳೆ ಅಲ್ಲಿ ಇರಲಿಕ್ಕಿಲ್ಲ. ನಿಮಗೆ ಬೇರೆ ಪ್ರಯಾಣಿಕರೊಡನೆ ಒಳಗೆ ಕೂಡ್ರಿಸಲಾಗುವದು." ಇದರಿಂದ ನನಗೆ ಕೊಂಚ ಸಮಾಧಾನವಾಯಿತು. ನನಗೆ ಹೊಡೆದ ಆ ಗಾಡಿಯವನ ಮೇಲೆ [illegible] ಇಚ್ಛೆಯು ನನ್ನಲ್ಲಿದ್ದಿಲ್ಲ. ಆದುದರಿಂದ ಈ ಕಥೆಯು ಇಲ್ಲಿಗೇ ಮುಗಿಯಿತು.

ಮುಂಜಾವಿಗೆ ಇಸಾ ಶೇಟ್ಟರ ಆಳು ನನ್ನನ್ನು ಗಾಡಿಯ ವರೆಗೆ ಒಯ್ದನು. ನನಗೆ ಯೋಗ್ಯ ಜಾಗ ಸಿಕ್ಕಿತು. ನಾನು ಅದೇ ದಿನ ರಾತ್ರಿ ಜೋಹಾನ್ಸಬರ್ಗಕ್ಕೆ ಮುಟ್ಟಿದೆನು.

ಸ್ಟೆಂಡರ್ಟನ್ನವು ಸಣ್ಣ ಗ್ರಾಮವು, ಜೋಹಾನ್ಸಬರ್ಗವು ದೊಡ್ಡ ಪಟ್ಟಣವು. ಅಬ್ದುಲ್ಲಾ ಶೇಟ್ಟರು ಜೋಹಾನ್ಸಬರ್ಗಕ್ಕೆ ತಂತಿ ಮಾಡಿದ್ದರು, ಅಲ್ಲಿಯ ಮಹಮ್ಮದ ಕಾಸಮ ಕಮ್ರುದ್ದೀನ ಕಂಪನಿಯ ಹೆಸರನ್ನು, ಪತ್ತೆಯನ್ನೂ ನನಗೆ ಕೊಟ್ಟಿದ್ದರು. ಅವರ ಆಳು ಗಾಡಿ ನಿಲ್ಲುವ ಸ್ಥಳದಲ್ಲಿ ನನಗೆ ಕರೆಯಬಂದಿದ್ದನು. ಆದರೆ, ನನಗೆ ಅವನು ಕಾಣಲಿಲ್ಲ. ಅವನಿಗೆ ನನ್ನ ಗುರುತು ಸಿಗಲಿಲ್ಲ. ಆದುದರಿಂದ ನಾನೊಂದು ಹೊಟೆಲಿಗೆ ಹೋಗಲು ನಿಶ್ಚಯ ಮಾಡಿದೆ. ಅನೇಕ ಹೊಟೆಲುಗಳ ಹೆಸರುಗಳನ್ನು ನಾನು ಬಲ್ಲೆ [illegible]. ಒಂದು ಚಿಕ್ಕ ಗಾಡಿಯನ್ನು ಮಾಡಿಕೊಂಡು "ಗ್ರೆಂಡ ನೆಶನಲ್ ಹೊಟೆಲಿ"ಗೆ ನನ್ನನ್ನೊಯ್ಯ ಹೇಳಿದೆನು. ನಾನು ಮೆನೇಜರರನ್ನು ಕಂಡು ಉಳಕೊಳ್ಳಲು ಒಂದು ಕೋಣೆ ಕೊಡಹೇಳಿದೆನು. ಒಂದು ಗಳಿಗೆಯ ವರೆಗೆ ಅವರು ನನ್ನನ್ನು ದಿಟ್ಟಿಸಿ ನೋಡಿ, ಸಭ್ಯತನದಿಂದ ನುಡಿದದ್ದೇನೆಂದರೆ — "ಕೋಣೆಗಳೆಲ್ಲ ತುಂಬಿಹೋಗಿವೆ, ಸಲಾಂ." ಆದುದರಿಂದ ನಾನು ಗಾಡಿಯವನಿಗೆ ಮಹಮ್ಮದ ಕಾಸಮ ಕಮ್ರುದ್ದೀನರವರ ಅಂಗಡಿಗೆ ಒಯ್ಯಹೇಳಿದೆನು. ಅಬ್ದುಲ್ ಗನಿ ಶೇಟರವರು ನನ್ನ ನಿರೀಕ್ಷಣೆ ಮಾಡುತ್ತ ಕುಳಿತಿದ್ದರು. ನನ್ನನ್ನು ನೋಡಿದೊಡನೆ ಅವರು ಆನಂದದಿಂದ ಸ್ವಾಗತಮಾಡಿಕೊಂಡರು. ಹೊಟೇಲಿನೊಳಗಿನ ಕಥೆಯನ್ನು ಕೇಳಿ, ಅವರು ಹೊಟ್ಟೆತುಂಬ ನಕ್ಕರು. "ಹೊಟೆಲಿನಲ್ಲಿ ನಿನಗೆಂದಾದರೂ ಸ್ಥಳ ಸಿಗುವದೆಂದು ತಿಳಿದಿದೆಯೇ?" ಎಂದು ಅವರು ಉದ್ಗರಿಸಿದರು. "ಏಕೆ ಇಲ್ಲ?" ಎಂದು ನಾನು ಪ್ರಶ್ನಿಸಿದೆನು.

"ಇಲ್ಲಿ ಕೆಲವು ದಿನ ಉಳಕೊಂಡ ಬಳಿಕ ನಿಮಗೆ ತಿಳಿಯುವದು. ಇಂಥ ದೇಶದಲ್ಲಿ ನಾವು ಮಾತ್ರ ಉಳಕೊಳ್ಳಬಲ್ಲೆವು. ದ್ರವ್ಯಕ್ಕಾಗಿ ನಾವು ಅಪಮಾನಗಳನ್ನು ಲೆಕ್ಕಿಸುವದಿಲ್ಲ. ಆದುದರಿಂದ ನಾವು ಇಲ್ಲಿದ್ದೇವೆ." ಹೀಗೆ ಅವರು ಹೇಳಿ, ದಕ್ಷಿಣ ಆಫ್ರಿಕೆಯೊಳಗಿನ ಭಾರತವಾಸಿಯರ ಕಥೆಯನ್ನು ಅವರು ನನಗೆ ಹೇಳಿದರು.

ಮುಂದೆ ನಾನು ಈ ಕಥೆಯನ್ನು ಹೇಳುತ್ತಿರುವಾಗ, ಶೇಟ ಅಬ್ದುಲ್ ಗನಿಯವರ ಪರಿಚಯವು ನಿಮಗಾಗುವದು. ಅಬ್ದುಲ್ ಗನಿಯವರು ಮುಂದರಿದು ನುಡಿದದ್ದೇನೆಂದರೆ — "ಈ ದೇಶವು ನಿಮ್ಮಂಥವರಿಗಲ್ಲ. ನಾಳೆ ನೀವು ಪ್ರಿಟೋರಿಯಾಕ್ಕೆ ಹೋಗಬೇಕು. ಮೂರನೇ ತರಗತಿಯ ಟಿಕೀಟನ್ನೇ ನೀವು ಪಡೆಯಬೇಕು. ಒಂದು ಮತ್ತು ಎರಡನೇ ತರಗತಿಯ ಟಿಕೀಟುಗಳನ್ನು ಹಿಂದೀಯರಿಗೆ ಮಾರುವದಿಲ್ಲ."

"ನೀವು ಈ ಕುರಿತು ಸಾಕಷ್ಟು ಆಗ್ರಹ ಹಿಡಿಯಲಿಲ್ಲವೆಂತೆ ತೋರುತ್ತದೆ."

"ನಾವು ಅರ್ಜಿಗಳನ್ನು ಮಾಡಿದ್ದೇವೆ. ಆದರೆ, ಬಹುತೇಕವಾಗಿ ನಮ್ಮವರಿಗೇ ಒಂದನೇಯ ಎರಡನೇ ತರಗತಿಗಳಲ್ಲಿ ಪ್ರಯಾಣಮಾಡುವದೇ ಬೇಡಾಗಿದೆ."

ನಾನು ರೇಲ್ವೆ ಕಾಯಿದೆಗಳ ಪುಸ್ತಕವನ್ನು ತರಿಸಿ ಓದಿದೆನು. ಒಂದು ಸಣ್ಣ ದೋಷವು ನನಗೆ ತೋರಿತು. ಟ್ರಾನ್ಸ್‌ವಾಲದ ಹಳೇ ಕಾಯಿದೆಗಳ ಭಾಷೆಯು ಅಷ್ಟು ಸ್ಪಷ್ಟವಾಗಿಲ್ಲ. ರೇಲ್ವೆ ಕಾಯಿದೆಗಳ ಭಾಷೆಯಂತು ಅವುಗಳಿಗಿಂತ ಅಸ್ಪಷ್ಟವು.

ನಾನು ಶೇಟರಿಗೆ ಹೇಳಿದ್ದೇನೆಂದರೆ "ಒಂದನೇ ತರಗತಿಯಿಂದ ನಾನು ಪ್ರಯಾಣ ಮಾಡಬಯಸುತ್ತೇನೆ. ಹಾಗೆ ಹೋಗಗೊಡದಿದ್ದರೆ, ಪ್ರಿಟೋರಿಯಾಕ್ಕೆ ಒಂದು ಕುದುರೆ ಗಾಡಿ ಮಾಡಿ ಹೋಗುವೆನು. ಪ್ರಿಟೋರಿಯಾ ಪಟ್ಟಣವು ಇಲ್ಲಿಂದ ಕೇವಲ ೩೭ ಮೈಲು ದೂರವಿದೆ."

"ಇದರಿಂದ ಎಷ್ಟು ಖರ್ಚು ತಗಲುವದು [illegible]" ಎಂದು ಅಬ್ದುಲ್ ಗನಿ ಶೇಟ್ಟರು ತಿಳಿಸಿದರು. ಆದರೆ, ಒಂದನೇ ತರಗತಿಯಿಂದ ನಾನು ಹೋಗಲು ಅವರು ಸಮ್ಮತಿಸಿದರು. ಅನಂತರ ನಾನು ಸ್ಟೇಶನ್ ಮಾಸ್ತರರಿಗೆ ಒಂದು ಟಿಪ್ಪಣಿಯನ್ನು ಕಳಿಸಿದೆನು. "ನಾನೊಬ್ಬ ಬೆರಿಸ್ಟರನಿದ್ದೇನೆ. ಯಾವಾಗಲೂ ಒಂದನೇ ತರಗತಿಯಿಂದಲೇ ಪ್ರಯಾಣಮಾಡುತ್ತೇನೆ. ಶೀಘ್ರವೇ ಪ್ರಿಟೋರಿಯಾ ಪಟ್ಟಣಕ್ಕೆ ಮುಟ್ಟಬೇಕಾಗಿದೆ

ಉತ್ತರವನ್ನು ನಿರೀಕ್ಷಿಸಲು ಅವಕಾಶವಿಲ್ಲ ಆದ್ದರಿಂದ ಸ್ಟೇಶನ್ನಿನಲ್ಲಿಯೇ ಈ ಪ್ರಶ್ನೆಯನ್ನು ಎದುರಿಸುವೆನು. ಆ ಸಮಯ "ನನಗೆ ಒಂದನೇ ತರಗತಿಯ ಟಿಕೀಟು ಸಿಗಬೇಕು" ಉತ್ತರವನ್ನು ಸ್ವತಃ ಕೊಳ್ಳಬೇಕೆಂದು ಹೇಳುವದರಲ್ಲಿ ಒಂದು ಕಾರಣವಿತ್ತು. ಸ್ಟೇಶನ್ ಮಾಸ್ತರರಿಂದ ಲೇಖೀ ಉತ್ತರವನ್ನು ಕೊಳ್ಳಬಯಸಿದರೆ ಅವರು ನಿಷೇಧಾರ್ಥಕ ಉತ್ತರವನ್ನು ನಿಸ್ಸಂಶಯವಾಗಿ ಕೊಡುವರೆಂದು. ನನ್ನ ತರ್ಕವಿತ್ತು "ಕೂಲಿ ಬೆನ್ನಿನ" ರ ವಿಷಯ ಅವರಿಗೆ ತಿಳಿಸಬೇಕೆಂದು ನನ್ನ ತರ್ಕವಿತ್ತು. ಆದ್ದರಿಂದ ನಾನು ಆಚ್ಚುಕಟ್ಟಾದ ಇಂಗ್ಲೀಷ ಉಡುಪನ್ನು ಧರಿಸಿ ಅವರ ಭೆಟ್ಟಿಕೊಂಡು, ಅವರೊಡನೆ ಮಾತಾಡಿ, ಒಂದನೇ ತರಗತಿಯ ಟಿಕೀಟು ಕೊಡಲು ಮನವೊಲಿಸಬಹುದೆಂದು ಯೋಚಿಸಿದ್ದನು. ಈ ಆಲೋಚನೆಯಿಂದ ನಾನು ಸ್ಟೇಶನಿಗೆ ನಿಲುವಂಗಿ, ಕೊರಳ ಪಟ್ಟಿಗಳನ್ನು ಧರಿಸಿಕೊಂಡು ಹೋದೆನು, ಟಿಕೀಟನ್ನು ಕೊಡುವ ಕಿಡಕಿಯಲ್ಲಿ ಟಿಕೀಟಿನ ಬಗ್ಗೆ ಒಂದು ಪವನನ್ನಿಟ್ಟು, ಒಂದನೇ ತರಗತಿಯ ಒಂದು ಟಿಕೀಟನ್ನು ಕೊಡ ಕೇಳಿದೆನು

"ನೀವು ಆ ಕಾಗದವನ್ನು ನನಗೆ ಬರೆದಿದ್ದಿರಿ"

"ಹೌದು, ಒಂದು ಟಿಕೀಟು ಕೊಟ್ಟರೆ, ಬಹಳ ಉಪಕಾರವಾಗುವದು. ಈ ಹೊತ್ತೇ ನಾನು ಪ್ರಿಟೋರಿಯಾಕ್ಕೆ ಮುಟ್ಟಬೇಕು"

ಸ್ಟೇಶನ್ ಮಾಸ್ತರರು ನಸುನಕ್ಕರು ಮತ್ತು ದಯಾಳುವಾಗಿ ನುಡಿದದ್ದೇನಂದರೆ—"ನಾನು ಟ್ರಾನ್ಸವಾಲದವನಲ್ಲ, ನಾನು ಹೊಲೆಂಡದವನು. ನಿಮ್ಮ ಕಷ್ಟಗಳು ನನಗೆ ತಿಳಿಯುತ್ತವೆ ಆ ಕುರಿತು ನಾನೂ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇನೆ ನಿಮಗೆ ಟಿಕೀಟು ಕೊಡಬೇಕೆಂದು ನನ್ನ ಮನಸ್ಸಿದೆ, ಆದರೆ, ಒಂದು ಕರಾರನ್ನು ನೀವು ಪಾಲಿಸಬೇಕು, ಗಾರ್ಡರು ಮೂರನೇ ತರಗತಿಗೆ ಹೋಗೆಂದು ನಿಮಗೆ ಹೇಳಿದರೆ, ನೀವು ನನಗೆ ಕಷ್ಟದಲ್ಲಿ ಹಾಕಬಾರದು ಅಂದರೆ, ನೀವು ರೇಲ್ವೆ ಕಂಪನಿಯ ಮೇಲೆ ಆರೋಪ ಹೊರಿಸಕೂಡದು ಸುರಕ್ಷಿತವಾಗಿ ಹೋಗಬಲ್ಲಿರಿ ನೀವು ಸಭ್ಯ ಗೃಹಸ್ಥರೆಂದು ನಾನು ಬಲ್ಲೆ"

ಹೀಗೆ ಹೇಳಿ, ಅವರು ನನಗೆ ಟಿಕೀಟನ್ನು ಕೊಟ್ಟರು ನಾನು ಅವರ ಉಪಕಾರ ಮನ್ನಿಸಿದೆನು, ಅವಶ್ಯವಿದ್ದ ಅಭಿವಚನವನ್ನೂ ಕೊಟ್ಟೆನು

ಶೇಟ ಅಬ್ದುಲ್ ಗನಿಯವರು ನನಗೆ ಮುಟ್ಟಿಸಲಿಕ್ಕೆ ಸ್ಟೇಶನಿಗೆ ಬಂದಿದ್ದರು ಪಡೆದ ಟಿಕೀಟನ್ನು ನೋಡಿ ಅವರಿಗೆ ಆನಂದವಾಯಿತು, ಆಶ್ಚರ್ಯವೂ ಆಯಿತು. ಆದರೆ, ಅವರು ಎಚ್ಚರಿಕೆ ಕೊಟ್ಟದ್ದೇನಂದರೆ— "ನೀವು ಪ್ರಿಟೋರಿಯಾಕ್ಕೆ ಕ್ಷೇಮದಿಂದ ಮುಟ್ಟಿದರೆ, ದೊಡ್ಡದೊಂದು ಕೆಲಸವಾಯಿತು ಒಂದನೇ ತರಗತಿಯಲ್ಲಿ ಗಾರ್ಡರು ನಿಮಗೆ ಸುಮ್ಮನೆ ಕೂತುಕೊಳ್ಳಗೊಡಲಿಕ್ಕಿಲ್ಲ, ಅವನು ಗೊಡವೆಗೆ ಬಾರದಿದ್ದರೂ, ಪ್ರಯಾಣಿಕರು ಸುಮ್ಮನೆ ಕೊಡುವರು"

ನಾನು ಒಂದನೇ ತರಗತಿಯ ಡಬ್ಬಿಯಲ್ಲಿ ಕೂತುಕೊಂಡೆ. ಉಗಿಬಂಡಿಯು ಹೊರಟಿತು ಜರ್ಮಿಸ್ಟನ್‌ದಲ್ಲಿ ಗಾರ್ಡರು ಟಿಕೀಟು ತಪಾಸ ಮಾಡಲಿಕ್ಕೆ ಬಂದರು ಒಂದನೇ ತರಗತಿಯಲ್ಲಿ ನನ್ನನ್ನು ನೋಡಿ, ಅವರು ಸಿಟ್ಟಾದರು, ಮೂರನೇ ತರಗತಿಯಲ್ಲಿ ಹೋಗಿ ಕೂಡ್ರಬೇಕೆಂದು ಕೈಸನ್ನೆ ಮಾಡಿದರು ನಾನು ನನ್ನ ಒಂದನೇ ತರಗತಿಯ ಟಿಕೀಟನ್ನು ತೋರಿಸಿದೆನು. "ಏನೂ ಚಿಂತೆಯಿಲ್ಲ, ಮೂರನೇ ತರಗತಿಯಲ್ಲಿ ಹೋಗಿ ಕೂತುಕೊಳ್ಳಿರಿ" ಎಂದು ಗಾರ್ಡರು ನುಡಿದರು.

ಆ ಡಬ್ಬಿಯಲ್ಲಿ ಒಬ್ಬ ಇಂಗ್ಲಿಷ ಪ್ರಯಾಣಿಕನು ಕೂತುಕೊಂಡಿದ್ದನು. ಅವನು ಗಾರ್ಡರಿಗೆ ಬುದ್ಧಿ ಹೇಳಿದನು "ಆ ಸಭ್ಯ ಗೃಹಸ್ಥರಿಗೆ ಯಾಕೆ ಉಪದ್ರವ ಕೊಡುತ್ತೀರಿ? ಅವರ ಹತ್ತಿರ ಒಂದನೇ ತರಗತಿಯ ಟಿಕೀಟು ಇದ್ದದ್ದು ನಿಮಗೆ ಕಾಣುವದಿಲ್ಲವೋ? ಅವರ ನನ್ನ ಜೊತೆಗೆ ಹೋಗುವದಕ್ಕೆ ನನ್ನ ಆಕ್ಷೇಪವಿಲ್ಲ," ಎಂದು ಗಾರ್ಡರಿಗೆ ಹೇಳಿ, "ನೀವು ಇದ್ದಲ್ಲಿಯೇ ಸುಖದಿಂದ ಕೂತುಕೊಳ್ಳಿರಿ," ಎಂದು ನನಗೆ ಉದ್ದೇಶಿಸಿ ನುಡಿದನು.

"ಕೂಲಿಯೊಡನೆ ನೀವು ಪ್ರಯಾಣ ಮಾಡಬಯಸಿದರೆ, ನನಗೇನು?" ಎಂದು ಗಾರ್ಡರು ಗುಣುಗುಟ್ಟುತ್ತ ನಡೆದರು

ಸಾಯಂಕಾಲ ಆ ಘಂಟೆಗೆ ಉಗಿಬಂಡಿಯು ಪ್ರಿಟೋರಿಯಾ ಪಟ್ಟಣಕ್ಕೆ ಮುಟ್ಟಿತು

ಶ್ರೀ ಕ್ಷೇತ್ರ ಗೋಕರ್ಣದಲ್ಲಿ

ಆಯುರ್ವೇದ ಸಂಗ್ರಹಾಲಯ.

ಶಾಸ್ತ್ರೋಕ್ತ ತಯಾರಿಸಿದ ಕೆಲವು ರಸಾಯನಗಳು.

೧. ಸಮೀರ ಪನ್ನಗ—ಇದು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು ಹೊಟ್ಟೆ ಉಬ್ಬರಣ, ಹುಚ್ಚುಯೋಗಿನ ನಾನಾ ಪ್ರಕಾರದ ಬೇನೆ, ಸನ್ನಿಪಾತ ವಿಕಾರಗಳಲ್ಲಿ ಬಹುಬೋಧ, ಕ್ಷಯ ರೋಗ ಮುಂತಾದ ಅನೇಕ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ
ತೊಲೆ ೧ಕ್ಕೆ ರೂ. ೬-೮-೦.

೨. ಮಲ್ಲಸಿಂಧೂರ—ಮಹಾಶ್ವಾಸ, ಕೆಮ್ಮು ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ಹುಚ್ಚು, ಕಫಕ್ಷಯ, ಆಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು ದಮ್ಮು, ಕಂಪು, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಗಳಿಗೆಯೊಳಗೆ ರೋಗಿಯು ವಾಸಿಯಾಗುತ್ತಾನೆ
ತೊಲೆ ೧ಕ್ಕೆ ರೂ. ೭-೦-೦.

೩. ಸುವರ್ಣರಾಜ ವಂಗೇಶ್ವರ—ಉಪದಂಶಗಳ ಶೇಷವಿಕಾರ, ಪರಮಾ, ಧಾತು ಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುವನ್ನು, ಸ್ವಪ್ನಾವಸ್ಥೆ, ಅಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧದ ಸಮಸ್ತ ವಿಕಾರಗಳನ್ನು ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನೂ ಕಾಂತಿಯನ್ನೂ ಕೊಡುತ್ತದೆ. ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ. ಇದರಿಂದ ಏನೊಂದೂ ಉಪದ್ರವವಾಗುವದಿಲ್ಲ.
ತೊಲೆ ೧ಕ್ಕೆ ರೂ. ೬-೮-೦

೪. ವ್ಯಾಧಿಹರಣ ರಸ—ಉಪದಂಶ, (ಗರಮಿ ಯು) ಫಿರಂಗೋಪದಂಶ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಆಮವಾಯು, ವಾತರಕ್ತ, ಭಯಂಕರ ವಾತವಿಕಾರ, ಪ್ರಾಮುಖ್ಯವಾಗಿ ಉಪದಂಶಗಳಿಗೆ ಮುಂದಾಗಿ ಆಗುವ ದಮ್ಮು, ಕೆಮ್ಮು, ನಿಶ್ಶಕ್ತತನ್ಯ ಇವುಗಳ ಮೇಲೆ ಇಷ್ಟು ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಇನ್ನಾವದೂ ಇಲ್ಲ
ತೊಲೆ ೧ಕ್ಕೆ ರೂ. ೭-೦-೦

೫. ಸೂತಶೇಖರ—ಸನ್ನಿಪಾತ, ಪ್ಲೇಗ, ಮೂರ್ಛೆ, ಹುಚ್ಚುವಿಕಾರ (ಭ್ರಮೆ) ಶ್ವಾಸ, ಶಿರ್ಕಂಪ ಬಿಕ್ಕಳಿಕೆ ಬಡತನ ಮುಕ್ತಿಸಿ ಅಪಾರವಾತ ಜಠರ ರೋಗ ವಾತ-ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದೆ. ಸಾಮಾನ್ಯವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ
ತೊಲೆ ೧ಕ್ಕೆ ರೂ. ೬-೮-೦

ಅವಲ್ಲದೆ, ಪದರಿಪದ ಚೂರ್ಣ, ಘೃತ, ಅವಲೇಹ, ಆಸವ, ಪಾಕ್ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ದರದಲ್ಲಿ ದೊರೆಯುತ್ತವೆ

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ಏರ್ಪಾಟು ಮಾಡಿರುತ್ತೇವೆ

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದಲ್ಲಿ ಉತ್ತರದ ಬಗ್ಗೆ ಸ್ಟ್ಯಾಂಪು ಜೊತೆಗಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ)

ಪತ್ತೆ— **ಶ್ರೀ ಗಜಾನನ ಅಪ್ಪು ಭಟ್ಟ ವೇದೇಶ್ವರ,**
ಆಯುರ್ವೇದಿಕ ವೈದ್ಯ,
ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶಿ ಕಟ್ಟಿಗೆಯ

ದೇವರ ಮಂಟಪಗಳೂ,

ಶಿಂಗಸದ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಕನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ—

ದಿ ನೋರ್ಥ ಕೆನರಾ ಟ್ರೇಡಿಂಗ್ ಕಂಪನಿ,

ಶಾಂತಿ ಭುವನ,

ಕಾರವಾರ

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ರುಚಿಕರವಿದ್ದು, ಸುವಾಸಿಕ ವಿರುತ್ತದೆ ಇದರ ಸೇವನದಿಂದ ಬಾಯಿಯು ಹಗು ಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ ಇದರ ಸೇವನದಿಂದ ದವಡೆ, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸು ವವರು ಅವಶ್ಯವಾಗಿ ಅನುಭವ ತೊಳ್ಳಬೇಕು ೧ ಪುಡಿ ಕಿಂ. ರೂ. ೦-೦-೬, ೨ಆರ ಕಿಂ ರೂ. ೦-೯-೦. ೧೦೦ ಕಿಂ ರೂ. ೨-೮-೦; ೫೦೦ ಪುಡಿಗಳ ಕಿಂ. ರೂ ೯ ೦ ೦; ೧೦೦೦ ೧೭-೦-೦, ವಿ. ಪಿ. ಖರ್ಚು ಪನ್ನೆರೆ ಪ್ರತ್ಯೇಕ.

ಸುಗಂಧಿ ನಶ್ಯ—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದಿದ್ದು, ಇದರಿಂದ ಶ್ಲೇಷ್ಮ, ಥಂಡಿ, ಅರತಲೆನೋವು ಮುಂತಾದವುಗಳು ಕೂಡಲೆ ಮಾಯ ವಾಗಿ ತಲೆಯು ಹಗುರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದ ರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ, ಒಮ್ಮೆ ಪರೀಕ್ಷಿಸಿ ಖಾತ್ರಿ ಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ರೂ. ೦-೪-೦; ೧ ಡಜನ್ ಡಬ್ಬಿ ಕಿಂ ರೂ ೩-೦-೦ ವಿ. ಪಿ. ಖರ್ಚು ಬೇರೆ

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ತಯಾರಿಸಿದ ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ ಕಿಮ್ಮತ್ತಿನ ವಿಷಯಕ್ಕೆ ಬರೆದು ಪುರವಣಿ ನೋಡಿ ಮಾಲಿಗೆ ಆರ್ಡರ ಕೊಡ ಬಹುದು. ಇದರ ಹೊರತು, ನಮ್ಮಲ್ಲಿಯು ಬಜಾರ ದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ, ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದರದಲ್ಲಿ ಕೊಂಡು, ಖರೀದಿ ಮಾಡಿಕೊಳ್ಳುವೆವು. ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವೆವು.

ಪತ್ತೆ:— ಎಸ್. ಬಿ. ಕದಂ,

ಬೀಡಿ ಮತ್ತು ತಂಬಾಕು ಜರ್ದಾ ದುಕಾನ,

ಮು॥ ಪೋ॥ ನಿಪ್ಪಾಣಿ, ಜಿ, ಬೆಳಗಾಂವ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ ಯವರ

ಸುಗಂಧಿ ನಶ್ಯದ ಪುಡಿ

ಜೋರದ್ದುದಾದ ಈ ಸುಗಂಧ ನಶ್ಯದ ಪುಡಿಯು ಕೆಲವು ಹಿಡಿಸುಲಿಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಿಗಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯುಳ್ಳಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಠರ ಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ, ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸಪ ಅಂಡ್ ಕಂಪನಿ ಲಿಮಿಟೆಡ್ ಪ್ರೋ. ಬಾ ೫೧೦, ಪೋರ್ಟಟೌನ, ಮದರಾಸ



ಸರಕಾರದಿಂದ ಪೇಟಂಟ ಪಡೆದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಬಹು ಅನುಕೂಲವಾಗಿರುವದು

ಇದು mild steelವೆಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು. ಎತ್ತುಗಳಿಗೆ ಬಹಳೇ ಹಗರು ಹೋಗುತ್ತದೆ. ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ವಿವರಣೆ ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಂದ ನೀರ ಹೋಣಿಯಲ್ಲಿ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರತ್ತೇವೆ.

ಪಳೆಯ ಬಗ್ಗೆ ಬರೆದು ತಿಳಿಸಿಕೊಳ್ಳಿರಿ.

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಉನ್ನತಿಯ ಕನ್ನಡ ಮಾಸಪತ್ರಿಕೆ.

ಸಂಪಾದಕ— ಶ್ರೀ। ಬಾಗಲ ಲಕ್ಷ್ಮಣರಾಯರು, ಸಾಹಿತ್ಯ ವಿಶಾರದ

ಮಾದರಿ ಸಂಚಿಕೆ ಪುಕ್ಕಟೆ ದೊರೆಯುವದು. ವಾರ್ಷಿಕ ವರ್ಗಣಿ ರೂ. ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ.

ಪ್ರಯಾಣಿಕರಿಗೆ.

ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ ಹಾಗೂ

ಅಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ:—

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ; ಗೋಕರ್ಣದಿಂದ ಅಂಕೋಲಾ, ಕಾರವಾರ

ಸೂಚನೆ:— ಬೇಕಾದ ಮುಂದಾಗಿ ಬರೆದುಕೊಳ್ಳಬೇಕು ಮಾಡುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ನಾಗೇಶರಾವ ಶಿಶಿಲತ್ತಾಯ,

ಮೋಟರ ಏಜಂಟ,

ಕುಮಟಾ (ಉತ್ತರ ಕನ್ನಡ

S. U. Narayanacharya & CO.
Chaukamba, BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿ ಕಾಠ ಜರಿ ಸೀರೆ, ಅಲ್ವಾ ನ್ ಶಾಲು, ತರಾವರ ರುದ್ರಾಕ್ಷಿ, ಕಸ್ತೂರಿ ಲಿಂಗಗಳೂ ಸ್ಫಟಿಕಮಣಿ ಮೊದಲಾದ ಸಾಮಾನುಗಳ ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಧರ್ಮಾರ್ಥವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳುಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು ಇದರಿಂದ ಎಲ್ಲ ಪ್ರಕಾರದ ನೋವುಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುವವರು ಇದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪ್ಪೊ, ಪೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Regd. NO. B. 1270

Monday August 2nd, 1926.

ವರ್ಷ ೧೦.

ಕಾನಡಾವೃತ್ತ.

ಸಂಚಿಕೆ ೪೪.

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು:
ರೂಪಾಯಿ 2-4-0.
ಹೊರಯೂರಿನಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

[illegible] लोके [illegible] त्यज्यते [illegible]: ।
इति महति विरोधे वर्तमाने समाने [illegible] दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ರಜಿ ಸ್ಮಾಲ ಪೈಕಾ (೧೫ ಎಟ್ ಇಂಚ) ೮ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಹೆಚ್ಚಿಂಗಳ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೨ ಮಾಹೆ ಅಗಸ್ಟ ಸನ್ ೧೯೨೬ ನೇ ಇಸವಿ.)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत १ रुपये;

रामबाण औषधें —
सर्दि थांबविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

— पिणारांस रुचिकर,

क्याटलाग मागवा,

संडु फार्मास्युटिकल वर्क्स लिमिटेड, मुंबई नं. १४

एजंट— मेसर्स पंडित आणी कंपनी,
तीर्थहळ्ळी.

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಶ್ರೇಯ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಕಾಂಚಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲೆ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ ॥ ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲೆಯ ಡಬ್ಬಿ ೧ ಕ್ಕೆ ೧—೪—೦, ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ —೨೦—೦, ತಲೆಗೆ ಹಾಕುವ ಸುವಾಸಿಕ ಮುಷಕರಾಜ ತೈಲ ೫ ತೊಲೆಯ ಬಾಟ್ಲಿ ೧ ಕ್ಕೆ ೦—೧೨—೦. ಹುಳದ ಪುಡಿ ತೊಲೆ ೧ ಕ್ಕೆ ೦—೮—. ಇವಲ್ಲದೆ, ನೀಲಗಿರಿತೈಲ, ಎಲ್ಲಾ ತರದ ಕಾಂಚಿ ಊದುಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ
ಅವರ್ಸಾಬಜಾರ, ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. *B. A.*

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರ್, ಕುಮಟಾ.

ಯಾವದೇ ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.
ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



ಬರೇ ಒಂದು ತಿಂಗಳ ಬಗ್ಗೆ, ನಾವು ಈ ದರದನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ-ಗ್ಯಾರಂಟಿ ಇರುವದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಗಡಿಯಾರವನು ಉತ್ಕೃಷ್ಟ ರೇಶಿಮೆ ಪಟ್ಟಿಯು ಸಹಿತ ಉಚಿತವಾಗಿ ಕೊಡುತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 603 P T Madras**

ಅತ್ಯಲ್ಪವಿವೆ! **ಉಚಿತ**

ಕೇವಲ
ಉಚಿತ

ಉಚಿತ
ಕೇವಲ
ಉಚಿತ

"ಹಾಮಾ" ಲೀವರ ರಿಜಿಸ್ಟರ್ಡ ಪೊಕೆಟ್ ವಾಚು ೧೮ ಕೆರೆಟ್ ರೋಲ್ಡ ಗೋಲ್ಡಿನವು. ಮುಚ್ಚಳಗಳಲ್ಲಿಯು ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಕಾರರು ಅಚ್ಚು ಹಾಕಿರುವರು. ಈ ಗಡಿಯಾರವನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸ" ರಿಜಿಸ್ಟರ್ಡ ಟ್ಯಾಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಗುಪ ಹಾಗು "ಹಾಮಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್‌ವಾಚ್ ಗಡಿಯಾರಗಳಿಗೆ ಕೇವಲ ಬರೇ ರೂಪಾಯಿ ೫.

CAPTAIN WATCH CO P B [illegible] MADRAS

ಗೌರೀಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ| **ಜಯಕರ್ನಾಟಕ**| ಮಾಸಪತ್ರಿಕೆ

ಸಂಪಾದಕ--ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು ಪ್ರಬಂಧ ಕಥೆಗಳು ಜೀವನಚರಿತ್ರ ನಾಟಕಾದಿಗಳು ಕೊಡಲ್ಪಡುವವು ಪ್ರತಿ ಸಂಚಿಕೆಯಲ್ಲಿ ಮೂರು ಸುಂದರ ಚಿತ್ರಗಳೂ ಬರುತ್ತವೆ ಪೊಡವಿನ ರಿಪ್ಸ್ ಆಕಾರದ ೩೦ ಪುಟಗಳು ವರ್ಗಣಿ ರೂ ೫-೮-೦

ಕಾರ್ಯದರ್ಶಿ ಜಯಕರ್ನಾಟಕ, ಧಾರವಾಡ

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಜಂತು ಮಾತ್ರೆ, ಹಿತ [illegible] ಎಲ್ಲ ತರದ ಜ್ವರ, ಸ್ವರಗಟ್ಟಿ, ಬಿಳಿಜ್ವರ, ಕಾಮಿಲೆ ನಮ್ಮು, ಕೆಮ್ಮು, ಕಫ ಅಗ್ನಿಮಾಂದ್ಯ, [illegible] ವ್ಯಾಧಿ, ನಗ, ವಾತ, [illegible], [illegible] ಎಲ್ಲ ರೋಗ, ಪ್ರಮೇಹ [illegible] ಬಾಲಗ್ರಹ, [illegible] ಔಷಧಗಳ [illegible] ವಾಗಿ ಸಿಗುವವು.

ಇವಲ್ಲದೆ ಎಲ್ಲ ತರದ [illegible] ಸಾಮಾನು, [illegible] ಹಿಂಗುಗಳು, [illegible] ಸಿಗುವವು ನಮ್ಮಲ್ಲಿ [illegible] ಅವಶ್ಯವಿರುವ [illegible] ದೇಶದಿಂದ ತರಿಸಿಕೊಡಲಾಗುವದು.

ಎಸ್. ಎಲ್. ಧಾಕಪ್ಪ ಮತ್ತು ಬ್ರದರ,

ಶಿರಸಿ

ರಾಗದ ಪೆಟ್ಟಿಗೆಗಳು.

ನಾಟಕ ಸಾಮಾನು:

ತಬಲೆ, ಡಕ್ಕೆ ವಗೈರ



೧ ಸ್ವರಪೆಟ್ಟಿಗೆ-ಸಿಂಗಲರೀಡ ೩೫, ೩೦, ೬೦ [illegible]
— ,, ಡಬಲ ರೀಡ [illegible]
೩. ಕಾಲುಪೆಟ್ಟಿಗೆ ,, ರೀಡ [illegible], ೧೦೦, ೧೨೫, ೧೫೦
೪. ತಬಲೆ (ತಾಮ್ರದಡಗ್ಗಾ ಸಹಿತ) ರೂ ೧೩, ೧೬, ೨೦
ಇತರ ಸ್ವರಗಳು [illegible] ರೂ ೧॥
ತಬಲೆ ಗ್ಯಾಸ [illegible] ೧೨ ಇತ್ಯೆ.

ಮಾಹಿತಿ ಬಗ್ಗೆ ಕ್ಯಾಟಲಾಗು ಪುಕ್ಕಟೆ ದೊರಕುವದು

ಗೋಪಾಳ ಸಖಾರಾಮ ಮತ್ತು ಕಂಪನಿ

ನಂ ೫೪೮, ವಿಠ್ಠಲವಾಡಿ ಎದುರಿಗೆ,

ಕಾಳಬಾದೇವಿ ರೋಡ,

ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ- ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ- ಶಿರ್ಶಿ- ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ರೂಟುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ.

ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಥಳಗಳಲ್ಲೂ ವ್ಯವಸ್ಥೆ ಮಾಡಲಾಗಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa

PROPRIETOR.

अगदीं फुकट.

वैद्यविद्या.

आरोग्यसंपत्ति आणि पूर्ण सुखाचा सरळ [illegible] "वैद्यविद्या" नावाचा मोठा [illegible] पुस्तकाची नवीन आवृत्ति बाहेर पडली आहे. हे पुस्तक कींमत व पोष्ट खर्च [illegible]. सिवाय अगदीं फुकट पाठविण्यात येते. तरी हे पुस्तक आजच मागवा.

प्रमेहावर रामबाण औषध.

मेहमर्दनचूर्ण.

हें चूर्ण फक्त तीन दिवस लागोपाठ घेत ल्याने लघवीस होणारी आग, लघवी थांबून थांबून होणे व्याधि या औषधाच्या सेवनानें एकदम बरे होतात.

कि. १० तोळ्याच्या डब्यास रु. १.

राजवैद्य नारायणजी केशवजी, जामनगर (काठेवाड).

कुमटा एजन्ट— **माधव सातप्पा शेणवी, वेलेकेरी.**

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು ೩೦ ೪೦ ವರ್ಷದ ಮುದುಕರ ಕಾಂತಿಯು [illegible] ತರುಣರಂತೆ ಪ್ರವರ್ಧಮಾನವಾಗುವದು ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯ [illegible] ಸ್ವಪ್ನದೋಷ [illegible] ಮೂತ್ರಸರ್ಜನದ ಪೂರ್ವದಲ್ಲಿ [illegible] ಹೋಗುವ [illegible] ಬಂದಾಗುವದು — ಶರೀರ [illegible] ಸಿದ್ಧವಾಗುವದು ಮೂರೇ ದಿವಸದಲ್ಲಿ [illegible] ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ [illegible] ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು, ಇವುಗಳು ನಾಶವಾಗುವದು [illegible] ಹಸಿವೆ ಹೆಚ್ಚಾಗಿ [illegible]. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ [illegible] ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ನಡೆಯುವ ಒಂದೇ ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತು ೪-೦-೦ [illegible] ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂಚೆ [illegible] ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತು ೧೩-೦-೦ ಮತ್ತು ೧ ಬಾಟಲಿ ಪುಕ್ಕಟೆ ಕೊಡುವದು. [illegible] ಬೇರೆ ಬೀಳುವದು. [illegible] ೧ ಬಾಟ್ಲಿಗೆ ೧—೦ ೩ ಬಾಟ್ಲಿಗೆ ೩—೦—೦ [illegible] ೧೩೦—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ: ನಿಪ್ಪಾಣಿ, ಜಿ. ಬೆಳಗಾಂವ

ಕ್ರಿಸ್ತನವಚನಗಳನ್ನು ಪರಿಪಾಲಿಸುವ ಧರ್ಮವೇ ಕ್ರೈಸ್ತ ಧರ್ಮವು.

ನನ್ನ ಪ್ರಿಯ ಕ್ರೈಸ್ತ ಬಂಧುಗಳೇ, ಬೋಧಿಸ್ತಾರಿಕೆಯ ಆಡಂಬರದ ಪೂರ್ತಿ ಖರ್ಚಿನ ಆಚರಣೆಗಳಿಗಿಂತ ಕ್ರೈಸ್ತ ತತ್ವಾನುಸಾರವಾದ ಅಂತರಂಗದ ಆಚರಣೆಗಳೇ ಕ್ರೈಸ್ತರಿಗೆ ಇಂದು ಸಂಸದ್ಗತಿಯನ್ನು ಪ್ರಾಪ್ತಮಾಡುವವು. ಕಾರಣ ನಮ್ಮ ಕುಂದು-ಕೊರತೆಗಳನ್ನು ನಾವು ತಿಳಕೊಳ್ಳುವದರಿಂದಲೇ ನಾವು ಸುಧಾರಣೆಯ ಮೆಟ್ಟಿಲ ಹತ್ತಲು ಸಮರ್ಥರಾಗುವೆವು. ನಮ್ಮ ಸಮಾಜದ ಪದ್ಧತಿಯು ನಮಗೆ ಇದೇ ಕಲಿಸುತ್ತದೆ ನಾವು ರೋಗದ ಮೂಲ ತಿಳಕೊಂಡ ಹೊರತು ಅದನ್ನು ಬಿಡುವ ಉಪಾಯ ಗೊತ್ತಾಗುವದಿಲ್ಲ ರೋಗಿಯು ಪ್ರತ್ಯಕ್ಷ ಪರೀಕ್ಷೆ ಮಾಡಲಿಕ್ಕೆ ಬಂದ ಹೊರತು ವೈದ್ಯನು ಅವನಿಗೆ ಔಷಧ ಕೊಡಲಿಕ್ಕೆ ಅಧಿಕೃತನಾಗಲಾರನು

ಮನುಷ್ಯ ಪ್ರಾಣಿಯು ಸ್ವಭಾವಿಕವಾಗಿ ಸ್ವಂತ ಅಭಿಮಾನವುಳ್ಳದ್ದು. ಅಂದರೆ ಕ್ರಮವಾಗಿ ತನ್ನ ಮನೆಯವರು, ತನ್ನ ಕುಲದವರು, ತನ್ನ ಜಾತಿಯವರು, ತನ್ನ ದೇಶದವರು ಎಂದು ಅಭಿಮಾನ ತಾಳುವ ಸಮಾಜವೆಯು ಮಾನವರಲ್ಲಿ ಎಲ್ಲ ಕಡೆಗೆ ಯಾವಾಗಲೂ ಕಂಡುಬರುತ್ತದೆ ಆದರೆ, ಎಲ್ಲಿ ಅಧೋಗತಿಯು ಪೂರ್ಣವಾಗಿ ನೆಲೆಗೊಂಡಿರುತ್ತದೆಯೋ, ಅಲ್ಲಿ ಬರೇ ಸ್ವಾರ್ಥದ ಹೊರತು, ಬೇರೆ ಏನೂ ಕಂಡುಬರುವ ಹಾಗಿಲ್ಲ, ಇದೇ ಒಂದು ಸಮಾನ ಜೀವನವು. ಇಂಥ ಸ್ಥಿತಿಯಲ್ಲಿದೇ, ದೇವರು ಪೂರ್ವದಲ್ಲಿ ೧೦ ಕಟ್ಟಳೆಗಳನ್ನು ಮಾನವರಿಗೆ ವಿಧಿಸಿದನು. ಅವುಗಳಲ್ಲಿ ಆರಂಭದ ಮೂರು ದೇವರಿಗೆ ಸಂಬಂಧಿಸಿದವು, ಉಳಿದ ಏಳು ಮನುಷ್ಯರಿಗೆ ಸಂಬಂಧಿಸಿದವು. ಅಷ್ಟೇ ಮನರಿಗೆ ಸಹ ತಿಳಕೊಳ್ಳಲಿಕ್ಕೆ ಸುಲಭವಾಗಬೇಕೆಂದು ಆ ೧೦ ಕಟ್ಟಳೆಗಳು, ಎರಡೇ ಸೂತ್ರದಲ್ಲಿ ಸಮಾವೇಶವಾಗುವಂತೆ, ಪ್ರಾವರ್ತಿಸಲ್ಪಟ್ಟವು — ದೇವರು ಒಬ್ಬನೇ, ಅವನಿಗೇ ಪೂಜಿಸಬೇಕು, ಇದು ೧ ನೇದು. ತನ್ನಂತೆ ಪರರು ಎಂದು ಬಗೆಯುವದು, ಇದು ೨ನೇದು. ಈ ತತ್ವಗಳನ್ನು ಮನುಷ್ಯನು ತನ್ನ ಕೃತಿಯಲ್ಲಿ ಪ್ರದರ್ಶಿಸಬೇಕು, ಎಂಬುದೇ ದೇವರ ಇಚ್ಛೆಯು. ಬರೇ ಅವುಗಳನ್ನು ಬಾಯಿಪಾಠ ಮಾಡಿಕೊಂಡಿರುವದರಿಂದ ಏನೂ ಪ್ರಯೋಜನವಿಲ್ಲ. ಈ ತತ್ವಗಳು ತೀರ ಅಧಃಪಾತವಾದ ಕಾಲಕ್ಕೆ ಸ್ವಾಮಿ ಯೇಸುಕ್ರಿಸ್ತನು ತನ ಸ್ವರ್ಗೀಯ ತಂದೆಯ ಅಪ್ಪಣೆಯಂತೆ, ಅವೇ ತತ್ವಗಳನ್ನು ಸರಿಗೊಳಿಸಲಿಕ್ಕೆ ಈ ಭೂಲೋಕದಲ್ಲಿ ನರಜನ್ಮವನ್ನು ತಾಳಿದನು ಮತ್ತು ಮನುಷ್ಯರೊಳಗೆ ಕೂಡಿಕೊಂಡು ಆ ತತ್ವಗಳ ಶಿಕ್ಷಣ ಪಡೆಯುವದರಲ್ಲಿಯೇ, [illegible] ಯಹೂದೀ ಜನರಿಂದ ಸ್ವಾಮಿ ಯೇಸುಕ್ರಿಸ್ತನು ನಾನಾ ತರದಿಂದ ಹಿಂಸೆ ಪಡಿಸಲ್ಪಟ್ಟು, ಅಂತ್ಯಕ್ಕೆ ಶಿಲುಬೆಗೆ ಹಾಕಲ್ಪಟ್ಟನು

ಭೂತದಯೆ-ಪರಸ್ಪರ ಪ್ರೀತಿಯೆ ಇವೆರಡೇ ಕ್ರೈಸ್ತ ಧರ್ಮಸಾರವು. ಸ್ವಾಮಿ ಯೇಸುಕ್ರಿಸ್ತನು ನಮ್ಮನ್ನಗಲಿ ಹೋಗುವ ಕಾಲಕ್ಕೆ ಮನುಷ್ಯ ಎರಡು ಪ್ರಯೋಗಗಳಿಂದ ಇದನ್ನು ಸಿದ್ಧಮಾಡಿರುವನು. ಮನುಷ್ಯನಾದರೋ ತಾನು ದೂರ ದೇಶಾಂತರಕ್ಕೆ ಹೋಗುವ ಕಾಲಕ್ಕೆ ಅಥವಾ ತನ್ನ ಮರಣ ಕಾಲಕ್ಕೆ, ತನ್ನ ಮನೆಯ ಜನರ ಸುರಕ್ಷಿತತೆಯ ಬಗ್ಗೆ ಅವರಿಗೆ ಒಂದೆರಡು ಬುದ್ಧಿ ಮಾತುಗಳನ್ನಷ್ಟೇ ಹೇಳುವದನ್ನು ಅವಲೋಕಿಸುತ್ತೇವೆ ಕಾರಣ, ಅವು ಬಹಳ ಮನನೀಯವಾಗಿರುತ್ತವೆ. ಹಾಗೆಯೇ ನಮ್ಮ ಸ್ವಾಮಿ ಯೇಸುಕ್ರಿಸ್ತನ ಮನುಷ್ಯ ಪ್ರೀತಿಯ ಅಂತ್ಯದ ಎರಡು ಪ್ರಯೋಗಗಳು ಹೃದಯದ್ರಾವಕವಾಗಿಯೂ, ಮಂಗಲದ ಚಿಂತನಪರವಾಗಿಯೂ ಇರುತ್ತವೆ. ಅವು ಯಾವವೆಂದರೆ:— ತನ್ನ ಶಿಷ್ಯರ ಪಾದಗಳನ್ನು ಸ್ವಾಮಿ ಯೇಸು ಕ್ರಿಸ್ತನು ಸ್ವತಃ ತನ್ನ ಕೈಯಿಂದ ತೊಳೆದು, ಅವರಿಗೆ— « ನೀವು ಇದೇ ಪ್ರಕಾರ ಪರಸ್ಪರ ಪ್ರೀತಿ ಮಾಡಿರಿ, ಸೇವೆ ಮಾಡಿರಿ, ಸೇವೆ ಮಾಡಿಸಿಕೊಳ್ಳುವವನಿಗಿಂತ ಸೇವೆ ಮಾಡುವವನೇ ಹೆಚ್ಚು ಶ್ರೇಷ್ಠನು, » ಎಂದು ಹೇಳಿದನು. ಇದು ಒಂದನೇ ಪ್ರಯೋಗವು. ಆದರೆ ಇಂಥ ಪರಸ್ಪರ ಪ್ರೀತಿ ಸೇವೆಗಳಿಗೆ ವೈರಸ್ಯವು ಬರುವ ಅಷ್ಟು ಬರುತ್ತದ್ದರಿಂದ ಎರಡನೇ ಪ್ರಯೋಗವನ್ನು, ತನ್ನ ದೇಹ ಬಲಿಕೊಟ್ಟು ಸಾಧಿಸಬೇಕಾಯಿತು — ಶಿಲುಬೆಯ ಮೇಲೆ ಜೋತಾಡುತ್ತ, ಮರಣವೇದನೆಯಿಂದ ತಳಮಳ ಪಡುವ ಸ್ವಾಮಿ ಯೇಸು ಕ್ರಿಸ್ತನು— « ನೀರಡಿಕೆ, ನೀರಡಿಕೆ » ಎಂದು ಒದರಲು, ನೀರು ಕೊಡುವದಕ್ಕೆ ಬದಲಾಗಿ ಹುಳಿ ಮತ್ತು ಅದಲ್ಲ ಕಾಡಿಸಿದ ಅಸಹ್ಯ ಪೇಯ ಕೊಡಲ್ಪಟ್ಟಿತು, ಮತ್ತು ರೋಮದವನೊಬ್ಬ ಯಹೂದಿಯು ತನ್ನ ಕೈಯೊಳಗಿನ ಭಾಲೆಯಿಂದ ಸ್ವಾಮಿ ಯೇಸುಕ್ರಿ,

ಮನೋಹರವಾದ ಕೂದಲನ್ನು ಹೇಗೆ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅದರ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡಿ ಹೋಗಿ, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲನ್ನಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ರೋಮರಂಧ್ರಗಳು ತೆರೆಯು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨-೧೦—೦
ಅಂಚೆವೆಚ್ಚ	,,	೦-೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

— o. —

೩ ಔನ್ಸಿಗೆ	ರೂ.	೨—೦—೦
೧ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦-೧೨-೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

“ ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!! ”

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲು ಯಾನೆ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082. **BOMBAY**

ಸ್ತನ ಎದೆಯನ್ನು ತಿವಿದನು ಅಲ್ಲೋ, ಎಂಥ ದಾರುಣ ವೈರತ್ವವಿದು " ಆದರೂ ಕ್ರಿಸ್ತನು ವಿಸುತ್ತಿದ್ದನು ಇದಕ್ಕೆ ಪ್ರತಿಯಾಗಿ—ದೇವರೇ « ಇವರು ಏನು ಮಾಡುತ್ತಾರೆಂಬುದು, ಇವರಿಗೇ ಗೊತ್ತಿಲ್ಲ, ಕಾರಣ ಇವರನ್ನು ಕ್ಷಮಿಸು" ಎಂದು ಪ್ರಾಣಬಿಡಬೇಕುತ್ತ ಶಾಂತ ಚಿತ್ತದಿಂದ ಬೇಡಿಕೊಂಡನು!!' ಇಂಥ ಕಿತ್ತಿಯನ್ನು ಹಾಕಿಕೊಟ್ಟ ಕ್ರಿಸ್ತನ ಶಿಷ್ಯರಲ್ಲಿ ವೈರತ್ವದ ಗಾಳಿಯಾದರೂ ಸೋಂಕಬಹುದೇ? ಒಂದು ವೇಳೆ ಅವರು ವೈರತ್ವಕ್ಕೆ ತಮ್ಮಲ್ಲಿ ಆಶ್ರಯಕೊಟ್ಟರೆ, ಅವರು ಕ್ರೈಸ್ತರೆಂಬ ಅಭಿದಾನಕ್ಕೆ ತಕ್ಕವರಾಗುವರೇ?

ಇದಲ್ಲದೆ, « ಇಬ್ಬರೇ ಕೂಡಿ ಪ್ರಾರ್ಥನೆ ಮಾಡುವದಕ್ಕೆ ಬದಲಾಗಿ, ಇಬ್ಬರು ಕೂಡಿ ಮಾಡಿದಲ್ಲಿ ತಾನು ಅಲ್ಲಿ ಇದ್ದೇ ಇರುವೆನು, " ಎಂದು ದೇವವಾಕ್ಯವಿರುವದರಿಂದ, ಸ್ವಜನ ಸಮಾಜಸಂಘಟನೆಯು ದೇವರಿಗೆ ಎಷ್ಟು ಒಪ್ಪಿಗೆಯಾದದ್ದೆಂಬುದು ಮೇಲೆ ಕಾಣುತ್ತದೆ. « ತಂದೆಯೇ ಮೇಲೆ ಹತ್ತು ನೀನು ನಮ್ಮ ಒಕ್ಕಟ್ಟು ಮಾಡಿರಿ" ಎಂಬ ಸ್ತೋತ್ರ ವಾಕ್ಯವು ನಮಗೆ ಇದನ್ನೇ ಸಾರುತ್ತದೆ. ಉಚ್ಚನೀಚವೆಂಬ ಬೇಧಭಾವವನ್ನಿಡದೆ, ಒಂದೇ ಮೇಜಿನಮೇಲೆ ಚರ್ಚದಲ್ಲಿ ಪವಿತ್ರ ಭೋಜನ ಮಾಡುವ ಪದ್ಧತಿಯು ಈ ಒಕ್ಕಟ್ಟಿನಿಂದಲೇ ನಮ್ಮಲ್ಲಿ ಏರ್ಪಟ್ಟಿರುತ್ತದೆ. « ನೀನು ನಿನ್ನ ಬಂಧುವಿನಮೇಲೆ ಕೈಯೆತ್ತಿದರೆ ನೀನು ನನ್ನ ಮಗನಲ್ಲ, ಕಾರಣ ನನ್ನ ಸ್ವರ್ಗರಾಜ್ಯದ ಪಾಲಿಗೆ ನೀನು ಹಕ್ಕುದಾರನಾಗಲಿಕ್ಕಿಲ್ಲ " ಎಂಬ ದೇವವಾಕ್ಯದ ಅರ್ಥ ಮಾರ್ಮಿಕವಾದರೂ ಇದೆ. « ಮನುಷ್ಯನನ್ನು ಪ್ರೀತಿಸದವನು ದೇವರನ್ನು ಪ್ರೀತಿಸನು, " ಎಂಬ ದೇವೋಕ್ತಿಯು ಸಹ ನೆನಪಾಗುವದೇ? « ನನ್ನ ಮೇಲೆ ಅಪರಾಧ ಮಾಡಿದವನ ಅಪರಾಧವನ್ನು ನಾನು ಕ್ಷಮಿಸಿದಂತೆ ನನ್ನ ಪಾಪಗಳನ್ನು ನೀನು ಕ್ಷಮಿಸು " ಎಂಬ ಈ ಸ್ತೋತ್ರದೊಳಗಿನ ಅಂಶವು ಪ್ರಚಲಿತವ ಕರಾರಿನಂತೆಯೂ ಪ್ರತಿನಿತ್ಯ ಎಲ್ಲ ಕ್ರೈಸ್ತರ ಬಾಯಿಗಳಿಂದ ಉಚ್ಚರಿಸಲ್ಪಡುತ್ತಿರುವದಲ್ಲವೇ?

ಈ ಪ್ರಕಾಶಿಸುವ ದೇವವಚನಗಳು ಎಂದಾದರೂ ಅನ್ಯಥಾ ಪರಿಣಮಿಸುವವೋ? « ಪೃಥ್ವಿ, ಸೂರ್ಯ, ಚಂದ್ರ, ನಕ್ಷತ್ರಗಳೆಲ್ಲವೂ ನಾಶವಾಗುವವು ಆದರೆ ನನ್ನ ವಚನಗಳು ನಾಶವಾಗವು " ಈ ದೇವೋಕ್ತಿಯು ಎಲ್ಲ ದೇವೋಕ್ತಿಗಳಲ್ಲಿ ಕಣ್ಣುಮುಚ್ಚಿ ವಿಶ್ವಾಸವಿಡಲಿಕ್ಕೆ ಮಾನವನಿಗೆ ಧೈರ್ಯವನ್ನು ಕೊಡುತ್ತದೆ. ಪ್ರೀತಿಯೇ ತನ್ನ ರೂಪದಲ್ಲಿ ರಚಿಸಿದ ಮಾನವ ಪ್ರಾಣಿಗೆ ಸೈತಾನನ ಗುಲಾಮಗಿರಿಯಿಂದ ಸ್ವರ ದೂರವಾಗುವಂತೆ, ದೇವರು ತನ್ನ ಪ್ರೀತಿಯ ಒಬ್ಬಂಟಿಗ ಪುತ್ರನಾದ ಏಸುವನ್ನು ಶಿಲುಬೆಯಮೇಲೆ ಬಲಿಕೊಟ್ಟನು. ಇವನ ಮಾನವರಿಗೆ ಕಳಕೊಳ್ಳಲು ನಷ್ಟವಾಗಲಿಲ್ಲ. ಇಂಥ ಮನುಷ್ಯನ ಸಲುವಾಗಿ ಕ್ಷಮಿಸುತ್ತಿದರೆ, ದೇವರು ಸಾಕ್ಷ್ಯನಿರುವನು. ನಮ್ಮ ಮೂಲ ತಂದೆಯಾದ ಆದಾಮನ ಎರಡನೇ ಮಗನಾದ ಕಾಯಿನನು ತನ್ನ ಅಣ್ಣನಾದ ಆಬೆಲ್ಲನನ್ನು ಕೊಲ್ಲಲಾಗಿ ದೇವರು ಕಾಯಿನನನ್ನು ರೌದ್ರವಾಗಿ ಗದ್ದರಿಸಿ, ಆತನ ಸಂತತಿ ಪರಂಪರೆಯು ಆಬೆಲ್ಲನ ಸಂತತಿ ಪರಂಪರೆಯ ಗುಲಾಮಗಿರಿಯಲ್ಲಿರುವಂತೆ ಶಪಿಸಲಿಲ್ಲವೇ?

ಇಂಥ ತತ್ವಗಳ ಮೇಲೆ ನೆಲೆಗೊಂಡಿರುವ ಕ್ರೈಸ್ತ ಧರ್ಮಕ್ಕೆ ತಕ್ಕ ಅನುಯಾಯಿಗಳು ನಾವು ಇನ್ನೂ ಆಗಲಿಲ್ಲ. ನಮ್ಮಲ್ಲಿರುವ ವಿದ್ಯೆಯ ಅಭಾವವೇ ಇದರ ಮುಖ್ಯ ಕಾರಣವು. ವಿದ್ಯೆಯ ಆಧಾರದಿಂದಲೇ ಈ ತತ್ವಗಳು ಮನದಟ್ಟಾಗುವಂಥವು. ಈ ತತ್ವಗಳನ್ನು ಪಾಲಿಸುವದರಿಂದ ಅನ್ಯಧರ್ಮಗಳವರೂ ಸಾಧಿಸುತ್ತಿರುವ ಉನ್ನತಿಯು ಎಷ್ಟಿದೆಯೋ, ಏಟವೋ ಎಂಬುದನ್ನು ಜಾನಗಾಲಕ್ಕೆ ಸ್ವಲ್ಪ ಲಕ್ಷ್ಯಕೊಟ್ಟು ನೋಡಿರಿ. ಅಂದರೆ ಈ ಭೂಮಿಯಮೇಲೆ ಯಾವ ಜನಾಂಗಗಳು ಅತಿ ಬಲಶಾಲಿಗಳಾಗಿ ಮೆರೆಯುವವು, ಯಾವ ಸಮಾಜಗಳು ಅಭಿವೃದ್ಧಿ ಹೊಂದುವವು ಎಂಬುದು ನಿಮಗೆ ತಿಳಿಯುವದು. ಅವರಲ್ಲಿ ನಿಜವಾದ ಬಂಧುಪ್ರೀತಿಯೂ, ಸ್ವಜನಾಭಿಮಾನವೂ ಇರುವದರಿಂದಲೇ ಅವರ ರಾಷ್ಟ್ರೀಯ, ಸಾಮಾಜಿಕ ಧಾರ್ಮಿಕ ಏಳ್ಗೆಯು ಸಾಧಿಸಿತಲ್ಲವೇ? ಹೆಚ್ಚು ವಿಚಾರಿಸಬಾರದ್ಯಾಕೆ? ಈ ನಮ್ಮ ಹಿಂದುಸ್ಥಾನದಲ್ಲಿಯೇ ಸದ್ಯಕ್ಕೆ ಬ್ರಾಹ್ಮಣ, ಮುಸಲ್ಮಾನ ಲಿಂಗಾಯತ, ಪಾರ್ಸಿ, ಮರಾಠೆ ವಗೈರೆ ಲೋಕ ಸಮಾಜಗಳು ಇರುತ್ತಿದ್ದು ಅವು ಈಗ कलौ युगे संघ शक्ति ಎಂಬ ತತ್ವವನ್ನು ಮುಂದೆ ಮಾಡಿ ತಮ್ಮ ತಮ್ಮ ಸಮಾಜದ ವೃದ್ಧಿ ಮಾಡಿಕೊಳ್ಳಲಿಕ್ಕೂ, ರಕ್ಷಣ ಹೊಂದಲಿಕ್ಕೂ ತಮ್ಮೊಳಗೆ ಕೃತಿಪೂರ್ವಕ ಬಂಧುಪ್ರೇಮ ಪರಸ್ಪರ ಸಹಾನುಭೂತಿಯನ್ನೂ ಮಾಡುತ್ತಿರುವರಲ್ಲವೇ? ಮುಂದೆ ಬರುವ ಸ್ವರಾಜ್ಯದ ಸಹಭಾಗೀದಾರರು ತಾವು ಆಗಬೇಕೆಂದು, ಹಿಂದುಳಿದ ಸಮಾಜದವರು ತಮ್ಮ ಸಂಘದ್ವಾರ ಎಷ್ಟು ಭಾವಿತ ಮಾಡುತ್ತಾರೆಂಬುದು ನೀವು ಕಣ್ಣಾರೆ ನೋಡುತ್ತೀರಲ್ಲವೇ? ನಮಗೆ ಕ್ರಿಸ್ತಿಯನ್ನರಿಗಂತು, ಸ್ವರಾಜ್ಯವೇ ದಕ್ಕದಿಸಲ್ಪಟ್ಟಿರುವದು. ಆದಕ್ಕಾಗಿ ನಾವು ಬಂಧುಪ್ರೇಮದಿಂದ ಕಟ್ಟಲ್ಪಟ್ಟು, ಯಾವಾಗಲೂ ಸ್ವರ್ಗರಾಜ್ಯದ ಪಾಲಿಗೆ ತಯಾರಾಗಿರಬೇಕು. ಆದರೆ ನಮ್ಮ ಸಮಾಜದೊಳಗಿನ ಅಜ್ಞಾನದ ಮೂಲಕ ನಮ್ಮಲ್ಲಿ ಸ್ವಜನಪ್ರೀತಿ, ಬಂಧುಪ್ರೀತಿ ಇವೆಲ್ಲ ಹೇಳ ಹೆಸರಿಲ್ಲದ ಹಾಗೆ ಆಗಿ ಹೋಗಿವೆ. ಅಂದಮೇಲೆ ನಮಗೆ ಸ್ವರಾಜ್ಯವೂ ಇಲ್ಲ, ಸ್ವರ್ಗರಾಜ್ಯವೂ ಇಲ್ಲ ಎಂಬುವಂತಾಗಿ ಸದ್ಯಕ್ಕೆ ನಾವು ಅಹಪರ ದುರ್ಗತಿಗೆ ಮಾತ್ರ ಗುರಿಯಾಗುವ ಸ್ಥಿತಿಯಲ್ಲಿರುತ್ತೇವಲ್ಲವೇ? ಒಟ್ಟಿನ ಮೇಲೆ, ನೀವು ನಿಷ್ಪಕ್ಷಪಾತ ಬುದ್ಧಿಯಿಂದಲೂ, ಶಾಂತ ಚಿತ್ತದಿಂದಲೂ ತಿಳಿದು ನೋಡಿದ ಹಾಗೆ ಕ್ರೈಸ್ತರಲ್ಲದವರಲ್ಲಾದರೂ ಕ್ರೈಸ್ತತತ್ವಗಳು ಆಚರಣೆಯ ಪ್ರಸಿದ್ಧದ್ದು ಕಾಣುವವು, ಆದರೆ ನಮ್ಮಲ್ಲಿ ಅವು ಬರೇ ಮಾತ್ರೋಕ್ತಿಯ ಆಚರಣೆಯಲ್ಲಿ ಮೆರೆಯುವವು.

ಉ| ಕಾ| ಕ್ರಿಸ್ತಬಂಧು.

(ಮುಂದೆ ಸಾಗಿರುವದು)

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ದೊರೆತ ಮಾಹಿತಿ.

ಮುಂಬಾಪುರಿಯೊಳಗಿನ ದಾದರ ಹಾಗು ನಾಯಿಗಮದೊಳಗಿನ ಸರಾಯಿ ಅಂಗಡಿಗಳಿಗೆ ರಾತ್ರಿ ೧೧ ಘಂಟೆಯ ವರೆಗೆ ಸರಾಯಿ ವಿಕ್ರಿಸಲು ಅಪ್ಪಣೆ ಕೊಟ್ಟಿದೆ. ಇಗಿಬಂದಿಯಿಂದ ಬರುವ ಪಾಂಕಸ್ಥರಿಗೆ ಉಪಕಾರ ಸಿಗಲು ತೊಂದರೆಯಾಗುವದರಿಂದ ಸರಾಯಿ ವಿಕ್ರಯದ ಸಮಯವನ್ನು ರಾತ್ರಿ ೯|| ಯಿಂದ ೧೧ ಘಂಟೆ ವರೆಗೆ ಬೆಳಿಸಬೇಕಾಗಿ ಅಂಗಡಿಕಾರರು ಬೇಡಿಕೊಂಡರು. ಇಗಿಬಂದಿಯ ಅಧಿಕಾರಿಗಳೂ ಅದನ್ನು ಅನುಮೋದಿಸಿದರು. ಪೋಲೀಸ ಕಮಿಶನರರೂ ಅದಕ್ಕೇನು ಆತಂಕ ಹೇಳಲಿಲ್ಲ. ಹೀಗೆ ಅಂಗಡಿಕಾರರಿಗೆ ಅಪ್ಪಣೆ ಸಿಕ್ಕಿದೆ. ಮುಂಬಯಿಯ ಗಿರಣಿ ಪ್ರದೇಶದ 'ಎಫ್' ಹಾಗು 'ಜಿ' ವಾರ್ಡಗಳಲ್ಲಿ ಗಿರಣಿ ಕೂಲಿಕಾರರಿಗೆ ಸಂಬಳ ಸಿಕ್ಕುವ ದಿವಸ ಸರಾಸರಿಯಿಂದ ೫೫೦ ಗೆಲನ್ಸ ಸರಾಯಿಯು ಪ್ರತಿ ಅಂಗಡಿಯಲ್ಲಿ ವಿಕ್ರಯವಾಗುತ್ತದೆ. ಇತರ ದಿನಗಳಲ್ಲಿ ೫೫ ಗೆಲನ್ಸಗಳಂತೆ ಮಾರಾಟವಾಗುತದೆ. ಸಾಮಾನ್ಯವಾಗಿ ತಿಂಗಳಲ್ಲಿ ೩ ದಿನಗಳಲ್ಲಿ ಹೆಂಡದ ವ್ಯಾಪಾರವು ಅಭಿವೃದ್ಧಿ ಹೊಂದುತ್ತದೆ. ಒಂದು ಸಂಬಳ ಸಿಕ್ಕ ದಿವಸ ಮತ್ತೊಂದು ಪಗಾರದ ದಿವಸ! ಇತ್ಯಾದಿ ಮಾಹಿತಿಯು ರಾ| ಎಚ್ ಕೇ. ದೋಶಿಯವರಿಗೆ ದೊರೆತಿದೆ

* *

ಪ್ರಾಥಮಿಕ ಶಿಕ್ಷಕರಿಗೆ ಬಡತಿ ಕೊಡುವ ಹಂಗಾಮು ಮಾರ್ಚ ಹಾಗು ಎಪ್ರಿಲ್ ತಿಂಗಳು. ಅವರ ಸರ್ವಿಸು ಈ ತಿಂಗಳುಗಳಲ್ಲಿ ೩ ತಿಂಗಳುಗಳಿಗೆ ಮಿಕ್ಕಿದರೆ, ಆದೇ ವರ್ಷವೆಂದು ಎಣಿಸಿ ಬಡತಿ ಕೊಡುತ್ತಾರೆ. ಅದಕ್ಕೂ ಕಡಿಮೆಯಾದರೆ, ಮುಂದಿನ ವರುಷದ ವರೆಗೆ ಅವರು ಕಾದುಕೊಂಡಿರಬೇಕು. ಈ ವ್ಯವಸ್ಥೆಯಿಂದ ಪಗಾರಿನ ಲೆಖ್ಖಾಚಾರಕ್ಕೆ ಅನುಕೂಲವಾಗುತ್ತದೆ. ಸಂಬಳದ ದುರುಸ್ತಿಯು ೧೯೩೧ ನೇ ಇಸ್ವಿಯ ಮಾರ್ಚ ೧ನೇ ತಾರೀಖಿಗೆ ಆಗಿತ್ತು. ಆದರಿಂದ ಮಾರ್ಚ-ಎಪ್ರಿಲ್ ತಿಂಗಳುಗಳಲ್ಲಿಯೇ ಬಡತಿ ಕೊಡುವದು ವಿಹಿತ. ಇತರ ಖಾತೆಗಳಲ್ಲಿ ಅವರವರ ಸರ್ವಿಸಿನ ವರ್ಷ ಮುಗಿದ ತಿಂಗಳಿನಿಂದಲೇ ಬಡತಿ ದೊರಕುತ್ತದೇನೆಂದು ಸಂಬಂಧಪಟ್ಟ ಖಾತೆಯವರಿಗೆ ಕೇಳಿಕೊಳ್ಳಬೇಕೆಂದು ಶಿಕ್ಷಣ ಖಾತೆಯ ದಿವಾಣರು ರಾ| ಶಂಕರ ಶ್ರೀಕೃಷ್ಣ ದೇವರಿಗೆ ಉತ್ತರ ಕೊಟ್ಟಿರುವರು.

* *

ವಿದ್ಯಾಧಿಕಾರಿಗಳ ಅನುಮತಿಯಿಂದ ಪುಣೆ ಜಿಲ್ಹೆಯಲ್ಲಿ ೨೦೦ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕೆಂಬ ನಿರ್ಧಾರವಾದ ಹಕೀಕತನ್ನು ಸರಕಾರವು ಅರಿತಿರುವದಿಲ್ಲ. ಪುಣೆಯ ಜಿಲ್ಹಾ ಬೋರ್ಡಿನವರು ೩೨ ಶಾಲೆಗಳನ್ನು ತೆರೆಯಲು ಸರಕಾರಕ್ಕೆ ಬರೆಕೊಂಡಿದ್ದರು. ಆದರೆ, ಜಿಲ್ಹಾ ಬೋರ್ಡಿನವರು ಪ್ರಾಥಮಿಕ ಶಿಕ್ಷಣದ ಅಧಿಕಾರವನ್ನು ಸ್ವಾಧೀನಪಡಿಸಿಕೊಂಡಕೂಡಲೇ, ಅವನ್ನು ಮಂಜೂರ ಮಾಡುವದು ಇಷ್ಟವಲ್ಲೆಂದು ಸರಕಾರದ ಮತವಿರುತ್ತದಾಗಿ ದಿವಾಣರಾದ ಮಿ| ಜಾಧವರರು ರಾ| ಗುಂಡಾಳೆರವರಿಗೆ ಹೇಳಿದರು. ಬೆಳಗಾಂವ ಜಿಲ್ಹೆಯ ಅಥಣಿ ತಾಲೂಕಿನ ಸಾಂಕರಹಟ್ಟಿ ಗ್ರಾಮದಲ್ಲಿ ೯೩೧ ಜನಸಂಖ್ಯೆಯಿದೆ. ಅಲ್ಲಿ ತಾ. ೧೩-೧೧-೧೯೨೫ ನೇ ಯಿಂದ ಹಿಂದು ಪ್ರಾಥಮಿಕ ಶಾಲೆಯ ಪ್ರಾರಂಭವಾಗಿದೆ. ಅಲ್ಲಿ ಪ್ರಾಥಮಿಕ ಶಾಲೆಯನ್ನೊಂದು ಸ್ಥಾಪಿಸಬೇಕೆಂದು ಗ್ರಾಮದವರು ೧೯೩೪ ನೇ ಇಸ್ವಿಯ ಎಪ್ರಿಲ್ ತಿಂಗಳಿನಲ್ಲಿ ಅರ್ಜಿಮಾಡಿದ್ದರು. ಸರಕಾರವು ಬೆಳಗಾಂವಿಯ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿಗೆ ಶಾಲೆಯನ್ನು ಸ್ಥಾಪಿಸಲು ಬಿನ್ನೈಸಿಕೊಂಡಿತೆಂದು ರಾ| ಜೋಗರವರಿಗೆ ಉತ್ತರ ದೊರಕಿದೆ.

* *

ಅಹಮ್ಮದನಗರ ಜಿಲ್ಹೆಯೊಳಗಿನ ಶಿನ್ನರ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ಮೇಲೆ ವಕೀಲರಾದ ಗೋವಿಂದರಾವ ವಾಮನರಾವ ಪ್ರಧಾನರವರು ದಾವೆ ದಾಖಲ ಮಾಡಿ, ಇಲೆಕ್ಷನುಗಳನ್ನು ನಡಿಸಬಾರದೆಂದು ಬೇಡಿಕೊಂಡಿದ್ದರು. ಆ ದಾವೆಯಲ್ಲಿ ವಾದಿಯಾದ ರಾ|| ಪ್ರಧಾನರವರ ಸಂಕೇತ ಚಿನ್ಹೆಯನ್ನು ಅಂಗೀಕರಿಸಿದ ಹೊರತು, ಮ್ಯುನಿಸಿಪಾಲಿಟಿಯ ಇಲೆಕ್ಷನನ್ನು ಮುಂದರಿಸಬಾರದಾಗಿ ಶಿನ್ನರದ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ರಾ|| ಖಾಡೇರಾವ ಬಲವಂತರಾವ ದೇಶಮುಖರವರ ಮೇಲೆ ಶಿನ್ನರದ ಸಬಜಡ್ಜರು ಪ್ರತಿಬಂಧಕ ಹುಕುಮನ್ನು ಕೊಟ್ಟರು. ಅಹಮ್ಮದನಗರ ಜಿಲ್ಹೆಯ ಕಲೆಕ್ಟರರೂ, ಸರಕಾರಿ ವಕೀಲರೂ ಸಬಜಡ್ಜರ ಹುಕುಮನಾಮೆಯು ಸಬಜಡ್ಜರ ಅಧಿಕಾರಬಾಹ್ಯವೆಂದು ನಿರ್ಣಯಿಸಿ, ಇಲೆಕ್ಷನನ್ನು ಮುಂದರಿಸಲು ಮ್ಯುನಿಸಿಪಾಲಿಟಿಯ ಅಧ್ಯಕ್ಷರಿಗೆ ತಿಳಿಸಿದರು. ಈ ಮಾಹಿತಿಯು ರಾ| ನವಲೇಯವರಿಗೆ ಕೊಡಲ್ಪಟ್ಟಿದೆ.

* *

ಸುರತ ಜಿಲ್ಹೆಯ ಚೋರಾಸಿ ತಾಲೂಕಿನ ಭಾಟಾ ಗ್ರಾಮದವರಿಗೆ ಶಾಹೀ ನಮೀಕಟದ ಸರಕಾರಿ ಪ್ರದೇಶದ ಮೇಲೆ ಮನೆಗಳನ್ನು ಸರಕಾರವು ಹೊಯಿಸಗೊ

ುತ್ತಿತ್ತು. ಇತ್ತ ೩೦ ವರ್ಷಗಳ ಲಾಗಾಯಿತು ಗ್ರಾಮದವರು ಹೀಗೆ ಮಾಯಿಸುತ್ತಿರುತ್ತಾರೆ. ಸರಕಾರವು ಈ ಕುರಿತು ಗ್ರಾಮದವರ ಕಡೆಯಿಂದ ಏನೊಂದೂ ಹಣ ಗೋಚರವಾದ ಎಂಥಾ ವಸೂಲ ಮಾಡುತ್ತಿದ್ದಿಲ್ಲ. ಸುರತ ಜಿಲ್ಹೆಯ ಕಲೆಕ್ಟರರು ಪ್ರಯೋಗಾರ್ಥವಾಗಿ ಒಂದು ವರುಷದ ವರೆಗೆ ದನ-ಕರು, ಕುರಿ-ಆಡುಗಳಿಗೆ ತಲೆಗೆ ೩ ಆಣೆಯಂತೆ ಎತ್ತುವಳಿ ಮಾಡಬೇಕೆಂದು ಹುಕುಂ ಮಾಡಿರುವರು. ಇದರಿಂದ ಸರಕಾರಕ್ಕೆ ಸುಮಾರು ೧೫೦ ರೂಪಾಯಿಗಳ ವಾರ್ಷಿಕ ಉತ್ಪನ್ನ ದೊರಕುತ್ತದೆ. ಈ ಕರವನ್ನೆತ್ತಲು ಸರಕಾರಕ್ಕೆ ಖರ್ಚಿಲ್ಲ. ಊರ ಪಟೇಲ-ಕುಲಕರ್ಣಿಯರು ಈ ಕೆಲಸ ಮಾಡುತ್ತಾರೆ. ಕಲೆಕ್ಟರರು ಹೀಗೆ ಮಾಡಿದ್ದು ಸರಕಾರಕ್ಕೆ ಸಮ್ಮತವಿರುವದೇನೆಂದು ರಾ| ಶಿವದಾಸಾನಿಯವರು ಮುಕ್ತೊಂದು ಸವಾಲು ಮಾಡಲು, ಅದಕ್ಕೆ ಹೀಗೆ ಕರಗಳನ್ನು ಎತ್ತಲು ಕಲೆಕ್ಟರರಿಗೆ ಲೆಂಡ ರೆವ್ಹಿನ್ಯೂ ಕೋಡದ ೩೫ ನೇ ಕಲಮಿನನ್ವಯ ಅಧಿಕಾರವಿರುವದಾಗಿ ಉತ್ತರ ದೊರಕಿತು.

* * *

ಮುಂಬಯಿ ಇಲಾಖೆಯ ಉತ್ತರ-ಮಧ್ಯ ಹಾಗು ದಕ್ಷಿಣ ಭಾಗಗಳಲ್ಲಿ ಸಾಗು ಆಗಬಹುದಾಗಿ ಬಂಜರು ಬಿದ್ದ ಭೂಮಿಗಳನ್ನು ಸರಕಾರವು ಅಸ್ಪೃಶ್ಯರಿಗೆ ಅನುಕೂಲವಾದ ಆಕಾರ ಕಟ್ಟಿ ಕೊಡಬಯಸುತ್ತದೇನೆಂದು ರಾ| ನೆಕ್ಲಿಜಾಯ್‌ರವರು ಕೇಳಿದ್ದರು. ಅಸ್ಪೃಶ್ಯ ಜಾತಿಯವರು ಭೂಮಿ ಬೇಕೆಂದು ಸ್ಥಳಿಕ ಅಧಿಕಾರಿಗಳಿಗೆ ಅರ್ಜಿ ಮಾಡಿಕೊಂಡಿದ್ದಲ್ಲಿ ಹಿಂದಿನಂತೆಯೇ ಅವರ ಅರ್ಜಿಗಳನ್ನು ಈ ಮುಂದೆಯೂ ಸಹಾನುಭೂತಿಯಿಂದ ವಿಚಾರಿಸಬೇಕೆಂದು ಸ್ಥಳಿಕ ಅಧಿಕಾರಿಗಳಿಗೆ ಸರಕಾರವು ಸೂಚನೆಗಳನ್ನು ಕೊಟ್ಟಿದೆ.

* * *

ಮುಂಬಯಿ ಸರಕಾರಕ್ಕೆ ನಾಟಕ, ಸಿನೇಮಾ ಮುಂತಾದ ಮನೋರಂಜಕ ಸಂಸ್ಥೆಗಳ ಮೇಲೆ ಕರ ಎತ್ತುವಳಿ ಮಾಡಿದ್ದರಿಂದ ೧೯೩೫ ನೇ ಇಸ್ವಿಯಲ್ಲಿ ೯,೦೭,೦೦೦ ರೂಪಾಯಿ ಉತ್ಪನ್ನವಾಯಿತು. ಹೀಗೆ ಪ್ರಾಪ್ತಿಯಾದ ಕರವನ್ನು ವಿಶಿಷ್ಟ ಕೆಲಸಕ್ಕಾಗಿ ಕಾದಿಡುವದು ಸರಕಾರಿ ಲೆಖ್ಖಾಚಾರಕ್ಕೆ ವಿರುದ್ಧವಾದದ್ದು; ಆದರೆ, ಕೌನ್ಸಿಲಿನಲ್ಲಿ ಕೊಟ್ಟ ಆಶ್ವಾಸನಕ್ಕನುಸಾರವಾಗಿ, ಸರಕಾರವು ಹೊಸ ಟೆಕ್ಸಿನ ಲೆಖ್ಖವನ್ನು ಪ್ರತ್ಯೇಕವಾಗಿ ಕಾಣುವಂತೆ ವ್ಯವಸ್ಥೆ ಮಾಡಿರುತ್ತದೆ. ೧೯೩೬-೩೭ನೇ ಇಸ್ವಿಯಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಸರಕಾರವು ಈ ಟೆಕ್ಸಿನ ಪೂರ್ಣ ಉತ್ಪನ್ನವನ್ನು ಕೊಟ್ಟು ೫ ಲಕ್ಷ ರೂಪಾಯಿಗಳನ್ನು ಕೊಟ್ಟಿತು. ಮಾರನೇ ವರುಷದಲ್ಲಿ ಈ ಟೆಕ್ಸಿಗಿಂತ ೩ ಲಕ್ಷ ಹೆಚ್ಚು ರೂಪಾಯಿ ಪ್ರಾಥಮಿಕ ಶಿಕ್ಷಣಕ್ಕೆ ವೆಚ್ಚವಾಗಿದೆ ಇತ್ಯಾದಿ ಮಾಹಿತಿಯು ರಾ|| ಗುಂಜಾಳರವರಿಗೆ ದೊರಕಿದೆ.

* * *

೧೯೧೩-೧೪ ನೇ ಇಸ್ವಿಯಲ್ಲಿ ಜನರು ಪಟ್ಟಿಯಿಂದ ಹಿಟ್ಟು ಮಾಡಿದ ಖೇಡ ಪ್ರದರ್ಶನ ನಿಧಿಯನ್ನು ಬೇಸಾಯ ಖಾತೆಯ ಡೈರೆಕ್ಟರ ಹಾಗು ಖೇಡ ತಾಲೂಕಿನ ಮಾಮಲೇದಾರರಿಗೆ ನಿಕ್ಷೇಪ ಪತ್ರ ಮಾಡಿ ಒಪ್ಪಿಸಿತು. ಖೇಡ ತಾಲೂಕಿನೊಳಗಿನ ಬೇಸಾಯ ಅಭಿವೃದ್ಧಿ ಸಂಘದ ಕಾರಭಾರಿ ಮಂಡಳದ ಠರಾವಿನಂತೆ ಮೇಲ್ಕಂಡ ಅಧಿಕಾರಿಗಳು ಈ ನಿಧಿಯನ್ನು ಸ್ವಾಧೀನಪಡಿಸಿಕೊಂಡಿರು. ಪ್ರದರ್ಶನಕೆಲಸದಲ್ಲಿ ಹಗಲಿರುಳು ದುಡಿದ ಕಾರಭಾರಿ ಮಂಡಳದವರಲ್ಲಿ ಯಾರೊಬ್ಬರೂ ಯಾಕೆ ನೇಮಿಸಲ್ಪಡಲಿಲ್ಲವೆಂದು ಸರಕಾರಕ್ಕೆ ಗೊತ್ತಿಲ್ಲ. ನೇಮಿಸಬೇಕೆಂಬ ಬಗ್ಗೆ ಪ್ರದರ್ಶನ ಮಂಡಳದವರು ಪಾಸು ಮಾಡಿದ ಠರಾವನ್ನೂ ಸರಕಾರವು ಅರಿತಿರುವದಿಲ್ಲ. ಈ ನಿಧಿಯೊಂದ ಹುಟ್ಟಿದ ಬಡ್ಡಿಯನ್ನು ಬೇಸಾಯ ಅಭಿವೃದ್ಧಿ ಸಂಘಕ್ಕೆ ಒಪ್ಪಿಸಲ್ಪಡುತ್ತದೆ. ಆ ಸಂಸ್ಥೆಯು ಯುಕ್ತ ಕಂಡಂತೆ ಖರ್ಚು ಮಾಡುತ್ತದೆ ಇತ್ಯಾದಿ ಮಾಹಿತಿಯು ರಾ| ಗುಂಜಾಳರವರಿಗೆ ದೊರಕಿದೆ.

* * *

೧೯೩೫ ನೇ ಇಸ್ವಿಯಲ್ಲಿ ಮುಂಬಯಿ ಹೈಕೋರ್ಟಿನಲ್ಲಿ ೯೭೭ ಸೆಕೆಂಡ ಅಪೀಲುಗಳು ದಾಖಲಾದವು. ೪೮೨ ಫರ್ಸ್ಟ ಅಪೀಲುಗಳು ದಾಖಲಾದವು. ಅದೇ ವರುಷದಲ್ಲಿ ೧೨೫೪ ಸೆಕೆಂಡ ಅಪೀಲುಗಳೂ, ೫೬೨ ಫರ್ಸ್ಟ ಅಪೀಲುಗಳೂ ನಿಕಾಲೆಯಾದವು. ಇವುಗಳಲ್ಲಿ ೩೩ ಫರ್ಸ್ಟ ಅಪೀಲುಗಳು ವಿಚಾರಕ್ಕಾಗಿ ಹಿಡಿಯಲ್ಪಟ್ಟಿವೆ; ೫೭೦ ಸೆಕೆಂಡ ಅಪೀಲುಗಳೂ ವಿಚಾರಕ್ಕೆ ಹಿಡಿಯಲಿಲ್ಲ. ಇತ್ಯಾದಿ ಮಾಹಿತಿಯು ರಾವಬಹಾದ್ದೂರ ಕಾಂಬಳೆಯವರಿಗೆ ದೊರಕಿದೆ.

* * *

ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿಯಾದರೆ ಕೂಡಲೆ ತಮ್ಮ ಕಡೆಗೆ ತಿಳಿಸಬೇಕೆಂದು ಕಾನಡಾ ಜಿಲ್ಹೆಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಹುಕುಂ ಮಾಡಿರುವರು. ಜಂಗಲದ ಗ್ರಾಮಗಳಲ್ಲಿದ್ದಲ್ಲಿ ಕಾಡಾನೆಗಳು ಮಾಡುವ ನಷ್ಟದ ಲೆಖ್ಖ ತಿಳಿಸಲಿಕ್ಕೆ ಅಸಿಸ್ಟಂಟ ಕಲೆಕ್ಟರರಿಗೆ ಹುಕುಮಾಗಿರುವದೆ. ೧೯೩೫ ನೇ ಇಸ್ವಿಯಲ್ಲಿ ಹಳಿಯಾಳ ತಾಲೂಕಿನ ಹಿರೇಗಳ್ಳಿ, ಉಸೋಡಾ; ಸೂಪಾ ಪೇಟೆಯ ಯಾರಗಲ್ಲ, ಶಿವಳ್ಳಿ, ಜೆಕಡ್ಯೆಳ್ಳಿ, ನವಣೆ, ಶಿರನಾಲಾ, ಉಚಗೇರಿ, ಬೊಮ್ಮನಳ್ಳಿ, ಕರಸ್ಯೆ, ನಗ್ರಿ, ಓಂಸಿ, ಗುಂದ ಬಾಲಗಿರ; ಯಲ್ಲಾಪುರ ತಾಲೂಕಿನ ವಿಜಕೊಪ್ಪ, ಮದನೂರ, ಲಾಲಗುಳಿ, ಡೋಂಗರ, ಹರಿಯಳ, ಬಾಲಗದ, ಅನಗೋಡ. ಮುಂಡಗೋಡ ಪೇಟೆಯ ಕೋಗರಳ್ಳಿ, ಗುಂಜಾವತಿ, ವೈನಳ್ಳಿ; ಶಿರ್ಸಿ ತಾಲೂಕಿನ ಸದಾಶಿವಳ್ಳಿ, ಸಿದ್ದಾಪುರ, ತಾಲೂಕಿನ ಹಿರೇಕೈ, ಐಗೋಡ, ಮುಪ್ಪಳ್ಳಿ, ಹೊನ್ನಾವರ ತಾಲೂಕಿನ ಸಾಗರಬಸ್ತಿಕೇರಿ ಹಾಗ ಹಿರೇಬೈಲ. ಈ ೩೦ ಗ್ರಾಮಗಳಲ್ಲಿ ಕಾಡಾನೆಗಳು ೩,೮೦೩ ರೂಪಾಯಿಗಳ ಬೆಳೆಯನ್ನು ನಷ್ಟಪಡಿಸಿದವು. ಆ ಕುರಿತು ೩೦ ಮಂದಿಗಳಿಗೆ ಸರಕಾರವು ರೂ ೭೧೫-೧೫ ೧೧ ಶಿಸ್ತ ಮಾಫ ಮಾಡಿಯದೆ. ಕಾಡಾನೆಗಳ ಹಾವಳಿಯನ್ನು ಪರಿಹರಿಸುವದಕ್ಕಾಗಿ ಬೇಸಾಯ ಖಾತೆಯವರು ಒಂದು ತಬಾಕಿಯನ್ನು ಕೊಂಡುಕೊಂಡಿರುವರು. ಅದನ್ನು ಉಪಯೋಗಿಸುವದಕ್ಕಾಗಿ, ಹೊನ್ನಾವರ ತಾಲೂಕಿನ ಬೇಟೆಗಾರರೊಬ್ಬರಿಗೆ ನೇಮಿಸಲಾಗಿದೆ. ಬೇಟೆಗಾರನು ಅವಶ್ಯವಿದ್ದ ತಾಲೂಕು ಯಾ ಗ್ರಾಮದಲ್ಲಿ ಹೋಗುತ್ತಾನೆ; ಅವನಿಗೆ ಕರೆಯುವ ಗ್ರಾಮದವರು ಅವನ ಖರ್ಚನ್ನು ಕೊಟ್ಟರೆ ಮಾತ್ರ ಹೋಗುತ್ತಾನೆ. ೧೯೩೫ ನೇ ಇಸ್ವಿಯಲ್ಲಿ ಶಿರ್ಸಿ ತಾಲೂಕಿನಲ್ಲಿ ಆತನು ಎರಡು ಆನೆಗಳನ್ನು ಕೊಂದನು. ಈ ಮಾಹಿತಿಯು ಶ್ರೀ| ಕರ್ಕಿಯವರಿಗೆ ದೊರಕಿದೆ.

* * *

ಕಾರವಾರ ತಾಲೂಕಿನಲ್ಲಿ ೮ ಮರಾಠಿ ಶಾಲೆಗಳಿವೆ. ಮೂರು ಹುಡುಗಿಯರವು, ಐದು ಹುಡುಗರವು. ಹಳಿಯಾಳ ತಾಲೂಕಿನಲ್ಲಿ ೪ ಮರಾಠಿ ಶಾಲೆಗಳಿವೆ. ಮೂರು ಹುಡುಗರವು, ಒಂದು ಹುಡುಗಿಯರದು. ಕಾರವಾರ ತಾಲೂಕಿನ ಮುಡಗೇರಿ ಗ್ರಾಮದವರು ತಮ್ಮಲ್ಲಿ ಮರಾಠಿ ಶಾಲೆಯನ್ನು ಸ್ಥಾಪಿಸಬೇಕೆಂದು ಈ ಕೆಳಗಿನಂತೆ ಒಂದು ಅರ್ಜಿ ಮಾಡಿದರು:- “ ನಮ್ಮ ಗ್ರಾಮದಲ್ಲಿ ಹುಡುಗಿಯರದೊಂದು ಮರಾಠಿ ಶಾಲೆಯನ್ನು ಸ್ಥಾಪಿಸುವ ಕುರಿತು ಪತ್ರವ್ಯವಹಾರ ನಡೆದ ಸಂಗತಿಯು ತಮಗೆ ವಿದಿತವಿದೆ. ಶಾಲೆಯನ್ನು ತೆರೆಯಲಿಕ್ಕೆ ಇನ್ನೂ ಮಂಜೂರಿ ದೊರೆಯಲಿಲ್ಲ. ತಾವು ಮೊದಲು ಹೇಳಿದಂತೆ, ನಾವು ಶಾಲಾ ಮಂದಿರವನ್ನು ಕಟ್ಟಿಸಿದ್ದೇವೆ. ಮತ್ತು ಮುಡಗೇರಿ ಕನ್ನಡ ಶಾಲೆಯ ಹೆಡ್ ಮಾಸ್ತರರ ಶಿಫಾರಸಿನ ಒಂದು ಅರ್ಜಿಯನ್ನೂ ಕಳುಹಿದ್ದೇವೆ. ಕಾರವಾರ ತಾಲೂಕಿನಲ್ಲಿ ದೊಡ್ಡ ಶಾಲೆಗಳೆಂದರೆ ಮೂರು:- ಸದಾಶಿವಗಡ, ಮುಡಗೇರಿ, ಹಾಗು ಮಾಜಾಳಿ. ಸದಾಶಿವಗಡ ಹಾಗು ಮಾಜಾಳಿಯಲ್ಲಿ ಹುಡುಗಿಯರ ಶಾಲೆಯಾಗಿ ೧೦-೧೨ ವರುಷಗಳಾದವು. ಆದರೆ, ಮುಡಗೇರಿಯಲ್ಲಿ ಇನ್ನೂ ಹುಡುಗಿಯರ ಶಾಲೆಯಾಗದೆ, ಹುಡುಗಿಯರಿಗೆ ಶಿಕ್ಷಣದ ಲಾಭ ದೊರಕುವದಿಲ್ಲ, ಕನ್ನಡ ಶಾಲೆಯಿಂದ ಅವರಿಗೆ ಲಾಭವಿಲ್ಲ. ಆದರಿಂದ ತಿಂಗಳ ಅವಧಿಯೊಳಗೆ ಇಲ್ಲಿ ಒಂದು ಹುಡುಗಿಯರ ಶಾಲೆಯನ್ನು ಏರ್ಪಡಿಸಬೇಕಾಗಿ ನಮ್ಮ ಪ್ರಾರ್ಥನೆ ಇದೆ.” ಇತ್ಯಾದಿ ಅರ್ಜಿಯನ್ನು ಕಾರವಾರ ತಾಲೂಕ ಲೋಕಲ್ ಬೋರ್ಡ ಅಧ್ಯಕ್ಷರಿಗೆ ಸಾದರಪಡಿಸಿದರು. ತಾಲೂಕ ಲೋಕಲ್ ಬೋರ್ಡಿನವರೂ ಈ ಕುರಿತು ಠರಾವವಾಯಿತು. ಆದರೆ, ಜಿಲ್ಹಾ ಬೋರ್ಡಿನವರು ಸದ್ಯಕ್ಕೆ ಹಣವಿಲ್ಲವಾಗಿಯೂ, ಹಣದ ಅಡಚಣಿ ಸುಧಾರಿಸಿದ ಬಳಿಕ ವಿಚಾರ ಮಾಡಬಹುದಾಗಿಯೂ ಹೇಳಿ, ಈ ವಿಚಾರವನ್ನು ತಹಕೂಬ ಇಟ್ಟಿರುವರು. ಈ ಮಾಹಿತಿಯು ರಾ| ಎ. ಎನ್. ಕುಬೇರಯವರಿಗೆ ದೊರಕಿದೆ.

* * *

ಧೋಲಕಾ ತಾಲೂಕಿನ ದುಗ್ರಿ ಗ್ರಾಮದೊಳಗಿನ ಕೆಲವು ಭೂಮಿಗಳಿಗೆ ಸರಕಾರಿ ಕೆರೆ ನೀರಿನ ಅನುಕೂಲತೆಯಿರುವದರಿಂದ ಆ ಭೂಮಿಗಳಿಗೆ ತೀರ್ವೆಯ ಸಂಗಡಲೇ “ ಹಿಮಾಯತ ” ಎಂಬ ನೀರಿನ ಕರವನ್ನು ಎತ್ತುತ್ತಾರೆ. ಕೆರೆಗಳಲ್ಲಿ ನೀರಿಗೆ ಬರಗಾಲವಿದ್ದಿಲ್ಲ. ಆದರೆ, ಮಳೆಯು ಕಡಿಮೆಯಾದ್ದರಿಂದ ಜನರಿಗೆ ನಟ್ಟಿ ಮಾಡಲು ಅನುಕೂಲವಾಗಲಿಲ್ಲ. ಬಿತ್ತಿಗೆಯ ಸಮಯ ಬೇಕಷ್ಟು ನೀರಿತ್ತು. ನೆಟ್ಟಿಯ ಕಾಲದಲ್ಲಿ ಸಾಕಷ್ಟು ನೀರಿದ್ದಿಲ್ಲ. ಕೆರೆಗಳು ತುಂಬಿ ತುಳುಕುವಾಗ ಸಸಿಗಳೆಲ್ಲ ಹಣಗಿ ಹೋಗಿದ್ದವು. ಜನರು ಇತ್ತದ ಪ್ರದೇಶದಲ್ಲಿ ಇತರ ಬೆಳೆಗಳನ್ನು ಬೆಳೆಸಲಿಕ್ಕೆ ನೀರು ಉಪಯೋಗಿಸಿಕೊಂಡಂತೆ ಕಾಣುತ್ತದೆ. ಊರವರು ತೀರ್ವೆಯನ್ನು ಮಾಫ ಮಾಡಬೇಕೆಂದು ಅರ್ಜಿ ಮಾಡಿಕೊಳ್ಳಲಿಲ್ಲ. ಬೆಳೆಯು ಆಣೆವಾರಿಯು ೮ ರಿಂದ ೧೨ ಆಣೆಯೆಂದು ದಾಖಲಾಗಿದೆ. ಆದರಿಂದ 'ಹಿಮಾಯತ' ಕರವನ್ನು ಬೇಸಾಯಗಾರರಿಗೆ ಸೂಟ ಕೊಡಲಿಲ್ಲ. ಇತ್ಯಾದಿ ಮಾಹಿತಿಯು ರಾ| ಸ್ವಾಮಿನಾರಾಯಣರಿಗೆ ದೊರಕಿದೆ.

* * *

ಪುಣೆ ಜಿಲ್ಹೆಯ ಪ್ರಾಥಮಿಕ ಶಾಲೆಯ ಹೆಣ್ಣು-ಗಂಡು ವಿದ್ಯಾರ್ಥಿಗಳ ಆರೋಗ್ಯವನ್ನು ತಪಾಸ ಮಾಡುವದಕ್ಕಾಗಿ ಸರಕಾರವು ಏನೂ ವ್ಯವಸ್ಥೆ ಮಾಡಿರುವದಿಲ್ಲ. ಸದ್ಯಕ್ಕೆ ಪ್ರಯೋಗಾರ್ಥವಾಗಿ ಈ ಕುರಿತು ಆಲೋಚನೆ ಮಾಡುವ ವಿಚಾರವೂ ಸರಕಾರಕ್ಕಿಲ್ಲ. ಪ್ರಾಥಮಿಕ ಶಿಕ್ಷಣದ ಕಾರಭಾರವು ಲೋಕಲ್ ಒಥೋರಿಟಿ ಯಾನೆ ಜಿಲ್ಹಾ ಬೋರ್ಡುಗಳ ಸ್ವಾಧೀನವಾದ ಬಳಿಕ ಈ ಕುರಿತು ವಿಚಾರಿಸುವದು ಲೋಕಲ್ ಒಥೋರಿಟಿಗಳ ಕರ್ತವ್ಯವು, ಇತ್ಯಾದಿ ಮಾಹಿತಿಯು ರಾ| ಗುಂಜಾಳರವರಿಗೆ ದೊರಕಿದೆ.

ಕಾನಡಾವೃತ್ತ

ಮಿತಿ ಕ್ಷಯ ಸಂ। ಶ್ರಾವಣ ಶು ೬ ಮಿ, ಸೋಮವಾರ.

ಲೋಕಲ್ ಫಂಡಿನ ಏರಿಕೆ

(ಲೇಖಾಂಕ ೫)

ಲೋಕಲ್ ಫಂಡನ್ನು ಏರಿಸುವದು 'ಸುಲಭವಾದ ಝರಿ' ಯೋಪಾದಿಯಲ್ಲಿರುವದೆಂದು ನಮ್ಮ ಧುರೀಣರು ಉದ್ಗರಿಸಿದ್ದನ್ನು ಕೇಳಿ, ಹಿಂದುಸ್ಥಾನಕ್ಕೆ ಆಳರಸರು ಉದ್ಗರಿಸುವ "Land of the Pagoda tree" ಅಂದರೆ, ಕನಕಲಂಕೆಯೆಂಬ ಹೆಸರಿನ ನೆನಪಾಗುತ್ತದೆ. ಭರತ ಭೂಮಿಯು ಸಮೃದ್ಧವಿದೆ: ಬೇಕಾದವರು ಬಂದು ಬೇಕಾದಷ್ಟನ್ನು ಸೂರೆ ಹಾಕಿದರೂ, ನಮ್ಮಲ್ಲಿಯ ಕನಕವೇನೂ ವ್ಯಯವಾಗುವದಿಲ್ಲ: ಅಷ್ಟು ಸಂಪತ್ತಿಯು ನಮ್ಮೀ ಭರತ ಭೂಮಿಯಲ್ಲಿ ತುಂಬಿಕೊಂಡಿದೆಂದು ಪಾಶ್ಚಾತ್ಯರು ಬಾಯಿಯಲ್ಲಿ ನೀರು ತಂದು, ತಂದು ಹೇಳುತ್ತಿದ್ದರಂತೆ. ಅದೇನೋ, ದೂರಿನ ನೋಟವು! ಬೆಟ್ಟವು ದೂರಿಂದ ಕಣ್ಣಿಗೆ ನುಣ್ಣಗೆ ಕಾಣುವಂತೆ, ಸ್ವಾರ್ಥಪರಾಯಣರಾದ ಪಾಶ್ಚಾತ್ಯರಿಗೆ, ಸೂರೆ ಹಾಕಲಿಚ್ಛಿಸುವ ಪಾಶ್ಚಾತ್ಯರಿಗೆ ಹಾಗೆ ತೋರುವದು ಸಹಜವು. ಹಿಂದುಸ್ಥಾನ ದೇಶವು ದಿನೇ ದಿನೇ ಬಡಬೀಳುತ್ತ ನಡೆದರೂ, ಬ್ರಿಟಿಶರ ಕನಕಲಂಕೆಯ ಭ್ರಮಣವು ತೀರುವದಿಲ್ಲ: ಒಮ್ಮೆ ಅದು ಕ್ಷಮ್ಯವೇ. ಆದರೆ, ನಮ್ಮ ಧುರೀಣರು ಲೋಕಲ್ ಫಂಡಿನ ಏರಿಕೆಗೆ 'ಸುಲಭವಾದ ಝರಿ' ಯೆಂದು ಸಂಬೋಧಿಸಿದ್ದು ಅಕ್ಷಮ್ಯವು. ಧುರೀಣರು ಲೋಕಧುರೀಣರೆಂದು ಹೇಳಿಸಿಕೊಳ್ಳುತ್ತಾರೆ; ಸಾಧಾರಣ ಪ್ರಜೆಗಳ ಹಿತಾಹಿತಗಳನ್ನು ಅರಿತುಕೊಂಡಿರುವಂತೆ ವರ್ತಿಸುತ್ತಾರೆ! ಜಂಗಲ ಕಷ್ಟಗಳ ಭ್ರಮಣವನ್ನು ಬಿಡಿಸಬೇಕಾದರೆ, ನಮ್ಮ ಧುರೀಣರೇ ಬಿಡಿಸಬೇಕು. "ಜಂಗಲ ಖಾತೆಯ ಮುಂಚೆ ನಮ್ಮ ಬೇಸಾಯವು ಹ್ಯಾಗೆ ಸಮೃದ್ಧ ಸ್ಥಿತಿಯಲ್ಲಿತ್ತು: ಜಂಗಲ ಖಾತೆಯ ಜನನವು ಯಾವ ಉದ್ದೇಶದಿಂದ ಉಂಟಾಯಿತು; ಬೇಸಾಯದ ಜೊತೆಗಾರನ ಬದಲು, ಜಂಗಲ ಖಾತೆಯು ಹ್ಯಾಗೆ ಶತ್ರುವಾಗಿ ಪರಿಣಮಿಸಿತು; ಬೇಸಾಯವು ಹ್ಯಾಗೆ ಕಳೆಗುಂದಿತು; ಬೇಸಾಯವನ್ನೇ ಸಾಗಿಸಿ ಹೊಟ್ಟೆ ಹೊರಕೊಳ್ಳುವ ಬೇಸಾಯಗಾರರ ಸ್ಥಿತಿಯು ಹ್ಯಾಗೆ ಗತಿಗೇಡಾಯಿತು," ಮುಂತಾದ ಕಥೆಯನ್ನು ಧುರೀಣರು ಬಿಚ್ಚಿದರೆ, ಕಲ್ಲು ಕರಗಿ ನೀರಾಗುತ್ತದೆ. ಬೇಸಾಯಗಾರರಿಗಾಗಿ ಜಂಗಲ ಖಾತೆಯೊಡನೆ ಹೋರಾಡಲು ತಾವು ಟೊಂಕಕಟ್ಟಿದ್ದೇವೆಂದು, ನಿಷ್ಕಪಟ ಬೇಸಾಯಗಾರರಿಗೆ ಹುರಿದುಂಬಿಸುವ 'ಧುರೀಣ'ವು "ಜಂಗಲ ಖಾತೆಯ ಮೇಲೆ ನಮ್ಮ ಸತ್ತೆಯಿಲ್ಲ;" ಮುಂತಾದ ಹೇಡಿತನದ ಉಪದೇಶವನ್ನು ಮಾಡುವ ಅರ್ಥವು ಸಾಮಾನ್ಯರಿಗೆ ಸಹ ತಿಳಿಯುವ ಹಾಗಿದೆ. 'ಧುರೀಣ'ದ ನಿಜ ರೂಪವು ಸ್ಫುಟವಾಯಿತು; ಜಂಗಲ ಖಾತೆಯೊಡನೆ ಹೋರಾಡುವ ಕಥೆಗಳಿಂದ ಉತ್ತರ ಗೋಗ್ರಹಣದೊಳಗಿನ ಉತ್ತರಕುಮಾರನು ಬೃಹನ್ನಳಾದಿ ಅಂತಃಪುರದೊಳಗಿನ ಸ್ತ್ರೀಯರೊಡನೆ ಮಾಡಿದ ನಿರರ್ಥಕ ಪ್ರಲಾಪಗಳ ಜ್ಞಾಪಕವಾಗಿ, ಮನಸ್ಸು ಬೇಸರಗೊಳ್ಳುತ್ತದೆ. ಧುರೀಣರಿಗೆ ಸುಲಭವ್ಯಾವುದು? ಕಠಿಣವ್ಯಾವುದು? ಝರಿ ಯಾವುದು? ನೆರೆ ಯಾವುದು! ಎಂಬ ಮಾತು ತಿಳಿಯದೆ ಹೋಯಿತಲ್ಲವೇ!

'ಸುಲಭವಾದ ಝರಿ' ಎಂಬದರ ಅರ್ಥವೇನು? ಯಾವ ಅರ್ಥದಿಂದ ಸುಲಭವು? ಬಡ ಬೇಸಾಯಗಾರರು, ವಿಧಿಸಿದ ಕರವನ್ನು ಸುಮ್ಮನೆ ತೆರುತ್ತಾರೆಂದು ಧುರೀಣರು ಸುಲಭವೆಂದು ಹೇಳುತ್ತಾರೇ! ಅಥವಾ ಜಂಗಲಖಾತೆಯಂತೆ ಬೇಸಾಯಗಾರರಿಗೆ ಬೋರ್ಡಿನ ಠರಾವಿಗೆ ವಿರೋಧ ಮಾಡಬರುವದಿಲ್ಲೆಂದು ಸುಲಭವೇ! ಜಂಗಲ ಖಾತೆಯು ವಿರೋಧಿಸುವದರಿಂದ, ಜಂಗಲ ಖಾತೆಗೆ ಎದುರಾಳಿಗಳಾಗಿ ನಿಂತು ಜಂಗಲ ಖಾತೆಯಿಂದ ಹಣ ಪಡಕೊಳ್ಳುವದು ಅಸಾಧ್ಯವಾದ್ದರಿಂದ ಕಠಿಣವು; ಬೇಸಾಯಗಾರರು ಕರಗಳನ್ನು ಅತ್ತು, ಕತ್ತು ಸೋತುಹೋದರೂ, ಇನ್ನೂ ತೆರುತ್ತಾರೆಂದು ಸುಲಭವು: ಇದೇ ಧುರೀಣರ ವಿಚಾರವಲ್ಲವೇ! "ಕರಗಳು ಮಿತಿಮೀರಿದವು; ಇನ್ನು ನಾವು ಕರಗಳನ್ನು ತೆರಲಾರೆವು;" ಎಂದು ಹೇರಿದ ಕರಗಳನ್ನು ನಿರಾಕರಿಸುವಷ್ಟು ಸ್ಥೈರ್ಯವು, ಧೈರ್ಯವು, ಸಾಹಸವೃತ್ತಿಯು ಬೇಸಾಯಗಾರರಲ್ಲಿ ತಲೆದೋರಿದ್ದರೆ, ಧುರೀಣರೇ ಬೇಸಾಯಗಾರರ ಪಕ್ಷಪಾತಿಯಾಗಿ ಜಂಗಲ ಖಾತೆಯ ಮೇಲೆ ಸಾಗಿಹೋಗಲು ತಯಾರಾಗುತ್ತಿದ್ದರು. 'ಗೆದ್ದವರ ಪಕ್ಷ'ವನ್ನು ಹೊತ್ತುಕೊಂಡು ತಿರುಗುವದು ತೀರ ಸುಲಭ ಕೆಲಸವು. ಬೇಸಾಯಗಾರರು ಸಾಮರ್ಥ್ಯವಂತರಾದರೆ, ನಮ್ಮ 'ಧುರೀಣ'ವು ಬೇಸಾಯಗಾರರದು; ಅಥವಾ ಧುರೀಣರ ಭಾಷೆಯಲ್ಲಿ ಹೇಳಬೇಕಾದರೆ, ಬೇಸಾಯಗಾರರಲ್ಲಿ ಸತ್ತೆಯಿದ್ದರೆ, 'ಧುರೀಣ'ವು ಬೇಸಾಯಗಾರರದು! ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ, 'ಧುರೀಣ'ಕ್ಕೆ ಸತ್ತೆ ಬೇಕು. ಬೇಸಾಯಗಾರರಲ್ಲಿ ಸತ್ತೆಯಿಲ್ಲ; ಆದರಿಂದ ಲೋಕಲ್ ಫಂಡು ಏರಿಸುವದು ಸುಲಭವು. ಸುಲಭ ಕೆಲಸವನ್ನು ಮಾಡಲಿಕ್ಕೆ ನಮ್ಮ 'ಧುರೀಣ'ವು ಉಪದೇಶಿಸುತ್ತದೆ.

'ಝರಿ' ಎಂಬ ಶಬ್ದವನ್ನು ಸ್ವಲ್ಪ ಆಲೋಚಿಸುವಾ. ನೀರು ಝರಿಯೊಳಗಿಂದ ಹರಿಯುವಂತೆ, ಲೋಕಲ್ ಫಂಡು ಹರಿಯಲಿಕ್ಕೆ ಬೇಸಾಯಗಾರರು ಗಂಟು ಕಟ್ಟಿದ್ದಾರೆಂದು ಧುರೀಣರ ಅಂಬೋಣವಿದೆಯೇ? ಹಾಗಾದರೆ, "ನಮ್ಮಲ್ಲಿಯ ಬೇಸಾಯಗಾರರು ಕಂಗೆಟ್ಟುಹೋದರು; ಅರೆಹೊಟ್ಟೆ ಉಣ್ಣುತ್ತಾರೆ; ಕಾಳೇಜಕ್ಕೆ ಉಣ್ಣುವಷ್ಟು ದೀನರಾಗಿದ್ದಾರೆ; ಅದೂ ಸಿಗದಿದ್ದಾಗ ಉಪವಾಸ ಸಾಯುತ್ತಾರೆ; ಒಂದು ಚಿಕ್ಕ ಸಿಡುಗು ಬಂದರೆ, ನೊಣಗಳಂತೆ ಜನರು ಸಾಯುತ್ತಾರೆ." ಮುಂತಾದ ಧುರೀಣರ ಜಂಗಲ ಪುರಾಣದೊಳಗಿನ ರೈತರ ಸಂಕಟಪರಂಪರೆಯ ಅಧ್ಯಾಯವು ಧುರೀಣರಿಗೆ ಗೊತ್ತಿರುವದಿಲ್ಲೇನು? ಲೋಕಲ್ ಫಂಡನ್ನು ಝರಿಗೆ ಸರಿಹೋಲಿಸಿ, ಧುರೀಣರು ಬೇಸಾಯಗಾರರಿಗೆ ಮಹದನ್ಯಾಯ ಮಾಡಿರುವರೆಂದು ನಮ್ಮ ಮತವಿದೆ. ಏರಿದ ಕರಗಳು ವಿಪರೀತವಾದವು; ಅವನ್ನೇ ತೆರಲು ನಮ್ಮಲ್ಲಿ ಸಾಮರ್ಥ್ಯವಿಲ್ಲೆಂದು ನಾವೆಲ್ಲರೂ ಗೋಳಿಡುತ್ತಿರುವಾಗ, ಲೋಕಲ್ ಫಂಡನ್ನು ಏರಿಸಿ ಹಣ ಪಡೆಯುವದೂ, ಹರಿಯುವ ಝರಿಯೊಳಗಿಂದ ನೀರು ಪಡೆಯುವದೂ ಒಂದೇ ಪ್ರಕಾರವೆಂದು ನಮ್ಮ 'ಧುರೀಣ'ವು ಧ್ವನಿಸಿ, ಸ್ವಾರ್ಥಪರಾಯಣರಾದ ಬ್ರಿಟಿಶರ ಪಂಕ್ತಿಯಲ್ಲಿ ಹೋಗಿ ಕೂತುಕೊಂಡಿದೆ. ಆಳರಸರ ಅಂತರಂಗವೂ, ನಮ್ಮ ಧುರೀಣರ ಅಂತರಂಗವೂ ಒಂದೇ! ಅಂತರಂಗದಿಂದ ಇವರು ಅಪ್ಪರು; ಭೂಮಿಕೆಯು ಮಾತ್ರ ಬೇರೆ ಬೇರೆ! ಒಬ್ಬರು ಆಳುವ ಅರಸರು; ಇನ್ನೊಬ್ಬರು ಜನರ ಕಲ್ಯಾಣಕರ್ತರು!

'ಸುಲಭವಾದ ಝರಿ'ಯ ಕಲ್ಪನೆಯು ತೀರ ಅಯಥಾರ್ಥವಿರುವದೆಂದು ಈ ವಿವರಣೆಯಿಂದ ವಾಚಕರಿಗೆ ಹೊಳೆಯುವಂತಿದೆ. ಸುಲಭತೆಯು ಬೇಸಾಯಗಾರರ ದುರ್ಬಲತೆಯಿಂದ ಜನಿತವಾದದ್ದು; ಹೊರತು, ಸಮೃದ್ಧಿಯಿಂದ ಅಲ್ಲ. ಜಿಲ್ಹಾ ಬೋರ್ಡಿನ ಲೋಕಪ್ರತಿನಿಧಿಗಳಾದರೂ ಈ ವಿಷಯವನ್ನು ಅರಿತುಕೊಂಡಿರಬೇಕು. ಅಧ್ಯಕ್ಷರಾದ ಶ್ರೀ। ಗೋಪಿ ಮಹಾಬಲೇಶ್ವರ ಭಟ್ಟರವರು ದೊಡ್ಡ ಜಮೀನದಾರರಿದ್ದು, ಅವರಿಗೂ ಭೂಮಿಯ ಮಾಲೀಕರ ಸುಖ-ದುಃಖಗಳ ಅರಿವಿರುವದು. ಅಧ್ಯಕ್ಷರಾದರೂ, ಅಧ್ಯಕ್ಷ ಅಧಿಕಾರಪ್ರಾಪ್ತಿಯಾದ ಬಳಿಕ, ಜಮೀನದಾರ ಬಾಂಧವರ ಕಷ್ಟಗಳನ್ನು ಅವರು ಮರೆಯಲಾರರ. ಬೇಸಾಯಗಾರರು ತೀರ್ವೆಯನ್ನು ಹ್ಯಾಗೆ ತೆರುತ್ತಾರೆ; ತೀರ್ವೆಯ ಹಪ್ತೆ ಬಂದೊಡನೆ ಅವರು ಕಾಳು-ಕಡಿಗಳನ್ನು ಹ್ಯಾಗೆ ಹ್ಯಾಗೆ ಮಾರುತ್ತಾರೆ; ಎಂಬುದನ್ನೆಲ್ಲ ಅವರು ಅರಿತ ಸಂಗತಿಯೇ. ಜಿಲ್ಹಾ ಬೋರ್ಡಿನ ಇತರ ಮೆಂಬರರಾದರೂ ಈ ಸಂಗತಿಯನ್ನು ಆಳವಾಗಿ ವಿಚಾರಿಸಿ, 'ಝರಿ'ಯ ಸುಲಭತೆಗೆ ಮರುಳಾಗದೆ, ಲೋಕಲ್ ಫಂಡನ್ನು ಏರಿಸದಂತೆ ನಿಕರದಿಂದ ಬಡದಾಡುವರೆಂದು ನಾವು ನೆರೆ ನಂಬಿರು

ವೆವು. ಅಧ್ಯಕ್ಷರಾದ ಶ್ರೀ| ಗೋಪಿಯವರು ಲೋಕಮತದ ಬೆಂಬಲದಿಂದ ಕಸುವುಳ್ಳವರಾಗಿ ಮುಂದಾಗಬೇಕು. ಅಧ್ಯಕ್ಷರ ಅಧಿಕಾರವು ದೊಡ್ಡದಿದ್ದು, ಅದಕ್ಕನುಗುಣವಾಗಿ ಸಾಹಸವನ್ನು ಕೈಕೊಳ್ಳದಿದ್ದರೆ, ಆ ಅಧಿಕಾರಪ್ರಾಪ್ತಿಯಿಂದ ಪ್ರಜೆಗಳಿಗೇನು ಲಾಭ? ಇದೇನು ಶ್ರೀ| ಗೋಪಿಯವರು ಅರಿಯದ ಮಾತಲ್ಲ. ಅಧಿಕಾರಕ್ಕನುಗುಣವಾಗಿ ಸ್ಥೈರ್ಯ—ಧೈರ್ಯಗಳಿಂದ ವರ್ತಿಸಿದರೆ, ಅಧಿಕಾರಕ್ಕೆ ಶೋಭೆ; ಅಧಿಕಾರಪ್ರಾಪ್ತಿಯೂ ಸಾರ್ಥಕವಾಗುವದು.

ಸ್ಫುಟ ಸೂಚನೆಗಳು.

೧. ನಮ್ಮ ಮುಂಬಯಿ ಪ್ರಾಂತಿಕ ಕೌನ್ಸಿಲಿನ ಅಧಿವೇಶನವು ಸದ್ಯಕ್ಕೆ ನಡೆದಿದೆ. ಕಾಯಿದೆ ಕೌನ್ಸಿಲಿನಲ್ಲಿ ಸಭಾಸದರಿಗೆ ದೊರೆತ ಕೆಲವು ಮಾಹಿತಿಯನ್ನು ನಾವು ಬೇರೊಂದೆಡೆಯಲ್ಲಿ ಕೊಟ್ಟಿರುವೆವು. ಆ ಮಾಹಿತಿಯು ಮನನೀಯವಿದೆ. ಕೆಲಕೆಲವು ಮಾಹಿತಿಯಂತೂ ಆಳರಸರ ಅಂತರಂಗವನ್ನು ಸ್ಫುಟಗೊಳಿಸುತ್ತಿದೆ. ಉದಾಹರಣಾರ್ಥವಾಗಿ ರಾ| ದೋಲೆಯವರು ಸರಾಯಿ ವ್ಯಾಪಾರದ ಕುರಿತು ಪಡೆದ ಮಾಹಿತಿಯ ಮೇಲಿಂದ ಸ್ಫುಟವಾಗುತ್ತದೆ. ಕುಂಡಗುಡುಕತನವನ್ನು ತಗ್ಗಿಸಲು ಆಳರಸರು ಒದ್ದಾಡುತ್ತಾರೆಂದು ಹೇಳಲಾಗುತ್ತದೆ ಹೀಗಿದ್ದರೂ, ಆಳರಸರು ಮುನ್ಸಿಪಾಲಿಟಿಗಳ ಅರ್ಜಿಗೆ ಉಗಿಬಂಡಿಯ ಚಾಲಕರ ಅನುಮತಿ ಪಡೆದು ಸರಾಯಿ ವಿಕ್ರಯದ ಸಮಯವನ್ನು ಪಾಂಥಸ್ಥರ ಅನುಕೂಲತೆಗಾಗಿ ೧|| ತಾಸಿನವರೆಗೆ ಬೆಳೆಸುತ್ತಾರೆ. ವ್ಯಸನ ತಗ್ಗಿಸಲು ಹಾತೊರೆಯುವ ಆಳರಸರು ವ್ಯಸನಾಧೀನರಿಗೆ ವಿಕಾರ ಹೇತುಗಳನ್ನು ಉಂಟುಮಾಡಿಕೊಡುವದರಿಂದ ವ್ಯಸನವು ಎಂದಿಗೂ ಕುಗ್ಗುವದೇನು! ಕುಂಡಗುಡುಕನು ಕುಂಡದಂಗಡಿಯನ್ನು ನೋಡಿ ಸೇವಿಸದೆ ಬಿಡುವನೇ? ವಿಕಾರ ಹೇತುವಿನ ಸಾನ್ನಿಧ್ಯದಲ್ಲಿ ಮನಸ್ಸು ವಿಕೃತವಾಗುವದು ಸಾಮಾನ್ಯ ಮಾನವ ಲಕ್ಷಣವು. ಕುಂಡಗುಡುಕತನವು ಅನಿಷ್ಟವು, ಅಧರ್ಮವು, ದುಃಖಾಸ್ಪದವು ಎಂದು ಗೊತ್ತಿದ್ದರೂ, ಕುಂಡಗುಡುಕತನದ ಮೋಹಪಾಶಕ್ಕೆ ದುರ್ಬಲರಾದ ಮಾನವರು ಬಲಿಬೀಳುತ್ತಾರಲ್ಲವೇ! ಇದನ್ನು ಆಳರಸರು ಅರಿತಿದ್ದರೂ, ಪಾಂಥಸ್ಥರ ಅನುಕೂಲತೆಯೆಂದು ಡಂಗುರ ಹೊಡೆದು ಸರಾಯಿ ಅಂಗಡಿಯ ಸಮಯವನ್ನು ಬೆಳೆಸುವದು ಪ್ರಜಾಕಲ್ಯಾಣದ ಲಕ್ಷಣವಲ್ಲೆಂದು ನಾವು ಒತ್ತಿ ಹೇಳುವೆವು. ಇದಕ್ಕೂ ಹೆಚ್ಚಿಗೆ ಏನು ಹೇಳಬೇಕು?

---

೨. ರಾ| ದೋಲೆಯವರು ಇನ್ನೊಂದು ಪ್ರಶ್ನೆಯನ್ನು ಕೇಳಿ ಗಿರಣಿ ಕೂಲಿಕಾರರ ದೈನ್ಯದ ಕಾರಣವನ್ನು ಹೊರಗೆಡಹಿರುವರು. 'ಎಫ್' ಹಾಗು 'ಜಿ' ವಾರ್ಡುಗಳೆಂದರೆ ಗಿರಣಿ ಕೂಲಿಕಾರರ ಕೇರಿಗಳು. ಈ ಪ್ರದೇಶದಲ್ಲಿರುವ ಸರಾಯಿ ಅಂಗಡಿಗಳಲ್ಲಿ ಸರಾಯಿಯ ವ್ಯಾಪಾರವು ೩ ದಿನ ಬಹು ರಭಸದಿಂದ ನಡೆಯುತ್ತದೆ. ಕೂಲಿಕಾರರಿಗೆ ಸಂಬಳ ಸಿಕ್ಕ ದಿನ, ಅದಕ್ಕೂ ಮಾರನೇ ದಿನ. ಈ ದಿನ ಸಾಮಾನ್ಯ ಸರಾಸರಿಗಿಂತ ಇಮ್ಮಡಿ ಸರಾಯಿ ಖರ್ಚಾಗುತ್ತದೆ. ಸಾಮಾನ್ಯ ದಿನಗಳಲ್ಲಿ ೫೫೦ ಗೆಲನ್ನು ಖರ್ಚಾದರೆ ಆ ದಿನಗಳಲ್ಲಿ ೫೯೩ ಗೆಲನ್ನು ಖರ್ಚಾಗುತ್ತವೆ ಇತರ ದಿನಗಲ್ಲಿ ೫೫೦ ಗೆಲನ್ನ ಕುಡಿದು ನಿರ್ವಾಹ ಸಾಗಿಸುವ ಬಡ ಕೂಲಿಕಾರರು ಸಂಬಳ ಸಿಕ್ಕಿದಾಗ ಅಷ್ಟೇ ಕುಡಿದು ನಿರ್ವಾಹ ಸಾಗಿಸಲು ಬರುವದಿಲ್ಲೇನು? ಅದಕ್ಕೆತ್ತರವಿಷ್ಟೇ! ಬರುತ್ತದೆ. ಆದರೆ ಏನು ಮಾಡುವದು! ಮದಿರಾ ದೇವಿಯು ಪ್ರಾಬಲ್ಯವನ್ನು ಸಹಿಸಲಾರದೆ ಮನೆಯಲ್ಲಿ ಕಾಳು-ಕಡಿ ಇರುತ್ತದೇನೆಂಬ ವಿಚಾರ ಕೂಡ ಮಾಡದೆ ಕುಂಡಕುಡಿದು ಹೋಗುತ್ತಾರೆ. ಇದು ಸ್ಪಷ್ಟವಿದೆ. ಕಾಯಿದೆ ಕೌನ್ಸಿಲಿನಲ್ಲಿ ರಾ| ದೋಲೆಯವರು ಅಬಕಾರಿ ಪ್ರಧಾನರಾದ ಮಿ| ದೆಹಲ್ವಿಯವರಿಗೆ ಸರಾಯಿ ಅಂಗಡಿಗಳನ್ನು ಕೂಲಿಕಾರರಿಗೆ ಸಂಬಳ ಸಿಕ್ಕಿದ ದಿನ ಮುಚ್ಚಿಸಬೇಕೆಂದು ಬಹಳ ಹಿಡ್ಡಾಡಿದರು ಗಿರಣಿ ಮಾಲಕರ ಪ್ರತಿನಿಧಿಗಳಾದ ಮಿ| ಕೇಲವರೂ ರಾ| ದೋಲೆಯವರಿಗೆ ಬೆಂಬಲಕೊಟ್ಟರು. ನಿರುಪಾಯವಾಗಿ, ಈ ಕುರಿತು ಆಲೋಚನೆ ಮಾಡುತ್ತೇವಾಗಿ ಮಿ| ದೆಹಲ್ವಿಯವರು ಅಭಿವಚನವನ್ನಿತ್ತು, ಬಂದ ಸಂಕಟದೊಳಗಿಂದ ಪಾರಾದರು. ಕುಂಡಗುಡುಕತನವನ್ನು ಅಳ್ಳಳಿಯಲು ಮುಂಬಯಿ ಸರಕಾರವು ಅನುಮಾನಧನದಿಂದ ಹೇಗೆ ಹಾತೊರೆಯುತ್ತದೆ ನೋಡಿರಿ.

---

೩. ಪರಮಾತ್ಮನ ಲೀಲೆಗಳು ಅಗಾಧವಾದ್ದವೆಂದು ಹೇಳುತ್ತಾರೆ. ಅತನ ಲೀಲೆಗಳನ್ನು ಕಲ್ಪನಾಶಕ್ತಿಯಿಂದ ನಾವು ತಿಳಕೊಳ್ಳಬೇಕು. ಆದರೆ ಅಗಾಧವಾದ ಲೀಲೆಗಳ ಮಾದರಿಯನ್ನು ಪ್ರತ್ಯಕ್ಷ ಕರ್ಮಭೂಮಿಯಲ್ಲಿ ನೋಡಬೇಕಾದರೆ ನಮ್ಮಲ್ಲಿಯ ಆಳರಸರ ಸಹವಾಸ ಮಾಡಬೇಕು. ಸಿವಿಲ್ ಕೋರ್ಟಿಯಾದ ನ್ಯಾಯಸ್ಥಾನದೊಳಗಿನ ನಿರ್ಣಯಗಳಿಂದ ಪಕ್ಷಗಾರರೂ, ಇತರ ಅಧಿಕಾರಿಗಳೂ ಬದ್ಧರೆಂಬದೊಂದು ಬ್ರಿಟಿಶ ನ್ಯಾಯದ ಸಿದ್ಧಾಂತವಿದೆ. ಅಹಮ್ಮದನಗರ ಜಿಲ್ಲೆಯ ರಾ| ಪವಲೆಯವರು ಈ ಸಿದ್ಧಾಂತವು ಮಾಯವಾಯಿತೆಂದು ಸಿದ್ಧಪಡಿಸಿರುವರು. ಮ್ಯು. ಇಲೆಕ್ಷನು ನಡೆದಿತ್ತು. ರಾ| ಗೋವಿಂದರಾವ ಪ್ರಧಾನರವರು ಹಿಟ್ಟು ಉಮೇದ್ವಾರರಿದ್ದರು. ಮತಪತ್ರಿಕೆಯ ಮೇಲೆ ತಮ್ಮ ವಿಶಿಷ್ಟ ಸಾಂಕೇತಿಕ ಚಿನ್ಹೆಯನ್ನು ಮುದ್ರಿಸಬೇಕೆಂದು ಅವರು ಅಧ್ಯಕ್ಷರಾದ ರಾ| ಖಂಡೇರಾವ ದೇಶಮುಖರವರಿಗೆ ತಿಳಿಸಿದರು. ರಾ| ಖಂಡೇರಾಯರವರು ಆ ಚಿನ್ಹೆಯನ್ನು ಅಂಗೀಕರಿಸಲೊಪ್ಪಲಿಲ್ಲ. ರಾ| ಪ್ರಧಾನರು ವಕೀಲರಿದ್ದರು. ಸಿವಿಲ್ ಕೋರ್ಟಿನ ಸರ್ವಗಾಮಿ ಅಧಿಕಾರದ ಸಿದ್ಧಾಂತದಲ್ಲಿ ಅವರಿಗೆ ನಂಬಿಗೆಯಿತ್ತು. ಆದರಿಂದ ರಾ| ಪ್ರಧಾನರವರು ಶಿನ್ನರದ ಸಬ್‌ಜಜ್ಜ ಕೋರ್ಟಿನಲ್ಲಿ ಅಧ್ಯಕ್ಷರಾದ ರಾ| ಖಂಡೇರಾಯರ ಮೇಲೆ ದಾವೆ ದಾಖಲು ಮಾಡಿಸಿ, ತಮಗನುಕೂಲವಾಗಿ ನಿರ್ಣಯ ಪಡೆದರು. ರಾ| ಪ್ರಧಾನರ ಸಾಂಕೇತಿಕ ಚಿನ್ಹೆಯನ್ನು ಮತಪತ್ರಿಕೆಯ ಮೇಲೆ ನಮೂದಿಸಿದ ಹೊರತು, ಇಲೆಕ್ಷನು ಮುಂದರಿಸಬಾರದಾಗಿ ಅಧ್ಯಕ್ಷರಾದ ರಾ| ಖಂಡೇರಾಯರವರಿಗೆ ಸಬ್‌ಜಜ್ಜರವರು ಫರಮಾಯಿಸಿದರು. ನ್ಯಾಯಕೋರ್ಟಿನ ಈ ನಿರ್ಣಯವು ಖಂಡೇರಾವರಿಗೆ ಸಮ್ಮತವಾಗದಿದ್ದದ್ದು ಸಹಜವು. ಆದರ ಪಕ್ಷವನ್ನು ಎತ್ತಿಹಿಡಿದ ಕಲೆಕ್ಟರರಿಗೂ, ಸರಕಾರಿ ವಕೀಲರಿಗೂ ಈ ನಿರ್ಣಯವು ಸರಿದೋರಲಿಲ್ಲ. ಸಬಜಜ್ಜ ಕೋರ್ಟಿಗೆ ಈ ವಿಚಾರ ಮಾಡುವ ಅಧಿಕಾರವಿಲ್ಲೆಂದು ಈ ಪ್ರಸ್ತಾಪಿಸಿ ನಿರ್ಣಾಸಿ ಇಲೆಕ್ಷನನ್ನು ಮುಂದರಿಸಲು ರಾ| ಖಂಡೇರಾಯರಿಗೆ ಆಜ್ಞಾಪಿಸಿದರು. ನ್ಯಾಯಕೋರ್ಟಿನ ನಿರ್ಣಯದ ಯೋಗ್ಯಾಯೋಗ್ಯತೆಯನ್ನು ನಿರ್ಣಯಿಸುವ ಅಧಿಕಾರವು ಸರಕಾರಿ ವಕೀಲರಿಗೆಲ್ಲಿಂದ ಬಂತು? ಕಲೆಕ್ಟರರಿಗೆಲ್ಲಿಂದ ಬಂತು? ಸರಕಾರವು ಈ ಕುರಿತು ಯಾವ ಉಪಾಯ ಮಾಡಲಿಚ್ಛಿಸಿದೆ? ಮುಂತಾದ ಪ್ರಶ್ನೆಗಳನ್ನು ರಾ| ಪವಲೆಯವರು ಕೇಳಬೇಕಿತ್ತು. ಇರಲಿ. ನ್ಯಾಯಕೋರ್ಟುಗಳ ಮೇಲೆ ಕಲೆಕ್ಟರರೂ, ಸರಕಾರಿ ವಕೀಲರೂ ಅಧಿಕಾರಿಗಳಿದ್ದಾರೆಂದು ತಿಳಿದು ಬಹಳ ಸಂತೋಷವಾಗುತ್ತದೆ. ಸರಕಾರಿ ನ್ಯಾಯಕೋರ್ಟಿನ ಗೌರವವನ್ನು ಸರಕಾರಿ ಅಧಿಕಾರಿಗಳೇ ಅಪಹರಿಸಿ ಅವುಗಳ ನಿಜರೂಪವನ್ನೂ, ಆಳರಸರ ನಿಜರೂಪವನ್ನೂ ಹೊರಗೆಡಹಿರುವರು ಇಷ್ಟೇ ಸಾಕು.

---

೪. ಸುರತ ಜಿಲ್ಹೆಯ ರಾ| ಶಿವದಾಸಾನಿಯವರು ತಾಪೀ ನದೀತೀರಾಕದ ಬೈಲು ಪ್ರದೇಶದ ಮೇಲೆ ಮೇಯುವ ದನಗಳ ಕುರಿತು ಪಡೆದ ಮಾಹಿತಿಯು ಬೋಧಪ್ರದವಿದೆ. ತಾಪಿ ನದಿಯ ದಂಡೆಯ ಮೇಲಿನ ಪ್ರದೇಶದ ಮೇಲೆ ಹುಲ್ಲು ಬೆಳೆಯುತ್ತದೆ. ಆ ಹುಲ್ಲನ್ನು ದನಗಳು ಈಗ ೬೦ ವರ್ಷಗಳಿಂದ ಮೇಯುತ್ತಿದ್ದವು; ಅದಕ್ಕೆ ಗೋಚರಾವು ಇದ್ದಿಲ್ಲ. ಸದ್ಯಕ್ಕೆ ಅಲ್ಲಿಯ ಕಲೆಕ್ಟರರು ಬಾಲಕ್ಕೆ ರಥಾನೆಯಂತೆ ಗೋಚರಾವು ಫೀ ಆಕರಿಸಿ, ೭ ಸಾವಿರ ೧೫೦ ರೂಪಾಯಿಗಳನ್ನು ಹುಟ್ಟುಮಾಡಿದೆ. ಬೇಸಾಯಗಾರರ ಹಿತಚಿಂತಕರಾದ ಆಳರಸರಿಗೆ ಈ ಕುರಿತು ದೂರುಕೊಂಡರೆ, ಕಲೆಕ್ಟರರಿಗೆ ಹಾಗೆ ಕರ ಎತ್ತುವಳಿ ಮಾಡುವ ಅಧಿಕಾರವಿರುವದಾಗಿ ಹೇಳಿ ಸರಕಾರವು ಪಾರಾಯಿತು! ಕರವನ್ನು ಎತ್ತುವಳಿ ಮಾಡಲು ಸರಕಾರಕ್ಕೆ ಖರ್ಚಿಲ್ಲ. ಗ್ರಾಮದ ಪಟೇಲ-ಶಾನಭೋಗರು ಈ ಕೆಲಸವನ್ನು ಮಾಡಿದರಾಗಿಯೂ ಸರಕಾರವು ಹೇಳಿತು. ಪಟೇಲ-ಶಾನಭೋಗರ ಮೇಲೆ ಬೇಕಾದಷ್ಟು ಕೆಲಸವನ್ನು ಹೇರುವದು; ಕೆಲಸ ಹೆಚ್ಚಾದಂತೆ ಪ್ರತಿಫಲ ಬೇಡಿದರೆ ಅದ ಮಾತ್ರ ಶಾನಭೋಗರಿಗೆ ಕೇಳುವವರಿಲ್ಲ. ಅಕ್ಕಿ ಸರಿಯಾಗದಂತೆ ಕರದ ಎತ್ತುವಳಿಯಾಗುತ್ತಿದ್ದರೆ ಕಲೆಕ್ಟರರೂ ಕರ ಹೇರುತ್ತಾರೆ; ಸರಕಾರವೂ ಕರ ಹೇರುತ್ತದೆ; ನಮ್ಮ ಧರೀಣರೂ "ಸುಲಭವಾದ ದ್ಯುತಿ" ಯೆಂದು ಹೇಳಿ ಕರ ಹೇರಲು ಕಲಿಸಿಕೊಡುತ್ತಾರೆ. ಲೋಕಲ್ ಫಂಡು ಏರಿಸುವದರಿಂದ ಅದಕ್ಕೇನು ಖರ್ಚಿಲ್ಲ. ರೂಪಾಯಿಗೆ ೧೭ ಆಣೆ ವಸೂಲ ಮಾಡುವವರು ಅದೇ ಸಮಯ ೧೭|| ಆಣೆ ವಸೂಲ ಮಾಡಿದರಾಯಿತು. ಕೊಡುವವರು ಕೊಟ್ಟೇ ಕೊಡುತ್ತಾರೆ. ಕೊಡದಿದ್ದರೆ ೧೭ ಆಣೆ ವಸೂಲು ಮಾಡುವ ಕ್ರಮವನ್ನೇ ೧೭|| ಆಣೆಗಾಗಿ ಅನುಸರಿಸಿದರಾಯಿತು. ಇದಕ್ಕೂ ಸುಲಭವ್ಯಾವದಿದೆ?

---

೫. ನಮ್ಮ ಜಿಲ್ಹೆಯೊಳಗಿನ ಕಾಡಾನೆಗಳ ಹಾವಳಿಯ ಕುರಿತು ಶ್ರೀ| ಶೆಟೆಯವರು ಮಾಡಿದ ಚಿಕಿತ್ಸೆಯು ಮನನೀಯವಿದೆ. ಸರಕಾರವು ಹೊನ್ನಾವರ ತಾಲೂಕಿನಲ್ಲಿ ಹಿಟ್ಟ ಬೇಟೆಗಾರನಿಗೆ ಮುಬಾಕೆಯ ಲಾಯಸನ್ನು ಕೊಟ್ಟು ಕಾಡಾನೆಗಳನ್ನು ಕೊಲ್ಲಲುನೇಮಿಸಿದೆ. ಆ ಬೇಟೆಗಾರನಿಗೆ ಯಾವದೇ ಜವಾಬದಾರಿ ಇರುವದಿಲ್ಲ. ಕಾಡಾನೆಗಳನ್ನು ಕೊಲ್ಲಲು ಅತನು ಕರ್ತವ್ಯಬದ್ಧನಲ್ಲ. ಹ್ಯಾಗೆ ಹೇಳುತ್ತೇವೆ, ಕೇಳಿರಿ. ಕಾಡಾನೆಗಳ ಹಾವಳಿಯಾದ್ದಲ್ಲಿ ಆ ಗ್ರಾಮದವರು ಮೊಟ್ಟಮೊದಲು ಬೇಟೆಗಾರನ ಖರ್ಚಿನ ಪಟ್ಟಿಯನ್ನು ತಯಾರಿಸಬೇಕು. ಅವರಿಂತ ಹಣವನ್ನು ಒಟ್ಟುಮಾಡ

ಬೇಕು. ಆ ಮೇಲೆ ಆತನಿಗೆ ಹುದುಕಿ ಆತನ ಸಮುಯ ಸಂಪಾದಿಸಿಕೊಂಡು ಮುಮುಷ್ಯಗನಂತೆ ಕರಕೊಂಡು ಹೋಗಬೇಕು. ಅನಕರಿಗೆ ಸಂಪೂರ್ಣವಾಗಿ ಬೆಳೆ ನಾಶವಾಗದಿದ್ದರೆ, ಕಾಡಾನೆಗಳು ನ ಒಲಿಕ್ಕೆ ಆ ಯಾರಾಗಿ ನಿಂತುಕೊಂಡರೆ, ಬೇಟೆಗಾರನು ಬೇಟೆ ಮಾಡುತ್ತಾನೆ. ಉಳಿದ ಬೆಳೆಗಾಗಿ ಬೇಸಾಯಗಾರರು ಘಟ್ಟೋತ್ತಮರಾಗುತ್ತದೆ ಬೇಟೆಗಾರರನ್ನು ನೇಮಿಸಿ ಬೇಸಾಯಗಾರರಿಗೆ ಹಿತಮಾಡಿದ ದೊಡ್ಡ 'ಶ್ರೇಯಸ್ಸು ಪರಸ್ಪರ ಬೇಸಾಯಗಾರರ ಖರ್ಚಿನಿಂದ ಸಿಗುತ್ತದೆ. ಇದಕ್ಕಿಂತ ಬಿಗ್ಗವಾಗಿ ಪ್ರಜಾಕಲ್ಯಾಣದ ಪುಣ್ಯ ಸಿಗುವ ಬಗೆ ಇರುವದೇನು ?

---

೬. ಈ ವಿಷಯವನ್ನು ಕಾಯಿದೆಯ ದೃಷ್ಟಿಯಿಂದ ವಿಚಾರಿಸುವ ಹಾಗಿದೆ. ಯಾರಾದರೊಬ್ಬನು ಹಿಂಸ್ರ ಪಶುಗಳನ್ನು ಸಾಕಿದರೆ, ಅವುಗಳಿಂದ ನೆರೆಹೊರೆಯವರಿಗೆ ಒದಗುವ ನಷ್ಟವನ್ನು ತುಂಬಿಕೊಡಬೇಕಾದವನು ಆ ಸಿದ್ಧಾಂತ. ಅವಶ್ಯ ಪ್ರಸಂಗಗಳಲ್ಲಿ [illegible] ಉಪಾಯಯೋಜನೆಮಾಡಿ ಸಾರ್ವಜನಿಕ ಸುರಕ್ಷಿತತೆಯನ್ನು ಪಾಲಿಸಲು ಜಿಲ್ಲೆಯೊಳಗಿನ ಮೆಜಿಸ್ಟ್ರೇಟರಿಗೆ ಕ್ರಿ. ಪ್ರೊ. ಕೋಡ ಕಲಂ ೧೩೩ರ ದಸ್ತುರ [illegible] ಅಧಿಕಾರವು ಕೊಡಲ್ಪಟ್ಟಿದೆ. ಕಾಡಾನೆಗಳ [illegible] ಯಿಂದ ಪ್ರಜೆಗಳನ್ನೂ, ಪ್ರಜೆಗಳ ಸೊತ್ತನ್ನೂ ರಕ್ಷಿಸಲು ಸರಕಾರವು ಕರ್ತವ್ಯಬದ್ಧವಿದೆ. [illegible] ವ್ಯವು ಬೆಳೆದಿದೆ. ಅವುಗಳ ಮೇರೆಯ [illegible] ಬರಿಸಿಗೆ ಹೊರೆಕೆಯಾಗಿ ಬಂದಿದೆ. [illegible] ಹೇಳಿದರೂ ಕಾಡಾನೆ ಕಡಿಮೆಯಾಗುವದಿಲ್ಲ. ಅವುಗಳಲ್ಲಿ ಹುಟ್ಟಿ ಬೆಳೆದ ಕಾಡಾನೆಗಳಿಂದ ನಷ್ಟವಾದರೆ ಗ್ರಾಮದವರು [illegible] ಬೇಟೆಗಾರರ ಖರ್ಚು ಕಾಯ್ದು ಬೆನಿಪಾನ ಮಾಡಿಕೊಳ್ಳಬೇಕು. ಕಾಡಾನೆಗಳ ಹಾಯ ನಷ್ಟಗಳನ್ನು ಪ್ರಜೆಗಳಿಗೆ ಕೊಡಲಿಕ್ಕೆ ಸರಕಾರಕ್ಕೆ [illegible] ಬೇಟೆಗಾರನಿಗೆ [illegible] ನವರ [illegible] ಹೊಸಸ್ಥಾನದ [illegible] ಕುಟಾಕಿಕೊಳ್ಳ [illegible] ಪ್ರಕಟಿಸಿ ಹಿಡಿಸಕೊಳ್ಳಬೇಕು. ಇಂಥ ಪ್ರಕಾರಗಳಿಂದ ಪ್ರಜಾಕಲ್ಯಾಣವು [illegible] ದಾನ ?

ಸ್ಥಾನಿಕ ವೃತ್ತಾಂತ

ಕುಮಟಾ— ೬ಹಳ ಮಳೆ, ವಿಲಕ್ಷಣವಾದ ಹಂಪ್ರ ಹುಟ್ಟಿದೆ. ಊರಲ್ಲಿ ಜ್ವರ, ಕೆಮ್ಮು, ನೆಗಡಿ, ಮುಂತಾದ ಸಾಂಸರ್ಗಿಕ ರೋಗಗಳು ಪ್ರಾದುರ್ಭವಿಸಿವೆ. ಹೊರಕರು ಉಪಚರಿಸು [illegible] ಷ. ಊರವರು ಗ್ರಾಮ [illegible] ಉಪಾಯ ಯೋಜನೆ ಮಾಡಬೇಕು. ಈ ವಾರದಲ್ಲಿ ೧೧ ೧೧- ಇಂಚು ಮಳೆಬಿತ್ತು. ಈವರೆಗೆ ಅಂತ, ೮೭-೩೯ ಇಂಚು ಮಳೆಯಾಯಿತು.

ಮೊನ್ನೆ ಶನಿವಾರಕ್ಕೆ ಜಿಲ್ಲಾ ಲೋಕಲ್ ಬೋರ್ಡಿನ ಇಲೆಕ್ಷನ ಗಡಬಡಿಯು ನಡೆಯಿತು. ಉಮೇದ್ವಾರರಲ್ಲಿ ರಾ| ಗಂಗಾಧರ ಗಣಪನಯ್ಯ ಶ್ಯಾನಭಾಗ ಹಾಗು ರಾ| ಗೋಪಾಲಕೃಷ್ಣ [illegible] ಹೆಗಡೆಯವರು ತಮ್ಮ ಉಮೇದ್ವಾರಿ ಅರ್ಜಗಳನ್ನು ಹಿಂತೆಗೆದುಕೊಂಡರು. ಮೇಲಾಗಿನವು ರಾ| ಸೀತಾರಾಮ ಗಣಪತ ಭಾಗವತ, ರಾ| ಪುಂಡಲೀಕ ಶೇಷಗಿರಿ ಶ್ಯಾನಭಾಗ ರಾ| ನರಸಿಂಹ ಗೋವಿಂದ ಶ್ಯಾನಭಾಗ ಇವರೊಳಗೆ ನಡೆಯಿತು. ಈ ಹೆಚ್ಚ ಮತಗಳ ಎಣಿಕೆಯಾಯಿತು. ರಾ| ಭಾಗವತರಿಗೆ ೨೦೪, ರಾ| ಪುಂಡಲೀಕ ಶ್ಯಾನಭಾಗರಿಗೆ ೪, ರಾ| ನರಸಿಂಹ ಶ್ಯಾನಭಾಗರಿಗೆ ೧೯೫ ಹೀಗೆ ಮತಗಳು ದೊರಕಿದವು. [illegible] ದಾರರು [illegible] ಮತಗಳು ಕೆಟ್ಟು ಹೋದವು.

ಗೋಕರ್ಣದ ಖೂನಿ ಪ್ರಕರಣದಲ್ಲಿ ಇಬ್ಬರು ಸೆರೆಯವರಾಗಿರುವರು. ಸಬ್‌ಡಿವಿಜನಲ್ ಮೆಜಿಸ್ಟ್ರೇಟರಾದ ವಿ| ವಿವೇಕರರವರಲ್ಲಿ ಇವರ ವಿಚಾರ ನಡೆಯುವದಿದೆ.

ಧಾರವಾಡ— ಕಳೆದ ತಾ. ೨೬-೭-೧೯೩೬ನೇ ರಂಜಿಕೆಯೊಳಗಿನ ಜೊನ್ನವರ [illegible] ಪ್ರಕಟಿಸಿದ '[illegible] ಶಂಕರರಾವ ನಾಗರಕಟ್ಟಿ' ಎಂಬ [illegible] ರಾ| ಶಂಕರರಾವ ಹಟ್ಟಿಗಡಿ' ಎಂತು ಓದಬೇಕು. ತಪ್ಪು ಗ್ರಹಿಕೆಯಿಂದ ರಾ| ಶಂಕರರಾವ ನಾಗರಕಟ್ಟಿಯವರ ಹೆಸರು ಪ್ರಕಟವಾದ ಬಗ್ಗೆ [illegible] ದಾಗ [illegible]

ಸೊರಬ— [illegible] ಟೌನ್‌ಹಾಲಿನ [illegible] ಕಳೆದ ಗುರುವಾರದಂದು ರಾ| ಡಿ. ಜಿ. ಹೆಗಡೆಯವರ ಅಧ್ಯಕ್ಷತೆಯಲ್ಲಿ [illegible] ಲಕರಿ [illegible] ತರವರ [illegible] ಇಂಥ [illegible] ಜಗದೇಯ [illegible] ವಿನಾಯಕ [illegible] ಜೊತೆ [illegible] ಗಳ [illegible] ಕಾರಣಗಳನ್ನು ರಾ| [illegible] ಉಪಾಧ್ಯಕ್ಷ [illegible] ರಾ| [illegible] ಸೂಚಿಸಿದರು. ಅದಕ್ಕೆ ರಾ| ಸುಂಕ್ಷ [illegible] ಅನುಮೋದಿಸಿದರು [illegible] ಪ್ರಕಟಿಸಿ [illegible] ಧ್ಯಕ್ಷರಾದ ರಾ| [illegible] ನ ಮಂಡಿಸಿದ್ದಲ್ಲದೆ ಅಧ್ಯಕ್ಷ ಭಕ್ತಿ [illegible] ಬಹು [illegible] ಧನ್ಯವಾದ ಕಲಿಯ ಬೇಕು ?

ಶಿರಸಿ— ಕೆಲವು ದಿವಸಗಳ ಹಿಂದೆ ಒಬ್ಬನು ಬಾವಿಯೊಳಗೆ ಬಿದ್ದ ಹಟಿಸಿನ ಹಣ್ಣನ್ನು ತೆಗೆಯುವದಕ್ಕಾಗಿ ಕೆಳಗೆ ಇಳಿದನು. ಆದರೆ ಹಗ್ಗಕ್ಕೆ ಹಣ್ಣನ್ನು ಕಟ್ಟುವ ಸ್ಥಳದಲ್ಲಿ ಧಮ್ಮು ಕಟ್ಟಿ ಅಲ್ಲೇ ಮೂರ್ಛಿತನಾಗಿ ಬಿದ್ದನು. ಎಷ್ಟು ಹೊತ್ತಾದರೂ ಮೇಲೆ ಬಾರದ್ದನ್ನು ಕಂಡು ಗಾಬರಿಯಾಗಿ ಅವನ ಅಣ್ಣನು ಕೆಳಗೆ ಇಳಿದನು. ಆದರೆ, ಅಲ್ಲಿ ತನ್ನ ತಮ್ಮನ ಸ್ಥಿತಿಯನ್ನು ಕಂಡು ಮುಂದೇನು ಮಾಡಬೇಕೆಂದು ಆಲೋಚಿಸುತ್ತಿರುವಲ್ಲಿ ಅಣ್ಣನೂ ಎಚ್ಚರತಪ್ಪಿ ಬಿದ್ದನು. ಈ ಈ ಅನ್ನುವಷ್ಟರಲ್ಲಿ ಈ ಶೋಚನೀಯ ಸಂಗತಿಯನ್ನು ಕೇಳಿ, ನೂರಾರು ಜನರು ನೆರೆದರು. ಆದರೆ, ಕೆಳಗೆ ಇಳಿಯಲು ಒಬ್ಬರಿಗೂ ಧೈರ್ಯವಾಗಲಿಲ್ಲ. ಆ ವೇಳೆ ಕೃತ್ರಿಮ ರೀತಿಯಿಂದ ಒಳಗೆ ಹವೆಯನ್ನು ಬಿಡಲು, ಕೆಳಗಿದ್ದ ಅಣ್ಣನು ಸ್ವಲ್ಪ ಮಾತಾಡಹತ್ತಿದನು. ಮುಂದ ಹಗ್ಗವನ್ನು ಬಿಟ್ಟು ಒಬ್ಬೊಬ್ಬರನ್ನಾಗಿ ಮೇಲೆ ಎಳೆದು ತೆಗೆದರೂ, ಕೆಲ ಹೊತ್ತಿನ ವರೆಗೆ ಅವರಿಗೆ ಎಚ್ಚರವಿದ್ದಿಲ್ಲ. ಈಗ ಅವರು ಕ್ಷೇಮದಿಂದಿರುವರು. ಹಲಸಿನ ಹಣ್ಣಿನ ಪ್ರಭಾವ ನೋಡಿರಿ!

ಇಲ್ಲಿಯ ಮ್ಯುನಸಿಪಲ್ಲಿಟಿಯ ಹೊಸ ಹೆಡ್‌ಮಾಸ್ತರರ ಕಳೆದ ೧ ವರ್ಷದ ಆಳಿಕೆಯಲ್ಲಿ ಅವರ ಕೈಕೆಳಗೆ ಕೆಲಸ ಮಾಡಿ ಹೋದವರೆಂದರೆ:— ೩ ಪಟ್ಟೇವಾಲರು, ೩ ತಾಲೀಮು ಮಾಸ್ತರರು, ೨ ಡ್ರಾಯಿಂಗ ಮಾಸ್ತರರು, ೨ ಗ್ರ್ಯಾಜ್ಯುಯೇಟರು ಮತ್ತು ಒಬ್ಬ ಕಾರಕೂನರು. ಹೊಸದಾಗಿ ಬಂದವರೆಂದರೆ - ೨ ಗ್ರ್ಯಾಜ್ಯುಯೇಟರು, ಒಬ್ಬ ಕನ್ನಡ ಟ್ರೇಂಡ್ ಶಿಕ್ಷಕರು, ಮತ್ತೊಬ್ಬರು ಕಾರಕೂನರು. ಇನ್ನೊಬ್ಬನು ಪಟ್ಟೇವಾಲನು, ಹೀಗೆ ಶಾಲೆಗೆ 'ಧರ್ಮಶಾಲೆ'ಯ ರೂಪ ಬಂದಿದೆ. ಯಾಕಂದರೆ- ನಡುವಡುವೆ ನಳಸಿರು ಹೋಗುವದೂ, ಹೊಸಬರು ಬರುವದೂ ನಡೆದೇ ಅದೆ. ಈ ರೀತಿಯಲ್ಲಿ ಇಂದು ಕಲಿಸಿದ ಶಿಕ್ಷಕನು ನಾಳೆ ಇಲ್ಲ, ನಾಳೆ ನೋಡಿದವನು ನಾಡದು ಇಲ್ಲವಾದರೆ ಹುಡುಗರ ಅಭ್ಯಾಸವಾಗುವದೆಂತು ? ಶಾಲೆಯ ಸ್ಥಿತಿಯು ಸುಧಾರಿಸುವದೆಂತು ? ಬೊದಲಿದ್ದ ಅನುಭವಿಕರೂ, ಉತ್ಸಾಹಿಗಳೂ ಆದ ಸ್ವಸ್ಥಶಿಕ್ಷಕರು ತಮಗೆ [illegible] ಸಿದ ಅನ್ಯಾಯದ ಮೂಲಕ ರಾಜಿನಾಮೆಯನ್ನಿತ್ತು ಹೊರಟುಹೋಗಿ ೩ ತಿಂಗಳಾದರೂ, ಹೊಸ ಶಿಕ್ಷಕರ ಪತ್ತೆಯೇ ಇಲ್ಲ. ಹೀಗಾಗಿ ೩ನೇ ಇಯತ್ತೆಯಿಂದ ೩ನೇ ಇಯತ್ತೆಯವರೆಗೆ ಭೂಗೋಲ-ಸ್ಕೆಚ್ ಕಲಿಸುವ ವ್ಯವಸ್ಥೆಯೇ ಇಲ್ಲವಂತೆ. ಈ ರೀತಿಯಲ್ಲಿ ಮೇಲಿನ ಇಯತ್ತೆಗಳ ವಿದ್ಯಾರ್ಥಿಗಳಿಗೆ ದಿನಕ್ಕೆ ಮೂರು ತಾಸಿಗಿಂತ ಹೆಚ್ಚು ಶಿಕ್ಷಣವು ಸಿಗುವದು ಕಾಣುವದಿಲ್ಲ. ಯಾಕಂದರೆ ಉಳಿದ ಹೊತ್ತಿನಲ್ಲಿ ಅವರು ಶಾಲೆಯನ್ನು ಬಿಟ್ಟು ಮನೆಗೆ ಬರುವದು ಕಂಡು ಬರುತ್ತದೆ. ಉಳಿದ ಸುಧಾರಣೆಗಾದರೂ ಕೊಂಡವರಲ್ಲಿ ಫೀ ಕೊಡುತ್ತಿದ್ದರೂ ಕಳೆದ ಬಂದು ವರುಷದಿಂದ ವಿದ್ಯಾರ್ಥಿಗಳಿಗೆ ಲೈಬ್ರರಿ ಪುಸ್ತಕಗಳು ಸಿಗುವದಿಲ್ಲವಂತೆ! ಶಾಲೆಯು ಪ್ರಾರಂಭವು ಬೆಳಿಗ್ಗೆ ೧೧|| ಘಂಟೆಗೆ ಇದ್ದದ್ದನ್ನು ಈಗ ೧೦|| ಗೆ ಮಾಡಿದ್ದರಿಂದಂತೂ, ಹುಡುಗರ ಫಜೀತಿಯಾಗುತ್ತಿರಬಹುದು. ಆದರಲ್ಲೂ ಬೆಳಿಗ್ಗೆ ಊಟ ಮಾಡಿ ಹೋದ ಕೂಡಲೆ ಕೆಲವರಿಗೆ ತಾಲೀಮು! ಮಧ್ಯಾನ್ಹಕ್ಕೆ ಊಟಕ್ಕೆ ಬರುವಾಗ ಕೆಲವರಿಗೆ ತಾಲೀಮು! ಹೀಗೆ ಮಾಡುವದರಿಂದ ಬಾಲಕರ ಪ್ರಕೃತಿಯು ಕೆಡುವದೆಂಬುದು ಪದವೀಧರರಾದ ಹೆಡ್ ಮಾಸ್ತರರ ಲಕ್ಷ್ಯಕ್ಕೆ ಬಂದಿರಲಿಕ್ಕಿಲ್ಲವೇ ? ಶಾಬಾಸ! ಆರೋಗ್ಯ ಶಾಸ್ತ್ರದ ಅಗಾಧವಾದ ಇವರ ಈ ಜ್ಞಾನವನ್ನು ಕಂಡು ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ? ಇದು ಇತರ ಪಾಲಕರ ಮ್ಯುನಿಸಿಪಾಲಿಟಿಯವರ ಲಕ್ಷ್ಯಕ್ಕೆ ಬಂದಿರುವದಿಲ್ಲವೇ ?

ಕಳೆದ ೨೫ ನೇ ತಾರೀಕಿನ ದಿವಸ ಮಧ್ಯಾನ್ಹ ವ್ಯಭಿಚಾರ, ಗಾಂಜಾ ಮ ಅಫೀಮುಗಳ ಬಲೆಯಲ್ಲಿ ಸಿಕ್ಕು ಬಿದ್ದಕ್ಕೆ ಬೇಸತ್ತ ಯುವಕನೊಬ್ಬನು ಮೇವರ ಬಂದೂಕನ್ನು ಕಳ್ಳತನದಿಂದ ಸಂಪಾದಿಸಿ ಅದರಿಂದ ಆತ್ಮಹತ್ಯ ಮಾಡಿಕೊಂಡನು. ದುವ್ಯಸನಗಳ ಪ್ರಭಾವ ನೋಡಿರಿ!

೨೮ನೇ ತಾರೀಕಿನ ರಾತ್ರಿ ಕನ್ನಡ ಶಾಲೆಯ ಬೀಗಗಳನ್ನು [illegible] ಯಾರೋ ಅಪರಿಚಿತರು ಒಳಗಿದ್ದ ಸ್ಕೂಲಿನ ಬಾಬ್ತು ಕೆಲವು ರಕಮನ್ನು ಒಯ್ದಿರುವರಂತೆ. ಪೋಲೀಸರ ತನಿಕೆ ನಡೆದಿದೆ.

ಮಳೆ ಸಹಿತ ದಿನ ನೆಟ್ಟಿಗಯ ಕೆಲಸ ಪ್ರಾರಂಭವಾಗಿದೆ

— ಹಾಲಂಡ ದೇಶದಲ್ಲಿ ರೋಜನ್ ಡಾಲ ಎಂಬ ಗ್ರಾಮದಲ್ಲಿ ಉತ್ಪತ್ತಳಾದ ಒಬ್ಬ ಕನ್ಯೆ ಇರುವಳು. ಇವಳ ಪ್ರಾಯ ೩೦ ವರುಷ ೭ ಅಡಿ ೧೧ ಅಂಗುಲ ಎತ್ತರವಿದ್ದಾಳೆ. ಇವಳಿಗೆ ಸಿಕ್ಕಿದ ಗಂಡನು ಇವಳಿಗಿಂತ ಎತ್ತರ! ಆತನು ಬೀದಿಯೊಳಗಿನ ದೀಪಸ್ತಂಭಗಳ ದೀಪಗಳಿಗೆ ಸಿಗರೇಟುಗಳನ್ನು ಹಚ್ಚಿಕೊಳ್ಳುತ್ತಾನೆ! ಇವಳಿಗೆ ತಕ್ಕ ಪತಿ !!

ವೃತ್ತಸಾರ.

— ವೆಲ್ಲೋರದಲ್ಲಿ ಅಂಗಡಿಗಳಿಗೆ ಬೆಂಕಿ ತಗಲಿ ಸುಮಾರು ೩೦ ಸಾವಿರಕ್ಕೆ ಮಿಕ್ಕಿ ನಷ್ಟ!

— ಮೊಹರಮ ಹಬ್ಬದಲ್ಲಿ ಹುಲಿಯ ವೇಷಹಾಕಿ ಕುಣಿಯುವದು ಇಸ್ಲಾಮು ಧರ್ಮಕ್ಕೆ ವಿರೋಧಕವೆಂದು ಮದ್ರಾಸ ಇಲಾಖೆಯ ನಾಗಪಟ್ಟಣ ಮುಸಲ್ಮಾನರ ದೂರು! ಹೀಗೆ ವೇಷ ಹಾಕಿಕೊಂಡು ಕುಣಿಯುವದನ್ನು ಪ್ರತಿಬಂಧಿಸಿರಿ ಎಂದು ಅಲ್ಲಿಯವರು ಕಲೆಕ್ಟರರಿಗೆ ಬಿನ್ನೈಸಿಕೊಳ್ಳಲು ಕಲೆಕ್ಟರರು ಅದನ್ನು ಪ್ರತಿಬಂಧಿಸಿದರು.

— ಕಳೆದ ತಾ. ೧೮ ನೇ ಹಾಂಗಕಾಂಗ ದ್ವೀಪದಲ್ಲಿ ೨೧ ಇಂಚು ಮಳೆ ಸುರಿಯಿತು! ನಿಕಸವನೆ ಸುರಿಯಿತು! ೩೫ ಲಕ್ಷ ರೂಪಾಯಿಗಳ ನಷ್ಟ!!

— ಕರಾಚಿಯ ಮುನಿಸಿಪಾಲಿಟಿಯವರು ೧೩ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಮಂದಿರವನ್ನು ಕಟ್ಟಲಿಕ್ಕಿರುವರು. ಅದರ ರಚನೆಯ ಕ್ರಮವನ್ನು ತಯಾರಿಸಿದ ಬಗ್ಗೆ ಒಬ್ಬ ಬ್ರಿಟಿಶ ಇಂಜನಿಯರರಿಗೆ ೫೦೦ ಪವನುಗಳು ಕೊಡೋಣಾದವು!

— ಸರದಾರ ಅರ್ಜುನಸಿಂಗ ಎಂಬ ದೇಶಭಕ್ತರು ೨॥ ವರ್ಷ ಕಾರಾಗೃಹವಾಸವನ್ನನುಭವಿಸಿ ಸದ್ಯಕ್ಕೆ ಮರಳಿದರು. ಇವರು ಈ ಮುಂಚೆ ದೇಶಕ್ಕಾಗಿ ಮೂರಾವರ್ತಿ ಕಾರಾಗೃಹವಾಸವನ್ನನುಭವಿಸಿದರು. ದೇಶಸೇವೆಗಾಗಿ ಇವರು ತಮ್ಮ ೪೦ ಸಾವಿರ ರೂಪಾಯಿಗಳ ಆಸ್ತಿಯನ್ನು ಕಳಕೊಂಡರು!

— ಅಲವಾರ ಸಂಸ್ಥಾನದ ಉತ್ಪನ್ನವು ೩,೩೭,೫೦೦ ಪವನಿದೆ. ಮಹಾರಾಜರಿಗೆ ೨,೦೨,೫೦೦ ಪವನು ಖರ್ಚಿಗೆ ಬೇಕು. ಉಳಿದ ರಕಮಿನಿಂದ ರಾಜ್ಯಭಾರ ನಡೆಯಬೇಕು. ಮಹಾರಾಜರಿಗೆ ತಗಲುವ ಖರ್ಚಿನ ದೊಡ್ಡ ರಕಮುಗಳು ಎಂದು, ೩೩,೦೦೦ ಪವನು ಮೋಟಾರ ಗಾಡಿಗಳಿಗೆ, ೧,೧೨,೫೦೦ ಕುಂಡಿ, ಕಿನಖು, ಮೇಜವಾನಿಗಳಿಗೆ !!

— ಬೆಂಗಳೂರಿನ ೧೦೩ ಕಾಮಗಾರರಿಗೂ ೧೦೫ಯ ಸಾವುಕಾರರಿಗೂ ಸಂಬಳದ ಕುರಿತು ನಡೆದ ಪ್ರಕರಣದಲ್ಲಿ ಪೋಲೀಸರು ಬಡೆಯುವ ಬಳಸಂಚಿಗೆ, ಸೇರಿ ಗುಂಡುಹಾಕಿ ನಾಲ್ವರನ್ನು ಕೊಂದರು. ಅನೇಕರಿಗೆ ಘಾಯಗಳಾಗಿವೆ !

— ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿ ದ್ರವ್ಯಶಕ್ತಿಯಿಂದ ಜಲರೋಧ ಮಾಡುವ ಮೋಜರ ಫೋರ್ಗ್ಗನ್‌ರವರಿಗೆ ಇನ್ನು ರೂಪಾಯಿ ೬,೦೦೦೦ ಮಂಜೂರಾದವು.

— ಡುಲಫೋಟನ ವಹರಿ ಚೆಟ್ಟಿಯು ಪಾಗಿಗೆ ಸಾಕ ಸಾಧ್ಯವಿಲ್ಲೆಂದು ಫೋಳ್ಳುಜಿಯ ಪಾಲ ಎಂಬ ಕ್ರೈಸ್ತಪಾದ್ರಿಯ ಕಡವನಿಗೆ ಮಾರಿದನಂತೆ! ಕ್ರಯ ವೇನೆಂದು ತಿಳಿಯಿತೇ? ಬರೇ ೫ ರೂಪಾಯಿ ! ಎಂಥ ಕಾಲವಿದು.

— ಮದ್ರಾಸ ಧರ್ಮದಾಯ ಕಾಯಿದೆಯನ್ನಯ ನಿರ್ಮಿಸಿದ ಬೋರ್ಡಿಗೆ ಕಳೆದ ಮೇ ೧ನೇ ತಾರೀಖಿನ ವರೆಗೆ ೪೦,೮೬೯ ರೂಪಾಯಿಗಳು ದೇವಸ್ಥಾನ, ಮಠ ಮುಂತಾದವುಗಳಿಂದ ವಸೂಲಾಗಿಯವೆ. ಖರ್ಚು ಆದವರೀಗೆ ೧,೬೨,೮೪೮ ರೂಪಾಯಿಗಳಾದವು.

— ಅಮೇರಿಕಾ ಖಂಡದ ಒಹಾಯೊ ಸಂಸ್ಥಾನದಲ್ಲಿ ಬಿರುಗಾಳಿ ಬೀಸಿ ಕಲ್ಪನಾತೀತ ನಷ್ಟ! ೧೫೦ ಮಂದಿ ಮಡಿದರು. ಅನೇಕ ಹಡಗುಗಳು ಜಲಸಮಾಧಿ ಹೊಂದಿದವು

— ಜಪಾನದಲ್ಲಿ ನೆರೆ ಬಂದು ೩೦೦ ಮಂದಿಗಳು ಜಲಸಮಾಧಿಹೊಂದಿದರು! ೩೦,೦೦೦ ಎಕ್ರೆ ಗದ್ದೆ ಭೂಮಿ ಹಾಳು ಬಿತ್ತು!

— ಬಿಹಾರ ಪ್ರಾಂತದ ವಿಕ್ರಮಪುರ ಗ್ರಾಮದವನೊಬ್ಬನು ಪಕ್ಕಟ್ಟಿಂಬು ಪದ್ಮಾನದಿಯನ್ನು ದಾಟುತ್ತಿದ್ದಾಗ ಮುಳುಗಿ ಸತ್ತನು. ೧೭ ಮಂದಿಗಳಿದ್ದರು !

— ವಿಜಾಪುರದ 'ಕರ್ನಾಟಕ ವೈಭವ' ಪತ್ರಿಕೆಯನ್ನು ಶ್ರೀ ಹಣಮಂತರಾವ ಮೋಹರೆಯವರು ಪುನಃ ಪ್ರಕಟಿಸಲಾರಂಭಿಸಿರುವರು. ಆನಂದ ! ಸ್ವಾಗತವಿದೆ.

— ಇರಾಣ ದೇಶದ ಪದಭ್ರಷ್ಟರಾದ ಶಹಾರವರು ಪ್ಯಾರೀಸ ಪಟ್ಟಣದಲ್ಲಿ ವಿಲಾಸಗಳನ್ನು ಅನುಭವಿಸುತ್ತಿರುವರು. ೯೦ ಲಕ್ಷ ರೂಪಾಯಿಗಳನ್ನು ದ್ಯೂತದೇವಿಗೆ ಒಪ್ಪಿಸಿದರು; ೩೦ ಲಕ್ಷ ರೂಪಾಯಿಗಳನ್ನು ವೇಶ್ಯಾಂಗನೆಗರ್ಪಿಸಿದರು!

— ಪುಣೆ ಪಟ್ಟಣದಲ್ಲಿ ಸೇರಲಿಕ್ಕಿದ್ದ ಡೋ. ಡೋ. ಬೇಸನ ಪ್ರದರ್ಶನಕ್ಕೆ ಕೊಲ್ಹಾಪುರದ ಮಹಾರಾಜರವರು ಎರಡು ದೊಡ್ಡ ಆನೆ, ಒಂದು ಆನೆ ಮರಿ, ಗೂಳಿ, ಹೋರಿ ಮೊದಲಾದವುಗಳನ್ನು ಕಳುಹಿಸಲಿರುವರು.

— ಮುಂಬಯಿಯ ಜ್ಞಾನಸಾಗರ ಫೋರ ಪ್ರೆಸ ಹಾಗು ಶ್ರೀ ರಾಮದಾಸ ಪ್ರಿಂಟಿಂಗ ವರ್ಕ್ಸ ಮುದ್ರಣಾಲಯಗಳ ಒಡೆಯರಾದ ಶ್ರೀ ಕೇಶವ ಲಕ್ಷ್ಮಣ ಜೋಶಿಯವರು ಕಳೆದ ೧೨ ವರುಷಗಳಿಂದ ಶ್ರೀ ದಾಸಬೋಧ ಗ್ರಂಥದ ಮಾರಾಟ ಮಾಡುತ್ತಿದ್ದರು. ಕಳೆದ ಆಷಾಢ ಏಕಾದಶಿ ದಿನ ಸಮರ್ಥ ಶ್ರೀ ರಾಮದಾಸ ಸ್ವಾಮಿಗಳ ಚರಣಗಳಿಗಾಗಿ ೧೦೦೦ ದಾಸಬೋಧದ ಪ್ರತಿಗಳನ್ನು ಅರ್ಪಿಸಿ, ತಮ್ಮ ವ್ರತವನ್ನು ಸಾಂಗಪಡಿಸಿದರು.

— ಬಾರ್ಸಿಯಲ್ಲಿ ಆಷಾಢ ಏಕಾದಶಿಯ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು. ಮಹಮ್ಮದೀಯ ಬಾಂಧವರೂ ಈ ಉತ್ಸವದಲ್ಲಿ ಉತ್ಸಾಹದಿಂದ ಸೇರಿದ್ದರಂತೆ!

— ನಿಜಾಮ ರಾಜ್ಯದೊಳಗಣ ವೈಷ್ಣವರು ಸಭೆಸೇರಿ ಇದೇ ತಿಂಗಳಲ್ಲಿ ಅಖಿಲ ಭಾರತೀಯ ವೈಷ್ಣವ ಪರಿಷತ್ತು ಸೇರಿಸುವ ವಿಚಾರ ನಡೆದದೆ. ಸ್ವಾಗತ ಮಂಡಲವು ನೇಮಿಸಲ್ಪಟ್ಟಿದೆ.

— ಸಿಂಧ ಪ್ರಾಂತದ ಪ್ರಸಿದ್ಧ ವರ್ತಕರಾದ ಶೇಟ ಸೀತಲದಾಸರವರು ಶಿಕಾರಪುರದ ಸ್ತ್ರೀಶಿಕ್ಷಣ ಹಾಗು ಆರೋಗ್ಯ ಸಂಸ್ಥೆಗಳಿಗೆ ೧ ಲಕ್ಷ ರೂಪಾಯಿಗಳನ್ನರ್ಪಿಸಿರುವರು !

— ಬಂಗಾಲದ ನವದ್ವೀಪ ಗ್ರಾಮದಲ್ಲಿ ೩೦ ಮಂದಿ ಶಸ್ತ್ರ ದರೋಡೆಗಾರರು ಮೋಟಾರಾರೂಢರಾಗಿ ಒಬ್ಬ ದುಡ್ಡುಳ್ಳವನ ಮನೆಹೊಕ್ಕು ೬೦ ಸಾವಿರ ರೂಪಾಯಿಗಳನ್ನು ಅಪಹರಿಸಿದರು.

— ಅಸಹಕಾರದಲ್ಲಿ ಸೇರಿ ಸರಕಾರಿ ಕೆಲಸದಿಂದ ನಿವೃತ್ತರಾದವರಿಗೆ ಸರಕಾರಿ ಕೆಲಸದ ಅಪೇಕ್ಷೆ ಇದ್ದಲ್ಲಿ ಅದನ್ನು ಪುನಃ ಕೊಡಲು ಸರಕಾರವು ಒಪ್ಪಿಕೊಂಡಿದೆ.

— ಮುಂಬಯಿಯ ಕೋಟ ಉಮರ ಸೋಬಾನಿಯವರ ಹೊಟ್ಟೆಯಲ್ಲಿ ಅಫೀಮು ದೊರಕಿತಂತೆ ' ಅದರಿಂದ ಅವರು ಆತ್ಮಹತ್ಯ ಮಾಡಿಕೊಂಡಿರಬೇಕೆಂದು ಪೋಲೀಸರ ಚೌಕಶಿ ನಡೆದಿದೆ

— ಬೆಳಗಾವಿಯ ಸಬಜಡ್ಜರು ದಾ। ಆಂಗಡಿಯವರಿಗೆ ಕೊಟ್ಟ ಹಂಗಾಮಿ ತಾಕೀದಿನ ಮೇಲೆ ಡಿಸ್ಟ್ರಿಕ್ಟ ಜಡ್ಜರಲ್ಲಿ ಅಪೀಲಾಯಿತು. ಡಿಸ್ಟ್ರಿಕ್ಟ ಜಡ್ಜರು ಹಂಗಾಮಿ ತಾಕೀದಿನ ಹುಕುಮನ್ನು ರದ್ದುಪಡಿಸಿದರು. ದಾವೆಯ ವಿಚಾರವು ಇದೇ ಜುಲೈ ತಾ ೧೨ನೇಗೆ ಸಬಜಡ್ಜರ ಕೋರ್ಟಿನಲ್ಲಿ ನಡೆಯುವದಿದೆ.

BATLIBOI'S
Accountancy Training Institute
Recognised by
The G. D. A. Board

Offers best training in Accounting, Banking, Company Management and Secretarial Work and Theory and Practice of Commerce.

Best staff, Individual attention—fee moderate, and payable by instalments.

Send for Prospectus at Yusuf Buildings, Churchgate street Fort, Bombay.

You are invited to make thorough enquiry before joining.

TUITION BY POST
IS OUR SPECIALITY.

ಷೆವರಲೆಟ್
ಮೋಟಾರಕಾರ್ ಏಜನ್ಸಿ, ಕೆನರಾ.



ನಾವು ಹೊಸ ಷೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ:—**ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ, ಶಿರ್ಸಿ**

ಕುಮಠಾ ಏಜಂಟ:- **ಜಿ. ಡಿ. ಮಳಗಿಕರ ಎಂಡ್ ಕೊ.**

ಬಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲಪ್ ಹಾಗು ಮಿಚಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮುಗ್ರಿಗಳು ಯೋಗ್ಯ ದರದಿಂದ ಪೂರೈಸುತ್ತೇವೆ.

G. D. Malgikar & Co,
KUMTA.

ಅತ್ಯದ್ಭುತ ! ಅತ್ಯದ್ಭುತ !!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲಿಕ್ಸಿರ್ ಆಫ್ ಲೈಫ್

ಅಂದರೆ, ಸರ್ವ ರೋಗ ನಾಶಕ, ಸಮ್ಮಾರೋಗ್ಯದಾಯಕ. ಅಜೀರ್ಣ ತಲೆನೋವು, ವಾಂತಿ, ಅತಿಸಾರ, ಜ್ವರ, ಕಾಲರಾ, ಜ್ವರ, ಕಿವಿನೋವು, ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಕೂಡಲೆ ಚಲ್ಲಾಟ ಒಂದೇ ರಾಮಬಾಣವಿದು ! ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ !! ಒಂದು ಸೀಸೆಯಿದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ !!!

ಒಂದು ಸೀಸೆಗೆ ರೂ. ೧-೦-೦ ಸಣ್ಣ ಸೀಸೆಗೆ ರೂ. ೦-೮-೦. ಟಪಾಲ ಖರ್ಚ ಬೇರೆ.

ಜೀವನಾಧಾರ ಡಿಪೋ, ಮೈಸೂರು,

ಬ್ರಾಂಚ:- **ಜೀವನಾಧಾರ ಡಿಪೋ, ಹುಬ್ಬಳ್ಳಿ.**

ಮಹಾತ್ಮರ ಆತ್ಮಚರಿತ್ರೆ.

(೧೦) ಪ್ರಿಟೋರಿಯಾದೊಳಗಿನ ಪ್ರಥಮ ದಿನ.

ದಾದಾ ಅಬ್ದುಲ್ಲಾರವರ ವಕೀಲರ ಕಡೆಯಿಂದ ಪ್ರಿಟೋರಿಯಾ ಸ್ಟೇಶನಿನಮೇಲೆ ನನಗೆ ಕಾಣಲು ಯಾರಾದರೊಬ್ಬರು ಬರುವರೆಂದು ನನ್ನ ಅಪೇಕ್ಷೆಯಿತ್ತು. ಮತ್ತ್ಯಾರಾದರೂ ಭಾರತೀಯರು ನನ್ನನ್ನೊಯ್ಯಲು ಸ್ಟೇಶನಿಗೆ ಬರಲಿಕ್ಕಿಲ್ಲೆಂದು ನನಗೆ ಗೊತ್ತಿತ್ತು. ಯಾಕೆಂದರೆ, ಭಾರತೀಯರ ಮನೆಯಲ್ಲಿ ನಾನು ಉಳಕೊಳ್ಳಲಿಕ್ಕಿಲ್ಲವೆಂದು ಮೊದಲೇ ನಿರ್ಧರಿಸಿದ್ದೆ. ವಕೀಲರು ಯಾರಿಗೂ ಕಳಿಸಲಿಲ್ಲ. ರವಿವಾರಕ್ಕೆ ನಾನು ಹೋಗಿ ಮುಟ್ಟಿದ್ದರಿಂದ ಸ್ಟೇಶನ್ನಿಗೆ ಯಾರಿಗೂ ಕಳಿಸಲು ಅನುಕೂಲವಾಗಲಿಲ್ಲವೆಂದು, ಬಳಿಕ ನನಗೆ ತಿಳಿಯಿತು. ನಾನು ಇಳಿದುಬಿದ್ದೆ. ಎಲ್ಲಿ ಹೋಗಬೇಕೆಂಬುದು ನನಗೆ ತಿಳಿಯಲಿಲ್ಲ. ಹೋಟೇಲಿನಲ್ಲಿ ನನಗೆ ಪ್ರವೇಶ ಸಿಗಲಿಕ್ಕಿಲ್ಲೆಂದು ನನ್ನ ಗ್ರಹಿಕೆ ಇತ್ತು.

೧೮೯೩ ನೇ ಇಸ್ವಿಯಲ್ಲಿ ಪ್ರಿಟೋರಿಯಾ ಸ್ಟೇಶನ್ನಿನ ಸ್ಥಿತಿಯು ಬೇರೆ, ೧೯೧೪ ನೇ ಇಸ್ವಿಯ ಸ್ಥಿತಿಯು ಬೇರೆ. ೧೮೯೩ ನೇ ಇಸ್ವಿಯಲ್ಲಿ ಬರಹೋಗುವ ಪ್ರಯಾಣಿಕರ ಸಂಖ್ಯೆಯು ಬಹಳ ಕಡಿಮೆ. ಪ್ರಯಾಣಿಕರೆಲ್ಲಾ ಹೊರಬೀಳುವರು. ಟಿಕೀಟು ಕಲೆಕ್ಟರನಿಗೆ ಸ್ವಲ್ಪ ಬಿಡುವು ಸಿಕ್ಕಿದ ಬಳಿಕ, ಅವರ ಬಳಿಗೆ ನನ್ನ ಟಿಕೀಟನ್ನು ಕೊಟ್ಟು, ಸಣ್ಣ ಹೋಟೇಲನ್ನಾಗಲಿ, ನಾನು ಹೋಗತಕ್ಕ ಬೇರೆ ಸ್ಥಳವನ್ನಾಗಲಿ ತೋರಿಸಿಕೊಡಲು ಕೇಳಬೇಕೆಂದು ನನ್ನ ವಿಚಾರವಿತ್ತು. ನನಗೆ ಅಪಮಾನವಾಗಬಹುದೆಂಬ ಭಯದಿಂದ ಇದನ್ನು ನಾನು ಕೇಳಲೊಪ್ಪಲಿಲ್ಲ.

ಸ್ಟೇಶನ್ನಿನೊಳಗಿಂದ ಪ್ರಯಾಣಿಕರೆಲ್ಲರೂ ಹೊರಹೋದರು. ಟಿಕೀಟು ಕಲೆಕ್ಟರರಿಗೆ ನನ್ನ ಟಿಕೀಟನ್ನು ಕೊಟ್ಟು ನಾನು ಪ್ರಶ್ನೆ ಮಾಡಲಾರಂಭಿಸಿದೆನು. ಟಿಕೀಟು ಕಲೆಕ್ಟರರ ಸಭ್ಯತೆಯಿಂದ ಮಾತಾಡಿದರು. ಆದರೆ ಅವರಿಂದೇನೂ ಸಹಾಯ ದೊರಕಲಿಕ್ಕಿಲ್ಲೆಂದು ನನಗೆ ತಿಳಿಯಿತು. ಹತ್ತಿರದಲ್ಲಿಯೇ ಅಮೇರಿಕೆಯ ನಿಗ್ರೋ ಜಾತಿಯವನೊಬ್ಬನು ನಿಂತಿದ್ದನು. ಅವನು ನನ್ನೊಡನೆ ಸಂಭಾಷಣೆ ಮಾಡಿದ್ದೇನೆಂದರೆ —

“ನೀವು ಪರಸ್ಥರೆಂದು ತೋರುತ್ತದೆ. ನಿಮಗೆ ಇಲ್ಲಿ ಯಾರೂ ಪರಿಚಯದವರಿಲ್ಲ.” ನನ್ನ ಜತೆಗೆ ಬಂದರೆ ನಿಮಗೊಂದು ಸಣ್ಣ ಹೋಟೇಲಿಗೆ ನಾನು ಒಯ್ಯುವೆನು. ಹೋಟೇಲು ಅಮೇರಿಕೆಯವರದು. ನನಗೆ ಅವರ ಚಿರಪರಿಚಯವಿದೆ. ವಿಶ್ವಾಸವಿದೆ. ಅವರು ಇರಗೊಡಿಸಿಕೊಳ್ಳುವರೆಂದು ನನ್ನ ನಂಬಿಗೆಯಿದೆ.

ಈ ಕುರಿತು ನನಗೆ ಬಹಳ ಸಂಶಯವಿತ್ತು. ಆದರೆ ನಾನು ಅವರ ಉಪಕಾರ ಮನ್ನಿಸಿ ಸೂಚನೆಯನ್ನು ಅಂಗೀಕರಿಸಿದೆನು. ಅವರು ನನಗೆ ಜೊಸ್ಟನ್‌ರವರ ಫ್ಯಾಮಿಲಿ ಹೋಟೇಲಿಗೆ ಒಯ್ದರು. ಅವರು ಜೊಸ್ಟನ್‌ರವರಿಗೆ ಒಂದೆಡೆ ಕರೆದು ಮಾತಾಡಿದರು. ಜೊಸ್ಟನ್‌ರವರು ರಾತ್ರಿ ನನ್ನನ್ನು ಇಳಿಸಿಕೊಳ್ಳಲು ಒಪ್ಪಿಕೊಂಡಿದ್ದರು. ಒಂದು ಶರತ್ತನ್ನು ಮಾತ್ರ ಅವರು ಹೇಳಿದರು. ಊಟಕ್ಕೆ ಬೇರೆಯೇ ಕೋಣೆಯಲ್ಲಿ ನಾನು ಉಣ್ಣಬೇಕು. “ಯಾಕೆಂದು ಹೇಳಿದ್ದೇನೆಂದರೆ — ‘ವರ್ಣಭೇದದ ಪ್ರವೃತ್ತಿಯು ನನಗಿರುವದಿಲ್ಲ. ಆದರೆ ನನ್ನ ಗಿರಾಕಿಗಳು ಯುರೋಪಿಯನ್‌ರು. ಅದರಿಂದ ನಿಮಗೆ ಭೋಜನಶಾಲೆಯಲ್ಲಿ ಊಟಮಾಡಗೊಟ್ಟರೆ, ಅವರು ಅಪಮಾನವೆಂದೆಣಿಸಿ ಬಿಟ್ಟು ಹೋಗುವ ಸಂಭವವಿದೆ’.

“ಈ ಹೊತ್ತು ರಾತ್ರಿ ಉಳಕೊಳ್ಳಲಿಕ್ಕೆ ಕೊಟ್ಟ ಬಗ್ಗೆ ನನಗೆ ಉಪಕಾರವಾಯಿತು. ಇಲ್ಲಿನ ಸ್ಥಿತಿ-ಗತಿಯನ್ನು ನಾನು ಅರಿತವನಿದ್ದೇನೆ. ನನ್ನ ಸಂಕಷ್ಟಗಳನ್ನು ನಾನರಿತವನಿದ್ದೇನೆ. ನನ್ನ ಕೋಣೆಯಲ್ಲಿ ನನಗೆ ಊಟಮಾಡ ಹೇಳಿದ್ದರಿಂದ ನನ್ನದೇನು ಲಕ್ಷ್ಯವಿಲ್ಲ. ನಾಳೆ ಬೇರೆ ವ್ಯವಸ್ಥೆಯನ್ನು ನಾನು ಮಾಡುವೆನು,” ಎಂದು ನಾನು ಹೇಳಿದೆನು.

ನನಗೊಂದು ಕೋಣೆ ಕೊಟ್ಟರು. ನಾನೊಬ್ಬನೇ ಇದ್ದೆ. ಊಟದ ಹಾದಿ ಕಾಯುತ್ತ ವಿಚಾರಮಗ್ನನಾಗಿ ಕೂತುಕೊಂಡಿದ್ದೆ. ಹೋಟೇಲಿನಲ್ಲಿ ಹೆಚ್ಚು ಜನರಿದ್ದಿಲ್ಲ. ಆದ್ದರಿಂದ ಊಟ ಬಡಿಸುವವನು ಬೇಗನೆ ಬರುವನೆಂದು ನನ್ನ ಕಲ್ಪನೆಯಿತ್ತು. ಆದರೆ ಜೊಸ್ಟನ್‌ರವರೇ ಬಂದು ಹೇಳಿದ್ದೇನೆಂದರೆ — “ನಿಮಗೆ ಇಲ್ಲಿಯೇ ಊಟಮಾಡ ಬೇಕೆಂದು ನಾನು ಹೇಳಿದ್ದು ತಪ್ಪಾಯಿತು. ನಿಮ್ಮ ಕುರಿತು ಬೇರೆ ಗಿರಾಕಿಗಳಿಗೆ ನಾನು ಪ್ರಸ್ತಾಪಿಸಿದೆ. ಭೋಜನಶಾಲೆಯಲ್ಲಿ ನಿಮಗೆ ಊಟಕೊಟ್ಟರೆ ನಿಮ್ಮದೇನು ಅಭ್ಯಂತರವೇನೆಂದು ಅವರಿಗೆ ನಾನು ಕೇಳಿದೆನು. ತಮ್ಮದು ಲಕ್ಷ್ಯವಿಲ್ಲೆಂದು ಅವರು ಹೇಳಿದರು. ನೀವು ಬೇಕಾದಷ್ಟು ದಿನ ಇಲ್ಲಿ ಉಳಕೊಳ್ಳಬಹುದೆಂದೂ ಅವರು ಹೇಳಿದರು. ಅದರಿಂದ ದಯಮಾಡಿ ನೀವು ಭೋಜನಶಾಲೆಗೆ ಬರಬೇಕು. ಇಲ್ಲಿ ಬೇಕಾದಷ್ಟು ದಿನ ನೀವು ಉಳಕೊಳ್ಳಬಹುದು.”

ನಾನು ಪುನಃ ಅವರ ಉಪಕಾರ ಮನ್ನಿಸಿ ಭೋಜನಶಾಲೆಗೆ ಹೋಗಿ ಹೊಟ್ಟೆ ತುಂಬ ಊಟಮಾಡಿದೆ.

ಮಾರನೇ ದಿನ ವಕೀಲರಾದ ಎ. ಡಬ್ಲ್ಯು. ಬೇಕರರವರಿಗೆ ಭೆಟ್ಟಿಯಾದೆ. ಅಬ್ದುಲ್ಲಾ ಸೇಠರು ಅವರ ವರ್ಣನೆಯನ್ನು ನನಗೆ ಸ್ವಲ್ಪ ಮಾಡಿದ್ದರು. ಆದ್ದರಿಂದ ಅವರ [illegible] ನನಗೆ ಆಶ್ಚರ್ಯವಾಗಲಿಲ್ಲ. ಅವರು ಸ್ನೇಹಭಾವದಿಂದ ಸ್ವಾಗತಮಾಡಿ [illegible] ಕುರಿತು ವಿಚಾರಿಸಿದರು. [illegible] ಎಲ್ಲ ಅವರ [illegible] ನಿಮಗೆ ಬಾರಿಸ್ಟರೆಂದು ಇಲ್ಲಿ [illegible] ಮಾಡಿದಂತೆ ಸಾಧ್ಯವಿಲ್ಲ. ನಾವು ಉತ್ತಮ [illegible] ತೆಗೆದುಕೊಂಡಿದ್ದೇವೆ. [illegible] ನೀವು ನನಗೆ ಸಹಾಯಮಾಡಬಹುದು. [illegible] ನನ್ನಗಿಂತ ಬಡವನಾದ [illegible] ನಿಮಗೆ ವಸತಿಯನ್ನು ಹುಡುಕಬೇಕು. [illegible] ಇದೊಂದು ಲಾಭವಾಗುವದು [illegible] ನ್ನು ಹುಡುಕಿಕೊಂಡು ಬಂದೆವು. ಅವಳು ನನ್ನ ಪರಿಚಯದವಳು. [illegible] ವರ್ಣಭೇದದ [illegible] ನ್ನು ಸಂಪಾದಿಸುವವಳು. [illegible] ಒಬ್ಬ ಹೆಂಗಸಿದ್ದಾಳೆ. ಅವಳು ರೊಟ್ಟಿ ಸುಡುವವನ ಹೆಂಡತಿ. [illegible] ಅವಳಿಗೂ ಸ್ವಲ್ಪ ಸಹಾಯವಾಗುವದು. [illegible] ಅವರ ಮನೆಗೆ ಹೋಗಿ [illegible] ನನ್ನನ್ನು [illegible] ದಿಂದ ಅವಳ ಸಹವಾಸಿಗರು [illegible] ಗು ಕೊಂಡು ನನಗೆ ಇಳಿಸಿಕೊಳ್ಳಲು ಅವಳು ಒಪ್ಪಿದಳು.

ಬೇಕರರವರು ವಕೀಲರಿದ್ದರೂ ಅಭಿಪ್ರಾಯದಿಂದ ಕಟ್ಟಾ ಗಿ ನಿಷ್ಠಾವಂತ ಕ್ರೈಸ್ತ ಧರ್ಮೋಪದೇಶಕರಿದ್ದರು. ಈಗಲೂ ಅವರು ಜೀವಂತರಿದ್ದಾರೆ. ವಕೀಲಿ ಉದ್ಯೋಗವನ್ನು ಬಿಟ್ಟು ಧರ್ಮೋಪದೇಶ ಕಾರ್ಯದಲ್ಲಿಯೇ ಅವರು ನಿಮಗ್ನರಾಗಿದ್ದರು. ಚಲೋ ಸ್ಥಿತಿವಂತ ಗೃಹಸ್ಥರು. ಈಗಲೂ ನನಗೆ ಅವರ ಪತ್ರಗಳು ಬರುತ್ತವೆ. ಪತ್ರಗಳೊಳಗಿನ ವಿಷಯ ಒಂದೇ, ವಿವಿಧ ದೃಷ್ಟಿಯಿಂದ ಕ್ರೈಸ್ತಧರ್ಮದ ಅಂಗ-ಉಪಾಂಗಗಳನ್ನು ವಿಚಾರಿಸಿ, ಕ್ರೈಸ್ತನು ಪರಮಾತ್ಮನ ಏಕಮೇವ ಪುತ್ರನೆಂದೂ, ಮಾನವರೆಲ್ಲರ ತಾರಕನೆಂದೂ ಗಣಿಸಿದ ಹೊರತು ಶಾಶ್ವತವಾದ ಶಾಂತಿಯು ದೊರಕಲಿಕ್ಕಿಲ್ಲೆಂದು ಅವರು ಪ್ರತಿಪಾದಿಸುತ್ತಾರೆ.

ಪ್ರಥಮ ಭೆಟ್ಟಿಯ ಸಮಯಕ್ಕೇ ಬೇಕರರವರು ನನ್ನ ಧರ್ಮವಿಚಾರಗಳನ್ನು ಪ್ರಶ್ನಿಸಿದ್ದರು. ಅದಕ್ಕೆ ನಾನು ಹೇಳಿದ್ದೇನೆಂದರೆ — “ನಾನು ಹಿಂದೂ ಧರ್ಮದಲ್ಲಿ ಹುಟ್ಟಿ ಬೆಳೆದಿದ್ದೇನೆ, ಆದರೂ, ಹಿಂದೂ ಧರ್ಮದ ಬಗ್ಗೆ ಹೆಚ್ಚು ಜ್ಞಾನವಿಲ್ಲ, ಇತರ ಧರ್ಮಗಳ ಮಾಹಿತಿಯೂ ನನಗಿರುವದಿಲ್ಲ. ನಿಜವಾಗಿ ಹೇಳಬೇಕಾದರೆ, ನಾನೆಲ್ಲಿರುವೆನೆಂದು ನನಗೆ ಗೊತ್ತಿಲ್ಲ. ನನ್ನ ಮಾರ್ಗವ್ಯಾವುದಿದೆ, ಮಾರ್ಗವನ್ನು ಹಿಡಿಯಬೇಕು ಎಂಬುದೂ ನನಗೆ ಗೊತ್ತಿಲ್ಲ. ಸ್ವಧರ್ಮದ ಅಭ್ಯಾಸವನ್ನು ಜಾಗ್ರತೆಯಿಂದ ನಡಿಸಬೇಕಾಗಿ ನನ್ನ ವಿಚಾರವಿದೆ. ಬೇರೆ ಧರ್ಮಗಳನ್ನೂ ಸಾಧ್ಯವಿದ್ದಷ್ಟರ ಮಟ್ಟಿಗೆ ಅರಿತುಕೊಂಡಿರಬೇಕೆಂದೂ ನನ್ನ ಬಯಕೆ ಇದೆ.”

ಇದನ್ನೆಲ್ಲ ಕೇಳಿ ಬೇಕರರವರಿಗೆ ಸಂತೋಷವಾಯಿತು. “ನಾನು ದಕ್ಷಿಣ ಆಫ್ರಿಕೆಯೊಳಗಿನ ಜನರಲ್ ಮಿಶನ್ ಎಂಬ ಧರ್ಮೋಪದೇಶಕ ಸಂಸ್ಥೆಯ ಒಬ್ಬ ಚಾಲಕನಿದ್ದೇನೆ. ನನ್ನ ಖರ್ಚಿನಿಂದ ನಾನೊಂದು ಇಗರ್ಜಿಯನ್ನು ಕಟ್ಟಿಸಿದ್ದೇನೆ. ಅಲ್ಲಿ ನಿಯಮಿತವಾಗಿ ನಾನು ಪ್ರವಚನಗಳನ್ನು ಕೊಡುತ್ತೇನೆ. ವರ್ಣಭೇದದ ಮರುಳು ನನಗೆ ಸೋಂಕಿಲ್ಲ. ನನ್ನ ಕೆಲವು ಜೊತೆಗಾರರಿದ್ದಾರೆ. ದಿನಾ ೧ ಘಂಟೆಗೆ ಕೆಲವು ನಿಮಿಷ ನಾವೆಲ್ಲರೂ ಒಟ್ಟಿಗೆ ಸೇರಿ, ಜನರಿಗೆ ಶಾಂತಿಪ್ರಾಪ್ತಿಯಾಗಲಿಕ್ಕೂ ಜ್ಞಾನಪ್ರಾಪ್ತಿಯಾಗಲಿಕ್ಕೂ ನಾವು ಪ್ರಾರ್ಥಿಸಿಕೊಳ್ಳುತ್ತೇವೆ. ನೀವು ಅಲ್ಲಿ ಸಮಯಕ್ಕೆ ಸೇರಿದರೆ ನನಗೆ ಸಂತೋಷವಾಗುವದು. ನಿಮಗೆ ನಮ್ಮ ಜೊತೆಗಾರರ ಪರಿಚಯ ಮಾಡಿಕೊಡುವೆನು. ನಿಮ್ಮನ್ನು ಕಂಡು ಅವರಿಗೂ ಸಂತೋಷವಾಗುವದು. ನಿಮಗೆ ಅವರ ಜೊತೆಯಲ್ಲಿರಲು ಆನಂದವಾಗುವದು. ಇದಲ್ಲದೆ ಧರ್ಮ ಪುಸ್ತಕಗಳನ್ನು ನಿಮಗೆ ಒದಗಿಸುವೆನು. ಒಂದು ಮಾತನ್ನು ಹೇಳುವದು ಉಚಿತವು. ಬ್ಯಾಬಲಿನ [illegible] ಪುಸ್ತಕವು ಇನ್ನೊಂದಿಲ್ಲ.”

ಬೇಕರರ ಉಪಕಾರ ಮನ್ನಿಸಿ ೧ ಘಂಟೆಯ ಪ್ರಾರ್ಥನೆಗೆ ತಪ್ಪದೆ ಹಾಜರಿರಲಿಕ್ಕೆ ನಾನು ಒಪ್ಪಿಕೊಂಡೆನು.

“ನಾಳೆ ೧ ಘಂಟೆಗೆ ಇಲ್ಲಿ ನಾನು ನಿಮ್ಮ ನಿರೀಕ್ಷಣೆ ಮಾಡುತ್ತೇನೆ. ನಾವಿಬ್ಬರೂ ಕೂಡಿ ಪ್ರಾರ್ಥನೆಗೆ ಹೋಗೋಣ,” ಎಂದು ಬೇಕರರು ಹೇಳಿದ ಬಳಿಕ ನಾನು ಎದ್ದು ಹೋದೆ.

[illegible] ನನಗೆ ವಿಶ್ರಾಂತಿ ಬೇಕಾಗಿತ್ತು. [illegible] ಜೊಸ್ಟನ್‌ರವರ ಬಳಿಗೆ ಹೋಗಿ ಊಟದ ಬಿಲ್ಲು ಕೊಟ್ಟು ಹೊಸ ವಿಡಾರಕ್ಕೆ ಹೋಗಿ ನಾನು ಊಟ ಮಾಡಿದೆನು. [illegible] ನನಗಾಗಿ ಅವಳು ಏನನ್ನೂ ತಯಾರಿಸಿದ್ದಳು. ಅಲ್ಪಾವಕಾಶದಲ್ಲಿಯೇ ನಾನು ಅವಳ ಮನೆಯಲ್ಲಿ ವಿಶೇಷ ಪರಿಚಯದಿಂದ ಉಳಕೊಳ್ಳಲಾರಂಭಿಸಿದೆನು.

ದಾದಾ ಅಬ್ದುಲ್ಲಾರವರು ತಮ್ಮೊಬ್ಬ ಮಿತ್ರನಿಗೆ ಬರೆದು ಕಾಗದವನ್ನು ಕೊಟ್ಟಿದ್ದರು. ಅವರಲ್ಲಿ ನಾನು ಹೋದೆ. ದಕ್ಷಿಣ ಆಫ್ರಿಕೆಯೊಳಗಿನ ಭಾರತೀಯರ ಕಷ್ಟಗಳನ್ನು ಅವರು ವಿವರಿಸಿದರು. ತಮ್ಮಲ್ಲಿಯೇ ಉಳಕೊಳ್ಳಬೇಕೆಂದು ಅವರು ಆಗ್ರಹ ಮಾಡಿದರು. ಮೊದಲೇ ವ್ಯವಸ್ಥೆ ಮಾಡಿಟ್ಟಿರುವದೆಂದು ಹೇಳಿ ಅವರ ಉಪಕಾರ ಮನ್ನಿಸಿದೆನು. ನಿಮಗೆ ಏನಾದರೂ ಅವಶ್ಯವಿದ್ದರೆ, ತಪ್ಪದೆ ನನ್ನೊಡನೆ ಕೇಳಿ ಪಡೆಯಬೇಕೆಂದು ಅವರು ಆಗ್ರಹದಿಂದ ಹೇಳಿದರು.

ಸಾಯಂಕಾಲವಾಯಿತು. ನಾನು ಮನೆಗೆ ಮರಳಿ ಬಂದು ಊಟಮಾಡಿದೆನು. ಕೋಣೆಗೆ ಹೋಗಿ ವಿಚಾರ ಮಾಡಲಾರಂಭಿಸಿದೆನು. ಸದ್ಯಕ್ಕೇನೂ ನನಗೆ ಕೆಲಸವಿದ್ದಿಲ್ಲ. ಈ ಸಂಗತಿಯನ್ನು ಅಬ್ದುಲ್ಲಾ ಶೇಠರಿಗೆ ತಿಳಿಸಿದೆನು. ಬೇಕರರವರು ನನ್ನೊಡನೆ ಸ್ನೇಹ ಬೆಳೆಸುವ ಕಾರಣವೇನು? ಅವರ ಧರ್ಮಬಾಂಧವರಿಂದ ನನಗೇನು ಲಾಭವಾಗುವದು? ಕ್ರೈಸ್ತ ಧರ್ಮವನ್ನು ನಾನು ಎಲ್ಲಿ ತನಕ ಕಲಿಯಬಹುದು? ಹಿಂದೂ ಧರ್ಮಗ್ರಂಥಗಳು ನನಗೆಲ್ಲಿ ದೊರಕುವವು? ಸ್ವಧರ್ಮವನ್ನು ಸಂಪೂರ್ಣವಾಗಿ ಅರಿತುಕೊಳ್ಳದೆ, ಕ್ರೈಸ್ತ ಧರ್ಮವನ್ನು ತಿಳಕೊಳ್ಳುವ ಬಗೆ ಹೇಗೆ? ಈ ಮುಂತಾದ ವಿಚಾರತರಂಗಗಳು ನನ್ನಲ್ಲುಂಟಾದವು. ಇವೆಲ್ಲ ಮಂಥನದಿಂದ ನಾನು ನಿರ್ಣಯ ಮಾಡಿದ್ದೇನೆಂದರೆ — “ನನ್ನ ಕೈಗೆ ನಿಲುಕಿದ ಸಮಸ್ತವನ್ನೂ ನಿರ್ಮಲ ಚಿತ್ತದಿಂದ ನಾನು ಅಭ್ಯಾಸಮಾಡಬೇಕು. ಈರ

ಪ್ರಶಂಸೆಮಾಡದಂತೆ ಬೇಕಾದರೆ ಜೊತೆಗಾರರೊಡನೆ ನಾನು ವರ್ತಿಸಬೇಕು. ಸ್ವಧರ್ಮವನ್ನು ಸಂಪೂರ್ಣವಾಗಿ ಅರಿತುಕೊಂಡ ಹೊರತು ಪರಧರ್ಮವನ್ನು ನಾನು ಅಂಗೀಕರಿಸಲಾಗದು "

ಹೀಗೆಲ್ಲ ವಿಚಾರ ಮಾಡುತ್ತಿರುವಾಗಲೇ ನಾನು ನಿದ್ದೆ ಹೋದೆ

ಬ್ರಹ್ಮಚರ್ಯ.

ಲೇಖಕ—" ನೀಲಕಂಠ "

ಬ್ರಹ್ಮಚರ್ಯ ಎಂದರೇನು ?

ಪೂರ್ವಕಾಲದಲ್ಲಿ ಹನುಮಂತನು ಸಮುದ್ರವನ್ನು ಹಾರಿ ಹೋದನು ಎಂಬುದು ಎಲ್ಲರಿಗೂ ಗೊತ್ತಿದ್ದ ಮಾತೇ ಸರಿ. ಅಂಥ ಅಗಾಧ ಶಕ್ತಿಯು ಅವನಿಗೆಲ್ಲಿಂದ ಬಂತು ? ಭೀಷ್ಮನು ಬ್ರಹ್ಮಚಾರಿಯೆಂದು ಹೇಳುವರು ಯಾಕೆ ? ಅವನು ಲಗ್ನವಾಗಲಿಲ್ಲವೆಂದೇ ? ಬೇ, ಇಷ್ಟೇ ಅಲ್ಲ. ಅವನಲ್ಲಿ ಬ್ರಹ್ಮಚಾರಿಯು ಅನುಸರಿಸುವಂಥ ಗುಣಗಳಿದ್ದವು. ಅವನು ಬಹು ಕೂಡಿಸಿದ್ದನು. ಇಂಥ ಅಗಾಧವಾದ ಶಕ್ತಿಯು ಎಲ್ಲಿಂದ ಬರುವದು! ಇದೇ " ವೀರ್ಯ "ವು. ವೀರ್ಯವನ್ನು ರಕ್ಷಿಸುವದಕ್ಕೆ ಬ್ರಹ್ಮಚರ್ಯವೆಂದೂ, ಅದನ್ನು ಪಾಲಿಸುವವನಿಗೆ ಬ್ರಹ್ಮಚಾರಿಯೆಂದೂ ಅನ್ನುವರು.

ಬ್ರಹ್ಮಚರ್ಯದ ಸ್ವರೂಪ.

ಬ್ರಹ್ಮಚಾರಿಯಲ್ಲಿ ಎಂಥ ಗುಣಗಳಿರುತ್ತವೆ ನೋಡುವಾ. ಬ್ರಹ್ಮಚಾರಿಯು ಯಾವಾಗಲೂ ಮನಸ್ಸಿನಿಂದ ಸ್ತ್ರೀಚಿಂತನ ಮಾಡುವದಿಲ್ಲ, ಸ್ತ್ರೀ-ವಿಷಯವನ್ನು ಎಂದೂ ಆಡುವದಿಲ್ಲ, ಮೋಹದೃಷ್ಟಿಯಿಂದ ಸ್ತ್ರೀಯನ್ನು ನೋಡುವದಿಲ್ಲ, ಇತ್ಯಾದಿ ಮುಖ್ಯ ಗುಣಗಳು. ಇನ್ನು ಆತನು ಶೃಂಗಾರರಸಪೂರಿತವಾದ ವಸ್ತುಗಳ ಕಡೆಗೆ ಲಕ್ಷ ಕೊಡುವದಿಲ್ಲ. ನಾಟಕ, ಸಿನೇಮಾ ಮುಂತಾದವುಗಳನ್ನು ನೋಡಲು ಇಚ್ಛಿಸುವದಿಲ್ಲ. ಇವೆಲ್ಲವೂ ಇನ್ನುಳಿದ ಲಕ್ಷಣಗಳು.

ಬ್ರಹ್ಮಚರ್ಯವನ್ನು ಪಾಲಿಸುವದರಿಂದ ಆಗುವ ಲಾಭಗಳು.

ಬ್ರಹ್ಮಚಾರಿಯ ವೀರ್ಯವು ಯುಕ್ತ ವಯಸ್ಸಿನಲ್ಲಿ (೨೫ ವರುಷ) ಪ್ರಯವಾಗುತ್ತದೆ. ಬಹಳ ದಿವಸಗಳಿಂದ ಕೂಡಿದ ವೀರ್ಯವು ಅವನ ಬುದ್ಧಿಯನ್ನೂ, ಸಾಮರ್ಥ್ಯವನ್ನೂ, ಪ್ರೈಬಣ್ಣವನ್ನೂ, ಮುಖಚರ್ಯೆಯನ್ನೂ, ಬೆಳೆಸಿ ಸಂಧಿ(ಕೀಲು)ಗಳನ್ನು ದೃಢತರಪಡಿಸಿ ದೀರ್ಘಾಯುವನ್ನಾಗಿ ಮಾಡಿ ಆಯುಷ್ಯವನ್ನು ಉತ್ಸಾಹದಿಂದ ಕಳೆಯುವಂತೆ ಮಾಡುತ್ತದೆ.

ಬ್ರಹ್ಮಚರ್ಯವನ್ನು ಪಾಲಿಸದಿರುವದರಿಂದ ಆಗುವ ಹಾನಿ.

ಒಂದು ಹಣ್ಣು ಪಕ್ವವಾಗುವ ಮುಂಚೆಯೇ ಅದರ ಬೀಜವನ್ನು ನೆಟ್ಟರೆ ಅದು ಬೆಳೆಯುವದೇ ಕಠಿಣ. ಬೆಳೆದರೂ ಕೆಲವು ದಿವಸಗಳಲ್ಲಿ ಅದು ಕ್ಷೀಣವಾಗಿ ಸಾಯುವದು. ಅಲ್ಲದೇ ಅದರ ಸಂತತಿಯಾದರೂ ಉತ್ತಮ ತರದ ಹಣ್ಣನ್ನು ಬಿಡಲಾರದು. ಅಂತು ಆ ಹಣ್ಣಿನ ಹೆಸರಿಲ್ಲದಂತೆಯೇ ಆಗುವದು. ಅದರಂತೆ, ವೀರ್ಯವು ಪಕ್ವವಾಗುವ ಮುಂಚೆಯೇ ಉಪಯೋಗಿಸುವದರಿಂದ ಅದರಿಂದ ಉತ್ಪನ್ನವಾಗುವ ಸಂತಾನವು ವೃದ್ಧಿಯಾಗಲಾರದು, ಒಂದು ವೇಳೆ ಅದು ವೃದ್ಧಿಯಾದರೂ, ಅದು ಸದಾ ರೋಗಿಯೂ ವೀರ್ಯಹೀನವೂ, ಅಪೂರ್ಣ ಅವಯವ ಉಳ್ಳದ್ದೂ, ಕಾಮಾತುರವೂ, ಮತ್ತು ಅಲ್ಪಾಯುವೂ ಆಗುವದು.

ಬ್ರಹ್ಮಚರ್ಯ ಪಾಲಿಸುವದಕ್ಕೆ ಆತ್ಮಸಂಯಮನವೂ, ಪ್ರಾಣಾಯಾಮವೂ ಮುಖ್ಯವಾದ ಸಾಧನಗಳು. ಪ್ರಾಣಾಯಾಮವನ್ನು ಬಲ್ಲವರಿಂದ ಕಲಿಯುವದು ವಿಹಿತವು.

ಸಾರಾಂಶ — ಈ ನಮ್ಮ ಭರತಭೂಮಿಯಲ್ಲಿ ಬ್ರಹ್ಮಚಾರಿಗಳನ್ನು ಕಾಣುವದು ಅತಿ ವಿರಲ. ಆದ್ದರಿಂದ ಪ್ರತಿಬ್ಬನೂ ತನ್ನ ೨೫ನೇ ವರುಷದ ವರೆಗೆ ಬ್ರಹ್ಮಚರ್ಯವನ್ನು ಪಾಲಿಸಿ, ತನ್ನ ಸಂತತಿಯನ್ನು ಅಭಿವೃದ್ಧಿಗೊಳಿಸುವದು ವಿಹಿತವು. ಸ್ವರಾಜ್ಯವನ್ನು ಸಂಪಾದಿಸಲಿಕ್ಕೆ ಇದೊಂದು ಸಾಧನವು. ಆದ್ದರಿಂದ ಈಗಾದರೂ ಪ್ರತಿ ಒಬ್ಬನೂ ತಾನು ಒಳ್ಳೇ ರೀತಿಯಿಂದ ನಡೆದು ತನ್ನ ಬಂಧು-ಬಾಂಧವ ಮಿತ್ರರನ್ನು ಸುಧಾರಿಸಲಿಕ್ಕೆ ಯತ್ನ ಮಾಡಬೇಕು.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ

ಆಯುರ್ವೇದ ಸಂಗ್ರಹಾಲಯ.

ಶಾಸ್ತ್ರೋಕ್ತ ತಯಾರಿಸಿದ ಕುಪಿಸ್ಥ ರಸಾಯನಗಳು.

೧. **ಸಮೀರ ಪನ್ನಗ**—ಇದು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು. ಹೊಟ್ಟೆ ಉಬ್ಬೋಣ, ಹೊಟ್ಟೆಯೊಳಗಿನ ನಾನಾ ಪ್ರಕಾರದ ಪೀಡನೆ, ಸನ್ನಿಪಾತ ವಿಕಾರಗಳಲ್ಲಿ ಹಲುಬೋಣ, ಸಿಕ್ಕಂತೆ ಓಡ್ಯಾಡೋಣ ಮುಂತಾದ ೮೦ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ.

ತೊಲೆ ೧ಕ್ಕೆ ರೂ. ೬-೮-೦.

೨. **ಮಲ್ಲಸಿಂಧೂರ**—ಮಹಾಶ್ವಾಸ, ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ತಲುಬೋಣ, ಕಫಕ್ಷಯ, ಇಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು-ದಮ್ಮು, ಕಂಪು, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಗಳಿಗೆಯೊಳಗೆ ರೋಗಿಯು ವಾಸಿಯಾಗುತ್ತಾನೆ.

ತೊಲೆ ೧ಕ್ಕೆ ರೂ. ೭-೦-೦.

೩. **ಸುವರ್ಣರಾಜ ವಂಗೇಶ್ವರ**—ಉಪದಂಶಗಳ ಶೇಷವಿಕಾರ, ಪರಮಾ, ಧಾತುಕ್ಷೀಣತೆ, ಮೂತ್ರನೊತರ ಹೋಗುವ ಧಾತುನಷ್ಟ, ಸ್ವಪ್ನಾವಸ್ಥೆ, ಅಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧವಾದ ಸಮಸ್ತ ವಿಕಾರಗಳನ್ನು ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನು, ಕಾಂತಿಯನ್ನೂ ಕೊಡುತ್ತದೆ. ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ. ಇದರಿಂದ ಏನೊಂದೂ ಉಪದ್ರವವಾಗ ಲಾರದು.

ತೊಲೆ ೧ಕ್ಕೆ ರೂ. ೬-೮-೦

೪. **ವ್ಯಾಧಿಹರಣ ರಸ**—ಉಪದಂಶ, (ಗರಮಿ) ಫಿರಂಗಿರೋಗ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಆಮವಾಯು, ವಾತರಕ್ತ, ಭಯಂಕರ ವಾತವಿಕಾರ, ಪ್ರಮುಖ್ಯವಾಗಿ ಉಪದಂಶಗಳಿಗೆ ಮುಂದಾಗಿ ಆಗುವ ದಮ್ಮು, ಕೆಮ್ಮು, ನಿಶ್ಶಕ್ತಿ ಇವುಗಳ ಮೇಲೆ ಇಷ್ಟು ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಇನ್ನಾವದೂ ಇಲ್ಲ.

ತೊಲೆ ೧ಕ್ಕೆ ರೂ ೨-೦-೦

೫. **ಸೂತಶೇಖರ**—ಸನ್ನಿಪಾತ, ಪ್ಲೇಗ, ಕಾಲರ್ಾ, ತಲೆತಿರುಗುವ ವಿಕಾರ (ಭ್ರಮೆ) ಶ್ವಾಸ ಸಿಕ್ಕಂತೆ ಓಡ್ಯಾಡುವದು, ಹೊಟ್ಟೆನೋವು, ಆಮ್ಲಪಿತ್ತ ಮುಂತಾದ ವಾತ-ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದೆ. ಸಾಮಾನ್ಯವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ.

ತೊಲೆ ೧ಕ್ಕೆ ರೂ ೬-೮-೦.

ಇವಲ್ಲದೆ, ತರತರದ ಚೂರ್ಣ, ಘೃತ, ಅವಲೇಹ, ಆಸವ, ಮಾತ್ರೆ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ.

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ವ್ಯವಸ್ಥೆ ಮಾಡಿದ್ದೇವೆ.

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದಲ್ಲಿ ಉತ್ತರದ ಬಗ್ಗೆ ಸ್ಟಾಂಪು ಜೊತೆಗಿಟ್ಟು ಈ ಕೆಳಗಿನ ಪತ್ತೆಗೆ ಬರೆದುಕೊಳ್ಳತಕ್ಕದ್ದು.

ಪತ್ತೆ — **ಶ್ರೀ ಗಜಾನನ ಅಪ್ಪು ಭಟ್ಟ ವೇದೇಶ್ವರ,**

ಆಯುರ್ವೇದಿಕ ವೈದ್ಯ

ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯದ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತು ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ.—

ದಿ ನೋರ್ಥಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು ಸುವಾಸಿಕ ವಿರುತ್ತದೆ. ಇದರ ಸೇವನದಿಂದ ಬಾಯಿಯು ಹೊಲಸು ವಾಸನೆ ಹುಳ ತಿನ್ನುವಿಕೆ ವಗೈರೆ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳು ಉತ್ಪನ್ನವಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ತೊಗೊಳ್ಳಬೇಕು. ೧ ಪುಡಿ ಕಿಂ ರೂ. ೦-೧-೬, ೨೫ರ ಕಿಂ ರೂ ೦-೯-೦ ೧೦೦ ಕಿಂ ರೂ ೨-೦-೦, ೫೦೦ ಪ್ರತಿಗಳ ಕಿಂ ರೂ ೯-೦-೦, ೧೦೦೦ ಗೆ ೧೭-೦-೦, ಟಪಾಲ ಖರ್ಚು ವಗೈರೆ ಪ್ರತ್ಯೇಕ.

ಸುಗಂಧಿ ನಶ್ಯ.—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದದ್ದು, ಇದರಿಂದ ಶೈತ್ಯ, ಥಂಡಿ, ಅರೆತಲೆನೋವು ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿ ಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ರೂ ೦-೪-೦ ೧ ಡಜನ್ ಡಬ್ಬಿ ಕಿಂ ರೂ ೨-೦-೦ ಟ ಪೋ ಖರ್ಚು ಬೇರೆ.

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕೆಲಸ ... ನಮ್ಮಲ್ಲಿ ತಯಾರಾಗುತ್ತವೆ. ಕಿವ... ಬೇಕಾದ ಬೀಡಿ, ಪ್ರಥಮ ನೋಡಿ ಮಾಲು ಕಳಿಸಲಿಕ್ಕೆ ಆರ್ಡರ ಕೊಡಬಹುದು. ಇದರ ಹೊರತು ನಮ್ಮಲ್ಲಿಯು ಅಂಗಡಿಯಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಸಿಗುತ್ತದೆ. ಬೇಕಾದ ನಮೂನೆಯು ತಂಬಾಕನ್ನು ... ತರಿಸಿಕೊಂಡು, ಖರೀದಿ ಮಾಡಿರಿ. ನನ್ನ ದರ ಪಟ್ಟಿ ಬಗ್ಗೆ ಪತ್ರವ್ಯವಹಾರ ಮಾಡಿರಿ. ಕೂಡಲೆ ಉತ್ತರ ಬರೆಯುವೆನು

ಪತ್ತೆ: ಎಸ್. ಬಿ. ಕದಂ,
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು. ಪೋ. ನಿಪ್ಪಾಣಿ, ಜಿ. ಬೆಳಗಾಂವ.

ಸಲಭ ಕ್ರಯ! ಸುಲಭಕ್ರಯ!!

ಡಾಕ್ಟರ ಜೆ. ಬೀ. ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯು ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಿದ್ದ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಸಭ್ಯರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ನಿಜ ಪುಸ್ತಕದ ಕಳಿಸಲಾಗುವದು.

ಒಂದು ಡಬ್ಬಿಯ ಕ್ರಯ ರೂ ೦-೪-೦, ವ್ಹಿ. ಪಿ ೪ ಅಣೆ ಡಜನ್ ೧ ಕ್ಕೆ ರೂ. ೨-೮-೦, ವ್ಹಿ ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಪಾರ್ಕಟೌನ, ಮದರಾಸ



ಸರಕಾರದಿಂದ ಪೇಟೆಂಟ ಪಡೆದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಬಹು

ಅನುಕೂಲವಾಗಿರುವದು

ಇದು mild steelವೆಂಬ ಜಾತಿಯ ಕಬ್ಬಿಣ ತಗಡಿನಿಂದ ಮಾಡಲ್ಪಟ್ಟಿರುವದು. ಎತ್ತುಗಳಿಗೆ ಬಹಳೇ ಹಗರು ಹೋಗುತ್ತದೆ. ಇದರೊಳಗಿಂದ ಒಂದು ಹನಿ ಸಹ ನೀರು ಕೆಳಗೆ ಬೀಳದಂತೆ ಏರ್ಪಾಡು ಮಾಡಲ್ಪಟ್ಟಿರುವದು. ಕಪ್ಪಲಿ ಬಾಯಿಯ ನೀರ ಹೊರೆಯ ಕ್ಷಿಪ್ರ ಬೀಳುವ ಕಾಲಕ್ಕೆ ಎತ್ತುಗಳಿಗೆ ಭಾರವಾಗದಂತೆ ರಚನೆಯಲ್ಲಿ ಸುಧಾರಣೆಯನ್ನು ಮಾಡಿರುತ್ತೇವೆ

ಬೆಲೆಯ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ವಾರ್ತೆ — ಉತ್ಸಾಹ, ಉದ್ಯೋಗ, ಜ್ಞಾನ ಕೊಡುವ ಕನ್ನಡ ಮಾಸಪತ್ರಿಕೆ.

ಸಂಪಾದಕ— ಶ್ರೀ ಬಾಗಲ ಲಕ್ಷ್ಮಣರಾಯರು, ವಾಙ್ಮಯ ವಿಶಾರದ

ಮಾದರಿ ಸಂಚಿಕೆ ಪುಕ್ಕಟೆ ದೊರೆಯುವದು. ವಾರ್ಷಿಕ ವರ್ಗಣಿ ರೂ. ೧-೪-೦

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ನೇಮಿಸಿದ ಮೋಟಾರ ಸರ್ವಿಸಿನ ವ್ಯವಸ್ಥೆ

ಹಾಗೂ

ಅಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ

ಈ ಕೆಳಗಿನಂತೆ ಮೋಟಾರು ಸ್ಟ್ಯಾಂಡಿನ —

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ, ಗೋಕರ್ಣದಿಂದ ಕುಮಟಾ ... ಗೋಕರ್ಣದಿಂದ ಅಂಕೋಲಾ, ಕಾರವಾರ

ಟಿಪ್ಪ — ಟಿಕೇಟು ಕಾಯ್ದಿಸಿ ಇಡುವ ಏರ್ಪಾಡ ಇದೆ ಸರವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ವಾಂಗೀಕರ ಸಹಿಪ್ರಸ್ಥಾ, ಮೋಟರ ಏಜಂಟ, ಗೋಕರ್ಣ (ಉತ್ತರ ಕನ್ನಡ)

S U. Narayanacharya & CO
Chaukamba, BENARES CITY

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿಕಣ, ಜರಿ ಸೀರೆ, ಕಾಶ್ಮೀರ ಶಾಲು, ಚಂದನ, ರುದ್ರಾಕ್ಷಿ, ಕಸ್ತೂರಿ, ಲಿಂಗ ಸಾಲಿಗ್ರಾಮ ಮೊದಲಾದವುಗಳು ಸಿಗುತ್ತವೆ. ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ. ಕಾಶೀಕ್ಷೇತ್ರ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಅಕ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೫೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗಿದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ನೆಗಡಿ, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅದೆಯತವು ಇದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ. ಫೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೪.

ವತ್ಸದ ವರ್ಗಣಿ.
ಕುಮಟೆಯಲ್ಲಿ ಆಗಾವು
ರೂಪಾಯಿ 2-4-0.
ಕುಣೆಯಕಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ವ್ಯಾಕ್ಯಾಸಿನ (೧೫ ಎಮ್ ಉದ) ೮ ಸಾಲುಗಳವರೆಗೆ ರೂ. 1-0-
೮ ನಂತ್ರ ಪ್ರತಿಸಾಲಿಗೆ 0-2-0.
ಹೆಚ್ಚಿಂಗದ ಜಾಹಿ ಎಷ್ಟು ಕೊಡ್ಡವಿರುವವರೋ ಆ ಮಾನದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

बहुविधविषयकर्ता ऐश्वर्ता वाति कोके बलपवादितवक्ता त्ववचने पापिवेद्रुः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

-(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೯ ಮಾಹೆ ಅಗಸ್ಟ ಸನ್ ೧೯೩೭ ನೇ ಇಸವಿ.)-

हिंदुस्थानांतील रहिवाशांस त्याप्रमाणें हिंदुस्थानची हवा त्याप्रमाणेंच हें औषध हिंदुस्थानातील लोकांस ज्यास्त फायदेशीर आहे.

द्राक्षासव- दीड रतलची किंमत २ रुपये;

रामबाण औषधें
भिंदें भाजविणारें,
भूक वाढविणारें,
शौच्यास साफ करणारें,
झोंपें आणणारें,
शक्ति देणारें,
तेजस्वीपणा आणणारें,

पिण्यास रुचिकर,
कचाउठाग मागवा,

बेंगॉल केमिकल...

मुंबईफार्मास्युटिकलवर्क्स लिमिटेड,
मुंबई नं. १२

एजंट— मेसर्स पंडित आणी कंपनी,
तीर्थहळ्ळी.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. *B. A.*

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭;



ಒರೇ ಒಂದು ತಿಂಗಳ ಬಗ್ಗೆ ಮಾತ್ರ ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ಚಂದ !!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತದೆ ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನ್ನು ಉತ್ಕೃಷ್ಟ ಲೇಮ ಪಟ್ಟೆಯು ಸಹಿತ ಉಚಿತವಾಗಿ ಕೊಡುತೇವೆ ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ— **Swan House: P B 503 P T Madras**

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಅಂಜೆ ಸುವಾಸಿಕ ಕಾಯೂಲಿ ಹಿಂಗು ೧೨ ತೊಲೆ ಡಬ್ಬಿ ೧ ಕ್ಕೆ ೧—೮—೦.ಹಿಂಗಿನ ಅರ್ಕ .||. ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿ ಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲೆಯ ಡಬ್ಬಿ ೧ ಕ್ಕೆ ೧—೪—೦. ೧ ತೊಲೆಯ ಹಿಂಗಿನ ವಡಿಗೆಗಳು ಡಬಿಕ್ ೧ ಕ್ಕೆ —೨೦—೦. ತಲೆಗೆ ಹಚ್ಚುವ ಸುವಾಸಿಕ ಸುಖಕರವಾದ ತೈಲ ೫ ತೊಲೆಯ ಬಾಟ್ಲಿ ೧ ಕ್ಕೆ ೦—೧೨—೦. ಹುಳದ ಪ್ರೇಮ ತೊಲೆ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಅಂಜೆ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು ಟಪಾಲ ಖರ್ಚ ಪ್ರತ್ಯೇಕ.

ಕೆರೇಕರ ಕಾಯೂಲೀ ಹಿಂಗಿನ ದುಕಾನ
ಅವರೆಬಾಜಾರ, ಕುಮಟಾ.

ಅತ್ಯಲ್ಪವಿವೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

ತಾರಾ" ಲೀವರ ರಿಜಿಸ್ಟರ್ಡ ಪೊಕೆಟ್ ವಾಚ್ಸು ೧೮ ಕೆರೆಟ್ ರೋಲ್ಡ ಗೋಲ್ಡಿನವು. ಮುಖಬಿಲ್ಲೆಯು ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಕಾರರು ಅಚ್ಚು ಹೊಡೆದಿರುವರು ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಿಜಿಸ್ಟರ್ಡ ಬ್ರ್ಯಾಂಡಿನನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ ಕೆಲವೇ ಗಡಿಯಾರಗಳಿವೆ ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಗುಣ ಹಾಗು 'ತಾರಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್‌ವಾಚ್ ಗಡಿಯಾರಗಳಿಗೆ ಕೇವಲ ಬರೇ ರೂಪಾಯಿ ೫.

CAPTAIN WATCH CO. P. B 265. MADRAS

ಗೋಕರ್ಣ ನ್ನೂ ಪೆಯಿಂದ ೬ನೇ ವರ್ಷ ಪ್ರಾರಂಭ

ಜಯಕರ್ನಾಟಕ (ಮಾಸಪತ್ರಿಕೆ)

ಉದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ ... ಸಾಮಾಜಿಕ ಐತಿಹಾಸಿಕ ಆರ್ಥಿಕ ... ವಿಷಯಗಳು ... ವಿಷಯಗಳು ಬರುತ್ತವೆ ...

ರೋಗದಿಂದ ನರಳಬೇಡಿರಿ

ಎಲ್ಲ ತರದ ... ಜ್ವರಗಳಿಗೆ ... ಮೂಲವ್ಯಾಧಿ ... ಗಳಿಗೆ ... ರೋಗ ...



... ಎಲ್ಲ ದಾಖಲ್ಯ ಮತ್ತು ಬಹಳ,

ರಾಗದ ಪೆಟ್ಟಿಗೆಗಳು

ನಾಟಿಕಿ ಸಾಮಾನ

ಕೊಳಲ, ಡಕ್ಕೆ ... ಗೆರ



... ಸಿಂಗಲ್ ... ೩೦ ...

ಗೋಕಾಳೆ ಸಹಕಾರಾಮ ಕಂಪನಿ

ನಂ ೩೮೮ ವಿಠ್ಠಲವಾಡಿ ಎದುರಿಗೆ

ಕಾಳಬಾದೇವಿ ರೋಡ,

ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ ಮುಂಡಗೋಡ ಶಿರ್ಶಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥಾ ಮಾಡಿದೆ ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa
PROPRIETOR

अगर्दी फुकट.

वैद्यविद्या·

आरोग्यसंपत्ति आणि पूर्ण सुखाचा सरळ रस्ता दाखविणारे 'वैद्यविद्या' नावाचा मोठा आयुर्वेदिक पुस्तकाचा नवीन आवृत्ति बाहेर पडली आहे, हे पुस्तक कींमत व पोष्ट खर्च घेतल्या शिवाय अगदीं फुकट पाठविण्यात येत तरी हे पुस्तक आजच मागवा

प्रमेहावर रामबाण औषध

मेहमर्दनचूर्ण.

हे चूर्ण फक्त तीन दिवस लागोपाठ घेतल्याने लघवीस होणारी आग, लघवी थांबून थांबून होणे व्याधि या औषधाच्या सेवनाने एकदम बरे होतात.

किं. १० तोळ्याच्या डब्यास रु १.

राजवैद्य नारायणजी केशवजी, जामनगर (काठेवाड)

कुमटा एजन्ट— माधव सातप्पा शेणवी, बेलेकेरी

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ವನೌಷಧಿಯಾದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ ಈ ಮಧುವಿನ ಸೇವನದಿಂದ ವಾತ ಪಿತ್ಥ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು ೧೦ ೩೦ ವರ್ಷದ ಮುದುಕರ ... ತರುಣರಂತೆ ಪ್ರವರ್ಧಮಾನವಾಗುವರು ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ... ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ... ವು ಒಂದಾಗುವದು — ... ನೂತನವಾದ ಶರೀರವು ನಿರ್ದೋಷವಾಗುವದು ... ದಿವಸದಲ್ಲಿಗೆ ... ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವನ್ನು ಸೇವನ ಮಾಡಿ ... ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ, ಉದರರೋಗ ದವಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ... ಊಟಮಾಡಿದರೂ ಅನ್ನ ... ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು ... ಮೈಯಲ್ಲಿ ಎಷ್ಟೋ ದಿವಸದ ... ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ... ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು ... ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೦ ೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲದಲ್ಲಿ ಕಳಿಸುತ್ತೇವೆ ಅಂದರೆ ... ಬೀಳುವದಿಲ್ಲ ... ಬಾಟಲಿಗಳ ಕಿಮ್ಮತ್ತು ೧೩—೮—೦ ಮತ್ತು ೧ ಬಾಟಲೆ ಪುಕ್ಕಟೆ ... ಬೇರೆ ಬೀಳುವದು ... ೧ ಬಾಟ್ಲಿಗೆ ೧—೦—೦ ೩ ಬಾಟ್ಲಿಗೆ ೩—೦—೦ ... ೧೩—೮—೦

ವ್ಯವಸ್ಥಾಪಕರ— ದ್ರಾಕ್ಷಾರ್ಕಮಧು ಆಫೀಸ ...

ಲೋಕಲ್ ಬೋರ್ಡುಗಳ ಸುಧಾರಣೆಯ ಉಪಾಯಗಳು.

ಅಹಮ್ಮದಾಬಾದ ಜಿಲ್ಹಾ ಬೋರ್ಡಿನ ಚೀಫ ಆಫೀಸರರಾದ ರಾ| ಈಶ್ವರಲಾಲ ಮಗನಲಾಲ ವೇಧಾರವರು ಸದ್ಯಕ್ಕೆ ಪುಣೆಯಲ್ಲಿ ಜರಗಿದ ಜಿಲ್ಹಾ ಬೋರ್ಡಿನ ಪರಿಷತ್ತಿನಲ್ಲಿ ಬೋರ್ಡುಗಳ ಆರ್ಥಿಕ ಸುಧಾರಣೆಯ ಉಪಾಯಗಳನ್ನು ವಿವರಿಸಿದರು ಅವೇನಂದರೆ

ಮುಂಬಯಿ ಇಲಾಖೆಯಲ್ಲಿ ೧೮೬೯ ೧೮೭೦ನೇ ಇಸ್ವಿಯ ಸರಕಾರಿ ಠರಾವು ನಂ. ೩೧೯೮ನೇದರಂತೆ ಲೋಕಲ್ ಫಂಡುಗಳು ಈ ಕೆಳಗಿನ ತತ್ವಗಳ ಮೇಲೆ ಸ್ಥಾಪಿಸಲ್ಪಟ್ಟವು —

(೧) ಹಳ್ಳಿಗಳಲ್ಲಿ ಶಿಕ್ಷಣದ ವಿಸ್ತಾರ ಮಾಡುವದಕ್ಕಾಗಿ ಹಾಗು ಲೋಕಲ ಮಾರ್ಗಗಳ ದುರುಸ್ತಿಗಾಗಿ, ದುರುಸ್ತಿ ಹಾಗು ರಚನೆಗಾಗಿ ಲೋಕಲ್ ಫಂಡು ಪ್ರಾರಂಭಿಸಬೇಕು

(೨) ಸ್ಥಳಿಕ ತೀರ್ವೆಯ ಮೇಲೆ ಈ ಲೋಕಲ್ ಫಂಡನ್ನು ಆಂಶಿಕ ಎತ್ತಬೇಕು ಸರಕಾರವು ಹೀಗೆ ಎತ್ತುವಳಿ ಮಾಡಲಿಕ್ಕಿಲ್ಲೆಂದು ವಚನ ಕೊಟ್ಟಿದ್ದರೆ, ಸರಕಾರಕ್ಕೆ ಸಲ್ಲುವ ತೀರ್ವೆ ರಕಮಿನೊಳಗಿಂದ ರೂಪಾಯಿಗೆ ಒಂದಾಣೆಯಂತೆ ಲೋಕಲ್ ಫಂಡನ್ನು ಪಡೆಯಬೇಕು ಸರಕಾರವು ವಚನ ಕೊಡದಿದ್ದ ಸಂಗತಿಯಲ್ಲಿ ರೂಪಾಯಿಗೊಂದಾಣೆಯಂತೆ ತೀರ್ವೆಯನ್ನು ರೈತರ ಕಡೆಯಿಂದ ವಸೂಲ ಮಾಡಬೇಕು

(೩) ಲೋಕಲ್ ಫಂಡ ತೆತ್ತವರಿಗೆ ಲೋಕಲ್ ಫಂಡಿನ ವಿನಿಯೋಗದಲ್ಲಿ ವಿಶೇಷ ಅಧಿಕಾರವಿರಬೇಕು

ಸಾರ್ವಭೌಮರು ನೇಮಿಸಿದ ಕಮಿಶನಿನ ೭೭೩ನೇ ಕಲಮಿನಲ್ಲಿ ಹೀಗೆ ಬರೆದದೆ ಏನಂದರೆ — "ಲೋಕಲ್ ಬೋರ್ಡುಗಳ ಉತ್ಪನ್ನದ ಬಾಬುಗಳು ಕಡಿಮೆಯೆಂದು ಸಾಮಾನ್ಯವಾಗಿ ಅದರೆ ಲೋಕಲ್ ಬೋರ್ಡುಗಳಿಗೆ ಲೋಕಲ್ ಫಂಡುಗಳನ್ನು ಏರಿಸುವ ಅಧಿಕಾರ ಕೊಡಲಿಕ್ಕಾಗಲಿ ಹೊಸ ಕರಗಳನ್ನು ಎತ್ತುವಳಿ ಮಾಡಲಿಕ್ಕಾಗಲಿ ಕಾಯಿದೆಯನ್ನು ಕೈಕೊಳ್ಳಲು ಹೇರಳ ... ಅವಶ್ಯಕತೆಯಿದೆ. ಈ ಉಪಾಯಗಳು ಯೋಗ್ಯವೆಂದು ಕಮಿಶನರರು ಹೇಳಿದರು ಈ ಕಮೀಶನರ ಅಭಿಪ್ರಾಯವು ನಮಗೆ ಸಮ್ಮತವಿದೆ. ಆದರಿಂದ ಬೋರ್ಡುಗಳ ಆಯವ್ಯಯವನ್ನು ಈ ಕೆಳಗಿನ ಉಪಾಯಗಳಿಂದ ಏರಿಸಬೇಕಾಗಿ ನಮ್ಮ ಸೂಚನೆಯಿದೆ

(೧) ದವಾಖಾನೆ ಚಿಕಿತ್ಸಾಲಯ ಬಂಗಲೆ ನಿರ್ಮಾಣ, ಸ್ಥಳಗಳ ರಕ್ಷಣೆ ಇವುಗಳ ಕೆಲಸವನ್ನು ಬೋರ್ಡುಗಳಿಂದ ಪ್ರಾಂತ ಸರಕಾರವು ಕೈಕೊಳ್ಳಬೇಕು

(೨) ಸರಕಾರವು ಬೋರ್ಡುಗಳ ಬಗ್ಗೆ ಕೆಲಸ ಮಾಡಿದರೆ, ಆ ಕುರಿತು ಬೋರ್ಡುಗಳಿಂದ ಏನೊಂದೂ ಪ್ರತಿಫಲವನ್ನು ಬಯಸಕೂಡದು

(೩) ೧೯೦೫ನೇ ಇಸ್ವಿಯಿಂದ ಲೋಕಲ್ ಫಂಡಿನ ಶೇಕಡಾ ೨೫ ರಂತೆ ಕೊಡುವ ಗ್ರ್ಯಾಂಟಿನ ಪ್ರಮಾಣವನ್ನು ಸಾಧ್ಯವಿದ್ದ ಮಟ್ಟಿಗೆ ಏರಿಸಿ, ಜಿಲ್ಹಾ ಲೋಕಲ್ ಬೋರ್ಡುಗಳಿಗೆ ಹಂಚಬೇಕು

(೪) ಇತರ ಗ್ರ್ಯಾಂಟುಗಳನ್ನು ಕೊಡಬೇಕು.

(ಮುಂಬಯಿ ಸರಕಾರದವರು ನೇಮಿಸಿದ) ಲೋರೆನ್ಸ ಕಮಿಟಿಯವರು ಅಬಕಾರಿ ಹಾಗು ಭೂಮಿಯ ತೀರ್ವೆಯ ಒಂದು ಪಾಲನ್ನು ಬೋರ್ಡುಗಳಿಗೆ ಕೊಡಬೇಕೆಂದು ಶಿಫಾರಸು ಮಾಡಿದರು ಇನಕಮ್ ಟೆಕ್ಸ ಕೊಡುವವರ ಮೇಲೆ ಒಂದು ಸಣ್ಣ ಕರ ಕೂಡ್ರಿಸಬೇಕಾಗಿಯೂ, ಇನ್‌ಕಮ್ ಟೆಕ್ಸ ಆಗದ ಉತ್ಪನ್ನಗಳಿಗೆ ಲ್ಯಾಯಸೆನ್ಸ ಫೀಗಳನ್ನು ಕೂಡ್ರಿಸಬೇಕಾಗಿಯೂ ಅವರು ಶಿಫಾರಸು ಮಾಡಿದರು. ಪ್ರಾಂತಿಕ ಉತ್ಪನ್ನದ ಬಜೆಟ್ಟಿನಿಂದ ಬೋರ್ಡುಗಳ ಉತ್ಪನ್ನವನ್ನು ಪ್ರಾಂತಿಕ ಸರಕಾರವು ಹೆಚ್ಚಿಸುವ ಕರ್ತವ್ಯದಿಂದ ಬದ್ಧವಾಯಿತೆಂದು ಈ ಕಮಿಟಿಯವರು ಅಭಿಪ್ರಾಯಪಟ್ಟರು

ಬೋರ್ಡುಗಳ ಉತ್ಪನ್ನದ ವಿಷಯವನ್ನು ಆಲೋ

ಮನೋಹರವಾದ ಕೂದಲನ್ನು ಬೆಳಸಬೇಕು!

ಆದರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ ಕೂದಲು ಮನೋಹರವಾಗಿರಬೇಕಾದರೆ ನೀವು ದಿನಾಲು ಅವುಗಳ ಕಡೆಗೆ ಲಕ್ಷಕೊಡಬೇಕು ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡಿ ಬೆಳ್ಳಗಾಗಿ ಉದುರುವವು ನೀವು ಅವಕ್ಕೆ ಚಲೋ 'ಕೂದಲನ್ನು' ಪೋಷಿಸುವ ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು ಇದು ಹಚ್ಚಿದ ಕೂಡಲೆ ತಲೆಯು ಹೊಟ್ಟು ಹೋಗುತ್ತದೆ ಕೆರತ ಹೋಗಿ ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಬಲ ಬರುತ್ತದೆ ಹಚ್ಚಿದ ತೈಲವು ಕೂದಲುಗಳಿಗೆ ತಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿ

ಬಾಟ್ಲಿ ೧ಕ್ಕೆ ರೂ	೧—೦—೦
ಅಂಚೆವೆಚ್ಚ	೦—೬—೦
೨ ಬಾಟ್ಲಿಗಳಿಗೆ ,,	೨—೧೦—೦
ಅಂಚೆವೆಚ್ಚ ,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ

—— 0 ——

೩ ಔನ್ಸಿಗೆ	ರೂ	೨—೦—೦
೩ ಔನ್ಸಿಗೆ	,,	೧—೪—೦
೧ ಡ್ರ್ಯಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಕೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!"

ಒಂದು ಸುಗಂಧದ್ರವ್ಯದಲ್ಲಿ ಇನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ ಅವುಗಳಲ್ಲಿ ಆಲ್ಕೋಹೋಲು ಇಲ್ಲವೆ ತೈಲವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯಸಾರ ಸ್ಪರ್ಶವಿಲ್ಲ

THE ANGLO INDIAN DRUG & CHEMICAL CO., LTD.

POST BOX, 2082 **BOMBAY**

ಚನೆ ಮಾಡಬೇಕಾದರೆ, ಈ ಕೆಳಗಿನ ವಿಷಯವನ್ನು ಚರ್ಚಿಸಬಹುದು

(೧) ಲೋಕಲ್ ಬೋರ್ಡುಗಳಿಗೊಪ್ಪಿಸಿದ ಕೆಲವು ಕೆಲಸಗಳನ್ನು ಪ್ರಾಂತಿಕ ಸರಕಾರವು ಸ್ವಾಧೀನಪಡಿಸಿಕೊಳ್ಳುವ

(೨) ಪ್ರಾಂತಿಕ ಸರಕಾರಕ್ಕೆ ಕ್ರಮವಾಗಿ ವೃದ್ಧಿಂಗತವಾಗುವ ಉತ್ಪನ್ನದ ಬಾಬುಗಳಲ್ಲಿ ಇನ್ನಿಷ್ಟು ಪಾಲು ಕೊಡುವದು

( ) ಲೋಕಲ್ ಬೋರ್ಡುಗಳಿಗೆ ಸರಕಾರವು ಕೊಡುವ ಸಹಾಯ ದಕವಿನ ಯೋಗ್ಯಾಯೋಗ್ಯತೆ

ಸದ್ಯಕ್ಕೆ ಲೋಕಲ್ ಬೋರ್ಡಿನ ಖರ್ಚಿಗೂ ಸರಕಾರವು ಕೊಡುವ ಗ್ರಾಂಟಿಗೂ ನಿರ್ದಿಷ್ಟ ಪ್ರಮಾಣವಿಲ್ಲ. ಯಾವ ತತ್ವದ ಮೇಲೆ ಸರಕಾರವು ಗ್ರಾಂಟು ಕೊಡುತ್ತದೆಂಬದು ಹೇಳಬರುವದಿಲ್ಲ ಆದರೆ ದ ಲೋಕಲ್ ಬೋರ್ಡುಗಳ [illegible] ಪತ್ರಿಕೆಯನ್ನು [illegible] ಸರಕಾರವು ಗ್ರಾಂಟನ್ನು ನಿಶ್ಚಿತವಾಗಿ [illegible] ಜಿಲ್ಲಾ ಬೋರ್ಡುಗಳಿಗೆ [illegible] ಪ್ರಮಾಣವು [illegible] ರಕ್ಕೆ [illegible] ಜಿಲ್ಲಾ ಬೋರ್ಡಿನ ಖರ್ಚಿನ [illegible] ಕಾರವು [illegible] ನೇ [illegible] ಅಗಸ್ಟ [illegible] ಲೋಕಲ್ ಬೋರ್ಡ ಸಭೆಯಾಗಿತ್ತು [illegible] ಅಧ್ಯಕ್ಷರಾಗಿದ್ದರು ಆ ಸಭೆಯು ಸರಕಾರಿ ಗ್ರಾಂಟುಗಳ [illegible] ಜಿಲ್ಲಾ [illegible] ರಾವಬಹಾದ್ದೂರ ಚಿತಳೇಯವರ [illegible] ಸೂಚನೆ ಮಾಡಿದ್ದರಾಗಿ [illegible] ಪ್ರಾಥಮಿಕ ಶಿಕ್ಷಣ [illegible] ಸರಕಾರವು ಕೊಡತಕ್ಕ ಗ್ರಾಂಟು [illegible] ಉಳಿದ ಎಲ್ಲಾ ಖರ್ಚಿನಲ್ಲಿ ಸರಕಾರವು ಮೂರರಲ್ಲಿ ಎರಡು ಪಾಲು ಕೊಡಬೇಕೆಂದು ರಾವಬಹಾದ್ದೂರ ಚಿತಳೇಯವರು ಮಾಡಿದ ಸೂಚನೆಗೆ ಸರ್ವರೂ ಒಪ್ಪಿದರಾಗಿ ತಿಳಿಯುತ್ತದೆ ಆ ಮೇಲೆ [illegible] ನೇ ಇದೇ ಪರಿಷತ್ತಿನ [illegible] ಒಂದು [illegible] ನ್ನು ಹೊರಪಡಿಸಿ ಲೋಕಲ್ ಬೋರ್ಡುಗಳಿಗೆ ತಗಲಬಹುದಾದ ಖರ್ಚಿನ [illegible] ಸರಕಾರವು ಯಾವದೊಂದು ಪ್ರಮಾಣದ ಸಹಾಯ [illegible] ಬೇಕೆಂದು ಪರಿಷತ್ತಿನಲ್ಲಿ ಗೊತ್ತಾಗುವದು ಯಾವ ಪ್ರಮಾಣದಿಂದ ಬೇಕು? [illegible] ನಿಶ್ಚಯವಾಗಲಿಲ್ಲ ಆದರೆ, ಅಧ್ಯಕ್ಷರು [illegible] ಸಲು ಕೆಲವು ತೊಂದರೆಗಳಿರುವದಾಗಿ ಹೇಳಿದ್ದರಿಂದ ಈ ಕುರಿತು ಮುಂದೆ ಆಲೋಚನೆ ಮಾಡಬಹುದಾಗಿ ಗೊತ್ತಾಯಿತು. ಆಲೋಚನೆ [illegible] ನೇಮಿಸಿಕೊಂಡು, ಈ ಕುರಿತ ನಿರ್ಣಯ ಮಾಡುವದು ಶ್ರೇಯಸ್ಕರವೆಂದೂ ಗೊತ್ತಾಯಿತು ಈ ಕಮಿಟಿಯವರು ಆಲೋಚಿಸಿ ಎರಡು ಪಾಲು ಖರ್ಚನ್ನು ಸರಕಾರವು ತೆರಬೇಕೆಂದೂ, ಒಂದು ಪಾಲನ್ನು ಬೋರ್ಡುಗಳು ತೆರಬೇಕೆಂದೂ ರಿಪೋರ್ಟ ಮಾಡಿರುವರು. ಉತ್ಪನ್ನವನ್ನು ಹೆಚ್ಚಿಸಬಹುದಾದ ಕೆಲವು ಉಪಾಯಗಳನ್ನೂ ಈ ಕಮಿಟಿಯವರು ತೋರಿಸಿಕೊಟ್ಟಿರುವರು ಪ್ರಾಂತಿಕ ಫಂಡಾಯದ ಮೇಲೆ ಕೆಲವು ಎತ್ತುವಳಿಯಾಗಬೇಕಾಗಿದೆ. ಇವುಗಳನ್ನು ಮುಂಚೂರ ಮಾತುವದು ಕಾಯಿದೆ ಕೌನ್ಸಿಲುಗಳ ಸ್ವಾಧೀನವಿದೆ

ಸ್ಥಾನಿಕ ಸ್ವರಾಜ್ಯ ಪರಿಷತ್ತಿನಲ್ಲಿ ಈ ಕೆಳಗಿನಂತೆ ಸೂಚನೆಗಳನ್ನಿಡಬೇಕು —

(೧) ಜಿಲ್ಲಾ ಬೋರ್ಡುಗಳ ಸರಹದ್ದಿನಲ್ಲಿ ಆಮದು-ರಫ್ತು ಆಗುವ ಜಿನಸುಗಳ ಮೇಲೆ ಟರ್ಮಿನಲ್ ಟ್ಯಾಕ್ಸನ್ನಿಡಬೇಕು

(೨) ಸಾರ್ವಭೌಮ ಕಮಿಶನಿನವರು ತಮ್ಮ ರಿಪೋರ್ಟಿನ ... ನೇ ಕಲಮಿನಲ್ಲಿ ನಮೂದಿಸಿದಂತೆ ಈ ಕೆಳಗಿನ ಖಾತೆಗಳನ್ನು ಪ್ರಾಂತಿಕ ಸರಕಾರಕ್ಕೆ ಒಪ್ಪಿಸಬೇಕು

ಆಸ್ಪತ್ರೆ ಹಾಗು ಔಷಧಾಲಯಗಳು,
ದಾಕು ತೆಗೆಯುವದು ಹಾಗು ಆರೋಗ್ಯರಕ್ಷಣೆ,
ಹುಚ್ಚು ನಾಯಿಗಳ ನಿವಾರಣೆ ಹಾಗು ಚಿಕಿತ್ಸೆ
ಪ್ಲೇಗ ಹಾಗು ಬರ

(೩) ಇದಷ್ಟು ಪಕ್ಕಾ ಮಾರ್ಗಗಳನ್ನು ಪ್ರಾಂತಿಕ ಸರಕಾರವು ವಹಿಸಿಕೊಳ್ಳಬೇಕು

( ) ೧೨-೧೦-೧೯೧೮ ನೇಗೆ ಹಿಂದುಸ್ಥಾನ ಸರಕಾರದವರು ಮುಂಬಯಿ ಸರಕಾರಕ್ಕೆ ಬರೆದ [illegible] ಪತ್ರದಲ್ಲಿ ನಮೂದಿಸಿದಂತೆ ಇನಕಮ್ ಟ್ಯಾಕ್ಸ ಹಾಗು ಸುಪರಟ್ಯಾಕ್ಸ ತೆರಿಗೆಗಳ ಒಂದು ಪಾಲನ್ನು ಜಿಲ್ಲಾ ಬೋರ್ಡುಗಳಿಗೆ ಒಪ್ಪಿಸಬೇಕು [illegible] ಕೊಡಲಾಗದಿದ್ದಲ್ಲಿ ಲೂರೆನ್ಸ ಕಮಿಟಿಯವರ [illegible] ಮಾಡಿದ [illegible] ಇನಕಮ್ ಟ್ಯಾಕ್ಸ ಹಾಗು ಸುಪರಟ್ಯಾಕ್ಸ ರಕಮುಗಳ ಮೇಲೆ ರೂಪಾಯಿಗೆ [illegible] ಕರ ಹೇರಿ, ಆ ಉತ್ಪನ್ನವನ್ನು ಜಿಲ್ಲಾ ಬೋರ್ಡುಗಳಿಗೆ ಕೊಡಬೇಕು

(೬) ಕೆರೆಗಳ ಎತ್ತುವಳಿಯ ಕುರಿತು ಚೌಕಶಿ ಮಾಡಿದ ಕಮಿಟಿಯವರು ತಮ್ಮ ರಿಪೋರ್ಟಿನ ೪೯೯ ನೇ ಕಲಮಿನಲ್ಲಿ ಶಿಫಾರಸು ಮಾಡಿದಂತೆ ಸರಕಾರವು ವರ್ತಿಸಬೇಕು

(೭) ಬೇಸಾಯೇತರ ಭೂಮಿಯಿಂದ ಎತ್ತುವಳಿ ಮಾಡಿದ ತೀರ್ವೆಯ ಉತ್ಪನ್ನವನ್ನು ಲೋಕಲ್ ಬೋರ್ಡುಗಳಿಗೆ ಒಪ್ಪಿಸಬೇಕು

(೮) ಮನೋರಂಜನ ಸಾಧನಗಳ ಮೇಲೆ ಹೇರಿದ ಕರದ ಹಕ್ಕುವಳಿಯಲ್ಲಿ ಕನಿಷ್ಠ ಅರ್ಧ ಪಾಲನ್ನು ಮ್ಯುನಿಸಿಪಾಲಿಟಿ ಹಾಗು ಲೋಕಲ್ ಬೋರ್ಡುಗಳಿಗೆ ಹಂಚಬೇಕು

(೯) ಮೋಟಾರ ಬಂಡಿಗಳ ಆದಿಯ ಮೇಲೆ ೨೦ದಿವಸದ ಸರಕಾರವು ಹೇರಿದ ಕರದ ಪ್ರಮಾಣವನ್ನು ಬಹು ಅಂಶದಿಂದ ತಗ್ಗಿಸಬೇಕು, ಮತ್ತು ಪ್ರಾಂತಿಕ ಸರಕಾರದವರು ಅವುಗಳ ಮೇಲೆ ಕರ ಹಾಕಿ ಬಂದ ಉತ್ಪನ್ನವನ್ನು ಬೋರ್ಡುಗಳಿಗೆ ಹಂಚಿಕೊಡಬೇಕು

— ಪಬ್ನಾ ಜಿಲ್ಹೆಯೊಳಗಣ ನಿರ್ಗತಿಕರ ದುಃಖನಿವಾರಣಾರ್ಥ ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯವರು ೧೦೦೦ ರೂಪಾಯಿಗಳನ್ನೂ, ಮುಂಬಯಿಯ ಕೊಂಗ್ರೆಸ ಕಮೀಟಿಯವರೂ, ಮುಂಬಾಪುರಪ್ಪನೂ ೪ ಸಾವಿರ ರೂಪಾಯಿಗಳನ್ನರ್ಪಿಸಿರುವರು. ಬಿಹಾರ ಸರಕಾರದವರು ವಿಶೇಷ ಪೋಲೀಸ ತುಕಡಿಯನ್ನು ಕಳಿಸಿ ಪ್ರಜೆಗಳ ಕಡೆಯಿಂದ ಖರ್ಚನ್ನು ವಸೂಲ ಮಾಡುತ್ತಿರುವರು

— ಶ್ರೀ ಪೃಥ್ವೀಗೀರರವರು ಬರೆದ ‹ ಗೋಸಾವಿ ಹಾಗು ಅವರ ಸಂಪ್ರದಾಯಗಳು ಎಂಬ ಗ್ರಂಥಕ್ಕೆ ಹಳಿಯಾಳದ ರಾವಬಹಾದ್ದೂರ ಗೋವಿಂದ ಗಿರಿಯವರು ೧೦೦ ರೂಪಾಯಿಗಳ ಪಾರಿತೋಷಕವನ್ನರ್ಪಿಸಿರುವರು

ಸ್ಥಾನಿಕ ಸ್ವರಾಜ್ಯ ಪರಿಷತ್ತು.

———0———

ಮುಂಬಯಿ ಇಲಾಖೆಯೊಳಗಣ ಮ್ಯುನಿಸಿಪಾಲಿಟಿ, ಲೋಕಲ್ ಬೋರ್ಡು ಹಾಗು ಗ್ರಾಮ ಪಂಚಾಯತುಗಳ ಪರಿಷತ್ತು ಪುಣೆಯ ಕೌನ್ಸಿಲು ಹೊಲಿನಲ್ಲಿ ಕಳೆದ ತಾರೀಖು ೨೯-೩೦ನೇಗೆ ಜರಗಿತು. ಸ್ಥಾನಿಕ ಸ್ವರಾಜ್ಯ ಖಾತೆಯ ದಿವಾಣರಾದ ನಾ| ಹಿದಾಯಿತುಲ್ಲಾ ರವರು ಅಧ್ಯಕ್ಷರಾಗಿದ್ದರು. ಪರಿಷತ್ತಿಗೆ ಕಾಯಿದೆ ಕೌನ್ಸಿಲಿನ ಅಧ್ಯಕ್ಷರೂ, ಸಭಾಸದರೂ, ಕಾರ್ಯಕಾರಿ ಕೌನ್ಸಿಲಿನ ಮೆಂಬರರೂ, ಇತರ ಪ್ರಮುಖರೂ ಹಾಜರಿದ್ದರು. ಪ್ರಾಂತಾಧಿಪರಾದ ಸರ್ ಲೆಸ್ಲಿ ವಿಲ್ಸನ್ ರವರು ಪರಿಷತ್ತಿನ ನಾಂದೀ ವಚನವನ್ನು ಹೇಳುವಾಗ ನುಡಿದದ್ದೆನಂದರೆ — ದೊಡ್ಡ ಮ್ಯುನಿಸಿಪಾಲಿಟಿಗಳಿಗೆ ವಿಶೇಷ ಅಧಿಕಾರಗಳು ಸದ್ಯಕ್ಕೆ ಕೊಡಲ್ಪಟ್ಟಿವೆ ಚಿಕ್ಕ ಪುಟ್ಟ ಮ್ಯುನಿಸಿಪಾಲಿಟಿಗಳಿಗೆ ಇನ್ನೂ ಹೆಚ್ಚು ಅಧಿಕಾರ ಕೊಡಬೇಕೆಂದು ಸರಕಾರದ ಸಂಕಲ್ಪವಿದೆ. ಪ್ರಾಂತಿಕ ಸರಕಾರದ ಸ್ವಾಧೀನದಲ್ಲಿದ್ದ ಕಟ್ಟಡಗಳನ್ನು, ಸಂಕಗಳನ್ನೂ ಪ್ರಾಂತಿಕ ಸರಕಾರದವರು ಜಿಲ್ಲಾ ಬೋರ್ಡುಗಳಿಗೆ ಒಪ್ಪಿಸಲಿರುವರು ಆ ಕುರಿತು ಲೋಕಲ್ ಬೋರ್ಡುಗಳೊಡನೆ ಚರ್ಚೆ ಮಾಡಿ ಇತ್ಯರ್ಥಪಡಿಸಲು ಸ್ವತಂತ್ರ ಅಧಿಕಾರಿಗಳೊಬ್ಬರು ನೇಮಿಸಲ್ಪಟ್ಟಿರುವರು. ಲೋಕಲ್ ಬೋರ್ಡಿನ ಅಧಿಕಾರಕ್ಷೇತ್ರದಲ್ಲಿದ್ದ ಚಿಕಿತ್ಸಾಲಯಗಳನ್ನೂ, ಮೈಲಿ ತೆಗೆಯುವದನ್ನೂ ಬೋರ್ಡುಗಳಿಗೆ ವಹಿಸುವ ಆಲೋಚನೆ ನಡೆದಿದೆ ಈ ಕಾರ್ಯಗಳನ್ನು ಒಪ್ಪಿಸಿಕೊಂಡರೆ, ಖರ್ಚಿನ ಒಜ್ಜೆಯನ್ನೂ ಬೋರ್ಡುಗಳು ಹೊರಬೇಕಾಗುವದು ಸರಕಾರವು ಕೆಲ ಮಟ್ಟಿಗೆ ದ್ರವ್ಯ ಸಹಾಯವನ್ನು ಮಾಡುವದು ಆದರೆ, ಅದಕ್ಕಾದರೂ ಹಿಂದು ಮುಂದಾಗಿದೆ

ಪ್ರಾಂತಾಧಿಪರು ಈ ಪ್ರಕಾರ ನಾಂದೀ ವಚನವನ್ನಾಡಿದ ತರುವಾಯ ಸ್ಥಾನಿಕ ಸ್ವರಾಜ್ಯ ಖಾತೆಯ ದಿವಾಣರಾದ ನಾ| ಹಿದಾಯಿತುಲ್ಲಾರವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು ಮ್ಯುನಿಸಿಪಾಲಿಟಿ ಹಾಗು ಲೋಕಲ್ ಬೋರ್ಡುಗಳ ಮೇಲೆ ಹೆಚ್ಚೆಚ್ಚು ಜವಾಬದಾರಿ ಬರಹತ್ತಿದೆ ಅದಕ್ಕೆ ತಕ್ಕದಾಗಿ ಮ್ಯುನಿಸಿಪಾಲಿಟಿಗಳು ಸೇವಕವರ್ಗವನ್ನು ತಯಾರಿಸಬೇಕು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಆವಶ್ಯಕತೆಯ ಕುರಿತು ದಿವಾಣರಿಗೆ ಆಲೋಚನಾ ಮಂಡಳವನ್ನು ಕೊಡುವ ಅವಶ್ಯಕತೆಯಿಲ್ಲ ಈ ಯೋಜನೆಯು ಅವ್ಯವಹಾರ್ಯವು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ದ್ರವ್ಯಸಹಾಯ ಮಾಡಲು ಸರಕಾರದ ಹತ್ತರ ಹಣವಿಲ್ಲ. ಸಂಸ್ಥೆಗಳಿಗೆ ಕರ ಎತ್ತುವಳಿ ಮಾಡಲು ಸಾಕಷ್ಟು ಅಧಿಕಾರವು ಕೊಡಲ್ಪಟ್ಟಿದ್ದು ಸರಕಾರಿ ಉತ್ಪನ್ನದಿಂದಲೇ ಈ ಸಂಸ್ಥೆಗಳಿಗೆ [illegible]ಗಬಹುದಾದ ಬಾಬುಗಳು ಎರಡು ಹೀಗೂ ಅಬಕಾರಿ, ಮತ್ತೊಂದು ಭೂಕಂದಾಯವು ಅಬಕಾರಿ ಉತ್ಪನ್ನವು ಇಂದಲ್ಲ, ನಾಳೆ ನಾಮಶೇಷವಾಗುವದು ಭೂಕಂದಾಯವು ಸಂಪೂರ್ಣವಾಗಿ ಮಳೆಯ ಮೇಲೆ ಅವಲಂಬಿಸಿದೆ ಅದರಿಂದ ಅದನ್ನು ನಂಬಿರಲಾಗದು! ಇಂಥ ಪ್ರಸಕ್ತಿಯಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಖರ್ಚನ್ನು ಅನ್ಯ ಉಪಾಯಗಳಿಂದ ಸಾಗಿಸಿಕೊಳ್ಳುವ ಯುಕ್ತಿ ಹುಡುಕಬೇಕು ಎಂಬರ್ಥದ ಭಾಷಣವಾದ ಬಳಿಕ, ಶಿವರ್ನಾನಗಳು ಸೂಚಿಸಲ್ಪಟ್ಟಾದವು ರಾ| ಮಾಸ್ತರೆ, ರಾವಬಹಾದ್ದೂರ ಚಿತಳೇ, ರಾ| ಈಶ್ವರಲಾಲ ಮೇಥಾ,

ಪ್ರೊ| ವಾಮನರಾವ ಕಾಳೇ ಮೊದಲಾದವರು ಉಪಯುಕ್ತ ಠರಾವುಗಳನ್ನು ಸೂಚಿಸಿದ್ದರು. ಅನೇಕ ಠರಾವುಗಳು ಕೈಗೆತ್ತಿಗೆಯಲ್ಪಟ್ಟವು. ಬಹಳ ಚರ್ಚೆಯಿಂದ ಈ ಕೆಳಗಿನ ತೀರ್ಮಾನಗಳು ಮಂಜೂರಾದವು.

(೧) ಸಮಸ್ತ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗಾಗಿ "ಲೋಕಲ್ ಸೆಲ್ಫ ಗವರ್ನಮೆಂಟ ಇನ್‌ಸ್ಟಿಟ್ಯೂಟ" ಎಂಬ ಮಧ್ಯವರ್ತಿ ಸಂಸ್ಥೆ ಹೊಂದಿರಬೇಕು.

(೨) ಇನ್‌ಕಮ್ ಟೆಕ್ಸ ಹಾಗು ಸುಪರಟೆಕ್ಸ ಇವುಗಳ ೪ ನೇ ಒಂದು ಪಾಲನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಕೊಡಬೇಕು ಇದಲ್ಲದೆ, ಇನ್‌ಕಮ್ ಟೆಕ್ಸ ಹಾಗು ಸುಪರಟೆಕ್ಸ ಇವುಗಳ ಮೇಲೆ ರೂಪಾಯಿಗೊಂದಾಣೆಯಂತೆ ಲೋಕಲ್ ಫಂಡನ್ನು ಆಕರಿಸಿ, ಹಾಗೆ ಹುಟ್ಟಿದ ರಕಮನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಒಪ್ಪಿಸಬೇಕು

(೩) ಬೇಸಾಯೋತರ ಭೂಮಿಗಳಿಂದ ಸರಕಾರಕ್ಕೆ ಸಿಗುವ ಹುಟ್ಟುವಳಿಯ ಬಹು ಅಂಶವನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಕೊಡಬೇಕು

(೪) ಮನೋರಂಜಕ ಸಾಧನಗಳ ಮೇಲಿನ ಕರದಿಂದ ಹುಟ್ಟಿದ ಅರ್ಧ ಹಣವನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಕೊಡಬೇಕು.

(೫) ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಾರ್ಯಗಳನ್ನು ನಿರ್ವಹಿಸಲು ತಕ್ಕ ಶಿಕ್ಷಣ ಕೊಟ್ಟು ಸರಕಾರವು ನೌಕರವರ್ಗವನ್ನು ತನ್ನ ಖರ್ಚಿನಿಂದ ತಯಾರಿಸಿ ಕೊಡಬೇಕು.

(೬) ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಪ್ರಜೆಗಳಿಗೆ ಹಕ್ಕು ಎಷ್ಟು, ಅವರ ಜವಾಬದಾರಿಗಳ್ಯಾವವು, ಕರ್ತವ್ಯಗಳ್ಯಾವವು, ಎಂಬ ಬಗ್ಗೆ ಮಾಹಿತಿ ಸಿಗುವಂತೆ ಚಲಚ್ಚಿತ್ರಪಟ, ಉಪನ್ಯಾಸ ಇತ್ಯಾದಿ ಸಾಧನಗಳನ್ನು ಸ್ಥಾನಿಕ ಸಂಸ್ಥೆಗಳು ಸುಸಂಘಟಿತವಾಗಿ ಮಾಡಬೇಕು.

(೭) ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಮಾಹಿತಿಯನ್ನು ವಿವರಪೂರ್ವಕವಾಗಿ ಕೊಡುವ ವಾರ್ಷಿಕ ಗ್ರಂಥಗಳನ್ನು ಸರಕಾರವು ಪ್ರಕಟಿಸಬೇಕು. ಮತ್ತು ಆ ಗ್ರಂಥದ ನಿಯಮಿತ ಪ್ರತಿಗಳನ್ನು ಸ್ವರಾಜ್ಯ ಸಂಸ್ಥೆಗಳು ಕೊಂಡುಕೊಳ್ಳಬೇಕು

(೮) ದಿವಾಣರಿಗೆ ಅಭಿಪ್ರಾಯ ಕೊಡಲು ಇಬ್ಬ ಲೋಕನಿಯುಕ್ತ ಸಭಾಸದರ ಮಂಡಳವೊಂದಿರಬೇಕು

(೯) ೧೦ ವರ್ಷಗಳೊಳಗೆ ಇಡೀ ಪ್ರಾಂತದಲ್ಲಿ ಗ್ರಾಮ ಪಂಚಾಯತಗಳನ್ನು ಸ್ಥಾಪಿಸಬೇಕು ಗ್ರಾಮ ಪಂಚಾಯತಗಳಿಗೆ ದಿವಾಣಿ ಹಾಗು ಫೌಜದಾರಿ ಅಧಿಕಾರಗಳನ್ನು ಕೊಡಬೇಕು. ಸರಕಾರವು ಅವುಗಳಿಗೆ ದ್ರವ್ಯಸಹಾಯವನ್ನೀಯಬೇಕು. ಗ್ರಾಮ ಪಂಚಾಯತಿಯ ಪ್ರಸಾರಕ್ಕಾಗಿ ಒಬ್ಬ ಪ್ರಚಾರಕರನ್ನು ನೇಮಿಸಬೇಕು. ಕರಗಳನ್ನು ಹೇರಬೇಕೋ? ಬಾರದೋ? ಎಂಬುವನ್ನು ಅಲ್ಲಿಯ ರೈತರಿಗೇ ಒಪ್ಪಿಸಬೇಕು.

(೧೦) 'ಲೋಕಲ್ ಸೆಲ್ಫ ಗವರ್ನಮೆಂಟ ಇನ್‌ಸ್ಟಿಟ್ಯೂಟ'ದಲ್ಲಿ ಅಂತು ೩೦ ಸಭಾಸದರಿರಬೇಕು. ಪುಣೆ ಮ್ಯುನಿಸಿಪಾಲಿಟಿಯ ಚೀಫ ಆಫಿಸರರಾದ ರಾ| ಎಸ್. ಆರ್ ಭಾಗ್ವತರವರು ಆ ಇನ್‌ಸ್ಟಿಟ್ಯೂಟದ ಕಾರ್ಯದರ್ಶಿಗಳಾಗಿರಬೇಕು.

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ದೊರೆತ ಮಾಹಿತಿ

ಅಹಮ್ಮದಾಬಾದದಲ್ಲಿ ೧೯೨೫ ನೇ ಇಸ್ವಿಯ ಡಿಶಂಬರ ೭-೮ನೇ ತಾರೀಖಿಗೆ ಸೇರಿದ ಗುಜರಾಥ ಪ್ರಾಂತಿಕ ವೈದ್ಯ ಪರಿಷತ್ತಿನಲ್ಲಿ ಮಂಜೂರಾದ ತೀರ್ಮಾನಗಳು ಮುಂಬಯಿ ಸರಕಾರಕ್ಕೆ ಸಾದರವಾಗಿವೆ ಮುಂಬಯಿ ಪ್ರಾಂತದಲ್ಲಿ ಒಂದು ಆಯುರ್ವೇದ ವಿದ್ಯಾಲಯವನ್ನು ಸ್ಥಾಪಿಸಬೇಕಾಗಿಯೂ, ಗ್ರಾಮಗಳ ಆರೋಗ್ಯರಕ್ಷಣಕ್ಕಾಗಿ ಅಖಿಲ ಭಾರತೀಯ ಆಯುರ್ವೇದ ವಿದ್ಯಾಪೀಠದ 'ಭಿಷಕ್' ಯಾ 'ವಿಶಾರದ' ರನ್ನು ನೇಮಿಸಿಕೊಳ್ಳಬೇಕಾಗಿಯೂ ಈ ತೀರ್ಮಾನಗಳಲ್ಲಿ ಬೇಡಿಕೊಳ್ಳಲಾಗಿದೆ ಸರಕಾರವು ಈ ಕುರಿತು ಏನೂ ವ್ಯವಸ್ಥೆ ಮಾಡಲಿಲ್ಲ ಇತ್ಯಾದಿ ಮಾಹಿತಿಯು ಶ್ರೀ| ಸ್ವಾಮಿನಾರಾಯಣರಿಗೆ ದೊರಕಿದೆ.

* * *

ಮುಂಬಯಿಯ ಪರೇಲದೊಳಗಿನ ಪ್ರಯೋಗಶಾಲೆಯಲ್ಲಿ ವನಸ್ಪತಿಗಳ ಗುಣಧರ್ಮಗಳನ್ನು ಶೋಧಿಸುವ ಕಾರ್ಯ ನಡೆದಿದೆ ವನಸ್ಪತಿಗಳನ್ನು ಚಿಕಿತ್ಸಾಲಯಗಳಲ್ಲಿ ಉಪಯೋಗಿಸಿ ದೊರೆಯುವ ಫಲವನ್ನು ಪರೀಕ್ಷಿಸುವ ಉಪಾಯಯೋಜನೆ ನಡೆದಿದೆ ಮದ್ರಾಸ ಸರಕಾರದವರು ಹಿಂದೀ ವೈದ್ಯಶಾಲೆಯನ್ನು ಸ್ಥಾಪಿಸಿರುವರು. ಮದ್ರಾಸ ಸರಕಾರವು ಈ ಪ್ರಯೋಗದಿಂದ ಮಾಡಿದ ಕಾರ್ಯವನ್ನು ನೋಡಿ, ಮುಂಬಯಿ ಸರಕಾರದವರು ಈ ಕುರಿತು ವಿಚಾರ ಮಾಡಲಿರುವರು ಆದರೆ ಹಿಂದೀ ವೈದ್ಯಶಾಲೆಯ ಯೋಜನೆಯನ್ನು ಮುಂಬಯಿ ಸರಕಾರಕ್ಕೆ ಸ್ಥಾಪಿಸುವ ವಿಚಾರವಿಲ್ಲ ಮದ್ರಾಸ ಸರಕಾರದ ಪ್ರಯೋಗವು ಯಶಸ್ವಿಯಾದಲ್ಲಿ, ಮುಂಬಯಿ ಸರಕಾರವು ಅಂಥದೊಂದು ಶಾಲೆಯನ್ನು ಸ್ಥಾಪಿಸುವ ವಿಚಾರ ಮಾಡಿದ್ದಲ್ಲಿ, ಅದಕ್ಕೆ ಅವಶ್ಯವುಳ್ಳ ಶಿಕ್ಷಕರನ್ನು ಮದ್ರಾಸ ಪ್ರಾಂತದಿಂದ ದೊರಕಿಸಿಕೊಳ್ಳಲಿಕ್ಕೆ ಮುಂಬಯಿ ಸರಕಾರಕ್ಕೆ ಅನುಕೂಲವಾಗುವದಾಗಿದೆ. ಸಂಯುಕ್ತ ಪ್ರಾಂತದಲ್ಲಿ ಹಿಂದೀ ವೈದ್ಯಶಾಲೆಯಾದ ಸುದ್ದಿಯು ಮುಂಬಯಿ ಸರಕಾರಕ್ಕೆ ದೊರೆತಿದ್ದಿಲ್ಲ ಇತ್ಯಾದಿ ಮಾಹಿತಿಯು ರಾ| ಪಟೇಲರವರಿಗೆ ದೊರೆತಿದೆ

* * *

ಧಾರವಾಡದ ವಿದ್ಯಾವರ್ಧಕ ಸಂಘಕ್ಕೆ ಮುಂಬಯಿ ಸರಕಾರವು ೧೯೦೬ನೇ ಇಸ್ವಿಯಿಂದ ರೂಪಾಯಿ ೫೦೦ ರಂತೆ ಗ್ರಾಂಟು ಕೊಡುತ್ತದೆ, ಎಂಬ ಮಾಹಿತಿಯು ರಾವಬಹಾದ್ದೂರ ಕಂಬಳಿಯವರಿಗೆ ದೊರೆತಿದೆ

* * *

ಬಂಗಾಲ ಇಲಾಖೆಯಲ್ಲಿ ಹೆಂಡದಿಂದ ಬೆಲ್ಲ ಮಾಡಲು ಲೈಸೆನ್ಸು ಅವಶ್ಯವಿಲ್ಲ ಮದ್ರಾಸ ಇಲಾಖೆಯಲ್ಲಿ ಕೆಲ ಸಂಗತಿಗಳಲ್ಲಿ ಮಾತ್ರ ಲೈಸೆನ್ಸು ಕೊಳ್ಳಬೇಕಾಗಿದೆ ಮುಂಬಯಿ ಇಲಾಖೆಯಲ್ಲಿ ಕೊಯ್ದ ಮರಗಳ ರಸದಿಂದ ಮಾಡುವ ಬೆಲ್ಲದ ಮೇಲೆ ಪ್ರತಿಬಂಧಗಳು ಇಡಲ್ಪಟ್ಟಿವೆ. ಬೆಲ್ಲ ಮಾಡುವ ನೆವದಿಂದ ಶೇಂದಿ ತಂದು, ಅದು ಕಳುವಿನಿಂದ ಮಾರಾಟವಾಗದಂತೆ ಮುಂಜಾಗ್ರತೆ ಕೊಳ್ಳಲು ಈ ಪ್ರತಿಬಂಧವಿಡಲ್ಪಟ್ಟಿದೆ ಮುಂಬಯಿ ಸರಕಾರವು ಸಂಪೂರ್ಣವಾಗಿ ಮದ್ಯಪಾನದ ಉಚ್ಚಾಟನವನ್ನು ಮಾಡುವದಾಗಿ ಅಭಿವಚನವನ್ನಿತ್ತಿರುವದು ಈ ಅಭಿವಚನಕ್ಕನುಗುಣವಾಗಿ ಸರಕಾರವು ಶೇಂದಿಯ ಮೇಲೆ ಕ್ರಮವಾಗಿ ಪ್ರತಿಬಂಧಗಳನ್ನಿಡುತ್ತ ಬಂದಿದೆ. ಸದ್ಯಕ್ಕೆ ಇಂಥ ಬೆಲ್ಲಕ್ಕೆ ಗಿರಾಕಿಗಳಿಲ್ಲ ಶೇಂದಿ ಕುಡಿಯುವದು ದೊಡ್ಡ ಚಟವಾದ್ದರಿಂದ ಬೆಲ್ಲಕ್ಕಾಗಿ ತಂದ ಶೇಂದಿಯನ್ನು ಬೆಲ್ಲಕ್ಕೇ ಪ್ರಯೋಗಿಸುತ್ತಾರೆಂದು ಸರಕಾರವು ಮೇಲುಪಾಕ ಇಡಲಿಕ್ಕೆ ದೊಡ್ಡ ನಿಬಂಧಿಯನ್ನು ಇಡಬೇಕಾಗುವದು. ಪ್ರಕೃತ ಸ್ಥಿತಿಯಲ್ಲಿ ಇಂಥ ನಿಬಂಧಿಯನ್ನಿಡಲು ಸರಕಾರವು ತಯಾರಿಲ್ಲ. ೧೯೨೩ ನೇ ಇಸ್ವಿಯಲ್ಲಿ ಆದ ಹೊಸ ನಿಯಮಗಳಿಂದ ಈ ಬೆಲ್ಲ ಮಾಡುವ ಉದ್ಯೋಗವು ನಿಂತು ಹೋಗಿದೆ. ಬೇಸಾಯ ಖಾತೆಯ ವಿದ್ಯಮಾನ ಪ್ರಾಂತಿಕ ಬೋರ್ಡುಗಳು ಸರಕಾರಕ್ಕೆ ಮಾಡಿಕೊಂಡ ಅರ್ಜಿಗಳು ಸರಕಾರಕ್ಕೆ ಸಾದರವಾಗಿವೆ. ಇತ್ಯಾದಿ ಮಾಹಿತಿಯು ರಾ| ಪ್ರಧಾನರವರಿಗೆ ದೊರಕಿದೆ.

* * *

೧೮೭೩ ನೇ ಇಸ್ವಿಯಲ್ಲಿ ತಸ್ತೀಕ ಸಿಗುವ ದೇವಾಲಯ ಹಾಗು ಮಸೀದಿಗಳ ಪೈಕಿ ಎಷ್ಟು ನಾಶವಾದವು? ಎಂಬ ಸಂಗತಿಯನ್ನು ಸರಕಾರವು ಅರಿತಿರುವದಿಲ್ಲ ತಸ್ತೀಕ, ದೇವಾಲಯದವರು ಒಯ್ಯದೆ ಬಾಕಿ ಬಿದ್ದ ಲೆಕ್ಕವಿದೆ ಬಾಕಿ ಬೀಳಲು ಕಾರಣವೇನೆಂದು ಶ್ರೀ| ಕರ್ಕಿಯವರು ಕೇಳಲು, ತಸ್ತೀಕು ಒಯ್ಯದಿದ್ದದ್ದೇ ಕಾರಣವೆಂದು ನಾ| ಗೂಡರವರು ಉತ್ತರ ಕೊಟ್ಟರು "ತಸ್ತೀಕು ಕೊಡುವ ಕಾರಣವೇನು? ಮತ್ತು ತಸ್ತೀಕಿನ ರಕಮು ಹೇಗೆ ನಿಶ್ಚಯಿಸೋಣಾಯಿತು?" ಎಂದು ಶ್ರೀ| ಕರ್ಕಿಯವರು ಪ್ರಶ್ನಿಸಿದರು. ಭೂಮಿಯಿದ್ದವರು ದೇವಾಲಯ ಹಾಗು ಮಸೀದಿಗಳಿಗೆ ಹಣ ಕೊಡುತ್ತಿದ್ದರು. ಮತ್ತು ಹೀಗೆ ಅವರು ಕೊಟ್ಟ ಹಣವನ್ನು ಸರಕಾರವು ಅವರಿಗೆ ಸೂಟ ಬಿಡಬೇಕಾಗಿತ್ತು ಹೀಗೆ ದ್ವಿವಿಧ ವ್ಯಾಪಾರ ಮಾಡುವ ಬದಲು, ಸರಕಾರವು ಸೂಟು ಬಿಡುವ ಪದ್ಧತಿಯನ್ನು ರದ್ದುಪಡಿಸಿ, ದೇವಾಲಯ-ಮಸೀದಿಗಳಿಗೇ ನೆಟ್ಟಗೆ ತಸ್ತೀಕು ಕೊಡಹತ್ತಿತು ಇತ್ಯಾದಿ ಮಾಹಿತಿಯು ಶ್ರೀ| ಕರ್ಕಿಯವರಿಗೆ ದೊರೆತಿದೆ

BATLIBOI'S
Accountancy Training Institute
Recognised by
The G. D. A. Board

Offers best training in Accounting, Banking, Company Management and Secretarial Work and Theory and Practice of Commerce

Best staff, Individual attention fee moderate, and payable by instalments

Send for Prospectus at Yusuf Buildings Churchgate street, Fort, Bombay

You are invited to make thorough enquiry before joining.

TUITION BY POST
IS OUR SPECIALITY

ಕಾನಡಾವೃತ್ತ.

ಮಿತಿ ಕ್ಷಯ ಸಂ। ಶ್ರಾವಣ ಶು ೧ ದ, ಸೋಮವಾರ

ಲೋಕಲ್ ಫಂಡಿನ ಏರಿಕೆ

(ಲೇಖಾಂಕ ೬)

ಲೋಕಲ್ ಫಂಡಿನ ಏರಿಕೆಯ ಕುರಿತು ನಮ್ಮ ಆಳರಸರ ಧೋರಣವನ್ನು ಸಂಕ್ಷಿಪ್ತವಾಗಿ ಇಂದಿಗೆ ವಿಚಾರಿಸಬಯಸುವೆವು ನಮ್ಮ ಆಳರಸರು ರಾಜ್ಯಾಡಳಿತೆಯ ಖರ್ಚನ್ನು ಪರಿಮಿತವಾಗಿ ಬೆಳೆಸಿರುವರಷ್ಟೇ ಸೈನ್ಯ ಖರ್ಚು, ಆಳರಸರ ಸಂಬಳದ ಖರ್ಚು ಮುಂತಾದ ಖರ್ಚುಗಳನ್ನು ಏರಿಸಿ, ಅವುಗಳಿಗಾಗಿ ಕರಗಳನ್ನು ಒಂದರ ಮೇಲೊಂದು ಹೇರುತ್ತಾರೆ ಅವಶ್ಯಕವೆಂದು, ಅಧಿಕವೆಂದು ಹೇಳಿದ ಕರಗಳನ್ನು, ಆಳರಸರು ಅವಶ್ಯವಾಗಿ ಹೇಳಿದ ಬಳಿಕ ತಾವಾಗಿ ತಗ್ಗಿಸಿದ ಉದಾಹರಣೆಗಳು ಸಹ್ಸ್ರಾಗಿ ತೋರಿಸಿದರೂ, ಶಿಗುವ ಹಾಗಿಲ್ಲ ಆ ಕರಗಳ ಉತ್ಪನ್ನವನ್ನು ತಮ್ಮ ಸ್ವಾರ್ಥಸಾಧನೆಗಾಗಿ ವಿನಿಯೋಗಿಸಿ, ಲೋಕೋಪಕಾರಿ ಕಾರ್ಯಗಳ ನಾಮನಿರ್ದೇಶವಾದ ಕೂಡಲೆ, ಹಣವಿಲ್ಲೆಂಬ ಸೋಗುಹಾಕಿಕೊಂಡು ಪ್ರಜಾಕಲ್ಯಾಣಕ್ಕಾಗಿ ಆಳರಸರೊಡನೆ ಸಾಹಚರ್ಯ ಬೆಳೆಸಹೋದ ಲೋಕಧುರೀಣರಿಗೆ ಅವರು ದೇಶಬಾಂಧವರ ಮೇಲೆ ಕರ ಹೇರಲು ಹುರಿದುಂಬಿಸುತ್ತಾರೆ ಲೋಕಧುರೀಣರೇನು ಹಿಂದಿನ ಕರಗಳ ಕಾರಣವನ್ನು ಪರ್ಯಾಲೋಚಿಸ ಲಿಲ್ಲ, ಅದನ್ನು ಪರ್ಯಾಲೋಚಿಸಹೋದರೆ, ಅಧಿಕಾರಿಗಳು ಲೋಕಧುರೀಣರೆಂದು ಇವರಿಗೆ ಹೇಳುವದಿಲ್ಲ ಆಳರಸರು ಹೇರುವ ಕರಗಳೆಲ್ಲ ಪ್ರಜಾಕಲ್ಯಾಣ ಕಾರ್ಯಗಳಿಗಾಗಿದ್ದು, ಪ್ರಜಾಕಲ್ಯಾಣ ಮಾಡಹೇಳಿದಾಗ ಪ್ರತ್ಯೇಕ ಕರಗಳನ್ನು ಹೇರಹೇಳುವದು ರಾಜಧರ್ಮವಲ್ಲ

ಶಿಕ್ಷಣ ಬೇಕೋ? ಒಂದು ಕರ ತೆರಿರಿ, ಆರೋಗ್ಯರಕ್ಷಣ ಬೇಕೋ? ಇನ್ನೊಂದು ಕರ ತೆರಿರಿ, ಈಗ ಇದ್ದ ಕರವನ್ನು ಏರಿಸಿರಿ ಶಹರಸುಧಾರಣೆ ಬೇಕೋ? ಮ್ಯುನಿಸಿಪಾಲಿಟಿಯನ್ನು ಸ್ಥಾಪಿಸಿರಿ, ಹಳ್ಳಿಗಳ ಸುಧಾರಣೆ ಬೇಕೋ? ಲೋಕಲ್ಫಂಡು ತೆರಿರಿ ಬೋರ್ಡುಗಳನ್ನಿಟ್ಟುಕೊಳ್ಳಿರಿ, ಕಾರಖಾನೆಗಳ ಹಾವಳಿಯಾಗುತ್ತಿದೆಯೋ? ಖರ್ಚು ಕೊಟ್ಟು ಬೇಟೆಗಾರರನ್ನು ಕರೆದೊಯ್ದು ಬೆಳೆರಕ್ಷಣೆ ಮಾಡಿಕೊಳ್ಳಿರಿ. ಹೀಗೆಲ್ಲ ಪ್ರತಿಪ್ರತ್ಯೇಕ ಪ್ರಜಾಕಲ್ಯಾಣದ ಯೋಜನೆಗಳಿಗೆ ನಾವು ಪ್ರತಿಪ್ರತ್ಯೇಕ ಕರ ಕೊಡಬೇಕಾದಲ್ಲಿ ತೀರ್ವೆ ಕೊಡುವದು ಯಾವ ಬಗ್ಗೆ? ನಾವನುಭವಿಸುವ ಭೂಮಿಯು, ಆಳರಸರು ಇಂಗ್ಲಂಡದಿಂದ ಗಂಟುಕಟ್ಟಿಕೊಂಡು ಬಂದದ್ದಲ್ಲ ರೈತರಿಗೆ ರಕ್ಷಿಸಬೇಕೆಂದು, ಪೈರು ನಷ್ಟವಾಗದಂತೆ ಆಳರಸರು ಉಪಾಯಯೋಜನೆ ಮಾಡಬೇಕೆಂದು ತೀರ್ವೆ ತೆರೋಣಾಗುತ್ತದೆ ಬೆಳೆ ರಕ್ಷಣೆಗಾಗಿ ನಮಗೆ ಪ್ರತ್ಯೇಕ ಯೋಜನೆ ಮಾಡಿಕೊಳ್ಳಹೇಳುವದು ಉಚಿತವಲ್ಲ ಪ್ರಜೆಗಳಿಗೆ ಜ್ಞಾನದಾನ ಮಾಡುವದು, ಪ್ರಜೆಗಳ ಆರೋಗ್ಯ ರಕ್ಷಣ ಮಾಡುವದು ಮುಂತಾದ ಕರ್ತವ್ಯಗಳನ್ನೆಲ್ಲ ಆಳರಸರು ಕೈಕೊಂಡು ಹೊರಗಾಣಿಸಲು ಬದ್ಧರಿದ್ದಾರೆ ಅವನ್ನು ಅವರು ಮಾಡದಿದ್ದರೆ, ಆ ಕುರಿತು ನಾವು ತಕ್ಕ ಉಪಾಯಯೋಜನೆ ಮಾಡಬೇಕಲ್ಲದೆ, 'ನೀವು ಕೊಡುವದಿಲ್ಲಾದರೆ ಇಲ್ಲ ನಾವೇನೋ ಡಿಕೊಳ್ಳುತ್ತೇವೆ' ಎಂಬ ಪುಕ್ಕತನದ ಕಲ್ಪನೆ ಮಾಡಿಕೊಂಡು ಹೊಸ ಕರಗಳನ್ನು ಹೇರಿಕೊಳ್ಳುವದು ಎಂದೂ ಶ್ರೇಯಸ್ಕರವಲ್ಲ

ಮತ್ತೊಂದು ಮಾತನ್ನು ನಾವು ಹೇಳಬೇಕಾಗಿದೆ ಆಳರಸರು ಕಣ್ಣವಿದ್ದ ಉಪಾಯಗಳಿಂದ ಕರಗಳನ್ನು ಪ್ರಜೆಗಳ ಮೇಲೆ ಹೇರಿ ಜನರಿಗೆ ಅಪ್ರಿಯರಾಗಿರುವರು. ಅಪ್ರೀತಿಯು ಪ್ರತ್ಯಕ್ಷವಾಗಿ ಇನ್ನೂ ಸ್ಫುಟವಾಗಿ ಇದಿರಾಗದಿದ್ದರೂ ಆಳರಸರಿಗೆ ಅಪ್ರೀತಿಯ ಅಸ್ತಿತ್ವವು ಗೊತ್ತಿರುವದು ಹೀಗೆಯೇ ಎಳೆಯುತ್ತ ನಡೆದರೆ, ಎಲ್ಲಿ ಹರಿಯುತ್ತದೋ ಎಂಬದೊಂದು ಭೀತಿಯು ಅವರಿಗುಂಟು ಯಾರಿಗಾದರೂ ಇರಲೇ ಬೇಕಲ್ಲವೇ? ಇಂಥ ಪ್ರಸಕ್ತಿಯಲ್ಲಿ ಜನರ ಅಸಂತೋಷದ ಪ್ರವಾಹವನ್ನು ಜನರ ಮೇಲೆಯೇ ತಿರುಗಿಸಲು ಆಳರಸರು ಯತ್ನಿಸುತ್ತಾರೆ ಆದ್ದರಿಂದ ಲೋಕಲ್‌ಬೋರ್ಡು, ಮ್ಯುನಿಸಿಪಾಲಿಟಿಗಳಂಥ ಖೊಟ್ಟಿ ಸ್ವರಾಜ್ಯವು ನಮ್ಮ ಕೊರಳಸುತ್ತ ಹಾಕಿಯದೆ ಈ ಸ್ವರಾಜ್ಯ ಸಂಸ್ಥೆಗಳಿಗೆ ಜನರಿಂದ ಪರಸ್ಪರ ಹಣ ಎತ್ತಿ, ಪರಸ್ಪರ ಜನರ ಕಲ್ಯಾಣ ಮಾಡುವ ಅಧಿಕಾರವು ಬೇಕಷ್ಟು ಕೊಡಲ್ಪಟ್ಟಿದೆ ಈ ಸಂಸ್ಥೆಗಳಲ್ಲಿ ಸೇರುವವರಿಗೆ ಲೋಕಮತದ ಬೆಂಬಲವಿರಬೇಕೆಂದು ಇಲೆಕ್ಷನು ಮೊದಲಾದ ಮುಂತಾದ ವಿಧಿಗಳು ನಿಯಮಿಸಲ್ಪಟ್ಟಿವೆ ಈ ವಿಧಿಗಳಿಂದ ಸಂಸ್ಥೆಗಳನ್ನು ಸೇರಿದ ಬಳಿಕ ಇವರಿಗೆ ಜವಾಬದಾರಿ ಬರುತ್ತದೆ "ಹಾಗೆ ಮಾಡಬೇಕು ಹೀಗೆ ಮಾಡಬೇಕು, ಹಾಗೆ ಮಾಡಲು ಇಂಬಿದೆ ಹೀಗೆ ಮಾಡಲು ಅಧಿಕಾರವಿದೆ, ನಾವು ಹಳ್ಳಿಗಳನ್ನು ಉದ್ಧರಿಸಬಹುದು, ಪಟ್ಟಣಗಳಿಗೆ ಕಳೆಸ ಹಾಕಬಹುದು," ಮುಂತಾದ ಲೋಕೋಪಕಾರದ ಕಲ್ಪನೆಗಳನ್ನು ಇವರು ಹೇಳುತ್ತಾರೆ ಈ ಕಲ್ಪನೆಗಳು ಮೊಂಬಗರಲ್ಲಿ ಬಡಮೂಡಿದ ಕೂಡಲೆ, ಆಳರಸರು ಕೃತಕೃತ್ಯರಾದರು "ತಮ್ಮ ಮೇಲಿನ ಪ್ರಜಾಕಲ್ಯಾಣದ ಜವಾಬದಾರಿಯು ಹೋಯಿತು ಬೋರ್ಡುಗಳಿಗೆ ಜವಾಬದಾರಿಯನ್ನು ಒಪ್ಪಿಸಿದ ಬಳಿಕ ತಾವು ಮಾಡುವದೇನು ಉಳಿಯಿತು! ಪ್ರಜೆಗಳನ್ನಾಳುವ ಮೂಲ ಕರ್ತವ್ಯವು ತಮ್ಮದೆಂದು ಪ್ರಜೆಗಳಾದರೂ ಎಲ್ಲಿ ತಿಳಿಯಬಲ್ಲರು? ಪ್ರಜೆಗಳಿಂದ ಎತ್ತಿದ ಸಾಮಾನ್ಯ ಕರಗಳನ್ನು ಈ ಸ್ವರಾಜ್ಯ ಚಾಲಕರಿಗೆ ತಾವು ಯಾಕೆ ಕೊಡಬೇಕು? ಸ್ವರಾಜ್ಯ ಚಾಲಕರು ಸ್ವರಾಜ್ಯ ಖರ್ಚನ್ನು ಆದಷ್ಟು ಎತ್ತುವಳಿ ಮಾಡಿ ತಮ್ಮ ಕೆಲಸವನ್ನು ನೀಗಿಸುವರು. ಬೇಕಾದರೆ ಅವರಿಗೆ ತಾವು ಹೊಸ ಕರಗಳನ್ನೆತ್ತುವ ಅಧಿಕಾರ ಕೊಟ್ಟರಾಯಿತು. ಹೊಸ ಉದ್ಧಾರದ ಯೋಜನೆಗಳ ಕಲ್ಪನೆಗಳನ್ನು ಅವರು ಪ್ರಜೆಗಳಿಗೆ ಹೇಳಿ, ಹೊಸ ಕರಗಳ ಎತ್ತುವಳಿ ಮಾಡುವರು ಹಾಗೆ ಅವರು ಸಮಾಧಾನ ಹೇಳದಿದ್ದರೂ, ಹೊಸ ಕರಗಳನ್ನು ಹೇರಿದ ಅಪ್ರೀತಿಯೇನು ತಮ್ಮ ಮೇಲೆ ಹೊರುವದಿಲ್ಲ, ಹಳೇ ಕರಗಳ ಬಗ್ಗೆ ಇದ್ದ ಅಪ್ರೀತಿಯೂ ಕೂಡ ಈ ಹೊಸ ಕರಗಳ ಎತ್ತುವಳಿಯಿಂದ ಕುಗ್ಗುವದು." ಇತ್ಯಾದಿ ವಿಚಾರಗಳನ್ನು ಆಳರಸರು ಮಾಡುತ್ತಾರೆ ಸ್ಥಿತಿಯಾದರೂ ಹಾಗೆಯೇ ಅಲ್ಲವೇ! ಮೊಟ್ಟಮೊದಲು ಲೋಕಲ್ಫಂಡಿನ ಕಾಯಿದೆಯನ್ನು ಪಠಿಸಿ, ರೂಪಾಯಿಗೊಂದಾಣೆಯಂತೆ ಎತ್ತುವಳಿ ಮಾಡುವಾಗ ಯಾವ್ಯಾವ ಪುಣ್ಯಾತ್ಮರು ಎಷ್ಟೆಷ್ಟು ಒದ್ದಾಡಿದ್ದರೋ ಏನೋ! ಈಗ ನಾವು ಒಂದಾಣೆಯ ಸುದ್ದಿ ಎತ್ತುತ್ತೇವೇನ! ರೂಪಾಯಿಗೆ ಹದಿನೇಳು ಆಣೆ ಎಂಬುದು ಈಗ ನಮಗೆ ಸಹಜವಾಗಿರುವದಲ್ಲವೇ!!!

ಮತ್ತೊಂದು ಕೌತುಕವನ್ನು ಆಳರಸರು ಯೋಚಿಸಿದಂತೆ ತೋರುತ್ತದೆ ಲೋಕಲ್ ಫಂಡನ್ನು ಎರಡಾಣೆ ವರೆಗೆ ಏರಿಸುವ ಅಧಿಕಾರವನ್ನು ಪ್ರಜೆಗಳಿಗೆ ಕೊಟ್ಟದ್ದು ಮಹಾದೊಡ್ಡ ಅಧಿಕಾರವು. ಬಿಲ್ಲಿ, ಅರ್ಧಾಣೆ, ಮುಕ್ಕಾಲಾಣೆ, ಇಡೀ ಒಂದಾಣೆ ಎಷ್ಟು ಬೇಕಾದಷ್ಟು ಏರಿಸಿಕೊಳ್ಳಲು ಪ್ರಜೆಗಳಿಗೆ ಸ್ವಾತಂತ್ರ್ಯವಿದೆ. ಪ್ರಜೆಗಳು ಏರಿಸುವ ತೀರ್ಮಾನ ಮಾಡಿದ ಕೂಡಲೆ, ಅದನ್ನು ಆಳರಸರು ವಸೂಲ ಮಾಡಿಕೊಡುತ್ತಾರೆ ಮುಂಬರುವದಿಗೇನು ಖರ್ಚಿಲ್ಲ, ಮುಂಬರುವ ತಮ್ಮ ಕಾಲ ಮೇಲೆ ತಾವು ಕೊಡ್ಲಿ ಹಾಕಿಕೊಳ್ಳಲು ಸಿದ್ಧರಾಗಿ ನಿಂತರಾಯಿತು. ಮುಂದಿನ ಕ್ರಮವನ್ನೆಲ್ಲ ಆಳರಸರು ನಡಿಸುತ್ತಾರೆ ಇದು ತೀರ ಸುಲಭ ಮಾತಲ್ಲವೇ? ಖರ್ಚಿಯ ಮೇಲೆ ಕೂತುಕೊಂಡು ಕಳೆದುಗಿಸಿದ ಕೂಡಲೆ ದ್ರವ್ಯಸಂಗ್ರಹವಾಗುತ್ತದೆ. ಈ ವಿಚಾರದಿಂದಲೇ 'ಧುರೀಣ' ವು ಇದಕ್ಕೆ 'ಸುಲಭವಾದ ದುಬ್ಬರಿ'ಯೆಂದು ಸಂಬೋಧಿಸಿತು. ಆಳರಸರ ಈ ಯುಕ್ತಿಯಲ್ಲಿ ಒಂದು ಮರ್ಮವಿದೆ ಕರ ಹೇರಿಕೆಗೆ ಆಕ್ಷೇಪಿಸುವವರು ಪ್ರಚಲಿತ ಸ್ಥಿತಿಯಲ್ಲಿ ಇದ್ದೇ ಇರುವರು ಆಳರಸರು ಕರ ಹೇರಿದರೆ, ಜನರ ದೃಷ್ಟಿಯು ಆಳರಸರ

ಮೇಲೆ ಹೋಗುತ್ತದೆ. "ಆ ಖಂಜೀರನ್ನು ತಗ್ಗಿಸಿರಿ, ಹೀಗೆ ಧುಂದುಗಾರಿಕೆ ಮಾಡಬೇಡಿ." ಮುಂತಾದ ಮಾತುಗಳನ್ನು ಪ್ರಜೆಗಳು ಎತ್ತುತ್ತಾರೆ. ಆಳರಸರೊಂದು ಕಡೆ, ಪ್ರಜೆಗಳೊಂದು ಕಡೆ ಹೀಗೆ ಪಕ್ಷಗಳಾಗುತ್ತವೆ. ಈಗ ಹಾಗೇನಿಲ್ಲ. ಪ್ರಜೆಗಳಲ್ಲಿಯೇ ಇತ್ತಂಡಗಳು! ಒಬ್ಬರು ಕರ ಹೇರಿಕೊಂಡು ಲೋಕೋಪಕಾರ ಮಾಡಬಯಸುವವರು, ಇನ್ನೊಬ್ಬರು ಕರ ಹೇರದೆ ಲೋಕೋಪಕಾರ ಮಾಡುವವರು ಇಬ್ಬರೂ, ಲೋಕೋಪಕಾರ ಮಾಡುವವರೇ! ಹೀಗೆ ಜನರೊಳಗೇ ವೈಷಮ್ಯಗಳುಂಟಾಗುತ್ತವೆ ಇವುಗಳನ್ನು ನೋಡಿ ಆಳರಸರು ಸಂತೋಷದಿಂದ ನಗುತ್ತಿರುತ್ತಾರೆ. ತಮ್ಮ ಮೇಲಿನ ಜವಾಬದಾರಿಯೂ ತಪ್ಪಿತು, ಹಣವೂ ಉಳಿಯಿತು. ಇದಕ್ಕೆ ಹೆಚ್ಚಿಗೆ ಅವರಿಗೇನು ಬೇಕು?

ಆಳರಸರ ವಿಚಾರಧೋರಣವನ್ನು ನಾವು ವಿವರಿಸುವೆವು ಆಳರಸರ ಚಿರಪರಿಚಯವಿದ್ದ ಜಿಲ್ಲಾ ಬೋರ್ಡಿನ ಮೆಂಬರರಿಗೆ ನಾವು ವಿಶೇಷವಾಗಿ ಏನೂ ಹೇಳಬೇಕಾಗಿಲ್ಲ ಯಾವದೇ ಕರವನ್ನು ಹೇರಬೇಕಾದರೆ, ನೀವು ಸೂಕ್ಷ್ಮವಾಗಿ ವಿಚಾರಮಾಡಿರಿ, ಆಳರಸರ ರಾಜ್ಯಧೋರಣವನ್ನು ವಿಚಾರಿಸಿರಿ, ಕರದ ಯೋಗ್ಯಾಯೋಗ್ಯತೆಯನ್ನು ವಿಚಾರಿಸಿರಿ, ಈ ಕರದಿಂದ ನೀವು ಸಾಧಿಸಬಹುದಾದ ಜನರ ಕಲ್ಯಾಣವನ್ನು ವಿಚಾರಿಸಿರಿ, ಮತ್ತು ಮುಂದಾಗಿರಿ

ಸ್ಫುಟ ಸೂಚನೆಗಳು.

೧. ಭಾರತೀಯ ರಾಜಕಾರಣದಲ್ಲಿ ಹಿಂದು ಅನಪೇಕ್ಷಿತವಾದ ಸ್ಥಿತ್ಯಂತರವುಂಟಾಗಿದೆ. ಕಲಕತ್ತೆಯಲ್ಲಿ ಹಿಂದೂ-ಮುಸಲ್ಮಾನರ ದೊಂಬಿಯಿಂದ ಉಂಟಾದ ಅನರ್ಥವನ್ನು ವಾಚಕರು ಅರಿತಿರುವರು. ಅದನ್ನು ಪರಿಹರಿಸಲು, ಪಂಡಿತ ಮೋತಿಲಾಲ ನೆಹರು, ಮೌಲಾನಾ ಅಬುಲ್ ಕಲಮು ಆಝಾದ ಪ್ರಭೃತಿ ಹಿಂದೂ-ಮಹಮ್ಮದೀಯ ಲೋಕನಾಯಕರು ಪ್ರಯತ್ನ ಪಡುತ್ತಲಿರುವರು. ಆಳರಸರೂ ದಬ್ಬಾಳಿಕೆಯ ಕಾನೂನಿನನ್ವಯ ಪ್ರಜೆಗಳನ್ನು ಪಡ್ಡಿ, ಶಾಂತಿಯನ್ನು ಪ್ರಸ್ಥಾಪಿಸಲು ಯತ್ನಿಸುತ್ತಿರುವರು. ಪಂಡಿತ ಮದನ ಮೋಹನ ಮಾಲವೀಯರವರು ಲೋಕೋಪದೇಶಾರ್ಥವಾಗಿ, ಕಲಕತ್ತೆಗೆ ಹೋಗಲಿದ್ದರು. ಇದನ್ನು ತಿಳಿದು, ಬಂಗಾಲದ ಆಳರಸರು ದಿಗಿಲುಬಿದ್ದರು. ಮಾಲವೀಯರವರು ಹಿಂದೂ ಸಭಾವರ್ತಕರು, ಸಾತ್ವಿಕ ಸನಾತನಿಗಳು. ಆದರೂ, ಕಲಕತ್ತೆಯಲ್ಲಿ ಕಾಲಿಟ್ಟರೆ, ಮಹಮ್ಮದೀಯರ ಪಿತ್ತ ಕೆಣಕಿ, ಹಿಂದೂ-ಮುಸಲ್ಮಾನರೊಳಗೆ ದೊಂಬಿಯಾಗಬಹುದೆಂದು ಆಳರಸರು ಕಲ್ಪಿಸಿದರು ಕೂಡಲೆ ಕಲಕತ್ತೆಯ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಕ್ರಿ. ಪ್ರೋ. ಕೋ. ೧೪೪ ನೇ ಕಲಮಿನನ್ವಯ ಪಂಡಿತ ಮಾಲವೀಯರವರಿಗೆ ಪ್ರತಿಬಂಧಕ ಹುಕುಮನ್ನು ಪ್ರಯಾಗ ಕ್ಷೇತ್ರದಲ್ಲಿರುವಾಗಲೇ ಜಾರಿಮಾಡಿಸಿದರು. ಪಂಡಿತ ಮಾಲವೀಯರವರ ನಿರ್ಮಲಚಿತ್ತರೂ, ಸಮಾಧಾನಿಗಳೂ ಇದ್ದರೂ, ಈ ಹುಕುಮಿನಿಂದ ಸಹಜವಾಗಿ ಅವರು ಸಂತಪ್ತರಾದರು. "ನಾನು ೪೦ ವರ್ಷಗಳಿಂದ ರಾಷ್ಟ್ರಸೇವೆಯನ್ನು ನಡಿಸುತ್ತಿದ್ದೇನೆ. ನನ್ನ ಉಪನ್ಯಾಸಗಳಿಂದ ಈ ವರೆಗೆ ದೊಂಬಿಯಾದ, ಸುದ್ದಿಯೇ ಇಲ್ಲ ದೊಂಬಿಗೆ ಉತ್ತೇಜಕವಂಥ ವಿಧಾನಗಳೂ ಆ ಭಾಷಣಗಳಲ್ಲಿರಲಿಲ್ಲ ಇದ್ದರೆ, ಅವುಗಳ ಮೇಲೆ ಕಾಯಿದೆಯಂತೆ ಇಲಾಜು ನಡಿಸಲು, ಸರಕಾರಕ್ಕೆ ಅಧಿಕಾರವಿದೆ. ಕಾಯಿದೆಯಂತೆ ಕ್ರಮ ನಡಿಸಿದರೆ, ಅದರೊಳಗೆ ನಾನು ತಪ್ಪುಗಾರನೆಂದು ಸಿದ್ಧವಾದರೆ, ಶಾಸನವನ್ನು ಅನುಭವಿಸಲು ನಾನು ಸಿದ್ಧನಿದ್ದೇನೆ ಈ ಹುಕುಮು ಕಾಯಿದೆಯನ್ನು ಮೀರಿದೆ, ಅಸಮರ್ಥನೀಯವಿದೆ ಆದ್ದರಿಂದ ಅದನ್ನು ನಾನು ಉಲ್ಲಂಘಿಸಿ, ಕಲಕತ್ತೆಗೆ ಶನಿವಾರಕ್ಕೆ ಬರುವೆನು. ಮತ್ತು ಕಲಕತ್ತೆಯ ಬಾಲೀಗಂಜದೊಳಗಿನ ಬಿರ್ಲಾ ಪಾರ್ಕದಲ್ಲಿ ಉಳಕೊಳ್ಳುವೆನು" ಎಂಬರ್ಥದ ಪತ್ರವನ್ನು ಪಂಡಿತ ಮಾಲವಿಯರವರು ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರವರಿಗೆ ಬರೆದು, ಆಳರಸರಿಗೆ ಇದಿರಾಗಲು ಸನ್ನದ್ಧರಾಗಿರುವರು. ಮಾಲವೀಯರವರು ನಿರುಪದ್ರವಿ ಪುರುಷರು ಅವರಿಗೆ ಪ್ರತಿಬಂಧಿಸಿದರೆ, ಅಶಾಂತಿಯೇ ಇಲ್ಲ ಎಂಬ ಕಲ್ಪನೆಯಿಂದ ಆಳರಸರು ಹೊರಡಿಸಿದ ಹುಕುಮು ಈಗ ಅವರ ಮೈಮೇಲೆ ಬಂದಿರುವದು, ಸಿಮ್ಲಾದಲ್ಲಿ ಪಂಡಿತ ಮಾಲವೀಯರವರ ಉತ್ತರದ ಸುದ್ದಿ ತಲುಪಿದೊಡನೆ, ಹಿಂದುಸ್ಥಾನ ಸರಕಾರದ ಅಂತಃಪುರದಲ್ಲಿ ಎಲ್ಲರೂ ಚಕಿತರಾದರಂತೆ, 'ಮುಂಬಯಿ ಕ್ರೊನಿಕಲ್' ಪತ್ರಿಕೆಯ ಸುದ್ದಿಗಾರರು ಬರೆಯುತ್ತಾರೆ. ಪಂಡಿತ ಮಾಲವೀಯ ರವರಂಥ ಸತ್ಪುರುಷರು ಸೆರೆಬಿದ್ದರೆ, ಆಳರಸರ ರಾಜ್ಯಾಪಕತೆಯ ಸ್ವರೂಪವು ದಿಗ್ದೇಶದಲ್ಲಿ ಬೀರಿ ಹೆಸರಿಗೆ ಕಲಂಕ ಬರಬಹುದೆಂದು, ಆಳರಸರು ತಿಳಿಯುತ್ತಾರಂತೆ ಮಹಾತ್ಮರೂ, ಲೋಕಮಾನ್ಯರೂ ಸೆರೆಯಾಳಾಗಿ, ಆಳರಸರ ಆಳಿಕೆಯ ಮಹಿಮೆಯನ್ನು ತೋರಗೊಡುತ್ತಿರುವರು, ಪಂಡಿತ ಮಾಲವೀಯರವರು ಸೆರೆಬಿದ್ದರೆ, ಇನ್ನಿಷ್ಟು ಹೆಸರು ಹಾಳಾಗುವದು ಅಷ್ಟೆ, ಇನ್ನು ಹೆಸರು ಹಾಳಾಗದೆ ಉಳಿದರೆ ಮಾತ್ರ ಈ ಭೀತಿಯಲ್ಲವೇ! ನಮಗಂತೂ ಈ ಸುದ್ದಿ ಕೇಳಿ, ಅತ್ಯಾನಂದವಾಗಿದೆ. ಪಂಡಿತ ಮಾಲವೀಯರವರಂಥ ಸಮಾಧಾನಿಗಳು ಅನ್ಯಾಯದ ಹುಕುಮುಗಳನ್ನು ಉಲ್ಲಂಘಿಸಲು ತಯಾರಾದ ಸಂಕೇತ. ಭಾರತೀಯ ರಾಜಕಾರಣದೊಳಗೆ ಬದಲಾಗುತ್ತಿದ್ದ ತೇಜಸ್ಸನ್ನು ವ್ಯಕ್ತಪಡಿಸುತ್ತದೆ. ಲೋಕನಾಯಕರು ಹುಕುಮುದಾರರನ್ನು ವಿಚಾರಶಕ್ತಿಯ ಹೊರತು, ಹುಕುಮುಗಳನ್ನು ಹೊರಡಿಸುವ ನಿರಂಕುಶ ಅಧಿಕಾರವು ಲಭಿಸಗೊಡುವದಿಲ್ಲ, ಭಾರತೀಯ ತೇಜಸ್ಸು ಪ್ರಕಟವಾಗುವದಿಲ್ಲ ನಿರ್ಮಲಚಿತ್ತ ಸನ್ಯಾಸಿಗಳು ಅನ್ಯಾಯಕ್ಕೆ ಇದಿರಾದ ಹಾಗೆ ಅನ್ಯಾಯದ ಪರಿಹಾರವಾಗಿ, ನ್ಯಾಯವು ತಲೆದೋರುವದು ನ್ಯಾಯವು ತಲೆದೋರಿದಂತೆ ಭಾರತ ಭೂಮಿಯು ಉದ್ಧಾರವಾಗುವದು. ಪಂಡಿತ ಮಾಲವೀಯರವರು ಕಲಕತ್ತೆಗೆ ಹೋದ ಹಕೀಕತು ಇನ್ನೂ ನಮ್ಮ ಕೈಸೇರಲಿಲ್ಲ ಆದರಿಂದ ಸರಕಾರವು ಹುಕುಮನ್ನು ಹಿಂತೆಗೆದುಕೊಂಡು ಸೋತಿತೋ? ಅಥವಾ ಮಾಲವೀಯರವರಿಗೆ ಸೆರೆಹಾಕಿ ಸೋತಿತೋ? ತಿಳಿಯಲಿಲ್ಲ. ಯಾವ ಪ್ರಕಾರದಿಂದ ವಿಚಾರಿಸಿದರೂ, ಸರಕಾರವು ಸೋಲುವದು ನಿಜ ಮುಂದಿನ ಹಕೀಕತನ್ನು ಈ ಮುಂದೆ ಹೇಳುವೆವೆಂದು ವಾಚಕಮಹಾಶಯರಿಗೆ ಅಭಿವಚನವನ್ನಿತ್ತು, ಪಂಡಿತ ಮಾಲವೀಯರವರಿಗೆ ಆದರಪೂರ್ವಕವಾಗಿ ವಂದನೆಗಳನ್ನರ್ಪಿಸುವೆವು.

೨. ಸ್ಥಾನಿಕ ಸ್ವರಾಜ್ಯ ಪರಿಷತ್ತಿನ ಹಕಿಕತನ್ನು ಬೇರೊಂದೆಡೆಯಲ್ಲಿ ನಾವು ಕೊಟ್ಟಿರುವೆವು ಪ್ರಾಂತಾಧಿಪರ ನಾಂದೀವಚನ ಹಾಗು ಅಧ್ಯಕ್ಷರಾದ ನಾಮದಾರ ಹಿದಾಯತುಲ್ಲಾರವರ ಪ್ರವೇಶ ಭಾಷಣಗಳು ಚಿಂತನೀಯವಿವೆ ಪ್ರಾಂತಾಧಿಪರು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಇನ್ನಿಷ್ಟು ಅಧಿಕಾರಕೊಟ್ಟು, ಧನ್ಯರಾಗುತ್ತೇವೆಂದು ನುಡಿದರು, ಹಾಗು ಮಹತ್ವದ ಅಧಿಕಾರ-ಕರ್ತವ್ಯಗಳನ್ನು ಕೊಡುವಾಗ ಅದಕ್ಕೆ ತಕ್ಕದಾಗಿ ಸ್ವರಾಜ್ಯ ಸಂಸ್ಥೆಗಳಿಗೆ ಸರಕಾರವು ನೆರವಾಗಲಾರದೆಂದು ಸ್ಪಷ್ಟಗೊಳಿಸಿದರು. ಕಾರ್ಯಭಾರವನ್ನು ನಿರ್ವಹಿಸಲು ಸ್ವರಾಜ್ಯ ಚಾಲಕರು ತಮ್ಮಷ್ಟಕ್ಕೆ ಸ್ವತಂತ್ರವಾಗಿ ದ್ರವ್ಯಸಂಗ್ರಹ ಮಾಡಬೇಕೆಂದೂ ಉಪದೇಶಿಸಿದರು. ನಾಮದಾರ ಹಿದಾಯತುಲ್ಲಾರವರ ಉದ್ಗಾರಗಳು ಇನ್ನೂ ಮನನೀಯವಿವೆ ಸ್ವರಾಜ್ಯ ಸಂಸ್ಥೆಗಳಿಗೆ ಹಕ್ಕು ಹೇಳುವಂಥ ಪ್ರಾಂತಿಕ ಕಂದಾಯದ ಬಾಬುಗಳು ಎರಡು: ಒಂದು ಭೂಕಂದಾಯ, ಇನ್ನೊಂದು ಅಬಕಾರಿ. ಪ್ರಾಂತಿಕ ಸರಕಾರವು ಮದ್ಯಪಾನವನ್ನು ನಿರ್ಮೂಲಿಸುವ ವಚನ ಕೊಟ್ಟಿದ್ದರಿಂದ, ಅದನ್ನು ಸ್ವರಾಜ್ಯ ಸಂಸ್ಥೆಗಳು ನಂಬಿಕೊಂಡಿರಬಾರದು ಭೂಕಂದಾಯವು ಸಂಪೂರ್ಣವಾಗಿ ಮಳೆಯ ಮೇಲೆ ಅವಲಂಬಿಸಿದೆ ಅದರ ಮೇಲೆ ನಂಬಿಗೆ ಇಡುವದೂ ಅಪ್ರಶಸ್ತವಂತೆ! ನಾಮದಾರ ಹಿದಾಯತುಲ್ಲಾರವರ ನುಡಿಗಳನ್ನು ಕೇಳಿದರೆ "ಮುಂಬಯಿ ಇಲಾಖೆಯೊಳಗೆ ಮದ್ಯಪಾನವು ನಿರ್ಮೂಲವಾಯಿತು, ಮಳೆ ಸರಿಯಾಗಿ ಬೀಳದೆ, ಸರಕಾರಕ್ಕೆ ಕಂದಾಯವು ಕೂಡ ಸಿಗದಿದ್ದ, ಜನರು ಇದನ್ನೆಲ್ಲ ಬುದ್ಧ್ಯಾ ತಿಳಿದು, ಆಳರಸರಿಗೆ ದೂರುತ್ತಾರೆ ಸರಕಾರವು ಈ ಉತ್ಪನ್ನಗಳನ್ನು ಲೆಕ್ಕಕ್ಕೆ ಹಿಡಿಯದೆ ರಾಜ್ಯಭಾರವನ್ನು ಹೇಗೂ ಸಾಗಿಸುತ್ತಾರೆ," ಎಂಬಂತೆ ಭಾಸವಾಗುತ್ತದೆ ಅಬಕಾರಿ ಉತ್ಪನ್ನವು ಮುಂದೆ ಕೂ[illegible]ಗುವದಿದೆ. ಅನಕ ವರೆಗೆ ದೊರಕಿದಷ್ಟು ಉತ್ಪನ್ನದ ಪಾಲನ್ನು ಸ್ವರಾಜ್ಯ ಸಂಸ್ಥೆಗಳಿಗೆ ಕೊಡಲಿದ್ದಿ? ಮಳೆಯ ಮೇಲೆ ಸರಕಾರವು ನಂಬಿಕೊಂಡು ಮುಂಬಯಿ ಇಲಾಖೆಯ ಪ್ರಜೆಗಳ ಆಡಳಿತೆಯನ್ನು ಸಾಗಿಸುತ್ತಿರುವಾಗ, ಸ್ವರಾಜ್ಯ ಸಂಸ್ಥೆಗಳಾದರೂ ಅದನ್ನು ನಂಬಿಕೊಂಡು, ತಮ್ಮ ಕಾರ್ಯಗಳನ್ನು ನಿರ್ವಹಿಸಬಹುದಲ್ಲವೇ? ಉತ್ಪನ್ನಗಳು ಸಿಗದಿದ್ದಾಗ, ನಾಮಶೇಷವಾದಾಗ ಪ್ರಾಂತಿಕ ಸರಕಾರವು ಬೇರೆ ಉಪಾಯಯೋಜನೆ ಮಾಡುವದು ಸ್ವರಾಜ್ಯ ಸಂಸ್ಥೆಗಳೂ ಬೇರೆ ಉಪಾಯಯೋಜನೆ ಮಾಡುವವು ಮುಂದೊದಗುವ ಅನರ್ಥವನ್ನು ಈಗಲೇ ಕಲ್ಪಿಸಿಕೊಂಡು, ನಾಮದಾರ ಹಿದಾಯತುಲ್ಲಾರವರು ಮರುಗುವದೇಕೆ? ಸರಕಾರಕ್ಕೆ ಉತ್ಪನ್ನ ಸಿಗದಿದ್ದರೆ, ಸರಕಾರಕ್ಕಷ್ಟೇ ಇಲ್ಲ, ಸ್ವರಾಜ್ಯ ಸಂಸ್ಥೆಗಳಿಗೂ ಇಲ್ಲ. ಇಬ್ಬರೂ ಬೇರೆ ಬೇರೆ ಮಾರ್ಗಗಳನ್ನು ನೋಡಿಕೊಳ್ಳುವರು ಮುಂದೆ ಹುಟ್ಟುವಳಿ ಯಾಗದೆಂದು ಈಗ ಸಿಕ್ಕಿದ ಹುಟ್ಟುವಳಿಯನ್ನು ಬಗಲಲ್ಲಿ ಸೇರಿಸಿ, ಮೇಲೆ ಸಹಾನುಭೂತಿಯ ಸೋಗು ಹಾಕಿಕೊಳ್ಳುವ ಅರ್ಥವು ಪ್ರಜೆಗಳಿಗೇನು ತಿಳಿಯದ ಮಾತಲ್ಲ ಹಣ ಕೊಡುವಾಗ ಪ್ರಾಪಂಚಿಕರಿಗೆ ಯಮದೂತರು ಎಳೆದಂತಾಗುತ್ತದಂತೆ! ಸರಕಾರಕ್ಕೂ ಅದೇ ಭಾವನೆಯು ಉಂಟಾಗುತ್ತದೆಂಬಂತೆ ತೋರುತ್ತದೆ. ಆದರೂ, ಪರಿಷತ್ತಿನ ಪ್ರತಿನಿಧಿಗಳು ಟೊಂಕಕಟ್ಟಿ

ಈ ಕುರಿತು ಶಿವರಾಮನ ಸ್ವಿವಾಡಿಯವರು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗಾಗಿ ಮುಂಬಯಿ ಸರಕಾರವು ಏನು ಮಾಡುತ್ತದೆ ನೋಡುವಾ.

---

೩. ಮೊಂಟೆಗ್ಯೂ ಸ್ವರಾಜ್ಯದ ಕುರಿತು ಮದ್ರಾಸಪತ್ರಂ ತದೊಳಗಿನವಿಶೇಷ ಮೊಂಟೆಗ್ಯೂ ಸ್ವರಾಜ್ಯದ ಭಕ್ತರಾದ ರಾ| ಮಾರ್ತಾಂಡಂ ಪಿಳ್ಳೆಯವರು ತೆಗೆದ ಉದ್ಗಾರಗಳನ್ನು ಎಲ್ಲರೂ ಮನಗಾಣಬೇಕಾಗಿದ್ದು. ಆರು ವರುಷಗಳ ವರೆಗೆ ರಾ| ಮಾರ್ತಾಂಡಂರವರು ಕೌನ್ಸಿಲಿನಲ್ಲಿ ಸೇರಿ, ಪ್ರಜಾಕಲ್ಯಾಣ ಮಾಡಲೆತ್ನಿಸಿದರು. ದಿವಾಣರಿಗೂ, ಸರಕಾರಕ್ಕೂ ಮನಮುಟ್ಟಿ ನೆರವಾದರು. ಆದರೂ, ತಮ್ಮಿಂದ ತಮ್ಮ ಮತದಾರ ಬಾಂಧವರಿಗಾಗಿ ಏನೊಂದೂ ಕಲ್ಯಾಣ ಮಾಡಲು ಸಾಧ್ಯವಿರಲಿಲ್ಲೆಂದು, ಅವರೊಪ್ಪಿಕೊಂಡು ಈ ಇಲೆಕ್ಷನಿನಲ್ಲಿ ಇನ್ನು ತಾವು ಸೇರಲಿಚ್ಛಿಸಲ್ಲೆಂದು ಪ್ರಕಟಿಸಿರುವರು. ಕಾಯಿದೆ ಕೌನ್ಸಿಲೆಂದರೆ, ಒಂದು ದೊಡ್ಡ ಪಾಪಭೂಮಿಯು. ಬೇಕಾದವರು ಬೇಕಾದಾಗ ಒಳಸೇರಬಹುದು, ಹೊರಹೋಗಬಹುದು. ಮೊಂಟೆಗ್ಯೂ ಸ್ವರಾಜ್ಯವು ದ್ವಿದಳ ರಾಜ್ಯಪದ್ಧತಿಯೆಂದು ಹೇಳಲ್ಪಡುತ್ತದೆ. ಸಿದ್ಧಾಂತವು ಬೇರೆ, ಆಚಾರವು ಬೇರೆ. ಇದ್ದಾಗಿದ್ದರೆ ಸ್ವಲ್ಪವಿದ್ದೀತು. ಆದರೆ, ದ್ವಿದಳ ರಾಜ್ಯಪದ್ಧತಿಯೂ, ಇಲ್ಲಿಯ ಆಚಾರವೂ ವಿಪರೀತವಾಗಿರುವವು. ದ್ವಿದಳ ರಾಜ್ಯಪದ್ಧತಿಯ ಸಿದ್ಧಾಂತವೇನು? ಮತದಾರರಿಗೆ ಕಾಯಿದೆ ಕೌನ್ಸಿಲಿನ ಪ್ರತಿನಿಧಿಗಳು ಅಧೀನರು, ಕಾಯಿದೆ ಕೌನ್ಸಿಲಿನ ಪ್ರತಿನಿಧಿಗಳಿಗೆ ದಿವಾಣರು ಅಧೀನರು. ದಿವಾಣರಿಗೆ ಸರಕಾರವು ಅಧೀನವು. ಹೀಗೆ ಮತದಾರ, ಕಾಯಿದೆ ಕೌನ್ಸಿಲಿನ ಪ್ರತಿನಿಧಿ, ದಿವಾಣ, ಸರಕಾರದ ಸಂಬಂಧವಿದ್ದು, ಮತದಾರರೇ ಪ್ರಾಧಾನ್ಯರೆಂದು ತೋರಿಬರುತ್ತದೆ. ಆದರೆ, ಇಲ್ಲಿಯ ಆಚಾರವು ಹೇಗೆ? ಸರಕಾರಕ್ಕೆ ದಿವಾಣರು ಅಂಕಿತರು. ದಿವಾಣರಿಗೆ ಪ್ರತಿನಿಧಿಗಳು ಅಂಕಿತರು. ಪ್ರತಿನಿಧಿಗಳ ದಾಸಾನುದಾಸರು ಮತದಾರರು. ಹೀಗೆಲ್ಲ ವಿಪರೀತ ಸ್ಥಿತಿಯು ಕಂಡುಬರುತ್ತದೆ. ದ್ವಿದಳ ರಾಜ್ಯಪದ್ಧತಿಯ ಸಿದ್ಧಾಂತವನ್ನು ಮೊಂಟೆಗ್ಯೂ ಸ್ವರಾಜ್ಯದಲ್ಲಿ ಅವಲಂಬಿಸಿದ ಬ್ರಿಟಿಶ ಪ್ರಕಾರವಿದು. ಈ ಪ್ರಕಾರವು ಹೊರಗಡೆ ತಿಳಿಯಬೇಕಾದರೆ, ರಾ| ಮಾರ್ತಾಂಡಂರವರಿಗೆ ೬ ವರುಷಗಳು ತಗಲಿದವು. ಇಂಥ ಸ್ಥಿತಿಯಲ್ಲಿ ಪ್ರತಿನಿಧಿಗಳು ಸಹಕಾರ ಮಾಡಿ, ಪ್ರಜೆಗಳ ಕಲ್ಯಾಣವೇನು ಮಾಡಬಲ್ಲರು? ನಮಗೇನು ತಿಳಿಯುವದಿಲ್ಲ. ಬ್ರಿಟಿಶರ ಸ್ವರಾಜ್ಯ ದಾನದ ಮರ್ಯಾದೆಯೇ ಇದು! ಲೋಕಕ್ಕೆ ತೋರಿಕೆಗಾಗಿ, ವಿಶಕಂಠದ ಮೇಲೆ ಕೆಂಪ ತಿಳ್ಳುವದು! ಇದಕ್ಕೆ ಯಾವ ಪ್ರಕಾರದ ಸಹಾಯ ಯೋಜನೆ ಮಾಡಿ, ಭಾರತೀಯರು ಉದ್ಧಾರವಾಗಬೇಕೆಂಬದೊಂದು ದೊಡ್ಡ ಹೋರೆಯು ಬಂದೊದಗಿದೆ. ವಿರೋಧ ಮಾಡಿದರೆ, ವಿರೋಧಕರೆಂದು ಪ್ರಜೆಗಳಿಗೇನು ಸಿಗುವದಿಲ್ಲ; ಸ್ನೇಹ ಬೆಳೆಸಿದರೂ ಸಿಗುವದು ಸೊನ್ನೆಯೇ!

ಸ್ಥಾನಿಕ ವೃತ್ತಾಂತ

ಕುಮಟಾ— ಅಶ್ಲೇಷಾ ನಕ್ಷತ್ರದ ಮಳೆಯು ವಿಪರೀತವಾಗಿ ಸುರಿಯುತ್ತು ಹವಾಮಾನವು ವಿಪರೀತವಾಗಿ ಬದಲಿಸಿದೆ. ಊರಲ್ಲಿ ಹೊರಕಡೆ, ಜ್ವರ ಮುಂತಾದ ರೋಗಗಳು ಪ್ರಬಲವಾಗಿವೆ. ಅನೇಕ ನಿಧನಗಳುಂಟಾದವು. ಅನೇಕರು ಅಸ್ವಸ್ಥರಿರುವರು. ಅಡಿಕೆ ತೋಟಗಳಿಗೆ ಹೇರಳ ನಷ್ಟ; ಮಾಡುವದೇನು? ಕಾಲಚಕ್ರದ ಮಹಿಮೆ! ಈ ವಾರದಲ್ಲಿ ೧೪-೩ಳ ಇಂಚು ಮಳೆಬಿತ್ತು. ಈ ವರೆಗೆ ಒಂದು ೧೨೧-೬೨ ಇಂಚು ಮಳೆಯಾಯಿತು.

ಈ ಮೊದಲು ಜಾಹೀರಾಂತ ಕಮಿಟಾ ಶಿರಾಲೂರ ಲೋಕಲ್ ಬೋರ್ಡಿನಲ್ಲಿ ಲೋಕಲ್ ಫಂಡ ಪರಿಕೆಯ ಕುರಿತು ವಿಚಾರವಾಗಿ, ಸದ್ಯಕ್ಕೆ ಈ ವಿಷಯವನ್ನು ಚರ್ಚಿಸದೆ, ಮುಂದೆ ಹೆಚ್ಚಿಗೆ ಮಾಹಿತಿ ಪಡಕೊಂಡ ಬಳಿಕ, ಈ ಕುರಿತು ವಿಚಾರ ಮಾಡಬೇಕೆಂದು ಗೊತ್ತಾಯಿತು.

ಓರ್ವ ಗೋಕರ್ಣಸ್ಥರು ತಿಳಿಸುವದೇನಂದರೆ:— ನಾನು ಜ್ವರದಿಂದ ಅಸ್ವಸ್ಥನಿದ್ದೆ. ಈ ಕುರಿತು ಗೋಕರ್ಣದೊಳಗಿನ ಡಿಸ್ಪೆನ್ಸರಿಯಲ್ಲಿ ಔಷಧ ಕೊಳ್ಳುತ್ತಿದ್ದೆ. ಕಮಿಟಿಯು ಕೋರ್ಟಿನಲ್ಲಿ ನನಗೆ ಸಾಕ್ಷಿಗೆ ಬರೆದಿತ್ತು. ಆ ಕುರಿತು, ಅಸ್ವಸ್ಥತೆಯು ಮೂಲಕ ಹಾಜರಾಗಲು ಅಸಮರ್ಥನಿದ್ದೆ, ನನಗೆ ಮದ್ದು ಕೊಡುವ ಡಾಕ್ಟರರಿಗೆ ಈ ಕುರಿತು ಸರ್ಟಿಫಿಕೇಟು ಕೊಡಹೇಳಿದೆ, ಡಾಕ್ಟರ ಸಾಹೇಬರು ೧೦ ರೂಪಾಯಿ ಬೇಡಿದರು. ನನಗೆ ಭತ್ತಿ ಬಗ್ಗೆ ಸಿಕ್ಕುವ ರೂಪಾಯಿ ೫! ನಾನು ಬಡವ. ಇಂಥ ಸಂದರ್ಭದಲ್ಲಿ ಬಡವರು ಹೇಗೆ ಸಹಿಸಬೇಕು? ಹಿರಿಯ ಬೋರ್ಡಿನವರು ಈ ಕುರಿತು ವಿಚಾರ ಮಾಡಿ, ಬಡವರ ಉದ್ಧಾರ ಮಾಡಬೇಕು. ಇತ್ಯಾದಿ.

ಹೊನ್ನಾವರ— ಇಲ್ಲಿಯ ತಾಲೂಕ ಲೋಕಲ್ ಬೋರ್ಡಿನಲ್ಲಿ ತಾ. ೩೧-೭-೩೭ ನೇದಿ ಲೋಕಲ್ ಫಂಡವನ್ನು ಹಚ್ಚುವ ಕುರಿತು ಬಹಳ ವಾದ ನಡೆಯಿತು. ರಾ| ಹೊಸಬಯ್ಯ ನಾಯಕರು ಲೋಕಲ್ ಫಂಡವನ್ನು ಹಚ್ಚಬೇಕಾಗಿ ಸೂಚಿಸಿದರು. ಅದಕ್ಕೆ ರಾ| ಕೃಷ್ಣಭಟ್ಟ, ರಾ| ಗಣಪತಿ ಹೆಗಡೆ ಇವರುಗಳು ವಿರೋಧಿಸಿದರು. ನೆರೆ ಹಾವಳಿಯಿಂದ ರೈತರು ಕಂಗೆಟ್ಟಿರುವರು, ಪ್ರಸ್ತುತ ಶೀರ್ಷೆಯನ್ನು ತೆರುವದು ಕಠಿಣವಾಗಿದೆ, ಇತ್ಯಾದಿ ಹೇಳಿದರು. ಬೋರ್ಡಿನಲ್ಲಿ ಉತ್ಸಾಹದಿಂದ ಸೇರಿದ ಮಂದಿಯರು ಸ್ವಾರ್ಥತ್ಯಾಗ ಮಾಡಿ ಭತ್ತೆಯನ್ನು ಕೊಡದಿದ್ದರೆ, ಬಹಳ ಉಳಿತಾಯವಾಗಬಹುದೆಂದು ರೈತರೊಬ್ಬರು ಸೂಚಿಸುತ್ತಾರೆ.

ಅಂಕೋಲಾ— ಅಂಕೋಲಾ ತಾಲೂಕ ಶ್ರೀ ಅಚ್ಚೆ, ಕಂಟಿಗಿಣಿ, ಮಾಣಿಗದ್ದೆ ಈ ಗ್ರಾಮಗಳ ಚಾಂದ್ರಾಯಣಿ ಕೃಷ್ಣ ನಾಯಕ ಹೆಬ್ಬಾರ ಮುಂತಾದವರು ಜಾಹೀರ ಮಾಡಿಕೊಳ್ಳುವದೇನಂದರೆ:—

ಹಿಲ್ಲೂರ ಗ್ರಾಮದ ಶ್ರೀಕಿಂ ಕೊಪ್ಪದಿಂದ ಅಚ್ಚೆ, ಕಂಟಿಗಿಣಿ ಗ್ರಾಮಕ್ಕೆ ಬರ-ಹೋಗುವ ಮಾರ್ಗವು ಲೋಕಲ್ ಫಂಡ ಖಾತೆಯದು ಇದ್ದು, ಈ ಮಾರ್ಗವು ಈಗ ಎಂಟು-ಹತ್ತು ವರುಷಗಳ ಲಾಗಾಯತು ದುರುಸ್ತ ಮಾಡದೇ ತೀರ ಕೆಟ್ಟು ಹೋಗಿರುತ್ತದೆ. ಮಾರ್ಗದ ಮೇಲೆ ಅಲ್ಲಲ್ಲಿ ಬಂಡೆಗಳು ಬಿದ್ದು ಗಾಡಿಗಳಿಗೆ ಸುರಕ್ಷಿತವಾಗಿ ಹೋಗಲು ಬಹಳೇ ಉಪದ್ರವವಾಗುತ್ತದೆ. ರಾತ್ರಿ ಸಮಯದಲ್ಲಿ ತಿರುಗಾಟ ಮಾಡುವ ಜನರಿಗೆ ಬಂಡೆಗಳಲ್ಲಿ ಬಿದ್ದು ಧುಃಖಪಡ ಆಗುವ ಪ್ರಸಂಗ ಉಂಟು.

ಈ ರಸ್ತೆಯು ಮೇಲ್ಬದಿಗೆ ಕಲಗಾಪಹಳ್ಳಿಯಿಂದ ಒಂದು ಸಂಕ, ಇನ್ನೊಂದು ಸುಟ್ಟವೋರಿ ಎಂಬುದು ಹೀಗೆ ಎರಡು ಸಂಕಗಳು ಮುರಿದು ಸುಮಾರು ೮-೧೦ ವರುಷಗಳಾದವು. ಇನ್ನೂ ಅವು ದುರುಸ್ತ ಆಗಲಿಲ್ಲ. ಇದರಿಂದ ಗಾಡಿ ವಗೈರೆ ವಾಹನಗಳಿಂದ ಅಡಿಕೆ, ಭತ್ತ ಮುಂತಾದ ಸಾಮಾನುಗಳನ್ನು ರಫ್ತ ಮಾಡಲಿಕ್ಕೆ ಹೇರಳ ಬಾಧಕ ಆಗುತ್ತದೆ. ತಲೆಹೊರೆ ಗಳಿಂದ ಎರಡು ಮೈಲು ದೂರದ ವರೆಗೆ ತರಬೇಕಾಗುತ್ತದೆ. ಕಾರಣ ಜೀವನದ ಬಗ್ಗೆ ಬೇಕಾಗುವ ಸಾಮಾನುಗಳಿಗೂ ಹೀಗೇ ತೊಂದರೆಪಡಬೇಕಾಗುತ್ತದೆ.

ಈ ಗ್ರಾಮದವರು ಆಯಾ ವರುಷ ರೂಪಾಯಿ ೩೦೦ ಲೋಕಲ್ ಫಂಡ ಕೊಡುತ್ತಿದ್ದು, ನಮ್ಮ ಊರಿಗೆ ಇರುವ ಇದು ಒಂದೇ ಮಾರ್ಗವು ಹೀಗೆ ನಾದುರುಸ್ತ ಇರುವದರಿಂದ ಲೋಕಲ್ ಬೋರ್ಡುಗಳಿಂದ ನಮಗೇನೂ ಫಾಯಿದೆ ಇಲ್ಲ. ಇದನ್ನು ಸನ್ನಿಧಿಯವರು ಗ್ರಹಿಸಿ ಈ ಮಾರ್ಗವನ್ನೂ ಎರಡೂ ಸಂಕಗಳನ್ನೂ ಕೂಡಲೆ ದುರುಸ್ತ ಮಾಡುವಂತೆ ವ್ಯವಸ್ಥೆ ಮಾಡಬೇಕಾಗಿ ಬೇಡುತ್ತೇವೆ. ಮಳೆಗಾಲವು ತೀರುವಷ್ಟರಲ್ಲಿ ಅಡಿಕೆಯ ಹಂಗಾಮು ಪ್ರಾರಂಭವಾಗುತ್ತಿದ್ದು ಅದರ ವರೆಗೆ ದುರುಸ್ತ ಆದಲ್ಲಿ ನಮಗೆ ಬಹಳ ಉಪಕಾರವಾಗುವಂತಿದೆ.

ಅವ್ರಸಾರ್— ನಮ್ಮ ಕನ್ನಡ ಶಾಲೆ ಹೆಡ್‌ಮಾಸ್ತರರ ಚೇಷ್ಟೆ. ಕೇರಿ! ಇವರಿಗೆ ೮॥-೯ ಘಂಟೆಗೆ ಸುಮಾರು ನಸುಕು ಹರಿಯುತ್ತದೆ. ಆನಂತರ ವರೆಗೆ ಶಾಲೆಯ ಹುಡುಗರು ಬೈಲಲ್ಲಿದ್ದ ಕಟ್ಟೆಯ ಮೇಲೆ ತೊಯ್ಯುತ್ತ ಕೂಡ್ರಬೇಕಾಗುತ್ತದೆ. ಇದರಿಂದ ಅನೇಕರು ಅಸ್ವಸ್ಥರಾಗಿರುವರು. ಸಾಯಂಕಾಲಕ್ಕೆ ಶಾಲೆ ಬಿಡಬೇಕಾದರೆ, ಕಗ್ಗತ್ತಲಾಗುತ್ತದೆ. ಶಾಲೆಯ ಕೆಲಸದ ಅವಧಿಯನ್ನು ಅಷ್ಟೇ ಇಟ್ಟಿದ್ದರೂ, ಸಮಯದ ಬದಲಾವಣೆಯ ಮೂಲಕ ಚಿಕ್ಕ ಬಾಲಕರ ಗೋಳು. ಈ ಕುರಿತು ಜಿಲ್ಲಾ ಬೋರ್ಡಿನವರು ತಕ್ಕ ಜಾಗ್ರತೆಕೊಳ್ಳಬೇಕು. ಇತ್ಯಾದಿ ಒಬ್ಬರು ತಿಳಿಸುತ್ತಾರೆ.

ಕಾರವಾರ— ಮಹಾತ್ಮರು ಅಖಿಲ ಭಾರತೀಯ ನೂಲುವ ಸಂಘವನ್ನು ಸ್ಥಾಪಿಸಿ ಈಗ ಒಂದು ದಶಕವಾಗುತ್ತ ಬಂತು. ಅದರ ಸದಸ್ಯರೊಳಗಾಗಿಯಾದರೂ ಕಾರವಾರ ತಾಲೂಕಿನೊಳಗಿನ ಖಾದೀಭಕ್ತರು ಎಷ್ಟು ಜನ ನೂಲುವ ಸಂಘದ ಸಭಾಸದರಾದದ್ದು ಆನಂದದ ಸಂಗತಿಯು. ಈ ತಾಲೂಕಿನೊಳಗಿಂದ ೬ ಜನರು ಸಭಾಸದರು ಆಗಿರುವರೆಂದೂ, ಅವರು ತಮ್ಮ ಇದೇ ವರುಷದ ನೂಲಿನ ವರ್ಗಣಿಯನ್ನು ಒಮ್ಮೆಲೆ ಮೊನ್ನೆಯೇ ಕಳಿಸಿಕೊಟ್ಟಿರುವರೆಂದು ತಿಳಿಯುತ್ತದೆ. ಚೆಂಡಿಯೆಯ ಮಹಾರಾಜಶ್ರೀ ಆರ್. ಪಿ. ಕೇಣಿಯವರು, ಸುಂಕೇರಿಯ ಶ್ರೀ ಮಾಂಜ್ರೇಕರ ಹನುಮಂತರಾಯರು A ಕ್ಲಾಸದ ಸಭಾಸದರಾಗಿದ್ದು ಸುಮಾರು ೩೫ ನಂಬರಿನ ೧೨೦೦೦ ಗಜ ನೂಲನ್ನು ಕಳಿಸಿರುವರು. ಇದಲ್ಲದೆ ಸುಂಕೇರಿಯ ಶ್ರೀ ಮುಕುಂದರಾವ ನಾಯಕ, ದಾಸಭಟ್ಟ ಶಿರಾಲಿ, ನಾಗೇಶಭಟ್ಟ, ಗೋವಿಂದ ಮಾಂಜ್ರೇಕರ ಇವರು B ವರ್ಗದ ಸದಸ್ಯರಾಗಿ ಪ್ರತಿ ಒಬ್ಬರು ೩೦೦೦ ಗಜ ನೂಲನ್ನು ರವಾನಿಸಿರುವರು. ಮೇಲಿನ ತರುಣರ ಮೇಲುಪಂಕ್ತಿಯನ್ನು ನೋಡಿ ಇತರರು ಎಚ್ಚರಾಗುವರೇನು?

ಅಖಿಲ ಭಾರತೀಯ ಗೋರಕ್ಷಣ ಸಂಘಕ್ಕೆ ಚೆಂಡಿಯೆ ಗ್ರಾಮ ಕೊಂಗ್ರೆಸ ಕಮಿಟಿಯಿಂದ ೬ ಸಾವಿರ ಗಜ ನೂಲೂ, ಶ್ರೀ ಮಾಂಜ್ರೇಕರರ ಕಡೆಯಿಂದ ೧೦೦೦ ಗಜ ನೂಲೂ ಕಳಿಸಲಾಗಿದೆ.

ಸುಂಕೇರಿ— ಕಳೆದ ವಾರ ಹಗಲಿರುಳೂ ಅಬ್ಬರದ ಮಳೆ ಬಾರಿಸಿತು. ಅದಕ್ಕೆ ಮನಮುಟ್ಟಿ ಸಹಾಯ ಮಾಡ ತ್ರಿರುಸಾದ ಸೂರ್ಯದರ್ಶನವು ತೀರ ಅಪರೂಪವಾಗಿಹೋಗಿದೆ!

ಅದರ ಕಳ್ಳರ ಸುಳಿದಾಟ ಎದ್ದಿದೆ. ಒಂದು ದಿವಸ ಒಬ್ಬರ ಅಂಗಡಿಯಲ್ಲಿ ಅವರ ಹಾವಳಿಯಾದರೆ ಇನ್ನೊಂದು ದಿನ ಸರಕಾರಿ ಕನ್ನಡ ಶಾಲೆಯಲ್ಲಿಯೇ ಅವರ ಚಹಪ್ರತಾಪ! ಮಾರ್ಗದ ಮೇಲೆಯೇ ಇರುವ ಶಾಲೆಯೊಳಗೇ ಕಳವು ಎಂದರೆ ವಿಚಿತ್ರವಲ್ಲೇನು? ಅದರೊಳಗೂ ಹೊರಗೆ ಹಾಕಿದ ಬೀಗವು ಮುರಿಯದೇ ಇದ್ದು ಒಳಗಿಂದೊಳಗೇ ಗತಿಯಾದರೆ ಕಳ್ಳರ ಹಸ್ತಗತವಾಯಿತು! ನೋಡಿರಿ! ಶಾಲೆಯ ಹತ್ತರವೇ ಸರಕಾರಿ ಅಧಿಕಾರಿ-ಪಟೇಲರ ವಾಸ್ತವ್ಯವಿದ್ದು ಇಂಥ ಹಾವಳಿಯು! ಇದು ಅವರ ಜಾಗರೂಕತೆಯ ಹಾಗು ದಕ್ಷತೆಯ ದ್ಯೋತಕವೇನು? ಪಟೇಲ ಸಾಹೇಬರು ಇನ್ನಿಷ್ಟು ಕರ್ತವ್ಯದಕ್ಷರಾಗಲಿ!

ಚೆಂಡಿಯೆ— ವಾಷ್ಟೀಯ ಪಕ್ಷವೆಂಬ ದೊಡ್ಡ ಆ ಬಿಧಾನವನ್ನು ತಳೆದು ಮುಂದುವರಿಯುವ ವೆಂಬುದು ಜನರ, ತಾಲೂಕ ಲೋಕಲ್ ಬೋರ್ಡುಗಳನ್ನು ಸ್ವಾಧೀನ ಪಡೆದು ಲೋ. ಬೋ. ಮಾರ್ಗಗಳನ್ನು ಹೆಚ್ಚಿಗೆ ಸುಧಾರಿಸುವರೆಂಬ ಆಶೆಯಿತ್ತು. ಆದರೆ ಅದು ಈಗ ನಿರಾಶೆಯಾಗಿದೆ. ಬೆ. ಡಿ. ಲೋಕಲ್ ಬೋರ್ಡ ಬೋ. ಮಾರ್ಗವು ಮುಂಚಿನ ವೆಂಬುದರ ದುರ್ಲಕ್ಷದ ಮೂಲಕ ಶೋಚನೀಯ ಸ್ಥಿತಿಯಲ್ಲಿ ಬಂದಿರುತ್ತದೆ. ಈ ಮಾರ್ಗದ ಎರಡು ಬದಿಗೆ ಗುತ್ತಿದ ಸಾಲು ಇದ್ದು, ಬಲಬದಿಗೆ ಹಗ್ಗನಲ್ಲಿ ಜನರ ಬಾಗಾಯತ-ಭೂಮಿಗಳಿರುತ್ತವೆ. ಮಾರ್ಗದ ಎಡಬದಿಯು ಕಲ್ಲಿನಿಂದ ಕಟ್ಟಲ್ಪಟ್ಟದರಿಂದ ಕೆಲಕೆಲವರು ತಮ್ಮ ಭೂಮಿಗೆ ಹತ್ತಿದ್ದ ಮಾರ್ಗದ ಭಾಗವನ್ನು ವರ್ಷಂಪ್ರತಿ ಇಲಿಗಳಂತೆ ಕೊರೆಕೊರೆದು ತಮ್ಮ ಭೂಮಿಗಳಲ್ಲಿ ಸೇರಿಸಿಕೊಂಡದ್ದರಿಂದಲೂ ಮಳೆಗಾಲದಲ್ಲಿ ನೀರಿನ ಪ್ರವಾಹದ ಬಿರುಸಿನಿಂದ ಕೆಲವು ಕಡೆ ಭಾಗವು ತಗ್ಗು ಭೂಮಿಯಲ್ಲಿ ಕತ್ತರಿಸಿ ಹೋದುದರಿಂದಲೂ, ಕೆಲವು ಕಡೆ ಮಾರ್ಗವು ಒಂದು ಮಾರು ಸಹ ಅಗಲವಿಲ್ಲ ಹೀಗಾಗಿ ಮಾರ್ಗದ ದುರ್ದೆಶೆಯನ್ನು ಹೇಳಲಾಗದು. ಅದರಲ್ಲಿ ಹೆಚ್ಚು ಲೋಕೋಪಯೋಗಿಯಾಗಿದ್ದ ಅಂಚೆಸಿಯಿಂದ ಪ್ರಾಣಿಗದಿಂ ಬಾಳೆದವರೆಗಿನ ಮಾರ್ಗದ ಭಾಗದ ಸ್ಥಿತಿಯಂತೂ ಹೆಚ್ಚು ಚಿಂತಾ ಜನಕವಾಗಿರುತ್ತದೆ. ಹೀಗೆಯೇ ಮುಂದೆ ಸಹ ನಡೆದರೆ ರಸ್ತೆಯೇ ಲೋಪವಾಗುವ ಸಂಭವವಿರುತ್ತದೆ.

ಕಾರಣ ರಾಷ್ಟ್ರೀಯ ಪಕ್ಷದ ಮೆಂಬರರು ಈ ಕಡೆಗೆ ಲಕ್ಷಕೊಟ್ಟು ಕಮಿಟಿಯಲ್ಲಿ ಈ ಮಾರ್ಗದ ಕರಿಡು ಸ್ಪೇಶಲ್ ರಿಪೇರಿಯ ಬಗ್ಗೆ ಕೆಲವು ಹಣ ಮಂಜೂರ ಮಾಡಿಸಿ ಬಾಳದ ವರೆಗಿನ ಮಾರ್ಗದ ಎಡಬದಿಯನ್ನಾದರೂ ಗುಂಡುಗಲ್ಲಿನಿಂದ ಕಟ್ಟಿಸಿ ಕಾಪಾಡುವರೇನು?

ವೃತ್ತಸಾರ.

— ಸಂಯುಕ್ತ ಪ್ರಾಂತಿಕ ಸರಕಾರದವರು ಆಯುರ್ವೇದ ಹಾಗೂ ಯುನಾನಿ ವೈದ್ಯ ಪದ್ಧತಿಯ ಕುರಿತು ವಿಚಾರಿಸಲು ನೇಮಿಸಿದ ಕಮಿಟಿಯ ರಿಪೋರ್ಟು ಪ್ರಕಟವಾಗಿದೆ. ಹಿಂದೀ ವೈದ್ಯಶಾಸ್ತ್ರಕ್ಕೆ ಸರಕಾರದ ಮಾನ್ಯತೆ ದೊರಕಬೇಕಾಗಿಯೂ, ಸರಕಾರವು ಅದಕ್ಕೆ ಉತ್ತೇಜನ ಕೊಡಬೇಕಾಗಿಯೂ ಕಮಿಟಿಯವರು ಅಭಿಪ್ರಾಯಪಟ್ಟಿರುವರು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಆಯುರ್ವೇದ ಹಾಗು ಯುನಾನಿ ಸಂಸ್ಥೆಗಳನ್ನು ಸ್ಥಾಪಿಸಲು ಸೂಚಿಸಬೇಕಾಗಿ ಕಮಿಟಿಯವರು ಸರಕಾರಕ್ಕೆ ಸೂಚನೆ ಮಾಡಿರುವರು.

— ಅಹಮ್ಮದಾಬಾದ ಜಿಲ್ಲೆಯ ಆನಂದ ಗ್ರಾಮದಲ್ಲಿ ಕೆಲವು ಮಾರ್ಗಿಗಳು ಒಂದು ಮರದ ಕೆಳಗೆ ನಿಂತು ಜನರಿಗೆ ಬೋಧಿಸುತ್ತಿದ್ದರು. ಥಟ್ಟನೆ ಮರವು ಕುಸಿದು ಬಿದ್ದು ೬ ಮಂದಿಗಳು ಅಲ್ಲಿಂದಲ್ಲೇ ಮಡಿದರು.

— ನ್ಯಾಯದ ವಿಷಯ ವಿಚಾರ ಮಾಡಲು ನೇಮಕ ಹೊಂದಿದ ಸಾರ್ವಭೌಮ ಕಮಿಟಿಯವರು ದೊರೆಯ ಪಗಾರವನ್ನು ಮುಂದೆ ಒಂದೂವರೆ ಲಕ್ಷ ರೂಪಾಯಿ ಮಾಡಬೇಕಾಗಿ ಸೂಚಿಸಿರುವರು. ಅದರಿಂದ ವರುಷಕ್ಕೆ ೧೮-೫-೪ ರೂಪಾಯಿ ಬೀಳುವದು. ಅಂದರೆ, ಹಗಲೇ ೬ ರೂಪಾಯಿಗಳು ಅಲ್ಲಿ ಅಗ್ಗವಾಗಿ ಸಿಗುವವು. ಪರದೇಶಿ ವ್ಯಾಪಾರಿಗಳಿಗೆ ಸುಗ್ಗಿ!

— ರಷ್ಯದಲ್ಲಿ ಸೇರಲಿಕ್ಕಿದ್ದ ಸ್ವಾಗತ ಕಮಿಟಿಗೆ ೧೫ ಸಾವಿರ ರೂಪಾಯಿಗಳ ದ್ರವ್ಯಸಂಗ್ರಹವಾಗಿದೆ.

— ಮುಂಬಯಿಯ ಶಾಸನ ಕೌನ್ಸಿಲಿನಲ್ಲಿ ಪ್ರಾಥಮಿಕ ಶಿಕ್ಷಕರಿಗೆ ಸಾಹೇ-ವರಾಂಡಬೇಕೆಂಬ ಸ್ವತಂತ್ರವಾದ ಠರಾವನ್ನು ಕೊಡಬೇಕೆಂದು ಶ್ರೀ ಕಂಕರ ಶ್ರೀಕೃಷ್ಣ ದೇವರವರು ಸೂಚಿಸಿದ ತೀರ್ಮಾನವು ಮಂಜೂರಾಯಿತು. ಈ ಠರಾವು ಹಣ ಬೊಕ್ಕಸದ ಜೋರಿನ ಸರಕಾರದ ಈ ಪ್ರಕಾರ ಸಂಬಳ ಕೊಡಲಾಗದೆಂದು ಶಿಕ್ಷಣ ಮಂತ್ರಿಗಳು ಕೌನ್ಸಿಲಿನಲ್ಲಿಯೇ ಹೇಳಿದರು. ಈ ಮೂಲಕ ಠರಾವು ತಂಟೆಯಾಗಿ ಶಿಕ್ಷಕರಿಗೆ ಲಾಭ ದೊರೆಯ ಬಾರದು.

— ಬಾಗಲಕೋಟೆಯ ವೇದಮೂರ್ತಿ ಮಳಗಿ ವೇದವ್ಯಾಸಾಚಾರ್ಯರ ಮಾಹೇವಿಲಾಸ ಸಂಸ್ಕೃತ ಪಾಠಶಾಲೆಗೆ ಶ್ರೀಮಂತ ಉತ್ತರಾಧಿ ಮಠಾಧೀಶರು ವರ್ಷಾಸನ ೪೦೦ ರೂಪಾಯಿ ಅರ್ಪಿಸಿರುವರು. ಕರ್ನಾಟಕದೊಳಗಿನ ಸಂಸ್ಕೃತ ಪಾಠಶಾಲೆಗಳಿಗೆ ಮಠಾಧೀಶರು ಇದೇ ಪ್ರಕಾರ ಪ್ರೋತ್ಸಾಹವನ್ನೀಯಲಿ.

— ಮೈಸೂರ ಪ್ರಾಂತದ ಸಾಮಾನಗರದ ನಿಜಾಮು ಸಂಪೇಹಿರವರು ತಮ್ಮ ರಾಜ್ಯದಲ್ಲಿ ವೀಣಾಗಳನ್ನು ಯಾರೂ ಹಿಡಿಯಬಾರದೆಂದು ಕಟ್ಟಪ್ಪಣೆ ಮಾಡಿರುವರು.

— ಮಲಬಾರದೊಳಗಿನ ಗಟ್ಟವಾಡ ಕಾರ್ತಿಲ್ಲಿ ಒಬ್ಬ ತಪಸ್ವಿಯು ಇರುತ್ತಿದ್ದನು. ಆತನು ಒಂದು ಆಕಳನ್ನು ಸಾಕಿದ್ದನು. ಅದರ ಹಾಲನ್ನು ಕುಡಿದು, ಹಣ್ಣುಗಳನ್ನು ತಿಂದು ಆತನು ತಪಸ್ಸನ್ನು ಮಾಡುತ್ತಿದ್ದನು. ಮಾಪಿಳ್ಳೆಯವನಿಗೆ ಕಪೋನವದ ಸಂಶಯ ಹತ್ತಿತು. ಆತನು ಆಕಳನ್ನು ಕದ್ದೊಯ್ದನು. ಆ ಬಳಿಯಲ್ಲಿ ತಂದೊಡನೆ ಪೋಲೀಸರಿಗೆ ಸಂಶಯ ಬಂದು, ಮಾಪಿಳ್ಳೆಯವನನ್ನು ಹಿಡಿದು ಖಟ್ಲೆ ಮಾಡಿಕೊಟ್ಟರು. ಮಾಪಿಳ್ಳೆಯವನಿಗೆ ೫ ವರುಷಗಳ ಸಕ್ತ ಶಿಕ್ಷೆ ವಿಧಿಸಲಾಗಿದೆ.

— ಜರ್ಮನಿಯಿಂದ ಕುಮಾರಿ ಹಾಲಜೆ.ಜೆ ಎಂಬ ಪ್ರಸಾಬ ಸ್ತ್ರೀಯೊಬ್ಬಳು ಮಹಾತ್ಮರ ದರ್ಶನಾರ್ಥವಾಗಿ ಅಹಮ್ಮದಾಬಾದಕ್ಕೆ ಬಂದಿದ್ದಾಳೆ. ಗುಜರಾಥ ವಿದ್ಯಾಪೀಠದಲ್ಲಿ ಇವಳು ಜರ್ಮನ್ ಭಾಷೆಯನ್ನು ಕಲಿಸುವಳು.

— ವಿರಮಗಾಂವದಲ್ಲಿ ಒಂದು ಚಮತ್ಕಾರ! ಅಲ್ಲಿಯ ಪ್ರಿರ್ಯೂರ ಆಫೀಸರನಿಗೆ ಮಗಳೊಬ್ಬಳಿದ್ದಳು. ಅವಳು ಸ್ಕೂಲ ಮನೆಯಲ್ಲಿದ್ದಳು ಹಿಂಬಾಗಿಲು ತೆರೆದಿತ್ತು. ಅದನ್ನು ಆವಳು ಮುಚ್ಚಹೋದಳು. ಆ ಸಮಯ ಪಿಶಾಚಿಯೊಂದು ಸೂಕ್ಷ್ಮರೂಪವಾಗಿ ಮೈಮೇಲಿನ ಆಭರಣಗಳನ್ನು ಬೇಡಿದಳು. ಹುಡುಗಿಯು ಹೌಹಾರಿದಳು. ಕಡತಲೆ ಆವಳು ಕೊಟ್ಟುಬಿಟ್ಟಳು. ಆದರೂ ಭೂತವು ಸುಮ್ಮನಿರಲಿಲ್ಲ. ನಿನಗೆ ಸುಟ್ಟು ಬಿಡುತ್ತೇನೆಂದು ಹುಡುಗಿಗೆ ಹೇಳಿದಳು. ಹುಡುಗಿಯು ದರಿಸಿಯಿಂದ ಬೇಡಿಕೊಂಡಳು, ಆ ಭೂತವು ಮೈಮೇಲೆ ಬೆಂಕಿ ಎಣ್ಣೆ ಹಾಕಿಬಿಟ್ಟಿತು. ಬೆಂಕಿ ಕೊಟ್ಟಿತು. ಮರಣ ಸಮಯ ಹುಡುಗಿಯು ಇದನ್ನು ಹಿತವೆಂದು ನಿವೇದಿಸಿದಳಂತೆ!

— ಕೊಚ್ಚಿಯ ಬಳಿ ತಿಮಿಂಗಿಲದಂಥ ದೊಡ್ಡ ಮೀನು ದೊರಕಿತು. ಅದರ ಹೊಟ್ಟೆಯನ್ನು ಕೊಯ್ದಾಗ ಒಂದು ಮೀನು ಹೊರಬಿದ್ದಿತು. ಈ ಮೀನಿನ ಕಿವಿಗಳು ದನದ ಕಿವಿಗಳೋಪಾದಿಯಲ್ಲಿದ್ದವು.

— ಗೋವೆಯಲ್ಲಿ 'ಅಫೀಸರ್ಸ ಕೇ ಡಕ್ಕ' ಎಂಬ ಸರಕಾರಿ ಅಧಿಕಾರಿಗಳ ಸಂಘದ ಕಾಯಿದೆಯ ಮೂಲಕ ಸ್ವಸಿಕರು ದೊಡ್ಡ ದೊಂಬಿಯನ್ನೆಬ್ಬಿಸಿದರು. ಈಗ ದೊಂಬಿಯು ಶಾಂತವಾಗಿದೆ.

— ಸರಾಯಿಯಿಂದ 'ಬೆಲ್ಲ ಮಾಡಲು ಇಟ್ಟಿ ಲಾಯಸನ್ಸ ಫೀಯನ್ನು ಕೊಚ್ಚಿಯ ಸರಕಾರವು ರದ್ದುಪಡಿಸಲಿದೆ.

— ಕರ್ನಾಟಕ ಕಾಲೇಜಿನ ಮುಖ್ಯಾಧ್ಯಾಪಕರಾಗಿದ್ದು, ಈಗ ಮುಂಬಯಿಯ ಎಲ್ಫಿನ್ಸ್ಟನ್ ಕಾಲೇಜಿನಲ್ಲಿ ಗಣಿತ ವಿಷಯದ ಅಧ್ಯಾಪಕರಾಗಿದ್ದ ಡಾ॥ ಮಾಂಡಲಿಂಗ ಶ್ರೀನಿವಾಸ ಕಟ್ಟಿಯವರು ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ಹೋದಾಗ, ಮಿನಿ ಹನ್ರೀಟ ಎಂಬ ಯುರೋಪಿಯನ ಹೆಂಗಸಿಗೆ ಮದುವೆಯಾದರು. ಆ ಸಮಯ ಡಾ॥ ಕಟ್ಟಿಯವರ ಪ್ರಾಯ ೩೩; ಹೆಂಡತಿಯ ಪ್ರಾಯ ೪೬! ಇವರು ಹಿಂದುಸ್ಥಾನಕ್ಕೆ ಬಂದ ಬಳಿಕ, ಕೆಲವು ಕಾಲ ಚಿಕ್ಕ ಬಾಡಿಕೊಂಡಿದ್ದರು. ಆ ಬಳಿಕ, ಗಂಡ-ಹೆಂಡರೊಳಗೆ ವಿರಸವು ಬೆಳೆದು, ಹನ್ರೀಟರವರು ವಿಲಾಯತಿಗೆ ಹೋಗಿ, ಘಟಸ್ಫೋಟ ಹಾಗು ಭರ್ತ್ಯಾಂಶದ ದಾವೆ ಮಾಡಿ ಹದ್ದಿಗೆ ೫ ಪವನು ೫ ಶಿಲಿಂಗಿನಂತೆ ಪೋಟಗಿ ಪಡಕೊಂಡಿರುವರು. ಪೌರ್ವಾತ್ಯ-ಪಾಶ್ಚಾತ್ಯ ಸರಸ್ವ ಬಂಧದ ಪರಿಣಾಮವಿದು!

— ಸುಪ್ರಸಿದ್ಧ ಕರ್ನಾಟಕ ಸಾಹಿತ್ಯ ಸೇವಕರಾದ ವೀಣೆ ಶೇಷಣ್ಣನವರು ಜುಲೈ ತಿಂಗಳ ೨೫ ನೇ ತಾರೀಖಿಗೆ ಪರಲೋಕವನ್ನೈದಿದರು. ಶೇಷಣ್ಣನವರು ವೀಣಾವಾದ್ಯದಲ್ಲಿ ಪ್ರವೀಣರು. ದಾಮನ ಮಹಾರಾಜರವರು ಇವರ ಗಾಯನಕ್ಕೆ ಮರುಳಾಗಿ ೧೦ ಸಾವಿರ ರೂಪಾಯಿಗಳನ್ನು ಅರ್ಪಿಸಿದರು. ಬರೋಡೆಯ ಮಹಾರಾಜರೂ, ಮೈಸೂರ ಮಹಾರಾಜರೂ ಇವರ ಜ್ಞಾನಕ್ಕೆ ಮೆಚ್ಚಿ, ಪಲ್ಲಕ್ಕಿಯಲ್ಲಿ ಕೂಡ್ರಿಸಿ ಇವರಿಗೆ ಮೆರಿಸಿದರು. ಘೋರ ಕದ ಬೇಗವನ್ಂತರು ವೀಣಾಗಾನವನ್ನು ಕೇಳಿ ಬ್ರಹ್ಮಾನಂದವನ್ನನುಭವಿಸಿದರಂತೆ! ಇಂಥ ಪುಣ್ಯಾತ್ಮರು ತೀರಿಕೊಂಡು ಕರ್ನಾಟಕಕ್ಕೆ ದೊಡ್ಡ ಕೊರತೆ ಆದಂತಾಯಿತು.

— ನಿಜಾಮ ರಾಜ್ಯದ ಕೊಪ್ಪಳ ಜಿಲ್ಲೆಯ ಕಾರಟಗಿ ಗ್ರಾಮದಲ್ಲಿ ಮನೆ ಕಟ್ಟುವದಕ್ಕಾಗಿ ನೆಲಗಟ್ಟು ಅಗಿಯುತ್ತಿದ್ದರು. ಆ ಸಮಯ ಚಿಕ್ಕ-ಚಿಕ್ಕ ಮಡಿಕೆಯ ಬಿರುದಾಂಕಿತವಾದ ಹಣ ತುಂಬಿದ ಪಬ್ಬಿ ದೊರಕಿದೆ. ಅದು ಈಶಾನ್ಯ ತಾಲೂಕ ಕಚೇರಿಗೆ ಕಳಿಸಲ್ಪಟ್ಟಿದೆ.

— ಬಂಗಾಲದ ದಿನಾಜಪುರ ಜಿಲ್ಲೆಗೆ ಸೇರಿದ ಕನಕಪುರ ಗ್ರಾಮದಲ್ಲಿ ಜುಲೈ ತಿಂಗಳ ೧೬ ನೇ ತಾರೀಖಿಗೆ ಒಬ್ಬ ದಾದನ ಮಗಳು ಹುಲಿ ವಾರಿಸಿಂಥ 'ಕಿರುಪೊಂಡವನ್ನು ಹೆತ್ತಳು. ಇದು ೧॥ ಅಡಿ ಉದ್ದವಿತ್ತು, ೪ ಕಾಲುಗಳಿದ್ದವು; ಒಂದು ಬಾಲವಿತ್ತು; ದೊಡ್ಡ ದೊಡ್ಡ ಕಣ್ಣುಗಳಿದ್ದವು, ಹಗಲಲ್ಲಿ ರೋಮಗಳಿದ್ದವು; ಹುಟ್ಟಿದಾಗ ಕೂಸಿಗೆ ಜೀವವಿತ್ತು. ತಾಯಿಯು ಅದನ್ನು ನೋಡಿದೊಡನೆ ಒಮ್ಮೆಲೇ ಅದನ್ನು ಹೊರಬೀಸಾಡಿದಳು; ಕೂಸು ಸತ್ತುಹೋಯಿತು. ಅದಕ್ಕೆ ಕಿವಿಯೊಂದಿಲ್ಲ. ನಾಯಿ ಯಾ ಬೆಕ್ಕು ಅದನ್ನು ತಿಂದಿರಬೇಕೆಂದು ಹೇಳುತ್ತಾರೆ. ಶಹರದೊಳಗಿನ ಡಾಕ್ಟರರು ಅದನ್ನು ಸ್ಪಿರಿಟದಲ್ಲಿ ಹಾಕಿಟ್ಟಿರುವರು. ತಾಯಿಯು ಪ್ರಸೂತಿಯಾದಂದಿನಿಂದ ಅಗ್ಗಿಗ್ಗಿ ಎಚ್ಚರತಪ್ಪಿ ಬೀಳುತ್ತಿರುವಳಂತೆ!

ಅತ್ಯದ್ಭುತ! ಅತ್ಯದ್ಭುತ!!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲೆಕ್ಷಿರ್ ಆಫ್ ಲೈಫ್

ಅಂದರೆ, ಸರ್ವ ರೋಗ ನಾಶಕ, ಸರ್ವಾರೋಗ್ಯದಾಯಕ. ಅಜೀರ್ಣ, ತಲೆನೋವು, ವಾಂತಿ, ಅತಿಸಾರ, ಜ್ವರ, ಕಾಲರಾ, ಜ್ವರ, ಕಿವಿನೋವು, ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಕೊಡೆಯ ಚಲ್ಲುವ ಒಂದೇ ರಾಮಬಾಣವಿದು! ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ! ಒಂದು ಸೀಸೆಯಿದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ!!!

ದೊಡ್ಡ ಸೀಸೆಗೆ ರೂ. ೧-೮-೦. ಸಣ್ಣ ಸೀಸೆಗೆ ರೂ. ೦-೮-೦. ಟಪಾಲ ಖರ್ಚು ಬೇರೆ.

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ:- ಜೀವನಾಧಾರ ಡಿಪೋ, ಹುಬ್ಬಳ್ಳಿ

ಮಹಾತ್ಮರ ಆತ್ಮಚರಿತ್ರೆ.

(೧೧) ಕ್ರೈಸ್ತರ ಗೆಳೆತನ

ಮಾರನೇ ದಿನ ೧ ಘಂಟೆಗೆ ನಾನು ಬೇಕರರವರ ಪ್ರಾರ್ಥನೆ ಸಭೆಗೆ ಹೋದೆನು. ಅಲ್ಲಿ ಕುಮಾರಿ ಹ್ಯಾರಿಸ್, ಗಿಬ್, ಮಿ|| ಕೊಟ್ಸ್ ಮುಂತಾದವರ ಪರಿಚಯವು ಮಾಡಿಕೊಡಲ್ಪಟ್ಟಿತು. ಪ್ರತಿಯೊಬ್ಬರೂ ಮೊಣಕಾಲೂರಿ ಪ್ರಾರ್ಥನೆ ಮಾಡಿದರು. ನಾನೂ ಅವರಂತೆಯೇ ಮಾಡಿದೆನು. ಪ್ರತಿಯೊಬ್ಬರೂ ತಮಗೆ ಇಷ್ಟವಿದ್ದುದನ್ನು ಪರಮಾತ್ಮನೊಡನೆ ಪ್ರಾರ್ಥನೆಮಾಡಿ ಬೇಡಿಕೊಂಡರು. ಹೀಗೆ ನಿತ್ಯ ಪ್ರಾರ್ಥನೆಯು ಪ್ರಶಾಂತ ಚಿತ್ತದಿಂದ ನಡೆಯಿತು. ಆ ಬಳಿಕ, ನನ್ನ ಕಲ್ಯಾಣಕ್ಕಾಗಿ ಒಂದು ಪ್ರಾರ್ಥನೆ ಮಾಡಲ್ಪಟ್ಟಿತು. ಅದೇನಂದರೆ: "ಭಗವಂತನೇ, ನಮ್ಮೊಳಗೆ ಇಂದಿಗೆ ಸೇರಿದ ನೂತನ ಬಂಧುವಿಗೆ ಸರಿಯಾದ ಮಾರ್ಗ ತೋರಿಸು. ನಮಗೆ ದಯಪಾಲಿಸಿದಂತೆಯೇ ಈತನಿಗೂ ಶಾಂತತೆಯನ್ನು ದಯಪಾಲಿಸು. ಕ್ರಿಸ್ತ ಪರಮಾತ್ಮನು ನಮ್ಮನ್ನು ಕಾಪಾಡಿದಂತೆ ಈತನನ್ನೂ ಕಾಪಾಡಲಿ. ನಾವು ಇದನ್ನೆಲ್ಲ ಕ್ರಿಸ್ತನ ಹೆಸರಿನಿಂದ ಪ್ರಾರ್ಥಿಸುತ್ತೇವೆ."

ಈ ಪ್ರಾರ್ಥನೆಗಳಲ್ಲಿ ಸ್ತೋತ್ರಗಳು ಹಾಡಲ್ಪಡುತ್ತಿರಲಿಲ್ಲ. ವಾದ್ಯಗಳೂ ಇರಲಿಲ್ಲ. [illegible] ಪ್ರಾರ್ಥನೆ ಮಾಡಿ [illegible] ಫಲಾಹಾರಕ್ಕಾಗಿ [illegible] ಹೋಗುತ್ತಿದ್ದೆವು.

[illegible] ಕ್ರೈಸ್ತರು [illegible] ಕೊಟ್ಸರವರು [illegible] ಪ್ರತಿ ರವಿವಾರಕ್ಕೆ [illegible] ಅವರು ನನಗೆ ಒಪ್ಪಿಗೆ [illegible].

ಮಿ|| ಕೊಟ್ಸರವರೂ, ನಾನೂ ರವಿವಾರಕ್ಕೆ ಒಟ್ಟಿಗೆ ಸೇರಿದಾಗ, ಆ ವಾರದಲ್ಲಿ ನಾನು ಮಾಡಿದ ಧಾರ್ಮಿಕ ಅಭ್ಯಾಸದ ವಿವರವನ್ನು ನಾನು ಅವರಿಗೆ ತಿಳಿಸುತ್ತಿದ್ದೆನು. ನಾನು ಓದಿದ ಗ್ರಂಥಗಳನ್ನು ಕುರಿತು ಚರ್ಚಿಸಿ ಅದರಿಂದ ನನ್ನ ಮನಸ್ಸಿನ ಮೇಲೆ ಆದ ಪರಿಣಾಮಗಳನ್ನು ತಿಳಿಸಿದೆನು. [illegible] ತಮ್ಮ ಅನುಭವಗಳನ್ನು ಹೇಳಿ [illegible] ತಮ್ಮ ಪ್ರಸನ್ನವಾದ ಶಾಂತತೆಯನ್ನು ವರ್ಣಿಸುತ್ತಿದ್ದರು. ಮಿ|| ಕೊಟ್ಸರವರು ನಿಷ್ಕಪಟ ಸ್ವಭಾವದ ಧೀರ [illegible] ಆಸ್ವಾದಿಸುತ್ತಿದ್ದವು [illegible] ಕ್ರೈಸ್ತ [illegible] ಕಡೆಗೆ ಅವರು ನನ್ನನ್ನೊಡನೆ [illegible].

ನನ್ನ ಪರಿಚಯವು ಹೆಚ್ಚಾದಂತೆ ಅವರು ಧಾರ್ಮಿಕ ಗ್ರಂಥಗಳನ್ನು ನನಗೆ ಕೊಡಹತ್ತಿದರು. ಆ ಗ್ರಂಥಗಳಿಂದ ನನ್ನ ಜೋಳಿಗೆಯು ತುಂಬಹತ್ತಿತು. ನಿಷ್ಠೆಯಿಂದ ನಾನು ಅವನ್ನೆಲ್ಲ ಓದಲೊಪ್ಪಿದೆನು. ಮತ್ತು ನಾನು ಓದಿದ ಹಾಗೆ ನಮ್ಮೊಳಗೆ ಅವುಗಳ ಚರ್ಚೆಯಾಗಹತ್ತಿತು.

೧೮೯೩ ನೇ ಇಸ್ವಿಯಲ್ಲಿ ಇಂಥ ಅನೇಕ ಗ್ರಂಥಗಳನ್ನು ನಾನು ಓದಿದೆನು. ಆ ಎಲ್ಲ ಗ್ರಂಥಗಳ ಹೆಸರು ನನಗೆ ಜ್ಞಾಪಕದಲ್ಲಿಲ್ಲ. ಆದರೆ, ಸಿಟಿ ಟೆಂಪಲ್‌ದ ಡಾ|| ಪಾರ್ಕರರವರ "ಕೊಮೆಂಟರಿ", ಪಿಯರಸನ್‌ರವರ "ಮೆನಿ ಇನ್‌ಫ್ಯಾಲಿಬಲ್ ಪ್ರೂಫ್ಸ" ಹಾಗು ಬಟ್ಲರರ "ಎನಲೋಜಿ" ಎಂಬ ಗ್ರಂಥಗಳನ್ನು ನಾನು ಓದಿದ ನೆನಪಿದೆ. ಈ ಗ್ರಂಥಗಳ ಕೆಲವು ಭಾಗವು ನನ್ನ ಗ್ರಹಿಕೆಗೆ ಬರಲಿಲ್ಲ. ಕೆಲ ಭಾಗವು ನನಗೆ ಸೇರಿತು, ಕೆಲ ಭಾಗವು ಸೇರಲಿಲ್ಲ. ಮಿ|| ಕೊಟ್ಸರವರೊಡನೆ ನನ್ನ ವಿಚಾರಗಳನ್ನು ನಾನು ಹೇಳುತ್ತಿದ್ದೆ. "ಮೆನಿ ಇನ್‌ಫ್ಯಾಲಿಬಲ್ ಪ್ರೂಫ್ಸ" ಎಂಬ ಗ್ರಂಥದಲ್ಲಿ ಗ್ರಂಥಕರ್ತನ ತಿಳುವಳಿಕೆಯಂತೆ 'ಬ್ಯಾಬಿಲ'ದಲ್ಲಿ ಪ್ರತಿಪಾದಿಸಿದ ಧರ್ಮದ ಆಧಾರಗಳು ಕೊಡಲ್ಪಟ್ಟಿವೆ. ಆ ಗ್ರಂಥ ವಾಚನದಿಂದ ನನ್ನ ಮೇಲೇನೂ ಪರಿಣಾಮವಾಗಲಿಲ್ಲ. ಪಾರ್ಕರರವರ 'ಕೊಮೆಂಟರಿ' ಗ್ರಂಥವು ಚಿತ್ತ ಪ್ರೇರಕವಿತ್ತು. ಆದರೆ, ಪ್ರಚಲಿತ ಕ್ರೈಸ್ತ ಧರ್ಮದ ಭಾವನೆಯಲ್ಲಿ ನಿಷ್ಠೆಯಿಲ್ಲದವನಿಗೆ ಅದರಿಂದೇನೂ ಲಾಭವಿದ್ದಿಲ್ಲ. ಬಟ್ಲರರವರ 'ಎನಲೋಜಿ' ಗ್ರಂಥವು ವಿದ್ವತ್ಪ್ರಚುರವಿತ್ತು. ಹಾಗೆಯೇ ಕಠಿಣವಿತ್ತು. ಸರಿಯಾಗಿ ತಿಳಿಯಬೇಕಾದರೆ, ೪-೫ ಸಾರೆ ಓದಬೇಕು. ನಾಸ್ತಿಕರಿಗೆ ಆಸ್ತಿಕ ಪಂಥಕ್ಕೆ ಎಳಕೊಳ್ಳುವದಕ್ಕಾಗಿ ಈ ಪುಸ್ತಕವು ಬರೆಯಲಾಗಿದೆಂದು ನನಗೆ ತೋರಿತು. ಪರಮಾತ್ಮನ ಅಸ್ತಿತ್ವದ ಕುರಿತು ಆ ಗ್ರಂಥದಲ್ಲಿ ಪ್ರತಿಪಾದಿಸಿದ ತರ್ಕಗಳು ನನಗೇನೂ ಅವಶ್ಯವಿದ್ದಿಲ್ಲ. ಆ ಕಾಲಕ್ಕೆ ನಾನು ನಾಸ್ತಿಕ ಪಂಥದವನಿದ್ದಿಲ್ಲ. "ಕ್ರೈಸ್ತನೇ ಪರಮಾತ್ಮನ ಒಂದೇ ಅವತಾರನು, ಆತನೇ ಪರಮಾತ್ಮನಗೂ, ಮಾನವನಿಗೂ ಮಧ್ಯಸ್ಥನು" ಎಂಬ ತರ್ಕಗಳಿಂದ ನಾನೇನು ಮರುಳಾಗಲಿಲ್ಲ.

ಆದರೆ, ಕೊಟ್ಸರವರು ಸೋಲನ್ನು ಸಂತೋಷದಿಂದ ಹಾಗೆ ಒಪ್ಪಿಕೊಳ್ಳಲಿಲ್ಲ. ನನ್ನ ಮೇಲೆ ಅವರಿಗೆ ಪ್ರೀತಿಯಿದ್ದು, ನನ್ನ ಕೊರಳಿಗೆ ತುಳಸೀ ಮಣಿಯ ವೈಷ್ಣವ ಮಾಲೆಯಿತ್ತು. ಅದು ಮೂಢ ಭಕ್ತಿಯೆಂದು ಅವರು ತಿಳಿದಿದ್ದರು. ಅದನ್ನು ನೋಡಿ, ಅವರಿಗೆ ವ್ಯಸನವಾಯಿತು. "ಇಂಥ ಮೂಢ ಭಕ್ತಿಯು ನಿಮಗೆ ಶೋಭಿಸುವದಿಲ್ಲ. ಹೀಗೆ ಬನ್ನಿ, ಆ ಮಾಲೆಯನ್ನು ನಾನು ಹರಿದು ಹಾಕುತ್ತೇನೆ."

"ಹಾಗಾಗದು. ನನ್ನ ತಾಯಿಯು ನನಗೆ ಮುದ್ದಿಟ್ಟು ಕೊಟ್ಟ ಪವಿತ್ರ ಮಾಲೆಯಿದು."

"ಆದರೆ, ಅದರಲ್ಲಿ ನಿಮಗೆ ನಂಬಿಗೆಯಿದೆಯೇ?"

"ನನಗೇನು ಅದರ ಗೂಢಾರ್ಥದ ಸಾಮರ್ಥ್ಯವು ಗೊತ್ತಿಲ್ಲ. ಅದನ್ನು ಧರಿಸದಿದ್ದರೆ ನಾನು ಸಂಕಟಕ್ಕೊಳಗಾಗುವೆನೆಂದು ನನಗೆ ತೋರುವದಿಲ್ಲ. ಆದರೆ, ತಾಯಿಯು ಪ್ರೀತಿಯಿಂದಲೂ, ನನಗೆ ಹಿತವಾಗುವದೆಂಬ ನಂಬಿಗೆಯಿಂದಲೂ ಹಾಕಿದ ಈ ಮಾಲೆಯನ್ನು, ಯೋಗ್ಯ ಕಾರಣ ದೊರೆತ ಹೊರತು ನಾನು ತ್ಯಜಿಸಲಾರೆ. ಕಾಲ ಕ್ರಮೇಣವಾದ ಹಾಗೆ ಅದು ಜೀರ್ಣವಾಗಿ ಹೋದ, ತನ್ನಷ್ಟಕ್ಕೇ ಹರಿದು ಹೋಗುವದು. ಆಗ ನಾನು ಹೊಸ ಮಾಲೆಯನ್ನು ಧರಿಸಲಿಕ್ಕಿಲ್ಲ. ಆದರೆ, ಈ ಮಾಲೆಯನ್ನು ನಾನು ಹರಿದು ಹಾಕಲಾರೆ."

ಕೊಟ್ಸರವರಿಗೆ ನನ್ನ ಧರ್ಮದ ಮೇಲೆ ಆದರವಿದ್ದಿಲ್ಲ. ಆದರಿಂದ ನನ್ನ ತರ್ಕವು ಅವರಿಗೆ ತಿಳಿಯಲಿಲ್ಲ. ಅಜ್ಞಾನಪಂಕದಿಂದ ನನ್ನನ್ನು ವಿಮೋಚನ ಮಾಡಲು ಅವರು ಯತ್ನಿಸುತ್ತಿದ್ದರು. "ಇತರ ಧರ್ಮಗಳಲ್ಲಿ ಕೆಲ ಮಟ್ಟಿಗೆ ಸತ್ಯಾಂಶವಿರಬಹುದು. ಆದರೆ, ಕ್ರೈಸ್ತಮತವೇ ಸಂಪೂರ್ಣ ಸತ್ಯವು. ಅದನ್ನು ಅಂಗೀಕರಿಸಿದ ಹೊರತು ನಿಮಗೆ ವಿಮೋಚನವಾಗುವದು ಅಶಕ್ಯವು. ಕ್ರೈಸ್ತನ ಮಧ್ಯಸ್ಥಿಕೆಯಿದ್ದರೆ, ನಿಮ್ಮ ಪಾಪಗಳು ತೊಳೆದು ಹೋಗುವವು. ನೀವು ಮಾಡಿದ ಸತ್ಕೃತ್ಯಗಳು ನಿರರ್ಥಕವಾಗುವವು," ಎಂದು ಅವರು ನನಗೆ ಬೋಧಿಸುತ್ತಿದ್ದರು.

ಅನೇಕ ಗ್ರಂಥಗಳ ಪರಿಚಯ ಮಾಡಿಕೊಟ್ಟಂತೆ ಅವರು ನಿಷ್ಠಾವಂತ ಕ್ರೈಸ್ತರ ಪರಿಚಯವನ್ನೂ ನನಗೆ ಮಾಡಿಕೊಟ್ಟರು. ಪ್ಲೈಮೌಥ ಬ್ರದ್ರಿನ್ ಎಂಬುದೊಂದು ಕ್ರೈಸ್ತ ಪಂಥವಿದೆ. ಈ ಪಂಥದ ಒಂದು ಮನೆತನದ ಪರಿಚಯವನ್ನೂ ನನಗೆ ಮಾಡಿಕೊಟ್ಟರು.

ಕೊಟ್ಸರವರು ಮಾಡಿಕೊಟ್ಟ ಅನೇಕ ಪರಿಚಯಗಳು ಒಳ್ಳೇ ಇದ್ದವು. ಬಹಳ ಮಂದಿಗಳು ಪಾಪಭೀರುಗಳೆಂದು ನನಗೆ ತಿಳಿಯಿತು. ಆದರೆ, ಪ್ಲೈಮೌಥ ಬ್ರದ್ರಿನ್ ಪಂಥದವನೊಡನೆ ಚರ್ಚಿಸುತ್ತಿರುವಾಗ, ನನ್ನೊಡನೆ ಒಂದು ತರ್ಕ ಮಾಡಲ್ಪಟ್ಟಿತು. ಈ ತರ್ಕವನ್ನು ಕೇಳಿ ನಾನು ಸ್ತಂಭಿತನಾದೆ.

"ನಿಮಗೆ ನಮ್ಮ ಧರ್ಮದ ಸೊಬಗು ತಿಳಿಯಲಿಲ್ಲ. ನೀವು ಕ್ಷಣಕ್ಷಣದಲ್ಲಿ ಮಾಡಿದ ಸ್ಖಲನಗಳ ಚಿಂತೆಮಾಡುತ್ತೀರೆಂಬಂತೆ ತೋರುತ್ತದೆ. ಆ ಸ್ಖಲನಗಳನ್ನು ತಿದ್ದಲಿಕ್ಕೆ, ಅವುಗಳಿಗಾಗಿ ಪ್ರಾಯಶ್ಚಿತ್ತ ಪಡೆಯಲಿಕ್ಕೆ ನೀವು ಚಿಂತಿಸುತ್ತಿರುತ್ತೀರಿ. ಹೀಗೆ ನೀವು ಹಗಲಿರುಳು ಚಿಂತಿಸುವದರಿಂದ ನಿಮಗೆ ಮುಕ್ತಿಯು ಹೇಗೆ ದೊರಕುವದು? ಈ ಪ್ರಕಾರದಿಂದ ನಿಮಗೆ ಚಿತ್ತಶಾಂತಿಯು ದೊರಕಲಿಕ್ಕಿಲ್ಲ. ನಾವೆಲ್ಲರೂ ಪಾಪಿಗಳೆಂದು ನೀವು ಒಪ್ಪುತ್ತೀರಿ. ನಮ್ಮ ಧರ್ಮವು ಹೇಗೆ ಸಂಪೂರ್ಣವಿರುವದೆಂದು ನೋಡಿ. ನಾವು ತಿದ್ದುಪಡಿ ಮಾಡಿಕೊಳ್ಳುವದಾಗಲಿ, ಪ್ರಾಯಶ್ಚಿತ್ತ ಪಡೆಯುವದಾಗಲಿ ವ್ಯರ್ಥವು. ಆದರೂ, ನಮಗೆ ಮುಕ್ತಿ ಬೇಕು. ಪಾಪದ ಹೊರೆಯನ್ನು ಸಹಿಸುವ ಬಗೆ ಹೇಗೆ? ಆ ಹೊರೆಯನ್ನು ನಾವು ಕ್ರಿಸ್ತನ ಮೇಲೆ ಎಸೆಯಬೇಕು; ಆತನೊಬ್ಬನೇ ಪರಮಾತ್ಮನ ಪಾಪರಹಿತ ಪುತ್ರನು. ಆತನಲ್ಲಿ ನಿಷ್ಠೆಯನ್ನಿಡುವವರಿಗೆ ಆತನ ಮಾತಿನ ಮೇಲೆ ಶಾಶ್ವತವಾದ ಮುಕ್ತಿ ದೊರೆಯುತ್ತದೆ. ಇದೇ ಪರಮಾತ್ಮನ ಅಪಾರವಾದ ಅನುಗ್ರಹವಾಗಿರುತ್ತದೆ. ಕ್ರಿಸ್ತನ ಪಾಪನಿವೃತ್ತಿಯ ಸಾಮರ್ಥ್ಯದಲ್ಲಿ ನಾವು ನಂಬಿಕೊಂಡಿರುವದರಿಂದ ನಮ್ಮ ಪಾಪಗಳಿಂದ ಬಾಧೆಯಾಗುವದಿಲ್ಲ. ನಾವು ಪಾಪ ಮಾಡಲೇ ಬೇಕು. ಪಾಪರಹಿತನಾಗಿ ಈ ಜಗತ್ತಿನಲ್ಲಿ ಉಳಕೊಳ್ಳುವದು ಅಶಕ್ಯವು. ಅದರಿಂದ ಕ್ರಿಸ್ತನು ಕಷ್ಟಗಳನ್ನು ಅನುಭವಿಸಿದನು; ಇಡೀ ಮಾನವ ಜಾತಿಯ ಪಾಪಗಳಿಗಾಗಿ ಪ್ರಾಯಶ್ಚಿತ್ತ ಕೊಂಡನು. ಆತನ ವಿಮೋಚನವನ್ನು ಅಂಗೀಕರಿಸುವವರಿಗೇ ಶಾಶ್ವತವಾದ ಶಾಂತಿಯು ಪ್ರಾಪ್ತವಾಗುವದು. ನೀವು ಬಹಳ ಅಸಮಾಧಾನದಿಂದಿರುವಿರಿ. ನಮ್ಮ ಧರ್ಮವು ಬಹಳ ಶಾಂತಿದಾಯಕವಿದೆ."

ಈ ತರ್ಕದಿಂದ ನನಗೇನೂ ಅನಿಸಲಿಲ್ಲ. ನಾನು ವಿನಯಪೂರ್ವಕವಾಗಿ ಹೇಳಿದ್ದೇನಂದರೆ:— "ಸಮಸ್ತ ಕ್ರೈಸ್ತರೂ ಇದೇ ಪ್ರಕಾರದಿಂದ ಕ್ರೈಸ್ತ ಧರ್ಮದ ಅರ್ಥ ಮಾಡುತ್ತಿದ್ದರೆ, ಅದನ್ನು ನಾನು ಅಂಗೀಕರಿಸಲಾರೆ. ಪಾಪದ ಫಲವನ್ನು ಅನುಭವಿಸದೆ ನನಗೆ ಮುಕ್ತಿ ದೊರೆಯಬೇಕೆಂದು ನನ್ನ ಹೇಳಿಕೆಯಿಲ್ಲ. ಪಾಪಕೃತ್ಯಗಳಿಂದಲೇ ನಾನು ಮುಕ್ತನಾಗಿರಬೇಕು. — ಏಕೆ? ಪಾಪದ ವಿಚಾರಗಳೇ ನನ್ನನ್ನು ಸೋಂಕಬಾರದು. ಅಲ್ಲಿಯ ವರೆಗೆ ಅಸಮಾಧಾನದಿಂದಿರಲು ನನ್ನ ತಯಾರಿಯಿದೆ."

ಇದಕ್ಕೆ ಆತನು ಹೇಳಿದ್ದೇನಂದರೆ:— "ನಿಮ್ಮ ಪ್ರಯತ್ನವು ನಿರರ್ಥಕವೆಂದು ನಾನು ನಿಮಗೆ ಸಾರಿ ಹೇಳುತ್ತೇನೆ. ನನ್ನ ಹೇಳಿಕೆಯನ್ನು ಪುನಃ ವಿಚಾರ ಮಾಡಿ ನೋಡಿ."

ಆ ಪ್ಲೈಮೌಥ ಬ್ರದ್ರಿನ್ ಪಂಥದವನು ತನ್ನ ಮಾತಿನಂತೆಯೇ ನಡೆದನು. ಆತನು ಬುದ್ಧ್ಯಾ ಪಾಪಕೃತ್ಯಗಳನ್ನು ಮಾಡುತ್ತಿದ್ದನು. ಮತ್ತು ಅವುಗಳ ವಿಚಾರದಿಂದ ಎಳ್ಳಷ್ಟೂ ಅಸ್ವಸ್ಥನಾಗುತ್ತಿದ್ದಿಲ್ಲ.

ಆದರೆ, ಈ ಗೆಳೆಯರ ಪರಿಚಯವಾಗುವ ಮೊದಲೇ ಸಮಸ್ತ ಕ್ರೈಸ್ತರು ಈ ತರದ ಪಾಪನಿವೃತ್ತಿಯಲ್ಲಿ ನಂಬಿಕೊಳ್ಳುವದಿಲ್ಲೆಂದು ನನಗೆ ಗೊತ್ತಿತ್ತು. ಸ್ವತಃ ಕೋಟ್ಸರವರು ಪಾಪಭೀರುಗಳಿದ್ದರು. ಅವರ ಅಂತಃಕರಣವು ನಿರ್ಮಲವಿತ್ತು. ಆತ್ಮಶುದ್ಧಿಯು ಶಕ್ಯವೆಂದು ಅವರು ನಂಬಿಕೊಂಡಿದ್ದರು. ಇಬ್ಬರು ಕುಮಾರಿಯರೂ ಹಾಗೆಯೇ ನಿಷ್ಠಾವಂತರಿದ್ದರು. ನಾನೋದಿದ ಕೆಲಕೆಲವು ಗ್ರಂಥಗಳಲ್ಲಂತೂ ಭಕ್ತಿಯು ತುಂಬಿಕೊಂಡಿತ್ತು. ಕೋಟ್ಸರವರಿಗೆ ಪ್ಲೈಮೌಥ ಬ್ರದ್ರಿನ್ ಪಂಥದ ತರ್ಕ ಕೇಳಿ ಬಹಳ ವಿಷಾದವಾಯಿತು. ಆದರೆ, ಇಂಥ ತರ್ಕದಿಂದ ಕ್ರೈಸ್ತ ಧರ್ಮದ ಕುರಿತು ನಾನು ವಿಕಲ್ಪ ಎಣಿಸಲಿಲ್ಲೆಂದು ನಾನವರಿಗೆ ಅಭಿವಚನವನ್ನಿತ್ತೆನು.

ನನಗೊದಗಿದ ಕಷ್ಟಗಳೇ ಬೇರೆ. ಬ್ಯಾಬಿಲ್ ಹಾಗು ಬ್ಯಾಬಿಲ್ ಗ್ರಂಥದ ರೂಢವಾಗಿದ್ದ ಅರ್ಥದ ಕುರಿತ ನನಗೆ ಕಷ್ಟಗಳುಂಟಾದವು.

ಚಿವರಲೆಟ್
ಮೋಟಾರಕಾರ್ ಏಜನ್ಸಿ, ಕೆನರಾ.

ನಾವು ಹೊಸ ಚಿವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಖರಿಸಿ ಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ:— **ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ, ಶಿರ್ಶಿ**

ಕುಮಟಾ ಏಜಂಟ- **ಜಿ ಡಿ. ಮಳಗಿಕರ ಎಂಡ್ ಕೊ.**

ಬಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ದೊರಕುತ್ತದೆ; ಡನ್‌ಲೊಪ್ ಹಾಗು ಮಿಶಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮುಗ್ರಿಗಳು ಯೋಗ್ಯ ದರದಿಂದ ಪೂರೈಸುತ್ತೇವೆ.

G. D. Malgikar & Co,
KUMTA

ಸರಸ್ವತೀ

ಇಡೀ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ತಮವಾದ ಕನ್ನಡ ಮಾಸಪತ್ರಿಕೆ ಇದೊಂದೇ.

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಓದತಕ್ಕ ವಿಷಯಗಳು ಮಾತ್ರ 40 ಪುಟಗಳಿವೆ. ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಖಲತಾ" ಎನ್ನುವ ಕಾದಂಬರಿಯೂ, 'ಶರಣಾಗತ'ನ' ಎನ್ನುವ ನಾಟಕವೂ ಸಾಹಿತ್ಯಸರೋಜ-ಕನ್ಯಾಕೈಪಿಡಿ-ಮುತ್ತಿನ ಸರ-ಚಾರು ಚರಿತಾವಳಿ-ಗ್ರಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಕಿಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ಚಂದಾದಾರರಿಗೆ "ಶಾರದಾ ಗ್ರಂಥಮಾಲೆ"ಯಲ್ಲಿ ಇದುವರೆಗೆ ಪ್ರಕಟವಾಗಿರುವ 'ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದೂ ಭಾಗ್ಯೋದಯ-ರಣಕೇಸರಿ' ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು. ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವದರಿಂದ ಪ್ರಕಟನೆಗೆ ಅತ್ಯುತ್ತಮವಾದ ಪತ್ರಿಕೆ. ವಾರ್ಷಿಕ ಚಂದಾ ರೂ. 3-0-0 ಮಾತ್ರ. ವಿದ್ಯಾರ್ಥಿಗಳಿಗೂ, ವಾಚನ ಶಾಲೆಗಳಿಗೂ ರೂ. 2-0-0 ಮಾತ್ರ.

ವಿಳಾಸ:— "ಸರಸ್ವತೀ" ಕಾರ್ಯಾಲಯ,
ಚಾಮರಾಜಪೇಟ, ಬೆಂಗಳೂರು ಸಿಟಿ

ಗೆಳೆಯರ ಗುಂಪಿನ.

ಕನ್ನಡ] **ಸ್ವಧರ್ಮ.** [ಮಾಸಪತ್ರಿಕೆ

ಸಂಪಾದಕರು- ದ. ರಾ ಬೇಂದ್ರೆ ಬೀ. ಎ.

ವಾರ್ಷಿಕ ವರ್ಗಣಿ ೩—೦—೦

ಸಮಾಜದಲ್ಲಿ ಶಾಂತಿತೃಪ್ತಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ. ಇಂಥಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊರಟವನೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ
ಆಯುರ್ವೇದ ಸಂಗ್ರಹಾಲಯ.
ಶಾಸ್ತ್ರೋಕ್ತ ತಯಾರಿಸಿದ ಕುಪಿಸ್ಥ ರಸಾಯನಗಳು.

೧. ಸಮೀರ ಪನ್ನಗ— ಇವು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು. ಹೊಟ್ಟೆ ಉದ್ವೇಗ, ಹೊಟ್ಟೆಯೊಳಗಿನ ನಾನಾ ಪ್ರಕಾರದ ಪೀಡನೆ, ಸನ್ನಿಪಾತ ವಿಕಾರಗಳಲ್ಲಿ ತಲುಬೋಣ, ಶಿಕ್ಕಂತೆ ಓಡ್ಯಾಡೋಣ ಮುಂತಾದ ಎಲ್ಲ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ.
ತೊಲೆ ೧ಕ್ಕೆ ರೂ. ೬-೮-೦.

೨. ಮಲ್ಲಸಿಂಧೂರ— ಮಹಾಶ್ವಾಸ, ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ತಲುಬೋಣ, ಕಫಕ್ಷಯ, ಇಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು-ದಮ್ಮು, ಕಂಪು, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಗಳಿಗೆಯೊಳಗೆ ರೋಗಿಯು ಮಾಸಿಯಾಗುತ್ತಾನೆ.
ತೊಲೆ ೧ಕ್ಕೆ ರೂ. ೭-೦-೦.

೩. ಸುವರ್ಣರಾಜ ವಂಗೇಶ್ವರ— ಉಪದಂಶಗಳ ಶೇಷವಿಕಾರ, ಪರಮಾ, ಧಾತುಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುನಷ್ಟ, ಸ್ವಪ್ನಾವಸ್ಥೆ, ಅಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧಗಳ ಸಮಸ್ತ ವಿಕಾರಗಳನ್ನು ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನೂ, ಕಾಂತಿಯನ್ನೂ ಕೊಡುತ್ತದೆ. ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ. ಇದರಿಂದ ಏನೊಂದೂ ಉಪದ್ರವವಾಗುವದಿಲ್ಲ.
ತೊಲೆ ೧ಕ್ಕೆ ರೂ. ೬-೦-೦

೪. ವ್ಯಾಧಿಹರಣ ರಸ— ಉಪದಂಶ, (ಗರಮಿಯ) ಫಿರಂಗೋಪದಂಶ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಆಮವಾಯು, ವಾತರಕ್ತ, ಭಯಂಕರ ವಾತವಿಕಾರ, ಪ್ರಾರಮುಖ್ಯವಾಗಿ ಉಪದಂಶಗಳಿಗೆ ಮುಂದಾಗಿ ಆಗುವ ದಮ್ಮು, ಕೆಮ್ಮು, ನಿಶ್ಶಕ್ತತೆ ಇವುಗಳ ಮೇಲೆ ಇಷ್ಟು ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಇನ್ನಾವದೂ ಇಲ್ಲ
ತೊಲೆ ೧ಕ್ಕೆ ರೂ. ೭-೦-೦.

೫. ಸೂತಶೇಖರ— ಸನ್ನಿಪಾತ, ಪ್ಲೇಗ, ಮೂರ್ಛೆ, ಹುಚ್ಚುಬುದ್ಧಿ ವಿಕಾರ (ಭ್ರಮೆ) ಶ್ವಾಸ, ಶಿಕ್ಕಂತೆ ಓಡ್ಯಾಡುವದು, ಹೊಟ್ಟೆನೋವು, ಅಮ್ಲಪಿತ್ತ ಮುಂತಾದ ವಾತ-ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದು. ಸಾಮಾನ್ಯವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ.
ತೊಲೆ ೧ಕ್ಕೆ ರೂ. ೬-೮-೦.

ಇವಲ್ಲದೆ, ತರತರದ ಚೂರ್ಣ, ಘೃತ, ಅವಲೇಹ, ಆಸವ, ಮಾತ್ರೆ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ.

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ಏರ್ಪಾಟು ಮಾಡಿರುತ್ತೇವೆ.

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದ್ದಲ್ಲಿ ಉತ್ತರದ ಬಗ್ಗೆ ಸ್ಟಾಂಪು ಜೊತೆಗಿಟ್ಟು ಈ ಕೆಳಗಿನ ಪತ್ತೆಗೆ ವಿಚಾರಿಸಿಕೊಳ್ಳತಕ್ಕದ್ದು

ಪತ್ತೆ:— **ಶ್ರೀ ಗಜಾನನ ಅಪ್ಪು ಭಟ್ಟ ವೇದೇಶ್ವರ,**
ಆಯುರ್ವೇದಿಕ ವೈದ್ಯ,
ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ.)



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಕೀಸಿ ಕಟ್ಟಿಗೆಯ
ದೇವರ ಮಂಟಪಗಳೂ,
ಹೆಂಗಸರ ಸೌಭಾಗ್ಯದ ಪೆಟ್ಟಿಗೆಗಳೂ, ಡಿಕ್ಸನರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಲಿಂಗ ಖುರ್ಚಿಗಳೂ ಹಾಗೂ ಯಾವತ್ತು ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ್ ಕಂಪನಿ,
ಶಾಂತಿ ಭುವನ,
ಕಾರವಾರ.

ಸುಗಂಧಿ ತಾಂಬೂಲೀ ಜರ್ದಾ

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕ ವಿರೆಕ್ಕಡೆ ಇದರ ಸೇವನದಿಂದ ಬಾಯಿಯು ಹೊಲಸು, ವೇದನೆ ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕ, ೧ ಪುಡಿ ಕಿಂ ರೂ.೦೦೬, ೨೫ರ ಕಿಂ ರೂ ೦-೯-೦ ೧೦೦ ಕಿಂ ರೂ ೨-೦-೦, ೫೦೦ ಪುಡಿಗಳ ಕಿಂ ರೂ ೯-೦-೦, ೧೦೦೦ ೧೭-೦-೦, ಟ ಪೆ ಖರ್ಚು ವಗೈರೆ ಪ್ರತ್ಯೇಕ.

ಸುಗಂಧಿ ನಶ್ಯ.—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದಿದ್ದು, ಇದರಿಂದ ಶೈತ್ಯ, ಥಂಡಿ, ಅರಕಲೆವಡತ ಮುಂತಾದವುಗಳು ಕೂಡಲೆ ವಾಸಿಯಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ ೧ ಡಪ್ಪಿ ಕಿಂ ರೂ.೦ ೪-೦, ೧ ಡಜನ್ ಡಪ್ಪಿ ಕಿಂ ರೂ ೨-೦-೦ ಪೆ ಪೋ. ಖರ್ಚು ಬೇರೆ

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಅನ್ಯರ ಕೈಗೆ ಒಪ್ಪಿಸಿಗಳ ನಮ್ಮಲ್ಲಿ ತಯಾರಿ ಇರುವೆ ತಿಮ್ಮತ್ತಿನ ವಿಷಯಕ್ಕೆ ಬರೆದ, ಫುರಸತ್ ನೋಡಿ ವಸ್ತುಗಳ ಆರ್ಡರ ಕೊಡಬಹುದು ಇದರ ಹೊರತು, ನಮ್ಮಲ್ಲಿಯು ಒಪಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕ ಬರುತ್ತದ ಬೇಕೆಂದ ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು ಖರೇದಿ ಮಾಡಿಕಳಿಸ ಪಡ್ತು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ಕೂಡಲೆ ಉತ್ತರ ಬರೆಯುವೆವು

ಪತ್ತೆ - ಎಸ್. ಬಿ, ಕದಂ,
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು' ಪೋ. ನಿಪ್ಪಾಣಿ, ಜಿ ಬೆಳಗಾಂವ

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ
ಹಾಗೂ
ಅಡಿಗೆ, ಊಟ ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ
ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ –
ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ, ಗೋಕರ್ಣದಿಂದ ಕುಮಟಾ, ಶಿರಸಿ ಹುಬ್ಬಳ್ಳಿ, ಗೋಕರ್ಣದಿಂದ ಅಂಕೋಲಾ, ಕಾರವಾರ

ಟೀಪು — ಟಿಕೇಟು ಮುಂದಾಗಿ ಪಡಕೊಳ್ಳಬೇಕೆನ್ನುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ಮಂಗೇಶರಾವ ಹಶಿಚಿತ್ರಾಲ,
ಮೋಟರ ಏಜಂಟ
ಕುಮಟಾ (ಉತ್ತರ ಕನ್ನಡ

S. U. Narayanacharya & CO
Chaukamba, BENARES CITY



ನಮ್ಮಲ್ಲಿ ಎಲ್ಲಾತರದ ರೇಶ್ಮೆ ಪೀತಾಂಬರ, ಜರಿಕಣ, ಜರಿ ಸೀರೆ, ಕಾಶ್ಮೀರ್ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ ಲಿಂಗಗಳೂ ಸ್ಫಟಿಕಮಣಿ ಮೊದಲಾದ ಮಾಲೆಗಳ ಸಿಗುತ್ತವೆ ಕ್ಯಾಟಲಾಗ ಕೇಳುವವರಿಗೆ ಉಚಿತವಾಗಿ ಕಳಿಸಲಾದೀತು.

ವಿಳಾಸ - ಶಿರೋಮಣಿ ನಾರಾಯಣಾಚಾರ್ಯ
ಮುಕ್ತಾ ಕಂದನಿ, ಚೌಕಂಬಾ ಕಾಶೀಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ ಯಾವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿದ ಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಿಗಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ— ಪಿನಸಿ, ಒಂಟಿತಲೆನೋವು, ತಲೆಂ ಲ್ಲಿಯ ರೋಗಗಳು, ಕಣ್ಣುಗಳಲ್ಲಿ ಕಾಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟ ಕಳಿಸಲಾದೀತು

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦, ವ್ಹಿ ಪಿ ೪ ಆಣೆ ಡಜನ್ ೧ಕ್ಕೆ ರೂ. ೨-೮-೦ ವ್ಹಿ ಪಿ. ೦-೮-೦
ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ

ಕಲಬತ್ತ" ಹಾಗು ದೋಸೆ ಹಂಚುಗಳು.

ನಮ್ಮ ಕಾರಖಾನೆಯಲ್ಲಿ ಎರಡು ನಮೂನೆಯ ಕಲಬತ್ತಗಳೂ,
ದೋಸೆ ಹಂಚುಗಳೂ ಕಬ್ಬಿಣ ಗೂಟಗಳೂ ತಯಾರಾಗುತ್ತವೆ.

ಕಲಬತ್ತಗಳಲ್ಲಿ
ಎರಡು ಪ್ರಕಾರಗಳುಂಟು ದೊಡ್ಡದು ೧೧ ಇಂಚು ಎತ್ತರ
ಬೆಲೆ ೪ ರೂಪಾಯಿ ಸಣ್ಣದು ೮ ಇಂಚು ಎತ್ತರ ಬೆಲೆ ೨ ರೂಪಾಯಿ.

ದೋಸೆ ಹಂಚು ಒಂದಕ್ಕೆ ೧॥ ರೂಪಾಯಿ.

ಒಂದು ಕಲಬತ್ತ ಮತ್ತು ಒಂದು ದೋಸೆಹಂಚನ್ನು ಕೂಡಿ ಕೊಂಡಲ್ಲಿ, ೮ ಆಣೆಗಳನ್ನು ಸೂಟು ಬಿಡುತ್ತೇವೆ.

ಕಲಬತ್ತ ಮತ್ತು ದೋಸೇ ಹಂಚುಗಳ ರೋಖ ದರಗಳನ್ನು ತಿಳಿದುಕೊಳ್ಳಿರಿ

ಗೂಟಗಳು ಯೋಗ್ಯವಿರುತ್ತವೆ; ಬೆಲೆ ಒಂದು ಡಝನಿಗೆ ೨ ರೂ.
ಸವಿಸ್ತರ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್, { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವದೇ ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುತವರು ಅದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೫

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಬುನೆಯಾರ್ಡರಿಯಿಂದ ರೂ. 3-0-0.

ವ್ಹಿ ಪಿ ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0- ೮ ನಂತ್ರ ಪ್ರತಿಸಾಲಿಗೆ 0-2-0.

ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೧೬ ನೂಹೆ ಅಗಸ್ಟ ಸನ್ ೧೯೩೭ ನೇ ಇಸವಿ.)

हिंदुस्थानातील रहिवाशांस ज्याप्रमाणे हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव-

दीड रतलची किंमत २ रुपये,

रामबाण औषधें —

भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

— पिण्यांस रुचिकर,

क्याटलाग मागवा,

पंडुफार्मास्युटिकलवर्क्स लिमिटेड,

मुंबई नं. १३

एजंट— मेसर्स पंडित आणी कंपनी, तीर्थहळ्ळी

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಊಂಚಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲೆ ಡಬ್ಬಿ ೧ ಕ್ಕೆ ೧—೮—೦, ಹಿಂಗಿನ ಅರ್ಕ . ತೊಲೆಯ ಬಾಟ್ಲಿ ೧ ಕ್ಕೆ ೦—೬—೦ ರಕ್ತಶುದ್ಧಿಕಾರಕ ಧಾತು ಪುಷ್ಟಿಕ, ಶಕ್ತಿವರ್ಧಕ ಪಲವಾ ೨೦ ತೊಲೆಯ ಡಬ್ಬಿ ೧ ಕ್ಕೆ ೧—೪—೦. ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ —೨೦—೦. ತಲೆಗೆ ಹಾಕುವ ಸುವಾಸಿಕ ಮಸಕರಾದ ತೈಲ ೫ ತೊಲೆಯ ಬಾಟ್ಲಿ ೧ ಕ್ಕೆ ೦—೧೨—೦ ಹುರಡ ಪೌಡು ತೊಲೆ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಊಂಚಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು ಟಪಾಲ ಖರ್ಚ ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ
ಜವಳಿಬಾಜಾರ, ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.
ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭;



ಒರೇ ಒಂದು ತಿಂಗಳ ಬಗ್ಗೆ ನಾವು ಈ ಆದರವನ್ನು ಕೊಡುವ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುವದೆ ಯಾವದೇ ಆಕಾರದ, ನಕ್ಷೆಯ, ನಂಬರಿನ ಕ್ಕೆ ಗಡಿಯಾರವನು ಉತ್ಕೃಷ್ಟ ಲೇಸು ಪಟ್ಟಿಯ ಸಹಿತ ಉಚಿತವಾಗಿ ಕೊಡುತೇವೆ ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ — Swan House: P B 608 P T Madras

ಆಶ್ಚರ್ಯವಿದೆ!



ಉಚಿತ

ಕೇವಲ
ಉಚಿತ

ಉಚಿತ
ಕೇವಲ
ಉಚಿತ

ಕಾಂ" ಲೀವರ ರಿಜಿಸ್ಟರ್ಡ ಪೊಕೆಟ್ ವಾಚ್ಚು ೧೮ ಕೆರೆಟ್ ರೋಲ್ಡ ಗೋಲ್ಡಿನವು ಮತ್ತು ಬೆಲ್ಟಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವವೆಂದು ಗಡಿಯಾರಕರರು ಅಚ್ಚು ಹಾಕಿದಿರುವರು ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ಸಹ "ಸಿ" ರಿಜಿಸ್ಟರ್ಡ ಟ್ಯಾಂಪೀಸನ್ನು ಉಚಿತವಾಗಿ ಕೊಡುತೇವೆ. ಇದೊಂದು ಅಪೂರ್ವ ಕಾಣಿಕೆ ಕೆಲವೇ ಗಡಿಯಾರಗಳಿವೆ ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಗುಡ ಹಾಗು "ಕಾಂ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್‌ವಾಚ್ ಗಡಿಯಾರಗಳಿಗೆ ಕೇವಲ ಬರೇ ರೂಪಾಯಿ ೫

CAPTAIN WATCH CO, P. B 265, MADRAS

ಗೌರೀಹುಣ್ಣಿವೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ| **ಜಯಕರ್ನಾಟಕ** |ಮಾಸಪತ್ರಿಕೆ

ಸಂಪಾದಕ-- ಆಲೂರ ವೆಂಕಟರಾಯರು

ಇದರಲ್ಲಿ ಮುಖ್ಯಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಜೀವನಾಟ್ಟು ನಾಟಕಕಾರರು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಬರುತ್ತವೆ. ಮೊದಲ್ನೆ ರಿವ್ಯೂ ಆಕಾರದ ೩೦ ಪುಟಗಳು. ವರ್ಗಣಿ. ರೂ ೫-೮-೦ ಕಾರ್ಯದರ್ಶಿ ಜಯಕರ್ನಾಟಕ, ಧಾರವಾಡ.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಬಂತು ಜುಲಾಬು, ಪಿತ್ತ ಜುಲಾಬು, ಎಲ್ಲ ತರದ ಜ್ವರ, ಜ್ವರಗಡ್ಡೆ, ಬಿಳಿಜ್ವರ, ಕಾಮಿಲಿ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ ಮೂಲವ್ಯಾಧಿ, ಸಳ, ವಾತ, ಶಲಿವಾತ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗರ್ಮಿ) ಬಾಲಗ್ರಹ, ಖಜ್ಜಿ, ಗಜಕರ್ಣಗಳಿಗೆ ಖಾತ್ರಿ ಗುಣ ಬರುವ ಜರ್ಮನ್, ಅಮೇರಿಕನ್, ಫ್ರೆಂಚ ಇಂಗ್ಲಿಷ ವಗೈರೆ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು

ಇವಲ್ಲದೆ ಬಂದೂಕುಗಳ, ಎಲ್ಲತರದ ಸ್ಪೋರ್ಟಿಂಗ್ ಸರಪ್ಲೈ ಸಾಮಾನುಗಳು, ಪಿಸ್ತೂಲು ಮೊದಲಾದ ಮಾರಿಸ ಮೋಟಾರ ಬಂಡಿಗಳು, ಸಾಬಲೀನ ದರದಿಂದ ಸಿಗುವವು. ನಮ್ಮಲ್ಲಿದ್ದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು

ಎಸ್ ಎಲ್. ಧಾಕಪ್ಪ ಮತ್ತು ಬ್ರದರ,

ಶಿರಸಿ.

ರಾಗದ ಪೆಟ್ಟಿಗಗಳು.

ನಾಟಕಿ ಸಾಮಾನು:-

ತಬಲೆ, ಡಕ್ಕೆ ವಗೈರೆ



೧. ಕೈಪೆಟ್ಟಿಗೆ ಸಿಂಗಲ ರೂ ೩೫, ೩೦, ೪೦, ೫೫, ೬೦

೨. ,, ಡಬಲ ರೂ. ೪೦, ೪೫, ೫೦, ೬೦, ೧೦೦.

೩. ಕಾಲುಪೆಟ್ಟಿಗೆ ,, ರೂ ೬೫, ೭೫, ೧೦೦, ೧೩೦, ೧೪೦

೪. ತಬಲಿ (ತಾಮ್ರ ಡಗ್ಗ ಸಹಿತ) ರೂ ೧೬, ೧೮, ೨೦

ಹಾರ್ಮೋನಿಯಮ್ ಗ್ಯಾಡ ೬೦ ರೂ. ೧॥

ತಬಲಿ ಗ್ಯಾಡ ೬೦, ೧೩ ಆಣೆ.

ನಾಟಕಿ ಬಗ್ಗೆ ಕ್ಯಾಟಲಾಗು ಪುಕ್ಕಟೆ ದೊರಕುವದು.

ಗೋಪಾಳ ಸಖಾರಾಮ ಮತ್ತು ಕಂಪನಿ

ನಂ. ೩೮೫, ವಿಠ್ಠಲವಾಡಿ ಎದುರಿಗೆ,

ಕಾಳಬಾದೇವಿ ರೋಡ,

ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಸಿ- ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ- ಶಿರ್ಸಿ- ಸಿದ್ದಾಪುರ- ಗೇರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ. ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ತಕ್ಕ ಏರ್ಪಾಡು ಮಾಡಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa

PROPRIETOR

ಅತ್ಯದ್ಭುತ! ಅತ್ಯದ್ಭುತ!!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲೆಕ್ಸಿರ್ ಆಫ್ ಲೈಫ್

ಅಂದರೆ ಸರ್ವ ರೋಗನಾಶಕ, ಸರ್ವಾರೋಗ್ಯದಾಯಕ. ಅಜೀರ್ಣ ತಲೆನೋವು, ವಾಂತಿ, ಅತಿಸಾರ, ಜ್ವರ, ಕೆಮ್ಮು ಜ್ವರ ಕಿವಿನೋವು, ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಹೊಡೆದು ಚಲ್ಲುವ ಒಂದೇ ರಾಮಬಾಣವಿದು! ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ! ಒಂದು ಸೀಸೆಯ ದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ!!!

ಒಂದು ಸೀಸೆಗೆ ರೂ. ೧-೮-೦. ಸಣ್ಣ ಸೀಸೆಗೆ ರೂ. ೦-೮-೦. ಟಪಾಲ ಖರ್ಚು ಬೇರೆ.

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ:- **ಜೀವನಾಧಾರ ಡಿಪೋ, ಹುಬ್ಬಳ್ಳಿ.**

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮುಕಾರ ಶಕ್ತಿ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋ ಪ್ರಾಪ್ತವಾಗಿ ವೀರ್ಯಸ್ಖಲನವು ಇಲ್ಲದಂತಾಗುವದು ಮೂತ್ರಸರ್ಜನದ ಪೂರ್ವದಲ್ಲಿ ಅಥವಾ ತರುವಾಗಿ ಹೋಗುವ ಯೋನಿ ಪ್ರ ಬಂದಾಗುವದು.— ಪರಮಾ ರೋಗಗಳಿಂದ ಲೋಪಿತವಾದ ಶರೀರವು ನಿರೋಗಿಯಾಗುವದು. ಮೂರೇ ದಿವಸಗಳಲ್ಲಿಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಹೆಚ್ಚಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾಲು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತು ೩-೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ ಇವನ ಬಾಟಲಿಗಳ ಕಿಮ್ಮತು ೧೨-೦-೦ ಮತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ್ಯಾ ಬಾಟ್ಲಿಗೆ ೧——೦ ೩ ಬಾಟ್ಲಿಗೆ ೩—೦—೦ ಹಚನಿ ೧೩೯—೨

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೋ. ವಿಠ್ಠಲ, ಜಿ. ಬೆಳಗಾಂವ.

ವಿವಿಧ ಸಂಗ್ರಹ.

ಕರ್ನಾಟಕದಲ್ಲಿ ಖಾದಿಯ ಪ್ರಸಾರ.

ಶ್ರೀ|| ಗಂಗಾಧರರಾವ ದೇಶಪಾಂಡೆಯವರು ಮಹಾತ್ಮರಿಗೆ ಒಂದು ಪತ್ರ ಬರೆದು, ನಮ್ಮ ಕಡೆಯ ಖಾದಿಯ ಕಾರ್ಯದ ಸ್ವರೂಪವನ್ನು ತಿಳಿಸಿರುವರು. ಈ ಪತ್ರದ ತಾತ್ಪರ್ಯವನ್ನು ಮಹಾತ್ಮರು ತಮ್ಮ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಕೊಟ್ಟಿರುವರು. ಅದೇನಂದರೆ:— ನಾನು ಕೆಲಸ ಮಾಡುವ ಸ್ಥಳವು ಬೆಳಗಾವಿಯಿಂದ ೧೮ ಮೈಲು ದೂರಿದೆ; ಸುಳಧಾಡ ಸ್ಟೇಶನದಿಂದ ೪ ಮೈಲಿನ ಮೇಲಿದೆ. ೧೯೨೦ನೇ ಇಸ್ವಿಯಲ್ಲಿ ಈ ಪ್ರದೇಶದಲ್ಲಿ ಕೈಮಾಟಿಯು ಉದ್ಧಾರವಾಯಿತು. ಈ ಪ್ರದೇಶದಲ್ಲಿ ಪ್ರತಿಶತ ೫೦ಯು ನೂಲು ತೆಗೆಯುವವರೇ ಹೆಚ್ಚಾಗಿರುವರು. ಇತ್ತೀಚಿನ ನೂಲುವವರೂ ಕೆಲವರಿದ್ದಾರೆ ೧೯೨೧ನೇ ಇಸ್ವಿಯಲ್ಲಿ ಈ ಕೇಂದ್ರದಿಂದ ೩೦ ಸಾವಿರ ರೂಪಾಯಿಗಳ ಖಾದಿಯ ಪೂರೈಕೆಯಾಯಿತು. ೧೯೨೪ನೇ ಇಸ್ವಿಯ ವರೆಗೆ ಖಾದಿಯ ಗಿರಾಕಿಯು ವರ್ಷ ವರ್ಷಕ್ಕೆ ಹೆಚ್ಚುತ್ತ ನಡೆಯಿತು. ಖಾದಿಯನ್ನು ದಲಾಲರ ವಿದ್ಯಮಾನ ಪೂರೈಸಿಕೊಳ್ಳಬೇಕಾಗಿತ್ತು. ದಲಾಲರಿಗೆ ನೂಲಿನ ಯಾ ಜವಳಿಯ ಗುಣ ಶೀಲದ ಪರಿವೆ ಇದ್ದಿಲ್ಲ. ಬೆಳಗಾವಿಯ ರಾಷ್ಟ್ರೀಯ ಸಭೆಯು ಮುಗಿದ ಬಳಿಕ, ಖಾದಿಯ ಗಿರಾಕಿಯು ಕುಗ್ಗಿತು. ಖಾದಿಯ ಗುಣ ಹಾಗು ಬೆಲೆಗಳ ಬಗ್ಗೆ ಅನೇಕ ದೂರುಗಳು ಬಂದವು. ನಾನು ದಲಾಲರೊಡನೆ ಚರ್ಚಿಸಿದೆನು. ಆದರೆ, ಗುಣವನ್ನು ಹೆಚ್ಚಿಸಲಿಕ್ಕಾಗಲಿ, ಮುನಾಫೆಯನ್ನು ಕುಗ್ಗಿಸಲಿಕ್ಕಾಗಲಿ ಅವರೊಪ್ಪಲಿಲ್ಲ. ಆದ್ದರಿಂದ ಆ ಕಾರ್ಯವನ್ನು ನಾನೇ ಕೈಕೊಳ್ಳಬೇಕೆಂದು ನಿಶ್ಚಯಿಸಿದೆನು. ನೆರೆಹೊರೆಯ ಗ್ರಾಮಗಳಿಗೆ ಹೋಗಿ, ಅಲ್ಲಿಯ ನೂಲುವ ಕೆಲಸವನ್ನು ನೋಡಿದೆನು. ನೂಲುಗಾರರಿಗೆ ಒಳ್ಳೇ ಗಟ್ಟಿಯಾದ ಹಾಗು ಸಮನಾದ ನೂಲನ್ನು ನೂಲಲು ಪ್ರೋತ್ಸಾಹಿಸಿದೆನು. ನೂಲಬಹುದಾದ ನೂಲನ್ನೇ ನಾನು ಕೊಳ್ಳುವೆನಾಗಿಯೂ ಪಣತೊಟ್ಟೆನು. ಹಾಗೆಯೇ ನೇಕಾರರಿಗೂ ಒಲಿಸಿಕೊಂಡೆನು. ಇದರಿಂದ ಖಾದಿಯು ಒಳ್ಳೇ ಪ್ರಗತಿಯನ್ನಾಯಿತು. ಆದರಿಂದ ಈಗ ಖಾದಿಯ ಗಿರಾಕಿಯು ಹೆಚ್ಚಾಗುತ್ತ ನಡೆದಿದೆ. ಈಗ ನನಗಾಗಿ ೩೫ ಕೈಮಗ್ಗಗಳು ನೇಯುತ್ತವೆ. ನನ್ನೊಡನೆ ೬ ಮಂದಿ ಹರೆಯದವರು ಕೆಲಸ ಮಾಡುತ್ತಾರೆ. ನನ್ನೊತ್ತಿಗಾಗಿ ಗುಡಿಸಲುಗಳನ್ನು ಕಟ್ಟಿಸಿದ್ದೇನೆ. ನನ್ನೊಡನೆ ೮ ಮಂದಿ ನೇಕಾರರು ಉಳಕೊಳ್ಳುತ್ತಾರೆ. ಅವರಲ್ಲಿ ಇಬ್ಬರು, ಎರಡು ನೂಲುವ ಗ್ರಾಮಗಳಲ್ಲಿ ನೇಮಿಸಲ್ಪಟ್ಟಿರುವರು. ಅಲ್ಲಿ ಅವರು ನೂಲನ್ನು ಖರೀದ ಮಾಡುತ್ತಿರುತ್ತಾರೆ. ಹಾಗು ಸಾಮಾನ್ಯ ಆರೋಗ್ಯಪಾಲನ ಮತ್ತು ಶಿಕ್ಷಣ ಇವುಗಳನ್ನೂ ನಡೆಸುತ್ತಾರೆ. ಪ್ರಗತಿಯು ಕ್ರಮವಾಗಿ ಸಾವಕಾಶವಿದ್ದರೂ, ನಿರಂತರದ ಕಾರ್ಯವು ಸಮಾಧಾನಕರವಿದೆ. ಅಸ್ಪೃಶ್ಯರಿಗಾಗಿ ಒಂದು ಶಾಲೆಯು ಸ್ಥಾಪಿತವಾಗಿದೆ. ಅದರೊಳಗೆ ಒಬ್ಬ ಬ್ರಾಹ್ಮಣ ಗ್ರಾಜ್ಯುಏಟರೂ, ಒಬ್ಬ ಲಿಂಗಾಯತರೂ ಶಿಕ್ಷಣ ಕೆಲಸವನ್ನು ಮಾಡುತ್ತಾರೆ. ಈ ಶಾಲೆಗೆ ಮೇಲ್ಜಾತಿಯ ಹಿಂದೂ ಹುಡುಗರೂ ಬರುತ್ತಾರೆ. ನೂಲುಗಾರರೂ, ನೇಕಾರರೂ ಹಳ್ಳಿಗರಿದ್ದು ತಮ್ಮ ತಮ್ಮ ಕೆಲಸವನ್ನು ಪುರಸತ್ತು ಸಿಕ್ಕಿದಾಗ ಜರುಗಿಸುತ್ತಾರೆ. ನಮ್ಮ ಕಡೆಯ ನೂಲು ಸಾಮಾನ್ಯವಾಗಿ ೧೫ ರಿಂದ ೩೦ ನಂಬರದ ವರೆಗಿನದು ಇರುತ್ತದೆ. ತಿಂಗಳಿಗೆ ಒಂದು ಸಾವಿರ ರೂಪಾಯಿ ಬೆಲೆಯ ಖಾದಿಯನ್ನು ನಾವು ತಯಾರಿಸುತ್ತೇವೆ. ನೂಲುವ ಗ್ರಾಮಗಳಲ್ಲಿ ಖಾದಿಯು ಮೂಲ ಬೆಲೆಯಿಂದ ಮಾರಲ್ಪಡುತ್ತದೆ; ಇತರ ಕಡೆಯಲ್ಲಿ ಶೇಕಡಾ ೬|| ರಂತೆ ಹೆಚ್ಚು ಕೊಳ್ಳಲಾಗುತ್ತದೆ. ನಮ್ಮಲ್ಲಿಯ ಖಾದಿಯ ಬೆಲೆಯು, ಇತರ ಪ್ರಾಂತಗಳ ಖಾದಿಯ ಬೆಲೆಯ ಮಾನದಿಂದ ವಿಚಾರಿಸಿದರೆ, ನಮ್ಮಲ್ಲಿಯ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕಡೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯು ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨-೧೦—೦
ಅಂಚೆವೆಚ್ಚ	,,	೦-೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

———:o:———

೩ ಔಂಸಿಗೆ	ರೂ.	೨—೦—೦
೨ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦-೧೨-೦
ಅಂಚೆವೆಚ್ಚ	,,	೦—೬—೦

ಒಟ್ಟೋ ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಅಲ್ಕೋಹೋಲು ಬಹಳ ಮಟ್ಟವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082. **BOMBAY**

ಖಾದಿಯೇ ಅಗ್ಗವಾದುದು. ನಮ್ಮ ಹುದಿ ಗ್ರಾಮದಲ್ಲಿಯೇ ಸುಮಾರು ೩೦ ನೇಕಾರರ ಮನೆತನಗಳಿವೆ. ಅವರಲ್ಲಿ ಕೈನೂಲನ್ನು ನೇಯಲು ಬರೇ ೧೫ ಮಂದಿಗಳ ಮನವೊಲಿಸಲು ಸಾಧ್ಯವಾಯಿತು. ಇತರರು ಗಿರಣಿಯ ನೂಲನ್ನು ನೇಯುತ್ತಾರೆ. ಸಾಮಾನ್ಯವಾಗಿ ಎಲ್ಲರೂ ಗಿರಣಿ ನೂಲಿನ ಸಾವುಕಾರರಿಗೆ ಸಾಲ ಕೊಡಬೇಕು. ನನ್ನ ಕೆಲಸವನ್ನು ಕೈಕೊಳ್ಳುವ ಮುಂಚೆ, ನನ್ನ ನೇಕಾರರ ಸಾಲವನ್ನು ನಾನು ತೀರಿಸಬೇಕಾಯಿತು. ಒಬ್ಬೊಬ್ಬನಿಗೆ ೯೦೦ ರೂಪಾಯಿಗಳನ್ನು ನಾನು ಮುಂಗಡ ಕೊಟ್ಟೆ. ನೇಕಾರರೆಲ್ಲರೂ ಸಾಮಾನ್ಯವಾಗಿ ದರಿದ್ರರು. ಮದ್ಯಪಾನವ್ಯಸನಾಧೀನರು. ನನ್ನೊಡನೆ ಕೂಡಿಕೊಂಡವರು ಆ ವ್ಯಸನವನ್ನು ಈಗ ಬಿಟ್ಟಿರಬೇಕು. ಹೆಂಗಸರು ಸಾಮಾನ್ಯವಾಗಿ ಉದ್ಯೋಗಿಗಳು, [illegible] ಸರು ವೈಗಳ್ಳರು. ಮುಖ್ಯವಾಗಿ ೫ ಗ್ರಾಮಗಳಿಂದ ನನಗೆ ನೂಲು ಸಿಗುತ್ತದೆ. ಆ ಗ್ರಾಮಗಳಲ್ಲಿಯೂ ಪ್ರತಿಯೊಂದು ಮನೆಯಲ್ಲಿ ಚರಕವಿದೆ. ಒಂದು ಗ್ರಾಮದಲ್ಲಿ ೧೫೦ ಮನೆಗಳಿವೆ. ಅವುಗಳಲ್ಲಿ [illegible] ನರಿಯಿಂದ ಹೆಂಗಸು ವಾರಕ್ಕೆ [illegible] ಗಳಿಸುತ್ತಾಳೆ. ದಿನಾಲು ಆರು ತಾಸು [illegible] ಮಾಡಿದರೆ, ಹನ್ನೆರಡು ಆಣೆಯನ್ನು [illegible] ಅಡ್ಡಿಯಿಲ್ಲ. ನನಗೆ ಬಹಳ ಸಮಾಧಾನವಾಗಿದೆ. ನನಗೆ ಪುರಸತ್ತು ಸಿಗುವದಿಲ್ಲ ಆದರೂ ಆಗಾಗ್ಗೆ [illegible] ಹೊರಹೋಗಬೇಕಾಗುತ್ತದೆ. [illegible] ದಲ್ಲಿ [illegible] ಒಮ್ಮೆ ಪತ್ರಗಳಲ್ಲಿ ಪ್ರವೇಶಿಸಿದರೆ, [illegible] ಯಕ್ಕೆ ಅನುಕೂಲವಾಗಬಹುದೆಂದು ಆಲೋಚಿಸಿ ನಾನು ಸ್ಥಳಿಕ ರಾಜಕಾರಣದಲ್ಲಿ ಪ್ರವೇಶಿಸಿದೆನು. ಆದರೆ, ಅದರಿಂದ ಪ್ರಯೋಜನವೇನೂ ಆಗಲಿಲ್ಲ. ಬ್ರಾಹ್ಮಣೇತರರು ಖಾದಿಯನ್ನು ಪುರಸ್ಕರಿಸುತ್ತಿರುವರು. ಇದನ್ನು ತಿಳಿದು ನಿಮಗೆ ಸಂತೋಷವಾಗಬಹುದು. ಕೆಲವರು ಈ ದಿನದ ಮಾರಾಟಕ್ಕಾಗಿ ದ್ರವ್ಯ ಸಂಚಯ ಮಾಡಿಕೊಂಡು ಭಂಡಾರವನ್ನು ಕೂಡಿಸುವ ಆಲೋಚನೆಯಲ್ಲಿರುವರು.

* * *

ರೈತವಾರಿ ಪದ್ಧತಿ

ಶ್ರೀ ಎಸ್. ಆರ್. ಮಲಕಾನಿಯವರು ಬಾರ್ದೋಲಿ ತಾಲೂಕಿನ ಬೇಸಾಯದ ಸ್ಥಿತಿಯನ್ನು ವಿಚಾರಿಸುವಾಗ, ರೈತವಾರಿ ಪದ್ಧತಿಯ ಸಿದ್ಧಾಂತವನ್ನೂ ಆಚಾರವನ್ನೂ ಬಲು ಮಾರ್ಮಿಕವಾಗಿ ಬಣ್ಣಿಸಿರುವರು. ಅದೇನೆಂದರೆ, ರೈತವಾರಿ ಪದ್ಧತಿಯೆಂದರೆ, ಸರಕಾರವು ಜಮೀನದಾರ ಮಧ್ಯಸ್ಥರನ್ನು ಬಿಟ್ಟು ಪ್ರತ್ಯಕ್ಷವಾಗಿ ಪ್ರಜೆಗಳೊಡನೆ ವ್ಯವಹಾರ ನಡಿಸುವದು. ಪ್ರತಿಯೊಂದು ಪ್ರದೇಶದ ನಕಾಶೆ ತೆಗೆದು ಅದನ್ನು ಸರ್ವೇ ನಂಬರುಗಳಲ್ಲಿ ವಿಂಗಡಿಸುತ್ತಾರೆ. ಒಂದು ಎತ್ತಿನ ಜೋಡಿಯು ಸಾಗ ಮಾಡಬಹುದಾದ ಪ್ರದೇಶವು ಒಂದು ಸರ್ವೇ ನಂಬರವೆಂದು ಎಣಿಸಲ್ಪಡುತ್ತದೆ. ಬೇಸಾಯವು ಎರಡು ಪ್ರಕಾರದ್ದಿರುತ್ತದೆ. ಒಂದು ನೀರಿನ ಆಶ್ರಯವಿದ್ದದ್ದು; ಒಂದು ನೀರಿನ ಆಶ್ರಯವಿಲ್ಲದ್ದು. ಎಲ್ಲ ಪ್ರದೇಶದ ನಕಾಶೆ ತೆಗೆದು ಅದರೊಳಗೆ ಸರ್ವೇ ನಂಬರು, ಗಾವಠಾಣ, ಕೆರೆ ಮುಂತಾದ ಸೃಷ್ಟಿ ರಚನೆಗಳನ್ನು ತೋರಿಸುತ್ತಾರೆ. ಆ ಬಳಿಕ, ಮಣ್ಣಿನ ಗುಣದೋಷದಂತೆ ವರ್ಗ ಮಾಡಿ, ಬೆಲೆ ಕಟ್ಟುತ್ತಾರೆ. ಇದು ಮುಂಬಯಿ ಇಲಾಖೆಯ ವಿಶೇಷವು. ಒಂದೊಂದು ತಾಲೂಕಿನಲ್ಲಿ ೪-೫ ಭಾಗಗಳನ್ನು ಮಾಡುತ್ತಾರೆ. ಹವಾಮಾನ, ಸೃಷ್ಟಿಸ್ಥಿತಿ, ಪೇಟೆಯ ಅನುಕೂಲ್ಯ, ಉಗಿಬಂಡಿ ಅಥವಾ ಪಟ್ಟಣದ ಸಾನ್ನಿಧ್ಯ, ತಂಗಳಿ ಇತ್ಯಾದಿಗಳ ವಿಚಾರದಿಂದ ಆ ತಾಲೂಕಿನ ಹಳ್ಳಿಗಳನ್ನು ಈ ನಾಲ್ಕು ಭಾಗಗಳಲ್ಲಿ ವರ್ಗೀಯಿಸುತ್ತಾರೆ. ಸಾಮಾನ್ಯವಾಗಿ ಒಂದೇ ಪ್ರಕಾರದ ಅನುಕೂಲವಿದ್ದ ಗ್ರಾಮಗಳು ಒಂದೊಂದು ಭಾಗದಲ್ಲಿರುತ್ತವೆ. ಒಂದೊಂದು ಭಾಗದಲ್ಲಿ ಪುನಃ ಮಣ್ಣಿನ ಜಾತಿಯಂತೆ ಪೋಟ ಭಾಗಗಳನ್ನು ಮಾಡುತ್ತಾರೆ. ಪ್ರತಿ ಒಂದು ಜಾತಿಯ ಮಣ್ಣಿನಲ್ಲಿ ೯-೧೦ ವರ್ಗಗಳಿವೆ. ಎರಡು ಮೊಳ ಮಣ್ಣಿದ್ದರೆ, ಒಂದು ಜಾತಿ ಅದಕ್ಕಿಂತ ಕಡಿಮೆಯಾದ ಹಾಗೆ ವರ್ಗಗಳಾಗುತ್ತವೆ. ಪ್ರತಿಯೊಂದು ಭಾಗದೊಳಗಿನ ಗ್ರಾಮಕ್ಕೆ ಪರಮಾವಧಿಯ ತೀರ್ವೆಯ ಮಾನವನ್ನು ಠರಾಯಿಸುತ್ತಾರೆ. ಮತ್ತು ಆ ಬಳಿಕ, ಇಂತಿಂಥ ಮಣ್ಣಿಗೆ ಇಂತಿಷ್ಟು ಆಣೆ ಎಂದು ಠರಾಯಿಸಿ, ೧೬ ಆಣೆಯಿಂದ ಒಂದು ಆಣೆಯ ವರೆಗೆ ಸಮಸ್ತ ವಿಚಾರದಿಂದ ಸರ್ವೇ ನಂಬರುಗಳ ವರ್ಗಗಳನ್ನು ಮಾಡುತ್ತಾರೆ. ೧೬ ಆಣೆಗೆ ತೀರ್ವೆ ಎಷ್ಟು ಕೂಡ್ರಿಸಬೇಕೆಂದು ಆ ಬಳಿಕ ನಿಶ್ಚಯವಾಗುತ್ತದೆ. ತೀರ್ವೆಯು ನಿಕ್ಕಿ ಉತ್ಪನ್ನದ ಆ ಭಾಗಕ್ಕಿಂತ ಮಿಕ್ಕಿರಬಾರದೆಂದು ಸಿದ್ಧಾಂತವಿದೆ. ನಿಕ್ಕಿ ಉತ್ಪನ್ನವೆಂದರೆ, ಹುಟ್ಟಿದ ಸಮಸ್ತ ಉತ್ಪನ್ನದ ಸರಾಸರಿ ದರದಿಂದ ಲೆಕ್ಕ ಮಾಡಿ, ಅದರೊಳಗಿಂದ ಸಾಗುವಳಿಯ ಖರ್ಚು ವಜಾ ಕಳೆದ ಬಳಿಕ, ಉಳಿಯುವ ರಕಮಾಗಿರುತ್ತದೆ. ಹೀಗೆ ರವಿನ್ಯೂ ಕೋಡಿನ ೧೦೭ ನೇ ಕಲಮಿನನ್ವಯ ತೀರ್ವೆಯನ್ನು ನಿರ್ದಿಷ್ಟ ಮಾಡಬೇಕಾದರೆ ಭೂಮಿಯ ಬೆಲೆಯನ್ನು ಆಲೋಚಿಸಬೇಕು. ಮತ್ತು ಬೇಸಾಯಕ್ಕೆ ಉಪಯೋಗಿಸುವ ಭೂಮಿಯಾಗಿದ್ದಲ್ಲಿ ಅದರಿಂದ ಹುಟ್ಟುವ ನಿಕ್ಕಿ ಉತ್ಪನ್ನವನ್ನು ಎಣಿಸಬೇಕು. ಇದು ಕಾಯಿದೆಯಿಂದ ನಿಶ್ಚಯಿಸಲ್ಪಟ್ಟಿದೆ. ಆದರೆ, ನಿಕ್ಕಿ ಉತ್ಪನ್ನದ ಲೆಕ್ಕಾಚಾರವನ್ನು ಮಾಡುವದು ಬಹಳ ಕಠಿಣ ಕೆಲಸವಾದ್ದರಿಂದ ತೀರ್ವೆಯ ಪ್ರಮಾಣವನ್ನು ಹುಂಡುಗುತ್ತಿಗೆಯ ಮೇಲೆ ಹಿಡಿಯುತ್ತಾರೆ. ಅದಕ್ಕೆ ಆಧಾರವೇನೆಂದರೆ, ಪ್ರಚಲಿತ ದರಗಳು ಹಾಗು ಸಾಮಾನ್ಯ ವಿಚಾರಗಳು. ರೈತವಾರಿ ಪದ್ಧತಿಯಿಂದ ಸರಕಾರಕ್ಕೂ, ಪ್ರಜೆಗಳಿಗೂ ಲಾಭವಿರುವದೆಂದು ಹೇಳುತ್ತಾರೆ. ಸಣ್ಣ ಸಣ್ಣ ಖಾತೆದಾರರಿಗೆ ಈ ಪದ್ಧತಿಯಿಂದ ಅವರವರ ಭೂಮಿಯ ಸ್ಥಿತಿಯ ವಿಚಾರದಿಂದ ತೀರ್ವೆಯ ಆಕಾರ ಕಟ್ಟಬರುತ್ತದೆಂದು ಹೇಳುತ್ತಾರೆ. ಸರ್ವೇ ಪದ್ಧತಿಯು, ವರ್ಗವಾರಿಯು ಪೂರ್ಣಾವಸ್ಥೆಗೆ ಮುಟ್ಟಿದೆ. ಹೊಸದಾಗಿ ವರ್ಗವಾರಿ ಮಾಡಲಿಕ್ಕಾಗಲಿ, ಸರ್ವೇ ನಂಬರುಗಳನ್ನು ಮಾಡಲಿಕ್ಕಾಗಲಿ ಇನ್ನು ಸರಕಾರಕ್ಕೆ ಅವಶ್ಯಕತೆ ಉಳಿಯಲಿಲ್ಲ. ತೀರ್ವೆಯು ತಿದ್ದುಪಡಿಯಾಗಬೇಕಿದ್ದರೆ, ಭೂಮಿಯ ಪ್ರದೇಶದ ಆರ್ಥಿಕ ಸ್ಥಿತಿ ಹಾಗು ಅದರ [illegible] ಸ್ಥಿತಿಯನ್ನಷ್ಟೇ ವಿಚಾರಿಸಿ ತೀರ್ವೆಯ ತಿದ್ದುಪಡಿ ಮಾಡುತ್ತಾರೆ. ಇದರಿಂದ ಪ್ರಜೆಗಳಿಗೆ ಪೀಡನೆಯಾಗುವದು ತಪ್ಪುತ್ತದೆ ಮತ್ತು ಅವರಿಗೆ ಒಂದು ಪ್ರಕಾರದ ಸ್ಥಿರತೆಯು ಪ್ರಾಪ್ತವಾಗುತ್ತದೆ. ಇಷ್ಟಾಗಿ ತೀರ್ವೆಯ ಆಕರಣೆಯ ದರವು ನಿಶ್ಚಿತವಿರುತ್ತದೆ. ಮತ್ತು ಪರಿಮಿತವಿರುತ್ತದೆ. ೩೦ ವರ್ಷಗಳಿಗೊಮ್ಮೆ ಮಾತ್ರ ತಿದ್ದುಪಡಿಯಾಗುತ್ತದೆ. ತೀರ್ವೆಯನ್ನು ಏರಿಸುವದಾದರೂ, ವಾಸ್ತವವಾಗಿಯೇ ಏರಿಸುತ್ತಾರೆ. ಬೇಸಾಯದಿಂದ ದೊರಕುವ ನಿಕ್ಕಿ ಲಾಭದ ಮೇಲಿಂದಲೇ ತೀರ್ವೆ ಪರಿಶೋಧನಾಗುತ್ತದೆ.

* * *

ರೈತವಾರಿ ಸಿದ್ಧಾಂತದ ಆಚಾರ.

ಶ್ರೀ ಮಲಕಾನಿಯವರು ಬಾರ್ದೋಲಿ ತಾಲೂಕಿನೊಳಗಿನ ತಿದ್ದುಪಡಿಯ ಕ್ರಮವನ್ನು ಕೊಟ್ಟಿರುವರು. ಈ ಸಿದ್ಧಾಂತಕ್ಕೆ ಆ ಉದಾಹರಣೆಯು ತೀರ ವಿಪರೀತವಾಗಿರುವದೆಂದು ವಾಚಕರಿಗೆ ತಿಳಿಯುವಂತಿದೆ. ಬಾರ್ದೋಲಿ ತಾಲೂಕಿನ ಸೆಟ್ಲಮೆಂಟ ಆಫೀಸರರು ಇಡೀ ತಾಲೂಕಿಗೆ ಶೇಕಡಾ ೨೫ರಷ್ಟು ತೀರ್ವೆಯನ್ನು ಹೆಚ್ಚಿಸಬೇಕೆಂದು ಶಿಫಾರಸು ಮಾಡಿರುವರು. ಹಳ್ಳಿಯ ಭಾಗಗಳನ್ನು ಪುನರ್ಘಟಿಸುವವರು, ಕೆಲವು ಹಳ್ಳಿಗಳನ್ನು ಮೇಲ್ತರಗತಿಯಿಂದ ಕೆಳತರಗತಿಗೆ ಇಳಿಸಿರುವರು; ಅನೇಕ ಹಳ್ಳಿಗಳನ್ನು ಮೇಲ್ತರಗತಿಗೆ ಏರಿಸಿರುವರು. ಉದಾಹರಣಾರ್ಥವಾಗಿ, ಜಿರಾಯತ ಜಮಾನ ಆಕಾರಣಿಯು ಅಂದರೆ, ನೀರಿನ ಆಶ್ರಯವಿಲ್ಲದ ಭೂಮಿಗೆ, ಎಕ್ರೆಗೆ ೩ ರೂಪಾಯಿಯಂತೆ ತೀರ್ವೆ ಕಟ್ಟುತ್ತಿತ್ತು. ಒಂದನೇ ತರಗತಿಯ ತೀರ್ವೆಯ ಮಾನವಿದು. ಎರಡನೇ ತರಗತಿಯದಿದ್ದರೆ, ೫ ರೂಪಾಯಿ ತೀರ್ವೆ ತೆರಬೇಕು. ಶೇಕಡಾ ೨೫ರಂತೆ ಏರಿಸಿದ್ದರಿಂದ, ಒಂದನೇ ತರಗತಿಯ ಭೂಮಿಯವರು ಎಕ್ರೆಗೆ ೩॥ ರೂಪಾಯಿ ತೆರಬೇಕಾಯಿತು. ಎರಡನೇ ತರಗತಿಯವರು ೩। ರೂಪಾಯಿ ತೆರಬೇಕಾಯಿತು. ಎರಡನೇ ತರಗತಿಯ ಭೂಮಿಯು ಒಂದನೇ ತರಗತಿಯಲ್ಲಿ ಸೇರಿದ್ದರೆ, ಅವರು ೫ ರೂಪಾಯಿ ತೀರ್ವೆಯ ಬದಲು, ೨॥ ರೂಪಾಯಿ ತೀರ್ವೆ ತೆರಬೇಕು ಅಂದರೆ, ಶೇಕಡಾ ೫೦ರಷ್ಟು ತೀರ್ವೆ ಹೆಚ್ಚಾಯಿತು. ಸೆಟ್ಲಮೆಂಟ ಕಮಿಶನರರ ವಿಚಾರವು ಶೇಕಡಾ ೨೫ರಷ್ಟು ಏರಿಸುವದಿದ್ದರೆ, ಆಚಾರವು ಮಾತ್ರ ಶೇಕಡಾ ೫೦ಕ್ಕೆ ಮುಟ್ಟಿತು. ಕೆಲ ಹಳ್ಳಿಗಳು ಒಂದನೇ ತರಗತಿಯಿಂದ ಎರಡನೇ ತರಗತಿಯಲ್ಲಿ ಇಳಿದಿವೆ. ಆದರೆ, ಅವಕ್ಕೆ ತೀರ್ವೆಯು ಕಡಿಮೆಯಾಗಬಹುದೆಂದು ಯಾರೂ ಆಲೋಚಿಸಬಹುದು. ಒಂದನೇ ತರಗತಿಯಲ್ಲಿದ್ದಾಗ, ೬ ರೂಪಾಯಿ ಕೊಡಬೇಕಾಗಿತ್ತು. ಈಗ ೬। ರೂಪಾಯಿ ತೆರಬೇಕು. ನೀರಿನ ಆಶ್ರಯವಿದ್ದ ಭೂಮಿಗೆ ದುಪ್ಪಟ್ಟು ತೆರಬೇಕು. ರೈತವಾರಿ ಪದ್ಧತಿಯಿಂದ ಒದಗುವ ಪರಿಣಾಮಗಳಿವು!!

BATLIBOI'S

Accountancy Training Institute

Recognised by

The G. D. A. Board

Offers best training in Accounting, Banking, Company Management and Secretarial Work and Theory and Practice of Commerce.

Best staff, Individual attention. fee moderate, and payable by instalments.

Send for Prospectus at Yusuf Buildings, Churchgate street, Fort, Bombay.

You are invited to make thorough enquiry before joining.

TUITION BY POST

IS OUR SPECIALITY.

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ದೊರೆತ ಮಾಹಿತಿ.

ಇದೀ ಮುಂಬಯಿ ಇಲಾಖೆಯಲ್ಲಿ ೧೯೩೧-೧೯೩೨, ೧೯೩೨-೧೯೩೩, ೧೯೩೩-೧೯೩೪ ಈ ಮೂರು ವರುಷಗಳ ಸರಾಸರಿಯಿಂದ ನೋಡಿದರೆ, ಪ್ರತಿ ವರುಷಕ್ಕೆ ಉಣ್ಣೆ-ಅರಿವೆ ಹಿಡಿದು ೩,೮೪,೭೩೫ ರೂ.ಗಳ ಅರಿವೆಯನ್ನು ಸರಕಾರವು,ಸರಕಾರಿ ಕಚೇರಿಗಳಿಗಾಗಿ ಉಪಯೋಗಿಸಿತು. ಸರಕಾರಿ ಕಚೇರಿಗಳಲ್ಲಿ ಖಾದಿ ಎಂಬ ಹೆಸರಿನ ಅರಿವೆಯನ್ನು ಉಪಯೋಗಿಸುತ್ತಾರೆ. ಖಾದಿಯಲ್ಲಿ ಮಿಲ ಖಾದಿಯು ಸಮಾವೇಶವಾಗಿರುವದು. ಅದರೆ, ಎಷ್ಟು ಬೆಲೆಯ ಖಾದಿಯನ್ನು ಸರಕಾರವು ಖರೀದಿ ಮಾಡಿತೆಂದು ಹೇಳುವದು ಅಸಾಧ್ಯವದೆ. ಅನೇಕ ಅಧಿಕಾರಿಗಳು ಅರಿವೆಯ ಜಾತಿವಾರ ಖರೀದಿಯ ಅಂಕಿಗಳನ್ನು ಇಟ್ಟುಕೊಳ್ಳುವದಿಲ್ಲ. ಇತ್ಯಾದಿ ಮಾಹಿತಿಯು ಶ್ರೀ| ಕಕೇರಯವರಿಗೆ ದೊರಕಿದೆ.

***

ಕಾನಡಾ ಜಿಲ್ಲೆಯಲ್ಲಿ ೨೩೪೦೩ ಮುಹಮ್ಮದೀಯರಿದ್ದಾರೆ. ೨೭೪೩೩೫ ಮುಹಮ್ಮದೇತರರಿದ್ದಾರೆ. ಮುಂಬಯಿ ಕಾಯಿದೆ ಕೌನ್ಸಿಲಿಗೆ ಮತ ಕೊಡಲು ಅಧಿಕಾರವಿದ್ದ ಮುಹಮ್ಮದೇತರರ ಸಂಖ್ಯೆಯು ೯೧೬೦. ಅಂದರೆ, ಶೇಕಡಾ ೩||ಯಷ್ಟು ಮಂದಿಗಳಿಗೆ ಮತಾಧಿಕಾರವಿದೆ. ಇತ್ಯಾದಿ ಮಾಹಿತಿಯು ರಾ| ಶಿವದಾಸಾನಿಯವರಿಗೆ ದೊರಕಿದೆ.

***

ಪಶ್ಚಿಮ ಖಾನದೇಶ ಜಿಲ್ಲೆಯ ನವಾಪುರದ ಸಬ್ ಡಿವ್ಹಿಜನ ಮ್ಯಾಜಿಸ್ಟ್ರೇಟರು ಕಳೆದ ಎಪ್ರಿಲ್-ಮೇ ತಿಂಗಳಿನಲ್ಲಿ ೧೫ ದಿನಗಳ ವರೆಗೆ ವಿಸರವಾಡಿಯಲ್ಲಿ ತಾಣ್ಯ ಹೂಡಿದಾಗ ಸರಬರಾಯಿಗಾಗಿ ೩೦೦ ರೂಪಾಯಿಗಳ ಮುಟ್ಟಿಗೆ ಗ್ರಾಮದವರು ಎತ್ತುವಳಿ ಮಾಡಿದ ಹಕೀಕತು ನಿರಾಧಾರವಿದೆ. ಆ ರಕಮಿನಿಂದ ಮ್ಯಾಜಿಸ್ಟ್ರೇಟರಿಗೂ, ಅವರ ಪರಿವಾರದವರಿಗೂ ಶಿರಾ-ಪುರಿ, ಹಾಲು,ತುಪ್ಪ, ಚಹಾ, ಸಿಗರೇಟು, ತಾಂಬೂಲ ಇತ್ಯಾದಿಗಳ ಸತ್ಕಾರವಾದ ಹಕೀಕತು ನಿರಾಧಾರವಿರುವದು. ಸರಕಾರಿ ಅಧಿಕಾರಿಗಳು ಸರ್ಕೀಟಿನ ಮೇಲಿದ್ದಾಗ, ಗ್ರಾಮದವರ ಖರ್ಚಿನಿಂದ ಸತ್ಕಾರ ಪಡಕೊಳ್ಳುವ ಕುರಿತು ಸರಕಾರಿ ನಿಯಮಗಳೇನಿರುವವೆಂದು ಶ್ರೀ| ಶಂಕರ ಶ್ರೀಕೃಷ್ಣ ದೇವರವರು ಕೇಳಿದ್ದರು. ಅದಕ್ಕೆ ಸರಕಾರವು ಉತ್ತರಿಸಿದ್ದೇನಂದರೆ, ಕೆಳ ಅಧಿಕಾರಿಗಳು ಸರ್ಕೀಟಿನ ಮೇಲಿದ್ದಾಗ, ಚಿಕ್ಕಪುಟ್ಟ ಬಿಟ್ಟಿಯನ್ನು ಮಾಡಿಸಿಕೊಳ್ಳದಂತೆ ತಿಳಿಸಲಿಕ್ಕೆ ಕಲೆಕ್ಟರರಿಗೆ ಸೂಚನೆ ಕೊಡಲ್ಪಟ್ಟಿದೆ. ಕೆಳ ಅಧಿಕಾರಿಗಳು ಪ್ರಜೆಗಳಿಗೆ ಅದಷ್ಟು ಕಷ್ಟ ಹದಗದಂತೆ ಸರ್ಕೀಟಿನ ಸಮಯ ವರ್ತಿಸಬೇಕಾಗಿಯೂ ಹುಕುಮುಗಳಾಗಿವೆ. ಗ್ರಾಮಗಳಲ್ಲಿರುವಾಗ, ಗ್ರಾಮದವರ ಖರ್ಚಿನಿಂದ ಸರ್ಕೀಟಿನ ಮೇಲಿದ್ದ ಅಧಿಕಾರಿಗಳು ಸತ್ಕಾರವನ್ನು ಸ್ವೀಕರಿಸದಂತೆ ಹುಕುಮುಗಳನ್ನು ಹೊರಡಿಸಲಿಲ್ಲ.

***

ಲೋಕಲ್ ಬೋರ್ಡಿನ ಮೆಂಬರರು ಲೋಕಲ್ ಬೋರ್ಡಿಗೆ ಸಂಬಂಧಪಟ್ಟ ಪ್ರಶ್ನೆಗಳ ಕುರಿತು ಪತ್ರವ್ಯವಹಾರ ನಡಿಸಬೇಕಾದಾಗ, ಅವರು ಇತರೇ ಜನರಂತೆ, ಸಾಮಾನ್ಯ ಟಪಾಲ ಸ್ಟ್ಯಾಂಪುಗಳನ್ನೇ ಉಪಯೋಗಿಸಬೇಕು. ಅವರಿಗೆ ಇಷ್ಟವಿದ್ದರೆ, ಆ ಖರ್ಚನ್ನು ಲೋಕಲ್ ಫಂಡಿನಿಂದ ವಸೂಲ ಮಾಡಬಹುದಾಗಿ ರಾ| ಗುಂಡಾಳರವರಿಗೆ ಹೇಳಲ್ಪಟ್ಟಿದೆ. ಸ್ಕೂಲ ಬೋರ್ಡ ಮೆಂಬರರ ಪ್ರಯಾಣ ಭತ್ತೆಯ ವಿಷಯವನ್ನು ಸರಕಾರವು ಆಲೋಚಿಸುತ್ತದಾಗಿ ಉತ್ತರ ದೊರಕಿದೆ.

***

ವೆಸ್ಟರ್ನ ಇಂಡಿಯಾ ಮೆನ್ಯುಫೆಕ್ಚರಿಂಗ ಕಂಪನಿಯ ಸ್ವದೇಶಿ ಬೆಂಕಿ ಪೆಟ್ಟಿಗೆಯ ಕಾರಖಾನೆಗೆ ಠಾಣೆ ಹಾಗು ಕುಲಾಬಾ ಜಿಲ್ಹೆಯೊಳಗಿನ ಕೆಲವು ಬೆಂಡು ಜಾತಿಯ ಗಿಡಗಳನ್ನು ಕಡಿದೊಯ್ಯಲಿಕ್ಕೆ ಸರಕಾರವು ಅಪ್ಪಣೆ ಕೊಟ್ಟಿದೆ. ಈ ಕುರಿತು ಸರಕಾರಕ್ಕೆ ಕೆಲವು ಹಣ ತೆರಬೇಕೆಂದು ಗೊತ್ತಾಗಿದೆ. ಈ ಕಾಡಿನಲ್ಲಿ ಬೆಂಕಿ ಪೆಟ್ಟಿಗೆಗೆ ಉಪಯೋಗವಾದ ಮರಗಳಿರುತ್ತವೆಂಬ ಸುದ್ದಿಯು ಮುಟ್ಟಿದೊಡನೆ ಕಂಪನಿಗೇ ಹತ್ತಿತು. ಆ ಬಳಿಕ, ಜಂಗಲ ಖಾತೆಯವರು ಅವರಿಗೆ ಅವಶ್ಯವಿದ್ದ ಮಾಹಿತಿಯನ್ನು ಪೂರೈಸಿದ್ದರು. ಬೆಂಕಿಪೆಟ್ಟಿಗೆಗೆ ತಕ್ಕುದಾದ ಬೆಂಡು ಜಾತಿಯ ಗಿಡಗಳ ಮಾಹಿತಿ ಕೊಡಲು ಜಂಗಲ ಖಾತೆಗೆ ಕೇಳಿದಂತೆ, ಜಂಗಲ ಖಾತೆಯು ಔದ್ಯೋಗಿಕ ಖಾತೆಯವರಿಗೆ ಈ ಮಾಹಿತಿಯನ್ನು ಪೂರೈಸಿತು. ಇನ್ನು ಮುಂದೆ ಬೆಂಡು ಜಾತಿಯ ಗಿಡಗಳನ್ನು ಪಡೆಯುವ ಹಕ್ಕು ಲಿಲಾಂವಿನಿಂದ ಅಥವಾ ಟೆಂಡರ ಪದ್ಧತಿಯಿಂದ ಮಾರಲ್ಪಡುವದು. ಇತ್ಯಾದಿ ಮಾಹಿತಿಯು ರಾ| ಆಲೇಕರ ನಾರಾಯಣರವರಿಗೆ ದೊರಕಿದೆ.

***

ಸಿಂಧದ ತಾಣವರದಾಸರವರ ಮೇಲಿನ ಖೂನಿ ಖಟ್ಲೆಯ ಪೂರ್ವಚೌಕಶಿಯನ್ನು ಹಿಟ್ಟ ಯುರೋಪಿಯನ್ ಪೋಲೀಸ ಸುಪರಿಂಟೆಂಡೆಂಟರು ಪ್ರಾರಂಭಿಸಿದ್ದರು. ಅವರಿಗೆ ವರ್ಗವಾದ ಬಳಿಕ, ಆ ಚೌಕಶಿಯನ್ನು ಸಿಂಧದ ಗುಪ್ತ ಪೋಲೀಸ ಖಾತೆಯವರು ನಡಿಸಿದರು. ಸರಕಾರಿ ವಕೀಲರ ಅಭಿಪ್ರಾಯವು ಕೊಳ್ಳೋಣಾಗಿತ್ತು. ಸರಕಾರಿ ವಕೀಲರಿಗೆ ಅಭಿಪ್ರಾಯ ಕೊಡಲು ೧೮ ದಿನಗಳು ತಗಲಿದವು. ಆರೋಪಿ ತಾಣವರದಾಸರು ೧೩ ತಿಂಗಳುಗಳ ವರೆಗೆ ಬಂದಿವಾಸದಲ್ಲಿದ್ದರು. ಮುಸಾಮತ್ ಧನೀ ಎಂಬುವಳ ಸಾಕ್ಷಿ ಕೊಳ್ಳೋಣಾಯಿತು. ಇವಳು ಒಳಸಂಚುಗಾರ್ತಿಯೆಂದು ಸರಕಾರಿ ವಕೀಲರ ಅಭಿಪ್ರಾಯವಾದ್ದರಿಂದ ಆ ಬಳಿಗೆ ಸರೆಹಿಡಿಯೋಣಾಯಿತು. ಪೋಲೀಸರು ಇವಳ ಕಡೆಯಿಂದ ಜಾಮೀನು ಪಡಕೊಂಡು ಪುರಾವೆಯನ್ನು ಸಂಗ್ರಹಿಸಿದರು. ಪೋಲೀಸರು ಧಡುಗಡೆ ಮಾಡಿದ ಬಳಿಕ, ಫಿರ್ಯಾದಿ ಕಡೆಯಿಂದ ಇವಳ ಸಾಕ್ಷಿ ಕೊಳ್ಳೋಣಾಯಿತು. ಆ ಬಳಿಕ ಮೆಜಿಸ್ಟ್ರೇಟರು ಇವಳೂ ಒಳಸಂಚುಗಾರ್ತಿಯೆಂದು ಅಭಿಪ್ರಾಯಪಟ್ಟು, ಹೆಚ್ಚಿನ ಪುರಾವೆ ಕೊಂಡು,ಇವಳ ಮೇಲೆಯೂ ಆರೋಪ ಹೊರಿಸಿದರು. ಅದರಿಂದ ಸರಕಾರಿ ವಕೀಲರು ಸಿಂಧದ ಗುಪ್ತ ಪೋಲೀಸ ಖಾತೆಯವರಿಗೆ ಬರೆದು ಅವಳಿಗೂ ಸೆರೆ ಹಿಡಿದರು. ನುರು ಎಂಬುವರನ್ನು ಸೆರೆ ಹಿಡಿದಿದ್ದರು. ಅವರು ನಾಲ್ಕು ತಿಂಗಳುಗಳ ವರೆಗೆ ಬಂದಿವಾಸದಲ್ಲಿದ್ದರು. ಆದರೆ, ಅವರ ಮೇಲೆ ಆರೋಪವನ್ನು ಸಿದ್ಧಪಡಿಸಲು ಅಸಾಧ್ಯವೆಂದು ಸೆಶನ್ಸ ಕೋರ್ಟಿನಲ್ಲಿ ಆರೋಪಿ ವಕೀಲರ ಅದ್ದು ಸವಾಲುಗಳ ಮೇಲಿಂದ ತೋರಿದ್ದರಿಂದ ಅವರ ಮೇಲಿನ ಖಟ್ಲೆಯನ್ನು ಸರಕಾರವು ಹಿಂತೆಗೆದುಕೊಂಡಿತು. ಸೆಶನ್ಸ ಜಜ್ಜರವರು ಈ ಖಟ್ಲೆಯನ್ನು ಪೋಲೀಸರು ಮಾಡಿಕೊಡದಾರದಿತ್ತೆಂದು ಹೇಳಿ, ಕೆಲ ಮಟ್ಟಿಗೆ ನಿರ್ಣಯದಿಂದ ಟೀಕಿಸಿ, ತಾಣಾವರದಾಸರಿಗೆ ಬಿಡುಗಡೆ ಮಾಡಿದರು; ಸಾರ್ವಜನಿಕ ಕಾಲ ಹಾಗು ಹಣಗಳ ಅಪವ್ಯಯವೆಂದೂ ಸಂಬೋಧಿಸಿರುವರು. ಸರಕಾರಕ್ಕೆ ಈ ಕುರಿತು ೩,೬೦೩ ರೂಪಾಯಿಗಳು ಖರ್ಚಾದವು. ಆರೋಪಿ ತಾಣಾವರದಾಸರವರು ತೀರ ದರಿದ್ರರು. ಅದರಿಂದ ಅವರಿಗಾಗಿ ಸರಕಾರಕ್ಕೆ ೪೩೫ ರೂಪಾಯಿಗಳ ಖರ್ಚು ಬಂತು. ಕೆಳ ಕೋರ್ಟಿನಲ್ಲಿ ಸರಕಾರಿ ವಕೀಲರು ಮಾಡಿದ ಕೆಲಸಕ್ಕೆ ಅವರಿಗೆ ೨|| ಸಾವಿರ ರೂಪಾಯಿಗಳು ಕೊಡೋಣಾದವು. ಸೆಶನ್ಸ ಕೋರ್ಟಿನಲ್ಲಿ ಮಾಡಿದ ಕೆಲಸದ ಕುರಿತು ಇನ್ನೂ ಹಣ ಮಂಜೂರಾಗಲಿಲ್ಲ. ಕೆಳ ಕೋರ್ಟಿನಲ್ಲಿ ಈ ಖಟ್ಲೆಯು ೬ ತಿಂಗಳು ೨೦ ದಿನ ನಡೆಯಿತು. ಸೆಶನ್ಸ ಕೋರ್ಟಿನಲ್ಲಿ ೩೭ ದಿನ ನಡೆಯಿತು. ಇತ್ಯಾದಿ ಮಾಹಿತಿಯು ಹೈದರಾಬಾದ ಜಿಲ್ಲೆಯ ಮಿ| ನೂರ ಮುಹಮ್ಮದರವರಿಗೆ ದೊರಕಿದೆ.

ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ಒಳ್ಳೆಯದೋ?

"People" ಎಂಬ ಪತ್ರಿಕೆಯಲ್ಲಿ ಶ್ರೀ| ಎಮ್. ಸೇನ್ ಎಂಬುವರು ಬರೆಯುವದೇನಂದರೆ:—

ನಾವು ಪಾಶ್ಚಾತ್ಯರನ್ನು ಪ್ರತಿಯೊಂದರಲ್ಲಿ ಕಣ್ಣು ಮುಚ್ಚಿಕೊಂಡು ಅನುಸರಿಸುತ್ತೇವೆ. ಹಿಂದು-ಮುಂದಿನ ವಿಚಾರವನ್ನೇ ಮಾಡುವದಿಲ್ಲ. ಅಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪುಕ್ಕಟೆಯಾಗಿಯೂ, ಒತ್ತಾಯದಿಂದಲೂ ಕೊಡಬೇಕೆಂದು ಹೇಳಿದ ಕೂಡಲೆ, ನಾವೂ ಅದನ್ನೇ ಪ್ರತಿಧ್ವನಿಸಗೈಯುತ್ತಿರುವೆವು. ಅದಿಲ್ಲದೆ, ಸ್ವರಾಜ್ಯಕೇ ಸಿಕ್ಕಲಾರದೆಂದು ಈಗ ಅನೇಕರಿಗೆ ನಂಬಿಗೆಯಾಗಿದೆ. ರಾಜಕಾರಣ ಚಳವಳಿಯೊಳಗಿನ ಒಂದು ಶಸ್ತ್ರವೆಂಬ ದೃಷ್ಟಿಯಿಂದ ಉಪಯೋಗವಿದ್ದೀತು, ಆದರೆ, ಅದು ನಮಗೆ ಬೇಕಿಲ್ಲ. ಈ ದೃಷ್ಟಿಯನ್ನು ಬಿಟ್ಟುಕೊಟ್ಟು, ಅದರಿಂದ ನಮ್ಮ ದೇಶಕ್ಕೇನಾದರೂ ಲಾಭವಿದೆಯೋ? ಲಕ್ಷಾವಧಿ ರೂಪಾಯಿಗಳನ್ನು ಅದಕ್ಕೋಸ್ಕರ ವೆಚ್ಚ ಮಾಡುವದರಿಂದಾಗುವ ಲಾಭವೇನು? ಇವೇ ಮುಂತಾದ ಪ್ರಶ್ನೆಗಳನ್ನು ವಿಚಾರ ಮಾಡುವ.

ರಾಜಕೀಯ ದೃಷ್ಟಿಯೊಂದು ಹೊರ್ತುಪಡಿಸಿದರೆ, ಶಿಕ್ಷಣದ ದೃಷ್ಟಿಯಿಂದ ಈ ತರಹದ ಪ್ರಾಥಮಿಕ ಶಿಕ್ಷಣವು ನಿರುಪಯೋಗವೆಂದು ಅಮೇರಿಕಾ ಮತ್ತು ಯುರೋಪದ ಶಿಕ್ಷಣಾಭಿಜ್ಞರ ಅಭಿಪ್ರಾಯವು. ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಯು ಬಹಳ ದಿವಸ ಕಲಿಯುವದಿಲ್ಲ. ಆ ಅವಧಿಯಲ್ಲಿ ಆತನ ಅಥವಾ ಅವಳ ಮೇಲೆ ಶಿಕ್ಷಣದ ಸಂಸ್ಕಾರವು ಸಾಕಷ್ಟು ಆಗುವದಿಲ್ಲ. ಶಾಲೆ ಬಿಟ್ಟ ಕೂಡಲೆ, ಅವನು ಕಲಿತದ್ದನ್ನೆಲ್ಲ ಮರೆತು ಮೊದಲಿನಂತೆ ಉಳಿಯುತ್ತಾನೆ. ಬಹಳಾದರೆ, ಆತನಿಗೆ ಸಿನೆಮಾದ ಹ್ಯಾಂಡಬಿಲ್ಲು ಅಥವಾ ಪ್ರೇಮಪತ್ರ (Love-letter) ಓದಲಿಕ್ಕೆ ಬರುವಷ್ಟು ಮಾತ್ರ ಆತನಿಗೆ ಸಂಸ್ಕಾರ ಉಳಿಯುತ್ತದೆ. ಶಾಲೆ ಬಿಟ್ಟ ಬಳಿಕ, ಆತನು ಕೈಕೊಂಡ ಉದ್ಯೋಗದಲ್ಲಿ ಆತನ ಈ ಜ್ಞಾನದ ಉಪಯೋಗವಾಗುವದಿಲ್ಲ. ಯುರೋಪದಲ್ಲಿಯ ಪ್ರಾಥಮಿಕ ಶಿಕ್ಷಣವು ನಮ್ಮಲ್ಲಿಗಿಂತ ಎರಡು ವರ್ಷ ಹೆಚ್ಚಿನದಿರುತ್ತದೆ. ಅಲ್ಲಿಯೇ ಈ ಸ್ಥಿತಿ. ಇದರಿಂದಲೇ ಪ್ರಾಥಮಿಕ ಶಿಕ್ಷಣವನ್ನಷ್ಟೇ ಒತ್ತಾಯ ಮಾಡದೆ, ಸ್ವೀಡನ್-ಡೆನ್ಮಾರ್ಕದವರು ಮಾಧ್ಯಮಿಕ ಶಿಕ್ಷಣವನ್ನು ಒತ್ತಾಯ ಪಡಿಸಿರುವರು. ಫ್ರಾನ್ಸ ಮತ್ತು ಅಮೇರಿಕೆಯವರೂ ಹಾಗೇ ಮಾಡಿರುವರು. ಇಂಗ್ಲಂಡವೂ ಮಾಡುವ ಯೋಜನೆಯಲ್ಲಿರುವದು. ಈ ದೇಶದಲ್ಲಿ ಮೊದಲಿನ ೪ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸುವದು ಒಳ್ಳೇದು ಮತ್ತು ೧೪ ವರ್ಷದ ನಂತರ ೨-೩ ವರ್ಷ ಉದ್ಯೋಗ ಶಿಕ್ಷಣ ಕೊಡುವದು ಉಚಿತವು. —ಜಯಕರ್ನಾಟಕ.

ಕಾನಡಾವೃತ್ತ.

ವಿಷಿ ಕ್ಷಯ ಸಂ। ಶ್ರಾವಣ ಶು। ೮ ಮಿ. ಸೋಮವಾರ.

ಲೋಕಲ್ ಫಂಡಿನ ಏರಿಕೆ

(ಲೇಖಾಂಕ ೭.)

ಜಿಲ್ಹಾ ಲೋಕಲ್ ಬೋರ್ಡಿನ ಪ್ರತಿನಿಧಿಗಳಿರಾ! ನಾಡದು ಬುಧವಾರಕ್ಕೆ ಲೋಕಲ್ ಫಂಡಿನ ಏರಿಕೆಯ ಕುರಿತು ನಿರ್ಧರಿಸುವ **ಮಹಾ ದೊಡ್ಡ** ಜವಾಬದಾರಿಯು ನಿಮ್ಮ ಮೇಲೆ ಬಂದೊದಗಿದೆ. ನಮ್ಮ ಜಿಲ್ಹೆಯಲ್ಲಿ ಈ ವಿಷಯ ಅಳರಸರ ಕುಟಿಲ ನೀತಿಯಿಂದ ಇತ್ತಂಡಗಳಾಗಿವೆ. **ಲೋಕಲ್** ಫಂಡನ್ನು ಏರಿಸಬಾರದೆನ್ನುವವರು; **ಲೋಕಲ್** ಫಂಡನ್ನು ಏರಿಸಬೇಕೆನ್ನುವವರು. ಲೋಕಲ್ ಫಂಡನ್ನು ಏರಿಸದಿದ್ದರೆ, **ಲೋಕಪ್ರೀತಿ ಸಿಗುತ್ತದಂತೆ! ಲೋಕಲ್** ಫಂಡನ್ನು ಏರಿಸಿದರೆ, ಲೋಕಕಲ್ಯಾಣವಾಗುತ್ತದಂತೆ!! ಈ ಎರಡು ಪ್ರಜಾಕಲ್ಯಾಣದ ಯೋಜನೆಗಳಲ್ಲಿ ಶ್ರೇಯಸ್ಕರವ್ಯಾವುದೆಂದು ನಾವು ವಿವೇಚಿಸಬೇಕಾಗಿದೆ.

ಲೋಕಲ್ ಫಂಡನ್ನು ಏರಿಸಬೇಕೆನ್ನುವವರ ಪಕ್ಷವನ್ನು ಕೇಳಿರಿ. **ಲೋಕಲ್** ಫಂಡನ್ನು ಏರಿಸಿದರೆ, ಪ್ರಾಥಮಿಕ ಶಿಕ್ಷಣದ ಪ್ರಸಾರವಾಗುತ್ತದಂತೆ. **ಹಳ್ಳಿಗಳ ಆರೋಗ್ಯರಕ್ಷಣವಾಗುತ್ತದಂತೆ.** ಹಳ್ಳಿಗರ ಆರೋಗ್ಯರಕ್ಷಣ ಕಾರ್ಯವು ಪಟ್ಟಣಿಗರಿಗೆ ಇಷ್ಟವಿಲ್ಲವಂತೆ. **ಆದರಿಂದ** ಪಟ್ಟಣಿಗರು **ಲೋಕಲ್** ಫಂಡಿನ ಏರಿಕೆಯನ್ನು ವಿರೋಧಿಸುತ್ತಾರಂತೆ. **ಹಳ್ಳಿಗಳೇ ನಮ್ಮ ಜಿಲ್ಹೆಯ ಜೀವಾಳವಿರುವದರಿಂದ ಲೋಕಲ್** ಫಂಡನ್ನು ಏರಿಸಬೇಕಂತೆ.

ಅಧ್ಯಕ್ಷರಾದ ಶ್ರೀ। ಗೋಪಿ ಮಹಾಬಲೇಶ್ವರ ಭಟ್ಟರು ತಮ್ಮ ನಿಮಂತ್ರಣ ಪತ್ರಿಕೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ **ಲೋಕಲ್** ಫಂಡನ್ನು ಏರಿಸಬೇಕೆಂದು ಧ್ವನಿಸಿರುವರು. ಇಂಥ ಸ್ಥಿತಿಯಲ್ಲಿ ಆರೋಗ್ಯರಕ್ಷಣದ ಪ್ರಶ್ನೆಯು ಹೊರಡುವದಿಲ್ಲ. ಆದರೂ, ಅದನ್ನು ನಾವು ವಿಚಾರಿಸುವ. ಹಳ್ಳಿಗರು ಆರೋಗ್ಯದಿಂದಿದ್ದರೆ, ಕ್ಷೇಮದಿಂದ ಬಾಳ್ವೆ ಮಾಡಿಕೊಂಡಿದ್ದರೆ, ಪಟ್ಟಣಿಗರ ಐಶ್ವರ್ಯವನ್ನು ತಿನ್ನುವವರ್ಯಾರು? ಹಳ್ಳಿಗಳು ಬಡಬಿದ್ದರೆ ಮಾತ್ರ, ಪಟ್ಟಣದ ವೈಭವವು ಕುಗ್ಗುತ್ತದೆ. **ಲೋಕಲ್** ಫಂಡಿನ ಏರಿಕೆಯು ಮಾತ್ರದಿಂದ ಹಳ್ಳಿಗರು ಆರೋಗ್ಯವಂತರಾಗುತ್ತಿದ್ದರೆ, ಜ್ಞಾನಸಂಪನ್ನರಾಗುತ್ತಿದ್ದರೆ, **ಲೋಕಲ್** ಫಂಡಿನ ಏರಿಕೆಯನ್ನು ಅರ್ಧ ಆಣೆ ವರೆಗೆ ತಡಿಸಬೇಡಿ, ಒಂದು ಆಣೆಯ ವರೆಗೂ ಉದ್ಧಾಣ ಹೊಡೆಯಿರಿ. ನಮಗೆ ಅತ್ಯಾನಂದವಿದೆ. ಬಾಂಧವರಾದ ಹಳ್ಳಿಗರು ವೈಭವಸಂಪನ್ನರಾದರೆ, ಆವರ ವೈಭವವು ಪಟ್ಟಣಕ್ಕೆ ಬರುತ್ತಿಲ್ಲವೇ? ಸೂಕ್ಷ್ಮವಾಗಿ ಪರ್ಯಾಲೋಚಿಸಿದರೆ, ನಮ್ಮಂಥ ಪಟ್ಟಣಿಗರಾದರೂ ಹಳ್ಳಿಗರೇ! ಅದರಿಂದ ಹಳ್ಳಿ—ಪಟ್ಟಣವೆಂಬ ಭೇದಬುದ್ಧಿಯನ್ನು ತಳೆಯಬೇಡಿ.

ಆಳವಾಗಿ ವಿಚಾರಿಸಿದರೆ, **ಲೋಕಲ್** ಫಂಡಿನ ಏರಿಕೆಯು ಬಹು ಮಟ್ಟಿಗೆ ಹಳ್ಳಿಗಳ ಮೇಲೆಯೇ ಹೇರುತ್ತದೆ. ಹಳ್ಳಿಗಳೇ ಜಿಲ್ಹೆಯ ಜೀವಾಳವಿರುವಾಗ, ಹಳ್ಳಿ ಭೂಮಿಯು ಜಿಲ್ಹೆಯ ಜೀವಾಳವಲ್ಲವೇ? ಹಳ್ಳಿಯ ಭೂಮಿಯ ಮೇಲಿನ **ಲೋಕಲ್** ಫಂಡನ್ನು ತೆರುವದು ಹಳ್ಳಿಗಳೇ. ಹೊರತು ಪಟ್ಟಣಿಗಳಲ್ಲ. ಲೋಕಲ್ ಫಂಡನ್ನು ಏರಿಸದಿದ್ದರೆ, ಪಟ್ಟಣಿಗರಿಗಿಂತ ಹಳ್ಳಿಗರಿಗೇ ಲಾಭವಿರುವದೆಂದು ನಾವಾಗಿ ತಮಗೆ ಹೇಳುವದೇಕೆ? ಇಂಥ ಪ್ರಸಕ್ತಿಯಲ್ಲಿ **ಲೋಕಲ್** ಫಂಡಿನ ಏರಿಕೆಯನ್ನು ಸಮರ್ಥಿಸುವವರು ಹಳ್ಳಿಗಳ ಉದ್ಧಾರಕರಾದಾರೇನು?

ಹಳ್ಳಿಗಳನ್ನು ಉದ್ಧರಿಸುವದೆಂದರೆ, ಉದ್ಧಾರದ ಯೋಜನೆ ಬೇಕಲ್ಲವೇ? ಹಳ್ಳಿಗಳ ಆರೋಗ್ಯರಕ್ಷಣೆ ನಮಗೂ ಇಷ್ಟವಿದೆ. ಅದನ್ನು ನಾವು ಮಾಡಲೇಬೇಕು. ಎಂತಲೂ ನಾವು ಪ್ರತಿಪಾದಿಸಬಹುದು. ಸಾಧ್ಯವಿದ್ದ ಮಟ್ಟಿಗೆ ತಾವದನ್ನು ಕೈಕೊಳ್ಳಲು ಕರ್ತವ್ಯಬದ್ಧರಿದ್ದೀರಿ. ಆದರೆ, ಆ ಯೋಜನೆಯು ಎಲ್ಲಿರುವದು? ಅದಕ್ಕೆ ಖರ್ಚೇನು ತಗಲೀತು? ಇದ್ದ ಖರ್ಚನ್ನು ಕೈ ಬಿಗಿ ಹಿಡಿದುಕೊಂಡು, ಜಾಗ್ರತೆಯಿಂದ ಖರ್ಚ ಮಾಡಿದರೆ, ತವ ಗೆಷ್ಟು ಹಣ ಉಳಿದಾಯವಾಗುವ ಹಾಗಿದೆ? ಪ್ರಚಲಿತ ಪ್ರಾಥಮಿಕ ಶಿಕ್ಷಣ ಕ್ರಮದ ಕುರಿತು ಮತಭೇದವಿದ್ದರೂ, ಪ್ರಜೆಗಳು ಜ್ಞಾನಸಮೃದ್ಧರಾಗಿರಬೇಕೆಂಬ ತತ್ವವು **ಸರ್ವರಿಗೂ ಮಾನ್ಯವಾದದ್ದೇ.** ಆಗಕ್ಯಾದರೂ, ತಮ್ಮ ಬೋರ್ಡಿನವರು ಯೋಜನೆಯನ್ನು ತಯಾರಿಸಿರುವರೇನು? ಎಲ್ಲೆಲ್ಲಿ ಶಾಲೆಗಳು ಅವಶ್ಯವಾಗಿರುವವು? ಇದ್ದ ಶಾಲೆಗಳನ್ನು ಪುನರ್ಘಟಿಸಿದರೆ, ಇದ್ದದ್ದರಲ್ಲಿಯೇ ಶಿಕ್ಷಣಪ್ರಸಾರವನ್ನು ಎಷ್ಟರ ಮಟ್ಟಿಗೆ ಮಾಡಬಹುದು? ಶಿಕ್ಷಣಪ್ರಸಾರ ಮಾಡುವದಾದರೆ, ಯಾವ ಕ್ರಮದಿಂದ **ಮಾಡಬೇಕು**? ಅದಕ್ಕೇನಾದರೂ ತಮ್ಮ ಬೋರ್ಡಿನವರು "ಸ್ಕೀಮು" ಯಾನೆ ಯೋಜನೆಯನ್ನು ತಮ್ಮ ಮುಂದೆ ಇಟ್ಟಿರುವರೇನು? **ಆರೋಗ್ಯಪಾಲನ ಯಾ ಪ್ರಾಥಮಿಕ ಶಿಕ್ಷಣಪ್ರಸಾರದ ಯೋಜನೆಗಳ ಅಭಾವದಲ್ಲಿ ಅವುಗಳಿಗೆ ತಗಲುವ ಖರ್ಚಿನ ಅಂದಾಜು ಸಹ ಗ್ರಹಿಸದೆ, ಲೋಕಲ್ ಫಂಡನ್ನು** ಏರಿಸುವದು ಸೋಜಿಗವಲ್ಲವೇ! **ಅರ್ಥಶಾಸ್ತ್ರದಂತೆ ಖರ್ಚನ್ನು ಬಾಯಿಗೂಡಿಸುವದಕ್ಕಾಗಿ ಕರ ಹೇರುವದಿದೆ. ಕರ** ಹೇರಿಕೊಂಡು ಖರ್ಚಿನ ಬಾಬುಗಳನ್ನು ನಿರ್ಮಿಸುವದು ವ್ಯವಹಾರಚಾತುರ್ಯವಲ್ಲ; **ಅರ್ಥ**ಶಾಸ್ತ್ರವಂತು ಅಲ್ಲೇ ಅಲ್ಲ! ಯೋಜನೆಗಳನ್ನು ನಿರ್ಧರಿಸದೆ, ಲೋಕಲ್ ಫಂಡಿನ ಏರಿಕೆಯ ಮಾತ್ರದಿಂದ ಪ್ರಜಾಕಲ್ಯಾಣದ ಕಲ್ಪನೆಯ ಸಾಮ್ರಾಜ್ಯವು ಕೈಸೇರುತ್ತದೆಂದು ಹೇಳಕೆಯಿದ್ದರೆ, ತಾವು ನಾಡದು ಬುಧವಾರಕ್ಕೇ **ಲೋಕಲ್** ಫಂಡನ್ನು ಎರಡಾಣೆಗೆ ಏರಿಸಿ ಮರಳಬನ್ನಿ. ಯೋಜನೆಯ ಹೊರತು, ಪ್ರಜಾಕಲ್ಯಾಣ ಸಾಧ್ಯವದೆಂದು ತಮಗೆ ತೋರಿದರೆ, ಅಧ್ಯಕ್ಷರಿಗೆ ಯೋಜನೆಯನ್ನು ತಯಾರಿಸಹೇಳಿರಿ; **ಪ್ರಕೃತ** ಖರ್ಚನ್ನು ಸಹಕಾರಿಗಳ ಸಹಾಯದಿಂದ **ಸವಿಸ್ತಾರ** ಲೋಚಿಸಿ, ಅನಾವಶ್ಯಕವಾದ ಬಾಬುಗಳನ್ನು ನಿರ್ದಯದಿಂದ ತುಂಡರಿಸಹೇಳಿ. **ಮತ್ತು** ಹೀಗೆ ಹಣ ದೊರಕಿದರೂ, ನಿರ್ವಾಹವಾಗುವದಿಲ್ಲಾದರೆ, ಇತರ ಉಪಾಯವಿಲ್ಲದಲ್ಲಿ, **ಲೋಕಲ್** ಫಂಡಿನ ಏರಿಕೆಯ ಕುರಿತು **ಚರ್ಚೆ ಮಾಡಲು** ಒಪ್ಪಿಕೊಳ್ಳಿ. ಲೋಕಲ್ ಫಂಡಿನ ಏರಿಕೆಯು ಆಪತ್ಕಾಲದಬ್ರಹ್ಮಾಸ್ತ್ರವೆಂದು ಕಾದಿಟ್ಟುಕೊಳ್ಳಿ. ಕಾರ್ಣವಿಷ್ಟೆ. ಲೋಕಲ್ ಫಂಡನ್ನು ಒಮ್ಮೆ ಏರಿಸಿದರೆ, ಅದನ್ನು ತಗ್ಗಿಸುವ **ಅಧಿಕಾರವು** ತಮಗಿರುವದಿಲ್ಲ. ಅವಿಚಾರದಿಂದ, **ಅವಿವೇಕ**ದಿಂದ ಒಮ್ಮೆ ಲೋಕಲ್ ಫಂಡು ಏರಿಸಿಕೊಂಡರೆ, ತಾವು ಮುಂದೆ ಪಶ್ಚಾತ್ತಾಪಪಡಬೇಕಾಗುವದು. ಪಶ್ಚಾತ್ತಾಪಪಟ್ಟರೂ, ಅದರೊಳಗಿಂದ ಸಿಕ್ಕು ಪಾರಾಗಲಾರಿರಿ. ಇಂಥ ಪ್ರಸಕ್ತಿಯಲ್ಲಿ ತಾವು ಜಾಗ್ರತೆಯಿಂದ, ವಿಚಾರದಿಂದ, ವಿವೇಕದಿಂದ ಪ್ರವೇಶಗೊಳ್ಳಿರಿ.

ಅಧ್ಯಕ್ಷರಾದ ಶ್ರೀ। ಗೋಪಿ ಮಹಾಬಲೇಶ್ವರ ಭಟ್ಟರವರು ಸಭೆಯ ನಿಮಂತ್ರಣ ಪತ್ರಿಕೆಯನ್ನು ಹೊರಡಿಸಿದ್ದರಿಂದ ಲೋಕಲ್ ಫಂಡನ್ನು ಏರಿಸದಿದ್ದರೆ, ಅವರ ಗೌರವಭಂಗವಾಗುವದೆಂದು ಗ್ರಹಿಸಬೇಡಿ. **ಆತ್ಮಗೌರವದ ಅಭಿಲಾಷೆಗಾಗಿ** ಅಧ್ಯಕ್ಷರು ಈ ನಿಮಂತ್ರಣ **ಪತ್ರಿಕೆ**ಯನ್ನು ಹೊರಡಿಸಲಿಲ್ಲ. ಜಿಲ್ಹೆಯ **ಲೋಕಮ**ತವನ್ನು ಅರಿತುಕೊಳ್ಳಲು, ಪ್ರತಿನಿಧಿಗಳ ಸತ್ವವನ್ನು ಪರೀಕ್ಷಿಸಲು ಅಧ್ಯಕ್ಷರು **ಈ ನಿಮಂತ್ರ**ಣವನ್ನು ತಮಗೆಲ್ಲರಿಗೆ **ಕೊಟ್ಟಿ**ರುವರು. **ಲೋಕ**ಲ್ ಫಂಡಿನ ಏರಿಕೆಯ ಪ್ರಶ್ನೆಯನ್ನು **ಹಳೇ ಬೋರ್ಡಿನಲ್ಲಿ** ಚರ್ಚೆ ಮಾಡಗೊಡದೆ, ಪ್ರಜೆಗಳಿಗೆ **ಈ** ವರೆಗೆ ಕಾಯ್ದ ಪುಣ್ಯಾತ್ಮರು ಅಧ್ಯಕ್ಷರೇ. ಪ್ರಜಾಕಲ್ಯಾಣವನ್ನು, ಲೋಕಲ್ ಫಂಡನ್ನು ಏರಿಸದೆ ಸಾಗಿಸಬರುತ್ತದಾದರೆ, **ಅದಕ್ಕೆ** ಯಾವಾಗಲೂ ಅಧ್ಯಕ್ಷರು ಟುಗ್ಗಾಲಿನ **ಮೇಲೆ** ಸಿದ್ಧರಿರುವರು. **ಲೋಕನಿಯುಕ್ತ ಅಧ್ಯಕ್ಷರ** ಕರ್ತವ್ಯವೂ, ಆನಂದವೂ **ಅದೇ. ಲೋಕೋಪಕಾರಕ್ಕಾಗಿ** ಅವರು **ಈ ಸಂಸ್ಥೆಯಲ್ಲಿ** ಸೇರಿರುವರು. **ತಾವು ಸ್ವತಂತ್ರವಾಗಿ ಮತ ಕೊಟ್ಟರೆ ಅವರಿಗೆ ಅತ್ಯಾನಂದವಿದೆ.**

ಲೋಕಲ್ ಫಂಡನ್ನು ಏರಿಸಬಾರದೆಂಬ ಬಗ್ಗೆ ವಿಸ್ತಾರಪೂರ್ವಕವಾಗಿ ನಾವು **ಈ ಹಿಂದೆ**

ಚರ್ಚಿಸಿರುವೆವು. ತೀರ್ವೆಯ ತಿದ್ದುಪಡಿ, ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಆರ್ಥಿಕ ಉನ್ನತಿಯ ಉಪಾಯ ಮುಂತಾದ ಪ್ರಶ್ನೆಗಳು ಸದ್ಯಕ್ಕೆ ಪ್ರಾದುರ್ಭೂತವಾಗಿದ್ದಾಗ, ಈಗಾಗಲೇ ಲೋಕಲ್ ಫಂಡನ್ನು ಏರಿಸಿಕೊಳ್ಳುವದು ವಿವೇಕವಲ್ಲ. ಲೋಕಲ್ ಫಂಡನ್ನು ಏರಿಸಿಯೂ ಜನಸಾ-ಜಿಕರ್ ಪತ್ರಿಕೆಯು ಬಾಯಿಗೂಡಿಸಲು ಬಾರದೆ, ಅನೇಕ ಬೋರ್ಡುಗಳು ಪೇಚಾಡುತ್ತಿವೆ. ಆ ಕುರಿತು ಸದ್ಯಕ್ಕೇ ಸರಕಾರವು ಆಲೋಚನೆ ಮಾಡಬೇಕಾಗಿದೆ. ಲೋಕಲ್ ಫಂಡಿನ ಏರಿಕೆಯು ಸೊಂಟದ ಗಾಳಿಯಿಂದ ನಾವು ಹಿಂದೆ ಬದುಕಿದ್ದೇವೆ; ಈಗಾಗಲೇ ಮುಗಿಲು ಕಳಿಸಿದು ಬೀಳುವ ಪ್ರಸಂಗವೇನಿಲ್ಲ. ಪ್ರಜಾಕಲ್ಯಾಣಪರ ಯೋಜನೆಯೂ ಇನ್ನೂ ತಯಾರಾಗಲಿಲ್ಲ; ಆದಳಿತೆಯ ಖರ್ಚನ್ನೂ ಬೋರ್ಡಿನವರು ಆಲೋಚಿಸಿ, ತಮಗೆ ಸಮಾಧಾನ ಮಾಡಲಿಲ್ಲ. [illegible]ಥ ಪ್ರಸಕ್ತಿಯಲ್ಲಿ ಗಾಬರಿಯಿಂದ ಲೋಕಲ [illegible]ಡನ್ನು ಏರಿಸಿಕೊಳ್ಳುವದು ಎಷ್ಟುಕ್ಕೂ ಶ್ರೇಯಸ್ಕರವಲ್ಲ.

ಪ್ರತಿನಿಧಿಗಳೇ, ವಿವೇಕದಿಂದ ಈ ಪ್ರಶ್ನೆಯನ್ನು ಪರ್ಯಾಲೋಚಿಸಿರಿ ಮರೆಮಾಚದೆ, ಮನೋದೇವತೆಗೆ ಸಾಕ್ಷಿಯಾಗಿ ನಿಮ್ಮ ಮತವನ್ನು ಕೊಡಿರಿ. ಇದಕ್ಕೂ ಹೆಚ್ಚಿಗೆ ತಮಗೆ ನಾವು ಹೇಳುವದೇನಿದೆ?

ಸ್ಫುಟ ಸೂಚನೆಗಳು.

೧ ಪಂಡಿತ ಮದನಮೋಹನ ಮಾಲವೀಯರವರ ಸಾಹಸದ ಉತ್ತರ ಕಥೆಯನ್ನು ಅರಿತುಕೊಳ್ಳಲು ಬಾಂಧವರು ಉತ್ಸುಕರಾಗಿರುವದು ಸಹಜವು. ಪಂಡಿತ ಮದನ ಮೋಹನ ಮಾಲವೀಯರವರು ಮೆಜಿಸ್ಟ್ರೇಟರಿಗೆ ಬರೆದ ಪತ್ರದಂತೆ ೭ನೇ ತಾರೀಕಿಗೆ ಕಲಕತ್ತೆಗೆ ಹೋದರು. ಲೋಕನಾಯಕರೆಲ್ಲರೂ ವೀರ ಪುರುಷರಿಗೆ ಇದಿರಾಗಿ ಪ್ರಚಂಡ ಸ್ವಾಗತವನ್ನಿತ್ತು ಸತ್ಕರಿಸಿದರು. ಸಾಯಂಕಾಲಕ್ಕೆ ಪ್ರಚಂಡ ಜಾಹೀರ ಸಭೆಯಾಯಿತು. ಪಂಡಿತ ಮಾಲವೀಯರವರು ಪರಿಸ್ಥಿತಿಯನ್ನು ಬಣ್ಣಿಸಿದರು. ತಮ್ಮ ಮೇಲೆ ಮೆಜಿಸ್ಟ್ರೇಟರು ಹೊರಡಿಸಿದ ಹುಕುಮು, ಪ್ರಜೆಗಳ ಭಾಷಣ ಹಾಗು ಚಾಲನಸ್ವಾತಂತ್ರ್ಯಗಳ ಮೇಲೆ ಎಸೆದ ಗದೆಯೆಂದು ಪಂಡಿತ ಮಾಲವೀಯರವರು ಸೂಚಿಸಿ, ಅಂಥ ಹುಕುಮಿಗೆ ಅನುಗುಣವಾಗಿಯೇ ತಾವು ವರ್ತಿಸಿರುವೆವೆಂದರು. ಅಪೇಕ್ಷೆಯಂತೆ ಪಂಡಿತ ಮಾಲವೀಯರವರಿಗೆ ಎಲ್ಲಿಯೂ ಪ್ರತಿಬಂಧವಾಗಲಿಲ್ಲ. ಇದನ್ನು ಕೇಳಿ ರಾಷ್ಟ್ರೀಯ ವಾರ್ತಾಪತ್ರಿಕೆಗಳು ಆನಂದಪಟ್ಟವು. ಅರಸರ ಮೂರ್ಖತನವನ್ನೂ, ಅಧಿಕಾರಮದವನ್ನೂ ಪರಿಹರಿಸುವ ಸುಲಭೋಪಾಯವು ಆಜ್ಞಾಭಂಗವೆಂದು ಹೇಳಿರುವವು. ಮುಂಬಯಿಯ 'ಟೈಮ್ಸ್'ದಂಥ ಎಂಗ್ಲೋ-ಇಂಡಿಯನ್ ಸಮಾಚಾರ ಪತ್ರಿಕೆಗಳು ಬಂಗಾಲದ ಅರಸರನ್ನು ಹಳಿಯುತ್ತಿವೆ: "ಮೊಟ್ಟಮೊದಲು ಇಂಥ ಹುಕುಮುಗಳನ್ನು ಹೊರಡಿಸುವದೇ ಅಪ್ರಶಸ್ತವು. ಒಮ್ಮೆ ಹೊರಡಿಸಿದ ಬಳಿಕ ಅವುಗಳನ್ನು ಉಲ್ಲಂಘಿಸುವವರಿಗೆ ಶಾಸನ ಮಾಡದಿರ ಮದು ಮೂರ್ಖತನವು. ಈ ಪ್ರಕಾರದಿಂದ ಪ್ರಜೆಗಳಲ್ಲಿ ನಗೆಗೇಡಾಗುತ್ತದೆ. ಆಜ್ಞಾಭಂಗ ಮಾಡುವವರಿಗೆ ಅವಾಸ್ತವವಾದ ಪ್ರತಿಷ್ಠೆಯು ದೊರಕುತ್ತದೆ." ಇತ್ಯಾದಿ ವಚನಗಳಿಂದ ಬಂಗಾಲದ ಅರಸರಿಗೆ ಹುರಿದುಂಬಿಸುತ್ತಿರುವವು. ನಾಗಪುರದಿಂದ ಡಾ| ಮುಂಜೇಯವರೂ, ಶ್ರೀ| ಜಯಕರ-ಕೇಳಕರರವರೂ ಕಲಕತ್ತೆಗೆ ಹೋಗಿರುವರು. ಅರಸರ ಪಕ್ಷಪಾತಿಗಳಾಗಿರುವ ಪತ್ರಿಕೆಗಳಿಗೆ ಇದನ್ನು ಕೇಳಿ ಚೇಳು ಕಡಿದ ವೇದನೆಗಳುಂಟಾಗಿವೆ. ಬಂಗಾಲದ ಅರಸರು ಈಗ ಎಚ್ಚರಿಕೆಪಟ್ಟು, ಪಂಡಿತ ಮಾಲವೀಯರವರ ಮೇಲೆ ಪಿನಲ್ ಕೋಡಿನ ೧೮೮ ನೇ ಕಲಮಿನನ್ವಯ ಸಮನ್ಸನ್ನು ಹೊರಡಿಸಿ, ಸರಕಾರಿ ಅಧಿಕಾರಿಯ ಹುಕುಮನ್ನು ಉಲ್ಲಂಘಿಸುವ ಕಾರಣಗಳನ್ನು ತೋರಿಸಹೇಳಿದ್ದಾರೆ. ಈ ಖಟ್ಲೆಯು ತಾ ೨೩ ನೇಗೆ ಕಲಕತ್ತೆಯಲ್ಲಿ ನಡೆಯುವದಿದೆ. ಪಂಡಿತ ಮಾಲವೀಯರವರಿಗೆ ಕೋರ್ಟಿನೊಳಗೆ ಜಿಲ್ಹಾ ಮೆಜಿಸ್ಟ್ರೇಟರು ಅಧಿಕಾರ ನಾತೆಯಿಂದ ತಮಗೆ ಭೆಟ್ಟಿಯಾಗಲು ಹೇಳಿದ್ದರು. "ನಿಮ್ಮೊಡನೆ ನನ್ನ ಕೆಲಸವೇನಿಲ್ಲ; ನನ್ನೊಡನೆ ನಿಮಗೆ ಕೆಲಸವಿದ್ದರೆ, ನೀವು ಬೇಕಾದಾಗ ಒಂದು ನನ್ನನ್ನು ಕಾಣಬಹುದು," ಎಂಬರ್ಥದ ವೀರ ಲೋಕನಾಯಕರಿಗುಚಿತವಾದ, ಉತ್ತರವನ್ನು ಪಂಡಿತ ಮಾಲವೀಯರವರು ಮೆಜಿಸ್ಟ್ರೇಟರಿಗೆ ಕಳುಹಿ ಭಾರತೀಯ ಲೋಕನಾಯಕರ ಸ್ವಾಭಿಮಾನವನ್ನು ಸಿದ್ಧಪಡಿಸಿರುವರು. ಮೆಜಿಸ್ಟ್ರೇಟರಂಥ ಚಿಕ್ಕ ಪುಟ್ಟ ಅಧಿಕಾರ ದೊರೆತ ಕೂಡಲೆ, ಲೋಕನಾಯಕರೆಂದರೆ, ಕೆಳ ತರಗತಿಯ ಪ್ರಾಣಿಗಳೆಂಬ ತಿರಸ್ಕಾರ ಬುದ್ಧಿಯನ್ನು ತಳೆಯುವ ಸಂಕುಚಿತ ವೃತ್ತಿಯ ಅಧಿಕಾರಿಗಳ ಮದ ಇಳಿಸುವ ಉಪಾಯವು ಇದೇ. ಪಂಡಿತ ಮಾಲವೀಯರವರು ಮುಂದಿನ ವಾರದಲ್ಲಿ ಏನು ಮಾಡುತ್ತಾರೆಂಬುದನ್ನು ನೋಡಲು ಅಖಿಲರೂ ಆತುರರಾಗಿರುವರು.

೨ ಅರಸರು ಅಸ್ಪೃಶ್ಯರ ಉದ್ಧಾರಕರೆಂದು ಹೇಳಿಸಿಕೊಳ್ಳುತ್ತಾರೆ. ಅಸ್ಪೃಶ್ಯರನ್ನು ಉನ್ನತಿಗೆ ತರುವದಕ್ಕಾಗಿ ಹಗಲಿರುಳು ಬಡಿದಾಡುವ ಪುಣ್ಯಾತ್ಮರು ನಮ್ಮ ಭರತ ಖಂಡದಲ್ಲಿ ಯಾರಾದರಿದ್ದರೆ, ಅವರು ಅರಸರೇ. ಭೇದಭಾವವಿಡುವ ಪ್ರಜೆಗಳಲ್ಲಿಂದಾದ ವೈಷಮ್ಯವನ್ನು ತಿಳಿದು, ಅಸ್ಪೃಶ್ಯರಿಗೆ ಸ್ಪೃಶ್ಯರೊಡನೆ ಸರಿಕರಾಗಿ ಕೂತು-ಕೊಳ್ಳಲು ತಯಾರಿಸುವ ಪರೋಪಕಾರಿಗಳು ಅರಸರೇ. ಅಸ್ಪೃಶ್ಯವರ್ಗದ ವಿಶ್ವದಾನ ರಾ| ಆರ್. ಎಸ್. ನೆಕ್ಲಜ್ಯಾರವರು ನಮ್ಮ ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಕೇಳಿದ ಒಂದು ಸವಾಲನ್ನು ಅಸ್ಪೃಶ್ಯರೂ, ಅಸ್ಪೃಶ್ಯ ಪಕ್ಷಪಾತಿಗಳೂ, ಪರೋಪಕಾರಿ ಬ್ರಿಟಿಶರ ಪಕ್ಷಪಾತಿಗಳೂ ವಿಮರ್ಶಿಸತಕ್ಕದ್ದು. ಅಸ್ಪೃಶ್ಯರಿಗೆ ಬಂಜರು ಬಿದ್ದ ಭೂಮಿಯನ್ನು ಅನುಕೂಲವಾಗುವಂತೆ ಸಾಗುವಳಿ ಮಾಡಗೊಡಲು ಸರಕಾರದ ಇಚ್ಛೆ ಇರುವದೇನೆಂದು ರಾ| ನೆಕ್ಲಜ್ಯಾರವರು ಕೇಳಿದರೆ, ಸ್ಥಳಿಕ ಅಧಿಕಾರಿಗಳಿಗೆ, ಅಸ್ಪೃಶ್ಯರ ಅರ್ಜಿಗಳನ್ನು ಈ ಹಿಂದೆ ಸಹಾನುಭೂತಿಯಿಂದ ವಿಚಾರ ಮಾಡಿದಾತೆ, ಈ ಮುಂದೆಯೂ ವಿಚಾರ ಮಾಡಬೇಕೆಂದು ಸರಕಾರವು ತಿಳಿಸಿರುತ್ತದಂತೆ! ಹಿಂದಿನಂತೆಯೇ ಮುಂದೆ ಸಹಾನುಭೂತಿಯು ಹರಿಯುತ್ತಿರುವಾಗ, ಹರಿಯುದೇಕಾದಾಗ ಮಧ್ಯದಲ್ಲಿಯೇ ಅಧಿಕಾರಿಗಳಿಗೆ ಸಹಾನುಭೂತಿಯ ಸೂಚನೆ ಕೊಡುವ ಅವಶ್ಯಕತೆಯೇನು ಬಿತ್ತು? ಸೂಚನೆ ಕೊಡುವ ಹೇತುವಾದರೂ ಏನು? ಸೂಚನೆ ಕೊಟ್ಟಿದರೂ ಫಲವೇನು? ಅಸ್ಪೃಶ್ಯರಿಗೆ ಉದ್ಧಾರ ಮಾಡಬೇಕೆಂದು ಅಂತಃಕರಣಪೂರ್ವಕವಾಗಿ ಸರಕಾರವು ಬಯಸುತ್ತಿದ್ದರೆ, ಹಿಂದಿನ ಸಹಾನುಭೂತಿಯು ಈ ಮುಂದೆ ಉಪಯೋಗವಿಲ್ಲ. ಜಿಲ್ಹಾ ಅಧಿಕಾರಿಗಳ ಸ್ವೇಚ್ಛೆಯ ಮೇಲೆ ಅಸ್ಪೃಶ್ಯರ ಕಲ್ಯಾಣವನ್ನು ಅವಲಂಬಿಸಿಡಬಾರದು. ಸಂಘಟಿತ ಯತ್ನಗಳನ್ನು ಮಾಡಬೇಕು; ಅಸ್ಪೃಶ್ಯರಿಗಾಗಿ ಮರುಗುವ ಸರಕಾರವು ಬಂಜರು ಭೂಮಿಯನ್ನೂ, ಸಾಗುವಳಿಗಾಗಿ ಸಾಲವನ್ನೂ ಅವರಿಗೆ ಕೊಟ್ಟು, ಅವರನ್ನು ಸ್ವತಂತ್ರರನ್ನಾಗಿ ಮಾಡಬೇಕು: ಅಂದರೆ ಅವರ ಸ್ಥಿತಿಯು ಸುಧಾರಿಸುವದು. ಅಸ್ಪೃಶ್ಯತೆಯು ದೂರವಾಗುವದು. ಯಾಕಂದರೆ, ಈ ಯುಗದಲ್ಲಿ ಹಣವಿದ್ದವನೇ ಬುದ್ಧಿವಂತನು; ಬಲವಂತನು; ಪುಣ್ಯವಂತನು; ಶ್ರೇಷ್ಠನಾದರೂ ಅವನೇ. ಅಸ್ಪೃಶ್ಯರ ಉದ್ಧಾರದ ಬೀಜವಿದು. ಅವರಿಗಾಗಿ ಮರುಗುವ ಸರಕಾರವು ಈ ಕುರಿತು ಸಂಘಟಿತವಾಗಿ ದುಡಿಯಲಿ.

೩. ಪ್ರಾಂತಿಕ ಕಾಯಿದೆ ಕೌನ್ಸಿಲುಗಳಲ್ಲಿ ಸರಕಾರಿ ಸಭಾಸದರು ಲೋಕಪ್ರತಿನಿಧಿಗಳಿಗೆ ಕೊಡತಕ್ಕ ಉತ್ತರಗಳ ಚಮತ್ಕಾರವನ್ನು ಬಣ್ಣಿಸುವಷ್ಟು ಕಠಿಣ. ಪ್ರತಿಪಕ್ಷದ ವಕೀಲರಿಗೆ ಧೂರ್ತ ಸಾಕ್ಷಿಗಾರರು ಕೊಟ್ಟ ಜವಾಬುಗಳು ಕೂಡ ಇಷ್ಟು ಅಸ್ಪಷ್ಟವಾಗಿರುವದಿಲ್ಲ. ಅಸ್ಪೃಶ್ಯರ ಕುರಿತು ರಾ| ನೆಕ್ಲಜ್ಯಾರವರಿಗೆ ದೊರೆತ ಉತ್ತರವನ್ನು ಮೇಲೆ ಚರ್ಚಿಸಿರುವೆವು. ನಮ್ಮ ಶ್ರೀ| ಕರ್ಕಿಯವರಿಗೆ ಖಾದಿಯ ಪುರಸ್ಕಾರದ ಕುರಿತು ಕೊಟ್ಟ ಉತ್ತರವು ಅಧಿಕಾರಿಗಳ ಮದಾಂಧತೆಯನ್ನೂ, ಲೋಕಪ್ರತಿನಿಧಿಗಳ ತಿರಸ್ಕಾರವನ್ನೂ ವ್ಯಕ್ತಪಡಿಸುತ್ತದೆ. 'ಖಾದಿ ಎಂಬ ಹೆಸರಿನ ಅರಿವೆಯು ಮಾರಾಟಕ್ಕಾಗಿ ಸರಕಾರಕ್ಕಾಗಿರುವದೆಂಬುದು ತಿಳಿದು ನಮಗೆ ಬಹಳ ಸಂತೋಷವಾಗಿದೆ. ಖಾದಿಯ ಹೆಸರು ತಿಳಿಯದೇಕಾದರೆ, ಸರಕಾರಕ್ಕೆ ಆರು ವರುಷಗಳು ತಗಲಿದವು! ಇದೇನು ಸಾಮಾನ್ಯ ಪ್ರಗತಿಯಲ್ಲ. ಖಾದಿಯಲ್ಲಿ ಜೈಲ ಖಾದಿಯನ್ನೂ ಸರಕಾರವು ಸಮಾವೇಶ ಮಾಡಿದ್ದರಿಂದ ಸರಕಾರಕ್ಕೆ ಖಾದಿಯ ಹೆಸರು ತಿಳಿದರೂ, ಅರ್ಥ ತಿಳಿಯಲಿಲ್ಲೆಂದು ಹೇಳಬೇಕಾಗಿದೆ. ಜೈಲಖಾದಿಯೆಂದರೆ, ಗಿರಣಿ ನೂಲಿನಿಂದ ಕೈದಿಗಳು ತಯಾರಿಸುವ ಅರಿವೆಯು. ಇದಕ್ಕೆ ಖಾದಿಯೆಂದು ಮುಂಬಯಿ ಸರಕಾರವು ಸಂಬೋಧಿಸುತ್ತಿರುವಾಗ, ಖಾದಿಯ ಅರ್ಥವು ಸರಕಾರಕ್ಕೆ ತಿಳಿಯಿತೆಂದು ಯಾರಾದರೂ ತಿಳಿಯುವರೇನು? ನಮ್ಮಲ್ಲಿಯ ಸರಕಾರವು ಖಾದಿಯ ಪುರಸ್ಕಾರವನ್ನು ಎಷ್ಟರ ಮಟ್ಟಿಗೆ ಮಾಡುತ್ತದೆಂಬುದು ಅರಿತುಕೊಳ್ಳಲು ಶ್ರೀ| ಕರ್ಕಿಯವರ ಸವಾಲಿತ್ತು. ಅಧಿಕಾರಿಗಳು ಬೇರೆ ಬೇರೆಯಾಗಿ ಲೆಖ್ಖ ಮನ್ನಿಸಲಿಲ್ಲೆಂದು, ಸರಕಾರವು ಎಷ್ಟು ತರದ ಅರಿವೆಯ ಖರೇದಿಯ ಅಂಕಿಗಳನ್ನಿತ್ತು, ಪಾರಾಯಿತು. ಈ ಅಂಕಿಗಳು ನಿಡುದಯೋಗಿ ಅಂಕಿಗಳೆಂದು ಸರಕಾರಕ್ಕೆ ಗೊತ್ತಿದೆ. ಖಾದಿಯ ಖರೇದಿಯ ಅಂಕಿದೊರೆತರೆ ಮಾತ್ರ, ಈ ಅಂಕಿಗಳಿಂದ ಪ್ರಯೋಜನವಿದೆ. ಇನ್ನು ಮುಂದೆಯಾದರೂ ಈ ಕುರಿತು ಸರಕಾರವು ಬೇರೆ ಬೇರೆಯಾಗಿ ಅಂಕಿಗಳನ್ನಿಡಲು ಆಶ್ವಾಸನವನ್ನು ಕೊಟ್ಟಿಲ್ಲ. ಲೋಕಮತವನ್ನು ಸರಕಾರವು ಹೇಗೆ ತಿರಸ್ಕರಿಸುತ್ತದೆ ನೋಡಿರಿ!

೪. ಅಸ್ಸಾಮದೊಳಗಿನ ಚಹದ ತೋಟಗಳಿಗಾಗಿ ಕೂಲಿಯಾಳುಗಳನ್ನು ಸಂಗ್ರಹಿಸಲು, ಏಜಂಟರೊಬ್ಬರು ನಮ್ಮ ಶಿರಸಿಯಲ್ಲಿ ಬಂದಿರುವರಾಗಿ, ಸಿರ್ಸಿಯ ಸುದ್ದಿಗಾರರು ತಿಳಿಸುತ್ತಾರೆ. ಅಸ್ಸಾಮವೆಲ್ಲಿ? ನಮ್ಮ ಕಾನಡಾ ಜಿಲ್ಹೆ ಎಲ್ಲಿ? ಇಷ್ಟು ದೂರದಿಂದ ಕೂಲಿಯಾಳುಗಳನ್ನು ಒಯ್ಯಬೇಕಾದ ಪ್ರಸಂಗ ಬಂದಾಗ, ಅಲ್ಲಿಯ ಸ್ಥಿತಿಯು ಕೂಲಿಕಾರರಿಗೆ ಎಷ್ಟರ ಮಟಗೆ ಅನುಕೂಲವಾಗಿರುವದೆಂದು, ಕೂಲಿಯಾಳುಗಳು ವಿಚಾರಿಸತಕ್ಕ ವಿಷಯವು. ಏಜಂಟರು ಬಣ್ಣಿಸುವಂತೆ ಅಸ್ಸಾಮದ ಚಹದ ತೋಟಗಳಲ್ಲಿ ಆಳುಗಳಿಗೆ ಅನುಕೂಲವಾದ ಪರಿಸ್ಥಿತಿ ಇದ್ದರೆ, ಏಜಂಟರಿಗೆ ಕೂಲಿಯಾಳುಗಳನ್ನು ಹುಡುಕಲು, ಇಲ್ಲಿಯವರೆಗೆ ಬರಬೇಕಾಗುತ್ತಿತ್ತೇನು? ಚಹದ ತೋಟಗಳೊಳಗಿನ ಸ್ಥಿತಿಯನ್ನು ಕಣ್ಣಾರೆ ಕಂಡು, ಆ ಕುರಿತು ದೀನಬಂಧು ಅಂಡ್ರೂಸರವರು ಕಣ್ಣೀರು ಸುರಿಸಿರುವರು. ಅಷ್ಟು ಅಲ್ಲಿಯ ಸ್ಥಿತಿಯು ಕಠಿಣವಿದೆ. ನಮ್ಮಲ್ಲಿಯ ಕೂಲಿಯಾಳುಗಳು ಈ ವಿಷಯವನ್ನು ವಿಚಾರಿಸಬೇಕು; ಮತ್ತು ಏಜಂಟರ ಸ್ವಾಧೀನರಾಗಬೇಕು; ಅಂದರೆ ಮುಂದೆ ಪಶ್ಚಾತ್ತಾಪಕ್ಕೆ ಆಸ್ಪದವಿರಲಿಕ್ಕಿಲ್ಲ. ಈ ವಿಷಯಕ್ಕೆ ಹೆಚ್ಚಿಗೆ ಮುಂಜಾಗ್ರತೆಯನ್ನು ಕೂಲಿಯಾಳುಗಳು ಉಪೇಕ್ಷಿಸಬಾರದು.

---

೫. ಬ್ರಿಟಿಶ ರಾಜ್ಯವು ಕಾಯಿದೆಯ ರಾಜ್ಯವೆಂದು ಹೇಳಲ್ಪಡುತ್ತದೆ. ನೀತಿಗಿಂತ ಕಾಯಿದೆಯೇ ಇಲ್ಲಿ ಪ್ರಾಧಾನ್ಯವು. ನೀತಿಯು ಒಂದುಗಲ್ಲಿಗೆ ಕಾಯಿದೆ! ಗಳನ್ನು ಹಚ್ಚಿದರೆ, ಅವರವರ ದೊಡ್ಡ ದೊಡ್ಡ ಕಾಯಿದೆಗಳು ಧಕ್ಕನೆ ಹಾರಿಹೋಗುವವು; ಅದರೂ ಅಧಿಕಾರಿಗಳು ನಡಿಸುವ ಕಾಯಿದೆಯ ಉಲ್ಲಂಘನವನ್ನಂತು ಇಂದಿಗೆ ತೋರಿಸಕೊಡಬಯಸುವೆವು. ನಮ್ಮ ಹಲ್ಲೆಯೊಳಗಿನ ಹಾದಿಗಳ ಮೇಲಿಂದ ಮೋಟಾರುಗಳನ್ನು ದಾಟಿಸುವರೆ ವಿಶಿಷ್ಟ ಹಾಸಲು ಕೊಡಬೇಕೆಂದಿದೆ. ತುಂಬಿದ ಮೋಟಾರಿಗೆ ಇಂತಿಷ್ಟು ಹಾಸಲು, ಬರಿ ಮೋಟಾರಿಗೆ ಇಂತಿಷ್ಟು ಹಾಸಲು ಹೀಗೆ ಭೇದವೇನಿರುವದಿಲ್ಲ. ಗಾಡಿಗಳಿಗೆ ಹೀಗೆ ಭೇದ ಮಾಡಲ್ಪಟ್ಟಿದೆ. ಇಂಥ ಸಂದರ್ಭದಲ್ಲಿ ತಾರಿಯವರು ನಿಯಮಿತ ಹಾಸಲನ್ನು ಬರಿ ಮೋಟಾರಿನಿಂದ ವಸೂಲ ಮಾಡಿ ಅದರೊಳಗೆ ಕೂಡುಹೋದ ಪ್ರಯಾಣಿಕರಿಂದ ಬೇರೆ ಹಾಸಲನ್ನು ವಸೂಲ ಮಾಡುತ್ತಾರೆ. ಇದು ಕಾಯಿದೆ ಅಥವಾ ತಾರಿಪಟ್ಟಿಯಲ್ಲಿ ನಮೂದಿಸಿದ ಹಾಸಲನ್ನು ತುಂಬಿದ ಮೋಟಾರಿಗೆಂದು ನಮೂದಿಸಿದ್ದಾಗಿ ಸಾಪ್ಪುವವು; ಬರಿ ಮೋಟಾರಿಗೆಂದಾದರೂ ನಮೂದಾಗಿರುವದೇನು? ಸಂದಿಗ್ಧ ಸ್ಥಿತಿಯಲ್ಲಿ ಕಾಯಿದೆಯ ಅರ್ಥವನ್ನು ಪ್ರಜೆಗಳಿಗೆ ಅನುಕೂಲವಾಗಿ (in favour of the subjects) ಮಾಡಬೇಕೆಂದು ಜನರಲ್ ಕ್ಲೋಜೆಸ ಆಕ್ಟ ಎಂಬ ಕಾಯಿದೆಯಲ್ಲಿ ವಿಧಿಸಲ್ಪಟ್ಟಿದೆ. ಹೀಗಿದ್ದು ತಾರಿಯವರು ಮೋಟಾರುಗಳಿಂದಾಗಿ ಹೋದ ಪ್ರಯಾಣಿಕರಿಂದ ಬೇರೆ ಹಾಸಲನ್ನು ವಸೂಲ ಮಾಡುವದೂ, ಅದನ್ನು ಅಧಿಕಾರಿಗಳು ಪ್ರತಿಬಂಧಿಸದಿರುವದೂ ಅನ್ಯಾಯವು. ಎಗ್ಝಿಕ್ಯುಟಿವ್ಹ ಇಂಜನಿಯರರು ತಾರಿಗಳಿಗೆ ಸವಾಲು ಮಾಡುವಾಗ ಪ್ರತ್ಯೇಕ ಹಾಸಲುಗಳನ್ನು ವಸೂಲ ಮಾಡಲು, ತಾರಿಯವರಿಗೆ ಅಪ್ಪಣೆಯನ್ನಿತ್ತಿದ್ದರಂತೆ. ಕಾಯಿದೆಯನ್ನು ಉಲ್ಲಂಘಿಸುವ ಅಧಿಕಾರವು ಬ್ರಿಟಿಶ ರಾಜ್ಯದಲ್ಲಿ ಕಾಯಿದೆಯಿಂದ ಯಾರಿಗೂ ಕೊಡಲ್ಪಡದಿಲ್ಲ. ಎಗ್ಝಿಕ್ಯುಟಿವ್ಹ ಇಂಜನಿಯರರು ಇದನ್ನು ವಿಚಾರಿಸಿ, ತಮ್ಮ ಹುಕುಮವನ್ನು ರದ್ದು ಪಡಿಸಬೇಕು. ಜಿಲ್ಹಾಧಿಪತಿಗಳೂ ಈ ಕುರಿತು ವಿಚಾರ ಮಾಡಬೇಕು.

ಸ್ಥಾನಿಕ ವೃತ್ತಾಂತ.

ಕುಮಟಾ— ಆಶ್ಲೇಷಾ ಮಳೆಯು ಈ ವಾರದಲ್ಲಿ ಸಾಮಾನ್ಯವಾಗಿ ಸುರಿಯಿತೆನ್ನಬಹುದು. ಕೆಲವು ಹೊತ್ತಿಗೆ ಬಿಸಿಲು ಬೀಳುತ್ತಿತ್ತು. ಕೆಲವು ಹೊತ್ತಿಗೆ ರಭಸದಿಂದ ಮಳೆ ಸುರಿಯಿತು. ಊರಲ್ಲಿ ಭಜನೆಯ ಮೇಳಗಳು ಹರಿನಾಮಸಂಕೀರ್ತನ ಮಾಡುತ್ತ ಗ್ರಾಮಶಾಂತಿಗಾಗಿ ಸಂಚರಿಸುತ್ತಿವೆ. ಜ್ವರ, ಹೊಟ್ಟೆಬೇನೆಗಳು ಇನ್ನೂ ಸಮಾಧಾನವಾಗಲಿಲ್ಲ. ಈ ವಾರದಲ್ಲಿ ೯.೭೨ ಇಂಚು ಮಳೆಬಿತ್ತು. ಈ ವರೆಗೆ ೧೨೬.೪೫ ಇಂಚು ಮಳೆಯಾಯಿತು.

ಕಾರವಾರ ಕುಮಟಾ ಮಾರ್ಗದ ೩೧|| ಮೈಲಿನ ಮೇಲೆ ೭೮ ನೇ ನಂಬರಿನ ಸಂಕಕ್ಕೆ ಬರುವಾಗ ಒಂದು ತಿರುವಿರುವದು. ಮೋಟಾರುಗಳಂಥ ವೇಗದಿಂದ ತಿರುಗುವ ವಾಹನಗಳಿಗೆ ಈ ತಿರುವಿನ ಆಕೃತಿಯು ಪ್ರಯಾಣಿಕರು ಯಾ ವಾಹನಗಳು ಕಾಣುವದಿಲ್ಲ ಇದರಿಂದ ಅಪಘಾತವಾಗುವ ಸಂಭವವಿದೆ. ಆದರಿಂದ ಈ ತಿರುವನ್ನು ಆಚೆ ಈಚೆ ಸ್ವಲ್ಪ ಸವರಿಸಿ ವಿಶಾಲಮಾಡಬೇಕಾಗಿ ಒಬ್ಬರು ತಿಳಿಸುತ್ತಾರೆ. ಎಗ್ಝಿಕ್ಯುಟಿವ್ಹ ಇಂಜನಿಯರರು ಇತ್ತ ಲಕ್ಷ್ಯಕೊಡಬೇಕು.

ಬಾಡದೊಳಗಿನ ಕುಂಬ್ರಿಕಟ್ಟೆ ಗಜ್ಜನಿ ಕಟ್ಟು ಕಟ್ಟಿ ಉಪಯೋಗಿಸಲು ಪರಸ್ಪರ ಸಹಕಾರಿ ಸಂಘವೊಂದು ಜನ್ಮ ತಳೆದಿತ್ತು. ಇದರಿಂದ ಕಟ್ಟಿಯ ಕಟ್ಟಿನ ಕೆಲಸವು ಸುಸೂತ್ರವಾಗಿ ಸಾಗುವದೆಂದು ಪರಸ್ಪರ ಸಹಕಾರಿಗಳು ಪರಸ್ಪರ ಹೇಳುತ್ತಿದ್ದರು ಆದರೆ, ಕಟ್ಟಿನ ಕಾರ್ಯವು ಈ ವರ್ಷ ವಿಶೇಷ ಹಾಳಾಗಿ, ನಂಬಿಸ ವರುಷ ಬೀಜ ಹುಡಿ ಕಿಸರಾಯಿಂದ ಗುಡೆ ಅಂಗಡಿಯವರೊಬ್ಬರು ತಿಳಿಸುತ್ತಾರೆ. ಜನರೊಳಗೆ ಸಹಕಾರಿ ವೃತ್ತಿ ಇಲ್ಲದೆ, ಸಹಕಾರಿ ಸಂಘಗಳ ಕಾಯಿದೆಗಳ ನೈರ್ಬಡಿಸಿಕೊಂಡು ಬಿಗಿದ ಕೊಂಡರೆ, ಒದಗುವ ಲಾಭವಿದು! ಸಹಕಾರ ವೃತ್ತಿ ಇದ್ದರೆ, ಕುಂಬ್ರಿಕಟ್ಟೆಯಂಥ ೩೦–೪೦ ಎಕ್ರೆ ಭೂಮಿಗೆ ಕಟ್ಟು ಕಟ್ಟಿಸಲು ಸಹಕಾರಿ ಸಂಘ ಬೇಕೇನು?

ಸಾಭಾರ ಸ್ವೀಕಾರ.

ಜಯಕರ್ನಾಟಕ— ಆಷಾಢ ಹುಣ್ಣಿವೆಯ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ- ಶ್ರೀಯುತ ಆಲೂರ ವೆಂಕಟರಾಯರು, ಶುಕ್ರವಾರ ಪೇಟ, ಧಾರವಾಡ. ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ರೂ. ೫-೮-೦.

ಸುಬೋಧ— ಸಚಿತ್ರ ಮಾಸಪತ್ರಿಕೆ. ಆಷಾಢ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ- ಶ್ರೀಯುತ ಎಸ್. ರಾಮರಾವ್, ಸುಬೋಧ ಮುದ್ರಣಾಲಯ, ಬೆಂಗಳೂರ ಸಿಟಿ ವಾ. ವ. ರೂ. ೧||.

ಆಯುರ್ವೇದ— ಆಷಾಢ ಮಾಸದ ಸಂಚಿಕೆ. ಸಂಪಾದಕರು- ವಿದ್ವಾನ್ ಪಿ. ಸೂರ್ಯನಾರಾಯಣ ಶಾಸ್ತ್ರಿಗಳು, ಕಾವ್ಯತೀರ್ಥ. ಪ್ರಕಾಶಕರು — ಜೀರಘುಪತಿರಾವ್ ಬ್ರದರ್ಸ್, ಶಿರ್ಶಿ ವ. ರೂ. ೩.

ಲೋಕರಹಸ್ಯ— ಜೂನ-ಜುಲೈ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ- ಶ್ರೀ. ಕೇ. ನಾರಾಯಣರಾವ, ವೀರರಾಜೇಂದ್ರ ಪೇಟೆ, ಕೊಡಗು ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ೨|| ರೂಪಾಯಿ.

ಗೌ॥ ಸಾ॥ ಬ್ರಾ॥ ಸ್ನೇಹಲೀಗ ಮುಂಬೈ- ೧–೪–೨೫ ನೇ ಯಿಂದ ೩೧–೩–೧೯೨೬ ನೇ ವರೆಗಿನ ೧೨ ನೇ ಸಾಲಿನ ಜಮಾ-ಖರ್ಚಿನ ಪತ್ರಿಕೆ c/o ಸಾರಸ್ವತ ಬ್ರಾಹ್ಮಣ ಸಮಾಜ, ಗಿರಗಾಂವ ಮುಂಬೈ

ಶ್ರೀಮತ್ ಲಕ್ಷದಾಸಬೋಧ— ಮುಸೂರಿನ ಬ್ರಹ್ಮಚಾರಿ ಆಶ್ರಮದ ವಿನಾಯಕ ಮಹಾರಾಜರವರು ದಾಸಬೋಧ ಗ್ರಂಥದ ೧ ಲಕ್ಷ ಪ್ರತಿಗಳನ್ನು ಧರ್ಮಪ್ರಸಾರಕ್ಕಾಗಿ ಉಚಿತವಾಗಿ ಹಂಚುವ ಸಂಕಲ್ಪ ಮಾಡಿದ್ದರಷ್ಟೇ. ಅದರಲ್ಲಿ ೫ ಸಾವಿರ ಪ್ರತಿಗಳನ್ನು ಈಗ ಹಂಚಿರುವರು. ಒಂದು ಪ್ರತಿಯನ್ನು ನಮಗೆ ಕಳಿಸಿರುವರು. ಅದನ್ನು ನಾವು ವಂದನೆಪೂರ್ವಕವಾಗಿ ಸ್ವೀಕರಿಸಿರುವೆವು. ಪ್ರತಿಗಳು ಚಿತ್ತಾಕರ್ಷಕವಾಗಿ ಮುದ್ರಿಸಲ್ಪಟ್ಟಿವೆ. ಸಮರ್ಥ ಶ್ರೀ ರಾಮದಾಸ ಚಿತ್ರವು ಕೊಡಲ್ಪಟ್ಟಿದೆ.

Volunteer— August issue Edited and published by— Dr Hardiker, 'Volunteer' Office, Hubli. Annual Subscription including postage Rs 3-0-0 only

ಪತ್ರಸ್ವೀಕಾರ.

ಶ್ರೀ॥ ದತ್ತಾತ್ರಯ ರಾಮಚಂದ್ರ ಕೇಳಕರ ಹಳಿಯಾಳ—ತಡವಾಗಿ ಕೈ ಸೇರಿತು. ಈ ಸಂಚಿಕೆಯಲ್ಲಿ ಪ್ರಕಟಿಸಲು ಅಸಾಧ್ಯ.

ಶ್ರೀ॥ ಶ್ರೀನಿವಾಸ ಕೃಷ್ಣರಾವ ನಾಯಕ ಕಡವಾಡ—ಮುಂದಿನ ಸಂಚಿಕೆಯಲ್ಲಿ ತಪ್ಪದೆ ಮುದ್ರಿಸಲ್ಪಡುವದು.

'Looker-on'— Rather overdone Not necessary; hence not published. Excuse.

ಹೊನ್ನಾವರ— ಈ ವರೆಗೆ ಮಳೆ ಚೆನ್ನಾಗಿ ಬಿದ್ದಿತು. ಬೆಳೆ ಕೆಡಲಿಲ್ಲ. ಈ ವರೆಗೆ ಬಿದ್ದ ಮಳೆ ೧೦೭ ಇಂಚು ಆಯಿತು.

ಜ್ವರ ಮತ್ತು ಹೊಟ್ಟೆಬೇನೆಯು ಹೆಚ್ಚಾಗುತ್ತ ನಡೆದದೆ. ಆಸ್ಪತ್ರಿಯಲ್ಲಿ ಜನರು ತೆರಪಿಲ್ಲದೆ ಬರುತ್ತಲಿದ್ದಾರೆ. ಪ್ರತಿ ದಿವಸ ಒಂದೆರಡು ಮರಣಗಳು ಇದ್ದೇ ಇವೆ. ಬಾಲಕರ ಸಂಖ್ಯೆಯೇ ಹೆಚ್ಚು. ಕ್ಷಯ ಸಂವತ್ಸರದ ಫಲವೋ ಏನೋ, ದೇವರೇ ಬಲ್ಲ!

ಮೇಲಿನ ಪೇಟೆಯಲ್ಲಿ ವೈಶ್ಯ ಜಾತಿಯ ಹೆಂಗಸೊಬ್ಬಳು ರಾತ್ರಿ ಸಮಯ ಮನೆ ಸಮೀಪದಲ್ಲಿದ್ದ ಬಾವಿಯಲ್ಲಿ ಹಾರಿ ಪ್ರಾಣ ಕಳಕೊಂಡಳು. ಮರು ದಿವಸ ಪೋಲೀಸರು ಪಂಚನಾಮೆ ಮಾಡಿ ಬಿಟ್ಟುಕೊಟ್ಟರು. ಬಾವಿಯಲ್ಲಿ ಹಾರಿ ಪ್ರಾಣಬಿಟ್ಟ ಕಾರಣವು ಯಾರಿಗೂ ತಿಳಿಯಲಿಲ್ಲ.

ಮಂಕಿ ಫೋರೆಸ್ಟ ನಾಕೆಯ ಸಮೀಪದ ಬಾವಿಯಲ್ಲಿ ಒಬ್ಬ ಸೊನಗಾರನಿಗೆ ಕೊಂದು ಹಾಕಿದ್ದಾರೆ. ಪೋಲೀಸ ತಪಾಸ ನಡೆದದೆ.

ಸಿರಸಿ— ಕಳೆದ ೧೦ನೇ ತಾರೀಖಿನ ದಿವಸ ಇಡೀ ತಾಲೂಕಿನ ಪರಿಯಿಂದ ಕೂಡಿದ ಸಾರ್ವಜನಿಕ ಸಭೆಯಲ್ಲಿ ಲೋಕಲ್ ಫಂಡನ್ನು ಏರಿಸಬಾರದೆಂಬ ಠರಾವು ಸರ್ವಾನುಮತದಿಂದ ಮಂಜೂರಾಗಿರುತ್ತದೆ.

ಆಸಾಮದ ಚಹಾದ ತೋಟಗಳಲ್ಲಿ ದುಡಿಯಲು ಕೂಲಿಕಾರರನ್ನು ಪೂರೈಸುವದಕ್ಕಾಗಿ ಇಬ್ಬರು ಏಜಂಟರು ಬಂದಿರುವರು. ಹಳಿಯಾಳದ ಕಡೆಯಿಂದ ೧೦-೧೨ ಜನರನ್ನು ತಂದದ್ದು, ಹೆಚ್ಚು ಜನರನ್ನು ಕೂಡಿಸುವ ಪ್ರಯತ್ನ ನಡೆದಿದೆ. ಕೂಲಿಕಾರರು ಅತಿ ಥಂಡಿಯ ಈ ವಿಪರೀತ ಮಳೆ ಬೀಳುವ ಆ ಪ್ರಾಂತಕ್ಕೆ ಹೋಗಿ ಸಹಿಸಬೇಕಾಗುವಂಥ ಕಷ್ಟಪರಂಪರೆಯನ್ನು ವರ್ಣಿಸಿ ತೀರುವಂತಿಲ್ಲ. ಇಲ್ಲಿಂದ ಕರಕೊಂಡು ಹೋಗುವಾಗ ಮದುಮಗನಂತೆ ಒಯ್ದರೂ, ಅಲ್ಲಿಗೆ ಹೋದ ಮೇಲೆ, ಗುಲಾಮನಿಗಿಂತಲೂ ಕಡೆಯಂತೆ! ಅದ್ದರಿಂದಲೇ ಅಲ್ಲಿ ಆಸಾಮಿ ಕೂಲಿಕಾರರು ಸಿಗುವದು ಕಠಿಣವಾಗಿದ್ದು, ಇಷ್ಟು ದೂರಿಂದ ಅವರನ್ನು ಒಯ್ಯಬೇಕಾಗಿದೆ. ಇನ್ನೊಂದು ಸೋಜಿಗವೇನಂದರೆ, ತಾಮಸೀ ವೃತ್ತಿಯವರೂ, ಸ್ವಭಾವತಃ ಕುಲುಮೆಗೆ ಬಳಗಾದವರೂ ಆದ ಮುಸಲ್ಮಾನರು ಅವರಿಗೆ ಬೇಡವಂತೆ! ಸಾತ್ವಿಕ ಸ್ವಭಾವದವರೂ, ಬಗ್ಗಿಸಿದಂತೆ ಬಗ್ಗುವವರೂ ಆದ ಹಿಂದೂ ಕೂಲಿಕಾರರೇ ಅವರಿಗೆ ಬೇಕಂತೆ! ಏಜಂಟರು ಬಂದಿರುವದರಿಂದ ಇಲ್ಲಿ ಗಡಬಡಿ ಎದ್ದಿದೆ. ಕಾರಣ, ಕೂಲಿಕಾರರಾಗಿ ಅಲ್ಲಿಗೆ ಅವರ ಜೊತೆಗೆ ಮರುಳಾಗಿ ಹೋಗುವವರು ಮುಂಚೆ ತವಾಗಿಯೇ ಪೂರ್ಣ ವಿಚಾರ ಮಾಡತಕ್ಕದ್ದು. ಇಲ್ಲದಿದ್ದರೆ, ಮುಂದೆ ಪಶ್ಚಾತ್ತಾಪಕ್ಕೆ ಕಾರಣವಾಗಬಹುದು.

ಸಿದ್ದಾಪುರ— ಮಳೆಯು ಈ ವರೆಗೆ ೯೦—೯೫ ಇಂಚು ಬಿದ್ದಿದೆ. ಮಧ್ಯಾಹ್ನದಲ್ಲಿ ಒಮ್ಮೆ ಬಿಸಿಲು; ಮತ್ತೆ ರಾತ್ರಿಯಲ್ಲೇ ಮಳೆಯು ಬೀಳಲು ಪ್ರಾರಂಭಿಸಿದೆ. ಹೀಗಾದ್ದರಿಂದ ಅಲ್ಲಲ್ಲಿ ಕೊಳೆ ರೋಗವು ತಲೆದೋರಹತ್ತಿದೆ.

ಈ ವರ್ಷ ಈ ತಾಲೂಕಿನಲ್ಲಿ ಕೊಳೆ ರೋಗದ ಸಂಬಂಧ ಸುಮಾರು ೨೦೦ ಎಕ್ರೆ ತೋಟಕ್ಕೆ ಕೊಳೆ ಔಷಧಿ ದ್ರಾವಣ ಹಾಕಿಸಿದರಂತೆ!

ಪುಣೆಯಲ್ಲಿ ನಡೆಯುವ ಕೃಷಿ ಪ್ರದರ್ಶನಕ್ಕೆ ಇಲ್ಲಿಂದ ಸುಪಾರಿ, ಭತ್ತ, ಬೆಲ್ಲ ವಗೈರೆ ಸಾಮಾನುಗಳು ಹೋಗಿವೆ.

ಹೊಟ್ಟೆಬೇನೆಯ ಉಪದ್ರವವು ಶಹರದಲ್ಲಿ ತಲೆದೋರಹತ್ತಿದೆ. ಒಂದೆರಡು ಮರಣಗಳೂ ಆದವು.

ಹೆಂಡ್ತಿಯನ್ನು ಕೊಂದ ಖೂನಿ ಪ್ರಕರಣದ ಸುಬ್ಬಾ ಭಟ್ಟನಿಗೆ ಸೆಶನ್ಸ ಜಡ್ಜರು ೧೪ ವರ್ಷ ಶಿಕ್ಷೆ ವಿಧಿಸಿರುವರು. ಹೈಕೋರ್ಟಿಗೆ ಅಪೀಲಾಗುವದಿದೆ.

ಇಲ್ಲಿಯ ತಾ. ಲೋ. ಬೋ. ಸಭೆಯು, ಲೋಕಲ್ ಫಂಡನ್ನು ಏರಿಸಬೇಕೋ, ಬೇಡವೆಂಬ ಬಗ್ಗೆ ತಾರೀಖು ೩—೮—೨೩ ನೇ ದಿವಸ ಕೂಡಿತ್ತು. ಆದರೆ, ಬಹುಮತವು ಲೋಕಲ್ ಫಂಡಿನ ಕರವನ್ನು ಏರಿಸಬಾರದೆಂದು ಅಭಿಪ್ರಾಯಪಟ್ಟದ್ದರಿಂದ, ಅದರಂತೆ ಸರ್ವಾನುಮತದಿಂದ ಠರಾವು ಆಗಿರುವದು. ಜಿ. ಲೋ. ಬೋರ್ಡಿನ ಎಲ್ಲ ಮೆಂಬರರೂ, ಈ ವಿಷಯವನ್ನು ಚನ್ನಾಗಿ ವಿಚಾರಿಸಿ, ಮುಂದಿನ ಸಭೆಯಲ್ಲಿ ಬಹುಮತದಂತೆ ಠರಾವು ಮಾಡ್ಯಾರೆಂದು ನಂಬಿಕೆ.

ಕಾರವಾರ— ಮಳೆಯು ಸರಿಯಾಗಿ ಬೀಳುತ್ತದೆ.

ಬೆಳಗಾವಿಯಿಂದ ಹಳಿಯಾಳ ಮಾರ್ಗವಾಗಿ ಕಾರವಾರದವರೆಗೆ ಒಂದು ಮೋಟಾರ ಸರ್ವೀಸು ಪ್ರಾರಂಭವಾಗಲಿರುವದೆಂದು ತಿಳಿಯುತ್ತದೆ.

ತಾರೀಖು ೧೦-೮-೧೯೨೩ ನೇಗೆ ಇಲ್ಲಿಯ ಸಹಕಾರಿ ಸಂಘದ ಮೇಲುಪ್ಪರಿಗೆಯ ಮೇಲೆ ಒಂದು ಸಭೆಯಾಗಿ, ಕರ್ನಾಟಕ ಪ್ರಾಂತಿಕ ಸಹಕಾರಿ ಪರಿಷತ್ತನ್ನೊಂದು ಸೇರಿಸಬೇಕಾಗಿ ತೀರ್ಮಾನವಾಗಿರುವದು. ಸ್ವಾಗತ ಕಮಿಟಿಯ ಅಧ್ಯಕ್ಷಸ್ಥಾನವು ಕುಮಟೆಯ ಸಹಕಾರಿಗಳಾದ ರಾ| ಬ| ಕಲ್ಯಾಣಪುರಕರರವರಿಗೆ ಕೊಡಲ್ಪಟ್ಟಿದೆ. ಪುಣೆಯ ದೊಡ್ಡ ಸಹಕಾರಿಗಳಾದ ರಾ| ಗೋಖಲೆಯವರ ದೇವಧರರವರು ಪರಿಷತ್ತಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವರು. ರಾ| ಗೌಡಪ್ಪ ಮಂಗೇಶರಾಯರ ನೇತೃತ್ವದಲ್ಲಿ ಕಾರ್ಯಕ್ಕಾಗಿ ಕಮೀಟಿಯೊಂದು ನೇಮಿಸಲ್ಪಟ್ಟಿದೆ. ಪರಿಷತ್ತು ನಾತಾಳದ ಹಬ್ಬದಲ್ಲಿ ನೆರೆಯಲಿಕ್ಕಿದೆ.

ಅಲ್ಲಿಯ ಕೋಡಿಬಾಗ ಗ್ರಾಮದ ಪ್ರಸಿದ್ಧ ನಿವಾಸಿಕರಾದ ರಾಮಚಂದ್ರ ಯಶವಂತರಾವ ಬೋರ್ಕರರವರು ಕಳೆದ ೩ ನೇ ತಾರೀಖಿಗೆ ಮಧುಮೇಹ ವಿಕಾರದಿಂದ ಜಂಜೀರಾ ಸಂಸ್ಥಾನದಲ್ಲಿ ದಿವಂಗತರಾದರು. ರಾ|| ಬೋ|| ರವರು ಶಿಕ್ಷಣ ಮುಗಿಸಿದ ಬಳಿಕ ಅಲ್ಲಿಯ ಸರಕಾರಿ ಹೈಸ್ಕೂಲಿನಲ್ಲಿ ಶಿಕ್ಷಕರಿದ್ದರು. ಅಲ್ಲಿಂದ ಅವರು ಮುಲ್ಕೀ ಖಾತೆಯಲ್ಲಿ ಸೇರಿ, ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರರ ವರೆಗೆ ಏರಿ ಹೋದರು. ಅತ್ತ ಮೂರು ವರ್ಷಗಳಿಂದ ರಾ| ಬೋರಕರರು ಜಂಜೀರಾ ಸಂಸ್ಥಾನದಲ್ಲಿ ದಿವಾನರಾಗಿ ದುಡಿಯುತ್ತಿದ್ದರು. ಮೃತಾತ್ಮನಿಗೆ ಪರಮಾತ್ಮನು ಸದ್ಗತಿಯನ್ನೀಯಲಿ.

ಗೋಕರ್ಣದ ಖೂನಿ ಪ್ರಕರಣದಲ್ಲಿ ೩ನೇ ಆರೋಪಿಗೆ ಸೆರೆಹಿಡಿದು ತಂದಿರುವರು. ಇನ್ನೊಬ್ಬ ಆರೋಪಿಗೆ ಸೆರೆ ಹಿಡಿಯುವ ವಿಚಾರವಿದೆ. ಖಟ್ಲೆ ವಿಚಾರವು ಸಬ್‌ಡಿವ್ಹಿಜನ್ ಮ್ಯಾಜಿಸ್ಟ್ರೇಟರಾದ ರಾ| ದಿವೇಕರರವರಲ್ಲಿ ನಡೆಯುವದಿದೆ.

ಹೈಸ್ಕೂಲಿನಿಂದ ಬಂದರದ ವರೆಗಿನ ಮಾರ್ಗದ ಮೇಲೆ ರೋಲು ಎಳೆಯುದೆ. ಅತ್ಯಾತುರದ ಕಾರ್ಯವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಲಕ್ಷ ಕೊಡಬೇಕು.

ಚೆಗ್ಗೆ ಸರಕಾರಿ ಸಂಘದ ಆಯುರ್ವೇದಗಳ ಮೇಲೆ ನಡೆದ ಖಟ್ಲೆಯಲ್ಲಿ ಸೆಕ್ರೆಟರಿಗೆ ಎರಡು ತಿಂಗಳ ಸಕ್ತ ಮಜೂರಿ ಶಿಕ್ಷೆಯಾಗಿದೆ. ಜಾಮೀನಿನ ಮೇಲೆ ಬಿಟ್ಟು ಕೊಟ್ಟರು. ಈ ತೀರ್ಪಿನ ಮೇಲೆ ಅಪೀಲು ಆಗಿರುವದು.

ಯಲ್ಲಾಪುರದ ಎತ್ತಿನ ಕಳುವಿನ ಪ್ರಕರಣದಲ್ಲಿ ಆರೋಪಿಗೆ ಮಾಡಿದ ೫೦ ರೂಪಾಯಿಗಳ ದಂಡದ ಹುಕುಮು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರವರಿಂದ ರದ್ದಾಗಿದೆ.

ರಾ|| ಮಂಕಿಕರರ ಕೋರ್ಟಿನಲ್ಲಿ ಶಿರಸಿಯ ರಾ| ಅನಂತ ವಿಠ್ಠಲ ಗ್ರಾಮೋಪಾಧ್ಯಾಯರು ಇಬ್ಬರು ಒಕ್ಕಲಿಗರ ಮೇಲೆ ಮಾನಹಾನಿಯ ಫಿರ್ಯಾದವನ್ನು ದಾಖಲ ಮಾಡಿದ್ದರು. ಕಳೆದ ವರ್ಷ ಬೇರೆ ಒಕ್ಕಲುಗಳ ಮೇಲೆ ಮಾಡಿದ ಇಂಥ ಫಿರ್ಯಾದಿಗಳು ರಾಜಿಯಿಂದ ನಿಕಾಲೆ ಮಾಡಿಕೊಂಡಿರುವದರಿಂದ ರಾ| ಮಂಕಿಕರರವರು ಫಿರ್ಯಾದಿಯನ್ನು ವಿಚಾರಕ್ಕೆ ಹಿಡಿಯಲಿಲ್ಲ. ಇದ್ಯಾವ ನ್ಯಾಯ?

ವೃತ್ತಸಾರ.

— ಸೂರತ ಜಿಲ್ಲೆಯ ಒಂಭತ್ತು ಶಾಲೆಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶವಿಲ್ಲ. ಅವರಿಗೆ ಪ್ರವೇಶಕೊಡದಿದ್ದರೆ, ಸರಕಾರವು ಸಹಾಯವನ್ನೇ ಕಿತ್ತುಕೊಳ್ಳುವದೆಂದು ಬೆದರಿಕೆ ಹಾಕಿರುವರು. ಅಸ್ಪೃಶ್ಯರಿಗೆ ಸ್ಪೃಶ್ಯರೊಳಗೆ ಸೇರಿಸುವ ಕುರಿತು ಸರಕಾರದ ಆಸ್ಥೆಯನ್ನು ನೋಡಿರಿ!

— ಬರೋಡೆಯ ಶ್ರೀಮಂತ ಸಯಾಜೀರಾವ ಗಾಯಕವಾಡರವರು ಹಿಂದೂ ವಿಶ್ವವಿದ್ಯಾಲಯಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಅರ್ಪಿಸಿರುವರು. ಪುಸ್ತಕಸಂಗ್ರಹಕ್ಕಾಗಿ ಒಂದು ಲಕ್ಷ; ಶಾಸ್ತ್ರೀಯ ಶಿಕ್ಷಣ ಪಡೆಯಲು ಪರದೇಶಗಮನ ಮಾಡುವವರಿಗೆ ಶಿಷ್ಯವೃತ್ತಿ ಕೊಡುವದಕ್ಕಾಗಿ ಒಂದು ಲಕ್ಷ.

— ಹಿಂದೂ ಸಂರಕ್ಷಣ ಸಭೆಯ ಇಬ್ಬ ಸ್ವಯಂಸೇವಕರ ಮೇಲಿನ ಗ್ರಹಚಾರ ನೋಡಿರಿ. ಶೀಲ್ದಾ ಸ್ಟೇಶನಿನ ಮೇಲೆ ಹಿಂದೂ ಹೆಣ್ಣುಮಗಳೊಬ್ಬಳು ಪಾಲಕರಿಗೆ ತಪ್ಪಿ ಹೋಗಿತ್ತು. ಅದಕ್ಕೆ ಸ್ವಯಂಸೇವಕರು ತಾಯಿ-ತಂದೆಗಳ ಸ್ವಾಧೀನಪಡಿಸಲಿದ್ದಾಗ, ಪೋಲೀಸರು ಅವರನ್ನು ಸೆರೆಹಿಡಿದು, ಖಟ್ಲೆ ಹೂಡಿದರು. ನಿರಾಶ್ರಿತ ಹುಡುಗಿಗೆ ನೆರವಾಗಿದ್ದ, ಅವರಿಗೆ ನೆರವಾಗುವವರ ಮೇಲೆ ಖಟ್ಲೆ ಹೂಡಿದ ಪೋಲೀಸ ಅಧಿಕಾರಿಗಳಿಗೆ ಮ್ಯಾಜಿಸ್ಟ್ರೇಟರು ಧಿಕ್ಕರಿಸಿದರು.

— ಸಮ್ಯಕ್ಕೆ ಬಿದ್ದ ಮಳೆಯಿಂದ ಸೂರತ ಹಾಗು ಖಾನದೇಶ ಜಿಲ್ಲೆಗಳಲ್ಲಿ ಹತ್ತಿಯ ಬೆಳೆಯು ಬಹಳ ನಷ್ಟವಾಗಿದೆ. ಇದರಿಂದ ೩ ಲಕ್ಷ ಹತ್ತಿಗಂಟು ಕಡಿಮೆಯಾಗಬಹುದೆಂದು ಜಿಲ್ಲೆಯವರ ಅಂದಾಜು.

— ಮುಂಬಯಿಯ ಮಾಧವಬಾಗದಲ್ಲಿ ಜೈನ ಶ್ವೇತಾಂಬರ ಪರಿಷತ್ತಿನ ವಿಶೇಷ ಅಧಿವೇಶನವು ಸೇರಿ, ಶತ್ರುಂಜಯದ ಯಾತ್ರಿಕರ ಮೇಲೆ ಹೇರಿದ ಕರವನ್ನು ಪಾಲೀತಾಣಾ ದರ್ಬಾರವು ರದ್ದು ಮಾಡಿದ ಹೊರತು, ಶತ್ರುಂಜಯಕ್ಕೆ ಯಾತ್ರೆಗೆ ಹೋಗಬಾರದಾಗಿ ನಿರ್ಧಾರ ಮಾಡಿದರು.

— ಅಖಿಲ ಭಾರತೀಯ ದೇಶಬಂಧುಗಳ ಸ್ಮಾರಕ ನಿಧಿಗೆ ೧,೩೪,೮೧೩ ರೂಪಾಯಿಗಳು ಸಂಗ್ರಹವಾಗಿವೆ.

— ಜೂನ ತಿಂಗಳಲ್ಲಿ ಕರ್ನಾಟಕದಲ್ಲಿ ೩,೧೩೦ ರೂಪಾಯಿಗಳ ಖಾದಿಯ ಉತ್ಪತ್ತಿಯಾಯಿತು; ೬,೫೧೯ ರೂಪಾಯಿಗಳ ಮಾರಾಟವಾಯಿತು.

— ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಸಭೆಯು ಗದಗಿನಲ್ಲಿ ಸೇರಿ, ಆಸಾಮದ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನು ಮದ್ರಾಸದ ಲೋಕನಾಯಕರಾದ ಶ್ರೀನಿವಾಸ ಅಯ್ಯಂಗಾರರಿಗೆ ಅರ್ಪಿಸಬೇಕೆಂದು ಆಸಾಮದ ಸ್ವಾಗತ ಮಂಡಳದವರಿಗೆ ಶಿಫಾರಸು ಮಾಡಿರುವರು.

— ವಿಲಾಯತಿಯೊಳಗಿನ ಸಹಾಯಕ ಭಾರತ ಮಂತ್ರಿಗಳಾದ, ವಿಂಟರಟನ್ ಲಾರ್ಡರವರು ಜುಲೈದಲ್ಲಿ ಹಿಂದುಸ್ಥಾನಕ್ಕೆ ಬರಲಿರುವರು.

— ಪಂಜಾಬು ಕೊಂಗ್ರೆಸ ಕಮಿಟಿಯವರು ರಾಯಬಹಾದ್ದೂರ ಹುಕ್ಕಿಸೋಹನಲಾಲರವರಿಗೆ ಕೊಂಗ್ರೆಸ ಉಮೇದವಾರರಾಗಿ ನೇಮಿಸಿದ್ದರು. ರಾಯಬಹಾದ್ದೂರರು ಪಂಜಾಬು ಅತ್ಯಾಚಾರದ ಸರ್ ಮೈಕೇಲ ಒಡ್ವಾಯರರವರಿಗೆ ಮಾನಪತ್ರ ಕೊಟ್ಟವರೊಳ್ಳಬ್ಬರೆಂದು, ಕಮಿಟಿಯ ಕೆಲ ಸಭಾಸದರು ವಿಶೇಷ ಸಭೆಯನ್ನು ಸೇರಿಸಿದರು. ರಾಯಬಹಾದ್ದೂರರು ಪಂಜಾಬು ಪ್ರಜೆಗಳೊಡನೆ ಕ್ಷಮಾಯಾಚನೆ ಮಾಡಬೇಕಾಗಿಯೂ, ರಾಯಬಹಾದ್ದೂರಿಯನ್ನು ತ್ಯಜಿಸಬೇಕಾಗಿಯೂ ಅದರ ವರೆಗೆ ಕೊಂಗ್ರೆಸ ಕಮಿಟಿಯು ಅವರಿಗೆ ನೆರವಾಗಬಾರದೆಂದೂ ತೀರ್ಮಾನವಾಗಿದೆ.

— ಸಿಂಧ ಪ್ರಾಂತದ ಪ್ರಖ್ಯಾತ ಮಹಮ್ಮದೀಯ ಲೋಕನಾಯಕರಾದ, ಪೀರ ಗುಲಾಮ ಮುಜಾದೀದರವರಿಗೆ, ಸರಕಾರಿ ಅಧಿಕಾರಿಗಳಿಗೆ ಸರಕಾರಿ ಕೆಲಸ ಮಾಡುವಾಗ ಅಡಚಣೆಪಡಿಸಿದ ಅಪರಾಧಕ್ಕಾಗಿ, ೪೫೦ ರೂಪಾಯಿ ದಂಡವಾಗಿದೆ. ಹೈದ್ರಾಬಾದದ ನಾಗರಿಕರು ಈ ನಿರ್ಣಯವನ್ನು ನಿಷೇಧಿಸಿರುವರು.

— ಪಂಡಿತ ಮಾಲವೀಯರವರು ನಾಗಪುರಕ್ಕೆ ಹೋದಾಗ, ಅಲ್ಲಿಯ ಮುನಿಸಿಪಾಲಿಟಿಯವರು ಅವರಿಗೆ ಮಾನಪತ್ರವನ್ನು ಸಮರ್ಪಿಸಿದರು. ಸಿಮ್ಲಾದೊಳಗಿನ ಶಾಸ್ತ್ರಕಾರಿಯ ಕೌನ್ಸಿಲಿನ ಸಭಾಸದರು ಪಂಡಿತ ಮಾಲವೀಯರವರ ಮೇಲಿನ ಖಟ್ಲೆಯನ್ನು ಹಿಂದೆಗೆದುಕೊಳ್ಳಲು ಸರ್ವಾಧಿಕಾರಿಗೆ ಬಿನ್ನೈಸಲಿರುವರು. ಬಂಗಾಲ ಸರಕಾರವು ಪಂಡಿತ ಮಾಲವೀಯರವರಿಗೆ ಕಲಕತ್ತೆಯಲ್ಲಿ ಕಾಲಿಡಗೊಡಬಾರದಿತ್ತೆಂದೂ, ಬಂಗಾಲ ಪ್ರಾಂತದ ಹೊರಗಿರುವಾಗಲೇ ಅವರಿಗೆ ಸ್ಟೇಶನಿನಲ್ಲಿ ಇಳಿಸಿಕೊಂಡು ಬೇರೆ ಕಡೆಗೆ ಒಯ್ದು ಹುಗಳಿ ನದಿಯ ಮೇಲೆ ಕಳ್ಳಿಸಿ ಕಳಿಸಬೇಕಾಗಿತ್ತೆಂದೂ 'ಇಂಡಿಯನ ಡೈಲಿ ನ್ಯೂಸ್' ಪತ್ರಿಕೆಯು ಸೂಚಿಸಿರುವದು. ಮಾಲವೀಯರವರಿಗೆ ಪ್ರವೇಶಕೊಟ್ಟದ್ದರಿಂದ, ಸರಕಾರದ ಪ್ರತಿಷ್ಠೆಯು ಕುಗ್ಗಿತೆಂದು 'ಡೈಲಿ ನ್ಯೂಸ್' ಕತರ ಹೇಳಿಕೆ. ಇಷ್ಟು ಅಡಿ ಕೋಳಿ ಬೇರೆ ಹೋಯಿತು! ಮಾಲವೀಯರವರು ನಾಗಪೂರದ ಪ್ರಾಂತಾಧಿಪರೊಡನೆ ಎರಡು ತಾಸು ಮಾತಾಡಿದರಂತೆ. ಸಂಭಾಷಣೆ ವಿಷಯವು ಖಾಸಗಿಯಾಗಿತ್ತೆಂದು ಹೇಳುತ್ತಾರೆ.

— ರತ್ನಾಗಿರಿ ತಾಲೂಕಿನೊಳಗಿನ ಎರಳ ಗ್ರಾಮದ ರಾಮಚಂದ್ರ ಗೋವಿಂದ ಭಾಗವತರವರು ಜುಲೈ ೨೦ ನೇ ತಾರೀಖಿಗೆ ಕೈಲಾಸವಾಸಿಗಳಾದರು. ಪರಲೋಕಗಮನ ಕಾಲಕ್ಕೆ ಇವರ ವಯಸ್ಸು ೧೦೭ ಇತ್ತು.

ಮಹಾತ್ಮರ ಆತ್ಮಚರಿತ್ರ.

(೧೨) ಭಾರತೀಯರೊಡನೆ ಸ್ನೇಹಬೆಳವಣಿಗೆ.

ಕ್ರೈಸ್ತ ಬಾಂಧವರೊಡನೆ ನಡೆದ ಸಹವಾಸದ ಹಕೀಕತನ್ನು ಮುಂದರಿಸುವ ಮುಂಚೆ ಆ ಕಾಲದ ಇನ್ನು ಕೆಲವು ಅನುಭವಗಳನ್ನು ನಾನು ನಮೂದಿಸಬೇಕಾಗಿದೆ. ನಾತಾಲದ ದಾದಾ ಅಬ್ದುಲ್ಲಾರವರಿಗೆ ನಾತಾಲದಲ್ಲಿ ಮುನ್ನೆ ಇದ್ದಂತೆಯೇ, ಶೇಟ ತಯ್ಯಬ ಹಾಜೀಖಾನ ಮಹಮ್ಮದರವರಿಗೆ ಪ್ರಿಟೋರಿಯಾದಲ್ಲಿ ಮನ್ನಣೆಯಿತ್ತು. ಪ್ರತಿಯೊಂದು ಸಾರ್ವಜನಿಕ ಕಾರ್ಯದಲ್ಲಿಯೂ ಅವರು ಇದ್ದೇ ಇರುತ್ತಿದ್ದರು. ಮೊದಲಿನ ವಾರದಲ್ಲಿಯೇ ನನಗೆ ಅವರ ಪರಿಚಯವಾಯಿತು. ಪ್ರಿಟೋರಿಯಾದೊಳಗಿನ ಪ್ರತಿಯೊಬ್ಬ ಭಾರತೀಯರ ಪರಿಚಯವಾಗಬೇಕೆಂದು ನಾನು ಮಾಡಿಕೊಳ್ಳಬಯಸುತ್ತೇನೆಂದು ಅವರಿಗೆ ನಾನು ಹೇಳಿದೆನು. ಅಲ್ಲಿಯ ಭಾರತೀಯರ ಸ್ಥಿತಿಗತಿಯನ್ನು ನಾನು ಅಭ್ಯಸಿಸಬಯಸುತ್ತೇನಾಗಿಯೂ ಅದಕ್ಕಾಗಿ ನನಗೆ ಸಹಾಯ ಬೇಕಾಗಿಯೂ ನಾನು ಹೇಳಿದೆನು. ಅದಕ್ಕವರು ಸಂತೋಷದಿಂದ ಒಪ್ಪಿಕೊಂಡರು.

ಮೊಟ್ಟಮೊದಲು, ಪ್ರಿಟೋರಿಯಾದೊಳಗಿನ ಸಮಸ್ತ ಭಾರತೀಯರ ಸಭೆ ಸೇರಿಸಿ ಟ್ರಾನ್ಸವಾಲದೊಳಗಿನ ಅವರ ಸ್ಥಿತಿಗತಿಯ ಚಿತ್ರವನ್ನು ಅವರಿಗೆ ತೋರಿಸಬೇಕೆಂದು [illegible] ಮುಸಲ್ಮಾನ ವರ್ತಕರ [illegible] ನನಗೆ ಮಾಡಿಕೊಡಲ್ಪಟ್ಟಿತು. [illegible] ಸಭೆಗೆ [illegible] ಹಿಂದೂಗಳು ಇದ್ದರು. [illegible] ಹಿಂದೂ ಧರ್ಮದವರು ಇದ್ದದ್ದೇ ತೀರ ಕಡಿಮೆ.

ಈ ಸಭೆಯಲ್ಲಿ ನಾನು ಮಾಡಿದ ಭಾಷಣವು ನನ್ನ ಮೊದಲನೇ ಸಾರ್ವಜನಿಕ ಭಾಷಣವೆಂದು ಹೇಳಬಹುದು. ವ್ಯಾಪಾರದಲ್ಲಿ ಸತ್ಯವನ್ನು ಪಾಲಿಸಬೇಕೆಂಬ ವಿಷಯವನ್ನು ಕುರಿತು ನಾನು ಮಾತಾಡಿದೆನು. [illegible] ವ್ಯಾಪಾರದಲ್ಲಿ ಸತ್ಯಪಾಲನ ಮಾಡುವದು ಶಕ್ಯವಿಲ್ಲೆಂದು ಹೇಳಿದ್ದನ್ನು ನಾನು ಕೇಳಿದ್ದೆ. [illegible] ಆದರೆ ನಾನು ಅದನ್ನು ನಂಬುತ್ತಿಲ್ಲ [illegible] ವ್ಯಾಪಾರ ಪರಸ್ಪರ ವಿರೋಧ [illegible] ನನ್ನ ಅನೇಕ ವರ್ತಕ ಮಿತ್ರರು [illegible] ವ್ಯಾಪಾರವೇ ವ್ಯವಹಾರ [illegible] ಸತ್ಯವು ಧರ್ಮದ [illegible] ಸತ್ಯವನ್ನು ಅನುಸರಿಸಿ ವ್ಯಾಪಾರ ನಡಿಸುವದು ಶಕ್ಯ [illegible] ವರ್ತಕರ [illegible] ನನ್ನ ಭಾಷಣದಲ್ಲಿ ಈ ವಿಚಾರಸರಣಿಯನ್ನು ನಾನು ಸ್ಪಷ್ಟವಾಗಿ ಖಂಡಿಸಿ, ವರ್ತಕರಲ್ಲಿ ಕರ್ತವ್ಯಜ್ಞಾನದ ಸ್ಮರಣೆ ಮಾಡಿದೆನು. [illegible] ಪರದೇಶದಲ್ಲಿ ಸತ್ಯದ ಜವಾಬುದಾರಿಯು ಅವರ ಮೇಲೆ ಹೆಚ್ಚಾಗಿರುವದೆಂದೂ ನಾನು ಹೇಳಿದೆನು. ಕಾರಣವೇನಂದರೆ, ಇಲ್ಲಿಯ ವರ್ತಕರ ವರ್ತನೆಯ ಮೇಲಿಂದಲೇ ಹಿಂದುಸ್ಥಾನ ದೇಶದೊಳಗಿನ ಕೋಟ್ಯಾವಧಿ ದೇಶಬಾಂಧವರ ಸ್ವರೂಪವು ಅಳೆಯಲ್ಪಡುತ್ತದೆ.

ನಮ್ಮ ದೇಶಬಾಂಧವರ ನಡಾವಳಿಯು ಸುತ್ತಲಿನ ಇಂಗ್ಲಿಷರ ನಡಾವಳಿಗೆ ಹೋಲಿಸಿದರೆ ತೀರ ಹೊಲಸಾಗಿತ್ತು. ಇತ್ತ ಲಕ್ಷ ಕೊಡಲೆಂದ ನಾನು ಹೇಳಿದೆನು. ಹಿಂದೂ ಮುಸಲ್ಮಾನ-ಪಾರಸೀ-ಕ್ರೈಸ್ತ-ಗುಜರಾತೀ-ಮದ್ರಾಸಿ-ಪಂಜಾಬಿ ಸಿಂಧಿ-ಕಚ್ಛೀ-ಸುರತೀ ಮುಂತಾದ ಭೇದಗಳನ್ನು ಅಲ್ಲಿ ಮರೆತು ಒಕ್ಕಟ್ಟಿನಿಂದಿರುವದು ಯುಕ್ತವೆಂದೂ ನಾನು ಪ್ರತಿಪಾದಿಸಿದೆನು.

ಭಾಷಣವನ್ನು ಸಮಾರೋಪ ಮಾಡುವಾಗ ಅಲ್ಲಿ ಒಂದು ಸಂಘವ[illegible] ಸ್ಥಾಪಿಸಿ ಭಾರತೀಯರ ಕಷ್ಟಗಳನ್ನು ಅಧಿಕಾರಿಗಳ [illegible] ಅರ್ಜಿಗಳನ್ನು ಸಲ್ಲಿಸಲು ಉಪಾಯಯೋಜನೆ ಮಾಡಬೇಕಾಗಿದೆ [illegible] ಶಕ್ಯವಿದ್ದ ಮಟ್ಟಿಗೆ ನಾನು [illegible] ವಹಿಸುತ್ತೇನೆ [illegible] ಮೇಲೆ ಚಲೋ ಅಭಿಪ್ರಾಯ ಬಿದ್ದಂತೆ ತೋರಿತು.

ನನ್ನ ಭಾಷಣವಾದ ಬಳಿಕ ಸಭೆಯಲ್ಲಿ [illegible] ನನಗೆ ಉತ್ತೇಜನ [illegible] ಇಂಗ್ಲಿಷ ಜ್ಞಾನ [illegible] ತೀರ ಕಡಿಮೆ [illegible] [illegible]

[illegible]

[illegible] ಸಭೆಯಿಂದ ಒದಗಿದ ಪರಿಣಾಮ ನೋಡಿ ನನಗಾದ [illegible] [illegible] ಉತ್ತೇಜನ [illegible] ಪ್ರಿಟೋರಿಯಾದೊಳಗಿನ ಪ್ರತಿಯೊಬ್ಬ ಭಾರತೀಯನ ಪರಿಚಯವು ನನಗಾಯಿತು. ಪ್ರತಿಯೊಬ್ಬನ ಸ್ಥಿತಿಗತಿಯೂ ನನಗೆ ತಿಳಿಯಿತು. ಇದರಿಂದ ನನಗೆ ಉತ್ತೇಜನ ದೊರೆಯಿತು. ಪ್ರಿಟೋರಿಯಾದೊಳಗಿನ ಬ್ರಿಟಿಶ ಏಜಂಟರ [illegible] ಪರಿಚಯವನ್ನು ನಾನು ಮಾಡಿಕೊಂಡೆ. ಅವರಿಗೆ ಭಾರತೀಯರ ಬಗ್ಗೆ ಸಹಾನುಭೂತಿಯಿತ್ತು. ಆದರೆ, ಅವರ ವಜನಿಗೆ ಅಲ್ಲಿ ಅಷ್ಟು ಮನ್ನಣೆ ಇದ್ದಿಲ್ಲ. ಆದರೂ [illegible] ಸಹಾಯವನ್ನು ನನಗೆ ಮಾಡುತ್ತೇವೆ [illegible] ನನಗೆ ಆಗಿಂದಾಗ ಭೆಟ್ಟಿಯಾಗಲು ಹೇಳಿದರು.

ಬಳಿಕ ನಾನು ರೇಲ್ವೆಯ ಅಧಿಕಾರಿಗಳೊಡನೆ [illegible] ಪತ್ರವ್ಯವಹಾರ ನಡಿಸಿದೆನು. ಮತ್ತು ಅವರ ಕಾಯಿದೆಗಳಂತೆ ವಿಚಾರ ಮಾಡಿದರೂ ಭಾರತೀಯರ ಮೇಲೆ ಹೊರಿಸಿದ ಪ್ರತಿಬಂಧಗಳು ಅಸಮರ್ಥನೀಯವೆಂದು ನಾನು ತಿಳಿಸಿಕೊಟ್ಟೆನು. ಯೋಗ್ಯವಾಗ ಉಡಿಗೆ-ತೊಡಿಗೆಗಳನ್ನು ಧರಿಸಿದವರಿಗೆ ೧-೨ನೇ ವರ್ಗಗಳ ಟಿಕೀಟುಗಳು ಕೊಡಲ್ಪಡುವವೆಂದು ಅವರಿಂದ ನನಗೆ ಉತ್ತರ ಬಂತು. ಯೋಗ್ಯವಾದ ಉಡಪು ಧರಿಸಿದವರ್ಯಾರೆಂಬ [illegible] ಕೆಲಸವು ಅಲ್ಲಿಯ ಸ್ಟೇಶನ್ ಮಾಸ್ತರರಿಗೆ ಒಪ್ಪಿಸಿದ್ದರಿಂದ ಇದರಿಂದ ತಕ್ಕ ಫಲಪ್ರಾಪ್ತಿಯಾಗಲಿಲ್ಲ.

ಬ್ರಿಟಿಶ ಏಜಂಟರು ಭಾರತೀಯರ ಅವಸ್ಥೆಯ ಕುರಿತು ಕೆಲವು ಕಾಗದ ಪತ್ರಗಳನ್ನು ತೋರಿಸಿದರು. ಅದೇ ಪ್ರಕಾರದ ಕೆಲವು ಕಾಗದ ಪತ್ರಗಳನ್ನು ತಯ್ಯಬಶೇಟರು ನನಗೆ ಕೊಟ್ಟರು. ಒರೆಂಜ ಫ್ರೀ ಸ್ಟೇಟದೊಳಗಿಂದ ಭಾರತೀಯರನ್ನು ಕ್ರೂರತನದಿಂದ ದೇಶಾಂತರಕ್ಕೆ ಓಡಿಸಿದ ಹಕೀಕತು ಅವುಗಳಲ್ಲಿ ಪ್ರತಿಬಿಂಬಿತವಾಗಿತ್ತು.

ತಾತ್ಪರ್ಯವೇನಂದರೆ ಪ್ರಿಟೋರಿಯಾದಲ್ಲಿ ಉಳಕೊಂಡಿದ್ದರಿಂದ ಟ್ರಾನ್ಸವಾಲ ಹಾಗು ಒರೆಂಜ ಫ್ರೀ ಸ್ಟೇಟದೊಳಗಿನ ಭಾರತೀಯರ ಸಾಮಾಜಿಕ ಆರ್ಥಿಕ ಹಾಗು ರಾಜಕೀಯ ಸ್ಥಿತಿಯನ್ನು ಆಳವಾಗಿ ಶೋಧಿಸಲು ಅನುಕೂಲವಾಯಿತು. ಈ ಶೋಧದ ನನಗೆ ಉಪಯೋಗವಾಗಿ [illegible] ಎಂದು [illegible] ನನಗೆ ಕಲ್ಪನೆ ಕೂಡ ಇದ್ದಿಲ್ಲ. ಕಾರಣವೇನೆ? ವರ್ಷ [illegible] ಮುಗಿದ ಕೂಡಲೆ ಅಥವಾ ವರ್ಷ [illegible] ಮುಗಿಯುವ ಮುಂಚೆಯೇ ಸ್ವದೇಶಕ್ಕೆ ಮರಳಿಬರ[illegible] ಕಲ್ಪನೆ [illegible] ಈಶ್ವರೇಚ್ಛೆಯೇ ಬೇರಿತ್ತು.

ನೋಟೀಸು.

ಈ ಕೆಳಗೆ ಕಾಣಿಸಿದ ನಮ್ಮ ಬ್ಯಾಂಕಿನ ಶ್ಯಾರು [illegible] ಈ ತಾರೀಖಿನಿಂದ ೧ ತಿಂಗಳೊಳಗೆ [illegible] ಕೆಳಗೆ ಕಾಣಿಸಿದ ನಮ್ಮ [illegible] ಭರಬೇಕಾದ [illegible] ವಸೂಲ [illegible] ನಮ್ಮ ಬ್ಯಾಂಕಿನ [illegible] ಶ್ಯಾರುಗಳು [illegible] ಅನುಸಾರವಾಗಿ [illegible] ಮಾಡುವದರಲ್ಲಿ ಬರುವವು ತಿಳಿಯಬೇಕು.

ಕ್ರಮ	ಶ್ಯಾರು ದಾರರ ಹೆಸರು	ತರ್ಕಬಾಕಿ ಕಾಲದ ರಕ್ಕಂ
	ಮ ಕೃಷ್ಣ ಮಂಜ ಗಿರಿ ಪೈ ಹೆಗಡೆ	೨
	[illegible] ಬಾ.	೫
೧	[illegible] ರಾಮಚಾಲಕರ	೮
೭	ಅನಂತ ಮ ಶಟಿ[illegible] ಗಂಗೊಳ್ಳಿ	೫೦
೧೦	ಗಣಪಯ್ಯ ಉಪೇಂದ್ರ ಪೈ ವೈಶ್ಯ	೨೦
	ಮ ಕೃಷ್ಣಮಣ ರಾಘವೇಂದ್ರ ನಾಯ್ಕ ವೈಶ್ಯ	೧೦
೨	ಸುಬ್ರಾಯ ನರಸಿಂಹ [illegible] ವೈಶ್ಯ	೬
೩	ಗೋಪಿ ಮ ನಾಯಗ್ರಿ ವೈಶ್ಯ	೩
೪	ಲಕ್ಷ್ಮಣ [illegible] ವೈಶ್ಯ	೮
೫	ಗೋವಿಂದ ಬಾಬಾಜಿ [illegible]	
	ಗಾಂವಕರ ವೈಶ್ಯ	೨೦
೧	ವಾಸುದೇವ [illegible] ವೈಶ್ಯ	೩
೧	ಕೃಷ್ಣ [illegible] ವೈಶ್ಯ	೪

Kumta 16 8 1926

Annapa R. Pai
Chairman
Kumta U[illegible] Co-operative Bank, Ltd

ಶೆವರಲೆಟ್

ಮೋಟಾರಕಾರ್ ಏಜನ್ಸಿ, ಕೆನರಾ

ನಾವು ಹೊಸ ಶೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿ ಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ—**ಎಸ್. ಎಲ್ ಧಾಕಪ್ಪ ಮತ್ತು ಬ್ರದರ್ಸ, ಶಿರ್ಶಿ**

ಕುಮಟಾ ಏಜಂಟ- **ಜಿ. ಡಿ. ಮಳಗಿಕರ ಎಂಡ್ ಕೊ.**

ಡಿ. ಓ ಸಿ. ಪೆಟ್ರೋಲ ನಮ್ಮಲ್ಲಿ ದೊರಕುತ್ತದೆ; ಡನ್‌ಲೊಪ್ ಹಾಗು ಮಿಚಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮುಗ್ರಿಗಳು ಯೋಗ್ಯ ಕಿಮ್ಮತಿಗೆ ಪೂರೈಸುತ್ತೇವೆ.

G. D. Malgikar & Co,
KUMTA

ಸರಸ್ವತೀ

ಇಡೀ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ತಮವಾದ ಸಚಿತ್ರ ಮಾಸಪತ್ರಿಕೆ ಇದೊಂದೇ

ಈ ಪತ್ರಿಕೆಯು ಪ್ರಾರಂಭವು ಮೇ ತಿಂಗಳಿನಿಂದ. ಓದತಕ್ಕ ವಿಷಯಗಳು ಮಾತ್ರ 40 ಪುಟಗಳಿವೆ ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಮಲತಾ" ಎನ್ನುವ ಕಾದಂಬರಿಯೂ, 'ಶಕುಂತಲಾ'ಎನ್ನುವ ನಾಟಕವೂ ಸಾಹಿತ್ಯಸರೋಜ-ಕನ್ಯಾಕೈಪಿಡಿ-ಮುತ್ತಿನ ಸರ ಚಾರಿತ್ರಾವಳಿ-ಗ್ರಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಕಿಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ಚಂದಾದಾರರಿಗೆ "ಶಾರದಾ ಗ್ರಂಥಮಾಲೆ"ಯಲ್ಲಿ ಇದು ವರೆಗೆ ಪ್ರಕಟವಾಗಿರುವ 'ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದೂ ಭಾಗ್ಯೋದಯ-ರಣಕೇಸರಿ' ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು. ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವದರಿಂದ ಪ್ರಕಟಣೆಗೆ ಅತ್ಯುತ್ತಮವಾದ ಪತ್ರಿಕೆ. ವಾರ್ಷಿಕ ಚಂದಾ ರೂ. 3-0-0 ಮಾತ್ರ. ವಿದ್ಯಾರ್ಥಿಗಳಿಗೂ, ವಾಚನ ಶಾಲೆಗಳಿಗೂ ರೂ 2-0 0 ಮಾತ್ರ

ವಿಳಾಸ — "ಸರಸ್ವತೀ" ಕಾರ್ಯಾಲಯ, ಚಾಮರಾಜಪೇಟೆ, ಬೆಂಗಳೂರು ಸಿಟಿ

ಗೆಳೆಯರ ಗುಂಪಿನ

ಕನ್ನಡ] **ಸ್ವಧರ್ಮ.** [ವಾರಪತ್ರಿಕೆ

ಸಂಪಾದಕರು - ದ ರಾ ಬೇಂದ್ರೆ ಬೀ ಎ

ವಾರ್ಷಿಕ ವರ್ಗಣಿ ೩—೦—೦

ಸಮಾಜದಲ್ಲಿ ಶಾಂತಿಪುಷ್ಟಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ ಇಂಥ ಈ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊರಟಿರುವ ಸ್ವಧರ್ಮದ ಗುರಿ ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ

ಕಾರ್ಯಕರ್ತ, ಸ್ವಧರ್ಮ ಕಾರ್ಯಾಲಯ, ಮಾಳಮಡ್ಡಿ, ಧಾರವಾಡ

ಶ್ರೀ ಕ್ಷೇತ್ರ ಗೋಕರ್ಣದಲ್ಲಿ

ಆಯುರ್ವೇದ ಸಂಗ್ರಹಾಲಯ.

ಶಾಸ್ತ್ರೋಕ್ತ ತಯಾರಿಸಿದ ಶುಷ್ಕ ರಸಾಯನಗಳು.

೧. **ಸಮೀರ ಪನ್ನಗ**—ಇದು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು. ಹೊಟ್ಟೆ ಉಬ್ಬೋಣ, ಹೊಟ್ಟೆಯೊಳಗಿನ ನಾನಾಪ್ರಕಾರದ ಪೀಡತೆ, ಸನ್ನಿಪಾತ ವಿಕಾರಗಳಲ್ಲಿ ಹಲುಬೋಣ, ಶ್ವಕ್ಯಂತೆ ಓಡ್ಯಾಡೋಣ ಮುಂತಾದ ಎಲ್ಲ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ.
ತೊಲೆ ೧ಕ್ಕೆ ರೂ. ೬-೮-೦.

೨. **ಮಲ್ಲಸಿಂಧೂರ**—ಮಹಾಶ್ವಾಸ, ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ಹಲುಬೋಣ, ಕಫಕ್ಷಯ, ಇಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು-ದಮ್ಮು, ಕಂಪು, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಗಳಿಗೆಯೊಳಗೆ ರೋಗಿಯು ಮಾತಾಡಹತ್ತುತ್ತಾನೆ.
ತೊಲೆ ೧ಕ್ಕೆ ರೂ. ೭-೦ ೦.

೩ **ಸುವರ್ಣರಾಜ ವಂಗೇಶ್ವರ**—ಉಪದಂಶಗಳ ಶೇಷವಿಕಾರ, ಪ್ರಮೇಹ, ಧಾತುಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುನಷ್ಟ, ಸ್ವಪ್ನಾವಸ್ಥೆ, ಅಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧವಾದ ಸಮಸ್ತ ವಿಕಾರಗಳನ್ನು ಪರಿಹರಿಸಿ ಶರೀರಕ್ಕೆ ಪುಷ್ಟಿಕೊಟ್ಟು ಉತ್ಸಾಹವನ್ನು, ಕಾಂತಿಯನ್ನೂ ಕೊಡುತ್ತದೆ. ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ. ಇದರಿಂದ ಏನೊಂದೂ ಉಪದ್ರವವಾಗ ದಿಲ್ಲ
ತೊಲೆ ೧ಕ್ಕೆ ರೂ. ೬-೦-೦

೪ **ವ್ಯಾಧಿಹರಣ ರಸ**—ಉಪದಂಶ, (ಗರಮಿ ಯು) ಫಿರಂಗೋಪದಂಶ ಮೊದಲಾದವುಗಳಿಂದ ಗಂಟುಗಳು ಉಬ್ಬಿ, ಜನವಾಯು, ವಾತರಕ್ತ, ಭಯಂಕರ ವಾತವಿಕಾರ, ಪ್ರಾಮುಖ್ಯವಾಗಿ ಉಪದಂಶದಿಂದ ಉತ್ಪನ್ನವಾಗಿ ಆಗುವ ದದ್ದು, ಕೆಮ್ಮು, ನಿಶ್ಶಕ್ತಿ ಇವುಗಳ ಮೇಲೆ ಇಷ್ಟು ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಇನ್ನಾವುದೂ ಇಲ್ಲ
ತೊಲೆ ೧ಕ್ಕೆ ರೂ ೭-೦-೦.

೫- **ಸೂತಶೇಖರ**—ಸನ್ನಿಪಾತ, ಪ್ಲೇಗ, ಮೂರ್ಛೆ, ಹುಚ್ಚುಹಿಡಿಯುವ ವಿಕಾರ (ಭ್ರಮೆ) ಶ್ವಾಸಕಾಸ, ಹಿಕ್ಕಾಮಹಾ, ಹೊಟ್ಟೆನೋವು, ಆಮ್ಲಪಿತ್ತ ಮುಂತಾದ ವಾತ-ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದು ಸಾಮಾನ್ಯವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ
ತೊಲೆ ೧ಕ್ಕೆ ರೂ ೬-೮-೦

ಇವಲ್ಲದೆ, ಎರಕರದ ಚೂರ್ಣ, ಘೃತ, ಅವಲೇಹ, ಆಸವ, ಭಸ್ಮ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ.

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ವ್ಯವಸ್ಥೆ ಮಾಡಿರುತ್ತೇವೆ

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದಲ್ಲಿ ಉತ್ತರದ ಬಗ್ಗೆ ಸ್ಟಾಂಪು ಜೊತೆಗಿಟ್ಟು ಈ ಕೆಳಗಿನ ಪತ್ತೆಗೆ ಬರೆಕೊಳ್ಳತಕ್ಕದ್ದು

ಪತ್ತೆ — **ವೇ|| ಗಜಾನನ ಅಪ್ಪು ಭಟ್ಟ ವೇದೇಶ್ವರ,**

ಆಯುರ್ವೇದಿಕ ವೈದ್ಯ,

ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ.)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಕುಂಗಮದ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತು ಕಟ್ಟಿಗೆ ಸಾಮಾನು ಸಿಗುತ್ತದೆ

ನಮ್ಮ ವಿಳಾಸ —

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ

ಸುಗಂಧಿ ತಾಂಬೂಲೀ ಜದಾರ್!

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕ ವಿದ್ದೃದೆ ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ ಇದರ ಸೇವನದಿಂದ ದಮ್ಮು, ಕಸ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕ ೧ ಪುಡಿ ಕಿಂ ರೂ.೦-೦-೬, ೨೫೦ ಕಿಂ ರೂ ೦-೯-೦ ೧೦೦ ಕಿಂ ರೂ ೨-೮-೦, ೫೦೦ ಪುಡಿಗಳ ಕಿಂ ರೂ ೯-೦-೦ ೧೦೦೦ ೧೭-೦-೦, ವಿ. ಪಿ ಖರ್ಚು ವಗೈರೆ ಪ್ರತ್ಯೇಕ.

ಸುಗಂಧಿ ನಸ್ಯ:—ಈ ನಸ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದಿದ್ದು, ಇದರಿಂದ ಶೈತ್ಯ, ಥಂಡಿ, ಅರತಲೆವಡತ ಮುಂತಾದವುಗಳು ಕೂಡಲೆ ದೂರವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಪಡಿಸಿಕೊಳ್ಳಿರಿ ೧ ಡಬ್ಬಿ ಕಿಂ ರೂ ೦ ४-೦, ೧ ಡಜನ್ ಡಬ್ಬಿ ಕಿಂ ರೂ ೩-೦-೦ ವಿ ಪೋ. ಖರ್ಚು ಬೇರೆ

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ... ನಮ್ಮಲ್ಲಿ ತಯಾರಿಸ ... ಒರೆದ, ಪುರವತ್ ನೋಡಿ ಮಗ್ಗದಲ್ಲಿ ... ಬಹುದು ಇದರ ಹೊರತು, ನಮ್ಮಲ್ಲಿ ... ದಲ್ಲಿ ಎಲ್ಲಾ ಪ್ರಕಾರಗಳ ತಂಬಾಕ ... ಕಾದ ವಾಸನೆಯ ತಂಬಾಕನ್ನು ... ಕೊಂಡು ಓರೆದಿ ಮಾಡಿಕಳಸ ... ಮಾಹಿತಿ ಒಳ್ಳೆ ಪತ್ರವ್ಯವಹಾರ ... ದ ಉತ್ತರ ಬರೆಯ ...

ಪತ್ತೆ:— ಎಸ್. ಬಿ. ಕದಂ,
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು॥ ಶ್ರೋ. ನಿಪ್ಪಾಣಿ ಜಿ ಬೆಳಗಾಂವ

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ ಯವರ

ಸುಗಂಧಿ ನಸ್ಯದ ಪುಡಿ

ಕೊಳ್ಳ ... ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯ ಕ್ಲೇಶ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ, ಮೂರು ಬಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಬಂದು ಚಿಟಕೆಯನ್ನು ಮಿಶ್ರಮಾಡಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಮಂದಿಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ... ಪುಕ್ಕಟೆ ಕಳಿಸಲಾರೆವು

ಒಂದು ಡಬ್ಬಿಯ ಕ್ರಯ ರೂ ೦-೪-೦ ವ್ಹಿ. ಪಿ ಖರ್ಚು ಒಂದು ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ ಗಾರಾಬಿಸನ ಅಂಡ್ ಕಂಪನಿ ಲಿಮಿಟೆಡ್ ಪೋ॥ ಬಾ ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ

ಕಲಬತ್ತ ಹಾಗು ದೋಸೆ ಹಂಚುಗಳು.

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಲಬತ್ತುಗಳೂ,

ದೋಸೆ ಹಂಚುಗಳೂ, ಕಬ್ಬಿಣ ಗೂಟಗಳೂ ತಯಾರಾಗುತ್ತವೆ.

ಕಲಬತ್ತುಗಳಲ್ಲಿ

ಎರಡು ಪ್ರಕಾರಗಳುಂಟು ದೊಡ್ಡದು ೧೧ ಇಂಚು ಎತ್ತರ,

ಬೆಲೆ ४ ರೂಪಾಯಿ ಸಣ್ಣದು ಆರು ಇಂಚು ಎತ್ತರ ಬೆಲೆ ೨ ರೂಪಾಯಿ.

ದೋಸೆ ಹಂಚು ಒಂದಕ್ಕೆ ೧॥ ರೂಪಾಯಿ.

ಒಂದು ಕಲಬತ್ತು ಮತ್ತು ಒಂದು ದೋಸೆಹಂಚನ್ನು ಕೂಡಿ ಕೊಂಡಲ್ಲಿ, ೮ ಆಣೆಗಳನ್ನು ಸೂಟು ಬಿಡುತ್ತೇವೆ.

ಕಲಬತ್ತು ಮತ್ತು ದೋಸೇ ಹಂಚುಗಳ ಥೋಕ ದರಗಳನ್ನು ತಿಳಿದುಕೊಳ್ಳಿರಿ.

ಗೂಟಗಳು ಯೋಗ್ಯವಿರುತ್ತವೆ; ಬೆಲೆ ಒಂದು ಡಝನಿಗೆ ೨ ರೂ.

ಸವಿಸ್ತರ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ಸೇವಿಸಿದ ಹೊತ್ತಿಗೆ ಮೋಟಾರ ವ್ಯವಸ್ಥೆ ಹಾಗೂ

ಅಡಿಗೆ, ಊಟ ವಾಸದ ಒಳ್ಳೆ ... ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯದೆ —

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರ್ಸಿ ಹುಬ್ಬಳ್ಳಿ; ಗೋಕರ್ಣದಿಂದ ಅಂಕೋಲಾ, ಕಾರವಾರ

ಟಿಪ್ಪ — ಟಿಕೇಟು ಮುಂದಾಗಿ ಪಡೆಕೊಳ್ಳಬಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ನಾರಾಯಣ ಶಿಶಿಕ್ಷಿತ್ಯ,
ಮೋಟರ ಏಜೆಂಟ,
ಕುಮಟಾ (ಉತ್ತರ ಕನ್ನಡ

S. U. Narayanacharya & CO
Chaukamba, BENARES CITY



ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿಕಣ ಜರಿ ಸೀರೆ, ಕಾಶ್ಮೀರ್ ಶಾಲು, ತರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ ಸ್ಫಟಿಕಮಣಿ ಮೊದಲಾದ ಮಾಲ ಗಳ ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾದೀತು.

ವಿಳಾಸ — ಶಿರೋಮಣಿ ನಾರಾಯಣಾಚಾರ್ಯ
ಮು॥ ಅಂಚೆ, ಚೌಕಂಬಾ. ಕಾಶೀಕ್ಷೇತ್ರ.

ಅಮೃತಾಂಜನ.



ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವದೆ ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿ ಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪ್ಪೊ, ಫೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

Reg. No. B. 1270

Monday August 23rd, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೬.

ಪತ್ರದ ವರ್ಗಣಿ.

ಕುಮಟೆಯಲ್ಲಿ ಆಗಾವು ರೂಪಾಯಿ 2-4-0.

ಕುನೆಯಾರ್ಡರಿಯಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ವ್ಯಾಖ್ಯಾಪಿನ (೧೫ ಎಮ್ ಉದ) ೫ ಸಾಲುಗಳವರೆಗೆ ರೂ. 1-0-0 ಆ ನಂತ್ರ ಪ್ರತಿಸಾಲಿಗೆ 0-2-0.

ಹಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಟಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

यदपि विहितकर्ता ह्रेप्सतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೨೩ ನೇ ಅಗಸ್ಟ ಸನ್ ೧೯೨೬ ನೇ ಇಸವಿ.

हिंदुस्थानांतील रहिवाशांस ज्याप्रमाणे हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत २ रुपये;

रामबाण औषधें

सर्दि घालविणारें,
भूक वाढविणारें,
शौच्यास साफ करणारें,
झोंपें आणणारें,
शक्ति देणारें,
तेजस्वीपणा आणणारें,

विश्वासे हकिकत व्याटलाग मागवा,

संडुफार्मास्युटिकलवर्क्स लिमिटेड,
मुंबई नं: १३

एजंट— मेसर्स पंडित आणी कंपनी, तीर्थहळ्ळी

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭,



ಒಂದೇ ಒಂದು ತಿಂಗಳ ಬಗ್ಗೆ. ನಾವು ಈ ದರವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಆಶ್ಚರ್ಯವು ಬಲಸೆ! ನಿರ್ದೋಷದ ಯಂತ್ರರಚನೆ!! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುವದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನ್ನು ಉತ್ಕೃಷ್ಟ ರೇಸು ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 503 P T Madras**

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ. ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಉಂಚಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲೆ ಡಬ್ಬಿಗೆ ೧ ಕ್ಕೆ ೧—೮—೦. ಹಿಂಗಿನ ಅರ್ಕ ... ತೊಲೆಯ ಬಾಟ್ಲಿ ೧ ಕ್ಕೆ ೦—೮—೦ ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲೆಯ ಡಬ್ಬಿ ೧ ಕ್ಕೆ ೧—೪—೦, ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ —೨೦—೦. ತಲೆಗೆ ಹಾಕುವ ಸುವಾಸಿಕ ಪುಷ್ಪರಾಜ ತೈಲ ೫ ತೊಲೆಯ ಬಾಟ್ಲಿ ೧ ಕ್ಕೆ ೦—೧೨—೦ ಹುಳದ ಪುಡಿ ತೊಲೆ ೧ ಕ್ಕೆ ೦—೮—, ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಉಂಚಿ ಊದುಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಡಬಾಲ್ಯ ಖರ್ಚ ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ
ಚಪಳಿಬಾಜಾರ, ಕುಮಟಾ.

ಅತ್ಯಲ್ಪನಿವೆ!

ಉಚಿತ



ಕೇವಲ
ಉಚಿತ

ಉಚಿತ
ಕೇವಲ
ಉಚಿತ

ಸಾರು" ಲೀವರ ರಿಜಿಸ್ಟರ್ಡ ಪೋಕೆಟ್ ವಾಚು ೧೮ ಕರೆಟ್ ರೋಲ್ಡ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಗಾರರು ಅಚ್ಚು ಹಾಕಿದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ ಬ್ರ್ಯಾಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ. ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೮ ಕರೆಟ್ ರೋಲ್ಡ ಗೋಲ್ಡಿನ ಪೋಕೆಟ್‌ವಾಚ್ ಗಡಿಯಾರಗಳಿಗೆ ಕಿಂಮತಿ ಬರೇ ರೂಪಾಯಿ ೫

CAPTAIN WATCH CO. P. B 265. MADRAS

ಗೌರೀಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ (ಮಾಸಪತ್ರಿಕೆ)

ಸಂಪಾದಕ- ಆಲೂರ ವೆಂಕಟರಾಯ ರು.

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ ಜೀವನಚರಿತ್ರೆ ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಬರುತ್ತವೆ. ಮಾದರಿ ಪ್ರತಿ ಪ್ರತಿಯೊಂದು ೭೦ ಪುಟಗಳು ವರ್ಗಣಿ ರೂ ೫-೮-೦

ಕಾರ್ಯದರ್ಶಿ ಜಯಕರ್ನಾಟಕ ಧಾರವಾಡ

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಜಂತು ... , ಪಿತ್ತ ... ಎಲ್ಲ ತರದ ಜ್ವರ ಜ್ವರಗಡ್ಡೆ ಚಳಿಜ್ವರ, ... ದಮ್ಮು ಕೆಮ್ಮು ಕಫ, ಅಗ್ನಿಮಾಂದ್ಯ ... ಭಾರತದ ... ಇಂಗ್ಲಿಷ ... ಔಷಧಗಳು ... ಅಗ್ಗವಾಗಿ ಸಿಗುವವು



... ಎಲ್ಲತರದ ... ಸಿಗುವವು ನಮ್ಮಲ್ಲಿ ... ಬೇರೆ ದೇಶದಿಂದ ...

ಎಸ್ ಎಲ್ ಧಾರಪ್ಪ ಮತ್ತು ಬ್ರದರ್ಸ,

ಶಿರಶಿ

ರಾಗದ ಪೆಟ್ಟಿಗೆಗಳು·

ನಾಟಕ ಸಾಮಾನು:-

ತಬಲೆ, ಡಕ್ಕೆ ವಗೈರೆ



... ಪೆಟ್ಟಿಗೆ ... ಪೆಟ್ಟಿಗೆ, ... (ಶಾಸ್ತ್ರೀಯ ...) ...

ಮಾಹಿತಿ ... ಪ್ರಕಟ ...

ಗೋಪಾಳ ಸಖಾರಾಮ ಕಂಪನಿ

ನಂ ... ವಿಠ್ಠಲವಾಡಿ ಎದುರಿಗೆ,

ಕಾಳಬಾದೇವಿ ರೋಡ,

ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ· ಕಾರವಾರ (೨)· ಹುಬ್ಬಳ್ಳಿ ಮುಂಡಗೋಡ ಶಿರ್ಶಿ ಕುಮಟಾ· ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ ಸಿದ್ದಾಪುರ· ಗೆರಸಪ್ಪಾ· ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಸ್ಥಳಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ, ಪ್ರಯಾಣಿಕರಿಗೆ ... ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥೆ ಏರ್ಪಾಡು ಮಾಡಿದೆ,

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa

Proprietor

... ! ಅತ್ಯದ್ಭುತ!!

ಜೀವನಾಧಾರ

... ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲೆಕ್ಸಿರ್ ಆಫ್ ಲೈಫ್

... ಅಜೀರ್ಣ ತಲೆನೋವು, ವಾಂತಿ, ಅತಿಸಾರ, ಜ್ವರ, ... ಇವೆಲ್ಲವುಗಳನ್ನು ಹೊಡೆದು ಚೆಲ್ಲುವ ಒಂದೇ ರಾಮಬಾಣವಿದು! ... ಒಂದ ಸೀಸೆಯ ಬೆಲೆ, ಬಳಸಿ ನೋಡಿರಿ ...!!!

... ಸೀಸೆಗೆ ರೂ ೧ ... ಟಪಾಲ ಖರ್ಚು ಬೇರೆ

ಜೀವನಾಧಾರ ಡಿಪೋ, ಮೈಸೂರು

ಬ್ರಾಂಚ - ಜೀವನಾಧಾರ ಡಿಪೋ, ಹುಬ್ಬಳ್ಳಿ

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕ ಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯದಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳು ... ಬೇನೆಯು ಹೋಗುವದು ... ವರ್ಷದ ಮುದುಕರ ... ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು. ಜನನೇಂದ್ರಿಯದ ... ಶಕ್ತಿಯು ... ಅಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ... ಹುಲದಾಗುವದು — ... ನಿರ್ದೋಷವಾಗುವದು ... ದಿವಸದಲ್ಲಿಗುಣಬರುವದು ... ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ... ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ... ನಾಶವಾಗುವವು ... ದಿವಸದಲ್ಲಿ ... ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ... ಇದರ ಅನುಭವವು ಮೊದಲನೇ ದಿವಸವೇ ಬರುವದು. ... ಆಗುವದು. ಮೈಯಲ್ಲಿ ಎಷ್ಟೇ ದಿವಸದ ... ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ... ಕಾರಣವಿಲ್ಲ ... ೧೦ ದಿವಸ ... ಒಂದು ಬಾಟಲಿಯಿಂದ ಗುಣಬರುವದು ... ರೋಗವಿದ್ದರೆ ... ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧ ರೂಪಾಯಿ ... ಬಾಟಲಿಯ ಕಿಮ್ಮತ್ತು ...—೦ ೦ ... ಬಾಟಲಿಗಳನ್ನು ಒಂದೇ ಸಾರ್ತಿ ... ಅಂದರೆ ಟಪಾಲಖರ್ಚು ಹೆಚ್ಚು ... ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲ ... ಟಪಾಲ ಖರ್ಚು ಬೇರೆ ... ೧ ಬಾಟ್ಲಿಗೆ ೧——೦ ೩ ಬಾಟ್ಲಿಗೆ ೩—೦—೦ ...

ಮ್ಯಾನೇಜರ— ದ್ರಾಕ್ಷಾರ್ಕ ಮಧು ಆಫೀಸ, ... ಬೆಳಗಾಂವ.

ಶೇತಕೀ ಖಾತೆಯ ಡೇಪ್ಯುಟಿ ಡಾಯರೆಕ್ಟರರಾದ ರಾ। ರಾ। ಗೋಖಲೇಯವರಿಗೆ—

(ಅನಾವೃತ ಪತ್ರ)

ಮಹನೀಯರೇ,

ನಾನೊಬ್ಬ ಕರ್ನಾಟಕದ ದೇಸಾಯಗಾರನು. ಕಾರವಾರಕ್ಕೆ ನನ್ನ ಕೆಲಸಕ್ಕೋಸ್ಕರ ಬಂದಾಗ ದೇಸಾಯದ ಬೆಳವಣಿಗೆಗೆ ಒಂದು ಸಭೆ ಇರುವದೆಂದು ಕೇಳಿ ಸಭೆಗೆ ಹೋದೆನು. ಅಲ್ಲಿ ಹೋಗಿ ನೋಡಿದರೆ, ನೆರೆದ ಜನರಲ್ಲಿ ಆಂಗ್ಲವಿದ್ಯಾವಿಭೂಷಿತರೇ ಹೆಚ್ಚು, ದೇಸಾಯಗಾರರು ತೀರ ಕಡಿಮೆ, ಇಲ್ಲವೆಂದರೂ ಸೈ; ಮತ್ತು ಅವರೊಳಗೆ ತಮ್ಮ ಭಾಷಣವನ್ನು ಕೇಳಿ अरसिकेषु कवित्व निवेदनम् ಎಂಬ ಮಾತಿನ ನೆನಪಾಯಿತು. ತಾವು ಬರೇ ಸವಿ ಮಾತಿನ ಸರಿಮಳೆಗರೆಯುವದನ್ನು ಕಂಡು ಅಲ್ಲಿಯೇ ಕೆಲವು ಆಕ್ಷೇಪಗಳನ್ನೆತ್ತಬೇಕೆಂದಿದ್ದೆನು. ಆದರೆ ವಿದ್ಯಾವಿಭೂಷಿತರಲ್ಲಿ ಮಾತಾಡುವ ಧೈರ್ಯವು ನನ್ನಂಥವರಲ್ಲಿ ಇಲ್ಲವಾದುದರಿಂದ, ಆ ಆಕ್ಷೇಪಗಳನ್ನು ಜಾಹೀರು ರೀತಿಯಿಂದ ತಮ್ಮ ಮುಂದೆ ಇಡಬೇಕೆನಿಸುತ್ತೇನೆ. ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ದಯಪಾಲಿಸಿ ದೂರುಗಳನ್ನು ದೂರಮಾಡುವಿರೆಂದು ನಂಬುತ್ತೇನೆ. ಇಲ್ಲವಿದ್ದರೆ ಮಾತ್ರ, ತಾವು ಮಾತಿನ ಮಲ್ಲಿಗೆಯ ಮಾಲೆಯನ್ನು ಪೋಣಿಸಿ ನಮ್ಮ ಕಣ್ಣುಗಳಲ್ಲಿ ಧೂಳಿಯನ್ನಿಕ್ಕಿ ಹೋಗುತ್ತೀರೆಂತಾಗುವದು.

ದೇಸಾಯದ ಕುಣಕುಮಿಣುಕನ್ನು ಕೂಡರಿಯದ ವಿದ್ಯಾವಿಭೂಷಿತರ ಸಭೆಯಲ್ಲಿಯೂ, ದೊಡ್ಡ ಪಟ್ಟಣಗಳಲ್ಲಿಯೂ ವ್ಯಾಖ್ಯಾನ ಮಾಡಿದರೆ ದೇಸಾಯದ ಸುಧಾರಣೆಯಾಗುವದೆಂದು ನಿಮ್ಮ ತಿಳುವಳಿಕೆ ಇರುವದೇನು? ನಮ್ಮ ತಾಲೂಕಿನೊಳಗಿನ ಹಳ್ಳಿ ಹಳ್ಳಿಗಳಲ್ಲಿ ನಿಮ್ಮ ತತ್ವಗಳನ್ನು ಹಬ್ಬಿಸಲಿಕ್ಕೆ ನೀವು ಯಾವ ಪ್ರಯತ್ನವನ್ನು ಕೈಕೊಂಡಿರುವಿರಿ? ಒಕ್ಕಲಿಗರ ಸಮುದಾಯದಲ್ಲಿ ಸೇರಿ ನೀವು ಸ್ವತಃ ಅವರಿಗೆ ಏಕೆ ತಿಳಿಸಿಕೊಡುವದಿಲ್ಲ? ಸಹಕಾರೀ ಸಂಘಗಳ ಮೇಲೆ ಆ ಕೆಲಸವನ್ನು ಯಾಕೆ ಒಪ್ಪಿಸಿಬಿಡುತ್ತೀರಿ? ತಮ್ಮ ಕೆಲಸದ ಜವಾಬದಾರಿಯನ್ನು ತಪ್ಪಿಸಿಕೊಳ್ಳುವದಕ್ಕೇನು? ಸಹಕಾರೀ ಸಂಘದವರಿಗಾದರೂ ನಿಮ್ಮ ದೇಸಾಯದ ತತ್ವಗಳ ಪೂರ್ಣ ಮಾಹಿತಿಯು ಇರುವದೇನು? ಇದ್ದರೂ ಅವರು ಒಕ್ಕಲಿಗರಿಗೆ ಎಲ್ಲಿ ತಿಳಿಸಿಕೊಟ್ಟಿದ್ದಾರೆ?.. ..ಸಹಕಾರಿ ಸಂಘಗಳಿಲ್ಲದ ಊರುಗಳಲ್ಲಿ ಹಬ್ಬುಗೆಯಾಗುವ ಬಗೆ ಹೇಗೆ? ಒಕ್ಕಲಿಗರು ಸ್ವಭಾವತಃ ಪುರಾಣಮತವಾದಿಗಳಾಗಿದ್ದು, ಸುಧಾರಣೆಗೂ ಬದಲಾವಣೆಗಳಿಗೂ, ಅನುಕೂಲರಾಗಿರುವದಿಲ್ಲ. ತಮ್ಮಂಥ ದೊಡ್ಡ ದೊಡ್ಡ ಅಧಿಕಾರಿಗಳು ಸ್ವತಃ ಬಂದು ಜನರಿಗೆ ತಿಳಿಸಿಹೇಳಿದರೆ ಮಾತ್ರ ಅವರ ಮೇಲೆ ಪರಿಣಾಮವಾಗಬಹುದು. ಹೆಚ್ಚಿನ ಜನರಿಗೆ ಕೇಳುವವರ್ಯಾರು? ಅವರೆ ತಾವು ತಿರುಗುವದು ಶಹರಗಳಲ್ಲಿ? ಅವರ ಪ್ರಯೋಜನವು ಹಳ್ಳಿಗಾಡಿನ ದೇಸಾಯಗಾರರಿಗೇನು?

ತಾವು ತಮ್ಮ ವ್ಯಾಖ್ಯಾನದಲ್ಲಿ ಹೊಸ ಸಾಧನಗಳ (ಅಂದರೆ ಕಬ್ಬಿಣದ ನೇಗಿಲು, ಪಂಪ ಇತ್ಯಾದಿ) ಉಪಯೋಗದ ಬಗ್ಗೆ ಮಾಹಿತಿ ಕೊಡುವಿರಾಗಿ ಹೇಳಿದಿರಿ? ಆದರೆ ನಮ್ಮ ತಾಲೂಕಿನೊಳಗೆ ಅವುಗಳ ಉಪಯೋಗವೇನು? ದೊಡ್ಡ ಪ್ರಮಾಣದ ಮೇಲೆ ದೇಸಾಯ ಮಾಡುವವರಿಗೆ ಈ ಸಾಧನಗಳಿಂದ ಲಾಭವಾಗುವದೆಂದು ಕೇಳಿದ್ದೇನೆ. ಆದರೆ, ಕಾರವಾರ ತಾಲೂಕಿನೊಳಗೆ ದೊಡ್ಡ ಪ್ರಮಾಣದ ಮೇಲೆ ದೇಸಾಯ ಮಾಡುವವರು ಯಾರೂ ಇಲ್ಲ. ಸಣ್ಣ ಪ್ರಮಾಣದಿಂದ ಮಾಡಿದರೂ ಲಾಭವಾಗಬಹುದೆಂಬ ಬಗ್ಗೆ ನೀವು ನಮ್ಮ ತಾಲೂಕಿನೊಳಗೆ ಪ್ರಯೋಗಗಳನ್ನು ಮಾಡಿ ನೋಡಿರುವಿರೋ? ಒಂದು ವೇಳೆ ಲಾಭವಾಗಬಹುದಾದರೂ, ಆ ಸಾಧನಗಳ ಉಪಯೋಗ

ಮನೋಹರವಾದ ಕೂದಲನ್ನು ಚನ್ನಾಗಿ ಕಾಯಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡಿ ಸಪ್ಪೆಯಾಗಿ ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ಹಚ್ಚಿ ಕೂಡ ತಿಕ್ಕಿದರೆ ನಿಮ್ಮ ತಲೆಯು ಹೊಟ್ಟು ಹೋಗುತ್ತದೆ. ಕೆಟ್ಟ ದ್ರವ್ಯಗಳು ಹೋಗುವವು, ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ ರು		೧—೦—೦
ಅಂಚೆವೆಚ್ಚ	,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೪—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿ.

—o—

½ ಔನ್ಸಿಗೆ ಬೆಲೆ		೨—೦—೦
¼ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೩—೦
ಅಂಚೆವೆಚ್ಚ	,,	೦—೪—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

“ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!”

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಯಾವದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶುದ್ಧವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2032 **BOMBAY**

ಕ್ಕೆ ಬೇಕಾಗುವಷ್ಟು ಸಂಪತ್ತು ವಿವಿಧ ಕರಗಳಿಂದ ಹೀರಿ ಹಿಪ್ಪೆಯಾದ ಬಡ ರೈತರಲ್ಲಿ ಎಲ್ಲಿರುವದು?

ತಾವು, ವಿಲಾಯತೀ ಗೊಬ್ಬರವನ್ನು ಉಪಯೋಗಿಸಿದ್ದಲ್ಲಿ ಹೆಚ್ಚು ಲಾಭವಾಗಬಹುದೆಂಬರ್ಥದ ಮಾತುಗಳನ್ನಾಡಿದಿರಿ. ಆ ಗೊಬ್ಬರಕ್ಕೆ ಭಾರೀ ಬೆಲೆಕೊಟ್ಟು ಅದನ್ನು ಕೊಳ್ಳುವಷ್ಟು ತ್ರಾಣವು ರೈತರಲ್ಲಿ ಇನ್ನೂ ಉಳಿಯಲಿಲ್ಲ. ನಾವು ತೀರ ಬೆಲೆಯಿಂದ ನಾವು ಬಡವರಾಗಿ, ಪರದೇಶದವರು ಶ್ರೀಮಂತರಾಗುತ್ತಾರೆ. ಇದು ಬೇಸಾಯದ ಉನ್ನತಿಯೋ? ಕಾರವಾರ ತಾಲೂಕಿನಲ್ಲಿ ಅಡವಿಗಳು ವಿಪುಲವಾಗಿರುತ್ತವೆ. ಅವುಗಳೊಳಗಿಂದ ನಮಗೆ ಬೇಕಾಗುವಷ್ಟು ಸೊಪ್ಪನ್ನು ನಾವು ಒಂದು ಪೈ ಖರ್ಚು ಮಾಡದೆ ತರಬಹುದಾಗಿತ್ತು. ನಮಗೆ ಜಂಗಲ್ ಖಾತೆಯವರು ಹೇಗೆ ಕಾಡುತ್ತಾರೆಂಬುವದು ನಿಮಗೆ ಗೊತ್ತಿಲ್ಲವೇನಿಲ್ಲ. ಆದರೆ ನಿಮಗೆ ನಾವು ಬೇಸಾಯಕ್ಕೆ ಸಹಾಯ ಮಾಡುತ್ತೇವಾಗಿ ಬರೀ ಮೇಲೆ ಮೇಲೆ ತೋರಿಕುವ ಬದಲು ನಿಮ್ಮ ಅಂತಃಕರಣವೇ ಬೇರೆ [illegible] ಜಂಗಲ್ ಖಾತೆಯೂ, ಬೇಸಾಯ ಖಾತೆಯೂ ಸರಕಾರದಿಂದಲೇ ಮಾಡಲ್ಪಟ್ಟಿವೆ. ಆದರೆ [illegible] ಖಾತೆಯು ಬೇಸಾಯಕ್ಕೆ ಬೇಕಾಗುವ [illegible] ಗಳನ್ನು ರೈತರಿಗೆ ತೆಗಿಸಿ ಕೊಡುವ ಸಾಮರ್ಥ್ಯವು [illegible] ಎಂತಲ್ಲ. ಹೀಗಿದ್ದರೂ ನಮ್ಮ ಬಿಕ್ಕಟ್ಟಿನಸ್ಥಿತಿಗೆ ದೊರೆಯುವ ಸವಲತ್ತುಗಳನ್ನು ಜಂಗಲ ಖಾತೆಯಿಂದ ತಾವು ಯಾಕೆ ಕೊಡಿಸಿಕೊಡುವದಿಲ್ಲ? ತಮ್ಮ ಹಿಂದಿನ [illegible] ನಮಗೆ ವಿಲಾಯತೀ ಗೊಬ್ಬರದ [illegible] ಮಾಡಿ ವಿಲಾಯತೀ [illegible] ದಿಕ್ಕೊಡುವದು ಇರುತ್ತದೆಂದು, ಸ್ಪಷ್ಟವಾಗುವದಿಲ್ಲವೇನು? ತಮ್ಮ ಬೇಸಾಯಗಾರರ ಹಿತಚಿಂತಕರೆಂದು ಕರೆಯುವದಕ್ಕಿಂತಲೂ ವಿಲಾಯತೀ ಗೊಬ್ಬರದ ಏಜಂಟರೆಂದು ಅವರು ಕರೆದರೆ ತಪ್ಪೇನು? ನಮಗೆ ಬೇಕಾಗುವದು ಸೊಪ್ಪನ್ನು ಜಂಗಲ ಖಾತೆಯಿಂದ ತೆಗಿಸಿಕೊಟ್ಟರೆ. ವಿಲಾಯತೀ ಗೊಬ್ಬರದ ಉಸಾಬರಿ ನಮಗೇಕೆ?

ಉತ್ತರಾಗಿ ಜನರಿಗೆ, 'ನೀವು ಬೇಸಾಯದ ಉನ್ನತಿ ಮಾಡಿರಿ ನಿಮಗೆ ಬೇಕಾದ ಮಾಹಿತಿಯನ್ನು ನಾವು ಕೊಡುತ್ತೇವೆ." ಎಂದು ತಮ್ಮ ಉಪದೇಶ ಮಾಡಿ, "ನೀವು ಬೇಸಾಯವನ್ನು ಸುಧಾರಿಸುತ್ತೇವೆ ಜಂಗಲ ಖಾತೆಯಿಂದ ಸೌಕರ್ಯಗಳನ್ನೊದಗಿಸಿಕೊಡಿರಿ," ಎಂದು ಕೇಳಿದರೆ, "ಅದು ನಮ್ಮ ಕೈಯಲ್ಲಿಲ್ಲ. ಜಂಗಲ ಖಾತೆಯು ಕೊಡದವನೆ ನೀವು ಹೊಗೆಹೇರಿ ಗೊಬ್ಬರವನ್ನು ವಿಲಾಯತಿಯಿಂದ ತರಿಸಿರಿ" ಎಂಬ ಸಾವಧಾನೋಪದೇಶವನ್ನು ನೀವು ಮಾಡುತ್ತೀರಿ. ಇದರಿಂದ ನಿಮ್ಮ ....ಹೇತುವು ಬಯಲಾಗುವದಿಲ್ಲವೇನು? ಎಮ್ಮೆ-ಆಕಳ ಗಳ ಬೇಸಾಯದ ಜೀವಾಳವು ಅವುಗಳಿಗೆ ಬಾಲ ಬಿಡುವಷ್ಟು ಅಗೆ ಕೊಡಬೇಕು. ಕಾಡಿಗೆ ಜಂಗಲದೊಳಗೆ ಹೋದರೆ, ಆಕಳುಗಳು ಕೊಂಡವಾಡಿಗೆ. ತರಿರಿ ದಂಡ! ಇಂಥ ಸ್ಥಿತಿಯಲ್ಲಿ ಗೊಬ್ಬರಕ್ಕೆ ಅತ್ಯವಶ್ಯವಾಗಿರುವ ಸೆಗಣಿ ಕೊಡುವಂಥ ಎಮ್ಮೆ ಆಕಳುಗಳನ್ನು ಸಾಕುವ ಬಗೆ ಹೇಗೆ? ಆಕಳುಗಳನ್ನು ಸಾಕದೆ ತಮ್ಮ ವ್ಯಾಖ್ಯಾನಗಳಿಂದ ಬೇಸಾಯದ ಉನ್ನತಿಯು ಹೇಗಾಗುವದು? ಆದ್ದರಿಂದ ಜಂಗಲ ಖಾತೆಯಿಂದ ನಮಗೆ ಬೇಕಾಗುವ ಸವಲತ್ತುಗಳನ್ನು ಒದಗಿಸಿ ಕೊಟ್ಟರೆ ಮಾತ್ರ, ನಿಮ್ಮ ನಿಜವಾದ ಕಳಕಳಿವು ವ್ಯಕ್ತವಾಗುವದಲ್ಲದೆ, ಸಂಘಗಳನ್ನು ಸ್ಥಾಪಿಸಿ, ಪ್ರೆಸಿಡೆಂಟ, ಸೆಕ್ರೆಟರಿಗಳನ್ನು ನೇಮಿಸುವದರಿಂದಲೂ, ಶಹರಗಳಲ್ಲಿ ವ್ಯಾಖ್ಯಾನ ಕೊಡುವದರಿಂದಲೂ ಎಂದೂ ಆಗಲಿಕ್ಕಿಲ್ಲ

ಇನ್ನೂ ಬಹಳ ಬರೆಯುವದಿತ್ತು. ಆದರೆ ವಿಸ್ತಾರವಾಗುವದೆಂದು ಬರೆಯಲಿಲ್ಲ. ಇಷ್ಟಕ್ಕೇ ಉತ್ತರಗಳನ್ನು ಕೊಡಬೇಕೆಂದರಾಯಿತು.

ತಮ್ಮ—

Karwad, 15-8-26 } Shrinivas Krishnrao Nayak.

ಕರ್ನಾಟಕದ ಏಕೀಕರಣ.

ಕರ್ನಾಟಕದ ಏಕೀಕರಣದ ಕುರಿತು ಧಾರವಾಡದ ಶ್ರೀ|| ದಿವಾಕರ ರಂಗನಾಥರಾಯರು ಮಾಹಿತಿ ಪೂರ್ಣವಾದ ಲೇಖವನ್ನೊಂದು ಕಳೆದ ತಾರೀಖು ೧೮-೮-೨೬ ನೇ "ಮುಂಬಯಿ ಕ್ರಾನಿಕಲ್" ಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟಿಸಿರುವರು. ಅದರ ತಾತ್ಪರ್ಯವೇನಂದರೆ —

ಸರಕಾರಿ ಮಂಡಳಿಯ ಖಾತೆಯವರು ದಕ್ಷಿಣ ಭಾಗದ ಕಮಿಶನರರಿಗೆ ಒಂದು ಪತ್ರ ಬರೆದರು. ಅದನ್ನು ಭಾಷಾಂತರಿಸಿರುವೆವು

ವಿಷಯ— ಕನ್ನಡ ಮಾತನಾಡುವ ಜನರಿಗಾಗಿ ಸ್ವತಂತ್ರ ಪ್ರಾಂತರಚನೆ

ಬಹಳ ಅಗತ್ಯವಾಗಿ ಬೇಗನೆ ತಿಳಿಸಬೇಕು ಕಾನ್ಸಿಲ್ ಆಫ ಸ್ಟೇಟ ಎಂಬ ಹಿರಿಯರ ಸಭೆಯಲ್ಲಿ ಕನ್ನಡ ಪ್ರಾಂತರಚನೆಯ ಕುರಿತು ಚರ್ಚೆಯಾದಂದಿನಿಂದ ಕನ್ನಡ ವರ್ತಮಾನ ಪತ್ರಗಳಲ್ಲಿ 'ಕಲವುಟ್ಟಗೆ ವರ್ತಮಾನ ಪತ್ರಗಳ ಚಳವಳಿಯಾಗಿರುವದಾಗಿ ಕಂಡುಬರುತ್ತದೆ. ಹಾಗಿದ್ದರೆ, ಆ ಚಳವಳಿಗೆ ಲೋಕಮತದ ಬೆಂಬಲವಿದೆಯೇನೆಂದು ಕಮಿಶನರರು ಹೇಳಬೇಕು. ಮತ್ತು ಆ ಕುರಿತ ವರ್ತಮಾನ ಪತ್ರಗಳೊಳಗಿನ ಅವತರಣಗಳನ್ನು ಕಳಿಸಬೇಕು.

ಈ ಪತ್ರವನ್ನು ಕಮಿಶನರರು ಕಲೆಕ್ಟರರಿಗೆ ಕಳುಹಿದರು.

ಇದನ್ನು ಸಮಾಲೋಚಿಸುವಾಗ, ರಂಗನಾಥರಾಯರು ಏಕೀಕರಣದ ಇತಿಹಾಸವನ್ನು ನಿವೇದಿಸಿರುವರು. ಕರ್ನಾಟಕ ಏಕೀಕರಣದ ಕಲ್ಪನೆಯ ಮೊಟ್ಟಮೊದಲ. ೧೯೦೩ ನೇ ಇಸ್ವಿಯಲ್ಲಿ ಉಂಟಾಯಿತು. ಧಾರವಾಡದ ಶ್ರೀ|| ಆಲೂರ ವೆಂಕಟರಾಯರು, ಶ್ರೀ|| ಗುಂಡಪ್ಪನವರಿಂದ ಸಂಗ್ರಹಿಸಲ್ಪಡುವ ಬೆಂಗಳೂರಿನೊಳಗಿನ "ಕರ್ನಾಟಕ" ವೆಂಬ ಇಂಗ್ಲಿಷ ವಾರ್ತಾ ಪತ್ರಿಕೆಯಲ್ಲಿ ಲೇಖ ಬರೆದರು. ೧೯೧೧ ನೇ ಇಸ್ವಿಯಲ್ಲಿ ಕ್ರಿಸ್ತಮಸಿ ನೋಟೆಗ್ಯೂರವರು ಹಿಂದುಸ್ಥಾನಕ್ಕೆ ಬಂದಾಗ, ಕರ್ನಾಟಕದೊಳಗಿನ ಪ್ರಮುಖರು ಒಂದು ಅರ್ಜಿಯನ್ನು ಸಾದರಪಡಿಸಿ, ಮುಂಬಯಿ, ಮದ್ರಾಸ ಹಾಗು ಕೊಡಗು ಪ್ರಾಂತಗಳೊಳಗಿನ ಕನ್ನಡಿಗರು ಒಂದು ಪ್ರಾಂತದಲ್ಲಿ ಸೇರಿ, ಪ್ರತ್ಯೇಕ ಪ್ರಾಂತರಚನೆ ಮಾಡಬೇಕೆಂದು ನಮೂದಿಸಲಾಗಿತ್ತು. ಕರ್ನಾಟಕ ಪ್ರಾಂತಿಕ ಪರಿಷತ್ತಿನ ಅಧಿವೇಶನವು ೧೯೨೦ ನೇ ಇಸ್ವಿಯ ಮೇ ತಿಂಗಳಲ್ಲಿ ಧಾರವಾಡದಲ್ಲಿ ಸೇರಿತ್ತು. ದಿವಾಣ ಬಹಾದ್ದೂರ ವ್ಹಿ. ಪಿ. ಮಾಧವರಾಯರು ಅಧ್ಯಕ್ಷರಾಗಿದ್ದರು, ಅಧ್ಯಕ್ಷರ ಉಪನ್ಯಾಸದಲ್ಲಿಯೂ ಕರ್ನಾಟಕದ ಏಕೀಕರಣದ ವಿಷಯವು ಸ್ಪಷ್ಟವಾಗಿ ನಮೂದಿಸಲ್ಪಟ್ಟಿತ್ತು. ಪರಿಷತ್ತಿನಲ್ಲಿ ಈ ಕುರಿತು ಠರಾವುಗಳು ಕೂಡಾ ಆಗಿವೆ. ಕನ್ನಡಿಗರು ಈ ಪರಿಷತ್ತನ್ನು ಸೇರಿಸಿ, ಕನ್ನಡಿಗರದೊಂದು ಪ್ರತ್ಯೇಕ ಪ್ರಾಂತ ಮಾಡುವ ಆವಶ್ಯಕತೆಯನ್ನು ಪ್ರತ್ಯಕ್ಷ ಸಿದ್ಧಪಡಿಸಿದರು. ಅದೇ ವರುಷ ಸೇರಿದ ರಾಷ್ಟ್ರೀಯ ಸಭೆಯಲ್ಲಿಯೂ ಭಾಷಾವಾರಿಯಂತೆ ಪ್ರಾಂತರಚನೆಯಾಯಿತು. ೧೯೨೧ ನೇ ಇಸ್ವಿಯಲ್ಲಿ ಸೇರಿದ ಬಳ್ಳಾರಿ ಜಿಲ್ಲಾ ಪರಿಷತ್ತಿನ ಹೊಸಪೇಟೆಯ ಅಧಿವೇಶನದಲ್ಲಿಯೂ ಕರ್ನಾಟಕದ ಏಕೀಕರಣದ ಕುರಿತು ಠರಾವುಗಳಾದವು.

೧೯೨೪ ನೇ ಡಿಸಂಬರ ತಿಂಗಳಿನಲ್ಲಿ ಕರ್ನಾಟಕ ಏಕೀಕರಣ ಸಂಘವು ನಿರ್ಮಾಣ ಹೊಂದಿತು. ಹುಬ್ಬಳ್ಳಿಯ ರಾವಬಹಾದ್ದೂರ ಕಂಬಳಿಯವರು ಈ ಸಭೆಯ ಅಧ್ಯಕ್ಷರಾಗಿರುವರು. ಆಂಧ್ರ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಸೇರಿಸಬೇಕೆಂಬ ವಿಚಾರ ನಡೆದಾಗ, ಕರ್ನಾಟಕ ಪ್ರಮುಖರು ಬಾಹೀರ ಸಭೆಗಳನ್ನು ನೆರಿಸಿದರು. ವಿಶೇಷ ದರ್ಶಕ ಠರಾವುಗಳೂ ಕರ್ನಾಟಕದ ಮುಖ್ಯ ಮುಖ್ಯ ಸ್ಥಳಗಳಲ್ಲಿ ಮಂಜೂರಾದವು. ನಾಮದಾರ ದತ್ತೋಪಂತ ಬೆಳವಿ, ಶ್ರೀ|| ರಾಘವೇಂದ್ರರಾವ ಕಡಣಿ, ನಾರಾಯಣ ಪ್ರಭೃತಿಯವರು ಬಳ್ಳಾರಿಯ ಭೀಮರಾಯರ ನೇತೃತ್ವದಲ್ಲಿ ಮದ್ರಾಸಕ್ಕೆ ಹೋಗಿ, ಪ್ರಾಂತಾಧಿಪರಿಗೆ ಭೆಟ್ಟಿಯಾಗಿ, ಕರ್ನಾಟಕದ ಸ್ಥಿತಿಯನ್ನು ನಿವೇದಿಸಿದರು. ಆಂಧ್ರ ವಿಶ್ವವಿದ್ಯಾಲಯ ಕಾಯಿದೆಯ ಕಲಮುಗಳ ವಿಚಾರವನ್ನು ಮಾಡುತ್ತಿದ್ದ ಸಿಲೆಕ್ಟ ಕಮಿಟಿಯವರ ಮುಂದೆಯೂ ತಮ್ಮ ಹೇಳಿಕೆಯನ್ನು ಸಪ್ರಮಾಣ ಪ್ರತಿಪಾದಿಸಿದರು. ಮದ್ರಾಸದ ಪ್ರಾಂತಾಧಿಪರಿಗೆ ಈ ಚಳವಳಿಯು ವಾಸ್ತವವಾಗಿರುವದೆಂದು ಖಾತ್ರಿಯಾಯಿತು. ಈ ಹಕೀಕತೆಲ್ಲ ಕೌನ್ಸಿಲ ಆಫ್ ಸ್ಟೇಟಿನಲ್ಲಿ ಡಾ|| ಯು. ರಾಮರಾಯರು ಠರಾವು ತರುವ ಕಾಲವಾದ ೧೯೨೬ ನೇ ಇಸ್ವಿಯ ಜನವರಿ ಮುಂಚಿತವಾಗಿಯೇ ಒದಗಿ ಬಂದಿರುತ್ತದೆ.

ಆ ವೇಳೆ ಬೆಳಗಾವಿಯ ಶ್ರೀ|| ಪಂಡಿತ ರಾಯ.ಪ್ಪಾ ಜಿಕೆಮ್ಕೀಹಿಯವರ ಅಧ್ಯಕ್ಷತೆಯಲ್ಲಿ ಬಳ್ಳಾರಿಯಲ್ಲಿ ಕರ್ನಾಟಕ ಪರಿಷತ್ತು ಸೇರಿತು. ಮಂಗಳೂರ, ಉಡುಪಿ ಮ್ಯುನಿಸಿಪಾಲಿಟಿಗಳೂ, ಮಂಗಳೂರ ಜಿಲ್ಲಾ ಬೋರ್ಡೂ ಕರ್ನಾಟಕದ ಏಕೀಕರಣದ ಕುರಿತು ಠರಾವುಗಳನ್ನು ಕೈಕೊಂಡಿವೆ.

ಇದನ್ನೆಲ್ಲ ನಿವೇದಿಸಿ, ಶ್ರೀ|| ರಂಗನಾಥರಾಯರು ಇದೇನು ವರ್ತಮಾನಪತ್ರಗಳ ಚಳವಳಿಯಲ್ಲೆಂದು ಪ್ರತಿಪಾದಿಸಿದರು.

— ಮೈಸೂರ ಮಹಾರಾಜರು ೧೦೦೦೦ ರೂಪಾಯಿಗಳನ್ನು ಕೊಟ್ಟು, ಕೃಷ್ಣ ಜಾರದ ನಾಲ್ಕು ಹಂಸ ಪಕ್ಷಿಗಳನ್ನು ತರಿಸಿರುವರು.

— ಇಡೀ ಭೂಮಂಡಲದಲ್ಲಿ ೨೩ ಕೋಟಿ ಮುಸಲ್ಮಾನರಿರುವರು, ಅದರಲ್ಲಿ ೧೯ ಕೋಟಿ ಮುಸಲ್ಮಾನರು ಬ್ರಿಟಿಶರ ಅಧೀನತಲ್ಲಿರುವರು.

— ಸಿರಿಯಾ ದೇಶದಲ್ಲಿ ದಮಾಸ್ಕಸದ ಸುತ್ತಮುತ್ತು ಡ್ರೂಸ ಎಂಬ ದಂಗೆಗಾರರಿಗೂ, ಫ್ರೆಂಚರಿಗೂ ಘೋರ ಕದನಗಳಾಗುತ್ತಿವೆ. ೧೮ ಸಾವಿರ ಫ್ರೆಂಚ ಸೈನಿಕರು ೧೦ ದಿನಗಳ ವರೆಗೆ ಹೋರಾಡಿದರು. ಯಾರೂ ಸೋಲಲಿಲ್ಲ, ಯಾರೂ ಗೆಲ್ಲಲಿಲ್ಲ'

ಚಹಾ ತೋಟಗಳಿಗೆ ಕೂಲಿಕಾರರು ಬೇಕು!!

ಕೆಲವು ದಿನಗಳ ಹಿಂದೆ ಅಸಾಮದ ಚಹಾ ತೋಟಗಳ ಏಜಂಟರೊಬ್ಬರು ನಮ್ಮ ಕಾನಡಾ ಜಿಲ್ಲೆಯೊಳಗಿಂದ ಆಕಸ್ಮಾತ್ತಾಗಿ ೧೫-೨೦ ಜನರನ್ನು ಕೂಲಿಗಳಾಗಿ ಒಯ್ದುದ್ದರಿಂದ ನಾಲ್ಕೂ ಕಡೆಗೆ ಎಷ್ಟು ಹಾಹಾಕಾರವೇಳುವದು ಅವಶ್ಯವಿತ್ತೋ ಅಷ್ಟು ಇನ್ನೂ ಎದ್ದಿರುವದಿಲ್ಲ. ಇದಕ್ಕೆ ಚಹಾತೋಟದ ಕೂಲಿಗಳ ಸುಖದುಃಖಗಳ ಅಜ್ಞಾನವೇ ಮುಖ್ಯ ಕಾರಣ. ಆದ್ದರಿಂದ "ಮಹಾರಾಷ್ಟ್ರೀಯ ಜ್ಞಾನಕೋಶದ ೧ ನೇ ಭಾಗದಲ್ಲಿ" ಸಿಲೋನದ ಚಹಾ ತೋಟಗಳಲ್ಲಿಯ ಕೂಲಿಕಾರರ ವಿಷಯದಲ್ಲಿ ಕೊಟ್ಟ ಮಾಹಿತಿಯನ್ನು ಭಾಷಾಂತರಿಸಿ ಇದರಡಿಯಲ್ಲಿ ಕೊಟ್ಟಿರುತ್ತೇವೆ. ಅದನ್ನು ಓದಿ ಅಂಥ ಕೂಲಿಗಳನ್ನು ದೊರಕಿಸಿ ಕಳಿಸಿಕೊಡಲಿಕ್ಕೆ ಸಹಾಯ ಮಾಡಿದ ಮತ್ತು ಸಹಾಯ ಮಾಡುವ ಸರಕಾರ ಹಾಗು ಸ್ವತಂತ್ರ ನೌಕರರೂ, ಚಹಾಪಾನದ ಪುರಸ್ಕರ್ತರೂ, ಮತ್ತು ಚಹಾಪಾನದ ಅಭ್ಯಾಸವಿಟ್ಟವರೂ ತಮ್ಮ ತಮ್ಮ ಪಾಲಿಗೆ ಬರುವ ಪುಣ್ಯಾಂಶವನ್ನು (!) ಸ್ಮರಿಸಿ, ಅದನ್ನು ಸ್ವೇಚ್ಛೆಯಿಂದ ಸ್ವೀಕರಿಸಲಿಕ್ಕೆ ತಯಾರಿರುವರೋ ಎಂಬದನ್ನು ವಿಚಾರಿಸಿ ಮುಂದರಿಸಬೇಕೆಂದು ಬೇಡಿಕೊಳ್ಳುತ್ತೇವೆ.

(೧) ಕೂಲಿಗಳ ಪ್ರಕೃತಿಮಾನ ಮತ್ತು ಔಷಧೋಪಚಾರ.

ಇಲ್ಲಿ ಸಂಧಿವಾತವಿಲ್ಲದ ಒಬ್ಬ ಮನುಷ್ಯನು ಸಹ ಇಲ್ಲ. ಕೆಲವೆಡೆಯಲ್ಲಿ ಶೀತ ಜ್ವರವಿದೆ. ಕಾಲರಾ, ಅತಿಸಾರ, ಮತ್ತು ಪ್ಲೇಗ್ ರೋಗಗಳ ಉಪದ್ರವಗಳಿಗೂ ಕೊರತೆಯಿಲ್ಲ. ಔಷಧೋಪಚಾರಕ್ಕಾಗಿ ಇರಿಸಿದ ಜನರ ಮೇಲೆ ಎಳ್ಳಕಾಳಷ್ಟು ಸಹ ಕೂಲಿಕಾರರಿಗೆ ವಿಶ್ವಾಸವಿಲ್ಲ.

ಪ್ರತಿಯೊಬ್ಬ ಅಸ್ವಸ್ಥ ಮನುಷ್ಯನಿಗೆ ಅಕ್ಕಿಯನ್ನು ಕೊಡಬೇಕೆಂದು ಕಾಯಿದೆಯುಂಟು; ಆದರೆ ಅಂಥ ಅಕ್ಕಿ ದೊರೆಯುವ ಭಾಗ್ಯವಂತನೇ ಅಪರೂಪ. ಸುಪರಿಂಟೆಂಡೆಂಟ ಸಾಹೇಬರು ಹೇಳುತ್ತಾರೆ: "ಅಕ್ಕಿಯೊಂದೇ ಯಾಕೆ; ಹಾಲು, ಗಂಜಿ, ಸಾಬೂದಾಣಿ ಮತ್ತು ಬೇಕಾದಬೇಕಾದ ಪದಾರ್ಥಗಳು ಕೂಲಿಗಳಿಗೆ ಕೊಡಲ್ಪಡುತ್ತವೆ." ಆದರೆ ನನಗೆ ಬರೆಯಲಿಕ್ಕೆ ಅತ್ಯಂತ ಕೆಡಕೆನಿಸುವದೇನಂದರೆ– ನಾನು ಅತ್ಯಂತ ನಿಷ್ಪಕ್ಷಪಾತಪಣದಿಂದಲೂ, ಮತ್ತು ಸೂಕ್ಷ್ಮ ರೀತಿಯಿಂದಲೂ, ಈ ಕೂಲಿಗಳ ತಕರಾರುಗಳ ಚೌಕಶಿ ಮಾಡಿದಾಗ್ಯೂ ಕೂಡ, ಸಾಹೇಬರ ಹೇಳಿಕೆಗೆ ವಸ್ತುಸ್ಥಿತಿಯ ಆಧಾರವು ಎಳ್ಳಷ್ಟೂ ಇಲ್ಲ. ಯಾವನೊಬ್ಬ ಕೂಲಿಯು ಬೇನೆ ಬಿದ್ದಾಗ ಅವನ ಶುಶ್ರೂಷೆ ಮಾಡಲಿಕ್ಕೆ ಅವನ ಆಪ್ತರ್ಯಾರೂ ಇಲ್ಲದಿದ್ದರೆ ತೀರಿತು; ಅವನು ಬದುಕಿ ಉಳಿಯುವ ಆಶೆಯನ್ನೇ ಬಿಟ್ಟುಬಿಡಬೇಕು. ಅವನು ಸಾಯುವದು ನಿಶ್ಚಿತವೇ! ಕೂಲಿ ಹೆಂಗಸಿಗೆ ಪ್ರಸೂತಿಯ ನಂತರ ಒಂದು ಬುಶೆಲ್ ಅಕ್ಕಿಯನ್ನೂ, ರೋಖ ಎರಡು ರೂಪಾಯಿಗಳನ್ನೂ ಕೊಡುತ್ತಾರೆ. ಮತ್ತು ಅದರಲ್ಲಿಯೂ ಆ ಎರಡು ರೂಪಾಯಿಗಳನ್ನು ಆ ಹೆಂಗಸಿನ ಹೆಸರಿನ ಖಾತೆ ಪುಸ್ತಕದಲ್ಲೇ ಸೇರಿಸುತ್ತಾರೆ!! ಚಹಾ ತೋಟಗಳಲ್ಲಿ ಸೂಲಗಿತ್ತಿಯರನ್ನು ಸಂಬಳಕ್ಕೆ ನೇಮಿಸಿರುವದಿಲ್ಲ; ಮತ್ತು ತಾತ್ಪೂರ್ತಿಕವಾಗಿ ಸಹ ಕರೆತರಿಸುವದಿಲ್ಲ !!

ಕೂಲಿಗೆ ಜಡ್ಡಾದ ಕೂಡಲೆ ಅವನನ್ನು ದವಾಖಾನೆಗೆ ಕಳಿಸುವದು ಸುಪರಿಂಟೆಂಡೆಂಟರ ಕರ್ತವ್ಯವಿರುತ್ತದೆಂದು ಕಾಯಿದೆ ಇರುತ್ತದೆ; ಹಾಗೆ ಮಾಡದಿದ್ದರೆ ಅದು ಕಾಯಿದೆಯ ದೃಷ್ಟಿಯಿಂದ ಗುನ್ಹೆಯಾಗಿರುತ್ತದೆ. ಆದರೆ, ಕಾಯಿದೆಯಲ್ಲಿಯ ಕಲಮು ಕಾಯಿದೆಯಲ್ಲೇ ಉಳಿಯುತ್ತಿದೆ! ಕೂಲಿಗಳು ಅತಿಶಯ ಜಡ್ಡಾಗಿ ಎಚ್ಚರತಪ್ಪುವವರೆಗೂ ಗುಡಿಸಲಲ್ಲೇ ಬಿದ್ದಿರುವದನ್ನು ನಾನು ಕಣ್ಣಾರೆ ನೋಡಿದ್ದೇನೆ.

ಕೆಲಕೆಲವು ತೋಟಗಳಲ್ಲಿಯ ಕೂಲಿಗಳ ಮರಣದ ಪ್ರಮಾಣವನ್ನು ನೋಡಿ ನಡುಗುವಂತಿದೆ. ....೩೦೦ ಕೂಲಿಗಳಲ್ಲಿ ಒಂದೇ ವರ್ಷದಲ್ಲಿ ೭೭ ಮಂದಿ ಖಲಾಸು!. ....ಹೊಸದಾಗಿ ಹುಟ್ಟಿದ ೩೦ ಮಕ್ಕಳಲ್ಲಿ ೧೫ ನಿಖಾಲಿ!!

(೨) ಆಹಾರ, ಕೆಲಸ, ಸಂಬಳ ಮತ್ತು ಲೆಕ್ಕಪಟ್ಟಿ.

ಯಾವಾಗಲೂ ಅಕ್ಕಿಯನ್ನು ತೋಟಗಾರರೇ ಪೂರೈಸುತ್ತಾರೆ. ಅದರ ದರವು ಒಂದೊಂದು ಬುಶೆಲ್ಲಿಗೆ (ಚಿಮಣಿ ಎಣ್ಣೆಯ ಡಬ್ಬಿಗೆ =೧೨ ಪಾವು !) ೪॥ ಯಿಂದ ೬॥ ರೂಪಾಯಿಗಳ ವರೆಗೆ ಬೀಳುತ್ತದೆ ... ತೋಟವು ಪಟ್ಟಣದಿಂದ ದೂರವಿದ್ದ ಪ್ರಮಾಣದಿಂದ ಅಕ್ಕಿಯ ದರವೂ ಹೆಚ್ಚುತ್ತದೆ; ಮತ್ತು ಅಷ್ಟೇ ಪ್ರಮಾಣದಿಂದ ಹೆಚ್ಚೆಚ್ಚು ಕೆಟ್ಟ ಅಕ್ಕಿಯು ಸಿಗುತ್ತದೆ...... ದರವೇಳೆ (ಭಾಗ್ಯಹೀನರಾದ) ಕೂಲಿಗಳು ಅದನ್ನೇ ತಿನ್ನಬೇಕಾಗುತ್ತದೆ.

ಮೇಲಾಗಿ ಅಕ್ಕಿಯನ್ನು ಕೊಡುವದು ಸಹ ಪ್ರತಿ ವಾರಕ್ಕೆ ನಿಯಮಿತ ಪ್ರಮಾಣದಿಂದಲೇ. ಒಬ್ಬೊಬ್ಬ ಗಂಡಸಿಗೆ ಕಾಲು ಬುಶೆಲ್ಲು, ಹೆಂಗಸಿಗೆ ಒಮ್ಮೆ ಕಾಲು ಮತ್ತೊಮ್ಮೆ ಅಷ್ಟಮಾಂಶ ಬುಶೆಲ್ಲು, ಮತ್ತು ಕೂಲಿ ಮಾಡುವ ಹುಡುಗ–ಹುಡುಗಿಯರಿಗೆ ಒಂದೇ ಅಷ್ಟಮಾಂಶ ಬುಶೆಲ್ಲು (೧॥ ಪಾವು ೭ ದಿನಕ್ಕೆ) ಇಲ್ಲಿ ನನ್ನ ಪಿಡಿತಕ್ಕ ಮತ್ತೊಂದು ಮಹತ್ವದ ಸಂಗತಿಯೆಂದರೆ ಕೂಲಿಕಾರರಿಗೆ ಕೊಡತಕ್ಕ ಕೆಲವು ಸಂಬಳದ ಬದಲಾಗಿ (ಮುರಕೊಂಡು) ಈ ಅಕ್ಕಿಯನ್ನು ಕೊಡುತ್ತಾರೆ. ಅರ್ಥಾತ್ ವಾರದಲ್ಲಿ ನಿಶ್ಚಿತ ಪಡಿಸಿದ ಕೆಲಸದ ದಿವಸ ಕೂಲಿಯವನು ಕೆಲಸದ ಮೇಲೆ ಹಾಜರಿರದಿದ್ದರೆ, ಸಂಬಳವು ಕಡಿಮೆಯಾಗುತ್ತದೆ. ಒಮ್ಮೊಮ್ಮೆ ಏನೇನೂ ಸಿಗುವದೇ ಇಲ್ಲ. ಒಟ್ಟಿಗೆ ಕೂಲಿಯವನು ಹಾಜರಿರದಿದ್ದರೆ, ಯಾ ಬೇನೆಬಿದ್ದರೆ ತೀರಿತು; ಅವನ ಅನ್ನ–ಪಾನಗಳು ಬಂದಾಗಲೇ ಬೇಕು! ಇಲ್ಲಿ ಹೇಳತಕ್ಕ ಇನ್ನೊಂದು ಸಂಗತಿಯೇನಂದರೆ – ಬೇನೆ ಬಿದ್ದ ಕೂಲಿಯ ಮನೆಗೆ ತೋಟಗರಿಂದ ಪುಕ್ಕಟೆಯಾಗಿ ಅಕ್ಕಿ ದೊರೆಯಬೇಕೆಂದು ಕಾಯಿದೆ ಇರುತ್ತದ್ದೂ, ಅದರಂತೆ ಅಕ್ಕಿ ದೊರೆಯುವದು ಅತ್ಯಂತ ಅಪರೂಪ.

ಮಸಾಲೆಯ ಸಾಮಾನುಗಳನ್ನು ಕೊಂಡು ತರಲಿಕ್ಕೆ ಅವಶ್ಯವಿರುವಷ್ಟು ರೋಖ ಹಣವು ಸಹ ಕೂಲಿಯವರ ಹತ್ತರ ಬಹುತರವಾಗಿ ಇರುವದೇ ಇಲ್ಲ.

ಕೆಲವು ಕಡೆಯಲ್ಲಿ ಕುಡಿಯುವ ನೀರನ್ನು ದೂರದಿಂದ ತರಬೇಕಾಗುತದೆ; ಕೆಲವೆಡೆಯಲ್ಲಿ ಬಾವಿಗಳೂ ಇವೆ.

ಸಿಲೋನ ಸರಕಾರವು ಕಾರುಣ್ಯಹೃದಯದಿಂದ ಶೇಂದಿ (ಸರಾಯಿ) ಯ ಅಂಗಡಿಯನ್ನು ಮಾತ್ರ ಪ್ರತಿಯೊಂದು ತೋಟದಲ್ಲಿ ಹತ್ತರದಲ್ಲೇ ಸ್ಥಾಪಿಸಿರುತ್ತದೆ!!

ತೋಟದೊಳಗಿನ ಮಧ್ಯಾಹ್ನದ ಊಟಕ್ಕಾಗಿ ಎಲ್ಲಿಯೂ ಬಿಡುವನ್ನು ಕೊಡುವದಿಲ್ಲ, ಆದ್ದರಿಂದ ಇತರ ಕೂಲಿಕಾರರಿಗೆ ಇಡೀ ೨೪ ತಾಸುಗಳಲ್ಲಿ ಎರಡೇ ಊಟಗಳು ಸಿಗುತ್ತವೆ; ಅವುಗಳಲ್ಲಿ ಒಂದು ಬೆಳಿಗ್ಗೆ ೬ ಘಂಟೆಯೊಳಗೆ; ಮತ್ತೊಂದು ದೀಪ ಹಚ್ಚಿದ ಮೇಲೆ!

(೩) ಕೆಲಸಗಳು.

ಹೂಡುವದು, ಗೊಬ್ಬರ ಹಾಕುವದು, ಹೊರಗಳ ಕಸ ಹೊರುವದು ಮುಂತಾದವು........ ನಿಜವಾಗಿ ನೋಡಿದರೆ, ಕೆಲಸಗಳೇನು ಅಷ್ಟು ಕಠಿಣವಿರುವದಿಲ್ಲ. ಆದರೆ, ಅವರ ಮೇಲೆ ದೇಖರೇಖಿ ಇಡುವ ಅಧಿಕಾರಿಗಳು – ಸಬ್ ಕಂಗನಿ, ಹೆಡ್-ಕಂಗನಿ – ಮತ್ತು ಕಂಡಕ್ಟರ ಇವರ ಮೂಲಕ ಕೆಲಸವು ಬಹಳ ಕಠಿಣವೆನಿಸುತದೆ. ಈ ಮೇಲಧಿಕಾರಿಗಳಿಗೆ ಆಗಾಗ್ಗೆ ಲಂಚವನ್ನು ಕೊಡಬೇಕಾಗುತ್ತದೆ. ಆ ಬಗ್ಗೆ ಕೆಲವು ಕೂಲಿಕಾರರು ತಕರಾರು ಮಾಡುತ್ತಾರೆ. ಒಟ್ಟಿಗೆ ಇವರ ದೋಷವು ಸುಪರಿಂಟೆಂಡೆಂಟರದೇ, ಯಾಕಂದರೆ, ಕೂಲಿಕಾರರ ವಿರುದ್ಧವಾದ ತಕರಾರುಗಳನ್ನು ಕೇಳಲಿಕ್ಕೆ ಮಾತ್ರ ಇವರು ಒಂದು ಕಾಲಿನ ಮೇಲೆ ಸಿದ್ಧರಿರುತ್ತಾರೆ.

ಕೆಲವು ಕಡೆಯಲ್ಲಿ ಬೆಳಿಗ್ಗಿನ ೬ ರಿಂದ ಸಾಯಂಕಾಲ ೪ ರ ವರೆಗೆ ಒಂದೇ ಸವನೆ ೧೦ ತಾಸುಗಳ ವರೆಗೆ ಪ್ರತಿ ದಿನ ಕೆಲಸ ಮಾಡಬೇಕಾಗುತ್ತದೆ. ಒಮ್ಮೊಮ್ಮೆ ಇದಕ್ಕೂ ಹೆಚ್ಚು ಕಾಲ ದುಡಿಯಬೇಕಾಗುತ್ತದೆ. ಇಷ್ಟಾಗಿಯೂ ಮಧ್ಯಾಹ್ನದ ಊಟಕ್ಕೆ ಪುರಸತ್ತು ಇಲ್ಲ! ಈ ಕುರಿತು ನಾನು ಅಲ್ಲಿಯ ಒಬ್ಬ ಸುಪರಿಂಟೆಂಡೆಂಟನ ಹತ್ತರ ಪ್ರಶ್ನಿಸಿದಾಗ, ಅವನು ಹೂಡಿದ ತರ್ಕಶಾಸ್ತ್ರದ ಪರಿ:—

"ದೊಡ್ಡ ದೊಡ್ಡ ಚಹಾದ ತೋಟಗಳಲ್ಲಿ ಕೂಲಿಕಾರರು ಕೆಲಸಕ್ಕಾಗಿ ತಾವು ವಾಸಿಸುವ ಸ್ಥಳದಿಂದ ಬಹಳ ದೂರ ಬರಬೇಕಾಗುತ್ತದೆ. ಆದ್ದರಿಂದ ಮಧ್ಯಾಹ್ನದ ಊಟಕ್ಕೆ ಹೋಗಿ ತಿರುಗಿ ಬರುವಷ್ಟು ಅವಕಾಶವನ್ನು ಕೊಡುವದು ಶಕ್ಯವಿಲ್ಲ.

ಚಿಕ್ಕ ಚಿಕ್ಕ ಚಹಾದ ತೋಟಗಳಲ್ಲಿಯೂ ಇದೇ ಪದ್ಧತಿ ಇರುತ್ತದೆ.

ಮೇಲಾಗಿ ಸುಪರಿಂಟೆಂಡೆಂಟರು ಸಹ ಬೆಳಿಗ್ಗಿನ ಫಳಾರದ ಮೇಲೆಯೇ ೧೨–೧ ಘಂಟೆಯ ವರೆಗೆ ಉಳಿದು ಆ ಮೇಲೆ ಉಣ್ಣುತ್ತಾರೆ. ಅಂದ ಮೇಲೆ ಬೆಳಿಗ್ಗೆ ಹೊಟ್ಟೆತುಂಬ ಉಂಡು ಬಂದ ಕೂಲಿಕಾರರು ೧೨ ಘಂಟೆಯ ಮೇಲೆ ಇನ್ನೂ ೪-೫ ತಾಸು ದುಡಿಯಲಿಕ್ಕೆ ಏನೂ ತೊಂದರೆಯಾಗಲಿಕ್ಕಿಲ್ಲ."

ಎಲ್ಲಿಯವರೆಗೂ ೫-೫॥ ಘಂಟೆಯ ಘಂಟಿ ಬಿಡುಗಡೆಯೋ ಆಗುವದಿಲ್ಲ. ಒಂದಾನುವೇಳೆ ವೇಳೆಗೆ ಸರಿಯಾಗಿ ಗಿಡ-ಗಣತಿಯ ಕಾಮವೂ, ಹೆಸರುಗಳನ್ನು ಬರಿಸುವದು ಮುಂತಾದ ಕೆಲಸಗಳಿಗೆ ಒಂದು ತಾಸಾದರೂ ಕಳೆಯುತ್ತದೆ. ಒಟ್ಟಿಗೆ ತೋಟದ ಕೆಲಸವು ಬೆಳಿಗ್ಗೆ ೬ ರಿಂದ ಸಾಯಂಕಾಲ ೬ ಘಂಟೆಯ ವರೆಗೆ ಸಾಗುತ್ತದೆ.

ಬಹುತರ ನೂರರಲ್ಲಿ ೮೦-೯೦ ಜನರಿಗೆ ಪ್ರತಿ ದಿನಕ್ಕೆ ೫॥ ಆಣೆ ಸಂಬಳ ಬೀಳುತದೆ.........ಎಲ್ಲ ತೋಟಗಳಲ್ಲಿ ಹೆಂಗಸರಿಗೆ ಪ್ರತಿ ದಿನ ೪ ಆಣೆ ಕೂಲಿ ದೊರಕುತ್ತದೆ. ಅದು ಸಹ ನೇಮಿಸಿಕೊಟ್ಟ ಕೆಲಸವೆಲ್ಲ ಮುಗಿಸಿಕೊಟ್ಟರೆ, ಮತ್ತು ಕಡಿಮೆ ಕೆಲಸ ಮಾಡುವವರಿಗೆ ಪೆಟ್ಟು ಬೀಳುತ್ತವೆ. ಮತ್ತು ಹೆಚ್ಚು ಕೆಲಸ ಮಾಡುವವರಿಗೆ ಇನಾಮು ಸಿಗುತ್ತದೆ; ಆದರೆ, ಹೆಚ್ಚು ಕೆಲಸ ಮಾಡುವದು ಶಕ್ಯವೇ ಇರುವದಿಲ್ಲ.

ನೇಮಿಸಿಕೊಟ್ಟಷ್ಟು ಕೆಲಸ ಮಾಡಿದ ಹುಡುಗ–ಹುಡುಗಿಯರಿಗೆ ಪ್ರತಿ ದಿನ ೨॥ ಆಣೆ ದೊರೆಯುತ್ತದೆ.

ಒಟ್ಟಿಗೆ ಬೇನೆಬೀಳದೆ ಸತತ ೨೬ ದಿನ (ಆದಿತ್ಯವಾರ ಕಳೆದು) ಕೆಲಸ ಮಾಡಿದವನಿಗೆ ತಿಂಗಳಿಗೆ ೧೦॥ ರೂ

ಪಾಯಿಗಳು ಸಿಗಬಹುದು; ಆದರೆ, ಅನೇಕರಿಗೆ ಬೇಸ-ಬೇಸರಿಕೆಗಳ ಮೂಲಕ ೭|| ರೂಪಾಯಿಗಳಿಗಿಂತ ಹೆಚ್ಚು ಸಂಬಳ ದೊರೆಯುವದೇ ಇಲ್ಲ

ಯಾರಿಗೂ ತಿಂಗಳಿಗೆ ೬ ರೂಪಾಯಿ ಗಳಿಗಿಂತ ಹೆಚ್ಚು ಸಂಬಳ ಕೈಯಲ್ಲಿ (ರೊಕ್ಕ) ದೊರೆಯುವದೇ ಇಲ್ಲ. ಬಹುತರ ೫ ರೂಪಾಯಿಗಳನ್ನು ಅಕ್ಕಿಗಾಗಿ, ಖರ್ಚು ತೆಗೆಯಲು, ೧—೧|| ರೂಪಾಯಿ ಗಳು ಮಾತ್ರ ಕಿಲ್ಕು ಉಳಿಯುತ್ತವೆ

ತಾತ್ಪರ್ಯ, ಕೂಲಿಕಾರರಿಗೆ ಸಿಕ್ಕುವ ಕೂಲಿಯು ಅವರ ನಿರ್ವಾಹಕ್ಕೆ ಸಹ ಸಾಕಷ್ಟು ಇರುವದು ಅಪ ರೂಪ. ... ವರ್ಷಕ್ಕೆ ಒಟ್ಟಿಗೆ ೧೦೦ ರೂಪಾಯಿ ಸಹ ಅನೇಕರಿಗೆ ಸಿಗುವದಿಲ್ಲ. ೬೫ ರೂಪಾಯಿ ಬರೇ ಅಕ್ಕಿಗಾಗಿ ಕಳೆಯಲು, ಉಳಿದದ್ದರಲ್ಲೇ ಮನೆ, ವಸ್ತ್ರ ಕಂಬಳಿ ಮುಂತಾದವುಗಳನ್ನು ದೊರಕಿಸಬೇಕಾಗುತ್ತದೆ, ಆದ್ದರಿಂದ ಅನೇಕರಿಗೆ ಸಾಲದಲ್ಲೇ ಬೀಳಬೇಕಾಗುತ್ತದೆ

ಅನುವಾದಕ.- ವಾಮನ ಅನಂತ ಪೈ, ಶಿರ್ಸಿ)

ಕಾನಡಾವೃತ್ತ.

ಮಿತಿ ಕ್ಷಯ ಸಂ। ಶ್ರಾವಣ ಶು। ೧೫ ವ ಸೋಮವಾರ

ಲೋಕಲ್ ಫಂಡಿನ ಪರಿಕೆ

ಭರತ ವಾಕ್ಯ.

ಲೋಕಲ್ ಫಂಡಿನ ಪರಿಕೆಯ ಕುರಿತು ನಾವು ಮಾಡಿದ ಪ್ರತಿಪಾದನೆಯು ಕೊನೆಗೆ ನಮ್ಮ ಜಿಲ್ಲಾ ಬೋರ್ಡಿನ ಪ್ರತಿನಿಧಿಗಳಿಗೆಲ್ಲ ಮಾನ್ಯವಾಯಿತೆಂದು ತಿಳಿದು ನಮಗೆ ಅತ್ಯಾನಂದವಾಗುತ್ತದೆ ಲೋಕಲ್ ಫಂಡಿನ ಪರಿಕೆಯ ಸೂಚನೆಯನ್ನು ತರಲು ಲೋಕನಿಯುಕ್ತ ಪ್ರತಿನಿಧಿಗಳಲ್ಲಾರೂ ಮುಂದಾಗಲಿಲ್ಲ. ಅಧ್ಯಕ್ಷರಾದ ಶ್ರೀ। ಗೋಪಿ ಮಹಾಬಲೇಶ್ವರ ಭಟ್ಟರವರು ಲೋಕಲ್ ಫಂಡಿನ ಪರಿಕೆಯನ್ನು ವಿಚಾರಿಸಲು ತೋರಿಸಿದ ನೋಟೀಸು ಗಾಬರಿಯಿಂದ ತೆಗೆದದ್ದೆಂದು, ನಾವಾಗಿ ಈಗ ಹೇಳಬೇಕೇನು? ಹಳ್ಳಿಗಳ ಆರೋಗ್ಯವು ಕೆಟ್ಟಿಂತೆ, ಸಾಂಪತ್ತಿಕ ಸ್ಥಿತಿಯಾದರೂ ಕೆಟ್ಟಿರುವದು. ಶಿಕ್ಷಣಯ ಮಾನವನ್ನು ಇನ್ನೂ ಹೆಚ್ಚಿಸಲು ಸರಕಾರ ಲಕ್ಷ್ಯದಲ್ಲಿ ಸೇರಿದ ಸ್ಥಾನಿಕ ಸ್ವರಾಜ್ಯ ಪರಿಷತ್ತು ತಯಾರಿಲ್ಲ ನಮ್ಮ ಜಿಲ್ಲಾ ಬೋರ್ಡಿನ ತರ್ಫೆಸಿಂದ ಪರಿಷತ್ತಿಗೆ ಹೋದ ಶ್ರೀ। ಪ್ರಭುಗಳವರು ಈ ವಿಚಾರವನ್ನು ಬೋರ್ಡಿಗೆ ಹೇಳಿ, ಸರಕಾರವು ಲೋಕಲ್ ಫಂಡನ್ನು ಏರಿಸುವ ಅಧಿಕಾರ ಕೊಡುವ ಕಾರಣವನ್ನು ಧ್ವನಿಸಿದರು. ಲೋಕಲ್ ಫಂಡನ್ನು ಏರಿಸಿದರೆ, ಅದರಿಂದಾ ಆಗುವ ಲೋಕೋಪಕಾರವಾದವನ್ನೂ, ಪ್ರಜಾಕ್ಷೋಭವನ್ನೂ ಜಿಲ್ಲಾ ಪ್ರತಿನಿಧಿಗಳೇ ಸಹಿಸಬೇಕು ಇದನ್ನೆಲ್ಲ ಆಲೋಚಿಸಿ ೧೭ ಮಂದಿ ಜಿಲ್ಲಾ ಪ್ರತಿನಿಧಿಗಳು ಶ್ರೀ। ಪ್ರಭುಗಳಿಗೆ ಬೆಂಬಲವನ್ನಿತ್ತಿದ್ದನ್ನು ನೋಡಿ, ನಮಗೆ ಸಂತೋಷವಾಗುತ್ತದೆ ಅವರಲ್ಲರನ್ನೂ ನಾವು ಅಭಿನಂದಿಸುವೆವು

ಲೋಕಲ್ ಫಂಡಿನ ವಿಷಯವು ಮಹತ್ವದ್ದೆಂದು, ನಮಗೂ ಒಪ್ಪಿಗೆಯಿದೆ ಆದರೆ, ಈ ವಿಷಯದ ಕುರಿತು ರಾ। ಮಾಸೂರರಿಗೆ ಯಾವ ಮಾಹಿತಿಯಿರುವದೆಂದು ನಮಗೇನು ತಿಳಿಯುವದಿಲ್ಲ ಬೋರ್ಡಿನಲ್ಲಿಯೂ ಅವರೇನು ಹೇಳಲಿಲ್ಲವಾಗಿ ನಮ್ಮ ಕಾರವಾರದ ಸುದ್ದಿಗಾರರು ತಿಳಿಸುತ್ತಾರೆ ಟಪ್ಪರ-ಮೆಕ್ಸವೆಲರವರ ವಚನಗಳಿಂದ ರಾ। ಮಾಸೂರರ ಪಠಣಶಕ್ತಿಯು ಜ್ಞಾನವಾಗಬಹುದು ಆದರೆ, ಅದರಿಂದ ನಮ್ಮ ಜಿಲ್ಲೆಯ ಸ್ಥಿತಿಯು ನಮಗೆ ಗೋಚರವಾಗದು ಜಿಲ್ಲಾ ಪ್ರತಿನಿಧಿಗಳೇನು ವಿಲಾಯತಿಯಿಂದ ಇಲ್ಲಿ ಬಂದು ಇಳಿದವರಲ್ಲ ಹಳ್ಳಿಗಳೊಡನೆ ಪ್ರತಿನಿತ್ಯವೆಂಬಂತೆ ಬಳಕೆ ಮಾಡುವವರು. ಇವರಿಗೆ ಟಪ್ಪರ-ಮೆಕ್ಸವೆಲರವರ ವಚನಗಳನ್ನು ಹೇಳಿ ಪ್ರಯೋಜನವೇನಿದೆ? ಇಷ್ಟು ಸಾಮಾನ್ಯ ಜ್ಞಾನವು ರಾ। ಮಾಸೂರರಿಗಿಲ್ಲವಾಗಿ ತಿಳಿದು ನಮಗೆ ವ್ಯಸನವಾಗುತ್ತದೆ ಲೋಕಲ್ ಫಂಡಿನ ಪರಿಕೆಯ ಕುರಿತು ಕೊನೆ ತನಕ ಒಂದು ಕೈ ನೋಡುವೆನೆಂದು ಮಹಾರಾಜಶ್ರೀಯವರು ಮಾತಾಡಲಿಲ್ಲ ಇದಕ್ಕೂ ಹೆಚ್ಚಿಗೆ ಇನ್ನೇನು ಹೇಳಬೇಕು ?

ಶ್ರೀ। ಗೋಪಿ ಮಹಾಬಲೇಶ್ವರ ಭಟ್ಟರವರು ರಾ। ಮಾಸೂರರಿಗೆ ಸಭೆಕರಲ್ಲಿ ಮೊಟ್ಟ ಮೊದಲು ಭಾಷಣ ಮಾಡಗೊಟ್ಟು, ತಮ್ಮ ಗುಣಗ್ರಾಹಕತೆಯನ್ನು ಸಿದ್ಧಪಡಿಸಿದರು ರಾ। ಮಾಸೂರರು ಮೆಂಬರರಲ್ಲದಿದ್ದರೂ, "ಗುಣಾಃ ಪೂಜಾಸ್ಥಾನಂ" ಎಂಬ ಕವಿ ವಚನದಂತೆ, ಶ್ರೀ। ಗೋಪಿಯವರು ಅವರಿಗೆ ಮನ್ನಣೆಯನ್ನಿತ್ತರು ಇದರಿಂದ ಒಂದು ಮಾತು ಸಿದ್ಧವಾಯಿತು ರಾ। ಮಾಸೂರರು ಇಷ್ಟು ಮಹತ್ವದ ಮನುಷ್ಯರಿದ್ದು, ಅವರಿಗೆ ನಮ್ಮ ಕುಮಟಾ ತಾಲೂಕಿನವರು ತಮ್ಮ ಪ್ರತಿನಿಧಿಗಳಾಗಿ ಆರಿಸಿ ಕೊಡದಿದ್ದದ್ದು ಮಹಾ ದೊಡ್ಡ ಪಾಪವು ಮತದಾರರಿಗೆ ಗುಣಗಳನ್ನು ಗ್ರಹಿಸುವ ಶಕ್ತಿಯಿಲ್ಲ ಕುಮಟಾ ತಾಲೂಕಿನೊಳಗಿನ ಪ್ರಮುಖರಾದರೂ ಅವರಿಗೆ ಕಳುಹಿಸಬಹುದಿತ್ತು. ಈಗಲಾದರೂ ಶ್ರೀ। ಗೋಪಿ ಮುಂತಾದ ಕುಮಟಾ ತಾಲೂಕಿನ ಪ್ರತಿನಿಧಿಗಳು ವಿಚಾರಿಸಿ, ಅವರಿಗೊಂದು ಆಸನವನ್ನು ಜಿಲ್ಲಾ ಬೋರ್ಡಿನಲ್ಲಿ ಸಂಗ್ರಹಿಸಿ ಕೊಡಬಹುದಲ್ಲವೇ? ಇಲ್ಲದಿದ್ದರೆ ಮಹತ್ವದ ವಿಷಯಗಳ ಮೇಲೆ ಮಾತಾಡಲು ರಾ। ಮಾಸೂರರಿಗೆ ಪುನಃ ಪುನಃ ಕರೆಯಬೇಕಾದೀತು ಉಳಿದ ಮೆಂಬರರಂತೆ ಅವರಿಗೆ ಭಕ್ತಿ ಕೊಡಕೊಳ್ಳಲಿಕ್ಕೂ ಮಾರ್ಗವಿಲ್ಲ.

ಇವೆಲ್ಲ ಸಂಗತಿಗಳ ಮೇಲಿಂದ ನಮ್ಮಲ್ಲಿಯ ಧುರೀಣರು ಲೋಕಲ್ ಫಂಡಿನ ಪರಿಕೆಯ ದೊಡ್ಡದೊಂದು ಚಕ್ರವ್ಯೂಹವನ್ನು ರಚಿಸಿದ್ದರೆಂದು ವಾಚಕರಿಗೆ ಕಾಣುವಂತಿದೆ. ಲೋಕನಿಯುಕ್ತ ಪ್ರತಿನಿಧಿಗಳಾದ ಶ್ರೀ।ಗೋಪಿ ಮಹಾಬಲೇಶ್ವರ ಭಟ್ಟರವರೂ ಈ ವ್ಯೂಹರಚನೆಯಲ್ಲಿ ಸೇರಿದಂತೆ ಯಾರಿಗಾದರೂ ಕಾಣಬಹುದು. ಪ್ರಾಥಮಿಕ ಶಿಕ್ಷಣಕ್ಕಾಗಿ ಲೋಕಲ್ ಫಂಡನ್ನೇರಿಸಬೇಕೆಂದು ಮೊಟ್ಟಮೊದಲು ಹೇಳಿ, ಆ ಬಳಿಕ, ಹಳ್ಳಿಗಳ ಅನಾರೋಗ್ಯತೆಯು ಬಾಲವನ್ನು ಅಧ್ಯಕ್ಷರು ಕಲ್ಪಿಸಿದರು. ಅನಾರೋಗ್ಯನಿವಾರಣೆಯ ಯಾ ಪ್ರಾಥಮಿಕ ಶಿಕ್ಷಣವಿಸ್ತಾರದ ಯಾವದೊಂದು ಯೋಜನೆಯನ್ನು ಅವರು ತಯಾರಿಸಲಿಲ್ಲ.ಯಾವದಕ್ಕೆ ಎಷ್ಟು ಖರ್ಚು ಬೇಕು, ಎಂಬುದನ್ನೂ ಅವರು ಹೇಳಲಿಲ್ಲ. ಲೋಕಲ್ ಫಂಡನ್ನು ಏರಿಸಬೇಕೆಂದು ರಾ। ಮಾಸೂರರಿಗೂ ಕುಮಟೆಯಿಂದ ಕರೆದೊಯ್ದರು. ಆದರೆ, ಪ್ರತಿನಿಧಿಗಳೇನು ಚಿಕ್ಕ ಬಾಲಕರಲ್ಲ ಲೋಕಲ್ ಫಂಡ ಪರಿಕೆಯ ಅರ್ಥವೂ, ಅದಕ್ಕಾಗಿ ಅಧ್ಯಕ್ಷರ ಹಾಗು ರಾ। ಮಾಸೂರರ ಒದ್ದಾಟವೂ ಪ್ರತಿನಿಧಿಗಳಿಗೆ ತಿಳಿಯುತ್ತದೆ, ಜನರಿಗೂ ತಿಳಿಯುತ್ತದೆ. ಸಂಕಾರಕ್ಕೂ ತಿಳಿದಿರಬೇಕು. ಸ್ಥಾನಿಕ ಸ್ವರಾಜ್ಯ ಪರಿಷತ್ತು ನಡೆದು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಸಂಪದಭಿವೃದ್ಧಿ ಮಾಡುವ ವಿಚಾರ ನಡೆದಾಗ, ಲೋಕಲ್ ಫಂಡಿನ ಏರಿಕೆಯು ಕುದುರೆಯನ್ನೋಡಿಸುವದು ಕೇವಲ ದುಷ್ಟತನವಲ್ಲವೇ? ಅಧ್ಯಕ್ಷರಾದ ಶ್ರೀ। ಗೋಪಿ ಮಹಾಬಲೇಶ್ವರ ಭಟ್ಟರವರು ದೊಡ್ಡ ಜಮೀನದಾರರಿದ್ದ ಮೂಲಕ, ಅವರಿಗೆ ಬೇಸಾಯಗಾರರ ಹಾಗು ಬೇಸಾಯಗಾರರ ಒಡೆಯರ ಸ್ಥಿತಿ_ಗತಿಯು ಪ್ರತ್ಯಕ್ಷ ಗೊತ್ತಿರಬೇಕೆಂದು ನಮ್ಮ ಅಂದಾಜಿತ್ತು, ಹಾಗೆ ತಮಗೆ ಗೊತ್ತಿತ್ತೆಂದು ಹಿಂದಿನ ಬೋರ್ಡಿನಲ್ಲಿ ಅವರು ಸಿದ್ಧಗೊಳಿಸಿದ್ದರು. ಆಗ ಮಾತ್ರ ಅವರು ಸಭಾಸದರಿದ್ದರು! ಜವಾಬದಾರಿಯಿದ್ದಿಲ್ಲ ಈಗ ಮಾತ್ರ ಅಧ್ಯಕ್ಷಸ್ಥಾನದ ಮುಖ್ಯತಮವಾದ ಜವಾಬದಾರಿಯು ಅವರ ತಲೆಯ ಮೇಲೆ ಬಂದಿದೆ. ಆದರೆ, ಇವರಂತೆಯೇ ಇಲಾಖೆಯೊಳಗಿನ ಇತರ ಅಧ್ಯಕ್ಷರ ಮೇಲೂ ಬಂದಿರುವದು, ಸರಕಾರದ ಮೇಲೂ ಜವಾಬದಾರಿಯಿರುವದು. ಇದನ್ನೆಲ್ಲ ವಿಚಾರಿಸಿ, ಶ್ರೀ। ಗೋಪಿಯವರು "ಬಡ ಬೇಸಾಯಗಾರರನ್ನು ದಣಿಸುವ ವ್ಯೂಹರಚನೆಯಲ್ಲಿ ಪ್ರವೇಶಗೊಂಡಿರದಿದ್ದರೆ, ನಮಗೆ ಆನಂದವೆನಿಸುತ್ತಿತ್ತು. ಜಿಲ್ಲಾ ಪ್ರತಿನಿಧಿಗಳು ಮರೆಮಾಚದೆ ತಮ್ಮ ಮತವನ್ನರುಹಿ,ಲೋಕಮತವನ್ನು ದಬ್ಬಿ ಹಾಕುವವರಿಗೆ ಚೆನ್ನಾಗಿ ಬುದ್ಧಿ ಗಲಿಸಿರುವರು. ಇದ ನಿಜವಾಗಿ ಆನಂದದಾಯಕ ನೋಟವು. ಇಂಥ ಪ್ರತಿನಿಧಿಗಳು ಯಾವದೇ ಸಂಸ್ಥೆಯಲ್ಲಿದ್ದರೂ, ಪ್ರಜೆಗಳಿಗೆ ಕಲ್ಯಾಣವಾಗಲೇ ಬೇಕು.

ಇಂದಿಗೆ ಲೋಕಲ್ ಫಂಡಿನ ಪರಿಕೆಯ ಭರತವಾಕ್ಯವನ್ನು ಹೇಳುವಾಗ, ನಮಗೆ ಆನಂದವಾಗುತ್ತದೆ. ಲೋಕಪ್ರತಿನಿಧಿಗಳು ಲೋಕಮತವನ್ನು ನಿದಾಕ್ಷಿಣ್ಯದಿಂದ ಪ್ರತಿಪಾದಿಸಿ, ಮತದಾರರ ಮಾನವನ್ನೂ, ಧನವನ್ನೂ ಕಾಯ್ದಿರುವರು; ಯಾರ ದಾಕ್ಷಿಣ್ಯಕ್ಕೂ ಬಲಿಬೀಳದೆ, ದುರ್ಬಲಕ್ಕೂ ನಸ್ಕರಾಗಿ ಮತದಾನ ಮಾಡಲಿಲ್ಲ. ಲೋಕಲ್ ಫಂಡಿನ ಪರಿಕೆಯ ಚಳವಳಿಯಿಂದ ಲೋಕಮತದ ಸಾಮರ್ಥ್ಯವು ಬೈಲಿಗೆ ಬಂದಿದೆ. ಲೋಕಮತಕ್ಕನುಕೂಲವಾಗಿ ಲೋಕಾನುಕೂಲತೆಗಳನ್ನು ಪ್ರಮಾಣಪೂರ್ವಕವಾಗಿ ನಡಿಸುವವರಿಗೆ ಮಾತ್ರ ಲೋಕಮತದ ಬೆಂಬಲವಿದೆ, ಆತ್ಮಗೌರವಕ್ಕಾಗಿ ಲೋಕಾನುಕೂಲತೆಗಳ ವಿಚಾರ ಮಾಡದಿದ್ದವರಿಗೆ ಲೋಕಮತವು ತೃಣಪ್ರಾಯವಾಗಿ ಲೆಕ್ಕಿಸುತ್ತದೆ. ಲೋಕಮತದಲ್ಲಿ ವಿವೇಕಶಕ್ತಿಯು ಈಗ ಪ್ರಾಪ್ತವಾಗಿರುವದು, ಕೈಬಳಿ ನೋಡುವದಕ್ಕಾಗಿ ಕನ್ನಡಿ ತೋರಿಸಲು ಮಹತ್ವದ ಮನುಷ್ಯರು ಬೇಕಾಗಿಲ್ಲ. ಇದೇ ಲೋಕಲ್ ಫಂಡಿನ ಪರಿಕೆಯ ಭರತ ವಾಕ್ಯವು. ಜಿಲ್ಹಾ ಪ್ರತಿನಿಧಿಗಳೆಲ್ಲರೂ ಇದೇ ಧೋರಣದಿಂದ ನಡೆದರೆ, ಪ್ರಜೆಗಳಿಗೆಲ್ಲ ಬಹಳ ಹಿತವಾಗುವದು. ಲೋಕಪ್ರತಿನಿಧಿಗಳೆಂಬ ಹೆಸರು ಸಾರ್ಥಕವಾಗುವದು.

ಸ್ಫುಟ ಸೂಚನೆಗಳು.

೧. ಬಂಗಾಲದ ಅರಸರು ಹಿಮ್ಮೆಟ್ಟಿದರು. ಕಳೆದ ತಾರೀಖು ೧೯ ನೇ ಗುರುವಾರಕ್ಕೆ ಬಂಗಾಲದ ಅರಸರು ೧೪೪ನೇ ಕಲಮಿನನ್ವಯ ಹೊರಡಿಸಿದ ಹುಕ್ಮಿಯನ್ನು ಹಿಂತಿರುಗಿ ಕೊಡಲು ಸರಕಾರಿ ವಕೀಲರಾದ ಮಿ॥ ದಿವಾಕರರವರು ಅರ್ಜಿ ಮಾಡಿದರು. "ಪಂಡಿತ ಮಾಲವೀಯರವರು ಅಗಸ್ಟ ತಿಂಗಳಿನಲ್ಲಿ ಕಲಕತ್ತೆಗೆ ಬರಲಿದ್ದರು; ಮುಲ್ಕಿ ತಿಂಗಳಿನಲ್ಲಿಯೇ ದೊಂಬಿಯ ಸಂಭವವಾಗಿತ್ತು. ಆದರೆ, ಪ್ರಜಾಶಕ್ತಿವು ಇನ್ನೂ ಬಲಗಿಂದೊಳಗೆ ಪ್ರಸ್ತಬ್ಧವಾಗಿತ್ತು. ಪಂಡಿತ ಮಾಲವೀಯರವರು ಕಳೆದ ಬಾರಿ ಕಲಕತ್ತೆಯಿಂದ ತೆರಳುವಾಗ ಮಾಡಿದ ಭಾಷಣದಿಂದ ಹಿಂದೂ ಮುಸಲ್ಮಾನರುಗಳ ಚಿತ್ತಪ್ರಕೋಪವಾಗುವಂತಿತ್ತೆಂದು ಅಧಿಕಾರಿಗಳ ಅಭಿಪ್ರಾಯವಾಗಿತ್ತು. ಅದರಿಂದ ಅವರಿಗೆ ಕಲಕತ್ತೆಯಲ್ಲಿ ಬಾರದಂತೆ ಸೂಚಿಸುವದರಿಂದ ಇನ್ನು ಮುಂದೆ ದೊಂಬಿಯಾಗಲಿಕ್ಕಿಲ್ಲೆಂದು ಅಧಿಕಾರಿಗಳ ಅಭಿಪ್ರಾಯವಾಗಿ, ಕ್ರಿ. ಪ್ರೊ. ಕೋಡ ೧೪೪ ನೇ ಕಲಮಿನನ್ವಯ ಪ್ರತಿಬಂಧಕ ಹುಕುಮು ಕೊಡಲಾಗಿತ್ತು. ಪಂಡಿತ ಮದನಮೋಹನ ಮಾಲವೀಯರವರು ಮೆಜಿಸ್ಟ್ರೇಟರ ಮುಂದೆ ಹಾಜರಾಗಿ ಹುಕುಮನ್ನು ಕಾಯಿದೆಯ ಕ್ರಮಕ್ಕನುಸರಿಸಿ ತಿದ್ದುಪಡಿ ಮಾಡಿಕೊಳ್ಳಬಹುದಾಗಿತ್ತು. ಅದನ್ನು ಬಿಟ್ಟು, ಹುಕುಮನ್ನೇ ಉಲ್ಲಂಘಿಸಿ ಸಾರ್ವಜನಿಕ ಶಾಂತತೆಯ ಪಾಲನೆಗೆ ಮಾಲವೀಯರವರು ದೊಡ್ಡದೊಂದು ಗಂಡಾಂತರವನ್ನು ಉಂಟುಮಾಡಿದರು. ಮೆಜಿಸ್ಟ್ರೇಟರಿಗೆ ಈ ಸಂಗತಿ ತಿಳಿಸಲು, ಮೆಜಿಸ್ಟ್ರೇಟರು ಸರಕಾರಿ ಹುಕುಮನ್ನು ಉಲ್ಲಂಘಿಸಿದ ಮೂಲಕ ಇಂಡಿಯನ್ ಪಿನಲ್ ಕೋಡ ೧೮೮ ನೇ ಕಲಮಿನನ್ವಯ ಪ್ರಕರಣವನ್ನು ಕೈಕೊಂಡರು. ಪಂಡಿತ ಮಾಲವೀಯರವರು ಮಾಡಿದ ಭಾಷಣದ ರಿಪೋರ್ಟು ಈಗ ಸರಕಾರದ ಕೈಸೇರಿದೆ; ಅದು ಸಾರ್ವಜನಿಕ ಶಾಂತತಾಭಂಗವಾಗುವಂಥ ಭಾಷಣವಲ್ಲವಾಗಿ ಸರಕಾರದ ಅಭಿಪ್ರಾಯವಾಗಿದೆ. ಇದಲ್ಲದೆ ಈ ಭಾಷಣವಾದಂದಿನಿಂದ ಈವರೆಗೆ ಕಲಕತ್ತೆಯಲ್ಲಿ ಎಲ್ಲಿಯೂ ಶಾಂತತಾಭಂಗವಾಗಲಿಲ್ಲ. ಆದರಿಂದ ಸರಕಾರವು ಈ ಹುಕ್ಮಿಯನ್ನು ಕೋರ್ಟಿನ ಅಪ್ಪಣೆ ಪಡೆಕೊಂಡು ಹಿಂತೆಗದುಕೊಳ್ಳಲು ನನಗೆ ಅಜ್ಞಾಪಿಸಿದೆ," ಎಂಬದಾಗಿ ಸರಕಾರಿ ವಕೀಲರು ಹೇಳಿ, ಬಂಗಾಲದ ಅರಸರ ಸೋಲನ್ನು ಜಾಹೀರುಪಡಿಸಿದರು. ಡಾ॥ ಮುಂಜೆಯವರ ಮೇಲಣ ಹುಕ್ಮಿಯನ್ನೂ ಇದೇ ಪ್ರಕಾರ ಸರಕಾರವು ಹಿಂತೆಗೆದುಕೊಂಡಿರುವದೆಂದು ಹೇಳಲಾಯಿತು.

೨. ಪಂಡಿತ ಮಾಲವೀಯರವರ ಕಾಯಿದೆಭಂಗವು ನಿಜಮತ್ತು ನಿರ್ದೋಷಿತವಾಯಿತೆಂದು ತಿಳಿಸಲು ನಮಗೆ ಸಂತೋಷವಾಗಿದೆ. ಕಾಯಿದೆಯ ಭಂಗವನ್ನು ಅಧಿಕಾರಿ ಪುರುಷರು ಕೈಕೊಂಡರೆ, ಸರಕಾರದ ನಿರಂಕುಶ ವೃತ್ತಿಯು ಹ್ಯಾಗೆ ನಿಯಂತ್ರಣ ಹೊಂದುತ್ತದೆಂದು ಸರಕಾರಿ ವಕೀಲರ ಭಾಷಣದ ಮೇಲಿಂದ ಸ್ಪಷ್ಟವಾಗುವಂತಿದೆ. ಅರಸರು ಈ ಹುಕುಮನ್ನು ಹೊರಡಿಸುವಾಗ, ಯಾವ ಮುನಸ್ಥಿತಿಯಲ್ಲಿದ್ದರೆಂಬದು ಸರಕಾರಿ ವಕೀಲರ ಭಾಷಣದ ಮೇಲಿಂದ ಧ್ವನಿತವಾಗುತ್ತದೆ. ಹುಕುಮು ತಪ್ಪಿದೆಂದ ಡವೆ ಪಂಡಿತ ಮಾಲವೀಯರವರು ಒಬ್ಬೊಬ್ಬ ಪರಿಸ್ಥರವನ್ನು ಕರಕೊಂಡು, ಮೆಜಿಸ್ಟ್ರೇಟರ ಸನ್ನಿಧಿಯಲ್ಲಿ ಸಾಮಾನ್ಯ ಮಾನವರಂತೆ ಹುಕುಮಿನ ಯೋಗ್ಯಾಯೋಗ್ಯತೆಯನ್ನು ಚರ್ಚಿಸುವರೆಂದು ಅರಸರ ಅಂದಾಜಿತ್ತು. ಆ ದಿನಗಳು ಈಗ ಇಲ್ಲ. ಈ ಮೊದಲೇ ಆ ಕಾಲವು ಕಳೆದುಹೋಗಿದೆ. ಲೋಕನಾಯಕರು ಅರಸರೊಡನೆ ದಯೆಯನ್ನಾಗಲಿ, ನ್ಯಾಯವನ್ನಾಗಲಿ ಅಪೇಕ್ಷಿಸುವದಿಲ್ಲ. ಕಾಳೀನಗರಿಯ ಶಾಂತತಾಪಾಲನದ ಜವಾಬುದಾರಿಯು ಅರಸರಿಗಿಂತ ಲೋಕನಾಯಕರ ಮೇಲೆ ವಿಶೇಷವಾಗಿರುವದು —ಏಕೆ?— ಸಂಪೂರ್ಣವಾಗಿ ಲೋಕನಾಯಕರ ಮೇಲೆಯೇ ಭರತಖಂಡದ ಶಾಂತತಾಪಾಲನದ ಜವಾಬುದಾರಿಯಿದೆ. ಅದನ್ನು ಭಂಗಿಸಬಾರದೆಂದು ಅರಸರು ಹೇಳ-ಕೇಳ ಕಾರಣವಿಲ್ಲ. ಶಾಂತತಾಭಂಗವು ದೇಶದ್ರೋಹವು. ಶಾಂತತಾಭಂಗದಿಂದ ದೇಶೋದ್ಧಾರ ಕಾರ್ಯಕ್ಕೂ, ದೇಶಬಾಂಧವರಿಗೂ ಅಪರಿಮಿತವಾದ ನಷ್ಟ ಹೊಂದುತ್ತದೆ. ಇಂಥ ಸಂದರ್ಭದಲ್ಲಿ ಕಲಕತ್ತೆಯ ಮೆಜಿಸ್ಟ್ರೇಟರು ಲೋಕನಾಯಕರ ಜವಾಬುದಾರಿಯನ್ನೂ ಚಿತ್ತವೃತ್ತಿಯನ್ನೂ ಲೆಕ್ಕಿಸದೆ, ವಿವೇಕಹೀನರಾಗಿ ಕೊಟ್ಟ ಹುಕುಮನ್ನು ತಿದ್ದುಪಡಿ ಮಾಡಲು ಪಂಡಿತ ಮಾಲವೀಯರವರು ಮೆಜಿಸ್ಟ್ರೇಟರ ಸನ್ನಿಧಿಯಲ್ಲಿ ಹಾಜರಾಗುವರೇನು? ಮೆಜಿಸ್ಟ್ರೇಟರೂ, ಅರಸರೂ ೧೪೪ ನೇ ಕಲಮಿನ ಹುಕ್ಮಿಯನ್ನು ಇಷ್ಟಕ್ಕೇ ಹಿಂತೆಗೆದುಕೊಂಡು, ಮೂರ್ಖರಾದರೂ ವಿವೇಕಭ್ರಷ್ಟರಾಗಲಿಲ್ಲೆಂದು ಸಾರಿರುವರು. ಹೀಗೆ ಅರಸರಿಗೆ ತಾವಾಗಿ ಮೂರ್ಖತನವನ್ನು ಹೊರಗೆಡಹಲು ಕಾರಣರಾದ ಪಂಡಿತ ಮಾಲವೀಯರವರಿಗೆ ನಾವು ಆದರಪೂರ್ವಕವಾಗಿ ವಂದನೆಗಳನ್ನರ್ಪಿಸುವೆವು. ಲೋಕನಾಯಕರಿಗೆಲ್ಲ ಇದೇ ಪ್ರಕಾರ ಸ್ಥೈರ್ಯ-ಧೈರ್ಯವ್ಯಕ್ತಿಗಳ ಅನುಗ್ರಹವಾಗಲೆಂದು ಪರಮಾತ್ಮನೊಡನೆ ನಾವು ಪ್ರಾರ್ಥಿಸುವೆವು.

೩. ಕರ್ನಾಟಕದ ಏಕೀಕರಣದ ಇತಿಹಾಸವನ್ನು ಧಾರವಾಡದ ಶ್ರೀ॥ ರಂಗನಾಥರಾಯರು ಬರುತಿರುವರು. ಅದನ್ನು ನಾವು ಬೇರೊಂದೆಡೆಯಲ್ಲಿ ಕೊಟ್ಟಿರುವೆವು. ಕರ್ನಾಟಕ ಪ್ರಾಂತವನ್ನು ಮುಂಬಯಿ, ಮುದ್ರಾಸ ಹಾಗು ಕೊಡಗು ಪ್ರಾಂತಗಳಲ್ಲಿ ಹರಿದುಬಿದ್ದ ಕರ್ನಾಟಕವನ್ನು ಏಕೀಕರಣ ಮಾಡಲು ಈಗ ೧೯೧೩ ನೇ ಇಸ್ವಿಯಿಂದ ಉದ್ಯೋಗ ನಡೆದಿದೆ. ಆದರೆ, ಅವರ ಸುಳುವು ನಮ್ಮನ್ನಾಳುವ ಪ್ರಜಾಕಲ್ಯಾಣಪರ ಅರಸರಿಗಿಲ್ಲೆಂಬಂತೆ ಕಮಿಶನರರಿಗೆ ವರ್ತಮಾನಪತ್ರಗಳೊಳಗಿನ ಅವತರಣಗಳನ್ನು ಸಂಗ್ರಹಿಸಲು ಆಜ್ಞೆಯಾಗಿದೆ. ಲೋಕನಾಯಕರು ಇಂದೆಲ್ಲಿ ಹೋದರು? ನಾಳೆಲ್ಲಿ ಹೋಗುವರು? ಎಲ್ಲಿಗೆ ಏನೇನು ಮಾಡುತ್ತಾರೆ? ಎಂಬುದನ್ನೆಲ್ಲ ವಿವರವಾಗಿ ಸಂಗ್ರಹಿಸುವ ಅರಸರಿಗೆ ಸಾರ್ವಜನಿಕವಾಗಿ ನಡೆದ ಕರ್ನಾಟಕ ಏಕೀಕರಣ ಚಳವಳಿಯ ಅರಿವಿಲ್ಲೆಂದು ಹೇಳಿದರೆ, ನಂಬುವವರಾರು? ನಿದ್ದೆ ಹತ್ತಿದವರಿಗೆ ಎಬ್ಬಿಸಬಹುದು; ಎಚ್ಚರವಿದ್ದವನಿಗೆ ಎಚ್ಚರಗೊಳಿಸುವದೆಂದಾದರೂ ಸಾಧ್ಯವೇ? ಕರ್ನಾಟಕ ಏಕೀಕರಣದ ಬೇಡಿಕೆಗೆ ಸರಕಾರವು ವರ್ತಮಾನಪತ್ರಗಳ ಚಳವಳಿಯೆಂದು ಅದನ್ನು ಹೊಡೆದು ಬಾರಾಗಲಿಕ್ಕಿಸುತ್ತಿದೆ. ವರ್ತಮಾನಪತ್ರಗಳು ಲೋಕಮತವನ್ನು ಪ್ರತಿಬಿಂಬಿಸದಿದ್ದರೆ, ಸರಕಾರವು ಕಮಿಶನರರಿಗೆ ವರ್ತಮಾನಪತ್ರಗಳ ಅವತರಣಗಳನ್ನು ಕಳುಹಬರೆದ ಕಾರಣವೇನು? ವರ್ತಮಾನಪತ್ರಗಳಲ್ಲಿ ಉಲ್ಲೇಖವಿದ್ದಿದ್ದರೆ, ಲೋಕಮತವಿಲ್ಲೆಂದು ಹೇಳುವದು, ವರ್ತಮಾನಪತ್ರಗಳಲ್ಲಿ ಉಲ್ಲೇಖವಾದರೆ, ವರ್ತಮಾನಪತ್ರಗಳ ಚಳವಳಿಯೆಂದು ನಿಂದಿಸುವದು; ಹೀಗೆ ಪ್ರಜಾ ಬೇಡಿಕೆಗಳನ್ನು ಅಲ್ಲಗಳೆಯುವ ಅರಸರ ಉಪಾಯಗಳು ಅನೇಕವಿವೆ. ಇಂಥ ಕುಯುಕ್ತಿಗಳ ಮರ್ಮವು ಜನರಿಗೆಲ್ಲ ತಿಳಿದಿರುವಾಗ, ಅದನ್ನೇ ಪುನಃ ಪುನಃ ಅದಿ ತೋರಿಸಿ ನಗೆಗೇಡಾಗುವದೇಕೆ? ಕನ್ನಡಿಗರನ್ನೆಲ್ಲ ಒಟ್ಟುಗೂಡಿಸಿ ಕರ್ನಾಟಕ ಪ್ರಾಂತವನ್ನು ರಚಿಸುವದಾದರೆ, ಅರಸರು ರಚಿಸುವದು, ಈ ಪುಣ್ಯ ಕಾರ್ಯವನ್ನೆಂದು ಕೈಕೊಳ್ಳಲು ಅವರಿಗೆ ಮನಪ್ಪೊಪ್ಪಿಗೆಯಾಗದಿದ್ದಲ್ಲಿ ಅವರು ಬಿಡುವದು. ಸ್ವಾವಲಂಬನದಿಂದ ಕರ್ನಾಟಕದ ಏಕೀಕರಣ ಮಾಡುವ ನಮ್ಮ ಯತ್ನಗಳು ನಡೆದೇ ಇವೆ. ಈಶಸಂಕಲ್ಪವಿದ್ದಾಗ ಅವು ಕೊನೆಗಂಡೇ ತೀರುವವು.

ಸ್ಥಾನಿಕ ವೃತ್ತಾಂತ.

ಕುಮುಟಾ— ಮಘಾ ನಕ್ಷತ್ರದ ಮಳೆಯು ಇಲ್ಲ. ಬಿಸಿಲು ಕಾಯುತ್ತದೆ. ಸೆಕೆಯಾಗುತ್ತದೆ. ಹೊರಕಡೆ ಜ್ವರಾದಿ ರೋಗಗಳ ಪೀಡು ಇನ್ನೂ ಹೊರಬೀಳುವದಿಲ್ಲ. ಭಜನೆ ಮೇಳಗಳು ನಾಮಸಂಕೀರ್ತನ ಮಾಡುತ್ತ ಬೀದಿ ಬೀದಿಗಳಲ್ಲಿ ತಿರುಗಾಡುತ್ತಿವೆ. ಈ ವಾರದಲ್ಲಿ ೩-೮೩ ಇಂಚು ಮಳೆ. ಈ ವರೆಗೆ ೧೧೦-೨೫ ಇಂಚು ಮಳೆಯಾಯಿತು.

ಸಾಭಾರ ಸ್ವೀಕಾರ.

ಸ್ವಧರ್ಮ— ಅಗಸ್ಟ ತಿಂಗಳ ಸಂಚಿಕೆ. ಸಂಪಾದಕರು—ಶ್ರೀ॥ ದ. ರಾ. ಬೇಂದ್ರೇ, ಬಿ. ಎ., ಸ್ವಧ

ರ್ಪ ಕಾರ್ಯಾಲಯ, ಮಾಳಮಡ್ಡಿ, ಧಾರವಾಡ. ವಾರ್ಷಿಕ ವರ್ಗಣಿ ರೂ. ೩—೦—೦.

ಕರ್ನಾಟಕ ರಂಗಭೂಮಿ— ವರ್ಷ ೧, ಸಂಚಿಕೆ ೧೦ ಸಂಪಾದಕ- ಶ್ರೀ ದ. ಕೃ. ಭಾರದ್ವಾಜ, ಆನಂದಾಶ್ರಮ, ಬಸವನಗುಡಿ, ಬೆಂಗಳೂರು, ವಾರ್ಷಿಕ ಚಂದಾ ರೂ. ೩—೦—೦

ಕಾರವಾರ— ಸೋಮವಾರ ತಾ. ೧೬ ನೇಗೆ ಕಲೆಕ್ಟರರಾದ ಮಿ| ಮೊಂಗೋಮೆರಿಯವರ ಅಧ್ಯಕ್ಷತೆಯಲ್ಲಿ ಸರಕಾರಿ ಖಾತೆಗಳ ಸಹಕಾರ ಸಭೆ ಸೇರಿತು. ಬೇಸಾಯದ ಉದ್ಧಾರಕ್ಕಾಗಿ ಮುಲ್ಕಿ ಹಾಗು ಬೇಸಾಯ ಖಾತೆಗಳು ಒಟ್ಟಾಗಿ ದುಡಿಯುವ ಆಲೋಚನೆ ಮಾಡಲು ಈ ಸಭೆ ಸೇರಿತ್ತು. ಮುಲ್ಕಿ ಖಾತೆಯ ಅಧಿಕಾರಿಗಳ ತರ್ಫೆನಿಂದ ಕಾರವಾರ ಡಿಸ್ಟ್ರಿಕ್ಟದ ಅಸಿ| ಕಲೆಕ್ಟರರಾದ ಮಿ| ವಿಠಲ ಚಂದಾವರಕರರೂ, ಶಿರ್ಸಿ ಡಿಸ್ಟ್ರಿಕ್ಟದ ಅಸಿ| ಕಲೆಕ್ಟರರಾದ ಮಿ| ದಿವೇಕರರವರೂ, ಅಂಕೋಲೆಯ ಮಾಮಲೇದಾರರೂ ಹಾಜರಿದ್ದರು. ಬೇಸಾಯ ಖಾತೆಯ ಡೆಪ್ಯುಟಿ ಡಾಯರೆಕ್ಟರರಾದ ಮಿ| ಗೋಖಲೆಯವರೂ, ಬೇಸಾಯ ಖಾತೆಯ ಮಿ| ಗೋಕರ್ಣಕರವರೂ ಹಾಜರಿದ್ದರು. ಡಿಸ್ಟ್ರಿಕ್ಟ ಬೋರ್ಡಿನ ಅಧ್ಯಕ್ಷರಾದ ಶ್ರೀ| ಗೋಪಿಯವರೂ, ಸಭಾಸದರಾದ ಶ್ರೀ| ಪ್ರಭು, ದೇಸಾಯರವರೂ ನಿಮಂತ್ರಣೆ ಮೇರೆಗೆ ಸಭೆಗೆ ಹೋಗಿದ್ದರು. ಸಭೆಯಲ್ಲಿ ಮುಂದಿನ ವರುಷದ ಬೇಸಾಯೋದ್ಧಾರದ ಯೋಜನೆಯ ಚರ್ಚೆಯಾಯಿತು. ಅನೇಕ ತೀರ್ಮಾನಗಳು ಕೈಕೊಳ್ಳಲ್ಪಟ್ಟವು. ಮುಲ್ಕಿ ಹಾಗು ಬೇಸಾಯ ಖಾತೆಗಳು ಒಟ್ಟಾದದ್ದು ಶುಭ ಸೂಚಕವು. ಜಂಗಲ ಖಾತೆಯೊಡನೆ ಮುಲ್ಕೀ ಖಾತೆಯು ಬಳಿಗೆ ಇರ ಬಾರಾಗಿ ಈ ವರೆಗೆ ಕಾದಾಡುತ್ತಿತ್ತು. ಇದರಿಂದ ಬೇಸಾಯವು ಕ್ರಮವಾಗಿ ಕಳೆಗುಂದಿತ್ತು. ಹೊಸ ಮನ್ವಂತರದಿಂದ ಬೇಸಾಯವು ಉದ್ಧಾರಹೊಂದುವ ನಮೂನೆ ಕಾಣುತ್ತದೆ. ಜಿಲ್ಲೆಯೊಳಗೆ ಬರಬರು ಬಿದ್ದು ಬೇಸಾಯಗಾರರಿಗೆ ಸಪ್ಪಕ್ಕಿಲ್ಲದ ಲಾವಣಿ ಭೂಮಿಗಳು ಸಾಗುವಳಿಯಾಗುವಂತೆ ಏರ್ಪಾಡಾದರೆ ಖಾತೆಗಳ ಸಹಕಾರದಿಂದ ಲಾಭವಾಗುವದು. ಕಾಡು ಪ್ರಾಣಿಗಳಿಗೆ ಬಲಿಬೀಳುವ ಬೆಳೆಯನ್ನು ರಕ್ಷಿಸಲು ಮುಲ್ಕಿ ಅಧಿಕಾರಿಗಳು ಶುಬಾರಿಯ ಲಾಯಸನ್ಸುಗಳನ್ನು ಧಾರಾಳ ಮನಸ್ಸಿನಿಂದಾಗಿ ಕೊಡಬೇಕು.

ಕಾರವಾರ ಹ್ಯೆಸ್ಕೂಲ ಗುಡ್ಡದ ಮಾರ್ಗವು ತೀರ ಕೆಟ್ಟು ಹೋಗಿದೆ. ಅಲ್ಲಿ ತಿರುಗಾಡುವ ಪ್ರಯಾಣಿಕರ ಗೋಳು. ಇಂಜನಿಯರರು ಯಾಕೆ ಕಣ್ಮುಚ್ಚಿ ನೋಡುತ್ತಿರುವರು?

, ಕೊನೆಗೆ ಸ್ಕೂಲ ಬೋರ್ಡಿನ ಸರಕಾರದಿಂದ ನಿಯೋಜಿತರಾದವರ ಹೆಸರು ಜಾಹೀರಾಗಿದೆ. ೩, ೪ ತಿಂಗಳುಗಳ ವರೆಗೆ ಕಲೆಕ್ಟರರೂ, ಡ್ಯಾರೆಕ್ಟರರೂ ಒದ್ದಾಡಿ, ಕ್ವಾಲಿಫ್ಟಸ್ ಹೇಗೆ ನ್ಯಾಯಕರವರಿಗೆ ಸ್ಕೂಲ ಬೋರ್ಡಿನಲ್ಲಿ ಸರಕಾರ ಕರ್ಪಿಸಿದ ಸೇವಿ.ಸಿದರು. ಕೆಥ್ಲಿನ್‌ರವರಿಗೆ ಅಕ್ಷರ ಜ್ಞಾನವಿಲ್ಲ; ಶಾಲೆ ಖಾತೆಗೆ ಇವರಲ್ಲದೆ ಹೆಚ್ಚಿಗೆ ಯೋಗ್ಯತೆ ಏನು ಬೇಕು? ಗುತ್ತಿಗೆದಾರ ಅಲಿಕೋಡ ಹೊರಬರಲಿಲ್ಲ. ಸರಕಾರದ ಗುಣಾಗ್ರಾಹಕತೆಯನ್ನೂ, ಶೋಧಕ ಶಕ್ತಿಯನ್ನೂ, ಬಣ್ಣಿಸುವಷ್ಟು ಕಠಿಣ.

ಹಳಿಯಾಳ—ಜಿಲ್ಲಾ ಬೋರ್ಡಿನವರು ಹಳಿಯಾಳ ಕಾವಲವಾಡಾ ಮಾರ್ಗವನ್ನು ಜಂಗಲ ಖಾತೆಯ ವಶಕ್ಕೆ ಕೊಟ್ಟಿರುವರು. ಅದಕ್ಕಾಗಿ ಜಿಲ್ಲಾ ಬೋರ್ಡಿನವರು ಜಂಗಲ ಖಾತೆಗೆ ಗ್ರಾಂಟನ್ನು ಕೊಡುತ್ತಾರೆ. ಗ್ರಾಂಟಿನಷ್ಟು ಹಣಾ ಜಂಗಲ ಖಾತೆಯವರು ವೆಚ್ಚ ಮಾಡುವದಿಲ್ಲವಾಗಿ ಕೇಳಬೇಕು. ಜಿಲ್ಲಾ ಬೋರ್ಡಿನವರು ತಮ್ಮ ಮಾರ್ಗವನ್ನು ಸ್ವಾಧೀನ ಪಡಿಸಿ ಕೊಳ್ಳುವದುತ್ತಮ

ಹಳಿಯಾಳ ಅಳ್ನಾವರ ಮಾರ್ಗವೂ ಕೆಟ್ಟು ಹೋಗಿ ಮೋಟಾರ ಓಡಾಟವು ಕೂಡ ತಡಕೊಂಬ ಆಯಿತು. ಇಂಜನಿಯರ ಖಾತೆಯವರು ಲಕ್ಷ್ಯವೇನು ಕೊಡುವದಿಲ್ಲ.

ಮುಂಡಗೋಡ ಕ್ಷೇತ್ರ—ಮಘಾ ಪುಬ್ಬಾ ನಕ್ಷತ್ರದ ಪ್ರಾರಂಭದಿಂದ, ಒಂದು ಹೊತ್ತು ಮಳೆ, ಒಂದು ಹೊತ್ತು ಬಿಸಿಲು ಬೀಳುತ್ತದೆ. ಭತ್ತದ ಪೈರು ಇನ್ನು ವರೆಗೆ ಸಾಧಾರಣ ಚಲೋದದೆ. ಜ್ವರದ ಕಾಹಿಲೆ ತಕ್ಕಮಟ್ಟಿಗೆ ಉಂಟು. ರಕ್ತಾತಿಸಾರ (ಬಿಟ್ಟಿ ಹೊರಕಡೆ) ಬಹಳೇ ಜೋರಿನಿಂದ ನಡೆದಿದೆ. ನವ್ಹಾಕ (ಮುಸಲ್ಮಾನ) ಕೇರಿಯಲ್ಲಿ ಈ ಅಸ್ವಸ್ಥವು ಎರಡು ಮೂರು ತಿಂಗಳಿಂದ ಚಾಲುಯಿದ್ದು ಇದರಿಂದ ನೂರಾರು ಮರಣಗಳುಂಟಾಗಿರಬಹುದು. ಇತ್ತಲಾಗಿ, ಸದರಿ ಸಮಾಯತದಲ್ಲಿ ಕೆಲವರು ದೇವರ ಭಜನೆ ಮಾಡುತ್ತ ಪ್ರತಿನಿತ್ಯ ತಮ್ಮ ಕೇರಿಯಲ್ಲೆಲ್ಲ ಸಂಚಾರ ಮಾಡುವದರಿಂದ, ಈ ಪಿಡುಗು ಅಲ್ಲಿ ಕಡಿಮೆ ಇದೆ.

ಇಲ್ಲಿಯ ವ್ಯಾಪಾರಸ್ಥರು ಹೊನ್ನಾವರದಲ್ಲಿ ಖರೀದಿ ಮಾಡಿದ ಮಾಲು ಇಲ್ಲಿಗೆ ತರುವಾಗ, ಕರಾವಳಿ ಹೊಳೆ ದಾಟಿಸಲಿಕ್ಕೆ ದರ ಒಂದು ಗಾಡಿ ಮಾಲಿಗೆ ಎರಡು ಆಣೆ ಯಂತೆ ತಾರಿ ಹಾಕಲು ಬಹಳ ಕಾಲದಿಂದ ಕೊಡುತ್ತಾ ಬಂದಿರುತ್ತ, ಇತ್ತೀಚಿಗೆ, ಗಾಡಿಗೆ ಲಕ್ಷ್ಯಕೊಡದೇ ಪ್ರತಿ ಪ್ರತ್ಯೇಕ ಮಾಲಿಗೆ, ಒಮ್ಮೊಮ್ಮೆ ಇಂಡಿಯಾ ಮೂಟೆಕ್ಕೆ ಎರಡು ಒಮ್ಮೊಮ್ಮೆ ಮೂರು ಪೈ ಹೀಗೆ ಮನಸ್ವೀ ಆಕರಣಿ ಮಾಡುವದರಿಂದ ಒಂದು ಗಾಡಿ ಮಾಲಿಗೆ ಸರಾಸರಿ ನಾಲ್ಕರಿಂದ ಆರಾಣೆ ವರೆಗೆ ಸದರಿ ತಾರಿ ಕಂಟ್ರಾಕ್ಟರರು (ಶ್ರೀ ರಾಮ, ಅಪ್ಪ ನಾಯಕ) ವಸೂಲು ಮಾಡುತ್ತಾರೆಂದು ಇಲ್ಲಿಯ ವ್ಯಾಪಾರಸ್ಥರ ಗೋಳೇ ಗೋಳು. ಈ ಕಡೆಗೆ ವರಿಷ್ಠ ಅಧಿಕಾರಸ್ಥರು ಕೃಪಾವಲೋಕನೆಯಿಂದ ವ್ಯಾಪಾರಸ್ಥರು ದೂರಿದ ಬಗೆ ವ್ಯವಸ್ಥೆ ಮಾಡುವರಾಗಿ ನಂಬುತ್ತೇವೆ.

ಇಲ್ಲಿಂದ ಉತ್ತರಕ್ಕೆ ಮುಂಡಗೋಡ ದಕ್ಷಿಣಕ್ಕೆ ಶಿರಾಳಿಯಲ್ಲಿ, ಹೀಗೆ ಎರಡೂ ಕಡೆ, ದನಕರುಗಳಿಗೆ ಮಹಾ ರೋಗ (ಹುಲ್ಲು ನೀರು ಬಿಟ್ಟು ಸಾಯುವದು) ಬಂದು ಅನೇಕಾನೇಕ ದನಗಳು ಸಾಯುತ್ತ ಇವೆ; ಇಲ್ಲಿಗೆ ಯಾವಾಗ ಎಲ್ಲಿಂದ ಈ ಪಿಡುಗು ಬರುತ್ತದೋ ಎಂದು ಜನರು ಭಯಗ್ರಹಸ್ತರಾಗಿದ್ದಾರೆ.

ಅಕ್ಕಿ ಮತ್ತು ಕಿರಾಣಿ ಸಾಮಾನುಗಳ ಕ್ರಯವು ಮಿತಿಮೀರಿ ಏರಿಯದೆ. ಇ ಇನ್ನೂ ಏರುತ್ತಲಿದೆ; ಎಲ್ಲಿ ವರೆಗೆ ಏರುತ್ತದೋ ತಿಳಿಯದು.

ವೃತ್ತಸಾರ.

— ಸಾತಾರೆ ಜಿಲ್ಲೆಯ ಮಾಟೇಗಾಂವ ಎಂಬ ಊರಲ್ಲಿ ಶ್ರೀ ಗೋಕುಲಾಷ್ಟಮಿಯ ದಿನ ಸಂಧ್ಯಾ ನಮಸ್ಕಾರಾದಿಗಳ ವೈದಿಕ ನಿತ್ಯ ಕರ್ಮಗಳ ಪರೀಕ್ಷೆಯು ಜರಗುವದದೆ. ಸಮಾರಂಭದ ಯಜಮಾನರು ಬ್ರಹ್ಮಚಾರಿ ಶ್ರೀ ವಿನಾಯಕ ಮಹಾರಾಜ ಕುಮಾರರು.

— ಮೈಸೂರ ದರಬಾರವು ಗೋಹತ್ಯವನ್ನು ಪ್ರತಿಬಂಧಿಸುವದಕ್ಕಾಗಿ ಇಬ್ಬ ಮುಸಲ್ಮಾನ, ಇಬ್ಬ ಕ್ರೈಸ್ತ ಹಾಗು ಐವ ಹಿಂದೂ ಹೀಗೆ ೯ ಮಂದಿಗಳ ಮಂಡಳಿಯನ್ನೊಂದು ನೇಮಿಸಿತು. ಸರ ಪುಟ್ಟಣ್ಣ ಚೆಟ್ಟಿಯವರು ಅಧ್ಯಕ್ಷರಿದ್ದಾರೆ.

— ಬೆಳಗಾವಿಯ ವಕೀಲರಾದ ರಾ| ಜೋಗಳೇಕರರವರು ಅಪೀಲ ಕೋರ್ಟಿನಲ್ಲಿ ದಬೀಲಾಂಟನ ತರ್ಫೆನ ತಕರಾರುಗಳನ್ನು ಕೋರ್ಟಿಗೆ ಸಾದರ ಪಡಿಸಿದರು. ಪತ್ರಿ ಪಕ್ಷದ ಕ ಪಿಲನ ವಕೀಲರು ತಮ್ಮ ಹೇಳಿಕೆಯನ್ನು ಹೇಳುತ್ತಿರುವಾಗ ಕೂತಲ್ಲಿಯೇ ರಾ| ಜೋಗಳೇಕರರು ದೇಹಾವಸಾನ ಹೊಂದಿದರು. ಕೋರ್ಟಿನಲ್ಲಿ ದೊಡ್ಡ ಗೊಂದಲ!

— ಪಂಡಿತ ಮೋತೀಲಾಲ ನೇಹರೂರವರು ಭಂಗಾ ಪ್ರಕರಣವನ್ನು ಕೈಕೊಂಡು ಪುನಃ ವಕೀಲಿಯನ್ನು ಪ್ರಾರಂಭಿಸುವರೆಂದು ಸುದ್ದಿ ಹಬ್ಬಿತ್ತು. ಈ ಪ್ರಕರಣದ ಬಗ್ಗೆ ಪಂಡಿತ ಮೋತಿಲಾಲರವರಿಗೆ ೧೫೧೦೦ ರೂಪಾಯಿ ಕೊಡುವರಿದ್ದರಂತೆ! ಆದರೆ ಪಂಡಿತ ನೇಹರೂರವರು ಪುನಃ ವಕೀಲಿಯನ್ನು ಕೈಕೊಳ್ಳಲೊಪ್ಪಲಿಲ್ಲ.

— ಕರ್ನಾಟಕ ಏಕೀಕರಣದ ಕುರಿತು ವಿಜಾಪುರ ಮುನಿಸಿಪಾಲಿಟಿಯವರು ಠರಾವನ್ನು ಪಾಸುಮಾಡಿದರು. ಜಿಲ್ಲಾ ಬೋರ್ಡಿನವರೂ ಇದೇ ಪ್ರಕಾರದ ಠರಾವನ್ನು ಕೈಕೊಂಡಿರುವರು.

— ವಿಜಾಪುರ ಜಿಲ್ಲೆಯ ತಾಳೀಕೋಟೆಯಲ್ಲಿ ಒಂದು ಗೋರಕ್ಷಣ ಸಂಘವು ಸ್ಥಾಪನೆ ಹೊಂದಿದೆ. ಪ್ರತಿ ವರ್ಷ ೧೦೦೦ ರೂಪಾಯಿಗಳನ್ನು ವೆಚ್ಚ ಮಾಡುವ ಸಂಕಲ್ಪವಾಗಿರುವದು. ಒಂದು ವೀರಶೈವ ...ಯು ಜನ್ಮ ತಾಳುತ್ತಿದೆ.

— ವೀರಶೈವ ಸಮಾಜಕ್ಕಾಗಿ ಸರ್ವಸ್ವವನ್ನರ್ಪಿಸಿದ ಶ್ರೀ ಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ ಸಿರಸಂಗಿಕರರವರ ಚರಿತ್ರವನ್ನು ಬರೆಯುವವರಿಗೆ ೧೦೦ ರೂಪಾಯಿಗಳ ಪಾರಿತೋಷಕ ಕೊಡಲಾದೀತೆಂದು ಬೆಳಗಾವಿಯ ರಾ| ಎಸ್. ವಿ. ನಾಯಿಕರವರು ಜಾಹೀರ ಪಡಿಸಿರುವರು. ಚರಿತ್ರೆಯು ೨೦೦ ಪುಟಗಳಿಂಬೇಕು.

— ವಿಜಾಪುರದ ಮುನಿಸಿಪಾಲಿಟಿಯವರು ತಮ್ಮಲ್ಲಿಯ ಲೆಕ್ಕ ಪತ್ರವನ್ನು ಕನ್ನಡದಲ್ಲಿಡಬೇಕೆಂದು ಗೊತ್ತುಮಾಡಿರುವರು. ಈ ವರೆಗೆ ಅಲ್ಲಿಯ ಲೆಕ್ಕ ಪತ್ರ ಮೋಡಿ ಮರಾಠಿ ಲಿಪಿಯಲ್ಲಿ ಬರೆಯಲ್ಪಡುತ್ತಿತ್ತು!

— ಮದ್ರಾಸ ಪ್ರಾಂತದ ರಾಮನಾಡದಲ್ಲಿ ಒಬ್ಬ ಹೆಂಗಸಿಗೆ ಕ್ರಮಸೂಕವಾಗಿ ಹುಟ್ಟಿದ ಕೂಸು ಮಂಗನಂತಿತ್ತು. ಎರಡು ಕೋಡುಗಳಿದ್ದವು; ಕೂಸು ಮೂರು ತಿಂಗಳು ಪ್ರಾಯದಷ್ಟಿತ್ತು.

— ಹಾವೇರಿಯ ಮುನಿಸಿಪಾಲಿಟಿಯವರು ಕರ್ನಾಟಕ ಏಕೀಕರಣದ ಠರಾವನ್ನು ಕೈಕೊಂಡಿರುವರು.

— ಶೃಂಗೇರಿಯಲ್ಲಿ ಶ್ರೀ ಶಂಕರಾಚಾರ್ಯರ ದೇವಸ್ಥಾನವಿದೆ ಮಿಂಚಿನ ದೀಪಗಳನ್ನು ಹಚ್ಚುವಂತೆ ಮೈಸೂರಿನ ಮಹಾರಾಜರವರು ವಿಚಾರಿಸಿ ಮಾಡಿರುವರು.

— ಧಾರವಾಡದಲ್ಲಿ ಈಗೆ ೪೦ ವರ್ಷಗಳಿಂದ ಒಂದು ಸಂಸ್ಕೃತ ಪಾಠ ಶಾಲೆಯು ನಡಿಯುತ್ತದೆ. ಈ ಪಾಠ ಶಾಲೆಯಲ್ಲಿ ೩೦ ಮಂದಿ ವಿದ್ಯಾರ್ಥಿಗಳಿರುವರು. ಈ ಶಾಲೆಯಲ್ಲಿ ನ್ಯಾಯ, ವ್ಯಾಕರಣ, ಜ್ಯೋತಿಷ, ಕಾವ್ಯ, ಅಲಂಕಾರ, ವೇದ, ವೇದಾಂತಗಳ ಅಭ್ಯಾಸವು ನಡಿಯುತ್ತದೆ. ಪಾಠಶಾಲೆಗೆ ಹೊಂದಿಕೆಯಾಗಿ ಭೋಜನಾಲಯವಿದೆ. ಅಲ್ಲಿ ೬ ವಿದ್ಯಾರ್ಥಿಗಳಿರುವರು. ವೇದಶಾಸ್ತ್ರ ಸಂಪನ್ನರಾದ ವಿದ್ಯಾಲಂಕಾರ ಶ್ರೀ| ನಾಗೇಶ ಶಾಸ್ತ್ರಿಗಳು ಮುಖ್ಯಾಧ್ಯಾಪಕರಿರುತ್ತಾರೆ. ಪಾಠ ಶಾಲೆಯಲ್ಲಿ ವಿದ್ಯಾದಾನ ಮಾಡುವದಲ್ಲದೆ ಶ್ರೀ| ಯೋಗಮಾಸಿಷ್ಠದ ಮೇಲೆ ಪದ್ಯಕ್ಕೆ ಸಾರ್ವಜನಿಕವಾಗಿ ಉಪನ್ಯಾಸಗಳನ್ನು ಕೊಡುತ್ತಿರುವರು. ಇಂಥ ಶಾಲೆಗಳನ್ನು ಧರ್ಮ ಪೀಠಾಧಿಕರು ಅಲ್ಲಲ್ಲಿ ಹೊರಡಿಸಿ ಧರ್ಮ ಜಾಗ್ರತೆಯನ್ನು ಉಂಟು ಮಾಡಬೇಕಾಗಿ ಪೀಠಾಧಿಕರಿಗೆಲ್ಲ ವಂದನೆ ಪೂರ್ವಕವಾದ ಬಿನ್ನಹ.

— ಅಮೇರಿಕೆಯ ಡೆರ್ಟ್ರೂಡ ಎಂಬ ೧೯ ವರ್ಷ ಪ್ರಾಯದ ಹುಡುಗಿಯು ಫ್ರಾನ್ಸ-ಇಂಗ್ಲಂಡ ದೇಶಗಳ ನಡುವಿರುವ ೨೧ ಮೈಲು ಅಗಲವಾದ ಆಖಾತವನ್ನು ೧೪ ತಾಸುಗಳಲ್ಲಿ ಈಸಿ ಹೋದಳು. ಈ ವರೆಗೆ ಇಷ್ಟು ವೇಗದಿಂದ ಈಸಿ ಹೋದ ಸ್ತ್ರೀಯು ಇರಳಿಲ್ಲವಳೇ!

— ಕಳೆದ ಅಗಸ್ಟ ೧ನೇ ತಾರೀಖಿಗೆ ಜಪಾನದ ನಾಗಾಸಾಕಿಯಲ್ಲಿ ಏಶಿಯಾ ಖಂಡದ ಪರಿಷತ್ತು ಸೇರಿತ್ತು. ಸಭೆಗೆ ಚೀನ, ಜಪಾನ, ಹಿಂದುಸ್ಥಾನ ಹಾಗು ಫಿಲಿಫಾಯನ್ಸ ಗಳೊಳಗಿಂದ ೫೦ ಮಂದಿ ಪ್ರತಿನಿಧಿಗಳು ಒಟ್ಟಾಗಿದ್ದರು. ಜಪಾನದವರು ಚೀನ ದೇಶದ ಮೇಲೆ ಹೇರಿದ ಬಲಾತ್ಕಾರದ ತಹನಾಮೆಗಳನ್ನು ರದ್ದುಮಾಡಬೇಕೆಂದು ಚೀನದ ಪ್ರತಿನಿಧಿಗಳು ಆಗ್ರಹ ಮಾಡಲು, ಅದಕ್ಕೆ ಜಪಾನರು ಈ ಕುರಿತು ವಿಚಾರ ಮಾಡುವದಾಗಿ ಹೇಳಲಾಯಿತು. ಹಿಂದುಸ್ಥಾನ ಹಾಗು ಫಿಲಿಫಾಯ್ನ್ಸ ದೇಶಗಳಿಗೆ ಸ್ವಾತಂತ್ರ್ಯ ಸಂಪಾದಿಸಿಕೊಡಲು ಪರಿಷತ್ತಿನವರು ಯತ್ನ ಮಾಡಬೇಕಾಗಿ ಚೀನದ ಪ್ರತಿನಿಧಿಗಳೊಬ್ಬರು ಸೂಚಿಸಿದರು. ಜಪಾನ ದೇಶದವರು ಇಂಗ್ಲಂಡ-ಅಮೇರಿಕಾ ದೇಶಗಳೊಡನೆ ಮಾಡಿದ ತಹನಾಮೆಗಳಿಗೆ ಬಾಧೆ ತಟ್ಟಬಹುದೆಂದು ಜಪಾನದ ಪ್ರತಿನಿಧಿಗಳು ವಾದಿಸಿದರು; ಕೆಲವರು ಭೀತಿಯನ್ನೂ ಪ್ರದರ್ಶಿಸಿದರು. ಅದರಿಂದ ಈ ಠರಾವು ಬಿದ್ದು ಹೋಯಿತು.

— ಯುರೋಪ ಖಂಡದ ರುಮಾನಿಯಾ ಹಾಗು ಬಲ್ಗೇರಿಯಾ ದೇಶಗಳಲ್ಲಿ ಭಯಂಕರವಾದ ಮತ್ಸರ ಬೆಳೆಯುತ್ತಲಿದೆ. ರುಮಾನಿಯಾ ದೇಶದ ಒಬ್ಬ ಸೈನಿಕನನ್ನು ಕೊಂದರೆ, ೨೫ ಮಂದಿ ಬಲ್ಗೇರಿಯನ್ನರಿಗೆ ಗುಂಡು ಹಾಕಿ ಕೊಲ್ಲುವದಾಗಿ ರುಮಾನಿಯಾ ಸರಕಾರವು ಜಾಹೀರು ಮಾಡಿದೆ. ಅದೆಂಥ ನ್ಯಾಯ! ರಾಷ್ಟ್ರಸಂಘವು ಏನು ಮಾಡುತ್ತಿದೆ!!

— ಜಾನದೇಶದ ನಸೀರಾಬಾದದಲ್ಲಿ ಓಂಕಾರ ಎಂಬೊಬ್ಬರಿದ್ದರು. ಅವರಿಗೆ ಇಬ್ಬರು ಹೆಂಡರು. ಮೊದಲನೇ ಹೆಂಡತಿಗೆ ಇಬ್ಬ ಮಗಂದಿರಿದ್ದರು. ಎರಡನೇ ಹೆಂಡತಿಗೂ, ಈ ಇಬ್ಬ ಹುಡುಗರಿಗೂ ದಿನಾಲು ಜಗಳಗಳಾಗುತ್ತಿದ್ದವು. ಅವನ್ನು ಸೈರಿಸಲಾರದೆ ಓಂಕಾರರು ಇಬ್ಬರು ಹುಡುಗರನ್ನೂ ಬಾವಿಯಲ್ಲಿ ಹಾಕಿ ಕೊಂದುಬಿಟ್ಟರು. ಈ ಕಾರಣ ಅವರ ಮೇಲೆ ಖಟ್ಲೆಯಾಗಿ, ಅವರಿಗೆ ಗಲ್ಲಿಗೇರಿಸುವ ಶಿಕ್ಷೆಯಾಗಿದೆ. ಸಂಸಾರತಾಪತ್ರಯದಿಂದ ಅವನು ಬಂಧಮುಕ್ತನಾದನು.

— ಸಿಂಹಲ ದ್ವೀಪದಲ್ಲಿ ವೇದಾಸ ಎಂಬುವೊಂದು ಜಾತಿಯುಂಟು. ಈ ಜಾತಿಯವರು ಎಂದೂ ನಗುವದಿಲ್ಲ! ಎಂದೂ ಸುಳ್ಳು ಮಾತನಾಡುವದಿಲ್ಲ!!

— ಇರಾಣ ಬಾದಶಹರ ರತ್ನಖಚಿತವಾದ ಖಡ್ಗದ ಬೆಲೆಯು ೪೫ ಲಕ್ಷ ರೂಪಾಯಿಗಳಾಗುವದಂತೆ.

— ಭಾವನಗರದ ಪಿ. ಸಿ. ಎನ್. ವಾಡಿಯಾರವರು ಮುಂಬಯಿಯಲ್ಲಿ ಚಿಕಿತ್ಸಾಲಯವನ್ನು ಸ್ಥಾಪಿಸುವದಕ್ಕಾಗಿ ೧೬ ಲಕ್ಷ ರೂಪಾಯಿಗಳನ್ನು ಅರ್ಪಿಸಿರುವರು. ದೇಶೀಯ ಔಷಧಾಲಯವನ್ನು ಸ್ಥಾಪಿಸಿದರೆ, ದೇಶಕ್ಕೆ ಹಿತವಿದೆ.

— ಮುಂಬಯಿಯ ಲೋಕಮಾನ್ಯರ ಶವದಹನಭೂಮಿಯ ಮೇಲೆ ಲೋಕಮಾನ್ಯರ ಮೂರ್ತಿಯನ್ನು ಕಟ್ಟಿಕೊಳ್ಳಲು ಮುಂಬಯಿ ಮ್ಯುನಿಸಿಪಾಲಿಟಿಗೆ, ಮುಂಬಯಿ ಸರಕಾರವು ದೀರ್ಘ ವಿಚಾರಮಾಡಿ ಒಪ್ಪಿಗೆಯನ್ನಿತ್ತಿದೆ. ಮೂರ್ತಿಯ ಬುಡದಲ್ಲಿ ಬರೆಯಬೇಕಾದ ವಚನಕ್ಕೆ ಸರಕಾರ ಮಾನ್ಯತೆಯನ್ನು ಪಡೆಯಬೇಕಂತೆ!

— ಮಧ್ಯಪ್ರಾಂತದ ಪೇಟೆಯ ಬಳಿಯಿಂದ ಮಾರವಾಡಿ ಗೃಹಸ್ಥರೊಬ್ಬರು ಚಿಕ್ಕ ಮಗನನ್ನು ಕರಕೊಂಡು ಹೋಗುತ್ತಿದ್ದರು. ಹುಡುಗನು ಮುಂದಾದನು; ಆತನನ್ನು ಎತ್ತಿಕೊಳ್ಳುವದಕ್ಕಾಗಿ ಚಪ್ಪಳೆ ಬಾರಿಸಿದರು. ಪೇಟೆಯೊಳಗಿನ ಮುಸಲ್ಮಾನರಿಗೆ ಪಿತ್ತ ಕೆರಳಿತು. ಮಸೀದಿಯ ಬಳಿ ಗದ್ದಲ ಮಾಡಿ, ಚಿತ್ತಚಂಚಲ ಮಾಡಿದ ಬಗೆ ಅವರೆಲ್ಲರೂ ಹಿಡಿದುಕೊಂಡು ಬಾಯಿಗೆ ಬಂದ ಹಾಗೆ ಬೈದರು. ಮಾರವಾಡಿಯು ಹೌಹಾರಿ ನೆರೆಯಲ್ಲಿದ್ದ ಒಬ್ಬ ಹಿಂದೂ ಬಾಂಧವರಲ್ಲಿ ಮರೆಹೊಕ್ಕನು. ಅದರಿಂದ ಅವನು ಬದುಕಿದನು. ಎಂಥ ಧರ್ಮದ ಹುಚ್ಚು ಇದು!

— ಹುಕ್ಕೇರಿ ತಾಲೂಕ ಟಿಗ್ಗಿಯಲ್ಲಿ ೪೦೦ ರ ವರೆಗೆ ರಾಟಿಗಳಿವೆ. ಲೋಕಮಾನ್ಯರ ಪುಣ್ಯತಿಥಿಯ ನಿಮಿತ್ತ ಇಲ್ಲಿ ನೂಲಿನ ಶರ್ಯತ್ತು ನಡೆಯಿತು. ನಿಂಗವ್ವ ಎಂಬ ಸ್ತ್ರೀಯು ಅಗ್ರಸ್ಥಾನವನ್ನು ಪಡೆದಳು.

— ಬಾಗಲಕೋಟೆಯ 'ಅನ್ನಾಡಿಗ' ಪತ್ರಿಕೆಯ ಸಂಪಾದಕರಾದ ಶ್ರೀ| ಶ್ರೀನಿವಾಸರಾವ ರಾಜೋರಾವ ಮಂಗಳವೇಢೇಕರರವರ ಮೇಲೆ ದಿವಾಣ ಸಾಹೇಬ ಜಾನ್ಸ್ಟೋನರವರು ಮಾನನಷ್ಟದ ಫಿರ್ಯಾದವನ್ನು ದಾಖಲ ಮಾಡಿದ್ದರು. ವಿಚಾರವು ಗುರುವಾರ ತಾರೀಖ ೫ ನೇ ಯಿಂದ ಪ್ರಾರಂಭವಾಯಿತು. ಆ ಸಮಯ ಕನ್ನಡ 'ನವಜೀವನ' ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ| ಕಮ್ಮಣ್ಣಾಚಾರ್ಯ ಪುರೋಹಿತರವರು ಗಾಂಧಿ ಟೊಪ್ಪಿಗೆಯನ್ನೂ, ಖಾದಿಯ ಉಡಿಗೆಯನ್ನೂ ಧರಿಸಿ ಹೋಗಿದ್ದರು. ಮೆಜಿಸ್ಟ್ರೇಟರು ಕೆಲವು ಕಾಲ ದಿಟ್ಟಿಸಿ ನೋಡಿ ಇನ್ನು ಮುಂದೆ ಈ ಉಡಿಗೆ ತೊಟ್ಟುಕೊಂಡು ಬಂದರೆ, ಅವರಿಗೆ ಹೊರಹಾಕುವೆನಾಗಿ ಹೇಳಿದರು. ಗಾಂಧಿ ಟೊಪ್ಪಿಗೆಯ ಮೇಲಿನ ಆಕ್ಷೇಪವು ಇನ್ನೂ ಇರುವದು. ಒಮ್ಮೆ ಮಾಯಳು ಹತ್ತಿದರೆ, ಸಂಪೂರ್ಣವಾಗಿ ಅದು ಕಿತ್ತುಹೋಗುವದಿಲ್ಲವಾಗಿ ಹೇಳುವದು ಅದಕ್ಕಾಗಿಯೇ!

— ಕೊಡಗಿನ ಬಾಗ ಮಂಡಲ ಎಂಬ ಊರಲ್ಲಿ ಕಳೆದ ವಾರ ೬೭ ಇಂಚು ಮಳೆಬಿತ್ತು. ಕಾವೇರಿ ನದಿಯ ಉಗಮವು ಇಲ್ಲಿಯೇ. ಅದರಿಂದ ಕಾವೇರಿ ನದಿಯು ೨೨ ಅಡಿ ಉಕ್ಕೇರಿ ಭಯಂಕರ ಹಾನಿ! ಕುಂಭಕೋಣದೊಳಗಿನ ನದಿಯ ಕಟ್ಟು ಒಡೆದು ಹೋಯಿತು. ತ್ರಿಚನಾಪಳ್ಳಿಯ ನೆಶನಲ್ ಕಾಲೇಜಿನ ಹಾಸ್ಟೆಲಿನಲ್ಲಿ ನೀರು ಸೇರಿರುವದು. ಕಾಫಿ ತೋಟಗಳಿಗೆ ಹೇರಳ ಹಾನಿ ತಟ್ಟಿದೆ.

— ಪಾಟ್ನಾ ಪಟ್ಟಣದಲ್ಲಿ ಬಾಬೂ ರಾಜೇಂದ್ರ ಪ್ರಸಾದ ಮೊದಲಾದ ಖಾದಿಯ ಪ್ರಸಾರಕರು ಚಿತ್ರಪಟಗಳನ್ನು ತೋರಿಸುತ್ತಿದ್ದರು. ಹಾಗೆ ತೋರಿಸಬಾರದೆಂದು ಪಾಟ್ನಾದ ಮೆಜಿಸ್ಟ್ರೇಟರು ಪ್ರತಿಬಂಧಕ ಹುಕುಮನ್ನು ಹೊರಡಿಸಿದರು. ಈ ಹುಕುಮನ್ನು ಬಾಬು ರಾಜೇಂದ್ರ ಪ್ರಸಾದರವರು ಉಲ್ಲಂಘಿಸಿ ವ್ಯಾಖ್ಯಾನ ಕೊಟ್ಟರು.

— ಕ್ಯಾಪವೇಲ್ಯೋ ಎಂಬಲ್ಲಿ ಭೂಕಂಪವಾಗಿ ೫೦೦ ಅಡಿ ಎತ್ತರವಿರುವ ದಿನ್ನೆಯು ಕುಸಿದುಬಿತ್ತು.

ಜಿಲ್ಲಾ ಬೋರ್ಡಿನ ಸಭೆ.

ಲೋಕಲ್ ಫಂಡು ಏರಲಿಲ್ಲ!

(ನಮ್ಮ ಕಾರವಾರದ ಸುದ್ದಿಗಾರರಿಂದ)

ಬುಧವಾರ ತಾ. ೧೮ನೇಗೆ ಜಿಲ್ಲಾ ಬೋರ್ಡಿನ ವಿಶೇಷ ಅಧಿವೇಶನವು ಬೋರ್ಡಿನ ಕಚೇರಿಯಲ್ಲಿ ಅಪರಾಹ್ನ ೩ ಘಂಟೆಗೆ ಸೇರಿತು. ಸಭೆಗೆ ಅಧ್ಯಕ್ಷರ ಸಹಿತ ೨೧ ಮಂದಿ ಸಭಾಸದರು ಚಿತ್ತೈಸಿದ್ದರು. ರಾ| ಶೆಟ್ಟಿ ಹಾಗು ರಾ| ಕೋರಾವರ ಬಸಪ್ಪನವರು ಹಾಜರಿದ್ದಿಲ್ಲ. ಮೊಟ್ಟಮೊದಲು, ಅಧ್ಯಕ್ಷರಾದ ಶ್ರೀ| ಗೋಪಿ ಮುಕಾಟೇಶ್ವರ ಭಟ್ಟರವರು ಸಭೆ ನಿಮಂತ್ರಿಸುವ ಕಾರಣವನ್ನು ಹೇಳಿದರು. ಲೋಕಲ್ ಫಂಡಿನ ಏರಿಕೆಯ ಕುರಿತು 'ಧುರೀಣ'ದಲ್ಲಿ ಪ್ರಕಟವಾದ ವಿಚಾರಗಳನ್ನೂ, ಹಳ್ಳಿಗಳ ಅನಾರೋಗ್ಯ ಸ್ಥಿತಿಯನ್ನೂ ಬಣ್ಣಿಸಿದರು; 'ವೃತ್ತ'ಕಾರರ ವಿಚಾರಗಳನ್ನೂ ಹೇಳಿದರು. ಆ ಬಳಿಕ, ಲೋಕಲ್ ಫಂಡಿನ ವಿಷಯವು ಮಹತ್ವದ್ದಾದ್ದರಿಂದ, ಆ ಕುರಿತು ರಾ| ಗಣಪತಿ ಮಾಸ್ತರರಿಗೆ ಮಾತಾಡಲು ತಾವು ಅಪ್ಪಣೆ ಕೊಟ್ಟಿರುವೆವಾಗಿ ಹೇಳಿ, ಅವರ ಭಾಷಣವನ್ನು ಕೇಳಲು ಸಹಕಾರಿಗಳಿಗೆ ಸೂಚಿಸಿದರು. ಅಧ್ಯಕ್ಷರ ಬಳಿಯಲ್ಲಿಯೇ ರಾ| ಮಾಸ್ತರರಿಗೆ ಆಸನ ಕೊಡಲಾಗಿತ್ತು. ರಾ| ಮಾಸ್ತರರು ಎದ್ದುನಿಂತು, ಹಳ್ಳಿಗಳ ಅನಾರೋಗ್ಯಸ್ಥಿತಿಯನ್ನು ಟಪ್ಪರ-ಮೆಕ್ಸವೆಲ್‌ರವರ ವಚನಗಳಿಂದ ಸಿದ್ಧಪಡಿಸಿದರು. ಜಿಲ್ಲಾ ಬೋರ್ಡಿನ ಪ್ರತಿನಿಧಿಗಳಿಗೆ ಅವರ ಭಾಷಣವು ಕೇಳಿಬರಲಿಲ್ಲ; ಅನೇಕರು ಪ್ರತಿಕೋಟ್ಸಕರಾಗಿ ಘಟ್ಟಿ ಮಾತಾಡಲು, ಮಹತ್ವದ ವಿಷಯದ ಮೇಲೆ ಮಾತಾಡುತ್ತಿದ್ದ ಮಹತ್ವ ಮಹಾಶಯರಿಗೆ ಆಗಾಗ ಬಿನ್ನೈಸುತ್ತಿದ್ದರು. ಲೋಕಲ್ ಫಂಡನ್ನು ಏರಿಸಹೇಳಲು ರಾ| ಮಾಸ್ತರರಿಗೂ ಧೈರ್ಯ ಬರಲಿಲ್ಲ. ಬಳಿಕ, ಸಿದ್ದಾಪುರದ ಶ್ರೀ| ಗೋಪಾಳರಾವ ದೇವರವರು ಅಧ್ಯಕ್ಷರ ಬಳಿಗೆ ಹೋಗಿ, ಇಂದಿನ ಸಭೆಯಲ್ಲಿ ಲೋಕಲ್ ಫಂಡನ್ನು ಏರಿಸಬೇಕೋ? ಬೇಡವೋ? ಇಷ್ಟೇ ಕುರಿತು ಚರ್ಚೆಯಾಗಬೇಕಲ್ಲವೇ? ಎಂದು ಕೇಳಲು, ಅಧ್ಯಕ್ಷರು ಅಹುದೆಂದರು. ಎಲ್ಲ ಪ್ರತಿನಿಧಿಗಳೂ ತಣ್ಣಗೆ ಕೂತುಕೊಂಡರು. ಸೂಚನೆಗಳನ್ನು ಸೂಚಿಸಿರೆಂದು ಅಧ್ಯಕ್ಷರು ಸರಕಾರದಿಂದ ನೇಮಕವಾದ ಸಭಾಸದರ ಕಡೆಗೆ ನೋಡಿ, ಹೇಳಿದರು. ಮಿ| ಕೊಯಿಲೋರವರು ಎದ್ದುನಿಂತು, ಲೋಕಲ್ ಫಂಡನ್ನು ಒಂದಾಣೆಯಿಂದ ಎರಡಾಣೆಗೆ ಏರಿಸಬೇಕೆಂದು ಸೂಚಿಸಿದರು. ಮಿ| ಅದಮ್ ಸಾಹೇಬರು ಅನುಮೋದಿಸಿದರು.

ತರುವಾಯ, ಅಂಕೋಲೆಯ ಶ್ರೀ| ವಿಶ್ವನಾಥ ಪ್ರಭುಗಳವರು ಸ್ಥಾನಿಕ ಸ್ವರಾಜ್ಯ ಪರಿಷತ್ತಿನಲ್ಲಿ ನಡೆದ ಚರ್ಚೆಯನ್ನೂ, ಅಲ್ಲಿ ಕೈಕೊಂಡ ತೀರ್ಮಾನವನ್ನೂ ಸಂಕ್ಷಿಪ್ತವಾಗಿ, ಚಿತ್ತವೇಧಕವಾಗಿ ನಿವೇದಿಸಿದರು. ರಾ| ಈಶ್ವರಲಾಲ ಮೋಧೀಯವರ ವಿಚಾರಗಳನ್ನೂ ಸಭಿಕರಿಗೆ ನಿವೇದಿಸಿ, ಸರಕಾರವು ಕ್ರಮವಾಗಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಖರ್ಚಿನ ಬಾಬುಗಳನ್ನು ವಹಿಸಿದ ಕಥೆಯನ್ನು ನಿವೇದಿಸಿದರು. ತೀರ್ವೆಯ ಮೇಲೆ ಕರ ಕೂಡ್ರಿಸುವ ವಿಚಾರವು ಸ್ಥಾನಿಕ ಸ್ವರಾಜ್ಯ ಪರಿಷತ್ತಿಗೆ ಸಹಿತ ಗ್ರಾಹ್ಯವಾಗಲಿಲ್ಲವೆಂದರು; ಲೋಕಲ್ ಫಂಡಿನ ಏರಿಕೆಯ ವಿಚಾರವನ್ನು ಮುಂದೂಡಬೇಕಾಗಿ ಉಪಸೂಚನೆ ತಂದರು. ಹೊನ್ನಾವರದ ಶ್ರೀ| ಉದ್ಯಾವರರವರು ಅನುಮೋದಿಸಿದರು. ಆ ಬಳಿಕ, ಮತ ಎಣಿಕೆಯಾಗಲು, ಶ್ರೀ| ಪ್ರಭುಗಳವರ ಸೂಚನೆಗೆ ೧೬ ಮತಗಳು ಅನುಕೂಲ ಬಿದ್ದವು. ಮಿ| ಫಿಲಿಫ್ಫೋಸರವರು ತಟಸ್ಥ ನಿಂತರು; ಮಿ| ಕೊಯಿಲೋ ಹಾಗು ಅದಮ್ ಸಾಹೇಬರವರು ವಿರೋಧಿಸಿದರು. ಅಧ್ಯಕ್ಷರು ತಮ್ಮ ಮತಾಧಿಕಾರವನ್ನು ಉಪಯೋಗಿಸಲಿಲ್ಲ. ಹೀಗೆ ಶ್ರೀ| ಪ್ರಭುಗಳ ಉಪಸೂಚನೆಯು ಪ್ರಚಂಡ ಬಹುಮತದಿಂದ ಮಂಜೂರಾಯಿತು. ಮಹತ್ವ ವಿಷಯದ ಮೇಲೆ ಮಾತಾಡಬಂದ ಮಹತ್ವ ಪುರುಷರ ದಾಕ್ಷಿಣ್ಯ ಸಹ ಹಿಡಿಯದೆ, ಲೋಕಲ್ ಫಂಡಿನ ಏರಿಕೆಯ ವಿಷಯವು ಮುಂದೂಡಲ್ಪಟ್ಟಿತು.

ಜಿಲ್ಲೆಯೊಳಗಿನ ಶಿರ್ಸಿ ಹೊರತಾಗಿ ಎಲ್ಲ ತಾಲೂಕ ಲೋಕಲ್ ಬೋರ್ಡುಗಳೂ ಲೋಕಲ್ ಫಂಡನ್ನು ಏರಿಸಬಾರದೆಂದು ಅಭಿಪ್ರಾಯ ಕೊಟ್ಟಿದ್ದವು. ಶಿರ್ಸಿಯ ನಾಗರಿಕರೂ ಸಭೆ ಸೇರಿ, ಲೋಕಲ್ ಫಂಡನ್ನು ಏರಿಸಬಾರದಾಗಿ ತೀರ್ಮಾನ ಕಳುಹಿದ್ದರು. ಇದಲ್ಲದೆ, ಅನೇಕ ದೇಸಾಯಿಗಾರರ ಕಡೆಯಿಂದ ಜಿಲ್ಲಾಧಿಪತಿಗಳಿಗೆ ಅನೇಕ ಅರ್ಜಿಗಳು ಸಾದರವಾಗಿದ್ದವು; ಬೋರ್ಡಿಗೂ ಅನೇಕ ಅರ್ಜಿಗಳು ಬಂದಿದ್ದವು.

ಹೀಗೆ ಲೋಕಲ್ ಫಂಡಿನ ಏರಿಕೆಯ ಪ್ರಶ್ನೆಯು ಸದ್ಯಕ್ಕೆ ತಹಕೂಬಾಗಿ ಮುಂದಿನ ಮಾತು ಮುಂದೆ."

ಮಹಾತ್ಮರ ಆತ್ಮಚರಿತ್ರೆ.

[illegible]

(೧೩) "ಕೂಲಿ"ಯ ಕಷ್ಟಪರಂಪರೆ

ಟ್ರಾನ್ಸವಾಲ ಹಾಗು ಒರೇಂಜ ಫ್ರೀ ಸ್ಟೇಟದೊಳಗಿನ ಭಾರತೀಯರ ಸ್ಥಿತಿಯನ್ನು ಸಂಪೂರ್ಣವಾಗಿ ಇಲ್ಲಿ ವರ್ಣಿಸುವದು ಪ್ರಸಂಗೋಚಿತವಲ್ಲವು. ಆ ಕುರಿತು ಸಾದ್ಯಂತ ಮಾಹಿತಿಯನ್ನು ಪಡೆಯಬಯಸುವವರು ನಾನು ಬರೆದ "ದಕ್ಷಿಣ ಆಫ್ರಿಕೆಯಲ್ಲಿಯ ಸತ್ಯಾಗ್ರಹದ ಇತಿಹಾಸ" ವೆಂಬ ಗ್ರಂಥವನ್ನು ಓದಬೇಕೆಂದು ನಾನು ಸೂಚಿಸುವೆನು. ಆದರೆ ಇಲ್ಲಿ ಸಂಕ್ಷಿಪ್ತವಾಗಿ ಆ ಕುರಿತು ಬರೆಯುವದು ಅವಶ್ಯವಿದೆ.

ಒರೇಂಜ ಫ್ರೀ ಸ್ಟೇಟದೊಳಗೆ ... ಭಾರತೀಯರ ಹಕ್ಕುಗಳೆಲ್ಲ [illegible] ಕಾಯಿದೆಯಿಂದ [illegible] [illegible]

[illegible]

... ಭಾರತೀಯರು ... [illegible] ... ರಾತ್ರಿ ೯ ಘಂಟೆಯ ನಂತರ ಹೊರ ಹೋಗಬೇಕಾದರೆ ... ಆ ಪ್ರಕಾರದ ಪರವಾನಿಗೆ ... ಪೋಲೀಸರ ಸ್ವೇಚ್ಛೆಯ ಮೇಲೆ ಅವಲಂಬಿಸಿರುತ್ತಿತ್ತು. ಆದ್ದರಿಂದ ಹೇಳಿಕೊಳ್ಳುವದಕ್ಕೆ ಈ ಪ್ರತಿಬಂಧವಿದ್ದಿಲ್ಲ.

ಈ ಎರಡೂ ಕಾಯಿದೆಗಳ ಪರಿಣಾಮಗಳನ್ನು ನಾನು ಅನುಭವಿಸಬೇಕಾಯಿತು. ಕೋಟ್ಸರವರೊಡನೆ ಆಗಾಗ ನಾನು ತಿರುಗಾಡಹೋಗುತ್ತಿದ್ದೆ. ೧೦ ಘಂಟೆ ಮುಂಚಿತವಾಗಿ ಮನೆಗೆ ಮರಳುತ್ತಿದ್ದಿಲ್ಲ. ಪೋಲೀಸರು ನನಗೆ ಸೆರೆಹಿಡಿದರೆ, ನನ್ನ ಗತಿಯೇನು? ಇದನ್ನು ಕುರಿತು ಕೋಟ್ಸರವರಿಗೆ ನನಗಿಂತಲೂ ಹೆಚ್ಚು ಚಿಂತೆಯಾಗಿತ್ತು. ಕೋಟ್ಸರವರಲ್ಲಿ ನಿಗ್ರೋ ಜಾತಿಯ ಆಳುಗಳಿದ್ದರು. ಅವರಿಗೆ ಕೋಟ್ಸರವರು ಪಾಸುಗಳನ್ನು ಕೊಟ್ಟಿದ್ದರು. ಆದರೆ, ನನಗೆ ಅವರಿಂದ ಪಾಸು ಸಿಗುವ ಬಗೆ ಹೇಗೆ? ಒಡೆಯನು ತನ್ನ ಆಳುಗಳಿಗೆ ಪಾಸು ಕೊಡಬೇಕೆಂದು ಕಾಯಿದೆ. ನನಗೊಂದು ಪಾಸು ಬೇಕಾದರೆ, ಅದನ್ನು ಕೋಟ್ಸರವರಿಗೆ ಕೊಡಲಾಗುತ್ತಿದ್ದರೂ, ಅವರು ಕೊಡುತ್ತಿದ್ದಿಲ್ಲ. ಯಾಕೆಂದರೆ, ಅದು ವಂಚನೆಯಾಗಿತ್ತು.

ಆದ್ದರಿಂದ ಕೋಟ್ಸರವರೋ, ಅವರ ಒಬ್ಬ ಗೆಳೆಯರೋ (ನನಗೆ ಯಾರೆಂದು ಈಗ ಜ್ಞಾಪಕವಿಲ್ಲ) ನನ್ನನ್ನು ಸ್ಟೇಟ ಎಟಾರ್ನಿಯಾದ ಡಾ। ಕ್ರೌಸರವರ ಬಳಿಗೆ ಕರೆದೊಯ್ದರು. ನಾವಿಬ್ಬರು, ಡಾ। ಕ್ರೌಸರವರೂ ಒಂದೇ "ಇನ್" ಎಂಬ ಶಾಲೆಯ ಬಾರಿಸ್ಟರರೆಂದು ತಿಳಿಯಿತು. ೯ ಘಂಟೆ ರಾತ್ರಿಯ ಮೇಲೆ ಹೊರ ಉಳಿಯಬೇಕಾದರೆ, ನನಗೊಂದು ಪಾಸ ಬೇಕಾಗಿರುವದೆಂದು ತಿಳಿದು ಅವರಿಗೆ ಬಹಳ ವ್ಯಸನವಾಯಿತು; ಅವರು ನನ್ನೊಡನೆ ಸಹಾನುಭೂತಿಯನ್ನು ಪ್ರಕಟಿಸಿದರು. ಪಾಸ ಕೊಡುವ ಬದಲು, ನನಗೊಂದು ಪತ್ರವನ್ನೇ ಕೊಟ್ಟು, ಪೋಲೀಸರ ಉಪದ್ರವವಾಗದಂತೆ ರಾತ್ರಿ ಸಮಯ ಬೇಕಾದಾಗ ಹೊರ ಉಳಿಯಲು ಅವರು ಅಧಿಕಾರ ಕೊಟ್ಟರು. ಹೊರಹೋಗುವಾಗ, ಆ ಪತ್ರವನ್ನು ನಾನು ಯಾವಾಗಲೂ ಒಳಿಯಲ್ಲಿಟ್ಟುಕೊಳ್ಳುತ್ತಿದ್ದೆ. ಆದರೆ, ಆ ಪತ್ರವನ್ನು ಉಪಯೋಗಿಸುವ ಪ್ರಸಂಗವು ನನಗೆ ಬರಲಿಲ್ಲ. ಇದೊಂದು ಆಕಸ್ಮಿಕ ಸಂಗತಿಯು.

ಡಾ। ಕ್ರೌಸರವರು ತಮ್ಮಲ್ಲಿ ಬರಲು ನನಗೆ ನಿಮಂತ್ರಿಸುತ್ತಿದ್ದರು ನಾವು ಗೆಳೆಯರಾದೆವೆಂದು ಹೇಳಬಹುದು. ಆಗಾಗ ನಾನು ಅವರಲ್ಲಿಗೆ ಹೋಗುತ್ತಿದ್ದೆ. ಅವರ ಮೂಲಕವೇ ಅವರ ಪ್ರಸಿದ್ಧ ಸಹೋದರನ ಪರಿಚಯವು ನನಗಾಯಿತು. ಅವರ ಸಹೋದರರು ಜೋಹಾನ್ಸಬರ್ಗದಲ್ಲಿ ಸರಕಾರಿ ವಕೀಲರಾಗಿದ್ದರು. ಬೋಅರ ಯುದ್ಧದಲ್ಲಿ ಇಂಗ್ಲಿಷ ಸ್ವಸ್ಥವಿಕಾರಿಯೊಬ್ಬನನ್ನು ಕೊಲೆ ಮಾಡುವ ಪ್ರಸಂಗದಲ್ಲಿ ಡಾ। ಕ್ರೌಸರವರ ಮೇಲೆ ಪ್ರಕರಣ ನಡೆದು, ೭ ವರ್ಷ ಕಾರಾಗೃಹ ಶಿಕ್ಷೆಯಾಯಿತು, ಅವರ ಸನದು ಬಾರಿಸ್ಟರರ ಪಟ್ಟದ ಮೇಲಿಂದ ತೆಗೆಯಲ್ಪಟ್ಟಿತು. ಯುದ್ಧ ಮುಗಿದ ಬಳಿಕ, ಡಾ। ಕ್ರೌಸರವರಿಗೆ ಬಿಡುಗಡೆಯಾಯಿತು. ಬಾರಿಸ್ಟರ ಪಟ್ಟದ ಮೇಲೆ ಮರಳಿ ಅವರು ವಕೀಲಿಯನ್ನು ಕೈಕೊಂಡರು.

ಈ ಪರಿಚಯಗಳಿಂದ ಮುಂದೆ ನನಗೆ ಬಹಳ ಲಾಭವಾಯಿತು: ಸಾರ್ವಜನಿಕ ಸೇವೆಗೆ ಬಹಳ ಅನುಕೂಲವಾಯಿತು.

ಕಾಲುದಾರಿಗಳ ಉಪಯೋಗದ ಕುರಿತು ಇರುವ ಕಾಯಿದೆಯಿಂದ ನನಗೆ ಬಲು ಕಷ್ಟವಾಯಿತು. ಯಾವಾಗಲೂ ಅಧ್ಯಕ್ಷರ ಮನೆ ಮಾರ್ಗದಿಂದ ನಾನು ಬೈಲಿಗೆ ಹೋಗುತ್ತಿದ್ದೆ. ಅಧ್ಯಕ್ಷರಾದ ಕ್ರೂಗರವರ ಮನೆಯು ಇದೇ ಬೀದಿಯಲ್ಲಿದೆ. ಈ ಮನೆಯು ತೀರ ಸಾಮಾನ್ಯವಿದ್ದ ಹೊರಗಿನಿಂದ ಉಪವನ ಸಹ ಇರುವದಿಲ್ಲ. ನೆರೆಹೊರೆಯವರಂತೆಯೇ ಇವರ ಮನೆ ಕಾಣುತ್ತದೆ. ಪ್ರಿಟೋರಿಯಾದೊಳಗಿನ ಅನೇಕ ಲಕ್ಷಾಧೀಶರ ಮನೆಗಳು ಇದಕ್ಕಿಂತ ಹೆಚ್ಚು ಸಂಭ್ರಮದ್ದಿವೆ. ಸುತ್ತಲು ಉಪವನಗಳೂ ಇವೆ. ಅಧ್ಯಕ್ಷರಾದ ಕ್ರೂಗರವರು ತೀರ ಸಾದಾ ಪುರುಷರೆಂದು ಖ್ಯಾತಿಯಿತ್ತು. ಅವರ ಮನೆಯ ಮುಂದಿರುವ ಪೋಲೀಸರ ಕಾವಲಿನ ಮೇಲಿಂದಲೇ ಆ ಮನೆಯು ಯಾರೊಬ್ಬ ಅಧಿಕಾರಿಯದೆಂದು ತಿಳಿಯಬೇಕಾಗಿತ್ತು. ಸಾಮಾನ್ಯವಾಗಿ ನಾನು ಯಾವಾಗಲೂ ಈ ಮಾರ್ಗದ ಮೇಲಿನ ಕಾಲ್ದಾರಿಯಿಂದ ಹೋಗುತ್ತಿದ್ದೆನು. ಪೋಲೀಸ ಕಾವಲುಗಾರರು ನನಗೇನೂ ಉಪದ್ರವ ಕೊಡಲಿಲ್ಲ.

ಪೋಲೀಸ ಕಾವಲುಗಾರರು ಬದಲಾಗುತ್ತಿದ್ದರು. ಒಮ್ಮೆ ಒಬ್ಬನು ನನಗೆ ಮುಂಜಾಗ್ರತೆ ಸಹ ಕೊಡದೆ, ಕಾಲ್ದಾರಿಯನ್ನು ಬಿಟ್ಟು ಹೋಗೆಂದೂ ಹೇಳದೆ, ಧಕ್ಕನೆ ಬಂದು ನನ್ನನ್ನು ನೂಕಿದನು; ಒದೆದನು. ನಾನು ದಿಗಿಲುಬಿದ್ದೆ. ಹೀಗೆ ಮಾಡಲು ಕಾರಣವೇನೆಂದು ನಾನು ಕೇಳಬೇಕೆನ್ನುವಷ್ಟರಲ್ಲಿ, ಕೋಟ್ಸರವರು ಅಶ್ವಾರೂಢರಾಗಿ ಅಲ್ಲಿಯೇ ಬಂದರು. ಅವರು ನನಗೆ ಕರೆದು ಹೇಳಿದ್ದೇನೆಂದರೆ —

"ಗಾಂಧಿಯವರೇ, ನಾನು ಸಮಸ್ತವನ್ನೂ ನೋಡಿದ್ದೇನೆ. ನೀವು ಆ ಮನುಷ್ಯನ ಮೇಲೆ ಖಟ್ಲೆ ಹೂಡಿದರೆ, ಸಂತೋಷದಿಂದ ನಾನು ನಿಮ್ಮ ಪಕ್ಷದಿಂದ ಸಾಕ್ಷಿ ಹೇಳುವೆನು. ನಿಮಗೆ ಈ ಪ್ರಕಾರ ನಡಿಸಿಕೊಂಡದ್ದನ್ನು ನೋಡಿ, ನನಗೆ ವ್ಯಸನವಾಗಿದೆ."

"ತಾವು ವ್ಯಸನಪಡುವ ಕಾರಣವಿಲ್ಲ. ಆ ಬಡ ಪ್ರಾಣಿಗೇನು ಗೊತ್ತು? ಆತನಿಗೆ ಕಪ್ಪು ಜನರೆಲ್ಲರೂ ಒಂದೇ; ನನ್ನನ್ನು ನಡಿಸಿಕೊಂಡಂತೆಯೇ ಆತನು ನಿಗ್ರೋ ಜನರನ್ನು ನಡಿಸಿಕೊಳ್ಳುತ್ತಾನೆ. ನನಗಾಗಿ ವ್ಯಕ್ತಿಶಃ ಕೋರ್ಟಿನಲ್ಲಿ ಹೋಗಬಾರದೆಂದು ನಾನೊಂದು ನಿಯಮ ಮಾಡಿದ್ದೇನೆ. ಆದ್ದರಿಂದ ಅವನ ಮೇಲೆ ನಾನು ಖಟ್ಲೆ ಹೂಡಬಯಸುವದಿಲ್ಲ," ಎಂದು ನಾನೆಂದೆ.

"ಇದು ತಮ್ಮ ಸ್ವಭಾವಕ್ಕನುಗುಣವಾಗಿಯೇ ಇರುತ್ತದೆ; ಆದರೂ, ಪುನಃ ವಿಚಾರ ಮಾಡಿ ನೋಡಿರಿ. ಇಂಥವರಿಗೆ ಚರೋ ಪಾಠ ಕಲಿಸಬೇಕು" ಎಂದು ಹೇಳಿ ಕೋಟ್ಸರವರು ಪೋಲೀಸನಿಗೆ ಛೀ ಮಾಡಿದರು. ಪೋಲೀಸ ಸಿಪಾಯಿಯು ಬೋಅರನಿದ್ದನು. ಇಬ್ಬರೂ ಡಚ್ ಭಾಷೆಯಲ್ಲಿ ಮಾತಾಡಿದರು. ನನಗೇನೂ ಅವರ ಮಾತು ತಿಳಿಯಲಿಲ್ಲ. ಸಿಪಾಯಿಯು ನನ್ನ ಕ್ಷಮೆ ಬೇಡಿದನು. ನಾನು ಆತನಿಗೆ ಈ ಮೊದಲೇ ಕ್ಷಮಿಸಿದ್ದೆನು; ಪುನಃ ಕ್ಷಮೆ ಬೇಡುವ ಕಾರಣವಿದ್ದಿಲ್ಲ.

ಆದರೆ, ಇನ್ನು ಮುಂದೆ ಈ ಬೀದಿಯೊಳಗಿಂದ ನಾನು ಹೋಗಲಿಲ್ಲ. ಈ ಸಿಪಾಯಿಯು ಬದಲಿಗೆ ಬೇರೆ ಸಿಪಾಯಿಯೊಬ್ಬನಿರಬಹುದು, ಆತನಿಗೆ ಈ ಹಕೀಕತು ತಿಳಿಯದು; ಆದ್ದರಿಂದ ಆತನು ಹೀಗೆಯೇ ವರ್ತಿಸಬಹುದು. ಅನಾವಶ್ಯಕವಾಗಿ ಇನ್ನೊಮ್ಮೆ ಆತನಿಂದ ನಾನ್ಯಾಕೆ ಒದೆದುಕೊಳ್ಳಬೇಕೆಂದು ವಿಚಾರಿಸಿ ಬೇರೆ ಹಾದಿಯನ್ನೇ ಹಿಡಿದೆನು.

ಭಾರತೀಯ ನಿವಾಸಿಗಳ ಕಷ್ಟಗಳ ಅರಿವು ನನಗೆ ಚೆನ್ನಾಗಿ ತಿಳಿಯಹತ್ತಿತು. ಈ ಕಾಯಿದೆಯ ವಿಷಯವನ್ನು ಬ್ರಿಟಿಶ ಏಜಂಟರೊಡನೆ ಮಾತಾಡಿ, ಅವಶ್ಯಬಿದ್ದರೆ, ಪ್ರಯೋಗಾರ್ಥವಾಗಿ ಒಂದು ಪ್ರಕರಣವನ್ನು ನಡಿಸುವ ವಿಷಯ ಆಲೋಚಿಸಿದೆನು.

ಹೀಗೆ ಭಾರತೀಯರ ಕಷ್ಟಸ್ಥಿತಿಯನ್ನು ನಾನು ಸೂಕ್ಷ್ಮವಾಗಿ ಅಭ್ಯಾಸಿಸಿದೆನು: ಓದಿದೆನು; ಕೇಳಿದೆನು; ಸ್ವತಃ ಅನುಭವಿಸಿದೆನು. ದಕ್ಷಿಣ ಆಫ್ರಿಕೆಯಲ್ಲಿ ಸ್ವಾಭಿಮಾನಿ ಹಿಂದೀಯರಿಗೆ ಇಂಬಿಲ್ಲವೆಂದು ಸ್ಪಷ್ಟವಾಯಿತು. ಈ ಸ್ಥಿತಿಯನ್ನು ಬದಲಿಸುವ ಉಪಾಯವನ್ನು ನಾನು ವಿಚಾರಿಸಹತ್ತಿದೆ.

ಸದ್ಯಕ್ಕೆ ದಾದಾ ಅಬ್ದುಲ್ಲಾರವರ ಪ್ರಕರಣವನ್ನು ನಾನು ಲಕ್ಷಿಸಬೇಕಾಗಿತ್ತು.

BATLIBOI'S

Accountancy Training Institute

Recognised by

The G. D. A. Board

Offers best training in Accounting, Banking, Company Management and Secretarial Work and Theory and Practice of Commerce.

Best staff, Individual attention fee moderate, and payable by instalments.

Send for Prospectus at Yusuf Buildings, Churchgate street Fort, Bombay

You are invited to make thorough enquiry before joining.

TUITION BY POST IS OUR SPECIALITY.

ಚವರಲೆಟ್
ಮೋಟಾರಕಾರ್ ಏಜನ್ಸಿ, ಕೆನರಾ.

ನಾವು ಹೊಸ ಚವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿ ಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ:— **ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ, ಶಿರ್ಶಿ**

ಕುಮಟಾ ಏಜಂಟ:- **ಜಿ. ಡಿ. ಮಳಗಿಕರ ಎಂಡ್ ಕೊ.**

ಬಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲಾಪ್ ಹಾಗು ಮಿಚಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮುಗ್ರಿಗಳು ಯೋಗ್ಯ ಸವಲತಿನಿಂದ ದೊರೆಯುತ್ತವೆ.

G. D. Malgikar & Co,
KUMTA

ಸರಸ್ವತೀ

ಇದೇ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ಕೃಷ್ಟವಾದ ತಿಳಿಗನ್ನಡ ಮಾಸಪತ್ರಿಕೆ ಇದೊಂದೇ.

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಒದಕಕ್ಕ ವಿಷಯಗಳು ಮಾತ್ರ 40 ಪುಟಗಳಿವೆ. ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಶೀಲಾ" ಎನ್ನುವ ಕಾದಂಬರಿಯೂ, 'ಶಹಾಜಹಾನ'ಎನ್ನುವ ನಾಟಕವೂ ಸಾಹಿತ್ಯಸರೋಜ-ಕನ್ಯಾಕೈಪಿಡಿ-ಮುತ್ತಿನ ಸರ-ಚಿತ್ರ ಚರಿತಾವಳಿ-ಗ್ರಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಿಕೆಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ಚಂದಾದಾರರಿಗೆ "ಶಾರದಾ ಗ್ರಂಥಮಾಲೆ"ಯಲ್ಲಿ ಇದು ವರೆಗೆ ಪ್ರಕಟವಾಗಿರುವ 'ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದೂ ಭಾಗ್ಯೋದಯ-ರಣಕೇಸರಿ'ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು. ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವುದರಿಂದ ಪ್ರಕಟಣೆಗೆ ಅತ್ಯುತ್ತಮವಾದ ಪತ್ರಿಕೆ. ವಾರ್ಷಿಕ ಚಂದಾ ರೂ. 3-0-0 ಮಾತ್ರ, ವಿದ್ಯಾರ್ಥಿಗಳಿಗೂ, ವಾಚನ ಶಾಲೆಗಳಿಗೂ ರೂ 2-0-0 ಮಾತ್ರ

ವಿಳಾಸ:— "ಸರಸ್ವತೀ" ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ನೇಕಾರರ ಗುಂಪಿನ.

ಕನ್ನಡ] **ಸ್ವಧರ್ಮ.** [ವಾರಪತ್ರಿಕೆ

ಸಂಪಾದಕರು:- ದ. ರಾ. ಬೇಂದ್ರೆ. ಬೀ. ಎ.
ವಾರ್ಷಿಕ ವರ್ಗಣಿ ೩—೦—೦

ಸಮಾಜದಲ್ಲಿ ಶಾಂತಿಪುಷ್ಟಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ರೀತಿಯು. ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ. ಇಂಥಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿ.

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ
ಆಯುರ್ವೇದ ಸಂಗ್ರಹಾಲಯ.
ಶಾಸ್ತ್ರೋಕ್ತ ತಯಾರಿಸಿದ ಕುಪಿಪಕ್ವ ರಸಾಯನಗಳು.

೧. **ಸಮೀರ ಪನ್ನಗ**— ಇದು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು. ಹೊಟ್ಟೆ ಉಬ್ಬೋಣ, ಹೊಟ್ಟೆಯೊಳಗಿನ ನಾನಾ ಪ್ರಕಾರದ ಪೀಡನೆ, ಸನ್ನಿಪಾತ ವಿಕಾರಗಳಲ್ಲಿ ಹಲುಬೋಣ, ಸಿಕ್ಕಂತೆ ಒದ್ದ್ಯಾಡೋಣ ಮುಂತಾದ ೮೦ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ.

ತೊಲೆ ೧ಕ್ಕೆ ರೂ. ೬-೮-೦.

೨. **ಮಲ್ಲಸಿಂಧೂರ**—ಮಹಾಶ್ವಾಸ, ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ಹಲುಬೋಣ, ಕಫಕ್ಷಯ, ಬಿಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು-ದಮ್ಮು, ಕಂಪು, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಗಳಿಗೆಯೊಳಗೆ ರೋಗಿಯು ವಾಸಿಯಾಗುತ್ತಾನೆ.

ತೊಲೆ ೧ಕ್ಕೆ ರೂ. ೭-೦-೦.

೩. **ಸುವರ್ಣರಾಜ ವಂಗೇಶ್ವರ**—ಉಪದಂಶಗಳ ಶೇಷವಿಕಾರ, ಪರಮಾ, ಧಾತು ಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುನಷ್ಟ, ಸ್ವಪ್ನಾವಸ್ಥ, ಅಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧಗಳ ಸಮಸ್ತ ವಿಕಾರಗಳನ್ನು ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನೂ ಕಾಂತಿಯನ್ನೂ ಕೊಡುತ್ತದೆ. ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ. ಇದರಿಂದ ಏನೊಂದೂ ಉಪದ್ರವವಾಗುವದಿಲ್ಲ.

ತೊಲೆ ೧ಕ್ಕೆ ರೂ. ೬-೦-೦

೪. **ವ್ಯಾಧಿಹರಣ ರಸ**—ಉಪದಂಶ, (ಗರಮೀಯು) ಫಿರಂಗೋಪದಂಶ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಆಮವಾಯು, ವಾತರಕ್ತ, ಭಯಂಕರ ವಾತವಿಕಾರ, ಪ್ರಾಮುಖ್ಯವಾಗಿ ಉಪದಂಶಗಳಿಗೆ ಮುಂದಾಗಿ ಆಗುವ ದಮ್ಮು, ಕೆಮ್ಮು, ನಿಶ್ಶಕ್ತಿ ಇವುಗಳ ಮೇಲೆ ಇಷ್ಟು ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಇನ್ನಾವದೂ ಇಲ್ಲ

ತೊಲೆ ೧ಕ್ಕೆ ರೂ 2-0-0.

೫. **ಸೂತಶೇಖರ**— ಸನ್ನಿಪಾತ, ಪ್ಲೇಗ, ಮೂರ್ಛೆ, ಹಲುಬುವ ವಿಕಾರ (ಭ್ರಮೆ) ಶ್ವಾಸ, ಸಿಕ್ಕಂತೆ ಒದ್ದ್ಯಾಡುವದು, ಹೊಟ್ಟೆನೋವು, ಅಮ್ಲಪಿತ್ತ ಮುಂತಾದ ವಾತ-ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದು. ಸಾಮಾನ್ಯವಾಗಿ ರೋಗದ ಚಿಹ್ನೆಯು ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಶುಭವಾಗುತ್ತದೆ.

ತೊಲೆ ೧ಕ್ಕೆ ರೂ. ೬-೮-೦.

ಇವಲ್ಲದೆ, ತರತರದ ಚೂರ್ಣ, ಘೃತ, ಅವಲೇಹ, ಆಸವ, ಮಾತ್ರೆ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ.

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ಏರ್ಪಾಟು ಮಾಡಿರುತ್ತೇವೆ.

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದಲ್ಲಿ ಉತ್ತರದ ಬಗ್ಗೆ ಸ್ಟಾಂಪು ಜೊತೆಗಿಟ್ಟು ಈ ಕೆಳಗಿನ ಪತ್ತೆಗೆ ಬರಕೊಳ್ಳತಕ್ಕದ್ದು.

ಪತ್ತೆ:— **ಶ್ರೀ। ಗಜಾನನ ಅಪ್ಪು ಭಟ್ಟ ವೇದೇಶ್ವರ,**
ಆಯುರ್ವೇದಿಕ ವೈದ್ಯ,
ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ.)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ
ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಬೆಯಾವತಕ್ತು ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—
ದಿ ನೊ ರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ

ಗೌರೀಹುಣ್ಣಿವೆಯಿಂದ ೪ನೇ ವರ್ಷ ಪ್ರಾರಂಭ
ಸಚಿತ್ರ] ಜಯಕರ್ನಾಟಕ [ಮಾಸಪತ್ರಿಕೆ

ಸಂಪಾದಕ— ಆಲೂರ ವೆಂಕಟರಾಯರು.
ಇದರಲ್ಲಿ ವಾಙ್ಮಯಾತ್ಮಕ (ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಜೀವನಗುಟ್ಟು ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಬರುತ್ತವೆ. ಮೋಡರ್ನ ರಿವ್ಯೂ ಆಕಾರದ ೩೦ ಪುಟಗಳು. ವರ್ಗಣಿ. ರೂ ೫-೮-೦
ವ್ಯವಸ್ಥಾಪಕ ಜಯಕರ್ನಾಟಕ, ಧಾರವಾಡ.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಜಂತು ಮಾತ್ರೆ, ಪಿತ್ತ ಮಾತ್ರೆ, ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾಮಿಲೆ, ಪಾಂಡು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ಗುಲ್ಮವ್ಯಾಧಿ, ಸಣ, ವಾತ, ಶಲೆವಾತ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗರ್ಮಿ) ಬಾಲಗ್ರಹ, ಮಕ್ಕಳ ಗಣಕಣಗಳಿಗೆ ಮುಂತಾಗಿ ೫೦ ತರದ ಜರ್ಮನ, ಅಮೇರಿಕನ, ಫ್ರೆಂಚ ಇಂಗ್ಲೀಷ ಮತ್ತು ದೇಶಿ ಪೇಟೆಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

[illegible] ಬಂದೂಕುಗಳ, ಎಲ್ಲ ತರದ ಸ್ಪೋರ್ಟಿಂಗ ಸಾಮಾನು, ಬೆಲ್ಟ, ಬ್ಯಾಗ, ಅಮೇರಿಕದ ಮೊಳಿಯರ ಬಂದೂಕುಗಳು, ಕುಲುಮೆ [illegible] ನಮ್ಮಲ್ಲಿ ನಿಮಗೆ ಅವಶ್ಯವಿರುವ ಸಾಮಾನ ಬೇರೆ ದೇಶದಿಂದ ತರಿಸಿಕೊಡಲಾಗುವದು.
ಎಸ್. ಎಲ್. ಧಾಕಪ್ಪ ಮತ್ತು ಬ್ರದರ,
ಶಿರಸಿ.

ರಾಗದ ಪೆಟ್ಟಿಗೆಗಳು.

ನಾಟಕ ಸಾಮಾನು:—
ತಬಲೆ, ಡಕ್ಕೆ ವಗೈರೆ.



- ಕ್ರೆ ಪೆಟ್ಟಿಗೆ ಗಳ ರೂ. ೩೫, ೬೦, ೪೦, ೫೫, ೬೦
- ,, [illegible] ರೂ. ೪೦, ೪೫, ೫೦, ೬೦, ೧೦೦.
- ಕಾಲು ಪೆಟ್ಟಿಗೆ ರೂ ೭೫, ೮೫, ೧೦೦, ೧೩೫, ೧೮೦
- ಶಹನೈ (ಕಾಮ್ಪ್ಲಿಟ ಸೆಟ್) ರೂ ೧೬, ೧೮, ೨೦

ಹಾರ್ಮೋನಿಯಮ್ ಗ್ರಾಮ ಕಿಂ. ರೂ. ೧೫,
ಶಹನೈ ಗ್ರಾಮ ಕಿಂ. ೧೨ ಆಣೆ.

ನಾಟಕದ ಬಗ್ಗೆ ಕ್ಯಾಟಲಾಗ ಪುಕ್ಕಟೆ ದೊರೆಯುವದು.

ಗೋಪಾಳ ಸಖಾರಾಮ ಮತ್ತು ಕಂಪನಿ

೩೦ ಕಲಕ, ವಿಠ್ಠಲವಾಡಿ ಎದುರಿಗೆ,

ಕಾಳಬಾದೇವಿ ರೋಡ,

ಮುಂಬಯಿ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ- ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ- ಸಿದ್ದಾಪುರ- ಗೇರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ.
ಪ್ರಯಾಣಿಕರಿಗೆ ಊಟೋಪಚಾರ ಮಾಡಕ್ಕೆ ಎಲ್ಲಾ ಸ್ಟೇಷನುಗಳಲ್ಲೂ ಪಕ್ಕಾ ವಿಶ್ರಾಂತಿ ಮಾಡಿದೆ.
ಹೆಚ್ಚಿನ ಮಾಹಿತಿಯನ್ನು ಅಪೇಕ್ಷಿಸಿದಲ್ಲಿ ತಿಳಿದುಕೊಳ್ಳ ಬಹುದು

M. Manjappa
PROPRIETOR.

ಅತ್ಯದ್ಭುತ ! ಅತ್ಯದ್ಭುತ ! !

ಜೀವನಾಧಾರ

ಅಮೇರಿಕಾ ಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲಿಕ್ಸಿರ್ ಆಫ್ ಲೈಫ್

ಅಂದರೆ, ಸರ್ವ ರೋಗ ನಾಶಕ, ಸರ್ವಾರೋಗ್ಯದಾಯಕ ಅಜೀರ್ಣ ತಲೆನೋವು, ವಾಂತಿ, ಅತಿಸಾರ, ಜ್ವರ, ಕಾಲರಾ ಜ್ವರ ಕಿವಿನೋವು ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಹೊಡೆದು ಚಲ್ಲುವ ಒಂದೇ ರಾಮಬಾಣವಿದು! ಎಲ್ಲ ರೋಗಗಳ ಮೇಲೆ ಪ್ರಯೋಗಿಸಿ! ಒಂದು ಸೀಸೆ ಮುಗಿದರೆ, ಒಬ್ಬ ಡಾಕ್ಟರನಿದ್ದಂತೆಯೇ!!!

ಒಂದು ಸೀಸೆಗೆ ರೂ ೧ ೮-೦ ಸಣ್ಣ ಸೀಸೆಗೆ ರೂ. ೦-೮-೦ ಟಪಾಲ ಖರ್ಚು ಬೇರೆ.

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ.— **ಜೀವನಾಧಾರ ಡಿಪೋ, ಹುಬ್ಬಳ್ಳಿ**

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಏನೆಲ್ಲ ರೋಗಗಳು ಹೋಗುವವು ೬೦ ೭೦ ವರ್ಷದ ಮುದುಕರ ಕಾಮುಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವವು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋ ಪ್ರಾಣನಾಶ ನಪುಂಸಕತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತುವು ಹಿಂದಾಗುವದು — ಸದರಿ ನಾಗೂ ಕಾಸಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವವು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧| ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩-೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಆದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. ತಿನಿಸ ಬಾಟಲಿಗಳ ಕಿಮ್ಮತ್ತು ೧೨-೦-೦ ವ. ಪಿ. ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧—೦ ೩ ಬಾಟ್ಲಿಗೆ ೩—೦—೦ ಹಣನಿ ೧೩೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ ಜಿ. ಬೆಳಗಾಂವ.

Our Head Master.

Sir,

In the last issue of the Kanara Leader, there appeared some explanation regarding the present condition of the Sirsi High School, and the way in which the affairs of the School are drifting under the Headmastership of Mr Amembal But we think that none is more to blame fore this state of things than the School authorities themselves who made Mr. Amembal the Headmaster of the School. Mr. Amembal, if his own assertions are to be believed, seems to be a man of exceptional abilities and attainment, and the School authorities should have taken good care before importing such illustrious servant for their tiny High shool. Great men soon grow weary of doing little things, and duties which attract lesser men soon become irksome to them and even provoke them into a manner of life which makes them look more like stupid fellows than men gifted with plain common sense. There would be little cause for surprise, therefore, if the students of the Sirsi High Shool were to complain that the teaching of the Head master is unintellegible to them, and if the teachers of the school were to curse the stars which induced them to join the school, and be only too glad to quit the school at the earliest opportunity that might be offered to them.

As an educationist and scholar, Mr. Amembal says he has no rival in the Kanara District. His proficiency is not limited to one or two subjects but covers the whole range of subjects which are included in the curriculum of the school and the University. Mr. Amembal spends a considerable portion of his periods in the school in recounting all the details about his scholarship for the benefit of his students evidently with the object that the students may get into the habit of believing him to a great man, and thus be inspired to emulate his example. Those who seem to be privileged like the students to hear the description of Mr. Amembal's greatness from his own lips, are the members of the Municipality whom he visits twice, thrice, or four times a day according to their improtance. Mr. Amembal is a gold medalist; and though the medal has not seen the light of day in Sirsi, we may safely assume that the laymen like ourselves are not fit to see it. Mr. Amembal is also a great grammarian, and he says that he is going to write a grammar for the benefit of the Bombay graduates who, in his opinion, lack in grammar, accents, and tonation Being himself a repository of knowldge, he naturally entertains a very low opinion about the other teachers. His food expres-

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನ ವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಇದ್ದು ತಿಕ್ಕಿದ ಕೂಡಲೆ ತಲೆಯು ತಂಪಾಗಿ ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ ರೂ. ೧—೦—೦
ಅಂಚೆವೆಚ್ಚ ,, ೦—೬—೦
೩ ಬಾಟ್ಲಿಗಳಿಗೆ ,, ೨—೧೦—೦
ಅಂಚೆವೆಚ್ಚ ,, ೦ ೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

—:o:—

೪ ಔನ್ಸಿಗೆ ರೂ. ೩—೦—೦
೨ ಔನ್ಸಿಗೆ ,, ೧—೪—೦
೧ ಡ್ರಾಮಿಗೆ ,, ೦-೧೨-೦
ಅಂಚೆವೆಚ್ಚ ,, ೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!



"ತೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082. **BOMBAY**

sion is, "These teachers do not know what is what and what is not what." He boasts, indeed, with pardonable pride that he has seen many schools in his school career, and that he has come to Sirsi not with any mercenery motives, but with the object of educating the public of Sirsi.

Mr. Amembal's views about discipline are as curious as they are novel. It is said that he once circulated a notice in the school, calling upon all the students to boycott a student and to have no communication with him for some offence by which the unlucky student incurred the wrath of his head-master.

From the above, it would be clear how ill-fitted the post of the Head-master is for Mr Amembal, and it would be a happy day for the the teachers and the students of the High school, if Mr Amembal is elevated to a higher position on one of the University chairs, where his activities may be more useful to himself and the humanity at large

Sirsi, 25-8-1926 } **An onlooker.**

ಗೆಳೆಯರ ಗುಂಪಿನ

ಕನ್ನಡ] **ಸ್ವಧರ್ಮ.** [ಮಾಸಪತ್ರಿಕೆ

ಸಂಪಾದಕರು:- ದ. ರಾ. ಬೇಂದ್ರೆ, ಬಿ. ಎ.

ವಾರ್ಷಿಕ ವರ್ಗಣಿ ೩-೦-೦

ಸಮಾಜದಲ್ಲಿ ಶಾಂತಿ ಪುಷ್ಟಿ ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ. ಇಂಥಾ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊರಡುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿ

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

BATLIBOI'S
Accountancy Training Institute
Recognised by
The G. D. A. Board

Offers best training in Accounting, Banking, Company Management and Secretarial Work and Theory and Practice of Commerce

Best staff, Individual attention fee moderate, and payable by instalments.

Send for Prospectus at Yusuf Buildings, Churchgate street, Fort, Bombay

You are invited to make thorough enquiry before joining.

TUITION BY POST IS OUR SPECIALITY.

ತುಲಸಿ.

"ಕಪ್ಪು ತುಲಸಿಯು ಹೆಚ್ಚು ಗುಣಕಾರಿಯು. ಈ ಗಿಡವು ರೋಗಕಾರಕ ಹವೆಯನ್ನು ಶುದ್ಧ ಮಾಡುವದರಿಂದ ಇದನ್ನು ಮನೆಯ ಹೊಂದಿಗೆ ಹಚ್ಚಬೇಕು. ಇದರಲ್ಲಿರುವ ಅಸಾಧಾರಣ ಗುಣವನ್ನು ಲಕ್ಷಿಸಿಯೇ ಪ್ರಾಚೀನರು ಇದನ್ನು ಬಹು ಪೂಜ್ಯವಾಗಣಿಸಿರುವರು. ಇದಕ್ಕೆ ಸಂಸ್ಕೃತದಲ್ಲಿ ಕುಲಿಪ್ಲೀ ಎಂತಲೂ ಹೆಸರುಂಟು. ೩-೪ ತುಲಸೀ ಎಲೆಗಳನ್ನು ಎರಡು ಶೇರು ನೀರಿನಲ್ಲಿ ಚತುರ್ಥಾಂಶ ಕಷಾಯ ಮಾಡಿ ಕುಡಿಯುವದರಿಂದ ಜ್ವರ, ಜಸ್ತಿ, ಪಿತ್ತ ವಿಕಾರಗಳು ಗುಣವಾಗುವವು. ಕಪ್ಪು ತುಲಸಿಯ ರಸದಲ್ಲಿ ಮೆಣಸಿನ ಕಾಳಿನ ಪುಡಿಯನ್ನು ಹಾಕಿ, ವಿಷಮ ಜ್ವರದಲ್ಲಿ ಕೊಡಬೇಕು. ಹುಡುಗರಿಗೆ ವಾಂತಿಯಾಗುತ್ತಿದ್ದರೆ ತುಲಸಿಯ ರಸದಲ್ಲಿ ಜೇನುತುಪ್ಪ ಹಾಕಿ ಕೊಡಬೇಕು. ಈ ಎಲೆಯ ರಸದಲ್ಲಿ ಹಸಿ ಶುಂಠಿಯ ರಸ ಜೇನುತುಪ್ಪ ಹಾಕಿಯಾಗಲಿ ಮೆಣಸಿನ ಕಾಳಿನ ಪುಡಿ, ಜೇನುತುಪ್ಪಗಳನ್ನು ಹಾಕಿಯಾಗಲೀ ವಾತ ರೋಗದ ಮೇಲೆ ಕೊಡಬೇಕು. ಗಜಕರ್ಣಕ್ಕೆ ಈ ಎಲೆಗಳನ್ನು ತಿಕ್ಕಬೇಕು. ಅಥವಾ ರಸದಲ್ಲಿ ಅಕ್ಕಿ ತುಪ್ಪ ಸಣ್ಣ ಕೂಡಿಸಿ ಹಚ್ಚಬೇಕು. ಈ ರಸದಲ್ಲಿ ಅಫುವನ್ನು ಅರೆದು ಇಲಿ ಕಚ್ಚಿದ ಗಾಯದ ಮೇಲೆ ಹಚ್ಚಬೇಕು. ಧಾರಣವಾಗಿ ರಕ್ತ ಬರುತ್ತಿದ್ದರೆ ಈ ಎಲೆಗಳನ್ನು ಅರೆದು ಲೇಪಿಸುವದು. ಅನ್ನದ ರುಚಿ ಕೆಟ್ಟವರು ಪ್ರತಿ ದಿನ ತುಲಸಿಯ ರಸ ಕುಡಿಯುವದರಿಂದ ಅಗ್ನಿ ದೀಪನವಾಗುವದು. ಈ ರಸದಲ್ಲಿ ನಿಂಬೆಯ ರಸವನ್ನು ಕೂಡಿಸಿ ಹಚ್ಚುವದರಿಂದ ಹೊಟ್ಟೆ ನೋವು ಗುಣವಾಗುವದು. ೧೦-೧೨ ತುಲಸಿ ಪತ್ರ, ಸಣ್ಣ ಚೂರ ಶುಂಠಿ ಹಾಕಿ ಕಷಾಯ ಮಾಡಿ ಉಪ್ಪು ತುಪ್ಪ ಸ್ವಲ್ಪ ಸ್ವಲ್ಪ ಹಾಕಿ ಎರಡು ಹೊತ್ತು ಕುಡಿಯುವದರಿಂದ ಎರಡು ವಾರದಲ್ಲಿ ಹೊಟ್ಟೆ ಶೂಲ ನಿಲ್ಲುವದು. ಈ ರಸದಲ್ಲಿ ಕಲ್ಲುಸಕ್ಕರೆ ಕೂಡಿಸಿ ನೆಕ್ಕುವದರಿಂದ ಕೆಮ್ಮು ದಮ್ಮುಗಳು ಗುಣವಾಗುವವು. ಜ್ವರದಲ್ಲಿ ಬೆವರು ಬಂದಿದ್ದರೆ ೩-೪ ತುಲಸೀ ಎಲೆಗಳನ್ನೂ ೩-೪ ಮೆಣಸಿನ ಕಾಳುಗಳನ್ನೂ ಹಾಕಿ ಕಷಾಯ ಮಾಡಿ ಬಿಸಿ ಬಿಸಿ ಕುಡಿಯುವದರಿಂದ ಬೆವರು ಬರುವದುಂಟು. ಒಂದು ಹನಿ ತುಲಸೀ ರಸವನ್ನು ಒಂದು ಕುದಿತ ಹಾಲಿನಲ್ಲಿ ಹಾಕಿ ಕುಡಿಸುವದರಿಂದ ಕಫವು ಕಡಿಮೆಯಾಗುವದು. ಈ ಎಲೆಗಳನ್ನು ಒಜ್ಜ ಪೋಟೀಸ ಮಾಡಿ ಎದೆಗೆ ಶಾಖ ಕೊಡುವದರಿಂದ ಕೆಮ್ಮು ಗುಣವಾಗುವದು. ಈ ಎಲೆಗಳನ್ನು ಒಣಗಿಸಿ ಪುಡಿ ಮಾಡಿ ನಶ್ಯದಂತೆ ಸೇದುವದರಿಂದ ಥಂಡಿಯಿಂದಾದ ತಲೆ ಭಾರವು ಕಡಿಮೆಯಾಗುವದು. ಇದರ ಬೀಜವನ್ನು ಆಕಳ ಹಾಲಿನಲ್ಲಿ ಅರೆದು ಕುಡಿಸುವದರಿಂದ ಸಣ್ಣ ಹುಡುಗರ ವಾಂತಿ ಅತಿಸಾರಗಳೂ ನಿಲ್ಲುವವು. ರಕ್ತಾತಿಸಾರವಾದಾಗ ಈ ಬೀಜವನ್ನು ರಾತ್ರೆ ನೆನೆ ಇಟ್ಟು ಬೆಳಿಗ್ಗೆ ಬೀಸಿ ಕುಡಿಯಬೇಕು."

— ಲೋಕಮಿತ್ರ.

— ಬೆಳಗಾವಿಯ ಜಿಲ್ಲಾ ಬೋರ್ಡಿನ ದಿವಾನ ನಿವಡಣೆಯು ಅಗೋಸ್ಟ ತಾ ೨೮ ನೇ ಕಾರ್ಯಕ್ರಮಕ್ಕೆ ಹತ್ತಿತ್ತು!

— ಅಕ್ಕಲಕೋಟ ಸಂಸ್ಥಾನದ ಜೇಷ್ಠರಾದ ರಾಣಿಸಾಹೇಬರು ೩ ತಿಂಗಳ ಹಿಂದೆ ಹುಟ್ಟಿದ ಮಗನ ಸಂಗ್ರಾಮ ಎಂಬ ಹೆಸರನ್ನು ಇಟ್ಟು ಕೊಂಡರು.

"ಕರ್ನಾಟಕದ ಗೌರವ ನಷ್ಟ ಪ್ರಸಂಗ."

ಅಖಿಲ ಭಾರತೀಯ ರಾಷ್ಟ್ರೀಯ ಮಹಾ ಸಭೆಯ ಭಾವೀ ಅಧ್ಯಕ್ಷರಾದ ಶ್ರೀಯುತ ಎಸ್. ಶ್ರೀನಿವಾಸಯ್ಯಂಗಾರರವರ ಎದುರಿಗೆ ಬಳ್ಳಾರಿಯಲ್ಲಿ ಕರ್ನಾಟಕದ ಉತ್ಸಾಹಯುಕ್ತ ತರುಣ ಕಾರ್ಯಕರ್ತರು ಜೂನ ೧ ನೇ ತಾ. ಮೊದಲ್ಗೊಂಡು ಸಪ್ಟಂಬರ ೩೦ ವರೆಗೆ ಸಲ್ಲುವ ೪ ತಿಂಗಳಲ್ಲಿ ೧೦,೦೦೦ ರಾಷ್ಟ್ರೀಯ ಮಹಾ ಸಭೆಯ ಸದಸ್ಯರನ್ನೂ ಮತ್ತು ೫೦೦ ಹಿಂದೂಸ್ಥಾನಿ ಸೇವಾದಲದ ಸದಸ್ಯರನ್ನೂ ಮತ್ತು ೫೦೦೦ ರೂಪಾಯಿಗಳ ನಿಧಿಯನ್ನೂ ಕೂಡಿಸುವದಾಗಿ ಪ್ರತಿಜ್ಞೆ ಮಾಡಿದರು. ಈಗ ಎರಡೂವರೆ ತಿಂಗಳುಗಳು ಕಳೆದು ಹೋದವು. ಇನ್ನು ಒಂದೂವರೆ ತಿಂಗಳು ಮಾತ್ರ ಉಳಿದಿರುವದು. ಇದು ವರೆಗೆ ೫೦೬೦ ರಾಷ್ಟ್ರೀಯ ಸಭೆಯ ಮತ್ತು ೨೭೮ ದಳದ ಸದಸ್ಯರನ್ನೂ ಕೂಡಿಸಲಾಗಿದೆ. ೨೦೦೦ ರೂಪಾಯಿಗಳ ತನಕ ನಿಧಿಯ ಬಗ್ಗೆ ವಾಗ್ದಾನಗಳಾಗಿವೆ. ಇನ್ನೂ ಅರ್ಧ ಕೆಲಸವು ಮಾತ್ರ ಪೂರೈಸುತ್ತ ಬಂದಿದೆ.

ನಮ್ಮ ಮಾತನ್ನು ನಾವು ಉಳಿಸಿಕೊಳ್ಳಬೇಕಾದರೆ ಈಗ ಉಳಿದಿರುವ ಆರು ವಾರಗಳಲ್ಲಿ ೫೦೦೦ ರಾಷ್ಟ್ರೀಯ ಮಹಾ ಸಭೆಯ ಮತ್ತು ೩೦೫ ದಳದ ಸದಸ್ಯರನ್ನೂ ೩೦೦೦ ರೂಪಾಯಿಗಳನ್ನೂ ಕೂಡಿಸಬೇಕಾಗಿದೆ. ಇಲ್ಲದಿದ್ದರೆ ನೆರೆಯ ಪ್ರಾಂತಗಳವರಿಗೆ ಅವಹೇಳನಕ್ಕೆ ಗುರಿಯಾಗಿ ಅವಯ ಕಷ್ಟಿಂದಾಗುವ ಸಂಶಯವು ನಮಗೆ ತೋರುತ್ತಿರುವದು. ಆದ್ದರಿಂದ ಕರ್ನಾಟಕದ ಸವಭಿಮಾನದ ಶ್ರೇಯೋತ್ಕಾಂಕ್ಷೆಗಳೆಲ್ಲರೂ ಉತ್ಸಾಹದಿಂದ ಮುಂದೆ ಬಂದು ನಮ್ಮ ತರುಣ ಕಾರ್ಯಕರ್ತರಿಗೆ ಅವರ ಪವಿತ್ರ ಉದ್ಯಮದಲ್ಲಿ ನೆರವಾಗಬೇಕೆಂದು ಬೇಡುತ್ತೇವೆ.

ಒಂದಾನೊಂದು ಕಾಲದಲ್ಲಿ ರಾಷ್ಟ್ರೀಯ ಚಳವಳಿಯಲ್ಲಿಯೂ ಮಹಾ ಸಭೆಯ ಧ್ಯಾನ ಧ್ಯೇಯ ಪ್ರಸಾರದಲ್ಲಿಯೂ ವಿಶೇಷ ಉತ್ಸುಕರಾಗಿದ್ದ ಮುಖಂಡರೂ ಪ್ರಸಿದ್ಧ ಕೆಲಸಗಾರರೂ ಈಗ ಯಾವ ವಿಧವಾದ ಕಲಕಳವನ್ನು ಕೊಡಲೂ ಇಚ್ಛಿಸುವದಿಲ್ಲವೆಂದು ನಮ್ಮ ಸಂಘಟಕರು ಬರೆಯುವರು. ಇದೊಂದು ವಿಷಾದಕರ ವಿಚಾರ. ಈ ವಿಷಯದಲ್ಲಿ ಪ್ರತ್ಯೇಕ ನಾವೇನೂ ಹೇಳಬಯಸುವದಿಲ್ಲ. ಆದರೆ ರಾಜಕೀಯ ಸತ್ವಗಳಿರುವ ಈ ನಮ್ಮ ಕನ್ನಡ ನಾಡಿನಲ್ಲಿ ಹೊಸ ಜೀವ ಕಳೆಯನ್ನು ತುಂಬುವ ಕಾರ್ಯವನ್ನು ಎಲ್ಲರೂ ಕೈಕೊಳ್ಳಬೇಕೆಂದು ನಮ್ಮ ಪ್ರಾರ್ಥನೆ.

N. S. Hardiker.
General Secretary.

— ಮೈಸೂರ ಮಹಾರಾಜರು ಸಿಂಹಾಸನವನ್ನೇರಿ ೨೫ ವರ್ಷಗಳಾದವು. ಈ ಕುರಿತು ತಾ ೮ ನೇಗೆ ಅರಮನೆಯಲ್ಲಿ ಒಂದು ಉತ್ಸವವಾಯಿತು! ಮಹಾರಾಜರು ಆಯುಷ್ಮಂತರಾಗಲಿ!

— ನವಾ ನಗರದ ಮಹಾರಾಜರವರು ರಯಲಂಡದ ಕೋನೇ ಮೋರಾ ಗ್ರಾಮದಲ್ಲಿ ಭೂಮಿಯನ್ನು ಕೊಂಡಿರುವರು. ಅಲ್ಲಿ ವರ್ಷದಲ್ಲಿ ಆರು ತಿಂಗಳು ಉಳಿದು ಮಹಾರಾಜರು ಭಕ್ತ ಬೆಳೆಸುವರಂತೆ! ಹಿಂದೂಸ್ಥಾನದಲ್ಲಿ ಮಹಾರಾಜರಿಗೆ ಎಲ್ಲಿಯೂ ಜಾಗವಿಲ್ಲ.

— ಮಂಗಳೂರಿನ ಡಾ। ರಾಮರಾಯರಿಗೆ ಸಕ್ಕರೆಯ ಕ್ರಮವನ್ನು ಅಭ್ಯಾಸ ಮಾಡುವದಕ್ಕಾಗಿ ವಿಲಾಯತಿಗೆ ಹೋಗಲು ವರ್ಷಕ್ಕೆ ೨॥ ಸಾವಿರ ರೂಪಾಯಿಗಳ ವೇತನ ದೊರಕಿದೆ.

ಕರ್ನಾಟಕಾಭಿಮಾನಿಗಳೇ

ಅಗೋಸ್ಟ ತಿಂಗಳು ಮುಗಿಯಿತು. ಸಪ್ಟಂಬರ ತಿಂಗಳು ಶುರುವಾಯಿತು. ಸಪ್ಟಂಬರ ತಿಂಗಳೊಳಗಾಗಿ ೨೦,೦೦೦ ರಾಷ್ಟ್ರೀಯ ಸಭಾಸದರನ್ನು ಕೂಡಿಸಬೇಕೆಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ನಿರ್ಣಯ ಮಾಡಿದ್ದು ತಮಗೆ ಗೊತ್ತಿದೆ. ಸಭಾಸದರನ್ನು ಮಾಡುವದು ಸಾಕಷ್ಟು ಜೋರಿನಿಂದ ಸಾಗಿರುವದಿಲ್ಲವೆಂಬುವದು ವಿಷಾದಕರವಾದ ಸಂಗತಿಯು ನಾವು ಮಾಡಿದ ನಿರ್ಣಯಗಳನ್ನು ಪೂರ್ಣವಾಗಿ ಅಮಲಿನಲ್ಲಿ ತರುವದು ಎಷ್ಟು ಮಹತ್ವವಾದದ್ದೆಂಬುದನ್ನು ತಮಗೆ ಹೇಳಬೇಕಾಗಿಲ್ಲ. ನಾವು ಕೆಲಸ ಮಾಡದೆ ತಪ್ಪಿದರೆ ನಮ್ಮ ಪಾಲಿಗೆ ಅಪಕೀರ್ತಿಯು ಕಟ್ಟಿಟ್ಟದ್ದೇ. ಕರ್ನಾಟಕವು ಕಾರ್ಯ ಪ್ರವರ್ತವಾಗಲಿಕ್ಕೆ ಸ್ವಲ್ಪ ವಿಲಂಬವಾಗುವದೆಂಬುದು ನನಗೆ ಗೊತ್ತುಂಟು. ಆದರೆ ಒಮ್ಮೆ ಕಾರ್ಯವನ್ನು ಕೈಕೊಂಡ ಬಳಿಕ ಮಾಯುವೇಗದಿಂದ ಪೂರ್ತಿಗೊಳಿಸುವದಾದರೆ ಕರ್ನಾಟಕದ ಸ್ವಭಾವವಾಗಿದೆ. ಕರ್ನಾಟಕಾಭಿಮಾನಿಗಳೇ ನೀವು ನಿಮ್ಮ ಆಲಸ್ಯವನ್ನು ಬಿಟ್ಟು ಬೇಗನೆ ಕಾರ್ಯ ಪ್ರವರ್ತರಾಗಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಪ್ರತಿಯೊಬ್ಬ ಕನ್ನಡಿಗನು ತನ್ನ ಕರ್ತವ್ಯವನ್ನು ಮಾಡಿಯೇ ತೀರಬೇಕೆಂದು ಕರ್ನಾಟಕ ಮಾತೆಯ ಅಪೇಕ್ಷೆಯುಂಟು. ಪ್ರತಿಯೊಬ್ಬರು ತನ್ನ ಕರ್ತವ್ಯವೆ ದಾರವಾಗಿ ಕೆಲಸ ಮಾಡಿದರೆ,೨೦,೦೦೦ ಸಭಾಸದರನ್ನು ಮಾಡುವದು ಕಠಿಣವಲ್ಲ. ಬಂಧುಗಳೇ ಟೊಂಕ ಕಟ್ಟಿರಿ. ಮತ್ತು ನೀವು ನಿಮ್ಮ ಉತ್ಸಾಹದಿಂದ ಕಾರ್ಯದಿಂದ ಕರ್ನಾಟಕವು ಉದ್ಯೋಗಶಾಲಿ ಎಂಬುದನ್ನು ಸಿದ್ಧ ಮಾಡಿ ತೋರಿಸಿರಿ.

ಹಿಂದುಸ್ಥಾನೀ ಸೇವಾದಲದವರು ಕೂಡಿಸಬೇಕಾದ ೫೦೦೦ ರೂ. ಗಳಲ್ಲಿ ಸುಮಾರು ಅರ್ಧ ಹಣವು ಈಗ ಕೂಡಿದೆ. ಆ ಕಾರ್ಯವನ್ನು ವಿಶ್ರಾಂತಿಯಿಲ್ಲದೆ ಹಗಲಿರುಳು ಕಾಟ ಮಾಡುವ ನನ್ನ ಸಹಕಾರಿಗಳಾದ ಡಾ|| ಹರ್ಡೀಕರರು ಮಾಡುವರು ಎಲ್ಲರೂ ಅವರಿಗೆ ನೆರವಾಗಿ ಉಳಿದ ಹಣವನ್ನು ನಿಯಮಿತ ವೇಳೆಯಲ್ಲಿಯೇ ಕೂಡಿಸುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ವಿಜಾಪುರ
೧-೯-೨೬

ಕಾಬಲಗಿ ಶ್ರೀನಿವಾಸರಾವ.
ಅಧ್ಯಕ್ಷ.
ಕ. ಪ್ರಾ. ಕಾ. ಕ.

— ವೀರಶೈವ ಸಮಾಜದ ಶ್ರೀ|| ಬಸಪ್ಪ ಮಲ್ಲಪ್ಪ ಕಂಕಣವಾಡಿಯವರು ಪೋಲೀಸ ಇನಸ್ಪೆಕ್ಟರರಾಗಿರುವರು. ಇವರಿಗೆ ಪುತ್ರಸಂತತಿಯಿಲ್ಲ. ಬೆಳಗಾವಿಯ ಯಮಕನಮರಡಿಯು ಶ್ರೀ ಬಸಪ್ಪನವರ ಗ್ರಾಮವು. ಅಲ್ಲಿ ಶ್ರೀ ಬಸಪ್ಪನವರದೊಂದು ದೊಡ್ಡ ಮನೆಯಿದೆ. ಅದನ್ನು ಮಕ್ಕಳ ಶಾಲೆಗಾಗಿ ಶ್ರೀಯುತರು ಬೆಳಗಾವಿಯ ಜಿಲ್ಲಾ ಬೋರ್ಡಿಗೆ ಅರ್ಪಿಸಿರುವರು. ಮೇಲಾಗಿ ತಾವು ಸಂಗ್ರಹಿಸಿರುವ ಸಂಪತ್ತನ್ನೆಲ್ಲ ಅಂದರೆ ೧೭ ಸಾವಿರ ರೂಪಾಯಿಗಳನ್ನು ಧಾರವಾಡದ ಲಿಂಗಾಯತ ವಿದ್ಯಾ ಸಂಘಕ್ಕೆ ಅರ್ಪಿಸಿರುವರು. ಇನ್ನು ೩ ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ಅರ್ಪಿಸಬೇಕೆಂದು ಶ್ರೀಯುತರ ಸಂಕಲ್ಪವಿದೆ. ೨೦ ಸಾವಿರ ರೂಪಾಯಿಗಳ ಬಡ್ಡಿಯನ್ನು ಬಡ ವೀರಶೈವ ವಿದ್ಯಾರ್ಥಿಗಳ ವಿದ್ಯಾದಾನಕ್ಕಾಗಿ ಉಪಯೋಗಿಸಬೇಕೆಂದು ವಿಧಿಸೋಣಾಗಿದೆ. ಧರ್ಮಾತ್ಮರು!

— ರೂಪಾಯಿಯ ಬೆಲೆಯನ್ನೇರಿಸುವ ದೇಶಹಿತಘಾತಕ ಕಾಯಿದೆಯ ಚರ್ಚೆಯನ್ನು ದೊಡ್ಡ ಕಾಯಿದೆ ಕೌನ್ಸಿಲು ಮುಂದೂಡಿದೆ. ಸರಕಾರವು ಸೋತಿತು! ಖಾಸ.

"ಶೇಷಂ ಕೋಪೇನ ಪೂರಯೇತ್"

ನಾವು ತಾ ೨೩-೮-೧೯೨೬ನೇಗೆ ಪ್ರಕಟಿಸಿದ ಜಿಲ್ಲಾ ಬೋರ್ಡಿನ ಅಧಿವೇಶನದ ಲೋಕಲ್ಫಂಡ ಪರಿಕೆಯ ಹಕೀಕತನ್ನೂ, ಆ ಹಕೀಕತಿನ ವೇಳೆ ಪ್ರದರ್ಶಿಸಿದ ನಮ್ಮ ವಿಚಾರಗಳನ್ನೂ ಓದಿ, ನಮ್ಮ ಧುರೀಣನಿಗೆ ವೇದನೆಗಳುಂಟಾಗಿವೆ. ಆ ವೇದನೆಗಳ ಭರದಲ್ಲಿ "ವೃತ್ತ"ಕಾರರಿಗೆ "ನಂಜಿನಕೊಡ," "ವಿಷಕುಂಭಪಯೋಮುಖ" ಮುಂತಾದ ವಚನಗಳಿಂದ ಅವನು ಸಂಬೋಧಿಸಿರುವನು. ಇದೇ ಲೇಖನವನ್ನು ನವಿನ್ನೂ ವೃತ್ತ ಪತ್ರದಲ್ಲಿ ನಾವು ಕೊಡುತ್ತಿದ್ದೆವು. ನಮ್ಮ ನಿಂದೆಯಾಗಲೀ, ಸ್ತುತಿಯಾಗಲೀ, ನಮ್ಮ ವೃತ್ತ ಪತ್ರದಲ್ಲಿ ಪ್ರಸಂಗವಿಲ್ಲದೆ ಪ್ರಕಟಿಸುವದು ಅನುಚಿತವೆಂದು ನಮಗೆ ತೋರುತ್ತದೆ. "ವೃತ್ತ"ದ್ವಾರಾ ವೃತ್ತಕಾರರು ಮಾಡಿದ ಕಾರ್ಯ-ಅಕಾರ್ಯ, ಉಪಕಾರ-ಅಪಕಾರಗಳು ವೃತ್ತದ ವಾಚಕರಿಗೆ ಗೊತ್ತಿರುವವು. "ಧುರೀಣರು" ಮಾತ್ರ "ವೃತ್ತಕಾರರ ನಂಜಿನ ಕೊಡ"ವನ್ನು ಟೀಕಿಸುವಾಗ ನಂಜಿನ ಕೊಡದ ಸ್ವರೂಪವನ್ನು ತಮ್ಮ ವಾಚಕರಿಗೆ ಅರುಹಿದರೆ, ಧುರೀಣರ ಸಭ್ಯತನಕ್ಕೂ, ಧುರೀಣತನಕ್ಕೂ ಶೋಭಿಸುತ್ತಿತ್ತು ಇರಲಿ.

'ಧುರೀಣ'ನು ನಾವು ಕೊಟ್ಟ ಜಿಲ್ಲಾ ಬೋರ್ಡಿನ ಹಕೀಕತನ್ನು ಅಲ್ಲಗಳೆಯಲಿಲ್ಲ. ಸ್ವತಃ ಆ ಸಭೆಯಲ್ಲಿ ನಡೆದ ಹಕೀಕತನ್ನು ವಿವರ ಪೂರ್ವಕವಾಗಿ ಪ್ರಕಟಿಸಲಿಲ್ಲ. ಕಾರವಾರದ ನಮ್ಮ ಬಾತ್ಮೀದಾರನು ವೃತ್ತಕಾರರ ಬಲೆಯಲ್ಲಿ ಸಿಲುಕಿದವನಂತೆ! ವೃತ್ತಕಾರರಿಗೆ ಸ್ನೇಹಭಾವದಿಂದ ಅನೇಕರು ಜಿಲ್ಲೆಯಲ್ಲಿ ನಡೆದ ಹಕೀಕತನ್ನು ಬರೆದು ಕಳುಹುತ್ತಾರೆ "ಧುರೀಣನು" ಬಲೆ ಹಾಕಿಕೊಂಡು ಬಾತ್ಮೀದಾರರನ್ನು ಸಂಪಾದಿಸುತ್ತಿರಬಹುದು. ಅವರ ಬಾತ್ಮೀದಾರನು ಬಲೆಯೊಳಗಿನವನಿರಲಿ, ಸ್ವತಂತ್ರನಿರಲಿ, ಆತನು ಕೊಟ್ಟ ಹಕೀಕತೇ ಪ್ರಾಮಾಣ್ಯವಿದ್ದು ಅದನ್ನೇ ಅಲ್ಲಗಳೆಯದ ಬಳಿಕ ಬಾತ್ಮೀದಾರನಿಗೆ ಟೀಕಿಸಿ ಫಲವೇನು?

ರಾ|| ಮಾಸೂರರು ಹಿಂದೇ ತಮ್ಮ ೧೫ ವರ್ಷಗಳ ವರೆಗೆ ಜಿಲ್ಲಾ ಲೋಕಲ್ಬೋರ್ಡಿನ ಮೆಂಬರಿದ್ದರಂತೆ! ತಾಲೂಕ ಲೋಕಲ್ಬೋರ್ಡಿನ ಮೆಂಬರರೂ ಇದ್ದರಂತೆ!! ಬೋರ್ಡಿನ ಪ್ರಸಿಡೆಂಟರೂ ಆಗಿದ್ದರಂತೆ!!! ನಿಸ್ಪೃಹತನದಿಂದಲೂ, ಉತ್ಸಾಹದಿಂದಲೂ ದುಡಿದಿದ್ದರಂತೆ! ನಮ್ಮ ಮಾಹಿತಿಯಂತೆ ರಾ|| ಮಾಸೂರರು ೧೦ ವರ್ಷಗಳ ವರೆಗೆ ಜಿಲ್ಲಾ ಲೋಕಲ್ಬೋರ್ಡಿನ ಮೆಂಬರಿದ್ದಿಲ್ಲ. ೧೦ ವರ್ಷಗಳ ವರೆಗೆ ತಾಲೂಕ ಲೋಕಲ್ಬೋರ್ಡಿನ ಮೆಂಬರರೂ ಇದ್ದಿಲ್ಲ. ನಿಸ್ಪೃಹತನದಿಂದ ಅವರು ದುಡಿದ ಬಗ್ಗೆ ರಾ|| ಮಾಸೂರರ ಚಾಲಕತ್ವದಲ್ಲಿಯೇ ನಡೆಯುವ "ಧುರೀಣ"ನು ಕೊಟ್ಟ ಸರ್ಟಿಫಿಕೇಟಿನ ಕಿಮ್ಮತ್ತನ್ನು ಬಲ್ಲವರು ಬಲ್ಲರು. ಧತ್ತೆ ಕೊಳ್ಳದೆ ರಾ|| ಮಾಸೂರರು ದುಡಿದರೆಂದು "ಧುರೀಣ"ನು ಸಮರ್ಥಿಸುತ್ತಾನೆ. ಆ ಕಾಲಕ್ಕೆ ಧತ್ತೆಯ ಏರ್ಪಾಟು ಇತ್ತೇನು? ಎಂದು "ಧುರೀಣ"ನು ಸ್ಪಷ್ಟೀಕರಿಸಿದ್ದರೆ, ರಾ|| ಮಾಸೂರರ ತ್ಯಾಗದ ಅರಿವಾಗುತ್ತಿತ್ತು.

ರಾ|| ಮಾಸೂರರು ಕೋರ್ಟಿನ ಸಾಕ್ಷಿ ಬಗ್ಗೆ "ಅದೇ ಸಂದರ್ಭಕ್ಕೆ" ಕಾರವಾರಕ್ಕೆ ಹೋಗಿದ್ದರಂತೆ! ಸಂದರ್ಭದ ವ್ಯಾಸವು ದೊಡ್ಡದಿದೆ. ಈ ಕುರಿತು ನಮ್ಮ ಕಾರವಾರದ ಬಾತ್ಮೀದಾರರೊಡನೆ ನಾವು ಚೌಕಶಿ ಮಾಡಿದೆವು. ರಾ|| ಮಾಸೂರರು ತಾರೀಖು ೧೭ ನೇಗೇ ಕಾರವಾರಕ್ಕೆ ಹೋಗಿದ್ದರು. ಅದಿನ ಯಾ ಮರುದಿನ ಅವರಿಗೆ ಸಾಕ್ಷಿ ಇದ್ದದ್ದು ಕಂಡು ಬರಲಿಲ್ಲವಾಗಿ ತಿಳಿಯುತ್ತದೆ. ಇಂಥ ಪ್ರಸಕ್ತಿಯಲ್ಲಿ ರಾ|| ಮಾಸೂರರು ಮುದ್ದಾಂ ಕರೆಬಂದದ್ದರಿಂದ ಹೋಗಿರಬೇಕೆಂದು ಗ್ರಹಿಸಲು ಆಸ್ಪದವಿದೆ. ಹಳ್ಳಿಗಳ ಸ್ಥಿತಿಯನ್ನು ಹಳ್ಳಿಗಳ ಮುಖಾಧಿಕ್ಯದಿಂದ ಆರಿಸಿಬಂದ ಪ್ರತಿನಿಧಿಗಳಿಗೆ ರಾ|| ಮಾಸೂರರು ಹೇಳುವಂಥಾದ್ದೇನಿದೆ? ನಮಗಿನ್ನೂ ತಿಳಿಯದು. ಹಳ್ಳಿಗಳ ಕುರಿತು ಕಾರ್ಯಾರಂಭ ಮಾಡಲು ಜಿಲ್ಲಾ ಬೋರ್ಡಿಗೆ ಆರಿಸಿಹೋದ ಮೆಂಬರರಿಗೆ ಹಸಿವಿಲ್ಲೇನು? ಅವರೇನು ಅಲ್ಲಿ ಖುರ್ಚಿಗಳನ್ನು ಅಲಂಕರಿಸಲು ಹೋಗಿರುವರೆಂದು 'ಧುರೀಣ'ನ ಯಾ ರಾ|| ಮಾಸೂರರ ಹೇಳಿಕೆ ಇದ್ದರೆ, ನಮ್ಮದೇನು ಆಕ್ಷೇಪವಿಲ್ಲ. ಜಿಲ್ಲಾ ಬೋರ್ಡಿನ ಎಲ್ಲ ಸಭಾಸದರಿಗಿಂತ ರಾ|| ಮಾಸೂರರು ಹೆಚ್ಚಿನ ಮಾಹಿತಿಯುಳ್ಳವರೆಂದು ನಾವೇನು ತಿಳಿಯುವದಿಲ್ಲ. ಹಾಗೆ ತಿಳಿಯುವವರು ಯಾರಾದರಿದ್ದರೆ, ಅವರು ರಾ|| ಮಾಸೂರರಿಗೆ ಬೋರ್ಡಿನಲ್ಲೊಂದು ಆಸನ ದೊರಕಿಸಿಕೊಡಲು ಕರ್ತವ್ಯ ಬದ್ಧರಿದ್ದಾರೆಂದು ನಮಗೀಗಲೂ ಅನಿಸುತ್ತದೆ. ರಾ|| ಮಾಸೂರರ ಭಾಷಣಕ್ಕೆ ಯಾರೂ ವಿರೋಧಿಸಲಿಲ್ಲವಾಗಿ 'ಧುರೀಣ'ನು ಹೇಳುತ್ತಾನೆ. ವಿರೋಧಿಸುವ ಬಗೆ ಹೇಗೆ? "ಲೋಕಲ್ಫಂಡನ್ನು ಏರಿಸ ಬೇಕೋ? ಏರಿಸಬಾರದೋ?" ಎಂಬುವದನ್ನು ಚರ್ಚಿಸಲು ಬೋರ್ಡಿನ ಸಭೆ ಸೇರಿತ್ತು. "ಲೋಕಲ್ಫಂಡು ಏರಿಸ ಬೇಕೋ? ಏರಿಸಬಾರದೋ? ಎಂಬುದನ್ನು ಹೇಳುವದು ಶ್ರೀ|| ಮಾಸೂರರ ಉದ್ದೇಶವಾಗಿದ್ದಿಲ್ಲ" ವಾಗಿ ಧುರೀಣನು ಸಮರ್ಥಿಸುತ್ತಾನೆ. ಅಂದ ಬಳಿಕ ಅಪ್ರಸಂಗಿಕವಾಗಿ ಮಾತಾಡುವವರಿಗೆ ಉತ್ತರ ಸಿಗುವ ಬಗೆ ಹೇಗೆ? ಅವರೂ ರಾ|| ಮಾಸೂರರಿಗೆ ಸಭೆಯಲ್ಲಿಯೇ ಉತ್ತರದೊರಕಿದೆಂದು "ಧುರೀಣ"ನಿಗೆ ವಿಚಾರ ಮಾಡಿದರೆ, ತಿಳಿಯುವ ಹಾಗಿದೆ, ರಾ|| ಮಾಸೂರರ ಭಾಷಣ ಮುಗಿದ ಕೂಡಲೇ ಸಿದ್ದಾಪುರದ ಶ್ರೀ|| ಗೋಪಾಲರಾವ ದೇಶಪಾಂಡೆಯವರು ಅಧ್ಯಕ್ಷರಿಗೆ ಸಭೆಯ ಉದ್ದೇಶವನ್ನು ಕೇಳಿ, ಇಷ್ಟೇ ಕುರಿತು ಸಭೆಯಲ್ಲಿ ಚರ್ಚೆಯಾಗಬೇಕೆಂದು ಹೇಳಿ, ರಾ|| ಮಾಸೂರರಿಗೆ ಅಲ್ಲಿ-ದಲ್ಲೇ ಅಧಿಕ ಪ್ರಸಂಗ ಮಾಡಿದ ಬಗ್ಗೆ ಪೆಟ್ಟುಕೊಟ್ಟಿದ್ದಾರೆಂದು ನಾವು ತಿಳಿಯುತ್ತೇವೆ, ಯಾರೂ ಗ್ರಹಿಸಬಹುದು.

ಅಧ್ಯಕ್ಷರಾದ ಶ್ರೀ|| ಗೋಪಿಯವರ "ಅಧ್ಯಕ್ಷ ಕಾರ್ಯನಿರ್ವಾಹಕತೆಯು ಸಮಾಧಾನಕರವಿರುವದೆಂದು" "ಧುರೀಣ"ನು ಹೇಳುತ್ತಾನೆ, ಸರ್ವಸಾಮಾನ್ಯ ಅಧ್ಯಕ್ಷಕಾರ್ಯನಿರ್ವಾಹಕತೆಯ ಕುರಿತು ನಾವು ಕಳೆದ ತಾ ೨೩-೮-೨೬ ನೇ ಲೇಖದಲ್ಲಿ ಚರ್ಚಿಸಲಿಲ್ಲ; ಚರ್ಚಿಸುವ ಪ್ರಸಂಗವೂ ಇದ್ದಿಲ್ಲ. ಶ್ರೀ|| ಗೋಪಿಯವರಿಗೆ ಅಧ್ಯಕ್ಷ ಅಧಿಕಾರವು ಪ್ರಾಪ್ತವಾಗಿ ೪-೫ ತಿಂಗಳಾಗಿದ್ದರಿಂದ ಇಷ್ಟರೊಳಗೆ ಯಾವದೊಂದು ಅಭಿಪ್ರಾಯ ಕೊಡುವದು ಯುಕ್ತವೂ ಅಲ್ಲ. ವಿಶೇಷ ಅಧಿವೇಶನದಲ್ಲಿ ಕಂಡು ಬಂದ ಅವರ ವರ್ತನವನ್ನು ಮಾತ್ರ ನಾವು ಸಮಾಲೋಚಿಸಿರುವೆವು. ಶ್ರೀ|| ಗೋಪಿಯವರು ಬೋರ್ಡಿನ ಮೆಂಬರರ ಸಮ್ಮತಿ ತಕ್ಕೊಂಡು ರಾ|| ಮಾಸೂರರಿಗೆ ಮಾತಾಡಗೊಟ್ಟರೆಂದು "ಧುರೀಣ"ನು ಹೇಳುತ್ತಾನೆ. ಹಾಗೆ

ಸಮ್ಮತಿಕೊಂಡಿದ್ದು ಕೋರಲಿಲ್ಲವಾಗಿ ನಮ್ಮ ಕಾರವಾರದ ಸುದ್ದಿಗಾರರು ತಿಳಿಸುತ್ತಾರೆ. ಮಹತ್ವದ ವಿಷಯದ ಮೇಲೆ ರಾ| ಮಾಸೂರರು ಮಾತಾಡುವವರಿದ್ದಾರೆಂದು ಅಧ್ಯಕ್ಷರು ಹೇಳಿದರು. ಅದನ್ನು ವಿರೋಧಿಸಿ, ಮಾತಾಡ ಬಂದವರಿಗೆ ಕಣ್ಣಿಗೆ ಕೂಡ್ರ ಹೇಳುವದು ಅಸಭ್ಯವಾಗುವದೆಂದು ಮಾತ್ರ ಸಭಿಕರು ಸುಮ್ಮನೆ ಕೂತುಕೊಂಡರಾಗಿಯೂ ತಿಳಿಯುತ್ತದೆ. ಅಂದ ಬಳಿಕ ಮುಂದಾಗಿ ಸಮ್ಮತಿ ತಕ್ಕೊಂಡ ಹಕೀಕತು ನಿರಾಧಾರವಾದದ್ದು.

ಇಂಥ ಪ್ರಸಂಗದಲ್ಲಿ 'ವೃತ್ತ'' ಕಾರರು '' ಹಳ್ಳಿಗಳ ಹಿತದ ಪರಮ ದ್ರೋಹಿಗಳು, ಮೂರ್ಖಶಿಖಾಮಣಿಗಳು, ನಿರ್ಲಜ್ಜರು, ಸ್ಮಶಾನ ಭೂತದ, ಹೇಸಿಗೆಯ ದೆವ್ವ'' ಎಂದು ಧುರೀಣನು ಸಂಬೋಧಿಸಿದ್ದು ಎಷ್ಟರಮಟ್ಟಿಗೆ ಸಾಧಾರವೆಂದು ವಾಚಕರು ತಿಳಿಯಬಹುದು. '' ಧುರೀಣ ''ನು ರಚಿಸಿದ ಲೋಕಲ್ಬಂದ ಪರಿಕೆಯು ಹಳ್ಳಿಗಳ ಉಪಕಾರದ ವ್ಯೂಹವು ನಿರರ್ಥಕವಾದ ಭರದಲ್ಲಿ '' ಶೇಷಂ ಕೋಪೇನ ಪೂರಯೇತ್ '' ಎಂಬ ವಚನದಂತೆ ಆಡಿದ ನುಡಿಗಳಿವು. 'ಧುರೀಣ'ನ ಧುರೀಣತನವು ಕ್ರಮವಾಗಿ ಕಳೆಗುಂದುತ್ತಿರುವ ಲಕ್ಷಣವಿದು. 'ಧುರೀಣ'ನು ಹೀಗೆಯೇ ಅಸಭ್ಯ, ಅವಾಚ್ಯ ನುಡಿಗಳನ್ನು ಜನರಿಗೆ ಸಂಬೋಧಿಸಿದಷ್ಟು ನಮ್ಮ ಕಾರ್ಯವಾಯಿತು. 'ಧುರೀಣ'ನ ಧುರೀಣತನವು ವಿನಾಶವಾಗಿ ಜನರಲ್ಲಿ ಜಾಗೃತಿಯುಂಟಾದ್ದರಿಂದಲೇ ಜನರು ಲೋಕಲ್ಬಂದ ಪರಿಕೆಯ ಯೋಜನೆಯನ್ನು ಅಲ್ಲಗಳೆದರು. 'ಧುರೀಣರು' ಅನುಯಾಯಿಗಳಿಲ್ಲದ ಧುರೀಣರಾದರು. ಇಂಥ ಸಂದರ್ಭದಲ್ಲಿ ಧುರೀಣನು ಅಸಭ್ಯ ನುಡಿಗಳನ್ನಾಡಿದರೆ, ಅವು ಕ್ಷಮ್ಯವೇ. ಇದಕ್ಕಿಂತ ಹೆಚ್ಚಿಗೆ ಈ ಕುರಿತು ಬರೆಯುವದೇನಿದೆ?

ಕಾನಡಾವೃತ್ತ.

ವಿ.ತಿ ಕ್ಷಯ ಸಂ। ಶ್ರಾವಣ ಬ। ೧೪, ಸೋಮವಾರ.

ಐಕ್ಯಮಂಥನ.

ರಾಷ್ಟ್ರೀಯ ಸಭಾಭಿಮಾನಿಗಳಲ್ಲಿ ಉಂಟಾದ ಐಕ್ಯ ಭಂಗದಿಂದ ರಾಷ್ಟ್ರಕಾರ್ಯಕ್ಕೊದಗಿದ ಹಾನಿಯನ್ನು ಹೇಳತೀರದು. ಪ್ರಕೃತಿಭೇದದಂತೆ, ವಿಚಾರಭೇದದಂತೆ ನಮ್ಮ ರಾಷ್ಟ್ರಲೋಕನಾಯಕರಲ್ಲಿ ಪಕ್ಷ ಭೇದಗಳುಂಟಾಗಿವೆ ಸ್ವರಾಜ್ಯಪಕ್ಷ, ಪ್ರತಿಸಹಕಾರಪಕ್ಷ, ಸ್ವತಂತ್ರ ಕಾಂಗ್ರೆಸ ಪಕ್ಷ, ರಾಷ್ಟ್ರೀಯ ಪಕ್ಷ, ಹಿಂದೂಸಭೆ, ಖಿಲಾಫತ, ಮುಸ್ಲಿಮಲೀಗ, ಬ್ರಾಹ್ಮಣ-ಬ್ರಾಹ್ಮಣೇತರ ಮುಂತಾದ ತಂಡೋಪತಂಡಗಳು ದೇಶದಲ್ಲಿ ಜನಿತವಾಗಿ ದೇಶದಲ್ಲೆಲ್ಲ ತುಂಬಾ ಗೊಂದಲ ಎದ್ದಿದೆ. ಮೊದಲೇ ನಮ್ಮ ಭಾರತವಾಸಿಯರು ಸಂಘಟಿತ ಪ್ರಾಣಿಗಳಲ್ಲ. ಈ ಗೊಂದಲದಿಂದಂತೂ ಪ್ರಜೆಗಳಿಗೂ ಏನೊಂದೂ ತಿಳಿಯದೆ, ಎಲ್ಲರೂ ದಿಙ್ಮೂಢರಾಗಿರುವರು. ಎಲ್ಲರಿಗೂ ಲಾಭಪ್ರದವಾದ ಸ್ವರಾಜ್ಯಪ್ರಾಪ್ತಿಯು ಎಂದಾದರೂ ಆಗಬಹುದೇನೆಂದು ಚಿಂತಾಕ್ರಾಂತರಾಗಿರುವರು.

ಈ ಗೊಂದಲದಲ್ಲಿ ರಾಷ್ಟ್ರಪ್ರೇಮವಿರುವದೆಂದು ತಿಳಿಸಲು ನಮಗೆ ತುಂಬಾ ಸಂತೋಷ. ದೇಶಭಕ್ತ ಲಾಲಾಲಜಪತರಾಯರು ಸ್ವರಾಜ್ಯಪಕ್ಷದ ಶೃಂಖಲೆಯನ್ನು ಬಿಡಿಸಿಕೊಳ್ಳುವಾಗ ಸ್ವರಾಜ್ಯಪಕ್ಷಕ್ಕೆ ಪ್ರೇಮದಿಂದ ಹಸ್ತಾಂದೋಲನ ಕೊಟ್ಟಿರುವರು. ಶ್ರೀ ಜಯಕರ, ಕೇಳಕರರವರಾದರೂ ರಾಷ್ಟ್ರಹಿತಕ್ಕಾಗಿಯೇ ಪ್ರತಿಸಹಕಾರಧ್ವಜವನ್ನು ಹಚ್ಚಿರುವರು. ಹಿಂದೂಸಭೆಯವರು ಹಿಂದೂಗಳ ಹೇಡಿತನವನ್ನು ಹೋಗಲಾಡಿಸಿ, ಪೌರುಷವನ್ನು ಜನಿಸಲು ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಪರಿಶ್ರಮ ಪಡುತ್ತಿರುವರು. ಖಿಲಾಫತ ಮುಸ್ಲಿಮಲೀಗದವರಾದರೂ ಸ್ವಾತಂತ್ರ್ಯಕ್ಕಾಗಿಯೇ ಬಡಿದಾಡುತ್ತಿರುವರು. ಬ್ರಾಹ್ಮಣೇತರರೂ ಸ್ವತಂತ್ರರಾಗಬಯಸಿ, ರಾಜಕಾರಣ ರಣಕ್ಷೇತ್ರದಲ್ಲಿ ಎದೆಯೇರಿಸಿಕೊಂಡು ನಿಂತಿರುವರು. ಎಲ್ಲರೂ ರಾಷ್ಟ್ರಪ್ರೇಮದಿಂದ ಪ್ರೇರಿತರಾಗಿರುವದರಿಂದ ಈ ಗೊಂದಲದಿಂದ ನಾವೇನೂ ನಿರಾಶರಾಗಬಾರದು.

ಅದಿಂತಿರಲಿ, ಐಕ್ಯಮಂಥನದ ಕಥೆಯನ್ನು ಹೇಳುವೆವು. ಲಜಪತರಾಯರು ಸ್ವರಾಜ್ಯ ಪಕ್ಷವನ್ನು ತ್ಯಜಿಸುವಾಗ ಸ್ವರಾಜ್ಯಪಕ್ಷಕ್ಕೆ ಸಾದರಪಡಿಸಿದ ರಾಜಿನಾಮೆಯಿಂದ ಭಾರತೀಯ ರಾಜಕಾರಣದಲ್ಲಿ ದೊಡ್ಡದೊಂದು ಕಲ್ಲೋಲ ಎದ್ದಿದೆ. ಲಜಪತರಾಯರ ಹೇಳಿಕೆಯನ್ನು ಕೇಳಿರಿ. ಸ್ವರಾಜ್ಯಪಕ್ಷದ ಕೌನ್ಸಿಲು ತ್ಯಾಗದಿಂದ ಮುಸಲ್ಮಾನರಿಗಿಂತ ಹಿಂದೂಗಳಿಗೇ ಹೆಚ್ಚು ನಷ್ಟವಾಗಿದೆ. ೪-೫ ಮಂದಿ ಮುಸಲ್ಮಾನರು ಸ್ವರಾಜ್ಯಪಕ್ಷದೊಡನೆ ಕೌನ್ಸಿಲು ತ್ಯಾಗಮಾಡಿದರೆ ೨೫-೩೦ ಮಂದಿ ಹಿಂದುಗಳು ಕೌನ್ಸಿಲು ತ್ಯಾಗಮಾಡಬೇಕಾಯಿತು. ಆಂದರೆ ಕೌನ್ಸಿಲಿನಲ್ಲಿ ನಡೆಯುವ ಕಾಯಿದೆ ಕೆಲಸಗಳಲ್ಲಿ ಹಿಂದೂಗಳ ಪ್ರಾಬಲ್ಯವು ಅಪರಿಮಿತವಾಗಿ ಕುಗ್ಗಿ, ಹಿಂದೂಗಳಿಗೆ ಹೇರಳ ನಷ್ಟ. ಕೌನ್ಸಿಲುಗಳಿಗೆ ಪ್ರತಿನಿಧಿಗಳಾಗಿ ಆರಿಸಿಬಂದು ಅವುಗಳನ್ನು ತ್ಯಜಿಸುವದು ಮತದಾರರ ವಿಶ್ವಾಸಘಾತವು. ಕೌನ್ಸಿಲು ತ್ಯಾಗಮಾಡಿದ ಬಳಿಕ ದೇಶದಲ್ಲಿ ವಿಧಾಯಕ ಕಾರ್ಯಕ್ರಮವನ್ನು ಕೈಕೊಂಡು ದೇಶವನ್ನು ಸಂಘಟಿಸುವ ಕಲ್ಪನೆ ಇತ್ತು. ಅದರಂತೆ ದೇಶದಲ್ಲಿ ಸಂಘಟನೆಯ ಕಾರ್ಯವಾಯಿತೇನೆಂದು ಲಜಪತರಾಯರವರು ಪಂಡಿತ ಮೋತಿಲಾಲರವರಿಗೆ ಕೇಳಿ ಇಂಥ ಪ್ರಸಕ್ತಿಯಲ್ಲಿ ಸ್ವರಾಜ್ಯಪಕ್ಷದಲ್ಲಿ ಉಳಕೊಂಡು ಪ್ರಯೋಜನವಿಲ್ಲೆಂದು ನಮೂದಿಸಿ, ಸ್ವರಾಜ್ಯಪಕ್ಷವನ್ನು ತ್ಯಜಿಸಿರುವರು.

ಪಂಡಿತ ಮೋತಿಲಾಲ ನೆಹರೂರವರು ಲಜಪತರಾಯರವರಿಗೆ ತಕ್ಕ ಉತ್ತರವನ್ನಿತ್ತಿರುವರು. ಸ್ವರಾಜ್ಯಪಕ್ಷವು ಕಾಯಿದೆಕೌನ್ಸಿಲುಗಳಲ್ಲಿ ನಡೆಯುವ ಕೆಲಸಗಳಲ್ಲಿ ನೆರವಾಗಿ ಮತದಾರರಿಗೆ ಸಹಾಯ ಮಾಡಲು, ರಾಜಕಾರಣದಲ್ಲಿ ಪ್ರವೇಶಗೊಂಡಿಲ್ಲ. ಸ್ವರಾಜ್ಯಪ್ರಾಪ್ತಿಗಾಗಿ ಕೌನ್ಸಿಲಿನಲ್ಲಿ ಸೇರಿಕೊಂಡಿದೆ. ಇಂಥ ಪ್ರಸಕ್ತಿಯಲ್ಲಿ ಮತದಾರರ ವಿಶ್ವಾಸಘಾತವಾಗಲಾರದು. ಹಿಂದೂಗಳಿಗಾಗಲೀ, ಮುಸಲ್ಮಾನರಿಗಾಗಲೀ ಎಂದೂ ಲಾಭ ನಷ್ಟವಾಗಲಾರದು. ವಿಧಾಯಕ ಕಾರ್ಯಕ್ರಮವನ್ನು ಪುರಸ್ಕರಿಸಲು ತಪ್ಪಿಂದಾಗದಿರಲು ಅದಕ್ಕೆ ಕಾರಣವಿದೆ. ಮಧ್ಯದಲ್ಲಿಯೇ ಪ್ರತಿ ಸಹಕಾರಿಗಳು ತಮ್ಮ ಗೊಂದು ಚಿಕ್ಕಿನ ಬಿಡಾರವನ್ನು ರಚಿಸಿ, ಸ್ವರಾಜ್ಯ ಪಕ್ಷಕ್ಕೆ ಹಳಿಯಲಾರಂಭಿಸಿದರು. ಅವರಿಗೆ ಇದಿರಾಗಬೇಕಾದ್ದರಿಂದ ಸಂಕಲ್ಪದಂತೆ ದೇಶವನ್ನು ಸಂಘಟಿಸುವ ಕಾರ್ಯಕ್ರಮವನ್ನು ಕೈಕೊಳ್ಳಲು ಮೋತಿಲಾಲರವರಿಗೆ ಕೈಗೂಡಲಿಲ್ಲವಂತೆ! ಇದನ್ನು ಕೇಳಿ, ನಮಗೆ ಬಹಳ ವ್ಯಸನವಾಗುತ್ತದೆ. ಲೋಕನಾಯಕರೊಳಗಿನ ಬಡದಾಟವು ರಾಷ್ಟ್ರಪ್ರೇಮದ್ದಿದ್ದರೂ, ಅದರಿಂದೊದಗಿದ ನಷ್ಟವನ್ನು ನೋಡಿ.

ಹೀಗೆ ಲಜಪತರಾಯ ಹಾಗು ಪಂಡಿತಮೋತಿಲಾಲರೊಳಗೆ ಐಕ್ಯಭಂಗವಾದರೂ ನಾವು ಐಕ್ಯಮಂಥನವೆಂದೇ ಅದನ್ನು ಸಂಬೋಧಿಸಿರುವೆವು. ಕಾರಣವೇನು? ಪಂಡಿತ ಮೋತಿಲಾಲರು ಲಜಪತರಾಯರಿಗೆ ಬರೆದ ಪತ್ರದಲ್ಲಿ ಐಕ್ಯಾಮೃತದ ಒಂದು ಬಿಂದು ದೃಗ್ಗೋಚರವಾಗುತ್ತದೆ. ಸರಕಾರಿ ಸೇವೆಯನ್ನು ರಾಷ್ಟ್ರೀಯ ಸಭೆಯವರ್ಯಾರೂ ಅಂಗೀಕರಿಸಬಾರದೆಂದು ಎಲ್ಲರೂ ಪ್ರತಿಜ್ಞೆಕೊಂಡರೆ, ರಾಷ್ಟ್ರೀಯ ಸಭೆಗೆ ಒಪ್ಪಿಜನರಲ್ಲಿ ಐಕ್ಯಮತ್ಯ ಮಾತಲು ಬೇಕಷ್ಟು ಇಂಬಿರುವದಾಗಿ ಪಂಡಿತ ಮೋತಿಲಾಲರವರು ಹೇಳಿರುವರು. ಸುದೈವದಿಂದ ಲಜಪತರಾಯರೂ ಸರಕಾರಿ ಸೇವೆಯನ್ನು ಲೋಕನಾಯಕರು ಅಂಗೀಕರಿಸಬಾರದೆಂಬ ಮತ್ತಿನವರು. ಪ್ರತಿ ಸಹಕಾರಿಗಳಿಗೂ ಮಾನ್ಯ ಪುರುಷರು ಪ್ರತಿ ಸಹಕಾರದ ಪ್ರಮುಖರಾದ ಶ್ರೀ। ಜಯಕರರವರಿಗೂ, ಪಂಡಿತ ಮಾಲವೀಯರವರಿಗೂ ಸಾಬರಮತಿಯ ಒಪ್ಪಂದದ ಕುರಿತು ಮಾತುಕಥೆ ನಡೆದಿರುವದಾಗಿಯೂ, ಸಾಬರಮತಿಯ ಒಪ್ಪಂದವನ್ನು ಉದ್ಧರಿಸಲು ಲಾಲಾಜಿಯವರೂ, ಪಂಡಿತ ಮಾಲವೀಯವರೂ ಯತ್ನಿಸುತ್ತಿದ್ದಾರಾಗಿಯೂ ತಿಳಿದು ಬರುತ್ತದೆ. ವಿಖ್ಯಾತ ಮಹಮ್ಮದೀಯ ರಾಷ್ಟ್ರಭಕ್ತರಾದ ಡಾ। ಅನಸಾರಿಯವರು ಕೇವಲ ರಾಷ್ಟ್ರಹಿತಕ್ಕಾಗಿ ಖಿಲಾಫತ, ಮುಸ್ಲಿಮಲೀಗ ಮುಂತಾದ ಮಹಮ್ಮದೀಯ ಸಂಸ್ಥೆಗಳೊಡನೆ ಇದ್ದ ಸಂಬಂಧವನ್ನು ತೊರೆದು ನಿರ್ಮಲ ರಾಷ್ಟ್ರೀಯ

ರಾಗಿರುವರು. ಲೋಕನಾಯಕರೆಲ್ಲರೂ ಐಕ್ಯಭಂಗಕ್ಕೆ ಬೇಸತ್ತಿರುವರು. ಇಂಥ ಪ್ರಸಕ್ತಿಲ್ಲಿ ತ್ವರ್ಯವೇ ಐಕ್ಯವು ಪ್ರಸ್ಥಾಪನೆಯಾಗುವ ಸುಚಿನ್ಹಗಳು ಕಾಣುತ್ತಿವೆ. ಐಕ್ಯಸಂಘಟನ ಕಾರ್ಯವು ಶೀಘ್ರವೇ ನೆರವೇರಲೆಂದು ಜಗಚ್ಚಾಲಕನನ್ನು ಪ್ರಾರ್ಥಿಸಿ, ನಾವು ಈ ಲೇಖವನ್ನು ಮುಗಿಸುವೆವು.

ಸ್ಫುಟ ಸೂಚನೆಗಳು.

೧. ಬೆಳಗಾಂವಿನ ಮುನಿಸಿಪಾಲಿಟಿಯು ಪ್ರಾಂತಾಧಿಪರಿಗೆ ಮಾನಪತ್ರವನ್ನಿತ್ತು ಸತ್ಕರಿಸಿ, ಪ್ರಾಥಮಿಕ ಶಿಕ್ಷಣ ವಿಸ್ತಾರಕ್ಕಾಗಿ ದ್ರವ್ಯಯಾಚನೆ ಮಾಡಿತು. ಪ್ರಾಂತಾಧಿಪರು ಆ ಕುರಿತು ಕಾಯಿದೆಯಂತೆ ಉತ್ತರವನ್ನಿತ್ತು ಪಾರಾದರು. ಪ್ರಾಥಮಿಕ ಶಿಕ್ಷಣ ಖರ್ಚಿನ ಅರ್ಧಾಂಶವನ್ನು ಮಾತ್ರ ಸರಕಾರವು ಕೊಡಬೇಕೆಂದು ಈ ಹಿಂದೆ ಕಾಯಿದೆಕೌನ್ಸಿಲಿನಲ್ಲಿ ಚರ್ಚೆಯಾಗಿ ನಿರ್ಧಾರವಾಗಿದೆ. ಕಾಯಿದೆಯಲ್ಲಿ ತಿದ್ದುಪಡಿಯಾದ ಹೊರತು ಅದನ್ನು ತಪ್ಪಿಸುವದು ಸಾಧ್ಯವಿಲ್ಲವಾಗಿ ಹೇಳಿ, ಪಾರಾದರು. ಪ್ರಾಥಮಿಕ ಶಾಲೆಗಳ ಕಟ್ಟಡಗಳ ಖರ್ಚನ್ನು ಪೂರೈಸಲಿಕ್ಕು ಬೆಳಗಾಂವಿಯ ಮುನಿಸಿಪಾಲಿಟಿಯವರು ಬೇಡಿಕೊಂಡಿದ್ದರು. ಅದಕ್ಕೂ ಮುಂಚಿನಂತೆಯೇ ನೆವ ಹೇಳಿ, ಪ್ರಾಂತಾಧಿಪರು ಪಾರಾದರು. ಮುನಿಸಿಪಾಲಿಟಿಗಳಿಗೆ ಗ್ರೇಂಟು ಕೊಡಲಿಕ್ಕೆ ಕಾಯಿದೆಯಿಂದಲೇ ಅಡ್ಡಿಯಾಗಿರುವಾಗ ಕಾಯಿದೆಯಂತೆ ನಡೆಯುವ ನಮ್ಮ ಆಳರಸರಿಗೆ ದೊಡ್ಡದೆಂದು ಸಂಕಟವಾಯಿತೆಂದು ಸಾಮಾನ್ಯರು ಗ್ರಹಿಸಬಹುದು. ಕಾಯಿದೆ ಕೌನ್ಸಿಲಿನಲ್ಲಿ ಮೇಜರ ಘೋಗ್ಸನ್‌ರವರಂಥ ದ್ವೇಷಿ ಜಲಸಂಶೋಧಕನ ತಲೆಯ ಭತ್ತೆಗಳು ಮಂಜೂರು ಆಗುತ್ತಿರುವಾಗ ಪ್ರಾಥಮಿಕ ಶಿಕ್ಷಣಕ್ಕಾಗಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ನೆರವಾಗಲು ಸರಕಾರವು ಬಯಸಿದರೆ, ಅದನ್ನು ಅಲ್ಲಗಳೆಯಲು ಕಾಯಿದೆ ಕೌನ್ಸಿಲು ಎಂದಾದರೂ ತಯಾರಾದೀತೇನು? ಕಾಯಿದೆಯ ತಿದ್ದುಪಡಿಯನ್ನು ಸರಕಾರವು ಸೂಚಿಸಲಿ; ಹಣವನ್ನು ಪ್ರಾಥಮಿಕ ಶಿಕ್ಷಣಕ್ಕೆ ಕೊಡಲು ನಿರ್ಧರಿಸಲಿ. ಅಂದರೆ ಕಾಯಿದೆಯ ಅಡ್ಡಿಯು ನಿಮಿಷದಲ್ಲಿ ಹಾರಿ ಹೋಗುವದೆಂದು ಯಾರಿಗೂ ತಿಳಿಯುವ ಹಾಗಿದೆ. ಪರಿಸ್ಥಿತಿಯು ಹೀಗಿರಲು ಕಾಯಿದೆ ಕೌನ್ಸಿಲು, ಕಾಯಿದೆ ಮುಂತಾದ ದೊಡ್ಡ ದೊಡ್ಡ ಮಾತುಗಳನ್ನು ಹೇಳುವದರಲ್ಲಿ ಪ್ರಯೋಜನವೇನಿದೆ? ಬೆಳಗಾಂವಿಯ ಮುನಿಸಿಪಾಲಿಟಿಗೆ ಕೊಟ್ಟ ಉತ್ತರದಲ್ಲಿ ಪ್ರಾಂತಾಧಿಪರು ಮನೆ ತೆರಿಗೆಯನ್ನು ಏರಿಸಿಕೊಳ್ಳಲು, ಮುನಿಸಿಪಾಲಿಟಿಯವರಿಗೆ ಹುರಿದುಂಬಿಸಿದರು. ಭಾಡಿಗೆಯ ಮಾನವು ಏರಿದಂತೆಯೇ ತೆರಿಗೆಯ ಮಾನವನ್ನೂ ಏರಿಸಿಕೊಂಡು ಸಂಪನ್ನರಾಗಿ, ಪ್ರಾಥಮಿಕ ಶಿಕ್ಷಣ ವಿಸ್ತಾರ ಮಾಡಿ ಬ್ರಿಟಿಶ ರಾಜ್ಯದಿಂದುಂಟಾದ ಲಾಭದ ರಾಶಿಯನ್ನು ಬೆಳಗಾಂವಿ ಮುನಿಸಿಪಾಲಿಟಿಯವರು ಜಗತ್ತಿಗೆ ಜಾಹೀರ ಮಾಡಿದರಾಯಿತು. ಪರಸ್ಪರ ಹಣವನ್ನಿತ್ತುಕೊಂಡು ಪರಸ್ಪರ ಪ್ರಜಾಕಲ್ಯಾಣ ಮಾಡುವದಿದ್ದರೆ, ನಮ್ಮ ಆಳರಸರು ನಮಗೆ ಸಂಬಾ ನೆರವಾಗಲು ಯಾವಾಗಲೂ ಸಿದ್ಧರೇ.

೨. ಇದೇ ಸಮಯ ವರಿಷ್ಟ ಕಾಯಿದೆ ಕೌನ್ಸಿಲಿನಲ್ಲಿ ನಡೆದ ಒಂದು ಹಕೀಕತನ್ನು ಹೇಳುವೆವು. ದಿಲ್ಲಿಯಲ್ಲಿ "ಇಂಪೀರಿಯಲ ಜಿಮಖಾನಾ ಕ್ಲಬ್" ಎಂಬ ಬಾದಶಾಹಿ ವಿನೋದ ಮಂದಿರವಿದೆ. ಅಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ಮನೋರಂಜನ ಮಾಡಿಕೊಳ್ಳುತ್ತಾರೆ. ಅದಕ್ಕೆ ಕಡಿಮೆ, ಬಡ್ಡಿ ದರದಿಂದ ಐದು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕಾಯಿದೆ ಕೌನ್ಸಿಲಿನಲ್ಲಿ ಆಳರಸರು ಮಂಜೂರು ಮಾಡಿಕೊಂಡಿರುವರು. ಅಧಿಕಾರಿಗಳಿಗೆ ಪ್ರಜಾಕಲ್ಯಾಣದ ಕೆಲಸ ಮಾಡಿ ಬಹಳ ದಣುವಾಗುತ್ತದೆ. ದಣುವಾರಿಸಿಕೊಳ್ಳುವದಕ್ಕಾಗಿ "ಬಾದಶಾಹಿ ವಿನೋದ ಮಂದಿರದಲ್ಲಿ ಸಾಧನಗಳಿದ್ದ ಮೂಲಕ ಅದಕ್ಕೆ ದ್ರವ್ಯ ಸಹಾಯವನ್ನಿತ್ತು ನೆರವಾಗುವದು, ತೆರಿಗೆಗಳನ್ನು ತೆರುವ ಭಾರತೀಯರ ಹಿತಕ್ಕಾಗಿಯೇ ಇದೆ" ಎಂದು ಕೋಶಾಧಿಕಾರಿಗಳಾದ ಸರ್ ಬೇಸಿಲ್ ಬ್ಲೆಕೆಟರವರು ಪ್ರತಿಪಾದಿಸಿದರು. ಸರ ಶಿವಸ್ವಾಮಿ ಅಯ್ಯರ, ಹರಿಸಿಂಗ ಗೌರ ಮುಂತಾದ ಸಭಾಸದರು ಹೀಗೆ ಸರಕಾರಿ ಹಣವನ್ನು ವಿನೋದಮಂದಿರಗಳಿಗಾಗಿ ವಿನಿಯೋಗ ಮಾಡುವದು ಅನ್ಯಾಯವೆಂದು ಒತ್ತಿ ಹೇಳಿದರೂ ಸರಕಾರವು ಕೇಳಲಿಲ್ಲ. ಭಾರತೀಯರ ಹಿತಕ್ಕಾಗಿಯೇ ಎಂದು ಹೇಳಿ, ಸೂಚನೆಯನ್ನು ಮಂಜೂರು ಮಾಡಿಕೊಂಡಿತು. ಆಳರಸರು ನಮಗಾಗಿ ಬಹಳ ಕಷ್ಟ ಪಡುತ್ತಾರೆ. ಹೆಂಡರು ಮಕ್ಕಳನ್ನು ತ್ಯಜಿಸಿ, ಭಾರತೀಯರ ಕಲ್ಯಾಣಕ್ಕಾಗಿ ದೇಶಾಂತರವಾಸವನ್ನೂ ಕೈಕೊಳ್ಳುತ್ತಾರೆ; ವೈಮಾರಿದು ಮಡಿಯುತ್ತಾರೆ; ಅವರಿಗೆ ವಿನೋದ ಸಾಧನಗಳನ್ನು ಪೂರೈಸಲು ಭಾರತೀಯರು ಕರ್ತವ್ಯಬದ್ಧರಾಗಿರುವರು. ಆಳರಸರಿಗೆ ಇಷ್ಟೆಲ್ಲ ಕಷ್ಟಗಳನ್ನನುಭವಿಸುವ ಕಾರಣವಿಲ್ಲ. ಭಾರತೀಯರು ಹೆಚ್ಚೆಚ್ಚಾಗಿ ಅಧಿಕಾರಗಳನ್ನು ಒಪ್ಪಿಸಲು ಒತ್ತಾಯ ಮಾಡುತ್ತಿರುವರು. ಅವರಿಗೇ ಈ ಕಷ್ಟಗಳನ್ನೆಲ್ಲ ಒಪ್ಪಿಸಿ, ವಿಲಾಯತಿಯೊಳಗಿನ ಶೀತಲ ಹವೆಯಲ್ಲಿ ಹೆಂಡರು ಮಕ್ಕಳೊಡನೆ ಸುಖದಿಂದ ಸಂಸಾರ ಮಾಡಲು ನಮ್ಮದೇನೂ ಅಡ್ಡಿ ಇಲ್ಲ. ಆಳರಸರಿಗೆ ಈ ಪರಿಯಿಂದ ಸುಖಸಾಧನಗಳನ್ನು ನಾವು ಪೂರೈಸಿ ಎಂದೂ ಅವರ ಋಣಮುಕ್ತರಾಗಲಾರೆವು. ಇವರಿಗೆ ಸುಖ ಸಾಧನಗಳನ್ನು ಮಾಡಿಕೊಟ್ಟಂತೆ ಇವರ ಜನ್ಮಕ್ಕೆ ಕಾರಣರಾದ ವಿಲಾಯತಿಯವರನ್ನೊಳಗೊಂಡ ಇವರ ತಾಯಿತಂದೆಗಳಿಗೂ ಯೋಗ್ಯ ವ್ಯವಸ್ಥೆ ಮಾಡಿಕೊಡಬೇಕಾದೀತು! "ತಾಯಿ ಸುಖದಿಂದಿದ್ದರೆ ಗರ್ಭಕ್ಕೆ ಸುಖ." ಎಂಬ ನಾಣ್ಣುಡಿಯಂತೆ ಈ ಆಳರಸರ ಭಾರತೀಯ ಕಲ್ಯಾಣಕ್ಕಾಗಿ ಇಡೀ ಬ್ರಿಟಿಶ ರಾಷ್ಟ್ರವನ್ನು ಸಕಲ ಸಾಮಗ್ರಿಗಳಿಂದ ಪೋಷಿಸಿದರೂ ನಮ್ಮ ಮೇಲಿನ ಉಪಕಾರದ ಹೊರೆಯು ಮತ್ತೂ ತೀರದು! ಇದರಿಂದ ಆಳರಸರು ಕೃತಜ್ಞ ಭಾರತೀಯರ ಸಹವಾಸವನ್ನು ಬಿಟ್ಟುಕೊಟ್ಟು ತ್ವರ್ಯವೇ ವಿಲಾಯತಿಗೆ ಪ್ರಯಾಣ ಬೆಳೆಸುವದು ಲೇಸಲ್ಲವೇ? ಭಾರತೀಯರು ದೇಶದ ಹಾಗೆ ಬಡಿದಾಡಿಕೊಂಡು ಕಲಿಯೊಡನೆ ಕೊಳ್ಳಲಿ. ಅವರವರ ಪಾಪಕ್ಕೆ ಅವರವರೇ ಹೊಣೆಗಾರರು. ಸ್ವಲ್ಪ ವಿಷಯಾಂತರವಾಯಿತು. ಒಂದು ಮಾತನ್ನು ಮಾತ್ರ ನಾವು ಕೇಳಬೇಕೆಂದು ಇಷ್ಟೆಲ್ಲ ಚರ್ಚೆ ಮಾಡಿದೆವು. ಪ್ರಾಥಮಿಕ ಶಿಕ್ಷಣದಂಥ ಪ್ರಜೆಗಳ ಉನ್ನತಿಯ ಯೋಜನೆಗೆ ಸರಕಾರದ ಹತ್ತರ ಹಣವಿಲ್ಲ; ಕಾಯಿದೆಯ ಅಡ್ಡಿ. ಆಳರಸರ ವಿನೋದ ಸಾಧನಕ್ಕಾಗಿ ಹ್ಯಾಗೂ ವ್ಯವಸ್ಥೆಯಾಗುತ್ತದೆ. ಇದರ ಮೇಲಿಂದ ನಾವು ಬೋಧ ಪಡೆಯಬೇಕಾದುದೇನು?

೩. ನಮ್ಮ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಉತ್ಸಾಹಿ ಕಾರ್ಯದರ್ಶಿಗಳಾದ ಡಾ| ನಾರಾಯಣರಾವ ಹರ್ಡೀಕರರವರು ಹೊರಡಿಸಿದ ಪ್ರಕಟನೆಯನ್ನು ನಾವು ಬೇರೊಂದೆಡೆಯಲ್ಲಿ ಕೊಟ್ಟಿರುವೆವು. ಅದರ ಮೇಲಿಂದ ಕರ್ನಾಟಕದಮೇಲೆ ಇರುವ ರಾಷ್ಟ್ರಕಾರ್ಯದ ಹೊರೆಯು ಧ್ವನಿತವಾಗುತ್ತದೆ. ಡಾ| ಹರ್ಡೀಕರರವರು ನುಡಿದಂತೆ ಶ್ರೀಯುತ ಶ್ರೀನಿವಾಸ ಅಯ್ಯಂಗಾರರವರ ಅಧ್ಯಕ್ಷತೆಯಲ್ಲಿ ಸೇರಿದ ಬಳ್ಳಾರಿಯ ಪ್ರಾಂತಿಕ ಅಧಿವೇಶನದಲ್ಲಿ ಕೈಕೊಂಡ ಠರಾವನ್ನು ಸಿದ್ಧಪಡಿಸುವ ಮಹತ್ವದ ಜವಾಬದಾರಿಯು ನಮ್ಮ ಮೇಲೆ ಬಂದಿರುವದು. ಕರ್ನಾಟಕರ ಭಾಗ್ಯದಿಂದ ಶ್ರೀನಿವಾಸ ಅಯ್ಯಂಗಾರರೇ ಆಸಾಮುದಲ್ಲಿ ಜರುಗಲಿಕ್ಕಿದ್ದ ರಾಷ್ಟ್ರೀಯಸಭೆಯ ಅಧಿವೇಶನದ ಅಧ್ಯಕ್ಷರಾಗಲಿರುವರೆಂದು ತಿಳಿಯಲು, ಏನೊಂದೂ ಪ್ರತ್ಯವಾಯವಿಲ್ಲ. ಕರ್ನಾಟಕಸ್ಥರು ರಾಷ್ಟ್ರೀಯಸಭೆಯನ್ನು ಸೇರುವ ಮೊದಲು ತಮ್ಮ ಪ್ರತಿಜ್ಞೆಯನ್ನು ಸಿದ್ಧಮಾಡಿಕೊಟ್ಟರೆ ಮಾತ್ರ ಕರ್ನಾಟಕಸ್ಥರ ಗೌರವವೂ, ಪ್ರತಿಜ್ಞಾ ಪಾಲನದ ತಯಾರಿಯೂ ಸಿದ್ಧವಾಗುವವು. ಇಲ್ಲವಿದ್ದರೆ ಬರೇ ಮಂಟಪ ಶೋಭೆಗಾಗಿ ಕರ್ನಾಟಕಸ್ಥರು "ಆಡಿ ಮಾತನವರು ರೂಢಿಯೊಳಗೆ ಅಧಮರೆಂದು" ಲೋಕದಲ್ಲಿ ಅಪಕೀರ್ತಿ ಹೊಂದಬೇಕಾದೀತು. ಕೆಲವೆಡೆಗಳಲ್ಲಿ ಕರ್ನಾಟಕದೊಳಗಿನ ಸ್ಥಳೀಕ ಕಾರ್ಯನಿರ್ವಾಹಕರು ಸಂಘಟಕರಿಗೆ ನೆರವಾಗುವದಿಲ್ಲವಾಗಿ ಡಾ| ಹರ್ಡೀಕರರವರು ನಮೂದಿಸುತ್ತಾರೆ. ಇದನ್ನು ಕೇಳಿ ನಮಗೆ ಅತ್ಯಂತ ವ್ಯಸನವಾಗಿದೆ. ಇನ್ನಾದರೂ ಸಮಯವು ಮೀರಿಲ್ಲ. ಕರ್ನಾಟಕಸ್ಥರು ಎಚ್ಚರರಾಗಿ ಬಳ್ಳಾರಿಯ ಅಧಿವೇಶನದಲ್ಲಿ ದೇಶಭಕ್ತರ ಸನ್ನಿಧಿಯಲ್ಲಿ ಕೈಕೊಂಡ ಠರಾವನ್ನು ಪಾರಗಾಣಿಸಲು ಕರ್ನಾಟಕಸ್ಥರೆಲ್ಲರೂ ಮನಮುಟ್ಟಿ ದುಡಿಯಬೇಕಾಗಿ ನಮ್ಮ ಬಿನ್ನಹವಿದೆ.

೪. ಅತ್ತೆಯ ಪಾದಸ್ಪರ್ಶವು ಸೊಸೆಗಾದರೆ ಸೊಸೆಯು ವಂದನೆ ಮಾಡಬೇಕಂತೆ! ಸೊಸೆಯ ಪಾದಸ್ಪರ್ಶವು ಅತ್ತೆಗಾದರೂ ಸೊಸೆಯು ಅತ್ತೆಗೇ ವಂದನೆ ಮಾಡಬೇಕಂತೆ!! ಹೀಗೊಂದು ನಮ್ಮಲ್ಲಿ ನಾಣ್ಣುಡಿ ಇದೆ. ಅದರಂತೆಯೇ ನಮ್ಮ ಭಾರತವಾಸಿಯರ ಸ್ಥಿತಿಯಾಗಿದೆ. ಸದ್ಯಕ್ಕೆ ಸಂಭವಿಸಿದ ಒಂದು ಉದಾಹರಣೆಯನ್ನು ಕೇಳಿರಿ. ದಕ್ಷಿಣ ಅಫ್ರಿಕೆಯೊಳಗಿನ ಭಾರತೀಯರ ಸ್ಥಿತಿಗತಿಯನ್ನು ವಿಚಾರಿಸುವದಕ್ಕಾಗಿ ಹಿಂದುಸ್ಥಾನ ಸರಕಾರವು ದಕ್ಷಿಣಅಫ್ರಿಕೆಗೆ ಶಿಷ್ಟಮಂಡಳ ಒಂದನ್ನು ಕಳುಹಿಸಿತ್ತು. ಆ ಶಿಷ್ಟಮಂಡಳದ ಖರ್ಚನ್ನು ಹಿಂದುಸ್ಥಾನ ಸರಕಾರವೇ ಸಹಿಸಿತ್ತು. ದಕ್ಷಿಣ ಅಫ್ರಿಕೆಯವರು ಇದೇ ತಿಂಗಳಲ್ಲಿ ಒಂದು ಶಿಷ್ಟಮಂಡಳವನ್ನು ಹಿಂದುಸ್ಥಾನ ಸರಕಾರದೊಡನೆ ಆಲೋಚಿಸಲು ಕಳುಹಲಿಕ್ಕಿದೆ. ಅದರ ಖರ್ಚನ್ನು ತೆರುವವರ್ಯಾರೆಂದು ಬಲ್ಲಿರೋ? ಅದನ್ನು ಭಾರತೀಯರೇ ತೆರಬೇಕು. ಖರ್ಚಿಗಾಗಿ ಮಂಜೂರಾದ ರಕಮುಗಳ ಯಾದಿಯನ್ನು ಪರ್ಯಾಲೋಚಿಸಿರಿ. ಆ ಸಾವಿರ ಮೈಲುಗಳ ವರೆಗೆ ಒಂದು ಸ್ಪೆಶಲ್ ಉಗಿಬಂಡಿಯು ಭರತಖಂಡದಲ್ಲಿ ತಿರುಗುವದು. ಅದಕ್ಕಾ

ಗಿ ೪೫೦೦೦ ರೂಪಾಯಿಗಳು ತಗಲುವವು. ಭೋಜನ ಖರ್ಚಿಗಾಗಿ ೧೪೦೦೦ ರೂಪಾಯಿಗಳು ತಗಲುವವಂತೆ! ಶಿಶಿಗೆ ದಿನಾ ೨೦ ರೂಪಾಯಿ ಖರ್ಚು ಬೀಳುವದೆಂದು ಹಿಡಿಯಲಾಗಿದೆ. ಸಭಾಸದರು ದಂಪತಿಯುಕ್ತರಾಗಿ ಭರತಖಂಡವಿಗೆ ಅನುಗ್ರಹಿಸುವರಂತೆ! ದಂಪತಿಗಳಿಗೆ ದಿನಾ ೬೦ ರೂಪಾಯಿ ಖರ್ಚು ಬೀಳುವದು. ಶಿಷ್ಟರು ವಿಹಾರಕ್ಕಾಗಿ ಬರುತ್ತಾರೋ? ಚೌಕಶಿಗಾಗಿ ಬರುತ್ತಾರೋ? ನೀವೇ ವಿಚಾರಿಸಿರಿ. ಹಿಂದುಸ್ಥಾನ ಸರಕಾರವು ಅವರ ಸತ್ಕಾರಕ್ಕಾಗಿ ಒಬ್ಬ ಪ್ರತಿನಿಧಿಯನ್ನು ನೇಮಿಸಿದೆ. ಅವರ ಸಂಬಳ ೫೦೦೦ ರೂಪಾಯಿ. ಮೋಟಾರುಗಳಿಗಾಗಿ ೨೦೦೦ ರೂಪಾಯಿಗಳು ಮಂಜೂರಾಗಿವೆ. ಇತರ ಖರ್ಚಿಗಾಗಿ ೧೦೦೦ ರೂಪಾಯಿಗಳು ಹೀಗೆ ೬೭ ಸಾವಿರ ರೂಪಾಯಿಗಳು ನಮಗೆ ಖರ್ಚಾಗುವವು. ದಕ್ಷಿಣ ಆಫ್ರಿಕೆಗೆ ಶಿಷ್ಟ ಮಂಡಳ ಕಳುಹಿಸಿದರೆ, ನಮ್ಮ ಶಿಷ್ಟ ಮಂಡಳವೇ ಸಾವು ಖರ್ಚು ತೆರಬೇಕು. ದಕ್ಷಿಣ ಆಫ್ರಿಕೆಯವರು ಅತಿಥಿ ಧರ್ಮದಂತೆ ಅವರ ಖರ್ಚನ್ನು ಸಹಿಸಲು ಬಯಸರಲ್ಲ. ನಮ್ಮಲ್ಲಿ ದಕ್ಷಿಣ ಆಫ್ರಿಕೆಯವರು ಬಂದರೆ ಅತಿಥಿ ಧರ್ಮದಂತೆ ಅವರಿಗೆ ದಂಪತಿಯುಕ್ತವಾಗಿ ಸತ್ಕರಿಸಲು ನಾವು ಬದ್ಧರಿದ್ದೇವೆ. ಅಂತೂ ಇಂತೂ ತೆರುವವರು ಹಿಂದೀ ಭಾರತೀಯರು. ಇಷ್ಟೊಂದು ಖರ್ಚು ಮಾಡಿ, ಭಾರತೀಯರಿಗೆ ದಕ್ಷಿಣ ಆಫ್ರಿಕೆಯಲ್ಲಿ ಸಿಗುವ ಹಕ್ಕಿನ ಅಂಶವು ಗೊತ್ತಿದ್ದದ್ದೇ. ಸ್ವರಾಜ್ಯ, ಪರರಾಜ್ಯಗಳೊಳಗಿನ ಭೇದವಿದು.

ಕುಂಭಾರವಾಡೆಯವರು ತಮ್ಮಲ್ಲೊಂದು ಚಿಕಿತ್ಸಾಲಯವನ್ನು ಸ್ಥಾಪಿಸಲು ಸರಕಾರಕ್ಕೆ ಮಾಡಿಕೊಂಡ ಅರ್ಜಿಯ ನಕಲನ್ನು ನಮ್ಮ ಕಡೆಗೆ ಕಳುಹಿರುವರು. ಕುಂಭಾರವಾಡೆಯಲ್ಲಿ ಮೊದಲೊಂದು ಚಿಕಿತ್ಸಾಲಯವಿತ್ತು. ಅದು ಮುಚ್ಚಲಾಯಿತು. ಈ ಕುರಿತು ಸರಕಾರಕ್ಕೆ ಬರಕೊಳ್ಳಲು, ಸರಕಾರವು ಬಂದು ಚಿಕಿತ್ಸಾಲಯವನ್ನು ಸ್ಥಾಪಿಸುವೆವಾಗಿ ತಾ ೧೧-೬-೧೯೩೩ ನೇಗೆ ಹೊರಡಿಸಿದ ನಂ ೯೯೭ B ನೇ ಪತ್ರದಲ್ಲಿ ವಚನ ಕೊಟ್ಟರು. ಆದರೆ, ಈ ವರೇಗೆ ಅಲ್ಲಿ ಚಿಕಿತ್ಸಾಲಯವಾಗುವ ಚಿನ್ಹಗಳೇನಿಲ್ಲ. ಕುಂಭಾರವಾಡೆಯಲ್ಲಿ ಮಲೇರಿಯಾ ಜ್ವರದ ಕೇಂದ್ರವಿದ್ದು ಅಲ್ಲಿ ಚಿಕಿತ್ಸಾಲಯವಿರುವದು ಅವಶ್ಯವಿರುವದಾಗಿ ಸರಕಾರವು ಕೂಡಾ ಮನಗಂಡಿದೆ. ಆದರೂ ಚಿಕಿತ್ಸಾಲಯವು ಸ್ಥಾಪನೆಯಾಗುವದಿಲ್ಲ. ಕುಂಭಾರವಾಡೆಯವರು ಔಷಧೋಪಚಾರಕ್ಕಾಗಿ ಸೂಪೆಗೆ ಹೋಗಬೇಕಾಗುತ್ತದೆ. ಕುಂಭಾರವಾಡೆಯಿಂದ ಸೂಪೆ ೧೮ ಮೈಲು ದೂರ. ಕಾಡಿನಲ್ಲಿ ಕಾಡಿನೊಳಗಿಂದ ಇಂಥ ಪ್ರಸಂಗದಲ್ಲಿ ಸೂಪೆಗೆ ಹೋಗಿ ಚಿಕಿತ್ಸೆ ಮಾಡಿಕೊಳ್ಳುವದಕ್ಕಿಂತ ಕುಂಭಾರವಾಡೆಯಲ್ಲಿ ತಣ್ಣಗೆ ಸಾಯುವವರೇ ಹೆಚ್ಚು! ಕುಂಭಾರವಾಡೆಯು ಚಿಕಿತ್ಸಾಲಯದಿಂದ ೧೮ ೨೦ ಮೈಲು ಆಚೆ ಈಚೆ ಔಷಧೋಪಚಾರ ನಡೆಯುತ್ತಿತ್ತು. ಈಗ ಅವರೆಲ್ಲರೂ ಚಿಕಿತ್ಸೆಯಿಲ್ಲದೆ ಸಾಯುವ ಪ್ರಸಂಗ ಬಂದಿದೆ. ಸಧ್ಯಕ್ಕೆ ಹಿಂದ ಜ್ವರದ ಪಿಡುಗಿನಲ್ಲಿ ಬಹಳ ಜನರು ಉಪಚಾರವಿಲ್ಲದೆ ಸಾಯುತ್ತಿರುವರು. ಸಧ್ಯಕ್ಕೆ ಸರ್ಕಾರಿ ಡಾಕ್ಟರರು ಕುಂಭಾರವಾಡೆಯಲ್ಲಿ ೨-೩ ತಿಂಗಳು ಮುಕ್ಕಾಮು ಮಾಡಿದ್ದರು. ಅವರು ೪-೫ ಸಾವಿರ ಜನರಿಗೆ ಉಪಚಾರ ಮಾಡಿದರೆಂದು ತಿಳಿಯುತ್ತದೆ. ಇದರ ಮೇಲಿಂದ ಕುಂಭಾರವಾಡೆಯ ಚಿಕಿತ್ಸಾಲಯದ ಅವಶ್ಯಕತೆಯು ಸಿದ್ಧವಾಗುವದಿಲ್ಲೇನು? ಪ್ರಜೆಗಳಿಗೆ ರಕ್ಷಣ ಮಾಡುವದು ಸರಕಾರದ ಪ್ರಥಮ ಕರ್ತವ್ಯವು. ಪ್ರಜೆಗಳು ಬಾಳ್ವೆ ಮಾಡಿಕೊಂಡಿದ್ದರೆ, ಮಾತ್ರ ಸರಕಾರದ ಅಸ್ತಿತ್ವ ...ಲ. ಇದನ್ನು ವಿಚಾರಿಸಿ, ಸರಕಾರವು ಬೇಗನೆ ಈ ಕುರಿತ ವ್ಯವಸ್ಥೆ ಮಾಡಬೇಕಾಗಿ ಬಿನ್ನೈಸುವೆವು. ಜಿಲ್ಲಾ ಬೋರ್ಡಿನವರಾದರೂ ಈ ಕುರಿತು ವಿಶೇಷ ದಕ್ಷತೆಯಿಂದ ಯತ್ನ ನಡಿಸಬೇಕಾಗಿಯೂ ನಮ್ಮ ಬೇಡಿಕೆಯಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಹುಬ್ಬಾ ನಕ್ಷತ್ರದ ಮಳೆಯು ಚಲೋ ನಡಿಸುತ್ತದೆ. ಊರಲ್ಲಿ ಹೊರಕಡೆ ಜ್ವರ ಮುಂತಾದ ಬೇನೆಗಳು ಜನರನ್ನು ತಮ್ಮ ಬಿಡಾರವನ್ನು ಬಿಡಲೊಲ್ಲವು. ಗ್ರಾಮ ಶಾಂತಿಗಾಗಿ ಊರಲ್ಲಿ ಕೇರಿ ಕೇರಿಗೆ ಭಜನೆಯ ಮೇಳಗಳು ಭಗವನ್ನಾಮ ಸಂಕೀರ್ತನ ಮಾಡುತ್ತಿವೆ. ಇಲ್ಲಿಯ ಗ್ರಾಮದೇವಾಲಯದಲ್ಲಿ ಕಳೆದ ಶುಕ್ರವಾರದಲ್ಲಿ ... ಆಯಿತು. ಶ್ರೀದೇವಿಯ ಆಜ್ಞೆಯಂತೆ ಮೊನ್ನೆ ಸೋಮವಾರ ಸಾಯಂಕಾಲಕ್ಕೆ ೬ ಘಂಟೆಗೆ ... ಮೂರು ದಿನಗಳ ವರೇಗೆ ... ಜನರು ಊರಲ್ಲಿ ಅಡ್ಡಾಡದೆ ತಮ್ಮ ತಮ್ಮ ಮನೆಗಳಲ್ಲಿಯೇ ಇರಬೇಕೆಂಬ ಶ್ರೀ ದೇವಿಯ ಅಜ್ಞೆಯಾದಂತೆ ಜನರು ಭಕ್ತಿಯಿಂದ ಕೈಲಾದಷ್ಟು ಆಚರಣೆ ಮಾಡುತ್ತಿರುವರು. ಜನರಲ್ಲಿರುವ ಭೀತಿ ನಾಶವಾಗಿರುವದು. ಹ್ಯಾಗಾದರೂ ಊರವರಿಗೆ ಬಂದ ಅರಿಷ್ಟದ ಪರಿಹಾರವಾದರಾಯಿತು ... ಚಿಂತೆ! ಶ್ರೀ ಗ್ರಾಮದೇವಾಲಯದಲ್ಲಿ ಕೆಲವು ಪ್ರಯೋಗಗಳೂ ನಡೆಯಲಿಕ್ಕಿವೆ. ಈ ವಾರದಲ್ಲಿ ... ಇಂಚು ಮಳೆ ಬಿತ್ತು. ಈ ವರೇಗೆ ೧೨೦-೧೯ ಇಂಚು ಮಳೆಯಾಯಿತು.

ಇಲ್ಲಿಯ ತಾಲೂಕ ಕಚೇರಿಯಲ್ಲಿ 'ಗ್ರಾಮ ಸ... ಭೋಗರಿಗೆ ದೇಸಾಯಿ ಖಾತೆಯವರು ಬೇಸಾಯದ ಅಭ್ಯುದಯ ಉಪಾಯಗಳನ್ನು ಪ್ರಸಾರ ಮಾಡಲು ಹೇಳಿಕೊಟ್ಟರು. ಗೊಬ್ಬರಕ್ಕೆ ಉಪ್ಪು ಬೇಕಾದವರ ಕಡೆಯಿಂದ ಅರ್ಜಿಗಳನ್ನು ಸಂಗ್ರಹಿಸಿ ... ಕಳಿಸಿಕೊಡಬೇಕೆಂದೂ, ತಾವು ಕಸ್ಟಮ್ ಖಾತೆಗೆ ಕಳಿಸಿಕೊಡುವವರಾಗಿಯೂ ಆ ಬಳಿಕ ಕಸ್ಟಮ್ ಖಾತೆಯಿಂದ ಉಪ್ಪು ತರಬೇಕಾಗಿಯೂ ದೇಸಾಯಿಗಾರರಿಗೆ ಉಪದೇಶಿಸಲು ಶಾನಭೋಗರಿಗೆ ಕಲಿಸಿದರು. ಉಪ್ಪು ಮಣ್ಣಿಗಾಗಿ ಆದಷ್ಟು ಹೆಚ್ಚಿಗೆ ಅರ್ಜಿಗಳನ್ನು ಸಂಗ್ರಹಿಸಲು ಯತ್ನ ಮಾಡಬೇಕೆಂದು ಗೊತ್ತಾಯಿತು. ಮಣ್ಣಿನಿಂದ ತೋಟ ಕೆಡುತ್ತದೆಂಬದೊಂದು ಕಲ್ಪನೆಯಿರುವದಾಗಿಯೂ ಸೊಪ್ಪು ಗೊಬ್ಬರಗಳಿಂದ ತೋಟಗಳಿಗೆ ತಂಪು ಸಿಗುತ್ತದಾಗಿಯೂ ಕೆಲವು ಶಾನಭೋಗರು ಆಕ್ಷೇಪಿಸಿದರು. ಉಪ್ಪಿನ ಉಪಯೋಗದ ಕ್ರಮ ದೇಸಾಯಿಗಾರರಿಗೆ ಗೊತ್ತಿಲ್ಲ, ಅವರಿಗೆ ನಮ್ಮ ಕಡೆ ಕಳಿಸಿಕೊಡಿರೆಂದು ದೇಸಾಯಿ ಖಾತೆಯವರು ಹೇಳಿದರು. ಉಪ್ಪು ಗೊಬ್ಬರ ಚಲೋದೋ? ಉಪ್ಪಿನ ಮಣ್ಣು ಚಲೋದೋ? ಸೊಪ್ಪಿನ ಗೊಬ್ಬರದ ಉಪದೇಶವನ್ನು ದೇಸಾಯಿ ಖಾತೆಯವರು ಯಾಕೆ ಮಾಡುವದಿಲ್ಲ? ಎಲುಬಿನ ಹುಡಿಯ ಗೊಬ್ಬರ ಹಾಕಬೇಕೆಂದು ಬೋಧಿಸಲು ಶಾನಭೋಗರಿಗೆ ಅಜ್ಞೆಯಾಯಿತು. ಎಲುಬು ತರವದೆಲ್ಲಿಂದ? ಜನರ ಎಲುಬು-ಚರ್ಮ ಮಾತ್ರ ಉಳಿದಿದೆ. ಕಟ್ಟಿಗೆಯ ಬೇಲಿ ತರಿಸಲಿಕ್ಕೆ ಬೇಸಾಯಗಾರರಿಗೆ ಹೇಳಬೇಕಂತೆ! ಇವೆಲ್ಲ ಉಪದೇಶದಲ್ಲಿ ಅರ್ಥವಿದೆ. ಜನರ ದೃಷ್ಟಿಯನ್ನು ಬಳಿಯಲ್ಲಿರುವ ಸೊಪ್ಪಿನ ಮೇಲಿಂದ ಉಪ್ಪಿನ ಮಣ್ಣು, ಎಲುಬಿನ ಹುಡಿ, ಇವುಗಳ ಮೇಲೆ ಹರಿಸಬೇಕು. ಕಾಡಿನೊಳಗಿನ ಗುಡ್ಡಗಳ ಬದಲು ವಿಲಾಯತಿಯ ಸಾವುಕಾರರ ಅಂಗಡಿಯ ... ಕಟ್ಟಿಗೆ ಬೇಲಿಗಳನ್ನು ತರಿಸಿ ಅವರ ಹೊಟ್ಟೆ ತುಂಬಬೇಕು. ಮೇಲೆ ದೇಸಾಯಿ ಖಾತೆಯು ಪ್ರಚಾರ ಮಾಡಿದ ... ಬೇಸಾಯಗಾರರು ಜಾಗೃತರಾದರು. ಬೇಸಾಯವು ಅಭಿವೃದ್ಧಿ ಹೊಂದಿತು. ಇತ್ಯಾದಿ ... ಗುರವನ್ನು ... ಸರಕಾರಕ್ಕೆ ಚೌಕಶಿಗಾಗಿ ಒರಲಿಕ್ಕಿದ್ದ ರೊಯಲ್ ಎಗ್ರಿಕಲ್ಚರಲ್ ಕಮಿಶನ್ ಯಾನೆ ... ಕಮಿಶನಿನ ಕಣ್ಣು ಕಟ್ಟಲು ಬೇಕು ... ಈಗಲೇ ಬೇಸಾಯ ಅಭಿವೃದ್ಧಿಗೆ ಕಳಕಳಿ ... ಕಾರಣವೇನು?

ಗೋಕರ್ಣ ಚಿಕಿತ್ಸಾಲಯದ ಕುರಿತು ನಮ್ಮ ತಾರೀಖು ೯-೮-೧೯೩೬ ನೆಯ ಪತ್ರಿಕೆಯಲ್ಲಿ ಪ್ರಕಟವಾದ ಟೀಕೆಯ ... ಎಂದರೆ — 'ಗೋಕರ್ಣದ ಡಾಕ್ಟರು ಕೊಟ್ಟ ಮಾಹಿತಿಯ ಮೇರೆಗೆ ತಿಳಿಯುವದೇನೆಂದರೆ ... ಪತ್ರ ಬರೆದವನು ಕೋರ್ಟಿನ ... ಸರ್ಟಿಫಿಕೇಟ ... ಡಾಕ್ಟರರ ಬಳಿ ಬಂದು ಹೋಗಿದ್ದನು. ಅದನ್ನು ... ಡಾಕ್ಟರರು ನಿರಾಕರಿಸಿದರು. ... ಫೀಯನ್ನು ಕೊಡ ಹೇಳಲಿಲ್ಲ. ಆತನು ಆ ದಿನ ಕೋರ್ಟಿಗೆ ಹೋಗಿದ್ದನು. ಆತನು ... "

ಕಾರವಾರ— ಸ್ಕೂಲ ಬೋರ್ಡಿನ ಪ್ರಥಮ ಸಭೆಯು ... ಕಳೆದ ೬ ರಂದು ಸೇರಿತು. ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ... ಸಭಾಪತಿಗಳಾಗಿದ್ದರು. ಚೆಯರಮನ್ ... ಸೂಚಿಸಲಾದವು. ಮಿ. ... ಮತಗಳು ... ಮಿ. ಕೃಷ್ಣರಾವ ... ವಕೀಲ ಇವರಿಗೆ ೫ ಮತಗಳು ... ಚೆಯರಮನರಾದರೆಂದು ಸಭಾಪತಿಗಳು ... ಗೋಪಿಯವರು ... ವ್ಹಾಯ್ಸ ಚೆಯರಮನ ... ಮಿ. ಯಾಜಿಯವರಿಗೆ ೬ ಮತಗಳು, ಮಿ. ಎಸ್. ಎಸ್. ನಾಯಕ ವಕೀಲ ಇವರಿಗೆ ೬ ಮತಗಳು ದೊರಕಿದವು. ಸಭಾಪತಿಗಳಾದ ... ಗೋಪಿಯವರು ಸಭಾಪತಿ ಸ್ಥಾನದ ಮತವನ್ನು ಮಿ. ಯಾಜಿಯವರಿಗೆ ಕೊಟ್ಟು ಮಿ. ನಾಯಕರಿಗೆ ಸೋಲಿಸಿದರು. ಮಾರನೇ ದಿನ ಸ್ಕೂಲ ಬೋರ್ಡಿನ ಕೆಲಸ ಮಾಡಲು ಸಭೆ ಸೇರಿತು. ಹಿಂದಿನ ದಿನ ನಡೆದ ಆರಿಸೋಣವು ಬೇಕಾಯದೇಶೀರ ಎಂದು ಕೆಲವು ಸಭಿಕರು ಆಕ್ಷೇಪಿಸಿದರು. ಜಿಲ್ಲಾ ಬೋರ್ಡಿನ ಅಧ್ಯಕ್ಷರು ಸ್ಕೂಲ ಬೋರ್ಡಿನ ಎಲ್ಲ ಆರಿಸೋಣವು ಮುಗಿಯುವ ವರೇಗೆ ಸಭಾಪತಿಸ್ಥಾನವನ್ನು ಅಲಂಕರಿಸಿದ್ದು ನೇಮಕಗಳಿಗೆ ವಿರೋಧವಾದದ್ದೆಂದೂ ಆ ಆರಿಸೋಣದ ಮೇಲೆ ಯಾವದೊಂದು ಕೆಲಸ ಮಾಡಕೂಡದೆಂದೂ ಹೇಳಿ ಆಕ್ಷೇಪಿಸಿದರು. ಮಿ. ಚಟ್ಟಿಂಗಡಿಯವರಿಗೆ ಆಕ್ಷೇಪವು ಸರಿದೋರಲಿಲ್ಲ. ಕೂಡಲೆ ಮಿ. ಹಳದೀಪುರಕರ ಭಟ್ಟ, ನಾಯಕ, ಚಂದಾವರಕರ ಇವರು ಸಭೆಯೊಳಗಿಂದ ಎದ್ದು ನಡೆದರು. ಆದರೂ ಉಳಿದ ಮೆಂಬರರು ಸಭಾ ಕಾರ್ಯವನ್ನು ಮುಂದೆ ನಡೆಸಲು, ಕೆಲ್ವನ ಜೋಗಿನಾಯ್ಕರು

ನಿಷೇಧಿಸಿದರು ಸಭೆಯು ಅಪರಾಹ್ನದ ವರೆಗೆ ಮುಂದೂಡ ಲ್ಪಟ್ಟಿತು. ಅಪರಾಹ್ನದ ಸಭೆಯಲ್ಲಿ ಬೆಳಿಗ್ಗೆ ಎದ್ದು ಹೋದ ಸಭಾಸದರೂ ಹಾಜರಾದರು ಸ್ಕೂಲಬೋರ್ಡಿನ ಇಲೆಕ್ಶನನ್ನು ರದ್ದುಪಡಿಸಲು ಮನೆಮಾಡುವರೆಂದು ಎಂದು ಊರಲ್ಲ ವದಂತಿ! ಸ್ಕೂಲಬೋರ್ಡಿನಲ್ಲಿ ಸಭಾಸದರು ವಿಶೇಷವಾಗಿ ಇಂಗ್ಲಿಷಿನಲ್ಲಿಯೇ ಮಾತಾಡುವರೆಂದೂ ಮಾತೃಭಾಷೆಯಲ್ಲಿಯೇ ಮಾತಾಡಬೇಕೆಂದೂ ಪ್ರೇಕ್ಷಕರು ದೂರುತ್ತಾರೆ.

ಅಂಕೋಲಾ— ತಾರೀಖು ೩೦-೮-೧೯೨೬ನೇ ಸಂಚಿಕೆಯಲ್ಲಿ ಅಗಸೂರ ಮಾರ್ಗವು ರಾ। ಮಾಣಿನಾಯ್ಕರ ಮಾಲಿಗೆ ಬಂದದೆಂದು ಬರೆದ ಮಜಕೂರು ತಪ್ಪು ರಾ। ಮಾಣಿನಾಯ್ಕರ ಮಾಲಿಗೆ ಕೆಂಕಣ, ಬೆಳ್ಳೂರ ಮಾರ್ಗಗಳ., ರಾ। ವೆಂಕಣ್ಣ ನಾಯ್ಕರ ಮಾಲಿಗೆ ಅಗಸೂರ ಮಾರ್ಗವು ಹೋಗಿರುವದಾಗಿ ಒಬ್ಬರು ತಿದ್ದುಪಡಿ ಮಾಡಿರುತ್ತಾರೆ

ಅವರ್ಸೆ— ಇಲ್ಲಿಯ ಕಾಲಾ ಪಾತ್ರದರ ಕುರಿತು ತಾರೀಖು ೯-೮-೧೯೨೬ನೇಗೆ ಪ್ರಕಟವಾದ ಪ್ರಾರು ಮಜಕೂರು ಸತ್ಯೋಕ್ತವಾಗಿದೆ. ಅದನ್ನು ಯಾರೋ ಒಬ್ಬರು ಮತ್ಸರ ಬುದ್ಧಿಯಿಂದ ಬರೆದಿರಬೇಕು. ...ಮಾಸ್ತರರು ಸರಿಯಾಗಿ ಕೆಲಸಮಾಡುತ್ತಾರಾಗಿಯೂ ರಾ। ವೆಂಕಟೇಶ ಸುಬ್ರಾಯ ಶೇಟ, ಮಾದೂನ ನಾರಾಯಣ ಭಟ ಮುಂತಾದ ೧೪ ಮಂದಿ ಗೃಹಸ್ಥರು ತಿಳಿಸುತ್ತಾರೆ

ಭಟ್ಕಳ— ಬೆಳೆ ಚನ್ನಾಗಿದೆ, ಅಕ್ಕಿ ಧಾರಣೆ ತೇಜಿ, ಬಡಬಗ್ಗರ ಗೋಳ, ಕಾಕ-ಘೂಕರ ಕಾಟ ದನಕರುಗಳಿಗೂ ರೋಗ, ಅತಿಸಾರ, ಜ್ವರ ಮುಂತಾದ ರೋಗಗಳು ಮನುಷ್ಯರಿಗೆ, ಕಾಲಮಾನವು ಬಹು ಭಯಂಕರ!

ಕನ್ನಡಶಾಲೆಯಲ್ಲಿ ಲೋಕಲ್ಬೋರ್ಡಿನ ಅಧಿರಾಜ್ಯವು ಪ್ರಾಪ್ತವಾದಂದಿನಂದ ಶಾಲೆ ಕೆಲಸದಲ್ಲಿ ಸಂಬಂಧಪಟ್ಟವರಿಗಾಗಲೀ, ಬಾಲಕರಿಗಾಗಲೀ ಶಾಲೆಯಲ್ಲಿ ಒಳ ಸೇರಬೇಕಾದರೆ ಮುಂದಾಗಿ ಅಪ್ಪಣೆ ಪಡೆಕೊಳ್ಳಬೇಕಂತೆ! ದೊಡ್ಡ ಸಾಹೇಬ ಹೌದು! ಪ್ರೇಕ್ಷಕರಿಗೆ ಈಗ ಯಾವ ಕಾಯಿದೆ ಸೂಚಿತವೋ ಏನೋ!

ಹೊಳೆ ಗ್ರಾಮದ ತೆಂಗಿನಗುಂಡಿಯಲ್ಲಿ ಒಬ್ಬ ಮುದುಕಿಯು ಕೆಲವು ದ್ರವ್ಯವನ್ನು ಹುಗಿದಿಟ್ಟಿದ್ದಳು ಅದರ ಸುಳುವು ಕಳ್ಳರಿಗೆ ಹತ್ತಿತು ಕೆಲವರು ಹಗಲಿಗೇ ಅದನ್ನು ಅಗಿದುಕೊಂಡು ಹೋದರು! ೫೦೦ ರೂಗಳಂತೆ! ಪೋಲೀಸರು ತಪಾಸು ಮಾಡುತ್ತಾರೆ. ಸತ್ತೆಯಿಲ್ಲ ದಾನಂ ಭೋಗೋ ನಾಶಃ ತಿಸ್ರೋ ಗತಯೋ ಭವಂತಿ ವಿತ್ತಸ್ಯ! ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯಾ ಗತಿರ್ಭವತಿ ||

ವೇ। ಮೂ। ಕಡಿಲ ಶೇಷಗಿರಿ ಉಪಾಧ್ಯಾಯರಿಗೂ, ವೇ। ಮೂ। ಮುಕ್ರಿಪುರದ ಮಂಜುನಾಥ ಪ್ರಭುಗಳಿಗೂ ೮-೧೦ ವರ್ಷಗಳಿಂದ ಒಂದು ಸಿವಿಲ ವ್ಯವಹಾರ ನಡೆದಿತ್ತು ಅದನ್ನು ಶ್ರೀಂದೂರಿನ ಮ। ರಾ। ಶಂಕರ ಹೊಳ್ಳರೂ, ವಕೀಲ ಶಾಸ್ತ್ರಿಗಳೂ ಕೂಡಿ ಇತರ ಸಭ್ಯರ ಆಲೋಚನೆ ಸಹ ಪಡೆಕೊಂಡು ನ್ಯಾಯದಂತೆ ಇತ್ಯರ್ಥ ಪಡಿಸಿಕೊಂಡರು ಸಂತೋಷವಾರ್ತೆ!

ವೃತ್ತಸಾರ.

— ಬರೋಡೆ ಸರಕಾರವು ದ್ವಾರಕಾ ಕ್ಷೇತ್ರದಬಳಿ ಐತಿಹಾಸಿಕ ವಸ್ತುಗಳ ಶೋಧಕ್ಕಾಗಿ ಒಂದು ಮಂಡಳವನ್ನು ನೇಮಿಸಿರುವರು ಒಂದು ಪ್ರಾಚೀನ ಮಂದಿರವೂ ಬೆಳ್ಳಿಯ ನಾಣ್ಯವೂ ದೊರೆತವೆ.

— ಮುಂಬಯಿ ಕಾಯಿದೆ ಕೌನ್ಸಿಲು ಕಳೆದ ತಿಂಗಳ ೩೧ ನೇ ತಾರೀಖಿಗೆ ಪ್ರಾಂತಾಧಿಪರಿಂದ ಬರಖಾಸ್ತು ಮಾಡಲ್ಪಟ್ಟಿತು.

— ಶ್ರೀ ಶಾರದಾಪೀಠದ ವಾರಸಾಹಕ್ಕಿನ ಕುರಿತು ಅಹಮ್ಮದಾಬಾದಿನ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ದಾವೆ ನಡೆದಿತ್ತು. ಜಗದ್ಗುರು ಸ್ವಾಮಿ ಶ್ರೀ। ಭಾರತೀ ಕೃಷ್ಣತೀರ್ಥರು ಜಯಶಾಲಿಗಳಾದರು ಹಕ್ಕುದಾರರಲ್ಲೆಂದು ಠರಾಯಿಸಿ, ಪೀಠಾಧಿಕಾರವನ್ನು ಪೀಠಕ್ಕೊಪ್ಪಿದ ಸ್ಥಾವರ ಜಂಗಮ ಸೊತ್ತನ್ನು ಶ್ರೀ। ರಾಜರಾಜೇಶ್ವರಾಶ್ರಮರವರಿಗೆ ಒಪ್ಪಿಸಿರುವರು.

— ಪ್ರಖ್ಯಾತ ಭಾರತೀಯ ಜಟ್ಟಿಗಳಾದ ಪ್ರೊ। ರಾಮಮೂರ್ತಿಯವರು ಈಗ ಸದ್ಯಕ್ಕೆ ಮುಂಬಯಿಯಲ್ಲಿ ಅಂಗ ಶಕ್ತಿಯನ್ನು ಬೆಳಸಿಕೊಳ್ಳಲು ಹಿಂದೀಯರಿಗೆ ಬೋಧಿಸುತ್ತಿರುವರು ಚಾಪು ಮಾಡಿಯನ್ನು ಆಧೀನಕದಾರ ಪಾಶ್ಚಿಮಾತ್ಯ ದೃಷ್ಟಿಗಿಂತ, ಖರೇ ನಮ್ಮ ದೇಶದ ಹವೆಗೆ ಶರೀರ ಪೋಷಕವೆಂದು ಅದನ್ನು ಸರ್ವರೂ ಧರಿಸಿಕೊಳ್ಳಬೇಕೆಂಬ ಸ್ವಾನುಭವವನ್ನು ಅರುಹಿದರು

— ಗೊಂಡಳದೊಳಗಿನ ರಾಜವೈದ್ಯ ಜೀವರಾಮ ಕಾಲಿದಾಸರವರ ರಸ ಶಾಲೆಗೆ ಬೆಂಕಿ ಬಿದ್ದು ೧॥ ಲಕ್ಷ ರೂಪಾಯಿಗಳ ನಷ್ಟ ಅಮೂಲ್ಯವಾದ ಗಿಡ ಮೂಲಿಕೆಗಳೂ ಮದ್ದುಗಳೂ, ಗ್ರಂಥಗಳೂ, ಅಚ್ಚುಕೂಟ ಯಂತ್ರ ಸಾಮಗ್ರಿಗಳೂ ಸುಟ್ಟು ಹೋದವು.

— ನಿಜಾಮನ ರಾಜ್ಯದಲ್ಲಿ ಮೋಗಲಾಯಿ! ಅರ್ಧ ಪೌಂಡೊಳಗಿನ ಪಾಕ್ಟರ ದೇಶವಾಯಿಕೆಂಬುವರು ನಿಜಾಮರಿಗೆ ದರ್ಶನ ಕಾಣಿಕೆ ಕೊಡಲೊಪ್ಪಲಿಲ್ಲ ಅದರಿಂದ ಅವರಿಗೆ ಬಾರ ಹೊರಗೆ ಮರಕ್ಕೆ ಬಿಗಿದು ಬಿಸಿಲಿನಲ್ಲಿ ನಿಲ್ಲಿಸಿದರಂತೆ! ನಿಯಮಿತ ಕಾಣಿಕೆ ತುಂಬಿದ ಬಳಿಕ ಪಾಕ್ಟರು ಬಿಡುಗಡೆ ಹೊಂದಿರುವಂತೆ!

— ಸಾರ್ವಜನಿಕ ಸ್ಥಳಗಳಲ್ಲಿ ಅಸ್ವಸ್ಥ, ಕಿತ್ತಳೇ ಸಂಬಂಧದ ಗಿಡಗಳನ್ನು ಹಚ್ಚಿ ಐದು ವರುಷಗಳ ವರೆಗೆ ಜೋಪಾನ ಮಾಡುವವರಿಗೆ ಗಿಡಕ್ಕೆ ೧೦ ರೂಪಾಯಿ ಕೊಡಲು ಬೀಡಿಂದು ವಧ್ವಾಣದ ಠಾಕೂರ ಸಾಹೇಬರು ಜಾಹೀರು ಮಾಡಿರುವರು

— ಫ್ರಾನ್ಸ ದೇಶದಲ್ಲಿ ಜ್ವಾಲಾ ಮುಖಿಯ ಸ್ಫೋಟದಿಂದ ೩ ಮೈಲು ಉದ್ದ ೧ ಮೈಲು ಅಗಲವಾದ ದಿನ್ನೆಯು ಕಲಿಯುತ್ತಿದೆ. ೩೦೦ ಎಕ್ರೆ ಬೇಸಾಯ ಭೂಮಿಯು ಹಾಳಾಯಿತು.

— ಬಂಗಾಲ ಪ್ರಾಂತದ ದಿನಾಜಪುರ ಪ್ರಾಂತದಲ್ಲಿ ಒಂದು ಹಳೇ ಮಂದಿರವು ದೊರಕಿದೆ ಸುಮಾರು ೧೫೦೦ ವರ್ಷದ್ದಂತೆ!

— ಖಾನದೇಶ ಜಿಲ್ಲೆಯಲ್ಲಿ ದೇವತಾ ಕ್ಷೋಭ! ಸಾತಪುರಾ ಪರ್ವತಗಳ ಬದಿಯಿಂದ ಬಿಸಿ ಬಿಸಿ ಗಾಳಿ ಬೀಸಿ ಶಿರಪುರ, ಶಿಂದಖೇಡ ಮುಂತಾದ ಗ್ರಾಮಗಳೊಳಗಿನ ಬೆಳೆ ಬೆಂದು ಹೋಯಿತು! ಅನೇಕರಿಗೆ ಗಾಯಗಳಾಗಿವೆ. ಲಕ್ಷ ರೂಪಾಯಿಗಳ ನಷ್ಟ!

— ಫ್ರಾನ್ಸ ದೇಶದ ಆಮಿನ್ಸ ಎಂಬಲ್ಲಿ ದೊಡ್ಡದೊಂದು ವಾಚನಾಲಯವಿದೆ. ಅಲ್ಲಿ ಅಮೂಲ್ಯವಾದ ೩೫,೦೦೦ ಹಸ್ತಲಿಖಿತ ಗ್ರಂಥಗಳಿದ್ದವು ಅವೆಲ್ಲ ಸುಟ್ಟು ಹೋದಿ ಹೇಳಕೂಡದಷ್ಟು ನಷ್ಟ.

— ಪುಣೆಯ ಮುನಿಸಿಪಾಲಿಟಿ ಅಧ್ಯಕ್ಷರಾದ ರಾ। ಬ। ರಾಜವಡೆಯರು ಕೈಲಾಸವಾಸಿಗಳಾದ್ದರಿಂದ ಡಾ। ಆರ್. ಪಿ. ನಾಯಡು ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು

— ಡಾ। ಪರಾಂಜಪೇ ಇವರ ಕನ್ಯಾಕುಮಾರಿ ಶಕುಂತಲಾ ಬಾಯಿ ಇವರು ಕೇಂಬ್ರಿಜ ಕಾಲೇಜಿನಲ್ಲಿ ಗಣಿತ ವಿಷಯದ ಮುಂದಿನ ಅಭ್ಯಾಸಕ್ಕಾಗಿ ಸರಕಾರದ ಶಿಷ್ಯ ವೃತ್ತಿಯ ಮೇಲೆ ಕಳೆದ ತಾರೀಖು ೨೮ ನೇ ಶನಿವಾರಕ್ಕೆ ಪ್ರಯಾಣ ಮಾಡಿದರು.

— ಸೇಲಂ ಸಂಸ್ಥಾನದಲ್ಲಿ ಮಹಾರಾಜರು ೫೮,೦೦೦ ಗುಲಾಮರನ್ನು ಸದ್ಯಕ್ಕೆಯ ಜವಾಬದ ದಾಸ್ಯತ್ವದಿಂದ ಮುಕ್ತ ಮಾಡಿದರು ದ ಬಗ್ಗೆ ೫೩ ಲಕ್ಷ ರೂಪಾಯಿಗಳನ್ನು ಸರಕಾರಿ ಕೋಶದಿಂದ ಖರ್ಚ ಮಾಡಬೇಕೆಂದು ಮಂಜೂರು ಮಾಡಿದ್ದರ. ಇನ್ನುಮುಂದೆ ಗುಲಾಮರ ವ್ಯಾಪಾರವು ಆಗದಂತೆ ಕಾಯಿದೆಯ ಪ್ರತಿಬಂಧವೂ ಮಾಡಲಾಗಿದೆ

— ಪಂಡಿತ ಮೋತೀಲಾಲ ನೆಹರುಗಳು ಸಪ್ಟೆಂಬರ ೪ ನೇ ತಾರೀಖಿಗೆ ಸಿಮ್ಲಾದಿಂದ ಹೊರಟು ಕೌನ್ಸಿಲ ಇಲೆಕ್ಷನಿನ ಸ್ವರಾಜ್ಯ ಪಾರ್ಟಿಯ ಚಳವಳಿಯನ್ನು ೫ ನೇ ತಾರೀಖಿನಿಂದ ಆರಂಭಿಸುವರು ಪಂಡಿತಜಿಯವರು “ಇಂಡಿಯನ್ ಡೇಲಿ ಟೆಲಿಗ್ರಾಫ” ಎಂಬ ಪತ್ರವನ್ನು ತಮ್ಮ ನೇತೃತ್ವದಲ್ಲಿಟ್ಟು ಮೋಹನ ಜೋಶೀಭರವರ ಸಂಪಾದಕತ್ವದಲ್ಲಿ ಅದನ್ನು ನಡಿಸುವವರಿದ್ದಾರೆ

— ಮುಂಬಯಿ ಸರಕಾರವು ೧೯೧೦ ನೇ ಇಸ್ವಿ ಜನವರಿಯಲ್ಲಿ ಕೃಷ್ಣಾಜಿ ಖಾಡಿಲಕರ ಇವರ ಮರಾಠಿ ನಾಟಕ “ಕೀಚಕ ವಧ” ವನ್ನು ಜಪ್ತ ಮಾಡಿತ್ತು. ಸದ್ಯಕ್ಕೆ ಅದರ ಮೇಲಿನ ಪ್ರತಿಬಂಧಕ ಹುಕುಮನ್ನು ಹಿಂತೆಗೆದುಕೊಂಡಿದೆ. ದ್ರೌಪದಿ ಭಾರತೀ ದೇವಿಯೆಂದೂ ಕೀಚಕ ಕರ್ಜನ್ ದೊರೆಗಳೆಂದೂ, ಧರ್ಮ ಭೀಮರು ರಗಿನ ಮವಾಳ ರಾಷ್ಟ್ರೀಯ ಪಕ್ಷಗಳೆಂದೂ ಸರಕಾರಕ್ಕೆ ಸೂಕ್ಷ್ಮವು ಅದರೊಳಗೆ ಕಂಡು ಬಂತಂತೆ! ದೇ। ಖಾಡಿಲಕರರು ದ್ರೌಪದಿ, ಸ್ವಯಂವರ, ಕೃಷ್ಣಲೀಲೆ ಮೇನಕಾ ಎಂಬ ಮರಾಠಿ ನಾಟಕಗಳನ್ನು ಭಾರತಾದಿ ಪುರಾಣಗಳೊಳಗಿನ ಕಥೆಗಳ ಆಧಾರದ ಮೇಲಿಂದ ಬರೆದಿದ್ದಾರೆ. ಮತ್ತು ಬರೆಯಬಹುದು ಮೈಮನ್ಯ ದೋಷಕ್ಕೆ ಹೊಣೆಗಾರರ್ಯಾರು?

ವಿಮರ್ಶೆ.

ಗೌಡ ಸಾರಸ್ವತ ಸ್ಕೋಲರಶಿಪ ಲೀಗು ಮುಂಬಯಿ— ಈ ಸಂಸ್ಥೆಯ ೧೩ ನೇ ವರ್ಷದ ರಿಪೋರ್ಟು ನಮ್ಮ ಕೈ ಸೇರಿದೆ ಮೈಗೋಪಾಳ ಸುಬ್ರಾವ ಶಾಂಗಿ, ಡಾ। ನಾರಾಯಣ ಅಣ್ಣಾ ನಾಯಕ ಶ್ರೀ। ಮಾಧವರಾವ ವಾಸುದೇವ ಭಟ್ಟ, ಮಾರ್ಕಂಡ ಗಣಪ್ಪಾ ಗಾಮತೊಂಡೆ ಶೇಷಗಿರಿ ಮಂಜುನಾಥ ಕಾಮತ, ವಿನಾಯಕ ಶ್ರೀನಿವಾಸ ಕಾಮತಕರರು ೧೩ ವರ್ಷಗಳ ಹಿಂದೆ ೩॥। ರೂಪಾಯಿ ವರ್ಗಣಿಯಿಂದ ಪ್ರಾರಂಭಿಸಿದ ಸಂಸ್ಥೆಯು ಇಂದಿಗೆ ೧೪,೦೦೦ ರೂಪಾಯಿಗಳನ್ನು ಸಂಗ್ರಹಿಸಲು ಸಮರ್ಥವಾದದ್ದನ್ನು ನೋಡಿ ನಮಗೆ ಆನಂದವಾಗಿದೆ. ಸಂಸ್ಥಾಪಕರಿಗೂ ಚಾಲಕರಿಗೂ ಅಭಿನಂದನೀಯವಾದ ಸಂಗತಿಯಿದು ಈ ವರುಷಗಳಲ್ಲಿ ಸಂಸ್ಥೆಯು ಉದ್ದೇಶದಂತೆ ಜ್ಞಾತಿಯೊಳಗಿನ ಬಡ ವಿದ್ಯಾರ್ಥಿಗಳಿಗೆ ಪುಸ್ತಕ, ಫೀ ಮುಂತಾದ ವಿದ್ಯಾಸಾಧನೆಗಳಿಗಾಗಿ ೩-೪ ಸಾವಿರ ರೂಪಾಯಿಗಳನ್ನು ಹಂಚಿರುವದೆಂದು ನಾವು ಲಕ್ಷ್ಯಕ್ಕೆ ತಂದರೆ, ಮೈ। ಶಾಂಗಿ ಮೊದಲಾದ ಸ್ನೇಹಿತರು ನಡೆಸಿದ ಕಾರ್ಯದ ಸ್ವರೂಪವು ಹೊಳೆಯುತ್ತದೆ ಚಾಲಕರು ಟ್ರಸ್ಟ ಡೀಡ ಯಾನೆ ನಿಕ್ಷೇಪ ಪತ್ರವನ್ನು ರಜಿಸ್ಟರ ಮಾಡಿ, ಸಂಸ್ಥೆಯ ನಿಧಿಯು ಭದ್ರತೆಯಲ್ಲಿರುವ ಬಗೆಯೂ ಸಂಸ್ಥೆಗೆ ಕೊಟ್ಟ ನಿಧಿಯು ವಿನಿಯೋಗವು ಸದ್ವಿನಿಯೋಗವಾಗುವದಾಗಿಯೂ ಸಭಾಸದರಿಗೂ ಸಂಸ್ಥೆಯ ಲಕ್ಷ್ಯದ ಪಾತ್ರರಾದ ಇತರೇ ಜ್ಞಾತಿ ಬಾಂಧವರಿಗೂ ವಿಶ್ವಾಸಕರನ್ನಿತ್ತಿರುವರು ಆದರಿಂದ ಸಂಸ್ಥೆಯು ಲೋಕಾದರಕ್ಕೂ, ವಿಶ್ವಾಸಕ್ಕೂ ಪಾತ್ರವಾಗಿದೆ ಚಾಲಕರು ರಿಪೋರ್ಟಿನ ಕಾಲಿನಲ್ಲಿ ಒಬ್ಬರನ್ನು ಆಜೀವ ಸಭಾಸದರಾಗಿ ಮಾಡಿಕೊಂಡರು ನಾಲ್ಕರ ಕಡೆಯಿಂದ ಅಭಿವಚನಗಳನ್ನು ಪಡೆಕೊಂಡಿರುವರು ಸಾಮಾನ್ಯ ಸಭಾಸದರ ಪಟದ ಮೇಲೆ ೩೯ ಮಂದಿ ಸಭಾಸದರು ಹೆಚ್ಚಾಗಿರುವರು ಸಂಸ್ಥೆಯ ರಿಪೋರ್ಟನ್ನು ಓದಿದರೆ ಸಂಸ್ಥೆಯು ಸ್ವಜ್ಞಾತಿಯೊಳಗಿನ ಬಡ ವಿದ್ಯಾರ್ಥಿ-ವಿದ್ಯಾರ್ಥಿನಿಗಳಿಗಾಗಿ ಧನಿಕರ ಧನಗಳಿಂದ ಹೇಗೆ ದುಡಿಯುತ್ತದೆಂಬು ಸ್ಪಷ್ಟವಾಗುತ್ತದೆ ಸಭಾಧ್ಯಕ್ಷರು ವಿಖ್ಯಾತ “ಮುಂಬಯಿ ಕ್ರಾನಿಕಲ್” ಪತ್ರಿಕೆಯ ಶ್ರೀ। ರಾಮಚಂದ್ರ ಪ್ರಭುಗಳವರು ಇವರ ನೇತೃತ್ವದಲ್ಲಿಯೂ, ಶ್ರೀ। ವೆಂಕಟ್ರಾವ ರಾಮಚಂದ್ರ ಹಳದೀಪುರ, ಶ್ರೀ। ಮಾಧವ ಮಂಜುನಾಥ ಶ್ಯಾನಭಾಗ ಮುಂತಾದ ಟ್ರಸ್ಟಿಗಳವರ ಆಶ್ರಯದಲ್ಲಿಯೂ, ಸುಸಂಘಟಿತವಾಗಿಯೂ, ಉತ್ಸಾಹದಿಂದಲೂ ನಡೆದಿರುವದು ಜ್ಞಾತಿ ಬಾಂಧವರೂ, ಇತರರೂ ಈ ಧರ್ಮದ ಸಂಸ್ಥೆಗೆ ಆಶ್ರಯ ಕೊಟ್ಟು ಚಾಲಕರಿಗೆ ತಮ್ಮ ಉದ್ದೇಶವನ್ನು ಕೊನೆಗಾಣಿಸಲು ನೆರವಾಗಬೇಕಾಗಿ ನಮ್ಮದೊಂದು ಬಿನ್ನಹ

ಮಹಾತ್ಮರ ಆತ್ಮಚರಿತ್ರೆ.

(೧೫) ಧರ್ಮದ ಗಡಬಡಿ.

ಕ್ರೈಸ್ತ ಮತದ ಗೆಳೆಯರೊಡನೆ ಪಡೆದ ಅನುಭವಗಳನ್ನು ಈಗ ಹೇಳುವದು ಸಮಯೋಚಿತವು. ಬೇಕರರವರಿಗೆ ನನ್ನ ಭವಿಷ್ಯದ ಚಿಂತೆ. ನಾನು ಮುಂದೆ ದೊಡ್ಡವನಾಗಬೇಕೆಂದು ಅವರು ಬಯಸುತ್ತಿದ್ದರು. ವೆಲಿಂಗ್ಟನದೊಳಗಿನ ಧರ್ಮ ಪರಿಷತ್ತಿಗೆ ಅವರು ನನ್ನನ್ನೊಯ್ದರು. ಪ್ರೊಟೆಸ್ಟಂಟ ಮತದ ಕ್ರೈಸ್ತರು ಇಂಥ ಸಭೆಗಳನ್ನು ಕೆಲಕೆಲವು ವರ್ಷಗಳಲ್ಲಿ ಸೇರಿಸುತ್ತಾರೆ. ಧರ್ಮ ಜಾಗ್ರತಿ ಮಾಡುವದು ಈ ಸಭೆಗಳ ಉದ್ದೇಶವು. ಆತ್ಮಶುದ್ಧಿ ಎಂದೂ ಹೇಳಬಹುದು. ಧರ್ಮೋದ್ಧಾರ ಕಾರ್ಯವೆಂದು ಹೇಳಲಿಕ್ಕೂ ಅಡ್ಡಿಯಿಲ್ಲ. ವೆಲಿಂಗ್ಟನದೊಳಗಿನ ಪರಿಷತ್ತು ಈ ಮಾದರಿಯದಾಗಿತ್ತು. ಸಭಾಧ್ಯಕ್ಷರು ಪ್ರಸಿದ್ಧ ಧರ್ಮೋಪದೇಶಕರಾದ ರೆವ್ಹರಂಡ ಎಂಡ್ರ್ಯೂ ಮರೆಯವರು. ಆ ಪರಿಷತ್ತಿನೊಳಗಿನ ಧರ್ಮೋಪದೇಶಗಳಿಂದಲೂ, ಧರ್ಮ ಬುದ್ಧಿಯಿಂದಲೂ, ಧರ್ಮ ಶ್ರದ್ಧೆಯಿಂದಲೂ ನನಗೆ ಕ್ರೈಸ್ತ ಮತಕ್ಕೆ ಸೇರಲು ಬುದ್ಧಿಯಾಗುವದೆಂದು ಬೇಕರರವರ ಆಶೆಯಿತ್ತು.

ಆದರೆ, ಅವರೆಲ್ಲರೂ ಪ್ರಾರ್ಥನೆ ಮೇಲೆ ವಿಶೇಷವಾದ ನಿಷ್ಠೆಯನ್ನಿಟ್ಟಿದ್ದರು. ಪ್ರಾರ್ಥನೆಯಿಂದಲೇ ದೇವರ ಪೂಜೆಯಾಗತಕ್ಕದ್ದೆಂದು ಅವರ ದೃಢವಾದ ಶ್ರದ್ಧೆ. ಮನಃಪೂರ್ವಕವಾಗಿ ಮಾಡಿದ ಪ್ರಾರ್ಥನೆಯನ್ನು ಆಲಿಸದಿರುವ ಸಾಮರ್ಥ್ಯವು ಪರಮಾತ್ಮನಿಗಿರುವದಿಲ್ಲವಾಗಿ, ಬೇಕರರವರ ನಂಬಿಗೆ. ಇತ್ತ ಬ್ರಿಸ್ಟಲದ ಜೋಜರ್ ಮುಲ್ಲರರವರಂಥವರ ಕಥೆಗಳನ್ನು ಅವರು ಹೇಳುತ್ತಿದ್ದರು. ಜೋಜರ್ ಮುಲ್ಲರರವರು ಪ್ರಾರ್ಥನೆಯನ್ನೇ ಅವಲಂಬಿಸಿಕೊಂಡಿದ್ದರು. ಪ್ರಾರ್ಥನಾ ಬಲದಿಂದಲೇ ಪ್ರಾಪಂಚಿಕ ಸಾಮಗ್ರಿಗಳನ್ನು ಅವರು ಪೂರೈಸಿಕೊಳ್ಳುತ್ತಿದ್ದರು. ಪ್ರಾರ್ಥನೆಯ ಮೇಲೆ ಬೇಕರರವರ ಕೊಟ್ಟ ಪ್ರವಚನವನ್ನು ನಾನು ನಿರ್ಮಲ ಚಿತ್ತದಿಂದ ಕೇಳಿಕೊಂಡೆ. ಕ್ರೈಸ್ತ ಮತವನ್ನು ಅಂಗೀಕರಿಸುವ ಪ್ರೇರಣೆ ನನ್ನಲ್ಲುಂಟಾದರೆ, ಕ್ರೈಸ್ತ ಮತವನ್ನು ಅಂಗೀಕರಿಸದೆ ಇರುವದಿಲ್ಲವೆಂದು ಅವರಿಗೆ ವಚನಕೊಟ್ಟೆನು. ಮನೋದೇವತೆಯ ಆಜ್ಞೆ ಹಿಡಿದಂತೆ ನಡೆಕೊಳ್ಳಲು ನಾನು ಕಲಿತಿದ್ದೆ. ಮನೋದೇವತೆಗೆ ವಿಧೇಯನಾಗಿ ನಡೆಯುವದೇ ನನಗೆ ಆನಂದ. ಮನೋದೇವತೆಗೆ ವಿರೋಧವಾಗಿ ನಡೆಕೊಳ್ಳುವದು ನನಗೆ ಕಠಿಣವಾಗಿತ್ತು. ಹಾಗೆ ನಡೆಕೊಂಡರೆ ನನಗೆ ದುಃಖವೆ ಆಗುತ್ತಿತ್ತು.

ಹೀಗೆ ನಾವಿಬ್ಬರೂ ವೆಲಿಂಗ್ಟನಕ್ಕೆ ಹೋದೆವು. ನನ್ನಂಥ ಕಪ್ಪು ಮನುಷ್ಯನ ಸಹವಾಸ ಮಾಡಿದ್ದರಿಂದ ಬೇಕರರಿಗೆ ಬಹಳ ತೊಂದರೆಗಳಾದವು. ನನಗಾಗಿಯೇ ಅನೇಕ ಪ್ರಸಂಗಗಳಲ್ಲಿ ಅವರಿಗೆ ಅನಾನುಕೂಲಗಳುಂಟಾದವು. ಪ್ರಯಾಣಕ್ಕೆ ಹೊರಟೆವು. ಮಧ್ಯದಲ್ಲಿ ಒಂದು ರವಿವಾರ ಬಂತು. ರವಿವಾರಕ್ಕೆ ಪ್ರಯಾಣ ಮಾಡಲು ಬೇಕರರಾಗಲಿ, ಅವರ ಗೆಳೆಯರಾಗಲಿ ಒಪ್ಪಲಿಲ್ಲ. ಸ್ಟೇಶನ ಬಳಿ ಒಂದು ಭೋಜನ ಗೃಹವಿತ್ತು. ಭೋಜನಾಲಯದವರು ಬಹಳ ವಾದವಿವಾದ ಮಾಡಿ, ನನಗೆ ಭೋಜನಾಲಯದಲ್ಲಿ ಎಡೆಗೊಟ್ಟರು. ಆದರೆ, ಭೋಜನ ಶಾಲೆಯಲ್ಲಿ ನನಗೆ ಹೋಗಗೊಡಲಿಕ್ಕೆ ಎಷ್ಟು ಮಾತ್ರ ಒಪ್ಪಲಿಲ್ಲ. ಬೇಕರರವರೇನು ಹಕ್ಕುಗಳನ್ನು ಸುಲಭವಾಗಿ ಕಳಕೊಳ್ಳುವವರಲ್ಲ. ಭೋಜನ ಗೃಹದೊಳಗಿನ ಭೋಜನಾರ್ಥಿಗಳ ಹಕ್ಕುಗಳನ್ನು ಅವರು ಪ್ರತಿಪಾದಿಸಿದರು. ಬೇಕರರವರಿಗೆ ಇದು ಬಹಳ ಕಠಿಣವಾಗುತ್ತಿತ್ತೆಂದು ನನಗೆ ತಿಳಿಯುತ್ತಿತ್ತು. ವೆಲಿಂಗ್ಟನದಲ್ಲಿಯೂ ಬೇಕರರವರೊಡನೆ ನಾನು ಉಳಕೊಂಡೆನು. ನನ್ನ ಸಹವಾಸದಿಂದ ಬರಬಹುದಾದ ಕಷ್ಟಗಳನ್ನು ಅಡಗಿಸಿ ಕೊಳ್ಳಲು ಬೇಕರರವರು ಯತ್ನ ಮಾಡುತ್ತಿದ್ದರು. ಆದರೂ, ನನಗೆ ಅವೆಲ್ಲ ತಿಳಿಯುತ್ತಿದ್ದವು

ಈ ಪರಿಷತ್ತು ಶ್ರದ್ಧಾಯುಕ್ತ ಕ್ರೈಸ್ತರ ಸಮ್ಮೇಲನವಾಗಿತ್ತು. ಅವರ ನಿಷ್ಠೆಯನ್ನು ನೋಡಿ ನನಗೆ ಆನಂದವಾಯಿತು. ರೆವ್ಹರಂಡ ಮರೆಯವರನ್ನು ನಾನು ಭೆಟ್ಟಿಯಾದೆನು. ಅನೇಕರು ನನಗಾಗಿ ಪ್ರಾರ್ಥನೆ ಮಾಡುತ್ತಿದ್ದರು. ಅವರ ಹಾಡುಗಳು ಇಂಪಾಗಿದ್ದವು.

ಪರಿಷತ್ತು ೩ ದಿನಗಳ ವರೆಗೆ ನಡೆಯಿತು. ಸಭಿಕರ ಭಕ್ತಿಯು ನಿಜವಾಗಿ ಪ್ರಶಂಸನೀಯವಿತ್ತು. ಆದರೆ, ನನಗೆ ಧರ್ಮಾಂತರ ಹೊಂದುವ ಕಾರಣವೇನೂ ತೋರಲಿಲ್ಲ. ಕ್ರೈಸ್ತನಾದರೆ ಮಾತ್ರ ಸ್ವರ್ಗ ಪ್ರಾಪ್ತಿಯಾಗತಕ್ಕದ್ದೆಂಬುದಾಗಲೀ ಮುಕ್ತಿ ಪ್ರಾಪ್ತವಾಗತಕ್ಕದ್ದೆಂಬುದಾಗಲೀ ಎಣಿಸಲಿಕ್ಕೆ ನನ್ನಿಂದಾಗಲಿಲ್ಲ. ಇದನ್ನು ನನ್ನ ಒಳ್ಳೆ ಕೆಲವು ಕ್ರೈಸ್ತ ಬಾಂಧವರಿಗೆ ಹೇಳಿದೆನು. ಇದನ್ನು ಕೇಳಿ ಅವರು ದಿಗಿಲು ಬಿದ್ದರು. ಆದರೆ ಅದಕ್ಕೆ ನಾನೇನ ಮಾಡುವದು ?

ನನಗೊದಗಿದ ಕಷ್ಟಗಳೇ ಬೇರೆ. ಕ್ರಿಸ್ತನು ಪರಮಾತ್ಮನ ಒಬ್ಬನೇ ಒಬ್ಬ ಮಗನೆಂದು ತಿಳಿಯುವದೂ, ಆತನಲ್ಲಿ ನಂಬಿಗೆ ಇಡುವವರಿಗೆ ಶಾಶ್ವತವಾದ ಸುಖ ಪ್ರಾಪ್ತಿಯಾಗುತ್ತದೆಂದು ಎಣಿಸುವದೂ ನನ್ನಿಂದ ಎಂದೂ ಸಾಧ್ಯವಾಗದ ಮಾತು. ಪರಮಾತ್ಮನಿಗೆ ಮಗಂದಿರು ಇರಬಹುದಾದರೆ ನಾವೆಲ್ಲರೂ ಆತನ ಮಗಂದಿರೇ. ಕ್ರಿಸ್ತನು ಪರಮಾತ್ಮನ ಅಂಶಿಯೂ ಸ್ವತಃ ಪರಮಾತ್ಮನೇ ಆಗಿದ್ದರೆ, ಮಾನವರೆಲ್ಲರೂ ಪರಮಾತ್ಮನ ಅಂಶಗಳೇ. ಸ್ವತಃ ಅವರು ಪರಮಾತ್ಮರಾಗಬಹುದು. ಕ್ರೈಸ್ತನು ಗಲ್ಲಿಗೇರಿ ಭೂತಲದೊಳಗಿನ ಪಾಪಗಳನ್ನು ಪರಿಮಾರ್ಜನ ಮಾಡಿದನೆಂಬುದು ನನ್ನ ಬುದ್ಧಿಗ್ರಾಹ್ಯವಾಗದು. ರೂಪಕ ದೃಷ್ಟಿಯಿಂದ ವಿಚಾರಿಸಿದರೆ, ಅದರೊಳಗೆ ಸತ್ಯಾಂಶವಿರಬಹುದು. ಕ್ರೈಸ್ತ ಮತದಂತೆ ಮಾನವರಿಗೆ ಮಾತ್ರ ಆತ್ಮಗಳಿದ್ದವು. ಇತರೇ ಪ್ರಾಣಿಗಳಿಗೆ ಆತ್ಮವಿದ್ದಿಲ್ಲ. ಆದರಿಂದ ಅವು ಸತ್ತ ಕೂಡಲೇ, ಸರ್ವ ನಾಶವಾಯಿತು. ನನ್ನ ವಿಚಾರವು ಸರಿ ವಿರುದ್ಧವಾಗಿತ್ತು. ಕ್ರೈಸ್ತನು ಧರ್ಮ ರಕ್ಷಣೆಕ್ಕಾಗಿ ಆತ್ಮಾರ್ಪಣೆ ಮಾಡಿಕೊಂಡನೆಂದು ತಿಳಿಯಲು ನನ್ನ ತಯಾರ. ತ್ಯಾಗದ ಆದರ್ಶವೆಂದೂ ನಾನು ಹೇಳಬಲ್ಲೆ; ಪರಮಾತ್ಮನ ಅವತಾರದಿಂದ ಪ್ರಾಪ್ತನಾದ ಧರ್ಮೋಪದೇಶಕನೆಂದೂ ನಾನು ನಂಬುವೆನು. ಆದರೆ, ಆತನು ಭೂತಲದಲ್ಲಿ ಜನಿಸಿದ ಮಾನವರಲ್ಲಿ ಸರ್ವೋತ್ತಮ ಮಾನವನೆಂದು ತಿಳಿಯಲಿಕ್ಕೆ ನಾನು ತಯಾರಿಲ್ಲ. ಆತನು ಖುರೀಸಿನ ಮೇಲೆ ಪ್ರಾಣತ್ಯಾಗ ಮಾಡಿದ್ದು ಇಡೀ ಭೂತಲಕ್ಕೆಲ್ಲ ಮಾರ್ಗದರ್ಶಕವಾಯಿತು, ಆದನ್ನು ಕೈಕೊಂಡು ಆತನು ಅದ್ಭುತ ಚಮತ್ಕಾರ ಮಾಡಿದನೆಂದು ನನಗೆ ಹೊಳೆಯುವದೇ ಇಲ್ಲ. ಕ್ರೈಸ್ತ ಮತದ ಧರ್ಮಿಷ್ಠ ಚರಿತ್ರೆಗಳನ್ನು ನಾನು ಓದಿದೆನು. ಆದರೆ, ಅವುಗಳಿಂದ ಇತರ ಧರ್ಮಗಳ ಸಾಧು ಚರಿತ್ರ ವಾಚನದಿಂದುಂಟಾದಷ್ಟೇ ಲಾಭವು ನನಗೆ ಪ್ರಾಪ್ತವಾಯಿತು. ಇತರ ಧರ್ಮಗಳ ಸಾಧುಗಳಲ್ಲಿ ಕಂಡು ಬಂದ ಜಾಗ್ರತೆಯೇ ಕ್ರೈಸ್ತರಲ್ಲಿಯೂ ಕಂಡು ಬಂತು. ತಾತ್ವಿಕವಾಗಿ ವಿಚಾರಿಸಿದರೆ, ಕ್ರೈಸ್ತ ಧರ್ಮ ತತ್ವಗಳಲ್ಲಿ ಅಸಾಮಾನ್ಯವೇನೂ ಇರುವದಿಲ್ಲ. ತ್ಯಾಗ ದೃಷ್ಟಿಯಿಂದ ವಿಚಾರಿಸಿದರಂತೂ ಕ್ರೈಸ್ತರಿಗಿಂತ ಹಿಂದುಗಳೇ ಶ್ರೇಷ್ಠರು. ಕ್ರೈಸ್ತ ಧರ್ಮವು ಗುಣಸಂಪನ್ನ ಧರ್ಮವು, ಅಥವಾ ಪರಮ ಶ್ರೇಷ್ಠವಾದ ಧರ್ಮವು, ಎಂದು ತಿಳಿಯುವದು ನನಗೆ ಅಶಕ್ಯವಿತ್ತು.

ಹೀಗೆ ಕ್ರೈಸ್ತ ಧರ್ಮದ ಕುರಿತು ನನ್ನಲ್ಲುಂಟಾದ ವಿಚಾರತರಂಗಗಳನ್ನು ಪ್ರಸಂಗೋಚಿತವಾಗಿ, ನಾನು ಕ್ರೈಸ್ತ ಗೆಳೆಯರೊಡನೆ ಚರ್ಚಿಸುತ್ತಿದ್ದೆನು. ಅವರಿಂದ ದೊರಕಿದ ಉತ್ತರಗಳಿಂದ ನನಗೇನು ಸಮಾಧಾನವಾಗಲಿಲ್ಲ.

ಕ್ರೈಸ್ತ ಧರ್ಮವು ಸರ್ವ ಗುಣಪೂರ್ಣ ಯಾ ಶ್ರೇಷ್ಠ ಧರ್ಮವೆಂದು ನಾನು ಗ್ರಹಿಸಬಹುದಾಗಿದ್ದಿಲ್ಲ, ಹಿಂದೂಧರ್ಮವಾದರೂ ಶ್ರೇಷ್ಠ ಧರ್ಮವೆಂದೂ ಆ ಕಾಲಕ್ಕೆ ನಾನು ತಿಳಿದಿದ್ದಿಲ್ಲ. ಹಿಂದೂ ಧರ್ಮದೊಳಗಿನ ದೋಷಗಳು ನನಗೆ ಸ್ಪಷ್ಟವಾಗಿ ಕಾಣುತ್ತಿದ್ದವು. ಅಸ್ಪೃಶ್ಯತೆಯು ಹಿಂದೂ ಧರ್ಮದ ಅಂಗವಾಗಿತ್ತು. ಆದರಿಂದ ಈ ಅಂಗವು ಒಂದೇ ಹಿಂದೂ ಧರ್ಮದ ದೋಷವಾಗಿರಬೇಕು; ಅಥವಾ ಹಿಂದೂ ಧರ್ಮದ ಮೇಲೆ ಬೆಳೆದ ಕೃತಿಮ ಅಂಗವಾಗಿರಬೇಕು. ಹಿಂದೂ ಧರ್ಮದೊಳಗಿನ ಭಿನ್ನಭಿನ್ನ ಮತ ಹಾಗು ಜ್ಞಾತಿಗಳ ಕಾರ್ಯ ಸಾಧನವನ್ನು ತಿಳಿಯಲು ನನಗೆ ಸಾಧ್ಯವಿದ್ದಿಲ್ಲ. ವೇದಗಳು ಭಗವಂತನ ಪ್ರೇರಣೆಯಿಂದ ಉತ್ಪನ್ನವಾದ ವಚನಗಳೆಂದು ಹೇಳುವದರಲ್ಲಿ ಅರ್ಥವೇನಿದೆ ? ಅವು ಭಗವಂತನಿಂದ ಉತ್ಪನ್ನವಾಗಿದ್ದರೆ, ಬೈಬಲ ಹಾಗು ಕುರಾನಗಳೂ ಕೂಡ ಭಗವಂತ ಪ್ರೇರಿತವೆಂದು ನಾವು ಯಾಕೆ ತಿಳಿಯಬಾರದು ?

ಕ್ರೈಸ್ತ ಗೆಳೆಯರಂತೆಯೇ ಮುಸಲ್ಮಾನರೂ ಗೆಳೆಯರೂ ನನ್ನನ್ನು ಇಸ್ಲಾಮ ಧರ್ಮದಲ್ಲಿ ಸೇರಿಸಿಕೊಳ್ಳಲು ಯತ್ನಿಸುತ್ತಿದ್ದರು. ಇಸ್ಲಾಮು ಧರ್ಮದ ಅಭ್ಯಾಸ ಮಾಡಲು ಅಬ್ದುಲ್ಲಾ ಶೇಟ್ಟರು ನನ್ನ ಮನ ಒಲಿಸುತ್ತಿದ್ದರು. ನನ್ನೊಡನೆ ಮಾತನಾಡುವಾಗಲೂ ಅವರು ಇಸ್ಲಾಮದೊಳಗಿನ ಯಾವದಾದರೊಂದು ಸೊಬಗಿನ ಪ್ರಸಂಗವನ್ನು ಬಣ್ಣಿಸದೆ ಬಿಡುತ್ತಿದ್ದಿಲ್ಲ.

ರಾಯಚಂದ ಭಾಯಿಯವರಿಗೆ ಪತ್ರ ಬರೆದು ನನ್ನ ಕಷ್ಟಗಳನ್ನು ಹೇಳಿದೆನು. ಹಿಂದುಸ್ಥಾನದೊಳಗಿನ ಇತರ ಧರ್ಮಾಧಿಕಾರಿಗಳಿಗೂ ಪತ್ರ ಬರೆದು ಅವರ ಕಡೆಯಿಂದ ಉತ್ತರಗಳನ್ನು ಸಂಗ್ರಹಿಸಿದೆನು. ರಾಯಚಂದ ಭಾಯಿಯವರ ಪತ್ರ ಓದಿ ನನಗೆ ಕೆಲಮಟ್ಟಿಗೆ ಸಮಾಧಾನವಾಯಿತು. ಅವರು ನನಗೆ ಸಮಾಧಾನ ತಾಳಲು ಹೇಳಿದರು. ಹಿಂದೂ ಧರ್ಮವನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಲು ಬೋಧಿಸಿದರು. ಅವರು ಬರೆದ ಪತ್ರದಲ್ಲಿ ಒಂದು ವಾಕ್ಯವು ಮನನೀಯವಿದೆ. "ಈ ವಿಷಯವನ್ನು ನಿರ್ಮಲ ಚಿತ್ತದಿಂದ ವಿಚಾರಿಸಿದರೆ, ಹಿಂದೂ ಧರ್ಮದಷ್ಟು ಸೂಕ್ಷ್ಮವಾದ ಹಾಗೂ ತತ್ವ ಪೂರ್ಣವಾದ ಧರ್ಮವು ಬೇರೊಂದಿಲ್ಲವಾಗಿ ನನ್ನ ಮನವರಿಕೆಯಾಗಿದೆ. ಹಿಂದೂ ಧರ್ಮದೊಳಗಿನ ಆತ್ಮ ಸಾಕ್ಷಾತ್ಕಾರವು, ದಯೆಯೂ ಶ್ರೇಷ್ಠವಾಗಿವೆ."

ಸೇಲರವರು ಮಾಡಿದ ಕುರಾನದ ಭಾಷಾಂತರವನ್ನು ಕೊಂಡು ಕೊಂಡು ಓದಲಾರಂಭಿಸಿದೆನು. ಇಸ್ಲಾಮ ಧರ್ಮದ ಮೇಲಿನ ಇತರ ಗ್ರಂಥಗಳನ್ನೂ ನಾನು ಸಂಗ್ರಹಿಸಿದೆನು. ಇಂಗ್ಲಂಡದೊಳಗಿನ ಕ್ರೈಸ್ತ ಬಾಂಧವರೊಡನೆ ಪತ್ರವ್ಯವಹಾರ ನಡೆಸಿದೆನು. ಒಬ್ಬರು ನನಗೆ ಎಡ್ವರ್ಡ ಮೇಟ್ಲೆಂಡರವರ ಪರಿಚಯ ಮಾಡಿಕೊಟ್ಟರು. ಅವರಿಗೂ ನಾನು ಪತ್ರ ಬರೆದೆನು. ಅವರು ನನಗೆ 'ಪರಫೆಕ್ಟ್ ವೇ' ಅಂದರೆ, ಸಿದ್ಧೋಪಕಾರಿ ಎಂಬ ಗ್ರಂಥವನ್ನು ನನಗೆ ಕಳುಹಿಸಿದರು. ಆ ಗ್ರಂಥವನ್ನು ಮೇಟ್ಲೆಂಡರವರು ಎನಾಕಿಂಗ್ಸ ಫರ್ಡರವರ ಸಹಾಯದಿಂದ ಬರೆದಿದ್ದರು. ಪ್ರಚಲಿತ ಕ್ರೈಸ್ತ ಧರ್ಮದ ಕಲ್ಪನೆಗಳು ಆ ಗ್ರಂಥದಲ್ಲಿ ಖಂಡಿಸಲ್ಪಟ್ಟಿದ್ದವು. "ನ್ಯೂ ಇಂಟರಪ್ರಿಟೇಶನ್ ಆಫ ದಿ ಬಾಯಬಲ್" ಅಂದರೆ ಬಾಯಬಲಿನ ಹೊಸ ಅರ್ಥ ಎಂಬ ಗ್ರಂಥವನ್ನು ಅವರು ನನಗೆ ಕಳುಹಿಸಿದರು. ಎರಡೂ ಗ್ರಂಥಗಳನ್ನು ನಾನು ಸಂತೋಷದಿಂದ ಓದಿದೆನು. ಹಿಂದೂ ಧರ್ಮಕ್ಕೆ ಆ ಗ್ರಂಥಗಳಿಂದ ಬೆಂಬಲ ದೊರಕುತ್ತದೆಂದು ನನಗೆ ತೋರಿತು. ಟಾಲಸ್ಟಾಯಿಯವರ "ಕಿಂಗಡಮ್ ಆಫ ಗಾಡ ಇಜ ವಿದಿನ್ ಯು" ಅಂದರೆ ದೇವರ ಸಾಮ್ರಾಜ್ಯವು ನನ್ನ ಅಂತಃಕರಣದಲ್ಲಿದೆ, ಎಂಬ ಪುಸ್ತಕವನ್ನೋದಿ ನನಗೆ ಆಶ್ಚರ್ಯವಾಯಿತು. ಆ ಗ್ರಂಥ ವಾಚನದಿಂದುಂಟಾದ ಸಂಸ್ಕಾರವು ಶಾಶ್ವತವಾದದ್ದು. ಸ್ವತಂತ್ರ ವಿಚಾರ, ಆಳವಾದ ನೀತಿ, ಸತ್ಯಾವಿಷ್ಕರಣಗಳು ಈ ಗ್ರಂಥದಲ್ಲಿ ಒಳಗೊಂಡಿದ್ದವು. ಈ ಗ್ರಂಥದ ಮುಂದೆ ಕೋಟ್ಸರವರು ನನಗೆ ಕೊಟ್ಟ ಸಮಸ್ತ ಪುಸ್ತಕಗಳೂ ನಿಷ್ಪ್ರಯೋಜಕವಾದವು.

ಹೀಗೆ ನನ್ನ ಅಭ್ಯಾಸದಿಂದ ಕ್ರೈಸ್ತ ಗೆಳೆಯರು ಯೋಚಿಸದ ಮಾರ್ಗದಿಂದ ನಾನು ಹೋಗಹತ್ತಿದೆನು. ಎಡ್ವರ್ಡ ಮೇಟ್ಲೆಂಡರವರೊಡನೆ ನಾನು ಬಹಳ ಕಾಲದವರೆಗೆ ಪತ್ರವ್ಯವಹಾರ ನಡೆಸಿದೆನು. ರಾಯಚಂದ ಭಾಯಿಯವರಿಗೂ ಅವರು ಸಾಯುವ ವರೆಗೆ ನಾನು ಪತ್ರ ಬರೆಯುತ್ತಿದ್ದೆ. ರಾಯಚಂದ ಭಾಯಿಯವರು ನನಗೆ ಕೆಲವು ಪುಸ್ತಕಗಳನ್ನು ಕಳುಹಿದ್ದರು. ಅವನ್ನು ನಾನು ಓದಿದೆನು. ಪಂಚೀಕರಣ, ಮಣಿರತ್ನಮಾಲಾ, ಯೋಗವಾಸಿಷ್ಠದ

ಮುಮುಕ್ಷು ಪ್ರಶ್ನೆ, ಹರಿ ಭಕ್ತ್ಯ ಸೂರಿಯವರ ಕೀರ್ತನ ಸಮುಚ್ಚಯ ಇವೇ ಮೊದಲಾದ ಪುಸ್ತಕಗಳನ್ನು ರಚಿಸಿ ಚಿರಂಜೀವಿಯಾಗಿರುವರು ಕಳುಹಿದ್ದರು.

ಕ್ರೈಸ್ತ ಗೆಳೆಯರು ಯೋಜಿಸಿದ ದಾರಿಯಿಂದ ನಾನು ಪಾಠಗಳನ್ನು ಮಾಡಿರುವಲ್ಲಿ ಅವರ ಸಹವಾಸದಿಂದ ನನ್ನಲ್ಲುಂಟಾದ ಧರ್ಮ ಜಾಗೃತಿಯ ಬಗ್ಗೆ ನಾನು ಅವರಿಗೆ ಕೃತಜ್ಞನಾಗಿ ಉಳಿಯುವೆನು. ಅವರ ಸಹವಾಸ ಸುಖವನ್ನು ನಾನೆಂದೂ ಮರೆಯಲಾರೆ. ಇನ್ನು ಮುಂದೆ ಇದೇ ಪ್ರಕಾರದ ಸುಖದ ಪವಿತ್ರವಾದ ಕ್ರೈಸ್ತರೊಳ ಯರ ಸಹವಾಸಗಳು ನನಗೆ ಪ್ರಾಪ್ತವಾದವು. ಆ ಕಥೆಯು ಈ ಮುಂದೆ.

ಷವರಲೆಟ್
ಮೋಟಾರಕಾರ್ ಏಜನ್ಸಿ, ಕೆನರಾ.

ನಾವು ಹೊಸ ಷವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಕರಿಸಿ ಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲ ಏಜಂಟ:— **ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ, ಶಿರ್ಶಿ**

ಕುಮಟಾ ಏಜಂಟ:- **ಜಿ. ಡಿ. ಮಳಗಿಕರ ಎಂಡ್ ಕೊ.**

ಬಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲೊಪ್ ಹಾಗು ಮಿಚಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮಗ್ರಿಗಳು ಯೋಗ್ಯ ದರಗಳಿಂದ ಪೂರೈಸುತ್ತೇವೆ.

G. D. Malgiker & Co,
KUMTA.

ಸರಸ್ವತೀ

ಇಡೀ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ಕೃಷ್ಟವಾದ ತಿಳಿಗನ್ನಡ ಮಾಸಪತ್ರಿಕೆ ಇದೊಂದೇ.

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಓದತಕ್ಕ ವಿಷಯಗಳು ಮಾತ್ರ 40 ಪುಟಗಳಿವೆ. ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಶೀಲಾ" ಎನ್ನುವ ಕಾದಂಬರಿಯೂ, 'ಶಹಾಜಹಾನ' ಎನ್ನುವ ನಾಟಕವೂ ಸಾಹಿತ್ಯಸರೋಜ-ಕನ್ಯಾಕೈಪಿಡಿ-ಮುತ್ತಿನ ಸರ-ಚಾರುಚರಿತಾವಳಿ-ಗೃಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಿಕೆಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ಚಂದಾದಾರರಿಗೆ "ಶಾರದಾಗ್ರಂಥಮಾಲೆ"ಯಲ್ಲಿ ಇದುವರೆಗೆ ಪ್ರಕಟವಾಗಿರುವ 'ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದೂಭಾಗ್ಯೋದಯ-ರಣಕೇಸರಿ' ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು. ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವದರಿಂದ ಪ್ರಕಟಣೆಗೆ ಅತ್ಯುತ್ತಮವಾದ ಪತ್ರಿಕೆ. ವಾರ್ಷಿಕ ಚಂದಾ ರೂ. 3-0-0 ಮಾತ್ರ. ವಿದ್ಯಾರ್ಥಿಗಳಿಗೂ, ವಾಚನ ಶಾಲೆಗಳಿಗೂ ರೂ. 2-0-0 ಮಾತ್ರ.

ವಿಳಾಸ:— "ಸರಸ್ವತೀ" ಕಾರ್ಯಾಲಯ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ
ಆಯುರ್ವೇದ ಸಂಗ್ರಹಾಲಯ.
ಶಾಸ್ತ್ರೋಕ್ತ ತಯಾರಿಸಿದ ಔಷಿಧ ರಸಾಯನಗಳು.

೧. **ಸಮೀರ ಪನ್ನಗ**— ಇದು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು. ಹೊಟ್ಟೆ ಉಬ್ಬೋಣ, ಹೊಟ್ಟೆಶೂಲೆಗಳ ನಾನಾ ಪ್ರಕಾರದ ಪೀಡನೆ, ಸನ್ನಿಪಾತ ವಿಕಾರಗಳಲ್ಲಿ ಹಲುಬೋಣ, ಬಿಕ್ಕಂತೆ ಬಿದ್ದಾಡೋಣ ಮುಂತಾದ ೮೦ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ.

ತೊಲೆ ೧ಕ್ಕೆ ರೂ. ೬-೮-೦.

೨. **ಮಲ್ಲಸಿಂಧೂರ**— ಮಹಾಶ್ವಾಸ, ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ಹಲುಬೋಣ, ಕಫಕ್ಷಯ, ಬಿಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು-ದಮ್ಮು, ಕಂಪ, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಗಳಿಗೆಯೊಳಗೆ ರೋಗಿಯು ವಾಸಿಯಾಗುತ್ತಾನೆ.

ತೊಲೆ ೧ಕ್ಕೆ ರೂ. ೭-೦-೦.

೩. **ಸುವರ್ಣರಾಜ ವಂಗೇಶ್ವರ**— ಉಪದಂಶಗಳ ಶೇಷವಿಕಾರ, ಪರಮಾ, ಧಾತುಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುನಷ್ಟ, ಸ್ವಪ್ನಾವಸ್ಥೆ, ಅಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧಗಳ ಸಮಸ್ತ ವಿಕಾರಗಳನ್ನು ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನೂ, ಕಾಂತಿಯನ್ನೂ ಕೊಡುತ್ತದೆ. ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ. ಇದರಿಂದ ಏನೊಂದೂ ಉಪದ್ರವವಾಗುವದಿಲ್ಲ.

ತೊಲೆ ೧ಕ್ಕೆ ರೂ. ೩-೦-೦

೪. **ವ್ಯಾಧಿಹರಣ ರಸ**— ಉಪದಂಶ, (ಗರಮಿಯ) ಫಿರಂಗೋಪದಂಶ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಆಮವಾಯು, ವಾತರಕ್ತ, ಭಯಂಕರ ವಾತವಿಕಾರ, ಪ್ರಾಮುಖ್ಯವಾಗಿ ಉಪದಂಶಗಳಿಗೋಸ್ಕರವಾಗಿ ಆಗುವ ದಮ್ಮು, ಕೆಮ್ಮು, ನಿಶ್ಶಕ್ತ್ಯ ಇವುಗಳ ಮೇಲೆ ಇಷ್ಟು ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಇನ್ನಾವದೂ ಇಲ್ಲ.

ತೊಲೆ ೧ಕ್ಕೆ ರೂ. ೭-೦-೦.

೫. **ಸೂತಶೇಖರ**— ಸನ್ನಿಪಾತ, ಪ್ಲೇಗ, ಮೂರ್ಛೆ, ಹಲುಬುವ ವಿಕಾರ (ಭ್ರಮೆ) ಶ್ವಾಸ, ಬಿಕ್ಕಂತೆ ಬಿದ್ದಾಡುವದು, ಹೊಟ್ಟೆನೋವು, ಆಮ್ಲಪಿತ್ತ ಮುಂತಾದ ವಾತ-ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದು. ಸಾಮಾನ್ಯವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ.

ತೊಲೆ ೧ಕ್ಕೆ ರೂ. ೬-೮-೦

ಇವಲ್ಲದೆ, ತರತರದ ಚೂರ್ಣ, ಘೃತ, ಅವಲೇಹ, ಆಸವ, ಮಾತ್ರೆ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ.

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನ್ನು ಕಲಿಸುವ ಏರ್ಪಾಟು ಮಾಡಿರುತ್ತೇವೆ.

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದ್ದಲ್ಲಿ ಉತ್ತರದ ಬಗ್ಗೆ ಸ್ಟಾಂಪು ಜೊತೆಗಿಟ್ಟು ಈ ಕೆಳಗಿನ ಪತ್ತೆಗೆ ಬರೆಕೊಳ್ಳತಕ್ಕದ್ದು.

ಪತ್ತೆ:— **ಶ್ರೀ ಗಜಾನನ ಅಪ್ಪು ಭಟ್ಟ ವೇದೇಶ್ವರ,**
ಆಯುರ್ವೇದಿಕ ವೈದ್ಯ,
ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ.)



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ
ದೇವರ ಮಂಟಪಗಳೂ,

ಹಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ತಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ಲೂಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—
ದಿ ನೋರ್ಥಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ

ಸುಗಂಧಿ ತಾಂಬೂಲೀ ಜರ್ದಾ!

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕವಿರುತ್ತದೆ ಇದರ ಸೇವನದಿಂದ ಬಾಯಿಯು ಹಗುರಾಗುವದು. ವೇದನೆ ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ ಇದರ ಸೇವನದಿಂದ ದವಡೆ, ಕಪ್ಪ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು, ೧ ಪುಡಿ ಕಿಂ ರೂ.೦-೦-೬, ೨೫ರ ಕಿಂ ರೂ ೦-೯-೦ ೧೦೦ ಕಿಂ ರೂ ೨-೬-೦, ೫೦೦ ಪುಡಿಗಳ ಕಿಂ ರೂ ೯-೦-೦, ೧೦೦೦ ೧೭-೦-೦, ಟ ಪೆ ಖರ್ಚು ವಗೈರೆ ಪ್ರತ್ಯೇಕ

ಸುಗಂಧಿ ನಶ್ಯ.—ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದದ್ದು, ಇದರಿಂದ ಶೈತ್ಯ, ಥಂಡಿ, ಅರತಲೆನೋವು ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ, ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ ೧ ಡಬ್ಬಿ ಕಿಂ ರೂ. ೦-೪-೦, ೧ ಡಜನ್ ಡಬ್ಬಿ ಕಿಂ ರೂ ೩-೦-೦ ಪೆ. ಪೋ ಖರ್ಚು ಬೇರೆ

ಉತ್ತಮ ಬೀಡಿಗಳು:—ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚಿಸ್ವಾಗಿ ಕಟ್ಟಿದ ಬೀಡಿಗಳ ನಮ್ಮಲ್ಲಿ ತಯಾರಿರುತ್ತವೆ ಕಿಮ್ಮತ್ತಿನ ವಿಷಯಕ್ಕೆ ಬರೆದು ಪ್ರದವತ್ ನೋಡಿ ಮಾಲ ತರಿಸಿಕೊಳ್ಳಬಹುದು. ಇದರ ಹೊರತು, ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲ ಪ್ರಕಾರಗಳ ತಂಬಾಕು ಒರುತ್ತದೆ ಬೇಕಾದ ಪ್ರತಿಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು ಖರೀದಿ ಮಾಡಿಕಳಿಸುವದು. ವಿಶೇಷ ಮಾಹಿತಿ ಬೇಕಾದರೆ ಪತ್ರವ್ಯವಹಾರ ಮಾಡಿದರೆ, ಕೂಡಲೆ ಉತ್ತರ ಬರೆಯುವದು

ಪತ್ತೆ- **ಎಸ್. ಬಿ. ಕದಂ,**
ಬೀಡಿ ಮತ್ತು ತಂಬಾಕು ಜರ್ದಾ ದುಕಾನ,
ಮು॥ ಪೋ. ನಿಪ್ಪಾಣಿ, ಜಿ. ಬೆಳಗಾಂವ

ಪ್ರಯಾಣಿಕರಿಗೆ
ವಿಶೇಷ ಅನುಕೂಲ.

ನೇಮಿಸಿದ ಮುತ್ತಿಗೆ ಮೋಟರಿನ ವ್ಯವಸ್ಥೆ
ಹಾಗೂ
ಅಡಿಗೆ, ಊಟ ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ
ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ—
ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ, ಗೋಕರ್ಣದಿಂದ ಕುಮಟಾ, ಶಿರಸಿ, ಹುಬ್ಬಳ್ಳಿ, ಗೋಕರ್ಣದಿಂದ ಅಂಕೋಲಾ, ಕಾರವಾರ
ಸೂಚನೆ — ಟಿಕೀಟ ಮುಂಗಡವಾಗಿ ಪಡೆಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ವಾಂಗ್ಮೀಕರ ದೀಕ್ಷಿತ್ರಲು,
ಮೋಟರ ಏಜಂಟ,
ಕುಮಟಾ (ಉತ್ತರ ಕನ್ನಡ

S U. Narayanacharya & CO
Chaukamba, BENARES CITY.

ನಮ್ಮಲ್ಲಿ ಎಲ್ಲತರದ ರೇಶ್ಮೆ ಪೀತಾಂಬರ, ಜರಿಕಣ ಜರಿ ಸೀರೆ, ಕಾಶ್ಮೀರ್ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ ಸ್ಫಟಿಕಮಣಿ ಮೊದಲಾದ ಮಾಲೆಗಳು ಸಿಗುತ್ತವೆ ಕ್ಯಾಟಲಾಗ ಕೇಳುವವರಿಗೆ ಇನಾಮಾಗಿ ಕಳಿಸಲಾದೀತು.

ವಿಳಾಸ — ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ ಯವರ
ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಹೇಳಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಠರ ಶಕ್ತಿಯನ್ನೂ ತೇಜ ಮಾಡುತ್ತದೆ, ಮೂರು ಚಿಟಿಕೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ ೩-೮-೦. ವ್ಹಿ ಪಿ ೦-೮-೦
ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ— ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪೋರ್ಟ್‌ಟೌನ ಮದರಾಸ

ಕಿರ್ಲೋಸ್ಕರ
"ಕಲಬತ್ತ" ಹಾಗು ದೋಸೆ ಹಂಚುಗಳು.

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಲಬತ್ತಗಳೂ,
ದೋಸೆ ಹಂಚುಗಳೂ, ಕಬ್ಬಿಣ ಗೂಟಗಳೂ ತಯಾರಾಗುತ್ತವೆ.

ಕಲಬತ್ತಗಳಲ್ಲಿ

ಎರಡು ಪ್ರಕಾರಗಳುಂಟು. ದೊಡ್ಡದು ೧೧ ಇಂಚು ಎತ್ತರ,
ಬೆಲೆ ೪ ರೂಪಾಯಿ ಸಣ್ಣದು ಆರು ಇಂಚು ಎತ್ತರ ಬೆಲೆ ೨ ರೂಪಾಯಿ.

ದೋಸೆ ಹಂಚು ಒಂದಕ್ಕೆ ೧॥ ರೂಪಾಯಿ.

ಒಂದು ಕಲಬತ್ತ ಮತ್ತು ಒಂದು ದೋಸೆಹಂಚನ್ನು ಕೂಡಿ ಕೊಂಡಲ್ಲಿ, ೮ ಆಣೆಗಳನ್ನು ಸೂಟು ಬಿಡುತ್ತೇವೆ.

ಕಲಬತ್ತ ಮತ್ತು ದೋಸೇ ಹಂಚುಗಳ ರೋಕ ದರಗಳನ್ನು ತಿಳಿದುಕೊಳ್ಳಿರಿ

ಗೂಟಗಳು ಯೋಗ್ಯವಿರುತ್ತವೆ; ಬೆಲೆ ಒಂದು ಡಝನಿಗೆ ೨ ರೂ.

ಸವಿಸ್ತರ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವದೆ ಇದರಿಂದ ಎಲ್ಲ ಪ್ರಕಾರದ ವೇದನೆಗಳು. ಕೆಮ್ಮು, ಬೀಗು, ಸಂಧಿವಾತ ಮುಂತಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುವವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg. No. B 1270

Monday September 13th, 1926.

ವರ್ಷ ೧೦.

ಸಂಚಿಕೆ ೪೯.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.

ಕುಮುಟೆಯಲ್ಲಿ ಅಗಾವು

ರೂಪಾಯಿ 2-4-0.

ಗುಣೆಯಾರ್ಡರಿಯಿಂದ

ರೂ. 3-0-0.

ವಿ. ಪಿ. ಅಂಚೆವೆಚ್ಚ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

[illegible] ।
[illegible] ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ವ್ಯಾಖ್ಯಾನ (೧೫ ಎಜ್ ಉದ್ದ) ೫ ಸಾಲುಗಳವರೆಗೆ ರೂ. 1-0- ೫ ಸಂತ್ರ ಪ್ರತಿಸಾಲಿಗೆ 0-2-0. ಹೆಚ್ಚಿಂಗದ ಸಾಲು ಎಷ್ಟು ಹೊತ್ತಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು. [illegible] ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾ ಸಮಕ್ಷ ತಿಳಿಸಲ್ಪಡುವದು.

(ಕುಮುಟಾ—ಕಾನಡಾವೃತ್ತ ಸೋಮವಾರ, ತಾರೀಖು ೧೩ ಮಾಹೆ ಸೆಪ್ಟಂಬರ ಸನ್ ೧೯೨೬ ನೇ ಇಸವಿ.)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव— [illegible] किंमत २ रुपये;

रामबाण औषधें ——

सर्दि [illegible],
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

—— पिण्यास रुचिकर,

[illegible] मागवा,

संडु फार्मास्युटिकल वर्क्स लिमिटेड,

मुंबई नं. १३

एजंट— मेसर्स पंडित आणी कंपनी,

तीर्थहळ्ळी.

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. [illegible]

ಕೆರೇಕರ [illegible] ಹಿಂಗಿನ [illegible]

[illegible], ಕುಮುಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಏ.,

ರತ್ನಾಭರಣ ವ್ಯಾಪಾರಿ, ಕುಮುಟಾ.

ಯಾವದೇ ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭;



[illegible] ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. [illegible] ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ !!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುವದು. ಯಾವದೇ ಆಕಾರದ, ನಕ್ಷೆಯ, ನಂಬರಿನ ಗಡಿಯಾರವನು ಉತ್ಕೃಷ್ಟ [illegible] ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ !

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 503 P T Madras**

ಅತ್ಯಲ್ಪವಿನೆ! ಕೇವಲ ಉಚಿತ



ಉಚಿತ ಉಚಿತ ಕೇವಲ ಉಚಿತ

[illegible] ಗಡಿಯಾರವನ್ನು [illegible] ಉಚಿತವಾಗಿ ಕೊಡುತ್ತೇವೆ. [illegible]

ಬರೇ ರೂಪಾಯಿ ೫.

CAPTAIN WATCH CO. P. B 285. MADRAS

ಗಾಂಧೀ ಸ್ಮಾರಕ ನಿಧಿಯಿಂದ ಧನ ಸಹಾಯ ಪ್ರಾರಂಭ
ಪತ್ರಿಕೆ, ಜಯಕರ್ನಾಟಕ (ಸಾಹಿತ್ಯ ಪತ್ರಿಕೆ)

ಸಂಪಾದಕ ಆಲೂರ ವೆಂಕಟರಾಯ ರು.
ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ... ಇತ್ಯಾದಿ ವಿಷಯಗಳು ಇರುವವು, ... ಪ್ರತಿ ಸಂಚಿಕೆಯಲ್ಲಿ ... ಇರುತ್ತವೆ. ... ೩೦ ಪುಟಗಳು ವರ್ಗಣಿ ರೂ ೫-೮-೦ ... ಜಯಕರ್ನಾಟಕ, ಧಾರವಾಡ.

ರೋಗದಿಂದ ನರಳಬೇಡಿರಿ.

... ಎಲ್ಲ ತರದ ಜ್ವರ, ಸ್ವರಗಳ್ಳೆ, ಚಳಿಜ್ವರ, ... ಅಗ್ನಿಮಾಂದ್ಯ, ಮಲಬದ್ಧತೆ ... ವಾತ, ತಲೆಸಡತ, ... ರೋಗ, ... ಗಜಕರ್ಣಗಳಿಗೆ ... ಔಷಧ ... ಆಗುವದು

... ನಮ್ಮಲ್ಲಿ ... ಬೇರೆ ದೇಶದಿಂದ ತರಿಸಿಕೊಡುತ್ತೇವೆ.
ಎಸ್ ಎಲ್ ಫಾಟಕ್ಸ ನಂತ ಬ್ರದರ್ಸ.
ಸಿರಸಿ

ರಾಗದ ಪೆಟ್ಟಿಗೆಗಳು
ನಾಟಕ ಸಾಮಾನು:
ತಬಲೆ, ಡಕ್ಕೆ ವಗೈರ



... ಪೆಟ್ಟಿಗೆ ... ರೂ ...
... ಕಟಲಾಗ್ ಉಚಿತ ಕೆಂ. ೧೩ ಆಣೆ
... ಬರೆಯುವದು
ಗೋಪಾಳ ಕಾರಿರಾಮ ಮತ್ತು ಕಂಪನಿ
ನಂ ೩೮೬, ವಿಠ್ಠಲವಾಡಿ ಎದುರಿಗ
ಕಾಳಬಾದೇವಿ ರೋಡ,
ಮುಂಬಯಿ

ಟಿ. ಎನ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರಸಿ ಕುಮಟಾ ಹೊನ್ನಾವರ ಭಟ್ಕಳ (೩) ಕುಮಟಾ ಶಿರಸಿ- ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ರಸ್ತೆಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ
ಪ್ರಯಾಣಿಕರಿಗೆ ... ವ್ಯವಸ್ಥೆ ಮಾಡಿದೆ
ಹೆಚ್ಚಿನ ಮಾಹಿತಿಯನ್ನು ಆಫಿಸಿನಲ್ಲಿ ತಿಳಿದುಕೊಳ್ಳಬಹುದು

M. Manjappa
PROPRIETOR

ಆಶ್ಚರ್ಯ ! ಅತ್ಯದ್ಭುತ !!

ಜೀವನಾಧಾರ

ಅನೇಕ ವರ್ಷಗಳಿಂದ ... ಕಂಡುಹಿಡಿದ ಸಿದ್ಧೌಷಧ

ಎಲಿಕ್ಸರ್ ಆಫ್ ಲೈಫ್

... ಅಜೀರ್ಣ ತಲೆಸುತ್ತು, ವಾಂತಿ ಅತಿಸಾರ, ಜ್ವರ ... ಒಂದೇ ರಾಮಬಾಣವಿದು
... ಸಿದ್ಧಪಡಿಸಿದೆ
... ರೂ ೧-೦-೦ ... ಸೀಸೆಗೆ ರೂ ೦-೮-೦ ... ಟಪಾಲ ಖರ್ಚು ಬೇರೆ
ಜೀವನ ಫಂಡ ಡಿಪ್ಪೋ, ಮೈಸೂರು
ಬ್ರಾಂಚ - ಜೀವನಾಧಾರ ಡಿಪ್ಪೋ, ಹುಬ್ಬಳ್ಳಿ

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟುಗಳು ಮತ್ತು ಬಂಗಾರದ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕ ಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯೂ ಇದ್ದು ಬಹಳ ... ರುಚಿಕರವಾಗಿಯೂ ಇರುತ್ತದೆ ಈ ಮಧುವ ಸೇವನದಿಂದ ವಾತ ಪಿತ್ತ, ಕಫ ಈ ತ್ರಿದೋಷಗಳ ... ೮೦ ೯೦ ವರ್ಷದ ಮುದುಕರ ... ತರುಣರಂತೆ ... ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯ ... ಪೂರ್ವದಲ್ಲಿ ಅಥವಾ ... ದಿವಸದಲ್ಲಿಗುಣ ... ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ ... ಆದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ... ಹಸಿವೆ ಚನ್ನಾಗಿ ಆಗುತ್ತದೆ ... ಶೌಚ ಸುಖ ಆಗುವದು ... ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ... ೧೦ ದಿವಸ ... ಒಂದು ಬಾಟಲಿಯಿಂದ ಗುಣ ... ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ... ಬಾಟಲಿಯ ಕಿಮ್ಮತ್ತು ೩-೦-೦ ... ಬಾಟಲಿಗಳನ್ನು ಒಂದೇ ... ಕೊಳ್ಳುವರಿಗೆ ... ಕಿಮ್ಮತ್ತು ೧೨-೦-೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು ಟಪಾಲ ಖರ್ಚು ಬೇರೆ ಬೀಳುವದು ... ೧ ಬಾಟ್ಲಿಗೆ ೧—೦ ೩ ಬಾಟ್ಲಿಗೆ ೩—೦—೦ ... ೧೩—೮

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ ಪ್ರೋ ನಿಗಪ್ಪಣ್ಣ, ಶಿ ಬೆಳಗಾಂವ.

ವಿವಿಧ ಸಂಗ್ರಹ.

ಕಲಿಯುಗದ ಶಿಬಿ.

ತ್ರಿವೇಣಕೋರದ ಸುದ್ದಿಗಾರರೊಬ್ಬರು ಮದ್ರಾಸ್ಮೇಲಿಗೆ ಪತ್ರ ಬರೆದು ತಿಳಿಸುವದೇನಂದರೆ:— ತ್ರಿವೇಣಕೋರದ ಕರೂರ ಗ್ರಾಮದಲ್ಲಿ ಕೆಲ ದಿನಗಳ ಹಿಂದೆ ಒಂದು ಆನೆಯು ಉನ್ಮತ್ತವಾಗಿ ದೆಚ್ಚಿತ್ತು. ಮಾವುತನಾದ ನಾರಾಯಣ ನಾಯ್ಯರನು ಆನೆಯನ್ನು ನಿಯಂತ್ರಿಸಲು ಶಕ್ತಿಮೀರಿ ಪರಿಶ್ರಮ ಮಾಡಿದನು. ಎಲ್ಲವೂ ನಿರರ್ಥಕವಾಯಿತು. ಮದ್ದಾನೆಯು ಮಾವುತನಿಗೆ ನೆಲಕ್ಕುರುಳಿ ಒಡಿತು, ಮಾವುತನು ಜರ್ಜರಿತನಾದರೂ ಸುದೈವದಿಂದ ಜೀವದಿಂದಿದ್ದನು. ಆತನಿಗೆ ಕರ್ತಾಲಿಯೊಳಗಿನ ಚಿಕಿತ್ಸಾಲಯಕ್ಕೆ ಒಯ್ದರು. ರಕ್ತವು ಹೇರಳವಾಗಿ ಸುರಿಯುತ್ತಿತ್ತು. ಘಾಯದಲ್ಲಿ ಜೀವಂತ ಮನುಷ್ಯನ ಮಾಂಸವನ್ನು ಹಾಕಿ, ಹೊಲಿದಗೆ ನಾಯ್ಯರನು ಬದುಕುವ ಆಶೆ ಇದೆಂದು ಸರ್ಜನರ ಅಭಿಪ್ರಾಯವಾಗಿ ' ರಕ ಮಾಂಸವನ್ನು ಅವರು ಬೇಡಿದರು. ಈ ಸುದ್ದಿಯು ಇಡೀ ಹಳ್ಳಿಗಳಲ್ಲಿ ವಿದ್ಯುದ್ವೇಗದಿಂದ ಹಬ್ಬಿತು. ಆದರೆ ಮೈಮೇಲಿನ ಮಾಂಸ ತೆಗೆದುಕೊಡುವವರ್ಯಾರು ? ನೆರೆಯ ದನವಳ್ಳಿ ಗ್ರಾಮದಲ್ಲಿ ಸುದ್ದಿ ಹಬ್ಬಿತು. ಕನ್ನತ ಕೃಷ್ಣ ಅಯ್ಯರ ಎಂಬವರು ಸ್ವಯಂದಿಂದ ಚಿಕಿತ್ಸಾಲಯಕ್ಕೆ ಹೋಗಿ ತಮ್ಮ ಮಾಂಸವನ್ನು ಕೊಡುತ್ತೇವೆಂದರು. ಸರ್ಜನರು ಸಂತೋಷದಿಂದ ಅಯ್ಯರಂಕಾಣಿಕೆಯನ್ನು ಅಂಗೀಕರಿಸಿ, ಕಾಲ್ತೊಡೆಯ ಹಿಂಬದಿಯಿಂದ ಹಿಂದು ಮಾಂಸದ ತುಂಡನ್ನು ತೆಗೆದು ನಾಯ್ಯರರ ಚಿಕಿತ್ಸೆ ಮಾಡಿದರು. ಸ್ವತಃ ಕೃಷ್ಣ ಅಯ್ಯರರು ಒಂದು ತಿಂಗಳ ವರೆಗೆ ಆಸ್ಪತ್ರಿಯಲ್ಲೇ ಚಿಕಿತ್ಸೆಕೊಂಡುತ್ತಿದ್ದರು. ಹೀಗೆ ಕೃಷ್ಣ ಅಯ್ಯರರು ನಾರಾಯಣ ನಾಯ್ಯರನನ್ನು ಬದುಕಿಸಿದ ಶ್ರೇಯಸ್ಸನ್ನು ಪಡೆದರು. ಕೃಷ್ಣ ಅಯ್ಯರರು ಅಸಹ ಯೋಗಿಗಳು; ಅಸಹ ಯೋಗದಿಂದ ಅವರ ಜೀವನ ಕ್ರಮವೇ ಸ್ಥಿತ್ಯಂತರ ಹೊಂದಿರುವದು. ಮೇಲೆ ಶಿವಿ ಧಕ್ತರು ಶಿಬಿಚಕ್ರವರ್ತಿಯಂಥ ತ್ಯಾಗಿಗಳಿಗೆ ಪೋಷಿಸುವ ಅಸಹ ಯೋಗವು ಭರತ ಭೂಮಿಯನ್ನು ಉದ್ಧರಿಸಲಿಕ್ಕಿಲ್ಲೇನು ?

* * *

ಬ್ರಹ್ಮ ಸೂತ್ರದ ಒಂದು ಕಥೆ.

ತ್ರಿಚನಾಪಳ್ಳಿ ಜಿಲ್ಲೆಯ ಕದಂಬರಾಯಪಟ್ಟಿಯೊಳಗಿನ ಶ್ರೀ ಅರವ ಮುಥು ನಾಯುಡುರವರು ತಮ್ಮ ಅಜ್ಜಿಯು ಹೇಳಿದ ಬ್ರಹ್ಮ ಸೂತ್ರದ ಕಥೆಯನ್ನೊಂದು ಪ್ರಕಟಿಸಿರುವರು. ಇದು ಬೋಧಪ್ರದವಿದೆ. ಬ್ರಹ್ಮ ದೇವರಿಗೆ ಒಬ್ಬಳೇ ಮಗಳಿದ್ದಳು. ಬ್ರಹ್ಮ ದೇವರು ಅವಳ ಜಾತಕವನ್ನು ನೋಡಿ ಬಹಳ ವ್ಯಸನ ಪಟ್ಟರು. ಅವಳಿಗೆ ವೈಧವ್ಯ ಯೋಗವಿತ್ತು. ಮದುವೆಯಾದ ಕೆಲವು ಕಾಲದಲ್ಲಿಯೇ ಅವಳ ಗಂಡನು ತೀರಿಕೊಳ್ಳಬೇಕಾಗಿತ್ತಂತೆ ! ಈ ಸಂಗತಿಯನ್ನು ಬ್ರಹ್ಮ ದೇವರು ಯಾರಿಗೂ ಹೇಳಲಿಲ್ಲ. ರೀತಿಯಂತೆ ಮದುವೆಯ ಸಮಾರಂಭವನ್ನು ಬ್ರಹ್ಮ ದೇವರು ಸಡಗರದಿಂದ ನೆರವೇರಿಸಿದರು. ವಿಧಿಯಂತೆ ಹುಡುಗಿಗೆ ವೈಧವ್ಯವು ಪ್ರಾಪ್ತವಾಯಿತು. ಅವಳು ತನ್ನ ತಂದೆಯ ಬಳಿಗೆ ಬಂದು ಮೃತ ಗಂಡನನ್ನು ಪುನರುಜ್ಜೀವನ ಮಾಡಲು ಬಹಳವಾಗಿ ಹೇಳಿಕೊಂಡಳು. ಹೀಗೆ ತಮ್ಮ ಮಗಳಿಗೆ ಉಪಕಾರ ಮಾಡಿದರೆ, ಭೂಮಂಡಲದೊಳಗಿನ ಸಮಸ್ತ ವಿಧವೆಯರಿಗೂ ಇದೇ ಪ್ರಕಾರ ಮಾಡಬೇಕಾದೀತೆಂದು ಬ್ರಹ್ಮ ದೇವರು ಎಣಿಸಿದರು. ಮಗಳಿಗೊಬ್ಬಳಿಗೇ ಪಕ್ಷಪಾತಮಾಡಿ ಉಳಿದವರಿಗೆ ನಿರಾಕರಿಸಿದರೆ ಪಕ್ಷಪಾತಿಯೆಂದು ಲೋಕಾಪವಾದವಾಗುವದೆಂದೂ ಅವರು ಎಣಿಸಿದರು. ಆದರಿಂದ ಅಳಿಯನಿಗೆ ಪ್ರಾಣದಾನ ಮಾಡದೆ ಹುಡುಗಿಗೆ ಕೈರಾಟೆಯನ್ನು ಕೊಟ್ಟು ಅದರ ಮೇಲೆ ನೂತು ಕಾಲಹರಣ ಮಾಡಲು ಆಜ್ಞಾಪಿಸಿದರು. ಹುಡುಗಿಯು ನೂಲ ಲಾರಂಭಿಸಿದಳು. ಆದರೆ ಅವಳಿಗೆ ಮೊದ ಮೊದಲು

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು !

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ್ಯ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ ' ಕೂದಲನ್ನ ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು ?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ. ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ತಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿ

ಬಾಟ್ಲಿ ೧ಕ್ಕೆ ರೂ		೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨-೧೦—೦
ಅಂಚೆವೆಚ್ಚ	,,	೦-೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

— ೦ —

½ ಔನ್ಸಿಗೆ ರೂ.		೨—೦—೦
¼ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦-೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!! "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಅಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY**

ಬಹಳ ಕಠಿಣವೆನಿಸಿತು. ಪುನಃ ಪುನಃ ನೂಲು ಹರಿದು ಹೋಗುತ್ತಿತ್ತು. ಅವಳು ಶಾಂತ ಚಿತ್ತದಿಂದ ಅದನ್ನು ಕೂಡಿಸಿ ನೂಲುತ್ತಿದ್ದಳು. ಒಮ್ಮೊಮ್ಮೆ ಕೈರಾಟೆಯು ಬಹಳ ಒಜ್ಜೆಯಾಗುತ್ತಿತ್ತು. ಸರಿಯಾಗಿ ತಿರುಗುತ್ತಿದ್ದಿಲ್ಲ. ಆಗ ಅವಳು ಎಣ್ಣೆ ಹಾಕುತ್ತಿದ್ದಳು. ಆದರೆ, ಪ್ರಯತ್ನದಿಂದಲೂ, ಶಾಂತವೃತ್ತಿಯಿಂದಲೂ ಅವಳು ಈ ವಿದ್ಯೆಯನ್ನು ಸಾಧಿಸಿದಳು. ಬಲವಾದ ಹಾಗೂ ಸೂಕ್ಷ್ಮವಾದ ನೂಲನ್ನು ಅವಳು ನೂಲಲಾರಂಭಿಸಿದಳು. ತನ್ನ ಕೈರಾಟೆಯನ್ನು ನೋಡಿ ಅವಳಿಗೆ ಆನಂದವಾಗುತ್ತಿತ್ತು. ಮತ್ತು ಕೈರಾಟೆಯ ಕೆಲಸದ ಮೂಲಕ ತನಗುಂಟಾದ ಆನಂದವನ್ನು ಅವಳು ಮರೆಯಳು. ಈಗ ಅವಳಿಗೆ ದುಃಖದ ಬಾಧೆಯು ತಟ್ಟಲಿಲ್ಲ. ಇಡೀ ಜಗತ್ತೆಲ್ಲ ಅವಳಿಗೆ ಆನಂದಮಯವಾಯಿತು. ಈ ಪ್ರಕಾರ ಭೂಮಂಡಲದ ಮೇಲಿನ ಮೊದಲನೇ ವಿಧವೆಯಾದ ಬ್ರಹ್ಮದೇವರ ಮಗಳು ಪ್ರಾರ್ಥನೆ ಮಾಡುತ್ತ ಆಯುಷ್ಯವನ್ನು ಕಳೆದಳು. ದೇಹಾವಸಾನ ಹೊಂದಿ ಸ್ವರ್ಗ ಪ್ರಾಪ್ತಿಯನ್ನು ಅನುಭವಿಸಿದಳು. ಬ್ರಹ್ಮದೇವರ ಮಗಳು ನೂಲುವದರಿಂದ ಸ್ವರ್ಗಪ್ರಾಪ್ತಿಯಾದುದರಿಂದ ಬ್ರಹ್ಮ[illegible] ಕೈರಾಟೆಯು ಅರವ[illegible] ಮಗ್ಗಗಳಿಗೆ ಹೇಳುತ್ತಿದ್ದ[illegible] ಈ ಕಥೆಯಿಂದ [illegible] ಸಮಾಜದಲ್ಲಿಯೂ ಕೈರಾಟೆಗೆ ಎಷ್ಟು ಮಹತ್ವವಿತ್ತೆಂದು ಸ್ಪಷ್ಟವಾಗುತ್ತದೆ. ಈಗಿನ ಕಾಲದ ಇಸಾಪ ನೀತಿಕಥೆಗಳಿಗಿಂತ ಈ ಕಥೆಯಲ್ಲಿ ವೇದಾಂತವೂ ವ್ಯವಹಾರವೂ ಎಷ್ಟು ತುಂಬಿ ತುಳುಕುತ್ತದೆ; ನೋಡಿ!

* * *

ಪ್ರಾಚೀನ ಸ್ತ್ರೀಯರ ಗೃಹಿಣೀ ಶಿಕ್ಷಣ.

ಅಥರ್ವ ವೇದದಲ್ಲಿ ೧೪ ನೇ ಸರ್ಗದ ೨ ನೇ ಅಧ್ಯಾಯದ ೫೧ ನೇ ಶ್ಲೋಕವು ಅತ್ಯಂತ ಮಹತ್ವದ್ದಿದೆ. ಪುರಾತನ ಕಾಲದ ಸನಾತನ ಸ್ತ್ರೀ ಶಿಕ್ಷಣದ ಸ್ವರೂಪವು ಅದರೊಳಗೆ ಪ್ರತಿಬಿಂಬಿತವಾಗಿದೆ. ಮದುವೆಯ ದಿನ ಮದುಮಗನು ಮದುಮಗಳು ಸ್ವತಃ ಕೈಯಿಂದ ನೂತು ನೆಯ್ದು ತಯಾರಿಸಿದ ಉಡುಪನ್ನೇ ಧರಿಸಬೇಕಾಗಿತ್ತು. ಈ ಉಡುಪಿನ ಮೇಲೆ ಚಿತ್ರವಿಚಿತ್ರವಾದ ಅಂಚುಗಳೂ, ಪಟ್ಟೆಗಳೂ ಇರುತ್ತಿದ್ದವು! ಇದರ ಅರ್ಥವೇನು? ಮದುವೆಗೆ ಮೊದಲೇ [illegible] ನೂಲು ನೂತು ನೆಯ್ಯುವ [illegible] ಕಲಿಯುತ್ತಿದ್ದಳು, ಇಲ್ಲದಿದ್ದರೆ ಮದುವೆಯ ಸಮಯ ಪತಿ ಸ್ವಾಮಿಗೆ ಚಿತ್ರವಿಚಿತ್ರವಾದ, ನಯನ ಮನೋಹರವಾದ ಉಡುಪಿನ ಕಾಣಿಕೆಯನ್ನು ಕೊಡುವ ಬಗೆ ಹೇಗೆ? ಈ ಪ್ರಕಾರ ಉಡುಪನ್ನು ತಯಾರಿಸಲು ಅವಶ್ಯವಿರುವ ಸಮಸ್ತ ಕೆಲಸಗಳನ್ನು ಅವಳು ಸ್ವತಃ ಮಾಡಬೇಕಾದ್ದರಿಂದ ಕಾರ್ಯಕಷ್ಟದ ಶಿಕ್ಷಣವು ಗೃಹಿಣಿ ಅಧಿಕಾರದ ಜೊತೆಯಲ್ಲೇ ಪೂರ್ವ ತಯಾರಿಯಾಗುತ್ತಿತ್ತು. ಈಗಿನ ಸ್ತ್ರೀಶಿಕ್ಷಣವಾದರೋ ಕಾರ್ಯಕಷ್ಟವೆಂಬುದು ಕೇಳಬೇಡಿ ಕಾರ್ಯಕಷ್ಟವು ನಿಂದಾಸ್ಪದವಾಗಿದೆ. ಗೃಹೋಪಯೋಗಿ ಉಡುಪು ಮುಂತಾದ ಸಾಮಗ್ರಿಗಳನ್ನು ಮನೆಯಲ್ಲಿ ತಯಾರಿಸುವದಕ್ಕಿಂತ ಕೊಂಡುಕೊಳ್ಳುವದೇ ಹೆಚ್ಚು ದೊಡ್ಡಸ್ತಿಕೆಯೆಂದು ಈಗ ಎಣಿಸಲ್ಪಡುತ್ತದೆ. ಕಸೂತಿ ಮುಂತಾದ ನಿರುಪಯೋಗಿ ಹಣ ಹಾಳಿನ ನಿರರ್ಥಕ ಸಾಮಾನುಗಳನ್ನು ತಯಾರಿಸುವದು ಹೊಸ ಸುಧಾರಣೆಯಾಗಿದೆ. [illegible] ಮಾಡಿ ತನ್ನ ಗೃಹ ಕೆಲಸಗಳಲ್ಲಿ ನೆರವಾಗುವವರಂತೂ ಇಲ್ಲವೇ ಇಲ್ಲ. ಅದರ ಬದಲು ಬಿರ್ಕಿನ ಕಸೂತಿಯು ಸುಧಾರಿಸಿದ ಗೃಹಗಳಲ್ಲಿ ಪ್ರವೇಶಗೊಂಡಿದೆ. ಅದರಿಂದಲೇ ಕ್ರಮವಾಗಿ ಬಡತನವು ಈಗ ಬಡಬೀಳುತ್ತ ನಡೆದಿದೆ, ಗೃಹ ಸ್ವಾಮಿನಿಯಾದ ಗೃಹಿಣಿಯು ದಿಕ್ಕುತಪ್ಪಿ ಮಾರ್ಗಕ್ರಮಣ ಮಾಡುತ್ತಲಿರಲು ಗೃಹದ ಪ್ರಪಂಚವು ಸುಖದಿಂದಲೂ ಶಾಂತಿಯು ದಿನದಲೂ ಸಾಗುವ ಬಗೆ ಹೇಗೆ?

* * *

ಪ್ರಾಯದ ಮುದುಕ.

ಬಿಕಾನೇರದಿಂದ ೨೪ ಮೈಲು ದೂರ ಘೂಸನ್ಸರ ಎಂಬ ಹೆಸರಿನ ಗ್ರಾಮವಿದೆ. ಅಲ್ಲಿ ಕಾನು ಎಂಬ ಹೆಸರಿನ ಜಾಟ ಜಾತಿಯವನು ಇರುತ್ತಾನೆ. ಅವನಿಗೆ ೧೧೨ ವರ್ಷ ವಯಸ್ಸು! ಆತನು ಬಿಕಾನೇರಿಗೂ, ನೆರೆಹೊರೆಯ ಗ್ರಾಮಗಳಿಗೂ ಸಹಜವಾಗಿ ಕಾಲುದಾರಿಯಿಂದ ಹೋಗಿ ಬರುತ್ತಾನೆ. ಆತನ ಹಲ್ಲುಗಳು ಗಟ್ಟಿಯಾಗಿವೆ, ಥಳಥಳಿಸುತ್ತವೆ, ಗಟ್ಟಿಯಾದ ಆಹಾರ ಸಾಮಗ್ರಿಗಳನ್ನು ಆತನು ಜಗಿದು ತಿನ್ನಬಲ್ಲನು. ಎರಡು ವರ್ಷಗಳ ಹಿಂದೆ ಆತನ ಕೂದಲು ಸಂಪೂರ್ಣವಾಗಿ ಬೆಳ್ಳಗಾಗಿತ್ತು. ಈಗ ಅವು ಪುನಃ ಕಪ್ಪು ಬಣ್ಣದ್ದಾಗುತ್ತ ನಡೆದವೆ. ಬಿಕಾನೇರದ ಮಹಾರಾಜರಿಗೆ ಭೆಟ್ಟಿಯಾಗಬೇಕಾಗಿ ಈತನು ಬಹುಕಾಲದಿಂದ ಆತುರಪಡುತ್ತಿದ್ದನು. ಆದರೆ, ಕಳೆದ ಆಗಸ್ಟ ತಿಂಗಳ ೬ ನೇ ತಾರೀಖಿನ ವರೆಗೆ ಆತನ ಆಶೆಯು ಫಲಿಸಲಿಲ್ಲ. ೬ ನೇ ತಾರೀಖಿಗೆ ಕಾನೂನು ಗಜನೇರ ಸರೋವರದ ಬಳಿಯಲ್ಲಿರುವ [illegible] ಗ್ರಾಮಕ್ಕೆ ಹೋಗಿದ್ದನು. ಅಲ್ಲಿ ಆತನು ಬೇಟೆಯಾಡುವ ಮಹಾಂತರಿಗೆ ಭೆಟ್ಟಿಯಾದನು. ಅನಿರೀಕ್ಷಿತವಾಗಿ ಬಿಕಾನೇರದ ಮಹಾರಾಜರೂ ಅಲ್ಲಿಯೇ ಬಂದಿದ್ದರು. ಮುದುಕರು ಮಹಾರಾಜರಿಗೆ ಕಾನೂನ ಪರಿಚಯ ಮಾಡಿಕೊಟ್ಟರು. ಕಾನೂನಿಗೆ ನೋಡಿ, ಮಹಾರಾಜರಿಗೆ ಸಂತೋಷವಾಯಿತು. ತಮ್ಮ ಸಂಸ್ಥಾನದಲ್ಲಿ ಇಷ್ಟು ಆಯುಷ್ಯವಂತ ಪುರುಷನಿದ್ದಾನೆಂದು ತಿಳಿದು ಅವರಿಗೆ ಅಭಿಮಾನವೆನಿಸಿತು. ಮಹಾರಾಜರವರು ಆತನಿಗೆ ಗಜನೇರಿಗೆ ತಮ್ಮೊಡನೆ ಒಯ್ದು, ೭ ದಿನಗಳ ವರೆಗೆ ಆತಿಥ್ಯ ನಡೆಸಿದರು. ಬಳಿಕ ಆತನಿಗೆ ಚಿನ್ನದ ಬಳೆ, ರುಮಾಲು ಮತ್ತು ವರ್ಷಕ್ಕೊಂದು ರೂಪಾಯಿಯಂತೆ ೧೧೨ ರೂಪಾಯಿಗಳನ್ನು ಕಾಣಿಕೆಯನ್ನಿತ್ತು ಸತ್ಕರಿಸಿದರು. ಆ ಬಳಿಕ, [illegible]ರ ಅರಮನೆಗೆ ಅವನನ್ನು ಒಯ್ದು, ಬಿಕಾನೇರ ಪಟ್ಟಣದಲ್ಲೆಲ್ಲ ಮೆರೆಸಿದರು. ಮಹಾರಾಜಾ ಶ್ರೀ | ಸುರತಸಿಂಗಜರವರ ಕಾಲದ ಆಗಾಯ್ತು ಪಟ್ಟವನ್ನೇರಿದ ನಾಲ್ಕು ಮಹಾರಾಜರ ಇತಿಹಾಸವನ್ನು ಕಾನೂನು ಬಲ್ಲನು. ಕಾನೂನ ಆಯುಷ್ಯವನ್ನು, ಮಹಾರಾಜರ ಅಭಿಮಾನವನ್ನೂ ಪ್ರಶಂಸಾಯುಕ್ತವಾದ ಸನ್ಮಾನವನ್ನು ಕಂಡು ಸಂತೋಷವಾಗುತ್ತದೆ.

* * *

ಜಿತಾತ್ಮರಾದ ಯೋಗಿರಾಜ ದೇವರವರು

ರಾ| ಮದನಮೋಹನ ಬಿ. ಎ. ಎಲ್. ಎಲ್. ಬಿ. ಯವರು ಭರತಪುರ ಸಂಸ್ಥಾನದ ಘೌರಿ ಗ್ರಾಮಕ್ಕೆ ಹೋಗಿದ್ದರು. ಅಲ್ಲಿ ನೋಡಿದ, ಯೋಗಿರಾಜ ದೇವರವರ ಆತ್ಮ ಪ್ರಭುತ್ವವನ್ನು ಅವರು ಪ್ರಕಟಿಸಿರುವರು, [illegible]ದಲ್ಲಿ ಅಖಿಲ ಭಾರತೀಯ "ದೇಸಾಯಿ ಹಾಗು ಔದ್ಯೋಗಿಕ ಸಂಸ್ಥೆಯ ಮ್ಯಾನೇಜರರವರು ಮದನಮೋಹನರವರಿಗೆ ನಿಮಂತ್ರಿಸಿದ್ದರು. ಈ ಗ್ರಾಮದ ಬಳಿ ಕಾಡು ಬೆಳೆದಿದೆ. ಕಾಡಿನಲ್ಲಿ ಒಂದು ಗುಹೆಯಿದೆ. ಅಲ್ಲಿ ಒಬ್ಬ ಸಾಧುಗಳಿರುವರು. ರಾ| ಮದನಮೋಹನರವರು ಹೋದಾಗ ಅವರು ಸಾಧಾರಣ ಉಡುಪನ್ನು ಧರಿಸಿದ್ದರು. ಸಾಧುಗಳ ತಲೆಯು ಬಹಳ ದೊಡ್ಡದು; ಕೇವಲವಾಗಿ ದೊಡ್ಡದಿತ್ತು. ದೇಹವು ಸ್ವಲ್ಪವು ಕೃಶವಿತ್ತು. ಪರಮಾತ್ಮನ ಅಸ್ತಿತ್ವದ ಕುರಿತು, ಮದನಮೋಹನರವರಿಗೂ, ಸಾಧುಗಳಿಗೂ ಸಂಭಾಷಣವಾಯಿತು. ಸಾಧುಗಳು ಪರಮಾತ್ಮನ ಅಸ್ತಿತ್ವವನ್ನು ಬುದ್ಧಿವಾದಪೂರ್ವಕವಾಗಿಯೂ, ನಿಶ್ಚಯಪೂರ್ವಕವಾಗಿಯೂ ಚರ್ಚಿಸಿ, ಮದನಮೋಹನರವರಿಗೆ ಮನಗಾಣಿಸಿದರಂತೆ! ನಿರುಪಾಯವಾಗಿ ಮದನಮೋಹನರವರು ನಮ್ಮ ಮೇಲೊಂದು ಶಕ್ತಿಯಿದೆಯೆಂದು ಒಪ್ಪಬೇಕಾಯಿತಂತೆ. ಆ ಶಕ್ತಿಯೇ ಪರಮಾತ್ಮನೆಂದು ಸಾಧುಗಳು ಸಂಬೋಧಿಸಿದರು. ಸಾಧುಗಳು, ಸಿದ್ಧಾಂತಿಗಳೆಂದು ಯಾರೂ ತಿಳಿಯಬಾರದು. ಅವರೊಡನೆ ನಡೆದ ಸಂಭಾಷಣದಿಂದ ವ್ಯವಹಾರಿಕರೆಂದು ರಾ| ಮದನಮೋಹನರವರು ಬರೆಯುತ್ತಾರೆ. ಪರಮಾತ್ಮನ ವಿಷಯದ ಚರ್ಚೆಯಾದ ಬಳಿಕ, ಈ ಕಾಡಿನಲ್ಲಿ ತಾವು ಉಳಕೊಳ್ಳುವ ಉದ್ದೇಶವೇನೆಂದು ರಾ| ಮದನಮೋಹನರವರು ಕೇಳಲು, "ನಾನೊಂದು ಧ್ಯೇಯಸಾಧನೆಗಾಗಿ ಇಲ್ಲಿದ್ದೇನೆ, ನನ್ನ ಉದ್ದೇಶದ ಕಲ್ಪನೆಯು ನಿಮಗೆ ಬರಲಾರದು," ಎಂದು ಸಾಧುಗಳು ಉತ್ತರವನ್ನಿತ್ತರು. ಆ ಉದ್ದೇಶವನ್ನು ಕೇಳಲು ರಾ| ಮದನಮೋಹನರವರು ಒತ್ತಾಯಮಾಡಿದರು. ಆಗ ಸಾಧುಗಳು ಹೇಳಿದ್ದೇನೆಂದರೆ, "ಈ ಪ್ರಪಂಚದಲ್ಲಿ ಸಾವು ನೋವು, ನಾಶವಿದೆ; ರೋಗವಿದೆ; ಮುಪ್ಪಿದೆ. [illegible] ಅನೇಕ ಪ್ರಕಾರದ ಉಪಾಧಿಗಳಿವೆ. ಅವನ್ನು ಪರಿಹರಿಸಲು ಶ್ರೀಕೃಷ್ಣ ರಾಮ[illegible] ವೈದ್ಯರಾಜರು ಯತ್ನ ಮಾಡಿದರು. ಆದರಿಂದ ಅವನ್ನು ಪರಿಹರಿಸುವ ಕಾರ್ಯವು ನೆರವೇರಲಿಲ್ಲ. ಈ ಉಪಾಧಿಗಳನ್ನು ಪರಿಹರಿಸಲಿಕ್ಕಾಗಿ, ನಾನು ಯತ್ನಮಾಡುತ್ತೇನೆ. ಮತ್ತೂ ಒಂದು ಸಾಧ್ಯವಿದೆ. ದೇಹವನ್ನು ನಾಶಪಡಿಸಬೇಕಾದರೆ, ಉಡಿಗೆ ತೊಡಿಗೆಗಳನ್ನು ಬದಲಿಸುವಂತೆ ಅನಾಯಾಸವಾಗಿಯೂ, ಸುಲಭವಾಗಿಯೂ ಬದಲಿಸಬೇಕಾಗಿ ನನ್ನ ಕಾಂಕ್ಷೆಯಿದೆ. ಸಾವು ಬಂದ ನಾನು ಸಾಯುವಾಗದೆಂದೂ ನನ್ನ ಇಚ್ಛೆ ಇದ್ದಾಗ ನನಗೆ ದೇಹತ್ಯಾಗ ಮಾಡಬರಬೇಕೆಂದೂ ನನ್ನ ಹೊಸನೆಯಿದೆ."

* * *

ಯೋಗಿರಾಜದೇವರವರ ಆತ್ಮಪ್ರಭಾವ ನಿರೂಪಣ.

" ಈ ಬಾಳ್ವೆಯಲ್ಲಿ ನಿಮಗೇನು ಸುಖವಿದೆಂದು ನನಗೆ ತಿಳಿಯದ ಮಾತು " ಎಂದು ರಾ| ಮದನಮೋಹನರವರು ನುಡಿಯಲು ಜಿತಾತ್ಮರಾದ ಯೋಗಿರಾಜ ದೇವರವರು ಉದ್ಗರಿಸಿದ್ದೇನೆಂದರೆ:— " ಸುಖವೇ! ನಿಮಗೆ ಸಿಕ್ಕಂತೆಯೇ ನನಗೂ ಸುಖ ದೊರೆಯುತ್ತದೆ. ನಿಮ್ಮ ಬಾಯಲ್ಲಿ ಹಿಂದಿಷ್ಟು ಸಕ್ಕರೆ ಹಾಕಿದರೆ, ನಿಮಗೆ ಸವಿರುಚಿ ಹುಟ್ಟುವ ಬಗೆ ಹೇಗೆ?

" ನನ್ನ ನಾಲಿಗೆಯಿಂದ ರುಚಿ ಸಿಗುತ್ತದೆ. "

" ನಿಮ್ಮ ಪ್ರಾಣೋತ್ಕ್ರಮಣವಾದಬಳಿಕ, ನಿಮಗೆ ರುಚಿಯಾಗುತ್ತದೇನು ? ನಿಮ್ಮ ನಾಲಿಗೆಯು ಅಲ್ಲೇ ಇರುತ್ತದೆ. "

" ಇಲ್ಲ; ರುಚಿ ಸಿಗುವದಿಲ್ಲ. "

" ರುಚಿಯಾಗಲಿ, ಸುಖವಾಗಲಿ ಇಂದ್ರಿಯಗಳಿಂದ ಲಭಿಸುವದಿಲ್ಲ. ಆದರೆ ಅವುಗಳನ್ನು ಉಂಟು ಮಾಡುವವನು ದೇಹಸ್ವಾಮಿಯಾದ ಆತ್ಮನು. "

" ಆತ್ಮನು ಎಲ್ಲಿ ಇರುತ್ತಾನೆ? "

" ಆತ್ಮನು ಸರ್ವವ್ಯಾಪಿಯು; ಆತನು ಅಣುರೇಣುಗಳಲ್ಲಿಯೂ ಇರುತ್ತಾನೆ. ಸೂರ್ಯ-ಚಂದ್ರರಿಗೆ ಆತ್ಮನೇ ಪ್ರಕೃತ ಅವಸ್ಥೆಯನ್ನು ಕೊಟ್ಟಿರುವನು. ಇಡೀ ಜಗತ್ತು ಆತ್ಮನಲ್ಲಿ ಅಡಕವಾಗಿದೆ. ಆತ್ಮಜ್ಞಾನ ಪಡೆಯಿರಿ; ಅಂದರೆ ಇಡೀ ವಿಶ್ವದ ಜ್ಞಾನವು ನಿಮಗಾಗುವದು. ಆತ್ಮನನ್ನು ನಿಯಂತ್ರಿಸಲು ಸಮರ್ಥರಾಗಿರಿ; ಅಂದರೆ ಇಡೀ ಬ್ರಹ್ಮಾಂಡವನ್ನು ಜಯಿಸುವ ಅಧಿಕಾರವು ನಿಮಗೆ ಪ್ರಾಪ್ತವಾಗುವದು. "

" ಈ ಆತ್ಮನನ್ನು ನಿಯಂತ್ರಿಸುವ ಸಾಮರ್ಥ್ಯವು ನಿಮಗೆ ಪ್ರಾಪ್ತವಾಗಿರುವದೆಂದು ನಾವು ಗ್ರಹಿಸಿದರೆ ಸೂರ್ಯಚಂದ್ರರನ್ನು ನಿಯಂತ್ರಿಸಲು ನೀವು ಸಮರ್ಥರಾಗಬೇಕು. "

ಸಾಧುಗಳು ತಲೆದೂಗಿಸಿ ನುಡಿದರು. ನಂತರ:-

" ಅಹುದು, ಅದರೊಳಗೆ ಕಠಿಣವೇನಿಲ್ಲ. ಬೆಳದಿಂಗಳು ಬೀಳುವ ವರೆಗೆ ನೀವು ಇಲ್ಲಿ ಕುಳಕೊಂಡರೆ ಅದು ಹ್ಯಾಗಾಗುತ್ತದೆಂದು ನಾನು ತೋರಿಸುವೆನು. "

ಆಗ ಸಾಯಂಕಾಲವಾಗಿತ್ತು. ಒಂದು ತಾಸಿನ ವರೆಗೆ ಮದನಮೋಹನರವರು ತಮ್ಮ ಜೊತೆಗಾರರೊಡನೆ ಅಲ್ಲಿ ಕುಳಕೊಂಡರು. ಅಷ್ಟರಲ್ಲಿ ಬೆಳದಿಂಗಳು ಬೀಳಹತ್ತಿತು. ಸಾಧುಗಳು ಬೈಲಿನಲ್ಲಿ ಆಸನಸ್ಥರಾದರು. ತಮಗೆ ನೋಡಲು ಸಾಧುಗಳು ಮದನಮೋಹನರವರಿಗೆ ಅಜ್ಞಾಪಿಸಿದರು. " ಬೆಳದಿಂಗಳು ನನ್ನ ಮೈಮೇಲೆ ಬೀಳದು. " ಎಂದು ಸಾಧುಗಳು ನುಡಿದು ಸುಮ್ಮಗಿರುವಷ್ಟರಲ್ಲಿ ಸಾಧುಗಳ ಮೈಮೇಲಿನ ಬೆಳದಿಂಗಳ ಬೆಳಕು ಕುಂದಹತ್ತಿತು. ಐದು ನಿಮಿಷಗಳಲ್ಲಿ ಅವರ ಮೈಮೇಲೆ ಬಿದ್ದ ಬೆಳದಿಂಗಳೆಲ್ಲ ಮಾಯವಾಯಿತು! ಸಾಧುಗಳು ಮರದ ಮರೆಯಲ್ಲಿ ಕುಳಿತುಕೊಂಡಂತೆ ಅವರ ಮೈಮೇಲೆಲ್ಲ ನೆರಳು ಬಿದ್ದಿತ್ತು. ಇದು ಚಂದ್ರನ ಕಿರಣಗಳನ್ನು ನಿಯಂತ್ರಿಸುವದೆಂದು ಸಾಧುಗಳು ನುಡಿದರು.

***

ಯೋಗಿರಾಜರವರ ಆತ್ಮಚಮತ್ಕಾರಗಳು.

ಮಾರನೇ ದಿನ ಮದನಮೋಹನರವರು ತಮ್ಮ ಜೊತೆಗಾರರೊಡನೆ ಬೆಳಗಿನ ೮ ಘಂಟೆಗೆ ಸಾಧುಗಳ ಬಳಿ ಹೋದರು. ಆ ಸಮಯ ಸಾಧುಗಳ ಮುಖಕಮಲವು ಚಿತ್ತಾಕರ್ಷಕವಾಗಿ ತೋರುತ್ತಿತ್ತು. ಮದನಮೋಹನರವರು ಕೆಲಹೊತ್ತಿಗೆ ದಿಟ್ಟಿಸಿ ನೋಡಲು, ಸಾಧುಗಳ ಮೋರೆಯು ಕಳೆಗುಂದಹತ್ತಿತು. ಹೀಗೆ ಕ್ರಮವಾಗಿ ಕಳೆಗುಂದುತ್ತ ನಡೆಯಿತು. ಅಲ್ಪಾವಕಾಶದಲ್ಲಿಯೇ ಅವರ ಇಡೀ ದೇಹವು ಮಾಯವಾಗಿ ಒಂದು ಮಾತ್ರವು ದೃಗ್ಗೋಚರವಾಗುತ್ತಿತ್ತು. ಎರಡು ನಿಮಿಷಗಳು ಕಳೆದವು. ಆ ಬಿಂದುವೂ ಅದೃಶ್ಯವಾಯಿತು. ಮತ್ತು ಮದನಮೋಹನರವರ ಮುಂದೆ ಒಂದು ಕಬಂಧವು ನಿಂತಿತು. ಇದನ್ನು ನೋಡಿ ಮದನಮೋಹನರವರು ಹೆದರಿದರು. ಆದರೆ ಅವರ ಜೊತೆಗಾರರು ಇದಕ್ಕಿಂತಲೂ ವಿಶೇಷ ಚಮತ್ಕಾರಗಳನ್ನು ನೋಡಿದ್ದರು. ಅವರ ಧೈರ್ಯದ ಮೇಲೆ ಮದನಮೋಹನರವರು ಎದೆಗಟ್ಟಿ ಮಾಡಿ ಕುಳಕೊಂಡರು. ಕಬಂಧವು ಕ್ರಮವಾಗಿ ಗಿಡ್ಡವಾಗುತ್ತ ನಡೆಯಿತು. ಅಲ್ಪಾವಕಾಶದಲ್ಲಿಯೇ ಅಶೇಷವಾಯಿತು. ಈ ಅಂತರ್ಧಾನವನ್ನು ನೋಡಿ ಮದನಮೋಹನರವರು ಚಕಿತರಾದರು. ಕೆಲ ನಿಮಿಷಗಳಲ್ಲಿಯೇ ಮದನಮೋಹನರವರ ಮುಂದೆ ಸಾಧುಗಳ ಕಬಂಧವು ಸದೇಹಾದಿ ತೋರಹತ್ತಿತ್ತು. ಹೀಗೆ ಹೋಗುತ್ತ ಕಬಂಧದ ಮೇಲೆ ತಲೆಯೂ ದೃಗ್ಗೋಚರವಾಯಿತು. ಮದನಮೋಹನರವರು ಭಕ್ತಿಭಾವದಿಂದ ಪಾದಗಳಿಗೆ ಎರಗಿದರು. ಸಾಧುಗಳ ಬಳಿಯಲ್ಲಿರುವ ವರೆಗೆ ತಮಗೆ ಯಾವ ಪ್ರಕಾರದ ಚಿಂತೆಯೂ ಬಾಧಿಸಲಿಲ್ಲೆಂದು ಮದನಮೋಹನರವರು ಬರೆಯುತ್ತಾರೆ. ಜಗದುದ್ಧಾರಕನು ಭರತ ಭೂಮಿಯಲ್ಲಿ ಅವತೀರ್ಣನಾಗುವ ತಯಾರಿಯೇನಿದು ?

***

ನಗ್ನ ಸಂಪ್ರದಾಯ.

ನಗ್ನಾವಸ್ಥೆಯು ಕಾಡು ಪದ್ಧತಿಯ ಲಕ್ಷಣವೆಂದು ಲೋಕಾಪವಾದಹೊಂದಿದೆ. ಉಡಿಗೆ ತೊಡಿಗೆಗಳನ್ನು ಧರಿಸುವದು ದೊಡ್ಡ ಸುಧಾರಣೆಯ ಲಕ್ಷಣವಾಗಿದೆ. ತರತರದ ಉಡುಪುಗಳನ್ನು ಧರಿಸಿಕೊಂಡ ಹಾಗೆ ಸುಧಾರಣೆಗೆ ಕಳೆಯೇರುತ್ತದೆ. ಆದರೆ ಸುಧಾರಿಸಿದ ರಾಷ್ಟ್ರವಾದ ಜರ್ಮನಿಯಲ್ಲಿ ನಗ್ನ ಸಾಂಪ್ರದಾಯವು ಉತ್ಸಾಹದಿಂದ ಪುರಸ್ಕರಿಸೋಣಾಗಿದೆ. ಸಾವಿರಾರು ಮಂದಿ ಜರ್ಮನರು ನಗ್ನಾವಸ್ಥೆಯನ್ನೇ [illegible] ರಾಜಧಾನಿಯಾದ ಬರ್ಲಿನಕ್ಕೆ ಹೋದ ಪ್ರೇಕ್ಷಕರೊಬ್ಬರು ಕೆಲವು ಹಕೀಕತನ್ನು ಪ್ರಕಟಿಸಿರುವರು. ಬರ್ಲಿನ ಪಟ್ಟಣದ ಸುತ್ತು ಸರೋವರಗಳೂ ಉದ್ಯಾನಗಳೂ ಇರುವವು. ಅಲ್ಲಿ ಶನಿವಾರ ಯಾ ರವಿವಾರಕ್ಕೆ ನಗ್ನ ಸಂಪ್ರದಾಯದ ಸ್ತ್ರೀ-ಪುರುಷರೂ ಹುಡುಗರೂ ನಗ್ನಾವಸ್ಥೆಯಲ್ಲಿ ಆಡುತ್ತಾರೆ; ಓಡುತ್ತಾರೆ; ವಿಹರಿಸುತ್ತಾರೆ. ಈ ಸಂಪ್ರದಾಯದವರು ಒಂದು ಸಂಘವನ್ನೇರ್ಪಡಿಸಿಕೊಂಡು ಅವರ ಪಿದ್ಯಮಾನ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಾರೆ. ಹಸ್ತಪತ್ರಿಕೆಗಳನ್ನು ಹಂಚಿ ತಮ್ಮ ವಿಚಾರಗಳನ್ನು ಪಸರಿಸುತ್ತಾರೆ. ಉಡಿಗೆ ತೊಡಿಗೆಗಳನ್ನು ಧರಿಸುವದು ಅಸ್ವಾಭಾವಿಕವೆಂದೂ, ದೊಡ್ಡಸ್ತನದ ಒಂದು ಡೌಲೆಂದೂ ಅವರ ಹೇಳಿಕೆ ಇದೆ. ನಗ್ನಾವಸ್ಥೆಯಲ್ಲಿ ನಾಚಿಕೆ ಇಲ್ಲವಾಗಿಯೂ ಈ ಸಂಪ್ರದಾಯದವರು ಪ್ರತಿಪಾದಿಸುತ್ತಾರೆ. ಆರೋಗ್ಯಕ್ಕೂ, ಸೊಬಗಿಗೂ, ನಗ್ನಾವಸ್ಥೆಯಿಂದ ಅನುಕೂಲವಾಗುತ್ತದೆಂದು ಅವರ ಅಭಿಪ್ರಾಯ. ಬರ್ಲಿನದ ವೆಸ್ಟರ್ನ ಹೌಸ್‌ದಲ್ಲಿ ಒಂದು ದೊಡ್ಡ ಸರೋವರವಿದೆ. ಆ ಸರೋವರದ ಬಳಿಯಲ್ಲಿ ನಗ್ನ ಸಂಪ್ರದಾಯದವರು ವಿಶಾಲವಾದ ಸ್ಥಳವನ್ನು ಕೊಂಡು ಭದ್ರವಾದ ಬೇಲಿ ಹಾಕಿರುವರು. ಮತ್ತು ಅಲ್ಲಿ ಪ್ರತಿ ಶನಿವಾರ-ರವಿವಾರಕ್ಕೆ ನಗ್ನ ಸಂಪ್ರದಾಯದವರು ನಗ್ನರಾಗಿ ವಿಹರಿಸುತ್ತಾರೆ. ಈ ಸಂಪ್ರದಾಯಕ್ಕೆ ಸೇರಿದವರಿಗೆ ಮಾತ್ರ ಇಲ್ಲಿ ಪ್ರವೇಶವಿದೆ. ಇತರ ಸಂಪ್ರದಾಯದವರಿಗೆ ಪ್ರೇಕ್ಷಕರಾಗಿ ಹೋಗಗೊಡುವದಿಲ್ಲ. ಸ್ನಾನವನ್ನು ಕುತೂಹಲ ಪ್ರಾಣಿಯು. ಸರೋವರದಲ್ಲಿ ದೋಣಿಬಿಟ್ಟು ಅನೇಕರು ದೋಣಿಗಳಮೇಲಿಂದ ಚಿತ್ತವೃತ್ತಿಯಾಗಿ ನಡೆದ ನಗ್ನಸಂಪ್ರದಾಯಗಳ ವಿಹಾರವನ್ನು ನೋಡುತ್ತಿರುತ್ತಾರೆ. ಬರ್ಲಿನದಲ್ಲಿ ಇದೊಂದು ವಿನೋದ ವಿಷಯವಾಗಿದೆ.

***

ಪಾದ್ರಿಗಳ ಏಕತಂತ್ರೀ ಕಾರಭಾರ.

ನಮ್ಮ ಉತ್ತರ ಕನ್ನಡ ಜಿಲ್ಲೆಯ ಸದಾಶಿವಗಡದೊಳಗಿನ ಕ್ರೈಸ್ತ ಸಂಘದ ಅಧ್ಯಕ್ಷರಾದ ಮಿ| ಎಸ್. ಪಿ. ರೊಡ್ರಿಗಸರವರು ನಮ್ಮ ಜಿಲ್ಲೆಯಲ್ಲಿ ನಡೆಯುವ ಪಾದ್ರಿಗಳ ಧರ್ಮಕಾರ್ಯದ ಸ್ವರೂಪವನ್ನು ಪ್ರಕಟಿಸಿರುವರು. ಪಾದ್ರಿಗಳು ಗೋವೆಯಿಂದ ಬರುತ್ತಾರೆ; ಅವರಿಗೆ ಇಂಗ್ಲೀಷು ಬರುವದಿಲ್ಲ. ಇಂಗ್ಲಿಷ ಕಲಿಸುವ ಪಿದ್ಯಾಲಯವನ್ನೂ ಅವರು ಕೈಕೊಳ್ಳುವದಿಲ್ಲ. ಸಮಾಜವನ್ನು ಆದಷ್ಟರ ಮಟ್ಟಿಗೆ ಅಜ್ಞಾನ ಅಂಧಕಾರದಲ್ಲಿಯೇ ಇಡಲು ಅವರು ಯತ್ನಿಸುತ್ತಿರುತ್ತಾರೆ. ಅಜ್ಞಾನ ಸಾಮ್ರಾಜ್ಯದ ಮೂಲಕ ಕ್ರೈಸ್ತ ಸಮಾಜವನ್ನು ಸ್ವಚ್ಛಂದದಿಂದ ಆಳಲು ಅನುಕೂಲವಾಗುತ್ತದೆ. ಕ್ರೈಸ್ತ ದೇವಾಲಯಗಳ ನಿಧಿಯನ್ನು ವಿನಿಯೋಗಿಸಲು ಮೊದಲು ಅಲ್ಲಲ್ಲಿ ಕಮಿಟಿಗಳಿದ್ದವು. ಕಮಿಟಿಗಳನ್ನೆಲ್ಲ ಪಾದ್ರಿಗಳು ವಿಸರ್ಜಿಸಿ, ಸ್ವಯಂಭೂ ಅಧಿಕಾರಿಗಳಾಗಿರುವರು. ದೇವಾಲಯಗಳ ಹಣದ ಲೆಖ್ಖವನ್ನು ಪಾದ್ರಿಗಳು ಇಡುತ್ತಾರೆ. ಆದರೆ ಆ ಲೆಖ್ಖ ಇಡುವದು ಪೋರ್ತುಗೀಜ ಭಾಷೆಯಲ್ಲಿ; ಪೋರ್ತುಗೀಜ ಭಾಷೆಯು ಇಲ್ಲಿಯ ಕ್ರೈಸ್ತರಿಗೆ ತಿಳಿಯುವದಿಲ್ಲ. ಹಣವನ್ನು ಖರ್ಚ ಮಾಡಬೇಕಾದರೆ, ಜನರ ಆಲೋಚನೆಯನ್ನೂ ಕೇಳುವದಿಲ್ಲ. ಮೇಲೆ ಸಮಾಜದವರ ಕಡೆಯಿಂದ ಕಾಣಿಕೆಗಳನ್ನು ಒತ್ತಾಯದಿಂದ ಪಡೆಕೊಳ್ಳುತ್ತಾರೆ. ಕ್ರೈಸ್ತ ಸಮಾಜದ ಶಿಕ್ಷಣಕಾರ್ಯ ಮಾಡುವದೆಂದರೆ, ಜೀವದ ಸುತ್ತು ಬರುತ್ತದೆ. ಆದರೂ ತೋರಿಕೆಗಾಗಿ ಕೆಲವು ಹಣವನ್ನು ಖರ್ಚಮಾಡಿ ತಮ್ಮ ದೊಡ್ಡಸ್ತಿಕೆಯನ್ನು ಮೆರಿಸುತ್ತಾರೆ. ಈ ಕುರಿತು ಕ್ರೈಸ್ತ ಸಮಾಜವು ಮೇಲಧಿಕಾರಿಗಳಿಗೆ ಬರಕೊಂಡರೆ, ಅದಕ್ಕೆ ಕಿವಿಗೊಡುವವರ್‍ಯಾರೂ ಇಲ್ಲ. ಹೀಗಾಗಿ ನಮ್ಮಲ್ಲಿಯ ಕ್ರೈಸ್ತ ಸಮಾಜವು ಬಹಳವಾಗಿ ದೈನ್ಯಾವಸ್ಥೆಗೆ ಒಂದಿರುವದಾಗಿ ಮಿ| ರೊಡ್ರಿಗ್ಸರವರ ಹೇಳಿಕೆಯಿದೆ. ದೇಶಾಭಿಮಾನದ ಪಾದ್ರಿಗಳಿದ್ದರೆ ಸಮಾಜಕ್ಕಾಗಿ ತನುಮನಧನದಿಂದ ದುಡಿದು ಸಮಾಜವನ್ನು ಉದ್ಧರಿಸುತ್ತಾರಾಗಿಯೂ ಮಿ| ರೊಡ್ರಿಗಸರವರು ಬರೆಯುತ್ತಾರೆ. ದೇಶಾಭಿಮಾನಿಗಳಾದ ಪಾದ್ರಿಗಳಿಂದಲೇ ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತ ಸಮಾಜವು ಸುಸಂಸ್ಕೃತವಾಗಿ ಅಭಿವೃದ್ಧಿಹೊಂದಿತಾಗಿಯೂ, ಅಲ್ಲಿಂದ ಕಾರವಾರಕ್ಕೆ ಬಂದುಳಕೊಂಡ ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತರು, ಗೋವೆಯ ಪಾದ್ರಿಗಳ ಪಕ್ಷಪಾತಿಯಾಗಿ ದುಡಿಯುವದು ಗರ್ಹಣೀಯವೆಂದೂ ಮಿ| ರೊಡ್ರಿಗ್ಸರವರು ಬರೆದಿರುವರು.

***

ಕೈಲಾಸವಾಸಿ ಶ್ರೀ| ವರ್ಧಮಾನಯ್ಯರವರು.

ದಕ್ಷಿಣ ಹಿಂದುಸ್ಥಾನದಲ್ಲೆಲ್ಲ ದಿವಾಂಯರ್ಗಿರಿಯಿಂದ ಖ್ಯಾತಿಗೊಂಡ ಮೈಸೂರಿನ ಶ್ರೀ| ವರ್ಧಮಾನಯ್ಯನವರು ಕಳೆದ ೨೮ ನೇ ತಾರೀಖಿಗೆ ತಮ್ಮ ೭೬ ನೇ ವರುಷದಲ್ಲಿ ಅಕಾಲಿಕವಾಗಿ ನಿಧನಹೊಂದಿದರು. ಶ್ರೀ| ವರ್ಧಮಾನಯ್ಯನವರು ಇಷ್ಟು ಖ್ಯಾತಿ ಪ್ರಾಪ್ತಿಮಾಡ

[೯ ನೇ ಪಾನಿನಮೇಲೆ ಮುಂದುವರಿದಿದೆ.]

ಕಾನಡಾವೃತ್ತ.

ಅಕ್ಷಯ ಸಂ|| ಭಾದ್ರಪದ ಶು|| ೬ ಷಷ್ಟಿ ಸೋಮವಾರ.

ಶುಭಚಿಹ್ನಗಳು.

ವಾದೇ ವಾದೇ ಜಾಯತೇ ತತ್ವಬೋಧಃ

ಐಕ್ಯಮಂಡನದ ಅನುವಾದವನ್ನು ಐಕ್ಯಭಂಗದ ಸಮಯ ನಾವು ಹೂಡಿದ್ದೇವಷ್ಟೇ. ಭಾರತೀಯರ ದುರ್ದೈವದಿಂದ, ಲಜಪತರಾಯರ ಐಕ್ಯಭಂಗವೂ, ಮೋತಿಲಾಲ-ಲಜಪತರಾಯರೊಳಗಿನ ವಾಗ್ವಾದವೂ ಪುನಃ ರಾಷ್ಟ್ರಪುರುಷನ ಉದ್ಧಾರಕ್ಕಾಗಿಯೇ ನಡೆದಿರುವದೆಂದು ನಾವು ಪೇಳದೇ ಹೇಳಿದ್ದೆವು. ಪಂಡಿತ ಮೋತಿಲಾಲರಂಥ ತ್ಯಾಗಿಗಳೂ, ಲಜಪತರಾಯರವರಂಥ ದೇಶನಿಷ್ಠ ಸೇವಕರೂ ಎಂದೆಂದಿಗೂ ಸ್ವಾರ್ಥಸಾಧನೆಗಾಗಿ ಕಾದಾಡುವವರಲ್ಲ. ಅವರೆಂದೂ ರಾಷ್ಟ್ರಧ್ಯೇಯಚ್ಯುತರಾಗಲಾರರು. ಪ್ರಕೃತಿ ಭೇದದಂತೆ ಮಾರ್ಗಭೇದ, ಆಚಾರ-ವಿಚಾರಭೇದ ಹೀಗೆ ಭೇದಗಳಿದ್ದರೂ ಧ್ಯೇಯವು ಒಂದೇ ಇರುವದರಿಂದಲೂ, ಸ್ವರಾಜ್ಯಪ್ರಾಪ್ತಿಯನ್ನು ತ್ವರ್ಯವೇ ಹಸ್ತಗತ ಮಾಡಿಕೊಳ್ಳಬೇಕೆಂಬ ಆತುರತೆಯು ಈರ್ವರಿಗೂ ಇರುವದರಿಂದಲೂ, ಈರ್ವರೂ ತಮ್ಮ ತಮ್ಮ ತತ್ವಗಳ ಆವಿಷ್ಕರಣಕ್ಕಾಗಿ ಸಾರಾಸಾರ ವಿಚಾರ ಮಂಥನೆಗಾಗಿ ವಾಗ್ವಾದವನ್ನು ನಿರುಪಾಯವಾಗಿ ಹೂಡಬೇಕಾಯಿತು. ಅಪರಿಹಾರ್ಯವಾಗಿ ನಡೆದ ಬುದ್ಧಿಭೇದದಿಂದ ಈರ್ವರಿಗೂ ವ್ಯಸನವಾಗಿದೆ. ಭರತಖಂಡದ ಹಿತಶತ್ರುಗಳಿಗೆ ಇದರಿಂದ ಅಂಕುಶಪ್ರವೇಶ ದೊರಕಲು ಇಂಬು ದೊರಕೀತೆಂದು ಯಾರೂ ತಿಳಿಯಲಾಗದಿದ್ದರೂ, ಲೋಕನಾಯಕರು ಒಡದಾಡುವ ನೋಟವು ವಿಚಾರರಮಣೀಯವಲ್ಲ. ಇದರಿಂದ ಲೋಕನಾಯಕರ ಸಾಮರ್ಥ್ಯವು ಶಿಥಿಲವಾಗುತ್ತದೆ. ಈ ಕುರಿತು ಭರತಖಂಡದ ಹಿತಶತ್ರುಗಳು ಸಂತೋಷಪಡಬಹುದು. ಆದರೆ ಈ ಹಕೀಕತು ಸಂಭವಿಸಿದ ಕೆಲವು ದಿನಗಳಲ್ಲಿಯೇ ಭಾರತೀಯ ಲೋಕನಾಯಕರೆಲ್ಲರೂ ಐಕ್ಯಮತ್ಯದಿಂದ ದುಡಿಯಲಾರಂಭಿಸಿದ ನೋಟವನ್ನು ಹಿತಶತ್ರುಗಳು ನೋಡಲೇ ಬೇಕಾಗುವದು.

ಲಜಪತರಾಯರು ಸ್ವರಾಜ್ಯಪಕ್ಷಕ್ಕೆ ರಾಜೀನಾಮೆ ಕೊಟ್ಟ ಕೂಡಲೆ, ಪಂಡಿತ ಮಾಲವೀಯಾದಿ ಸ್ವತಂತ್ರ ಕೊಂಗ್ರೆಸ ಪಕ್ಷದವರೂ ಶ್ರೀ| ಜಯಕರಾದಿ ಪ್ರತಿಸಹಕಾರಿಗಳೂ ಲಜಪತರಾಯರನ್ನು ತಮ್ಮೊಳಗೆ ಸೇರಿಸಿಕೊಳ್ಳಲು ಮಾತುಕಥೆ ನಡಿಸಿದ್ದಾರಾಗಿ ತಿಳಿಯುತ್ತದೆ. ಇದಕ್ಕೆ ಕಾರಣವಿದೆ. ರಾಷ್ಟ್ರೀಯಸಭೆಯಲ್ಲಿ ಪ್ರಬಲವಾದ ಪಕ್ಷವು ಸ್ವರಾಜ್ಯ ಪಕ್ಷವು. ಅದಕ್ಕೆ ದಿರ್ರಾಗಬೇಕಿದ್ದರೆ, ಸ್ವತಂತ್ರ ಪಕ್ಷ, ಪ್ರತಿಸಹಕಾರಪಕ್ಷ ಹೀಗೆ ಪಕ್ಷೋಪಪಕ್ಷಗಳನ್ನು ನಿರ್ಮಿಸಿಕೊಂಡು ಒಡದಾಡಿದರೆ, ಸೋಲು ನಿಶ್ಚಯ. ಆದರಿಂದ ಸ್ವತಂತ್ರ ಹಾಗು ಪ್ರತಿಸಹಕಾರ ಪಕ್ಷಗಳೊಳಗಿನ ಚಿಕ್ಕಪುಟ್ಟ ಮತಭೇದಗಳನ್ನು ದೂರಪಡಿಸಿಕೊಂಡು ಪಂಡಿತ ಮದನಮೋಹನ ಮಾಲವೀಯರವರೂ, ಶ್ರೀ| ಜಯಕರರವರೂ ಒಕ್ಕಟ್ಟಾಗಿ ಲಜಪತರಾಯರನ್ನೂ ಜೊತೆಗೆ ಸೇರಿಸಿಕೊಂಡು ದುಡಿಯಬೇಕಾಗಿ ಕಲ್ಪಿಸಿದ್ದರು. ಮಾಲವೀಯರವರು ಈ ಕುರಿತು ಮುಂಬಯಿಯಲ್ಲಿದ್ದ ಜಯಕರರವರೊಡನೆ ಟೆಲಿಫೋನಿನಿಂದ ಮಾತುಕಥೆ ನಡಿಸುತ್ತಿದ್ದರಂತೆ! ಈ ಕುರಿತು ಮೊನ್ನೆ ೧೨ ನೇ ತಾರೀಕಿಗೆ ಸ್ವತಂತ್ರ ಕೊಂಗ್ರೆಸಪಕ್ಷದವರ ಚರ್ಚೆಯು ದಿಲ್ಲಿಯಲ್ಲಿ ನಡೆಯುವದಿತ್ತು.

ಇತ್ತ ಪಂಡಿತ ಮೋತಿಲಾಲರವರೂ ಐಕ್ಯಮತ್ಯಕ್ಕಾಗಿ ಪ್ರಯತ್ನ ನಡಿಸುತ್ತಿದ್ದರು. ಪಂಡಿತ ಮೋತಿಲಾಲರವರೊಡನೆ ಐಕ್ಯದ ಮಾತುಕಥೆ ನಡಿಸುವದಕ್ಕಾಗಿ ತಮ್ಮ ಪಕ್ಷದ ಪ್ರಮುಖರ ಅಭಿಪ್ರಾಯಗಳನ್ನು ಅವರು ಸಂಗ್ರಹಿಸುತ್ತಿರುವರು. ಕೊಂಗ್ರೆಸ ಕಾರ್ಯಕಾರೀ ಮಂಡಲದ ಸಭೆಯೂ ಮೊನ್ನೆ ತಾ. ೧೧ ರಂದು ದಿಲ್ಲಿಯಲ್ಲಿ ಸೇರುವದಿತ್ತು. ಪಂಡಿತ ಮಾಲವೀಯರವರು ಸೂಚಿಸಿದ ಸೂಚನೆಗಳನ್ನು ತಮ್ಮ ಪಕ್ಷದ ಪ್ರಮುಖರಿಗೆ ತಂತಿಯಿಂದಲೇ ತಿಳಿಸಿ, ಅವರ ಅಭಿಪ್ರಾಯಗಳನ್ನು ತಂತಿಯಿಂದಲೇ ಮೋತಿಲಾಲರವರು ತರಿಸಿರುವರಾಗಿ ಸುದ್ದಿಯಿದೆ. ಹೀಗೆ ಐಕ್ಯಮತ್ಯವಾದರೆ "ಸಂಯುಕ್ತ ರಾಷ್ಟ್ರೀಯ ಪಕ್ಷ" ವೆಂಬ ಅಭಿಧಾನದಿಂದ ರಾಷ್ಟ್ರೀಯ ಸಭೆಯು ಕೌನ್ಸಿಲ ಪ್ರವೇಶವನ್ನು ಗೈಯ್ಯುವದು. ಈ ಪಕ್ಷದವರು ರಾಷ್ಟ್ರೀಯ ಸಭೆಗೊಪ್ಪಿದ ಸಮಸ್ತ ಪಕ್ಷಗಳ ಉಮೇದ್ವಾರರ ಯಾದಿಯನ್ನು ಪುನರಾಲೋಚಿಸಿ, ಉಭಯಪಕ್ಷಗಳನ್ನು ಲಕ್ಷಕ್ಕೆ ತಾರದೆ ಯೋಗ್ಯತಾವಂತರನ್ನು ಮಾತ್ರ ಪ್ರಾಂತಿಕ ಹಾಗು ವರಿಷ್ಠ ಕಾಯಿದೆ ಕೌನ್ಸಿಲುಗಳಿಗೆ ಉಮೇದ್ವಾರರನ್ನಾಗಿ ನಿಲ್ಲಿಸುವರು.

ಪಂಡಿತ ಮಾಲವೀಯರವರು ಸೂಚಿಸಿದ ಶರ್ತುಗಳು ಸ್ವರಾಜ್ಯ ಹಾಗೂ ಪ್ರತಿಸಹಕಾರ ಪಕ್ಷಗಳೊಳಗಿನ ಮಧ್ಯಸ್ಥಿಕೆಯಂತೆ! ಪ್ರಾಂತಿಕ ಸರಕಾರದಲ್ಲಿ ರಾಷ್ಟ್ರೀಯ ಸಭೆಯವರು ಅಧಿಕಾರ ಗ್ರಹಣ ಮಾಡಬೇಕಾದರೆ, ಕೆಲವು ಶರ್ತುಗಳನ್ನು ಹಾಕಿರುವರು. ಆ ಶರ್ತುಗಳನ್ನು ಪಾಲಿಸಲು ಅನುಕೂಲವಾಗುವಲ್ಲಿ ಮಾತ್ರ ಸಂಯುಕ್ತ ರಾಷ್ಟ್ರೀಯಪಕ್ಷದವರು ದಿವಾಣಪದಗಳನ್ನು ಸ್ವೀಕರಿಸುವರು. ಸಂಪೂರ್ಣ ಸ್ವರಾಜ್ಯ ಸರಕಾರವನ್ನು ತ್ವರ್ಯವೇ ಸ್ಥಾಪಿಸುವದಕ್ಕಾಗಿ ಕಾಯಿದೆಕೌನ್ಸಿಲುಗಳಲ್ಲಿ ಕಾರ್ಯಕ್ರಮವನ್ನು ಪುರಸ್ಕರಿಸಬೇಕು. ಮತ್ತು ಕೈಲಾದಷ್ಟು ಪ್ರಜೆಗಳ ಹಿತವನ್ನು ಸಾಧಿಸಲಿಕ್ಕೆ ಯತ್ನ ಮಾಡಬೇಕು. ಹೀಗೆ ಸ್ಥೂಲಮಾನದಿಂದ ಸಾಬರಮತಿಯ ಒಪ್ಪಂದವು ಕೆಲಮಟ್ಟಿಗೆ ತಿದ್ದುಪಡಿಯಾಗಿ ಆಮಲಿನಲ್ಲಿ ಬರುವದೆಂದು ಬಲ್ಲವರು ತರ್ಕಿಸುತ್ತಾರೆ. ಸಂಯುಕ್ತ ರಾಷ್ಟ್ರೀಯ ಪಕ್ಷವು ಜನ್ಮವನ್ನೆತ್ತಿದರೆ ಕೌನ್ಸಿಲು ಪ್ರವೇಶದ ಕಾರ್ಯಕ್ಕಾಗಿ ಸಮಸ್ತಪಕ್ಷಗಳ ಪ್ರಮುಖರದೊಂದು ಮಂಡಳವು ನೇಮಿಸಲ್ಪಡುವದು. ಶ್ರೀಮತೀ ಸರೋಜಿನಿ ನಾಯುಡೂ, ಪಂಡಿತ ಮೋತಿಲಾಲ ನೆಹರೂ, ಲಾಲಾ ಲಜಪತರಾಯ, ಪಂಡಿತ ಮಾಲವೀಯ, ಶ್ರೀ| ಶ್ರೀನಿವಾಸ ಅಯ್ಯಂಗಾರ, ಟಿ. ಚಕ್ರವರ್ತಿ, ಮುಕುಂದರಾವ ಜಯಕರ ಪ್ರಭೃತಿ ಮುಂದಾಳುಗಳು ಈ ಮಂಡಳದಲ್ಲಿರುವರಂತೆ!

ಇದನ್ನು ಕೇಳಿ ಯಾರೂ ಆಶ್ಚರ್ಯಪಡುವ ಕಾರಣವಿಲ್ಲ. ತತ್ವಭೇದವಾದರೂ, ಧ್ಯೇಯಪ್ರಾಪ್ತಿಯು ಸಮಸ್ತರಿಗೂ ಒಂದೇ ಇರುವಾಗ ಭಿನ್ನ ಭಿನ್ನ ತತ್ವಗಳ ಚರ್ಚೆಯಿಂದ ತತ್ವಬೋಧಾಮೃತವೇ ಫಲಿಸುತ್ತದೆಂದು ಮೇಲ್ಕಂಡ ವಚನವೇ ಸಾರುತ್ತದೆ. ಮಹಾತ್ಮರಿಗೆ ಡಾ| ಮಹಮೂದ ಮೊದಲಾದ ಪ್ರಮುಖರು ರಾಷ್ಟ್ರಸೂತ್ರಗಳನ್ನು ಕೈಕೊಂಡು ಈಗೊದಗಿದ ಗೊಂದಲವನ್ನು ಪರಿಹರಿಸಬೇಕಾಗಿ ಬಿನ್ನೈಸಿದ್ದರು. ತಮ್ಮ ವಿಶ್ರಾಂತಿಸಮಯವು ತೀರಿದ ಹೊರತು ರಾಜಕಾರಣದ ಸೂತ್ರಗಳನ್ನು ಕೈಕೊಳ್ಳಲು ಅಸಮರ್ಥರಿರುವೆವಾಗಿ ಬರೆಯುವಾಗ ಲೋಕನಾಯಕರೊಳಗಿನ ಸಾಧನ ಭೇದವನ್ನೂ, ಸಾಧ್ಯೈಕ್ಯವನ್ನೂ ಮಹಾತ್ಮರು ಮಾರ್ಮಿಕವಾಗಿ ನಮೂದಿಸಿರುವರು. ಮಹಾತ್ಮರು ಬರೆಯುವದೇನಂದರೆ:- " ಮೋತಿಲಾಲಜಿ. ಹಾಗು ಲಾಲಾಜಿಯವರೊಳಗಿನ ವಾದವು ಹೊಲಸಾದರೂ ಅದು ಸ್ವರಾಜ್ಯಕಾದಾಟದ ಒಂದು ಅಂಗವು. ಈ ಮತಭೇದಗಳನ್ನು ನೋಡಿ ಭಾರತೀಯ ಸ್ವಾತಂತ್ರ್ಯ ಶತ್ರುಗಳು ಆನಂದಾತಿರೇಕದಿಂದ ಉಬ್ಬಲಿ, ಶತ್ರುಗಳು ಆನಂದೋದ್ರೇಕದಲ್ಲಿರುವಾಗಲೇ ದೇಶಾಭಿಮಾನಿಗಳು ಐಕ್ಯಮತ್ಯದಿಂದ ದುಡಿಯಲಾರಂಭಿಸುವರು. ಇಬ್ಬರೂ ದೇಶಪ್ರೇಮಿಗಳು: ಜ್ಞಾತಿಯ ಏಳ್ಗೆಯನ್ನು ಸಾಧಿಸದ ಹೊರತು ರಾಷ್ಟ್ರೋದ್ಧಾರವಾಗಲಾರದೆಂದು ಲಾಲಾಜಿಯವರ ಅಭಿಮತವಿದೆ; ಜ್ಞಾತಿಯ ಏಳ್ಗೆಯ ಸುದ್ದಿ ತೆಗೆದರೆ ಪಂಡಿತಜಿಯವರಿಗೆ ಸಹನವಾಗುವದಿಲ್ಲ. ಯಾರೊಬ್ಬರ ಅಭಿಪ್ರಾಯವನ್ನು ಯೋಗ್ಯವೆಂದು ಹೇಳುವ ಬಗೆ ಹೇಗೆ? ಇಬ್ಬರ ವಿಚಾರಗಳೂ ಪ್ರಕೃತಸ್ಥಿತಿಯ ಮೇಲಿಂದ ಉಂಟಾದದ್ದಿರುತ್ತವೆ. ಸ್ವರಾಜ್ಯದ ಮಂತ್ರವನ್ನೇ ಜಪಿಸುತ್ತ ರಾಜಕಾರಣದಲ್ಲಿ ಸೇರಿದ

ಲಾಲಾಜಿಯವರು ಸ್ವರಾಜ್ಯವನ್ನು ದ್ವೇಷಿಸುತ್ತಾರೆಂದು ತಿಳಿಯಲಾಗದು. ನಮ್ಮ ಉತ್ಕ್ರಾಂತಿಯಲ್ಲಿ ಜ್ಞಾತಿಯವಳಿಗ್ಗಾಗಿ ಯತ್ನ ಪಡುವದು ಅತ್ಯಾವಶ್ಯಕವೆಂದು ಅವರ ಅಭಿಪ್ರಾಯವಾಗಿ ಸ್ವರಾಜ್ಯವನ್ನು ಆ ಮಾರ್ಗದಿಂದ ಸಾಧಿಸಲು ಅವರು ಯತ್ನಿಸುತ್ತಾರೆ. ಜ್ಞಾತಿವಿಳಿಗ್ಗೆಯ ಚಳವಳಿಯಿಂದ ಸ್ವರಾಜ್ಯಪ್ರಾಪ್ತಿಯ ಮಾರ್ಗಕ್ಕೆ ಆತಂಕವಾಗುತ್ತದೆಂದು ಪಂಡಿತಜೀಯವರ ಅಭಿಪ್ರಾಯ. ಆದರಿಂದ ಅವರು ಆ ಚಳವಳಿಯನ್ನು ಧಿಃಕರಿಸುತ್ತಾರೆ. ಹಕೀಮ ಸಾಹೇಬ ಅಜಮಲಖಾನರವರಂತೆಯೇ ಸರ್ ಅಬ್ದುಲ್ ರಹಿಮಾನರೂ ದೇಶೋದ್ಧಾರಕ್ಕೆ ಅವಶ್ಯವುಳ್ಳವರೇ. ಇಸ್ಲಿಂಗಟನ್ ಕಮಿಶನದ ಮೆಂಬರರಾಗಿ ಗೋಖಲೆಯವರೊಡನೆ ಭಿನ್ನಮತ ಪತ್ರಿಕೆಯನ್ನು ಬರೆದ ಸರ ಅಬ್ದುಲ್ ರಹಿಮಾನರವರು ದೇಶದ ವೈರಿಗಳಲ್ಲ. ಹಿಂದುಗಳೊಡನೆ ಸರಿಕರಾಗಿ ಮುಸಲ್ಮಾನರು ಮೇಲಾಟ ನಡಿಸಿದ ಹೊರತು ದೇಶೋದ್ಧಾರವಾಗದೆಂದು ಅವರು ಎಣಿಸಿದರೆ, ಅವರಿಗೆ ಹಳಿಯುವವರಾರು? ಅವರ ಸಾಧನಗಳು ತಪ್ಪಾಗಿರಬಹುದು. ಆದರೂ ಅವರು ಸ್ವಾತಂತ್ರ್ಯ ಪ್ರೇಮಿಗಳೇ. ಈ ಪ್ರಕಾರ ನಾನು ಭಿನ್ನ ಭಿನ್ನವಾಗಿ ವಿಚಾರ ಮಾಡುವವರ ಕುರಿತು ಗ್ರಾಹ್ಯ ಸಂಗತಿಗಳನ್ನು ತಿಳಕೊಳ್ಳಬಲ್ಲೆ. ಆದರೆ, ನನಗೆ ಗೊತ್ತಿದ್ದ ರಾಷ್ಟ್ರೋದ್ಧಾರದ ಮಾರ್ಗವು ಒಂದೇ. ಜ್ಞಾತಿಯ ವಿಳಿಗ್ಗೆಯು ಸ್ವರಾಜ್ಯಪ್ರಾಪ್ತಿಯ ಸೋಪಾನವೆಂದು ಸಹ ನಾನು ತಿಳಿಯುವದಿಲ್ಲ." ಮಹಾತ್ಮರ ವಿಚಾರಗಳಂತೆ ಭಿನ್ನ ಭಿನ್ನ ಮಾರ್ಗಗಳ ಪ್ರತಿಪಾದಕರೂ ಕೂಡ ಒಂದೇ ಧ್ಯೇಯಸಾಧಕರಿರುವಾಗ ಅವರ ಚಟುವಟಿಕೆಯಿಂದ ಅಥವಾ ವಾಗ್ಯುದ್ಧದಿಂದ ಕೆಲಕಾಲ ಅಹಿತವಾಗತ್ತದೆಂದು ಎಣಿಸಿದರೂ ಅಂತ್ಯದಲ್ಲಿ ಹಿತವಾಗಲೇಬೇಕು. ಎಂಬ ಸಿದ್ಧಾಂತವನ್ನು ಯಾರೂ ಅಲ್ಲಗಳೆಯಲಾರರು.

ಹೀಗೆ ಧ್ಯೇಯೈಕ್ಯದಿಂದ ಭಿನ್ನ ಭಿನ್ನ ಸಾಧಕರು ಮೊನ್ನಿನ ಶನಿವಾರಕ್ಕೆ ದಿಲ್ಲಿಯಲ್ಲಿ ಒಟ್ಟಿಗೆ ಸೇರಿದಾಗ ಐಕ್ಯಮತ್ಯವಾಗದೆಂದು ಯಾರೂ ತಿಳಿಯಲಾಗದು. ಐಕ್ಯಮತ್ಯವಾಗಲೇಬೇಕೆಂದು ನಾವಂತೂ ನಿಶ್ಚಯವಾಗಿ ಹೇಳುವೆವು. ಲೋಕನಾಯಕರು ಯೋಜಿಸಿದ ಮುಹೂರ್ತವು ಮಂಗಲದಾಯಕವಿದೆ. ಮೊನ್ನಿನ ಶನಿವಾರವು ಸಮಸ್ತ ಬ್ರಹ್ಮಾಂಡಕ್ಕೂ ಮಂಗಲದಾಯಕನಾದ, ಮಂಗಲಮೂರುತಿಯಾದ, ವಿಘ್ನಹಾರಕನಾದ ಶ್ರೀ ಗಣಪತಿಯ ಆಗಮನದ ಸಮಯವಾಗಿರುತ್ತದೆ. ವಿಘ್ನಹಾರಕನ ಆಗಮದ ಸಮಯದಲ್ಲಿ ಲೋಕನಾಯಕರು ಸಭೆಸೇರಿದಾಗ ರಾಷ್ಟ್ರೈಕ್ಯಕ್ಕೆ ಒದಗಿದ ಅಂತರ್ಬಾಹ್ಯ ವಿಘ್ನಗಳೆಲ್ಲ ದೂರವಾಗಿ ಲೋಕನಾಯಕರೆಲ್ಲರೂ ಒಮ್ಮನಸ್ಸಿನಿಂದ ದೇಶೋದ್ಧಾರದ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡ ಶುಭ ಸುದ್ದಿಯನ್ನು ಅತಿಶೀಘ್ರ ಪ್ರಜೆಗಳಿಗೆ ಸಾರುವರು. ಶ್ರದ್ಧಾಯುಕ್ತರೆಲ್ಲರೂ ನಿಶ್ಚಯದಿಂದ ಇರುವರೆಂದು ನಾವು ತಿಳಿಯುವೆವು. ಈ ಲೇಖವು ಪ್ರಕಟವಾಗುವ ಸಮಯವೇ ಲೋಕನಾಯಕರು ಕೈಕೊಂಡ ತೀರ್ಮಾನಗಳು ಜಾಹೀರಾಗುವದಿದ್ದದರಿಂದ ಶುಭಸುದ್ದಿಯನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸುವೆವಾಗಿ ವಾಚಕ ಮಹಾಶಯರಿಗೆ ಅಭಿವಚನವನ್ನಿತ್ತು ಇಂದಿಗೆ ಇಷ್ಟಕ್ಕೇ ತಡೆಯುವೆವು.

ಸ್ಫುಟ ಸೂಚನೆಗಳು.

೧ ಆಸಾಮದೊಳಗಿನ ಚಹದ ತೋಟಗಳಿಗಾಗಿ ಕೂಲಿಕಾರರನ್ನು ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಗ್ರಹಿಸುವ ಸುದ್ದಿಯು ಮಹಾತ್ಮರ ಕಿವಿ ತನಕ ಮುಟ್ಟಿರುವದು. ಈ ಕುರಿತು ಮಹಾತ್ಮರು ಬರೆದ ಉದ್ಗಾರಗಳನ್ನು ನಮ್ಮಲ್ಲಿಯ ವಾಚಕರು ಗ್ರಹಿಸತಕ್ಕದ್ದು. "ಕೂಲಿಕಾರರನ್ನು ಸಂಗ್ರಹಿಸುವ ಅರಿಷ್ಟವು ದೊಡ್ಡದು; ಆಸಾಮ ಪ್ರಾಂತವು ನಿರ್ಜನಪ್ರದೇಶವಲ್ಲ. ಆಸಾಮಕ್ಕೆ ಕಾನಡಾ ಜಿಲ್ಲೆಯಿಂದ ಕೂಲಿಕಾರರನ್ನು ಒಯ್ಯಬೇಕಾದರೆ ಅಲ್ಲಿಯ ಸ್ಥಿತಿಯು ಅನಿಷ್ಟವಿರಲೇಬೇಕು. ಕಾನಡಾ ಜಿಲ್ಲೆಯೊಳಗಿನ ನಿಷ್ಪಾಪ ಕೂಲಿಕಾರರಿಗೆ ಆಸಾಮದೊಳಗಿನ ಚಹದ ತೋಟಗಳ ಸ್ಥಿತಿಯು ಅರಿವಾಗದು. ಕೂಲಿಕಾರರನ್ನು ಸಂಪಾದಿಸಲು ದಲಾಲರು ಮಧ್ಯಸ್ಥರಾದರೆ, ಕೂಲಿಕಾರರಿಗೆ ಸ್ವತಂತ್ರ ಬುದ್ಧಿಯಿಂದ ಕೂಲಿಯ ದರಗಳನ್ನು ನಿಶ್ಚಯಿಸಲು ಅನುಕೂಲವಾಗುವದಿಲ್ಲ. ಕನ್ನಡ ಜಿಲ್ಲೆಯವರು ಸ್ವೇಚ್ಛೆಯಿಂದ ಆಸಾಮಕ್ಕೆ ಹೋಗಬಹುದು. ಆದರೆ ಆಸಾಮದವರನ್ನು ಪದಭ್ರಷ್ಟ ಮಾಡಲು ಅವರು ಹೋಗಬಾರದು. ಪ್ರಕೃತ ಸ್ಥಿತಿಯಲ್ಲಿ ಕನ್ನಡ ಜಿಲ್ಲೆಯವರು ಸಂತೋಷದಿಂದ ಕೂಲಿಕಾರರಾಗುತ್ತಾರೆಂದು ಹೇಳಬರುವದಿಲ್ಲ. ಈಗ ಅವರು ಹೋದರೆ ಆಸಾಮದವರನ್ನು ಮನೆಗೆ ಕಳುಹಿಕೊಟ್ಟು ಅವರ ಸ್ಥಳದಲ್ಲಿ ಈ ಕೂಲಿಕಾರರು ನೇಮಕರಾಗುವರು. ಆಸಾಮದೊಳಗೆ ಕೂಲಿ ಸಿಗದೆ ಕೂಲಿಗಾಗಿ ನಿರೀಕ್ಷಣೆ ಮಾಡುತ್ತಿರುವ ಬಡಬಗ್ಗರು ಅನೇಕರಿರುವರು. ಆಸಾಮದ ಚಹ ತೋಟಗಳನ್ನು ಸ್ಥಳೀಕ ಕೂಲಿಕಾರರ ಕೂಲಿಯಿಂದಲೇ ಸಾಗು ಮಾಡಬೇಕು. ಹಾಗಾಗದಿದ್ದರೆ, ಅವನ್ನು ಸಾಗು ಮಾಡಬಾರದು." ರಿಕ್ರೂಟಿಂಗದ ಹಾವಳಿಯನ್ನು ಪರಿಹರಿಸುವ ಉಪಾಯಗಳನ್ನು ಸೂಚಿಸಲು ಮಹಾತ್ಮರಿಗೆ ಶಿರಸಿಯ ಸುದ್ದಿಗಾರರೊಬ್ಬರು ಬರೆದಿದ್ದರು. "ಲೋಕಮತವೇ ಎಲ್ಲಕ್ಕೂ ಶ್ರೇಷ್ಠವಾದ ಉಪಾಯವು. ಸುದ್ದಿಗಾರರು ಸಾಕಷ್ಟು ಸ್ವಯಂಸೇವಕರನ್ನು ಸಂಗ್ರಹಿಸಲಿ, ಮತ್ತು ಅವರಿಗೆ ನೆರೆಹೊರೆಯ ಗ್ರಾಮಗಳಿಗೆ ಪುರಸತ್ತಿನ ಸಮಯ ಕಳುಹಿಸಿ ಹಳ್ಳಿಗರಿಗೆ ಬಲಿಯಲ್ಲಿ ಸಿಲುಕದಂತೆ ಬೋಧಿಸಲಿ. ಅವರೊಳಗಿನ ಮನೊಬ್ಬರು ಆಸಾಮದೊಳಗಿನ ಕೂಲಿಕಾರರ ಸ್ಥಿತಿಯ ಅಭ್ಯಾಸ ಮಾಡಬೇಕು. ಸ್ವತಃ ಹೋಗಿ ನೋಡಬಹುದು. ಅಥವಾ ಆ ವಿಷಯದ ಮೇಲಿನ ಸಾಹಿತ್ಯವನ್ನು ಸಂಗ್ರಹಿಸಿ ತಿಳಕೊಳ್ಳಬಹುದು." ಮಹಾತ್ಮರು ಆಸಾಮದ ಸ್ಥಿತಿಯ ವಿಚಾರದಿಂದ ಪ್ರಕಟಿಸಿದ ಉದ್ಗಾರಗಳಿವು.

೨. ಆಸಾಮದ ಚಹದ ತೋಟಗಳ ಸ್ಥಿತಿಯು ಕೂಲಿಕಾರರಿಗೆ ಅನುಕೂಲವಾಗಿದ್ದರೆ, ಆಸಾಮದಲ್ಲಿ ಬೇಕಷ್ಟು ಕೂಲಿಕಾರರು ಯಾವಾಗಲೂ ಸಿಗಬಹುದು. ಕೂಲಿಕಾರರಿಗೆ ದಣಿಸುತ್ತಿರಾದ್ದರಿಂದ ಉತ್ತರ ಕನ್ನಡ ಜಿಲ್ಲೆಯ ವರೆಗೆ ಕಪಟ ವಿದ್ಯೆಯ ದಲಾಲರನ್ನಿಟ್ಟು ಅಜ್ಞ ಕೂಲಿಕಾರರನ್ನು ಸಂಪಾದಿಸುವ ಗರ್ಹಣೀಯ ಪ್ರಕಾರಗಳು ನಡೆದಿರುತ್ತವೆ. ಕೂಲಿಕಾರರು ಸ್ವತಃ ವಿಚಾರ ಮಾಡಿ ದಲಾಲರ ಬಲೆಯಲ್ಲಿ ಬೀಳಬೇಕು ಅಂದರೆ ಮುಂದೆ ಪಶ್ಚಾತ್ತಾಪಕ್ಕೆ ಕಾರಣವಿರದು, ಆದಷ್ಟರಮಟ್ಟಿಗೆ ದಲಾಲರು ರಚಿಸಿದ ಅತ್ಯುತ್ಕೃಷ್ಟತೆಯ ಕಲ್ಪನೆಗಳು ನಿರರ್ಥಕವಾದವೆಂದು ಎಣಿಸಿ ಮುಂದಾಗಬೇಕು. ನಮ್ಮ ಜಿಲ್ಲೆಯ ಕೂಲಿಕಾರರು ಆಸಾಮಕ್ಕೆ ಹೋಗಿ ಸಂಪನ್ನರಾಗುವದಾದರೆ ನಾವಾಗಿ ಅವರಿಗೆ ಹೋಗಲು ಬೋಧಿಸುತ್ತಿದ್ದೆವು. ಆದರೆ ಅಲ್ಲಿಯ ಸ್ಥಿತಿಯು ನೆಟ್ಟಗಿದ್ದರೆ, ಇಲ್ಲಿಯ ತನಕ ದಲಾಲರೇ ಬರುತ್ತಿದ್ದಿಲ್ಲ. ಇಷ್ಟು ಸಾಮಾನ್ಯ ಬುದ್ಧಿಯನ್ನು ನಮ್ಮಲ್ಲಿಯ ಕೂಲಿಕಾರರು ತಳೆದು ದಲಾಲರು ರಚಿಸಿದ ಮಾಯದ ಮನೆಯಲ್ಲಿ ಸಿಲುಕಿ ಗೋಳಾಡಬಾರದೆಂದು ಮುಂದಾಗಿ ನಾವು ಎಚ್ಚರಿಕೆಯನ್ನೀಯುವೆವು. ಶ್ರೀ। ಪಾಡುವೆ ಹೊದ್ಯೆಯವರು ಜ್ಞಾನಕೋಶದೊಳಗಿಂದ ಬರೆದ ಚಹದ ತೋಟಗಳೊಳಗಿನ ಕೂಲಿಕಾರರ ಸ್ಥಿತಿಯನ್ನು ಒದಗುವ ಗತಿಯನ್ನು ಪರಾಂಬರಿಸತಕ್ಕದ್ದು. ಅಲ್ಲಲ್ಲಿಯ ಗ್ರಾಮದವರೂ ಈ ಹಕೀಕತನ್ನು ಅಜ್ಞ ಕೂಲಿಕಾರರಿಗೆ ತಿಳಿಸಿ ಹೇಳಿ ಅವರನ್ನು ಪರಾವೃತ್ತ ಮಾಡಬೇಕಾಗಿಯೂ ನಮ್ಮ ಬಿನ್ನಹ ಇದೆ.

---

೩. ಪ್ರಕೃತ ಶಿಕ್ಷಣ ಪದ್ಧತಿಯಿಂದ ವಿದ್ಯಾರ್ಥಿಗಳಲ್ಲಿ ಒದಗಿದ ಅವಸ್ಥಾಂತರಗಳನ್ನು ಹೇಳಿ ತೀರದು. ಈಗಿನ ಶಿಕ್ಷಣದಿಂದ ವಿದ್ಯಾರ್ಥಿಗಳು ತಮ್ಮ ಪುರಾತನ ಸಂಸ್ಕೃತಿಗೆ ಚ್ಯುತರಾಗಿ "ಇತೋ ಭ್ರಷ್ಟಸ್ತತೋ ಭ್ರಷ್ಟ" ರಾಗಿರುವರು. ಕಾರಣವನ್ನು ಹುಡುಕಲು ದೂರ ಹೋಗಬೇಕಾಗಿಲ್ಲ. ಕ್ರಮಿಕ ಪುಸ್ತಕಗಳನ್ನೇ ವಿಚಾರಿಸಿದರೆ ನಮ್ಮ ಹೇಳಿಕೆಯು ವಾಚಕರಿಗೆ ಹೊಳೆಯುವದಾಗಿದೆ. ಇಸಾಪನೀತಿ ಕಥೆಗಳು ಎಲ್ಲರಿಗೂ ಗೊತ್ತಿವೆ. ಪಂಚತಂತ್ರ, ಹಿತೋಪದೇಶ, ಮಹಾಭಾರತ, ರಾಮಾಯಣಾದಿ ಗ್ರಂಥಗಳ ಪರಿಚಯವು ನಮ್ಮಲ್ಲಿಯ ವಿದ್ಯಾರ್ಥಿಗಳಿಗಿಲ್ಲ. ಶೇಕ್ಸ್ಪಿಯರನ ಇಂಗ್ಲಿಷ ಕಾವ್ಯವನ್ನು ರುಚಿಯಿಂದ ಓದುವ ಹುಡುಗರಿಗೆ ಶ್ರೇಷ್ಠ ಕವಿಗಳಾದ ಕಾಲಿದಾಸರ ದಿವ್ಯವಾಣಿಯು ಅಮೃತದ ರುಚಿಯಿಲ್ಲ. ಪಾಶ್ಚಾತ್ಯರೇ ಸರ್ವಶ್ರೇಷ್ಠರು ಅಲ್ಲಿಯ ಇಂಗ್ಲಿಷ ಕವಿಗಳು ಪ್ರತಿಭಾಸಂಪನ್ನರು. ಇಂಗ್ಲಿಷರು ದೊಡ್ಡ ಬುದ್ಧಿಗಳು, ಭಾರತೀಯರು ಕಾಡುಜನಾಂಗದವರು. ಬ್ರಿಟಿಶರ ಆಗಮನದಿಂದಲೇ ಕಾಡುತನವು ಕೆಲಮಟ್ಟಿಗೆ ನೀಗಿದೆ, ಇತ್ಯಾದಿ ದಂತಕಥೆಗಳು ನಮ್ಮ ಹುಡುಗರಿಗೆ ಕಲಿಸಲಾಗುತ್ತವೆ. ಚಿಕ್ಕ ಪ್ರಾಯದಲ್ಲಿ ಕಲಿತ ಈ ಸಿದ್ಧಾಂತಗಳನ್ನು ಮರೆಯಲು ಅಸಾಧ್ಯವಿದ್ದದರಿಂದಲೂ, ಅವುಗಳ ಪಠಣದಿಂದ ಕೀಳರದೆಯಾಗುವದರಿಂದಲೂ ನಮ್ಮ ಭಾರತೀಯರ ಸ್ಥಿತಿಯು ಕೆಂಗೆಟ್ಟಿದೆ. ಇದಕ್ಕೆ ಮಹತ್ವದ ಒಂದು ಸಂಗತಿಯು ಮುಂಬಯಿ ಮುನಿಸಿಪಾಲಿಟಿಯವರ ಲಕ್ಷ್ಯಕ್ಕೆ ಬಂದಿದೆ. ಸರ್ ಮಾಯಕೇಲ ಓಡವಾಯರರವರು ಲೋಕಪ್ರಿಯ ಪ್ರಾಂತಾಧಿಪರಾಗಿದ್ದರೆಂದು

ಉರ್ದು ಕ್ರಮಿಕ ಪುಸ್ತಕದಲ್ಲಿ ಬರೆದಿದೆ, ಹುಡುಗರಿಂದ ಈ ವಚನವು ಪಠಿಸಲ್ಪಡಾಗುತ್ತದೆ. ಜನರಲ್ ಡಾಯರ್ ಎಂಬ ಅಪ್ರತಿಮ ದೊರೆಗಳ ಪರಿಚಯವನ್ನು ವಾಚಕರಿಗೆ ಹೇಳಬೇಕಾಗಿಲ್ಲ. ಅವರು ಪಂಜಾಬ ಅತ್ಯಾಚಾರ ಕಾಲದಲ್ಲಿ ಪಂಜಾಬದ ಅಧಿಪತಿಗಳಾಗಿದ್ದರು. ಇಷ್ಟು ಹೇಳಿದರೆ ಅವರಬಗ್ಗಿರುವ ಲೋಕಾದಾರವೂ, ಲೋಕಪ್ರೀತಿಯೂ ಸ್ಪುಟವಾಗುವಹಾಗಿವೆ. ಭಗತ ಖಾಸವು ಮಹಾತ್ಮರ ಅಧಿಪತ್ಯದಲ್ಲಿ ನೇಮಿಸಿ, ಪಂಜಾಬ ಅತ್ಯಾಚಾರಗಳನ್ನು ಚೌಕಶಿ ಮಾಡಿದ ಕಮಿಟಿಯವರೂ ಅಪ್ರತಿಮ ದೊರೆಗಳ ಶಾಸನಾತ್ಮಕ ಕೃತ್ಯಗಳನ್ನು ನಮೂದಿಸಿರುವರು ಹೀಗೆ ವಸ್ತುಸ್ಥಿತಿ ಇರುವಾಗ ಅಪ್ರತಿಮ ದೊರೆಗಳಿಗೆ ಲೋಕಪ್ರಿಯ ಪ್ರಾಂತಾಧಿಪರೆಂದು ಸಂಬೋಧಿಸಿ, ಉರ್ದು ಕಲಿಯುವ ಚಿಕ್ಕ ಬಾಲಬಾಲಕಿಯರಿಗೆ ಪಠಿಸುವದು ಶಿಕ್ಷಣವೇನಿದು ? ಇದು ದೇಶದ್ರೋಹವಲ್ಲವೆ ? ಮುಂಬಯಿಯ ಮುನಿಸಿಪಾಲಿಟಿಯವರು ಈ ಕುರಿತು ಸಮಾಲೋಚಿಸಿ, ಅಪ್ರತಿಮ ದೊರೆಗಳ ಪರವಾಗಿ ಮಾಡಿದ ಪ್ರಶಂಸಾಯುಕ್ತ ಉಲ್ಲೇಖವನ್ನು ಕ್ರಮಿಕ ಪುಸ್ತಕದಿಂದ ತೆಗೆಯುದಕ್ಕಾಗಿ ಸೂಚಿಸಿರುವರು ಇಷ್ಟರ ಮಟ್ಟಿಗೆ ಈ ಸೂಚನೆಯು ಸಮಾಧಾನಕರವಿದೆ. ಆದರೆ, ಎಲ್ಲ ಕ್ರಮಿಕ ಪುಸ್ತಕಗಳನ್ನು ಅಲ್ಲಲ್ಲಿಯ ಸ್ಥಾನಿಕ ಸ್ವರಾಜ್ಯಸಂಸ್ಥೆಗಳು ಪರ್ಯಾಲೋಚಿಸಿ, ರಾಷ್ಟ್ರೀಯ ವೃತ್ತಿಯನ್ನು ಭಂಜಿಸುವ ಪಾತಗಳನ್ನು ತೆಗೆದುಹಾಕಬೇಕು, ಸಾಧ್ಯವಿದ್ದರೆ ರಾಷ್ಟ್ರಕ್ಕೆ ಪೋಷಕವಾದ ಕ್ರಮಿಕ ಪುಸ್ತಕಗಳನ್ನು ರಚಿಸಬೇಕಾಗಿಯೂ ನಮ್ಮದೊಂದು ಸೂಚನೆಯಿದೆ.

---

೪. ಈಗಿನ ಶಿಕ್ಷಣ ಪದ್ಧತಿಯಿಂದ ನಮ್ಮ ಸ್ವಭಾವವು ರೂಪಾಂತರ ಹೊಂದಿದ್ದನ್ನ ನೋಡಬೇಕಾದರೆ, ಮತ್ತೊಂದು ಉದಾಹರಣೆಯನ್ನು ಕೊಡಬಹುದು. ಮದ್ರಾಸ ಕಾಯದೆ ಕೌನ್ಸಿಲಿನ ಶ್ರೀ ರಘುಚಂದ್ರ ಬಲ್ಲಾಳರವರು ಮಂಗಳೂರಿನ ಹೆಣ್ಣು ಮಕ್ಕಳ ಶಾಲೆಯ ಕುರಿತು ಒಂದು ಪ್ರಶ್ನೆಯನ್ನು ಕೇಳಿದರು. ಮಂಗಳೂರಿನೊಳಗಿನ ಹೆಣ್ಣು ಮಕ್ಕಳ ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಇಂಗ್ಲಿಷ ಭಾಷೆಯಿಂದ ವಿಷಯಗಳನ್ನು ಕಲಿಸುವ ಹಕೀಕತ ನಿಜವೋ ? ಎಂದು ಕೇಳಿದ ಪ್ರಶ್ನೆಗೆ, ಸರಕಾರವು ತಲೆ ದೂಗಿಸಿ ಕಾರಣಗಳನ್ನು ವಿವರಿಸಿತು. ಈ ಕಾರಣಗಳನ್ನು ಭಾರತೀಯರೆಲ್ಲರೂ ಕೇಳಿ, ಮೂಕಸಾಕ್ಷ್ಯಂತರಾಗುವರು. " ಮಂಗಳೂರದೊಳಗಿನ ಹೆಣ್ಣು ಮಕ್ಕಳು ಮನೆಯೊಳಗೆ ಮಾತನಾಡುವ ಭಾಷೆಯು ತುಳು ಅಥವಾ ಕೊಂಕಣಿ. ಆದರಿಂದ ಅಲ್ಲಿಯ ಹೆಣ್ಣು ಮಕ್ಕಳಿಗೆ ಕನ್ನಡದಿಂದ ವಿಷಯಗಳನ್ನು ಕಲಿಸಿದರೆ, ಗ್ರಹಿಸಲಾಗುವದಿಲ್ಲ ಆದರಿಂದ ಇಂಗ್ಲಿಷಿನ ಮಧ್ಯಸ್ಥಿಯಿಂದ ಶಿಕ್ಷಣ ಕಾರ್ಯವನ್ನು ನೆರವೇರಿಸಬೇಕಾಗಿದೆ." ಕಾರಣವನ್ನು ಕೇಳಿ, ತುಳು ಅಥವಾ ಕೊಂಕಣಿಗೆ ಇಂಗ್ಲಿಷ ಭಾಷೆಯು ಕನ್ನಡಕ್ಕಿಂತ ಸಮೀಪದೆಂದು ಪ್ರಯಸ್ಥರು ಭಾವಿಸಬಹುದು. ಇಲ್ಲದಿದ್ದರೆ, ಇಂಗ್ಲಿಷದಿಂದ ತುಳು ಯಾ ಕೊಂಕಣಿ ಬಲ್ಲದ ಚಿಕ್ಕ ಬಾಲಕಿಯರಿಗೆ ವಿದ್ಯಾದಾನ ಮಾಡುವ ಬಗೆ ಹೇಗೆ ? ನಮ್ಮ ಅರಸರ ಕಾಲದಲ್ಲಿ ೬ ಸಾವಿರ ಮೈಲು ದೂರದ ಇಂಗ್ಲಿಷು ನಮಗೆ ಬಳಕೆದ್ದಾಗಿ ಬಳಿಯ ಕನ್ನಡವು ದೂರವಾಯಿತು ! ಇದಕ್ಕೂ ಅಧಿಕ ವಾದ ಚಮತ್ಕಾರವು ಯಾವುದಿದೆ ? ಮಂಗಳೂರಿನವರು ಈ ಕುರಿತು ತಕ್ಕ ಚಳವಳಿ ನಡಿಸಬೇಕಾಗಿಯೂ ತುಳು ಯಾ ಕೊಂಕಣಿ ಭಾಷೆಯಿಂದ ವಿದ್ಯಾದಾನ ಮಾಡಲು ಅಸಾಧ್ಯವಿದ್ದಲ್ಲಿ ನಮ್ಮ ಪ್ರಾಂತ ಭಾಷೆಯಾದ ಕನ್ನಡದಿಂದಲೇ ಶಿಕ್ಷಣವನ್ನೀಯಲು ಅಗ್ರಹ ಹಿಡಿಯಬೇಕಾಗಿಯೂ ನಮ್ಮ ಬಿನ್ನಹವಿದೆ. ನಮ್ಮಲ್ಲಿಯ ಬಾಲಕಿಯರು ಗೃಹಿಣಿಗಳಾಗಿ ಕರ್ನಾಟಕದಲ್ಲಿಯೇ ಉಳಿಯುವವರಲ್ಲದೆ, ವಿಲಾಯತಿಗೆ ಹೋಗಲಾರರು, ಎಂಬ ಮಾತನ್ನು ನಾವು ಸರಕಾರಿಗೂ ಹೇಳ ಬಯಸುವೆವು. ಇದಲ್ಲದೆ, ಕರ್ನಾಟಕದೊಳಗಿನ ಬಾಲಕಿಯರಿಗೆ ಕನ್ನಡವು ಇಂಗ್ಲಿಷಿಗಿಂತ ಕಷ್ಟವೆಂದು ಹೇಳುವದು ನಾಚಿಕೆಗೇಡಿತನವು; ಸ್ವಾಭಿಮಾನ ಶೂನ್ಯತ್ವ. ಬಾಲಕಿಯರೂ ಇತ್ತ ಲಕ್ಷಗೊಟ್ಟು ಕನ್ನಡದ ಅಭಿಮಾನ ಹಿಡಿಯಬೇಕಾಗಿ ನಮ್ಮ ಬಿನ್ನಹವಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಹುಬ್ಬಸಳಿಯ ಪತ್ರಿಯಲ್ಲಿ ಮೋಡಗಳಾಗುತ್ತವೆ; ಆದರೆ ಮಳೆ ಹನಿಸುವದಿಲ್ಲ. ಪೈರುಗಳು ಬಾಡಹತ್ತಿವೆ. ಕದರು ತೆಗೆಯುವಾಗ ನೀರಿಲ್ಲದಿದ್ದರೆ, ಮುಂದಿನ ಗತಿಯೇನೆಂದು ಬೇಸಾಯಗಾರರು ಚಿಂತಾತುರರಾಗಿರುವರು. ಊರಲ್ಲಿಂತೂ ಅತಿ ಸಾರದ ಬೇನೆಯು ಇನ್ನೂ ಬಿಡಾರವನ್ನೇ ಬಿಟ್ಟಿಲ್ಲ. ಕೆರವಟ್ಟೆಯ ಬಳಿ ಹಳ್ಳೇರಜಾತಿಯ ಹೆಂಗಸು ಹೊರಕಡಿಯ ವೇದನೆಗಳನ್ನು ಸಹಿಸಲಾರದೆ ಬಾವಿಯಲ್ಲಿ ಹಾರಿಕೊಂಡು ಮುಕ್ತಳಾದಳು. ಎಂಥ ಪ್ರಕಾರವಿದು ! ಈ ವಾರದಲ್ಲಿ ೦-೮೫ ಇಂಚು ಮಳೆಬಿತ್ತು. ಈ ವರೆಗೆ ೧೨೧-೩ ಇಂಚು ಮಳೆಯಾಯಿತು.

ಹೆಗಡೆಯಲ್ಲಿ ಕಳೆದ ಮಂಗಳವಾರಕ್ಕೊಂದು ಅದ್ಭುತ ನೋಟವು ದೃಗ್ಗೋಚರವಾಯಿತು. ಇಲ್ಲಿಯ ಇಂಗ್ಲಿಷ ಶಾಲೆಗೆ ಹೆಚ್ಚು ೫-೬ ಮಂದಿ ಹುಡುಗರು ಹೆಗಡೆಯಲ್ಲಿಯೇ ಊಟ ತೀರಿಸಿಕೊಂಡು ಶಾಲೆಗೆ ಬರುತ್ತಾರೆ. ಮಂಗಳವಾರಕ್ಕೆ ಕೆಲವು ಹುಡುಗರು ಮುಂದಾದರು. ಗೋವಿಂದ ನಾರಾಯಣ ಹೆಗಡೆ ಎಂಬ ಹುಡುಗನು ಹಿರಿಯವರನ್ನು ಕೂಡಿಕೊಳ್ಳಲು ಅವಸರದಿಂದ ಹೆಗಡೆಯಿಂದ ಇತ್ತಕಡೆ ಬರುತ್ತಿದ್ದನು. ಆಗ ಮಧ್ಯಾನ್ಹ ಸಮಯವಾಗಿತ್ತು. ಸಾರಂಗಧರಪಾಡೆಯ ದೇವಸ್ಥಾನದ ಬಳಿಗೆ ಬಂದಕೂಡಲೆ ಅವನು ಮುಂದೆ ಹುಟ್ಟು ಹೆಂಗಸನ್ನೂ, ಅವಳಿಗೆದಿರಾಗಿ ಘಟ್ಟಿಯಾದ ಹುಟ್ಟು ಆಳನ್ನೂ ನೋಡಿದನು. ಹೆಂಗಸು ಹೆಗಡೆಯ ಗಡಿಯನ್ನು ದಾಟಲು ಹವಣಿಸುತ್ತಿದ್ದಳಂತೆ ! ಗಡಿಯ ಕಾವಲುಗಾರನಾಗಿದ್ದ ಆಳು ಅವಳಿಗೆ ಆತಂಕ ಮಾಡುತ್ತಿದ್ದನು ! ! ಕೆಲಹೊತ್ತು ಏನೇನೋ ವಾಗ್ವಾದ ನಡೆಯಿತು ಹೆಂಗಸು ಅಸ್ಪೃಶ್ಯಳಾದಳು ! ! ! ಹುಡುಗನು ಹೌಹಾರಿ ಹೆಗಡೆಗೇ ಹಿಂತಿರುಗಿ ನಡೆದನಂತೆ.

ಇಲ್ಲಿಯ ಸಹಕಾರಿ ಸಂಘದ ಮೆನೇಜಿಂಗ ಕಮಿಟಿಯವರು ಗಿಬ್‌ಹೈಸ್ಕೂಲಿಗೆ ಸಂಘದ ಶಿಕ್ಷಣನಿಧಿಯೊಳಗಿಂದ ರೂಪಾಯಿ ೩೦೦ನ್ನ ಅರ್ಪಿಸಿರುವರು.

ಹೊನ್ನಾವರದ ಗಂಗಾಭಾಗೀರಥಿ ಗಿರಿಜಾಬಾಯಿಯವರು ಮಾಡಿದ ಮಾನನಷ್ಟದ ಫೌಜದಾರಿ ಮೊಕದ್ದಮೆಯಲ್ಲಿ ಇಲ್ಲಿಯ ೧ ನೇ ವರ್ಗ ಮೆಜಿಸ್ಟ್ರೇಟರು ಇಬ್ಬ ಆರೋಪಿಗಳ ಮೇಲೆ ಚಾರ್ಜ ಹಾಕಿ ಆರೋಪವನ್ನಿಟ್ಟಿದ್ದರಷ್ಟೇ. ಈ ಕುರಿತು ಗಂ| ಭಾ ಗಿರಿಜಾಬಾಯಿಯವರು ಕಾರವಾರದ ಸೆಶನ್ಸ ಕೋರ್ಟಿನಲ್ಲಿ ಅಪೀಲು ಮಾಡಲು, ಸದರ ಆರೋಪಿಗಳ ಮೇಲೆ ಆರೋಪವನ್ನಿಟ್ಟು ಪುನಃ ಮೊಕದ್ದಮೆಯನ್ನು ನಡಿಸಬೇಕೆಂದು ಸೆಶನ್ಸ ಜಡ್ಜರು ವಿಧಿಸಿದರು. ಈ ಹುಕುಮಿನಮೇಲೆ ಆರೋಪಿಗಳು ಹೈಕೋರ್ಟಿಗೆ ಮಾಡಿದ ಅರ್ಜಿಯನ್ನು ನ್ಯಾಯಮೂರ್ತಿಗಳು ವಿಚಾರಿಸಿ, ಜಡ್ಜರ ಹುಕುಮನ್ನು ರದ್ದುಪಡಿಸಿ, ಮೆಜಿಸ್ಟ್ರೇಟರ ಹುಕುಮನ್ನು ಸ್ಥಿರಪಡಿಸಿರುವರು, ನ್ಯಾಯಮೂರ್ತಿಗಳು ಜ್ಞಾತಿಸಭೆಯ ಹಕ್ಕಿನ ಕುರಿತು ಬರೆದ ಉಲ್ಲೇಖಗಳನ್ನು ಈ ಮುಂದೆ ಸಮಾಲೋಚಿಸಬೇಕಾಗಿದೆ.

ಕಾರವಾರ— ಮಳೆಯಿಲ್ಲ ಒಕ್ಕಲಿಗರ ಗೋಳು. ಅಕ್ಕಿಯದರವು ಏರುತ್ತಲಿದೆ.

ಇಲ್ಲಿಯ ಮರಾಠಾ ವಾಚನಾಲಯದ ವಿದ್ಯಮಾನ ಇತಿಹಾಸ ಪ್ರಸಿದ್ಧಳಾದ ಅಹಿಲ್ಯಾಬಾಯಿ ಹೋಳಕರರವರ ಪುಣ್ಯತಿಥಿಯು ನೆರವೇರಿತು. ಜಿಲ್ಲಾ ಬೋರ್ಡಿನ ಸಭಾಸದರಾದ ರಾ। ದತ್ತು ಸುಬ್ಬು ನ್ಯಾಕರವರು ಈ ಉತ್ಸವದ ಪ್ರವರ್ತಕರು. ಕೆಳಗಿನ ರಾವಸಾಹೇಬ ಪಾಟೀಲರವರು ಅಧ್ಯಕ್ಷರಾಗಿದ್ದರು. ರಾ। ಸಾವಂತರವರು ಅಹಿಲ್ಯಾಬಾಯಿಯವರ ಪಂಚರಿಯನ್ನು ಸಭಿಕರಿಗೆ ಮಾಡಿಕೊಟ್ಟರು ಅಹಿಲ್ಯಾಬಾಯಿಯವರು ಮೊದಲು ತೀರ ಹಿಂದ ಮನೆತನದವರಿದ್ದು ಕೇವಲ ಸ್ವಪರಾಕ್ರಮದಿಂದ ಭೂತಲದಲ್ಲಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿರುವರು. ಚಿಕ್ಕಂದಿನಲ್ಲಿ ಅಹಿಲ್ಯಾಬಾಯಿಯವರ ಮೇಲೆ ಒದಗಿದ ಆಪತ್ತುಗಳನ್ನು ಬಾಯಿಯಿಂದ ವರ್ಣಿಸುವದಸದಳವು. ಮೊದಲು ಅಹಿಲ್ಯಾಬಾಯಿಯವರ ಪತಿಗಳು ತೀರಿಕೊಂಡರು. ಆ ಬಳಿಕ ಅವಳ ಒಬ್ಬನೇ ಮಗನೂ ತೀರಿಕೊಂಡನು. ಆದರೂ ಅಹಿಲ್ಯಾಬಾಯಿಯವರು ಎದೆಗುಂದಲಿಲ್ಲ. ಈಶಸಂಕಲ್ಪದಂತೆ ತಮಗೆ ಪ್ರಾಪ್ತವಾದ ರಾಜ್ಯಾಧಿಕಾರವನ್ನು ಪ್ರಜೆಗಳ ಅಭಿವೃದ್ಧಿಗಾಗಿ ಉಪಯೋಗಿಸಿದರು. ಪುಣ್ಯಮಯವಾದ ಕ್ಷೇತ್ರಸ್ಥಾನಗಳಲ್ಲಿ ಛತ್ರಗಳನ್ನೂ, ಧರ್ಮಶಾಲೆಗಳನ್ನೂ ಕಟ್ಟಿಸಿದರು. ನಮ್ಮ ಗೋಕರ್ಣ ಕ್ಷೇತ್ರದಲ್ಲಿಯೂ ಅಹಿಲ್ಯಾಬಾಯಿಯವರ ಛತ್ರವಿದೆ ಕಲಕತ್ತೆಯಿಂದ ಪುಣೆಯವರೆಗೆ ರಾಜಮಾರ್ಗವನ್ನೂ ಅಹಿಲ್ಯಾಬಾಯಿಯವರು ರಚಿಸಿದರು. ಇನ್ನೂ ಅನೇಕ ಪ್ರಜಾನುರಂಜನವಾದ ಧರ್ಮಕಾರ್ಯಗಳನ್ನು ನೆರವೇರಿಸಿದರು ಅಹಿಲ್ಯಾಬಾಯಿಯವರ ಪುಣ್ಯತಿಥಿಯ ಮಹೋತ್ಸವವು ಇಲ್ಲಿ ನೆರವೇರಿದ್ದು ಇದೇ ಮೊದಲನೇ ಸಲ. ಉತ್ಸವದ ಪ್ರವರ್ತಕರಾದ ರಾ। ದತ್ತು ಸುಬ್ಬು ನ್ಯಾಕರ ಈ ಕಾರ್ಯವು ಸ್ತುತ್ಯವಿದೆ.

ಬೆಳಗಾವಿಗೆ ಮೋಟಾರುಗಳ ಓಡಾಟವು ಪ್ರಾರಂಭವಾಗಿದೆ. ಟಿಕೇಟು ದರ ೮ ರೂ. ೮ ತಾಸಿನಲ್ಲಿ ಬೆಳಗಾವಿಯನ್ನು ಕಾಣಬಹುದು. ಕಟ್ಟು ದಿನಗಳಲ್ಲಿ ಮೋಟಾರು ಓಡಾಟವು ಅಗ್ಗ !

ಕಾರುಪುರಸ್ಥರು ಬರೆಯುವದೇನೆಂದರೆ:— ಸ್ಕೂಲ ಬೋರ್ಡಿನ ಅಲೆಕ್ಷನ ಪ್ರಕರಣವು ಸಂಕಾರದ ಕಡೆಗೆ ನಿರ್ಣಯಕ್ಕಾಗಿ ಹೋದದವಾಗಿರುವದು. ಸಂಕಾರದ ನಿರ್ಣಯವನ್ನು ಬೋರ್ಡಿನವರು ಹಾರೈಸುತ್ತಿರುವರು. ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಮಿ। ಗೋಪಿಯವರ ಪಕ್ಷ ಪರೀಕ್ಷೆಯಾಯಿತು. ಇವರು ದೊಡ್ಡ ಗುಣಗ್ರಾಹಕರೆಂದು ತಂಗುರ ಸಾರಲಾಗಿತ್ತು. ಇದು ಸಾರ್ಥಕವಾಯಿತು. ಮಿ। ಗೋಪಿಯವರಿಗೆ ರಾ। ಎಸ್. ಎಚ್. ನಾಯಕ ಎಮ್. ಎ. ಎಲ್ ಎಲ್. ಬಿ. ವಕೀಲ ಇವರಿಗಿಂತ ರಾ। ಜಿ. ಆರ್. ಯಾಜಿರವರೇ ಗುಣವಂತರೆಂದು ಭಾಸವಾಯಿತು. ರಾ। ಯಾಜಿಯವರಿಗೆ ಮಿ। ಗೋಪಿಯವರ ಗುಣಗಳು ತಿಳಿದು ಬಂದಂತೆ, ಮಿ। ಗೋಪಿಯವರಿಗೆ ರಾ। ಯಾಜಿಯವರ ಗುಣಗಳು ಹೊಳೆದವು. ಜೆಯರಮನರಿಗೆ ಅನಾ

ಕೋಲಾರದಾಗ ಅವರ ಕೆಲಸ ಮಾಡಲಿಕ್ಕೆ ವ್ಯಾಸ ಚೆಯರಮನರನ್ನು ನೇಮಿಸುತ್ತಾರೆ. ಹೆಚ್ಚಾಗಿ ಸ್ಥಳೀಕ ಗೃಹಸ್ಥರಿರುತ್ತಾರೆ. ಮಾ|| ಸಾಧು-ಕರದಲು ಸರಕಾರಿ ವಕೀಲರಾಗಿ ಈಗ ಇಲ್ಲಿಯೇ ಉಳಕೊಂಡಿರುವರು. ಮೇಲಾಗಿ ಅವರು ಕಳೆದ ಬೋರ್ಡಿನಲ್ಲಿ ವ್ಯಾಸ ಚೆಯರಮನರಿದ್ದರು. ಅದರೂ ದಾ|| ಯಾಜಿಯವರು ರಾ|| ನಾಯಕರಿಗಿಂತ ಜಜ್ಞಾನ ಗುಣವಂತರೆಂದು ವಿ| ಗೋಪಿಯವರು ಎಣಿಸಿರುವರು. ! ವಿ|| ಗೋಪಿಯವರ ಗುಣಗ್ರಾಹಕತೆಯು ಈ ಇಲೆಕ್ಷನಿನಲ್ಲಿ ಸಿದ್ಧವಾಯಿತು. " ಇತ್ಯಾದಿ.

ವೃತ್ತಸಾರ.

— ಮುಂಬಯಿಯ ಬೆರಿಸ್ಟರರಾದ ವಿ.| ನಸರವಾನಜೀ ಗೆಝುದ್ದಾರರವರು ಹೊನಕಬೀ ಘಾಟಿನ ಮೇಲಿಂದ ಹೋಗುವಾಗ ಮೋಟಾರಿನ ಅಪಘಾತದಿಂದ ಪ್ರಾಣಗಳೆದರು!

— ಶ್ರೀ| ಪಾಂಡುರಂಗ ಶ್ರೀನಿವಾಸ ಕಟ್ಟಿಯವರ ಮೇಲೆ ಅವರ ಅಂಗ್ಲ ಜೊತೆಗಾತಿಯು ಮಾಡಿದ ಫಿರ್ಯಾದೆಯನ್ನು ಮುಂಬಯಿಯ ಮ್ಯಾಜಿಸ್ಟ್ರೇಟರು ತಳ್ಳಿಹಾಕಿರುವರು. ಶ್ರೀ| ಕಟ್ಟಿಯು ೨೦ ವರ್ಷ ಜೊತೆಗಾತಿಗೆ ಸಂಬಳ ಕೊಡಲು ಒಪ್ಪಿದ್ದಾಗ್ಯೂ ಅವಳಿಗೆ ಹಿಂದುಸ್ಥಾನದಲ್ಲಿ ಮನಸ್ಸು ನಿಲ್ಲಲಿಲ್ಲ. ಅಂಗ್ಲ ಸ್ತ್ರೀಯರ ವಿಷಯದಲ್ಲಿ ಎಚ್ಚರಾಗಿರಬೇಕು!

— ಆಗಿಬಂದಿರುವರಿಗೆ ೧೯೩೩-೩೪ ಇಸ್ವಿಯಲ್ಲಿ ಪ್ರಯಾಣಿಕರಿಂದ ೩೯ ಕೋಟಿ ರೂಪಾಯಿಗಳ ಉತ್ಪನ್ನವಾಯಿತು. ಮೂರನೇ ವರ್ಗದ ಪ್ರಯಾಣಿಕರಿಂದ ೩೩ ಕೋಟಿ ರೂಪಾಯಿಗಳು ದೊರೆತಿವೆ! ೧-೨ ವರ್ಗದವರಿಂದ ೩ ಕೋಟಿ ರೂಪಾಯಿಗಳು ಕ್ಷೀಣಿಸಿದವು!! ಹೀಗಿದ್ದರೂ ೩ ನೇ ವರ್ಗದ ಪ್ರಯಾಣಿಕರ ಕಷ್ಟಗಳಿಗೆ ಕಿವಿಗೊಡುವವರಿಲ್ಲ.

— ಕಚ್ಛ-ಮಾಂಡವಿಯಲ್ಲಿ ಈ ವರ್ಷ ಮೇಘರಾಜನು ವಿಪರೀತವಾಗಿ ಅನುಗ್ರಹಿಸಿರುವನು. ಅಲ್ಲಿ ಮಳೆ ಬೀಳುವದು ವರ್ಷಕ್ಕೆ ೧೨ ಇಂಚು. ಈ ಸರ್ತಿಗೆ ೩೯ ಇಂಚು ಮಳೆಯಾಯಿತು. ಎರಡು ದಿನ ಎಡಬಿಡದೆ ಮಳೆ ಸುರಿದು ರುಕ್ಮಾವತಿ ನದಿಗೆ ನೆರೆ ಕಟ್ಟಿತು. ಮಾಂಡವಿ ಬಂದರವು ನೀರಿನಲ್ಲಿ ಮುಳುಗಿಕೊಂಡಿದೆ, ೬೦೦ ಮನೆಗಳು ಕುಸಿದು ಬಿದ್ದವು ಬೆಳೆ ನಷ್ಟ!

— ಬೇಸಾಯದ ವಿಚಾರಕ್ಕಾಗಿ ಸರಕಾರವು ನೇಮಿಸಿದ ಕಮೀಶನು ಧಾರವಾಡಕ್ಕೆ ನವಂಬರ ೮-೯ ನೇ ವರೆಗೆ ಉಳಿಯುವದಂತೆ! ಕಮೀಶನಿನವರು ನಮ್ಮ ಕಡೆಯ ಬೇಸಾಯ ಭೂಮಿಯನ್ನು ಒಂದಾವರ್ತಿ ನೋಡಿ ಹೋಗಬಹುದು! ಬೇಸಾಯ ನೋಡಿ ಬೇಸರಬಂದರೆ, ವನದೇವಿಯೊಡನೆ ವಿಹರಿಸಬಹುದು.

— ಮೈಸೂರಿನ ಸಾಧ್ವಿ-ಕಂಠದಭ್ಯುದಯ-ಮೈಸೂರ ಪೇಟ್ರಿಯಟ ಪತ್ರಿಕೆಗಳ ಸಂಪಾದಕರಾದ ಶ್ರೀ| ವೆಂಕಟಕೃಷ್ಣಯ್ಯನವರು ಸಪ್ಟೆಂಬರ ೨೧ ನೇ ವರುಷದ ವರ್ಧಂತಿ ನೆರವೇರಿಸಿದರು. ಕರ್ನಾಟಕದ ಪತ್ರಿಕಾ ಪ್ರಪಂಚದ ಪಿತಾಮಹರವರು!

— ತಿಬೇಟದ ಸರಕಾರದವರ ಅನುಜ್ಞೆಯನ್ನು ಪಡಕೊಂಡು ಮಹಾಸಂಘ ರಾಜ ಎಂಬ ಬೌದ್ಧ ಮತ ಸಂಸ್ಥೆಯವರು ಬೆಂಗಳೂರಿನ ಬಸವನ ಗುಡಿಯಲ್ಲಿ ಬೌದ್ಧ ಮಠದ ಮಂದಿರವನ್ನು ಕಟ್ಟಿಸುವವರಿದ್ದಾರಾಗಿ ತಿಳಿಯುತ್ತದೆ

— ಧಾರವಾಡದ ಜಿಲ್ಲಾ ಲೋಕಲ ಬೋರ್ಡಿನವರು ಕರ್ನಾಟಕ ಏಕೀಕರಣ ಹಾಗು ಕರ್ನಾಟಕ ವಿಶ್ವವಿದ್ಯಾಲಯಗಳ ಕುರಿತು ಠರಾವುಗಳನ್ನು ಕೈಕೊಂಡಿರುವರು.

— ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದಲ್ಲಿ "ವೈದಿಕ ಜ್ಞಾನ ಪ್ರಸಾರಕ ಸಂಘ"ವು ಸ್ಥಾಪನೆಹೊಂದಿದೆ. ಹಿಂದೂ ಧರ್ಮವನ್ನು ಬೋಧಿಸುವದೇ ಈ ಸಂಘದ ಉದ್ದೇಶವಾಗಿದೆ.

— ಮೊಗಲ ರಾಜ್ಯದ ಸಂಸ್ಥಾಪಕರಾದ ಬಾಬರ-ಹುಮಾಯೂನರ ಕಾಲದಲ್ಲಿ ಹಿಂದೂ-ಮುಸಲ್ಮಾನರೊಳಗೆ ಕಲಹಗಳಿದ್ದಿಲ್ಲವೆಂದು ಬಾಬರನು ಬರೆದಿಟ್ಟ ಮೃತ್ಯು ಪತ್ರದಿಂದ ಸರ ಅಬ್ದುಲ ಅಲ್ಲೀಅರಗರವರು ಸಿದ್ಧಪಡಿಸಿರುವರು.

— ಮುಕ್ತಿ ಕ್ಷೇತ್ರದೊಳಗಣ ಪೈಗಂಬರ ಸಮಾಧಿಯ ಮೇಲಣ ಆಭರಣಗಳು ೩೦ ಲಕ್ಷ ರೂಪಾಯಿಗಳ ಬೆಲೆಯವಂತೆ! ಪೈಗಂಬರರ ಧರ್ಮಕಾರ್ಯದ ವಿಚಾರವಾದರೆ, ಈ ಶಾಣಿಕೆಯು ತ್ಯಾಜ್ಯವಾಗಿರುತ್ತದೆ.

— ಪಂಜಾಬದಲ್ಲಿ ಗಾಮಾ ಎಂಬ ಪ್ರಸಿದ್ಧ ಜಟ್ಟಿಯಿರುವನು! ಅವನೊಡನೆ ಮಲ್ಲಯುದ್ಧ ಮಾಡಲು ಯುರೋಪ ಖಂಡದ ಪೋಲೆಂಡದೊಳಗಣ ವಿಖ್ಯಾತ ಜಟ್ಟಿಯಾದ ಝಿಬಿಸ್ಕೋ ಎಂಬುವನು ಬರಲಿಕ್ಕಿದ್ದಾನೆ. ಸ್ವಾಗತಂ!

— ಇಟಾಲಿಯ ಸರ್ವಾಧಿಕಾರಿಗಳಾದ ಮುಸೋಲಿನಿಯವರ ಆಜ್ಞೆಯಂತೆ ಅಲ್ಲಿಯ ಸ್ತ್ರೀಯರು ಸ್ವದೇಶದಲ್ಲಿಯ ಅರಿವೆಯನ್ನೇ ಉಪಯೋಗಿಸುವ ವ್ಯವಸ್ಥೆ ಮಾಡಲಿರುವರು. ಸ್ತ್ರೀಯರ ಉಡುಗೆ ತೊಡಿಗೆಯ ಮೂಲಕ ಪರದೇಶಗಳಿಗೆ ಹೋಗುವ ದ್ರವ್ಯವು ತಡೆಯಲ್ಪಡಬೇಕೆಂಬುದು ಈ ಯೋಜನೆಯಾಗಿದೆ.

— ಮಂಗಳೂರಿನ ಮುನಿಸಿಪಾಲಿಟಿಯವರು, ಆವಲಕ್ಕಿ ಮಂಡಕ್ಕಿಗಳನ್ನು ಮನೆ ಮನೆಗೊಯ್ದು ಮಾರಿ ಹೊಟ್ಟೆಯ ಗೋಳನ್ನು ನೀಗಿಸಿಕೊಳ್ಳುವವರ ಮೇಲೆ ತೆರಿಗೆ ಹೇರುವ ವಿಚಾರದಲ್ಲಿರುವರು. ಇಂಥ ಸ್ವರಾಜ್ಯವು ನಮಗೆ ಸಿಕ್ಕಿದೆ.

— ರಷ್ಯಾದೇಶದಲ್ಲಿ ಸ್ತ್ರೀಯರಿಗೆ ಯುದ್ಧ ಕಲೆಯನ್ನು ಕಲಿಸುವ ಏರ್ಪಾಟು ನಡೆದಿದೆ. ಮುಂದಿನ ಶಾಂತತೆಯ ತಯಾರಿ!

— ವಿಲಾಯತಿಯೊಳಗಣ ಒಬ್ಬ ವೈದ್ಯರಾಜನ ಬುದ್ಧಿ ವೈಭವ ಕೇಳಿ! ಗಂಡು ಕೂಸನ್ನು ತಾನು ಹೆಣ್ಣನ್ನಾಗಿ ರೂಪಾಂತರಿಸಬಹುದೆಂದು ಪ್ರತಿಪಾದಿಸುತ್ತಾನಂತೆ!

— ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವವು ವಿಜಾಪುರ ಜಿಲ್ಲಾ ಲೋಕಲ್ಬೋರ್ಡಿನ ಅಧ್ಯಕ್ಷರಾದ ಶ್ರೀ| ಶಂಕರಗೌಡ ಪಾಟೀಲರವರ ಅಧ್ಯಕ್ಷತೆಯಲ್ಲಿ ಕಳೆದ ತಾ ೪-೯-೩೬ನೇಗೆ ಸಾಂಗವಾಗಿ ನೆರವೇರಿತು. ಸಂಘದ ಗ್ರಂಥ ಪರೀಕ್ಷಕರ ಸೂಚನೆಯ ಮೇರೆಗೆ ಮುಂಬಯಿಯ ಸರಕಾರದಿಂದ ಕೊಟ್ಟ ರೂಪಾಯಿ ೫೦೦ ಗಳನ್ನು ಮಾನನೀಯ ಗ್ರಂಥ ಬರೆದವರಿಗೆ ಹಂಚಲಾಯಿತು; ಕನ್ನಡ ಬರಹಗಾರರಂತೆಯೇ ಕನ್ನಡ ಓದುಗರ ಅಪೇಕ್ಷೆಯೂ ಸಾಗಿ ಅವರಿಗೂ ಬಹುಮಾನಗಳು ಹಂಚಲಾದವು. ಅಧ್ಯಕ್ಷರಾದ ಶ್ರೀ| ಶಂಕರಗೌಡ ಪಾಟೀಲರವರು ಅಧ್ಯಕ್ಷರಾಗಿ ಮಾತಾಡುವಾಗ, ವಿದ್ಯಾವರ್ಧಕ ಸಂಘದವರು ಕನ್ನಡ ಕ್ರಮಿಕ ಪುಸ್ತಕಗಳನ್ನು ತಯಾರಿಸಿ ಕನ್ನಡ ಭಾಷೆಯ ಪಾವಿತ್ರ್ಯವನ್ನು ಪಾಲಿಸಬೇಕೆಂದೂ, ಕರ್ನಾಟಕ ಏಕೀಕರಣಾದಿ ಉಪಯುಕ್ತ ವಿಷಯಗಳ ಮೇಲೆ ಕಾದಿಗಳನ್ನು ರಚಿಸಿ ಕನ್ನಡ ವಿದ್ಯಾರ್ಥಿಗಳಿಗೆ ಬೋಧಿಸಬೇಕೆಂದೂ ನುಡಿದರು. ಮಾರನೇದಿನ ಸಭೆ ಸೇರಿದಾಗ ಶ್ರೀ| ಮುದವೀಡ ಕೃಷ್ಣರಾಯರು ಅಧ್ಯಕ್ಷರಿದ್ದರು. ವಿದ್ಯಾವರ್ಧಕ ಸಂಘದ ಕಚೇರಿ ಕಾರ್ಯವನ್ನು ಕೈಕೊಳ್ಳಬೇಕೆಂದೂ, 'ವಾಗ್ಭೂಷಣ' ಪತ್ರಿಕೆಯನ್ನು ಇನ್ನೊಂದು ಸಲ ನಡೆಸಬೇಕೆಂದೂ ಗೊತ್ತಾಯಿತು. ಕರ್ನಾಟಕ ವಿದ್ಯಾವರ್ಧಕ ಸಂಘವು ಮುಂದಿನ ದಶೆಯ ಸಂಕಲ್ಪದಾದಿ ಬಹಳ ಪರಿಷತ್ತುಗಳು ಬೇಕು. ಆದರೂ ಸಂಘದ ಕಟ್ಟಡಕ್ಕಾಗಿ ಅವಶ್ಯವುಳ್ಳ ೫-೬ ಸಾವಿರ ರೂಪಾಯಿಗಳು ಕೈಸೇರಿಲ್ಲ ಎಂತ ಕೊರತೆಯೇ ಸಿಕ್ಕಿಯಿದೆ!

— ದಾವಣಗೆರೆಯ ಅವರಗೆರೆಯಲ್ಲಿ ಒಬ್ಬ ಸಾಧುಗಳ ಆಗಮನವಾಗಿದೆ. ಸಾಧುಗಳು ರೋಗಿಗಳ ಮೈ ಗಾಯಗಳನ್ನು ನೆಕ್ಕಿ ಮೂರು ದಿವಸಗಳಲ್ಲಿ ರೋಗಗಳನ್ನು ನಿವಾರಿಸುತ್ತಾರಾಗಿ ಸುದ್ದಿ!

— ೧೯೩೪—೩೫ ನೇ ಸಾಲಿನಲ್ಲಿ ಪ್ರಜಾ ಕ್ಷೇಮಕ್ಕಾಗಿ ಕಲಂಗಣಿಗಳ ರೂಪ್ಯಗಳನ್ನು ವೆಚ್ಚಮಾಡಿದರು ಲೋಕಸಂಖ್ಯೆಯ ಪ್ರಮಾಣದಿಂದ ತಲೆಗೆ ೪ ಆಣೆ ವಿದ್ಯಾಸಿಂಚಾರ ಬೀಳುತ್ತದೆ.

— ಅಯೋಧ್ಯಾ ಪ್ರಾಂತದ ಗಾಜೀಪೂರ ಜಿಲ್ಲೆಯ ಕಲೆಕ್ಟರರಾದ ತಗ್ಲುಸರರವರು ಸತ್ಯಕ್ಕೆ ಕಾರ್ಯಾರ್ಥಿಗಳಾದರು. ಇವರು ದೇಹಲೋಪಿಯನ್ನರು; ಆದರೆ ಆರ್ಯ ಸಮಾಜದ ಪ್ರಾಯಶ್ಚಿತ್ತ ವಿಧಿಗಳಿಂದ ಆರ್ಯರಾಗಿದ್ದರು. ತಮ್ಮ ದೇಹಕ್ಕೆ ವೇದೋಕ್ತ ವಿಧಿಗಳಿಂದ ಭಾಗೀರಥಿಯ ತೀರದಲ್ಲಿ ಅಗ್ನಿಸಂಸ್ಕಾರ ಕೊಡಬೇಕೆಂದು ಆರ್ಯ ತಗ್ಲುಸರರು ಅಪೇಕ್ಷಿಸಿದಂತೆ ಅವರ ಉತ್ತರ ಕ್ರಿಯೆಯು ನೆರವೇರಿಸಲ್ಪಟ್ಟಾಯಿತು!

— ಅಯರ್ಲಂಡದಲ್ಲಿ ಚಲಚ್ಚಿತ್ರ ಪಟದ ನಾಟಕ ಮಂದಿರಕ್ಕೆ ಬೆಂಕಿ ಹಚ್ಚಿ ೪೭ ಮಂದಿಗಳು ಸತ್ತರು. ೧೧ ಮಂದಿಗಳಿಗೆ ಘಾಯಗಳಾಗಿವೆ.

(೫ ನೇ ಪುಟದ ಮೇಲಿಂದ ಮುಂದರಿಸಿದ್ದು.)

ಲ್ಲಿ ನೆರವೇರಿಸಿದ ಕಾರ್ಯವನ್ನೂ, ದರದವನ್ನೂ ಕಲ್ಪಿಸಿದರೆ, ಮನಸ್ಸು ಸ್ತಂಭಿತವಾಗುತ್ತದೆ. ಶ್ರೀ| ಕೃಷ್ಣರಾಜೇಂದ್ರ ವಿ.ಲ್. ಮೈಸೂರ ಆಶುತೋಷ ಕಂಪನಿ ಮುಂತಾದ ವ್ಯಾಪಾರ ಔದ್ಯೋಗಿಕ ಸಂಸ್ಥೆಗಳ ಪ್ರವರ್ತಕರಾಗಿ ಅವರ. ಸಂಪಾದಿಸಿದ ದ್ರವ್ಯ ಸಂಗ್ರಹವನ್ನು ಲೋಕೋಪಕಾರಕ್ಕಾಗಿ ಅವರು ವ್ಯಯ ಮಾಡಿದರು. ೧ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ಮೈಸೂರಿನಲ್ಲಿ ಹಿಂದು ವಿದ್ಯಾರ್ಥಿ ಭವನವನ್ನೇರ್ಪಡಿಸಿದರು. ಈ ಭವನದಲ್ಲಿರುವ ೫೦ ಮಂದಿ ವಿದ್ಯಾರ್ಥಿಗಳಿಗೆ ತಿಂಗಳಿಗೆ ೫೦೦ ರೂಪಾಯಿ ವೆಚ್ಚದ ಊಟ ವಸತಿಗಳನ್ನಿಯುಕ್ತ ಬಂದಿರುವ ಪುಣ್ಯಾತ್ಮರಿರುವರು. ಅವಲ್ಲದೆ ಪ್ರತಿ ವರ್ಷಕ್ಕೆ ೧,೫೦೦ ರೂಪಾಯಿಗಳ ವಿದ್ಯಾರ್ಥಿವೇತನವನ್ನೂ ಶ್ರೀ| ವರ್ಧಮಾನಯ್ಯನವರು ಕೊಡುತ್ತಿದ್ದರು. ತಮ್ಮ ಜೈನ ಸಮಾಜದ ಅಭಿವೃದ್ಧಿಗಾಗಿ, ಜೈನ ಸಾಹಿತ್ಯದ ಪ್ರಚಾರಕ್ಕೆ ನೆರವಾದರು; ಜೈನವಿದ್ಯಾನಿಧಿ ಸಂಘವನ್ನು ಸ್ಥಾಪಿಸಿದರು; ಇವಲ್ಲದೆ ಶ್ರವಣ ಬೆಳಗುಳದ ಜೈನ ಬೋರ್ಡಿಂಗ ಶಾಲೆ, ಸಾಲಿಗ್ರಾಮದ ಸಂಸ್ಕೃತ ಪಾಠಶಾಲೆ ಮುಂತಾದ ವಿದ್ಯಾ ಸಂಸ್ಥೆಗಳನ್ನು ಪಾಲಿಸಿ ಪೋಷಿಸಿದವರು. ಶ್ರೀ| ವರ್ಧಮಾನಯ್ಯನವರು ಜೈನ ಸಮಾಜಕ್ಕೆ ಮಾಡಿದ ಉಪಕಾರವನ್ನು ಬಣ್ಣಿಸಿ ತೀರದು. ಕರ್ನಾಟಕಕ್ಕೊದಗಿದ ಹಾನಿಯು ಹೇಳಲಾಗದು! ಕಾಲಚಕ್ರದ ಮಹಿಮೆ !! ಈಶೇಚ್ಛೆ !!!

ಉಚಿತ ! ಉಚಿತ!!

ನನ್ನ ಶಾಸ್ತ್ರೀಯವಾದ
ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಟವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ, ಅಂತಹ ಶರೀರ ದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು. ನನ್ನಲ್ಲಿ ಕಲಿಯುತ್ತಿರುವವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೨ ಆಣೆಯ ಸ್ಟ್ಯಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತವಾಗದ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕಾಗಿ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್
ಬಸವನಗುಡಿ, ಬೆಂಗಳೂರಸಿಟಿ.

ಮಹಾತ್ಮರ ಆತ್ಮಚರಿತ್ರ.

(೧೬) ಈಶ ಸಂಕಲ್ಪವೇ ಬೇರೆ.

ದಾವೆಯು ನಿಕಾಲಿಯಾದ್ದರಿಂದ ನನಗೆ ಪ್ರಿಟೋರಿಯಾ ದಲ್ಲಿ ಉಳಕೊಳ್ಳುವ ಕಾರಣವಿರಲಿಲ್ಲ. ಆದ್ದರಿಂದ ನಾನು ಡರ್ಬಾನಿಗೆ ಮರಳಿದೆನು. ಮತ್ತು ಮನೆಗೆ ಮರಳಲು ತಯಾರಿ ಮಾಡಲಾರಂಭಿಸಿದೆನು. ನನಗೆ ಸತ್ಕರಿಸಬೇಕೆಂದು ಅಬ್ದುಲ್ಲಾ ಶೆಟ್ಟರ ಆಗ್ರಹವಾಯಿತು ಮತ್ತು ಸಿದನಹಾಮದಲ್ಲಿ ಅಬ್ದುಲ್ಲಾ ಶೆಟ್ಟರು ನನಗೊಂದು ಮೇಜವಾನಿಯನ್ನು ಕೊಟ್ಟರು.

ಶಿದನಹಾಮದಲ್ಲಿಯೇ ಇಡೀ ದಿವಸವನ್ನು ಕಳೆಯಬೇಕಾಗಿತ್ತು. ಆ ದಿನ ಕೆಲವು ವರ್ತಮಾನ ಪತ್ರಿಕೆಗಳು ನನ್ನ ಕೈಸೇರಿದವು. ಒಂದು ವೃತ್ತ ಪತ್ರಿಕೆಯ ಮೂಲೆ ಯಲ್ಲಿ "ಇಂಡಿಯನ್ ಫ್ರೆಂಚಾಯಿಜ" ಯಾನೆ ಹಿಂದೀ ಮತಾಧಿಕಾರವೆಂಬ ಸದರಿನಲ್ಲಿ ಒಂದು ಸಣ್ಣ ಸುದ್ದಿಯು ಪ್ರಸಿದ್ಧವಾಗಿತ್ತು. ನಾನದನ್ನೋದಿದೆನು. ನಾತಾಳದೊಳಗಿನ ಕಾಯಿದೆ ಕೌನ್ಸಿಲಿನ ಸಭೆಗೆ ಪ್ರತಿನಿಧಿಗಳನ್ನಾರಿಸುವ ಅಧಿಕಾರವು ಹಿಂದೀಯರಿಗಿತ್ತು. ಅದನ್ನು ಕಸಕೊಳ್ಳಲು ಕಾಯಿದೆ ಕೌನ್ಸಿಲಿನಲ್ಲಿ ಹೊಸ ಕಾಯಿದೆಯನ್ನು ಬರೆಸಿ... ಮೇಲ್ಕಂಡ ಸುದ್ದಿಯು ಪ್ರಕಟವಾ... ಕಾಯಿದೆಯ ಮಾಹಿತಿಯು ನನಗಿರಲಿಲ್ಲ. ಮೇಜವಾನಿಯ ಸಮಾರಂಭದಲ್ಲಿ ಸೇರಿದ ಸಭ್ಯ ಗೃಹಸ್ಥರಿಗೂ ಈ ಕುರಿತು ಎಳ್ಳಷ್ಟಾದರೂ ಸುದ್ದಿ ಇರಲಿಲ್ಲ.

ಅಬ್ದುಲ್ಲಾ ಶೆಟ್ಟರಿಗೆ ನಾನು ಈ ಕುರಿತು ವಿಚಾರಿಸಲು ಅವರು ನುಡಿದದ್ದೇನೆಂದರೆ,— "ಇಂಥ ವಿಷಯಗಳಲ್ಲಿ ನಮಗೇನು ತಿಳಿಯುತ್ತದೆ? ನಮ್ಮ ವ್ಯಾಪಾರಕ್ಕೆ ಬಾಧೆ ತಗಲುವದಕ್ಕೆ ಸಂಗತಿಗಳು ಮಾತ್ರ ನಮಗೆ ತಿಳಿಯುತ್ತವೆ. ಓರೆಂಜ ಫ್ರೀಸ್ಟೇಟ "ದೊಳಗಿನ ನಮ್ಮ ವ್ಯಾಪಾರವೆಲ್ಲ ಹಾಳಾದದ್ದು ನಿಮಗೆ ಗೊತ್ತೇ ಇದೆ. ಅದಕ್ಕಾಗಿ ನಾವು ಬಹಳ ಹೆಣಗಾಡಿದೆವು. ಆದರೆ ನಾವು ಹಸ್ತಗಳೂ ನಿರರ್ಥಕವಾದವು. ನಮಗೇನು ಓದು ಬರಹವಿಲ್ಲ. ನಾವು ಒಳ್ಳೆ ... ಪೇಟೆ ಧಾರಣೆ ಮುಂತಾದವುಗಳನ್ನು ತಿಳಕೊಳ್ಳುವದಕ್ಕಾಗಿ ನಾವು ಸಾಮಾನ್ಯವಾಗಿ ವರ್ತಮಾನ ಪತ್ರಿಕೆಗಳನ್ನು ಕೊಂಡುಕೊಳ್ಳುತ್ತೇವೆ. ಅಂಥಲ್ಲಿ ಕಾಯಿದೆಯ ಸಂಗತಿ ನಮಗೇನು ತಿಳಿಯಬೇಕು. ಇಲ್ಲಿಯ ಯುರೋಪಿಯನ್ನ ವಕೀಲರೇ ನಮ್ಮ ಕಣ್ಣು ಕಿವಿ; (ಅವರು ತೋರಿಸಿದರೆ ನಾವು ನೋಡಬೇಕು ಹೇಳಿದರೆ ಕೇಳಬೇಕು)

"ಆದರೆ ಇಲ್ಲಿಯೇ ಹುಟ್ಟಿ ಬೆಳೆದ ಶಿಕ್ಷಣಹೊಂದಿದ ತರುಣ ಭಾರತೀಯರು ಅನೇಕರಿರುವರು. ಅವರು ನಿಮಗೆ ನೆರವಾಗುವದಿಲ್ಲೇನು?" ಎಂದು ನಾನು ಪ್ರಶ್ನಿಸಿದೆನು.

"ಅವರೋ? ಅವರು ನಮ್ಮ ಬಳಿಗೆ ಬರುವದೇ ಇಲ್ಲ. ಸತ್ಯಸ್ಥಿತಿ ತಿಳಿಸಲೇನು? ನಾವಾದರೂ ಅವರಿಗೆ ಮನ್ನಿಸುವದಿಲ್ಲ. ಅವರೆಲ್ಲರೂ ಕ್ರೈಸ್ತರು. ಗೋರಾ ಯಾದ ಪಾದ್ರಿಗಳಿಗೆ ಸಮಸ್ತವಾಗಿಯೂ ಅಧೀನರಾಗಿದ್ದಾರೆ. ಪಾದ್ರಿಗಳೆಲ್ಲರೂ ಸರಕಾರದ ಅಧೀನರು." ಎಂದು ಅಬ್ದುಲ್ಲಾ ಶೆಟ್ಟರು ನಿರಾಶರಾಗಿ ನುಡಿದರು

ನನಗೆ ಎಚ್ಚರಿಕೆಯಾಯಿತು. ಈ ಕ್ರೈಸ್ತ ವರ್ಗವನ್ನು ನಮ್ಮೊಳಗೆ ಸೇರಿಸಿಕೊಳ್ಳಬೇಕೆಂದು ನನಗನಿಸಿತು. ಇದೇ ಕ್ರೈಸ್ತ ಧರ್ಮದ ಅರ್ಥವೇನು? ಕ್ರೈಸ್ತ ಧರ್ಮಕ್ಕೆ ಒಪ್ಪಿದವರಾದ್ದರಿಂದ (ಜನ್ಮ ಭೂಮಿಯಾದ) ಭಾರತದ ಬಾಂಧವ್ಯದಿಂದ ಅವರು ಮುಕ್ತರಾಗುತ್ತಾರೇನು?

ನಾನು ಮನೆಗೆ ಹೊರಡಲು ತಯಾರಾಗಿದ್ದೆ. ಈ ಕುರಿತು ನನ್ನ ಮನಸ್ಸಿನಲ್ಲುಂಟಾದ ವಿಚಾರತರಂಗಗಳನ್ನು ಎಚ್ಚರಿಸಲು ನನ್ನಿಂದಾಗಲಿಲ್ಲ. ಅಬ್ದುಲ್ಲಾ ಶೆಟ್ಟರಿಗೆ ಇಷ್ಟು ಮಾತನ್ನು ಮಾತ್ರ ನಾನು ಹೇಳಿಬಿಟ್ಟೆನು "ಈ ಕಾಯಿದೆಯು ಮಂಜೂರಾದರೆ ನಿಮ್ಮ ಸ್ಥಿತಿಯು ತೀರ ಕಠಿಣವಾಗುವದು. ನಮ್ಮನ್ನು ನಿರ್ಮೂಲ ಕೊಲ್ಲುವ ಪೂರ್ವಕ ಯೋಜನೆಯಿದು. ನಮ್ಮ ಸ್ವಾಭಿಮಾನವು ಇದರಿಂದ ನಷ್ಟವಾಗುತ್ತದೆ."

"ಆಗಲಿ. ಮತಾಧಿಕಾರದ ಪ್ರಶ್ನೆಯ ಇತಿಹಾಸವನ್ನು ಹೇಳುತ್ತೇನೆ. ಮತಾಧಿಕಾರದ ಪ್ರಶ್ನೆಯೇ ನಮಗೆ ಗೊತ್ತಿದ್ದಿಲ್ಲ. ಎಸ್ಕೋಂಬಿಯವರಿಗೆ ನೀವು ಬಲ್ಲಿರಿ. ಅವರು ನಮ್ಮ ವಕೀಲರು. ಮತಾಧಿಕಾರದ ಕಲ್ಪನೆಯನ್ನು ಅವರೇ ನಮ್ಮ ತಲೆಯಲ್ಲಿ ಹಾಕಿದರು. ಅದರ ಹಕೀಕತು ಹೀಗೆ: ಅವರು ಯಾವಾಗಲೂ ಕಾದಾಡುವವರು. ಅವರಿಗೂ ಪ್ಲಾಟ್ ಎಂಜಿನಿಯರರವರಿಗೂ ಇಲೆಕ್ಷನ ಮೇಲಾಟ ನಡೆಯುತ್ತಿತ್ತು. ಇಂಜಿನಿಯರರವರು ತಮ್ಮ ವ್ಹೋಟುಗಳನ್ನು ಅಪಹರಿಸಿ ತಮಗೆ ಇಲೆಕ್ಷನಿನಲ್ಲಿ ಸೋಲಿಸುವರೆಂದು ಅವರಿಗೆ ದೊಡ್ಡದೊಂದು ಅಂಜಿಕೆಯಾಗಿತ್ತು. ಅದರಿಂದ ಅವರು ನಮ್ಮಲ್ಲಿ ಜಾಗೃತೆಯನ್ನು ಹುಟ್ಟಿಸಿ, ನಮ್ಮನ್ನು ಮತದಾರರ ಪತ್ರಿಕೆಯಲ್ಲಿ ದಾಖಲ ಮಾಡಿಸಿದರು. ನಾವೆಲ್ಲರೂ ಇಲೆಕ್ಷನಿನಲ್ಲಿ ಅವರಿಗೇ ಮತಕೊಟ್ಟೆವು. ಆದರಿಂದ ನಿಮ್ಮಂತೆ ನಾವು ವ್ಹೋಟಿಗೆ ಲೆಕ್ಕಿಸುವದಿಲ್ಲ. ಆದರೆ ನಿಮ್ಮ ಹೇಳಿಕೆಯು ಗ್ರಹಿಕೆಯಾಗುತ್ತದೆ. ಮುಂದೇನು ಮಾಡಬೇಕೆಂದು ನಿಮ್ಮ ಹೇಳಿಕೆಯಿದೆ?"

ಅಲ್ಲಿ ನೆರೆದವರೆಲ್ಲರೂ ನಮ್ಮೊಳಗೆ ನಡೆದ ಸಂಭಾಷಣೆಯನ್ನು ಲಕ್ಷ್ಯಗೊಟ್ಟು ಕೇಳುತ್ತಿದ್ದರು. ಒಬ್ಬರು ನುಡಿದದ್ದೇನೆಂದರೆ "ನಾನು ಹೇಳಲೋ, ಈಗೇನು ಮಾಡಬೇಕೆಂದು? ಈ ಪ್ರಯಾಣವನ್ನು ನೀವು ರದ್ದು ಪಡಿಸಿರಿ ಇನ್ನು ಒಂದು ತಿಂಗಳು ಇಲ್ಲಿ ಉಳಕೊಳ್ಳಿರಿ. ನಿಮ್ಮ ಅಪ್ಪಣೆಯಂತೆ ನಾವು ನಡಕೊಂಡು ಕಾದಾಡುವಾ."

"ಅದು ಸರಿ; ಅಹುದು" ಅಬ್ದುಲ್ಲಾ ಶೆಟ್ಟರೇ ಗಾಂಧಿಯವರಿಗೆ ನೀವು ಹೋಗಗೊಡಬಾರದು." ಎಂದು ಉಳಿದವರೆಲ್ಲರೂ ಒಮ್ಮನಸ್ಸಿನಿಂದ ನುಡಿದರು.

ಅಬ್ದುಲ್ಲಾ ಶೆಟ್ಟರು ಧೂರ್ತರು. ಅವರು ನುಡಿದದ್ದೇನೆಂದರೆ — "ಅವರಿಗೀಗ ನನ್ನಿಂದ ಇಟ್ಟುಕೊಳ್ಳಲಾಗುವದಿಲ್ಲ. ನಾನೇ ಯಾಕೆ? ನೀವೆಲ್ಲರೂ ನನ್ನಂತೆಯೇ ಇರುವಿರಿ. ಅವರನ್ನು ನೀವು ಇಟ್ಟುಕೊಳ್ಳಬಹುದು. ಆದರೆ ನೀವು ಹೇಳುವದೇನೋ ನಿಜವಿರುತ್ತದೆ. ನಾವೆಲ್ಲರೂ ಕೂಡಿ ಅವರಿಗೆ ಇಲ್ಲಿ ಉಳಿಯಲು ಮನ ಒಲಿಸುವಾ; ಅವರು ಬೇರಿಸ್ಟರರಿದ್ದಾರೆ; ಈ ಮಾತು ನಿಮಗೆ ಗೊತ್ತೇ ಇದೆ. ಅವರ "ಫೀ"ಯ ವ್ಯವಸ್ಥೆ ಏನು?"

"ಫೀ" ಉಲ್ಲೇಖ ಕೇಳಿ ನನಗೆ ವ್ಯಸನವಾಯಿತು. ನಾನು ಮಧ್ಯದಲ್ಲೇ ನುಡಿದದ್ದೇನೆಂದರೆ:— "ಅಬ್ದುಲ್ಲಾ ಶೆಟ್ಟರೇ, "ಫೀ"ಯ ಮಾತು ಬಿಟ್ಟುಬಿಡಿ. ಸಾರ್ವಜನಿಕ ಸೇವೆಗೆ ಫೀ ಇರಲಾರದು. ನಾನು ಉಳಿಯುವದಾದರೆ ನಿಮ್ಮ ಸೇವಕನಾಗಿ ಉಳಿಯುವೆನು. ನನಗೇನು ಇಲ್ಲಿ ಸೇರಿದ ಗೆಳೆಯರ ಪರಿಚಯವಿಲ್ಲ. ಆದರೆ ಅವರೆಲ್ಲರೂ ನನಗೆ ನೆರವಾಗುವರೆಂದು ನಿಮಗೆ ನಂಬಿಗೆ ಇದ್ದರೆ, ಇನ್ನೊಂದು ತಿಂಗಳು ಉಳಕೊಳ್ಳಲು, ನನ್ನ ತಯಾರಿ ಇದೆ. ಒಂದು ಮಾತನ್ನು ಮಾತ್ರ ನಾನು ಹೇಳುವೆನು ನನಗೆ ಹಣ ಬೇಡಾಗಿದ್ದರೂ ನಾವೀಗ ಪ್ರಾರಂಭಿಸುವ ಕಾರ್ಯಕ್ಕೆ ಕೆಲವು ದ್ರವ್ಯನಿಧಿಯು ಬೇಕೇ ಬೇಕು. ತಂತಿಗಳನ್ನು ಕಳಿಸಬೇಕಾದೀತು; ಕೆಲವು ಹಸ್ತ ಪತ್ರಿಕೆಗಳನ್ನು ಮುದ್ರಿಸಿ ಪ್ರಕಟಿಸಬೇಕಾದೀತು; ಅಚೆ, ಈಚೆ ಪ್ರಯಾಣ ಮಾಡಬೇಕಾದೀತು; ಸ್ಥಳೀಕ ವಕೀಲರ ಆಲೋಚನೆ ಕೊಳ್ಳಬೇಕಾದೀತು. ನಿಮ್ಮಿತ್ತ ಕಡೆಯ ಕಾಯಿದೆಯ ಮಾಹಿತಿ ನನಗಿರುವದಿಲ್ಲ. ಅದರಿಂದ ಮಾಹಿತಿಗಾಗಿ ಕಾಯಿದೆ ಪುಸ್ತಕಗಳನ್ನು ನಾನು ಕೊಳ್ಳಬೇಕಾದೀತು. ಇದಕ್ಕೆಲ್ಲ ಹಣಬೇಕು ಈ ಕಾರ್ಯವು ಒಬ್ಬರಿಂದ ಸಾಗುವಂಥದ್ದಲ್ಲ. ಅನೇಕರು ನೆರವಾಗಬೇಕು.

ಅಲ್ಲಿದ್ದವರೆಲ್ಲರೂ ಏಕಸ್ವರದಿಂದ ಉದ್ಗರಿಸಿದ್ದೇನಂದರೆ:— "ಅಲ್ಲಾ ದೇವರು ದೊಡ್ಡವನಿದ್ದಾನೆ; ದಯಾಳುವಿದ್ದಾನೆ. ಬೇಕಷ್ಟು ಹಣವೂ ಸಂಚಯವಾಗುವದು; ಬೇಕಾದಷ್ಟು ಜನರು ತಯಾರಿದ್ದಾರೆ ನೀವು ಒಮ್ಮೆ ಉಳಕೊಳ್ಳಲು ಒಪ್ಪಿಗೆಯನ್ನು ಕೊಡಿರಿ; ಅಂದರೆ ಎಲ್ಲವೂ ನೆಟ್ಟಗೆ ಸಾಗುವದು."

ಹೀಗೆ ಮೇಜವಾನಿಯ ಸಮಾರಂಭವು ಕಾರ್ಯಕಾರಿ ಮಂಡಳವಾಗಿ ಪರಿಣಮಿಸಿತು. ಬೇಗನೇ ಊಟವನ್ನು ಮುಗಿಸಿ ಮನೆಗೆ ತೆರಳಬೇಕೆಂದು ನಾನು ಸೂಚಿಸಿದೆನು. ಕಾದಾಟದ ಸ್ವರೂಪವನ್ನು ನಾನು ನನ್ನ ಮನಸ್ಸಿನಲ್ಲಿಯೇ ಕಲ್ಪಿಸಿದೆನು. ಮತ ಪತ್ರಿಕೆಯ ಮೇಲಿರುವ ಮತದಾರರ ಹೆಸರುಗಳನ್ನು ನಾನು ತಿಳಕೊಂಡು ಒಂದು ತಿಂಗಳವರೆಗೆ ಉಳಕೊಳ್ಳುವ ಸಂಕಲ್ಪ ಮಾಡಿದೆನು.

ಈ ಪ್ರಕಾರ ಪರಮಾತ್ಮನು ದಕ್ಷಿಣ ಆಫ್ರಿಕೆಯೊಳಗಿನ ನನ್ನ ಭವಿತವ್ಯತೆಯ ಮೂಲ ಪೀಠಿಕೆಯನ್ನು ರಚಿಸಿ, ಅದರಮೇಲೆ ರಾಷ್ಟ್ರೀಯ ಸ್ವಾಭಿಮಾನದ ಕಾದಾಟದ ಬೀಜಾರೋಪಣ ಮಾಡಿದನು.

— ಗೌಹತಿಯಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಸ್ವಾಗತ ಮಂಡಳದ ಸಭೆ ಸೇರಿ ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರವರು ರಾಷ್ಟ್ರೀಯ ಸಭೆಯ ಅಧಿಪತಿಗಳಾಗಿ ನೇಮಿಸಲ್ಪಟ್ಟಿರುವರು!

— ವಿಖ್ಯಾತ ಮಿ। ಹಾರ್ನಿಮನ್ನರವರ ವರ್ತಮಾನ ಪತ್ರಿಕೆಯ ಕಂಪನಿಗೆ ಬೇಕಾದಷ್ಟು ಬಂಡವಲು ದೊರಕಿದೆ. ವರ್ತಮಾನ ಪತ್ರವು ಸದ್ಯಕ್ಕೇ ಹೊರಡುವದಿದೆ. ಹಾರ್ನಿಮನ್ನರ ಚಾಲಕರು ಆತುರರಾಗಿರುವರು.

— ಕಿರ್ಲೋಸ್ಕರ ಕಂಪನಿಯ ಒಡೆಯರಾದ ಶ್ರೀ। ಲಕ್ಷ್ಮಣರಾವ ಕಿರ್ಲೋಸ್ಕರರವರ ಮಗಂದಿರರಾದ ಶ್ರೀ। ಶಂಕರರಾಯರು ಅಮೇರಿಕೆಯಿಂದ ಔದ್ಯೋಗಿಕ ಶಿಕ್ಷಣವನ್ನು ಪಡಕೊಂಡು ಮರಳಿ ಬಂದಿರುವರು! ಸ್ವಾಗತವಿದೆ.

ಗೆಳೆಯರ ಗುಂಪಿನ.

ಕನ್ನಡ] **ಸ್ವಧರ್ಮ.** [ಮಾಸಪತ್ರಿಕೆ

ಸಂಪಾದಕರು:- ದ. ರಾ. ಬೇಂದ್ರೆ. ಬೀ. ಎ

ವಾರ್ಷಿಕ ವರ್ಗಣಿ ೩—೦—೦

ಸಮಾಜದಲ್ಲಿ ಶಾಂತಿಪುಷ್ಟಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೆಳಿಗೆಗೆ ಸುವಿಚಾರವೇ ಸರಿಯಾದ ಸಾಧನ. ಇಂಥ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊರಡುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

BATLIBOI'S
Accountancy Training Institute
Recognised by
The G. D. A. Board

Offers best training in Accounting, Banking, Company Management and Secretarial Work and Theory and Practice of Commerce.

Best staff, Individual attention fee moderate, and payable by instalments.

Send for Prospectus at Yusuf Buildings, Churchgate street, Fort, Bombay.

You are invited to make thorough enquiry before joining.

TUITION BY POST
IS OUR SPECIALITY.

— ಬೆಳಗಾವಿಯ ಜಿಲ್ಲಾ ಬೋರ್ಡಿನ ಅಧ್ಯಕ್ಷರ ನೇಮಣೂಕಿಯ ದಾವೆಯ ವಿಚಾರವು ಬೆಳಗಾವಿಯ ರಾವಬಹಾದ್ದೂರ ಬಾಪಟರವರ ಕೋರ್ಟಿನಲ್ಲಿ ನಡೆದಿರುವದು. ೩ನೇ ತಾರೀಖಿಗೆ ಮಾದಿ ಪಕ್ಷದ ಪುರಾವೆಯು ಮುಗಿದಿದೆ.

— ಬ್ರಿಟಿಶರೇಕದ ಹಿಲ್ಸ ಎಂಬಲಿಲ್ಲಿಂದು ಸಂಸ್ಥಾನವಿದೆ. ಸಂಸ್ಥಾನಿಕರು ತಮ್ಮ ರಾಜ್ಯದೊಳಗೆ ಗೋವಧೆಯನ್ನು ಸಂಪೂರ್ಣವಾಗಿ ನಿಲ್ಲಿಸಿರುವರು. ವರ್ಷಕ್ಕೆ ೮ ದಿನಗಳ ವರೆಗೆ ಯಾರೂ ಯಾವ ಪ್ರಾಣಿಯನ್ನೂ ಕೊಲ್ಲಬಾರದಾಗಿ ಕಟ್ಟಪ್ಪಣೆ ಮಾಡಿರುವರು!

ಶೆವರಲೆಟ್
ಮೋಟಾರಕಾರ್ ಏಜನ್ಸಿ, ಕೆನರಾ.



ನಾವು ಹೊಸ ಶೆವರಲೆಟ್ ಮೋಟರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಮಾರಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಸೋಲಏಜಂಟ:—**ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ, ಶಿರ್ಶಿ**

ಕುಮಟಾ ಏಜಂಟ:- **ಜಿ. ಡಿ. ಮಳಗಿಕರ ಎಂಡ್ ಕೊ.**

ಟಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಪರ್‌ಫಿಯೂಮ್ ಹಾಗು ವಿಲಾಯಿತಿ ಮೋಟಾರ ಹಾಗು ಸಾಯಿಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮಗ್ರಿಗಳು ಯೋಗ್ಯ ದರದಿಂದ ಪೂರೈಸುತ್ತೇವೆ.

G. D. Malgikar & Co,
KUMTA.

ಸರಸ್ವತೀ

ಇಡೀ ಕರ್ನಾಟಕದಲ್ಲಿ ಸ್ತ್ರೀಯರಿಂದ ಸ್ತ್ರೀಯರಿಗಾಗಿ ಪ್ರಕಟಿಸಲ್ಪಡುವ ಉತ್ಕೃಷ್ಟವಾದ ತಿಳಿಗನ್ನಡ ಮಾಸಪತ್ರಿಕೆ ಇದೊಂದೇ.

ಈ ಪತ್ರಿಕೆಯ ವರ್ಷಾರಂಭವು ಮೇ ತಿಂಗಳಿನಿಂದ. ಓದತಕ್ಕ ವಿಷಯಗಳು ಮಾತ್ರ 40 ಪುಟಗಳಿವೆ. ಇದರಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳೂ, "ಸುಖಲತಾ" ಎಂಬ ಕಾದಂಬರಿಯೂ, 'ಕರ್ಮಫಲ' ಎಂಬುವ ನಾಟಕವೂ ಸಾಹಿತ್ಯಸರೋಜ-ಕನ್ಯಾಕೈಪಿಡಿ-ಮುತ್ತಿನ ಸರ-ಚಾರು ಚರಿತಾವಳಿ-ಗೃಹವಿಜ್ಞಾನ-ವನಿತಾವಿನೋದ ಮೊದಲಾದ ಲೇಖನಗಳೂ, ಬಾಲಕ-ಬಾಲಿಕೆಯರಿಗೂ, ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ಚಂದಾದಾರರಿಗೆ "ಶಾರದಾ ಗ್ರಂಥಮಾಲೆ"ಯಲ್ಲಿ ಇದು ವರೆಗೆ ಪ್ರಕಟವಾಗಿರುವ 'ಇಂದಿರೆ-ನಿರ್ಮಲೆ-ಸ್ನೇಹಲತೆ-ಪ್ರಿಯಂವದೆ-ಹಿಂದೂ ಭಾಗ್ಯೋದಯ-ರಣಕೇಸರಿ' ಮೊದಲಾದ ಗ್ರಂಥಗಳೂ ಮುಂದೆ ಪ್ರಕಟವಾಗುವ ಗ್ರಂಥಗಳೂ ಕಡಿಮೆ ಬೆಲೆಗೆ ಕೊಡಲಾಗುವವು. ಕರ್ನಾಟಕದಲ್ಲೆಲ್ಲ ಪ್ರಚಾರವಾಗುತ್ತಿರುವದರಿಂದ ಪ್ರಕಟಣೆಗೆ ಅತ್ಯುತ್ತಮವಾದ ಪತ್ರಿಕೆ. ವಾರ್ಷಿಕ ಚಂದಾ ರೂ. 3-0-0 ಮಾತ್ರ. ವಿದ್ಯಾರ್ಥಿಗಳಿಗೂ, ವಾಚನ ಶಾಲೆಗಳಿಗೂ ರೂ. 2-0-0 ಮಾತ್ರ.

ವಿಳಾಸ:— "ಸರಸ್ವತೀ" ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ
ಆಯುರ್ವೇದ ಸಂಗ್ರಹಾಲಯ.
ಶಾಸ್ತ್ರೋಕ್ತ ತಯಾರಿಸಿದ ಕುಪಿಸ್ಥ ರಸಾಯನಗಳು.

೧. **ಸಮೀರ ಪನ್ನಗ**— ಇದು ಸನ್ನಿಪಾತ ವಿಕಾರಕ್ಕೆ ಉತ್ತಮವಾದ ಪರಿಹಾರಗಳು. ಹೊಟ್ಟೆ ಉಬ್ಬೋಣ, ಹೊಟ್ಟೆಯೊಳಗಿನ ನಾನಾ ಪ್ರಕಾರದ ಪೀಡನೆ, ಸನ್ನಿಪಾತ ವಿಕಾರಗಳಲ್ಲಿ ಹಲುಬೋಣ, ಸಿಕ್ಕಂತೆ ಓಡ್ಯಾಡೋಣ ಮುಂತಾದ ೮೦ ಪ್ರಕಾರದ ವಾತವಿಕಾರಗಳ ಮೇಲೆ ದಿವ್ಯೌಷಧ.
ತೊಲೆ ೧ಕ್ಕೆ ರೂ. ೬-೮-೦.

೨. **ಮಲ್ಲಸಿಂಧೂರ**—ಮಹಾಶ್ವಾಸ, ಕೆಮ್ಮು, ದಮ್ಮು, ಸನ್ನಿಪಾತ ಜ್ವರ, ವಿಷಮ ಜ್ವರ, ಮೂರ್ಛೆ, ತಲುಬೋಣ, ಕಫಕ್ಷಯ, ಇಕ್ಕಳಿಕೆ, ಭಯಂಕರವಾದ ಕಫಯುಕ್ತ ಕೆಮ್ಮು-ದಮ್ಮು, ಕಂಪು, ಅಸಾಧ್ಯವಾದ ವಾತವಿಕಾರಗಳಿರುವಾಗ ಇವುಗಳ ಮೇಲೆ ಉಪಯೋಗಿಸಿದರೆ, ೩-೪ ಘಳಿಗೆಯೊಳಗೆ ರೋಗಿಯು ಶಾಂತನಾಗುತ್ತಾನೆ.
ತೊಲೆ ೧ಕ್ಕೆ ರೂ. ೭-೦-೦

೩. **ಸುವರ್ಣರಾಜ ವಂಗೇಶ್ವರ**—ಉಪದಂಶಗಳ ಶೇಷವಿಕಾರ, ಪರಮಾ, ಧಾತುಕ್ಷೀಣತೆ, ಮೂತ್ರದೊಡನೆ ಹೋಗುವ ಧಾತುನಷ್ಟ, ಸ್ವಪ್ನಾವಸ್ಥೆ, ಅಜೀರ್ಣ ಜ್ವರ, ಅಶಕ್ತತೆ, ಮೂತ್ರ ಹಾಗು ಧಾತುಸಂಬಂಧಗಳ ಸಮಸ್ತ ವಿಕಾರಗಳನ್ನು ಪರಿಹರಿಸಿ ಶರೀರಕ್ಕೆ ಪುಷ್ಟಿ ಕೊಟ್ಟು ಉತ್ಸಾಹವನ್ನೂ ಕಾಂತಿಯನ್ನೂ ಕೊಡುತ್ತದೆ. ಪ್ರಮೇಹಗಳ ಮೇಲೆ ಇಷ್ಟು ಗುಣಕಾರಿಯಾದ ಔಷಧವು ಬೇರೊಂದಿಲ್ಲ. ಇದರಿಂದ ಏನೊಂದೂ ಉಪದ್ರವವಾಗುವದಿಲ್ಲ.
ತೊಲೆ ೧ಕ್ಕೆ ರೂ. ೬-೦-೦

೪ **ವ್ಯಾಧಿಹರಣ ರಸ**—ಉಪದಂಶ, (ಗರಮಿಯ) ಫಿರಂಗೀರೋಗ ಮೊದಲಾದವುಗಳಿಂದ ಉತ್ಪನ್ನವಾಗುವ ಸಂಧಿವಾತ, ಅಂಗವಾಯು, ವಾತರಕ್ತ, ಭಯಂಕರ ವಾತವಿಕಾರ, ಪ್ರಮುಖವಾಗಿ ಉಪದಂಶಗಳಿಗೆ ಮುಖ್ಯವಾಗಿ ಆಗುವ ದಮ್ಮು, ಕೆಮ್ಮು, ನಿಶ್ಶಕ್ತಿ ಇವುಗಳ ಮೇಲೆ ಇಷ್ಟು ಶೀಘ್ರವಾಗಿ ಉಪಚಾರ ಮಾಡಿ ವ್ಯಾಧಿಹರಣ ಮಾಡುವ ರಸಾಯನವು ಅನ್ಯವಿಲ್ಲ.
ತೊಲೆ ೧ಕ್ಕೆ ರೂ. ೭-೦-೦.

೫. **ಸೂತಶೇಖರ**— ಸನ್ನಿಪಾತ, ಪ್ಲೇಗ, ಮೂರ್ಛೆ, ಹಲುಬುವ ವಿಕಾರ (ಭ್ರಮೆ) ಶ್ವಾಸ, ಸಿಕ್ಕಂತೆ ಓಡ್ಯಾಡುವದು, ಹೊಟ್ಟೆನೋವು, ಅಮ್ಲಪಿತ್ತ ಮುಂತಾದ ವಾತ-ಪಿತ್ತ ವಿಕಾರಗಳ ಮೇಲೆ ಅತ್ಯುತ್ತಮವಾದ ಪರಿಹಾರವಿದು. ಸಾಮಾನ್ಯವಾಗಿ ರೋಗದ ನಿಶ್ಚಯ ನಿದಾನವಾಗದ ಸ್ಥಿತಿಯಲ್ಲಿಯೂ ಇದನ್ನು ಉಪಯೋಗಿಸಿದರೆ, ಲಾಭವಾಗುತ್ತದೆ.
ತೊಲೆ ೧ಕ್ಕೆ ರೂ. ೬-೮-೦.

ಇವಲ್ಲದೆ, ತರತರದ ಚೂರ್ಣ, ಘೃತ, ಅವಲೇಹ, ಆಸವ, ಮಾತ್ರೆ ಮುಂತಾದ ಔಷಧಿಗಳು ನಮ್ಮ ಸಂಗ್ರಹಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುತ್ತವೆ.

ಸೂಚನೆ:— ನಾವು ಆಯುರ್ವೇದ ಉಪಚಾರದ ಹಾಗು ಔಷಧ ತಯಾರಿಸುವ ಶಿಕ್ಷಣವನು ಕಲಿಸುವ ಏರ್ಪಾಟು ಮಾಡಿರುತ್ತೇವೆ.

ಮೇಲಿನ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ವಿವರ ಬೇಕಾದ್ದಲ್ಲಿ ಉತ್ತರದ ಬಗ್ಗೆ ಸ್ಟ್ಯಾಂಪು ಜೋಡಿಸಿ ಈ ಕೆಳಗಿನ ಪತ್ತೆಗೆ ಬರಕೊಳ್ಳತಕ್ಕದ್ದು.

ಪತ್ತೆ:— **ಶ್ರೀ| ಗಜಾನನ ಅಪ್ಪು ಭಟ್ಟ ವೇದೇಶ್ವರ,**
ಆಯುರ್ವೇದಿಕ ವೈದ್ಯ,
ಶ್ರೀ ಕ್ಷೇತ್ರ ಗೋಕರ್ಣ. (ಉತ್ತರ ಕನ್ನಡ.)



ವ್ಯಾಪಾರಿಗಳು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಸೀಸೆ ಕಟ್ಟಿಗೆಯ
ದೇವರ ಮಂಟಪಗಳೂ,
ಹಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನರೀ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತರದ ಕರವ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—
ದಿ ನೋರ್ಥಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

"ಬಲವಂತ ಗುಟಿಕಾ."

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ವೈದ್ಯಕೀಯದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ ನಾಶವಾಗುವವು. ಹಾಗೂ ಪರಾಕ್ರಮ ಬಿಡುವ ವೀರ್ಯ ಅಥವಾ ನಷ್ಟವಾದ ಧಾತು ಸರಿಯಾಗುವದು ನಿಶ್ಚಿತವೆ. ಸ್ವಾಸ್ಥ್ಯವು ಉಂಟಾಗುವದಲ್ಲದೆ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಪಥ್ಯ ಬೇಕಿಲ್ಲ. ಖಾತ್ರಿ ಮಾಡಿಕೊಳ್ಳಬಹುದು) ಇದರಿಂದ ಮೈಯಲ್ಲಿ ಗರಮಿಯು ಉಂಟಾಗುವ ವಿಕಾರಗಳು ನಾಶವಾಗ ಮಾಡುತ್ತದೆ. [illegible] ವಾಗಿ [illegible] ಪ್ರಾಪ್ತವಾಗುವದು. ಇದರ ಒಳ್ಳೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

[illegible] ಬೆಲೆ ೧೦೦ ಕ್ಕೆ ರೂ ೧, [illegible] ತಪ್ಪಿಗೆ ೦ ೧೬ ೦, [illegible] ತಪ್ಪಿಗಳಿಗೆ ೭ ೦-೦, ಇದಲ್ಲದೆ ೧ ತಪ್ಪಿಯು ಫ್ರೀ ಸಿಗುವದು.

ಪತ್ತೆ:- **ಎಸ್. ಬಿ. ಕದಂ, ಮತ್ತು ಸನ್ಸ್**

ಮು ಶ್ರೀ ನಿಪ್ಪಾಣಿ, ಜಿ, ಬೆಳಗಾಂವ

ಪ್ರಯಾಣಿಕರಿಗೆ

ವಿಶೇಷ ಅನುಕೂಲ.

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ ಹಾಗೂ

ಅಂಚೆ, ಲಗೇಜ, ಪಾರ್ಸಲ ಬಗ್ಗೆ ಯೋಗ್ಯ ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ—

[illegible] ದಿಂದ ಕುಮಟಾ, ಹೊನ್ನಾವರ, ಭಟ್ಕಳ. [illegible] ದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ; [illegible] ದಿಂದ ಅಂಕೋಲಾ, ಕಾರವಾರ.

ಟೀಪ್ರು— ಟಿಕೇಟು ಮುಂದಾಗಿ ರಿಜರ್ವ ಮಾಡಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ವ್ಯಂಕಟೇಶರಾವ ಶಿರೋಡ್ಕರ,
ಮೋಟರ ಏಜಂಟ,
ಕುಮಟಾ (ಉತ್ತರ ಕನ್ನಡ)

S. U. Narayanacharya & CO
Chaukamba, BENARES CITY

ಸನ್ನಕ್ಕಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿ ಕಣ ಜರಿ ಸೀರೆ, ಕಾಶ್ಮೀರ ಶಾಲು, ಶರವಂದ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ ಸ್ಫಟಿಕಮಣಿ ಮೊದಲಾದ ಸಾಮಾನುಗಳ ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ— [illegible]

ಮುಕ್ತಾ ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಸಿನಿಕ್ಕಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ ೨-೮-೦ ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ— ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦, ಪಾರ್ಕಟೌನ ಮದರಾಸ

ಕಿರ್ಲೋಸ್ಕರ

ಸೇಂಗಾ (ಭೈಮೂಗ) ಒಡೆಯುವ

ಪಾವರ ಹಾಗು ಕೈ-ಯಂತ್ರಗಳು

———— o ————

ಪಾವರ ಯಂತ್ರ— "ಪಿಗ್ ಆಯರ್ನ" ಎಂಬ ಕಬ್ಬಿಣದಿಂದ ಮಾಡಲ್ಪಟ್ಟಿರುವದು. ಗಂಟೆಯೊಂದಕ್ಕೆ ೧೦ ಚೀಲ ಕಾಳುಗಳನ್ನು ಒಡೆಯುವದು. ಈ ಯಂತ್ರವು ಏಳು ಅಶ್ವಶಕ್ತಿಯುಳ್ಳ ಎಂಜಿನ್‌ನಿಂದ ನಡೆಯುತ್ತದೆ.

ಕೈಯಂತ್ರ— ಇದಾದರೂ ಕಬ್ಬಿಣದ್ದೇ. ಇದನ್ನು ತಿರುಗಿಸಲಿಕ್ಕೆ ಎರಡು ಆಳುಗಳು ಬೇಕು. ತಾಸಿಗೆ ೨೦೦ ಪೌಂಡು ಕಾಳುಗಳನ್ನು ಒಡೆಯುವದು.

ಬೆಲೆಯ ಬಗ್ಗೆ ತಿಳಿದು ಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬಾವು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಆಯಾ ರೋಗಿಗಳು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಪೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

Monday September 20th, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೫೦

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಕುಣೆಯಾರ್ಡರಿಯಿಂದ ರೂ. 3-0-0.

ವ್ಹಿ ಪಿ ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ರ್ಯಾಕ್ಟಿಸಿನ (೧೫ ಎಮ್ ಉದ) ೮ ಸಾಲುಗಳವರೆಗೆ ರೂ 1-0-
೮ ನಂತ್ರ ಪ್ರತಿಸಾಲಿಗೆ 0-2-0.
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ೮ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೨೦ ಮಾಹೆ ಸಪ್ಟಂಬರ ಸನ್ ೧೯೨೬ ನೇ ಇಸವಿ.)—

हिंदुस्थानातील रहिवाशांस ज्याप्रमाणे हिंदुस्थानची हवा त्याप्रमाणेच हें औषध हिंदुस्थानातील लोकांस ज्यास्त फायदेशीर आहे.

द्राक्षासव. दीड रतलची किंमत २ रुपये;

रामबाण औषधें

सर्दि वातविकारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर

क्याटलाग मागवा,

बंगाल फार्मास्युटिकल वर्क्स लिमिटेड,

मुंबई नं: १२

एजंट— मेसर्स पंडित आणी कंपनी,
तीर्थहळ्ळी.

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಉಂಚಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲೆ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ ,1. ತೊಲೆಯ ಬಾಟ್ಲಿ ೧ ಕ್ಕೆ ೦—೬—೦ ರಕ್ತಶುದ್ಧಿ ಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೧ ತೊಲೆಯ ಡಬ್ಬಿ ೧ ಕ್ಕೆ ೧—೪—೦, ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ —೨೦—೦. ತಲೆಗೆ ಹಾಕುವ ಸುವಾಸಿಕ ಮಸಗರಾಜ ತೈಲ ೫ ತೊಲೆಯ ಬಾಟ್ಲಿ ೧ ಕ್ಕೆ ೦—೧೨—೦ ಹುಳದ ಪ್ರೊಮ ತೊಲೆ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಉಂಚಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚ ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ
ಆಜಳೀಬಾಜಾರ,-ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ ಏ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭,



ಬರೇ ಒಂದು ತಿಂಗಳ ಬಗ್ಗೆ ಸಾಫ್ ಈ ದರವನ್ನು ಕೊಡ ವರ್ಷದಲ್ಲಿ ಮಾತ್ರ ಕೊಡುತ್ತೇವೆ ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ !!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನು ಉತ್ಕೃಷ್ಟ ಲೇದು ಪಟ್ಟಿಯು ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 503 P T Madras**

ಅತ್ಯಲ್ಪವಿವೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

ತಾರಾ'' ಲೀವರ ರಿಜಿಸ್ಟರ್ಡ ಪೊಕೆಟ್ ವಾಚ್ಚು ೧೮ ಕೆರೆಟ್ ರೋಲ್ಡ ಗೋಲ್ಡಿನದು ಮುಚ್ಚಳಿಲ್ಲಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಕರ್ತರು ಅಚ್ಚು ಹೊಡೆದಿರುವರು ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ಸಾಫ ನಮ್ಮ "ಸ" ರಿಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ ಕೆಲವೇ ಗಡಿಯಾರಗಳಿವೆ ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫.

CAPTAIN WATCH CO. P B 365. MADRAS

ಗಣೇಶಚತುರ್ಥಿಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ] **ಜಯಕರ್ನಾಟಕ** [ಮಾಸಪತ್ರಿಕೆ

ಸಂಪಾದಕ-- ಆಲೂರ ವೆಂಕಟರಾಯರು.

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಇರುವವು. ಪ್ರಪಂಚ ಪರಿಚಯ, ಜೀವನಗುಟ್ಟು ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಇರುತ್ತವೆ. ವಾರ್ಷಿಕ ವರ್ಗಣಿ ರೂ ೫-೮-೦ ಜಯಕರ್ನಾಟಕ, ಧಾರವಾಡ.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಜಂತು ಟಾನಿಕ, ಪಿತ್ತ ಟಾನಿಕ, ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾಲರಾ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮೂಲವ್ಯಾಧಿ, ನರ, ಪಾತ, ತಲೆನೋವು, ಪ್ರಸವ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗರ್ಮಿ) ಬಾಲಗ್ರಹ ಇತ್ಯಾದಿ ಗುಣಕಾರಿ ಔಷಧಗಳು ಅಮೇರಿಕನ ಇಂಗ್ಲಿಷ ಮತ್ತು ದೇಶೀ ಔಷಧಗಳ ಬಹಳ ಅಗ್ಗವಾಗಿ ಸಿಗುವವು.



ಇವಲ್ಲದೆ ಬಂದೂಕುಗಳು, ಎಲ್ಲತರದ ಸ್ಟೇಶನರಿ ಸಾಮಾನುಗಳು, ಟಾರ್ಚ, ಫೋಟೋ ಮತ್ತು ಸುಂದರ ಚಿತ್ರಗಳು, ಪೋಷಾಕು ಬಂಡಿಗಳು, ಸಾಬೂನ ಮುಂತಾದವು ಸಿಗುವವು. ನಮ್ಮಲ್ಲಿದ್ದ ನಿಮಗೆ ಅವಶ್ಯವಿದ್ದ ಸಾಮಾನು ಬೇರೆ ದೇಶದಿಂದ ತರಿಸಿಕೊಡುತ್ತೇವೆ.

ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ,

ಶಿರಸಿ

ರಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:-

ತಬಲೆ, ಡಕ್ಕೆ ವಗೈರೆ



೧ ಫ್ಲೂಟ ಪೆಟ್ಟಿಗೆ ಸಿಂಗಲ ರೂ. ೩೫, ೩೦, ೪೦, ೫೫, ೬೦

೨ ,, ಡಬಲ ರೂ. ೪೦, ೪೫, ೫೦, ೬೦, ೧೦೦

೩ ಕಾಲುಪೆಟ್ಟಿಗೆ ರೂ. ೬೫, ೭೫, ೧೦೦, ೧೨೦, ೧೫೦

೪. ತಬಲೆ (ಅಸ್ಸಲ ಡಗ್ಗಾ ಸಹಿತ) ರೂ ೧೬, ೧೮, ೨೦

ಕ್ಯಾಟಲಾಗ ೧ ರೂ. ೧॥

ಕಿರಿಯ ಕ್ಯಾಟಲಾಗ ೧೩ ಪಾಣೆ.

ನಾಟಕಿ ಸಾಮಾನುಗಳು ಪ್ರತ್ಯಕ್ಷ ದೊರಕುವವು

ಗೋಪಾಳ ಸಖಾರಾಮ ಮತ್ತು ಕಂಪನಿ

ನಂ. ೩೮೫, ವಿಠ್ಠಲವಾಡಿ ಎದುರಿಗೆ

ಕಾಳಬಾದೇವಿ ರೋಡ,

ಮುಂಬಯಿ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಸಿ ಕುಮಟಾ- ಹೊನ್ನಾವರ **ಭಟ್ಕಳ** (೩) ಕುಮಟಾ ಶಿರ್ಸಿ- ಸಿದ್ದಾಪುರ- ಗೆರಸಪ್ಪಾ- ಜೋಗ (**Gersappa Falls**) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ. ಪ್ರಯಾಣಿಕರಿಗೆ ಊಟಕ್ಕೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿಯೂ ವ್ಯವಸ್ಥಾ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa

PROPRIETOR.

ಅತ್ಯದ್ಭುತ ! ಅತ್ಯದ್ಭುತ !!

ಜೀವನಾಧಾರ

ಅಮೇರಿಕಾ ಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲಿಕ್ಸಿರ್ ಆಫ್ ಲೈಫ್

ಎಂದರೆ ಸರ್ವರೋಗ ನಿವಾರಕ ಸರ್ವಾರೋಗ್ಯದಾಯಕ ಅಜೀರ್ಣ ತಲೆನೋವು, ವಾಂತಿ, ಅತಿಸಾರ, ಜ್ವರ, ತಾಪ ಮುಂತಾದ ತೀವ್ರವಾದ ವ್ಯಾಧಿಗಳನ್ನು ಇವೆಲ್ಲವುಗಳನ್ನು ಕೂಡಲೇ ಕಳೆಯುವ ಒಂದೇ ರಾಮಬಾಣವಿದು! ಎಲ್ಲ ರೋಗಗಳ ಮೇಲೆ ಪ್ರಯೋಗಿಸಿ ಒಂದು ಸೀಸೆಯಿದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ!!!

ಒಂದು ಸೀಸೆಗೆ ರೂ. ೧ ೮-೦ ಸಣ್ಣ ಸೀಸೆಗೆ ರೂ ೦-೮-೦. ಟಪಾಲು ಖರ್ಚು ಬೇರೆ.

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ- **ಜೀವನಾಧಾರ ಡಿಪೋ, ಹುಬ್ಬಳ್ಳಿ.**

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟಗಳು ಮತ್ತು ಸುವರ್ಣಪದಕಗಳು **ಸಂಪಾದಿಸಿದ**

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮುಕಾರ ಶಕ್ತಿ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾದ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋ ಸ್ವಪ್ನದೋಷ ವೀರ್ಯಸ್ಖಲನವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತು ಬಂದಾಗುವದು— ಬರವಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ. ಅದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತು ೩ ೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುತ್ತೇವೆ. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. ಇವನ ಬಾಟಲಿಗಳ ಕಿಮ್ಮತು ೧೩-೦-೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು ಏಜಂಟರ ಕಡಿಯಿಂದ್ವೆ ೧ ಬಾಟ್ಲಿಗೆ ೧---೦ ೩ ಬಾಟ್ಲಿಗೆ ೩-೦-೦ ೧೨ ಬಾಟ್ಲಿಗೆ ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೀ ಸಿದ್ಧೇಶ ಜಿ ಬೆಳಗಾಂವ.

ಸ್ಕೂಲ ಬೋರ್ಡಿನೊಳಗಿನ ಹಕೀಕತು.

—ooo—

ಶ್ರೀ ಶಾಸನಾವೃತ್ತದ ಸಂಪಾದಕರಿಗೆ:

ಮಹನೀಯರೇ,

ತಾ. ೧೪-೯-೩೬ ನೇಯ ಶಾಸನಾ ಧುರೀಣದ ಸಂಚಿಕೆಯಲ್ಲಿ, ಆ ಪತ್ರದ ಸುದ್ದಿಗಾರನು, ಕಡಿಗೆ ಕಳೆದ ಸ್ಕೂಲ ಬೋರ್ಡಿನ ಸಭೆಯ ಸುದ್ದಿಯನ್ನು ತಿಳಿಸಿದ ತನ್ನ ಸುದ್ದಿಗಾರನಿಗೆ ಉದ್ದೇಶಿಸಿ ಹಲವು ಅಪಶಬ್ದಗಳನ್ನು ಬರೆದು ಧನ್ಯತೆಯನ್ನು ಪಡೆದಿದ್ದಾನೆ. ಶ್ರೀ ಹಳದೀಪೂರ ಮೊದಲಾದವರು ಎದ್ದು ಹೋದ ವೇಳೆ ಸಭೆಯ ಕೆಲಸವು ಅವರಾಸ್ಥದ ವರೆಗೆ ನಡೆಯಿತೆಂದು ತನ್ನ ಬಾತಮಿದಾರರು ತನಗೆ ಬರೆದದ್ದು ನಿಜವಾಗಿ ತಪ್ಪು. ಹಾಗೆ ಅವರ ತಪ್ಪು ತಿಳುವಳಿಕೆಯಾಗಿರಬಹುದು. ಅದರೆ, ಶ್ರೀ ಹಳದೀಪೂರ ಮೊದಲಾದವರು ೯। ಘಂಟೆಗೆ ಎದ್ದು ಹೋದ ವೇಳೆ ಅವರು ೧೦।। ಘಂಟೆಗೆ ಪುನಃ ಬಂದು ಸೇರುವ ವರೆಗೆ ೧ ತಾಸು ತನಕ ಸಭೆಯ ಕೆಲಸವು ನಡೆಯದೇ ತಹಕೂಬ ಇತ್ತೆಂಬ ಸಂಗತಿ ಈಗ ಈ ಧುರೀಣದ ಸುದ್ದಿಗಾರನು ಒಪ್ಪಿಕೊಳ್ಳುವಂಥಾದ್ದು ತನ್ನ ಹಿಂದಿನ ಸುದ್ದಿಯೋಲೆಯಲ್ಲಿ ಅವನು ಯಾಕೆ ಬರೆದಿದ್ದಿಲ್ಲವೆಂದು ಯಾರಾದರೂ ಕೇಳಬಹುದಲ್ಲವೇ? "ವ್ಯಲ್ಪರು ಹೊರಬಿದ್ದರು. ಸಭೆಯಲ್ಲಿ ೮ ಜನರು ಉಳಿದರು; ತರುಗಿ ನಾಲ್ವರೂ ಸಭೆಗೆ ಬಂದರು" ಈ ರೀತಿಯಿಂದ, ನಡೆದ ಸಂಗತಿಗಳ ಕ್ರಮ ಬರೆಯುವ ದರಲ್ಲಿ — ೯।। ಯಿಂದ ೧೦।। ವರೆಗೆ ಮೇಲಿನ ನಾಲ್ವರು ಎದ್ದು ಹೋದ ವೇಳೆಯಲ್ಲಿ ಸಭೆಯ ಕೆಲಸ ನಡೆಯಲಿಲ್ಲ; ಡಿ ಮಿ. ಫಲಿಫೋಸರು ರಾಜದಾತಿ ಅವರನ್ನು ಕರೆತರಲು ಹೋಗಿದ್ದರು; ಆ ಸಮಯದಲ್ಲಿ ಉಳಿದ ಸಭಾಸದರು ಸಭೆಯ ಜಾಗೆಯನ್ನು ಬಿಟ್ಟು ಬೇರಾದಲ್ಲಿ ಹೊರಟು ಹೋಗಿದ್ದರು; ಸಭೆಯ ಕೆಲಸ ಬಾಲು-ವಿದಿಲ್ಲ,—ಅವೇ ಮೊದಲಾದ ಸಂಗತಿಗಳನ್ನು ಒಪ್ಪಿಕೊಳ್ಳದೇ ಬಿಟ್ಟಿರುವ ಅಪ್ರಾಮಾಣಿಕ ಪ್ರಯತ್ನವನ್ನು ಧುರೀಣದ ಸುದ್ದಿಗಾರನೇ ಮಾಡಿದ್ದಲ್ಲವೇ? ಫೋರೀಸಿನವರು ನನ್ನಂಥ ಪ್ರೇಕ್ಷಕರನ್ನು ಸಭೆ ಹೊರಗೆ ಕಳುಹಿಸಿ ಗುಪ್ತ ರೀತಿಯಿಂದ ನಡೆಸಿದ ಕೆಲವು ಕೆಲಸಗಳ ಸಂಗತಿಯನ್ನು ಸಹ "ಅಂತೆ" "ಅಂತೆ" ಎಂಬ ಶಬ್ದದ ಸಹಾಯವನ್ನು ತೆಗೆದುಕೊಂಡು ಸುದ್ದಿಗಾರನ ವೇಷದಿಂದ ಪ್ರಕಟಿಸಬಹುದು ಹವಣಿಸುವ ಮತ್ತು ಸ್ವತಃ ಬೋರ್ಡಿನ ಮೆಂಬರರಾಗಿರುವ ಸತ್ಯಪ್ರತಿಜ್ಞ ಸಂಪಾದಕ ಮಹಾಶಯರು ಮೇಲಿನ ಯಥಾರ್ಥ ಸಂಗತಿಗಳನ್ನು ಬಿಟ್ಟುಬಿಟ್ಟು ಜನರಲ್ಲಿ ತಪ್ಪು ತಿಳುವಳಿಕೆ ಉಂಟಾಗುವಂತೆ ಮಾಡಿದ್ದು ಇಷ್ಟವೇ ಮಾಡಿಸಿದ್ದು ಬ್ಲಾಫಿಸೇರ ಪೋ "ನಿಜತ್ವ"ವನ್ನು ಮೊದಲೇ ಒಪ್ಪಿಕೊಂಡಿದ್ದರೆ, ಅವರ ಘನತೆಗೆ ಕುಂದು ಬರುತ್ತಿತ್ತೇ? ಹ್ಯಾಗೂ ಇರಲಿ. ತಪ್ಪು ತಿಳುವಳಿಕೆಯಿಂದಾದಂಥ ತನ್ನ ಸುದ್ದಿಗಾರನ ಅಯಥಾರ್ಥ ನಿವೇದನದ ಮೂಲಕ, ನಡೆದ ಸಂಗತಿಗಳನ್ನು ಕಪ್ಪು ಬಣ್ಣದ ಮಸೀಯದ ಸುದ್ದಿಗಾರರ ವೇಷದ ಸಂಪಾದಕ ಮಹಾಶಯರು ಈಗಾದರೂ ಯಥಾರ್ಥ ನಿವೇದನವನ್ನು ಮಾಡಬೇಕಾಯಿತು. ಅಷ್ಟೇ ಸಮಾಧಾನ!

ಇನ್ನೊಂದು ಸಂಗತಿಯೂ ನನಗೆ ಮನೋರಂಜಕವಾಗಿ ತೋರುತ್ತದೆ. ಅದೇ ಸಂಚಿಕೆಯಲ್ಲಿ ಧುರೀಣದ ಸಂಪಾದಕ ಮಹಾಶಯರು ಬಂದು ಸಂಪಾದಕೀಯ ಟೀಕೆ ಟಿಪ್ಪಣಿಯನ್ನು ಬರೆದು ಬಹುಮತದ ಅವಿವೇಕವನ್ನು ಪ್ರದರ್ಶಿಸಲು ಯತ್ನಿಸಿರುವರು. ಅದರೆ, ಎಲ್ಲ ಸಂಗತಿಗಳಲ್ಲಿಯೂ ಇಂಥ ಬಹುಮತವೇ ನಿರ್ಣಾಯಕವಾಗುತ್ತದಲ್ಲವೇ? ಶ್ರೀ ದೇಸಾಯಿಯವರು ಬೋರ್ಡಿನ ಮುಂಬರರಾಗಿ ಆರಿಸಿ ಬಂದದ್ದು ಇಂಥ ಬಹುಮತದಿಂದಲೇ ಅಲ್ಲವೇ? ಬೋರ್ಡಿನ ಚೇರಮನ್ನರಾಗಲೀ, ನ್ಯಾಯಿಕ ಚೇರಮನ್ನರಾಗುವ ಶ್ರೀ ದೇಸಾಯಿಯವರಾಗಲೀ ಆರಿಸಿ ಬಂದದ್ದು ಇಂಥ ಬಹುಮತದ ಮೂಲಕವೇ ಅಲ್ಲವೇ? ಬಹುಮತದ ಅವೆಲ್ಲ ನಿರ್ಣಯಗಳನ್ನು ಮಾನ್ಯ ಮಾಡಿ ಬಂದ. ವಿಶಿಷ್ಟ ಪ್ರಸಂಗದಲ್ಲಿ ಮಾತ್ರ ಬಹುಮತವನ್ನು ಕಡೆಗಣಿಸುವದು ಹ್ಯಾಗೆ ನ್ಯಾಯವಾದೀತು? ಮೇಲಿನ ಸಂಗತಿಗಳಲ್ಲಿ ಕಂಡು ಬಂದ ಬಹುಮತವು ವಿವೇಕದ್ದೋ ಅವಿವೇಕದ್ದೋ, ಯೋಗ್ಯರ ಹಕ್ಕನ್ನು ಕಾಪಾಡುವಂಥಾದ್ದೋ ಧಿಕ್ಕರಿಸುವಂಥಾದ್ದೋ ಎಂಬ ಸಂಗತಿ ಯಾರು ಹೇಳಬಲ್ಲರು? ಡಾ|| ತಿಪ್ಪಾ ಕೊಡ್ಡರ ನಾಯ್ಕರ ನೇಮಣೂಕಿಯಿಂದ ಉಂಟಾದ ಅನ್ಯಾಯವನ್ನು ಉಲ್ಲೇಖಿಸುವಾಗ ಸಂಪಾದಕ ಮಹಾಶಯರು ೩-೪ ಯೋಗ್ಯ ಹಕ್ಕುದಾರರ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕ ರಿಕು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಬೇಕಿರೆ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನ ವ್ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಇಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ; ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಹುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೬—೧೦—೦
ಅಂಚೆವೆಚ್ಚ	,,	೦-೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

—— o:——

೪ ಔನ್ಸಿಗೆ	ರೂ.	೨—೮—೦
೪ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦-೧೨—೦
ಅಂಚೆವೆಚ್ಚ	,,	೦—೬—೦

ಓಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಅದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಅಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY**

ಹೆಸರುಗಳ ಠರಾವುಗಳನ್ನು ತೆಗೆದುಕೊಂಡಿರುವರು ಆದರೆ, ಅವರೆಲ್ಲರೂ ಯೋಗ್ಯ ಹಕ್ಕುದಾರರಿದ್ದರೂ ಅವರೆಲ್ಲರಿಗೂ ಬೋರ್ಡಿನ ಮೆಂಬರರಾದ ಸಂಪಾದಕ-ಮಹಾಶಯರ ಅಧ್ಯಕ್ಷತೆಯು ದೊರೆಯುವಂತಿತ್ತೆಂದು ತಿಳಿಯುವದು ಅಸಾಧ್ಯವು. ಸಾಹಿತ್ಯಸೇವಕರೆಂಬವರಿಂದ ಡಾ॥ ಕಾರಣಿಯವರಿಗೆ ತಗಲ ಕೊಂಡಿದ್ದರೆ ಹೆಚ್ಚಿನ ಸರ್ವೀಸು ಇದ್ದು ಅನುಭವಿಕ (ಕ್ಷಕರಾದ ಡಾ॥ ದೇಸಾಯಿ ಅಂಥವರಿಗೆ ಅನ್ಯಾಯವಾಗುತ್ತಿತ್ತು. ಹೆಚ್ಚಿನ ಸರ್ವೀಸು ಎಂಬುದರಿಂದ ಡಾ. ದೇಶಾಯಿಯವರಂಥ ಯಾರಿಗಾದರೂ ತೆಗೆದುಕೊಂಡಿದ್ದರೆ, ಬಿ ಪಿ ಗೆ ಹೋಗಿರುವ ಡಾ॥ ಗಾಂವಕಾರರಿಗೆ ಅನ್ಯಾಯವಾಗುವದು ಅನಿವಾರ್ಯವಾಗುತ್ತಿತ್ತು. ಆದ್ದರಿಂದ ಇವರಲ್ಲಿ ಯಾರದಾದರೂ ಹಿರಿತನದಿಂದ ಪ್ರೊಮೋಶನ್ ಆಗಿದ್ದರೆ ಅದು ಮಾತ್ರ ನಿರ್ದೋಷ ಬಹುಮತವೆಂದು ಎಲ್ಲರಿಗೂ ಮಾನ್ಯವಾಗುತ್ತಿತ್ತೆಂಬುದು ಎಂದೂ ತಿಳಿಯಲಾಗದು. ಇಂಥ ಪ್ರಸಂಗದಲ್ಲಿ ಅವರವರಿಗೆ ಯೋಗ್ಯ ಕಂಡ ಧೋರಣದಂತೆಯೇ ಬರುವ ತತ್ವ ಪ್ರಕಟವಾಗಬೇಕಲ್ಲದೇ, ಇಂಥಾದ್ದೇ ಒಂದು ನಿಶ್ಚಿತ ರೀತಿಯಲ್ಲಿ ಅದು ಪ್ರಕಟವಾಗಬೇಕೆಂದು ಅಹಂಮನ್ಯರು ನಾವಿಷ್ಟರೂ ಮೊರೆದರೂ ಅವರ ಮತವನ್ನು ಯಾರೂ ಆದರಿಸುವಂತಿಲ್ಲ. ತಮಗೆ ಅನುಕೂಲವಾದಾಗ ಬಹುಮತದ ನಿರ್ಣಯವನ್ನು ಕೊಂಡಾಡುವುದು ಮತ್ತು ಪ್ರತಿಕೂಲವಾದಾಗ ಬಹುಮತವನ್ನು ಅವಿವೇಕವೆಂದು ನಿಂದಿಸುವದು ಇದು ಹ್ಯಾಗೆ ನ್ಯಾಯದ ಮಾತು. ಬಹುಮತದ ನಿರ್ಣಯದ ಮಹತ್ವವನ್ನು ಒಂದಾವರ್ತಿ ಸ್ವೀಕರಿಸಿದ ಮೇಲೆ, ಅದು ಯಾವ ರೀತಿಯಿಂದ ಪ್ರಕಾಶಿಸಿದರೂ ಅದಕ್ಕೆ ತಲೆ ಬಗ್ಗಿಸಿಯೇ ನಡಕೊಂಡ ಹೊರತು ಗತ್ಯಂತರವಿಲ್ಲ. ಬಹುಮತ ಒಪ್ಪು ಯಾವಾಗಲೂ ಗೌರವ ಪ್ರಾಮಾಣಿಕ ಯಾಜೀ ಕಂಪನಿಯವರಿಗೆ ಅನುಕೂಲವಾಗಿಯೇ ಪ್ರಕಟವಾಗಬೇಕೆಂದು ನಿಬಂಧನ ಹಾಕುವದು ಯಾರಿಗೆ ಸಾಧ್ಯವು?

	ತಮ್ಮ ವಿಧೇಯ
ಧಾರವಾಡ,	ಸಭೆಗೆ ಹಾಜರಿದ್ದ
ತಾ ೨-೯-೩೭	ಒಬ್ಬ ನಿಷ್ಪಕ್ಷಪಾತಿ.

ಓದಿರಿ ಓದಿಸಿರಿ

ನನ್ನ ಶಾಸ್ತ್ರೀಯವಾದ ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳು ದುವಲ್ಲವೆ ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವಿವರವೂ ಕೊಡಲ್ಪಟ್ಟಿರುವದು. ನನ್ನಲ್ಲಿ ಕಲಿಯುತ್ತಿರುವ ಅಭ್ಯಾಸಿಗಳೂ ಅನೇಕರ ಪತ್ರ ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಓದಲು ಬಾರದ ತರುಣರು ಸ್ವಂತವನ್ನು ಕಲಿತುಕೊಳ್ಳುವ ಸಲುವಾಗಿ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳಕೊಳ್ಳದೆ, ಕಾಲವಿಳಂಬ ಮಾಡದೆ, ಇನ್ನೂ ಈ ಯೋಚನೆಯಲ್ಲಿ ನಿಂತಿರಬಾರದು. ಈ ಪುಸ್ತಕಕ್ಕಾಗಿ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ ಬೆಂಗಳೂರ ಸಿಟಿ

ಚೀನದೊಳಗಿನ ಸ್ಥಿತಿ

ಚೀನದೊಳಗಿನ ಯುದ್ಧದ ಗದ್ದಲವು ಸದ್ಯಕ್ಕೆ ಕೇಳಿಬರುತ್ತಿದೆ. ಈ ಕುರಿತು ಅಲ್ಲಿಯ ಯುದ್ಧಸೂತ್ರಗಳನ್ನು ವಾಚಕರಿಗೆ ನಿವೇದಿಸುವದು ಯುಕ್ತವು. ಚೀನದಲ್ಲಿ ಸದ್ಯಕ್ಕೆ ೪ ಪಕ್ಷಗಳಿವೆ. ಪ್ರಜಾಸತ್ತಾ ಪಕ್ಷ, ಸುಶಿಕ್ಷಿತ ಪಕ್ಷ, ಸಾಮ್ರಾಜ್ಯವಾದಿ ಪಕ್ಷ, ಜಪಾನ ಪಕ್ಷ. ಮೊದಲನೇ ಪಕ್ಷದ ಸಂಸ್ಥಾಪಕ ಸನ್ಯಾತ್ ಸೇನ್‌ರವರು. ವಿದ್ಯಾರ್ಥಿ-ಪ್ರೊಫೆಸರ ಮೊದಲಾದ ಸುಶಿಕ್ಷಿತರೂ, ಗಿರಣಿ ಕಾರಖಾನೆಗಳಲ್ಲಿ ಕೆಲಸ ಮಾಡುವ ಕೂಲಿಕಾರರೂ ಎರಡನೇ ಪಕ್ಷದಲ್ಲಿ ಸೇರಿರುವರು. ಸಾಮ್ರಾಜ್ಯವಾದಿ ಪಕ್ಷವು ಬ್ರಿಟಿಶ ಪಕ್ಷವು. ಬ್ರಿಟಿಶರ ತಂತ್ರದಿಂದ ಈ ಪಕ್ಷವು ನಡೆಯುತ್ತಿದೆ. ಈ ಪಕ್ಷದ ನಾಯಕರು ವೂಪೆಫೂರವರು. ನಾಲ್ಕನೇ ಪಕ್ಷದೊಳಗಿನ ಚೀನಿಯರು ಜಪಾನದವರ ಆಶ್ರಯ ಪಡೆದವರು. ಪ್ರಜಾಸತ್ತಾ ಪಕ್ಷ ಹಾಗು ಸುಶಿಕ್ಷಿತ ಪಕ್ಷಗಳವರು ಸಮಾನವಾಗಿ ಹಿಂದೇ ನಿಂದ ಒಂದುಗೂಡಿರುವರು. ಇವರ ಕಾರ್ಯಕ್ಷೇತ್ರವು ಕೆಂಟನ್ ಹಾಗು ಕ್ವಾಲಂಗ್ಸ್ ಪ್ರದೇಶವು. ಈ ಪಕ್ಷಗಳಿಗೆ ದೊರೆತ ವಿದ್ಯಾ ಪಕ್ಷ ಎಂದು ಕರೆಯುವದು ಅನುಚಿತವಾಗಿದೆ. ಈ ಪಕ್ಷಗಳಲ್ಲಿ ಪ್ರಮುಖರಾದ ಡಾ. ಸನ್ಯಾತ್‌ಸೇನರು ... ರಶಿಯಾ ದೇಶದಲ್ಲಿ ಸ್ವಾತಂತ್ರ್ಯವನ್ನು ಪಡೆದಿರುವ ... ಧೋರಣ ದಿಂದ ಚೀನ ದೇಶದಲ್ಲಿ ಅವರು ಸ್ವತಃ ಶಿಕ್ಷಣ ಕೊಡತೊಡಗಿದರು. ಅವಶ್ಯವಿದ್ದರೆ ರಶಿಯಾ ದೇಶವು ಕೆಲವು ಪಟ್ಟಿಗೆ ಈ ಪಕ್ಷಗಳಿಗೆ ಸಹಾಯ ಮಾಡುವದನ್ನು ಪ್ರಾರ್ಥಿಸುವದು. ಈ ಪಕ್ಷಗಳ ಪರವಾಗಿ ಬೊರೋಡಿನ್ ನ್ಯಾರದ ಪ್ರವರ್ತಕರ. ಚೀನದೊಳಗಿನ ಪರದೇಶಸ್ಥ ರಾಜ್ಯಕರ್ತರ ಹಾಗು ಕಾರಖಾನೆದಾರರ ಪ್ರತಿಷ್ಠೆಯನ್ನು ಬಿಡಿಸಿ, ಕಳೆದ ಶತಮಾನದ ಕೂಲಿಕಾರರ ಸ್ಥಿತಿಯನ್ನು ಸುಧಾರಿಸಲು ಸಶಿಕ್ಷಿತ ಪಕ್ಷವು ಯತ್ನವನ್ನು ನಡೆಸುತ್ತಿದೆ. ದೇಸಾಯಿಗಳರಿಗೂ ಈ ಧೋರಣವು ಮಾನ್ಯವಿದ್ದುದರಿಂದ ಚೀನದೊಳಗಿನ ಪ್ರಜೆಗಳು ಈ ಎರಡು ಪಕ್ಷಗಳಲ್ಲಿಯೇ ಸೇರಿರುವರು.

ಸೇನಾಪತಿ ವೂಪಫೂರವರು ಬ್ರಿಟಿಶರ ದೊಡ್ಡ ರಕ್ಷಣವಾಗಿದೆ. ಶಾಂಘಾಯಿ ಪ್ರದೇಶವು ವೂಪೆಫೂರವರದಾಗಿದೆ. ಇಲ್ಲಿ ಇರುವ ಬ್ರಿಟಿಶ ಸಾಮ್ರಾಜ್ಯದವರು ವೂಪೆಫೂರವರಿಗೆ ದ್ರವ್ಯವನ್ನೂ ಮದ್ದು ಗುಂಡುಗಳನ್ನೂ ಪೂರೈಸುತ್ತಿರುವರು. ಚೀನ ದೇಶದ ಮಧ್ಯ ಹಾಗು ಉತ್ತರ ಭಾಗಗಳೊಳಗಿನ ಚೀನಿ ವರ್ತಕರೂ, ಶಾಂಘಾಯಿದೊಳಗಿನ ಬ್ರಿಟಿಶ ವರ್ತಕರೂ ಬಳಕೆಯಿಂದ ವೂಪೆಫೂರವರಿಗೆ ನೆರವಾಗುತ್ತಿರುವರು. ಅದರಿಂದ ಚೀನದೊಳಗಿನ ದೊಡ್ಡ ದೊಡ್ಡ ವರ್ತಕರು ಸನ್ಯಾತ್‌ಸೇನ ಮತಾನುಯಾಯಿ ಪ್ರಜಾಸತ್ತಾ ಪಕ್ಷಗಳಿಗೆ ಇದಿರಾಗಲು ನೆರವಾಗುತ್ತಿದ್ದಾರೆ. ವೂಪೆಫೂರವರಿಗೆ ಬೇಕಷ್ಟು ಹಣವನ್ನು ಬೇಕಾದಾಗ ಪೂರೈಸಲು ಅವರು ಒಗ್ಗಟ್ಟಿನ ಮೇಲೆ ಸಿದ್ಧರಿರುವರು. ವೂಪೆಫೂರವರು ವಿದ್ವಾಂಸರಿದ್ದಾರೆ ಆದರೆ, ಅವರಿಗೆ ಸುಶಿಕ್ಷಿತ ವರ್ಗದ ಹಾಗು ಸನ್ಯಾತ್‌ಸೇನ್‌ರವರ ರಾಷ್ಟ್ರೀಯ ವಿಚಾರಗಳು ಗ್ರಾಹ್ಯವಿಲ್ಲ. ಇದರಿಂದ ವೂಪೆಫೂರವರು ಚೀನ ದೇಶದ ಶತ್ರುಗಳೆಂದು ಬಹುಜನಸಮಾಜದಲ್ಲಿ ಲೋಕಾಪವಾದವಾಗಿದೆ. ಅವರನ್ನು ನಾಶಪಡಿಸಲು ಚೀನಿಯರು ಹೋರಾಡುತ್ತಿರುವರು.

ಜಪಾನ ಪಕ್ಷಪಾತಿ ಪಕ್ಷದ ಚೀನಿ ನಾಯಕರು ಚಾಂಗ್ ತ್ಸೋಲಿನರವರು. ಇವರ ಅಧಿಕಾರ ಕ್ಷೇತ್ರವು ಚೀನದ ರಾಜಧಾನಿಯಾದ ಪೇಕಿಂಗ ಹಾಗು ಮುಕ್ಡೇನ್ ಪ್ರಾಂತವು. ಈ ಪ್ರದೇಶಗಳು ಜಪಾನದ ನೆರೆಹೊರೆಯಲ್ಲಿದ್ದು, ಜಪಾನಿ ಬ್ಯಾಂಕುಗಳೂ, ಉಗ್ರಾಣಗಳೂ, ಉಗಿಬಂಡಿಗಳೂ ಇಲ್ಲಿ ಹಬ್ಬಿಕೊಂಡಿವೆ. ಮುಕ್ಡೇನದ ಗವ್ಹರ್ನರರು ಚಾಂಗ್ ತ್ಸೋಲಿನರವರ ಕೈಯಲ್ಲಿ ಸೂತ್ರಗೊಂಬೆಗಳಾಗಿರುವರು. ಇಲ್ಲಿ ಜಪಾನದ ಹೇಳಿಕೆಗೆ ವಿರೋಧವಾಗಿ ಕಡ್ಡಿ ಅಲುಗಲಾರದು. ಆದರೆ ಸದ್ಯಕ್ಕೆ ಜಪಾನ ಪಕ್ಷಕ್ಕೂ, ಚೀನದೊಳಗಿನ ರಾಷ್ಟ್ರೀಯ ಪಕ್ಷಕ್ಕೂ ಇನ್ನೂ ಹೋರಾಟ ನಡೆಯಲಿಲ್ಲ. ಜಪಾನದವರು ಜಾಗ್ರತೆಯಿಂದ ಅಲ್ಲಿಯ ಸ್ಥಿತಿಯನ್ನು ವಿಚಾರಿಸುತ್ತಿರುವರು. ೧೦ ನೇ ತಾರೀಖಿಗೆ ಜಪಾನ ಮಂತ್ರಿ ಮಂಡಳದ ಸಭೆಯಾಗಿ ಸದ್ಯಕ್ಕೆ ಜಪಾನದವರು ಬರೇ ಪ್ರೇಕ್ಷಕರಾಗಿಯೇ ಇರತಕ್ಕದ್ದೆಂದು ನಿರ್ಣಯವಾಗಿರುವದೆಂದು ತಿಳಿಯುತ್ತದೆ. ಬ್ರಿಟಿಶರು ಜಪಾನದವರಿಗೆ ಹುರಿದುಂಬಿಸಲು ಯತ್ನ ಮಾಡುತ್ತಿದ್ದರೂ, ಸದ್ಯಕ್ಕೆ ಅವು ವಿಫಲವಾಗಿವೆ.

ಚೀನದಲ್ಲಿ ಬ್ರಿಟಿಶ ಪಕ್ಷಪಾತಿಯಾದ ವೂಪೆಫೂರವರಿಗೂ ಸನ್ಯಾತ್‌ಸೇನ ಮೊದಲಾದ ರಾಷ್ಟ್ರೀಯರಿಗೂ ಈಗ ಯುದ್ಧ ನಡೆದಿದೆ. ಉತ್ತರ ಚೀನದೊಳಗಿನ ಕ್ವಾಲಂಗಸ್ ಪ್ರದೇಶದಲ್ಲಿ ವೂಪೆಫೂರವರು ರಾಷ್ಟ್ರೀಯ ಸೈನ್ಯಕ್ಕೆ ಇದಿರಾಗುತ್ತಿರುವರು. ಇತ್ತ ದಕ್ಷಿಣ ಕಡೆಯಿಂದ ಕೆಂಟನ್‌ದ ಮೇಲಿಂದ ರಾಷ್ಟ್ರೀಯ ಸೈನ್ಯವು ಶಾಂಘಾಯಿ ಪ್ರದೇಶದ ಮುಖ್ಯಸ್ಥಾನವಾದ ಹೆಂಕೌ ಪಟ್ಟಣವನ್ನು ಕೈವಶ ಮಾಡಿಕೊಳ್ಳಲು ಯತ್ನಿಸುತ್ತಿರುವದು. ಹೆಂಕೌ ಪಟ್ಟಣವು ಯಾಂಗತ್ಸೆಕ್ಯಾಂಗ ನದಿಯ ಮೇಲಿದ್ದು, ಹೆಂಕೌ ಪಟ್ಟಣದವರೆಗೆ ಹಳದೀ ಸಮುದ್ರದ ಮೇಲಿಂದ ದೊಡ್ಡ ದೊಡ್ಡ ಹಡಗ ಪಡೆಗಳು ಹೋಗುತ್ತಿವೆ. ಈ ಹಡಗುಪಡೆಗಳಿಗೂ ಚೀನದವರಿಗೂ ಕಳೆದ ವರ್ಷದಲ್ಲಿ ಭಯಂಕರ ಸಂಗ್ರಾಮವಾಯಿತು. ಬ್ರಿಟಿಶ ಪಕ್ಷಪಾತಿಯಾದ 'ರೋಯ್ಟರ' ಸುದ್ದಿಗಾರರು ಚೀನ ದೇಶಕ್ಕೊದಗಿದ ನಷ್ಟವನ್ನೇ ಬಣ್ಣಿಸುತ್ತಿರಲ್ಲದೆ, ತಮ್ಮ ನಷ್ಟವನ್ನು ಹೇಳುವದಿಲ್ಲ.

ಕಳೆದ ಸಪ್ಟಂಬರ ೮ ನೇ ತಾರೀಖಿಗೆ ಹೆಂಕೌ ಪಟ್ಟಣದ ಒಳಿಯಲ್ಲಿರುವ ಹನ್ಯಾಂಗ ಪಟ್ಟಣವು ರಾಷ್ಟ್ರೀಯ ಚೀನದ ಕೈವಶವಾಯಿತೆಂದು ಸುದ್ದಿ ಬಂದಿರುವದು. ಶಾಂಘಾಯಿ ಪ್ರದೇಶದಲ್ಲಿ ನಡೆದಿರುವ ಭೀಷಣ ಘೋರ ರಣಕ್ಷೇತ್ರದಲ್ಲಿ ಬ್ರಿಟಿಶರು ಪ್ರತ್ಯಕ್ಷವಾಗಿ ಸೇರಬೇಕೆಂದು ಬ್ರಿಟಿಶ ವ್ಯಾಪಾರದ ರಕ್ಷಕರಾದ ಬ್ರಿಟಿಶ ವೃತ್ತಪತ್ರಿಕಾಕರ್ತರು ಬ್ರಿಟಿಶ ಮುತ್ಸದ್ದಿಗಳಿಗೆ ಪ್ರೇರೇಪಿಸುತ್ತಿರುವರು. ... ಪ್ರವೇಶಿಸಲು ಅಸಮರ್ಥರಾದರೆ, ಜಪಾನದೊಡನೆ ಗೆಳೆತನ ಬೆಳೆಸಿಯಾದರೂ ರಾಷ್ಟ್ರೀಯ ಚೀನರನ್ನು ಬಗ್ಗುಬಡಿಯಬೇಕೆಂದು ಪತ್ರಿಕಾಕರ್ತರ ಹೇಳಿಕೆಯಿದೆ. ಆದರೆ, ಜಪಾನ ದೇಶವು ಬ್ರಿಟಿಶರ ಕೈಗೊಂಬೆಯಾಗಬಾರದೆಂದು ಜಪಾನದಲ್ಲಿ ವರ್ತಮಾನಪತ್ರಕರ್ತರು ಅಲ್ಲಿಯ ಸರಕಾರಕ್ಕೆ ಎಚ್ಚರಿಕೆಯನ್ನೀಯುತ್ತಿರುವರು. ಫ್ರೆಂಚರು ಈ ಕುರಿತು ಯಾವದೊಂದು ಚಿಂತೆಗೊಳಗಾಗಿರುವದಿಲ್ಲ. ಮಿತ್ರರಾಷ್ಟ್ರವಾದ ಬ್ರಿಟಿಶರಿಗೆ ನೆರವಾಗಲಿಕ್ಕೂ ಇವರು ತಯಾರಿಲ್ಲವಾಗಿ ತೋರುತ್ತದೆ. ಹೀಗೆ ವೂಪೆಫೂರವರಿಗೆ ಪ್ರತ್ಯಕ್ಷ ಸಹಾಯ ಮಾಡಲು ಯಾರೂ ತಯಾರಿಲ್ಲ. ಕೆಂಟನ್

ಸರಕಾರವು ವಿಮಾನಗಳ ಮೇಲಿಂದ ಕಾದಾಡಲು ಸನ್ನದ್ಧವಾಗಿದೆ. ರಶಿಯಾ ದೇಶದಲ್ಲಿ ವಿಮಾನಗಳ ಪೂರೈಕೆಯಾಗಿರುವಂತೆ ೨ ಲಕ್ಷ ಸೈನ್ಯವು ಕೆಂಟನ್ ಸರಕಾರದ ಬೆಂಬಲಕ್ಕಿದೆ. ಸೈನ್ಯವೆಲ್ಲ ಸುಸಂಘಟಿತವಾಗಿರುವದು. ಇದಕ್ಕೆ ಶತ್ರು ಸೈನ್ಯವಾದ ಶಾಂಘಾಯಿ ಸೈನ್ಯವು ತೀರ ಕಡಿಮೆ. ಇದಕ್ಕೆ ವಿರಾಗಲು ಶಾಂಘಾಯಿ ಸೈನ್ಯವು ತೀರ ಅಸಮರ್ಥವೆಂದು ಬಲ್ಲವರು ಹೇಳುತ್ತಾರೆ. ಸಧ್ಯದಲ್ಲಿಯೇ ಹೆಂಕೌ ಪಟ್ಟಣವು ರಾಷ್ಟ್ರೀಯರ ಸ್ವಾಧೀನವಾದ ಶುಭ ಸುದ್ದಿಯು ಜಾಹೀರಾಗುವದೆಂದು ಬಲ್ಲವರು ಹೇಳುತ್ತಾರೆ. ಹೆಂಕೌ ಪಟ್ಟಣವು ಬಿದ್ದರೆ, ಪೂರ್ವಪೂರವು ಸೋತರೆಂದು ತಿಳಿಯುವದೇ, ಶಾಂಘಾಯಿ ಸರಕಾರವೂ ಸೋತಿತು, ಬ್ರಿಟಿಶ ಪಕ್ಷಪಾತಿಯಾದ ಚೀನಿ ಪರ್ಕಳರೂ ಸೋತರು. ಬ್ರಿಟಿಶರ ವ್ಯಾಪಾರವೂ ನಾಶವಾಯಿತು, ಚೀನದ ರಾಷ್ಟ್ರೋದ್ಧಾರದ ಮಾರ್ಗವು ಸುಲಭ ಸಾಧ್ಯವಾಯಿತು, ಇಷ್ಟು ಮಹತ್ವದ ಸಂಗ್ರಾಮವು ಈಗ ಹೆಂಕೌ ಸುತ್ತು ಮುತ್ತು ನಡೆದಿದೆ.

ವಿವಿಧ ಸಂಗ್ರಹ.

ಗೋಮತಿ ಶಿಲೆಯ ಚಮತ್ಕಾರಗಳು

ಶ್ರೀ ಗೋವರ್ಧನ ಪೀಠದ ಶಂಕರಾಚಾರ್ಯರು ಚಾತುರ್ಮಾಸಕ್ಕಾಗಿ ತಾಭೋಳಿಯದಲ್ಲಿ ಇಳಕೊಂಡಿರುವರು. ಶ್ರೀ ಸ್ವಾಮಿಯವರು ಹಿಮಾಲಯ ಪರ್ವತದಿಂದ ಗೋಮತಿ ಶಿಲೆಯನ್ನು ಕಷ್ಟದಿಂದ ಸಂಪಾದಿಸಿ ತಂದಿರುವರು. ಈ ಶಿಲೆಯ ಚಮತ್ಕಾರಗಳು ಶ್ರೀ ದೇವೀಪುರಾಣದಲ್ಲಿ ವರ್ಣಿಸಲ್ಪಟ್ಟಿವೆ. ಈ ಶಿಲೆಯ ಗುಣಧರ್ಮಗಳು ಸಾಮಾನ್ಯ ಕಲ್ಲಿನಂತಿದ್ದರೂ, ಹಿಂದೆರಡು ಚಮತ್ಕಾರಗಳಿವೆ. ಪಾತ್ರೆಯಲ್ಲಿ ನೀರು ತುಂಬಿ ಈ ಶಿಲೆಯನ್ನು ನೀರೊಳಗೆ ಹಾಕಿದರೆ, ಶಿಲೆಯು ಮೊಟ್ಟಮೊದಲು ಅತಿಶಯ ಹೋಗುತ್ತದೆ, ಕೂಡಲೆ ಅದು ಮೇಲೆ ಬಂದು ತೇಲಹತ್ತುತ್ತದೆ. ತೇಲುವಾಗಲೂ ಸ್ಥಿರವಾಗಿ ನೀರಿನ ಪಾತಳಿಯ ಮೇಲಿರುವದಿಲ್ಲ. ಇತ್ತಿಂದ ಅತ್ತ, ಅತ್ತಿಂದ ಇತ್ತ ಹಿಡ್ಯಾಡುತ್ತದೆ. ಇದನ್ನು ಶ್ರೀ ಸ್ವಾಮಿಗಳು ಜನರಿಗೆ ಉಚಿತವಾಗಿ ತೋರಿಸುತ್ತಾರೆ ಇತ್ಯಾದಿ ಹಕೀಕತನ್ನು ರಾ| ಕೇ ಎಸ್. ರಾಕೂರರು "ಮುಂಬಯಿ ಕ್ರಾನಿಕಲ್" ಪತ್ರಿಕೆಗೆ ಬರೆದಿರುವರು.

* * *

ನಮ್ಮ ಸಂಸ್ಥಾನಿಕರ ದುಂದುಗಾರಿಕೆ

ನಮ್ಮ ಹಿಂದುಸ್ಥಾನದೊಳಗಿನ ಅಲವಾರ ಪತಿಯಾಲಾ-ಜಯಪೂರ ಮುಂತಾದ ಆರು ಮಂದಿ ಸಂಸ್ಥಾನಿಕರು ವಿಲಾಯತಿಯಲ್ಲೊಂದು ಚಲಚ್ಚಿತ್ರಪಟಗಳ ಕಂಪನಿಯೊಂದನ್ನು ಸ್ಥಾಪಿಸಲಿಕ್ಕಾಗಿ ೪೦ ಲಕ್ಷ ರೂಪಾಯಿಗಳನ್ನು ಪಟ್ಟಿಯಿಂದ ಕೂಡಿಸಲಿರುವರು. ವಿಲಾಯತಿಯೊಳಗಿನ ಕಂಪನಿಯಲ್ಲಿ ತಯಾರಾದ ಚಲಚ್ಚಿತ್ರಪಟಗಳನ್ನು ಹಿಂದುಸ್ಥಾನದಲ್ಲಿ ಪ್ರದರ್ಶಿಸಲು ಈ ಮಹಾರಾಜರು ನೆರವಾಗುವರು. ಅಲ್ವಾರದ ಮಹಾರಾಜರು ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಲ್ಲದೆ, ಚಲಚ್ಚಿತ್ರಪಟಗಳ ಪ್ರದರ್ಶನಾಲಯಗಳಿಗಾಗಿ ಅವಶ್ಯವುಳ್ಳ ಭೂಮಿಯನ್ನು ಉಚಿತವಾಗಿ ಕೊಡುವರು. ಪತಿಯಾಲಾದ ಮಹಾರಾಜರು ೪|| ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು. ಜಯಪುರದ ಮಹಾರಾಜರು ೩|| ಲಕ್ಷ ರೂಪಾಯಿಗಳನ್ನು ಕೊಡಲಿರುವರು. ಬರುವ ಮುಂದಿನ ವರುಷ ಇದೇ ಸಮಯ ಚಲಚ್ಚಿತ್ರಪಟಗಳ ೩೦೦ ಪ್ರದರ್ಶನಾಲಯಗಳು ನಮ್ಮ ಹಿಂದುಸ್ಥಾನದಲ್ಲಿ ತಯಾರಾಗುವವು. ಈ ಮಂದಿರಗಳಲ್ಲಿ ಪ್ರದರ್ಶನ ಮಾಡುವ ಚಲಚ್ಚಿತ್ರಪಟಗಳು ಬ್ರಿಟಿಶ ಸಾಮ್ರಾಜ್ಯದಲ್ಲಿ ತಯಾರಾದವಿರಬೇಕು, ಅವುಗಳ ಪ್ರಮಾಣವನ್ನು ಕೇಳಿರಿ! ಬ್ರಿಟನ್‌ದಲ್ಲಿ ತಯಾರಾದ ೬ ಚಲಚ್ಚಿತ್ರಪಟಗಳನ್ನು ತೋರಿಸಿದ ಮೇಲೆ, ಸಾಮ್ರಾಜ್ಯದ ಇತರ ಭಾಗಗಳಲ್ಲಿ ತಯಾರಾದ ಚಲಚ್ಚಿತ್ರಪಟವನ್ನೊಂದು ತೋರಿಸಬೇಕಾಗಿರುತ್ತದೆ. ಹಿಂದುಸ್ಥಾನವು ಇತರ ಘಟಕಗಳಲ್ಲಿ ಸೇರಿಹೋಯಿತು. ನಮ್ಮ ಜನ್ಮಭೂಮಿಯೊಳಗಿನ ಮಹಾರಾಜರು ಪಟ್ಟುಹಾಕಿ ಸ್ಥಾಪಿಸಿದ ಚಲಚ್ಚಿತ್ರಪಟಗಳ ಪ್ರದರ್ಶನಾಲಯಗಳಲ್ಲಿಯೇ ನಾವು ಇತರೇ ಮಂದಿಗಳಲ್ಲಿ ಸೇರಿಹೋದೆವು. ಮಹಾರಾಜರುಗಳ ದುಂದುಗಾರಿಕೆಯನ್ನು ನೋಡಿ ಅಳಬೇಕೋ, ನಮ್ಮ ಪಾರತಂತ್ರ್ಯದಿಂದ ಒದಗಿದ ಬುದ್ಧಿಭ್ರಂಶವನ್ನು ಮರುಗಬೇಕೋ? ಪಾರತಂತ್ರ್ಯದಿಂದ ಒದಗುವ ಬುದ್ಧಿಭ್ರಂಶದ ಲಕ್ಷಣವಿದು !!

* * *

ಇದೆಂಥ ವ್ಯಾಣಿದಯೆ ?

ಬಿಕೋದೆಯ ನೆರೆಹೊರೆಯಲ್ಲಿ ಕೆಲವು ಅಹಿಂಸಾವಾದಿಗಳಾದ ಶ್ರೀಮಂತರಿರುವರು. ಇವರೊಂದು ಶ್ವಾನಮಂದಿರವನ್ನು ಸ್ಥಾಪಿಸಿರುವರು. ಈ ಮಂದಿರದಲ್ಲಿ ನೂರಾರು ನಾಯಿಗಳಿವೆ. ನಾಯಿಯ ಪ್ರಕೋಪವಾದರೆ, ಅದಕ್ಕೆ ತುಪ್ಪ, ಗೋದಿಯ ಸಜ್ಜಿ ಮುಂತಾದ ಪಥ್ಯಕರ ಜಿನಸುಗಳನ್ನು ಕೊಟ್ಟು ಪಾಲಿಸುತ್ತಾರೆ. ಪ್ರಕೋಪ ಮಾಡಲು ವೈದ್ಯರಾದರೂ ನೇಮಕರಾಗಿರುವರು. ಇದೆಂಥ ಪ್ರಾಣಿದಯೆ? ನಮ್ಮೀ ಬಡಬಿದ್ದ ಭರತಖಂಡದಲ್ಲಿ ಅಹಿಂಸಾವಾದಿಗಳಿಗೆ ಇದಕ್ಕೂ ಶ್ರೇಯಸ್ಕರವಾದ ಯೋಜನೆಯು ಸೂಚಿಸಲಿಲ್ಲೇನು ?

* * *

ಅನುಕರಣೀಯ ಸೇವೆ

ಅಖಿಲ ಭಾರತೀಯ ನೂಲಗಾರರ ಸಂಘದ ಕಾರ್ಯದರ್ಶಿಗಳಿಗೆ ಶ್ರೀ| ಹರಿಭಾವು ಫಾಟಕರವರ ಬರೆಯುವದೇನೆಂದರೆ - "ಈ ಹೊತ್ತು ಶ್ರೀಮತಿ ಅನಪೂರ್ಣಾಬಾಯಿ ಗೋರೆಯವರ ೨೫೦೦೦ ಗಜ ನೂಲನ್ನು ಕಳುಹಿದ್ದೇನೆ. ಚಾತುರ್ಮಾಸದಲ್ಲಿ ಅನೇಕ ಮಹಾರಾಷ್ಟ್ರೀಯ ಸ್ತ್ರೀಯರು ವ್ರತಗಳನ್ನು ಕೈಕೊಳ್ಳುತ್ತಾರೆ. ಅನಪೂರ್ಣಾಬಾಯಿಯವರು ೧ ಲಕ್ಷ ಗಜ ನೂಲನ್ನು ನೂತು ಅರ್ಪಿಸಬೇಕೆಂದು ನಿರ್ಧರಿಸಿರುವರು. ಈ ಹೊತ್ತು ಕಳಿಸಿದ್ದು ಮೊದಲನೇ ತಿಂಗಳ ಪಟ್ಟಿ. ನನ್ನ ಗೆಳೆಯರಾದ ಶ್ರೀಧರಪಂತ ಶಾಸ್ತ್ರಿಯವರು ಇವರ ಪತಿಗಳು. ದಂಪತಿಗಳೀರ್ವರೂ ಅಖಿಲ ಭಾರತೀಯ ನೂಲುಗಾರರ ಸಂಘದ ಸಭಾಸದರಿರುವರು. ಅವರು ತಮ್ಮ ಮಾತಿಗೆಯನ್ನು ಪೂರ್ಣವಾಗಿ ಈ ಮೊದಲೇ ಸಲ್ಲಿಸಿರುವರು. ದಂಪತಿಗಳಿಗೆ ಚಿಕ್ಕ ಚಿಕ್ಕ ಮಕ್ಕಳಿರುವರ ಬಡತನದವರು, ಕಣ್ಣು ಬೆಳಕು ಕಾಣದಿದ್ದರೂ ಅದರಿಂದ ಅವರು ಕೈಕೊಂಡ ಪ್ರಯತ್ನವು ಪ್ರಶಂಸೆಗೆ ಪಾತ್ರವಿರುತ್ತದೆ" ಮಹಾತ್ಮರು ಈ ಹಕೀಕತನ್ನ ನಮೂದಿಸಿ, ಇದೊಂದು ದೇಶಸೇವೆ ಎಂದು ಉದ್ಗರಿಸಿರುವರು.

ಜಿಲ್ಹಾ ಬೋರ್ಡಿನ ಅಧ್ಯಕ್ಷರಿಗೆ ಒಂದು ಸವಾಲು.

ಜಿಲ್ಹಾ ಲೋಕಲ ಬೋರ್ಡಿನ ಕಳೆದ ವಿಶೇಷ ಅಧಿವೇಶನದಲ್ಲಿ ರಾ| ಮಾಸೂರರಿಗೆ ಅಧ್ಯಕ್ಷರ ಬಳಿಯಲ್ಲಿಯೇ ಆಸನ ಕೊಡೋಣಾಗಿತ್ತೋ ಹ್ಯಾಗೆ, ಲೋಕಲ ಫಂಡಿನ ಪರಿಕೆಯನ್ನ ಸಮಾರ್ಥಿಸಬೇಕೆಂಬುದರಿಂದ ಅವರನ್ನ ಕುಮಚಿಯಿಂದ ಕರೆದೊಯ್ದದ್ದರೋ ಹ್ಯಾಗೆ, ಎಂಬ ಸಂಗತಿಗಳ ಚರ್ಚೆಯು ವೃತ್ತಪತ್ರಗಳಲ್ಲಿ ನಡೆದಿರುವದು ಕಂಡುಬರುತ್ತದೆ. ಆ ಸಂಗತಿಗಳು ಹ್ಯಾಗೂ ಇರಲಿ, ರಾ| ಮಾಸೂರರಿಗೆ ಜಿಲ್ಹಾ ಬೋರ್ಡಿನ ಸಭೆಯಲ್ಲಿ ಅಧ್ಯಕ್ಷ ರಾ| ಗೋಪಿಯವರು ಮಾತಾಡಲಿಕ್ಕೆ ಕೊಟ್ಟದ್ದು ನಿರ್ವಿವಾದವಾದರೆ, ಬೋರ್ಡಿನ ಸಭಾಸದರಲ್ಲದ ಹೊರಗಿನ ಗೃಹಸ್ಥರಿಗೆ ಬೋರ್ಡಿನ ಕೆಲಸದಲ್ಲಿ ಭಾಷಣ ಮಾಡಲಿಕ್ಕೆ ಅಧ್ಯಕ್ಷ ಶ್ರೀ| ಗೋಪಿಯವರು ಯಾವ ಕಾಯಿದೆಯ ಆಧಾರದಿಂದ ಪರವಾನಗಿ ಕೊಟ್ಟರೆಂಬವನ್ನು ಅವರು ಖುಲಾಸೆ ಮಾಡಿ ತಿಳಿಸಿದರೆ ನೆಟ್ಟಗಾಗುತ್ತಿತ್ತು. ಬೋರ್ಡಿನ ಮೆಂಬರರಲ್ಲದ ಗೃಹಸ್ಥರನ್ನು ಈ ರೀತಿಯಲ್ಲಿ ಸಭೆಯ ಮುಂದಿನ ಚರ್ಚೆಯಲ್ಲಿ ಭಾಷಣ ಮಾಡಿ ಭಾಗ ತೆಗೆದುಕೊಳ್ಳಲಿಕ್ಕೆ ಕೊಟ್ಟ ಬೇರೆ ಯಾವವಾದರೂ ಉದಾಹರಣೆಗಳು ಇದ್ದರೆ, ಅವುಗಳನ್ನ ಅವರು ಉಲ್ಲೇಖಿಸುವರೇನು? ತಮ್ಮ,

ಹೊಸ್ಪೇಟ,
ತಾ ೧೯-೯-೨೬ } ಓರ್ವ ಪ್ರಯಸ್ಥ

ನಮ್ಮಲ್ಲಿಯ ಶಿಕ್ಷಕರ ಗೋಳು.

ಶಿಕ್ಷಕರ ಹಿತೇಚ್ಛುಗಳು ಬರೆಯುವದೇನಂದರೆ —

ನಮ್ಮ ಕಾನಡಾ ಜಿಲ್ಹೆಯಲ್ಲಿ ಸ್ಕೂಲ ಬೋರ್ಡಿನ ಉದಯ ಕಾಲದಲ್ಲಿ ವರ್ಗಾವರ್ಗಿಯ ದೊಡ್ಡದೊಂದು ಸಂಕ್ರಮಣ ಹಬ್ಬವಾಯಿತು. ಹಬ್ಬಕ್ಕೆ ಖರ್ಚಾಪಿಪರೀತ. ಅದಕ್ಕೆ ಬಡ ಶಿಕ್ಷಕರು ಪರರ ಕೈ-ಕಾಲು ಹಿಡಿದು ಹ್ಯಾಗಾದರೂ ಹಬ್ಬದ ಸೂಗಸು ಕಂಡರು. ಹಬ್ಬ ಮುಗಿದು ೨ ೪ ತಿಂಗಳುಗಳಾದರೂ ಕೋಳಿಗೆ ಗಾಗಿ ತಂದ ಗೋದಿಯ ರೊಕ್ಕವು ಶಿಕ್ಷಕರ ಮೇಲೆ ಇನ್ನೂ ಬಾಕಿಯುಳಿದಿದೆ. ಸಂಕ್ರಮಣ ಕಾಲದಲ್ಲಿ ಕೊಡಬೇಕಾಗಿದ್ದ ಪ್ರಯಾಣ ಭತ್ತೆಯು ಇನ್ನೂ ಶಿಕ್ಷಕರಿಗೆ ಸಿಗದು. ಇದು ಸಿಗುವದು, ನಾಳೆ ಕೈಸೇರವದು ಎಂಬ ಆಶೆಯಿಂದ ೧-೨ ತಿಂಗಳು ಕಳೆದುಹೋದವು. ಆ ಬಳಿಕ ಅರ್ಜಿಗಳಾದವು, ಆದರೂ ಪತ್ತೆಯಿಲ್ಲ. ಶಿಕ್ಷಕರಿಗೆ ವರ್ಗ ಮಾಡುವದು ಅತ್ಯವಶ್ಯವೆಂದು ಸ್ಕೂಲ ಬೋರ್ಡಿಗೆ ಹೊಳೆದಂತೆ ಪ್ರಯಾಣ ಭತ್ತೆಯನ್ನು ಪೂರೈಸುವದವಶ್ಯವೆಂದು ಹೊಳೆಯುವದಿಲ್ಲೇನು? ಇತರ ಖಾತೆಯಲ್ಲಿ ವರ್ಗವಾದ ನೌಕರರಿಗೆ ಮುಂಗಡವಾಗಿ ಪ್ರಯಾಣ ಖರ್ಚು ಸಿಗುತ್ತದೆ, ಪ್ರಾಥಮಿಕ ಶಿಕ್ಷಕರಿಗೆ ತಿಂಗಳುಗಟ್ಟಲೆ ಯಾದರೂ ಭತ್ತೆ ಸಿಗುವದಿಲ್ಲ. ಹೊಟ್ಟೆಯ ಮೇಲೆ ಕಟ್ಟ ಹಾಕಿ ಬೇನೆಯಿಂದ ಬಳಲುತ್ತಿರುವ ಶಿಕ್ಷಕರ ಕುರಿತು ವಿಚಾರಿಸುವವರ್‍ಯಾರಿಲ್ಲ. ಅವರಿಗೆ ಅನುಕೂಲತೆಗಳನ್ನು ಪೂರೈಸುವವರೂ ಯಾರೂ ಇಲ್ಲ. ಹಳೇ ಸ್ಕೂಲಬೋರ್ಡು, ಶಿಕ್ಷಕರಿಗೆ ಸಂಕ್ರಮಣ ಮಾಡಿ ಅವತಾರ ಸಮಾಪ್ತಿ ಹೊಂದಿತು. ಹೊಸ ಸ್ಕೂಲಬೋರ್ಡು ಜನ್ಮ ಹೊಂದಲಿಕ್ಕೇ ಬಹಳ ಸಮಯವು ಹೋಯಿತು. ಸ್ಕೂಲ ಬೋರ್ಡಿನ ರಚನೆಯಾದ ಬಳಿಕ, ಇಲೆಕ್ಷನಿನ ಗೊಂದಲ! ದ್ರೋಣಸಮರದಲ್ಲಿ ಬಡ ವಿರಾಟನೋಪಾದಿಯಲ್ಲಿರುವ ಶಿಕ್ಷಕರಿಗೆ ಕೇಳುವವರಾರು? ಇನ್ನಾದರೂ ಪ್ರಯಾಣ ಭತ್ತೆಯನ್ನು ಶಿಕ್ಷಕರಿಗೆ ಕೊಟ್ಟು ಕಾಯಬೇಕಾಗಿ ಬೇಡಿಕೆಯಿದೆ ಇತ್ಯಾದಿ

ಕಾನಡಾವೃತ್ತ

ಮಿತಿ ಕ್ಷಯ ಸಂ। ಭಾದ್ರಪದ ಶು। ೧೪, ಸೋಮವಾರ

ಲಂಖಾನ್ ಪಡ್ಯ್ರಃ।

ನಿರೀಕ್ಷಣೆಯಂತೆ ಶುಭ ಚಿನ್ಹಗಳು ಫಲಿಸ ಲಿಲ್ಲವೆಂದು ತಿಳಿಸಲು ನಮಗೆ ಅತ್ಯಂತ ವ್ಯಸನ ವಾಗುತ್ತದೆ. ಸ್ವರಾಜ್ಯ ಹಾಗು ಪ್ರತಿಸಹಕಾರ ಪಕ್ಷಗಳೊಳಗಿನ ಸಂಧಾನವು ಇತ್ತಟ್ಟಿನಲ್ಲಿ ಯೂ ಐಕ್ಯಮತ್ಯಗೊಳಿಸಲು ಸಮರ್ಥವಾಗಲಿಲ್ಲ ಪಂಡಿತ ಮೋತೀಲಾಲ ನೆಹರೂರವರು ನುಡಿ ದಂತೆ, ಸರಕಾರಿ ಅಧಿಕಾರ ಸ್ವೀಕಾರದ ಶರ್ತು ಗಳು ಇತ್ತಟ್ಟಿನಲ್ಲಿಯೂ ಮಾನ್ಯವಾಗಲಿಲ್ಲ. ಹೇಗಾದರೂ ಸ್ವರಾಜ್ಯವು ಸಾಕಷ್ಟು ಫಲದಾಯ ಕವಲ್ಲೆಂದು ಎಲ್ಲರೂ ಅಭಿಪ್ರಾಯಪಟ್ಟಿ ಗ್ಯೂ, ಆದರಿಂದ ಅದನ್ನು ಶೀಘ್ರವೇ ತಿದ್ದು ಪಡಿ ಮಾಡುವದವಶ್ಯವೆಂದು ಅಭಿಮತವಿದ್ದಾಗ್ಯೂ ಆ ಕಾಯಿದೆಯಂತೆ ಏರ್ಪಾಟಾದ ಘಟನೆಯ ನ್ನು ಪ್ರಜಾಕಲ್ಯಾಣಕ್ಕಾಗಿ ಉಪಯೋಗಿಸುವ ಯೋಜನೆಯ ಕುರಿತು ಇತ್ತಟ್ಟಿನಲ್ಲಿಯೂ ಮಹತ್ವದ ಮತಭೇದಗಳಿವೆ. ಆ ಭೇದಗಳನ್ನು ಪ್ರಜೆಗಳೆಲ್ಲರೂ ಅರಿತುಕೊಳ್ಳುವದವಶ್ಯತು

ಪಂಡಿತ ಮೋತೀಲಾಲ ಹಾಗು ಪಂಡಿತ ಮದನಮೋಹನರವರೊಳಗೆ ಸಂಧಿ-ಪ್ರಸ್ತಾಪ ಗಳು ನಡೆದವೆಂದು ನಾವು ಹಿಂದೆ ತಿಳಿಸಿದ್ದೇವ ಷ್ಟೇ ಅವುಗಳ ಸ್ವರೂಪವೇನು? ಪಂಡಿತ ಮೋತೀಲಾಲರ ಅಂಬೋಣವೇನು? ಮದನ ಮೋಹನರವರ ಅಭಿಪ್ರಾಯವೇನು? ಪಂಡಿತ ಮೋ ತೀಲಾಲರವರು ಸರಕಾರಿ ಅಧಿಕಾರಗಳನ್ನು ಸ್ವೀಕರಿಸುವ ಮುಂಚೆ, ಘಟನೆಯಲ್ಲಿ ಸರಕಾರ ವು ಮಾಡತಕ್ಕ ತಿದ್ದುಪಾಟುಗಳನ್ನು ತಿಳಿಸಿದರು. ವರಿಷ್ಠ ಕಾಯಿದೆ ಕೌನ್ಸಿಲಿನ ತಾ ೧೮-೨-೧೯೨೪ ಹಾಗು ತಾ ೮-೯-೧೯೨೫ ಈ ಎರಡು ಅಧಿ ವೇಶನಗಳಲ್ಲಿ ಕೈಕೊಂಡ ರಾಷ್ಟ್ರೀಯ ಬೇಡಿಕೆ ಯ ತೀರ್ಮಾನುಗಳನ್ನು ಸರಕಾರವು ಅಂಗೀ ಕರಿಸಬೇಕು, ರಾಜಕಾರಣದ ಅನುಕೂಲಕ್ಕಾ ಗಾಗಿ ಬಂಧನಕ್ಕೀಡಾದ ದೇಶಸೇವಕರನ್ನು ಸರ ಕಾರವು ಬಂಧಮುಕ್ತ ಮಾಡಬೇಕು ಅಥವಾ ಕಾಯಿದೆಯಂತೆ ಅವರ ವಿಚಾರ ಮಾಡಬೇಕು, ದಬ್ಬಾಳಿಕೆಯ ಕಾನೂನುಗಳನ್ನೆಲ್ಲ ರದ್ದು ಪಡಿಸ ಬೇಕು. ಕಾಯಿದೆ ಕೌನ್ಸಿಲುಗಳಿಗೆ ಸರಕಾರವು ಸಭಾಸದರನ್ನು ನೇಮಿಸಬಾರದು ಪ್ರತ್ಯೇಕಿಸಿ ಕೊಟ್ಟ ಖಾತೆಗಳ ಮೇಲೆ ದಿವಾನರಿಗೆ ಸರ್ವಾ ಧಿಕಾರವಿರಬೇಕು, ಅವುಗಳ ಆಡಳಿತೆಯ ಕುರಿ ತು ದಿವಾನರು ಕಾಯಿದೆ ಕೌನ್ಸಿಲಿನ ಆಧೀ ನರಾಗಿರಬೇಕು, ಹೊಸ ಕರಗಳನ್ನು ಹೇರ ದೆ, ಇದ್ದ ಕರಗಳೊಳಗಿಂದ ದಿವಾನರಿಗೆ ಪಾಲು ಕೊಡಬೇಕು ಈ ಶರ್ತುಗಳನ್ನು ಪಾಲಿ ಸಲು ಸರಕಾರವು ಒಪ್ಪುವ ವರೆಗೆ ಪ್ರಾಂತಿಕ ಕಾಯಿದೆ ಕೌನ್ಸಿಲಿನೊಳಗಿನ ರಾಷ್ಟ್ರೀಯ ಪಕ್ಷ ವು ಸರಕಾರಿ ಆಡಳಿತೆಗೆ ಅವಶ್ಯವುಳ್ಳ ಖರ್ಚಿನ ರಕಮುಗಳನ್ನು ತಿರಸ್ಕರಿಸಲು ಕರ್ತವ್ಯ ಬದ್ಧವಿರುತ್ತದೆ. ಕಾಲಕಾಲಕ್ಕೆ ಕೈಕೊಳ್ಳ ತಕ್ಕ ಉಪಾಯಯೋಜನೆಯನ್ನು ಆಯಾ ಪ್ರಾಂ ತದ ಪಕ್ಷದವರು ನಿರ್ಧರಿಸಬೇಕು.

ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿಯೂ ಸ್ವರಾ ಜ್ಯ ಪಕ್ಷವು, ರಾಷ್ಟ್ರೀಯ ಬೇಡಿಕೆಗಳು ಮಾನ್ಯ ವಾಗುವ ವರೆಗೆ ಆಡಳಿತೆಗೆ ಅವಶ್ಯವುಳ್ಳ ಖರ್ಚಿ ನ ರಕಮುಗಳನ್ನು ಮಂಜೂರ ಮಾಡಬಾರದು ಪ್ರಜಾಧಿಕಾರವನ್ನು ನಿಯಂತ್ರಿಸುವ ಕಾಯಿದೆ ಗಳನ್ನೆಲ್ಲ ತಿರಸ್ಕರಿಸಬೇಕು. ಆರ್ಥಿಕ, ಬೇಸಾ ಯ ವಿಷಯಕ, ಔದ್ಯೋಗಿಕ, ವ್ಯಾಪಾರ ವಿಷ ಯಕ ಸಂಬಂಧಗಳನ್ನು ಪುರಸ್ಕರಿಸಲು ತೀರ್ಮಾನುಗಳನ್ನು ಸ್ವರಾಜ್ಯ ಪಕ್ಷವು ಕೈಕೊ ಳ್ಳಬೇಕು ಒಡೆಯ-ಒಕ್ಕಲು, ಯಜಮಾನ-ಸೇವಕರೊಳಗಿನ ಹಿತ ಸಂಬಂಧಗಳನ್ನು ಕಾಪಾಡಬೇಕು. ಲಖನೌ ಪಟ್ಟಣದೊಳಗಾದ ಹಿಂದೂ-ಮುಸಲ್ಮಾನರ ತಹನಾಮೆಯಂತೆ ಸ್ವರಾಜ್ಯ ಪಕ್ಷವು ನಡಕೊಳ್ಳಬೇಕು ಸ್ವರಾಜ್ಯ ಪಕ್ಷದವರು ಹಿಂದೂ ಮುಸಲ್ಮಾನ ಧರ್ಮ ವಿಷಯಗಳ ಕುರಿತು ಕಾಯಿದೆಗಳನ್ನು ಸೂಚಿ ಸಲಾಗದು ಇಂಥ ಕಾಯಿದೆಗಳ ಸೂಚನೆಯಾ ದ್ದಲ್ಲಿ, ಆ ಕುರಿತು ಪಕ್ಷದ ಸಭಾಸದರು ಸ್ವತಂ ತ್ರವಾಗಿ ಮತದಾನ ಮಾಡಬಹುದು. ಸನಾತನ ವಿಷಯು ಕಾಯಿದೆ ಯಾವದು? ಎಂಬದನ್ನು ನಿರ್ಣಯಿಸಲು ಮಂಡಳವೊಂದನ್ನು ನೇಮಿಸಿ ಕೊಳ್ಳಬೇಕು ಈ ಶರ್ತುಗಳ ಮೇಲೆ ಎರಡು ಮೂರು ರಾತ್ರಿ ಪಂಡಿತ ಮೋತೀಲಾಲರವರಿಗೂ ಪಂಡಿತ ಮದನ ಮೋಹನರವರಿಗೂ ಚರ್ಚೆ ಯಾಯಿತು ಆದರೆ, ಇತ್ತಟ್ಟಿನಲ್ಲಿಯೂ ಐಕ್ಯ ಮತ್ಯವಾಗಲಿಲ್ಲ.

ಕೊನೆಗೆ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಸೌ। ಸರೋಜಿನಿ ದೇವಿಯವರ ಆಗ್ರಹದ ಮೇಲೆ ಮಾತುಕಥೆಯಾಯಿತು. ಪಂಡಿತ ಮಾಲ ವೀಯರವರು ಕೊನೆಯ ಸಂಧಾನ ಶರ್ತು ಗಳನ್ನು ವಿವರಿಸಿದರು. ಅವೇನೆಂದರೆ:- ಬಂಗಾ ಲದೊಳಗಿನ ದಬ್ಬಾಳಿಕೆಯ ಕಾನೂನಿನನ್ವಯ ಬಂಧಿಸಲ್ಪಟ್ಟವರೆಲ್ಲ, ಸರಕಾರವು ಒಂದೇ ವಿಮೋಚಿಸಬೇಕು, ಅಥವಾ ಅವರಿಗೆ ಕಾಯಿ ದೆಯಂತೆ ಶಾಸನವನ್ನೀಯಬೇಕು. ಅಲ್ಲಿಯವರೆಗೆ ಸರಕಾರಿ ಅಧಿಕಾರಗಳನ್ನು ರಾಷ್ಟ್ರೀಯ ಪಕ್ಷವು ಸ್ವೀಕರಿಸಲಾಗದು. ಹೀಗೆ ಬಿಡುಗಡೆಯಾದ ಬಳಿ ಕ, ಪ್ರಾಂತದೊಳಗಿನ ಪರಿಸ್ಥಿತಿಯನ್ನು ಸಮಾ ಲೋಚಿಸಿ, ಆಯಾ ಪ್ರಾಂತದವರು ಅಧಿಕಾರ ಸ್ವೀಕಾರದ ಯೋಜನೆಯನ್ನು ನಿರ್ಧರಿಸಬೇಕು ಮತ್ತು ಅದನ್ನು ಅಖಿಲ ಭಾರತೀಯ ಮಂಡಳ ದವರು ಸಮ್ಮತಿಸಬೇಕು ಆ ಬಳಿಕ, ಈ ನಿರ್ಣ ಯದಂತೆ ಪಕ್ಷದವರು ವರ್ತಿಸಬೇಕು ಈಗಿನ ಘಟನೆಯಲ್ಲಿ ಸಾಧ್ಯವಿದ್ದ ಮಟ್ಟಿಗೆ ಪ್ರಜೆಗಳ ಹಿತಗಳನ್ನು ಕಾಪಾಡಲಿಕ್ಕೂ, ಸ್ವರಾಜ್ಯವನ್ನು ಶೀಘ್ರವೇ ಸಂಪಾದಿಸಲಿಕ್ಕೂ ಕಾಯಿದೆ ಕೌನ್ಸಿಲಿ ನಲ್ಲಿ ಯತ್ನ ಮಾಡಬೇಕು. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ರಾಷ್ಟ್ರೀಯ ಬೇಡಿಕೆಯು ಮಾನ್ಯ ವಾಗುವ ವರೆಗೆ ರಾಷ್ಟ್ರೀಯ ಪಕ್ಷವು ಖರ್ಚಿನ ರಕಮಿನೊಳಗೆ ಸರಕಾರಿ ಕಾರ್ಯಕಾರಿ ಕಮೀಟಿಯ ಖರ್ಚಿನ ರಕಮನ್ನು ಪ್ರತಿ ವರ್ಷ ಕಿತ್ತೊಗೆಯಬೇಕು. ಪ್ರತಿ ವರ್ಷ ಸೂಚಿಸಲ್ಪ ಡುವ ಹೊಸ ಹೊಸ ಕರ ಹೇರಿಕೆಯ ಕಾಯಿದೆ ಯನ್ನು ಕಿತ್ತೊಗೆಯಲಿಕ್ಕೂ ಪಂಡಿತ ಮದನ ಮೋಹನ ಮಾಲವೀಯರವರು ತಯಾರಿರು ವರು ಧರ್ಮ ವಿಷಯಕ ಕಾಯಿದೆಗಳ ಕುರಿ ತು ಐಕ್ಯಮತ್ಯವಾಗದಿದ್ದರೆ ಸಭಾಸದರು ತಮ ಗೆ ಯುಕ್ತ ಕಂಡಂತೆ ಮತದಾನ ಮಾಡಬಹು ದು ಕಾಯಿದೆ ಕೌನ್ಸಿಲುಗಳ ಉಮೇದ್ವಾರರ ಯಾದಿಯನ್ನು ಪುನರಾಲೋಚಿಸಲು ೭ ಮಂದಿ ಗಳ ಮಂಡಳವನ್ನೊಂದು ಏರ್ಪಡಿಸಬೇಕು

ಪಂಡಿತ ಮಾಲವೀಯರವರ ಶರ್ತುಗಳ ಮೇಲೆ ಅಭಿಪ್ರಾಯ ಕೊಡಲು ಪಂಡಿತ ಮೋತೀ ಲಾಲ ನೆಹರೂರವರು ತಮ್ಮ ಪಕ್ಷದವರಿಗೆ ಸೂಚಿಸಿದ್ದರು ಆ ಅಭಿಪ್ರಾಯಗಳ ವಿವರವು ಪ್ರಕಟವಾಗಿಲ್ಲ ಆದರೂ ಪಂಡಿತ ಮಾಲವೀ ಯರವರ ಸೂಚನೆಗಳು ಸ್ವರಾಜ್ಯ ಪಕ್ಷದ ಪ್ರಮುಖರಿಗೆ ಮಾನ್ಯವಾಗಲಿಲ್ಲ ಸರಕಾರಿ ಅಧಿ ಕಾರಗಳನ್ನು ಸ್ವೀಕರಿಸುವ ಮುಂಚೆ ಒದಗಬೇ ಕಾದ ಪರಿಸ್ಥಿತಿಯನ್ನು ವಿಚಾರಿಸುವ ಅಧಿಕಾ ರವನ್ನು ಕೌನ್ಸಿಲುಗಳೊಳಗಿನ ಸಭಾಸದರಿಗೆ ಒಪ್ಪಿಸಲು ಸ್ವರಾಜ್ಯ ಪಕ್ಷವು ತಯಾರಿಲ್ಲ, ಅವ ನ್ನು ಸ್ಪಷ್ಟವಾಗಿ ನಮೂದಿಸಿ ನಾವು ಮುಂದಾಗ ಬೇಕೆಂದು ಪಂಡಿತ ಮೋತೀಲಾಲರ ಅಂಬೋ ಣವಿದೆ. ಇಲ್ಲದಿದ್ದರೆ, ಪ್ರಕೃತಿ ಭೇದದಂತೆ, ಪ್ರಾಂತಭೇದದಂತೆ ಒಂದೇ ರಾಷ್ಟ್ರೀಯ ಪಕ್ಷವು ಭಿನ್ನ ಭಿನ್ನವಾಗಿ ವರ್ತಿಸಿ ಗೊಂದಲ ಮಾಡುವ ದೆಂದು ಭೀತಿಯಿದೆ. ರಾಜಕಾರಣದ ಉಕ್ತಿಗಳು, ಸಾಧ್ಯವಿದ್ದ ಮಟ್ಟಿಗೆ ಸ್ಪಷ್ಟವಾಗಿದ್ದರೆ ಮಾತ್ರ, ಪ್ರತ್ಯಕ್ಷ ಕಾರ್ಯದಲ್ಲಿ ಪರಿಣಮಿಸಲು ಬಹಳ ಅನುಕೂಲವಾಗುತ್ತದೆ, ಎಂಬದನ್ನು ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಶಾಬರಮತಿ ಯೊಳಗಣ ಒಪ್ಪಂದದ ತಹನಾಮೆಯ ಅರ್ಥವು ಇತ್ತಟ್ಟಿನವರಿಗೂ ಮಾನ್ಯವಾಗದೆ ಒದಗಿದ ಅನರ್ಥವನ್ನು ನಾವು ಅರಿತಿದ್ದೇವೆ. ಪಂಡಿತ ಮೋತೀಲಾಲ ನೆಹರೂರವರು ನುಡಿದಂತೆ, ನಮ್ಮ ಕಾರ್ಯ ಧೋರಣವನ್ನು ಸ್ಪಷ್ಟವಾಗಿ

ಸಮೂಹಿಸುವ ಸಮಯವು ಈಗ ಪ್ರಾಪ್ತವಾಗಿದೆ. ಹೀಗೆ ಸಮೂಹಿಸಿಕೊಂಡು ಕೌನ್ಸಿಲುಗಳಲ್ಲಿ ಸೇರಲು ಶ್ರೀ ಜಯಕರ-ಕೇಳಕರರವರ ಪ್ರತಿಸಹಕಾರ ಪಕ್ಷವಾಗಲಿ, ಪಂಡಿತ ಮದನಮೋಹನ ಮಾಲವೀಯರವರ ಸ್ವತಂತ್ರ ಕೊಂಗ್ರೆಸ ಪಕ್ಷವಾಗಲಿ ತಯಾರಿಲ್ಲ. ಇದರಿಂದ ನಿರುಪಾಯವಾಗಿ ಐಕ್ಯಮತ್ಯದ ಕೊನೆಯ ಯತ್ನವು ನಿರರ್ಥಕವಾಯಿತು. ಐಕ್ಯಭಂಗಕ್ಕೆ ಪಂಡಿತ ಮೋತೀಲಾಲರೇ ಕಾರಣರೆಂದು ಪ್ರತಿಸಹಕಾರ ಪಕ್ಷದ 'ಕೇಸರಿ'ಯು ಗರ್ಜಿಸುತ್ತದೆ. ಆದರೆ, ಈ ಗರ್ಜನೆಯು ನಿರಾಧಾರವೆಂದು ಮೇಲಿನ ವಿವರದಿಂದ ಸ್ಪಷ್ಟವಾಗುವಂತಿದೆ. ಹೀಗೆ ಇತ್ತಿಟ್ಟನಲ್ಲಿ ಐಕ್ಯವಾಗದ್ದರಿಂದ ಸ್ವರಾಜ್ಯ ಪಕ್ಷದ ಲೋಕನಾಯಕರಾದ ಪಂಡಿತ ಮೋತೀಲಾಲರವರೂ, ಪ್ರತಿಸಹಕಾರ ಪಕ್ಷದ ಶ್ರೀ ಜಯಕರರವರೂ, ಸ್ವತಂತ್ರ ಕೊಂಗ್ರೆಸ ಪಕ್ಷದ ಪಂಡಿತ ಮಾಲವೀಯರವರೂ "ಶಂಖಾನ್ ದಧ್ಮುಃ ಪೃಥಕ್ ಪೃಥಕ್ |" ಎಂಬ ಭಗವದುಕ್ತಿಯಂತೆ ತಮ್ಮ ತಮ್ಮ ಇಲೆಕ್ಷನ ಸಂಗ್ರಾಮದ ಶಂಖಗಳನ್ನು ದಿಲ್ಲಿ, ಅಲಿಗಡ, ಲಖನೌ ಮುಂತಾದ ಕಡೆಗಳಲ್ಲಿ ಪ್ರತ್ ಪ್ರತ್ಯೇಕವಾಗಿ ಊದಿ, ಸ್ವಕಾರ್ಯರಾಷ್ಟ್ರಧೋರಣವನ್ನು ಭಾರತವಾಸಿಯರಿಗೆ ಜಾಹೀರ ಪಡಿಸುತ್ತಿರುವರು. ವಿವೇಕಶೀಲರಾದ ಭಾರತ ವಾಸಿಯರೆಲ್ಲರೂ ವಿಚಾರದಿಂದ ತಮ್ಮ ತಮ್ಮ ಮತದಾನವನ್ನು ಮಾಡಿ ಲೋಕನಾಯಕರಿಗೆ ಬೆಂಬಲವನ್ನೀಯುವರಾಗಿ ನಾವು ನರೆ ನಂಬಿರುವೆವು.

ಸ್ಫುಟ ಸೂಚನೆಗಳು.

೧. ಭೂತಲದ ಮೇಲಿನ ರಾಷ್ಟ್ರಗಳನ್ನು ಗೆಳೆತನವನ್ನು ಬೆಳಿಸಿ, ಅಂತಃ ರಾಷ್ಟ್ರೀಯ ಕಲಹಗಳನ್ನು ಸಾಮೋಪಚಾರದಿಂದ ನಿರ್ಣಯಿಸಿಕೊಳ್ಳಲು, ರಾಷ್ಟ್ರಸಂಘವು ಜನ್ಮವನ್ನೆತ್ತಿತಷ್ಟೇ. ಜರ್ಮನಿಯಂಥ ಬಲಾಢ್ಯ ರಾಷ್ಟ್ರವು ರಾಷ್ಟ್ರಸಂಘದಲ್ಲಿ ಸೇರದ ತನಕ, ಯುರೋಪ ಖಂಡದಲ್ಲಿಯೂ ಶಾಂತತೆಯನ್ನು ಪ್ರಸ್ಥಾಪಿಸಲು ಯತ್ನಿಸುವದು ಅವ್ಯವಹಾರ್ಯವಿತ್ತು. ಬ್ರಿಟಿಶರು ಫ್ರೆಂಚರ ಜೊತೆಗಾರರಾಗಿ ಜರ್ಮನಿಯೊಡನೆ ಹೋರಾಡಿದರೂ ಫ್ರೆಂಚರಿಗೆ ಕಣ್ಣಿಗೆ ಕರಬುಯಿಸಿ, ಜರ್ಮನಿಯೊಡನೆ ಗೆಳೆತನದ ಮಾತುಕಥೆಗಳನ್ನು ನಡಿಸುತ್ತಿದ್ದರು. ಫ್ರಾನ್ಸ ದೇಶದ ಅಂತಃಸ್ಥಿತಿಯೂ ಬಹಳ ಕೆಟ್ಟಿತ್ತು, ಒಳ್ಳೆ ವಿಪರೀತ ಬೆಳೆದಿತ್ತು. ಜರ್ಮನಿಯ ಮನವೊಲಿಸುವದು ಕಠಿಣವಾಗಿತ್ತು. ಇಂಥ ಸಂದರ್ಭದಲ್ಲಿ ಜರ್ಮನಿಯಂಥ ಶತ್ರುವನ್ನು ನೆರೆಯಲ್ಲಿರಿಸಿಕೊಳ್ಳುವದು ಸುರಕ್ಷಿತವಲ್ಲೆಂದು ವಿಚಾರಶೀಲರ ಅಭಿಮತವಾಯಿತು. ಜರ್ಮನಿಯಾದರೂ ದ್ವೇಷಭಾವದಿಂದ ನಷ್ಟವೇ ಹೊರತು ಲಾಭವಿಲ್ಲೆಂದು ಎಣಿಸಿ ರಾಷ್ಟ್ರ ಸಂಘದಲ್ಲಿ ಸೇರಲೊಪ್ಪಿತು. ರಾಷ್ಟ್ರಸಂಘದಲ್ಲಿ ಜರ್ಮನಿಯ ಪ್ರವೇಶವು ಕಳೆದ ೧೦ ನೇ ತಾರೀಖಿಗೆ ಸಾಂಗವಾಗಿ ನೆರವೇರಿತು. ಫ್ರೆಂಚರ ಪ್ರತಿನಿಧಿಗಳಾದ ಬ್ರೆಂಡರವರೂ, ಜರ್ಮನಿಯ ಪ್ರತಿನಿಧಿಗಳಾದ ಡಾ| ಸ್ಟ್ರೆಸ್ಮನ್‌ರವರೂ ಮಿತ್ರಭಾವದಿಂದ ೧೦ ನೇ ತಾರೀಖಿಗೆ ಹಸ್ತಾಂದೋಲನಮಾಡಿ, ಮುಖ್ಯಸ್ಥಾನದಲ್ಲಿ ಅನ್ಯೋನ್ಯ ಅಭೀಷ್ಟಚಿಂತನ ಮಾಡಿದರು. ಬ್ರಿಟಿಶರಿಗೆ ಕುಯುಕ್ತಿ ಮಾಡುವ ಸಾಧನವೊಂದು ನಷ್ಟವಾಯಿತೆಂದು ವ್ಯಸನವಾದಾಗ್ಯೂ, ಬ್ರಿಟಿಶ ಪ್ರತಿನಿಧಿಗಳಾದ ಸರ ಆಸ್ಟಿನ ಚೆಂಬರಲೇನರವರು ರಾಷ್ಟ್ರಸಂಘದಲ್ಲಿ ಸಂತೋಷವನ್ನು ಪ್ರಕಟಿಸಿದರು. ರಣದೇವತೆಯನ್ನು ನಾವು ಮೂಲೆಗಟ್ಟುವಾ ಎಂದು ಫ್ರಾನ್ಸ ದೇಶದ ಪ್ರತಿನಿಧಿಗಳಾದ ಬ್ರೆಂಡರವರು ಉದ್ಗರಿಸಿದರು. ಜರ್ಮನಿಯ ಪ್ರತಿನಿಧಿಗಳಾದ ಡಾ| ಸ್ಟ್ರೆಸ್ಮನ್‌ರವರು ಜರ್ಮನಿಯೊಳಗಿನ ಶಸ್ತ್ರಸನ್ಯಾಸದ ಯೋಜನೆಯನ್ನು ಜಾಹೀರು ಪಡಿಸಿ, ಅದರಂತೆ ಸಮಸ್ತ ರಾಷ್ಟ್ರಗಳೂ ವರ್ತಿಸಬೇಕೆಂದರು. ಈ ಸಮಾರಂಭದ ಪ್ರೀತ್ಯರ್ಥ ಭೋಜನ ಸಮಾರಂಭವು ನೆರವೇರಿತು. ಜರ್ಮನಿಯ ಪ್ರವೇಶದಿಂದ ಸ್ಪೇನದೇಶವು ರಾಷ್ಟ್ರಸಂಘದಿಂದ ಹೊರಬಿತ್ತು. ಆದರೆ, ಸ್ಪೇನ ದೇಶವು ತನ್ನಕ್ಕೆ ಮುಖ್ಯಸ್ಥಾನ ಸಿಕ್ಕದಿದ್ದರಿಂದ ಬೇರೆಯಾದರೂ, ಆ ದೇಶವು ಶೀಘ್ರವೇ ರಾಷ್ಟ್ರಸಂಘದಲ್ಲಿ ಸೇರುವದೆಂದು ಪೂರ್ವಾಪರ ಸಂಬಂಧಗಳನ್ನರಿತವರು ಹೇಳುತ್ತಾರೆ. ಸ್ಪೇನ ದೇಶವು ಫ್ರಾನ್ಸ ದೇಶದ ಸ್ನೇಹದ ನಿಮಿತ್ತವಾಗಿ ವರ್ತಿಸಿದ್ದರಿಂದ ಇಂದು ನಾಳೆ ಆ ದೇಶವು ರಾಷ್ಟ್ರಸಂಘದಲ್ಲಿ ಸೇರುವದೆಂದು ತಿಳಿಯಲಡ್ಡಿಯೇನಿಲ್ಲ, ಹೊರಹೋದರೂ ಮಹತ್ವವೇನಿಲ್ಲ. ಅಂತೂ ಯುರೋಪ ಖಂಡದ ಮಟ್ಟಿಗೆ ರಾಷ್ಟ್ರಗಳೊಳಗಿನ ಮತ್ಸರ ಬುದ್ಧಿಯು ನಷ್ಟವಾಯಿತು. ಆದರೆ, ಯುರೋಪ ಖಂಡದೊಳಗಿನ ಶಾಂತಿದಾತ ಬ್ರಿಟಿಶರು ಏಶಿಯಾ, ಅಮೇರಿಕಾ, ಆಫ್ರಿಕಾ ಖಂಡಗಳಲ್ಲಿ ಪ್ರಾರಂಭಿಸಿದ ರಣದೇವತೆಯ ಆವಾಹನವನ್ನು ನಷ್ಟಪಡಿಸುವ ಸಮಯವು ಇನ್ನೂ ಬರಲಿಲ್ಲವೇನು? ಅಥವಾ ಯುರೋಪ ಖಂಡದೊಳಗಿನ ದ್ವೇಷವು ಇತರ ಕಡೆಯಲ್ಲಿ ಸ್ವಾರ್ಥ ಸಾಧಿಸಲು ಅಡ್ಡಬರುತ್ತದೆಂದು ಜರ್ಮನಿಯೊಡನೆ ಸಂಧಾನವಾಯಿತೇನು?

---

೨. ಮಾನವನ ವಿಚಾರ ವೈಚಿತ್ರ್ಯವನ್ನು ಒಲ್ಲಿಹರಾರು? ಸದ್ಯಕ್ಕೊಂದು ವಿಲಾಯಿತಿಯೊಳಗಿನ ಪ್ರಿವ್ಹಿಕೌನ್ಸಿಲ ನ್ಯಾಯಮಂಡಲವು ಕೊಟ್ಟ ತೀರ್ಪನ್ನು ಕೇಳಿ ನಮಗೆ ಆತ್ಯಾಶ್ಚರ್ಯವಾಗಿದೆ. ನೀತಿ ಉಪದೇಶಕರಿಗೂ ಉಪಾಸಕರಿಗೂ, ಸಾಮಾನ್ಯ ವ್ಯವಹಾರಿಕರಿಗೂ ಇದೇ ಭಾವನೆಯುಂಟಾಗದಿರದು. ೧೯೨೦ ನೇ ಇಸ್ವಿಯಲ್ಲಿ ಸ್ಮಿಥ್ ಎಂಬ ಕಾನಡಾ ದೇಶದ ಸರಾಯಿ ವರ್ತಕರು ಮದ್ಯವನ್ನು ಕಳ್ಳತನದಿಂದ ಆಮದು ಮಾಡಿ, ಲಕ್ಷಾವಧಿ ರೂಪಾಯಿಗಳನ್ನು ಗಳಿಸಿದರು. ಅಲ್ಲಿಯ ಇನ್‌ಕಮ್‌ಟೆಕ್ಸ ಖಾತೆಯವರು ಪ್ರಾಪ್ತಿಯ ಮೇಲೆ ಕರ ಹೇರುವಾಗ ಕಳ್ಳತನದಿಂದ ಸಂಪಾದಿಸಿದ ಪ್ರಾಪ್ತಿಯ ಮೇಲೂ ಕರ ಹೇರಿದರು. ಸ್ಮಿಥ್‌ರವರು ಆ ಕರವನ್ನು ಕೊಡಲು ನಿರಾಕರಿಸಿದರು. ಇದರಿಂದ ಇನ್‌ಕಮ್‌ಟೆಕ್ಸ ಖಾತೆಯವರ ವಿದ್ಯಮಾನ ಎಕ್ಸಚೆಕರ ಕೋರ್ಟಿನಲ್ಲಿ ಸ್ಮಿಥರವರ ಮೇಲೆ ಫಿರ್ಯಾದಾಯಿತು. ಕಾನಡಾ ದೇಶದ ವರಿಷ್ಠ ನ್ಯಾಯಾಸನದಲ್ಲಿ ಬೇಕಾಯದೇಶೀರ ಪ್ರಾಪ್ತಿಯ ಮೇಲೆ ಕರ ಹೇರಬಾರದೆಂದು ನ್ಯಾಯಮೂರ್ತಿಗಳ ನಿರ್ಣಯವಾಗಿ ಕೆಳ ಕೋರ್ಟಿನ ಹುಕುಮನಾಮೆಯು ರದ್ದಾಯಿತು. ಕಾನಡಾ ದೇಶವು ಬ್ರಿಟಿಶ ಸಾಮ್ರಾಜ್ಯಕ್ಕೆ ಒಪ್ಪಿದ್ದು ಆದರಿಂದ ಕಾನಡಾ ದೇಶದ ಕೋಶಪಾಲಕರು ಈ ತೀರ್ಪಿನ ಮೇಲೆ ಪ್ರಿವ್ಹಿಕೌನ್ಸಿಲಿಗೆ ಅಪೀಲು ಮಾಡಿದರು. ಪ್ರಿವ್ಹಿಕೌನ್ಸಿಲಿನವರು ಹಕೀಕತಿನ ವಿಚಾರದಿಂದ ಸಿದ್ಧಾಂತವನ್ನು ಹೇಳಿದರು. ಕಾಯಿದೆಯಂತೆ ಸಂಪಾದಿಸಿದ ಪ್ರಾಪ್ತಿಯ ಮೇಲೆ ಕರ ಹೇರಲು ಸರಕಾರಕ್ಕೆ ಅಧಿಕಾರವಿರುವಂತೆ, ಕಳ್ಳತನ ಮುಂತಾದ ಕಾಯಿದೆಯ ಉಲ್ಲಂಘನದಿಂದ ಸಂಪಾದಿಸಿದ ಪ್ರಾಪ್ತಿಯಮೇಲೂ ಕರ ಹೇರಲು ಅಧಿಕಾರವಿದೆ. ಈ ಸಿದ್ಧಾಂತವನ್ನು ಕೇಳಿ, ಯಾರು ತಾನೇ ಚಕಿತವಾಗದಿರನು? ಕಾಯ್ದೆಯಂತೆ ಸಂಪಾದಿಸಿದ ಪ್ರಾಪ್ತಿಯನ್ನು ಇಟ್ಟುಕೊಳ್ಳುವ ಅಧಿಕಾರವು ಕಾಯ್ದೆಯಂತೆ ಪ್ರಜೆಗಳಿಗಿರುವದು. ಆದರೆ, ಕಾಯ್ದೆಯ ಉಲ್ಲಂಘನದಿಂದ ಸಂಪಾದಿಸಿದ ಸೊತ್ತು ಯಾರದ ಪರದು; ಹೊರತು ಸಂಪಾದಿಸಿದವನದಲ್ಲ. ಸೊತ್ತಿನ ಒಡೆಯರು ಇಲ್ಲದಿದ್ದರೆ ಸರಕಾರವು ಆ ಸೊತ್ತನ್ನು ಪಡೆಯಲು ಹಕ್ಕುದಾರರಿದ್ದಾರೆ. ಪ್ರಜೆಗಳಿಗೆ ಕಾಯ್ದೆಯಂತೆ ರಾಜ್ಯದಲ್ಲಿ ಪ್ರಾಪ್ತಿಮಾಡಲು ಇಂಬಿರುವದು, ಹೊರತು ಕಾಯ್ದೆಯನ್ನು ಮುರಿಯಲು ಅಧಿಕಾರವಿಲ್ಲ ಕಾಯಿದೆಯ ಉಲ್ಲಂಘನದಿಂದ ಸಂಗ್ರಹಿಸಿದ ಯಾವದೇ ಸೊತ್ತು ಸೊತ್ತಾಗಲಾರದು. ಇಷ್ಟು ಸಾಮಾನ್ಯ ತತ್ವವು ಪ್ರಿವ್ಹಿಕೌನ್ಸಿಲಿನ ನ್ಯಾಯಮೂರ್ತಿಗಳಿಗೆ ಹೊಳೆಯದಿದ್ದದ್ದು ಪರಮಾಶ್ಚರ್ಯವು. ಕಾನಡಾ ದೇಶದ ಸರಕಾರವಾದರೂ ಇದೇ ಪ್ರಾಪ್ತಿಯನ್ನೇ ಪಡಕೊಳ್ಳುವ ಮಾರ್ಗವನ್ನವಲಂಬಿಸದೆ ಇನ್‌ಕಮ್‌ಟೆಕ್ಸ ಅಧಿಕಾರದ ನಿರ್ಣಯಕ್ಕಾಗಿ ವಿಲಾಯಿತಿಯ ತನಕ ಪ್ರಯತ್ನ ಪಟ್ಟದ್ದನ್ನು ನೋಡಿ, ನಾವು ಮತ್ತಷ್ಟು ಬೆರಗಾಗಿರುವೆವು. ಸ್ಮಿಥ್‌ರವರೂ ಕಳ್ಳತನದಿಂದ ದ್ರವ್ಯ ಸಂಪಾದನ ಮಾಡಿದ್ದು ಮನುಷ್ಯ ಸ್ವಭಾವವೆಂದು ಎಣಿಸಬಹುದು. ಆದರೆ, ಕಳ್ಳತನವನ್ನು ಆಧರಿಸಿಕೊಂಡು ಪ್ರಾಪ್ತಿಯ ಮೇಲೆ ಕರ ಕೊಡಲು ನಿರಾಕರಿಸಿ ತಮ್ಮ ಕಳ್ಳತನವನ್ನು ಸಂಭಾವಿತತನದಿಂದ ಮೆರಿಸುವದನ್ನು ನೋಡಿ ನಮ್ಮ ಮತಿಯು ಕುಂಠಿತವಾಗಿದೆ. ಅಂತೂ ಈ ಪ್ರಕರಣವು ಆಶ್ಚರ್ಯಕರ ಸಂಗತಿಗಳ ಒಂದು ಪರಂಪರೆಯಲ್ಲವೇ?

---

೩. ಆಳರಸರಿಗೆ ಅಭಿನಂದಿಸುವ ಸುಯೋಗವು ನಮಗೆ ಪ್ರಾಪ್ತವಾಗುವದು ಅಪರೂಪವಾದ ಸಂಗತಿಯು. ಆದರಿಂದ ಇಂಥ ಸಮಯದಲ್ಲಿ ನಮಗೆ ಬಹಳ ಆನಂದ ಉಂಟಾಗುವದು ಸಹಜವು. ಆಯುರ್ವೇದ ಹಾಗು ಯುನಾನಿ ಪದ್ಧತಿಯ ಚೌಕಶಿಗಾಗಿ ಸಂಯುಕ್ತಪ್ರಾಂತ ಸರಕಾರವು ಒಂದು ಆಲೋಚನಾ ಮಂಡಳವನ್ನು ನೇಮಿಸಿತ್ತಷ್ಟೇ! ಆ ಮಂಡಳದವರು ಈ ವಿಷಯಗಳನ್ನು ಆಲೋಚಿಸಿ, ಸರಕಾರಕ್ಕೆ ರಿಪೋರ್ಟನ್ನು ಸಾದರಪಡಿಸಿದರೆಂದು, ಈ ಮೊದಲೇ ಹೇಳಲಾಗಿದೆ. ಪ್ರಾಂತಿಕ ಸರಕಾರವು ಈ ಶಿಫಾರಸುಗಳನ್ನು ಪರ್ಯಾಲೋಚಿಸಿ, ಈ ಶಿಫಾರಸುಗಳಂತೆಯ ೧೮ ಮಂದಿ ಸಭಾಸದರ ಒಂದು ಕಮಿಟಿಯನ್ನು ನ್ಯಾಯಮೂರ್ತಿ ಗೋಕರ್ಣನಾಥ ಮಿಶ್ರರವರ ಅಧ್ಯಕ್ಷತೆಯಲ್ಲಿ ನೇಮಿಸಿದೆ. ಈ ಮಂಡಳವು ಆಯುರ್ವೇದ ಹಾಗು ಯುನಾನಿ ಪದ್ಧತಿಗಳ ಅಭ್ಯಾಸ ಕ್ರಮವನ್ನು ನಿಶ್ಚೈಸಿ ಅದು ಬಿಸಲ್ಲಿ ತರುವದು. ಸದ್ಯಕ್ಕೆ ಪ್ರಾಂತಿಕ ಸರಕಾರವು ೫೦ ಸಾವಿರ ರೂಪಾಯಿಗಳನ್ನು ಈ ಪದ್ಧತಿಯಿಂದ ನಡೆಯುವ ಚಿಕಿತ್ಸಾಲಯಗಳಿಗೆ ಹಂಚಿರುವದು. ಈ ಸುದ್ದಿಯನ್ನು ಕೇಳಿ ವಾಚಕರೆಲ್ಲರೂ ಬಹಳ ಸಂತೋಷಪಡುವರು. ಸರಕಾರಿ ಆಫೀಸುಗಳಲ್ಲಿ

ಲೋಕ ಕಲ್ಯಾಣದ ಉದ್ದೇಶ [illegible] ಗಳು ಮೂಳು ತಿನ್ನುತ್ತ ಮೂಲೆಗೆ ಬಿದ್ದಿವೆ. ಆಗಿನಿಂದ ಈ ರಿಪೋರ್ಟ ಮೂಲೆಗುಂಪಾಗುವದೆಂದು [illegible] ನ್ನು ತಿಳುವಳಿಕೆ [illegible] ಕ ಸರಕಾರವು ಪ್ರಕಾಶಕ್ಕೆ ತಾರದಿರುವ ಪ್ರೇರಣೆಯಿಂದ ಆಯ [illegible] ಯೋಜಿಸಿರುವ ಪದ್ಧತಿಗಳನ್ನು ಉದ್ಧರಿಸಲು ಯೋಚಿಸಿದ ಬಗೆ ನಾವು ಮನಃಪೂರ್ವಕವಾಗಿ ಅಭಿನಂದಿಸುವೆವು. ಮತ್ತು ಹೀಗೆಯೇ ಎಲ್ಲ ಪ್ರಾಂತಗಳಲ್ಲಿಯೂ ಸರಕಾರವು ನಮ್ಮ ದೇಶಿ ಔಷಧ ಕ್ರಮವನ್ನು ಪ್ರೋತ್ಸಾಹಿಸಿ, ರೋಗಿ [illegible] ರೋಗವನ್ನು ಕಳೆದು, ಉಪಕಾರ ಮಾಡಬೇಕೆಂದು ನಮ್ಮದೊಂದು ಕೋರಿಕೆ.

---

೪. ನಮ್ಮ ಮುಂಬಯಿ ಸರಕಾರದ ಶಿಕ್ಷಣ ಮಂತ್ರಿಗಳಾದ ರಾ. ಭಾಸ್ಕರರಾಯ ಜಾಧವರವರ [illegible] ವೇನೆಂದು ನಮಗೆ ತಿಳಿಯದ ಮಾತು. ಪ್ರಾಥಮಿಕ ಶಿಕ್ಷಕರಿಗೆ ಸರ್ವೆ ಕಮಿಟಿಯವರ ಶಿಫಾರಸಿನಂತೆ ಹೆಡ್‌ಮಾಸ್ತರ ಭತ್ತೆಯನ್ನು ಕೊಡದೆ [illegible] ವ ಅಸಂಬದ್ಧತೆಯನ್ನೂ ಅನ್ಯಾಯವನ್ನೂ ನಾವು ಈ ಹಿಂದೆ ನಿರ್ದೇಶಿಸಿದ್ದೆವು. ಹೆಡ್‌ಮಾಸ್ತರ ಭತ್ತೆಯಲ್ಲಿ ಆಕ್ಷೇಪ [illegible] ಗಳಿವೆ. ಶಿಕ್ಷಕರ ಶಿಕ್ಷಣ, [illegible] ಕರ ದೊಡ್ಡ ದೊಡ್ಡ [illegible] ಗಳಲ್ಲಿಯೇ ಇರಬೇಕಾಗುತ್ತದೆ, ಯಾಕಂದರೆ, ದೊಡ್ಡ ದೊಡ್ಡ ಶಾಲೆಗಳಲ್ಲಿ ಮುಖ್ಯ [illegible] ಮಾತ್ರ ಶಿಕ್ಷಕರೇಬೇಕು. [illegible] ದು ಹೆಡ್‌ಮಾಸ್ತರ ಆಸನಗಳ ಸಂಖ್ಯೆಯು ಅಲ್ಪ [illegible] ಯುವದಿಲ್ಲ. ಶಾಲೆಯು ದೊಡ್ಡದಿರಲಿ, ಸಣ್ಣದಿರಲಿ, ಅಲ್ಲಿ ಇರುವ [illegible] ಹೆಡ್‌ಮಾಸ್ತರಿಯು ಆಸನ [illegible] ಪ್ರಸಕ್ತಿಯಲ್ಲಿ ಹೆಡ್‌ಮಾಸ್ತರ ಭತ್ತೆಯನ್ನು ಹೆಡ್‌ಮಾಸ್ತರ [illegible] ಪ್ರಪಂಚವೆಂದು ನಾವು ಪ್ರತ್ಯೇಕವಾಗಿ ಹೇಳಬೇಕೇನೆ? ಒಂದೇ ದೇಹದ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಹಚ್ಚಿಕೊಳ್ಳುವದನ್ನು ದಡ್ಡತನವೆಂದು ಯಾರೂ ಹೇಳುವರು. ಪ್ರಾಥಮಿಕ ಶಿಕ್ಷಕರೆಲ್ಲರೂ ಒಂದೇ ವಿದ್ಯಾಖಾತೆಯೊಳಗಿನ ನೌಕರರಿದ್ದು, ಪಾತ್ರಾಪಾತ್ರತೆಯ ವಿಚಾರ ಮಾಡದೆ, ಯೋಗ್ಯಾಯೋಗ್ಯತೆಯನ್ನು ಉಪೇಕ್ಷಿಸಿ ಹೆಡ್‌ಮಾಸ್ತರ ಆಸನಗಳಿಗೆ ೫ ರೂಪಾಯಿಯಿಂದ ೩೦ ರೂಪಾಯಿಗಳ ವರೆಗೆ ಭತ್ತೆ ಕೊಡುವದು ಹೇಗಲ್ಲವಾಗಿದೆ. ಸಂಸ್ಥಾನಕ್ಕೆ ಶೋಭಿಸದ ಮಾತು. ನಮ್ಮ ಬ್ರಿಟಿಶ ರಾಜ್ಯದಲ್ಲಿ ಈ ಪ್ರಕಾರದ ಅವಿವೇಕ ನಡೆಯುವದು ಆಶ್ಚರ್ಯಕರವಾದದ್ದು. ಮತ್ತೊಂದು ಮಾತಿದೆ. ಸರ್ವೆ-ಪರಾಂಜಪೇಯವರು ಶಿಕ್ಷಕರ ಗುಣಗ್ರಾಹಕ ವಿಚಾರದಿಂದ ಸ್ಥಿತಿಗತಿಯನ್ನು ಲಕ್ಷಿಸಿ, ಸಂಬಳದ ಪ್ರಮಾಣವನ್ನು ನಿಶ್ಚೈಸಿದ್ದರು. ಆ ಪ್ರಮಾಣದಂತೆ ಶಿಕ್ಷಕರಿಗೆ ಸಂಬಳ ಕೊಡಬೇಕೆಂದು ಸದ್ಯಕ್ಕೆ ಮುಂಬಯಿ ಕೌನ್ಸಿಲಿನ ಬೈಠಕಿ ಅಧಿವೇಶನದಲ್ಲಿ ಗೊತ್ತಾಗಿದೆ. ಶಿಕ್ಷಣ ಮಂತ್ರಿಗಳಾದ ನಾಮದಾರ ಜಾಧವರವರು ಕೌನ್ಸಿಲಿನೊಳಗಿನ ಠರಾವಕ್ಕೆ ಆ ಕಾಲಕ್ಕೆ ಒಪ್ಪಿಗೆ ಕೊಡದೆ [illegible] ರಂತೆ ಅವರೂ ಅದಕ್ಕೊಪ್ಪಿ ಧಿಕ್ಕರಿಸಿ, ಸರ್ವೆ ಕಮಿಟಿಯ ಪಂಕ್ತಿಪ್ರಪಂಚವನ್ನೇ ಅಮಲಿನಲ್ಲಿ ತರಲು, ಹುಕುಮ [illegible] ಗಳನ್ನು ಹೊರಡಿಸಿದ್ದಾರೆಂಬಾಗಿ ತಿಳಿಯುತ್ತದೆ. ಹೀಗೆ ಮಾಡುವದು ಅವರ ಅಧಿಕಾರಕ್ಕೆ ಭೂಷಣವಲ್ಲ. ಹೆಡ್‌ಮಾಸ್ತರಿ ಭತ್ತೆಯಿಂದ ಶಿಕ್ಷಕರೊಳಗೆ ಪರಸ್ಪರ ಒಡಕಿಯು ಉಂಟಾಗುವ ಲಕ್ಷಣಗಳಿವೆ. ಪಕ್ಷಪಾತವಾದಾಗ [illegible] ಗಾಗುವದು ಸಹಜವು. "ಸರ್ವೆ-ಪರಾಂಜಪೇ ಯೋಜನೆಯನ್ನು ನೀವು ಜೀಕಾದಾರ ಅನುಲಕ್ಷಿಸಿ ತರಿರಿ. ಸರ್ವೆ ಕಮಿಟಿಯ ಹೆಡ್‌ಮಾಸ್ತರಿ ಭತ್ತೆಯು ನಮಗೆ ಬೇಡ" ಎಂದು ಶಿಕ್ಷಕರು ದಿವಾನರಿಗೆ ಪ್ರಾರ್ಥಿಸಿಕೊಳ್ಳುತ್ತಿರುವರು. ಇಷ್ಟು ದಿವಸಗಳ ವರೆಗೆ ಶಿಕ್ಷಕರು ಸಂಬಳವನ್ನು ಪಡೆಯಲು ಬೇಡಿಕೊಳ್ಳುತ್ತಿದ್ದರು. ಈಗ ಸಂಬಳವನ್ನು ತ್ಯಜಿಸಲು ಸಿದ್ಧರಾಗುತ್ತಲಿದ್ದಾರೆ. ಶಿಕ್ಷಕರ ಈ ಪ್ರಕಾರ ಅವಸ್ಥೆ ತರಲು [illegible] ನಾಮದಾರ ಜಾಧವರವರ ಮನೋರಥವು ದರ್ಬಾರದೊಳಗಿನ ಶಕುನಿಯವರಿಗೂ ಹಿಂದೆ ಹಾಕಿ ಮುಂದಾಗಿರುವವು. ಸರ್ವೆ ಕಮಿಟಿಯವರ ಹೆಡ್‌ಮಾಸ್ತರಿ ಭತ್ತೆಯು ತರ್ಕಶೂನ್ಯವಾಗಿರುವದೆಂದೂ, ಅದನ್ನು ಅಮಲಿನಲ್ಲಿ ತರಲು ಯೋಜಿಸುವ ನಾಮದಾರ ಜಾಧವರವರು ವಿದ್ಯಾಖಾತೆಯ ದೈತ್ಯರೆಂದೂ ನಾವು ಹೇಳಿದರೆ, ತಪ್ಪಾದೀತೇನು? ಶಿಕ್ಷಕರೂ ಕೂಡ ಈ ಕುರಿತು ನಿಷೇಧ ಪ್ರದರ್ಶನ ಮಾಡುತ್ತಿರುವಾಗಂತೂ ತಮ್ಮದೇ ಹಟವನ್ನು ಪುರಸ್ಕರಿಸುವದು ಗರ್ಹಣೀಯವು. ನಾಮದಾರ ಜಾಧವರವರು ಈಗಲೂ ಈ ಕುರಿತು ವಿಚಾರಿಸಿ, ಅನ್ಯಾಯವನ್ನು ಅಲ್ಲಿಗೇ ತಡೆಸಲು ಅವಕಾಶವಿದೆ. ಹಾಗೆ ಮಾಡದೆ, ತಮ್ಮ ಅಧಿಕಾರವನ್ನೇ ವಿಸ್ತಾರದಿಂದ ಮುಂದರಿಸಿದರೆ, ಯಾರದೇನ ಹೋಯಿತು? ಅವರ ಅಧಿಕಾರಕ್ಕೆ ಕಳವಳವನ್ನು [illegible] ಬಗ್ಗೆ ಅವರು ಕೊಟ್ಟ ಕಷ್ಟಗಳನ್ನು ಅವರು ಭೋಗಿಸಿಯೇ ತೀರಬೇಕು. ಇದಕ್ಕಾಗಿಷ್ಟೇ ಪ್ರಾಥಮಿಕ ಶಿಕ್ಷಕರಿಗಾಗಲೀ, ಶಿಕ್ಷಣ ಮಂತ್ರಿಗಳಿಗಾಗಲೀ ನಮ್ಮಿಂದ ಹೇಳಲಸಾಧ್ಯ.

ಸ್ಥಾನಿಕ ವೃತ್ತಾಂತ.

ಕುಮಟಾ— ಮೇಘರಾಜನು ವಿಪರೀತವಾಗಿ ಸುರಿಯುತ್ತಿರುವನು. ಮುಂದಿನ ವಾರದಲ್ಲಿ ಮಳೆಯು ನಿಲ್ಲದೆಂದು ಗೋಳಿಡುವವರು ಈಗ ಮಳೆ ಬೀಳುತ್ತದೆಂದು ಗೋಳಿಡುತ್ತಾರೆ. ಸೈರೆಲ್ಲಿ ಅಡ್ಡ ಬೀಳಹತ್ತಿದೆ. ಹೀಗೆಯೇ ಮಳೆ ಸುರಿದರೆ, ಹೇರಳ ನಷ್ಟವಾಗುವದು. ಊರಲ್ಲಿ ಜ್ವರ, ಹೊರಕಡೆಯ ಬೇನೆಗಳು ಇನ್ನೂ ಹೇಳುವಷ್ಟು ಹೆಚ್ಚಿಸಲಿಲ್ಲ. ಗ್ರಾಮ ದೇವಿಯ ಹೇಳಿಕೆಯಂತೆ ಕೆಲವು ವಿನಿಯೋಗಗಳು ನಡೆದವು. ಸೋಮನಪುಕ್ಕಿಯಲ್ಲಿ ಕೆಲವು ದನಗಳನ್ನು ಒಂದು ಹುಲಿಯು ಫಲಾಹಾರ ಮಾಡಿತು. ಈ ವಾರದಲ್ಲಿ ೮-೮೩ ಇಂಚು ಮಳೆ ಬಿತ್ತು. ಇಂತೂ ಈ ವರೆಗೆ ೧೩೯-೪೯ ಇಂಚು ಮಳೆಯಾಯಿತು.

ಹಳಿಯಾಳದಲ್ಲಿ ತಾರೀಖು ೯-೯-೩೬ ನೇಗೆ ಒಂದು ಎಮ್ಮೆ ಕೋಣ ಆಕಳ್ಕೆ ೨ ತಲೆ ೨ ಮೂಗು ೪ ಕಣ್ಣು ೪ ಕಿವಿಗಳುಳ್ಳ ಕರು ಹುಟ್ಟಿರುವದಾಗಿಯೂ ಕಾಲ ಮಾತ್ರ ನಾಲ್ಕೇ ಎಂದೂ ಒಂದು ಚಿತ್ರವು ಇಲ್ಲಿಯ ಮಿ| ಜೆ. ಬಿ. ಅಲ್ಮೇಡಾರವರಿಗೆ ಬಂದಿರುವದಾಗಿ ತಿಳಿಯುತ್ತದೆ

ಗೋಕರ್ಣದಲ್ಲಿ ಕಳೆದ ತಾರೀಖ ೧೬-೯-೩೬ ನೇಗೆ ಮಧ್ಯಾಹ್ನ ಸಮಯ ಒಂದು ಅದ್ಭುತವಾದ ಚಮತ್ಕಾರವು ಸಂಭವಿಸಿತು. ಕಾವೇರಿ ಕೋಂ ಶೇಷಪ ಭಂಡಾರಿ ನಾಕೀನ ಕೊಸ್ಕಟ ಎಂಬವಳೊಬ್ಬ ಹೆಂಗಸು ಹೊಸ್ಕಟಿನಿಂದ ಗೋಕರ್ಣಕ್ಕೆ ಹೋಗುತ್ತಿದ್ದರು. ತಲಗೇರಿಯಲ್ಲಿ ಒಂದು ಅಂಗಡಿಯು ಮುಚ್ಚಿಕೊಂಡಿತ್ತು. ಆ ಅಂಗಡಿಯ ಬಗಲಿಯ ಮೇಲೆ ಇಬ್ಬ ಹೆಂಗಸರು ಕೂತುಕೊಂಡಿದ್ದರು. ಒಬ್ಬ ಹುಡುಗನು ಬಳಿಯಲ್ಲಿದ್ದನು. ಕಾವೇರಿಗೆ ಗೋಕರ್ಣಕ್ಕೆ ಹೋಗಲು ಜೊತೆಗಾರರು ಸಿಕ್ಕಿದಂತಾಯಿತು. ಬಳಿಗೆ ಹೋಗಿ, ನೀವೆಲ್ಲಿಂದ ಬಂದಿರಿ? ಹೋಗುವದೆಲ್ಲಿ? ಎಂದು ಆಗಿನ ಸ್ವಾಗತದ ಮಾತುಕಥೆಗಳ ವಿಚಾರವಾಗಲು ಅವರು ನುಡಿದದ್ದೇನಂದರೆ:-ನಾವು ದೊಡ್ಡಮ್ಮನವರದಿಂದ ಹೊರಟಿವು, ಕುಮಟೆಗೆ ಬಂದೆವು. ಮೊನ್ನೆ ದಿವಸ ಕುರಿ ಕೋಣಗಳನ್ನು ತಾರಿ ದಾಟಿಸಿ, ಅಘನಾಶಿನಿ ಮಾರ್ಗವಾಗಿ ಇತ್ತಕಡೆ ಬಂದಿರುತ್ತೇವೆ. ನಮ್ಮ ಸೈಕಿ ಬಿಟ್ಟಳು. ಅಘನಾಶಿನಿಯಲ್ಲಿ ಉಳಕೊಂಡಿರುವಳು. ನಾವು ಇಲ್ಲಿಂದ ಅಂಕೋಲಾ ತಾಲೂಕ ಮಂಜಗುಣಿಗೆ ಹೋಗಲಿದ್ದೇವೆ. ಎಂಬರ್ಥದ ಮಾತುಗಳನ್ನು ಅವರು ಆಡಿದರಂತೆ. ಅವರ ಜೊತೆಯಲ್ಲಿಯೇ ಕಾವೇರಿಯು ಚೌಂಡಗೇರಿಯ ಅಂಗಡಿಯ ತನಕ ಹೋದಳು. ಹೆಂಗಸರೂ, ಹುಡುಗರೂ ಸ್ವಲ್ಪ ಹಿಂದಾದರು. ಕಾವೇರಿಯು ಮುಂದೆ ಹೋಗಿ ಹಿಂದೆ ನೋಡಲು, ಯಾರೂ ಕಾಣಲಿಲ್ಲ. ಕಾವೇರಿಗೆ ಎದೆಹಾರಿತು!

ಸಾಭಾರ ಸ್ವೀಕಾರ.

ಲೋಕರಹಸ್ಯ— ಆಗಷ್ಟ ಸಂಚಿಕೆ, ಮಾಸಪತ್ರಿಕೆ. ಸಂಪಾದಕರು ಕೆ. ನಾರಾಯಣರಾವ ವೀರರಾಜಪೇಟೆ (ಕೊಡಗು) ವಾ. ವ ರೂ, ೩-೮-೦.

ಸುಬೋಧ— ಆಗಷ್ಟ ಸಂಚಿಕೆ. ಸಚಿತ್ರ ಮಾಸಪತ್ರಿಕೆ. ಸಂಪಾದಕರು ಯಂ. ರಾಮರಾವ ಬೆಂಗಳೂರ ಸಿಟಿ ವಾರ್ಷಿಕ ವರ್ಗಣಿ ರೂ. ೧||.

ಜಯಕರ್ನಾಟಕ— ಶ್ರಾವಣ ಸಂಚಿಕೆ. ಮಾಸಪತ್ರಿಕೆ. ಸಂಪಾದಕರು ಆಲೂರ ವೆಂಕಟರಾಯರು, ಧಾರವಾಡ, ವಾರ್ಷಿಕ ವರ್ಗಣಿ ರೂ. ೩||.

ಆಯುರ್ವೇದ— ಶ್ರಾವಣ ಸಂಚಿಕೆ. ಸಂಪಾದಕ ವಿದ್ವಾನ ಪಿ. ಸೂರ್ಯನಾರಾಯಣಶಾಸ್ತ್ರಿ, ಆಯುರ್ವೇದ ಭೂಷಣ ಸಾಹಿತ್ಯ ವಿದ್ವಾನ ಕಾವ್ಯತೀರ್ಥ ಚಿಕಿತ್ಸಕ ಶ್ರೀ ಭುವನೇಂದ್ರ ವೈದ್ಯಶಾಲಾ. ಪ್ರಕಾಶಕರು ಜೆ. ರಘುಪತಿರಾವ ಬ್ರದರ್ಸ, ತೀರ್ಥಹಳ್ಳಿ. ವಾರ್ಷಿಕ ವರ್ಗಣಿ ರೂ. ೨.

ರಂಗಭೂಮಿ— ಆಷಾಢ ಸಂಚಿಕೆ, ಸಚಿತ್ರ ಮಾಸಪತ್ರಿಕೆ ಸಂಪಾದಕರು ಶ್ರೀ| ಡ. ಕೃ. ಭಾರದ್ವಾಜ. ಆನಂದಾಶ್ರಮ, ಬಸವನಗುಡಿ ಬೆಂಗಳೂರ ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ರೂ. ೩.

ಸ್ವಧರ್ಮ— ಶ್ರಾವಣ ಸಂಚಿಕೆ ಸಂಪಾದಕರು ಶ್ರೀ| ದ. ರಾ. ಬೇಂದ್ರೆ, ಬಿ. ಎ, ಮಾಳಮಡ್ಡಿ, ಧಾರವಾಡ ವಾರ್ಷಿಕ ಚಂದಾ ರೂ. ೨.

ಕಾರವಾರ— ೪-೫ ದಿವಸಗಳಿಂದ ವಿಪರೀತ ಮಳೆ ಸುರಿಯುತ್ತದೆ. ಡಾ| ಪರಾಂಜಪೇಯವರು ಇಲ್ಲಿ ತಾರೀಖು ೧೫ ನೇಗೆ ಮತದಾರರ ಜಾಗೃತಿಗಾಗಿ ಬಂದಿದ್ದರು. ಮ್ಯುನಿಸಿಪಾಲಿಟಿಯ ಸಭಾಮಂದಿರದಲ್ಲಿ ಮಾರನೇ ದಿನ ಮತದಾರರ ಸಭೆಯಾಯಿತು. ಪರಾಂಜಪೇಯವರು ತಮ್ಮ ದೇಶಸೇವೆಯ ಬಗ್ಗೆ ಹೇಳಿದರು. ಮೋರ್ಲೆ-ಮಿಂಟೋರವರ ಸುಧಾರಣಾ ಯುಗದಲ್ಲಿ ಅವರು ಮುಂಬಯಿ ವಿಶ್ವವಿದ್ಯಾಲಯದ ಪ್ರತಿನಿಧಿಗಳಾಗಿದ್ದರು. ಸರಕಾರನಿಯುಕ್ತ ಸಭಾಸದರಾದಾಗಲೂ ತಾವು ಲೋಕಪಕ್ಷಕ್ಕೇ ಮತ ಕೊಟ್ಟಿರುವೆನಾಗಿ ಅವರು ಹೇಳಿದರು. ದಿವಾನರಾಗಿ ಸುಧ್ಯ

ವಿಧ್ವಪ್ಟು ಲೋಕಸೇವೆಯನ್ನು ತಾವು ಮಾಡಿರುವೆವಾಗಿ ಅವರು ಉದ್ಗರಿಸಿ ಮಾತಾಡಿದರು. ಕಳೆದ ಕಾಯಿದೆ ಕೌನ್ಸಿಲಿನಲ್ಲಿಯೂ ಲೋಕಪಕ್ಷಕ್ಕನುಕೂಲವಾಗಿಯೇ ತಾವು ಮತಕೊಟ್ಟಿರುವೆವಾಗಿ ಹೇಳಿ, ಶ್ರೀ ಕರ್ನಾಡರವರಿಗೆ ಈ ಹಕೀಕತು ಗೊತ್ತಿರುವದಾಗಿ ಪರಾಂಜಪೆಯವರು ಸಭೆಯಲ್ಲಿ ಹಾಜರಿದ್ದ ಕರ್ನಾಡರವರಿಗೆ ಬೊಟ್ಟು ತೋರಿಸಿದರು. ತಮಗೆ ಆರಿಸಿ ಕಳಿಸಿದರೆ, ತಾವು ಲೋಕಸೇವೆಯನ್ನು ಮಾಡುವೆವಾಗಿ ಅವರು ಹೇಳಿದರು. ಪಂಡಿತ ಮೋತಿಲಾಲರವರಿಗಿಂತ ತಾವು ಹೆಚ್ಚಿಗೆ ಲೋಕಮಾನ್ಯಾನುವರ್ತಿಗಳೆಂದು ಬೆನ್ನು ತಟ್ಟಿಕೊಂಡರು. ರಾಷ್ಟ್ರೀಯ ಸಭೆಯ ಆಜ್ಞೆ ಸಿದ್ಧಾಂತವು ತಮಗೆ ಮಾನ್ಯವಿಲ್ಲದ್ದರಿಂದ, ರಾಷ್ಟ್ರೀಯ ಸಭೆಗೆ ತಾವು ಸೇರಲಿಲ್ಲೆಂದೂ ಅವರು ಸಮರ್ಥನೆ ಮಾಡಿಕೊಂಡರು. ಡಾ॥ ಪರಾಂಜಪೆಯವರ ಕೌನ್ಸಿಲ ಕಾರ್ಯವು ಸಮಾಧಾನಕರವೆಂದು ಶ್ರೀ ಕರ್ನಾಡರವರು ನುಡಿದರು. ಆದರೆ, ಡಾ॥ ಪರಾಂಜಪೆಯವರು ರಾಷ್ಟ್ರೀಯ ಸಭೆಗೆ ಒಪ್ಪಿದವರಲ್ಲದ್ದರಿಂದ ಅವರಿಗೆ ಮತಕೊಡಲು ತಾವು ಹೇಳುವದಿಲ್ಲವಾಗಿ ಶ್ರೀ ಕರ್ನಾಡರವರು ಉತ್ತರಿಸಿದರು.

ಸ್ಕೂಲಬೋರ್ಡಿನ ಇಲೆಕ್ಷನುಗಳನ್ನು ರದ್ದುಮಾಡಲು ಜೆಯರಮನ ಪ್ಲೀಡರ ಮಿರಜಾನಕರವರ ಮೇಲೆ ರಾ॥ ಕೃಷ್ಣರಾವ ಕಳಸೂರಕರ, ರಾ॥ ಸುಬ್ರಾಯ ನಾಯ್ಕ, ರಾ॥ ಶಾಮರಾವ ಭದ್ರಾಪುರರವರು ಕಳೆದ ತಾರೀಕ ೧೭ ನೇಗೆ ದಾವೆ ದಾಖಲ ಮಾಡಿರುವರು. ಜಿಲ್ಲಾಬೋರ್ಡಿನ ಅಧ್ಯಕ್ಷರು ಇಲೆಕ್ಷನ ಕಾಲಕ್ಕೆ ಹಾಜರಿದ್ದದ್ದು ಕಾಯಿದೆಯ ಉಲ್ಲಂಘನವೆಂದು ವಾದಿಯರು ಪ್ರತಿಪಾದಿಸಿ, ಪ್ರತಿವಾದಿಯರನ್ನು ಪದಚ್ಯುತ ಮಾಡಲು ಬೇಡಿಕೊಂಡಿರುವರು.

ಕೀರ್ಯ ಮಾರ್ವಾಡಿಬಾಯಿಯು ತನ್ನ ಅಳಿಯ ಪಗ್ಗರಿ ೬-೭ ಸಾಂದಿಗಳ ಮೇಲೆ ಮಾಡಿದ, ದರೋಡೆಯ ಫಿರ್ಯಾದಿಯು ಶಿಕ್ಷೆಗೆಯೊಳಪಟ್ಟಿದೆ. ಫಿರ್ಯಾದಿಯು ಸುಳ್ಳಿರಬೇಕೆಂಬ ಜಜ್ಜರ ಅನುಮಾನ.

ಬಲ್ಲವರೊಬ್ಬರು ಬರೆಯುವದೇನೆಂದರೆ:— ಡಾ॥ ತಿಮ್ಮಪ್ಪ ಕೋಯಿರು ನಾಯಕರವರ ನೇಮಣೂಕಿಯ ವಿಷಯ ಬಹಳ ತಪ್ಪುಗ್ರಹಿಕೆಯಾಗಿರುವದು. ಸ್ಕೂಲಬೋರ್ಡಿನಲ್ಲಿ ಈ ಕುರಿತು ನಡೆದ ಚರ್ಚೆಯೆಲ್ಲ ಗುರಿತಪ್ಪಿದೆ. ಸ್ಕೂಲಬೋರ್ಡಿಗೆ ಸರಕಾರವು ಕೇಳಿದ್ದೊಂದು! ಸ್ಕೂಲಬೋರ್ಡು ವಿಚಾರಿಸಿದ್ದೊಂದು! ಸ್ಕೂಲಬೋರ್ಡಿಗೆ ಡಾಕ್ಟರರನ್ನು ನೇಮಿಸುವ ಅಧಿಕಾರವು ಕೊಟ್ಟಿದ್ದಿಲ್ಲ. ಅರ್ಜಿಗಳನ್ನು ಕರಿಸಿದ್ದೂ ತಪ್ಪು. ಅರ್ಜದಾರರ ಗುಣದೋಷಗಳನ್ನು ವಿಚಾರಿಸಿದ್ದೂ ತಪ್ಪು; ಸರಕಾರವು ಕೇಳಿದ ಪ್ರಶ್ನೆಯು ಒಂದೇ; "ರಾ॥ ತಿಮ್ಮಪ್ಪ ಕೋಯಿರು ನಾಯಕರವರಿಗೆ ರಾ॥ ರಾವ ದೊಡ್ಡಪ್ಪ ವ್ಯಾಕರಣರ ಗಜೆಯಲ್ಲಿ ನೇಮಿಸುವ ವಿಚಾರ ನಡೆದದೆ; ಈ ಕುರಿತು ನಿಮ್ಮ ಅಭಿಪ್ರಾಯವೇನು?" ಎಂದು ಸರಕಾರವು ಕೇಳಿತ್ತು. ಅದಕ್ಕೆ "ಬೇಕು" ಯಾ "ಬೇಡ" ಎಂಬ ಎರಡೇ ಅಕ್ಷರಗಳ ಒಂದು ಶಬ್ದವನ್ನು ಉತ್ತರಕೊಡುವ ಕೆಲಸವು ಸ್ಕೂಲಬೋರ್ಡಿನದಾಗಿತ್ತು. ಅದನ್ನುಬಿಟ್ಟು ಸ್ಕೂಲಬೋರ್ಡಿನವರು ನೇಮಣೂಕಿಯ ಅಧಿಕಾರವೇ ತಮಗೆ ಪ್ರಾಪ್ತವಾದಂತೆ, ಸ್ಕೂಲಬೋರ್ಡಿನಲ್ಲಿ ಚರ್ಚೆ ನಡಿಸಿದರು. ಸ್ಕೂಲಬೋರ್ಡಿನ ದೊಡ್ಡದೊಡ್ಡ ಅಧಿಕಾರಿಗಳೂ ಈ ಕುರಿತು ತಪ್ಪು ಗ್ರಹಿಕೆಯನ್ನು ಪ್ರಸಾರಗೊಳಿಸುವದನ್ನು ನೋಡಿ ಸ್ಕೂಲಬೋರ್ಡಿನ ಅಧಿಕಾರಿಗಳ ಅಜ್ಞಾನದ ಪ್ರದರ್ಶನವಾಗುತ್ತದೆ. ಆಕಸ್ಮಿಕವಾಗಿ ರಾ॥ ತಿಮ್ಮಪ್ಪನವರಿಗೆ ಬಹುಮತ ದೊರಕಿದ್ದರಿಂದ ಸ್ಕೂಲಬೋರ್ಡಿನ ದಡ್ಡತನವು ಸರಕಾರಕ್ಕೆ ತಿಳಿಯಲಿಕ್ಕೆ ಮಾರ್ಗವಾಗಲಿಲ್ಲ. ಇತ್ಯಾದಿ.

ಸಂಕೇರಿ—ಹಿಂದುಸ್ಥಾನಿ ಸೇವಾದಲದ ಶ್ರೀ ಡಿ. ಎಮ್. ಬೆಂಗೇರಿಯವರು ಇಲ್ಲಿಯ ಗ್ರಾಮ ಕಾಂಗ್ರೆಸ ಕಮಿಟಿಗೆ ೫೦ ಸಭಾಸದರನ್ನು ಕೂಡಿಸಿಕೊಟ್ಟು ಹೋದರು.

ಶ್ರೀ ಮಂಜುನಾಥ ಹರಿ ಜೋಶಿ, ಶ್ರೀ ಗೋವಿಂದ ನಾಗೇಶ ನಾಯಕ, ಮತ್ತು ಶ್ರೀ ಕಾಂಚ್ರೇಕರ ಹನುಮಂತರಾಯರೂ ಹಿಂದುಸ್ಥಾನೀ ಸೇವಾದಲದ ವಲಂಟಿಯರು ಆಗಿರುವರು. ಶ್ರೀಯುತರು ಸೇವಾದಲದ ಕಾರ್ಯಕ್ಕೆ ಅಲ್ಪಸ್ವಲ್ಪ ನಿಧಿಯನ್ನೂ ಕೂಡಿಸಿರುವರು.

ಹೋದ ವರ್ಷದಂತೆಯೇ ಈ ವರ್ಷವೂ ಭಾಗವತ ಸಪ್ತಾಹವು ನಡೆದಿರುತ್ತದೆ. ಜನರಲ್ಲಿ ಧರ್ಮನಿಷ್ಠೆಯೂ ಸದಾಚಾರ ಪ್ರವೃತ್ತಿಯೂ ಹೆಚ್ಚೆಚ್ಚು ಬೆಳೆಯಲಿ.

ವೃತ್ತಸಾರ.

— ಮದ್ರಾಸ ಕಾಯಿದ ಕೌನ್ಸಿಲಿನಲ್ಲಿ ಹಿಂದೂ ಧರ್ಮದಾಯ ಕಾಯಿದೆಯ ಚರ್ಚೆ ನಡೆಯುತ್ತದೆ. ಹಿಂದೂ ದೇವಾಲಯದೊಳಗಿನ ವಿನಿಯೋಗಗಳನ್ನು ಸಾಗಿಸಿ, ಉಳಿದ ದೇವಸ್ಥಾನದ ಹಣವನ್ನು ಚಿಕಿತ್ಸಾಲಯ, ಶಾಲೆ ಮುಂತಾದ ಧರ್ಮ ಕಾರ್ಯಗಳಿಗೆ ಉಪಯೋಗಿಸಬೇಕೆಂದು ಠರಾವಾಗಿದೆ. ಧರ್ಮಕಾಯಿದೆಯಂತೆ ನಿರ್ಮಾಣವಾದ ಬೋರ್ಡಿನ ಮೇಲೆ ಮೊಕದ್ದಮೆಗಳಾದಲ್ಲಿ ಮೊಕದ್ದಮೆಗಳ ಖರ್ಚನ್ನು ಸಂಬಂಧಪಟ್ಟ ದೇವಸ್ಥಾನದ ನಿಧಿಯೊಳಗಿಂದ ತೆರಬೇಕೆಂದು ಗೊತ್ತಾಗಿದೆ.

— ಆಸ್ಟ್ರೇಲಿಯಾ ದೇಶದ ಮಾರಲು ಎಂಬಲ್ಲಿ ಉಗಿಬಂಡಿಯ ಅಪಘಾತವಾಗಿ ೨೭ ಮಂದಿಗಳು ಮಡಿದರು. ೫೦ ಮಂದಿಗಳಿಗೆ ಗಾಯಗಳಾಗಿವೆ.

— ದಕ್ಷಿಣ ಆಫ್ರಿಕೆಯ ಶಿಷ್ಟಮಂಡಳವು ಕಳೆದ ಶನಿವಾರಕ್ಕೆ ಮುಂಬಯಿಗೆ ಬಂದಿಳಿಯಿತು. ಮುಂಬಯಿಯ ವ್ಯಾಪಾರಿ ಸಂಘದವರು ಅವರಿಗೊಂದು ಔತಣ ಕೊಡುವವರಿದ್ದಾರೆ. ಆ ಸಮಯ ಮಹಾತ್ಮರು ಹಾಜರಿರುವರು.

— ಆಸಾಮದಲ್ಲಿ ರಾಷ್ಟ್ರೀಯ ಸಭೆಯ ತಯಾರಿಯು ಭರದಿಂದ ನಡೆದದೆ. ಕಾರ್ಯಕಾರಿ ಕಮಿಟಿ ಮುಂತಾದ ೧೩ ಮಂಡಳಗಳು ನೇಮಿಸಲ್ಪಟ್ಟಿವೆ. ೨೨ ಸಾವಿರ ರೂಪಾಯಿಗಳು ಒಟ್ಟಾಗಿವೆ.

— ಬ್ರಹ್ಮದೇಶದಲ್ಲಿ ೨೦ ರಾಷ್ಟ್ರೀಯವಳ ಸಂಘಗಳನ್ನು ಸರಕಾರವು ಬೇಕಾಯಿದೇಶೀರ ಎಂದು ಜಾಹೀರ ಮಾಡಿದೆ.

— ಜರ್ಮನಿಯ ಪೆಸೋಲಿ ಪ್ರದೇಶದಲ್ಲಿ ಜ್ವರದ ಪಿಡುಗು ಬಂದಿದ್ದು ೨೭ ಮಂದಿಗಳು ಮಡಿದರು. ನೂರಾರು ಮಂದಿಗಳು ಹಾಸಿಗೆ ಹಿಡಿದಿರುವರು.

— ಸ್ವಾಮಿ ಶ್ರದ್ಧಾನಂದಜಿಯವರು ಹಿಂದೂ ಮಹಾ ಸಭೆಯನ್ನು ತ್ಯಜಿಸಿರುವರು. ಹಿಂದೂ ಮಹಾ ಸಭೆಯ ಚಟುವಟಿಕೆಗಳು ರಾಷ್ಟ್ರಕ್ಕೆ ಅಹಿತಕರವೆಂದು ಅವರು ಮನಗಂಡು ರಾಜಿನಾಮೆ ಕೊಟ್ಟಿರುವರು. ಹಿಂದೂ ಮಹಾಸಭೆಯವರು ತಮ್ಮ ಉಮೇದವಾರರನ್ನು ಇಲೆಕ್ಷನಿನಲ್ಲಿ ಮುಂದೆ ಮಾಡಿದ್ದು ಅಯೋಗ್ಯವಾಯಿತೆಂದು ಅವರ ಹೇಳಿಕೆ.

— ಪಂಡಿತ ಮೋತೀಲಾಲರವರು ತಂತಿ ಮಾರ್ಗ ಬೇಸ ದೇಶದಲ್ಲಿ ಹಿಂದುಸ್ಥಾನದ ಸಹಾಯದಿಂದ ಅಲ್ಲಿಯ ರಾಷ್ಟ್ರೀಯರನ್ನು ದಬ್ಬಬಾರದೆಂದು ಅವರ ಹೇಳಿಕೆಯಿದೆ.

— ಹರಿದ್ವಾರದ ಸ್ವಾಮಿ ರಾಮಾನಂದ ಗುರುಗಳ ಸ್ವಾಧೀನಕ್ಕೆ ಮಾರವಾಡಿ ವರ್ತಕರಾದ ಶ್ರೀಮಂತ ಶಿವನಾರಾಯಣಜಿರವರು ೫೦ ಸಾವಿರ ರೂಪಾಯಿಗಳನ್ನಿತ್ತು, ಬಡ ಸನಾತನಿಗಳಿಗೆ ಭಗವದ್ಗೀತೆಯನ್ನು ಉಚಿತವಾಗಿ ಹಂಚಲು ಅರ್ಪಿಸಿರುವರು. ಸ್ವಾಮಿ ರಾಮನಾಥಜಿಯವರು ಈ ಕುರಿತು ದೊಡ್ಡ ದೊಡ್ಡ ಸನಾತನ ಕ್ಷೇತ್ರಗಳಲ್ಲಿ ಸಂಚರಿಸಿ, ನಿಧಿಯನ್ನು ಒಟ್ಟುಗೂಡಿಸುವರು.

— ಪತ್ರಿಯದ ಸಮಯ ಒದಗಿದ ದೊಂಬಿಯಲ್ಲಿ ಒಬ್ಬ ಮುಸಲ್ಮಾನನು ಮಡಿದಿದ್ದನು. ಒಂಭತ್ತು ಮಂದಿಗಳಿಗೆ ಗಾಯಗಳಾಗಿದ್ದವು. ಆ ಕುರಿತು ೪೯ ಮಂದಿ ಹಿಂದೂಗಳ ಮೇಲೆ ಖಟ್ಲೆಯಾಗಿ, ೬ ಮಂದಿಗಳಿಗೆ ಗಲ್ಲಿಗೇರಿಸಬೇಕೆಂದು ವಿಧಿಸಲಾಗಿದೆ. ೩೦ ಮಂದಿಗಳಿಗೆ ಜನ್ಮಟಾಪು ಶಿಕ್ಷೆಯಾಗಿದೆ.

— ಹಿಂದೂ-ಮುಸಲ್ಮಾನರೊಳಗೆ ಐಕ್ಯ ಮಾಡುವ ಕುರಿತು ಪಂಡಿತ ಮದನ ಮೋಹನ ಮಾಲವೀಯ ಹಾಗು ಮೌಲಾನಾ ಅಬುಲ್ ಕಲಮ ಆಝಾದರವರೊಳಗೆ ಕೆಲವು ಉಪಾಯಗಳು ನಿರ್ಧರಿಸಲ್ಪಟ್ಟಿರುವವಾಗಿ ತಿಳಿಯುತ್ತದೆ

— ಇಸ್ಲಾಮಪೂರ ತಾಲೂಕಿನ ಕಾಟೇಗಾಂವದಲ್ಲಿ ಬ್ರಹ್ಮಚಾರಿ ಶ್ರೀ ವಿನಾಯಕ ಮಹಾರಾಜ ಕುಮಾರರು ಸುಮಾರು ೧೭೫ ವಿದ್ಯಾರ್ಥಿಗಳಿಗೆ ಸಂಧ್ಯಾ, ನಮಸ್ಕಾರ ನಿತ್ಯಕರ್ಮಗಳಲ್ಲಿ ಪರೀಕ್ಷೆ ಕೊಂಡರು.

— ಕಲಕತ್ತೆಯಲ್ಲಿ ಸ್ತ್ರೀಯರ ಖಡ್ಗಯುದ್ಧ, ಮುಷ್ಟಿಯುದ್ಧ ಮುಂತಾದ ಆಟಗಳ ಕಾರ್ಯಕ್ರಮಗಳು ನಡೆದವು.

— ಬೆಳಗಾವಿಯ ಸೆರೆಮನೆಯಲ್ಲಿ ಕಳ್ಳರ ಸುಳಿದಾಟವು ವಿಶೇಷವಾಗಿದೆ. ವಾಹನಗಳಲ್ಲಿ ಸುಲಿಗೆಯಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ ಪೋಲೀಸರಿದ್ದು ಈ ಗತಿ!

— ಕೊಲಂಬೋದೊಳಗಿನ ಒಂದು ತೋಟದಲ್ಲಿ ೧೦ ರತ್ತಲು ತೂಕದ ಕಳದೀ ಬಣ್ಣದ ರತ್ನಗಳು ದೊರಕಿವೆ! ಒಂದರ ಬೆಲೆಯು ಅರ್ಧ ಲಕ್ಷವಂತೆ!!

— ಶ್ರೀ ದತ್ತಾತ್ರಯ ವೆಂಕಟೇಶ ಬೆಳವಿಯವರು ಸ್ವರಾಜ್ಯ ಪಕ್ಷದ ವಿದ್ಯಾಮಾನ ರಾಷ್ಟ್ರೀಯ ಸಭೆಗೆ ಉಮೇದ್ವಾರರಾಗಿರುವರು.

— ಮೈಸೂರಿನಲ್ಲಿ ಕ್ಷೌರಿಕರ ದೊಡ್ಡ ಕಟ್ಟು. ಶ್ರೀ ಚಾಮುಂಡ ದೇವಸ್ಥಾನದಲ್ಲಿ ಪ್ರವೇಶ ಕೊಡಬೇಕೆಂದು ನಾವಿಕರ ಹೇಳಿಕೆ. ಹಾಗೆ ಪ್ರವೇಶಕೊಡಬಾರದೆಂದು ಬ್ರಾಹ್ಮಣರ ಆಗ್ರಹ. ದೇವಾಲಯದಲ್ಲಿ ಪ್ರವೇಶ ಸಿಗುವವರೆಗೆ ಕ್ಷೌರಿಕರು ಬ್ರಾಹ್ಮಣರಿಗೆ ಕ್ಷೌರಮಾಡಬಾರದೆಂದು ಹಟ ಹಿಡಿದಿರುವರು

— ಉಡುಪಿಯ ಶ್ರೀ ಮಧ್ವಮುನಿ ಸೇವಾ ಸಂಘದವರು ಶ್ರೀ ಮಧ್ವಾಚಾರ್ಯರ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಪರಿವರ್ತಿಸುವ ಸಂಕಲ್ಪದಿಂದ ೩೦ ಸಾವಿರ ರೂಪಾಯಿಗಳ ನಿಧಿಯನ್ನು ಸಂಗ್ರಹಿಸಲಿರುವರು. ೪ ಸಾವಿರ ರೂಪಾಯಿಗಳು ಒಟ್ಟಾಗಿವೆ.

— ಆಂಧ್ರ ವಿಶ್ವವಿದ್ಯಾಲಯಕ್ಕೆ ರಾವಬಹಾದ್ದೂರ ಲಕ್ಷ್ಮೀಪತಿಯಯರವರು ತಮ್ಮ ಗ್ರಂಥ ಸಂಗ್ರಹಾಲಯವನ್ನು ಅರ್ಪಿಸಿದರು. ಈ ಗ್ರಂಥ ಸಂಗ್ರಹದ ಬೆಲೆಯು ಒಂದು ಲಕ್ಷ ರೂಪಾಯಿ.

— ಉಡುಪಿಯ ಅಷ್ಟಮಠದ ಶ್ರೀ ಪುತ್ತಿಗೆ ಮಠದ ಶ್ರೀ ಸ್ವಾಮಿಗಳವರು ಮೈಸೂರಿಗೆ ಚಿತ್ತೈಸಿದ್ದರು. ಆ ಸಮಯ ಮೈಸೂರಿನ ಶ್ರೀ ಮಹಾರಾಜರವರು ಶ್ರೀ ಸ್ವಾಮಿಗಳ ದರ್ಶನ ಪಡಕೊಂಡು, ಸ್ವೀಕರಿಸಿ ಮನ್ನಿಸಿದರು.

— ಕಾರ್ಕಳದಲ್ಲಿ ಶಕ್ತಿ ಎಂಬ ಹೊಸ ಪತ್ರಿಕೆಯು ಹೊರಡಲಿದೆ. ಮಿಜಾರಿನ ಶ್ರೀ ಗೋವರ್ಧನರಾಯರು ಸಂಪಾದಕರಾಗುವರಂತೆ.

— ಅಹಮ್ಮದ ನಗರದಲ್ಲಿ ಕಳೆದ ಶನಿವಾರಕ್ಕೆ ಖಾದಿಯ ಪ್ರದರ್ಶನದ ಪ್ರದರ್ಶನದ ಆಸೆವರೂ ಸಮಾರಂಭವಾಯಿತು. ನವಾಕಾಳ ಪತ್ರಿಕೆಯ ಶ್ರೀ ಕೃಷ್ಣಾಜಿ ಪ್ರಭಾಕರ ಖಾಡಿಲಕರರವರು ಈ ಪ್ರದರ್ಶನದ ಸಭಾಧ್ಯಕ್ಷರಿದ್ದರು.

— ಜಪಾನದಲ್ಲಿ ಕಳೆದ ೧೭ ನೇ ತಾರೀಖಿಗೆ ತಿರುಪಿಲ್ಲದೆ ಮಳೆ ಸುರಿದು, ಹಿರೋಶಿಯಾ ಪಟ್ಟಣದೊಳಗಿನ ನೂರಾರು ಮನೆಗಳು ಬಿಳಿದು ಹೋದವು. ೩೦ ಮಂದಿಗಳ ಪತ್ತೆಯಿಲ್ಲ.

— ಉಡುಪಿಯ ಸತ್ಯಾಗ್ರಹಿ ಪತ್ರಿಕೆಯು ಕಳೆದ ತಾರೀಕ ೮ ನೇಯಿಂದ ಪತ್ರಿಕಾ ಪ್ರಪಂಚದಲ್ಲಿ ಅವತೀರ್ಣವಾಗಿದೆ. ಶ್ರೀ ಹಿರಿಯಡ್ಕ ರಾಮರಾಯರು ಸಂಪಾದಕರಾಗಿರುವರು. ಶ್ರೀ ಮುಲ್ಕಿ ಮಾಧವ ಕಾಮತರವರು ಪ್ರಕಾಶಕರಿದ್ದಾರೆ.

ಮಹಾತ್ಮರ ಆತ್ಮಚರಿತ್ರ.

(೧೭) ನಾತಾಲದಲ್ಲಿ ಉಳಕೊಂಡೆನು.

೧೮೯೪ ನೇ ಇಸ್ವಿಯಲ್ಲಿ ನಾತಾಲದೊಳಗಿನ ಭಾರತೀಯ [illegible] ಹೀಟು ಹಾಜಿ ಮಹಮ್ಮದ [illegible] ದಾದಾಬ್ದುಲ್ಲಾ ಕಂಪನಿಯಿಂದ ಶೇಟು ಅಬ್ದುಲ್ಲಾ ಹಾಜಿ ಆದಮರವರು ದೊಡ್ಡವರಿದ್ದರೂ, ಸಾರ್ವಜನಿಕ ವ್ಯವಹಾರಗಳಲ್ಲೆಲ್ಲ ಎಲ್ಲರೂ ಶೇಟು ಹಾಜಿ ಮಹಮ್ಮದರವರಿಗೇ ಅಗ್ರಪೂಜೆಯ ಮಾನವನ್ನಿಯುತ್ತಿದ್ದರು. ಆದರಿಂದ ಅಬ್ದುಲ್ಲಾ ಶೇಟರ ಮನೆಯಲ್ಲಿ ಹಾಜಿ ಮಹಮ್ಮದರವರು ಅಧ್ಯಕ್ಷರಾಗಿ ಸಭೆ ಸೇರಿತು. ಆ ಸಭೆಯಲ್ಲಿ [illegible] ವನ್ನು ಆವಹಿಸುವ ಕಾನೂನನ್ನು ವಿರೋಧಿಸಬೇಕೆಂದು [illegible] ಗೊತ್ತಾಯಿತು.

ಸ್ವಯಂಸೇವಕರ [illegible] ತು. ನಾತಾಲದಲ್ಲಿ ಹುಟ್ಟಿದ ಭಾರತೀಯರ, ಅಂದರೆ ಕ್ರಿಸ್ತ ಜಾತಿಯ ಹುಡುಗರ [illegible] ಸೇರಿಸಿಕೊಂಡಿತ್ತು. [illegible] ಕೋರ್ಟಿನೊಳಗಿನ [illegible] ಪ್ರಿಟೋರಿಯಸ್ [illegible] ಕ್ರಿಸ್ತ [illegible] [illegible] ರಲ್ಲಿ ಇದ್ದರು.

ಅನೇಕ ವ್ಯಾಪಾರಿ ವರ್ತಕರು ಸ್ವಯಂಸೇವಕರಾದರು. ದಾವೂದ ಮಹಮ್ಮದ, ಮಹಮ್ಮದ ಕಾಸಿಂ ಕಮರುದ್ದೀನ, ಆದಮಜಿ ಮ್ಯಾಂಖಾನ, ಕೋಲಂದ ವೇಲು ಪಿಳ್ಳೆ, ಲಚ್ಚಿರಾಮ, ರಂಗಸ್ವಾಮಿ ಪಡಿಯಾಚಿ, ಆಮೋದ ಜೀವಾ ಪ್ರಭೃತಿ ಪ್ರಮುಖರು ಸ್ವಯಂಸೇವಕರಾಗಿದ್ದರು. ಪಾರ್ಸಿ ರುಸ್ತುಮಜೀಯವರೂ ಸ್ವಯಂಸೇವಕರಾಗಿ ಮುಂದಾಗಿದ್ದರು. ಮಾಣಿಕಜಿ, ಜೋಶಿ, ನರಸೀರಾಮ ಮುಂತಾದ ದಾದಾ ಅಬ್ದುಲ್ಲಾರವರ ಹಾಗು ಇತರ ಕಂಪನಿಯೊಳಗಿನ ಕಾರಕೂನರೂ ತಮ್ಮ ಹೆಸರನ್ನು ದಾಖಲ ಮಾಡಿಕೊಂಡಿದ್ದರು. ಸಾರ್ವಜನಿಕ ಸೇವೆಯಲ್ಲಿ ತಾವು ಸೇರಿದ್ದನ್ನು ಕಂಡು ಅವರಿಗೊಂದು ಪ್ರಕಾರದ ಆನಂದಘಂಟಾಯಿತು. ಹೀಗೆ ಸಾರ್ವಜನಿಕ ಸೇವೆಗಾಗಿ ನಿಮಂತ್ರಿಸುವದನ್ನು ನೋಡಿ, ಅವರಿಗೆ ಚಮತ್ಕಾರವೆನಿಸಿತು. ಇಡೀ ಭಾರತೀಯ ಸಮಾಜದ ಮೇಲೆ ಒದಗಿದ ಆಪತ್ಕಾಲದಲ್ಲಿ ವರಿಷ್ಠ-ಕನಿಷ್ಠ, ದೊಡ್ಡವ-ಚಿಕ್ಕವ, ಒಡೆಯ-ಸೇವಕ, ಹಿಂದೂ-ಮುಸಲ್ಮಾನ-ಪಾರಸೀ-ಕ್ರಿಶ್ಚನ್-ಗುಜರಾತಿ-ಮದ್ರಾಸಿ-ಸಿಂಧಿ ಮುಂತಾದ ಭೇದಗಳೆಲ್ಲ ಮಾಯವಾದವು. ಸಮಸ್ತರೂ ಮಾತೃಭೂಮಿಯ ಮಕ್ಕಳೇ ತಾವೂ, ಸೇವಕರಂತೆಯೂ ಗ್ರಹಿಸಿ ಮುಂದಾದರು. ಕಾಯಿದೆಯ ಎರಡನೇ ವಾಚನವು ಮುಗಿದಿರಬೇಕು, ಯಾ ನಡೆದಿರಬೇಕು, ಆ ಸಮಯ ಕಾಯಿದೆ ಕೌನ್ಸಿಲಿನಲ್ಲಿ ನಡೆದ ಭಾಷಣಗಳಲ್ಲಿ ಈ ಕಠೋರ ಕಾನೂನಿಗೆ ಭಾರತೀಯರು ವಿರೋಧ ಮಾಡಲಿಲ್ಲೆಂದು ಹೇಳಲಾಯಿತು ಮತ್ತು ಈ ಸಾಧನೆಯಿಂದ ಭಾರತೀಯರ ಅಪಾತ್ರತೆಯನ್ನು ಸಿದ್ಧಪಡಿಸಲು ಯತ್ನಿಸಲಾಗಿತ್ತು.

ಸಭೆಕರಿಗೆ ಈ ಸ್ಥಿತಿಯನ್ನು ನಾನು ವಿವರಿಸಿದೆನು. ಮೊಟ್ಟಮೊದಲು ಶಾಸನ ಕೌನ್ಸಿಲಿನ ಸಭಾಪತಿಗಳಿಗೊಂದು ತಂತಿ ಮಾಡಿ ಕಾಯಿದೆಯ ಚರ್ಚೆಯನ್ನು ಮುಂದೆ ಇಡಬೇಕಾಗಿ ನಾವು ಬಿನ್ನೈಸಿಕೊಂಡೆವು. ಹೀಗೆಯೇ ಮುಖ್ಯ ಪ್ರಧಾನರಾದ ಸರ್ ಜೋರ್ಜ ರೋಬಿನ್‌ಸನ್‌ರವರಿಗೆ ಒಂದು ತಂತಿ ಕಳುಹಿದೆವು. ದಾದಾ ಅಬ್ದುಲ್ಲಾರವರ ಗೆಳೆಯರಾದ ಮಿ. ಎಸ್ಕೋಂಬಿಯವರಿಗೂ ಒಂದು ತಂತಿ ಕ [illegible] ಹೋಯಿತು. ಶಾಯಿದೆ ಕೌನ್ಸಿಲಿನ ಅಧ್ಯಕ್ಷರು ತಾವು [illegible] ಉತ್ತರ [illegible] ಕಾಯಿದೆಯ ಚರ್ಚೆ [illegible] ದಿನಗಳ ವರೆಗೆ [illegible] ತಿಳಿಸಿದ [illegible] ಎಂದು ನಮಗೆ [illegible]

[illegible] ಸಲ್ಲಿಸಬೇಕಾದ ಅರ್ಜಿಯ [illegible] ಮುದ್ರಣಾಲಯಗಳಿಗೆ [illegible] ವರ್ತಮಾನಪತ್ರಗಳಿಗೂ [illegible] ಈ ಅರ್ಜಿಯ [illegible] ಹಸ್ತಾಕ್ಷರಗಳನ್ನು ಪಡೆಯಲು [illegible] ರಾತ್ರಿ [illegible] ಪ್ರತಿಯನ್ನು ತಯಾರಿಸಿದರು. [illegible] ಪ್ರತಿಗಳನ್ನು ಇತರರು ಬರೆದುಕೊಂಡು [illegible] ಪ್ರತಿಗಳ [illegible] ವರ್ತಕರು [illegible] ಗಾಡಿಗಳಲ್ಲಿ ಹೋಗಿ [illegible] ಸಹಿಗಳನ್ನು [illegible] [illegible] ವರ್ತಮಾನ [illegible] ಕಾಯಿದೆ [illegible]

ಹೀಗೆ ಸಂಭವಿಸುವದೆಂದು ನಾವೆಲ್ಲರೂ ಅರಿತಿದ್ದೆವು. ಆದರೆ, ಈ ಚಳವಳಿಯಿಂದ ಸಮಾಜದಲ್ಲಿ ನವಚೈತನ್ಯವುಂಟಾಯಿತು. ಎಲ್ಲ ಭಾರತೀಯರೂ ಒಂದೇ ಎಂಬ [illegible] ವರ್ತಕರು [illegible] ರಾಜಕೀಯ ಹಕ್ಕುಗಳಿಗಾಗಿ ಒಡಂಬಡುವದು ತಮ್ಮ ಕರ್ತವ್ಯವೆಂದು ಎಲ್ಲರಿಗೆ ಮನವರಿಕೆಯಾಯಿತು. [illegible] ದೊರೆಗಳು ಈ ಕಾಲಕ್ಕೆ [illegible] ಗಳ [illegible] ಆದರ ಒಳಗೊಂಡ ಹೇರಳ ಸಹಿಗಳ ಅರ್ಜಿಯನ್ನು ಸಾದರಪಡಿಸಬೇಕೆಂದು ಗೊತ್ತಾಯಿತು. ಈ ಕೆಲಸವು ದೊಡ್ಡದು, ದಿನ ಒಪ್ಪತ್ತಿನಲ್ಲಿ ಆಗುವಂಥಾದ್ದಲ್ಲ. ಇನ್ನೂ ಸ್ವಯಂಸೇವಕರನ್ನು ಸೇರಿಸಿಕೊಳ್ಳಲಾಯಿತು. ಎಲ್ಲರೂ ತಮ್ಮ ತಮ್ಮ ಪಾಲಿನ ಕೆಲಸವನ್ನು ನೆರವೇರಿಸಿದರು.

ಈ ಅರ್ಜಿಯನ್ನು ತಯಾರಿಸಲಿಕ್ಕೆ ನಾನು ಬಹಳ ಪರಿಶ್ರಮಪಟ್ಟೆ. ಈ ವಿಷಯದ ಮೇಲಿನ ಗ್ರಂಥಗಳನ್ನೆಲ್ಲ ನಾನು ಓದಿಕೊಂಡೆನು. ಮುಖ್ಯವಾಗಿ ನಾನು ತತ್ವವನ್ನೂ, ಔಚಿತ್ಯವನ್ನೂ ಪ್ರತಿಪಾದಿಸಿದೆನು. ಹಿಂದುಸ್ಥಾನದಲ್ಲಿ ನಮಗೊಂದು ಪ್ರಕಾರದ ಮತಾಧಿಕಾರವಿತ್ತು. ಹಾಗೆಯೇ ನಾತಾಲದಲ್ಲಿಯೂ ಮತಾಧಿಕಾರವನ್ನು ಪಡೆಯಲು ನಾವು ಹಕ್ಕುದಾರರಿದ್ದೇವೆಂದು ಪ್ರತಿಪಾದಿಸಿದೆನು. ಮತಾಧಿಕಾರವನ್ನು ಉಪಯೋಗಿಸುವ ಭಾರತೀಯ ಸಂಖ್ಯೆಯು ಅತ್ಯಲ್ಪವಿದ್ದದರಿಂದ, ಅದನ್ನು ಕಾಪಾಡುವದು ಉಚಿತವೆಂದೂ ನಾನು ಆಗ್ರಹ ಮಾಡಿದೆನು.

ಹದಿನೈದು ದಿನಗಳಲ್ಲಿ ಹತ್ತು ಸಾವಿರ ಜನರಿಗಳ ಸಹಿಗಳು ದೊರಕೊಳ್ಳಲಾಯಿತು. ಸ್ವಯಂಸೇವಕರು ಇಂಥ ಕೆಲಸದಲ್ಲಿ ಮುಂದುವರಿದದ್ದು ಇದೇ ಮೊದಲನೇ ಸಲ. ಈ ಕೆಲಸದ ಮಾಹಿತಿಯು ಅವರಿಗೆ ಹಿಂದೆಂದೂ ಇದ್ದಿಲ್ಲ. ಈ ಪ್ರಾಂತದೊಳಗಿಂದ ಇಷ್ಟು ಸಹಿಗಳನ್ನು ಸಂಗ್ರಹಿಸುವದು ಸಾಮಾನ್ಯ ಕೆಲಸವಲ್ಲ. ಸಹಿ ಮಾಡುವವರು ಅರ್ಜಿಯೊಳಗಿನ ಹಕೀಕತನ್ನು ಚೆನ್ನಾಗಿ ತಿಳಕೊಂಡು ಸಹಿ ಮಾಡಬೇಕೆಂಬ ನಿರ್ಧಾರವಾಗಿತ್ತು. ಆದರಿಂದ ಈ ಕೆಲಸಕ್ಕಾಗಿ ಯೋಗ್ಯ ಸ್ವಯಂಸೇವಕರನ್ನು ಆರಿಸಿ ತೆಗೆಯಬೇಕಾಯಿತು. ಗ್ರಾಮಗಳು ದೂರ ದೂರ ಇದ್ದವು. ಸ್ವಯಂಸೇವಕರು ಮನಸ್ಸುಕೊಟ್ಟು ದುಡಿದರೆ ಮಾತ್ರ ಈ ಕೆಲಸವು ಸಾಗುವಂತಿದ್ದಿತ್ತು. ಆದನ್ನು ಸ್ವಯಂಸೇವಕರು ಮನಸ್ಸಿಟ್ಟು ಭಾಷಾಂತರ ಮಾಡಿ ಕಳೆಗಾಣಿಸಿದರು. ಆದರೆ, ಈ ಹಕೀಕತನ್ನು ಬರೆಯುವಾಗ, ಶೇಟ ದಾವೂದ, ಮಹಮ್ಮದ ರುಸ್ತುಮಜಿ ಆದಮಜಿ ಮಿಯಾಖಾನ ಹಾಗು ಆಮೋದ ಜೀವಾ ಇವರ ನೆನಪಾಗುತ್ತದೆ. ಇವರು ತೀರ ಹೆಚ್ಚಿಗೆ ಸಹಿಗಳನ್ನು ಸಂಪಾದಿಸಿದರು. ದಾವೂದ ಶೇಟರು ಇಡೀ ದಿನ ತಮ್ಮ ವಾಹನದಲ್ಲಿ ಕೂತುಕೊಂಡು ಓಡಾಡುತ್ತಿದ್ದರು. ಎಲ್ಲರೂ ಪ್ರೀತಿಪೂರ್ವಕವಾಗಿ ದುಡಿದರು. ಒಬ್ಬರಾದರೂ ತಿಂಡಿಗಾಗಿ ಸಹ ಹಣ ಕೇಳಲಿಲ್ಲ. ದಾದಾ ಅಬ್ದುಲ್ಲಾರವರ ಮನೆಯು ಛತ್ರವಾಯಿತು. ಹಾಗೆಯೇ ಸಾರ್ವಜನಿಕ ಸೇವಕರ ಕಚೇರಿಯಾಯಿತು. ನನಗೆ ನೆರವಾದ ಸುಶಿಕ್ಷಿತ ಗೆಳೆಯರಿಗೂ, ಇತರರಿಗೂ ಅಲ್ಲಿ ಭೋಜನ ದೊರೆಯುತ್ತಿತ್ತು. ಎಲ್ಲರಿಗೂ ಹೇರಳ ಹಣ ಖರ್ಚಾಯಿತು.

ಕಟ್ಟಕಡೆಗೆ ಅರ್ಜಿಯು ಸಾದರವಾಯಿತು. ಒಂದು ಸಾವಿರ ಪ್ರತಿಗಳನ್ನು ಅಚ್ಚುಮಾಡಿ ಹಂಚಲಾದವು. ನಾತಾಲದೊಳಗಿನ ಸ್ಥಿತಿಯು ಮೊಟ್ಟಮೊದಲು ಭಾರತೀಯರಿಗೆ ತಿಳಿದದ್ದು ಇದರಿಂದಲೇ. ವರ್ತಮಾನಪತ್ರಗಳಿಗೂ, ಬಲ್ಲಾದ ಮಟ್ಟಿಗೆ ಸಾರ್ವಜನಿಕ ಸೇವಕರಿಗೂ ಅರ್ಜಿಯ ಪ್ರತಿಗಳನ್ನು ನಾವು ಕಳುಹಿದೆವು. ಮುಂಬಯಿಯ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕಾಕಾರರು ಅಗ್ರಲೇಖವನ್ನು ಬರೆದು ಭಾರತೀಯರ ಬೇಡಿಕೆಗಳನ್ನು ಆಗ್ರಹಪೂರ್ವಕವಾಗಿ ಸಮರ್ಥಿಸಿದರು. ವಿಲಾಯತಿಯೊಳಗಿನ ಭಿನ್ನ ಭಿನ್ನ ಪಕ್ಷಗಳ ಪತ್ರಿಕೆಗಳಿಗೂ, ಪ್ರಮುಖರಿಗೂ ನಾವು ಪ್ರತಿಗಳನ್ನು ಕಳುಹಿದೆವು. 'ಲಂಡನ್ ಟೈಮ್ಸ್' ಕರ್ತರು ನಮ್ಮ ಬೇಡಿಕೆಗಳನ್ನು ಎತ್ತಿಹಿಡಿದರು. ಕಾಯಿದೆಯು ಸಾರ್ವಭೌಮ ಅಧಿಕಾರಿಗಳಿಂದ ತಿರಸ್ಕೃತವಾಗಬಹುದೆಂದು ನಮಗೆ ಆಶೆ ಹುಟ್ಟಿತು.

ಈಗ ನಾತಾಲನ್ನು ಬಿಟ್ಟು ಹೊರಡುವದು ನನಗೆ ಅಸಾಧ್ಯವಾಗಿತ್ತು. ನನ್ನ ಹಿಂದೀ ಗೆಳೆಯರೆಲ್ಲರೂ ಸುತ್ತುಗಟ್ಟಿ ಅಲ್ಲಿಯೇ ವಾಸ್ತವ್ಯ ಮಾಡಿಕೊಂಡು ಉಳಿಯಬೇಕೆಂದು ಒತ್ತಾಯದಿಂದ ಹೇಳಿದರು. ನನ್ನ ತೊಡಕುಗಳನ್ನು ನಾನು ವಿವರಿಸಿದೆನು. ಸಾರ್ವಜನಿಕರ ಖರ್ಚಿನಿಂದ ಅಲ್ಲಿ ಉಳಿಯಬಾರದೆಂದು ಸಂಕಲ್ಪ ಮಾಡಿದೆನು. ಅಲ್ಲಿ ಬೇರೆ ಬಿಡಾರ ಮಾಡಿಕೊಂಡು ಉಳಕೊಳ್ಳುವದು ಅವಶ್ಯವಿತ್ತು. ಮನೆಯು ನೋಟಕ್ಕೆ ಚಂದವಿರಬೇಕು, ಕೇರಿಯು ಚಲೋದಿರಬೇಕು; ಬೆರಿಸ್ಟರರಿಗೆ ತಕ್ಕಷ್ಟು ಡೌಲಿನಿಂದ ನಾನು ಉಳಕೊಳ್ಳದಿದ್ದರೆ, ಸಮಾಜಕ್ಕೆ ಮರ್ಯಾದೆ ಕುಗ್ಗುವದೆಂದು ತೋರುತ್ತಿತ್ತು. ಹೀಗೆ ನಾನು ಉಳಕೊಳ್ಳಬೇಕಾದರೆ, ಕನಿಷ್ಠ ವರ್ಷಕ್ಕೆ ೩೦೦ ಪೌಂಡು ಖರ್ಚು ಬೇಕಾಗಿತ್ತು. ಆದರಿಂದ ವಕೀಲಿಯ ಉತ್ಪನ್ನವು ಅಷ್ಟರ ಮಟ್ಟಿಗೆ ದೊರಕಿಸಿಕೊಡುವದಾದರೆ, ಉಳಕೊಳ್ಳಬಲ್ಲೆನೆಂದು ನಾನು ಅವರಿಗೆ ತಿಳಿಸಿದೆನು.

ಅವರು ನುಡಿದದ್ದೇನಂದರೆ:—"ನೀವು ಸಾರ್ವಜನಿಕ ನಿಧಿಯಿಂದ ಈ ಹಣವನ್ನು ಕೊಳ್ಳಬಹುದು. ಈ ಹಣವನ್ನು ನಾವು ಸುಲಭವಾಗಿ ಸಂಗ್ರಹಿಸಬಲ್ಲೆವು ಇದಲ್ಲದೆ, ವ್ಯಕ್ತಿಶಃ ಜನರ ಬಗ್ಗೆ ವಕೀಲಿಯ ಮಾಹಿತಿ ಕೊಟ್ಟರೆ, ಆ ಬಗ್ಗೆ ಬೇರೆ ಫೀ ಪಡೆಯಬಹುದು."

ನಾನು ನುಡಿದದ್ದೇನಂದರೆ:— "ಸಾರ್ವಜನಿಕ ಸೇವೆಗಾಗಿ ನಿಮ್ಮಿಂದ ನಾನು ಹಣ ಪಡೆಯಲಾರೆ. ಬೆರಿಸ್ಟರಿ ಚಾತುರ್ಯವನ್ನು ಅಲ್ಲಿ ಉಪಯೋಗಿಸಬೇಕಾಗಿಲ್ಲ. ನಿಮ್ಮಿಂದ ಕೆಲಸ ಪಡೆಯುವದೇ ನನ್ನ ಕೆಲಸವು. ಅಂಥಲ್ಲಿ ನಿಮ್ಮಿಂದ ಪ್ರತಿಫಲ ಪಡಕೊಳ್ಳುವ ಬಗೆ ಹೇಗೆ? ಇದಲ್ಲದೆ, ಈ ಕೆಲಸಕ್ಕಾಗಿ ನಾನು ನಿಮ್ಮ ಬಳಿ ಪುನಃ ಪುನಃ ಹಣ ಕೇಳಬೇಕಾಗುವದು. ನಾನೇ ನಿಮ್ಮ ಹಣದಿಂದ ಜೀವನೋಪಾಯ ಮಾಡಿದರೆ, ನಿಮ್ಮ ಕಡೆಗೆ ಧೈರ್ಯ

ಭೂಷ್ಟ ರತ್ನಗಳನ್ನು ಕೇಳಬೇಕಾದರೆ, ನನಗೆ ಸಂಕೋಚವೆನಿಸೀತು. ಮತ್ತು ನನ್ನ ಕೆಲಸವನ್ನು ಭಗ್ನಸಿ ನಿಂತುಹೋದೀತು ಅದಲ್ಲದೆ ಪ್ರತಿ ವರ್ಷಕ್ಕೆ ೩೦೦ ರೂಪಾಯಿಗಿಂತ ಹೆಚ್ಚು ಖರ್ಚು ಸಾರ್ವಜನಿಕ ಕಾರ್ಯಕ್ಕೇ ತಗಲುತ್ತದೆ."

"ಆದರೆ ನನಗೆ ಈಗ ನಿಮ್ಮ ಪರಿಚಯವಾಗಿದೆ. ನಿಮಗೆ ಅವಶ್ಯವಿದ್ದಷ್ಟು ಹಣವನ್ನು ಮಾತ್ರ ನೀವು ತಕ್ಕೊಂಡೀರಿ; ಹೊರತು ಹೆಚ್ಚು ತಕ್ಕೊಳ್ಳಲಿಕ್ಕಿಲ್ಲವೆಂದೂ ನಾವು ನಿಶ್ಚಯಪೂರ್ವಕವಾಗಿ ತಿಳಿಯುತ್ತೇವೆ. ನಿಮಗೆ ಬೇಕಾದಷ್ಟು ಹೇಳುವವರಾದ ನಾವು ನಿಮ್ಮ ಖರ್ಚಿನ ಪೂರ್ತಿಕೆ ಮಾಡಿಕೊಡಬೇಕಲ್ಲವೇ?" ಹೀಗೆ ಅವರು ನುಡಿದರು.

"ಈ ಮಾತುಗಳನ್ನೆಲ್ಲ ಸ್ನೇಹಭಾವದಿಂದಲೂ, ಈಗಿನ ಉತ್ಸಾಹದಿಂದಲೂ ನೀವು ಆಡುತ್ತೀರಿ. ಇದೇ ಪ್ರೀತಿಯೂ, ಉತ್ಸಾಹವೂ ಶಾಶ್ವತವಾಗಿ ಬಾಳುವವೇನು? ನಿಮ್ಮ ಗೆಳೆಯನಾಗಿಯೂ, ಸೇವಕನಾಗಿಯೂ ಇರುವಾಗಲೇ ನಿಮ್ಮ ಬಗ್ಗೆ ಕಠಿಣ ಶಬ್ದಗಳನ್ನು ನಾನು ಪ್ರಸಂಗವಶಾತ್ ಆಡಬೇಕಾದೀತು. ಆ ಕಾಲಕ್ಕೆ ನನ್ನ ಮೇಲಿನ ನಿಮ್ಮ ಪ್ರೀತಿಯು ಇರಬಹುದೇನೆಂದು ಶ್ರೀ ದೇವರಿಗೇ ಗೋಚರ. ಆದರಿಂದ ಸಾರ್ವಜನಿಕ ಸೇವೆಗಾಗಿ ನಾನು ಹಣವನ್ನು ಅಂಗೀಕರಿಸಲಾರೆ. ನೀವೆಲ್ಲರೂ ನಿಮ್ಮ ಪಾಲಿನ ಕೆಲಸವನ್ನು ನನಗೆ ಕೊಡುತ್ತೀರೆಂಬ ನಿಮ್ಮ ಮಾತೇ ಸಾಕು. ಅದನ್ನೇ ಪಾಲಿಸುವದು ನಿಮಗೆ ಕಠಿಣ ವಾದೀತು ಎಂದಾದರೆ, ನಾನು ಗೌರವಾಯಿತ ಬರಿಸ್ಟರನಲ್ಲ! ಕೋರ್ಟು ನನ್ನ ಬಾಗಿಗೆ ತಿವಿಗೊಡುವದೆಂದು ನಾನು ತಿಳಕೊಳ್ಳುವ ಬಗೆ ಹೇಗೆ? ವಕೀಲಿಯಲ್ಲದರೂ ನನ್ನ ಅವಸ್ಥೆಯು ಹೇಗಾದೀತೆಂದು ನಾನು ಹೇಗೆ ತಿಳಿಯಲಿ? ಆದರಿಂದ ನನಗೆ ನಿಮ್ಮ ಪ್ರಕರಣಗಳನ್ನು ಕೊಡುವದರಿಂದಲೂ ನಿಮಗೆ ಕೆಲ ಮಟ್ಟಿಗೆ ಅನುಕೂಲವಿದೆ. ನಿಮ್ಮ ವಕಾಲತನ್ನೇ ನಾನು ಸಾರ್ವಜನಿಕ ಸೇವೆಯ ಪ್ರತಿಫಲವೆಂದು ಎಣಿಸುವೆನು."

ಹೀಗೆ ನಮ್ಮೊಳಗೆ ಚರ್ಚೆಯಾಯಿತು. ಕೊನೆಗೆ ಸುಮಾರು ೩೦ ಮಂದಿ ವರ್ತಕರು ಒಂದು ವರ್ಷದ ತಮ್ಮ ವಕಾಲತು ಕೊಡುವದಾಗಿ ಕೇಳಿಕೊಟ್ಟರು. ಇದಲ್ಲದೆ, ದಾದಾ ಅಬ್ದುಲ್ಲರವರು ಪ್ರಯಾಣ ಸಮಯ ನನಗೆ ಕೆಲವೊಂದು ಕೃತ್ಯನಿಧಿಯನ್ನು ಕೊಡಬೇಕೆಂದು ಮಾಡಿದ್ದರು; ಆ ಹಣದಿಂದ ನನ್ನ ಬಗ್ಗೆ ಅವಶ್ಯವುಳ್ಳ ಖುರ್ಚಿ, ಮೇಜು ಮುಂತಾದ ಸಾಹಿತ್ಯಗಳನ್ನು ಕೊಂಡುಕೊಂಡರು. ಹೀಗೆ ನಾನು ನಾತಾಲದಲ್ಲಿ ಉಳಿಯಲು ಒಂಬಿಸಿದೆನು.

Wanted—Sub-Agents in each Taluka for **India Equitable Insurance Co. Ltd.** on liberal termes.

Apply to -

Messrs. **V. B. Muzumdar & Co.,**

ANKOLA.

ಗೆಳೆಯರ ಗಮನಿಸ.

ಕನ್ನಡ] **ಸ್ವಧರ್ಮ.** [ವಾರಪತ್ರಿಕೆ

ಸಂಪಾದಕರು.- ವ. ದಾ. ಬೇಂದ್ರೆ ಬೀ. ಎ

ವಾರ್ಷಿಕ ವರ್ಗಣಿ ೩—೦—೦

ಸಮಾಜದಲ್ಲಿ ಶಾಂತಿತೃಪ್ತಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿಯು. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ. ಇಂಥ ವಿಚಾರಗಳನ್ನು ಸಮಾಜದ ಮುಂದಿಡಲು ಹೊರಡುವದೇ ಸ್ವಧರ್ಮದ ಗುರಿ ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ.

ಚವರಲೆಟ್

ಮೋಟಾರಕಾರ್ ಏಜನ್ಸಿ, ಕೆನರಾ.



ನಾವು ಹೊಸ ಚವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಕರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳಬಹುದು.

ಸೋಲ ಏಜಂಟ:—**ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ, ಶಿರಸಿ**

ಕುಮಟಾ ಏಜಂಟ:- **ಜಿ. ಡಿ. ಮಳಗಿಕರ ಎಂಡ್ ಕೊ.**

ದಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ದೊರಕುತ್ತದೆ; ಡನ್‌ಲೊಪ್ ಹಾಗು ಮಿಚಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮಗ್ರಿಗಳು ಯೋಗ್ಯದರಗಳಿಂದ ಪೂರೆಸುತ್ತೇವೆ.

G. D. Malgikar & Co,

KUMTA.

ಮೋಸಹೋಗಬೇಡಿರಿ!!

ಜಿ. ಎನ್. ತೊರಸಲ ಮೋಟಾರ ಸರ್ವಿಸ, ಹೊನ್ನಾವರ-ಕುಮಟಾ.

ಭಟಕಳದಿಂದಾಗಿನ ಪೆಸೆಂಜರರು ಭಟಕಳದಿಂದ ಕುಮಟೆಗೆ ಡೈರೆಕ್ಟ ಟಿಕೀಟು ಕೊಂಡುಕೊಳ್ಳದೆ ಬದಲು, ಕುಮಟೆಗೆ ಹೊರಡುವ ಮೋಟಾರ ಟಿಕೀಟುಗಳು **ಹೊನ್ನಾವರ ಬಂದರದಲ್ಲಿ ಸೋಡಿಯಿಂದ** ಮಾರಲ್ಪಡುತ್ತವೆ. ಮೊ ಟಾರ್ಗ ಬಂಡಿಗಳು ನಿತ್ಯವೂ ನಾಲ್ಕು ಸಾರೆ ಓಡಾಡುತ್ತವೆ.

ಮೋಟಾರ ಬಿಡುವ ವೇಳಾಪತ್ರಕ:— | ಬೆಳಿಗ್ಗೆ ಅಕ್ಕೆ ಪುನಃ ೧೦ll ಗೆ | ಸಾಯಂಕಾಲ ೩ll ಗೆ ಪುನಃ ೫ಕ್ಕೆ

ಟಿಕೀಟು ಸಿಗುವಸ್ಥಳ | ಬಂದರದಲ್ಲಿ—**ಗೋವಿಂದ ನಾಗಪ್ಪ** ಇವರ ದುಕಾನದಲ್ಲಿ. | ದುರ್ಗಾಕಾಂಯಲ್ಲಿ —**ಮಿ|| ಸಂಡಿತ ಭಿಕ್ಕುರಾವ್.**

ಏಜಂಟರು ಬೇಕು.! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶಿ ಕಟ್ಟಿಗೆಯ

ದೇವರ ಮಂಟಪಗಳೂ,

ಕುಂಗಮದ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಟೇಬಲ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತು ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನಾರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

BATLIBOI'S

Accountancy Training Institute

Recognised by The G. D. A. Board

Offers best training in Accounting, Banking, Company Management and Secretarial Work and Theory and Practice of Commerce.

Best staff, Individual attention fee moderate, and payable by instalments.

Send for Prospectus at Yusuf Buildings Churchgate street Fort, Bombay.

You are invited to make thorough enquiry before joining.

TUITION BY POST IS OUR SPECIALITY.

ರಕ್ತಶುದ್ಧಿ ಕಿ ಮತ್ತು ಧಾತುವೃದ್ಧಿಕಾರಕ

"ಬಲವಂತ ಗುಟಿಕಾ."

ಈ ಬಲವಂತ ಗುಟಿಕೆಯ ಉತ್ತಮ ವನಸ್ಪತಿ [illegible]

[illegible]

ಪತ್ರ:— ಎಸ್. ಬಿ. ಕಪಂ, ಮತ್ತು ಸನ್ಸ್

ಮು: ಪೋ: ಸಿದ್ದಾಪುರ ಜಿ ಬೆಳಗಾಂವ

ಪ್ರಯಾಣಿಕರಿಗೆ

ವಿಶೇಷ ಅನುಕೂಲ.

ನೇವಿಸಿದ ಮೋಟರ ಬೋಟಿನ ವ್ಯವಸ್ಥೆ ಹಾಗೂ ಅಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ— ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ, ಗೋಕರ್ಣದಿಂದ ಕಾರವಾರ, ಸಿರಸಿ, ಹುಬ್ಬಳ್ಳಿ, ಗೋಕರ್ಣದಿಂದ ಅಂಕೋಲಾ, ಕಾರವಾರ

ಶಿಪ್ಪು — [illegible] ಬರುವವರು ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ವೆಂಕಟೇಶನ ಕಶಿಂತ್ರಲ, ಮೋಟರ ಏಜಂಟ, ಕುಮಟಾ (ಉತ್ತರ ಕನ್ನಡ)

S. U. Narayanacharya & CO
Chaukamba, BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ ಶಾಲು, ಜರಮೋದ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಪಟಿಕಮಣಿ ಮೊದಲಾದ ವಿಗಳು ಗಳ ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ — ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿಕಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪುಕ್ಕಟೆ ಕಳಿಸಲಾಗುವದು.

ಒಂದು ಡಬ್ಬಿಗೆ ಕ್ರಯ ರೂ ೦-೪-೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಜಿ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಪಾರ್ಕಟೌನ ಮದರಾಸ

ಕಿರ್ಲೋಸ್ಕರ

ಸೇಂಗಾ (ಭೈಮೂಗ) ಒಡೆಯುವ

ಪಾವರ ಹಾಗು ಕೈ-ಯಂತ್ರಗಳು.

———o———

ಪಾವರ ಯಂತ್ರ— "ಪಿಗ್ ಆಯಿರ್ನ" ಎಂಬ ಕಬ್ಬಿಣದಿಂದ ಮಾಡಲ್ಪಟ್ಟಿರುವದು ಗಂಟೆಯೊಂದಕ್ಕೆ ೧೦ ಚೀಲ ಕಾಳುಗಳನ್ನು ಒಡೆಯುವದು. ಈ ಯಂತ್ರವು ಏಳು ಅಶ್ವಶಕ್ತಿಯುಳ್ಳ ಎಂಜಿನ್ನಿಂದ ನಡೆಯುತ್ತದೆ.

ಕೈಯಂತ್ರ— ಇದಾದರೂ ಕಬ್ಬಿಣದ್ದೇ. ಇದನ್ನು ತಿರುಗಿಸಲಿಕ್ಕೆ ಎರಡು ಆಳುಗಳು ಬೇಕು. ತಾಸಿಗೆ ೩೦೦ ಪೌಂಡು ಕಾಳುಗಳನ್ನು ಒಡೆಯುವದು.

ಬೆಲೆಯ ಬಗ್ಗೆ ತಿಳಿದು ಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೪೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತಿರುವವು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

Reg. No. B 1270 | Monday September 27th, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೫೧.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾದ (೧೫ ಎಮ್ ಉದ) ೮ ಸಾಲುಗಳವರೆಗೆ ರೂ. 1-0-
೮ ಸಂತ್ರ ಪ್ರತಿಸಾಲಿಗೆ 0-2-0.
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವವೋ ಆ ಮಾನದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೨೭ ಮಾಹೆ ಸಪ್ಟಂಬರ ಸನ್ ೧೯೨೬ ನೇ ಇಸವಿ.)—

हिंदुस्थानांतील रहिवाश्यास ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- द्रीद रसलणी किंमत २ रुपये;

रामबाण औषधें —
सर्दि घालविणारें,
मुक घालविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

— पिण्यास रुचिकर.

क्याटलाग मागवा,

पंडुफार्मास्युटिकल वर्क्स लिमिटेड,
मुंबई नं: १३

एजंट— मेसर्स पंडित आणी कंपनी,
तीर्थहळ्ळी

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಕಾಂಚಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲಿ ಡಬ್ಬಿ ೧ಕ್ಕೆ ೧—೮—೦. ಹಿಂಗಿನ ಅರ್ಕ ೨ ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿ ಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲೆಯ ಡಬ್ಬಿ ೧ ಕ್ಕೆ ೧—೪—೦, ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ —೨೦—೦, ತಲೆಗೆ ಹಾಕುವ ಸುವಾಸಿಕ ಮಾಸಕರಾದ ತೈಲ ೫ ತೊಲಿಯ ಬಾಟ್ಲಿ ೧ ಕ್ಕೆ ೦—೧೨—೦ ಹುಳದ ಪೌಡು ತೊಲಿ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಕಾಂಚಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು ಟಪಾಲ ಖರ್ಚ ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ
ಅವಳಿಬಾಜಾರ, ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. *B. A.*

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮುಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.
ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



ಒಂದೇ ಒಂದು ತಿಂಗಳ ಬಗ್ಗೆ ನಾವು ಈ ದರವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ!! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಗಡಿಯಾರವನ್ನು ಉತ್ಕೃಷ್ಟ ರೀತಿಯ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House; P B 503 P T Madras**

ಆಶ್ಚರ್ಯವಿದೆ! ಕೇವಲ ಉಚಿತ



ಉಚಿತ ಉಚಿತ ಕೇವಲ ಉಚಿತ

“ತಾರಾ” ಲೀವರ್ ರಿಜಿಸ್ಟರ್ಡ ಪೋಕೆಟ್ ವಾಚು ೧೮ ಕೆರೆಟ್ ರೋಲ್ಡ ಗೋಲ್ಡಿನದು ಮುಚ್ಚಳಿಲ್ಲದೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವರಿಗೆ ನಾವು ನಮ್ಮ “ಸಿ” ರಜಿಸ್ಟರ್ಡ ಚ್ಯಾಂಪಿಯನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು “ತಾರಾ” ಲೀವರ ರಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೋಕೆಟ್‌ವಾಚ್ ಗಡಿಯಾರಗಳ ಕೂಡಿ ಬರೇ ರೂಪಾಯಿ ೫.

CAPTAIN WATCH CO. P. B 285 MADRAS

ಗೌರೀಹುಣ್ಣಿವೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ] ಜಯಕರ್ನಾಟಕ [ಮಾಸಪತ್ರಿಕೆ

ಸಂಪಾದಕ— ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಚೇನಾಟ್ಟು ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಇರುತ್ತವೆ. ಮೊದಲ್ನೇ ದರ್ಜೆಯ ೮೦ ಪುಟಗಳು ವರ್ಗಣಿ ರೂ ೫-೮-೦

ಮ್ಯಾನೇಜರ್ ಜಯಕರ್ನಾಟಕ ಧಾರವಾಡ

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ಸಂತು ಮಾತ್ರೆಗಳು, ಪಿತ್ತ ಮಾತ್ರೆಗಳು, ಎಲ್ಲ ತರದ ಜ್ವರ, ಜ್ವರಗಳ್ಗೆ, ಬಿಳಿಜ್ವರ, ಕಾಮಾಲೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ, ಮೂಲವ್ಯಾಧಿ, ನರ, ವಾತ, ತಲೆನೋವು, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗರ್ಮಿ) ಬಾಲಗ್ರಹ ಇತ್ಯಾದಿ, ಗುಣಕಾರಕಗಳಿಗೆ ಖಂಡಿತ ಗುಣ ಬರುವ ಜರ್ಮನ ಅಮೇರಿಕನ ಫ್ರೆಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.

ಇವಲ್ಲದೆ ಬಂದೂಕುಗಳು, ಎಲ್ಲತರದವುಗಳು ಮನೆ ಸಲಕರಣೆ ವ್ಯಾಪಾರಿಕ ಸಾಮಾನು, ಬಿಲ್ಡ ಸ್ಟೋವ್ ಬ್ಯಾಲ ಸುವರೇಟ್, ಮೋರಿಸ ಮೋಟಾರ ಬಂಡಿಗಳು, ಸಬಳಿಕಿನ ದರದಿಂದ ಸಿಗುವವು. ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು.

ಎಸ್ ಎಲ್. ಧಾಕಪ್ಪ ಮತ್ತು ಬ್ರದರ,

ಶಿರಶಿ

ವಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:—

ತಬಲೆ, ಡಕ್ಕೆ ವಗೈರೆ

೧ ಸ್ವರಪೆಟ್ಟಿಗೆ ಸಿಂಗಲ ರೂ ೩೫, ೩೦, ೪೦, ೫೫, ೬೦

೨ ,, ಡಬಲ ರೂ. ೬೦, ೪೫, ೫೦, ೬೦, ೧೦೦

೩ ಕಾಲ ಪೆಟ್ಟಿಗೆ ,, ರೂ ೬೫ ೭೫, ೧೦೦, ೧೨೦, ೧೫೦

೪ ತಬಲೆ (ತಂಬೂರದ ಸಹಿತ) ರೂ ೧೬, ೧೮, ೨೦

ಹಾರ್ಮೋನಿಯಮ್ ಗ್ರ್ಯಾಡ ೬೦ ರೂ ೧॥,

ತಬಲೆ ಗ್ರ್ಯಾಡ ೬೮. ೧೨ ರೂ

ಸಾಮಾನುಗಳ ಬಗ್ಗೆ ಕ್ಯಾಟಲಾಗು ಫುಕ್ಕಟೆ ದೊರಕುವದು

ಗೋಪಾಳ ಸಖಾರಾಮ ಮತ್ತು ಕಂಪನಿ

ನಂ ೫೮೫, ವಿಠ್ಠಲವಾಡಿ ಎದುರಿಗೆ

ಕಾಳಬಾದೇವಿ ರೋಡ,

ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ— ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ- ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ. ಪ್ರಯಾಣಿಕರಿಗೆ ಊಟ ಉಪಹಾರಕ್ಕೆ ಎಲ್ಲಾ ಸ್ಟೇಶನಗಳಲ್ಲಿಯೂ ವ್ಯವಸ್ಥೆ ಮಾಡಲಾಗಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa

PROPRIETOR.

ಅತ್ಯದ್ಭುತ! ಅತ್ಯದ್ಭುತ!!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲಿಕ್ಸರ್ ಆಫ್ ಲೈಫ್

ಇಂಥ ಸರ್ವ ರೋಗ ನಾಶಕ ಸರ್ವಾರೋಗ್ಯದಾಯಕ ಅಜೀರ್ಣ ತಲೆನೋವು, ವಾಂತಿ, ಅತಿಸಾರ, ಜ್ವರ, ಕಾಲರಾ ಜ್ವರ ಹೊಟ್ಟೆನೋವು ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಹೊಡೆದು ಚೆಲ್ಲುವ ಒಂದೇ ರಾಮಬಾಣವಿದು! ಎಲ್ಲ ರೋಗಗಳ ಮೇಲೆ ಪ್ರಯೋಗ ಮಾಡಿ ಒಂದು ಸೀಸೆಯುದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ!!!

ದೊಡ್ಡ ಸೀಸೆಗೆ ರೂ ೧-೮-೦ ಸಣ್ಣ ಸೀಸೆಗೆ ರೂ ೦-೮-೦ ಟಪಾಲ ಖರ್ಚು ಬೇರೆ

ಜೀವನಾಧಾರ ಡಿಪ್ಪೋ, ಮೈಸೂರು.

ಬ್ರಾಂಚ - **ಜೀವನಾಧಾರ ಡಿಪ್ಪೋ, ಹುಬ್ಬಳ್ಳಿ.**

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿದಿಂದಾದ ಬೇನೆಯು ಹೋಗುವದು. ೬೦ ೭೦ ವರ್ಷದ ಮುದುಕರ ಕಾಮಕಾರಕ ಶಕ್ತಿ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು. ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ಧಾತು ಬಂದಾಗುವದು— ಶರೀರವು ಹಾಗೂ ಕಾಂತಿ ಪುಷ್ಟಿಕವಾದ ಶರೀರವು ನಿರೋಗವಾಗುವದು. ಮೂರೇ ದಿವಸದಲ್ಲಿಗುಣ ತೋರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚೆನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣವಾಗುವದು. ಹಳೇ ರೋಗದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೪—೦—೦ ಮೂರು ಬಾಟಲಿಗಳನ್ನು ಒಂದೇ ಸಾರ್ತಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹಚ್ಚಬೇಕಾಗುವದಿಲ್ಲ. ೬ನನ ಬಾಟಲಿಗಳ ಕಿಮ್ಮತ್ತು ೧೬—೦—೦ ಮತ್ತು ೧ ಬಾಟಲಿ ಫುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಮಿಶನ್ದಿಂದ ೧ ಬಾಟ್ಲಿಗೆ ೧—೦ ೩ ಬಾಟ್ಲಿಗೆ ೩—೦—೦ ಪಾರ್ಸಲಿನ ೧೨೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ ಜಿ ಬೆಳಗಾಂವ.

ಔದ್ಯೋಗಿಕ ಮನೋವೃತ್ತಿ.

(ಕಿರ್ಲೋಸ್ಕರ ವಾರ್ತೆಯ ಪ್ರೇಮದ ಸಂದೇಶ)

ಕರ್ನಾಟಕ ಬಂಧು ಭಗಿನಿಯರೇ,

ತಮ್ಮಲ್ಲಿ ಉದ್ಯೋಗ, ಉತ್ಸಾಹ, ಉನ್ನತಿಯಾಗಬೇಕೆಂದು ಕಿರ್ಲೋಸ್ಕರ ವಾರ್ತೆಯು ಅಸ್ಖಲಿತವೃತ್ತಿ ಎರಡು ವರ್ಷಗಳ ವರೆಗೆ ಎಡೆಬಿಡದೆ ಪ್ರಯತ್ನಮಾಡಿ ತನ್ನ ಉಪದೇಶವು ಕರ್ನಾಟಕಕ್ಕೆ ರುಚಿಸುವದೋ? ಇಲ್ಲವೋ? ಎಂಬುದನ್ನು ತಿಳಿಯಲು ಸದ್ಯಕ್ಕೆ ವಿರಾಮವನ್ನು ಹೊಂದುತ್ತಲಿರುವದು

ಕರ್ನಾಟಕದಲ್ಲಿ ಹಲವರು ಶ್ರೀಮಂತರಿರುವರು, ಕಲಿತವರಿರುವರು, ವಕೀಲರಿರುವರು, ಭೂಮಿಯುಳ್ಳ ಒಕ್ಕಲಿಗರಿರುವರು ಆದರೂ, ವಕೀಲರಿದ್ದೂ ವ್ಯಾಪಾರದಲ್ಲಿ ಹಿಂದುಳಿಯುವದೂ, ಒಕ್ಕಲಿಗರಿದ್ದೂ ಒಕ್ಕಲುತನವನ್ನು ಸುಧಾರಿಸದಿರುವದೂ ಕಲಿತವರಿದ್ದೂ ಸುಧಾರಣೆಯನ್ನು, ಸಂಶೋಧನೆಯನ್ನು ಮಾಡದಿರುವದೂ, ಶ್ರೀಮಂತರಿದ್ದೂ, ಒಂದಾದರೂ ಔದ್ಯೋಗಿಕ ಕಾರ್ಖಾನೆಯನ್ನು ತೆರೆಯದಿರುವದೂ ದುಃಖದ ಸ್ಥಿತಿಯು ಇವೆಲ್ಲಕ್ಕೂ ಸರಕಾರದ ಬೆಂಬಲವು ಅವಶ್ಯವಾದಾಗ್ಯೂ, ಸರಕಾರದಿಂದ ಪೂರೈಸಲ್ಪಡದ ಸಾಧನಗಳನ್ನು ಜನರು ಪರಸ್ಪರರಲ್ಲಿ ಸಂಘಟನ ಮಾಡಿ ಅದರಿಂದ ಪೂರೈಸಿಕೊಳ್ಳುವದು ಸದ್ಯದ ಪರಿಸ್ಥಿತಿಗೆ ಅವಶ್ಯವಾಗಿರುವದು.

ಈ ರೀತಿಯಿಂದ ಸದ್ಯಕ್ಕೆ ಹಿಂದುಸ್ಥಾನದಲ್ಲಿ ಅಲ್ಲಲ್ಲಿ ಹೊಸ ಹೊಸ ಕಾರ್ಖಾನೆಗಳು ಕೇವಲ ಸ್ವಜನರಿಂದಲೇ ಜರುಗುತ್ತಿರುವದು ಹಿಂದುಸ್ಥಾನದ ಭಾವೀ ಉನ್ನತಿಯ ಚಿನ್ಹವಾಗಿರುತ್ತದೆ ಶಕ್ಯವಿದ್ದವರು ಇಂಥ ಹಲವು ಕಾರ್ಖಾನೆಗಳನ್ನು ಅಲ್ಲಲ್ಲಿ ತರೆದಲ್ಲಿ ಇಷ್ಟವು ಆದರೆ ಎಲ್ಲಿ ಶಕ್ಯವಿಲ್ಲವೋ, ಅಲ್ಲಿ ಕೈಜೋಡಿಸಿಕೊಂಡು ಕಟ್ಟಿದ ಇದ್ದ ಕಾರ್ಖಾನೆಗಳಿಗೆ ತಮ್ಮ ಬೆಂಬಲವನ್ನು ಕೊಟ್ಟಲ್ಲಿ ಈ ಕಾರ್ಖಾನೆಗಳು ವಿಸ್ತೃತಸ್ವರೂಪವನ್ನು ಹೊಂದಿ ತನ್ನ ಕೈಕೊಂಡ ಮಾರ್ಗದಲ್ಲಿ ಬಂದ ಸಂಕಟಗಳನ್ನು ಲೋಕಸಂಗ್ರಹದ ಸಾಮರ್ಥ್ಯದಿಂದ ಬದಿಗೊತ್ತಿ ತನ್ನ ಮುಂದಿನ ಮಾರ್ಗಕ್ರಮಣವನ್ನು ಮಾಡಲು ಬಲವುಳ್ಳದ್ದಾಗುವದು.

ಸ್ವದೇಶೀ ಕಾರ್ಖಾನೆಗಳು ಅವ್ಯಾಹತವಾಗಿ (ನಿರಂತರವಾಗಿ) ನಡೆಯಬೇಕಾದಲ್ಲಿ ಸ್ವಜನರ ಸಕ್ರಿಯ ಸಹಾನುಭೂತಿಯು ಮುಖ್ಯವಾಗಿರುವದು

ಇನ್ನು ಕರ್ನಾಟಕವನ್ನುದ್ದೇಶಿಸಿ ನಮ್ಮ ವಿಜ್ಞಾಪನೆಗಳೆಂದರೆ - ಕರ್ನಾಟಕವು ಕಪ್ಪುನೆಲವುಳ್ಳ ಸಂಪನ್ನವಾದ ದೇಶವು ಇಲ್ಲಿ ಒಕ್ಕಲುತನವು ನಡೆದಷ್ಟು ಮಿಕ್ಕ ಪ್ರಾಂತಗಳಲ್ಲಿ ನಡೆಯದು ಇದಕ್ಕೆ ಸಮಾನವಾದ ಪ್ರಾಂತಗಳೆಂದರೆ, ಗುಜರಾಥ, ಬಂಗಾಲ, ಖಾನದೇಶ ಇವೇ ಮೊದಲಾದವುಗಳು. ಆದ್ದರಿಂದ ಕರ್ನಾಟಕವು ಒಕ್ಕಲುತನದಲ್ಲಿ ಹಾಗು ವ್ಯಾಪಾರದಲ್ಲಿ ಎಂದೂ ಹಿಂದುಳಿಯಕೂಡದು ಆದರೆ ಎತ್ತ ನೋಡಿದತ್ತ ಒಕ್ಕಲಿಗರು ಸುಧಾರಣೆಯ ಪದ್ಧತಿಯನ್ನು ತಿರಸ್ಕರಿಸಿ, ಕೇವಲ ಅಜ್ಞಾನತ್ವದಿಂದ ನಡೆದು ಬಂದ ಹಳೇ ಪದ್ಧತಿಗೆ ಅಂಟಿಕೊಂಡು ಒಕ್ಕಲುತನದಲ್ಲಿ ಸುಧಾರಣೆಯನ್ನು ಮಾಡಲೊಲ್ಲರು. ಮತ್ತೊಂದು ಕಡೆಗೆ ನೋಡಿದಲ್ಲಿ, ಹಿರಿಯರು ಅಂಗ್ಲ ಪದ್ಧತಿಯೇ ಮೇಲಾದ ಸುಧಾರಿಸಿದ ಪದ್ಧತಿಯೆಂದು ತಪ್ಪು ತಿಳುವಳಿಕೆ ಮಾಡಿಕೊಂಡು ಕೇವಲ ಬಾಹ್ಯಾಡಂಬರಕ್ಕೆ ಮನಸೋತು ವಿಲಾಸಿಗಳಾಗುತ್ತಿರುವರು ಮಿಕ್ಕವರು ಗೇಣು ಹೊಟ್ಟೆಗಾಗಿ ಪರರ ಚಾಕರಿಯನ್ನು ಬಯಸಿರುವರು. ಸದ್ಯಕ್ಕೆ ಹೊಟ್ಟೆ ಹೊರೆಕೊಳ್ಳುವದು ಕೂಡ ಕಠಿಣವಾಗಿರುವದೇನು ಸುಳ್ಳಲ್ಲ. ಆದರೆ, ಈ ಹೀನ ಸ್ಥಿತಿಗೆ ಕಾರಣಗಳೆಲ್ಲ ಮೇಲೆ ವಿವರಿಸಿದಂತೆ ಆದಾಗ್ಯೂ, ಉಚ್ಚ ಧ್ಯೇಯವನ್ನು ಇಟ್ಟುಕೊಂಡು, ಸಂಘಶಕ್ತಿಯಿಂದ ಕಾರ್ಯಾರಂಭವನ್ನು ಮಾಡಿದಲ್ಲಿ ಹೊಟ್ಟೆ ಹೊರೆಕೊಳ್ಳುವಂಥ ಕ್ಷುದ್ರ ಹೇತುವಾಗಲೇ ಕೈಗೂಡಿ ದೇಶದ ಸಂಪತ್ತಿವೃದ್ಧಿಯಂಥ ಮಹತ್ಕಾರ್ಯವು ಸಾಧಿಸುವದು ಹೀಗೆ ಉಪದೇಶ ಮಾಡುವದು ಪ್ರಸ್ತುತ ಲೇಖನದ ಉದ್ದೇಶವಿರದೆ, ಕರ್ನಾಟಕ ತರುಣರಲ್ಲಿ ನೀಚ ಸೇವಾವೃತ್ತಿಯು ಮಾಯವೃತ್ತಿಯು ಅಳಿದುಹೋಗಿ, ಸ್ವತಂತ್ರ ವೃತ್ತಿಯಿಂದ ಶಕ್ಯವಿದ್ದ ಉದ್ಯೋಗವನ್ನಾಗಲೀ, ವ್ಯಾಪಾರವನ್ನಾಗಲೀ, ಕಲೆಯನ್ನಾಗಲೀ ಅವರು ಕಲಿತು ತಮ್ಮ ಹಾಗು ತಮ್ಮ ಪ್ರಾಂತದ ಹಾಗೂ ಸ್ವದೇಶದ ಏಳಿಗೆಯನ್ನು ಮಾಡಬೇಕೆಂಬುದೇ ಮುಖ್ಯೋದ್ದೇಶವು ಇದೇ ದೃಷ್ಟಿಯಿಂದ ಪ್ರಸ್ತುತ ಕಿರ್ಲೋಸ್ಕರ ಬಂಧುಗಳ ಕಾರ್ಖಾನೆಯು ಕರ್ನಾಟಕ ತರುಣರಿಗೆ ಮಾದರಿಯಾಗಿರುವದು ಅದನ್ನು ಮುಂದಿಟ್ಟುಕೊಂಡು ಕಾರ್ಯ ಮಾಡುವದಷ್ಟೇ ಕರ್ನಾಟಕ ತರುಣರ ಕರ್ತವ್ಯವು ಇದೇ ವಾರ್ತೆಯ ಪ್ರೇಮದ ಸಂದೇಶ

—ಸಂಪಾದಕ, ಕೆ. ವಾಕೆರ್.

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು.. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ

ಬಾಟ್ಲಿ ೧ಕ್ಕೆ ರೂ.		೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨-೧೦—೦
ಅಂಚೆವೆಚ್ಚ	,,	೦-೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

—— 0. ——

೩ ಔಂಸಿಗೆ ರೂ.		೨—೮—೦
೧ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦-೧೨-೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

“ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!”

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಇದ್ಯಾವದು?

ಒಟ್ಟೋ-ದಿಲ್ ಬಹಾರ್!! ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಅಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY.**

ಖಾದೀ ಸೈನ್ಯ ಘಟನೆ.

ಅಖಿಲ ಭಾರತೀಯ ನೂಲುಗಾರರ ಸಂಘದ ಕಾರ್ಯಕಾರಿ ಮಂಡಳದ ಸಭೆಯು ಸತ್ಯಾಗ್ರಹಾಶ್ರಮದಲ್ಲಿ ಸೇರಿ ಖಾದಿ ಸೈನ್ಯ ಘಟನೆಯೊಂದನ್ನು ತಯಾರಿಸುವ ಇಷ್ಟಾನಿಷ್ಟತೆಯ ಬಗ್ಗೆ ವಿಚಾರ ಮಾಡಿ ಮಂಡಳವೊಂದು ಘಟನೆಯನ್ನು ತಯಾರಿಸಲು ನಿಯೋಜಿಸಿತ್ತು. ಆ ಘಟನೆಯನ್ನು ಪ್ರಸಿದ್ಧಪಡಿಸಬೇಕಾಗಿ ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟಿಸುವದರಿಂದ ಘಟನೆಗೆ ಪ್ರಸಿದ್ಧಿ ದೊರೆಯುತ್ತದೆ. ಅದರಿಂದ ಘಟನೆಯು ಈ ಕೆಳಗೆ ಕೊಡಲ್ಪಟ್ಟಿದೆ. ಖಾದಿಯ ಹಿತಚಿಂತಕರೆಲ್ಲರೂ ಈ ಘಟನೆಯ ಬಗ್ಗೆ ಅಭಿಪ್ರಾಯಗಳನ್ನು ತೀವ್ರದಲ್ಲಿ ಬರೆದು ಕಳಿಸಬೇಕಾಗಿ ಸಹಾಯಕ ಕಾರ್ಯದರ್ಶಿಯವರು ವಿನಂತಿಸಿಕೊಂಡಿರುತ್ತಾರೆ. ತಮ್ಮ ಅಭಿಪ್ರಾಯಗಳನ್ನು ತಿಳಿಸುವಾಗ ಕಾಂಗ್ರೆಸ್ ಮತ್ತು ಖಾದಿಯ ಸೇವೆಯಲ್ಲಿ ದೊರೆತ ಅನುಭವವನ್ನು ಲಕ್ಷ್ಯದಲ್ಲಿಟ್ಟು ಜನಸೇವಾ ಕಾರ್ಯದಲ್ಲಿ ತಮಗೆ ಸಹಾಯಕವಾಗುವ ರೀತಿಯಲ್ಲಿ ಖಾದಿಯ ಉತ್ಪತ್ತಿ ಹಾಗೂ ಪ್ರಸಾರಕ್ಕೆ ಸಮಾಧಾನಕರವಾಗಿ ತಿಳಿಸಬೇಕು.

ಖಾದಿ ಸೈನ್ಯ ಘಟನೆ

ಅಖಿಲ ಭಾರತೀಯ ನೂಲುಗಾರರ ಸಂಘದ ಆಶ್ರಯದಲ್ಲಿ ಖಾದಿ ಸೈನ್ಯವೆಂಬ ಸೇವಾ ಸಂಘವೊಂದಿರುವದು.

ಸಂಘದ ತಿಳುವಳಿಕೆಯ ಮೇರೆಗೆ ಸ್ವಂತ ಇಚ್ಛೆಯಿಂದ ಸಂಘದ ನಿಯಮಗಳಿಗೆ ಒಳಪಟ್ಟು ನಡೆಯುವವರು ಮಾತ್ರ ಈ ಸೈನ್ಯದಲ್ಲಿ ಸೇರಲು ಪಾತ್ರರಾಗಿರುತ್ತಾರೆ.

ಸೈನಿಕರ ಪಾತ್ರತೆ

ಈ ಸೈನ್ಯದಲ್ಲಿ ಸೇರಬಯಸುವವನು ೧೮ ವರ್ಷ ವಯಸ್ಸಿಗೆ ಮೀರಿರಬೇಕು. ತನ್ನ ಪ್ರಾಂತದ ದೇಶಭಾಷೆಯನ್ನು ಓದಲು ಬರೆಯಲು ಅರಿತಿರಬೇಕು. ಅಂಕಗಣಿತದ ಸಾಮಾನ್ಯ ಜ್ಞಾನವೂ ಅವನಿಗಿರಬೇಕು. ಆರೋಗ್ಯ ಹಾಗು ಸಚ್ಛೀಲದ ಪ್ರಮಾಣಪತ್ರಗಳನ್ನು ಅವನು ಪಡೆದಿರಬೇಕು. ಅಂದರೆ ಅವನಿಗೆ ನೂಲುಗಾರರ ಸಂಘದ ಔದ್ಯೋಗಿಕ ಶಾಲೆಯಲ್ಲಿ ಪ್ರವೇಶ ಸಿಗತಕ್ಕದ್ದು.

ಶಿಕ್ಷಣಕ್ರಮ

ಶಿಕ್ಷಣಕ್ರಮವು ೨ ವರ್ಷಗಳ ವರೆಗಾದರೂ ನಡೆಯತಕ್ಕದ್ದು. ಆ ಶಿಕ್ಷಣಕ್ರಮದಲ್ಲಿ ಈ ಕೆಳಗಿನ ಸಂಗತಿಗಳು ಒಳಗೊಂಡಿರತಕ್ಕದ್ದು.

(ಅ) ಹತ್ತಿಯನ್ನು ಹೆಕ್ಕುವದು, ಹಿಂಜುವದು, ಹಸನಮಾಡುವದು, ನೂಲುವದು, ನೇಯುವದು ಮುಂತಾದ ಸಮಸ್ತ ಪ್ರಯೋಗಗಳು ಕಲಿಸಲ್ಪಡಬೇಕು.

(ಬ) ಹಿಂದೀ ಅಥವಾ ಹಿಂದೂಸ್ಥಾನೀ ಭಾಷೆಯನ್ನು ಕಲಿಸಬೇಕು.

(ಕ) ಈ ದೇಶದ ಹಾಗು ಪಾಶ್ಚಾತ್ಯ ಪದ್ಧತಿಯ ಜಮಾಖರ್ಚು ಪದ್ಧತಿಗಳು ಅತನಿಗೆ ಕಲಿಸಲ್ಪಡತಕ್ಕದ್ದು.

ಮೇಲಿನ ಶಿಕ್ಷಣಕ್ರಮದಲ್ಲಿ ವಿದ್ಯಾರ್ಥಿಯು ಉತ್ತೀರ್ಣನಾಗಿ ಪ್ರಮಾಣಪತ್ರಗಳನ್ನು ಪಡೆಕೊಂಡ ಬಳಿಕ, ಆ ವಿದ್ಯಾರ್ಥಿಗೆ ಯಾವದೊಂದು ಪ್ರಾಂತದೊಳಗಿನ ಖಾತೆಯ ಕಾರ್ಯಾಲಯಕ್ಕೆ ಕಳಿಸಲಾಗುವದು. ಅಲ್ಲಿ ಅವನು ಒಂದು ಹಂಗಾಮು (ಅಂದರೆ ಸಾಮಾನ್ಯವಾಗಿ ಎಂಟು ತಿಂಗಳು) ಕೆಲಸಮಾಡಿ ಪ್ರತ್ಯಕ್ಷ ಅನುಭವ ಪಡೆಕೊಳ್ಳಬೇಕು. ಪ್ರಾಂತಿಕ ಖಾದಿ ಕಾರ್ಯಾಲಯದ ವ್ಯವಸ್ಥಾಪಕರಿಂದ ಪ್ರತ್ಯಕ್ಷ ಅನುಭವ ಪಡೆದ ಬಗ್ಗೆ ಸಮಾಧಾನಕರವಾದ ಪ್ರಮಾಣಪತ್ರವನ್ನು ಪಡೆಯಬೇಕು. ಇಷ್ಟಾದ ಬಳಿಕ ಆತನಿಗೆ ಖಾದಿಯ ಸೈನ್ಯದಲ್ಲಿ ದಾಖಲು ಮಾಡಲಾಗುವದು. ಇದರೊಳಗೊಂದು ಶರತ್ತಿನ ಈ ಶಿಕ್ಷಣಕ್ರಮವು ನಡೆಯುವಾಗ ವಿದ್ಯಾರ್ಥಿಯ ಆರೋಗ್ಯವು ಕೆಟ್ಟರೆ ಅಥವಾ ಆತನು ಕೆಲಪ್ರಕಾರನಾದರೆ ಆತನಿಗೆ ಖಾದಿಯ ಸೈನ್ಯದಲ್ಲಿ ದಾಖಲಪಡಿಸಿಕೊಳ್ಳಲಾಗದು.

ಹೀಗೆ ಸೈನ್ಯದಲ್ಲಿ ದಾಖಲಾದವನು ಸಂಘದ ಹೇಳಿಕೆಯಂತೆ ಬೇಕಾದ ಖಾತೆಯ ಕಾರ್ಯಾಲಯದಲ್ಲಿ ಹಾಜರಾಗಬೇಕಾಗುವದು.

ಸೈನಿಕನಿಗೆ ತಿಂಗಳಿಗೆ ರೂಪಾಯಿ × × ಸಂಬಳವಾಗುವದು. ಈ ಸಂಬಳದ ಪ್ರಮಾಣವನ್ನು ಸಂಘದವರು ಅಥವಾ ಖಾದಿ ಸೈನ್ಯ ಮಂಡಳದವರು ಕಾಲ ಕಾಲಕ್ಕೆ ನಿರ್ಧರಿಸಬಹುದು.

ಖಾದಿ ಸೈನ್ಯದಲ್ಲಿ ಸೇರಬಯಸುವವರೆಲ್ಲರೂ ಮುಂದಿನ ವಚನ ಪತ್ರದಲ್ಲಿ ಸಹಿ ಮಾಡಿಕೊಡಬೇಕು.

ಇತರ

ಖಾದಿ ಸೈನ್ಯದಲ್ಲಿ ಸೇರಬಯಸುವ ಔದ್ಯೋಗಿಕ ಖಾತೆಯಲ್ಲಿ ಶಿಕ್ಷಣ ಪಡೆಯುತ್ತಿರುವವರಿಗೂ ಖಾತೆಯವರು ಶಿಕ್ಷಣ ಕೊಡುವರು. ಆದರೆ ಖಾದಿ ಸೈನಿಕರಾಗುವವರಿಗೆ ಮೊದಲ ಪ್ರವೇಶ ಕೊಟ್ಟು ಸ್ಥಳಾವಕಾಶವಿದ್ದಲ್ಲಿ ಮಾತ್ರ ಇತರರಿಗೆ ಪ್ರವೇಶ ಕೊಡಲಾಗುವದು.

ನೂಲುಗಳಿಯುವವರಿಗಾಗಿ ಮೂರು ತಿಂಗಳ ಶಿಕ್ಷಣಕ್ರಮವೊಂದು ಏರ್ಪಡಿಸಲ್ಪಡುವದು. ಈ ಶಿಕ್ಷಣಕ್ರಮದಿಂದ ಹತ್ತಿಯನ್ನು ಹಿಂಜಿ ಹಸನ ಮಾಡಿ ನೂಲುವಾಡುವ ಕ್ರಮಗಳೂ ಕಲಿಸಲ್ಪಡುವವು.

ಶಿಕ್ಷಣಕ್ರಮ ಪಡೆಯಬಯಸುವವರೆಲ್ಲರೂ ಅರ್ಜಿಗಳನ್ನು ಸಾದರಪಡಿಸತಕ್ಕದ್ದು. ಅರ್ಜಿಗಳ ಮನ್ನಣೆಯಾದ್ದರೆ ಅವನು ತನ್ನ ಊರಿನಿಂದ ಸಾಬರಮತಿಯ ವರೆಗಿನ ಪ್ರವಾಸ ಖರ್ಚನ್ನು ರೇಲ್ವೆ ತನಗೆ ತಾನು ಕೊಟ್ಟು ಮೇಲೆ ೩ ರೂಪಾಯಿಗಳನ್ನು ಕಟ್ಟಿಗೆ ಇಡಬೇಕು. ಯಾವದೇ ಕಾರಣದಿಂದ ವಿದ್ಯಾರ್ಥಿಗೆ ಹೊರಹೊಗಬೇಕಾದಲ್ಲಿ ಈ ಹಣವು ವಜಾ ಮಾಡಲ್ಪಡುವದು.

ವಿದ್ಯಾರ್ಥಿವೇತನ

ವಿದ್ಯಾರ್ಥಿಗಳಿಗೆ ಉಳಕೊಳ್ಳಲು ಉಚಿತವಾಗಿ ವ್ಯವಸ್ಥೆ ಮಾಡಲ್ಪಡುವದು. ಊಟದ ಖರ್ಚನ್ನು ಕೊಡಲು ತೀರ ಅಶಕ್ತರಾದ ಔದ್ಯೋಗಿಕ ಖಾತೆಯ ಯಜಮಾನರ ಶಿಫಾರಸಿದ್ದಲ್ಲಿ ಅವರಿಗೆ ಊಟಕ್ಕಾಗಿ ತಿಂಗಳಿಗೆ ೧೨ ರೂಪಾಯಿಗಳು ಕೊಡಲ್ಪಡುವವು. ವಿದ್ಯಾರ್ಥಿಗಳಿಗಾಗಿ ಖಾತೆಯು ಭೋಜನಾಲಯವಿಟ್ಟರೆ ಈ ವೇತನ ದೊರಕಲಿಕ್ಕಿಲ್ಲ.

ಅಖಿಲ ಭಾರತೀಯ ನೂಲುಗಾರರ ಸಂಘಕ್ಕೆ ಮೇಲ್ಕಂಡ ಘಟನೆಯಲ್ಲಿ ಕಾಲೋಚಿತವಾಗಿ ತಿದ್ದುಪಾಟು ಮಾಡುವ ಅಧಿಕಾರಗಳಿವೆ. ನೂಲುಗಾರರ ಸಂಘದ ಕೈಕೆಳಗೆ ಈಗ ಇರುವ ಸೇವಕರಿಗೆ ಈ ಘಟನೆಯಿಂದ ಬಾಧೆಯಿಲ್ಲ.

BATLIBOI'S

Accountancy Training Institute

Recognised by

The G. D. A. Board

Offers best training in Accounting, Banking, Company Management and Secretarial Work and Theory and Practice of Commerce

Best staff, Individual attention fee moderate, and payable by instalments

Send for Prospectus at Yusuf Buildings, Churchgate street Fort, Bombay

You are invited to make thorough enquiry before joining

TUITION BY POST

IS OUR SPECIALITY

ವಿವಿಧ ಸಂಗ್ರಹ.

ವಾದ್ಯಘೋಷದ ಮರುಳು.

ಇತ್ತೀಚೆಗೆ ವಾದ್ಯಘೋಷದ ಮರುಳು ವಿಶೇಷವಾಗಹತ್ತಿದೆ. ಅಧಿಕಾರಿಗಳು ಈ ಮರುಳಿಗೆ ಪ್ರೋತ್ಸಾಹನ ಕೊಡಹತ್ತಿದ್ದರಿಂದ ಈ ಮರುಳಿನ ಚೇಷ್ಟೆಗಳು ಮತ್ತೂ ಮಿಗಿಲಾಗಿವೆ. ಈ ಕಥೆ ಕೇಳಿರಿ! ಸಂಯುಕ್ತ ಪ್ರಾಂತದ ಇಟಾವಾ ಗ್ರಾಮದಲ್ಲಿ ಗವಾರಿಮಶೀದ ಎಂಬದೊಂದು ಮಶೀದಿ ಇದೆ. ಈ ಮಶೀದಿಯ ಬಳಿ ಮೇವಾರಾಮ ಹಾಗು ಸೇವಾರಾಮ ಎಂಬ ಇಬ್ಬ ಸನಾತನಿಗಳ ಮನೆ ಇರುವದು. ಇದಾದರೂ ಪುರಾತನ ಕಾಲದಿಂದಲೇ ಇರುತ್ತದೆ. ಸನಾತನಿಗಳು ಈ ವರೆಗೆ ಸನಾತನ ಧರ್ಮದ ವ್ರತಗಳನ್ನು ಉತ್ಸಾಹದಿಂದ ಸಾಗಿಸುತ್ತಿದ್ದರು. ಧರ್ಮಾವತಾರನಾದ ಶ್ರೀಕೃಷ್ಣ ಪರಮಾತ್ಮನ ಜಯಂತಿಯ ಮಹೋತ್ಸವವನ್ನು ಸಂಯುಕ್ತ ಪ್ರಾಂತ ಮುಂತಾದ ಉತ್ತರ ದೇಶಗಳಲ್ಲಿ ವಿಜೃಂಭಣೆಯಿಂದ ನೆರವೇರಿಸುವ ರೂಢಿಯಿದೆ. ಅದಕ್ಕನುಸಾರವಾಗಿ ಈ ವರುಷವೂ ಅದೇ ಪ್ರಕಾರ ವಿಜೃಂಭಣೆಯಿಂದ ಮೇವಾರಾಮ ಹಾಗು ಸೇವಾರಾಮರವರು ನಡಿಸಲು ತಯಾರಿ ಮಾಡಿದ್ದರು. ಅಷ್ಟರಲ್ಲಿ ಇಟಾವಾದ ಮೆಜಿಸ್ಟ್ರೇಟರು ಕ್ರಿಮಿನಲ್ ಪ್ರೊಸೀಜರ ಕೋಡ ೧೪೪ ನೇ ಕಲಮಿನನ್ವಯ ಪ್ರತಿಬಂಧಕ ಹುಕುಮನ್ನು ಹೊರಡಿಸಿ ಮೇವಾರಾಮ ಹಾಗು ಸೇವಾರಾಮರವರಿಗೆ ಶಂಖವಾದ್ಯವನ್ನಾಗಲೀ, ವಾದ್ಯಘೋಷವನ್ನಾಗಲೀ ಸಾಯಂಕಾಲ ೬॥ ಯಿಂದ ೭॥ ಹಾಗು ರಾತ್ರಿ ೮ ರಿಂದ ೯॥ ವರೆಗೆ ಮಾಡದಂತೆಯೂ, ಹಾಗೆ ಮಾಡಿದ್ದಲ್ಲಿ ಬಳಿಯ ಮಶೀದಿಯಲ್ಲಿ ಈಶಪ್ರಾರ್ಥನೆ ಮಾಡುವ ಮಹಮ್ಮದೀಯರಿಗೆ ಶಾಂತತಾಭಂಗವಾಗಿ, ಸಾರ್ವಜನಿಕ ಶಾಂತತಾಭಂಗವಾಗುತ್ತದಾಗಿಯೂ ಪ್ರತಿಬಂಧಿಸಿರುವರು. ಇದೆಂಥ ಕೃಷ್ಣಲೀಲೆಯು? ಮುಸಲ್ಮಾನರ ಚಿತ್ತವು ಇಷ್ಟು ಸೂಕ್ಷ್ಮವಾಯಿತೆಂದು ಮೆಜಿಸ್ಟ್ರೇಟರ ತಿಳುವಳಿಕೆಯಾಯಿತೇನು?

* * *

ಕರ್ನಾಟಕದಲ್ಲಿ ರಾಷ್ಟ್ರಕಾರ್ಯ

ಕರ್ನಾಟಕ ಪ್ರಾಂತಿಕ ಸ್ವಯಂಸೇವಕ ದಲದ ಕಾರ್ಯದರ್ಶಿಗಳಾದ ಡಾ| ನಾ. ಸು. ಹರ್ಡೀಕರರವರು ಬರೆಯುವದೇನಂದರೆ — ಹಿಂದುಸ್ಥಾನಿ ಸೇವಾದಲದ ಸಂಘಟಕರು ಕರ್ನಾಟಕ ಪ್ರಾಂತದ ಸ್ವಯಂಸೇವಕರನ್ನೂ, ರಾಷ್ಟ್ರೀಯ ಸಭೆಯ ಸಭಾಸದರನ್ನೂ ಒಟ್ಟುಗೂಡಿಸುತ್ತ ಸಂಚರಿಸುತ್ತಿದ್ದಾರೆ. ಇದೇ ಕಳೆದ ತಾ. ೧೫ ನೇ ವರೆಗಿನ ಪತ್ರಗಳ ಮೇಲಿಂದ ಅವರ ಕಡೆಗೆ ಆ೬೬೧ ರಾಷ್ಟ್ರೀಯ ಸಭೆಯ ಸಭಾಸದರಾಗಿರುವರು. ೩೬೭ ಸೇವಾದಲದ ಸ್ವಯಂಸೇವಕರಾಗಿರುವರು. ಇನ್ನೂ ಉಳಿದ ಸಭಾಸದರನ್ನೂ ಸ್ವಯಂಸೇವಕರನ್ನೂ ಇದೇ ತಿಂಗಳ ಕೊನೆಯೊಳಗೆ ಕಳಿಸಿಕೊಡಬೇಕು. ಸಂಘಟಕರೆಲ್ಲರೂ ಶಕ್ತಿಮೀರಿ ದುಡಿಯಬೇಕು. ರಾಷ್ಟ್ರೀಯ ಸಭಾಸದರ ತಪಶೀಲು —

ಜಿಲ್ಲೆ	ಸಭಾಸದರ ಸಂಖ್ಯೆ
ದಕ್ಷಿಣ ಕನ್ನಡ	೨೨೪೨
ಬೆಳಗಾಂವಿ	೨೦೫೧

ಧಾರವಾಡ	೧೯೪೬.
ಉತ್ತರ ಕನ್ನಡ	೮೧೧.
ಮೈಸೂರ	೭೮೧
ವಿಜಾಪುರ	೭೪೨.
ಬಳ್ಳಾರಿ.	೪೭.
ಕೊಡಗು.	೦.

ಇದರ ಮೇಲಿಂದ ದಕ್ಷಿಣ ಕನ್ನಡ ಜಿಲ್ಲೆಯು ಅಗ್ರಸ್ಥಾನವನ್ನು ಪಡೆದಿದೆಂದು ತೋರ ಬರು. ವಿಜಾಪುರ ಹಾಗು ಉತ್ತರ ಕನ್ನಡ ಜಿಲ್ಲೆಗಳಲ್ಲಿ ನಡೆದ ಕಾರ್ಯವು ಸಮಾಧಾನಕರವಿಲ್ಲ. ಈ ಜಿಲ್ಲೆಗಳು ಇನ್ನೂ ಹಿಂದುಳಿಯದೆ ಮುಂದಾಗಬೇಕು. ಅಲ್ಲಲ್ಲಿಯ ಪ್ರಮುಖರು ಇನ್ನು ಯತ್ನ ಮಾಡಿ ತಮತಮಗೆ ಒಪ್ಪಿಸಿದ ರಾಷ್ಟ್ರಕಾರ್ಯದ ಪಾಲನ್ನು ನೆರವೇರಿಸಬೇಕು

,

ಚಹದ ಅನರ್ಥ

ಸುಧಾರಿಸಿದವರಲ್ಲಿ ಚಹಾಪಾನವು ಇತ್ತಿತ್ತ ವ್ಯಸನವಾಗಿಯೇ ಹೋಗಿದೆ. ಕೆಳವರ್ಗದವರಲ್ಲಿ ಕಂಡ ಗುಡಾಕುತನದಿಂದ ಅನರ್ಥವಾಗುತ್ತದೆ. ಮೇಲು ಜಾತಿಗಳಲ್ಲಿ ಚಹಾಪಾನದಿಂದ ಹೇರಳ ಅನರ್ಥಗಳುಂಟಾಗಿವೆ. ರಶಿಯಾ ದೇಶದೊಳಗೆ ಚಹದ ಪಾರಿಯನ್ನು ಕೊಂಡಳ್ಳಲು ಸರಕಾರಿ ಯತ್ನಗಳು ನಡೆದಿವೆ. ವಿಲಿಯಮ್ ಕೆಬೆಟ್ ಎಂಬವರ ಚಹಾದ ವಿಷಯವನ್ನು ಚರ್ಚಿಸಿ ನುಡಿಯುವದೇನೆಂದರೆ, ಚಹದ ಸೇವನದಿಂದ ದೇಹಯಷ್ಟಿಯು ಶಿಥಿಲವಾಗುತ್ತದೆ, ಚಹಾಪಾನ ಮಾಡುವವರು ಷಂಡರಾಗುತ್ತಾರೆ, ಅವರಲ್ಲಿ ಧೈರ್ಯವಿರುವದಿಲ್ಲ, ಆಯುಷ್ಯವು ಕ್ಷೀಣವಾಗುತ್ತದೆ, ಮುದಿ ಪ್ರಾಯದಲ್ಲಿ ಇದನ್ನು ಸೇವಿಸಿದರೆ ಮೈಯು ಸಂತಪ್ತವಾಗುತ್ತದೆ. ಕೆಬೆಟ್‌ರವರ ಮಗನೊಬ್ಬನು ಚಹವನ್ನು ವಿಪರೀತವಾಗಿ ಕುಡಿದು ತೀರಿಕೊಂಡನಂತೆ. ನಮ್ಮಲ್ಲಿಯ ತರುಣರಲ್ಲಿ ಈಗ ಬೇರೂರಿಕೊಂಡಿರುವ ಷಂಡತನವೂ, ಅಧೈರ್ಯವೂ ಚಹಾಪಾನದ ಪರಿಣಾಮವೆಂದು ಕೆಬೆಟ್‌ರವರ ವಿಚಾರಪರಂಪರೆಯಿಂದ ಹೇಳಬೇಕಾಗಿದೆ

ಹೊಳದ ಪ್ರೇಮ!

(ರಶಿಯಾ ದೇಶದ ಪೆಂಟ್ರೋನಿಕಾ)

ಇದೀಗಲೇ !

ನೂತನವಾಗಿ ನಮ್ಮ ಕೈಸೇರಿದೆ ! !

ಬೇಗನೇ ತರಿಸಿ ಸಂಗ್ರಹಿಸಿರಿ!

ಪತ್ತೆ-ಮೆಸರ್ಸ ಏ. ಪಿ. ಸಿ. ಎಂಡ್ ಟೊಲಕಾಸ್ಕಿ,

ಪಿ. ಎಂಡ್ ಸಿ ಟೊಲಕಾಸ್ಕಿ ಕಂಪನಿಯವರು,

೬, ೫, ಮತ್ತು ೭ ಧವಜ ಸ್ಟ್ರೀಟ, ಮುಂಬಯಿ.

ದರ:- ೫ ರತ್ತಲು ವರೆಗೆ ಕೊಳ್ಳುವವರಿಗೆ ರತ್ತಲಿಗೆ ರೂ ೧೬/- ರಂತೆ.

೫ ರತ್ತಲಿಗೆ ಮಿಕ್ಕಿ ಕೊಳ್ಳುವವರಿಗೆ ರತ್ತಲಿಗೆ ರೂ ೧೫/- ರಂತೆ

ಅಂಚೆ ವೆಚ್ಚ ಪ್ರತ್ಯೇಕ

ರಾಜಾ ಕಾಲಸ್ಯ ಕಾರಣಂ.

‘ರಾಜಾ ಕಾಲಸ್ಯ ಕಾರಣಂ’ ಇದರರ್ಥವನ್ನು ನಾವು ತಿಳಕೊಳ್ಳುವದು ವಿಹಿತವು. ಕಾಲವು ಯಾರ ಅಧೀನದಲ್ಲಿಯೂ ಇರುವದಿಲ್ಲ. ಅದಷ್ಟು ಸರ್ವವ್ಯಾಪಿಯಿದೆ, ಸರ್ವಸ್ವತಂತ್ರವಿದೆ. ಅಂಥ ಕಾಲವು ಕ್ಷಣಭಂಗುರ ಅರಸರ ಪ್ರೇರಣೆಯಿಂದ ನಡೆಯುವ ಬಗೆ ಹೇಗೆ? ಎಂದು ಯಾರೂ ಪ್ರಶ್ನಿಸಬಹುದು. ಆ ಕಾಲವೆಂದರೇನು? ಕಾಲವೆಂದರೆ, ಸಮಯವಲ್ಲ. ಆಚಾರವಿಚಾರ ಮುಂತಾದ ಪ್ರಜೆಗಳ ಸಾಮಾನ್ಯ ನಡವಳಿಗೆ ಕಾಲವೆಂದು ಸಂಬೋಧಿಸುತ್ತಾರೆ. ಅರಸರು ಧಾರ್ಮಿಕರಿದ್ದರೆ, ಪ್ರಜೆಗಳಲ್ಲಿಯೂ ಧರ್ಮಬುದ್ಧಿಯು ಜಾಗೃತವಾಗಿರುತ್ತದೆ. ಧರ್ಮಾಚಾರಗಳನ್ನು ಪುರಸ್ಕರಿಸುವದು ದೊಡ್ಡ ಅಭಿಮಾನದ ಸಂಗತಿಯಾಗುತ್ತದೆ. ಚಂದ್ರಹಾಸನ ರಾಜ್ಯದೊಳಗಿನ ಧರ್ಮಾಚಾರಗಳನ್ನು ಸನಾತನಿಗಳು ಕೇಳಿರಬಹುದು. ಏಕಾದಶೀ ವ್ರತವನ್ನು ಗೋವುಗಳೂ ಕೂಡ ಆಚರಿಸುತ್ತಿದ್ದವಂತೆ! ಈಗ ಧರ್ಮಶಾಸ್ತ್ರರು ಕೂಡ ಅದನ್ನಾಚರಿಸುವದು ಕಠಿಣವಾಗಿದೆ. ಅರಸನು ವಿಷಯಲಂಪಟನಾದರೆ, ಪ್ರಜೆಗಳೂ ವಿಷಯಲಂಪಟರಾಗುತ್ತಾರೆ. ವೋಗಲಾಯಿಯ ಆಳಿಗಾಲದ ಕಥೆಯೂ, ಪೇಶವಾಯಿಯ ಆಳಿಗಾಲದ ಕಥೆಯೂ ಇವಕ್ಕೆ ಉದಾಹರಣೆಗಳು. ಅರಸನು ಶೂರ ನರವೀರನಾಗಿದ್ದರೆ, ಪ್ರಜೆಗಳಾದರೂ ಶೂರನರವೀರರೇ. ಯಾವ ಪ್ರಸಂಗದಲ್ಲಿಯೂ ಧೈರ್ಯ ಬಿಡುವದಿಲ್ಲ ಶಿವಾಜಿ ಮಹಾರಾಜರ ಕಾಲದ ಮಾವಳೇಯರ ಪರಾಕ್ರಮ ಕೇಳಿರಿ. ಶ್ರೀ ರಾಮನಾವ ತಾರದೊಳಗಿನ ಯಃಕಶ್ಚಿತ್ ಕಪಿಗಳ ಸಾಹಸವನ್ನು ಮನನ ಮಾಡಿರಿ. ಅರಸರು ಪರಧರ್ಮೀಯರಾದರೆ, ಇತರ ಧರ್ಮದ ಪ್ರಜೆಗಳಾದರೂ ಧರ್ಮಾಚಾರಗಳನ್ನು ಮರೆತು, ಪರಧರ್ಮಾಚಾರಗಳನ್ನು ಕೈಕೊಳ್ಳುವವರಲ್ಲಿಯೇ ಭೂಷಣವೆನಿಸುತ್ತಾರೆ. ಮೋಗಲಾಯಿಯಲ್ಲಿ ನಮ್ಮ ಉತ್ತರ ಹಿಂದುಸ್ಥಾನದ ಸನಾತನಿಗಳಿಗೆ ಉಂಟಾದ ಮುಹಮ್ಮದೀ ಉಡಿಗೆ ತೊಡಿಗೆ, ನಡಾವಳಿಗಳನ್ನು ಪರಾಂಬರಿಸಿರಿ. ಈಗಿನ ಸ್ಥಿತಿಯಂತೂ ನಮ್ಮೆದಿರಿಗೇ ಇದೆ. ಧೋತರಗಳಿಗಿಂತ ಚಣ್ಣಕ್ಕೇ ಮನ್ನಣೆ ಹೆಚ್ಚು. ರುಮಾಲಿಗಿಂತ ಹೇಟಿಗೇ ಮರ್ಯಾದೆ ವಿಶೇಷ. ಇಂಗ್ಲಿಷರ ದೇಶವು ಶೀತ ಪ್ರದೇಶ. ಅಲ್ಲಿ ಉಣ್ಣೆಯ ಅರಿವೆಗಳನ್ನು ಹಾಕಿಕೊಳ್ಳುವದು ಸಹಜವು. ಇಲ್ಲಿಯೂ ಉಣ್ಣೆಯ ಅರಿವೆಗಳನ್ನು ಹಾಕಿಕೊಳ್ಳುವದೊಂದು ದೊಡ್ಡಸ್ತನವಾಗಿದೆ. ನಮ್ಮ ಹಳೇ ಕಾಲದ ಆಸನಗಳು ಮಾಯವಾಗಿ ಖುರ್ಚಿ ಮೇಜು ಮುಂತಾದ ಆಧುನಿಕ ಸಾಹಿತ್ಯಗಳು ಮನೆಮಾಡಿಕೊಂಡಿವೆ. ತಿಂಡಿ ತಿನಸುಗಳೂ ಬದಲಾಗಿವೆ. ಬಿಸ್ಕೀಟುಗಳಿಗೇ ರುಚಿ ಹೆಚ್ಚು. ಅವು ದೇಕಾದರೆ, ಯಾರೇ, ಯಾವದೇ ಪರಿಯಿಂದ,/ಯಾವದೇ ಸಾಹಿತ್ಯಗಳಿಂದ ತಯಾರಿಸಿದ್ದಿರಲಿ, ನಮ್ಮ ಸ್ವಧರ್ಮಾಚಾರಗಳು ಹೇಯವಾಗಿವೆ. ಅವುಗಳನ್ನು ಆಚರಿಸುವವನಂತೂ ಹಿತ್ತಿಗಿರಲಿ, ಅವುಗಳನ್ನಾಚರಿಸುವ ವಂಶಜರೆಂದು ಹೇಳಿಕೊಳ್ಳಲಿಕ್ಕೂ ಅನೇಕರು ತಯಾರಿಲ್ಲ. ದೇಶಭಾಷೆಗಳನ್ನು ಓದುವದಾಗಲಿ, ಕಲಿಯುವದಾಗಲಿ ತಿರಸ್ಕರಣೀಯವು. ಇಂಗ್ಲಿಷನ್ನು ಓದುವದೇ ದೊಡ್ಡಸ್ತನವು, ಬರಿಯುವದೇ ದೊಡ್ಡದೊಂದು ಭೂಷಣ. ಇಂಗ್ಲಿಷ ಓದು ಬರಹ ಬರುತ್ತದೆಂದು ಇಂಗ್ಲಿಷಿನಿಂದಲೇ ಹೇಳುವದು ಎಲ್ಲಕ್ಕೂ ಶ್ರೇಷ್ಠವಾದ ದೊಡ್ಡದೊಂದು ಅಭಿಮಾನ. ದೇಶಭಾಷೆಗಳನ್ನು ಅರಿತುಕೊಳ್ಳುವದೊಂದು ತ್ಯಾಜ್ಯ ಸಂಗತಿ. ವಿಲಾಯತಿಗೆ ಹೋಗುವದು ಯಾತ್ರೆ. ಕಾಶೀ, ರಾಮೇಶ್ವರ, ಗಯಾ, ದ್ವಾರಕಾ ಮುಂತಾದವುಗಳಲ್ಲಿ ಹೋಗುವದು ಮೂರ್ಖತನ, ದಡ್ಡತನ. ಆಂಗ್ಲರ ನಡಾವಳಿಯಂತೆ ನಮ್ಮ ಭೋಜನ-ಪಾನೀಯಗಳೂ ನಡೆಯಲಾರಂಭಿಸಿವೆ. ವಿವಾಹದ ಪಾವಿತ್ರ್ಯವು ಮರೆಯಾಗಿ, ಅದರ ಬದಲು ಕಾಮವಾಸನೆಯೇ ತಲೆದೋರಿದೆ. ಮನೆತನಗಳೊಳಗಿನ ಸಾಹಚರ್ಯ, ಐಕ್ಯ, ಸಹಕಾರ ಮುಂತಾದ ಪುರಾತನ ವಿಚಾರಗಳು ಕ್ರಮವಾಗಿ ಕಳೆಗುಂದುತ್ತ ಸ್ವಾರ್ಥಪರಾಯಣ ಸ್ವಾತಂತ್ರ್ಯ, ಅನಿಯಂತ್ರಿತವಾದ ಪ್ರೇಮಾದಿ ಕಲ್ಪನೆಗಳು ಪ್ರಾದುರ್ಭೂತವಾಗಿ ಅನರ್ಥಗಳುಂಟಾಗಿವೆ. ‘ರಾಜಾ ಕಾಲಸ್ಯ ಕಾರಣಂ’ ಈ ಉಕ್ತಿಯು ಅನ್ವರ್ಥವಾಗಿಯು ನಮ್ಮ ದೇಶದಲ್ಲಿ ಪುನಃ ಪುನಃ ಒದಗಿರುತ್ತದೆ. ಸಮ್ರಾಧಿಪತಿಗಳು ಹೊಸವಾಗಿ ಬರುವಾಗ, ಯಾವದಾದರೊಂದು ಚಿತ್ತವೇಧಕವಾದ ಧ್ಯೇಯವನ್ನು ಸಾರುತ್ತ ಬರುತ್ತಾರೆ. ಒಬ್ಬರು ವಿದ್ಯಾದೇವಿಯ ಭಕ್ತರಾಗಿ ಬರುತ್ತಾರೆ, ಪಠಶಾಲೆಗಳಲ್ಲಿಯೂ ವಿದ್ಯಾದೇವಿಯ ಕಲ್ಯಾಣದ್ದೇ ಚಿಂತೆ. ಮಹಾರಾಜರೂ, ಸಂಸ್ಥಾನಿಕರೂ, ಸಾವ್ಕಾರರೂ ಸಮ್ರಾಧಿಪತಿಗಳ ಅನುಗ್ರಹ ಸಂಪಾದನೆಗಾಗಿ ಲಕ್ಷಾವಧಿ ರೂಪಾಯಿಗಳನ್ನು ತೆರುತ್ತಾರೆ. ಒಬ್ಬರಿಗೆ ಕ್ರಿಕೆಟ್ ಆಟದ್ದೇ ಪ್ರೀತಿ. ಶಾಲೆಯೊಳಗಿನ ಚಿಕ್ಕ ಚಿಕ್ಕ ಬಾಲಕರೂ ಕೂಡ ತಾಯಿ-ತಂದೆಗಳೊಡನೆ ಹಟ ಹಿಡಿದು ಕ್ರಿಕೆಟಿನ ಸಾಹಿತ್ಯಗಳನ್ನು ತರಿಸುತ್ತಾರೆ. ನಮ್ಮ ಈಗಿನ ಸಮ್ರಾಧಿಪತಿಗಳಾದ ಇರ್ವಿನ್ ದೊರೆಗಳು ದೇಸಾವೋದ್ಧಾರದ ಧ್ವಜ ಹಚ್ಚಿಕೊಂಡು ಬಂದಿರುವರು. ಇಡೀ ಹಿಂದುಸ್ಥಾನದಲ್ಲಿ ದೇಸಾವೋದ್ಧಾರದ ಸಂಚಾರವಾಗಿದೆ. ಮುಂಬಯಿಯ ಪ್ರಾಂತಾಧಿಪರಾಗಿದ್ದ ಲ್ಲಾಯ್ಡ ದೊರೆಗಳು ಮುಂಬಯಿಯ ನೆರೆಯೊಳಗಿನ ಸಮುದ್ರವನ್ನು ಹೂಳಿದು, ಮೇಲೆ ಗಗನಚುಂಬಿತವಾದ ಮಂದಿರಗಳನ್ನು ರಚಿಸಬಹುದೆಂಬ ಕಲ್ಪನೆ ಕೊಟ್ಟರು. ವಿಚಾರ ಮಾಡುವವರ್ಯಾರು? ಕ್ಷಣಾರ್ಧದಲ್ಲಿ ಹಣವೆಷ್ಟು ಸಂಚಯವಾಗಿ ಹೋಯಿತು. ಯೋಜನೆಯು ಸಾಧ್ಯವೋ? ಅಸಾಧ್ಯವೋ? ಕರ್ಮಸೃಷ್ಟಿಯೊಳಗಿನದೋ? ಕಲ್ಪನಾಸೃಷ್ಟಿಯೊಳಗಿನದೋ? ಮುಂದೇನಿದೆ? ಹಿಂದೇನಿದೆ? ಮುಂಬಯಿಯಲ್ಲಿ ಕಾಲಿಡದ ಮುಂಚೆಯೇ, ಮುಂಬಯಿಯಲ್ಲಿದ್ದವರಿಗಿಂತ ಮುಂಬಾಪುರಿಯ ಸ್ಥಿತಿಯ ಕಲ್ಪನೆಯು, ಲ್ಲಾಯ್ಡ ದೊರೆಗಳಿಗೆ ಹೇಗೆ ಉಂಟಾಯಿತು? ಎಂಬೀ ವಿಚಾರಗಳು ಯಾರಿಗೂ ಸೂಚಿಸಲಿಲ್ಲ ‘ರಾಜಾ’ ಎಂಬ ಶಬ್ದದ ವ್ಯಾಪ್ತಿಯು ಬಹಳವಿದೆ, ಅರಸು ಎಂಬ ಸಂಕುಚಿತ ದೃಷ್ಟಿಯಿಂದ ನಾವು ವಿಚಾರಿಸದೆ, ಅರಸನಂತೆ ಜನಾಂಗದ ಮೇಲೆ ಅಧಿಕಾರವನ್ನು ಸಂಪಾದಿಸಿದ ಪುರುಷನಾದರೂ ಅರಸನೇ. ಮಹಾತ್ಮರು ಲೋಕಕಾರ್ಯಗಳಿಂದ ಪ್ರಜಾಂತಃಕರಣವನ್ನು ಸ್ವಾಧೀನಪಡಿಸಿಕೊಂಡಿದ್ದರಿಂದಲೇ, ಅವರು ಹೇಟು, ಬೂಟು, ಚಣ್ಣ ಮುಂತಾದ ಆಂಗ್ಲ ವೇಷವನ್ನೆಲ್ಲ ಒಮ್ಮೆಲೇ ಇಳಿಸಿ, ಖಾದಿಯ ಉಡಿಗೆ-ತೊಡಿಗೆಗಳನ್ನು ಧರಿಸಲು ಸಮರ್ಥರಾದರು. ಅಧಿಕಾರಿ ಪುರುಷನು ಆಚಾರ-ವಿಚಾರಗಳನ್ನು ರೂಢಪಡಿಸಲು ಉದ್ಯುಕ್ತನಾಗುತ್ತಾನೆಂಬುದೇ ‘ರಾಜಾ ಕಾಲಸ್ಯ ಕಾರಣಂ’ ಎಂಬ ವಚನದ ಅರ್ಥವು

'ರಾಜಾ ಬೋಲೆ ಮುಲುಖ ಹಾಲೇ, ಓಡ್ಡಾ ಬೋಲೆ ದಾಡೀ ಹಾಲೇ,'' ಎಂಬ ಹಿಂದುಸ್ಥಾನೀ ಉಕ್ತಿಯಾದರೂ ಇದನ್ನೇ ಉದಾಹರಿಸುತ್ತದೆ. ಈ ಮೂಲಕವಾಗಿಯೇ ನಮ್ಮ ಶಾಸ್ತ್ರಗಳು 'ರಾಜಾ ರಾಷ್ಟ್ರಕೃತಂ ಪಾಪಂ' ಎಂದು ಹೇಳಿ, ಸಮಾಜವು ಮಾಡಿದ ಪಾಪದ ಹೊರೆಯನ್ನು, ಸಮಾಜದ ಆಚಾರ-ವಿಚಾರಗಳಿಗೆ ಕಾರಣರಾದ ರಾಜರ ಮೇಲೆ ಯಾನೆ ಅಧಿಕಾರಿ ಪುರುಷರ ಮೇಲೆ ಹೇರುತ್ತವೆ. ಪಾಪ-ಪುಣ್ಯಗಳಿಗೆ ಆಚಾರ-ವಿಚಾರಗಳೇ ಕಾರಣವಿರಲು, ಸಮಾಜದ ಆಚಾರ-ವಿಚಾರಗಳ ಒಡೆಯರಾದ ರಾಜರು ಯಾನೆ ಅಧಿಕಾರಿ ಪುರುಷರು ಸಮಾಜದ ಸಮಸ್ತ ಪಾಪಗಳಿಗೂ ಹೊಣೆಯಾಗಬೇಕಾಗಿದ್ದದ್ದು ಸಹಜವು. ಈ ವಚನದ ಮೇಲಿಂದ ರಾಜರು ಯಾನೆ ಸಮಾಜದ ಅಧಿಕಾರಿ ಪುರುಷರು ಹೇಳಿಸಿಕೊಳ್ಳುವವರು ಅಥವಾ ಹೇಳಬೇಕೆಂದು ಬಯಸುವವರು ತಮ್ಮ ವರ್ತನವನ್ನು ನಿರ್ಮಲವಾಗಿಟ್ಟು ನಡೆದುಕೊಳ್ಳಬೇಕೆಂಬುದು ಸ್ಪಷ್ಟವಿದೆ. ಅಧಿಕಾರಿ ಪುರುಷರು ಈ ಭಾವನೆಯನ್ನು ತಳೆದು, ತಮ್ಮ ಮೇಲಿರುವ ಪಾಪ-ಪುಣ್ಯಗಳ ಹೊರೆಯನ್ನು ಅರಿತುಕೊಂಡು ನಡೆಕೊಂಡರೆ, ದೇಶಕ್ಕೂ ಹಿತವಿದೆ, ಸಮಾಜಕ್ಕೂ ಹಿತವಿದೆ, ಗ್ರಾಮಕ್ಕೂ ಹಿತವಿದೆ ಸ್ವತಃ ಅಧಿಕಾರಿಗಳಿಗೂ ಹಿತವಿದೆ.

ಕಾನಡಾವೃತ್ತ.

ಮಿತಿ ಕ್ಷಯ ಸಂ॥ ಭಾದ್ರಪದ ಬ॥ ಷಷ್ಟಿ, ಸೋಮವಾರ.

ಯುದ್ಧದ ಭೀತಿ.

ಚೀನ ದೇಶದೊಳಗಿನ ಅಂತಃಕಲಹದ ಸ್ವರೂಪವನ್ನೂ, ಅಲ್ಲಿಯ ಹೋರಾಟದಲ್ಲಿ ಒಳಗೊಂಡ ತತ್ವಗಳನ್ನೂ ನಾವು ಈ ಹಿಂದೆ ವರ್ಣಿಸಿರುವೆವು. ಕೆಂಟನ್‌ದೊಳಗಿನ ರಾಷ್ಟ್ರೀಯರು ಯಾಂಗ್‌ತ್ಸೆಕ್ಯಾಂಗ ನದಿಯ ಮೇಲಿನ ಹಂಕೌ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡರೆ, ಬ್ರಿಟಿಶ ವ್ಯಾಪಾರದ ಮರ್ಮಘಾತವಾಗುವದೆಂಬುದನ್ನು ನಾವು ಹೇಳಿರುವೆವು. ಬ್ರಿಟಿಶ ಜನಾಂಗವು ವ್ಯಾಪಾರಪ್ರಧಾನ ದೇಶವಾಗಿದ್ದು, ವ್ಯಾಪಾರಕ್ಕೆ ಬಾಧೆ ತಟ್ಟುವಲ್ಲಿ ಅದನ್ನು ಪರಿಹರಿಸಲು ಆ ಜನಾಂಗವು ಯಾವಾಗಲೂ ತತ್ಪರವಿರುತ್ತದೆ. ಇದೇನು ಹೊಸದಾಗಿ ಹೇಳ ತಿಳಿಯುವ ವಿಷಯವಲ್ಲ. ಚೀನ ದೇಶದವರು ಸಾಮಾನ್ಯವಾಗಿ ಬ್ರಿಟಿಶ ವ್ಯಾಪಾರದ ಮೇಲೆಯೇ ಗುರಿಯಿಟ್ಟಿರುವರು. ಅದನ್ನೂ ನಾವು ಹೇಳಿರುವೆವು. ಇಂದಿಗೆ ಅಲ್ಲಿ ಒದಗಿದ ಪರಿಸ್ಥಿತಿಯನ್ನೂ, ಭರತಖಂಡದ ಸಂಬಂಧವನ್ನೂ ವಾಚಕರಿಗೆ ಹೇಳಬಯಸುವೆವು.

ಬ್ರಿಟಿಶರ ವ್ಯಾಪಾರವು ಗಂಡಾಂತರದಲ್ಲಿ ಸಿಲುಕಿಕೊಂಡಾಗ, ನಮ್ಮ ಭರತಖಂಡಕ್ಕೆ ಸುಖವೇನು? ದುಃಖವೇನು? ಅದರ ಗೊಡವೆ ನಮಗೇಕೆ! ಎಂದು ಅಲಕ್ಷ್ಯ ಮಾಡುವ ಕಾರಣವೇನಿಲ್ಲ. ವಿಧಿಘಟನೆಯಿಂದ ನಮ್ಮೀ ಭರತಖಂಡವು ಬ್ರಿಟಿಶರ ಸ್ವಾಧೀನವಾಗಿದೆ. ಬ್ರಿಟಿಶರ ಮರ್ಯಾದೆಯೇ ನಮ್ಮ ಮರ್ಯಾದೆ. ಬ್ರಿಟಿಶರ ನಷ್ಟವೇ ನಮ್ಮ ನಷ್ಟ. ಬ್ರಿಟಿಶರ ಲಾಭವೇ ನಮಗೆ ಲಾಭ, ಎಂಬದೊಂದು ಕಲ್ಪನೆಯು ಹಿಂದುಸ್ಥಾನದ ಅಧಿಕಾರಿಗಳಲ್ಲಿ ಉಂಟಾಗಿದೆ. ಬಸವನ ಹಿಂದೆ ಬಾಲವು ನೋಣ ಹೊಡಿಸುತ್ತ ಹೋದಂತೆ, ಹಿಂದುಸ್ಥಾನವಾದರೂ ಹೋಗಬೇಕಾಗಿಯದೆ. ಸಂತೋಷದಿಂದ ಹೋದರೆ, ಆನಂದವೇ, ಇಲ್ಲೆಂದರೆ ಹಿಂದುಸ್ಥಾನವನ್ನು ಎಳಕೊಂಡು ಹೋಗುವ ಸಾಮರ್ಥ್ಯವು ಬ್ರಿಟಿಶರಲ್ಲಿದೆ. ಆ ಸಾಮರ್ಥ್ಯವನ್ನು ಅಲ್ಲಗಳೆಯುವ ಚೈತನ್ಯವು ನಮ್ಮಲ್ಲಿಲ್ಲ. ಈ ಸ್ಥಿತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ನಾವು ಚೀನದೊಳಗಿನ ಪರಿಸ್ಥಿತಿಯನ್ನು ಸಮಾಲೋಚಿಸುವೆವು.

ಈ ಮೊದಲೇ ಹೇಳಿದಂತೆ, ಚೀನದೊಳಗಿನ ರಾಷ್ಟ್ರೋದ್ಧಾರದ ಪಕ್ಷವು ಸುಸಂಘಟಿತವಾಗಿರುವದು. ಉತ್ತರ ಪ್ರದೇಶದಲ್ಲಿ ಸನ್ಯತ್‌ಸೇನ ಮುಂತಾದವರ ರಾಷ್ಟ್ರೀಯ ಪಕ್ಷವು, ದಕ್ಷಿಣದ ಕೆಂಟನ್ ಪ್ರದೇಶದಲ್ಲಿ ಕೂಲಿಕಾರರ ಪಕ್ಷವು ಹೀಗೆ ಇವೆರಡೂ ಪಕ್ಷಗಳು ಮಧ್ಯ ಚೀನದೊಳಗಿನ ಬ್ರಿಟಿಶರ ಪಕ್ಷಪಾತಿಯಾದ ವೂಪೇಫೂರವರಿಗೆ ಬುದ್ಧಿ ಕಲಿಸಲು ಯತ್ನಿಸುತ್ತಿರುವವು. ಇತ್ತಿತ್ತ ಕೆಂಟನದೊಳಗಿನ ಕೂಲಿಕಾರರೇ ಮುಂದಾಗಿ ಸಾಗಿರುವರು. ಹಂಕೌ ಪಟ್ಟಣದ ನೆರೆಹೊರೆಯಲ್ಲಿಯೇ ಇವರು ಹೋರಾಡುತ್ತಿರುವರು. ಹಂಕೌ ಪಟ್ಟಣವು ಇಂದು-ನಾಳೆ ಕೆಂಟನ ಸರಕಾರದ ಕೈವಶವಾಗುವ ಲಕ್ಷಣಗಳು ಸ್ಪಷ್ಟವಾಗಿ ಹೊಳೆಯುತ್ತವೆ. ಈ ಪಟ್ಟಣವು ಬಿದ್ದರೆ, ಶಾಂಘಾಯದೊಳಗಿನ ಬ್ರಿಟಿಶರೂ, ಬ್ರಿಟಿಶರ ಪಕ್ಷಪಾತಿಯಾದ ಚೀನ ಸಾವುಕಾರರೂ ಗಂಟುಮೂಟೆ ಕಟ್ಟಿಕೊಂಡು ಹೊರಬೀಳುವದೇ! ಇಂಥ ಸಂಕಟ ಸಮಯದಲ್ಲಿ ಬ್ರಿಟಿಶ ರಾಜಕಾರಣಧುರಂಧರರು ಚೀನದೊಳಗಿನ ಬ್ರಿಟಿಶ ವರ್ತಕರಿಗೆ ನೆರವಾಗಿ ಕಾಯಬೇಕೆಂದು ಹೂಲಿ ಎದ್ದಿದೆ. ಹಂಕೌ ಪಟ್ಟಣವು ಚೀನಿಯರ ವಶವಾದರೆ, ಬ್ರಿಟಿಶ ಪ್ರಧಾನ ಮಂಡಳವು ಹಿಂದುಸ್ಥಾನದ ಸೈನ್ಯವನ್ನು ಶಾಂಘಾಯಕ್ಕೆ ಕಳಿಸಿ, ಅಲ್ಲಿಯ ದೇಶೋದ್ಧಾರಕರನ್ನು ದಬ್ಬಲೆತ್ನಿಸುವದು. ಹಂಕೌ ಶಹರದ ಮಹತ್ವವು ವಿಶೇಷವಿದೆ. ಅದೊಂದು ಕೈವಶವಾದರೆ, ಕೆಂಟನ್ ಸರಕಾರವೂ, ಉತ್ತರ ಚೀನದೊಳಗಿನ ರಾಷ್ಟ್ರೀಯರೂ, ಐಕ್ಯಮತ್ಯದಿಂದ ಶತ್ರುಗಳಿಗಿದಿರಾಗಲು ಅನುಕೂಲವಿದೆ. ಹಂಕೌದಿಂದ ಚೀನದ ರಾಜಧಾನಿಯಾದ ಪೇಕೀನ ವರೆಗೆ ನೆಟ್ಟಗೆ ಉಗಿಬಂಡಿಯಿದೆ. ಹಂಕೌ ಪಟ್ಟಣವು ಯಾಂಗತ್ಸೀ ನದಿಯ ಮೇಲಿದ್ದು, ಅಲ್ಲಿಯತನಕ ದೊಡ್ಡ ದೊಡ್ಡ ಉಗಿಹಡಗಗಳೂ ಹೋಗುತ್ತವೆ. ಪರದೇಶ ವರ್ತಕರಿಗೆ ಹಂಕೌ ಪಟ್ಟಣವು ತಮ್ಮ ಸ್ವಾಧೀನದಲ್ಲಿರುವ ವರೆಗೆ ತಮ್ಮಲ್ಲಿಯ ಸರಕುಗಳನ್ನು ನದಿಗುಂಟ ನೆಟ್ಟಗೆ ತರಲು ಇಂಬಿರುವದು. ಹಂಕೌ ಪಟ್ಟಣವು ಕೈತಪ್ಪಿ ಹೋದರೆ ಮಾತ್ರ, ಮುಂದೆ ಗತಿ ಇಲ್ಲ. ಯಾಂಗತ್ಸೀ ನದಿಯ ಒಡೆತನವೂ ಚೀನಿಯರ ವಶವಾಗುವದು. ವಿದ್ಯಾರ್ಥಿ ಪಕ್ಷದವರಂತೂ ಈ ನದಿಯನ್ನು ಸ್ವಾಧೀನಪಡಿಸಿಕೊಳ್ಳಲು ಹಾತೊರೆಯುತ್ತಿರುವರು. ಸದ್ಯಕ್ಕೆ ವಿದ್ಯಾರ್ಥಿ ಸಂಘದವರು ಯಾಂಗತ್ಸೀನದಿಯಲ್ಲಿ ಸುರಂಗಗಳನ್ನು ಹಾಕಿ, ವೂಪೇಫೂರವರ ಉಗಿಹಡಗಗಳನ್ನು ನಾಶಪಡಿಸಿದರು. ವೂಪೇಫೂರವರಿಗೆ ಸ್ವಂತ ಮನೆಯಲ್ಲಿಯೇ ಹೊಕ್ಕಿ ಕೂಡದಂತಾಯಿತು! ಕೈಗೆ ಸಿಕ್ಕ ವಿದ್ಯಾರ್ಥಿಗಳ ಹೆಡಮುರಿಗೆ ಕಟ್ಟಿ ನಿರ್ದಯಮನಸ್ಕರಾಗಿ ಅವರು ಗಲ್ಲಿಗೇರಿಸಿ ಬಿಟ್ಟರು. ವಿದ್ಯಾರ್ಥಿಗಳ ತಿಳಿಗೇಡಿತನದ ಮೂಲಕ ವೂಪೇಫೂರವರಿಗೆ ತಮ್ಮ ಪ್ರದೇಶವನ್ನು ಬಿಟ್ಟು ದೂರ ಹೋಗಲಿಕ್ಕೂ ಮಾರ್ಗವಿಲ್ಲ, ಆದಷ್ಟು ಶಾಂಘಾಯದ ಸನ್ನಿಧಿಯಲ್ಲಿಯೇ ಇದ್ದು ಹೋರಾಡಬೇಕಾಗುತ್ತದೆ.

ಕ್ರಮವಾಗಿ ವೂಪೇಫೂರವರ ಬಲವು ಕಳೆಗುಂದುತ್ತ ನಡೆದಿದೆ. ಕೆಂಟನ್ ಹಾಗು ಇತರ ರಾಷ್ಟ್ರೀಯ ಚೀನಿಯರ ಪಕ್ಷವು ದಿನೇ ದಿನೇ ದೃಢವಾಗುತ್ತ ನಡೆದಿದೆ. ಕೆಂಟನ್‌ದೊಳಗಿನ ಕೂಲಿಕಾರರಂತೂ ಅತ್ಯಂತ ಸಭ್ಯತನದಿಂದ ನಡೆಯುತ್ತಿರುವರು. ಹಂಕೌ ಪಟ್ಟಣವು ನಮ್ಮ ಮುಂಬಾಪುರಿಯಂತೆ ದೊಡ್ಡದಿದ್ದು, ೧೦ ೧೨ ಲಕ್ಷ ಜನವಸತಿ ಇದೆ. ಈ ಪಟ್ಟಣದಲ್ಲಿ ಕೆಂಟನ್‌ದೊಳಗಿನ ಕೆಲವು ಸೈನಿಕರು ಹೋದಾಗ ಯಾವದೇ ಪ್ರಕಾರದಿಂದ ಯಾರಿಗೂ ಸುಲಿಯದೆ ಸಮಾಧಾನದಿಂದಲೂ, ಸಭ್ಯತನದಿಂದಲೂ ತಮಗೆ ಅವಶ್ಯವುಳ್ಳ ಸರಕುಗಳನ್ನು ಕೊಂಡುಕೊಂಡರಾಗಿ ತಿಳಿಯುತ್ತದೆ. ಸದ್ವರ್ತನದಿಂದ ಅವರು ಲೋಕಾದರಕ್ಕೆ ಪಾತ್ರರಾದರು. ಕೂಲಿಕಾರ ಪಕ್ಷಕ್ಕೆ ಸೇರಿದರೆ ನಷ್ಟವಿಲ್ಲವೆಂದೂ ಪ್ರಜೆಗಳ ಅಭಿಮತವಾಗುತ್ತ ನಡೆದಿದೆ. ಈ ಪ್ರಕಾರ ಕೆಂಟನ್‌ದೊಳಗಿನ ಸರಕಾರವು ಹೋದ ಹೋದಲ್ಲಿ ಸ್ಥಳಿಕ ಪ್ರಜೆಗಳ ಸಹಾನುಭೂತಿಯನ್ನು ಗಳಿಸುತ್ತಿದೆ. ಹೀಗೆ ಕೂಲಿಕಾರ ಪಕ್ಷವು ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿ ಹೊಂದುತ್ತ ನಡೆದಂತೆ, ವೂಪೇಫೂರವರ ಬ್ರಿಟಿಶ ಪಕ್ಷವು ಕೃಷ್ಣಪಕ್ಷದ ಚಂದ್ರನಂತೆ ಕ್ಷೀಣವಾಗುತ್ತ ನಡೆದಿದೆ. ಇಂಥ ಸ್ಥಿತಿಯಲ್ಲಿ ಬ್ರಿಟಿಶ ವರ್ತಕರು ಸ್ವದೇಶ ಬಾಂಧವರಾದ ಬ್ರಿಟಿಶ ಮುತ್ಸದ್ದಿಗಳ ಪ್ರಾರ್ಥನೆ ಮಾಡುವದೂ, ಅವರು ನೆರವಾಗುವದೂ ಸಹಜವೇ! ಆದರೆ, ಬ್ರಿಟಿಶ ವರ್ತಕರ ವ್ಯಾಪಾರ ರಕ್ಷಣೆಗಾಗಿ

ಹಿಂದುಸ್ಥಾನದೊಳಗಿನ ಸೈನ್ಯವನ್ನು ಕಳಿಸುವದು ಮಾತ್ರ ಅಸ್ವಾಭಾವಿಕವು. ಸ್ವಾತಂತ್ರ್ಯಶೀಲರಾಗಿ, ಸ್ವಾತಂತ್ರ್ಯಕಾಂಕ್ಷಿಗಳಾಗಿ, ಸ್ವಾತಂತ್ರ್ಯಸಂಪಾದನೆಗಾಗಿ ಸ್ವದೇಶದಲ್ಲಿ ಭಾರತೀಯರು ಬಡದಾಡುತ್ತಿರುವಾಗ, ಅದೇ ಹಿಂದುಸ್ಥಾನ ದೇಶದೊಳಗಿನ ಸೈನ್ಯವು ಚೀನದೊಳಗಿನ ಸ್ವಾತಂತ್ರ್ಯಸಂಪಾದನೆಯನ್ನು ದಬ್ಬಹೋಗುವದೊಂದು ವಿಧಿಘಟನೆಯು:

ಪಂಡಿತ ಮೋತಿಲಾಲ ನೆಹರೂರವರು ಹಿಂದೀ ಸೈನ್ಯವನ್ನು ಚೀನ ದೇಶಕ್ಕೆ ಕಳಿಸಲಾಗದೆಂದು, ಬ್ರಿಟಿಶ ದೇಶದೊಳಗಿನ ಕೂಲಿಕಾರ ಪಕ್ಷಕ್ಕೆ ತಿಳಿಸಿರುವರು. ಆದರೆ, ಈ ಮುಂಜಾಗ್ರತೆಗೆ ಕೇಳುವವರಾರು? ಕುರಿಗೆ ಕೇಳಿ ಸಂಬಾರವೇ! ಎಂಬ ಉಕ್ತಿಯಂತೆ ನಮ್ಮೀ ಭಾರತವಾಸಿಯರ ಗತಿಯಾಗಿದೆ. ಹಿಂದುಸ್ಥಾನ ದೇಶವು ಸ್ವಾತಂತ್ರ್ಯಸಂಪಾದನೆಗಾಗಿ ಹಗಲಿರುಳು ಉಪಾಯಯೋಜನೆ ಮಾಡುತ್ತದೆಂದು ಬರೇ ಲೋಕಪ್ರವಾದವೇ ಹೊರತು, ಪ್ರತ್ಯಕ್ಷವಾಗಿ ಭಾರತವಾಸಿಯರು ಸ್ವಾತಂತ್ರ್ಯಕಾಂಕ್ಷಿಗಳನ್ನು ದಬ್ಬಲು, ಯಾವಾಗಲೂ ತಯಾರಾಗಿ ಹೋಗುತ್ತಾರೆ. ಈ ನೋಟವು ವಿಚಾರರವು ತೀರುವಲ್ಲ. ಆದರೆ, ನಾವು ಮಾಡುವದೇನು? ಪಂಡಿತ ಮೋತಿಲಾಲರವರು ಬ್ರಿಟಿಶ ಕೂಲಿಕಾರ ಪಕ್ಷಕ್ಕೆ ತಂತಿಮಾಡಿ, ತಮ್ಮ ನಿಷೇಧವನ್ನು ಜಾಹೀರಪಡಿಸಿರುವರು. ಯುದ್ಧದ ಭೀತಿಯು ಈ ನಿಷೇಧದಿಂದ ದೂರವಾಗುವ ಲಕ್ಷಣಗಳಿಲ್ಲ. ನಮ್ಮ ಸೈನಿಕರು ಸಮರಾಂಗಣದಲ್ಲಿ ಸೇರಿದರೆ, ಅವರಿಗಾಗಿ ನಾವು ಸಮಸ್ತ ಪ್ರಕಾರದ ಖರ್ಚನ್ನು ಕೊಡಲಿಕ್ಕೆ ಸಿದ್ಧತಯಾರಾಗಬೇಕು. ನಮ್ಮ ತಯಾರಿ ಇಲ್ಲದಿದ್ದರೂ, ನಮಗೆ ಬುದ್ಧಿಯಿಂದ ಆ ಕುರಿತು ತೆರಹಚ್ಚುವ ಧೈರ್ಯವು ಬ್ರಿಟಿಶ ಮುತ್ಸದ್ದಿಗಳಲ್ಲಿರುವದು. ಈ ಪ್ರಕಾರದ ಸ್ಥಿತಿಯು ಸದ್ಯದಲ್ಲಿ ಉಂಟಾಗಿರುವದು. ಕೆಲವು ಶರ್ತುಗಳ ಮೇಲೆ ಸರಕುಗಳನ್ನು ಆಮದಾಗಗೊಡಲು, ಕೆಂಟನ್ ಸರಕಾರವು ಒಪ್ಪಿಕೊಂಡಿರುವದಾಗಿ ಒಂದು ಸುದ್ದಿಯು ಹಬ್ಬಿದೆ. ಈ ಕರಾರುಗಳನ್ನೆಯ ಬ್ರಿಟಿಶ ಸರಕುಗಳ ಮೇಲೆ ಕೆಂಟನ್ ಸರಕಾರವು ಆಮದು ಕರಗಳನ್ನು ಹೇರಲಿಕ್ಕಿರುವದಾಗಿಯೂ ತಿಳಿಯುತ್ತದೆ. ಸಂಧಾನವಾದರೆ, ಎಲ್ಲರಿಗೂ ಹಿತವೇ. ಆದರೆ, ಸಾಪೋಪಚಾರದ ಸುದ್ದಿಯು ಎಷ್ಟರ ಮಟ್ಟಿಗೆ ಸಾಧಾರವಿರುವದೆಂದು ತಿಳಿಯಲಿಲ್ಲ.

ಸ್ಫುಟ ಸೂಚನೆಗಳು.

೧ ಕುಮಾರಿ ಮ್ಯುರೀಲಾ ಲೇಸ್ಟರ ಎಂಬ ಇಜಿಪ್ತ ದೇಶದ ವಿದ್ಯಾಧಿಕಾರಿಯೊಬ್ಬಳು ಭರತಭೂಮಿಯನ್ನು ಸಂಚರಿಸಿ, ಮೊನ್ನೆ ಶನಿವಾರಕ್ಕೆ ಇಜಿಪ್ತಕ್ಕೆ ಮರಳಿದಳು. ಮರಳುವ ಮುಂಚೆ ಕುಮಾರಿಯವಳು ಮಹಾತ್ಮರ ಸಾಬರಮತಿಯ ಆಶ್ರಮದಲ್ಲಿದ್ದಳು. ಮಹಾತ್ಮರೊಡನೆ ಅನೇಕ ವಿಷಯಗಳ ಮೇಲೆ ಮ್ಯುರೀಲಾಳವಳ ಸಂಭಾಷಣವಾಯಿತು. ಸಾಬರಮತಿ ಆಶ್ರಮದಲ್ಲಿದ್ದಾಗ ವಿದುಷಿಯು ಖಾದಿಯನ್ನು ಧರಿಸಿದ್ದಳು; ಮುಂಜಾನೆ ನಾಲ್ಕು ಘಂಟೆಗೇ ಎದ್ದು ಅಡಿಗೆಯನ್ನೂ ಮಾಡಿದಳು. ಅಹಮ್ಮದಾಬಾದದೊಳಗಿನ ವರ್ತಮಾನ ಪತ್ರಿಕೆಗಳ ಪ್ರತಿನಿಧಿಯು ಭೆಟ್ಟಿಯಾದಾಗ ಅವಳು ನುಡಿದದ್ದೇನಂದರೆ:— ಗಾಂಧಿಯವರಿಗೆ ಸ್ವದೇಶದಲ್ಲಿಯೂ, ಪರದೇಶಗಳಲ್ಲಿಯೂ ಸಾಧುವೆಂದು ಸಂಬೋಧಿಸುತ್ತಾರೆ. ಆ ಹೇಳಿಕೆಯು ಸಂಪೂರ್ಣವಾಗಿ ಸಾರ್ಥವಿದೆ. ಆದರೂ, ಗಾಂಧಿಯವರು ಸಾಮಾನ್ಯ ಮಾನವರಂತಿರುವರು. ಇದೇ ಮಾನವ ಕೋಟಿಯನ್ನೇ ಅವರು ಪ್ರೀತಿಸುತ್ತಾರೆ. ಗಾಂಧಿಯವರ ವಿನೋದ ನೋಡಿಯಂತೂ ಅವಳು ಬೆರಗಾದಳಂತೆ! ಮ್ಯುರೀಲಾಳವಳಿಗೆ ಸಮಯವಿದ್ದರೆ, ಹಿಂದು ವರುಷದ ವರೆಗೆ ಮಹಾತ್ಮರ ಸಾನ್ನಿಧ್ಯದಲ್ಲಿದ್ದು ಅವರು ಹೇಳುವ ಪಾಠಗಳನ್ನೆಲ್ಲ ಪ್ರತ್ಯಕ್ಷ ಕಲಿಯುತ್ತಿದ್ದಳು.

ಆಶ್ರಮದಲ್ಲೆಲ್ಲ ಎಲ್ಲಿ ನೋಡಿದಲ್ಲಿ ಚಿತ್ತವೇಧಕವಾದ ಸುಖವೇ ಅವಳಿಗೆ ಕಂಡುಬಂತು. ಎಲ್ಲರೂ ನಗೆಮೋರೆಯವರೇ. ಹೆಂಗಸರು ಹಾಡುತ್ತಿದ್ದರು; ಚಿಕ್ಕ ಚಿಕ್ಕ ಬಾಲಕರು ಸಮಾಧಾನದಿಂದ ನಡಕೊಳ್ಳುತ್ತಿದ್ದರು. ಸಾಬರಮತಿಯ ಆಶ್ರಮದ ಕಥೆ ಹೇಳಿದ ಬಳಿಕ, ಕುಮಾರಿ ಮ್ಯುರೀಲಾಳವಳು ಹಿಂದುಸ್ಥಾನದಲ್ಲಿ ತನಗೆ ದೊರೆತ ಆತಿಥ್ಯವನ್ನು ಬಣ್ಣಿಸಿ, ಸಂತೋಷವನ್ನು ಪ್ರಕಟಿಸಿದಳು.

---

೨. ಕುಮಾರಿ ಮ್ಯುರೀಲಾಳವಳು ಇಜಿಪ್ತದೊಳಗಿನ ದೊಡ್ಡ ವಿದ್ಯಾಧಿಕಾರಿಯಿರುವಳೆಂದು, ನಾವು ಮೊದಲೇ ಹೇಳಿರುವೆವು. ಇದರಿಂದ ಅವಳಿಗೆ ಭಿನ್ನ ಭಿನ್ನ ಶಿಕ್ಷಣಕ್ರಮದಿಂದ ವಿದ್ಯಾರ್ಥಿಗಳಲ್ಲುಂಟಾಗುವ ಅವಸ್ಥಾಂತರಗಳನ್ನು ಪರೀಕ್ಷಿಸುವ ಸಾಮರ್ಥ್ಯವಿದೆ. ಇಲ್ಲಿಯ ಶಿಕ್ಷಣಕ್ರಮವನ್ನು ನೋಡಿ ಅವಳು ಪ್ರದರ್ಶಿಸಿದ ವಿಚಾರಗಳು ಮನನೀಯವಿವೆ: "ಹಿಂದುಸ್ಥಾನದೊಳಗಿನ ಶಿಕ್ಷಣಕ್ರಮ ನೋಡಿ ನಾನು ನಿರಾಶಳಾದೆ. ಹುಡುಗರಿಗೆ ಸಂಸ್ಕಾರಕ್ಕಾಗಿ ಶಿಕ್ಷಣ ಕೊಡುವದಿಲ್ಲ; ಸುಸಂಸ್ಕಾರವೆಂದು ಹುಡುಗರು ಶಿಕ್ಷಣವನ್ನು ಪಡೆಕೊಳ್ಳುವದಿಲ್ಲ. ಇಲ್ಲಿಯ ಶಿಕ್ಷಣದ ಧ್ಯೇಯದ ಸಾಧ್ಯವು ಒಂದೇ! ಅದ್ಯಾವದೆಂದರೆ, ಸರಕಾರಿ ಸೇವೆ. ಇಂಥ ಶಿಕ್ಷಣದಿಂದ ಸುಶಿಕ್ಷಿತರು ದಿನೇ ದಿನೇ ಹೆಚ್ಚೆಚ್ಚು ನಿರುದ್ಯೋಗಿಗಳಾಗುತ್ತಾರೆ. ಇತರರು ನಿರುದ್ಯೋಗಿಗಳಾದ್ದರಿಂದಲೇ ಸಮಾಜಗಳೊಳಗೆ ಮತ್ಸರಬುದ್ಧಿಯುಂಟಾಗಿ ದೇಶದಲ್ಲಿ ಸಾಮಾಜಿಕ ಕಲಹಗಳಾಗಲು ಕಾರಣ. ಎಲ್ಲರೂ ಸರಕಾರದ ಅಳ್ಕಾಗಲು ಹಾರೈಸುತ್ತಿರುವಾಗ, ಅನೇಕರಿಗೆ ನಿರಾಶೆಯಾಗುವದು ಸಹಜವಿದೆ. ಹೀಗೆ ನಿರಾಶರಾದವರು ತಮ್ಮ ದುರ್ದೈವಕ್ಕಾಗಿ ಬೇರೆ ಸಮಾಜವನ್ನು ದೂರುತ್ತಾರೆ. ಸರಕಾರಕ್ಕಂತೂ ಇದೊಂದು ಚತುರಂಗದ ಆಟವಾಗುತ್ತದೆ. ಚತುರಂಗದಲ್ಲಿ ಪೇದೆಗಳನ್ನು ಸ್ಥಾನಾಂತರಮಾಡಿ, ಮನೋರಂಜನ ಮಾಡಿಕೊಳ್ಳುವಂತೆ ಸರಕಾರವು ಭಿನ್ನ ಭಿನ್ನ ಸಮಾಜಗಳೊಡನೆ ನಡಕೊಳ್ಳುತ್ತದೆ." ಮ್ಯುರೀಲಾಳವಳು ಶಿಕ್ಷಣಕ್ರಮದ ಪರಿಚಯದಿಂದ ಉದ್ಗರಿಸಿದ ಉದ್ಗಾರಗಳಿವು. ಸರಕಾರವು, ಸ್ವತಃ ಶಿಕ್ಷಣಕ್ರಮದಿಂದಲೇ ಸಾಮಾಜಿಕ ಐಕ್ಯಭಂಗದ ಬಿತ್ತಿಗೆ ಮಾಡಿ, ಮೇಲೆ ಸಾಮಾಜಿಕ ಐಕ್ಯಭಂಗವಾಗದಂತೆ ಕಾನೂನುಗಳನ್ನು ನಿರ್ಮಿಸುತ್ತದೆ; ಪ್ರಜೆಗಳ ಸಹಕಾರ ಬೇಡುತ್ತದೆ; ತಾನು ದೊಡ್ಡ ಸಾಮಾಜಿಕ ಐಕ್ಯರಕ್ಷಣೆಯ ಮೂರ್ತಿ ಎಂದು ಸಾರುತ್ತದೆ. ಇದೆಲ್ಲ ವೇಷವಂತೂ, ಬಿತ್ತಿದ್ದನ್ನು ಬೆಳೆಕೋ ಎಂಬ ನ್ಯಾಯದಂತೆ ಪ್ರಚಲಿತ ಸಾಮಾಜಿಕ ಐಕ್ಯಭಂಗವು ಶಿಕ್ಷಣಬೀಜದ ಸಹಜ ಫಲವೆಂದೂ ಹೊಳೆಯುವ ಹಾಗಿದೆ. ಹೀಗೆ ಪರಿಸ್ಥಿತಿ ಇದ್ದಾಗ, ಮಹಾತ್ಮರು ಪ್ರಚಲಿತ ಸರಕಾರಿ ವಿದ್ಯಾಮಂದಿರಗಳನ್ನು ಥಟ್ಟನೇ ತೊರೆದು ಹೊರ ಬರಬೇಕೆಂದು ವಿದ್ಯಾರ್ಥಿಗಳಿಗೆ ಉಪದೇಶಿಸಿದ್ದು ನ್ಯಾಯವಲ್ಲವೇ? ಶಿಕ್ಷಣ ಪಡೆದು ದೇಶದಲ್ಲಿ ಬಡಿದಾಡಿಕೊಳ್ಳುವದಕ್ಕಿಂತ ಅಜ್ಞಾನಿಯಾಗಿ ಸುಖಸಮಾಧಾನದಿಂದಲೂ, ಸಮಾಜ ಬಾಂಧವರೊಡನೆ ಸ್ನೇಹಭಾವದಿಂದಲೂ ಬಾಳ್ವೆ ಮಾಡಿಕೊಂಡುಳಿಯುವದು ಶ್ರೇಯಸ್ಕರವಲ್ಲವೇ? ಮ್ಯುರೀಲಾಳವಳು ಶಿಕ್ಷಣಕ್ರಮದ ಮರ್ಮವನ್ನರುಹಿ ಅರಸರ ನಿಜರೂಪವನ್ನು ಪ್ರಕಟಿಸಿರುವಳು. ಇಜಿಪ್ತ ದೇಶದಲ್ಲಿಯೂ ಅರಸರ ಕಾರಭಾರದ ಮರ್ಮವು ಪ್ರಸಾರ ಹೊಂದುವದು. ಹಿಂದುಸ್ಥಾನ ದೇಶದಲ್ಲಿ ಅರಸರ ರಾಜ್ಯಭಾರ ನಡೆಯುವ ವರೆಗೆ ಸಾಮಾಜಿಕ ಐಕ್ಯರಕ್ಷಣವಾಗುತ್ತದೆಂಬ ವಚನವು ವಸ್ತುಸ್ಥಿತಿಯ ವಿಪರ್ಯಾಸವೆಂದು ಇನ್ನಾದರೂ ಪ್ರಜೆಗಳು ಮನಗಾಣಲಿ.

---

೩. ಮ್ಯುರೀಲಾಳವಳು ತನ್ನ ಧರ್ಮಬಾಂಧವರಿಗೆ ಮಾಡಿದ ಉಪದೇಶವನ್ನು ನಾವು ಹೇಳುವದುಚಿತವು. ವಾದ್ಯಘೋಷದ ಸಿಡುಗಿನಿಂದ ಮುಸಲ್ಮಾನ ಬಾಂಧವರ ಈಶಪೂಜನೆಗೆ ದೊಡ್ಡದೊಂದು ಆತಂಕವಾಗುತ್ತದೆಂದು ಭರತಖಂಡದಲ್ಲೆಲ್ಲ ಕೋಲಾಹಲವೆದ್ದಿದೆ. ವಾದ್ಯಘೋಷವನ್ನು ಕೈಕೊಂಡು ಮುಸಲ್ಮಾನ ಬಾಂಧವರ ಚಿತ್ತಪ್ರಕೋಪವಾಗದಂತೆ ಕ್ರಿ. ಶ್ರೀ. ಕೋಡಿನೊಳಗಿನ ಕಲಮುಗಳ ಪ್ರಯೋಗವಾಗುತ್ತದೆ. ಇಂಥ ಸಮಯದಲ್ಲಿ ಮ್ಯುರೀಲಾಳವರ ಹೇಳಿಕೆಗೆ ವಿಶೇಷ ಮನ್ನಣೆಯನ್ನೀಯಬೇಕಾಗಿದೆ "ವಾದ್ಯಘೋಷದ ಮರುಳು ಬರೇ ಮೂರ್ಖತನದ್ದು ಕುರಾಣ ಗ್ರಂಥದಲ್ಲಿ ಈ ವಿಷಯ ಏನೂ ಆಜ್ಞೆಗಳಿಲ್ಲ. ಇಜಿಪ್ತದಲ್ಲಿ ಇಂಥ ಮೂರ್ಖ ಚೇಷ್ಟೆಗಳಿಲ್ಲ. ಮುಸಲ್ಮಾನರು ಕ್ರೈಸ್ತರೊಡನೆ ಬಂಧುಭಾವದಿಂದ ನಡಕೊಳ್ಳುತ್ತಿರುವರು. ಮುಸಲ್ಮಾನರ ಜನಸಂಖ್ಯೆಯೇ ವಿಪರೀತವಿದೆ. ಅವರೂ, ಕ್ರೈಸ್ತರೊಡನೆ ಜಗಳಾಡಹತ್ತಿದರೆ, ಮೂರನೇಯವನು ತಮ್ಮಿಬ್ಬರ ಮೇಲೆ ದಾಳಿಮಾಡಿ ದಣಿಸಬಹುದೆಂದು ತಿಳಿಕೊಂಡು ಇಜಿಪ್ತದೊಳಗಿನ ಮುಸಲ್ಮಾನರೂ, ಕ್ರೈಸ್ತರೂ ಬಂಧುಭಾವದಿಂದಿರುವರಂತೆ" ಇಷ್ಟು ಸಾಮಾನ್ಯ ಬುದ್ಧಿಯನ್ನು ಇಲ್ಲಿಯ ಸಮಾಜದವರು ತಳೆಯದಿದ್ದರೆ, ನಮಗೆ ಸ್ವಾತಂತ್ರ್ಯವು ಪ್ರಾಪ್ತವಾಗದೆಂದು ಮ್ಯುರೀಲಾಳವಳು ಉದ್ಗರಿಸಿದ್ದು ಯಥಾರ್ಥವಿದೆ. ಹಿಂದೂ-ಮುಸಲ್ಮಾನರು ವಿವೇಕಶೀಲರಾಗಿ ನಡಕೊಳ್ಳಬೇಕೆಂಬದೊಂದು ಪ್ರಾರ್ಥನೆ ಇದೆ.

---

೪. ವಿಜಾಪೂರ ಜಿಲ್ಹೆಯ ಗುಳೇದಗುಡ್ಡದೊಳಗೆ ಒಂದು ಬೆಂಚು ಕೋರ್ಟಿದೆ. ಆ ಬೆಂಚು ಕೋರ್ಟಿನಲ್ಲಿ ನಡೆದ ಒಂದು ಹಕೀಕತನ್ನು ಪ್ರೇಕ್ಷಕರೊಬ್ಬರು 'ಕರ್ನಾಟಕ ವೈಭವ' ಪತ್ರಿಕೆಯಲ್ಲಿ ಬಣ್ಣಿಸಿರುವರು. ಬೆಂಚು ಕೋರ್ಟುಗಳೊಳಗಿನ ಮರ್ಕಟ ಚೇಷ್ಟೆ

ಗಳ ಅದೊಂದು ಮಾದರಿಯಿದೆ. ಗುರುಸಂಗಪ್ಪಾ ಜೀರ ಎಂಬೊಬ್ಬ ಬಡವನ ಮನೆಯಲ್ಲಿ ಬಲಾತ್ಕಾರದಿಂದ ಪ್ರವೇಶ ಮಾಡಿದ ಬಗ್ಗೆ ಫಿರ್ಯಾದಿಯಿತ್ತು. ಗುರುಸಂಗಪ್ಪನು ತನ್ನ ಸಾಕ್ಷಿಗಾರರನ್ನು ವಿಚಾರ ಸಮಯ ಕರಕೊಂಡು ಬಂದಿದ್ದನು. ಆ ದಿನ ಆತನ ತರ್ಫಿನಿಂದ ಸಾಕ್ಷಿಗಾರರ ವಿಚಾರವಾಯಿತು. ಆರೋಪಿಗಳು ವಕೀಲರನ್ನು ತಂದಿದ್ದಿಲ್ಲ. ಸಾಕ್ಷಿಗಾರರಿಗೆ ಮಾರನೇ ದಿನ ಕೋರ್ಟಿಗೆ ಹಾಜರಾಗಲು ಹುಕುಮೂ ಆಗಿದ್ದಿಲ್ಲ. ಅದರಿಂದ ಅವರೆಲ್ಲರೂ ತಮ್ಮ ತಮ್ಮ ಊರುಗಳಿಗೆ ಹೊರಟು ಹೋಗಿದ್ದರು. ಮಾರನೇ ದಿನ ಆರೋಪಿ ವಕೀಲರು ಅತ್ತ ಸವಾಲುಗಳಿಗಾಗಿ ಸಾಕ್ಷಿಗಾರರನ್ನು ಕರೆದಾಗ ಸಾಕ್ಷಿಗಾರರು ಹಾಜರಿದ್ದಿಲ್ಲವೆಂದು, ಜಿಂಟು ಕೋರ್ಟಿನ ನ್ಯಾಯಮೂರ್ತಿಗಳು ನಾರಂಟು ಹೊರಡಿಸಿ, ಸಾಕ್ಷಿಗಾರರನ್ನು ಹಿಡತಂದರು. ಅಧಿಕಾರವಿಲ್ಲದೆ ನಾರಂಟು ಹೊರಡಿಸಿದರೆಂದು ಮೊರಿಕೊಂಡು ಖಟ್ಲೆಯನ್ನೇ ಸ್ಥಗಿತ ಮಾಡಲು ತಾವು ಉಪಾಯ ಮಾಡುವೆವಾಗಿಯೂ ಅಲ್ಲಿಯ ತನಕ ವ್ಯಾದೆ ಕೊಡಬೇಕಾಗಿಯೂ ಫಿರ್ಯಾದಿಯ ವಕೀಲರು ಬೇಡಿಕೊಂಡರು. ಅದಕ್ಕೆ ಕಿವಿಗೊಡದೆ, ಖಟ್ಲೆಯ ವಿಚಾರವು ಮುಂದರಿಸಲ್ಪಟ್ಟಿತು. ಆರೋಪಿಗಳ ವಕೀಲರು ೩-೪ ಪ್ರಶ್ನೆಗಳನ್ನು ಕೂಡಿಸಿ ಪಿರ್ಯಾದಿ ಸಾಕ್ಷಿಗಾರರಿಗೆ ಕೇಳುತ್ತಿದ್ದರು. ಹಾಗೆ ಕೇಳಬರುವದಿಲ್ಲೆಂದು ಫಿರ್ಯಾದಿಯ ವಕೀಲರು ಮೊರಿಕೊಂಡರೆ, "ನೀವು ಹೀಗೆ ಆತಂಕ ಮಾಡಬಾರದು. ಬೇಕಾದರೆ ಮರುಸವಾಲಿನಲ್ಲಿ ಈ ಕುರಿತು ಖುಲಾಸೆ ಮಾಡಿಕೊಳ್ಳಬಹುದು," ಎಂದು ಜಿಂಟು ಕೋರ್ಟಿನ ಹುಕುಮಾಯಿತು. "ಮರುಸವಾಲಿನಲ್ಲಿ ಹೀಗೆ ಖುಲಾಸೆ ಮಾಡಿಕೊಳ್ಳಲು ಬರುವದಿಲ್ಲ; ಆರೋಪಿ ವಕೀಲರಿಗೆ ಹೀಗೆ ಕೇಳಿಕೊಳ್ಳಲು ಅಪ್ಪಣೆಯಾಗುತ್ತಿದ್ದರೆ, ನನ್ನ ಆಕ್ಷೇಪವನ್ನಾದರೂ ಕೋರ್ಟಿನವರು ಬರಕೊಳ್ಳಬೇಕು," ಎಂದು ಫಿರ್ಯಾದಿಯ ವಕೀಲರು ವಿನಂತಿಸಿಕೊಂಡದ್ದಕ್ಕೆ ಜಿಂಟ ಮೆ.ಜಿಸ್ಟ್ರೇಟರು ಕೋಪಿಷ್ಟರಾಗಿ "ಹೀಗೆ ಆಕ್ಷೇಪ ತೆಗೆದರೆ, ಸನದನ್ನೇ ರದ್ದು ಮಾಡುತ್ತೇನೆ" ಎಂದು ನುಡಿದರು. ಇಷ್ಟಾದ ಬಳಿಕ ಖಟ್ಲೆಯ ವಿಚಾರವು ಜಿಂಟ ಕೋರ್ಟಿನ ಕೈತಪ್ಪಿ ಹೋಯಿತೆಂದು ಮತ್ತೆ ಹೇಳಬೇಕೇನು? ಈ ಕಥೆಯು ಮೇಲಿಂದ ಜಿಂಟು ಕೋರ್ಟುಗಳಲ್ಲಿ ನಡೆಯುವ ನಿರಂಕುಶ ಕಾರಭಾರದ ಸ್ವರೂಪವೂ, ಬಡವರ ಕಷ್ಟಗಳೂ ಎಲ್ಲರಿಗೂ ಹೊಳೆಯುವ ಹಾಗಿದೆ. ಇದಕ್ಕೂ ಹೆಚ್ಚಿಗೆ ಜಿಂಟ ಕೋರ್ಟಿನ ನ್ಯಾಯವನ್ನು ಬಣ್ಣಿಸಲಶಕ್ಯವು.

ಸಾಭಾರ ಸ್ವೀಕಾರ.

ಶಕ್ತಿ—ಹೊಸ ಕನ್ನಡ ಮಾಸಪತ್ರಿಕೆಯು, ಮೊದಲನೇ ಸಂಚಿಕೆ. ಸಂಪಾದಕ ಶ್ರೀ ಎಮ್. ಗೋವರ್ಧನರಾವ ಬಿಜಾರ ಪ್ರಕಾಶಕ ಶ್ರೀ ಕೆ. ಬಿ. ಶಾಮ, ಮಾರುತಿ ಮುದ್ರಣಾಲಯ, ಕಾರ್ಕಳ, ದಕ್ಷಿಣ ಕನ್ನಡ. ಅಂಚೆವೆಚ್ಚ ಸಹಿತ ಚಂದಾ ರೂ ೩-೦-೦

ನಂದಿನೀ—ವಿವಿಧಾರ್ಥ ಸಂದೋಹ ವೃತ್ತ ಮಾಸಪತ್ರಿಕೆಯು ಭಾದ್ರಪದ ಸಂಚಿಕೆ. ಸಂಪಾದಕ—ಶ್ರೀ ನಾರಾಯಣ ಶಾಸ್ತ್ರಿ ಭಡತಿ. ಪ್ರಕಾಶಕ—ರಾಮಾ ತಿರುಮಲ ಭಟ್ಟ ಸಿದ್ದೇಶ್ವರ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೨—೦—೦.

ವಾಚಕ ಮಹಾಶಯರಿಗೆ.—

ಇದು ನಿಮ್ಮ 'ವೃತ್ತ'ದ ೧೨ನೇ ವರುಷದ ೫೧ನೇ ಸಂಚಿಕೆಯು. ಇನ್ನು ೨ ಸಂಚಿಕೆಗಳನ್ನು ತಮಗೆ ಸಾದರಪಡಿಸಿ, 'ವೃತ್ತ' ೧೩ನೇ ವರ್ಷವನ್ನು ಮೆಟ್ಟುವದು. 'ವೃತ್ತ'ದ ಸೇವೆಯನ್ನು ತಾವು ೧೨ ವರುಷಗಳ ಪರಿಚಯದಿಂದ ಅರಿತಿರುವಿರಿ. 'ವೃತ್ತ'ವು ನೆರವೇರಿಸಿದ ಪ್ರಜಾಸೇವೆಯ ಪಾತವನ್ನು ಸಂಕ್ಷಿಪ್ತವಾಗಿ ಕೂಡ ವಿವರಿಸುವದು ಆತ್ಮಸ್ತುತಿಯಾಗುವದು. ಪ್ರತ್ಯಕ್ಷ 'ವೃತ್ತ'ವೇ ನಿಮ್ಮೆಡೆಯಲ್ಲಿದ್ದು, ಅದರ ಗುಣದೋಷ ಮಾಡುವ ಬುದ್ಧಿಯು ತಮ್ಮಲ್ಲಿದ್ದಾಗ, 'ವೃತ್ತ'ದ ಸೇವೆಯನ್ನು ವಿಶದಪಡಿಸುವ ವ್ಯವಹಾರ ತಮಗೆಲ್ಲ. ಆದರಿಂದ 'ವೃತ್ತ'ವು ಬಿನ್ನೈಸಿಕೊಳ್ಳುವದೇನಂದರೆ:—ಈ ವರೆಗೆ ತಾವು ನನ್ನ ಸೇವೆಯನ್ನು ಮನ್ನಿಸಿಕೊಂಡಿರಿ. ಪ್ರಾಯವು ಬೆಳೆದಂತೆ, ಜವಾಬದಾರಿಯೂ ಬೆಳೆಯುತ್ತ ನಡೆದಿದೆ. ಅದಕ್ಕೆಲ್ಲ ಪರ್ಯಾಲೋಚಿಸಿ, ವಾಚಕರು ನನ್ನನ್ನು ಬಿಡದೆ ಕೈಗೊಂಡು ಮನ್ನಿಸಬೇಕಾಗಿಯೂ, ಪಿನ್ನೂ ಹೆಚ್ಚು ಲೇಖಕರು ಸಹಾಯಕರಾಗಿರಲೂ ಪ್ರಾರ್ಥಿಸುವೆನು. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೩ ರೂಪಾಯಿ. ವರುಷವು ಅದನ್ನು ಮನಿಯಾರ್ಡರದ್ವಾರಾ ವ್ಯವಸ್ಥಾಪಕರಿಗೆ ಕಳುಹಿದರೆ, ಕಾಗದ, ಶಾಯಿ ಮುಂತಾದ ಪ್ರೆಸ್ಸಿನ ದ್ರವ್ಯಗಳನ್ನು ಸಂಗ್ರಹಿಸಲಿಕ್ಕೆ ಅನುಕೂಲವಾಗುವದು. ತಾವು ಒಬ್ಬೊಬ್ಬರು ಇನ್ನೊಬ್ಬೊಬ್ಬರಿಗೆ ಸಂಪಾದಿಸಿಕೊಟ್ಟರೆ, ನಾನು ಇನ್ನೂ ವಿಶೇಷ ಸೇವೆಯನ್ನು ಸಲ್ಲಿಸಲು ಸಮರ್ಥನಾಗುವೆನು. ಸೇವ್ಯ-ಸೇವಕಭಾವವನ್ನು ನೆನಸಿ ನನಗೆ ಸಹಾಯಬೇಕು. ಇದಕ್ಕೂ ಹೆಚ್ಚಿಗೆ ನಾನು ತಮ್ಮ ಬಳಿಗೆ ಹೇಳಿಕೊಳ್ಳಲಿ? ಇತಿ ವ್ಯವಸ್ಥಾಪಕ.

ಸ್ಥಾನಿಕ ವೃತ್ತಾಂತ.

ಕುಮಟಾ—ಈ ವಾರದಲ್ಲಿಯೂ ಮಳೆ ಸುರಿಯಿತು. ನಿನ್ನೆ-ಮೊನ್ನೆಯಿಂದ ಸ್ವಲ್ಪ ಸಮಾಧಾನವಾಗಿದೆ. ಬಿಸಿಲು ಬೀಳುತ್ತಿದೆ. ಜ್ವರ-ಕೆಮ್ಮು-ನೆಗಡಿ ಉಪದ್ರವಗಳು ಶಾಂತವಾಗಹತ್ತಿವೆ. ಶ್ರೀ ಗ್ರಾಮದೇವಾಲಯದಲ್ಲಿ ಭಜನೆ ಸಪ್ತಾಹದ ಮಂಗಲೋತ್ಸವವು ಉತ್ಸಾಹದಿಂದ ಕಳೆದ ಬುಧವಾರಕ್ಕೆ ನೆರವೇರಿತು. ಈ ವಾರದಲ್ಲಿ ೪ ೮೬ ಇಂಚು ಮಳೆ ಬಿತ್ತು. ಈ ವರೆಗೆ ೧೩೪ ೭೫ ಇಂಚು ಮಳೆಯಾಯಿತು.

ಶ್ರೀ ಮಂಜನಾಥ ಭಟ್ಟ ಕರ್ಕಿಯವರು ಸ್ಪರ್ಧಿಗಳಿಲ್ಲದೆ ಮುಂದಿನ ಮುಂಬಯಿ ಕಾಯಿದೆ ಕೌನ್ಸಿಲಿಗೆ ಆರಿಸಿ ಬಂದಿರುವರು.

ಹೊನ್ನಾವರ— ಮಾಗೋಡ ವಿಪರೀತ ಬುಧವಾರಕ್ಕೆ ಒಂದು ದೊಡ್ಡ ಅಪಘಾತ ಸಂಭವಿಸಿತು. ಹೊನ್ನಾವರದಿಂದ ಮಧ್ಯಾಹ್ನ ೪ ಘಂಟೆ ಸಮಯದ ಒಂದು ಸಣ್ಣ ಕೋಲು ದೋಣಿಯಲ್ಲಿ ಬೇರಂಕಿ-ಖರ್ವಗುಂಜೆ ಬದಿಗೆ ೩ ಜನ ಹೆಂಗಸರು ೭ ಜನ ಗಂಡಸರು ಈ ರೀತಿ ೧೦ ಜನ ಕೂತುಕೊಂಡು, ಹೋಗುವಾಗ ನಡುಹೊಳೆಯಲ್ಲಿ ೫ ಘಂಟೆ ಸಮಯಕ್ಕೆ ದೊಡ್ಡ ಗಾಳಿ ಮಳೆ ಬಂದದ್ದರಿಂದ ಹೊಳೆಯಲ್ಲಿ ಬಿರುಗಾಳಿ ಎದ್ದು ದೋಣಿ ಮುಳುಗಿ ೩ ಹೆಂಗಸರು ೩ ಗಂಡಸರು ಈ ರೀತಿ ೬ ಅಸಮು ಹೊಳೆಪಾಲಾದರು. ಬಾಕಿ ಗಂಡಸರಲ್ಲಿ ಒಬ್ಬನು ಈಸು ಅಲ್ಲಿಯೇ ಸಮೀಪ ಹೋಗುವ ದೋಣಿಯ ಮೇಲೆ ಹತ್ತಿ ಬದುಕಿದನು. ಸ್ವಲ್ಪ ಹೊತ್ತಿನ ಮೇಲೆ ಬುತ್ತೊಂದು ದೋಣಿ ಬಂದದರಿಂದ ಇನ್ನು ನಾಲ್ವರು ಬದುಕಿದರು. ಸತ್ತವರ ಶವಗಳು ಸಮುದ್ರ ದಂಡೆಗೆ ತೇಲಿ ಬಂದಿರುತ್ತವೆ.

ಕಾರವಾರ— ಕಡವಾಡದ ಖೂನಿ ಖಟ್ಲೆಯು ೬ ದಿನಗಳ ವರೆಗೆ ನಡೆಯಿತು. ಆರೋಪಿಗೆ ೧ ವರ್ಷದ ಕಾರಾಗೃಹವಾಸವು ವಿಧಿಸಲ್ಪಟ್ಟಿದೆ. ಮೃತನಿಗೆ ಆರೋಪಿಯು ಮೊದಲು ಹೊಡೆದಳು. ಪಾಪವು ಹೊರಬಿದ್ದೀತೆಂಬ ಭಯದಿಂದ ಮೃತನನ್ನು ಮನೆಯೊಳಗೇ ಪ್ರತಿಬಂಧಿಸಿದಳಂತೆ! ಖೂನಿಯಾದದ್ದು ಕಳೆದ ಡಿಸೆಂಬರ ೧೧ನೇ ತಾರೀಖಿಗೆ. ಈಗಿನ ಫೌಜದಾರರೇ ಈ ಅಪರಾಧದ ಪತ್ತೆ ಹಚ್ಚಿ ಮೂರು ತಿಂಗಳಲ್ಲಿ ಅಪರಾಧಿಗೆ ನ್ಯಾಯಾಸನದ ಮುಂದೆ ಎಳೆತಂದರು. ಪೋಲೀಸರು ಉದ್ಯೋಗಿಗಳಾಗಲಿಕ್ಕೆ ಹತ್ತಿದರು!

ಹಿಂದುಸ್ಥಾನಿ ಸೇವಾ ದಲದ ಶ್ರೀ ಲಿಂಗದೇಯವರು ಇತ್ತ ಕಡೆ ರಾಷ್ಟ್ರೀಯ ಸಭೆ ಹಾಗು ಸೇವಾ ದಲಗಳಿಗೆ ಸಭಾಸದರನ್ನು ಸಂಗ್ರಹಿಸಿ, ಯಲ್ಲಾಪುರಕ್ಕೆ ತೆರಳಿದರು. ರಾಷ್ಟ್ರೀಯ ಸಭೆಗೆ ಇವರ ಪ್ರಯತ್ನದಿಂದ ಸುಮಾರು ೨೦೦ ಮಂದಿ ಸಭಾಸದರೂ, ಸೇವಾದಲಕ್ಕೆ ೩೦ ಮಂದಿ ಸ್ವಯಂಸೇವಕರೂ ದಾಖಲಾದರು.

ಚೆಂಡಿಯೆ— ಟೇಲೀಘಡ ಖೂನಿಯು ಪತ್ತೆಯಾದಂತೆ ತೋರುತ್ತದೆ. ಫೌಜದಾರರು ಮೂವರನ್ನು ಗಿರಫಿಡಿದರು. ಹಿಂದಿನ ಫೌಜದಾರರಿಂದ ಇದು ಕೈಸಾಗದ ಮಾತಾಗಿತ್ತೆಂದು ಹೇಳುತ್ತಿದ್ದರು. ತೆರಪಿಲ್ಲದ ಮಳೆ ಸುರಿಯುತ್ತದೆ. ಬೇನೆಗಳು ವಿಶೇಷ.

ಅವರ್ಸೆ— ರಾ। ದತ್ತಾತ್ರಯ ರಾಮಕೃಷ್ಣ ಪ್ರಭು, ಹನುಮಂತ ಬೊಮ್ಮಯ್ಯ ನಾಯಕ, ವೆಂಕಣ್ಣ ತಿಮ್ಮಣ್ಣ ನಾಯಕ ಮುಂತಾದ ೩೪ ಜನರು ಬರೆಯುವದೇನಂದರೆ:—ರಾ। ವಾಮನ ನಾರಾಯಣ ಭಟ್ಟ,ವೆಂಕಟೇಶ ಸುಬ್ರಾಯ ಶಾನಭಾಗ ಮುಂತಾದ ೧೪ ಜನರು ತಾ. ೬-೯-೩೬ ನೇದರಲ್ಲಿ ಕೊಟ್ಟ ಹಕೀಕತು ವಾಸ್ತವವಲ್ಲ. ರಾ। ವಾಮನ ಭಟ್ಟ ಹಾಗು ವೆಂಕಟೇಶ ಶೇಟರವರಿಗೆ ಶಾಲೆಗೆ ಹೋಗುವಂಥ ಹುಡುಗರಿಲ್ಲದ್ದರಿಂದ ಹುಡುಗರ ಕಷ್ಟಗಳು ಅವರಿಗೆ ಗೊತ್ತಾಗಲಿಕ್ಕಿಲ್ಲವೆಂದು ತಿಳಿಯಲು ಆಸ್ಪದವಿದೆ. ಅದರ ಹಾಗೆ ಗ್ರಹಿಸಲಿಕ್ಕೆ ಉಪಾಯವಿಲ್ಲ. ಇವರು ಊರಲ್ಲಿದ್ದರೆ, ಊರವರು ತಮ್ಮ ಹುಡುಗರನ್ನು ಹುಡುಕುತ್ತಲು ಕಗ್ಗತ್ತಲೆಯಲ್ಲಿ ಹೋದದ್ದಾದರೂ ತಿಳಿಯಬೇಕಿತ್ತು. ಹುಡುಗರು ಮಳೆಯಲ್ಲಿ ತೊಯ್ದು ಬಂದದ್ದನ್ನಾದರೂ ಅವರು ಕಾಣಬಹುದಿತ್ತು. ಸರ್ರಿಯವರ ಬರವಣಿಗೆಯ ಮೇಲಿಂದ ಇವರು ಊರಲ್ಲಿದ್ದಂತೆ ತೋರುವದಿಲ್ಲ. ಊರಲ್ಲಿದ್ದರೆ, ಇವರ ಅಜ್ಞಾನದ ಮಹಿಮೆಯು ಎಲ್ಲರಿಗೆ ಹೊಳೆದೀತು. ಹೆಡ್ ಮಾಸ್ತರು ಶಾಲೆಗೆ ಸರಿಯಾಗಿ ಬರದೆ, ಹುಡುಗರಿಗೆ ಬರುವ ಉಪದ್ರವಗಳ ಬಗ್ಗೆ ಬೇಕಷ್ಟು ಪ್ರಮಾಣಗಳನ್ನು ಕೊಡಬಹುದು. ಸ್ಕೂಲ ಬೋರ್ಡಿನ ನೆಂಬರರಾದ ರಾ। ಮಹಾಬಲೇಶ್ವರ ಜೋಗ ಹೆಬ್ಬಾರರು ತಾರೀಖು ೧೬-೯-೧೯೩೬ ನೇಗೆ ಶಾಲೆಗೆ ಧಕ್ಕನೆ ಭೆಟ್ಟಿ ಕೊಟ್ಟಾಗ ಒಬ್ಬ ಅಸಿ. ಮಾಸ್ತರು ಮಾತ್ರ ಹಾಜರಿದ್ದರಂತೆ! ರಾ। ಹೆಬ್ಬಾರರು ಬಂದಾಗ ೩-೪೫ ಘಂಟೆಯಾಗಿತ್ತು. ಶಾಲೆಯ ಕರೀ ಹಲಗೆಯ ಮೇಲೆ ಈ ಸಂಗತಿ ಬರೆದು ಹೋಗಿದ್ದರು. "ಆ ಘಂಟೆಯ ವರೆಗೆ ಹೆಡ್ ಮಾಸ್ತರರು ಬಂದಿಲ್ಲ" ಇತ್ಯಾದಿ. ರಾ। ಹೆಬ್ಬಾರರವರು ಕರಾ ಪುಸ್ತಕದ ಮೇಲೆ ಶಿಕ್ಷಕರೆಲ್ಲರೂ ವೇಳೆಗೆ ಸರಿಯಾಗಿ ಹಾಜರಿದ್ದರೆಂದು ಬರೆದಿರುವರೆಂದು ಹೇಳುತ್ತಾರೆ. ಹೀಗೆ ಬರೆದಿರಲಿಕ್ಕಿಲ್ಲೆಂದು" ಒಬ್ಬ ನಿಷ್ಪಕ್ಷಪಾತಿಯು ಬರೆಯುತ್ತಾನೆ.

ಸುಂಕೇರಿ— ೭ ದಿನಗಳ ವರೆಗೆ ನಡೆಯುತ್ತಿದ್ದ ಶ್ರೀಮದ್ಭಾಗವತ ಸಪ್ತಾಹವು ತಾ. ೨೧ನೇ ರಾತ್ರಿಗೆ ಬಹಳೇ ವಿಜೃಂಭಣೆಯಿಂದ ಕೊನೆಗೊಂಡಿತು. ಭಕ್ತವೃಂದರ ಅನೇಕರೂಪ ಕಾಣಿಕೆಗಳೂ, ನೈವೇದ್ಯ-ಭಜನೆ-ಆರತಿಗಳೂ ಸಮರ್ಪಿಸಲ್ಪಟ್ಟವು. ಮರು ದಿನ ಬ್ರಾಂಬ್ರಹ್ಮಣ

ಸಂಕೀರ್ತನೆಯೂ, ಪಂಚೆಗೆ ಹೊಕ್ಕ ಪೂಜೆಯೂ ಆದವು. ಇಂಥ ಸಮಾರಂಭಗಳು ಇತ್ತಿತ್ತಲಾಗಿ ತೀರ ವಿರಳವಾದರೂ, ಸಾಂಗವಾಗಿ ಭಕ್ತಿಪೂರ್ವಕವಾಗಿ ನೆರವೇರಿಸಿದ ಶ್ರೇಯಸ್ಸು ಇಲ್ಲಿಯ ಪ್ರಸಿದ್ಧ ವೇ॥ ಮೂ॥ ರಘುವೀರ ಆಚಾರ್ಯರವರೇ! ದೇವರು ಅವರಿಗೆ ಚಿರಾಯುರಾರೋಗ್ಯಗಳನ್ನಿತ್ತು ಇಂಥ ಕೃತ್ಯಗಳನ್ನು ಪದೇ ಪದೇ ಕೈಕೊಳ್ಳಲಿ! ಜನರೆಲ್ಲರೂ, ಆದರು ಕೊನೆಯ ದಿವಸ ಶಾಸ್ತ್ರಿಗಳು ಮಾಡಿದ ವಿನಂತಿಯನ್ನು ಲಕ್ಷದಲ್ಲಿಟ್ಟು ಪಾಲಿಸಲಿ. ಏನೆಂದರೆ “ನಾಟಕ-ಸಿನೇಮಾಗಳಂಥ ಮನೋರಂಜನೆಯ ಮತ್ತೊಂದು ಸಾಧನವೆಂತ, ಇಲ್ಲವೆ ದುರಾಚಾರದಲ್ಲಿ ದ್ರವ್ಯ ವ್ಯಯಗೊಳಿಸುವ ಸುಲಭಸಾಧ್ಯ ಮಾರ್ಗವೆಂತ ಇದನ್ನು ಭಾವಿಸಬೇಡಿರಿ. ಇದು ಸನ್ಮಾರ್ಗದರ್ಶಕ, ಮೋಕ್ಷಮಾರ್ಗಪ್ರವರ್ತಕವಾಗಿದೆ. ಆಬಾಲವೃದ್ಧ, ಸ್ತ್ರೀ-ಪುರುಷರು ಈ ಕಲಿಯುಗದಲ್ಲಿ ಸಹ ಸುಲಭವಾದ ‘ಹರಿನಾಮ ಸಂಕೀರ್ತನೆ ಅನುದಿನ ಮಾಡ್ಲುಗೆ ನರಕ ಭಯಗಳುಂಟೇ?’ ಎಂಬ ತತ್ವವು ಇದರಲ್ಲಿ ಎಲ್ಲೆಲ್ಲಿಯೂ, ಪುರಸ್ಕೃತವಾಗಿದೆ. ಸದಾ ಸರ್ವಕಾಲ ಹರಿ ಭಕ್ತಿಪರಾಯಣರಾಗಿರಿ ಮತ್ತು ಮಾನವಜನ್ಮವನ್ನು ಸಾರ್ಥಕಗೊಳಿಸಿರಿ.”

ಈ ಪೂಜೆಯ ಕಾಲಕ್ಕೆ ಇಲ್ಲಿಯ ಕರಾಚಿಯಲ್ಲಿ ಶ್ರೀ॥ ವಿಠ್ಠಲರಾವ ಘೋರ್ಪಡೆಕಾರರು [ಇವರು ಕೀರ್ತನಿಗರಲ್ಲ. ಖರೇ ಒಬ್ಬ ವ್ಯಾಪಾರಿ] ಮ. ಶ್ರೀಯಾಳ ಚರಿತ್ರೆಯನ್ನು ಯಾವತ್ತು ಜನರ ಮೇಲೆ ಪರಿಣಮಿಸುವಂತೆ ಸುಶ್ರಾವ್ಯ ಕೀರ್ತನ ಮಾಡಿದರು. ಕರುಣರಸದ ಬಲವು ನಾಟಕಗಳಲ್ಲಿ ಬರಿಯದೆ ಇಂಥ ಕೀರ್ತನೆಗಳಲ್ಲಿ ತೋರುವದು ಸತ್ಯವಲ್ಲವೇ?

ವೃತ್ತಸಾರ.

— ಬೆಳಗಾವಿಯ ಜಿಲ್ಲಾ ಬೋರ್ಡಿನ ಅಧ್ಯಕ್ಷರೊಳಗಿನ ದಾವೆಯ ವಿಚಾರವು ಮುಗಿಯಿತು. ಶ್ರೀ. ಕೃಷ್ಣರಾವ ಕತ್ತಟ್ಟಿನ ವಕೀಲರ ತರ್ಕಗಳು ಸಾಕಾರವಾಗುವವಿದ್ದಷ್ಟೆ. ತೀರ್ಪು ಇಂದು-ನಾಳೆ ಬಂದೀತು.

— ಹುಬ್ಬಳಿ ಗ್ರಾಮದಿಂದ ೧೫ ಮೈಲು ದೂರ ತಾರೀಖು ೨೦-೯-೨೬ ನೇಗೆ ಸಿಡಿಲುಬಿದ್ದು ಮೂರು ಗಂಡಸರು, ಇಬ್ಬರು ಹೆಂಗಸರು ಮಡಿದರು. ೧೦ ದನ ಕಾಗೆಗಳೂ ಸತ್ತು ಹೋದವು. ಮೂವರು ಸಂಧಿ ಗಂಡಸರಿಗೆ ಪೆಟ್ಟಾಗಿದೆ. ಒಂದು ಗಂಡು ಕೂಸು ಉಳಿಯುತ್ತಿದೆ. ಬಿಜಾಪುರವೆಂಬ ಗ್ರಾಮದಲ್ಲಿ ಒಬ್ಬ ಹೆಂಗಸು ಹತ್ತು ೨ ಮೋರೆಗಳುಳ್ಳ ಒಂದು ಕೂಸಿಗೆ ಜನ್ಮವನ್ನಿತ್ತಳು. ಈ ಹುಟ್ಟಿದ ಅಲ್ಪಾವಕಾಶದಲ್ಲಿಯೇ ನಿಧನ ಹೊಂದಿದಳು. ಕೂಸಿನ ದೇಹವೆಲ್ಲ ಮಾನವ ಆಕಾರದ್ದಿತ್ತು. ಹೆಂಗಸಿಗೆ ಪ್ರಸೂತವಾಗುವ ನಾಲ್ಕು ದಿವಸಗಳ ಮುಂಚಿನಿಂದ ಪ್ರಸೂತವೇದನೆಗಳಿಗೆ ಪ್ರಾರಂಭವಾಗಿತ್ತಂತೆ! ಭಗವಂತನ ಲೀಲೆಗಳನ್ನು ಬಲ್ಲವರಾರು!

— ಧಾರವಾಡದ ಇತಿಹಾಸ ಮಂಡಳದ ಉತ್ಸಾಹಕರಲ್ಲೊಬ್ಬರೂ, ಕರ್ನಾಟಕ ಇತಿಹಾಸಸಂಶೋಧಕರೂ ಆಗಿರುವ ಶ್ರೀ॥ ನಾರಾಯಣ ಶ್ರೀನಿವಾಸ ರಾಜಪುರೋಹಿತರವರು ಸಂಶೋಧನ ಕಾರ್ಯಕ್ಕಾಗಿ ದ್ರವ್ಯಸಂಗ್ರಹ, ಹಸ್ತಲಿಖಿತ ಪ್ರತಿ ಹಾಗು ಶಾಸನ ಮುಂತಾದ ಸಂಶೋಧನ ಕಾರ್ಯಕ್ಕಾಗಿ ಕರ್ನಾಟಕದಲ್ಲಿ ಸಂಚರಿಸುತ್ತಿದ್ದಾರೆ. ಅವರಿಗೆ ಸರ್ವರೂ ಸಹಾಯ ಮಾಡಬೇಕಾಗಿ ‘ಜಯಕರ್ನಾಟಕ’ ಪತ್ರಿಕೆಯ ಸಂಪಾದಕರಾದ ಶ್ರೀ॥ ಆಲೂರ ವೆಂಕಟರಾಯರು ಸಮಸ್ತ ಕರ್ನಾಟಕಸ್ಥರಿಗೆ ಬಿನ್ನೈಸಿಕೊಳ್ಳುತ್ತಾರೆ. ಸಂಶೋಧನ ಕಾರ್ಯವು ಸಮಸ್ತ ಕರ್ನಾಟಕಸ್ಥರದಿದ್ದು, ಅದಕ್ಕಾಗಿ ದುಡಿಯುವ ಶ್ರೀ॥ ರಾಜಪುರೋಹಿತರಿಗೆ ಎಲ್ಲರೂ ನೆರವಾಗಬೇಕಾಗಿ ನಾವೂ ಪ್ರಾರ್ಥಿಸುತ್ತೇವೆ.

— ಹರಿದ್ವಾರದೊಳಗಿನ ಗುರುಕುಲದವರು ೧೯೨೭ನೇ ಇಸವಿಯ ಶಿಂಗಳಿನಲ್ಲಿ ತಮ್ಮ ೨೫ನೇ ವರ್ಷದ ವರ್ಧಂತಿ ಮಹೋತ್ಸವವನ್ನು ಜರಗಿಸಲಿರುವರು. ಆ ಅವಧಿಯೊಳಗೆ ೧೦ ಲಕ್ಷ ರೂಪಾಯಿಗಳನ್ನು ಸಂಗ್ರಹಿಸಬೇಕೆಂದು ಗೊತ್ತಾಗಿದೆ.

ಬಳ್ಳಾರಿಯ ಪ್ರತಿಜ್ಞೆಯು ಕೊನೆಗಂಡಿತು.

ಬಳ್ಳಾರಿಯೊಳಗಣ ಸ್ವಯಂಸೇವಕ ಪರಿಷತ್ತಿನಲ್ಲಿ ಕೈಕೊಂಡ ಠರಾವಿನಂತೆ ರಾಷ್ಟ್ರೀಯ ಸಭೆಗೆ ೧೦೦೦೦ ಸಭಾಸದರ ಸಂಗ್ರಹವಾಯಿತೆಂದು ಡಾ॥ ನಾರಾಯಣಸಾಹೇಬ ಹರ್ಡೀಕರರು ತಿಳಿಸುತ್ತಾರೆ.

“Futile Certifying.”

The ‘ex-School Board Member’ Mr. S V. Kamat has, chivalrously enough, made his appearanc on the scene for the rescue of his ex-colleague Mr. Yaji, and quite in a school-masterlike fashion has gallantly certified that if it was not for a luminary like Mr. Yaji, the old School Board would not have been able to achieve the record that it has now to its credit! In the light of Mr. Kamat's remarks preferring the claims of Mr. Yaji to those of Mr. S. H. Naik M. A., LL. B., the ex-Vice-Chairman (in which controversy I don't choose to take sides), even a disinterested person will feel interested to enquire of Mr. Kamat why Mr. Yaji was so cruelly and wantonly ignored in the old School Board of which Mr. Kamat was a member. Following Mr. Kamat's reasoning, may we know why the old Board was responsible for the criminal folly (as Mr. Kamat would think of it) of selecting a mere B. A., LL. B, without “the requisite experience to successfully tackle the problems of primary education” for the more responsible post of a Chairman? Did Mr. Kamat (probably himself also ‘one of the few and the fittest’) as a member then, at least try to install his illustrious colleague in his proper place? Why ... did that Board with Mr. Kamat thereon, not select that “one of the few and fittest” — Mr. Yaji — at least for the Vice-Chairmanship? Why was this rare person passed over, and Mr. S. H. Naik M. A., LL. B., selected then? May not any outsider think that the New Board was led into going by the path of wisdom which they thought had been shown by their predecessors in the election of their office-bearers? Probably they will now learn that the wisdom of these wiseacres reveals itself only in unsolicited precept, and not in example, or it dawns upon them too late.

As for Mr. Kamat's sagacious psycological observations that such are the effusions of “the defeated and despairing.” I must here leave the field open for Mr. Kamat as he unquestionably knows such psycology best, being himself one “defeated and despairing.”

Honavar, 24-9-1926. Yours etc, **P. B. P.**

[ಪರೋಪದೇಶೇ ಪಾಂಡಿತ್ಯಂ.

ಸ್ಕೂಲ ಬೋರ್ಡ ಮೆಂಬರಿಯಿಂದ ಪದಭ್ರಷ್ಟರಾದ ಮಿ॥ ಎಸ್. ವ್ಹಿ. ಕಾಮತರವರು ಉತ್ತರಕಾನಡಾದಂತೆ ತಮ್ಮ ಸಹಕಾರಿಗಳಾಗಿದ್ದ ಡಾ॥ ಯಾಜಿಯವರಿಗೆ ಸಂಕಟ ಸಮಯದಲ್ಲಿ ನೆರವಾಗಲು ಟೊಂಕಕಟ್ಟಿ ರಂಗಸ್ಥಳದಲ್ಲಿ ಬಂದಿರುವರು. ಶಾಲಾಮಾಸ್ತರನಂತೆ ಅಟ್ಟಹಾಸದಿಂದ ಶಿಫಾರಸು ಪತ್ರವನ್ನು ಕೊಟ್ಟು ಬಿಟ್ಟಿರುವರು. ಡಾ॥ ಯಾಜಿಯವರಂಥ ರತ್ನವು ಸ್ಕೂಲ ಬೋರ್ಡಿಗೆ ಲಭಿಸದಿದ್ದರೆ, ಹಳೇ ಸ್ಕೂಲ ಬೋರ್ಡು ಈಗ ಸಂಪಾದಿಸಿದಷ್ಟು ಶ್ರೇಯೋಭಿವೃದ್ಧಿಯನ್ನು ಸಂಗ್ರಹಿಸುತ್ತಿದ್ದಿಲ್ಲವಂತೆ! ಹಳೇ ಬೋರ್ಡಿನಲ್ಲಿ ಡಾ॥ ಯಾಜಿಯವರು ಇದ್ದಾಗ, ವ್ಹಾಯ್ಸ ಛೇರಮನ್ನಿಯ ಅಧಿಕಾರವನ್ನು ಅವರಿಗೇ ಕೊಡದಿರುವದಕ್ಕೆ ಹಳೇ ಸ್ಕೂಲ ಬೋರ್ಡು ಯಾಕೆ ನಿಷ್ಠುರವಾಯಿತು? ಡಾ॥ ಎಸ್. ಎಚ್. ನಾಯ್ಕ, ಎಂ. ಎ., ಎಲ್ ಎಲ್. ಬಿ., ಇವರಿಗೆ ಆ ಸ್ಥಾನವನ್ನು ಯಾಕೆ ಕೊಟ್ಟಿತು? ಎಂಬುದನ್ನು ತಿಳಿಕೊಳ್ಳಲು ತ್ರಯಸ್ಥರು ಕುತೂಹಲವುಳ್ಳವರಾಗುವದು ಸಹಜವು. ಹಳೇ ಸ್ಕೂಲ ಬೋರ್ಡಿನಲ್ಲಿ ಮಿ॥ ಎಸ್. ವ್ಹಿ. ಕಾಮತರು ಮೆಂಬರಿದ್ದರು. ಮಿ॥ ಕಾಮತರ ತರ್ಕಶಾಸ್ತ್ರವನ್ನೇ ನಾನು ಅನುಸರಿಸುವೆನು. ಮಿ॥ ಕಾಮತರವರ ಕಲ್ಪನೆಯಂತೆ, ಹಳೇ ಬೋರ್ಡು ವ್ಹಾಯ್ಸ ಛೇರಮನ್ನಿಗಿಂತ ಹೆಚ್ಚು ಅಧಿಕಾರದ ಛೇರಮನ್ನಿ ಜಾಗಕ್ಕಾಗಿ ಖರೇ ಬಿ. ಎ., ಎಲ್‌ಎಲ್. ಬಿ., ಯವರನ್ನು ಆರಿಸುವಷ್ಟು ದಡ್ಡತನವನ್ನು ಯಾಕೆ ಪ್ರದರ್ಶಿಸಿತು? ‘ಪ್ರಾಥಮಿಕ ಶಿಕ್ಷಣದ ಪ್ರಶ್ನೆಗಳನ್ನು ಕುಶಲವಾಗಿ ಬಿಡಿಸಲು ಸಾಕಷ್ಟು ಅನುಭವವನ್ನು ಈ ಬಿ. ಎ., ಎಲ್‌ಎಲ್. ಬಿ., ಯವರು ಸಂಪಾದಿಸಿದ್ದಿಲ್ಲ.’ (ಮಿ॥ ಕಾಮತರವರು ಈ ದುರ್ಲಭ, ಯೋಗ್ಯತಾವಂತ ಪುರುಷರಲ್ಲಿ ಒಬ್ಬರೆಂದು ಗೃಹೀತ ಹಿಡಿಯಲಡ್ಡಿಯಿಲ್ಲವಾಗಿ ತಿಳಿದರೆ,) ಅವರಾದರೂ ತಮ್ಮ ಕೀರ್ತಿವಂತ ಸಹಕಾರಿಯನ್ನು ತಕ್ಕ ಆಸನದಲ್ಲಿ ಅಧಿಷ್ಠಿತಗೊಳಿಸಲು ಮೆಂಬರ ನಾತೆಯಿಂದ ಯತ್ನವನ್ನಾದರೂ ಮಾಡಿದ್ದರೇನು? ಆ ಬೋರ್ಡು — ಮಿ॥ ಕಾಮತರೊಳಗೊಂಡಿದ್ದ ಬೋರ್ಡು — ದುರ್ಲಭ, ಯೋಗ್ಯತಾವಂತ ಪುರುಷರಾದ ಡಾ॥ ಯಾಜಿಯವರನ್ನು ವ್ಹಾಯ್ಸ ಛೇರಮನ್ನಿಯ ಆಸನದಲ್ಲಾದರೂ ಯಾಕೆ ಆವಾಹನ ಮಾಡಲಿಲ್ಲ? ಈ ದುರ್ಲಭ ರತ್ನವನ್ನು ಧಿಕ್ಕರಿಸಿ, ಡಾ॥ ಎಸ್. ಎಚ್. ನಾಯ್ಕ, ಎಂ. ಎ., ಎಲ್‌ಎಲ್. ಬಿ., ಯವರಿಗೆ ಯಾಕೆ ನೇಮಿಸಿತು? ಅಧಿಕಾರಿಗಳನ್ನು ಆರಿಸುವ ಕಾರ್ಯದಲ್ಲಿ ಹಿಂದಿನ ಬೋರ್ಡು ತೋರಿಸಿಕೊಟ್ಟ ಮಾರ್ಗದಿಂದಲೇ ಹೋಗುವದು ಜಾಣತನವೆಂದು ಹೊಸ ಬೋರ್ಡಿನ ಗ್ರಹಿಕೆಯಾಯಿತೆಂದು ತ್ರಯಸ್ಥರು ಯಾಕೆ ತಿಳಿಯಬಾರದು? ಈ ಬುದ್ಧಿವಂತರ ಜಾಣತನವು ಪರರಿಗೆ ಉಪದೇಶ ಮಾಡುವವರಲ್ಲಿಯೇ ವ್ಯಗ್ರೀಭೂತವಾಗುತ್ತದೆಂದು ಈಗ ಅವರಿಗೆ ಹೊಳೆಯುವದು; ಅಥವಾ ಜಾಣತನದ ಸಂಚಾರವು ಕಾಲ ತಪ್ಪಿ ಹುಟ್ಟುತ್ತದೆಂದು ಗ್ರಹಿಸಲಿಕ್ಕೆ ಅಡ್ಡಿಯಿಲ್ಲ.

ಮಿ॥ ಕಾಮತರವರು ದೊಡ್ಡ ವೇದಾಂತೋಕ್ತಿಗಳನ್ನು ನುಡಿದು, “ಸೋತವರೂ, ನಿರಾಶರಾದವರೂ ಹೀಗೆಯೇ ಬಡಬಡಿಸುತ್ತಾರೆಂ”ದು ಧ್ವನಿಸಿರುವರು. ಈ ವೇದಾಂತದ ಅನುಭವವು ಸ್ವತಃ ಮಿ॥ ಎಸ್. ವ್ಹಿ. ಕಾಮತರವರಿಗೇ ಉಂಟು. ಯಾಕೆಂದರೆ, ಅವರು ಸೋತವರು; ನಿರಾಶರಾದವರೂ ಅವರೇ. ನಿರಾಶೆಯಿಂದ ಬಡಬಡಿಸುವ ಅನುಭವವೂ, ಅಧಿಕಾರವೂ ಅವರದೇ ಆಗಿರುತ್ತದೆ. ಇದ ಕಾರಣ, ಸೋತವರ ಅಂತರಂಗವನ್ನು ಸ್ವಾನುಭವದಿಂದ ಉದಾಹರಿಸುವದು ಅವರಿಗೇ ಒಪ್ಪಿರುವದು.

ಹೊನ್ನಾವರ, ತಾ. ೨೪-೯-೧೯೨೬. ತಮ್ಮ,

ಪಿ. ಬಿ. ಪಿ.]

ಮಹಾತ್ಮರ ಆತ್ಮಚರಿತ್ರ.

(ಅನುವಾದಿತ)

(೧೮) ವರ್ಣದ ಅಡ್ಡಿ.

ನ್ಯಾಯಾಸನದ ಮೇಲೆ ಒಂದು ವಿಸ್ತಾರವಾದ [illegible] ನಿಷ್ಪಕ್ಷಪಾತಿಯಾಗಿಯೂ [illegible] ದಂತೆ [illegible] ಕಣ್ಣುಗಳನ್ನು ಕಟ್ಟಿಕೊಂಡು [illegible] ಬಿದ್ದ ವಿಧಿ [illegible] ನ್ಯಾಯ [illegible] ಕುರುಡನಾಗಿರುವಳು. ಇದರಿಂದ ನ್ಯಾಯ [illegible] ಬಾಹ್ಯವೇಷ [illegible] ದಾನವರ [illegible] ಗುತ್ತವೆ. ಆದರೆ, ಈ ಅತ್ಯವನ್ನು [illegible] ವಿರುವನ್ನು ಅನುಭವಿಸಲಿಕ್ಕೆ [illegible] ನ್ಯಾಯಾಸನಕ್ಕೆ [illegible] ವಕೀಲರು [illegible]

ವರಿಷ್ಠ ನ್ಯಾಯಾಸನದ ವಕೀಲರ [illegible] ಕೊಟ್ಟು [illegible] ನನ್ನ [illegible] ಹೈಕೋರ್ಟಿನಲ್ಲಿ ನನ್ನ ಹೆಸರನ್ನು ದಾಖಲು [illegible] ವಾಗ ವಿಲಾಯತಿಯಿಂದ ತಂದ ಸನದನ್ನು [illegible] ನಲ್ಲಿ ನಾನು [illegible] ಹೊರಡುವಾಗ ಹೆಸರನ್ನು ದಾಖಲುಪಡಿಸಿಕೊಳ್ಳಬೇಕೆಂದರೆ ಅರ್ಜಿಯ ಜೊತೆಗೆ ಸನ್ನಡತೆಯ ಬಗ್ಗೆ [illegible] ಪತ್ರಗಳನ್ನು ಕಳುಹಬೇಕಾಗಿತ್ತು. [illegible] ದೇಶಾಭಿಮಾನ ಪತ್ರ ಕೊಟ್ಟರೆ ನನ್ನ ಅರ್ಜಿಗೆ [illegible] ದೊರಕುವದೆಂದು ನಾನು ಬಯಸಿದೆನು. ಮತ್ತು ಅಬ್ದುಲ್ಲಾ ಶೇಟರ ಮಧ್ಯಸ್ಥಿಕೆಯಿಂದ ನನ್ನ ಪರಿಚಯ [illegible] ರಾದ ಯುರೋಪಿಯನ್ ವರ್ತಕರಿಬ್ಬರ [illegible] ಪತ್ರಗಳನ್ನು ಸಂಗ್ರಹಿಸಿದೆನು. ವಕೀಲರೊಬ್ಬರ [illegible] ಗಳನ್ನು ಕೋರ್ಟಿಗೆ [illegible] ವಾಗಿ ಎಟರ್ನಿ ಜನರಲ್‌ರವರು [illegible] ವೇತನ ಕೊಳ್ಳದೆ [illegible] ಅಬ್ದುಲ್ಲಾ ಶೇಟರವರ ವಕೀಲರಾದ [illegible] ಎಟರ್ನಿ ಜನರಲ್‌ರಿದ್ದರು. [illegible] ನನ್ನ ಅರ್ಜಿಯನ್ನು [illegible] ಅವರು ಸಂತೋಷದಿಂದ ಒಪ್ಪಿಕೊಂಡರು.

ವಕೀಲ ಸಂಘದವರು ನನ್ನ ಅರ್ಜಿಯನ್ನು ದಾಖಲು ಪಡಿಸಿಕೊಳ್ಳಲಿಕ್ಕೆ ತಮ್ಮ ವಿರೋಧವಿರುವದಾಗಿ ನನಗೆ [illegible] ಕೊಟ್ಟರು. ಇದನ್ನು ನೋಡಿ ನಾನು ಚಕಿತನಾದೆ. [illegible] ವಿಲಾಯತಿಯೊಳಗಿನ ಸನದು. ಅರ್ಜಿಯ ಜೊತೆಗೆ [illegible] ಯಾವದೊಂದು ಆಕ್ಷೇಪವನ್ನೂ ಅವರು ಮಾಡಿದರು. ಆದರೆ, ಇದೇನು ಮುಖ್ಯ ಆಕ್ಷೇಪವಲ್ಲ. ವಕೀಲರನ್ನು ದಾಖಲುಪಡಿಸಿಕೊಳ್ಳುವ ನಿಯಮಗಳನ್ನು ರಚಿಸಿದಾಗ ಕಪ್ಪು ಜನಾಂಗದವರು ಈ ಕೆಲಸಕ್ಕೆ ಅರ್ಜಿ ಮಾಡುವರೆಂಬ ಕಲ್ಪನೆಯಿದ್ದಿಲ್ಲ. ಯುರೋಪಿಯನ್‌ರ ಶ್ರಮಸಾಹಸದಿಂದಲೇ ನಾತಾಲದ ಅಭಿವೃದ್ಧಿಯಾಗಿತ್ತು. ಆದರಿಂದ [illegible] ವರ್ಗದಲ್ಲಿಯೂ ಯುರೋಪಿಯನ್ನರ ಪ್ರತಿಷ್ಠೆಯನ್ನು ಕಾಯಬೇಕಾಗಿತ್ತು. ಕಪ್ಪು ಜನಾಂಗದವರಿಗೆ ಪ್ರವೇಶಕೊಟ್ಟರೆ ಕ್ರಮವಾಗಿ ಅವರ ಸಂಖ್ಯೆಯು ಯುರೋಪಿಯನ್‌ರಿಗಿಂತ ಹೆಚ್ಚಾಗುವದು. ಮತ್ತು ಮುಂದೆ [illegible] ದೊಡ್ಡದೊಂದು [illegible] ಬರುವದು.

ವಕೀಲ ವರ್ಗದವರು ವಿರೋಧ ಮಾಡಲು ದೊಡ್ಡ ವಕೀಲರನ್ನು ಇಟ್ಟಿದ್ದರು. ಆದಾಗ್ಯೂ ನಾದಾ ಅಬ್ದುಲ್ಲಾ ಶೇಟರ ವಕೀಲರೇ. ಆದರಿಂದ ತಮ್ಮ ಒಳಿ ಬಂದು ವೇಷ

ನಾದಿ ಹೋಗಿ ಅಬ್ದುಲ್ಲಾ ಶೇಟರಿಗೆ ತಿಳಿಸಿದರು. ನನ್ನೊ ಡನೆ ಅವರು [illegible] ಮಾತಾಡಿದರು. ನನ್ನ ಪೂರ್ವೇತಿಹಾಸವನ್ನೂ ಅವರು ಕೇಳಿದರು. ನಾನು ಎಲ್ಲ ಹಕೀಕತ್ತನ್ನು [illegible]

ಅದನ್ನು ಕೇಳಿಕೊಂಡು ಅವರು ನುಡಿದದ್ದೇನೆಂದರೆ — "ನಿಮ್ಮ ಮೇಲೆ ನನ್ನದೇನೂ ಆಕ್ಷೇಪವಿಲ್ಲ. ನೀವು ಯಾವುದೊಂದು [illegible] ವಸಹಾತುಗಳಲ್ಲಿ [illegible] ಸಾಹಸಿಗರಿರಬಹುದೆಂದು ನನ್ನ ಕಲ್ಪನೆಯಿತ್ತು. ನಿಮ್ಮ ಅರ್ಜಿಯೊಡನೆ [illegible] ಸನದು ಇಲ್ಲಾಗಿತ್ತು. ಇದರಿಂದ ನನ್ನ ಸಂಶಯ [illegible] ವೆಂದು ನನಗನಿಸಿತು. ಅನೇಕರು ಬೇರೆಯವರ ಸನದುಗಳನ್ನು ತಮ್ಮದೆಂದು ಉಪಯೋಗಿಸಿಕೊಂಡ [illegible] ಉದಾಹರಣೆಗಳಿವೆ. [illegible] ನೀವು [illegible] ಕೊಟ್ಟ ಸನ್ನಡತೆಯ [illegible] ಪತ್ರಗಳ [illegible] ನನ್ನ ಗ್ರಹಿಕೆ ಇದೆ. [illegible] ನಿಮ್ಮ [illegible] ಎಲ್ಲಿಂದ ಇರಬೇಕು? ನಿಮ್ಮ [illegible]"

[illegible] ಪಂಚಸ್ತರೇ. ಅಬ್ದುಲ್ಲಾ [illegible] ಇಲ್ಲಿ [illegible]

[illegible] ಶೇಟರೂ, ನೀವೂ ಬಂದೀರಿ [illegible] ನಿಮ್ಮ ತಂದೆಯವರು ಇಲ್ಲಿ ಮುಖ್ಯ [illegible] ಶೇಟರಿಗೆ ನಿಮ್ಮ [illegible] "ಪ್ರತಿಜ್ಞಾಪತ್ರ"ವನ್ನು ನೀವು ದಾಖಲು [illegible] ಪಡಿಸಲು ನನ್ನ ಬಳಿ ಕಳುಹಿಸಿರಿ [illegible] ವಕೀಲರ [illegible] ತಿಳಿಸುವೆನು."

[illegible] ನನಗೆ ಸಂತೋಷವೆನಿಸಿತು. [illegible] ಅಬ್ದುಲ್ಲಾ ಶೇಟರ [illegible] ಅರ್ಜಿಯ ಜೊತೆಗೆ [illegible] ಪತ್ರಗಳನ್ನು ಕಳುಹಿಸಲ್ಪಟ್ಟಿತ್ತು. ಇದಲ್ಲದೆ, ನನಗೆ ವಕೀಲರ [illegible] ದಾಖಲುಪಡಿಸಿಕೊಳ್ಳ [illegible] ನನ್ನ [illegible] ಇತಿಹಾಸದ ಸುದ್ದಿ [illegible] ನಾನು ಒಬ್ಬನಾಗಿ [illegible] ಪ್ರತಿಷ್ಠಾವಂತನಾ [illegible] ನನ್ನ ಮೇಲೆ ಆಕ್ಷೇಪ ಮಾಡಲು [illegible] ನನಗೆ ಸಂಶಯವಿತ್ತು. ಆದರೂ ನಾನು ಸಮಾಧಾನ ಹೊಂದಿ, ಉತ್ತರ ಕೊಟ್ಟದ್ದೇನೆಂದರೆ, "ವಕೀಲರ ಸಂಘಕ್ಕೆ ಈ [illegible] ಇಲ್ಲವೆಂದು [illegible] ಅದನ್ನು ನಿಮ್ಮ ಅಪೇಕ್ಷೆಯಂತೆ ಆಧಾರಪತ್ರವನ್ನು ದಾಖಲಿಸಲು ತಯಾರಿದ್ದೇನೆ."

ಅಬ್ದುಲ್ಲಾ ಶೇಟರ ಆಧಾರಪತ್ರವನ್ನು ತಯಾರಿಸಿ, ವಕೀಲರ ಸಂಘದ ವಕೀಲರಿಗೆ ಸಾದರಪಡಿಸಿದೆನು. ಅವರು ತಮ್ಮ ಆಕ್ಷೇಪವಿಲ್ಲೆಂದರು. ಆದರೂ, ವಕೀಲರ ಸಂಘಕ್ಕೇನು ಸಮಾಧಾನವಾಗಲಿಲ್ಲ. ವರಿಷ್ಠ ನ್ಯಾಯಾಸನದಲ್ಲಿ ವಕೀಲರ ಸಂಘವು ನನ್ನ ಅರ್ಜಿಯನ್ನು ವಿರೋಧಿಸಿತು. ನ್ಯಾಯಮೂರ್ತಿಗಳು ನನ್ನ ಪಕ್ಷಿನ ಎಟರ್ನಿ ಜನರಲ್‌ರಾದ [illegible] ಎಸ್ಕೊಂಬಿಯವರಿಗೆ ಉತ್ತರ ಕೊಡಲು ಆಜ್ಞೆಪಿಸದೇ, ವಿರೋಧವನ್ನು ತಿರಸ್ಕರಿಸಿ ಮುಖ್ಯ ನ್ಯಾಯಾಧೀಶರು ನುಡಿದದ್ದೇನೆಂದರೆ—ಅರ್ಜಿದಾರರು ಅರ್ಜಿಯ ಜೊತೆಗೆ ಮೂಲ ಸನದನ್ನು ಕಳುಹಲಿಲ್ಲವೆಂಬ ಆಕ್ಷೇಪದಲ್ಲಿ ಹುರುಳಿಲ್ಲ. ಅವರು ಸುಳ್ಳು ಆಧಾರಪತ್ರವನ್ನು ದಾಖಲು ಮಾಡಿದರೆ, ಆ ಕುರಿತು ಅವರ ಮೇಲೆ ಖಟ್ಲೆ ಮಾಡಬಹುದು. ಮತ್ತು ಅವರು ಅಪರಾಧಿಗಳೆಂದು ಸಿದ್ಧವಾದರೆ, ಅವರ ಹೆಸರನ್ನು ಪಟದ ಮೇಲಿಂದ ತೆಗೆದುಹಾಕಬಹುದು. ಕಾಯಿದೆಯಲ್ಲಿ ಬಿಳೇ-ಕಪ್ಪು ಎಂಬ ಭೇದವಿಲ್ಲ. ಆದರಿಂದ ಗಾಂಧಿಯವರಿಗೆ ಪಟದ ಮೇಲೆ ತಮ್ಮ ಹೆಸರನ್ನು ದಾಖಲುಪಡಿಸಿಕೊಳ್ಳಲು ನ್ಯಾಯಾಸನವು ಪ್ರತಿಬಂಧಿಸಲಾರದು. ನಾವು ಅರ್ಜಿಯನ್ನು ಮನ್ನಿಸುತ್ತೇವೆ. ಗಾಂಧಿಯವರೇ, ನೀವು ಪ್ರತಿಜ್ಞೆಯನ್ನು ಈಗ ಕೊಳ್ಳಬಹುದು."

ನಾನು ಎದ್ದು ನಿಂತು ರಜಿಸ್ಟ್ರಾರರ ಮುಂದೆ ಪ್ರತಿಜ್ಞೆಯನ್ನು ಕೊಂಡೆನು. ಪ್ರತಿಜ್ಞೆಯನ್ನು ಕೊಂಡಾದ ಬಳಿಕ, ಮುಖ್ಯ ನ್ಯಾಯಾಧೀಶರು ನನಗೆ ನುಡಿದದ್ದೇನೆಂದರೆ:— "ಗಾಂಧಿಯವರೇ, ನೀವೀಗ ನಿಮ್ಮ ರುಮಾಲನ್ನು ತೆಗೆಯಬೇಕು. ವಕೀಲಿ ಮಾಡುವ ಬೆರಿಸ್ಟರರು ಧರಿಸಿಕೊಳ್ಳುವಂಥ ಉಡುಪನ್ನು ನಮ್ಮ ನ್ಯಾಯಾಸನದ ನೇಮಗಳನ್ನನುಸರಿಸಿ ನೀವು ಧರಿಸಬೇಕು."

ನನ್ನ ಸ್ಥಿತಿಯನ್ನು ನಾನು ಲಕ್ಷಿಸಿದೆನು. ಡಿಸ್ಟ್ರಿಕ್ಟ ಮೆಜಿಸ್ಟ್ರೇಟ ಕೋರ್ಟಿನಲ್ಲಿ ರುಮಾಲನ್ನು ಧರಿಸಲು ನಾನು ಹಟಹಿಡಿದಿದ್ದೆ. ಆದನ್ನೀಗ ನಾನು ವರಿಷ್ಠ ನ್ಯಾಯಮೂರ್ತಿಗಳ ಅಪ್ಪಣೆಗನುಸಾರವಾಗಿ ತೆಗೆದೆನು. ಈ ಹುಕುಮನ್ನು ವಿರೋಧಿಸುವ ಸಾಮರ್ಥ್ಯವು ನನ್ನಲ್ಲಿತ್ತು, ಆದರೆ, ಇನ್ನೂ ದೊಡ್ಡ ದೊಡ್ಡ ಕಾರ್ಯಗಳಿಗಾಗಿ ನಾನು ಸಾಮರ್ಥ್ಯವನ್ನು ಕಾದಿಡಬೇಕಾಗಿತ್ತು. ರುಮಾಲನ್ನೇ ಸ್ಥಾನದಲ್ಲಿಡಲು ನನ್ನ ವಿರೋಧಕ ಶಕ್ತಿಯನ್ನು ನಾನು ವ್ಯಯಮಾಡುವದು ಉಚಿತವಲ್ಲ. ಆದನ್ನು ವಿಶೇಷ ಕಾರ್ಯಗಳಿಗಾಗಿ ಉಪಯೋಗಿಸಬೇಕು.

ಅಬ್ದುಲ್ಲಾ ಶೇಟ್ ಪ್ರಭೃತಿ ಗೆಳೆಯರಿಗೆ ನಾನು ತಲೆಬಾಗಿಸಿದ್ದು ಸೇರಲಿಲ್ಲ. ನ್ಯಾಯಾಸನದಲ್ಲಿ ವಕೀಲಿ ಮಾಡುವಾಗ ರುಮಾಲನ್ನು ಧರಿಸುವ ನನ್ನ ಅಧಿಕಾರವನ್ನೇ ನಾನು ಭದ್ರವಾಗಿ ಸಮರ್ಥಿಸಬೇಕಾಗಿತ್ತೆಂದು ಅವರ ಹೇಳಿಕೆ. ಅವರೊಡನೆ ನಾನು ಬುದ್ಧಿವಾದ ಮಾಡಲೆತ್ನಿಸಿದೆನು "ರೋಮದಲ್ಲಿರುವಾಗ ರೋಮ ಜನರಂತೆ ನಡೆಕೊಳ್ಳಬೇಕು," ಎಂಬ ಅಂಗ್ಲ ಗಾದೆ ಮಾತಿನ ಭಾವಾರ್ಥವನ್ನು ಅವರಿಗೆ ಬಿಂಬಿಸಲೆತ್ನಿಸಿದೆನು. ಹಿಂದುಸ್ಥಾನದಲ್ಲಿ ಆಂಗ್ಲ ಅಧಿಕಾರಿಯಾಗಲಿ, ನ್ಯಾಯಾಧಿಕಾರಿಯಾಗಲಿ ನಿಮಗೆ ರುಮಾಲನ್ನು ತೆಗೆಯಹೇಳಿದರೆ, ಆದನ್ನು ಉಲ್ಲಂಘಿಸುವದು ಕ್ರಮಪ್ರಾಪ್ತವಾಗಿದೆ. ಆದರೆ, ನಾತಾಲ ಪ್ರಾಂತದ ಕೋರ್ಟಿನಲ್ಲಿ ವಕೀಲಿ ಅಧಿಕಾರಪ್ರಾಪ್ತನಾದ ನನಗೆ ಅದೇ ಕೋರ್ಟಿನ ನಿಯಮಗಳನ್ನು ಉಲ್ಲಂಘಿಸುವದು ಶೋಭಿಸದು." ಮುಂತಾದ ತರ್ಕದ ಮಾತುಗಳನ್ನಾಡಿ ಗೆಳೆಯರಿಗೆ ಕೆಲ ಮಟ್ಟಿಗೆ ಸಮಾಧಾನಮಾಡಲೆತ್ನಿಸಿದೆನು.

ಆದರೆ, ಅವರಿಗೆ ನನ್ನ ಮಾತು ಬಿಂಬಿಸಿದಂತೆ ತೋರಲಿಲ್ಲ. ಭಿನ್ನ ಭಿನ್ನ ಸಂಗತಿಗಳಲ್ಲಿ ಭಿನ್ನ ಭಿನ್ನ ಪ್ರಕಾರಗಳಿಂದ ನಾವು ನಡೆಕೊಳ್ಳಬೇಕೆಂಬ ತತ್ವವು ಅವರಿಗೆ ಹೊಳೆಯಲಿಲ್ಲ. ಆದರೆ, ಸತ್ಯಾಗ್ರಹ ಮಾಡಿಯೇ ನನ್ನ ಇಡೀ ಆಯುಷ್ಯವು ಕಳೆದಿದೆ. ಆದರಿಂದ ಪ್ರಸಂಗವಶಾತ್ ಸ್ವೀಕರಿಸಿ ಹಿಡಿಯುವ ಮಾರ್ಗದ ಬೊಬೆಗನ್ನು ನಾನರಿತಿದ್ದೇನೆ. ಇಂಥ ವೃತ್ತಿಯು ಸತ್ಯಾಗ್ರಹದ ಪ್ರಮುಖ ಅಂಗವೆಂದು ನನಗೆ ಆ ಬಳಿಕ ಹೊಳೆಯಿತು. ಇಂಥ ವೃತ್ತಿಯಿಂದ ಅನೇಕಾವರ್ತಿ ನಾನು ಗಂಡಾಂತರದಲ್ಲಿ ಸಿಲುಕಿದ್ದೇನೆ; ಗೆಳೆಯರ ಅಸಂತೋಷವನ್ನೂ ಸಹಿಸಿದ್ದೇನೆ. ಆದರೆ, ಸತ್ಯವು ವಜ್ರದಷ್ಟು ಕಠೋರವಿರುತ್ತದೆ; ಹೂವಿನಷ್ಟು ಮೆತ್ತನ್ನಾಗಿರುತ್ತದೆ.

ವಕೀಲರ ಸಂಘದ ವಿರೋಧದಿಂದ ದಕ್ಷಿಣ ಆಫ್ರಿಕೆಯಲ್ಲಿ ಅನಾಯಾಸವಾಗಿ ನನ್ನದೊಂದು ಜಾಹೀರನಾಮೆಯಾಯಿತು. ಅನೇಕ ವಾರ್ತಾಪತ್ರಿಕೆಗಳು ವಿರೋಧಕರನ್ನು ನಿಂದಿಸಿದವು. ವಕೀಲರ ಸಂಘಕ್ಕೆ ಅಸೂಯೆಪ್ರೇರಿತವೆಂದೂ ನಿಷೇಧಿಸಿದರು, ಈ ಜಾಹೀರನಾಮೆಯಿಂದ ಕೆಲ ಮಟ್ಟಿಗೆ ನನ್ನ ಕೆಲಸವು ಸುಲಭವಾಯಿತು.

Wanted—Sub Agents in each Taluka for **India Equitable Insurance Co., Ltd.** on liberal terms.

Apply to -

Messrs. **V. B. Muzumdar & Co.,**

ANKOLA.

ಜಾಹೀರ ಬಿನ್ನಹವು.

ಶ್ರೀ.

ಸ॥ ನಮಸ್ಕಾರಗಳು. ಈ ವರ್ಷ ನವಂಬರದಲ್ಲಿ ಆಗುವ ಇಂಡಿಯನ ಲೆಜಿಸ್ಲೇಟಿವ್ಹ ಎಸೆಂಬ್ಲಿಯ ಚುನಾವಣೆಯ ಲ್ಲಿ ಮುಂಬಯಿ ಇಲಾಖೆಯೊಳಗಿನ ದಕ್ಷಿಣ ಭಾಗದಲ್ಲಿರುವ ಮುಸಲ್ಮಾನೇತರ ಮತದಾರರಿಂದ ಪುನಃ ಆರಿಸಿ ಬರುವಗೋಸ್ಕರ ನಾನು ಉಮೇದವಾರನಾಗಿರುತ್ತೇನೆಂಬ ಸಂಗತಿಯನ್ನು ತಮಗೆ ತಿಳಿಸಲಿಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ನಾನು ದಕ್ಷಿಣ ಭಾಗದೊಳಗಿನ ಮ್ಯುನಿಸಿಪಾಲಿಟಿಗಳಿಂದ ಮುಂಬಯಿಯ ಕಾನಡಾ ದಿಂ ಹಲಕ್ಕೆ ನಾಲ್ಕು ಸಾರೆ ಆರಿಸಲ್ಪಟ್ಟು ಸನ್ ೧೯೧೧ನೇ ಇಸ್ವಿಯಿಂದ ಸನ್ ೧೯೨೩ನೇ ಇಸ್ವಿಯ ವರೆಗೆ ಒಂದೇ ಸಮನೇ ಮುಂಬಯಿ ಇಲಾಖೆಯೊಳಗಿನ ಜನರ ಸೇವೆಯನ್ನು ಮಾಡಿರುತ್ತೇನೆ. ಸನ್ ೧೯೨೫ನೇ ಇಸ್ವಿಯಲ್ಲಿ ಇಂಡಿಯನ್ ಲೆಜಿಸ್ಲೇಟಿವ್ಹ ಎಸ್ಸೆಂಬ್ಲಿಗೆ ಆರಿಸಿ ಬರುವ ಬಗ್ಗೆ ನಾನು ಉಮೇದವಾರನಾಗಿ ನಿಂತಿದ್ದೆನು. ಆದರೆ ಆ ವರ್ಷದ ಸಪ್ಟೆಂಬರದಲ್ಲಿ ಕಲಕತ್ತೆಯಲ್ಲಾದ ಸ್ಪೇಶಲ್ ಕಾಂಗ್ರೆಸದ ಠರಾವಿನ ಪ್ರಕಾರ ಹಿಂದೆ ಸ್ವರಾಜ್ಯ ಪಕ್ಷದವರಿಗಿನ ಎಲ್ಲ ಕಾನೂನ ಮಂಡಲಗಳ ಮೇಲೆ ಬಹಿಷ್ಕಾರವನ್ನು ಹಾಕುವದು ಗೊತ್ತಾದ್ದರಿಂದ ನಾನು ನನ್ನ ಉಮೇದವಾರಿಯನ್ನು ಆಗ ಬಿಟ್ಟುಬಿಟ್ಟೆನು. ಮುಂದೆ ಸನ್ ೧೯೨೩ನೇ ಇಸ್ವಿಯ ಲ್ಲಿ ದಿಲ್ಲಿಯಲ್ಲಾದ ಸ್ಪೇಶಲ್ ಕಾಂಗ್ರೆಸದಲ್ಲಿ ಕಾನೂನ ಮಂಡಲಗಳಲ್ಲಿ ಪ್ರವೇಶಿಸಲಿಕ್ಕೆ ಅಪ್ಪಣೆಯು ದೊರೆತ ಕೂಡಲೆ ನಾನು ಎಸ್ಸೆಂಬ್ಲಿಗೆ ಉಮೇದವಾರನಾಗಿ ನಿಂತು ದಕ್ಷಿಣ ಭಾಗದಲ್ಲಿ ದೊಡ್ಡ ಬಹುಮತದಿಂದ ಆರಿಸಿ ಬಂದು ಈಗ್ಗೆ ಎಸ್ಸೆಂಬ್ಲಿಯ ಮೆಂಬರನಾಗಿರುತ್ತೇನೆ

ನಾನು ಯಾವಾಗಲೂ ಕಾಂಗ್ರೆಸದ ಪೂರ್ಣ ಅಭಿಮಾನಿಯಾಗಿರುತ್ತೇನೆ. ನನ್ನ ಈಗಿನ ಉಮೇದವಾರಿಗೆ ಮಹಾರಾಷ್ಟ್ರ ಪ್ರಾವಿನ್ಸಿಯಲ್ ಕಾಂಗ್ರೆಸ್ ಕಮಿಟಿಯುವರೂ, ಕರ್ನಾಟಕ ಪ್ರಾವಿನ್ಸಿಯಲ್ ಕಾಂಗ್ರೆಸ್ ಕಮಿಟಿಯುವರೂ, ರಾಷ್ಟ್ರೀಯ ಸಭೆಯ ವರ್ಕಿಂಗ ಕಮಿಟಿಯುವರೂ ತಮ್ಮ ಮಂಜೂರಿಯನ್ನು ಕೊಟ್ಟಿರುತ್ತಾರೆ.

ದಯಮಾಡಿ ದಕ್ಷಿಣ ಭಾಗದೊಳಗಿನ ಮತದಾರರು ನನ್ನಲ್ಲಿ ನಂಬಿಗೆಯನ್ನಿಟ್ಟು ನನ್ನನ್ನು ಪುನಃ ಆರಿಸಿಕೊಟ್ಟರೆ, ನಾನು ರಾಷ್ಟ್ರೀಯ ಸಭೆಯ ಆಜ್ಞೆಗೆ ಅನುಸರಿಸಿ ನಮ್ಮ ದೇಶದ ಸೇವೆಯನ್ನು ಮುನಮುಟ್ಟಿ ಮಾಡುವೆನೆಂದು ಖಂಡಿತವಾಗಿ ಹೇಳುತ್ತೇನೆ. ತಿಳಿಯುವದು, ದಯೆಯಿರಲಿ ಇಂತಿ ಬಿನ್ನಹ

ತಮ್ಮ ಸೇವಕನಾದ,

ಬೆಳಗಾವಿ, ತಾ ೫-೯-೩೬. } ದ. ವೆಂ. ಬೆಳವಿ, ಎಲ್‌ಎಲ್.ಬಿ ಎಮ್. ಎಲ್. ಎ

ಗೆಳೆಯರ ಗುಂಪಿನ

ಕನ್ನಡ] **ಸ್ವಧರ್ಮ.** [ಮಾಸಪತ್ರಿಕೆ

ಸಂಪಾದಕರು - ದ. ರಾ. ಬೇಂದ್ರೆ. ಬೀ ಎ

ವಾರ್ಷಿಕ ವರ್ಗಣಿ ೩—೦—೦

ಸಮಾಜದಲ್ಲಿ ಶಾಂತಿಪುಷ್ಟಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೆಳೆಗೆಗೆ ಸುವಿಚಾರವೇ ಸರಿಯಾದ ಸಾಧನ. ಇಂಥ ಈ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊರಡುವ ಸ್ವಧರ್ಮದ ಗುರಿ ಕನ್ನಡಿಗರು ಕೈಗೊಂಡು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಮಾಯಾಪತಿ, ಸ್ವಧರ್ಮ ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

ಉಚಿತ! ಉಚಿತ!!

ನನ್ನ ಶಾಸ್ತ್ರೀಯವಾದ ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ ಅಂತಹ ಶರೀರದಾರ್ಢ್ಯವನ್ನು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು. ನನ್ನಲ್ಲಿ ಕಲಿಯುತ್ತಿದ್ದವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೩ ಆಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ಕಳುಹಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ ಕಾಲಾತೀತವಾಗದ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕಾಗಿ ಬರೆಯಿರಿ.

ಪ್ರೊಫೆಸರ್ ಎಂ. ವಿ ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ.

ಶೆವರಲೆಟ್ ಮೋಟಾರಕಾರ್ ಏಜನ್ಸಿ, ಕೆನರಾ.



ನಾವು ಹೊಸ ಶೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿ ಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳಬಹುದು.

ಸೋಲಏಜಂಟ:—**ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ್, ಶಿರ್ಸಿ**

ಕುಮಟಾ ಏಜಂಟ:- **ಜಿ. ಡಿ. ಮಳಗಿಕರ ಎಂಡ್ ಕಂ.**

ಬಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲೋಪ್ ಹಾಗು ವಿ.ಚಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮಗ್ರಿಗಳು ಯೋಗ್ಯದರದಿಂದ ಪೂರೈಸುತ್ತೇವೆ.

G. D. Malgikar & Co,
KUMTA.

ಮೋಸಹೋಗಬೇಡಿರಿ!!

ದಿ ತೊರಸಲ ಮೋಟಾರ ಸರ್ವಿಸ, ಹೊನ್ನಾವರ-ಕುಮಟಾ.

ಘಟಕಳದೊಳಗಿನ ಪೆಸೆಂಜರರು ಘಟಕಳದಿಂದ ಕುಮಟೆಗೆ ಡ್ಯಾರೆಕ್ಟ ಟಿಕೀಟು ಕೊಂಡುಕೊಳ್ಳುವ ಬದಲು, ಕುಮಟೆಗೆ ಹೋರಡುವ ಮೋಟಾರ ಟಿಕೀಟುಗಳು **ಹೊನ್ನಾವರ ಬಂದರದಲ್ಲಿ ಸೋಯಿಂದ** ಮಾರಲ್ಪಡುವವು. ಮೋಟಾರ ಬಂಡಿಗಳು ನಿತ್ಯವೂ ನಾಲ್ಕು ಸಾರೆ ಓಡಾಡುತ್ತವೆ

ಮೋಟಾರ ಬಿಡುವ ಕಾಲಕ್ರಮ:— } ಬೆಳಿಗ್ಗೆ ೮ಕ್ಕೆ; ಪುನಃ ೧೦॥ಕ್ಕೆ. ಸಾಯಂಕಾಲ ೩॥ಕ್ಕೆ. ಪುನಃ ೫ಕ್ಕೆ.

ಟಿಕೀಟು ಸಿಗುವಸ್ಥಳ } ಬಂದರದಲ್ಲಿ—**ಗೋವಿಂದ ನಾಗಪ್ಪ** ಇವರ ದುಕಾನದಲ್ಲಿ. ಮೂಗಾರಕೇರಿಯಲ್ಲಿ—**ವಿ॥ ಪಂಡಿತ ಭಿಕ್ಕುರಾವ್.**

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತರ ಮನೇ ಸಾಮಾನು ಸಿಗುತ್ತವೆ.

ನಮ್ಮ ವಿಳಾಸ:—

ದಿ ನೋರ್ಥಕೆನರಾ ಟ್ರೇಡಿಂಗ ಕಂಪನಿ,
ಗಾಂಧಿ ಭುವನ,
ಕಾರವಾರ

ರಕ್ತಶುದ್ಧಿ-ಧಾತುವೃದ್ಧಿಕಾರಕ
"ಬಲವಂತ ಗುಟಿಕಾ."

ಈ ಬಲವಂತ ಗುಟಿಕೆಯು ಉತ್ತಮವಾದ ... ಗುಣವಾಗುವದು. ... ಕಳಿಸಿದರೆ ... ವಿ.ಪಿ. ... ಕಳಿಸಲಾಗುವದು.

ಪತ್ತೆ- ಎಸ್. ಬಿ. ಕದಂ, ಮತ್ತು ಸನ್ಸ್.
ಮು ಪೋ. ಸಿಪ್ಪಾಣಿ, ಜಿ. ಬೆಳಗಾಂವ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯಾವರ
ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು, ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮೂಲಕವಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಠರ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ. ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪೋರ್ಟಟೌನ, ಮದರಾಸ

ಕಿರ್ಲೋಸ್ಕರ
ಸೇಂಗಾ (ಭೈಮೂಗ) ಒಡೆಯುವ
ಪಾವರ ಹಾಗು ಕೈ-ಯಂತ್ರಗಳು.

ಪಾವರ ಯಂತ್ರ— "ಬಿಗ್ ಆರ್ಡರ್" ಎಂಬ ಶಬ್ದದಿಂದ ಮಾಡಲ್ಪಟ್ಟಿರುವದು ಗಂಟೆಯೊಂದಕ್ಕೆ ೧೦ ಚೀಲ ಕಾಳುಗಳನ್ನು ಒಡೆಯುವದು. ಈ ಯಂತ್ರವು ಏಳು ಅಶ್ವಶಕ್ತಿಯುಳ್ಳ ಎಂಜಿನ್‌ನಿಂದ ಆಗಿರುತ್ತದೆ.

ಕೈಯಂತ್ರ— ಇದಾದರೂ ಅಚ್ಚಿನದ್ದೇ. ಇದನ್ನು ತಿರುಗಿಸುವಲಿಕ್ಕೆ ಎರಡು ಆಳುಗಳು ಬೇಕು. ತಾಸಿಗೆ ೩೦೦ ಪೌಂಡು ಕಾಳುಗಳನ್ನು ಒಡೆಯುವದು.

ಬೆಲೆಯ ಬಗ್ಗೆ ತಿಳಿದು ಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರ }

ಪ್ರಯಾಣಿಕರಿಗೆ
ವಿಶೇಷ ಅನುಕೂಲ.

ನೇಮಿಸಿದ ಮೋಟರಿನ ವ್ಯವಸ್ಥೆ ಹಾಗೂ ವಸತಿಗೆ, ಊಟ ಮಾಡುವ ಬಗ್ಗೆ ಯೋಗ್ಯ ವ್ಯವಸ್ಥೆ ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ.—

... ಕುಮಟಾ ಹೊನ್ನಾವರ, ಭಟ್ಕಳ ... ಕುಮಟಾ, ಶಿರಸಿ, ಹುಬ್ಬಳ್ಳಿ; ... ಅಂಕೋಲಾ, ಕಾರವಾರ.

ಟೀಪು.— ಟಿಕೇಟು ಮುಂದಾಗಿ ಮಾಡಿಕೊಳ್ಳಬೇಕಾದವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬೇಕು.

ಅನಂತ ಮಂಗೇಶರಾವ ಸಶಿಹಿತ್ತಲ,
ಮೋಟರ ಏಜಂಟ,
ಕುಮಟಾ (ಉತ್ತರ ಕನ್ನಡ)

S. U. Narayanacharya & CO
Chaukamba, BENARES CITY.

ನಮ್ಮಲ್ಲಿ ಎಲ್ಲಾತರದ ರೇಶ್ಮೆ ಪೀತಾಂಬರ, ಜರಿ ಶಾಲು, ಜರಿ ಸೀರೆ, ಕಾಶ್ಮೀರ ಶಾಲು, ಕಿರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲ ಗಳ ಸಿಗುತ್ತವೆ ಕ್ಯಾಟಲಾಗ ಕೇಳುವವರಿಗೆ ಉಚಿತವಾಗಿ ಕಳಿಸಲಾದೀತು.

ವಿಳಾಸ — ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ.

ಅಮೃತಾಂಜನ.

ಇದರ ಉಪಯೋಗದಿಂದ, ಶಿರೋವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಜನರುಗಳು ಅಮೃತಾಂಜನವನು ಉಪಯೋಗಿಸುತಿರುವರೆ. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ನೆಗಡಿ, ಸಂಧಿವಾತ ಮೊದಲಾದ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg. No. B 1270 Monday October 4th, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೫೨.

ವರ್ಗಣಿದಾರರ ವರ್ಗಣೆ.

ಕುಮಟೆಯಲ್ಲಿ ಅಗಾವು:
ರೂಪಾಯಿ 2-4-0.
ಕುನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪೀ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಪ್ರತಿಸಾಲಿನ (೧೫ ಎಮ್ ಪೈಕ) ೮ ಸಾಲುಗಳವರೆಗೆ ರೂ. 1-0-
೮ ನಂತರ ಪ್ರತಿಸಾಲಿಗೆ 0-2-0.
ಜಾಹಿರಾತಿನ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವವು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೪ ಮಾಹೆ ಅಕ್ಟೋಬರ ಸನ್ ೧೯೨೬ ನೇ ಇಸವಿ.)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत २ रुपये;

रामबाण औषधें

भूक लावणारें,
मूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास चविकर.

क्याटलाग मागवा,

संडु फार्मास्युटिकल वर्क्स लिमिटेड,
मुंबई नं: १३

एजंट— मेसर्स पंडित आणी कंपनी,
तीर्थहळ्ळी.

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಪ್ರಿಯು ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಬಂಚಿ ಸುವಾಸಿಕ ಕಾಬೂಲಿ ಹಿಂಗು ೧೦ ತೊಲೆ ಡಬ್ಬಿ ೧ಕ್ಕೆ ೧—೮—೦. ಹಿಂಗಿನ ಅರ್ಕ ೪ ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿ ಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೊಲೆಯ ಡಬ್ಬಿ ೧ ಕ್ಕೆ ೧—೪—೦. ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ —೨೦—೦. ತಲೆಗೆ ಹಾಕುವ ಸುವಾಸಿಕ ಮಹಶರಾಬ ತೈಲ ೫ ತೊಲೆಯ ಬಾಟ್ಲಿ ೧ ಕ್ಕೆ ೦—೧೨—೦. ಹಲ್ಲಿನ ಪೌಡರು ತೊಲೆ ೧ ಕ್ಕೆ ೦—೮—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಬಂಚಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;

ಬರೇ ಒಂದು ತಿಂಗಳ ಬಗ್ಗೆ. ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ!! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಬೇಗನೇ ಬರೆಯಿರಿ.

ಪತ್ತೆ:— **Swan House: P B 503 P T Madras**

ಅತ್ಯಲ್ಪವಿವೆ! ಕೇವಲ ಉಚಿತ



ಉಚಿತ! ಉಚಿತ ಕೇವಲ ಉಚಿತ

"ಹಾರಾ" ಲೀವರ ರಿಜಿಸ್ಟರ್ಡ ಪೋಕೆಟ್ ವಾಚು ೧೮ ಕರೆಟ್ ರೋಲ್ಡ ಗೋಲ್ಡಿನದು. ಮುಚ್ಚಳದ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಗಾರರು ಅಚ್ಚು ಹಾಕಿರುತ್ತಾರೆ. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸ" ರಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ಹಾರಾ" ಲೀವರ ರಿಜಿಸ್ಟರ್ಡ ೧೮ ಕರೆಟ್ ರೋಲ್ಡ ಗೋಲ್ಡಿನ ಪೋಕೆಟ್‌ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಗೌರೀಹುಣ್ಣಿಮೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ ಜಯಕರ್ನಾಟಕ ಮಾಸಪತ್ರಿಕೆ

ಸಂಪಾದಕ- ಆಲೂರ ವೆಂಕಟರಾಯರು

ಇದರಲ್ಲಿ ವಾಙ್ಮಯಾತ್ಮಕ ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು! ಪ್ರಬಂಧ ಪರೀಕ್ಷೆಯು, ಜೇನಹುಟ್ಟು ನಾಟಕಾದಿಗಳು ಕೊಡಲ್ಪಡುವವು ಪ್ರತಿ ಸಂಚಿಕೆಯಲ್ಲಿ ಮೂರು ಸುಂದರ ಚಿತ್ರಗಳೂ ಒಗುತ್ತವೆ ಮಾದರಿ ಪ್ರತಿ [illegible] ೩೦ ಪುಟಗಳು [illegible]

[illegible] ಜಯ ಕರ್ನಾಟಕ ಧಾರವಾಡ

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ [illegible], ಚಿತ್ತ [illegible], ಎಲ್ಲ ತರದ ಜ್ವರ ಜ್ವರಗಳ್ಗೆ, ಬಿಳಿಜ್ವರ, [illegible] ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, [illegible] [illegible], ಸರ, ವಾತ, [illegible], ಸ್ವಪ್ನದೋಷ, ಗರ್ಭಾಶಯದ ಎಲ್ಲ ರೋಗ [illegible] (ಗಡಿಯ) [illegible] [illegible] ಆಮೇರಿಕನ ಫ್ರೆಂಚ ಇಂಗ್ಲಿಷ ಮತ್ತು ದೇಶಿ [illegible] ಔಷಧಗಳು [illegible] ಅಗ್ಗವಾಗಿ ಸಿಗುವವು



ಇಸಲ್ಲವೆ ಬಂದೂಕುಗಳ, ಎಲ್ಲ ತರದ [illegible] ನ ರಿಸ್ಟ್ವಾಚ್ ಸಾಮಾನುಗಳು, [illegible] ಸೊಕ್ಕಿರಿಸ ಮೋಟಾರ ಬಂಡಿಗಳು [illegible] ದಿಂದ ಸಿಗುವವು. ನಮ್ಮಲ್ಲಿಲ್ಲದ ನಿಮಗೆ ಅವಶ್ಯಕವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡುತ್ತೇವೆ.

ಎಸ್ ಎಲ್ ಥಾಕಪ್ಪ ಮತ್ತು ಬ್ರದರ.
ಶಿರಸಿ

ರಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:—
ತಬಲೆ, ಡಕ್ಕೆ ಪಗ್ಗೆರೆ.



೧ [illegible] ಪೆಟ್ಟಿಗೆ ಸಿಂಗಲರೀಡ [illegible] ೩೦, ೪೦, ೫೫, ೬೦
೨ ,, [illegible] ರೂ ೪೦, ೫೫, ೪೦, ೬೦, ೧೦೦
೩ [illegible] ಪೆಟ್ಟಿಗೆ ,, ರೂ ೬೫, ೭೫, ೧೦೦, ೧೨೫, ೧೪೦
೪ ತಬಲೆ (ಪ್ರತಿ ಪ್ರತಿಪತ್ತಕ್ಕೆ ಸಹಿತ) ರೂ ೧೬ [illegible], ೩೦
ಗ್ರಾಮೋಫೋನಿನ ಗ್ರ್ಯಾಡ ಕಿಂ ರೂ ೧॥,
ತಬಲಿ ಗ್ರ್ಯಾಪ ಕಿಂ ೧೨ ಆಣೆ.

ನಾಟಕಿ ಬಗ್ಗೆ ಕ್ಯಾಟಲಾಗು ಪುಕ್ಕಟೆ ದೊರಕುವದು

ಗೋಪಾಳ ಸಖಾರಾನು ಮತ್ತು ಕಂಪನಿ

ನಂ ೨೫೮, ವಿಠ್ಠಲವಾಡಿ ಎದುರಿಗೆ

ಕಾಳಬಾದೇವಿ ರೋಡ,
ಮುಂಬಯಿ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- [illegible] ಶಿರ್ಸಿ **ಕುಮಟಾ- ಹೊನ್ನಾವರ ಭಟ್ಕಳ** (೩) ಕುಮಟಾ, ಶಿರ್ಸಿ ಸಿದ್ದಾಪುರ- ಗೆರಸಪ್ಪಾ- ಜೋಗ (**Gersappa Falls**) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ [illegible] ಎಲ್ಲಾ ಸ್ಟೇಶನುಗಳಲ್ಲಿಯ [illegible] ವ್ಯವಸ್ಥೆ ಮಾಡಿದೆ

[illegible] ಆಫೀಸಿನಲ್ಲಿ ತಿಳಿಯಬಹುದು

M. Manjappa
PROPRIETOR.

[illegible] !   **ಅತ್ಯದ್ಭುತ !!**

ಜೀವನಾಧಾರ

[illegible] ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ

ಎಲಿಕ್ಸಿರ್ ಆಫ್ ಲೈಫ್

[illegible] ತಲೆನೋವು, ವಾಂತಿ, ಅತಿಸಾರ, ಜ್ವರ, [illegible] ಜ್ವರ [illegible] ಇವೆಲ್ಲವುಗಳನ್ನು ಕೂಡಲೆ ಹಲ್ಲುವ ಒಂದೇ ರಾಮಬಾಣವಿದು! [illegible] ! ಒಂದು ಸೀಸೆಯಿದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ !!!

ಒಂದು ಸೀಸೆಗೆ ರೂ [illegible] [illegible] ಸೀಸೆಗೆ ರೂ [illegible] ಟಪಾಲ ಖರ್ಚ ಬೇರೆ

ಜೀವನಾಧಾರ ಡಿಪೋ, ಮೈಸೂರು

ಬ್ರಾಂಚ - **ಜೀವನಾಧಾರ ಡಿಪೋ, ಹುಬ್ಬಳ್ಳಿ**

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ [illegible] ಬೇನೆಯು ಹೋಗುವದು [illegible] ವರ್ಷದ ಮುದುಕರ ಶಾಮುಕಾರ [illegible] ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು. ಜನನೇಂದ್ರಿಯದೊಳಗಿನ [illegible] ವ್ಯಾಧಿ [illegible] ಇಲ್ಲದಂತಾಗುವದು. ಮುದುಕರ ಶರೀರದಲ್ಲಿ [illegible] ಹೋಗುವ [illegible] ಉಂಟಾಗುವದು — [illegible] ದೋಷಿಕವಾದ [illegible] ದಿವಸಗಳಲ್ಲಿ ಗುಣಬರುವದು. [illegible] ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ [illegible] ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು. [illegible] ದಿವಸದಲ್ಲಿ [illegible] ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. [illegible] ಸುಖ ಆಗುವದು. ಮೈಯಲ್ಲಿ ಎಷ್ಟೇ ದಿವಸದ [illegible] ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸೊಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ [illegible] ಬಾಟಲಿಯಿಂದ [illegible] ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತು ೩—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲದಲ್ಲಿ ತರಿಸುವೆವು ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. ಅವನ ಬಾಟಲಿಗಳ ಕಿಮ್ಮತು ೧೨— ೦—೦ ಮತ್ತು ೧ ಬಾಟಲ ಪುಕ್ಕಟೆ ಕೊಡುವೆವು. ಟಪಾಲ ಖರ್ಚ ಬೇರೆ ಬೀಳುವದು. ವಿಹಂಗಿಕ [illegible] ಬಾಟ್ಲಿಗೆ ೧——೦ ೩ ಬಾಟ್ಲಿಗೆ ೩—೦—೦ [illegible] ೧೩೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ ಜಿ ಬೆಳಗಾಂವ.

ಉತ್ತರ ಕಾನಡಾ ಜಿಲ್ಲೆಯ ಕ್ರೈಸ್ತ ಬಂಧುಗಳಿಗೆ—

ಉತ್ತರ ಕಾನಡಾ ಜಿಲ್ಲೆಯ ಕೆಥೊಲಿಕ್ ಕ್ರೈಸ್ತ ಬಂಧುಗಳು ತಾ. ೨೯-೯-೧೯೩೭ ನೇಗೆ ಬರೆಯುವದೇನಂದರೆ—

ಮುಂಬಯಿಯ 'ಟೈಮ್ಸ ಆಫ್ ಇಂಡಿಯಾ' ಮುಂತಾದ ವರ್ತಮಾನ ಪತ್ರಗಳಲ್ಲಿ ಪೋಪ ಗುರುಗಳು ಬ್ರಿಟಿಶ ಹಿಂದುಸ್ಥಾನದೊಳಗಿನ ಕ್ರೈಸ್ತ ಶಿಷ್ಯವರ್ಗವನ್ನು ಪೋರ್ತುಗೀಜ ಪಾದ್ರಿಗಳ ಸ್ವಾಧೀನದೊಳಗಿಂದ ತಪ್ಪಿಸಿ, ಮುಂಬಯಿ ಪ್ರೊಪೆಗಾಂಡಾ ಮಿಶನಿನ ವಶಕ್ಕೆ ಕೊಡುವ ಆಲೋಚನೆಯಲ್ಲಿದ್ದಾರೆಂದು ದಟ್ಟ ಸುದ್ದಿ ಹಬ್ಬಿರುವದಾಗಿ ಪ್ರಸಿದ್ಧವಾಗಿದೆ. ನಮ್ಮ ಜಿಲ್ಲೆಯು ಮುಂಬಯಿ ಇಲಾಖೆಗೆ ಒಪ್ಪಿದ್ದಿಷ್ಟ, ಈ ಯೋಜನೆಯಂತೆ ಈ ಜಿಲ್ಲೆಯೊಳಗಿನವರು ಮುಂಬಯಿಯ ಆರ್ಚಬಿಶಪ್‌ರಾದ ಡಾ| ಅಲ್ಬಾನ ಗುಡಿಯರರವರ ಕೈಕೆಳಗೆ ಹೋಗುವದು ಹಾಗೆ ಅವರ ಅತಳತೆಗೆ ಹೋಗುವಂತೆ ನಿರ್ಮಿಸಲು ನಮ್ಮ ಧರ್ಮಗುರುವಾದ ಕ್ರೈಸ್ತ ಮಹಾತ್ಮನೆಡೆಗೆ ನಾವು ಹಗಲಿರುಳು ಪ್ರಾರ್ಥಿಸತಕ್ಕದ್ದು. ಈ ಯೋಜನೆಯಿಂದ ನಮ್ಮಲ್ಲಿಯ ಕ್ರೈಸ್ತರ ಉದ್ಧಾರವಾಗುವ ಹಾಗಿದೆ. ಇಲ್ಲಿಯ ಮಿ| ಸಿಲ್ವಾ ವಕೀಲರವರು 'ಎಂಗ್ಲೋ ಲುಸಿಟಾನೋ' ಪತ್ರದಲ್ಲಿ ಒಂದು ಲೇಖವನ್ನು ಪ್ರಕಟಿಸಿದ್ದರು. ನಾವು ನೂರಾರು ವರ್ಷಗಳಿಂದ ಪೋರ್ತುಗಾಲದೊಳಗಿನ ಪಾದ್ರಿಗಳ ಸ್ವಾಧೀನದಲ್ಲಿರುವೆವು. ವಿದ್ಯೆ, ಧರ್ಮ, ನೀತಿ ಮುಂತಾದ ಯಾವದೇ ಸುಧಾರಣೆಯಿಲ್ಲದೇ ಕಗ್ಗತ್ತಲೆಯಲ್ಲಿ ಬೆಳಕು ಕಾಣದೆ ಬಿದ್ದಿರುವೆವು. ಮಂಗಳೂರ, ಬೆಂಗಳೂರ, ಮುಂಬಯಿ ಮುಂತಾದ ಕಡೆಗಳಲ್ಲಿಯೂ ಇದೇ ಸ್ಥಿತಿ ಇತ್ತು. ಆದರೆ, ಅಲ್ಲಿ ಜೆಸುಇಟ ಪಂಥದ ಪಾದ್ರಿಗಳು ಗುರುಗಳಾದ್ದರಿಂದ ಅವರ ಸ್ಥಿತಿಯು ಬಹಳವಾಗಿ ಸುಧಾರಿಸಿರುವದು. ಜೆಸುಇಟ ಪಾದ್ರಿಗಳು ನಮ್ಮ ಕಡೆ ಬಂದರೆ, ನಮ್ಮ ಉದ್ಧಾರವಾಗುವ ಹಾಗಿದೆ.

ಹೀಗಿರುವಾಗ ಮುಂಬಯಿಯಲ್ಲಿ ಡಾ| ರಿಬೆರೋ, ಜೋಸೆಫ್ ಫರ್ನಾಂಡಿಸ, ಗೊನ್ಸಾಲ್ವಿಸ ಮುಂತಾದವರು ಏಪ್ರಿಲ ೨೫ ನೇ ತಾರೀಖಿಗೆ ಮುಂಬಯಿಯಲ್ಲಿ ಒಂದು ಕೂಟವನ್ನು ಸೇರಿಸಿ, ತಮಗೆ ಪೋರ್ತುಗಾಲದ ಪಾದ್ರಿಗಳೇ ಬೇಕೆಂದು ತೀರ್ಮಾನಿಸಿರುವದಲ್ಲದೆ, ಪೋಪ ಗುರುಗಳಿಗೆ ಮೆಮೋರಿಯಲ್ ಎಂಬ ಅರ್ಜಿಯನ್ನೊಂದು ತಯಾರಿಸಿ ಕಳುಹಿಸಿರುವರಾಗಿಯೂ ಆಗಸ್ಟ ೧೯ ನೇ ತಾರೀಖಿನ 'ಗೋವಾ ಮೇಲ್' ಪತ್ರಿಕೆಯಿಂದ ತಿಳಿಯುತ್ತದೆ. ಈ ಅರ್ಜಿಯ ಮೇಲೆ ಕ್ರೈಸ್ತರ ಸಹಿಗಳನ್ನು ಕೊಳ್ಳುವ ಆಲೋಚನೆ ನಡೆದಿರುವದಂತೆ. ಇದೊಂದು ದುರ್ದೈವದ ಸಂಗತಿಯು. ಬಡ ಕ್ರೈಸ್ತ ಬಾಂಧವರ ಉದ್ಧಾರದ ಯೋಜನೆಯನ್ನು ತಡೆಯುವ ಯೋಜನೆಯಿದು. ಡಾ| ರಿಬೆರೋ ಮುಂತಾದ ಪುಣ್ಯಾತ್ಮರು ನಮ್ಮ ಜಿಲ್ಲೆಗೆ ಸಹಿ ಕೊಳ್ಳಲು ಬರದಿದ್ದರೆ, ನಮ್ಮ ಮೇಲಿನ ಆಪತ್ತೊಂದು ದೂರವಾಗುತ್ತಿತ್ತು.

ನಾವು ಸಾಕಷ್ಟು ಸುಮ್ಮನಿರಕೂಡದು. ನಮ್ಮ ಸ್ಥಿತಿ-ಗತಿಯನ್ನೆಲ್ಲ ವಿಶದವಾಗಿ ವಿವರಿಸಿ, ಒಂದು ಅರ್ಜಿಯನ್ನು ತಯಾರಿಸಬೇಕು. ಮತ್ತು ನಮಗೆ ಮುಂಬಯಿ ಇಲಾಖೆಯ ಆರ್ಚಬಿಶಪ್‌ರ ಗುಡಿಯರ ಗುರುಗಳ ವಶಕ್ಕೆ ಒಪ್ಪಿಸಬೇಕೆಂದು ಪೋಪ ಗುರುಗಳೊಡನೆ ಬೇಡಿಕೊಳ್ಳಬೇಕು. ಇದರಿಂದ ನಮಗೆ ಕಲ್ಯಾಣವಾಗುವದು.

ಪೋರ್ತುಗಾಲದೊಳಗಿನ ಪಾದ್ರಿಗಳ ಭಕ್ತರು ನಿಮಗೆ ಗಂಟುಬಿದ್ದರೆ, ದಾಕ್ಷಿಣ್ಯಕ್ಕೊಳಗಾಗಿ ಅವರು ತಂದ ಅರ್ಜಿಯ ಮೇಲೆ ಸಹಿ ಹಾಕಬೇಡಿರಿ. ಹಿಂದೆ ಒಮ್ಮೆ ಇಂಥಾದ್ದೇ ಒಂದು ಪ್ರಕಾರವು ಸಂಭವಿಸಿತ್ತು. ನಮ್ಮ ಜಿಲ್ಲೆಯ ಕಲೆಕ್ಟರರು 'ಗೋವೆಯ ಪಾದ್ರಿಗಳು ಬೇಕೋ? ಜೆಸುಇಟರು ಬೇಕೋ?' ಎಂದು ಕೇಳಿದ್ದರು. ಆಗ ಗೋವಾ ಪಾದ್ರಿಗಳ ಒತ್ತಾಯದಿಂದ ಕಾರವಾರದೊಳಗಿನ ಕೆಲವರು, ಗೋವಾ-ಸಂಪ್ರದಾಯದವರ ಕೂಟವನ್ನಾಗಿ ಇಷ್ಟ ಬಾಂಧವರಿಗೆ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಒಳ್ಳೇ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚೆಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೩—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ

——೦——

½ ಔಂಸಿಗೆ	ರೂ	೨—೦—೦
¼ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಕೇಳಲಿಕ್ಕೆ ಮರೆಯಬೇಡಿರಿ!



"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY**

ತಪ್ಪು ಗ್ರಹಿಕೆ ಕೊಟ್ಟು ಗೋವೆಯ ಪಾದ್ರಿಗಳೇ ಬೇಕೆಂದು ಕಲೆಕ್ಟರರಿಗೆ ತಿಳಿಸಿದ್ದರು. ಅವರ ಫಲವನ್ನು ೧೫-೧೬ ಸಾವಿರ ಕೆಥೊಲಿಕ್ ಪ್ರಜೆಗಳು ಇನ್ನೂ ಅನುಭೋಗಿಸುತ್ತಿದ್ದಾರೆ. ಕೆಲವು ದಿವಸಗಳ ಹಿಂದೆ ಮಂಗಳೂರದೊಳಗಿನ ಕೆಲವು ಪ್ರಮುಖರು ನಮ್ಮ ಉತ್ತರ ಕನ್ನಡ ಜಿಲ್ಲೆಯೊಳಗಿನ ಕ್ರೈಸ್ತ ಜನರನ್ನು ಮಂಗಳೂರ ಸೆಕ್ಯುಲರ ಪಾದ್ರಿಗಳ ಕೈಕೆಳಗೆ ಕೊಡುವ ಬಗ್ಗೆ ಒಂದು ಅರ್ಜಿಯನ್ನು ತಯಾರಿಸಿ ಅದರ ಮೇಲೆ ತಮ್ಮ ಜನರ ಮತ್ತು ಮುಂಬಯಿಯಲ್ಲಿ ನೌಕರರಾಗಿದ್ದ ನಮ್ಮ ಕಡೆಯ ಅಜ್ಞಾನಿಗಳ ಸಹಿಗಳನ್ನು ಪಡಕೊಂಡು ಪೋಪ ಗುರುಗಳಿಗೆ ಕಳಿಸಿರುತ್ತಾರಂತೆ. ಸಹಿ ಕೊಟ್ಟವರಿಗೆ ನಿಜವಾದ ಹಕೀಕತು ತಿಳಿದ ಬಳಿಕ, ಅವರು ಪಶ್ಚಾತ್ತಾಪ ಪಡುತ್ತಿರುವರು. ಕಾರಣ ನಮ್ಮಲ್ಲಿಯ ಕ್ರೈಸ್ತ ಬಾಂಧವರು ನಮ್ಮನ್ನಿಲ್ಲಿ ಪಾದ್ರಿಗಳಿಂದ ವಿಮೋಚಿಸಿ, ಜೆಸುಇಟ ಮಿಶನರಿಗಳ ಕಡೆಗೆ ವಹಿಸಬೇಕೆಂದು ಸರಕಾರಕ್ಕೂ, ಪೋಪ ಗುರುಗಳಿಗೂ ಬಿನ್ನೈಸಿಕೊಳ್ಳಬೇಕು. ಕೂಡಲೇ ನಾವು ಈ ಕೆಲಸವನ್ನು ಕೈಕೊಳ್ಳದಿದ್ದರೆ, ಇನ್ನು ನೂರಾರು ವರುಷಗಳ ತನಕ ನಾವು ಹೀಗೆಯೇ ಬಳಲುತ್ತಿರಬೇಕಾಗುವದು. ಕಾರಣ ಬಾಂಧವರೇ, [illegible] ಮುಕ್ತಿ ಆತ್ಮೋದ್ಧಾರ ಕಾರ್ಯ ನಡಸಲು ಉದ್ಯುಕ್ತರಾಗಿರಿ. ಸಮಯವು ಈಗ ಅನುಕೂಲವಿದೆ. ಇದನ್ನು ನಾವು ಕಳಕೊಂಡರೆ ಮುಂದೆ ಪಶ್ಚಾತ್ತಾಪ ಪಡಬೇಕಾಗುವದು. ಇತ್ಯಾದಿ.

ಹುಳದ ಪ್ರೇಮು!

(ರಶಿಯಾ ದೇಶದ ಸೆಂಚೋನಿಕಾ)

ಇದೀಗಲೇ!

ನೂತನವಾಗಿ ನಮ್ಮ ಕೈಸೇರಿದೆ!!

ಬೇಗನೇ ತರಿಸಿ ಸಂಗ್ರಹಿಸಿರಿ!

ಪತ್ತೆ-**ಮೆಸರ್ಸ ಪಿ. ಸಿ. ಎಂಡ್ ಸಿ. ಟೊಲಕೌಸ್ಕಿ,**

ಪಿ. ಎಂಡ್ ಸಿ. ಟೊಲಕೌಸ್ಕಿ ಕಂಪನಿಯವರು,

೩, ೫, ಮತ್ತು ೭ ಧನಜಿ ಸ್ಟ್ರೀಟ್, **ಮುಂಬಯಿ.**

ದರ:- ೫ ರತ್ತಲು ವರೆಗೆ ಕೊಳ್ಳುವವರಿಗೆ ರತ್ತಲಿಗೆ ರೂ. ೧೬/- ರಂತೆ.

೫ ರತ್ತಲಿಗೆ ಮಿಕ್ಕಿ ಕೊಳ್ಳುವವರಿಗೆ ರತ್ತಲಿಗೆ ರೂ. ೧೫/- ರಂತೆ

ಅಂಚೆ ವೆಚ್ಚ ಪ್ರತ್ಯೇಕ.

Wanted-- Sub-Agents in each Taluka for **India Equitable Insurance Co., Ltd.** on liberal terms.

Apply to -

Messrs. **V. B. Muzumdar & Co.,**

ANKOLA.

ತಿಳಿಗೇಡಿತನದ ಪ್ರದರ್ಶನ!

'ಕಾನಡಾ ಧುರೀಣ'ದ ತಾ ೨೮-೯-೧೯೩೩ನೆಯ ಸಂಚಿಕೆಯಲ್ಲಿ ಪ್ರಸಿದ್ಧವಾಗಿರುವ ಹೊನ್ನಾವರದ 'ಶೋಧಕ'ನೆಂಬ ಲೇಖಕನ ಪತ್ರವೂ, 'ನಾನೇ ತ್ರಯಸ್ಥ'ನೆಂಬ ಅಹಂಭಾವದ ಬಿರುದನ್ನು ತಾಳುವ ಇನ್ನೊಬ್ಬ ಲೇಖಕನ ಪತ್ರವೂ ಅವುಗಳಲ್ಲಿ ಕಂಡುಬರುವ ವಿಷಯದ ಅಜ್ಞಾನ ಮತ್ತು ಅಸಂಬದ್ಧ ಸಮರ್ಥನೆ ಇವುಗಳ ಮೂಲಕ ಬಲ್ಲಾದವರಿಗೆ ಮನೋರಂಜಕವಾಗಿ ಕಾಣದೆ ಇರಲಾರವು. 'ವೃತ್ತಕಾರರ ಹೊತ್ತಿಗೋದ ರೋಡ"ವನ್ನು ಬಯಲಿಗೆ ಹಾಕುವ ರಭಸದಲ್ಲಿಯೂ 'ಪ್ರತಿ ಸವಾಲು"ಗಳನ್ನು ಕೇಳಿ ನಿರುತ್ತರ ಮಾಡುವ ಬರಿ ಜಂಬದಲ್ಲಿಯೂ ಇವರು ಪ್ರದರ್ಶಿಸಿರುವ ತಮ್ಮ ತಮ್ಮ ತಿಳಿಗೇಡಿತನವನ್ನು ನೋಡಿ ಸಹೃದಯ ವಾಚಕರು ಕನಿಕರ ಪಡದೆ ಇರಲಾರರು. ಇರಲಿ.

'ಶೋಧಕ'ನ ಮೊದಲನೆಯ ಸಿದ್ಧಾಂತವೇನೆಂದರೆ-"ಯಾವದೇ ಪತ್ರವ್ಯವಹಾರವನ್ನು ವೃತ್ತಪತ್ರಕಾರರು ಪ್ರಕಟಿಸಿದೊಡನೆಯೇ ಅವರು ಆ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸಹ ಅದರೊಂದಿಗೆ ಪ್ರಕಟಿಸಲೇಬೇಕು; ಇಲ್ಲವಾದರೆ ಅವರ ಮೌನದ ಮೂಲಕ ಆ ಎಲ್ಲ ಪತ್ರವ್ಯವಹಾರದೊಳಗಿನ ಅಭಿಪ್ರಾಯಗಳೆಲ್ಲ ಅವರಿಗೆ ಸಮ್ಮತವಿರುವುವೆಂದು ಸಾಧಾರವಾಗಿ ತಿಳಿಯಬಹುದು!" ಇಂಥ ವಿಚಿತ್ರ ತರ್ಕ ಪದ್ಧತಿಯನ್ನು ಅವಲಂಬಿಸಿ ಈ ಸಿದ್ಧಹಸ್ತ 'ಶೋಧಕ'ನು, ಶ್ರೀ| ಯಾಜಿಯವರಿಗೆ ಶ್ರೀ| ಗೋಪಿಯವರು ಕೊಟ್ಟ ನಿರ್ಣಾಯಕ ಮತದ ಬಗ್ಗೆ ಕಾಂಗ್ರೆಸ್ಸನೆಂಬ ಯಾವನೊಬ್ಬ ಲೇಖಕನು 'ವೃತ್ತ'ದಲ್ಲಿ ಪ್ರಕಟಿಸಿದ ಒಂದು ಸಣ್ಣ ಪತ್ರದೊಳಗಿನ ಅಭಿಪ್ರಾಯದ ಸಂಬಂಧದಿಂದಲೂ, ಹಿಡುವ ಪದವನ್ನು ಸಮರ್ಥಿಸುವ ಇನ್ನೊಬ್ಬ ಲೇಖಕನ ಪತ್ರದೊಳಗಿನ ವಾದಗಳನ್ನೂ ವೃತ್ತಕಾರರ ಮೇಲೆ ಹೊರಿಸುವನು, ಮತ್ತು ಈ ಸಬಲ ಆಧಾರದ ಮೇಲೆ ವೃತ್ತಕಾರರ ಅಭಿಪ್ರಾಯಗಳೊಳಗಿನ ವಿಸಂಗತತೆಯನ್ನು ತೋರಿಸಲು ಟೊಂಕ ಕಟ್ಟಿರುವನು! ಮೇಲೆ ಕಾಣಿಸಿದ ವಿಚಿತ್ರ ಶೋಧದ ಜನಕನು 'ಶೋಧಕ'ನೆಂಬ ಬಿರುದಿಗೆ ಅಪಾತ್ರನೆಂದು ಯಾರು ಹೇಳುವರು?

ಡಾ| ಯಾಜಿಯವರ ಪಕ್ಷದಿಂದ ತನ್ನ ಜಾದಾ ಮತವನ್ನು ಶ್ರೀ| ಗೋಪಿಯವರು ಕೊಟ್ಟಿದುದನ್ನು ಸಮರ್ಥಿಸುವಾಗ ಡಾ| ಯಾಜಿಯವರು 'ಶುದ್ಧ' ರಾಷ್ಟ್ರೀಯ ಪಕ್ಷದವರಾದ್ದರಿಂದ ಅವರಿಗಾಗಿ ಕೊಟ್ಟ ವಿಶೇಷ ಮತವು ರಾಷ್ಟ್ರೀಯ ಪಕ್ಷದ ಅಭಿಮಾನಿಗಳಿಗೆ ಗ್ರಾಹ್ಯವಾಗಬೇಕೆಂದು 'ಶೋಧಕ'ನ ಆಗ್ರಹವು. ಆದರೆ, ಸ್ಥಾನಿಕ ಬೋರ್ಡಿನ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷದವರನ್ನೇ ಆದರಿಸಬೇಕೆಂಬ ತತ್ವವನ್ನು ಡಿ| ಲೋ| ಬೋರ್ಡಿನವರು ಒಂದಾವ ತೀರ್ಮಾನ ಕೈಕೊಟ್ಟದ್ದು ನಾವು ಸೋದಾಹರಣ ನೋಡುತ್ತಿರುವಾಗ, ಈಗ ಮಾತ್ರ ಆ ತತ್ವವನ್ನು ಪುರಸ್ಕರಿಸಿ ಸಮರ್ಥಿಸುವ ಬಗೆ ಹೇಗೆ? ಇನ್ನೊಂದು ಸಂಗತಿಯೇನೆಂದರೆ,- ಕಾರವಾರದಲ್ಲಿ ಡಾ| ಯಾಜಿಯವರು ಸ್ಥಾನಿಕ ಬೋರ್ಡಿನ ಅಂತ್ಯಜ ವರ್ಗದ ಮೆಂಬರನಿಗೆ ವಾಯ್ಸಚೆಯರಮನ್ನಿಯ ಬಗ್ಗೆ ತಮಗೆ ಮತಕೊಡಬೇಕೆಂದು ಹೇಳಿಕೊಂಡಾಗ, ಅವನು ಚೆಯುರಮನ್ನಿಯ ಬಗ್ಗೆ ನೀವು ಯಾರಿಗೆ ಮತ ಕೊಡಬೇಕೆಂದಿರುವಿರೆಂದು ಡಾ| ಯಾಜಿಯವರಿಗೆ ಕೇಳಿದನಂತೆ. 'ಶುದ್ಧ' ರಾಷ್ಟ್ರೀಯ ಪಕ್ಷದ ಮಹಾಶಯರು ಡಾ. ಹಟ್ಟಂಗಡಿ ಅವರಿಗೆ ಕೊಡುವೆವೆಂದು ಹೇಳಿಬಿಟ್ಟರಂತೆ! ಖಾದಿಯನ್ನು ಧರಿಸುವವರೂ, ರಾಷ್ಟ್ರೀಯ ಪಕ್ಷದವರೂ ಆದ ನೀವು ಹೀಗೆ ಹ್ಯಾಗೆ ಮಾಡಬಹುದೆಂದು, ವಿಶೇಷ ಪಾಂಡಿತ್ಯವನ್ನೂ ತರ್ಕವನ್ನೂ ಅರಿಯದ ಸಾಧಾರಣ ಬುದ್ಧಿಯ ಆ ಅಂತ್ಯಜ ಸಭಾಸದನು ಡಾ. ಯಾಜಿಯವರಿಗೆ ಪ್ರಶ್ನೆ ಮಾಡಿದನಂತೆ. "ರಾಷ್ಟ್ರೀಯ ಪಕ್ಷಕ್ಕೂ, ಸ್ಥಾನಿಕ ಬೋರ್ಡ ಚುನಾವಣೆಗೂ ಸಂಬಂಧವೇನು?" ಎಂದು ಉತ್ತರವನ್ನು ಕೊಟ್ಟುಬಿಟ್ಟು, ಡಾ| ಯಾಜಿಯವರು ದಾರಿ ಹಿಡಿದರಂತೆ! ಹೀಗಿನ ವದಂತಿಯು ಕಾರವಾರದಿಂದ ನಮ್ಮಲ್ಲಿ ಅಂಕೋಲೆ ವರೆಗೆ ಹಬ್ಬಿ ಎಷ್ಟೋ ದಿನಗಳಾದವು. ಅದು ಹೊನ್ನಾವರ ವರೆಗೆ ಮುಟ್ಟದಿರಲಿಕ್ಕೆ ಸಾಕು. ಆದರೆ, ಇದು ನಿಜವೋ ಹ್ಯಾಗೆ? ಇದು ಹೌದಾದರೆ, ಶ್ರೀ| ಯಾಜಿಯವರು ರಾಷ್ಟ್ರೀಯ ಪಕ್ಷದವರೆಂಬುವರಿಂದ ಉಂಟಾಗುವ ಅವರ ಹಕ್ಕು ಎಲ್ಲಿ ಉಳಿಯಿತು? ಇವರು ಪುರಸ್ಕರಿಸಿದ ತತ್ವವನ್ನು ಅಂಗೀಕರಿಸಿದ ಮೇಲೆ, ಈಗ ಇವರಿಗೆ ಕೊಟ್ಟ ಜಾದಾ ಮತವನ್ನು ಮಾತ್ರ ಇವರು ರಾಷ್ಟ್ರೀಯ ಪಕ್ಷದವರೆಂದು ಕಾಣಿಸಿ ಸಮರ್ಥಿಸಲು ಹವಣಿಸುವ ಬಗೆ ಹೇಗೆ? ಈ ವರೆಗೆ ನಿರೂಪಿಸಿದಂಥ ಸಂಬಂಧವು ಸ್ಥಾನಿಕ ಬೋರ್ಡ ಚುನಾವಣೆಗೂ, ರಾಷ್ಟ್ರೀಯ ಪಕ್ಷಕ್ಕೂ ಈಗ ಮಾತ್ರ ಬಂತೋ ಹ್ಯಾಗೆ? ಇದರ ಮೇಲಿಂದ ತಮಗೆ ಅನುಕೂಲವಾದ "ಸಂದರ್ಭದಲ್ಲಿ ಮಾತ್ರ ರಾಷ್ಟ್ರಪಕ್ಷದವರೆಂದು ಕುಣಿಯುವವರು," ವೃತ್ತಕಾರರ ಪರಿವಾರದವರೋ, ಅಥವಾ "ಶುದ್ಧ" ರಾಷ್ಟ್ರೀಯ ಪಕ್ಷದವರ ಪರಿವಾರದವರೋ, ಎಂಬುದು ವ್ಯಕ್ತವಾಗುತ್ತದಲ್ಲವೇ?

ಕಣ್ತೆರೆದು ನೋಡಿರಿ!

"ಪ್ರತಿಸವಾಲು"ಗಳನ್ನು ಕೇಳಲಿಕ್ಕೆ ಎದೆತಟ್ಟಿ 'ನಾನೇ ತ್ರಯಸ್ಥ'ನೆಂದು ಮುಂದೆ ಬಂದಿರುವ ಆ ಇನ್ನೊಬ್ಬ ಲೇಖಕನು ಸಭೆಗೆ ಬಂದ ಪ್ರತಿಷ್ಠಿತರಿಗೆ ಯೋಗ್ಯ ಸ್ಥಾನ ಕೊಡಲಿಕ್ಕೆ ಕಾಯಿದೆಯ ಆಧಾರವ್ಯಾವುದೆಂಬ ಅರ್ಥದ ಒಂದು ಸವಾಲು ಕೇಳಿರುವನು. ಆದರೆ, ವೃತ್ತದ ತಾ. ೨೫ನೇ ಸಪ್ಟೆಂಬರದ ಸಂಚಿಕೆಯಲ್ಲಿ 'ತ್ರಯಸ್ಥ'ನು ಡಿ. ಲೋ. ಬೋ. ಅಧ್ಯಕ್ಷರಿಗೆ ಈ ವಿಷಯದಲ್ಲಿ ಸವಾಲು ಎಂದೂ ಕೇಳಿರುವದಿಲ್ಲವೆಂಬ ಸ್ಪಷ್ಟವಾದ ಸಂಗತಿಯು, ಅವನು ಆ ಪತ್ರವನ್ನು ಕಣ್ತೆರೆದು ಇನ್ನೊಮ್ಮೆ ಓದಿದರೆ ಅವನಿಗೆ ಹೊಳೆಯದಿರದು. ಶ್ರೀ| ಮಾಳಕೇರರಿಗೆ ಅಧ್ಯಕ್ಷ ಶ್ರೀ| ಗೋಪಿಯವರು ಡಿ. ಲೋ. ಬೋ. ಸಭೆಯಲ್ಲಿ ಭಾಷಣ ಮಾಡಲಿಕ್ಕೆ ಕೊಟ್ಟದ್ದು ನಿಯಮಬಾಹ್ಯವೋ, ಗ್ರಾಹ್ಯವೋ ಎಂಬುದೊಂದೇ ಸಂಗತಿ ಈಗ ಉಳಿಯಿತು. ವೃತ್ತಕಾರರ 'ಮನೋಮಾಲಿನ್ಯ'ವನ್ನು ಪ್ರಕಟಿಸಲು ಹವಣಿಸುವ "ಶೋಧಕ"ನೂ, ಅವರ 'ಪಕ್ಷಾಂಧತೆಯನ್ನು' ತೋರಿಸಿ ಕೊಡಲು ವೃಥಾ ಗರ್ವದಿಂದ ಮುಂದೆ ಬಂದಿರುವ 'ನಾನೇ ತ್ರಯಸ್ಥ'ನು ಉತ್ತರ ಕೊಡತಕ್ಕ ಬೇರೊಂದು ಮಾತೆಂದರೆ, ಡಾ| ಹಿರೇಕೆರೂರರಾದ ಗೋಖಲೆಯವರಿಗೆ ಮಾತ ಆಡಲಿಕ್ಕೆ ಕೊಟ್ಟರೆಂಬ ಉದಾಹರಣೆಯನ್ನು ಮುಂದೊಡ್ಡಿ ಪಕ್ಷಾಂಧತೆಯ ಮೂಲಕ ತಮ್ಮಲ್ಲುಂಟಾದ ಅಂಧತ್ವವನ್ನು ಮಾತ್ರ ಪ್ರಕಟಿಸಿರುವರು. ಆದ್ದರಿಂದ ನಾನು ಅವರಿಗೆ ಒಂದೇ ಸಂಗತಿ ಹೇಳುವದೇನೆಂದರೆ— ಒಮ್ಮೆ ಕಣ್ತೆರೆದು ಲೋಕಲ ಬೋರ್ಡ ಆಕ್ಟಿನ ಕಲಮುಗಳನ್ನು ಓದಿರಿ; ಕಲಮು ೪೦ ನೇದನ್ನು ಕಣ್ತೆರೆದು ನೋಡಿರಿ; ಮತ್ತು ಮಿ| ಗೋಖಲೆಯವರಿಗೆ ಮಾತಾಡಗೊಟ್ಟದ್ದು ವೃತ್ತಕಾರರು ಲಕ್ಷಿಸಲಿಲ್ಲೆಂಬುದರಿಂದ ಅವರ ಮನೋಮಾಲಿನ್ಯವು ವ್ಯಕ್ತವಾಗುತ್ತದೋ, ಅಥವಾ ಈಗ ವೃತ್ತಕಾರರ ವಿಷಯದಲ್ಲಿರುವ ನಿಮ್ಮ ಮನೋಮಾಲಿನ್ಯವು ವ್ಯಕ್ತವಾಗುತ್ತದೋ, ಎಂಬುದನ್ನು ಸ್ಪಷ್ಟವಾಗಿ ಹೇಳಿರಿ. ಆ ಕಲಮಿನಲ್ಲಿ ಸರಕಾರದವರು ಡಿ| ಡಾಯರೆಕ್ಟರ ಆಫ್ ಎಗ್ರಿಕಲ್ಚರ ಮುಂತಾದ ಕೆಲವು ವಿಶಿಷ್ಟ ಅಧಿಕಾರಿಗಳಿಗೆ ಮಾತ್ರ ಅವರು ಬೋರ್ಡಿನ ಸಭಾಸದರಲ್ಲದಿದ್ದರೂ, ಡಿ| ಲೋ| ಬೋ| ಸಭೆಯಲ್ಲಿ ಮಾತಾಡಲಿಕ್ಕೆ ವಿಶೇಷ ಹಕ್ಕು ಕಾಯಿದೆಯಿಂದಲೇ ಅರ್ಪಿಸಿರುವರು. ಡಾ| ಗೋಖಲೆಯವರು ಈ ಕಾಯಿದೆಯ ಆಧಾರದಿಂದಲೇ ಮಾತಾಡಲಿಕ್ಕೆ ಅಧಿಕಾರಪಟ್ಟದ್ದು. ಶ್ರೀ| ಮಾಳಕೇರರಿಗೆ ಮಾತಾಡಲಿಕ್ಕೆ ಕೊಟ್ಟ ಶ್ರೀ| ಗೋಪಿಯವರ ಮರ್ಜಿಯಿಂದಲ್ಲ. ಸರಕಾರದವರು ಕಾಯಿದೆಯಲ್ಲಿ ಮುಂಚಿತವಾಗಿಯೇ ನಿರ್ಣಯ ಮಾಡಿ ಕೆಲವು ವಿಶಿಷ್ಟ ಅಧಿಕಾರಿಗಳಿಗೆ ಬೋರ್ಡಿನ ಸಭೆಯಲ್ಲಿ ಮಾತಾಡಲಿಕ್ಕೆ ಮುದ್ದಾಮ ಪರವಾನಗಿ ಇಟ್ಟಿದ್ದರ ಮೇಲಿಂದ, ಹಾಗಿಲ್ಲವಾದರೆ ಬೋರ್ಡಿನ ಮೆಂಬರರಲ್ಲದ ಪರಸ್ಥರಿಗೆ ಮಾತಾಡಲಿಕ್ಕೆ ಎಂದೂ ಬರುವಂತಿಲ್ಲವೆಂಬ ಸರ್ವಸಾಧಾರಣ ನಿಯಮವೇ ವ್ಯಕ್ತವಾಗುತ್ತದಲ್ಲವೇ?

ಹಿಂದೆ ನನಗೆ ಹತ್ತು ವರ್ಷಗಳ ವರೆಗೆ ಲೋಕಲ್ ಬೋರ್ಡುಗಳಲ್ಲಿ ಅನುಭವ ಪಟ್ಟವರಿಗೆ ಇದು ತಿಳಿಯಬಹುದಿಲ್ಲವೇ? ನಿಯಮಬದ್ಧ ಪದ್ಧತಿಯಿಂದ ಘಟನೆಯಾಗಿ ಕಾಯಿದೆಯಿಂದ ಅಧಿಕಾರ ಪಡೆದ ಯಾವ ದಾದರೊಂದು ಬೋರ್ಡಿನಲ್ಲಿ ಸಭಾಸದರಲ್ಲದ ಹೊರಗಿನವರು ಒಂದು ಮಾತಾಡುವದು ಕಾಯಿದೆಗೆ ಎಂದಾದರೂ ಸಮ್ಮತವಾದೀತೇ? ನಾಳೆ ನಮ್ಮ ಕಾಯಿದೆ ಕೌನ್ಸಿಲಿನ ಒಂದು ಅಧಿವೇಶನದಲ್ಲಿ ಸಾರ್ವಜನಿಕ ಮಹತ್ವದ ಪ್ರಶ್ನೆಯೊಂದರಿಂದ ಯಾರಾದರೂ ಪ್ರತಿಷ್ಠಿತರು ಹೋಗಿ ಭಾಷಣ ಮಾಡಲು ಯತ್ನಿಸಿದರೆ, ಅಧ್ಯಕ್ಷರು ಪರವಾನಗಿಯನ್ನೀಯುವದು ಎಂದಾದರೂ ಉಂಟೇ? ಇಲ್ಲ. "ಅಂಥ ಪ್ರಶ್ನೆಗೆ ಉತ್ತರ ಕೊಡುವದು ಅಧ್ಯಕ್ಷರ ಕೆಲಸವೇ?" ಎಂದು ಹೇಳಿ, ಹಾಗೆ ಪ್ರತ್ಯುತ್ತರವನ್ನೀಯಲಿಕ್ಕೆ ಮುಂದ ಒಂದು ತೀರ ಅಪ್ರಸ್ತುತವಾದ ರಾ| ಗೋಖಲೆಯವರ ಮಾತಿನನ್ನು ಉದಾಹರಿಸಿ ಕಾಯಿದೆಯ ವಿಷಯದ ತನ್ನ ಅಜ್ಞಾನವನ್ನು ಪ್ರಕಟಿಸಿದ ಈ ಜಾಣ ಹೆಮ್ಮೆಯ "ನಾನೇ ತ್ರಯಂಬಕ"ನನ್ನು, ಅವನ ಜೊತೆಗಾರನಾದ ಆ "ಕೋಧೇಕ"ನನ್ನು ನೋಡಿದರೆ, 'ಅವಿವೇಕ'ವೂ, 'ಕ್ಷುದ್ರಮನ'ವೂ, 'ಅಸಂಬದ್ಧ ಪ್ರಲಾಪ'ವೂ ಯಾರ ಪಾಲಿಗೆ ಬರುತ್ತವೆಂದು ಸಹಜವಾಗಿ ಹೇಳಬಹುದಲ್ಲವೇ? ಇಷ್ಟರಿಂದಾದರೂ ಅವರು ಜಾಣರಾಗಲಿ! ತಮ್ಮ,

ಅಂಕೋಲಾ, ತಾ. ೨೯-೯-೧೯೩೬. } ಓರ್ವ ನಿಸ್ಪೃಹಿ.

ರಾ| ಮಾಸೂರರ ಗ್ರಾಮಸಂಭಾವನೆ

(ಹೆಗಡೆಯ ಒಬ್ಬ ಪ್ರೇಕ್ಷಕರಿಂದ)

ಕಳೆದ ತಾ. ೨೪ ನೇಗೆ ರಾ| ಗಣಪತ ಮಾಸೂರರು ಇಲ್ಲಿ ಬಂದಿದ್ದರು. ಇಲ್ಲಿಯ ಶ್ರೀ ಶಾಂತಿಕಾಂಬಾ ದೇವಾಲಯದಲ್ಲಿ ಊರವರ ಸಭೆಯೊಂದು ಸೇರುವದಿದೆಂದು ಊರವರಿಗೆ ಕರೆಸಲಾಗಿತ್ತು. ಅದರಂತೆ ನಾವೆಲ್ಲರೂ ಸಭೆಗೆ ಹೋದೆವು. ನಮ್ಮಲ್ಲಿಯ ರಾ| ರಾಘವೇಂದ್ರ ಪಟ್ಟಶೆಟ್ಟಿ ಶಾನಭಾಗರವರ ಮನೆಯಲ್ಲಿಯೇ ಸಭೆ ಸೇರಿಸಬೇಕೆಂದು, ಆ ವೇಳೆ ಗೊತ್ತಾದಂತೆ ಅಲ್ಲಿ ಸಭೆ ಸೇರಿತು. ಸಭೆಗೆ ಊರ ಪ್ರಮುಖರು ಬಂದಿದ್ದರು. ರಾ| ಮಾಸೂರರು ಭಾಷಣ ಮಾಡತೊಡಗಿದರು. ಜಂಗಲ ಸವಲತ್ತುಗಳನ್ನು ಸಂಪಾದಿಸಲಿಕ್ಕಾಗಿ ತಾವು ಮಾಡಿದ ಪ್ರಯತ್ನದ ಪುರಾಣವನ್ನು ಬಿಚ್ಚಿ, ಕೆಲವು ಕಾಲಹರಣ ಮಾಡಿದರು. ಆ ಮೇಲೆ, ಒಂದು ಅತ್ಯಾಶ್ಚರ್ಯಚಕಿತವಾದ ವಿಧಾನ ಮಾಡಿದರು. ಅದೇನಂದರೆ:- "ರೈತರು ಕಷ್ಟಾರ್ಜಿತವಾದ ಸವಲತ್ತುಗಳ ದುರುಪಯೋಗ ಮಾಡುತ್ತಾರೆ. ಅನೇಕರು ರೈತರ ವೇಷ ತಾಳಿ, ಸವಲತ್ತುಗಳ ಲಾಭ ಪಡೆದುಕೊಳ್ಳುತ್ತಾರೆ. ಎಷ್ಟೋ ಮಂದಿಗಳು ತಮಗೆ ಬೇಕಾದ್ದಕ್ಕಿಂತ ಹೆಚ್ಚಿಗೆಯಾಗಿ ಜಂಗಲ ಸಾಮಗ್ರಿಗಳನ್ನು ತಂದು, ಪರರಿಗೆ ಮಾರುತ್ತಾರೆ. ಈ ಸಂಗತಿಯನ್ನು ನಾನು ಸ್ವತಃ ಖಾತ್ರಿ ಮಾಡಿಕೊಂಡಿರುತ್ತೇನೆ" ರಾಜಶ್ರೀಯವರು ಉದಾಹರಣೆಗಳನ್ನು ಹೇಳಲಿಲ್ಲ; ಖಾತ್ರಿ ಮಾಡಿಕೊಂಡ ಉಪಾಯಗಳನ್ನೂ ಹೇಳಲಿಲ್ಲ. ಹ್ಯಾಗೆ ಖಾತ್ರಿಯಾಯಿತು? ಎಂದು ಪ್ರೇಕ್ಷಕರು ಕುತೂಹಲಪಡುವಷ್ಟರಲ್ಲಿ ಖಾತ್ರಿಯ 'ಮರ್ಮ'ವು ಸ್ವಲ್ಪವೆ ಅವರ ಬಾಯಿಯಿಂದಲೇ ಹೊರಬಿತ್ತು. ರಾ| ಮಾಸೂರರು ಮುಂದೆ ನುಡಿದದ್ದೇನಂದರೆ- "ಈ ಪ್ರಕಾರ ನಮಗೆ ಸಿಕ್ಕಿದ ಸವಲತ್ತುಗಳ ದುರುಪಯೋಗವಾಗುವದನ್ನು ನೋಡಿ, ನನಗೆ ಬಹಳೇ ಪಶ್ಚಾತ್ತಾಪವಾಗುತ್ತದೆ. (ರಾ| ಮಾಸೂರರಿಗೆ ಕಣ್ಣೀರು ಬಂದಿಲ್ಲಾಗಿತ್ತು.) ನನಗೆ ಒಂದು ಸಲ ಫಾರೆಸ್ಟ ಆಫೀಸರರಾದ ಮಿ| ತಗ್ಗರ್ಸೆ ಸಾಹೇಬರು ಸಿಕ್ಕಿದ್ದರು. ರೈತರು ತಮಗೆ ಸಿಕ್ಕಿದ ಸವಲತ್ತುಗಳ ದುರುಪಯೋಗವನ್ನು ಈ ಮೇಲೆ ಹೇಳಿದಂತೆ ಮಾಡಿ, ಜಂಗಲನ್ನು ಹಾಳುಗೆಡಹುತ್ತಾರೆ; ಎಂದು ಹೇಳಿ, ಬಹಳ ಪಶ್ಚಾತ್ತಾಪಪಟ್ಟರು. ಹೀಗಾಗುವದು ಸಹಜವಿದೆ, ಎಂದು ನಾನು ಹೇಳಿದೆನು. ಈ ಮೊದಲು ಜಂಗಲದಲ್ಲಿ ಹೋಗಿ ಬೇಕಾದ ಹಾಗೆ ಕಟ್ಟಿಗೆಯನ್ನು ಕಡಿದು ತರುವರೆ ಜನರಿಗೆ ಪ್ರತಿಬಂಧವಿತ್ತು. ರೈತರು ಕಳ್ಳತನದಿಂದ ಜಂಗಲದೊಳಗಿನ ಸಾಮಾನುಗಳನ್ನು ತಂದುಕೊಳ್ಳುತ್ತಿದ್ದರು. ಕಳವು ಮಾಡುವಾಗ ಕೈಗೆ ಸಿಕ್ಕ ಸಾಮಾನುಗಳನ್ನು ಅವರು ಕಡಿಯುತ್ತಿದ್ದರು. ಅದೇ ಅವರ ಸ್ವಭಾವವಾಗಿದೆ. ಹೊಟ್ಟೆತುಂಬ ಅನ್ನ ಸಿಗದವರು ಮಿಷ್ಟಾನ್ನ ಸಿಕ್ಕಿದಾಗ ಹೊಟ್ಟೆಬಾಕರಂತೆ ನಡಕೊಳ್ಳುವ ಸ್ಥಿತಿಯೇ ರೈತರ ಸ್ಥಿತಿಯಾಗಿದೆ. ಇತ್ಯಾದಿ ವಿಚಾರಗಳನ್ನು ಹೇಳಿ ಮಿ| ತಗ್ಗರ್ಸೆಯವರಿಗೆ ನಾನು ಸಮಾಧಾನ ಹೇಳಿದೆನು. ನಾವು ಹೀಗೆ ನಡಕೊಳ್ಳುವ[illegible]ರೆಯಲ್ಲ. ಸರಕಾರವು ಪ್ರಾಯಶಃ ಜಂಗಲನ್ನು ನಮಗೆ ವಿಂಗಡಿಸಿ ಕೊಟ್ಟಿರುತ್ತದೆ. ಅದಷ್ಟೇ ನಮ್ಮ ಗಂಟು. ಅದನ್ನು ನಾವು ಬೇಗ ಬೇಗನೇ ಖರ್ಚು ಮಾಡಿದರೆ ನಮಗೆ ಮುಂದೆ ಕಷ್ಟವಾಗುವದು. ಅದರಿಂದ ನಮಗೆ ಅವಶ್ಯವಿದ್ದಷ್ಟೇ ಜಲಪಿಯನ್ನು ನಾವು ತೆಗೆದುಕೊಳ್ಳಬೇಕು, ಮುಷ್ಟ ಅರ ಬೆಳವಣಿಗೆಯಾಗುವಂತೆ ಉಪಾಯಯೋಜನೆ ಮಾಡಬೇಕು. ಇದನ್ನು ಸಮಸ್ತರಿಗೆ ತಿಳಿಸಿಹೇಳಿ ಅದರಂತೆ ಸುಧಾರಿಸುವದು ಕಷ್ಟಸಾಧ್ಯ ಕೆಲಸವು. ಈ ಕುರಿತು ಏನು ಮಾಡಬೇಕೆಂದು ತಿಳಿಯದೆ ನಾನು ಚಿಂತಾವಿಷ್ಟನಾದೆನು. ಹೀಗೆ ಆಲೋಚನೆ ಮಾಡುತ್ತಿರುವಾಗ ನನಗೊಂದು ಉಪಾಯ ಹೊಳೆಯಿತು. ಜವಾಬದಾರ ಜಂಗಲ ಆಫೀಸರರೊಡನೆ (ಯಾರೆಂದು ತಿಳಿಯಲಿಲ್ಲ.) ಚರ್ಚೆ ನಡಿಸಿದೆನು. ಅದು ಯೋಗ್ಯವೆಂತಾ ನನಗೆ ಹೊಳೆಯಿತು. ಅದರಿಂದ ಊರೂರಿಗೆ ಹೋಗಿ ಅದರ ವೃತ್ತಾಂತವನ್ನು ಜನರಿಗೆ ತಿಳಿಸಿ ಹೇಳಿ, ಅದರಂತೆ ನಡಕೊಳ್ಳಲು ಪ್ರೇರೇಪಿಸುವದು ತೀರ ಅವಶ್ಯವಿದೆ."

"ಆ ಕಲ್ಪನೆ ಏನಂದರೆ:- ಊರವರು ಒಂದು ಕಮೀಟಿಯನ್ನು ಸ್ಥಾಪಿಸಬೇಕು. ಆ ಕಮೀಟಿಗೆ ಅಧ್ಯಕ್ಷ, ಸೆಕ್ರೆಟರಿಗಳಿರಬೇಕು. ಆ ಕಮೀಟಿಯವರು ಊರವರನ್ನೊಂದು ಯಾದಿಯನ್ನು ತಯಾರಿಸಿ, ಯಾರ್ಯಾರಿಗೆ ಎಷ್ಟೆಷ್ಟು ಕಟ್ಟಿಗೆ ಬೇಕಾಗಬಹುದನ್ನು ನಮೂದಿಸಬೇಕು. ಅದನ್ನು ಜಂಗಲ ಅಧಿಕಾರಿಗಳಿಗೆ ತಿಳಿಸಬೇಕು. ಎಕರೆಗೆ ೩೦ ಖಂಡಿ ಕಟ್ಟಿಗೆ ಸಿಗುವದೆಂದು ಲೆಕ್ಕ ಹಿಡಿದು, ಜಂಗಲ ಅಧಿಕಾರಿಗಳು ಆ ಪ್ರಮಾಣದಿಂದ ಎಷ್ಟು ಜಂಗಲು ಬೇಕಾದೀತೆಂದು ನಿಮಗೆ ತಿಳಿಸುವರು. ಅಥವಾ ನೀವೇ ಈ ಲೆಕ್ಕದಂತೆ ಇಂತಿಷ್ಟು ಎಕರೆಗಳು ನಮಗೆ ಬೇಕೆಂದು ತಿಳಿಸಿದರೂ ಅಡ್ಡಿ ಇಲ್ಲ. ಪ್ರತಿಯೊಂದು ಎಕರೆಗೆ ೧೦ ರೂಪಾಯಿಗಳಂತೆ ನೀವು ಹಾಸಲನ್ನು ಮುಂಗಡ ಕೊಡಬೇಕು. ಜಂಗಲ ಅಧಿಕಾರಿಗಳು ತಾವು ಕಟ್ಟಿದಷ್ಟು ಎಕರೆಗಳಿಗೆ ಗಡಿ ಹಾಕಿ ಕೊಡುವರು. ಆ ನಂತರ ಗಡಿ ಹಾಕಿಕೊಟ್ಟ ಜಂಗಲದೊಳಗಿಂದ ನೀವು ಸಂಪೂರ್ಣವಾಗಿ ಕಟ್ಟಿಗೆ ಕಡಿದು, ಜಂಗಲನ್ನು ಸಾಫ ಮಾಡಿಕೊಡಬೇಕು. ನಿಮಗೆ ಹೀಗೆ ವಿಂಗಡಿಸಿ ಕೊಟ್ಟ ಕ್ಷೇತ್ರದಲ್ಲಿ ಇರಬಹುದಾದ ಮುನ್ನಾಯ ಜಾತಿಯ ಗಿಡ-ಮರಗಳನ್ನು, ಕಡಿದೊಯ್ಯಲು ನನ್ನ ಯೋಜನೆಯಂತೆ ಅಧಿಕಾರ ಕೊಡಲ್ಪಟ್ಟಿದೆ. ಸದ್ರಿ ಕಟ್ಟಿಗೆಯನ್ನು ಈ ಮೊದಲು ಮಾಡಿಟ್ಟ ಯಾದಿಯಂತೆ ಜನರಿಗೆ ಕಮೀಟಿಯವರು ಹಂಚಿಕೊಡಬೇಕು. ಪ್ರತ್ಯೇಕಿಸಿಕೊಟ್ಟ ಕ್ಷೇತ್ರದಲ್ಲಿ ಸಿಗಬಹುದಾದ ಸಾಮಾನುಗಳನ್ನು ಎಲ್ಲರಿಗೂ ಹಂಚಿಕೊಡಲು ಅನಾನುಕೂಲವಾದಲ್ಲಿ, ಅವುಗಳನ್ನು ಲಿಲಾಂವ ಮಾಡಬೇಕು. ಹಾಗೆ ಹುಟ್ಟಬಹುದಾದ ಹಣವನ್ನು ನೀವು ಹಂಚಿಕೊಳ್ಳಬಹುದು. ಹಂಚಿಕೊಳ್ಳದಿದ್ದರೆ, ಶಿಲ್ಕು ಇಡಬಹುದು. ಮಾರನೇ ವರುಷ ಮುಂಚಿನ ವರ್ಷ ಕೊಟ್ಟ ಸ್ಥಳದ ಮುಂದಿನ ಕ್ಷೇತ್ರವು ನಿಮಗೆ ಕೊಡಲ್ಪಡುವದು. ಈ ಪ್ರಕಾರ ೪೦ ವರುಷಗಳ ವರೆಗೆ ೪೦ ಭಾಗಗಳು ನಿಮಗೆ ಕೊಡಲ್ಪಡುವವು. ಆ ಮೇಲೆ ಪುನಃ ಮೊದಲಿನದೇ ಭಾಗ ನಿಮಗೆ ಕಡಿಯಲು ಸಿಗುವದು. ೪೦ ವರುಷಗಳಲ್ಲಿ ಮೊದಲಿನ ಭಾಗವು ಚಲೋ ಬೆಳೆದು ತಯಾರಾಗುತ್ತದೆ. ಈ ಯೋಜನೆಯಿಂದ ಶಿಕ್ಷೆ ಶಿಕ್ಷೆ ಹಾಗೆ ಜಂಗಲ ಕಡಿಯುವ ನಮ್ಮ ದುರಭ್ಯಾಸವು ತಪ್ಪುವದು. ದೇಶಾದಷ್ಟನ್ನೇ ಹದಲನುಕೂಲವಾಗುತ್ತದೆ. ಜಂಗಲನ್ನು ಚಲೋ ರೀತಿಯಾಗಿ ಬೆಳಿಸಲು ಅನುಕೂಲತೆ ಮಾಡಿಕೊಟ್ಟಂತಾಗುತ್ತದೆ. ಈ ಯೋಜನೆಯಿಂದ ಜಂಗಲ ಖಟ್ಲೆ, ಕಾಂಪೆನಸೇಶನ್ ದಂಡ ಮುಂತಾದ ಉಪದ್ರವಗಳು ತಪ್ಪಿ, ಜನರಿಗೆ ಹೇರಳ ಲಾಭವಾಗುವದು. ಇದಕ್ಕಾಗಿ ನೀವು ಒಂದು ಕಮೀಟಿಯನ್ನು ಸ್ಥಾಪಿಸಬೇಕು. ಈ ಕಮೀಟಿಯ ನಿರ್ಮಾಣದಿಂದ ನಿಮ್ಮೊಳಗೆ ಸಹಕಾರವೃತ್ತಿಯು ಬೆಳೆಯುವದು. ನಮ್ಮ ಹಳ್ಳಿಗಳ ಸ್ಥಿತಿಯು ಬಹಳ ಕೆಟ್ಟಿದೆ. ಮಾರ್ಗಗಳಿಲ್ಲ; ರೋಗಿಗಳಿಗೆ ಔಷಧೋಪಚಾರ ಕೊಳ್ಳಲು ಅನುಕೂಲವಿಲ್ಲ; ಚಳಿಜ್ವರವು ಮನೆ ಮಾಡಿಕೊಂಡಿದೆ; ಹಳ್ಳಿಗಳ ಜನಸಂಖ್ಯೆಯು ಕುಗ್ಗುತ್ತ ನಡೆದಿದೆ; ಎಷ್ಟೋ ಕಡೆಯಲ್ಲಿ ಭೂಮಿಯನ್ನು ಸಾಗು ಮಾಡಲು ರೈತರಿಲ್ಲ. ಕಾನಡಾ ಹಳ್ಳಿಯಲ್ಲಿ ಇರುವ ಒಟ್ಟು ಸಾಗು ಭೂಮಿ, ಹುಟ್ಟುವ ಹುಟ್ಟುವಳಿ, ಜನಸಂಖ್ಯೆ ಇವುಗಳ ತುಲನೆ ಮಾಡಿದರೆ, ಒಬ್ಬನಿಗೆ ದಿನಾ ಒಂದು ಊಟ ಸಹ ಸಿಗುವದಿಲ್ಲವಾಗಿ ತೋರುವದು. ಅರಹೊಟ್ಟೆ ಅನ್ನ ದೊರಕಿದರೆ, ಅವನ ಸುದೈವವೇ. ಹಳ್ಳಿಗಳಿಂದಲೇ ನಮಗೆ ವಿಶೇಷವಾದ ಉತ್ಪನ್ನ ದೊರಕುತ್ತದೆ. ಅದರಿಂದ ಗ್ರಾಮಗಳ ಸುಧಾರಣೆಯನ್ನು ನಾವು ಮಾಡುವದು ಅತ್ಯಗತ್ಯವು. ಗ್ರಾಮಗಳ ಸುಧಾರಣೆಯನ್ನು ಸರಕಾರವು ಮಾಡಬೇಕೆಂದು ನೀವು ಹಟ ಹಿಡಿದು ಕೂತುಕೊಳ್ಳಬಾರದು. ಸರಕಾರದ ಹತ್ತರ ಹಣವಿಲ್ಲ. ಲವರು ತಮ್ಮ ಬಜೇಟನಲ್ಲಿ ಬಹಳ ಮಿತವ್ಯಯ ಮಾಡಿದರು; ಆದರೂ ಸರಕಾರಕ್ಕೆ ಸಾಲ ತೆಗೆಯುವ ಪ್ರಸಂಗ ಬಂತು. ಇಂಥ ಸ್ಥಿತಿಯಲ್ಲಿ ಸರಕಾರವೇ ಹಳ್ಳಿಗಳ ಸುಧಾರಣೆ ಮಾಡಬೇಕೆಂದು ನಾವು ಹೇಳುವ ಬಗೆ ಹೇಗೆ? ಈ ಕುರಿತು ನಾವು ಲೋಕಲ್ ಫಂಡನ್ನಾದರೂ ಬಳಸಿಕೊಂಡು ಗ್ರಾಮಗಳ ಸುಧಾರಣೆ ಮಾಡುವದು ಹಿತವು. ಅದರಂತೆ ನಾನು ಪ್ರಯತ್ನಪಟ್ಟೆನು. ಅದಕ್ಕಾಗಿ ನನ್ನ ಮೇಲೆ ವೃತ್ತಪತ್ರಗಳಲ್ಲಿ ದೊಡ್ಡ ಕೋಲಾಹಲವೆದ್ದಿತು. ಇದು ಬರೇ ವ್ಯಕ್ತಿದ್ವೇಷದಿಂದಲ್ಲವೇ? ಸಾರ್ವಜನಿಕ ಕೆಲಸಗಳಲ್ಲಿ ವ್ಯಕ್ತಿದ್ವೇಷ ತಂದು ಸಾರ್ವಜನಿಕ ಹಿತವನ್ನು ಕೆಡಿಸಬೇಡಿ. ಈ ಮೊದಲ ಹೇಳಿದಂತೆ, ಕಮೀಟಿಯನ್ನು ಸ್ಥಾಪಿಸಿ ನನಗೆ ತಿಳಿಸಿರಿ. ನಾನು ಅದರ ಮುಂದಿನ ವ್ಯವಸ್ಥೆಯನ್ನು ಮಾಡುತ್ತೇನೆ." ಇತ್ಯಾದಿ ಭಾಷಣವನ್ನು ಮಾಡಿದರು.

(ಮುಂದೆ ೯ನೇ ಪಾನಿನ ಮೇಲೆ ಮುಂದರಿಸಿದೆ)

ವಾಚಕಮಹಾಶಯರಿಗೆ ವಿನಂತಿ.

ಇದು ನಿಮ್ಮ 'ವೃತ್ತ'ದ ೧೦ನೇ ವರುಷದ ೫೨ನೇ ಸಂಚಿಕೆಯು. ಇನ್ನು ೧ ಸಂಚಿಕೆಯನ್ನು ತಮಗೆ ಸಾದರಪಡಿಸಿ, 'ವೃತ್ತ'ವು ೧೧ನೇ ವರುಷವನ್ನು ಮೆಟ್ಟುವದು. 'ವೃತ್ತ'ದ ಸೇವೆಯನ್ನು ತಾವು ೧೦ ವರುಷಗಳ ಪರಿಚಯದಿಂದ ಅರಿತಿರುವಿರಿ. 'ವೃತ್ತ'ವು ನೆರವೇರಿಸಿದ ಪ್ರಜಾಸೇವೆಯ ಪಾಠವನ್ನು ಸಂಕ್ಷಿಪ್ತವಾಗಿ ಕೂಡ ವಿವರಿಸುವದು ಅತ್ಯುಕ್ತಿಯಾಗುವದು. ಪ್ರತ್ಯಕ್ಷ 'ವೃತ್ತ'ವೇ ನಿಮ್ಮೆದುರಿಗಿದ್ದು, ಅದರ ಗುಣಪರೀಕ್ಷೆ ಮಾಡುವ ಬುದ್ಧಿಯು ತಮ್ಮಲ್ಲಿದ್ದಾಗ, 'ವೃತ್ತ'ದ ಸೇವೆಯನ್ನು ವರ್ಣಿಸುವದು ವ್ಯವಹಾರಿಕವಲ್ಲ. ಆದ ದರಿಂದ 'ವೃತ್ತ'ವು ಬಿನ್ನವಿಸಿಕೊಳ್ಳುವದೇನೆಂದರೆ— ಈ ವರೆಗೆ ತಾವು ನನ್ನ ಸೇವೆಯನ್ನು ಮನ್ನಿಸಿಕೊಂಡಿರಿ, ಪ್ರಾಯವು ಬೆಳೆದಂತೆ, ಜವಾಬದಾರಿಯೂ ಹೆಚ್ಚುತ್ತ ನಡೆದಿದೆ, ಅದನ್ನೆಲ್ಲ ಮನಗಂಡು ವಾಚಕರು ನನ್ನನ್ನು ಬರಮಾಡಿಕೊಂಡು ಮನ್ನಿಸಬೇಕಾಗಿಯೂ, ವಿದ್ವಜ್ಜನರು ಲೇಖಗಳನ್ನಿತ್ತು ಸಲಹಬೇಕಾಗಿಯೂ ಪ್ರಾರ್ಥಿಸುವೆನು. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ಬರೇ ೩ ರೂಪಾಯಿ ಇರುವದು. ಅದನ್ನು ಮನಿ ಆರ್ಡರದ್ವಾರಾ ವ್ಯವಸ್ಥಾಪಕರಿಗೆ ಕಳುಹಿದರೆ, ಕಾಗದ—ಮುದ್ರಣ ಮುಂತಾದ ಪೋಷಕ ಪ್ರವೃತ್ತಿಗಳನ್ನು ಸಂಗ್ರಹಿಸಲಿಕ್ಕೆ ಅನುಕೂಲವಾಗುವದು. ತಾವು ಒಬ್ಬೊಬ್ಬರು ಇನ್ನೊಬ್ಬೊಬ್ಬ ಚಂದಾದಾರರನ್ನು ಸಂಪಾದಿಸಿಕೊಟ್ಟರೆ, ನಾನು ಇನ್ನೂ ವಿಶೇಷ ಸೇವೆಯನ್ನು ನೆರವೇರಿಸಲು [illegible] ಸೇವ್ಯ—ಸೇವಕಭಾವವನ್ನು ನೆನಿಸಿ, ನನಗೆ ಸಹಾಯ ಬೇಕು. ಯಾವದೇ ಕಾರಣದಿಂದ ನನಗೆ ಈ ಮುಂದೆ ಆಶ್ರಯವನ್ನೀಯಲಾರದಿದ್ದವರು ಮುಂಚಿತವಾಗಿಯೇ ತಿಳಿಸಬೇಕಾಗಿ ವಿನಂತಿ. ಇದಕ್ಕಿಂತ ಹೆಚ್ಚಿಗೇನು ನಾನು ತಮ್ಮ ಬಳಿಗೆ ಹೇಳಿಕೊಳ್ಳಲಿ?

—ಇತಿ ವ್ಯವಸ್ಥಾಪಕ.

ಕಾನಡಾವೃತ್ತ.

ಶ್ರೀ ಕ್ಷಯ ಸಂ| ಭಾದ್ರಪದ ಬ| ೧೩ |, ಸೋಮವಾರ

ಪ್ರಕೃತ ಶಿಕ್ಷಣ.

ಪ್ರಕೃತ ಶಿಕ್ಷಣಕ್ರಮದ ಕುರಿತು, ಇತ್ತಿತ್ತ ವಿಶೇಷ ಚರ್ಚೆಯಾಗುತ್ತಿದೆ. ವಿದ್ಯಾದಾನವು, ವಿದ್ಯಾಗ್ರಹಣವು ಪವಿತ್ರ ಕಾರ್ಯಗಳು. ಇವುಗಳಿಗಾಗಿ ಸರಕಾರವೂ, ಔದಾರ್ಯವಂತ ಧನವಾನ್ತರೂ ಹೇರಳ ದ್ರವ್ಯವನ್ನು ವ್ಯಯ ಮಾಡುತ್ತಿರುವರು. ಬಾಲಕರಿಗೆ ಶಿಕ್ಷಣ ಕೊಡುವ ದೊಡ್ಡದೊಂದು ಪುಣ್ಯಕಾರ್ಯದ ಹೆಸರಿನಿಂದ ಅಪರಿಮಿತವಾದ ಹಣವು ಖರ್ಚಾಗುತ್ತಿರುವಾಗ, ಹಣಕ್ಕೆ ತಕ್ಕ ಪ್ರತಿಫಲವು ನಮಗೆ ಸಿಕ್ಕಿರುವದೇನು? ಸಿಗದಿದ್ದರೆ, ಅದಕ್ಕೆ ಕಾರಣವೇನು? ಶಿಕ್ಷಣ ಪಡೆದವರು ಮಿಗಿಲಾದಂತೆ, ದೇಶದೊಳಗಿನ ದೈನ್ಯವು ಹಿಂಗಿತೋ? ಕುಗ್ಗಿತೋ? ಹಿಗಿದರೆ, ಹಿಂಗ್ಗುವ ಕಾರಣವೇನು? ಎಂಬೀ ವಿಷಯಗಳು ನಮ್ಮ ಅಭ್ಯುದ್ಧಾರದ ಯೋಜನೆ ನಡೆದಾಗ ಮಹತ್ವದ್ದಿವೆ. ಶಿಕ್ಷಣಕ್ರಮವನ್ನು ಅಭ್ಯುದ್ಧಾರಕ್ಕನುಕೂಲವಾಗಿ ತಿದ್ದುಪಡಿ ಮಾಡುವ ಸಂಕ್ರಮಣ ಕಾಲವಾದರೂ ಇದೇ. ಇಂಥ ಸಮಯದಲ್ಲಿ ವಂಗದೇಶದೊಳಗಿನ ಪ್ರಸಿದ್ಧ ಸರಸ್ವತೀಭಕ್ತರಾದ, ಆಚಾರ್ಯ ಪಿ. ಸಿ. ರೇಯವರ ವಿಚಾರಗಳನ್ನು ವಾಚಕರಿಗೆ ನಿವೇದಿಸಲಿಚ್ಛಿಸುವೆವು. ಉದಯೋನ್ಮುಖ ಪ್ರಜೆಗಳೆಲ್ಲರೂ ಅವನ್ನು ಪರಾಂಬರಿಸುವದವಶ್ಯವಿದೆ

ಆಚಾರ್ಯ ಪಿ. ಸಿ ರೇಯವರು ಅಖಿಲ ವಂಗದೇಶದ ಕಾಲೇಜು ಹಾಗು ವಿಶ್ವವಿದ್ಯಾಲಯದೊಳಗಿನ ಶಿಕ್ಷಕರ ಪರಿಷತ್ತಿನ ಸಭಾಪತಿಗಳಾಗಿದ್ದರು. ಸಭಾಪತಿಗಳಾಗಿ ಅವರು ಮಾಡಿದ ಭಾಷಣದಲ್ಲಿ ಪ್ರಕೃತ ಶಿಕ್ಷಣಪದ್ಧತಿಯ ದೋಷಾವಿಷ್ಕರಣವಾಗಿದೆ. ಈ ಶಿಕ್ಷಣಪದ್ಧತಿಯಿಂದ ಅಮಿತವಾಗಿ ದ್ರವ್ಯಾಪವ್ಯಯವಾಗುತ್ತಿದೆ. ವಿದ್ಯಾರ್ಥಿಗಳ ಅಮೂಲ್ಯವಾದ ಆಯುಷ್ಯವೂ ಅಪವ್ಯಯ ಹೊಂದುತ್ತಿದೆ ಆಚಾರ್ಯರು ಅಂಕಿಗಳಿಂದಲೇ ತಮ್ಮ ವಿಧಾನವನ್ನು ಮಂಡಿಸಿದರು. ವರ್ಷಕ್ಕೆ ೧೫ ಸಾವಿರ ವಿದ್ಯಾರ್ಥಿಗಳು ಬಂಗಾಲದೊಳಗಿನ ೯೦೦ ಶಾಲೆಗಳೊಳಗಿಂದ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕೂತುಕೊಳ್ಳುತ್ತಾರೆ. ಒಂಭತ್ತು ಸಾವಿರ ವಿದ್ಯಾರ್ಥಿಗಳು ಉಚ್ಚ ಶಿಕ್ಷಣ ಪಡೆಯಬಯಸುವವರಾಗಿ ಕಾಲೇಜುಗಳನ್ನು ಸೇರುತ್ತಾರೆ. ಅವರಲ್ಲಿ ೫೦೦ ಮಂದಿಗಳು ಎಮ್. ಏ. ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಾರೆ. ೫೦೦ರಲ್ಲಿ ೫೦ ಮಂದಿಗಳಿಗೆ ಉಚ್ಚ ಶಿಕ್ಷಣ ಕೊಡುವ ಸಂಧಿ ದೊರಕಿದರೆ, ಮಿತಿಮೀರಿತು! ಉಳಿದ ೪೫೦ ಜನರು ಹೊಟ್ಟೆಬರಹವನ್ನು ಒಪ್ಪಿಕೊಳ್ಳುತ್ತ ಸಾಮಾನ್ಯವಾಗಿ ೫೦ ರೂಪಾಯಿ ಸಂಬಳ ಪಡೆವ ಕಾರಕೂನರಾಗಿ, ಯಾ ಶಾಲೆಯೊಳಗಿನ ಶಿಕ್ಷಕರಾಗಿ ಬಾಳೆ ಮಾಡಿಕೊಳ್ಳಬೇಕು. ವರಿಷ್ಠ ಶಿಕ್ಷಣಕ್ಕೆ ತಗಲುವ ೫೦ ಮಂದಿಗಳನ್ನು ಹೆಕ್ಕುವದಕ್ಕಾಗಿ ೯ ಸಾವಿರ ವಿದ್ಯಾರ್ಥಿಗಳನ್ನು ಕಾಲೇಜು ಯಾನೆ ಉಚ್ಚ ಶಿಕ್ಷಣಾಲಯಗಳಲ್ಲಿ ಸೇರಿಸಿಕೊಳ್ಳುವದು ಉಚಿತವೇನು? ಉಳಿದ ೮೯೫೦ ವಿದ್ಯಾರ್ಥಿಗಳಲ್ಲಿ ವಕೀಲ, ಡಾಕ್ಟರ, ಇಂಜಿನಿಯರ ಮುಂತಾದವರು ಸಂಗ್ರಹಿಸಲ್ಪಡುತ್ತಾರೆಂದು ಗ್ರಹಿಸುವಾ. ಆದರೆ, ಈ ಧಂದೆಗಳಲ್ಲಿ ಸದ್ಯಕ್ಕೆ ಹೇರಳ ಮಂದಿಗಳಿದ್ದು, ಅವುಗಳಲ್ಲಿ ವರ್ಷಾವಧಿ ಒದಗಬಹುದಾದ ಜನರ ಕುಗ್ಗೋಣಕ್ಕೆ ಇಷ್ಟು ವಿದ್ಯಾರ್ಥಿಗಳು ತಗಲುವದಿಲ್ಲ. ಶಿಕ್ಷಣಕ್ರಮವು ಸಂಘಟಿತವಾಗಿದ್ದರೆ, ೯೦೦೦ ವಿದ್ಯಾರ್ಥಿಗಳ ಬದಲು, ಬರೇ ೯೦೦ ವಿದ್ಯಾರ್ಥಿಗಳಿಂದ ಇಷ್ಟೇ ಕೆಲಸವನ್ನು ಸಾಗಿಸಬಹುದು. ಇಂಗ್ಲಂಡದಲ್ಲಿ ಸುಸಂಘಟಿತ ಶಿಕ್ಷಣ ಪದ್ಧತಿ ಇರುವದರಿಂದ ಇಲ್ಲಿಯಂತೆ ಅಲ್ಲಿ ವಿದ್ಯಾರ್ಥಿಗಳ ಹಾಗು ದ್ರವ್ಯದ ಅಪವ್ಯಯವಾಗುವದಿಲ್ಲ. ತಲೆಗೆ ತಿಂಗಳಿಗೆ ೩೦ ರೂಪಾಯಿಯಂತೆ ಸರಾಸರಿ ಖರ್ಚು ತಗಲುತ್ತದೆಂದು ಹಿಡಿದು ಲೆಕ್ಕ ಮಾಡಿದರೆ, ಸಾಲಿಯಾನ ೮೧೦೦ ವಿದ್ಯಾರ್ಥಿಗಳಿಗೆ ೨೯,೧೬,೦೦೦ ರೂಪಾಯಿಗಳು ನಿರರ್ಥಕವಾಗಿ ಹಾಳಾಗುತ್ತವೆ. ಇವು ನಿಮಗೆ ಉಳಿಯುವವು. ಈ ಹಣದಿಂದ ವ್ಯಾಪಾರ, ಉದ್ಯೋಗ, ಬೇಸಾಯಗಳನ್ನು ಉದ್ಧರಿಸಬಹುದು, ಈ ರೂಪಾಯಿಗಳೇನು ಸಾಮಾನ್ಯ ರಕಮಲ್ಲ. ತಲೆಗೆ ೩೬೦ ರೂಪಾಯಿಗಳು ಬಿದ್ದವು. ಇಷ್ಟು ಬಂಡವಲಿನಿಂದ ಬೇಕಾದ ಉದ್ಯೋಗವನ್ನು ನಡಿಸಿ ಐಶ್ವರ್ಯವನ್ನು ಸಂಪಾದಿಸಬಹುದು. ಚೇನಿಯರೇನು ಮೆಟ್ರಿಕ್ಯುಲೇಶನ್ ಕಲಿತವರಲ್ಲ. ಆದರೂ, ಅವರು ತಮ್ಮ ಕೈಗಾರಿಕೆಯ ವ್ಯಾಪಾರವನ್ನು ಒಳ್ಳೇ ರೀತಿಯಾಗಿ ನಡಿಸುತ್ತಾರೆ. ಮಾರವಾಡಿಗಳು ಯಾವ ಶಿಕ್ಷಣಸಂಪನ್ನರು! ಮೊಟ್ಟಮೊದಲು ೧೦ ರೂಪಾಯಿ ಸಹ ಅವರ ಕಡೆ ಬಂಡವಲು ಇರುವದಿಲ್ಲ. ಇಂಥ ಪ್ರಸಕ್ತಿಯಲ್ಲಿ ೩೬೦ ರೂಪಾಯಿಗಳು ಸಿಕ್ಕಿದರೆ, ಬೇಕಾದ ಉದ್ಯೋಗವನ್ನು ರಭಸದಿಂದ ನಡಿಸಬಹುದು. ಸಾಮಾನ್ಯ ಅಂಗಡಿಕಾರರು ಸಾಮಾನ್ಯ ವಿದ್ಯಾಸಂಪನ್ನರಿಗಿಂತ ನಾಲ್ಕು ಪಟ್ಟು ಹಣವನ್ನು ಸಂಪಾದನೆ ಮಾಡುತ್ತಾರೆ. ಭೇದವಿಷ್ಟೇ: ಅಂಗಡಿಕಾರರು ಕಾಯಕಷ್ಟ ಮಾಡುತ್ತಾರೆ; ಕಾರಕೂನರಿಗೆ ಆಯಾಸವಿಲ್ಲದೆ ಬಾಳ್ವೆಯಾಗುತ್ತದೆ. ಕಾರಕೂನರ ಹುಟ್ಟುವಳಿಯು ಕಾರಕೂನರ ಖರ್ಚಿಗೇ ಸಾಲದು. ಅದರಿಂದ ತಮ್ಮ ಹೌಸು ಕಾಪಾಡಬೇಕಿದ್ದರೆ, ಅವರಿಗೆ ಸಾಲ ತೆಗೆಯಬೇಕಾಗುತ್ತದೆ. ಸಾಲಗಾರರು ಸಾಲದ ನಿವಾರಣೆಗಾಗಿ ಬಾಗಿಲಲ್ಲಿ ಎಡತಾಕುತ್ತಿರುವರು. ಇದೊಂದು ದೊಡ್ಡ ಅಪಮಾನವು. ಈ ಅಪಮಾನಕ್ಕಿಂತ ಕಾಯಕಷ್ಟ ಮಾಡಿ ನಾಲ್ಕು ಪಟ್ಟು ಹಣ ಸಂಪಾದಿಸುವದು ಶ್ರೇಯಸ್ಕರವಲ್ಲವೇ? ನಮ್ಮಲ್ಲಿಯ ವಿದ್ಯಾರ್ಥಿಗಳಿಗೆ ನಿಜವಾದ ವೈಭವದ ಅರಿವಿಲ್ಲ. ಕಾಯಕಷ್ಟವು ಮಾನವನ ಚರಿತಾರ್ಥದ ಪ್ರಮುಖಾಂಗವು. ಜ್ಞಾನಶಕ್ತಿಗೇ ಅಲ್ಲದ ಪ್ರಾಧಾನ್ಯ ಕೊಟ್ಟು, ಕಾಯಕಷ್ಟವನ್ನು ಧಿಕ್ಕರಿಸಿದ್ದರಿಂದ ನಾವು ಈ ಗತಿಗೆ ಮುಟ್ಟಿರುವೆವು. ಇದನ್ನು ನಾವು ಈಗ ತಿಳಿಯಬೇಕಾಗಿದೆ. ಇಂಥ ಶಿಕ್ಷಣಕ್ರಮವನ್ನು ಈ ವರೆಗೆ ನಾವು ಸ್ವೀಕರಿಸಿದ್ದು ಮಹಾ ದೊಡ್ಡ ಅಪರಾಧವು.

ಆಚಾರ್ಯ ರೇಯವರು ಮುಂದಾದರು. ಈ ಶಿಕ್ಷಣ ಕ್ರಮವನ್ನು ಅವರು ಎಷ್ಟು ಹಳಿದಾಗ್ಯೂ, ಅದನ್ನು ನಾವೇನು ಬಿಡಲಾರೆವು. ಏಕೆ? ಅದರಿಂದ ಸಮಾಜದಲ್ಲಿ ನಮಗೆ ದೊಡ್ಡವರೆಂದು ಹೇಳಿಸಿಕೊಳ್ಳಬರುತ್ತದೆ. ನಾವು ಜ್ಞಾನ

ಸಂಪನ್ನರೆಂದು ಗ್ರಹಿಸಿದರೂ, ನಮ್ಮ ಜ್ಞಾನದ ವ್ಯಾಪ್ತಿ ಏನು! ಇಷ್ಟೆಲ್ಲ ಆಯಾಸದಿಂದ ಪ್ರಾಪ್ತವಾದ ಶಿಕ್ಷಣದಿಂದ ನಮಗೆ ಸಿಗುವ ಜ್ಞಾನವೆ ನಿಶ್ಚಿತವಾದ ನೂರಾರು ಪ್ರಶ್ನೆಗಳಿಗೆ ನಾವು ಉತ್ತರ ಕೊಡಬಲ್ಲೆವು. ನಿಜವಾದ ಇತಿಹಾಸ-ಭೂಗೋಲ ಶಾಸ್ತ್ರೀಯ ಜ್ಞಾನಗಳು ನಮಗೆ ಪ್ರಾಪ್ತವಾಗುತ್ತವೇನು! ವಿಲಾಯತಿಯೊಳಗಿನ ೧೩-೧೪ ವರ್ಷ ಪ್ರಾಯದ ಚಿಕ್ಕ ಬಾಲಕರಿಗೆ ಆಗುವಷ್ಟು ವಿಷಯಜ್ಞಾನವು ನಮ್ಮಲ್ಲಿಯ ಪದವೀಧರರಿಗೆ ದೊರೆಯುವದಿಲ್ಲೆಂದು ಆಚಾರ್ಯರವರು ಒತ್ತಿ ಹೇಳಿರುವರು. ಈ ದಶಕ್ಕೆ ಹೆಚ್ಚಿಗೆ ಹೇಳುವದೇನು! ಆಚಾರ್ಯರವರು ಹೀಗಾಗುವ ಕಾರಣವನ್ನೂ ಹೇಳಿರುವರು. ಇಂಗ್ಲಿಷ ಭಾಷೆಯ ಮೇಲೆ ನಮ್ಮ ಕಟಾಕ್ಷವು ವಿಶೇಷ. ವಿಷಯಜ್ಞಾನಕ್ಕಿಂತ ಇಂಗ್ಲಿಷ ಭಾಷೆಯಲ್ಲಿ ಪ್ರವೀಣರೆಂದು ಹೇಳಿಸಿಕೊಳ್ಳುವದೇ ನಮಗೊಂದು ಅಭಿಮಾನದ ಸಂಗತಿ. ನಮ್ಮ ವಿಷಯಜ್ಞಾನವು ಇಂಗ್ಲಿಷ ಭಾಷೆಯ ಮಧ್ಯಸ್ಥಿಕೆಯಿಂದ ಆಗಬೇಕು. ಜರ್ಮನಿ ಮುಂತಾದ ದೇಶಗಳಲ್ಲಿ ಪರ ಭಾಷೆಗಳನ್ನು ಕಲಿಯುವ ರೂಢಿಯಿದೆ. ಆದರೆ, ವಿದ್ಯಾದಾನವು ಮಾತ್ರ ಸ್ವಭಾಷೆಯಿಂದಲೇ ನಡೆಯುತ್ತಿದೆ, ಎಂಬದನ್ನು ನಾವು ಮರೆಯಕೂಡದಾಗಿಯೂ ಆಚಾರ್ಯ ರೇಯವರು ವಿಶದವಾಗಿ ಹೇಳಿದರು.

ಪ್ರಕೃತ ಶಿಕ್ಷಣ ಪದ್ಧತಿಯ ಕುರಿತು, ಆಚಾರ್ಯ ರೇಯವರ ವಿಚಾರಗಳನ್ನು ನಾವು ವಿವರಿಸಿರುವೆವು. ಸಾರ್ವತ್ರಿಕ ಶಿಕ್ಷಣಪ್ರಸಾರದ ಕುರಿತು ಲಾಲಾ ಲಜಪತರಾಯರವರ 'ಪೀಪಲ್' ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖವನ್ನು ನಾವು ಈ ಮೊದಲು ಕೊಟ್ಟಿರುವೆವು. ಇವುಗಳ ಮೇಲಿಂದ ಪ್ರಕೃತ ಶಿಕ್ಷಣಕ್ರಮದ ಪ್ರಸಾರದಿಂದ ಲಾಭಕ್ಕಿಂತ ನಮಗೆ ನಷ್ಟವೇ ವಿಶೇಷವೆಂದು ವಿಚಾರಶೀಲರಿಗೆ ತಿಳಿಯುವ ಹಾಗಿದೆ. ಇಂಥ ಪ್ರಸಕ್ತಿಯಲ್ಲಿ ಶಿಕ್ಷಣಪ್ರಸಾರವನ್ನು ಕೈಕೊಳ್ಳುವ ಮುಂಚೆ ಶಿಕ್ಷಣ ಪದ್ಧತಿಯನ್ನು ಪುನರ್ಘಟಿಸುವದೇ ಆದ್ಯ ಕರ್ತವ್ಯವು. ಪ್ರಕೃತ ಶಿಕ್ಷಣ ಪ್ರಸಾರದಿಂದ ಉದಯೋನ್ಮುಖ ಭರತಖಂಡದ ಪ್ರಜೆಗಳು ವೈಗಳ್ಯರೂ, ಕಾಯಕಷ್ಟವನ್ನು ಧಿಕ್ಕರಿಸುವವರೂ, ದುಂದುಗಾರರೂ ಆಗುವ ಲಕ್ಷಣಗಳು ಪ್ರಮುಖ್ಯವಾಗಿ ತೋರುವದರಿಂದ ಆ ಶಿಕ್ಷಣಕ್ರಮವನ್ನೇ ಒಮ್ಮೆಲೇ ರದ್ದುಪಡಿಸಿ, ಹೊಸ ಶಿಕ್ಷಣಕ್ರಮವನ್ನು ಲೋಕನಾಯಕರು ಕಲ್ಪಿಸಬೇಕಾಗಿ ನಮ್ಮ ಬಿನ್ನಹವಿದೆ.

— ಮಿ| ಹೊರ್ನಿಮನರ ವರ್ತಮಾನಪತ್ರವು ಹೊಸರೆಯ ಸುಮುಹೂರ್ತದಲ್ಲಿ ಮುಂಬಯಿಯಲ್ಲಿ ಪ್ರಕಟವಾಗುತ್ತದೆ.

— ರಂಗೂನಿನಲ್ಲಿ ಪರೀತ ಮಳೆ ಸುರಿದು ೩ ಲಕ್ಷ ಎಕ್ರೆ ಭತ್ತದ ಪೈರು ನಷ್ಟ! ಪುನಃ ಬಿತ್ತಿಗೆ ಮಾಡಬಹುದಿತ್ತು. ಕಾಗಿಲ್ಲ.

ಸ್ಫುಟ ಸೂಚನೆಗಳು.

೧. ಚೀನ ದೇಶದೊಳಗೆ ಬಹಳೇ ಗದ್ದಲಾಗಿದೆ. ಹಾಂಕೌ ಪಟ್ಟಣವು ಕೆಂಟನ್ ಸರಕಾರದ ಸ್ವಾಧೀನವಾಗಿದೆ. ಯಾಂಗತ್ಸೀ ನದಿಯ ಮಹತ್ವವನ್ನು ನಾವು ಈ ಮೊದಲೇ ಬಣ್ಣಿಸಿರುವೆವು. ಯಾಂಗತ್ಸೀ ನದಿಗುಂಟ ಪ್ರದೇಶಗಳಲ್ಲಿ ಬ್ರಿಟಿಶರ ಕಾರಖಾನೆಗಳಿವೆ; ಗಿರಣಿಗಳಿವೆ. ಅವೆಲ್ಲವುಗಳನ್ನು ರಕ್ಷಿಸಿಕೊಳ್ಳುವದು ಕಠಿಣವಾಗಿದೆ. ಚೀನ ದೇಶದಲ್ಲಿಂದು ದಿನ ಹೋದ ಹಾಗೆ ಬ್ರಿಟಿಶ ಆದಿ ಪರಸ್ಪರ ದ್ವೇಷವು ಬೆಳೆಯುತ್ತ ನಡೆದಿದೆ. ವಿದ್ಯಾರ್ಥಿಗಳು ಯಾಂಗತ್ಸೀ ನದಿಗುಂಟ ಕಳ್ಳತನದಿಂದ ಸೇರಿಕೊಂಡು ಯಾಂಗತ್ಸೀ ನದಿಯಲ್ಲಿ ಪ್ರವೇಶಿಸುವ ಬ್ರಿಟಿಶರ ಹಡಗುಗಳ ಮೇಲೆ ಮದ್ದು ಗುಂಡುಗಳನ್ನು ಹಾರಿಸುತ್ತಿರುವರು. ಹೀಗಾಗಿ ಶಾಂಘಾಯ ಪ್ರದೇಶದೊಳಗಿನ ಪರಸ್ಪರ ಸ್ಥಿತಿಯು ಚಿಂತಾಜನಕವಾಗಿದೆ. ಚುಂಗಕಿಂಗದೊಳಗಿನ ೭೬ ಮಂದಿ ಪರಕೀಯರು ತಮ್ಮ ಮನೆಮಾರುಗಳನ್ನು ಬಿಟ್ಟು ಹೊರಟರು. ಹೊನ್ನನದೊಳಗಿನ ಪಾದ್ರಿಗಳ ಕಚೇರಿಯನ್ನು ಚೀನದೊಳಗಿನ ಕಳ್ಳರು ನಾಶಪಡಿಸಿದರಾಗಿ ಒಂದು ಸುದ್ದಿ ಬಂದಿದೆ. ಶಾಂಘಾಯದೊಳಗಿನ ಸಮಸ್ತ ಬ್ರಿಟಿಶರೆಲ್ಲರೂ ಈಗ ಸಂತಸ್ತರಾಗಿರುವರು. ಈಗಲಾದರೂ ಬ್ರಿಟಿಶರು ಒದಗಿದ ಸ್ಥಿತಿಯನ್ನು ವಿಚಾರಿಸಿ, ನೆರವಾಗಬೇಕೆಂದು ಅವರು ಆಗ್ರಹ ಮಾಡುತ್ತಾರೆ. ಬ್ರಿಟಿಶರ ಗ್ರಹಸ್ಥಿತಿಯು ಚೆನ್ನಾಗಿಲ್ಲ. ಗಣಿಯೊಳಗಿನ ಕೂಲಿಕಾರರು ಸಂಪು ಮಾಡಿ, ಅವರೆಂದು ದೊಡ್ಡ ಪ್ರಕರಣವೇ ಆಗಿದೆ, ಸಂಪುಗಾರರ ಬೇಡಿಕೆಯನ್ನು ಸುಧಾರಿಸಿಕೊಂಡರೆ ಅವರಿಗೆ ಸಾಕಾಗಿದೆ. ಆದರೂ, ಕೆಲವು ಯುದ್ಧದ ಹಡಗುಪಡೆಗಳು ಯಾಂಗತ್ಸೀ ನದಿಯಲ್ಲಿ ಕಳುಹಿಸಲಾದವು. ಎರಡು ಹಡಗುಪಡೆಗಳು ಹೋಗಿ ಚೀನಿಯ ರಕ್ಷಕವಾದವು. ಯಾಂಗತ್ಸೀ ನದಿಯಲ್ಲಿ ಸೇರುವನು ಗಂಡಾಂತರಪ್ರದವಾದ್ದರಿಂದ, ಹಡಗುಪಡೆಗಳು ಹೋಗಿ ನಿರರ್ಥಕವಾಗುತ್ತವೆ. ಚೀನ ಸರಕಾರವು ಬ್ರಿಟಿಶ ವರ್ತಕರಿಗೆ ವ್ಯಾಪಾರ ಮಾಡಲು ಆತಂಕ ಮಾಡುವದಿಲ್ಲ. ಆದರೆ, ವ್ಯಾಪಾರ ಮಾಡಬೇಕಾದರೆ, ಸರಕುಗಳ ಆಮದು-ರಫ್ತುಗಳ ಮೇಲೆ ಕರಗಳನ್ನು ಕೊಟ್ಟು ಚೀನರ ಅಧೀನವಾಗಿ ನಡಕೊಳ್ಳಬೇಕೆಂದು ಅವರ ಬಯಕೆಯಿದೆ. ಅಲ್ಲಿಯ ಬ್ರಿಟಿಶರಾದರೂ ತಮ್ಮ ಸ್ಥಿತಿಯನ್ನು ಆಲೋಚಿಸಿ, ಮುಂದಣ ಹಟವನ್ನು ತೊರೆದಂತೆ ತೋರುತ್ತದೆ. ಕಳೆದ ವಾರ ಬ್ರಿಟಿಶ ವರ್ತಕರಿಗೂ, ಕೆಂಟನ್ ಸರಕಾರಕ್ಕೂ ಆದ ವ್ಯಾಪಾರ ತಹನಾಮೆಯನ್ನೊಂದು ನಾವು ವಿವರಿಸಿದ್ದೆವು. ಮುಂದಿನ ಹಕೀಕತು ತಿಳಿಯಲಿಲ್ಲ. ಬ್ರಿಟಿಶರ ಪಕ್ಷಪಾತಿಯಾದ ಹ-ಕೊಯ್ಯುರ ಸುದ್ದಿಗಾರರು ಸುಸಂಗತವಾದ ಸುದ್ದಿಗಳನ್ನೇ ಇತ್ತ ಕೊಡುವದಿಲ್ಲ. ಕೋಳಿಯನ್ನೇ ಬುಟ್ಟಿಯ ಬುಡಕ್ಕೆ ಬಾಯಿ ಕಟ್ಟಿ ಮುಚ್ಚಿ ಹಾಕಿ, ಸೂರ್ಯನಾರಾಯಣನ ಆಗಮನದ ವಾರ್ತೆಯನ್ನು ಬಚ್ಚಿಡಲು ಪ್ರಯತ್ನಿಸುತ್ತಾರೆ. ಆದರೂ, ಚೀನದೊಳಗಿನ ಬ್ರಿಟಿಶ ವರ್ತಕರ ಸ್ಥಿತಿಯೇನು ಸುಧಾರಿಸುವದಿಲ್ಲ. ಸದ್ಯಕ್ಕೆ ಬ್ರಿಟಿಶ ವರ್ತಕರು ಮತ್ತೊಂದು ಸಾರ್ವಭೌಮ ಅಧಿಕಾರವನ್ನು ಕಳಕೊಂಡ ಸುದ್ದಿಯು ನಿರುಪಾಯವಾಗಿ ಪ್ರಕಟಗೊಂಡಿದೆ. ಶಾಂಘಾಯದೊಳಗಿನ ಬ್ರಿಟಿಶರು ಚೀನದವರಿಗೆ ನ್ಯಾಯದಾನ ಕೊಡಲು ಅಧಿಕಾರಪಟ್ಟಿದ್ದರು. ಆ ಅಧಿಕಾರವು ಬ್ರಿಟಿಶರ ಕಡೆಯಿಂದ ಸೆಳಕೊಳ್ಳಲಾಗಿದೆಂದು ತಿಳಿಯುತ್ತದೆ. ಹೀಗೆಲ್ಲ ಚೀನದೊಳಗಿನ ರಾಷ್ಟ್ರೀಯರು ದಿನೇ ದಿನೇ ರಾಷ್ಟ್ರದ ಪಾರುಪತ್ಯವನ್ನು ಸ್ವಪರಾಕ್ರಮದಿಂದ ಸಂಪಾದಿಸುವ ಸಂಗತಿಯನ್ನು ಕೇಳಿ, ನಮಗೆ ಸಂತೋಷವಾಗುತ್ತದೆ. ಹೀಗೆಯೇ ಅವರು ಮುಂದರಿದು ವಿಜಯಶ್ರೀವಿಭೂಷಿತರಾಗಲಿ.

---

೨. ಈ ಸಮಯ ಜಿನೀವಾದೊಳಗಿನ ರಾಷ್ಟ್ರಸಂಘದಲ್ಲಿ ನಡೆದ ಒಂದು ಸಣ್ಣ ಆಖ್ಯಾನ ಕೇಳುವದುಚಿತವು. ಭೂತಲದಲ್ಲಿ ಶಾಂತತೆಯನ್ನು ಪ್ರಸ್ಥಾಪಿಸುವದಕ್ಕಾಗಿ, ರಾಷ್ಟ್ರಸಂಘವು ಜನ್ಮವನ್ನೆತ್ತಿರುವದಷ್ಟೇ. ಈ ಸಂಘವು ಬ್ರಿಟಿಶ, ಫ್ರಾನ್ಸ ಮುಂತಾದ ದೊಡ್ಡ ದೊಡ್ಡ ದೇಶಗಳ ಕೈಗೊಂಬೆಯೆಂದು ಅನೇಕಾವರ್ತಿ ಸಿದ್ಧವಾಗಿದೆ. ಚೀನದ ವಿಷಯದಲ್ಲಿ ಪ್ರಸ್ತುತವಾದ ಅನುಭವವು ಅಮೂಲ್ಯವಿದೆ. ರಾಷ್ಟ್ರಸಂಘದಲ್ಲಿ ಪ್ರತಿನಿಧಿಯ ಆಸನವನ್ನು ಕೊಟ್ಟು ಅದಕ್ಕಾಗಿ ಆಯಾ ರಾಷ್ಟ್ರಗಳಿಂದ ರಾಷ್ಟ್ರಸಂಘದ ಖರ್ಚಿನ ಹಣವನ್ನು ತರಿಸುತ್ತಾರೆ. ಚೀನ ಸರಕಾರದ ಹಿರಿಯ ಪ್ರತಿನಿಧಿಗಳು ರಾಷ್ಟ್ರಸಂಘದಲ್ಲಿರುವರು. ಚೀನದೊಳಗಿನ ಗಡಿಬಿಡಿಯ ಕಾಲಕ್ಕೆ ಜಿನೀವಾದಲ್ಲಿ ರಾಷ್ಟ್ರಸಂಘದ ಏಳನೇ ಪರಿಷತ್ತು ಸೇರಿತ್ತು. ಚೀನ ಸರಕಾರದ ಪ್ರತಿನಿಧಿಗಳಾದ ಮಿ| ಚೂರವರು, ಬ್ರಿಟಿಶರ ಹಡಗುಪಡೆಗಳು ಯಾಂಗತ್ಸೀ ನದಿಯಲ್ಲಿ ಚೀನ ಸರಕಾರಕ್ಕೆ ದಿರಾಗಲು ಹೋದವೆಂದು ಹೇಳಿ, ಇದು ರಾಷ್ಟ್ರಸಂಘದ ತಹನಾಮೆಗಳಿಗೆ ವಿರೋಧವಾದದ್ದೆಂದರು. ಬ್ರಿಟಿಶ ರಾಷ್ಟ್ರಕ್ಕೂ, ಕೆಂಟನ್ ಸರಕಾರಕ್ಕೂ ಯುದ್ಧವಾಗಿರುವದಿಲ್ಲ. ಬ್ರಿಟಿಶರ ಪ್ರತಿನಿಧಿಗಳಾದ ಸೆಸಿಲ್ ದೊರೆಗಳು ಚಕಿತರಾದರಂತೆ. ಮಿ| ಚೂರವರ ಕೇಳಿಕೆಯು ತಮಗೆ ಸಿಕ್ಕದ ಮಾಹಿತಿಯಿಂದ ನೋಡಿದರೆ ಅಯಥಾರ್ಥವೆಂದರು. ಎರಡೂ ಸರಕಾರಗಳು ಈ ಕುರಿತು ಆಲೋಚನೆ ನಡೆಸುತ್ತಿರುವವಾಗಿಯೂ ಮಿ| ಚೂರವರ ವಾದದಿಂದ ಹಿಡಂಬಡಿಕೆಯಾಗಲು ಆತಂಕ ಬರಬಹುದೆಂದು ಧ್ವನಿಸಿ, ಚೂರವರು ಈ ವಿಷಯವನ್ನು ಸಭೆಯಲ್ಲಿಡಲು ಅನುಸರಿಸಿದ ಕ್ರಮವು ವಿಲಕ್ಷಣವೆಂದು ಸೆಸಿಲ್ ದೊರೆಗಳು ಉದ್ಗರಿಸಿದರಂತೆ. ಎಲ್ಲರೂ ಸೆಸಿಲ್ ದೊರೆಗಳಿಗೆ ತಲೆದೂಗಿಸಿದರು. ಸೆಸಿಲ್ ದೊರೆಗಳಿಗೆ ಹೋಲಿಕೆ ಕೇಳವೆ, ಈ ವಿಷಯವನ್ನು ಚೂರವರು ಸೂಚಿಸಿದ್ದು ಅಕ್ರಮವಾಯಿತೆಂದು ಪರಿಷತ್ತಿನ ಸಭಾಪತಿ ಅಭಿಮತವಾಯಿತಂತೆ. ಅಧ್ಯಕ್ಷರು ಇನ್ನೊಂದು ವೇಷವನ್ನು ತಾಳಿ ಚೂರವರನ್ನು ಸುಮ್ಮಗಿರಿಸಿಬಿಟ್ಟರು. ಪರಿಷತ್ತಿನ ಕಾರ್ಯಕ್ರಮಪತ್ರಿಕೆಯಲ್ಲಿ ಈ ವಿಷಯದ ಉಲ್ಲೇಖವಿಲ್ಲದ್ದರಿಂದ ಈ ವಿಷಯದ ಚರ್ಚೆಯನ್ನು ಮುಂದೆ ನಡೆಸಗೊಡುವದು ಅಶಕ್ಯವೆಂದು ಅಧ್ಯಕ್ಷರು ನುಡಿದು, ಕಾರ್ಯಕ್ರಮಪತ್ರಿಕೆಯ ಕಡೆಗೆ ಹೊರಳಿದರು. ಬ್ರಿಟಿಶರು ಹಡಗುಪಡೆಗಳನ್ನು ಯಾಂಗತ್ಸೀ ನದಿಗೆ ಕಳುಹಿಸುವ ಯೋಜನೆಯನ್ನು ಕಾರ್ಯಕ್ರಮಪತ್ರಿಕೆಯ ಸಮಯ ಚೂರವರಿಗೆ ಮುಂದಾಗಿ ತಿಳಿಸಿದ್ದರೆ, ಚೂರವರು ಆ ವಿಷಯವನ್ನು ಕಾರ್ಯಕ್ರಮಪತ್ರಿಕೆಯಲ್ಲಿ ಸೇರಿಸಿಕೊಳ್ಳುತ್ತಿದ್ದರು; ಯುದ್ಧ ನಡೆವಾಗ ಶಾಂತತೆಯನ್ನು ಪ್ರಸ್ಥಾಪಿಸಲು ಜನ್ಮವನ್ನೆತ್ತಿದ ರಾಷ್ಟ್ರಸಂಘವು ಕಾರ್ಯಕ್ರಮ ಪತ್ರಿಕೆಯಲ್ಲಿ ಉಲ್ಲೇಖವಿಲ್ಲೆಂದು ಬ್ರಿಟಿಶರ ಅಪಕೃತ್ಯವನ್ನು ಅಲಕ್ಷ ಮಾಡುವದುಚಿತವೇನು?

ರಾಷ್ಟ್ರಸಂಘವು ಬ್ರಿಟಿಶರ ಕೈಗೊಂಬೆಯು ಎಂದು ಹಲುಬುವವರು ಕೂಡ ಅದರೊಳಗೆ ಸೇರಿದ ರಾಷ್ಟ್ರಗಳು ಎಂಬುದಕ್ಕೆ ಪುರಾವೆ ಬೇಕೇನ?

೩. ಪಾಶ್ಚಾತ್ಯ ಸಂಸ್ಕೃತಿಯು ಹೊಗಳಿಕೆಯನ್ನು ಮಾಡುವವರು ಹೆಚ್ಚು ನಮ್ಮಲ್ಲಿ ಆ ಸಂಸ್ಕೃತಿಯು ಮೂಲಕವಾಗಿ ಪಿಶಾಚೀ ಜಾಗೃತಿಯುಂಟಾಯಿತು; ನಾಲಕ್ಕು ಬಡಿಯಿಂದ ನಮ್ಮ ಸುಧಾರಣೆಯಾಯಿತು; ಇತ್ಯಾದಿ ಕಥೆಗಳು ಕೇಳಲ್ಪಡುತ್ತವೆ. ಈ ಕುರಿತು ಸರ್ ಆರ್ಥರ ನೋಟಕೀನರವರು ಒಂದು ಸ್ವತಂತ್ರವಾದ ಲೇಖವನ್ನು ಬರೆದು ಗೌರವರ್ಣದವರ ಸಹವಾಸದಿಂದ ಬೇರೆ ಬೇರೆ ಖಂಡಗಳೊಳಗಿನ ಮೂಲ ನಿವಾಸಿಗಳಿಗೆ ಅಹಿತವೇ ಆಗಿರುವದಾಗಿ ಪ್ರತಿಪಾದಿಸಿರುವರು. ಸರ್ ಆರ್ಥರ ನೋಟರವರು ಆಫ್ರಿಕಾ ಖಂಡದೊಳಗಿನ ಝುಲೂ ರವರಿಗೆ ಒದಗಿದ ಅವಸ್ಥಾಂತರವನ್ನು ಬಣ್ಣಿಸಿರುವರು. ಯುರೋಪಿಯನ್ನರ ಸಂಸರ್ಗವಾಗುವ ಮುಂಚೆ ಝುಲೂರವರ ದೇಹಯಷ್ಟಿಯು ಸದೃಢವಿತ್ತು; ಮನಸ್ಸು ಗಟ್ಟಿಯಿತ್ತು. ಯಾವದೇ ಸಾಹಸ ಕಾರ್ಯವನ್ನು ಕೈಕೊಳ್ಳಲು ಅವರು ಒಂಟಿಗಾಲಿನ ಮೇಲೆ ತಯಾರಿದ್ದರು. ಭಯಂಕರ ಮೃಗಗಳನ್ನು ಅವರು ಕಲಿತಿದ್ದರು. ಈಗ ಅವರ ದೈನ್ಯವನ್ನು ನೋಡಿದರೆ, ಕರಳು ಕರಗುತ್ತದೆ. ಶರೀರವು ಸೊರಗಿ ಹೋಗಿದೆ, ಮುಂಚಿನ ತೇಜವು ಈಗ ಎತ್ತಲೋ ಮಾಯವಾಯಿತು. ಶರೀರದಂತೆ ಮನಸ್ಸೂ ದುರ್ಬಲವಾಗಿದೆ. ಪಾಶ್ಚಾತ್ಯ ಸಂಸ್ಕೃತಿಯಿಂದಲೇ ಈ ಗತಿಯಾಯಿತೆಂದು ಸರ್ ಆರ್ಥರ ನೋಟರವರು ಪಶ್ಚಾತ್ತಾಪಪೂರ್ವಕವಾಗಿ ಒಪ್ಪಿಕೊಂಡಿರುವರು. ಆಸ್ಟ್ರೇಲಿಯಾ–ಅಮೇರಿಕಾ ಮುಂತಾದ ಕಡೆಗಳ ಮೂಲನಿವಾಸಿಗಳ ಇತಿಹಾಸವನ್ನು ಬರೆದವರೂ ಕೂಡ ಹೀಗೆಯೇ ಅಭಿಪ್ರಾಯಪಟ್ಟಿರುವರು. ಸರ್ ಆರ್ಥರ ನೋಟರವರು ಪಿಲಾಯತಿಯೊಳಗಿನ ಗರಡಿ ಮನೆಗಳ ಮಂಡಳದ ಅಧ್ಯಕ್ಷರಿದ್ದು, ಅವರ ವಿಚಾರಗಳು ಯಥಾರ್ಥ ಹಕೀಕತನ್ನು ಬಣ್ಣಿಸುತ್ತವೆಂದು ತಿಳಿಯಲಿಕ್ಕೇನೂ ಅಡ್ಡಿಯಿಲ್ಲ. ನಮ್ಮಲ್ಲಿಯ ದೊಡ್ಡ ದೊಡ್ಡ ವಿದ್ಯಾಸಂಪನ್ನರ ಆತ್ಮವಿಶ್ವಾಸನಾಶಕ್ಕಾದರೂ ಪಾಶ್ಚಾತ್ಯ ಸಂಸ್ಕೃತಿಯ ಸಹವಾಸವೇ ಕಾರಣವೆಂದು ನಾವು ನಿಶ್ಚಯವಾಗಿ ತಿಳಿಕೊಳ್ಳಬಹುದು. ಹೀಗೆ ವಿಚಾರ ಮಾಡಿದರೂ, ಪಾಶ್ಚಾತ್ಯ ಸಂಸ್ಕೃತಿಯ ಸಹವಾಸವನ್ನು ಘಟಿಸುವ ಶಿಕ್ಷಣಾಲಯಗಳನ್ನು ಸುಮ್ಮನೇ ತ್ಯಜಿಸಬೇಕೆಂದು, ಮಹಾತ್ಮರು ಬೋಧಿಸಿದ್ದು ದೇಶಕಾಲೋಚಿತವಲ್ಲವೇ? ಅವನ್ನು ತ್ಯಜಿಸುವಷ್ಟು ಸಾಹಸಶಕ್ತಿಯಾಗಲಿ, ಅವುಗಳಿಂದೊದಗುವ ಅನರ್ಥಪರಂಪರೆಯನ್ನು ಅರಿತುಕೊಳ್ಳುವ ಸೂಕ್ಷ್ಮದೃಷ್ಟಿಯಾಗಲಿ ನಮ್ಮಲ್ಲಿಲ್ಲ ಮಾತ್ರ ಬೇರೆ

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಬೇಸಗೆ, ಮಳೆಯು ಹಿಂದಾಯಿತು. ಕಳೆದ ವಾರದಲ್ಲಿ ೩-೪ ದಿನ ತೆರಪಿಲ್ಲದೆ ಹಗಲೀ ರಾತ್ರಿ ಮಳೆ ಸುರಿಯಿತು. ಈಗ ಸ್ವಲ್ಪ ಸಮಾಧಾನವಾಗಿದೆ. ಆಣಿಕೆಯು ಬರಹತ್ತಿದೆ. ಬರೇ ಹುಲ್ಲು ಆಣಿಕೆಯೊಂದು ಪಕೀಕರ ದೂರು. ಬೆಲ್ಲವೂ ತೇಜಿ ಇಲ್ಲ. ಊರಲ್ಲಿ ಜ್ವರ, ಅತಿಸಾರ ಮುಂತಾದ ಬೇನೆಗಳು ಸಾವಕಾಶವಾಗಿ ಹಿಂದಾಗುತ್ತಿವೆ. ಈ ವಾರದಲ್ಲಿ ಮಳೆಯು ೩—೪೭ ಇಂಚು ಬಿತ್ತು. ಅಂತೂ ಈ ವರೆಗೆ ೧೩೦—೩೬ ಇಂಚು ಮಳೆ ಬಿತ್ತು.

ಗೋಕರ್ಣದ ರಥಬೀದಿಯಲ್ಲಿರುವ ವೇ| ಮು| ಶಿವದಿಯರ ಮನೆ ಕೊಟ್ಟಿಗೆಯಲ್ಲಿ ಕಳೆದ ಶುಕ್ರವಾರ ರಾತ್ರಿ ಒಂದು ಹುಲಿ ಹೊಕ್ಕು ಒಂದು ಆಕಳ ಹೋಟ್ಟೆಯನ್ನು ಫಲಾಹಾರ ಮಾಡಿತು. ಒಂದೆರಡು ವಾರು ಅಚೆ–ಈಚೆ ಮನೆಯ ಜನರು ಮಲಗಿದ್ದರು. ರಥಬೀದಿಯಲ್ಲಿ ಹುಲಿಯ ಪ್ರವೇಶವಾಗತೊಡಗಿದ ಬಳಿಕ, ಯಾರೇನು ಹೇಳುವದುಳಿಯಿತು? ಜನರ ಹತ್ತರ ಶಸ್ತ್ರಾಸ್ತ್ರಗಳಿಲ್ಲೆಂಬ ಸುದ್ದಿಯು ಗಿರಿಗುಹೆಗಳಲ್ಲಿ ವಾಸಿಸುವ ಹುಲಿಗಳಿಗೂ ಮುಟ್ಟಿತೇನು?

ಸಾಭಾರ ಸ್ವೀಕಾರ.

ಜಯಕರ್ನಾಟಕ— ಭಾದ್ರಪದ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ— ಶ್ರೀ| ಆಲೂರ ವೆಂಕಟರಾಯರು, ಧಾರವಾಡ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂಪಾಯಿ ೫-೮-೦ ಮಾತ್ರ.

ಸುಬೋಧ— ಶ್ರಾವಣ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ— ಶ್ರೀ| ಎಂ. ರಾಮರಾವ್, ಬೆಂಗಳೂರು. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೧-೮-೦.

ಕಿರ್ಲೋಸ್ಕರ ಖಬರ— (ಮರಾಠಿ ಮಾಸಪತ್ರಿಕೆ) ಅಕ್ಟೋಬರ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ— ಶ್ರೀ| ಶಂ. ವಾ. ಕಿರ್ಲೋಸ್ಕರ, ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ರೂ. ೧-೮-೦

ಕಾರವಾರ— ಮಾದಿವಗೇರಿಯ ಗಭೀಬೂಸಿ ಖಟ್ಲೆಯ ತಾಯಿ ಯಾದ ಮೊದಲನೇ ಆರೋಪಿಗೆ ಜನ್ಮಠೇಪು ಶಿಕ್ಷೆಯಾಗಿದೆ ಎರಡನೇ ಆರೋಪಿಯ ಮೇಲೆ ಬಳಸಿಂ ಪುಂಗಾವಳೆಂದು ಸೇರಿಸೋಣಾಗಿತ್ತು. ಅವಳನ್ನು ಜಜ್ಜರು ಬಿಟ್ಟುಕೊಟ್ಟರು.

ಗೋಕರ್ಣದ ಖೂನಿ ಖಟ್ಲೆಯ ವಿಚಾರವು ರಾ| ದಿವೇಕರರ ಕೋರ್ಟಿನಲ್ಲಿ ನಡೆಯುತ್ತದೆ. ಮೂರು ಆರೋಪಿಗಳಿರುವರು. ಪೋಲೀಸರಿಗೆ ಇನ್ನು ನಾಲ್ಕನೇ ಆರೋಪಿಯ ಪತ್ತೆ ಹತ್ತಲಿಲ್ಲ. ಆದರಿಂದ ಮೂರು ಆರೋಪಿಗಳ ಮೇಲೆ ಖಟ್ಲೆ ನಡೆಯಿತು. ಕೆಲವರ ಜಬಾನಿಗಳಾದವು. ರಾ| ದಿವೇಕರರು ಮೊನ್ನೆ ಆರೋಪಿಗಳ ಜಾಮೀನನ್ನು ರದ್ದುಪಡಿಸಿ, ಆರೋಪಿಗಳನ್ನು ಬಂಧನದಲ್ಲಿಟ್ಟಿರುವರು.

ವಾಜಾಳಿಯ ಹುಡುಗಿಯರ ಶಾಲೆಯ ಮುಖ್ಯಾಧ್ಯಾಪಿಕೆಯಾದ ಸೌ| ಇಂದಿರಾಬಾಯಿ ಶ್ಯಾನಭಾಗರವರು ಇಲ್ಲಿಯ ಸಿವ್ಹಿಲ್ ಆಸ್ಪತ್ರೆಯಲ್ಲಿ ತೀರಿಕೊಂಡರು. ಅವರು ಪ್ರಸೂತರಾಗಿ ಜ್ವರಗ್ರಸ್ತರಾಗಿದ್ದರು. ಸಧ್ಯಕ್ಕೆ ಅವರಿಗೆ ಅತ್ತ ಒದಗಿಯಾಗಿತ್ತು. ಕುಮಟೆಯ ಹುಡುಗಿಯರ ಶಾಲೆಯಲ್ಲಿ ಅವರು ಬಹಳ ವರುಷ ಕೆಲಸ ಮಾಡಿದ್ದರು. ಪುಣೆಯ ಟ್ರೇನಿಂಗ ಕಾಲೇಜಿನಲ್ಲಿ ಅವರು ಶಿಕ್ಷಣ ಪಡೆದಿದ್ದರು. ಚಿಕ್ಕ ಬಾಲಕರ ಗೋಳು!

ಯಲ್ಲಾಪುರ— ಯಲ್ಲಾಪುರ ತಾಲೂಕ ಶಿಕ್ಷಕ ಸಂಘದ ವಿದ್ಯಮಾನ ಶಿಕ್ಷಕರ ನಾಲ್ಕನೇ ಅಧಿವೇಶನವು ಜಿಲ್ಲಾ ಬೋರ್ಡಿನ ಮೆಂಬರರಾದ ಶ್ರೀ| ನಾರಾಯಣ ಗಣೇಶ ಹೆಗಡೆಯವರ ಅಧ್ಯಕ್ಷತೆಯಲ್ಲಿ ಸೇರಿ, ಶಿಕ್ಷಕರ ಉನ್ನತಿಯ ಕುರಿತು ಠರಾವುಗಳು ಕೈಕೊಳ್ಳಲ್ಪಟ್ಟವು. ಹೆಡ್ ಮಾಸ್ತರ ಭತ್ತೆಯನ್ನು ರದ್ದುಪಡಿಸಿ, ಮುಂದಿನ ಯೋಜನೆಯನ್ನು ಕೈಕೊಳ್ಳಬೇಕು. ತಾಲೂಕುಗಳೊಳಗಿನ ಶಿಕ್ಷಕರಿಗೆ ಅವರವರ ಕೆಲಸದ ಮಹತ್ವದ ಮಾನದಿಂದ ಪ್ರತ್ಯೇಕ ಭತ್ತೆಯನ್ನು ಕೊಡಬೇಕು. ವಿ| ತಿಮ್ಮಪ್ಪ ಕೊಯರು ಮಾಸ್ತರರಿಗೆ ಅಸಿಸ್ಟಂಟ ಡೆಪ್ಯುಟಿ ಹಾಗು ಸುಪರವ್ಯಾಯಝರ ಕೆಲಸದ ಬಗ್ಗೆ ಸ್ಕೂಲಬೋರ್ಡು ಕೊಡದ ಖಾಸಗಿ ಶಾಲೆಗಳ ನಿಷೇಧ ಮಾಡಲಾಯಿತು. ಅವರ ಖಾತೆಯವರಿಗೆ ಬೇರೆ ಭತ್ತೆ ಸಿಗುವಂತೆ ಶಿಕ್ಷಕರಿಗೂ ಈ ಭತ್ತೆ ಸಿಗಬೇಕು ಮುಖ್ಯ ಠರಾವುಗಳ ಸಂಬಳವನ್ನು ೫೫ ರೂಪಾಯಿಗಳಿಗೆ ಅದ್ದನ್ನು ಈ ಮುಂಚಿನಂತೆಯೇ ಏರಿಸಬೇಕು. ಬಗೇ ಮಾಡಿದ ಶಿಕ್ಷಕರಿಗೆ ಇನ್ನೂ ಪ್ರಯಾಣ ಭತ್ತೆ ಸಿಗಲಿಲ್ಲ. ಪ್ರಯಾಣ ಭತ್ತೆಯು ಸಿಗದಿದ್ದ ಬಗ್ಗೆ ಸಭೆಯು ಅಸಮಾಧಾನವನ್ನು ಪ್ರದರ್ಶಿಸಿತು. ೫ ವರ್ಷಕ್ಕಿಂತ ಹೆಚ್ಚಿಗೆ ಸರ್ವಿಸಾದ ಮುಲ್ಕಿ ಪಾಸಾದ ಶಿಕ್ಷಕರುಗಳಿಗೆ ಕಾಯಂಶಿಕ್ಷಕರನ್ನಾಗಿ ನೇಮಿಸಿಕೊಳ್ಳಬೇಕು. ಸಾರಿಲವಾರ ರಜೆ ಮುಂತಾದ ವಿಷಯಗಳ ಬಗ್ಗೆಯೂ ಠರಾವುಗಳು ಕೈಕೊಳ್ಳಲ್ಪಟ್ಟವು.

ಇಲ್ಲಿಯ ವಿ| ಜಯಾನಂದ ದಾಕ್ಟರ ಎಂಬ ಫಾರೆಸ್ಟರರು ತಮ್ಮ ಡ್ಯೂಟಿಯ ಮೇಲೆ ಜಂಗಲಕ್ಕೆ ಹೋದಾಗ ಕಾಲಿಗೊಂದು ಮುಂಬಳ ತಾಗಿದ ನಿಮಿತ್ತದಿಂದ ಎಂಟೇ ದಿವಸಗಳಲ್ಲಿ ತೀರಿಕೊಂಡರು. ಬಸ್ಸು, ಹೆಂಡತಿ, ಮುದಿ ತಾಯಿ, ಆರು ಮಂದಿ ಗಂಡು ಹೆಣ್ಣು ಮಕ್ಕಳು ಎಲ್ಲರೂ ಅನಾಥರಾದರು. ಈಶಲೀಲೆ.

ವೃತ್ತಸಾರ.

— ಬೆಳಗಾವಿ ಜಿಲ್ಲೆಯ ಹೇರೇ ಗ್ರಾಮದಲ್ಲಿ ಒಬ್ಬ ಜಹಾಗೀರದಾರನ ಭೂಮಿಯಲ್ಲಿ ಒಂದು ಪಾಷಾಣವು ದೊರೆತಿದೆ. ಪಾಷಾಣದ ಒಂದು ಸಿಂಹಾಸನವಿದೆ. ಸಿಂಹಾಸನದ ಮೇಲೆ ಶ್ರೀ ಗೋಪಾಲಕೃಷ್ಣನ ಮುಖವೋಹಕ ಮೂರ್ತಿಯು ಸವತ್ಸ ಗೋವಿನ ದಾಖವನ್ನು ಹಿಡಕೊಂಡು ಕಟಿಸ್ಥ ನಿಂತಿರುವದು. ಕರುವು ತಾಯಿಯ ಮೊಲೆಯನ್ನು ಮುದ್ದಿನಿಂದ ಕುಡಿಯುತ್ತದೆ. ಅದೇ ಸಿಂಹಾಸನದ ಮೇಲೆ ಶ್ರೀ ಶಂಕರನ ಲಿಂಗವಿದೆ. ಕೈಲಾಸನಾಥನ ಭಕ್ತರೊಬ್ಬರು ಶ್ರೀಶನಿಗೆ ಬಿಲ್ವ ಪತ್ರಿಗಳನ್ನು ಭಕ್ತಿಯಿಂದ ಅರ್ಪಿಸುತ್ತಿದ್ದಾರೆ. ಈ ಪಾಷಾಣವು ಬಹು ಪುರಾತನ ಕಾಲದ್ದೆಂದು ಜನರು ಹೇಳುತ್ತಾರೆ. ಇತ್ಯಾದಿ ಹಕೀಕತು ಬೆಳಗಾವಿಯ 'ಚಿತ್ರಕ' ಪತ್ರಿಕೆಯಲ್ಲಿ ಪ್ರಕಟವಾಗಿದೆ.

— ಪ್ರಾಥಮಿಕ ಶಿಕ್ಷಣಪ್ರಸಾರಕ್ಕಾಗಿ ಹೊಸ ಅಡಚಣಿಯಾಗಿ ಬಂಗಾಲದ ಸರಕಾರವು ಶಿಕ್ಷಣ ಕರವನ್ನು ಹೇರಬೇಕಾಗಿ ನಿಶ್ಚಯಿಸಿದೆ. ಈ ಕರದಿಂದ ಒಟ್ಟುಗೂಡಿದ ನಿಧಿಯ ವಿನಿಯೋಗ ನಡಿಸುವದಕ್ಕಾಗಿ ಸರಕಾರವು ಒಂದು ಪ್ರತ್ಯೇಕ ಮಂಡಳವನ್ನು ಏರ್ಪಡಿಸುವದು. ಅಲ್ಲಲ್ಲಿಯ ಜಿಲ್ಹಾಧಿಪರು ಅಧ್ಯಕ್ಷರಾಗಿ ಸೇವೆ ಸಲ್ಲಿಸುವರು. ಜಿಲ್ಹಾ ಬೋರ್ಡಿನ ಅಧ್ಯಕ್ಷರು ಉಪಾಧ್ಯಕ್ಷರಾಗಿ ನೇಮಿಸಲ್ಪಡುವರು! ಆಳರಸರಿಗೆ ಸಂಬಳ ಕೊಡಲು ಮಾತ್ರ ಬೇಕಷ್ಟು ಹಣವಿದೆ!

— ಅಮೇರಿಕೆಯ ಸಂಯುಕ್ತಸಂಸ್ಥಾನಗಳ ನದಿಯ ತೀರದ ಮಿಸ್ರೂಜ ಪ್ರದೇಶದಲ್ಲಿ ಭಯಂಕರ ಗಾಳಿ–ಮಳೆ! ಊರೊಳಗಿನ ಬೀದಿಗಳಲ್ಲೆಲ್ಲ ಮೊಣಕಾಲು ನೀರು. ೩-೮ ಕೋಟಿ ರೂಪಾಯಿಗಳ ನಷ್ಟ!

— ಪಂಜಾಬದ ೫೦ ಸಮಾಜವು ರಾಷ್ಟ್ರೀಯ ಸಭೆಗೆ ಅಧೀನವಾಗಿ ಕೌನ್ಸಿಲು ಚುನಾವಣೆಯಲ್ಲಿ ಸೇರುವ ನಿರ್ಧಾರವನ್ನು ಕೈಕೊಂಡಿರುವದು!

— ಬಿಹಾರ ಪ್ರಾಂತದಲ್ಲಿ ಬಾಬು ರಾಜೇಂದ್ರ ಪ್ರಸಾದರ ರ ಖಾದಿಯ ಪ್ರಸಾರ ಕಾರ್ಯವು ರಭಸದಿಂದ ಸಾಗಿದೆ. ಜಮಶೇದಪುರ ಹಾಗು ಕಂಪನಿಗಳೊಳಗಿನ ಯುರೋಪಿಯನ್ನರೂ ಕೂಡ ಖಾದಿಯ ಪುರಸ್ಕಾರ ಮಾಡಹತ್ತಿರುವರು.

— ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಯು ನವಂಬರ ೩. ರಂದು ನಡಿಯುವದಿದೆ. ನಮ್ಮ ದಕ್ಷಿಣ ಭಾಗದ ತರ್ಫೆನಿಂದ ಶ್ರೀ| ದತ್ತೋಪಂತ ಬೆಳವಿ ಹಾಗು ಡಿ. ಎಲ್. ಪಾಟೀಲರವರು ಉಮೇದ್ವಾರರಾಗಿರುವರು. ಶ್ರೀ| ಬೆಳವಿಯವರು ರಾಷ್ಟ್ರೀಯ ಪಕ್ಷದವರಿದ್ದುದರಿಂದ ಅವರನ್ನೇ ಆರಿಸಿ ಕಳಿಸುವದು ಮತದಾರರ ಕರ್ತವ್ಯವು, ಅಭಿಮಾನವೂ ಅದೇ.

— ಜರ್ಮನಿಯಿಂದ ಕೆಲವು ವೋಟಾರ ಪ್ರಯಾಣಿಕರು ಮುಂಬಯಿಯಲ್ಲಿ ಬಂದಿಳಿದಿರುವರು. ಮೋಟಾರಿನಿಂದ ಭೂಗೋಳವನ್ನು ಸಂಚರಿಸುವಂತೆ ಅವರು ನಿಶ್ಚಯ ಮಾಡಿರುವರು. ಕಳೆದ ಎಪ್ರಿಲ್ ತಿಂಗಳಲ್ಲಿ ಅವರು ಜರ್ಮನಿಯಿಂದ ಹೊರಟರಂತೆ.

— ಕೊಡಗಿನಲ್ಲಿ ಉಷ್ಣದ ಬೇನೆ ಒಂದು ಈಗ ಎರಡು ತಿಂಗಳುಗಳಿಂದವು. ಸಾವಿರಾರು ಜನಗಳು ಜಾಡಿಸಿದರು. ಇದರೂ ಸರಕಾರವು ಈ ಕುರಿತು ಇನ್ನೂ ಏನೊಂದು ಉಪಾಯ ಮಾಡಲಿಲ್ಲ.

— ಬಾಗಲಕೋಟೆಯ ಮುನಿಸಿಪಾಲಿಟಿಯವರು ತಮ್ಮಲ್ಲಿಯ ಕಾಗದಪತ್ರಗಳನ್ನು ತಿನ್ನಬಹುದೆಂದು ನಿಶ್ಚಯಿಸಿದ ಠರಾವು ರಾ ಧುರಂಧರರ ಹಳೆಯ, ಒ.ಪ. ಗಾರ ಸರ್ಕಾರ ನಾಗರಿಕ ಪ್ರಭೃತಿ ಕನ್ನಡಾಭಿಮಾನಿ ಲೋಕಪ್ರತಿನಿಧಿಗಳ ವಿರೋಧದಿಂದ ಬಿದ್ದುಹೋಯಿತು.

— ನಾಗಪುರದ ಸಬ್‌ಜಡ್ಜರಾದ ರಾ| ಜೆಂಡಾರಕರರ ದ ಕೋರ್ಟಿನಲ್ಲಿ ದಿವಾಣಿ ಮೊಕದ್ದಮೆ ನಡೆದಿತ್ತು. ಪೂರ ಸಾಕ್ಷಿಯೊಬ್ಬನು ಮೊಕದ್ದಮೆಯ ಕಾಗದಪತ್ರಗಳನ್ನು ನೋಡ ನೋಡುತ್ತ ಒಂದು ಕಾಗದವೊಂದನ್ನು ಬಾಯಲ್ಲಿ ಹಾಕಿ ತಿಂದುಬಿಟ್ಟನು! ಯಾವ್ಯಾವ ಪ್ರವೃತ್ತಿಯು ಆಗಿರುವದೊ !!

— ಕಾರವಾರ ಮುನಿಸಿಪಾಲಿಟಿಯೊಳಗೆ ದೊಡ್ಡದೊಂದು ಗದ್ದಲ! ಕಾರವಾರ ಮುನಿಸಿಪಾಲಿಟಿಯ ಸಭಾಸದರೂ ಅಧ್ಯಕ್ಷರೂ ಈಗ ಒಳಗಿನ ಕಿರಿಕಿರಿಯಿಂದ ಜಗಳ ನಡೆದಿತ್ತು. ಆ ಕಾರಣ ಸರಕಾರವು ಮುನಿಸಿಪಾಲಿಟಿಯನ್ನೇ ವಿಸರ್ಜಿಸಿತು. ಆ ಬಳಿಕ ಸಭಾಸದರು ... ಕೆಲವು ತೀರ್ಮಾನಗಳನ್ನು ಕೈಕೊಂಡರು. ಅವು ಪಾಸಾದವು. ಆದರೆ ಒಬ್ಬ ಅಧ್ಯಕ್ಷರೂ ಸಭಾಸದರೊಬ್ಬರೂ ಮುನಿಸಿಪಾಲಿಟಿಯ ಹೈಕೋರ್ಟಿನಲ್ಲಿ ಒಂದು ಲಕ್ಷದ ದಾವೆ ಹೂಡಿದರು. ಸಭಾಸದರು ಸಭೆಸೇರಿ ಆ ದಾವೆಯನ್ನು ನಡಿಸಲು ಮುನಿಸಿಪಾಲಿಟಿಯ ಫಂಡಿನೊಳಗಿಂದ ಖರ್ಚುಮಾಡಬೇಕೆಂದು ನಿರ್ಧರಿಸಿದರು. ಹೀಗೆ ಖರ್ಚು ಮಾಡಲಾಗದೆಂದು ಮುನಿಸಿಪಾಲಿಟಿಗೆ ತೆರಿಗೆ ಕೊಡುವವರೊಬ್ಬರು ಜಿಲ್ಲೆಯ ಸಬ್‌ಜಡ್ಜ ಕೋರ್ಟಿನಲ್ಲಿ ದಾವೆ ಮಾಡಿ ಪ್ರತಿಬಂಧಕ ಹುಕುಮನ್ನು ಪಡೆದಿರುವರು. ಸ್ಥಾನಿಕ ಸ್ವರಾಜ್ಯ ಸೇವೆಗಾಗಿ ನಿರಪೇಕ್ಷ ಬುದ್ಧಿಯಿಂದ ಮುಂದಾದ ಪ್ರಮುಖರ ಪಾಡೈ ಗೆಳೆವು!

ಡಾ|| ವ್ಹಾ. ಎಮ್. ವೈದ್ಯ,

ಡೆಂಟಿಸ್ಟ ಮತ್ತು ಅಕ್ಯೂಲಿಸ್ಟ,

ಗವಳೀಗಲ್ಲಿ, ಧಾರವಾಡ.

ಡಾಕ್ಟರ ಕೂಪರ, ಬಿ. ಡಿ. ಎಸ್. ಮುಂಬಯಿ, ಇವರ ಮೊದಲನೇ ಅಸಿಸ್ಟೆಂಟ.

ಹುಬ್ಬಳ್ಳಿ ಬ್ರ್ಯಾಂಚ:— ದುರ್ಗದಬೈಲ. ಪ್ರತಿ ದಿವಸ ಮಧ್ಯಾಹ್ನ ೨ರಿಂದ ಸಂಜೆಯ ೬ ರ ವರೆಗೆ.

ಏನೂ ನೋಯಿಸದೆ ಹಲ್ಲುಗಳನ್ನು ತೆಗೆಯುತ್ತೇವೆ. ಕೃತ್ರಿಮ ಹಲ್ಲುಗಳನ್ನು ಯೋಗ್ಯವಾಗಿ ಕೂಡಿಸುತ್ತೇವೆ. ಬೆಳ್ಳಿ ಅಥವಾ ಬಂಗಾರದ ಸಿಮೆಂಟದಿಂದ ಹಲ್ಲುಗಳನ್ನು ಕೂಡಿಸುತ್ತೇವೆ. ಹಳೇ ಹಲ್ಲುಗಳನ್ನು ದುರುಸ್ತ ಮಾಡುತ್ತೇವೆ. ಗೋಲ್ಡ, ಕ್ರೌನ ಮತ್ತು ಬ್ರಿಡ್ಜ್‌ವರ್ಕ ಲಿಷ್ಟ ಸೈಜಿನ ಹಲ್ಲುಗಳನ್ನು ಸ್ಪಷ್ಟವಾಗಿ ಮಾಡುವದರಲ್ಲಿ ಬರುವವು. ಇದಲ್ಲದೆ, ಅವುಗಳನ್ನು ಸಂಪೂರ್ಣವಾಗಿ ಬೆಳ್ಳಗೆ ಮಾಡುವದರಲ್ಲಿಯೂ ಬರುವದು. ನಮ್ಮ ದೇಶಿ ಮಂಡಳಿಯವನ್ನು ಉಪಯೋಗಿಸಿರಿ.

ಟೆಲಿ ಹಬ್ಬಿಗೆ ೪ ಆಣೆ.

ಕಣ್ಣು ಹಾಲೀಸ.

ಹಾಲೀಸಿಯ ಸಲುವಾಗಿ ಕಣ್ಣುಗಳನ್ನು ಪರೀಕ್ಷಿಸುತ್ತೇವೆ. ಕಲ್ಲಿನವು, ಫ್ರೇಮ್ಸ ರೋಲ ಮತ್ತು ನಿಕಲ್ ಇವುಗಳ ಚಾಳಿಗಳು ಮತ್ತು ಚಾಳೀಸ ಹಾಕುವ ಪೆಟ್ಟಿಗೆಗಳು, ವಿಲ್ಸನ್ ಗೋಲ್ಡ ಅನುಬಿದ ಮುಂತಾದವುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಚಾಳೀಸುಗಳನ್ನು ದುರುಸ್ತ ಮಾಡುತ್ತೇವೆ. ಹಾಗೂ ಕೃತ್ರಿಮ ಕಣ್ಣುಗಳನ್ನು ಸಹ ಕೂಡಿಸುತ್ತೇವೆ.

ರಾ| ಮಾಸೂರರ ಗ್ರಾಮಸಂಭಾವನೆ

(ಹಳೇ ಹಾಳಿನಿಂದ ಮುಂದರಿಸಿದ್ದು.)

ಆ ಬಳಿಕ ಸಭಿಕರು ರಾ|ಶೆಟ್ಟಿಯವರಿಗೆ ಪ್ರಶ್ನೆಗಳನ್ನು ಕೇಳತೊಡಗಿದರು. ಒಬ್ಬರು ಕೇಳಿದ್ದೇನಂದರೆ.—"ಈ ಸಿದ್ದಿ ಉಚಿತವಾಗಿ ಸಿಗುವ ಹಟ್ಟಿಗೆಗಾಗಿ ಎಕ್ರೆಗೆ ೧೦ ರೂಪಾಯಿ ತುಂಬುವದು ಹೆಚ್ಚು ನಲ್ಲವೇ ?"

ಅದಕ್ಕೆ ರಾ| ಮಾಸೂರರು ನುಡಿದದ್ದೇನಂದರೆ: "ಅದರಿಂದ ನಿಮಗೆ ನಷ್ಟವಿಲ್ಲ ಮತ್ತು ಜಾತಿಯ ಗಿಡ-ಮರಗಳು ಸಹ ನಿಮಗೆ ಸಿಗುತ್ತವೆ. ಕಿಕ್ಕ ಕಿಕ್ಕ ಹಾಗೆ ಗಿಡಗಳನ್ನು ಕಡಿದು, ಸರಕಾರಿ ಪಹಾಸದಲ್ಲಿ ಕಿಕ್ಕ ಕಂಟೆನ್‌ಸ್‌ಟನ್ ಯಾವ ದಂಡ ತುಂಬಿ ಮೊಕದ್ದಮೆಗಳನ್ನು ಮಾಡಿಕೊಂಡು ನಷ್ಟಕ್ಕೆ ಬೀಳುವದು ತಪ್ಪುತ್ತದೆ. ಇದೆಲ್ಲ ವಿಚಾರ ಮಾಡಿದರೆ, ಇದರಿಂದ ಲಾಭವೇ."

ಇನ್ನೊಬ್ಬರು ಕೇಳಿದ್ದೇನಂದರೆ: "ಕಮೀಟಿಗಳು ಹಂಚಿಕೊಳ್ಳ ಅವನ್ನು ಕಡಿಸುವ ಬಗೆ ಹೇಗೆ? ಕಟ್ಟಿಗೆಯನ್ನು ಹಂಚಿಕೊಳ್ಳುವ ಬಗೆ ಹೇಗೆ?"

"ನೀವು ಪ್ರತಿ ಒಬ್ಬರಿಗೆ ಅವರವರಿಗೆ ಬೇಕಾದ ಕಟ್ಟಿಗೆಯ ಪ್ರಮಾಣದಿಂದ ಅರುಗಳನ್ನು ಅವರವರ ಕಡೆಯಿಂದ ತೆಗೆದುಕೊಂಡು, ಎಲ್ಲ ಅರುಗಳನ್ನು ಒಟ್ಟುಗೂಡಿಸಿ ಆದವಿಯನ್ನು ಕಡಿದು, ಪಡದಿಯನ್ನು ಹಂಚಿಕೊಳ್ಳಬೇಕು."

ಮತ್ತೊಬ್ಬರು ಕೇಳಿದ್ದೇನಂದರೆ:— "ಒಂದೇ ದಿನ ಎಲ್ಲ ಅರುಗಳನ್ನು ಕೂಡಿಸುವದು ಕಷ್ಟಸಾಧ್ಯವಾಗುತ್ತದೆ."

ಅದಕ್ಕೆ ರಾ| ಮಾಸೂರರು ಅಂದದ್ದು: "ಅವರವರ ಅನುಕೂಲತೆಯಂತೆ ಅವರವರು ಅರು ಹಾಕಿ ಅರವಲ ಕಟ್ಟಿಗೆಯನ್ನು ತಂದುಕೊಳ್ಳಬಹುದು. ನೌಕರರಿಗೆ ಬರಬಹುದಾದ ನೌಕರರನ್ನು ಮಾತ್ರ ಒಟ್ಟಿನ ಮೇಲೆ ಕಡಿಸಿದರಾಯಿತು."

"ಹೀಗಾದರೆ, ಒಬ್ಬನಿಗೆ ಹಳೆಯ ಕಟ್ಟಿಗೆ ಸಿಕ್ಕೀತು; ಇನ್ನೊಬ್ಬನಿಗೆ ಕೆಡಕು ಸಿಕ್ಕಬಹುದು. ಈ ಯೋಜನೆಯಿಂದ ನಮ್ಮ ನಮ್ಮೊಳಗೆ ಬಡಿದಾಡಿಕೊಳ್ಳಲಿಕ್ಕೆ ಅಡ್ಡಿಯಿಲ್ಲ." ಎಂದು ಮತ್ತೊಬ್ಬ ಪ್ರಶ್ನಕಾರರು ನುಡಿದರು.

"ಇಲಿಗಳು ಸಭೆ ಸೇರಿ ಬೆಕ್ಕಿನ ಕುತ್ತಿಗೆಗೆ ಘಂಟೆ ಕಟ್ಟುವ ಕಲ್ಪನೆಯಂತೆ ಈ ಕಮೀಟಿಯ ಗತಿಯಾಗುವದೇನು" ಸಭಿಕರಲ್ಲೊಬ್ಬರು ನುಡಿದರು.

"ಹಳ್ಳಿಗಳ ಸ್ಥಿತಿಯು ಹೀನಾವಸ್ಥೆಗೆ ಮುಟ್ಟಿದೆ. ಅವು ಬರೆ. ಅವುಗಳನ್ನು ಉರ್ಜಿತಾವಸ್ಥೆಗೆ ತರಲು ನಾವು ಸರಕಾರದಿಂದ ಹಣ ದೊರಕಿಸಿಕೊಳ್ಳಬೇಕು. ರಾ| ಮಾಸೂರರ ಹೇಳಿದಂತೆ ಲೋಕಲ್ ಫಂಡನ್ನು ಏರಿಸಿಕೊಂಡು ಸಧಾರಣೆ ಮಾಡುವದು ನಮ್ಮಲ್ಲಿ ಸಾಮರ್ಥ್ಯವಿಲ್ಲ. ಒಬ್ಬನಿಗೆ ಅರಹೊಟ್ಟೆ ಊಟ ಸಹ ಸಿಗದಿದ್ದಲ್ಲಿಯು ರಾ| ಮಾಸೂರರು ಈ ಮೊದಲೇ ಹೇಳಿಬಿಟ್ಟಿರುವರು. ಈ ಸ್ಥಿತಿಯಲ್ಲಿ ನಾವಿನ್ನು ಕರ ಕೊಡುವ ಬಗೆ ಹೇಗೆ? ಸರಕಾರವು ಮಿತವ್ಯಯ ಮಾಡಿದೆಂಬುದು ಬರೇ ತೋರಿಕೆಗೆ ಮಾತ್ರ. ನಮ್ಮ ಆಲಾಪದೊಳಗಿನ ಬಲ್ಲವರು ಹೇಳಿದಂತೆ ಅದರು ಖರ್ಚನ್ನು ತಗ್ಗಿಸಿರುವದಿಲ್ಲ" ಎಂದು ಒಬ್ಬರು ನಿರ್ದಾಕ್ಷಿಣ್ಯದಿಂದ ನುಡಿದರು.

ಅದಕ್ಕೆ ರಾ| ಮಾಸೂರರು ದೃಷ್ಟಾಂತವೊಂದು ಹೇಳಿದ್ದೇನಂದರೆ:— "ಸರಕಾರದ ಹತ್ತರ ಹಣವಿಲ್ಲ. ಜನಾ-ಖರ್ಚಿನ ಬಾಯಿಗೂಡಿಸಲಿಕ್ಕೆ ಸರಕಾರದಿಂದ ಆಗುವದಿಲ್ಲ. ಇದರಿಂದ ಅದರಿಗೆ ಸಾಲವಾಗಿದೆ. ಸರಕಾರದಿಂದ ಸುಧಾರಣೆ ಮಾಡಿಸಿಕೊಳ್ಳಬೇಕೆಂದು ನಾವು ಪ್ರಯತ್ನಪಡುವದಕ್ಕಿಂತ ನಮ್ಮ ಗ್ರಾಮಗಳು ದುಃಸ್ಥಿತಿ ಹೀನಾವಸ್ಥೆಗೆ ಮುಟ್ಟುವವು."

ಸಭಿಕರಲ್ಲೊಬ್ಬರಿಗೆ ರಾ| ಮಾಸೂರರ ಸರಕಾರ ಪಕ್ಷಪಾತಿ ಪುರಾಣ ಕೇಳಿ ಉದ್ವೇಗ ಬಂದಂತೆ ತೋರಿತು. ಅವರು ನುಡಿದದ್ದೇನಂದರೆ:— "ನಮ್ಮ ಹತ್ತರ ತೆರಿಗೆ ಕೊಡುವ ಸಾಮರ್ಥ್ಯವಿಲ್ಲ. ಜನಾ-ಖರ್ಚಿನ ಬಾಯಿಗೂಡಿಸಲಿಕ್ಕಾಗದೆ ಸರಕಾರವು ನಮ್ಮ ಸಲುವಾಗಿ ವ್ಯಥಾ ಕಷ್ಟಪಡುವದ್ಯಾಕೆ? ನಮ್ಮ ಭಾರ ಧಾರವನ್ನು ನಮಗೇ ಒಪ್ಪಿಸಿಬಿಡಲಿ. ನಾವು ಯುಕ್ತ ಕಂಡಂತೆ ಸಧಾರಣೆ ಮಾಡಿಕೊಳ್ಳುತ್ತೇವೆ."

ರಾ| ಮಾಸೂರರಿಗೆ ಮರ್ಮಘಾತ ಮಾಡಿದಂತಾಯಿತು. "ನೀವು ಸರಕಾರದ ಹತ್ತರವೇ ಹೇಳಿಕೊಳ್ಳಿ," ಎಂದು ಮೋಹದ ಮಾತಾಡಿದರು. "ಈಗ ನನಗೆ ರಾತ್ರಿಯಾಯಿತು. ನಾನು ಹೋಗುತ್ತೇನೆ. ನಾನು ಹೇಳಿದ ಕಮೀಟಿಯ ವಿಷಯಕ್ಕೆ ಏನು ಮಾಡುತ್ತೀರೆಂಬದನ್ನು ನನಗೆ ತಿಳಿಸಿರಿ," ಎಂದು ಹೇಳಿ ರಾ| ಮಾಸೂರರು ಹೊರಟರು. ಸಭಿಕರೆಲ್ಲರೂ ತಮ್ಮ ತಮ್ಮ ಮನೆಗೆ ಹೋದರು.

ಮಾರನೇ ದಿನ ಊರಲ್ಲೆಲ್ಲ ಇದೇ ಒಂದು ಚರ್ಚೆಯ ವಿಷಯ. ಜಂಗಲ ಬೊಳಕುಗಳನ್ನು ಲಿಲಾಂವಿನಲ್ಲಿ ಪಡೆದವರಿಗೆ ಎಕ್ರೆ ಒಂದರ ೩-೪ ರೂಪಾಯಿ ಬೀಳುತ್ತವೆ. ೧೦ ರೂಪಾಯಿ ಕೊಡುವದ್ಯಾಕೆ? ಕಮೀಟಿಯ ಉಪಾಧಿ ಯಾಕೆ? ರಾ|ಮಾಸೂರರ ಲೋಕೋಪಕಾರವ್ಯಾಕೆ? ನೆರೆಯ ಮಿರ್ಜಾನ ಗ್ರಾಮದ ಮುಹಮ್ಮದ ಇಸ್ಮಾಯಿಲ್ ಉರ್ಫ ಬಡೇ ಸಾಹೇಬರವರು ೩೦ ಎಕ್ರೆ ಜಂಗಲವನ್ನು ೧೦೦ ರೂಪಾಯಿಗೆ ಲೀಜಿಗೆ ಪಡೆದಿರುತ್ತಾರೆ. ಈ ಲೆಕ್ಕದಂತೆ ಎಕ್ರೆಗೆ ೩| ರೂಪಾಯಿ ಬೀಳುತ್ತದೆ. ೧೦ ರೂಪಾಯಿ ಕೊಡಬೇಕೆಂದು ರಾ| ಮಾಸೂರರು ಹೇಳುತ್ತಾರೆ. ಜಂಗಲ ಖಾತೆಯ ಗುಪ್ತ ವೇಷಧಾರಿಗಳೇನವರು? ಕೊಳವುಗಳನ್ನೇ ಲಿಲಾಂವಿನಲ್ಲಿ ಪಡೆಯುವದು ಹೆಚ್ಚು ಲಾಭಪ್ರದವಲ್ಲವೇ? "ನಿಮ್ಮ ಹೇಳಿಕೆಯಂತೆ ಕಮಿಟಿ ಮಾಡುವದು ನಮ್ಮಲ್ಲಿ ಸಾಧ್ಯವಿಲ್ಲೆಂ"ದು ರಾ| ಮಾಸೂರರಿಗೆ ಮಾರನೇ ದಿವಸ ತಿಳಿಸಲಾಯಿತು.

[*.* ಹಗಡೆಯ ಪ್ರೇಕ್ಷಕರು ಕೊಟ್ಟ ಸಭೆಯ ಹಕೀಕತನ್ನು ನಾವು ಮೇಲೆ ಕೊಟ್ಟಿರುವೆವು. ಈ ಹಕೀಕತಿನಲ್ಲಿ ಅನೇಕ ವಿವಾದಾತ್ಮಕ ವಿಷಯಗಳಿವೆ. ಅವನ್ನು ಸಮಾಲೋಚಿಸುವದು ನಮ್ಮ ಕರ್ತವ್ಯವು ಆದರೆ, ರಾ| ಮಾಸೂರರಿಗೆ ಅನ್ಯಾಯವಾಗಬಾರದೆಂದು ನಮ್ಮದೊಂದು ಅರಿಕೆಯಿದೆ. ರಾ| ಮಾಸೂರರು ಹಗಡೆಯೊಳಗಿನ ಸಭೆಯ ಯಥಾರ್ಥ ಹಕೀಕತನ್ನು ಕಳುಹಿಸಿಕೊಟ್ಟರೆ, ನಾವು ಅದನ್ನು ಪ್ರಕಟಿಸಿ, ನಮ್ಮ ವಿಚಾರಗಳನ್ನು ಮುಂದೆ ಪ್ರಕಟಿಸುವೆವು. ಒಂದು ವಾರದ ವರೆಗೆ ರಾ| ಮಾಸೂರರ ಪತ್ರ ನಿರೀಕ್ಷಣ ಮಾಡುವೆವು. ಅಷ್ಟರವರೆಗೆ ಅವರ ಪತ್ರವು ಬಾರದಿದ್ದಲ್ಲಿ, ಹಗಡೆಯ ಪ್ರೇಕ್ಷಕರು ಕಳುಹಿದ ಹಕೀಕತೇ ಪ್ರಮಾಣವೆಂದು ಎಣಿಸಿ, ನಮ್ಮ ವಿಚಾರಗಳನ್ನು ವಾಚಕರಿಗೆ ಅರ್ಪಿಸುವೆವು. — ಪತ್ರ ಸಂಪಾದಕ.]

ಮಹಾತ್ಮರ ಆತ್ಮಚರಿತ್ರ.

ನಾತಾಲದಲ್ಲಿ ಹಿಂದೀ ರಾಷ್ಟ್ರೀಯ ಸಭೆ.

ವಕೀಲಿ ಉದ್ಯೋಗಕ್ಕೆ ನಾನು ಪ್ರಮುಖ ಸ್ಥಾನ ಕೊಡಲಿಲ್ಲ, ಹೇಗಾಗಲೂ ಅದು ನನಗೆ ಪ್ರಮುಖವಾಗಲೇ ಇಲ್ಲ. ನಾನು ಸಾರ್ವಜನಿಕ ಸೇವೆಯಲ್ಲಿ ನಿಮಗ್ನನಾಗಿದ್ದರೆ ಮಾತ್ರ, ನಾತಾಲದಲ್ಲಿ ಉಳಕೊಂಡದ್ದು ಸಾರ್ಥಕವಾಗಿತ್ತು. ಮತಾಧಿಕಾರವನ್ನು ಸೆಳಕೊಳ್ಳುವ ಕಾನೂನಿನ ಕುರಿತು ಅರ್ಜಿಮಾಡಿ ಅಷ್ಟು ಪ್ರಯೋಜನವಿದ್ದಿಲ್ಲ ಬ್ರಿಟಿಶ ಪ್ರಧಾನ ಮಂಡಳದೊಳಗಿನ ವಸಾಹತುಗಳ ಪ್ರಧಾನರಿಗೆ ಅನ್ಯಾಯವನ್ನು ಮನಗಾಣಿಸಬೇಕಾಗಿದ್ದರೆ, ಸತತವಾಗಿ ದುಡಿಯಬೇಕಾಗಿತ್ತು. ಅದಕ್ಕಾಗಿ ಶಾಶ್ವತವಾದ ಸಂಸ್ಥೆಯನ್ನೊಂದು ನಿರ್ಮಿಸಲು ಬೇಕಾಗಿತ್ತು. ಅದರಿಂದ ಶೇಟ ಅಬ್ದುಲ್ಲಾ ಪ್ರಭೃತಿ ಗೆಳೆಯರೊಡನೆ ನಾನು ಆಲೋಚಿಸಿದೆನು. ಮತ್ತು ಶಾಶ್ವತವಾದ ಸಾರ್ವಜನಿಕ ಸಂಸ್ಥೆಯನ್ನೊಂದು ಸ್ಥಾಪಿಸಲು ನಾವೆಲ್ಲರೂ ನಿರ್ಧರಿಸಿದೆವು.

ಹೊಸ ಸಂಸ್ಥೆಗೆ ನಾಮಕರಣ ಮಾಡುವ ಬಗ್ಗೆ ಏನೆಂದು ನಾನು ವಿಚಾರಿಸಹತ್ತಿದೆನು, ನನಗೆ ಅದೇ ಒಂದು ದೊಡ್ಡ ಚಿಂತೆಯಾಯಿತು. ಆ ಸಂಸ್ಥೆಯು ಯಾರಿಗೂ ಪಕ್ಷಪಾತಿಯಾಗಿ ಕಾಣಬಾರದು. ಕೊಂಗ್ರೆಸ ಯಾನೆ ರಾಷ್ಟ್ರೀಯ ಸಭೆ ಎಂಬ ಹೆಸರು ವಿಲಾಯತಿಯೊಳಗಿನ ಪುರಾತನ ಮತವಾದಿ ಪಕ್ಷದವರಿಗೆ ಸೇರುತ್ತಿರಲಿಲ್ಲ. ಆದಾಗ್ಯೂ, ರಾಷ್ಟ್ರೀಯ ಸಭೆಯಿಂದ ಹಿಂದುಸ್ಥಾನಕ್ಕೆ ಅಪರಿಮಿತವಾದ ಹಿತವಾಗಿರುವದೆ ನಾತಾಲದಲ್ಲಿ ಅದರ ಹೆಸರನ್ನೇ ಪ್ರಸರಿಸಬೇಕೆಂದು ನಾನು ಎಣಿಸಿದೆನು. ಆ ಹೆಸರನ್ನು ಇಟ್ಟುಕೊಳ್ಳಲು ಅನುಮಾನಿಸುವದು ಹೇಡಿತನವಾಗಿತ್ತು. ಅದರಿಂದ ಕಾರಣಗಳನ್ನೆಲ್ಲ ವಿವರಿಸಿ, ಸಂಸ್ಥೆಗೆ "ನಾತಾಲ ಹಿಂದೀ ರಾಷ್ಟ್ರೀಯ ಸಭೆ" ಎಂಬ ಹೆಸರನ್ನು ಇಡಬೇಕಾಗಿ ನಾನು ಸೂಚಿಸಿದೆನು, ಮೇ ೨೨ನೇ ತಾರೀಖಿಗೆ ನಾತಾಲ ಹಿಂದೀ ರಾಷ್ಟ್ರೀಯ ಸಭೆಯು ಪ್ರಾಣಪ್ರತಿಷ್ಠೆಯಾಯಿತು

ದಾದಾ ಅಬ್ದುಲ್ಲಾರವರ ಮಂದಿರವು ವಿಶಾಲವಿತ್ತು ಅದರೂ ಮೇ ೨೨ನೇ ತಾರೀಖಿಗೆ ಆ ಮಂದಿರವೆಲ್ಲ ಜನಸಂದಣಿಯಿಂದ ತುಂಬಿಹೋಗಿತ್ತು ರಾಷ್ಟ್ರೀಯ ಸಭೆಗೆ ಸಭಿಕರೆಲ್ಲರೂ ಉತ್ಸಾಹದಿಂದ ಬರಮಾಡಿಕೊಂಡರು. ಸಭೆಯ ಘಟನೆಯು ಸಾಮಾನ್ಯವಿತ್ತು. ಆದರೆ ಪಟ್ಟಿಯು ಹೇರಳ ತಿಂಗಳಿಗೆ ೫ ಶಿಲಿಂಗು ಕೊಡಬಲ್ಲವರಿಗೆ ಮಾತ್ರ ಸಭಾಸದರಾಗಲು ಅಧಿಕಾರವಿತ್ತು. ಶ್ರೀಮಂತರಿಗೆ ಅದಷ್ಟು ಹೆಚ್ಚಿಗೆಯಾಗಿ ಪಟ್ಟಿ ಕೊಡಲು ಮನವೊಲಿಸೋಣಾಯಿತು. ಅಬ್ದುಲ್ಲಾ ಶೆಟ್ಟರು ಎಲ್ಲರಿಗಿಂತಲೂ ಹೆಚ್ಚಿಗೆಯಾಗಿ ವಂತಿಗೆ ಕೊಡಲೊಪ್ಪಿ, ತಮ್ಮ ಹೆಸರನ್ನು ಮೊಟ್ಟಮೊದಲು ದಾಖಲಪಡಿಸಿದರು. ತಿಂಗಳಿಗೆ ಅವರು ೨ ಪವನು ಪಟ್ಟಿ ಕೊಡಲೊಪ್ಪಿದರು. ಇನ್ನಿಬ್ಬ ಗೆಳೆಯರೂ ಅಷ್ಟೇ ಪಟ್ಟಿಯನ್ನು ಕೊಟ್ಟರು. ನನ್ನ ಪಟ್ಟಿಯು ಕಡಿಮೆಯಾಗಬಾರದೆಂದು ನನಗನಿಸಿ, ನಾನು ತಿಂಗಳಿಗೆ ಒಂದು ಪವನಿನ ಪಟ್ಟಿ ಹಾಕಿದೆನು. ನನ್ನ ಸ್ಥಿತಿಯ ವಿಚಾರದಿಂದ ನನಗೆ ಇದೇ ದೊಡ್ಡ ರಕಮಾಗಿತ್ತು ಆದರೆ, ನನ್ನಿಂದ ಕೈಸಾಗದ ಮಾತಿದ. ನಾನು ಎಣಿಸಲಿಲ್ಲ. ನಾನು ನನ್ನ ಭವಿತವ್ಯತೆಗಾಗಿ ಶಕ್ಯ ತ್ಯಾಗ ಮಾಡಬೇಕೆಂದು ನನಗನಿಸಿತು. ಪರಮಾತ್ಮನೂ ನನಗೆ ನೆರವಾದನು. ಹೀಗೆ ತಿಂಗಳಿಗೆ ಒಂದೊಂದು ಪವನು ಪಟ್ಟಿ ಹಾಕಿ, ಹೇರಳ ಮಂದಿಗಳು ಸಭಾಸದರಾದರು ೧೦ ಶಿಲಿಂಗು ಪಟ್ಟಿ ಕೊಟ್ಟವರು ಇವರಿಗಿಂತಲೂ ಹೇರಳ ಮಂದಿಗಳಿದ್ದರು. ಇದಲ್ಲದೆ ಅನೇಕರು ಕಾಣಿಕೆಗಳನ್ನಿತ್ತರು ಅವುಗಳನ್ನೆಲ್ಲ ನಾವು ಕೃತಜ್ಞತೆಯಿಂದ ಅಂಗೀಕರಿಸಿದೆವು

ಕೇಳಿದೊಡನೆ ಪಟ್ಟಿಯ ರಕಮನ್ನು ಯಾರೂ ವಸೂಲ ಕೊಡುವರಿಲ್ಲವಾಗಿ ನಮಗೆ ಅನುಭವ ಬಂತು ದರ್ಬಾನದ ಹೊರಗುಳಿಯುವ ಸಭಾಸದರಿಗೆ ಆಗಿಂದಾಗ ಕೇಳುವದಂತೂ ಅಶಕ್ಯವೇ. ಉತ್ಸಾಹವು ಕ್ಷಣಭಂಗುರವಾಯಿತು. ದರ್ಬಾನದೊಳಗಿನ ಸಭಾಸದರಿಗೆ ಪಟ್ಟಿ ಕೊಡಬೇಕಾದರೆ, ಬಹಳು ಪರ್ತಿ ಆಗ್ರಹ ಮಾಡಬೇಕಾಗುತ್ತಿತ್ತು

ಕಾರ್ಯದರ್ಶಿಯ ಕರ್ತವ್ಯವು ನನ್ನ ಪಾಲಿಗೆ ಬಂದಿತ್ತು ಪಟ್ಟಿಯ ಹಣವನ್ನು ನಾವೇ ಸಂಗ್ರಹಿಸಬೇಕಾಗಿತ್ತು. ಕ್ರಮವಾಗಿ ನನ್ನ ಕಾರಕೂನನಿಗೆ ಪಟ್ಟಿ ಕೂಡಿಸುವದೊಂದೇ ಕೆಲಸವಾಗಿತ್ತು. ಕೆಲವು ತಿಂಗಳುಗಳಾದ ಬಳಿಕ, ಕಾರಕೂನನಿಗೆ ಬೇಸರಬಂತು ನಾನೂ ಈ ಸ್ಥಿತಿಯ ಕುರಿತು ಆಲೋಚಿಸಹತ್ತಿದೆನು. ಆ ಸ್ಥಿತಿಯನ್ನು ಸುಧಾರಿಸುವ ಉಪಾಯವು ಒಂದೇ ಮಾಸಿಕ ಪಟ್ಟಿಯನ್ನು ವಾರ್ಷಿಕ ಪಟ್ಟಿಯನ್ನಾಗಿ ರೂಪಾಂತರಿಸಿದ್ದಲ್ಲಿ ಏನಾದರೂ ಸುಧಾರಣೆಯಾಗುವದಾಗಿತ್ತು ಅದರಿಂದ 'ರಾಷ್ಟ್ರೀಯ ಸಭೆ'ಯ ಸಭೆಯೊಂದನ್ನು ನೆರಿಸಿದೆನು ವರ್ಷಕ್ಕೊಮ್ಮೆ ಪಟ್ಟಿ ಕೊಡುವ ಸೂಚನೆಯು ಎಲ್ಲರಿಗೂ ಮಾನ್ಯವಾಯಿತು. ವರ್ಷಕ್ಕೆ ೩ ಪವನಿಗೆ ಕಡಿಮೆಯಾಗದಂತೆ ಪಟ್ಟಿ ಕೊಡಬೇಕೆಂದೂ ನಿರ್ಧರಿಸಲಾಯಿತು ಹೀಗೆ ವಂತಿಗೆ ಕೂಡಿಸುವ ಕೆಲಸದ ಸೌಧಾರಣೆಯಾಯಿತು.

ಸಾರ್ವಜನಿಕ ಸೇವೆಯನ್ನು ಎಂದೆಂದಿಗೂ ಸಾಲ ತಂದು ನಡಿಸಬಾರದಾಗಿ ನಾನೊಂದು ಪಾಠ ಕಲಿತಿದ್ದೆ. ಹಣದ ವಿಷಯವನ್ನೊಂದು ಬಿಟ್ಟು, ಉಳಿದ ವಿಷಯಗಳಲ್ಲಿ ಜನರು ಕೊಡುವ ಮಾತುಗಳ ಮೇರೆ ಬೇಕಾದವರು ನಂಬಿಗೆ ಇಡಬಹುದು, ಒಪ್ಪಿಕೊಂಡ ಪಟ್ಟಿ ಕೊಡಲು ಯಾವಾಗಲೂ ಜನರು ತಯಾರಿದ್ದಿಲ್ಲ ನಾತಾಲದೊಳಗಿನ ಭಾರತೀಯರು ಸಾಮಾನ್ಯ ಮಾನವರು ಆದರಿಂದ ಹಣವು ಕೈಗೆ ಸಿಕ್ಕ ಹೊರತು ನಾವು ಯಾವ ಕೆಲಸವನ್ನೂ ಮಾಡಲಿಲ್ಲ. ಅದರಿಂದ ನಾತಾಲದೊಳಗಿನ ರಾಷ್ಟ್ರೀಯ ಸಭೆಗೆ ಎಂದೂ ಸಾಲವಾಗಲಿಲ್ಲ.

ನನ್ನ ಜೊತೆಗಾರರು ಉತ್ಸಾಹದಿಂದ ಸಭಾಸದರನ್ನು ಕೂಡಿಸಿದರು. ಆ ಕೆಲಸವನ್ನು ಮಾಡುವದೆಂದರೆ ಅವರಿಗೆ ದೊಡ್ಡದೊಂದು ಉತ್ಸಾಹವಾಗಿತ್ತು ಅದರಿಂದ ಅವರಿಗೆ ಅಮೂಲ್ಯವಾದ ಅನುಭವವು ಕೂಡ ಪ್ರಾಪ್ತವಾಯಿತು. ಅನೇಕರು ಸಂತೋಷದಿಂದ ಕಾಣಿಕೆಗಳನ್ನಿತ್ತು, ಜೊತೆಗಾರರಿಗೆ ಮನ್ನಿಸಿದರು ದೂರ ದೂರವಿರುವ ಗ್ರಾಮಗಳಲ್ಲಿ ಕೆಲಸ ಮಾಡುವದು ಕೆಲವಟ್ಟಿಗೆ ಕಠಿಣವಾಗಿತ್ತು. ಸಾರ್ವಜನಿಕ ಕಾರ್ಯದ ಸ್ವರೂಪವು ಗ್ರಾಮದವರಿಗೆ ಗೊತ್ತಿರಲಿಲ್ಲ. ಆದರೂ ನಮಗೆ ದೂರ ದೂರದಿಂದ ನಿಮಂತ್ರಣಗಳು ಬರುತ್ತಿದ್ದವು ಅಲ್ಲಿಯ ಪ್ರಮುಖ ವರ್ತಕರು ನಮಗೆ ಆತಿಥ್ಯ ಮಾಡಿದರು

ಒಮ್ಮೆ ನಾವು ಪ್ರಯಾಣಮಾಡುತ್ತಿದ್ದಾಗ ಒಂದು ಕಠಿಣ ಪ್ರಸಂಗವು ಪ್ರಾಪ್ತವಾಯಿತು ನಮ್ಮ ಯಜಮಾನನು ೬ ಪವನು ಪಟ್ಟಿಕೊಡುವನೆಂದು ನಾವು ಎಣಿಸಿದ್ದೆವು. ಆದರೆ ೩ ಪವನಿಗೆ ಮಿಕ್ಕಿ ಒಂದು ಕಾಸನ್ನು ಕೂಡ ಕೊಡುವದಿಲ್ಲೆಂದು ಆತನು ಹಟಹಿಡಿದನು. ಆತನು ಕೊಡುವಷ್ಟು ರಕಮನ್ನು ನಾವು ಅಂಗೀಕರಿಸಿದ್ದರೆ, ಇತರರೂ ಅವನನ್ನೇ ಹಿಂಬಾಲಿಸುತ್ತಿದ್ದರು. ಹೇಳುವಷ್ಟು ದ್ರವ್ಯಸಂಚಯವು ಆಗುತ್ತಿರಲಿಲ್ಲ. ರಾತ್ರಿ ಬಹಳಾಗಿತ್ತು, ನಮಗೆ ಹಸಿವೆಯೂ ಆಗಿತ್ತು ನಿರೀಕ್ಷಿಸಿದಷ್ಟು ಪಟ್ಟಿಯನ್ನು ಸಂಪಾದಿಸಿದ ಹೊರತು, ಊಟ ಮಾಡುವ ಬಗೆ ಹೇಗೆ? ನಮ್ಮ ಯಜಮಾನರ ಮನವೊಲಿಸಲು ಪರಿಪರಿಯಿಂದ ಯತ್ನಮಾಡಲಾಯಿತು. ಆದರೆ, ಯಜಮಾನರ ಹೃದಯವೇನು ಕರಗಲಿಲ್ಲ. ಊರೊಳಗಿನ ಇತರ ವರ್ತಕರೂ ಅವರೊಡನೆ ಒಡ್ಡಿವಾದ ಮಾಡಿದರು. ಇಡೀ ರಾತ್ರಿ ನಾವೆಲ್ಲರೂ ಹಾಗೆಯೇ ಕೂತುಕೊಂಡೆವು. ನಾವೂ, ಅವರೂ ನಮ್ಮ ನಮ್ಮ ಹಟವನ್ನೇ ಹಿಡಿದು ಭದ್ರವಾಗಿ ಆಸನ ಹೂಡಿದೆವು. ನನ್ನ ಜೊತೆಗಾರರಿಗೆ ಸಿಟ್ಟು ಬಂದಿತ್ತು; ಆದರೂ, ಅವರು ಸಮಾಧಾನವನ್ನು ತೊರೆಯಲಿಲ್ಲ. ನಸುಕು ಹರಿಯುವ ಸಮಯ ಯಜಮಾನನು ತನ್ನ ಹಟವನ್ನು ಬಿಟ್ಟು ೬ ಪವನುಗಳನ್ನು ಎಣಿಸಿದನು. ನಾವೆಲ್ಲರೂ ಮಿಷ್ಟಾನ್ನಭೋಜನ ಮಾಡಿದೆವು. ಇದು ಆದದ್ದು ಟೋಂಗಾಟದಲ್ಲಿ. ಆದರೆ ಈ ಸಂಗತಿಯ ಪ್ರತಿಧ್ವನಿಯು ಉತ್ತರಕ್ಕೆ ಸ್ಟಂಘರದ ವರೆಗೂ, ಮಧ್ಯಭಾಗದಲ್ಲಿ ಚಾರ್ಲ್ಸ್ ಟೌನದವರೆಗೂ ಹಬ್ಬಿತು. ಇದರಿಂದ ದ್ರವ್ಯಸಂಚಯದ ಕೆಲಸಕ್ಕೆ ಬಹಳ ಅನುಕೂಲವಾಯಿತು.

ಆದರೆ, ದ್ರವ್ಯಸಂಚಯ ಮಾಡುವದೊಂದೇ ನಮ್ಮ ಕೆಲಸವಿದ್ದಿಲ್ಲ. ಕೆಲಸಕ್ಕೆ ಅವಶ್ಯವಿದ್ದಷ್ಟೇ ದ್ರವ್ಯಸಂಚಯ ಮಾಡಿಕೊಳ್ಳಬೇಕೆಂಬ ತತ್ವವನ್ನು ನಾನು ಅರಿತುಕೊಂಡಿದ್ದೆ.

ತಿಂಗಳಿಗೊಮ್ಮೆ ಯಾ ಅವಶ್ಯವಿದ್ದರೆ ವಾರಕ್ಕೊಮ್ಮೆ ಸಭೆಗಳು ನೇರಕಲ್ಪಡುತ್ತಿದ್ದವು; ಹಿಂದಿನ ಸಭೆಯ ಟಿಪ್ಪಣಗಳು ಓದಲ್ಪಡುತ್ತಿದ್ದವು ಅನೇಕ ತರದ ಚರ್ಚೆಯೂ ಆಗುತ್ತಿತ್ತು ಸಾರ್ವಜನಿಕ ವಿಷಯಗಳಲ್ಲಿ ವಿವಾದ ಮಾಡುವ ಯಾ ಸಂಕ್ಷಿಪ್ತವಾಗಿ ವಿಷಯಾಂತರ ಮಾಡದೆ ಮಾತಾಡುವ ಅಭ್ಯಾಸವು ಜನರಿಗಿದ್ದಿಲ್ಲ. ಎದ್ದು ನಿಂತು ಮಾತಾಡುವದಕ್ಕೆ ಎಲ್ಲರೂ ಹೆದರುವವರೇ. ಸಭೆಯ ಕಾರ್ಯಕ್ರಮವನ್ನು ಸಭೆಯಲ್ಲಿ ನಾನು ಅವರಿಗೆ ತಿಳಿಸಿ ಹೇಳಿದೆನು. ಅವರು ಅದನ್ನು ಮನ್ನಿಸಿದರು. ಹೀಗೆ ಸಭೆಯಲ್ಲಿ ಮಾತಾಡುವದು ಒಂದು ಪ್ರಕಾರದ ಸಂಸ್ಕಾರವೆಂದು ಅವರಿಗೆ ಹೊಳೆಯಿತು ಸಭಿಕರೆದುರಿಗೆ ಮಾತಾಡಲು ಅಭ್ಯಾಸವಿಲ್ಲದ ಅನೇಕರಿಗೆ ಸಾರ್ವಜನಿಕ ವಿಷಯದ ಕುರಿತು ವಿಚಾರ ಮಾಡುವ ಹಾಗು ಸಭೆಯಲ್ಲಿ ಮಾತನಾಡುವ ಅಭ್ಯಾಸವು ಅಲ್ಪಾವಕಾಶದಲ್ಲಿಯೇ ಪ್ರಾಪ್ತವಾಯಿತು.

ಸಾರ್ವಜನಿಕ ಕಾರ್ಯದಲ್ಲಿ ಚಿಕ್ಕ ಪುಟ್ಟ ಕೆಲಸಗಳಿಗಾಗಿಯೇ ದೊಡ್ಡ ದೊಡ್ಡ ರಕಮುಗಳು ಖರ್ಚಾಗುತ್ತಿದ್ದವು. ಅದರಿಂದ ಮೊದಮೊದಲಿಗೆ ರಸೀದಿಯ ಪುಸ್ತಕಗಳನ್ನು ನಾನು ಅಚ್ಚು ಮಾಡಲೊಪ್ಪಲಿಲ್ಲ. ನನ್ನ ಆಫೀಸಿನಲ್ಲಿ ಸ್ಯಾಕ್ಲೋಸ್ಟೈಲ ಯಾನೆ ಶಿಲಾಯಂತ್ರವಿತ್ತು. ಅದರ ಮೇಲೆ ರಸೀದಿಗಳನ್ನೂ, ರಿಪೋರ್ಟುಗಳನ್ನೂ ನಾನು ಛಾಪಿಸಿದೆನು ರಾಷ್ಟ್ರೀಯ ಸಭೆಯ ಕೋಶವು ಬೆಳೆದಾಗಲೇ ನಾನು ಇವುಗಳನ್ನು ಅಚ್ಚು ಮಾಡಿಸಿದೆನು. ಸಭಾಸದರ ಸಂಖ್ಯೆಯು ಬೆಳೆದು ಕೆಲಸದ ಮಾನವೂ ಬೆಳೆದ ಬಳಿಕ, ಅಚ್ಚುಕೂಟದ ಮೂಲಕ ಕೆಲಸ ಮಾಡಿಸಲಾಯಿತು ಇಂಥ ಮಿತವ್ಯಯವು ಪ್ರತಿಯೊಂದು ಸಂಸ್ಥೆಗೆ ಅವಶ್ಯವಿದೆ. ಆದರೆ, ಅದನ್ನು ಕೈಕೊಳ್ಳುವವರೇ ವಿರಳರು. ಆದರಿಂದಲೇ ಕ್ರಮವಾಗಿ ಅಭಿವೃದ್ಧಿಗೈದ ಈ ಸಂಸ್ಥೆಯ ಮೂಲಾರಂಭದ ಚಿಕ್ಕ ಪುಟ್ಟ ವಿವರಗಳನ್ನು ವಿವರಿಸಲು ನಾನು ಉದ್ಯುಕ್ತನಾಗಿರುವೆನು.

ಜನರು ಕೊಟ್ಟ ಹಣದ ಪಾವತಿಯನ್ನು ಕೊಳ್ಳುವಷ್ಟು ಜಾಗೃತಿಯನ್ನು ಕೊಳ್ಳುತ್ತಿರಲಿಲ್ಲ. ಆದರೆ, ನಾವು ಅವರಿಗೆ ರಸೀದಿಯನ್ನು ಕೊಳ್ಳಲು ಆಗ್ರಹ ಮಾಡುತ್ತಿದ್ದೆವು ಹೀಗೆ ಒಂದು ಪೈವರೆಗಿನ ಲೆಕ್ಕವು ಸ್ಪಷ್ಟವಾಗಿ ಕಾಣುತ್ತಿತ್ತು. 'ನಾತಾಲ ಹಿಂದೀ ರಾಷ್ಟ್ರೀಯ ಸಭೆ'ಯ ಕಾಗದಪತ್ರಗಳಲ್ಲಿ ೧೮೯೪ ನೇ ಇಸ್ವಿಯ ಲೆಕ್ಕದ ಪುಸ್ತಕಗಳು ಇನ್ನೂ ಇರುತ್ತವೆಂದು ನಾನು ಹೇಳಬಲ್ಲೆ. ಲೆಕ್ಕವನ್ನು ಚೊಕ್ಕವಾಗಿಡುವದೇ ಯಾವದೇ ಸಂಸ್ಥೆಯ ಮೂಲಾರಂಭವು ಲೆಕ್ಕವಿಲ್ಲದಿದ್ದರೆ ಆ ಸಂಸ್ಥೆಗೆ ಮರ್ಯಾದೆ ಇಲ್ಲ. ಸರಿಯಾಗಿ ಲೆಕ್ಕವನ್ನಿಡದಿದ್ದರೆ ನಿರ್ಮಲವಾದ ಸತ್ಯವನ್ನು ಪಾಲಿಸುವದು ಅಶಕ್ಯವೇ.

ವಸಾಹತಿನಲ್ಲಿ ಹುಟ್ಟಿದ ಸುಶಿಕ್ಷಿತ ಭಾರತೀಯರು ರಾಷ್ಟ್ರೀಯ ಸಭೆಗೆ ನೆರವಾದದ್ದು ಒಂದು ವಿಶೇಷ ಸಂಗತಿಯು. ರಾಷ್ಟ್ರೀಯ ಸಭೆಯ ಆಶ್ರಯದಲ್ಲಿಯೇ ವಸಾಹತುಗಳಲ್ಲಿ ಹುಟ್ಟಿದ ಹಿಂದೀ ಶಿಕ್ಷಣ ಸಂಸ್ಥೆಯು ಸ್ಥಾಪನೆಗೊಂಡಿತು. ಸುಶಿಕ್ಷಿತ ಎಳೆ ಪ್ರಾಯದವರೆಲ್ಲರೂ ಪ್ರಾಯಶ್ಯವಾಗಿ ಸಭಾಸದರಿದ್ದರು. ಹೆಸರಿಗೆ ಪೂರ್ತ ಪಟ್ಟಿ ಇಡಲ್ಪಟ್ಟಿತ್ತು ಈ ಸಂಘವು ಸುಶಿಕ್ಷಿತರ ದೂರುಗಳನ್ನೂ, ಅವಶ್ಯಕತೆಗಳನ್ನೂ ಧ್ವನಿಸುತ್ತಿತ್ತು; ವಿಚಾರಜಾಗೃತಿ ಮಾಡುತ್ತಿತ್ತು. ಹಿಂದೀ ವರ್ತಕರೊಡನೆ ಪರಿಚಯ ಬೆಳೆಸಿ ವಿಶೇಷ ಸಮಾಜಸೇವೆಯನ್ನು ಅವರಿಂದ ಮಾಡಿಸಿಕೊಳ್ಳು

ತ್ತಿತ್ತು. ಈ ಸಂಘವು ಒಂದು ವ್ಯವಹಾರವಾದ ಭೂಮಿಯಾಗಿತ್ತು. ಸಭಾಸದರೆಲ್ಲರೂ ನಿಯಮಿತವಾಗಿ ಸಭೆಸೇರಿ ಭಿನ್ನ ಭಿನ್ನ ವಿಷಯಗಳ ಮೇಲೆ ನಿಬಂಧಗಳನ್ನೋದುತ್ತಿದ್ದರು; ಚರ್ಚೆ ಮಾಡುತ್ತಿದ್ದರು. ಸಂಘವು ಒಂದು ಪುಸ್ತಕಾಲಯವನ್ನು ತೆರೆದಿತ್ತು.

ಇಷ್ಟೇ ಈ ಸಭೆಯು ಕೈಕೊಂಡ ಮುಖ್ಯವಾದ ಕಾರ್ಯವು ಪ್ರಚಾರವು. ನಾತಾಲದೊಳಗಿನ ಸ್ಥಿತಿಯನ್ನು ದಕ್ಷಿಣ ಆಫ್ರಿಕೆಯೊಳಗಿನ ಇಂಗ್ಲರಿಗೂ, ಇಂಗ್ಲಂಡ ದೇಶಕ್ಕೂ ಭಾರತವಾಸಿಯರಿಗೂ ತಿಳಿಸ ಬೇಕೆಂಬ ಈ ಪ್ರಚಾರದ ಧ್ಯೇಯವಾಗಿತ್ತು. ಅದಕ್ಕಾಗಿ ನಾನು ಎರಡು ಹಸ್ತಪತ್ರಿಕೆಗಳನ್ನು ಬರೆದೆನು. "ದ ಆಫ್ರಿಕೆಯೊಳಗಿನ ಪ್ರತಿಯೊಬ್ಬ ಇಂಗ್ಲನಿಗೆ ಅನ್ವಹದ ವಿನಂತಿ" ಎಂಬ ಸದರಿನ ಮೊದಲನೇ ಹಸ್ತಪತ್ರಿಕೆಯಲ್ಲಿ ನಾತಾಲದೊಳಗಿನ ಭಾರತೀಯರ ಸಾಮಾನ್ಯಸ್ಥಿತಿಯನ್ನು ಸಪ್ರಮಾಣ ಪ್ರತಿಪಾದಿಸಿದ್ದೆನು. "ಭಾರತೀಯರ ಮತದಿಕಾರ, ಅಗ್ರಹದ ವಿನಂತಿ" ಎಂಬ ಸದರಿನ ಹಸ್ತಪತ್ರಿಕೆಯಲ್ಲಿ ಭಾರತೀಯರ ಮತಾಧಿಕಾರದ ಇತಿಹಾಸವನ್ನು, ಸಂಗತಿಗಳನ್ನು ಸಂಕ್ಷಿಪ್ತವಾಗಿ ಬರೆದಿದ್ದೆನು. ಇವುಗಳನ್ನು ತಯಾರಿಸಲಿಕ್ಕಾಗಿ ನಾನು ಬಹಳ ಪರಿಶ್ರಮ ಪಟ್ಟಿದ್ದೆ. ಪರಿಶ್ರಮವು ಫಲಿಸಿತು. ಹಸ್ತಪತ್ರಿಕೆಗಳು ಬಹಳವಾಗಿ ಹಂಚಲ್ಪಟ್ಟವು.

ಇವೆಲ್ಲ ಉಪಾಯಗಳಿಂದ ದಕ್ಷಿಣ ಆಫ್ರಿಕೆಯೊಳಗಿನ ಹಿಂದೀಯರಿಗೆ ಅನೇಕ ಗೆಳೆಯರು ಪ್ರಾಪ್ತರಾದರು. ಹಿಂದುಸ್ಥಾನದೊಳಗಿನ ಸಮಸ್ತ ಪಕ್ಷಗಳೂ ದಕ್ಷಿಣ ಆಫ್ರಿಕೆಯವರಿಗೆ ನೆರವಾದವು. ಹಾಗು ದಕ್ಷಿಣ ಆಫ್ರಿಕೆಯವರಿಗೆ ತಮ್ಮ ಉದ್ಧಾರಕ್ಕಾಗಿ ಹೇಗೆ ಮುಂದರಿಯಬೇಕೆಂಬುದೂ ಗೊತ್ತಾಯಿತು.

ಉಚಿತ! ಉಚಿತ!!

ನನ್ನ ಶಾಸ್ತ್ರೀಯವಾದ ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ ಅಂಥ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು. ಇನ್ನಲ್ಲಿ ಕರಬಿಯುತ್ತಿರುವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೨ ಆಣೆಯ ಸ್ಟಾಂಪನ್ನು ಕಳಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾ ವಾಗದ, ಇನ್ನೂ ಈ ಯೋಜನೆಯಲ್ಲಿ ಇರುವಾಗಲೇ ಈ ಪುಸ್ತಕಕ್ಕಾಗಿ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,

ಬಸವನಗುಡಿ, ಬೆಂಗಳೂರ ಸಿಟಿ.

ಶೆವರಲೆಟ್
ಮೋಟಾರಕಾರ್ ಏಜನ್ಸಿ, ಕೆನರಾ



ನಾವು ಹೊಸ ಶೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ತರಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳಬಹುದು.

ಸೋಲಏಜಂಟ:—**ಎಸ್. ಎಲ್. ಧಾಕೆಪ್ಪ ಮತ್ತು ಬ್ರದರ್ಸ, ಶಿರ್ಶಿ**

ಕುಮಟಾ ಏಜಂಟ:- **ಜಿ. ಡಿ. ಮಳಗಿಕರ ಎಂಡ್ ಕೊ.**

ಬಿ. ಓ. ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲೊಪ್ ಹಾಗು ಮಿಚಲಿನ ಮೋಟಾರ ಹಾಗು ಸಾಯಕಲ್ ಟಾಯರ-ಟ್ಯೂಬ ಇತ್ಯಾದಿ ಸಾಮಗ್ರಿಗಳು ಯೋಗ್ಯದರದಲ್ಲಿ ಪೂರೈಸುತ್ತೇವೆ.

G. D. Malgikar & Co,
KUMTA.

ಮೋಸಹೋಗಬೇಡಿರಿ!!

ದಿ ತೊರಸಲ ಮೋಟಾರ ಸರ್ವಿಸ, ಹೊನ್ನಾವರ-ಕುಮಟಾ.

ಭಟಕಳದೊಳಗಿನ ಪೆಸೆಂಜರರು ಭಟಕಳದಿಂದ ಕುಮಟೆಗೆ ಡ್ಯಾರೆಕ್ಟ ಟಿಕೀಟು ತೆಗೆದುಕೊಳ್ಳುವ ಬದಲು, ಕುಮಟೆಗೆ ಹೊರಡುವ ಮೋಟಾರ ಟಿಕೀಟುಗಳು **ಹೊನ್ನಾವರ ಬಂದರದಲ್ಲಿ ಸೋಯಿಯಿಂದ** ಮಾರಲ್ಪಡುವವು. ಮೋಟಾರ ಬಂಡಿಗಳು ನಿತ್ಯವೂ ನಾಲ್ಕು ಸಾರೆ ಓಡಾಡುತ್ತವೆ

ಮೋಟಾರ ಬಿಡುವ ಕಾಲಕ್ರಮ:- } ಬೆಳಿಗ್ಗೆ ೮ಕ್ಕೆ; ಪುನಃ ೧೦॥ಗೆ. ಸಾಯಂಕಾಲ ೨॥ಗೆ; ಪುನಃ ೫ಕ್ಕೆ.

ಟಿಕೀಟು ಸಿಗ ಸ್ಥಳ } ಬಂದರದಲ್ಲಿ—**ಗೋವಿಂದ ನಾಗಪ್ಪ** ಇವರ ದುಕಾನದಲ್ಲಿ. ಪ-ಗಾರ್ಕೇರಿಯಲ್ಲಿ—**ಮಿ। ಪಂಡಿತ ಭಿಕ್ಕುರಾವ್.**

ಗೆಳೆಯರ ಗುಂಪಿನ

ಕನ್ನಡ] **ಸ್ವಧರ್ಮ.** [ವಾರಪತ್ರಿಕೆ

ಸಂಪಾದಕರು:- ದ. ರಾ. ಬೇಂದ್ರೆ ಬಿ. ಎ

ವಾರ್ಷಿಕ ವರ್ಗಣಿ ೩-೦-೦

ಸಮಾಜದಲ್ಲಿ ಶಾಂತಿಪುಷ್ಟಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ. ಇಂಥ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊರಗು ಬರುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

BATLIBOI'S
Accountancy Training Institute
Recognised by
The G. D. A. Board

Offers best training in Accounting, Banking, Company Management and Secretarial Work and Theory and Practice of Commerce.

Best staff, Individual attention fee moderate, and payable by instalments.

Send for Prospectus at Yusuf Buildings, Churchgate street, Fort, Bombay.

You are invited to make thorough enquiry before joining.

TUITION BY POST IS OUR SPECIALITY.

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ
ತೀಕ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ್ ಬಾಕ್ಸಗಳೂ, ರೋಕಿಂಗ ಖುರ್ಚೆಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

"ಬಲವಂತ ಗುಟಿಕಾ."

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿಚೂರ್ಣದಿಂದ ಶಾಸ್ತ್ರೀಕ ಮತ್ತು ಕಾವೋಸ್ತ್ರೀಚಕ ಅರ್ಕಗಳನ್ನು ಮಿಶ್ರಿಸಿ ದೇಶೀವದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ರೋಗಗಳೂ ಇಲ್ಲದಿದೆ. ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮತ್ತು ಬಿಡುವ ಮೊದಲು ಅಥವಾ ನಂತರ ಧಾತು ಕರಿಯವುದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಇವನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಪಥ್ಯ [illegible] ಕಕ್ಕೊಳ್ಳಲು ಖಾತ್ರಿ ಮಾಡಿಕೊಳ್ಳಬಹುದು.) ಇವರಿಂದ ವೈಯಕ್ತಿಕ ಗರಮಿಯು [illegible] ವಿಕಾರಗಳು ನಾಶವಾಗಿ ಪವಿತ್ರ ಧಾತುವೃದ್ಧಿಯಾಗಿ ಪುಷ್ಟಿಕರತ್ವವು ಪ್ರಾಪ್ತವಾಗುತ್ತದೆ. ಇದರ ಹಿರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

[illegible]

ಪತ್ತೆ— ಎಸ್. ಬಿ. ಕದಂ, ಮತ್ತು ಸನ್ಸ್.

ಮು ಪೋ. ನಿಪ್ಪಾಣಿ, ಜಿ ಬೆಳಗಾಂವ

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ ಯಾವದ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಿದ ೫೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಠರ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಮಹಾಜನಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾಡಿರಿ ಸೀಸೆ ಪ್ರತ್ಯಕ್ಷ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೧ ೪ ಂ, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ— ಗುರುಬಸವ ಬಂಧ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ

ಸೇಂಗಾ (ಭೈಮೂಗ) ಒಡೆಯುವ

ಪಾವರ ಹಾಗೂ ಕೈ-ಯಂತ್ರಗಳು

ಪಾವರ ಯಂತ್ರ— "ಪಿಗ್ ಆಯರ್ನ" ಎಂಬ ಕಬ್ಬಿಣದಿಂದ ಮಾಡಲ್ಪಟ್ಟಿರುವದು. ಗಂಟೆಯೊಂದಕ್ಕೆ ೧೦ ಚೀಲ ಕಾಳುಗಳನ್ನು ಒಡೆಯುವದು. ಈ ಯಂತ್ರವು ಏಳು ಅಶ್ವಶಕ್ತಿಯುಳ್ಳ ಇಂಜನ್ನಿಂದ ನಡೆಯುತ್ತದೆ.

ಕೈಯಂತ್ರ— ಇದಾದರೂ ಕಬ್ಬಿಣದ್ದೇ. ಇದನ್ನು ತಿರುಗಿಸಲಿಕ್ಕೆ ಎರಡು ಆಳುಗಳು ಬೇಕು. ತಾಸಿಗೆ ೩೦೦ ಪೌಂಡು ಕಾಳುಗಳನ್ನು ಒಡೆಯುವದು.

ಬೆಲೆಯ ಬಗ್ಗೆ ತಿಳಿದು ಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್, { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ }

ಪ್ರಯಾಣಿಕರಿಗೆ

ವಿಶೇಷ ಅನುಕೂಲ.

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ ಹಾಗೂ ಅಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ—

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ, ಗೋಕರ್ಣದಿಂದ ಕಮಟಾ, ಶಿರಸಿ, ಹುಬ್ಬಳ್ಳಿ, ಗೋಕರ್ಣದಿಂದ ಅಂಕೋಲಾ ಕಾರವಾರ

ಟೀಪು — ಟಿಕೆಟ ಮುಂದಾಗಿ ತೆಗೆದುಕೊಳ್ಳಬಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ವೆಂಕಟೇಶರಾವ ಹಕಿಹಿತ್ತಲ, ಮೋಟರ ಏಜಂಟ, ಕುಮಟಾ (ಉತ್ತರ ಕನ್ನಡ)

S U Narayanacharya & CO
Chaukamba, BENARES CITY

ನಮ್ಮಲ್ಲಿ ಎಲ್ಲಾತರದ ರೇಶ್ಮಿ ಪೀತಾಂಬರ, ಜರಿ ಕಣ ಜರಿ ಸೀರೆ, ಕಾಶ್ಮೀರ್ ಶಾಲು, ತರಮಂದ ರುದ್ರಾಕ್ಷಿ, ಕರ್ಪೂರಿ, ಲಿಂಗಗಳೂ ಸ್ಫಟಿಕಮಣಿ ಮೊದಲಾದ ಸಾಮಾನು ಗಳು ಸಿಗುತ್ತವೆ. ಕ್ಯಾಟಲಾಗ ಕೋರುವವರಿಗೆ ಧರ್ಮಾರ್ಥವಾಗಿ ಕಳಿಸಲಾದೀತು.

ವಿಳಾಸ - ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳುಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನು ಉಪಯೋಗಿಸುತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ವಿಶ್ವೇ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg. No. S. 1270 Monday October 11th, 1926.

ವರ್ಷ ೧೦.

ಕಾನಡಾವೃತ್ತ.

THE KANARA NEWS.

ಸಂಚಿಕೆ ೫೪.

ಪತ್ರದ ದರಗಳು.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಸ್ಥಳದ ಹೊರಗಿನವರಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೧೫ ಎಂ ಅದ) ೮ ಸಾಲುಗಳವರೆಗೆ ರೂ. 1-0- ಆ ಸಂಚ್ಯೆ ಪ್ರತಿಸಾಲಿಗೆ 0-2-0.

ಹೆಚ್ಚಿಗೆ ಸಾಲು ಎಷ್ಟು ಹೊಕ್ಕರುವದೋ ಆ ಮಾನದಿಂದ ಪತ್ರ... ತಿಳಿಯಲ್ಪಡುವದು.

ಬೇರೆ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಬೇಕು.

ಸರ್ವಸಿದ್ಧಿರ್ಲಿರ್ಕೆರ್ಲಾ ...ಕಾರ್ಯಕರ್ತೀ ...ಸಕಲ ...

ಇತಿ ...ಕಾರ್ಯಕರ್ತೀ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

—(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೧೧ ನೇದೆ ಅಕ್ಟೋಬರ ಸನ್ ೧೯೨೬ ನೇ ಇಸವಿ.)—

हिंदुस्थानांतील रहिवाशास ज्याप्रमाणें हिंदुस्थानची हवा लाभप्रमाणें हें औषध हिंदुस्थान, तील लोकास ज्यास्त फायदेशीर आहे.

तीव रक्तशी

द्राक्षासव-

किंमत २ रुपये;

रामबाण औषधें

सर्दि घालविणारें,

भूक वाढविणारें,

श्वासोच्छवास साफ करणारें,

जोर आणणारें,

शक्ति देणारें,

तेजस्वीपणा आणणारें,

पित्तास ...

कफास ...

संडु फार्मास्युटिकल वर्क्स लिमिटेड,

मुंबई नं: १२

एजंट— मेसर्स पंडित आणी कंपनी, तीर्थहळ्ळी.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಏ.,

ರತ್ನಾಭರಣ ವ್ಯಾಪಾರಿ, ಕುಮಟಾ.

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯ್ ೧೪, ಅರ್ಧ ಬೆಲೆ ರೂಪಾಯ್ ೭;

ಒಂದೇ ಒಂದು ತಿಂಗಳ ಬಗ್ಗೆ ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ ಅತ್ಯುತ್ತಮ ಚಲನ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ !!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕ್ಕೆ ಗಡಿಯಾರವನ್ನು ಉತ್ಕೃಷ್ಟ ಕೇಸಿನ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ ಬೆಲೆ ರೂಪಾಯ್ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ವಿಳಾಸ:— Swan House: P B 503 P T Madras

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ

ಉಚಿತ ಉಚಿತ



"ತಾರಾ" ಲೀವರ ಬಿಳುಪ ...ಪಾಕೆಟ ವಾಚು ೧೮ ಕರೆಟ್ ರೋಲ್ಡ ಗೋಲ್ಡಿನವು. ಮುಚ್ಚಳದಲ್ಲಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಕಾರರು ಅಚ್ಚು ಹಾಕಿರುತ್ತಾರೆ. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ಟೈಮ್‌ಪೀಸ್ ಕ್ಲಾಕನ್ನು ಉಚಿತವಾಗಿ ಕೊಡುತ್ತೇವೆ ಇದೊಂದು ಅಪೂರ್ವ ಸಂಧಿ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ಬಿಳುಪ ೧೮ ಕರೆಟ್ ರೋಲ್ಡ ಗೋಲ್ಡಿನ ಪಾಕೆಟವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫.

ಎಲ್ಲಾ ನೋವುಗಳಿಗೆ ದಿವ್ಯೌಷಧವು

ವಾತಹಾರಿ ತೈಲ.

ಪ್ರಿಯ ೫ ತೋಲೆ ಬಾಟ್ಲಿ ೧ ಕ್ಕೆ ೦—೧೨—೦. ಊಂಚಿ ಸುವಾಸಿಕ ಕಾಪೂರಿ ಹಿಂಗು ೧೦ ತೋಲೆ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ ೧॥ ತೋಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತ ಶುದ್ಧಿ ಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೨೦ ತೋಲೆಯ ಡಬ್ಬಿ ೧ ಕ್ಕೆ ೧—೪—೦. ೧ ತೋಲೆಯ ಹಿಂಗಿನ ವಡಿಗಳು ಡಜನ್ ೧ ಕ್ಕೆ —೨೦—೦. ತಲೆಗೆ ಹಾಕುವ ಸುವಾಸಿಕ ಮುಸಕರಾಜ ತೈಲ ೫ ತೋಲೆಯ ಬಾಟ್ಲಿ ೧ ಕ್ಕೆ ೦—೧೨—೦. ಹುಳಿಪ ಪೊಡಿ ತೋಲೆ ೧ ಕ್ಕೆ ೦—೪—. ಇದಲ್ಲದೆ, ನೀಲಗಿರಿ ತೈಲ, ಎಲ್ಲಾ ತರದ ಊಂಚಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚ ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ಮಕಾನ

ಗೌರೀಹುಣ್ಣಿವೆಯಿಂದ ೫ನೇ ವರ್ಷ ಪ್ರಾರಂಭ

ಸಚಿತ್ರ] ಜಯಕರ್ನಾಟಕ [ಮಾಸಪತ್ರಿಕೆ

ಸಂಪಾದಕ—ಆಲೂರ ವೆಂಕಟರಾಯರು.

ಇದರಲ್ಲಿ ವಾಙ್ಮಯಾತ್ಮಕ 'ಸಾಹಿತ್ಯ, ಧಾರ್ಮಿಕ ಸಾಮಾಜಿಕ ಐತಿಹಾಸಿಕ ಆರ್ಥಿಕ ಇತ್ಯಾದಿ ವಿಷಯಗಳು ಬರುವವು! ಪ್ರಪಂಚ ಪರಿಚಯ, ಜೀವನಚರಿತ್ರೆ ನಾಟಕಾದಿಗಳು ಕೊಡಲ್ಪಡುವವು. ಪ್ರತಿ ಸಂಚಿಕೆಯಲ್ಲಿ ಸುಂದರ ಚಿತ್ರಗಳೂ ಬರುತ್ತವೆ. ದೊಡ್ಡ ರಿವ್ಯೂ ಆಕಾರದ ೩೦ ಪುಟಗಳು ವಾರ್ಷಿಕ ರೂ. ೫-೮-೦

ಕಾರ್ಯಾಧಿಪತಿ ಜಯಕರ್ನಾಟಕ, ಧಾರವಾಡ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ— ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ- ಸಿದ್ದಾಪುರ- ಗೇರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ.

ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವಸ್ತಿ ವಿದಾ‌ಣ ಮಾಡಿದೆ

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa
PROPRIETOR.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ ದಂತ ಕುಲಾಯಿ, ಪಿತ್ತ ಕುಲಾಯಿ, ಎಲ್ಲ ತರದ ಜ್ವರ, ಜ್ವರಗಡ್ಡೆ, ಚಳಿಜ್ವರ, ಕಾಮಿಲೆ, ದಮ್ಮು, ಕೆಮ್ಮು, ಕಫ, ಅಗ್ನಿಮಾಂದ್ಯ, ಮಲಬದ್ಧತೆ ಮೂಲವ್ಯಾಧಿ, ನರ, ವಾತ, ಕಲೆರಾ, ಪ್ರದರ, ಗರ್ಭಾಶಯದ ಎಲ್ಲ ರೋಗ, ಪ್ರಮೇಹ, ಉಪದಂಶ (ಗರ್ಮಿ) ಬಾಲಗ್ರಹ, ಕುಷ್ಠ ಗಜಕರ್ಣಗಳಿಗೆ ಖಂಡಿತ ಗುಣ ಬರುವ ಜರ್ಮನ, ಅಮೇರಿಕನ, ಫ್ರೇಂಚ ಇಂಗ್ಲಿಷ ಮತ್ತು ದೇಶಿ ಪೇಟಂಟ ಔಷಧಗಳು ಬಹಳ ಅಗ್ಗವಾಗಿ ಸಿಗುವವು.



ಇದಲ್ಲದೆ ಬಂದೂಕುಗಳು, ಎಲ್ಲತರದ ಸ್ಟೇಶನರಿ, ಸರಪ್ರಾಮಣಿ ಸ್ಯಾಕಲ ಸಾಮಾನು, ಓಲ್ಡ ಸ್ಮೊಕ ಬ್ಯಾಲ, ಸುಪರಲೈಟ, ಮೋರಿಸ ಮೊಟಾರ ಬಂಡಿಗಳು, ಸಬಲಿನ ದರದಿಂದ ಸಿಗುವವು. ನಮ್ಮಲ್ಲಿಲ್ಲದ ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು

ಎಸ್ ಎಲ್. ಧಾಕಪ್ಪ ಮತ್ತು ಬ್ರದರ್ಸ್,
ಶಿರಸಿ.

ಅತ್ಯದ್ಭುತ ! ಅತ್ಯದ್ಭುತ !!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲೆಕ್ಸಿರ್ ಆಫ್ ಲೈಫ್

ಅಂದರೆ ಸರ್ವ ರೋಗ ನಾಶಕ, ಸರ್ವಾರೋಗ್ಯದಾಯಕ ಅಜೀರ್ಣ ತಲೆನೋವು ವಾಂತಿ, ಅತಿಸಾರ, ಜ್ವರ, ಕಾಲರಾ ಜ್ವರ ಕಿವಿನೋವು ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಹೊಡೆದು ಚಲ್ಲುವ ಒಂದೇ ರಾಮಬಾಣವಿದು! ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ !! ಒಂದು ಸೀಸೆಯಿದ್ದರೆ ಒಬ್ಬ ಡಾಕ್ಟರನಿದ್ದಂತೆಯೇ !!!

ಒಂದು ಸೀಸೆಗೆ ರೂ ೧-೮-೦ ಸಣ್ಣ ಸೀಸೆಗೆ ರೂ ೦-೮-೦ ಟಪಾಲ ಖರ್ಚು ಬೇರೆ

ಜೀವನಾಧಾರ ಡಿಪೋ, ಮೈಸೂರು,

ಬ್ರಾಂಚ - **ಜೀವನಾಧಾರ ಡಿಪೋ, ಹುಬ್ಬಳ್ಳಿ**

ರಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:- ತಬಲೆ, ಡಕ್ಕೆ ವಗೈರೆ.

೧ ಕೈಪೆಟ್ಟಿಗೆ-ಸಿಂಗಲ ರೂ ೨೫, ೩೦, ೪೦, ೫೫, ೬೦
— „ ಡಬಲ ರೂ ೪೦, ೪೫, ೫೦, ೬೦, ೧೦೦
೩ ಕಾಲುಪೆಟ್ಟಿಗೆ „ ರೂ ೬೫, ೭೫, ೧೦೦, ೧೩೦, ೧೪೦
೪ ತಬಲೆ (ಡಗ್ಗದಡಕ್ಕೆ ಸಹಿತ) ರೂ ೧೬, ೧೮, ೨೦
ಹಾರ್ಮೋನಿಯಮ್ ಗ್ಯಾಡ ಕಿಂ ರೂ. ೧॥,
ತಬಲೆ ಗ್ಯಾಡ ಕಿಂ ೧೨ ಆಣೆ.

ಮಾಹಿತಿ ಬಗ್ಗೆ ಕ್ಯಾಟಲಾಗು ಪುಕ್ಕಟೆ ದೊರಕುವದು

ಗೋಪಾಳ ಸಖಾರಾಮ ಕುಲ್ಕರ್ಣಿ ಕಂಪನಿ

ನಂ ೨೮೮, ವಿಠ್ಠಲವಾಡಿ ಎದುರಿಗೆ

ಕಾಳಬಾದೇವಿ ರೋಡ,
ಮುಂಬಯಿ

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತದಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮಶಕ್ತಿ ತರುಣರಂತೆ ಪ್ರವರ್ಧಮಾನವಾಗುವದು ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋದ ಸ್ವಾಭಾವಿಕ ಸ್ತ್ರೀಸಹವಾಸವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ತರುವಾಯ ಹೋಗುವ ಧಾತು ಬಂದಾಗುವದು.— ಪರಮಾ ಹಾಗೂ ಕಾಸಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ತಾಪ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ವಿಷಯದ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩-೦-೦ ಮೂರು ಬಾಟಲಿಗಳನ್ನು ಒಂದೇ ಸಾರ್ತಿಯಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೨-೦-೦ ಮತ್ತು ೧ ಬಾಟಲಿ ಪುಕ್ಕಟೆ ಕೊಡುವದು ಟಪಾಲ ಖರ್ಚು ಬೇರೆ ಬೀಳುವದು. ಹೊರಗಿನ ಗಿರಾಕಿಯವರಿಗೆ ೧ ಬಾಟ್ಲಿಗೆ ೧—೦ ೩ ಬಾಟ್ಲಿಗೆ ೩—೦—೦ ಆರಕ್ಕೆ ೧೩-೧-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ ನಿಪ್ಪಾಣಿ, ಜಿ ಬೆಳಗಾಂವ.

ವಿವಿಧ ಸಂಗ್ರಹ.

ಮಾನವನ ದೈನ್ಯ.

'ಸಂಡೇ ಎಕ್ಸ್‌ಪ್ರೆಸ್' ಎಂಬ ಪತ್ರಿಕೆಯ ಬುಡಾಪೆಸ್ಟಿನ ಬಿಟ್ಟಿ ಸುದ್ದಿಗಾರರು ಹಂಗೇರಿಯೊಳಗಿನ ದೈನ್ಯವನ್ನು ಬಣ್ಣಿಸಿರುವರು. ಹಂಗೇರಿಯೊಳಗಿನ ಜೆಬ್ರಿಸನ್ ಗ್ರಾಮದ ಪೋಲೀಸರು ಅಲ್ಲಿ ನಡೆದಿರುವ ಚಿಕ್ಕ ಬಾಲ-ಬಾಲಕಿಯರನ್ನು ಮಾರಾಟ ಮಾಡುವ ಪೇಟೆಯೊಂದನ್ನು ಬಣ್ಣಿಸಿರುವರು. ಒಬ್ಬ ೫೮ ವ.ಗ, ಒಬ್ಬ ಹುಡುಗಿ, ಇನ್ನೊಂದು ಕೂಸು ಹೀಗೆ, ತನ್ನ ಮೂವರು ಹುಟ್ಟಿದವರನ್ನು ಕರಕೊಂಡು ಆ ಪೇಟೆಗೆ ಒಬ್ಬ ಹೆಂಗಸು ಹೋದಳು. ಆ ಪೇಟೆಯಲ್ಲಿ ಹುಡುಗ-ಹುಡುಗಿಯರ ವಯೋಮಾನದಂತೆ ನಿಶ್ಚಿತ ದರವಿದೆ. ೧೪ ವರ್ಷದ ಗಂಡು ಮಗ ಹೆಣ್ಣಿಗೆ ೩ ಪವನು; ೪ ವರ್ಷದ ಕೂಸಿಗೆ ೧॥ ಪವನು, ಮತ್ತು ಚಿಕ್ಕ ಕೂಸಿಗೆ ೧೨ ಶಿಲಿಂಗು. ಆ ಹೆಂಗಸು ೧೪ ವರ್ಷದ ಹುಡುಗಿಯನ್ನೂ, ನಾಲ್ಕು ವರ್ಷದ ಬಾಲಕನನ್ನು ಮಾರಿದಳು. ಒಂಭತ್ತು ತಿಂಗಳ ಒಂದು ಕೂಸಿಗಾಗಿ ಮಾರಾಟಕ್ಕೆ ಇಟ್ಟಿದ್ದಳು. ಆ ಕೂಸಿಗೆ ಕೊಳ್ಳುವವರಾರೂ ಒಪ್ಪಲಿಲ್ಲ. ಪೋಲೀಸರು ಹೆಂಗಸಿಯು ಕರುಳನ್ನು ಮಾರಾಟ ಮಾಡುವ ಕಾರಣವನ್ನು ಕೇಳಿದರು. ಆಗ ಅವಳು ಹೇಳಿದ್ದೇನಂದರೆ,-ಗಂಡನು ಅಪಘಾತದಲ್ಲಿ ಸಿಲುಕಿ ಸಂಪಾದನೆ ಮಾಡಲು ಅಶಕ್ತನಾಗಿರುವನು. ಆದರಿಂದ ತಾನೂ, ೬ ಮಂದಿ ಹುಡುಗರೂ ಉಪವಾಸ ಸಾಯುವ ಪ್ರಸಂಗ ಬಂದಿದೆ. ಮೂವರನ್ನು ಮಾರಾಟ ಮಾಡಿದರೆ, ಮೂವರಿಗೆ ಹೊಟ್ಟೆಯ ವ್ಯವಸ್ಥೆ ಮಾಡಿದಂತಾಯಿತು, ವಿಕ್ರಯದಿಂದ ಸಿಕ್ಕಿದ ಹಣದಿಂದ ಮನೆಯಲ್ಲಿದ್ದ ಹುಡುಗರನ್ನು ಸಾಕಲಿಕ್ಕೂ ಅನುಕೂಲವಾಯಿತು. ಇದನ್ನು ಕೇಳಿ, ಪೋಲೀಸರು ಆ ಪೇಟೆಯಲ್ಲಿ ತಪಾಸ ಮಾಡಲು, ಹುಡುಗರ ಮಾರಾಟದ ವ್ಯಾಪಾರವು ಬಹು ಕಾಲದಿಂದ ಆ ಪೇಟೆಯಲ್ಲಿ ನಡೆಯುತ್ತದೆಂದು ಅವರಿಗೆ ತಿಳಿದುಬಂತು. ಕೂಳಿಲ್ಲದೆ ಬಳಲುವ ತಾಯಿ-ತಂದೆಗಳು ತಮ್ಮ ಹುಡುಗರನ್ನು ಮಾರುತ್ತಿದ್ದರು, ಸಂತತಿಯಿಲ್ಲದ ಶ್ರೀಮಂತರು ಆ ಹುಡುಗರನ್ನು ಕೊಂಡುಕೊಂಡು ಸಾಕುತ್ತಿದ್ದರು. ಮಾರಾಟವಾದ ಬಳಿಕ ತಂದೆ-ತಾಯಿಗಳಿಗೂ, ಆ ಹುಡುಗರಿಗೂ ಏನೊಂದೂ ಸಂಬಂಧವಿರುತ್ತಿರಲಿಲ್ಲ. ಎಂಥ ವ್ಯಾಪಾರವಿದು?

***

ವಿಲಕ್ಷಣ ತ್ಯಾಗ.

ರಂಗೂನಿನೊಳಗಿನ 'ಟ್ರಾಟ್ಸ್' ಪತ್ರಿಕೆಯಲ್ಲಿ ಶ್ರೀ ಪಗನಪಗೋಡಾ ಎಂಬ ದೇವಾಲಯದಲ್ಲಿ ನಡೆದ ವಿಲಕ್ಷಣ ಪ್ರಕಾರದ ಆಹುತಿಯ ಕಥೆಯು ಪ್ರಕಟ ಹೊಂದಿದೆ. ಕಳೆದ ತಾರೀಖು ೨ನೇ ಆದಿತ್ಯವಾರಕ್ಕೆ ಪಗೋಡಾ ದೇವಾಲಯದಲ್ಲಿ ಸಂಯಾಬ್ಯಾ ಎಂಬ ಬ್ರಹ್ಮೀ ಗೃಹಸ್ಥರು ಈಶಪ್ರಾರ್ಥನೆ ಮಾಡುತ್ತಿದ್ದರು, ಹಾಗೆ ಮಾಡುತ್ತಿರುವಾಗಲೇ ಒಂದು ಮೂರ್ತಿಯ ಸನ್ನಿಧಿಯಲ್ಲಿ ತಮ್ಮ ಎಡಗೈಯ ಮಧ್ಯ ಬೆರಳಿನ ತುದಿಯನ್ನು ಕೊಯ್ದು ದೇವರಿಗೆ ಅರ್ಪಿಸಿದರು. ರಕ್ತವು ಸುರಿಯಹತ್ತಿತು. ಬಳಿಯಲ್ಲಿದ್ದ ಜನರು ಇದನ್ನು ನೋಡಿ, ರಕ್ತ ಸುರಿಯುತ್ತಿದೆಂದು ಇವರಿಗೆ ಹೇಳಿದ್ದಾಗ್ಯೂ ಇವರು ಕಿವಿಗೊಡದೆ, ತಮ್ಮ ಪ್ರಾರ್ಥನಾ ಕಾರ್ಯವನ್ನು ಏಕಾಗ್ರ ಚಿತ್ತದಿಂದ ನಡೆಸಿದ್ದರು. ಮುಂದೆ ಆ ತುಂಡನ್ನು ಎಣ್ಣೆಯಲ್ಲಿ ಅದ್ದಿಸಿ, ಅದಕ್ಕೆ ಬಟ್ಟೆ ಕಟ್ಟಿ, ದೀಪ ಹಚ್ಚಿ ಶ್ರೀ ಮೂರ್ತಿಗೆ ಸೇವೆಯಾಗುವದಿತ್ತು. ಪೋಲೀಸರಿಗೆ ಸುದ್ದಿ ಗೊತ್ತಾಯಿತು. ಕೂಡಲೆ ಪೋಲೀಸರು ಇವರನ್ನು ಹಿಡಿದು, ಚಿಕಿತ್ಸಾಲಯಕ್ಕೊಯ್ದು ಉಪಚಾರ ನಡೆಸಿದರು. ಹಿಂದೊಮ್ಮೆ ಪಗೋಡಾ ದೇವಾಲಯದಲ್ಲಿ ಇವರೇ ತಮ್ಮ ಒಂದು ಬೆರಳನ್ನು ಕೊಯ್ದು ಅರ್ಪಿಸಿದ್ದರಂತೆ! ಯಾವ ಪ್ರಕಾರದ ಭಕ್ತಿ?

***

ಅದ್ಭುತ ಪ್ರಯೋಗಗಳು.

ಭರತ ಖಂಡದಲ್ಲಿ ಧೀಮಂತರೆಂದು ಖ್ಯಾತಿಗೊಂಡು, ಹಿಂದುಸ್ಥಾನದಲ್ಲೆಲ್ಲ ಅದ್ಭುತ ಪ್ರಯೋಗಗಳ

ಮನೋಹರವಾದ ಕೂದಲನ್ನು ಚೆನ್ನಾಗಿ ಕಾಯಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡಿ ಒಣಗಿ, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನದ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿಗೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨-೧೦—೦
ಅಂಚೆವೆಚ್ಚ	,,	೦-೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

೪ ಔಂಸಿಗೆ	ರೂ	೨—೦—೦
೨ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦-೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಅಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY.**

ನ್ನು ಮಾಡಿ ತೋರಿಸಿ, ಪ್ರೇಕ್ಷಕರನ್ನು ಚಕಿತಮಾಡಿದ ಪ್ರೊಫೆಸರ ರಾಮಮೂರ್ತಿಯವರು ಈಗ ತಮ್ಮ ಸರ್ಕಸ ನಾಟಕ ಕಂಪನಿಯನ್ನು ವಿಸರ್ಜಿಸಿ, ಭಾರತೀಯ ದೇಶಬಾಂಧವರ ಕಾಯಿಕ-ಮಾನಸಿಕ ಹಾಗು ಆತ್ಮಿಕ ಉನ್ನತಿಯನ್ನು ಸಾಧಿಸುವದಕ್ಕಾಗಿ ಮುಂಬಾಪುರಿಯಲ್ಲಿ ಹೊಸ ಮಾಹಿರಿಯ ಮೇಲೆ ಫಿಜಿಕಲ್ ಇನ್‌ಸ್ಟಿಟ್ಯೂಟ ಎಂಬ ಶಾರೀರಿಕ ಶಿಕ್ಷಣದ ಸಂಸ್ಥೆಯನ್ನೊಂದು ಸಂಸ್ಥಾಪಿಸಿರುವರು. ಈ ಸಂಸ್ಥೆಯ ಸಂಸ್ಥಾಪನೆಯ ಉತ್ಸವದ ಮುಂಚೆ ರಾಮಮೂರ್ತಿಯವರೂ, ಅವರ ಪರಿವಾರದವರೂ ಅದ್ಭುತವಾದ ಪ್ರಯೋಗಗಳನ್ನು ಮಾಡಿ ತೋರಿಸಿದರು. ಆ ಪ್ರಯೋಗಗಳಲ್ಲಿ ಸ್ವಾಮಿ ಸೀತಾರಾಮಜೆಯವರು ಮಾಡಿದ ವಿಷಭಕ್ಷಣದ ಪ್ರಯೋಗಗಳನ್ನು ನೋಡಿ ಪ್ರೇಕ್ಷಕರು ಸ್ತಂಭಿತರಾದರು. ಶ್ರೀ ಸ್ವಾಮಿಯವರಿಗೆ 'ಸಿದ್ಧ ಪುರುಷ' 'ಸರ್ವಭಕ್ಷಕ'ರೆಂಬ ಬಿರುದುಂಟು. ಈ ಬಿರುದಿನಂತೆ ಶ್ರೀ ಸ್ವಾಮಿಯವರು ಸರ್ವ ಪ್ರಕಾರಗಳ ಭಕ್ಷ್ಯಾಭಕ್ಷ್ಯಗಳನ್ನು ಅಚಲ ವೃತ್ತಿಯಿಂದ ತಿನ್ನುತ್ತಾರೆ. ಇಂಥ ಪ್ರಯೋಗ ಸಮಾರಂಭವೊಂದು ಗಾಂಧಿ ಜಯಂತಿಯ ಸುಮುಹೂರ್ತದಲ್ಲಿ ಮುಂಬಯಿಯ ಬಾಲಿವಾಲಾ ನಾಟಕಗೃಹದಲ್ಲಿ ಜರುಗಿತು. ಈ ಸಮಯ ಉಚ್ಚಾಸನದ ಮೇಲೆ ಅನೇಕ ವೈದ್ಯರಾಜರು ಅನುಗ್ರಹಿಸಿದ್ದರು. ಶ್ರೀ ಸ್ವಾಮಿಯವರ ವಿಷಭಕ್ಷಣದ ಪ್ರಯೋಗವು ಕಟಿಯೋ, ದಿಟವೋ ಎಂಬುದನ್ನು ಸೂಕ್ಷ್ಮವಾಗಿ ವೈದ್ಯರಾಜರು ಪರೀಕ್ಷಿಸುತ್ತಿದ್ದರು. ಶ್ರೀ ಸ್ವಾಮಿಯವರು ಕಾಜಿನ ತುಣುಕುಗಳನ್ನು ಬಿಸ್ಕೀಟುಗಳಂತೆ ರುಚಿಯಿಂದ ತಿಂದರು, ಜಹರಾದ ಕಟ್ಟಿಣ ಮೊಳೆಗಳನ್ನು ತಿಂದರು, ಪಾದರಸವನ್ನು ಕುಡಿದರು, ಕಾದು ನೀರಾದ ಶೀಸವನ್ನು ಕುಡಿದರು. ಇವನ್ನೆಲ್ಲ ಕುಡಿಯುವಾಗ, ಅವರಿಗೆ ಎಳ್ಳು ಕಾಳಿನಷ್ಟು ಚಿತ್ತಪ್ರಕ್ಷೋಭವಾಗಲಿಲ್ಲ. ವೈದ್ಯರಾಜರು ಸೂಕ್ಷ್ಮವಾಗಿ ಇವುಗಳ ವಿಚಾರ ಮಾಡಿದರು. ಶ್ರೀ ಸ್ವಾಮಿಯವರ ಬಾಯಿಯನ್ನು ತಪಾಸ ಮಾಡಿದರು, ಮತ್ತು ಶ್ರೀ ಸ್ವಾಮಿಯವರು ಮಾಡಿದ ಪ್ರಯೋಗಗಳಲ್ಲಿ ರಕ್ಕತನವೇನಿಲ್ಲೆಂದು ಅಭಿಪ್ರಾಯ ಕೊಟ್ಟರು. ಡಾ| ಪಾಪರಿಯವರು ಇನ್ನೂ ಕಠಿಣಪರೀಕ್ಷೆ ಮಾಡಬೇಕೆಂದು 'ಪ್ರಸಿಕ್ ಎಸಿಡ್' ಎಂಬ ಭಯಂಕರವಾದ ವಿಷದ ಬಾಟ್ಲಿಯನ್ನು ಮುಂದೆ ಮಾಡಿ ಇದನ್ನು ತೆಗೆದುಕೊಳ್ಳುವಿರೇನು? ಎಂದು ಪ್ರಶ್ನೆ ಮಾಡಿದರು. 'ಪ್ರಸಿಕ್ ಆಸಿಡ್' ವಿಷವನ್ನು ಮೂಸಿದರೆ ಸಾವು ಬರುವದೂ ಉಂಟು. ಶ್ರೀ ಸ್ವಾಮಿಗಳವರು ಡಾ| ಪಾಪರಿಯವರಿಗೆ ಉತ್ತರ ಕೊಡಲು ತಡೆಯಲಿಲ್ಲ. ಬಾಟ್ಲಿಯನ್ನು ತೆಗೆದುಕೊಂಡು ಅಲ್ಲಿ ವೇದಿ ಹೊಯ್ದುಕೊಂಡು ಹಾಲು ಕುಡಿದಂತೆ ರುಚಿಯಿಂದ ಅದರ ಆಚಮನ ಮಾಡಿ ಬಿಟ್ಟರು. ಇದನ್ನು ನೋಡಿ, ಡಾಕ್ಟರರು ಮೂಗಿನ ಮೇಲೆ ಬೆರಳಿಟ್ಟರು. ರಾಮಮೂರ್ತಿಯವರು ಶ್ರೀ ಸ್ವಾಮಿಗಳ ಕಲವು ಹಕೀಕತನ್ನು ಹೇಳಿದರು: ಶ್ರೀ ಸೀತಾರಾಮಜಿಯವರು ೮೦ ವರ್ಷ ಪ್ರಾಯದವರಿದ್ದರೂ ಹರೆಯದವರಂತೆ ತೋರುತ್ತಾರೆ. ಅವರು ೧೮ ವರ್ಷಗಳವರೆಗೆ ಹಿಮಾಲಯ ಪರ್ವತದಲ್ಲಿ ತಪಶ್ಚರ್ಯವನ್ನು ಮಾಡಿ, ಉಪಾಸನ ಸಿದ್ಧಿಯನ್ನು ಪಡೆದಿರುವರು. ಆ ಸಿದ್ಧಿಬಲದಿಂದಲೇ ಶ್ರೀ ಸ್ವಾಮಿಯವರಿಗೆ ಇಂಥ ಪ್ರಾಯೋಗಗಳನ್ನು ಪ್ರದರ್ಶಿಸಲು ಸಾಮರ್ಥ್ಯವು ಪ್ರಾಪ್ತವಾಗಿರುವದು. ತಪಶ್ಚರ್ಯ, ಉಪಾಸನೆ ಮುಂತಾದ ಪುರಾತನ ವಿಧಿಗಳಿಗೆ ಮುಕರಾಗಿದ್ದರಿಂದ ನಾವು ಈಗ ದುರ್ಬಲರಾಗಿ ಕಾಲಹರಣ ಮಾಡಬೇಕಾಗಿದೆ.

***

ರಾಮಮೂರ್ತಿಯವರ ಹೇಳಿಕೆ

'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳು ಪ್ರೊ| ರಾಮಮೂರ್ತಿಯವರ ಭೆಟ್ಟಿ ತೊಂಡು ರಾಮಮೂರ್ತಿಯವರ ವಿಚಾರಗಳನ್ನು ಕೇಳಿದರು. ಭಾರತೀಯರ ಪುರಾತನ ಪದ್ಧತಿಯು, ಶಾರೀರಿಕ ಬೆಳವಣಿಗೆಯ ಕ್ರಮವು ಶಾಸ್ತ್ರಶುದ್ಧವಿದ್ದು, ಅದರಿಂದ ರೋಗಗಳ ಪರಿಹಾರವಾಗುತ್ತದೆ. ಅಂತರ್ಬಾಹ್ಯ ಅಂಗಗಳಿಗೆ ಚೈತನ್ಯ ದೊರಕಿ ಅಂಗಾಂಗಗಳೆಲ್ಲ ಸಮವಿನಿಂದ ಬೆಳೆಯುತ್ತವೆ. ಪಾಶ್ಚಾತ್ಯರ ಶಾರೀರಿಕ ಬೆಳವಣಿಗೆಯ ಪದ್ಧತಿಯಿಂದ ಬಾಹ್ಯಾಂಗಗಳು ಮಾತ್ರ ಬೆಳೆಯುತ್ತವೆ. ಪ್ರಾಣಾಯಾಮದಿಂದ ಪುಪ್ಪುಸಗಳು ಬೆಳೆಯುತ್ತವೆ, ರಕ್ತಶುದ್ಧಿಯಾಗುತ್ತದೆ. ಏಕಾಗ್ರತೆ ಸ್ತನುಡಲು ಇದೊಂದು ದೊಡ್ಡ ಸಾಧನ, ಆತ್ಮಿಕ ಶಾಂತಿಯು ಪ್ರಾಪ್ತವಾಗುತ್ತದೆ. ಕಾಯಿಕ ಹಾಗು ಮಾನಸಿಕ ಕಸುವು ಪ್ರಾಪ್ತವಾಗಿ ಮಾನವನು ದೀರ್ಘಾಯುವಾಗುತ್ತಾನೆ. ಈ ಪದ್ಧತಿಯಿಂದಲೇ ತಮಗೆ ಸಾಮರ್ಥ್ಯವು ಪ್ರಾಪ್ತವಾಗಿ ಅದ್ಭುತವಾದ ಪ್ರಯೋಗಗಳನ್ನು ಮಾಡಿ ತೋರಿಸಲು ತಾವು ಪಾತ್ರರಾದೆವೆಂದು ರಾಮಮೂರ್ತಿಯವರು ಸ್ಪಷ್ಟವಾಗಿ ಹೇಳಿದರು.

***

ವನಸ್ಪತ್ಯಾಹಾರದ ಶ್ರೇಷ್ಠತೆ

ರಾಮಮೂರ್ತಿಯವರು ವನಸ್ಪತ್ಯಾಹಾರದ ಕುರಿತು ಪ್ರದರ್ಶಿಸಿದ ವಿಚಾರಗಳು ಮನನೀಯವಿವೆ. ದೇಹವನ್ನು ಬೆಳೆಸುವವರು (ಆತ್ಮವನ್ನಲ್ಲ, ಮನವನ್ನಲ್ಲ) ತತ್ತಿ, ಕುರಿ, ಕೋಳಿ ಮುಂತಾದ ಮಾಂಸಗಳನ್ನು ಭಕ್ಷಿಸಬೇಕೆಂಬದೊಂದು ಕಲ್ಪನೆಯು ರೂಢವಾಗಿದೆ. ಆ ಕುರಿತು ತಮ್ಮ ಅಭಿಪ್ರಾಯವೇನೆಂದು ಪ್ರತಿನಿಧಿಗಳು ಪ್ರೊಫೆಸರ ರಾಮಮೂರ್ತಿಗಳಿಗೆ ಕೇಳಿದರು. ಅದಕ್ಕೆ ರಾಮಮೂರ್ತಿಯವರು ನುಡಿದದ್ದೇನಂದರೆ ವನಸ್ಪತ್ಯಾಹಾರವು ದೇಹಕ್ಕೆ ಅವಶ್ಯವಿರುವ ಪೋಷಕ ದ್ರವ್ಯವನ್ನು ಸಂಪೂರ್ಣವಾಗಿ ಕೊಡುತ್ತದೆ. ಮೇಲಾಗಿ ಸಾತ್ವಿಕ ಗುಣಗಳು ವನಸ್ಪತ್ಯಾಹಾರದಲ್ಲಿರುವದರಿಂದ ದೇಹವನ್ನು ನಿಯಂತ್ರಿಸುವ ಅಧಿಕಾರವು ಸತ್ವಪ್ರಧಾನ ಆಹಾರದ ಬಲದಿಂದ ಮನಸ್ಸಿಗೆ ಪ್ರಾಪ್ತವಾಗುತ್ತದೆ. ಮಾಂಸಾಹಾರವು ರಜ ಹಾಗು ತಮೋ ಗುಣಗಳಿಂದ ಯುಕ್ತವಾಗಿ ಮನಸ್ಸನ್ನು ಕಲುಷಿತ ಮಾಡುತ್ತದೆ. ಅದರಿಂದ ಮನಸ್ಸು ದುರ್ಬಲವಾಗಿ ದೇಹವು ಮಾತ್ರ ಬೆಳೆಯುತ್ತದೆ. ಗೋಧಿ, ಬೇಳೆ ಮುಂತಾದ ಧಾನ್ಯಗಳಲ್ಲಿ ಮಾನವನ ಶರೀರಪೋಷಣೆಗೆ ಅವಶ್ಯವಿದ್ದ ಸಂಪೂರ್ಣ ಸಾಮಗ್ರಿಗಳಿವೆ. ಉಪ್ಪು ಶ್ರೇಷ್ಠವಾದ ರಕ್ತಪೋಷಕ ದ್ರವ್ಯವು. ಹೀಗೆ ಶರೀರಕ್ಕೆ ಅವಶ್ಯವಿದ್ದ ಸಂಪೂರ್ಣ ಸಾಮಗ್ರಿಗಳನ್ನು ಪೂರೈಸಲು ವನಸ್ಪತಿಗಳು ಸಮರ್ಥವಿವೆ. ಸೂಕ್ಷ್ಮವಾಗಿ ವಿಚಾರಿಸಿದರೆ, ಆಹಾರ ದ್ರವ್ಯಗಳ ಮೇಲೆ ನಮ್ಮ ಶಕ್ತಿಯು ಅವಲಂಬಿಸಿರುವದಿಲ್ಲ. ಆರೋಗ್ಯಕರವಾದ ಹಾಗು ಜೀರ್ಣವಾಗಬಹುದಾದ ಆಹಾರವನ್ನು ಉಪಯೋಗಿಸುವದೇ ನಮ್ಮ ಸಾಮರ್ಥ್ಯದ ಕಾರಣವಿದೆ. ವನಸ್ಪತ್ಯಾಹಾರದಿಂದ ನಮ್ಮ ಆರೋಗ್ಯವು ಕಳೆಗುಂದಿತೆಂದು ಹಾರುವದು ನಿರಾಧಾರವಿದೆ. ನಮ್ಮ ಅವನತಿಯ ಕಾರಣವೇನೆಂದು ಬಲ್ಲಿರಾ? ನಾವು ಸ್ವಾಭಿಮಾನವನ್ನು ತೊರೆದಿದ್ದೇವೆ, ನಮಗೆ ಗೌರವದ ಅರಿವಿಲ್ಲ. ಪುರಾತನ ವೈಭವವನ್ನು ನಾವು ಮರೆತಿದ್ದೇವೆ. ಅದರಿಂದ ನಮ್ಮ ಕಸುವು ನಷ್ಟವಾಗಿದೆ. ಪ್ರೊಫೆಸರ ರಾಮಮೂರ್ತಿಯವರು ಸ್ವಾನುಭವದಿಂದ ಆಡಿದ ಮಾತುಗಳಿವು. ಅವನ್ನು ದೇಶಬಾಂಧವರು ಪರ್ಯಾಲೋಚಿಸಿ ನಡೆದುಕೊಂಡರೆ, ನಮಗೆ ಹಿತವಾಗುವದು.

***

ಸಂಭಾವಿತ ಕಳ್ಳ

ವಾಂದ್ರೆಯೊಳಗಿನ ಸೆರೆಮನೆಯಲ್ಲಿ ಬಾಬು ಛಪ್ಪರವಾಲಾ ಎಂಬೊಬ್ಬ ದೊಡ್ಡ ಕುಲಿಗಾರನನ್ನು ಇಟ್ಟಿದ್ದರು. ಅವನು ಸೆರೆಮನೆಯೊಳಗಿಂದ ಪಾರಾದನು. ಸೆರೆಮನೆಯ ಕಾವಲುಗಾರರಿಗೆ ಧೋಕಾ ಮಾಡಿ ಬಾಬು ಛಪ್ಪರವಾಲಾನು ಪಾರಾದನೆಂದು ಅವನ ಮೇಲೆ ಆರೋಪವಿತ್ತು. ಈ ಖಟ್ಲೆಯಲ್ಲಿ ಆದ ಬಾಬು ಛಪ್ಪರವಾಲಾನ ಜಬಾನಿಯು ಅತ್ಯಂತ ಮನೋರಂಜಕವಿದೆ. ಅವನೆನಂದರೆ "ನಾನು ಅಂಜಿಕೆಯವನಾಗಿ ಇದ್ದೇನೆ, ಅತ್ಯಾಚಾರವನ್ನು ನಾನೆಂದಿಗೂ ಮಾಡುವವನಲ್ಲ. ತಪ್ಪಿ ಕೂಡ ಯಾರಿಗೂ ನಾನು ಅಪಶಬ್ದಗಳನ್ನು ಮಾತಾಡಿದ್ದು ನನಗೆ ನೆನಪಾಗ ವದಿಲ್ಲ. ನನ್ನ ಕೈಕೆಳಗಿನವರು ಕೂಡ ಈ ನೇಮವನ್ನು ಪಾಲಿಸಬೇಕು. ವಾಂದ್ರೆಯೊಳಗಿನ ಸೆರೆಮನೆಯಲ್ಲಿ ಕಠೋರವಾದ ಕಾವಲಿತ್ತು, ಆದರೂ ನಾನು ಪಾರಾದೆನು. ಇದರ ಮೇಲಿಂದ ನನ್ನ ಸಾಮರ್ಥ್ಯದ ಕಲ್ಪನೆಯು ಯಾರಿಗೂ ಆಗುವ ಹಾಗಿದೆ. ಕಠಿಣ ಕಾವಲಿದ್ದರೂ ನೀನು ಹ್ಯಾಗೆ ಪಾರಾಗುತ್ತೀಯೋ ನೋಡುವಾ, ಎಂದು ಯಾರಾದರೂ ನನ್ನೊಡನೆ ಪಣ ಕಟ್ಟಲಿ. ಪೋಲೀಸರು ಬೇಕಾದಷ್ಟು ಕಠಿಣ ಕಾವಲಿರಲಿ, ಆದರೂ ನಾನು ಪಾರಾಗಬಲ್ಲೆ. ಪಾರಾಗುವ ಬಗೆಯನ್ನು ನಾನು ಶೋಧಿಸಿಯೇ ತೀರುವೆನು; ಇಷ್ಟಾಗಿ ಯಾರಿಗೂ ಎಳ್ಳಷ್ಟೂ ನೋಯಿಸಲಿಕ್ಕಿಲ್ಲ. ಶಸ್ತ್ರಾಸ್ತ್ರಗಳನ್ನೇ ನಾನು ಬಯಸುವದಾದರೆ ಅವನ್ನು ನಾನು ಬೇಕಷ್ಟು ಸಂಪಾದಿಸೇನು. ಆದರೆ ಅವು ನನಗೆ ಬೇಕಾಗಿಲ್ಲ. ಅವನ್ನು ನಾನು ಯಾವಾಗಲೂ ಧಿಕ್ಕರಿಸುತ್ತೇನೆ. ಕಾವಲುಗಾರನಿಗೆ ಧಾಕಾ ಮಾಡಿದವನು ಶಫಿಯು, ನಾನಲ್ಲ. ಹಾಗೆ ಶಫಿಯು ಮಾಡುವನೆಂದು ನನಗೆ ಮುಂದಾಗಿ ತಿಳಿದಿದ್ದರೆ, ನಾನು ಅವನಿಗೆ ಹಾಗೆಂದೂ ಮಾಡಗೊಡುತ್ತಿದ್ದಿಲ್ಲ. ನನಗೆ ಅನೇಕ ಕಳ್ಳರ ಸಹವಾಸವು ಪ್ರಾಪ್ತವಾಗಿದೆ. ಆದರೆ ಕೀಳು ತರಗತಿಯ ಕಳ್ಳರೊಡನೆ ನಾನೆಂದೂ ಸಹವಾಸ ಮಾಡಿರಲಿಲ್ಲ. ನಾನು ಕಳವು, ಮಾಡುವವನಿದ್ದೆನೆ. ಮನೆಗಳನ್ನು ಹುಲಿಯುತ್ತೇನೆ. ಆದರೆ, ನನ್ನ ನಡತೆಯು ಕೆಲವು ನಿಯಮಗಳಿಗನುಸಾರವಾಗಿ ನಡೆಯುತ್ತದೆ. ಆ ನಿಯಮಗಳನ್ನೆಲ್ಲ ನನ್ನ ಕೈಕೆಳಗಿನವರ ಕಡೆಯಿಂದ ನಾನು ಪಾಲಿಸಿಕೊಳ್ಳುತ್ತೇನೆ. ಮುಂಬಯಿಯ ಹೈಕೋರ್ಟಿನಲ್ಲಿ ಅನೇಕ ಫಿರ್ಯಾದುಗಳು ನನ್ನ ಮೇಲೆ ಆಗಿರುವವು. ಆದರೆ, ಹಿಂದು ಫಿರ್ಯಾದಿಯಲ್ಲಿಯೂ ಕೂಡ ನಾನು ಯಾರಿಗೂ ನೋವು ಮಾಡಿದ್ದು ನಮೂದಿಲ್ಲ. ನಾನು ಹಿಂದೆಯಲ್ಲಿ ಸೇರುವ ವರೆಗೆ ತಂದವರಿಗೆ ಅಸಭ್ಯ ಶಬ್ದಗಳನ್ನು ಉಪಯೋಗಿಸಿದ ಆರೋಪವಿತ್ತು. ಆದರೆ, ಪ್ರತ್ಯಕ್ಷಪೂರ್ವಕವಾಗಿ ನಾನು ಅದನ್ನು ನಿರಾಕರಿಸಿದ್ದೇನೆ. ಸ್ತ್ರೀಯರಿಗೆ ಎಂದೂ ಅಸಭ್ಯ ಮಾತುಗಳನ್ನಾಡದಂತೆ ನಾನು ಶಕ್ತಿಮೀರಿ

ಜಾಗ್ರತೆಯನ್ನು ಕೊಂಡಿರುವೆನು. ಪುಣೆಯಲ್ಲಿ ಪೊಲೀಸರವರು ನನಗೆ ಹಿಡಿದರು. ಆಗ ನನ್ನಲ್ಲಿ ಜೋರಿಯಿತ್ತು, ನನ್ನ ಇಚ್ಛೆ ಇದ್ದರೆ, ಅವರಿಗೆ ಜೋರಿಯಿಂದ ಹೊಡೆದು ಪಾರಾಗಬಹುದಿತ್ತು. ಆದರೆ, ನಾನು ಆ ಮಾರ್ಗವನ್ನು ಉದ್ದೇಶಪೂರ್ವಕವಾಗಿ ತಿರಸ್ಕರಿಸಿದೆನು. ಪೊಲೀಸರವರು ನನ್ನ ಕಾಲಿಗೆ ಕೈಹಾಕಿದ್ದರು. ಅಂಗಿಯನ್ನೇ ಅವರ ಕೈಯಲ್ಲಿ ಬಿಟ್ಟು ಯುಕ್ತಿಯಿಂದ ನಾನು ಪಾರಾಗಿದ್ದೆ. ಯಾವದೇ ಉಪಾಯದಿಂದ ಸೆರೆಮನೆಯೊಳಗಿಂದ ಹೊರಬಿದ್ದು, ಸ್ವಾತಂತ್ರ್ಯಪ್ರಾಪ್ತಿ ಮಾಡಿಕೊಳ್ಳಬೇಕೆಂದು ನಾನು ಹಾತೊರೆಯುತ್ತಿದ್ದೆ. ಸಂಧಿ ದೊರೆತ ಕೂಡಲೆ ನಾನು ಪಾರಾದೆ. ಈ ಹಿಂದೆ ನಾಲ್ಕು ವರ್ಷ ನಾನು ಪಾರಾಗಿರುವೆನು. ಆ ಬಾರಿಗಳಲ್ಲಿಯೂ ನಾನು ಯಾರಿಗೂ ನೋವು ಮಾಡಲಿಲ್ಲ.” ಬಾಬು ಚಕ್ರವರ್ತಿಯವರ ಜಬಾನಿಯನ್ನು ಕೇಳಿದರೆ, ಶೋಕವೂ, ಆನಂದವೂ ಒಮ್ಮೆಲೇ ಆಗುತ್ತವೆ. ಶೋಕವು, ದರೋಡೆಯಂಥ ನೀಚ ವ್ಯವಸಾಯಗಳನ್ನು ನೀತಿಯಿಂದ ಅವರು ಪಾಲಿಸುವ ಕಥೆಯು ನಿಜವಾಗಿ ಆನಂದಪ್ರದವಿದೆ. ಇಷ್ಟು ಬುದ್ಧಿವೈಭವಸಂಪನ್ನನಾದ ಚಕ್ರವರ್ತಿಯು ಕಳುವಿನಂಥ ನೀಚ ಸಮಾಜಘಾತಕ ವ್ಯವಸಾಯಗಳಲ್ಲಿ ಬೀಳಬೇಕೇ?

* * *

ಕರ್ನಾಟಕ ಸೇವಾದಳದ ಕಾರ್ಯ.

ಹಿಂದುಸ್ಥಾನೀ ಸೇವಾದಳದ ಕಾರ್ಯದರ್ಶಿಗಳಾದ ಡಾ| ನಾ. ಸೋ. ಹರ್ಡೀಕರರವರು ಬರೆಯುವದೇನಂದರೆ.—ಜೂನ, ಜುಲೈ, ಅಗಸ್ಟ, ಸಪ್ಟಂಬರ ಈ ನಾಲ್ಕು ತಿಂಗಳಲ್ಲಿ ಹಿಂದುಸ್ಥಾನಿ ಸೇವಾದಳದ ಕರ್ನಾಟಕ ಶಾಖೆಯವರೂ, ಅವರ ಸಹಾಯಕರೂ ೧೪,೫೭೮ ರಾಷ್ಟ್ರೀಯ ಸಭೆಯ ಸಭಾಸದರನ್ನೂ, ೫೦೩ ಸೇವಾದಳದ ಸ್ವಯಂಸೇವಕರನ್ನೂ ಸೇರಿಸಿದರು. ದಳದ ಸ್ವಯಂಸೇವಕರೇ ೧೦೧೩೮ ರಾಷ್ಟ್ರೀಯ ಸಭೆಯ ಸಭಾಸದರನ್ನು ಕೂಡಿಸಿದರು. ಶ್ರೀ| ಹೊಸಕೋಟೆ ಕೃಷ್ಣರಾಯರು ಒಬ್ಬರೇ ೩೪೬೦ ಸಭಾಸದರನ್ನೂ, ೬೦ ದಳದ ಸ್ವಯಂಸೇವಕರನ್ನೂ, ಶ್ರೀ| ಲೇಂಗ್ಡೆಯವರೊಬ್ಬರೇ ೧೮೪೪ ರಾಷ್ಟ್ರೀಯ ಸಭಾಸದರನ್ನೂ, ೮೪ ದಳದ ಸ್ವಯಂಸೇವಕರನ್ನೂ ಕೂಡಿಸಿದರು. ಸಹಾಯಕರಲ್ಲಿ ಶ್ರೀ| ಬಸಪ್ಪರು ೧೫೦೦ ಸಭಾಸದರನ್ನು ಕೂಡಿಸಿದರು. ಬಿಜಾಪುರದಲ್ಲಿ ೫೦೦, ಶಿರಸಿಯಲ್ಲಿ ೧೬೧ ಸಭಾಸದರ ಸಂಗ್ರಹವಾಗಿದೆ. ಸಭಾಸದರ ಸಂಖ್ಯೆಯಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಯೇ ಮುಂದೆ ಬಂದಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ೩೫೧೯, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೭೯೯, ಧಾರವಾಡದಲ್ಲಿ ೨೯೦೭, ಬೆಳಗಾವಿಯಲ್ಲಿ ೨೪೭೯, ಮೈಸೂರಿನಲ್ಲಿ ೧೧೭೩, ವಿಜಾಪುರದಲ್ಲಿ ೮೪೪, ಬಳ್ಳಾರಿಯಲ್ಲಿ ೩೬೦, ಕೊಡಗಿನಲ್ಲಿ ಸೊನ್ನೆ. ಡಾ| ಹರ್ಡೀಕರರು ೫೫೬೦ ರೂಪಾಯಿಗಳ ನಿಧಿಯನ್ನು ಸಂಗ್ರಹಿಸಿರುವರು. ಮೇಲಾಗಿ ೪೦೦೦ ರೂಪಾಯಿಗಳ ಭಾಗ್ದಾನವು ದೊರಕಿದೆ. ೪ ತಿಂಗಳಲ್ಲಿ ಡಾ| ಹರ್ಡೀಕರರು ನೆರವೇರಿಸಿದ ಕಾರ್ಯವು ಅತ್ಯಂತ ಪ್ರಶಂಸನೀಯವಿದೆ.

* * *

ದೈವಲೀಲೆ.

ಸಪ್ಟಂಬರ ೧೪ನೇ ತಾರೀಖಿಗೆ ಅಕ್ಷರ ಪೋಲೀಸ ಕಮಿಶನರರಾದ ಖಾನ ಬಹಾದ್ದೂರ ಅಬ್ದುಲ್ ರಹೀದಮಾನಗರದ ಹೆಂಡತಿಯವರು ತಮ್ಮ ಹುಡುಗನನ್ನು ಜೊತೆಗೆ ಕೊಂಡು ಎರಡನೇ ವರ್ಗದ ಡಬ್ಬಿಯಲ್ಲಿ ಕೂತು ರಾಬರ್ಟಸನಪೇಟೆಯಿಂದ ಬಂಗಾರಪೇಟೆಗೆ ಹೋಗುತ್ತಿದ್ದರು. ಬಾಣ ಹಾಗು ಮಾಲೂರ ಸ್ಟೇಶನಗಳ ನಡುವೆ ಉಗಿಬಂಡಿ ಇರುವಾಗ ತಾಯಿಗೆ ಸ್ವಲ್ಪ ಕೈಕಾಲು ಬಿಟ್ಟು ಮಲಗಿಕೊಳ್ಳುವ ಬಯಕೆಯಾಯಿತು. ಅವರು ಸ್ವಲ್ಪ ಅಸ್ವಸ್ಥರಿದ್ದರು. ಥಟ್ಟನೆ ಡಬ್ಬಿಯ ಬಾಗಿಲು ತೆರೆಯಿತು, ೫ ವರ್ಷದ ಹುಡುಗನೊಬ್ಬನು ಹೊರಕ್ಕೆ ಬಿದ್ದನು. ತಾಯಿಯು ಥಟ್ಟನೇ ಡಬ್ಬಿಯಲ್ಲಿದ್ದ ಅಪತ್ಕಾಲದ ಸರಪಣಿಯನ್ನು ಎಳೆದು ಉಗಿಬಂಡಿಯನ್ನು ನಿಲ್ಲಿಸಲೆತ್ನಿಸಿದಳು. ಆದರೆ ಅಲ್ಲಿ ಏನಾಗಿತ್ತೋ ಏನೋ ಉಗಿಬಂಡಿಯು ನಿಲ್ಲಲಿಲ್ಲ. ಇನ್ನೂ ಓಡ ತೊಡಗಿತು. ತಾಯಿಗೆ ಹುಚ್ಚು ಹತ್ತಿದಂತಾಯಿತು. ಹೊರಕ್ಕೆ ಹಾರಿಕೊಂಡು ಬಿಟ್ಟಳು. ಜನರು ಇದನ್ನು ನೋಡಿ, ಕೈವಸ್ತ್ರಗಳನ್ನು ತೋರಿಸಿ ಉಗಿಬಂಡಿಯನ್ನು ನಿಲ್ಲಿಸಿದರು. ಉಗಿಬಂಡಿಯು ಅರ್ಧ ಮೈಲು ಓಡಿ ಮುಂದರಿದಿತ್ತು. ಹಿಂದಕ್ಕೆ ಬಂದು ನೋಡಲು, ತಾಯಿಯೂ, ಚಿಕ್ಕ ಬಾಲಕನೂ ಸುಖರೂಪವಾಗಿದ್ದರು. ಪರಮಾತ್ಮನೇ ಅವರಿಗೆ ಸಹಾಯ್ಯನು. ಉಗಿಬಂಡಿಯ ಆಚೆ–ಈಚೆ ಮಳೆಬಿದ್ದು ಹುಲ್ಲು ಬೆಳೆದಿತ್ತು. ಆ ಹುಲ್ಲುಗಳ ಮೇಲೆ ಬಿದ್ದದರಿಂದ ಹೇಳತಕ್ಕಂಥ ಅಪಾಯವೇನು ಆಗಲಿಲ್ಲ. ಶ್ರೀ ಪರಮಾತ್ಮನು ಮಾತೃಪ್ರೇಮಕ್ಕೆ ಮೆಚ್ಚಿ ಇಬ್ಬರಿಗೂ ಸಾಹ್ಯನು. ಪರಮಾತ್ಮನು ಅನಾಥಬಂಧುವಲ್ಲವೇ!

— ಕೋಲಾರದ ಚಿನ್ನದ ಗಣಿಯಲ್ಲಿ ಸ್ಫೋಟವಾಗಿ ೮ ಮಂದಿಗಳ ಪತ್ತೆಯಿಲ್ಲ.

— ವೇಶ್ಯಾಲಂಪಟರ ಗತಿ ನೋಡಿರಿ! ಮೈಸೂರಿನಲ್ಲಿ ಇಬ್ಬರು ಸ್ನೇಹಿತರಿದ್ದರು ಇಬ್ಬರೂ ಒಬ್ಬಳೇ ವೇಶ್ಯೆಯಲ್ಲಿ ಆಸಕ್ತರಾಗಿದ್ದರು ಒಬ್ಬರು ಇನ್ನೊಬ್ಬರನ್ನು ನಾಶ ಮಾಡಬೇಕೆಂದು ಬಯಸುತ್ತಿದ್ದರು, ದ್ವೇಷವನ್ನು ಮಾತ್ರ ವ್ಯಕ್ತಪಡಿಸುತ್ತಿರಲಿಲ್ಲ. ಇಬ್ಬರೂ ಒಂದು ದಿನ ಚಹಾ ಕುಡಿಯಹೋಗಿದ್ದರು ಚಹಾಕ್ಕೆ ಸಕ್ಕರೆ ಸಾಲದೆಂದು ಒಬ್ಬನು ನುಡಿಯಲು, ಇನ್ನೊಬ್ಬನು ವಿಷದಿಂದ ಕೂಡಿದ ಸಕ್ಕರೆಯನ್ನು ಅವನಿಗೆ ಕೊಟ್ಟನು ಚಹಾ ಕೊಂಡ ಬಳಿಕ, ಅವನು ಮರಣೋನ್ಮುಖನಾದನು. ಪೋಲೀಸರಿಗೆ ಈ ಸುದ್ದಿ ಹತ್ತಿ ಅವರೀಗ ಚಿಕಿತ್ಸೆ ನಡಿಸುತ್ತಿರುವರು ಮುಂದೆ ಖಟ್ಲೆ ನಡೆಯುವದಿದೆ

NOTICE.

The Annual Gathering of the past and present students and the Prize-giving Ceremony of the Gibb High School, Kumta, will be held on 21st, 22nd & 23rd October, 1926 **Mr. Amembal Shrinivas Pai**, *B A*, *B L*, of Mangalore has kindly consented to preside on the occasion All past students and sympathisers are cordially invited to attend

Subscription in aid of the above ceremony will be thankfully received.

S. V Pandit,	**G S. Karnakar,**
	B. K. Baliga.
Secretary,	*Secretaries,*
on behalf of students	Gathering Committee

— ಬಂಗಾಲದಲ್ಲಿ ಖಾದಿಯ ಪ್ರಸಾರವು ಭರದಿಂದ ನಡೆದಿದೆ ೧೯೨೪ರಲ್ಲಿ ಖಾದಿ ಪ್ರತಿಷ್ಠಾನದವರು ೮೦ ಸಾವಿರ ರೂಪಾಯಿ ಬೆಲೆಯ ಖಾದಿಯ ಹುಟ್ಟುವಳಿ ಮಾಡಿದರು. ೧೯೨೫ ನೇ ಇಸ್ವಿಯಲ್ಲಿ ೧ ಲಕ್ಷ, ೫೦ ಸಾವಿರ ರೂಪಾಯಿಗಳ ಖಾದಿಯ ಹುಟ್ಟುವಳಿಯಾಯಿತು ಈ ವರುಷ ೩ ಲಕ್ಷ ರೂಪಾಯಿಗಳ ಹುಟ್ಟುವಳಿಯಾಗಬಹುದೆಂದು ಹೇಳುತ್ತಾರೆ, ಆ ತಿಂಗಳ ಲೆಕ್ಕದಿಂದ ಹೊಂದಿಸಿದ ಅನುಮಾನವಿದು!

ಹುಳದ ವ್ರೋಮು!

(ರಶಿಯಾ ದೇಶದ ಸಂಶೋಧನೆ.)

ಇದೀಗಲೇ !

ನೂತನವಾಗಿ ನಮ್ಮ ಕೈಸೇರಿದೆ ! !

ಬೇಗನೇ ತರಿಸಿ ಸಂಗ್ರಹಿಸಿರಿ !

ಪತ್ತೆ-ಮೆಸರ್ಸ ಏ. ಪಿ. ಎಂಡ್ ಸಿ. ಟೋಲಕೌಸ್ಕಿ,

ಪಿ ಎಂಡ್ ಸಿ ಟೋಲಕೌಸ್ಕಿ ಕಂಪನಿಯವರು,

೩, ೫, ಮತ್ತು ೭ ಧನಜಿ ಸ್ಟ್ರೀಟ, **ಮುಂಬಯಿ.**

ದರ:- ೫ ರತ್ತಲು ವರೆಗೆ ಕೊಳ್ಳುವವರಿಗೆ ರತ್ತಲಿಗೆ ರೂ. ೧೩/- ರಂತೆ.

೫ ರತ್ತಲಿಗೆ ಮಿಕ್ಕಿ ಕೊಳ್ಳುವವರಿಗೆ ರತ್ತಲಿಗೆ ರೂ. ೧೫/- ರಂತೆ

ಅಂಚೆ ವೆಚ್ಚ ಪ್ರತ್ಯೇಕ.

ಡಾ|| ವ್ಯಾ. ಎಮ್. ವೈದ್ಯ,

ಡೆಂಟಿಸ್ಟ ಮತ್ತು ಅಕ್ಯೂಲಿಸ್ಟ,

ಗವಳೀಗಲ್ಲಿ, **ಧಾರವಾಡ.**

ಡಾಕ್ಟರ ಕೂಪರ, ಬಿ ಡಿ. ಎಸ್ ಮುಂಬಯಿ,

ಇವರ ಮೊದಲನೇ ಅಸಿಸ್ಟಂಟ.

ಹುಬ್ಬಳ್ಳಿ ಬ್ರಂಚ:- ದುರ್ಗದಬೈಲ ಪ್ರತಿ ದಿವಸ ಮಧ್ಯಾಹ್ನ ೩ರಿಂದ ಸಂಜೆಯ ೭ ರ ವರೆಗೆ.

ಏನೂ ನೋಯಿಸದೆ ಹಲ್ಲುಗಳನ್ನು ತೆಗೆಯುತ್ತೇವೆ. ಕೃತ್ರಿಮ ಹಲ್ಲುಗಳನ್ನು ಯೋಗ್ಯವಾಗಿ ಕೂಡಿಸುತ್ತೇವೆ ಬೆಳ್ಳಿ ಅಥವಾ ಭಂಗಾರದ ಸಿಮೆಂಟದಿಂದ ಹಲ್ಲುಗಳನ್ನು ತುಂಬುತ್ತೇವೆ ಹಳೇ ಹಲ್ಲುಗಳನ್ನು ದುರುಸ್ತ ಮಾಡುತ್ತೇವೆ ಗೋಲ್ಡ ಕ್ರೌನ ಮತ್ತು ಬ್ರಿಜ್ಜಸ್ಪೆಶಲಿಷ್ಟ ಸ್ವಾಭಾವಿಕ ಹಲ್ಲುಗಳನ್ನು ಸ್ವಚ್ಛವಾಗಿ ಮಾಡುವದರಲ್ಲಿ ಬರುವದು ಇದಲ್ಲದೆ, ಅವುಗಳನ್ನು ಸಂಪೂರ್ಣವಾಗಿ ಬೆಳ್ಳಗೆ ಮಾಡುವದರಲ್ಲಿಯೂ ಬರವದು. ನಮ್ಮ ದಂತಮಂಜನವನ್ನು ಉಪಯೋಗಿಸಿರಿ

ಬೆಲೆ ಡಬ್ಬಿಗೆ ೧ ಆಣೆ

ಕಣ್ಣು ಚಾಳೀಸ

ಚಾಳೀಸಿಯ ಸಲುವಾಗಿ ಕಣ್ಣುಗಳನ್ನು ಪರೀಕ್ಷಿಸುತ್ತೇವೆ. ಕನ್ನಡಕಗಳು, ಪ್ರೇಮ್ಸ ರೋಲ ಮತ್ತು ನಿಕಲ್ ಇವುಗಳ ಬಾಜುಗಳು ಮತ್ತು ಚಾಳೀಸ ಹಾಕುವ ಪೆಟಿಗೆಗಳು, ಪಿಲ್ಲನ್ ಗೋಲ್ಡ ಅಮುಲೆಟ ಮುಂತಾದವುಗಳು ನಮ್ಮಲ್ಲಿ ಸಿಗುತ್ತವೆ ಮತ್ತು ಚಾಳೀಸಗಳನ್ನು ದುರುಸ್ತ ಮಾಡುತ್ತೇವೆ. ಹಾಗೂ ಕೃತ್ರಿಮ ಕಣ್ಣುಗಳನ್ನು ಸಹ ಕೂಡಿಸುತ್ತೇವೆ

ವಾಚಕ ಮಹಾಶಯರಿಗೆ.

ಈ ಸಂಚಿಕೆಯನ್ನು ಸಾದರಪಡಿಸಿ, 'ವೃತ್ತ'ವು ೧೧ ನೇ ವರುಷವನ್ನು ಮೆಟ್ಟುತ್ತದೆ. 'ವೃತ್ತ'ದ ಸೇವೆಯನ್ನು ತಾವು ೧೦ ವರುಷಗಳ ಪರಿಚಯದಿಂದ ಅರಿತಿರುವಿರಿ. 'ವೃತ್ತ'ವು ನೆರವೇರಿಸಿದ ಪ್ರಜಾಸೇವೆಯ ಮಾತವನ್ನು ಸಂಕ್ಷಿಪ್ತವಾಗಿ ಕೂಡ ವಿವರಿಸುವದು ಆತ್ಮಸ್ತುತಿಯಾಗುವದು. ಪ್ರತ್ಯಕ್ಷ 'ವೃತ್ತ'ವೇ ನಿಮ್ಮೆದುರಿಗಿದ್ದು, ಅದರ ಗುಣಪರೀಕ್ಷೆ ಮಾಡುವ ಬುದ್ಧಿಯು ತಮ್ಮಲ್ಲಿದ್ದಾಗ, 'ವೃತ್ತ'ದ ಸೇವೆಯನ್ನು ಮತಿಸುವದು ವ್ಯವಹಾರಿಕವಲ್ಲ. ಅದರಿಂದ 'ವೃತ್ತ'ವು ಬಿನ್ನೈಸಿಕೊಳ್ಳುವದೇನಂದರೆ:— ಈ ವರೆಗೆ ತಾವು ನನ್ನ ಸೇವೆಯನ್ನು ಮನ್ನಿಸಿಕೊಂಡಿರಿ. ನ್ಯಾಯವು ಹೇಳಿದಂತೆ, ಜವಾಬದಾರಿಯೂ ಬೆಳೆಯುತ್ತ ನಡೆದಿದೆ. ಅದನ್ನೆಲ್ಲ ಪರ್ಯಾಲೋಚಿಸಿ ವಾಚಕರು ನನ್ನನ್ನು ಬರಮಾಡಿಕೊಂಡು ಮನ್ನಿಸಬೇಕಾಗಿಯೂ, ವಿದ್ವಜ್ಜನರು ಲೇಖಗಳನ್ನಿತ್ತು ಸಲಹಬೇಕಾಗಿಯೂ ಪ್ರಾರ್ಥಿಸುವೆನು. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ಬರೇ ೩ ರೂಪಾಯಿ ಇರುವದು. ಅದನ್ನು ಮನಿ ಆರ್ಡರದ್ವಾರಾ ವ್ಯವಸ್ಥಾಪಕರಿಗೆ ಕಳುಹಿಸಿದರೆ, ಕಾಗದ-ಮಸಿ ಮುಂತಾದ ಪೋಷಕ ದ್ರವ್ಯಗಳನ್ನು ಸಂಗ್ರಹಿಸಲಿಕ್ಕೆ ಅನುಕೂಲವಾಗುವದು. ತಾವು ಒಬ್ಬೊಬ್ಬರು ಇನ್ನೊಬ್ಬೊಬ್ಬ ಚಂದಾದಾರರನ್ನು ಸಂಪಾದಿಸಿಕೊಟ್ಟರೆ, ನಾನು ಇನ್ನೂ ವಿಶೇಷ ಸೇವೆಯನ್ನು ನೆರವೇರಿಸಲು ಸಮರ್ಥನಾಗುವೆನು. ಸೇವ್ಯ-ಸೇವಕಭಾವವನ್ನು ನೆನಿಸಿ, ನನಗೆ ಸಲಹಬೇಕು. ಯಾವದೇ ಕಾರಣದಿಂದ ನನಗೆ ಈ ಮುಂದೆ ಆಶ್ರಯವನ್ನೀಯಲಾರದಿದ್ದರೂ ಮುಂಚಿತವಾಗಿಯೇ ತಿಳಿಸಬೇಕಾಗಿ ವಿನಂತಿ. ಇದಕ್ಕಿಂತ ಹೆಚ್ಚಿಗೇನು ನಾನು ತಮ್ಮ ಬಳಿಗೆ ಹೇಳಿಕೊಳ್ಳಲಿ?

—ಇತಿ ವ್ಯವಸ್ಥಾಪಕ.]

ಕಾನಡಾವೃತ್ತ.

ಮಿತಿ ಕ್ರಯ ಸಂ॥ ಆಶ್ವೀನ ಶು॥ ೫ ಮಿ, ಸೋಮವಾರ.

ಐಕ್ಯಸೈನ್ಯಘಟನೆ.

ನಾಲ್ಕು ಬದಿಗೆ ಹಿಂದೂ-ಮುಸಲ್ಮಾನರ ಕಲಹಪ್ರವೃತ್ತಿಯು ಹಬ್ಬಿರುವದು. ಹಿಂದೂಗಳಾಗಲೀ, ಮುಸಲ್ಮಾನರಾಗಲೀ ಸ್ವಧರ್ಮಪರಿಪಾಲನೆಗಾಗಿ ಎಂದು ಸಾರಿ, ಪರಸ್ಪರ ಬಡಿದಾಡಿಕೊಂಡು ದೇಶದಲ್ಲಿ ಅನರ್ಥಗಳನ್ನುಂಟುಮಾಡುತ್ತಿರುವರು. ವಾ ದ್ಯ ಘೋ ಷ ವ್ರೋ! ಮಹಮ್ಮದೀಯರಿಗೆ ನಿಷಿದ್ಧವಂತೆ! ವಾದ್ಯಘೋಷವನ್ನು ಕೇಳಿದೊಡನೆ ಮಹಮ್ಮದೀಯರಿಗೆ ಧರ್ಮಾಜ್ಞೆಯ ಉಲ್ಲಂಘನವಾದ ಮಮತೆ ತಲೆಗೇರಿ ಹಿಂದೂಗಳ ಮೇಲೆ ಸಾಗಿ ಹೋಗುತ್ತಾರೆ. ಸನಾತನಿಗಳಾದರೂ ಗೋವಧೆಯನ್ನು ತಪ್ಪಿಸಹೋಗಿ, ದೇಶಬಾಂಧವರಾದ ಮಹಮ್ಮದೀಯರನ್ನೇ ಕೊಲ್ಲುತ್ತಾರೆ ಹೀಗೆ ಪರಸ್ಪರ ಧರ್ಮಬಾಂಧವರ ಮೇಲೆ ಧರ್ಮದ ಹೆಸರಿನಲ್ಲಿ ಅತ್ಯಾಚಾರ ನಡೆಯುವ ನೋಟವು ಯಾವಾಗಲೂ ಅಸಹ್ಯವು. ದೇಶಹಿತಸಾಧಕರಿಗೆ ಇದೊಂದು ದೊಡ್ಡ ಆತಂಕವು. ಈ ಆತಂಕವನ್ನು ಪರಿಹರಿಸಿಕೊಳ್ಳುವದಕ್ಕಾಗಿ ವಿಚಾರಶೀಲರಾದ ಲೋಕನಾಯಕರು ಉಪಾಯಗಳನ್ನು ಕಲ್ಪಿಸುತ್ತಿರುವರು. ಈ ಸಮಯ ಬೆಂಗಳೂರಿನೊಳಗಿನ ಸ್ತ್ರೀಯರ ಶ್ರೀ ಶಾರದಾ ಮಂಡಳದಲ್ಲಿ ಬೇಗಂ ಮಹಮ್ಮದ ಜೈಹುದ್ದೀನ ಮಾಕ್ಕಯ ಎಂಬ ಮಹಮ್ಮದೀಯ ಸ್ತ್ರೀಯು ಪ್ರದರ್ಶಿಸಿದ ವಿಚಾರಗಳನ್ನು ದೇಶಬಾಂಧವರು ವಿಮರ್ಶಿಸತಕ್ಕದ್ದು.

ಹಿಂದೂ-ಮುಸಲ್ಮಾನರ ಐಕ್ಯಸಾಧನೆಗಾಗಿ ಪ್ರಯತ್ನ ಮಾಡುವದು ಪರಮ ಶ್ರೇಷ್ಠವಾದ ಪವಿತ್ರ ಕರ್ತವ್ಯವಾಗಿರುವದು. ಹಿಂದೂ-ಮುಸಲ್ಮಾನರು ಭಾರತೀಯ ಜನಾಂಗದ ಪ್ರಮುಖಾಂಗಗಳು. ಅವುಗಳಲ್ಲಿ ಪರಸ್ಪರ ದ್ವೇಷಬೆಳೆಸುವದಾಗಲೀ, ಬುದ್ಧಿಭೇದವನ್ನುಂಟು ಮಾಡುವದಾಗಲೀ ಅತ್ಯಂತ ನೀಚ ಕೆಲಸವು. ಪಾಪಮಯವಾದ ಆಚಾರವು ಹಿಂದೂ-ಮುಸಲ್ಮಾನರ ಐಕ್ಯೋಪಾಯದಿಂದ ಭರತಖಂಡಕ್ಕೆ ಉದ್ಧಾರವಾಗುವದು, ಇಡೀ ಮಾನವ ಕೋಟಿಗೂ ಉದ್ಧಾರವಾಗುವಂತಿದೆ. ಹಿಂದೂಗಳ ದೇವರೇ ಬೇರೆ; ಮುಸಲ್ಮಾನರ ದೇವರೇ ಬೇರೆ ಹಿಂದೂ ದೇವರಿಗೂ, ಮುಸಲ್ಮಾನರ ದೇವರಿಗೂ ಏನೊಂದೂ ಸಂಬಂಧವಿದ್ದಿಲ್ಲವಾದರೆ, ಹಿಂದೂ-ಮುಸಲ್ಮಾನರು ಧರ್ಮಾತ್ಮನ ಹೆಸರಿನಿಂದ ಪರಸ್ಪರ ಜಗಳಾಡುವದು ಸಹಜವಿದೆ, ಕ್ಷಮ್ಯವೂ ಇದೆ. ಆದರೆ, ಹೀಗೆ ಸ್ಥಿತಿಯಿದೆಯೇ? ಹಿಂದೂಗಳ ದೇವರೂ, ಮುಸಲ್ಮಾನರ ದೇವರೂ ಒಂದೇ' ಭೇದವೇನಿಲ್ಲ. ಆದರೂ, ವಾದ್ಯಘೋಷದಂಥ ಅಲ್ಪ ನೆವದ ಮೇಲೆ ಪರಮಾತ್ಮನ ಹೆಸರಿನಿಂದ ನಾವಿಬ್ಬರೂ ಜಗಳಾಡುತ್ತೇವೆ ಇದರಷ್ಟು ಅಧೋಗತಿಗೆ ಒಯ್ಯುವ ಸಾಧನ ವ್ಯಾವುದಿದೆ?

ಸೂಫೀ ಪಂಥದ ದೊಡ್ಡ ಸಾಧುಗಳು ಪರಮಾತ್ಮನನ್ನುದ್ದೇಶಿಸಿ ಹಾಡಿದ ಹಾಡುಗಳನ್ನು ಕೇಳಿರಿ. ಸನಾತನಿಯು ಪರಮಾತ್ಮನ ಪ್ರಾಪ್ತಿಗಾಗಿ ಯತ್ನ ಮಾಡಿದನು. ಸನಾತನಿಗೆ ಪರಮಾತ್ಮನು ಮೂರ್ತಿಯಲ್ಲಿ ಸಾಕ್ಷಾತ್ಕಾರ ಕೊಟ್ಟನು. ಪಾರ್ಶಿಯರು ಪರಮಾತ್ಮನ ಪ್ರಾಪ್ತಿಯನ್ನು ಅಗ್ನಿಯಲ್ಲಿ ಪಡೆದರು. ಪರಮಾತ್ಮನ ಮೇಲೆ ಶ್ರದ್ಧೆ ಇಲ್ಲದವರೂ ಕೂಡ ಸೃಷ್ಟಿದೇವಿಯನ್ನೇ ಪರಮಾತ್ಮನೆಂದು ಗ್ರಹಿಸಿ ಪೂಜಿಸುತ್ತಾರೆ. ಆದರೆ, ಪರಮಾತ್ಮನ ಅಸ್ತಿತ್ವವನ್ನು ಈ ಜನಕ ಯಾರೂ ಅಲ್ಲಗಳೆಯಲಿಲ್ಲ. ಸೂಫೀ ಸಾಧುಗಳ ವಚನದಂತೆ ಪರಮಾತ್ಮನು ಸರ್ವರಿಗೂ ಒಂದೇಯಾಗಿರಲು, ಒಂದೇ ಪರಮಾತ್ಮನಿಗಾಗಿ ಒಂದೇ ಪರಮಾತ್ಮನ ಹೆಸರನ್ನು ಹೇಳುತ್ತ ಭಿನ್ನ ಭಿನ್ನ ಧರ್ಮದವರು ಜಗಳಾಡುವದು ಮೂರ್ಖತನವಲ್ಲೇನು? ಇಸ್ಲಾಮ ಧರ್ಮದ ಸಾಧ್ಯವೇನೆಂದು ಬಲ್ಲಿರಾ? ಭೂತಲದಲ್ಲಿ ಶಾಂತತೆ-ಪ್ರಗತಿಗಳನ್ನು ಹಬ್ಬಿಸುವದಕ್ಕಾಗಿ ಇಸ್ಲಾಮ ಧರ್ಮವು ಕಲ್ಪಿಸೋಣಾಗಿದೆ. ಯುದ್ಧವು ಇಸ್ಲಾಮ ಧರ್ಮಕ್ಕೆಗ್ರಾಹ್ಯವಿಲ್ಲ. ಧರ್ಮಗಳ ಸಂಸ್ಥಾಪಕರೆಲ್ಲರೂ ದೇವದೂತರೆಂದು ಇಸ್ಲಾಮ ಧರ್ಮವು ಮನ್ನಿಸುತ್ತದೆ. ಮಾನವರೆಲ್ಲರೂ ಬಾಂಧವರು, ಪರಮಾತ್ಮನು ಸಮಸ್ತರಿಗೂ ತಂದೆಯು, ಎಂಬ ಭಾವನೆಯನ್ನು ಪ್ರತ್ಯಕ್ಷವಾಗಿ ಆಚಾರದಲ್ಲಿ ತಂದ ಧರ್ಮವು ಇಸ್ಲಾಮ ಧರ್ಮವೇ! ಸಮಸ್ತ ಮಾನವಕೋಟಿಯನ್ನು ತನ್ನ ಕಕ್ಷೆಯಲ್ಲಿ ಸೇರಿಸಿಕೊಂಡು ಬಂಧುಭಾವದಿಂದ ಎಣಿಸುವ ಧರ್ಮವು ಇಸ್ಲಾಮ ಧರ್ಮವೇ. ಇಡೀ ಮಾನವಕೋಟಿಯು ಈ ಧರ್ಮದ ಕಲ್ಪನೆಯಂತೆ ಒಂದೇ ಶರೀರವಿದೆ. ಎಲ್ಲ ಮಾನವರೂ ಈ ಶರೀರದ ಅಂಗಗಳು. ಒಂದು ಅಂಗಕ್ಕೆ ನೋವಾದರೆ, ಎಲ್ಲ ಅಂಗಗಳಿಗೂ ನೋವೆನಿಸುತ್ತದೆ, ಹೀಗೆ ವಿಚಾರಮಾಡಿದರೆ, ಈ ಪವಿತ್ರ ತತ್ವಗಳನ್ನು ಉಲ್ಲಂಘಿಸಿ ಭೂತಲದೊಳಗಿನ ಯಾವದೇ ಮುಸಲ್ಮಾನನು ಆಚರಿಸಿದರೆ, ಅದರಿಂದ ನಿಷ್ಠಾವಂತ ಸತ್ಯಶೀಲ ಮುಸಲ್ಮಾನರು ಅಪಮಾನವೆಂದೆಣಿಸುವರು. ಹಿಂದೂಗಳಾದರೂ ಶಾಸ್ತ್ರದಂತೆ ಇವೇ ತತ್ವಗಳನ್ನು ಅನುಸರಿಸಲು ಬದ್ಧರಿರುವರು.

ಬೇಗಂ ಮಹಮ್ಮದ ಜೈಹುದ್ದೀನ ಮಾಕ್ಕಯರವರು ಈ ಪ್ರಕಾರವಾಗಿ ಧರ್ಮತತ್ವಗಳನ್ನು ಸ್ಫುಟಮಾಡಿ, ಐಕ್ಯಸೈನ್ಯಘಟನೆಯ ಸ್ಥೂಲ ಸ್ವರೂಪವನ್ನು ನಿರ್ದೇಶಿಸಿದರು. ಹಿಂದೂ-ಮುಸಲ್ಮಾನರು ಸಂಘಟಿತರಾಗಿ ಈ ಅನಾಚಾರಗಳನ್ನು ಪರಿಹರಿಸಲುದ್ಯುಕ್ತರಾಗಬೇಕು. ಸ್ವಸಂರಕ್ಷಣಕ್ಕಾಗಿ ಸಂಘಟಿಸುವದು ಹೀನವು, ಇದರಿಂದ ಕ್ಷೇಮವಿಲ್ಲ. ಸ್ವಸಂರಕ್ಷಣಕ್ಕಾಗಿ ಸಂಘಟಿಸಿದರೆ ಪರರ ಮೇಲೆ ದಾಳಿ ಮಾಡಲು ಮಾನವನು ಉದ್ಯುಕ್ತನಾಗುತ್ತಾನೆ. ಪರಧರ್ಮದ ಮತಗಳನ್ನು ಆತನಿಂದ ಸಹಿಸಲು ಸಾಮರ್ಥ್ಯವಿರುವದಿಲ್ಲ. ಅಸಹಿಷ್ಣುತೆಯು ಬೆಳೆಯುತ್ತದೆ. ಹಾಗಾದರೆ, ನಮ್ಮ ಸಂಘಟನೆಯು ಯಾವ ವಿಚಾರದಿಂದ ಕೈಕೊಳ್ಳಬೇಕೆಂದು ತಿಳಿಯಿತೇ! ಎರಡೂ ಸಮಾಜದವರು ಸಂಘಟಿಸಿ ತಮ್ಮ ಸ್ವಂತ ಸಮಾಜದವರು ಸ್ವಧರ್ಮದ ತತ್ವಗಳನ್ನು ಉಲ್ಲಂಘಿಸಿ ಪರಧರ್ಮಗಳ ಮೇಲೆ ದಾಳಿಯಾಗದಂತೆ ಎಚ್ಚರಿಕೆಯನ್ನಿಡಬೇಕು. ಇದಕ್ಕಾಗಿ ಹಿಂದೂ-ಮುಸಲ್ಮಾನರ ಐಕ್ಯಸಂಘಟನೆಯೊಂದು ತಯಾರಿಸಲ್ಪಡಬೇಕು. ಹಿಂದೂ-ಮುಸಲ್ಮಾನ ಧರ್ಮದ ಸ್ತ್ರೀ-ಪುರುಷರು ಈ ಸೈನ್ಯದಲ್ಲಿ ಸೇರಿ, ಅನಾಚಾರ ಒದಗಿದ ಕೂಡಲೆ ಮೊಟ್ಟಮೊದಲು ಪರಧರ್ಮೀಯರಿಗೆ ಕಾಪಾಡಹೋಗಬೇಕು: ಮುಸಲ್ಮಾನರು ಹಿಂದೂ ಧರ್ಮದ, ಹಿಂದೂ ಧರ್ಮಬಾಂಧವರ

ದೇವಾಲಯಗಳ ಹಾಗು ಸ್ತ್ರೀಯರ ಪಾವಿತ್ರ್ಯ ರಕ್ಷಣಕ್ಕಾಗಿ ಕೂಡಲೆ ಓಡಬೇಕು. ಹಿಂದೂಗಳು ಮಸೀದಿ, ಮುಸಲ್ಮಾನರ ಸ್ತ್ರೀ ಮುಂತಾದವುಗಳ ರಕ್ಷಣಕ್ಕಾಗಿ ಓಡಿಹೋಗಿ ಸ್ವಧರ್ಮಬಾಂಧವರು ಸ್ವಧರ್ಮ ಆಜ್ಞೆಗಳನ್ನು ಉಲ್ಲಂಘಿಸಿ, ಪರಧರ್ಮೀಯರಿಗೆ ಪೀಡಿಸದಂತೆ ಜಾಗ್ರತೆ ಕೊಳ್ಳಬೇಕು. ಈ ಉಪಾಯಗಳಿಂದ ಹಿಂದೂ ಮುಸಲ್ಮಾನ ಧರ್ಮಬಾಂಧವರಲ್ಲಿ ಧರ್ಮಸಹಿಷ್ಣುತೆಯು ಬೆಳೆಯುವದು. ಪರಧರ್ಮದ ಬಾಂಧವರೊಡನೆ ಸ್ನೇಹಭಾವದಿಂದ ಉಳಕೊಳ್ಳಲು ಪ್ರವೃತ್ತಿಯಾಗುವದು.

ಈ ವಿಚಾರಗಳನ್ನೇ ಮಹಾತ್ಮರು ತಮ್ಮ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸುವಾಗ, ಇಂಥ ಸ್ನೇಹಘಟನೆಗೆ ದೇಶದೊಳಗಿನ ವಾತಾವರಣವು ಅನುಕೂಲವಿಲ್ಲವಾಗಿ ಅಭಿಪ್ರಾಯಪಟ್ಟಿರುವರು. ಅನುಕೂಲವಿಲ್ಲೆಂಬುದೇನೋ ನಿಜ. ಧರ್ಮದ ದುರಭಿಮಾನ, ಜಾತಿಯ ದುರಭಿಮಾನ ಮುಂತಾದ ದುರಭಿಮಾನಗಳಿಂದ ದೇಶದ ಸಮಗ್ರ ವಾತಾವರಣವು ಕಲುಷಿತವಾಗಿದೆಂಬ ಮಾತು ಯಾರೂ ಅಲ್ಲಗಳೆಯಲಾರರು. ಸಾರ್ವತ್ರಿಕ ಜಾಗೃತಿಯಾದಾಗ, ಜಾಗೃತಿಯ ಸಮಯದಲ್ಲಿ ಅತಿಕ್ರಮಗಳೂ ಒದಗುವದು ಸಾಹಜಿಕವಿದೆ. ಆದರೆ, ಅತಿಕ್ರಮದಿಂದ ಜಾತಿಗಾಗಲಿ, ಧರ್ಮಕ್ಕಾಗಲಿ ಪರಿಣಾಮದಲ್ಲಿ ಅನುಕೂಲವಲ್ಲೆಂಬ ಗ್ರಹಿಕೆಯನ್ನು ನಾವು ತಳೆಯಬೇಕು. ಜಾತಿಯ ದುರಭಿಮಾನವು ಮನೋದೌರ್ಬಲ್ಯದ ಸೂಚಕವು. ಅದನ್ನು ನಾವು ಪರಿಹರಿಸಿಕೊಂಡು ವಿಶಾಲ ಬುದ್ಧಿಯನ್ನು ತಳೆದು ಮುಂದಾದರೆ ಮಾತ್ರ, ನಮ್ಮ ಉದ್ಧಾರವಾಗುವ ಹಾಗಿದೆ. ಜಾತಿಯ ಅಭಿಮಾನವನ್ನು ಆದಷ್ಟು ತೊರೆದು ಔದಾರ್ಯಮನಸ್ಕರಾದರೆ, ನಮ್ಮಲ್ಲಿ ಐಕ್ಯವು ನೆಲೆಗೊಳ್ಳುವದು; ರಾಷ್ಟ್ರಕಾರ್ಯಕ್ಕೆ ಕಳೆಯೇರುವದು ದೇಶದಲ್ಲೆಲ್ಲ ಸಮೃದ್ಧಿಯೂ, ಶಾಂತತೆಯೂ ಉಂಟಾಗುವವು. ಬೇಗಂರವರ ವಿಚಾರಗಳು ಮನನೀಯವಿವೆ. ಅವರು ಹೇಳಿದಂತೆ ಪರಮಾತ್ಮನು ಒಬ್ಬನು; ನಾವೆಲ್ಲರೂ ಯಾವದೇ ಧರ್ಮಾಭಿಮಾನಿಗಳಾಗಿರಲಿ, ಆತನ ಕೃಪೆಯನ್ನೇ ಹಾರೈಸಿ ನಮ್ಮ ಪ್ರಪಂಚವನ್ನು ಸಾಗಿಸಬೇಕು. ಭಗವದ್ವಚನದಂತೆ, "ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮಚಾಖಿಲಮ್।" ಎಂಬ ಬುದ್ಧಿಯನ್ನೇ ಹಿಡಿದು ಸಮಸ್ತ ವ್ಯಾಪಾರಗಳಲ್ಲಿಯೂ ನಾವು ಪ್ರೇರಿತರಾಗಿದ್ದರೆ, ರಾಷ್ಟ್ರೋದ್ಧಾರವೂ, ಆತ್ಮೋದ್ಧಾರವೂ ಒಮ್ಮೆಲೇ ನೆರವೇರುವವು. ಅವುಗಳಿಗೆಲ್ಲ ಬಂಧುಭಾವವೇ ಮೂಲಾಧಾರವು. ಧರ್ಮಭೇದದಿಂದ ಮಾನವಕೋಟಿಯ ಬಂಧುಭಾವಕ್ಕೆ ಭೇದ ಬರುವದಿಲ್ಲ. ಇಷ್ಟು ಕಲ್ಪನೆಯನ್ನು ನಾವು ಕಲ್ಪಿಸಿದರೆ, ಹಿಂದೂ-ಮುಸಲ್ಮಾನರೊಳಗೆ ಐಕ್ಯವಾಗಲು ಪ್ರತ್ಯವಾಯವೇನಿದೆ? ಶ್ರೀ ಶಾರದಾ ಮಂಡಳದಲ್ಲಿ ಬೇಗಂರವರು ಈ ವಿಚಾರಗಳನ್ನರುಹಿ ಜ್ಞಾನಸೇವೆಯ ಬೀಜವನ್ನು ಬಿತ್ತಿರುವರೆಂಬ ಸಮಾಧಾನವೆನಿಸುತ್ತದೆ. ಈ ಬೀಜಕ್ಕೆ ಅನುಕೂಲವಾದ ಕ್ಷೇತ್ರವು ಪ್ರಾಪ್ತವಾಗಿ ಶೀಘ್ರವೇ ಐಕ್ಯವೃಕ್ಷವು ಬೆಳೆದು, ಸ್ವರಾಜ್ಯ ಫಲವು ಬೇಗನೇ ನಮ್ಮ ಕೈಸೇರಲೆಂದು ಬಯಸಿ, ನಮ್ಮ ಈ ವರ್ಷದ ಕೊನೆಯ ಸೇವೆಯನ್ನು ಇಂದಿಗೆ ಮುಗಿಸುವೆವು.

ಸ್ಫುಟ ಸೂಚನೆಗಳು.

೧. ಇತ್ತ ಇಲೆಕ್ಷನಿನ ಗಡಬಡಿಯು ವಿಶೇಷವಾಗಿದೆ. ಮತಸಂಗ್ರಹವನ್ನು ಯುಕ್ತಿ-ಪ್ರಯುಕ್ತಿಯಿಂದ ಮಾಡುವ ಉಪಾಯಗಳೆಲ್ಲ ಈ ಸಮಯ ಕೈಕೊಳ್ಳಲ್ಪಡುವವು. ದುರ್ದೈವದಿಂದ ನಮ್ಮಲ್ಲಿಯ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಗಡಬಡಿಯು ದೂರವಾಗಿರುವದು. ವರಿಷ್ಠ ಕಾಯಿದೆ ಕೌನ್ಸಿಲಿನ ಇಲೆಕ್ಷನು ಮಾತ್ರ ನಡೆಯುತಲಿದೆ. ಇಲೆಕ್ಷನಿನಲ್ಲಿ ಯಾರಿಗೆ ಮತ ಕೊಡಬೇಕೆಂಬ ಬಗ್ಗೆ ನಮ್ಮಲ್ಲಿಯ ಮತದಾರರಿಗೆ ದಾರಿ ತೋರಿಸಿಕೊಡಬೇಕಾಗಿಲ್ಲ. ಕಾಯಿದೆ ಕೌನ್ಸಿಲಿನಲ್ಲಿ ರಾಷ್ಟ್ರಾಭಿಮಾನವನ್ನು ಕಾಯ್ದು ರಾಷ್ಟ್ರಧೋರಣವನ್ನು ಕೃತಿಯಲ್ಲಿ ರೂಪಾಂತರಿಸಲು ಯತ್ನಿಸುವವರು ಮಾತ್ರ, ಮತಗಳನ್ನು ಕೊಳ್ಳಲು ಪಾತ್ರರಾಗಿದ್ದಾರೆ. ಮತಗಳ ಯಾಚನೆಗಾಗಿ ನಮ್ಮಲ್ಲಿಗೆ ಯಾರೂ ಬಂದಿಲ್ಲವೆಂದು ನಾವು ಬೇಸರಪಡುವ ಕಾರಣವಿಲ್ಲ. ಸಾರಾಸಾರವಿಚಾರ ಮಾಡಿ ಮತ ಕೊಡುವ ಕೆಲಸವು ಮತದಾರರದ್ದಿದೆ. ಕೌನ್ಸಿಲಿನಲ್ಲಿ ಹೋಗಿ ರಾಷ್ಟ್ರಪ್ರತಿನಿಧಿಗಳಿಗೆ ವ್ಯಕ್ತಿಶಃ ಯಾವದೇ ಕಾರ್ಯವನ್ನು ಮಾಡಲಿಕ್ಕೆ ಸಾಧ್ಯವಿಲ್ಲ; ಪ್ರತಿನಿಧಿಗಳ ಧ್ಯೇಯವೂ ಹಾಗಿರುವದಿಲ್ಲ. ರಾಷ್ಟ್ರೀಯ ಸಭೆಯ ಕಾರ್ಯಕಾರೀ ಮಂಡಳದವರು ನಿಶ್ಚೈಸಿದ ಧೋರಣದಂತೆ ಎಲ್ಲರೂ ನಡೆಯಲಿಕ್ಕೆ ಬದ್ಧರೇ ಹೊರತು, ವಿಶಿಷ್ಟ ಮತದಾರರ ವರ್ಗದ ಹಿತಾಹಿತಗಳನ್ನು ಮಾಡಲು, ಪ್ರತಿನಿಧಿಗಳು ಹೋಗುವದಿಲ್ಲ. ಇಂಥ ಪ್ರಸಕ್ತಿಯಲ್ಲಿ ಶ್ರೀ ಬೆಳವಿಯವರು ಕೌನ್ಸಿಲಿಗೆ ಹೋಗಿ ಏನು ಮಾಡಿದರೆಂದು ಪ್ರಶ್ನಿಸುವದು ಬರೇ ಹುಡುಗಾಟಿಕೆಯು. ರಾಷ್ಟ್ರಧೋರಣವನ್ನು ಮನ್ನಿಸದಿದ್ದವರು ಈ ಪ್ರಶ್ನೆಯನ್ನೆತ್ತಿ ಶ್ರೀ ಬೆಳವಿಯವರಿಗೆ ನಿಂದಿಸಿದರೆ, ಅದು ಕ್ಷಮ್ಯವು; ನಿಂದಿಸುವದು ಸುಸಂಗತವು. ಆದರೆ, ರಾಷ್ಟ್ರೀಯ ಧೋರಣವನ್ನು ಮನ್ನಿಸುವವರು, ರಾಷ್ಟ್ರೀಯರೆಂದು ಹೇಳಿಸಿಕೊಳ್ಳಲು ಅಭಿಮಾನ ಪಡೆಯುವವರು ಈ ಪ್ರಶ್ನೆಯನ್ನೆತ್ತಿ ಚರ್ಚಿಸುವದೂ, ಅವರ ಅಂಬೋಣವನ್ನು ಕೇಳಿಕೊಳ್ಳಬಯಸುವದೂ ವಿಚಿತ್ರ ಸಂಗತಿಯು. ನಮ್ಮ 'ಧುರೀಣ'ನು ಈ ಕುರಿತು ದೊಡ್ಡದೊಂದು ಆಕ್ಷೇಪ ಕೊಂಡದ್ದರಿಂದ ಇಷ್ಟು ಪ್ರಸ್ತಾಪ ಮಾಡಬೇಕಾಯಿತು. ಶ್ರೀ ಬೆಳವಿಯವರು ರಾಷ್ಟ್ರೀಯ ಸಭೆಯ ಆಜ್ಞೆಯನ್ನು ಶಿರಸಾ ಮನ್ನಿಸಿಕೊಂಡು ಕೌನ್ಸಿಲ ಪ್ರವೇಶಂಗೈದರು, ಆಜ್ಞಾನುರೋಧವಾಗಿ ಅವರು ನಡಕೊಂಡಿದ್ದಾರೆ. ಈಗಿನ ಉಮೇದವಾರರಲ್ಲಿಯೂ ರಾಷ್ಟ್ರೀಯ ಸಭೆಯ ಪಕ್ಷದಿಂದ ನಿಂತ ಉಮೇದವಾರರು ಅವರೊಬ್ಬರೇ. ರಾಷ್ಟ್ರಧೋರಣವನ್ನು ಮನ್ನಿಸುವ ಮತದಾರರೆಲ್ಲರೂ ಅವರಿಗೆ ಮತ ಕೊಡಲು ಬದ್ಧರಿರುವರು. ಶ್ರೀ ಬೆಳವಿಯವರು ನಮ್ಮಲ್ಲಿಗೆ ಬರಲಿಲ್ಲವೆಂದು ಬೇಸರಪಡುವ ಕಾರಣವಿಲ್ಲ. ಶ್ರೀ ಬೆಳವಿಯವರಿಗೆ ಮತಕೊಟ್ಟು ಉಪಕಾರ ಮಾಡುತ್ತೇವೆಂಬ ಭಾವನೆಯು ನಮ್ಮಲ್ಲಿರಲಾಗದು. ಪ್ರತಿನಿಧಿಗಳಿಗೆ ಇಲೆಕ್ಷನ ಸಮಯ ಎಲ್ಲ ಕಡೆಗಳಲ್ಲಿಯೂ ಅಡ್ಡಾಡಲು ಅನುಕೂಲವಿರುತ್ತದೆಂದು ನಾವು ತಿಳಿಯಲಾಗದು. ಅನುಕೂಲವಿದ್ದರೆ, ಶ್ರೀ ಬೆಳವಿಯವರು ನಮ್ಮ ಜಿಲ್ಲೆಯಲ್ಲಿ ಬಂದು ಹೋಗಬೇಕೆಂಬ ಪ್ರೀತಿಯು ನಮಗುಂಟು. ಈ ಯೋಜನೆಯಿಂದ ಮತದಾರರಿಗೆ ಮೂರು ವರ್ಷಗಳಿಗೊಮ್ಮೆ ಜಾಗೃತಿ ಮಾಡಿದ ಶ್ರೇಯಸ್ಸು ಪ್ರಾಪ್ತವಾಗುತ್ತದೆ. ಶ್ರೀ ಬೆಳವಿಯವರು ಈ ಯೋಜನೆಯ ವಿಚಾರ ಮಾಡಬೇಕು.

ದಸರೆಯ ವಾರ್ಷಿಕ ರಜೆ.

೧೧ನೇ ವರ್ಷಾರಂಭ.

ಮೊದಲನೇ ಸಂಚಿಕೆ

ತಾರೀಖು ೨೫ನೇ ಸೋಮವಾರಕ್ಕೆ.

೨. ಈ ಸಂದರ್ಭದಲ್ಲಿ ರಾಷ್ಟ್ರೀಯ ಸಭೆಯ ಅಭಿಮಾನಿಗಳಾಗಿದ್ದ ಲೋಕಮಾನ್ಯರ ವಚನವನ್ನೊಂದು ವಾಚಕರಿಗೆ ಅರ್ಪಿಸುವೆವು. ಯಾರಿಗೆ ಮತದಾರರು ಮತ ಕೊಡಬೇಕು? ಎಂಬುದನ್ನು ಹೇಳುವಾಗ ಲೋಕಮಾನ್ಯರು ನುಡಿಯುವದೇನೆಂದರೆ: "ರಾಷ್ಟ್ರೀಯ ಸಭೆಯ ಧೋರಣವನ್ನು ಮನ್ನಿಸುವವರಲ್ಲಿ ಹೆಚ್ಚು ಬುದ್ಧಿವಂತರಿದ್ದವರನ್ನು ನೀವು ಆರಿಸಿ ಕಳುಹಿರಿ. ರಾಷ್ಟ್ರೀಯ ಸಭೆಯ ಧೋರಣವನ್ನು ಮನ್ನಿಸುವವರಲ್ಲಿ ಹೆಚ್ಚು ಶೀಲವಂತರನ್ನು ನೀವು ಆರಿಸಿ ಕಳುಹಿರಿ. ಸಮಸ್ತ ಹಿಂದೀ ರಾಷ್ಟ್ರದ ಕಲ್ಯಾಣೋಪಾಯಗಳನ್ನು ನಿರ್ಧರಿಸುವ ಕೆಲಸವು ರಾಷ್ಟ್ರೀಯ ಸಭೆಯದಾಗಿರುತ್ತದೆ. ಆ ಧೋರಣವನ್ನು ಮನ್ನಿಸದಿದ್ದವರ ಕಡೆಯಿಂದ ಹಿಂದೀ ರಾಷ್ಟ್ರದ ಕಲ್ಯಾಣವಾಗದೆಂದು ರಾಷ್ಟ್ರೀಯ ಸಭೆಯ ಮತವಿದೆ. ಹಿಂದೀ ರಾಷ್ಟ್ರದ ಕಲ್ಯಾಣ ಮಾಡಲು ಸಾಮರ್ಥ್ಯವಿಲ್ಲದವನು ಬುದ್ಧಿವಂತನಿದ್ದರೇನು? ರೂಪವಂತನಿದ್ದರೇನು? ತಪಸ್ವಿಯಾಗಿದ್ದರೇನು? ಆತನಿಗೆ ರಾಜಕಾರಣಕ್ಕಾಗಿ ನೇಮಿಸಿ ಫಲವೇನು? ರಾಜಕಾರಣದಲ್ಲಿ ನಮ್ಮ ಕಲ್ಯಾಣ ಮಾಡುವ ಶಕ್ತಿ ಬೇಕು. ಶಕ್ತಿಯು ಇದೆಯೋ, ಇಲ್ಲವೋ? ಎಂಬುದನ್ನು ತಿಳಕೊಳ್ಳುವ ಒರೆಗಲ್ಲು ರಾಷ್ಟ್ರೀಯ ಸಭೆಯ ಮಾನ್ಯತೆಯು. ಈ ಪ್ರಶ್ನೆಯು ಧೋರಣದ್ದಿದೆ. ವ್ಯಕ್ತಿಯದಲ್ಲ." ಲೋಕಮಾನ್ಯರು ಮತದಾರರಿಗೊಂದು ಒರೆಗಲ್ಲನ್ನು ಕೊಟ್ಟಿರುವರು. ಈ ಒರೆಗಲ್ಲಿಗೆ ಹಚ್ಚಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮತದಾರರು ಮತಗಳನ್ನು ಕೊಡಬಹುದು.

೩. ಕಾಲವು ಅನುಕೂಲವಾದರೆ, ಕೇಡಿನಿಂದಲೂ ಒಳಿತು ಸಂಭವಿಸುತ್ತದೆಂಬ ಮಾತೇನು ಸುಳ್ಳಲ್ಲ. ಅಮೃತಸರದ ಒಂದು ಕೋರ್ಟಿನಲ್ಲಿ ನಡೆದ ಒಂದು ಪ್ರಕಾರವು ಈ ಸಿದ್ಧಾಂತದ ಒಂದು ಉದಾಹರಣೆಯಾಗಿದೆ. ಒಬ್ಬ ಕಳ್ಳನು ಉಗಿಬಂಡಿಯಲ್ಲಿ ಪ್ರಯಾಣ ಮಾಡುವಾಗ ಒಬ್ಬ ಪ್ರಯಾಣಿಕನ ಕಿಸೆಯೊಳಗಿಂದ ನಾಲ್ಕು ರೂಪಾಯಿಗಳ ಕಳುವು ಮಾಡಿದನು. ಕಳ್ಳನು ಅನೇಕಾವರ್ತಿ ಸೆರೆಮನೆಯನ್ನು ನೋಡಿದ

ಶ್ರಾಣೆಯು. ಅತನ ಚರಿತ್ರೆಯನ್ನು ನ್ಯಾಯಮೂರ್ತಿಗಳು ತಿಳಿದೊಡನೆ ಅತನಿಗೆ ಜನ್ಮಟಾಪು ಶಿಕ್ಷೆಯನ್ನು ವಿಧಿಸಿದರು. ಇದನ್ನು ಕೇಳಿ, ಅಮೃತಸರ, ಲಾಹೋರ ಮುಂತಾದ ವೃತ್ತಪತ್ರಗಳಲ್ಲಿ ದೊಡ್ಡದೊಂದು ಕೋಲಾಹಲ! ನಾಲ್ಕು ರೂಪಾಯಿಗಳಿಗಾಗಿ ಜನ್ಮಟಾಪು ಶಿಕ್ಷೆಯು ಬಂದಿವಾಸವೇನು? ಎಲ್ಲಿಯ ನ್ಯಾಯವಿದು? ಎಂದು ವೃತ್ತಪತ್ರಿಕಾಕರ್ತರೆಲ್ಲ ದೊಡ್ಡದೊಂದು ಗಲಭೆಯನ್ನೇ ಎಬ್ಬಿಸಿಬಿಟ್ಟರು. ಆದರೆ, ಸ್ವತಃ ಕಳ್ಳನು ಆನಂದಭರಿತನಾಗಿದ್ದನು. ಜನ್ಮಟಾಪು ಶಿಕ್ಷೆಯಾದದ್ದನ್ನು ಕೇಳಿ, ಅಪರಾಧಿಗೆ ದೊಡ್ಡದೊಂದು ಚಿಂತೆಯು ದೂರವಾದಂತಾಯಿತು. ಭಯಂಕರವಾದ ಶಸ್ತ್ರವನ್ನು ನ್ಯಾಯಮೂರ್ತಿಗಳು ಅಪರಾಧಿಯ ಮೇಲೆ ಎಸೆದು ಕಳುವು ಯಾರೂ ಇನ್ನು ಮುಂದೆ ಮಾಡಲಾಗದಂತೆ ಭೀತಿಯನ್ನು ಹುಟ್ಟಿಸಬೇಕೆಂದು ಕಾಂಕ್ಷಿಸಿ, ಶಿಕ್ಷೆ ಕೊಟ್ಟ ಬಳಿಕ, ಅಪರಾಧಿಯು ನುಡಿದದ್ದೇನೆಂದರೆ. “ ಒಳ್ಳೇ ಆನಂದದ ಸಂಗತಿಯಿದು ಸಾಯುವ ವರೆಗೆ ನನಗೀಗ ಪ್ರಪಂಚದ ಚಿಂತೆಯಿಲ್ಲ. ನಾನು ಕ್ಷಯ ರೋಗಿ. ಇದೇ ಶಿಕ್ಷೆ ಸಿಗಬೇಕೆಂದು ನಾನು ಈ ಕಳವು ಮಾಡಿದ್ದೆ. ಆದರೆ, ಇಷ್ಟು ಶಿಕ್ಷೆ ಶಿಕ್ಕೀತೆ ದು ನನ್ನ ಕಲ್ಪನೆ ಇದ್ದಿಲ್ಲ. ನನಗೆ ಬೇಕಾದಷ್ಟು ಹಿಂದು ಕಣ್ಣು, ಪರಮಾತ್ಮನೋ ದಯಾಳುವಾಗಿರುವ ನ್ಯಾಯಶಾಸನವೂ ನನಗೆ ಎರಡು ಕಣ್ಣುಗಳನ್ನು ಕೊಟ್ಟು ಅನುಗ್ರಹಿಸಿದೆ. ಈ ಕಳುವಿನಿಂದ ಕೆಲವು ದಿವಸಗಳ ವರೆಗೆ ನನಗೆ ಹೊಟ್ಟೆತುಂಬ ಅನ್ನ ಹಾಗು ರೋಗನಿವಾರಕ ಔಷಧವು ದೊರೆಕೀತೆಂದು ನನ್ನ ಅಂದಾಜಿತ್ತು. ಆದರೆ, ನ್ಯಾಯಮೂರ್ತಿಗಳು ಜನ್ಮಟಾಪು ಶಿಕ್ಷೆಯನ್ನು ಕೊಟ್ಟು ಇಡೀ ಜನ್ಮದ ಚಿಂತೆಯನ್ನೇ ಹೋಗಲಾಡಿಸಿರುವರು. ಈಗ ಸಾಯುವ ವರೆಗೆ ಉಚಿತವಾಗಿ ನನ್ನ ಔಷಧೋಪಚಾರವಾಗುವದು ನಿಯಮದಂತೆ ಆಹಾರವೂ ಸಿಗುವದು. ” ಇದನ್ನು ಕೇಳಿ ನ್ಯಾಯಮೂರ್ತಿಗಳು ತಣ್ಣಗಾಗಿರಬೇಕು. ಅತಿ ಅಪಕಾರ ಮಾಡುವ ಹವ್ಯಾಸಕ್ಕೆ ಬಲಿಬಿದ್ದು, ಅತಿ ಉಪಕಾರ ಮಾಡಿ ನ್ಯಾಯಮೂರ್ತಿಗಳು ನಗೆಗೀಡಾದರು. ‘ಅತಿ ಸರ್ವತ್ರ ವರ್ಜಯೇತ್’ ಎಂದು ಹೇಳುವ ಕಾರಣವು ಇದೇ. ಕ್ಷಯ ರೋಗಿಯು ಅತಿ ನಿಷ್ಠುರ ನ್ಯಾಯಮೂರ್ತಿಗಳಿಗೆ ಅಹಿಂಸೆಯಿಂದಲೇ ದಂಡಿಸಿರುವನೆಂದು ಹೇಳಬಹುದು. ವೃತ್ತಪತ್ರಗಳ ಟೀಕೆಗಿಂತ ಅಪರಾಧಿಯ ಟೀಕೆಯು ಹೆಚ್ಚು ಫಲದಾಯಕವಿದೆ. ಸಿಟ್ಟಿಗೆ ಉದಾಸೀನವೇ ಪಥ್ಯ. ಮುಕ್ತಿ ಮುಂದಾಗಿ ಸಿಟ್ಟನ್ನು ಸತ್ಕಾರದಿಂದ ಬರಮಾಡಿ ಕೊಂಡರೆ ಸಿಟ್ಟು ಶೀಘ್ರವೇ ಇಳಿದು ಮನುಷ್ಯನು ಸಮಾಧಾನ ಪಡೆಯುತ್ತಾನೆ. ಕಾಲನ ಲೀಲೆ ಎಂಬುದು ಇದೇ.

ಸ್ಥಾನಿಕ ವೃತ್ತಾಂತ.

ಕುಮಟಾ— ಛಳಿ ಬೀಳುತ್ತದೆ. ಮೋಡ ಕವಿದು ನಿಂತಿತ್ತದೆ. ೯ಬಜೆ ಬೆಳಿಗ್ಗೆ ಕೊಣ್ಣಿಲ್ಲಲು ತಯಾರಾಯಿತು. ಇಳಿ ಹೊಯ್ಯುತ್ತದೇನೆಂದು ಒಕ್ಕಲಿಗರು ಭೀತಿಗೊಂಡಿರುವರು. ಗೋಕರ್ಣ ಅತ್ತಕಡೆಯಲ್ಲಿ ದನಗಳ ಉಪದ್ರವವು ವಿಶೇಷವಾಗಿ ಅನೇಕ ದನಗಳು ನಿಧನ ಹೊಂದಿದವು. ಒಕ್ಕಲಿಗರೆಲ್ಲರೂ ಮರಮರನೆ ಮರುಗುತ್ತಿರುವರು. ಅಡಿಕೆ ಬರಹತ್ತಿದೆ. ದರವು ಕಡಿಮೆ.

ನವರಾತ್ರಿಯು ಉತ್ಸಹಗಳ ಪ್ರೀತ್ಯರ್ಥ ಇಲ್ಲಿಯ ದೇವಸ್ಥಾನಗಳಲ್ಲಿ ಎಂದಿನಂತೆ ಕೀರ್ತನೆಗಳು ನಡೆಯುತ್ತಿವೆ ಶುಕ್ಲಪಕ್ಷದಲ್ಲಿ ಮುನಿಸಿಪಾಲಿಟಿಯವರು ದೀಪಗಳನ್ನು ಹಚ್ಚುವ ರೂಢಿಯಿತ್ತು. ಪಂಚಮಿ ವರೆಗೆ ಮಾತ್ರ ಈ ತಿಂಗಳಲ್ಲಿ ಹಚ್ಚುವ ರೂಢಿಯಿದೆ. ಹೆಂಗಸರೂ, ಹುಡುಗರೂ ನವರಾತ್ರಿಯ ಕೀರ್ತನ ಉತ್ಸಹಗಳಿಗೆ ಹೋಗಿ-ಬರುತ್ತಾರಾದ್ದರಿಂದ ದಶಮಿಯ ವರೆಗೆ ಮುನಿಸಿಪಾಲಿಟಿಯವರು ದೀಪಗಳನ್ನು ಹಚ್ಚುವದು ಯುಕ್ತವೆಂದು ಒಬ್ಬರು ತಿಳಿಸುತ್ತಾರೆ.

ಇಲ್ಲಿಯ ರಾ| ರಾಮರಾವ ಸುಬ್ರಾಯ ಕಾಮತ ಇವರು ಡಿಸ್ಟ್ರಿಕ್ಟ ಕೋರ್ಟ ವಕೀಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ಸಾಭಾರ ಸ್ವೀಕಾರ.

ಲೋಕರಹಸ್ಯ— ಸಪ್ಟಂಬರ ಸಂಚಿಕೆ. ಸಂಪಾದಕ ಶ್ರೀ| ಕೇ. ನಾರಾಯಣರಾವ, ವೀರರಾಜೇಂದ್ರ ಪೇಟೆ ಕೊಡಗು. ವಾರ್ಷಿಕ ಚಂದಾ ಅ. ವೆ. ಸೇರಿ ರೂ. ೩||.

ಸುಬೋಧ—ಸಚಿತ್ರ ಮಾಸ ಪತ್ರಿಕೆ. ಸಂಪಾದಕ ಯಂ ರಾಮರಾವ ಸುಬೋಧ ಮುದ್ರಣಾಲಯ ಬೆಂಗಳೂರ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೧||

ರಂಗಭೂಮಿ— ಸಚಿತ್ರ ಮಾಸ ಪತ್ರಿಕೆ ಸಂಪಾದಕ-ಶ್ರೀ| ದ. ಕೃ ಭಾರದ್ವಾಜ, ಬೆಂಗಳೂರ ಸಿಟಿ. ವಾ. ವ. ಅಂಚೆ ವೆಚ್ಚದೊಡನೆ ರೂ ೩||

ಕಾರವಾರ— ಹಳಿಯಾಳದ ಮೌಲವಿಯವರು ಅಲ್ಲಿಯ ಅಬ್ದುಲ್ ಕರಿಮ ಎಂಬವರ ಮೇಲೆ ಮಾನನಷ್ಟದ ಫಿರ್ಯಾದನ್ನು ತಂದಿದ್ದರು. ಹಳಿಯಾಳದಲ್ಲಿ ಅಬ್ದುಲ್‌ಕರಿಮರು ಎರಡು ಹಸ್ತಪತ್ರಿಕೆಗಳನ್ನು ಪ್ರಕಟಿಸಿ ಮಾನನಷ್ಟ ಮಾಡಿದರೆಂದು ಮೌಲವಿಯವರ ಫಿರ್ಯಾದಿತ್ತು ಅದು ಮೊನ್ನೆ ಶನಿವಾರಕ್ಕೆ ‘ಸಂಧಾನವಾಗಿ ನಿಕಾಲೆಯಾಯಿತು. ಅಬ್ದುಲ್ ಕರೀಮರು ಹಸ್ತಪತ್ರಿಕೆಗಳೊಳಗಿನ ವಿಧಾನಗಳನ್ನು ಹಿಂದೆ ಪಡೆದುಕೊಂಡರು ಮೌ| ಯವರು ಫಿರ್ಯಾದನ್ನು ಹಿಂತೆಗೆದುಕೊಂಡರು.

ಚಿಗಳ್ಳಿಯ ಸಹಕಾರಿ ಸಂಘದ ಕಾರ್ಯದರ್ಶಿಗಳ ಮೇಲೆ ನಡೆದ ಖಟ್ಲೆಯಲ್ಲಿ ಕಾರ್ಯದರ್ಶಿಗಳಿಗೆ ಶಿಕ್ಷೆಯಾಗಿತ್ತು. ಖಟ್ಲೆಯ ನುನಾವಣೆಯ ಕ್ರಮವು ಕಾಯ್ದೆಯಂತೆ ನಡೆಯಲಿಲ್ಲೆಂದು ಸೆಶನ್ಸ ಜಡ್ಜರು ಅಭಿಪ್ರಾಯಪಟ್ಟು, ಕಾರ್ಯದರ್ಶಿಗಳನ್ನು ಬಿಡುಗಡೆ ಮಾಡಿದರು. ಆರೋಪಿಗೆ ಈಗ ಒದಗಿದ ಕಷ್ಟಗಳನ್ನು ಲಕ್ಷಕ್ಕೆ ತಂದು ಸೆಶನ್ಸ ಜಡ್ಜರು ಪುನಃ ವಿಚಾರಣೆಯಾಗುವದು ಅವಶ್ಯವಿಲ್ಲೆಂದು ತೀರ್ಮಾನಿಸಿರುವರು.

ವೃತ್ತಸಾರ.

—ವಿಲಾಯತಿಯಲ್ಲಿ ಗೋಪಾಲನವು ಅತ್ಯಂತ ವ್ಯವಸ್ಥಿತವಾಗಿ ನಡೆಯುವದರಿಂದ ಅಲ್ಲಿಯ ಆಕಳುಗಳು ೪೦-೫೦ ಶೇರು ಹಾಲು ಹಿಂಡುತ್ತವೆ. ಒಂದೇ ಸವನೆ ಕೂತು ಹಾಲು ಕರೆದು ಕೈನೋಯು ಬರುವದರಿಂದ, ಅಲ್ಲಿ ಹಾಲು ಕರೆಯುವದಕ್ಕಾಗಿ ವಿದ್ಯುಚ್ಛಕ್ತಿಯ ಯಂತ್ರಗಳು ಯೋಜಿಸಲ್ಪಟ್ಟಿವೆ. ಎಂಥೆಂಥ ವ್ಯಾಪಾರವಿದು!

—ಸಾಂಗಲಿ ಸಂಸ್ಥಾನಿಕರು ಪ್ರಕಟನೆಯನ್ನು ಹೊರಡಿಸಿ ವಿದ್ಯಾರ್ಥಿಗಳೆಲ್ಲರೂ ಸಾಷ್ಟಾಂಗ ನಮಸ್ಕಾರಗಳನ್ನು ಹಾಕಬೇಕೆಂದು ಅಪ್ಪಣೆ ಕೊಟ್ಟಿರುವರು!

— ‘ಮುಂಬಯಿ ಕ್ರಾನಿಕಲ್’ ಮುದ್ರಣಾಲಯ ಹಾಗು ‘ಮುಂಬಯಿ ಕ್ರಾನಿಕಲ್’ ಪತ್ರಿಕೆಗಳು ಲಿಲಾಂವಾದವು. ಅವನ್ನು ಮುಂಬಯಿಯ ದೊಡ್ಡ ಶ್ರೀಮಂತ ಲಕ್ಷ್ಮೀದಾಸ ರಾವಜಿ ರಾಕಸೀಯವರು ೧,೪೦,೦೦೦ ರೂಪಾಯಿಗಳಿಗೆ ಕೊಂಡುಕೊಂಡರು ಪತ್ರವು ಶ್ರೀಮಂತರ ಮಾಲ್ಕಿಗೆ ಸೇರಿದಾಗ್ಯೂ, ಪತ್ರಿಕೆಯ ಧೋರಣದಲ್ಲಿ ಅಂತರ ಬೀಳಲಿಕ್ಕಿಲ್ಲೆಂದು ಸಂಪಾದಕರು ಬರೆಯುತ್ತಾರೆ.

— ಪಂಜಾಬ ಪ್ರಾಂತದ ಅಟೋಕ ಜಿಲ್ಲೆಯಲ್ಲಿ ಸಪ್ಟಂಬರದಲ್ಲಿ ಅತಿವೃಷ್ಟಿಯಾಗಿ ೧೦೦೦ಕ್ಕೆ ಮಿಕ್ಕಿ ಮನೆಗಳು ಬಿದ್ದವು ಪ್ರಜೆಗಳ ಗೋಳು!

— ಶನಿವಾರ ತಾರೀಖು ೬ನೇಗ ಹುಬ್ಬಳ್ಳಿಯಲ್ಲಿ ಒಂದು ತಾಸಿನ ವರೇಗೆ ದೊಡ್ಡ ಮಳೆಯಾಯಿತು. ಊರೆಲ್ಲ ನೀರೇ ನೀರು. ನೀರಿನ ಪ್ರವಾಹದಲ್ಲಿ ಒಬ್ಬ ಮುದುಕಿ ಹಾಗು ಒಬ್ಬ ಹುಡುಗಿ ಇಬ್ಬರು ಸಿಕ್ಕಬಿದ್ದರು ಒಂದು ಎತ್ತು ಬಳಕುಹೋಯಿತು!

— ತಂಜಾವರದ ಅರಸು ಮನೆತನದ ಶ್ರೀ ಶಿವಾಜಿ ರಾಜಾಸಾಹೇಬರವರು ನಾಲ್ಕು ಮೈಲು ದೂರವಿರುವ ಶ್ರೀ ಮಾರಿಯಮ್ಮ ದೇವಸ್ಥಾನಕ್ಕೆ ಕಾಲು ನಡೆಯಿಂದ ಹೋಗಿ ಶ್ರೀ ದೇವಿಗೆ ಅಭಿಷೇಕ-ಪೂಜೆ ಮುಂತಾದ್ದನ್ನು ನಡಿಸಿದರು. ಬಡಬಗ್ಗರಿಗೆ ಅನ್ನದಾನ ಮಾಡಿದರು.

— ಪುಣೆಯಲ್ಲಿ ಒಂದು ಭಯಂಕರ ಕಳುವು. ಜೈನ ಬಸ್ತಿಯ ಬಾಗಿಲು ಬೀಗಗಳನ್ನು ಮುರಿದು ಕಳ್ಳರು ಗರ್ಭಗೃಹವನ್ನು ಪ್ರವೇಶಿಸಿ ೧ ಲಕ್ಷ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳನ್ನು ಅಪಹರಿಸಿದರು. ಜಿನೇಶ್ವರನ ತಲೆಯ ಮೇಲಿರುವ ರತ್ನಖಚಿತವಾದ ಕಿರೀಟವನ್ನು ಕದ್ದೊಯ್ದರು.

— ಬಿಹಾರದೊಳಗಣ ಕೆಲವು ದೊಡ್ಡ ದೊಡ್ಡ ಮುಸಲ್ಮಾನರು ಹಿಂದೂ ಮಹಾಸಭೆಗೆ ಸೇರಿ ೨೫೦೦ ರಂತೆ ೫ ವರ್ಷಗಳ ತನಕ ಕೊಡಲೊಪ್ಪಿರುವರು.

— ಜರ್ಮನಿಯ ಒಬ್ಬ ವೈದ್ಯಶಾಸ್ತ್ರಜ್ಞರು ಛಳಿಜ್ವರದ ಮೇಲೆ ರಾಮಬಾಣ ಔಷಧವನ್ನು ಶೋಧಿಸಿರುವರು. ಕ್ವಿನೀನಿಗಿಂತ ಈ ಮದ್ದು ಶ್ರೇಷ್ಠವಾದದ್ದಂತೆ! ಇದರ ಹೆಸರು ಪ್ಲೆಸ್ಮೊಚಿನ್ ಪ್ಲೆಸ್ಮೊಚಿನ್ನಿನಿಂದ ಛಳಿ ಜ್ವರದ ಬೀಜವು ಕೂಡ ನಷ್ಟವಾಗುತ್ತದಂತೆ! ಮದ್ದುಗಳ ಶೋಧ ಹೆಚ್ಚಿದ ಹಾಗೆ ರೋಗ ಸಂಖ್ಯೆಯೂ ಬೆಳೆಯುತ್ತಿದೆ.

— ಶೃಂಗೇರಿಯ ‘ಶ್ರೀ ಶಾರದಾ’ ಎಂಬ ಸಂಸ್ಕೃತ ಪತ್ರಿಕೆಯ ಚಾಲಕರಾದ ವೈದ್ಯ ರಂಗಭಟ್ಟರವರು ಅಕಾಲವಾಗಿ ತೀರಿಕೊಂಡರು. ರಂಗಭಟ್ಟರು ಶ್ರೇಷ್ಠ ತರಗತಿಯ ವೈದ್ಯರಿದ್ದರು. ಆಯುರ್ವೇದ ಪ್ರಸಾರಕ್ಕಾಗಿಯೇ ಅವರು ‘ಶ್ರೀ ಶಾರದಾ’ ಪತ್ರಿಕೆಯನ್ನು ಹೊರಡಿಸಿದ್ದರು. ಕರ್ನಾಟಕಕ್ಕೆ ಹಾನಿ! ಅಖಿಲ ಭರತಖಂಡಕ್ಕೂ ಹಾನಿ!! ಈಶ್ವರ ಲೀಲೆ

— ಬೊಂಡಾಸೋರ ಉಗಿಹಡಗವು ಬಂಗಾಲದ ಉಪಸಾಗರವನ್ನು ದಾಟುವಾಗ ಬಿರುಗಾಳಿಯಲ್ಲಿ ಸಿಲುಕಿ ಹಡಗದ ಮೇಲಿದ್ದ ೩೦೦ ಮಂದಿ ಪ್ರಯಾಣಿಕರಲ್ಲಿ ೧೭೯ ಮಂದಿ ಸ್ತ್ರೀಪುರುಷರು ಜಲಸಮಾಧಿಯನ್ನು ಹೊಂದಿದರು

— ಅಮೇರಿಕೆಯಲ್ಲೊಂದು ಮಾರ್ಗ ಗುಡಿಸುವ ಯಂತ್ರವು ಶೋಧಿಸಲ್ಪಟ್ಟಿದೆ. ಮಾರ್ಗವನ್ನು ಕಸಬರಿಗೆಯಿಂದ ಗುಡಿಸಿದರೆ, ಧೂಳಿ ಮುಂತಾದ ಕಬ್ಬಿಣದ ವಸ್ತುಗಳು ಹೋಗುವದಿಲ್ಲ. ಆದ್ದರಿಂದ ಮೋಟಾರಿಗೊಂದು ಲೋಹ ಚುಂಬಕದ ಯಂತ್ರ ಹಚ್ಚಿ ಮಾರ್ಗಗಳ ಮೇಲಿಂದ ಒಯ್ದರೆ, ಕಬ್ಬಿಣದ ಸಾಮಾನುಗಳನ್ನೆಲ್ಲ ಲೋಹಚುಂಬಕವು ಆಕರ್ಷಿಸಿಕೊಳ್ಳುತ್ತದೆ. ಆದರಿಂದ ಮಾರ್ಗವು ನಷ್ಟವಾಗುತ್ತದೆ. ಮೋಟಾರಿಗೆ ತಗಲಿದ ಪೆಟ್ರೋಲ ಎಣ್ಣೆಯ ಖರ್ಚು ಕಬ್ಬಿಣ ಮೊಳೆಗಳ ಸಂಗ್ರಹದಿಂದ ಹುಟ್ಟುತ್ತದಂತೆ! ಅದರ ವಿನಾ ಮೊಳೆಗಳು ಸಿಗುವದೆಲ್ಲಿಂದ? ಬೀಳುವದೆಲ್ಲಿಂದ! ಮೊಳೆಗಳಿಂದ ಅಪಘಾತವಾಗುವದಾದರೂ ಎಷ್ಟು?

— ಹಿಂದುಸ್ಥಾನದಲ್ಲಿ ಮೊದಲು ೨೯ ಕೋಟಿ ಆಕಳುಗಳಿದ್ದವಾಗಿಯೂ, ಈಗ ಆ ಸಂಖ್ಯೆಯು ೯ ಕೋಟಿಗೆ ಇಳಿದಿರುವದಾಗಿಯೂ ಸಾತಾರಾ ಜಿಲ್ಲೆಯ ಸಜೇಮುದ್ದೀನ ಶಮಸುದ್ದೀನ ಸಾಹೇಬರವರು ಹೇಳುತ್ತಾರೆ. ಗೋರಕ್ಷಣೆಯನ್ನು ಸಾಧ್ಯ ಸಹಾಯದಲ್ಲಿ ಕೈಕೊಂಡು ಗೋಸಂಹಾರವನ್ನು ಪ್ರತಿಬಂಧಿಸದಿದ್ದರೆ, ಮುಂದೆ ಅನರ್ಥ ಒದಗಬಹುದೆಂದು ಸಜೇಮುದ್ದೀನ ಸಾಹೇಬರು ಎಚ್ಚರಿಕೆ ಕೊಟ್ಟಿರುವರು.

— ಸಹಾಯಕ ಭಾರತ ಮಂತ್ರಿಗಳಾದ ವಿಂಟರಟನ್ ದೊರೆಗಳು ಇದೇ ಬರುವ ಡಿಸೆಂಬರ ತಿಂಗಳಿನಲ್ಲಿ ಭರತ ಖಂಡಕ್ಕೆ ಅನುಗ್ರಹಿಸುವವರಿದ್ದಾರೆ. ಅವರ ಕಾರ್ಯ ವ್ಯಾವದು ? ಸಹಚಾರಿಣಿಯರ ಸಹಿತ ಬರುವರಂತೆ !

— ಸಕ್ಕರದ ಒಬ್ಬನು ತನ್ನ ಕುದುರೆಯನ್ನು ಕೊಂಡು ಸಿಂಧೂ ನದಿಯ ದಂಡೆಯ ಮೇಲೆ ಅದಕ್ಕೆ ಜಳಕ ಮಾಡುತ್ತಿದ್ದನು. ಆಗ ಒಂದು ಮೊಸಳೆಯು ತನ್ನ ಕಡೆಗೆ ಬರುವದನ್ನು ಆತನು ಕಂಡನು. ಕೂಡಲೇ ಆತನು ಕುದುರೆಯನ್ನು ಕೊಂಡು ಓಡಹತ್ತಿದನು. ಮೊಸಳೆಯು ನದಿಯ ದಂಡೆಯ ಮೇಲೆ ಹತ್ತಿ ಹಿಂದೆಯೇ ಓಡುತ್ತ ಬಂತು! ಹಾದಿಯಲ್ಲಿ ಇಂಜಿನಿಯರರೊಬ್ಬರು ನೋಡಿ ೨ ಗುಂಡು ಹಾಕಿ ಅದನ್ನು ಕೊಂದರು. ಮೊಸಳೆಯು ೧೬ ಅಡಿ ಉದ್ದವಿತ್ತು. ಎಂಥ ಕಾಲವಿದು!

— ಕಲಕತ್ತೆಯ ನಾಲ್ವರು ಹರೆಯದವರು ಸೈಕಲ್ಲಿನಿಂದ ಭೂಪ್ರದಕ್ಷಿಣೆ ಮಾಡಲೆಂದು ಹೊರಟಿರುವರು. ಪರ್ಯಟನಕ್ಕೆ ೪ ವರ್ಷಗಳು ತಗಲುವವೆಂದು ಅಂದಾಜು ಸೂಚಿಸಿದರು.

— ಲಖನೌದೊಳಗಿನ ಪ್ರಾಣಿ ಸಂಗ್ರಹಾಲಯದಲ್ಲಿ ವಿಚಿತ್ರವಾದ ಪ್ರಾಣಿಯೊಂದು ಸಧ್ಯಕ್ಕೆ ಇಡಲ್ಪಟ್ಟಿದೆ. ಅದರ ಮುಖಚರ್ಯೆಯು ಮಾನವನಂತೆ ಸುಂದರವಾಗಿದೆ. ಕೋಳನಂತೆ ಬಾಲವಿದೆ; ಕುದುರೆಯಂತೆ ಕಿವಿಗಳಿವೆ, ಬೆಕ್ಕು ಬಾಲಕನಂತೆ ಎದೆಯಿದೆ; ಕೈಕಾಲುಗಳಿವೆ; ಆದರೆ ಬೆರಳುಗಳಿಲ್ಲ. ಬೆರಳುಗಳ ಬದಲಿಗೆ ದನಗಳಂತೆ ಕಾಲ ಗೊರಸುಗಳಿವೆ. ಚರ್ಮದ ಬಣ್ಣ ಅಚ್ಚ ಕೆಂಪು. ಈ ವಿಚಿತ್ರ ಪ್ರಾಣಿಯನ್ನು ನೋಡಲು ಜನಸಂದಣಿಯೇನು ಕೇಳುವದು. ಬೇರೆ ಸೃಷ್ಟಿಚಮತ್ಕಾರ ! ಮತ್ತೇನು?

— ಹಿಂದುಸ್ತಾನದ ಆಳರಸರಲ್ಲಿ ಹಿಂದೀಯರನ್ನು ಹೆಚ್ಚಾಗಿ ಸೇರಿಸಿಕೊಳ್ಳಬೇಕೆಂಬುದೊಂದು ಸಾಮ್ರಾಜ್ಯದ ಧೋರಣವು ಜಾಹೀರಾಗಿದೆ. ಅದಕ್ಕನುಗುಣವಾಗಿ ಈ ಸಲ ೩೫ ಮಂದಿಗಳು ನೇಮಿಸಲ್ಪಟ್ಟರು, ಯುರೋಪಿಯನರ ಸಂಖ್ಯೆಯನ್ನು ಈ ಮುಂದೆ ತಗ್ಗಿಸಿ, ಹಿಂದೀಯರ ಸಂಖ್ಯೆಯನ್ನು ಹೆಚ್ಚಿಸುವದೇ ಈ ಧೋರಣವು. ೩೫ ಮಂದಿಗಳಲ್ಲಿ ೨೦ ಮಂದಿ ಯುರೋಪಿಯನ್ನರು; ೫ ಮಂದಿ ಹಿಂದೀಯರು; ಹೀಗೆ ನೇಮಣೂಕಿಗಳಾದರೆ, ಆಳರಸರ ಸಂಖ್ಯೆಯು ಅಲ್ಪ ಕಾಲದಲ್ಲಿಯೇ ವಿಶೇಷವಾಗಿ ತಗ್ಗಿ ಆಳರಸರೆಲ್ಲ ಹಿಂದಿಯರೇ ಆಗುವರು ! ಸಂಶಯವೇಕೆ ? ಇನ್ನು ಬ್ರಿಟಿಶ ಅಧಿಕಾರಿಗಳ, ಭಜನದಲ್ಲಿ ಅವಲಂಬಿಗೆ ಮಾಡುವವರು ಶೋಧಬೇಕೆಯೆ.

— ಶ್ರೀ ವಿಠ್ಠಲಭಾಯಿ ಪಟೇಲರವರು ಗುಜರಾಥ ಪ್ರಾಂತದ ತರ್ಫೆಯಿಂದ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದಿರುವರು.

— ಮಹಾತ್ಮರ ಜಯಂತ್ಯುತ್ಸವವು ಮುಂಬಯಿ ಕರಾಚಿ ಮದ್ರಾಸ ಮುಂತಾದ ಕಡೆಗಳಲ್ಲಿ ಭಕ್ತಿಯಿಂದ ಆಚರಿಸಲ್ಪಟ್ಟಿತು. ಮಹಾತ್ಮರಿಗೆ ಜಗದುದ್ಧಾರಕ ಕಾರ್ಯವನ್ನು ನೆರವೇರಿಸಲು ದೀರ್ಘಾಯುರಾರೋಗ್ಯಗಳನ್ನಿತ್ತು ಸಲಹಬೇಕೆಂದು ಪರಮಾತ್ಮನಿಗೆ ಮೊರೆ ಇಡಲಾಯಿತು.

— ನಾಗಪುರ ಮುನಿಸಿಪಾಲಿಟಿಯವರು ಲೋಕಮಾನ್ಯರ ಮೂರ್ತಿಯನ್ನು ಸ್ಥಾಪಿಸುವ ವಿಚಾರ ಮಾಡಿರುವರು. ಯೋಗ್ಯಸ್ಥಳ ಹಾಗು ಯೋಗ್ಯ ಮೂರ್ತಿಗಳ ಸಂಪಾದನೆಗಾಗಿ ತಗಲುವ ಖರ್ಚನ್ನು ತೆರಲು ಮುನಿಸಿಪಾಲಿಟಿಯು ಸಿದ್ಧವಿದೆ.

— ಕರ್ನಾಟಕ ಹ್ಯಾಸ್ಕೂಲಿನ ರಾ| ಕೇ. ಎಲ್. ದೇಶಪಾಂಡೆಯವರಿಗೆ ವಿಧಿಸಿದ ಶಿಕ್ಷೆಯನ್ನು ಅಪೀಲ ಕೋರ್ಟಿನವರು ರದ್ದುಪಡಿಸಿ, ಅವರಿಗೆ ಬಂಧಮುಕ್ತ ಮಾಡಿರುವರು.

— ಚೀನದ ಕೆಂಟನ ಸರಕಾರವು ಬ್ರಿಟಿಶ ಸಾಮಗ್ರಿಗಳ ಮೇಲಿನ ಬಹಿಷ್ಕಾರವನ್ನು ಹಿಂತಗೆದುಕೊಂಡಿರುವದಾಗಿ ಸುದ್ದಿ! ಬ್ರಿಟಿಶ ಹಡಗುಗಳ ಮೇಲೆ ಗುಂಡುಹಾಕಿದ ಸುದ್ದಿಯೂ ಬರುತ್ತಿದೆ, ಯಾಂಗ್‌ತ್ಸೆ ನದಿಯಲ್ಲಿ ಸುರಂಗಗಳನ್ನು ಚೀನಿಯರು ಹಾಕಿದ ಸುದ್ದಿಯೂ ಬರುತ್ತಿದೆ.

— ಪಂಡಿತ ಮೋತೀಲಾಲಜಿಯವರು ಪಂಜಾಬದಲ್ಲಿ ಪ್ರಚಾರ ಕಾರ್ಯಕ್ಕಾಗಿ ಹೋಗಿದ್ದರು. ಆಕಸ್ಮಿಕ ಅಸ್ವಾಸ್ಥ್ಯದಿಂದ ನಿರುಪಾಯರಾಗಿ ಅವರು ಮರಳಬೇಕಾಯಿತು. ಮದ್ರಾಸದ ಶ್ರೀ ಸತ್ಯಮೂರ್ತಿಯವರು ಪ್ರಚಾರ ಕಾರ್ಯವನ್ನು ಪಂಜಾಬದಲ್ಲಿ ಮುಂದರಿಸುವರು.

— ಇರಾಣ ಬಾದಶಹರಾದ ರೇಝಾಖಾನ ಪೆಹಲವಿಯವರನ್ನು ಕೊಲ್ಲಲು ಒಂದು ದೊಡ್ಡ ಒಳಸಂಚು ನಡೆದಿತ್ತು. ಅದರ ಸುಳಿವು ಹತ್ತಿ ಪೋಲೀಸರು ಅನೇಕ ದ್ರೋಹಿಗಳನ್ನು ಸೆರೆಹಿಡಿದಿರುವರು.

— ಕೊಭೆಮ ಎಂಬ ವೈಮಾನಿಕರು ವಿಮಾನ ಸಂಚಾರ ಮಾಡಿ ಕ್ಷೇಮದಿಂದ ಮರಳಿ ಬಂದ ಬಗ್ಗೆ ವಿಲಾಯತಿಯಲ್ಲಿ ಸಂಭ್ರಮದಿಂದ ಸತ್ಕಾರವಾಯಿತು !

— ಅಕಾಲಿ ದಲ ಹಾಗು ಶಿರೋಮಣಿ ಗುರುದ್ವಾರ ಪ್ರಬಂಧಕ ಮಂಡಳಗಳು ಪಂಜಾಬ ಸರಕಾರದ ಮಾನ್ಯತೆಯನ್ನು ಪಡೆದಿರುವದರಿಂದ ಅಕಾಲಿಗಳ ಚಳವಳಿಯಲ್ಲಿ ಸೆರೆಮನೆಯನ್ನು ಸೇರಿದ ಅಕಾಲಿಗಳಿಗೆಲ್ಲ ಬಂಧಮುಕ್ತತೆಯಾಗಿದೆ. ಸಿಖರ ಬಹುಮಾನ್ಯ ನಾಯಕರಾದ ಸರದಾರ ಖರಕ ಸಿಂಗರಿಗೆ ಮಾತ್ರ ಇನ್ನು ಬಂದಿವಾಸವೇ?

— ರಶಿಯಾ ದೇಶದಲ್ಲಿ ತೋಳಗಳ ಹಾವಳಿ ವಿಪರೀತ, ೧ ಲಕ್ಷ ತೋಳಗಳಿಂದ ೧೧ ಲಕ್ಷ ದನಗಳು ನೀಗಿವೆ. ತೋಳಗಳ ಬೇಟೆ ಮಾಡುವವರಿಗೆ ಸರಕಾರವು ಬಹುಮಾನಗಳನ್ನಿತ್ತು ಪ್ರೋತ್ಸಾಹಿಸುವ ವಿಚಾರ ಮಾಡಿದೆ.

— ಬೇಂಗರಕೋ ಡೌನ ಎಂಬಲ್ಲಿ ಈಜುವ ಶರ್ಯತ್ತು ನಡೆಯಿತು. ೩೯ ಮಂದಿ ಗಂಡಸರೂ, ೧೨ ಮಂದಿ ಹೆಂಗಸರೂ ಈ ಶರ್ಯತ್ತಿನಲ್ಲಿ ಸೇರಿದ್ದರು. ೧|| ಮೈಲು ದೂರ ಹೋಗಬೇಕಾಗಿತ್ತು. ೯ ಮಂದಿ ಗಂಡಸರೂ, ೧೦ ಮಂದಿ ಹೆಂಗಸರೂ ಶರ್ಯತ್ತಿನಲ್ಲಿ ಗೆದ್ದರು. ೩೦ ಮಂದಿ ಗಂಡಸರಿಗೆ ಮುಂದರಿಯ ಬರದೆ ಸೋತು ಹೋದರು. ಹೆಂಗಸರು ಸಬಲರೋ? ಅಬಲರೋ?

— ಫೋರ್ಡ ಮೋಟಾರ ಕಂಪನಿಯ ಒಡೆಯರಾದ ಮಿ| ಹೆನ್ರಿ ಫೋರ್ಡರವರು ತಮ್ಮ ಮಗಳನ್ನು ರಶಿಯಾ ದೇಶದ ಪೋಲಂಡ ಪ್ರದೇಶದ ರಾಜ್ಯಪದವಿಂದ ನಿವೃತ್ತಿ ಹೊಂದಿದವರಿಗೆ ಮದುವೆ ಮಾಡಿಕೊಟ್ಟರು. ೬ ಕೋಟಿ ಪವನು ವರದಕ್ಷಿಣೆ ಕೊಡಲಾಯಿತು. ಇದ್ದವರು ಕೊಡಬಹುದಲ್ಲ !

— ಬೇಸಾಯ ಕಮಿಶನಿನ ಸಭಾಸದರು ಕಳೆದ ಬುಧವಾರ ಮುಂಬಯಿಯಲ್ಲಿ ಬಂದಿಳಿದಿರುವರು. ಮಾರ್ಕ್ವಿಸ ಲಿನ್ಲಿಥಗೋರವರು ಅಧ್ಯಕ್ಷರಾಗಿದ್ದಾರೆ. ಸರ್ ಜೇಮ್ಸ ಮೆಕ್ಕೆನಾ, ಸರ್ ಥೋಮಸ್ ಮಿ. ಡಿಲ್ಲನ್ ಹಾಗು ಸರ್ ಹೆನ್ರಿ ಲಾರೆನ್ಸರವರು ಸಭಾಸದರಾಗಿದ್ದಾರೆ. ಕಮಿಶನಿನ ಉಳಿದ ಸಭಾಸದರು ಹಿಂದುಸ್ಥಾನದವರಿದ್ದು ಅವರೆಲ್ಲರೂ ಸಿಮ್ಲಾದ ಶೀತಲ ಹವೆಯಲ್ಲಿ ಸಮಾಲೋಚಿಸಿ ಪ್ರಕಟನೆಯನ್ನು ಹೊರಡಿಸುವವರಿದ್ದಾರೆ.

— ಮುಂಬಯಿಯ ಹೆಸರಾದ ವರ್ತಕರಾದ ಕಚ್ಛಿ ಮೆಮನ್ ಸಾವುಕಾರರಾದ ಸಾಲೇ ಮಹಮ್ಮದ ಹಾಜಿ ಕರೀಮಭಾಯಿಯವರು ಸಾಲದಲ್ಲಿ ಬಿದ್ದು ವೈರಾಗ್ಯದಿಂದ ಆತ್ಮಹತ್ಯ ಮಾಡಿಕೊಂಡರು. ೧,೦೦,೫೦೦ ರೂಪಾಯಿಗಳನ್ನು ಅವರು ಕೊಡಬೇಕಾಗಿತ್ತಂತೆ !

— ತಿನ್ನವೆಲ್ಲಿಯ ಬಳಿ ಕಾಳಪ್ ಎಂಬದೊಂದು ಗ್ರಾಮವಿದೆ. ಈ ಗ್ರಾಮದೊಳಗಿನ ಒಬ್ಬ ಹರೆಯದವನಿಗೂ, ಒಬ್ಬ ಪ್ರಾಯಸ್ಥ ಹುಡುಗಿಗೂ ಪ್ರೀತಿಯುಂಟಾಯಿತು. ಇಬ್ಬರು ಮದುವೆ ಮಾಡಿಕೊಂಡು ಸಂಸಾರ ಮಾಡಬೇಕೆಂದು ಬಯಸುತ್ತಿದ್ದರು. ಆದರೆ ಹುಡುಗಿಯ ತಂದೆಗೆ ಈ ವ್ಯವಸ್ಥೆಯು ಸರಿದೋರಲಿಲ್ಲ. ಆತನು ಹುಡುಗಿಯನ್ನು ಬೇರೆಗೆ ಕೊಡಮಾಡಿದನು. ಹುಡುಗ-ಹುಡುಗಿಯರಿಗೆ ವಿರಹ ಕಲ್ಪನೆಯು ಅಸಹ್ಯವಾಗಿ ಇಬ್ಬರೂ ಒಮ್ಮೆಲೆ ಆತ್ಮಹತ್ಯ ಮಾಡಿಕೊಂಡರು! ಎಂಥ ಬಲಾತ್ಕಾರವಿದು!

— ಹೈದರಾಬಾದಿನಲ್ಲಿ ನೊಣಗಳ ಕಾಟವು ವಿಪರೀತವಾಯಿತು. ೩೦ ಮಂದಿಗಳು ಅದನ್ನು ಸಹಿಸಲಾರದೆ ಉಗಿಬಂಡಿಯ ಕಂಬಿಗಳ ಮೇಲೆ ಸ್ವಸ್ಥವಾಗಿ ಮಲಗಿಕೊಂಡಿದ್ದರು. ಅನಪೇಕ್ಷಿತವಾಗಿ ಒಂದು ಇಂಜಿನು ಬಂದು ನಾಲ್ವರು ಮಡಿದರು, ಕೆಲವರಿಗೆ ಗಾಯಗಳಾಗಿವೆ.

… ಕಲಕತ್ತೆಯೊಳಗಿನ ಹಡಗದ ಉದ್ಯಾನದಲ್ಲಿ ಒಂದು ದೊಡ್ಡ ಹೆಬ್ಬಾವು ಮಲಗಿಕೊಂಡಿತ್ತು. ಅದರ ಉದ್ದ ೧೪ ಅಡಿ; ದಪ್ಪ ೧|| ಅಡಿ. ಇಷ್ಟು ದೊಡ್ಡ ಹಾವು ಹಡಗದಲ್ಲಿ ಸೇರುವ ವರೆಗೆ ಹಡಗದವರು ಮಲಗಿಕೊಂಡಿದ್ದರೇ. ಅದಕ್ಕೆ ಪೋಲೀಸ ಗುಂಡುಹಾಕಿ ಕೊಲ್ಲಲಾಯಿತು

… ಮುಂಬಯಿಯೊಳಗಿನ ಗಿರಣಿಗಳನ್ನು ಜಪಾನದವರು ಕೊಂಡುಕೊಂಡು ಒಕ್ಕಲು ಮಾಡುವ ಆಲೋಚನೆಯುಳ್ಳವರಾಗಿರುವರಾಗಿಯೂ, ೨ ಕೋಟಿ ಪವನುಗಳನ್ನು ಕೊಟ್ಟು, ಕೆಲವು ಗಿರಣಿಗಳನ್ನು ಜಪಾನದವರು ಕೊಂಡುಕೊಂಡರಾಗಿಯೂ ವದಂತಿ ಹಬ್ಬಿದೆ. ಜಪಾನದಿಂದ ಅರವೆ ತಂದು ಮಾರುವದಕ್ಕಿಂತ ಗಿರಣಿಗಳನ್ನೇ ಇಲ್ಲಿ ಸ್ಥಾಪಿಸುವ ಯೋಜನೆಯು ವಿಶೇಷ ಸುರಕ್ಷಿತವು. ಹಿಂದುಸ್ಥಾನದ ಸಂರಕ್ಷಣ ಕಾಯದೆಗಳ ಲಾಭ ಸಿಗುತ್ತದೆ.

… ಪುಣೆಯ ಭಾರತ ಸೇವಕ ಸಮಾಜದ ಅಧ್ಯಕ್ಷರಾದ ನೇಕ ನಾಮದಾರ ಶಾಸ್ತ್ರಿಗಳವರು ಮಂಗಳೂರಿಗೆ ಹಾದಿಯು ಅನೇಗೆ ಹೋಗುವವರಿದ್ದರು. ಆ ಸಮಯ ಮುನಿಸಿಪಾಲಿಟಿಯವರು ಅವರಿಗೆ ಮಾನಪತ್ರವನ್ನು ಕೊಡಲಿರುವರು.

… ಮುಂಬಯಿ ವಿಶ್ವವಿದ್ಯಾಲಯದ ಪದವೀಧರ ವರ್ಗದ ತರ್ಫೆಯಿಂದ ಡಾ| ಲೋಧೆ ಸುಕ್ಥಂಕರ ಪರಾಂಜಪೆಯವರು ಉಮೇದ್ವಾರರಾಗಿ ನಿಂತಿರುವರು. ಪಾಲ್ವರು ದೊಡ್ಡದೊಂದು ಜಾಹೀರನಾಮೆಯನ್ನು ಪ್ರಕಟಿಸಿ ತಮ್ಮ ಗುಣವರ್ಣನೆಗಳನ್ನು ಮಾಡಿಕೊಂಡಿರುವರು. ವಿಮಾನದಿಂದ ಇನ್ನೇನು ಸಾಧನೆ ಎಂಬ ವಿಷಯದ ಮೇಲೆ ಉಪನ್ಯಾಸಗಳನ್ನು ಕೊಡಹತ್ತಿರುವರು. ವಿಮಾನಪಥವನ್ನು ಕೊಟ್ಟು ನೋಡಿದವೆ. ಹೀಗೆ ಇದ್ದಾಗ ಇಂಥ ಭವಿಷ್ಯದ ನಯನಮನೋಹರ ಚಿತ್ರಗಳನ್ನು ಕಲ್ಪಿಸಿ ಪ್ರಯೋಜನವೇನಿದೆ? ಅದಕ್ಕೆ ಮರುಳಾಗುವವರ್‍ಯಾರು?

— ಹಿಂದುಸ್ಥಾನದಲ್ಲೆಲ್ಲ ಈಗ ಒಂದೇ ಗಡಿಬಿಡಿ! ಇಲೆಕ್ಷನು, ಇಲೆಕ್ಷನು, ಪುನಃ ಕೇಳಿದರೆ, ಇಲೆಕ್ಷನು ! ಸ್ವರಾಜ್ಯ ಪಕ್ಷ, ಸ್ವತಂತ್ರ ಕಾಂಗ್ರೆಸ ಪಕ್ಷ, ಪ್ರತಿಯೋಗಿ ಪಕ್ಷ, ಹಿಂದೂ ಸಭೆಯ ಪಕ್ಷ ಬ್ರಾಹ್ಮಣೇತರ ಪಕ್ಷ, ರಾಷ್ಟ್ರೀಯ ಪಕ್ಷ, ಮುಸಲ್ಮಾನ ಪಕ್ಷ ಸ್ವತಂತ್ರ ಮತವಾದಿಗಳ ಪಕ್ಷ, ಜಸ್ಟಿಸ್ ಯಾನೆ ನ್ಯಾಯ ಪಕ್ಷ ಜಮೀನದಾರ ಪಕ್ಷ, ಕಿಸಾನ ಯಾನೆ ಒಕ್ಕಲು ಪಕ್ಷ ಇತ್ಯಾದಿ ಪಕ್ಷಗಳೇ ಪಕ್ಷಗಳು !! ಮತದಾರರ ಗೋಳೇ ಗೋಳು. ಎಲ್ಲರೂ ಮತಗಳನ್ನು ಬೇಡುವವರು. ಯಾರಿಗೆ ಕೊಡುವದು? ಯಾರಿಗೆ ಬಿಡುವದು? ರಾಷ್ಟ್ರೀಯ ಸಭಾಭಿಮಾನಿಗಳಿಗೆ ಗೊಂದಲವಿಲ್ಲ, ರಾಷ್ಟ್ರೀಯ ಸಭೆಯ ಧೋರಣವನ್ನು ಪಾಲಿಸುವವರಿಗೆ ಮತ ಕೊಟ್ಟರಾಯಿತು! ಯಾರದೂ ದಾಕ್ಷಿಣ್ಯವಿಲ್ಲ.

ಮಹಾತ್ಮರ ಆತ್ಮಚರಿತ್ರ.

(೧೦) ಬಾಲ ಸುಂದರಂರವರು.

ಅಂತಃಕರಣಪೂರ್ವಕವಾಗಿ ನಿರ್ಮಲ ಬುದ್ಧಿಯಿಂದ ನಾವು ಸಂಕಲ್ಪ ಮಾಡಿದ ಕಾರ್ಯವು ಯಾವಾಗಲೂ ನೆರವೇರುತ್ತದೆ ಇದರ ಅನುಭವವು ನನಗುಂಟು ಬಡಬಗ್ಗರ ಸೇವೆ ಮಾಡುವದು ನನ್ನ ಸಂಕಲ್ಪವು ಮತ್ತು ಈ ಮೂಲಕ ನಾನು ಬಡಬಗ್ಗರೊಳಗೇ ಸೇರಿ ಅವರ ಸುಖ-ದುಃಖಗಳನ್ನು ತಿಳಿಯಲು ಸಮರ್ಥನಾಗಿದ್ದೇನೆ

ನಾತಾಲದ ಹಿಂದೀ ರಾಷ್ಟ್ರೀಯ ಸಭೆಯ ಕಕ್ಷೆಯೊಳಗೆ ಅಲ್ಲಿ ಹುಟ್ಟಿದ ಭಾರತೀಯರೂ, ಕಾರಕೂನರೂ ಸೇರಿದ್ದರು ಆದರೆ, ಸಾಮಾನ್ಯ ಕೂಲಿಕಾರರಾಗಲಿ, ಕರಾರುಬದ್ಧ ಕೂಲಿಕಾರರಾಗಲಿ ಸೇರಿದ್ದಿಲ್ಲ. ಇನ್ನೂ ರಾಷ್ಟ್ರೀಯ ಸಭೆಯು ಅವರದಾಗಿದ್ದಿಲ್ಲ ಪಟ್ಟಿಯನ್ನು ತೆತ್ತು ಸಭೆಯಲ್ಲಿ ಸೇರಲು ಅವರಿಗೆ ಸಾಮರ್ಥ್ಯವಿದ್ದಿಲ್ಲ ಅವರ ಸೇವೆಯನ್ನು ಮಾಡಿಯೇ ರಾಷ್ಟ್ರೀಯ ಸಭೆಯು ಅವರ ಪ್ರೀತಿಯನ್ನು ಸಂಪಾದಿಸಬೇಕಾಗಿತ್ತು. ಅನಪೇಕ್ಷಿತವಾಗಿ ಒಂದು ಪ್ರಸಂಗವು ಪ್ರಾಪ್ತವಾಯಿತು. ಇದಕ್ಕಿದಿರಾಗಲು, ರಾಷ್ಟ್ರೀಯ ಸಭೆಯಾಗಲಿ, ನಾನಾಗಲಿ ತಯಾರಾಗಿದ್ದಿಲ್ಲ ನಾನು ವಕೀಲಿ ಮಾಡಹತ್ತಿ ೩-೪ ತಿಂಗಳು ಆಗಿರಬಹುದು, ರಾಷ್ಟ್ರೀಯ ಸಭೆಯು ಇನ್ನೂ ಬಾಲ್ಯದಲ್ಲಿಯೇ ಇತ್ತು ಆ ಸಮಯ ಒಬ್ಬ ತಮಿಳನು ಹರಕು ಬಟ್ಟೆಗಳನ್ನು ಧರಿಸಿಕೊಂಡು, ಶಿರಸ್ತ್ರಾಣವನ್ನು ಕೈಯಲ್ಲಿ ಹಿಡಕೊಂಡು ನನ್ನ ಮುಂದೆ ನಡುಗುತ್ತ, ಅಳುತ್ತ ಬಂದು ನಿಂತುಕೊಂಡನು. ಆತನ ಮುಂದಿನ ಎರಡು ಹಲ್ಲುಗಳು ಮುರಿಯಲ್ಪಟ್ಟಿದ್ದವು, ಬಾಯೊಳಗಿಂದ ರಕ್ತವು ಸುರಿಯುತ್ತಿತ್ತು ಆತನಿಗೆ ಯಜಮಾನನು ಚನ್ನಾಗಿ ಬಡೆದಿದ್ದನು ನನ್ನ ಕಾರಕೂನರಿಗೆ ತಮಿಳು ಭಾಷೆ ಬರುತ್ತಿತ್ತು. ಅವರ ಮಧ್ಯಸ್ಥಿಕೆಯಿಂದ ಸಮಗ್ರ ಹಕೀಕತನ್ನು ನಾನು ಅರಿತುಕೊಂಡೆನು ಆತನ ಹೆಸರು ಬಾಲಸುಂದರಂ ಆತನು ಡರ್ಬಾನದೊಳಗಿನ ಹೆಸರಾದ ಒಬ್ಬ ಯುರೋಪಿಯನ್ನನಲ್ಲಿ ಕರಾರುಬದ್ಧ ಕೂಲಿಕಾರನಾಗಿದ್ದನು ಒಡೆಯನಿಗೆ ಸಿಟ್ಟು ಬಂದು, ಚಿತ್ತ ಕೆರಳಿ, ಚಿತ್ತಕ್ಷೋಭವಾಗಿ ಬಾಲಸುಂದರಂನಿಗೆ ನಿರ್ದಯದಿಂದ ಹೊಡೆದು ಎರಡು ಹಲ್ಲುಗಳನ್ನು ಆತನು ಮುರಿದು ಬಿಟ್ಟನು.

ನಾನು ಆತನಿಗೆ ಡಾಕ್ಟರರ ಬಳಿಗೆ ಕಳುಹಿದೆನು ಆ ಕಾಲಕ್ಕೆ ಅಲ್ಲಿ ಯುರೋಪಿಯನ್ ಡಾಕ್ಟರರೇ ಇದ್ದರು ಬಾಲ ಸುಂದರಂನಿಗೆ ಒದಗಿದ ಗಾಯದ ಸ್ವರೂಪವನ್ನು ಹೇಳುವ ಡಾಕ್ಟರರದೊಂದು ಸರ್ಟಿಫಿಕೇಟು ನನಗೆ ಬೇಕಾಗಿತ್ತು. ಸರ್ಟಿಫಿಕೇಟನ್ನು ನಾನು ತೆಗೆದುಕೊಂಡು ಆ ಬಾಲ ಸುಂದರಂನನ್ನು ನೆಟ್ಟಗೆ ಮೆಜಿಸ್ಟ್ರೇಟರ ಬಳಿಗೆ ಕಳುಹಿ ಫಿರ್ಯಾದನ್ನು ದಾಖಲ ಮಾಡಿದೆನು ಮೆಜಿಸ್ಟ್ರೇಟರು ಅದನ್ನು ಓದಿ ನೋಡಿ ಸಂತಪ್ತರಾದರು ಕೂಡಲೆ, ಯಜಮಾನನ ಮೇಲೆ ಸಮನುಗಳನ್ನು ಹೊರಡಿಸಿದರು

ಒಡೆಯನಿಗೆ ಶಿಕ್ಷೆ ಮಾಡುವದು ನನ್ನ ವಿಚಾರವಿದ್ದಿಲ್ಲ, ಬಾಲ ಸುಂದರಂನಿಗೆ ಆತನ ಕಡೆಯಿಂದ ತಪ್ಪಿಸುವದು ನನ್ನ ವಿಚಾರವಿತ್ತು ಕರಾರುಬದ್ಧ ಕೂಲಿಯ ಕಾಯಿದೆಯನ್ನು ನಾನು ಓದಿದೆನು ಸಾಮಾನ್ಯ ಆಳು ತಿಳಿಸದೆ ಸೇವೆಯನ್ನು ಬಿಟ್ಟರೆ ಆತನ ಮೇಲೆ ಸಿವಿಲ್ ಕೋರ್ಟಿನಲ್ಲಿ ಕಾಯಿದೆಯಂತೆ ಇಲಾಜು ನಡಿಸಬಹುದಾದೆ ಕರಾರುಬದ್ಧ ಕೂಲಿಯ ಪ್ರಕರಣವು ಮಾತ್ರ ತೀರ ಬೇರೆ ಆತನು ತಿಳಿಸದೆ ಕೆಲಸ ಬಿಟ್ಟಲ್ಲಿ ಆತನ ಮೇಲೆ ಫೌಜದಾರೀ ಮೊಕದ್ದಮೆಯಾಗಿ ಆತನಿಗೆ ಶಿಕ್ಷೆಯಾಗುತ್ತಿತ್ತು ಆದದರಿಂದಲೇ ಸರ್ ವಿಲಿಯಮ್ ಹಂಟರರವರು ಕರಾರುಬದ್ಧ ಕೂಲಿಗೆ ಗುಲಾಮತನವೆಂದು ಸಂಬೋಧಿಸುತ್ತಿದ್ದರು ಗುಲಾಮನಂತೆ ಕರಾರುಬದ್ಧ ಕೂಲಿಕಾರನು ಒಡೆಯನ ಸೊತ್ತಾಗಿದ್ದನು

ಬಾಲ ಸುಂದರಂನಿಗೆ ವಿಮೋಚನ ಮಾಡುವದಾದರೆ, ಎರಡು ಉಪಾಯಗಳಿದ್ದವು ಆತನ ಕರಾರನ್ನು ರದ್ದು ಮಾಡಲಿಕ್ಕೆಯಾ ಆತನನ್ನು ಬೇರೆ ಒಡೆಯನ ಕಡೆಗೆ ಇಡಲಿಕ್ಕೆ ಕರಾರುಬದ್ಧ ಕೂಲಿಕಾರರ ರಕ್ಷಕನೆಂಬ ಅಧಿಕಾರಿಗೆ ಬಿನ್ನೈಸುವದು, ಅಥವಾ ಆ ಬಾಲ ಸುಂದರಂನ ಒಡೆಯನ ಕಡೆಯಿಂದ ಆತನನ್ನು ವಿಮೋಚಿಸುವದು ನಾನು ಬಾಲ ಸುಂದರಂನ ಒಡೆಯನಿಗೇ ಭೆಟ್ಟಿಯಾದೆನು ಮತ್ತು ನುಡಿದದ್ದು ಸಂದರೆ "ನಿಮ್ಮ ಮೇಲೆ ಮೊಕದ್ದಮೆಯನ್ನು ಮಾಡಿ ನಿಮಗೆ ಶಿಕ್ಷೆಯಾಗಬೇಕೆಂದು ನನ್ನ ವಿಚಾರವಿಲ್ಲ ಬಾಲ ಸುಂದರಂನಿಗೆ ನೀವು ನಿರ್ದಯದಿಂದ ಹೊಡೆದಿರವಿರೆಂದು ನಿಮಗೆ ತೋರುತ್ತದೆ ನೀವು ಈ ಕರಾರನ್ನು ಬೇರೆಯವರಿಗೆ ಬದಲಿಸಿಕೊಟ್ಟರೆ, ನನಗೆ ಸಮಾಧಾನವಿದೆ" ಕೊನೆಯ ಮಾತಿಗೆ ಒಡೆಯರು ಒಪ್ಪಿದರು ನಾನು ರಕ್ಷಕರಿಗೆ ಭೆಟ್ಟಿಯಾದೆನು ಅವರೂ ಒಪ್ಪಿದರು ಆದರೆ ನಾನು ಹೊಸ ಒಡೆಯನನ್ನು ಸಂಪಾದಿಸಿಕೊಡಬೇಕೆಂದು ಹೇಳಿದರು

ಆದರಿಂದ ಒಡೆಯನನ್ನು ಹುಡುಕಲು ನಾನು ಹೋದೆನು ಕರಾರ ಬದ್ಧ ಕೂಲಿಯ ಕಾಯಿದೆಯಂತೆ ಯುರೋಪಿಯನರಿಗೆ ಮಾತ್ರ ಕರಾರುಬದ್ಧ ಕೂಲಿಕಾರರನ್ನು ಇಟ್ಟುಕೊಳ್ಳುವ ಅಧಿಕಾರವಿತ್ತು ಆ ಕಾಲದಲ್ಲಿ ನನಗೆ ಯುರೋಪಿಯನರ ಹೆಚ್ಚು ಪರಿಚಯವಿದ್ದಿಲ್ಲ ನಾನು ಒಬ್ಬರಿಗೆ ಭೆಟ್ಟಿಯಾದೆ ಬಾಲಸುಂದರಂರವರಿಗೆ ಇಟ್ಟುಕೊಳ್ಳಲು ಅವರು ದಯಾಭರಿತರಾಗಿ ಒಪ್ಪಿದರು ಕೃತಜ್ಞತಾಬುದ್ಧಿಯಿಂದ ನಾನು ಅವರ ಉಪಕಾರ ಮನ್ನಿಸಿದೆನು ಬಾಲ ಸುಂದರಂರವರ ಒಡೆಯರು ಅಪರಾಧಿಯೆಂದು ಮೆಜಿಸ್ಟ್ರೇಟರು ಠರಾಯಿಸಿದರು ಹಾಗು ಬಾಲ ಸುಂದರಂರವನ್ನು ಬೇರೆಯವರ ಕಡೆಗೆ ಕೂಲಿಕಾರನಾಗಿ ಇಡಲು ಒಡೆಯರು ಒಪ್ಪಿದ್ದಾರೆಂದು ನಮೂದಿಸಿದರು.

ಬಾಲ ಸುಂದರಂನ ಪ್ರಕರಣವು ದಕ್ಷಿಣ ಆಫ್ರಿಕೆಯೊಳಗಿನ ಕರಾರುಬದ್ಧ ಕೂಲಿಕಾರರ ಕಿವಿಗೆ ಮುಟ್ಟಿತು ಕರಾರುಬದ್ಧ ಕೂಲಿಕಾರರ ಗೆಳೆಯನೆಂದು ನಾನು ಹೆಸರುಗೊಂಡೆನು ಇದನ್ನು ಕೇಳಿ ನನಗೆ ಸಂತೋಷವಾಯಿತು ಕರಾರುಬದ್ಧ ಕೂಲಿಕಾರರು ತಂಡುಗಟ್ಟಿ ನನ್ನ ಕಚೇರಿಯಲ್ಲಿ ಬರಲಾರಂಬಿಸಿದರು ಆದರಿಂದ ಅವರ ಸುಖ ದುಃಖಗಳನ್ನು ತಿಳಕೊಳ್ಳಲು ಪ್ರಸಂಗವು ನನಗೆ ಪ್ರಾಪ್ತವಾಯಿತು

ದೂರದ ಮದ್ರಾಸದಲ್ಲಿಯೂ ಬಾಲಸುಂದರಂ ಪ್ರಕರಣದ ಪ್ರತಿಧ್ವನಿಯಾಯಿತು ಹಿಂದುಸ್ಥಾನದ ಯಾವದೇ ಭಾಗದಿಂದ ನಾತಾಲಕ್ಕೆ ಹೋದ ಕೂಲಿಕಾರರಿಗೆಲ್ಲ ಈ ಹಕೀಕತು ಕರಾರುಬದ್ಧ ಬಾಂಧವರಿಂದ ತಿಳಿದುಬಂತು

ಈ ಪ್ರಕರಣದಲ್ಲಿ ವಿಶೇಷವೇನಿದ್ದಿಲ್ಲ ಆದರೆ, ನಾತಾಲದಲ್ಲಿ ತಮ್ಮ ಪಕ್ಷ ಹಿಡಿದು ಬಹಿರಂಗವಾಗಿ ಕಾದಾಡಲೊಬ್ಬರು ಇದ್ದಾರೆಂದು ತಿಳಿದು ಅವರಿಗೆಲ್ಲರಿಗೆ ಆನಂದವೂ, ಆಶ್ಚರ್ಯವೂ ಉಂಟಾಗಿ ನೂತನವಾದ ಆಶಾಂಕುರವು ತಲೆದೋರಿತು.

ಬಾಲ ಸುಂದರಂರವರು ನನ್ನ ಕಚೇರಿಯಲ್ಲಿ ಕಾಲಿಟ್ಟು ಶಿರಸ್ತ್ರಾಣವನ್ನು ಕೈಯಲ್ಲಿ ಹಿಡಕೊಂಡಿದ್ದರೆಂದು ನಾನು ಬರೆದಿದ್ದೇನಷ್ಟೇ ? ಈ ಸಂಗತಿಯು ಕೌತುಕಪೂರ್ಣವಾಗಿತ್ತು ಅದರ ಮೇಲಿಂದ ನಮ್ಮ ಅಧೋಗತಿಯೂ ಸ್ಪಷ್ಟವಾಗುತ್ತದೆ. ನನ್ನ ರುಮಾಲನ್ನು ತೆಗೆಯಬೇಕೆಂದು ಹೇಳಿದಾಗ ಒದಗಿದ ಕಥೆಯನ್ನು ನಾನು ಮೊದಲೇ ಹೇಳಿರುವೆನು ಕರಾರುಬದ್ಧ ಕೂಲಿಕಾರರೂ, ಭಾರತೀಯ ಇತರರೂ ಯುರೋಪಿಯನರಿಗೆ ಕಾಣಹೋದಾಗ ತಮ್ಮ ಶಿರಸ್ತ್ರಾಣವನ್ನು ತೆಗೆದುಕೊಂಡುಹೋಗಬೇಕೆಂಬುದೊಂದು ಬಲಾತ್ಕಾರದ ರೂಢಿಯಾಗಿತ್ತು ಶಿರಸ್ತ್ರಾಣವು ಟೊಪ್ಪಿಗೆಯಾಗಿರಲಿ, ರುಮಾಲಾಗಿರಲಿ ಅಥವಾ ತಲೆಗೆ ಸುತ್ತಿಕೊಂಡ ಬಂದು ವಸ್ತ್ರವಾಗಿರಲಿ ಅದನ್ನು ತೆಗೆಯಬೇಕಾಗಿತ್ತು ಎರಡೂ ಕೈಗಳನ್ನು ಜೋಡಿಸಿ ನಮಸ್ಕಾರ ಮಾಡಿದರೂ, ಅದರಿಂದ ಸಮಾಧಾನವಾಗುತ್ತಿರಲಿಲ್ಲ ಅದೇ ರೂಢಿಯಿಂದ ಬಾಲ ಸುಂದರರವರು ಸನ್ಮಾನ ಆಚರಿಸಿದರು ನಾನು ನೋಡಿದ್ದು ಇದೇ ಮೊದಲು, ನನಗೆ ಅದನ್ನು ನೋಡಿ, ತೀರ ಕಡಕೆನಿಸಿತು. ಬಟ್ಟೆ ತುಂಡನ್ನು ತಲೆಗೆ ಸುತ್ತಿಕೊಳ್ಳಲು ನಾನು ಹೇಳಲು, ಬಹಳ ಅನುಮಾನದಿಂದ ಆತನು ಬಟ್ಟೆಯನ್ನು ಸುತ್ತಿಕೊಂಡನು ಆದರೆ, ಬಟ್ಟೆ ಸುತ್ತಿಕೊಳ್ಳುವಾಗ ಆತನು ಆನಂದದಿಂದ ನಗುಮೋರೆಯಾದನು ಬಾಂಧವರನ್ನು ಅಪಮಾನ ಮಾಡುವದರಿಂದ ತಮಗೆ ಮಾನ ದೊರಕುವದೆಂಬ ಭಾವನೆಯು ಹ್ಯಾಗೆ ರೂಢವಾಯಿತೆಂದು ನನಗಿನ್ನೂ ತಿಳಿಯದು

Definitely my last !

One can discover very little reason or sense in the rejoinder of Mr S V. Kamat in reply to my last letter. One more and a dispassionate perusal of my letter will not fail to make it evident to him that I never cotested the position that Mr Yaji or any *other person may*, by his individual merits, be qualified to be elected in preference to this that or any other degree-holder Indeed it does little credit to Mr Kamat's intelligence to have been so miserably led astray as to mistake me and represent me to be a 'glorifier of Degree-holders'! Having made no secret of the opinion I hold of Mr Kamat's (a possessor of two degrees himself) uncalled for contribution in this controversy, I wonder how I could be mistaken at all for a glorifier of those degree-holders like himself Can Mr Kamat point out even a single word from my previous letter in support of his assumption? I was only interested to enquire and know how with the opinion that Mr. Kamat is seen to hold of Mr. Yaji and all that he is, the old board including him could *afford to allow Mr Yaji "who has dedicated a part of his life to the cause of* education" (! by being a teacher like any other Primary school-master!) and his abilities to go without any recognition, and that also in favour of the 'new-fledged M.A., LL B.'

The only argument that can be discovered from that one column and more of non-sensical pageantry of words and phrases under the all too apt caption of "without rhyme or reason" is that Mr Yaji could not be elected for the Vice-chairmanship as he was not a candidate for the office But it is widely known that the President of the local authority had not then adopted the system of having definite persons duly nominated as candidates for the particular offices, but had allowed each members the freedom of *writing the name of any person* he chose, taking all the members to be eligible candidates. If this be true, had not Mr Kamat the freedom of voting for his hero, of

his own free will? Then, did he so, or were most of the votes cast in favour of Mr. Naik? In view of these facts, which Mr Kamat seems to have conveniently forgotten, can not one easily see who deserves that compliment of 'raving like an idiot'?

Once again, for Mr Kamat's shrewd observation that 'when jealousy is aroused reason is stifled' I must meekly bow down to his dictum, as it is probably in his heart that 'jealousy must have been whipped up,' Mr Kamat unlike me being one "defeated and despairing"

P. B. P

Wanted-- Sub Agents in each Taluka for **India Equitable Insurance Co. Ltd.** on liberal terms

Apply to -

Messrs. **V. B. Muzumdar & Co.,**
ANKOLA

BATLIBOI'S
Accountancy Training Institute
Recognised by
The G. D. A. Board

Offers best training in Accounting, Banking, Company Management and Secretarial Work and Theory and Practice of Commerce

Best staff, Individual attention fee moderate, and payable by instalments.

Send for Prospectus at Yusuf Buildings, Churchgate street, Fort, Bombay

You are invited to make thorough enquiry before joining

TUITION BY POST
UR SPECIALITY

ನೆಲ್ಸರ ಗುಂಪಿನ

ಕನ್ನಡ] **ಸ್ವಧರ್ಮ.** [ವಾರಪತ್ರಿಕೆ

ಸಂಪಾದಕರು ದ ರಾ ಬೇಂದ್ರೆ, ಬೀ ಎ

ವಾರ್ಷಿಕ ವರ್ಗಣಿ ೩—೦—೦

ಸಮಾಜದಲ್ಲಿ ಶಾಂತಿತುಷ್ಟಿ, ಪುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೇರಿಗೆ ಸುವಿಚಾರವೇ ಸರಿಯಾದ ಸಾಧನ ಇಂಥ ಸುವಿಚಾರಗಳನ್ನು ಸಮಾಜದ ಮುಂದಿಡುವ ಹೊಣೆ ಹೊತ್ತ ಈ ಸ್ವಧರ್ಮದ ಗುರಿ ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ

ಉಚಿತ! ಉಚಿತ!!

ನನ್ನ ಶಾಸ್ತ್ರೀಯವಾದ ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳು ರೋಗವಿಲ್ಲದ ಅಂಥಹ ಶರೀರದಾರ್ಢ್ಯವು ಹೇಗೆ ಒಂದಿಕೊಂಡು ಬರುವದೆಂಬುದು ಕೊಡಲ್ಪಟ್ಟಿರುವದು ಮತ್ತು ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಓದಲು ಮಾಡಲು ಆಸೆಯು ಸ್ವಲ್ಪವನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ಕಳುಹಿಸುತ್ತೇವೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತಮಾಡದೆ, ಇನ್ನೂ ಈ ಯೋಜನೆ ನೀವೀಗಲೇ ಈ ಪುಸ್ತಕಕ್ಕಾಗಿ ಬರೆಯಿರಿ

ಪ್ರೊಫೆಸರ್ ಎಂ. ವಿ ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಶೆವರಲೆಟ್
ಮೋಟಾರಕಾರ್ ಏಜನ್ಸಿ, ಕೆನರಾ

ನಾವು ಹೊಸ ಶೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಮಾರಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು

ಸೋಲಏಜಂಟ —**ಎಸ್. ಎಲ್. ಘಾಟಕೆಪ್ಪ ಮತ್ತು ಬ್ರದರ್ಸ, ಶಿರ್ಸಿ**

ಕುಮಟಾ ಏಜಂಟ— **ಜಿ. ಡಿ. ಮಾಳಗಿಕರ ಎಂಡ್ ಕೊ.**

ಡಿ. ಓ ಸಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುತ್ತದೆ; ಡನ್‌ಲೊಪ್ ಹಾಗು ಮಿಚಲಿನ ಮೋಟಾರ ಟಾಗು ಸಾಯಕಲ್ ಟಾಯರ ರ-ಟ್ಯೂಬ ಇತ್ಯಾದಿ ಸಾಮಗ್ರಿಗಳು ಯೋಗ್ಯ ದರದಿಂದ ಪೂರೆಸುತ್ತೇವೆ.

G. D. Malgikar & Co,
KUMTA.

ಮೋಸಹೋಗಬೇಡಿರಿ!!

ದಿ ಕೊರಸಲ ಮೋಟಾರ ಸರ್ವಿಸ, ಹೊನ್ನಾವರ-ಕುಮಟಾ.

ಭಟಕಳದ ಕಡೆಗಿನ ಪೆಸಂಜರರ ಹೊನ್ನಾವರದಿಂದ ಕುಮಟೆ ದ್ವಾರಕ್ಕೆ ಟಿಕೀಟು ಕೊಂಡುಕೊಳ್ಳುವ ಬದಲು, ಕುಮಟೆಗೆ ಹೋಗುವ ಮೋಟಾರ ಟಿಕೀಟುಗಳು **ಹೊನ್ನಾವರ ಬಂದರದಲ್ಲಿ ಸೋಯಿಯಿಂದ** ದೊರೆಯುವ ಹಾಗೆ ಮೋಟಾರ ಬಂಡಿಗಳು ನಿತ್ಯವೂ ನಾಲ್ಕು ಸಾರೆ ಓಡಾಡುತ್ತವೆ.

ಮೋಟಾರ ಬಿಡುವ ಕಾಲಕ್ರಮ — } ಬೆಳಿಗ್ಗೆ ೮ಕ್ಕೆ, ಪುನಃ ೧೦॥ಗೆ. ಸಾಯಂಕಾಲ ೨॥ಗೆ, ಪುನಃ ೫ಕ್ಕೆ

ಟಿಕೀಟು ಸಿಗುವ ಸ್ಥಳ } ಬಂದರದಲ್ಲಿ—**ಗೋವಿಂದ ನಾಗಪ್ಪ** ಇವರ ದುಕಾನದಲ್ಲಿ. ದುರ್ಗಾಕೇರಿಯ ಶ್ರೀ—**ಮಿ॥ ಪಂಡಿತ ಭಿಕ್ಕುರಾವ್.**

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ
ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯದ ಪೆಟ್ಟಿಗೆಗಳೂ, ಡಿಕ್ಸನೇರೀ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೂಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ

1926-27

—[Star of Kanara Press, Kumta.]—

Monday October 25th, 1926.

ವರ್ಷ ೧೧.

ಕಾನಡಾವೃತ್ತ.

ಸಂಚಿಕೆ ೧.

THE KANARA NEWS.

ನರಪತಿಹಿತಕರ್ತಾ द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಬುನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ
ಪ್ಯಾಯಿಕ (೧೫ ಎಮ್ ಉದ್ದ)
೮ ಸಾಲುಗಳವರೆಗೆ ರೂ. 1-0-
೮ ನಂತ್ರ ಪ್ರತಿಸಾಲಿಗೆ 0-2-0.
ಹಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-(ಕುಮಟಾ—ಕಾನಡಾವೃತ್ತ ಸೋಮವಾರ, ತಾರಿಖು ೨೫ ನಾಕೆ ಅಕ್ಟೋಬರ ಸನ್ ೧೯೨೬ ನೇ ಇಸವಿ.)-

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलाची किंमत २ रुपये;

रामबाण औषध
सर्दि घालविणारें,
भूक वाढविणारें,
कोठ्याला साफ करणारें,
झोंप आणणारें,
शक्ति देणारें,
तरतरीतपणा आणणारें,

पिण्यास रुचिकर.

ह्याकरितां मागवा,

झंडुफार्मास्युटिकलवर्क्स लिमिटेड,
मुंबई नं: १३

एजंट— मे[illegible] पंडित आणि कंपनी,
तीर्थहळ्ಳी.

ಉಚಿತ! ಉಚಿತ!!

ನವೀನ ಶಾಸ್ತ್ರೀಯವಾದ
ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನಿನ್ನ ಮತ್ತು ನನ್ನ ಶರೀರ ಅಂಗಸೌಷ್ಟವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ ಅಂಥಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು. ನನ್ನಲ್ಲಿ ತರಬಿಯತ್ತಾದವರ ಅಭಿ[illegible] ಅದರಲ್ಲಿರುವವು. ಈ ಪುಸ್ತಕವನ್ನು ಒದಿದ[illegible] ನಿಮ್ಮ ದೇಹವನ್ನು ಹೇಗೆ ಬಲಪಡಿಸ[illegible] ಸಾಧ್ಯವಾದ ಮಾರ್ಗವನ್ನು ತಿಳಿಯುತ್ತಾ[illegible] ಕಲು[illegible] ಜನಿಯ ಸ್ವಾಸ್ಥ್ಯವನ್ನು ಕಳೆದು [illegible] ನಿಮಗೆ ಉಚಿತ [illegible] ಯನ್ನು ಕಳದುಕೊ[illegible] ಮರೆಯಬೇಡಿರಿ! [illegible] ಯೋಜನೆಯಲ್ಲಿ [illegible]ರಿಯರಿ.

[illegible] ಕೃಷ್ಣರಾವ್,
ಸವನಗುಡಿ, ಬೆಂಗಳೂರ ಸಿಟಿ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದಿಕ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ [ಮಲಬಾರ ಕೃತಿ]

ಅನುಭವಿಕ ಔಷಧಗಳು!

೧. ಮದನಕಾಮೇಶ್ವರಿ ಲೇಹ. ಧಾತುಪೌಷ್ಟಿಕ, ವೀರ್ಯ—ಶಕ್ತಿವರ್ಧಕ, ಕಾಮೋತ್ತೇಜಕ.
೨. ಮದನ ಕಾಮೇಶ್ವರ. ಗುಣ ಮೇಲಿನಂತೆ. ೫ ೧ಕ್ಕೆ ೨ ರೂ ೩ ಕ್ಕೆ ೫ ರೂ. [ಡ. ೧ಕ್ಕೆ ೨॥ ರೂ.
೩. ಉಪದಂಶ. (ಗರ್ಮಿ) ರೋಗಕ್ಕೆ ದವಾ. ಇಂದ್ರಿಯದ ಹುಣ್ಣು ಪರವಾ ಯಾವದೇ ತರದ ಶರೀರ ರೋಗವಾದರೂ ಮಾರಕೋನ್ಮುಖ ಸ್ಥಿತಿಯಲ್ಲಿದ್ದರೂ ೭ ದಿವಸದಲ್ಲಿ ಗುಣಕೊಡುವದು.
೪. ಗವಿ [illegible] ರೋಗಕ್ಕೆ [illegible]. ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿನಕ್ಕೆ ಗುಣ.
೫. ಯೋಗರಾಜ ಗುಗ್ಗುಳ. ಅರ್ಧಾಂಗವಾತ ಕೋಷ್ಠವಾತ, ಸಂಧಿಗತ ೫. ೮೦ ತರದ ವಾತರೋಗಕ್ಕೆ [illegible] ೧॥, ೧॥, ೨. ರೂ.
೬. ಕೆಮ್ಮಿನ ಗುಳಿಗೆ. ಕ್ಷಯ, ದಮ್ಮು, ಕೆಮ್ಮು, ೫. ಮೇಲೆ ರಾಮಬಾಣ. ಡ. ೧೦೦ಚಿಕೆ, ೧ ರೂ, ೧॥ ರೂ.
೭. ವಾತಪಿತ್ತ ಕಫನಾಶಕ ಜ. ಲಾಬಿನ ಗುಳಿಗೆ. ೨೫ ರ ಡ. ೮ ಆ ೧೦೦ ಕ್ಕೆ ೧॥ ರೂ.
೮. ಸಂಜೀವನಿ. ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ ಚಾತುರ್ಥಿಕ, ಸನ್ನಿಪಾತ, ೫. ಜ್ವರಗಳ ಮೇಲೆ ೨೫ ರ ಡ. ೧ ರೂ. ೧೦೦ ರ ಡ. ೩ ರೂ.
೯. ಚಂದ್ರಪ್ರಭಾ ವಟಿ — ೨೦ ತರದ ಮೇಹ, ಮೂತ್ರದಾಹ, ಅಶ್ಮರಿ, ಧಾತುಕ್ಷಯ, ಸ್ವಪ್ನಾವಸ್ಥೆ, ೫ ಡ. ೨ ರೂ.
೧೦. ದಂತಮಂಜನ. ಹಲ್ಲು ನೋವು, ಹುಳ, ಕೆಳತ, ಅಲಗಾಡುವಿಕೆ ೫. ಕೂಡಲೆ ಗುಣವಾಗುವವು. ಡ. ೨ ಆಣೆ, ೧೨ ಕ್ಕೆ ೧ ರೂ.
೧೧. ಜಂತುವಿನ ಔಷಧ. ಹೊಟ್ಟೆ ಹುಳಗಳ ಮೇಲೆ ರಾಮಬಾಣ ಪುಡಿ ೧ಕ್ಕೆ ೧॥ ಆ ೨೫ ಕ್ಕೆ ೧॥ ರೂ. ೧೦೦ಕ್ಕೆ ೫॥ ರೂ.
೧೨. ಬಜ್ಜಿಯ ಮಲಮು. ಡ. ೪ ಆ. ೧೨ ಕ್ಕೆ ೨॥ ರೂ. ಸಾಕಷ್ಟು ಪಿತ್ತಕ್ಕೆ ಡ. ೧॥ ರೂ. ೨॥ ೫ ರೂ.
೧೩. ವಾತಸಂಹಾರ ತೈಲ. ನಾರಾಯಣ ತೈಲ, ಅರ್ಧಾಂಗವಾತಾದಿ ಅನೇಕ ವಾತ ರೋಗಕ್ಕೆ ಸಿದ್ಧ ತೈಲಗಳು. ಬಾ. ೧॥ ರೂ. ೨॥ ರೂ.
೧೪. ವಾಕ್‌ಸಂಜೀವನಿ ಗುಟಿಕಾ. ಮಾತು ತಡಿಯುವಿಕೆ, ತು ತು ತು ಆಗುವಿಕೆ ೫. ಡ. ೨. ರೂ.
೧೫. ಪುತ್ರಜೀವನಲೇಹ. ಗರ್ಭಪತನವಾಗುವ ಸ್ತ್ರೀಯರಿಗೆ ಸಿದ್ಧೌಷಧಿಯು. ಡ. ೪ ರೂ. ೬. ಟಪಾಲ ಬೇರೆ. ಅನುಪಾನ ಪತ್ರ ಔಷಧದ ಸಂಗಡ. (ಆಯುರ್ವೇದ ಗುಣರತ್ನಮಾಲಾ ಪುಸ್ತಕ ಉಚಿತ) ಇವಲ್ಲದೆ ಅನೇಕ ತರದ ರೋಗಗಳ ಮೇಲೆ ಪಾಕ, ಲೇಹ, ಚೂರ್ಣ, ತೈಲ, ವಟಿಗಳ ಬಗ್ಗೆ ಸ್ಟಾಂಪ ಇಟ್ಟು ಪತ್ರದ್ವಾರ ಯಾ ಸಮಕ್ಷ ತಿಳಕೊಳ್ಳಬಹುದು.

ಪತ್ತೆ:— ಮೇನೇಜರ, ಆಯುರ್ವೇಚಿಕಿತ್ಸಾಮಂದಿರ. ಪೋ. ಚೆಂಡಿಯೆ, ತಾ ಕಾರವಾರ.

ಮುಂಬಯಿ ಏಜಂಟ.— R. C. KAMAT, *Teashop, Store Lane, Fort, Bombay.*

ಗಾರೀಖು ... ವರ್ಷ ಪ್ರಾರಂಭ
... ಸಚಿತ್ರ ಮಾಸಪತ್ರಿಕೆ

ಇದರಲ್ಲಿ ... ಸಾಹಿತ್ಯ ಧಾರ್ಮಿಕ ಸಾಮಾಜಿಕ ... ಆರ್ಥಿಕ ಇತ್ಯಾದಿ ವಿಷಯಗಳ ... ಪ್ರಪಂಚ ಪರಿಚಯ ... ಪ್ರತಿ ಸಂಚಿಕೆಯಲ್ಲಿ ... ವರ್ಗಣಿ ರೂ ...
... ಧಾರವಾಡ

ರೋಗದಿಂದ ನರಳಬೇಡಿರಿ

ನಮ್ಮಲ್ಲಿ ... ಬಿಳಿಜರ, ಕಾಮಿಲಿ, ... ಮುಂತಾದ ... ಪ್ರದರ, ... ಅಮೇರಿಕನ ... ರೋಗವಾಗಿ ...

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ ಕಾರವಾರ (೨) ಹುಬ್ಬಳ್ಳಿ ಮುಂಡಗೋಡ ಶಿರ್ಶಿ ಕುಮಟಾ ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ ಪ್ರಯಾಣಿಕರಿಗೆ ... ಎಲ್ಲಾ ಸ್ಟೆಶನುಗಳಲ್ಲಿ ... ಏರ್ಪಾಡು ಮಾಡಿದೆ ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa
PROPRIETOR



... ಮಾಡಿದ ... ಸಿಂಗಲ ... ಡಬಲ ... ನಮ್ಮಲ್ಲಿದ್ದು ನಿಮಗೆ ಅವಶ್ಯವಿರುವ ಸಾಮಾನು ಬೇರೆ ದೇಶದಿಂದ ತರಿಸಿಕೊಡಲಾಗುವದು

ಎಸ್ ಎಲ್ ಧೂಳಪ್ಪ ಮತ್ತು ಬ್ರದರ್, ಶಿರಸಿ.

ಅತ್ಯದ್ಭುತ ! ಅತ್ಯದ್ಭುತ ! !

ಜೀವನಾಧಾರ

ಅನೇಕ ... ವಿಖ್ಯಾತ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ

ಎಲೆಕ್ಷಿರ್ ಆಫ್ ಲೈಫ್

ಅಂದರೆ ಸರ್ವ ರೋಗ ನಾಶಕ ಸರ್ವಾರೋಗ್ಯದಾಯಕ ಅಜೀರ್ಣ ತಲೆನೋವು ವಾಂತಿ ಅತಿಸಾರ, ಜ್ವರ, ... ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಹೊಡೆದು ಚಲ್ಲುವ ಒಂದೇ ರಾಮಬಾಣವಿದು ಎಲ್ಲ ರೋಗಗಳ ಮೇಲೆ ಬ್ರಹ್ಮಾಸ್ತ್ರ ಒಂದು ಸೀಸೆಯುದ್ದರೆ ಒಬ್ಬ ಡಾಕ್ಟರನಿದ್ದಂತೆಯೇ !!

ಒಂದು ಸೀಸೆಗೆ ೭-೧-೬-೦ ಸಣ್ಣ ಸೀಸೆಗೆ ರೂ ೦-೮-೦ ಟಪಾಲ ಖರ್ಚ ಬೇರೆ

ಜೀವನಾಧಾರ ಡಿಪೋ ಮೈಸೂರು

ಬ್ರಾಂಚ— **ಜೀವನಾಧಾರ ಡಿಪೋ, ಹುಬ್ಬಳ್ಳಿ**

ರಾಗದ ಪೆಟ್ಟಿಗೆಗಳು

ನಾಟಕಿ ಸಾಮಾನು: ತಬಲ, ದಕ್ಕೆ ವಗೈರೆ.



... ಪೆಟ್ಟಿಗೆ ಸಿಂಗಲ ರೂ ... ಡಬಲ ರೂ ೪೦ ... ೧೦೦
... ಕಾಲುಪೆಟ್ಟಿಗೆ ರೂ ೬೫ ೭೫ ೧೦೦ ...
... ತಬಲೆ (ಡಗ್ಗದ ಸಹಿತ) ರೂ ... ೧೦
ಹಾರ್ಮೋನಿಯಂ ಗ್ಯಾಸ ಕಿಂ ರೂ ...
ತಬಲೆ ಗ್ಯಾಸ ಕಿಂ ... ಆಣೆ
ಮಾಹಿತಿಗೆ ಕ್ಯಾಟಲಾಗು ಪುಕ್ಕಟೆ ದೊರಕುವದು

ಗೋಪಾಳ ಸಖಾರಾಮ ಮುಕ್ತಿ ಕಂಪನಿ

ನಂ ... ವಿಠ್ಠಲವಾಡಿ ಎದುರಿಗೆ

ಕಾಳಬಾದೇವಿ ರೋಡ, ಮುಂಬಯಿ

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮದುವು ಮಹೌಷಧಿಯಾಗಿದ್ದು ಬಹಳ ... ರುಚಿಕರವಾಗಿಯೂ ಇ... ಸೇವನದಿಂದ ವಾತ ಪಿತ್ತ, ಕಫ ಈ ತ್ರಿದೋಷಗಳ ... ಬೇನೆಯು ... ವರ್ಷದ ಮುದುಕರ ... ತರುಣರಂತೆ ... ಒಂದೇ ಸಪಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ... ಮೂತ್ರಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ... ಹಾಗೂ ... ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುನ ಸೇವನ ಮಾಡಿ ... ಅದರಿಂದ ಕ್ಷಯರೋಗ, ಉದರರೋಗ ... ಹಸಿವೆ ... ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ್ಯದು ... ಒಂದು ಬಾಟಲಿಯಿಂದ ಗುಣಬರುವದು ... ಒಂದು ಬಾಟ್ಲಿಯ ಕಿಮ್ಮತ್ತು ೧ ರೂಪಾಯಿ ಮೂರು ಬಾಟಲಿಗೆ ... ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ... ಬೀಳುವದಿಲ್ಲ ತನನ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ... ಖರ್ಚ ಬೇರೆ ... ೧೨೦—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ ...

ಕ್ರಿಸ್ತನ ವಚನಗಳನ್ನು ಪಾಲಿಸುವ ಧರ್ಮವೇ ಕ್ರೈಸ್ತ ಧರ್ಮವು

(೨೮ ೨೬ ನೇ ಸಂಚಿಕೆಯಿಂದ ಮುಂದೆ ಸಾಗಿದ್ದು)

ಪ್ರಿಯ ಬಾಂಧವರೇ, ನಮ್ಮ ಈ ಕಾನಡಾ ಜಿಲ್ಲೆಯ ದುಳಿದವರೆಂದು ಅನ್ನಿಸಿಕೊಳ್ಳುವ ನಾಡೋರ-ಕೊಂ ವರೂ ಸಮಾಜಗಳು ನಮ ಗಿಂತ ಸಂಖ್ಯೆಯಿಂದ ವೆ ಯಿರುತ್ತಿದ್ದರೂ ಅವರ ಸ್ಥಿತಿಗತಿಯು ನಮ್ಮದ ಎಷ್ಟೋ ಪಾಲು ಶ್ರೇಷ್ಠವಾಗಿರುತ್ತದೆ ಅವರಲ್ಲಿ ಎಲ್ಲ ೩ ಜನ ನಾಯಾಂಗರಾವರಲ್ಲವೆ? ಆ ಪತಿ ಂದು ಸಮಾಜದಲ್ಲಿ ಸ ನಿರಾರು ರೂಪಾಯಿ ಶೀರ್ವ ಮುವಂಥ ಸಾವಿರಾರು ಖುತೆದಾರರಿರುವರಲ್ಲವೇ? ನಮ್ಮ ೦೦೦ ಜನರಲ್ಲಿ ಜಮೀನದಾರರು ಕೈಬೊಟ್ಟಗಳ ರೆ ಎಣಿಸುವಷ್ಟು ಸಹ ಸಿಗುವದು ದುರ್ಲಭವು ಂ ಅನುಭವವನ್ನು ಈ ಜಿಲ್ಹೆಯ ವ್ಹೋಟಿಂಗ ಲಿಷ್ಟನಲ್ಲಿ ಮಾಡಿಕೊಳ್ಳಿರಿ

ದರಂತೆ ವ್ಯಾಪಾರೋದ್ಯೋಗಗಳಲ್ಲಿ ... ಟನರ ಹ್ಯಾಗಿರುವದೆಂಬುದನ್ನು ನೋಡೋಣ ಕೆಟ ನವು ರು, ದಲಾಲರು ಕಾಂಟ್ರಾಕ್ಟದಾರರು ನಮ್ಮಲ್ಲಿ ಎಷ್ಟು ದಿ ಇರುವರು? ವಕೀಲರ ಪಾವಿಗೆ ಸರಕಾರೀ ದೊಡ್ಡ ನವಕರರು ನಮ್ಮಲ್ಲಿ ಎಷ್ಟು ಮಂದಿ ಇರು ? ಮೆಟ್ರಿಕ್ ಫಯ್ನಲ ಟ ಷ ಪರೀಕ್ಷೆ ಪರೀಕ್ಷೆಗ ಪಾಸಾದವರು ನಮ್ಮಲ್ಲಿ ಎಷ್ಟು ಮಂದಿ ಇರುವರು? ಈ ಸಂಗತಿಗಳನ್ನು ಕುರಿತು ನೀವು ಎಂದಾದರೂ ಸ್ವಾಭಿಮಾನದಿಂದ ವಿಚಾರಿಸಿರುವಿರೋ? ಇಲ್ಲ ಮೇಲಿನ ಪ್ರಶ್ನೆಗಳಿಗೆಲ್ಲ ಯಾರೂ ಇಲ್ಲವೆಂತಲೇ ಉತ್ತರವು ಬರುತ್ತ ಹೊರಡುವದು

ಪೋಲೆ ನಮೂದಿಸಿದ ನಾಡೋರ ಕೊಂಕಣ ವ ರಾಠಾ ಜನರು, ಬ್ರಾಹ್ಮಣರಂತೆ ತಾವದರೂ ಸರಕಾರೀ ನವಕರಿಯಲ್ಲಿಯೂ, ವಿದ್ಯೆಯಲ್ಲಿಯೂ ಮುಂದೆ ಬರಬೇಕೆಂದು ತಮ್ಮ ಸಂಘದ್ವಾರ ಪ್ರಯತ್ನಿಸುವರಲ್ಲವೇ? ಸಭೆಗಳಲ್ಲಿ ಯೋಗ್ಯ ಠರಾವುಗಳನ್ನು ಮಾಡಿ ಅವುಗಳನ್ನು ಸರಕಾರಕ್ಕೆ ಸಾದರಪಡಿಸಿ ಲಕ್ಷ್ಯ ಸರಕಾರೀ ನವಕರಿ ಇವುಗಳಲ್ಲಿ ಯೋಗ್ಯ ಸವಲತ್ತುಗಳನ್ನು ಸರಕಾರದಿಂದ ಪಡೆಯುತ್ತಿರುವರಲ್ಲವೇ? ಇದು ಅನ್ಯಂತ ಪರರು" ಎಂದು ತಿಳಿದು ನಡೆದದ್ದರ ಪರಿಣಾಮವೋ, ವ್ಯಕ್ತಿಸ್ವಾರ್ಥವೋ ಯೋಚಿಸಿ ನೋಡಿರಿ

ಪ್ರಿಯ ಬಾಂಧವರೇ ನನ್ನ ಕಳವಳವು ಇಷ್ಟರಿಂದಲೂ ತೀರಲಿಲ್ಲ ನಿವು ಇನ್ನೂ ಮುಂದೆ ಹೆಜ್ಜೆಯಿಟ್ಟು ಹೊಲೆಯ ಚಮಗಾರರಂಥ ಅಸ್ಪೃಶ್ಯ ಹಾಗೂ ಅಲ್ಪಸಂಖ್ಯಾಕ ಜನರ ಕಡೆಗೆ ಹೊರಳಿನೋಡಿರಿ ಸರಕಾರವು ಅವರಿಗೆ ಪ್ರಾಥಮಿಕ ಹಾಗೂ ಇಂಗ್ಲೀಷ ಶಾಲೆಗಳಲ್ಲಿ ಸ್ಕಾಲರ್ಶಿಪ್ಪಗಳನ್ನು ಹೇರಳವಾಗಿ ಕೊಡುತ್ತಿರುವದ ಕೆಲವು ದಿವಸಗಳಲ್ಲಿ ಅವರು ನಮಗಿಂತ ಮೇಲಾಗುವರು ಈ ಜಿಲ್ಹೆಯಲ್ಲಿ ಸುಮಾರು ೨೦೦೦ ಇರುವಂಥ ಚಮಗಾರರಲ್ಲಿ ೨ ಮಂದಿ ಮ್ಯಾಟ್ರಿಕ್ಯುಲೇಟರಿರುವರು ಆದರೆ ನಮ್ಮ ೧೬೦೦೦ ಜನರಲ್ಲಿ ೩ ಮಂದಿ ಮಾತ್ರ ಇರುವರು ಸರಕಾರೀ ಸ್ಕಾಲರ್ಶಿಪ್ಪಗಳನ್ನು ಪಡೆಕೊಂಡು ಇಂಗ್ಲಿಷ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳೂ ಅವರಲ್ಲಿ ಹೆಚ್ಚುತ್ತಲಿರುವರು ಹೀಗಾಗಿ ಸ್ವಜನಾಭಿಮಾನವೂ, ಸ್ವದೇಶಪ್ರೀತಿಯೂ ಹೊಲೆಯ—ಚಮಗಾರರಲ್ಲಿ ಸಹ ತಲೆದೋರಿರುವದಲ್ಲವೇ? ಇನ್ನು ಕೆಲವು ವಿದ್ಯಾವಂತರು ಅವರಲ್ಲಿ ಆಗಲಾಗಿ, ಸಂಘಶಕ್ತಿಯಿಂದ ಅವರು ಇನ್ನೂ ಮುಂದೆ ಧುಮುಕುವರು ಅಂದ ಮೇಲೆ ಇಂಥ ನಾಯಾಲಿಗಳಲ್ಲಿ ಅವರಗಿಂತಲೂ ನಾವು ಹಿಂದಾದರೆ, ನಮಗೆ ಕಲಂಕವಲ್ಲವೇ? ನೊದಲೇ ನಾವು ನೂರಾರು ಕೆನರಾ ಕ್ರಿಸ್ತರು ಅಪ್ರಸಿದ್ಧರು ಸದರಿಂದ ನಮ್ಮ ಗೋವಾ ಪಾದ್ರಿಗಳ ಪ್ರೇರಣೆಯಿಂದಲೋ ಏನೋ ಅವರ ಪಕ್ಷಪಾತಿಗಳು ಮುಂಬಯಿಯ 'ಆಂಗ್ಲೋ ಲುಸಿಟಾನೋ' ಪತ್ರದಲ್ಲಿ ಪ್ರಸಿದ್ಧಿಸಿರುವರು ನಾವು ಅವರ ಕೈಕೆಳಗೆ ೩೦೦-೪೦೦ ವರ್ಷಗಳ ವರೆಗೆ ಇರುತ್ತಿದ್ದರೂ ವಿದ್ಯೆಯಲ್ಲಿ ನಾವು ತೀರ ಹಿಂದುಳಿದೆವೆ ಈ ಆರೋಪವನ್ನು ತಮ್ಮ ತಲೆಯ ಮೇಲಿಂದ ತೆಗೆದು ಹಾಕಲಿಕ್ಕೆ ಮಾಡಿದ ಪ್ರಾಮಾಣಿಕ ಉಪಾಯವಿದು! ನಿಜವಾಗಿ ಐಕ್ಯವೇ ಕ್ರೈಸ್ತರ ಮುಖ್ಯ ಲಕ್ಷಣವೆಂದು ಮೇಲೆ ಹೇಳಿರುತ್ತದಷ್ಟೇ? ಕ್ರಿಸ್ತನಲ್ಲಿ ನಾವೆಲ್ಲರೂ ಐಕ್ಯ ಹೊಂದಬೇಕಾಗಿದೆ "ನನ್ನನ್ನು ನೀವು ಪ್ರೀತಿಸುತ್ತಿದ್ದರೆ ನನ್ನ ಆಜ್ಞೆಗಳನ್ನು ನೀವು ಕೇಳಿರಿ" ಎಂಬುದೇ ನಮಗೆ ಕ್ರಿಸ್ತನ ಅಪ್ಪಣೆಯು ಈ ಅಪ್ಪಣೆಯು ಯಾವದೆಂದರೆ ನಾವು ಪರಸ್ಪರ ಪ್ರೀತಿ ಮಾಡಬೇಕೆಂಬುದೇ ಪ್ರೀತಿಯೋ ಕ್ರಿಸ್ತ ರಾಜ್ಯದ ಅಡಿಗಲ್ಲಾಗಿರುವದರಿಂದ ಅವನ ರಾಜ್ಯವು ಅಂತ್ಯದ ವರೆಗೂ ಬಾಳುವದೆಂತಲೂ ಅಲೇಕ್ಸಾಂದರ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ... ಮಾಡುತ್ತಾರೆ ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕ ... ಕೊಡಬೇಕು ಕೂದಲುಗಳನ್ನು ಅಲಕ್ಷ ಮಾಡಿದರೆ ಅವು ಬಾಡುವವು ... ದುರುವವು ನೀವು ... ಚೆಲೋ ಕೂದಲನ್ನು ಕೊಡಬೇಕು ಶ್ರೇಷ್ಠವಾದ ... ಕೂದಲನ್ನು ವ್ಯಾವಷ

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು ... ದ ಕೂಡಲೆ ... ಹೊಟ್ಟು ಹೋಗುತ್ತದೆ ... ಯಿಂದ ತಲೆ ... ದೊರೆ ... ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ... ಸ್ತವೆ

ಎಲ್ಲಾ ಚೆಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿ

ಬಾಟ್ಲಿ ೧ಕ್ಕೆ ರೂ	೧—೦—೦
೬ ಡಜನ್ನ ,	೦—೬—೦
೩ ಬಾಟ್ಲಿಗಳಿಗೆ	೨ ೧೦—೦
ಅಂಚೆವೆಚ್ಚ	೦ ೧೨—೦

ನನ್ನ ...

... ಕಾರದಿಂದ

... ಟ್ಲಿ

... ರೂ	೨—೦—೦
	೧—೪—೦
... ಪಾಲಿ ...	೦—೧೨—೦
	೦—೬—೦

ಕ್ರಿಸ್ತನ ... ದಿನಿ ... ಮರ್ಗ ... ಡಿರಿ

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

... ಸುಗಂಧದ್ರವ್ಯದಲ್ಲಿ ಇಡೀ ... ಸಂಪಾದಿಸಬಹುದು ... ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳ ಸಿಗದು ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು ಇದಕ್ಕೆ ಮದ್ಯದ ಸ್ಪರ್ಶವಿಲ್ಲ

THE ANGLO INDIAN DRUG & CHEMICAL CO., LTD.

POST BOX, 2082 BOMBAY

ಜೂಲಿಯಸ್ ಸೀಝರ್ ಇವರ ಮತ್ತು ತನ್ನ ರಾಜ್ಯಗಳು ಬಲಿಯಾದ ಮೇಲೆ [illegible] ರಾಜ್ಯಸ್ಥಾಪಕರ [illegible] ಮಾಡಿದನಷ್ಟೇ. ಅವನು ಮರಿಯುವವರೆಗೂ ನ್ಯಾಪೋಲಿಯನ್ ಬೋನಾಪಾರ್ಟನು ಅವನ ಕೊನೆಯ ಹೋಲಿ ಕೈದು ಸಾಹೇಬರ ಕಡೆಗೆ ನಡೆದ ಸಂವಾದದಲ್ಲಿ ಒಪ್ಪಿಕೊಂಡನು. ಎಲ್ಲ ಸಂತ ಸಾಧುಗಳ ಜೀವನಚರಿತ್ರೆಯಲ್ಲಿ ಸಹ ಈ ಸದ್ಗುಣವು ತುಂಬಿ ತುಳುಕುತ್ತಿರುವದು. ಅವರು ಮನುಷ್ಯ ಪ್ರೀತಿ ಮಾಡುವಲ್ಲಿ ತನ್ನ ಇಡೀ ಜೀವನವನ್ನೂ, ದೇಹವನ್ನೂ ತೃಣಸಮಾನ ಬಗೆದರು. 'ಪರೋಪಕಾರಾರ್ಥಮಿದಂ ಶರೀರಂ' ಎಂಬ ಸೂಕ್ತಿಗೆ ಸರಿಯಾಗಿ [illegible] ಸೋಮಿಯಾರ ಎಂಬ ಸಾಧುವಂತೂ [illegible] *more than [illegible]* ಎಂದು [illegible] ಅಂಥ ಪರೋಪಕಾರ [illegible] ಅವರ [illegible] ತಾಳಿದ ಪ್ರೀತಿಯ [illegible] ದಯಾ, ಮಮತಾ, ಪರೋಪಕಾರ ಇವೆಲ್ಲವೂ [illegible] ಪ್ರೀತಿಯ [illegible] ಗಳೇ. ಸರಿ, ಅಂಥ [illegible] ಚರಿತ್ರಗಳನ್ನು ಪ್ರಸಿದ್ಧಪಡಿಸುವದಕ್ಕಾ! [illegible] ನ ಪವಿತ್ರ ದಿವಸಗಳನ್ನು [illegible] ಪಾಲಿಸುವರು. [illegible] ದಿವಸ ಅವರ ಚರಿತ್ರೆಗಳನ್ನು [illegible] [illegible] ರುತ್ತಲೆ [illegible] ಬಿಡುವದು ಕಂಡ [illegible] ಲ್ಲದೆ [illegible] ಹಕ್ಕಿಗಳ [illegible] ಹಕ್ಕಿಗಳು [illegible] ಗಳೊ [illegible] ದೃಷ್ಟಿ [illegible] ಹೊಳೆಯುವವು. ಆದರಂತೆ ಕ್ರಿಸ್ತ ಲಕ್ಷಣವಾದ [illegible] ಪ್ರೀತಿಯು [illegible] ವೇಲ್ಸ್ರೋರಿಕೆಯ ಲಕ್ಷಣಗಳಾದ [illegible] ನು, ಹಟ ವಗ್ಗೆರೆ [illegible] ತೂಡುವುಗಳ [illegible] ದವು ಹೆಚ್ಚು ಕಂಗೊಳಿಸುವದು. ಇದರಿಂದಾಗಿ ಸೇರಿಗದ [illegible] ಶಾಸನದಿಂದಲೂ ನಮ್ಮ ಸಮಾಜದಲ್ಲಿ ಅವಶ್ಯ ರಾಜಿಯ [illegible] ಯಿ ವೃಥಾವಾಗಿ [illegible] ಈ ಹಣವನ್ನು [illegible] ಮಲ್ಲಿಗೆ ಉಳಿಸಿ ಅವುಗಳಿಂದ ನಮ್ಮ ಸಮಾಜೋದ್ಧಾರದ ಅನೇಕ ಸತ್ಕಾರ್ಯಗಳನ್ನು ಮಾಡಬಹುದು. ಆದರೆ [illegible] ಕಾರ್ಯಗಳಿಗೆ ನಮ್ಮೊಳಗಿನ ಪ್ರತಿಷ್ಠಿತ ಜನರ ಬೆಂಬಲವಿಲ್ಲ. ಕ್ರಿಸ್ತೀ ಸದ್ಗೃಹಿಗಳೆಂದು ಹೆಸರಾದ ಧೈರ್ಯನಿಗಳನ್ನು ನಟಿಸಲಿಕ್ಕೆ ಯಾವ ತಡೆಯೂ ಇಲ್ಲ. ಅವುಗಳಿಗೆ ತಕ್ಕಂತೆ ತವಾಗಿ ವಿದ್ಯೆ ತಾರೀಕ [illegible] ಎಂಬ ಬಗೆ [illegible] ಹೀಗಾಗಿ [illegible] ಪ್ ಟೇಬಲ್ [illegible] ವಸ್ತ್ರ ಭರಣಗಳನ್ನು ತರಿಸುವದು [illegible] ಸರಿಯಾಗಿ ಕೂತ ನಟಿಸುವದು, ಸರಿ ಕುಡಿಯುವದು, ಜೂಜಾಟ, ಸಿಗರೇಟ ಸೇದುವದು ವಗ್ಗೆರೆ ವ್ಯಸನಗಳು ಚಿಕ್ಕಂದಿನಲ್ಲೇ ನಮ್ಮ ಹುಡುಗರ ಲಕ್ಷವನ್ನು ಆಕರ್ಷಿಸುವವು. ಈ ಪ್ರಕಾರ [illegible] ವಿದ್ಯಾಭಿರುಚಿಯಿರುವ [illegible] ಬಗೆಯೇನು? ಅಜ್ಞಾನಿಗಳಾದ ತಾಯಿ-ತಂದೆಗಳಾಗಲಿ, ಜ್ಞಾನಿಗಳಾದ ಪಮಾಲೋಚಕರಾಗಲಿ ಆಗಲಿ ಅವರನ್ನು ಎಚ್ಚರಿಸುವದುಂಟೇ? ನೋವಲು ಇವೆಲ್ಲ ಪದ್ಧತಿಗಳು ಗೋವೆಯಿಂದ ಕಾರವಾರದಲ್ಲಿ ಬಂದು ಹೊಂದಿದ ಮೇಲೆ ಅಲ್ಲಿಂದ ಮುಂದೆ ಪಸರಿಸುವವು. 'ಸಂಗತಿ ಸಂಗದೋಷಃ' ಎಂಬಂತೆ ಗೋವೆಯ ಸರಹದ್ದಿನಲ್ಲಿರುವ ಕಾರವಾರ ತಾಲೂಕಿನಲ್ಲಿ ಇವು ವಿಶೇಷವಾಗಿ ಹಬ್ಬಿರುತ್ತವೆ. ಅವುಗಳಿಂದ ನಮ್ಮ ಸಮಾಜದ ನೀತಿಭ್ರಷ್ಟವಾಗುತ್ತದೆ; ದುಡ್ಡು ಹಾಳಾಗುತ್ತದೆ, ಶಕ್ತಿ ನಷ್ಟವಾಗುತ್ತದೆ, ಬುದ್ಧಿ ಹೀನವಾಗುತ್ತದೆ ಮತ್ತು ನಮ್ಮ ಬಹುಸಂಖ್ಯಾಕ ಹಿಂದೂ-ಮುಸಲ್ಮಾನ ಬಾಂಧವರ ದೃಷ್ಟಿಯಿಂದ ನಮಗೆ ಅಪಕೀರ್ತಿ ಪ್ರಾಪ್ತವಾಗುತ್ತದೆ. ಅಂಥ ಮೇಲೆ ನಮ್ಮ ಇಂಥ ಸ್ಥಿತಿಯು ಹಾಲೂಲಕ ಇತ್ತ ಇಡಿಗೆ ಕ್ರಿಸ್ತ ಪತ್ರಾಪ್ರಕಾರ ಮಾಗುವದೆಂತು ಬತ್ತಬಟ್ಟಿಗಿರಲಿ. ಇದ್ದ ಧರ್ಮವು ಲೋಪವಾಗುವ ಜಿಲ್ಲೆಗಳಷ್ಟೇ ಕಾಣುತ್ತವೆ. ಹಳೆಯಾಳ, ಯಲ್ಲಾಪುರ ವಗ್ಗೆರೆ ತಾಲೂಕುಗಳಲ್ಲಿ ಎಷ್ಟೋ ಮಂದಿ ಕ್ರಿಸ್ತೀ ಜನರು ತಿರುಗಿ ಹಿಂದೂ ಧರ್ಮಕ್ಕೆ ಸೇರಿದರು. ಆದರೆ ಜುಜೆ, (ಜಿಸ್ತ್ಯಾಂವ) ಮಾನ್ಯುವೆಲ (ಮನವೇಲ) ಎಂಬ ಕ್ರಿಸ್ತೀ ಹೆಸರುಗಳು ಅವರಲ್ಲಿ ಇನ್ನೂ ರೂಢವಾಗಿ ಉಳಿದಿವೆ. ಅದರಂತೆ ಲಗ್ನ ಮುಂತಾದ ಸಮಾರಂಭಗಳಲ್ಲಿ ಸರಾಯಿ ಕುಡಿದು ಗಂಡಸರೂ ಹೆಂಗಸರೂ ಕೂಡಿ ಕುಣಿದಾಡುವ ಗೋವಾ ಪದ್ಧತಿಯು ಮಾತ್ರ ಅಚ್ಚಳಿಯದೆ ಉಳಿದಿರುವದು. ಒಟ್ಟಿನ ಮೇಲೆ ದೊಡ್ಡವರಿಗಾಗಲಿ, ಸಣ್ಣವರಿಗಾಗಲಿ ವಿನೋದೋಲ್ಲಾಸವೆಲ್ಲ ದುಂದುಗಾರಿಕೆಯು ವ್ಯಸನಗಳು ಬಹು ಬೇಗ ಅಂಟಿಕೊಳ್ಳುತ್ತವೆ. ಮತ್ತು ಅವು ಒಮ್ಮೆ ಹತ್ತಿದ ಮೇಲೆ ಘಾತವಾಗಿ ವಂಶಪರಂಪರಾಗತವಾಗಿ ಸಾಗುತ್ತವೆ. ಕಡೆಗೆ ಅವುಗಳನ್ನು ಕಿತ್ತುಹಾಕುವದು ಬಲು ಕಷ್ಟವು. ಅವುಗಳಿಂದ ಹಣ, ವೇಳೆ, ಮತ್ತು ಶಕ್ತಿ ಇವು ವ್ಯರ್ಥವಾಗುತ್ತವೆಂಬುದು ಲಕ್ಷಕ್ಕೆ ಬರುವದಿಲ್ಲ. ಮೆಚ್ಚಿದವನಿಗೆ ಮಸಣ ಸವಿಯಂತೆ, ಅಲ್ಲದಂತ ಕೆಲಸಗಳಲ್ಲಿ ಇವು ಹರಿದುಹೋದರೆ, ಕ್ಷಣಿಕವಾಗಲಿ, ಉದ್ಯೋಗವ್ಯವಸಾಯಗಳಾಗಲಿ ಅವು ಬೆಳೆಯುವ ಬಗೆ ಹ್ಯಾಗೆ? [illegible] ಕ್ರಿಸ್ತ ಮತ ಬಾಳಿದ ಸಮಾಜದ [illegible] ಇದ್ದದ್ದರಲ್ಲಿ ಆಶ್ಚರ್ಯ [illegible] ಮೇಲೆ ವಿವರಿಸಿದ ದುಷ್ಕಾರ್ಯಗಳಾದ ಅಂತಃ [illegible] ಶಕ್ತಿ [illegible] ಕೊಟ್ಟಿರುವ ಫಲವಿದು. ಇದನ್ನು ನಾವು ಅರಿತು [illegible] ನೋಡಬೇಕಾಗುವದು. ಈ ಆರೋಪವು ನಮ್ಮ ಧರ್ಮಾಧಿಕಾರಿಗಳ ಮೇಲೆ ಬಂದರೆ, ಅವರು ನಾವು ಹೀನಕುಲದವರೆಂದು ಜಾಹೀರ ರೀತಿಯಿಂದ ಕನ್‌ಫೆಸನ್ ಮಾಡಿ ವಿಧಿಯಿದು ನಮಗೆ ಸತ್ಯ ಕನ್‌ಫೆಸನ್ ಮಾಡಿಸುವವರ ಕರ್ತವ್ಯವಿದು.'

ಸ್ವಾಮಿ ಯೇಸು ಕ್ರಿಸ್ತನ ಮೇಲೆ ಬಂದ ಪ್ರತಿಯೊಂದು ಸಂಕಟ ಕಾಲದಲ್ಲಿ ಅವನ ದಯೆಯು ಕಂಡು ನಮ್ಮ ಹಿತಾಹಿತಗಳ ಕಡೆಗೇ ಇತ್ತು. ಕ್ರೂಜು ಈ ಕಾಲಕ್ಕೆ ತನಗೆ ಆಗುತ್ತಿರುವ ಕಷ್ಟ—ಹಿಂಸೆಗಳ ಕಡೆಗೆ ಅವನು ಏನೂ ಲಕ್ಷ ಮಾಡುತ್ತಿದ್ದಿಲ್ಲ. ಜೋದಾಸನ ವಿಶ್ವಾಸಘಾತಕತನ ಮತ್ತು ಯೆಹೂದಿಯರು ಅವನನ್ನು ಹಿಡಿದು ಹೊಡೆಯುತ್ತ, ಬಡಿಯುತ್ತ ನಡೆಯಿಸಿಕೊಂಡು ಹೋಗುತ್ತಿರುವಾಗ, ಎಷ್ಟೋ ಮಂದಿ ಹೆಂಗಸರು ಅವನ ಬಗ್ಗೆ ಕನಿಕರಪಟ್ಟು ಅಳುತ್ತ ಅವನನ್ನು ಹಿಂಬಾಲಿಸಲು ಅವನು ಹಿಂದಿರುಗಿ ಅವರನ್ನು — ಎಲೈ ಹೆಂಗಸರೇ, ನನ್ನ ಬಗ್ಗೆ ನೀವು ಅಳಬೇಡಿ. ನಿಮ್ಮ ಪಾಪಗಳ ಬಗ್ಗೆ ಮತ್ತು ನಿಮ್ಮ ಮಕ್ಕಳ ಬಗ್ಗೆ ಅತ್ತುಕೊಳ್ಳಿರಿ, ಎಂದು ಉಪದೇಶಿಸಿದನು. ಕಾರಣ ನಾವು ಸದ್ವರ್ತನವುಳ್ಳವರಾಗಿ ಮಕ್ಕಳ ಶಿಕ್ಷಣದ ಕಡೆಗೆ ಲಕ್ಷ್ಯ ಪೂರೈಸಿದರೆ, ಈ ವಚನವನ್ನು ನಾವು ಪಾಲಿಸಿದಂತಾಗುತ್ತದೆ. ಮತ್ತು ಪ್ರತ್ಯಕ್ಷ ಇಡೀ ಜಗತ್ತಿನ ಮೇಲೆ ಶಿಕ್ಷಣವೇ ಮಕ್ಕಳಿಗೆ ತಕ್ಕ ಮದ್ದು ಎಂದು ಅದನ್ನೇ ಅವರಿಗೆ ಪ್ರಸಾದಿಸುವರು. ಇದು ಎಲ್ಲರಿಗೂ ಗೊತ್ತುಂಟು. ಆದರೆ ನಮ್ಮಲ್ಲಿ ಇನ್ನುವರೆಗೂ ವಿದ್ಯಾಭಿವೃದ್ಧಿಗೆ ಯೋಗ್ಯ ಉತ್ತೇಜನ—ಸಹಾಯ ದೊರೆಯುತ್ತಿಲ್ಲ. ನಿಜವಾಗಿ ಶಿಕ್ಷಣದಿಂದಲೇ ದೇವರ ಮಹಿಮೆಯು ತಿಳಿಯುವದು, ಪಾಪ-ಪುಣ್ಯಗಳ ಅರಿವಾಗುವದು. ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದರೆ, ದೇವರೆದುರಿಗೆ ನಾವು ಮಹಾಪರಾಧಿಗಳಾಗುವೆವು. ಮಕ್ಕಳ ಅನ್ನ-ವಸ್ತ್ರಗಳಿಗಾಗಿ ನಾವು ಹ್ಯಾಗೆ ವ್ಯಯ ಮಾಡುತ್ತೇವೋ, ಹಾಗೆಯೇ ಅವರ ಶಿಕ್ಷಣಕ್ಕಾಗಿ ದುಡ್ಡು ಖರ್ಚು ಮಾಡುವದು 'ನಮ್ಮ ತಲೆಯ ಮೇಲಿನ ದೊಡ್ಡ ಜವಾಬದಾರಿ' ಕೆಲಸವು. ಆದರೆ ನಮ್ಮ ಸಮಾಜವು ಹಿಂದಿನಿಂದ ನಮ್ಮ ಕ್ರಿಸ್ತೀ ಧರ್ಮದ ಕಡೆ ಬಂದ ದುಂದುಗಾರಿಕೆಯಲ್ಲಿ ವಿಶೇಷವಾಗಿ ಮುಳುಗಿದ್ದರಿಂದ ಶಿಕ್ಷಣದ ಕಡೆಗೆ ಯೋಗ್ಯ ಲಕ್ಷ್ಯ ಪೂರೈಸುವದು ಹೆಣಗಾಡಾಯ ಮಹೂಗಿರುವದಿಲ್ಲ. ಇದಲ್ಲದೆ ಲಗ್ನ-ಮರಣ-ಜನನವಿಧಿಗಳ ನಿಮಿತ್ಯದಿಂದಲೂ, ಹಬ್ಬದ ವಾರ್ಷಿಕ ಪಗಳೂ, ಹಬ್ಬದ ವಗೈರೆಗಳ ರೂಪದಿಂದಲೂ ವಿಶಿಷ್ಟ ಧಾರ್ಮಿಕ ಕಂ ತಂಬೇಕಾಗುತ್ತದೆ. ಈ ರೀತಿಯಿಂದ ಕೂಡಿದ ಚರ್ಚ ಫಂಡು ಸಹ ಪಾದ್ರಿಗಳಿಂದ ಮನಸೋಕ್ತ ಖರ್ಚು ಮಾಡಲ್ಪಡುತ್ತದೆ. ಇದರ ಟ್ರೇಝರರ್ ಎಂಬ ಇಬ್ಬರು ಮೆಂಬರರನ್ನು ಅದರ ಮೇಲೆ ಹೆಸರಿನ ಪ್ರೀತಿ ನೇಮಿಸುವರು. ಅದರ ವಾರ್ಷಿಕ ಆಯ-ವ್ಯಯಗಳು ಸಹ ಗೊತ್ತಾಗುವದಿಲ್ಲ. ಈ ಪ್ರಕಾರ ನಮ್ಮ ಸಾರ್ವಜನಿಕ ಹಿತದ ದೃಷ್ಟಿಯಿಂದ ಆ ಫಂಡಿನ ಲಾಭ ನಮಗೆ ಆಗುತ್ತಿರುವದಿಲ್ಲ. ಇದಕ್ಕೆ ಸ್ವಾಮಿ ಯೇಸು ಕ್ರಿಸ್ತನು ನಮ್ಮೊಳಗಿದ್ದು ನಮಗೆ ಹಾಕಿಕೊಟ್ಟ ಇನ್ನೊಂದು ಕಿತ್ತಿಗೆ ಮಾಡಿದ ಉತ್ತರವೇ ಕಾರಣವು. ಐದು ರೊಟ್ಟಿ ಮತ್ತು ಎರಡು ಮೀನುಗಳಿಂದ ೫೦೦೦ ಜನರಿಗೆ ಊಟ ಮಾಡಿಸಿದ ಮೇಲೆ ಉಳಿದ ರೊಟ್ಟಿ—ಮೀನುಗಳ ತುಂಡುಗಳಿಂದ ೭ ಬುಟ್ಟಿಗಳು ತುಂಬಿದವು. ಅವು ವ್ಯರ್ಥವಾಗಬಾರದೆಂದು ಸ್ವಾಮಿ ಯೇಸು ಕ್ರಿಸ್ತನು ಅವುಗಳನ್ನು ಕೂಡಿಸಹೇಳಿದನು. ಕಷ್ಟಪಟ್ಟು ದುಡಿದ ಸಾವಿರಾರು ಜನರಿಗೆ ಕ್ಷಣಾರ್ಧದಲ್ಲಿ ಅನ್ನ ತಯಾರ ಮಾಡುವಂಥ ದೇವಪುತ್ರನಿಗೆ ಅವುಗಳನ್ನು ಕೂಡಿಸುವ ಅವಶ್ಯಕತೆಯೇನಿದ್ದಿತ್ತು? ಅಂದ ಮೇಲೆ ನಾವು ಅವನ ಶಿಷ್ಯರೆಂಬ ಅಭಿಮಾನವುಳ್ಳ ಬಡ ಕ್ರಿಸ್ತರು, ಸದ್ವ್ಯಯ, ಸದುಪಯೋಗ, ಸತ್ಪಾತ್ರದಾನ, ಸದಿಚ್ಛೆ ಸದ್ವರ್ತನ ಇವುಗಳನ್ನು ಬಿಟ್ಟು ನಮ್ಮಲ್ಲಿ ಈಗ ರೂಢ ವಾಗಿರುವ ದುಂದುಗಾರಿಕೆಗೆ ಈಡಾಗಬಹುದೋ?

ಓರ್ವ ನೊಂ| ಕೇ| ಕ್ರಿಸ್ತಬಂಧು.

ತ್ವರೆ ಮಾಡಿರಿ! ತ್ವರೆ ಮಾಡಿರಿ!

ಜಾಹಿರಾತದಾರರು ತ್ವರೆಮಾಡಿರಿ!

ಬಿಗ್ದಾಣ ರಾಮಾ ತಿಮ್ಮಣ್ಣ ಪಂಡಿತರಿಂದ ದೃಗ್ಗಣಿತ ಪ್ರಕಾರ ಗಣಿಸಿ ಪರಿಶೋಧಿಸಲ್ಪಟ್ಟ

ಪ್ರಭವ ಸಂವತ್ಸರದ ಪಂಚಾಂಗವು

ಅಚ್ಚಿನಲ್ಲಿದೆ!

ಪಂಚಾಂಗದಲ್ಲಿ ಜಾಹಿರಾತು ಕೊಡುವವರಿಗೆ ವಿನಾಯತು ಮಾಡಿತೆ!

ಈ ಪಂಚಾಂಗವು ಕಾನಡಾ ಜಿಲ್ಹೆಯೊಳಗಿನ ಹಳ್ಳಿ ಹಳ್ಳಿಗಳಲ್ಲಿಯೂ ಸಾಗರ-ಶಿವಮೊಗ್ಗ ಮೊದಲಾದ ಮೈಸೂರ ಪ್ರಾಂತದಲ್ಲಿಯೂ ಪ್ರಸಿದ್ಧವಿದೆ. ಜಾಹಿರಾತು ಕೊಡಲಿಚ್ಛಿಸುವವರು ಬರುವ ನವಂಬರ ತಾರೀಖು ೧೦ ರೊಳಗೆ ಈ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಿ ದರವಾಂ ತಿಳಕೊಳ್ಳಬಹುದು.

ಪತ್ತಾ—ಮೆನೆಜರ, "ಸ್ವಾರ ಆಫ್ ಕೆನರಾ ಪ್ರೆಸ್," ಕುಮಟಾ. (ಉ. ಕಾನಡಾ.)

पाहिजे !

प्रौढ वधू पाहिजे—गरीब वराण्याची १८ वर्षांवरील—गौ० सा० ब्रा० ज्ञातीतिल स्मार्त अगर वैष्णव संप्रदायाची — वत्स गोत्राम [illegible] — प्रौढ [illegible] वधू पाहिजे. अंगावर २००० दोन 'जाराचे दागीने शिवाय ३००० तीन [illegible] विम्याची पोलिसी नूत्न तिच्यां [illegible] होणार —विजवर —वय ६१ वर्षे— उत्पन्न स्थावर व-इतर मिळून ६० (एंषराशे) शिवाय स्वतंत्र मोठे घर-व जमीन वगैरे. गरजूनीं खालील पत्यावर व्यवहार करावा.

'सदानंद' C/o मेनेजर, 'केनरा वर्तमानपत्र' कुमटा P KUM

ಕಳ್ಳನ ಆತ್ಮಚರಿತ್ರ.

ಪೂರ್ವೇತಿಹಾಸ.

ಬಾಬೂ ಚಮ್ಮವಾಲಾನು ಬಾಂದ್ರಾ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಕೊಟ್ಟ ಜಬಾಬನ್ನು ಈ ಹಿಂದೆ ಕೊಟ್ಟಿರುವೆವು. ಆತನ ಪೂರ್ವಚರಿತ್ರೆಯು ಮನೋರಂಜಕವಿದೆ. ಈತನು ದೈವಜ್ಞ ಜಾತಿಯವನು. ಈತನು ನುಡಿಯುವದೇನಂದರೆ:— ೧೯೧೩ ನೇ ಇಸ್ವಿಯಲ್ಲಿ ನಾನು ಮರಾಠಿ ಮೂರನೇ ವರ್ಷದ ಟ್ರೇಂಡನಾದೆ. ಔರಂಗಾಬಾದ ಜಿಲ್ಹೆಯಲ್ಲಿ ಆರು ವರುಷಗಳ ವರೆಗೆ ಶಿಕ್ಷಕನಾಗಿದ್ದೆ. ಆ ಬಳಿಕ ನನಗೆ ನಿಜಾಮ ರಾಜ್ಯದ ಪರಬಿನ್ ಜಿಲ್ಹೆಯಲ್ಲಿ ಮುಖ್ಯಾಧ್ಯಾಪಕರ ಅಧಿಕಾರ ಶಿಕ್ಕಿತು. ಅಲ್ಲಿ ಜವಾಬು ಕೆಲಸವು ನನ್ನದಿತ್ತು. ಟಪಾಲ ಪೇಟಿಕಿನ ಕೆಲಸವನ್ನೂ, ಮನಿಯಾರ್ಡರಿನ ಕೆಲಸವನ್ನೂ ನಾನು ನೋಡುತ್ತಿದ್ದೆ. ೫೫೦೦ ರೂಪಾಯಿಗಳ ವಂಚನೆ ಮಾಡಿದ ಬಗ್ಗೆ ನನ್ನ ಮೇಲೆ ಖಟ್ಲೆಯಾಗಿ ನನಗೆ ೬ ತಿಂಗಳ ಶಿಕ್ಷೆಯಾಯಿತು. ಔರಂಗಾಬಾದ ಜೈಲಿನಲ್ಲಿ ನನ್ನನ್ನಿಟ್ಟರು. ನನಗೆ ಅಲ್ಲಿ ಕಾರಕೂನಿಯ ಜಾಗ ಶಿಕ್ಕಿತು. ಅಲ್ಲಿ ಲೊರೆನ್ಸ ಎಂಬ ಯುರೋಪಿಯನ್ ಜಾತಿಯ ಕೈದಿಯ ಸಹವಾಸವು ನನಗೆ ಪ್ರಾಪ್ತವಾಯಿತು. ತಕ್ಕು ಮಾಡಿದ ಆರೋಪದ ಮೇಲೆ ಈತನಿಗೆ ೬ ತಿಂಗಳ ಶಿಕ್ಷೆಯಾಗಿತ್ತು. ಈ ಮೊದಲು ಒಂದೆರಡು ಕಳ್ಳತನ ಬಗ್ಗೆ ಲೊರೆನ್ಸನಿಗೆ ಶಿಕ್ಷೆಯಾಗಿತ್ತು. ನಾನು ಚಿಂತಾವಿಷ್ಟನಾದೆ. ಸರಕಾರೀ ಕೆಲಸಕ್ಕೆ ನಾನೀಗ ಅಪಾತ್ರನಾಗಿರುವೆನು. ಮುಂದೇನು ಗತಿ? ಎಂದು ವಿಚಾರಿಸುತ್ತಿರುವರಷ್ಟರಲ್ಲಿ, ಲೊರೆನ್ಸನು ನನಗೆ ಕಳುವಿನ ಗುರೂಪದೇಶ ಕೊಟ್ಟನು. ಆತನ ತರ್ಕಗಳು ನನ್ನ ಮೇಲೆ ಬಿಂಬಿದವು. ಮುಂದೆ ಕಳ್ಳನಾಗಿ ನನ್ನ ನಿರ್ವಾಹ ಮಾಡಿಕೊಳ್ಳಬೇಕೆಂದು ನಾನು ನಿರ್ಧರಿಸಿ, ಕಳ್ಳಾಟಿಕೆಯ ಪ್ರಯೋಗಗಳನ್ನು ಕಲಿಯಹತ್ತಿದೆನು. ಗೋಡೆಗಳಿಗೆ ಕನ್ನ ಹೊಡೆಯುವದು, ಬೀಗಗಳನ್ನು ಮುರಿಯುವದು, ಬಾಗಿಲ-ಕಿಡಿಕಿಗಳ ಅಗಣಿಗಳನ್ನು ತೆಗೆಯುವದು ಮುಂತಾದ ಜ್ಞಾನವನ್ನು ಅಲ್ಲಿಯ ಸಹಕಾರಿ ಕೈದಿಗಳು ನನಗೆ ಸಪ್ರಯೋಗ ಕಲಿಸಿದರು. ಬಿಡುಗಡೆಯಾದ ಬಳಿಕ ಔರಂಗಾಬಾದ್ದಿಗೆ ಹೋಗಿ ೧-೧½ ತಿಂಗಳಲ್ಲಿ ೧೦-೧೫ ಕಳವುಗಳನ್ನು ಮಾಡಿದೆನು. ಮನೆಗಳನ್ನು ಒಡೆಯುವದಕ್ಕಾಗಿ ಅವಶ್ಯಕ ಸಾಮಗ್ರಿಗಳನ್ನೆಲ್ಲ ಸಂಗ್ರಹಿಸಿದೆನು. ಗುಂಡು ಹೊಡೆಯಲಿಕ್ಕೆ ನಾನು ಕಲಿಯಲಿಕ್ಕೆ ಹಿಡಿದೆನು. ಆದರೆ, ಹಿಂಸೆಯ ಯೋಚನೆಯು ನನಗೆ ಸರಿಬೀಳಲಿಲ್ಲ. ಆದರಿಂದ ನಾನು ಬೇರೆ ಮಾರ್ಗ ಹಿಡಿದೆನು.

***

ಚಮ್ಮವಾಲಾನ ಕಳ್ಳಾಟಿಕೆಗಳು.

[ಔರ]ಂಗಾಬಾದದಲ್ಲಿ ಒಂದು ಬಂಗಲೆಯನ್ನು ಬಾಡಿಗೆ [ಹಿಡಿ]ದೆನು. ಇದು ನನ್ನ ಕಳ್ಳಾಟಿಕೆಗಳ ಕೇಂದ್ರ[ವಾಯಿ]ತು. ಪೋಲೀಸರು ಎಗಿಲು ಬಿದ್ದರು. ಅನೇಕ [ಕಳವು]ಗಳು ನಡೆದವು. ಕಳ್ಳನ ಪತ್ತೆ ಹತ್ತದು. [ನನ್ನ ಮೇ]ಲೆ ಅವರ ಸಂಶಯವಿದ್ದಿಲ್ಲ. ನಾನು ಶ್ರೀಮಂತ[ನಾ]ದ ವ್ಯಾಪಾರಿಯಾಗಿ ಮೆರೆಯುತ್ತಿದ್ದೆ. ನನ್ನ[ಲ್ಲಿ ಒ]ಂದೆರಡು ವಾಹನಗಳಿದ್ದವು; ಒಂದು ತ್ರಿಜೋರಿಯಿತ್ತು; ಹೊರಬದಿಗೆ ನನ್ನ ಹೆಸರಿನ ಪಾಟಿಯಿತ್ತು; ಬಾಗಿಲಲ್ಲಿ ಪತ್ರ ಹಾಕುವ ಪೆಟ್ಟಿಗೆ ಇತ್ತು; ೩-೪ ಸೇವಕರಿದ್ದರು. ಕೆಲವು ಕಾಲ ಈ ವೇಷದಿಂದ ಪೋಲೀಸರ ಕಣ್ಣಿಗೆ ನಾನು ಧೂಳು ಹಾಕಿದೆನು. ಆದರೆ, ಕೊನೆಗೆ ನಿಜ ರೂಪವು ತಿಳಿದು, ಒಬ್ಬ ಜೊತೆಗಾರನೊಡನೆ ಪೋಲೀಸರು ನನಗೆ ಸೆರೆಹಿಡಿದರು. ಖಟ್ಲೆ ನಡೆಯುವಾಗ ನಾನು ಮೆಜಿಸ್ಟ್ರೇಟರ ಸ್ವಾಧೀನದಲ್ಲಿದ್ದೆ. ನಾನು ತಪ್ಪಿಸಿಕೊಂಡು ಪಾರಾದೆನು. ಮಾರನೇ ದಿನ ಜಲಗಾಂವದಲ್ಲಿ ನನಗೆ ಸೆರೆಹಿಡಿದರು. ಅಲ್ಲಿಂದಲೂ ತಪ್ಪಿಸಿಕೊಂಡು ನಾನು ಪುಣೆಗೆ ಬಂದೆನು. ಅಲ್ಲಿ ಒಂದು ಬಂಗಲೆಯನ್ನು ಬಾಡಿಗೆಗೆ ಪಡೆದು ಚಹಾದ ಪೇಟಿಯನ್ನು ತೆರೆದಿಸಿದೆನು; ನಾನು ಕಾಳು-ಕಡಿಯ ದಲಾಲನ ವೇಷ ತಾಳಿದೆನು. ಕೇಸರಿಯ ಮುದ್ರಣಾಲಯದಲ್ಲಿ ಹಸ್ತಪತ್ರಗಳನ್ನು ಛಾಪಿಸಿ, ಊರಲ್ಲಿ ಹಂಚಿದೆನು. ೨-೩ ತಿಂಗಳು ಈ ವೇಷ ಬಾಳಿತು. ನನ್ನ ನಿಜ ವೇಷ ತಿಳಿಯಿತು; ನನಗೆ ಸೆರೆಹಿಡಿದರು. ನಾನು ತಪ್ಪಿಸಿಕೊಂಡ ಉಗಿಬಂಡಿಯನ್ನು ಹತ್ತಿದೆನು, ಆದರೂ, ಉಗಿಬಂಡಿಯ ಮೇಲೆಯೇ ನನಗೆ ಹಿಡಿದರು. ಪುಣೆಯ ಬೆಂಚ ಮೆಜಿಸ್ಟ್ರೇಟರಲ್ಲಿ ಖಟ್ಲೆ ನಡೆದು ನಾನು ದೋಷಮುಕ್ತನಾದೆನು. ಆದರೂ, ನಾನು ಪುಣೆಯಲ್ಲಿ ನಿಲ್ಲಲಿಲ್ಲ; ಸುರತಿಗೆ ಹೋದೆ. ಅಲ್ಲಿ ಝವೇರಿ ಕಂಪನಿಯ ವೇಷವನ್ನು ಹೊರಡಿಸಿದೆನು. ದಾವೂದ ಎಂಬ ಕುದುರೆಯ ಗಾಡಿಯವನು ನನಗೆ ದಿನಾ ಬಾಡಿಗೆಯ ಮೇಲೆ ಹತ್ತಿಸಿಕೊಂಡು ತಿರುಗಾಡಿಸುತ್ತಿದ್ದನು. ಆತನಿಗೆ ನನ್ನ ಉದ್ಯೋಗದ ಮರ್ಮವು ತಿಳಿಯಿತು. ನನಗೆ ನೆರವಾಗಲು ಆತನು ತಯಾರಾದನು. ಕಳ್ಳಾಟಿಕೆಯಲ್ಲಿ ಇನ್ನೊಬ್ಬನು ಬೇಕೇ ಬೇಕು. ಆದರಿಂದ ನಾನು ಆತನನ್ನು ಸ್ವೀಕರಿಸಿ ನನ್ನ ಪದ್ಧತಿಯನ್ನು ಆತನಿಗೆ ವಿವರಿಸಿದೆನು. ಹಗಲಿಗೆ ಇಡೀ ಪಟ್ಟಣವನ್ನೆಲ್ಲ ತಿರುಗಾಡುವದು, ದೊಡ್ಡ ಅಂಗಡಿಗಳ ಮೇಲೆ ಕಣ್ಣಿಟ್ಟು, ಇರುಳು ಬಾಗಿಲುಗಳನ್ನು ಒಡೆಯುವದು, ಈ ಕ್ರಮವು ನಡೆಯಿತು. ಸುದೈವದಿಂದಲೂ ನನ್ನ ಅಂತರಂಗವು ಗೊತ್ತಾಗಿ, ನನ್ನ ಮೇಲೆ ಖಟ್ಲೆಯಾಗಿ ೬ ತಿಂಗಳ ಕಾರಾಗೃಹವಾಸವಾಯಿತು.

***

ಚಮ್ಮವಾಲಾನ ಹಗಲುಗಳ್ಳತನ.

ಗ್ರಾಮಾಂತರದಲ್ಲಿ ಕಳುವು ಮಾಡುವದರಿಂದ ಪ್ರಯೋಜನವಿಲ್ಲೆಂದು ನನ್ನ ಮನವರಿಕೆಯಾಯಿತು. ಆದರಿಂದ ಮುಂಬಯಿಗೆ ಹೋಗುವನು ಎಂದು ಮನದಲ್ಲಿ ನಾನು ಎಣಿಸಿ, ಬಿಡುಗಡೆಯಾದ ಬಳಿಕ ಮುಂಬಯಿಗೆ ಹೋದೆನು. ಕಳುವು ಮಾಡುವದರಲ್ಲಿ ನಾನೆಂದೂ ಸಿಗಲಿಲ್ಲ. ಕದ್ದ ಸಾಮಗ್ರಿಗಳನ್ನು ವಿನಿಯೋಗಿಸುವಾಗ, ನಾನು ಪೋಲೀಸರ ಕೈಗೆ ಸಿಗುತ್ತಿದ್ದೆ. ಇದೊಂದು ನನ್ನ ಕಳುವು ಕಲೆಯ ದೋಷವಿತ್ತು. ಅದನ್ನು ಮುಂಬಯಿಯಲ್ಲಿ ನಾನು ಪರಿಹರಿಸಿಕೊಂಡೆ. ಕದ್ದು ತಂದ ಸಾಮಗ್ರಿಗಳನ್ನು ಸಾರ್ವಜನಿಕವಾಗಿ ಸಂಭಾವಿತ ವರ್ತಕರಂತೆ ಮಾರಾಟ ಮಾಡಬೇಕೆಂದು ನಾನು ಬಯಸಿದೆನು. ಈ ಆಲೋಚನೆಯಿಂದ ಮುಂಬಯಿಯೊಳಗಿನ ಹೆಸರಾದ ವರ್ತಕರೊಡನೆ ಪರಿಚಯ ಬೆಳಿಸಿದೆನು. ಅವರಿಗೆ ನಾನು ಆಗಿಂದಾಗ ಭೆಟ್ಟಿಯಾಗುತ್ತಿದ್ದೆನು. ಅವರಿಗೂ ನಿಮಂತ್ರಿಸುತ್ತಿದ್ದೆನು. ಮೋಟಾರಿನ ಹೊರತು ಇತರ ವಾಹನಗಳಲ್ಲಿ ನಾನು ಅಡ್ಡಾಡುತ್ತಿರಲಿಲ್ಲ. ವ್ಯಾಪಾರಿ ವರ್ತಕರು ನನ್ನಲ್ಲಿ ಬಂದಾಗ ಅವರಿಗೆ ಮೇಜವಾನಿ ಮಾಡುತ್ತಿದ್ದೆನು; ಫೋನೋಗ್ರಾಫುಗಳನ್ನು ಬಾರಿಸಿ, ಮನರಂಜನ ಮಾಡುತ್ತಿದ್ದೆನು; ನರ್ತನಗಳು ನಡಿಯುತ್ತಿದ್ದವು; ನಾಟಕಗೃಹಗಳಲ್ಲಿ ಅವರನ್ನೊಯ್ಯುತ್ತಿದ್ದೆನು. ಮುಂಬಯಿ, ಲಖನೌ, ಲಾಹೋರ, ಕಲಕತ್ತಾ ಮುಂತಾದ ಪಟ್ಟಣಗಳಲ್ಲಿ ನಾನು ಇವರೊಡನೆ ಪ್ರಯಾಣ ಮಾಡಿದ್ದೇನೆ. ದೊಡ್ಡ ದೊಡ್ಡ ಯುರೋಪಿಯನ್ನರ ಹೋಟೆಲುಗಳಲ್ಲಿಯೇ ನಾನು ಉಳಿಯುತ್ತಿದ್ದೆ. ೫-೬ ಜನರನ್ನು ಕರಕೊಂಡು ಹೋಗುವದರಿಂದ ನಾನು ದೊಡ್ಡ ವರ್ತಕನೆಂದು ಜನರಿಗೆ ಭಾಸವಾಗುತ್ತಿತ್ತು. ಇಷ್ಟಾಗಿ ಇವೆಲ್ಲ ನಡೆಯುತ್ತಿರುವಾಗಲೇ ನನ್ನ ಕಳ್ಳತನದ ಉದ್ಯೋಗವೂ ನಡೆದಿತ್ತು. ಕೊನೆಗೆ ನನ್ನನ್ನು ಮುಂಬಯಿಯಲ್ಲಿ ಹಿಡಿದರು. ವರ್ತಕರೂ ನನ್ನ ಸಹವಾಸವನ್ನು ತ್ಯಜಿಸಿದರು. ಬಳಿಕ ನಾನು ಖಡಕಿಗೆ ಹೋದೆ. ಸರಕಾರದ ಸೈನ್ಯಕ್ಕೆ ಕಾಳು-ಕಡಿಗಳನ್ನು ಪೂರೈಸುವ ಕಂಟ್ರಾಕ್ಟನ್ನು ನಾನು ಸೈನ್ಯಾಧಿಕಾರಿಗಳಿಂದ ಪಡಕೊಂಡೆನು. ಇದೇನು ನನ್ನ ಜೀವನೋಪಾಯವೆಂದು ಎಣಿಸಲಿಲ್ಲ. ಉದ್ಯೋಗವೆಂದು ಹಿಂದಿದ್ದರೆ, ಕಳ್ಳಾಟಿಕೆ ನಡಿಸಲು ಅನುಕೂಲವೆಂದು ನಾನು ಈ ಉದ್ಯೋಗವನ್ನು ಕೈಕೊಂಡೆನು. ಮುಂಬಯಿಯಲ್ಲಿ ೧೨ ಮಂದಿಗಳ ಜೊತೆಗೆ ನನಗೆ ಹಿಡಿದರು. ನನ್ನ ಕೊಬರ ಯಾನೆ ಕೊರಳ ಪಟ್ಟಿಯನ್ನು ಹಿಡಿದು ನನ್ನನ್ನೊಯ್ಯುವಾಗ, ಕೊರಳಪಟ್ಟಿಯನ್ನು ಫಕ್ಕನೆ ಹರಿಸಿಕೊಂಡು ನಾಪತ್ತೆಯಾಗಿ ಬಿಟ್ಟೆನು. ಕೆಲವು ಸಮಯದ ಬಳಿಕ ನಾನು ಮುಂಬಯಿಯಲ್ಲಿ ಬಂದು ಗಿರಗಾಂವ, ಕಾಳಬಾದೇವಿ, ಪಾಯದೋಣಿ, ಮಶೀದಿ, ಬಂದರ ಮುಂತಾದ ಕಡೆಗಳಲ್ಲಿ ಪೇಢಿಗಳನ್ನಿಟ್ಟೆನು. ಕೆಲವು ಸಲ ನಾನು ಕೈದಿಯಾಗಿ ಇದ್ದದರಿಂದ ಕೈದಿಗಳಿಗೂ, ನನಗೂ ಬಹಳ ಪರಿಚಯವಿತ್ತು. ಕೆಲವರು ನನ್ನ ಕಡೆ ಬಂದು, ನನ್ನ ಸೇವಕರಾಗುತ್ತೇವೆಂದರು. ನಾನೀಗ ದೊಡ್ಡ ವರ್ತಕನಾಗಿದ್ದೇನೆಂದು ಹೇಳಿ, ನಾನು ಅವರಿಗೆ ವಂಚಿಸಿದೆನು. ೧೯೨೪ನೇ ಇಸ್ವಿಯ ನವಂಬರ-ಡಿಸೆಂಬರ ತಿಂಗಳುಗಳಲ್ಲಿಯೂ, ೧೯೨೫ ನೇ ಇಸ್ವಿಯ ಜನವರಿ ತಿಂಗಳಲ್ಲಿಯೂ ನಾನು ೬ ಲಕ್ಷ ರೂಪಾಯಿಗಳನ್ನು ಕದ್ದೆನು. ಮುಂಬಯಿಯಲ್ಲಿ ದೊಡ್ಡ ಗುಲ್ಲೋ ಗುಲ್ಲು. ನನಗೆ ಸೆರೆಹಿಡಿದರು, ಆದರೆ, ಮೆಜಿಸ್ಟ್ರೇಟರು ಆರೋಪವನ್ನಿಡದೆ ನನ್ನನು ಬಿಟ್ಟುಬಿಟ್ಟರು. ಆದರೆ, ಪೋಲೀಸರು ಸಿಟಿ ಪೋಲೀಸ ಕಾಯ್ದೆಯಂತೆ ನನಗೆ ಊರ ಹೊರಹಾಕಿದರು.

ಆ ಬಳಿಕ, ನಾನು ಠಾಣೆಯಲ್ಲಿ ಕದ್ದೆನು. ಅದರೊಳಗೆ ನನಗೆ ಶಿಕ್ಷೆಯಾಯಿತು. ಹೊರ ಬಂದ ದಿವಸವೇ ನಾನೊಂದು ಕಳವು ಮಾಡಿದೆನು. ಮಾಡುವದೇನು? ಸೆರೆಮನೆಯಿಂದ ಹೊರಬೀಳುವಾಗ ನನ್ನ ಹಸ್ತದಲ್ಲಿ ೧೪ ಆಣೆಗಳಿದ್ದವು. ಬಳಿಯಲ್ಲಿಯೇ ಒಂದು ಅಂಗಡಿಯಿತ್ತು. ಅಂಗಡಿಯಲ್ಲಿ ಯಾರೂ ಇದ್ದಿಲ್ಲ. ನಾನು ಒಳಕ್ಕೆ ಸೇರಿ, ೭೫ ರೂಪಾಯಿಗಳ ಸಾಮಾನನ್ನು ಕದ್ದುಕೊಂಡು, ಘಾಟಕೋಪರ-ದಾದರಗಳಲ್ಲಿ ಅದರ ವ್ಯವಸ್ಥೆ ಮಾಡಿ, ಮುಂಬಯಿಗೆ ಮೋಟಾರ ಹತ್ತಿಕೊಂಡು ಬಂದೆನು. ಅಷ್ಟೊತ್ತಿಗೆ ನನ್ನ ಪೇಢಿಗಳೆಲ್ಲ ಹಾಳುಬಿದ್ದಿದ್ದವು. ಗಿರಗಾಂವ ಪೇಢಿಯನ್ನು ಹಿಂಭಾಗಿಲಿನಿಂದ ಸೇರಿ, ಹಸ್ತಪ್ರತಿ, ಲಖೋಟೆ, ಕೆಲವು ಉಡಿಗೆ-ತೊಡಿಗೆಗಳನ್ನು ಕೊಂಡು, ಉಗಿಬಂಡಿ ಹತ್ತಿ ನಿರಾರಕ್ಕೆ ಹೋದೆನು. ಉಗಿಬಂಡಿಯಲ್ಲಿ ಕಳುವಿನಿಂದ ೨೫೦ ರೂಪಾಯಿಗಳ ಸಂಪಾದನೆಯಾಯಿತು. ಈ ಬಂಡವಲಿನಿಂದ

[illegible] ಮಾಡಿದನು. ಸನ [illegible] ನಾನು [illegible] ಹತ್ತಿದೆನು. [illegible] ನೋಡಿ [illegible] ಕನ್ನಡಿಗರ, [illegible] ಅಪ್ಪನೆ ಹೊರಕು [illegible] ಗುಡಿಗಳು ಮುಂತಾದ [illegible] ಸ್ಥಳದಲ್ಲಿ [illegible] ಯಂಗ ಇಂಡಿಯಾ, [illegible] ಪತ್ರಿಕೆಗಳ [illegible] ಕನ್ನಡಿಗರು [illegible] ದೊಡ್ಡ [illegible] ನನ್ನ [illegible].

ಕಾನಡಾವೃತ್ತ.

[illegible] ಸೋಮವಾರ

ಪುಣೆ ಪ್ರದರ್ಶನ.

ಸದ್ಯಕ್ಕೆ ಪುಣೆಯಲ್ಲಿ ಜರಗುತ್ತಿದ್ದ ಬೇಸಾಯ ಪ್ರದರ್ಶನವು ದೊಡ್ಡ [illegible] ತೋರುವಂತಿದೆ. ಈ ಪ್ರದರ್ಶನವು ಕಳೆದ ತಾರೀಖು ೫ನೇಗೆ ನಮ್ಮ ಮುಂಬಯಿಯ ಪ್ರಾಂತಾಧಿಪರಾದ ನಾಮದಾರ ವಿಲ್ಸನ್ ದೊರೆಗಳಿಂದ ತೆರೆಯಲ್ಪಟ್ಟಿತು. ನಮ್ಮ ಹಿಂದುಸ್ಥಾನ ದೇಶವು ಬೇಸಾಯಪ್ರಧಾನ [illegible] ಬೇಸಾಯದ ಉದ್ಧಾರಕ್ಕಾಗಿ ಈ ಪ್ರಚಂಡ ಪ್ರದರ್ಶನವು ಪುಣ್ಯ ನಗರಿಯಲ್ಲಿ ಸೇರಿಸಲ್ಪಟ್ಟಿರುವದು. ಹೊಸ ಸರ್ವಾಧಿಪತಿಗಳಾದ ಇರ್ವಿನ್ ದೊರೆಗಳ ಕಟಾಕ್ಷವು ಬೇಸಾಯದ ಮೇಲೆಯೇ ವಿಶೇಷವಾಗಿರುವದು. ಪ್ರದರ್ಶನದ ದೊಡ್ಡ ದೊಡ್ಡ ಜಾಹೀರನಾಮೆಗಳು ಸರಕಾರದ ವಿದ್ಯಮಾನ ಪ್ರಾಂತದೊಳಗಿನ ಗ್ರಾಮಗಳಲ್ಲೆಲ್ಲ ಹಂಚಲ್ಪಟ್ಟವು. ಮುಂಬಯಿ ಸರಕಾರವು ಈ ಪ್ರದರ್ಶನಕ್ಕಾಗಿ ಅರ್ಧ ಲಕ್ಷ ರೂಪಾಯಿಗಳನ್ನು ಅರ್ಪಿಸಿದೆ. ಒಂದು ಲಕ್ಷಕ್ಕೂ ಮಿಕ್ಕಿ ಪ್ರಜೆಗಳು ದ್ರವ್ಯಸಂಚಯ ಮಾಡಿಕೊಟ್ಟಿರುವರು. ದೊಡ್ಡ ದೊಡ್ಡ ಮಹಾನುಭಾವರೂ ಬೇಸಾಯೋದ್ಧಾರ ಪ್ರೇರಿತರಾಗಿ ಈ ಸಮಯ ಪುಣೆಯಲ್ಲಿ ಸೇರುವರು. ನೆರೆಹೊರೆಯೊಳಗಿನ ಬೇಸಾಯಗಾರರೆಲ್ಲರೂ ಪ್ರದರ್ಶನ ಚಮತ್ಕಾರಗಳನ್ನು ನೋಡಲುತ್ಸುಕರಾಗಿ ಪುಣೆಯಲ್ಲಿ ಕೂಡುವರು. ಪ್ರದರ್ಶನವು ೧೦ ದಿನಗಳವರೆಗೆ ನಡೆಯುವದಿದೆ. ಇಷ್ಟು ವೆಚ್ಚದಿಂದಲೂ, ಜಾಹೀರಾತಿಯಿಂದಲೂ ಸೇರಿಸಿದ ಪ್ರದರ್ಶನದ ಸ್ಥೂಲ ಸ್ವರೂಪವನ್ನು ಇಂದಿಗೆ ನಾವು ವಿವರಿಸಲಿಚ್ಛಿಸುವೆವು.

ಪ್ರದರ್ಶನ ಸ್ಥಳವು ಪುಣೆಯೊಳಗಿನ ಬೇಸಾಯ ಕಾಲೇಜಿನ ಸುತ್ತುಮುತ್ತಲಿನ ಪ್ರಾಕಾರವು. ಈ ಪ್ರದರ್ಶನದಲ್ಲಿ ಅಂಜೂರ, ದ್ರಾಕ್ಷೆ, ಮಾವು, ಕಿತ್ತಳೇ ಹಣ್ಣು, ಪೇರಲ ಹಣ್ಣು, ಬಾಳೆ ಮುಂತಾದ ಹಣ್ಣು-ಹಂಪಲಗಳ ಬೆಳವಣಿಗೆಯು ತೋರಿಸಲ್ಪಟ್ಟಿದೆ. ಅವುಗಳನ್ನೆಲ್ಲ ಕಣ್ಣಾರೆ ಕಂಡು [illegible] ಬೇಸಾಯಗಾರರು ನಮ್ಮ ತಮ್ಮ ಭೂಮಿಗಳಿಗುಚಿತವಾದ ಗೊಬ್ಬರಗಳನ್ನು ಹಾಕಿಕೊಂಡು ಲಾಭ ಪಡೆಯಬಹುದು. ಹತ್ತಿ, ಕಬ್ಬು, ದ್ವಿದಲ ಧಾನ್ಯ, ಔಡಲ ಬೀಜ, ದನಗಳ ಮೇವು ಮುಂತಾದ ಬೆಳೆಗಳೂ ಈ ಪ್ರದರ್ಶನದಲ್ಲಿ ತೋರಿಸಲ್ಪಡುವವು. ಬೆಳೆಗಳನ್ನು ನಾಶ ಮಾಡುವ ಪ್ರಾಣಿಗಳ ನಿವಾರಣೆಗಾಗಿ ಅವಶ್ಯವುಳ್ಳ ಸಾಹಿತ್ಯಗಳನ್ನು ಈ ಪ್ರದರ್ಶನದಲ್ಲಿ ಕಾಣಬಹುದು. ಹಂದಿ ಮುಂತಾದ ಕಾಡು ಪ್ರಾಣಿಗಳ ಕಾಟದನ್ನು ಬೇಲಿಗಳಿಂದ ಪರಿಹರಿಸುವ ಉಪಾಯಗಳು ಇಲ್ಲಿ ಸೂಚಿಸಲ್ಪಡುವವು. ಇಲಾಖೆಯೊಳಗಿನ ಕಿನತರದ ಮಣ್ಣುಗಳೂ, ಅವುಗಳಿಗೆ ಗೊಬ್ಬರಗಳನ್ನು ಹಾಕಿ ಹುಟ್ಟುವ ವಿಶೇಷ ಲಾಭವೂ ನಮಗೆ ಪ್ರತ್ಯಕ್ಷವಾಗಿ ತೋರಿಸಲ್ಪಡುವದು. ಕೃತಕ ಗೊಬ್ಬರಗಳಿಂದ ಸಿಗುವ ಲಾಭದ ಪ್ರಮಾಣವು ಈ ಭಾಗದಲ್ಲಿ ಸಪ್ರಯೋಗ ತೋರಿಸಲ್ಪಡುವದು. ಬೇಸಾಯಕ್ಕೆ ಅತ್ಯವಶ್ಯವಾದದ್ದು ಗೋಧನವು. ಆದರಿಂದ ಗೋವುಗಳಿಗಾಗಿ ಪ್ರತ್ಯೇಕ ಭಾಗವು ಏರ್ಪಡಿಸಲ್ಪಟ್ಟಿದೆ. ಪ್ರಾಂತದೊಳಗಿನ ವಿವಿಧ ಗೋವುಗಳನ್ನು ಇಲ್ಲಿ ಕಾಣಬಹುದು. ಸಕಲ ಇಡೀ ಹಿಂದುಸ್ಥಾನದೊಳಗಿನ ಗೋವುಗಳ ಮಾದರಿಗಳನ್ನೇ ಇಲ್ಲಿ ಕಾಣಬಹುದು. ಗುಜರಾಥದಲ್ಲಿ "ಕಾಂಕ್ರೇಜ" ಎಂಬದೊಂದು ಜಾತಿಯ ದನಗಳಿವೆ. ಈ ದನಗಳು ಹೂಡಲಿಕ್ಕೆ ಕಸುವುಳ್ಳ ಪ್ರಾಣಿಗಳು; ಇಷ್ಟು ಕಸುವುಳ್ಳ ಗೋವುಗಳು ಬೇರೊಂದಿಲ್ಲವೆಂದು ಖ್ಯಾತಿಯಿದೆ. ಆದರೆ ಇವುಗಳಿಗೆ ಹಾಲು ಮಾತ್ರ ತೀರ ಕಡಿಮೆ. ಬೇಸಾಯ ಪ್ರದರ್ಶನದಲ್ಲಿ "ಕಾಂಕ್ರೇಜ" ಗೋವುಗಳಿಗೆ ಹಾಲು ಹಿಂಡುವ ಶಕ್ತಿಯನ್ನು ಕೊಡುವ ಪ್ರಯೋಗವನ್ನೂ ನೋಡಬಹುದು! ಬೇಸಾಯ ಖಾತೆಯ ಡಾಯರೆಕ್ಟರರಾದ ಡಾ॥ ಮೆನ್ನರವರು "ಕಾಂಕ್ರೇಜ" ಗೋವುಗಳಿಂದ ವರ್ಷಾನಸನ ಐದು ಸಾವಿರ ರತ್ತಲು ಹಾಲನ್ನು ಹಿಂಡಬಹುದೆಂದು ಈ ಪ್ರದರ್ಶನದಲ್ಲಿ ತೋರಿಸುವರು. ಈ ಪ್ರಯೋಗವು ಸಾರ್ವತ್ರಿಕವಾಗಿ ಫಲಿಸಿದರೆ, ಬೇಸಾಯಕ್ಕೆ ಅದೊಂದು ದೊಡ್ಡ ಲಾಭ. ಲಕ್ಷ್ಮೀ-ಸರಸ್ವತಿಯರ ಸಂಯೋಗವಾದಂತೆ ಬೇಸಾಯಕ್ಕೂ, ಬೇಸಾಯಗಾರರಿಗೂ ಕಳೆ ಏರುವದು. ಹಾಲಿನ ಪ್ರಮಾಣವು ಹೆಚ್ಚಾಗಿ, ಹಾಲಿನ ಪೂರೈಕೆ ಇಲ್ಲದೆ ಬಳಲುವ ಲಕ್ಷಾವಧಿ ಶಿಶುಗಳಿಗೆ ಪ್ರಾಣದಾನ ಕೊಟ್ಟಂತಾಗುವದು; ಗೋವುಗಳ ಪಾಲನೆ-ಪೋಷಣೆಗೂ ಅನುಕೂಲವಾಗುವದು. ಇವೆಲ್ಲ ಬೇಸಾಯದ ಅಭಿವೃದ್ಧಿಗಾಗಿ ಯೋಜಿಸಿದ ಸಾಹಿತ್ಯಗಳ ವಿವರವಾಯಿತು.

ಬೇಸಾಯೋದ್ಯೋಗವು ಇಡೀ ವರ್ಷದಲ್ಲಿ ನಡೆಯತಕ್ಕ ಉದ್ಯೋಗವಲ್ಲ. ವರ್ಷದಲ್ಲಿ ೬-೭ ತಿಂಗಳು ಬೇಸಾಯದ ಉದ್ಯೋಗವನ್ನು ನಡಿಸಬಹುದು. ಆದಕ್ಕಾಗಿ ಬೇಸಾಯ ಪ್ರದರ್ಶನದಲ್ಲಿ ಆನುಷಂಗಿಕ ಉದ್ಯೋಗಗಳಿಗೂ ಎಡೆ ಕೊಡಲ್ಪಟ್ಟಿದೆ. ನೂಲುವದು, ನೇಯುವದು, ಮುಂತಾದ ಚಿಕ್ಕಪುಟ್ಟ ಕೈಗಾರಿಕೆಗಳನ್ನು ಈ ಪ್ರದರ್ಶನದಲ್ಲಿ ಕಾಣಬಹುದು. ಸದ್ಯಕ್ಕೆ ಮುಂಬಯಿ ಪ್ರಾಂತದಲ್ಲಿ ೮ ಲಕ್ಷ ಮಂದಿಗಳ ಜೀವನೋಪಾಯವು ನೇಯ್ಗೆಯು ನೂತು, ನೇಯ್ಗೆಗಳಿಂದ ಅನೇಕ ಬೇಸಾಯಗಾರರು ಬೇಸಾಯೋದ್ಯೋಗವಿಲ್ಲದ ಸಮಯದಲ್ಲಿ ಕೆಲ ಮಟ್ಟಿಗೆ ಪ್ರಾಪಂಚಿಕ ಸಾಹಿತ್ಯಗಳನ್ನು ಪೂರೈಸಿಕೊಳ್ಳುತ್ತಿರುವರು. ನೂಲುವ ಕೆಲಸವು ಸುಲಭವಿದ್ದಷ್ಟೇ, ಅದರಿಂದ ದೊರಕುವ ಪ್ರತಿಫಲವೂ ಅಲ್ಪವಾಗಿರುತ್ತದೆ. ಆದರೆ ಅಲ್ಪ ದ್ರವ್ಯದಿಂದ ಬೇಸಾಯಗಾರರಿಗೆ ಅಪರಿಮಿತವಾದ ಸಹಾಯವಾಗುತ್ತದೆ. ಆಪತ್ಕಾಲಕ್ಕೆ ಅದೊಂದು ದೊಡ್ಡ ನಿಧಿಯೇ. ಮಹಾತ್ಮರ ಚಾಲನೆಯಿಂದ ಜನ್ಮವನ್ನೆತ್ತಿದ ಅಖಿಲ ಭಾರತೀಯ ನೂಲುಗಾರರ ಸಂಘವು ಈ ಪ್ರದರ್ಶನದಲ್ಲಿ ಪ್ರವೇಶಗೊಂಡು ನೂಲುವ ಕ್ರಿಯೆಗಳನ್ನೆಲ್ಲ ಪ್ರಜೆಗಳಿಗೆ ಬೋಧಿಸುವದು. ಕಟ್ಟಿಗೆಯ ಬಣ್ಣದ ಕೈಗಾರಿಕೆಗಳೂ ಈ ಪ್ರದರ್ಶನದಲ್ಲಿ ದೃಗ್ಗೋಚರವಾಗುವವು. ಬೇಸಾಯಗಾರರಿಗೆ ಅನುಕೂಲವಾಗಿರುವ ಯಂತ್ರಗಳೂ, ಬೀಜಗಳೂ ಇಲ್ಲಿ ಪ್ರದರ್ಶಿಸಲ್ಪಡುವವು. ಹೂದೋಟವೊಂದನ್ನು ನಾವು ಕಾಣಬಹುದು. ಈ ತೋಟದಲ್ಲಿ ತರತರದ ಹೂವುಗಳು ತಮ್ಮ ಸುವಾಸವನ್ನು ಬೀರಿ, ರಸಿಕರ ಮನರಂಜನ ಮಾಡುವವು. ಪುಷ್ಪಪ್ರಿಯ ರಸಿಕರಿಗಾಗಿ ಬೇಸಾಯ ಹೂವಿನ ಗಿಡಗಳ ಪರಿಚಯ ಮಾಡಿಕೊಟ್ಟ ರಸಿಕರಿಂದ ದ್ರವ್ಯವನ್ನು ಸೆಳೆಯಬಹುದು. ಬೇಸಾಯ ಕಮೀಶನಿನವರು ಈ ಪ್ರದರ್ಶನದಲ್ಲಿ ಹೋಗುವರೆಂದು ಹೇಳ[illegible]

ಈ ಪ್ರದರ್ಶನ ಸಮಯ ಇನ್ನೊಂದು ವಿಶೇಷ ಸಮಾರಂಭವು ಜರಗುವದಿದೆ. ಸಹಕಾರಿ ಪರಿಷತ್ತೊಂದು ನಮ್ಮಲ್ಲಿ [illegible] ಗೊನೆ

ಯುವರ ಅಧ್ಯಕ್ಷತೆಯಲ್ಲಿ ನೆರವೇರುವದಿದೆ. ಬೇಸಾಯಗಾರರೆಲ್ಲರೂ ದ್ವೇಷ-ಮಾತ್ಸರಾದಿ ಅತ್ಯಂತ ಘಾತಕ ದುರ್ಗುಣಗಳನ್ನು ತ್ಯಜಿಸಿ ಸಹಕಾರವನ್ನು ಆಶ್ರಯಿಸಿದರೆ, ಉಂಟಾಗುವ ಲಾಭಗಳನ್ನು ಈ ಪರಿಷತ್ತಿನಲ್ಲಿ ವಿವರವಾಗಿ ಸಹಕಾರಿಗಳು ಹೇಳುವರು. ಸಹಕಾರದಿಂದ ಯಾವಾಗಲೂ ಲಾಭವಿದೆ. ಈ ಕುರಿತು ಎಂದಿಗೂ ಮತಭೇದವಾಗಲಾರದು. ಅಸಹಕಾರಿಗಳಾದರೂ ಸಹಕಾರಕ್ಕಾಗಿಯೇ ದಣಿಯದೆ ದುಡಿಯುತ್ತಿರುವರು. ಇಂಥಲ್ಲಿ ಸಹಕಾರದ ಮಹಿಮೆಯನ್ನು ತಾತ್ವಿಕವಾಗಿ ಬಣ್ಣಿಸಿ ಪ್ರಯೋಜನವೇನು? ಈಗ ನಡೆದ ಹಾಗೂ ನಡೆಯುತ್ತಿರುವ ಸರಕಾರಿ ಸಹಕಾರದ ಧೋರಣವು ಎಷ್ಟರ ಮಟ್ಟಿಗೆ ಬೇಸಾಯಕ್ಕೆ ಲಾಭಪ್ರದವೆಂಬುದು ಮಾತ್ರ ಕಠಿಣ ಪ್ರಶ್ನೆಯಿದೆ. ಹಂದಿ ಮುಂತಾದ ಗಳನ್ನು ನಾಶಮಾಡುವ ಪ್ರಾಣಿಗಳನ್ನು ಪೋಷಿಸುವದು ಜಂಗಲ ಖಾತೆಯವರು. ಅವುಗಳ ಪರಿಹಾರ ಮಾಡಿಕೊಳ್ಳಬೇಕಾದರೆ ಬೇಸಾಯಗಾರರು ಪ್ರದರ್ಶನಕ್ಕಿಟ್ಟ ಬೇಲಿಗಳನ್ನು ಕೊಂಡುಕೊಂಡು ಊರುಗಳನ್ನು ರಕ್ಷಿಸಿಕೊಳ್ಳಬೇಕು. ಒಬ್ಬೊಬ್ಬರಿಂದ ಈ ಕೆಲಸವು ಕೈಸಾಗದಿದ್ದರೆ ಸಹಕಾರದಿಂದ ಬಂಡವಲನ್ನು ಸಂಗ್ರಹಿಸಿಕೊಂಡು ಧರ್ಮ ಈ ಕೆಲಸವನ್ನು ಸಾಗಿಸಿಕೊಳ್ಳಬೇಕು. ಮೊರತು ಹಂದಿಗಳನ್ನು ನಾಶಪಡಿಸಬಾರದು. ವ್ಯಕ್ತಿಶಃ ನಾಶಪಡಿಸಲೂ ಬಾರದು; ಸಹಕಾರವನ್ನಾಶ್ರಯಿಸಿ ಸಂಘಶಃ ನಾಶಪಡಿಸಲೂ ಬಾರದು. ಜಂಗಲ ಖಾತೆಯವರು ಸಾಕಿ ಸಲಹಿದ ಹಂದಿಗಳನ್ನು ನಿಯಂತ್ರಿಸಲು ಬದ್ಧರೂ ಅಲ್ಲ. ಜಂಗಲ ಖಾತೆಯು ಹಂದಿಗಳನ್ನು ಬೆಳೆಸುತ್ತ ಹೋಗುವದು; ಪ್ರಜೆಗಳು ಸಹಕಾರವನ್ನಾಶ್ರಯಿಸಿ ವಿಲಾಯತಿಯೊಳಗಿನ ಕಾನೆಯವರು ನಮ್ಮಲ್ಲಿಯ ಬೇಸಾಯಗಾರರ ಕಲ್ಯಾಣಕ್ಕಾಗಿ ಮಾಡಿಟ್ಟ ಬೇಲಿಗಳನ್ನು ಕೊಂಡುಕೊಂಡು ತಂದಿಟ್ಟುಕೊಂಡರಾಯಿತು. ಇಂಥ ಸಹಕಾರದ ವೇದಾಂತವು ಯಾರಿಗೆ ಮಾನ್ಯವಾದೀತು!

ಇರಲಿ. ಬೇಸಾಯ ಪ್ರದರ್ಶನದಲ್ಲಿ ಬೇಸಾಯದ ಅಭಿವೃದ್ಧಿಯ ಉಪಾಯಗಳನ್ನು ನಾವು ಬೇಕಾದಷ್ಟು ಕಾಣಬಹುದು. ಆದರೆ, ಸ್ಥಳೀಕ ಸಾಹಿತ್ಯಗಳಿಂದ ಸ್ಥಳೀಕ ಪರಿಸ್ಥಿತಿಗೆ ಉಚಿತ ...ಗಳ ಅವುಗಳ ಕಲ್ಪನೆಯಾಗಿದ್ದರೆ ಬೇಸಾಯ ವೃದ್ಧಿಯಾಗುವ ಹಾಗಿದೆ. ಕೃತಕ ಗೊಬ್ಬರದಿಂದ ಗಂಟು ಸಿಗಬಹುದಾದರೂ, ಅಂಥ ಗೊಬ್ಬರಗಳನ್ನು ಸಾರ್ವತ್ರಿಕವಾಗಿ ಸ್ಥಳೀಕ ಸಾಮಗ್ರಿಗಳಿಂದ ತಯಾರಿಸಬಲ್ಲವಿದ್ದರೆ, ಅವು ಪ್ರದರ್ಶನದಿಂದ ಬಡ ಬೇಸಾಯಗಾರರಿಗೆ ಪ್ರಯೋಜನ! ಈ ಪ್ರಯೋಗಗಳಿಂದ ಗೊಬ್ಬರಗಳನ್ನು ತಯಾರಿಸುವ ಕಾರಖಾನೆಗಳ ಜಾಹೀರಾತನ್ನು ನಮ್ಮ ಖರ್ಚಿನಿಂದ ನಾವು ಮಾಡಿಕೊಂಡಂತಾಯ್ತು. ಸಾರ್ವಜನಿಕ ಹಣದಿಂದ ಪರಸ್ಪರ ಪರದೇಶಿ ಕಾರಖಾನೆಗಳಿಗೆ ಉತ್ತೇಜನ ದೊರಕುವದು. ಪ್ರದರ್ಶನದ ಹಕೀಕತ್ತು ಇನ್ನೂ ಸಂಪೂರ್ಣವಾಗಿ ನಮ್ಮ ಕೈಸೇರಲಿಲ್ಲ. ಆದರಿಂದ ವಿಸ್ತಾರಪೂರ್ವಕವಾಗಿ ಈ ವಿಚಾರಗಳನ್ನು ನಾವು ಸೂಚಿಸದವು; ಪ್ರದರ್ಶನದ ಹಕೀಕತನ್ನು ನೋಡಿ, ಈ ಮುಂದೆ ಈ ಪ್ರದರ್ಶನದಿಂದ ಸಮಗ್ರ ಲಾಭವನ್ನೂ ಸುಖವನ್ನೂ ಸಮಾಲೋಚಿಸುವೆವು.

ಸ್ಫುಟ ಸೂಚನೆಗಳು

೧ ಚೀನದೊಳಗಿನ ಗಡಿಬಿಡಿಯು ಸಮಾಧಾನ ಕೊಂದಿಕ್ಕಿಂಬುದೊಂದು ಭಾವನೆ ಇತ್ತು. ಪಿಶಾಯತಿಯ, ರೆಯ್ಟರ ಸುದ್ದಿಗಾರರು ಅಲ್ಲಿಯ ಗೊಂದಲದ ಹಕೀಕತ್ತನ್ನು ತಿಳಿಸಲು ಬಹಳ ಹದರುತ್ತಾರೆಂಬಂತೆ ತೋರುತ್ತದೆ. ನಿರುಪಾಯವಾದಾಗ ಕೆಲ ಕೆಲವು ಸುದ್ದಿಯು ಹೊರಬೀಳುತ್ತವೆ. ಕಳೆದ ದಸರೆಯ ಸುಮಾರಿಗೆ ಚೀನ ದೇಶದಲ್ಲಿ ದೊಡ್ಡದೊಂದು ಕಾದಾಟವಾಯಿತೆಂಬಂತೆ ತೋರುತ್ತದೆ. ಹಾಂಕಾಯುದ ನದೀಕೊರೆಯಲ್ಲಿ ಈ ಕಾದಾಟವಾಯಿತು. ಯಾಂಗ್ಸೀ ನದಿಯು ಚೀನದವರ ಕೈವಶವಾದ್ದರಿಂದ ಆ ನದಿಯಲ್ಲಿ ಬ್ರಿಟಿಶ ಹಾಗು ಅಮೇರಿಕೆಯವರ ಹಡಗುಪಡೆಗಳಿಗೆ ಸಂಚರಿಸಲು ಅಡ್ಡಿಯಾಗಿದೆ. ಹಾಂಕಾಯದೊಳಗಿನ ಮದ್ದುಗುಂಡಿನ ಕಾರಖಾನೆಯನ್ನು ಕೈವಶಮಾಡಿಕೊಳ್ಳಲು ಚೀನಿಯರು ಮುಂದಾದರು. ಆದರೆ ಅವರಿಗೆ ಹಿಂದಟ್ಟಿದರಂತೆ! ಬ್ರಿಟಿಶ ಪಕ್ಷಪಾತಿಯಾದ ಚೀನಿಯರಲ್ಲಿ ೧೫೦೦ ಮಂದಿಗಳು ಪ್ರಾಣಗತರಾದರಂತೆ! ಎಲ್ಲರೂ ಹಡಗದ ಮೇಲಿದ್ದಾಗ ರಾಷ್ಟ್ರೀಯ ಚೀನಿಯರು ಗುಂಡುಗಳನ್ನು ಹೊಡೆದರಂತೆ! ಗುಂಡು ಹೊಡೆದವರಲ್ಲ್ಯಾ ರೊಯ್ಟರನ ಪುಸ್ತಿಗೆ. ಎಲ್ಲರೂ ಹಡಗದ ಮೇಲೆ ಇದ್ದಪ್ಪರ್ಕ್ಯಾ ರೆಯ್ಟರನ ಮುಸ್ಸಣೆ; ಹಡಗುಪಡೆಯ ನಾಶವಾಯಿತು; ಯಾರೂ ಪ್ರಾಣಗತರಾಗಲಿಲ್ಲ; ಎಂದು ಸಿದ್ಧುಪಡಿಸಲಾಗಿದೆ ಹಾಂಕಾಯದ ಮೇಲೆ ರಾಷ್ಟ್ರೀಯ ಚೀನಿಯರು ಸಾಗಿಬಂದಿದ್ದರಂತೆ ಆದರೆ ಅವರಿಗೆ ಹಿಂದಟ್ಟಿದರಂತೆ! ಹಿಂದಟ್ಟಿದ ಮೇಲೆ ಸಾಗಿಹೋದ ಸುದ್ದಿಯು ನಮಗೆ ತಿಳಿಯುತ್ತದೆ. ಅಮೇರಿಕೆಯ ಹಡಗುಪಡೆಯ ಮೇಲೂ ರಾಷ್ಟ್ರೀಯ ಚೀನಿಯರು ಸಾಗಿಹೋದರು. ಆದರೆ ಅಮೇರಿಕೆಯವರಿಗೆ ನಷ್ಟವೇನೂ ಆಗಲಿಲ್ಲ. ಅನೇಕ ಬ್ರಿಟಿಶ ಹಡಗುಪಡೆಗಳ ಮೇಲೆ ಚೀನ ದೇಶದವರು ಸಾಗಿಹೋಗಿದ್ದರಾಗಿಯೂ ಈಗ ತಿಳಿಯುತ್ತದೆ. ಆದರೆ ಸುಸಂಗತವಾದ ಸುದ್ದಿಯು ನಮಗಿನ್ನೂ ತಿಳಿಯದು. ಬ್ರಿಟಿಶರ ಮೂಗು ಮೇಲಾದ ಹಕೀಕತು ಸಂಭವಿಸುವ ವರೆಗೆ ಹುದುಗಿದ ಅನರ್ಥಗಳ ಸುದ್ದಿಯೇ ನಮಗೆ ತಿಳಿಯವೆಂದು ರೊಯ್ಟರನ ತಂತಿಗಳ ಮೇಲಿಂದ ಅನುಮಾನಿಸಬೇಕಾಗಿದೆ. ಚೀನದೊಳಗಿನ ಗಡಿಬಿಡಿಯು ಶಾಂತವಾಗಲಿಲ್ಲ. ಬ್ರಿಟಿಶರ ಹುಹತಗಳು ಇನ್ನು ಅಲ್ಲಿ ನಡೆಯಲಾರವು. ಇಷ್ಟು ಅನ...ನ ಹೂಡಲಿಕ್ಕೆ ಈಗ ಪ್ರತ್ಯವಾಯವೇನಿಲ್ಲ. ಇವಕ್ಕೂ ಹೆಚ್ಚಿಗೆ ಹೇಳಲು ಈಗ ಸಮ್ಮಂದಾಗದು.

೨ ಇಲೆಕ್ಷನು ಸಮೀಪಿಸಿದ ಹಾಗೆ ಪಕ್ಷೋಪಪಕ್ಷಗಳಲ್ಲಿ ಪರಸ್ಪರ ದೋಷಗಳ ಆವಿಷ್ಕರಣವಾಗುತ್ತಿದೆ. ಸ್ವರಾಜ್ಯ ಪಕ್ಷದವರು ಕಾಯಿದೆ ಕೌನ್ಸಿಲುಗಳಿಂದ ಹೊರಬಂದು ದೇಶದ ಘಾತ ಮಾಡಿದರು, ಮುಂತಾದ ಮಾತುಗಳು ಕೇಳಬರುತ್ತಿವೆ ಪ್ರಧಾನ ಪದಾದಿ ಅಧಿಕಾರಗಳನ್ನು ಸ್ವೀಕರಿಸದೆ ಮುನಿದು ಕೂತುಕೊಳ್ಳುವದು ಸ್ವರಾಜ್ಯಪೋಷಕವಲ್ಲ, ಮುಂತಾದ ರಾಜಕಾರಣ ತತ್ವಗಳ ಪ್ರತಿಪಾದನವಾಗುತ್ತಿದೆ. ಈ ಕುರಿತು ಸದ್ಯಕ್ಕೆ 'ಕೇಸರಿ' ಕರ್ತರು ಸ್ವರಾಜ್ಯ ಪಕ್ಷದ ಪುರಸ್ಕರ್ತರಾದ ಶ್ರೀ ಖಾಡಿಲಕರರವರ ಕೆಲವು ವಾಕ್ಯಗಳನ್ನು ಸಂದರ್ಭ ಹೇಳದೆ ಅವತರಿಸಿರುವರು, ಆದರಿಂದ ಮತದಾರರು ಸ್ವರಾಜ್ಯ ಪಕ್ಷದ ಕುರಿತು ಪೂರ್ವಗ್ರಹವನ್ನು ಮಾಡಿಕೊಳ್ಳುವ ಸಂಭವವಿದೆ. 'ಕೇಸರಿ' ಕರ್ತರಾದ ಶ್ರೀ ನರಸೋಪಂತ ಕೇಳಕರರವರು ತಾ. ೨೯-೨-೧೯೨೦ನೇ ಇಸ್ವಿಯ 'ಕೇಸರಿ'ಯಲ್ಲಿ ರಾಷ್ಟ್ರೀಯ ಪಕ್ಷ ಹಾಗು ಅದರ ಧೋರಣವೆಂಬದೊಂದು ಲೇಖವನ್ನು ಬರೆದು ರಾಷ್ಟ್ರೀಯ ಪಕ್ಷದ ಧೋರಣವನ್ನು ಸಾಂಗೋಪಾಂಗ ಚರ್ಚಿಸಿದ್ದರು. ಅವರು ಆ ಲೇಖದಲ್ಲಿ ಬರೆದ ಉದ್ಗಾರಗಳನ್ನು ಶೋಧಿಸಿ ಇಲ್ಲಿ ಕೊಟ್ಟಿರುವೆವು. ಅವರು ಹೇಳುವದೇನೆಂದರೆ:— "ರಾಷ್ಟ್ರೀಯ ಸಭೆಯ ಧೋರಣವನ್ನು ರಾಷ್ಟ್ರೀಯ ಸಭೆಯು ಠರಾವುಗಳ ಹೊರಗೆ ಶೋಧಿಸುವ ಮನುಷ್ಯನು ತಾನೊಬ್ಬ ಜಾಣನೆಂದು ಮೆರೆಯಲಿಚ್ಛಿಸುವನೆಂದು ಹೇಳಬೇಕು. ಅಥವಾ ಅವನಿಗೆ ತಾರತಮ್ಯ ವಿಚಾರವಿಲ್ಲವೆಂದು ಹೇಳಬೇಕು. ರಾಷ್ಟ್ರೀಯ ಸಭೆಯ ಠರಾವುಗಳನ್ನು ಮನ್ನಿಸಿ ತಮ್ಮದೇ ಹಿರಿಯ ಅರ್ಥವನ್ನು ಆ ಠರಾವುಗಳ ಮೇಲೆ ಹೇರುವ ಅಧಿಕಪ್ರಸಂಗಿಗಳೂ ಕೆಲವರಿರುವರು. ಬಿಪಿನ್ ಬಾಬುಗಳು ಈ ವರ್ಗದವರು. ಸರಕಾರಕ್ಕೆ ಪ್ರಚಂಡ ವಿರೋಧ ಮಾಡಬೇಕು. ಅವರೊಡನೆ ಕಾದಾಟ ನಡಿಸುವದಾದರೆ, ಕಾಯಿದೆ ಕೌನ್ಸಿಲಿನ ರಣಕ್ಷೇತ್ರದಲ್ಲಿಯೇ ನಡಿಸಬೇಕು," ಎಂಬ ಮಾತುಗಳು ಬಿಪಿನ್ ಬಾಬುಗಳಿಗೆ ಮಾನ್ಯವಿವೆ. ಅಂದ ಬಳಿಕ ವಾದವೆಲ್ಲಿ ಉಳಿಯಿತು? ಕೌನ್ಸಿಲುಗಳಲ್ಲಿ ಶಕ್ಯವಿದ್ದರೆ ಸಹಕಾರವನ್ನು ಅನುಸರಿಸಬೇಕೆಂಬದೊಂದು ಮಾತಿದೆ, ರಾಷ್ಟ್ರೀಯ ಪಕ್ಷದವರಿಗೆ ಪ್ರಧಾನಪದಗಳನ್ನು ಕೊಟ್ಟ ಬಳಿಕ ಈ ಶಕ್ಯತೆಯುಂಟಾಗುತ್ತಿದೆ. ಪ್ರಧಾನಪದದ ದೊಡ್ಡ ಮಾನವು ತಮಗೆ ಸಿಕ್ಕೀತೆಂಬ ಚಿಂತೆಯು ಯಾವ ರಾಷ್ಟ್ರೀಯ ಮುಂದಾಳಿಗೂ ಇರುವದಿಲ್ಲ. ಈ ಆಪತ್ತಿಯು ಸಂಭವಿಸುವ ಭೀತಿಯೂ ಅವರಿಗೆ ಇಲ್ಲ. ಆದರಿಂದ ಶಕ್ಯವಿದ್ದರೆ ಸಹಕಾರಿತೆಯನ್ನು ನಾವು ಮಾಡುವೆವು; ಎಂಬ ಉಲ್ಲೇಖವು ವಿರೋಧ ಮಾಡುವ ಅಲ್ಪಸಂಖ್ಯಾಕ ರಾಷ್ಟ್ರೀಯ ಸಭಾಸದರ ಸಂಬಂಧವಾಗಿರುತ್ತದೆ ನೇಮಕರಿಗೇ ಪ್ರಧಾನ ಪದಗಳು ಸಿಗಬೇಕೆಂದು ಬ್ರಹ್ಮದೇವರೇ ಹೇಳಿದಂತೆ ನಿಶ್ಚಯವಿದೆ. ಇದನ್ನು ತಿಳಿಯದಷ್ಟು ರಾಷ್ಟ್ರೀಯ ಪಕ್ಷವು ಅಪ್ರಬುದ್ಧವಲ್ಲ. ಆದರಿಂದ ಶಕ್ಯವಿದ್ದರೆ ಸಹಕಾರಿತೆ ಎಂಬ ಶಬ್ದಸಮುಚ್ಚಯದ ಅರ್ಥವನ್ನು ಪ್ರಧಾನಪದಗಳ ಸಂಗ್ರಹದ ತನಕ ಎಳೆದೊಯ್ದು ಹಚ್ಚುವದು ಅಕಾಂಡ ತಾಂಡವವು. ಲೋಕನಿಯುಕ್ತ ಪ್ರತಿನಿಧಿಗಳು ಕೌನ್ಸಿಲಿನಲ್ಲಿ ಸೇರಿ, ಪ್ರಧಾನಪದಗಳನ್ನು ಅಂಗೀಕರಿಸಿ ಉಪಯೋಗವಾಗುವದಕ್ಕಿಂತ ಪ್ರಧಾನಪದಗಳನ್ನು ಅಂಗೀಕರಿಸಿದವರ ಮೇಲೆ ಬಹುಮತ

ದವರ ಬಿಡ್ಗವನ್ನು ಹಿಡಿದು ಅವರಿಗೆ ನಿಯಂತ್ರಿಸುವವಿ ರುತ್ತದೆ. ಕೆಲ ಬಾಬುಗಳು ಕೇಳುವಂತೆ ಇವರೊಳಗೆ ಆರ್ಥಿಕ ಸಂಭವನೇನಿಲ್ಲ. ಕಿಂಬಹುದಾದ ಲಾಭವು ನೈತಿಕವಾಗಿರುತ್ತದೆ. "ಪಿಂಡಾಂಭಸ್ತತಿ ವಾಯಸಃ" ಪಿಂಡಾನ್ನವನ್ನು ತಿನ್ನುವದು ಕಾಗೆಗಳದು. ಅದನ್ನು ಮೇರೆಯುವರು ಹೇಗೆ ಕೊಳ್ಳುವರು? 'ಪ್ರಧಾನವದು' ಪಿಂತವು ಕಾಗೆಗಳ ಬಾಯಿಯಲ್ಲಿ ಬಿದ್ದ ಹೊರತು, ಆಳರಸರ ಪಿತೃಗಳು ಸ್ವರ್ಗ ಸುಖವನ್ನನುಭವಿಸಲಾರವು." ಪ್ರಧಾನವದಗಳಿಗೆ "ಅಪತ್ತು" "ಪಿಂಡ" ಮುಂತಾದ ತಿರಸ್ಕಾರಯುಕ್ತ ನುಡಿಗಳಿಂದ ಸಂಬೋಧಿಸುವ ೧೯೨೦ನೇ ಇಸ್ವಿಯ ಮಾನಧನ 'ಕೇಸರಿ'ಯು ಅರು ವರ್ಷಗಳಲ್ಲಿ ಅದನ್ನೇ ಭಕ್ಷಿಸಲು ಗರ್ಜಿಸಿ ಹಾರಬೇಕೇ? ಇದಕ್ಕೂ ಹೆಚ್ಚಿಗೆ ದೇಶದ ದುರ್ದೈವವಾವದು?

---

೭. ಜಾತಿಗೆ ಭೇದವಾದರೂ ನೀತಿಗೆ ಭೇದವಿಲ್ಲೆಂಬದೊಂದು ನಾಣ್ಣುಡಿ ಇದೆ. ಈಗಿನ ಆಳರಸರ ಕಾಲದಲ್ಲಿ ಜಾತಿಯೊಂದಾದರೆ, ನೀತಿಯೊಂದೇ ಎಂಬದೊಂದು ಸಿದ್ಧಾಂತವನ್ನು ನಾವು ಹೂಡಬಹುದು. ಆಳಾಗಿ ಸೇರಿದವರಿಗೆ ಅಂತಹ ದೊರಕಿದರೆ, ಅವರೆಂದಿಗೂ ಅವರನುಕೂಲವಾಗಿ ನಡೆಯುರು. ಮೈಸೂರಿನ ಸರಕಾರದಲ್ಲಿ ಸದ್ಯಕ್ಕೊದಗಿದ ಒಂದು ಪ್ರಕಾರವನ್ನು ನಾವು ಉದಾಹರಿಸಬಹುದು. ಬೆಂಗಳೂರಿನ ಬಿನ್ನಿ ಗಿರಣಿಯಲ್ಲಿ ಕೂಲಿಕಾರರು ಸಂಪು ಮಾಡಿದ್ದರು. ಸಂಪು ಮುರಿಯಲಿಕ್ಕಾಗಿ ಗಿರಣಿಯ ಒಡೆಯರಿಗೆ ನೆರವಾಗಲು ಅಸಿಸ್ಟಂಟ ಸುಪರಿಂಟೆಂಡೆಂಟರಾದ ಮಿ| ಸಿರ್ಲೇಯವರ ನೇತೃತ್ವದಲ್ಲಿ ಪೋಲೀಸರು ಹೋಗಿ ೫ ಮಂದಿ ಸಂಪುಗಾರರನ್ನು ಕೊಂದು ಬಿಟ್ಟರು. 'ವಿಶ್ವಕರ್ನಾಟಕ' ಮುಂತಾದ ಪತ್ರಿಕಾಪ್ರಪಂಚದಲ್ಲಿ ಈ ಕುರಿತು ಗಡಿಬಿಡಿಯಾಗಲು, ಸರಕಾರವು ವಿಚಾರಣೆಯನ್ನು ನಡಿಸುತ್ತಿದ್ದೇವೆಂದು ಜುಲೈ ೧೮ನೇ ತಾರೀಖಿಗೆ ಪ್ರಕಟಣೆಯನ್ನು ಹೊರಡಿಸಿ ಜಾಹೀರಪಡಿಸಿದರು. ನಿರುಪಾಯವಾಗಿ ಆದಷ್ಟು ಕಾಲಹರಣ ಮಾಡಿ, ಕಳೆದ ಸಪ್ಟೆಂಬರ ತಿಂಗಳಿನಲ್ಲಿ ಮೈಸೂರ ಸರಕಾರವು ಚೌಕಶಿ ಮಾಡಿ ಪೋಲೀಸರು ದೊಂಬಿಯ ಸಮಯ ಸಂಪುಗಾರರ ಮೇಲೆ ಹಾರಿಸಿದ ಮದ್ದು ಗುಂಡು ಕಾಯಿದೆಯ ನಿಯಮಗಳಿಗೆ ಮೀರಿರುವದಾಗಿಯೂ, ಸಂಪುಗಾರರ ಮೇಲೆ ತುಬಾಕಿಯನ್ನು ಹಾರಿಸಿದ್ದು ತಪ್ಪೆಂದೂ, ತುಬಾಕಿಯನ್ನು ಹಾರಿಸುವದಕ್ಕೆ ಮುಂಚಿತವಾಗಿ ಮುಂಜಾಗ್ರತೆಯನ್ನು ಸ್ಪಷ್ಟವಾಗಿ ಪೋಲೀಸರು ಕೊಡಲಿಲ್ಲವಾಗಿಯೂ ಸಿದ್ಧಾಂತ ಮಾಡಿರುವರು. ಇಷ್ಟಾದರೂ ಚೌಕಶಿ ಮಾಡಿದವರು ಪೋಲೀಸ ಆಫೀಸರರಿಗೆ ಒಂದು ಶಿಫಾರಸುಪತ್ರವನ್ನೇ ಕೊಟ್ಟಿರುವರೆಂದು ವಾಚಕರಿಗೆ ಹೇಳಿದರೆ, ವಾಚಕರೆಂದೆಂದಿಗೂ ಒಪ್ಪುವಂತಿಲ್ಲ. ಆದರಿಂದ ನಮ್ಮ 'ವಿಶ್ವಕರ್ನಾಟಕ'ಪತ್ರಿಕೆಯೊಳಗಿನ ವಾಕ್ಯವನ್ನೇ ನಾವು ಎತ್ತಿಕೊಡುವೆವು. "ಇದಕ್ಕೆ ಸಂಬಂಧಪಟ್ಟ (ತುಬಾಕಿ ಹಾರಿಸಿ ಪ್ರಾಣ ತೆಗೆಯಲಿಕ್ಕೆ) ಪೋಲೀಸ ಆಫೀಸರರು ತಮ್ಮ ವಿವೇಚನೆಯನ್ನು ಸಾಧ್ಯವಾದಷ್ಟರ ಮಟ್ಟಿಗೆ ಉತ್ತಮವಾದ ರೀತಿಯಲ್ಲಿ ಉಪಯೋಗಿಸಿದಂತೆ ಕಂಡುಬರುತ್ತದೆ" ಈ ವಾಕ್ಯದ ಅರ್ಥವನ್ನು ಮೇಲಿನ ಹಕೀಕತಿನಿಂದ ಗ್ರಹಿಸಲು ಬ್ರಹ್ಮದೇವರಿಂದ ಕೂಡ ಸಾಧ್ಯವಾಗದು. ಮದ್ದು ಗುಂಡುಗಳನ್ನು ಕಾಯಿದೆಗೆ ಮೀರಿ ಉಪಯೋಗಿಸಿ, ಮುಂಜಾಗ್ರತೆಯನ್ನೀಯದ ಗುಂಡುಗಳನ್ನು ಹಾರಿಸುವವರು ಸಾಧ್ಯವಾದಷ್ಟರ ಮಟ್ಟಿಗೆ ಉತ್ತಮವಾದ ರೀತಿಯಲ್ಲಿ ತಮ್ಮ ವಿವೇಚನೆಯನ್ನು ಉಪಯೋಗಿಸಿದರೆಂದು ಬೆಕ್ಕಬುದ್ಧಿ ಇದ್ದವರ್‍ಯಾರೂ ಹೇಳಲಾರರು. ಹೇಳುವ ಬಗೆ ಹೇಗೆ? ಬರದಕ್ಕಿಂತ ಹೆಚ್ಚಿಗೆಯಾಗಿ ಕೊಡಲಿದೆ ಬಿಟ್ಟರೆಂಬರ್ಥವಿರುವ ಈ ವಾಕ್ಯವು ಬರದಿದ್ದರೆ, ಅದಕ್ಕೆ ಮಾತ್ರ ನಮ್ಮ ಸಮ್ಮತಿ ಇದೆ. [illegible] ಇದು ಪ್ರಕಾರದ ಉಪಕಾರವೇ ಮಿ| ಸಿರ್ಲೇಯವರ ನೇತೃತ್ವದಲ್ಲಿ ಸಂಪುಗಾರರ [illegible] ಹೋದ ಪೋಲೀಸರು ಈ [illegible] ದರೆಂದು ಹೇಳಿ ಅವರಿಗೆ [illegible] ಅದಕ್ಕೂ ನಾವು ತಯಾರಿರುವೆವು. ಆದರೆ, ಇಂಥ ಪಾಷಾಣಕ್ಕ [illegible] ಪ್ರೋಲೀಸ [illegible] ರಕ್ಷಣೆಗಾಗಿ [illegible] ವೆ. ಅಷ್ಟೆ.

---

೮. ಇವನ್ನೋದಿ [illegible] ಸರನ್ನು ಕ್ಷಮಿಸಿ [illegible] "ಅಕ್ರಮಗಳ [illegible] ಪ್ರಬಲವಾದ [illegible] ವು ಸದ್ರಿ ಆಫೀಸರರನ್ನು [illegible] ವರ ದರ್ಜೆಯಿಂದ ಇನ್ಸಪೆಕ್ಟರ [illegible] ಸಿದೆ" ಈ ವಾಕ್ಯವು [illegible] ರಸಿಗೆ ಸುಸಂಗತವಾಗಿರುವದು. [illegible] ರವು ಕೈಗೊಂಡ ಉಪಾಯವನ್ನು [illegible] ಶಿಫಾರಸಿನಂತೆ ಮಿ| ಸರ್ಲೇಯವರಿಗೆ ಒಡತಿ ದೊರಕದೇಕು, ಕಾರಣವು ಸ್ಪಷ್ಟವಿದೆ. ಸಂಪುಗಾರರು ದೊಂಬಿಯನ್ನೆಬ್ಬಿಸಿದಾಗ ಸಾಧ್ಯವಾದಷ್ಟರ ಮಟ್ಟಿಗೆ ಉತ್ತಮವಾದ ರೀತಿಯಲ್ಲಿ ಗುಂಡು ಹಾರಿಸಿ [illegible] ಡಿರುವರು! ಕಮಿಟಿಯವರ ಇವನ್ನೊಂದು ಶಿಫಾರಸಿನಂತೆ ಅವರಿಗೆ ಕೆಳ ಹುದ್ದೆಯ ಮೇಲೆ ನೇಮಿಸಬೇಕ. ಇದರಿಂದ ಮೈಸೂರ ಸರಕಾರವು ಕೈಕೊಂಡ ತಿಸು ಪಡಿಯನ್ನು ಕೇಳಲು ವಾಚಕರು ಉತ್ಸುಕರಾಗುವದು ಸಹಜವು. ಮಿ| ಸಿರ್ಲೇಯವರು ಅಸಿ| ಸುಪರಿಂಟೆಂಡೆಂಟರಿಂದ ಇನ್ಸಪೆಕ್ಟರರಾದರು. ಆದರೆ ಹುದ್ದೆಯು ಕೆಳತರಗತಿಯದಾದರೂ ಸಂಬಳವು ಮಾತ್ರ ಮಿ| ಸಿರ್ಲೆಯವರಿಗೆ ಅಸಿ| ಪೋಲೀಸ ಸುಪರಿಂಟೆಂಡೆಂಟರಿರುವಾಗ ೨೫೫ ರೂಪಾಯಿ ಸಂಬಳ ದೊರಕುತ್ತಿತ್ತು, ತಲಬು ೨೦೦ ರೂಪಾಯಿ, ಕನ್ವೆಯನ್ಸ ಭತ್ತೆ ೩೦ ರೂಪಾಯಿ, ಗೃಹಸಂಭಾವನೆ ೨೫ ರೂಪಾಯಿ. ಹಿಂಬಡತಿಯಲ್ಲಿ ೨೮೦ ರೂಪಾಯಿಗಳು ಸಮವು! ಅಂದರೆ ಹಿಂಬಡತಿಯಿಂದ ಮಿ|ಸಿರ್ಲೇಯವರಿಗೆ ೨೫ ರೂಪಾಯಿಗಳ ಮುಂಬಡತಿಯು ದೊರಕಿತು! ಅದಕ್ಕಾದರೂ ಲೆಖ್ಖವಿದೆ! ಪೋಲೀಸ ಇನ್ಸಪೆಕ್ಟರರಿಗೆ ಸಿಗುವ ಸಂಬಳವು ೨೭೦ ರೂಪಾಯಿ, ತಲಬು ೧೫೦; ಸವಾರಿ ಸಂಭಾವನೆ ೨೫ ರೂಪಾಯಿ, ಕಮಾಯಿತು ಸಂಭಾವನೆ ರೂ. ೨೫ ಗೃಹಸಂಭಾವನೆ ರೂ. ೭೦. ಮಿ| ಸಿರ್ಲೇಯವರಿಗೆ ಹಿಂಬಡತಿ ಕೊಡುವಾಗ, ಸಿರ್ಲೆ ವ್ಯಕ್ತಿಗೆ ಸಂಭಾವನೆಯನ್ನು ಕಲ್ಪಿಸಿ, ೫೦ ರೂಪಾಯಿ ಕೊಟ್ಟು, ಅವರಿಗೆ ೨೮೦ ರೂಪಾಯಿ ಕೊಟ್ಟಿರುತ್ತಾರೆ! ಅಧಿಕಾರ ಸಂಭಾವನೆಯು ಬದಲು, ವ್ಯಕ್ತಿಸಂಭಾವನೆ ದೊರಕಿತು! ಅಧಿಕಾರ ಸಂಭಾವನೆ [illegible] ಹೋಗಲಿಕ್ಕೂ ಕಾರಣವಿದೆ, ಯಾಕಂದರೆ ಅಧಿಕಾರ ಸಾತೆಯಿಂದ ಮಿ| ಸಿರ್ಲೇಯವರು ಅಕ್ರಮಗಳನ್ನಾಚರಿಸಿದರು. ವ್ಯಕ್ತಿನಾತೆಯಿಂದ ವಿವೇಚನವನ್ನು ಸಾಧ್ಯವಾದಷ್ಟರ ಮಟ್ಟಿಗೆ ಉತ್ತಮವಾದ ರೀತಿಯಲ್ಲಿ ಉಪಯೋಗಿಸಿದರು. "ವಿಶ್ವಕರ್ನಾಟಕ"ಕ್ಕೆ ಇವೆಲ್ಲ ಸೂಕ್ಷ್ಮ ಭೇದಗಳು ತಿಳಿಯಲಿಲ್ಲೆಂಬಂತೆ ತೋರುತ್ತದೆ. ಆದರಿಂದ ಅಧಿಕಾರದ ಹಿಂಬಡತಿಯಾದಾಗ, ಹಣದ ಮುಂಬಡತಿಯಾಗುವ ನೀತಿ ಯಾವದೆಂದು "ವಿಶ್ವಕರ್ನಾಟಕ"ವು ದಿಗಿಲು ಬಿದ್ದಿದೆ. ಆಳರಸರ ಸೂತ್ರಬದ್ಧಿಯು ಆರಾರಿಗೆಲ್ಲಿಂದ ಬರಬೇಕು? ಚರ್ಮಚಕ್ಷುಗಳಿಗೆ ವಿಸಂಗತವಾಗಿ ಭಾಸವಾಗುವ ಪರಮಾತ್ಮನ ಲೀಲೆಗಳ, ಸುಸಂಗತವಾಗಿರುವವೆಂದು ವೇದಾಂತಿಗಳು ಹೇಳುವದನ್ನು ಪ್ರತ್ಯಕ್ಷ ಕಾಣಬೇಕಾದರೆ, ನಮ್ಮ ಆಳರಸರ ಲೀಲೆಗಳನ್ನೇ ಶೋಧಿಸಬೇಕಲ್ಲವೇ!

ಸ್ಥಾನಿಕ ವೃತ್ತಾಂತ.

ಕುಮಟಾ—ಸಾಮಾನ್ಯ ಚಳಿ. ಮೈಗು ಕೊಯ್ಲಿನ ಹಂಗಾಮು. ಅಡಿಕೆಯು ಬರುತ್ತಿದೆ. ಮೋಹಿನ [illegible] ನಡೆದಿದೆ. ನವರಾತ್ರಿಯ ಮಹೋತ್ಸವವು ವಾರ್ಷಿಕ ಪದ್ಧತಿಯಂತೆ ಕೀರ್ತನೆ [illegible] ಗಳಿಂದ ನೆರವೇರಿತು. ಅಡಿಕೆಯ ದರವು ಇಳಿಯುತ್ತಿದೆ.

ಇಲ್ಲಿಯ ಗಿಬ್ ಹಾಯಸ್ಕೂಲಿನ ಸಮ್ಮೇಲನ ಸಮಾರಂಭವು ಸಡಗರದಿಂದ ನೆರವೇರಿತು. ಗುರುವಾರ, ಶುಕ್ರವಾರಗಳಲ್ಲಿ ಹುಡುಗರ ಆಟಗಳು, ಚಮತ್ಕಾರಗಳು, ನಾಟಕ, ಬೈಲಾಟ ಮುಂತಾದವುಗಳ ನಡೆದವು. ಬಾಲಕಬಾಲಕಿಯರ ಭಾಷಣಗಳೂ, ಹಸ್ತ ಕೌಶಲ್ಯದ ಚಿಕ್ಕದೊಂದು ಪ್ರದರ್ಶನವೂ ಜರುಗಿದವು. ಮಂಗಳೂರಿನ ವಿಖ್ಯಾತ ಶ್ರೀ| ಅಮ್ಮೆಂಬಳ ಶ್ರೀನಿವಾಸ ಪೈರವರು ಈ ಸಮಾರಂಭಕ್ಕಾಗಿ ನಿಮಂತ್ರಿಸಲ್ಪಟ್ಟಿದ್ದರು. ಶ್ರೀನಿವಾಸ ಪೈರವರು ಇವುಗಳನ್ನೆಲ್ಲ ನೋಡಿ ಸಂತೋಷಬಟ್ಟರು. ಶನಿವಾರ ಸಾಯಂಕಾಲಕ್ಕೆ ಇನಾಮು ಹಂಚುವ ಸಮಾರಂಭವಾಯಿತು. ಶಾಲೆಯ ಪ್ರಗತಿಯ ರಿಪೋರ್ಟ ಓದಲಾಯಿತು. ರಿಪೋರ್ಟಿನಲ್ಲಿ ಶಾಲೆಯು ಪ್ರಗತಿಯ ಉಲ್ಲೇಖವು ಪರ್ಯಾಸನದಂತೆ ಮಾಡಲ್ಪಟ್ಟಿತು. ೭೬೦ ರೂಪಾಯಿಗಳನ್ನು ಕೊಟ್ಟ ಬಗ್ಗೆ, ಸಹಕಾರಿ ಸಂಘದ ಆಭಾರಮನ್ನಣೆ ಮಾಡಲಾಯಿತು. ಮುನಿಸಿಪಾಲಿಟಿಗೆ ಕರಗಳ ಕೊಡುವವರ ಹುಡುಗರನ್ನು ಹಾಯಸ್ಕೂಲಿನವರು ಕಲಿಸಿದ ಬಗ್ಗೆ ಮುನಿಸಿಪಾಲಿಟಿಯವರ ಕಡೆಗೆ ಪ್ರತ್ಯಸಹಾಯ ಬೇಡಲು ಹಾಯಸ್ಕೂಲಿಗೆ ಅಧಿಕಾರವಿರುವದಾಗಿ ಹೇಳಲಾಯಿತು. ಬೋರ್ಡಿಂಗಿನಲ್ಲಿ ಉತ್ತಮತರದ ವ್ಯವಸ್ಥೆಯಿದ್ದು, ಅದರ ಲಾಭವನ್ನು ಪಡೆಯುವವರ ಸಂಖ್ಯೆಯು ಕುಗ್ಗುತ್ತ [illegible] ಬಗ್ಗೆ ಪಶ್ಚಾತ್ತಾಪ ಪ್ರದರ್ಶಿಸಲಾಯಿತು. [illegible] ಅಧ್ಯಕ್ಷರಾದ ಅಮ್ಮೆಂಬಳ ಶ್ರೀನಿವಾಸ ಪೈಗಳವರು ಇನಾಮುಗಳನ್ನು ಹಂಚಿ, ತಮ್ಮ ಭಾಷಣವನ್ನು ಮಾಡಿದರು. ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ನೆರೆಹೊರೆಯವಿದ್ದು, ೧೮೬೫ನೇ ಇಸ್ವಿಯವರೆಗೆ ಒಂದೇ ಮನೆಯಂತೆ ಕೂಡಿ ನಡಕೊಳ್ಳು[illegible] ವೆಂದೂ ಹೇಳಿದರು. ಉತ್ತರ ಹಾಗು ದಕ್ಷಿಣ ಜಿಲ್ಲೆಗಳಿಗೆ ಸಾಮಾನ್ಯವಾದ ಒಂದೇ ಕೇ[illegible] ಹೊನ್ನಾವರದಲ್ಲಿ ಇದ್ದಿತೆಂತಲೂ [illegible] ದಕ್ಷಿಣ ಕನ್ನಡ ಜಿಲ್ಲೆಗಳ [illegible] ಂಧಗಳು [illegible]

...ವೆಂದೂ ಶ್ರೀ| ಪೈಗಳವರು ನುಡಿದರು. ಉತ್ತರ ...ಣ ಕನ್ನಡ ಜಿಲ್ಲೆಗಳೊಳಗಿನ ಸಮಾಜಗಳು ಕೂ...ಡಾದೇ ಸಂಸ್ಕೃತಿಯುವಾದ್ದರಿಂದ ಈ ಒಕ್ಕಟ್ಟಿ...ದ ಜಿಲ್ಲೆಗೆ ಲಾಭವಾಯಿತೆಂದೂ ಅಧ್ಯಕ್ಷರು ...ದರು, ಗನ್ತಕಾತೇ ಇಷ್ಟಿಯಲ್ಲಿ ಉತ್ತರ ಕನ್ನಡ ...ಯು ಮುಂಬಯಿ ಪ್ರಾಂತಕ್ಕೆ ಸೇರಿಸಿಕೊಂಡಂದಿ...ದ ನಾವು ಪರಕ್ಕರಂತೆ ನಡಕೊಳ್ಳಹತ್ತಿದೆವಾಗಿ...ಊ, ತಮ್ಮನ್ನು ನಿಯಂತ್ರಿಸಿ, ಚಾಲಕರು ಮುಂಚಿ ...ಬಂಧುಭಾವವನ್ನು ಉದ್ಧರಿಸಬಯಸಿರುವರಾಗಿ ...ೂ ಈ ಬಂಧು ಪಭಾವನ್ನು ಮುಂದೆ ನಡೆಸಲು ...ವೆಲ್ಲರೂ ದುಡಿಯಬೇಕಾಗಿ ಪ್ರೇರೇಪಿಸಿದ... ...ಲಿಯ ರಿಪೋರ್ಟನ್ನು ಪ್ರಶಂಸಿಸಿ, ಮುಂದೆ ಕೆಲವು ...ರದೇಶವನ್ನು ಅವರು ಮಾಡಿದರು. ಪ್ರಸ್ತುತ ...ಾ ಪದ್ಧತಿಯಲ್ಲಿ ಅನೇಕ ಊನಗಳಿರುವವಾಗಿ ...ೂ, ಅವನ್ನು ನಾವು ತಿದ್ದುಗಡಿಮಾಡಿಕೊಳ್ಳಬೇಕು, ...ಗಿಯೂ ಶ್ರೀ| ಶ್ರೀನಿವಾಸ ಪೈಗಳವರು ಸೂಚಿಸಿ, ...ೀಪಗಳನ್ನು ವಿವರಿಸಿದರು. ಪುರಾತನ ಸಂಸ್ಕೃತಿ ... ನಮ್ಮಲ್ಲಿ ಬಡವಾಗಿದ್ದಿಷ್ಟು ಅದನ್ನು ಅಭಿವೃದ್ಧಿ...ಸಲು ನಾವೆಲ್ಲರೂ ಯತ್ನಮಾಡತಕ್ಕದ್ದು. ಜರ್ಮ...ು ಪದ್ಧತಿಯು ಜರ್ಮನಿಯಲ್ಲಿ ಎಷ್ಟು ಯಶಸ್ವಿ...ಾದಾಗ್ಯೂ, ಅದನ್ನೇ ಇಲ್ಲಿ ಪ್ರಚುರಗೊಳಿಸುವದು ...ಅಪಕಾರಕವು. ಬ್ರಿಟಿಶ ಪದ್ಧತಿಯನ್ನು ನಮ್ಮಲ್ಲಿ ...ಸ್ಥಿತಿಗತಿಗಳ ವಿಚಾರವಮಾಡದೆ, ಅದನ್ನು ಅನುಸ...ರಿಸಿದ್ದು ದೊಡ್ಡ ತಪ್ಪೆಂದು ಶ್ರೀ| ಪೈಗಳವರು ...ನುಡಿದಿರುವರು ಪುರಾತನ ಸಂಸ್ಕೃತಿಗೆ ನಾವು ...ಪರಾಙ್ಮುಖರಾಗಿರುವೆವು. ನಾವದನ್ನು ಪುನರುದ್ಧರಿ...ಸಲು ಅದಕ್ಕಾಗಿ ಡಾ| ಭಾಂಡಾರಕರರವರು ರಚಿ...ಸಿದ ಗ್ರಂಥಗಳನ್ನು ಪರಿಶೀಲನ ಮಾಡಬೇಕು. ನಮ್ಮ ಸಂಸ್ಕೃತಿಯ ಮೊದಲನೇ ಲಕ್ಷಣವು. ಸಾಮಾನ್ಯ ...ನಕ್ರಮವು, ಡೌಲು, ಉಡಿಗೆ ತೊಡಿಗೆಗಳ ವಿಶೇ...ಷವು ನಮ್ಮ ಪುರಾತನ ಕಾಲದಲ್ಲಿ ಗೊತ್ತಿರಲಿಲ್ಲ ...ವಾದರೂ ಅದನ್ನೇ ಕೈಕೊಳ್ಳಬೇಕು, ಗುರು-ಹಿರಿ...ಗೆ ಆದರ ಭಾವವನ್ನು ತೋರಿಸುವದು ಹಿಂದೂ ...ಸ್ಕೃತಿಯ ಎರಡನೇ ಲಕ್ಷಣವು. ಗುರು-ಹಿರಿಯ...ರಾದ ಮಹಿಮೆ... ನಾವು ಪುರಾತನ ಕಾಲ...ದ ಅನ ಭವಿಸಿ ...ವು. ಗುರು ಹಿರಿಯರಿಗೆ ...ಯರಾಗಿ ನಡೆಯುವದು ನಮ್ಮ ಧರ್ಮವು ಆತ...ಯುಕ... ಕಳೆಗುಂದಿದೆ. ಪಾಶ್ಚಾತ್ಯರ ಸರಿಕೆ...ವು. ಕಲಿದೊರಿಂದ, ಈ ತಿದ್ದುವಡಿಯು ನಮಗೆ ...ವಲ್ಲಿ. ಸ್ಮರಣಶಕ್ತಿಯು ನಮ್ಮ ಮೂರನೇ ಗುಣ...ವು ದುಃಖ್ಯ ದಾಖಿಲೆ ತಯಾರಾಗುವದೂ, ಸ್ಮರಣ...ಯೂ ಭಿನ್ನವಾದವು. ಪುರಾತನ ಕಾಲದಲ್ಲಿ ...ಸ್ಮರಣರಿಗೆ ನಮ್ಮ ಧರ್ಮಶಾಸ್ತ್ರಗಳೆಲ್ಲ ನಾಲಿಗೆಯ...ಯ ಮೇಲಿದ್ದವು. ಅವರ ಕಿಂತವ ಅವರ...ೀಕರತಣದಿಂದ ಬೇಕಾದಷ್ಟು ಶಬ್ದ ಸಂಗ್ರಹವು ...ಗೆ ಸಿಗುತ್ತಿತ್ತು. ಭಗವದ್ಗೀತೆಯನ್ನು ಸುಲಭವಾ...ಡುವವರಿದ್ದಾರೆ. ಈ ಅಮೂಲ್ಯ ಗ್ರಂಥಗಳು ... ನಾಲಿಗೆಯ ತುದಿಯ ಮೇಲಿದ್ದರೆ, ನಮಗೆ ... ಹಿತವಿದೆ. ಮದ್ರಾಸ ಹಾಯಕೋರ್ಟಿನ ನ್ಯಾಯ...ಧೀಶರಾಗಿದ್ದ ಶ್ರೀ| ಸದಾಶಿವ ಅಯ್ಯರರವರ... ...ಗಳಲ್ಲಿ ಸಂಚರಿಸುತ್ತಿದ್ದು ಭಗವದ್ಗೀತೆಯ ...ೀಕರವರಿಗೆ ಇನಾಮುಗಳನ್ನು ಕಲ್ಪಿಸಿ ...ಇದರಿಂದ ನಮ್ಮ ಪುರಾತನ ಕಾಲದಲ್ಲಿ ...ಗಿದ್ದ ಸ್ಮರಣಶಕ್ತಿಯು ಮಹತ್ವವು ನಿಮಗೆ

ಹೊಳೆದೀತು. ಪುರಾತನ ಕಾಲದ ನಡೆನುಡಿಗಳನ್ನೆಲ್ಲ ಅಕ್ಷರಶಃ ಪಾಲಿಸಬೇಕೆಂಬುದು ತಮ್ಮ ಹೇಳಿಕೆ ಇರುವ ದಿಲ್ಲವಾಗಿಯೂ, ದೇಶಕಾಲೋಚಿತವಾದ ಸುಧಾರ ಣೆಗಳನ್ನು ಕೈಕೊಂಡ, ನಾವು ನಡೆನುಡಿಗಳನ್ನು ಕೈಕೊಳ್ಳಬೇಕಾಗಿಯೂ ಶ್ರೀ| ಪೈಗಳವರು ಸೂಚಿಸಿ, ಎಲ್ಲರೂ ಶಿಕ್ಷಣ ಪಡೆದು ಶೀಲವಂತರಾಗಬೇಕೆಂದು ಬೋಧಿಸಿ, ತಮ್ಮ ಉಪನ್ಯಾಸವನ್ನು ಚಪ್ಪಾಳೆಯ ಘೋಷದಲ್ಲಿ ಮುಗಿಸಿದರು. ಆ ಬಳಿಕ ಆಭಾರ ಮನ್ನಣೆ, ತಾಂಬೂಲ ಸಮರ್ಪಣೆ ಮಂತ್ರಾಕ್ಷತೆಗ ಳು ನಡೆದು, ಸಮಾರಂಭವು ವಿಸರ್ಜನ ಹೊಂದಿತು. ನಿನ್ನೆ ಇಲ್ಲಿಯ ಸಬಜಡ್ಜ ಮಿ| ಮಂಗೇಶವೇಘೇಕರರವರ ಅಧ್ಯಕ್ಷತೆಯಲ್ಲಿ ಶ್ರೀ| ಶ್ರೀನಿವಾಸ ಪೈಗಳವರ ಉಪ ನ್ಯಾಸವೊಂದಾಯಿತು 'ನ್ಯಾಶನಲ್ ಐಡಿಯಾ' ಎಂಬ ವಿಷಯದ ಮೇಲೆ ಶ್ರೀ| ಪೈಗಳವರು ಸುಂದರ್ಯ ಮಾತಾಡಿ ದರು.

ಕಳೆದ ಗುರುವಾರದಿಂದ ಇಲ್ಲಿ ಜಾಯಿಂಟ ಕೋರ್ಟು ಪ್ರಾರಂಭವಾಗಿದೆ ಚಿಕ್ಕೋಡಿಯ ಮಿ| ಆಲೂರರವರು ಜಾಯಿಂಟ ಸಬಜಡ್ಜರಾಗಿ ನೇಮಕ ವಾಗಿದ್ದಾರೆ.

ಕುಮಟೆಯಲ್ಲಿ ಶ್ರೀ ಮಧ್ವಜಯಂತಿಯ ಉತ್ಸವವು ವಾಡಿಕೆಯಂತೆ ಮೆರವಣಿಗೆ-ಉಪನ್ಯಾಸಗಳಿಂದ ನೆರವೇರಿತು

ಅಂಕೋಲಾ— ಕೊಡ್ಲಗದ್ದೆ ಗ್ರಾಮದ ನಿವಾ ಸಿಕರು ತಿಳಿಸುವದೇನಂದರೆ:— ಕಾರವಾರದಿಂದ ಧಾರ ವಾಡಕ್ಕೆ ಹೋಗುವ ಮಾರ್ಗದ ೪೪-೪೫ ಮೈಲುಗಳ ನಡುವೆ ದೊಡ್ಡ ಹಳ್ಳದ ಎಡ ಪಾರ್ಶ್ವದಿಂದ ನಮ್ಮ ಊರಿಗೆ ಹೋಗಬೇಕು ಇಲ್ಲಿಂದ ನಮ್ಮ ಊರು ೫-೫॥ ಮೈಲು ದೂರವಿದೆ. ಲೋಕಲ್ ಬೋರ್ಡಿನವರು ಸುಮಾರು ೩ ಮೈಲು ಮಾರ್ಗವನ್ನು ಮಾತ್ರ ತಯಾರಿಸಿರುವರು. ಮುಂದೆ ೨-೨॥ ಮೈಲು ಮಾರ್ಗವೇ ಇಲ್ಲ. ಆದರಿಂದ ಆ ೩ ಮೈಲು ಮಾರ್ಗ ಕಟ್ಟಿಸಿ ವ್ಯರ್ಥ. ನಮ್ಮ ಊರವ ರು ಸುಮಾರು ೨೦೦ ರೂಪಾಯಿಗಳನ್ನು ಲೋಕಲ್ ಫಂಡಿಗೆ ತರುತ್ತಿರುವರು. ನಾವು ಈ ಕುರಿತು ಲೋಕಲ್ ಬೋರ್ಡಿಗೆ ಎಷ್ಟು ಹೇಳಿಕೊಂಡರೂ, ನಮ್ಮ ಕಡೆಗೆ ಯಾರೂ ಕಿವಿಗೊಡುವದಿಲ್ಲ. ಹೀಗಿದ್ದರೂ ಕೊರತೆಯಾಗಿದ್ದರೆ, ನಮ್ಮ ಊರವರು ೫೦೦ ರೂಪಾಯಿಗಳ ಪಟ್ಟಿಗೆ ಈ ಕುರಿತು ಹಣ ಕೊಡಲು ತಯಾರಿರುವರು ಈ ಬಗೆ ಲೋಕಲ್ ಬೋರ್ಡಿಗೂ ಊರವ ೩ ಅರ್ಜಿ ಮಾಡಿಕೊಂಡಿರುತ್ತಾರೆ. ಇನ್ನಾದರೂ ಲೋಕಲ್ ಬೋರ್ಡು ಅತ್ತ ಲಕ್ಷ್ಯ ಪೂರೈಸುವದೇನು ?

ಸಿದ್ದಾಪುರ— ಇಲ್ಲಿಯ ಮಾಮಲೇದಾರ ಮಿ| ಜೋಗಳೇಕರ ಇವರಿಗೆ ಕುಲಾಬಾ ಜಿಲ್ಲೆಯ ಅಲೀಬಾಗ ಕ್ಕೆ ವರ್ಗವಾಗಿರುವದು. ಮಾಮಲೇದಾರಾಗಿ ಗ್ರಾಮಗಳ ಲ್ಲಿ ತಾಂಬೂಲ ಸಮರ್ಪಣೆಯಾಗುತ್ತಿದೆ

ನಮ್ಮ ತಾಲೂಕಿನಲ್ಲಿ ದನಗಳಿಗೆ ಮೇಯಲು ಹುಲ್ಲು ಬನ್ನಿಗಳಿರುವದಿಲ್ಲ. ಆದ್ದರಿಂದ ಇಂಥ ಒಂದು ಗ್ರಾಮ ವು ಈ ಗ್ರಾಮದವರು ತಮ್ಮ ತಮ್ಮ ವಾಡಿಕ್ಕೆ ಜಾಗ ಗಳಲ್ಲಿಯೇ ದನಗಳನ್ನು ಮೇಯಿಸಿಕೊಳ್ಳುತ್ತಾರೆ. ಈ ಮೂಲಕ ಕಳೆದ ಎಂಟು ವರ್ಷಗಳಲ್ಲಿ ಗೋಚರವಾದ ಘೀ ವಸೂಲಾಗಿದ್ದಿಲ್ಲ. ಈ ವರುಷ ಹಿಂದಿನ ವರುಷದ ಗೋಚರಾಯಿನ ವಸೂಲಿಯ ಕುರಿತು ಜಪ್ತಿ ಕ್ರಮವು ನಡೆಯುತ್ತಿರುವದಂತೆ! ಜಿಲ್ಲಾಧಿಕಾರಿಗಳು ರಕ್ಷಿಸಬೇಕು.

ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಕ ಸಂಘಾಂ ತರ್ಗತ ಕಾರವಾರ ಜಿಲ್ಲಾ ಸಂಘದ ಅಷ್ಟಮ ಮಹಾಸಭೆ ಯು ಹೊನ್ನಾವರದ ವಕೀಲರಾದ ಶ್ರೀ| ಶಿವರಾವ ಶಾಸ್ತ್ರಿಗ ಳ ಅಧ್ಯಕ್ಷತೆಯಲ್ಲಿ ನವಂಬರ ತಾ| ೧-೨ನೇಗೆ ಸಿದ್ದಾಪುರ

ದ ಕನ್ನಡ ಶಾಲೆಯಲ್ಲಿ ನಡೆಯುವದಿರುವದಾಗಿ ಕಾರ್ಯದ ರ್ಶಿಗಳಾದ ರಾ| ಆ. ತಿ. ಹೆಗಡೆಯವರು ತಿಳಿಸುತ್ತಾರೆ.

ಮುಂಡಗೋಡ— ತಾಲೂಕ ಲೋಕಲ್ ಬೋರ್ಡಿನ ಸಭಾಸದರಾದ ರಾ| ದೇವರಾಯ ಸುಬ್ರಾಯ ಶೇಟ ಇವರು ತಿಳಿಸುವದೇನಂದರೆ:— ಇತ್ತೀಚೆಗೆ ರೇಂಜ ಫೊರೆಸ್ಟ ಅಧಿಕಾರಿರಾದ ಮಿ| ಸಾಲ್ಡಾನಾರವರು ಇಲ್ಲಿಯ ಕನ್ನಡ ಶಾಲೆಯನ್ನು ಸಂದರ್ಶಿಸಿ. ಶಾಲೆಯ ಸ್ಥಿತಿಯನ್ನು ನೋಡಿ ಸಂತೋಷಪಟ್ಟರು. ಶಾಲೆಯಲ್ಲಿ ಸಮಯ ನೋ ಡಲು ಗಡಿಯಾರವಿದ್ದಿಲ್ಲ, ಆದರಿಂದ ಮಿ| ಸಾಲ್ಡಾನಾರವ ರು ಒಂದು ಟೈಂಪೀಸನ್ನು ಕಾಣಿಕೆಯಾಗಿಯಾಗಿ ಅರ್ಪಿ ಸಿದರು. ಸ್ಟುತ್ಯ. ಹೆಡ್ ಮಾಸ್ತರರಾದ ರಾ| ಗೋವಿಂದ ಮುಕುಂದ ದೇವಳಿಯವರಿಗೆ ಶಾಲೆಯನ್ನು ಸುಸ್ಥಿತಿಯಲ್ಲಿ ಟ್ಟ ಪ್ರಶಂಸೆ ಪಡೆದ ಶ್ರೇಯಸ್ಸು ಸಲ್ಲಬೇಕು. ಇತ್ಯಾದಿ.

ವೃತ್ತಸಾರ.

— ತಾರೀಖು ೧೮ನೇ ಸೋಮವಾರಕ್ಕೆ ಬೆಳಗಾವಿ ಡಿಸ್ಟ್ರಿಕ್ಟ ಬೋರ್ಡಿನ ದಾವೆಯಲ್ಲಿ ಬೆಳಗಾವಿಯ ಫಸ್ಟ ಕ್ಲಾಸ ಸಬಜಡ್ಜರಾದ ಮಿ|| ಬಾಪಟರವರು ತೀರ್ಪು ಕೊಟ್ಟು ರಾ| ಬ| ಅಂಗಡಿಯವರನ್ನು ಅಧ್ಯಕ್ಷರಾಗಿ ನೇಮಿ ಸ್ದು ಕಾಯಿದೆಗೆ ವಿರೋಧವಾದ್ದೆಂದು ಅಭಿಪ್ರಾಯ ಕೊಟ್ಟಿ ರುವರು. ಅದರಿಂದ ರಾ| ಬ| ಅಂಗಡಿಯವರು ಕರೆದ ಸಭೆಗಳನ್ನೂ ರಾ| ಚಿಕ್ಕೋಡಿಯವರು ರದ್ದು ಮಾಡಿರುವ ರು. ಅಧ್ಯಕ್ಷರ ನೇಮಣೂಕಿಯ ಬಗ್ಗೆ ಹೊಸ ಇಲೆಕ್ಷನು ಆಗಬೇಕಾಯಿತು. ಆದೇನು ಆಗುವದಿದೆಯೆಂತ! ವ್ಯರ್ಥ ಹೆಸರಿನಲ್ಲಿಯೇ ಬೋರ್ಡಿನ ಆಯುಷ್ಯ ಕಳೆದೀತು!

— ಮಾನಪಾಡದವರು ಮಹಾತ್ಮರಿಗೆ ಜಯಂತಿ ದಿನ ೫೦ ಸಾವಿರ ಗಜ ನೂಲನ್ನು ಅರ್ಪಿಸಿದರು. ಮಹಾತ್ಮರ ಜಯಂತಿ ದಿನ ಮುಂಜಾವು ೫ ಘಂಟೆಯಿಂದ ಸಾಯಂ ಕಾಲ ೫ ಘಂಟೆ ವರೆಗೆ ೫೬೦೦ ಗಜ ನೂಲನ್ನು ನೂತರು.

— ಮುಂಬಯಿಯ ನ್ಯಾಯಮೂರ್ತಿಗಳಾದ ಮಿ| ಮಾಡ ಗಾಂವಕರರವರು ನಮ್ಮಲ್ಲಿಯ ನ್ಯಾಯಾಸನಗಳನ್ನು ಸಂದರ್ಶಿಸುವದಕ್ಕಾಗಿ ಜನವರಿ ೪ ನೇಗೆ ಬಂದು ೮ ನೇ ವರೇಗೆ ಉಳಿಯುವರು.

— ಶಿಕ್ಷಣ ವಿಷಯವನ್ನು ಆಲೋಚಿಸಲು ಪುಣೆ ಪಟ್ಟಣ ದಲ್ಲಿ ಅಖಿಲ ಭಾರತೀಯ ಸ್ತ್ರೀಯರ ಸಭೆಯು ಸೇರುವದಿದೆ.

— ನಿಜಾಮ ರಾಜ್ಯದ ಹೈದರಾಬಾದದಲ್ಲಿ ಮದ್ದು ಗುಂಡು ಗಳನ್ನು ತಯಾರಿಸುತ್ತಿರುವಾಗ ಥಟ್ಟನೆ ಒಂದು ಸ್ಫೋ ಟವಾಗಿ, ೫ ಜನ ಹೆಂಗಸರಿಗೆ ಬಹಳ ಗಾಯಗಳಾದವು ನೆರೆಹೊರೆಯಲ್ಲಿರುವ ಒಂದು ಮನೆಯಲ್ಲಿ ಈ ಸಮ ಯ ಒಬ್ಬ ಹುಡುಗನು ಕುರಾನವನ್ನು ಓದುತ್ತಿದ್ದನು, ಆತನು ಈ ಸ್ಫೋಟದಿಂದ ಸತ್ತನು

— ಆಸಾಮದ ಶಾಸನಸಭೆ ಕೌನ್ಸಿಲಿನಲ್ಲಿ ಅಧಿಕಾರಿಯನ್ನು ಹೊಗಳುವಂತೆ ನೇಮಿಸಬಾರದೆಂಬ ಠರಾವು ಆಗಿರು ವದು. ಒಬ್ಬೊಂಟಿಗರಾಗಿ ಒಂದು ಸ್ಥಳದಲ್ಲಿ ಸೇರಲು ತ್ತು ಇಲ್ಲ; ಒಬ್ಬನಿಗೆ ವಿಶ್ವ ಅನೇಕರು ಸೇರಿದ್ದರೆ ೫೦ ರೂಪಾಯಿ ದಂಡ ತೆರಬೇಕು.

— ಕೊಲ್ಲಾಪುರದ ಬಳಿಕದಬ ಬಾವಡಾ ಎಂಬ ಗ್ರಾಮದಲ್ಲಿ ರಾ| ಬಾಬೂರಾವ ಯಾದವರವರಿಗೆ ಮನೆ ಯ ಗೋಡೆಯಲ್ಲಿ ಒಂದು ತಾಮ್ರದ ಕೊಡ ಸಿಕ್ಕಿತು ಆ ಕೊಡದಲ್ಲಿ ಹುಮಾಯೂನ-ಅಕಬರರವರ ಬಂಗಾ ರದ ನಾಲ್ಕು ಸಾವಿರಕ್ಕೆ ಮಿಕ್ಕಿ ನಾಣ್ಯಗಳಿದ್ದವು.

— ಅಮೇರಿಕೆಯ ಹವಾನಾ ನಗರದಲ್ಲಿ ದೊಡ್ಡ ದೊಂದು ಗಾಳಿ ಬೀಸಿ ಹೇರಳ ನಷ್ಟ. ಅನೇಕ ಗಿಡ-ಮರಗ ಳೂ ಬಂದರದಲ್ಲಿರುವ ಚಿಕ್ಕ ದೊಡ್ಡ ಹಡಗಗಳೂ ನಾಶ ವಾದವು. ಬೆಳೆಯೂ ನಷ್ಟವಾಯಿತು. ೩೦ ಮಂದಿಗಳು ಪ್ರಾಣಗಳೆದರು. ೩೦೦ ಮಂದಿಗಳಿಗೆ ಗಾಯಗಳಾಗಿವೆ. ಮನೆಗಳು ಬಿದ್ದದರಿಂದ ಸಾವಿರಾರು ಪ್ರಜೆಗಳು ಮನೆ ಮಾರುಗಳಿಲ್ಲದೆ ಬಳಲುತ್ತಿರುವರು

ಮಹಾತ್ಮರ ಆತ್ಮಚರಿತ್ರ.

(೨೧) ೩ ಪವನಿನ ತೆರಿಗೆ.

ಬಾಲ ಸುಂದರಂನ ಪ್ರಕರಣದಿಂದ ನನಗೆ ಕರಾರು ಬಿದ್ದ ಕೂಲಿಕಾರರ ಪರಿಚಯವಾಯಿತು. ಈ ಕೂಲಿಕಾರರ ಮೇಲೆ ವಿಶೇಷ ತೆರಿಗೆಯನ್ನೆತ್ತುವ ಪ್ರಯತ್ನಗಳು ನಡೆದವು. ಈ ಪ್ರಯತ್ನಗಳಿಗೆ ನಾನು ಅವಿರುಗಬೇಕಾದ್ದರಿಂದ ಅವರ ಸ್ಥಿತಿಯನ್ನು ನಾನು ಆಳವಾಗಿ ವಿಚಾರಿಸಿದೆನು.

೧೮೯೪ನೇ ಇಸ್ವಿಯಲ್ಲಿ ನಾತಾಲ ಸರಕಾರವು ಕರಾರು ಬಿದ್ದ ಕೂಲಿಕಾರರ ಮೇಲೆ ೨೫ ಪವನು ತೆರಿಗೆಯು ಪ್ರತಿವರ್ಷ ವಸೂಲಾಗಬೇಕೆಂದು ಯೋಚಿಸಿತು. ಇದನ್ನು ಕೇಳಿ ನಾನು ದಿಗಿಲುಬಿದ್ದೆ. ರಾಷ್ಟ್ರೀಯ ಸಭೆಯಲ್ಲಿ ಈ ಕುರಿತು ಚರ್ಚೆಯಾಯಿತು. ಆಗ ಅವಶ್ಯವಿದ್ದ ಪ್ರಯತ್ನಗಳನ್ನು ಕೈಕೊಂಡು ಸಂಘಟಿತವಾಗಿ ಪ್ರತಿಕೂಲಿ ಯಿರುಗಬೇಕೆಂದು ಗೊತ್ತಾಯಿತು.

ಮೊಟ್ಟಮೊದಲು ಈ ತೆರಿಗೆಯ ಇತಿಹಾಸವನ್ನು ಸಂಕ್ಷಿಪ್ತವಾಗಿ ನಾನು ವಿವರಿಸುವೆನು. ಸುಮಾರು ೧೮೬೦ನೇ ಇಸ್ವಿಯಲ್ಲಿ ನಾತಾಲದೊಳಗಿನ ಯುರೋಪಿಯನರು ಕಬ್ಬಿನ ಬೆಳೆಯುವಿಕೆಗಾಗಿ ಕೂಲಿಯಾಳುಗಳ ಬೇಕಾದರು. ಕಬ್ಬಿನ ಬೆಳೆಗಾಗಿ ಬೇಕಾಗುವ ಸಕ್ಕರೆಯ ... ಕೆಲಸ ಮಾಡುವ ನಾತಾಲದೊಳಗಿನ ... ಕಾರಣದಿಂದ ಹಿಂದುಸ್ಥಾನದ ... ಸರಕಾರದೊಡನೆ ಪತ್ರವ್ಯವಹಾರ ನಡಿಸಿ ಹಿಂದುಸ್ಥಾನದ ಕೂಲಿಯಾಳುಗಳನ್ನು ಸಂಗ್ರಹಿಸಲು ಅಪ್ಪಣೆ ಪಡೆಕೊಂಡರು. ಈ ಕೂಲಿಯಾಳುಗಳು ನಾತಾಲದಲ್ಲಿ ೫ ವರುಷಗಳ ವರೆಗೆ ಕೂಲಿ ಮಾಡಬೇಕಾಗಿತ್ತು. ಆ ಬಳಿಕ ಅಲ್ಲಿ ಮನೆಮಾರು ಮಾಡಿಕೊಂಡು, ಭೂಮಿಯ ಒಡೆಯರಾಗಿ ಉಳಕೊಳ್ಳಬಹುದೆಂದು ಕೂಲಿಯಾಳುಗಳಿಗೆ ಆಶೆ ತೋರಿಸಲಾಗಿತ್ತು. ಇದಕ್ಕೆ ಕಾರಣವಿದೆ. ಆ ಕಾಲಕ್ಕೆ ಕೂಲಿಯಾಳುಗಳು ಸ್ವತಂತ್ರರಾದ ಬಳಿಕ ಅವರ ಶ್ರಮದಿಂದ ಅಲ್ಲಿಯ ಬೇಸಾಯವನ್ನು ಉತ್ಕರ್ಷ ಹೊಂದಬಹುದೆಂದು ಯುರೋಪಿಯನ್‌ರು ನಿರೀಕ್ಷಿಸಿದ್ದರು.

ಆದರೆ, ಹಿಂದೀಯರು ನಿರೀಕ್ಷಣೆಗಿಂತ ವಿಶೇಷ ಕೆಲಸವನ್ನು ಮಾಡಿದರು. ಕಾಯಿಪಲ್ಲೆಗಳನ್ನು ಅವರು ಹೇರಳವಾಗಿ ಬೆಳೆಸಿದರು. ಹಿಂದುಸ್ಥಾನದೊಳಗಿನ ಕಾಯಿಪಲ್ಲೆಗಳ ಜಾತಿಗಳನ್ನೂ ಅಲ್ಲಿ ಬೆಳೆಸಿದ್ದಲ್ಲದೆ, ಸ್ಥಳಿಕ ಕಾಯಿಪಲ್ಲೆಗಳನ್ನು ಅಲ್ಪ ಬೆಲೆಯಿಂದ ಬೆಳೆಸಿದರು. ಮಾವಿನ ಹಣ್ಣನ್ನೂ ಬೆಳೆಸಹತ್ತಿದರು. ಬೇಸಾಯದಲ್ಲಿಯೇ ಅವರ ಸಾಹಸವು ಅಂತ್ಯವಾಗಲಿಲ್ಲ, ವ್ಯಾಪಾರದಲ್ಲಿಯೂ ಅವರು ಪ್ರವೇಶಗೊಂಡರು. ಸ್ಥಳಗಳನ್ನು ಕೊಂಡು ಕಟ್ಟಡಗಳನ್ನು ರಚಿಸಿದರು. ಅನೇಕರು ಸ್ವಪರಾಕ್ರಮದಿಂದ ಭೂಮಿಯನ್ನು, ಮನೆಗಳನ್ನು ಸಂಪಾದಿಸಿದರು. ಹಿಂದುಸ್ಥಾನದೊಳಗಿಂದ ವರ್ತಕರು ಅಲ್ಲಿಗೆ ಹೋಗಿ ವ್ಯಾಪಾರ ಮಾಡಲಾರಂಭಿಸಿದರು. ಶೇಟ ಅಬೂಬಕ್ಕರ ಅಮ್ಮದರವರು ಅಲ್ಲಿ ಮೊಟ್ಟಮೊದಲು ಹೋಗಿ ಹೆಸರಾದ ವರ್ತಕರಾದರು.

ಯುರೋಪಿಯನ್ ವರ್ತಕರಿಗೆ ಇದನ್ನೆಲ್ಲ ನೋಡಿ, ದೊಡ್ಡ ಭೀತಿಯುಂಟಾಯಿತು. ಹಿಂದೀ ಕೂಲಿಕಾರರನ್ನು ಮೊಟ್ಟಮೊದಲು ಕರೆಕೊಂಡಾಗ ಅವರಿಗೆ ವರ್ತಕರ ಚಾತುರ್ಯವಿರುವದೆಂದು ಅವರು ಎಣಿಸಿದ್ದಿಲ್ಲ. ಹಿಂದೀಯರು ಸ್ವತಂತ್ರ ಬೇಸಾಯಗಾರರಾಗಿರುವದು ವರೆಗೆ ಯುರೋಪಿಯನ್‌ರ ಆಕ್ಷೇಪವೇನಿದ್ದಿಲ್ಲ. ಆದರೆ, ವ್ಯಾಪಾರದಲ್ಲಿ ಸರಿಸರಿಯಾಗಿ ಪೈಪೋಟಿ ಮಾಡುವದನ್ನು ಮಾತ್ರ ಸೈರಿಸಲಾರರಾದರು.

ಇದೇ ಭಾರತೀಯರ ಮೇಲುಂಟಾದ ವಿರೋಧದ ಬೀಜವು. ಈ ಬೀಜದ ಬೆಳವಣಿಗೆಗೆ ಇತರ ಅನುಕೂಲ ಸಂಗತಿಗಳು ಘಟಿಸಿದವು. ನಮ್ಮ ಧರ್ಮವು ಬೇರೆ, ನಮ್ಮ ನಡೆನುಡಿಗಳ ಬೇರೆ. ಜೀವನಕ್ರಮವು ಸಾದಾಸೀದಾ, ಅಲ್ಪಲಾಭದಿಂದ ಸಂತೋಷ, ಆರೋಗ್ಯ ನಿಯಮಗಳ ಕುರಿತು ಅಜಾಗ್ರತೆ, ನಮ್ಮ ಕೇರಿಯನ್ನು ಸ್ವಚ್ಛವಾಗಿ ಕಾಪಾಡುವದರಲ್ಲಿ ನಿರ್ಲಕ್ಷ್ಯತನ, ನಮ್ಮ ಮನೆಗಳನ್ನು ನೆಟ್ಟಗೆ ಮಾಡಿಸುವದರಲ್ಲಿ ಕೃಪಣತನ, ಇವೇ ಮುಂತಾದ ಕಾರಣಗಳಿಂದ ವಿರೋಧದ ಬೀಜವು ವಿಶೇಷ ಬೆಳೆಯಿತು. ಕಾಯಿದೆಯ ನಿರ್ಮಾಣದಿಂದ ಈ ವಿರೋಧವು ಸ್ಪಷ್ಟವಾಯಿತು. ಮತಾಧಿಕಾರವನ್ನು ಕಸಕೊಳ್ಳುವ ಕಾಯಿದೆ, ಕರಾರುಬಿದ್ದ ಕೂಲಿಕಾರರ ಮೇಲೆ ತೆರಿಗೆಯನ್ನೆತ್ತುವ ಕಾಯಿದೆಗಳು ಈ ವಿರೋಧದ ಫಲವು. ಕಾಯಿದೆಯ ಹೊರತು ಇನ್ನೂ ಬೇರೆ ಕುಟಿಲ ಕೆಲಸಗಳು ನಡೆದಿದ್ದವು.

ಹಿಂದೀ ಕೂಲಿಯಾಳುಗಳನ್ನು ಕರಾರು ಮುಗಿಯುವ ಮುಂಚೆಯೇ ಬಲಾತ್ಕಾರದಿಂದ ಹಿಂದುಸ್ಥಾನಕ್ಕೆ ಕಳಿಸಬೇಕು. ಕರಾರಿನ ಮುದ್ದತು ಹಿಂದುಸ್ಥಾನದಲ್ಲಿ ಅಂತ್ಯವಾಗಬೇಕು. ಹಿಂದುಸ್ಥಾನ ಸರಕಾರಕ್ಕೆ ಈ ಸೂಚನೆಯು ಮಾನ್ಯವಾಗಲಿಲ್ಲ. ಆದ್ದರಿಂದ ಇನ್ನೊಂದು ಸೂಚನೆಯು ಸೂಚಿಸಲ್ಪಟ್ಟಿತು. ಅದರ ವಿವರವೇನಂದರೆ— ಕೂಲಿಯಾಳುಗಳು, ತಮ್ಮ ಕೂಲಿಯ ಮುದ್ದತ್ತು ತೀರಿದ ಕೂಡಲೆ ಹಿಂದುಸ್ಥಾನಕ್ಕೆ ಮರಳಬೇಕು. ಅಥವಾ ಪ್ರತಿ ಎರಡು ವರ್ಷಗಳಿಗೊಮ್ಮೆ ಹೊಸ ಕರಾರನ್ನು ಬರಕೊಡಬೇಕು, ಈ ಹೊಸ ಕರಾರು ಬರಕೊಡುವಾಗ, ಅವರಿಗೆ ಬಡತಿ ಕೊಡಬೇಕು. ಹೊಸ ಕರಾರನ್ನು ಬರಕೊಡಲೊಲ್ಲದಿದ್ದಲ್ಲಿ ಹಿಂದುಸ್ಥಾನಕ್ಕೆ ಹೋಗಲೊಲ್ಲದಿದ್ದಲ್ಲಿ ಆ ಕೂಲಿಕಾರರು ವರ್ಷಾವಧಿ ೨೫ ಪವನಿನಂತೆ ತೆರಿಗೆಯನ್ನು ತರಬೇಕು.

ಸರ್ ಹೆನ್ರಿ ಬಿನ್ಸ್ ಹಾಗು ಮಿ। ಮೇಸನ್‌ರವರು ಅಲ್ಲಿಯ ಸರಕಾರದ ಪ್ರತಿನಿಧಿಯಾಗಿ ಹಿಂದುಸ್ಥಾನಕ್ಕೆ ಬಂದರು. ಇಲ್ಲಿಯ ಸರಕಾರದಿಂದ ಈ ಸೂಚನೆಯನ್ನು ಮನ್ನಿಸಿಕೊಳ್ಳಬೇಕೆಂದು ಅವರು ಇಲ್ಲಿ ಬಂದರು. ಆ ಕಾಲದಲ್ಲಿ ಎಲ್ಗಿನ್ ದೊರೆಗಳು ಇಲ್ಲಿಯ ಸರ್ವಾಧಿಪತಿಗಳಾಗಿದ್ದರು. ೨೫ ಪವನಿನ ತೆರಿಗೆಯು ಅವರಿಗೆ ಮಾನ್ಯವಾಗಲಿಲ್ಲ. ಆದರೆ, ೩ ಪವನು ತಲೆ ತೆರಿಗೆ ಕೂಡ್ರಿಸಬಹುದೆಂದು ಸರ್ವಾಧಿಪತಿಗಳು ಹೇಳಿದರು. ಸರ್ವಾಧಿಪತಿಗಳು ಈ ಸೂಚನೆಯನ್ನು ಮಾಡಿ, ಹಿಂದೀ ಪ್ರಜೆಗಳ ಕಲ್ಯಾಣವನ್ನು ಧಿಕ್ಕರಿಸಿರುವರೆಂದು ನನಗೆ ಆಗಲೂ ತೋರಿತು, ಈಗಲೂ ತೋರುತ್ತದೆ. ಹಿಂದುಸ್ಥಾನದ ಹಿತವನ್ನು ಅವರು ಗ್ರಹಿಸಲಿಲ್ಲ. ನಾತಾಲ ಯುರೋಪಿಯನ್‌ರಿಗೆ ಅನುಕೂಲತೆಗಳನ್ನು ಒದಗಿಸಿ ಕೊಡುವದು ಅವರ ಕರ್ತವ್ಯವಾಗಿದ್ದಿಲ್ಲ. ಈ ಕಾಯಿದೆಯಿಂದ ೪-೫ ವರ್ಷಗಳಲ್ಲಿ ಕೂಲಿಕಾರರೂ, ಅವರ ಹೆಂಡಂದಿರೂ, ೧೬ ವರ್ಷ ವಯಸ್ಸಿಕ್ಕೆ ಮಿಕ್ಕಿದ ಗಂಡು ಹುಡುಗರೂ, ೧೩ ವರ್ಷ ವಯಸ್ಸಿಕ್ಕೆ ಮಿಕ್ಕಿದ ಹುಡುಗಿಯರೂ ಈ ಕಾಯಿದೆಯ ಕಕ್ಷೆಯೊಳಗೆ ಸೇರಿದರು. ಗಂಡ-ಹೆಂಡತಿ ಹಾಗು ಇಬ್ಬರು ಹುಡುಗರಿದ್ದ ಒಂದು ಮನೆತನದಿಂದ ೧೨ ಪವನುಗಳನ್ನು ವರ್ಷಾವಧಿ ವಸೂಲು ಮಾಡುವದು ಕ್ರೂರತನವು, ಭೂಗೋಲದಲ್ಲೆಲ್ಲಿಯೂ ಕಾಣದ ಮಾತು. ಗಂಡನ ಸಂಪಾದನೆಯಾದರೋ, ತಿಂಗಳಿಗೆ ಸರಾಸರಿಯಿಂದ ೧೪ ಶಿಲಿಂಗು!

ಈ ತೆರಿಗೆಗೆ ವಿರೋಧವಾಗಿ ನಾವು ದೊಡ್ಡ ದೌಡನ್ನೇ ಘಟಿಸಿದೆವು. ನಾತಾಲದೊಳಗಿನ ಹಿಂದೀ ರಾಷ್ಟ್ರೀಯ ಸಭೆಯು ಸುಮ್ಮನೆ ಉಳಕೊಂಡಿದ್ದರೆ ಸರ್ವಾಧಿಪತಿಗಳು ೨೫ ಪವನು ತೆರಿಗೆಗೂ ಒಪ್ಪಿಗೆ ಕೊಡುತ್ತಿದ್ದರು. ೨೫ ರಿಂದ ೩ ಪವನಿಗೆ ಇಳಿದದ್ದು ರಾಷ್ಟ್ರೀಯ ಸಭೆಯ ಚಳವಳಿಯ ಫಲವೆಂದು ನನ್ನ ತಿಳುವಳಿಕೆಯಿದೆ. ಆದರೆ, ಅದು ತಪ್ಪಾಗಿರಲಿಕ್ಕೂ ಸಾಕು. ಹಿಂದುಸ್ಥಾನ ಸರಕಾರವು ಮೊದಲಿನಿಂದಲೇ ೨೫ ಪವನಿನ ತೆರಿಗೆಗೆ ವಿರೋಧ ಮಾಡಿ ೩ ಪವನಿಗೆ ಇಳಿಸಿದರೂ ಇರಬಹುದು ಸ್ಯಾಗಿದ್ದರೂ, ಹಿಂದುಸ್ಥಾನ ಸರಕಾರವು ಕರ್ತವ್ಯಭ್ರಷ್ಟವಾಯಿತೆಂದು ನನ್ನ ಹೇಳಿಕೆ. ಇದೆ ಹಿಂದುಸ್ಥಾನದ ಕಲ್ಯಾಣಕರ್ತರಾಗಿ ನೇಮಿಸಲ್ಪಟ್ಟ ಸರ್ವಾಧಿಪತಿಗಳು ಈ ಅಮಾನುಷ ತೆರಿಗೆಗೆ ಎಂದೆಂದಿಗೂ ಎಷ್ಟಕ್ಕೂ ಒಪ್ಪಿಗೆ ಕೊಡಬಾರದಿತ್ತು.

೨೫ ಪವನುಗಳಿಂದ ೩ ಪವನಿಗೆ ತೆರಿಗೆಯನ್ನಿಳಿಸಿದ್ದು ರಾಷ್ಟ್ರೀಯ ಸಭೆಗೆ ದೊಡ್ಡ ಅಭಿಮಾನದ ಸಂಗತಿಯಲ್ಲ. ಕೂಲಿಕಾರರನ್ನು ಸಂಪೂರ್ಣವಾಗಿ ಕಾಯಲು ರಾಷ್ಟ್ರೀಯ ಸಭೆಯು ಅಸಮರ್ಥವಾಯಿತೆಂಬ ಅಸಮಾಧಾನವು ಇದ್ದೇ ಇತ್ತು. ಈ ತೆರಿಗೆಯನ್ನು ಸಂಪೂರ್ಣವಾಗಿ ರದ್ದು ಮಾಡಿಸಿಕೊಳ್ಳಬೇಕೆಂಬ ನಿರ್ಧಾರವು ನಮ್ಮದಾಯಿತು. ೨೦ ವರುಷಗಳ ಮೇಲೆ ಈ ನಿರ್ಧಾರವು ಕೊನೆಗಂಡಿತು. ಆ ನಿರ್ಧಾರವು ಕೊನೆಗಾಣಬೇಕಾದರೆ, ನಾತಾಲದೊಳಗಿನ ಹಿಂದೀಯರೂ ಮಾತ್ರವಲ್ಲದೆ ದಕ್ಷಿಣ ಆಫ್ರಿಕದೊಳಗಿನ ಸಮಸ್ತರೂ ಪರಿಶ್ರಮಪಟ್ಟರು. ಗೋಖಲೆಯವರಿಗೆ ಕೊಟ್ಟ ಅಭಿವಚನವನ್ನು ಉಲ್ಲಂಘಿಸಿದ ಬಳಿಕ ಒದಗಿದ ಕಾದಾಟದಲ್ಲಿ ಕೂಲಿಕಾರರು ಅಂತಃಕರಣಪೂರ್ವಕವಾಗಿ ಪ್ರವೇಶಗೊಂಡರು. ಗುಂಡು ತಾಗಿ ಕೆಲವರು ಮಡಿದರು. ೧೦೦೦೦ ಕ್ಕೆ ಮಿಕ್ಕಿ ಜನರು ಸೆರೆಮನೆಯ ಕಷ್ಟಗಳನ್ನನುಭವಿಸಿದರು. ಕೊನೆಗೆ ಸತ್ಯದ ವಿಜಯವಾಯಿತು. ಭಾರತೀಯರ ಕಷ್ಟಗಳು, ಸತ್ಯದ ದ್ಯೋತಕವು. ಅಚಲ ನಿಷ್ಠೆ-ಅಪರಿಮಿತ ಸಹನಶೀಲ-ಸತ್ಯಶೋಧನೆಗಳಿಲ್ಲದ್ದರೆ, ಸತ್ಯವು ವಿಜಯ ಹೊಂದುತ್ತಿದ್ದಿಲ್ಲ. ಈ ತೆರಿಗೆಯು ಅಸಹಾಯರೆಂದು ಭಾರತೀಯರು ಕಾದಾಟವನ್ನು ತ್ಯಜಿಸಿದರೆ, ರಾಷ್ಟ್ರೀಯ ಸಭೆಯು ತನ್ನ ಸಂಗ್ರಾಮವನ್ನು ಬಿಟ್ಟಿದ್ದರೆ, ಇಂದಿನ ತನಕ ನಿಂದ್ಯವಾದ ತೆರಿಗೆಯನ್ನು ತೆತ್ತು, ದಕ್ಷಿಣ ಆಫ್ರಿಕೆಯೊಳಗಿನ ಹಿಂದೀಯರೂ, ಇಡಿ ಭರತ ಖಂಡವೂ ಶಾಶ್ವತವಾಗಿ ನಾಚಿಕೆಗೀಡಾಗಬೇಕಾಗಿತ್ತು.

BATLIBOI'S
Accountancy Training Institute
Recognised by
The G. D. A. Board
Offers best training in Accounting, Banking, Company Management and Secretarial Work and Theory and Practice of Commerce
Best staff, Individual attention, fee moderate, and payable by instalments.
Send for Prospectus at Yusuf Buildings, Churchgate Street, Fort, Bombay.
You are invited to make a thorough enquiry before joining
TUITION BY POST
IS OUR SPECIALITY.

ಗೆಳೆಯರ ಗುಂಪಿನ
ಕನ್ನಡ] ಸ್ವಧರ್ಮ. [ಪಾಕ್ಷಿಕ
ಸಂಪಾದಕರು.- ದ. ರಾ. ಬೇಂದ್ರೆ ಬಿ. ಎ
ವಾರ್ಷಿಕ ವರ್ಗಣಿ ೩—೦—೦
ಸಮಾಜದಲ್ಲಿ ಶಾಂತಿತೃಪ್ತಿ, ತುಷ್ಟಿಗಳು ನೆಲೆಗೊಳ್ಳ ಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೆಳೆಗೆಗೆ ಸುವಿಚಾರವೇ ಸರಿಯಾದ ಸಾಧನ. ಈ ಸುವಿಚಾರಗಳನ್ನು ಸಮಾಜದ ಮುಂದಿಡುವದೇ ಸ್ವಧರ್ಮದ ಗುರಿ. ಕನ್ನಡಿಗರು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.
ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ
ಮಾಳಮಡ್ಡಿ, ಧಾರವಾಡ

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

"ಬಲವಂತ ಗುಟಿಕಾ."

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿಜಾತಿಗಳಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ಬೇಕಾದ ಕ್ರಿಯೆಯಿಂದ ತಯಾರಿಸಲ್ಪಟ್ಟಿವೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇವಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿದ್ದ ಮೇಲೆ ಅಥವಾ ನಂತರ ಧಾತು ಸರಿಯುವದು ನಿಲ್ಲುವದೆ ಸ್ವಪ್ನಾವಸ್ಥೆಯು ಆಗುವದಿಲ್ಲ. ಇವನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತೆಗೆದುಕೊಂಡು ಖಾತ್ರಿ ಮಾಡಿಕೊಳ್ಳಬಹುದು) ಇದರಿಂದ ಮೈಯಲ್ಲಿ ಗರ್ಮಿಯು ಎಣ್ಣಾಕರವಿಕಾರಗಳು ನಾಶವಾಗ ಮಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲ ಖರ್ಚು ಸಹಿತ ೧ ಡಬ್ಬಿಗೆ ೦-೧೪-೦. ೩ ಡಬ್ಬಿಗಳಿಗೆ ೭-೪-೦, ೧೨ ಡಬ್ಬಿಗಳಿಗೆ ೭ ೦-೦, ಇದಲ್ಲದೆ ೧ ಡಬ್ಬಿಯು ಕಮೀಶನ್ನು ಸಿಗುತ್ತದೆ.

ಸೂಚನೆ – ಹೊಸ ರೋಗಕ್ಕೆ ಒಂದೇ ಡಬ್ಬಿಯಿಂದ ಹಳೇ ರೋಗಕ್ಕೆ ೩ ಡಬ್ಬಿಯಿಂದ ಪೂರ್ಣ ಗುಣ.

ಎಸ್. ಬಿ. ಕದಂ ಮತ್ತು ಸನ್ಸ್,

ಮು॥ ಪೋ. ನಿಪ್ಪಾಣಿ, ಜಿ॥ ಬೆಳಗಾಂವ

ಶೆವರಲೆಟ್

ಮೋಟಾರ ಕಾರ್ ಏಜನ್ಸಿ, ಕೆನರಾ

ನಾವು ಹೊಸ ಶೆವರಲೆಟ್ ಮೋಟಾರ ಗಾಡಿಗಳನ್ನು ಗಿರಾಕಿಗಳಿಗೆ ಅನುಕೂಲವಾಗುವಂತೆ ಕಳಿಸಿಕೊಡುತ್ತೇವೆ. ಅಪೇಕ್ಷೆಯುಳ್ಳವರು ಸಮಕ್ಷಮ ಅಥವಾ ಪತ್ರದ್ವಾರಾ ಮಾಹಿತಿ ತಿಳಕೊಳ್ಳಬಹುದು.

ಏಜಂಟ:—ಎಸ್. ಎಲ್. ಧಾಕಪ್ಪ ಮತ್ತು ಬ್ರದರ್ಸ್, ಶಿರ್ಸಿ

ಸಬ್ ಏಜಂಟ— ಜಿ. ಡಿ. ಮಾಳಗಿಕರ ಎಂಡ್ ಕೊ

ಬಿ. ಪಿ. ಪೆಟ್ರೋಲ ನಮ್ಮಲ್ಲಿ ಬೇಕಷ್ಟು ಸಿಗುವದು. ಡನ್‌ಲೊಪ್ ಹಾಗು ಮಿಚಲಿನ ಮೋಟಾರ ಸಾಯಕಲ್ ಟಾಯರ-ಟ್ಯೂಬ ಇತ್ಯಾದಿಗಳು ಯೋಗ್ಯ ಕಿಮ್ಮತ್ತಿನಿಂದ ಪೂರೈಸುತ್ತೇವೆ

G. D. Malgikar & Co,

KUMTA

ಯಾವದೇ ಆಕಾರದ ನಂಬರಿನ ನಕ್ಷೆಯ ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭;



ಬರೇ ಒಂದು ತಿಂಗಳ ಖಗ್ಗ. ಸಾಕು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ !!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈ ಗಡಿಯಾರವನ್ನು ಉತ್ಕೃಷ್ಟ ಲೇದರ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 608 P T Madras**

ಅತ್ಯಲ್ಪವಿವೆ! ಕೇವಲ ಉಚಿತ



ಉಚಿತ ಉಚಿತ ಕೇವಲ ಉಚಿತ

"ತಾರಾ" ಲೀವರ ರಿಜಿಸ್ಟರ್ಡ ಪೊಕೆಟ್ ವಾಚು ೧೮ ಕೆರೆಟ್ ರೋಲ್ಡ ಗೋಲ್ಡಿನದು. ಮಜಬೂತಿಯುಳ್ಳದು ಮತ್ತು ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಕರರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಿಜಿಸ್ಟರ್ಡ ಟ್ಯಾಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಬನ್ನಿ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್‌ವಾಚ್ ಗಡಿಯಾರಗಳಿಗೆ ಕೂಡಿ

ಬರೇ ರೂಪಾಯಿ ೫

CAPTAIN WATCH CO, P. B. 265, MADRAS



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಸೆ ಕಟ್ಟಿಗೆಯ

ದೇವರ ಮಂಟಪಗಳೂ,

ಮಂಗಲ ಸೌಭಾಗ್ಯವತಿ ಪೆಟ್ಟಿಗೆಗಳೂ, ತಿಜೋರಿ ಪೆಟ್ಟಿಗೆಗಳೂ ಆಫೀಸ ಬಾಕ್ಸುಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೋರ್ಥ್ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಎಲ್ಲಾ ನೋವುಗಳಿಗೆ ದ್ವಿವ್ಯೌಷಧವು

ವಾತಹಾರಿ ತೈಲ.

ಕ್ರಯ ೫ ತೊಲೆ ಬಾಟ್ಲಿ ೧ ಕ್ಕೆ ೦—೧೨—೦. ಗಾಂಜೆ ಸುವಾಸಿಕ ಗಂಧೂಲಿ ಹಿಂಗು ೧೦ ತೊಲೆ ಡಬ್ಬಿ ೧ ಕ್ಕೆ ೧—೮—೦. ಹಿಂಗಿನ ಅರ್ಕ ½ ತೊಲೆಯ ಬಾಟ್ಲಿ ೧ ಕ್ಕೆ ೦—೮—೦. ರಕ್ತಶುದ್ಧಿಕಾರಕ ಧಾತು ಪೌಷ್ಟಿಕ, ಶಕ್ತಿವರ್ಧಕ ಹಲವಾ ೩೦ ತೊಲೆಯ ಡಬ್ಬಿ ೧ ಕ್ಕೆ ೧—೪—೦ ೧ ತೊಲೆಯ ಹಿಂಗಿನ ಡಬ್ಬಿಗಳು ಡಜನ್ ೧ ಕ್ಕೆ —೩೦—೦. ತಲೆಗೆ ಹಾಕುವ ಸುವಾಸಿಕ ಮಸಕದಾಣ ತೈಲ ೫ ತೊಲೆಯ ಬಾಟ್ಲಿ ೧ ಕ್ಕೆ ೦—೧೨—೦ ಹುಳದ ಪೌಡರ ತೊಲೆ ೧ ಕ್ಕೆ ೦—೮—. ಇವಲ್ಲದೆ, ನೀಲಗಿರಿ ತೈಲ, ನಾನಾ ತರದ ಊದಿ ಊದಬತ್ತಿಗಳು ಯೋಗ್ಯ ಕಿಂಮತಿಗೆ ಸಿಗುವವು. ಟಪಾಲ ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ

ಅವಳಿಬಾಜಾರ, ಕುಮಠಾ.

ಸಬ್ ಅಸಿಸ್ಟಂಟ ಸರ್ಜನ್

ವ್ಹಿ. ಎಮ್. ವೈದ್ಯ,

ಡೆಂಟಿಸ್ಟ ಮತ್ತು ಅಕ್ಯೂಲಿಸ್ಟ,

ಗವಳೇಗಲ್ಲಿ, ಧಾರವಾಡ.

ಡಾಕ್ಟರ ಕೂಪರ, ಡಿ. ಡಿ. ಎಸ್ ಮುಂಬಯಿ, ಇವರ ಮೊದಲನೇ ಅಸಿಸ್ಟಂಟ.

ಹುಬ್ಬಳ್ಳಿ ಬ್ರಾಂಚ:– ದುರ್ಗದಬೈಲ ಪ್ರತಿ ದಿವಸ ಮಧ್ಯಾಹ್ನ ೨ರಿಂದ ಸಂಜೆಯ ೫ ರ ವರೆಗೆ

ಏನೂ ನೋಯಿಸದೆ ಹಲ್ಲುಗಳನ್ನು ತೆಗೆಯುತ್ತೇವೆ. ಕೃತ್ರಿಮ ಹಲ್ಲುಗಳನ್ನು ಯೋಗ್ಯವಾಗಿ ಕೂಡಿಸುತ್ತೇವೆ. ಬೆಳ್ಳಿ ಅಥವಾ ಭಂಗಾರದ ಸಿಮೆಂಟದಿಂದ ಹಲ್ಲುಗಳನ್ನು ಕೂಡಿಸುತ್ತೇವೆ. ಹಳೇ ಹಲ್ಲುಗಳನ್ನು ದುರುಸ್ತ ಮಾಡುತ್ತೇವೆ. ಗೋಲ್ಡ ಕ್ರೌನ ಮತ್ತು ಬ್ರಿಜ್ಜವರ್ಕ ಸ್ವಾಭಾವಿಕ ನೈಸರ್ಗಿಕ ಹಲ್ಲುಗಳನ್ನು ಸ್ವಚ್ಛವಾಗಿ ಮಾಡುವದರಲ್ಲಿ ಒರುವದು ಇದಲ್ಲದೆ, ಹಲ್ಲುಗಳನ್ನು ಸಂಪೂರ್ಣವಾಗಿ ಬೆಳ್ಳಗೆ ಮಾಡುವದರಲ್ಲಿಯೂ ಒರುವದು. ನಮ್ಮ ದಂತಮಂಜನವನ್ನು ಉಪಯೋಗಿಸಿರಿ

ಬೆಲೆ ಡಬ್ಬಿಗೆ ೪ ಆಣೆ

ಕಣ್ಣು ಚಾಳೀಸ.

ಚಾಳೀಸಿಯ ಕಲುವಾಗಿ ಕಣ್ಣುಗಳನ್ನು ಪರೀಕ್ಷಿಸುತ್ತೇವೆ. ಕಪ್ಪಿಹದಲು ಪ್ರೇಮ್ಸು ರೋಲ ಮತ್ತು ನಿಕಲ್ ಇವುಗಳ ಚಾಳೀಸುಗಳು ಮತ್ತು ಚಾಳೀಸ ಹಾಕುವ ಪೆಟ್ಟಿಗೆಗಳು, ಪಿನ್ಸ ಗೋಲ್ಡ ಅವಾಲೆಟ ಮುಂತಾದವುಗಳು ನಮ್ಮಲ್ಲಿ ಸಿಗುತ್ತವೆ ಮತ್ತು ಚಾಳೀಸುಗಳನ್ನು ದುರುಸ್ತ ಮಾಡುತ್ತೇವೆ. ಹಾಗೂ ಕೃತ್ರಿಮ ಕಣ್ಣುಗಳನ್ನು ಸಹ ಕೂಡಿಸುತ್ತೇವೆ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯಾವರ

ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು; ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪುಕ್ಕಟೆ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ. ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಆಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಏಜ – ಗುರುನಾಥ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೧, ಜಾರ್ಜಟೌನ, ಮದರಾಸ

ಕಿರ್ಲೋಸ್ಕರ ಕುರ್ಚಿಗಳು.

ಇವು ಉಕ್ಕಿನ ತಗಡಿನವು.
ಎತ್ತಿಡಲಿಕ್ಕೆ ಹಗರು.
ಕಟ್ಟಿಗೆ ಕುರ್ಚಿಗಳಿಗಿಂತ
ಬಹು ದಿವಸ ತಡೆಯುತ್ತವೆ.
ಬೆಲೆ ೫ ರೂ.
ವರ್ತಕರಿಗೆ ಕಮೀಶನ್.



ಕಿರ್ಲೋಸ್ಕರ ಕಬ್ಬಿನ ಗಾಣ.



ನಮ್ಮಲ್ಲಿ ಕಮಾಲ ಮತ್ತು ಕ್ರೌನ ಗಾಣಗಳು ತಯಾರಾಗುತ್ತವೆ. ಇವುಗಳಲ್ಲಿ ಈ ವರ್ಷ ಹೊಸ ಸುಧಾರಣೆ ಮಾಡಿ ಹಿಂದಿನ ಅಡಚಣೆಗಳನ್ನು ದೂರ ಮಾಡಿರುತ್ತೇವೆ.

ಸವಿಸ್ತರ ಸಂಗತಿ ಬಗ್ಗೆ ಇಂದೇ ಕಾಗದ ಬರೆಯಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ.

ಪ್ರಯಾಣಿಕರಿಗೆ

ವಿಶೇಷ ಅನುಕೂಲ.

ನೇಮಿಸಿದ ಹೊತ್ತಿಗೆ ಮೋಟಾರಿನ ವ್ಯವಸ್ಥೆ

ಹಾಗೂ

ಅಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ.–

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ; ಗೋಕರ್ಣದಿಂದ ಅಂಕೋಲಾ, ಕಾರವಾರ.

ಟೀಪು: — ಟಿಕೇಟ ಮುಂದಾಗಿ ಪಡಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ಸಶಿಹಿತ್ತಲ,
ಮೋಟರ ಏಜಂಟ,
ಕುಮಟಾ (ಉತ್ತರ ಕನ್ನಡ)

S. U. Narayanacharya & CO.
Chaukamba, BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಸಾಮಾನುಗಳು ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಧನಾವಹಾಗಿ ಕಳಿಸಲಾದೀತು.

ವಿಳಾಸ — ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನು ಉಪಯೋಗಿಸುತ್ತಿರುವವು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇನೆ, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯತವರು ಅದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ ಮುಂಬಯಿ.

Monday, November 1st, 1926.

ವರ್ಷ ೧೧.

ಕಾನಡಾವೃತ್ತ.

THE KANARA NEWS.

ಸಂಚಿಕೆ ೨.

ಪತ್ರದ ವರ್ಗಣಿ.

ಮುಂಚೆಯಲ್ಲಿ ಅಗಾವು

ರೂಪಾಯಿ 2-4-0.

ವರ್ಷಾಖೇರಿಯಿಂದ

ರೂ. 3-0-0.

ವಿ. ಪಿ. ಅಂಚೆವೆಚ್ಚ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0- ೮ ನಂತ್ರ ಪ್ರತಿಸಾಲಿಗೆ 0-2-0.

ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೧ ಮಾಹೆ ನವಂಬರ ಸನ್ ೧೯೨೬ ನೇ ಇಸವಿ)

ಉಚಿತ!] ನನ್ನ ಶಾಸ್ತ್ರೀಯುವಾದ [ಉಚಿತ!!

ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು. ನನ್ನಲ್ಲಿ ಕಲಿಯುತ್ತಿದವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೨ ಆಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀವಿಯಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,

ಬಸವನಗುಡಿ, ಬೆಂಗಳೂರ ಸಿಟಿ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,

ರತ್ನಾಭರಣ ವ್ಯಾಪಾರಿ, ಕುಮಟಾ.

ಇನ್ನೂ ಗೊತ್ತೇ ಇಲ್ಲವೋ?

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿಯು

ಬೆಳಗಾಂವ ದಿಂದ ಕಾರವಾರಕ್ಕೆ

ಕಾರವಾರ ದಿಂದ ಬೆಳಗಾಂವಕ್ಕೆ

ಕಳೆದ ಸಪ್ಟಂಬರ ೧ ನೇ ತಾರೀಖಿನಿಂದ ನಿಯುಮಿತ ಡೇಲಿ ಮೋಟರ ಸರ್ವ್ಹಿಸ್ ಶುರುಮಾಡಿದ್ದು!

ಬೆಳಗಾಂವಕ್ಕೆ ಮುಂಬಯಿ ಮೇಲ ಬಂದ ನಂತರ ಬೆಳಿಗ್ಗಿನ ೧೧॥ ಘಂಟೆಗೆ ಬೆಳಗಾಂವ ಬಿಟ್ಟು, ಹಳಿಯಾಳ—ಯಲ್ಲಾಪುರ—ಅಂಕೋಲಾ ಮಾರ್ಗವಾಗಿ ಅದೇ ದಿವಸ ಸಾಯಂಕಾಲಕ್ಕೆ ಕಾರವಾರಕ್ಕೆ ಮುಟ್ಟುವಂತೆಯೂ, ಕಾರವಾರದಿಂದ ಬೆಳಿಗ್ಗಿನ ೭ ಘಂಟೆಗೆ ಹೊರಟು ಮುಂಬಯಿ ಮೇಲ ಟ್ರ್ಯಾಮಿಗೆ ಸರಿಯಾಗಿ ಬೆಳಗಾಂವಕ್ಕೆ ಮುಟ್ಟುವಂತೆಯೂ ಫಕ್ತ ಪ್ರಯಾಣಿಕರ ಸೋಯಿಗಾಗಿ ಡೇಲಿ ಮೋಟಾರ ಸರ್ವ್ಹಿಸ ಇಟ್ಟಿದ್ದಿರುತ್ತದೆ. ಟಿಕೀಟಿನ ದರಗಳು ವ ವಿಶೇಷ ಮಾಹಿತಿ ನಮ್ಮ ಅಲ್ಲಲ್ಲಿಯ ಏಜಂಟರ ಕಡಿಗೆ; ಅಥವಾ ನಮ್ಮ ಹೆಡ್ ಆಫೀಸಿನಲ್ಲಿ.

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ,

ಬೆಳಗಾಂವ.

ಗಾಂಧೀಹುಣ್ಣಿವೆಯಿಂದ ೪ನೇ ವರ್ಷ ಪ್ರಾರಂಭ

ಸಚಿತ್ರ, ಜಯಕರ್ನಾಟಕ ಮಾಸಪತ್ರಿಕೆ

ಸಂಪಾದಕ—ಆಲೂರ ವೆಂಕಟರಾಯರು

ಇದರಲ್ಲಿ ನಾಟ್ಯವಾಙ್ಮಯ, ಸಾಹಿತ್ಯ, [illegible] ಇತ್ಯಾದಿ ವಿಷಯಗಳು ಬರುವವು. ಪ್ರಪಂಚ ಪರಿಚಯ, ಜೀವನಚರಿತ್ರೆ, ನಾಟಕಾದಿಗಳು ಕೊಡಲ್ಪಡುತ್ತವೆ. ಪ್ರತಿ ಸಂಚಿಕೆಯಲ್ಲಿಯೂ ಸುಂದರ ಚಿತ್ರಗಳೂ ಇರುತ್ತವೆ. ಮೊದಲ ವರ್ಷ [illegible] ಪುಟಗಳು ವರ್ಗಣಿ ರೂ. ೫-೮-೦ ಸ್ ಜಯಕರ್ನಾಟಕ, ಧಾರವಾಡ.

ರೋಗದಿಂದ ನರಳಬೇಡಿರಿ.

ನಮ್ಮಲ್ಲಿ [illegible], [illegible], [illegible], ಬೀಜರ, [illegible], [illegible], ಅಗ್ನಿಮಾಂದ್ಯ, [illegible], ನಪುಂಸಕತ್ವ, [illegible], [illegible], ಗರ್ಭಿಣೀ [illegible] ರೋಗ, [illegible] [illegible] [illegible] [illegible] [illegible] ಔಷಧಗಳು [illegible] ಅಗ್ಗವಾಗಿ ಸಿಗುವವು.



[illegible]

ಎಸ್ ಎಲ್. ಧಾರಪ್ಪ ಮತ್ತು ಬ್ರದರ್ಸ,

[illegible]

ರಾಗದ ಪೆಟ್ಟಿಗೆಗಳು.

ನಾಟಕ ಸಾಮಾನು:
ತಬಲೆ, ಡಕ್ಕೆ ವಗೈರೆ.



೧ ಸ್ವರಪೆಟ್ಟಿಗೆ-ಸಿಂಗಲ ರೂ. ೩೫, ೩೦, ೬೦, ೫೫, ೬೦
೨ „ -ಡಬಲ ರೂ. ೪೦, ೪೫, ೫೦, ೬೦, ೦೦.
೩ ಕಾಲುಪೆಟ್ಟಿಗೆ „ ರೂ. ೬೫, ೭೫, ೧೦೦, ೧೩೦, ೧೪೦
೪. ತಬಲೆ (ತಂಬೂರದ ಸಹಿತ) ರೂ. ೧೬, ೧೮, ೨೦
ಹಾರ್ಮೋನಿಯಮ್ ಗೈಡ ಕಿಂ. ರೂ. ೧॥,
ತಬಲೆ ಗೈಡ ಕಿಂ. ೧೨ ಆಣೆ.

ನಮೂನೆ ಬಗ್ಗೆ ಕ್ಯಾಟಲಾಗು ಪ್ರತ್ಯೇಕ ಮೊರಕಳುವದು.

ಗೋಪಾಳ ಸಖಾರಾಮ ಮತ್ತು ಕಂಪನಿ

ನಂ ೫೮೫, ವಿಠ್ಠಲವಾಡಿ ಎದುರಿಗೆ

ಕಾಳಬಾದೇವಿ ರೋಡ.

ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ (೨) ಹುಬ್ಬಳ್ಳಿ- ಮುಂಡಗೋಡ ಶಿರ್ಸಿ- ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ- ಶಿರ್ಸಿ- ಸಿದ್ದಾಪುರ- ಗೇರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ.

ಪ್ರಯಾಣಿಕರಿಗೆ ಊರಕೆ [illegible] ಎಲ್ಲಾ ಸ್ಥಳಗಳಲ್ಲಿ [illegible] ವ್ಯವಸ್ಥೆ ಮಾಡಿದೆ.

ಹೆಚ್ಚಿನ ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa
PROPRIETOR.

ಅತ್ಯದ್ಭುತ !   ಅತ್ಯದ್ಭುತ !!

ಜೀವನಾಧಾರ

ಅಮೇರಿಕಾಖಂಡದ ಪ್ರಸಿದ್ಧ ಡಾಕ್ಟರನೊಬ್ಬನು ಕಂಡುಹಿಡಿದ ಸಿದ್ಧೌಷಧ.

ಎಲಿಕ್ಸಿರ್ ಆಫ್ ಲೈಫ್

ಅಂದರೆ [illegible] ರೋಗನಾಶಕ, ಸರ್ವಾರೋಗ್ಯದಾಯಕ ಅಜೀರ್ಣ ತಲೆನೋವು, ವಾಂತಿ, ಅತಿಸಾರ, ಜ್ವರ, [illegible], [illegible] ಕಿವಿನೋವು, ಸ್ತ್ರೀವ್ಯಾಧಿಗಳನ್ನು ಇವೆಲ್ಲವುಗಳನ್ನು ಹೊಡೆದು ಚೆಲ್ಲುವ ಒಂದೇ [illegible] ರೋಗಗಳ ಮೇಲೆ ಬ್ರಹ್ಮಾಸ್ತ್ರ ! ಒಂದು ಸೀಸೆಯಿದ್ದರೆ, ಒಬ್ಬ ಡಾಕ್ಟರನಿದ್ದಂತೆಯೇ !!

ಒಂದು ಸೀಸೆಗೆ ರೂ. ೧-೮-೦. ಸಣ್ಣ ಸೀಸೆಗೆ ರೂ. ೦-೮-೦ ಟಪಾಲು ಖರ್ಚು ಬೇರೆ

ಜೀವನಾಧಾರ ಡಿಪೋ, ಮೈಸೂರು.

ಬ್ರಾಂಚ:- **ಜೀವನಾಧಾರ ಡಿಪೋ, ಹುಬ್ಬಳ್ಳಿ**

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮದ್ದು ಮಹೌಷಧಿಯಾಗಿದ್ದು ಬಹಳ [illegible] ರುಚಿಕರವಾಗಿಯೂ ಇರುತ್ತದೆ. [illegible] ವಾತ, ಪಿತ್ತ, ಕಫ ಈ ತ್ರಿದೋಷಗಳ [illegible]ದಿಂದಾದ ಬೇನೆಯು ಹೋಗುವದು [illegible] ಪ್ರಸನ್ನವಾಗುವದು. ಸಿಜವಾ[illegible] ಒಂದೇ [illegible] ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ [illegible] ಅಳ್ಳದಂತಾಗುವದು. ಮೂತ್ರಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ [illegible] ಬಂದಾಗುವದು — [illegible] ಶಾಸಿಂದ [illegible] ನಿರ್ಮಲವಾಗುವದು [illegible] ದಿವಸ [illegible] ಕರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ, ಇದರ ಅ[illegible] ಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಮೇಹ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣವಾಗುವದು. ಹಳೇ ರೋಗವಿದ್ದರೆ [illegible] ಬಾಟಲಿಯಿಂದ ಗುಣವಾಗುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩-೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತ್ತು ೧೩-೦-೦ ಮತ್ತು ೧ ಬಾಟಲ ಪ್ರಕ್ಕಟ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು ವರಂಟರ [illegible] ೧ ಬಾಟ್ಲಿಗೆ ೧-೦-೦ ೩ ಬಾಟ್ಲಿಗೆ ೩-೦-೦ ಡಜನಿಗೆ ೧೩-೯-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ ಜಿ ಬೆಳಗಾಂವ.

ಪ್ರಾಸಂಗಿಕ ವಿಚಾರ.

[ಲೇಖಕ:—ನಿರೀಕ್ಷಕ]

ಇಲೆಕ್ಷನಿನ ಗಡಿಬಿಡಿಯು ಈಗ ನಾಲ್ಕೂ ಕಡೆಯಲ್ಲಿ ನಡೆದಿದೆ. ಮೊಂಟೆಗ್ಯೂ ಸ್ವರಾಜ್ಯದರ್ಥ ವನ್ನಾಗಿಸಿ ಲೋಕಕಲ್ಯಾಣ ಮಾಡಲು ಪಕ್ಷ ಪ್ರಾಂತ್ಯದ ಘರ್ಷಣಾಗಿರುವವು. ಈ ಪ್ರಸಂಗ ಮೊಂಟೆಗ್ಯೂ ಸ್ವರಾಜ್ಯದಲ್ಲಿ ಲೋಕಕಲ್ಯಾ ಣಕ್ಕಾಗಿ ಪ್ರಾಣವಿತ್ತಿರುವ ಪ್ರಧಾನರ ಸ್ಥಿತಿ ಯನ್ನು ನಿರೀಕ್ಷಿಸಬಹುದು. ಮೊಂಟೆಗ್ಯೂ ಸ್ವರಾಜ್ಯದ ದೋಷಗಳನ್ನು ಪರಿಹರಿಸುವ ವಿಚಾರ ಮಾಡಿ ಸರಕಾರವು ಒಂದು ಚೌಕಶಿ ಮಂಡಳವನ್ನು ನೇಮಿಸಿತು. ಆ ಸಮಯ ಬಂಗಾಲ, ಪಂಜಾಬ ಹಾಗು ಮಧ್ಯಪ್ರಾಂತಗಳ ಪ್ರಧಾನರು ಸ್ವಾನುಭ ವದ ತಮ್ಮ ಅಧಿಕಾರದ ಸ್ಥಿತಿಯನ್ನೂ, ಮೊಂ ಟೆಗ್ಯೂ ಸ್ವರಾಜ್ಯದ ನಿರರ್ಥಕತೆಯನ್ನೂ ಬಣ್ಣಿಸಿ ದರು. ಬಂಗಾಲದ ಪ್ರಧಾನರಾದ ಸರ್ ಪಿ. ಸಿ. ಮಿತ್ರರವರು ನುಡಿಯುವದೇನೆಂದರೆ.— “ ಸರಕಾ ರದಲ್ಲಿ ಪ್ರವೇಶಗೊಂಡ ಕೂಡಲೆ, ಈ ರಾಜ್ಯಪದ್ಧತಿ ಯು ಅಸಮಾಧಾನಕರವೆಂದು ನನಗೆ ತಿಳಿಯಿತು., ಇದನ್ನು ನಡೆಸಲಿಕ್ಕೆ ಬರುವದಾಗಿನದಲ್ಲೆಂದೂ ನನಗೆ ತಿಳಿಯಿತು. ದ್ವಿದಲ ರಾಜ್ಯಪದ್ಧತಿಯು ದೋಷಗಳು ಇದ್ದೇ ಇವೆ. ಇದನ್ನು ಲೋಕಮತಾನುವರ್ತಿಯಾಗಿ ನಡಿಸುವದು ಕಷ್ಟವು. ಇದಕ್ಕೆ ಸಾಕಷ್ಟು ದ್ರವ್ಯವು ದೊರಕದೆ ಕಷ್ಟವಾಯಿತು. ದ್ರವ್ಯಸಹಾಯವನ್ನಿತ್ತಿದ್ದರೂ, ಇತರ ಕೆಲವು ದೋಷಗಳನ್ನು ಪರಿಹರಿಸಿದಾಗ್ಯೂ, ಈ ರಾಜ್ಯಪದ್ಧತಿಯನ್ನು ಲೋಕಮತಾನುವರ್ತಿ ಸಂಸ್ಥೆಯಾಗಿ ನಡಿಸುವದು ಸಾಧ್ಯವಿಲ್ಲ.”

***

ಪಂಜಾಬದ ಪ್ರಧಾನರಾದ ಲಾಲಾ ಹರಿಕಿಸನ ಲಾಲರವರು ಮೊಂಟೆಗ್ಯೂ ಸ್ವರಾಜ್ಯದೊಳಗಿನ ಪ್ರಧಾನರ ನಿರಾಧಾರ ಸ್ಥಿತಿಯನ್ನು ಹೇಳುವದೇನೆಂದರೆ:—“ಹಣದ ಪೂರೈಕೆಯ ವಿಷಯದಲ್ಲಿ ಬಿಂಗಡಿಸಿಕೊಟ್ಟ ಖಾತೆಗಳು ಸಂಪೂರ್ಣವಾಗಿ ಕೋಶಾಧಿಕಾರಿಗಳ ಸ್ವಾಧೀನದಲ್ಲಿವೆ ಅವರು ಕೊಟ್ಟಷ್ಟು ಹಣವನ್ನು ಪ್ರಧಾನರು ವಿನಿಯೋಗಿಸಬೇಕಾಗಿದೆ. ಇದರಿಂದ ಬಿಂಗಡಿಸಿಕೊಟ್ಟ ಖಾತೆಗಳು ಅಭಿವೃದ್ಧಿಗೈಯದಿದ್ದು. ಇದರಿಂದ ಪ್ರಧಾನರು ಲೋಕಾಪವಾದಕ್ಕೀಡಾಗಬೇಕಾಗಿದೆ.

***

ಮಧ್ಯಪ್ರಾಂತದ ಪ್ರಧಾನರಾದ ರಾವಬಹಾದ್ದೂರ ನಾರಾಯಣರಾವ ಕೇಳಕರರವರು ಕೆಲವು ಉದಾಹರಣೆಗಳನ್ನು ಹೇಳಿ, “ ಪ್ರಧಾನರೆಂದರೆ, ಮೇಲಧಿಕಾರಿಗಳ ಹಾಗು ಕೆಳ ಅಧಿಕಾರಿಗಳ ಕೈಯೊಳಗಿನ ಕೊಡ್ರಗೊಂಬೆಯಂತಿರುವರು. ಮೇಲೆ ಪ್ರಾಂತಾಧಿಪರು; ಕೆಳಗೆ ಖಾತೆಗಳ ಮುಖ್ಯಸ್ಥರು, ಇಬ್ಬರೂ ಹೇಳಿದ ಹಾಗೆ ಕೇಳಿದರೆ ಮಾತ್ರ, ಪ್ರಧಾನರ ಮರ್ಯಾದೆ ಉಳಿಯುತ್ತದೆ. ಖಾತೆಗಳ ಮುಖ್ಯಸ್ಥರು ಕಾಯಿದೆಯಂತೆ ಪ್ರಧಾನರ ಕೈಕೆಳಗಿನವರು. ಪ್ರಧಾನರ ಹುಕುಮುಗಳನ್ನು ಅವರು ಪಾಲಿಸಬೇಕು. ಆದರೆ, ವಸ್ತುಸ್ಥಿತಿಯು ವಿಪರೀತವು. ನಾನು ಹುಕುಮುಗಳನ್ನು ಮಾಡಲು, ನನ್ನ ಕೈಕೆಳಗಿನ ಕಮಿಶನರರಿಗೆ ಅವು ಸಮರ್ಪಕವಾಗದೆ, ಅವುಗಳನ್ನು ಪ್ರಾಂತಾಧಿಪರ ಕಡೆಗೆ ಕಳುಹಿಸಲು ನನ್ನ ಕೈಕೆಳಗಿನ ಕಮಿಶನರರು ನನಗೆ ಆಜ್ಞಾಪಿಸಿದರು. ಇದಕ್ಕೂ ಹೆಚ್ಚಿಗೆ ಅಪಮಾನಾಸ್ಪದವಾದ ಸಂಗತಿ ಯಾವುದಿದೆ ? ಇದರ ಮೇಲಿಂದ ಕೈಕೆಳಗಿನ ಮುಖ್ಯಸ್ಥರಿಗೆ ಸೇರುವ ಹುಕುಮುಗಳನ್ನೇ ನಾನು ಮಾಡಬೇಕೆಂದು ಸ್ಪಷ್ಟವಿದೆ. ಇಬ್ಬ ಸಿವ್ಹಿಲ್ ಸರ್ಜನರಿಗೆ ಮೋಟಾರು ಗಾಡಿಗಳನ್ನು ಕೊಂಡುಕೊಳ್ಳಲು ಮುಂಗಡ ಹಣ ಬೇಕಾಯಿತು. ನಾನು ಬಹಳ ಚೌಕಶಿ ಮಾಡಿ, ಅವರಿಗೆ ವಹಿಸಿದ ಸರಕಾರಿ ಕೆಲಸವನ್ನು ನೆರವೇರಿಸಲಿಕ್ಕೆ ಮೋಟಾರ ಬಂಡಿಗಳು ಅವಶ್ಯವಿಲ್ಲೆಂದು ತೀರ್ಪು ಕೊಟ್ಟೆನು. ವೈದ್ಯ ಖಾತೆಯ ಮುಖ್ಯನಾದಂಥ ಇನ್ಸಪೆಕ್ಟರ ಜನರಲ್‌ರವರು ಪ್ರಾಂತಾಧಿಪರಿಗೆ ಈ ಕುರಿತು ಕೇಳಲು, ಪ್ರಾಂತಾಧಿಪರು ನನ್ನ ಹುಕುಮ ನ್ನು ರದ್ದು

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು !

ಆದರೆ. ಕೆಲವು ಸ್ತ್ರೀಪುರುಷರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ್ಯ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಚೆಲೋ ‘ ಕೂದಲನ್ನ ’ ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು ?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ದುಂಡಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ನಿಮ್ಮ ತಲೆಯ ಕೂದಲೆ ಬುಡವು ಹೊಟ್ಟು ಹೋಗುತ್ತದೆ: ಕೇಶರಂಧ್ರಗಳು ತೆರೆದು ಅವುಗಳಿಂದ ತಲೆಗೆ ತಂಪು ಬರುತ್ತಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುವವು.

ಎಲ್ಲಾ ಚೆಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ ರೂ		೧—೦—೦
ಅಂಚೆವೆಚ್ಚ	,,	೦—೩—೦
೩ ಬಾಟ್ಲಿಗಳಿಗೆ	,,	೨-೧೦—೦
ಅಂಚೆವೆಚ್ಚ	,,	೦-೧೨—೦

ಎಲ್ಲಾ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

——o:——

೧ ಸೀಸೆಗೆ	ರೂ.	೨—೦—೦
೩ ಸೀಸೆಗೆ [?]	,,	೧—೪—೦
[?] ಸೀಸೆಗೆ	,,	೦-೧೨—೦
ಅಂಚೆವೆಚ್ಚ	,,	೦—೩ [?]—೦

ಒಟ್ಟೋ-ದಿಲ್ ಬಹಾರ

ಕೇಳಲಿಕ್ಕೆ ಮರೆಯಬೇಡಿರಿ!

“ ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!! ”

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY**

ಮಾಡಿದರು. ನಾಗಪುರದ ಎಗ್ಝಿಕ್ಯೂಟಿವ್ ಇಂಜಿನಿಯರರಾದ ಮಿ| ಹ್ಯಾಡರರು ೧೨ ರೂಪಾಯಿ ಯುಂಕಿ ವಾಹನ ಭತ್ತೆ ಕೇಳಿದರು, ಆ ಕುರಿತ ನಾನು ಚೌಕಶಿ ಮಾಡಿ ವಿಶೇಷ ಭತೆ ಬಾರದ್ದಾಗಿ ಹುಕುಮು ಕೊಟ್ಟೆನು. ಮಿ| ಹ್ಯಾಡರವರ ಪೂರ್ವಾಧಿಕಾರಿಯಾದ ಮಿ| ಮತಾರ ... ಅರ್ಜಿಯನ್ನು ಮಾಡಿದ್ದರು ಆ ಅರ್ಜಿಯನ್ನು ನಾನೇ ತಿರಸ್ಕರಿಸಿದ್ದೆ. ... ಈ ವಿಷಯ ನನ್ನ ಹುಕುಮಿಗೆ ಆಕ್ಷೇಪ ತೆಗೆಯಲಿಲ್ಲ. ಮಿ| ಹ್ಯಾಡರವರಿಗೆ ಕೊಟ್ಟ ಹುಕುಮಿಗೆ ಮಾತ್ರ ಆಕ್ಷೇಪಿಸಿ ಪ್ರಾಂತಾಧಿಪರಿಗೆ ಬಿನ್ನೈಸಲು, ಪ್ರಾಂತಾಧಿಪರು ನನ್ನ ಹುಕುಮನ್ನು ರದ್ದ ಮಾಡಿಬಿಟ್ಟರು. ಇದನ್ನು ನೋಡಿ, ನಾನು ಚಕಿತನಾದೆನು. ನಮ್ಮ ಭಾಗದ ಕಮಿಶನರರವರು ಮಧ್ಯಪ್ರಾಂತದೊಳಗಿನ ಕಮಿಶನರರ ಮುಂಗಡೆಗೆ ತೆಗೆದ ಸೀಲಿಂಗು ಯಾನ ಮೋಟಾರು ಕಾರನ್ನು ಬಯಸಿ, ೧೨೦೦ ರೂಪಾಯಿ ಖರ್ಚ ಬೇಡಿದ್ದರು. ತೆಗಿದ ಸೀಲಿಂಗು ಅವಶ್ಯವಿಲ್ಲವೆಂದೂ, ಇಷ್ಟು ಖರ್ಚ ಮಾಡತಕ್ಕದ್ದು ಅವಶ್ಯವಿಲ್ಲವೆಂದೂ ನಾನು ಕಮಿಶನರರಿಗೆ ಬರೆದೆನು. ಆ ಹುಕುಮು ಅವರಿಗೆ ಮಾನ್ಯವಾಗಲಿಲ್ಲ 'ನಿಮ್ಮ ಹುಕುಮಿಗೆ ಪ್ರಾಂತಾಧಿಪರ ಅನುಮತಿ ದೊರಕಿರುವದೇನೆಂದು' ನನಗೆ ಪ್ರಶ್ನಿಸಿದರು."

***

ಮೊಂಟೆಗ್ಯೂ ಸ್ವರಾಜ್ಯದೊಳಗಿನ ಶ್ರೇಷ್ಠ ಅಧಿಕಾರದ ಪ್ರಧಾನರ ಸ್ಥಿತಿ ನೋಡಿರಿ! ಪ್ರಧಾನರ ಹುಕುಮನ್ನು ಪಾಲಿಸದೆ ಇರುವದಕ್ಕೆ, ಪ್ರಾಂತಾಧಿಪರ ಮಂಜೂರಿ ಕೇಳುವಷ್ಟು ಸಾಹಸವು ಕೆಳಅಧಿಕಾರಿಯಾದ ಕಮಿಶನರರಿಗೆ ದೊರೆತ ಬಳಿಕ, ಈ ರಾಜ್ಯಪದ್ಧತಿಯ ಪ್ರಧಾನರಿಗೆ ಸಿಕ್ಕಿದ್ದೇನು, ಪ್ರಧಾನನ ಪದದ ಆಸನ ಹಾಗು ಪಗಾರಗಳಷ್ಟೇ ಹೊರತು, ಅಧಿಕಾರವೇನಾದರೂ ದೊರಕಿರುವದೇನು? ಮಾತುಮಾತಿಗೆ ಕೆಳ ಅಧಿಕಾರಿಗಳೊಡನೆ ಜಗಳಾಡಬೇಕು; ಪ್ರಾಂತಾಧಿಪರ ಕಡೆಯಿಂದ ಹುಕುಮುಗಳನ್ನು ರದ್ದ ಮಾಡಿಸಿಕೊಳ್ಳಬೇಕು ಇದು ಮಾನವಂತ ಪುರುಷರಿಗೆ ಅಥವಾ ರಾಷ್ಟ್ರಕ್ಕೆ ಶೋಭಿಸುವಂಥದ್ದೇನು? ಯುಕ್ತ್ಯಾ ವಾಹನ ಭತ್ತೆ, ಸೀಲಿಂಗ, ಮೋಟಾರ ಗಳಿಗಾಗಿ ಮುಂಗಡ ಹಣ, ಮುಂತಾದ ಕ್ಷುಲ್ಲಕ ವಿಷಯಗಳಲ್ಲಿಯೂ ಕೂಡ ಪ್ರಧಾನರಿಗೆ ಕೆಳದರ್ಜೆಯ ಅಧಿಕಾರಿಗಳು ತಗಾದೆ ಮಾಡಿದರೆ? ಕಾಯಿದೆ ಕೌನ್ಸಿಲಿನಿಂದ ಪ್ರಧಾನರಿಗೆ ಬೆಂಬಲ ಕೊಟ್ಟು ಪ್ರಜೆಗಳಿಗೇನು ಪ್ರಯೋಜನ? ಸೂಕ್ಷ್ಮವಾಗಿ ವಿಚಾರಿಸಿದರೆ, ಹೆಜ್ಜೆ ಹೆಜ್ಜೆಗೆ ಅಪಮಾನವಾಗುವ ರಾಜ್ಯಪದ್ಧತಿಯಲ್ಲಿ ದೊಡ್ಡ ದೊಡ್ಡ ಕಿತಾಬುಗಳನ್ನು ಪಡೆದು, ದೊಡ್ಡವರೆಂದು ಖ್ಯಾತಿಗೊಂಡ ಪುರುಷರು ತಮ್ಮ ಅಧಿಕಾರವನ್ನು ನಡೆಸಿದ ಬಗೆ ಹೇಗೆ? ಮೊಂಟೆಗ್ಯೂ ರಾಜ್ಯಪದ್ಧತಿಯ ಕಲ್ಪನೆಯಿಂದ ದೊರಕಿದ ಫಲವಿದ್ದಲ್ಲಿಯೂ ಇಲ್ಲದಂಥದ್ದು. ಪ್ರಧಾನಪದಗಳನ್ನು ಅಂಗೀಕರಿಸಿದವರು ಭೂತಲದಲ್ಲಿ ಸಿಗುವರೇನು? ಅಂಥ ಪ್ರಧಾನ ಪದಗಳಿಗಾಗಿ ರಾಷ್ಟ್ರೀಯ ಸಭೆಯನ್ನು ನಿಂದಿಸುವ ಲೋಕನಾಯಕರ ಬುದ್ಧಿಯನ್ನು ವಿಚಾರಿಸಿದರೆ, ಮನಸ್ಸು ಬೇಸರಗೊಳ್ಳುತ್ತದೆ.

ಅಧಿಕಾರಿಗಳು ಮದ್ಯಪಾನವನ್ನು ನಿಷೇಧಿಸುತ್ತಾರೆಂದು ಹೇಳುತ್ತಾರೆ. ಸದ್ಯಕ್ಕೆ ಮದ್ಯ ಸರಕಾರದ ಅಬಕಾರಿ ಧೋರಣ ತನ್ನ ನಿರೂಪಿಸುವ ತೀರ್ಮಾನವನ್ನೊಂದು ಪ್ರಕಟಿಸಿರುವದು. ಮದ್ಯಪಾನವನ್ನು ನಿಯಂತ್ರಿಸದೆ, ೮೦ ಪ್ರತಿಶತ ... ಬಂಧಿಸಿದರೆ, ಅಕ್ರಮಗಳು ನಡೆದ ಮದ್ಯಪಾನ ಕ್ಕೆ ಕಳೆಯೋರುವದು ಆದರಿಂದ ಮದ್ಯಪಾನದ ನಪ್ರತಿಬಂಧ ... ಆಗದ ಮಾತ ಭವಿಷ್ಯದಲ್ಲಿಯೂ ಆಗದು ಸ್ಥಳಿಕ ಪ್ರಜೆಗಳ ಅಭಿಪ್ರಾಯದಿಂದ ಮದ್ಯಪಾನವನ್ನು ವಿಶಿಷ್ಟ ... ಪ್ರತಿಬಂಧಿಸುವದು ... ಆ ಗ್ರಾಮದವರ ಅಕ್ರಮದಿಂದ ಮದ್ಯ ತಯಾರಿಯಾಗುವ ಭೀತಿಯಿಂದ ಅಂಗಡಿಗಳ ... ಸರಕಾರವು ತಯಾರಿಲ್ಲ. ... ಸಮಯವನ್ನು ... ಸಿದ್ಧವಿಲ್ಲ ಹೀಗಿಲ್ಲ ಮದ್ಯಪಾನ ನಿಷೇಧ ಮಾರ್ಗಗಳಲ್ಲಿ ಮಧ್ಯಪ್ರಾಂತ ಸರಕಾರವು ಧಿಕ್ಕರಿಸಿದ ಕಾರಣವೇನು? ಮದ್ಯಪಾನವನ್ನು ಕಾಯಿದೆ ... ಪ್ರತಿಬಂಧಿಸಿದರೆ, ಅಕ್ರಮದಿಂದ ಮದ್ಯ ... ಪ್ರಕಾರ ... ದೊಡ್ಡದೊಂದು ಭೂತವನ್ನು ಸರಕಾರವು ಕಲ್ಪಿಸಿ ಮದ್ಯಪಾನವನ್ನು ಕಾಪಾಡುತ್ತದೆ. ಅಕ್ರಮಗಳು ನಡೆಯುತ್ತವೆಂದು, ಅಕ್ರಮಗಳಿಗೆ ಕಾಯಿದೆಯಿಂದ ಉತ್ತೇಜನ ಕೊಡುವದು ... ಇದೆ ...!

ಕಾರವಾರ ತಾಲೂ

ಕ್ರಿಸ್ತೀ ಬಂಧುಗಳಿಗೆ ಸವಿನಯ ವಿಜ್ಞಾಪನೆ

ಕಾರವಾರ ತಾಲೂ ಕಿನೊಳಗಿನ ಬಾಡ ಗ್ರಾಮದ ಕ್ರೈಸ್ತ ಬಾಂಧವರ ನಡುವಿರುವ "ಸೆಂಟ್ ಜೋಸೆಫ್" ಶಾಲೆಯ ಹತ್ತರ ಬಾಡ ... ನೇ ತಾರೀಖಿನ ಆದಿತ್ಯವಾರ ಸಾಯಂಕಾಲ ೫ ಘಂಟೆಗೆ ಕಾರವಾರ ತಾಲೂಕಾ "ನೋರ್ಥ ಕೆನರಾ ಕ್ಯಾಥೊಲಿಕ ಜನರಲ್ ಮೀಟಿಂಗ" ... ನಡೆಸಲು ನಿಶ್ಚಯಿಸಿರುತ್ತದೆ. ಅದರೊಳಗೆ ... ವರುಷದಿಂದ ಉತ್ತರ ಕಾನಡಾ ಜಿಲ್ಲೆಯೊಳಗಿನ ಇಂಗ್ಲಿಷ ಕಲಿಯುವ ಬಡ ಕ್ರೈಸ್ತ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ ಗೊತ್ತುಮಾಡುವದೂ, ಇನ್ನೂ ಅನೇಕ ನಮ್ಮ ಸಮಾಜೋದ್ಧಾರಕವಾದ ಮಹತ್ವದ ಠರಾವುಗಳನ್ನೂ ಮಾಡತಕ್ಕದ್ದಿರುತ್ತದೆ.

ಕಾರಣ ನಮ್ಮ ಕ್ರೈಸ್ತ ಬಂಧುಗಳು ಅವಶ್ಯವಾಗಿ ಈ ಸಭೆಗೆ ... ಮಾಡಿ ವೇಳೆಗೆ ಸರಿಯಾಗಿ ಬಂದು ಸಭಾಲಂಕೃತರಾಗಬೇಕಾಗಿ ನನ್ನ ವಿನಂತಿಯು ಇದೆ.

ತಾ.27-10-26 } S. P. Redrigs,
ಪ್ರೆಸಿಡೆಂಟ್,
ಉ. ಕಾ. ಕ್ರಿ. ಸಂಘ, ಸದಾಶಿವಗಡ.

— ನಾಗಪುರದ ಕಾಯಿದೆಯ ಶಾಲೆಯಲ್ಲಿ ಒಂದು ದೊಡ್ಡ ಗಡಿಬಿಡಿ! ಒಬ್ಬ ಹುಡುಗನು ಪರೀಕ್ಷೆ ನಡೆಯುತ್ತ ವರ್ತಮಾನಪತ್ರವನ್ನೊಂದು ಓದ ತ್ತಿದ್ದನೆಂದು ಅದನ್ನು ಶಿಕ್ಷಕರು ಕಂಡು ಅವನಿಗೆ ಏಳು ರೂಪಾಯಿ ದಂಡ ಮಾಡಿದರು. ಸಾರ್ವಜನಿಕವಾಗಿ ಆತನು ಕ್ಷಮೆಯನ್ನು ಬೇಡಬೇಕಾಗಿಯೂ ವಿಧಿಸಲಾಗಿದೆ. ವಿದ್ಯಾರ್ಥಿಗಳು ಸಭೆಯನ್ನು ಸೇರಿಸಿ, ಶಾಲೆಯ ಚಾಲಕರ ನಿರ್ಣಯವನ್ನು ನಿಷೇಧಿಸಿರುವರು.

ತ್ವರೆ ಮಾಡಿರಿ! ತ್ವರೆ ಮಾಡಿರಿ!

ಜಾಹಿರಾತದಾರರು ತ್ವರೆಮಾಡಿರಿ!

ಬಿಗೊಳ್ಳಿ ರಾಮಾ ಶಿವರ್ಕರ ಪಂಡಿತರಿಂದ ದೃಗ್ಗಣಿತ ಪ್ರಕಾರ ಗಣಿಸಿ ಪರಿಶೋಧಿಸಲ್ಪಟ್ಟ

ಪ್ರಭವ ಸಂವತ್ಸರದ ಪಂಚಾಂಗವು ಅಚ್ಚಿನಲ್ಲಿದೆ!

ಪಂಚಾಂಗದಲ್ಲಿ ಜಾಹಿರಾತು ಕೊಡುವವರಿಗೆ ಏರ್ಪಾಟು ಮಾಡಿದೆ!

ಈ ಪಂಚಾಂಗವು ಕಾನಡಾ ಜಿಲ್ಲೆಯೊಳಗಿನ ಹಳ್ಳಿಗಳಲ್ಲಿಯೂ ಸಾಗರ-ಶಿವಮೊಗ್ಗ ಮೊದಲಾದ ಮೈಸೂರ ಪ್ರಾಂತದಲ್ಲಿಯೂ ಪ್ರಸಿದ್ಧವಿದೆ ಜಾಹಿರಾತು ಕೊಡಬಯಸುವವರು ಬರುವ ನವಂಬರ ತಾರೀಖು ೧೦ ರೊಳಗೆ ಈ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಿ ದರಮಾನ ತಿಳಕೊಳ್ಳಬಹುದು.

ಪತ್ತೆ — ಮೆನೆಜರ್, "ಸ್ಟಾರ್ ಆಫ್ ಕೆನರಾ ಪ್ರೆಸ್,"
ಕುಮಟಾ (ಉ. ಕಾನಡಾ)

हिंदुस्थानातील रहिवाशास ज्याप्रमाणे हिंदुस्थानची हवा त्याप्रमाणेच हें औषध हिंदुस्थानातील लोकास ज्यास्त फायदेशीर आहे.

द्राक्षासव-

दीड रतलची किंमत २ रुपये.

रामबाण औषधे

सर्दि घालविणारें,
भूक वाढविणारें,
शोच्यास साफ करणारें,
झोंप आणणारें,
शक्ति देणारें,
तनस्वीपणा आणणारें,

पिण्यास रुचिकर

बनविणार मागवा,

अंड फार्मास्युटिकल वर्क्स लिमिटेड,

... मुंबई नं. १२

एजंट— मेसर्स पंडित आणी कंपनी, तीर्थहळळी

पाहिजे !

प्रौढ वधू पाहिजे— गरीब घराण्याची १८ वर्षावरील — गौ० मा० ब्रा० ज्ञातीतिल स्मार्त अगर वैष्णव संप्रदायाची — वरास गोत्राम जुळणारी — प्रौढ निरोगी वधू पाहिजे. अगावर २००० दोन हजाराचे दागीने शिवाय ३००० तीन हजाराची विम्याची पोलसी तूर्त तिच्या मालकीची होणार —विजवर — वय ६१ वर्षे— वार्षिक उत्पन्न स्थावर व इतर मिळून रु० १५०० (पंधराशें) शिवाय स्वतंत्र मोठें घर-बागाइता-जमीन वगैरे. गरजूनीं खालील पत्यावर पत्र व्यवहार करावा.

'सदानंद' C/o मॅनेजर, 'कॅनरा न्यूस,'
वर्तमानपत्र - कुमटा Post- KUMTA

ಅವರ್ಸೆಯ ಕಾತ್ಯಾಯನೀ ದೇವಸ್ಥಾನ.

ಒಬ್ಬ ಭಕ್ತರು ಬರೆಯುವದೇನಂದರೆ:—

ಅವರ್ಸೆಯ ಶ್ರೀ ಕಾತ್ಯಾಯನೀ ದೇವಸ್ಥಾನದ ಕೀರ್ತಿಯು ದೊಡ್ಡದು, ಮಹಿಮೆಯು ಅಗಾಧವಾದದ್ದು, ಭಂಡಾರವು ವಿಪುಲ; ೭-೮ ಸಾವಿರ ಉತ್ಪನ್ನ ಬರುವ ಭೂಮಿ ಜಿನ್ನವು ಹೇರಳ. ಇಂಥ ದೇವಾಲಯದಲ್ಲಿ ನಡೆಯುತ್ತಿರುವ ಕಥೆಯನ್ನು ಹೇಳುತ್ತೇನೆ, ಕೇಳಿರಿ.

ಆಶ್ವೀನ ಶುದ್ಧ ೧೫ ವರೆಗೆ ಇಲ್ಲಿ ದರ್ಶನದ ಮಹೋತ್ಸವ ನಡೆಯುತ್ತದೆ. ದೂರ ದೂರದಿಂದ ಜನರು ಬರುತ್ತಾರೆ. ಸಾವಿರಾರು ಮಂದಿಗಳು ಶ್ರೀ ದೇವರ ಪ್ರಸಾದವನ್ನು ಗ್ರಹಿಸಲುತ್ಸುಕರಾಗಿ ಆಯಾಸಪಟ್ಟು ಬರುತ್ತಾರೆ. ಈ ವರುಷ ಹಿಡಗಿದ ಅವಸ್ಥೆ ಕೇಳಿರಿ. ಪ್ರಸಾದಕ್ಕಾಗಿ ಬಂದ ಜನರು ನಾಲ್ಕು ತಾಸುಗಳ ವರೆಗೆ ಬಿಸಿಲಲ್ಲಿ ಮೈ ಸುಡಿಸಿಕೊಳ್ಳುತ್ತ ಎಲೆ ಹಿಡಿದುಕೊಂಡು ಕೂತುಕೊಂಡು ಪ್ರಸಾದವನ್ನು ಗ್ರಹಣ ಮಾಡಿ ಬರಬೇಕಾದರೆ, ಸಾಕುಬೇಕಾಯಿತು. ಶ್ರೀ ದೇವಾಲಯದೊಳಗಿನ ಸೇವಕರು ಅಭಕ್ಷ್ಯ ಮಾತುಗಳನ್ನು ಬಿಟ್ಟುಕೊಂಡು ಈ ಧರ್ಮಶಾಲೆಯಲ್ಲಿ ಪಾವನರಾದರು. ಜನರಂತೂ ಭದ್ರವಾಗಿ ಕಿವಿ ಮುಚ್ಚಿಕೊಂಡು ಸೈರಿಸಿದರು. ಈ ದೇವಾಲಯದೊಳಗಿನ ಅವಸ್ಥೆಯನ್ನು ಹೇಳಿ ತೀರದು. ದೇವರ ದರ್ಶನಕ್ಕೆ ಹೋದರೆ ಅರ್ಚಕನ ಹಾದಿ ಕಾಯುತ್ತ ಕೂತುಕೊಳ್ಳಬೇಕು. ಈ ದೇವಾಲಯಕ್ಕೆ ಮೊಕ್ತೇಸರರು ಇದ್ದಾರೆಂಬುದು ಯಾರೂ ಹೇಳರು; ಹುಟ್ಟುವಳಿ ಖರ್ಚುವದಾಗಿ ಯಾರೂ ತಿಳಿಯರು. ಹುಟ್ಟುವಳಿಯು ಕರಗಿ ನೀರಾಯಿತೇನು? ಎಂದು ಅನೇಕ ಜನರು, ಈ ಬಾಹ್ಯವ್ಯವಸ್ಥೆಯನ್ನು ನೋಡಿ ಕೇಳದಿರರು. ಭಂಡಾರವನ್ನು ಬಕಾಸುರನೇ ಬಂದು ತಿನ್ನಹತ್ತಿದರೂ, ಅದೇನು ಕಡಿಮೆಯಾಗದು. ಇಷ್ಟು ದೊಡ್ಡ ಭಂಡಾರವು ನಮ್ಮ ದೇವರಿಗಿದೆ. ಮೊಕ್ತೇಸರರು ಸಭ್ಯರೂ, ಪ್ರಾಮಾಣಿಕರೂ ಎಂದು ಹೇಳಲಿಕ್ಕೆ ನನ್ನ ಅಡ್ಡಿಯಿಲ್ಲ. ಆದರೆ, ಬರೇ ಸಭ್ಯತೆಯಿಂದಾಗಲೀ, ಪ್ರಾಮಾಣಿಕತನದಿಂದಾಗಲೀ ಆಡಳಿತೆಯು ಸಾಗದು. ಅದಕ್ಕೆ ಕಾರ್ಯದಕ್ಷತೆಯೂ, ಕಾರ್ಯಾಸಕ್ತಿಯೂ ಬೇಕು. ಅವು ಈಗಿನ ಮೊಕ್ತೇಸರರಲ್ಲಿ ಇಲ್ಲವೆಂಬ ದೊಡ್ಡ ಇಕ್ಕಟ್ಟಿನ ಸ್ಥಿತಿಯೇ ಸಾಕ್ಷಿ [illegible] ತಟ್ಟಿಕೊಂಡು, ಕಣ್ಣುಮುಚ್ಚಿಕೊಂಡಿದ್ದರೆ, ಶ್ರೀ ದೇವಸ್ಥಾನದ ಆಡಳಿತೆಯು ಕಂಗೆಟ್ಟು ಹೋಗುವದು. ಭಕ್ತವರ್ಗವು ಎಚ್ಚರಾಗಲಿ. ರಾ| ವಿಶ್ವನಾಥ ಪ್ರಭು, ಶಾನುಭಾಗ ಕ್ಷೇತ್ರಯ್ಯನವರಂಥ ಪ್ರಮುಖರು ಟೀಕೆಗೆ ಹೆದರಿ ಕೈಕಾಲು ಚಾಚಿಕೊಂಡು ಕೂತುಕೊಳ್ಳುವದು ಭೂಷಣವಲ್ಲ.

ಗೆಳೆಯರ ಗುಂಪಿನ

ಕನ್ನಡ] **ಸ್ವಧರ್ಮ.** [ಮಾಸಪತ್ರಿಕೆ

ಸಂಪಾದಕರು:- ದ. ರಾ. ಬೇಂದ್ರೆ ಬಿ. ಎ.

ವಾರ್ಷಿಕ ವರ್ಗಣಿ ೩-೦-೦

ಸಮಾಜದಲ್ಲಿ ಶಾಂತಿಪುಷ್ಟಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿಯು. ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ. ಅಂಥ ಸುವಿಚಾರಗಳನ್ನು ಸಮಾಜದ ಮುಂದಿಡಹೋಗುವ ಸ್ವಧರ್ಮದ ಗುಚ್ಛ ಕನ್ನಡಿಗರು ಕೈಗೊಂಡು ಅದನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ

ಆಯುರ್ವೇದಿಕ] ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ [ಮುಲಬಾರಿ ಕೃತಿ

ಅನುಭವಿಕ ಔಷಧಗಳು!

೧. ಮದನಕಾಮೇಶ್ವರ ಲೇಹ- ಧಾತುಪೌಷ್ಟಿಕ, ವೀರ್ಯ-ಶಕ್ತಿವರ್ಧಕ, ಕಾಮೋತ್ತೇಜಕ.
೨. ಮದನಕಾಮೇಶ್ವರ- ಗುಣ ಮೇಲಿನಂತೆ. ತ. ೧ಕ್ಕೆ ೨ ರೂ. ೩ ಕ್ಕೆ ೫ ರೂ. [ತ. ೧ಕ್ಕೆ ೨॥ ರೂ.
೩. ಉಪದಂಶ- (ಗರ್ಮಿ) ರೋಗಕ್ಕೆ ಮಾತ್ರ, ಇಂದ್ರಿಯದ ಹುಣ್ಣು ಸರಮಾ, ಯಾವದೇ ತರದ ಕಠಿಣ ರೋಗವಾದರೂ ಮರಣೋನ್ಮುಖ ಸ್ಥಿತಿಯಲ್ಲಿದ್ದರೂ ೭ ದಿವಸದಲ್ಲಿ ಗುಣಹೊಂದುವದು
೪. ಗರ್ಮಿ ರೋಗಕ್ಕೆ ಮಲಮು- ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿನಕ್ಕೆ ಗುಣ
೫. ಯೋಗರಾಜ ಗುಗ್ಗುಳ ಅರ್ಧಾಂಗವಾತ ಕೋಷ್ಠವಾತ, ಸಂಧಿವಾತ ೮೦ ತರದ ವಾತರೋಗಕ್ಕೆ ಸಿದ್ಧೌಷಧಿ. ೩॥, ೧॥, ೨. ರೂ
೬. ಕೆಮ್ಮಿನ ಗುಳಿಗೆ ಕ್ಷಯ, ದಮ್ಮು, ಕೆಮ್ಮು, ಇ. ಮೇಲೆ ರಾಮಬಾಣ, ೫೦ ಗುಳಿಗೆ, ೧ ರೂ., ೧॥ ರೂ
೭. ವಾತಪಿತ್ತ-ಕಫನಾಶಕ ಜುಲಾಬಿನ ಗುಳಿಗೆ- ೨೫ ರ ಡ ಬ ೮, ೧೦೦ ಕ್ಕೆ ೧॥ ರೂ.
೮. ಸಂಜೀವನಿ- ವಿಷಮ, ದ್ವ್ಯಾಹಿಕ, ತ್ರ್ಯಾಹಿಕ ಚಾತುರ್ಥಿಕ, ಸನ್ನಿಪಾತ, ಇ. ಜ್ವರಗಳ ಮೇಲೆ ೨೫ ರ ಡ ೧ ರೂ ೧೦೦ ರ ಡ. ೩ ರೂ
೯. ಚಂದ್ರಪ್ರಭಾ ಮಾತ್ರೆ - ೨೦ ತರದ ಮೇಹ, ಮೂತ್ರಕೃಚ್ಛ್ರ, ಅಶ್ಮರೀ, ಧಾತುಕ್ಷಯ, ಸ್ವಪ್ನದೋಷ ೨ ರೂ
೧೦. ದಂತಮಂಜನ- ಹಲ್ಲು ನೋವು, ಹುಳ, ಕೀವು, ಅಲುಗಾಡುವಿಕೆ ಇ ದೋಷ ಗುಣವಾಗುವವು. ಡ ೨ ೩, ೧೨ ಕ್ಕೆ ೨। ರೂ
೧೧. ಜಂತುವಿನ ಔಷಧ- ಹೊಟ್ಟೆಹುಳಗಳ ಮೇಲೆ ರಾಮಬಾಣ ಪುಡಿ ೧ಕ್ಕೆ ೧॥ ರ. ೨೫ ಕ್ಕೆ ೧॥ ರೂ. ೧೦೦ಕ್ಕೆ ೫। ರೂ.
೧೨. ಬಿಜ್ಜಿಯ ಮುಲಮು- ಡ. ೪ ಆ. ೧೨ ಕ್ಕೆ ೨॥ ರೂ. ಸೂತಶೇಖರ ಮಾತ್ರೆ ಪಿತ್ತಕ್ಕೆ ಡ ೧॥ ರೂ ೨॥ ೫ ರೂ
೧೩. ವಾತಸಂಹಾರಿ ತೈಲ ನಾರಾಯಣ ತೈಲ, ಅರ್ಧಾಂಗವಾತಾದಿ ಅನೇಕ ವಾತ ರೋಗಕ್ಕೆ ಸಿದ್ಧ ತೈಲಗಳು. ಬಾ. ೧॥ ರೂ ೨। ರೂ
೧೪. ವಾಕ್ಸಂಜೀವನಿ ಗುಟಿಕಾ - ಮಾತು ತಡೆಯುವಿಕೆ, ತು ತು ತು ಅನ್ನುವಿಕೆ ಇ. ಡ. ೨. ರೂ
೧೫ ಪುತ್ರಜೀವನಲೇಹ - ಗರ್ಭಪಾತವಾಗುವ ಸ್ತ್ರೀಯರಿಗೆ ಸಿದ್ಧೌಷಧಿಯು. ಡ. ೪ ರೂ ಟ. ೩.ಚ.೯ ಬೇರೆ. ಅನುಪಾನ ಪತ್ರ ಔಷಧದ ಸಂಗಡ. (ಆಯುರ್ವೇದಿಕ ಗುಣರತ್ನಮಾಲಾ ಪುಸ್ತಕ ಉಚಿತ) ಇವಲ್ಲದೆ ಅನೇಕ ತರದ ರೋಗಗಳ ಮೇಲೆ ಪಾಕ, ಲೇಹ, ಚೂರ್ಣ, ತೈಲ, ಮಾತ್ರೆಗಳ ಬಗ್ಗೆ ಸ್ಟ್ಯಾಂಪ ಇಟ್ಟು ಪತ್ರದ್ವಾರಾ ಯಾ ಸಮಕ್ಷ ತಿಳಕೊಳ್ಳಬಹುದು.

ಪತ್ತೆ:— ಮೇನೇಜರ, ಆಯುರ್ವೇದಚಿಕಿತ್ಸಾಮಂದಿರ. ಪೋ. ಚೆಂಡಿಯೆ, ತಾ ಕಾರವಾರ.

ಮುಂಬಯಿ ಏಜಂಟ.— R. C KAMAT, *Teashop, Store Lane, Fort, Bombay.*

ಯಾವದೇ ಆಕಾರದ ನಂಬರಿನ ನಕ್ಷೆಯ ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭,



ಒಂದೇ ಒಂದು ತಿಂಗಳ ಬಗ್ಗೆ ನಾವು ಈ ದರವನ್ನು ಜಾಹಿರಾತಿನ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ "ಚಲನ" ಮೋಹಕ ಯಂತ್ರರಚನೆ!! ಧರಿಸುವದಕ್ಕೆ ಯೋಗ್ಯ ಹಾಗು ಭವ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ ನಂಬರಿನ ಕೈ ಗಡಿಯಾರವನ್ನು ಉತ್ಕೃಷ್ಟ ಲೇಮ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 508 P T Madras.**

ಅತ್ಯಲ್ಪವಿವೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

'ತಾರಾ' ಲೀವರ ರಿಜಿಸ್ಟರ್ಡ ಪೊಕೆಟ್ ವಾಚು ೧೦ ಕೆರೆಟ್ ರೋಲ್ಡ ಗೋಲ್ಡಿನದು ಮುಚ್ಚಳಿಕೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರಕಾರರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೦ ಕೆರೆಟ್ ರೋಲ್ಡ ಗೋಲ್ಡಿನ ಪೊಕೆಟ್ ವಾಚ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫.

CAPTAIN WATCH CO, P B 265, MADRAS

ಕಾನಡಾವೃತ್ತ.

ಶ್ರೀ ಕ್ಷಯ ಸಂವತ್ಸರದ ಆ ಬ ೧೧ ಸೋಮವಾರ.

ಒಕ್ಕಲಿಗರ ಸ್ಥಿತಿ.

ಬೇಸಾಯ ಪ್ರದರ್ಶನದ ನೆರವಿನಿಂದ ಸಮಗ್ರ ಭರತಭೂಮಿಯಲ್ಲಿ ಬೇಸಾಯದ್ದೇ ಚರ್ಚೆಯು ಈಗ ದುಮುದುಮಿಸುತ್ತದೆ. ಒಕ್ಕಲಿಗರ ಸ್ಥಿತಿಯು ಕಂಗೆಟ್ಟಿದೆ, ಒಕ್ಕಲತನವು ಗತಿಗೇಡಾಗಿದೆ, ಅದನ್ನು ಪುನರ್ಘಟಿಸಿದ ಹೊರತು ದೇಶೋದ್ಧಾರವಿಲ್ಲ ಮುಂತಾದ ಕಥೆಗಳು ಈಗ ಹೇಳಲ್ಪಡುತ್ತವೆ. ಸರಕಾರಕ್ಕೆ ಒಕ್ಕಲಿಗರ ಸ್ಥಿತಿ-ಗತಿಯು ಗೊತ್ತಿರುವದಿಲ್ಲವೆಂಬ ಮಾತು ಯಾರೂ ನಂಬುತ್ತಿದ್ದಿಲ್ಲ. ಹೊಸದಾಗಿ ಹುಟ್ಟಿದ ಜ್ಞಾನಾನುಭೂತಿಯಿಂದಂತೂ ನಮ್ಮೆಲ್ಲರಿಗೆ ಮನೋನಿಶ್ಚಯವಾಗುವಂತಿದೆ. ಪ್ರಕೃತದ ಬೇಸಾಯ ಪ್ರದರ್ಶನದ ಸಮಯ ಪ್ರಾಂತಿಕ ಪರಿಷತ್ತು ಕೂಡಿತ್ತು. ಅದನ್ನು ಮುಂಬಯಿ ಇಲಾಖೆಯ ಪ್ರಾಂತಾಧಿಪರಾದ ನಾಮದಾರ ವಿಲ್ಸನ್ ದೊರೆಗಳೇ ತೆರೆದರು. ಬೇಸಾಯ ಕಮಿಶನಿನ ಅಧ್ಯಕ್ಷರಾದ ಲಿನ್ಲಿಥ್‌ಗೋ ದೊರೆಗಳು ಪ್ರಾಂತಿಕ ಪರಿಷತ್ತಿನಿಂದ ಬೇಸಾಯಕ್ಕೆ ಹಿತವಾಗುವದೆಂದು ನುಡಿದರು. ಅಧ್ಯಕ್ಷರಾದ ಸರ್ ಮನುಭಾಯಿಯವರು ತಮ್ಮ ಭಾಷಣದಲ್ಲಿ ನಮ್ಮಲ್ಲಿಯ ಗ್ರಾಮಗಳ ಸ್ಥಿತಿಯನ್ನು ಬಣ್ಣಿಸಿದರು. ಗ್ರಾಮಗಳ ಸ್ಥಿತಿಯ ಅನುಭವವು ಪ್ರತ್ಯಕ್ಷವಾಗಿ ನಮಗಿರುವದು. ಅದನ್ನೇನು ಸರ್ ಮನುಭಾಯಿಯವರ ವಚನಗಳಿಂದ ನಾವು ಕಲ್ಪಿಸಬೇಕಾಗಿಲ್ಲ. ಆದರೂ, ಸರಕಾರಿ ದಪ್ತರದಲ್ಲಿ ನಮೂದ ಆಗುವಂಥ ಸ್ಥಿತಿಯನ್ನು ನಾವರಿತುಕೊಳ್ಳುವದು ಇಷ್ಟವು. ಆ ಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಸರಕಾರವು ಕೈಕೊಳ್ಳುವ ಉಪಾಯಗಳಿಂದ ಆ ಸ್ಥಿತಿಯು ನಿವಾರಣೆಯಾದೀತೇನೆಂದು ಸರಕಾರಕ್ಕೆ ಕೇಳಲಿಕ್ಕೊಂದು ಅನುಕೂಲವಾಗುತ್ತದೆ. ಈ ವಿಚಾರದಿಂದ ಪ್ರಾಂತಿಕ ಪರಿಷತ್ತಿನ ಸಭಾಪತಿಗಳಾದ ಸರ್ ಮನುಭಾಯಿಯವರು ನಮೂದಿಸಿದ ಒಕ್ಕಲಿಗರ ಸ್ಥಿತಿಯನ್ನು ಇಲ್ಲಿ ನಮೂದಿಸಲಿಚ್ಛಿಸುವೆವು.

ಸರ್ ಮನುಭಾಯಿಯವರು ಭಾರತೀಯ ಒಕ್ಕಲಿಗರ ಸ್ಥಿತಿಯನ್ನು ಆಗಾಖಾನರವರ "ಸಂಕ್ರಮಣ ಹಿಂದುಸ್ಥಾನ"ವೆಂಬ ಗ್ರಂಥದೊಳಗಿಂದ ಎತ್ತಿಕೊಟ್ಟರು. ಒಕ್ಕಲಿಗರ ನಡಾವಳಿಯು ಒಂದೇ ಸಮನೆ ಬೇಸರ ಹುಟ್ಟಿಸುವಂತೆ ಸಾಗುತ್ತಲಿದೆ. ತಕ್ಕುದಾದ ಉಡಿಗೆ-ತೊಡಿಗೆಗಳಿಲ್ಲ. ಸ್ತ್ರೀ ಪುರುಷ ಬಾಲಿಕೆಯರೆಲ್ಲರೂ ಸೊರಗಿ ದುರ್ಬಲರಾಗಿರುವರು. ಇವರು ಮಾಡುವ ಕೆಲಸವು ವಿಪರೀತ, ಆಯಾಸವು ಅರೆಹೊಟ್ಟೆ. ಇದರಿಂದ ಪ್ರಾಯ ಆಗುವ ಮೊದಲೇ ಮುಪ್ಪು ತಲೆದೋರುತ್ತದೆ. ನಸುಕು ಹರಿಯುವದರೊಳಗೆ ಏಳಬೇಕು. ಒಂದು ತುತ್ತು ಉಣ್ಣಬೇಕು. ಸವಿ ಸಕ್ಕರೆ ಇಲ್ಲ, ಹಾಲಿಲ್ಲ. ತಂಗಳ ಅನ್ನವನ್ನು ಕೊಂಡು ಹೋಗಬೇಕು. ಕಾಲಿಗೆ ಮೆಟ್ಟಿಲ್ಲ. ಗದ್ದೆಗಳಿಗೆ ಹೋಗಿ ಕೂಡಲೆ ನೇಗಿಲು ಹಿಡಿದು ಹೂಡಬೇಕು. ಮಣ್ಣಿನಲ್ಲಿ ಗೊಬ್ಬರವಿಲ್ಲದೆ ಭೂಮಿ ನಿಸ್ಸಾರವಾಗಿದೆ. ಸೊರಗಿದ ದನಗಳ ಇವುಗಳಿಂದ ಭೂಮಿಯನ್ನು ಸಾಗುವಳಿ ಮಾಡಬೇಕು. ಮಧ್ಯಾಹ್ನಕ್ಕೆ ತುಸು ಹೊತ್ತು ತಡೆದು ತಂಗಳನ್ನಷ್ಟು ತಿಂದು ಪುನಃ ಆಯಾಸಪ್ರದವಾದ ಗದ್ದೆ ಕೆಲಸವನ್ನು ನಸುಗತ್ತಲಿನವರೆಗೆ ಸಾಗಿಸಬೇಕು. ಸಾಯಂಕಾಲಕ್ಕೆ ಚಳಿ ಬೀಳುತ್ತಿರೆ ಆ ಸಮಯ ಚಳಿ ಜ್ವರದಿಂದಾಗಲೀ ರೋಗದಿಂದಾಗಲೀ ನಡುಗುತ್ತ ಮನೆಗೆ ಸಾವಕಾಶವಾಗಿ ಹೋಗಬೇಕು. ಹೀನವಾದ ಜಪಾತಿಯ ತುಂಡನ್ನೊಂದ ಬಗೆದು ಒಂದಿಷ್ಟು ಕೊಳಕು ನೀರನ್ನು ಕುಡಿದರೆ, ಊಟ ತೀರಿತು. ಗ್ರಾಮದೊಳಗಿನ ಅಸ್ವಚ್ಛ ಕಟ್ಟೆಯ ಮೇಲೆ ಕೂತು ಕೆಂಪು ಕೆಲ ಹೊತ್ತು ಹರಟೆ ಕೊಚ್ಚಿ ದನಗಳನ್ನು ಕಟ್ಟಿ ಹಾಕಿ ಮನೆಗಳಲ್ಲಿ ನಿದ್ದೆ ಮಾಡಹೋಗುತ್ತಾರೆ. ಮನೆಯು ಅನಾರೋಗ್ಯದ ತವರಮನೆಯು. ಯುರೋಪಖಂಡದ ಒಕ್ಕಲಿಗರು ಇಲ್ಲಿ ಹಂದಿಗಳನ್ನು ಕಟ್ಟಲಿಕ್ಕೂ ಹೇಸುವರು. ಇಂಥ ಸ್ಥಿತಿಯು ನಮ್ಮಲ್ಲಿಯ ಗ್ರಾಮಗಳದು.

ಸರ್ ಮನುಭಾಯಿಯವರು ಒಕ್ಕಲಿಗರ ಸ್ಥಿತಿಯನ್ನು ನಿವೇದಿಸಿ ದೈವಲೀಲೆಯಿಂದ ಒದಗುವ ವಿಪನ್ನಾವಸ್ಥೆಯನ್ನು ಬಣ್ಣಿಸಿದರು. ಹಿಂದುಸ್ಥಾನದಲ್ಲಿ ಚಂಚಲವಾದ ಋತುಮಾನಗಳಿಂದ ಒಕ್ಕಲಿಗರ ಸ್ಥಿತಿಯು ಮತ್ತೂ ಕೆಟ್ಟಿದೆ. 'ನಾಹಂ ಕರ್ತಾ ಹರಿಃ ಕರ್ತಾ' ಎಂಬದೊಂದು ದೈವವಾದವಿದೆ. ಆ ದೈವವಾದವು ಹಿಂದುಸ್ಥಾನದಲ್ಲಿಯೇ ವಿಶೇಷವಾಗಿ ಸಾರ್ಥವೆಂದು ಹೇಳಬಹುದು. ಹಿಂದುಸ್ಥಾನದೊಳಗಿನ ಮೇಘರಾಜನ ವಿಚಿತ್ರ ಲೀಲೆಗಳನ್ನು ಎಲ್ಲರೂ ಬಲ್ಲರು. ಮೇಘರಾಜನನ್ನು ನಿಯಂತ್ರಿಸುವ ಅಧಿಕಾರವು ಮಾನವನಿಗಿಲ್ಲ. ಮೇಘರಾಜನು ನೀರಿಯಂತೆ ಒಲಿದರೆ, ಒಕ್ಕಲಿಗರ ಸುಗ್ಗಿ. ಮಾರಿಯಂತೆ ಮುನಿದರೆ ಮಾತ್ರ ಆತನ ಸ್ಥಿತಿಯನ್ನು ಬಣ್ಣಿಸಿ ತೀರದು !! ಅಪರಿಮಿತವಾದ ಬೆಳೆ ಹುಟ್ಟಿದಾಗ ಧರ್ಮರಾಯನಂತೆ ಬೀಗುತ್ತಿರೆ ವಿಪರೀತ ಸ್ಥಿತಿಯಲ್ಲಿ ಹೊಟ್ಟೆಯ ಗೋಳು ! ಸ್ಟ್ರಾಕ್‌ಲಂಡರವರು ನುಡಿದಂತೆ, ಪುರಾತನ ಕಾಲದ ಸಾಧುವೃತ್ತಿಯ ಗ್ರಾಮದ ಪಂಚರು ಈ ಕಾಲದಲ್ಲಿ ಅದೃಶ್ಯರಾಗಿರುವರು. ಹಳ್ಳಿಯಲ್ಲಿ ಮೂರು ಮಂದಿಗಳ ಸಹವಾಸವು ಒದಗುತ್ತದೆ. ಸರಕಾರಿ ತೆರಿಗೆಯನ್ನು ವಸೂಲ ಮಾಡುವ ಅಧಿಕಾರಿಯು ಮೊದಲನೇಯವನು, ದುಡ್ಡು ಕೊಟ್ಟು ಕಾಡುವ ಸಾವುಕಾರನು ಎರಡನೇಯವನು, ಕಾಯಿದೆ ಕಲಿಸುವ ವ್ಯವಹಾರಿಕನು ಮೂರನೇಯವನು. ಬೆಳೆ ಕೆಟ್ಟಾಗ, ಮನೆತನದ ಸಮಾರಂಭಗಳಿಗಾಗಿ ವಿಶೇಷ ಖರ್ಚು ಮಾಡಬೇಕಾದಾಗ ಆತನು ಸಾವುಕಾರನ ಕಡೆಗೆ ಸಾಲ ತೆಗೆಯುತ್ತಾನೆ. ಮೈಮುರಿದು ದುಡಿಯುವ ಬೇಸಾಯಗಾರನಿಗೆ ಹೊಟ್ಟೆ ಕೊಡುವದೆಂದರೆ, ಸಾವುಕಾರನಿಗೆ ಅದೊಂದು ದೊಡ್ಡ ಆನಂದ! ಹೊಲದ ಭದ್ರತೆಯು ಬೇಕೆಯೋ ಬೇಡ ಒಮ್ಮೆ ಸಾಲದ ಕೆಸರಲ್ಲಿ ಕಾಲೂರಿತೆಂದರೆ, ಅದರೊಳಗಿಂದ ವಿಮೋಚನವಾಗುವದು ತೀರ ಕಠಿಣವು. ಕ್ರಮವಾಗಿ ಆತನು ಕುಗ್ಗುತ್ತ, ಕುಗ್ಗುತ್ತ ಕೊನೆಗೆ ಆವನ ಸ್ಥಿತಿ ಏನಾಗುತ್ತದೆಂದು ಬಲ್ಲಿರಾ? ಸಾವುಕಾರನು ಕಾಳು ಕೊಟ್ಟರೆ ತಿನ್ನಬೇಕು. ಉಡಿಗೆ ಕೊಟ್ಟರೆ ತೊಡಬೇಕು. ಹೂಡಲಿಕ್ಕೆ ಎತ್ತು ಕೋಣಗಳನ್ನು ಕೊಟ್ಟರೆ ಹೂಡಬೇಕು. ಸರ್ವಸ್ವವೂ ಸಾವುಕಾರನ ಆಧೀನವಾಗುತ್ತದೆ. ಕಷ್ಟದಿಂದ ಬಿತ್ತಿ ಬೆಳಸಿದ ಕಾಳು ಕಡಿಗಳನ್ನೆಲ್ಲ ಸಾವುಕಾರನು ಒಯ್ಯುತ್ತಾನೆ. ಆತನು ಕೊಟ್ಟಷ್ಟು ಕಾಳನ್ನು ಈತನು ತಿನ್ನಬೇಕು. ಇತ್ಯಾದಿ ಕಥೆಯನ್ನು ಸರ್ ಮನುಭಾಯಿಯವರು ನಿವೇದಿಸಿ, ಸಹಕಾರ ಪರಿಷತ್ತಿನ ಪೂರ್ವಪೀಠಿಕೆಯನ್ನು ಕಯಾರಿಸಿದರು.

ಈ ಪೂರ್ವಪೀಠಿಕೆಯೊಳಗಿನ ಸ್ಥಿತಿಯು ಸಾಮಾನ್ಯವಾಗಿ ನಮಗೆಲ್ಲ ಗೊತ್ತಿದ್ದದ್ದೇ ಮಾತು. ಆದನ್ನು ನಿವಾರಿಸಲು ಉಪಾಯವೇನೆಂಬುದೇ ಪ್ರಶ್ನೆ. ಸಹಕಾರ ಪರಿಷತ್ತಿನಿಂದಾಗಲೀ ಈಗ ನಡೆದಿರುವ ಸಹಕಾರ ಸಂಘಗಳಿಂದಾಗಲೀ ಒಕ್ಕಲಿಗರ ಸ್ಥಿತಿಯು ಸುಧಾರಿಸುವ ಹಾಗೆ ಆಗಿರುವದೇನೆಂಬದೊಂದು ಪ್ರಶ್ನೆ. ಸಹಕಾರಿ ಸಂಘಗಳು ಅವತೀರ್ಣವಾಗಿ ಇಂದಿಗೆ ಹತ್ತು-ಹನ್ನೆರಡು ವರ್ಷಗಳು ತೀರಿದವು. ಆದರೂ ಬೇಸಾಯಗಾರರ ಸ್ಥಿತಿಯು ಸುಧಾರಿಸಿದ್ದೇನು ಕಂಡುಬರುವದಿಲ್ಲ. ವಿಚಾರ ಮಾಡಿದರೆ, ಈಗಿನ ಸಹಕಾರದ ಚಟುವಟಿಕೆಯಿಂದ ಸಾಮಾನ್ಯವಾಗಿ ಜನರ ಸ್ಥಿತಿಯು ಕಂಗೆಟ್ಟಿರುವದೇ ಹೊರತು, ಸುಧಾರಿಸಿಲ್ಲವೆಂದು ಬಲ್ಲವರು ನುಡಿಯುತ್ತಾರೆ. ಹೊಸದಾಗಿ ಹೊರಡಿಸಿದ 'ಹೆರಲ್ಡ್' ಪತ್ರಿಕೆಯ ಸಂಪಾದಕರಾದ ನಮ್ಮ ಹಳೇ ಪರಿಚಯದ ಮಿ॥ ಹೂರ್ನಿಮನ್‌ರವರು ಈ ಕುರಿತು ಒಂದು ಲೇಖವನ್ನು ಬರೆದು ಸಹಕಾರದಿಂದ ಪ್ರಜೆಗಳ ಸ್ಥಿತಿಯು ಮತ್ತೂ ಕಠಿಣವಾಯಿತೆಂದೂ, ಸಾವುಕಾರರಿಗೆ ಈ ಸಂಘಗಳಿಂದ ಲಾಭವಾಯಿತೆಂದೂ ಉದ್ಗರಿಸಿರುವರು. ಮಿ॥ ಹೂರ್ನಿಮನ್‌ರವರು ಹಿಂದುಸ್ಥಾನದ

ಯನ್ನೂ, ಸಹಕಾರಿ ಸಂಘಗಳ ಆವಳಿ ನ್ನೂ ಅರಿತವರಿರುವರ ಸಹಕಾರದಿಂದ ಲಗಾರರಿಗೆ ಸಾಲ ಪಡೆಯಲು ಸುಲಭವಾಗು ದ್ದಾಗಲ್ಯಿ, ಅವರಿಂದ ಸಾವುಕಾರರಿಗೆ ಸಲ್ಲ ಬೇಕಾದ ರಕಮೆಲ್ಲ ಸಂಪೂರ್ಣವಾಗಿ ಸಲ್ಲಲು ನುಕೂಲವಾಗುತ್ತದಾಗಿ ಮಿ| ಹೊರ್ನಿಮನ್ ರು ಅಭಿಪ್ರಾಯಪಟ್ಟಿರುವರು. ಸಹಕಾರಿ ಸಂಘಗಳ ರಚನೆ, ಅವುಗಳೊಳಗಿನ ಪಾರುಪ ಇವುಗಳನ್ನರಿತುಕೊಂಡವರಿಗೆ ಈ ವಿಷ ವನ್ನು ಯಾರೂ ಪ್ರತ್ಯೇಕವಾಗಿ ಹೇಳ ಬೇ ವ ಕಾರಣವಿಲ್ಲ. ಸಹಕಾರಿ ಸಂಘಗಳು ಮುಖ ಗ್ರಾಮಗಳಲ್ಲಿ ಈಗ ಹರಡಿಕೊಂಡಿ ಸಂಘಗಳ ಚಾಲಕರು ನಿರ್ಮಲ ಬುದ್ಧಿ ಯಿಂದ ಸಂಘದ ಕಾರ್ಯವನ್ನು ಪರಾಂಬರಿಸಿ ದರೆ, ಅವರಿಗೇ ಹಿತಾಹಿತಗಳು ಹೊಳೆಯುವ ವು. ಸಹಕಾರವು ಸಾಲಗಾರನ್ನು ನೀಗಿಸಿ ಸಾಲ ಕಾರರಿಗೆ ವಿಮೋಚನ ಮಾಡಲು ಜನ್ಮವನ್ನೆತ್ತಿ ದ ಸಾಲಗಳು ನೀಗಿದವ್ರೋ ಹೇಗೆ? ಅಥ ವಾ ಸಾಲಗಳು ಮಿಗಿಲಾದವ್ರೋ, ಹೇಗೆ? ಎಂಬ ಒಂದು ಎಣಿಕೆಯನ್ನು ನಮ್ಮಷ್ಟಕ್ಕೆ ನಾವೇ ಮಾಡಿಕೊಂಡರೆ, ನಮಗೆ ಸಹಕಾರವು ಆತೀ ವ ರೂಪದಿಂದ ಪರಿಣಮಿಸಿತೋ? ಯಾವ ಬಗೆಗಿ ಫಲಿಸಿತೋ? ತಿಳಿಯುವ ಹಾಗಿದೆ. ಮಿ| ಹೊರ್ನಿಮನ್‌ರವರು ಧ್ವನಿಸಿದ ಉದ್ಗಾರಗಳು ಮನನೀಯವಿವೆ. ಒಕ್ಕಲಿಗರ ಸ್ಥಿತಿಯನ್ನು ಸು ಧಾರಿಸಿ ಭರತ ಭೂಮಿಯಲ್ಲೆಲ್ಲ ಬೇಸಾಯಗಾ ರರ ಸುಗ್ಗಿಯನ್ನು ನೆರವೇರಿಸಲು ಸಿದ್ಧವಾಗಿ ಬಂದ ಸಾರ್ವಭೌಮ ಕಮಿಶನಿನವರು ಈ ಕುರಿತು ವಿಚಾರಿಸುವದು ಯುಕ್ತವಿದೆ. ಒಕ್ಕಲಿ ಗರ ಸ್ಥಿತಿಯು ಸಹಕಾರದ ಈಗಿನ ಕ್ರಮಿಕ ಕಗಳಿಂದ ಸುಧಾರಿಸದ ಮಾತು ಇಷ್ಟೇ ಂದಿ ಹೇಳಿ ತಿಳಿಯುವೆವು

ಸ್ಫುಟ ಸೂಚನೆಗಳು

ಹಿಂದುಸ್ಥಾನದಲ್ಲಿ ಬೇಸಾಯಗಾರರ ಸ್ಥಿತಿ ಮೊದಲಿನಿಂದಲೇ ಕಂಗೆಟ್ಟಿದೆ. ಮಹಾತ್ಮರು "ಹಳ್ಳಿಗಳಿಗೆ ಮರಳಿರಿ" ಎಂದು ಡಂಗುರ ಹೊಡೆಯುತ್ತಿದ್ದರೂ ನಮ್ಮ ಅರಸರು ಆಗ ಅದಕ್ಕೆ ಕಿವಿಗೊಡದೆ, ಈಗಲೇ ಬೇಸಾಯಗಾರರಿಗಾಗಿ ಯಾಕೆ ಮರುಗುತ್ತದ, ಹೇಳಿರಿ ನೋಡುವಾ. ಯಾವದೂ ಅವಶ್ಯವಾಗದ ಹೊರತು, ಎಂಬದೊಂದು ಗಾದೆ ಇದೆ. ನಮ್ಮ ಇಂಗ್ಲಿಷರ ಸ್ಥಿತಿಯು ಕೈಗಾರಿಕೆಗಳಿಂದ ಮುಗ್ನವಾಯಿತು. ಬೇಸಾಯವು ಊರ್ಜಿತಾವಸ್ಥೆಯಲ್ಲಿದ್ದರೆ ಮಾತ್ರ, ಗಿರಣಿ, ಕಾರಖಾನೆ, ಕೈಗಾರಿಕೆಗಳ ಬಣ್ಣ. ಸರ್ ಮನುಭಾಯಿಯವರು ಈ ವಿಷಯವನ್ನು ತಮ್ಮ ಭಾಷಣದಲ್ಲಿ ಸ್ಪಷ್ಟಮಾಡಿರು. ಅವರು ಹೇಳುವದೇನೆಂದರೆ — "ಯಾವ ರಾಷ್ಟ್ರವು ಪ್ರಾಮುಖ್ಯವಾಗಿ" ಉದ್ಯೋಗಗಳ ಮತ್ತು ಬೇಸಾಯವನ್ನು ನಿಯಂತ್ರಿಸಿದಾಗ ರಾಷ್ಟ್ರದ ಸುಗ್ಗಿ ತೆನ್ನದೇಕು. ಈ ಗಂಡಾಂತರವು ಇಂಗ್ಲಂಡ ದೇಶಕ್ಕೆ ತಿಳಿದಿದೆ. ಅದರಿಂದಲೇ ಇಂಗ್ಲಂಡ ದೇಶವು ಬೇಸಾಯ ಪ್ರಧಾನ ಸಾಮ್ರಾಜ್ಯಕ್ಕೆ ಅಂಟಿಕೊಂಡಿರುವದು." ಬೇಸಾಯ ಕಮಿಶನನ್ನು ನೇಮಿಸಿದ ಇಂಗಿತವಿದು. ಇಂಗ್ಲಂಡದೊಳಗಿನ ಕಾರಖಾನೆಗಳಿಗೆ ತಗಲುವ ಸಾಮಗ್ರಿಗಳನ್ನು ಪೂರೈಸಲು ಹಿಂದುಸ್ಥಾನವು ಬೇಕು, ಇಂಗ್ಲಂಡದಲ್ಲಿ ತಯಾರಾದ ಸಾಮಗ್ರಿಗಳನ್ನು ಕೊಂಡುಕೊಳ್ಳಲು ಹಿಂದುಸ್ಥಾನವು ಬೇಕು. ಮೊದಮೊದಲು ಈ ಜಾಗ್ರತೆಯು ಹುಟ್ಟಿದ್ದಿಲ್ಲ. ಕಾರಣವಿದೆ. ಬ್ರಿಟಿಶರಿಗೆ ಬಹಿಷ್ಕಾರವು ಆಗಿದ್ದಿಲ್ಲ. ಬೇಕಾದ್ದಲ್ಲಿ ಬೇಕಾದಷ್ಟು ಸಾಮಗ್ರಿಗಳನ್ನು ಕೊಂಡುಕೊಳ್ಳಲಿಕ್ಕೂ, ವ್ಯಾಪಾರ ಮಾಡಲಿಕ್ಕೂ ಅನುಕೂಲವಿತ್ತು. ಈಗ ಸ್ವಲ್ಪ ಕಡೆಯಲ್ಲಿ ಬ್ರಿಟಿಶರ ಬಹಿಷ್ಕಾರದ ಹೂಲಿ ಎದ್ದಿದೆ. ಇದರಿಂದ ಹಿಂದೀ ಬೇಸಾಯಗಾರರ ಕಷ್ಟವು ನಮ್ಮ ಬ್ರಿಟಿಶರ ಗ್ರಹಿಕೆಗೆ ಬಂದಿರುವದು. ಸ್ವಾರ್ಥಮೂಲಕವಾಗಿ ಬೇಸಾಯ ಕಮೀಶನಿನ ಜನ್ಮವಾಗಿರುವದೆಂದು ಹೇಳುವದೇ ತಾತ್ಪರ್ಯವು. ಯಾವ ಉಪಾಯದಿಂದಾದರೂ ಬಡ ಬೇಸಾಯಗಾರರ ಉದ್ಧಾರವಾದರಾಯಿತು!

---

೨ ಚೀನದೊಳಗಿನ ಸ್ಥಿತಿಯು ಚಿಂತಾಜನಕವಾಗುತ್ತಿದೆ. ಚೀನದಲ್ಲಿ ಈಗ ಬಹಳೇ ದೊಡ್ಡ ದೊಂಬಿಯಾಗಿದೆ. ವಿದ್ಯಾರ್ಥಿಗಳೂ, ಕೂಲಿಕಾರರೂ ಕಳೆದ ಅಕ್ಟೋಬರ ೩ನೇ ತಾರೀಖಿಗೆ ಪೋಲೀಸ ಸ್ಟೇಶನದಲ್ಲಿ ನುಗ್ಗಿ ಅನರ್ಥ ಮಾಡಿದರು. ಪೋಲಿಸರು ಗುಂಡುಗಳನ್ನು ಹಾರಿಸಿ, ಇಬ್ಬರಿಗೆ ಘಾಯ ಪಡಿಸಿದರಂತೆ! ಏಶ್ಯಾಟಿಕ್ ಪೆಟ್ರೋಲಿಯಮ್ ಹಾಗು ಬ್ರಿಟಿಶ ಅಮೇರಿಕನ್ ಕಂಪನಿಗಳ ಲಕ್ಷಾವಧಿ ರೂಪಾಯಿಗಳ ಸಾಮಗ್ರಿಯನ್ನು ಚೀನದವರು ಸರಕಾರಕ್ಕೆ ಜಪ್ತ ಮಾಡಿರುವರು. ಚೀನದೊಳಗಿನ ಜನರು ಬ್ರಿಟಿಶರ ಸೇವೆಯನ್ನು ಕೂಡ ಮಾಡಲು ಒಪ್ಪದೆ ಸಂಪ ಮಾಡಿರುವರು. ರಶಿಯಾ ದೇಶದ ಬೊಲ್ಶೆವಿಕ್ ಪಂಥದ ಸೇನಾಪತಿಗಳಾದ ಫೇನರವರು ಚೀನ ದೇಶಕ್ಕೆ ಮರಳಿ ಬಂದಿರುವರು. ಪರದೇಶದ ಬಲಾತ್ಕಾರಗಳಿಂದ ಚೀನ ರಾಷ್ಟ್ರವನ್ನು ಬಿಡುಕಿಸಲು ತಾವು ಚೀನ ದೇಶಕ್ಕೆ ಮರಳಿ ಬಂದಿರುವೆವೆಂದು ಅವರು ಜಾಹೀರನಾಮೆಯನ್ನು ಹೊರಡಿಸಿರುವರು. ಚೀನ ದೇಶದಲ್ಲಿ ಬಯಾದವರಂತೆ ಅಂತಃಕಲಹಗಳು ನಡೆದಾಗ್ಯೂ, ಬ್ರಿಟಿಶರಿಗೆ ಬಹಿಷ್ಕಾರ ಹಾಕುವ ವಿಷಯದಲ್ಲಿ ಎಲ್ಲರೂ ಐಕ್ಯಮತ್ಯದಿಂದಿರುವರೆಂದು. ಲಂಡನ್‌ದೊಳಗಿನ "ಟೈಮ್ಸ" ಪತ್ರಿಕಾ ಕರ್ತರ ಶಾಂಘಾಯ ಸುದ್ದಿಗಾರರು ಉದ್ಗರಿಸುತ್ತಾರೆ. ಬ್ರಿಟಿಶರನ್ನು ಗಂಟು ಮೂಟೆ ಕಟ್ಟಿ ಹೊರಹಾಕಲು ಚೀನದವರೆಲ್ಲರೂ ಟೊಂಕಕಟ್ಟಿರುವರೆಂದು ನಾವು ಅನುಮಾನಿಸಬಹುದು. ಸುಸಂಗತವಾದ ಸುದ್ದಿಗಳು ತಿಳಿಯುವದೇ ಇಲ್ಲ. ಇದರಿಂದ ಅಲ್ಲಿಯ ಕಲಹದ ಸ್ವರೂಪವನ್ನು ಯಥಾರ್ಥವಾಗಿ ಗ್ರಹಿಸುವದು ಕಷ್ಟವಾಗಿದೆ. ಆದರೂ, ಒಂದು ಮಾತನ್ನು ಸ್ಪಷ್ಟವಾಗಿ ಹೇಳಬಹುದು. ಬ್ರಿಟಿಶ, ಫ್ರಾನ್ಸ, ಮುಂತಾದ ಪರದೇಶಸ್ಥರ ಕುಯುಕ್ತಿಗಳು ಇನ್ನು ನಡೆಯಲಾರವು, ಅವು ಈಗ ಚೀನದಲ್ಲಿ ಅಂತ್ಯವಾದವು.

---

೩. ಬಾಬು ಚಷ್ಮೆವಾಲಾನ ಆತ್ಮಚರಿತ್ರೆಯನ್ನು ನಾವು ಕಳೆದ ಸಂಚಿಕೆಯಲ್ಲಿ ಕೊಟ್ಟಿರುತ್ತಿದ್ದೆವು. ಅದು ಮನನೀಯವಿದೆ. ಮುಳ್ಳನ್ನು ಬಾಹ್ಯವೇಷದಿಂದ ನಿಕೃಷ್ಟತನಾಗಿ ಬಿಕ್ಕಿರುವದು ಯಾವಾಗಲೂ ಅನಾಥನವು ಸತ್ಯವು ಹಿಂದಿಲ್ಲೊಂದು ದಿನ ಬೈಲಿಗೆ ಬಂದೇ ಬರುತ್ತದೆ. ಚಷ್ಮೆವಾಲಾನು ಕುಶಲ ಪುರುಷನು. ಆತನ ಬುದ್ಧಿವೈಭವವನ್ನು ನೋಡಿ ಮೆಚ್ಚದ ಮನುಜನ್ಯಾರು? ಕುಲಿಗೆ ಮಾಡಿ ಕಳವು ಮಾಡಿ, ಸಂಭಾವಿತನಂತೆ ಸಭ್ಯರಲ್ಲಿ ಮೆರೆಯುವ ಕುಶಲತೆಯು ಸಾಮಾನ್ಯನಿಗೆ ಎಂದೂ ಸಾಧ್ಯವಿಲ್ಲ. ಇಂಥ ಪುರುಷನೂ ಕೂಡ ಅಸತ್ಯ-ಪಾಪಕೃತ್ಯಗಳನ್ನಾಶ್ರಯಿಸಿದರೆ ಎಂದೂ ಉನ್ನತಿಗೆ ಬರಲಾರನು. ಪಾಪಕ್ಕೆ ಪ್ರಾಯಶ್ಚಿತ್ತವು ಸಿಗಲೇಬೇಕು; ಎಂಬದೊಂದು ಮಹಾತತ್ವವನ್ನು ಚಷ್ಮೆವಾಲಾನು ಸಿದ್ಧಪಡಿಸಿರುವನು. ಇದೇ ಆತನ ಆತ್ಮಚರಿತ್ರೆಯಿಂದ ನಾವು ಕಲಿಯುವೇಕಾದ ವಿಷಯ.

---

೪ ಹೊನ್ನಾವರ ತಾಲೂಕಿನಲ್ಲಿ ಆನೆ ಹಾಗು ಹುಲಿಗಳ ಕಾಟವು ವಿಶೇಷವಾಗಿರುವದಾಗಿ ಸುದ್ದಿಗಾರರ ಪತ್ರಾತ ಗೋಚರವಿಗೆ ಕೊಟ್ಟ ಬೆಟ್ಟದಲ್ಲಿ ಬೆಳೆದ ಗಿಡಗಂಟಿಗಳ ಮರೆಗೆ ವ್ಯಾಘ್ರರಾಜನು ಅಡಗಿಕೊಂಡು ಹುಲ್ಲನ್ನು ಮೇಯಬಂದ ಸಿರುವತ್ರಿ ಪಿ ಪಶುಕರುಗಳನ್ನು ಆಹುತಿಯಾಗಿ ಪಡೆಕೊಳ್ಳುತ್ತಿರುವನು. ಇದನ್ನು ಸಾರ್ವಭೌಮ ಬೇಸಾಯ ಕಮಿಶನಿನವರು ನಮೂದಿಸಿ ಇವರ ಬಗ್ಗೆ ಹರಿಯಬೇಕಾಗಿ ನಮ್ಮ ಬಿನ್ನಹವಿದೆ. ಆನೆಗಳ ಹಾವಳಿಯೂ ಇದೇ ಪ್ರಕಾರದ್ದು. ಇದೇ ಜಿಲ್ಲೆಯಲ್ಲಿ ಆನೆಗಳನ್ನು ಕೊಲ್ಲಲು ಒಂದು ಪಿಸ್ತೂಲು ಕೊಡಲ್ಪಟ್ಟಿದೆ. ಇದೇ ಜಿಲ್ಲೆಯೊಳಗಿನ ಬೇಸಾಯಗಾರರೆಲ್ಲರೂ ಆನೆಗಳ ಕಾಳಯಾದಾಗ ಅದನ್ನೇ ಬಳಸಬೇಕು, ಮಹಿಮೆ ಗ್ರಾಮದಲ್ಲಿ ಆನೆಗಳ ಹಾವಳಿಯಾದಾಗ ಅಲ್ಲಿಯ ರೈತರು ತಮ್ಮ ರಕ್ಷಣೆಗಾಗಿ ದಯಾಘನ ಸಾರ್ವಭೌಮ ಪಂಚಮ ಜಾರ್ಜರವರಿಂದ ನೇಮಿಸಲ್ಪಟ್ಟ ಜಿಲ್ಲಾಧಿಕಾರಿಗಳಿಗೆ ಬಿನ್ನೈಸಿಕೊಂಡರು. "ಶಿರಸಿಯಲ್ಲಿ ಪಿಸ್ತೂಲಿದೆ, ಬೇಟೆಗಾರನೂ ಅಲ್ಲಿ ಇರುವನು. ಆತನ ಖರ್ಚಿಗೆ ಬೇಕಾದಷ್ಟು ಹಣವನ್ನು ಸಂಗ್ರಹಿಸಿರಿ ಮತ್ತು ಆತನಿಗೆ ಕರತಂದು, ಆನೆಗಳ ಕಾಟದಿಂದ ರಕ್ಷಣೆ ಮಾಡಿಕೊಳ್ಳಿರಿ" ಎಂದು ಜಿಲ್ಲಾಧಿಪತಿಗಳು ಮಹಿಮೆಯೊಳಗಿನ ರೈತರಿಗೆ ಹೇಳಿ ತಮ್ಮ ಕರ್ತವ್ಯವನ್ನು ಜರುಗಿಸಿರುವರು. ಈ ಉಪದೇಶದಲ್ಲಿ ಸಹಕಾರವಿದೆ, ಸಂಘಟನೆ ಇದೆ, ಆದರಾತಿಥ್ಯವಿದೆ, ನಿಮ್ಮ ನಿರಾಧಾರ ಸ್ಥಿತಿಯೂ ಇರುವದು, ಸ್ವಾವಲಂಬನ ತಾರವೂ ಇರುವದು. "ಮಹಿಮೆ ಗ್ರಾಮದಲ್ಲಿ ತೀರ್ವೆಯನ್ನೂ ನೀವೇ ವಸೂಲ ಮಾಡಿಕೊಂಡು ನಿಮ್ಮ ಗ್ರಾಮದ ಆಡಳಿತೆಯನ್ನು ನಡಿಸಿಕೊಳ್ಳಿರಿ" ಎಂದು ಜಿಲ್ಲಾಧಿಪತಿಗಳು ಮಹಿಮೆ ಗ್ರಾಮದೊಳಗಿನ ರೈತರಿಗೆ ಹೇಳಿದರೆ ಮೇಲ್ಕಂಡ ಉಪದೇಶಕ್ಕೆ ಸುಸಂಗತವಾಗುತ್ತಿತ್ತು! ಬೇಸಾಯಗಾರರ ಸ್ಥಿತಿಯು ಹೀಗಾಗಿರುವದು. ತೀರ್ವೆಯನ್ನೂ ತೆರಬೇಕು, ಕಾಡು ಪ್ರಾಣಿಗಳಿಂದ ಬೆಳೆ ರಕ್ಷಣ ಮಾಡಿಕೊಳ್ಳಬೇಕಾದರೆ, ಪಟ್ಟಿಯನ್ನೆತ್ತಿ ಬೇಟೆಗಾರರನ್ನು ಪರ ಊರುಗಳಿಂದ ಆಮದು ಮಾಡಬೇಕು. ಪಿಸ್ತೂಲುಗಳನ್ನು ಕೊಡಲು ಸರಕಾರಕ್ಕೆ ಪ್ರಜೆಗಳ ಮೇಲೆ ವಿಶ್ವಾಸವಿಲ್ಲ. ಪಿಸ್ತೂಲುಗಳನ್ನು ಕೊಟ್ಟು ಬೇಟೆಗಾರರಿಗೆ ಅಷ್ಟಿಷ್ಟು ಪೂರೈಸುವಷ್ಟು ಸಂಬಳವನ್ನೂ ಸರಕಾರವು ಕೊಡದು. ಅಕ್ಕಿ ಸರಿಯಾಗದೆ, ಅಕ್ಕನ ಮಕ್ಕಳು ಬಡವಾಗದಂತೆ ನಮ್ಮ ಜಿಲ್ಲಾಧಿಪತಿಗಳು ಪರಸ್ಪರ ಉಪದೇಶ ಮಾಡುತ್ತಾರೆ. ಪಟ್ಟಿ ಕೂಡಿಸಿ ಬೇಟೆಗಾ

ರ ಮಡುವುಗವನ್ನು ಕರತರವ ವರೆಗೆ ಆನೆಗಳು ಸಿಕ್ಕುವದಿಲ್ಲ; ಹುಲಿಯಂತೂ ಓಡಿ ನಡೆಯುತ್ತದೆ. ಮಳೆಯಲ್ಲಿ ಕಷ್ಟದಿಂದ ಬಿತ್ತಿ, ಬೆಳೆಸಿದ ಪೈರು ಕೊನೆಗೆ ಕಾಡಾನೆಗಳ ಪಾಲು. ಬಿತ್ತಿ, ಬೆಳೆಸಿದ ಬೆಳೆಯು ತಿನ್ನಲಿಕ್ಕೆ ಸಿಗುವಷ್ಟು ಭಾಗ್ಯವು ಬೇಸಾಯಗಾರರಿಗೆ ದೊರಕದ ಬಳಿಕ, ಯಾರು ತಾನೇ ಬೇಸಾಯವನ್ನು ಕೈಕೊಳ್ಳುವನು? ಬೇಸಾಯಗಾರರ ಬಾಳ್ವೆಯಾಗುವ ಬಗೆ ಇರುವದೇ? ಬಿಕ್ಕೂಲಿನಿಂದ ಕಾಡಾನೆಗಳನ್ನು ಹೊಡೆಯಲಾರದಷ್ಟು ಮಹಿಮೆ ಗ್ರಾಮದವರು ಅಪೌರುಷರಾದರೆಂದು ಜಿಲ್ಲಾಧಿಪತಿಗಳ ತಿಳುವಳಿಕೆ ಇರುವದೇನು? ಮಹಿಮೆ ಗ್ರಾಮದಲ್ಲಿ ಏಕೆ, ನಮ್ಮ ಇಡೀ ಜಿಲ್ಹೆಯಲ್ಲಿ ತಕ್ಕ ಶಸ್ತ್ರಗಳನ್ನು ಪೂರೈಸಿದರೆ, ಕಾಡು ಪ್ರಾಣಿಗಳ ಸಮಾಚಾರವನ್ನು ಕೊಳ್ಳುವ ಸಾಹಸಿಗರು ಅನೇಕರಿರುವರು. ಮಹಿಮೆ ಗ್ರಾಮದಲ್ಲಿ ಒಬ್ಬರಿದ್ದಾರೆ. ಇಂಥ ಪ್ರಸಕ್ತಿಯಲ್ಲಿ ಶಿರ್ಸಿಯಿಂದ ಬೇಟೆಗಾರರನ್ನು ಕರತರುತ ಬಲಾತ್ಕಾರವನ್ನು ಬಡ ಮಹಿಮೆ ಗ್ರಾಮದವರ ಮೇಲೆ ಹೊರಿಸುವದು ದುಷ್ಟತನವಲ್ಲೇನು? ಜಿಲ್ಲಾಧಿಪತಿಗಳು ಸಂಕಾರಿ ಧೋರಣೆಯನ್ನು ಸ್ಫುಟಮಾಡಿರುವರು. ಬೇಸಾಯದ ಜೋಪಾನಕ್ಕಾಗಿ, ಕಲ್ಯಾಣಕ್ಕಾಗಿ ಉಪಾಯಗಳನ್ನು ಕಲ್ಪಿಸಲು ಮುದ್ದಾಂ ಭರತ ಭೂಮಿಗೆ ಚಿತ್ತೈಸಿದ ಸಾರ್ವಭೌಮ ಕವಿಶನಿನವರು ಈ ಕುರಿತು ವಿಚಾರಿಸಬೇಕಾಗಿ ಇನ್ನೊಮ್ಮೆ ಬಿನ್ನೈಸವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಸಾಮಾನ್ಯ ಪೈರು ಕೊಯ್ಯುವ ಹಂಗಾಮು. ಹಿರೇಗುತ್ತಿ ಆಸ್ಪತ್ರೆಯ ಜ್ವರದಿಂದ ನೂರಾರು ಮಂದಿಗಳು ಹಾಸಿಗೆ ಹಿಡಕೊಂಡಿರುವರು. ಅಡಿಕೆ ಬರುತ್ತಿದೆ. ಧಾರಣೆಯು ಏರಿಕೆಯ ಮೇಲಿಲ್ಲ

ಸವಿಸ್ತಾರ ಕಡೆ ಮುಂಬಯಿಯಿಂದ ಹೊರಡುವ ಆಗಬೋಟಿಯು ಸಮಯವು ಬದಲಿದೆ, ರವಿವಾರಕ್ಕೆ ಪೆಸೆಂಜರ ಬೋಟಿಯು ಹೊರಡುವದಾಗಿಯೂ, ಮಂಗಳವಾರಕ್ಕೆ ವಖಾಲು ಬೋಟಿಯು ಹೊರಡುವದಾಗಿಯೂ ಇಲ್ಲಿಯ ಏಜಂಟರು ತಿಳಿಸುತ್ತಾರೆ

ಸಂಭಾರ ಸ್ವೀಕಾರ

ಜಯಕರ್ನಾಟಕ—ಈಗ ಹುಣ್ಣಿವೆಯ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ ಶ್ರೀ॥ ಆಲೂರ ವೆಂಕಟರಾಯರು ಸಾಧನಕೇರಿ ಧಾರವಾಡ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂಪಾಯಿ ೫—೮—೦

ರಂಗಭೂಮಿ—ಶ್ರೀ ಕರ್ಣಾಟಕ ನಾಟಕ ಮಂಡಳಿಗಳ ಆಶ್ರಯದಲ್ಲಿ ಶ್ರೀ॥ ದತ್ತಾತ್ರಯ ಕೃಷ್ಣ ಭಾರದ್ವಾಜರವರು ಪ್ರಕಟಿಸುವ ನಾಟ್ಯಕಲೆಯ ಪತ್ರಿಕೆ ಆನಂದಾಶ್ರಮ ಬಸವನಗುಡಿ, ಬೆಂಗಳೂರು, ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೩-೮-೦

ಆಯುರ್ವೇದ—ಭಾದ್ರಪದ ಸಂಚಿಕೆ. ಸಂಪಾದಕ ವಿದ್ವಾನ್ ಪಿ ಸೂರ್ಯನಾರಾಯಣ ಶಾಸ್ತ್ರಿ, ಆಯುರ್ವೇದಭೂಷಣ, ಸಾಹಿತ್ಯ ವಿದ್ವಾನ್, ಕಾವ್ಯತೀರ್ಥ. ಚಿಕಿತ್ಸಕ, ಶ್ರೀ ಭುವನೇಂದ್ರ ಆಯುರ್ವೇದ ವೈದ್ಯಶಾಲಾ. ಪ್ರಕಾಶಕ. ಜೆ. ರಘುಪತಿರಾವ ಪ್ರಭು, ತೀರ್ಥಹಳ್ಳಿ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ ೩—೦—೦.

ಸುವಾಸಿನಿ—ಸಪ್ಟಂಬರ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ—ಶ್ರೀ॥ ಬೋಳಾರ ವಿಠ್ಠಲರಾಯರು, ಬಾಬುರಾವ ಮತ್ತು ಸುಗಂಧಿರು, ಮಂಗಳೂರು ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ ೨-೦-೦

ಕಾರವಾರ—ಹೈಸ್ಕೂಲಿನಲ್ಲಿ ಈ ವರುಷ ಪಂದ್ಯಾಟಗಳು ನಡೆದವು ಇಂಥ ಪಂದ್ಯಾಟಗಳು ನಡೆಯದೆ ಆರು ವರ್ಷಗಳು ಹೋದವು. ಓಟ್ಯಾಟ, ಹಾರ್‍ಯಾಟ, ಎಳೆದಾಟ, ಸ್ಯಾಕಲು, ಕವಾಯತು, ಮುಂತಾದ ವಿವಿಧ ಪ್ರಕಾರಗಳು ನಡೆದವು. ಜಿಲ್ಲಾಪತಿಗಳಾದ ಮಿ॥ ವೆಸಂಗೊಮೆರಿಯವರು ಸಭಾಪತಿಗಳಾಗಿದ್ದರು. ಅವರ ಹೆಂಡಂದಿರಾದ ಮಿಸೆಸ್ ವೆಸಂಗೊಮೆರಿಯವರೂ ಈ ಸಮಾರಂಭಕ್ಕೆ ಚಿತ್ತೈಸಿದ್ದರು ಮುಖ್ಯಾಧ್ಯಾಪಕರು ಸಭಿಕರ ಸ್ವಾಗತ ಮಾಡುವಾಗ ಇಂಥ ಸಮಾರಂಭಗಳನ್ನು ಈ ಹಿಂದೆ ನೆರವೇರಿಸುವದು ಹಣದ ಅಡಚಣೆಯ ಮೂಲಕ ಸಾಧ್ಯವಾಗಲಿಲ್ಲೆಂದು ಸೂಚಿಸಿದರು ಪಂದ್ಯಾಟಗಳಲ್ಲಿ ಹೆಸರು ಗಳಿಸಿದ ವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಹಂಚಲ್ಪಟ್ಟವು ಮಿ॥ ವೆಸಂಗೊಮೆರಿಯವರು ಸಮಯೋಚಿತ ಭಾಷಣ ಮಾಡಿದ ಬಳಿಕ ಸಮಾರಂಭವು ವಿಸರ್ಜನ ಹೊಂದಿತು,

ಕಲೆಕ್ಟರ ಆಫೀಸಿನೊಳಗಣ ವಿ ಗೋಳಿಕೇರಿಯವರಿಗೆ ಅಂಕೋಲೆಯ ಮಾಮಲೇದಾರರಾಗಿ ನೇಮಿಸಲಾಗಿದೆ ಸಾರ್ವಜನಿಕ ಕಾರಣಕ್ಕಾಗಿ (Public grounds) ನೇಮಿಸಲಾಗಿರುವದಂತೆ!

ಹಳಿಯಾಳ—ಹುಬ್ಬಳ್ಳಿ ಬರೆಯುವದೇನಂದರೆ ದಕ್ಷಿಣ ಕನ್ನಡ ಜಿಲ್ಹೆಯಿಂದ ಉತ್ತರ ಕನ್ನಡ ಜಿಲ್ಹೆಯನ್ನು ಪ್ರತ್ಯೇಕಿಸಿದ ಲಾಗಾಯ್ತು ನಮ್ಮ ಉತ್ತರ ಕನ್ನಡ ಜಿಲ್ಹೆಗೆ ಸರಿಯಾಗಿ ಸರಕಾರವು ನಡಿಸುವದಿಲ್ಲ ನಮ್ಮ ಹಳಿಯಾಳತಾಲೂಕು ಉತ್ತರ ಕನ್ನಡ ಜಿಲ್ಹೆಗೆ ಒಪ್ಪಿದ್ದು ತಾಲೂಕಿನ ಕೆಲವು ಭಾಗವು ಧಾರವಾಡದ ನ್ಯಾಯಾಸನಕ್ಕೆ ಒಪ್ಪಿಸಲ್ಪಟ್ಟಿರುವದು ಮುಲಕಿ-ಫೌಜದಾರಿ ಮೊಕದ್ದಮೆಗಳಿಗೆಲ್ಲ ಹಳಿಯಾಳ ತಾಲೂಕು ಕಾರವಾರಕ್ಕೇ ಬರಬೇಕು. ದಿವಾಣಿ ಮೊಕದ್ದಮೆಗಳಿಗಾಗಿ ಧಾರವಾಡಕ್ಕೆ ಹೋಗಬೇಕು ದಕ್ಷಿಣ ಭಾಗದ ಇನ್ನಾವ ಜಿಲ್ಹೆಯಲ್ಲಿಯೂ ಈ ವ್ಯವಸ್ಥೆಯಿರುವದಿಲ್ಲ ಆದರಿಂದ ಹಳಿಯಾಳದಲ್ಲಿ ಒಂದು ಕೋರ್ಟನ್ನು ಸ್ಥಾಪಿಸಬೇಕು ಕಾರವಾರ ಕೋರ್ಟಿನ ಕೆಲವು ಭಾಗವನ್ನು ಹಳಿಯಾಳ ಕೋರ್ಟಿಗೆ ಸೇರಿಸಬಹುದು. ಸುಪೆಯನ್ನು ಹಳಿಯಾಳಕ್ಕೆ ಸೇರಿಸಿದರೆ, ಕಾರವಾರ ಕೋರ್ಟಿಗೂ ಸ್ವಲ್ಪ ವಿಶ್ರಾಂತಿ ದೊರೆದೀತು ಇತ್ಯಾದಿ

ಶಿರ್ಸಿ— ವಾಡಿಕೆಯಂತೆ ನವರಾತ್ರಿಯ ಕಾಲಕ್ಕೆ ಶ್ರೀ ಮಾರಿಕಾಂಬಾ ದೇವಸ್ಥಾನದಲ್ಲಿ ನಡೆಯುವ ಕೀರ್ತನಗಳಿಗಾಗಿ ಈ ಸಾರೆ ಗೇರಸಪ್ಪೆಯ ಶ್ರೀ॥ ರಾಮಪೈ ಇವರನ್ನು ಬರಮಾಡಿಸಿದ್ದರು ಇವರ ಕೀರ್ತನೆಗಳು ಮನೋಹರ್‍ಯವಾದ್ದರಿಂದ ಈ ಸಾರೆ ವರ್ಷಕ್ಕಿಂತ ೩ ಹೆಚ್ಚು ಅಂದರೆ ಒಟ್ಟು ೧೨ ಕೀರ್ತನಗಳಾದವು. ಪ್ರತಿ ದಿವಸ ಸಾವಿರಗಟ್ಟಲೆ ಜನಸಮೂಹವು ಕೂಡುತ್ತಿತ್ತು ಇವರು ಭಕ್ತಿಮಾರ್ಗವನ್ನೇ ಮುಖ್ಯ ವಿಷಯವಾಗಿಟ್ಟುಕೊಂಡು ಈಗಿನ ಕಾಲಕ್ಕನುಕೂಲವಾಗಿ, ಧಾರ್ಮಿಕ, ನೈತಿಕ, ಸಾಮಾಜಿಕ ರಾಜಕೀಯ ಮೊದಲಾದ ವಿಷಯಗಳನ್ನು ಸರಸವಾಗಿ ವರ್ಣಿಸುತ್ತಿರುವಾಗ ಶ್ರೋತೃವೃಂದವು ಚಕಿತವಾಗುತ್ತಿತ್ತು ನಡುನಡುವೆ ಅವರ ಗಂಭೀರವಾದ ಹಿಂದೀ ಭಾಷಣವನ್ನು ಕೇಳಿ, ಜನರ ಹೃದಯವು ಕಂಪಿತವಾಗುತ್ತಿತ್ತು. ಎಷ್ಟೋ ಮಹಮ್ಮದೀ ಬಾಂಧವರೂ ಸಹ ಬಂದು ತಪಸ್ಥರಾಗಿ ಕೂಡ್ರುತ್ತಿದ್ದರು ಅಸ್ಪೃಶ್ಯರಿಗಾಗಿ ಪ್ರತ್ಯೇಕ ಜಾಗದ ವ್ಯವಸ್ಥೆಯಾಗಿದ್ದರೂ, ಆ ವಿಷಯದ ಕಡೆಗೆ ಜನರ ವಿಶೇಷ ಲಕ್ಷವಿದ್ದಿಲ್ಲ ಇವರ ಕೀರ್ತನದ ಪರಿಣಾಮದಿಂದ ವಿಧಾಯಕ ಕಾರ್ಯಕ್ರಮ ಖಾದಿ, ಅಸ್ಪೃಶ್ಯತಾ ನಿವಾರಣ ಹಿಂದೂ—ಮುಸಲ್ಮಾನರ ಐಕ್ಯ ಇವುಗಳಿಗೆ ಸ್ವಲ್ಪ ಸಹಾಯವಾಗಿರುತ್ತದೆ. ಇಷ್ಟೇ ಅಲ್ಲ, ಇವರ ಕೀರ್ತನಕ್ಕೆ ಮೆಚ್ಚಿದ ಅಸ್ಪೃಶ್ಯರು ಇವರಿಂದ ತಮ್ಮ ಕೇರಿಯಲ್ಲಿಯೂ ಒಂದು ಕೀರ್ತನವನ್ನು ಮಾಡಿಸಿದರು ಅದಕ್ಕೆ ಯಾವತ್ತೂ ವರ್ಗದ ಜನಸಮುದಾಯವು ವಿಶೇಷವಾಗಿ ಕೂಡಿತ್ತು. ಭಕ್ತಿ ಅಸ್ಪೃಶ್ಯತೆ, ಮದ್ಯಪಾನನಿಷೇಧ ಮೊದಲಾದವುಗಳ ಚರ್ಚೆಯಾಯಿತು. ಇವರ ವ್ಯವಸ್ಥಾಪಕ ಮಂಡಳಿಯ ಗುಣಗ್ರಾಹಕತೆಯು ಹೊಗಳತಕ್ಕಂಥಾದ್ದೇ ಸರಿ. ಮತ್ತು ಅಸ್ಪೃಶ್ಯತಾನಿವಾರಣೆಯ ಬಗ್ಗೆ ಒರೇ ಶಾಬ್ದಿಕ ಸಹಾನುಭೂತಿಯನ್ನು ತೋರಿಸದೆ, ಅದು ತೋರಿಸಿದಂತೆ ಮಾಡಿತೋರಿಸುವ ಮನೋಧೈರ್ಯವನ್ನು ತೋರಿಸಿದ್ದಕ್ಕಾಗಿ ಶ್ರೀ॥ ರಾಮಪೈಯವರನ್ನು ಅಭಿನಂದಿಸಬೇಕಾಗಿದೆ ಮತ್ತು ಈ ರೀತಿಯಲ್ಲಿ ತಮ್ಮನ್ನು ಉದ್ಧರಿಸಲು ಯತ್ನಿಸುವ ಇವರ ಋಣದೊಳಗಿದ್ದು ಮುಕ್ತವಾಗುವದೆಂದರೆ, ನಮ್ಮ ಅಸ್ಪೃಶ್ಯ ಬಾಂಧವರು ತಮ್ಮಲ್ಲಿ ರೂಢವಾಗಿದ್ದ ಘಾತಕವಾದಂಥ ಮದ್ಯಪಾನದ ದುರ್ವ್ಯಸನವನ್ನು ಕಿತ್ತು ಹಾಕುವದಾಗಿದೆ

ಇಲ್ಲಿ ಅ ಭಾ ಚ. ಸಂಘದ ಖಾದೀ ಅಂಗಡಿಯು ಶುರುವಾಗಿದ್ದು, 'ಅಲ್ಲಿ ಒಗೆಯ ಸಿದ್ಧಗೊಳಿಸಿದ ಕಚ್ಚಾ ಖಾದಿಯು ಇತರ ಕಡೆಗಿಂತ ಅಗ್ಗದಲ್ಲಿ ರೊಕ್ಕಕ್ಕೆ ಕಿನ್ನುಕ್ತಿಗೆ ಒಂದೇ ದರದಿಂದ ದೊರೆಯುತ್ತದೆ. ನಮಗೆ ಖಾಯಸಾದ ವಸ್ತ್ರಗಳು ಮುದ್ದಾಂ ತಯಾರು ಮಾಡಿಸಿ ತರಿಸಲ್ಪಡುತ್ತದೆ. ಖಾದಿ ಭಕ್ತರು ಲಕ್ಷ್ಯ ಮಾಡಬೇಕು.

ಅಂಕೋಲಾ— ಭಜಕರೊಬ್ಬರು ಬರೆದ ಸಂದೇಶಂದರೆ – ಶ್ರೀ ವೆಂಕಟೇಶ ದೇವಸ್ಥಾನದಲ್ಲಿಯ ಅನಂತ ಚತುರ್ದಶಿ ವ್ರತಕ್ಕೆ ಎಂದು ಆಯಿಥಾರ ಸಭಿಗಳು. ಪ್ರಕಟ್ಟಿ [illegible] ಯಿಂದ ಆ ಕ[illegible] ಸ್ಥಿತಿಯನ್ನು ನಿಮ್ಮ ಪತ್ರದಲ್ಲಿ ಪ್ರಕಟಿಸಬೇಕೆಂದು ಬಿನ್ನಹವಿದೆ

ಶ್ರೀ ವೆಂಕಟೇಶ ದೇವಸ್ಥಾನದಲ್ಲಿ ಪ್ರತಿ ವರುಷ ಅನಂತ ಚತುರ್ದಶಿಯ ದಿವಸ ೪೦ ಬ್ರಾಹ್ಮಣರ ಸಂತರ್ಪಣೆ ಮತ್ತು ಆ ದಿವಸದ ಪೂಜಾ ವಿನಿಯೋಗದ ಉತ್ಸವ ನಡಿಸುವದಕ್ಕೆ ತಗಲುವ ಖರ್ಚಿನ ಬಗ್ಗೆ ಆಜಮಾಸ ರೂ ಮಾಯಿ ೧೦ ವಾರ್ಷಿಕ ಉತ್ಪನ್ನವುಳ್ಳ ಜಮೀನು, ಇಲ್ಲಿಯ ಅಧ್ಯ [illegible] ವ ದಿವಂ ಮನೆತನದವರೊಬ್ಬರು, ಸುಮಾರು ೫೦ ವರ್ಷಗಳ ಹಿಂದೆ ಬಿಟ್ಟಿರುತ್ತಾರಂತೆ ಆ ಪ್ರಕಾರ ಶ್ರೀ ದೇವಸ್ಥಾನದ ಅರ್ಚಕರು ಆ ಉತ್ಪನ್ನವನ್ನು ಪಡಕೊಂಡು ಸದ್ರಿ ಉತ್ಸವವನ್ನು ನಡಿಸುತ್ತ ಬರುವ [illegible] ಆದರೆ ಈ ಸಾಲಿನ ಮುಖಾಂತರ ಉತ್ಸವ [illegible] ಸದ್ರಿ ಉತ್ಸವವನ್ನು ಸಾಗಿಸಲಿಕ್ಕೆ ತಮ್ಮಿಂದ ಆಗುವದಿಲ್ಲೆಂತ ಆ ಜಮೀನು ಮುಕ್ತೇಸರರ ಕಡೆಗೆ ವಾಪಸ ವಹಿಸಿದರಂತೆ ಆದರೂ, ವಹಿವಾಟುದಾರ—ಮುಕ್ತೇಸರರು ಈ ಉತ್ಸವವನ್ನು ಪ್ರತಿ ವರುಷ ಸಾಂಗವಾಗಿ ನಡಿಸದೆ ಬರುವಲ್ಲಿ, ಆ ಉತ್ಸವದ ಬಗ್ಗೆ ಬಿಟ್ಟ ಭೂಮಿಯ ಉತ್ಪನ್ನ ಬಾಬತಿನ ಕಟ್ಟು ಕಟ್ಟು ಹೋದ ಮೂಲಕ ಉತ್ಪನ್ನವು ಕಡಿಮೆ ಬರಹತ್ತಿದ್ದರಿಂದಲೂ, ೪೦ ಬ್ರಾಹ್ಮಣರ ಬದಲಾಗಿ, ೪೦೦ ರಷ್ಟು ಜನರು ಪ್ರಸಾದಲಾಭ ತಕ್ಕೊಳ್ಳುತ್ತಿರುವದರಿಂದಲೂ ಮುಖ್ಯ ಮನೆತನದವರು

…ಉತ್ಪನ್ನವು ಸರ್ರಿ ಉತ್ಸವವನ್ನು ಸಾಗಿಸಲಿಕ್ಕೆ …ಕಡಿಮೆ ಬೀಳುತ್ತದೆ. ಈ ಬಗ್ಗೆ ಶ್ರೀ ದೇವರ …ದೇಶಗಳಗಿಂತ ಹೆಚ್ಚಿನ ನಾಡಲಿಕ್ಕೆ ಮತ್ತೇ ಕಾರಣ…ವು ಇರುವದಿಲ್ಲ. ಪೂರ್ವಜರು ಇಟ್ಟ ಸರ್ರಿ ಉ…ವನ್ನು ಸಾಗಿಸಲಿಕ್ಕೆ ಕಡಿಮೆ ಬೀಳುವಂಥ ರಕಮಿನ …ಮಾಡುವದು ಅತ್ಯ ಮಹತ್ವದ ಕರ್ತವ್ಯವಿರುತ್ತದೆ. ಈ ಪ್ರಕಾರ ಅವರು ಏನೂ ಮಾಡುವದಿಲ್ಲದ ಪಕ್ಷಕ್ಕೆ ಸರ್ರಿ ಉತ್ಸವವನ್ನು …ನು ಸದಾ ಮಾಡಿಸ ಅವರಿಗೆ ಬಹುಮಾನದ … ಇದರ ಮೇಲಿಂದ, ನಿಸ್ವಾರ್ಥ ಬುದ್ಧಿಯಿಂದ …ಜನಿಕ ಕೆಲಸ ಮಾಡುವ ಮಹನೀಯರಾದ …ರನ್ನು ದೂಷಿಸುವದು ಎಷ್ಟು ಅಯಥಾರ್ಥವೆಂ…ಬು ಕಂಡುಬರುವದು.

…ಸಿಗೊಂದು ಕೂಸು ಹುಟ್ಟಿತು!

…ಯಾದೊಳಗಿನ ಸುಬ್ಬ …ಂಗಳ …ಗೆ ಹೊಟ್ಟೆ ಕತ್ತರಿಸಲಾಯಿತು. ಹೊಟ್ಟೆ ಉಬ್ಬಿ …ಸರ್ಜನರು ಶಸ್ತ್ರಪ್ರಯೋಗ ಮಾಡಿ ಹೊಟ್ಟೆಯ …ಯಲು ನೋಡಲು, ಒಳಗೊಂದು ಚಿಕ್ಕ ಕೂ…ಕಂಡಿತು. ಹೆಣ್ಣು ಎರಡು ಕೈ ಹಾಗು …ದು ಕಾಲು ಇದ್ದವು. ಕೂಸಿನ ಹೊಟ್ಟೆಯಲ್ಲಿ ಕೂ…ಹುಟ್ಟಿದ ಸುದ್ದಿಯಾದೊಡನೆ ಜನರು ತಂಡುಗಟ್ಟಿ …ಸ್ಪತ್ರೆಗೆ ಓಡಿಹೋದರು. ಚಿಕಿತ್ಸಾಲಯ…ದವರು ತಲೆಗೆ ಆಣೆಯ ತಿಕೀಟನ್ನು ಇಟ್ಟು ಹಣಗಳಿಸಿದರು. ತಾಯಿಯು ಕ್ಷೇಮದಿಂದ ಇದ್ದಾಳೆ. ಕೂಸಿನ …ನು ಬಾಟ್ಲಿಯಲ್ಲಿ ಹಾಕಿ ಬೆಳಗಾಗಿದೆ ಇತ್ಯಾದಿ …ಕನನ್ನ 'ಖಿಲಾಫತ' ಪತ್ರಿಕೆಯ ೧೦ನೇ …ದ ಸುದ್ದಿಗಾರರು ಬರೆಯುತ್ತಾರೆ.

ವೃತ್ತಸಾರ.

…ಪಂಡಿತ ಮೋತೀಲಾಲ ಹಾಗು ಪಂಡಿತ ಮಾಲವೀಯವರು ಪ್ರತಿಸ್ಪರ್ಧಿಗಳಿಲ್ಲದೆ ವರಿಷ್ಠ ಶಾಸನದ ಕೌನ್ಸಿಲಿಗೆ ಆರಿಸಿ ಬಂದಿರುವರು.

…ಗೋರೇಗಾಂವದಲ್ಲಿ ಅಕ್ಷತ್ರಿಯರಿಗೊಂದು ಬೋರ್ಡಿಂಗ್ …ವರು ಸ್ಥಾಪಿಸಿರುವರು. ಇದಕ್ಕಾಗಿ ಶ್ರೀ ಮೋತಿ…ರಾವವರು ಅರ್ಧ ಲಕ್ಷ ರೂಪಾಯಿಗಳನ್ನೂ, ವೈರಾ…ಜೀಭಾಯಿಯವರು …೦೦ ರೂಪಾಯಿಗಳನ್ನೂ ಕೊಟ್ಟಿರುವರು.

…ಮೈಸೂರಿನ ಪ್ರೊಫೆಸರ ಎಸ್. ವೆಂಕಟಸುಬ್ಬಯ್ಯನವರು ಕನ್ನಡ ಟೈಪರೈಟರವನ್ನೊಂದು ಮಾಡಿರು…ದು ಕನ್ನಡ ಲಘು ಲೇಖನವನ್ನು ಅವರು ಕಲ್ಪಿಸಿದ್ದು ಕನ್ನಡದ ಅಭಿವೃದ್ಧಿಗಿದೊಂದು ದೊಡ್ಡ ಸಾಧನ.

ಕರ್ನಾಟಕ ಸೇವಾ ದಲದವರು ರಾಷ್ಟ್ರೀಯ ಸಭೆಗೆ …ಸದರನ್ನು ಕೂಡಿಸಿದ ಬಗ್ಗೆ ರೂಪಾಯಿಗಳ ಇನಾ…ಗಳು ನಿರ್ಧರಿಸಲ್ಪಟ್ಟವೆ. ಶ್ರೀ ಹೊಸಕೊಪ್ಪ ಕೃಷ್ಣ…ವ ೩೫ ಕರಗುದ್ರಿ ೨೫, ವೈದ್ಯ ೨೫ ಲೇಂಗಡೇ ೨೫, …ರೆ ೨೫ ಕಾಬಕರ್ಣ ೧೦, ವೆಂಕಟರಾಮಯ್ಯ ೫, …ಡಿ. ಎ ೫ ಹೊಸಕೊಪ್ಪ ಕೃಷ್ಣರಾಯರು ಒಂದು …ಸಾವಿರ ರೂಪಾಯಿಗಳನ್ನು ಕೊಟ್ಟು … ಅದನ್ನು ಪ್ರತಿ ವರ್ಷ ಎಲ್ಲಕ್ಕೂ ಹೆಚ್ಚು ದಲದ …ಯ ಮಾಡುವವರಿಗೆ ಕೊಡಬೇಕೆಂದು ಅಪೇಕ್ಷಿಸಿದ್ದಾರೆ. …ಪಾರಿತೋಷಕವನ್ನೀಯುವ ಸಮಾರಂಭವು ರಾಷ್ಟ್ರೀಯ …ಸಭೆಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ನೆರವೇರುವದು.

— ಬೈಂದೂರಿನಲ್ಲಿ ಅಕ್ಕಿಯ ದರವು ವಿಪರೀತ ಏರಿತು. …ಬಡವರ ಗೋಳು! ಶ್ರೀಮಂತ ಯತ್ರಾರೆ ಅಣ್ಣಯ್ಯಪ್ಪ…ನವರು ಬಡವರಿಗೆ ಒಪ್ಪತ್ತು ಗಂಜಿ ಹಾಕಿ ಸಲಹುತ್ತಾರೆ.

— ವಿಲಾಯತಿಯಿಂದ ಮಿಸ್ ಮೋರೇಲಿಸ್ಟರ ಎಂಬವಳು ಸಾಬರಮತಿ ಆಶ್ರಮಕ್ಕೆ ಮಹಾತ್ಮರಿಂದ ಪ್ರೇರಣೆ ಪಡೆಕೊಳ್ಳಲು ಬಂದಿರುವಳು. ವಿಲಾಯತಿಯಲ್ಲಿ ಇವಳು ಶಾಲೆಗಳನ್ನು ಜರುಗಿಸಿರುವಳು. ಚಿಕ್ಕ ಚಿಕ್ಕ ಬಾಲಕರಿಗೆ ತನ್ನಲ್ಲಿಯೇ ಇಟ್ಟುಕೊಂಡು ಸಾಕಿ ವಿದ್ಯಾದಾನ ಮಾಡುತ್ತಾಳೆ. ಮದ್ಯಪಾನನಿಷೇಧಕ್ಕಾಗಿ ಇವಳೊಂದು ಮಂದಿರವನ್ನು ಸ್ಥಾಪಿಸಿರುವಳು.

— ಲಾಹೋರಿನಲ್ಲಿ ದಸರೆಯ ಉತ್ಸವವು ಸಡಗರದಿಂದ ನೆರವೇರುತ್ತಿತ್ತು. ರಾವಣನ ಪ್ರೇತಸಂಸ್ಕಾರವಾಗಿ ಒಂದು ತಾಸಾಗುವಷ್ಟರಲ್ಲಿ, ದುರೊಬ್ಬ ದುರಾತ್ಮನು ಬಾಂಬು ಗುಂಡನ್ನು ಜನಸಂದಣಿಯಲ್ಲಿ ಒಗೆದನು. ಇದರಿಂದ ಸುಮಾರು ೪೦ ಮಂದಿಗಳಿಗೆ ಘಾಯಗಳಾದವು. ಇಬ್ಬರು ಮಡಿದರು.

— ದಕ್ಷಿಣ ಆಫ್ರಿಕೆಯ ಪಂಚ ಗ್ರಾಮದ ಗಣಿಗಳಲ್ಲಿ ಸ್ಫೋಟವಾಗಿ ೧೫೪ ಮಂದಿಗಳು ಹೂಳಿಬಿದ್ದರು.

— ಮಿದ್ನಾಪುರದಲ್ಲಿ ನೆರೆಯಿಂದ ೫೦೦ ಚದರ ಮೈಲು ಭೂಮಿಯ ಬೆಳೆಯು ನಾಶವಾಯಿತು. ಸಾವಿರಾರು ಮನೆಗಳು ಬಿದ್ದು ನಷ್ಟ. ದನಕರುಗಳು ಸತ್ತವು. ಸರಕಾರವು ೬೫ ರೂಪಾಯಿಗಳನ್ನು ಕೊಟ್ಟು ನಿರಾಶ್ರಿತರಿಗೆ ನೆರವಾಗಲು ಯತ್ನಿಸುತ್ತಿದೆ.

— ದಕ್ಷಿಣ ಆಫ್ರಿಕೆಯೊಳಗಿನ ಭಾರತೀಯರ ಸ್ಥಿತಿಯನ್ನು ವಿಚಾರಿಸಲು ಪರಿಷತ್ತು ಡಿಸೆಂಬರ ೨೦ ನೇ ತಾರೀಖಿಗೆ ಕೇಪ ಟೌನಿನಲ್ಲಿ ಕೂಡುವದಿದೆ. ದಕ್ಷಿಣ ಆಫ್ರಿಕೆಯಿಂದ ಹಿಂದುಸ್ಥಾನವನ್ನು ಸ್ವತಃ ನೋಡಬಂದ ದಕ್ಷಿಣ ಆಫ್ರಿಕೆಯ ಶಿಷ್ಟಮಂಡಳವು ಕಳೆದ ಪಕ್ಷದಲ್ಲಿ ಮರಳಿತು.

— ಫ್ರಾನ್ಸ ದೇಶದೊಳಗಿನ ಚೆಂಟಿಲದೊಳಗಿನ ರನ್ನಾಗಾರದಲ್ಲಿ ಕಳ್ಳರು ನುಗ್ಗಿ ಹೇರಳವಾದ ರತ್ನಾದಿಗಳನ್ನು ಕದ್ದೊಯ್ದರು. ಗುಲಾಬಿ ಬಣ್ಣದ ಅಮೂಲ್ಯವಾದ ವಜ್ರವನ್ನೂ ಅವರು ಕದ್ದೊಯ್ದರಂತೆ! ಕೋಟ್ಯವಧಿ ರೂಪಾಯಿಗಳ ನಷ್ಟ.

— ಸ್ವರಾಜ್ಯ ಪಕ್ಷದವರು ಜಾಹೀರನಾಮೆಯನ್ನು ಪ್ರಕಟಿಸಿ ತಾವು ಸಾಧಿಸಿದ ಹಿಂದಿನ ಕಾರ್ಯ, ಮುಂದಿನ ಕಾರ್ಯಗಳನ್ನು ನಮೂದಿಸಿ, ಟೀಕಾಕಾರರಿಗೆಲ್ಲ ಸಮರ್ಪಕ ಉತ್ತರಗಳನ್ನು ಕೊಟ್ಟಿರುವರು. ಸ್ವರಾಜ್ಯ ಪಕ್ಷವು ರಾಷ್ಟ್ರಸ್ವಾಭಿಮಾನರಕ್ಷಣೆಗಾಗಿ ತನುಮನಧನಗಳಿಂದ ದುಡಿಯುವದು.

— ಮೈಸೂರ ಸರಕಾರವು ದಯೆಕೋರದೆ ಬಾಲ-ಬಾಲಿಕೆಯರ ಶಾಲೆಗಳಲ್ಲಿ ಕೈರಾಟಗಳನ್ನು ಸ್ಥಾಪಿಸಿರುವದು.

— ಬೆಂಗಳೂರಿನಲ್ಲಿ ಕಲಿಯ ಪ್ರವೇಶ, ಒಬ್ಬ ಮೈಸೂರ ಹೆಂಗಸು 'ಹೇರ ಕಟಿಂಗ ಸಲೂನ' ಎಂಬ ಕ್ಷೌರದ ಅಂಗಡಿಯಲ್ಲಿ ಹೋಗಿ ಮುಖಕ್ಷೌರವನ್ನು ಮಾಡಿಸಿಕೊಂಡಳಂತೆ!

— ಸಾವಂತವಾಡಿ ಸಂಸ್ಥಾನದ ಕುಡಾಳ ಊರಲ್ಲಿ ಶ್ರೀ ಲಕ್ಷ್ಮೀ ದೇವಾಲಯವಿದೆ. ಅಲ್ಲಿ ಒಂದು ಸರ್ಪವಿತ್ತು. ಅದು ಕಾಳಪ್ಪನೆಂಬೊಬ್ಬನ ಕಣ್ಣಿಗೆ ಬಿತ್ತು. ಅದನ್ನು ಆತನು ಕೊಂದನು. ಅಲ್ಪಾವಕಾಶದಲ್ಲಿಯೇ ಆತನ ಕೈಯು ಸಂಪೂರ್ಣವಾಗಿ ಚೈತನ್ಯಹೀನವಾಯಿತು. ಮಾತೂ ಕೂಡ ಆತನು ಆಡಲಾರದವನಾದನಂತೆ!

— ಧಾರವಾಡ ಜಿಲ್ಲೆಯ ಗುತ್ತಲದಲ್ಲಿ ಪಂಚಾಯತ ಕೋರ್ಟಿರುವದು. ಈ ಕೋರ್ಟಿನ ಮೂಲಕ ಊರಲ್ಲಿ ಎರಡು ಪಂಗಡಗಳಾಗಿರುವವು. ಕಾರಣ ಅದನ್ನು ಕಿತ್ತೊಗೆಯಬೇಕಾಗಿ ಊರವರದೊಂದು ಸೂಚನೆ.

— ನಿಪ್ಪಾಣಿಯ ಮುನಿಸಿಪಾಲಿಟಿಯವರು ತಮ್ಮ ಆವಾರ ರಕ್ಷಣೆಯಲ್ಲಿ ಗೋವಧೆಯಾಗಬಾರದೆಂದು ಠರಾಯಿಸಿರುವರು! ಮುನಿಸಿಪಾಲಿಟಿಯ ಮುಸಲ್ಮಾನ ಸಭಾಸದರೆಲ್ಲರೂ ಈ ಠರಾವಿಗೆ ಅನುಮತಿ ಕೊಟ್ಟರು' ಆನಂದದ ಸಂಗತಿ

— ಅಥಣಿ ತಾಲೂಕಿಗೆ ಸೇರಿದ ಕೋಹಳ್ಳಿ ಗ್ರಾಮದಲ್ಲಿ ಹಗಲು ೪ ತಾಸಿನ ಸಮಯ ಮಿಂಚು ಬಿದ್ದು ಹೊಲೆಯರ ಮನೆಯೊಳಗಿನ ನಾಲ್ವರು ಎರಡು ಆಡು ಐದು ಕೋಳಿಗಳು ಗತಪ್ರಾಣರಾದರು! ವಿಧಿಘಟನೆ!

— ಶ್ರೀ ಕಾಶೀಕ್ಷೇತ್ರದ ವಿಶ್ವವಿದ್ಯಾಲಯದಲ್ಲಿ ಪೌರ್ವಾತ್ಯ ಹಾಗು ಪಾಶ್ಚಾತ್ಯ ಕಲೆ ಹಾಗು ವಾಙ್ಮಯದ ಪ್ರದರ್ಶನವನ್ನು ಸಂಗ್ರಹಿಸುವದಕ್ಕಾಗಿ ಕ್ರಿಸ್ತರಾಸ ಮೋಹನ ಪೋಲ್ಲ ೦ ಟಬೆಸ್ಸರವರ ಹೆಂಡತಿಯವರು ೧೫ ಸಾವಿರ ಹಣವನ್ನು ಅರ್ಪಿಸಿರುವರು ಪ್ರಶಂಸನೀಯ. ಹಾಗು ಅನುಕರಣೀಯ.

— ಇಂಗ್ಲಂಡ ದೇಶದ ಕೆಂಟ ಪ್ರಾಂತದ ಬಾರೀ ಎಂಬ ಗ್ರಾಮದಲ್ಲಿ ರಿಕ್ಕಾರ್ಡ ಎಂಬವರಿರುವರು. ಇವರಿಗೆ ಎರಡೂ ಕೈಗಳಿಲ್ಲ. ಆದರೂ, ಇವರು ಕುದುರೆಯನ್ನು ಜನಸಂದಣಿಯಲ್ಲಿ ಕೂಡ ನಡಿಸಬಲ್ಲರು. ತೋಳುಗಳಿಗೆ ಕಟ್ಟಿದ ಕೊಕ್ಕೆಯನ್ನು ಸಿಕ್ಕಿಸಿಕೊಂಡು ಅವರು ನಡಿಸುತ್ತಾರೆ ಅಭಿಮನ್ಯುವಿನ ಸಂಚಾರವೇನಿದು?

— ಹಿಂದುಸ್ಥಾನದಲ್ಲೀಗ ೮೩,೭೭೦ ಮೋಟಾರುಗಳಿವೆ. ಅವುಗಳಿಗೆ ೬ ಕೋಟಿ ೫ ಲಕ್ಷ ರೂಪಾಯಿಗಳ ಬೆಲೆ ಇಷ್ಟು ಸಟ್ಟಿಗೆ ಪರದೇಶಕ್ಕೆ ರಫ್ತಾಯಿತು!

— ಬೆಳಗಾವಿ ಜಿಲ್ಲಾ ಬೋರ್ಡಿನ ಪ್ರಕರಣದಲ್ಲಿ ರಾ। ಬಾ। ಅಂಗಡಿಯವರು ಡಿಸ್ಟ್ರಿಕ್ಟ ಜಜ್ಜರವರೊಡನೆ ಅಪೀಲು ಮಾಡಿರುವರು. ಅಪೀಲಿನ ವಿಚಾರವು ಮೊನ್ನೆ ಆಗುವದಿತ್ತು. ಅಪೀಲಿನ ನಿರ್ಣಯದ ತನಕ ಚೀಫ ಆಫೀಸರರು ಜಿಲ್ಲಾ ಬೋರ್ಡಿನ ಅಧ್ಯಕ್ಷಾಧಿಕಾರವನ್ನು ನಿರ್ವಹಿಸಬೇಕಾಗಿ ಡಿಸ್ಟ್ರಿಕ್ಟ ಜಜ್ಜರು ಹುಕುಮನ್ನು ಕೊಟ್ಟಿರುವರು.

… ಮೈಲದೊಂಗಲದಲ್ಲಿ ಒಬ್ಬನು ಅಧಿಕ ತಿಂದಿದ್ದನು ಅದು ತಲೆಗೇರಿ ಆತನು ಮಡಿದನು. ಯಮನಿಗೊಂದು ನೆವ!

— ಬಂಗಾಲದೊಳಗಿನ ಬಿನ್ನಿ ಗಿರಣಿಯ ಅನರ್ಥಕ್ಕೆ ಕಾರಣರಾದ ಮಿ। ಸಿಕ್ಲೇಯವರಿಗೆ ೧೫೦೦-೦-೦ ಸಂಬಳವೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಜಾಹೀರಾಯಿತು. ಮೊದಲು ಮಾರಗಳ ತನಕ ತಾವು ಪ್ರಕಟಿಸಿದ ಅಂಕಿಗಳನ್ನು ತಿದ್ದಿರಲು ಕಾರಣವೇನೆಂದು 'ವಿಶ್ವಕರ್ನಾಟಕ' ವು ಕೇಳುತ್ತಿದೆ. ಕಾರಣವಿದೆ. ಲೋಕಮತ ಪತ್ರಿಕೆಗಳಿಗೆ ಉತ್ತರ ಕೊಡಬೇಕ್ಯಾರು?

— ರಾಣಿಬೆನ್ನೂರ ತಾಲೂಕಿನ ಉದ್ಗಟ್ಟಿ ಗ್ರಾಮದಲ್ಲಿ ಒಕ್ಕಲಿಗನು ಎರಡು ಎತ್ತುಗಳನ್ನು ಕಟ್ಟಿಕೊಂಡು ಕೂತಿದ್ದನು. ಜೇನಹುಳಗಳು ಒಕ್ಕಲಿಗನಿಗೂ ಎತ್ತುಗಳಿಗೂ ಮುತ್ತಿ ಕಡಿದವು. ಅದರಿಂದ ೩-೪ ತಾಸುಗಳಲ್ಲಿ ಮೂವರೂ ಪರಲೋಕಗಮನ ಮಾಡಿದರು ವಿಧಿಘಟನೆ.

— ಸಾಗರದ ಸರಕಾರಿ ವಕೀಲರಾದ ರಾವಸಾಹೇಬ ಶ್ರೀ ಬಂಡೇಯವರು ಮಹಾವಿದ್ಯಾಲಯಕ್ಕೆ ೧೦ ಸಾವಿರ ರೂಪಾಯಿ ಬೆಲೆಯ ಮಂದಿರವನ್ನು ಅರ್ಪಿಸಿರುವರು

— ಕೊಲ್ಹಾಪುರದ ಮಹಾರಾಜರ ಆಶ್ರಯದಲ್ಲಿ ಸದ್ಯಕ್ಕೆ ಮಲ್ಲಯುದ್ಧವು ನಡೆಯುವದಿದೆ. ಗಾಮಾ ಹಾಗು ಜಾಮಾರವರು ಮಲ್ಲಯುದ್ಧದೊಳಗಿನ ವೀರರು. ಗಾಮಾನು ಮೂರನಿದ್ದಾನೆ, ಮೇಲೆ ಶಿಕ್ಷಣವಿದ್ದಾನೆ. ಆದರೂ, ಚಿಕ್ಕ ಶ್ರೇಷ್ಠನು. ಮಹಾರಾಜರು ಮಲ್ಲಯುದ್ಧದಲ್ಲಿ ಯಶಸ್ಸು ಪಡೆಯುವವರಿಗೆ ಬೆಳ್ಳಿಯ ಗದೆ ಸಹಿತವಾದ ಕಾಣಿಕೆಯನ್ನೀಯುವದಾಗಿ ಜಾಹೀರಾಗಿದೆ

— ರಾಜಕೀಯ ಅಪರಾಧಗಳಿಗಾಗಿ ಸಮಸ್ತ ರಾಷ್ಟ್ರಗಳಲ್ಲಿ ಕೂಡಿ ೧ ಲಕ್ಷ ಕೈದಿಗಳಿದ್ದಾರೆ. ಹಿಂದುಸ್ಥಾನದಲ್ಲಿ ೧೫೦೦೦, ಉಳಿದ ದೇಶಗಳಲ್ಲೆಲ್ಲ ೮೫೦೦೦!

— ಹಳಿಯಾಳದೊಳಗಿನ ಶ್ರೀ ಕಸೂಲರು ಅಖಿಲ ಭಾರತೀಯ ಸಾಲುಗಾರ ಸಂಘದ ಸಭಾಸದರಾಗಿರುವರು ಶ್ರೀ ಕಸೂಲರವರು ಸರಕಾರಿ ನೌಕರರಿದ್ದಾರೆ. ಈ ಸಂಗತಿಯನ್ನು ನೆನಪಿನಲ್ಲಿಡತಕ್ಕದ್ದು.

ಮಹಾತ್ಮರ ಆತ್ಮಚರಿತ್ರ

(೨೨) ಧರ್ಮಾಭ್ಯಾಸ.

ನಾನು ಸಂಪೂರ್ಣವಾಗಿ ಸಮಾಜಸೇವಾರತನಾಗ[illegible] ಕಾರಣವಿದೆ. ಆತ್ಮಸಾಕ್ಷಾತ್ಕಾರವನ್ನು ಪಡೆಯಲು ನಾನು ಉತ್ಸುಕನಾಗಿದ್ದೆ. ಸಮಾಜಸೇವೆಯು ನನ್ನ ಧರ್ಮವಾಗಿತ್ತು. ಯಾಕೆ ಅಂದರೆ ಸಮಾಜಸೇವೆಯಿಂದಲೇ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ. ನನ್ನ ಪಾಲಿಗೆ ಬಂತು ಭಾರತಖಂಡದ ಸೇವೆಯೇ. ನನಗೆ ವಿಧಿಸಿದ ಸಮಾಜಸೇವೆ ಆಕಸ್ಮಿಕವಾಗಿ ಅದು ನನ್ನ ಪಾಲಿಗೆ ಬಂದಿತ್ತು. ಅದನ್ನು ನೆರವೇರಿಸಲು ತಕ್ಕ ಪಾತ್ರತೆಯೂ ನನ್ನಲ್ಲಿತ್ತು. ದಕ್ಷಿಣ ಆಫ್ರಿಕೆಗೆ ನಾನು ಹೊಟ್ಟೆ ಹೊರೆದುಕೊಳ್ಳಲು ಆಕಸ್ಮಿಕವಾಗಿ ಹೋಗಿದ್ದೆ. ಕಾಠೇವಾಡದೊಳಗಿನ ಒಳಸಂಚಿನಿಂದ ನನಗೆ ಬೇಸರ ಬಂದಿತ್ತು. ಆದರೆ ನಾನು ಪರಮಾತ್ಮನ ಸಾಕ್ಷಾತ್ಕಾರವನ್ನು ಬಯಸುವಂಥವನಾದೆನು; ಆತ್ಮಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸುವಂಥವನಾದೆನು.

ಕ್ರೈಸ್ತ ಬಾಂಧವರು ನನ್ನಲ್ಲಿ ಜ್ಞಾನಾರ್ಜನದ ರುಚಿಯನ್ನುಂಟು ಮಾಡುತ್ತಿದ್ದರು. ಜ್ಞಾನಸಂಪಾದನೆ ಮಾಡಲು ನಾನು ಬುಭುಕ್ಷಿತನಾಗಿದ್ದೆ. ಈ ವಿಷಯವನ್ನು ನಾನು ಉಪೇಕ್ಷಿಸಿದರೂ ಅವರು ನನಗೆ ಉಪೇಕ್ಷಿಸಗೊಡುತ್ತಿರಲಿಲ್ಲ. ದಕ್ಷಿಣ ಆಫ್ರಿಕೆಯೊಳಗಿನ "ಜನರಲ್ ಮಿಶನ" ಮುಖ್ಯಸ್ಥರಾದ ಮಿ| ಸ್ಪೆನ್ಸರ ವಾಲ್ಟನ್ ರವರು ಡರ್ಬಾನದಲ್ಲಿ ನನಗೆ ಗಂಟುಬಿದ್ದರು. ನಾನು ಅವರ ಕುಟುಂಬಸ್ಥನಂತೆ ಆದೆನು. ನನಗೆ ನಡಸಿಕೊಂಡರು. ನನಗೆ ಪರಿಚಯವಾಗಲು ಕಾರಣವಿತ್ತು. ಪ್ರಿಟೋರಿಯಾದಲ್ಲಿ ಅನೇಕ ಕ್ರೈಸ್ತರು ನನ್ನ ಗೆಳೆಯರಾಗಿದ್ದರು. ಅವರ ಪರಿಚಯದಿಂದ ವಾಲ್ಟನ್ ರವರ ಗುರುತಾಗಿತ್ತು. ಮಿ| ವಾಲ್ಟನ್ ರವರ ಸ್ವಭಾವವೇ ಬೇರೆ. ಕ್ರೈಸ್ತಮತವನ್ನು ಅಂಗೀಕರಿಸಲು ಅವರೆಂದೂ ನನಗೆ ಹೇಳಿದ್ದು ನೆನಪಿನಲ್ಲಿಲ್ಲ. ಆದರೆ ತಮ್ಮ ನಿತ್ಯಜೀವನವನ್ನೂ, ಸ್ವಭಾವವನ್ನೂ ಅವರು ನನ್ನ ಮುಂದಿಟ್ಟು ನನಗೆ ಅವನ್ನು ಸೂಕ್ಷ್ಮವಾಗಿ ನಿರೀಕ್ಷಿಸಗೊಟ್ಟರು. ಅವರ ಸೊಸೆಯು ಬಹಳ ಸಭ್ಯ ಹಾಗು ಚತುರ ಹೆಂಗಸಾಗಿದ್ದಳು. ಈ ದಂಪತಿಗಳ ನಡತೆಯನ್ನು ನೋಡಿ ನನಗೆ ಸಂತೋಷವಾಯಿತು. ನಮ್ಮೊಳಗೆ ತಾತ್ವಿಕ ಭೇದವಿರುವದೆಂಬ ಸಂಗತಿಯನ್ನು ನಾವರಿತಿದ್ದೆವು. ಎಷ್ಟು ವಿವಾದ ಮಾಡಿದರೂ ನಮ್ಮ ಮತಭೇದಗಳು ಬದಲುವ ಹಾಗಿರಲಿಲ್ಲ. ಆದರೆ ಸಹನಶೀಲತೆ, ಉದಾರಬುದ್ಧಿ, ಸತ್ಯಪ್ರೇಮಗಳಿದ್ದರಿಂದ ಭೇದಭಾವದಿಂದ ನಮಗೆ ಅನುಕೂಲವಾಯಿತು. ವಾಲ್ಟನ್ ದಂಪತಿಗಳ ವಿನಯಶೀಲತೆಯನ್ನೂ, ಉದ್ಯೋಗಬುದ್ಧಿಯನ್ನೂ, ಕಾರ್ಯಶಕ್ತಿಯನ್ನೂ ನೋಡಿ ನಾನು ಸಂತೋಷಪಟ್ಟೆ. ನಾವು ಬಹಳ ಸಲ ಒಬ್ಬರನ್ನೊಬ್ಬರು ಭೆಟ್ಟಿಯಾಗುತ್ತಿದ್ದೆವು.

ಈ ಗೆಳೆತನದಿಂದ ಧರ್ಮಾಭ್ಯಾಸದ ಚಟವು ನನ್ನಲ್ಲುಂಟಾಯಿತು. ಪ್ರಿಟೋರಿಯಾದಲ್ಲಿ ಧರ್ಮಾಭ್ಯಾಸ ಮಾಡಲು ನನಗೆ ಬಹಳ ಸಮಯ ಸಿಗುತ್ತಿತ್ತು, ಅಷ್ಟು ಸಮಯವು ನನಗೆ ಡರ್ಬಾನದಲ್ಲಿ ಸಿಗುತ್ತಿರಲಿಲ್ಲ. ಆದರೆ ಸಿಕ್ಕಿದಷ್ಟು ಸಮಯವನ್ನು ನಾನು ಬಹಳ ಯೋಗ್ಯವಾಗಿ ಉಪಯೋಗಿಸಿದೆನು. ಧರ್ಮವಿಷಯಕ ನನ್ನ ಪತ್ರವ್ಯವಹಾರವು ಹಿಂದಿನಂತೆ ನಡೆದಿತ್ತು. ರಾಯಚಂದಭಾಯಿಯವರು ನನಗೆ ಮಾರ್ಗ ತೋರಿಸಿಕೊಡುತ್ತಿದ್ದರು. ಗೆಳೆಯರೊಬ್ಬರು 'ಧರ್ಮವಿಚಾರ'ವೆಂಬ ನರ್ಮದಾಶಂಕರರ ಗ್ರಂಥವನ್ನು ಕಳುಹಿದರು. ಅದರ ಪ್ರಸ್ತಾವನೆಯು ಬೋಧಪ್ರದವಿತ್ತು. ಕವಿಗಳು ಬೋಹಿಮಿಯಾದೊಳಗಿನ ಪದ್ಧತಿಯಂತೆ ನಡಕೊಳ್ಳುತ್ತಿದ್ದರು. ಈ ನಡತೆಯಿಂದಲೂ, ಧರ್ಮಗ್ರಂಥಗಳ ಅಭ್ಯಾಸದಿಂದಲೂ ಅವರಲ್ಲಿ ಉಂಟಾದ ಅವಸ್ಥಾಂತರಗಳನ್ನು ಓದಿ, ನಾನು ಮರುಳನಾದೆ. ಆ ಗ್ರಂಥವು ನನಗೆ ಚಿತ್ತವೇಧಕವಿತ್ತು. ಅದನ್ನು ನಾನು ಆಸಕ್ತಿಯಿಂದ ಓದಿದೆನು. "ಭಾರತಖಂಡ, ಅದರಿಂದ ನಾವೇನು ಬೋಧ ಪಡೆಯಬೇಕು?" ಎಂಬ ಗ್ರಂಥವನ್ನು ಮೊಕ್ಷಮುಲ್ಲರರವರು ಬರೆದಿದ್ದರು. ಥಿಯೊಸೊಫಿ ಸಂಘದವರು ಉಪನಿಷತ್ತುಗಳ ಇಂಗ್ಲಿಷ ಭಾಷಾಂತರವನ್ನು ಪ್ರಕಟಿಸಿದ್ದರು. ಇವುಗಳನ್ನು ನಾನು ಪ್ರೀತಿಯಿಂದ ಓದಿದೆನು. ಇವುಗಳ ವಾಚನದಿಂದ ಹಿಂದೂ ಧರ್ಮದ ಕುರಿತು ನನ್ನಲ್ಲಿ ಹೆಚ್ಚಿನ ಆದರ ಹುಟ್ಟಿತು. ಹಿಂದೂ ಧರ್ಮದ ಸೌಂದರ್ಯಗಳು ನನಗೆ ದಿನೇ ದಿನೇ ಹೊಳೆಯಹತ್ತಿದವು. ಆದರೆ, ಅದರಿಂದ ಪರಧರ್ಮಗಳ ಕುರಿತು ನನ್ನಲ್ಲಿ ವಿಪರೀತ ಗ್ರಹಿಕೆಯು ಹುಟ್ಟಲಿಲ್ಲ. ವಾಶಿಂಗಟನ್ ಇರ್ವಿನ್ ರವರು ಬರೆದ "ಪೈಗಂಬರರು, ಅವರ ಅನುಯಾಯಿಗಳೂ" ಎಂಬ ಗ್ರಂಥವನ್ನು ಹಾಗೂ ಕಾರ್ಲಾಯ್ಲರವರು ಮಾಡಿದ ಪೈಗಂಬರರ ಗುಣವರ್ಣನೆಯನ್ನು ನಾನು ಓದಿದೆನು. ಈ ಗ್ರಂಥಗಳ ವಾಚನದಿಂದ ಪೈಗಂಬರರು ಮಹಾಪುರುಷರೆಂದು ನನ್ನ ಮನವರಿಕೆಯಾಯಿತು. "ಝರಾತುಸ್ತ್ರನ ವಚನಗಳು" ಎಂಬ ಗ್ರಂಥವನ್ನೂ ನಾನು ಓದಿದೆನು.

[illegible] ಜ್ಞಾನವನ್ನು ನಾನು [illegible] ಸಂಪಾದಿಸಿದೆನು. ಅಭ್ಯಾಸದಿಂದ ನನ್ನ ಆತ್ಮನಿರೀಕ್ಷಣೆ [illegible] ಪ್ರಾರಂಭಕ್ಕೆ ಕಳೆಯ [illegible] ಪರಿಣಾಮ [illegible] ತೋರಿದ ಯೋಗಸಾಧನೆಗಳನ್ನು ಅಭ್ಯಾಸದಲ್ಲಿ ಪರಿಣಮಿಸಲು ನನಗೆ ಬಯಕೆಯುಂಟಾಯಿತು. ಹಿಂದೂ ಧರ್ಮಶಾಸ್ತ್ರಗಳು ನಿವೇದಿಸಿದ ಯೋಗಸಾಧನಗಳನ್ನು ನನ್ನ ತಿಳುವಳಿಕೆ ಮುಟ್ಟಿಗೆ ನಾನು ಆಚರಿಸಹತ್ತಿದೆನು. ಆದರೆ ಅವರೊಳಗೆ ನನ್ನ ಪ್ರಗತಿಯಾಗಲಿಲ್ಲ. ಅದರಿಂದ ಭಾರತಭೂಮಿಗೆ ಮರಳಿದ ಬಳಿಕ ಯಾರೊಬ್ಬ ತಜ್ಞನ ಸಹಾಯದಿಂದ ಅವನ್ನು ಕೈಕೊಳ್ಳಬೇಕೆಂದು ನಾನು ನಿರ್ಧರಿಸಿದೆನು. ಆ ಬಯಕೆಯು ಇನ್ನೂ ಹಾಗೆಯೇ ಇರುತ್ತದೆ.

ಟಾಲ್ ಸ್ಟಾಯ್ ರವರ ಗ್ರಂಥಗಳನ್ನು ನಾನು ಸೂಕ್ಷ್ಮವಾಗಿ ಪರಿಶೀಲನ ಮಾಡಿದೆನು. "ಗೊಸ್ಪೆಲ್ಸ್ ಇನ್ ಬ್ರೀಫ್," "ವಾಟ್ ಟು ಡು" ಮುಂತಾದ ಗ್ರಂಥಗಳು ನನ್ನ ಹೃದಯದ ಮೇಲೆ ಬಹಳ ಪರಿಣಾಮವಾಯಿತು. ವಿಶ್ವಪ್ರೇಮದ ಸ್ವರೂಪವನ್ನು ತಿಳಿದರೆ, ಅದರಿಂದ ಉದ್ಭವಿಸುವ ಶಕ್ತಿಗಳು ಅಗಣಿತವೆಂದು ನನಗೆ ಕ್ರಮವಾಗಿ ಹೊಳೆಯಹತ್ತಿತು.

ಇದೇ ಸಮಯದಲ್ಲಿ ಇನ್ನೊಂದು ಕ್ರೈಸ್ತ ಮನೆತನದೊಡನೆ ನನ್ನ ಪರಿಚಯವುಂಟಾಯಿತು. ಅವರ ಸೂಚನೆಯಂತೆ ಪ್ರತಿ ರವಿವಾರಕ್ಕೆ ವೆಸ್ಲಿ ಪಂಥದ ಇಗರ್ಜಿಗೆ ನಾನು ಹೋಗುತ್ತಿದ್ದೆನು. ಈ ದಿನಗಳಲ್ಲಿ ಮಧ್ಯಾಹ್ನ ಭೋಜನಕ್ಕೆ ನನಗೆ ಯಾವಾಗಲೂ ಆಮಂತ್ರಣವಿರುತ್ತಿತ್ತು. ಇಗರ್ಜಿಗೆ ಹೋಗಿ ನನ್ನ ಮನಸ್ಸಿನ ಮೇಲೆ ಅನುಕೂಲ ಅಭಿಪ್ರಾಯವುಂಟಾಗಲಿಲ್ಲ. ಅಲ್ಲಿಯ ಪ್ರವಚನಗಳನ್ನು ಕೇಳಿ ನನಗೇನೂ ಪ್ರೇರಣೆ ಹುಟ್ಟಲಿಲ್ಲ. ಇಗರ್ಜಿಯಲ್ಲಿ ಕೂಡಿದ ಜನರು ವಿಶೇಷ ಧರ್ಮಬುದ್ಧಿಯಿಂದ ಪ್ರೇರಿತರಾಗಿದ್ದಂತೆ ತೋರಲಿಲ್ಲ. ಅವರು ಪರಮಾತ್ಮನ ಭಕ್ತರಾಗಿ ಅಲ್ಲಿ ಸೇರುತ್ತಿದ್ದಿಲ್ಲ. ವಿನೋದಕ್ಕಾಗಿ ಮಾಡಿಕೆಯಂತೆ ಪ್ರಾಪಂಚಿಕ ಮಂದಿಗಳಾಗಿ ಅವರು ಹೋಗುತ್ತಿದ್ದರು. ಅನೇಕಾವರ್ತಿ ಅನೈಚ್ಛಿಕವಾಗಿ ನಾನು ತೂಕಡಿಸುತ್ತಿದ್ದೆ. ನನಗೆ ನಾಚಿಕೆಯುಂಟಾಗುತ್ತಿತ್ತು. ಆದರೆ, ನನ್ನ ಅಕ್ಕಪಕ್ಕ ಇದ್ದ ಕೆಲವರೂ ಹೀಗೆಯೇ ತೂಕಡಿಸುತ್ತಿದ್ದರಿಂದ ನನಗೆ ಅಷ್ಟೇನು ನಾಚಿಕೆ ಎನಿಸಲಿಲ್ಲ. ಇದೇ ಪ್ರಕಾರ ಬಹಳ ಕಾಲದವರೆಗೆ ಇಗರ್ಜಿಗೆ ಹೋಗಿ ತೂಗುಕೊಳ್ಳುವದು ಶಕ್ಯವಿರಲಿಲ್ಲ. ಅದರಿಂದ ಅದನ್ನು ನಾನು ಬಿಟ್ಟುಬಿಟ್ಟೆನು.

ಪ್ರತಿ ರವಿವಾರಕ್ಕೆ ನಾನು ಹೋಗುತ್ತಿದ್ದ ಮನೆತನದ ಸಂಬಂಧವು ಥಟ್ಟನೆ ಹರಿದುಹೋಯಿತು. ನನಗೆ ಅಲ್ಲಿ ಇನ್ನು ಮುಂದೆ ಬರಬಾರದೆಂದು ಎಚ್ಚರಿಕೆ ಕೊಡಲಾಯಿತು. ಅದು ಹತ್ತಿತು ಹೀಗೆ. ನನ್ನ ಮನೆಯ ಯಜಮಾನಿಯು ಸರಳ ಸ್ವಭಾವದ ಹೆಂಗಸು; ಆದರೆ ಕೆಲಮಟ್ಟಿಗೆ ಕ್ಷುದ್ರ ಸ್ವಭಾವದವಳು. ನಾವು ಯಾವಾಗಲೂ ಧರ್ಮವಿಷಯಗಳನ್ನು ಚರ್ಚಿಸುತ್ತಿದ್ದೆವು. ಆರ್ನಾಲ್ಡರವರ "ಏಶಿಯಾ ಖಂಡದ ದೀಪ," ಎಂಬ ಗ್ರಂಥವನ್ನು ನಾನು ಆ ಕಾಲಕ್ಕೆ ಓದುತ್ತಿದ್ದೆ. ಬುದ್ಧ ಕ್ರೈಸ್ತನನ್ನು ಬುದ್ಧನೊಡನೆ ನಾವು ಸರಿಹೋಲಿಸಹತ್ತಿದೆವು. ನಾನು ನುಡಿದದ್ದೇನಂದರೆ "ಗೌತಮನ ದಯಾನಿಧಿಯನ್ನು ನೋಡಿರಿ; ಅವನ ದಯಾಕ್ಷೇತ್ರವು ಮಾನವಕೋಟಿಯನ್ನೇ ವ್ಯಾಪಿಸದೆ ಸಮಸ್ತ ಪ್ರಾಣಿಕೋಟಿಯನ್ನೂ ವ್ಯಾಪಿಸಿತ್ತು. ಅವನ ಹೆಗಲ ಮೇಲೆ ಆನಂದಾತಿಶಯದಿಂದ ಕೂರ್ತಿರುವ[illegible] ಮರಿಯ ಕಥೆಯನ್ನು ಓದಿದರೆ, ಯಾರಿಗೆ ತಾನೇ ಪ್ರೀತಿಯುಂಟಾಗದಿರದು! ಇಂಥ ಪ್ರೇಮವು ಕ್ರೈಸ್ತನಲ್ಲಿ ಕಂಡು ಬರುವದಿಲ್ಲ." ಇದನ್ನು ಕೇಳಿ, ನನ್ನ ಯಜಮಾನಿಗೆ ದುಃಖವಾಯಿತು. ಅಂಥ ಮನೋವಿಕಾರಗಳು ನನಗೆ ತಿಳಿದವು. ಆ ವಿಷಯವನ್ನು ನಾನು ಅಷ್ಟಕ್ಕೇ ಬಿಟ್ಟುಕೊಟ್ಟು ಭೋಜನ ಶಾಲೆಗೆ ನಡೆದೆನು. ಅವಳಿಗೊಬ್ಬ ಕಿರಿಗೇಡಿ [illegible] ಸುಮಾರು ಐದು ವರ್ಷ ಪ್ರಾಯದ ಹುಡುಗನಿದ್ದನು. ಅವನು ನನ್ನ ಜೊತೆಯಲ್ಲಿದ್ದನು. ಹುಡುಗರ ಜೊತೆಯಲ್ಲಿರುವದು ನನಗೆ ಆನಂದ. ಈ ಹುಡುಗನಿಗೂ, ನನಗೂ ಬಹುಕಾಲದಿಂದ ಗೆಳೆತನವು ಬೆಳೆದಿತ್ತು. [illegible] ಹರಿವಾಣದಲ್ಲಿ ಮಾಂಸದ ತುಂಡಿಯಿತ್ತು. ಅದನ್ನು ನಾನು ಹೀಯಾಳಿ, ನನ್ನ ತಟ್ಟೆ ಇದ್ದ ಸೇಬುಹಣ್ಣನ್ನು ಹೊಗಳಿದೆನು. ಆ ಹುಡುಗನಿಗೆ ಮನವರಿಕೆಯಾಯಿತು. ಅವನೂ ನನ್ನೊಡನೆ ಫಲವನ್ನು ಹೊಗಳಹತ್ತಿದನು. ತಾಯಿಯಾದವಳೋ ಇದನ್ನು ನೋಡಿ ದಿಗಿಲು ಬಿದ್ದಳು. ಮುಜುಗರ ಕೊಡಲಾಯಿತು. ನಾನು ಅಷ್ಟಕ್ಕೇ ತಡೆದು, ವಿಷಯಾಂತರ ಮಾಡಿದೆನು. ಮರುವಾರದಲ್ಲಿ ಮಾಮೂಲಿನಂತೆ ಅಲ್ಲಿ ನಾನು ಹೋದೆನು. ವೈಮನಸ್ಯವಾಗುತ್ತಿತ್ತು; ಅಲ್ಲಿ ಹೋಗಬಾರದೆಂದು ನನಗನಿಸಲಿಲ್ಲ. ಹೋಗದಿರುವದು ಅಪ್ರಶಸ್ತವೆಂದು ಎಣಿಸಿದೆನು. ಆದರೆ ಆ ಸ್ತ್ರೀಯಳು ನನಗೆ ಅನುಕೂಲವಾದ ಮಾರ್ಗ ತೋರಿಸಿಕೊಟ್ಟಳು. ಅವಳು ಹೇಳಿದ್ದೇನಂದರೆ, "ಮಿ| ಗಾಂಧಿಯವರೇ, ನಾನು ಒಂದು ಮಾತು ಹೇಳುತ್ತೇನೆ. ನೀವು ವ್ಯಸನಪಡಲಾಗದು, ನಿಮ್ಮ ಸಹವಾಸದಿಂದ ನನ್ನ ಹುಡುಗನು ಸುಧಾರಿಸಲಿಲ್ಲ; ಮಾಂಸವನ್ನು ತಿನ್ನಲಿಕ್ಕೆ ಅವನು ದಿನಾ ಹಿಂಜರಿಯುತ್ತಾನೆ; ಹಣ್ಣುಹಂಪಲಗಳನ್ನೇ ಬೇಡುತ್ತಾನೆ. ನಿಮ್ಮ [illegible]ಗಳನ್ನೇ ನನಗೆ ಆಗಾಗ್ಗೆ ಹೇಳುತ್ತಾನೆ. ಇದು ವಿಪರೀತವಾಯಿತು. ಮಾಂಸವನ್ನು ಅವನು ಬಿಟ್ಟರೆ, ಅವನು ಬೇಗ ಬೆಳೆದಿದ್ದರೂ ದುರ್ಬಲನಾಗುವನು. ಅದನ್ನು ನನ್ನಿಂದ ನೋಡಲಿಕ್ಕಾಗುವದಿಲ್ಲ. ನೀವು ಇನ್ನು ಮುಂದೆ ನಮ್ಮೊಡನೆ ಇರುವಾಗ ತತ್ವಚರ್ಚೆ ಮಾಡಬೇಡಿರಿ, ಹುಡುಗನ ಮೇಲೆ ಅವುಗಳಿಂದ ಕೆಟ್ಟ ಪರಿಣಾಮಗಳುಂಟಾಗುತ್ತವೆ."

ನಾನು ಉತ್ತರಕೊಟ್ಟದ್ದೇನಂದರೆ:—"ಸಭ್ಯಳೇ, ನಿಮಗೆ ವ್ಯಸನವಾಗುತ್ತದೆ. ನನಗೂ ದುಃಖವಾಗುವದು, ಅದರಿಂದ ನಿಮಗುಂಟಾದ ಮನೋವ್ಯಥೆಯನ್ನು ನಾನು ಗ್ರಹಿಸಬಲ್ಲೆ. ಈ ಅಪ್ರಿಯ ಸ್ಥಿತಿಯನ್ನು ನಾವು ಸುಲಭವಾಗಿ ಅಂತ್ಯಪಡಿಸಬಹುದು. ನನ್ನ ಮಾತುಗಳಿಗಿಂತ ನಾನು ತಿನ್ನುವ ಪದಾರ್ಥಗಳಿಂದ ಹೆಚ್ಚು ಪರಿಣಾಮವಾಗುತ್ತಿರಬಹುದಾಗಿದೆ. ಅದರಿಂದ ಈ ಪ್ರಕಾರ ನಾನು ನಿಮ್ಮಲ್ಲಿ ಬಾರದಿರುವದೇ ಉತ್ತಮ ಪಕ್ಷವು. ಅದರಿಂದ ನಮ್ಮ ಸ್ನೇಹಭಾವದಲ್ಲೇನು ಅಂತರ ಬರುವ ಹಾಗಿಲ್ಲ.

ಇದನ್ನು ಕೇಳಿ, ಯಜಮಾನಿಗೆ ದೊಡ್ಡದೊಂದು ಹೊರೆ ಇಳಿಸಿದಂತಾಯಿತು. "ಉಪಕಾರವಾಯಿತು," ಎಂದು ಅವಳು ಉದ್ಗರಿಸಿದಳು.

(೨೪) ಗೃಹಸ್ಥಾಶ್ರಮವು.

ಇಂಗ್ಲೆಂಡನ್ನು ನೋಡುವದು ನನಗೇನು ಅಪರಿಚಿತ ವಿಷಯವಲ್ಲ. ಆದರೆ ನಾಲ್ಕಾರು ತಾಲುಕಗಳಲ್ಲಿ ಮುಂಬಯಿ ಹಾಗು ಲಂಡನಿನಂತೆ ವಸ್ತಿ ಮಾಡಲು ಸಾಧ್ಯವಿದ್ದಿಲ್ಲ. ಈ ಸಲ ಕೆಲ ಕಾಲ್ಕಗೆ ಇಷ್ಟಗಾಗಿ ಖರ್ಚು ಮಾಡಬೇಕಾಗಿತ್ತು. ಮಾರ್ಕೆಟದಲ್ಲಿ ನನ್ನ ಬೆರಿಸ್ಟರರ ಗೌರವಕ್ಕನುಗುಣವಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸುವ ಅವಶ್ಯಕತೆ ತೋರಿತು. ಅದರಿಂದ ಮುಖ ಕೇರಿಯಲ್ಲಿ ನಾನೊಂದು ಚಿಕ್ಕದಾದ ಹಾಗು ಸುಂದರವಾದ ಮನೆಯನ್ನು ಕೊಂಡೆನು. ಅಲ್ಲಿ ಮನೆಯಲ್ಲಿ ಎಲ್ಲ ಸರಂಜಾಮು ಇತ್ತು. ನನ್ನ ಆಹಾರವು ಸಾಮಾನ್ಯವಿದ್ದು ಇಂಗ್ಲಿಷ ಗೆಳೆಯರಿಗೂ, ಭಾರತೀಯ ಜೊತೆಗಾರರಿಗೂ ನಾನು ಆಗಿಂದಾಗ್ಗೆ ನಿಮಂತ್ರಿಸುತ್ತಿದ್ದದರಿಂದ ಬಿಹಾರ ಖರ್ಚು ಸಾಮಾನ್ಯವಾಗಿ ಹೆಚ್ಚಿಗೆ ತಗಲುತ್ತಿತ್ತು. ಮನೆಯೊಂದು ಕೊಂಡಬಳಿಕ, ಅಲ್ಲಿ ಒಬ್ಬ ನಂಬಿಗಸ್ಥ ಸೇವಕನನ್ನು ಇಡಬೇಕಾಗಿತ್ತು. ಇವರೆ ಯಾರಿಗಾದರೂ ಚಾಕರನಾಗಿ ನಡಿಸಿಕೊಳ್ಳುವ ಸ್ವಭಾವವು ನನಗೆಂದೂ ಇರಲಿಲ್ಲ. ನನಗೊಬ್ಬ ಗೆಳೆಯನಿದ್ದನು, ಆತನು ನನ್ನ ಜೊತೆಗಾರನು. ನನಗೆ ಯಾವಾಗಲೂ ನೆರವಾಗುತ್ತಿದ್ದನು. ಒಬ್ಬ ಅಡಿಗೆಭಟ್ಟನೂ ಇದ್ದನು. ಆತನಿಗೆ ನನ್ನೊಬ್ಬ ಮನೆಯವನಂತೆ ನಡಿಸಿಕೊಳ್ಳುತ್ತಿದ್ದೆವು. ನನ್ನ ಆಫೀಸಿನೊಳಗಿನ ಕಾರಕೂನರು ನನ್ನ ಜೊತೆಗೆ ಉಳಕೊಳ್ಳುತ್ತಿದ್ದರು.

ಈ ಪ್ರಯೋಗವು ಸಾಮಾನ್ಯವಾಗಿ ಯಶಸ್ವಿಯಾಯಿತು ಎಂದು ಹೇಳಬಹುದು. ಆದರೆ, ಕೆಲವಂಶದಿಂದ ನಾನು ಕಹಿಯಾದ ಅನುಭವಗಳನ್ನು ಪಡೆಯಬೇಕಾಯಿತು. ನನ್ನ ಜೊತೆಗಾರನು ಜಾಣನಿದ್ದನು. ಹಾಗೆಯೇ ನಂಬಿಗಸ್ಥನೆಂದು ನಾನು ತಿಳಕೊಂಡಿದ್ದೆ. ಆದರೆ, ಈ ಕಲ್ಪನೆಯು ಸಾಧಾರವಿದ್ದಿಲ್ಲ. ಈತನಿಗೆ ನನ್ನ ಆಫೀಸಿನ ಒಬ್ಬ ಕಾರಕೂನನ ಮೇಲೆ ಅಸೂಯೆ ಹುಟ್ಟಿತು. ಆತನು ಒಂದು ಜಾಲಕವನ್ನು ರಚಿಸಿ, ಕಾರಕೂನನ ಮೇಲೆ ನನ್ನ ಸಂಶಯವನ್ನು ಹುಟ್ಟಿಸಿದನು. ಈ ಕಾರಕೂನರು ವಿಚಿತ್ರ ಸ್ವಭಾವದವರಿದ್ದರು. ತನ್ನ ಮೇಲೆ ನನಗೆ ಸಂಶಯ ಹುಟ್ಟಿತೆಂದು ಆತನಿಗೆ ತಿಳಿದ ಕೂಡಲೆ, ಆತನು ನಂದ ಮನೆಯನ್ನು ಬಿಟ್ಟನು; ನನ್ನೊಡನೆ ಉಳಕೊಳ್ಳುವದನ್ನು ಬಿಟ್ಟನು. ನನಗೆ ಬಹಳ ಮನೋವ್ಯಥೆಯಾಯಿತು. ನಾನು ಆತನಿಗೆ ಅನ್ಯಾಯ ಮಾಡಿದ್ದಿರಬೇಕೆಂದು ನನ್ನ ಮನಸ್ಸಿನಲ್ಲಿ ಯಾವಾಗಲೂ ಆ ವಿಚಾರ ತಲೆದೋರುತ್ತಿತ್ತು.

ಇಷ್ಟರಲ್ಲಿ, ಕೆಲ ದಿನಗಳ ರಜೆ ತಕ್ಕೊಂಡೋ ಅಥವಾ ಬೇರೆ ಕಾರಣದ ಮೂಲಕವಾಗಿಯೋ ಅಡಿಗೆ ಭಟ್ಟನು ನಮ್ಮ ಮನೆಯನ್ನು ಬಿಟ್ಟುಹೋಗಿದ್ದನು. ಬೇರೊಬ್ಬ ಅಡಿಗೆಭಟ್ಟನನ್ನು ಹುಡುಕಬೇಕಾಗಿತ್ತು. ನಮ್ಮ ಹೊಸ ಅಡಿಗೆ ಭಟ್ಟನು ಅಧಮ ನೆಂದು, ನನಗೆ ಆ ಬಳಿಕ ತಿಳಿಯಿತು; ಆದರೆ, ಆತನಿಂದ ನನ್ನ ಕಲ್ಯಾಣವಾಯಿತು. ಆತನು ಬಂದು ೩-೪ ದಿನಗಳಾಗಿದ್ದವು; ನನ್ನ ತಿಳುವಳಿಕೆಯಿಲ್ಲದೆ ನನ್ನ ಮನೆಯಲ್ಲಿ ನಡೆಯುವ ಕೆಲವು ಅತ್ಯಾಚಾರಗಳನ್ನು ಆತನು ಕಂಡುಹಿಡಿದನು,ನನಗೆ ತಕ್ಕ ಜಾಗ್ರತಿ ಕೊಡಬೇಕೆಂದೂ ಆತನು ನಿರ್ಧರಿಸಿದನು. ನಾನು ವಿಶೇಷ ವಿಚಾರ ಮಾಡದೆ ನಂಬುವವನೆಂದು ಮನೆಯವರ ತಿಳುವಳಿಕೆಯಾಗಿತ್ತು; ಅವರೊಡನೆಯೇ ಸ್ಪಷ್ಟ ಸ್ವಭಾವದವನೆಂದೂ ಗ್ರಹಿಕೆಯಾಗಿತ್ತು. ಅಡಿಗೆ ಭಟ್ಟನಿಗೆ ಈ ಅತ್ಯಾಚಾರಗಳನ್ನು ನೋಡಿ ಆಶ್ಚರ್ಯವಾದಂತಾಯಿತು. ದಿನಾಲು ಮಧ್ಯಾಹ್ನ ೧ ಘಂಟೆಗೆ ಫಲಾಹಾರಕ್ಕಾಗಿ ನಾನು ಆಫೀಸಿನಿಂದ ಮನೆಗೆ ಹೋಗುತ್ತಿದ್ದೆನು; ಒಂದು ದಿನ ೧೨ ಘಂಟೆಗೆ ಅಡಿಗೆ ಭಟ್ಟನು ಆಫೀಸಿಗೆ ಉಸುರುಕಟ್ಟುತ್ತ ಬಂದು «ಕೂಡಲೆ ಮನೆಗೆ ಬರಬೇಕು; ಅಲ್ಲಿ ಒಂದು ಚಮತ್ಕಾರವನ್ನು ನೀವು ನೋಡಬಹುದು» ಎಂದು ಹೇಳಿದನು.

ನಾನು ಹೇಳಿದ್ದೇನಂದರೆ. — ಇದ್ಯಾವ ಚಮತ್ಕಾರವು ಎಂಬುದು ಮೊದಲು ನನಗೆ ಹೇಳಬೇಕು. ಅದನ್ನು ನೋಡಲಿಕ್ಕಾಗಿ ಆಫೀಸನ್ನು ಈ ಸಮಯಕ್ಕೆ ಬಿಟ್ಟು ಬರುವದು ಹೇಗೆ?"

«ನೀವು ಈಗ ಬಂದು ನೋಡದಿದ್ದರೆ, ನಿಮಗೆ ಮುಂದೆ ಪಶ್ಚಾತ್ತಾಪವಾಗುವದು; ಇದಕ್ಕಿಂತ ನಾನು ಹೇಳಲೊಲ್ಲೆ."

ಆತನ ಆಗ್ರಹ ನೋಡಿ ನನ್ನ ಮನಸ್ಸೊಪ್ಪಿಯಿತು. ಒಬ್ಬ ಕಾರಕೂನನನ್ನು ಜೊತೆಗೆ ಕರಕೊಂಡು ನಾನು ಮನೆಗೆ ಹೋದೆನು. ಅಡಿಗೆ ಭಟ್ಟನು ಮುಂದಾಗಿ ನಡೆದಿದ್ದನು ಆತನು ನನ್ನನ್ನು ಮೇಲುಪ್ಪರಿಗೆಯ ಮೇಲೆ ಒಯ್ದು ನನ್ನ ಜೊತೆಗಾರನ ಕೋಣೆಗೆ ಬೊಟ್ಟು ತೋರಿಸಿ, «ಈ ಬಾಗಿಲನ್ನು ತೆರೆದು ನೀವೇ ನೋಡಿಕೊಳ್ಳಿ." ಎಂದನು.

ನಾನು ಎಲ್ಲ ಹಕೀಕತನ್ನು ನೋಡಿದೆನು. ನಾನು ಬಾಗಿಲನ್ನು ಬಡಿದೆನು. ಎಲ್ಲರೂ ಸ್ತಬ್ಧರಾಗಿದ್ದರು. ಭಟ್ಟಯಾಗಿ ನೂಕಿದೆನು; ಗೋಡೆಗಳೇ ನಡುಗುವಂತೆ ದೂಡಿದೆನ; ಬಾಗಿಲು ತೆರೆಯಿತು. ಒಳಬದಿಗೆ ಒಬ್ಬ ವೇಶ್ಯೆಯಿದ್ದಳು. ಅವಳಿಗೆ ನಮ್ಮ ಮನೆಯನ್ನು ಒಮ್ಮೆಲೇ ಬಿಟ್ಟು ಹೋಗಲು ನಾನು ಆಜ್ಞಾಪಿಸಿದೆನು; ಇನ್ನು ಮುಂದೆ ಬರಲಾಗದೆಂದೂ ಅವಳಿಗೆ ಹೇಳಿದೆನು.

ಜೊತೆಗಾರನಿಗೆ ನಾನು ಹೇಳಿದ್ದೇನಂದರೆ:—«ಈ ಕ್ಷಣದಿಂದ ನನಗೂ,ನಿನಗೂ ಏನೊಂದೂ ಸಂಬಂಧವಿರುವದಿಲ್ಲ. ನಾನು ಮೋಸಹೋಗಿದ್ದೇನೆ; ಮೂರ್ಖನಂತೆ ನನ್ನ ಗತಿಯಾಗಿದೆ. ನಿನ್ನ ಮೇಲಿಟ್ಟ ನಂಬಿಗೆಯನ್ನು ನೀನು ಈ ಪ್ರಕಾರ ಉಪಯೋಗಿಸಿಕೊಂಡಿದ್ದೀ"

ಇದರಿಂದ ಆತನು ಜಾಗೃತಿ ಹೊಂದುವ ಬದಲು, ನನ್ನ ಮೋಸಗಳನ್ನು ಹೊರಗೆಡಹುವೆನೆಂದು ನನಗೆ ಆತನು ಬೆದರಿಸಹತ್ತಿದನು.

ನಾನು ನುಡಿದದ್ದೇನಂದರೆ:— «ಬಚ್ಚಿಡುವಂಥಾದ್ದು ನನ್ನಲ್ಲಿ ಯಾವದೂ ಇಲ್ಲ. ನೀನು ಬೇಕಾದ್ದನ್ನು ಹೊರಗೆ ಹೇಳಬಹುದು. ಈಗಲೇ ಮಾತ್ರ ನನ್ನನ್ನು ಬಿಟ್ಟು ನಡೆಯಬೇಕು "

ಇದನ್ನು ಕೇಳಿ, ಆತನ ಗರ್ವಿಯು ತೀರ ಕೆಟ್ಟ ಹೋಯಿತು. ಆತನು ಸಿಟ್ಟಾದನು. ಕೆಳಗೆ ನಿಂತುಕೊಂಡ ಕಾರಕೂನನಿಗೆ ನಾನು ಹೇಳಿದ್ದೇನಂದರೆ: «ಪೋಲೀಸ ಸುಪರಿಂಟೆಂಡೆಂಟನಿಗೆ ನನ್ನ ವಂದನೆಗಳನ್ನು ಹೇಳಿ ತಿಳಿಸುವದೇನಂದರೆ — «ನನ್ನ ಜೊತೆಗಾರನೊಬ್ಬನು ಕೆಟ್ಟ ಕೆಲಸ ಮಾಡಿರುವನು. ಆತನನ್ನು ನನ್ನ ಮನೆಯಲ್ಲಿ ಇಟ್ಟುಕೊಳ್ಳಲಿಕ್ಕೆ ನನ್ನ ಇಚ್ಛೆಗೊಲ್ಲ, ಆದರೆ, ಮನೆಯನ್ನು ಬಿಟ್ಟುಹೋಗಲು ಆತನು ಒಲ್ಲಗಳೆಯುತ್ತಾನೆ. ಈ ಕುರಿತು ತಾವು ನನಗೆ ನೆರವಾದರೆ, ಉಪಕಾರವಾದೀತು.'

ನಾನು ಗಂಭೀರನಾಗಿರುವೆನೆಂದು ಆತನಿಗೆ ತಿಳಿಯಿತು. ಪಾತಕ್ಕೈದ ಮೂಲಕ ಆತನ ಧೈರ್ಯವು ಕುಗ್ಗಿತು, ಪೋಲೀಸರಿಗೆ ತಿಳಿಸಬಾರದೆಂದು ಆತನು ನನಗೆ ಪರಿಪರಿಯಿಂದ ಬಿನ್ನೈಸಿಕೊಂಡನು. ತತ್ಕಾಲವೇ ಮನೆಯನ್ನು ಬಿಟ್ಟು ಹೋಗುತ್ತೇನಾಗಿ ಹೇಳಿ ನಡೆದುಬಿಟ್ಟನು.

ಈ ಸಂಗತಿಯಿಂದ ತಕ್ಕ ಕಾಲದಲ್ಲಿ ನನಗೊಂದು ಎಚ್ಚರಿಕೆ ಕೊಟ್ಟಂತಾಯಿತು. ಈ ದುಷ್ಟ ಪ್ರಾಣಿಯಿಂದ ನಾನು ಮೋಸಹೋದೆನೆಂದು ನನಗೆ ಸ್ಪಷ್ಟವಾಗಿ ಹೊಳೆಯಿತು. ಆತನಿಗೆ ಆಶ್ರಯವನ್ನಿತ್ತು, ಸತ್ಕಾರ್ಯಕ್ಕಾಗಿ ದುಷ್ಟ ಸಾಧನವನ್ನು ಕಲ್ಪಿಸಿದಂತಾಯಿತು. ಜಾಲಿ ಮರವನ್ನು ನೆಟ್ಟು ಮಾವಿನ ಹಣ್ಣುಗಳನ್ನು ತಿನ್ನಬಯಸಿದಂತಾಯಿತು ಜೊತೆಗಾರನು ದುರ್ವರ್ತನದವನೆಂದು ನನಗೆ ಗೊತ್ತಿತ್ತು; ಆದರೆ, ಆತನು ನಂಬಿಗಸ್ಥನೆಂದು ನಾನು ತಿಳಕೊಂಡಿದ್ದೆ; ಆತನನ್ನು ಸುಧಾರಿಸಹೋಗಿ, ನಾನು ಕೆಟ್ಟುಹೋಗುವ ಹವಣಿಯಲ್ಲಿದ್ದೆ. ಹಿತಚಿಂತಕ ಸ್ನೇಹಿತರು ಕೊಟ್ಟ ಮುಂಜಾಗ್ರತೆಗಳನ್ನು ನಾನು ಲೆಕ್ಕಿಸಲಿಲ್ಲ, ಮೋಹಾವಿಷ್ಟನಾಗಿ, ಅಂಧನಂತೆ ನಾನು ನಡಕೊಂಡಿದ್ದೆನು.

ಹೊಸ ಅಡಿಗೆ ಭಟ್ಟನಿಲ್ಲದಿದ್ದರೆ, ನನಗೆ ಸತ್ಯಸ್ಥಿತಿಯು ತಿಳಿಯುತ್ತಿದ್ದಿಲ್ಲ. ಈ ಮುಂದೆ ಸ್ವತಂತ್ರವಾಗಿ ನಾನು ನಡಕೊಂಡೆ, ಆದರೆ, ಅದೇ ಜೊತೆಗಾರನ ಜೊತೆಯಿದ್ದರೆ, ಎನ್ನಿಂದ ಹಾಗೆ ನಡಕೊಳ್ಳಬರುತ್ತಿದ್ದಿಲ್ಲ. ಯಾವಾಗಲೂ ಆತನಿಗೆ ನಾನು ಸಮಯವೇಳೆ ಮಾಡುತ್ತ ಕಾಲಹರಣ ಮಾಡಬೇಕಾಗಿತ್ತು ನನ್ನನ್ನು ಆತನು, ಏನೂ ತಿಳಿಯಗೊಡದೆ, ಸುಳ್ಳ ಗೃಹಿಕೆಯನ್ನುಂಟುಮಾಡಿ, ತನ್ನ ವ್ಯಾಪಾರವನ್ನು ನಡಿಸುತ್ತಿದ್ದನು.

ಆದರೆ, ಮೊದಲಿನಂತೆ ನನಗೆ ಪರಮಾತ್ಮನೇ ಅನುಗ್ರಹ ಮಾಡಿದನು. ನಾನು ನಿರ್ಮಲಚಿತ್ತನಿದ್ದೆ. ಅದರಿಂದ ನನ್ನಿಂದ ತಪ್ಪಾದರೂ, ನಾನು ಬದುಕಿದೆನು. ನನಗೆ ಈ ಅನುಭವದಿಂದ ಭವಿಷ್ಯಂಲ್ಲಿ ನಡಕೊಳ್ಳುವ ಮುಂಜಾಗ್ರತೆಯು ಹಟ್ಟಿತು

ಅಡಿಗೆ ಭಟ್ಟನು ದೇವಲೋಕದಿಂದ ಕಳಿದ ಬಂದ ದೂತನೋಪಾದಿಯಲ್ಲಿ ಪರಿಣಮಿಸಿದನು ಆತನಿಗೆ ಅಡಿಗೆ ಮಾಡಬರುತ್ತಿದ್ದಿಲ್ಲ, ಅಡಿಗೆ ಭಟ್ಟನಾಗಿ ನನ್ನಲ್ಲಿ ಆತನು ಬಹಳ ಕಾಲದವರೆಗೆ ಇರಲು ಸಾಧ್ಯವಿರಲಿಲ್ಲ. ಆದರೆ, ಇನ್ನಾರೂ ನನ್ನಲ್ಲಿ ಜಾಗ್ರತೆ ಹುಟ್ಟಿಸುತ್ತಿರಲಿಲ್ಲ. ನಮ್ಮ ಮನೆಯಲ್ಲಿ ಆ ವೇಶ್ಯೆಯು ಈ ಹಿಂದೆ ಅನೇಕಾವರ್ತಿ ಬಂದಿದ್ದಳೆಂದು ನನಗೆ ಮುಂದೆ ತಿಳಿಯಿತು. ಆದರೆ ಈ ಅಡಿಗೆ ಭಟ್ಟನಷ್ಟು ಧೈರ್ಯವು ಯಾರಿಗೂ ಇರಲಿಲ್ಲ ಜೊತೆಗಾರನ ಮೇಲೆ ನನ್ನ ಸಂಪೂರ್ಣ ವಿಶ್ವಾಸವಿತ್ತೆಂದು ಎಲ್ಲರಿಗೂ ಗೊತ್ತಿತ್ತು ಅದೇ ಕ್ಷಣವೇ, ಅಡಿಗೆ ಭಟ್ಟನು ನನ್ನನ್ನು ತೊಲಗುತ್ತೇನೆಂದು ಹೇಳಿ ಹೊರಟನು. ನನಗೆ ಈ ಸೇವೆ ಮಾಡುವದಕ್ಕಾಗಿಯೇ ಆತನನ್ನು ನನ್ನಲ್ಲಿ ಕಳಿಸಲಾಗಿತ್ತೆಂಬಂತೆ ತೋರಿತು.

«ನಿಮ್ಮಲ್ಲಿ ನಾನು ಉಳಕೊಳ್ಳಲಾರೆ. ನೀವು ಸುಲಭವಾಗಿ ಮೋಸ ಹೋಗುತ್ತೀರಿ. ಇದು ನನಗೆ ಹೇಳಿದ ಸ್ಥಳವಲ್ಲ," ಎಂದು ಅಡಿಗೆ ಭಟ್ಟನು ನುಡಿಯಲು, ನಾನು ಆತನಿಗೆ ಹೋಗಗೊಟ್ಟೆನು.

ಈ ಜೊತೆಗಾರನೇ ಕಾರಕೂನನ ದೂರು ಹೇಳಿ ನನ್ನ ಮನಸ್ಸನ್ನು ಕಲುಷಿತ ಮಾಡಿದನೆಂದು ನನಗೀಗ ತಿಳಿಯಿತು. ನನ್ನಿಂದ ಒದಗಿದ ಅನ್ಯಾಯದ ಪರಿಹಾರವನ್ನು ಕಾರಕೂನನೊಡನೆ ನಾನು ಬಹು ಪರಿಯಿಂದ ಮಾಡಿದೆನು ಆತನಿಗೆ ಸಂಪೂರ್ಣವಾಗಿ ಸಮಾಧಾನಪಡಿಸಲು ನನ್ನಿಂದಾಗಲಿಲ್ಲ. ಆ ಕುರಿತು ನಾನು ಯಾವಾಗಲೂ ವ್ಯಥೆ ಪಡುತ್ತಿದ್ದೇನೆ ಒಮ್ಮೆ ಒಡೆದು ಬಂದ ಮೇಲೆ ಅದನ್ನೆಷ್ಟೂ ನೆಟ್ಟಗೆ ಮಾಡಿದರೂ, ಮುಂಚಿನಂತೆ ಅದು ಬರಲಾರದು ಎಂಬುದಿಲ್ಲ.

BATLIBOI'S
Accountancy Training Institute
Recognised by The G. D. A. Board

Offers best training in Accounting, Banking, Company Management and Secretarial Work and Theory and Practice of Commerce

Best staff, Individual attention fee moderate, and payable by instalments.

Send for Prospectus at Yusuf Buildings, Churchgate street Fort, Bombay.

You are invited to make thorough enquiry before joining

TUITION BY POST IS OUR SPECIALITY.

ಸಬ್ ಅಸಿಸ್ಟೆಂಟ ಸರ್ಜನ್

ವ್ಹಿ. ಎಮ್. ವೈದ್ಯ,

ಡೆಂಟಿಸ್ಟ ಮತ್ತು ಅಕ್ಯೂಲಿಸ್ಟ,

ಗವಳೀಗಲ್ಲಿ, ಧಾರವಾಡ.

ಡಾಕ್ಟರ ಕೂಪರ, ಡಿ ಡಿ ಎಸ್ ಮುಂಬಯಿ
ಇವರ ಮೊದಲನೇ ಅಸಿಸ್ಟೆಂಟ

ಹುಬ್ಬಳ್ಳಿ ಬ್ರೆಂಚ - ದುರ್ಗದಬೈಲ ಪ್ರತಿ ದಿವಸ
ಮಧ್ಯಾನ್ಹ ೩ರಿಂದ ಸಂಜೆಯ ೬ ರ ವರೆಗೆ

ಎನೂ ನೋಯಿಸದೆ ಹಲ್ಲುಗಳನ್ನು ತೆಗೆಯುತ್ತೇವೆ. ಕೃತ್ರಿಮ ಹಲ್ಲುಗಳನ್ನು ಯೋಗ್ಯವಾಗಿ ಕೂಡಿಸುತ್ತೇವೆ ಬೆಳ್ಳಿ ಅಥವಾ ಭಂಗಾರದ ಸಿಮೆಂಟದಿಂದ ಹಲ್ಲುಗಳನ್ನು ಕೂಡಿಸುತ್ತೇವೆ ಹಳೇ ಹಲ್ಲುಗಳನ್ನು ದುರುಸ್ತ ಮಾಡುತ್ತೇವೆ ಗೋಲ್ಡ, ಕ್ರೌನ ಮತ್ತು ಬ್ರಿಜ್ಜವರ್ಕ್ ಲಿಸ್ಟ ನೈಸರ್ಗಿಕ ಹಲ್ಲುಗಳನ್ನು ಸ್ವಚ್ಛವಾಗಿ ಮಾಡುವದರಲ್ಲಿ ಬೀಳುವದು ಇದಲ್ಲದೆ, ಅವುಗಳನ್ನು ಸಂಪೂರ್ಣವಾಗಿ ಬೆಳಗೆ ಮಾಡುವದರಲ್ಲಿಯೂ ಒರ ವರು ನಮ್ಮ ದಂತಮಂಜನವನ್ನು ಉಪಯೋಗಿಸಿರಿ

ಬೆಲೆ ಡಬ್ಬಿಗೆ ೪ ಆಣೆ

ಕಣ್ಣು ಚಾಳೀಸ

ಚಾಳೀಸಿಯು ಸಲುವಾಗಿ ಕಣ್ಣುಗಳನ್ನು ಪರೀಕ್ಷಿಸುತ್ತೇವೆ ಕಲ್ಲಹರಳು ಫ್ರೇಮ್ಸ ರೋಲ ಮತ್ತು ನಿಕಲ್ ಇವುಗಳ ಚಾಳೀಸಗಳು ಮತ್ತು ಚಾಳೀಸ ಹಾಕುವ ಪೆಟ್ಟಿಗೆಗಳು, ಫಿಲ್ಡನ್ ಗೋಲ್ಡ ಅಮೆರಿಕನ ಮಾದರಿಯವು ಗಳು ನಮ್ಮಲ್ಲಿ ಸಿಗುತ್ತವೆ ಹಳೇ ಚಾಳೀಸಗಳನ್ನು ದುರುಸ್ತ ಮಾಡುತ್ತೇವೆ ಹಾಗೂ ಕೃತ್ರಿಮ ಕಣ್ಣುಗಳನ್ನು ಸಹ ಕೂಡಿಸುತ್ತೇವೆ.

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಮೋಟಾರಿನ ವ್ಯವಸ್ಥೆ

ಹಾಗೂ

ಅಡಿಗೆ, ಊಟ, ವಾಸದ ಒಳ್ಳೇ ಏರ್ಪಾಡು, ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ –

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ, ಗೋಕರ್ಣದಿಂದ ಕುಮಟಾ, ಶಿರಸಿ, ಹುಬ್ಬಳ್ಳಿ ಗೋಕರ್ಣದಿಂದ ಅಂಕೋಲಾ, ಕಾರವಾರ

ಟಪ್ಪ – ಟಿಕೇಟ ಮುಂದಾಗಿ ಕಾದಿಟ್ಟುಕೊಳ್ಳಬಯಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಮಂಗೇಶರಾವ ಸಹಿತ್ರಾ,
ಮೋಟಾರ ಏಜಂಟ,
ಕುಮಟಾ (ಉತ್ತರ ಕನ್ನಡ)

B. U. Narayanacharya & CO
Chaukamba, BENARES CITY

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ ಜರಿ ಕಣ, ಜರಿ ಸೀರೆ, ಕಾಶ್ಮೀರ ಶಾಲು, ತರವಾರ ದ್ರಾಕ್ಷಿ, ಕಸ್ತೂರಿ ಲಿಂಗಗಳೂ, ಸ್ಫಟಿಕಮಣಿ ಮೊದಲಾದ ವಸ್ತುಗಳು ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ — ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ ಬೀ ಯವರ

ಸುಗಂಧಿ ನಶ್ಯದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು; ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಸ್ತ್ರೀಯರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪ್ರತ್ಯೇಕ ಕಳಿಸಲಾಗದು

ಒಂದು ಡಬ್ಬಿಗೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦, ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ದತ್ತ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಮಾರ್ಕೆಟ್ ಫೋರ್ಟ, ಮದರಾಸ

ಕಿರ್ಲೋಸ್ಕರ ಖುರ್ಚಿಗಳು.



ಇವು ಉಕ್ಕಿನ ತಗಡಿನವು.
ಎತ್ತಿಡಲಿಕ್ಕೆ ಹಗುರ
ಕಟ್ಟಿಗೆ ಖುರ್ಚಿಗಳಿಗಿಂತ
ಬಹು ದಿವಸ ತಡೆಯುತ್ತವೆ.
ಬೆಲೆ ೫ ರೂ
ವರ್ತಕರಿಗೆ ಕಮೀಶನ್

ಕಿರ್ಲೋಸ್ಕರ ಕಬ್ಬಿನ ಗಾಣ.



ನಮ್ಮಲ್ಲಿ ಕಮಲ ಮತ್ತು ಕಿಸಾನ ಗಾಣಗಳು ತಯಾರಾಗುತ್ತವೆ. ಇವುಗಳಲ್ಲಿ ಈ ವರ್ಷ ಹೊಸ ಸುಧಾರಣೆ ಮಾಡಿ ಹಿಂದಿನ ಅಡಚಣೆಗಳನ್ನು ದೂರ ಮಾಡಿದ್ದೇವೆ.

ಸವಿಸ್ತರ ಸಂಗತಿ ಬಗ್ಗೆ ಇಂದೇ ಕಾಗದ ಬರೆಯಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಜನರುಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯತಕ್ಕವರು ಅದನ್ನು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತ್ತು ೧೦ ರೀ ವ್ಹಿ ಪಿ ಖರ್ಚು ಬೇರೆ

ಅಮೃತಾಂಜನ ಡಿಪೋ, ಫೋರ್ಟ ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta

೧೧.

ಕಾನಡಾವೃತ್ತ.

THE KANARA NEWS.

ಸಂಚಿಕೆ ೩.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

...ವರ್ಗಣಿ.
...ಲ್ಲಿ ಅಗಾವು
...ರಾಯಿ 2-4-0
...ರಿಯಿಂದ
... ರೂ. 3-0-0.
...ಂಚೆವೆಚ್ಚ ಸೇರಿ
...ಯಿ 3-2-0
...ಕೆಗೆ 0-1-0

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ 1-0- ಆ ನಂತ್ರ ಪ್ರತಿಸಾಲಿಗೆ 0-2-0
ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೮ ಮಾಹೆ ನವಂಬರ ಸನ್ ೧೯೩೭ ನೇ ಇಸವಿ)

ನನ್ನ ಶಾಸ್ತ್ರೀಯವಾದ (ಬೆಲೆ॥
ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮಾತ್ರ ನನ್ನ ದೇಹದ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುವವರ ಅಭಿಪ್ರಾಯಗಳೂ ಅದರಲ್ಲಿರುವವು ಈ...ನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ...ಬೆಳೆಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವ...ಯುತ್ತಾರೆ ಟಪಾಲು ಹಾಸಲು ೨ ಆಣೆಯ ಸ್ಟಾಂ...ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ...ಉಚಿತವಾಗಿ ರವಾನಿಸಲಾಗುವದು ಈ ಸಮಯವ...ಕಳೆಯದೆ, ತಾಬಡತೋಬ, ಇಂದೇ ಈ...ಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ ಎ,
ರತ್ನಾಭರಣ ವ್ಯಾಪಾರ್, ಕುಮಟಾ.

ಇನ್ನೂ ಗೊತ್ತೇ ಇಲ್ಲವೋ ?

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿಯು

ಬೆಳಗಾಂವ ದಿಂದ ಕಾರವಾರಕ್ಕೆ
ಕಾರವಾರ ದಿಂದ ಬೆಳಗಾಂವಕ್ಕೆ

ಕಳೆದ ಸಪ್ಟಂಬರ ೧ ನೇ ತಾರೀಖಿನಿಂದ ನಿಯಮಿತ ಡೇಲಿ ಮೋಟರ ಸರ್ವ್ಹಿಸ್ ಶುರುಮಾಡಿದ್ದು

ಬೆಳಗಾಂವಕ್ಕೆ ಮುಂಬಯಿ ಮೇಲ ಬಂದ ನಂತರ ಬೆಳಿಗ್ಗಿನ ೧೦॥ ಘಂಟೆಗೆ ಬೆಳಗಾಂವ ಬಿಟ್ಟು,
ಹಳಿಯಾಳ—ಯಲ್ಲಾಪುರ—ಅಂಕೋಲಾ ಮಾರ್ಗವಾಗಿ ಅದೇ ದಿವಸ ಸಾಯಂಕಾಲಕ್ಕೆ
ಕಾರವಾರಕ್ಕೆ ಮುಟ್ಟುವಂತೆಯೂ, ಕಾರವಾರದಿಂದ ಬೆಳಿಗ್ಗಿನ ೭ ಘಂಟೆಗೆ ಹೊರಟು
ಮುಂಬಯಿ ಮೇಲ ಟ್ರೈನಿಗೆ ಸರಿಯಾಗಿ ಬೆಳಗಾಂವಕ್ಕೆ ಮುಟ್ಟುವಂತೆಯೂ
ಫಕ್ತ ಪ್ರಯಾಣಿಕರ ಸೋಯಿಗಾಗಿ ಡೇಲಿ ಮೋಟಾರ ಸರ್ವ್ಹಿಸ ಇಟ್ಟಿ
ದ್ದಿರುತ್ತದೆ. ಟಿಕೀಟಿನ ದರಗಳು ವ ವಿಶೇಷ ಮಾಹಿತಿ ನಮ್ಮ
ಅಲ್ಲಲ್ಲಿಯ ಏಜಂಟರ ಕಡಿಗೆ; ಅಥವಾ ನಮ್ಮ ಹೆಡ್ ಆಫೀಸಿನಲ್ಲಿ.

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ,
ಬೆಳಗಾಂವ

Mahale's expense Mr Mahale writes that he would approach the Commissioner S.D. though he knows he would not get any relief from that quarter It seems, he only wants to try the rights of appeal provided for by law.

This is an instance of executive *fiats*, common in our District Mr. Mahale has submitted these facts to the Royal Commission just to awaken their eyes to the arbitrary and harassing conduct of the officials He pertinently asks how in these circumstances the agriculturists would prosper Mr. Mahale then observes on the difficulties and regours of the Forest Dept, which responsible for many cultivable waste lands in the District He suggests the clearing of forest belts round about cultivable fields and provi[sion] for gathering leaves for manure Mr Mahale also wants to see more arms distributed to the agriculturists for destruction of pigs and tigers, which destroy agricultural produce and cattle Mr Mahale opines the errection of solid walls may prove a permanent remedy but till errections take place distribution of arms is a necessity

पाहिजे !

शेट वधू पाहिजे— गरिब घराण्याची १८ वर्षांतील – गौ० सा० ब्रा० ज्ञातीतील स्मार्त अगर वैष्णव संप्रदायाची – वत्स गोत्रास मुकणारी – शेट निरोगी वधू पाहिजे. अंगावर २००० दोन हजाराचे दागीने शिवाय ३००० तीन हजाराची विम्याची पोलिसी हे तिच्या मालकीची होणार. —विजवर —वय ५१ वर्षे— वार्षिक उत्पन्न स्थावर व इतर मिळून रु० १५०० (पंधराशे) शिवाय स्वतःचे मोठे घर-बागाइत-जमीन वगैरे गरजनी खालील पत्यावर पत्रव्यवहार करावा.

'सदानंद' C/o मॅनेजर, 'केनरा न्यूस,'
वर्तमान त्र - कुमटा. Post- KUMTA.

ಗಳೆಯರ ಗುಂಡಿನ

ಕನ್ನಡ] **ಸ್ವಧರ್ಮ.** [ವಾರಪತ್ರಿಕೆ

ಸಂಪಾದಕರು:- ದ. ರಾ. ಬೇಂದ್ರೆ, ಬಿ. ಎ

ವಾರ್ಷಿಕ ವರ್ಗಣಿ ೩—೦—೦

ಸಮಾಜದಲ್ಲಿ ಶಾಂತಿಪುಷ್ಟಿ, ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿಯು. ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ. ಅಂಥ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊರಟಿರುವ ಸ್ವಧರ್ಮದ ಗುರಿಗೆ ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಕಾರ್ಯದರ್ಶಿ, ಸ್ವಧರ್ಮ ಕಾರ್ಯಾಲಯ
ಮಾಳಮಡ್ಡಿ, ಧಾರವಾಡ

ವಿವಿಧ ಸಂಗ್ರಹ.

ರಾವಣನಿಗೆ ಬಿಕ್ಕೆಯ ಬಯಕೆ.

ವಿಖ್ಯಾತ ರಾವಣನಿಗೆ ಭಿಕ್ಷೆ ಬೇಡುವ ಮಹತ್ವಾಕಾಂಕ್ಷೆಯಾಯಿತೆಂದು ಹೇಳುತ್ತಾರೆ. ನಮ್ಮಲ್ಲಿಯ ಸಂಸ್ಥಾನಿಕರಿಗೂ ಇಂಥ ದುರಾಶೆಗಳು ಹುಟ್ಟುತ್ತಿವೆ. ಯುರೋಪ ಖಂಡವೆಂದರೆ, ನಮ್ಮಲ್ಲಿಯ ಸಂಸ್ಥಾನಿಕರಿಗೆ ಅದೊಂದು ವೈಕುಂಠಪುರಿ. ಅನೇಕ ಸಂಸ್ಥಾನಿಕರು ಶರೀರಸ್ವಾಸ್ಥ್ಯಕ್ಕಾಗಿ ಅತ್ತ ಕಡೆ ತೆರಳುವರು. ಕ್ರಿಕೆಟ್ ಮೊದಲಾದ ಪಂದ್ಯಾಟಗಳಿಗಾಗಿ ಅನೇಕರು ಅಲ್ಲಿ ಹೋಗುತ್ತಾರೆ. ಅಲ್ಲಿಯ ಪಾರ್ಲಿಮೆಂಟಿನ ಸಭಾಸದರಾಗಿ ಮೆರೆಯಬೇಕೆಂದೂ ಕೆಲವರಿಗೆ ಆಶೆಯಿದೆ. ಅಲವಾರದ ಮಹಾರಾಜರು ಮೀನು ಹಿಡಿಯುವದಕ್ಕಾಗಿ ವಿಲಾಯತಿಗೆ ತೆರಳಿದರಂತೆ! ಇದೆಂಥ ದುರಾಶೆ! ಹಿಂದುಸ್ಥಾನದಲ್ಲಿ ಅಗಾಧವಾದ ಸಾಗರದಾಯಿಸು ಹಬ್ಬಿಕೊಂಡಿರೆ ವಾಗ ವಿಲಾಯತಿಗೆ ಮೀನು ಹಿಡಿಯುವದಕ್ಕಾಗಿ ಹೋಗುವದು ನಮ್ಮ ದೇಶದ ದುರ್ಭಾಗ್ಯವಲ್ಲವೇ? ಸಂಸ್ಥಾನಿಕರ ಇಂಥ ಹವ್ಯಾಸಗಳಿಂದ ಲಕ್ಷಾವಧಿ ರೂಪಾಯಿಗಳ ನಾಶವಾಗುತ್ತಿದೆ. ವಾರ್ಧಕ್ಯದಿಂದೊದಗುವ ಬುದ್ಧಿಭ್ರಂಶದ ಪರಿಣಾಮವೇನಿದು!

***

ಬ್ರಿಟಿಶ ನ್ಯಾಯದೇವಿಯ ಅಕ್ಕರತೆ.

ಸಿಂಹಲದ್ವೀಪದ ಯಾನೆ ಲಂಕೆಯೊಳಗಿನ ಕಥೆ! ಒಬ್ಬನು ತನ್ನ ಅಣ್ಣನ ಭಾರ್ಯೆಗೆ ಹೊಡೆದುಕೊಂಡ ಬಗ್ಗೆ ಫೌಜದಾರಿ ಮೊಕದ್ದಮೆಯಾಗಿತ್ತು. ವಿಚಾರದ ವೇಳೆ ಅತನಿಗೆ ಹಾಜರಾಗಲು ಅವಕಾಶವಾಯಿತು. ಅರ್ಧ ತಾಸಿನ ವರೆಗೆ ಮೆಜಿಸ್ಟ್ರೇಟರು ಆಕಳಿಸುತ್ತ ನಿರೀಕ್ಷಣೆಯ ಮೇಲೆ ಕೂತುಕೊಂಡರು, ಅಷ್ಟರಲ್ಲಿ ಮೆಜಿಸ್ಟ್ರೇಟರಿಗೆ ಒಂದು ಸುದ್ದಿ ಬಂತು. ಪೋಲೀಸರು ಆರೋಪಿಗೆ ಹಿಡಕೊಂಡು ಬರುತ್ತಿದ್ದರು; ಅಷ್ಟರಲ್ಲಿ ಆರೋಪಿಗೆ ಬಹಳ ಹಸಿಯುವ ಹಂಬಲವಾದ್ದರಿಂದ ಆರೋಪಿಗೆ ತರಲಿಕ್ಕೆ ಇನ್ನೂ ಅವಕಾಶವಿದೆಂದು ಸುದ್ದಿಗಾರರು ಹೇಳಿದರು, ಮೆಜಿಸ್ಟ್ರೇಟರಿಗೆ ಎಳ್ಳಷ್ಟೂ ಸಿಟ್ಟು ಬರಲಿಲ್ಲ; ನಗುತ್ತ ಎರಡನೇ ಮೊಕದ್ದಮೆಯನ್ನು ಕರೆದರು. ಇಷ್ಟು ಭಾಗ್ಯವಂತ ಆರೋಪಿ ಯಾರಿರುವರು? ಒಬ್ಬ ಯುರೋಪಿಯನ್ನರು, 'ಫೋರಾಂಚೆ ಸರ್ಕಲ ಥೀಅರ.'

***

ಬ್ರಾಹ್ಮಣರ ಅಸ್ಪೃಶ್ಯತಾ ಪ್ರವರ್ತನೆ.

ಮಲಬಾರದೊಳಗಿನ ಇಝುವಾ ಜಾತಿಯ ಅಸ್ಪೃಶ್ಯರು ಕೊನೆಗೆ ಕಾಲಾವಧಿಯ ಬ್ರಾಹ್ಮಣರ ಕೈಯೊಳಗಿಂದ ಪಾರಾದರು. ಇಝುವಾರವರಿಗೂ ಕಾಲಾವಧಿಯ ಬ್ರಾಹ್ಮಣರಿಗೂ ಸಾರ್ವಜನಿಕ ಬೀದಿಗಳ ಮೇಲೆ ಅಡ್ಡಾಡುವದಕ್ಕಾಗಿ ದೊಡ್ಡದೊಂದು ವಾದವಾದ ನಡೆದಿತ್ತು. ಆರ್ಯ ಸಮಾಜದವರ್ಯಾರೂ ವಾರದವರಿಗೆ ತಮ್ಮ ದೀಕ್ಷೆಯನ್ನಿತ್ತು, ಪಾವನ ಮಾಡಿದರು. ಸಮಾಜದವರಿಗೆ ಸಾರ್ವಜನಿಕ ಮಾರ್ಗಗಳಲ್ಲಿ ಪ್ರವೇಶಿಸಲು ಆತಂಕವಿಲ್ಲದ್ದರಿಂದ ಬ್ರಾಹ್ಮಣ ಹಾಗೂ ಇಝುವಾರವರೊಳಗಿನ ಕಲಹ ಬೇಗನೆ ಪರಿಹಾರ ಹೊಂದುವದೆಂದು ಅವರ ಕಲ್ಪನೆ ಇತ್ತು. ಆದರೆ, ಬ್ರಾಹ್ಮಣರು ಈ ಆರ್ಯರಿಗೆ ಪ್ರತಿಬಂಧ ಮಾಡುತ್ತಿದರು. ಕೊನೆಗೆ ಇಝುವಾರವರು ಬೇಸತ್ತು ಹಿಂದೂ ಸನಾತನ ಧರ್ಮವನ್ನೇ ತ್ಯಜಿಸಿ, ಕ್ರೈಸ್ತ ಧರ್ಮವನ್ನು ಅಂಗೀಕರಿಸಿದರು. ಈಗ ಸದ್ಯಕ್ಕೆ ೩೦ ಮಂದಿಗಳು ಕ್ರೈಸ್ತರಾಗಿರುತ್ತಾರೆ. ಇನ್ನೂ ಅನೇಕರು ಧರ್ಮಾಂತರ ಹೊಂದುವ ತಯಾರಿಯಲ್ಲಿರುವರು. ಕ್ರೈಸ್ತರಾದ ಬಳಿಕ, ಇಝುವಾರವರಿಗೆ ಸಾರ್ವಜನಿಕ ಬೀದಿಗಳಲ್ಲಿ ಅಡ್ಡಾಡಲಿಕ್ಕೆ ಪ್ರತಿಬಂಧ ಮಾಡಲು, ಬ್ರಾಹ್ಮಣರ ಹಣೇಬರಹದಲ್ಲಿಲ್ಲ. ಅಂದ ಬಳಿಕ, ಇಝುವಾರವರಿಗೆ ಸಾರ್ವಜನಿಕ ಬೀದಿಗಳಲ್ಲಿ ಪ್ರವೇಶಕೊಡಲು ಅಡ್ಡಿ ಮಾಡುವದರಿಂದ ಸನಾತನ ಧರ್ಮಕ್ಕೆ ಲಾಭವೇನಾಯಿತು? ಸ್ವಧರ್ಮಬಾಂಧವರಿಗೆ ಧರ್ಮತ್ಯಾಗ ಮಾಡಲು ಅವರು ಹೇಳಿದ ಪಾಪಕ್ಕೆ ಗುರಿಯಾಗದೇಕಿದ್ದವೇ? ಇನ್ನಾದರೂ ಬ್ರಾಹ್ಮಣರು ವಿವೇಕವನ್ನು ತಳೆದು ಇಝುವಾರವರ ಮೇಲೆ ನಡೆಯುವ ದ್ವೇಷದ ಅನ್ಯಾಯವನ್ನು ಪರಿಹರಿಸಲಿ. ಅಸ್ಪೃಶ್ಯರ ಮೇಲಿನ ಇಂಥ ಅನ್ಯಾಯಗಳಿಂದಲೇ ಸನಾತನ ಧರ್ಮದ ಪ್ರತಿಷ್ಠೆಯು ಕುಗ್ಗುತ್ತ ನಡೆದಿದೆ.

***

ಸರಕಾರಿ ವಕೀಲರು ಸರಕಾರಿ ಅಧಿಕಾರಿಗಳಲ್ಲ.

ನಮ್ಮ ದಕ್ಷಿಣಭಾಗದ ಕಡೆಯಿಂದ ವರಿಷ್ಠ ಕಾಯಿದೆ ಕೌನ್ಸಿಲಿಗೆ ಒಬ್ಬ ಸಭಾಸದರನ್ನು ಆರಿಸಿ ಕಳಿಸಬೇಕಾಗಿದೆ. ಅದಕ್ಕಾಗಿ ಮೂರು ಉಮೇದ್ವಾರರು ನಿಂತುಕೊಂಡಿದ್ದರು. ಶ್ರೀ| ದತ್ತೋಪಂತ ಬೆಳವಿ, ಹುಲಕೋಟಿ, ಹಾಗು ಡಿ. ಎಂ. ಪಾಟೀಲರವರು. ರಾ| ಪಾಟೀಲರವರು ತಮ್ಮ ಉಮೇದವಾರಿಯನ್ನು ಹಿಂತೆಗೆದುಕೊಂಡು ಹಿಮ್ಮೆಟ್ಟಿದ್ದರಿಂದ, ಮೇಲಾಟವು ಶ್ರೀ| ಬೆಳವಿ-ಹುಲಕೋಟಿಯವರೊಳಗೆ ನಡೆಯುವದು. ಸರಕಾರಿ ಅಧಿಕಾರಿಗಳು ಇಲೆಕ್ಷನಿನಲ್ಲಿ ಉಮೇದ್ವಾರರಾಗಿ ನಿಲ್ಲಬಾರದೆಂದು ನಿಯಮವಿದೆ. ರಾ| ಹುಲಕೋಟಿಯವರು ಸರಕಾರಿ ವಕೀಲರಿದ್ದಾರೆ. ಸರಕಾರಿ ವಕೀಲರು ಸರಕಾರಿ ಅಧಿಕಾರಿಗಳ ವ್ಯಾಖ್ಯೆಯಲ್ಲಿ ಸೇರುತ್ತಾರೆಂದು ರಾ| ಬೆಳವಿಯವರು ಆಕ್ಷೇಪಿಸಿ, ಅವರ ಉಮೇದವಾರಿಯನ್ನು ರದ್ದು ಮಾಡಬೇಕೆಂದು, ಪ್ರಾಂತಿಕ ಸರಕಾರದ ವರೆಗೂ ತಕರಾರ ನಡಿಸಿದರು. ಆದರೂ ಸರಕಾರಿ ವಕೀಲರು ಸರಕಾರಿ ಅಧಿಕಾರಿಗಳಲ್ಲವೆಂದು, ಸರಕಾರವು ನಿರ್ಣಯಿಸಿ, ರಾ| ಹುಲಕೋಟಿಯವರ ಉಮೇದವಾರಿಯನ್ನು ಎತ್ತಿಹಿಡಿದಿದೆ. ನವಂಬರ ೧೮ ನೇ ತಾರೀಖಿಗೆ ಚುನಾವಣೆಯು ನಡೆಯುವದು. ಸರಕಾರಿ ವಕೀಲರು ಪ್ರಜೆಗಳ ವಕೀಲಿ ಮಾಡುವದು ವಿಸಂಗತ. ಆದರಿಂದ ಮತದಾರರೆಲ್ಲರೂ ರಾ| ಬೆಳವಿಯವರಿಗೇ ಮತಕೊಡುವರೆಂಬುದರಲ್ಲಿ ಸಂದೇಹವೇನಿಲ್ಲ. ಮಿಗಿಲಾಗಿ ರಾ| ಬೆಳವಿಯವರು ರಾಷ್ಟ್ರೀಯ ಸಭೆಯ ಮಹಾರಥಿಗಳು. ಅವರಿಗೆ ಮತ ಕೊಡುವದರಿಂದ ನಮ್ಮ ರಾಷ್ಟ್ರಾಭಿಮಾನವು ವ್ಯಕ್ತವಾಗುವಂತಿದೆ. ರಾಷ್ಟ್ರೀಯ ಸಭೆಯ ಪ್ರತಿಷ್ಠೆಯೂ ಬೆಳೆಯುವದು.

— ಭರತ ಭೂಮಿಯ ಹಿತಚಿಂತಕರಾದ ಮಿ| ಹೊರ್ನಿಮನ್‌ರ “ಇಂಡಿಯನ್ ನೇಶನಲ್ ಹೆರಲ್ಡ” ಪತ್ರಿಕೆಯು ಕಳೆದ ೭ನೇ ತಾರೀಖಿನಿಂದ ಹೊರಡಹತ್ತಿದೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂಪಾಯಿ ೩೦-೦-೦.

— ಮದ್ರಾಸದೊಳಗಿನ ಪ್ರಸಿದ್ಧ ‘ಹಿಂದೂ’ ಪತ್ರಿಕೆಯ ಸಂಪಾದಕರಾದ ಶ್ರೀ|| ಎಸ್. ರಂಗಸ್ವಾಮಿ ಅಯ್ಯಂಗಾರರವರು ಮದನಪಲ್ಲಿಯ ಕ್ಷಯವಿಕಾರದಿಂದ ಸ್ವರ್ಗಸ್ಥರಾದರು. ಪತ್ರಿಕಾಪ್ರಪಂಚದಲ್ಲಿ ದೊಡ್ಡದೊಂದು ಕೊರತೆ!

ಶ್ರೀ ಕಾತ್ಯಾಯಿನೀ ದೇವಸ್ಥಾನ.

ಶ್ರೀ ದೇವರ ಭಾಕ್ತರೊಬ್ಬರು ಬರೆಯುವದೇನಂದರೆ.— ಶ್ರೀ ಕಾತ್ಯಾಯಿನೀ ದೇವಿಯು ಗೋವೆಯೊಳಗಣ ಕಾಂಕೋಣ ಗ್ರಾಮದವಳೆಂದು ಹೇಳುತ್ತಾರೆ. ಅಲ್ಲಿಯ ಬಳಿ ಸಮುದ್ರ ದಂಡೆಯ ಹತ್ತರ ಕೆಲವು ಅಂಬಿಗರಿಗೆ ಅವಳು ದೊರಕಿದಳಂತೆ! ಅಂಬಿಗರಿಗೆ ಅವಳನ್ನು ನೋಡಿ ಏನೆಂದು ತಿಳಿಯಲಿಲ್ಲ. ಅವರು ಅವಳನ್ನು ಒಳಿಯಲ್ಲಿರುವ ಒಂದು ದ್ವೀಪದ ಮೇಲೆ ಇಟ್ಟು, ಬಿಟ್ಟರೂ ಜನರು ಆ ದ್ವೀಪದ ಮೇಲೆ ಸೊಪ್ಪು ಕೊಯ್ಯಲಿಕ್ಕೆ ಹೋಗುತ್ತಿದ್ದರು. ಒಮ್ಮೆ ಇವಳು ಸೊಪ್ಪಿನ ಬುಟ್ಟಿಯಲ್ಲಿ ಈ ಗ್ರಾಮಕ್ಕೆ ಬಂದಳಂತೆ! ಗ್ರಾಮಕ್ಕೆ ಬಂದು ಅವಳು ತನ್ನ ಮಹಿಮೆಯನ್ನು ತೋರಿಸಲಾರಂಭಿಸಿದಳು. ವರ್ತಕನೊಬ್ಬನ ಹಡಗವು ದಿಕ್ಕು ತಪ್ಪಿ ಎಲ್ಲಿ ಹೋಗಿತ್ತೋ ಏನೋ! ಅವನು ಶ್ರೀ ದೇವಿಯನ್ನು ಪ್ರಾರ್ಥಿಸಿಕೊಂಡನು: ಹಡಗವು ಸುರಕ್ಷಿತವಾಗಿ ಬಂದು ಮುಟ್ಟಿದರೆ ಹರ್ಣೆ ಮಾಬಾಗಿಯಲ್ಲಿ ಗುಡಿ ಕಟ್ಟಿಕೊಡುತ್ತೇನೆಂದು ಆತನು ಹೇಳಿಕೊಂಡನು. ಆ ವರ್ತಕನು ಕಟ್ಟಿಕೊಟ್ಟ ಗುಡಿಯನ್ನೇ ನಾವು ಎಲ್ಲರೂ ಈಗ ನೋಡುತ್ತೇವೆ. ಹೀಗೆ ಶ್ರೀ ದೇವಿಯ ಮಹಿಮೆಯಿಂದ ಸಾವಿರಾರು ಭಕ್ತರು ಶ್ರೀ ದೇವಿಯ ಭಕ್ತರಾಗಿರುವರು.

ಶ್ರೀ ದೇವಿಯ ಮಹಿಮೆಯು ಈ ಪ್ರಕಾರವಿದ್ದರೂ, ಶ್ರೀ ದೇವಸ್ಥಾನದ ಆಡಳಿತೆಯು ಮಾತ್ರ ತೀರ ಅವ್ಯವಸ್ಥೆಯಲ್ಲಿರುವದು. ಮಹಾಜನರೊಳಗೆ ಯಾವದರ ಕುರಿತೆ ಕಲಹಗಳುಂಟಾದವು. ಒಂದು ಪಕ್ಷದವರು ಬೇರೆ ಅರ್ಚಕರನ್ನೇ ನೇಮಿಸಿದ್ದರು. ಈ ಅರ್ಚಕರ ಕಾಲದಲ್ಲಿ ಶ್ರೀ ದೇವಸ್ಥಾನದ ಭಜನೆಗೆ ಹೋಗದೇ ಇರುವರೆ ಭಕ್ತರು ಘೋರ ತಪಸ್ಸು ಮಾಡಬೇಕು. ಅರ್ಚಕರಿಗೆ ಶೋಧಿಸಿ ತೆಗೆದು ಘೋರ ಪ್ರಸಂಗವು ಭಕ್ತರ ಮೇಲೆ ಬರುತ್ತದೆ.

ಶ್ರೀ ದೇವಸ್ಥಾನಕ್ಕೆ ಆಕಳೋಣೆಯು ಮಹಾರ ಹಾಗು ಅವ್ವರ್ಸೆಯ ಮಹಾನು ಹೀಗೆ ಭೂಮಿ ಮೊದಲೇ ನಡೆದಿದ್ದಾರೆ. ಆಕೋಣೆಯ ಮಹಾರರೂ ಅವ್ವರ್ಸೆಯ ಮಹಾರರೊಡನೆ ಅಸಹಕಾರ ಮಾಡುತ್ತಿರುವರು. ಮಹಾಜನರು ಒಬ್ಬನ ಬಂಡಾರದ ಹಣದ ಬಾಕಿ, ಒಬ್ಬ ಪ್ರಾಮಿಸರೀ ನೋಟಿನ ವ್ಯಾಜ ತೀರಿದರೂ, ಆ ಕುರಿತು ಆಡಳಿತೆಯು ಸುಮ್ಮನೆ ಉಳಕೊಂಡಿರುವರು. ಕೆಲವು ಮಹಾಜನರು ಶ್ರೀ ದೇವಸ್ಥಾನದ ದುರುಸ್ತಿಗಾಗಿ ಮರ ಊರಿಗೆ ಹೋಗಿ ಭಕ್ತರಿಂದ ಕಡೆಯಿಂದ ವಂತಿಗೆ ತೆಗೆದು ತಮ್ಮ ತಮ್ಮ ಮನೆಗಳನ್ನು ನೆಟ್ಟಗೆ ಮಾಡಿಕೊಳ್ಳುತ್ತಾರಂತೆ!

ಅಲ್ಲಿಯ ಭಕ್ತರೆಲ್ಲರು ಒಕ್ಕಟ್ಟಾಗಿ ಶ್ರೀ ದೇವಸ್ಥಾನದೊಳಗಣ ಅವ್ಯವಸ್ಥೆಯನ್ನು ಹೋಗಲಾಡಿಸಬೇಕಾಗಿ ಪ್ರಾರ್ಥನೆ. ಶ್ರೀ ದೇವಸ್ಥಾನದ ಆಡಳಿತೆಯವರು ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಬೇಕಾಗಿಯೂ ಭಕ್ತರ ಹೇಳಿಕೆಯಿದೆ.—

(೧) ಶ್ರೀ ದೇವರಿಗೆ ಅವ್ವರ್ಸೆ, ಹಾರವಾಡೆ, ಆಂಕೋಣ ಈ ಮೂರು ಗ್ರಾಮಗಳಲ್ಲಿ ಭೂಮಿಯಿರುವವು. ಅವ್ವರ್ಸೆ ಹಾರವಾಡೆ ಗ್ರಾಮದೊಳಗಿನ ಉತ್ಪನ್ನದಿಂದ ಶ್ರೀ ದೇವರ ವಿನಿಯೋಗಗಳು ಸಾಗುವವಾಗಿವೆ. ಆಂಕೋಣ ಭೂಮಿಯ ಉತ್ಪನ್ನವು ಎಲ್ಲಿ ಹೋಗುವದು?

(೨) ಕಳೆದ ಹತ್ತು ವರುಷಗಳ ಲೆಕ್ಕಾಚಾರವನ್ನು ಪಂಚರಿಗೆ ಒಪ್ಪಿಸಲು ಆಡಳಿತೆಯ ಮಹಾಜನರು ಸಿದ್ಧರಿರುವರೇನು?

(೩) ಪ್ರಾಮಿಸರಿ ನೋಟುಗಳ ಮೇಲೆ ಹಿಂದು ಸಾಲವು ವಸೂಲಾಗಿರುವದೇನು? ವಸೂಲಾಗಿದ್ದರೆ ಪ್ರಾಮಿಸರಿ ನೋಟುಗಳ ವ್ಯಾಜ ಇರುವದೇನು?

(೪) ಮೊಕ್ತೇಸರರು ಯಾವ ಮಹಾಜನರು ಈಗಿನ ಅರ್ಚಕರನ್ನು ತೆಗೆದು ಹೊಸ ಅರ್ಚಕರನ್ನಿಡಲಿಕ್ಕೆ ತಯಾರಿರುವರೋ ಹೇಗೆ?

(೫) ವರ್ಗಣೆಯಿಂದ ಸಂಗ್ರಹಿಸಿದ ಹಣದ ತಪಶೀಲು ಎಲ್ಲಿದೆ? ಇತ್ಯಾದಿ.

ಕಾನಡಾಜಿಲ್ಲಾ ಪ್ರಾಥಮಿಕ ಶಿಕ್ಷಕರ ಎಂಟನೆಯ ಅಧಿವೇಶನ, ಸಿದ್ದಾಪುರ.

ಈ ತಿಂಗಳ ೧೦ನೇ ತಾರೀಖು ಶ್ರೀಯುತ ಶಿವರಾಮಶಾಸ್ತ್ರಿ ಬಿ.ಎ.,ಎಲ್.ಎಲ್.ಬಿ., ಹೊನ್ನಾವರ ಇವರ ಅಧ್ಯಕ್ಷತೆಯಲ್ಲಿ ಸಡಗರದಿಂದ ನೆರವೇರಿತು. ಸ್ವಾಗತಾಧ್ಯಕ್ಷ ಶ್ರೀಯುತ ದೇವರವರು ಸಮಯೋಚಿತ ಭಾಷಣದಿಂದ ಸಭಿಕರ ಸ್ವಾಗತ ಮಾಡಿದ ನಂತರ ಅಧ್ಯಕ್ಷರು ಪ್ರಾಸ್ತಾವಿಕ ಭಾಷಣದಲ್ಲಿ ನುಡಿದದ್ದೇನಂದರೆ:—

ಶಿಕ್ಷಕ ಸಂಘದ ಧ್ಯೇಯ.

ಶಿಕ್ಷಕರು ತಮ್ಮ ಹಿತವನ್ನು ಸಾಧಿಸಿಕೊಳ್ಳುವದರ ಜೊತೆಗೆ ಅವರ ಕೈಕೆಳಗಿನ ಮಕ್ಕಳ ಹಿತವನ್ನೂ ಸಾಧಿಸಬೇಕು. ಹುಡುಗರ ಶೀಲವನ್ನುಂಟುಮಾಡುವ ಕೆಲಸವು ಶಿಕ್ಷಕರದು. ಸಂಘದ ಧ್ಯೇಯಗಳಲ್ಲಿ ಇದೊಂದಾಗಿರಬೇಕು. ಇಂಥ ಪ್ರಸಂಗದಲ್ಲಿಯೂ ಈ ಧ್ಯೇಯವನ್ನು ಬಿಡದೆ ದಿನೇ ದಿನೇ ಸಘಂಟ ವಿಸ್ತೃತಿಯನ್ನು ಮಾಡಲಿಕ್ಕೆ ಯತ್ನಿಸಬೇಕು.

ಈಗಿನ ಶಿಕ್ಷಣಪದ್ಧತಿ.

ಶಿಕ್ಷಣ ಪದ್ಧತಿಗಳಲ್ಲಿ ಇಂಥದೊಂದು ವಿಶಿಷ್ಟ ಪದ್ಧತಿಯೇ ಸರಿಯಾದ್ದೆಂದು ಹೇಳಲಾಗದು. ಸಾಧ್ಯ ಎಂಥ ದೃಷ್ಟಿಯಿಂದ ಮಕ್ಕಳ ಪದ್ಧತಿಯು ಅನುಕೂಲವಾಗಿದ್ದರಿಂದ ನಮ್ಮ ಆರ್ಯ ಸಂಸ್ಕೃತಿಯು ಲೋಪವಾಗದೆ ಉಳಿದಿರುವದು. ಈಗಿನ ಶಿಕ್ಷಣ ಪದ್ಧತಿಯಲ್ಲಿರುವ ದೋಷವಿದು! ಆ ಜೀವಂತ ಗುರುಕುಲ ಪದ್ಧತಿಯು ಆಚರಣೆಯನ್ನು ಈಗಲಾದರೂ ಮಾಡಲಾಗುವದಿಲ್ಲ. ಪಾಶ್ಚಾತ್ಯ ಶಿಕ್ಷಣ ಪದ್ಧತಿಗಳಲ್ಲಿಯ ಉತ್ತಮೋತ್ತಮವಾದವುಗಳನ್ನು ಕೊಂಡು ಹಿಡಿದು ಈಗಿನ ಕಾಲಮಾನಕ್ಕನುಗುಣವಾದ ಒಂದು ಪದ್ಧತಿಯನ್ನು ಪ್ರಚಾರದಲ್ಲಿ ತರುವದು ಯೋಗ್ಯವು. ಇದು ಧುರೀಣರಂಥ ವಿದ್ವಾಂಸರ ಕೆಲಸವಾಗಿದೆ. ದಿವಾಣದ ಕೈಯಲ್ಲಿ ಶಿಕ್ಷಣದ ಕೆಲಸವನ್ನೊಪ್ಪಿಸಿದ್ದರೂ ಅದರಿಂದ ಹಿತವಾಯಿತೆಂದು ನಾನು ತಿಳಿಯುವದಿಲ್ಲ.

ಗುರುಕುಲ ಪದ್ಧತಿಯಂತೆ ಈಗ ಅನಿಯಂತ್ರಿತವಾದ ಸ್ವತಂತ್ರ ವಿಚಾರಗಳಿಗೆ ಮಕ್ಕು ಅಲ್ಲದೆಯೂ ಪರಿಸ್ಥಿತಿಗನುಗುಣವಾದ ಶಿಕ್ಷಣ ದೊರೆಯುವದಿಲ್ಲ. ಸ್ಕೂಲ ಬೋರ್ಡಿಗೆ ಶಿಕ್ಷಣದ ಕೆಲಸವನ್ನು ವಹಿಸಿದ್ದರೂ ಅದಕ್ಕೂ ತಕ್ಕ ಸ್ವಾತಂತ್ರ್ಯವಿರುವದಿಲ್ಲ. ಮೊದಲು ಬ್ರಿಟಿಶ ಸರಕಾರದಿಂದ ಸ್ವತಂತ್ರ ವಾತಾವರಣದಲ್ಲಿ ಬೆಳೆದ ವಿದ್ವಾಂಸರು ಎಲ್ಲ ಕಡೆಯಲ್ಲಿಯೂ ಇರುತ್ತಿದ್ದದರಿಂದ ಎಲ್ಲರೂ ಸಚ್ಚೀಲರಾಗುತ್ತಿದ್ದರು. ಈಗ ೧೦೦ ಕ್ಕೆ ೧೦ ಜನರಂತೆ ಸುಶಿಕ್ಷಿತರು! ಆಗ ೧೦೦ ಕ್ಕೆ ೧೫ ಜನರಂತೆ ಇದ್ದರೂ. ಹಿಂದಿನ ಸಾಮ್ರಾಜ್ಯದ ನಂತರ ೫೦ ವರ್ಷ ತಿರುಗಿ ಇಂಥ ಗುಣಗಳ ಶಿಕ್ಷಣಗಳ ಮಧ್ಯದ ಗೊಂದಲದಲ್ಲಿ ನಮ್ಮ ಆರ್ಯ ಸಂಸ್ಕೃತಿಯು ಮುಗ್ಗರಿಸಿತು. ಪಾಶ್ಚಾತ್ಯಭಾಷೆಗಿದ್ದ ಪ್ರಾಧಾನ್ಯವೇ ಈಗ ಇಲ್ಲದಂತಾಗಿದೆ. ಈ ದೋಷವು ಈಗಿನ ಪದ್ಧತಿಯದೇ! ಶಿಕ್ಷಣ ವಿಷಯದಲ್ಲಿರುವ ನಿರ್ಬಂಧವೇ ಇದಕ್ಕೆ ಕಾರಣ! ಇದನ್ನು ಯಾರೂ ಲಕ್ಷಿಸುವದಿಲ್ಲ. ಆದರೆ ಜಿಲ್ಲೆಯ ಮಟ್ಟಿಗಾದರೂ ಸ್ವತಂತ್ರ ಶಿಕ್ಷಣ ಪದ್ಧತಿಯನ್ನು ಪ್ರಚಾರದಲ್ಲಿ ತರುವದರಿಂದ ಹಿತವು.

ವಯೋಮಾನಕ್ಕೆ ತಕ್ಕ ಶಿಕ್ಷಣ.

ಎಳೆ ಮಕ್ಕಳ ವಯೋಮಾನಕ್ಕೆ ತಕ್ಕಂತೆ ಅವರ ಮಾನಸಿಕ ಶಕ್ತಿಯು ವಿಕಾಸವಾಗುವಂತೆ ಈಗಿನ ಶಿಕ್ಷಣ ಪದ್ಧತಿಯಲ್ಲಿ. ೫ರಿಂದ ೧೪ ವರ್ಷಗಳ ವರೆಗೆ ಭಾವನಾಪ್ರಧಾನ ವಿಷಯಗಳನ್ನಷ್ಟೇ ಕಲಿಸಬೇಕು. ಈ ಅವಧಿಯಲ್ಲಿ ಮಾತೃಭಾಷೆಯಿಂದಲೇ ಕಲಿಯತಕ್ಕದ್ದು. ಭಾವನೆಯನ್ನೇ ಶೀಲವು ಅವಲಂಬಿಸಿರುವದು. ೧೪ರಿಂದ ೨೧ ವರ್ಷಗಳ ವರೆಗೆ ಬೌದ್ಧಿಕ, ಉದ್ಯೋಗಿಕ, ತಾತ್ವಿಕ ವಿಷಯಗಳನ್ನು ಕಲಿಸಬೇಕು. ವಿಶ್ವವಿದ್ಯಾಲಯಗಳಲ್ಲಿ ಜಗತ್ತಿನ ಶಿಕ್ಷಣ ಭ್ರಾತೃಸಂಘದ ದೃಷ್ಟಿಯಲ್ಲಿ ೨೫ ವರ್ಷಗಳ ವರೆಗಿನ ಮಕ್ಕಳ ಶಿಕ್ಷಣದ ಸಲುವಾಗಿ ಬಂದು ನಿಶ್ಚಿತ ಪದ್ಧತಿಯನ್ನು ಗೊತ್ತು ಪಡಿಸಿದ್ದಾರೆ. ಜೀವನಕ್ರಮದಲ್ಲಿ ಒಳ್ಳೆಯ ನಾಗರಿಕನಾಗಲಿಕ್ಕೆ ಕಲಿಸಿಕೊಳ್ಳುವದೇ ಶಿಕ್ಷಣದ ಉದ್ದೇಶ.

ಬ್ರಹ್ಮಚರ್ಯ, ಗುರುಕುಲವಾಸ, ಶಿಕ್ಷಣ ಪದ್ಧತಿಯ ಅನಿರ್ಬಂಧತೆ, ವಯೋಮಾನಕ್ಕೆ ತಕ್ಕ ಮಾನಸಿಕ ಬೆಳವಣಿಗೆ ಇವುಗಳಿಂದ ಆರ್ಯ ಸಂಸ್ಕೃತಿಯ ಪುನರುದ್ಧಾರವಾಗುವಂತೆ ಮಾಡಬೇಕು. ಹುಡುಗರ ಶೀಲವನ್ನು ಬೆಳೆಸಲು ಶಿಕ್ಷಕರು ಸಚ್ಛೀಲರಾಗಬೇಕು.

ಜನಸೇವೆ.

ಶಿಕ್ಷಕರು ಜನಸೇವೆ ಮಾಡಲು ಸಿದ್ಧರಾದರೆ ಲೋಕಪ್ರಿಯರಾಗುವದಲ್ಲದೆ ಅದರಿಂದ ಸ್ವಾರ್ಥ-ಪರಾರ್ಥಗಳೆರಡೂ ಸಾಧಿಸುವವು. ಜನರ ಯಾವ ರೀತಿಯಲ್ಲಿಯೂ ಸೇರದೆ ಜನಸೇವೆ ಮಾಡಿದರೆ, ಶಿಕ್ಷಕರ ಆರ್ಥಿಕ ಸ್ಥಿತಿಯೂ ಸುಧಾರಿಸುವದು. ಆದ್ದರಿಂದ ತಾವು ನಂಬಿಗಸ್ತರಾಗಿ ಜನಸೇವೆ ಮಾಡಿ ಜನತಾ ಜನಾರ್ದನನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಯೋಗ್ಯ ಯಶಸ್ಸು ಪಡೆಯಿರೆಂದು ಜಗದೀಶನನ್ನು ಪ್ರಾರ್ಥಿಸುತ್ತೇನೆ.

ಅಧಿವೇಶನದ ನಿರ್ಣಯಗಳು.

ಹಿಂದಿನ ಅಧಿವೇಶನಗಳಲ್ಲಿ ಶಿಕ್ಷಕರು ತಮಗೂ, ತಮ್ಮ ಕಾಯದ ಕಕ್ಷೆಗೂ ಒದಗುವ ತೊಂದರೆಗಳನ್ನು ಪರಿಹರಿಸಲು ಮಾಡಿದ ಠರಾವುಗಳು ಬೇಗನೆ ಅಮಲಿನಲ್ಲಿ ಬರಬೇಕು, ಹೆಡ್‌ಮಾಸ್ತರಿ ಆಲೋಚನಾ ಪದ್ಧತಿಯಿಂದ ಬಹಳ ಶಿಕ್ಷಕರಿಗೆ ಅನ್ಯಾಯವಾಗುವದರಿಂದ ಸೀನಿಯಾರಿಟಿಯನ್ನೇ ಕೊಡಬೇಕು. ಮತ್ತು ಸೂಪರನ್ಯುಯೇಶನ್ ಆಗದ, ನೇಮಣೂಕಿನಲ್ಲಿ ಯೋಗ್ಯರ ಹಕ್ಕನ್ನು ಕಾಪಾಡಬೇಕೆಂಬ ಕುರಿತು ನಿರ್ಣಯವೂ, ಆರ್ಯ ಸಂಸ್ಕೃತಿಯ ಪೋಷಕಗಳಾದ ಪಠ್ಯ ಪುಸ್ತಕಗಳನ್ನು ಪ್ರಚಾರದಲ್ಲಿ ತರಬೇಕೆಂಬ ನಿರ್ಣಯವೂ ಸರ್ವಾನುಮತದಿಂದ ಪಾಸು ಮಾಡಲ್ಪಟ್ಟವು.

ಮಹಾಮಹೋಪಾಧ್ಯಾಯರ ಭಾಷಣ.

ತಾ. ೩ನೇ ಮಂಗಳವಾರ ಮುಂಜಾನೆ ಕುಲಕರ್ಣಿ ಮಹಾಮಹೋಪಾಧ್ಯಾಯರು ಶಿಕ್ಷಕರ ಹೊಣೆಯು ಪವಿತ್ರವಾದದೆಂದೂ, ಶಿಕ್ಷಕರ ಯೋಗ್ಯತೆಯೂ ಬಹಳ ಹೆಚ್ಚಿನದೆಂದೂ, ಅದಕ್ಕೆ ಪ್ರತ್ಯಕ್ಷ ಭೋಜನವೆಂಬಂತೆ ವಿದ್ಯಾದಾನದಿಂದ ಶಿಕ್ಷಕರಿಗೆ ತಾವೇ ಪ್ರತಿಫಲವು ದೊರೆಯುವದೆಂದೂ, ಕರ್ನಾಟಕ ಮಾತೃಭೂಮಿಯ ಅಭಿವೃದ್ಧಿಯು ಶಿಕ್ಷಕರನ್ನೇ ಅವಲಂಬಿಸಿರುವದೆಂದೂ, ಲೋಕಪ್ರಿಯರಾಗಲು ಶಿಕ್ಷಕರು ತಮ್ಮ ಪಾವಿತ್ರ್ಯವನ್ನು ಕಾಯ್ದುಕೊಂಡಿರಬೇಕೆಂದೂ ಹೇಳಿದರು.

ಸಮಾರೋಪ.

ಜನರೋತ್ಸಾಹದಿಂದ ಈ ಎರಡು ದಿವಸಗಳಲ್ಲಿ ಅಧಿವೇಶನವು ಸಾಂಗವಾಯಿತು. ಶ್ರೀಮತ್ ಶ್ರೀಧರಸ್ವಾಮಿಗಳು ಹೇಳಿದ ಸಂಗತಿಯನ್ನು ಶಿಕ್ಷಕರೆಲ್ಲರೂ ಇನ್ನು ಮಾನವಧರ್ಮದಂತೆ ನಡೆಯಬೇಕೆಂದು ಆದೇಶ ಕೊಟ್ಟಿದ್ದಾರೆ. ಕೆಲಸ ಮಾಡತಕ್ಕದ್ದು. ಧ್ಯೇಯವನ್ನಿಟ್ಟುಕೊಂಡು ಪ್ರಯತ್ನ ಮಾಡುತ್ತಿದ್ದರೆ, ಸತ್ಯ ಸಂಕಲ್ಪದಾತಾ ಭಗವಾನನು ಫಲ ಕೊಟ್ಟೇ ಕೊಡುವನು. ಚಿಕ್ಕ ಮಕ್ಕಳನ್ನು ಯೋಗ್ಯ ರೀತಿಯಿಂದ ಶಿಕ್ಷಣದಲ್ಲಿ ಒಯ್ಯುವ ಕೆಲಸವನ್ನು ನೀವು ನಿಮ್ಮ ಸ್ವಂತ ಕಾರ್ಯಕ್ಕಿಂತಲೂ ಮನಮುಟ್ಟಿ ಮಾಡುವಿರಾಗಿ ನಂಬಿದ್ದೇನೆ. ಮುಂದಿನ ಕಲಿಕೆ ಎಷ್ಟೇ ಯೋಗ್ಯತೆ ಪಡೆದರೂ, ಅವರು ನಿಮಗೆ ಮನ್ನಣೆ ಕೊಡಲಿಕ್ಕೆ ಬೇಕು. ಕೊನೆಯ ಬಾರಿ ಆರ್ಯ ಸಂಸ್ಕೃತಿಗೆ ಒಪ್ಪುವ ಆಧಿಕ ಧ್ಯೇಯನಿಷ್ಠೆಯನ್ನು, ನಿಂತಿರುವ ಸ್ವಾವಲಂಬನದ ದಾರಿ ತೋರಿಸುವ, ಜೀವಿಗೆಯಲ್ಲಿ ಕೈಬಿಡದ, ಮೇಲೆ ಗುಂಪಿನಲ್ಲಿ ಹೆಚ್ಚುಗೆ ಪಡೆದದ್ದನ್ನೇ ಧರಿಸಬೇಕೆಂದು ಶಿಕ್ಷಕರೆಲ್ಲರಿಗೂ ನನ್ನ ವಿನಂತಿ.

ಆಭಾರ ಮನ್ನಣೆ, ಉಪಾಹಾರ-ತಾಂಬೂಲ ಸಮಾರಂಭ ಸಮಾರೋಪದ ಬಳಿಕ, ಅಧಿವೇಶನವು ಸಮಾಪ್ತವಾಯಿತು.

ಒಬ್ಬ ಪ್ರೇಕ್ಷಕ.

ಕರ್ನಾಟಕವೃತ್ತ.

ಮಿತಿ ಕ್ಷಯ ಸಂ। ಕಾರ್ತಿಕ ಶು॥ ೩, ಸೋಮವಾರ.

ರಾಷ್ಟ್ರಾಭಿಮಾನಿಗಳಿಗಾಗಿ.

ಈ ಬಾರಿ ನಮ್ಮ ಕಡೆ ಕೌನ್ಸಿಲು ಇಲೆಕ್ಷನಿನ ಗದ್ದಲವು ವಿಶೇಷವಾಗಿ ತೋರುವದಿಲ್ಲ. ಕಾರಣವು ಸ್ಪಷ್ಟವಿದೆ. ಪ್ರಾಂತಿಕ ಕಾಯಿದೆ ಕೌನ್ಸಿಲಿನ ಪ್ರತಿನಿಧಿಗಳನ್ನಾರಿಸುವ ಕೆಲಸವು ನಮ್ಮಲ್ಲಿ ಪ್ರತಿಸ್ಪರ್ಧಿಗಳಿಲ್ಲದೇ ನೆರವೇರಿತು. ಅದರಿಂದ ಕೌನ್ಸಿಲಿನ ಚುನಾವಣೆಯ ದೊಡ್ಡದೊಂದು ಬಿರುಗಾಳಿಯಿಂದ ನಾವು ಬದುಕಿದೆವು. ದಿಲ್ಲಿಯ ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಯೂ ಇದರಂತೆ ಪ್ರತಿಸ್ಪರ್ಧಿಗಳಿಲ್ಲದೆ ನೆರವೇರಿದ್ದರೆ, ಇಂದಿಗೆ ಚುನಾವಣೆಯ ಕುರಿತು ಮತದಾರರಿಗೆ ಎಚ್ಚರಿಕೆಯನ್ನೀಯುವ ಪ್ರಸಂಗವು ನಮ್ಮ ಮೇಲೆ ಬರುತ್ತಿದ್ದಿಲ್ಲ. ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಯು ಇದೇ ಬರುವ ೧೫ನೇ ತಾರೀಖಿಗೆ ನಡೆಯುವದು. ಆ ಸಮಯಕ್ಕೆ ಮತದಾರರು ತಮಗಿರುವ ಒಂದೇ ಒಂದು ಮತವನ್ನು ಇರ್ವರೊಳಗೆ ಯಾರೊಬ್ಬರಿಗೆ ಕೊಡಬೇಕಾಗುವದು.

ರಾಷ್ಟ್ರೀಯ ಸಭೆಯವರು ಸರ್ವೋತ್ಕರ ಲೋಕಪರಿಚಿತರಾದ ಲೋಕಾಗ್ರಣಿಗಳಾದ ಶ್ರೀ॥ ದತ್ತಾತ್ರಯ ಬೆಳವಿಯವರಿಗೆ ಈ ಸ್ಥಾನದಲ್ಲಿ ನಿಲ್ಲಿಸಿರುವರು. ಸರಕಾರಿ ವಕೀಲರಾದ ರಾ॥ ಚನ್ನಪ್ಪ ಹುಲಿಕೋಟಿಯವರು ಶ್ರೀ॥ ಬೆಳವಿಯವರೊಡನೆ ಹೋರಾಟ ನಡೆಸುವವರಾಗಿರುವರು. ರಾ॥ ಹುಲಕೋಟಿಯವರ ಕುರಿತು ವ್ಯಕ್ತಿಶಃ ಗುಣದೋಷಗಳನ್ನು ಚರ್ಚಿಸಲು ನಾವು ಉದ್ಯುಕ್ತರಾಗಿಲ್ಲ. ಅವುಗಳನ್ನು ಮತದಾರರ್ಯಾರೂ ವಿಚಾರಿಸುವ ಅಗತ್ಯವಿಲ್ಲೆಂದು ನಮ್ಮ ಗ್ರಹಿಕೆಯಿರುವದು. ರಾಷ್ಟ್ರೀಯ ಸಭಾಭಿಮಾನಿಗಳ ಕರ್ತವ್ಯವು ಒಂದೇ. ರಾಷ್ಟ್ರೀಯ ಸಭೆಯ ಪ್ರತಿಷ್ಠೆಯನ್ನು, ಆಜ್ಞೆಗಳನ್ನು ಶಿರಸಾವಹಿಸುವ ಲೋಕೋಪಕಾರಿ ಪ್ರಮುಖರು ಯಾರಿದ್ದರೂ, ಅವರಿಗೆ ನಾವು ಮತದಾನವನ್ನೀಯಲು ಕರ್ತವ್ಯಬದ್ಧರಿದ್ದೇವೆ. ರಾಷ್ಟ್ರೀಯ ಸಭೆಯು ರಾಷ್ಟ್ರದೊಳಗಿನ ಹಿತಾಹಿತಗಳ ಜವಾಬದಾರಿಯನ್ನು ಸ್ವಾಧೀನಪಡಿಸಿಕೊಂಡು ರಾಜಕಾರಣರಣಕ್ಷೇತ್ರದಲ್ಲಿ ಹುರಿಯಾಳುಗಳನ್ನು ಮುಂದೆ ಮಾಡಿದಾಗ, ಅವರಿಗೆ ಕಣ್ಮುಚ್ಚಿ ಬೆಂಬಲವನ್ನೀಯಲು ರಾಷ್ಟ್ರಾಭಿಮಾನಿಗಳೆಲ್ಲರೂ ಕರ್ತವ್ಯಬದ್ಧರಿರುವರು. ರಾಷ್ಟ್ರೀಯ ಸಭೆಯ ಪ್ರತಿಷ್ಠೆಯೇ ದೇಶದ ಪ್ರತಿಷ್ಠೆ; ರಾಷ್ಟ್ರೀಯ ಸಭೆಗೆ ಗೆಲವಾದರೆ, ದೇಶಕ್ಕೆ ಗೆಲವು; ರಾಷ್ಟ್ರೀಯ ಸಭೆಗೆ ಸೋಲಾದರೆ, ದೇಶಕ್ಕೆ ಸೋಲು, ಎಂಬ ವಿಚಾರಗಳನ್ನು ರಾಷ್ಟ್ರಾಭಿಮಾನಿಗಳೆಲ್ಲರೂ ತಳೆದು, ಈ ಇಲೆಕ್ಷನಿನಲ್ಲಿ ವರ್ತಿಸುವರೆಂದು ನಾವು ನಿಶ್ಚಯಪೂರ್ವಕವಾಗಿ ತಿಳಿದಿರುವೆವು. ರಾ॥ ಹುಲಕೋಟಿಯವರ ಗುಣಗಳು ಅನೇಕವಿರಬಹುದು. ಅವರು ಸ್ವತಂತ್ರ ಮತದವರೆಂದು ತಿಳಕೊಳ್ಳಲೂ ನಾವು ತಯಾರಿರುವೆವು. ಬ್ರಾಹ್ಮಣ-ಬ್ರಾಹ್ಮಣೇತರವೆಂಬ ಕ್ಷುದ್ರ ದೃಷ್ಟಿಯ ಬಾಧೆಯು ಅವರಿಗಿಲ್ಲೆಂದು ಎಣಿಸಲಿಕ್ಕೂ ನಾವು ಸಿದ್ಧರಿದ್ದೇವೆ. ರಾಷ್ಟ್ರೀಯ ಸಭೆಯಲ್ಲಿ ಅವರು ಸೇರಿರುವದಿಲ್ಲವೆಂಬ ಒಂದೇ ಮಾತ್ರದಿಂದ ಅವರಿಗೆ ಮತಕೊಡಬಾರದೆಂದು ನಾವು ಆದರಪೂರ್ವಕವಾಗಿ ಮತದಾರರಿಗೆ ಸಾರಬೇಕಾಗಿದೆ.

ಮೇಲಾಗಿ ಶ್ರೀ॥ ದತ್ತೋಪಂತ ಬೆಳವಿಯವರು ಲೋಕಸೇವೆಯಲ್ಲಿ ನಿರತರು. ಕಾರ[illegible] ಪಂಡಿತ ಮೋತಿಲಾಲ ನೆಹರು, ಶ್ರೀ॥ ವಿಠ್ಠಲಭಾಯಿ ಪಟೇಲ, ಜಮ್ನಾದಾಸ ಮೇಹ್ತಾ ಮುಂತಾದ ಮಹನೀಯರಂತೆ ಇಡೀ ವಯದಲ್ಲಿ ಹಗಲಿರುಳು ಲೋಕಜಾಗೃತಿಯನ್ನು ಕೈಕೊಳ್ಳಲು ಅವರಿಗೆ ಅನುಕೂಲವಿಲ್ಲದಿದ್ದಾಗ್ಯೂ, ರಾ॥ ಹುಲಕೋಟಿಯವರಿಗಿಂತ ಶ್ರೀ ಬೆಳವಿಯವರು—ಗುಂಜಿಯೇಕೆ?—ತೊಲೆ ತೂಕ ಶ್ರೇಷ್ಠರೆಂದು ನಿಸ್ಸಂದೇಹವಾಗಿ ಹೇಳಬಹುದು. ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿಯೂ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿಯೂ ಶ್ರೀ ಬೆಳವಿಯವರು ರಾಷ್ಟ್ರ ಹಿತೈಕ್ಯದೃಷ್ಟಿಯಿಂದ ಜರುಗಿಸಿದ ಸೇವೆಯನ್ನು ನಾವೆಂದೂ ಮರೆಯಲಾರೆವು. ಅದನ್ನು ಮರೆತರೆ ಕೃತಘ್ನರೆಂದು ನಾವು ಲೋಕಾಪವಾದ ಹೊಂದಬೇಕಾಗುವದು. ಯಾವದೇ ವಿಷಯದಲ್ಲಿ ರಾಷ್ಟ್ರೀಯ ಸಭೆಯ ಪ್ರತಿಷ್ಠೆಯನ್ನು ಕುಗ್ಗಿಸುವಂತೆ ಅವರೆಂದಿಗೂ ನಡಕೊಳ್ಳಲಿಲ್ಲ. ರಾಷ್ಟ್ರೀಯ ಸಭೆಯ ಧೋರಣಕ್ಕನುಗುಣವಾಗಿ ರಾಷ್ಟ್ರದ ಸ್ವಾಭಿಮಾನಪೋಷಕವಾಗುವಂತೆ ಅವರು ಈ ವರೆಗೆ ನಡಕೊಂಡಿರುವರು. ಇನ್ನು ಮುಂದೆಯೂ ನಡಕೊಳ್ಳುವ ಸಿದ್ಧಾಂತವನ್ನು ಜಾಹೀರಪಡಿಸಿರುವರು. ನಿರ್ಧಾರದಂತೆ ಶ್ರೀ॥ ಬೆಳವಿಯವರು ಪಂಡಿತ ಮೋತಿಲಾಲರವರ ಜೊತೆಗಾರರಾಗಿ ಸ್ವರಾಜ್ಯದ ಕಾದಾಟವನ್ನು ನಿರಪೇಕ್ಷ ಬುದ್ಧಿಯಿಂದಲೂ, ನಿರ್ದಾಕ್ಷಿಣ್ಯದಿಂದಲೂ, ನಡಿಸುವರೆಂದು ನಾವು ಎದೆತಟ್ಟಿ ಹೇಳಬಲ್ಲೆವು.

ರಾ॥ ಹುಲಕೋಟಿಯವರ ಕುರಿತು, ವ್ಯಕ್ತಿಶಃ ಗುಣದೋಷಗಳ ಆಕ್ಷೇಪವಿಲ್ಲವೆಂದು ನಾವು ಮೊದಲೇ ಹೇಳಿಬಿಟ್ಟಿರುವೆವು. ಆದರೂ, ಒಂದು ಮಾತನ್ನು ಪ್ರಮುಖ್ಯವಾಗಿ ನಾವು ನಮೂದಿಸಬೇಕಾಗಿದೆ. ರಾ॥ ಹುಲಕೋಟಿಯವರು ಧಾರವಾಡದಲ್ಲಿ ಸರಕಾರಿ ವಕೀಲರಿರುವರು. ಸರಕಾರಿ ವಕೀಲರು ಸರಕಾರಿ ವ್ಯಾಖ್ಯೆಯಂತೆ ಸರಕಾರಿ ಅಧಿಕಾರಿಗಳಲ್ಲೆಂದು ಪ್ರಾಂತಿಕ ಸರಕಾರವು ಕೊಟ್ಟ ನಿರ್ಣಯವನ್ನು ನಾವೀಗ ಒಪ್ಪಲೇಬೇಕು. ಆದರೆ, ಸರಕಾರಿ ವಕೀಲಿಯ ಮೂಲಕ ರಾ॥ ಹುಲಕೋಟಿ ಚನ್ನಪ್ಪನವರಿಗೆ ಸರಕಾರದ ಹಂಗು ಇಲ್ಲವಾಗಿ ಯಾರಾದರೂ ವಾದಿಸಿದರೆ, ಅದಕ್ಕೊಪ್ಪಲು ನಾವು ತಯಾರಿಲ್ಲ. ಸರಕಾರಿ ವಕೀಲರು ಸರಕಾರದ ತಲಬು ತಿನ್ನದಿದ್ದರೂ 'ಫೀ'ಯನ್ನು ತಿಂದೇ ತಿನ್ನುತ್ತಾರೆ. ಆ ಹಂಗು ಅವರಿಗೆ ಇದ್ದೇ ಇರುತ್ತದೆ; ಇಲ್ಲೆಂದರೂ ಅದು ಅವರನ್ನು ಬಿಟ್ಟು ತೊಲಗುವದಿಲ್ಲ. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ನಿಷ್ಠುರವಾಗಿ ನಾವು ಸರಕಾರದೊಡನೆ ಕಾದಾಡಬೇಕಾಗಿರುವದು. ಸರಕಾರಿ ವಕೀಲರಾದ ರಾ॥ ಹುಲಕೋಟಿ ಚನ್ನಪ್ಪನವರು ಸರಕಾರದೊಡನೆ ಪ್ರತಿಭಟಿಸಿ ಕಾದಾಡುವ ನೋಟವನ್ನು ಕಲ್ಪಿಸಲಿಕ್ಕೆ ಸಹ ನಮ್ಮಿಂದಾಗದು. ಉದಾಹರಣೆ ಬೇಕೇ? ಗಂಗಾತನಯನಾದ ಪ್ರತಾಪಿ ಭೀಷ್ಮನ ಸ್ಥಿತಿಯನ್ನೇ ನಾವು ವಿಚಾರಿಸುವಾ. ಭೀಷ್ಮನಷ್ಟು ಧೈರ್ಯವಂತರೂ, ಸ್ಥೈರ್ಯವಂತರೂ ತಾವಲ್ಲವೆಂದು ರಾ॥ ಹುಲಕೋಟಿಯವರೇ ಒಪ್ಪಬೇಕು. ಭೀಷ್ಮಾಚಾರ್ಯರಿಗೆ ಪಾಂಡವರ ಮೇಲಿದ್ದಷ್ಟು ಪ್ರೇಮವು ರಾ॥ ಚನ್ನಪ್ಪ ಹುಲಕೋಟಿಯವರಿಗೆ ದೇಶಬಾಂಧವರ ಮೇಲೆ ಇರುವದಿಲ್ಲೆಂದೂ ಯಾರೂ ಒಪ್ಪತಕ್ಕಂಥ ಮಾತು. ಭೀಷ್ಮಾಚಾರ್ಯರ ಹಾಗು ಧರ್ಮಭೀಮಾದಿ ಪಂಚಪಾಂಡವರೊಳಗಿರುವ ಪ್ರೇಮವನ್ನು ಕಲ್ಪಿಸಿಯೇ ತೀರಬೇಕಲ್ಲದೆ ಅದನ್ನು ವರ್ಣಿಸಲಿಕ್ಕೆ ಸಾಧ್ಯವೇ! ಇಷ್ಟಾಗಿ ಪಾಂಡವರು ಧರ್ಮಬುದ್ಧಿಯಿಂದ ಕೇವಲ ಅಪರಿಹಾರ್ಯವೆಂದ ಕುರುಕ್ಷೇತ್ರದಲ್ಲಿ ಕೌರವರಿಗೆ ಇದಿರಾಗಿದ್ದರು. ಆದರೂ ಭೀಷ್ಮಾಚಾರ್ಯರಿಗೆ ಪಾಂಡವರಿಗಿದಿರಾಗಿ ಕಾದಾಡಬೇಕಾಯಿತು. ಕಾರಣವನ್ನು ಭೀಷ್ಮಾಚಾರ್ಯರೇ ನುಡಿದಿರುವರು:

> ಅರ್ಥಸ್ಯ ಪುರುಷೋ ದಾಸೋ
> ದಾಸಸ್ತ್ವರ್ಥೋ ನ ಕಸ್ಯಚಿತ್ ।
> ಇತಿ ಸತ್ಯಂ ಮಹಾರಾಜ
> ಬದ್ಧೋಸ್ಮ್ಯರ್ಥೇನ ಕೌರವೈಃ ॥

"ಮಾನವನು ಧನದ ದಾಸನಿದ್ದಾನೆ; ಧನವು ಯಾರಿಗೂ ವಶ ಹೋಗುವದಿಲ್ಲ; ಸತ್ಯಸ್ಥಿತಿಯಿದು. ಮಹಾರಾಜನಾದ ಯುಧಿಷ್ಠಿರನೇ ಕೇಳು; ಕೌರವರು ದ್ರವ್ಯಪಾಶದಿಂದ ನನಗೆ ಕಟ್ಟಿಹಾಕಿರುವರು." ದ್ರವ್ಯದ ಪಾಶವು ಇಷ್ಟು ಕಠಿಣವಿದೆ. ಅದನ್ನು ಹರಿದಿಸಿಕೊಂಡು ಸತ್ಯಪಕ್ಷಪಾತಿಯಾದ, ನ್ಯಾಯಪಕ್ಷಪಾತಿಗಳಾದ ಪಾಂಡವರಿಗೆ ಸೇರಿಕೊಳ್ಳಲು, ಭೀಷ್ಮಾಚಾರ್ಯರಂಥ ಮಹಾಪುರುಷರಿಗೇ ಸಾಧ್ಯವಾಗದ ಪ್ರಸಂಗದಲ್ಲಿ, ರಾ॥ ಚನ್ನಪ್ಪ ಹುಲಕೋಟಿಯವರಿಗೆ ಹ್ಯಾಗೆ ಸಾಧ್ಯವಾದೀತು? ಸರಕಾರಿ ವಕೀಲರಿಗೆ ಸರಕಾರಿ ಹಂಗು ತೊರೆಯಬೇಕೆಂದರೂ, ಅದೆಂದಾದ

ರೂ ಬಿಟ್ಟುಹೋಗುವರೇ? ಭೀಷ್ಮಾಚಾರ್ಯರಂತೆ ತೇಜಃಪುಂಜ ಭಟರಿಗೆ ಪ್ರತಿಬಂಧಿಸಿದ ದ್ರವ್ಯಪಾಶವು ರಾ|| ಹುಲಕೋಟಿ ಚನ್ನಪ್ಪನವರನ್ನು ಭದ್ರವಾಗಿ ಪ್ರತಿಬಂಧಿಸುವದು. ರಾ|| ಹುಲಕೋಟಿಯವರು ಸರಕಾರಿ ವಕೀಲಿಗೆ ಧಾರೆಯೆರೆದಲ್ಲಿ ಅವರಿಗೆ ಮತಕೊಡಲಿಕ್ಕೂ, ಅವರು ಸರಕಾರದೊಡನೆ ನಡಿಸುತ್ತೇವೆಂದು ಹೇಳಿದ ಕಾದಾಟದ ನಿಜ್ಜಯ ಸ್ವರೂಪವನ್ನು ತಿಳಕೊಳ್ಳಲಿಕ್ಕೂ ಅನುಕೂಲವಾಗುವದು ರಾ|| ಹುಲಕೋಟಿಯವರು ಇಷ್ಟು ಚರ್ಚೆಯಾದಾಗ್ಯೂ ಸರಕಾರಿ ವಕೀಲಿಯನ್ನು ಭದ್ರವಾಗಿ ಜೋಪಾನಮಾಡಿಕೊಂಡಿರುವದರಿಂದ ಸುಮ್ಮನೇ ಸರಕಾರಿ ವಕೀಲಿಯ ತ್ಯಾಗದ ತಂಟಗದಲ್ಲಿ(?) ನಾವು ಕೇಳುವದ್ಯಾಕೆ?

ವರಿಷ್ಠ ಕಾಯಿದೆ ಕೌನ್ಸಿಲಿನ ಈ ಚುನಾವಣೆಯಲ್ಲಿ ಸರಕಾರದ ಹಂಗಿಲ್ಲದೇ ಕಾದಾಡಲು ಸೇರಿದವರು ಒಬ್ಬರೇ. ಅವರು ಶ್ರೀ|| ದತ್ತೋಪಂತ ಬೆಳವಿಯವರು. ಸರಕಾರದೊಡನೆ ಮುಂದಾಗಿ ಈ ಸಂಕಟ ಸಮಯದಲ್ಲಿ ಕಾದಾಡಲು ನಿಮಗೆ ಪ್ರತಿನಿಧಿ ಬೇಕಾಗಿದ್ದರೆ, ಮತದಾರರೇ ನಿಮ್ಮ ಮತವನ್ನು ನೀವು ಶ್ರೀ|| ದತ್ತೋಪಂತ ಬೆಳವಿಯವರಿಗೇ ಕೊಡಬೇಕು. ಇದೇ ಬರುವ ೧೨ನೇ ಗುರುವಾರಕ್ಕೆ ಮತದಾನದ ಸ್ಥಳಗಳಲ್ಲಿ ನೀವು ಹೋಗಿ ತಪ್ಪದೇ ಶ್ರೀ|| ಬೆಳವಿಯವರಿಗೆ ಮತಕೊಡಿರಿ. ಶ್ರೀ|| ಬೆಳವಿಯವರ ಹೆಸರು ಹಸರು ಬಣ್ಣದಿಂದಿದೆ. ಶ್ರೀ|| ಬೆಳವಿಯವರ ಹೆಸರನ್ನೂ, ಬಣ್ಣವನ್ನೂ ನೋಡಿ, ಅದರ ಮುಂದಿರುವ ಕೋಣೆಯಲ್ಲಿ ಗುಣಿಲೆ ಚಿನ್ಹೆಯನ್ನು ಹಾಕಿ ನೀವು ಮತಕೊಡಬೇಕು. ನೀವು ಒಬ್ಬರನ್ನೇ ಆರಿಸಿ ಕಳುಹಬೇಕಾದ್ದರಿಂದ ನಿಮ್ಮದು ಒಂದೇ ಮತವಿದೆ. ಆದದರಿಂದ ನೀವು ಒಂದೇ ಗುಣಿಲೆ ಚಿನ್ಹವನ್ನು ಹಾಕತಕ್ಕದ್ದು. ಅಂದರೆ ನೀವು ರಾಷ್ಟ್ರಾಭಿಮಾನಿಗಳಾದಿರಿ; ರಾಷ್ಟ್ರದ ಸ್ವಾಭಿಮಾನವನ್ನು ಕಾದಿರಿ; ರಾಷ್ಟ್ರೀಯ ಸಭೆಯ ಪ್ರತಿಷ್ಠೆಯು ಬೆಳೆಯಿತು; ರಾಷ್ಟ್ರೀಯ ಸಭೆಯ ರಾಷ್ಟ್ರೋದ್ಧಾರ ಕೆಲಸಕ್ಕೆ ಕಳೆಯೇರುವದು. ಪಂಡಿತ ಮೋತಿಲಾಲರವರು ರಾಷ್ಟ್ರೋದ್ಧಾರ ಕಾರ್ಯದಲ್ಲಿ ತಮಗೊಬ್ಬ ಜೋಡುಗಾರರನ್ನು ಸಂಪಾದಿಸಿ ಕೊಟ್ಟರೆಂದು ಗ್ರಹಿಸಿ, ನಿಮ್ಮ ವಿವೇಕಬುದ್ಧಿಯನ್ನು ಕೊಂಡಾಡುವರು. ನಿಮ್ಮ ಮತದಾನದಿಂದ ಒದಗುವ ಫಲಿತಾಂಶಗಳನ್ನೆಲ್ಲ ಮುಂದಾಗಿ ತಿಳಕೊಂಡು ಮತದಾನದ ಠಾಣ್ಯಗಳಲ್ಲಿ ಮತದಾರರೇ ನೀವು ಪ್ರವೇಶಗೊಂಡು ವರ್ತಿಸಬೇಕು. ಇದಕ್ಕೂ ಹೆಚ್ಚಿಗೆಯಾಗಿ ತಮ್ಮಂಥ ಬಲ್ಲವರಿಗೆ ನಾವೇನು ಹೇಳುವದದೆ!

— ಕಲಕತ್ತೆಯಲ್ಲಿ ಸೇರಿದ ಒಂದು ಅಲೆಕ್ಷನ ಸಭೆಯಲ್ಲಿ ಗೊಂದಲವಾಗಿ ಮುದರಕ್ಷಗಳು(?) ಸಹ ಹಾಳ್ಯಾಡಿದವಂತೆ(?) ನಮ್ಮ ಅವಕಾ(?).

ಸ್ಫುಟ ಸೂಚನೆಗಳು.

೧. ಪುಣೆಯಲ್ಲಿ ಜರುಗಿದ ಬೇಸಾಯ ಪ್ರದರ್ಶನದ ವಿಷಯ ನಾವು ಒಂದು ಲೇಖ ಬರೆದು, ಪ್ರದರ್ಶನವು ಬ್ರಿಟಿಶ ಕಾರಖಾನೆಯವರ ಸಾಮುಗ್ರಿಗಳ ಜಾಹೀರನಾಮೆಯಾಗುವದೆಂದು ಅನುಮಾನಿಸಿದ್ದೆವು. ಆ ಅನುಮಾನವೇ ಪ್ರೇಕ್ಷಕರ ಅನುಭವವಾಗಿದೆಯೆಂದು ತಿಳಿಸಲಿಕ್ಕೆ ನಮಗೆ ವ್ಯಸನವಾಗುತ್ತದೆ. ಮುಂಬಯಿಯ 'ಹೆರಲ್ಡ' ಪತ್ರಿಕಾಕರ್ತರಾದ ಮಿ|| ಹಾರ್ನಿಮನ್‌ರವರು ಈ ಕುರಿತು ತಮ್ಮ ಪತ್ರಿಕೆಯಲ್ಲಿ ಇದೊಂದು ದೊಡ್ಡ ತಮಾಶೆಯಾಯಿತೆಂತಲೂ; ಬ್ರಿಟಿಶ ದೇಶದಲ್ಲಿ ತಯಾರಾಗುವ ಸಾಮುಗ್ರಿಗಳದೊಂದು ಜಾಹೀರನಾಮೆಯೇ ಈ ಪ್ರದರ್ಶನದ ಮುಖಾಂತರ ಹೊತ್ತಪ್ಪಿಸ್ಸಿತೆಂದೂ(?) ಪ್ರದರ್ಶನವನ್ನು ನೋಡಿ ಬಂದ ಪ್ರೇಕ್ಷಕರು ಹೇಳುತ್ತಾರೆಂದು ಬರೆಯುತ್ತಾರೆ. ಪ್ರದರ್ಶನವು ಬೇಸಾಯೋತ್ತೇಜಕವೆಂದು ಹೇಳುವದಕ್ಕಿಂತ ಬ್ರಿಟಿಶ ಸಾಮುಗ್ರಿಗಳ ಮಾರಾಟದ ಸಾಧನವೆಂದು ಹೇಳಬಹುದಾಗಿ ಪ್ರೇಕ್ಷಕರ ಅಭಿಮತವಾಗಿರುವದಂತೆ. ಅರಸರು ಹೂಡಿದ ಈ ಪ್ರದರ್ಶನಕ್ಕೆ

ವರಿಷ್ಠ ಕಾಯಿದೆ ಕೌನ್ಸಿಲಿನ

ಮತದಾರರೇ,

ರಾಷ್ಟ್ರೀಯ ಸಭೆಯಿಂದ
ನಿಯೋಜಿತರಾದ

ಶ್ರೀ. ಬೆಳವಿಯವರಿಗೇ

ರಾಷ್ಟ್ರಾಭಿಮಾನ ಹಿಡಿದು ತಾರೀಖು ೧೨ನೇ ಗುರುವಾರಕ್ಕೆ ಮತದಾನ ಮಾಡಿರಿ.

ಸೂಚನೆ:- ಶ್ರೀ|| ಬೆಳವಿಯವರ ಹಸರು ಹೆಸರಿನ ಮುಂದೆ ಗುಣಿಲೆ ಚಿನ್ಹೆ ಹಾಕಿ ಮತ ಕೊಡಬೇಕು.

ದೊರೆತ ಆಶ್ರಯವು ಸರ್ವಥಾ ಅಯೋಗ್ಯವೆಂದು 'ಹೆರಲ್ಡ' ಪತ್ರಿಕಾಕರ್ತರ ಅಂಬೋಣವಿದೆ. ಪರಸ್ಪರ ಭಾರತೀಯರ ದ್ರವ್ಯದಿಂದ ಬ್ರಿಟಿಶ ಸಾಮುಗ್ರಿಗಳ ಜಾಹೀರನಾಮೆಯಾಯಿತು. ಬೇಸಾಯ ಪ್ರದರ್ಶನದ ಸಾಫಲ್ಯವಾದರೂ ಇಷ್ಟೇ?

೨. ಬೇಸಾಯ ಪ್ರದರ್ಶನದಿಂದ ನೆರವೇರಿಸಿದ ಬುದ್ಧಿಭ್ರಂಶವನ್ನು ಕೇಳಿರಿ. ಬೇಸಾಯದ ಅಧ್ಯಾಕರರಾದ ರಾ|| ಪಟೇಲರವರು ಸಾರ್ವಭೌಮ ಬೇಸಾಯ ಕಮೀಶನದ ಬಳಿ ಸಾಕ್ಷಿ ಕೊಡುವಾಗ ನುಡಿದದ್ದೇನಂದರೆ. "ಪರದೇಶದೊಳಗಿನ ಚಿಕ್ಕ ಕಾರಖಾನೆಯವರ ಮನ ಒಲಿಸಿ, ಅವರಿಗೆ ಹಿಂದುಸ್ಥಾನದಲ್ಲಿ ಕಾರಖಾನೆಗಳನ್ನಿಡಹೇಳಬೇಕು. ಇದರಿಂದ ಭಾರತೀಯ ಬೇಸಾಯಗಾರರ ಕೊರತೆಗಳನ್ನು ಕಂಡು ಹಿಡಿದು, ಇಲ್ಲಿಯ ಪರಿಸ್ಥಿತಿಗೆ ತಕ್ಕುದಾದ ಯಂತ್ರ ಸಾಮುಗ್ರಿಗಳನ್ನು ಅವರು ತಯಾರಿಸುವರು." ಪಟೇಲರವರಂಥ ಬಲ್ಲವರು ಈ ಪ್ರಕಾರ ನುಡಿಯಬೇಕಾದಾಗ ಪ್ರದರ್ಶನದಲ್ಲಿ ಹೂಡಿದ ಪರದೇಶಿ ಕಾರಖಾನೆಯವರ ಸಾಮುಗ್ರಿಗಳ ನಾವಿನ್ಯವು ಕಲ್ಪಿಸುವ ಹಾಗಿದೆ, ರಾ|| ಪಟೇಲರವರಿಗೆ ನಮ್ಮ ಕಡೆಯ ಕಿರ್ಲೋಸ್ಕರ ಕಂಪನಿಯ ಹೆಸರು ನೆನಪಾಗಲಿಲ್ಲ. ಸಾತಾರೆಯ ಕಿರ್ಲೋಸ್ಕರ ಕಂಪನಿಯವರು ಪ್ರಯತ್ನಪೂರ್ವಕವಾಗಿ ನಮ್ಮ ಕಡೆಯ ಬೇಸಾಯಕ್ಕೆ ತಕ್ಕ ರೆಂಟೆ, ಗಾಣ ಮುಂತಾದ ಸಾಮುಗ್ರಿಗಳನ್ನು ತಯಾರಿಸುತ್ತಿರುವರು. ಅಲ್ಲಿ ತಯಾರಾಗುವ ನೀರಿನ ಪಂಪು ಬಹಳ ಶ್ರೇಷ್ಠ ಪ್ರತಿಯದೆಂದು ಬಲ್ಲವರು ಹೇಳುತ್ತಾರೆ. ಅವರಿಗೆ ಸರಕಾರವು ನೆರವಾಗಿ, ನಮಗುಚಿತವಾದ ಸಾಮುಗ್ರಿಗಳನ್ನು ಸರಕಾರವು ತಯಾರಿಸಿ ಕೊಡಬೇಕೆಂದು ಬೇಸಾಯೋದ್ಧಾರಕ ಪಂಡಿತರಿಗೆ ಅನಿಸಲಿಲ್ಲ. ಪರದೇಶದ ಕಾರಖಾನೆಯವರು ಇಲ್ಲಿ ಬಂದು ಸರಕಾರದ ಸಹಾಯದಿಂದ ಕಾರಖಾನೆಗಳನ್ನು ಸ್ಥಾಪಿಸಿ, ನಮಗೆ ಯೋಗ್ಯವಾದ ಸಾಹಿತ್ಯಗಳನ್ನು ಅವರು ತಯಾರಿಸಿ ಕೊಡಬೇಕು. ನಮ್ಮ ಬೇಸಾಯಗಾರರ ಸ್ಥಿತಿ-ಗತಿಯನ್ನು ಪರಿಚಯದಿಂದ ಅರಿತ ಕಿರ್ಲೋಸ್ಕರ ಕಂಪನಿಯವರಿಗೆ ಸರಕಾರವು ಸಹಾಯ ಕೊಡಬೇಕೆಂದು ರಾ|| ಪಟೇಲರಿಗೆ ಅನಿಸಲಿಲ್ಲ. ಯಾಕೆ? ಪ್ರದರ್ಶನದಲ್ಲಿ ಕಿರ್ಲೋಸ್ಕರರ ಸಾಹಿತ್ಯಗಳಿದ್ದವು; ಅವನ್ನು ಉಪಯೋಗಿಸಿ ಲಾಭ ಹೊಂದಿದ ಬೇಸಾಯಗಾರರೂ ಅನೇಕರಿದ್ದರು, ಬೇಸಾಯ ಪಂಡಿತರಾದ ರಾ|| ಪಟೇಲರೂ ಅವುಗಳ ಪರೀಕ್ಷೆ ಮಾಡಬಹುದಿತ್ತು. ದೋಷಗಳನ್ನು ಪರಿಹರಿಸಲು ಕಿರ್ಲೋಸ್ಕರ ಕಂಪನಿಯವರು ಒಗ್ಗಾಲಿನ ಮೇಲೆ ತಯಾರಿರುವರು. ಆದರೂ, ಪರದೇಶದವರನ್ನು ನಾವು ಅವುಡು(?) ಮಾಡುವ ಕಾರಣವೇನು? ನಮ್ಮ ಕಿವಿ ಚುಚ್ಚಲಿಕ್ಕೆ ಸಾಹೇಬ ಸೊನಗಾರರೇ ಬೇಕೇನು? ಪಾರತಂತ್ರ್ಯದಿಂದ ಒದಗಿದ ನಮ್ಮ ವಿಪನ್ನಾವಸ್ಥೆ ನೋಡಿ!

೩. ವಿಲಾಯತಿಯಲ್ಲಿ 'ಪಂಚ' ಎಂಬಿದೊಂದು ಹಾಸ್ಯಪತ್ರಿಕೆಯಿದೆ. ಪಂಚ ಪತ್ರಿಕೆಯಲ್ಲಿ ಪ್ರಚಲಿತ ವಿಷಯಗಳು ವಿನೋದದಿಂದ ಚರ್ಚಿಸಲ್ಪಡುತ್ತಿವೆ. ಈ ಪತ್ರಿಕೆಯ ಪ್ರತಿಷ್ಠೆಯೂ, ಪ್ರಚಾರವೂ ಬಹಳವದೆ. ವಿಲಾಯತಿಯಲ್ಲಿ ಮದ್ಯಪಾನದ ನಿಷೇಧವಿಲ್ಲ. ಆದರೂ, ಅಲ್ಲಿಯೂ ಮದ್ಯಪಾನದಿಂದುಂಟಾದ ಪರಿಪರಿಯ ಕಷ್ಟಗಳು ಈಗ ತೋಳೆವು(?), ಆ ಪತ್ರಿಕಾಕರ್ತರು ತಮ್ಮ ಪತ್ರಿಕೆಯಲ್ಲಿ ಬರುವ ಮಾರ್ಚ ತಿಂಗಳಿಂದ ಮದ್ಯದ ಜಾಹೀರಾತುಗಳನ್ನು ಪ್ರಕಟಿಸಲಿಕ್ಕಿಲ್ಲವಾಗಿ ಪ್ರಕಟಿಸಿರುವರು. ಇದೊಂದು ಮದ್ಯಪಾನನಿಷೇಧಕರ ವಿಜಯವೆಂತಲೇ ಎಣಿಸಬೇಕಾಗಿದೆ. ಮದ್ಯಪಾನದಿಂದುಂಟಾಗುವ ಆರೋಗ್ಯಹಾನಿ, ಮನೋದೌರ್ಬಲ್ಯ, ಐಹಿಕ ಪಾರಮಾರ್ಥಿಕ ಅಧಃಪತನಗಳನ್ನು ನಾವು ಹೇಳಿ ತೀರದು. ಹಿಂದುಸ್ಥಾನವಂತೂ ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧ ಮಾಡುವ ದೇಶವು. ಮದ್ಯಪಾನವು ಮಹಾಪಾಪವೆಂದು ಸನಾತನಿಗಳು ಎಣಿಸುತ್ತಾರೆ; ಮಹಮ್ಮದೀಯರಿಗೂ ಅದೇ ಪ್ರಕಾರದ ಧರ್ಮಪ್ರತಿಬಂಧವಿದೆ. ಇಂಥ ದೇಶದಲ್ಲಿ ದಿನೇ ದಿನೇ ಮದ್ಯಪಾನವು ಹೆಚ್ಚಾಗುತ್ತ ನಡೆಯುವದು ನಮ್ಮ ದುರ್ದೈವವಲ್ಲವೇ? ನಮ್ಮಲ್ಲಿಯ ಸರಕಾರವೂ ಕೂಡ ಮದ್ಯಪಾನವನ್ನು ಅಸ್ತನಿಯಂತ್ರಿಸಲು(?) ಹಿಂದೆ ಮುಂದೆ ನೋಡುವದನ್ನು ನೋಡಿ, ತೀರ ವ್ಯಸನವಾಗುತ್ತದೆ. ಮದ್ಯಪಾನ ನಿಷೇಧ ಕಾರ್ಯಕ್ಕೆ ಸರಕಾರವು ಉತ್ತೇಜನವಿತ್ತರೆ, ಹಂತಗುಡಕರನ್ನು(?) ದುರ್ವ್ಯಸನದಿಂದ ನಾವು ಬಹುಬೇಗನೇ ಉದ್ಧಾರ ಹೊಂದುವೆವು. ಯಾಕಂದರೆ

ಮದ್ಯಪಾನ ನಿಷೇಧವು ನಮ್ಮ ಸ್ವಭಾವವು; ... ನವು ... ತ್ರಿವೇಣಿಕೋರ ಸಂಸ್ಥಾನದ ವಿನಾಚಿಲ ತಾಲೂಕಿನಲ್ಲಿ ಮದ್ಯಪಾನ ನಿಷೇಧ ಕಾರ್ಯಪ್ರಯುಕ್ತ ಅಲ್ಲಿಯ ಮದ್ಯದ ಗಿರಾಕಿಯು ಶೀರ ಕಡಿಮೆಯಾಗಿರುವದಾಗಿ ತ್ರಿವೇಂದ್ರದೊಳಗಿನ ಗುತ್ತಿಗಾರರು ಪ್ರಕಟಿಸಿರುವರು. ತ್ರಿವಣಕೋರ ದರ್ಬಾರವು ನೆರವಾದರೆ, ಅಲ್ಲಿಯ ಮದ್ಯಪಾನ ವ್ಯಾಪಾರವು ಅಲ್ಪಾವಧಿಯಲ್ಲಿಯೇ ನಾಮಶೇಷವಾಗುವ ದು. ಸಂಸ್ಥಾನಿಕರು ಮುಂದಾಗಿ, ಈ ಕಾರ್ಯವನ್ನು ಕೈಕೊಂಡು, ಶೀಘ್ರವಾದ ಕೀರ್ತಿ ಪಡೆಯಬೇಕಾಗಿಯೂ, ಬ್ರಿಟಿಶರಿಗೆ ಅನುಕರಣೀಯರಾಗಬೇಕಾಗಿಯೂ ನಾವು ಬಯಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಗಾಳಿ ಬೀಸುತ್ತಿದೆ. ... ಹಸಿಸು ತ್ತಿದೆ. ಕರೆಯೂ ಬೀಳುತ್ತಿದೆ. ಬೆಳೆ ಕೊಯ್ಲಾಗಿ ಕೃಷ್ಯಾಕ್ಕೆ ಪ್ರೋತ್ಸಾಹ. ಅನುಗ್ರಹಿಸಲಿಕ್ಕೆ ... ಮೋಡಂದ ಭತ್ತ ಇಳಿಯುತ್ತಿದೆ; ... ತ್ತಿದೆ. ದರವು ಅಷ್ಟು ಏರಿಕೆಯ ಮೇಲಿಲ್ಲ. ಹೀಗಿದ್ದರೂ ಅತ್ತ ಕಡೆಯಲ್ಲಿ ದ್ರವ್ಯ ರಥಕ್ಕದಿಂದಿದೆ ಈ ... ಪ್ರವನ್ನು ಹೀಗೆ ಕಂಡವರ್‍ಯಾರಿದ್ದಾರೆ!

ಒಬ್ಬರು ಬರೆಯುವದೇನಂದರೆ:— ಮುನಿಸಿಪಾಲಿಟಿಯವರು ಪೇಟೆಯಲ್ಲಿ ಗ್ಯಾಸದೀಪಗಳನ್ನು ಹಚ್ಚಿಸುತ್ತಾರೆ. ಅದರ ಪೇಟೆಯಲ್ಲಿ ಇವು ಅವಶ್ಯವಿದ್ದ ಭಾಗಕ್ಕಿಂತ ಹೆಚ್ಚಿನ ಖರ್ಚಿನಿಂದ ಮಣಕಿ, ವನ್ನಳ್ಳಿ ಈ ಮಾರ್ಗಗಳ ಮೇಲೆ ದೀಪದ ಕಂಬಗಳನ್ನು ಹಚ್ಚಿದರೆ ಅನುಕೂಲವಾಗುವದು. ಈ ಮಾರ್ಗಗಳ ... ಬಹಳ ದೂರ ದೂರ ದೀಪದ ಕಂಬಗಳಿದ್ದು, ... ಲಿಯಲ್ಲಿ ಚಿಕ್ಕಗಳಂತೆ ಬೆಳಗುತ್ತವೆ. ... ಕು ಕಂಬದ ಆಚೆ ಈಚೆ ೩-೪ ಮಾರು ಸುತ್ತ ಸರಿಯಾಗಿ ಕಾಣುವದಿಲ್ಲ. ಅಷ್ಟು ... ಕಂಬಗಳು ಹಚ್ಚಲ್ಪಡುತ್ತವೆ. ಒಳ ಮಾರ್ಗಗಳ ಹಾಗು ಪೇಟೆಯ ಹೊರ ಮಗ್ಗುಲಗಳ ಮಾರ್ಗಗಳ ಸ್ಥಿತಿಯೇ ಹೀಗೆ; ಅವುಗಳ ಕಡೆಗೆ ನೋಡುವವರಿಲ್ಲ. ಪೇಟೆಯ ಕಡೆ ಮಾರ್ಗಗಳ ಜೀರ್ಣವೊಂದು ವಿಪರೀತವಾಗಿ ಸಾಗುತ್ತದೆ. ಮುನಿಸಿಪಾಲಿಟಿಯವರು ಹಿಂದು ದಿನ ಕಗ್ಗತ್ತಲಿನ ರಾತ್ರಿಯಲ್ಲಿ ಪೇಟೆಯ ಹೊರ ಮಗ್ಗುಲಿನ ಮಾರ್ಗಗಳ ಮೇಲೆ ಅನುಭವ ಪಡೆಯಬೇಕು. ಮತ್ತು ಪೇಟೆಯಲ್ಲಿ ಗ್ಯಾಸದೀಪ ಹಚ್ಚಿ ಮಾಡುವ ಖರ್ಚು ಯೋಗ್ಯವೋ ಹೇಗೆ ಎಂಬವನ್ನು ವಿಚಾರಿಸಬೇಕು, ಇತ್ಯಾದಿ—

ಶುಕ್ರವಾರ ಬೆಳಗಿನ ... ರಾಜಮಾರ್ಗದ ಎಡಬದಿಗೆ ... ಬಿದ್ದ ಸುದ್ದಿ ಊರಲ್ಲಿ ಹಬ್ಬಿತ್ತು. ಪೋಲೀಸರಿಗೆ ಸ್ಪಷ್ಟವಾಗಿ ಪಂಚನಾಮೆಯಾದಿ ವಿಧಿಗಳಾಗಲಿಕ್ಕೆ ಅವರಾನ್ನ ನಾಲ್ಕು ಘಂಟೆ ಬಡಿಯಿತು. ಮೃತನ ಹತ್ತರ ಹಿಂದು ಮಂಚಾಂಗವಿತ್ತು. ಅದರ ಮೇಲಿಂದ ಆತನು ಹುಬ್ಬಳ್ಳಿಯವನಿರಬೇಕೆಂದು ತರ್ಕ!

ಸಾಭಾರ ಸ್ವೀಕಾರ.

Volunteer.... November issue. Editor & publisher-Dr. N. S. Hardiker, Volunteer office, Hubli Annual subscription Rs 3/- only. Post free.

ವೃತ್ತಸಾರ.

— ಹಿಂದೂಗಳಿಗೆ ಅಮೇರಿಕೆಯಲ್ಲಿ ನಾಗರಿಕ ಹಕ್ಕು ... ೧೯೨೩ ನೇ ಇಸ್ವಿಯಲ್ಲಿ ವರಿಷ್ಠ ನ್ಯಾಯಾಲಯವು ನಿರ್ಣಯಿಸಿತ್ತು. ಆ ನಿರ್ಣಯವನ್ನು ಸರ್ಕಿಟ ಕೋರ್ಟಿನವರು ರದ್ದು ಮಾಡಿ ಪಂಡಿತ ... ನಾಗರಿಕ ಹಕ್ಕನ್ನು ಕೊಟ್ಟಿರುವರು. ಪಂಡಿತರು ಹೇಸರಿನಂತೆ ವಿದ್ಯಾ ತ ಪಂಡಿತರಿದ್ದಾರೆ.

— ಜಿನೀವಾ ಕಮೀಶನಿನ ಮುಂದೆ ವಿವಿಧ ಪ್ರಾಂತೀಯ ... ಸಂಸ್ಥೆಗಳಾಗ ... ಪ್ರತ್ಯೇಕವಾಗಿ ... ಭಿನ್ನ ಭಿನ್ನವಿವೆ. ... ಶಿಕ್ಷಣ, ಔಷಧ, ... ಸಾಲ ತೆಗೆಯಬೇಕು. ... ಜೀನಸುಗಳ ... ಈ ... ಕಾಲವನ್ನು ... ನಡಿಸಲು ... ನಿವಾರಣೆಗೆ ... ಹಾಗೆ ... ವಿಧಿ ... ಸಿನೆಮಾ ... ಕೇಳಿದ ರುಚಿಯನ್ನು ... ಬ ... ಮಾಡಬೇಕು ... ವ್ಯವಸ್ಥೆ ... ಸ್ಥಳಗಳಲ್ಲಿದ್ದ ... ಚಿಕ್ಕ ... ಮಾರ್ಗಗಳ ... ಸಾಧನ ... ರತ್ನ ... ಭಾಗವಹಿಸಲಿಕ್ಕೆ ... ಮತ್ತು ಅದಕ್ಕೆ ಪ್ರತಿಫಲ ವಾಗಿ ... ವಡಿಯಬೇಕು, ... ಬೆಲೆಗಳನ್ನು ಮಾಡಿ ... ಅದನ್ನು ... ಇತ್ಯಾದಿ ಚಿತ್ರವಿಚಿತ್ರ ಸೂಚನೆಗಳು ಸೂಚಿಸಲ್ಪಟ್ಟಿವೆ.

— ... ಕೌನ್ಸಿಲುಗಳಲ್ಲಿ ನಡೆಸುವ ಕೆಲಸದ ಕುರಿತು ಹೊಸ ನಿಯಮಗಳಾಗಿವೆ. ಸಭಾಸದರಿಗೆ ... ವನ್ನು ಸೂಚಿಸುವ ... ಹಕ್ಕು ... ಸರಕಾರಿ ... ಪ್ರಾಂತಿಕ ಕಾಯದೆ ಕೌನ್ಸಿಲುಗಳಲ್ಲಿ ದಿವಾಣರ ಮೇಲೆ ... ಠರಾವುಗಳನ್ನು ಸೂಚಿಸಬೇಕಾದರೆ, ಮುಂಬಯಿ ಪ್ರಾಂತದಲ್ಲಿ ಕನಿಷ್ಠಪಕ್ಷ ೪೬ ಮಂದಿ ಸಭಾಸದರು ಸೂಚಿಸಬೇಕೆಂಬ ಅಭಿಪ್ರಾಯವಿರಬೇಕು. ದಿವಾಣರು ರಾಜಿನಾಮೆ ಕೊಟ್ಟಲ್ಲಿ, ಅವರು ... ಕಾರಣಗಳ ಚರ್ಚೆಯು ಕೌನ್ಸಿಲಿನಲ್ಲಿ ನಡಿಸಕೂಡದು. ಇತ್ಯಾದಿ ಸಿದ್ಧಾಂತಗಳಾಗಿವೆ.

... ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ಸಂಸ್ಕೃತಿಯ ಕೇಂದ್ರ ಮಾಡಬೇಕಾಗಿ ಸೂಚನೆಯ ವಿಚಾರ ನಡೆದದೆ. ಮುಂಬಯಿ, ಮದ್ರಾಸ ಸರಕಾರಗಳು ತಮ್ಮ ಕಕ್ಷೆಯೊಳಗಿನ ಪ್ರದೇಶದ ಶಿಕ್ಷಣದ ಅಧಿಕಾರವನ್ನು ಮೈಸೂರ ಕೇಂದ್ರಕ್ಕೆ ವಹಿಸಬೇಕಾಗಿಯೂ ಹಿಂದು ಸೂಚನೆ ನಡೆದದೆ.

— ರಂಗೂನ ಮುನಿಸಿಪಾಲಿಟಿಯ ಆರೋಗ್ಯ ಖಾತೆಯ ಕುರಿತ, ಚೌಕಶಿ ಮಾಡಲಿಕ್ಕೆ ಬ್ರಹ್ಮದೇಶದ ಸರಕಾರವು ಮಂಡಳವನ್ನೊಂದು ನೇಮಿಸಿತ್ತು. ಆ ಮಂಡಳವನ್ನು ನೇಮಿಸುವ ಮುಂಚೆ ಸರಕಾರವು ಮುನಿಸಿಪಾಲಿಟಿಯ ಅಭಿಪ್ರಾಯ ಪಡೆಯಲಿಲ್ಲ. ಆದ ರಿಂದ ಮುನಿಸಿಪಾಲಿಟಿಯವರು ಮಂಡಳವನ್ನು ಬಹಿಷ್ಕರಿಸುವ ನಿರ್ಧಾರ ಮಾಡಿದರು. ಮತ್ತು ಸರಕಾರಿ ಮಂಡಳಕ್ಕೆ ಯಾರೊಬ್ಬರೂ ಏನೊಂದೂ ಮಾಹಿತಿ ಕೊಡಬಾರದಾಗಿ ನಿರ್ಧರಿಸಿದರು. ಸರಕಾರವು ಒಗ್ಗಿ ಮಂಡಳದ ವಿಚಾರಕ್ಕೆ ತಡೆಹಾಕಿದ್ದು ಮುನಿಸಿಪಾಲಿಟಿಗೆ ಪುನರಾಲೋಚನ ಮಾಡಲು ಸೂಚಿಸಿದೆ.

— ಮದ್ರಾಸ ಸರಕಾರದ ರಾ| ರಾಮಸ್ವಾಮಿ ಅಯ್ಯರವರು ವಿಲಾಯತಿಯೊಳಗಿನ ರಾಷ್ಟ್ರ ಸಂಘಕ್ಕೆ ಹೋಗಿದ್ದರು ರಾಷ್ಟ್ರ ಸಂಘದಲ್ಲಿ ಹಿಂದುಸ್ಥಾನಕ್ಕೆ ಬಹಳ ಹಕ್ಕಿರುವದಾಗಿ ಸಾರಹೊರಟಿದ್ದಾರೆ. ರಾಷ್ಟ್ರ ಸಂಘದಲ್ಲಿ ಹಿಂದುಸ್ಥಾನಕ್ಕೆ ಎಷ್ಟು ಹಕ್ಕು ಇರುವದೆಂಬುದು ನಮಗೆಲ್ಲರಿಗೂ ಗೊತ್ತಿದೆ. ಸುಮ್ಮನೇ ರಾ| ಅಯ್ಯರರಿಗೆ ಕಂಠಶೋಷಣೆ ಯಾಕೆ?

— ಸಾಮ್ರಾಜ್ಯ ಪರಿಷತ್ತಿನಲ್ಲಿ ಭರತ ಭೂಮಿಯ ಪ್ರತಿನಿಧಿಯಾಗಿ ಹಿಂದುಸ್ಥಾನ ಸರಕಾರದಿಂದ ನೇಮಿಸಲ್ಪಟ್ಟ ಬರದ್ವಾನದ ಮಹಾರಾಜರು ಮಹಾತ್ಮಾ ಗಾಂಧಿಯವರ ಚಳವಳಿಯು ಹುಡುಗಾಟಿಕೆಯೆಂದು ಸಂಬೋಧಿಸಿದರು.

... ಹಿಂದುಸ್ಥಾನ ಸರಕಾರವು ಅಂತರಿನೊಳಗಿನ ಉಷ್ಣ ಪ್ರದೇಶದ ರೋಗಗಳ ಸಂಶೋಧಕರಿಗಾಗಿ ರೊಸ್ ಇನ್‌ಸ್ಟಿಟ್ಯೂಟ ಎಂಬ ಸಂಶೋಧಕ ಸಂಸ್ಥೆಗೆ ೫೫೦ ಪವನುಗಳನ್ನು ಕೊಟ್ಟಿರುವದು, ಯಾವದೊಂದು ನೆವದಿಂದ ಇಲ್ಲಿಯ ಹಣ ವಿಲಾಯತಿಗೆ ಕಳಿಸಿದರಾಯಿತು. ಉಷ್ಣ ಪ್ರದೇಶದ ರೋಗಗಳ ಸಂಶೋಧನ ಮಾಡಲು ನಮ್ಮಲ್ಲಿಯ ಸಂಶೋಧಕರಿಗೆ ಬುದ್ಧಿ ಇಲ್ಲೇನು ?

— ಭಟ್ಟರ ಸಿಂಧರದ ಕುರಿತು ಹಿಂದು ಚೌಕಶಿಯ ಮಂಡಳ ನೇಮಿಸಲ್ಪಟ್ಟಿತ್ತು. ಡಾ| ರಘುನಾಥರಾವ ಪರಾಂಜಪೆಯವರು ... ಕಮೀಟಿಯ ಸಭಾಸದರಿದ್ದರು. ಆ ರಿಪೋರ್ಟಿನ ಗತಿಯು ಏನಾಯಿತೆಂಬುದು ... ನ್ನೂ ತಿಳಿಯಲಿಲ್ಲ.

— ಪೂಣೆಯ ಮಹಾರಾಜಾ ಬಾಗ ಎಂಬ ಉಪವನದಲ್ಲಿ ನೇರಿಸಿದ ಸ್ವದೇಶಿ ಪ್ರದರ್ಶನವು ೫೦ ದಿವಸಗಳ ವರೆಗೆ ನಡೆಯಿತು. ೩೩ ಸಾವಿರ ಮಂದಿಗಳು ಈ ಪ್ರದರ್ಶನದ ಲಾಭಕೊಂಡರು. ಈ ಅವಧಿಯಲ್ಲಿ ೩೫ ಸಾವಿರ ರೂಪಾಯಿಗಳ ಸ್ವದೇಶಿ ಸಾಮಗ್ರಿಗಳು ಖಚಾರದವು.

— ಸಾರ್ವಭೌಮ ಬೇಸಾಯ ಕಮೀಶನಿನವರು ಪೂಣೆಯ ನೆರೆಹೊರೆಯಲ್ಲಿದ್ದ ಜತೆಗಾಂವ ಎಂಬ ಹಳ್ಳಿಗೆ ದರ್ಶನವಿತ್ತರು. ಅಲ್ಲಿಯ ಆರ್ಥಿಕ ಸ್ಥಿತಿಯನ್ನು ಸ್ವತಃ ನೋಡಿದರಂತೆ. ನಮ್ಮತ್ತ ಕಡೆಗೂ ಬಂದು ನೋಡಬಹುದು. ನೋಡಿದರೆ ಲಾಭವಾಗಬೇಕು

.. ಶ್ರೀ| ಗಂಗಾಧರರಾವ ದೇಶಪಾಂಡೆಯವರು ತಾ. ೧೭ ನೇ ಶಿ ಪಂಢರಪುರದಲ್ಲಿ ಖಾದಿ ಪ್ರದರ್ಶನವನ್ನು ತೆರೆಯುವವರಿದ್ದಾರೆ.

... ಜಗನ್ನಾಥ ದೀನಾನಾಥ ಎಂಬ ೩೫ ವರ್ಷ ವಯಸ್ಸಿನ ಧಾರ್ಮಿಕ ವೃತ್ತಿಯವನು ಗುರುಸಿನ ವಿನಿ ... ಮಾಡುತ್ತಿರುವಾಗ, ಬ್ರಾಹ್ಮಣ ... ವ್ಯಕ್ತಿಯೋ ಕಟ್ಟಿ ವಧಿಸಿದನು.

ಬೆಳಗಾಂವ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ [illegible] ಹೂವಿನ ಅಂಗಡಿ-ಚಿಕ್ಕೋಡಿಯವರೊಳಗಿನ ಜಗಳವು ಸಣ್ಣ ಬಾಲದಂತೆ ಬೆಳೆಯುತ್ತ ನಡೆದಿದೆ. ಅಧ್ಯಕ್ಷ ಸ್ಥಾನದ ಚುನಾವಣೆಯು ರಾ| ಬಾ| ಅಂಗಡಿಯವರಿಗೆ ಪ್ರತಿಕೂಲವಾಗಿ ಸಾಧಿಸಲಾಗದಿದ್ದರೂ ಚಿಕ್ಕೋಡಿಯವರ ಅಂಗಡಿಯವರು ಇಟ್ಟ ಸ್ಕೂಲು ಬೋರ್ಡಿನ ಸಭೆಯನ್ನು ಚಿಕ್ಕೋಡಿಯವರು ರದ್ದು ಮಾಡಿದರು. ಇದಕ್ಕೆ ಪ್ರತಿ ಸ್ಕೂಲ ಬೋರ್ಡಿನ ಸಭೆಗೆ ಸಭಿಕರು ಬಂದಲ್ಲಿ ಅವರಿಗೆ [illegible] ಕಳಿಸಲ್ಪಟ್ಟಿಲ್ಲವಾಗಿಯೂ ಹೊಸವು ಕೊಟ್ಟರು. ಉಪಾಧ್ಯಕ್ಷರಾದ ರಾ| ಸಾ| ಅನಗೋಳ ವೈಕುಂಠನವರು ಸ್ಕೂಲ ಬೋರ್ಡಿನ ಸಭೆಯನ್ನು ನಿಮಂತ್ರಿಸುವ ಅಧಿಕಾರವು ತಮ್ಮದೆಂದು ಹಟ ಹಿಡಿದು, ತಮ್ಮ ಹಕ್ಕಿನಂತೆ ಸಭೆ ಕರೆಯಬೇಕೆಂದರು. ರಾ| ಬಾ| ಅಂಗಡಿ, ರಾ| ಸಾ| ಅನಗೋಳ ಹಾಗು ರಾ| ಚಿಕ್ಕೋಡಿ ಇವರ ಮೇಲೆ ರಾ| ಚೌಗಲೆ ಮೊದಲು ದಾವೆಯನ್ನು ದಾಖಲಿಸಿ ಸ್ಕೂಲ ಬೋರ್ಡಿನ ಸಭೆಯನ್ನು ನಿರಿಸದಂತೆ ಕೋರ್ಟಿನ ಪ್ರತಿಬಂಧಕ ಹುಕುಮನ್ನು ಪಡೆದಿರುವರು. ಜಗಳಗಂಟತನವು ಇನ್ನು ಎಲ್ಲಿಗೆ ಮುಟ್ಟುವದೆಂದು ಹೇಳುವವರ್ಯಾರ ?

ಮೈಸೂರ ಸಂಸ್ಥಾನದ ಹೊನ್ನಾಳಿ, ಚನ್ನಗಿರಿ, [illegible] ಮುಂತಾದ ಗ್ರಾಮಗಳೊಳಗಿನ ದೇವಾಭಿಮಾನಿ [illegible] ದೇಶದಲ್ಲಿ ತಯಾರಾಗುವ ಸಕ್ಕರೆ ಒಳಗೊಳ್ಳಬೇಕೆಂದು ನಿರ್ಧರಿಸಿ, ಅದರಂತೆ [illegible] ಮಾಡಲಾರಂಭಿಸಿರುವರು.

[illegible] ದೇಶದ ಅಮೀನಗಡ ಪ್ರದೇಶದಲ್ಲಿ ಭೂಮಿಯು ಒಂದು ತಾಸಿನ ವರೆಗೆ ಅದ್ಭುತ ಧ್ವನಿಮಾಡುತ್ತ [illegible] ನಿಂತಿತು; [illegible] ಮನೆಗಳು ನೆಲಕ್ಕುರುಳಿದವು; ಹಲವರು ಮಡಿದರು ಹಾನಿಯಾದ ಜನರಿಗೆ [illegible] ಗಳಾಗಿವೆ. ಆ ಊರುಗಳು ನೆಲಸಮವಾದವು. [illegible] ಊರುಗಳಲ್ಲಿ ಹಾನಿಯ ಸಬ್ದ. ಜನರು ಭ್ರಾಂತರಾಗಿ [illegible] ಕಾಲಕಳೆಯುತ್ತಿದ್ದಾರೆ.

[illegible] ಪರ್ವತಗಳಿಗೆ ಆಚೆಯವೆಂದು ಹೇಳುತ್ತಾರೆ ಅದರ [illegible] ಭಾಗದವರು ಇದಕ್ಕೊಂದು ಅನಾಮಧೇಯವನ್ನು ಇಟ್ಟು [illegible] ದಿದ್ದಾರೆ. ಸ್ಥಾನೀಯರಿಂದ ಅರ್ಜೆಂಟಿನಾ ಎಂಬ [illegible] ಪರ್ವತವು ವೇದಿಕೆಯ ಆ ಅಂಚಿನಂತೆ ನಡೆಯುತ್ತಿರುವ [illegible] ಈ ಪರ್ವತವು ೬ ಸಾವಿರ ಫೂಟು ಎತ್ತರವಿದೆ. [illegible] ವು ಮಕ್ಕಳೊಂದು ಅಪವಾದ ಬೇಕಲ್ಲವೇ?

[illegible] ಕುಂಭಕೋಣದ ಶಾಮಕೋಟ ಶೀರುಲುಧೀಕರಾದ ಶ್ರೀ [illegible] ಶ್ರೀ ನ್ಯಾಯ ವಿದ್ಯಾಭ್ಯಾಸಕ್ಕಾಗಿ [illegible] ನಕ್ಕೆ ಉತ್ತೇಜನ ಕೊಡುವ ಸಂಕಲ್ಪದಿಂದ [illegible] ರೊಳಗಿನ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ [illegible] ಸಿದ್ಧಾಂತದಲ್ಲಿ ಉತ್ತಮವಾಗಿರುವ [illegible] ರವರಿಗೆ ವರ್ಷಾಸನ ಪಾರಿತೋಷಕಗಳನ್ನಿತ್ತು [illegible] ಗೊಳಿಸುತ್ತಿದ್ದಾರೆ. ಈ ದರುಶ ಅನುಕೂಲ್ಯಮಾದ ಕ್ಷೇತ್ರಗಳ [illegible] ಸಂಕಲ್ಪವನ್ನು ಪಾರಿತೋಷಕಕ್ಕಾಗಿ [illegible] ಮಾಡಿರುವರು. ಧರ್ಮಾಭಿಮಾನಿಗಳು ಸಂಸ್ಕೃತವು ನಮ್ಮ [illegible] ಧರ್ಮ ರಕ್ಷಕ ಪೀಠಾಧೀಶರಿಗೂ ಅನುಕರಣೀಯವಿದೆ.

[illegible] ಕರ್ನಾಟಕ ಕಾಲೇಜ ಸಂಸ್ಥೆಗಾಗಿ ಸಂಗ್ರಹಿಸಿದ [illegible] ದಲ್ಲಿ ಸುಮಾರು ೩ ಸಾವಿರ ರೂಪಾಯಿಗಳು [illegible] ರುವವು, ಆ ಹಣವನ್ನು ಸರಕಾರದ ಕಡೆಗೆ ಅಥವಾ [illegible] ಬ್ಯಾಂಕಿನಲ್ಲಿಟ್ಟು ಅದರಿಂದ ಹುಟ್ಟುವ ಸುಮಾರು [illegible] ರೂಪಾಯಿಗಳ ಬಡ್ಡಿಯನ್ನು ಬಿ. ಎ. ಪರೀಕ್ಷೆಯಲ್ಲಿ [illegible] ನ್ನಡ ಭಾಷೆಯಲ್ಲಿ ಅಗ್ರಸ್ಥಾನ ಪಡೆಯುವವರಿಗೆ ಪಾರಿತೋಷಕ ಕೊಡಬೇಕಾಗಿ ಶ್ರೀ ಬಳವಿದ ಪಾ| ಸಂಕಲ್ಪಿ [illegible] ರುವರು ಈ ಪಾರಿತೋಷಕಕ್ಕೆ ಶ್ರೀ ವಿದ್ಯಾರಣ್ಯ ಪಾರಿತೋಷಕವೆಂಬ ನಾಮಧೇಯ ಕೊಡಲ್ಪಟ್ಟಿದೆ.

[illegible] ಬಿಜಾಪುರ ಪ್ರಾಂತದ ಧನಟುದದಲ್ಲಿ ಭೂಗರ್ಭಶಾಸ್ತ್ರ [illegible] ಶಾಲೆಯು ಡಿಸೆಂಬರ ೧೦ ನೇ ತಾರೀಖಿಗೆ ಪ್ರಾರಂಭವಾಗುವದು.

— ಚೀನ ದೇಶದಲ್ಲಿ ಸೇರುವ ಜನಾಂಗಗಳನ್ನು ಕಲಾಸ ಕಳಿಸಲು ಚೀನದ ರಾಷ್ಟ್ರೀಯ ಸರಕಾರವು ಒಂದು ಹೊಸ ಯೋಜನೆಯನ್ನು ಮಂಡಿಸಿದೆ ಈ ಯೋಜನೆಯು ಜಪಾನದ ಸರದಾರರಿಗೆ ವಿರೋಧವಾದದ್ದೆಂದು ಅಮೇರಿಕೆಯ ಸಂಯುಕ್ತ ಸಂಸ್ಥಾನದ ಸರಕಾರದ ದೊಡ್ಡ ಆಕ್ಷೇಪ!

— ಸಿಂದನೂರಿನೊಳಗೆ ಗಾಳಿ ಮಳೆಯಿಂದ ಪಶ್ಚಿಮ ಬೆಳೆದುಬೆಳೆದ ಸಂಕಟನಿವಾರಣೆಗಾಗಿ ಪಂಜಾಬದ ಒಬ್ಬ ಶ್ರೀಮಂತನಿಗೆ ೫೦ ಸಾವಿರ ರೂಪಾಯಿಗಳನ್ನು ಕಳಿಸಿದನು !

— ಅಫೀಮು ಹಾಗು ಹೊಗೆಸೊಪ್ಪು ನಿಷೇಧವಾಗಿರುವ ಕಾಯಿದೆ ಕೌನ್ಸಿಲಿನಲ್ಲಿ ಎರಡು ಕಾಯಿದೆಗಳು ಮಂಜೂರಾಗಿವೆ. ವ್ಯಾಪಾರಿಗಳಿಗೆ ಈ ಕಾಯಿದೆಗಳಲ್ಲಿ ದೋಷಗಳು ಕಂಡುಬಂದು ಅವರು ಈ ಕಾಯಿದೆಗಳಿಗೆ ತಮ್ಮ ಸಮ್ಮತಿ ಕೊಡದ ಹಾಗೆ ಕೇಳಿಕೊಂಡಿರುವರು. ಕಾಯಿದೆ ಕೌನ್ಸಿಲಿನ ಪ್ರತಿನಿಧಿಗಳು ಕೇಳುವರೋ? ಅಥವಾ ಪ್ರಾಂತ ಕಾರ್ಯದ ಅಧಿಕಾರಿಯಿರುವದರಿಂದ, ಅಧಿಕಾರದ ಮುಂದೆ ಜನ ಮತಕ್ಕೆ ಕೇಳುವವರ್ಯಾರು?

— ಮುಂಬಯಿಯಲ್ಲಿ 'ಚೆಕ್‍ಟೇ' ಸಮುದ್ರ ಪಕ್ಕದ ಶಹರವನ್ನು ಕಾಂಬಿ ಭೂಪ್ರದೇಶವನ್ನು ನಿರ್ಮಿಸಲು ದೊಡ್ಡ ದೊಂದು ಯೋಜನೆ ನಡೆದಿತ್ತು ಈ ಕುರಿತು ಮುಂಬಯಿಯ ವಿಖ್ಯಾತ ಎಂಜಿನಿಯರರಾದ ರಾ| ಕೇ. ಎಫ್. ನರೀಮಾನರವರ ಮೇಲೆ ಮಾನನಷ್ಟದ ಫೌಜದಾರಿ ಖಟ್ಲೆ ಹೂಡಲು ಹಿಂದುಸ್ಥಾನ ಸರಕಾರವು ಸಮ್ಮತಿಯನ್ನಿತ್ತಿರುವರು. ಚೆಕ್‍ಟೇ ಖಾತೆಯ ಸುಪರಿಂಟೆಂಡಿಂಗ ಇಂಜನಿಯರರಾದ ಮಿ| ಹಾರ್ವೇಯು ಖಟ್ಲೆ ಫಿರ್ಯಾದಿಯಾಗುವರು. ಮುಂಬಯಿ ಹು ಸರಕಾರದ ಕೈ ಖರ್ಚ ತೆರಬೇಕು. ರಾ| ನರೀಮಾನರವರು ದೋಷಮುಕ್ತರಾದರೆ, ಖರ್ಚನ್ನು ಮಿ| ಹಾರ್ವೇಯವರು ತೆರಬೇಕಂತೆ! ಚೆಕ್‍ಟೇ ಪ್ರಕರಣದ ಚೌಕಶಿಯ ಸಮಯ ಕೊಟ್ಟ ಸಾಕ್ಷಿಯ ಮೇಲಿಂದ ಈ ದೊಡ್ಡ ದೊಡ್ಡ ಖಟ್ಲೆಗಳು ಬಂದ ಚೌಕಶಿ ಕಮಿಟಿಯ ಮುಂದೆ ಸಾಕ್ಷಿ ಕೊಟ್ಟವರ ಮೇಲೆ ಫೌಜದಾರಿ ಖಟ್ಲೆಗಳನ್ನು ನಡೆಸಲು ಹಾಕುವದು ಕೂಡದೆಂದಿಲ್ಲವು ಚೌಕಶಿ ಮಂಡಳದ ಅಧ್ಯಕ್ಷರಾದ ಮಿ| ವೇದ ಸರವರು ಅಭಿಪ್ರಾಯ ಕೊಟ್ಟದ್ದರು. ಚೌಕಶಿ ಕಮಿಟಿಯ ವರದಿಯು ಇದೇ ಬರುವ ನವಂಬರ ಕೊನೆಗೆ ಪ್ರಕಟವಾಗುವದಂತೆ!

—ಬೆಂಕಿಪೆಟ್ಟಿಗೆಯ ಪ್ರಯೋಗವನ್ನು ನಮ್ಮ ಜಿಲ್ಹೆಯ ಕುಂದಾಪುರ-ಕುಮಟೆಯಲ್ಲಿ ಸಪ್ರಯೋಗ ಮಾಡಿ ತೋರಿಸಿದ ಶ್ರೀ| ಭಿಡೆಯವರಿಗೆ ಬೇಕಾದ ಪ್ರದರ್ಶನದ ಸಮಯ ಪ್ರಯೋಗಗಳನ್ನು ಮಾಡಿ ತೋರಿಸುವದಕ್ಕಾಗಿ ಬೇಕಾದ ಖಾತೆಯ ಅಧಿಕಾರಿಗಳು ೩೦೦ ರೂಪಾಯಿಗಳನ್ನು ಕೊಟ್ಟರು ಇದೊಂದು ದೊಡ್ಡ ಉಪಕಾರವಾಯಿತು.

ಮೇಲ್ಜಾತಿಯ ಕೇರಿಯಲ್ಲಿ ಒಂದು ಪಾಯಖಾನೆಯನ್ನು ನಾವು ನೋಡಿದೆವು. ಅದರ ವಿವರವನ್ನು ನಾನು ಕೊಡಲೇಬೇಕು. ಪ್ರತಿಯೊಂದು ಕೋಣೆಯಲ್ಲಿ ಒಂದೊಂದು ಕಾಲುವೆಯಿತ್ತು. ಆ ಕಾಲುವೆಯೊಳಗಿಂದ ನೀರನ್ನು ಒಗೆಯುತ್ತಿದ್ದರು; ಮೂತ್ರವನ್ನು ಬಿಡುತ್ತಿದ್ದರು. ಇದರಿಂದ ಇಡೀ ಮನೆಯಲ್ಲಿಯೇ ದುರ್ಗಂಧ ಬರುತ್ತಿತ್ತು. ಇದೇ ಕೇರಿಯೊಳಗಿನ ಇನ್ನೊಂದು ಮೇಲುಪ್ಪರಿಗೆಯ ಮನೆಯಲ್ಲಿ ಶಯನಮಂದಿರವೊಂದಿತ್ತು. ಅಲ್ಲಿಯ ಕಾಲುವೆಯೊಳಗಿಂದ ಮಲ-ಮೂತ್ರಗಳನ್ನು ವಿಸರ್ಜಿಸುತ್ತಿದ್ದರು. ಆ ಕಾಲುವೆಗೊಂದು ಕೊಳವೆಯಿತ್ತು. ಆ ಕೊಳವೆಯೊಳಗಿಂದ ಮಲ-ಮೂತ್ರಗಳು ಕೆಳಗೆ ಬೀಳುತ್ತಿದ್ದವು. ಶಯನಮಂದಿರದಲ್ಲಿ ದುರ್ಗಂಧದಿಂದ ನಿಲ್ಲಲಾಗುತ್ತಿದ್ದಿಲ್ಲ. ಅಂಥ ಕಡೆಯಲ್ಲಿ ಜನರು ಆ ಕೋಣೆಯಲ್ಲಿ ಹ್ಯಾಗೆ ಮಲಗುತ್ತಿದ್ದರೆಂದು ವಾಚಕರೇ ಕಲ್ಪಿಸಬೇಕು.

ಮುಂಭಾಗದವರು ಅಲ್ಲಿಯ ಪಾಂಚ್ಯ ವೈಷ್ಣವ ಗುಡಿಯಾ ದ ಹವೇಲಿಯನ್ನು ಸಂದರ್ಶಿಸಿದರು. ಹವೇಲಿಯ ಅಧಿಕಾರಿ ನಮ್ಮ ಮನೋಗತವನ್ನು ತಿಳಿದುಕೊಂಡು ಆದರದಿಂದಿದ್ದರು. ಆದರಿಂದ ನಮಗೆ ಬೇಕಾದ್ದನ್ನು ನೋಡಿಕೊಳ್ಳಲಿಕ್ಕೆ ಮತ್ತು ಅವಶ್ಯವಿದ್ದ ದಾಖಲೆಗಳನ್ನು ಸೂಚಿಸಲಿಕ್ಕೆ ಆತನು ನಮಗೆ ಹೇಳಿದನು. ಹವೇಲಿಯ ಒಂದು ಭಾಗವನ್ನು ಆತನೆಂದೂ ನೋಡಿದ್ದಿಲ್ಲ. ಎಂಜಲು ಎಲೆಗಳನ್ನೂ, ಎಂಜಲುಗಳನ್ನೂ ಗೋಡೆಯ ಆಚೆಗೆ ಒಗೆಯುತ್ತಿದ್ದರು. ಅಲ್ಲಿ ಹಣ್ಣುಗಳು, ಕಾಗೆಗಳು ಆಗಿಂದಾಗ ಬರುತ್ತಿದ್ದವು. ಅಲ್ಲಿಯ ವಾಯುಮಾನಗಳೂ ಒಳ್ಳೇ ಹೊಲಸು. ನಾವು ಮಾಡಿದ ಆರೋಗ್ಯದ ಸೂಚನೆಗಳನ್ನು ಅಧಿಕಾರಿಯು ಕೈಕೊಂಡನೆಂದು ತಿಳಿಕೊಳ್ಳುವದು ಅವಧಿಯ ತನಕ ನಮ್ಮಿಂದ ರಾಹಕರಾಗಿಟ್ಟಲ್ಲಿ ಉಳಿಯಲಾಗಲಿಲ್ಲ. ಪೂಜಾಸ್ಥಾನದಲ್ಲಿ ಇಷ್ಟು ಹೊಲಸು ನೋಡಿ, ನನಗೆ ವ್ಯಸನವಾಯಿತು. ಪವಿತ್ರ ಸ್ಥಾನಗಳಲ್ಲಿಯಾದರೂ ಆರೋಗ್ಯ ಪಾಲಿಸುವ ನಿಯಮಗಳನ್ನು ಜಾಗ್ರತೆಯಿಂದ ಪಾಲಿಸಬೇಕೆಂದು ಯಾರಾದರೂ ಎತ್ತಿಹೇಳಬೇಕು. ಸ್ವಚ್ಛ ತಾರಯದ ಯಷಿಗಳು ಅಂತರ್ಬಾಹ್ಯಗಳನ್ನು ನಿರ್ಮಲವಾಗಿ ಕಾಪಾಡಬೇಕೆಂದು ವಿಶೇಷ ಒತ್ತಿನಿಂದ ಹೇಳಿದ್ದಾರಲ್ಲವೇ?

झंडूचें

द्राक्षासव- एक रतलास किंमत १॥ रुपये;

रामबाण औषध

सर्दी घालविणारें
भूक वाढविणारें
शोच्यास साफ करणारें
झोंप आणणारें
शक्ति देणारें
तेजस्वीपणा आणणारें

विश्वास रुचिकर.

कचाटखाना मागवा,

झंडु फार्मास्युटिकल वर्क्स लिमिटेड, मुंबई नं. १४

एजंट— मेसर्स पंडित आणी कंपनी, तीर्थहळ्ळी.

सिर्सि एजंट- एस. एल्. धाकप्पा आणि ब्रदर.

BATLIBOI'S
Accountancy Training Institute

Recognised by The G. D. A. Board

Offers best training in Accounting, Banking, Company Management and Secretarial Work and Theory and Practice of Commerce.

Best staff, Individual attention, fee moderate, and payable by instalments.

Send for Prospectus at Yusuf Buildings, Churchgate street Fort, Bombay.

You are invited to make thorough enquiry before joining

TUITION BY POST IS OUR SPECIALITY.

ಆಯುರ್ವೇದಿಕ] ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ [ಮಲಬಾರಿ ಕೃತಿ

ಅನುಭವಿಕ ಔಷಧಗಳು!

೧. ಮದನಕಾಮೇಶ್ವರಿ ಲೇಹ_ ಧಾತುಪುಷ್ಟಿಕ, ವೀರ್ಯ—ಶಕ್ತಿವರ್ಧಕ, ಕಾಮೋತ್ತೇಜಕ.
೨. ಮದನ ಕಾಮೇಶ್ವರ_ ಗುಣ ಮೇಲಿನಂತೆ. ೫. ೧ಕ್ಕೆ ೨ ರೂ. ೩ ಕ್ಕೆ ೫ ರೂ. [೬. ೧ಕ್ಕೆ ೨॥ ರೂ.
೩. ಉದರರಿಪು_ (ಗರ್ಮಿ) ರೋಗಕ್ಕೆ ಮಾತ್ರ, ಇಂದ್ರಿಯದ ಹುಣ್ಣು ಪರಮಾ ಯಾವದೇ ತರದ ಕಠಿಣ ರೋಗವಾದರೂ ಪಾರಕೋನ್ಮುಖ ಸ್ಥಿತಿಯಲ್ಲಿದ್ದರೂ ೬ ದಿವಸದಲ್ಲಿ ಗುಣಹೊಂದುವದು.
೪. ಗರ್ಮಿ ರೋಗಕ್ಕೆ ಮುಲಮು. ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿವಕ್ಕೆ ಗುಣ.
೫. ಯೋಗರಾಜ ಗುಗ್ಗುಳ- ಅರ್ಧಾಂಗವಾತ ಕೋಷ್ಠವಾತ, ಸಂಧಿಗತ ೫. ೮೦ ತರದ ವಾತರೋಗಕ್ಕೆ ಸಿದ್ಧೌಷಧಿ. ॥।, ೧।, ೨. ರೂ.
೬. ಕೆಮ್ಮಿನ ಗುಳಿಗೆ_ಕ್ಷಯ, ದಮ್ಮು, ಕೆಮ್ಮು, ೫. ಮೇಲೆ ರಾಮಬಾಣ. ೫.೧೦ ಆಣೆ, ೧ ರೂ, ೧।। ರೂ.
೭. ವಾತ-ಪಿತ್ತ-ಕಫನಾಶಕ ಜೀಲಾಬಿನ ಗುಳಿಗೆ_ ೨೫ ರ ೫. ೮. ೮. ೧೦೦ ಕ್ಕೆ ೧॥ ರೂ.
೮. ಸಂಜೀವನಿ_ ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ ಚಾತುರ್ಥಿಕ, ಸನ್ನಿಪಾತ, ೫. ಜ್ವರಗಳ ಮೇಲೆ ೨೫ ರ ೫. ೧ ರೂ. ೧೦೦ ರ ೫. ೩ ರೂ.
೯. ಚಂದ್ರಪ್ರಭಾ ವಟಿ_ ೨೦ ತರದ ಮೇಹ, ಮೂತ್ರದೋಷ, ಅಶ್ಮರೀ, ಧಾತುಕ್ಷಯ, ಸ್ವಪ್ನಾವಸ್ಥೆ, ೫. ೩. ೨ ರೂ.
೧೦. ದಂತಮಂಜನ_ ಹಲ್ಲು ನೋವು, ಹುಳ, ರಕ್ತ, ಅಲುಗಾಡುವಿಕೆ ಈ ಪೂರ್ಣ ಗುಣವಾಗುವವು. ೮. ೩ ಆಣೆ, ೧೨ ಕ್ಕೆ ೨। ರೂ.
೧೧. ಹಂಚುವಿನ ಔಷಧ_ ಹೊಟ್ಟೆಹುಳಗಳ ಮೇಲೆ ರಾಮಬಾಣ ಪ್ರತಿ ೧ಕ್ಕೆ ೧॥ ರ. ೨೫ ಕ್ಕೆ ೧॥ ರೂ. ೧೦೦ಕ್ಕೆ ೫। ರೂ.
೧೨. ಬಜ್ಜಿಯ ಮುಲಮು_ ೫. ೪ ರ. ೧೨ ಕ್ಕೆ ೨॥ ರೂ. ಸೂತಶೇಖರ ಮಾತ್ರೆ. ಪಿತ್ತಕ್ಕೆ ೫. ೧॥ ರೂ. ೨॥। ೫ ರೂ.
೧೩. ವಾತಸಂಹಾರಿ ತೈಲ - ನಾರಾಯಣ ತೈಲ, ಅರ್ಧಾಂಗವಾತಾದಿ ಅನೇಕ ವಾತ ರೋಗಕ್ಕೆ ಸಿದ್ಧತೈಲಗಳು. ೫. ೧॥ ರೂ. ೨। ರೂ.
೧೪. ವಾತ ಸಂಜೀವನಿ ಗುಟಿಕಾ _ ವಾತ ಜಡಿಯುವಿಕೆ, ಕಾಲು ಕಾಲು ಆಗುವಿಕೆ ೫. ೫. ೨. ರೂ.
೧೫. ಪುತ್ರಜೀವನಲೇಹ _ ಗರ್ಭವಾಸವಾಗುವ ಸ್ತ್ರೀಯರಿಗೆ ಸಿದ್ಧೌಷಧಿಯು. ೫. ೪ ರೂ. ೬. ಖರ್ಚು ಬೇರೆ. ಅನುಪಾನ ಪತ್ರ ವಿಷಯದ ಸಂಗಡ. (ಆಯುರ್ವೇದ ಗುಣರತ್ನಮಾಲಾ ಪುಸ್ತಕ ಉಚಿತ) ಇವಲ್ಲದೆ ಅನೇಕ ತರದ ರೋಗಗಳ ಮೇಲೆ ಪಾಕ, ಲೇಹ, ಚೂರ್ಣ, ತೈಲ, ಮಾತ್ರೆಗಳ ಬಗ್ಗೆ ಸ್ಟಾಂಪ ಇಟ್ಟು ಪತ್ರದ್ವಾರ ಯಾ ಸಮಕ್ಷ ತಿಳಕೊಳ್ಳಬಹುದು.

ಪತ್ತ:— ಮೇನೆಜರ, ಆಯುರ್ವೇದ ಚಿಕಿತ್ಸಾ ಮಂದಿರ, ಪ್ರೋ. ಚೆಂಡಿಯೆ, ತಾ. ಕಾರವಾರ.

ಮುಂಬಯಿ ಏಜಂಟ:— R. C. KAMAT, *Teashop, Store Lane, Fort, Bombay.*

ಯಾವದೇ ಆಕಾರದ ನಂಬರಿನ ನಕ್ಷೆಯ ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



ಒರೇ ಒಂದು ತಿಂಗಳ ಬಗ್ಗೆ. ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ!! ಮೋಹಕ ಯಂತ್ರರಚನೆ!! ಧರಿಸುವರಿಗೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ ನಂಬರಿನ ಕೈ ಗಡಿಯಾರವು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತ:— **Swan House: P B' 508 P T Madras.**

ಅತ್ಯಲ್ಪವಿವೆ! ಉಚಿತ

ಕೇವಲ ಉಚಿತ ಉಚಿತ ಕೇವಲ ಉಚಿತ

"ತಾರಾ" ಲೀವರ ರಿಜಿಸ್ಟರ್ಡ ರೋಲ್ಡ ಗೋಲ್ಡ ರೂ ೧೦ ವರುಷ ಗ್ಯಾರಂಟಿ ಇರುವದೆಂದು ಗಡಿಯಾರಕಾರರು ಬರೆದುಕೊಡುತ್ತಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಿಜಿಸ್ಟರ್ಡ ಚ್ಯಾಂಪಿಯನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೦ ಕರೆಟ್ ರೋಲ್ಡ ಗೋಲ್ಡಿನ ಪಾಕೆಟ್ ವಾಚ ಗಡಿಯಾರಗಳಿಗೆ ಕಿಮ್ಮತ್ತು ಬರೇ ರೂಪಾಯಿ ೫.

CAPTAIN WATCH CO, P. B. 365, MADRAS.

ಸಬ್ ಅಸಿಸ್ಟೆಂಟ ಸರ್ಜನ್

ವ್ಹಾ. ಎಸ್. ವೈದ್ಯ

ಡೆಂಟಿಸ್ಟ ಮತ್ತು ಅಕ್ಯುಲಿಸ್ಟ,

ಗವಾಗಲ್ಲಿ, ಧಾರವಾಡ

ಡಾಕ್ಟರ ಕೂಪರ, [illegible] ಇವರ ಮೊದಲನೇ ಅಸಿಸ್ಟಂಟ

[illegible]

ಎಲ್ಲಾ ನೋವು ಕೊಡ ಹಲ್ಲುಗಳನ್ನು ತೆಗೆಯುತ್ತೇವೆ [illegible] ಹಲ್ಲುಗಳನ್ನು ಯೋಗ್ಯವಾಗಿ [illegible] ಗಳನ್ನು [illegible] ದವಡೆಯಲ್ಲಿ [illegible] ನಮ್ಮ ದಂತ [illegible]

[illegible]

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಭೋಜನದ ವ್ಯವಸ್ಥೆ

ಹಾಗೂ

[illegible] ಈ ಸ್ಥಳಗಳಿಂದ [illegible] ಗೋಕರ್ಣದಿಂದ [illegible] ಗೋಕರ್ಣದಿಂದ [illegible]

[illegible] ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ಮಂಗೇಶರಾವ ಸಶಿಶಿತ್ತಲ,

ಮೊಟರ ಏಜಂಟ

[illegible]

B U Narayanacharya [illegible]
Chaukamba BENARES CITY



ನಮ್ಮಲ್ಲಿ [illegible] ಶಿಲಾ ಲಿಂಗಗಳೂ [illegible] ಸಿಗುತ್ತವೆ [illegible]

[illegible] ಉಚಿತವಾಗಿ ಕಳಿಸಲಾಗುವದು
ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಮುಕ್ಕಾಂ ಚಕಮಿ, ಚೌಕಂಬಾ, ಕಾಶೀಕ್ಷೇತ್ರ

ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯುವರ

ಸುಗಂಧಿ ನಶ್ಯದ ಪುಡಿ.

[illegible] ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರ [illegible] ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ [illegible] ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂಲು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದ [illegible] ಅನೇಕ [illegible] ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ [illegible]

[illegible] ರೂ. [illegible] ವ್ಹಿ. ಪಿ [illegible] ಡಜನ್ [illegible] ರೂ. ೨-೮-೦. ವ್ಹಿ. ಪಿ. ೦-೮-೦ [illegible] ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

[illegible] ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, [illegible], ಮುದರಾಸ

ಕಿರ್ಲೋಸ್ಕರ ಕುರ್ಚಿಗಳು.



ಇವು ಉಕ್ಕಿನ ತಗಡಿನವು
ಎತ್ತಿಡಲಿಕ್ಕೆ ಹಗುರ
ಕಟ್ಟಿಗೆ ಕುರ್ಚಿಗಳಿಗಿಂತ
ಬಹುದಿವಸ ಬಾಳುತ್ತವೆ.
ಬೆಲೆ ೫ ರೂ.
ವ್ಯಾಪಾರಿಗಳಿಗೆ ಕಮೀಶನ್

ಕಿರ್ಲೋಸ್ಕರ ಕಬ್ಬಿನ ಗಾಣ.



ನಮ್ಮಲ್ಲಿ ಕಮಾಲ ಮತ್ತು ಕಿಸಾನ ಗಾಣಗಳು ತಯಾರಾಗುತ್ತವೆ. ಇವುಗಳಲ್ಲಿ ಈ ವರ್ಷ ಹೊಸ ಸುಧಾರಣೆ ಮಾಡಿ ಹಿಂದಿನ ಅಡಚಣಿಗಳನ್ನು ದೂರ ಮಾಡಿರುತ್ತೇವೆ.

ಸವಿಸ್ತರ ಸಂಗತಿ [illegible] ಕಾಗದ ಬರೆಯಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರ.

ಅಮೃತಾಂಜನ

ಇದರ ಉಪಯೋಗದಿಂದ, ವಾತವೇದನೆ, [illegible] ಇತ್ಯಾದಿ ವ್ಯಾಧಿಗಳು [illegible], ರಾಮಬಾಣದಂತಾಗಿರುವದು ಕಳೆದ [illegible] ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ [illegible] ಅಮೃತಾಂಜನವನು ಉಪಯೋಗಿಸುತಿರುವದ [illegible] ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ [illegible] ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು [illegible] ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು [illegible] ಬಜಾರ ಬೇಲೆ.

ಅಮೃತಾಂಜನ ಡಿಪೋ, ಫೋರ್ಟ ಮುಂಬಯಿ.

Printed and Published by Krishnarao Keshav Sastri (Editor) at his Star Kanara Press Kumta

ವರ್ಷ ೧೧.

ಕಾನಡಾವೃತ್ತ.

THE KANARA NEWS.

ಸಂಚಿಕೆ ೫.

ವರ್ಷದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಹೊರಗಿನವರಿಂದ
ರೂ. 3-0-0.
ವಿ. ಪಿ. ಖರ್ಚು ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

[illegible]

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ವ್ಯಾಪಾ... (೧೫ ಎಮ್ ಅಗಲ) ಆ ಸಾಲುಗಳವರೆಗೆ ರೂ. 1-0. ಆ ನಂತರ ಪ್ರತಿಸಾಲಿಗೆ 0-1-0. [illegible]

(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೨೩ ಮಾಹೆ ನವಂಬರ ಸನ್ ೧೯೩೬ ನೇ ಇಸವಿ.)

(ಜಾಹೀರ) ನವ್ಯ ಶಾಸ್ತ್ರೀಯ ವಾದ (ಜಾಹೀರ)

ಶಾರೀರಿಕ ಶಿಕ್ಷಣ.



[illegible]

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
[illegible]

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.
Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.
ರತ್ನಾಭರಣ ವ್ಯಾಪಾರಿ, ಕುಮಟಾ.

ಇನ್ನೂ ಗೊತ್ತೇ ಇಲ್ಲವೋ ?

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿಯು,

ಬೆಳಗಾಂವ	ಕಾರವಾರ
ದಿಂದ	ದಿಂದ
ಕಾರವಾರಕ್ಕೆ	ಬೆಳಗಾಂವಕ್ಕೆ

ಕಳೆದ ಸಪ್ಟಂಬರ ೧ ನೇ ತಾರೀಖಿನಿಂದ ನಿಯಮಿತ ಡೇಲಿ ಮೋಟರ ಸರ್ವ್ಹಿಸ್ ಶುರುಮಾಡಿದ್ದು

ಬೆಳಗಾಂವಕ್ಕೆ ಮುಂಬಯಿ ಮೇಲ ಬಂದ ನಂತರ ಬೆಳಿಗ್ಗಿನ ೧೦॥ ಘಂಟೆಗೆ ಬೆಳಗಾಂವ ಬಿಟ್ಟು,
ಹಳಿಯಾಳ—ಯಲ್ಲಾಪುರ—ಅಂಕೋಲಾ ಮಾರ್ಗವಾಗಿ ಅದೇ ದಿವಸ ಸಾಯಂಕಾಲಕ್ಕೆ
ಕಾರವಾರಕ್ಕೆ ಮುಟ್ಟುವಂತೆಯೂ, ಕಾರವಾರದಿಂದ ಬೆಳಿಗ್ಗಿನ ೭ ಘಂಟೆಗೆ ಹೊರಟು
ಮುಂಬಯಿ ಮೇಲ ಟ್ರೇನಿಗೆ ಸರಿಯಾಗಿ ಬೆಳಗಾಂವಕ್ಕೆ ಮುಟ್ಟುವಂತೆಯೂ
ಫಕ್ತ ಪ್ರಯಾಣಿಕರ ಸೋಯಿಗಾಗಿ ಡೇಲಿ ಮೋಟಾರ ಸರ್ವ್ಹಿಸ ಇಟ್ಟಿ
ದ್ದಿರುತ್ತದೆ. ಟಿಕೇಟಿನ ದರಗಳು ವ ವಿಶೇಷ ಮಾಹಿತಿ ನಮ್ಮ
ಅಲ್ಲಲ್ಲಿಯ ಏಜಂಟರ ಕಡಿಗೆ; ಅಥವಾ ನಮ್ಮ ಹೆಡ್ ಆಫೀಸಿನಲ್ಲಿ.

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ,
ಬೆಳಗಾಂವ.

[illegible]

ಬಿ. ಎಸ್. ... ಸರ್ವಿಸ, ಶಿವಮೊಗ್ಗಾ



ಸಪ್ಲೈಸ್

ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ ಯಲ್ಲಾಪುರ- ಅಂಕೋಲಾ- ಕಾರವಾರ- (೨) ... ಕೊಪ್ಪಳ ... (೩) ... ಗೇರಸೊಪ್ಪಾ ಜೋಗ (Gersappa Falls) ಸಾಗರ ಶಿವಮೊಗ್ಗ — ... ನಡೆಯುತ್ತದೆ.

[illegible]

M. Manjappa

PROPRIETOR

ಜೀವನಾಧಾರ

ಅಮೇರಿಕಾ ಖಂಡದ ಪ್ರಸಿದ್ಧ ಡಾಕ್ಟರರು ಕಂಡುಹಿಡಿದ ಸಿದ್ಧೌಷಧ

ಎಲಿಕ್ಸಿರ್ ಆಫ್ ಲೈಫ್

[illegible]

ಜೀವನಾಧಾರ ಡಿಪೋ, ಮೈಸೂರು

ಬ್ರಾಂಚ - ಜೀವನಾಧಾರ ಡಿಪೋ, ಹುಬ್ಬಳ್ಳಿ

[illegible] ರಜಿಸ್ಟರ ಔಷಧ

[illegible]

[illegible]

ಈ ಮಹೌಷಧಿ [illegible]

ಪ್ರತಿನಿಧಿ — [illegible]

[illegible]

[illegible]

ಎಸ್. ಎಲ್. ಧಾರವಪ್ಪ ಮಂತ್ರಿ ಬ್ರದರ್ಸ, ಸಿರಸಿ.

ಕಾಗದ ಪೆಟ್ಟಿಗೆಗಳು

ನಾಜೂಕ ...:-

ಕಬಟ, ಡಬ್ಬ ವಗೈರೆ

[illegible]

ಗೋಪಾಳ ... ಕಂಪನಿ

... ಎದುರಿಗೆ

ಕಾಳಬಾದೇವಿ ರೋಡ,

ಮುಂಬಯಿ

ವಿವಿಧ ಸಂಗ್ರಹ.

ವಿಚಿತ್ರ ಕಥೆ.

ಕಲಕತ್ತೆಯ ಸಮಾಚಾರ ಪತ್ರಿಕೆಗಳಲ್ಲಿ ಈಗ ತೋಳಗಳಿಂದ ಪೋಷಣೆ ಹೊಂದಿದ ಹುಡುಗಿಯರ ವಿಚಿತ್ರ ಕಥೆಯು ಪ್ರಕಟಗೊಂಡಿದೆ. ಆ ಹುಡುಗಿಯರಲ್ಲಿ ಒಬ್ಬಳು ಹೊಟ್ಟೆಬೇನೆಯಿಂದ ತೀರಿಕೊಂಡಳು. ಇನ್ನೊಬ್ಬಳು ಕಮಲೆಯು. ಅವಳ ಪ್ರಾಯವು ೧೪ ವರುಷ. ಕಮಲೆಗೆ ಇಷ್ಟು ಪ್ರಾಯವಾದರೂ, ಉಡಿಗೆ-ತೊಡಿಗೆಗಳನ್ನು ಧರಿಸುವದು ಸೇರುವದಿಲ್ಲ; ಬರಲು ಮಾತಾಡಲು ಬರುವದಿಲ್ಲ; ಮೂಲೆಯಲ್ಲಿ ಕೂತುಕೊಂಡು ಏನಾದರೂ ಧ್ಯಾನಿಸುತ್ತ ಕಾಲಹರಣ ಮಾಡುತ್ತಾಳೆ, ಅವಳಿಗೆ ಅಳಬರುವದಿಲ್ಲ; ನಗಲಿಕ್ಕೂ ಬರುವದಿಲ್ಲ. ಅಲ್ಲಿಯ ಅನಾಥಾಲಯದ ಯಜಮಾನಿಯ ಜೊತೆ ಅವಳು ಹೊಂದಿಕೊಳ್ಳುವದೇ ಒಂದು ಪ್ರೀತಿ. ಕಮಲೆಯು ಹೀಗೆ ಪ್ರಾಣಿ ಪರಿಣಮಿಸಿದರೂ, ಅವಳ ಸ್ವಭಾವದಲ್ಲಿ ಇಷ್ಟು ಸ್ವಭಾವ ಸ್ಥಿತ್ಯಂತರವಾಗಲು ಕಾರಣವೇನೆಂದು ಶಾಸ್ತ್ರಜ್ಞರು ವಿಚಾರಿಸುತ್ತಿದ್ದಾರೆ.

* * *

ಕಮಲೆಯ ಪೂರ್ವೇತಿಹಾಸ.

ಕಮಲೆಯೂ, ಇನ್ನೊಂದು ಹುಡುಗಿಯೂ ತೋಳಗಳ ಒಂದು ಗವಿಯಲ್ಲಿದ್ದರು. ಆ ಗವಿಯ ಪ್ರದೇಶದಲ್ಲಿ ದಟ್ಟ ಕಾಡು. ಆ ಗವಿಗಳಲ್ಲಿ ತೋಳಗಳ ವಾಸ. ಆ ಗವಿಗಳೊಳಗಿಂದ ಇಬ್ಬರು ಹುಡುಗಿಯರು ಹೊರಕ್ಕೆ ಹೋಗುತ್ತಿದ್ದರು. ಅವರನ್ನು ಜನರು ಕಂಡರೆ ಪಿಶಾಚಿಗಳೆಂದು ಭಾವಿಸುತ್ತಿದ್ದರು. ಆ ಹುಡುಗಿಯರ ಮೈಮೇಲೆಲ್ಲ ಉದ್ದುದ್ದವಾದ ಕೂದಲುಗಳು ಬೆಳೆದಿದ್ದವು. ಯಾರಾದರೂ ಆ ಹುಡುಗಿಯರನ್ನು ಕಂಡದ್ದು ಅವರಿಗೆ ಭಾಸವಾದರೆ, ಅವರು ಗವಿಯಲ್ಲಿ ಸೇರುತ್ತಿದ್ದರು. ಒಂದು ದಿನ ೧೩ ಜನರು ಗುದ್ದಲಿಗಳನ್ನು ತೊಂದು ಗವಿಯನ್ನು ಅಗೆಯಲಾರಂಭಿಸಿದರು. ಗವಿಯೊಳಗಿಂದ ಎರಡು ತೋಳಗಳು ಜಿಗಿದು ಹೊರಬಿದ್ದವು. ೧೩ ಮಂದಿಗಳು ಬಹಳ ಹುಶಾರಿ ಗದ್ದವೆಂದು ಹೇಳಿ ಬಾಣಾವರು ಗಂಡು ತೋಳವು ಕಾಡಿನಲ್ಲಿ ಸೇರಿ ಎಲ್ಲಿಯೋ ಓಡಿಹೋಯಿತು. ಹೆಣ್ಣು ತೋಳವು ಮಾತ್ರ ಗುಹೆಯ ಬಾಯಿಯಲ್ಲಿ ಗುದುಗುಟ್ಟುತ್ತ ಕೂತುಕೊಂಡಿತ್ತು. ಕೆಲ ಜನರು ಧೈರ್ಯವಾಗಿ, ಬಾಣಗಳನ್ನೆಸೆದು, ಹೆಣ್ಣು ತೋಳವನ್ನು ಕೊಂದರು. ಆ ಬಳಿಕ ಗವಿಯನ್ನು ಮುಕ್ತ ಅಗೆದ.

ತೋಳದ ಎರಡು ಮರಿಗಳು ಹಾಗೂ ಎರಡು ಹುಡುಗಿಯರು ಅವರ ಕೈಸೇರಿದವು. ಅವನ್ನು ಅಲ್ಲಿಯ ಒಬ್ಬರು ತಂದು ಇಟ್ಟುಕೊಂಡರು. ಆ ಕಾಲಕ್ಕೆ ಕಮಲೆಯ ಪ್ರಾಯವು ೮ ವರುಷ. ಇನ್ನೊಬ್ಬ ಹುಡುಗಿಗೆ ೫ ವರುಷ ಪ್ರಾಯವಾಗಿತ್ತು. ಇಬ್ಬರೂ ಬಹ ಅಶಕ್ತರಾಗಿದ್ದರು. ಮೈಮೇಲೆಲ್ಲ ಗಾಯಗಳಾಗಿದ್ದವು. ಕಣ್ಣುಗಳನ್ನು ತೋಳಗಳಂತೆ ಅವರು ಅಡಿಸುತ್ತಿದ್ದರು. ಮತ್ತು ಅವುಗಳ ಉಗುರುಗಳು ಕೊಂಕಾಗಿದ್ದವು. ಮೊಟ್ಟಮೊದಲು ಹುಡುಗಿಯರು ಮಿದ್ನಾಪುರದ ಅನಾಥಾಲಯದ ಸಂಗರವರಿಗೆ ಕೊಟ್ಟಾಗ ಆ ಹುಡುಗಿಯರು ಪಶುಗಳಂತೆ ವರ್ತಿಸುತ್ತಿದ್ದರೆಂದು ಸಿಂಗರವರು ತಿಳಿಸುತ್ತಾರೆ. ಚತುಷ್ಪಾದಗಳಂತೆ ಹುಡುಗಿಯರು ಕೂತುಕೊಳ್ಳುತ್ತಿದ್ದರು. ಮಾಂಸ ತಿನ್ನುವ ಜೋರತು, ಅನ್ನವನ್ನಾಗಲೀ, ನೀರನ್ನಾಗಲೀ ಅವರು ಸೇವಿಸುತ್ತಿರಲಿಲ್ಲ. ಮಾಂಸವನ್ನು ಬೇಯಿಸದೆ ತಿನ್ನುವದೇ ಅವರಿಗೆ ಪ್ರೀತಿ. ಕಣ್ಣುತಪ್ಪಿ ಮಾಂಸವನ್ನೆಲ್ಲ ಇಟ್ಟರೂ, ಅವರು ಮುಂಗಾಳಿಯಿಂದ ಅದನ್ನು ಹುಡುಕಿ ತಿನ್ನುತ್ತಿದ್ದರು. ಬೇಯಿಸದೆ ಇದ್ದ ಮಾಂಸದ ಮೇಲೆ ಪ್ರೀತಿ ಹೆಚ್ಚು. ಮಾಂಸ ತಿನ್ನುವಾಗ ಅವರ ಮುಖವು ಭಯಂಕರವಾಗಿ ತೋರುತ್ತಿತ್ತು. ಕಣ್ಣುಗುಡ್ಡೆಗಳನ್ನು ತಿರುಗಿಸಿ ಅವರು ಗುರುಗುಡಿಸುತ್ತಿದ್ದರು. ಅನಾಥಾಲಯದೊಳಗಿನ ಇತರ ಹುಡುಗರ ಸುದ್ದಿಗೆ ಅವು ಹೋಗುತ್ತಿದ್ದಿಲ್ಲ. ಆದರೆ, ಅಲ್ಲಿರುವ ನಾಯಿ, ಕೋಳಿ, ದನಕರುಗಳೊಡನೆ ಇವು ಆಡು

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು !

ಆದರೆ, ಕಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಳ್ನ ಚಲೋ 'ಕೂದಲನ್ನು' ಕೊಡದು.... ಶ್ರೇಷ್ಠವಾದ ಕೂದಲನ್ನು ಬಯಸುವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ್)

ದಿನಾ ಮುಂಜಾನೆ ಅರ್ಧ ಚಮಚ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ತಿಮ್ಮ ತಿಕ್ಕಿದ ಕೂದಲಿ ತಲೆಯು ಬೊಕ್ಕು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ತಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ-

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

೧ ಬಾಟ್ಲಿಗೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦ ೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

—— ೦ ——

½ ಔನ್ಸಿಗೆ	ರೂ	೨—೦—೦
¼ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦-೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ್
ಪೋಸ್ಟಕ್ಕೆ ನೇರ ಜೇರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ್)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ- ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY**

ತ್ತಿದ್ದವು. ಹೀಗಿದ್ದು ಮೇಲೆ ಮಲಗುತ್ತಿರಲಿಲ್ಲ. ಕಾಲಿಯು ಸೂರಕೋಗಿ ಬಿಣಹುಲ್ಲು ತಂದು ಅದರ ಮೇಲೆ ಇಬ್ಬರೂ ಒಬ್ಬರ ಮೇಲೊಬ್ಬರಾಗಿ ಮಲಗುತ್ತಿದ್ದರು. ಚಿಕ್ಕ ಹುಡುಗಿಯು ಹೊಟ್ಟೆಬೇನೆಯಿಂದ ತೀರಿಕೊಂಡಳು. ಈಗ ಕಮಲೆಯು ಮಾತ್ರ ಕ್ಷೇಮದಿಂದಿದ್ದಾಳೆ. ಕಮಲೆಗೆ ಬಂಗಾಲಿ ಭಾಷೆಯು ಕಲಿ ತೋಣ್ಣಾಗಿದೆ. ಉಡುಪನ್ನು ಹಾಕಿಕೊಳ್ಳಲಿಕ್ಕೂ ಮನಪೂರ್ವಕೋಣ್ಣಾಗಿದೆ. ಯಾರಾದರೂ ಬಂದರೆ, ನಮಸ್ಕಾರವೆಂದು ಅವರು ಹೇಳಿ ನಾಚ್ಕೆ ಮಾಡುತ್ತಾಳೆ ಈ ಬಾಲೆಯ ರಕ್ಷಕರು ಈಗ ೫-೬ ವರುಷಗಳಾದವು. ಅವರಿಗೆ ಮದುವೆಯಾಗಲು ಮುಂದೆ ತೊಂದರೆ ಬರಬಹುದೆಂದು ಸಿಂಗರವರು ಆಲೋಚಿಸಿ, ಈ ಕಥೆಯ ನ್ಯಾಯಾಲಿಗೂ ಹೇಳಿದ್ದಿಲ್ಲ ಚಿಕ್ಕ ಹುಡುಗಿಯು ನನ್ನಕ್ಕೆ ಬೇಸ ಒಬ್ಬಗ ಬಿಷಪರ ಮಾತಾರವರಿಗೆ ಡಾಕ್ಟರಿಗೆ ಕರೆತಂದು, ಡಾಕ್ಟರು ಸಾಧ್ಯಂತ ಪರೀಕ್ಷಿಸಿ ಹೇಳಿದರು ಸಿರ್ಗಾರ ದಿನದ ಸಿಂಗರವರು ಈ ಕಥೆಯನ್ನು ಹೇಳಿದರು. ಕಾತ ಪ್ರಾಣಗಳ ಸಂಗತೋಬಿದ ಕಮಲೆಯ ಮೃಗಸ್ವಭಾವದ ಸ್ವಿತ್ವಂತರಗಳನ್ನು ಲಕ್ಷಿಸಿ, ಇದರಿಂದಲೇ ಸಸ್ಯಶಾಸ್ತ್ರಿಗಳು "ಸನ್ನಂಗದ ಕಥೆಯು ಕಿಂಪ ಕರಾರೀ ಪ್ರಾಣಾಂ," ಎಂದು ಹೇಳಿ, ಸಂಗದಿಂದಲೇ ಮಾನವನು ಉದ್ಧಾರ ಹೊಂದುತ್ತಾನೆ; ಅಧೋಗತಿಗೂ ಮುಟ್ಟುತ್ತಾನೆ ಎಂದು ಧ್ವನಿಸಿ, ಮಾನವನಿಗೆ ಸರ್ವದಿಂದಲೂ ಕಲ್ಯಾಣ ಮಾಡಬಲ್ಲದ ಸಜ್ಜನರ ಸಹವಾಸವನ್ನೇ ಕಡ್ಡಾಯವಾಗಿ ಕೈಕೊಳ್ಳಲು ಬೋಧಿಸುವವರಲ್ಲವೇ?

* * *

ವಿಷಯಲಂಪಟರ ಅತ್ಯಾಚಾರಗಳು.

ಕಳೆದ ನವೆಂಬರ ೧ನೇ ತಾರೀಖಿಗೆ ಮುಂಬಯಿಯೊಳಗಿನ ಅಕ್ಸೆಲ್ಸಿಯರ ನಾಟಕಗೃಹದೊಳಗೆ ವಿಷಯಲಂಪಟ ಪ್ರೇಕ್ಷಕರು ತಂಡತಂಡವಾಗಿ ಸೇರಿದ್ದರು. ಆದಿನ ಊರಾ ಹಕರಿನ ವೇಶ್ಯೆಯ ಸಂಗೀತ ಕಾರ್ಯಕ್ರಮವಿತ್ತು. ಆದರೆ, ದೈವಸಂಕಲ್ಪವೇ ಬೇರೆ ಆಕೆಯು ಸ್ವಲ್ಪ ಹೊತ್ತು ಕುಣಿದು ಪ್ರೇಕ್ಷಕರ ಮನಸ್ಸನ್ನು ಹರಣಮಾಡುತ್ತಿರುವಷ್ಟರಲ್ಲಿ ಥಕ್ಕನೆ ಅವಳ ಪ್ರಕೃತಿಯು ಕೆಟ್ಟಿತು; ಥಕ್ಕನೆ ಸಿಡಿಲ್ಬಡಿಯಂತೆ ಪರದೆಯು ಹಿಂದೆ ಬೀಳಾಗಿ ಬಿಟ್ಟಿತು. ಪ್ರೇಕ್ಷಕರ ಮನರಂಜನೆಗಾಗಿ ಇತರ ಸಂಗೀತವಿಶಾರದರು ಯೋಜಿಸಲ್ಪಟ್ಟರು. ಆದರೆ, ವಿಷಯಲಂಪಟರಿಗೆ ಹೇಗೆ ಸಮಾಧಾನವಾಗಬೇಕು? ಚಪ್ಪಾಳೆ, ಹುಸ್ಸ ಹುಸ್ಸ ಧ್ವನಿ ಮುಂತಾದವುಗಳಿಂದ ನಾಟಕಗೃಹವೆಲ್ಲ ದುಮುದುಮಿಸಿತು, ಆದರೂ, ಚಂಪಯೇನೂ ಹೊರಬೀಳಲಿಲ್ಲ. ಪ್ರೇಕ್ಷಕರಿಗಂತೂ ಅನೇಕವು ಕಠಿಣತರ ಹೋಗಿತ್ತು ನಾಟಕಗೃಹದಲ್ಲೆಲ್ಲ ಗೊಂದಲವೇ ಗೊಂದಲ. ಪಾಠಕರಿಗೆ ನಾಟಕಗೃಹದಲ್ಲಿ ಹಾರ್ಮೋನಿಯಮ್. ರಂಗಭೂಮಿಯ ಮೇಲೆ ಬೆತ್ತಗಳೂ, ಖುರ್ಚಿಗಳೂ ಹಂಗೆಯೆಬ್ಬಟ್ಟವು. ಅದರೂ ಚಂಪೆಯ ಮೋರೆಯು ಮನಮೋಹಕ ದೃಶ್ಯವು ವಿಷಯಲಂಪಟರಿಗೆ ಸಿಗದು. ಪ್ರೇಕ್ಷಕರಿಗೆ ತಾಳಲಾಗದು. ಪ್ರೇಕ್ಷಕರು ರಂಗಭೂಮಿಯ ಮೇಲೆ ಹಾಗಿಹೋಗಿ ಚಂಪೆಯ ಅಂತಃಪುರವನ್ನು ಮುತ್ತಿದರು ಕರ್ಮ-ಧರ್ಮ ಸಂಯೋಗದಿಂದ ದೀಪಗಳು ಥಕ್ಕನೇ ನಂದಿಹೋದವು. ಕೇಳುವದೇನಿದೆ? ವಿಷಯದ ಮಬ್ಬು ಕತ್ತಲೆ ಗೊಂದಲವೇ ಗೊಂದಲ, ಖುರ್ಚಿ, ಪರದೆ ಮುಂತಾದ ನಾಟಕಗೃಹದೊಳಗಿನ ಸಾಮಗ್ರಿಯೆಲ್ಲ ನುಚ್ಚುನೂರು. ಆದರೂ, ವಿಷಯದ ಮಬ್ಬು ಇಳಿಯದು. ಹೊರಕ್ಕೆ ಹೋಗಿ, ನಾಟಕಗೃಹದ ಪ್ರಾಂಗಣದಲ್ಲಿದ್ದ ಉಪವನವನ್ನೂ ಅವರು ನಾಶಪಡಿಸಿ, ಪ್ರೇಕ್ಷಕರು ಚದರಿದ ಬಳಿಕ, ಪೋಲೀಸರು ಬಂದು ಶಾಂತತಾಸ್ಥಾಪನೆ ಮಾಡಿದರು. ಇಷ್ಟೆಲ್ಲ ಗೊಂದಲ ನಡೆಯುವಾಗ ನಾಟಕಗೃಹದಲ್ಲಿ ಮುಂಬಯಿಯೊಳಗಿನ ದೊಡ್ಡ ದೊಡ್ಡ ಅಧಿಕಾರಿಗಳಿದ್ದರಂತೆ; ಈ ಗೊಂದಲವನ್ನು ಅವರು ಪಿಕಿ ಪಿಕಿ ನೋಡುತ್ತಿದ್ದರು! ಎಂಥ ಪ್ರಾರಬ್ಧವಿದು?

* * *

ಉಡುಪಿಯಲ್ಲಿ ಹಿಂದೂಗಳ ಪರಿಷತ್ತು.

ಉಡುಪಿಯಲ್ಲಿ ಸದ್ಯಕ್ಕೆ ಹಿಂದೂಗಳ ಪರಿಷತ್ತೊಂದು ಸೇರುವದಿದೆ. ಸ್ವಾಗತಾಧ್ಯಕ್ಷರು ಶ್ರೀ ಹೊಸಕೊಪ್ಪ ಕೃಷ್ಣರಾಯರು. ಪರಿಷತ್ತಿನಲ್ಲಿ ಧರ್ಮದಾಯ ಕಾಯಿದೆಯಿಂದುಂಟಾದ ಅಸ್ವಾಸ್ಥ್ಯದ ಚರ್ಚೆಯಾಗುವದಿದೆ. ಶ್ರೀ ಹೊಸಕೊಪ್ಪ ಕೃಷ್ಣರಾಯರವರ ಈ ಕುರಿತು ಬಾಹೀರ ಮಾಡುವದೇನೆಂದರೆ:—ಮದ್ರಾಸ ಪ್ರಾಂತದ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಹಿಂದೂ ಧರ್ಮದಾಯ ಕಾಯಿದೆಯು ಮಂಜೂರಾಗಿದೆ. ಈ ಕಾಯಿದೆಯನ್ನು ಮಂಜೂರ ಮಾಡಬೇಕಾದರೆ, ಜಾಗರೂಕತನ್ನು ಅನುಸರಿಸಿರಲಿಲ್ಲ [illegible] ವಿಸಿಕೊಂಡು ಈ ಕಾಯಿದೆಯನ್ನು [illegible] ಪರಿವರ್ತಿಸಿಕೊಂಡಿದ್ದಾರೆ. ಈ ಕಾಯಿದೆ [illegible] ಮಾಡಿದ ನಿಷೇಧವನ್ನು [illegible]. ಸ್ವರಾಜ್ಯದ [illegible] ನಾವು, ಅಬ್ರಾಹ್ಮಣರ [illegible] ವನ್ನು ತೀರ್ಮಾನಿಸಿ ಈ ಕಾಯಿದೆಯು [illegible] ಗಿದೆ. [illegible] ಇದನ್ನೊಂದು ಸಲ್ಲದು? [illegible] ಗಾಗಿ ಈ ಕಾಯಿದೆಯು ಪಾಸಾಗಲಿಲ್ಲ. ಆದರೆ, ಕಾಯಿದೆ ಕೌನ್ಸಿಲಿನಲ್ಲಿ [illegible] ದ ಪಕ್ಷದ ಕೆಲವರನ್ನಾಗಿ [illegible] ಹೋಗಿರುವರು. ದಕ್ಷಿಣ ಕನ್ನಡ [illegible] ಮಠಾಧಿಪತಿಗಳೂ, ಸನಾತನಿಗಳೂ [illegible] ಬಗ್ಗೆ ಅಭಿಪ್ರಾಯಗಳನ್ನು [illegible] ಕೌನ್ಸಿಲಿನಲ್ಲಿ [illegible], ಸನಾತನಿಗಳೂ [illegible] ಉಪಾಯವನ್ನು [illegible] ಈ ಸಭೆಯು ಸನಾತನಿಗಳೆಲ್ಲರೂ [illegible] ಹಿತ್ತಿನ [illegible] ಧರ್ಮಶ್ರದ್ಧೆಯನ್ನು [illegible].

* * *

ಪ್ರತ್ಯಿಷ್ಟಿಯ ಅರ್ಥ ಮಾಲು.

ಬೆಳಗಾವಿಯ ಸರಕಾರಿ ಕೋಶದಲ್ಲಿ ಹಣದ ಟಿಕೀಟು ಜಾಮೀನಿನ [illegible] ನಡೆಸಿದ ಪ್ರಕರಣದ ಕೊನೆಯ ನಿರ್ಣಯವಾಯಿತು. ಮೂಲ ಅಪರಾಧಿಗಳಾದ ಭಟ್ಟಿಯವರು ಎಲ್ಲಿ ಹೋದರೆಂತಲೂ ಹೋಗಿ ಅದೃಶ್ಯರಾಗಿರುವರು. ಭಟ್ಟಿಯವರ ಅಪಕೃತ್ಯದಿಂದ ೩೪೦೦೦ ರೂಪಾಯಿಗಳು ಸರಕಾರಕ್ಕೆ ನಷ್ಟವಾಗಿವೆ. ಇದನ್ನು ಕಾಲಕಾಲಕ್ಕೆ ಕೋಶಾಧಿಕಾರಿಗಳಾಗಿದ್ದವರು ತುಂಬಿಕೊಡಬೇಕೆಂದು ವಿಧಿಸಿ, ಮುಂಬಯಿ ಸರಕಾರವು ಭಟ್ಟಿ ಪ್ರಕರಣದ ಬಾಬು ಗೆಝೆಟಿಯಲ್ಲಿ ತಿಳಿಸಿರುವದು. ರಾ| ಗೋಖಲೆಯವರ ಪಾಲಿಗೆ ೧೧ ಸಾವಿರ, ರಾ| ಕುಂಟಳೆಯವರ ಪಾಲಿಗೆ ೫ ಸಾವಿರ, ರಾ| ಹಿರೇಮಠರವರಿಗೆ ೪ ಸಾವಿರ, ರಾವಸಾಹೇಬ ಗಜೇಂದ್ರಗಡಕರರವರಿಗೆ ೧೮೦೦, ರಾ| ಕುಲಕರ್ಣಿಯವರಿಗೆ ೧೨೦೦, ರಾ| ದೇವರಾವ ಭಾಸ್ಕರರವರಿಗೆ ೮೦೦, ಹೀಗೆ ಭಟ್ಟಿಯವರ ಪ್ರಾಪ್ತಿಯ ಪಾಲು ಬಂದಿದೆ. ೩೪ ಸಾವಿರ ರೂಪಾಯಿಗಳ ಭರಪಾಯಿಗೆ ಇತರ ಕೋಶಾಧಿಕಾರಿಗಳ ಲೆಕ್ಕಕ್ಕೆ ಚಿಲ್ಲಿಪಿಲ್ಲರೆ ರಕಮುಗಳು ಹಂಚಿಬಂದಿರುವವು. ಅಂತೂ ಭಟ್ಟಿಯವರ ಅಪರಾಧದಿಂದ ಒದಗಿದ ಸರಕಾರಿ ನಷ್ಟವು ತುಂಬಿಬಂತು. ಕೋಶಾಧಿಕಾರಿಗಳಿಗೆ ಭಟ್ಟಿಯವರ ಸಹವಾಸ ಪ್ರಾಪ್ತವಾದದ್ದಕ್ಕೆ ಅವರು ಈ ದಂಡ ತೆರಬೇಕು.

* * *

ರಾಷ್ಟ್ರೀಯ ಸಭೆಯ ತಯಾರಿ.

ಗೌಹತಿಯಲ್ಲಿ ಸೇರಲಿಕ್ಕಿದ್ದ ರಾಷ್ಟ್ರೀಯ ಸಭೆಯ ತಯಾರಿಯು ಭರದಿಂದ ನಡೆದಿದೆ. ಸ್ವಾಗತ ಮಂಡಳದ ಕಾರ್ಯಕಾರಿ ಸಭೆಯು ನವಂಬರ ೭ನೇ ತಾರೀಖಿಗೆ ಸೇರಿ, ಜಮಾ—ಖರ್ಚ ಪತ್ರಿಕೆಯು ಮಂಜೂರಾಯಿತು. ಶ್ರೀ ಫೂಕನ್‌ರವರು ಸಭಾಪತಿಗಳಿದ್ದರು. ಪ್ರೇಕ್ಷಕರಿಗೆ ಮೊದಲನೇ ದಿನ ೧೦ ರೂಪಾಯಿ ಟಿಕೀಟು, ಉಳಿದ ದಿನ ದಿನಾ ೫ ರೂಪಾಯಿಗಳಂತೆ ಟಿಕೀಟು ಬೀಳುವವು. ಇದಲ್ಲದೆ, ಶ್ರೀಮಂತರ ಉಪಯೋಗಕ್ಕಾಗಿ ೫೦೦೦-೨೦೦೦-೧೦೦೦-೫೦೦-೧೦೦ ಹೀಗೆ ವಿಶೇಷ ತರಗತಿಯ ಟಿಕೀಟುಗಳ ವ್ಯವಸ್ಥೆಯಾಗಿದೆ. ಪ್ರತಿನಿಧಿಗಳಿಗೆ ಉಳಕೊಳ್ಳುವ ವ್ಯವಸ್ಥೆ ಬೇಕಾದ್ದಲ್ಲಿ ೬ ರೂಪಾಯಿಗಳ ಟಿಕೀಟು [illegible]; ಬಿಡಾರು ಬೇಕಾದವರು ೫೧ ರೂಪಾಯಿಗಳನ್ನು ತೆರಬೇಕು. ಮುಂಬಯಿಯಿಂದ ಕಲಕತ್ತೆಗೆ ಹೋಗಿ, ಅಲ್ಲಿಂದ ಶಿಲಾಂಗ ಮೇಲ ಗಾಡಿಯಿಂದ ಗೌಹತಿ ಪಟ್ಟಣಕ್ಕೆ ಹೋಗುವದು ಯುಕ್ತವು. ರಾಷ್ಟ್ರೀಯ ಸಭೆಯ ಸಮಯ ಸ್ವದೇಶಿ ವಸ್ತುಗಳ ಪ್ರದರ್ಶನವು ಸೇರುವದು. ಪ್ರದರ್ಶನದಲ್ಲಿ ಕೈ ನೂಲು-ಕೈ ನೇಯಿಗೆಯ ಸಂಬಂಧದ ಅಂಶ-ಅಂಕಗಳಿಗೇ ಪ್ರವೇಶವಿದೆ. ಖಾದಿ ಪ್ರದರ್ಶನ ಮಾಡುವವರಿಗೆ ಪ್ರದರ್ಶನಾಲಯದಲ್ಲಿ ರಿಯಾಯತಿ ದರದಿಂದ ಜಾಗೆಯ ವ್ಯವಸ್ಥೆ ಮಾಡಲಾಗಿದೆ.



ಕಬ್ಬುಬೆಳೆಯುವ ರೈತರೇ! ಸುಪ್ರಸಿದ್ಧ ಹೊಸ "ಮದ್ರಾಸ್, ಸೂರ್ಯ, ಪ್ರಭಾವತಿ ಆಲೆಕಣೆಗಳನ್ನು ಕೊಳ್ಳಿರಿ. ಅಗದೀ ಸುಧಾರಿಸಿ ಅಚ್ಚುಕಟ್ಟಾಗಿವೆ. ಮೂರು ಗಾಣಗಳೂ ಗುಪ್ತವಾಗಿ ನಿಲ್ಲುವವು. ಸಣ್ಣ ಎತ್ತುಗಳೂ ಒಗೆಯಬಹುದು. ತಿರುಗಿಸುವವು ಎತ್ತಿ ಇಳಿಸಲೂ, ಊರಿಂದೂರಿಗೆ ಸಾಗಿಸಲೂ ಬಹು ಸುಲಭ.

ನಮ್ಮಲ್ಲಿ ಇಂಜಿನ್, ಶಕ್ತಿಯಿಂದ ನಡೆಯುವ ಯಂತ್ರಗಳ ಮೇಲೆ ಎಲ್ಲಾ ನಮೂನೆಯ ಕಣೆ ದುರಸ್ತಿ ಕೆಲಸಗಳು ನಡೆಯುತ್ತವೆ. ಹೆಚ್ಚಿಗೆ ವಿಷಯಕ್ಕೆ ಪಟ್ಟೀಲು ಜಾಹಿರಾತು ತರಿಸಿ ನೋಡಿರಿ.

ಪ್ರಭಾಕರ ಆಲೆಕಣೆ ಕಂಪನಿ,

ವರದಾನದೀ ನಸ್ತೆ, ಸಾಗರ (ಜಿಲ್ಲಾ ಶಿವಮೊಗ್ಗ)

ಕಾರವಾರದಲ್ಲಿ ಪಾದ್ರಿಗಳ ಲೋಕಶಿಕ್ಷಣದ ವೇಷ.

ಕಾರವಾರದಲ್ಲಿ ಕಲೆಕ್ಟರ ಕಚೇರಿಯ ಇದಿರಿಗೆ ಇದ್ದ ಸ್ಥಳವನ್ನು ಗೋವೆಯ ಬಿಶಪ್‌ರು ಮಿ| ರವೆಲೋರವರ ಕಡೆಯಿಂದ ಶಾಲೆಯನ್ನು ಕಟ್ಟುವದಕ್ಕೋಸ್ಕರ ಕೊಂಡಿರುವರು. ಅಲ್ಲಿ ಹೆಣ್ಣು ಮಕ್ಕಳ ಬಗ್ಗೆ ಶಾಲೆಯನ್ನು ಕಟ್ಟುವ ... ನಡೆದಿದೆ. ಬಿಶಪ್‌ರವರು ಈ ಕಟ್ಟಡದ ಬಗ್ಗೆ ... ಸಾವಿರ ರೂಪಾಯಿಗಳನ್ನು ಸಂಗ್ರಹಿಸ ಹತ್ತಿರುವರು. ಸರ್ಕಾರದವು ಕೋಟಿಬಾಗ ಡಿಪೋದಿಂದ ಸುಮಾರು ೧೦೦ ಖಂಡಿ ಕಟ್ಟಿಗೆಯನ್ನೂ ಕೊಟ್ಟಿರುವದಾಗಿ ತಿಳಿಯುತ್ತದೆ. ಶಾಲೆಯಲ್ಲಿ ದೋಭಿಕಾಂಗ್ರ, ಚಿಕಿತ್ಸಾಲಯ ಮುಂತಾದವುಗಳ ಏರ್ಪಾಟಾಗುವದು. ಸುತ್ತಲೂ ಕಾಂಪೌಂಡನ್ನು ಕಟ್ಟಿಸಿ ಪ್ರಾಕಾರ ಕಟ್ಟುವ ಆಲೋಚನೆ ನಡೆದಿದೆ.

ಇದನ್ನು ಕೇಳಿ, ಗೋವೆಯ ಪಾದ್ರಿಗಳಾದವರಿಗೆ ಅನೇಕರು ಧನ್ಯವಾದಗಳನ್ನರ್ಪಿಸುವರು. ಉತ್ತರ ಕನ್ನಡ ಜಿಲ್ಲೆಯೊಳಗಿನ ಕ್ರೈಸ್ತರು ವಿದ್ಯಾಹೀನರಿದ್ದು, ಅವರನ್ನು ಸುಸಂಸ್ಕೃತ ಮಾಡಲು ಬಿಶಪ್‌ರವರು ದುಡಿಯುತ್ತಿದ್ದರೆಂದೂ ಯಾರಾದರೂ ಭಾವಿಸಬಹುದು. ಆದರೆ, ಈ ಕಲ್ಪನೆಯು ತೀರ ಆಧಾರರಹಿತ. ಈ ಶಾಲೆಯು ವೇಷವು ಲೋಕವಂಚಕವಿದೆ. ವಾಸ್ತವ ಹಕೀಕತನ್ನು ಕೇಳಬೇಕು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೩ ಸಾವಿರ ಕ್ರಿಸ್ತಿ ಜನರಿರುವರು. ಪಾದ್ರಿಗಳಾದವರು ಇಲ್ಲಿ ಬಂದು ೩೦೦—೪೦೦ ವರ್ಷಗಳಾದವು. ಅಂದಿನಿಂದ ಇವರು ಸ್ಥಾಪಿಸಿದ್ದೆಂದರೆ ೨—೩ ಶಾಲೆಗಳು. ಅವು ಕೂಡ ಪ್ರಾಥಮಿಕ ತರಗತಿಯವು. ಇಷ್ಟಾಗಿ, ಶಾಲೆಗಳನ್ನಿಟ್ಟರೂ ಸರಕಾರಿ ಶಾಲೆಗಳ ಓಳಿಯಲ್ಲಿಯೇ ಶಾಲೆಗಳೊಳಗಿನ ಶಿಕ್ಷಕರೆಲ್ಲರೂ ಅಂಗ್ರೇಜರು. ಇದರಿಂದ ಬುದ್ಧಿಶಾಲಿ ಹುಡುಗರಿಗೆ ಮುಂದೆ ಹೋಗಲು ಅವಕಾಶ ದೊರಕುವದಿಲ್ಲ. ಪಾದ್ರಿಗಳಾದವರು ಗಂಡು ಮಕ್ಕಳಿಗಾಗಿ ಹಿಂದು ಶಾಲೆಯನ್ನು ಕೂಡ ಸ್ಥಾಪಿಸಲಿಲ್ಲ. ಈ ಜಿಲ್ಲೆಯ ಸ್ಥಾನಿಕ ಕ್ರಿಶ್ಚನ್ನರಲ್ಲಿ ೧೦೦೦ ಕ್ಕೆ ೪ ಮಂದಿ ಕೂಡ ಇಂಗ್ಲಿಷ ಬಲ್ಲವರು ದೊರಕುವದು ಅಪರೂಪವು. ಅಂತಹ, ಗಂಡು ಹುಡುಗರ ಕುರಿತು ಶಾಲೆಯ ಸ್ಥಾಪನೆಯಾಗದೇ ಹೆಣ್ಣು ಹುಡುಗಿಯರಿಗಾಗಿ ಇಷ್ಟೊಂದು ಸಂಭ್ರಮವೇಕೆ? ಅದಕ್ಕೆ ಕಾರಣವಿದೆ. ಗೋವೆಯಲ್ಲಿ 'ಪಾದ್ರಿ' ಯಾಜಕ ಮಂಡಳ ಎಂಬ ಪಾದ್ರಿ ಸಂಸ್ಥೆಯು ಜನರಿಗೆ ಗೋವೆಯ ಸರಕಾರವು ಕಾಯಿದೆಯಿಂದ ಪ್ರತಿಬಂಧಿಸಿದೆ. ಅದರಿಂದ ಆ ಜನರಿಗೆ ಉಳಕೊಳ್ಳುವದಕ್ಕಾಗಿ ಹಿಂದು ಕನ್ನಡ ಬೇಕು. ಹೆಣ್ಣು ಮಕ್ಕಳ ಶಿಕ್ಷಣದ ವೇಷವನ್ನು ಮುಂದೊಡ್ಡಿ, ಬಿಶಪ್‌ರವರು ಕನ್ನಡ ಪಟ್ಟದಲ್ಲಿ ಸ್ಥಾಪಿಸಬಯಸುತ್ತಿರಬಹುದೆಂದು ನಿಶ್ಚಯವಾಗಿ ಅನುಮಾನಿಸಬಹುದು. ದೋಭಿಕಾಂಗ್ರ, ದವಾಖಾನೆ, ಪ್ರಾರ್ಥನಾ ಗೋಡೆಗಳಿಗೆ ಕಾಡು ಇವುಗಳನ್ನು ನೋಡಿದರೆ, ಅನುಮಾನವು ದೃಢವಾಗುತ್ತದೆ. ಪಾದ್ರಿಗಳಾದವರು ತಮ್ಮ ಧರ್ಮಬಾಂಧವರಾದ ಕ್ರಿಸ್ತಿಯರಿಗೆ ವಿದ್ಯೆ ಕಲಿಸಲು ಏರ್ಪಾಟು ಮಾಡದೆ, ಆ ಕಲಿಸುವವರು ಹಿಂದುಳಿದ ವರ್ಗದಲ್ಲಿ ದಾಖಲಾಗಿರುವರು. ಅದರಿಂದ ಶಿಕ್ಷಣ ಪ್ರಚಾರಕ್ಕಾಗಿ ನಾವು ಸಹಿಸುತ್ತೇವೆ, ಎಂದು ತೋರಿಸುವದಕ್ಕಾಗಿ ಈಗಿನ ಕನ್ನಡ ಸಮ್ಮೇಳನವು ಹೊಸ ಇಮಾರತಿನ ರಚನೆಯಾಗುತ್ತಿದೆ.

ಹೆಣ್ಣು ಹುಡುಗಿಯರ ಶಾಲೆಯು ಸ್ಥಾಪನೆಯಿಂದ ಸ್ಥಾನಿಕ ಜನರಿಗೆ ಉಪಯೋಗವಿಲ್ಲ. ... ಗಂಡಸರು ವಿದ್ಯಾಹೀನರು; ವಿದ್ಯಾರ್ಜನೆಗೆ ಸಾಧನಗಳಿಲ್ಲ. ಹೆಂಗಸರು ಈ ಶಾಲೆಯಲ್ಲಿ ವಿದ್ಯೆ ಕಲಿತು ವಿದ್ವಾಂಸರಾದರೆ, ಅವರು ಅಕ್ಷರಶೂನ್ಯರಾದ ಸ್ಥಾನಿಕ ಕ್ರಿಸ್ತಿ ಗಂಡಸರೊಡನೆ ಮದುವೆಯಾಗಲು ಒಪ್ಪಿಕೊಳ್ಳುವರೇನು? ಕಾರವಾರದಲ್ಲಿ ಮಂಗಳೂರ, ಗೋವಾ ಮುಂತಾದ ಕಡೆಗಳಿಂದ ಬಂದ ಕ್ರಿಸ್ತಿಯರು ಸುಶಿಕ್ಷಿತರಿರುವರು. ಇವರು ತಮ್ಮ ಹೆಂಗಳೆಯರಿಗೂ ವಿದ್ಯೆ ಕಲಿಸಲು ಬೇಡುತ್ತಿದ್ದರು. ಅವರಿಗೆ ಈ ಶಾಲೆಯ ಸ್ಥಾಪನೆಯಿಂದ ಲಾಭ ಕೊರತು, ಸ್ಥಾನಿಕ ಜನಾಂಗಕ್ಕೆ ಏನೂ ಲಾಭವಿಲ್ಲ. ಮಂಗಳೂರ ಹಾಗು ಗೋವಾ ಕ್ರಿಸ್ತಿಯರಿಗೂ, ಪಾದ್ರಿಗಳಾದವರಿಗೂ ಸ್ಥಾನಿಕ ಜನಾಂಗದ ಮೇಲಿನ ತಮ್ಮ ಅಂಕುಶವನ್ನು ನಡೆಸಲಿಕ್ಕೊಂದು ಸಾಧನವಾಗುವದು. ಇತ್ಯಾದಿ "ಹಿಂದ ಕೆಥೋಲಿಕ್" ರವರು ಬರೆಯುತ್ತಾರೆ.

— ಪಂಜಾಬ ಸತ್ಯಾಗ್ರಹವು ಧಾರವಾಡದಲ್ಲಿ ನಡೆಯಿತು. ಈ ಸತ್ಯಾಗ್ರಹದಲ್ಲಿ ಭಾಗವಹಿಸಿ ... ಸ್ತ್ರೀ ಹಾಗು ಪುರುಷ, ಹಣ್ಣು ... ಸ್ತ್ರೀಯರ ಅವಸ್ಥೆ, ಹಿಂದೂ ಧರ್ಮಶಾಸ್ತ್ರ ಹಾಗೂ ಪ್ರಾರ್ಥ ವಿಷಯದಂತೆ ಹಿಂದೂ ಸ್ತ್ರೀಯರ ಹಕ್ಕುಗಳು, ಸಮ್ಮತಿ ವಯ, ಹಾಗು ಅವರ ವಿವಾಹಗಳ ವಿಷಯಗಳ ಮೇಲೆ ವಿಚಾರ ಪ್ರಚುರವಾದ ಭಾಷಣಗಳು ಆದವು.

— ಬಾಗಲಕೋಟ ತಾಲೂಕ ಗುಂಡ ಈ ಸ್ಥಳದಲ್ಲಿ ... ಉಗಿಬಂಡಿಯು ಒಂದು ಎತ್ತು ಬಿದ್ದು ಉಗಿಬಂಡಿಯು ಹಳಿಯು ಬಿಟ್ಟು ಆಗಿತ್ತು.

— ಮುಂಬಯಿ ಇಲಾಖೆಯಲ್ಲಿ ಶಾಲಾಕಾಲೇಜುಗಳ ... ಗ್ರಂಥಗಳನ್ನು ... ಸರ್ ... ... ಅರ್ಧ ಲಕ್ಷ ರೂಪಾಯಿ ಕೊಟ್ಟಿರುವರು.

— ಮೋಟಾರನ್ನು ಅಜಾಗ್ರತೆಯಿಂದ ಹೊಡೆದು ಒಬ್ಬ ಮನುಷ್ಯನನ್ನು ಕೊಂದ ಬಗ್ಗೆ ಮುಂಬಯಿಯ ಹೈಕೋರ್ಟಿನಲ್ಲಿ ೫೦೦೦೦ ರೂಪಾಯಿ ನಷ್ಟದ ದಾವೆಯಾಗಿತ್ತು. ಆ ದಾವೆಯಲ್ಲಿ ನ್ಯಾಯಮೂರ್ತಿಗಳು ೪೫೦೦೦ ರೂಪಾಯಿಗಳನ್ನು ಕೊಡಿಸಿರುವರು.

—ಸ್ಪೇನದಲ್ಲಿ ರಾಜ್ಯಕ್ರಾಂತಿಯು ಆಗಿರುವ ... ದೊಂದು ... ಹೊರಬಿದ್ದು ೧೨೫ ಮಂದಿಗಳಿಗೆ ಸೆರೆಹಿಡಿಯಲಾಗಿದೆ.

— ಬ್ರಿಟಿಶ ದೇಶದ ಲೋಕಸಭೆಯಲ್ಲಿ ... ಮೋಟಾರ ಬಂಡಿಯನ್ನು ... ದರೋಡೆಗಾರರು ... ೩ ಜನರನ್ನು ಅಪಹರಿಸಿದರು. ಅವರು ಸ್ತ್ರೀ-ವೇಷವನ್ನು ತಳೆದಿದ್ದರಂತೆ!

— ಪುಣೆಯಲ್ಲಿ ಇಲೆಕ್ಷನಿನ ಒಂದು ದೊಡ್ಡ ಗದ್ದಲ; ... ಒಬ್ಬರ ... ಅದರಿಂದ ... ಅಪ್ಪಣೆ ... ಹೊಸ ... ಒಂದು ... ಹೋಗಬೇಕಾಗಿದೆ.

— ಮುಸಲ್ಮಾನರ ... ಕೈದಿ ಮಾಡಿದವರು ... ಹೋಗಿರುವರು. ... ಭೆಟ್ಟಿಗಾಗಿ ಹೋಗಿರುವರಂತೆ! ... ಮಾಡುವದಕ್ಕಾಗಿ ... ಹೋಗಿರುವದಾಗಿ ಸುದ್ದಿ.

— ಮೈಸೂರು ... ಬೆಂಗಳೂರಿಗೆ ಹೋಗಿರುವರು.

ಅಲ್ಪ ವೆಚ್ಚಕ್ಕಾಗಿ ಜನ್ಮದ ಲಾಭ ಕಳಕೊಳ್ಳಬೇಡಿರಿ.] ಶ್ರೀ ಶಿವಯೋಗಿಯೇ ರಕ್ಷಿಸು. [ಧೀಕರಿಸಿ ದುಃಖಿಗಳಾಗಿ ಪಶ್ಚಾತ್ತಾಪಪಡಬೇಡಿರಿ.

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯೊಳಗಿಂದ ಮುಕ್ತರಾಗಿರಿ.

ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಭಕ್ತಿಸಃ, ಪದಕಗಳನ್ನು ದೊರಕಿಸಿ ಸುಪ್ರಸಿದ್ಧಿಯನ್ನು ಹೊಂದಿದ

ಬಾಲಗ್ರಹ ದೋಷ ನಿವಾರಕವೆಂಬ ಮಂತ್ರ ಯಂತ್ರದ ತಾಯಿತ್.

"ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮಾದಿಗಳಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ, ಮುಟ್ಟಾಗುವ ಸಮಯದೊಳು ಕೈಕಾಲು ಸೆಳೆಯುವಿಕೆ, ದುಃಸ್ವಪ್ನಗಳು ಬೀಳುವಿಕೆ, ಹೊಟ್ಟೆಶೂಲೆ, ಬಿಳುಪು-ಕೆಂಪು ಹೋಗಿ ಗರ್ಭಪತನವಾಗುವಿಕೆ, ವಾಂತಿ, ಮೂರ್ಛೆ, ಮಹಾಪಿತ್ತ, ಪಿಶಾಚಬಾಧೆಯಿಂದ ನರಳುವಿಕೆ, ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಇಲ್ಲದೆ ಸಣ್ಣ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ, ಮುಟ್ಟುದೋಷ, ಕಾಮಿಣಿ, ಗ್ರಹಪೀಡೆ, ದೃಷ್ಟಿದೋಷ, ಮುಟಿಕಿಬ್ಯಾನಿ, ವಿಶೇಷ ಅಳೋಣ, ಭಯದಿಂದ ಜ್ವರಪೀಡೆ, ಕ್ಷಯ ಹೊಂದುವಿಕೆ, ಮೊದಲಾದವುಗಳಿಂದ ಕಾಡುತ್ತಿರುವದು." ಗರ್ಭರಕ್ಷಾಕರ ವಿಧಿಯಲ್ಲಿ, ಸೂರ್ಯ ರಕ್ಷಾಕರ ವಿಧಿಯಲ್ಲಿ, ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಮಹಾನ್ ಸಾಧು ಸತ್ಪುರುಷ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ. ಇದನ್ನು ಕರಿಸಿ ಧರಿಸಿದರೆ ಹೆಂಗಸು ಮಕ್ಕಳಿಗಾಗುವ ಸಂತಾನಭಂಗವೂ, ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಯಾವತ್ತು ಪರಿಹಾರವಾಗುತ್ತದೆ. ಈ ತಾಯಿತ ಧರಿಸಿಕೊಂಡು ೧೯೧೬ ರಿಂದ ಈವರೆಗೆ ೧೦೦೦ ರೂಪಾಯಿ ಭಕ್ಷೀಸು ಕೊಡುತ್ತೇವೆ. ಒಂದು ಸಲ ತರಿಸಿ ಅನುಭವ ತಕ್ಕೊಳ್ಳಿರಿ. ಕ್ರಯ ೧ಕ್ಕೆ ರೂ; ೩-೮-೦. ಪೋಸ್ಟ ಖರ್ಚ ಬೇರೆ.

ವಿಳಾಸ—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ ಪೋ. ಮು. ಅಥಣಿ, ಜಿಲ್ಲಾ ಬೆಳಗಾಂವ.

ಕಾನಡಾವೃತ್ತ

೨೨ನೇ ಕ್ಷಯ ಸಂ। ಕಾರ್ತಿಕ ಶು ೩ ಗೆ ಸೋಮವಾರ

ಇದೇ ಸಪ್ರು ಪರೀಕ್ಷೆ!

ಮೊಂಟೆಗ್ಯೂ ಸ್ವರಾಜ್ಯ ಯುಗದಲ್ಲಿ ಭಾರತೀಯರ ಪರೀಕ್ಷೆಯು ನಡೆದಿಯು ಪದೇ ಪದೇ ಹೇಳಲ್ಪಡುತ್ತದೆ. ಭಾರತೀಯರು ಸ್ವರಾಜ್ಯ ಪಾತ್ರತೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಹಾಗೆ ಕಂಡುಬಂದಿಯಂತ ನಮ್ಮೀ ಭರತ ಭೂಮಿಗೆ ಸ್ವರಾಜ್ಯದಾನಮಾಡೀರಾಗಿ ಹೇಳುತ್ತಾರೆ. ಬ್ರಿಟಿಶ ಪಾರ್ಲಮೆಂಟಿಗೆ ಹಿಂದುಸ್ಥಾನದಲ್ಲಿ ಸುವ್ಯವಸ್ಥೆಯನ್ನು ಪಾಲಿಸುವ ಜವಾಬದಾರಿಯು ಈಶ್ವರನಿಂದ ಒಪ್ಪಿಸಿದ ಪ್ರಸ್ತಾವಿತರುವದು. ಆ ಜವಾಬದಾರಿಯನ್ನು ಸಾಗಿಸಲು ಬ್ರಿಟಿಶರು ಕರ್ತವ್ಯಬದ್ಧರಾಗಿರುವರು. ಭಾರತೀಯರ ಸ್ವರಾಜ್ಯ ಪಾತ್ರತೆಯನ್ನು ನೋಡದೆ ಸ್ವರಾಜ್ಯವನ್ನು ಒಮ್ಮೆಲೇ ಅರ್ಪಿಸಿಬಿಟ್ಟರೆ, ಮುಂದೆ ಅನರ್ಥವಾಗುವದ ಆ ಅನರ್ಥದ ಪಾಪವನ್ನು ಬ್ರಿಟಿಶರು ಪರಲೋಕದಲ್ಲಿ ಅನುಭೋಗಿಸಬೇಕಾಗುವದು. ಯಾಕಂದರೆ ಪರಮಾತ್ಮನೇ ಭೂಭಾರ ಇಳಿಸುವ ಜವಾಬದಾರಿಯನ್ನು ಭೂತಲದಲ್ಲಿ ಪರದೇಶಿಗಳನ್ನು ... ಅವತರಿಸಿ ಬಂದ ಬ್ರಿಟಿಶರಿಗೆ ವಹಿಸಿದ ಪ್ರಯೋಜನವೇನಾಯಿತು? ಅಂದ ಬಳಿಕ ಬ್ರಿಟಿಶರು ನಮ್ಮ ಕಡೆಯಿಂದ ಪರೀಕ್ಷೆಯನ್ನು ಕೊಳ್ಳದೆ ಸ್ವರಾಜ್ಯವನ್ನು ಒಪ್ಪಿಸಿಬಿಟ್ಟರೆ, ಸುಪಾತ್ರದಲ್ಲಿ ದಾನವನ್ನಿತ್ತ ಪಾಪಕ್ಕೆ ಗುರಿಯಾಗಬೇಕಾಗುವದು. ಈ ಪರೀಕ್ಷೆಯ ನಮೂನೆಯನ್ನು ನಾವು ಕಲ್ಪಿಸಬಲ್ಲೆವೆ? ಆದರೆ ಪ್ರತ್ಯಕ್ಷ ಪರೀಕ್ಷೆಯ ನಮೂನೆಯನ್ನು ಮದ್ರಾಸದ ಹೈಕೋರ್ಟ ವಕೀಲರಾದ ರಾ| ಸಂಜೀವ ಕಾಮತರವರು ಕಲಕತ್ತೆಯ "ಅಮೃತ ಬಝಾರ" ಪತ್ರಿಕೆಯಲ್ಲಿ ಪ್ರಕಟಿಸಿರುವರು. ಅದು ಮನನೀಯವಿದೆ. ಪರೀಕ್ಷೆಯಲ್ಲಿ ನಾವು ಉತ್ತೀರ್ಣವಾಗುವ ಆಶೆಯನ್ನು ಕೂಡ ಹಿಡಿಯಬಹುದೋ? ಎಂಬ ವಿಚಾರವನ್ನು ವಿಚಾರಶೀಲ ದೇಶಾಭಿಮಾನಿಗಳು ವಿಚಾರಿಸತಕ್ಕದ್ದಾಗಿದೆ.

ಮೊಂಟೆಗ್ಯೂ ಸ್ವರಾಜ್ಯ ಯುಗದಲ್ಲಿ "ಹಿಂದೀಕರಣದ" ಬಿಂಗಾಳಿಯು ಸಂಚರಿಸಿತು. ಹಿಂದೀಕರಣವೆಂದರೆ, ಸ್ವರಾಜ್ಯ ಘಟನೆಯಲ್ಲ ದರಂತೆ ಒಪ್ಪಿದಂತೆ ಹಿಂದೀಯರನ್ನು ಕ್ರಮವಾಗಿ ಸೇರಿಸಿಕೊಂಡು ಖಾತೆಯ ಅಧಿಕಾರಗಳನ್ನು ಹಿಂದೀಯರಿಗೆ ಸ್ವರಾಜ್ಯದ ದಕ್ಷಿಣೆಯನ್ನು ಕ್ರಮವಾಗಿ ಪಡೆಯಲು ತಯಾರಿಸುವದು. ಕ್ರಮವಾಗಿಯೇ ಈ ವ್ಯಾಪಾರ ನಡೆಯಬೇಕು. ಒಮ್ಮೆಲೇ ಕೇಳಿದ ಹಾಗೆ ಭಾರತೀಯರು ಕೇಳಿದರ ರಾಜ್ಯರಥವು ಛಕ್ಕನೇ ಕೀಲುತಪ್ಪಿ ಮುರಿದರೆ, ಲೋಕೋಪಕಾರಿ ಬ್ರಿಟಿಶರು ಅಂತೀಕಿ ಗೀಡಾಗಬೇಕಾಗುವದು. ಅದರಂತೆ ೧೯೨೪ನೇ ಇಸ್ವಿಯಲ್ಲಿ ಸೇನಾಖಾತೆಯು ಉಗ್ರಾಣದಲ್ಲಿ ಪ್ರಯೋಗವೆಂದು ೨೦ ಮಂದಿಗಳನ್ನು ಸೇರಿಸಿಕೊಳ್ಳಬೇಕೆಂದು ಗೊತ್ತಾಯಿತು. ೧೯೨೪ನೇ ಫೆಬ್ರುವರಿ ತಿಂಗಳಲ್ಲಿ ಉಗ್ರಾಣ ಖಾತೆಯ ಉಮೇದ್ವಾರ ಜಾಗಗಳಿಗಾಗಿ ಅರ್ಜಿಗಳು ಬೇಡಲಾದವು. ೨೦ ಜಾಗಗಳಿಗಾಗಿ ೩೦೦ ಅರ್ಜಿಗಳು ಅಧಿಕಾರಿಗಳ ಕೈಸೇರಿದವು. ಅರ್ಜಿದಾರರಲ್ಲಿ ವಿಶ್ವವಿದ್ಯಾಲಯದೊಳಗಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಪದವೀಧರರ ನೇಕರಿದ್ದರು. ೩೦೦ ಅರ್ಜಿಗಳೊಳಗಿಂದ ೮೦ ಅರ್ಜಿಗಳನ್ನು ಹೆಕ್ಕಿ ಅರ್ಜಿದಾರರಿಗೆ ಪರೀಕ್ಷೆಗೆ ಕೂಡುಕೊಳ್ಳಲು ಅಪ್ಪಣೆ ದೊರಕಿತು. ೧೯೨೪ನೇ ಇಸ್ವಿಯ ಸಪ್ಟಂಬರ ೭ನೇ ತಾರೀಖಿಗೆ ಈ ಪರೀಕ್ಷೆಯು ಅಲ್ಲಲ್ಲಿ ನಡೆಯಿತು. ಉಮೇದ್ವಾರರಲ್ಲಿ ಉತ್ತೀರ್ಣರಾದವರಿಗೆ ಅಕ್ಟೋಬರ ೧೯೨೪ನೇ ಇಸ್ವಿಯಲ್ಲಿ ೪ ರೂಪಾಯಿ ದಿನಗೂಲಿ ಮೇಲೆ ನೇಮಿಸಲಾಯಿತು. ಒಂದು ವರುಷಗಳ ಬಳಿಕ, ಈ ಉಮೇದ್ವಾರರಿಗೆ ಪರೀಕ್ಷೆಯನ್ನು ಪುನಃ ತಕ್ಕೊಂಡು ತಿಂಗಳಿಗೆ ೧೨೦ ರೂಪಾಯಿ ಸಂಬಳ ಕೊಡಬೇಕಾಗಿಯೂ, ಮುಂದೆ ೪೫೦ ರೂಪಾಯಿಗಳ ತನಕ ನೇಮಿಸಲ್ಪಟ್ಟ ಹಿಂದೀಯರ ತಲಬನ್ನು ಏರಿಸಬೇಕಾಗಿಯೂ ಗೊತ್ತಾಗಿತ್ತು. ೧೯೨೫ನೇ ಇಸ್ವಿ ಅಕ್ಟೋಬರ ತಿಂಗಳು ಕಳೆಯಿತು, ಇಡೀ ವರ್ಷವೂ ಕಳೆಯಿತು. ಆದರೂ ಪರೀಕ್ಷೆಯು ಪತ್ತೆಯಿಲ್ಲ. ೧೯೨೬ನೇ ಇಸ್ವಿಯ ಅಕ್ಟೋಬರವು ಸಮೀಪಿಸಿದ ಕೂಡಲೆ, ಬ್ರಿಟಿಶ ಅಧಿಕಾರಿಗಳು ಉಮೇದ್ವಾರರೆಲ್ಲ ಒಂದು ತಿಂಗಳ ನೋಟೀಸನ್ನು ಕೊಟ್ಟು ಅವರ ಸೇವೆಯನ್ನು ಅಂತ್ಯಪಡಿಸಿದರು. ಒಬ್ಬರೂ ಉಗ್ರಾಣ ಖಾತೆಯೊಳಗಿನ ಅಧಿಕಾರವನ್ನು ನಡಿಸಲು ಅಪಾತ್ರರೆಂದು ಬ್ರಿಟಿಶ ವರಿಷ್ಠಾಧಿಕಾರಿಗಳ ಅಭಿಮತವಾಗಿ ಹಿಂದೀಕರಣದ ಪ್ರಯೋಗವು ಅಸಫಲವಾಯಿತೆಂದು ತಿರಸ್ಕರಿಸಲಾಗಿದೆ.

ಉಗ್ರಾಣ ಖಾತೆಯ ಅಷ್ಟು ದೊಡ್ಡ ಹುದ್ದೆಗಳನ್ನು ಈ ವರೆಗೆ ನಡಿಸಿದ ಯೋಗ್ಯತಾವಂತ ಪುಂಪರ್ಸ್ಯಾರು? ಅವರಿಗೆ ತಲಬು ಹ್ಯಾಗೆ ಸಿಗುತ್ತಿತ್ತು? ಎಂದು ಕೇಳುತ್ತೀರಾ? ಸೈನ್ಯ ಖಾತೆಯಲ್ಲಿ ನೌಕರಿ ಮಾಡುವ ಕೆಳ ತರಗತಿಯ ಶಾಲಾಳುಗಳಿಗೆ ಆ ಹುದ್ದೆಗಳು ಕೊಡಲ್ಪಡುತ್ತವೆ. ಈ ಶಾಲಾಳುಗಳಲ್ಲಿ ಅಶಿಕ್ಷಿತರೂ, ಅಸಭ್ಯರೂ ಸಿಗುವದು ದುರ್ಲಭ. ಇವರಿಗೆ ಎರಡು ವರುಷಗಳ ತನಕ ಉಮೇದ್ವಾರರಾಗಿ ನೇಮಿಸುತ್ತಾರೆ. ಉಮೇದ್ವಾರಿಯ ಅವಧಿಯಲ್ಲಿ ಸೈನಿಕರಿಗೆ ೨೧೦ ರೂಪಾಯಿ ಸಿಗುತ್ತದೆ. ಈ ಹುದ್ದೇದಾರರು ವಿವಾಹಿತರಾಗಿದ್ದರೆ, ಇವರಿಗೆ ೨೫೦ ರೂಪಾಯಿ ಸಿಗುತ್ತದೆ; ಮೇಲೆ ಉಳಕೊಳ್ಳಲು ಉಚಿತವಾಗಿ ಬಿಡಾರೂ ಸಿಗುತ್ತದೆ. ಮುಂದೆ ವರುಷಗಳು ಹೋದ ಹಾಗೆ ಬಡತಿ ಸಿಗುತ್ತದೆ. ವಿವಾಹಿತ ಬ್ರಿಟಿಶರಿಗೆ ಅನಾನುಕೂಲವಾಗಬಾರದೆಂದು ೪೦ ರೂಪಾಯಿಗಳ ಹೆಚ್ಚಿನ ಬಡತಿ ಕೊಡುವ ಸರಕಾರವು, ವಿದ್ಯಾವಂತರಾಗಿದ್ದ ಸಭ್ಯ ಪದವೀಧರರಿಗೆ ೧೨೦ ರೂಪಾಯಿ ಕೊಡುತ್ತದೆ. ಇದು ಈ ವರೆಗೆ ನಡೆದು ಬಂದ ಪ್ರಕಾರವು. ಹಿಂದುಸ್ಥಾನದೊಳಗಿನ ವಿಶ್ವವಿದ್ಯಾಲಯಗಳಲ್ಲಿ ಉತ್ತೀರ್ಣರಾದ ಪದವೀಧರರು ನಡಿಸಲಿಕ್ಕೆ ಅಪಾತ್ರವಾದ ಹುದ್ದೆಗಳನ್ನು ಆಕ್ರಮಿಸುವವರ ಯೋಗ್ಯತೆಯನ್ನೂ, ಅವರಿಗೆ ಸಿಗುವ ಪ್ರತಿಫಲವನ್ನೂ ವಾಚಕರೇ ನೀವು ಕೇಳಿದಿರಲ್ಲವೇ!

ಬ್ರಿಟಿಶರು ಪುರಸ್ಕರಿಸುವ ಹಿಂದೀಕರಣ ಪರೀಕ್ಷೆಯು ಮಾದರಿಯಿದು. ಗೌರಕಾಯದವರಿಗೆ ಕೊಡುವ ಅರ್ಧ ತಲಬನ್ನು ಕೊಟ್ಟು, ನಮ್ಮ ಗೌರಕಾಯದವರು ಭಾರತೀಯರ ಉತ್ಸಾಹ ಭಂಗಮಾಡಲೆಳಸಿದರು; ಎರಡು ಪರೀಕ್ಷೆಗಳ ಬೆದರಿಕೆ ಹಾಕಿದರು. ಆದರೂ ಭಾರತೀಯರಲ್ಲಿ ಬಿಡುತ್ತಾರೆ! ಕಳ್ಳನಿಗೆ ಮನೆತನಕ ಮುಟ್ಟಿಸಿ ಅತನ ಅಂತರಂಗವನ್ನು ಪರೀಕ್ಷಿಸಲು ಭಾರತೀಯರು ಟೊಂಕಕಟ್ಟಿ ಸನ್ನದ್ಧರಾಗಿರುವರು. ತಲಬು ಕಡಿಮೆ ಕೊಡುತ್ತೀರೋ? ಅಡ್ಡಿಯಿಲ್ಲ, ಬಿಡಾರು ಕೊಡುವದಿಲ್ಲವೋ? ಆಕ್ಷೇಪವಿಲ್ಲ; ಪರೀಕ್ಷೆ ಕೊಡಬೇಕೋ? ಅದಕ್ಕೂ ನಮ್ಮ ತಯಾರಿಯಿದೆ. ಇಷ್ಟಾದರೂ ಭಾರತೀಯರು ಸರಕಾರಿ ಹುದ್ದೆಗಳನ್ನು ನಡಿಸಲು ಅಪಾತ್ರರು; ಅವರನ್ನು ಸೇರಿಸಿಕೊಳ್ಳುವ ಯೋಜನೆಯು ಅವ್ಯವಹಾರಿಕವು; ಹೀಗೆ ಗೌರಕಾಯದವರು ಕಲಾ ಕೊಟ್ಟು ತಮ್ಮ ಸ್ವಾರ್ಥಪರಾಯಣತೆಯನ್ನು ಮಾತ್ರ ಪ್ರದರ್ಶಿಸುತ್ತಾರೆಂದರೆ ಅದೆಂಥಾದದ್ದು ಅಯಥಾರ್ಥವಾಗುವದೇನು? ವಿದ್ವತ್ತು ಇಲ್ಲದೆ, ಮಾನಸಿಕ ಶಿಕ್ಷಣವಿಲ್ಲದೆ ಕೇವಲ ವಿವಾಹಿತನೆಂಬುದರಿಂದ ೪೦ ರೂಪಾಯಿಗಳ ಹೆಚ್ಚಿನ ದರವನ್ನು ಪಡೆಯಲು ಗೌರಕಾಯದವರು ಹೇಗೆ ಪಾತ್ರರಾಗುತ್ತಾರೆ! ವಿವಾಹಿತರಾದರೆ ಹುದ್ದೆಯನ್ನು ನಡಿಸಲು ಹೆಚ್ಚಿನ ಪಾತ್ರತೆಯು ಹ್ಯಾಗೆ ಬರುತ್ತದೆ? ನಾವು ತಿಳಿಯದವರು. ಹೀಗೆ ಪಂಕ್ತಿಪ್ರಪಂಚವನ್ನೂ, ಸ್ವಾರ್ಥಪರಾಯಣತೆಯನ್ನೂ ತಾಳುವ ಬ್ರಿಟಿಶ ಅಧಿಕಾರಿಗಳು ನಮಗೆಂದಾದರೂ ಸ್ವರಾಜ್ಯ ಕೊಡುವದು ಸಾಧ್ಯವೇನು? ಕೊಟ್ಟ ಹಕ್ಕುಗಳನ್ನು ಸ್ವೀಕರಿಸಿ ಭಾರತೀಯರು ತಮ್ಮ ಪಾತ್ರತೆಯನ್ನು ಸಿದ್ಧಪಡಿಸಬೇಕೆಂಬ ಉಪದೇಶವು

ಬರೇ ಡಂಭಾಚಾರವಲ್ಲವೇ? ಇಂಥ ಪರೀಕ್ಷೆಗಳಲ್ಲಿ ನಾವು ಉತ್ತೀರ್ಣರಾದೆವೆಂದು ಅಧಿಕಾರಿಗಳು ಎಂದಾದರೂ ಹೇಳುವದು ಸಾಧ್ಯವೇ? ಆದದರಿಂದಲೇ ನಾವು ಸರಕಾರಿ ಹುದ್ದೆಗಳನ್ನು ಸ್ವೀಕರಿಸಲಾಗದೆಂದು ಪಂಡಿತ ಮೋತೀಲಾಲರವರು ಆಗ್ರಹ ಮಾಡುತ್ತಾರೆ. ಈ ಆಗ್ರಹವು ಪ್ರಸ್ತುತ ಸ್ಥಿತಿಯಲ್ಲಿ ಯೋಗ್ಯವೆಂದು ಯಾರು ಹೇಳರು!

ಸ್ಫುಟ ಸೂಚನೆಗಳು.

೧. ಸಾಮ್ರಾಜ್ಯ ಪರಿಷತ್ತು ಸದ್ಯಕ್ಕೆ ಲಂಡನಿನಲ್ಲಿ ನೆರವೇರಿತು. ಆ ಸಮಯ ಬ್ರಿಟಿಶ ರಾಷ್ಟ್ರದ ಪ್ರತಿನಿಧಿಗಳೂ, ವಸಾಹತುಗಳ ಪ್ರತಿನಿಧಿಗಳೂ ಒಂದುಗೂಡಿದ ಉತ್ಕೃಷ್ಟ ಮಾತುಗಳನ್ನಾಡಿ ಸಾಮ್ರಾಜ್ಯದ ಸ್ತುತಿಯನ್ನು ಮನಸಾರೆ ಮಾಡಿದರು. ನಮ್ಮ ಹಿಂದುಸ್ಥಾನದ ಕಡೆಯಿಂದ ಬರದ್ವಾನದ ಮಹಾರಾಜರೂ ಸ್ತುತಿ ಸಂತೆ ಮಾಡಿದರು. ರೀಡಿಂಗ ದೊರೆಗಳು ಹಿಂದುಸ್ಥಾನದ ಸರ್ವಾಧಿಕಾರಿಗಳಾಗಿ ಭರತಭೂಮಿಯನ್ನು ಉದ್ಧರಿಸಿದವರಾಗಿ ಅವರ ಅಭಿಪ್ರಾಯವಾಗಿದೆ. ಮಹಾತ್ಮರು ಹುಡುಗಾಟಿಕೆಯ ಚಳವಳಿಯನ್ನು ಕೈಕೊಂಡು ಭರತಭೂಮಿಯ ಪ್ರಗತಿಯ ರಥಕ್ಕೆ ಹಿಂದೆ ಸರಿಸುವ ಉದ್ಯೋಗದಲ್ಲಿದ್ದರು; ಅದಕ್ಕೆ ರೀಡಿಂಗ ದೊರೆಗಳು ತಡೆ ಹಾಕಿ ಹಿಂದುಸ್ಥಾನವನ್ನು ಕಾಂಗ್ರೆಸ್ ಇತ್ಯಾದಿ ಅಪಲಾಪಗಳನ್ನು ಬರದ್ವಾನದ ಮಹಾರಾಜರು ಉದ್ಗರಿಸಿ, ತಮ್ಮ ರಾಷ್ಟ್ರಾಭಿಮಾನವನ್ನು ಕಳಕೊಂಡರೂ, ಸಾಮ್ರಾಜ್ಯಾಭಿಮಾನವನ್ನು ಕಾಯ್ದುಕೊಂಡರು. ಇಷ್ಟಾದರೂ ಬ್ರಿಟಿಶ ಮುತ್ಸದ್ದಿಗಳಿಗೆ ಅವರ ಮೇಲೆ ನಂಬಿಗೆ ಇಲ್ಲೆಂಬಂತೆ ತೋರುತ್ತದೆ. ಸಾಮ್ರಾಜ್ಯ ಸಂರಕ್ಷಣದ ಚರ್ಚೆ ನಡೆದಾಗ ವಸಾಹತುಗಳ ಪ್ರತಿನಿಧಿಗಳಿಗೆ ಮಾತ್ರ ಅವರು ಇಂಬುಗೊಟ್ಟು, ಬರದ್ವಾನದ ಮಹಾರಾಜಾದಿ ಹಿಂದುಸ್ಥಾನದ ಪ್ರತಿನಿಧಿಗಳಿಗೆ ವಿಚಾರಿಸಲಿಲ್ಲವಾಗಿ ತಿಳಿಯುತ್ತದೆ. ಸಾಮ್ರಾಜ್ಯ ಪಾಲನೆಗೆ ಸೈನ್ಯವೆಷ್ಟಿರಬೇಕು? ಅದರ ಖರ್ಚನ್ನು ಯಾರ್ಯಾರು ಎಷ್ಟೆಷ್ಟು ಸೈರಿಸಬೇಕು? ಇತ್ಯಾದಿ ಮಹತ್ವದ ಚರ್ಚೆಗೆ ಸಾಮ್ರಾಜ್ಯನಿಷ್ಠ ಹಿಂದುಸ್ಥಾನದ ಪ್ರತಿನಿಧಿಗಳಿಗೆ ಪ್ರವೇಶ ದೊರಕಲಿಲ್ಲ. ಕಾರಣವು ಸ್ಪಷ್ಟವಿದೆ. ಹಿಂದುಸ್ಥಾನದ ಆಯವ್ಯಯದ ಪಾರುಪತ್ಯವು ಹಿಂದುಸ್ಥಾನದವರ ಕೈಯಲ್ಲಿಲ್ಲ; ಬೇಕಾದಷ್ಟು ಖರ್ಚ ಮಾಡುವ ಅಧಿಕಾರವು ಬ್ರಿಟಿಶ ಮುತ್ಸದ್ದಿಗಳ ಸ್ವಾಧೀನದಲ್ಲಿರುವದು. ಅಂಥ ಪ್ರಸಕ್ತಿಯಲ್ಲಿ ಹಿಂದೀ ಪ್ರತಿನಿಧಿಗಳಿಗೆ ಗರ್ಭಾಗಾರದಲ್ಲಿ ಪ್ರವೇಶಗೊಟ್ಟು ಫಲವೇನಿದೆ? ಅವರು ಒಪ್ಪಿಗೆಯನ್ನಿತ್ತರೂ ಕೇಳುವವರಿಲ್ಲ; ಇಲ್ಲೆಂದರೆ ಕೇಳುವವರಾರು? ಇಷ್ಟಾದರೂ ನಮ್ಮ ಬರದ್ವಾನದ ಮಹಾರಾಜರಂಥ ಪ್ರತಿನಿಧಿಗಳು ಹಿಂದುಸ್ಥಾನದ ಪ್ರತಿನಿಧಿಗಳೆಂದು ಮೆರೆಯುವದಾಗಲೀ, ಸಾಮ್ರಾಜ್ಯಪರಿಷತ್ತಿನಲ್ಲಿ ಕೂತುಕೊಳ್ಳುವದಾಗಲೀ ಸ್ವಾಭಿಮಾನಶೂನ್ಯವೇ. ಅದರೂ, ಅವರು ಉತ್ಕೃಷ್ಟ ಮಾತುಗಳನ್ನಾಡಿ ಮಹಾತ್ಮರಂಥ ಲೋಕೋಪಕಾರಿ ಸ್ವಾಭಿಮಾನಿ ಪುರುಷರಿಗೆ ಅವಿವೇಕಿಯಂತೆ ದೂರುವದು ಕೇವಲ ನಿರ್ಭಿಡತೆಯು.

---

೨. ಇದೇ ವಿಷಯ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ವಸಾಹತುಗಳ ಪ್ರತಿನಿಧಿಗಳು ಸಾಮ್ರಾಜ್ಯದ ಘಟಕಗಳಿದ್ದಾಗ್ಯೂ, ಅವು ಸಾಮ್ರಾಜ್ಯ ಸೈನ್ಯದ ಖರ್ಚನ್ನು ಸಹಿಸಲು ಒಪ್ಪಲಿಲ್ಲ. ಆದದರಿಂದ ಅವರ ಮೇಲೆ ನಂಬಿಗೆ ಇಡದೆ ಬ್ರಿಟಿಶರು ಸಾಮ್ರಾಜ್ಯದ ಸಂರಕ್ಷಣೆಗಾಗಿ ಹಿಂದುಸ್ಥಾನದ ಮೇಲೆಯೇ ಅವಲಂಬಿತರಾದರೆಂಬರ್ಥದ ಮಾತುಗಳನ್ನು ಭಾರತ ಮಂತ್ರಿಗಳಾದ ಬರ್ಕನಹೆಡ್ ದೊರೆಗಳು ಉದ್ಗರಿಸಿರು. ಲೆಫ್ಟನೆಂಟ ಹೆನಿಂಗರವರು ಇದೇ ಮಾತನ್ನು ಹಿಂದಿನ ಲೇಖದಲ್ಲಿ ಪ್ರತಿಪಾದಿಸಿರುವರು. ವಸಾಹತುಗಳು ಸಾಮ್ರಾಜ್ಯದ ಘಟಕಗಳು; ಸಾಮ್ರಾಜ್ಯದ ಲಾಭವಾದರೂ ಅವರಿಗೇ ವಿಶೇಷವಾಗಿದೆ. ದೇಶವನ್ನು ಸಮೃದ್ಧಗೊಳಿಸಲು ತಕ್ಕ ಸ್ವಾತಂತ್ರ್ಯವು ಅವರಿಗೆ ಕೊಡಲ್ಪಟ್ಟಿದೆ. ಆದರೂ, ಅವು ಸಾಮ್ರಾಜ್ಯ ಸೈನ್ಯ ಖರ್ಚನ್ನು ತೆರಲಾರವು; ಹಿಂದುಸ್ಥಾನವು ತೆರಬೇಕು. ಹೊಡೆಯುವವನಿದ್ದರೆ ಸತ್ತಕಾಗೆ ನೆಟ್ಟಗೆ ಮಲಗುವದೆಂಬುದು ತಾನೇ. ಅದರೂ, ಮಹಾತ್ಮರಿಗೆ ಅಜ್ಞಾನಿಗಳೆಂದು ಸಂಬೋಧಿಸುವ ಬರದ್ವಾನ ಮಹಾರಾಜರಂಥ ರಾಜಕಾರಣಧುರಂಧರರು ಈ ಮರ್ಮವನ್ನು ತಿಳಿಯದೆ ಹೋದರು. ಇದಕ್ಕೂ ಹೆಚ್ಚಿನ ಯಾವ ದೇಶದ ದುರ್ದೈವವಾವದು?

---

೩. ಪ್ರಾಂತಿಕ ಕೌನ್ಸಿಲು, ವರಿಷ್ಠ ಕಾಯಿದೆ ಕೌನ್ಸಿಲುಗಳ ಚುನಾವಣೆಯ ಸಮ್ಮಿಶ್ರ ಕಡೆಯ ಗದ್ದಲವು ತೀರಿತು. ಮದ್ರಾಸ, ಬಂಗಾಲ ಕಡೆಗಳಲ್ಲಿಯೂ ಗದ್ದಲವು ತೀರಿದೆ. ದಿವಾ ಗೆದ್ದ ಉಮೇದವಾರರ ಹೆಸರುಗಳು ಜಾಹೀರಾಗುತ್ತಿವೆ. ಪರಿಣಾಮದ ಮೇಲಿಂದ ರಾಷ್ಟ್ರೀಯ ಸಭೆಯ ಉಮೇದವಾರರು ಗೆಲ್ಲುತ್ತಿರುವರೆಂದು ಸಾಮಾನ್ಯವಾಗಿ ಹೇಳಬಹುದು. ಮುಂಬಯಿಯಲ್ಲಿ ಇನ್ನೂ ಚುನಾವಣೆಯಾಗಬೇಕಾಗಿತ್ತು. ಇವರಲ್ಲಿ ಮೂವರು ಸ್ವರಾಜ್ಯ ಪಕ್ಷದವರು ಪ್ರತಿಯೋಗಿ ಸಹಕಾರಿಗಳಿಗಿಂತಲೂ ಆರಿಸಿ ಬರಲಿಲ್ಲ. ಮದ್ರಾಸದಲ್ಲಿ ಬ್ರಾಹ್ಮಣೇತರ ಪಕ್ಷದ ದೊಡ್ಡ ದೊಡ್ಡ ಹಿರಿಯರುಗಳ ಗರ್ವವು ನೆಲಕಚ್ಚಿದೆ. ಗೌಹತಿ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಮಾನ್ಯ ಶ್ರೀ| ಶ್ರೀನಿವಾಸ ಅಯ್ಯಂಗಾರರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಪ್ರಚಂಡ ಮತದಿಂದ ಆರಿಸಿ ಬಂದಿರುವರು. ಸುಮಾರು ೪೬ ಆಸನಗಳನ್ನು ಸ್ವರಾಜ್ಯ ಪಕ್ಷವು ಆಕ್ರಮಿಸಿಕೊಂಡಿರುವದೆಂದು ಸುದ್ದಿ ಹಬ್ಬಿದೆ. ಕರ್ನಾಟಕ ಸುದ್ದಿಯನ್ನೇ ಕೇಳಿದರೆ, ರಾಷ್ಟ್ರೀಯ ಸಭೆಯು ಗೆಲ್ಲುತ್ತಿದೆಂಬು ಹೇಳಲಿಕ್ಕೇನೂ ಅಡ್ಡಿಯಿಲ್ಲ. ಶ್ರೀ| ಕರ್ಕಿಯವರಂತೂ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದಿರುವರು. ಧಾರವಾಡದಲ್ಲಿ ಸ್ವರಾಜ್ಯ ಪಕ್ಷದ ಶ್ರೀ| ಜೋಗರವರು ಆರಿಸಿ ಬರುವ ಧೋರಣವಿದೆ. ವಿಜಾಪುರದಲ್ಲಿ ಶ್ರೀ| ಕೌಜಲಗಿ ಶ್ರೀನಿವಾಸರಾಯರೇ ಗೆಲ್ಲುವರೆಂದು ಹೇಳುತ್ತಾರೆ. ಬೆಳಗಾವಿಯಲ್ಲಿ ಕಾಂಗ್ರೆಸ ಉಮೇದವಾರರಾದ ಶ್ರೀ| ವಾಮನರಾವ ಧಾತರಸೇಕರರವರು ಆರಿಸಿ ಬಂದಿರುವರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಸಭೆಯ ಹುರಿಯಾಳುಗಳಾದ ಶ್ರೀ| ಕಾರಂತರೇ ಗೆದ್ದರು; ಚಟ್ಟೋಪಾಧ್ಯಾಯ ಶ್ರೀ| ಕಮಲಾಬಾಯಿಯವರು ಸೋತರು. ಇದೊಂದು ದೊಡ್ಡ ರಾಷ್ಟ್ರೀಯ ಸಭೆಯ ಗೆಲವೆಂದು ಹೇಳಬಹುದು. ಶ್ರೀ| ಕಮಲಾದೇವಿಯವರಿಗೆ ಅನೇಕ ಸ್ತ್ರೀಯರ ಸಹಾನುಭೂತಿಯಿತ್ತು. ಸ್ತ್ರೀ ಉಮೇದವಾರರನ್ನು ಪ್ರತಿನಿಧಿಯನ್ನಾಗಿ ಕಳುಹಿಸುವ ಪ್ರಯೋಗ ಮಾಡಿ ನೋಡಬೇಕಾಗಿ ಸುಧಾರಕ ಸಂಪ್ರದಾಯದವರು ಯೋಚಿಸಿದ್ದರು. ರಾಷ್ಟ್ರೀಯ ಸಭೆಯನ್ನು ಹಳಿಯುವವರಿಗೆ ಶ್ರೀ| ಕಮಲಾದೇವಿಯವರ ಉಮೇದವಾರಿಯು ಹಿಡಿದ ನೆವ ಸಿಕ್ಕಿತು. ಅವರೂ, ಯಾವದಕ್ಕೂ ಅಲ್ಲಿಯ ರಾಷ್ಟ್ರಾಭಿಮಾನಿಗಳು ಮರುಳಾಗದೆ ಶ್ರೀ| ಕಾರಂತರನ್ನೇ ಆರಿಸಿ ಕಳಿಸಿದ್ದು ಶ್ರೇಯಸ್ಕರವು. ರಾಷ್ಟ್ರನಿಷ್ಠೆಯ ಪರೀಕ್ಷೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಾಂಧವರು ಉತ್ತೀರ್ಣರಾದರೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಯಲ್ಲಿ ಶ್ರೀ| ಬೆಳವಿಯವರಿಗೆ ಕರ್ನಾಟಕದಲ್ಲಿ ಬಹುಮತ ದೊರಕಿರಬೇಕೆಂದು ನಮಗೆ ಸಿಕ್ಕ ಮಾಹಿತಿಯ ಮೇಲಿಂದ ಹೇಳಬಹುದು. ಬೆಳಗಾವಿ, ವಿಜಾಪುರ ಜಿಲ್ಲೆಗಳಲ್ಲಿ ಶ್ರೀ| ಬೆಳವಿಯವರಿಗೇ ಹೇರಳ ಮಂದಿಗಳು ಬೆಂಬಲವಿತ್ತಿರುವರಾಗಿಯೂ, ಧಾರವಾಡದಲ್ಲಿ ಕೆಲಮಟ್ಟಿಗೆ ರಾ| ಹುಕ್ಕೇರಿಯವರು ಮುಂದೆ ಸರಿದರೂ, ಇತರ ಜಿಲ್ಲೆಗಳೊಳಗಿನ ಭೇದವನ್ನು ಲಕ್ಷಿಸಿದರೆ, ಅವರಿಗೆ ಗೆಲವಾಗಲಿಕ್ಕಿಲ್ಲೆಂದೂ ತರ್ಕವಿದೆ. ನಮ್ಮ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಸಾವಿರಕ್ಕೆ ಮಿಕ್ಕ ಮತಗಳು ಶ್ರೀ| ಬೆಳವಿಯವರಿಗೆ ದೊರಕಿರುವವೆಂದು ನಾವು ಕೇಳಬಲ್ಲೆವು. ರಾ| ಹುಕ್ಕೇರಿಯವರಿಗೆ ೩೦೦ ೪೦೦ ಸಿಕ್ಕಿದರೆ ಪರಮಾವಧಿಯಾಯಿತು. ರತ್ನಾಗಿರಿ–ಕುಲಾಬಾ ಜಿಲ್ಲೆಗಳಲ್ಲಿಯೂ ಶ್ರೀ| ಬೆಳವಿಯವರೇ ಬಹಳ ಮುಂದಾಗಿರಬೇಕು. ಮತಗಳ ಎಣಿಕೆಯು ೨೫ ನೇ ಗುರುವಾರಕ್ಕೆ ಬೆಳಗಾವಿಯಲ್ಲಿ ನಡೆಯುವದು. ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಾದ ಶ್ರೀ| ಬೆಳವಿಯವರಿಗೇ ಜಯವಾಗುವದೆಂದು ನಾವು ಈಗ ಹಾರೈಸುವೆವು. ರಾಷ್ಟ್ರೀಯ ಸಭೆಯ ಪ್ರವೃತ್ತಿಯು ರಾಷ್ಟ್ರದಲ್ಲಿ ಪಸರಿಸಿದ ಪ್ರತ್ಯಕ್ಷ ಲಕ್ಷಣವಿದು. ಬ್ರಾಹ್ಮಣ—ಬ್ರಾಹ್ಮಣೇತರವೆಂಬ ಜಾತಿಭೇದ, ದ್ವೇಷಬೀಜವು ನಮ್ಮೀ ಭರತ ಭೂಮಿಯಲ್ಲಿ ಈಗ ಬೆಳೆಯಲಾರದೆಂದು ನಾವೀಗ ನಿಶ್ಚಯವಾಗಿ ತಿಳಿಯಬಹುದು. ಇದು ಯಾವಾಗಲೂ ಇಷ್ಟವೇ. ಬ್ರಾಹ್ಮಣರೂ, ಬ್ರಾಹ್ಮಣೇತರರೂ ಒಂದೇ ಭರತ ಭೂಮಾತೆಯ ಹೊಟ್ಟೆಯಲ್ಲಿ ಹುಟ್ಟಿದವರಾಗಿದ್ದು, ಅವರು ಪರಸ್ಪರ ಮನಸ್ತಾಪಗಳನ್ನು ಕಲ್ಪಿಸಿಕೊಂಡರೆ, ದೇಶಕ್ಕೆಂದೂ ಹಿತವಿಲ್ಲ. ಈ ಕಲ್ಪನೆಯು ಮಹಾತ್ಮರಂಥ ಲೋಕೋಪಕಾರಿಗಳ ಪುಣ್ಯದಿಂದ ದೂರವಾಗುತ್ತ ನಡೆದಿದೆ. ಹೀಗೆಯೇ ಈ ಪ್ರವೃತ್ತಿಯು ಬೆಳೆದು, ರಾಷ್ಟ್ರಸಭೆಯು ರಾಷ್ಟ್ರದ ಪ್ರಾತಿನಿಧಿಕ ಸಂಸ್ಥೆಯಾಗಲೆಂದೂ, ಸ್ವರಾಜ್ಯವನ್ನು ಪಡೆಯಲು ತಕ್ಕ ರಾಷ್ಟ್ರೈಕ್ಯವು ರಾಷ್ಟ್ರೀಯ ಸಭೆಗೆ ಪ್ರಾಪ್ತವಾಗಲೆಂದೂ ನಾವು ಭಕ್ತಿಪೂರ್ವಕವಾಗಿ ಜಗದುದ್ಧಾರಕನೆಡೆಗೆ ಪ್ರಾರ್ಥಿಸುವೆವು.

---

೪. ಸದಾಶಿವಗಡದ ಗ್ರಾಮದಲ್ಲಿ ನಡೆದ ಜಂಗಲ ಖಾತೆಯ ಪೀಡನೆಯನ್ನೂ, ಸರಕಾರದ ಪೊಲೀಸರು ಅವರಿಗೆ ಕೊಟ್ಟ ಪುರಸ್ಕಾರವನ್ನೂ ಕೇಳಿದರೆ, ಮನಸ್ಸು ಬೇಸರಗೊಳ್ಳುತ್ತದೆ. ಸದಾಶಿವಗಡದ ಊರವರು ವೈಸನಹಾಳ ಹೊಳೆಯ ಒಂದು ಸಣ್ಣ ಭೂಶಿರದ ಮೇಲೆ ಈಗ ಬಹು ಪುರಾತನ ಕಾಲದಿಂದ ತಮ್ಮ ಗೋವುಗಳನ್ನು ಮೇಯಿಸುತ್ತಿದ್ದರು. ೬ ತಿಂಗಳ ಹಿಂದೆ ಅಲ್ಲಿಯ ಜಂಗಲ ಅಧಿಕಾರಿಗಳು ಇದೇ ಪ್ರದೇಶದಲ್ಲಿ ದನಗಳನ್ನು ಮೇಯಿಸುವದಕ್ಕಾಗಿ ಬೇಸಾಯಗಾರರ ಕಡೆಯಿಂದ ಗೋಚರಾವು ಫೀಯು ವಸೂಲ ಮಾಡಿದರು. ಆದರೆ, ಈ ವರುಷ

[illegible]

ಪರಿಕಲ್ಪಿಸುತ್ತಾರೆಂದು ಯಾರೂ ಹೇಳಲಾರರು. ಅದು ಹಾಗಿರಲಿ, ಸ್ಕೂಲ ಬೋರ್ಡಿನವರು ರಾ| ಶಿವಪ್ಪ ಕೊಯರ ನಾಯ್ಕ ಇವರನ್ನು ಅ. ಶಿ. ಯ ಸ್ಥಳಕ್ಕಾಗಿ ಶಿಫಾರಸು ಮಾಡಿ ನೇಮಣೂಕೆಯ ಇಷ್ಟ ಮನುಗಳ ಕುರಿತ ವ್ಯಕ್ತಿಶಃ ಆಲೋಚಿಸುವದು ಪತ್ರಿಕಾಕರ್ತರ ಧರ್ಮವಲ್ಲ ಆದರೆ, ಕತ್ತಿಗರನ್ನೆಲ್ಲ ಗಂಟು ಮೂಟೆ ಕಟ್ಟಿ ಬಿಗಿದಿಟ್ಟು, ನೇಮಣೂಕಿಯಾಗುವ ಸಂದರ್ಭದಲ್ಲಿ ಪತ್ರಕರ್ತರು ಎಚ್ಚರಿಕೆಯನ್ನೀಯಲು ಬದ್ಧರಿರುವರು. ರಾ| ಶಿವಪ್ಪ ಕೊಯರ ನಾಯ್ಕರ ನೇಮಣೂಕಿಯನ್ನು ಪುನರಾಲೋಚಿಸಲು ವಿದ್ಯಾಧಿಕಾರಿಗಳು ಜಿಲ್ಲಾ ಬೋರ್ಡಿನ ಕಡೆಗೆ ಪುನಃ ಕಳುಹಿಸುವರಾಗಿ ತಿಳಿಯುತ್ತದೆ. ಈ ಸಮಯ ಜಿಲ್ಲಾ ಬೋರ್ಡಿನವರು ವಿವೇಕ ಬುದ್ಧಿಯನ್ನು ಕಳೆಯಬೇಕಾಗಿ ನಮ್ಮ ಸೂಚನೆಯಿದೆ. ಈ ಹುದ್ದೆಗಾಗಿ ಅನೇಕರ ಅರ್ಜಿಗಳು ಸ್ಕೂಲ ಬೋರ್ಡಿಗೆ ಹೋಗಿರುವವು. ಅವರಲ್ಲಿ ಸರ್ವಿಸ್, ಅರ್ಜೆದಾರರ ಕ್ವಾಲಿಫಿಕೇಶನ್ ಯಾನೆ ಯೋಗ್ಯತೆಗಳನ್ನು ನ್ಯಾಯ ಬುದ್ಧಿಯಿಂದ [illegible]

[illegible]

ಸಂಜೀವ ಈ ಮಾರ್ಕೆಟ್ಟಿನಲ್ಲಿ ಪ್ರಾಂತಿಗೆ ಕಳಿಸಿದ್ದರ ಬಗ್ಗೆ ೩೯ ಪ್ರಾಂತುಗಳು ಸಂಗ್ರಹವಾದವು. ೨೮ ಮತ ಗಳು ಶ್ರೀ [illegible] ಪಕ್ಷದವರಿಗೆ ದೊರೆತವು.

ಬೆಳಗಾವಿ— ಗುರುವಾರ ದಿವಸ ಜರಿಷ್ಟ ಕಾಯಿದೆ ಕೌನ್ಸಿಲಿನ ಚುನಾವಣೆಯಲ್ಲಿ ೧೧೧೦ ಜನ ಮತದಾರರು ಮತಗಳನ್ನು ಕೊಟ್ಟರು. ೧೦೦೯ ಮತಗಳು ಶ್ರೀ [illegible] ಅವರಿಗೆ ದೊರೆತವು.

ಸಿದ್ದಾಪುರ— ಜರಿಷ್ಟ ಕಾಯಿದೆ ಕೌನ್ಸಿಲಿನ ಚುನಾವಣೆಯಲ್ಲಿ ೧೮೫ ಮತಗಳು [illegible] ಕೊಟ್ಟರು. [illegible] ಮತಗಳು ಶ್ರೀ [illegible] ಅವರಿಗೆ ದೊರೆತವು.

ಹಳಿಯಾಳ— ಚಳಿಯ ಪ್ರಭಾವ ಹೆಚ್ಚಿದೆ. ಪ್ಲೇಗು ರೋಗವು ತನ್ನ ಆಗಮನವನ್ನು ತೋರಿಸಿ ಕೊಟ್ಟಿದೆ. ಇಲಿಗಳು ಸಾಯಹತ್ತಿವೆ. ರಾ. [illegible] ನೇತೃತ್ವದ ಇವರ ಮೇಲೆ ನಡೆದ ಖಟ್ಲೆಯಲ್ಲಿ ಆರೋಪಿಗೆ ೬೦ ರೂಪಾಯಿ ದಂಡ ವಿಧಿಸಲಾಗಿದೆ. ಕೆರೆ ಗಾಂವದಲ್ಲಿ ಕುಡಿಯುವ ನೀರಿನ ಕೊರತೆ ಬಹಳ. ಆದ್ದರಿಂದ ಜಿಲ್ಲಾ ಬೋರ್ಡಿನವರು ಒಂದು ಹೊಸ ಬಾವಿಯನ್ನು ತೆಗೆಯುವ ಆಲೋಚನೆ ಮಾಡಿದರು. ಜಿಲ್ಲಾ ಬೋರ್ಡಿನ ಅಧ್ಯಕ್ಷರು ಬಂದಾಗ ತಾಲೂಕ ಲೋಕಲ್ ಬೋರ್ಡಿನ ಸಭಾಸದರಾದ ರಾ. [illegible] ನರಾವ ರಾವರವರು ಮುಂದಿನ ಲೋಕಲ್ ಬೋರ್ಡ ಬಾವಿಯನ್ನು ಹೊಸದಾಗಿ ಕಟ್ಟಿಸಿದರೆ, ತಾವು ಅರ್ಧ ಹಣವನ್ನು ಕೊಡ ಬಹುದಾಗಿ ಹೇಳಿದರು. ಹಳೇ ಬಾವಿಯನ್ನು ರಾ. ವಾಮನರಾಯರ ತಂದೆಯವರು ಕಟ್ಟಿಸಿದ್ದರು. ತೀರ್ಥರೂಪರವರ ಹೆಸರನ್ನೇ ಈ ಬಾವಿಗೆ ಕೊಡಬೇಕೆಂದು ರಾ. ವಾಮನರಾಯರ ಅಪೇಕ್ಷೆ ಇದೆ. ದಾಂಡೇಲಿ ತನಕ ಮೋಟಾರ ಸರ್ವೀಸ ಪ್ರಾರಂಭವಾಗಿದೆ.

ಜರಿಷ್ಟ ಕಾಯಿದೆ ಕೌನ್ಸಿಲಿನ ಚುನಾವಣೆಯಲ್ಲಿ ಇಟ್ಟಿರಿಗೂ ಸರಿಯಾಗಿ ಮತ ಬಿದ್ದಿರುವದಾಗಿ ಕೇಳು ತ್ತಾರೆ.

ಕಾರವಾರ— ರಾ. ಹ [illegible] ಕಟ್ಟೀ [illegible] ಧಾರವಾಡದ ರಾ [illegible] ಹಾಗು [illegible] ಚುನಾವಣೆಯ ದಿನ ಹಾದಿ ನೋಡುತ್ತಿದ್ದರು. ಅವರ [illegible] ಶ್ರೀ [illegible] ಅವರಿಗೆ ಹೆಚ್ಚಿನ ಮತಗಳು ದೊರೆಕಿರುವವು.

ಬೇಲೀಕೇರಿಗೆ ಹೊಸ ಕಾಲೇಜ ಪಟ್ಟಿಯ ಸಿಕ್ಕಾಲಿ ಯಾಗಿಯಿತು. ಪ್ರಾಂತ್ಯ ಹಾಗು ಬುದ್ದೀಜನರಿಗೆ ಈ ನೀರಿನ ಶಿಕ್ಷೆಯಾಗಿದೆ. ಇನ್ನೆ ಆರೋಪಿಯಾದ ರಾ [illegible] ರವರಿಗೆ ಬಿಟ್ಟು ಕೊಟ್ಟಿದೆ. [illegible] ಗೆಳೆಯ ಶ್ರೀಯುತ [illegible] ರಾದ ಮಿ. [illegible] ರವರಿಗೆ [illegible]. ಡಿ. [illegible] ಕೊಂಕಣಿ ಭಾಷೆಯಲ್ಲಿ ಪದ್ಯಾನಿಗಳನ್ನು [illegible] ವ ಪ್ರಭಾವವನ್ನು ಉಂಟು ಮಾಡಿರುವರು. ಕೊಂಕಣಿ ಭಾಷೆಯನ್ನಾಡುವವರಿಗೆ ಇದೊಂದು ದೊಡ್ಡ ಲಾಭ ದೊರೆತಂತಾಗಿದೆ.

ಪರಿಶಿಷ್ಟ ನಡವಳಿಕೆಯಾದ ಭಾಗೀರಥಿಬಾಯಿಯ ವರು ತುಳಸೀ ವಿವಾಹದ ಮುಹೂರ್ತದಲ್ಲಿ ಸಹಗ ರದಿಂದ ನೆರವೇರಿಸಿದರು. ವರಪಕ್ಷದವರು ರಾ. [illegible] ವಸೆಯವರ ಮನೆಯಿಂದ ಹೊರಟು ಶ್ರೀ ಮುರಲಿ ಧರ ದೇವಾಲಯಕ್ಕೆ ಹೋದರು. ಆ ಸಮಯ ವಿಟ್ಟಲ ದಲ್ಲಿ ೫೦೦೦ ಮಂದಿ ಸ್ತ್ರೀ-ಪುರುಷರು ನೆರೆದಿದ್ದರು. ವಿವಾಹದ ಸಂಭ್ರಮವು ರಾತ್ರಿ ೪ ಘಂಟೆ

ತನಕ ನಡೆದ ಬ್ರಾಹ್ಮಣರಿಗೆಲ್ಲ ಪ್ರಸಾದ ಹಂಚಿದ ಒಳಿತ ವರಿಸವಾಗಿತ್ತು. ಇಂಥ ಸಮಾರಂ ಭವು ಈ ಊರ ಇಲ್ಲ ನೆರವೇರಿದ್ದಿಲ್ಲ. ಈ ಸಮಾರಂ ಭಕ್ಕಾಗಿ ಭಾಗೀರಥಿಬಾಯಿಯವರು ಕೇರಳದಿಂದ ನಿಧಿಯನ್ನು ಒದಗಿಸಿದ್ದರು.

ಈ ಕೇರಿಯಲ್ಲಿ ದೈವಜ್ಞ ಜಾತಿಯವರ ಹುಡುಗಿಯ ರಿಗೆ ೩ ತಿಂಗಳುಗಳಾದವು. ಇನ್ನೂ ಪತ್ತೆಯಾಗಿಲ್ಲ. ಪೋಲೀಸ ಅಧಿಕಾರಿಗಳು ಜಾಗರೂಕರಾಗಿದ್ದಾರೆ.

ಶಿರಸಿ— ಇಲ್ಲಿಯ ಮುನಸಿಪಲ ಕಚೇರಿಯಲ್ಲಿ ೧೮ ನೇ ತಾರೀಖಿನ ದಿವಸ ಜರಿಷ್ಟ ಕಾಯಿದೆ ಕೌನ್ಸಿಲಿಗೆ ಮತದಾರರು ೧೫೫ ಮತಗಳು ಬಾಕಿ ಉಳಿದಿದ್ದು ಅವುಗಳ ಶ್ರೀ [illegible] ರವರಿಗೆ ೧೧೦ ಮತ ರಾ. ಹುಬ್ಬಳ್ಳಿ ಕರವರಿಗೆ ೧೫ ಮತಗಳು ಬಿದ್ದಿರುವವು. ಮತ್ತು ಇದೇ ಕಾಲಕ್ಕೆ ಜಿಲ್ಲಾ ಲೋಕಲ್ ಬೋರ್ಡಿಗೆ ೩೦೦ ಮತಗಳು ಬಾಕಿ ಉಳಿದಿದ್ದು ಅವುಗಳ ಶ್ರೀ [illegible] ಅವರಿಗೆ [illegible] ಮತ ರಾ. ಹುಬ್ಬಳ್ಳಿಕರ ಅವರಿಗೆ [illegible] ಮತಗಳು ಬಿದ್ದಿರುವದಾಗಿ ತಿಳಿಯುತ್ತದೆ.

ಡಾಕ್ಟರ ಅಪ್ಪ ಎಂಬುವರು ಇಲ್ಲಿಯ ಮುನಿಸಿಪ ಲ ಆಸ್ಪತ್ರೆಯ ಡಾಕ್ಟರರಾಗಿದ್ದು ಅವರು ಅನೇಕ ಕೆಲಸದಲ್ಲಿ ಒಳ್ಳೇ ಪ್ರವೀಣರಿರುವರು. ಅವರು ಮೊನ್ನೇದಿನ, ಹೊಟ್ಟೆ, ಪಿತ್ತಕೋಶ ಮೊದಲಾದ ರೋಗ ಗಳ ಶಸ್ತ್ರಗಳ ಓಪರೇಶನ್ ಮಾಡಿ ಎಷ್ಟೋ ಜನರಿಗೆ ಗುಣಪಡಿಸಿರುವರು. ಅಪ್ಪರಂಥ ಡಾಕ್ಟರರ ಹೊಸಲೇ ಇದಕ್ಕೆ ಜನಗಳು ಬಡವರಿಗಾಗಿ ಹೇಳಬಹುದು. ಇವರ ಧಾರಾಳ ಮನಸ್ಸನ್ನು ಲಕ್ಷ್ಯವಾಗಿ ತೆಗೆದ ಕೊಳ್ಳಬಹುದು.

ಹಿರೇಕೆರೂರು ತಾಲೂಕಿನಲ್ಲಿ ೩೩ ಮತ ಗಳು ಶ್ರೀ [illegible] ಅವರಿಗೆ ದೊರಕಿವೆ.

ವೃತ್ತಸಾರ.

— [illegible] ಹೇಳದ ಅಭ್ಯಾಸದಲ್ಲಿ ಹಂಚು ಭಂಗಾರದಿಂದ ಕಟ್ಟಿದ ಪುಸ್ತಕಗಳು ಬಗೆದು ತೆಗೆಯಲ್ಪಟ್ಟಿವೆ. ಘೋರ [illegible] ಕಲ್ಲಿಗೆ ಕಟ್ಟಿಯಾಗಿ [illegible] ಅದು ಜಿಲ್ಲಾ ಸಮಯಕ್ಕೆ [illegible] ಇನ್ನು ಹೊಸತು. ಎಲ್ಲಾ ಬೌಂದ ಇದೆ.

— ಮುಂಬಯಿಯ ಹೈಕೋರ್ಟಿನ ನ್ಯಾಯಮೂರ್ತಿ ಗಳಾದ ಸರ್ ಲಲ್ಲುಭಾಯಿ ಶಹಾರವರು ಕಳೆದ ಮಂಗಳ ವಾರಕ್ಕೆ ಪ್ರಕೃತಿ ವಿಕಾರದಿಂದ ತೀರಿಕೊಂಡರು. ಕ್ಷ ವಾ. ಶಹಾರವರು ಸೋಮವಾರದ ತನಕ ನ್ಯಾಯಾಸನದ ಕೆಲಸವನ್ನು ನೆರವೇರಿಸಿದ್ದರು. ಹಿಂದೂ ಕಾಯಿದೆಯ ಕುರಿತು ಕ್ಷ ವಾ. ಗಳು ಮಹತ್ವದ ತೀರ್ಪುಗಳನ್ನು ಕೊಟ್ಟಿರುವರು.

—೧೯ ಸಾವಿರ ಇಸ್ವಿಯಲ್ಲಿ ಸುಮಾರು ೧ ಲಕ್ಷ ರೂಪಾಯಿ ಗಳ ಹೊಸೆಲ್ [illegible] ಕೇಂಬ್ರಿಜ್ ಯುನಿವರ್ಸಿಟಿಯ ಮಿ. [illegible] ಬ್ರಿಟನ್ [illegible] ಗಳ ಕಾರು ಹುಟ್ಟು ವಾದ್ಯದ ಪುಸ್ತಕಗಳ ಅಭಿವೃದ್ಧಿಗಾಗಿ ಆ ರಕಮು ನ್ನು ಉಪಯೋಗಿಸಬೇಕೆಂದು ಇವೀಲಿಯವರಿಗೆ ಸೂಚಿ ಸಿರುವರು. ಇವೀಲಿಯವರು ಹಾಗೆ ಮಾಡಲು ಅಸಾಧ್ಯ ವೆಂದು ವಿಚಾರ ಮಾಡುತ್ತಿರುವರು. ಇದರ ಕಾರಣವೇನಿರ ಬಹುದು!

— ಜರ್ಮನಿಯ ನಾಯಕರಾದ ಜನರಲ್ ಲೂಡೆನ್‌ಡಾರ್ಫರವರು ಕಳೆದ [illegible] ಯುರೋಪ ಖಂಡದ ಪ್ರವಾಸ ಮುಗಿಸಿ ತಿರುಗಿ ಬಂದು ಮುಟ್ಟಿದರು.

— ಜರ್ಮನಿಯಲ್ಲಿ ಪ್ರತಿ ತಿಂಗಳ ಹೊಳೆಗಳ ಬಿಡುಗು ಅತಿಕ್ರಮವಾಗಿದೆ. ಹೆಚ್ಚಿಗೆ ಜನರು ಹೊಟ್ಟೆಗಿಲ್ಲದೆ ಅನೇಕ ಗಿರಾಕಿಗಳನ್ನು ಬೆಳೆಯನ್ನು ತಿಂದು ಈ ಹುಳ ಗಳು ಹಾಳ ಮಾಡಿದವು ಅನೇಕ ಜನರ ಹಣಗಳನ್ನು ಕಾಡಿಗ ಬಿಟ್ಟಿದ್ದಾವೆ. ಭಯ ಉಂಟಾಗಿದೆ!

— ಅಮೇರಿಕೆಯಿಂದ ಕಲಕತ್ತೆಗೆ ಒಂದು ಮುಟ್ಟಿದ ಸಿಟಿ ಆಫ್ ಟೂಸ್‌ನ್ ಎಂಬ ಉಗಿಹಡಗದ ಲ್ಲಿ ಅಕಸ್ಮಾತ್ತಾಗಿ ಅಗ್ನಿ ಸಾರಿಯಿಂದ ಪ್ರತೀಯ ಒಂದು ಲಕ್ಷ ರೂಪಾಯಿ ಬಹಳ ಹಾನಿಯು ಸಂಭವಿಸಿದೆ, ಎಲ್ಲಯ ಅಗ್ನಿಗಳು ಸಾಹಸದಿಂದ ವಿರುದ್ಧ.

— ಪ್ಲೇಗು ರೋಗದ ಮೂಲಕ ವಿಜಾಪುರದಲ್ಲಿ ಸೆರವ ಶೈಷ ಕಮಾಟಿಕ ಆಯುರ್ವೇದ ಸಮ್ಮೇಲನವು ಫೆಬ್ರು ವಾರಿಕ ವರೆಗೆ ಮುಂದೂಡಲ್ಪಟ್ಟಿತು.

— ಯೂರೋಪಿಯ ವೀರಶೈವ ಜ್ಞಾತಿಯ ಸ್ತ್ರೀ ಸಂಘದವರು [illegible] ನೇಗಿ ಶೈವಾಚಾರ್ಯಾಗಿದಾರು. ವಿಜಾಪುರ ಜಿಲ್ಲೆಯಲ್ಲಿ ವೀರಶೈವ ಬಂಧುವರಿಗೆ ಜ್ಞಾನಾರ್ಜನೆ ಗಾಗಿ ಒಂದು ಸಂಸ್ಕೃತ ಕಾಲೇಜನ್ನು ಸ್ಥಾಪಿಸಿ, ಪಠಿಸ್ಯ ೧ ಲಕ್ಷ ೫೦ ಸಾವಿರ ರೂಪಾಯಿಗಳ ಕಾಣಿಕೆಯನ್ನು ಕೊಡುತ್ತಿರುವರು.

— ಬೆಳಗಾಂವದ ಮಿ. ರೋಜರ್ಸ್ ನ್ಯಾಯಕೋರ್ಟ್ ಹಾ ಈ ಅಂಗಡಿಯವರಿ ಅಧಿಕಾರ ಜಾಹಿರು ಮಿ. ಆಜ ಮಾಡಿದೆ. ನ್ಯಾಯ ವಿಚಾರಿಸಿದರೆ ಡಾ ಈ ಅಂಗಡಿಯ ವರ ಅಧ್ಯಕ್ಷರಾಗಿ ಕಾಗದ ಪತ್ರಗಳನ್ನು ಪರೀಕ್ಷಿಸಿದ ಕೆಂದು ಹೇಳಿದ್ದು ಮಾಡಿದ್ದಾರೆ. ಕೋರ್ಟಿನವರ ಪರವಾಗಿ ವಿರುದ್ಧ ಚಾರ ಹುಕುಮಾಯಿತು.

— ಕೊಲ್ಹಾಪುರ ಮಹಾರಾಜರ ಬ್ರಾಹ್ಮಣರುಗಳು ಹೊಸ ಪುಸ್ತಕಗಳಲ್ಲಿ ತಾವಿಯ ಮುಂದೆ ಪಟ್ಟ ಬರೆಕೊಡಬೇಕು ವೆಂದು ಆಜ್ಞಾಪಿಸಿದ್ದಾರೆ.

.. ಹಿಂದೂ ವೈದ್ಯರ ಸಂಘದವರಲ್ಲಿ ಒಂದು ದಿನ್ನಯ ಬರುತ್ತಿದೆ ಉದಯಮುಖರಿಗೆ ಗಂಧದ ಪ್ರಕೃತಿ ಹೋದರು ಹುಟ್ಟಿದೆ. ಇದಿಯ ಪಾಪಸಾಗಿ ಪ್ರತಿದಿನಾಲುಕ್ತ ಇದೆ. ೫೦ ವೈಲು ಅದೇ ಅದೇ ಪ್ರಾಣಿಯು ಅರಿಯು ತ್ತದೆ.

… ಮೋಟಾರ ಕಾರ್ಖಾನೆ ಇನ್ನ ಮಗೆ ಮುಟ್ಟಿದ ಯಂತ್ರಸಾಮಗ್ರಿಗಳಿಗೆ ಈ ವರ್ಷ ೩೦ ಲಕ್ಷ, ಮುಂದಿನ ವರ್ಷ ೧೬ ಲಕ್ಷ, ಎರಡೂವರ ಕೋಟಿ ರೂಪಾಯಿಗಳಿಗೆ ೬ ಕೋಟಿ ಪ್ರಾಂತಗಳು ೩೩೩.೯ ಲಾಭವು ವಿದೇಶೀ ಸಾಮಗ್ರಿ [illegible]

… ಬಂಗಾಲದ ಪ್ರಸಿದ್ಧ ಪತ್ರಿಕೆಯಾದ ಲೀಡರ ಇವೀ ಮಿ. ಸರವರು ೫೦ ವರುಷಗಳ ವರೆಗೆ ನಡೆಸಿ, ಅಂತ್ಯ ವಡುವಕ್ಕೆ ಸಿದ್ಧರಾಗಿದ್ದರು.

.. ಎಲ್ಲ ರಾಷ್ಟ್ರಗಳಲ್ಲಿ ಇರುವ ರಾಷ್ಟ್ರೀಯ ಕ್ರೈಸ್ತರು ೧ ಲಕ್ಷ ಪಟ್ಟು ಅದರ ಬುಡದಲ್ಲೇ ೧೫೦೦೦ ಜನರು ಕಾರ್ಯಕ್ಕೆ ಸಿದ್ಧರಿದ್ದಾರೆ.

… ಸ್ವರಾಜ ಕೇಂದ್ರ ಸಂಸ್ಥೆಯವರ ನೇರೆಯ ಹಳ್ಳಿಯಲ್ಲಿ ಒಂದು ದೇವಾಲಯ, ಶಾಲೆ, ಹಾಗು ಕ್ರಿಯು ಅ.ಪ.ಪ [illegible]

. ಮೈಸೂರು ಸಂಸ್ಥಾನದೊಳಗಿನ ಹಳ್ಳಿಗಳಲ್ಲಿ ಪಂಚಾಯತು ಕೋರ್ಟುಗಳನ್ನು ಸ್ಥಾಪಿಸುವ ನಿರ್ಧಾರ ಮಾಡಿ ಇದೇ ಫೆಬ್ರವರಿ ತಿಂಗಳಲ್ಲಿ ಈ ಕೋರ್ಟುಗಳು ಸ್ಥಾಪಿತ ಹೊಂದುವವು.

… ವಿಲಾಯತಿಯಲ್ಲಿ ಇದ್ದ ಸಭೆಗಳ ಕಾರಿಕಾರರು ಸಂಖ್ಯೆ ಮಹಾರಿರುವರು. ಹಿಂದಿನಂತೆ ೪॥ ಬೆಲೆ ಇದು [illegible] ಗಳ ಪಕ್ಷವಾಗಿರುವರು. ಇನ್ನಷ್ಟಾಗಬಹುದೋ!

… ಪಟ್ಟಿ ಜಿಲ್ಲೆಯ (ಬಂಕಾಪುರ) ಶ್ರೀ ಸಾಯಿ. ಜ ಕಟಗೇರಿ, ಶ್ರೀ ಹ. ಕಟಗೇರಿ, (ಶುದು) ಟಿ. ಬಿ. ಹೆಗಡೆ ಕರ, (ಹೀ) ಎಮ್. ಎಸ್. ಕೃ ಟಿ ಎಸ್. ನಾಯ್ಕ (ಅಥಣಿ) ಚರಿಯಪ್ಪ ಚಂದ್ರಶೇಟ್, ಅನಂತಪ್ಪ ಚಂದ್ರಶೇಟಿ, (ಹಳಿಯಾಳ) ಎಸ್. ಸ್ವಾಮಿರಾಯ ಅಪ್ಪ ಇವರು ಅಖಿಲ ಭಾರತೀಯ ಸಾಲುಗಾರರ ಸಂಘದ ಮೊದಲನೇ ಅಂಗಡಿಯ ಸಭಾಸದರಾಗಿರುವರು. ತಿಂಗಳಿಗೆ ೩.೩ ಪಾವಲಿ ಗೆರ ಸಾಲವನ್ನು ಇವರು ತಂಧಿಕ್ಕೆ ಆಗಿಸುತ್ತಾರೆ.

ಮಹಾತ್ಮರ ಆತ್ಮಚರಿತ್ರೆ

(೫೬) ರಾಜನಿಷ್ಠೆ ಹಾಗು ಆರೈಕೆ.

ಬ್ರಿಟಿಶರ ರಾಜ್ಯಶಾಸನಕ್ಕೆ ಇರುವ ನನ್ನಲ್ಲಿದ್ದಷ್ಟು ಆಳವಾದ ನಿಷ್ಠೆಯನ್ನು ಇನ್ನಾರಲ್ಲೂ ನಾ ಕಾಣೆ. ಸತ್ಯನಿಷ್ಠೆಯೇ ಈ ರಾಜನಿಷ್ಠೆಯ ಮೂಲಾಧಾರವಾಗಿತ್ತು. ರಾಜನಿಷ್ಠೆಯಾಗಲೀ, ಇನ್ನಾವ ಸದ್ಗುಣಗಳನ್ನಾಗಲೀ ನನ್ನಲ್ಲಿ ಹುಟ್ಟಿಸಿ ನಟಿಸಲು ನನಗೆ ಶಕ್ಯವಿರಲಿಲ್ಲ. ಬ್ರಿಟಿಶ ಗುಣಗಳೆಲ್ಲವೂ ಸ್ವಭಾವಸಿದ್ಧವಾಗಿದ್ದವು. ಬ್ರಿಟಿಶರ ರಾಷ್ಟ್ರೀಯ ಗೀತವನ್ನು ನಾನು ನಾಟಾಲದಲ್ಲಿ ನಡೆಯುತ್ತಿದ್ದ ಎಲ್ಲ ಸಭೆಗಳಲ್ಲಿಯೂ ಹಾಡುತ್ತಿದ್ದರು. ನಾನೂ ಅದರ ಹಾಡುವಿಕೆಯಲ್ಲಿ ಸೇರಿಕೊಳ್ಳಬೇಕೆಂದು ನನಗೆ ಅನಿಸುತ್ತಿತ್ತು. ಬ್ರಿಟಿಶರ ಆಡಳಿತದ ದೋಷಗಳ ಅರಿವು ನನಗಿರಲಿಲ್ಲವೆಂದಲ್ಲ. ಆದರೆ ಬ್ರಿಟಿಶ ರಾಜ್ಯಪದ್ಧತಿಯು ಒಟ್ಟಿನಲ್ಲಿ ಸ್ವೀಕಾರಾರ್ಹವೆಂದು ನನಗೆ ತೋರುತ್ತಿತ್ತು. ಬ್ರಿಟಿಶ ರಾಜ್ಯವು ಪ್ರಜೆಗಳಿಗೆ ಕಲ್ಯಾಣಪ್ರದವೆಂದೇ ನಾನು ಆ ಕಾಲದಲ್ಲಿ ನಂಬಿಕೊಂಡಿದ್ದೆನು.

ದಕ್ಷಿಣ ಆಫ್ರಿಕೆಯಲ್ಲಿ ಕಂಡ ವರ್ಣದ್ವೇಷವು ಬ್ರಿಟಿಶರ ಪರಂಪರೆಗೆ ವಿರುದ್ಧವಾದದ್ದೆಂದೂ, ಅದು ಕ್ಷಣಿಕವಾದ ಸ್ಥಳೀಯ ದೋಷವೆಂದೂ ನಾನು ನಂಬಿದ್ದೆನು. ಆದುದರಿಂದ ಇಂಗ್ಲಿಷರೊಡನೆ ನಾನು ರಾಜನಿಷ್ಠೆಯಲ್ಲಿ ಸ್ಪರ್ಧಿಸುತ್ತಿದ್ದೆನು. ಏಕಾಗ್ರ ಬುದ್ಧಿಯಿಂದ ನಾನು ರಾಜನಿಷ್ಠೆಯನ್ನು ಪ್ರದರ್ಶಿಸುತ್ತಿದ್ದೆನು. "ದೇವರು ರಾಜನನ್ನು ರಕ್ಷಿಸಲಿ" ಎಂಬ ರಾಷ್ಟ್ರಗೀತವನ್ನು ನಾನು ಜಾಗ್ರತೆಯಿಂದಲೂ, ಪ್ರಯತ್ನದಿಂದಲೂ ಕಲಿತುಕೊಂಡೆ. ಅದನ್ನು ಹಾಡಿದಾಗೆಲ್ಲ ನಾನು ಹಾಡುತ್ತಿದ್ದೆ. ವಿಶೇಷ ಆಡಂಬರವಿಲ್ಲದೆ, ಸಂದರ್ಭ ಸಿಕ್ಕಾಗ ರಾಜನಿಷ್ಠೆ ಯನ್ನು ಪ್ರದರ್ಶಿಸುವ ಪ್ರಸಂಗ ಬಂದಾಗ ಅದನ್ನು ಉತ್ಸಾಹದಿಂದ ಅಂಗೀಕರಿಸುತ್ತಿದ್ದೆ.

ಈ ರಾಜನಿಷ್ಠೆಯ ಬುದ್ಧಿಯಿಂದ ನಾನು ಯಾರಿಂದಲೂ ಏನೂ ಅಪೇಕ್ಷಿಸಲಿಲ್ಲ. ರಾಜನಿಷ್ಠೆಯಿಂದ ಸ್ವಾರ್ಥ ಸಾಧನೆಯನ್ನು ನಾನು ಮಾಡಲಿಲ್ಲ. ನಾನು ರಾಜನಿಷ್ಠೆಯಿಂದಿದ್ದದ್ದು ಕರ್ತವ್ಯವೆಂದು; ಪ್ರತಿಫಲವನ್ನು ನಾನೆಂದೂ ಅಪೇಕ್ಷಿಸಲಿಲ್ಲ.

ನಾನು ಹಿಂದುಸ್ಥಾನಕ್ಕೆ ಬಂದ ಸಮಯ ವಿಕ್ಟೋರಿಯಾ ಮಹಾರಾಣಿಯವರ ಜುಬಿಲಿ ಮಹೋತ್ಸವದ ಸಮಯವಾಗಿತ್ತು. ರಾಜಕೋಟದಲ್ಲಿ ಈ ಉತ್ಸವ ನಡೆಸುವ ಸಮಿತಿಯೊಳಗಿನ ಸದಸ್ಯನಾಗಿರಲು ನನಗೆ ನಿಮಂತ್ರಿಸಿದರು. ನಾನು ಆ ನಿಮಂತ್ರಣವನ್ನು ಅಂಗೀಕರಿಸಿದೆನು. ಆದರೆ, ಈ ಸಮಾರಂಭವೆಲ್ಲ ಬರೀ ಒಂದು ತೋರಿಕೆಯಾಗುವದೆಂದು ನನ್ನ ಗ್ರಹಿಕೆಯಾಯಿತು. ಈ ಸಮಾರಂಭದಲ್ಲಿ ಡಂಭಾಚಾರವೇ ಹೇರಳವಿರುವದಾಗಿ ನನಗೆ ಕಂಡು ಬಂತು. ಅದನ್ನು ತಿಳಿದು ನನಗೆ ಬಹಳ ದುಃಖವಾಯಿತು. ಇಂಥ ಸಮಿತಿಯಲ್ಲಿ ಇರಬೇಕೇ ಬೇಡವೇ ಎಂದು ವಿಚಾರಿಸಿದೆನು. ಕೊನೆಗೆ ನನ್ನ ಕರ್ತವ್ಯವನ್ನು ಮಾಡಿ ಮುಗಿಸುವದು ಒಳ್ಳೆಯದು ಎಂದು ಗ್ರಹಿಸಿ ನಾನು ನನ್ನ ಕೆಲಸವನ್ನು ಮಾಡುತ್ತಿದ್ದೆನು.

ಗಿಡಗಳನ್ನು ಹಚ್ಚುವದು ಈ ಉತ್ಸವದ ಒಂದು ಅಂಗವಾಗಿತ್ತು. ಡಂಭಾಚಾರಕ್ಕಾಗಿ, ಅಧಿಕಾರಿಗಳ ಸಂತೋಷಕ್ಕಾಗಿ ಅನೇಕರು ಅದನ್ನು ಮಾಡುತ್ತಿದ್ದರೆಂದು ನನಗೆ ಕಂಡು ಬಂತು. ಗಿಡಗಳನ್ನು ನೆಡುವದು ಅವಶ್ಯವೆಂದೂ ನಾನು ಅವರಿಗೆ ತಿಳಿಸಿದೆನು. ಗಿಡಗಳನ್ನು ಬರೀ ಒಂದು ಸಂದರ್ಭಕ್ಕಾಗಿ ನೆಡುವದಾದರೆ ಅದನ್ನು ಬಿಡುವದೇ ಒಳ್ಳೆಯದು. ವಿಚಾರವಿಲ್ಲದೆ, ಶ್ರದ್ಧೆಯಿಲ್ಲದೆ ಮಾಡುವದಕ್ಕಿಂತ ಮಾಡದಿರುವದೇ ಮೇಲು. ಆದ್ದರಿಂದ ಎಲ್ಲರೂ ತಮ್ಮಂತೆ ನನಗೆ ನೆಡಿಸಿದ ನನ್ನ ಸ್ವಾಧೀನಕ್ಕೊಪ್ಪಿಸಿದ ಗಿಡಗಳಿಗೆ ನಾನು ಜಾಗ್ರತೆಯಿಂದ ನೀರು ಹಾಕಿ ಜೋಪಾನ ಮಾಡಿದೆ ನೆನಪಿದೆ.

"ಎಲ್ಲರೂ ರಾಜನಿಷ್ಠರಾಗಿರಬೇಕು" ಎಂಬ ಮಾತನ್ನು ನಾನು ನನ್ನ ಮನೆಯೊಳಗಿನ ಹುಡುಗರಿಗೂ ಕಲಿಸಿದೆನು. ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿಗಳಿಗೂ ಅದನ್ನು ನಾನು ಕಲಿಸಿದ್ದೆನೆಂದು ನೆನಪು. ವಿದ್ಯಾರ್ಥಿಗಳಿಗೆ ಇದನ್ನು ಕಲಿಸಿದ್ದು ಏಳನೆಯ ಎಡ್ವರ್ಡ ಬಾದಶಹರ ರಾಜ್ಯಾಭಿಷೇಕದ ಸಮಯವೋ? ಈಗ ನೆನಪಿಲ್ಲ. ಕೆಲವು ದಿವಸಗಳ ಮೇಲೆ ಆ ಪದ್ಯದೊಳಗಿನ ವಿಚಾರಗಳು ನನಗೆ ಹಿಡಿಸಲಿಲ್ಲವಾಗಿತ್ತು. ಅಹಿಂಸೆಯ ಕಲ್ಪನೆಯು ನನ್ನಲ್ಲಿ ಅಭಿವೃದ್ಧಿಗೊಂಡಹಾಗೆ ನನ್ನ ವಿಚಾರ ಹಾಗೂ ವಚನಗಳ ಕುರಿತು ನಾನು ಎಚ್ಚರಿಕೆಯಿಂದ ಪರೀಕ್ಷಿಸಹತ್ತಿದೆನು. ಆ ಪದ್ಯದೊಳಗಿನ ಈ ಎರಡು ಸಾಲುಗಳು ಅಹಿಂಸೆಯ ಭಾವನೆಯನ್ನು ವಿರೋಧವಾಗಿ ಕಂಡುಬಂದುವು.

> "ಅವಳ (ಮಹಾರಾಣಿಯವರ) ವೈರಿಗಳನ್ನು ಚದರಿಸು;
> ಮತ್ತು ಅವರ ನಾಶ ಮಾಡು;
> ಅವರ ರಾಜಕಾರ್ಯಗಳಲ್ಲಿ ಗೊಂದಲ ಎಬ್ಬಿಸು;
> ಅವರ ಠಕ್ಕತನದ ಹಂಚಿಕೆಗಳನ್ನೆಲ್ಲ ನಿಷ್ಫಲ
> ಗೊಳಿಸು."

ಡಾ. ಬೂಥರವರಿಗೆ ನನ್ನ ಭಾವನೆಗಳನ್ನು ತಿಳಿಸಿದೆ. ಅಹಿಂಸಾನಿಷ್ಠರು ಈ ಸಾಲುಗಳನ್ನು ಹಾಡುವದು ವಿರುದ್ಧ ಎಂದು ಅವರು ಅಭಿಪ್ರಾಯಪಟ್ಟರು. ಬಹುಶಹ "ವೈರಿ" ಗಳೆಂದು ಕರೆಯಲ್ಪಡುವವರು "ಠಕ್ಕ" ರೆಂದು ನಾವು ಗ್ರಹಿಸಿ ಹಿಡಿಯುವ ಬಗೆ ಹೇಗೆ? ಅವರು ವೈರಿಗಳೆಂಬುವದರಿಂದಲೇ ಅನ್ಯಾಯಕಾರಿಗಳೆಂದೇ ಕೆಂದು ಸಿದ್ಧಾಂತವಿರುವದೇನು? ನ್ಯಾಯವನ್ನೇ ಅನುಗ್ರಹಿಸಲು ನಾವು ಪರಮಾತ್ಮನನ್ನು ಬೇಡಬೇಕಲ್ಲವೆ. ಡಾ. ಬೂಥರು ನನ್ನ ಭಾವನೆಗಳಿಗೆ ಸಂಪೂರ್ಣವಾಗಿ ಸಮ್ಮತಿಸಿದರು. ತಮ್ಮಲ್ಲಿಯ ಧರ್ಮ ಸಭೆಯವರಿಗಾಗಿ ಹೊಸ ಪದ್ಯವನ್ನು ರಚಿಸಿದರು. ಆದರೆ ಡಾ. ಬೂಥರವರ ಕಥೆಯನ್ನು ಮುಂದೆ ಹೇಳುವೆನು.

ರಾಜನಿಷ್ಠೆಯ ರೀತಿಯೇ ರೋಗಿಗಳ ಆರೈಕೆ ಮಾಡುವ ಪರಿ ನನ್ನದೆಂದು ಹುಟ್ಟುಗುಣವಾಗಿತ್ತು. ಗೆಳೆಯರಿಗಾಗಲೀ, ಇತರರಿಗಾಗಲೀ ಆರೈಕೆ ಮಾಡುವದು ನನಗೊಂದು ಪ್ರೀತಿ.

ದಕ್ಷಿಣ ಆಫ್ರಿಕೆಯ ಕುರಿತು ನಾನು ಹಸ್ತಪತ್ರಿಕೆಯನ್ನು ಬರೆಯುವ ಉದ್ಯೋಗದಲ್ಲಿದ್ದಾಗ ಮುಂಬಯಿಗೆ ಹೋಗಿ ಬರುವ ಪ್ರಸಂಗ ಬಂತು. ಪಟ್ಟಣಗಳಲ್ಲಿ ಸಭೆಗಳನ್ನು ಸೇರಿಸಿ ಈ ಪ್ರಶ್ನೆಯ ಮೇಲೆ ಲೋಕಮತವನ್ನು ತಯಾರಿಸುವದು ನನ್ನ ಸಂಕಲ್ಪವಿತ್ತು. ಮೊಟ್ಟಮೊದಲು ಮುಂಬಯಿಯನ್ನೇ ನಾನು ಆರಿಸಿದೆನು. ನ್ಯಾಯಮೂರ್ತಿ ರಾನಡೆಯವರಿಗೆ ಮೊದಲು ಭೆಟ್ಟಿಯಾದೆ. ಅವರು ವಿಷಯವನ್ನೆಲ್ಲ ಲಕ್ಷ್ಯಪೂರ್ವಕ ಕೇಳಿಕೊಂಡು ಸರ ಫಿರೋಜಶಹಾ ಮೆಹತಾರವರಿಗೆ ಭೆಟ್ಟಿಯಾಗಲು ನನಗೆ ಹೇಳಿದರು. ಆ ಮೇಲೆ ನ್ಯಾಯಮೂರ್ತಿ ಬದ್ರುದ್ದೀನ ತಯ್ಯಬಜಿಯವರಿಗೆ ನಾನು ಭೆಟ್ಟಿಯಾದೆ. ಅವರೂ ಹಾಗೆಯೇ ಹೇಳಿದರು. ತಯ್ಯಬಜಿಯವರು ನನ್ನ ಹತ್ತಿರ ಹೇಳಿದ್ದೇನಂದರೆ:—"ನ್ಯಾಯಮೂರ್ತಿ ರಾನಡೆ ಯವರಿಗೆ ನಿಮಗೆ ಹೆಚ್ಚಿನ ಸಹಾಯ ಮಾಡಲು ಬರಲಿಕ್ಕಿಲ್ಲ. ನನ್ನ ಸ್ಥಿತಿಯೂ ನಿಮಗೆ ಗೊತ್ತಿದೆ. ಸಾರ್ವಜನಿಕ ಕಾರ್ಯಗಳಲ್ಲಿ ನಾವು ಪ್ರವೇಶಿಸುವಂತಿಲ್ಲ. ನಿಮ್ಮ ಕಾರ್ಯಗಳ ಬಗ್ಗೆ ಸಹಾನುಭೂತಿ ಇದೆ. ನಿಮಗೆ ಮಾರ್ಗದರ್ಶಕರಾಗಿ ನೆರವಾಗುವವರು ಸರ ಫಿರೋಜಶಹಾ ಮೇಹತಾರವರೇ."

ಸರ ಫಿರೋಜಶಹಾ ಮೆಹತಾರವರಿಗೆ ನಾನು ಸ್ವಾಗತ ಭೆಟ್ಟಿಯಾಗುವವನಿದ್ದೆ. ರಾನಡೆ, ತಯ್ಯಬಜಿ ಇವರ ಬರೆದ ಶಿಫಾರಸು ಮೆಹತಾರವರ ಕಡೆಗೆ ಒಯ್ದೆನು. ಫಿರೋಜಶಹಾ ಮೆಹತಾ ಸರ ಫಿರೋಜಶಹಾ ಎಂಬ ಹೆಸರಿನ ಮೇರು ಪರ್ವತದಂತಹ ವ್ಯಕ್ತಿಯ ಕಲ್ಪನೆಯು ನನಗಾಗಿತ್ತು. ನಾನು ಅವರಿಗೆ ಭೆಟ್ಟಿಯಾದೆ. ಅವರನ್ನು ನೋಡಿದೊಡನೆ ಕಕ್ಕಾಬಿಕ್ಕಿ ಭಾರತದ ಸಿಂಹವೆನ್ನುವಂತಿರುವ ಭೀತಿಯು ಉಂಟಾಗುವದೆಂದು. ಸಿದ್ಧರಾಗಿದ್ದ ವ್ಯಕ್ತಿಗಳು ಅವರನ್ನು ಸುತ್ತುವರಿದಿದ್ದರು. ಅದರಲ್ಲಿ ಶ್ರೀ ಡಿ. ಇ. ವಾಚಾ, ಶ್ರೀ ಕಾಮಾ, ಇವರೂ ಇದ್ದರು. ಶ್ರೀ ವಾಚಾರವರ ಹೆಸರನ್ನು ನಾನು ಕೇಳಿದ್ದೆನು. ಅವರು ಮುಂದೆ ನನಗೆ ಪರಿಚಯ ಮಾಡಿಕೊಟ್ಟರು. ಅವರು ಸರ ಫಿರೋಜಶಹಾರವರ ಬಲಗೈಯೆಂದು ಕರೆಯುತ್ತಿದ್ದರು. "ಗಾಂಧಿಯವರೇ, ನಾವು ಪುನಃ ಭೆಟ್ಟಿಯಾಗೋಣ" ಎಂದು ಹೇಳಿದರು.

ಆಮೇಲೆ ಕೆಲವು ದಿವಸಗಳಲ್ಲಿ ಸಭೆಯು ನಡೆಯಿತು. ಸರ ಫಿರೋಜಶಹಾರವರು ಎಲ್ಲ ಕಥೆಯನ್ನು ನಾನು ಹೇಳಿದೆನು. ನಾನು ಬರೆದ ಹಸ್ತಪತ್ರಿಕೆಯನ್ನು ಅವರಿಗೆ ತೋರಿಸಿದೆನು. ಅವರು ಸಮಾಧಾನದಿಂದ ಕೇಳಿಕೊಂಡರು. "ಗಾಂಧಿಯವರೇ, ನಿಮಗೆ ನಾನು ಸಹಾಯ ಮಾಡುವೆನು. ಇಲ್ಲಿ ಸಾರ್ವಜನಿಕ ಸಭೆಯನ್ನು ನಾವು ಕರೆಯುವೆವು" ಎಂದು ಮುಂದುವರಿಸಿದರು. ಆಮೇಲೆ ಅವರು ತಮ್ಮ ಕಾರ್ಯದರ್ಶಿಗಳಾದ ಶ್ರೀ ಮುನ್ಶಿಯವರಿಗೆ ಸಭೆಯ ದಿವಸವನ್ನು ನಿಶ್ಚಯಿಸಲು ಹೇಳಿದರು. ಸಭೆಯ ದಿವಸ ನಿಶ್ಚಯವಾಯಿತು. ಸಭೆಯ ಹಿಂದಿನ ದಿನ ಅವರಿಗೆ ಭೆಟ್ಟಿಯಾಗಲು ಹೇಳಿ ನನಗೆ ಹೋಗಲಪ್ಪಣೆ ಕೊಟ್ಟರು. ಈ ಸಂಭಾಷಣೆಯಿಂದ ನನ್ನ ಭೀತಿಯೆಲ್ಲ ದೂರವಾಯಿತು. ನಾನು ಸಂತೋಷದಿಂದ ಮನೆಗೆ ತಿರುಗಿದೆನು.

ಮುಂಬಯಿಯಲ್ಲಿ ಇರುವಾಗ ನಾನು ನನ್ನ ಭಾವನ ಬಿಡಾರಕ್ಕೆ ಹೋದೆನು; ಭಾವನು ಬೇನೆಯಲ್ಲಿದ್ದನು; ನನ್ನ ಭಾವನು ಬಡವನಿದ್ದನು; ನನ್ನ ಅಕ್ಕನಿಗೆ ಗಂಡನ ಆರೈಕೆ ಮಾಡಲು ಅಷ್ಟು ಶಕ್ತಿಯಿದ್ದಿಲ್ಲ. ರೋಗ ಬಹಳ ವಿಶೇಷವಾಗಿತ್ತು; ಆದರಿಂದ ಅವನನ್ನು ರಾಜಕೋಟಿಗೆ ಒಯ್ಯುತ್ತೇನೆಂದು ನಾನು ಹೇಳಿದೆನು; ಅವನು ಒಪ್ಪಿದನು. ನಾನು ಅಕ್ಕನ ಸಹಿತ ಮನೆಗೆ ಬಂದೆವು. ಬೇನೆಯು ಬಹಳ ದಿನಗಳ ವರೆಗೆ ನಡೆಯಿತು. ಭಾವನನ್ನು ನನ್ನ ಕೋಣೆಯಲ್ಲಿಟ್ಟು ಹಗಲಿರುಳು ಅವನ ಹೊತ್ತಿಲ್ಲ ನಾನು ಇರುತ್ತಿದ್ದೆ. ರಾತ್ರಿಯಲ್ಲಿ ನಾನು ಜಾಗರಣ ಮಾಡಬೇಕಾಗುತ್ತಿತ್ತು. ಅವನ ಶುಶ್ರೂಷೆಯು ನಡೆದಾಗಲೇ ದಕ್ಷಿಣ ಆಫ್ರಿಕೆಯ ಕೆಲಸವನ್ನೂ ನಾನು ಮಾಡುತ್ತಿದ್ದೆ. ಕೊನೆಗೆ ರೋಗಿಯು ದೇವಾಧೀನನಾದನು. ಆದರೆ ಅಂತ್ಯಕಾಲದಲ್ಲಿ ಅವನ ಆರೈಕೆ ಮಾಡಲು ನನಗೆ ಅವಕಾಶ ದೊರೆತದ್ದೇ ನನಗೆ ಸಮಾಧಾನವೆನಿಸಿತು.

ಶುಶ್ರೂಷೆಯು ನನ್ನ ಗುಣವು ಒಂದು ಹೊಸ್ತ ವಿಶಾಲವಾಗಿ ಪರಿಣಮಿಸಿತು. ಅನೇಕಾವರ್ತಿ ನನ್ನ ಕೆಲಸವನ್ನೇ ನಾನು ಲಕ್ಷ್ಯಕ್ಕೆ ತರಲಿಲ್ಲ. ಪ್ರಸಂಗದಲ್ಲಿ ನನ್ನ ಹೆಂಡತಿಯನ್ನು, ಮನೆಮಂದಿಯನ್ನು ಅದೇ ಕೆಲಸಕ್ಕೆ ನಾನು ಹಚ್ಚುತ್ತಿದ್ದೆನು.

ಈ ರೋಗಿಗಳ ಆರೈಕೆಯ ಕೆಲಸಗಳನ್ನು ಸಂತೋಷದಿಂದ ಮಾಡಬೇಕೇ ಹೊರತು ಆಪುಗಳಿಂದ ಪ್ರಯೋಜನವಿಲ್ಲ. ಡಂಭಾಚಾರಕ್ಕಾಗಿ, ಅಥವಾ ಲೋಕಾಪವಾದದ ಭೀತಿಯಿಂದ ಮಾಡಿದರೆ ಅದರಿಂದ ಆತ್ಮವಿಕಾಸವು ಆಗುವದಿಲ್ಲ; ಆತ್ಮಕ್ಕೆ ಬಲವಾಗುವದಿಲ್ಲ; ಆಹಂಕಾರವೇ ಬೆಳೆದು ಸೇವೆಯ ಫಲವು ದೊರೆಯಲಾರದು. ಅಂತಃಕರಣದ ಪ್ರವೃತ್ತಿಯಿಂದ ನಡೆದ ಲೋಕಸೇವೆಯು ಮುಂದೆ ಅತ್ಯಂತ ಆನಂದವೂ, ಆತ್ಮದಾರ್ಢ್ಯವೂ ದೊರೆಯುವದೆಂದು ಭಾಸವಾಗುತ್ತದೆ.

ಸ್ವರಿ ಬಾಕಿದೆ! ಸ್ವರಿ ಬಾಕಿದೆ!

ಜಾಹಿರಾತದಾರರು ತ್ವರೆಮಾಡಿರಿ!

ಬೆಳಗಾವಿ ರಾಜಶ್ರೀ ತಿಮ್ಮಣ್ಣ ಪಂಡಿತರಿಂದ ದೃಗ್ಗಣಿತ ಪ್ರಕಾರ ಗಣಿಸಿ ಪರಿಶೋಧಿಸಲ್ಪಟ್ಟ

ಪ್ರಭವ ಸಂವತ್ಸರದ ಪಂಚಾಂಗವು

ಅಚ್ಚಿನಲ್ಲಿದೆ!

ಪಂಚಾಂಗದಲ್ಲಿ ಜಾಹಿರಾತು ಕೊಡುವವರಿಗೆ ಅವಕಾಶ ಬಾಕಿದೆ!

ಈ ಪಂಚಾಂಗವು ಕಾನಡಾ ಜಿಲ್ಲೆಯೊಳಗಿನ ಹಳ್ಳಿಗಳಲ್ಲಿಯೂ, ಸಾಗರ-ಶಿವಮೊಗ್ಗ ಮೊದಲಾದ ಮೈಸೂರ ಪ್ರಾಂತದಲ್ಲಿಯೂ ಪ್ರಸಿದ್ಧವಿದೆ. ಜಾಹಿರಾತು ಕೊಡುವವರು ... ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ಪತ್ತೆ:- ಮೆನೆಜರ, "ಸ್ಟಾರ ಆಫ್ ಕೆನರಾ ಪ್ರೆಸ್," ಕಾರವಾರ. (ಉ. ಕಾನಡಾ.)

झंडूचें
द्राक्षासव-
एक रतलास किंमत १॥ रुपये;

राजयक्ष्मा औषधें

रोग़ें चाळविणारें
भूक वाढविणारें
खोकला साफ करणारें
झोप आणणारें
शक्ति देणारें
तेजस्वीपणा आणणारें

विश्वास हरिकर.

तयार करणार,

झंडू फार्मास्युटिकल वर्क्स लिमिटेड, मुंबई नं. १२

एजंट— मेसर्स पंडित आणी कंपनी, तीर्थहळ्ळी.

शिर्सि एजंट-एम. एल. भाकप्पा आणि ब्रदर.

BATLIBOI'S
Accountancy Training Institute

Recognised by The G. D. A. Board

Offers best training in Accounting, Banking, Company Management and Secretarial Work and Theory and Practice of Commerce.

Best staff, Individual attention. Fee moderate, and payable by instalments.

Send for Prospectus at Yusuf Buildings, Churchgate street, Fort, Bombay.

You are invited to make thorough enquiry before joining.

TUITION BY POST IS OUR SPECIALITY.

ಆಯುರ್ವೇದೀಯ] ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ [ಮುಲಬರಿ ಕೃತಿ!

ಅನುಭವಿಕ ಔಷಧಗಳು!

೧. ಮದನಕಾಮೇಶ್ವರ ಲೇಹ- ಧಾತುಪುಷ್ಟಿ, ವೀರ್ಯ-ಶಕ್ತಿವರ್ಧಕ ...
೨. ಮದನ ಕಾಮೇಶ್ವರ- ಗುಳಿಗೆ ... [...]
೩. ಉಪದಂಶ- (ಗರ್ಮಿ) ರೋಗಕ್ಕೆ ... ೭ ದಿವಸದಲ್ಲಿ ಗುಣಹೊಂದುವದು.
೪. ಗರ್ಮಿ ರೋಗಕ್ಕೆ ... (ಕುರ್ಕು) ...
೫. ಯೋಗರಾಜ ಗುಗ್ಗುಳ- ಅರ್ಧಾಂಗವಾತ ... ವಾತರೋಗಕ್ಕೆ ಸಿದ್ಧೌಷಧಿ. ॥, ೧।, ... ರೂ.
೬. ಕೆಮ್ಮಿನ ಗುಳಿಗೆ- ಕ್ಷಯ, ದಮ್ಮು, ಕೆಮ್ಮು, ... ೧ ರೂ, ೧॥ ರೂ.
೭. ವೀರ್ಯಶುದ್ಧ- ... ಗುಳಿಗೆ. ... ೧೦೦ ಕ್ಕೆ ೧॥ ರೂ.
೮. ಸಂಜೀವನಿ- ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ ... ಜ್ವರಗಳ ಮೇಲೆ ... ೧೦೦ ರ ... ರೂ.
೯. ಚಂದ್ರಪ್ರಭಾ ವಟಿ- ... ಪ್ರಮೇಹ, ಮೂತ್ರಕೃಚ್ಛ, ಅಶ್ಮರಿ, ಧಾತುಕ್ಷಯ, ಸ್ವಪ್ನದೋಷ, ... ರೂ.
೧೦. ದಂತಮಂಜನ- ಹಲ್ಲು ನೋವು, ... ರೂ.
೧೧. ಜಂತುವಿಷ ಔಷಧ- ... ೧॥ ರೂ. ೧೦೦ಕ್ಕೆ ... ರೂ.
೧೨. ಬಜ್ಜಿಯ ಮುಲಾಮು- ... ರೂ.
೧೩. ನಾರಾಯಣ ತೈಲ- ... ಅರ್ಧಾಂಗವಾತ ಮೊದಲಾದ ಅನೇಕ ವಾತ ರೋಗಕ್ಕೆ ... ತೈಲಗಳು. ... ೧॥ ರೂ. ...
೧೪. ವಾತಸಂಜೀವನಿ ಗುಟಿಕಾ- ... ರೂ.
೧೫. ಪುತ್ರಜೀವನಲೇಹ- ಗರ್ಭಧಾರಣಾಗದ ಸ್ತ್ರೀಯರಿಗೆ ಸಿದ್ಧೌಷಧಿಯು. ... ರೂ. ...

... ಅನುಪಾನ ಪತ್ರ ಔಷಧದ ಸಂಗಡ. (ಆಯುರ್ವೇದ ಗುಣರತ್ನ ... ಪುಸ್ತಕ ಉಚಿತ) ಇವಲ್ಲದೆ ಅನೇಕ ... ರೋಗಗಳ ಮೇಲೆ ... ಕಲ್ಪ, ತೈಲ, ... ಬಗ್ಗೆ ... ಪತ್ರವ್ಯವಹಾರ ಮಾಡಬೇಕು.

ಪತ್ತೆ:— ಮೆನೆಜರ, ಆಯುರ್ವೇದಚಿಕಿತ್ಸಾಮಂದಿರ, ಪ್ರೋ. ಚಿಂದಿಪ್ಪ, ಜಿ. ಕಾರವಾರ.

ಮುಂಬಯಿ ವಿಳಾಸ:— R. C. KAMAT, *Toyshop, Store Lane, Fort, Bombay.*

ಯಾವದೇ ಆಕಾರದ ನಂಬಿಕೆಯ ನಕ್ಷೆಯ ಗಡಿಯಾರವನ್ನು

ಬರೇ 2 ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪; ಅರ್ಧ ಬೆಲೆ ರೂಪಾಯಿ ೭;



ಒಂದೇ ಒಂದು ತಿಂಗಳ ಒಳಗೆ ... ಎಲ್ಲಾ ... ಬೆಲೆ ... ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ... ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House; P B 508 P T Madras.**

ಅತ್ಯಲ್ಪವಿವೆ!

ಕೇವಲ

ಉಚಿತ

ಉಚಿತ

ಉಚಿತ

ಕೇವಲ

ಉಚಿತ

... ಈ ಗಡಿಯಾರವನ್ನು ... ಉಚಿತವಾಗಿ ... ಬರೆಯಿರಿ.

CAPTAIN WATCH CO, P. B. 265, MADRAS.

ಸಬ್ ಅಸಿಸ್ಟೆಂಟ ಸರ್ಜನ್

ವ್ಯಾ. ಎಮ್. ವೈದ್ಯ,

ಡೆಂಟಿಸ್ಟ ಮತ್ತು ಅಕ್ಯೂಲಿಸ್ಟ,

ಗವಳೀಗಲ್ಲಿ, ಧಾರವಾಡ.

ಡಾಕ್ಟರ ಕಾಪರ, ಡಿ ಡಿ ಎಸ್ ಮುಂಬಯಿ,

ಇವರ ಮೊದಲನೇ ಅಸಿಸ್ಟೆಂಟ

ಹುಬ್ಬಳ್ಳಿ ಬ್ರೆಂಚ - ದುರ್ಗದಬೈಲ ಪ್ರತಿ ದಿವಸ ಮಧ್ಯಾಹ್ನ ೨ರಿಂದ ಸಂಜೆಯ ೬ ರ ವರೆಗೆ

ಏನೂ ನೋಯಿಸದೆ ಹಲ್ಲುಗಳನ್ನು ತೆಗೆಯುತ್ತೇವೆ ಕೃತ್ರಿಮ ಹಲ್ಲುಗಳನ್ನು ಯೋಗ್ಯವಾಗಿ ಕೂಡಿಸುತ್ತೇವೆ ಬೆಳ್ಳಿ ಅಥವಾ ಬಂಗಾರದ ಸಿಮೆಂಟದಿಂದ ಹಲ್ಲಗಳನ್ನು ಕೂಡಿಸುತ್ತೇವೆ ಹಳೇ ಹಲ್ಲಗಳನ್ನು ದುರುಸ್ತ ಮಾಡುತ್ತೇವೆ ಗೋಲ್ಡ, ಕ್ರೌನ ಮತ್ತು ಬ್ರಿಜ್ಜವರ್ಕ ಸ್ವಾಭಾವಿಕ ಹಲ್ಲುಗಳನ್ನು ಸ್ವಚ್ಛವಾಗಿ ಮಾಡುವದರಲ್ಲಿ ಬರುವದು ಇದಕ್ಕವೆ ಕಪ್ಪನ್ನು ಸಂಪೂರ್ಣವಾಗಿ ಬೆಳ್ಳಗೆ ಮಾಡುವದರಲ್ಲಿಯೂ ... ನಮ್ಮ ದಂತಮಂಜನವನ್ನು ಉಪಯೋಗಿಸಿರಿ

ಬೆಲೆ ಡಬ್ಬಿಗೆ ೪ ಆಣೆ

ಕಣ್ಣು ಚಾಳೀಸ

ಚಾಳೀಸು ಕಲ ನಾಗಿ ಕಣ್ಣುಗಳನು ಪರೀಕ್ಷಿಸುತ್ತೇವೆ ಕನ್ನಡಕ, ಪ್ರೇಮ್, ರೋಲ ಮತ್ತು ನಿಕಲ್ ... ಗಳು ... ಕಣ್ಣುಗಳನ್ನು ... ಕೂಡಿಸುತ್ತೇವೆ

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ

ಹಾಗೂ

ಅಡಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ

ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ —

ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ; ಗೋಕರ್ಣದಿಂದ ಕುಮಟಾ, ಶಿರ್ಸಿ, ಹುಬ್ಬಳ್ಳಿ, ಗೋಕರ್ಣದಿಂದ ಅಂಕೋಲಾ, ಕಾರವಾರ

ಟೀಪು — ಟಿಕೇಟು ಮುಂದಾಗಿ ಪಡಕೊಳ್ಳಬೇಕೆನ್ನುವವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ಮಂಗೇಶರಾವ ಶಿಶಿತ್ಕರ,

ಮೋಟರ ಏಜಂಟ

ಗೋಕರ್ಣ (ಉತ್ತರ ಕನ್ನಡ

S. U. Narayanacharya & CO.
Chaukamba, BENARES CITY



ನಮ್ಮಲ್ಲಿ ಎಲ್ಲಾತರದ ರೇಶ್ಮೆ ಪೀತಾಂಬರ ಜರಿ ಕಣ, ಜರಿ ಸೀರೆ, ಶಾಲ್ ಶಾಲು, ತರವರಿ ರುದ್ರಾಕ್ಷಿ, ಕಸ್ತೂರಿ ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲೆಗಳು ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು

ವಿಳಾಸ — ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ ಕಾಶಿಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧಿನಶ್ಯದ ಪುಡಿಯು ಅಂದು ಹಿಡಿದು ... ಸಾವಿರಾರು ಜನಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು; ಯಾವವೆಂದರೆ— ಪೀನಸ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಸೇರಿದ ... ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ, ಮೂಗು ಕಟ್ಟಿದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಐದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಜನಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗುವದು

ಬುದ್ದಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ;

ಪತ್ರ — ಗ ರ. ಒ ಕ ವ ಅಂಡ್ ಕಂಪನಿ ಲಿಮಿಟೆಡ್ ಪೋ ... ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ ಕುರ್ಚಿಗಳು.



ಇವು ಉಕ್ಕಿನ ತಗಡಿನವು,

ಎತ್ತಿಡಲಿಕ್ಕೆ ಹಗುರ

ಕಟ್ಟಿಗೆ ಕುರ್ಚಿಗಳಿಗಿಂತ

ಬಹು ದಿವಸ ಬಾಳುತ್ತವೆ.

ಬೆಲೆ ೫ ರೂ

ವರ್ತಕರಿಗೆ ಕಮೀಶನ್



ಕಿರ್ಲೋಸ್ಕರ ಕಬ್ಬಿನ ಗಾಣ.

ನಮ್ಮಲ್ಲಿ ಕವಾಲ ಮತ್ತು ಕಿಸಾನ ಗಾಣಗಳು ತಯಾರಾಗುತ್ತವೆ. ಇವುಗಳಲ್ಲಿ ಈ ವರ್ಷ ಹೊಸ ಸುಧಾರಣೆ ಮಾಡಿ ಹಿಂದಿನ ಅಡಚಣೆಗಳನ್ನು ದೂರ ಮಾಡಿರುತ್ತೇವೆ.

ಸವಿಸ್ತರ ಸಂಗತಿ ಬಗ್ಗೆ ಇಂದೇ ಕಾಗದ ಬರೆಯಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನ.

ಅದರ ಉಪಯೋಗಗಳಿಂದ, ಶಾಶ್ವತ, ಉಳುಕು ಇತ್ಯಾದಿ ವ್ಯಾಧಿಗಳಲ್ಲಿ, ಬಹುಬಾಧೆ ದೂರಾಗಿರುವದು, ಕಳೆದ ೨೫ ವರ್ಷಗಳಿಂದ ಅದರ ಉಪಯುಕ್ತತೆಯು ಪ್ರಚುರವಾಗಿ ಸಿದ್ಧವಾಗಿದೆ. ಲಕ್ಷಗಟ್ಟಲೆ ಜನಗಳು ಅಮೃತಾಂಜನವನು ಉಪಯೋಗಿಸುತ್ತಿರುವರು ಅವರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ನೆಗಡಿ, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯತಕ್ಕವರು ಈ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

Reg. No. B. 1270. Monday, November 29th 1926.

ವರ್ಷ ೧೧. ಸಂಚಿಕೆ ೬.

ಕಾನಡಾವೃತ್ತ.

THE KANARA NEWS.

ಚಂದಾ ದರ.

ಊರಲ್ಲಿ ಅಗಾವು ವರ್ಷಾಯಿ 2-4-0.
ಟಪಾಲ ಖರ್ಚ ಸೇರಿ ರೂ. 3-0-0.
ಅಂಚೆವೆಚ್ಚ ಸೇರಿ ವರ್ಷಾಯಿ 3-2-0.
ಸಂಚಿಕೆಗೆ 0-1-0.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಜಾಹೀರಾತು (೧೫ ಲೈನ್ ಒಳಗೆ) ೧ ಸಲಕ್ಕೆ ರೂ. 1-0- ಆ ನಂತರ ಪ್ರತಿ ಸಲಕ್ಕೆ 0-2-0.
ಹೆಚ್ಚಿಗೆ ಸಾಲು ಎಷ್ಟು ಹೆಚ್ಚಿರುವವೋ ಆ ಮಾನದಿಂದ ಅಷ್ಟು ಹಣ ಹೆಚ್ಚಿಗೆ ಕೊಡಬೇಕಾಗುವದು.
ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿ ನಿಶ್ಚಯ ಮಾಡಲ್ಪಡುವವು.

ಅಲ್ಪವಿಲಿಖಿತಮಪಿ ...
ಇತಿ ಮಹತಿ ... ಕಾರ್ಯಕಾಲೇ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೨೯ ನೇ ನವಂಬರ ಸನ್ ೧೯೨೬ ನೇ ಇಸವಿ

(...) ನನ್ನ ಶಾಸ್ತ್ರೀಯ ವಾದ (...)
ಶಾರೀರಿಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ... ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ ... ದೃಢವಾದ ... ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ... ಈ ಪುಸ್ತಕವನ್ನು ... ಉಚಿತವಾಗಿ ಕಳಿಸುತ್ತೇನೆ ... ಈ ವಿಳಾಸಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A.
Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಇನ್ನೂ ಗೊತ್ತೇ ಇಲ್ಲವೋ?

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿಯು,

ಬೆಳಗಾಂವ	ಕಾರವಾರ
ದಿಂದ	ದಿಂದ
ಕಾರವಾರಕ್ಕೆ	ಬೆಳಗಾಂವಕ್ಕೆ

ಕಳೆದ ಸಪ್ಟೆಂಬರ ೧ ನೇ ತಾರೀಖಿನಿಂದ ನಿಯಮಿತ ಡೇಲಿ ಮೋಟರ ಸರ್ವ್ಹಿಸ್ ಶುರುಮಾಡಿದ್ದು

ಬೆಳಗಾಂವಕ್ಕೆ ಮುಂಬಯಿ ಮೇಲ ಬಂದ ನಂತರ ಬೆಳಿಗ್ಗಿನ ೧೦॥ ಘಂಟೆಗೆ ಬೆಳಗಾಂವ ಬಿಟ್ಟು, ಹಳಿಯಾಳ—ಯಲ್ಲಾಪುರ—ಅಂಕೋಲಾ ಮಾರ್ಗವಾಗಿ ಅದೇ ದಿವಸ ಸಾಯಂಕಾಲಕ್ಕೆ ಕಾರವಾರಕ್ಕೆ ಮುಟ್ಟುವಂತೆಯೂ, ಕಾರವಾರದಿಂದ ಬೆಳಿಗ್ಗಿನ ೭ ಘಂಟೆಗೆ ಹೊರಟು ಮುಂಬಯಿ ಮೇಲ ಟ್ಯಾಮಿಗೆ ಸರಿಯಾಗಿ ಬೆಳಗಾಂವಕ್ಕೆ ಮುಟ್ಟುವಂತೆಯೂ ಫಕ್ತ ಪ್ರಯಾಣಿಕರ ಸೋಯಿಗಾಗಿ ಡೇಲಿ ಮೋಟಾರ ಸರ್ವ್ಹಿಸ ಇಟ್ಟಿದ್ದಿರುತ್ತದೆ. ಟಿಕೀಟಿನ ದರಗಳು ವ ವಿಶೇಷ ಮಾಹಿತಿ ನಮ್ಮ ಅಲ್ಲಲ್ಲಿಯ ಏಜಂಟರ ಕಡಿಗೆ; ಅಥವಾ ನಮ್ಮ ಹೆಡ್ ಆಫೀಸಿನಲ್ಲಿ.

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ,
ಬೆಳಗಾಂವ.

"ಸುವಾಸಿನಿ"

ಸಚಿತ್ರ ಮಾಸಪತ್ರಿಕೆ.

ಪ್ರತಿ ತಿಂಗಳ ಅಂತ್ಯದಲ್ಲಿ ಪ್ರಕಟವಾಗುವದು.

ವಾರ್ಷಿಕ ಚಂದಾ ರೂ. ೩-೪-೦.

ಆರು ತಿಂಗಳುಗಳಿಗೆ ರೂ ೧-೧೨-೦

ಮನೋರಂಜಕವಾದ ಕಥೆಗಳಿಂದ, ನೀತಿಬೋಧಕಗಳಾದ ಉಪನ್ಯಾಸಗಳಿಂದ, ಹಾಸ್ಯಗರ್ಭಿತವಾದ ಉಲ್ಲೇಖಗಳಿಂದ ನಿಮ್ಮ ಕಾಲವನ್ನು ವಿನೋದದಿಂದ ಕಳೆಯಬೇಕಾದರೆ, "ಸುವಾಸಿನಿ"ಯು ತಕ್ಕ ಪತ್ರಿಕೆಯು. ಇದು ಸ್ವತಂತ್ರ ಇದೇ ಆಕ್ಟೋಬರದಿಂದ ಪ್ರಾರಂಭ. ಚಂದಾದಾರರಾಗಲು ಇದೇ ತಕ್ಕ ಸಮಯ.

ವಿಳಾಸ:- "ಸುವಾಸಿನಿ" ಆಫೀಸು,

ಮಂಗಳೂರು, (ದ. ಕ.)



ಕಬ್ಬು ಅರೆಯುವ ಕೈಗಾರಿಕೆ ಸುಪ್ರಸಿದ್ಧ ಹೊಸ ಮದ್ರಾಸ, ಸೂಪರ ಛಾಪಾ ಆಲೆಕಣೆಗಳನ್ನು ಕೊಳ್ಳಿರಿ. ಅಗದೀ ಸುಧಾರಿಸಿ ಅಚ್ಚುಕಟ್ಟಾಗಿವೆ. ಮೂರು ಕಣೆಗಳೂ ಗುಪ್ತವಾಗಿ ನಿಲ್ಲುವವು. ಸಣ್ಣ ಎತ್ತುಗಳೂ ಜುಗುಟದಂತೆ ತಿರುಗಿಸುವವು. ಎತ್ತಿ ಇಳಿಸಲೂ, ಬಹುದೂರಿಗೆ ಸಾಗಿಸಲೂ ಬಹು ಸುಲಭ.

ನಮ್ಮಲ್ಲಿ ೩ ಶಕ್ತಿಯಿಂದ ನಡೆಯುವ ಯಂತ್ರಗಳ ಮೇಲೆ ಎಲ್ಲಾ ನಮೂನೆಯ ಕಣೆ ದುರಸ್ತಿ ಕೆಲಸಗಳು ನಡೆಯುತ್ತ ಹೆಚ್ಚಿಗೆ ವಿಷಯಕ್ಕೆ ಕನ್ನಡ ಜಾಹಿರಾತು ತರಿಸಿ ನೋಡಿರಿ.

ಪ್ರಭಾಕರ ಆಲೆಕಣೆ ಕಂಪನಿ,

ವರದಾನದೀ ಪಸ್ತೆ, ಸಾಗರ (ಜಿಲ್ಲಾ ಶಿವಮೊಗ್ಗ)

ರಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:-

ತಬಲೆ, ಡಕ್ಕೆ, ವಗೈರೆ.



೧. ಕೈಪೆಟ್ಟಿಗೆ-ಸಿಂಗಲ ರೂ. ೨೫, ೩೦, ೪೦, ೫೫, ೬೦

೨. ,, -ಡಬಲ ರೂ. ೪೦, ೪೫, ೫೦, ೬೦, ೧೦೦.

೩. ಕಾಲುಪೆಟ್ಟಿಗೆ ,, ರೂ. ೬೫, ೭೫, ೧೦೦, ೧೩೦, ೧೫೦

೪. ತಬಲೆ (ತಾಮ್ರದಡಕ್ಕೆ ಸಹಿತ) ರೂ ೧೬, ೧೮, ೨೦

ಹಾರ್ಮೋನಿಯಮ್ ಗ್ಯಾಡ ಕಿಂ. ರೂ. ೧||;

ತಬಲೆ ಗ್ಯಾಡ ಕಿಂ. ೧೨ ಆಣೆ.

ಮಾಹಿತಿ ಬಗ್ಗೆ ಕ್ಯಾಟಲಾಗು ಪುಕ್ಕಟೆ ದೊರೆಯುವದು.

ಗೋಪಾಳ ಸಖಾರಾಮ ಮತ್ತು ಕಂಪನಿ

ನಂ. ೩೮೮, ವಿಠ್ಠಲವಾಡಿ ಎದುರಿಗೆ

ಕಾಳಬಾದೇವಿ ರೋಡ,

ಮುಂಬಯಿ.

೧೦೦೦ ರೂಪಾಯಿ ಇನಾಮು.

ಮಿರಜೆಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರಪಾಕ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಡನೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ಎದೆನೋವು ಹಾರ್ಟ (ಡಿಸೀಜ) ಜೀರ್ಣಜ್ವರ, ಮೂಲವ್ಯಾಧಿ, ಹಳೆಪರ್ಮ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟ ವಿಕಾರಗಳು, ಮೆಂದುವಿನ ಅಶಕ್ತತೆ ಉರಿಮೂತ್ರ, ಎಲ್ಲ ಪಿತ್ತವಿಕಾರಗಳು ನಿದ್ದೆಯು ಬಾರದೆ ಇರೋಣ ಮುಂತಾದ ವೃದ್ಧಪುರುಷರ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತದ ವೃದ್ಧಿಯು ಆಗುತದೆ. ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯುವ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜಿದ್ದಿನ ಪಾಕವನ್ನು ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವ ಪಡೆಯಬೇಕು. ಈ ಪಾಕವನ್ನು ಬಹು ಪ್ರಯಾಸದಿಂದ ಅಮೌಲ್ಯ ಔಷಧ ಅತಿ ವನಸ್ಪತಿಗಳಿಂದ ತಯಾರಿಸಿದ್ದೇವೆ. ಇದರಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ಅತಿಜೀನಸು ಹಾಕಿಲ್ಲೆಂದು ಸಿದ್ಧಮಾಡಿ ಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲೆಯು ೧ ಕಡಿ, ರಾತ್ರಿ ಭೋಜನ ನಂತರ ೨ ತೊಲೆಯು ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ೨ ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀಸಂಗ ಹೆಚ್ಚಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ಅರ್ಧ ತೊಲೆ ಡಬ್ಬಿಯು ಬರುವ ಮಾಸದ ಕಿಮತ ಕಡಿಮೆ ಮಾಡಿದ ೫ ರೂಗೆ ಸಿಗುವದು ೩ ಡಬ್ಬಿಗೆ ೧೪|| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು. ದಿನಸುಗಳ ವಿವರವನ್ನು ವೈದ್ಯಕೀಯ ಕ್ಯಾಟಲಾಗಿನಲ್ಲಿ ನೋಡಿರಿ.

ಪತ್ತೆ:— ಮಾಲಕ ವೈದ್ಯ ವ್ಹಿ. ಎಸ್ ಕಾಪಸೆ, ಮು. ಪೋ. ಮಿರಜ.

ಅಲ್ಪ ವೆಚ್ಚದಲ್ಲಿ ಅಧಿಕ ಲಾಭ ಕಳಕೊಳ್ಳಬೇಡಿರಿ.] **ಶ್ರೀ ಶಿವಯೋಗಿಯೇ ರಕ್ಷಿಸು.** [ಧೀಕಂಸಿ ದುಃಖಿಗಳಾಗಿ ಪಶ್ಚಾತ್ತಾಪಪಡಬೇಡಿರಿ.

☞ ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯೊಳಗಿಂದ ಮುಕ್ತರಾಗಿರಿ.

ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಭಕ್ಷಿಸು, ಪದಕಗಳನ್ನು ದೊರಕಿಸಿ ಸುಪ್ರಸಿದ್ಧಿಯನ್ನು ಹೊಂದಿದ

ಬಾಲಗ್ರಹ ದೋಷ ನಿವಾರಕನೆಂಬ ಮಂತ್ರ ಯಂತ್ರದ ತಾಯಿತ್.

"ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವ ಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ, ಮುಟ್ಟಾಗುವ ಸಮಯದೊಳು ಕೈಕಾಲು ಸೆಳೆಯುವಿಕೆ, ದುಸ್ವಪ್ನಗಳು ಬೀಳುವಿಕೆ, ಹೊಟ್ಟೆಶೂಲೆ, ಬಿಳುಪು-ಕೆಂಪು ಹೋಗಿ ಗರ್ಭ ಪತನವಾಗುವಿಕೆ, ಮಾಟ, ಸರ್ಪ ಶಾಪ, ಮಾರ್ಜಾಲ ಶಾಪ, ಪಿಶಾಚಬಾಧೆಯಿಂದ ನರಳುವಿಕೆ, ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಇದಲ್ಲದೆ ಸಣ್ಣ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ) ಮುಟ್ಟುದೋಷ, ಕಾಮಿಣಿ, ಗ್ರಹಪೀಡೆ, ದೃಷ್ಟಿದೋಷ, ಮುಟಕಿಬ್ಯಾನಿ, ವಿಶೇಷ ಅಳೋಣ, ಜಯದಿಂದ ಜ್ವರಪೀಡೆ, ಕ್ಷೀಣ ಹೊಂದುವಿಕೆ, ಮೊದಲಾದವುಗಳಿಂದ ಕಾಡುತ್ತಿರುವದು.' ಗರ್ಭರಕ್ಷಾಕರ ವಿಧಿಯಲ್ಲಿ, ಸೂರ್ಯ ರಕ್ಷಾಕರ ವಿಧಿಯಲ್ಲಿ, ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಮಹಾನ್ ಸಾಧು ಸತ್ಪುರುಷ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ. ಇದನ್ನು ತರಿಸಿ ಧರಿಸಿದರೆ ಹೆಂಗಸು ಮಕ್ಕಳಿಗಾಗುವ ಸಂತಾನಭಂಗವೂ, ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಯಾವತ್ತು ಪರಿಹಾರವಾಗುತ್ತದೆ. ಈ ತಾಯಿತ ಧರಿಸಿಕೊಂಡು ಗುಣವಿಲ್ಲೆಂದವರಿಗೆ ೧೦೦ ರೂಪಾಯಿ ಭಕ್ಷಿಸು ಕೊಡುತ್ತೇವೆ ಒಂದು ಸಲ ತರಿಸಿ ಅನುಭವ ತಕ್ಕೊಳ್ಳಿರಿ. ಕ್ರಯ ಗಿಕ್ಕೆ ರೂ: ೨-೮-೦. ಪೋಸ್ಟ ಖರ್ಚ ಬೇರೆ.

ವಿಳಾಸ—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ ಪೋ. ಮು. ಅಥಣಿ, ಜಿಲ್ಲಾ ಬೆಳಗಾಂವ.

Karwar Convent School.

Mr. Editor,

In the issue of the Kanara-News dated the 22nd instant there has appeared a letter by a pseudonimous correspondent styled a "Catholic" in connection with the Convent School for girls which is going to be established in Karwar. Of late I have found many a letter published in your paper regarding the North Kanara Christians. Since so long they were merely effusions of a harmless nature intended to tickle the fancies of your readers nobody took any notice of them. But in the present letter your correspondent, who has not the courage to disclose his name, has distorted facts and made base insinuations to such an extent, that if the public are not enlightened on the subject, they are likely to remain under wrong impressions about the Convent School. I therefore request you to publish this letter in the interests of truth and fairplay and oblige.

It is not a fact that the Archbishop has sanctioned 16000 Rs for the building. He has bougth the land with ecclesiastical funds so that it may not be private property transferable at will. As regards the costs of the building which are estimated at about Rs. 16000, it is the public of Kanara without distinction of caste and creed— the school is meant for girls of all castes— and even outsiders that are going to raise the necessary funds by means of public subscriptions, and many, including the Archbishop, have already given very liberal donations It is not the Padroado priests that are interested in the establishment of the school, but it is at the instance of the public that the Archbishop, who is the Patriarch of the East Indies, has at last deigned to give his support and patronage to it. Kanara badly wanted an English school for girls since there was none in the whole district, and it was after repeated requests to the Patriarch that he wrote to the Bishop of Quilon and secured the services of the Carmelite nuns from Trivandrum to run the school. It is a base calumny on the part of your correspondent therefore to insinuate that the Convent School is meant to provide for nuns of Goa. As a matter of fact there are no nuns at all in Goa, and your correspondent has betrayed his crass ignorance by making this mean insinuation. Your correspondent further seems to suggest that in the absence of schools for Catholic boys a school for girls is unnecessary in North Kanara. But he seems to ignore that there are already five High Schools for boys in North Kanara and that up to this time no Catholic boy has failed to avail of English education for want of an English school.

Not only the Catholic graduates which North Kanara has produced till now, but all the Catholic boys who for some reason or other could not prosecute their studies, have been educated in these schools and

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ಲಕ್ಷ್ಯ ಮಾಡುತ್ತಾರೆ ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕಡೆಗೆ ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಒಳ್ಳೇ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ್)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ; ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಒಳ್ಳೇ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ ರೂ. ೧—೦—೦
ಅಂಚೆವೆಚ್ಚ ,, ೦—೬—೦
೩ ಬಾಟ್ಲಿಗಳಿಗೆ ,, ೨-೧೦—೦
ಅಂಚೆವೆಚ್ಚ ,, ೦-೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

೪ ಔನ್ಸಿಗೆ ರೂ. ೨—೦—೦
೨ ಔನ್ಸಿಗೆ ,, ೧—೪—೦
೧ ಡ್ರಾಮಿಗೆ ,, ೦-೧೨—೦
ಅಂಚೆವೆಚ್ಚ ,, ೦—೬—೦

ಒಟ್ಟೋ-ದಿಲ್ ಬಹಾರ

ಕೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ್)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳ ವಿಲ್ಲ; ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082. **BOMBAY**

are now holding lucrative posts in Bombay, Africa, Persian Gulf etc., etc. If more Catholic boys have not availed themselves of English education, it is not because there was dearth of schools but because of the apathy of the parents who are mostly agriculturists and artisans and are naturally unwilling to wean their boys from their own trades. Your correspondent suggests, moreover, that it will be superfluous to teach English to girls when they will not be able to secure educated boys for their husbands. This shows what a poor brain he has got. He imagines that the only scope for girls is marriage and that too within the district. He forgets that many girls from Kanara are even today serving as teachers, nurses etc. in Bombay and elsewhere and that many girls have married boys who have emigrated to distant places for want of suitable and lucrative work for them in this district. Had not these girls gone, at great expense to their parents, to Mangalore and other distant places to get some English education, they would have been compelled to remain at home either as old maids or doing some menial work. That the want of an English school is keenly felt is evident from the fact that some parents are even now sending their girls to Boys' Schools and to Mangalore and other places for their education. The Vernacular Schools for girls which are existing in the district are not sufficient to the present day requirements not only of Christian girls but even of Hindu girls. It is to provide this long felt want that the Convent School is going to be opened in Karwar and not to make a show of the priests' interest in education as your correspondent insinuates. An English school for girls was actually started in Kanara some years ago with the help of Government, the Karwar Municipality and the District Local Board, but the school had to be closed as the lay lady teachers were unwilling to stay in Karwar sacrificing their prospects in places like Bombay etc. It is to avoid such a contingency in future that, through the intervention of the Patriarch, the services of nuns are secured this time, as the nuns are selfless, having given up wordly life, and are best fitted for the education of girls who will not only be taught in the Convent School the three Rs. but will be instructed in various other subjects which are required to complete a girl's education.

Yours faithfully,

Karwar, 24-11-1926 } **L. S. Coutinho,** B.A., LL.B.,

— ಜಪಾನ ದೇಶದ ರಾಜಧಾನಿಯಾದ ಟೋಕಿಯೋ ಪಟ್ಟಣದ ನೆರೆಹೊರೆಯಲ್ಲಿ ಅಗ್ನಿಪ್ರಳಯವಾಗಿ ೬೪ ಕಾಂಚಾನೆ ೩೦೦ ಮನೆಗಳು ಸುಟ್ಟು ಹೋಗಿ ಒಂದು ಸಾವಿರ ಮಂದಿಗಳು ನಿರಾಶ್ರಿತರಾಗಿರುವರು ೩ ಲಕ್ಷ ರೂಪಾಯಿಗಳ ನಷ್ಟ ಜಪಾನದ ದುರ್ದೈವ!

— ಅಕ್ಟೋಬರದಲ್ಲಿ ಜರುಗಿದ ಎರಡನೇ ಎಲ್‌ಎಲ್.ಬಿ., ಪರೀಕ್ಷೆಗೆ ೫೦೬ ಉಮೇದ್ವಾರರು ಕುಳಿತುಕೊಂಡಿದ್ದು ಅವರೊಳಗೆ ೧೬೪ ವಿದ್ಯಾರ್ಥಿಗಳು ಪಾಸಾದರು.

— ಸಿರಿಯಾ ದೇಶದಲ್ಲಿ ಅಲ್ಲಿಯ ಮೂಲನಿವಾಸಿಗಳಾದ ಡ್ರೂಜರಿಗೂ, ಫ್ರೆಂಚರಿಗೂ ಘೋರ ಕದನವೆದ್ದಿದೆ. ಫ್ರೆಂಚರಿಗೆ ಸೋಲುಬೇಕಾಯಿತು. ಈ ಕದನಕ್ಕೆ ಸಂಬಂಧಿಸಿದ ಜರು ಕ್ರಿಸ್ತಮತದವರು!

— ಮುಂಬಯಿಯ ಹರಿಯುವರ ಸಂಸ್ಥೆಯವರು ೧೦ ಮೈಲು ನಡಿಗೆಯ ಪಂದ್ಯಾಟವನ್ನು ಯೋಜಿಸಿದ್ದರು ಈ ಪಂದ್ಯಾಟದಲ್ಲಿ ೮೪ ಮಂದಿ ಯುವಕರು ಸೇರಿದ್ದರು. ರಾ| ಡಿ. ಆರ್ ಪಾಸ್ಕರ ಎಂಬ ಪಾರ್ಸೀ ಯುವಕನು ೬೦ ಮಿನಿಟುಗಳಲ್ಲಿ ೧೦ ಮೈಲು ನಡೆದು, ಅಗ್ರಸ್ಥಾನವನ್ನು ಪಡೆದನು!

— ನಿಜಾಮ ಸಾಹೇಬರು ಹೈದರಾಬಾದದೊಳಗಣ ಯುನಾನಿ ಚಿಕಿತ್ಸಾಲಯಕ್ಕಾಗಿ ೧೦ ಲಕ್ಷದ ಕಟ್ಟಡ ಕಟ್ಟಿಸುವ ಸಂಕಲ್ಪ ಮಾಡಿರುವರು. ಚಿಕಿತ್ಸಾಲಯ ಕಟ್ಟುವಿಕೆಯ ಸಮಾರಂಭವನ್ನು ನಿಜಾಮ ಸಾಹೇಬರು ತಾರೀಖು ೨೨ನೇಗೆ ಸ್ವತಃ ನೆರವೇರಿಸಿದರು.

ಪಿ. ಎಸ್ ಮೋಟರ ಸರ್ವಿಸ ಶಿವಮೊಗ್ಗಾ

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ- (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ- ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ- ಶಿರ್ಶಿ- ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ.
ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವಸತಿ ವ್ಯವಸ್ಥೆ ಮಾಡಿದೆ.
ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa
PROPRIETOR.

ಸರಕಾರದಲ್ಲಿ ರೆಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀದಾಸಾದಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಯಮಾ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು — ಪರಮಾ ಹಾಗೂ ಕಾವಿನಿಂದ ಬಾಧಿತವಾದ ಶರೀರವು ನಿರೋಗವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮುಂತಾದ ಇವುಗಳು ನಾಶವಾಗುವವು ದಿವಸದಲ್ಲಿ ಮೂರುವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಜ್ಜಿ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ ಮೂರು ಬಾಟಲಿಯ ಕಿಮ್ಮತು ೩—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ವಿ.ಪಿ. ಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦ ಡಜನಿಗೆ ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೀ. ನಿಪ್ಪಾಣಿ, ಜಿ ಬೆಳಗಾಂವ.

ವಿವಿಧ ಸಂಗ್ರಹ.

ಕಳವಳವು ಬೇಸಾಯದ್ದೋ, ವಿಲಾಯತಿ ಸಾಮಗ್ರಿಗಳದೋ!

ಇತ್ತಲಾಗಿ ಬೇಸಾಯ ಕಮೀಶನ, ಬೇಸಾಯ ಪ್ರದರ್ಶನ ಇವುಗಳ ಗದ್ದಲವೆದ್ದಿದೆ. ಈ ಕುರಿತು ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಬರೆಯುವದೇನಂದರೆ:— "ಬೇಸಾಯ ಕಮೀಶನನು ಬ್ರಿಟಿಶ ವ್ಯಾಪಾರಿಗಳದೆಂದು ಶಂಕೆಯೆಂದು ನನಗೆ ಮೊದಲೇ ಸಂಶಯವಿತ್ತು. ಬೇಸಾಯದ ಯಂತ್ರಸಾಮಗ್ರಿಗಳಿಗೆ ಗಿರಾಕಿಗಳನ್ನು ನಿರ್ಮಿಸುವದಕ್ಕಾಗಿ ಈ ಕಮೀಶನಿನ ನಿರ್ಮಾಣವಾಗಿದೆ. ಇಂಗ್ಲಂಡದಲ್ಲಿ ಜರುಗಿದ ಸಭೆಗಳ ಹಕೀಕತಿನ ಮೇಲಿಂದ ನನ್ನ ಭೀತಿಯು ಈಗ ಯಥಾರ್ಥವೆಂದು ಹೇಳಬೇಕಾಗಿದೆ." ಈ ಅವತರಣವು ಹಿಟ್ಟರು ಬರೆದ ಪತ್ರದೊಳಗಿಂದ ತೆಗೆಯಲ್ಪಟ್ಟಿದೆ. ಈ ಮಹಾನುಭಾವರು ಪ್ರತಿ ಶಬ್ದವನ್ನು ತೂಕ ಮಾಡಿ ಉಪಯೋಗಿಸುತ್ತಾರೆ. ಅವರಲ್ಲಿ ಅಸೂಯಾ ಬುದ್ಧಿ ಇಲ್ಲ. ಪ್ರಚಲಿತ ರಾಜಕಾರಣದಲ್ಲಿಯೂ ಅವರು ಸೇರಿದವರಲ್ಲ. ಈ ಅವತರಣವನ್ನು ನಾನು ಕೊಡಲು ಕಾರಣವೇನಂದರೆ, ನನಗೂ ಅದೇ ಭೀತಿಯಿದೆ. ನನಗೆ 'ಸರಕಾರದಲ್ಲಿ' ವಿಶ್ವಾಸವಿಲ್ಲದ್ದರಿಂದ ಈ ಭೀತಿಯುಂಟಾಗುವದು ಶಕ್ಯವಿದೆ. ಭರತಖಂಡದೊಳಗಣ ಬೇಸಾಯಗಾರರ ಸ್ಥಿತಿಗತಿಯನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸುವ ಸದ್ಬುದ್ಧಿಯಿಂದ ಈ ಕಮೀಶನಿನ ಯೋಜನೆಯಾಗಿರುವದೂ ಶಕ್ಯವಿದೆ. ನನ್ನ ಭೀತಿಯಾಗಲಿ, ಸಂಶಯವಾಗಲಿ ನಿರಾಧಾರವೆಂದು ತಿಳಿದರೆ, ನನಗೆ ಸಂತೋಷವೇ. ಆದರೆ, ಆ ಭೀತಿಯನ್ನು ನಾನು ತಾಳುವ ತನಕ ಅದನ್ನು ಸಾರ್ವಜನಿಕವಾಗಿ ಪ್ರಕಟಿಸುವದು ಯೋಗ್ಯವು. ಬೇಸಾಯ ಪ್ರದರ್ಶನದ ಪ್ರೇಕ್ಷಕರೊಬ್ಬರು ನನಗೆ ಕಳುಹಿದ ಪತ್ರದೊಳಗಿನ ಅವತರಣವೊಂದನ್ನು ನಾನು ಈ ಕೆಳಗಡೆ ಕೊಟ್ಟಿರುವೆನು. ಪ್ರದರ್ಶನದಿಂದ ಲಾಭವಾಗುವದೆಂಬ ಗ್ರಹಿಕೆಯಿಂದ ಅವನು ಪ್ರದರ್ಶನಕ್ಕೆ ಹೋಗಿದ್ದನು. ಆದರೆ, ಪ್ರದರ್ಶನದೊಳಗಿನ ಚಿತ್ತವೇಧಕ ಸ್ಥಳವು ಬೇಸಾಯ ಯಂತ್ರ ಸಾಮಗ್ರಿಗಳದೆಂದೂ, ಅವನ್ನು ಬೇಸಾಯಗಾರರು ಎಂದೂ ಉಪಯೋಗಿಸಲಾರರೆಂದೂ ಅವರು ಉದ್ಗರಿಸಿರುವರು. ಅವರು ಮತ್ತೂ ಮುಂದಾಗಿ ನುಡಿಯುವದೇನಂದರೆ:— "ಕೆಲವು ಯಂತ್ರ ಸಾಮಗ್ರಿಗಳಂತೂ ಗೊಬ್ಬರ ಹೊಂದಕ್ಕೆ ಯೋಗ್ಯವಾಗಿದ್ದವು." ಅವರು ಅನೇಕ ಪ್ರಕಾರದ ಯಂತ್ರ ಸಾಮಗ್ರಿಗಳನ್ನು ನೋಡಿದವರು, ಉಪಯೋಗಿಸಿದವರು. ಸಾವಧಾನ ಚಿತ್ತದಿಂದ ಅವರು ಬರೆದ ಅಭಿಪ್ರಾಯವದು. ಪ್ರದರ್ಶನದಲ್ಲಿ ಇಟ್ಟ ಅನೇಕ ಸಾಮಗ್ರಿಗಳ ಕುರಿತು ಯೋಗ್ಯ ಜಾಗ್ರತೆ ತೂಡ ತೋರಿಲ್ಲಿಲ್ಲ. ಹೀಗೆ ಅಜಾಗ್ರತೆಯಿಂದ ಪ್ರದರ್ಶನದಲ್ಲಿ ಇಟ್ಟ ಸಾಹಿತ್ಯಗಳಿಂದ ಬೋಧವಾಗುವದಿಲ್ಲ. ಕೆಲವು ಕಿವಿ ಕುರುಳು ಜನರು ದೊಡ್ಡ ದೊಡ್ಡ ಜಾಹೀರಾತುಗಳ ನೆಚ್ಚಿದಿ ಯಂತ್ರ ಸಾಮಗ್ರಿಗಳನ್ನು ಕೊಂಡು ಕೊಂಡು ಮುಂದೆ ಪಶ್ಚಾತ್ತಾಪ ಪಡುವರು.

***

ಚಳಿಜ್ವರದ ಮೇಲೆ ದಿವ್ಯ ಔಷಧಿ.

ಕಲಕತ್ತೆಯ ವೈದ್ಯರಾದ ಮಿ॥ ಅಲ್ಲಾ ರಖಿಯಾ ಸಾಹೇಬರವರು ಚಳಿಜ್ವರದ ಮೇಲೆ ಒಂದು ಸಾಮಾನ್ಯ ಉಪಾಯವನ್ನು ಸೂಚಿಸಿರುವರು. ಅವರು ನುಡಿಯುವದೇನಂದರೆ:— ಚಳಿಜ್ವರವನ್ನು ನಾಶ ಮಾಡಲು ಇಷ್ಟು ಸಾಮಾನ್ಯ ಉಪಾಯವನ್ನು ಜನರು ಉಪಯೋಗಿಸುವದಿಲ್ಲ. ಇದರಷ್ಟು ರಾಮಬಾಣ ಉಪಾಯವು ಬೇರೊಂದಿಲ್ಲ. ತುಳಸಿಯ ೭ ಎಲೆಗಳನ್ನು ಹಾಗೂ ೭ ಮೆಣಸಿನ ಕಾಳುಗಳನ್ನು ಪ್ರಾತಃಕಾಲಕ್ಕೆ ಜಗಿದರೆ, ಶರೀರಕ್ಕೆ ಲಗುವಾಗುತ್ತದೆ. ೩ ದಿವಸಗಳವರೆಗೆ ಹೀಗೆಯೇ ಸೇವಿಸಿದರೆ, ಚಳಿಜ್ವರವು ಬಿಡುತ್ತದೆ. ತುಳಸಿ ಗಿಡಗಳನ್ನು ನೆಡುವದರಿಂದ ಸೊಳ್ಳೆಗಳು ನಾಶ ಹೊಂದುತ್ತವೆ. ಇದನ್ನು ಮುಂಬಯಿಯ ಮ್ಯುನಿಸಿಪಾಲಿಟಿಯವರು ಉಪಯೋಗಿಸಿ ನೋಡಬೇಕು. ನಮ್ಮ ಓದುಗರೂ ಈ ಸುಲಭೋಪಾಯವನ್ನು ಮಾಡಿ ನೋಡಬೇಕು.

***

ಗೋವುಗಳನ್ನು ರಕ್ಷಿಸಿರಿ.

ಜಾಮನಗೇರಿಯ ಪ್ರಾಣಿದಯಾ ಜ್ಞಾನಪ್ರಸಾರಕ ಸಂಘದ ಕಾರ್ಯದರ್ಶಿಗಳು ಹಿಂದುಸ್ಥಾನದ ಬೇರೆ ಬೇರೆ ರಾಜ್ಯಗಳಲ್ಲಿ ಗೋವಧೆಯನ್ನು ಪ್ರತಿಬಂಧಿಸುವ ಕುರಿತು ಕೈಕೊಂಡ ಉಪಾಯಗಳನ್ನು ವಿವರಿಸಿರುವರು. ಗೋಬ್ರಾಹ್ಮಣಪ್ರತಿಪಾಲಕರೆಂಬ ಬಿರುದು ಪಡೆದ ನಮ್ಮ ಮೈಸೂರ ದರಬಾರದವರು ಈ ಕುರಿತು ವಿಚಾರ ಮಾಡುವಂಥಾದ್ದಿದೆ. ಕಾರ್ಯದರ್ಶಿಗಳು ಬರೆಯುವದೇನಂದರೆ:—

ಹೈದರಾಬಾದ— ಬಕರೀದ ಮುಂತಾದ ಯಾವ ಕಾಲದಲ್ಲಿಯೂ ಗೋವುಗಳನ್ನು ಕೊಲ್ಲಕೂಡದು.

ಬಡೋದೆ— ಬಕರೀದ ಮುಂತಾದ ಯಾವ ಕಾರ್ಯದಲ್ಲಿಯೂ ಹಸು, ಎತ್ತು ಕರುಗಳನ್ನು ಕೊಲ್ಲಕೂಡದು. ಕೊಂದರೆ ಐ. ಕೋ. ಮೇರೆಗೆ ಶಿಕ್ಷೆಗೆ ಗುರಿಯಾಗುವರು.

ಕಾಶ್ಮೀರ— ಯಾವ ಮನುಷ್ಯನೇ ಆಗಲಿ, ಗೋವುಗಳನ್ನು ಕೊಲ್ಲಲು ಪ್ರಯತ್ನಿಸಿದರೇ ಆಗಲಿ ಅಥವಾ ಕೊಂದರೇ ಆಗಲಿ ೧೫ ವರ್ಷದ ವರೆಗೆ ಸಜೆಯನ್ನಾಗಲೀ ಅಥವಾ ಜುಲ್ಮಾನೆಯನ್ನಾಗಲೀ ಇಲ್ಲವೆ ಎರಡನ್ನೂ ಅನುಭವಿಸಬೇಕಾಗುವದು.

ರಾಜಪುತ್ರ ಸಂಸ್ಥಾನಗಳು — ಗೋವುಗಳನ್ನು ಖಂಡಿತವಾಗಿಯೂ ಕೊಲ್ಲಕೂಡದೆಂದು ಅಪ್ಪಣೆ ಮಾಡಲಾಗಿದೆ. ಹಾಗೆ ಕೊಂದರೆ ಖೂಂಟೀನವನ್ನು ಮಾಡಿದ ರೀತಿ ಭಾವಿಸಿ ಶಿಕ್ಷಿಸಲಾಗುತ್ತೆ.

ಬಿಕಾನೇರ— ಇದು ಹಿಂದೂರಾಜ್ಯವಿರುವದರಿಂದ ಗೋಹತ್ಯವನ್ನು ಮಾಡಿದವರು ಮಹಾ ಪಾಪವನ್ನು ಮಾಡಿದ ಹಾಗಾಗುತ್ತದೆಂದು ಪರಿಗಣಿಸಲ್ಪಡುತ್ತಾರಲ್ಲದೆ, ಹಾಗೆ ಮಾಡಿದವರಿಗೆ ೧೦ ವರ್ಷ ಸಜೆಯನ್ನಾಗಲೀ ಇಲ್ಲವೇ ೧೦ ಸಾವಿರ ರೂಪಾಯಿ ಜುಲ್ಮಾನೆಯನ್ನಾಗಲೀ ವಿಧಿಸಲಾಗುತ್ತೆ.

ಡುಂಗರಪುರ— ಯಾರೇ ಆಗಲಿ ಹಸು, ಎತ್ತು ಮತ್ತು ಕರುಗಳನ್ನು ಕೊಂದರೆ, ೧೦ ವರ್ಷ ಕಠಿಣ ಶಿಕ್ಷೆಯನ್ನಾಗಲೀ ಇಲ್ಲವೆ ಶಿಕ್ಷೆಯನ್ನೂ ಜುಲ್ಮಾನೆಯನ್ನೂ ಕೂಡಿಯೇ ಅನುಭವಿಸಬೇಕಾಗುತ್ತದೆ.

ಬಾನಸಾವರ— ಗೋವುಗಳನ್ನು ಕೊಂದವರು ೧೦ ವರ್ಷ ಕಠಿಣ ಶಿಕ್ಷೆಯನ್ನೂ, ಜುಲ್ಮಾನೆಯನ್ನೂ ಅನುಭವಿಸಬೇಕಾಗುವದು. ಅಲ್ಲದೆ ಇತರೇ ಭಾಗದಿಂದ ಸಂಸ್ಥಾನದ ಒಳಗೆ ಗೋಮಾಂಸವನ್ನು ತಂದರೇ ಆಗಲಿ, ತರಲು ಪ್ರಯತ್ನಿಸಿದರೇ ಆಗಲಿ ೬ ತಿಂಗಳ ಸಜೆಯನ್ನೂ ಜುಲ್ಮಾನೆಯೊಂದಿಗೆ ಅನುಭವಿಸಬೇಕಾಗುವದು.

ರಾಜಕೋಟ— ಈ ಸಂಸ್ಥಾನದ ಸರಹದ್ದಿನಲ್ಲಿಯೇ ಯಾರೂ ಗೋವುಗಳನ್ನು ಕೊಲ್ಲಕೂಡದು. ಮತ್ತು ಕಟುಕರಿಗೆ ಮಾರಲೂ ಕೂಡದು. ಹಾಗೆ ಮಾಡಿದರೆ ೬ ತಿಂಗಳ ಕಠಿಣ ಶಿಕ್ಷೆಗೂ, ೧೦ ರೂ. ದಂಡಕ್ಕೂ ಗುರಿಯಾಗಬೇಕು. ಯಾರಾದರೂ ಕೊಲ್ಲುತ್ತಿದ್ದವನ್ನಾಗಲೀ, ಕಟುಗರಿಗೆ ಮಾರುತ್ತಿದ್ದವನ್ನಾಗಲೀ ತೋರಿಸಿದರೆ, ತೋರಿಸಿದವರಿಗೆ ೫ ರೂ. ಬಹುಮಾನ ಕೊಡಲಾಗುತ್ತೆ.

ಪನ್ನ ಸಂಸ್ಥಾನ— ಗೋವುಗಳನ್ನು ಕೊಂದರೇ ಆಗಲಿ, ಕೊಲ್ಲುವ ಉದ್ದೇಶ ಇತರ ರಾಜ್ಯಗಳಿಗೆ ಕಳುಹಿಸಿದರೇ ಆಗಲಿ, ೮ ತಿಂಗಳು ಸಜೆಯನ್ನಾಗಲೀ ೫೦೦ ರೂ. ದಂಡವನ್ನಾಗಲೀ ಇಲ್ಲವೆ ಎರಡನ್ನೂ ಅನುಭವಿಸಬೇಕಾಗುವದು.

ರೇವಸಂಸ್ಥಾನ— ಹಸು, ಎತ್ತು ಮತ್ತು ಕರು ಮುಂತಾದವುಗಳನ್ನು ಕೊಲ್ಲಕೂಡದು. ಅಲ್ಲದೆ ಅವುಗಳನ್ನು ಸಂಸ್ಥಾನದ ಹೊರಗೆ ಮಾರಲೂ ಕೂಡದು. ಹಾಗೆ ಮಾಡಿದರೆ ೫ ವರ್ಷ ಶಿಕ್ಷೆ ಮತ್ತು ಜಡಿ ಹೊಡೆತವನ್ನು ಅನುಭವಿಸಬೇಕಾಗುತ್ತದೆ.

ನಾವಾನಗರ— ಗೋವುಗಳನ್ನು ಕೊಂದವರು ೩ ವರ್ಷ ಸಜೆಯನ್ನಾಗಲಿ, ೧೦೦೦ ರೂಪಾಯಿ ಜುಲ್ಮಾನೆಯನ್ನಾಗಲಿ ಇಲ್ಲವೇ ಎರಡನ್ನೂ ಅನುಭವಿಸಬೇಕಾಗುವುದು.

ಪಾನ್‌ಗನೇರ— ಯಾರೇ ಆಗಲಿ ಕಟುಕರಿಗೆ ಪಶುಗಳನ್ನು ಮಾರಿದರೇ ಆಗಲಿ, ಕೊಂದರೇ ಆಗಲಿ, ೬ ತಿಂಗಳು ಕಠಿಣ ಶಿಕ್ಷೆಯನ್ನಾಗಲಿ, ೨೦೦ ರೂಪಾಯಿ ಜುಲ್ಮಾನೆಯನ್ನಾಗಲೀ ಅಥವಾ ಎರಡನ್ನೂ ಅನುಭವಿಸಬೇಕಾಗುವದು. ಅಲ್ಲದೆ ಕಟುಕರಿಗೆ ಪಶುಗಳನ್ನು ಮಾರಿದ್ದಾಗಲೀ, ಕೊಂದದ್ದಾಗಲೀ ತೋರಿಸಿದವರಿಗೆ ೫ ರೂಪಾಯಿ ಬಹುಮಾನ ಕೊಡಲಾಗುತ್ತದೆ.

ನಂದಾಕೆ (ಬಿಹಾರ) ಯ ಹಿಂದು ಸಂಸ್ಥಾನ— ಯಾವಯಾವ ಕಾರಣದಿಂದಲೂ ಗೋವುಗಳನ್ನು ಕೊಲ್ಲಕೂಡದು. ಇಷ್ಟೇ ಅಲ್ಲ; ವರ್ಷದಲ್ಲಿ ೪ ದಿವಸ ಯಾವ ಪ್ರಾಣಿಗಳನ್ನೂ ಸಹ ಕೊಲ್ಲಕೂಡದು. ಹಾಗೆ ಕೊಂದರೆ ಕಠಿಣವಾದ ಶಿಕ್ಷೆ ಮಾಡಲಾಗುತ್ತದೆ.

ಕೊಲ್ಹಾಪುರ— ಯಾರೇ ಆಗಲಿ ಗೋವುಗಳನ್ನು ಕೊಂದರೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

ಮೊಂಡೂರ— ಈ ಸಂಸ್ಥಾನದಲ್ಲಿ ಯಾರೂ ಗೋವುಗಳನ್ನು ವಧ ಮಾಡಕೂಡದು. ಮತ್ತು ಸಂಸ್ಥಾನದಿಂದ ಗೋವುಗಳನ್ನು ಹೊರಗೆ ಕಳುಹಿಸಕೂಡದು. ಹಾಗೆ ಮಾಡಿದಲ್ಲಿ ಶಿಕ್ಷೆಗೆ ಗುರಿಯಾಗುವರು.

ಹಿಂದೂ ದೇಶದ ಅನೇಕ ರಾಜ್ಯಗಳಲ್ಲಿ ಈ ರೀತಿಯಾಗಿ ಗೋವಧಾ ಪ್ರತಿಬಂಧವನ್ನು ಮಾಡಿರುವಾಗ, ನಮ್ಮ ಮೈಸೂರ ರಾಜ್ಯವು ಏನು ಮಾಡಿದೆ ಎಂಬುದಾಗಿ ಎಲ್ಲರೂ ಯೋಚಿಸುತ್ತಿರುವರು. ನಮ್ಮ ಘನ ಸರಕಾರದವರಾದರೂ ಗೋವಧಾ ನಿರೋಧವನ್ನು ಮಾಡಲು ಒಂದು ಕಮಿಟಿಯನ್ನು ನಿಯಮಿಸಿರುವರು. ಸದ್ಯದಲ್ಲಿಯೇ ಕಮಿಟಿಯವರಾದರೂ ಈ ವಿಷಯವಾದ ತನಿಖೆಯನ್ನು ಮಾಡತಕ್ಕವರಾಗಿರುವರು. ಮುಸಲ್ಮಾನ ಮತ್ತು ಕ್ರೈಸ್ತ ಬಾಂಧವರೇ ದೇಶಾಭ್ಯುದಯದ ವೇಳೆಯೂ, ನಿಮ್ಮ ಸಹೋದರರಾದ ಹಿಂದೂಗಳ ಮೇಲೆಯೂ ಅಭಿಮಾನವಿಟ್ಟು ಗೋವುಗಳ ರಕ್ಷಣಾ ಕಾರ್ಯದಲ್ಲಿ ಸಹಾನುಭೂತಿಯನ್ನು ತೋರಿಸಿ ಹಿಂದೂಗಳ ಪ್ರೀತಿಗೂ, ಆಚಂದ್ರಾರ್ಕವಾದ ಕೀರ್ತಿಗೂ ಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇನೆ.

(ಮುಂದೆ ೧೦ ನೇ ಪಾನು ನೋಡಿರಿ)

ಕಾನಡಾವೃತ್ತ

ಮಿತಿ ಕ್ಷಯ ಸಂ ಕಾರ್ತಿಕ ಶು ೧೦ ಮಿ ಸೋಮವಾರ

ಸಿಂಹಾವಲೋಕನ.

ಸದ್ಯಸ್ಥಿತಿಯು ವಿಚಾರಣೀಯವಿದೆ. ಇಲೆಕ್ಷನ ಕುದುರೆಗಳ ಜೂಜಾಟ, ಪಂದ್ಯಾಟಗಳು ತೀರುತ್ತ ಬಂದವು. ಮುಂಬಯಿ, ಮದ್ರಾಸ, ಬಂಗಾಲ, ಪಂಜಾಬ, ಮಧ್ಯಪ್ರಾಂತಗಳಲ್ಲಿ ಇಲೆಕ್ಷನ ಕುದುರೆಗಳ ಹಾರ್‍ಯಾಟದಿಂದ ಸಂಭವಿಸಿದ ಗೊಂದಲವು ಈಗ ಪ್ರಶಾಂತವಾಗಿದೆ. ರಾಷ್ಟ್ರೀಯ ಸಭೆಯಲ್ಲಿ ತಂದೆಗಳಾಗಿ ಸ್ವರಾಜ್ಯ ಪ್ರತಿಯೋಗಿ ಸ್ವತಂತ್ರ ಎಂಬ ಮೂರು ದಿಕ್ಕುಗಳಿಂದ ರಾಷ್ಟ್ರೀಯ ಸಭೆಯ ಕುದುರೆಗಳು ಹಾರ್‍ಯಾಡುತ್ತಿದ್ದವು. ಇವುಗಳ ಗದ್ದಲವೇ ಪ್ರಾಮುಖ್ಯವಾಗಿ ಇಡೀ ಭರತಖಂಡದಲ್ಲಿ ದುಮುದುಮಿಸುತ್ತಿತ್ತು. ಸ್ಥಲಭೇದದಂತೆ, ಪ್ರಾಂತಭೇದದಂತೆ, ವ್ಯಕ್ತಿಭೇದದಂತೆ, ಜಾತಿಭೇದದಂತೆ, ಬ್ರಾಹ್ಮಣೇತರ ಜಸ್ಟಿಸ್, ಸ್ವತಂತ್ರ, ಮುಸಲ್ಮಾನ ಮುಂತಾದ ಭೇದಗಳು ಅಲ್ಲಲ್ಲಿ ಕೆಲಮಟ್ಟಿಗೆ ಇಲೆಕ್ಷನಿನಲ್ಲಿ ಕಂಡುಬಂದವು. ಸ್ಥಳಿಕ ಭೇದಗಳಿಗೂ ಕೆಲ ಮಟ್ಟಿಗೆ ಜಯಾಪಜಯಗಳಾಗಿವೆ. ರಾಷ್ಟ್ರದ ವ್ಯಾಪಕದೃಷ್ಟಿಯನ್ನು ಈ ಉಮೇದ್ವಾರ ಕುದುರೆಗಳು ತಳೆಯಲಿಲ್ಲ. ವ್ಯಕ್ತಿಪ್ರತಿಷ್ಠೆಯಿಂದ, ಸಮಾಜಬಲದಿಂದ ಸ್ಥಳಿಕ ಗೌರವದಿಂದ ಈ ಕುದುರೆಗಳು ಇಲೆಕ್ಷನಿನ ಕುರುಕ್ಷೇತ್ರದಲ್ಲಿ ಪ್ರವೇಶಗೊಂಡು ಕಾದಾಡಿದವು. ಇವುಗಳಿಗೆ ಅಖಿಲ ಭಾರತೀಯ ರಾಜಕಾರಣದಲ್ಲಿ ಎಣಿಸಲಾಗದು. ಅಖಿಲ ಭಾರತೀಯ ದೃಷ್ಟಿಯನ್ನೇ ಅವರು ತಳೆಯದಿದ್ದಾಗ, ಅವರಿಗೆ ಅಖಿಲ ಭಾರತೀಯ ರಾಜಕಾರಣದಲ್ಲಿ ಗಣಿಸದಿರುವದು ಸಹಜವು. ರಾಷ್ಟ್ರೀಯ ಸಭೆಗೆ ಒಪ್ಪಿದ ಸ್ವರಾಜ್ಯ, ಪ್ರತಿಯೋಗಿ, ಸ್ವತಂತ್ರವೆಂಬ ಮೂರು ಪಕ್ಷಗಳ ಜಯಾಪಜಯಗಳನ್ನೇ ನಾವು ಆಲೋಚಿಸಬೇಕಾಗಿದೆ. ಈ ಮೂರೇ ಪಕ್ಷಗಳು ವ್ಯಾಪಕ ದೃಷ್ಟಿಯನ್ನು ಜಾಹೀರುಪಡಿಸಿ ಕೌನ್ಸಿಲು ಪ್ರವೇಶವನ್ನು ಪುರಸ್ಕರಿಸಿದವು.

ಮೊಟ್ಟಮೊದಲು, ಪಂಡಿತ ಮಾಲವೀಯ, ಲಾಲಾ ಲಜಪತರಾಯ ಪ್ರಭೃತಿಗಳ ಆಶ್ರಯದಲ್ಲಿ ಹೊರಟ ಸ್ವತಂತ್ರ ರಾಷ್ಟ್ರೀಯ ಸಭೆಯು ಪಕ್ಷವನ್ನೇ ವಿಚಾರಿಸುವ. ಈ ಪಕ್ಷಕ್ಕೆ ರಾಷ್ಟ್ರೀಯ ಸಭೆಯು ಹೆಸರು ಒಪ್ಪುವದಿಲ್ಲೆಂದು ಅನೇಕರು ಹೇಳುತ್ತಾರೆ. ಮಾಲವೀಯ, ಲಜಪತರಾಯರಂಥ ರಾಷ್ಟ್ರೀಯ ಸಭಾಭಿಮಾನಿಗಳು ಈ ಪಕ್ಷದಲ್ಲಿ ಸೇರಿರುವದರಿಂದ ಈ ಪಕ್ಷವು ರಾಷ್ಟ್ರೀಯ ಸಭೆಗೆ ಒಪ್ಪಿದ್ದೆಂದು ಹೇಳಬೇಕೇ ಹೊರತು, ಇವರಿಗೆ ಇನ್ನಾವ ರಾಷ್ಟ್ರೀಯ ಸಭೆಯ ಶಿಸ್ತು ಮಾನ್ಯವಿಲ್ಲೆಂದು ಹೇಳಬಹುದು. ಹೆಸರೇ ಸ್ವತಂತ್ರ ಅಂದ ಬಳಿಕ, ಇವರಿಗೆ ಶಿಸ್ತು ಎಲ್ಲಿ? ನಿಯಮಗಳೆಲ್ಲಿ? ಮಾಲವೀಯ ಲಜಪತರಾಯರವರ ವ್ಯಕ್ತಿಮಾಹಾತ್ಮ್ಯದಿಂದ ...ಕ ಬದುಕುವ ಪಕ್ಷವಿದು. ಈ ಪಕ್ಷವು ಹಿಂದೂ ಮಹಾಸಭೆಯನ್ನು ಬೆಂಬಲಕ್ಕೆ ಕೊಂಡಿದ್ದರಿಂದ ಈ ಪಕ್ಷದ ಪ್ರತಿಷ್ಠೆಯು ಪಂಜಾಬ, ಸಂಯುಕ್ತ ಪ್ರಾಂತಗಳಲ್ಲಿ ವಿಶೇಷವಾಗಿರುವದು. ಕೆಲ ಮಟ್ಟಿಗೆ ಮಧ್ಯಪ್ರಾಂತದಲ್ಲಿಯೂ ಈ ಪಕ್ಷದ ಪ್ರವೇಶವಿದೆ. ಇತರ ಪ್ರಾಂತಗಳಲ್ಲಿ ನಾಮಮಾತ್ರವೇ. ಇಂಥ ಪ್ರಸಕ್ತಿಯಲ್ಲಿ ಈ ಪಕ್ಷದ ಕುದುರೆಗಳು ಇಲೆಕ್ಷನಿನಲ್ಲಿ ಹೆಚ್ಚಾಗಿ ಗೆದ್ದ ಸುದ್ದಿಗಳಿಲ್ಲ. ಮಧ್ಯಪ್ರಾಂತದಲ್ಲಿ ೫೫ ಕೌನ್ಸಿಲು ಆಸನಗಳಲ್ಲಿ ೫ ಆಸನಗಳನ್ನು ಆಕ್ರಮಿಸಬೇಕಾದರೆ ಈ ಪಕ್ಷಕ್ಕೆ ಸಾಕು ಬೇಕಾಯಿತು. ಸಂಯುಕ್ತ ಪ್ರಾಂತದ ಇಲೆಕ್ಷನಿನ ಫಲವು ಇನ್ನೂ ಜಾಹೀರಾಗುವದಿದೆ. ಪಂಜಾಬದ ಹಕೀಕತು ಇನ್ನೂ ತಿಳಿಯಬೇಕು. ಆದರ ಈ ಪಕ್ಷದ ನಾಯಕರಾದ ಲಾಲಾ ಲಜಪತರಾಯ, ಪಂಡಿತ ಮಾಲವೀಯರವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದಾಗ್ಯೂ, ಈ ಪಕ್ಷಕ್ಕೆ ಇವೆರಡೂ ಪ್ರಾಂತಗಳಲ್ಲಿ ಹೇಳತಕ್ಕಷ್ಟು ವಿಜಯವಾದೀತೆಂದು ಯಾರೂ ಹೇಳಲಾರರು. ಸ್ವತಃ ಸ್ವತಂತ್ರ ಪಕ್ಷದ ನಾಯಕರಿಗೇ ತೋರುತ್ತಲಿಂದ. ನಾವೇನು ತಿಳಿಯುವದಿಲ್ಲ. ಅಂದ ಬಳಿಕ, ಇಲೆಕ್ಷನಿನಿಂದ ಈ ಪಕ್ಷದ ಪ್ರತಿಷ್ಠೆಯು ಪ್ರಚಲಿತ ರಾಜಕಾರಣದ ಮೇಲೆ ವಿಶೇಷವಾಗದು.

ಇನ್ನು ಪ್ರತಿಯೋಗಿಗಳ ವಿಚಾರ ಮಾಡುವ. ಪ್ರತಿಯೋಗಿಗಳೆಂದ ಕೂಡಲೆ ಶ್ರೀ॥ ಜಯಕರ-ಕೇಳಕರ-ಮುಂಜೆಯವರ ನೆನಪಾಗುತ್ತದೆ. ಇವರೇ ಈ ಪಕ್ಷದ ನಾಯಕರು. ಇವರ ಪ್ರಾಂತಗಳೇ ಈ ಪಕ್ಷದ ವ್ಯಾಪವು. ಮುಂಬಯಿಯೊಳಗಿನ ಮಹಾರಾಷ್ಟ್ರ, ಮಧ್ಯಪ್ರಾಂತದೊಳಗಿನ ಮಹಾರಾಷ್ಟ್ರ: ಪ್ರಚಲಿತ ಪರಿಭಾಷೆಯಲ್ಲಿ ಹೇಳಬೇಕಾದರೆ, ಬೃಹನ್ಮಹಾರಾಷ್ಟ್ರವು ಈ ಪ್ರತಿಯೋಗಿಗಳ ದೊಡ್ಡ ಆಶ್ರಮವು, ಆಶ್ರಯವೂ ಇದೇ. ಮಹಾರಾಷ್ಟ್ರದಲ್ಲಿ ಲೋಕಮಾನ್ಯರ ಜೊತೆಗೆ ರಾಷ್ಟ್ರಕಾರ್ಯವನ್ನು ನೆರವೇರಿಸಿ ಲೋಕಾದರಕ್ಕೆ ಪಾತ್ರರಾದ ಶ್ರೀ॥ ಅಣೇ, ಖಾಪರ್ಡೆ ಮುಂತಾದ ಮಹನೀಯರು ಈ ಪ್ರತಿಯೋಗಿಗಳಲ್ಲಿ ಸೇರಿಕೊಂಡ ಮೂಲಕ ಬೃಹನ್ಮಹಾರಾಷ್ಟ್ರದಲ್ಲಿ ಸ್ವರಾಜ್ಯ ಪ್ರತಿಯೋಗಿಗಳ ತುಮುಲ ಯುದ್ಧವು ನಡೆಯಿತು. ಅರಾಷ್ಟ್ರೀಯರ ಸದ್ದು ಈ ಭಾಗದಲ್ಲಿ ಇತ್ತ ಕೇಳಬರಲಿಲ್ಲ. ರಾಷ್ಟ್ರಾಭಿಮಾನದ ದೃಷ್ಟಿಯಿಂದ ಇದು ಒಂದು ಪರಿಯಿಂದ ಹಿತವೇ. ಶುದ್ಧ ಅರಾಷ್ಟ್ರೀಯರಿಗಿಂತ ಕಲಂಕಿತ ರಾಷ್ಟ್ರೀಯರು ಯಾವಾಗಲೂ ಇಷ್ಟರೇ. ಬೃಹನ್ಮಹಾರಾಷ್ಟ್ರದಲ್ಲಾದರೂ ಪ್ರತಿಯೋಗಿಗಳಿಗೆ ಪ್ರಚಂಡ ವಿಜಯವಾಯಿತೆಂದು ಹೇಳಬರದು. ಮಧ್ಯಪ್ರಾಂತದಲ್ಲಿ ಸ್ವರಾಜ್ಯ ಪಕ್ಷದವರು ೧೫ ಮಂದಿಗಳು ಗೆದ್ದರೆ, ಪ್ರತಿಯೋಗಿಗಳು ಆರಿಸಿಬಂದದ್ದು ಬರೇ ೧೩ ಮಂದಿ. ಪ್ರತಿಯೋಗಿ ಪಕ್ಷದ ನಾಯಕರಾದ ಡಾ॥ ಮುಂಜೇಯವರು ಪಂತ್ರ ಕಾಯಿದೆ ಕೌನ್ಸಿಲಿಗೆ ಆರಿಸಿ ಬರಬೇಕಾದರೆ, ಪರಮಾವಧಿಯ ಯತ್ನ ಮಾಡಬೇಕಾಯಿತು. ಮುಂಬಯಿಯ ಮಹಾರಾಷ್ಟ್ರದೊಳಗಿನ ಶ್ರೀ॥ ಜಯಕರ-ಕೇಳಕರರು ಇಲೆಕ್ಷನಿನಲ್ಲಿ ಅಗ್ರಪೂಜೆಯ ಮಾನವನ್ನು ಪಡೆದರೂ, ವ್ಯಕ್ತಿಮಾಹಾತ್ಮ್ಯವೆಂದೇ ಅದನ್ನೆಣಿಸುತ್ತಾರಲ್ಲದೇ, ಪ್ರತಿಯೋಗಿ ಧೋರಣದ ಮನ್ನಣೆಯೆಂದು ಗ್ರಹಿಸುವದಿಲ್ಲ. ಪ್ರಾಂತಿಕ ಕಾಯಿದೆ ಕೌನ್ಸಿಲಿಗೆ ಉಮೇದ್ವಾರರಾಗಿ ನಿಂತವರ್‍ಯಾರೂ ಮುಂಬಯಿಯಲ್ಲಿ ಆರಿಸಿ ಬರಲಿಲ್ಲ. ಪ್ರತಿಯೋಗಿಗಳ ಪ್ರತಿಷ್ಠೆಯು ಬೃಹನ್ಮಹಾರಾಷ್ಟ್ರದಲ್ಲಿಯೇ ವ್ಯಾಪಿಸಿಕೊಂಡಾಗ್ಯೂ, ಚಾಲಕರು ರಾಜಕಾರಣಿಗಳಿರುವದರಿಂದ ಹೊಸ ರಾಜಕಾರಣದಲ್ಲಿ ಇವರು ಪ್ರಾಮುಖ್ಯವಾಗಿ ನಲಿದಾಡುವರು. ಡಾ॥ ಮುಂಜೇಯವರಂತು ಈಗಲೆ ಸಂಧಾನಪ್ರಸ್ತಾಪ ಮಾಡಿ ರಾಷ್ಟ್ರೀಯರೆಲ್ಲರೂ ಒಕ್ಕಟ್ಟಾಗಬೇಕೆಂದು ಸೂಚಿಸಿರುವರು.

ಮೂರನೇ ಪಕ್ಷವು ಸ್ವರಾಜ್ಯ ಪಕ್ಷವು; ಪ್ರಚಲಿತ ರಾಜಕಾರಣದಲ್ಲಿ ಪ್ರಚಂಡ ಪಕ್ಷವು ಇದೇ. ಇಡೀ ಭರತಖಂಡವೇ ಈ ಪಕ್ಷದಿಂದ ವ್ಯಾಪಿಸಿಕೊಂಡಿದೆ. ಈ ಪಕ್ಷದ ಲೋಕನಾಯಕರ್‍ಯಾರು? ಪಂಡಿತ ನೇಹರು, ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ, ಸೇನಗುಪ್ತ, ಶ್ರೀಮತಿ ಸರೋಜಿನಿ ನಾಯಡು, ವಿಠ್ಠಲಭಾಯಿ ಪಟೇಲ ಪ್ರಭೃತಿ ಮಹಾತ್ಮರ ಕೈಕೆಳಗೆ ಅಸಹಯೋಗದ ದೀಕ್ಷೆಯನ್ನು ದೇಶೋದ್ಧಾರಕ್ಕಾಗಿ ಕೈಕೊಂಡ ಪುಣ್ಯಾತ್ಮರಿರುವರು. ರಾಷ್ಟ್ರೋದ್ಧಾರವನ್ನು ಕಾಲೋಚಿತವಾಗಿ ಕಲ್ಪಿಸಲು ಭರತ ಭೂಮಿಯಲ್ಲಿ ಅವತರಿಸಿದ ರಾಷ್ಟ್ರೀಯ ಸಭೆಯು ಸ್ವರಾಜ್ಯ ಪಕ್ಷವನ್ನೇ ಕೌನ್ಸಿಲು ರಣಾಂಗಣದಲ್ಲಿ ಸಮಸ್ತರಿಗೂ ಎದುರಾಳಿಗಳಾಗಿ ನಿಲ್ಲಿಸಿದೆ. ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ, ಕರಾಚಿಯಿಂದ ರಂಗೂನಿನ ವರೆಗೆ ಈ ಪಕ್ಷವು ವ್ಯಾಪ್ತವಾಗಿದೆ. ಇಲೆಕ್ಷನಿನಲ್ಲಿ ಸ್ವರಾಜ್ಯ ಪಕ್ಷದವರು ಗೆದ್ದರೋ, ಸೋತರೋ, ಎಂದು ಪ್ರತಿಯೊಬ್ಬರು ಕುತೂಹಲಪೂರ್ವಕವಾಗಿ ಪ್ರತಿ ಕಡೆಯಲ್ಲೂ ನೋಡುತ್ತಿದ್ದಾರೆ. ಮುಂಬಯಿ, ಮಧ್ಯಪ್ರಾಂತಗಳಲ್ಲಿ ಸ್ವರಾಜ್ಯ ಪಕ್ಷವು ಬಹುಮಟ್ಟಿಗೆ ಗೆದ್ದಿದೆ. ಸ್ಥಳಿಕ ಪ್ರತಿಯೋಗಿ ಪಕ್ಷಕ್ಕೂ ಹಿಮ್ಮೆಟ್ಟು ಹಚ್ಚಿದೆ. ಬಂಗಾಲದಲ್ಲಂತೂ ಶ್ರೀ॥ ಸೇನಗುಪ್ತರವರಿಗೆ ೪,೬೪೫ ಮತಗಳನ್ನು ಅರ್ಪಿಸಿ, ಸ್ವರಾಜ್ಯ ಪಕ್ಷದ ಧ್ವಜವನ್ನು

ಪರುಷದಿಂದ ಹಾರ್ದ್ಯಾಡಿಸಿದೆ. ಶ್ರೀ| ಸೇನಗುಪ್ತರವರಿಗೆ ಎದುರಾಳಿಗಳಾಗಿ ರಾ| ಸುಖೇಂದು ವಿಕಾಸರಾಯರೆಂಬ ಪ್ರತಿಯೋಗಿಗಳು ನಿಂತಿದ್ದರು. ಅವರಿಗೆಷ್ಟು ಮತಗಳು ದೊರೆತವೆಂದು ಕೇಳುತ್ತೀರೋ! ಖರೇ ೧೩೦! ಇದಕ್ಕಿಂತ ಸ್ವರಾಜ್ಯ ಪಕ್ಷದ ವಿಜಯಧ್ವಜದ ಹಾರ್ದ್ಯಾಟಕ್ಕೇನು ಬೇಕು! ಮದ್ರಾಸ ಪ್ರಾಂತದಲ್ಲಿ ಜಸ್ಟಿಸ ಯಾನೆ ಬ್ರಾಹ್ಮಣೇತರ ಪಕ್ಷದ ಸೊಕ್ಕು ಇಳಿಯಿತು. ಪಾನಗಲದ ಮಹಾರಾಜರು ಗರ್ವದಿಂದ ಈ ವರೆಗೆ ನಡಿಸಿದ ನಿರಂಕುಶ ಅಧಿಕಾರವು ಈ ಇಲೆಕ್ಶನಿನಲ್ಲಿ ಫಲಿಸಿತು. ಶ್ರೀ| ಶ್ರೀನಿವಾಸ ಅಯ್ಯಂಗಾರರವರ ನಿರಪೇಕ್ಷ ದೇಶಸೇವೆಯಿಂದಲೂ, ರಾಷ್ಟ್ರೀಯ ಸಭೆಯ ಪುಣ್ಯದಿಂದಲೂ ಮದ್ರಾಸ ಪ್ರಾಂತದಲ್ಲಿ ಸ್ವರಾಜ ಪಕ್ಷದವರು ಬಹುಮತವನ್ನು ಸಂಗ್ರಹಿಸಿರುವರು. ಪ್ರಧಾನ ಮಂಡಳವನ್ನು ರಚಿಸಲು ಸ್ವರಾಜ್ಯ ಪಕ್ಷದ ನಾಯಕರಾದ ಶ್ರೀ| ನರಸಿಂಹ ರಾಜುರವರಿಗೆ ಪ್ರಾಂತಾಧಿಪರು ನಿಮಂತ್ರಿಸಿದರಂತೆ. ಮಂತ್ರಿಪದದ ಮೋಹಕ್ಕೆ ಸ್ವರಾಜ್ಯ ಪಕ್ಷದವರು ಬಲಿಬೀಳುತ್ತಾರೇನೆಂದು ಸತ್ವ ಪರೀಕ್ಷೆ ನೋಡಲು ಈ ಸಮಯವೆಂದು ಬಲ್ಲವರು ಬಲ್ಲರು. ಶ್ರೀ| ರಾಜುರವರು ಶ್ರೀ| ಶ್ರೀನಿವಾಸ ಅಯ್ಯಂಗಾರರ ಆಲೋಚನೆಯಿಂದ ನಿರ್ದಿಷ್ಟವಾದ ಒಂದೇ ಉತ್ತರವನ್ನು ಗೋಶ್ಚೆನ್ ದೊರೆಗಳವರಿಗೆ ಕೊಟ್ಟು ಸ್ವರಾಜ್ಯ ಪಕ್ಷದ ವ್ರತನಿಷ್ಠೆಯನ್ನು ಜಾಹೀರು ಮಾಡಿರುವರು. ಮದ್ರಾಸದೊಳಗಿನ ಸ್ವರಾಜ್ಯ ಪಕ್ಷದವರು ಪ್ರತಿಜ್ಞಾಭ್ರಷ್ಟರಾಗಿ ತಮ್ಮ ಪಂಕ್ತಿಗೆ ಸೇರಿಕೊಳ್ಳುವರೆಂಬ ಕಲ್ಪನಾ ಸಾಮ್ರಾಜ್ಯದಲ್ಲಿ ಪ್ರತಿಯೋಗಿಗಳು ಸಂತೋಷಪಡುತ್ತಿದ್ದರು; ಆದರೆ ಶ್ರೀ| ರಾಜುರವರು ನಿಶ್ಚಯಪೂರ್ವಕವಾದ ನಿರಾಕರಣೆಯಿಂದ ಪ್ರತಿಯೋಗಿಗಳು ಈಗ ನಿರಾಶರಾಗಿ ಪಾನಗಲ್ಲರವರು ಪ್ರಧಾನ ಮಂಡಳವನ್ನು ರಚಿಸಿ, ಈ ಹಿಂದಿನಂತೆ ಪ್ರಜೆಗಳಿಗೆ ಕಾಡುವರೆಂಬ ವ್ಯಾಖ್ಯಾನವನ್ನು ಮುಂದೆ ಮಾಡಿ, ಪ್ರಜಾರಕ್ಷಣೆಗಾಗಿಯೇ ಸ್ವರಾಜ್ಯ ಪಕ್ಷದವರು ಪ್ರಧಾನ ಮಂಡಳವನ್ನು ಅಂಗೀಕರಿಸಬೇಕಾಗಿ ಲೋಕಹಿತದ ಉಪದೇಶವು ಮಾಡೋಣಾಯಿತು. ಶ್ರೀಮಾನ್ ಅಯ್ಯಂಗಾರರು ಅದಕ್ಕೆ ಮರುಳಾಗಲಿಲ್ಲ. ಪಾನಗಲ್ ಮಹಾರಾಜರನ್ನು ತಲೆ ಬಗ್ಗಿಸಿ ನಿಂತಿಯಲು ತಮ್ಮ ಸ್ವರಾಜ್ಯ ಪಕ್ಷದ ಸೈನಿಕರು ಕಾಯಿದೆ ಕೌನ್ಸಿಲಿನಲ್ಲಿ ಸನ್ನದ್ಧರಿದ್ದಾರೆಂದು ಹೇಳಿ ಲೋಕೋಪಕಾರದ ಕಥೆಗಳನ್ನು ಹೇಳುವವರಿಗೆ ಸುಮ್ಮಗಿರಿಸಿದರು. ಸ್ವರಾಜ್ಯ ಪಕ್ಷದ ಪ್ರತಿಷ್ಠೆಯು ದೇಶದಲ್ಲಿ ಅನಪೇಕ್ಷಿತವಾಗಿ ಅಭಿವೃದ್ಧಿಗೈದಿರುವದು. ರಾಷ್ಟ್ರದ ಬೇಡಿಕೆಯನ್ನು ರಾಜ್ಯಕರ್ತರು ಮನ್ನಿಸದ ಹೊರತು, ಸರಕಾರಿ ಅಧಿಕಾರಗಳನ್ನು ಅಂಗೀಕರಿಸಲಾಗದೆಂಬ ಪ್ರತಿಜ್ಞೆಯು ನಿಷ್ಠೆಯಿಂದ ಪಾಲಿಸಲ್ಪಡುವದೆಂದು ಸಮಸ್ತ ಪ್ರಜೆಗಳೂ ಅರಿತಿರಲಿ. ಬ್ರಿಟಿಶರ ಮನೋಧರ್ಮವನ್ನು ನಾವರಿತಿರಬೇಕು. ಅದೇನು? "Kick John Bull; he will kiss you. Kiss John Bull; he will kick you" ಜೊನ್ ಬುಲ್ ಅಂದರೆ, ಬ್ರಿಟಿಶರಿಗೆ ಒದೆಯಿರಿ; ಅಂದರೆ, ಅವರು ಮುದ್ದಿಡುವರು. ಅದೇ ಮುದ್ದಿಡ ಹೋಗಿರಿ; ಅವರು ಒದೆಯುತ್ತಾರೆ. ಇದು ಬ್ರಿಟಿಶರ ಮಾನಸಿಕ ಲಕ್ಷಣವು. ಅದರಿಂದಲೇ ಸ್ವರಾಜ್ಯ ಪಕ್ಷವು ಬ್ರಿಟಿಶರ ಔದಾರ್ಯವನ್ನು ಧಿಕ್ಕರಿಸಿ, ಜನ್ಮಸಿದ್ಧ ಹಕ್ಕಿಗಾಗಿ ಕಾದಾಡುತ್ತಿದೆ. ಅಖಿಲ ಭಾರತೀಯರೂ ಅದಕ್ಕಾಗಿಯೇ ಸ್ವರಾಜ್ಯ ಪಕ್ಷವನ್ನು ಎತ್ತಿ ಹಿಡಿದು, ಪ್ರಚಂಡ ಬಹುಮತದಿಂದ ಅವರನ್ನು ಕೌನ್ಸಿಲಿಗೆ ಕಳುಹಿದರು.

ಈ ಸಲ ... ಸ್ವರಾಜ್ಯ ಪಕ್ಷದ ಹಿತಶತ್ರುಗಳಾದ ಶ್ರೀ| ಬಿಪಿನಚಂದ್ರ ಪಾಲರವರು ನಿರುಪಾಯವಾಗಿ ತೆಗೆದ ಉದ್ಗಾರಗಳನ್ನು ಉಲ್ಲೇಖಿಸಿ, ಈ ಲೇಖವನ್ನು ಮುಗಿಸುವೆವು. ಶ್ರೀ| ಪಾಲರವರು ನುಡಿಯುವದೇನಂದರೆ:— "ಇಲೆಕ್ಷನಿನಲ್ಲಿ ಬಿದ್ದ ಮತಗಳ ನೀತಿ ಯಾ ಬುದ್ಧಿಯ ವಿಷಯವನ್ನು ನಾವು ಅಲಕ್ಷಿಸಿ ವಿಚಾರಿಸುವ. ಮತದಾರರ ಹೇಳಿಕೆಯೇನು? ಅವರು ಸ್ವರಾಜ್ಯ ಪಕ್ಷದವರನ್ನೇ ಪುರಸ್ಕರಿಸುತ್ತಾರೆ. ಇನ್ನೊಂದು ಮಾತು. ಭಾರತೀಯರಲ್ಲಿ ಬೇರೂರಿಕೊಂಡ ಬ್ರಿಟಿಶರ ವಿರೋಧ ಬುದ್ಧಿಯೂ ಈ ಇಲೆಕ್ಷನಿನಲ್ಲಿ ಸ್ಪುಟವಾಗಿದೆ. ಮತ್ತೇನು? ಸ್ವರಾಜ್ಯ ಪಕ್ಷದ ಸಂಘಟನೆಯೂ ಈ ವಿಜಯದಿಂದ ಪ್ರತ್ಯಕ್ಷ ಸಿದ್ಧವಾಗಿದೆ. ಇದನ್ನು ನಾವು ಮನ್ನಿಸಲೇ ಬೇಕು. ಮನ್ನಿಸದವರು ಮಂದಮತಿಗಳು; ಮೂರ್ಖರುಗಳು. ಸ್ವರಾಜ್ಯಪಕ್ಷದವರೇ ಭಾರತೀಯ ರಾಜಕಾರಣದಲ್ಲಿ ಅಸ್ಥೆಯಿಂದ ದುಡಿಯುವ ಪುರುಷರು. ಕಾಲೋಚಿತವಾಗಿ ತ್ಯಾಗವನ್ನು ಮಾಡಲಿಕ್ಕೂ ಅವರು ತಯಾರು." ಇದಕ್ಕೂ ಹೆಚ್ಚಿಗೆ ಯಾವ ಪಕ್ಷದವರು ರಾಷ್ಟ್ರೋದ್ಧಾರಕ್ಕಾಗಿ ಏನು ಮಾಡಬಲ್ಲರು! ಪುರುಷಪ್ರಯತ್ನವನ್ನು ರಾಷ್ಟ್ರೋದ್ಧಾರಕ್ಕಾಗಿ ಮಾಡಲು ಟೊಂಕಕಟ್ಟಿದ ಸ್ವರಾಜ್ಯ ಪಕ್ಷದವರೇ ಈ ಇಲೆಕ್ಶನಿನಲ್ಲಿ ಗೆದ್ದಿರುವರು. ಮುಂದೇನು! ಎಂಬ ಆಲೋಚನೆಯು ಗೌಹತಿ ನಗರಿಯಲ್ಲಿ ಸೇರಲಿಕ್ಕಿದ್ದ ರಾಷ್ಟ್ರೀಯ ಸಭೆಯ ಅಧಿವೇಶನದಲ್ಲಿ ನಿರ್ಣಯವಾಗುವದಿದೆ. ಮಹಾತ್ಮರ ಅಜ್ಞಾತವಾಸವೂ ಇದೇ ಸಮಯ ತೀರುವದಿದೆ. ಆದರಿಂದ ಗೌಹತಿಯ ಕಡೆಗೆ ನಾವೆಲ್ಲರೂ ಆತುರರಾಗಿ ನಿರೀಕ್ಷಿಸುತ್ತಿರಬೇಕು.

... ದಕ್ಷಿಣ ಆಫ್ರಿಕೆಯ ಕಿಶ್ವರಾದ ನೇಳ ನಾಯಕರಾದ ಶ್ರೀನಿವಾಸ ಶಾಸ್ತ್ರಿಗಳಿಗೆ ಅಹಮ್ಮದಾಬಾದ ಮುನಿಸಿಪಾಲಿಟಿಯವರು ಮಾನಪತ್ರವನ್ನಿತ್ತು ಸತ್ಕರಿಸಿದರು. ಭಾರತ ಸೇವಕ ಸಮಾಜಕ್ಕೆ ೩೦೦೦ ರೂಪಾಯಿಗಳನ್ನಿತ್ತರು.

ಸ್ಫುಟ ಸೂಚನೆಗಳು.

೧. "ಬಾವಿ ಹೋದಲ್ಲಿ ಮೊಳಕಾಲು ನೀರು" ಎಂಬ ಮಾತೇನು ಸುಳ್ಳಲ್ಲ. ನಮ್ಮೀ ಭರತಭೂಮಿಗೆ ಸ್ವಾತಂತ್ರ್ಯವಿಲ್ಲ; ಪಾರತಂತ್ರ್ಯದಲ್ಲಿ ನಾವು ಪರಲುತ್ತಿದ್ದೇವೆ; ನಮ್ಮನ್ನು ಬ್ರಿಟಿಶರು ಬಾಹ್ಯ ವೇಷಕ್ಕಾಗಿ ರಾಷ್ಟ್ರಸಂಘ-ಸಾಮ್ರಾಜ್ಯ ಪರಿಷತ್ತುಗಳಲ್ಲಿ ಒಯ್ದರೂ, ನಮಗೆ ಅದರಿಂದ ಪ್ರತ್ಯಕ್ಷ ಲಾಭಪ್ರಾಪ್ತಿಯಿಲ್ಲವಾಗಿ ನಾವು ನೋಡೇನೋಡಿರುವೆವು. ಇದಕ್ಕೆ ಸಾಮ್ರಾಜ್ಯ ಪರಿಷತ್ತಿನ ವರದಿಯೊಂದು ಪ್ರಕಟವಾಗಿದೆ. ಆ ವರದಿಯಿಂದ ಸಾಮ್ರಾಜ್ಯದ ಘಟನೆಯಲ್ಲಿ ಮಹತ್ವದ ಬದಲಾವಣೆಯೊಂದಾಗಿದೆ. ಇದನ್ನು ನಾವು ವಿಚಾರಿಸತಕ್ಕ ವಿಷಯ. ಕೆನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮುಂತಾದ ವಸಾಹತುಗಳು ಬ್ರಿಟಿಶರ ಸಾಮ್ರಾಜ್ಯಕ್ಕೆ ಒಪ್ಪಿದ್ದವು. ನಮ್ಮೀ ಹಿಂದುಸ್ಥಾನವಾದರೂ ಸಾಮ್ರಾಜ್ಯಕ್ಕೊಪ್ಪಿದ್ದೇ. ಆದರೆ, ನಮಗೂ, ವಸಾಹತುಗಳಿಗೂ ಕೇವಲ ಅಧ್ಯಂತರವಿರುವದೆಂಬ ಮಾತನ್ನು ನಾವು ಅನೇಕಾವರ್ತಿ ನೋಡಿರುವೆವು. ಈ ವರದಿಯಿಂದ ವಸಾಹತುಗಳ ನಿಜ ಸ್ಥಿತಿಯೂ, ಹಿಂದುಸ್ಥಾನದ ನಿಜ ಸ್ಥಿತಿಯೂ, ಬೈಲಿಗೆ ಬಂದಿರುವವು. ವಸಾಹತುಗಳಿಗೆ ಇನ್ನು ಮುಂದೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿರುವದು. ಅವು ಸ್ವತಂತ್ರ ಘಟಕಗಳು. ಅವುಗಳ ಅಂತಃಕಾರಭಾರದಲ್ಲಿ ವಿಲಾಯತಿಯೊಳಗಿನ ಪಾರ್ಲಿಮೆಂಟು ಎಂದಿಗೂ ಕೈಹಾಕಲಾರದು; ಕೈಹಾಕುವ ಅಧಿಕಾರವೂ ಅವರಿಗಿರಲಾರದಾಗಿ ಈ ವರದಿಯು ಶಿಫಾರಸು ಮಾಡಿದೆ. ಸ್ಪಷ್ಟವಾಗಿ ಹೇಳಬೇಕಾದರೆ, ದಕ್ಷಿಣ ಆಫ್ರಿಕೆಗೂ, ಮಾತೃಭೂಮಿಯಾದ ಬ್ರಿಟನ್ ದೇಶಕ್ಕೂ ಏನೇನೂ ಸಂಬಂಧ ಉಳಿಯಲಿಲ್ಲ. ಫ್ರಾನ್ಸ ದೇಶದಂತೆ ಇಬ್ಬರೂ ಸ್ವತಂತ್ರರು. ವಸಾಹತುಗಳಲ್ಲಿ ಅನ್ಯಾಯದಿಂದ ಭಾರತೀಯರನ್ನು ಪೀಡಿಸಿಕೊಂಡರೆ, ಅವರು ವಸಾಹತುಗಳ ಸರಕಾರಕ್ಕೇ ಮೊರೆಯಿಡಬೇಕಲ್ಲದೆ, ಅನ್ಯ ಉಪಾಯವಿಲ್ಲ. ಹಿಂದುಸ್ಥಾನವು ಮಾತ್ರ, ಈಗಿನಂತೆ ಮುಂದೆಯೂ ಬ್ರಿಟನ್ ದೇಶದ ಒಂದು ಅಂಗಭೂತವಾಗಿ ಇರಬೇಕು. ಇಷ್ಟು ದಿನಗಳ ವರೆಗೆ ವಸಾಹತುಗಳು ಬ್ರಿಟಿಶ ಸಾಮ್ರಾಜ್ಯದ ಅಂಗಗಳೆಂಬ ಒಂದು ಸೋಗು ಇತ್ತು, ಅದೀಗ ಸಂಪೂರ್ಣವಾಗಿ ಬಯಲಾಗಿದೆ.

---

೨. ಈ ವ್ಯವಸ್ಥೆಯಿಂದ ಹಿಂದುಸ್ಥಾನಕ್ಕೆ ಮಾತ್ರ ಲಾಭವಂತೂ ಇಲ್ಲ; ನಷ್ಟವು ಮಾತ್ರ ವಿಶೇಷವಿದೆ. ಹಿಂದುಸ್ಥಾನವು ಬ್ರಿಟಿಶರಿಗೂ ಬೇಕು; ವಸಾಹತುಗಳಿಗೂ ಬೇಕು. ಯಾಕೆ? ಆಯಾ ದೇಶಗಳಲ್ಲಿ ತಯಾರಾದ ಸಾಮಗ್ರಿಗಳನ್ನು ವಿಕ್ರಯಿಸುವದಕ್ಕೆ! ಹಿಂದುಸ್ಥಾನದ ಪಾರತಂತ್ರ್ಯಶೃಂಖಲೆಯನ್ನು ಹರಿದು ತೆಗೆದರೆ, ಹಿಂದುಸ್ಥಾನದ ರಾಜ್ಯಧೋರಣವು ಸ್ವತಂತ್ರವಾಗಿ ಸಾಗಿದರೆ, ವಸಾಹತುಗಳಿಗೂ, ಬ್ರಿಟಿಶರಿಗೂ ಕೇಳುವವರಾರು? ಭಾರತೀಯ ಸರಕಾರವು ಸ್ವತಂತ್ರ ರಾಜ್ಯಧೋರಣವನ್ನವಲಂಬಿಸಿ ಮುಂದಾಗುವದು. ಅವಶ್ಯವುಳ್ಳ ಕಾಯಿದೆಗಳನ್ನೇರ್ಪಡಿಸಿ ಪರದೇಶದ ಸುಲಿಗೆಗೆ ಪ್ರತಿಬಂಧ ಮಾಡಲೆಳಿಸುವದು. ಇದರಿಂದ ಹಿಂದೀ ರಾಜ್ಯಧೋರಣದ ಸೂತ್ರಗಳು ಬ್ರಿಟಿಶರ ಸ್ವಾಧೀನವಿರಬೇಕು. ವಸಾಹತುಗಳು ಬ್ರಿಟಿಷ ದೇಶದಂತೆ ಸ್ವತಂತ್ರ ಘಟಕಗಳಾದ್ದರಿಂದ ಭರತಖಂಡದ ರಾಜ್ಯಧೋರಣವನ್ನು ತಮಗೂ ಅನುಕೂಲವಾಗುವಂತೆ ಕಲ್ಪಿಸಲು ಅವರು ಬ್ರಿಟನ್ ದೇಶದೊಡನೆ ಸರಿಸಮರಾಗಿ ಈಗ ಕೂಡಿಕೊಳ್ಳಲಾರಂಭಿಸು

ಕರು ಬ್ರಿಟಿಶ ರಾಷ್ಟ್ರದಂತೆ ವ್ಯಾಪಾರಸ್ಥರಿಗೂ ಭಿನ್ನವಾಗಿ ಹಿಂದಿನ ಭೂಮಿಯು ಇನ್ನು ಮುಂದೆ ನಡೆಸಿಕೊಳ್ಳಬೇಕಾಗಿದೆ. ಸಾಮ್ರಾಜ್ಯ ಪರಿಷತ್ತಿನಲ್ಲಿ ಸರಿಸಮಾನವಾಗಿ ವಸಾಹತುಗಳ ಪ್ರತಿನಿಧಿಗಳೊಡನೆ ಕೂಡಿಕೊಂಡ ಹಿಂದುಸ್ಥಾನದ ಪ್ರತಿನಿಧಿಗಳ ಸ್ವರೂಪವು ಅದೇ ಪರಿಷತ್ತಿನಲ್ಲಿ ಅತ್ಯಂತ [illegible]. ಬ್ರಿಟಿಶ ದೇಶದ ಸ್ವಾರ್ಥವನ್ನು ಪೂರೈಸಿ ಈಗ ನಮ್ಮ [illegible] ಸಾಗದು. ವಸಾಹತುಗಳ ನಿರ್ಣಯಗಳನ್ನು ಸಂಪಾದಿಸಿ ದೊರೆಯಿಸಿಯುರು ಇನ್ನು ಸ್ವಾತಂತ್ರ್ಯವನ್ನು ಪಡೆಯಬೇಕಾಗಿದೆ. ಇಷ್ಟು ದೊಡ್ಡ ಸ್ವಾತಂತ್ರ್ಯವು ಈ ಸಾಮ್ರಾಜ್ಯ ಪರಿಷತ್ತಿನಲ್ಲಿ ದೊರಕಬಹುದೇ?

---

೩. ಮದ್ರಾಸ ಕಾಯಿದೆ ಕೌನ್ಸಿಲಿನ ಇಲೆಕ್ಷನಿನಲ್ಲಿ ಶ್ರೀ ವಿಶ್ವನಾಥ ದೇಶಪಾಂಡೆಯವರು ನಿಲ್ಲುವರು. ರಾ| ಹುಬ್ಬಳ್ಳಿಕರ ಯವರು ಸೋತರು. ಶ್ರೀ ದೇಶಪಾಂಡೆಯವರನ್ನೇ ಆರಿಸಿ ಕಳುಹಿಸಿದ್ದು ಕರ್ನಾಟಕಕ್ಕೆ ದೊರೆತ ಭೂಷಣದ ಮಾತು. ಶ್ರೀ ದೇಶಪಾಂಡೆಯವರ ರಾಷ್ಟ್ರಸೇವೆಯು ಅಷ್ಟು ದೊಡ್ಡದಿರುವದು. ಪಂಡಿತ ನೆಹರು, ಶ್ರೀನಿವಾಸ ಅಯ್ಯಂಗಾರರಂತೆ ರಾಷ್ಟ್ರಸೇವೆಗಾಗಿ ಅವರಿತನ್ನು ಪ್ರಪಂಚ ತ್ಯಾಗ ಮಾಡಲಿಲ್ಲ. ಅದನ್ನು ನಾವೊಪ್ಪುವೆವು. ಆದರೆ, ಲೋಕಮಾನ್ಯರ ರಾಷ್ಟ್ರಕಾರ್ಯದಲ್ಲಿ ವಿಶ್ವಾಸವಂತರಾಗಿ, ತತ್ವನಿಷ್ಠರಾಗಿ ಮುಂದಿನ ಮಹತ್ವದ ಭಾವವಿರುವರು. ಪುಣ್ಯಾತ್ಮರು ಸ್ವರ್ಗನಿರ್ಧಾರದ ಮಾತಿನಂತೆ [illegible] ಭಾರತೀಯ ಪ್ರತಿನಿಧಿಗಳ ರಾಜ್ಯಕ್ಕಾಗಿ ದೇಶಸೇವೆ ಮಾಡುವ ತ್ಯಾಗಶೀಲರಾದ ಪ್ರಮುಖರಿರುವರು. ಇಂಥವರನ್ನೇ ಕರ್ನಾಟಕಕ್ಕೆ ದೊರೆಯಲೆಂದು ಕರ್ನಾಟಕದ ಹಿತವಾಗುವದು ಆದರಿಂದಲೇ ಅವರನ್ನು ಆರಿಸಿ ಕಳುಹಿ, ಕರ್ನಾಟಕವು ಧನ್ಯವಾಗಿದೆಯೆಂದು ನಾವು ಹೇಳುವೆವು. ಕಳೆದ ಸಂಚಿಕೆಯಲ್ಲಿ ನಾವು ಪ್ರಕಟಿಸಿದ ಅಂಬಾಡುಗರಂತೆ ಬೆಳಗಾವಿಯ ಶ್ರೀ| ನಾಮಧಾರಿ ಘಾತರಘೇಕರರಾಗಲಿ, ನಮ್ಮ ಶ್ರೀ| ಕೌಜಲಗಿ ಶ್ರೀನಿವಾಸರಾಯರಾಗಲೀ ಪ್ರಾಂತಿಕ ಕೌನ್ಸಿಲಿಗೆ ಆರಿಸಿ ಬರಲಿಲ್ಲವೆಂದು ತಿಳಿದು ವ್ಯಸನವಾಗುತ್ತದೆ. ಧಾರವಾಡದ 'ಕರ್ಮವೀರ' ಪತ್ರಿಕೆಯಿಂದ ಆ ಅಂಬಾಡುಗಳು ಪ್ರಕಟವಾಗಿದ್ದವು. ಶ್ರೀ ಘಾತರಘೇಕರರನ್ನು ಆರಿಸಿಬಿಡುವರೆಂಬ ತಪ್ಪು ಗ್ರಹಿಕೆಯೂ ಆ ಅಂಬಾಡುಗಳ ಮೇಲಿಂದ ಆಯಿತು. ಬೆಳಗಾವಿ, ವಿಜಾಪುರದೊಳಗೆ ಬಹುತರವಾಗಿ ಬ್ರಾಹ್ಮಣೇತರ ಪಕ್ಷವೇ ಪ್ರಾಬಲ್ಯವಾಗಿರುವದೆಂದು ಈ ಇಲೆಕ್ಷನಿನ ಮೇಲಿಂದ ಸ್ಪಷ್ಟವದೆ. ಇದೊಂದು ನಮ್ಮ ಕರ್ನಾಟಕದೊಳಗಿನ ತೀರ ಭಯಂಕರವಾದ ರೋಗಬೀಜವೆಂದು ನಾವು ಎಣಿಸುತ್ತೇವೆ. ಬ್ರಾಹ್ಮಣರಿರಲಿ, ಬ್ರಾಹ್ಮಣೇತರರಿರಲಿ ಎಲ್ಲರೂ ಭಾರತಮಾತೆಯ ಸ್ವಾತಂತ್ರ್ಯದ ಸ್ವಾಯತ್ತತೆಯ ಬಸ್ತರಿರುವಾಗ, ರಾಷ್ಟ್ರೋದ್ಧಾರದ ಕಾರ್ಯದಲ್ಲಿ, ಯುಧಿಷ್ಠಿರ ಮಹಾರಾಯನು ನುಡಿದಂತೆ, ನಾವು ೧೦೫ ಮಂದಿಗಳಾಗಿ ಅವರೆಲ್ಲರೊಡನೆ ರಾಷ್ಟ್ರೋದ್ಧಾರದ ಕಾರ್ಯದಲ್ಲಿ ದುಡಿವರೇನೇ ನಮ್ಮ ತರಣೋಪಾಯವಿದೆ. ವಿಚಾರಶೀಲ ಬ್ರಾಹ್ಮಣೇತರರು ಇದನ್ನು ವಿಚಾರಿಸಬೇಕಾಗಿ ವಿನಂತಿ.

---

೪. ನಾಳೆ ಜಿಲ್ಲಾ ಲೋಕಲ್ ಬೋರ್ಡಿನ ಸಭೆ ಸೇರುವದಿದೆ. ಆ ಸಮಯ ನಮ್ಮ ಕುಮಟೆಯಲ್ಲೊಂದು ಹುಡುಗಿಯರಿಗಾಗಿ ಕನ್ನಡ ವರ್ಗವನ್ನು ಇಡುವ ವಿಚಾರವಿರುವದಾಗಿ ತಿಳಿಯುತ್ತದೆ. ಪ್ರಕೃತ ಶಿಕ್ಷಣದ ಗುಣದೋಷಗಳ ವಿಚಾರ ಮಾಡಿದರೆ, ಈ ಶಿಕ್ಷಣಕ್ರಮವನ್ನು ಶೀಘ್ರವೇ ಪುನರ್ಘಟಿಸಿದ ಹೊರತು, ಯಾವದೇ ರೀತಿ ಪ್ರಸಾರ ಮಾಡಲೆಳಸುವದು ಅನಿಷ್ಟವೆಂದು ನಮ್ಮ ಅಭಿಪ್ರಾಯವಿದೆ. ದೊಡ್ಡ ದೊಡ್ಡ ಶಿಕ್ಷಣ ತಜ್ಞರೂ ಕೂಡ ಹೀಗೆಯೇ ಅಭಿಪ್ರಾಯ ಪಟ್ಟಿರುವರು. ಬಿಹಾರದ ಪ್ರಾಂತಾಧಿಪರಾಗಿದ್ದ, ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದ ಸತ್ಯೇಂದ್ರಪ್ರಸನ್ನ ಸಿಂಹದೊರೆಗಳೂ ಕೂಡ ಹೀಗೆಯೇ ಅಭಿಪ್ರಾಯ ಪಟ್ಟಿರುವರು. ಆ ಮಾತು ಒತ್ಟಟ್ಟಿಗಿರಲಿ. ನಮ್ಮ ಕುಮಟೆಯಲ್ಲಿ ಹುಡುಗಿಯರಿಗಾಗಿ, ಅಥವಾ ಬಾಲಕಿಯರಿಗಾಗಿ ಪ್ರತ್ಯೇಕ ಕನ್ನಡ ವರ್ಗದ ಅವಶ್ಯಕತೆ ಇರುವದೇನೆಂಬದೊಂದು ಪ್ರಶ್ನೆಯಿದೆ. ಕುಮಟೆಯಲ್ಲಿ ಕನ್ನಡ ೫ ಶಾಲೆಗಳಿವೆ, ನೆಲ್ಲಿಕೇರಿಯಲ್ಲಿ, ಹೆರವಟ್ಟೆಯಲ್ಲಿ, ಚಿತ್ರಿಗಿಯಲ್ಲಿ, ಹೊನ್ನಮಾವಿನಲ್ಲಿ, ಕಹಿನಲ್ಲಿ [illegible] ಹೀಗೆ ಅತಿಗಡಿಗೆ ಶಾಲೆಗಳಿವೆ. ಅವುಗಳಲ್ಲಿಯೇ ಬಾಲಕಿಯರಿಗೆ ಶಿಕ್ಷಣ ಕೊಳ್ಳಲು ಪ್ರತಿಬಂಧವೇನಿದೆ? ಬಾಲಕರ ಶಿಕ್ಷಣಕ್ರಮವೂ ಅದೇ, ಬಾಲಕಿಯರ ಶಿಕ್ಷಣಕ್ರಮವೂ ಅದೇ. ಲಿಂಗಭೇದದಂತೆ, ಅವರವರ ಸಾಮರ್ಥ್ಯಭೇದದಂತೆ ಪ್ರಚಲಿತ ಶಿಕ್ಷಣಕ್ರಮದಲ್ಲಿ ಭೇದವೇನಿರುವದಿಲ್ಲ. ಹೀಗಿದ್ದು, ಪ್ರತ್ಯೇಕ ವರ್ಗದ ವ್ಯವಸ್ಥೆಗೊಳಿಸಿ ಹಣವನ್ನು ವ್ಯಥಾ ಖರ್ಚು ಮಾಡುವದೇಕೆ?

---

೫. ಆಕ್ಷೇಪಕರು ಒಂದು ಆಪತ್ತಿಯನ್ನು ಪ್ರತಿಪಾದಿಸಬಹುದು. ೧೦-೧೨ ರ ವರೆಗೆ ಒತ್ತಟ್ಟಿಗೆ ಶಿಕ್ಷಣ ಕೊಡುವ ಕ್ರಮವು ಸರಿಯಷ್ಟೆ; ಅದರಿಂದ ಹಿತವಾಗದು, ಅಹಿತವಾಗುತ್ತದೆ. ಪ್ರಾಯಸ್ಥ ಹೆಂಗಳೆಯರಿಗೆ ಪರೆಯದ ಹುಡುಗರ ಜೊತೆಗೆ ಶಿಕ್ಷಣ ಕೊಡುವ ಪದ್ಧತಿಯೂ ಅನಿಷ್ಟವೆಂದು ನಾವೊಪ್ಪುವೆವು. ಸುಧಾರಕರು ಇಷ್ಟವೆಂದು ಪ್ರತಿಪಾದಿಸಬಹುದು. ಆದರೆ, ಈ ಆಕ್ಷೇಪವೇನು ಚಿಕ್ಕ ಬಾಲ-ಬಾಲಿಕೆಯರಿಗೆ ಬಾಧಿಸದು. ಬಾಲ-ಬಾಲಿಕೆಯರು ನಿಷ್ಕಪಟ ಸ್ವಭಾವದವರಿದ್ದು, ಚಿಕ್ಕ ಪ್ರಾಯದಲ್ಲಿ ಬಂಧು-ಭಗಿನಿಯರಂತೆ ನಡೆಕೊಳ್ಳುತ್ತಾರೆ. ಅವರಲ್ಲಿ ಕಪಟ ಬುದ್ಧಿಯೇನೂ ಇರಲಾರದು ಇದು ಸ್ಪಷ್ಟವಿದೆ. ಹೀಗಿರಲು, ಪ್ರತ್ಯೇಕ ಕನ್ನಡ ವರ್ಗವನ್ನು ಬಾಲಕಿಯರಿಗಾಗಿ ಇಲ್ಲಿ ಏರ್ಪಡಿಸುವ ಪ್ರಸಂಗವೆಲ್ಲಿದೆ? ಹೆರವಟ್ಟೆ, ನೆಲ್ಲೀಕೇರಿ, ಚಿತ್ರಿಗಿ, ಹೊನ್ನಮಾವಿನಂಥ ಊರ ನೆರೆಹೊರೆಯ ಗ್ರಾಮಗಳಿಂದ ಬರುವ ಹುಡುಗಿಯರೂ ಕೂಡ ಪ್ರತ್ಯೇಕ ವರ್ಗಕ್ಕೇ ಬರಬೇಕೆಂದು ಸ್ಕೂಲ ಬೋರ್ಡಿನವರು ಬಲಾತ್ಕಾರಪಡಿಸುವದೇನು? ಬಳಿಯಲ್ಲಿದ್ದ ಶಾಲೆಗಳನ್ನು ಬಿಟ್ಟು, ಕನ್ನಡ ವರ್ಗಕ್ಕೆ ಹೋಗಲು ಕಾರಣವೇನಿದೆ? ನಮ್ಮ ಕುಮಟೆಯ ಮಾತು ಒತ್ತಟ್ಟಿಗಿರಲಿ; ಗ್ರಾಮಗಳೊಳಗೆ ಕನ್ನಡ ಕಲಿಯುವ ಬಾಲ-ಬಾಲಕಿಯರು ಒಂದೇ ಶಾಲೆಯಲ್ಲಿ ಕಲಿಯುವದಿಲ್ಲೇನ? ಇಂಥ ಸ್ಥಿತಿಯಲ್ಲಿ ಕನ್ನಡ ವರ್ಗವನ್ನೊಂದು ಪ್ರತ್ಯೇಕ ನಿರ್ಮಿಸಿ, ಕನ್ನಡದ ಅಭಿಮಾನವನ್ನು ಪ್ರದರ್ಶಿಸುವದಿದ್ದರೆ, ನಮ್ಮ ಉಪಾಯವಿಲ್ಲ.

---

೬. ಇನ್ನೂ ಒಂದು ಮಾತಿದೆ. ಕನ್ನಡ ವರ್ಗ ರಚನೆಯ ಒಂದು ಚಂಚುಪ್ರವೇಶವು. ಒಂದು ಕನ್ನಡ ವರ್ಗವನ್ನು ರಚಿಸಿದರೆ, ನಮ್ಮ ಕೆಲಸವಾಗದು. ಬಾಲಕಿಯರಿಗಾಗಿ ಪ್ರತ್ಯೇಕ ಕನ್ನಡ ವರ್ಗದ ಉತ್ತರವನ್ನು ಮನ್ನಿಸಿದರೆ, ನಾವು ಪ್ರತ್ಯೇಕ ಕನ್ನಡ ಶಾಲೆಯನ್ನೇ ಏರ್ಪಡಿಸಲು ಸಿದ್ಧವಾಗಬೇಕಾದೀತು. ಇದನ್ನು ಜಿಲ್ಲಾ ಬೋರ್ಡಿನ ಸಭಾಸದರು ಮರೆಯಬಾರದು. ಈಗಿನ ಕನ್ನಡ ಶಾಲೆಗಳಲ್ಲಿ ಕನ್ನಡ ಕಲಿಯಬೇಕೆನ್ನುವ ಬಾಲಕಿಯರೆಲ್ಲರೂ ಹೋಗುತ್ತಾರೆ. ಅವರ ಸಂಖ್ಯೆಯ ಮೇಲಿಂದಲೂ ಪ್ರತ್ಯೇಕ ಕನ್ನಡ ಶಾಲೆಯೂ ಅವಶ್ಯವಿರುವದಾಗಿ ತೋರುವದಿಲ್ಲ. ಕನ್ನಡ ಶಾಲೆಗೆ ಶಿಕ್ಷಕಿಯರು ಬೇಕು; ಶಾಲಾ ಮಂಡಿರವು ಬೇಕು; ಕಲಿಕೆಯ ಸರಂಜಾಮವೂ ಬೇಕು. ಇಷ್ಟಾಗಿ, ವಿದ್ಯಾಸಂಪನ್ನರಾಗಲಿಚ್ಛಿಸುವ ಬಾಲಕಿಯರೂ ಸಾಕಷ್ಟು ಸಿಗಬಾರರು. ಈ ಪರಿಸ್ಥಿತಿಯಲ್ಲಿ ಬಾಲಕಿಯರಿಗಾಗಿ ಪ್ರತ್ಯೇಕ ವರ್ಗವನ್ನೇರ್ಪಡಿಸುವದು ವ್ಯರ್ಥದ ಅನವ್ಯಯವು. ಇದಕ್ಕಿಂತ ಹೆಚ್ಚಿನ ಲೋಕೋಪಕಾರಿ ಕಾರ್ಯಗಳಿವೆ. ಇವುಗಳನ್ನೆಲ್ಲ ವಿಚಾರಿಸಿ, ಜಿಲ್ಲಾ ಬೋರ್ಡಿನವರು ಈ ವಿಚಾರವನ್ನು ತ್ಯಜಿಸಬೇಕಾಗಿ ನಮ್ಮ ಬಿನ್ನಹವಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ವಿಶೇಷ, ಊರಲ್ಲಿ ಜ್ವರ, ಹೊಟ್ಟೆ ಬೇನೆ ಮುಂತಾದ ಬೇನೆಗಳಿವೆ.

ಇಲ್ಲಿಯ ಹುಡುಗಿಯರ ಶಾಲೆಯಲ್ಲಿ ಮೊನ್ನೆ ಸಾಯಂಕಾಲ ೬ ಘಂಟೆಗೆ ಬಹುಮಾನ ಹಂಚುವ ಸಮಾರಂಭವು ನೆರವೇರಿತು. ಕಲೆಕ್ಟರರು ಅಧ್ಯಕ್ಷರಾಗಿದ್ದರು.

ಇಲ್ಲಿಯ ವಾರ್ಷಿಕ ಶಿಬಿರ ದೀಪೋತ್ಸವವು ವಾಡಿಕೆಯಂತೆ ಶುಕ್ರವಾರಕ್ಕೆ ನೆರವೇರಿತು. ಕಲೆಕ್ಟರರ ಪತ್ನಿಯವರು ಬಾಲಕರ ವಿಮಂತ್ರಣೆ ಮೇರೆಗೆ ಸಮಾರಂಭದ ನೋಟವನ್ನು ನೋಡಬಂದಿದ್ದರು.

ಇಲ್ಲಿಯ ಸಬಜಡ್ಜ ಮಿ| ಮಂಗಳವೇಡಕರರವರಿಗೆ ರೂಪಾಯಿ ೧೫೦ ರ ಸ್ಮಾಲಕಾಜ ಅಧಿಕಾರವು ಕೊಡಲ್ಪಟ್ಟಿರುವದು.

ಹೆಗಡೆಯಲ್ಲಿ ಜಂಗಲವನ್ನು ಜನರಿಗೆ ಕೊಳ್ಳಲು ರಾ| ಮಾಮಲೇದಾರರೂ, ಜಂಗಲ ಖಾತೆಯ ಒಬ್ಬ ಅಧಿಕಾರಿಗಳೂ ಜನರಿಗೆ ಬಹಳವಾಗಿ ಬೋಧಿಸಿದರಂತೆ, ಜಂಗಲವನ್ನು ಕೊಂಡರೆ, ಜನರಿಗೆ ಬಹಳ ಹಿತವಿದೆಂದು ಇಬ್ಬರೂ ಬಹುವಾಗಿ ಹೇಳಿದರಂತೆ. ಈ ಬಾರಿ ಎಕ್ರೆ ೧ ರ ೧೦ ರೂಪಾಯಿ ದರವು ರೂ. ೫ ಕ್ಕೆ ಇಳಿಯಿತು! ರಾ| ರಾಘವೇಂದ್ರ ಜಪ್ಪರ್ಪಕಾಗನಭಾಗ ಹಾಗು ಗೋಪಾಲಕೃಷ್ಣ ಕುಪ್ಪ ಹೆಗಡೆ ಮೊದಲಾದ ೫-೬ ಕುಳಿಯವರು ೫-೫ ರೂಪಾಯಿ ಕೊಡುವ ಕರಾರಿನ ಮೇಲೆ ಪ್ರತ್ಯೇಕ ಒಂದೊಂದು ಎಕ್ರೆ ಜಂಗಲವನ್ನು ಉಪಾಯವಿಲ್ಲದೆ ಕೊಳ್ಳಲೊಪ್ಪಿದರಾಗಿ ಸುದ್ದಿಗಾರರೊಬ್ಬರು ತಿಳಿಸುತ್ತಾರೆ. ಜಂಗಲ ಖಾತೆಯು ಮಾಡುವ ಹಿತವನ್ನು ಬೋಧಿಸಲು ರಾ| ಮಾಮಲೇದಾರರು ದೊರಕಿದರು. ಇದೊಂದು ಜಂಗಲ ಖಾತೆಯ ಪುಣ್ಯವು. ಹೆಗಡೆಗೆ ಬಂದ ಜಂಗಲ ಅಧಿಕಾರಿಯು ಜನರ ಹಿತವನ್ನು ಹೇಳುವ ಒಂದು ಸರ್ಕ್ಯೂಲರನ್ನು ಜನರಿಗೆ ತೋರಿಸಿ, ಸಹಿ ಕೊಳ್ಳುತ್ತಿದ್ದಾನಂತೆ. ಜನರ ಹಿತದ ಸರ್ಕ್ಯೂಲರನ್ನು ನಮಗೆ ಕಳುಹಿಸಿದರೆ, ನಾವು ಆನಂದದಿಂದ ಪ್ರಕಟಿಸುವೆವು, ಜನರಿಗೂ ತಮ್ಮ ಹಿತ ತಿಳಿಯುವದು. ರಾ| ಮಾಮಲೇದಾರರಿಗೂ ಲೋಕಹಿತಕ್ಕಾಗಿ ಹಗಲಿರುಳು ದುಡಿಯುವ ಕಷ್ಟಕರ ಪ್ರಸಂಗವು ತಪ್ಪುವದು.

ಸಾಭಾರ ಸ್ವೀಕಾರ.

ಜಯಕರ್ನಾಟಕ—೫ನೇ ವರ್ಷದ ಪ್ರಥಮ ಸಂಚಿಕೆ. ಸಂಪಾದಕರು ಮತ್ತು ಪ್ರಕಾಶಕರು:- ಶ್ರೀ| ಆಲೂರ ವೆಂಕಟರಾಯರು, ಧಾರವಾಡ. ವಾರ್ಷಿಕ ವರ್ಗಣಿ ರೂ. ೫-೮-೦.

ಕಾದಂಬರೀ ಸಂಗ್ರಹ— ಅಕ್ಟೋಬರ ನವ್ಹಂಬರ ಸಂಚಿಕೆ. ಸಂಪಾದಕ ಶ್ರೀ| ಸಿ. ವೆಂಕಟರಮಣ ಶಾಸ್ತ್ರೀ, ಚಾಮರಾಜನಗರ. ವಾ. ವ. ರೂ. ೧-೮-೦; ಬಿಡಿ ಸಂಚಿಕೆಗೆ ೦-೩-೦.

ಮುಂಡಗೋಡ— ಸಭ್ಯ ಗೃಹಸ್ಥರೊಬ್ಬರು ಬರೆಯುವದೇನಂದರೆ:— ಮೋಟಾರುಗಳ ಓಡಾಟದಲ್ಲಿ ನಮ್ಮಲ್ಲಿಯ ಸ್ತ್ರೀಯರ ಗೋಳು ನೋಡಿ! ಇಲ್ಲಿಯ ಗಾ| ಶೇಕಪ್ಪನವರು ಮೋಟಾರ ಏಜಂಟರು. ಇವರ ಅಂಗಡಿಯ ಎದುರಿಗೆ ಮಾರ್ಗದ ಮೇಲೆ ೩-೪ ಮೋಟಾರುಗಳು ಸದಾಕಾಲ ನಿಂತೇ ಇವೆ. ಆಚೆ-ಈಚೆ ಸರಿಯ ಎಡವಿಲ್ಲ. ಬಳಿಯಲ್ಲಿಯೇ ನಮ್ಮೂರ ನೀರಿನ ಹೊಂಡವಿದೆ. ಈ ಅಂಗಡಿಯನ್ನು ದಾಟಿಯೇ ಸ್ತ್ರೀಯರು ನೀರು ತರಹೋಗಬೇಕು. ಮೋಟಾರು ನಿಂತುಕೊಂಡರೆ, ಪ್ರಯಾಣಿಕರ ಗದ್ದಲ. ಹೀಗಾಗಿ ಬಡಾವಿಯರಿಗೆ ನೀರು ತರಹೋಗಲು ನಾಚಿಕೆ. ಇಲ್ಲಿಯ ಪೋಲೀಸರಂತೂ ಕಣ್ಮುಚ್ಚಿ ಕಾವಲು ಮಾಡುತ್ತಾರೆ. ಅವರು ಕಣ್ತೆರೆದು ಮೋಟಾರುಗಳ ಅತಿಕ್ರಮದಿಂದ ಉಂಟಾದ ತೊಂದರೆಯನ್ನು ಪರಿಹರಿಸಬೇಕು. ರಾ| ಶೇಕಪ್ಪನವರೂ ಇತ್ತ ಲಕ್ಷ ಕೊಡಬೇಕು.

ಕುಂಭಾರವಾಡಾ— ಒಬ್ಬ ರೈತರೊಬ್ಬರು ತಿಳಿಸುವದೇನಂದರೆ:—ನಮ್ಮ ಕಡೆಯಲ್ಲಿ ಎಲ್ಲ ಕಡೆಯಂತೆ ಪೀಕ ಪಹಾಣಿಯು ಭಾಸೋಕಂಡು ತಪ್ಪದೆ ಅಕ್ಟೋಬರ ತಿಂಗಳಲ್ಲೇ ಆಗುತ್ತದೆ! ತೆನೆ ಬೇಕಾದರೆ ನವಂಬರ ತಿಂಗಳಲ್ಲೇ ಬರಲಿ!! ತೆನೆ ಬರುವ ಮುಂಚೆಯೇ ಬೆಳೆ ಆಣೇವಾರಿಯಾಗುತ್ತದೆ! ಹೀಗೆ ಬೆಳೆ ಹುಟ್ಟುವ ಮುಂಚೆ ಆಣೇವಾರಿ ಮಾಡುವ ಕಲ್ಪನಾಶಕ್ತಿಯನ್ನು ದೇವರು ಇಲ್ಲಿಯ ಗ್ರಾಮಸ್ಥರಿಗೆ, ಶೇತಸಾಹುಕಾರರಿಗೆ ದಯಪಾಲಿಸಿದ್ದಾನೆ ಪಾಪಿ ಪಾಪಿಗಳು! ಅವರ ಆಣೇವಾರಿಯಂತೆ ನನಗೆ ಬೆಳೆಯೇ ಹುಟ್ಟುವದಿಲ್ಲ!! ಅಕ್ಟೋಬರದಲ್ಲಾದ ಆಣೇವಾರಿಯಂತೆ ನವಂಬರದಲ್ಲಿ ತೆನೆ ಬರುವದೆಂಬ ನನ್ನ ಕಲ್ಪನೆಯಿತ್ತು. ಆ ಆಶೆಯಿಂದ ಈತನಕ ಹಾದಿ ನೋಡಿದೆನು. ಹಾಗೆ ಬೆಳೆ ಹುಟ್ಟದ್ದರಿಂದ ನಿಮಗೆ ಈ ಪತ್ರ ಬರೆಕೊಂಡಿದ್ದೇನೆ. ಹುದ್ದೆದಾರಿಗಳಾದ ನಮ್ಮಂಥ ಬಡವರ ಪೀಕ ಪಹಾಣಿಯನ್ನು ಬೆಳೆ ಹುಟ್ಟಿದ ಮೇಲೆಯೇ ಮಾಡಬೇಕೆಂದು ಅಧಿಕಾರಿಗಳೊಡನೆ ನನ್ನದೊಂದು ಬಿನ್ನಹ. ಸ್ಥಳಿಕ ಅಧಿಕಾರಿಗಳು ಆಣೇವಾರಿಯನ್ನು ಹೆಚ್ಚಾಗಿ ದಾಖಲುಪಡಿಸಿ, ನಮ್ಮಂಥ ಬಡಬಗ್ಗರನ್ನು ತ್ರಿವ್ಯರೀಯ ಮೇಲೆ ಕೊಡಿಸಬೇಕೆಂದು ಹಾರೈಸುತ್ತಾರೆ. ಅವರ ತಪ್ಪಿಲ್ಲ. ನಾವೇ ಹತಭಾಗಿಗಳು. ಆದ್ದರಿಂದ ಅವರು ದಯಮಾಡಿ ಬೆಳೆ ಬಂದ ಮೇಲೆ, ಬೆಳೆಯನ್ನು ಕಣ್ಣಾರೆ ಕಂಡು ಪೀಕ ಪಹಾಣಿ ಮಾಡಬೇಕಾಗಿ ನಾನು ಬೈನ್ನೈಗೊಂಡು ಬೇಡುತ್ತೇನೆ. ಬೆಳೆಯ ಅಂದಾಜು ಜಿಲ್ಹೇಯವರಿಗೆ ತಿಳಿಯುದಿದ್ದರೆ, ಊರ ಸಭ್ಯ ಗೃಹಸ್ಥರ ಕಡೆಯಿಂದ ಅವರು ಮಾಹಿತಿ ಪಡಕೊಳ್ಳಬಹುದಲ್ಲವೇ?

— ಕಲಬುರ್ಗಿಯೊಳಗಿನ ಮಾರವಾಡಿ ಯುವಕ ಮಂಡಳದವರು ಸ್ಥಾಪಿಸಿದ ಪಾಠಶಾಲೆಯ ದ್ವಿತೀಯ ವಾರ್ಷಿಕೋತ್ಸವವು ವಿಜೃಂಭಣೆಯಿಂದ ನೆರವೇರಿತು. ರಾಜಾ ಬನ್ಸೀಲಾಲರವರು ಸಭಾಪತಿಗಳಿದ್ದರು. ಶ್ರೀ| ಜ. ವಿ. ಕೆಂಡೂಪರಕರರವರು 'ವಿದ್ಯಾ' ವಿಷಯದ ಮೇಲೆ ವಿಸ್ತೃತಪೂರ್ಣವಾದ ಉಪನ್ಯಾಸವನ್ನು ಹಿಂದೀ ಭಾಷೆಯಲ್ಲಿ ಕೊಟ್ಟರು. ಸಭಾಪತಿಗಳು ಛಾತ್ರಾಲಯಕ್ಕಾಗಿ ೧೧೦೦೦ ರೂಪಾಯಿಗಳನ್ನರ್ಪಿಸಿದರು; ರಾ| ಬ| ಲಕ್ಷ್ಮೀನಾರಾಯಣರಾಯರು ೩೫೦೦೦ ರೂಪಾಯಿಗಳ ದಾನ ಮಾಡಿರುವರು.

ವೃತ್ತಸಾರ.

— ಮದ್ರಾಸದ ಶ್ರೀ ರಾಮಚಂದ್ರಅಯ್ಯರವರು ನೀರನ್ನು ಎತ್ತುವ ಒಂದು ಯಂತ್ರವನ್ನು ತಯಾರಿಸಿರುವರು. ಈ ಯಂತ್ರವು ಈಗ ಮಹಾತ್ಮರ ಸತ್ಯಾಗ್ರಹಾಶ್ರಮದಲ್ಲಿ ನೀರನ್ನು ಎತ್ತಿ ಹಾಕುತ್ತಲಿದೆ. ಈ ಯಂತ್ರದಿಂದ ಒಂದೇ ಎತ್ತು, ಎರಡು ಎತ್ತುಗಳ ಅಷ್ಟಿಡಿ ಕೆಲಸವನ್ನು ಅನಾಯಾಸವಾಗಿ ಮಾಡುತ್ತದೆ. ಇದೊಂದು ಬೇಸಾಯಗಾರರಿಗೆ ದೊಡ್ಡದೊಂದು ಉಪಕಾರವೆಂದು ಮಹಾತ್ಮರು ನಮೂದಿಸುತ್ತಾರೆ. ಮಹಾತ್ಮರು ಇದನ್ನು ಇಂಜನಿಯರರ ಕಡೆಯಿಂದ ಪರೀಕ್ಷೆ ಮಾಡಿಸಿ ಈ ಯಂತ್ರದ ಶೋಧತೆ ಕುಶಲವಿರುವದೆಂದು ಅಭಿಪ್ರಾಯ ಪಡಕೊಂಡಿರುವರು. ಈ ಯಂತ್ರಕ್ಕೆ ರೂಪಾಯಿ ೩೫೦ ರಿಂದ ೩೭೫ರ ವರೆಗೆ ಬೆಲೆ ಬೀಳುತ್ತದೆ. ಈ ಯಂತ್ರವು ಲೋಕಪ್ರಿಯವಾದರೆ ಇದರ ಬೆಲೆಯು ಇನ್ನೂ ಕಡಿಮೆ ರೂಪಾಯಿ ೧೫೦ಕ್ಕೆ ಇಳಿಯಬಹುದು. ಸಾಮಾನ್ಯವಾಗಿ ನೀರನ್ನು ಎತ್ತಲು ಎರಡು ಎತ್ತುಗಳನ್ನು ಹೂಡುತ್ತಾರೆ. ಆಸುಪಾಸು ಎತ್ತಿನ ಜೋಡಿಯನ್ನು ಕೊಂಡುಕೊಳ್ಳಲು ರೂಪಾಯಿ ೩೦೦-೪೦೦ ಬೀಳುತ್ತವೆ. ಮೇಲಾಗಿ ಅವುಗಳಿಗೆ ಸಾಕಬೇಕು. ಈ ಎಲ್ಲ ವಿಚಾರ ಮಾಡಿದರೆ, ಶ್ರೀ| ರಾಮಚಂದ್ರರವರ ಯಂತ್ರದಿಂದ ಬೇಸಾಯಗಾರರಿಗೆ ಬಹು ದೊಡ್ಡ ಉಪಕಾರವಾಗಿರುವದು. ಈ ಯಂತ್ರವನ್ನು ಶ್ರೀ| ರಾಮಚಂದ್ರಅಯ್ಯರವರು ಮದ್ರಾಸ ಇಲಾಖೆಯ ಬೇಸಾಯ ಹಾಗು ಔದ್ಯೋಗಿಕ ಖಾತೆಯ ಅಧಿಕಾರಿಗಳಿಗೆ ಪ್ರಯೋಗ ಮಾಡಿ ತೋರಿಸಿ ೧೧ ವರ್ಷ ಕಳೆದವು. ಆದರೆ ಅದಕ್ಕೆ ಕೇಳುವವರ್‍ಯಾರಿಲ್ಲ! ಶ್ರೀ| ರಾಮಚಂದ್ರಅಯ್ಯರವರ ಯಂತ್ರಕ್ಕೆ ಸರಕಾರದ ಉತ್ತೇಜನವು ಯಾಕೆ ಇರುವದಿಲ್ಲ? ಸ್ವಲ್ಪ ವಿಚಾರಿಸಿ ನೋಡಿ.

— ಲಂಡನಿನಲ್ಲಿ ಭಯಂಕರ ಮಂಜು ಬೀಳಹತ್ತಿದೆ. ಟ್ರಾಮಬಂಡಿಗೆ ಮುಂದಿರುವ ಬೀದಿಯಾಗಿ ತೋರಿಸಿದ ಹಾದಿಯು ಕಾಣಲಿಲ್ಲ. ಆದರಿಂದ ಉಗಿಬಂಡಿಗಳು ಒಂದಕ್ಕೊಂದು ತಾಗಿ ೩೪ ಮಂದಿಗಳಿಗೆ ಗಾಯಗಳಾಗಿವೆ.

— ನ್ಯೂಯಾರ್ಕದಲ್ಲಿ ಪ್ರಚಂಡ ಮಳೆ ಬಿದ್ದು ಭಯಂಕರ ನಷ್ಟ. ಒಂದು ದೊಡ್ಡ ಗುಡ್ಡದ ತುಂಡು ಕುಸಿದುಬಿದ್ದು ೨೫ ಮಂದಿಗಳು ಮೃತರಾದರು. ನೂರಾರು ಮನೆಗಳು ನೆಲಸಮವಾದವು.

— ಹಿಂದುಸ್ತಾನಿ ಸೇವಾದಲದ ಸ್ವಯಂಸೇವಕರ ಪರಿಷತ್ತು ಗೌಹತಿಯಲ್ಲಿ ರಾಷ್ಟ್ರೀಯ ಸಭೆಯ ಎರಡು ದಿನ ಮುಂಚೆ ಸೇರುವದಿದೆ. ಶ್ರೀ| ತುಳಸೀಚರಣ ಗೋಸ್ವಾಮಿಯವರು ಅಧ್ಯಕ್ಷರಾಗುವರು.

— ಡಾ| ಹರ್ಡೀಕರರು ಮಹಾತ್ಮರಿಗೆ ಕರ್ನಾಟಕಕ್ಕೆ ಆಮಂತ್ರಿಸಿದ್ದರು. ಮಹಾತ್ಮರು ಅನುಗ್ರಹಿಸಿದರೆ, ೪೦ ಸಾವಿರ ರೂಪಾಯಿಗಳ ಖಾದಿಯನ್ನು ಮಾರಾಟ ಮಾಡುವ ಸಂಕಲ್ಪವನ್ನು ಪ್ರಕಟಿಸಿದ್ದರು. ಇಷ್ಟು ಅಲ್ಪ ವಧೂದಕ್ಷಿಣೆಯಿಂದ ತಾನು ಒಲಿಯುವ ವಧುವಲ್ಲವಾಗಿ ಮಹಾತ್ಮರು ವಿನೋದದಿಂದ ಬರೆದು, ಕರ್ನಾಟಕಕ್ಕೆ ಬರುವದಿಲ್ಲವಾಗಿ ಹೇಳಿರುವರು. ನಾವೇನು ಮಾಡಿದರೆ, ತಾವು ನಮ್ಮಲ್ಲಿಗೆ ಅನುಗ್ರಹಿಸುತ್ತೀರಿ? ಎಂದು ಡಾ| ಹರ್ಡೀಕರರು ಮಹಾತ್ಮರಿಗೆ ಪ್ರಶ್ನಿಸಿರುವರು.

— ಮುಂಬಯಿಯ ವಿಶ್ವವಿದ್ಯಾಲಯದ ಚುನಾವಣೆಯಲ್ಲಿ ಡಾ| ರಘುನಾಥರಾವ ಪರಾಂಜಪೆಯವರು ಗೆದ್ದರು. ಅವರಿಗೆ ೨೧೫೭ ಮತಗಳು ಬಿದ್ದವು. ರಾಷ್ಟ್ರೀಯ ಪಕ್ಷದ ಉಮೇದ್ವಾರರಾದ ಡಾ| ದೇಶಮುಖರವರಿಗೆ ೧೧೯೯ ಮತಗಳು ಬಿದ್ದವು. ಪ್ರತಿಯೋಗಿ ಪಕ್ಷದ ಚೆಟ್ಟಿಸ್ಥಾನದವರಿಗೆ ೫೮೦ ಮತಗಳು ಬಿದ್ದವು. ವಿಶ್ವವಿದ್ಯಾಲಯದ ಮತದಾರರಲ್ಲಿ ೭ ವರ್ಷದ ಈಚೆಗಿನ ಪದವೀಧರರಿಗೆ ಮತಾಧಿಕಾರವಿಲ್ಲದ್ದರಿಂದಲೂ ಮತದಾರರು ಬಹುತರವಾಗಿ ಸರಕಾರಿ ನೌಕರರೂ, ನೇಮಸ್ತ ವಿಚಾರದವರಿರುವದರಿಂದಲೂ ಡಾ| ಪರಾಂಜಪೆಯವರೇ ಗೆದ್ದು ಬಂದರು.

— ಕಲಕತ್ತೆಯ ವಿಖ್ಯಾತ ಖಾದಿ ಸೇವಕರಾದ ಡಾ| ಪ್ರಫುಲ್ಲಚಂದ್ರ ರೇಯವರು ಬೊಂಗಳೂರಿಗೆ ಚಿತ್ತೈಸಿರುವರು. ಆ ಸಮಯ ೫೦೦೦ ಮಂದಿಗಳು ಅವರಿಗೆ ಸ್ವಾಗತವನ್ನಿತ್ತರು. ಜಮೀನ್ದಾರರು ೫೦೦ ಮಂದಿ ಬಂಗಾರಿಗೆ ಒಂದು ವನಭೋಜನವನ್ನಿತ್ತು ಸತ್ಕರಿಸಿದರು. ಪ್ರಮುಖ ನಾಗರಿಕರೂ ಈ ಸಮಾರಂಭಕ್ಕೆ ಚಿತ್ತೈಸಿದ್ದರು.

— ಗೋದಾವರಿಯಲ್ಲಿ ಹಡಗ ಮುಳುಗಿ ೫೫ ಮಂದಿಗಳು ನೀರುಪಾಲಾದರು ೧೭ ಹೆಣಗಳು ಕೈಸೇರಿವೆ. ಮಿಕ್ಕದವರಲ್ಲಿ ಯಾರಾದರೆ ಬದುಕಿರುವರೋ ಏನೋ! ವಿಚಾರಿಸುವೆ.

... ಮದ್ರಾಸ ಪ್ರಾಂತದಿಂದ ವರಿಷ್ಠ ಕಾಯಿದೆ ಕೌನ್ಸಿಲಿಗೆ ೧೬ ಸಭಾಸದರು ಕಳಿಸಬೇಕು ೧೧ ಮಂದಿಗಳು ಸ್ವರಾಜ್ಯದಕ್ಷದವರು. ಗೌಹತಿ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ| ಶ್ರೀನಿವಾಸ ಅಯ್ಯಂಗಾರರವರ ದುಡಿತದ ಫಲವಿದು! ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ೪೬ ಆಸನಗಳು ಸ್ವರಾಜ್ಯ ಪಕ್ಷದ ಕೈಸೇರಿವೆ, ಬರೇ ೧೮ ಆಸನಗಳು ಜಸ್ಟಿಸ ಯಾನೆ ಬ್ರಾಹ್ಮಣೇತರ ಪಕ್ಷದ ಕೈಯಲ್ಲಿವೆ. ೩೨ ಮಂದಿಗಳು ಸ್ವತಂತ್ರರು!

— ಮುಂಬಯಿಯ ಮುನಿಸಿಪಾಲಿಟಿಗೆ ಮುಂಬಯಿಯ ಸರಕಾರವು ವಾಗ್ದಾನ ಮಾಡಿದ ಶಿಕ್ಷಣ ಕಾರ್ಯದ ಗ್ರ್ಯಾಂಟನ್ನು ಸರಕಾರವು ಸಲ್ಲಿಸಲಿಲ್ಲ. ಆದರಿಂದ ಮುನಿಸಿಪಾಲಿಟಿಯವರು ಸರಕಾರದ ಮೇಲೆ ದಾವೆ ಮಾಡುವ ನಿರ್ಧಾರ ಮಾಡಿರುವರು.

... ಕರ್ನಾಟಕದಲ್ಲಿ 'ಬ್ರಾಹ್ಮಣೇತರ' ಎಂಬ ಶಬ್ದದಿಂದ ಲಿಂಗಾಯತರೇ ಅಭಿಪ್ರೇತರಾಗುತ್ತಾರೆ. ಉಳಿದವರೆಲ್ಲರೂ ಇವರಿಗೆ ಅಧೀನರಾಗಬೇಕಾಗಿರುವದು. ಆದರಿಂದ ರಾಜಕಾರಣದಲ್ಲಿ ಕೆಲಸ ಮಾಡಲು "ಲಿಂಗಾಯತೇತರ" ಎಂಬ ಒಳತಂಡವನ್ನು ರಚಿಸಬೇಕೆಂದು ಧಾರವಾಡದ ಪಂಚಗಾರರವರು ಸೂಚಿಸುತ್ತಾರೆ ಜಾತೀಯತ್ವದ ತಂಡಗಳು ಇನ್ನು ಎಷ್ಟಾಗುವವೆಂದು ಯಾರು ಬಲ್ಲರು?

— ಗೌಹತಿಯೊಳಗಿನ ರಾಷ್ಟ್ರೀಯ ಸಭೆಗೆ ಪ್ರತಿನಿಧಿಗಳನ್ನು ಆರಿಸುವದಕ್ಕಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಭೆಯು ಇದೇ ಬರುವ ೩೦ನೇ ತಾರೀಖಿನ ದಿವಸ ಹುಬ್ಬಳ್ಳಿಯ ಜನರಿಗೆ ಗದಗಿನಲ್ಲಿ ಸೇರಲಿಕ್ಕಿದೆ.

ಪುಕ್ಕಟೆ! ಪುಕ್ಕಟೆ!! ಈಗ ಪುಕ್ಕಟೆ!!!

ಪ್ರೀಮಿಯಮ್ಮುಗಳನ್ನು ಕೊಡಬೇಡಿರಿ!

ಯಾಕೆ?

ನಾವು ಬರೇ ಪುಕ್ಕಟೆಯಾಗಿ ನಿಮ್ಮ ವಿಮೆಯನ್ನು ಇಳಿಸುತ್ತೇವೆ!

ಮಾಹಿತಿ ಪತ್ರಕವನ್ನಪೇಕ್ಷಿಸುವವರು ಒಂದಾಣೆ ಸ್ಟಾಂಪನ್ನಿಟ್ಟು ಬರೆಕೊಳ್ಳಬೇಕು;

ಇದೇಪ್ರಕಾರ ಏಜಂಟರಾಗಬಿಚ್ಛಿಸುವವರೂ ಬರೆಕೊಳ್ಳಬೇಕು.

ಪತ್ತೆ:— The Inspector of Agencies,

THE VENUS ASSURANCE BANK, LTD.

Dharwar Branch, DHARWAR.

ಮಹಾತ್ಮರ ಆತ್ಮಚರಿತ್ರ.

(೨೭) ಮುಂಬಯಿಯ ಸಭೆ

ಭಾವನು ತೀರಿಕೊಂಡ ಮಾರನೇ ದಿನವೇ ನಾನು ಸಾರ್ವಜನಿಕ ಸಭೆಯ ಬಗ್ಗೆ ಮುಂಬಯಿಗೆ ಹೋಗಬೇಕಾಯಿತು. ಇಂಥ ಪ್ರಸಂಗದಲ್ಲಿ ಭಾಷಣದ ಕುರಿತು ವಿಚಾರ ಮಾಡಲು ಅವಕಾಶವೆಲ್ಲಿ? ಹಗಲಿರುಳು ಶುಶ್ರೂಷೆ ಮಾಡಿ ದಣಿದಿದ್ದ ನನ್ನ ಧ್ವನಿಯು ಕರ್ಕಶವಾಗಿತ್ತು. ಆದರೂ ಪರಮಾತ್ಮನನ್ನು ನಂಬಿಕೊಂಡು ಮುಂಬಯಿಗೆ ಹೊರಟೆನು. ಭಾಷಣವನ್ನು ಬರೆಕೊಂಡು ಹೋಗಬೇಕೆಂಬ ಕಲ್ಪನೆ ಕೂಡ ಇರಲಿಲ್ಲ.

ಸರ್ ಫೀರೋಜಶಹರವರ ಸೂಚನೆಯಂತೆ ಸಭೆಯ ಮುನ್ನಾದಿನ ಸಾಯಂಕಾಲ ೫ ಘಂಟೆಗೆ ಅವರ ಕಚೇರಿಗೆ ಹೋಗಿ ನಾನವರ ಭೆಟ್ಟಿ ಮಾಡಿದೆ.

"ಗಾಂಧಿಯವರೆ, ನಿಮ್ಮ ಭಾಷಣವು ತಯಾರಾಗಿದೆಯೇ?" ಎಂದು ಅವರು ನನಗೆ ಕೇಳಿದರು.

ನಾನು ನಡುಗುತ್ತಾ "ನಾನು ಬರೆದಿಲ್ಲ; ಬಾಯಿಂದಲೇ ಮಾತಾಡಬೇಕೆಂದಿರುವೆನು" ಎಂದೆನು. "ಮುಂಬಯಿಯಲ್ಲಿ ಹೀಗಾಗದು. ಭಾಷಣಗಳ ಹಸ್ತಪ್ರತಿ ಬರೆದುಕೊಂಡು ಬರಬೇಕು. ನಮ್ಮ ಸಭೆಯಿಂದ ದೇಶಕ್ಕೆ ಲಾಭವಾಗಬೇಕಾದರೆ ನಿಮ್ಮ ಭಾಷಣವನ್ನು ನೀವು ಬರೆದು ನಾಳೆ ಬೆಳಗು ಹರಿಯುವದರೊಳಗೆ ಅದು ಅಚ್ಚಾಗಬೇಕು. ಹೀಗೆ ನೀವೊಂದು ವ್ಯವಸ್ಥೆಮಾಡಬಲ್ಲಿರಲ್ಲವೆ?" ಎಂದು ಅವರು ಹೇಳಿದರು.

ನನಗೆ ಗಾಬರಿಯಾಯಿತು. ಆದರೆ ಪ್ರಯತ್ನ ಮಾಡುತ್ತೇನೆಂದು ಹೇಳಿದೆನು.

"ಹಾಗಾದರೆ ನಿನ್ನ ಹಸ್ತಪ್ರತಿ ತೆಗೆದುಕೊಳ್ಳಲು ಮುನ್ಶಿಯವರು ಯಾವಾಗ ಬರಬೇಕು?"

"ರಾತ್ರಿ ೧೧ ಘಂಟೆಗೆ" ಎಂದು ನಾನು ಹೇಳಿದೆನು.

ಮಾರನೇ ದಿನ ಸಭೆಗೆ ಹೋದ ಬಳಿಕ ಸರ್ ಫೀರೋಜಶಹರವರ ಉಪದೇಶದ ಮಹತ್ವವು ನನಗೆ ತಿಳಿಯಿತು. ಸರ್ ಕಾವಸಜಿ ಜಹಾಂಗೀರ ಇನ್‌ಸ್ಟಿಟ್ಯೂಟಿನ ಸಭಾಮಂದಿರದಲ್ಲಿ ಈ ಸಭೆ ನೆರೆದಿತ್ತು. ಸರ್ ಫೀರೋಜಶಹಾ ಮೆಹತಾರವರು ಈ ಸಭಾಮಂದಿರದಲ್ಲಿ ಭಾಷಣ ಮಾಡುವದಿದ್ದಾಗ ಸಭಾಮಂದಿರವೆಲ್ಲ ವಿದ್ಯಾರ್ಥಿಗಳಿಂದಲೇ ತುಂಬಿ ತುಳುಕುತ್ತಿತ್ತಂತೆ. ಪ್ರೇಕ್ಷಕರಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೇ ಅಪರಿಮಿತವಾಗಿತ್ತು. ಈ ಸಮಯದಲ್ಲಿಯೂ ಅದೇ ಪ್ರಕಾರವಿತ್ತು. ನನಗೆ ಇದರ ಅನುಭವವಿರಲಿಲ್ಲ. ನನ್ನ ಧ್ವನಿಯು ಯಾರಿಗೂ ಕೇಳಿಸುತ್ತಿರಲಿಲ್ಲ. ಭಾಷಣ ಮಾಡುವಾಗ ನನ್ನ ಮೈ ನಡುಗುತ್ತಿತ್ತು. ಸರ್ ಫೀರೋಜಶಹಾರವರು ಇನ್ನೂ ಗಟ್ಟಿಯಾಗಿ ಮಾತಾಡಲು ನನಗೆ ಆಗಿಂದಾಗ ಹುರಿದುಂಬಿಸುತ್ತಿದ್ದರು. ಆದರೆ ಇದರಿಂದ ನನ್ನ ಉತ್ಸಾಹಭಂಗವಾಗಿ ನನ್ನ ಧ್ವನಿಯು ಬೀಳಹತ್ತಿತು.

ಇಷ್ಟರಲ್ಲಿ ನನ್ನ ಹಳೇ ಗೆಳೆಯ ರಾವಬಹದ್ದೂರ ಕೇಶವರಾವ ದೇಶಪಾಂಡೆಯವರು ನನಗೆ ನೆರವಾದರು. ಅವರ ಧ್ವನಿಯು ಇಂಥ ಸಭೆಗೆ ತೀರ ಯೋಗ್ಯವಾಗಿತ್ತು. ನನ್ನ ಭಾಷಣವನ್ನು ನಾನು ಅವರಿಗೆ ಕೊಟ್ಟೆ. ಆದರೆ ಅವರಿಗೆ ಕೇಳಿಕೊಳ್ಳಲು ಪ್ರೇಕ್ಷಕರು ಒಪ್ಪಲಿಲ್ಲ. 'ವಾಚ್ಛಾ' 'ವಾಚ್ಛಾ' ಎಂಬ ಒಂದೇ ಧ್ವನಿಯಿಂದ ಇಡೀ ಸಭಾಮಂದಿರವೆಲ್ಲ ದುಮದುಮಿಸಿತು. ಅದರಿಂದ ಶ್ರೀ. ವಾಚ್ಛಾರವರೇ ಎದ್ದುನಿಂತು, ಚಿತ್ತವೇಧಕವಾಗಿ ಭಾಷಣವನ್ನು ಓದಿ ಹೇಳಿದರು. ಪ್ರೇಕ್ಷಕರೆಲ್ಲ ಸಂಪೂರ್ಣವಾಗಿ ಪ್ರಶಾಂತಚಿತ್ತದಿಂದ ಭಾಷಣವನ್ನು ಲಕ್ಷದಿಂದ ಆದಿಯಿಂದ ಕೇಳಿದರು. ಅಲ್ಲಲ್ಲಿ ಸಮಯೋಚಿತವಾಗಿ ಚಪ್ಪಾಳೆ 'ನಾಚಿಕೆ' ಕೋಪಗಳನ್ನು ಮಾಡಿದರು. ಇದನ್ನು ನೋಡಿ ನನಗೆ ಸಂತೋಷವಾಯಿತು.

೨. ಬ್ರಿಟಿಶ ದೇಶದ ವರ್ತಮಾನಪತ್ರಿಕೆಗಳ ಹೇಳಿಕೆಯನ್ನು ಕೇಳಿ, ಯಾರೂ ಮೋಸಹೋಗುವ ಕಾರಣವಿಲ್ಲ. ಪರೋಪಕಾರ ಬುದ್ಧಿಯಿಂದ ಚೀನ ದೇಶಕ್ಕೆ ಸ್ವಾತಂತ್ರ್ಯಪ್ರಾಪ್ತವಾಗಬೇಕೆಂಬ ಬುದ್ಧಿಯಿಂದ ಈ ಉಪದೇಶ ಮಾಡಲಾಗುತ್ತಿಲ್ಲ. ಸ್ವಾರ್ಥಪರತೆಯೇ ಕಾರಣವಾಗಿದೆ. ಬ್ರಿಟಿಶ ವೃತ್ತಪತ್ರಿಕೆಗಳು ಚೀನದೇಶಕ್ಕೆ ಸ್ನೇಹಭಾವದಿಂದ ನಡಿಸಿಕೊಳ್ಳಲು ಬೋಧಿಸುತ್ತಿರುವವು. ಅದು ಹೇಗೆ? ಪರದೇಶಗಳಿಗೆ ಚೀನ ದೇಶದಲ್ಲಿ ಕೆಲವು ಹಕ್ಕುಗಳಿವೆ. ಅವನ್ನು ಪರ್ಯಾಲೋಚಿಸಿರಿ. ಆಮದು-ರಫ್ತುಗಳ ಮೇಲೆ ಕರಗಳನ್ನಿಡುವ ಅಧಿಕಾರವು ಚೀನದವರಿಗಿಲ್ಲ. ಯುರೋಪಿಯನ್ನರ ಜೀವನೋಪಾಯಕ್ಕೆ ಅವಶ್ಯವಿದ್ದ ಸಾಮಗ್ರಿಗಳ ಆಮದಿನ ಮೇಲೆ ಯಾವದೇ ಕರವನ್ನಿಡಬಾರದು. ಪರದೇಶದವರು ದೇಶೀಯರ ಮೇಲೆ ಅನ್ಯಾಯ ಮಾಡಿದರೆ ಆಯಾ ದೇಶದ ರಾಯಭಾರಿಗಳೊಡನೆ ದೂರಿಕೊಳ್ಳಬೇಕು, ಚೀನ ದೇಶದವರು ಅನ್ಯಾಯ ಮಾಡಿದರೆ ಅವರ ಮೇಲೆ ಪರದೇಶದವರು ದೂರಿಕೊಳ್ಳುವದಾದರೂ ತಮ್ಮ ರಾಯಭಾರಿಗಳೊಡನೆಯೇ. ಚೀನ ದೇಶದ ಸರಕಾರಕ್ಕೆ ಇನ್ಸಾಫ ಮಾಡುವ ಅಧಿಕಾರವು ಇರುವದಿಲ್ಲ. ಚೀನ ದೇಶದವರಿಗೆ ಪರದೇಶಗಳಲ್ಲಿ ಉಳಕೊಳ್ಳುವ ಸ್ವಾತಂತ್ರ್ಯವಿಲ್ಲ. ಪರದೇಶದವರು ಚೀನ ದೇಶದಲ್ಲಿ ಬಂದು ದೇಶದಲ್ಲಿ ಉಳಕೊಳ್ಳಬಹುದು. ಹೀಗೆಲ್ಲ ಹಕ್ಕುಗಳನ್ನು ಪರದೇಶದವರು ಅನುಕೂಲ ಸಂಧಿ ಸಾಧಿಸಿ ಬಲಾತ್ಕಾರದಿಂದ ಅಪಹರಿಸಿದ್ದರು. ರಶಿಯಾ ದೇಶದವರು ಆ ಹಕ್ಕುಗಳನ್ನು ಬಿಟ್ಟುಕೊಟ್ಟು ಚೀನ ದೇಶದೊಡನೆ ಸ್ನೇಹಭಾವದಿಂದ ನಡೆಕೊಳ್ಳಲುದ್ಯುಕ್ತರಾಗಿರುವರು. ಬ್ರಿಟಿಶಾದಿ ರಾಷ್ಟ್ರಗಳು ತಮ್ಮ ಹಕ್ಕುಗಳನ್ನೇ ಭದ್ರವಾಗಿ ಕಾಪಾಡಲುದ್ಯುಕ್ತವಾದರೆ, ದ್ವೇಷಾಗ್ನಿಯು ಮತ್ತೂ ತೀವ್ರವಾಗಿ ಬೆಳೆದು, ರಶಿಯಾ ದೇಶಕ್ಕೆ ಚಂಚುಪ್ರವೇಶ ಮಾಡಲು ಇಂಬು ಸಿಗುವದು. ಹಾಗೆ ರಶಿಯಾ ಸರಕಾರವು ಚೀನ ದೇಶದ ಸಹಕಾರಿಯಾಗಿ ಪರಿಣಮಿಸಿದರೆ ಬ್ರಿಟಿಶಾದಿಗಳ ಗತಿಗೇಡಾಗುವದೆಂಬ ದೊಡ್ಡ ಭೀತಿಯು ದೂರದೃಷ್ಟಿಯ ಬ್ರಿಟಿಶ ವರ್ತಮಾನಪತ್ರಗಳಿಗೆ ಬಿದ್ದಿದೆ. ಹಟ ಹಿಡಿದರೆ ಸ್ವಾರ್ಥಕ್ಕೆ ಆತಂಕ ಬರುತ್ತದೆ. ಬಲಾತ್ಕಾರದಿಂದ ಸಂಪಾದಿಸಿದ ಒಪ್ಪಂದದ ಶರ್ತುಗಳನ್ನು ಪ್ರಬಲವಾದ ಚೀನದೇಶವು ಪಾಲಿಸಲು ತಯಾರಿಲ್ಲ. ಇಂಥ ಸಮಯ ಚೀನ ದೇಶದೊಡನೆ ಗೆಳೆತನ ಬೆಳೆಸುವದೇ ಲೇಸು; ಸ್ವಾರ್ಥವೂ ಸಾಧಿಸುತ್ತದೆ; ಪರಾರ್ಥವೂ ಕೈಗೂಡುತ್ತವೆ. ಹ್ಯಾಗೂ ಇರಲಿ. ಬ್ರಿಟಿಶ ವರ್ತಮಾನ ಪತ್ರಿಕೆಗಳ ಉಪದೇಶವನ್ನು ಪಾಲಿಸಿದರೆ, ಚೀನ ದೇಶದೊಳಗಿನ ಅನರ್ಥವು ತಪ್ಪುವದು. ಈಶೇಚ್ಛೆಯನ್ನು ಯಾರು ಬಲ್ಲರು!

---

೩. ನಮಗೆ ಸ್ವಾತಂತ್ರ್ಯವಿಲ್ಲವಿದ್ದರೂ, ಸ್ವಾತಂತ್ರ್ಯದ ವೇಷಕ್ಕೇನು ಬರಗಾಲವಿಲ್ಲ. ಬ್ರಿಟಿಶ ದೇಶದಲ್ಲಿ ಪಾರ್ಲಿಮೆಂಟಿದೆ. ಅದರ ಅಧಿಕಾರವೆಷ್ಟೆಂದು ಬಲ್ಲಿರಾ? ಪುರುಷನಿಗೆ ಸ್ತ್ರೀ ಮಾಡುವ ಅಧಿಕಾರವಿಲ್ಲ; ಸ್ತ್ರೀಗೆ ಪುರುಷ ಮಾಡುವ ಅಧಿಕಾರವಿಲ್ಲ. ಈ ಅಧಿಕಾರವನ್ನೊಂದು ಬಿಟ್ಟರೆ, ಉಳಿದ ಎಲ್ಲ ಅಧಿಕಾರಗಳು ಪಾರ್ಲಿಮೆಂಟಿಗಿವೆ. ಅಷ್ಟು ಸರ್ವಾಂತರ್ಯಾಮಿ ಸರ್ವಶಕ್ತಿಯುಳ್ಳ ಪ್ರಜಾಸಂಸ್ಥೆಯದು. ನಮ್ಮಲ್ಲಿಯೂ ಪಾರ್ಲಿಮೆಂಟಿದೆ, ವರಿಷ್ಠ ಕಾಯಿದೆ ಕೌನ್ಸಿಲು, ಪ್ರಾಂತಿಕ ಕಾಯಿದೆ ಕೌನ್ಸಿಲು ಮುಂತಾದ ಸಂಸ್ಥೆಗಳಿವೆ. ಈ ಸಂಸ್ಥೆಗಳಿಗೆ ಇರುವ ಅಧಿಕಾರವೆಷ್ಟೆಂದು ನಾವು ಹೇಳಬೇಕಾಗಿಲ್ಲ. ಕೌನ್ಸಿಲಿನಲ್ಲಿ ಮಂಜೂರಾದ ಠರಾವುಗಳನ್ನು ಮನ್ನಿಸಲು ಸರಕಾರವು ಬದ್ಧವಿಲ್ಲ. ಅಮಾನ್ಯ ಮಾಡಿದ ಠರಾವುಗಳನ್ನು ಮನ್ನಿಸುವ ಅಧಿಕಾರವು ಪ್ರಾಂತಾಧಿಪತಿ–ಸರ್ವಾಧಿಪತಿಗಳಿಗಿರುವದು. ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಇಲೆಕ್ಷನು ಮುಗಿದ ಕೂಡಲೆ ಮಂತ್ರಿಮಂಡಳದ ತರ್ಕ ವಿತರ್ಕಗಳು ಪ್ರಾರಂಭವಾಗುತ್ತವೆ. ಇಲ್ಲಿಯೂ ಅವೇ ತರ್ಕಗಳೀಗ ಪ್ರಾರಂಭವಾಗಿವೆ. ಡಾ|| ಪರಾಂಜಪೇ ರಘುನಾಥರಾಯರು ಶಿಕ್ಷಣ ಮಂತ್ರಿಗಳಾಗುವರೆಂದು ಸುದ್ದಿ ಬಿತ್ತು. ನಾ|| ಹಿದಾಯತುಲ್ಲಾ ಹಾಗು ನಾ|| ದೆಹಲವಿಯವರು ಹಿಂದಿನ ಮಂತ್ರಿಪದಗಳನ್ನೇ ಮುಂದೆಯೂ ನಡಿಸಲುದ್ಯುಕ್ತರಾಗುವರೆಂದು ಸಾಮಾನ್ಯವೊಂದು ಅಂದಾಜಿತ್ತು. ಆದರೆ ಈ ಅಂದಾಜೀಗ ನಿರಾಧಾರವೆಂದು ತಿಳಿಯುತ್ತದೆ. ಹಿದಾಯತುಲ್ಲಾರವರ ಕಾರಕೀರ್ದಿಗೆ ಸಿಂಧಪ್ರಾಂತದ ಮಹಮ್ಮದೀಯ ಸಭಾಸದರೆಲ್ಲರೂ ಕ್ಷಣ್ಣದೃಷ್ಟಿ ಇವರಿಗೆ ತಲೆದೂಗಡಿಸುತ್ತಾರೆ. ಅದರಿಂದ ಇವರಿಗೆ ನೇಮಿಸಿಕೊಂಡ ಹೊರತು ನಮ್ಮ ಪ್ರಾಂತಾಧಿಪರಿಗೆ ಗತ್ಯಂತರವಿಲ್ಲ. ಡಾ|| ಪರಾಂಜಪೇಯವರಿಗೆ ಸಭಾಸದರ ಬೆಂಬಲವಿಲ್ಲದ್ದರಿಂದ ಪ್ರಾಂತಾಧಿಪರು ಅವರನ್ನು ತ್ಯಜಿಸಿರುವರಾಗಿ "ಹೆರಲ್ಡ" ಪತ್ರಿಕೆಯಲ್ಲಿ ಬಲ್ಲವರು ಬರೆಯುತ್ತಾರೆ. ತಾಜೆಯ ಪ್ರಧಾನ ಗೋವಿಂದ ರಾಯರು (Constructive Co-operation party) ಘಟನಾತ್ಮಕ ಸಹಕಾರ ಪಕ್ಷವೆಂಬ ಹೊಸ ಪಕ್ಷವನ್ನೊಂದು ನಿರ್ಮಿಸುವ ಗಡಿಬಿಡಿಯಲ್ಲಿರುವರು. ಅಹಮದಾಬಾದಿಗೆ ಹೋಗಿ ಕೆಲವು ಸಭಾಸದರನ್ನು ತಮ್ಮ ಪಕ್ಷದಲ್ಲಿ ದಾಖಲುಮಾಡಿಕೊಂಡ ಸುದ್ದಿ ಬಿದ್ದಿದೆ. ಪ್ರತಿಯೋಗಿ ಪಕ್ಷದ ಶ್ರೀ ಮುಕುಂದರಾವ ಜಯಕರರವರ ಬೆಂಬಲವೂ ಇವರಿಗಿದೆ. ಇದರಿಂದ ಇವರಿಗೊಂದು ಮಂತ್ರಿಪದ ದೊರಕೀತೆಂದು ಹೇಳುತಾರೆ. ಬ್ರಾಹ್ಮಣೇತರ ಪ್ರತಿನಿಧಿಗಳಿಗೆ ಸಮಾಧಾನ ಮಾಡಲು ರಾ|| ಜಾಧವರಾವ ಪವಾರರವರಿಗೆ ಪ್ರಾಂತಾಧಿಪರು ಮಂತ್ರಿಗಳಾಗಿ ನೇಮಿಸಿಕೊಳ್ಳಲಿರುವರಾಗಿಯೂ ಹೇಳುತ್ತಾರೆ. ಇವೆಲ್ಲ ರಾಜಕಾರಣದ ಗರ್ಭಾಗಾರದೊಳಗಿನ ತರ್ಕಗಳು. ಇತ್ತ ಅಹಮ್ಮದಾಬಾದದ ಹಿಂದೂ ಸಭೆಯವರು ಪ್ರಾಂತಾಧಿಪರಿಗೊಂದು ತಂತಿ ಮಾಡಿ 'ಹಿಂದೂ ಸಂಖ್ಯೆಯ ಮಾನದಿಂದ ಈರ್ವ ಮಂತ್ರಿಗಳಾದರೂ ಹಿಂದೂಗಳಾಗಬೇಕೆಂದು ಪ್ರಾರ್ಥಿಸಿಕೊಂಡಿರುವರು. ನಮ್ಮ ಕರ್ನಾಟಕದ ಬ್ರಾಹ್ಮಣೇತರರು ರಾ|| ಬ|| ಕಂಬಳಿಯವರಿಗೆ ಮಂತ್ರಿಪದವನ್ನಿತ್ತು ಕರ್ನಾಟಕಕ್ಕೆ ಸತ್ಕರಿಸಬೇಕಾಗಿ ಆಗ್ರಹಪೂರ್ವಕವಾಗಿ ಬೇಡಿಕೊಳ್ಳುತ್ತಿರುವರು. ಇತ್ತ ಮುಂಬಯಿಯ ಪಾರಸೀಗಳಿಗೂ ಒಂದು ಮಂತ್ರಿ

ವದ ದೇಶ. ಪ್ರತಿನಿಧಿಗಳ ಸಹಕಾರ್ಯವು ಬೇಕೇ ಬೇಕು; ಸ್ವತಂತ್ರರಿಗೂ ದೇಶ ಸೇವಾಸಕ್ತರಿಗೂ ಅವಶ್ಯವು ಹೀಗೆ ಮೂವರ ಮಂತ್ರಿಪದಗಳಿಗಾಗಿ ಎಷ್ಟೋ ಮಂದಿ ಪ್ರಯತ್ನಿಸುತ್ತಿರುವರು. ಇದಕ್ಕಾಗಿ ಗಡಿಬಿಡಿ ಮಾಡುತ್ತಿರುವವರು. ಇರಲಿ. ಗದ್ದಲ ನಡೆಯುತ್ತಿರುವಷ್ಟರಲ್ಲಿ ಈ ಹೊಸ ಉಪಾಧಿಯು ಗಂಟು ಬಿದ್ದಿದೆ. ಪ್ರಾಂತಾಧಿಪರು ಗೌಹತಿಯ ನಿರೀಕ್ಷಣೆ ಮಾಡುತ್ತಿದ್ದಾರೆಂದೂ ಇಂದು ನಾಳೆ ಹೀಗೆಲ್ಲ ನಮ್ಮಲ್ಲಿಯ ಪ್ರಾಂತಿಕ ರಾಜಕಾರಣದಲ್ಲಿ ತರಂಗಗಳು ಏಳುತ್ತಿವೆ. ಅಧಿಕಾರಕ್ಕೆ ಬರಗಾಲವಾದರೂ, ಅಧಿಕಾರದ ಮೇವುಗಳಿಗೇನು ದುಷ್ಕಾಲವಿಲ್ಲ. ಒಂದರ ಹಿಂದೆ ಮತ್ತೊಂದು; ಒಂದರ ಮೇಲೆ ಮತ್ತೊಂದು; ಹೀಗೆ ಮೇಘಗಳು ಥರಥರನೆ ಬಂದು ನರದೆಯೊಳಗೆ ಬಾರಾಗುತ್ತಿವೆ. ಶುಕ್ರಧಾರದ ರಂಗಸ್ಥಳದ ಮೇಲೆ ಯಾರು ಮುಖ್ಯ ನಟನಾಗುವನೋ, ಯಾರು ಬಿದ್ದು ಹೋಗುವನೋ ಕಲ್ಪನಾತರಂಗವಲ್ಲವೋ. ನಾವು ಪ್ರೇಕ್ಷಕರಾಗಿ ಕಾ... ಮಾಡಬೇಕು."

---

೪ ನಮ್ಮ ಮೇಲೆ ಒಂದು ದೊಡ್ಡ ಆರೋಪ. ನಮ್ಮ ಕುಮಟೆಯಲ್ಲಿ ಕೆಲ್ಸ ಮಕ್ಕಳಿಗೆ ಪ್ರತ್ಯೇಕ ಕನ್ನಡ ಶಾಲೆ ಅವಶ್ಯವಿಲ್ಲವಾಗಿ ನಾವು ಈ ಮೊದಲೆ ಪ್ರತಿಪಾದಿಸಿದ್ದೆವು. ಈಗಲೂ ನಮ್ಮ ಅಭಿಪ್ರಾಯವು ಹಾಗೆಯೆ ಇದೆ. ಸಾಧಕ ಬಾಧಕಗಳನ್ನು ಈ ಮೊದಲೇ ತೋರಿಸಿಕೊಟ್ಟಿರುವೆವು. ಪ್ರತ್ಯೇಕ ಕನ್ನಡ ಶಾಲೆಗಳಲ್ಲಿಯೇ ಹೆಣ್ಣುಮಕ್ಕಳು ಮುಕ್ಕಾಲು ಪಾಲು ಕಲಿಯುತ್ತಿರುವಾಗ, ಪ್ರತ್ಯೇಕ ಕನ್ನಡ ಶಾಲೆಯನ್ನು ನಡೆಸಬಾರದೆಂದು ನಾವು ಸೂಚಿಸಿದ್ದೆವು. ಇದರಿಂದ ನಮ್ಮ "ಮರಾಠಿಯ ಅಭಿಮಾನ"ವು ಉಬ್ಬಿ ಬಂತಂತೆ! "ಕನ್ನಡ ಭಾಷೆಯ ಮೇಲೆ ದ್ರೋಹ" ಬಗೆಯುತ್ತಿದ್ದೇವಂತೆ!! "ಕನ್ನಡ ಬಾಂಧವರ ಮೇಲೂ ದ್ರೋಹ" ಬಗೆಯುತ್ತಿದ್ದೇವಂತೆ!! "ಕನ್ನಡದ ಮೇಲೆ ಗದೆ ಎತ್ತಿದ ಯೋಜನೆಯು"! "ಕಾನಡಾ ಧುರೀಣ"ನ ಆಕ್ಷೇಪಗಳನ್ನು ಕೇಳಿ ನಮಗೆ ನಗೆ ಬರುತ್ತಿದೆ. "ಧುರೀಣ"ನ ಇಷ್ಟು ವಿಚಾರಹೀನನೆಂದು ನಾವು ಬಗೆದಿದ್ದಿಲ್ಲ. ನಮ್ಮ ಪ್ರತಿಪಾದನೆಯಲ್ಲಿ ಇಷ್ಟೊಂದು ಬಾಧಕ ಗ್ರಹವಾಗಿರುವದೆಂಬ ಕಲ್ಪನೆಯನ್ನು "ಧುರೀಣ"ನೇ ಕಂಡುಹಿಡಿಯಬೇಕು. ಕೇವಲ ವಿಚಾರಪಿದ್ದವರ್ಯಾರೂ ಒಂದೂ ಹೇಳರು. ಕನ್ನಡದ ಕೂಪಕ್ಕೆ, ಗುಣದೋಷ, ಸಾಧಕ ಬಾಧಕ, ವ್ಯವಹಾರಿಕ, ಅವ್ಯವಹಾರಿಕ ವಿಚಾರಗಳನ್ನೆಲ್ಲ ಬದಿಗೊತ್ತಿ, ಬಣ್ಣದ ಮಾತು ಕೇಳಿಸುವವರ. ನಾವಲ್ಲ. ಜಿಲ್ಲಾ ಬೋರ್ಡ ಠರಾವುಗಳನ್ನು ಹಿಡಿಯುವದರಿಂದ ನಾವು ಮಾಡುವದು; ಕೌನ್ಸಿಲಿಂಗ ಪ್ರೊಟೆಸ್ಟ ಕೊಟ್ಟು ನಿಷೇಧ ಮಾಡಲಿ; ಅದರ ಗೊಡವೆ ನಮಗೇಕೆ? ನಮ್ಮ ಮತವನ್ನು ಅರುಹುವ ಕರ್ತವ್ಯವು ಮಾತ್ರ ನಮ್ಮದು. ಜಿಲ್ಲಾ ಬೋರ್ಡಿನ ಠರಾವುಗಳಿಂದ ನಮ್ಮ ಮತಗಳ ಇಷ್ಟಾನಿಷ್ಟತೆಯು ಸಿದ್ಧವಾಗದು. "ಧುರೀಣ"ನು 'ವೃತ್ತ'ಕಾರರ ವಾದದ ಮಾತುಗಳನ್ನು ಅಮೂಲಾಗ್ರ ಪ್ರಕಟಿಸಿ, ಪೊಳ್ಳು ಉದ್ಗಾರಗಳನ್ನು ತೆಗೆದರೆ ನಗೆಗೇಡಾಗುವದೆಂದು ತಿಳಿದೋ ಏನೋ, ಅವನ್ನು ಪ್ರಕಟಿಸಿಲ್ಲ. ಈಗಾದರೂ ಅವನು ಪ್ರಕಟಿಸಿ, 'ವೃತ್ತ'ಕಾರರ ವಾದದ ಸ್ವರೂಪವನ್ನು ತನ್ನ ವಾಚಕರಿಗೆ ಅರುಹಲಿ. ಇಂಥ ಸ್ವಾರ್ಥಾಂಧ ಉದ್ಗಾರಗಳಿಗೆ 'ವೃತ್ತ'ಕಾರರು ಸೊಪ್ಪು ಹಾಕುವವರಲ್ಲೆಂದು "ಧುರೀಣ"ನಿಗೆ ಗೊತ್ತಿದ್ದಿದ್ದರೆ, ನಾವು ಮತ್ತೇನೂ ಹೇಳುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ—ಚಳಿ ಸಾಮಾನ್ಯ; ೨ ದಿನ ಚಳಿಯ ಶಕೆ ಬಿತ್ತು. ವ್ಯಾಪಾರಿಗಳ ಬೀಡು ಬಿಡದು. ಘಟ್ಟದ ಮೇಲಿನ ಕಾರಕೂನರ ಆಮದು ಈಗ ಹೆಚ್ಚಾಗಿ ಇಳಿಯುವದಿಲ್ಲ. ಊರಡಿಕೆಯ ಹಂಗಾಮು ತೀರಿತೆನ್ನಬಹುದು.

ಪುಣೆಯ 'ಭಾರತ ಸೇವಾ ಸಮಾಜ'ದ ಉದಾತ್ತಸ್ವಭಾವ ಶ್ರೀ| ದೇವಧರ ಗೋಪಾಳರಾಯರು ದಕ್ಷಿಣ ಭಾಗದ ಸಹಕಾರಿ ಪರಿಷತ್ತಿನ ಕೆಲಸ ತೀರಿಸಿಕೊಂಡು, ಅಂಕೋಲಾ, ಗೋಕರ್ಣ ಮಾರ್ಗವಾಗಿ ಇಲ್ಲಿ ಮಂಗಳವಾರಕ್ಕೆ ಬಂದಿದ್ದರು. ಜುಬಿಲಿ ಧರ್ಮಶಾಲೆಯಲ್ಲಿ ಒಂದು ಸಭೆಯಾಗಿ ಶ್ರೀ| ದೇವಧರರವರ ಭಾಷಣವಾಯಿತು. ಸಹಕಾರವು ಆತ್ಮೋನ್ನತಿಯ ಮಾರ್ಗವು; ಇದರಿಂದ ದೇಶೀಯರಾದಿ ಉದ್ಯೋಗಗಳಿಗೆ ಕಡಿಮೆ ದರದಿಂದ ಬಡ್ಡಿ ಸಿಗಲು ಅನುಕೂಲವಿದೆ; ಕಷ್ಟಪಟ್ಟು ದುಡಿಯುವವರಲ್ಲಿ ರಾಷ್ಟ್ರೀಯ ವೃತ್ತಿಯು ಹೇರೂರುತ್ತಿದೆ. ಸಂಘಗಳಿದ್ದಲ್ಲಿ ಸಾವುಕಾರರ ಕಾಟ ಸಾಗುವದಿಲ್ಲ. ಸಹಕಾರಿ ಸಂಘಗಳಲ್ಲಿ ಬೇಕಷ್ಟು ಹಣವಿದ್ದು ಅವನ್ನು ಜನರ ಉಪಯೋಗಿಸಿಕೊಳ್ಳಬೇಕು. ಸಹಕಾರಿ ಸಂಸ್ಥೆಗಳು ಜನರ ವಿಶ್ವಾಸವನ್ನು ಸಂಪಾದಿಸಿ ಸರಕಾರವು ನಡೆಸಿಕೊಳ್ಳುವಂತೆ ಬಡ್ಡಿಯು ದರದಿಂದಲೂ ಸೇವೆಗಳನ್ನು ಸಂಪಾದಿಸಬೇಕು. ಸಹಕಾರಿ ಸಂಘಗಳು, ಲೋಕೋಪಕಾರಿ ಸಂಘಗಳು, ಅವಕ್ಕೆ ಜನರೆಲ್ಲರೂ ಸಹಾಯ ಭೂತಿಯ ನೆರವಾಗಬೇಕು ಇತ್ಯಾದಿ ಮಾತಾಡಿದರು. ಸಭಿಕರಿಗೇನಾದರೂ ಪ್ರಶ್ನೆ ಕೇಳುವದಿದ್ದಲ್ಲಿ ಪ್ರಶ್ನೆ ಕೇಳಬಹುದೆಂದು ಹೇಳಲಾಯಿತು. ಮೊದಲೇ ಸಭಿಕರು ೪|| ಘಂಟೆಯಿಂದ ಶ್ರೀ| ದೇವಧರರವರ ಹಾದಿಕಾಯುತ್ತ ಬೇಸತ್ತಿದ್ದರು; ಪ್ರಶ್ನೆ ಕೇಳುವ ಪ್ರಸಂಗವನ್ನು ಯಾರೂ ನಿರೀಕ್ಷಿಸಿದ್ದಿಲ್ಲ. ಇದರಿಂದ ಯಾರೂ ಪ್ರಶ್ನೆ ಕೇಳಲಿಲ್ಲವಾಗಿ ತೋರುತ್ತದೆ. ಆಭಾರ ಮನ್ನಣೆಯಾಗಿ ಸಭೆಯು ವಿಸರ್ಜನ ಹೊಂದಿತು.

ನಿನ್ನೆಯಿಂದ ಇಲ್ಲಿಯ ಶ್ರೀ ಕುಂಭೇಶ್ವರ ದೇವಾಲಯಕ್ಕೆ ಹತ್ತಿದ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿ ದತ್ತ ಜಯಂತಿ ಉತ್ಸವಕ್ಕೆ ಪ್ರಾರಂಭವಾಗಿದೆ. ಮುಂಜಾನೆ ಭಜನೆ ನಡೆಯುತ್ತದೆ. ಶನಿವಾರಕ್ಕೆ ಭಿಕ್ಷಾಟಣವಾಗುವದು. ರವಿವಾರಕ್ಕೆ ಉತ್ಸವ ಹೊರಡುವದು.

ಸಾಭಾರ ಸ್ವೀಕಾರ.

ಲೋಕರಹಸ್ಯ—ನವಂಬರ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ—ಶ್ರೀ| ಕೇ. ನಾರಾಯಣರಾವ್, ವೀರರಾಜೇಂದ್ರ ಪೇಟೆ, ಕೊಡಗು. ವಾ. ವ. ರೂ. ೩-೮-೦ ಮಾತ್ರ.

ಸರಸ್ವತೀ—ಸಪ್ಟೆಂಬರ ಸಂಚಿಕೆ. ಸಂಪಾದಕಿ—ಶ್ರೀಮತಿ ಆರ್. ಕಲ್ಯಾಣಮ್ಮ. ಚಾಮರಾಜಪೇಟೆ ಬೆಂಗಳೂರು ಸಿಟಿ, ವಾರ್ಷಿಕ ಚಂದಾ ರೂ ೨-೦-೦

ಕರ್ನಾಟಕ ರಂಗಭೂಮಿ— ದ್ವಿತೀಯ ವರ್ಷದ ದ್ವಿತೀಯ ಸಂಚಿಕೆ ಸಂಪಾದಕರು-ಶ್ರೀ. ಪ. ಕೃ ಭಾರದ್ವಾಜ, ಅನಂದಾಶ್ರಮ, ಬಸವನಗುಡಿ, ಬೆಂಗಳೂರು. ವಾ. ವ. ರೂ. ೩-೮-೦.

ಕಂದನ ಕಥೆ—ಸಂಪಾದಕ— ಶ್ರೀ ದೇವುಡು ನರಸಿಂಹ ಶಾಸ್ತ್ರೀ, ಬಿ. ಎ. ಬಳೇಪೇಟೆ, ಬೆಂಗಳೂರು

ಜಗತ್ಪಾವನ— ಆರ್ಯ ಸೃಷವಂಶೀಯರಾದ ಕುರುಬರ ಮಾಸಪತ್ರಿಕೆ. ಪ್ರಥಮ ಸಂಚಿಕೆ. ಸಂಪಾದಕ-ಶ್ರೀ. ಎಂ. ಎನ್. ಲಿಂಗಪ್ಪ, ಎಡಿಟರ್. ಬೆಂಗಳೂರು ವಾ. ವ. ರೂ. ೬-೦-೦.

The Volunteer— December issue. Edited and published by Dr. N. S. Hardiker at the "Volunteer office" Hubli Annual subscription 3-0-0 only.

ಕುಂಭಾರವಾಡಾ—ಇಲ್ಲಿಂದ ಏಳು ಮೈಲು ದೂರ ಸುಜ್ಜ ಎಂಬ ಗ್ರಾಮವಿದೆ ಅಲ್ಲಿಯ ಕೊಂಕಣ ಮರಾಠಿ ಜನರಿಗೆ ಈ ತನಕ ಉಪಯನವಾಗಿದ್ದಿಲ್ಲ. ಆದರಿಂದ ಕಳೆದ ದುಃಖಾಲಯ ಪಕ್ಷದಲ್ಲಿ ಈ ಗ್ರಾಮದವರಿಗೆಲ್ಲ ಉಪನಯನ ಮಾಡಲಾಯಿತು. ೧೨ ವರುಷದ ಹುಡುಗರಿಂದ ೬೦ ವರುಷದ ಮುದುಕರ ವರೆಗೆ ಎಲ್ಲರಿಗೂ ವ್ರತಬಂಧವೇ. ಸುಜ್ಜ ಶಾಲೆಯ ಶಿಕ್ಷಕರಾದ ರಾ| ನಾಯ್ಕರವರು ಈ ಸಮಾರಂಭದ ಪುರಸ್ಕರ್ತರಾಗಿದ್ದರಾಗಿ ತಿಳಿಯುತ್ತದೆ.

ಇಲ್ಲಿಯ ಮಾರ್ಗದ ಮೇಲೆ ಇಂಜನಿಯರ ಖಾತೆಯವರು ಕೆಲಸ ನಡಿಸುತ್ತಿದ್ದಾರೆ. ಕೂಲಿಕಾರರ ಕೂಲಿಯು ಬಹಳ ಬಾಕಿ ಉಳಿದಿರುವದಾಗಿ ದೂರಿದೆ. ಮ್ಹಾಳು ಗೋವಿಂದ, ನಿಂಗೂ ಮೋನೂ, ಫೊಂಡು ಪಿತ್ತು ಮೊದಲಾದ ಏಳು ಮಂದಿ ಕೂಲಿಕಾರರು ಮಾರ್ಚ-ಎಪ್ರಿಲ ತಿಂಗಳಲ್ಲಿ ಮಾರ್ಗದ ಕೆಲಸ ಮಾಡಿದ್ದರಂತೆ. ೮-೧೦-೨೬ನೇ ತನಕ ಅವರಿಗೆ ಕೂಲಿ ಸಿಗಲಿಲ್ಲ. ಆದರಿಂದ ಅವರು ಸಬಡಿವಿಜನಲ್ ಆಫೀಸರರಿಗೆ ಆ ದಿನ ಅರ್ಜಿ ಮಾಡಿಕೊಂಡಿರುವರು. ಇನ್ನೂ ತನಕ ಏನೂ ಹುಕುಮವಾಗಲಿಲ್ಲ. ಜಿಲ್ಲಾಧಿಪತಿಗಳು ಈ ಕರಿತು ತಕ್ಕ ಜಾಗ್ರತೆ ಕೊಳ್ಳಬೇಕು. ಎಗ್ಝಿಕ್ಯೂಟಿವ್ಹ ಇಂಜನಿಯರರೂ ಈ ಪ್ರಕರಣವನ್ನು ವಿಚಾರಿಸಬೇಕು.

ಸಿದ್ದಾಪುರ— ಶ್ರೀ| ಚಂದ್ರಶೇಖರ ಹರಿಯಪ್ಪನವರು ಬರೆಯುವದೇನಂದರೆ:—

ತಾಲೂಕ ಕೊಂಗ್ರೆಸ ಕಮೀಟಿಯ ವಾರ್ಷಿಕ ಮಹಾ ಸಭೆಯು ಇದೇ ತಾ. ೨೦-೧೨-೧೯೨೬ ನೇ ಗುರುವಾರ ದಿವಸ ಸಾಯಂಕಾಲ ೪ ಘಂಟೆಗೆ ರಾಷ್ಟ್ರೀಯ ಶಾಲೆಯಲ್ಲಿ ಸೇರಿ, ಅಧ್ಯಕ್ಷನ ಹಿಡುವದು, ಮುಂದಿನ ವರ್ಷದ ಕೊಂಗ್ರೆಸ ಕಮಿಟಿಯ ಅಧಿಕಾರಿಗಳನ್ನು ಆರಿಸುವದು, ಖಾದೀ ಪ್ರಸಾರ, ಮೊದಲಾದ ವಿಷಯಗಳ ಚರ್ಚೆ ನಡೆಯುವದು. ಆದರಿಂದ ಎಲ್ಲಾ ಕೊಂಗ್ರೆಸ ಮೆಂಬರರೂ, ಖಾದಿಯೊರ್ಡ ಮೆಂಬರರೂ ತಪ್ಪದೇ ಬರಬೇಕಾಗಿ ವಿನಂತಿ. ಸಭೆಗೆ ಕೋರಂ ಆಗದಿದ್ದಲ್ಲಿ ಮುಂದರಿಸಿದ ಸಭೆಯು ಮಾರನೇ ದಿವಸ ಸಾಯಂಕಾಲ ಕೂಡುವದು.

ಶಿರಶಿ— ಕೊಂಗ್ರೆಸ ಕಮೀಟಿಯ ಪ್ರತಿಯಿಂದ ನವರಾತ್ರಿಯ ಸುಮುಹೂರ್ತದಲ್ಲಿ ಸ್ಥಾಪಿತವಾದ ಖಾದಿ ಅಂಗಡಿಯಲ್ಲಿ ಕಳೆದ ೨ ತಿಂಗಳೊಳಗೆ ಸುಮಾರು ೪೦೦ ರೂಪಾಯಿಯ ಖಾದಿಯ ಮಾರಾಟವಾಗಿದೆ

ನಿಜಾಮ ಹೈದರಾಬಾದದ ಜೀವರಕ್ಷಾ ಜ್ಞಾನಪ್ರಸಾರಕ ಮಂಡಳಿಯವರ ಪರಿಶ್ರಮದಿಂದ ೨-೩ ತಿಂಗಳ

...ಕ, ಭಾಷಣಗಳ ಅವಧಿ. ಅವುಗಳನ್ನು ಕೇಳಲು ...ಹಳ ಜನರು ಕೂಡುತ್ತಿದ್ದರು. ಅದರ ಪರಿಣಾಮದಿಂದ ೪-೫ ಅಸ್ಪೃಶ್ಯ ಬಾಂಧವರು ತಾವು ಇನ್ನು ಮೇಲೆ ಹಿಂಸೆ ಮಾಡುವದಿಲ್ಲೆಂತಲೂ, ತಮ್ಮ ಸದಾಚಾರದ ಮನಸ್ಸನ್ನು ಸಹ ಬಲಿಸಲು ಪ್ರಯತ್ನ ಮಾಡುವೆವೆಂತಲೂ ಜಾಹೀರ ಪ್ರತಿಜ್ಞೆ ಮಾಡಿದರು. ಸದ್ರಿ ಮಂಡಳಿಯವರು ಇಲ್ಲಿ ಜಾತ್ರೆಯ ಕಾಲಕ್ಕೆ ಆರು ಸಲ ಪ್ರಚಾರ ಮಾಡುತ್ತಿರುವ ಸತ್ಯಾಗ್ರಹದ ಕಾರ್ಯದರ್ಶಿಗಳಾದ ಶ್ರೀ ಹೊದ್ದಯವರಿಗೆ ಮಿಸ್ಟರ್ ಬ್ಲ್ಯಾಂಟನ್ ಮೊದಲಾದವುಗಳ ಕಾಣಿಕೆ ... ಸಹಾಯ ಮಾಡುವ ವಚನ ಕೊಟ್ಟಿರುವರು.

ನಡಬಾಳದಲ್ಲಿರುವ ಶ್ರೀ ಸೋಮಣ್ಣ ಮಂಗಸೂಳಿ ... ಯವರ ಅಂಗಡಿಯ ಬೀಗಗಳನ್ನು ಕಿತ್ತು ರಾತ್ರಿಯ ಕಾಲಕ್ಕೆ ಅಜಮಾಸ ೧॥ ಸಾವಿರ ರೂಪಾಯಿಯ ಕಿಮ್ಮತ್ತಿನ ಡಾಗಿನೆಗಳ ಕಳವಾಗಿದೆ. ತನಿಖೆ ನಡೆದಿದೆ. ಪೋಲೀಸ ಪರೀಕ್ಷೆಯ ಕಾಲ!

...ನಗಳ ಉಪದ್ರವವು ಇಲ್ಲಲ್ಲಿ ಪ್ರಾರಂಭವಾಗಿದೆ. ಅದ ...ತವೆಯೇ ಎಷ್ಟೋ ಜನರು ಜ್ವರದಿಂದ ಬಳಲುತ್ತಿರುವರು.

ಲೋಕಲ್ ಬೋರ್ಡಿನ ಕಾಲಕೀರ್ದಿಯಲ್ಲಿ ಪ್ರಾಥಮಿಕ ಶಿಕ್ಷಕರ ಗೋಳು. ಎರಡೆರಡು ತಿಂಗಳ ಪಗಾರು ಬಾಕಿ ಉಳಿಯುತ್ತಿದ್ದು, ಅಕ್ಟೋಬರದ ಪಗಾರು ಡಿಸೆಂಬರ ೯ ನೇ ತಾರೀಖಿಗೆ ಸಿಕ್ಕಿತು ಅಂತೆ!

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಉಪಾಧ್ಯಕ್ಷರಾದ ಶ್ರೀ ದೇವಧರ ಇವರು ಶ್ರೀ ... ದೇವಸ್ಥಾನದಲ್ಲಿ ಸಹಕಾರದ ಮೇಲೆ ಸ್ವಾರಸ್ಯವಾದ ಉಪನ್ಯಾಸ ಮಾಡಿದ್ದರು.

ವೃತ್ತಸಾರ.

— ಬೆಳಗಾಂವ ಜಿಲ್ಲಾ ಬೋರ್ಡಿನ ಅಧ್ಯಕ್ಷರ ಚುನಾವಣೆಯ ಸಂಬಂಧದ ಅಪೀಲಿನ ವಿಚಾರವು ಬೆಳಗಾಂವಿಯ ಡಿಸ್ಟ್ರಿಕ್ಟ ಜಜ್ಜ ಕೋರ್ಟಿನಲ್ಲಿ ಜನವರಿ ೩ ನೇಗೆ ನಡೆಯಲಿದೆ.

— ಹುಬ್ಬಳ್ಳಿಯೊಳಗಿನ ಪೋಲೀಸ ಜಮಾದಾರರ ಮೇಲೆ ದೊಡ್ಡದೊಂದು ಹಲ್ಲೆ ನಡೆದಿದೆ. ಗೂಂಡಾ ಇಬ್ರಾಹಿಂ ಸಾಂಗೋಲಿ ಎಂಬವನ ಮೇಲೆ ಒಂದು ಅಪರಾಧ ಹೊರಿಸಿ ಅವನನ್ನು ಸೆರೆ ಹಿಡಿದಿದ್ದರು. ಪೋಲೀಸ ಜಮಾದಾರರು ಅವನ ತನಿಖೆ ಮಾಡುತ್ತಿದ್ದರು. ಇಂಬೋಳಿಯು ದೊಡ್ಡ ಮಂಡಳಿಯಿಂದ ಜಮಾದಾರರ ಗೃಹಿಣಿಯನ್ನು ... ಅಕ್ಟೋಬರ ೪ ನೇ ತಾರೀಖಿನ ರಾತ್ರಿ ೨ ಘಂಟೆಗೆ ಜಮಾದಾರರು ಒಂದು ಹಿತ್ತಾಳಿಯ ಚರಿಗೆಯನ್ನು, ಕಟ್ಟಿಗೆಯನ್ನೂ ಕಂಡರು. ಇಂಬೋಳಿಗೆ ಸನ್ನಿವೇಶದಿಂದ ಹೋಲಿಸಿದರು. ಬೆಂಕಿಯನ್ನು ಕರಿಮಾಳದಲ್ಲಿಟ್ಟು ಬೆಂಕಿ ಹಚ್ಚಿದರು. ಅವನ್ನು ಕಂಡು ತ್ರಿಜೋಡಿಯ ಮುಂದಿಟ್ಟು ಧೂಪ ಹಾಕಿದರು. ಮತ್ತು ತ್ರಿಜೋಡಿಯ ಮೊಹರುಗಳನ್ನು ಒಡೆಯದೆ ಒಳಗಿದ್ದ ಹಣವನ್ನು ಮಂತ್ರಬಲದಿಂದ ಇಂಬೋಳಿಗೆ ತೆಗೆದುಕೊಡ ಹೇಳಿದರು. ಇನ್ನಿಂತ ಆಗದ ಮಾತೆಂದು ಇಂಬೋಳಿಯು ಹೇಳಲು ಬಾಗಿಲ ಹಾಕಿ ಅವನನ್ನು ಅರಿಯಬೇಕೆಂದು ಹೇಳಿ, ಎಡಗೈಯನ್ನು ಹಿಡಿದು ಚೂರಿಯ ಮೇಲೆ ಇಟ್ಟು ಕಲ್ಲಿನಿಂದ ಹೊಡೆದರು. ಸ್ವಲ್ಪ ದೊಡ್ಡ ಗಾಯವಾಗಿ ರಕ್ತ ಸುರಿಯಿತು. ವೇದನೆಯಿಂದ ಇಂಬೋಳಿಯು ಬೊಬ್ಬೆ ಹಾಕಲು ಜನರು ಓಡಿಬಂದರು! ಎಂಥೆಂಥ ವ್ಯಾಪಾರ?

— ಮಾರ್ಗಶೀರ್ಷ ಶುದ್ಧ ಏಕಾದಶಿಗೆ ಹಿಂದೂ ಸಮಾಜದ ಅನುಜ್ಞೆಯಂತೆ ಗೀತಾಜಯಂತಿಯ ಉತ್ಸವವನ್ನು ಆಚರಿಸಬೇಕಾಗಿ ಪುಣೆಯ ಗೀತಾ ಧರ್ಮ ಮಂಡಳದ ಕಾರ್ಯದರ್ಶಿಗಳು ಸಮಸ್ತ ಸಮಾಜಗಳಿಗೆ ವಿನಂತಿಸುತ್ತಾರೆ. ಪವಿತ್ರವಾದ ಕುರುಕ್ಷೇತ್ರದಲ್ಲಿ ಭಾರತ ಯುದ್ಧವು ನಡೆದಾಗ ಶ್ರೀ ಕೃಷ್ಣ ಪರಮಾತ್ಮನು ಭಕ್ತನಾದ ಅರ್ಜುನನಿಗೆ ಬೋಧಿಸಿದ ಗೀತಾದಿನವಿದು. ಆ ದಿನ ಗೀತೆಯನ್ನು ಎಲ್ಲರೂ ಓದಬೇಕು. ದೇವಸ್ಥಾನಗಳಲ್ಲಿಯೂ, ಸಾರ್ವಜನಿಕ ಸ್ಥಳಗಳಲ್ಲಿಯೂ ಗೀತಾಮಾಹಾತ್ಮ್ಯವನ್ನು ಸನಾತನಿಗಳೆಲ್ಲರೂ ತಿಳಿಸಿ ಹೇಳಬೇಕು. ಇದರಂತೆ ಧಾರವಾಡ, ಬೆಳಗಾವಿ, ಅಥಣಿ, ಹುಂಗಲಿ, ಮುಂತಾದ ಕಡೆಗಳಲ್ಲಿ ಗೀತಾ ಜಯಂತಿಯು ಆಚರಿಸಲ್ಪಡುತ್ತದೆ.

— ಚೀನದಲ್ಲಿ ಬರದಿಯಿಂದ ಭಯಂಕರ ಸ್ಥಿತಿ ಒದಗಿದೆ. ಕಂಸಿಯು ಸಿಯಾಂಗ ಪ್ರಾಂತದಲ್ಲಿ ಅನೇಕ ಜನರು ಸತ್ತುಬಿದ್ದಿರುವರು. ಉತ್ತರಕ್ರಿಯೆ ಮಾಡುವವರ ಗತಿಯಿಲ್ಲ. ಜನರಿಗೆ ಅನ್ನವಿಲ್ಲ. ದನ, ಕುದುರೆ, ನಾಯಿಗಳನ್ನು ತಿಂದು ಜನರು ನಿರ್ವಾಹ ಮಾಡುತ್ತಿರುವರಂತೆ. ಪೇಟೆಯಲ್ಲಿ ಮಾನವನ ಮಾಂಸವು ವಿಕ್ರಯವಾಗಹತ್ತಿದೆಯಂತೆ! ಎಂಥ ಸ್ಥಿತಿಯಿದು!!

— ಮೈಸೂರು ಸಂಸ್ಥಾನದೊಳಗಿನ ಕಾಲೇಜ ಹಾಗೂ ಹೈಸ್ಕೂಲ ವಿದ್ಯಾರ್ಥಿಗಳು ಇದೇ ಬರುವ ಡಿಸೆಂಬರ ತಿಂಗಳ ರಜೆಯಲ್ಲಿ ಗ್ರಾಮಸಂಚಾರ ಮಾಡಿ ಸಾಲದ ಪ್ರಚಾರ ಮಾಡುವವರಿದ್ದಾರೆ.

— ಗೋಧ್ರಾದಲ್ಲಿ ಗುಜರಾಥ ಪ್ರಾಂತದ ಮದ್ಯಪಾನ ನಿಷೇಧದ ಪರಿಷತ್ತು ನೆರೆಯಿತು. ಸರಕಾರವು ದೀಪಾವಳಿ, ಸಂಕ್ರಾಂತಿ, ಜಾತ್ರೆ, ಹಬ್ಬ, ಇಲೆಕ್ಷನು ದಿನಗಳಲ್ಲಿ ಸರಾಯಿ ಅಂಗಡಿಗಳನ್ನು ಮುಚ್ಚಬೇಕೆಂದು ಠರಾವು ಪಾಸಾಯಿತು. ಮದ್ಯಪಾನ ನಿಷೇಧಕ್ಕಾಗಿ ಅಲ್ಪ ಕಟ್ಟು ಪ್ರಚಾರಕರ ನೇಮಿಸಬೇಕಾಗಿಯೂ ಠರಾವಾಗಿದೆ.

— ಮುಂಬಯಿಯ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಅಧಿವೇಶನವು ಮುಂಬಯಿಯ, ನಗರಭವನದಲ್ಲಿ ಫೆಬ್ರುವರಿ ೧೮ ನೇ ತಾರೀಖಿಗೆ ಜರಗುವದಿದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಭೆಯು ಗದಗಿನಲ್ಲಿ ಕಳೆದ ತಾರೀಖ ೩ ನೇಗೆ ಸೇರಿ ಕಾರ್ಯಕಾರಿ ಮಂಡಳ, ಅಖಿಲ ಭಾರತ ಕಾಂಗ್ರೆಸ ಕಮೀಟಿಗೆ ಪ್ರತಿನಿಧಿ, ಸೇವಾದಲದ ಕರ್ನಾಟಕ ಶಾಖೆಯ ಕಾರ್ಯಕಾರಿ ಮಂಡಳದ ನೇಮಣೂಕಿ, ಮುಂದಿನ ವರ್ಷದ ಜಮಾ ಖರ್ಚಿನ ಪತ್ರಿಕೆ, ದಕ್ಷಿಣ ಆಫ್ರಿಕೆಯ ದಿನದ ಆಚರಣೆ, ಕರ್ನಾಟಕ ಕಾಂಗ್ರೆಸಿಗರಿಗೆ ಬರುವ ಕೋರ್ಟುಗಳಿಗೆ ಬಯ್ಯದಂತೆ ಕೈಕೊಳ್ಳಬೇಕಾದ ಜಾಗ್ರತೆ ಮುಂತಾದ ಠರಾವುಗಳು ಪಾಸಾದವು.

— ದಿಲ್ಲಿಯ ... ಎಂಬವರ ಹತ್ತರ ಒಂದು ಗಂಡು ಆಕಳಿದೆ. ಅದಕ್ಕೆ ೫ ವರ್ಷ ವಯಸ್ಸು. ಇದು ಹಾಲು ಹಿಂಡುತ್ತದೆ. ಸೃಷ್ಟಿ ಘಟನೆ!!

— ವಿಜಾಪುರದಲ್ಲಿ ಬಂಗಾಲ ಫಲವೃಕ್ಷ ಸರಿಗೆ ಕಾಲುವೆ ಕಟ್ಟಿ ನೀರಿನ ವ್ಯವಸ್ಥೆ ಮಾಡಿದರೆ ಅಲ್ಲಿ ಕೆಲ ಸ್ಥಿತಿ ಬದಲಾಗಬಲ್ಲುದಾಗಿ ಬಲ್ಲವರು ಹೇಳಿದರೂ, ಸರಕಾರವು ಅದಕ್ಕೆ ಕಿವಿಗೊಡುತ್ತಿಲ್ಲ. ಅಲ್ಲಿಯ ಭೂಮಿಯಷ್ಟು ಉತ್ತಮ ಸ್ಥಿತಿಯ ಭೂಮಿಯು ಅನ್ಯತ್ರವಿಲ್ಲವಂತೆ. ಆದರೂ ಹೀಗಿರುತ್ತದೆ.

— ಬೆಳಗಾವೀ ಪ್ರಕರಣದಲ್ಲಿ ಸಾಕ್ಷಿ ಕೊಡುವಾಗ ಸುಪರಿಂಟೆಂಡೆಂಟ ಇಂಜನಿಯರರ ಮೇಲೆ ವಂಚನೆಯ ಆರೋಪ ಮಾಡಿದರೆಂದು ಮುಂಬಯಿಯ ಹೈಕೋರ್ಟ ವಕೀಲರಾದ, ರಾಷ್ಟ್ರೀಯ ಸಭೆಯ ಧುರೀಣರಾದ ಮಿ। ನರಿಮಾನರವರ ಮೇಲೆ ಮಾನನಷ್ಟದ ಫೌಜದಾರಿ ಮೊಕದ್ದಮೆಯನ್ನು ಮುಂಬಯಿಯ ಚೀಫ್ ಪ್ರೆಸಿಡೆನ್ಸಿಯ ಮೆಜಿಸ್ಟ್ರೇಟ ಕೋರ್ಟಿನಲ್ಲಿ ದಾಖಲ ಮಾಡಿರುವರು. ಅದೇ ದಿನವೇ ಮಿ। ನರಿಮಾನರವರು ಬೆಳಗಾವೀ ಖಾತೆಯ ಡೈರೆಕ್ಟರರಾದ ಮಿ। ಹೆವರ್ಡರ ಮೇಲೆ ಮಾನನಷ್ಟದ ಫೌಜದಾರಿ ಮೊಕದ್ದಮೆಯನ್ನು ಅದೇ ಕೋರ್ಟಿನಲ್ಲಿ ದಾಖಲಮಾಡಿರುವರು. ಮಿ। ಹೆವರ್ಡರು ಸಾಕ್ಷಿ ಕೊಡುವಾಗ ತಮ್ಮ ಶೀಲ ಧಂದೆಗೆ ಅನುಚಿತವಾದ ಉದ್ಗಾರಗಳನ್ನು ಹೇಳಿ ತಮ್ಮ ಮಾನನಷ್ಟ ಮಾಡಿದರೆಂದು ಮಿ। ನರಿಮಾನರವರ ಅಂಬೋಣ. ಬೆಳಗಾವೀ ಪ್ರಕರಣದ ಹೊಲಸು ಈಗ ಹೊರಬೀಳಲನುಕೂಲ.

— ಬಳ್ಳಾರಿಯಲ್ಲಿ ಮಹಿಳಾ ಪ್ರೇಮ ಸಮಾಜವು ಸ್ಥಾಪನ ಹೊಂದಿದೆ. ೧೫ ಮಂದಿ ಹೆಂಗಸರು ಸಭಾಸದರಾಗಿರುವರು. ಪ್ರತಿ ಶುಕ್ರವಾರಕ್ಕೆ ಉಪನ್ಯಾಸ, ಭಜನೆಗಳು ನಡೆಯುತ್ತಿವೆ. ಬಡಬಗ್ಗರಿಗೆ ಅನ್ನದಾನ, ವಸ್ತ್ರದಾನಗಳನ್ನು ಸಮಾಜದವರು ಮಾಡುತ್ತಾರೆ. ಬಡವರಿಗೆ ಔಷಧಿಗಳನ್ನು ಕೊಡುತ್ತಾರೆ. ಗೃಹಿಣಿಯರಿಗೆ ಇಂಥ ಧರ್ಮಬುದ್ಧಿಯು ಪ್ರಾಪ್ತವಾಗಲಿ.

— ಬೆಳಗಾವಿಯಲ್ಲಿ ಮಳೆಯಿಲ್ಲದೆ ಬೆಳೆ ಒಣಗ ಹತ್ತಿದೆ.

— ನಮ್ಮ ಜಿಲ್ಲಾ ಬೋರ್ಡ ಕರ್ನಾಟಕದ ಏಕೀಕರಣವನ್ನು ಪುರಸ್ಕರಿಸಿ ಕಳೆದ ಜಿಲ್ಲಾ ಬೋರ್ಡಿನಲ್ಲಿ ಠರಾವ ಪಾಸಮಾಡಿರುವದು.

— ಕೊಲ್ಲಾಪುರ ಸಂಸ್ಥಾನದಲ್ಲಿ ಪಳವಣಿ ಎಂಬುದೊಂದು ಗ್ರಾಮವಿದೆ. ಅಲ್ಲಿ ಒಬ್ಬ ೨೫ ವರ್ಷ ಪ್ರಾಯದವನಿರುವನು. ಅವನ ಹುಟ್ಟು ಮೊದಲು ಎದೆಯ ಕೂದಲುಗಳು ಪಕ್ಷಿಗಳಂತೆ ಬೆಳೆಯುತ್ತವೆ; ಕಳೆಯುತ್ತವೆ. ಬಣ್ಣ-ಬಣ್ಣ ಪಕ್ಷಗಳಂತೆ ಈ ಬದಲಾವಣೆಯು ಒದಗುತ್ತದೆಂದು ತಿಳಿಯುತ್ತಿಲ್ಲ. ಹೀಗೆ ಆಗಹತ್ತಿ ಬಹಳ ವರುಷಗಳಾದವಂತೆ. ಸೃಷ್ಟಿ ಚಮತ್ಕಾರ. ಹುತ್ತೇನು?

— ಹುಬ್ಬಳ್ಳಿಯಲ್ಲಿ ವೀರಶೈವರ ಮಹಾಸಭೆಯು ಇದೇ ಬರುವ ಜನವರಿ ೧-೨-೩ ನೇಗೆ ಸೇರುವದಿದೆ. ರಾ। ಸಾ। ಪಿ. ಆರ್. ಚಿಕ್ಕೋಡಿಯವರು ಸಭಾಪತಿಗಳಾಗುವರು. ಸಭೆಯು ಶ್ರೀ ಮೂರುಸಾವಿರ ಮಠದಲ್ಲಿ ಸೇರುವದು. ವೀರಶೈವರ ಉನ್ನತಿ, ಕರ್ನಾಟಕ ಏಕೀಕರಣ, ಕರ್ನಾಟಕ ವಿಶ್ವವಿದ್ಯಾಲಯ, ವೀರಶೈವ ಇತಿಹಾಸ ರಚನೆ, ಸ್ವದೇಶೀ ಸಾಮಗ್ರಿಗಳ ಉತ್ತೇಜನ, ಗೋರಕ್ಷಣ ಮುಂತಾದವುಗಳ ಚರ್ಚೆಯಾಗುವದು.

— ಕೃಷ್ಣಾ ಜಿಲ್ಲೆಯ ನಂದಿ ಗ್ರಾಮ ತಾಲೂಕಿನ ಮುಕ್ತಲ್ಲ ಗ್ರಾಮದ ಸರಸ್ವತೀ ಲಕ್ಷ್ಮಮ್ಮನವರು ನೆಲ್ಲೂರಿನ ಶಾಂತಿನಿಕೇತನದಲ್ಲಿರುವರು. ಅಲ್ಲಿ ಅವಳು ಅನ್ನ-ನೀರುಗಳಿಲ್ಲದೆ ಕಾಲಹರಣಮಾಡುತ್ತಿರುವಳು. ಮಲಮೂತ್ರವಿಸರ್ಜನೆಗಳು ನಿಂತುಹೋಗಿವೆ. ಏಕಾಂತವಾಸದಲ್ಲಿ ಇರುವದೇ ಅವಳಿಗೆ ಇಷ್ಟ. ಅವಳು ಬಾಲವಿಧವೆ. ಈ ಜನ್ಮದಲ್ಲಿಯೇ ಪರಮಾತ್ಮನ ಸಾಕ್ಷಾತ್ಕಾರ ಪಡೆಯಬೇಕೆಂದು ಅವಳ ಪ್ರಯತ್ನ. ಬದುಕಿರಹಗೊತ್ತಿಲ್ಲ. ಜನರು ದರ್ಶನಕಾಂಕ್ಷಿಗಳಾಗಿ ಹೋಗುತ್ತಿರುವರು. ಇತ್ಯಾದಿ ಸುದ್ದಿಯು ವಿಜಾಪುರದ 'ಕರ್ನಾಟಕ ವೈಭವ' ಪತ್ರಿಕೆಯಲ್ಲಿ ಪ್ರಕಟವಾಗಿದೆ.

— ಅಸ್ಪೃಶ್ಯ ವಿದ್ಯಾರ್ಥಿಗಳ ಕಡೆಯಿಂದ ಪರೀಕ್ಷೆಯ ಫೀಯನ್ನು ಕೊಳ್ಳಬಾರದೆಂದು ಮೈಸೂರ ವಿಶ್ವವಿದ್ಯಾಲಯವು ನಿರ್ಧರಿಸಿರುವರು.

ನೋಟೀಸು.

ಕಾರವಾರ ಫ॥ ಕ್ಲಾ॥ ಸಬಜಜ್ಜ ಕೋರ್ಟ ಮೂಲ ನಂಬರ ೧೩೪ ಸಂನ ೧೯೩೨ ನೇ ದಾವಾದಲ್ಲಿ ಕೋರ್ಟಿನಿಂದಾ ನೇಮಕವಾದ ಶಿರಸಿಯ ವೆಂಕಟರಮಣ ನರಸಿಂಹ ಶಾಸ್ತ್ರಿ ಹೊಸಮನೆ ಇವರು ಶಿದ್ದೇಶ್ವರ ಗಣಿಯು ಎಲ್ಲ ಆಸಾಮಿದಾರರಿಗೆ ಇವರ ಮುಖಾಂತರ ತಿಳಿಸುವದೇನಂದರೆ: — ರಿಸೀವ್ಹರನಾತೆಯಿಂದಾ ನಾನು ಸದ್ರಿ ಗಣಿ ಸ್ಥಳದಲ್ಲಿ ಹಾಕಿಸಿದ ರೈತರ ಭತ್ತದ ಗೋಣಿಗಳು ವಕ್ಕಿ-ಭತ್ತ ತಯಾರಿಸುವ ಕೆಲಸ ಈಗ ನಡೆಯುತ್ತಿದ್ದು, ಇನ್ನು ಕೆಲವು ಕಾಲದಲ್ಲಿ ಎಲ್ಲಾ ಆಸಾಮಿದಾರರು ಗಣಿಯ ಖಣದಲ್ಲಿ ಹಾಕಿದ ಉಳಿದ ಅಕ್ಕಿ ವಗೈರಾ ಅವರವರಿಗೆ ರೀತಿ ಪ್ರಕಾರ ಸಲ್ಲತಕ್ಕ ಉತ್ಪನ್ನ ತಕೊಂಡು ನಮಗೆ ಪಾವತಿ ಕೊಡತಕ್ಕದ್ದು.

ಶಿದ್ದೇಶ್ವರ, ತಾ. ೧೨-೧೨-೩೬.

ವೆಂಕಟ್ರಮಣ ನರಸಿಂಹ ಶಾಸ್ತ್ರಿ
ಹೊಸಮನೆ, ರಿಸೀವ್ಹರ.

ಮಹಾತ್ಮರ ಆತ್ಮಚರಿತ್ರ.

(೨೯) (ಬೇಗನೇ) ಮರಳಿ ಬನ್ನಿ.

ಮದ್ರಾಸದಿಂದ ಕಲಕತ್ತೆಗೆ ಹೋದೆನು. ಅಲ್ಲಿ ನಾನು ಬಹಳ ಕಷ್ಟದಲ್ಲಿಯೇ ಬಿದ್ದೆನು. ಅಲ್ಲಿ ನನಗೆ ಯಾರದೂ ಪರಿಚಯವಿದ್ದಿಲ್ಲ. 'ಆದರಿಂದ ಗ್ರೇಟ ಈಸ್ಟರ್ನ ಹೊಟೆಲಿ'ನಲ್ಲಿ ಒಂದು ಕೋಣೆಯನ್ನು ಹಿಡಿದು ಉಳಕೊಂಡೆನು. ಇಲ್ಲಿ "ಡೇಲಿ ಟೆಲಿಗ್ರಾಫ" ಪತ್ರಿಕೆಯ ಪ್ರತಿನಿಧಿಗಳಾದ ಮಿ॥ ಎಲರ್ಥರ್ಪನವರ ಪರಿಚಯ ಮಾಡಿಕೊಂಡೆ. ಅವರು ಬಂಗಾಲ ಕ್ಲಬ್ಬಿನಲ್ಲಿ ಉಳಕೊಳ್ಳುತ್ತಿದ್ದರು. ಅಲ್ಲಿ ನನಗೆ ಬರಹೇಳಿದರು. ಆ ಕ್ಲಬ್ಬಿನ ದಿವಾನಖಾನೆಯಲ್ಲಿ ಭಾರತೀಯರಿಗೆ ಪ್ರವೇಶವಿದ್ದಿಲ್ಲ. ಇದು ಮಿ॥ ಎಲರ್ಥರ್ಪನವರಿಗೆ ಗೊತ್ತಿದ್ದಿಲ್ಲ. ಈ ಪ್ರತಿಬಂಧವು ತಿಳಿದ ಕೂಡಲೆ ಅವರು ನನ್ನನ್ನು ತಮ್ಮ ಕೋಣೆಗೆ ಒಯ್ದರು. ಸ್ಥಳಿಕ ಇಂಗ್ರಜರ ಪೂರ್ವಗ್ರಹದ ಕುರಿತು ವ್ಯಸನಪ್ರದರ್ಶನ ಮಾಡಿ ದಿವಾನಖಾನೆಯಲ್ಲಿ ನನ್ನನ್ನು ಒಯ್ಯಲಿಕ್ಕಾಗದ ಬಗ್ಗೆ ನನ್ನ ಕ್ಷಮೆ ಬೇಡಿದರು.

ಬಂಗಾಲದ ಅನಭಿಷಿಕ್ತ ಅರಸರಾದ ಸುರೇಂದ್ರನಾಥ ಬಾನರ್ಜಿಯವರ ದರ್ಶನವನ್ನಂತೂ ನಾನು ಮಾಡಿಕೊಳ್ಳಬೇಕಾಗಿತ್ತು. ನಾನು ಅವರಲ್ಲಿಗೆ ಹೋದೆ. ಅವರ ಸುತ್ತಲೂ ಗೆಳೆಯರಿದ್ದರು. ಅವರು ನನಗಂದದ್ದೇನಂದರೆ — 'ನಿಮ್ಮ ಕಾರ್ಯದಲ್ಲಿ ಜನರಿಗೆ ಪ್ರೀತಿ ಇಲ್ಲ. ಇಲ್ಲಿಯೇ ನಮಗೆ ಹೇರಳ ಕಷ್ಟಗಳು ಒದಗಿವೆ. ಆದರೂ ನೀವು ನಿಮ್ಮ ಕಾರ್ಯಕ್ಕಾಗಿ ಕೈಲಾದಷ್ಟು ಮಾಡಲೇ ಬೇಕು. ಮಹಾರಾಜರ ಸಹಾನುಭೂತಿಯನ್ನು ನೀವು ಪಡೆಯಬೇಕಾಗುವದು. "ಬ್ರಿಟಿಶ ಇಂಡಿಯನ್ ಎಸೋಸಿಯೇಶನ್ನಿ'ನ ಪ್ರತಿನಿಧಿಗಳ ಭೆಟ್ಟಿಯನ್ನು ನೀವು ಕೊಳ್ಳತಕ್ಕದ್ದು. ರಾಜಾ ಸರ್ ಪ್ಯಾರೀಮೋಹನ ಮುಕರ್ಜಿ ಹಾಗು ಮಹಾರಾಜಾ ಟಾಗೋರರವರಿಗೂ ನೀವು ಭೆಟ್ಟಿಯಾಗಿರಿ. ಇಬ್ಬರೂ ಔದಾರ್ಯವುಳ್ಳವರು. ಸಾರ್ವಜನಿಕ ಸೇವೆಯನ್ನು ಹಬ್ಬಮಟ್ಟಿಗೆ ಕೈಕೊಳ್ಳುತ್ತಾರೆ.

ಇಬ್ಬರಿಗೂ ನಾನು ಭೆಟ್ಟಿಯಾದೆ. ಆದರೆ ಫಲಪ್ರಾಪ್ತಿಯೇನೂ ಆಗಲಿಲ್ಲ. ನಾನು ಅವರ ಕಡೆಗೆ ಹೋದದ್ದೇ ಅವರಿಗೆ ಸೇರಲಿಲ್ಲ. ಕಲಕತ್ತೆಯಲ್ಲಿ ಜಾಹೀರ ಸಭೆ ನೇರೆಸುವದು ಸುಲಭದ ಮಾತಲ್ಲೆಂದು ಅವರು ನುಡಿದರು. ಸುರೇಂದ್ರನಾಥ ಬಾನರ್ಜಿಯವರೇ ಏನಾದರೂ ಮಾಡಬಹುದೆಂದು ಅವರು ಪರಸ್ಪರ ಹೇಳಿಬಿಟ್ಟರು.

ಇಲ್ಲಿಯೂ ನನ್ನ ಕೆಲಸವು ದಿನಾ ಗಡಚಾಗುತ್ತ ನಡೆಯಿತು. 'ಅಮೃತಬಝಾರ' ಪತ್ರಿಕೆಯ ಕಚೇರಿಗೆ ಹೋಗಿ ಸಂಪಾದಕರಿಗೆ ಭೆಟ್ಟಿಯಾದೆ. ಅಲ್ಲಿಯವರು ನಾನೊಬ್ಬ ಜೋಗಿಯೆಂದು ತಿಳಕೊಂಡರು. 'ಬಂಗವಾಸಿ' ಪತ್ರಿಕೆಯವರು ನನ್ನನ್ನು ಮತ್ತೂ ಹೀನನೆಂದೆಣಿಸಿದರು. ಒಂದು ತಾಸಿನ ವರೆಗೆ ನಾನು ಸಂಪಾದಕರ ನಿರೀಕ್ಷಣೆ ಮಾಡಿದೆನು. ಅವರಿಗೆ ಕಾಣಲಿಕ್ಕೆ ಅನೇಕರು ಬಂದಿದ್ದರು. ಎಲ್ಲರ ಕೆಲಸವಾದಾಗ್ಯೂ, ಅವರು ನನ್ನ ಕಡೆ ಬರಿಗಣ್ಣಿನಿಂದ ಸಹ ನೋಡಲೊಪ್ಪಲಿಲ್ಲ. ಕಾದು ಕಾದು ನಾನು ಬೇಸತ್ತೆ. ಕೊನೆಗೆ ಈ ವಿಷಯವನ್ನು ಹೇಳತೊಡಗಲು ಅವರು ಬೇಸರಿಸಿ ನುಡಿದದ್ದೇನಂದರೆ.—"ನಮಗೆ ಬಹಳ ಕೆಲಸವಿದೆ, ನಿಮಗೆ ಕೆಲಸ ಇಲ್ಲವೋ? ನಿಮ್ಮಂತೆ ನಮಗೆ ಕಾಣಬರುವವರ ಸಂಖ್ಯೆಯೇ ಹೆಚ್ಚಾಗಿ ಹೋಗಿದೆ. ಒಮ್ಮೆ ನೀವು ಇಲ್ಲಿಂದ ಹೋಗಿರಿ. ನಿಮ್ಮ ಕಥೆಯನ್ನು ನಾವು ಕೇಳಲಾರೆ." ನನಗೆ ಸ್ವಲ್ಪ ಸಿಟ್ಟು ಬಂತು. ಕೆಲ ಹೊತ್ತು ವಿಚಾರ ಮಾಡಿದ ಬಳಿಕ, ಸಂಪಾದಕರ ಸ್ಥಿತಿಯ ಅರಿವು ನನಗುಂಟಾಯಿತು. "ಬಂಗವಾಸಿ"ಯ ಕೀರ್ತಿಯನ್ನು ನಾನು ಕೇಳಿದ್ದೆ. ದಿನಾ ಸಂಪಾದಕರ ಭೆಟ್ಟಿಯನ್ನು ತಂಡುಗಟ್ಟಿ ಜನರು ಕೊಳ್ಳುತ್ತಿದ್ದರು. ಆ ಜನರೆಲ್ಲರೂ ಸಂಪಾದಕರ ಪರಿಚಯದವರು. ಆ ಪತ್ರಿಕೆಗೆ ವಿಷಯಗಳು ಬೇಕಷ್ಟು ಇದ್ದವು. ಆ ಕಾಲಕ್ಕೆ ದಕ್ಷಿಣ ಆಫ್ರಿಕೆಯ ಹೆಸರು ಹೆಚ್ಚಾಗಿ ಗೊತ್ತಿದ್ದಿಲ್ಲ.

ಕಷ್ಟಗಳ ಕಾಠಿಣ್ಯವನ್ನು ಅನುಭವಿಸುವವರೇ ಬಲ್ಲರು. ಸಂಪಾದಕರ ಕಚೇರಿಯಲ್ಲಿ ಅಂಥವರೇ ಹೋಗುವ ಮೂಲಕ ಆ ಕುರಿತು ಸಂಪಾದಕರಿಗೇನು ವಿಶೇಷವೆನಿಸುವದಿಲ್ಲ. ಎಲ್ಲವರ ಸಮಾಚಾರವನ್ನು ಅವರು ಕೊಳ್ಳುವ ಬಗೆ ಹೇಗೆ? ಮೇಲಾಗಿ ಜನರ ಕಲ್ಪನೆಯೇ ಬೇರೆ. ಸಂಪಾದಕರೆಂದರೆ, ದೊಡ್ಡ ಸಾಮರ್ಥ್ಯವಂತ ಪುರುಷರೆಂದು ಅವರು ತಿಳಕೊಳ್ಳುತ್ತಾರೆ. ಆದರೆ, ಸಂಪಾದಕರು ಕಚೇರಿಯ ಪ್ರಾಕಾರದ ಸ್ವಾಮಿಗಳೆಂದು ಸಂಪಾದಕರೆಲ್ಲರೂ ಅರಿತ ಮಾತು. ಇರಲಿ. ಇದರಿಂದ ನಾನೇನೂ ಎದೆಗುಂದಲಿಲ್ಲ. ಇತರ ಪತ್ರಿಕೆಗಳ ಸಂಪಾದಕರನ್ನು ನಾನು ಕಂಡೆನು. ಎಂಗ್ಲೋ ಇಂಡಿಯನ್ ಪತ್ರಿಕೆಗಳ ಸಂಪಾದಕರಿಗೂ ನಾನು ಭೆಟ್ಟಿಯಾದೆ. ಸ್ಟೇಟ್ಸಮನ್ ಹಾಗು ಇಂಗ್ಲಿಷಮನ್ ಪತ್ರಿಕೆಗಳಿಗೆ ಈ ಪ್ರಶ್ನೆಯ ಮಹತ್ವ ತಿಳಿಯಿತು. ನಾನು ಅವರಿಗೆ ಸವಿಸ್ತರ ಹಕೀಕತನ್ನು ತಿಳಿಸಿದೆನು. ಅವರು ಅವನ್ನೆಲ್ಲ ಪ್ರಕಟಿಸಿದರು.

ಇಂಗ್ಲಿಷಮನ್ ಪತ್ರಿಕೆಯ ಸಂಪಾದಕರಾದ ಮಿ॥ ಸೌಂಡರ್ಸರವರು ನನಗೆ ಬಂಧುಭಾವದಿಂದ ನಡಿಸಿಕೊಂಡರು. ತಮ್ಮ ಕಚೇರಿಯೂ, ಪತ್ರಿಕೆಯೂ ನನ್ನ ಸ್ವಾಧೀನಕ್ಕೆ ಬಿಟ್ಟಂತಾಯಿತು. ಅವರು ಬರೆದ ಲೇಖಗಳಲ್ಲಿ ಅವಶ್ಯವಿದ್ದ ತಿದ್ದುಪಾಟುಗಳನ್ನು ಮಾಡಲು ನನಗೊಂದು ಸ್ವಾತಂತ್ರ್ಯವನ್ನು ಸಹ ಅವರು ಕೊಡುತ್ತಿದ್ದರು. ಇದರಿಂದ ನಮ್ಮೊಳಗೆ ಜಬರ ಗೆಳೆತನ ಬೆಳೆಯಿತು. ಬೇಕಷ್ಟು ಸಹಾಯ ಮಾಡುವದಾಗಿ ನನಗೆ ಅವರು ಅಭಿವಚನವನ್ನಿತ್ತು, ಅದರಂತೆ ನಡಕೊಂಡರು. ನನಗೆ ಅವರು ಸ್ವಹಸ್ತದಿಂದ ಬೇರೆ ಬೇರೆ ತರಹ ಪತ್ರಗಳನ್ನು ಬರೆಯುತ್ತಿದ್ದರು.

ಹೀಗೆ ಅನಪೇಕ್ಷಿತವಾಗಿ ಒದಗಿ ಬಂದ ಅನೇಕ ಗೆಳೆಯರನ್ನು ನಾನು ಹೇಳಬಲ್ಲೆ. ಸೌಂಡರ್ಸರವರಿಗೆ ನನ್ನ ಮೇಲೆ ಪ್ರೀತಿ ಯಾಕೆ? ನಾನು ಅತಿಶಯೋಕ್ತಿ ಮಾಡುವವನಲ್ಲ, ಮೇಲಾಗಿ ಸತ್ಯಪ್ರಿಯನು ಎಂದು ಅವರು ನಿಶ್ಚಯಪೂರ್ವಕವಾಗಿ ತಿಳಕೊಂಡಿದ್ದರು. ನನಗೆ ಸಹಾಯಿಸುವ ಮುಂಚೆ ಸೌಂಡರ್ಸರವರು ಸೂಕ್ಷ್ಮವಾಗಿ ನನ್ನ ಪರೀಕ್ಷೆ ಮಾಡಿದರು. ದಕ್ಷಿಣ ಆಫ್ರಿಕೆಯೊಳಗಿನ ಯುರೋಪಿಯನ್ನರ ಸ್ಥಿತಿಯನ್ನು ಕುರಿತು ನಾನು ಪರಿಶ್ರಮಪೂರ್ವಕವಾಗಿಯೂ, ನಿಷ್ಪಕ್ಷಪಾತಬುದ್ಧಿಯಿಂದಲೂ ವಿಚಾರಿಸುವೆನೆಂದು ಅವರಿಗೆ ಮನೋನಿಶ್ಚಯವಾಗಿತ್ತು. ಎದುರುಪಕ್ಷಕ್ಕೆ ನ್ಯಾಯದಾನ ಮಾಡುವದರಿಂದಲೇ ನಮಗೆ ನ್ಯಾಯವು ಶೀಘ್ರವೇ ಸಿಗುತ್ತದೆಂದು ನನ್ನ ಮನವರಿಕೆಯಾಗಿರುವದು.

ಸೌಂಡರ್ಸರವರು ಮಾಡಿದ ಅನಪೇಕ್ಷಿತವಾದ ಸಹಾಯದಿಂದ ನನಗೆ ಹುರುಪು ಉಂಟಾಯಿತು. ಕಲಕತ್ತೆಯಲ್ಲಿಂದು ಸಾರ್ವಜನಿಕ ಸಭೆಯನ್ನು ನೇರಿಸಬಹುದೆಂದು ನನ್ನ ವಿಚಾರವಾಯಿತು. ಅಷ್ಟರಲ್ಲಿ ಡರ್ಬಾನದಿಂದ ನನಗೆ ಈ ಕೆಳಗಿನಂತೆ ತಂತಿ ಬಂತು.

"ಜನವರಿಯಲ್ಲಿ ಪಾರ್ಲಮೆಂಟಿನ ಅಧಿವೇಶನವಿದೆ. ಶೀಘ್ರವೇ ಮರಳಿ ಬನ್ನಿ."

ಆದರಿಂದ ವರ್ತಮಾನಪತ್ರಗಳಲ್ಲಿ ಥಟ್ಟನೇ ಕಲಕತ್ತೆಯಿಂದ ಹೊರಟು ಹೋಗುವ ಕಾರಣವನ್ನು ಪ್ರಕಟಿಸಿ, ಮುಂಬಯಿಗೆ ಹೊರಟೆನು. ಹೊರಡುವ ಮುಂಚೆ ದಾದಾ ಅಬ್ದುಲ್ಲಾ ಕಂಪನಿಯ ಮುಂಬಯಿಯ ಏಜಂಟರಿಗೆ ತಂತಿ ಮಾಡಿ, ದಕ್ಷಿಣ ಆಫ್ರಿಕೆಗೆ ಕೂಡಲೇ ಹೋಗುವ ಬೋಟಿಯ ಟಿಕೀಟನ್ನು ಕೊಳ್ಳಲು ತಿಳಿಸಿದೆನು. ಆ ಕಾಲಕ್ಕೆ ದಾದಾ ಅಬ್ದುಲ್ಲಾರವರು 'ಕುರಲಂಡ' ಬೋಟಿಯನ್ನು ಕೊಂಡು ಕೊಂಡಿದ್ದರು. ಇದೇ ಬೋಟಿಯಿಂದ ನಾನೂ, ನನ್ನ ಕುಟುಂಬದವರೂ ದಕ್ಷಿಣ ಆಫ್ರಿಕೆಗೆ ಹೋಗಬೇಕಾಗಿ ಅವರು ಆಗ್ರಹ ಮಾಡಿದರು. ನಾನು ಉಪಕಾರ ಮನ್ನಿಸಿ, ದಾದಾ ಅಬ್ದುಲ್ಲಾರವರ ಹೇಳಿಕೆಯನ್ನು ಅಂಗೀಕರಿಸಿ, ಎರಡನೇ ಬಾರಿ ಡಿಸೆಂಬರ ತಿಂಗಳ ಪ್ರಾರಂಭದಲ್ಲಿ ದಕ್ಷಿಣ ಆಫ್ರಿಕೆಗೆ ಹೊರಟೆನು. ಈ ಬಾರಿ ನನ್ನ ಜೊತೆಗೆ ನನ್ನ ಹೆಂಡತಿ, ಇಬ್ಬರು ಹುಡುಗರು ಹಾಗೂ ವಿಧವೆಯಾದ ನನ್ನ ತಂಗಿಯ ಹುಡುಗ ಇಷ್ಟು ಜನರೊಡನೆ ಹೊರಟಿದ್ದೆನು. ಅದೇ ಸಮಯ 'ನಾದೇರಿ' ಎಂಬ ಇನ್ನೊಂದು ಹಡಗವೂ ಡರ್ಬಾನಕ್ಕೆ ಹೊರಟಿತು. ಈ ಹಡಗದ ಏಜಂಟರೂ ದಾದಾ ಅಬ್ದುಲ್ಲಾ ಕಂಪನಿಯವರೇ. ಇವೆರಡೂ ಹಡಗಗಳಿಂದ ೮೦೦-೧೦೦೦ ಪ್ರಯಾಣಿಕರು ಹೊರಟಿರಬೇಕು. ಇವರಲ್ಲಿ ಸರಿ ಅರ್ಧ ಜನರು ಟ್ರಾನ್ಸ್ವಾಲಿಗೇ ಹೊರಟಿದ್ದರು.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ.

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯುಕ್ತವು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಲದಲ್ಲಿ ಅನುಭವಕ್ಕೆ ಬರುವದು. ಜನನೇಂದ್ರಿಯದೊಳಗಿನ ಶಿಥಿಲತೆಯು ಹೋಗಿ ದೃಢತಾ ಪುರೇಸರತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಿವಾರ ಹಾಗೂ ಕಾಮಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮತ್ತು ಇತರ ರೋಗಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ತಾಪ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ವಿಷಯಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ವಿಷಯ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುತ್ತೇವೆ. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಹತ್ತು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲಖರ್ಚ ಬೇರೆ ಬೀಳುವದು. ವ್ಹಿ.ಪಿ. ಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೮—೦ ಡಜನ್ನಿಗೆ ೧೩—೯—೦

[illegible]— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ. ಬೆಳಗಾಂವ.

ತ್ವರೆಮಾಡಿರಿ! ತ್ವರೆ ಮಾಡಿ!!

ಜಾಹಿರಾತದಾರರು ತ್ವರೆಮಾಡಿರಿ

ಬಗ್ಗೋಣ ರಾಮಾ ಶಿವ್ಯಣ್ಣ ಪಂಡಿತರಿಂದ

ದೃಗ್ಗಣಿತ ಪ್ರಕಾರ ಗುಣಿಸಿ ಪರಿಶೋಧಿಸಲ್ಪಟ್ಟ

ಪ್ರಭವ ಸಂವತ್ಸರದ ಪಂಚಾಂಗವು

ಅಚ್ಚಿನಲ್ಲಿದೆ!

ಪಂಚಾಂಗದಲ್ಲಿ ಜಾಹಿರಾತು ಕೊಡುವವರಿಗೆ ಏರ್ಪಾಟು ಮಾಡಿದೆ!

ಈ ಪಂಚಾಂಗವು ಕಾನಡಾ ಜಿಲ್ಲೆಯೊಳಗಿನ ಹಳ್ಳಿಹಳ್ಳಿಗಳಲ್ಲಿಯೂ, ಸಾಗರ-ಶಿವಮೊಗ್ಗಾ ಮೊದಲಾದ ಮೈಸೂರು ಪ್ರಾಂತದಲ್ಲಿಯೂ ಸುಪ್ರಸಿದ್ಧವಿದೆ. ಜಾಹೀರಾತು ಕೊಡಲಿಚ್ಛಿಸುವವರು ಬರುವ ಡಿಸೆಂಬರ ತಾರೀಖು ೩೦ ರೊಳಗೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿ ದರವಾರ ತಿಳಕೊಳ್ಳಬಹುದು.

ಪತ್ತೆ — ಮ್ಯಾನೇಜರ, "ಸ್ವಾತಂತ್ರ್ಯ ಕನಸಾ ಪ್ರೆಸ್," ಕುಮಟಾ. (ಉ. ಕಾನಡಾ.)

झंडूचें

द्राक्षासव-

एक रत्तल
किंमत १॥ रुपये,

रामबाण औषधें

साधि थांबविणारें
भूक वाढविणारें
शोच्यास साफ करणारें
झोंप आणणारें
शक्ति देणारें
तेजस्वीपणा आणणारें

पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,

मुंबई नं. १४

एजंट— मेसर्स पंडित आणी कंपनी, तीर्थहळ्ळी.

सिर्सि एजंट-एम. एल्. धाकप्पा आणि ब्रदर

BATLIBOI'S

Accountancy Training Institute

Recognised by The G. D. A. Board

Offers best training in Accounting, Banking, Company Management and Secretarial Work and Theory and Practice of Commerce.

Best staff. Individual attention fee moderate, and payable by instalments

Send for Prospectus at Yusuf Buildings, Churchgate street Fort, Bombay.

You are invited to make thorough enquiry before joining

TUITION BY POST IS OUR SPECIALITY.

ಆಯುರ್ವೇದೀಯ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ (ಮಲಬಾರ ಕೃತಿ)

ಅನುಭವಿಕ ಔಷಧಗಳು!

೧ ಮದನಕಾಮೇಶ್ವರಿ ಲೇಹ- ಧಾತು ಪುಷ್ಟಿಕ, ವೀರ್ಯ—ಶಕ್ತಿವರ್ಧಕ, ಕಾಮೋತ್ತೇಜಕ.

೨. ಮದನಕಾಮೇಶ್ವರ- ಗುಣ ಮೇಲಿನಂತೆ. ತೊ. ೧ಕ್ಕೆ ೨ ರೂ. ೩ ಕ್ಕೆ ೫ ರೂ. [ತೊ. ೧ಕ್ಕೆ ೨॥ ರೂ.

೩. ಉಪದಂಶ- (ಗರ್ಮಿ) ರೋಗಕ್ಕೆ ಮಾತ್ರೆ. ಇಂದ್ರಿಯದ ಹುಣ್ಣು ಪರಮಾ ಯಾವದೇ ತರದ ಕಠಿಣ ರೋಗವಿದ್ದರೂ ಮರಣೋನ್ಮುಖ ಸ್ಥಿತಿಯಲ್ಲಿದ್ದರೂ ೭ ದಿವಸದಲ್ಲಿ ಗುಣಹೊಂದುವದು

೪. ಗರ್ಮಿ ರೋಗಕ್ಕೆ ಮುಲಮು. ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿನಕ್ಕೆ ಗುಣ.

೫. ಯೋಗರಾಜ ಗುಗ್ಗುಳ- ಅರ್ಧಾಂಗವಾತ ಕೋಷ್ಠವಾತ, ಸಂಧಿಗತ ಇ. ೮೦ ತರದ ವಾತರೋಗಕ್ಕೆ ಸಿದ್ಧೌಷಧಿ. ।।।, ೧।, ೨. ರೂ.

೬. ಕೆಮ್ಮಿನ ಗುಳಿಗೆ-ಕ್ಷಯ, ದಮ್ಮು, ಕೆಮ್ಮು, ಇ. ಮೇಲೆ ರಾಮಬಾಣ. ಪ.೧೦ರಕ್ಕೆ ೧ ರೂ. ೧॥ ರೂ.

೭. ವಾತ-ಪಿತ್ತ-ಕಫನಾಶಕ ಜಂಬೂಬಿನ ಗುಳಿಗೆ- ೨೫ ರ ತು. ರು. ರು. ೧೦೦ ಕ್ಕೆ ೧॥ ರೂ.

೮. ಸಂಜೀವನಿ- ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ ಚಾತುರ್ಥಿಕ, ಸನ್ನಿಪಾತ, ಇ. ಜ್ವರಗಳ ಮೇಲೆ ೨೫ ರ ತು. ೧ ರೂ. ೧೦೦ ರ ತು. ೩ ರೂ.

೯. ಚಂದ್ರಪ್ರಭಾ ಮಾತ್ರೆ - ೨೦ ತರದ ಮೇಹ, ಮೂತ್ರದಾಹ, ಅಶ್ಮರಿ, ಧಾತುಕ್ಷಯ, ಸ್ವಪ್ನದೋಷ. ಇ. ತೊ. ೨ ರೂ.

೧೦. ದಂತಮಂಜನ ಹಲ್ಲು ನೋವು, ಹುಳ, ಕೀವು, ಅಲುಗಾಡುವಿಕೆ ಈ ರೋಗ ಗುಣವಾಗುವವು ಪ. ೩ ಆಣೆ, ೧೨ ಕ್ಕೆ ೨। ರೂ.

೧೧. ಜಂತುವಿನ ಔಷಧ- ಹೊಟ್ಟೆಯ ಹುಳಗಳ ಮೇಲೆ ರಾಮಬಾಣ ಪುಡಿ ೧ಕ್ಕೆ ೧॥ ಆ. ೨೫ ಕ್ಕೆ ೧॥ ರೂ. ೧೦೦ಕ್ಕೆ ೫॥ ರೂ.

೧೨. ಪಿಚ್ಚು ಮುಲಮು.- ತೊ. ೪ ರ ೧೨ ಕ್ಕೆ ೨॥ ರೂ. ಸೂರಶೇಖರ ಮಾತ್ರೆ. ಪಿತ್ತಕ್ಕೆ ತೊ. ೧॥ ರೂ. ,೨॥. ೫ ರೂ.

೧೩. ವಾತಸಂಹಾರಿ ತೈಲ - ನಾರಾಯಣ ತೈಲ, ಅರ್ಧಾಂಗವಾತಾದಿ ಅನೇಕ ವಾತ ರೋಗಕ್ಕೆ ಸಿದ್ಧ ತೈಲಗಳು. ಬಾ. ೧॥ ರೂ. ೨॥ ರೂ.

೧೪ ಬಾಲಸಂಜೀವನಿ ಗುಟಿಕಾ - ಬಾಲಕರ ಕೆಮ್ಮು, ಹುಳು ಉಗುವಿಕೆ ಇ. ತು. ೨. ರೂ.

೧೫. ಪ್ರಸೂತಿಜೀವನಲೇಹ - ಗರ್ಭವತಿಯಾಗುವ ಸ್ತ್ರೀಯರಿಗೆ ಸಿದ್ಧೌಷಧಿಯು. ತೊ. ೪ ರೂ. ೫.

೩.ಪೋ.ಖರ್ಚು ಬೇರೆ. ಅನುಭವ ಪತ್ರ ಔಷಧದ ಸಂಗಡ. (ಆಯುರ್ವೇದೌಷಧಿ ಗುಣರತ್ನಮಾಲಾ ಪುಸ್ತಕ ಉಚಿತ) ಇವಲ್ಲದೆ ಅನೇಕ ತರದ ರೋಗಗಳ ಮೇಲೆ ಪಾಕ, ಲೇಹ, ಚೂರ್ಣ, ತೈಲ, ಮಾತ್ರೆಗಳ ಬಗ್ಗೆ ಸ್ಟಾಂಪ ಇಟ್ಟು ಪತ್ರದ್ವಾರಾ ಯಾ ಪ್ರತ್ಯಕ್ಷ ತಿಳಕೊಳ್ಳಬಹುದು

ಪತ್ತೆ — ಮ್ಯಾನೇಜರ, ಆಯುರ್ವೇದ ಚಿಕಿತ್ಸಾ ಮಂದಿರ, ಪ್ರೋ. ಚೆಂಡಿಯೆ, ತಾ. ಕಾರವಾರ.

ಮುಂಬಯಿ ಏಜಂಟ. — R. C. KAMAT, *Teashop, Store Lane, Fort, Bombay.*

ಯಾವದೇ ಆಕಾರದ ನಂಬರಿನ ನಕ್ಷೆಯ ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭;



ಬರೇ ಒಂದು ತಿಂಗಳ ಬಗ್ಗೆ. ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನು ಅರ್ಧ ಬೆಲೆಗೆ ಮಾರುತ್ತೇವೆ. ಆಶ್ಚರ್ಯವು ಬೇಡ!! ಮೋಸವ ಯಂತ್ರರಚನೆ !! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ ನಂಬರಿನ ಗಡಿಯಾರವನ್ನು ಉತ್ಕೃಷ್ಟ ರೀತಿಯ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ;

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B' 608 P T Madras.**

ಅತ್ಯಲ್ಪವಿದೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

"ಜಾಪ" ಲೀವರ ರಿಜಿಸ್ಟರ್ಡ ಪೋಕೆಟ್ ವಾಚು ೧೮ ಕೆರೆಟ್ ರೋಲ್ಡ ಗೋಲ್ಡಿನದು.. ಮುಂಬಯಿಲ್ಲಿವು ಮೇಲೆ ೨ ವರ್ಷದ ಗ್ಯಾರಂಟಿ ಇರುವವೆಂದು ಗಡಿಯಾರದವರು ಅಪ್ಪ ಕೊಡುತ್ತಾರೆ. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಿಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ ಇದೊಂದು ಅಪೂರ್ವ ಅವಕಾಶ. ಕೆಲವೇ ಗಡಿಯಾರಗಳಿವೆ ಬೇಗ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ಜಾಪ" ಲೀವರ ರಿಜಿಸ್ಟರ್ಡ ೧೮ ಕೆರೆಟ್ ರೋಲ್ಡ ಗೋಲ್ಡಿನ ಪೋಕೆಟ್ ವಾಚಗಡಿಯಾರಗಳ ಕಿಮ್ಮತ್ತು ಬರೇ ರೂಪಾಯಿ ೫.

CAPTAIN WATCH CO., P B ೩೮೮, MADRAS.

ಸಬ್ ಅಸಿಸ್ಟೆಂಟ ಸರ್ಜನ್

ವ್ಹಾ. ಎಮ್. ವೈದ್ಯ

ಡೆಂಟಿಸ್ಟ ಮತ್ತು ಅಕ್ಯೂಲಿಸ್ಟ,

ಗವಳೀಗಲ್ಲಿ, ಧಾರವಾಡ.

ಡಾಕ್ಟರ ಕೂಪರ, ಜಿ. ಟಿ. ಎಸ್. ಮುಂಬಯಿ

ಇವರ ಮೊದಲಿನ ಅಸಿಸ್ಟೆಂಟ

ಸ್ಪೆಷಲ್ ಡೆಂಟಲ್ ಸರ್ಜರಿ ...

ಮಿಡ್ವಾಯ್ಫರಿ ... ಕೆಲಸ.

ಹುಳ ಹೊಡೆದ ಹಲ್ಲುಗಳನ್ನು ತೆಗೆಯುತ್ತೇನೆ. ಕೃತ್ರಿಮ ಹಲ್ಲುಗಳನ್ನು ಯೋಗ್ಯವಾಗಿ ಕೂಡಿಸುತ್ತೇನೆ. ಬೆಳ್ಳಿ ಅಥವಾ ಭಂಗಾರದ ಸಿಮೆಂಟದಿಂದ ಹಲ್ಲುಗಳನ್ನು ತುಂಬಿಸುತ್ತೇನೆ. ಹಳೇ ಹಲ್ಲುಗಳನ್ನು ದುರುಸ್ತ ಮಾಡುತ್ತೇನೆ. ಗೋಲ್ಡ, ಕ್ರೌನ ಮತ್ತು ಬ್ರಿಜ್ಜ ವರ್ಕ ... ಹಲ್ಲುಗಳನ್ನು ಸ್ವಚ್ಛವಾಗಿ ಮಾಡುವದರಲ್ಲಿ ... ಇದಲ್ಲದೆ, ... ಸಂಪೂರ್ಣವಾಗಿ ... ನಮ್ಮ ದಂತಮಂಜನವನ್ನು ಉಪಯೋಗಿಸಿರಿ

ಬೆಲೆ ಡಬ್ಬಿಗೆ ೪ ಆಣೆ.

ಕನ್ನಡಕ ಚಾಳೀಸ

ಚಾಳೀಸು ... ಶೀಶೆಗಳು, ... ಕನ್ನಡಕ, ಫ್ರೇಮ್ಸ, ... ಇವುಗಳ ... ಗೋಲ್ಡ ... ನಮ್ಮಲ್ಲಿ ಸಿಗುತ್ತವೆ ಮತ್ತು ... ದುರುಸ್ತ ಮಾಡುತ್ತೇವೆ. ಹಾಗೂ ಕೃತ್ರಿಮ ಕಣ್ಣುಗಳನ್ನು ಸಹ ಕೂಡಿಸುತ್ತೇವೆ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಟೀ. ... ಅವರ

ಸುಗಂಧಿ ನಸ್ಯದ ಪುಡಿ

ಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ... ಗಳನ್ನು ಉಪಯೋಗಿಸಿ, ... ಆರೋಗ್ಯ ... ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ... ಕಣ್ಣುಗಳ ... ವ್ಯಾಧಿಗಳು, ... ಮುಂತಾದ ವ್ಯಾಧಿಗಳು ... ವಾಗುವವಲ್ಲದೆ, ... ವ್ಯಾಧಿಗಳನ್ನೂ ... ಶಕ್ತಿಯನ್ನೂ ... ಮಾಡುತ್ತದೆ. ಮೂರು ಪಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು— ಇದನ್ನು ಅನೇಕ ಜನರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪ್ರಕಟ ...

... ದಶನ್ ೧ ಕ್ಕೆ ರೂ. ೨—೮—೦. ವ್ಹಿ. ಪಿ. ೦—೮—೦ ... ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ— ಗುರುಬಸವ ... ಕಂಪನಿ ಲಿಮಿಟೆಡ್ ಪ್ರೋ ... ೫೧೦, ಮಾರ್ಕೆಟ್‌ನ ...

ಪುಣೆ ಪ್ರದರ್ಶನದಲ್ಲಿ ಬಹುಮಾನ ಪದಕುಗಳನ್ನು ಪಡೆದ

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳು.



ಸಣ್ಣದ ಹಂಗಾಮಕ್ಕ ಒಕ್ಕಲಿಗರಿಗೆ ಉಪಯೋಗವಾಗುವಂತೆ ತಯಾರಿವೆ.

ಮಾಹಿತಿ ಬಗ್ಗೆ ಪತ್ರ ಬರೆಯಿರಿ.

ಈ ವರ್ಷ ಈ ನೇಗಿಲುಗಳಲ್ಲಿ ಬೆಲೆಯಲ್ಲಿ ಕಡಿಮೆ ಮಾಡಿದ್ದೇವೆ ಅಲ್ಲದೆ ಗಾಣಗಳಲ್ಲಿ ಸುಧಾರಣೆಯನ್ನು ತಿದ್ದುಪಡಿಯನ್ನೂ ಮಾಡಿದ್ದೇವೆ ಮುಂದಾಗಿ ಆರ್ಡರ್ ಕೊಟ್ಟಲ್ಲಿ ವೇಳೆಗೆ ಸರಿಯಾಗಿ ಮಾಲು ಸಿಗುವದು.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರಾ

ಪ್ರಯಾಣಿಕರಿಗೆ

ವಿಶೇಷ ಅನುಕೂಲ.

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ

ಹಾಗೂ

... ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ

... ಕುಮಟಾ, ಹೊನ್ನಾವರ, ... ಶಿರಸಿ, ... ಕಾರವಾರ

ಸೂಚನೆ — ಟಿಕೇಟು ಮುಂದಾಗಿ ಪಡಕೊಳ್ಳಲಿಕ್ಕೆ ಬರುವವರು ... ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ಪಾಂಡುರಂಗ ... ,

ಮೋಟರ ಏಜಂಟ,

ಕುಮಟಾ, (ಉತ್ತರ ಕನ್ನಡ

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ ಜರಿ ಕಣ ಜರಿ ಸೀರೆ, ಶಾಲು, ... ರುದ್ರಾಕ್ಷಿ, ಕಸ್ತೂರಿ ಲಿಂಗಗಳೂ, ... ಮೊದಲಾದವು ಕೂಡ ಸಿಗುತ್ತವೆ ... ಕೊಳ್ಳುವವರಿಗೆ ... ಕಳಿಸಲಾಗುವದು

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಅಮೃತಾಂಜನ.

... ಉಪಯೋಗದಿಂದ, ... ನೋವು ... ವ್ಯಾಧಿಗಳ ಮೇಲೆ, ... ಇದರ ಉಪಯುಕ್ತತೆಯು ... ಸಿದ್ಧವಾಗುತದ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು.. ... ಎಲ್ಲ ಪ್ರಕಾರದ ವೇದನೆಗಳು, ... ಸಂಧಿವಾತ ... ವ್ಯಾಧಿಗಳ ಮೇಲೆ ಇದು ... ಪ್ರತ್ಯಕ್ಷ ಅನುಭವದಿಂದ ಖಾತ್ರಿ ಮಾಡಿಕೊಳ್ಳಬಹುದು. ... ೧೦ ಆಣೆ ...

ಅಮೃತಾಂಜನ ಡಿಪೊ, ಫೋರ್ಟ ಮುಂಬಯಿ.

Reg No. B. 1370. Monday December 20th 1926.

ವರ್ಷ ೧೧.

ಕಾನಡಾವೃತ್ತ.

THE KANARA NEWS.

ಸಂಚಿಕೆ ೯.

ವರ್ಷದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಭಾಷಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0 ಆ ಮೇಲೆ ಪ್ರತಿಸಾಲಿಗೆ 0-2-0.

ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖ ೨೦ ಮಾಹೆ ಡಿಸೆಂಬರ ಸನ್ ೧೯೨೬ ನೇ ಇಸವಿ)

ಉಚಿತ) ನನ್ನ ಶಾಸ್ತ್ರೀಯವಾದ (ಉಚಿತ

ಶಾರೀರಿಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುತ್ತಿರುವವರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ವಿಧಗಳನ್ನು ತಿಳಿಯುತ್ತಾರೆ. ಟಪಾಲು ಹಾಸಲು ೨ ಆಣೆ, ಸ್ಟ್ಯಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಚನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD: B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಇನ್ನೂ ಗೊತ್ತೇ ಇಲ್ಲವೋ?

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿಯು,

ಬೆಳಗಾಂವ	ಕಾರವಾರ
ದಿಂದ	ದಿಂದ
ಕಾರವಾರಕ್ಕೆ	ಬೆಳಗಾಂವಕ್ಕೆ

ಕಳೆದ ಸಪ್ಟಂಬರ ೧ ನೇ ತಾರೀಖಿನಿಂದ ನಿಯಮಿತ ಡೇಲಿ ಮೋಟರ ಸರ್ವ್ಹಿಸ್ ಶುರುಮಾಡಿದ್ದು!

ಬೆಳಗಾಂವಕ್ಕೆ ಮುಂಬಯಿ ಮೇಲ ಬಂದ ನಂತರ ಬೆಳಿಗ್ಗಿನ ೧೦॥ ಘಂಟೆಗೆ ಬೆಳಗಾಂವ ಬಿಟ್ಟು, ಹಳಿಯಾಳ—ಯಲ್ಲಾಪುರ—ಅಂಕೋಲಾ ಮಾರ್ಗವಾಗಿ ಅದೇ ದಿವಸ ಸಾಯಂಕಾಲಕ್ಕೆ ಕಾರವಾರಕ್ಕೆ ಮುಟ್ಟುವಂತೆಯೂ, ಕಾರವಾರದಿಂದ ಬೆಳಿಗ್ಗಿನ ೭ ಘಂಟೆಗೆ ಹೊರಟು ಮುಂಬಯಿ ಮೇಲ ಟ್ರೇನಿಗೆ ಸರಿಯಾಗಿ ಬೆಳಗಾಂವಕ್ಕೆ ಮುಟ್ಟುವಂತೆಯೂ ಫಕ್ತ ಪ್ರಯಾಣಿಕರ ಸೋಯಿಗಾಗಿ ಡೇಲಿ ಮೋಟಾರ ಸರ್ವ್ಹಿಸ ಇಟ್ಟಿದ್ದಿರುತ್ತದೆ. ಟಿಕೇಟಿನ ದರಗಳು ವ ವಿಶೇಷ ಮಾಹಿತಿ ನಮ್ಮ ಅಲ್ಲಲ್ಲಿಯ ಏಜಂಟರ ಕಡೆಗೆ; ಅಥವಾ ನಮ್ಮ ಹೆಡ್ ಆಫೀಸಿನಲ್ಲಿ.

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ,
ಬೆಳಗಾಂವ.

"ಸುವಾಸಿನಿ"

ಸಚಿತ್ರ ಮಾಸಪತ್ರಿಕೆ

ಪ್ರತಿ ತಿಂಗಳ ಅಂತ್ಯದಲ್ಲಿ ಪ್ರಕಟವಾಗುವದು

ವಾರ್ಷಿಕ ಚಂದಾ ರೂ ೩-೪-೦

ಆರು ತಿಂಗಳುಗಳಿಗೆ ರೂ ೧-೧೨-೦

ಮನೋರಂಜಕವಾದ ಕಥೆಗಳಿಂದ, ನೀತಿಬೋಧಕಗಳಾದ ಉಪನ್ಯಾಸಗಳಿಂದ, ಹಾಸ್ಯಗರ್ಭಿತವಾದ ಚುಟುಕುಗಳಿಂದ ವಿರಾಮ ಕಾಲವನ್ನು ವಿನೋದದಿಂದ ಕಳೆಯಬೇಕಾದರೆ, "ಸುವಾಸಿನಿ"ಯೇ ತಕ್ಕ ಪತ್ರಿಕೆ! ೬ನೆಯ ಸಂಪುಟವು ಇದೇ ಜನವರಿಯಿಂದ ಪ್ರಾರಂಭ. ಚಂದಾದಾರರಾಗಲು ಇದೇ ತಕ್ಕ ಸಮಯ.

ವಿಳಾಸ- **"ಸುವಾಸಿನಿ" ಆಫೀಸ್,**

ಮಂಗಳೂರು (ದ. ಕ.)



ಕಬ್ಬು ಬೆಳೆಸುವ ರೈತರೇ, ಸರ್ಕಾರದ ಹೊಸ ಮದ್ರಾಸ್ ಸೂರ್ಯ ಬಾಣ ಅಲೆಕಣೆಗಳನ್ನು ಕೊಳ್ಳಿರಿ. ಅಗಲವಾಗಿ ಅಚ್ಚುಕಟ್ಟಾಗಿ ತಯಾರಿಸಿದ ಕಣಗಳಿಂದ ಗಟ್ಟಿಯಾಗಿ ಸಿಕ್ಕುವವು. ಸಣ್ಣ ಪೆಟ್ಟಿಗೆಗಳು ಸಿಗುವದು. ಎತ್ತು ಇಳಿಸಲು ಉರುಳು ದೊರೆಗೆ ಸಾಗಿಸಲು ಸುಲಭ.

ನಮ್ಮಲ್ಲಿ ಇಂಜನ್ ಶಕ್ತಿಯಿಂದ ನಡೆಯುವ ಯಂತ್ರಗಳ ಮೇಲೆ ಎಲ್ಲಾ ನಮೂನೆಯ ಕಣ ಮರಿಸಿ ಕೆಲಸಗಳು ನಡೆಯುತ್ತ. ಹೆಚ್ಚಿನ ವಿಷಯಕ್ಕೆ ಚಿತ್ರಗಳ ಜಾಹಿರಾತು ತರಿಸಿ ನೋಡಿರಿ

ಪ್ರಭಾಕರ ಅಲೆಕಣೆ ಕಂಪನಿ,

ವರದಾನದೀ ರಸ್ತೆ, ಸಾಗರ (ಜಿಲ್ಲಾ ಶಿವಮೊಗ್ಗ)

ರಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:-

ತಬಲೆ, ಡಕ್ಕೆ ವಗೈರೆ.



೧ ಕೈಪೆಟ್ಟಿಗೆಸಿಂಗಲ ರೂ. ೨೫, ೩೦, ೪೦, ೫೫ ೬೦

೨ ,, ಡಬಲ ರೂ ४೦, ४५, ೫೦, ೬೦, ೧೦೦

೩ ಕಾಲುಪೆಟ್ಟಿಗೆ,, ರೂ ೬೫, ೭೫, ೧೦೦, ೧೫೦, ೧೪೦

೪ ತಬಲೆ (ತಾಮ್ರದಡಕ್ಕೆ ಸಹಿತ) ರೂ ೧೩, ೧೮, ೩೦

ಹಾರ್ಮೋನಿಯಮ್ ಗ್ಯಾಡ ಕಿಂ ರೂ. ೧॥,

ತಬಲೆ ಗ್ಯಾಡ ಕಿಂ. ೧೨ ಆಣೆ.

ಮಾಹಿತಿ ಬಗ್ಗೆ ಕ್ಯಾಟಲಾಗು ಪುಕ್ಕಟೆ ದೊರಕುವದ.

ಗೋಪಾಳ ಸಖಾರಾಮ ಮುಕ್ತ ಕಂಪನಿ

ನಂ. ೩೮೮, ವಿಠ್ಠಲವಾಡಿ ಎದುರಿಗೆ

ಕಾಳಬಾದೇವಿ ರೋಡ,

ಮುಂಬಯಿ.

೧೦೦೦ ರೂಪಾಯಿ ಇನಾಮು.

ಮಿರಜಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರಪಾಕ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗುವಿಕೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗುವಿಕೆ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರುವಿಕೆ, ಎದೆನೋವು ಹಾರ್ಟ (ಡಿಸೀಜ) ಜೀರ್ಣಜ್ವರ ಮೂಲವ್ಯಾಧಿ, ಬಿಳಿಪದರು ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟ ವಿಕಾರಗಳು ಮೊಂಡುತನ ಅಶಕ್ತತೆ ಉರಿಮೂತ್ರ ಎಲ್ಲ ಪಿತ್ತವಿಕಾರಗಳು, ನಿದ್ರೆಯು ಬಾರದೆ ಇರುವಿಕೆ ಮುಂತಾದವು ವೃದ್ಧಪುರುಷರ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ. ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧವ ರೋಗನಾಶಕ ಖಾತ್ರಿಯು ಮತ್ತು ಜಿದ್ದಿನ ಪಾಕವನ್ನು ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕವನ್ನು ಬಹು ಪ್ರಯಾಸದಿಂದ ಅಮೌಲ್ಯ ಅಪರೂಪ ೫೨ ವನಸ್ಪತಿಗಳಿಂದ ತಯಾರಿಸಿದ್ದೇವೆ. ಇದರಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೇನಸು ಹಾಕಿಲ್ಲೆಂದು ಸಿದ್ಧಮಾಡಿ ಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೬ ತೊಲಿಯ ೧ ವಡಿ ರಾತ್ರಿ ಭೋಜನಾ ನಂತರ ೨ ತೊಲೆಯ ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸಕ್ಕರೆ ಹಾಕಿದ ೨೦ ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೨೧ ದಿನಸ ಸಾಕಾಗುವಷ್ಟು ಈ ಪಾಕದ ೪೮ ತೊಲೆ ಡಬ್ಬಿಯು ಬರುವ ಮಾಸದ ತನಕ ಕಡಿಮೆ ದರದಿಂದ ೫। ರೂ. ಗೆ ಸಿಗುವದು. ೩ ಡಬ್ಬಿಗೆ ೧೪॥ ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ಪಷ್ಟ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು. ದಿನಸುಗಳ ವಿವರವನ್ನು ಪ್ರೈಸ್ ಲಿಸ್ಟದಲ್ಲಿ ನೋಡಿರಿ.

ಪತ್ತೆ — ಮಾಲಕ ವೈದ್ಯ ವ್ಹಿ. ಎಸ್ ಕಾಪಸೆ, ಮು. ಪೋ. ಮಿರಜ

ಅಲ್ಪ ಪಟ್ಟಕ್ಕಾಗಿ ದನ್ಯದ ಲಾಭ ಕಳಕೊಳ್ಳಬೇಡಿರಿ] **ಶ್ರೀ ಶಿವಯೋಗಿಯೇ ರಕ್ಷಿಸು.** [ಥಕ್ಕಾಸಿ ದುಃಖಿಗಳಾಗಿ ಪಶ್ಚಾತ್ತಾಪಪಡಬೇಡಿರಿ

☞ ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳ ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯೊಳಗಿಂದ ಮುಕ್ತರಾಗಿರಿ.

ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಭಕ್ಷಿಸು, ಪದಕಗಳನ್ನು ದೊರಕಿಸಿ ಸುಪ್ರಸಿದ್ಧಿಯನ್ನು ಹೊಂದಿದ

ಬಾಲಗ್ರಹ ದೋಷ ನಿವಾರಕವೆಂಬ ಮಂತ್ರ ಯಂತ್ರದ ತಾಯಿತ್.

"ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ, ಮುಟ್ಟಾಗುವ ಸಮಯದೊಳ ಕೈಕಾಲು ಸೆಳೆಯುವಿಕೆ, ದುಸ್ವಪ್ನಗಳು ಬೀಳುವಿಕೆ, ಹೊಟ್ಟೆಶೂಲೆ, ಬಿಳುಪು-ಕೆಂಪು ಹೋಗಿ ಗರ್ಭಪತನವಾಗುವಿಕೆ, ವಾಂತಿ, ಸರ್ಪಶಾಪ, ಮಾರ್ಜಾಲಶಾಪ, ಪಿಶಾಚಬಾಧೆಯಿಂದ ನರಳುವಿಕೆ, ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳಾದಲ್ಲದೆ ಸಣ್ಣ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ) ಮುಟ್ಟುದೋಷ, ಕಾಮಿಣಿ, ಗ್ರಹಪೀಡೆ, ದೃಷ್ಟಿದೋಷ, ಮುಟಕಿಬ್ಯಾನಿ, ನಿಶೇಷ ಅಳೋಣ, ಭಯದಿಂದ ಜ್ವರಪೀಡೆ, ಕ್ಷಯ ಹೊಂದುವಿಕೆ, ಮೊದಲಾದವುಗಳಿಂದ ಕಾಡುತಿರುವದ," ಗರ್ಭರಕ್ಷಾಕರ ವಿಧಿಯಲ್ಲಿ, ಸೂರ್ಯ ರಕ್ಷಾಕರ ವಿಧಿಯಲ್ಲಿ, ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಮಹಾನ್ ಸಾಧು ಸತ್ಪುರುಷ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ. ಇದನ್ನು ತರಿಸಿ ಧರಿಸಿದರೆ ಹೆಂಗುಮಕ್ಕಳಿಗಾಗುವ ಸಂತಾನಭಂಗವೂ, ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಇವೆಲ್ಲವೂ ಪರಿಹಾರವಾಗುತ್ತದೆ. ಈ ತಾಯಿತ ಧರಿಸಿಕೊಂಡು ಗುಣವಿಲ್ಲೆಂದವರಿಗೆ ೧೦೦ ರೂಪಾಯಿ ಭಕ್ಷಿಸು ಕೊಡುತ್ತೇವೆ ಒಂದು ಸಲ ತರಿಸಿ ಅನುಭವಕ್ಕೆ ತಕ್ಕೊಳ್ಳಿರಿ. ಕ್ರಯ ೧ಕ್ಕೆ ರೂ; ೨-೮-೦. ಪೋಸ್ಟ ಖರ್ಚು ಬೇರೆ.

ವಿಳಾಸ—ಸಿದ್ಧಾಂತಿ ಬಿ ಸಿ ಪಂಚಗಟ್ಟಿ ಪೋ. ಮು ಅಥಣಿ, ಜಿಲ್ಲಾ ಬೆಳಗಾಂವ.

ರಾಷ್ಟ್ರೀಯ ಸಭೆಯ ತಯಾರಿ.

ರಾಷ್ಟ್ರೀಯ ಸಭೆಯು ಸಭೆ ಸೇರಲು ಇನ್ನು ಹಿಂದೇ ನಿಂತವು ಉಳಿಯಿತು. ಸಭೆಯ ತಯಾರಿಯು ಭರದಿಂದ ನಡೆದಿದೆ. ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಗೌಹತಿಯ ಅಧಿವೇಶನವೆಂದು ಹೆಸರಿದ್ದಾಗ್ಯೂ ಗೌಹತಿಯಲ್ಲಿ ರಾಷ್ಟ್ರೀಯ ಸಭಾಸ್ಥಾನವಿರುವದಿಲ್ಲ. ಗೌಹತಿಯಿಂದ ೪-೫ ಮೈಲು ದೂರ 'ಪಂಡು' ಎಂಬ ಗ್ರಾಮವಿದೆ. ಪಾಂಡವರೇನೋ ಈ ಗ್ರಾಮದಲ್ಲಿ ಸಂಚರಿಸಿದ್ದರೆಂಬ ಜನರ ಹೇಳಿಕೆ. ರಾಷ್ಟ್ರೀಯ ಸಭೆಯ ಸ್ಥಾನಕ್ಕೆ ಇದೇ ಕಾರಣದಿಂದ 'ಪಂಡು ನಗರ' ವೆಂದು ಸಂಬೋಧಿಸಿರುವರು. ಗೌಹತಿಗೆ ಅಸಾಮಿ ಭಾಷೆಯಲ್ಲಿ "ಗುವಾಹಟಿ" ಅಂದರೆ, ಅಡಿಕೆಯ ಪೇಟೆಯೆಂದು ಹೇಳುತ್ತಾರೆ. ಸುತ್ತಲೂ ಅಡಿಕೆಯ ತೋಟಗಳೇ ಹೇರಳವಾಗಿದ್ದು, ಎಲ್ಲ ಕಡೆಯಿಂದ ಇಲ್ಲಿ ಸಂಗ್ರಹವಾಗಿ ಮಾರಲ್ಪಡುತ್ತದೆ. ಇದೇ ಆಸಾಮ ಪ್ರಾಂತದಲ್ಲಿ ದೊಡ್ಡ ಪಟ್ಟಣವು. ಅದರಿಂದ ಇಡೀ ಭರತಖಂಡದಲ್ಲಿ ಈ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ "ಗೌಹತಿಯ ಅಧಿವೇಶನ" ವೆಂಬ ಹೆಸರಾಗಿದೆ. ದೊಡ್ಡವರ ನೆರೆಯಲ್ಲಿ ಬಡವರು ಮುಖ್ಯ ಕಾರ್ಯಗಳನ್ನು ನೆರವೇರಿಸಿದರೂ, ಕೀರ್ತಿಯು ದೊಡ್ಡವರಿಗೇ ಅಲ್ಲವೇ?

* * *

ಇಲ್ಲಿ ಭಯಂಕರವಾದ ಚಳಿ. ರಾಷ್ಟ್ರೀಯ ಸಭೆಯ ಕಾಲಕ್ಕೆ ಚಳಿಯು ಮತ್ತೂ ವಿಶೇಷವಾಗಿ ಕಡ್ಡುವದು. ಸುತ್ತುಮುತ್ತು ಬೆಟ್ಟ ಕಾಡು. ಮಂಜು ಪ್ರಬಲವಾಗಿ ಬೀಳುತ್ತಿದೆ. ಸೂರ್ಯದರ್ಶನವು ಬರೇ ೧೦ ತಾಸು ಸಿಕ್ಕಿದರೆ ದೊಡ್ಡದು. ಸುತ್ತುಮುತ್ತು ಬೆಟ್ಟ ಪ್ರದೇಶವಾಗಿರುವದರಿಂದ, ಸೃಷ್ಟಿಸೌಂದರ್ಯವನ್ನು ಇಲ್ಲಿಯೇ ನೋಡಬೇಕು. ಬ್ರಹ್ಮಪುತ್ರಾ ನದಿಯು ಈ ಪ್ರದೇಶದಲ್ಲಿಯೇ ಹರಿಯುತ್ತದೆ. ಈ ಪ್ರದೇಶದಲ್ಲಿ ಬಾವಿಗಳನ್ನು ಕೇಳಬೇಡಿ, ಚಿಕ್ಕಪುಟ್ಟ ಹೊಂಡಗಳಿವೆ. ಗೌಹತಿಯಲ್ಲಿ ನಳಗಳಿಂದ ನೀರಿನ ಪೂರೈಕೆಯಾಗುತ್ತಿದೆ. 'ಪಂಡು ನಗರ' ದಲ್ಲಿಯೂ ಹೀಗೆಯೇ ವ್ಯವಸ್ಥೆ ಮಾಡಲ್ಪಟ್ಟಿದೆ. ನಳಗಳನ್ನು ತಂದು ದೊಡ್ಡ ದೊಡ್ಡ ಹೌದುಗಳನ್ನು ಕಟ್ಟಿ ನೀರಿನ ಸಂಗ್ರಹ ಮಾಡಿಕೊಂಡಿರುವರು. ನೀರಿಗೆ ಬರಗಾಲವಿಲ್ಲ, ಬೇಕಷ್ಟು ನೀರಿನ ಪೂರೈಕೆಯಿದೆ.

* * *

ಈ ರಾಷ್ಟ್ರೀಯ ಸಭೆಯಲ್ಲಿ ಬಿದುರೇ ಹೇರಳವಾಗಿ ಉಪಯೋಗಿಸಲ್ಪಟ್ಟಿದೆ. ಇಲ್ಲಿ ಬಿದುರು ಬಹಳ. ಪ್ರತಿನಿಧಿಗಳಿಗಾಗಿ ಕಟ್ಟುವ ಬಿಡಾರುಗಳಿಗೂ ಬಿದುರು, ಸಭಾಮಂಟಪಕ್ಕೂ ಬಿದುರೇ. ಸಭಾಮಂಟಪಕ್ಕೆ ಎರಡು ಮಹಾದ್ವಾರಗಳಿವೆ. ಅವುಗಳಿಗೆ ಹೇಳತಕ್ಕಷ್ಟು ಆಡಂಬರವಿರಲಿಕ್ಕಿಲ್ಲ. ಅಸಾಮವು ಬಡನಾಡು. ಇಲ್ಲಿ ವಿಶೇಷ ಆಡಂಬರ ಮಾಡಲಿಕ್ಕೆ ಹಣದ ಅನುಕೂಲತೆಯಿಲ್ಲ. ಇದರಿಂದ 'ಸ್ವಾಗತ ಮಂಡಳಿಯವರು' ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಗೆ ಬಿನ್ನೈಸಿಕೊಂಡು ಪ್ರತಿನಿಧಿಗಳ ಫೀ ರಕಮನ್ನು ೧ ರೂಪಾಯಿಯಿಂದ ೧೦ ರೂಪಾಯಿಗಳಿಗೆ ಏರಿಸಿಕೊಂಡರು. 'ಪಂಡು ನಗರ' ದಲ್ಲಿ ಸುಧಾರಣೆಯು ಕಾಣಲಿಕ್ಕಿಲ್ಲ. ಸಾಮಾನ್ಯ ದೇಶೀ ವಿಧಗಳಿಂದಲೇ ಇಲ್ಲಿಯ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ. ಸ್ವಯಂಸೇವಕರಿಗೆ ಉಡಿಗೆ-ತೊಡಿಗೆಗಳನ್ನು ಕೊಡಲಿಕ್ಕೂ ಸ್ವಾಗತ ಮಂಡಳಿಯಲ್ಲಿ ಸಾಮರ್ಥ್ಯವಿಲ್ಲ. ಅದರಿಂದ ಸ್ವಯಂಸೇವಕರಿಗೆ ಕೆಲವೊಂದು ಚಿನ್ಹೆಯನ್ನು ಕೊಟ್ಟಿರುವರು. ೬೦೦-೭೦೦ ಮಂದಿ ಸ್ವಯಂಸೇವಕರು ಸಭೆಯ ಕಾರ್ಯವನ್ನು ಮುಪ್ಪಟ್ಟು ಧಾವತಿ ಮಾಡಿ ನೆರವೇರಿಸಬೇಕಾಗಿದೆ. ಸ್ವಯಂಸೇವಕರು ಅಷ್ಟೊಂದು ಶಿಕ್ಷಣಬದ್ಧರಲ್ಲ. ಅದರಿಂದ ಕೆಲಸವು ಅಪೇಕ್ಷೆಯಂತೆ ಸಾಗಿಹೋಗುವದಿಲ್ಲ. ಸ್ವಯಂಸೇವಕರಲ್ಲಿ ೨೦ ಮಂದಿ ಹೆಂಗಸರೂ ಇದ್ದಾರೆ. ಕಾಲೇಜಿನ ವಿದ್ಯಾರ್ಥಿಗಳಿಗೂ ಸ್ವಯಂಸೇವಕರಾಗಲು ಅಧಿಕಾರಿಗಳು ಅಪ್ಪಣೆಯಿತ್ತು ರಾಷ್ಟ್ರೀಯ ಸಭೆಗೆ ಮನ್ನಣೆಯನ್ನಿತ್ತಿರುವರು. ಸಾಮಾನ್ಯವಾಗಿ ೧೦೦೦೦ ಜನಸಂದಣಿಯು ಸೇರುವದೆಂದು ಹೇಳುತ್ತಾರೆ.

* * *

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲಿಗೆ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಪೌಷ್ಟಿಕತ್ವವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ದಪ್ಪನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

—— o: ——

½ ಔನ್ಸಿಗೆ	ರೂ.	೨—೨—೦
¼ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೩—೦

ಒಟ್ಟೋ-ದಿಲ್ ಬಹಾರ ಕೇಳಲಿಕ್ಕೆ ಮರೆಯಬೇಡಿರಿ!

'ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY**

ಮಹಾತ್ಮರು ರಾಷ್ಟ್ರೀಯ ಸಭೆಗೆ ಹೋಗುವರೇ, ಸೋ, ಎಂದು ಎಲ್ಲರೂ ಕೇಳುವವರೇ. ಮಹಾತ್ಮರು ರಾಷ್ಟ್ರೀಯ ಸಭೆಗೆ ಹೋಗಬಾರದೆಂದಿದ್ದರು. ಪಂಡಿತ ಮೋತಿಲಾಲರೂ ವೈರಾಗ್ಯವನ್ನೇ ತಾಳಲು, ನಿರುಪಾಯವಾಗಿ ರಾಷ್ಟ್ರೀಯ ಸಭೆಗೆ ಅನುಗ್ರಹಿಸುವ ನಿರ್ಧಾರ ಮಾಡಿದರು "ನೀವು ಹೋಗದಿದ್ದರೆ ನಾನೂ ಹೋಗುವದಿಲ್ಲ," ಎಂದು ಮೋತೀಲಾಲರು ನಿರ್ಧಾರದಿಂದ ಹಂಠ ಮಾಡಿದ್ದರು. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಮಾನ್ಯ ಶ್ರೀನಿವಾಸ ಅಯ್ಯಂಗಾರರೂ ರಾಷ್ಟ್ರೀಯ ಸಭೆಯ ಸೂತ್ರಧಾರರಾದ ಮಹಾತ್ಮರಿಗೆ ಅಧಿವೇಶನಕ್ಕೆ ಚಿತ್ತೈಸಲು ಆಗ್ರಹಪೂರ್ವಕವಾಗಿ ಒಪ್ಪಿಸಿಕೊಂಡಿದ್ದರು. ಆದರಿಂದ ಮಹಾತ್ಮರು ನಿರುಪಾಯವಾಗಿ ರಾಷ್ಟ್ರೀಯ ಸಭೆಗೆ ಹೋಗುವರು. ಅಲ್ಲಿ ತಟಸ್ಥವೃತ್ತಿಯನ್ನೇ ಅವರು ಅಂಗೀಕರಿಸುವರಾಗಿ ವರ್ಧಾದೊಳಗಿನ ಸತ್ಯಾಗ್ರಹಾಶ್ರಮದ 'ಹೆರಲ್ಡ' ಪತ್ರಿಕೆಯ ಸುದ್ದಿಗಾರರು ತಿಳಿಸುತ್ತಾರೆ. ತಟಸ್ಥವೃತ್ತಿಯಲ್ಲಿಯೂ ಬೇಕಾದವರಿಗೆ ಅವಶ್ಯವಾದ್ದ ಆಲೋಚನೆ ಹೇಳಲು ಮಹಾತ್ಮರ ತಯಾರಿಯಿದೆ.

ಮಹಾತ್ಮರು ಪಾಂಡುನಗರಕ್ಕೆ ಡಿಸೆಂಬರ ೨೪ನೇ ತಾರೀಖಿಗೆ ಮುಟ್ಟುವರು. ಅದೇ ದಿನ ರಾಷ್ಟ್ರೀಯ ಸಭೆಯ ವಿಷಯನಿರ್ಧಾರಕ ಮಂಡಳವು ಪ್ರಾರಂಭವಾಗುವದು. ಅಧ್ಯಕ್ಷರಾದ ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರವರು ನಿನ್ನೆ ತಾರೀಖು ೧೯ನೇಗೆ ಮದ್ರಾಸಿನಿಂದ ಹೊರಟು ನಾಳೆ ಮಂಗಳವಾರ ತಾ. ೨೧ನೇಗೆ ಕಲಕತ್ತೆಗೆ ಮುಟ್ಟಿ ಅಲ್ಲಿ ಒಂದು ದಿನ ಉಳಕೊಂಡು, ಡಿಸೆಂಬರ ತಾರೀಖು ೨೩ನೇಗೆ ಪಾಂಡುನಗರವನ್ನು ಪ್ರವೇಶಿಸುವರು. ಶ್ರೀನಿವಾಸ ಅಯ್ಯಂಗಾರರವರಿಗೆ ಪಾಂಡುನಗರದೊಳಗಿನ ಪ್ರಜೆಗಳು ೫೦ ಗಜಗಳಿಂದ ಯುಕ್ತವಾದ ಮೆರವಣಿಗೆಯಿಂದ ಬರಮಾಡಿಕೊಳ್ಳುವರು. ೨೦ ಉಗಿಬಂಡಿಗಳು ರಾಷ್ಟ್ರೀಯ ಸಭೆಯ ಪ್ರತಿನಿಧಿ-ಪ್ರೇಕ್ಷಕರಿಗಾಗಿ ಹೊರಡಿಸುವ ವ್ಯವಸ್ಥೆಯನ್ನು ಸ್ವಾಗತ ಮಂಡಳದವರು ಮಾಡಿರುವರು.

***

ಅಧಿಕಾರಿಗಳಿಗೆ ಚಿತ್ತಪ್ರಕೋಪವಾಗಲು ಪ್ರಾರಂಭ. [illegible] ಕೂಲಿಕಾರರ ಪಕ್ಷದ ಕಡೆಯಿಂದ ಪಾರ್ಲಿಮೆಂಟಿನಲ್ಲಿ ಸಭಾಸದರಾಗಿರುವ ಮಿ| ಪೆಥಿಕ್ ಲೋರೆನ್ಸರವರು ಸಪತ್ನೀಕರಾಗಿ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಬಂದಿರುವರು. ರಾಷ್ಟ್ರೀಯ ಸಭಾಸ್ಥಾನದ ಬಳಿ "ಸರ್ಕೀಟ ಹೌಸೆಂಬ" ಸರಕಾರಿ ಬಂಗ್ಲೆ ಇದೆ. ಅಲ್ಲಿ ಮಿ| ಲೋರೆನ್ಸರವರಿಗೆ ಉಳಕೊಳ್ಳಲು ಸ್ಥಳ ಕೊಡಬೇಕೆಂದು ಸ್ವಾಗತ ಮಂಡಳದ ಅಧ್ಯಕ್ಷರಾದ ಶ್ರೀ| ಫೂಕನ್‌ರವರು ಆಸಾಮ ಕಂದರದ ಕಮೀಶನರರಿಗೆ ಕೇಳಿದರೆ, ಅದು ಕೊಡಲಾಗದೆಂದು ಕಮೀಶನರರು ಮೊಂಡ ಉತ್ತರ ಕೊಟ್ಟು ಧಿಕ್ಕರಿಸಿದರು. ಆಸಾಮವು ಚಹದ ತೋಟಗಳ ಸಾಹುಕಾರರ ರಾಜ್ಯ. ಕೂಲಿಕಾರರ ಪಕ್ಷಕರಿಗೂ, ಕೂಲಿಕಾರರ ಒಡೆಯರಿಗೂ ಅಹಿ-ನಕುಲಗಳಷ್ಟು ಗೆಳೆತನ! ಸ್ಕಾಟ್ಲಂಡ ದೇಶದ ಜೊವೆಟ್, ಹಾಗು ಮಿ| ಹರ್ಡಿಮನ್‌ರವರು ಈಗ ಹಿಂದುಸ್ಥಾನದಲ್ಲಿ ಪ್ರವಾಸ ಮಾಡುತ್ತಿರುವರು. ಅವರೂ ರಾಷ್ಟ್ರೀಯ ಸಭೆಗೆ ಚಿತ್ತೈಸುವವರಿದ್ದಾರಾಗಿ ಮದ್ರಾಸಿನಿಂದ ಸುದ್ದಿ.

***

'ಎಸೋಸಿಯೇಟೆಡ್ ಪ್ರೆಸ್'ಎಂಬ ಸಮಾಚಾರ ಸಂಸ್ಥೆಯು ಪಾಂಡುನಗರದ ವರ್ಣನೆಯನ್ನು ಚಿತ್ತವೇಧಕವಾಗಿ ಮಾಡಿರುವದು. ೧೬ನೇ ತಾರೀಖಿನ ಸುದ್ದಿಯೆಂದರೆ:- ಒಂದೇ ವಾರದಲ್ಲಿ ಪಾಂಡುನಗರವು ರಚಿಸಲ್ಪಟ್ಟಿದೆ. ಪಾಂಡುನಗರದ ಸ್ಥಳವು ಚಿತ್ತವೇಧಕವಿದೆ. ಉತ್ತರಕ್ಕೆ ಭರತ ಭೂಮಿಯ ಗಗನಚುಂಬಿತವಾದ ಹಿಮಾಲಯ ಗಿರಿಯ ಭವ್ಯವಾದ ನೋಟ, ದಕ್ಷಿಣಕ್ಕೆ ಜಯಂತಿ ಪರ್ವತಗಳು, ಉಳಿದ ಬದಿಗಳಿಗೆ ಬ್ರಹ್ಮಪುತ್ರಾ ನದಿ, ಹೀಗೆ ಸೃಷ್ಟಿಸೌಂದರ್ಯದ ಗೌರವನೆಯೋಬಾದಿಯಲ್ಲಿರುವ ಪಾಂಡು ನಗರದ ಶೋಭೆಯನ್ನೇನು ಹೇಳುವದು? ಕವಿಕಲ್ಪನಾ ಸಮುದ್ರವೇ ಇದು! ನಾಲ್ಕೂ ಬದಿಗೆ ಪಾವನವಾದ ದೇವಾಲಯಗಳಿವೆ. ಕಾಮಾಕ್ಷಿ, ಭುವನೇಶ್ವರಿ, ಉಮಾನಂದ, ಅಶ್ವಕ್ರಾಂತ ಮುಂತಾದ ದೇವಾಲಯಗಳನ್ನು ನೋಡಿದರೆ, ರಾಮಾಯಣ ಮಹಾಭಾರತಗಳೊಳಗಿನ ಪವಿತ್ರವಾದ ಪ್ರಸಂಗಗಳ ನೆನವಾಗಿ ಮನಸ್ಸು ಉಲ್ಲಸಿತವಾಗುತ್ತದೆ. ಅಶ್ವಕ್ರಾಂತದಲ್ಲಿ ಭಗವಾನ್ ಶ್ರೀಕೃಷ್ಣದೇವರ ಅಶ್ವವು ದಣಿವಿತ್ತಂತೆ! ಅದು ವಿಶ್ರಮಿಸಿದ ಸ್ಥಳವೇ ಅಶ್ವಕ್ರಾಂತವೆಂದು ಹೆಸರಾಗಿದೆ. ವಸಿಷ್ಠ ಬ್ರಹ್ಮರ್ಷಿಗಳು ಧ್ಯಾನ ಮಾಡುವ ತಪೋವನವು ಬಳಿಯಲ್ಲೇ ಇದೆ. ಹೀಗೆ ಸನಾತನಿಗಳಿಗೆ ಧರ್ಮಕ್ಷೇತ್ರವಾಗಿರುವ ಪುಣ್ಯಭೂಮಿಗಳ ಸಾನ್ನಿಧ್ಯದಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನವು ಸೇರುವದು. ಬಂಗಾಲ-ಆಸಾಮಗಳಿಂದ ತಂಡುಗಟ್ಟಿ ಪ್ರಜೆಗಳು ಪಾಂಡು ನಗರದಲ್ಲಿ ಸೇರುವರು.

***

ಇತರ ಸುದ್ದಿಗಳು

ರಾಷ್ಟ್ರೀಯ ಸಭೆಯ ಮಂಟಪದಲ್ಲಿ ಅಖಿಲ ಭಾರತೀಯ ಸ್ವಯಂಸೇವಕರ ಪರಿಷತ್ತು ಸೇರುವದಿದೆ. ಶ್ರೀ| ಗೋಸ್ವಾಮಿಯವರು ಅಧ್ಯಕ್ಷರಾಗುವರು. ಅಸಾಮಿ ಜನರ ಸಂರಕ್ಷಣೆ ಸಭೆ, ಅಖಿಲ ಭಾರತೀಯ ಸಂಗೀತ ಪರಿಷತ್ತು, ರಾಜಕೀಯ ಬಂದಿವಾಸ ಅನುಭವಿಸಿದವರ ಪರಿಷತ್ತು, ಅಖಿಲ ಭಾರತೀಯ ಗೋ ಪರಿಷತ್ತು ಅಖಿಲ ಭಾರತೀಯ ವಾಚನಾಲಯ ಪರಿಷತ್ತು, ಹಿಂದೂ ಮಹಾಸಭೆಯ ಅಧಿವೇಶನ, ರಾಷ್ಟ್ರೀಯ ಭಾಷಾ ಸಮ್ಮೇಲನ, ಮುಂತಾದ ಅನೇಕ ಪರಿಷತ್ತುಗಳು ಜರುಗಲಿವೆ. ಖಾದಿ ಪ್ರದರ್ಶನ ಅನಾವರಣ ಸಮಾರಂಭವು ಮಹಾತ್ಮರ ಹಸ್ತದಿಂದ ತಾ. ೨೫ನೇ ಶನಿವಾರಕ್ಕೆ ನೆರವೇರುವದು. ರಾಷ್ಟ್ರೀಯ ಭಾಷಾ ಸಮ್ಮೇಲನಕ್ಕೆ ಅಧ್ಯಕ್ಷರಾಗಲು ಮಹಾತ್ಮರಿಗೆ ಬಿನ್ನಹ ಮಾಡಲಾಗಿತ್ತು. ಮಹಾತ್ಮರು ಒಪ್ಪಲಿಲ್ಲವಾಗಿ ತಿಳಿಯುತ್ತದೆ. ಗೌಹತಿಯ ರಾಷ್ಟ್ರೀಯ ಸಭೆಗೆ ಸಮಸ್ತ ಪಕ್ಷಗಳಿಗೂ ಮಾನ್ಯವಾಗುವಂಥ ಕಾರ್ಯಕ್ರಮವನ್ನು ನಿರ್ಧರಿಸಲು ಸಿಂಧ ಪ್ರಾಂತಿಕ ಕೋಂಗ್ರೆಸ ಕಮೀಟಿಯವರು ಬಿನ್ನೈಸಿರುವರು. ರಾಷ್ಟ್ರೀಯ ಸಭೆಯ ನಿರ್ಣಯಗಳಿಗೆ ವಿರೋಧಕವಾಗಿ ಕಾರ್ಯಕಾರಿ ಮಂಡಳದವರು ವರ್ತಿಸಿದ್ದಲ್ಲಿ ಅವರಿಗೆ ಕೂಡಲೆ ಪದಭ್ರಷ್ಟ ಮಾಡಬೇಕೆಂದು ಸಂಯುಕ್ತ ಪ್ರಾಂತದ ರಾಜಕೀಯ ಪರಿಷತ್ತಿನ ಸೂಚನೆ ಇದೆ. ಅಖಿಲ ಭಾರತೀಯ ಗೋರಕ್ಷಣ ಸಂಘದವರು ಬಂಗಾಲ-ನಾಗಪುರ ರೇಲ್ವೆಯ ಡಿಡಲತಿ ಸ್ಟೇಶನಿನ ಹತ್ತರ ೯ ಸಾವಿರ ಎಕ್ರೆ ಭೂಮಿಯನ್ನು ಗೋವುಗಳ ಮೇವಿಗಾಗಿ ಪಡಕೊಂಡಿರುವರು. ರಾಷ್ಟ್ರೀಯ ಸಭೆಯ ಅಧಿವೇಶನವು ರವಿವಾರ ತಾರೀಖು ೨೬ನೇಯಿಂದ ನಾಲ್ಕು ದಿನಗಳವರೆಗೆ ನಡೆಯುವದು.

ಮಹಾತ್ಮರ ಕಾರ್ಯಕ್ರಮ.

ಈಗ ಮಹಾತ್ಮರು ವರ್ಧಾದೊಳಗಿನ ಸತ್ಯಾಗ್ರಹಾಶ್ರಮದಲ್ಲಿ ಉಳಕೊಂಡಿರುವರು. ಈ ಹೊತ್ತು ಸೋಮವಾರ ತಾ. ೨೦ನೇಗೆ ಅವರು ಕೈಕೊಂಡ ಅಜ್ಞಾತವಾಸವ್ರತವು ಮುಗಿಯುತ್ತದೆ. ನಾಳೆ ಮಂ

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು. ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ತರುವಾಗ ಹೋಗುವ ವೀರ್ಯವು ಬಂದಾಗುವದು — ಪರಮಾ ಹುಗಣ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮುಂತಾದ್ದು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ತಾಪ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ. ಮೂರು ಬಾಟಲಿಯ ಕಿಮ್ಮತು ೩-೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತು ೧೨-೦-೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು. ವ್ಹಿ.ಪಿ. ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೧-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ ಜಿ| ಬೆಳಗಾಂವ.

ಗಳವಾರಕ್ಕೆ ಅವರು ಅಮರಾವತಿಗೆ ಹೋಗಿ ಡಾ| ಪಟವರ್ಧನರವರ ವ್ಯಾಯಾಮ ಮಂದಿರದ ಅನಾವರಣ ಸಮಾರಂಭವನ್ನು ನೆರವೇರಿಸುವರು. ಹಾಗೆಯೇ ಮುಂದೆ ನಾಗಪುರಕ್ಕೆ ಹೋಗಿ, ಅಲ್ಲಿ ಮುನಸಿಪಾಲಿಟಿಯು ಮಾನಪತ್ರವನ್ನು ಅವರು ಸ್ವೀಕರಿಸುವರು. ಆ ಬಳಿಕ, ಖಾದಿ ಭಂಡಾರದ ಸ್ಥಾಪನೆಯು ಮಹಾತ್ಮರಿಂದಲೇ ನೆರವೇರುವದು. ಅಲ್ಲಿಂದ ಗೊಂಡಿಯಾ ಪಟ್ಟಣಕ್ಕೆ ಹೋಗಿ, ಅಲ್ಲಿಂದ ಮುಂದೆ ಕಲಕತ್ತೆಯ ಮಾರ್ಗವಾಗಿ ಗೌಹತಿಗೆ ತೆರಳುವರು.

ವರ್ಧೆಯೊಳಗಿನ ಸತ್ಯಾಗ್ರಹಾಶ್ರಮದಲ್ಲಿ ಮಹಾತ್ಮರು ಬೆಳಗಿನ ಜಾವಕ್ಕೆ ಎದ್ದು ನಿಯಮಿತವಾಗಿ ತಿರುಗಾಟದ ವ್ಯಾಯಾಮ ಕೊಳ್ಳುತ್ತಾರೆ. ಸಾಯಂಕಾಲಕ್ಕೂ ಇದೇ ಪ್ರಕಾರದ ವ್ಯಾಯಾಮವಾಗುತ್ತದೆ; ತಿರುಗಾಡುವಾಗ ಅವರ ಜೊತೆಗೆ ಯಾರಾದರೊಬ್ಬ ಪ್ರಮುಖರು ಇದ್ದೇ ಇರುತ್ತಾರೆ. ಸದ್ಯಕ್ಕೆ ಸತ್ಯಾಗ್ರಹಾಶ್ರಮದಲ್ಲಿ ರಾಜಗೋಪಾಲಾಚಾರ್ಯ, ಗಂಗಾಧರರಾವ ದೇಶಪಾಂಡೆ, ವಾಮನರಾವ ದಾಸ್ತಾನೆ, ಶಂಕರ ಶ್ರೀಕೃಷ್ಣ ದೇವ ಮೊದಲಾದ ಪ್ರಮುಖರು ಸತ್ಯಾಗ್ರಹಾಶ್ರಮದಲ್ಲಿ ಮಹಾತ್ಮರ ಜೊತೆಗೆ ಇದ್ದರು. ಅಖಿಲ ಭಾರತೀಯ ನೂಲುಗಾರರ ಸಂಘದ ಸಭೆಯೂ ಕಳೆದ ೧೭-೧೮ ನೇ ತಾರೀಖುಗಳಲ್ಲಿ ಸೇರಿ, ಮಹತ್ವದ ನಿರ್ಧಾರಗಳು ಕೈಕೊಳ್ಳಲ್ಪಟ್ಟವು.

ಮಹಾತ್ಮರ ಜೊತೆಗೆ ಭಾರತೀಯ ಲೋಕನಾಯಕರ ಹೊರತು ಮೂವರು ಪರದೇಶದ ಸ್ತ್ರೀಯರಿರುವರು. ಸಮಾಜ ಸತ್ತಾವಾದದ ಪಕ್ಷಪಾತಿಯಾದ ಜರ್ಮನಿಯ ಸ್ತ್ರೀಯರೊಬ್ಬಳು ಮಹಾತ್ಮರಿಂದ ಬೋಧ ಕಲಿಯಲು ಉದ್ಯುಕ್ತಳಾಗಿ ಬಂದಿರುವಳು. ಹೋಲ್ಬಿಯೆಂಬ ಅಮೇರಿಕೆಯ ಸ್ತ್ರೀಯು ತನ್ನ ಹುಡುಗಿ ಸಹಿತ ಮಹಾತ್ಮರ ಬಳಿ ಉಳಕೊಂಡಿರುವಳು. ಹೋಲ್ಬಿಯ ಮಗಳು ಅಮೇರಿಕೆಯ ಕಾಲೇಜದಲ್ಲಿ ಅಧ್ಯಾಪಕಳಿದ್ದಾಳೆ. ಅವಳಿಗೆ ಅವಳ ಕಾಲೇಜಿನವರು ಭೂಮಂಡಲದ ಮೇಲಿನ ಆದ್ಯಾದಿ ಲೋಕೋತ್ತರ ಪುರುಷರ ಭೆಟ್ಟಿ ಪಡೆದ ವಿವಿಧ ವಿಷಯಗಳ ಜ್ಞಾನಸಂಪಾದನೆ ಮಾಡಲು ಕಳುಹಿರುವರಾಗಿ ಸುದ್ದಿ. ಅವರೆಲ್ಲರೂ ಮಹಾತ್ಮರೊಡನೆ ಬಹುಕಾಲದ ವರೆಗೆ ಸಂಭಾಷಣ ಮಾಡಿದರು. ಭಿನ್ನ ಭಿನ್ನ ಧರ್ಮಗಳ ಮೇಲಿನ ಅಭಿಪ್ರಾಯಗಳನ್ನು ಮಹಾತ್ಮರಿಂದ ಅರಿತುಕೊಳ್ಳಲು ಅವರು ಉತ್ಸುಕರಾಗಿದ್ದರಂತೆ!

ರಾಷ್ಟ್ರೀಯ ಸಭೆಯಲ್ಲಿ ಮಹಾತ್ಮರು ಯಾವದೇ ಕಾರ್ಯಕ್ರಮವನ್ನು ಪುರಸ್ಕರಿಸಲಿಕ್ಕಿಲ್ಲವಾಗಿ ಅವರ ಸುದ್ದಿ. ರಾಷ್ಟ್ರೀಯ ಸಭೆ ತೀರಿದ ಬಳಿಕ ಮಹಾತ್ಮರು ಖಾದಿಯ ಸಂಘಟನೆಯನ್ನು ಕೈಕೊಳ್ಳುವರು. ಮೊಟ್ಟಮೊದಲು ಬಿಹಾರ ಪ್ರಾಂತವೇ ಮಹಾತ್ಮರ ಕಾರ್ಯಕ್ಷೇತ್ರವಾಗುವದು. ಜನವರಿಯಲ್ಲಿ ಬಿಹಾರದೊಳಗಿನ ಕಾರ್ಯ ಮುಗಿಸಿ, ಮಹಾರಾಷ್ಟ್ರಕ್ಕೆ ಫೆಬ್ರುವರಿಯಲ್ಲಿ ಹೋಗುವರು. ಅಲ್ಲಿ ಒಂದು ತಿಂಗಳು ಉಳಿದು ಕಾಠೇವಾಡ ಸಂಸ್ಥಾನ ಪರಿಷತ್ತಿಗೆ ಹೋಗುವರು. ಆಂಧ್ರ-ತಮಿಳನಾಡುಗಳಲ್ಲಿ ಎಪ್ರಿಲ್ ತಿಂಗಳಲ್ಲಿ ಪ್ರಯಾಣ ಮಾಡುವವರಿದ್ದಾರಾಗಿ ತಿಳಿಯುತ್ತದೆ. ಕೊಲ್ಲಾಪುರದಲ್ಲಿ ಖಾದಿಯ ಪ್ರದರ್ಶನವಾಗುವದಿದೆ. ಅದಕ್ಕಾಗಿ ಮಹಾತ್ಮರು ಎಪ್ರಿಲ್ ತಿಂಗಳ ಮಧ್ಯ ಸುಮಾರಿನಲ್ಲಿ ಅತ್ತಕಡೆ ಹೋಗುವರು.

ಜಾಹೀರಾತು.

ಇದರ ಮೂಲಕ ಯಾವತ್ತು ಜನರಿಗೆ ಜಾಹೀರ ಮಾಡುವದೇನಂದರೆ:—

ಮುಂಬಯಿಯ ಏಶಿಯಾಟಿಕ್ ಪೆಟ್ರೋಲಿಯಮ್ ಕಂಪನಿ (ಇಂಡಿಯಾ) ಲಿಮಿಟೆಡ್ ಇವರು ಹೊನ್ನಾವರದ ತಮ್ಮ ಕಂಪನಿಯ ಏಜನ್ಸಿಯ ಅಧಿಕಾರವನ್ನು ಹೊನ್ನಾವರದ **ಮೆಸರ್ಸ ವೆಂಕಟರಮಣ ವಿಠ್ಠಲ ಶ್ಯಾನಭಾಗ ಮತ್ತು ಕಂಪನಿ** ಇವರಿಗೆ ಕಳೆದ ತಾರೀಖು ೧-೧೧-೧೯೨೬ ನೇ ಯಿಂದ ವಹಿಸಿರುತ್ತಾರೆ. ಭಟ್ಕಳ, ಶಿರಾಲಿ, ಮುರ್ಡೇಶ್ವರ, ಗೇರಸಪ್ಪೆ ಏಜನ್ಸಿಗಳು ಹೊನ್ನಾವರ ಏಜನ್ಸಿಗೆ ಒಪ್ಪಿಸಿದ್ದು, ಅವನ್ನೂ ಏಶಿಯಾಟಿಕ್ ಪೆಟ್ರೋಲಿಯಮ್ ಕಂಪನಿಯವರು ಮೇಲ್ಕಂಡ ಮೆ| ವಿ. ವಿ. ಶ್ಯಾನಭಾಗ ಮತ್ತು ಕಂಪನಿ ಇವರಿಗೇನೇ ವಹಿಸಿರುತ್ತಾರೆ.

ಕುಮಟೆಯ ಮಿ| ಮಂಗೇಶರಾವ ಸೋಯರೋಬಾ ಮಿರ್ಜಾನಕರ ಇವರಿಗೆ ತಾ. ೧-೧೧-೨೬ ನೇಯಿಂದ ಹೊನ್ನಾವರ ಏಜನ್ಸಿಯಲ್ಲಾಗಲಿ, ಭಟ್ಕಳ, ಶಿರಾಲಿ, ಮುರ್ಡೇಶ್ವರ ಹಾಗು ಗೇರಸಪ್ಪೆ ಏಜನ್ಸಿಗಳಲ್ಲಾಗಲಿ ಏನೊಂದೂ ಹಕ್ಕು ಸಂಬಂಧವಿರುವದಿಲ್ಲ.

ಈ ಕೆಳಗೆ ಕಾಣಿಸಿದ ಛಾಪುಗಳ ಕೆರೋಸಿನ ಎಣ್ಣೆಯು ಯಾವಾಗಲೂ ನಮ್ಮ ಹೊನ್ನಾವರ ಹಾಗು ಅದಕ್ಕೊಪ್ಪಿಸಿದ ಇತರೇ ಏಜನ್ಸಿಗಳಲ್ಲಿ ದೊರೆಯುವದು:—

ಶೆಲ್ ಕೇಸ, (೧೫೦°), ನಾಂಗರ ಛಾಪ, ಸೂರ್ಯ ಛಾಪ, ಹಂಸ ಛಾಪ

ದಿ ಏಶಿಯಾಟಿಕ್ ಪೆಟ್ರೋಲಿಯಮ್ ಕಂಪನಿ, ಮುಂಬಯಿ.

ಟಿ. ಎಸ್ ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವ್ಹಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ- (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ- ಸಿದ್ದಾಪುರ- ಗೇರಸಪ್ಪಾ- ಜೋಗ (**Gersappa Falls**) ಸಾಗರ ಶಿವಮೊಗ್ಗಾ— ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ. ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವಸ್ತಿ ಏರ್ಪಾಡು ಮಾಡಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa
PROPRIETOR.

ಫುಕ್ಕಟೆ! ಫುಕ್ಕಟೆ!! ಈಗ ಫುಕ್ಕಟೆ!!!

ಪ್ರೀಮಿಯಮ್ಮುಗಳನ್ನು ಕೊಡಬೇಡಿರಿ!

ಯಾಕೆ?

ನಾವು ಬರೇ ಫುಕ್ಕಟೆಯಾಗಿ ನಿಮ್ಮ ವಿಮೆಯನ್ನು ಇಳಿಸುತ್ತೇವೆ!

ಮಾಹಿತಿ ಪತ್ರಕವನ್ನಪೇಕ್ಷಿಸುವವರು ಒಂದಾಣೆ ಸ್ಟ್ಯಾಂಪನ್ನಿಟ್ಟು ಬರೆಕೊಳ್ಳಬೇಕು;
ಅನೇಕ ಪ್ರಕಾರ ಏಜಂಟರಾಗಲಿಚ್ಛಿಸುವವರೂ ಬರೆಕೊಳ್ಳಬೇಕು.

ಪತ್ತೆ:— **The Inspector of Agencies,**
THE VENUS ASSURANCE BANK, LTD.
Dharwar Branch, DHARWAR.

ಮೋಹನ ಮೂರ್ತಿಯವರಾದ

ಮಹಾತ್ಮರು

೪೧ನೇ ರಾಷ್ಟ್ರೀಯ ಸಭಾಪತಿಗಳಾದ
ಶ್ರೀಮಾನ್ ಶ್ರೀನಿವಾಸ
ಅಯ್ಯಂಗಾರರವರು

ಕಾನಡಾವೃತ್ತ.

ಮಿತಿ ಕ್ಷಯ ಸಂ ಮಾರ್ಗಶಿರ್ಷ ಬ ೨ನೇ ಸೋಮವಾರ

ಗೌಹತಿಯಲ್ಲಿ.

'ಈಗ ಅಖಿಲ ಭಾರತೀಯರು ಗೌಹತಿಯ ಕಡೆಗೆ ದಿಟ್ಟಿಸಿ ನಿರೀಕ್ಷಿಸುತ್ತಿರುವರು ನಮ್ಮ ಸಂಕಾರವೂ ಸಾಮ್ರಾಜ್ಯ ಸರಕಾರವೂ ಗೌಹತಿಯನ್ನೇ ಕಾಣುತ್ತಿವೆ ಭರತಖಂಡದ ಲೋಕನಾಯಕರ ನಿರ್ಧಾರವನ್ನು ಅರಿತುಕೊಳ್ಳಲು ನಮಸ್ತರೂ ಆತುರರಾಗಿರುವರು ಗೌಹತಿಯ ರಾಷ್ಟ್ರೀಯ ಸಭೆಗೆ ವಿಶೇಷವಾದ ಪ್ರಾಮುಖ್ಯ ಬರಲು ಕಾರಣವಿದೆ ರಾಷ್ಟ್ರೀಯ ಸಭಾಭಿಮಾನಿಗಳಲ್ಲಿ ತಂಡಗಳಾಗಿವೆ ಸ್ವರಾಜ್ಯಪಕ್ಷ ಪ್ರತಿಯೋಗಿ ಸಹಕಾರ ಪಕ್ಷ ಸ್ವತಂತ್ರ ಕೊಂಗ್ರಸ ಪಕ್ಷ ಹೀಗೆ ಮೂರು ಪಕ್ಷಗಳು ಪ್ರಾಮುಖ್ಯವಾಗಿ ಗೌಹತಿಯಲ್ಲಿ ಬಡದಾಡುವವು "ನಾನೇ ರಾಷ್ಟ್ರಪುರುಷನ ಏಕನಿಷ್ಠ ಸೇವಕನು ನಾನೇ ಆತನಿಗೆ ಅಭಿವೃದ್ಧಿ ಬಯಸುವವನು ನನ್ನ ಮಾರ್ಗವೇ ಆತನ ಉದ್ಧಾರಮಾರ್ಗವು ಹೀಗೆಯೇ ರಾಷ್ಟ್ರಪುರುಷನ ನನ್ನ ಬೆಂಬಲಕ್ಕೆ ಬಂದರೆ, ಆತನು ನನ್ನನ್ನು ಉದ್ಧರಿಸುವನು ತನ್ನನ್ನು ಉದ್ಧರಿಸಿಕೊಳ್ಳುವನು," ಎಂಬ ಶ್ರದ್ಧೆಯಿಂದ ಈ ಮೂರೂ ಪಕ್ಷಗಳು ಗೌಹತಿಯಲ್ಲಿ ರಾಷ್ಟ್ರಪುರುಷನ ಮನ್ನಣೆ ಪಡೆಕೊಳ್ಳಲು ಬಡದಾಡುವವು

ಐಕ್ಯದ ಮೋಹನಮೂರ್ತಿಗಳಾದ ಮೋಹನದಾಸ ಗಾಂಧಿಯವರು ಗೌಹತಿಗೆ ಬರುವವರು ಪಂಡಿತ ಮೋತಿಲಾಲ ನೆಹರು ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರವರ ಆಗ್ರಹದ ಮೂಲಕ ಮಹಾತ್ಮರು ರಾಷ್ಟ್ರೀಯ ಸಭೆಗೆ ಹೋಗಲೊಪ್ಪಿದವರಾಗಿ ಬರುತ್ತಿದೆ ಮಹಾತ್ಮರು ತಟಸ್ಥವೃತ್ತಿಯನ್ನು ಧರಿಸಿದರೂ ಅವರಿಗೆ ಸಮ್ಮಗುಣ ಬಿಡಲು ಚಿನ್ಹಗಳೇನು ತೋರ ಪಡಿಲ್ಲ ಅಂದಿಗೆ ಮಹಾತ್ಮರು ಕೈಕೊಂಡ ಅಜ್ಞಾತವಾಸವು ಮುಗಿಯುತ್ತಿದೆ ನಿಸ್ಪೃಹ ಬುದ್ಧಿಯಿಂದಲೂ ನಿಮ್ಮಲ ಚೇತದಿಂದಲೂ ನಿಭರ್ಯದಿಂದಲೂ ನಿದಾಕ್ಷಿಣ್ಯದಿಂದಲೂ ಸತ್ಯಪ್ರೀತಿಯಿಂದಲೂ, ಬಂಧುಭಾವದಿಂದಲೂ ವಿಚಾರ ಮಾಡುವ ಇಡೀ ಭರತಖಂಡದೊಳಗೆ ಏಕೆ ಇಡೀ ಭೂತಲದೊಳಗೆ ಮಹಾತ್ಮರೊಬ್ಬರೇ ಎಂದು ಹೇಳಿದರೆ ಅತಿಶಯೋಕ್ತಿಯಾಗದು ಅಂದ ಪುರಪರು ರಾಷ್ಟ್ರೀಯ ಸಭೆಯ ಅಧಿವೇಶನದಲ್ಲಿ ಸಮಸ್ತ ಪಕ್ಷಗಳ ಪೇಕ್ಷೆಯನ್ನು ಸಾವಧಾನ ಚಿತ್ತದಿಂದ ಕೇಳಿಕೊಂಡು ಐಕ್ಯಮುಖ್ಯವನ್ನುಂಟು ಮಾಡಲು ಯತ್ನಿಸುವರಾಗಿ ನಾವು ಗೃಹೀತ ಹಿಡಿಯಬಹುದು ಮಹಾತ್ಮರ ಬಲ್ಲಿಂದರೂ ಉತ್ಸಾಹಿ ಪ್ರಜೆಗಳು ಅವರನ್ನೊಂದಿಗೂ ಬಿಡದೆ ಐಕ್ಯಭಂಗವನ್ನು ದೂರಪಡಿಸಲು ಯತ್ನಿಯು ಮಾಡುವರೆಂದು ನಾವು ನಿಶ್ಚಿತವಾಗಿ ಹೇಳುವೆವು ಬುದ್ಧಿಭೇದದಿಂದ ಇಲೆಕ್ಷನು ಸಮಯ ಬದಗಿದ ಕಟ್ಟಾಟಗಳಿಂದ ರಾಷ್ಟ್ರಪುರುಷನು ಬೇಸತ್ತು ಹೋಗಿರುವನು

ಪ್ರಾಮುಖ್ಯವಾಗಿ ಪಂಡಿತ ಮೋತಿಲಾಲರವರಿಗೂ ಲಾಲಾ ಲಜಪತರಾಯರವರಿಗೂ ಭಯಂಕರವಾದ ಕದನ ಉಂಟಾಗುವದೆಂದು ಬಲ್ಲವರು ಹೇಳುತ್ತಾರೆ ಇಬ್ಬರೂ ವೀರರೇ ತ್ಯಾಗಿಗಳೇ! ತಮ್ಮ ತಮ್ಮ ಮಾರ್ಗದಿಂದಲೇ ರಾಷ್ಟ್ರಕ್ಕೆ ಕಲ್ಯಾಣವಾಗುತ್ತದೆಂಬ ದೃಢನಿಶ್ಚಯವುಳ್ಳವರೇ ಸರಕಾರಿ ಅಧಿಕಾರಸ್ಥಾನಗಳನ್ನು ರಾಷ್ಟ್ರೀಯ ಸಭಾಭಿಮಾನಿಗಳು ಸ್ವೀಕರಿಸುವದಿಷ್ಟವೋ ಹೇಗೆ? ಸ್ವೀಕರಿಸುವದಾದ್ದಲ್ಲಿ ಆ ಕುರಿತು ಯಾವ ಯಾವ ಪ್ರತಿಬಂಧಗಳನ್ನು ರಾಷ್ಟ್ರೀಯ ಸಭೆಯು ವಿಧಿಸತಕ್ಕದ್ದು? ಯಾವ ಯಾವ ಅಧಿಕಾರಸ್ಥಾನಗಳನ್ನು ಲೋಕನಾಯಕರು ಆಕ್ರಮಿಸತಕ್ಕದ್ದು? ಸರಕಾರವು ಮನ್ನಿಸಬೇಕಾದ ಪೂರ್ವ ಕರಾರುಗಳ್ಯಾವವು? ಇವುಗಳ ನಾಮನಿರ್ದೇಶವು ರಾಷ್ಟ್ರೀಯ ಸಭೆಯಲ್ಲಿ ಬಲು ಸೂಕ್ಷ್ಮವಾಗಿಯೂ, ಸ್ಪಷ್ಟವಾಗಿಯೂ ನಿರ್ಣಯಿಸಲ್ಪಡುವದು ಇಲೆಕ್ಷನುಗಳ ಮೂಲಕ ಪಕ್ಷಗಳ ಬಲಾಬಲಗಳು ಲೋಕನಾಯಕರಿಗೆ ತಿಳಿದಿವೆ ಗೌಹತಿಯಲ್ಲಿ ಬಲಾಬಲಗಳಿಗೆ ದೊರೆತ ರಾಷ್ಟ್ರೀಯ ಮನ್ನಣೆಯ ಪರಿಣಾಮವು ತಿಳಿಯುವ ಹಾಗಿದೆ

ಲಾಲಾ ಲಜಪತರಾಯರಂದ ಲೋಕನಾಯಕರ ಹಿಂದೂ ಮಹಾಸಭೆಯ ಪಕ್ಷವನ್ನು ವಹಿಸಿಕೊಂಡು ಸನಾತನ ಸಮಾಜದಲ್ಲಿ ಒಂದು ಪ್ರಕಾರದ ಪರಭಿಮಾನವನ್ನು ಹುಟ್ಟಿಸಿರುವರ ಸನಾತನ ಸಮಾಜವು ಸಾಮಾನ್ಯವಾಗಿ ನಿದ್ರಾವಸ್ಥೆಯೊಳಗಿನದು ಅದನ್ನು ಎಚ್ಚರಿಕೆ ಮಾಡಿದ್ದು ಇಷ್ಟವಾದರೂ ಹೀಗೆ ಉಂಟಾದ ಜಾಗೃತಿಯನ್ನು ರಾಷ್ಟ್ರಪೋಷಕವಾಗಿಯೇ ಲೋಕನಾಯಕರು ಯೋಜಿಸಿಕೊಳ್ಳಬೇಕು ಅದೇ ಯೋಜಕ ಲೋಕನಾಯಕರ ಕಾರ್ಯವು ಲೋಕದಲ್ಲಿ ವಿವಿಧ ಪ್ರಕೃತಿಗಳವೆ ವಿವಿಧ ಪ್ರಕೃತಿಗಳನ್ನು ನಿಯಂತ್ರಿಸಿ ರಾಷ್ಟ್ರಕ್ಕನುಕೂಲವಾಗಿ ಪರಿಣಮಿಸಿಕೊಳ್ಳುವದೇ ಗೌಹತಿಯೊಳಗಿನ ಮುಖ್ಯವಾದ ರಾಷ್ಟ್ರಕಾರ್ಯವು ಹಿಂದೂ ಮಹಾಸಭೆಯ ವಿಲಕ್ಷಣವಾದ ಜಾಗೃತಿಯಿಂದ ಮಹಮ್ಮದೀಯರಲ್ಲಿಯೂ ಅದೇ ಪ್ರಕಾರದ ಅಸೂಯೆ ಯುಂಟಾಗಿದೆ ಹಿಂದೂ-ಮಹಮ್ಮದೀಯ ಐಕ್ಯ ಸಾಧಕರ ಅಥವಾ ಐಕ್ಯ ಬೋಧಕರ ಮಾತಿಗೆ ಈಗಿನ ಲೋಕಪಕ್ಷದ ರಾಜಕಾರಣದಲ್ಲಿ ಗಿರಾಕಿಯು ಕಾಣ ಹತ್ತಿದೆ ಇದೇನು ಸುಲಕ್ಷಣವಲ್ಲ ಸನಾತನಿಗಳು ಸರಕಾರಿ ಅಧಿಕಾರಸ್ಥಾನಗಳಿಗಾಗಿ ಬಡದಾಡುತ್ತಾರೆ ಸನಾತನಿಗಳಿಗೆ ಅವು ಸಿಕ್ಕಿ ಹೋದರೆ, ಮುಸಲ್ಮಾನರು ದಿಕ್ಕು ತಪ್ಪಿ ಬೀಳಬೇಕಾಗುವದೆಂದು ಮಹಮ್ಮದೀಯರ ಕಲ್ಪನೆ ಮಂತ್ರಿಪದಾದಿ ಅಧಿಕಾರಸ್ಥಾನಗಳು ಮುಸಲ್ಮಾನರ ಕೈವಶವಾ

ಬರಿ ಇತ್ತ ಸ್ವರಾಜ್ಯವೂ ಇಲ್ಲ ಇತ್ತ ಬ್ರಿಟಿಶ ರಾಜ್ಯದಲ್ಲಿಯೂ ಸ್ಥಾನವಿಲ್ಲ" ಎಂಬಂಥ ತ್ರಿಶಂಕಗಳಾಗಿ ಸನಾತನಿಗಳೆಲ್ಲ ಜೋತಾಡಬೇಕಾಗುವದೇನು ಸನಾತನಿಗಳ ಭಾವನೆ ಮಂತ್ರಿಪದಗಳದರೆ, ಇನ್ನಾವದೇ ಅಧಿಕಾರವಿರಲಿ, ಇವುಗಳನ್ನೆಲ್ಲ ಚಲಿಸುವ ಸೂತ್ರಧಾರರು ಪ್ರತ್ಯೇಕರಾಗಿರುವವರಲ್ಲವೇ! ಭಗವಂತನು ಹೃದ್ದೇಶವನ್ನೇ ಆಕ್ರಮಿಸಿಕೊಂಡು ಯಂತ್ರಾರೂಢವಾದ ಸಮಸ್ತ ಪ್ರಾಣಿಕೋಟಿಯನ್ನು ಚಲಿಸುವಂತೆ ಆಂಗ್ಲೇಯರು ವೋಟಿಗ್ಗೂ ಸ್ವರಾಜ್ಯದಲ್ಲಿ ಯಾವದೇ ಅಧಿಕಾರಸ್ಥಾನಗಳನ್ನು ಆಕ್ರಮಿಸಿಕೊಂಡಾಗ್ಯೂ, ಮುಂದಾಗಿ ಅರಸರ ಗರ್ಭಾಗಾರದಲ್ಲಿ ಸಿಕ್ಕಿತವಾದ ರಾಜ್ಯಧೋರಣವನ್ನೇ ಅನುಷ್ಠಾನದಲ್ಲಿ ತರಬೇಕಲ್ಲದೆ ಬೇರೆ ಉಪಾಯವಿರುವದೇನು! ನಾವು ದಾರ ಚಿಂತಾವನೆಯಿಲ್ಲ ಹರಿಕಿಸನಲಾಲರವರ ಅನುಭವವೇ ಇದಕ್ಕೆ ಪ್ರಮಾಣವು. ಹಿಂದೂ ಮುಸಲ್ಮಾನರು ಪರಸ್ಪರ ಅಸೂಯೆಯನ್ನು ತಾಳುವದು ಒರೇ ದಡ್ಡತನವು ಮೂರ್ಖತನವು, ಅದೂರದೃಷ್ಟಿಯು.

ಗೌಹತಿಯೊಳಗೆ ಇವೆಲ್ಲ ವಿಚಾರಗಳ ಮಂಥನವಾಗುವದಿದೆ. ಆಂಗ್ಲೇಯರು ಸರಕಾರಿ ಅಧಿಕಾರಸ್ಥಾನಗಳನ್ನು ಕೈಕೊಂಡು ರಾಜ್ಯದ ಅಂತಃಪುರದಲ್ಲಿ ಪ್ರವೇಶಿಸುವದು ತಪ್ಪವೇ? ಅದರಿಂದ ರಾಷ್ಟ್ರಕ್ಕೆ ಹಿತವೇ? ಪ್ರಜೆಗಳಿಗೆ ಕಲ್ಯಾಣವೇ? ಅದನ್ನು ಅಧಿಕಾರಗಳನ್ನು ಧಿಃಕರಿಸಿ ಕಾಯಿದೆ ಕೌನ್ಸಿಲುಗಳಲ್ಲಿ ಸರಕಾರಕ್ಕೆ ಪ್ರತಿಭಟರಾಗಿ ಕಾದಾಡಿ ಅಡ್ಡಗಟ್ಟಿ ಲೋಕಮತವನ್ನು ಬಲಾತ್ಕಾರದಿಂದ ಅಂಗೀಕರಿಸಿ ಸರಕಾರಿ ಧೋರಣವನ್ನು ತಿದ್ದುಪಡಿಸಲೆತ್ನಿಸುವದು ತಪ್ಪವೇ? ಅದರಿಂದ ರಾಷ್ಟ್ರಪುರುಷನಿಗೆ ಅಭಿವೃದ್ಧಿಗೈಯ್ಯಲು ಅನುಕೂಲವಾಗುವದೇ? ಸರಕಾರವು ಬಗ್ಗೀತೇ? ಇವೇ ಮುಂತಾದ ಪ್ರಶ್ನೆಗಳನ್ನು ರಾಷ್ಟ್ರೀಯ ಸಭೆಯೊಳಗಿನ ಲೋಕನಾಯಕರು ಗೌಹತಿಯಲ್ಲಿ ಬಲು ಸೂಕ್ಷ್ಮವಾಗಿಯೂ, ಸ್ಪಷ್ಟವಾಗಿಯೂ ಚರ್ಚಿಸುವರು. ರಾಷ್ಟ್ರದೊಳಗಿನ ವಿಚಾರವೆಲ್ಲ ಗೌಹತಿಯಲ್ಲಿ ಕೇಂದ್ರೀಕೃತವಾಗುವದು. ಅದರಿಂದಲೇ ಅರಸರೂ, ಸಾಮ್ರಾಜ್ಯ ಸರಕಾರವೂ ಗೌಹತಿಯ ಕಡೆಗೆ ಲಕ್ಷವಿಟ್ಟು ನೋಡುತ್ತಿರುವರು. ನಾವಾದರೂ ಲೋಕನಾಯಕರ ಅನುಜ್ಞೆಯನ್ನು ಪಾಲಿಸುವವರಿದ್ದದರಿಂದ ನಾವೂ ಕೂಡ ಅದನ್ನೇ ನಿರೀಕ್ಷಿಸುತ್ತಿರಬೇಕಾಗಿದೆ. ಶನಿವಾರದಿಂದ ವಿಷಯನಿರ್ಧಾರಕ ಸಭೆಯ ಅಧಿವೇಶನಕ್ಕೆ ಪ್ರಾರಂಭವಾಗುವದಿದೆ. ಆ ದಿನ ಸಮಸ್ತ ಲೋಕನಾಯಕರಿಗೂ, ಪ್ರಜೆಗಳಿಗೂ ನಿರ್ಮಲ ಚಿತ್ತವನ್ನೂ ರಾಷ್ಟ್ರೋದ್ಧಾರದ ನಿರ್ಧಾರವನ್ನೂ ಭಗವಂತನು ದಯಪಾಲಿಸಿ ಆಶೀರ್ವದಿಸಲೆಂದು ನಾವು ಭಕ್ತಿಪೂರ್ವಕವಾಗಿ ಪ್ರಾರ್ಥಿಸುವೆವು.

ಸ್ಫುಟ ಸೂಚನೆಗಳು.

೧ ಕಳೆದ ಶನಿವಾರಕ್ಕೆ ಕಲಕತ್ತೆಯಲ್ಲೊಂದು ಔತಣ ಸಮಾರಂಭವು ನೆರವೇರಿತು. ಔತಣ ಕೊಟ್ಟ ಧಣ್ಯಾತ್ಮರು ಅಲ್ಲಿಯ ಯುರೋಪಿಯನ್ ಕ್ಲಬ್ಬಿನವರು. ಸರ್ವಾಧಿಪತಿಗಳಾದ ಇರ್ವಿನ್ ದೊರೆಗಳು ಆ ದಿನ ಅತಿಥಿಗಳಾಗಿ ಅನುಗ್ರಹಿಸಿದ್ದರು. ಸಮಾರಂಭಕ್ಕೆ ೩೮೦ ಮಂದಿ ಪ್ರಮುಖ ಯುರೋಪಿಯನರು ಸೇರಿದ್ದರು. ಆ ಸಮಯದ ನಡೆದ ಭಾಷಣಗಳು ಯುರೋಪಿಯನರ ಮಾನಸಿಕ ಸ್ಥಿತಿಯನ್ನು ಸ್ಫುಟವಾಗಿ ತೋರುತ್ತವೆ. ಅಧ್ಯಕ್ಷರಾದ ಮಿ|| ಲಿಂಗ್ಲಿತ್‌ಗೋ ಬೆನ್ನಂರವರು ಸರ್ವಾಧಿಪತಿಗಳ ಆರೋಗ್ಯಚಿಂತನೆ ಮಾಡಿ, ಮದ್ಯ ಸೇವನ ಮಾಡುವಾಗ ನುಡಿದದ್ದೇನೆಂದರೆ — 'ನಾವಿಲ್ಲಿ (ಹಿಂದುಸ್ಥಾನದಲ್ಲಿ) ಇದ್ದೇವೆ, ನಮಗಿಲ್ಲಿರುವ ಅಧಿಕಾರವಿದೆ. ನಮ್ಮನ್ನು ಹೊರತಳ್ಳುವವರೆಗೆ ನಾವಿಲ್ಲಿ ಭದ್ರವಾಗಿ ಉಳಕೊಳ್ಳಲು ನಿರ್ಧರಿಸಿರುವೆವು. ನೀತಿಯಿಂತೆಯೂ ನಾವಿಲ್ಲಿ ಇರಲು ಬದ್ಧರಿದ್ದೇವೆ. ಬ್ರಿಟಿಶರೇ ಈ ತನಕ ಹಿಂದುಸ್ಥಾನವನ್ನು ಇಷ್ಟು ಅಭಿವೃದ್ಧಿಗೆ ತಂದರು. ಇಂದ ಮೇಲೆ ಈ ದೇಶದಲ್ಲಿ ಉಳಕೊಳ್ಳುವದು ಈ ದೇಶದ ಹಿತಕ್ಕಾಗಿಯೇ ಅವಶ್ಯವಿದೆ. ವಿಚಾರಶೀಲ ಭಾರತೀಯರ ಕಲ್ಪನೆಯಾದರೂ ಹೀಗೆಯೇ ಇರುತ್ತದೆ. ನಮ್ಮ ಹಿರಿಯರು ಸ್ಥಾಯಿಕರೂ, ಪ್ರಾಮಾಣಿಕರೂ, ಕಲಕರೂ ಆಗಿದ್ದರು. ಈಗಲೂ ಆಥ ಗಣಸಂಪನ್ನ ಜನರು ಬೇಕೇ ಬೇಕು. ಸ್ವಾತಂತ್ರ್ಯ ಕಲ್ಪಕತೆಗಳು ನಮ್ಮ ಜನ್ಮಸಿದ್ಧ ಹಕ್ಕುಗಳಾಗಿವೆ. ಅವನ್ನು ನಾವು ಇಲ್ಲಿಯ ರಾಜ್ಯಭಾರಕ್ಕೆ ಸಂತೋಷದಿಂದ ಅರ್ಪಿಸಬೇಕು. ಭಾರತೀಯರು ಸಂಕಟಸಮಯದಲ್ಲಿ ಕಿಲುಕಿಸ ಕೂಡಲೆ ಸಾಹೇಬರಿಗೆ ಮರೆಹೊಕ್ಕುತ್ತಿದ್ದರು. ಈಗಲೂ ಅದೇ ಸ್ಥಿತಿ ಇದೆ. ನಾವು ಈಗಲೂ ಭಾರತೀಯರಿಗೆ ಮಾಂಬಿನಂತೆ ಆಶ್ರಯ ಕೊಡತಕ್ಕವು." ಮಿ|| ಬೆನ್ನರವರ ಉದ್ಗಾರಗಳನ್ನು ಕೇಳಿ ಸಾಮಾನ್ಯ ಭಾರತೀಯರು ಕೂಡ ಕೊಕ್ಕನೆ ನಕ್ಕು ಬಿಡುವರು. ಬ್ರಹ್ಮದೇವರು ಬುದ್ಧಿ ಹಂಚುವಾಗ, ಭಾರತೀಯರ ಇದ್ದಿಲ್ಲವಾಗಿ ಪ್ರತಿಪಾದಿಸುವ ಧಣ್ಯಾತ್ಮರ ಮೆಂಬರ ಪಙ್ತಿಯೊಳಗಿನವರ ಭಾರತೀಯರ ಪುರಾತನ ಸ್ಥಿತಿಗೂ, ಈಗಿನ ಸ್ಥಿತಿಗೂ ಮಹದಂತರವಿದೆ. ಪುರಾತನ ಕಾಲದ್ದು ವೈಭವವೆಂದು ಸಂಬೋಧಿಸಲ್ಪಟ್ಟಿದೆ, ಈಗ ಅಧೋಗತಿಯೆಂದು ಮಾತ್ರ ರಾಷ್ಟ್ರ ನಿರ್ಮಲ ಚಿತ್ತದ ಲೋಕನಾಯಕರು ಉದ್ಗರಿಸುತ್ತಾರೆ. ಪ್ರಕೃತ ಸ್ಥಿತಿಯ ಗುಣದೋಷಗಳ ಕುರಿತು ಮತಭೇದವಿದ್ದರೂ ಈಗಿನ ಸ್ಥಿತಿಗೆ ಪ್ರಾಮುಖ್ಯವಾಗಿ ಬ್ರಿಟಿಶರೇ ಕಾರಣರೆಂಬ ಮಿ|| ಬೆನ್ನರವರ ವಿಧಾನಕ್ಕೆ ನಮ್ಮ ಒಪ್ಪಿಗೆ ಇದೆ. ಸಾಹೇಬರಿಗೆ ಮರೆಹೊಕ್ಕುವ ಯುಕ್ತಿಯನ್ನು, ಸಾಹೇಬರು ಆಶ್ರಯ ಕೊಡುವ ಕಾರಣವೂ ಈಗ ಸಮಸ್ತರಿಗೂ ಗೋಚರವಾಗದ್ದೇ ಕೆಲವುಟ್ಟಿಗೆ ಇನ್ನೂ ಅವರ ಸೃಷ್ಟಿಯವರು ದೀನರಕ್ಷಕನಾದ ಪರಮಾತ್ಮನಿಗಿಂತ ಸಾಹೇಬರ ಧ್ಯಾನ ಮಾಡುತ್ತಾರೆಂದು ನಮಗೂ ಹಿಪ್ಪಿಗೆ ಆ ದಿನಗಳು ಕಳೆದು ಹೋದವು, ಇನ್ನು ಹೋಗದಿದ್ದರೆ ಅಲ್ಪಾವಕಾಶದಲ್ಲಿಯೇ ಹೋಗುವವು.

---

೨ ಸರ್ವಾಧಿಪತಿಗಳು ಮಿ|| ಬೆನ್ನರವರ ಉದ್ಗಾರಗಳಿಗೇನೂ ಉತ್ತರವನ್ನೀಯದೆ ಮೌನವ್ರತದಿಂದಲೇ ಮನ್ನಿಸಿದರು. ಮುಂದೆ ವಿಲಾಯತಿಯ ಪಾರ್ಲಿಮೆಂಟಿನ ಮೇಲೆ ದೈವಸಂಕಲ್ಪದಿಂದ ಬಂದ ಜವಾಬದಾರಿಯನ್ನು ಮನ್ನಿಸಿದರು. "ಪಾರ್ಲಿಮೆಂಟು ಹಿಂದುಸ್ಥಾನದ ಕಲ್ಯಾಣವನ್ನೇ ಚಿಂತಿಸಬೇಕು" ಇದೆಂಥ ಮಾತು! ಪಾರ್ಲಿಮೆಂಟು ಹಿಂದುಸ್ಥಾನದ ಕಲ್ಯಾಣವನ್ನು ಚಿಂತಿಸುವದಿಲ್ಲೇನು? ಅಥವಾ ಪಾರ್ಲಿಮೆಂಟಿನ ಅಂತರಂಗಜ್ಞಾನವಿಲ್ಲದೆ ಸರ್ವಾಧಿಪತಿಗಳು ತಮ್ಮ ಬಯಕೆಯೇ ಪಾರ್ಲಿಮೆಂಟಿನ ಬಯಕೆ ಇರಬೇಕೆಂದು ಬಯಸಿದರೇನು? ಮುಂದೆ ಕೇಳಿರಿ. 'ಪಾರ್ಲಿಮೆಂಟು ಹಿಂದುಸ್ಥಾನದ ಕಲ್ಯಾಣವನ್ನೇ ಚಿಂತಿಸುವ ಸಂಸ್ಥೆಯಾದಾಗ್ಯೂ, ಆ ಸಂಸ್ಥೆಯು ಕುಶಾಗ್ರ ಬುದ್ಧಿಯ ಯೋಗ್ಯತಾವಂತ ನ್ಯಾಯಬುದ್ಧಿಯ ಸಂಸ್ಥೆ!' ಇದು ಸರ್ವಾಧಿಪತಿಗಳ ನುಡಿಗಳನ್ನು ಕೇಳಿದರೆ ಪಾರ್ಲಿಮೆಂಟಿಗೆ ನಾವು ಸಂಪೂರ್ಣ ಅಧೀನವಿರುತ್ತೇವಾಗಿ ಸ್ಪಷ್ಟವಾಗುತ್ತದೆ. ಪಾರ್ಲಿಮೆಂಟೊಂದು ನ್ಯಾಯಾಸನವು ಅದರ ಮುಂದೆ ಭಾರತೀಯರೆಲ್ಲರೂ ಸ್ವರಾಜ್ಯಪಾತ್ರತೆಯನ್ನು ಸಿದ್ಧಪಡಿಸಿ ಸ್ವರಾಜ್ಯದ ತೀರ್ಪನ್ನು ಪಡೆಕೊಳ್ಳಬೇಕು. ಅಂದರೆ ನಮಗೆ ಸ್ವರಾಜ್ಯ ಸಿಗುವದು. ಬ್ರಿಟಿಶ, ಫ್ರಾನ್ಸ, ಜರ್ಮನಿ ಮುಂತಾದ ಪಾಶ್ಚಾತ್ಯ ದೇಶಗಳಿಗೆ ಯಾವ ಪಾರ್ಲಿಮೆಂಟು ಸ್ವರಾಜ್ಯವನ್ನರ್ಪಿಸಿತ್ತೆಂದು ಇರ್ವಿನ್ ದೊರೆಗಳು ಹೇಳಿದ್ದರೆ, ನಮಗೆ ಮುಂದೆ ಅನುಕೂಲವಾಗುತ್ತಿತ್ತು. ಸ್ವಪರಾಕ್ರಮದಿಂದಲೇ ಈ ರಾಷ್ಟ್ರಗಳು ಸ್ವರಾಜ್ಯವನ್ನು ಸಂಪಾದಿಸಿದ್ದಿರುವಾಗ, ಭಾರತೀಯರಾದರೂ ಅದೇ ಮಾರ್ಗವನ್ನು ಅವಲಂಬಿಸುವದು ಸಹಜವಲ್ಲವೇ? ಪಾರ್ಲಿಮೆಂಟಿನ ನಿಷ್ಪಕ್ಷಪಾತ ಬುದ್ಧಿ, ಕುಶಾಗ್ರ ಬುದ್ಧಿ, ಲೋಕೋತ್ತರ ಯೋಗ್ಯತೆಗಳ ಪುರಾವೆಗಳನ್ನು ನಮ್ಮ ಸರ್ವಾಧಿಪತಿಗಳು ವರ್ಣಿಸಿ ಹೇಳುವ ಅವಶ್ಯಕತೆ ಇಲ್ಲ. ಅವೆಲ್ಲ ನಮಗೆ ಈ ಮುಂಚೆಯೇ ತಿಳಿದು ಹೋಗಿವೆ. ಹಿಂದುಸ್ಥಾನಕ್ಕೆ ಸಾಮರ್ಥ್ಯಪ್ರಾಪ್ತಿಯಾದರೆ ಸ್ವರಾಜ್ಯವನ್ನಿಟ್ಟುಕೊಳ್ಳುವ ಶಕ್ತಿಯು ಪಾರ್ಲಿಮೆಂಟಿಗಿಲ್ಲ, ಸಾಮರ್ಥ್ಯವಿಲ್ಲದಿದ್ದರೆ ಪಾರ್ಲಿಮೆಂಟು ಪ್ರಲಯ ಕಾಲದವರೆಗೂ ಸ್ವರಾಜ್ಯದ ದಾನಮಾಡದು ಈ ಮಾತು ಖಂಡಿತವಾಗಿದೆ.

---

೩ ಕುಂಭಾರವಾಡೆಯ ಜನರ ಅವಸ್ಥೆಯ ಬಗ್ಗೆ ಕಲಕಳಿಸಿ ಇಲ್ಲಿಯ ಸ್ಥಿತಿಯನ್ನು ಲಕ್ಷಿಸಿ, ಸರಕಾರವು ಚಿಕಿತ್ಸಾಲಯವನ್ನು ಸ್ಥಾಪಿಸಲು ಒಪ್ಪಿ, ಹಣವನ್ನು ಕೂಡ ಮಂಜೂರು ಮಾಡಿತ್ತು. ಈ ತನಕ ಅದನ್ನೂ ಇಲ್ಲಿ ಸಮಾಧಾನ ಇಲ್ಲ. ಈ ಕುರಿತು ನಾವು ಈ ಮುಂಚೆಯೇ ಬರೆದಿರುವೆವು. ಕುಂಭಾರವಾಡೆಯಲ್ಲಿ ಚಿಕಿತ್ಸಾಲಯವಿಲ್ಲದೆ ಅರ್ಧಕ್ಕೂ ಮಿಕ್ಕಿ ಜನರು ತಿರಿಕೊಂಡರು. ಹೀಗೆಯೇ ಮುಂದೆ ಸಾಗಿದರೆ ಇಲ್ಲಿ ಬರೇ ಜಾಗಗಳು ಬೆಳೆಯುವವು. ಇದೇ ವೇಳೆಯೊಳಗಿನ ಸಮಸ್ತ ಪ್ರದೇಶವೇ ನಾಶವಾಗುವರು. ಸರಕಾರವು ಈ ಗಾಳಿಯನ್ನು ಯಾಕೆ ಲಕ್ಷಿಸುವದಿಲ್ಲ ಎಂಬುದು ನಮಗಿನ್ನೂ ತಿಳಿಯದು. ಪ್ರಜಾಪಾಲನವು ರಾಜಧರ್ಮವು. ರಾಜ್ಯಾಧಿಕಾರವು ಪ್ರಜಾಪಾಲನಕ್ಕಾಗಿ ಕೊಡಲ್ಪಟ್ಟಿದೆ. ಇಂಥ ಸಂದರ್ಭದಲ್ಲಿ ಸರಕಾರವು ಹಣದ ಕಡೆಗೆ ಎಳ್ಳಷ್ಟು ಲಕ್ಷ್ಯಮಾಡಬಾರದು. ಕುಂಭಾರವಾಡೆಯಲ್ಲಿ ಚಿಕಿತ್ಸಾಲಯವನ್ನಿಡುವದೇನು ದೊಡ್ಡ ಮಾತಲ್ಲ. ಈಗಲೂ ಸರಕಾರವು ಇಷ್ಟು ಡಾಕ್ಟರರಿಗೆ ಅತ್ತ ಕಳಿಸಿ, ಔಷಧೋಪಚಾರ ನಡಿಸಲು ನವಂಬರದಿ ಮೂರು ತಿಂಗಳ ವರೆಗೆ

ನೇಮಿಸುತ್ತಾರೆ. ಈ ಡಾಕ್ಟರರು ಬಂದ ತರುವಾಯ ಗೊಳ್ಳುವವನಲ್ಲಿ. ವಿಷಮ ಜ್ವರವು ಬಂದ ರೋಗಿಗಳಿಗೆ, ಚಳಿ ಜ್ವರದವರಿಗೆ ಸಾಮಾನ್ಯವಾದ ಮದ್ದು ಕೊಟ್ಟು ಇವರು ಬಂದ ತಪ್ಪಿಗೆ ಹೋಗಿಬಿಡುತ್ತಾರೆ. ಊರಲ್ಲಿ ಉಳಕೊಳ್ಳುವ ಪ್ರಸಂಗವಿಲ್ಲದ್ದರಿಂದ ರೋಗಿಗಳಿಂದ ಇವರು ಅನ್ನೂ ಮಾಡಿದ್ದು. ಈ ಮೂಲಕ ಈ ಕ್ರಮದಿಂದ ಪ್ರಜೆಗಳಿಗೂ ಲಾಭವಾಗುವದಿಲ್ಲ. ಇಬ್ಬ ಡಾಕ್ಟರರಿಗೂ ಪ್ರಯಾಣದ ತೊಂದರೇ. ಸರಕಾರದವರು ಇನ್ನು ಸ್ವಲ್ಪ ಹಣ ವೆಚ್ಚ ಮಾಡಿ ಕುಂಭಾರವಾಡೆಯಲ್ಲಿ ಚಿಕಿತ್ಸಾಲಯವನ್ನು ಸ್ಥಾಪಿಸಿದರೆ, ವಾಸ್ತವಿಕವಾಗಿ ಹೆಚ್ಚು ಚಿಕಿತ್ಸಾಲಯವನ್ನು ಉಪಯೋಗಿಸುವ (ಇಲ್ಲಿ ... ಚಿಕಿತ್ಸಾಲಯವಿತ್ತು.) ಪ್ರಜೆಗಳು ಚಿರಋಣಿಯಾಗಿ ಉಪಕಾರಸ್ಮರಣೆ ಮಾಡುವರು. ಕುಂಭಾರವಾಡೆಯಲ್ಲಿ ಚಿಕಿತ್ಸಾಲಯವಿದ್ದರೆ ಇಬ್ಬ ಡಾಕ್ಟರರು ಅತ್ತಕಡೆಯ ಪ್ರಯಾಣ ಬೆಳೆಸುವದೂ ಕೂಡ ಅವಶ್ಯವಿಲ್ಲ. ಇಬ್ಬ ಪ್ರವಾಸಿ ಡಾಕ್ಟರರ ಭತ್ತೆ ಸಂಬಳಗಳ ಬದಲಿಗೆ ಕುಂಭಾರವಾಡೆಯಲ್ಲಿ ಒಬ್ಬ ಡಾಕ್ಟರರನ್ನಿಟ್ಟು ಚಿಕಿತ್ಸಾಲಯವನ್ನಿಟ್ಟರೆ, ಸರಕಾರಕ್ಕೆ ಹೆಚ್ಚು ಖರ್ಚು ಬರದು. ಸರಕಾರವು ಪ್ರಜಾಪಾಲನೆ ತಮ್ಮ ಕರ್ತವ್ಯವೆಂದು ಸ್ಮರಿಸಿ, ಕುಂಭಾರವಾಡೆಯಲ್ಲಿ ಚಿಕಿತ್ಸಾಲಯವೊಂದನ್ನು ಬೇಗನೇ ಸ್ಥಾಪಿಸುವದೇನು? ನಮ್ಮ ಜಿಲ್ಲೆಯೊಳಗಿನ ಲೋಕಸಂಖ್ಯೆಯು ದಿನೇ ದಿನೇ ಕುಗ್ಗುತ್ತ ನಡೆದದೆ. ಪ್ರಜಾಕ್ಷಯಕ್ಕೆ ತಡೆಹಾಕುವದು ಸರಕಾರದ ಪ್ರಥಮ ಧರ್ಮವು. ಅದಕ್ಕಾಗಿ ಹೆಚ್ಚಿಗೆ ಏನಾಗಿ ನಾವು ಹೇಳುವದೇನಿದೆ? ಸರಕಾರದಿಂದಲೂ ಅಪೇಕ್ಷಿಸುವದೇನು?

ಇ. ಇಲ್ಲಿಯ ಶ್ರೀ ಕುಂಭೇಶ್ವರ ದೇವಾಲಯದಲ್ಲಿ ಶ್ರೀ ದತ್ತಜನ್ಮೋತ್ಸವವು ನಿನ್ನೆ ತನಕ ವಿಶೇಷ ಆಡಂಬರಗಳಿಂದ ನೆರವೇರಿತು. ನಿನ್ನೆ ಬಡಬಗ್ಗರಿಗೆಲ್ಲ ಅನ್ನದಾನವಾಯಿತು. ಈ ಉತ್ಸವದ ಖರ್ಚಿಗೆಲ್ಲ ಮೊನ್ನೆ ಮಾಡಿದ ಭಿಕ್ಷಾಟಣದಿಂದ ಸಾಗುತ್ತದೆ. ಭಿಕ್ಷಾಟಣದಿಂದ ಹುಟ್ಟಿದ ಹುಟ್ಟುವಳಿಯಿಂದ ಶ್ರೀ ದತ್ತಜನ್ಮೋತ್ಸವವನ್ನು ನೆರವೇರಿಸುವ ಪದ್ಧತಿಯು ಅನುಕರಣೀಯವಾದದ್ದು. ಭಿಕ್ಷೆ ಹಾಕಿದವರಿಗೆ ತಮ್ಮ ಭಿಕ್ಷೆಯು ಏನಿಯೋಗವನ್ನು ಹಾರದೇ ದಿನವೇ ನೋಡ ಸಿಗುತ್ತದೆ. ಇಂಥ ಪದ್ಧತಿಯನ್ನು ಸಮಸ್ತ ಸಾರ್ವಜನಿಕ ಕೆಲಸಗಳಲ್ಲಿ ಸಾರ್ವಜನಿಕ ಸೇವಕರು ಅನುಕರಿಸಿದರೆ, ಪ್ರಜೆಗಳಿಗೂ ಕಲ್ಯಾಣವಾಗುತ್ತದೆ; ಸಾರ್ವಜನಿಕ ಸೇವಕರೂ ವಿಶ್ವಾಸಪಾತ್ರರಾಗುತ್ತಾರೆ. ಈ ತತ್ವವನ್ನು ರಾ| ಚಿತ್ರಿಗಿಯವರು ಸ್ವೋದಾಹರಣದಿಂದ ಸಿದ್ಧಪಡಿಸಿರುವರು. ಇದಕ್ಕಾಗಿ ರಾ| ಚಿತ್ರಿಗಿಯವರ ಸಾಹಸವನ್ನು ಅಭಿನಂದಿಸುವೆವು.

— ದುಬ್ರಿಸ ಕಾಯಿದೆ ಕೌನ್ಸಿಲಿನ ಸಭಾಪತಿ ಸ್ಥಾನಕ್ಕೆ ಸ್ವರಾಜ್ಯ ಪಕ್ಷದ ಶ್ರೀನರಸಿಂಹ ರಾಜುರವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದಿರುವರು.

— ಸರ್ದಂಕಮದ ಕಾಡಲ ಬಾಳೆ ದಿಂದಿನ ೩ ಹುಟ್ಟಲು ಉಕಕೊಟ್ಟರೆ ವಿಷಪು ಇಳಿಯುತ್ತದಾಗಿ 'ಹಿಬ್ರಾಲಯ ಟ್ರ್ಯಾಮ್ಸ' ಪತ್ರಿಕಾಕರ್ತರು ಪ್ರಕಟಿಸಿರುವರು.

ಭರತಖಂಡ ಸಂಸ್ಥಾನದಲ್ಲಿ ಪುನರ್ವಿವಾಹವು ಕಾಯಿದೆಗೆ ಮಾನ್ಯವೆಂದು ನಿರ್ಧಾರವಾಗಿದೆ. ೧೪ ವರ್ಷ ಪ್ರಾಯದೊಳಗಣ ಹುಡುಗಿಯರು ಅಥವಾ ೧೮ ವರ್ಷ ಪ್ರಾಯದೊಳಗಣ ಹುಡುಗರು ಮದುವೆಮಾಡಿಕೊಳ್ಳಬಾರದೆಂದೂ ವಿಧಿಸೋಣಾಗಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಸಾಮಾನ್ಯ: ಜ್ವರದ ಹಾವಳಿ ನಿಶೇಷ. ಕೆಮ್ಮು ಅದೆ. ಮಿಡಾಣದಲ್ಲಿ ಒಬ್ಬ ಅಂಬಿಗನಿಗೆ ಕಾಡು ಹಂದಿಯು ಓಡಿ ಬೇಳೆಗೆ ಹೋದಾಗ ಹಿಂದಿನಿಂದ ಕೊಡೆಗೆ ಇರಿದು ಪೆಟ್ಟು ಮಾಡಿತಂತೆ. ತನ್ನ ಊರಲ್ಲಿ ಅಂದು ಬಹು ಭಯಮಿಷ್ಟನಾಗಿ ಬಿದ್ದಾಸ್ಯತೆ. ಜನರಿಗೆ ಕೆಲಸಕ್ಕೆಗೆ ಪೆಟ್ಟಾಗಿದೆ. ಪೋಲೀಸರು ಎಚ್ಚರಾಗಲಿ.

ಇದೇ ವಾರದಲ್ಲಿ ಶ್ರೀ ದತ್ತಜಯಂತಿ ಪ್ರೀತ್ಯರ್ಥ ಮುಂಜಾನೆಗೆ ಭಜನ, ಸಂಧ್ಯಾಕಾಲಕ್ಕೆ ಭಜನೆ, ಕೀರ್ತನ, ಆಟ, ನಾಟಕ ಮುಂತಾದ ವಿವಿಧ ಪ್ರಕಾರದ ಸೇವೆಗಳು ನಡೆದವು. ಮೊನ್ನೆ ಭಿಕ್ಷಾಟಣವಾಯಿತು. ನಿನ್ನೆ ಉತ್ಸವವಾಗಿ ಬಡಬಗ್ಗರಿಗೆ ಅನ್ನದಾನವಾಯಿತು.

ಸಾಭಾರ ಸ್ವೀಕಾರ.

ಸ್ವಧರ್ಮ— ಆಕ್ಷಯ ಸಂ. ಕಾರ್ತಿಕ ಸಂಚಿಕೆ, ಸಂಪಾದಕ ಶ್ರೀ ದತ್ತಾತ್ರಯ ರಾಮಚಂದ್ರ ಬೇಂದ್ರೆ ಬಿ. ಎ., ಧಾರವಾಡ. ವಾರ್ಷಿಕ ಚಂದಾ ಐಂಚತೆಮ್ಮ ನೇರೀ ೬ ರೂಪಾಯಿ.

ಸುಧಾರಕ— ವರ್ಷ ೪. ಸಂಚಿಕೆ ೧ ಆಕ್ಟೋಬರ ಸಂಚಿಕೆ. ಸಂಪಾದಕ—ರಾ. ಆರ್. ಕೇ. ನಾಯ್ಕ, ಬಿ. ಎ. ಪ್ರಕಾಶಕ—ರಾ. ವಿ. ವ. ಗಾಂವಕರ, ಕೋರ್ಟ್ ... ವಾ. ವ. ರೂ. ೧—೮—೦

ಶ್ರೀನಿವಾಸ ಹುಬ್ಬಳ್ಳಿ ಕೋ-ಆಪರೇಟಿವ್ ಇನ್‌ಸ್ಟಿಟ್ಯೂಟದ ವಾರ್ಷಿಕ ರಿಪೋರ್ಟ— ೧೯೩೫—೩೬ ಪ್ರಕಾಶಕರು ವಿ. ಎಸ್. ಹಬ್ಬು, ಬಿ ಎಜಿ, ಮುಕ್ತಾಂ; ಕಾರ್ಯಾಲಯ ಇನ್‌ಸ್ಟಿಟ್ಯೂಟ ಆಫೀಸು.

ಕಾರವಾರ —ಯಲ್ಲಾಪುರದ ಪೆಟ್ಟನ ಪ್ರಕರಣದ ನಿರ್ಣಯವಾಯಿತು. ಆರೋಪಿಗೆ ಗಲ್ಲಿನ ಶಿಕ್ಷೆಯನ್ನು ವಿಧಿಸಿರುವರು. ಆರೋಪಿಯಾದವನ ಸಂಬಂಧ ಹೈಕೋರ್ಟಿಗೂ ಅಪೀಲು ಸಂಬಂಧವಿಲ್ಲ. ಈ ಪ್ರಕರಣಕ್ಕೆ ಮೃತನು ಅಪ್ಪ ಬರದಿದ್ದರೆ ಆರೋಪಿಯು ಮೃತನಿಗೆ ಕೊಂದಿದ್ದನು. ಈ ಪ್ರಕರಣ ಈ ವರುಷ ಗಲ್ಲು ಶಿಕ್ಷೆಗೆ ತಕ್ಕದ್ದಾಗಿ ಸಂಭವಿಸುತ್ತಿದೆ.

ಕರ್ನಾಟಕ ಸ್ಕೌಟು ಚಳವಳಿ ಬಾಲಚರರ ಶಿಕ್ಷಣಿಯ ಧಾರವಾಡದಲ್ಲಿ ನಡೆದ ತಾ. ೨೦ ರಿಂದ ೧೧ ರವರೆಗೆ ನಡೆಯಿತು. ಕರ್ನಾಟಕದೊಳಗಿನ ಎಲ್ಲ ಜಿಲ್ಲೆಗಳೊಳಗಿಂದ ಅನೇಕ ಮಂದಿ ಬಾಲಚರರು ಹೋಗಿದ್ದರು. ಕಾರವಾರದಿಂದ ೪೪ ಮಂದಿ ಬಾಲಚರರು ಹೋಗಿದ್ದರು. ಕಾರವಾರದ ಬಾಲಚರರಿಗೆಲ್ಲ ಮೂರನೇಯ ಇನಾಮು ದೊರಕಿದೆ. ಇವರ ಕೆಲಸಗಳು ವಾದ್ಯವು ಪ್ರಶಂಸನೀಯವಾಯಿತು. ಬಾಲಚರ ಸೈನ್ಯದ ಅಧಿಪತಿಗಳಾದ ಮಿ| ಫೆರರ್ಸ ಜಜ್ಜರವರು ಈ ತಂಡಕ್ಕೆ ಗವ್ಹರ್ನರರ ತಂಡವೆಂದು ಸಂಬೋಧಿಸಿದರು. ಯಾಕೆಂದರೆ ಈ ತಂಡಕ್ಕೆ ಗವ್ಹರ್ನರರ ಭಾವಚಿತ್ರವು ಇನಾಮಾಗಿ ದೊರೆತಿತ್ತು; ಕಾರವಾರ ಸ್ಕೌಟ್ಸ್‌ರಿಗೆ ಭೂಷಣವಿದು.

ಯಲ್ಲಾಪುರ— ತಾರೀಖು ೧೪ ೧೩-೧೯೩೬ ನೇಗೆ ಕೆಂಪಟಗಿಯಲ್ಲಿ ದಶಾವತಾರದ ಆಟ ನೋಡಲು ಮೋಟಾರಾರೂಢರಾಗಿ ೧೦-೧೨ ಜನರು ಹೋಗಿದ್ದರು. ಇವರು ಒಂದು ಮನೆಯ ಜಗಲಿಯ ಮೇಲೆ ಕೂತುಕೊಂಡರು. ಆಗ ಮಾರುತಿ ಎಂಬ ಹಿಪ್ಪಿ ಪೋಲೀಸ ಕಾನ್‌ಸ್ಟೇಬಲನು ಹೆಂಡ ಕುಡಿದು ಕೆಳಕ್ಕೆ ಹಾಗೆ ಪ್ರೇಕ್ಷಕರಿಗೆ ದೈಹಿಕ ಶಿಕ್ಷೆ ಕುರು ಮಾಡಿದನು. ಶಿರಸ್ತೇದಾರರಿಗೆ ವರದಿ ಹೇಳಿ, ಅವರು ಬಂದರು ಅವರಿಗೂ ಮಾರುತಿಯು ಧೃಷ್ಟ ಹಾಕಿದನು. ಬವಣಾದಾರರು ಬಂದು ಆತನಿಗೆ ಸ್ವಲ್ಪ ಹೆದರಿಸಿ ಇಲ್ಲಿಯ ಜನರಿಗೆ ನೆರವಾದರು. ಪೋಲೀಸನಿಗೆ ಬಕಲ ನಂಬರು ಕೇಳಲು ಆತನು ೩೪೪ ಎಂದು ಉತ್ತರ ಕೊಟ್ಟನು. ಕತ್ತಿ ಕೊಡೆದು ನೋಡಲು ೫೦೪ ನಂಬರು ಇತ್ತು. ಇಂಥ ಹೆಂಡಗುಡುಕ ಪೋಲೀಸರ ಪಾರುಪತ್ಯವನ್ನು ಮೇಲಧಿಕಾರಿಗಳು ಮಾಡಲಾರರೇನು? ಪೋಲೀಸರೇ ಜನರಿಗೆ ಪೀಡಿಸಹತ್ತಿದರೆ ಜನರು ಹೋಗುವದೆಲ್ಲಿ?

ಬನವಾಸಿ— ಇಲ್ಲಿಯ ಶ್ರೀ ಮಧುಕೇಶ್ವರ ದೇವರ ಸನ್ನಿಧಿಯಲ್ಲಿ ಶ್ರೀಮತ್ ಪರಮಹಂಸ ಬ್ರಹ್ಮಚೈತನ್ಯ ಗೋಂದಾವಲೀ ಮಹಾರಾಜರವರ ಪುಣ್ಯತಿಥಿಯ ಪ್ರೀತ್ಯರ್ಥ ಈ ಶೂತ್ತ ಮಾರ್ಗಶೀರ್ಷ ಕೃಷ್ಣ ೧೯೩೦ರ ೧೧ಕಿ ೧.೧೨ವಾರದ ತನಕ ಶೀಘ್ರಕವಿ ಶಿವರಾಮದಾಸ ಕವಳಗಾರರವರು ಉತ್ಸವ ನಡೆಸುವರು. ಶ್ರೀಗುರುಗಳ ಪಾದುಕೆಗಳ ಪ್ರತಿಷ್ಠೆ, ಅರ್ಚನ, ಸೂರ್ಯನಮಸ್ಕಾರ, ನವಗ್ರಹ ಜಪ, ಶ್ರೀಮದ್ಭಾಗವತದ ಪಾರಾಯಣ ಪುರಾಣ ಕಥನ, ಅಖ್ಯಾಯಿಕಾನ ಸೇವೆ, ಭಜನ, ಕೀರ್ತನಾದಿ ಸೇವೆಗಳು ನಿತ್ಯವೂ ಜರಗುವವು; ಸಪ್ತಮಿ ರವಿವಾರಕ್ಕೆ ಗುರುವು ಪ್ರವಾಸದಂತೆ ಭಿಕ್ಷಾಟನ ದಶಮಿ ಬುಧವಾರಕ್ಕೆ ಮಹಾಸಂತರ್ಪಣೆ, ೧೧ಕಿ ಗುರುವಾರಕ್ಕೆ ಸ್ವಾಮಿಗಳ ಉತ್ಸವ ಮೆರವಣಿಗೆ, ಉತ್ಸವ ಮುಂಗಳಾದಿ ಸೇವೆಗಳು ನಡೆಯುವವು.

ವೃತ್ತಸಾರ.

— ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿ ಬಿಶ್ವಮುಖ್ಯದಿಂದ ಸರಕಾರಕ್ಕೆ ವಿರೋಧಿಸಲು ರಾ| ದಾದಾಭಾಯಿ ದೇಸಾಯಿಯವರು ಒಂದು ಪಕ್ಷವನ್ನು ಸ್ಥಾಪಿಸಿರುವರು. ಸ್ವರಾಜ್ಯ ಪಕ್ಷದವರು ಈ ಪಕ್ಷದಲ್ಲಿ ಸೇರಲು ಒಪ್ಪಿರುವರು.

— ಅಮೇರಿಕೆಯಿಂದ ಹಿಂದುಸ್ಥಾನಕ್ಕೆ ೪೦ ಸಾವಿರ ಕತ್ತೆ ಗಂಟುಗಳು ಬಂದಿರುವವು. ಮುಂಬಯಿಯ ಗಿರಣಿ ಸಾವುಕಾರರು ಖರೀದಿ ಮಾಡಿದರಂತೆ! ರೂಪಾಯಿಯ ಬೆಲೆಯನ್ನು ಕೃತ್ರಿಮವಾಗಿ ಸರಕಾರವು ಏರಿಸಿದ ಫಲವಿದು. ಇಲ್ಲಿಯ ಪ್ರಜೆಗಳಿಗೆ ಹೇರಳ ನಷ್ಟ, ಹೊಸ ಯೋಜನೆಯಂತೆ ಮಣಿಗೆ ೧೨ ರೂಪಾಯಿ ಬೀಳುತ್ತದೆ. ಭಾರತೀಯ ಪ್ರಜೆಗಳು ಗೋಳಿಟ್ಟರೂ ಸರಕಾರವು ಇನ್ನೂ ಕಿವಿಗೊಡದೆ ಈ ಪರಿಯಿಂದ ಅನರ್ಥವನ್ನುಂಟುಮಾಡಿತು.

— ಮುಂಬಯಿಯ ಪೂರ್ಣ ಪ್ರದೇಶದಲ್ಲಿ ಪಠಾಣರಿಗೆ ಊಟ ಮಾಡುವಾಗ ಪೋಲೀಸರು ಹಿಡಿಯಲುದ್ಯುಕ್ತರಾಗಲು ಅವರು ಒಬ್ಬ ಪೋಲೀಸನಿಗೆ ಕೊಂದರು; ಬಳಿಯ ದಹಿನ ಅಂಗಡಿಯ ಹೊರಬದಿಗೆ ಮಲಗಿದ ಒಬ್ಬ ಅಂಗಡಿಕಾರನನ್ನೂ ಕೊಂದರು!

— ಜರೋಪೆಯ ಮುಖ್ಯ ಪ್ರಧಾನರಾದ ಸರ ಮುಹಿಭಾಯ ಮೋಘಾದವರು ಭಕ್ಷ್ಯದ ರಾಜನಾಮೆಯನ್ನಿತ್ತಿರುವರು! ಯುರೋಪಿಯನ್ನರಿಗೆ ಈ ಸ್ಥಳದಲ್ಲಿ ನೇಮಿಸಬೇಕೆಂದು ಗೊತ್ತಾಗಿರುವದಂತೆ! ಸಂಧ್ಯಾವದಲ್ಲಿ ಸ್ವರಾಜ್ಯಕ್ಕೆ ಪ್ರಾರಂಭವಾಯಿತು.

— ತುರ್ಕಸ್ಥಾನದ ಟ್ರ್ಯಾಪ ಎಂಬಲ್ಲಿ ೪-೫ ಕೋಟಿ ರೂಪಾಯಿಗಳ ನಷ್ಟ, ೩೦೦ ಅಂಗಡಿಗಳು ಸುಟ್ಟು ಹೋದವು.

— ಪಾರಿಸದೊಳಗಿನ ರಸಾಯನ ಶಾಲೆಯಲ್ಲಿ ಕೆಲಸ ನಡೆಯುತ್ತಿರುವಾಗ ಧಕ್ಕನೆ ಸ್ಫೋಟವಾಗಿ ಕೆಲಸಗಾರರು ಸುಮಾರು ಕಷ್ಟಗೊಳಿಸುತ್ತಿದ್ದರು. ಪ್ರಯತ್ನದಿಂದ ಅನೇಕರನ್ನು ಹೊರತಂದು ಚಿಕಿತ್ಸಾಲಯಗಳಿಗೆ ಕಳಿಸಲಾಯಿತು. ೧೫೦೦ ಮಂದಿಗಳು ಕೆಲಸ ಮಾಡುತ್ತಿದ್ದರು. ೧೫ ಮಂದಿಗಳು ಅಲ್ಲಿಂದಲೇ ಮರಣಹೊಂದಿದರು. ೪೦ ಮಂದಿಗೆ ಗಾಯಗಳಾಗಿವೆ.

— ಅಮೇರಿಕೆಯವರು ಒಂದು ಹೊಸ ಮಾದರಿಯ ೫೦ ಗಂಟೆಗಳ ಗೊಂಚಲನ್ನು ತಯಾರಿಸಹತ್ತಿರುವರು. ಅದರ ನಾದವು ಬ್ರಿಟನ್, ಐರ್ಲಂಡ, ದಕ್ಷಿಣ ಆಫ್ರಿಕ, ಹಿಂದುಸ್ಥಾನ, ಆಸ್ಟ್ರೇಲಿಯಾಗಳಿಗೆ ಕೇಳಬರುವದಂತೆ!

— ಮುಂಬಯಿಯ ಅಪೋಲೋ ಬಂದರದ ಮೇಲಿನ ಪ್ರಖ್ಯಾತ ತಾಜ ಮಹಾಲ ಹೊಟೆಲಿಗೆ ಬೆಂಕಿಬಿದ್ದು ೫೦೦ ರೂಪಾಯಿಗಳ ನಷ್ಟವಾಯಿತು.

— ವೈಸರಾಯಿಣಿಯ ಮಹಾರಾಜಕನ್ನಿಕೆಯ, 'ಚೆಲುವಂಬಾ ವಿಲಾಸ" ಅರಮನೆಯೊಳಗಿಂದ ೪೦೦೦೦ ರೂಪಾಯಿ ಬೆಲೆಬಾಳುವ ಅಮೂಲ್ಯ ಜಿನಸುಗಳು ಕಳುವಾಗಿ ಹೋದವು. ಆ ಕಾಲಕ್ಕೆ ರಾಜಕನ್ನಿಕೆಯು ಪತಿಯೊಡನೆ ಮುಂಬಯಿಯಲ್ಲಿದ್ದಳು. ಅಪರಾಧಿ ಕಳ್ಳನು ಕಾವಲಿಯಲ್ಲಿ ಸಿಕ್ಕಿದ್ದಾನೆಂದು ತಿಳಿಯುತ್ತದೆ.

— ಮುಂಬಯಿಯ ಪಾಗಳ ವೇಲಿ ಸುಂದರಾಬಾಯಿ ಎಂಬ ಸ್ತ್ರೀಯು ನಿಂತುಕೊಂಡಿದ್ದಳು. ಒಬ್ಬ ತರುಣನು ಅವಳು ತನ್ನ ಹೆಂಡತಿಯೆಂದು ಅವಳನ್ನು ಎಳೆದು ಮನೆಗೆ ಕರಕೊಂಡು ಹೋಗಲಾರಂಭಿಸಿದನು. ಆಕೆಯು ಚಿಟ್ಟನೇ ಚೀರಿ, ತಾನು ಆತನ ಹೆಂಡತಿಯಲ್ಲೆಂದು ನಿಷೇಧಿಸುತ್ತ ಪೋಲೀಸರಲ್ಲಿ ಫಿರ್ಯಾದು ಕೊಟ್ಟಳು. ಅವಳು ಕೋರ್ಟಿನಲ್ಲಿ ವಿಚಾರ ಕಾಲಕ್ಕೆ ಆ ಯುವಕನು ತನ್ನ ಹೆಂಡತಿಯೆಂದೇ ವಾದಿಸ ತೊಡಗಿದನು. ಕೊನೆಗೆ ನಿಜವಾದ ಹೆಂಡತಿಯನ್ನು ಕೋರ್ಟಿಗೆ ತಂದು, ಸವೀಪದಲ್ಲಿ ನಿಲ್ಲಿಸಿ ಪರಿಶೋಧಿಸಲು ಇಬ್ಬರ ರೂಪ-ಸಾಮ್ಯದಲ್ಲಿ ಸಾರಿಗಳಲ್ಲಿ ವ್ಯತ್ಯಾಸ ಕಂಡು ಬಂದ ಆದ್ದರಿಂದ ಮಜಿಸ್ಟ್ರೇಟರು ಒಬ್ಬರೇ ೫೦ ರೂಪಾಯಿ ದಂಡ ಆ ಹೆಂಗಸಿಗೆ ಕೊಡಿಸಿದರು. ಇನ್ನಾರೆ ಕಂಡರೂ, ಬೀದಿಯೊಳಗಿನ ಪರಸ್ತ್ರೀಯರನ್ನು ಪರಾಂಬರಿಸಿ ನೋಡಬೇಕು, ಎಂಬುದು ಅಷ್ಟರ ಮಟ್ಟಿಗೆ ಸಿದ್ಧ!

— ಇರಾಣ ದೇಶದ ಸಿಂಹಾಸನವು ಅತ್ಯಂತ ಬೆಲೆಯುಳ್ಳದ್ದು. ಇಡೀ ಭೂತಲದಲ್ಲಿ ಅಷ್ಟು ಅಮೂಲ್ಯವಾದ ಸಿಂಹಾಸನವಿರುವದಿಲ್ಲವಂತೆ! ಸಿಂಹಾಸನಕ್ಕೆ ಪಚ್ಚೆ ಮುತ್ತು ರತ್ನಾದಿಗಳು ಹೇರಳವಿವೆ. ಇದರ ಬೆಲೆ ೧೨॥ ಕೋಟಿ ರೂಪಾಯಿ. ಸಿಂಹಾಸನದ ಮುಂದೆ ಒಂದು ರತ್ನಗಂಬಳಿಯಿದೆ. ಅದರ ಬೆಲೆ ೬೦ ಲಕ್ಷ ರೂಪಾಯಿ. ಸಿಂಹಾಸನದಲ್ಲಿ ಛತ್ರವಿದೆ. ಆ ಛತ್ರಕ್ಕೂ ರತ್ನಾದಿಗಳಿವೆ. ಅದರ ಮೇಲೆ ಸೂರ್ಯ ಕಿರಣಗಳು ಬಿದ್ದರೆ ಇಂದ್ರಧನುಷ್ಯ ಯಾವಾಗಲು ಬೆಳಗುತ್ತಿದೆ.

— ಚೀನಾ ದೇಶದ ಪದಭ್ರಷ್ಟ ಬಾದಶಹರ ಒಬ್ಬ ಮಗನು ಪಚ್ಚೆಕ್ಕೆ ಸ್ವಿಟ್ಝರ್ಲಂಡದ ಒಂದು ಗ್ರಾಮದಲ್ಲಿರುವರು. ಅರಮನೆಗಳನ್ನು ಒಗೆಯುವ ಪಗ್ಗೆ ಕೆಲಸಗಳನ್ನು ಮಾಡಿ ಅವರು ಹೊಟ್ಟೆ ತುಂಬಿಕೊಳ್ಳುತ್ತಾರೆ. ವಿಧಿಘಟನೆ!

... ಹೊಸ ಶೋಧ! ಆಶ್ಚರ್ಯಕಾರಕ ಪರಮ ಹೊಸ ಯಂತ್ರದ ಶೋಧ ಹಚ್ಚಲಾಗಿದೆ. ಈ ಯಂತ್ರಕ್ಕೆ ರೆಕ್ಕೆಗಳಿವೆ. ಇದನ್ನು ಸೊಂಟಕ್ಕೆ ಹಚ್ಚಿಕೊಂಡರೆ, ಅದರ ಎರಡು ರೆಕ್ಕೆಗಳು ಎರಡೂ ಕೈಗಳ ಹತ್ತರ ಬಂದು ಪಕ್ಷಿಯ ಪಕ್ಕಗಳಂತೆ ಕಾಣುತ್ತವೆ. ಈ ಯಂತ್ರಸಹಾಯದಿಂದ ಆಕಾಶದಲ್ಲಿ ಮಾನವನು ವಿಹರಿಸಬಹುದಾಗಿದೆ ಪಶ್ಚಕ್ಕೆ ಈ ಯಂತ್ರದ ಪ್ರಯೋಗಗಳು ನಡೆದಿವೆ. ಎಂಥಂಥ ಶೋಧ!

— ವರಿಷ್ಠ ಶಾಯದೆ ಕೌನ್ಸಿಲಿನ ಹೊಸ ಅಧಿವೇಶನವು ಬರುವ ಜನವರಿ ೧೯ನೇ ತಾರೀಖಿಗೆ ನೆರೆದು, ಅಧ್ಯಕ್ಷರ ಚುನಾವಣೆಯಾಗುವದು.

... ರಶಿಯಾ ದೇಶದ ಕೊಳೆಗಳು ಪ್ರಾಂತಕ್ಕೆ ಒಬ್ಬಿದ ಕಾಲ ಗ್ರಾಮವು ಭೂಕಂಪದಿಂದ ನಾಶವಾಯಿತು. ೫೦ ಮಂದಿಗಳು ಮೃತಪಟ್ಟರು; ೫೦೦ ಮಂದಿಗಳಿಗೆ ಗಾಯಗಳಾಗಿವೆ.

... ಅಖಿಲ ಕರ್ನಾಟಕ ವಿದ್ಯಾರ್ಥಿ ಸಂಘದ ಪಪ್ರವು ವಾರ್ಷಿಕ ಸಮ್ಮೇಲನವು ಇಳಿದ ೧೭ನೇ ತಾರೀಖಿಗೆ ಡಾ. ನಾರಾಯಣರಾವ ಅಧ್ಯಕ್ಷತೆಯಲ್ಲಿ ನೆರವೇರಿತು.

— ಮುದ್ದುಪ್ರಾಂತದೊಳಗೆ ಭತ್ತಿಸಗಡ ಭಾಗದ ದುರ್ಗ ಜಿಲ್ಲೆಯೊಳಗಿನ ೧,೫೫,೦೦೦ ಜೋಲೆಯ ಜಾತಿಯ ಜನರು ತಮ್ಮ ಮೇಲೆ ಕ್ರಿಶ್ಚನರಿಂದ, ಅಗಸರಿಂದ ಬಹಿಷ್ಕಾರ ಹಾಕಿದ್ದರಿಂದ ಉದ್ವೇಗದಿಂದ ಹಿಂದೂ ಧರ್ಮವನ್ನು ಬಿಡಲು ಸಿದ್ಧರಾಗಿದ್ದರು. ಈ ಸುದ್ದಿ ಕಲಕತ್ತೆಯ ಮಹಾಸಭೆಯ ಮುಂದೆ ಬರಲು ನೆರೆದಿದ್ದ ಹಿಂದೂ ಸಭೆಯ ಪ್ರತಿನಿಧಿಗಳಿಗೆ ತಿಳಿಸಲಾಯಿತು. ಶ್ರೀ ಶ್ರದ್ಧಾನಂದ ಸ್ವಾಮಿಗಳ ಪ್ರ, ಸುಂದರಲಾಲ ಶರ್ಮಾ, ರತ್ನಾಕರ ಈ ಮೂವರು ಕೂಡಲೆ ದುರ್ಗ ಜಿಲ್ಲೆಗೆ ಹೋಗಿ, ಸನಾತನ ಧರ್ಮದ ಮಹತ್ವವನ್ನು ಹೇಳಿದ ಜಾತಿಯ ಬಂಧುವರಿಗೆ ತಿಳಿಸಿ ಹೇಳಿದರು. ಶ್ರೀ ಗುಪ್ತ ಪ್ರಭೃತಿಗಳು ಸ್ವತಃ ವಸ್ತ್ರಗಳನ್ನು ತೊಳೆದು, ಅವರ ಕ್ಷೌರಮಾಡಿ, ಅಸ್ಪೃಶ್ಯ ಬಾಂಧವರು ಕೊಟ್ಟ ನೀರನ್ನು ಕುಡಿದು ಅವರ ವಿಶ್ವಾಸಕ್ಕೆ ಪಾತ್ರರಾದರು.

... ಶ್ರೀ ಜಯಕರ-ಕೇಳಕರರವರಿಗೆ ಪ್ರಕೃತಿಸ್ವಾಸ್ಥ್ಯವಿಲ್ಲ. ಅದರಿಂದ ಅವರು ರಾಷ್ಟ್ರೀಯ ಸಭೆಗೆ ಹೋಗಲಾರರು. ಪ್ರತಿಯೋಗಿ ಸಹಕಾರ ಪಕ್ಷದ ಅಥವಾ ನಾಯಕರೂ ರಾಷ್ಟ್ರೀಯ ಸಭೆಗೆ ಹೋಗಲಿಕ್ಕಿಲ್ಲ. ಅವು ರಾಷ್ಟ್ರೀಯ ಸಭೆಗೆ ಹೋದಲ್ಲಿ ಮಾನಭಂಗವಾಗುವದೆಂದು, ಅದನ್ನು ಪರಿಹರಿಸುವದಕ್ಕಾಗಿ ಅವರು ರಾಷ್ಟ್ರೀಯ ಸಭೆಗೆ ಹೋಗಲಿಕ್ಕಿಲ್ಲವಾಗಿ ತಿಳಿಯುತ್ತದೆ. ಮುಖ್ಯವನ್ನು ಪರಿಹರಿಸುವ ಆಲೋಚನೆಯು ಇಲೆಕ್ಷನಿನ ಸಮಯ ಉಂಟಾಗಲಿಲ್ಲ ಲೋಕಮಾನ್ಯರು ಎಂತು ಹೀಗೆ ಎಂದೂ ಹದರುತ್ತಿದ್ದಿಲ್ಲ. ರಾಷ್ಟ್ರೀಯ ಸಭೆಗೆ ಎಲ್ಲರಿಗೂ ಬರಹೇಳಿ ಲೋಕಮಾನ್ಯತೆಯನ್ನು ತಮ್ಮ ಕಾರ್ಯಕ್ರಮಕ್ಕೆ ಪಡಕೊಳ್ಳಬಲ್ಲವರಾಗಿದ್ದರು. ಅವರ ಶಿಷ್ಯರಿಗೆ ರಾಷ್ಟ್ರೀಯ ಸಭೆಯ ಸಮಯ ಪ್ರಕೃತಿಯ ಅಸ್ವಾಸ್ಥ್ಯ ತತ್ವಜ್ಞಾನ ಪ್ರಮಾಣಗಳೆಂಬವಾಗುವದು ಸುಲಕ್ಷಣವಲ್ಲ; ಆಳಿಂದ ಅಂತಃಪುರದಲ್ಲಿ ಹೋಗಿ ಕಾದಾಡುವ ಮಾಲ್ಪಟ್ಟುಗಳಿಗೆ ತಕ್ಕದ್ದಲ್ಲ. ಪಂಡಿತ ಮದನಮೋಹನ ಮಾಲವೀಯರವರು ರಾಷ್ಟ್ರೀಯ ಸಭೆಗೆ ಹೋಗಬೇಕೆಂಬ ಪಕ್ಷದವರಂತೆ!

— ಅಲ್ಲಾಹಾಬಾದದಲ್ಲಿ ನೀರಿನ ಪೂರೈಕೆ ಇಲ್ಲದೆ ಜನರು ಗೋಳಾಡುತ್ತಿರುವರು. ಸರಕಾರವು ಮುನಸಿಪಾಲಿಟಿಯವರಿಗೆ ಈ ಬಗ್ಗೆ ಕೂಡಲೆ ಪಡುವೀಜ ಅಗಬೇಕಾಗಿ ಸಕ್ತ ತಾಕೀತು ಕೊಟ್ಟಿರುವದು.

— ಪದಭ್ರಷ್ಟ ಇಂದೂರ ಮ.ಹಾರಾಜರ ಅರಮನೆ ಕಟ್ಟೋಣ ಕೆಲಸವು ಈ ವರ್ಷ ಡಿಸೆಂಬರ ಅಂತ್ಯಕ್ಕೆ ಪೂರ್ಣವಾಗುವದು. ಇದಕ್ಕೆ ೩೩ ಕೋಟಿ ಗಳಿವೆ. ಬಳ್ಳಾಲ ಕೊಟ್ಟಿಗೆಗೆ ಒರೆ: ೫೦ಲಕ್ಷ ಮಾನುಗಳು ಖರ್ಚು ಆಗಿಹೋಗಿವೆಯಂತೆ!

— ಬಾಲವಿವಾಹ ಪ್ರತಿಬಂಧಕ್ಕೆ ಜನರ ಅಭಿಪ್ರಾಯ ಅರಿತುಕೊಳ್ಳಲು ಬಡೋದಾ ಮಹಾರಾಜರು ಕಮೀಟಿಯೊಂದನ್ನು ನೇಮಿಸಿರುವರು.

— ಮನೆಯಲ್ಲಿ ಕೂತಲ್ಲಿಯೇ ಕೈಕೊಳ್ಳಬಹುದಾದ ಉದ್ಯೋಗಗಳನ್ನು ಕೈಕೊಳ್ಳಲು ಮುದ್ರಾಸ ಸರಕಾರವು ಬಿಡ್ಯೋಗಿಗಳ ಖಾತೆಗೆ ಸ್ಥಾಪಿಸಿದೆ.

— ಗೋಂಡಲ ಸಂಸ್ಥಾನದ ಮಹಾರಾಜರು ತಮ್ಮ ಆಶ್ರಯದಿಂದ ಕಾಲೇಜ ಶಿಕ್ಷಣವನ್ನು ಮುಗಿಸಿ ಬಂದ ಜಿವಾಬ್ದಾರ ರಾಠೋಡ ಎಂಬ ಬರೇ ೨೨ ವರ್ಷ ಪ್ರಾಯದ ಕುವರಿಗೆ ಪ್ರೈವೇಟ ಸೆಕ್ರೆಟರಿಗಳಾಗಿ ನೇಮಿಸಿರುವರು. ಸಂಸ್ಥಾನದ ಇತರೇ ಅಧಿಕಾರಿಗಳು ಕಾಗದಪತ್ರಗಳನ್ನು ಇವಳ ಹಸ್ತದಿಂದ ಕಳುಗಿಸ ಬೇಕೆಂದೂ ಹುಕುಮು ಮಾಡಿರುವರು. ಮಂತ್ರಿಪದದಷ್ಟೇ ಜವಾಬದಾರಿಯ ಅಧಿಕಾರಸ್ಥಾನವನ್ನು ಅನುಭವಿಸುವ ಹೆಣ್ಣುಮಗಳಿಗೆ ಕೊಟ್ಟಿರುವದರಿಂದ ಅಲ್ಲಿಯ ಪ್ರಜೆಗಳು ಬಹಳ ಅಸಮಾಧಾನ ಸ್ಥಿತಿಯಲ್ಲಿರುವರು. ಸ್ತ್ರೀ ಸ್ವಾತಂತ್ರ್ಯದ ಜೋರು!

— ಧಾರವಾಡ ಜಿಲ್ಲೆಯ ಲೋಕಲ್‌ಬೋರ್ಡಿನ ಸ್ಕೂಲ ಬೋರ್ಡಿನವರು ಹೆಡ್‌ಮಾಸ್ತರರಿಗೆ ಭಕ್ತಿ ಕೂಡದೆಂದು ನಿರ್ಧರಿಸಿರುವರು. ಧಾರವಾಡ ಮುನಸಿಪಾಲಿಟಿಯು ಸ್ಕೂಲದ ... ನವರು ಹಾಗೆ ಕೊಡತಕ್ಕದ್ದೆಂದು ನಿರ್ಣಯಿಸಿರುವರು. ಹೀಗೆ 'ಸ್ವರಾಜ್ಯ'ದ ಅವಶ್ಯಕತೆ?

— ಬೆಳಗಾಂವ ಜಿಲ್ಲೆಯಲ್ಲಿ ಸುಲಿಗೆ ಮಾಡಿ ಜೀವಿಸುವ ಜನರಿರುವರು. ಅವರನ್ನು ಹಿಡಿಯಲು ಸರಕಾರವು ಒಬ್ಬ ಅಧಿಕಾರಿಯನ್ನು ನೇಮಿಸಿದ್ದರು. ಈ ಅಧಿಕಾರಿಯೂ, ಆತನ ಕೈಕೆಳಗಿನ ಶಿಪಾಯಿಗಳೂ ಸುಲಿಗೆಗಾರರೊಡನೆ ಒಳಸಂಚು ಮಾಡಿ ಅವರಿಂದ ಊರಲ್ಲಿ ಸುಲಿಗೆ ಮಾಡಿಸಿ ಹಂಚಿಕೊಳ್ಳುತ್ತಿದ್ದರಂತೆ! ಅಧಿಕಾರಿಗಳಿಗೆ ಸೆರೆಹಿಡಿಯಲಾಗಿದೆ. ಬೇಲಿಯೇ ಎದೆ ತಿನ್ನಹತ್ತಿತು!

—ಪ್ರಖ್ಯಾತ ಹಾದಿಸೇವಕರಾದ ಆಚಾರ್ಯ ಪ್ರಫುಲ್ಲಚಂದ್ರ ರೋಯ್‌ರವರು ಮೈಸೂರಿನ ಶ್ರೀಮನ್ಮಹಾರಾಜರವರಿಗೆ ಪರದೇಶಸಂಚಾರವನ್ನೇಕೆ ಕೈಕೊಂಡಿಲ್ಲವಾಗಿ ಪ್ರಶ್ನಿಸಿದರು. ಒಕ್ಷಣವಾಗಿ ರಾಜ್ಯಭಾರ ಮಾಡಲು ಪರದೇಶಸಂಚಾರ ಮಾಡುವದವಶ್ಯವಿಲ್ಲವಾಗಿ ಮಹಾರಾಜರು ಉತ್ತರ ಕೊಡಿಸಿದರು. ಪರದೇಶದಲ್ಲಿಯೇ ಕಾಲ ಕಳೆಯುವ ಬಡೋದೆಯ ಮಹಾರಾಜರು ಬೋಧಗಲಿಯಬಹುದು.

— ಸಹರಾಣಪುರದ ಒಬ್ಬ ದೊಡ್ಡ ಶ್ರೀಮಂತನ ಪತ್ನಿಯು ೪೦,೦೦೦ ರೂಪಾಯಿಗಳನ್ನು ಜ್ವಾಲಾಪುರದ ಮಹಾ ವಿದ್ಯಾಲಯಕ್ಕೆ ಅರ್ಪಿಸಿದಳು.

— ಬಂಗಾಲದ ಗೋಘ್ರಾ ಜಿಲ್ಲೆಯಲ್ಲಿ ಧರ್ಮಾಂತರ ಹೊಂದಿದ ಕ್ರೈಸ್ತರನ್ನು ಪ್ರಾಯಶ್ಚಿತ್ತಪೂರ್ವಕವಾಗಿ ಹಿಂದೂ ಧರ್ಮದಲ್ಲಿ ಸೇರಿಸಿಕೊಳ್ಳಲಾಯಿತು.

ರಾಷ್ಟ್ರೀಯ ಸಭೆಯ ಸುದ್ದಿ.

ಪಂಡಿತ ಮೋತಿಲಾಲ ನೆಹರೂರವರು ೨೦ನೇ ತಾರೀಖಿಗೆ ಗೌಹತಿಗೆ ಮುಟ್ಟುವರು.

ರಾಷ್ಟ್ರೀಯ ಸಭೆಯ ಸ್ವಯಂಸೇವಕರಾಗಬಾರದಾಗಿ ಹಿಂದು ಸರಕಾರಿ ಹ್ಯಾಸ್ಕೂಲ ಮುಖ್ಯಾಧ್ಯಾಪಕರು ಹುಕುಮನ್ನು ಹೊರಡಿಸಿರುವರು.

ಅಧ್ಯಕ್ಷರ ನಿವಾಸಸ್ಥಾನಕ್ಕೆ 'ಚಿತ್ತರಂಜನಪುರ'ವೆಂದು ಹೆಸರು ಕೊಟ್ಟಿರುತ್ತದೆ.

ರಾಷ್ಟ್ರೀಯ ಸಭೆಯ ಪ್ರಮುಖದ್ವಾರಕ್ಕೆ 'ಸ್ವರಾಜ್ಯದ್ವಾರ'ವೆಂದು ಹೆಸರು. ಉತ್ತರ ದ್ವಾರಕ್ಕೆ 'ಗಾಂಧಿದ್ವಾರ'; ದಕ್ಷಿಣ ದ್ವಾರಕ್ಕೆ 'ಅವಸಾರಿ ದ್ವಾರ'ವೆಂದು ಹೆಸರು ಕೊಡಲ್ಪಟ್ಟಿದೆ.

ಮಹಾತ್ಮರ ಆತ್ಮಚರಿತ್ರ.

೩ನೇ ಭಾಗ

(೧) ಬಿರುಗಾಳಿಯ ಗರ್ಜನೆ

ಹೆಂಡರ ಮಕ್ಕಳೊಡನೆ ಪ್ರಯಾಣ ಬೆಳೆಸಿದ್ದು ಇದೇ ಮೊದಲನೇ ಬಾರಿ. ಬಾಲವಿವಾಹದಿಂದ ಮಧ್ಯಮವರ್ಗದ ಹಿಂದೂ ಸಮಾಜದಲ್ಲಿ ಗಂಡನು ಓದಿಕೊಂಡಿದ್ದರೆ, ಹೆಂಡತಿಯು ಅಕ್ಷರಶತ್ರುವಾಗಿರುತ್ತಾಳೆ. ಇದರಿಂದ ಗಂಡ-ಹೆಂಡಿರೊಳಗೆ ಒಂದು ದೊಡ್ಡ ಭೇದವುಂಟಾಗುತ್ತದೆ. ಗಂಡನು ಹೆಂಡತಿಯ ಶಿಕ್ಷಕನಾಗಬೇಕಾಗುತ್ತದೆ. ಈ ಸ್ಥಿತಿಯನ್ನು ನಾನು ಈ ಕಥೆಯಲ್ಲಿ ಆಗಿಂದಾಗ ವಿವರಿಸಿದ್ದೇನೆ. ಈ ಪ್ರಕಾರ ಹೆಂಡರ-ಮಕ್ಕಳ ಉಡಿಗೆ-ತೊಡಿಗೆಗಳನ್ನೂ ಆಹಾರಸಾಮಗ್ರಿಗಳನ್ನೂ, ಹೊಸ ವ್ಯವಸ್ಥೆಗೆ ತಕ್ಕಂಥ ಸರಂಜಾಮುಗಳನ್ನೂ ನಾನೊಬ್ಬನೇ ಕಲ್ಪಿಸಬೇಕಾಯಿತು. ಆ ಕಾಲದ ನೆನಪು ಮಾಡಿದರೆ, ನನಗೆ ಒಮ್ಮೊಮ್ಮೆ ನಗೆ ಬರುತ್ತದೆ. ಗಂಡನಿಗೆ ಪತಿನಿಷ್ಠೆ ವಿಧೇಯಳಾಗಿರುವದು ಮಹತ್ತಮವಾದ ಧರ್ಮವೆಂದು ಹಿಂದೂ ಪತ್ನಿಯು ತಿಳಿಸುತ್ತಾಳೆ. ತನ್ನ ಹೆಂಡತಿಯು ಅಧೀನಳು ತಾನೆಂದೂ, ತಾನು ಹೇಳಿದಂತೆ ಹೆಂಡತಿಯು ಕೇಳಿಯಬೇಕೆಂದೂ ಗಂಡನ ಕಲ್ಪನೆಯಾಗಿರುತ್ತದೆ.

ಈ ಕಾಲದಲ್ಲಿ ನಾನು ಸುಧಾರಿಸಿದವನಾಗಿ ನಡೆಯಬೇಕಾದರೆ, ಆದಷ್ಟರ ಮಟ್ಟಿಗೆ ಯುರೋಪಿಯನ್ನರ ಕ್ರಮವನ್ನೇ ನಾನು ಅನುಸರಿಸಬೇಕೆಂದು ನನ್ನ ಕಲ್ಪನೆಯಿತ್ತು. ಈ ಪ್ರಕಾರ ನಾವು ಕೆಲಮಟ್ಟಿಗೆ ಪ್ರತಿಷ್ಠೆಯನ್ನು ಸಂಪಾದಿಸಬಹುದೆಂದೂ ನನ್ನ ಕಲ್ಪನೆಯಿತ್ತು. ಪ್ರತಿಷ್ಠೆಯ ಹೊರತು ಸಮಾಜ ಸೇವೆ ಮಾಡುವದು ಅಸಾಧ್ಯವೆಂತಲೂ ನನ್ನ ಕಲ್ಪನೆ ಇತ್ತು.

ಹೀಗೆ ಹೆಂಡರು—ಮಕ್ಕಳ ಉಡಿಗೆ—ತೊಡಿಗೆಗಳ ನಮೂನೆಯನ್ನು ನಾನು ಕಲ್ಪಿಸಿದೆನು. ಅವರು ಕಾಠೇವಾಡದೊಳಗಿನ ಒಸಿಯ ಜಾತಿಯವರೆಂದು ತಿಳಿಯಬಾರದೆಂದು ನನ್ನ ಆಲೋಚನೆ. ಆ ಕಾಲಕ್ಕೆ ಹಿಂದೀಯರಲ್ಲಿ ಪಾರಸೀಯರು ಶಿಖರವನ್ನೇರಿದವರು, ಪಾರಸೀಗಳೆಂದೆನಿಸಲ್ಪಡುತ್ತಿದ್ದರು. ಆದರಿಂದ ಯುರೋಪಿಯನ್ನರ ಮಾದರಿಯನ್ನನುಸರಿಸುವದು ಅಯೋಗ್ಯವೆನಿಸಿದಾಗ ನಾವು ಪಾರಸೀಗಳ ಮಾದರಿಯನ್ನು ಅನುಸರಿಸಿದೆ. ನನ್ನ ಹೆಂಡತಿಯು ಪಾರಸೀ ಸೀರೆಯನ್ನು ತೊಟ್ಟುಕೊಳ್ಳುತ್ತಿದ್ದಳು. ಪಾರಸೀ ಅಂಗಿ-ಚಣ್ಣಗಳನ್ನು ಹುಡುಗರು ಧರಿಸುತ್ತಿದ್ದರು. ಕಾಲು ಚೀಲ ಹಾಗು ಮೊಜ್ಜೆಗಳನ್ನು ಎಲ್ಲರೂ ಧರಿಸಬೇಕಾಗಿತ್ತು. ನನ್ನ ಹೆಂಡರು—ಮಕ್ಕಳಿಗೆ ಬಹುಕಾಲದವರೆಗೆ ಅವುಗಳ ಅಭ್ಯಾಸವೇ ಆಗದು. ಮೊಜ್ಜೆ ಜೋಡುಗಳಿಂದ ಕಾಲುಗಳು ಕಚ್ಚುತ್ತಿದ್ದವು. ಕಾಲು ಚೀಲಗಳೆಲ್ಲ ಬೆವರಿನಿಂದ ನಾರುತ್ತಿದ್ದವು. ಕಾಲು ಬೆರಳುಗಳಿಗೆ ಆಗಿಂದಾಗ ಪೆಟ್ಟಾಗುತ್ತಿತ್ತು. ಈ ಕುರಿತು ಹೆಂಡರು-ಮಕ್ಕಳು ಆಕ್ಷೇಪಿಸಿದಾಗ ನಾನು ಆ ಕಾಲಕ್ಕೆ ಸಮಯೋಚಿತ ಉತ್ತರವನ್ನಿತ್ತು ಸುಮ್ಮಗಿರಿಸುತ್ತಿದ್ದೆ. ಉತ್ತರಗಳ ತರ್ಕದಿಂದ ಅವರಿಗೆ ಸಮಾಧಾನವಾಗುತ್ತಿದ್ದಿಲ್ಲ. ನನ್ನ ಅಧಿಕಾರಬಲದಿಂದಲೇ ಅವರು ಸುಮ್ಮಗಿರುತ್ತಿದ್ದರು. ಉಡಿಗೆ-ತೊಡಿಗೆಗಳಲ್ಲಿ ತಿದ್ದುಪಾಟುಗಳನ್ನು ಅವರು ನಿರುಪಾಯವಾಗಿ ಕೈಕೊಂಡರು. ಹಾಗೆಯೇ ಅದಕ್ಕಿಂತ ಹೆಚ್ಚಿನ ಅಸಮಾಧಾನದಿಂದ ಚಮಚ-ಮುಳ್ಳುಗಳಿಂದ ಭೋಜನ ಮಾಡಲಾರಂಭಿಸಿದರು. ಸುಧಾರಣೆಯ ಮೋಹವು ಕಡಿಮೆಯಾದ ನಾನು ವಿಮುಕ್ತನಾದ ಕೂಡಲೆ ಅವರು ಚಮಚ-ಮುಳ್ಳುಗಳನ್ನು ಬಿಟ್ಟುಕೊಟ್ಟರು. ಮುಂಚಿನ ಜೀವನಕ್ರಮಕ್ಕೆ ಬರಬೇಕಾದರೂ ಸ್ವಲ್ಪ ಕಷ್ಟವಾಯಿತು. ಯಾಕೆಂದರೆ ಈ ಬದಲಾವಣೆಗಳು ಅವರ ಮೈಯಲ್ಲಿಯೇ ಹೋಗಿದ್ದವು. ಆದರೂ ಸುಧಾರಣೆಯ ಬೇಗೆಯನ್ನು ತೂರಿದು ನಾವು ಸ್ವತಂತ್ರರಾಗಿದ್ದೇವೆ. ಈಗ ಸುಖಿಗಳಾಗಿದ್ದೇವೆ.

ಇದೇ ಹಡಗದ ಮೇಲೆ ನಮ್ಮ ಜೊತೆಯಲ್ಲಿ ಕೆಲವು ಆಪ್ತರೂ, ಗೆಳೆಯರೂ ಇದ್ದರು. ಇವರಿಗೂ ಇನ್ನಿತರ ಪ್ರಯಾಣಿಕರಿಗೂ ನಾನು ಆಗಿಂದಾಗ ಭೆಟ್ಟಿಯಾಗುತ್ತಿದ್ದೆ. ಹಡಗವು ನಮ್ಮ ಪಕ್ಷಗಾರರದಿತ್ತು. ಬೇಕಾದಲ್ಲಿ ಬೇಕಾದಾಗ ಬೇಕಾದ ಹಾಗೆ ತಿರುಗಾಡಲು ನನಗೆ ಅವಕಾಶವಿತ್ತು.

ಹಡಗವು ನಡುವೆ ನಾತಾಲಕ್ಕೆ ಹೋಗುವದಿತ್ತು. ಮಧ್ಯಂತರದಲ್ಲಿ ನಿಲ್ಲುವದಿದ್ದಿಲ್ಲ. ಆದರಿಂದ ಪ್ರಯಾಣಕ್ಕೆ ೧೮ ದಿನಗಳು ತಗಲಿದವು. ದಕ್ಷಿಣ ಆಫ್ರಿಕೆಯಲ್ಲಿ ಮುಂದೆ ಬರತಕ್ಕ ಬಿರುಗಾಳಿಯ ಸೂಚನೆ ಕೊಡಲು ಸಮುದ್ರದ ಮೇಲೆ ದೊಡ್ಡದೊಂದು ಬಿರುಗಾಳಿ ಬೀಸಿತು. ಆ ಕಾಲಕ್ಕೆ ನಾವು ನಾತಾಲದಿಂದ ೪ ದಿನಗಳ ಹಾದಿಯ ಮೇಲೆ ಇದ್ದೆವು. ದಕ್ಷಿಣ ಗೋಲಾರ್ಧದಲ್ಲಿ ಡಿಸೆಂಬರ ತಿಂಗಳಿಂದ ರೆ ಬೇಸಿಗೆ-ಮಳೆಗಾಲ ದಿನಗಳು. ಆದರಿಂದ ಅತ್ತ ಕಡೆ ಸಮುದ್ರದಲ್ಲಿ ಚಿಕ್ಕ-ದೊಡ್ಡ ಬಿರುಗಾಳಿಗಳು ಸಂಭವಿಸುತ್ತಿದ್ದವು. ನಮ್ಮ ಪ್ರಯಾಣಸಮಯದ ಬೀಸಿದ ಬಿರುಗಾಳಿಯು ಭಯಂಕರವಿತ್ತು. ಬಹು ಕಾಲದ ವರೆಗೆ ಬೀಸಿತು. ಆ ಸಮಯ ಹಡಗದ ಮೇಲಿನವರೆಲ್ಲರೂ ಗಾಬರಿಯಾದರು. ಆ ಸಮಯದ ಜನರ ಆ ದೃಶ್ಯ ಕಂಡ ಎಲ್ಲರೂ ಐಕ್ಯರಾದರು. ಹಿಂದೂ-ಮುಸಲ್ಮಾನ-ಕ್ರಿಸ್ತನ ಮುಂತಾದ ಪ್ರಯಾಣಿಕರೆಲ್ಲರೂ ತಮ್ಮೊಳಗಿನ ಭೇದಗಳೆಲ್ಲವನ್ನೂ ಮರೆತು ಐಕ್ಯಮತ್ಯದಿಂದ ಒಬ್ಬನೇ ಪರಮಾತ್ಮನ ಧ್ಯಾನಮಾಡಹತ್ತಿದರು. ಅನೇಕರು ಅನೇಕ ಪರಿಯಿಂದ ಹರಕೆಗಳನ್ನು ಹೇಳಿಕೊಂಡರು. ಪ್ರಯಾಣಿಕರೊಡನೆ ಕಪ್ತಾನನೂ ಪ್ರಾರ್ಥನೆ ಮಾಡಹತ್ತಿದನು. ಬಿರುಗಾಳಿಯು ಭಯಂಕರವಾದಾಗ್ಯೂ, ಇದಕ್ಕೂ ಭಯಂಕರವಾದ ಬಿರುಗಾಳಿಗಳ ಅನುಭವವು ತನಗಿದ್ದವಾಗಿ ಹಡಗವು ಭದ್ರವಾಗಿದ್ದು ಬೇಕಾದ ಬಿರುಗಾಳಿಯನ್ನು ಸಹಿಸಬಲ್ಲದೆಂದು ಅವನು ಆಶ್ವಾಸನವನ್ನಿತ್ತನು. ಆದರೂ ಪ್ರಯಾಣಿಕರಿಗೇನು ಸಮಾಧಾನವಾಗಲಿಲ್ಲ. ಕ್ಷಣಕ್ಷಣಕ್ಕೆ ಅಪಾಯಕರವಾದ ಸಪ್ಪಳವಾಗುತ್ತಿತ್ತು, ಹಡಗ ಕ್ಕೆ ಪೆಟ್ಟು ಬಿತ್ತೆಂದು ಎಲ್ಲರೂ ಭಯಭೀತರಾಗಿದ್ದರು. ಹಡಗದ ಹಿಂದೋಲನವನ್ನು ನೋಡಿ ಕ್ಷಣಾರ್ಧದಲ್ಲಿಯೇ ಬುಡಮೇಲಾಗಬಹುದೆಂದು ಎಲ್ಲರೂ ನಡುಗುತ್ತಿದ್ದರು. ಈ ಸಮಯ ಎಲ್ಲರೂ ಅಂತಸ್ತಿನ ಮೇಲಿಂದಿಳಿದು ಹಡಗದ ಕೆಳಕ್ಕೆ ಹೋಗಿದ್ದರು. 'ಈಶ್ವರೇಚ್ಛೆ' ಎಂದು ಎಲ್ಲರೂ ಧ್ಯಾನಿಸುವವರೇ. ಇಂಥ ಒಂದು ದಿನ ನಾವು ಈ ಯಾತನೆಯನ್ನು ಅನುಭವಿಸಿದೆವು. ಕಟ್ಟಕಡೆಗೆ ಮುಗಿಲು ನಿಚ್ಚಳವಾಯಿತು. ಸೂರ್ಯನಾರಾಯಣನು ತಲೆಯೆತ್ತಿ ಹಣಕಿ ನೋಡಿದನು. ಈಗ ಬೇಕಾದರೆ ಬಿರುಗಾಳಿ ತೀರಿತೆಂದು ಕಪ್ತಾನನು ಉದ್ಗರಿಸಿದನು. ಪುನಃ ಜನರೆಲ್ಲರೂ ಸಂತೋಷಭರಿತರಾದರು. ಸಂಕಟ ನಿವಾರಣೆಯಾದ್ದರಿಂದ ಪರಮೇಶ್ವರನ ಧ್ಯಾನವೂ ಲೋಪಹೊಂದಿತು. ಕುಡಿಯುವದು, ತಿನ್ನುವದು, ಹಾಡುವದು ಮುಂತಾದ ಸಾಂಸಾರಿಕ ಭೋಗಗಳು ಪುನಃ ತಲೆದೋರಿದವು. ಅಂತಕನ ಭೀತಿಯು ಓಸರಿಸಿ ಹೋಯಿತು. ಹಾಗು ಪ್ರಾರ್ಥನೆಯು ಮನೋಭೂಮಿಯು ಬಯಲಾಗಿ ಮಾಯೆಯುಂ ಪುನಃ ಪ್ರಸ್ಥಾಪನೆ ಹೊಂದಿತು. ವಾಡಿಕೆಯಂತೆ ನಮಾಜು ನಡೆದಿತ್ತು. ಪ್ರಾರ್ಥನೆಗಳೂ ನಡೆಯುತ್ತಿದ್ದವು. ಆದರೆ ಸಂಕಟಕಾಲದಲ್ಲಿ ನಡೆದಂತೆ ಅಂತಃಕರಣಪೂರ್ವಕವಾಗಿ ಅವು ನಡೆಯುತ್ತಿರಲಿಲ್ಲ.

ಈ ಬಿರುಗಾಳಿಯಿಂದ ಪ್ರಯಾಣಿಕರೊಡನೆ ನಾನು ಐಕ್ಯನಾದೆನು. ಬಿರುಗಾಳಿಗೆ ನಾನು ಹೆದರುತ್ತಿದ್ದಿಲ್ಲ. ಅನೇಕ ಬಿರುಗಾಳಿಗಳನ್ನು ನಾನು ನೋಡಿದ್ದೆ. ನನಗೆ ಚಲೋ ಅಂಬಿಗನು ಎನಗೆ ವಾಕರಿಕೆಯ ಉಪದ್ರವವಿದ್ದಿಲ್ಲ. ಆದರಿಂದ ಪ್ರಯಾಣಿಕರೊಳಗೆ ನಾನು ನಿರ್ಭಯದಿಂದ ತಿರುಗಾಡಿ ಅವರಿಗೆ ಹುರಿದುಂಬಿಸುತ್ತಿದ್ದೆ. ಕಪ್ತಾನನ ಹೇಳಿಕೆಯನ್ನು ಆಗಿಂದಾಗ್ಗೆ ತಿಳಿಸುತ್ತಿದ್ದೆ. ಈ ಪ್ರಕಾರ ಬಡಗಿನಿಂದ ಗೆಳೆತನದಿಂದ ನನಗೆ ಚಲೋ ಲಾಭವಾಯಿತು.

ನಮ್ಮ ಹಡಗವು ಡಿಸೆಂಬರ ೧೮ ಅಥವಾ ೧೯ ನೇ ತಾರೀಖಿಗೆ ದರ್ಬಾನ ಬಂದರದಲ್ಲಿ ಲಂಗರು ಹಾಕಿತು. "ನಾದೇರಿ" ಹಡಗವೂ ಅದೇ ದಿನ ಮುಟ್ಟಿತು.

ಆದರೆ ನಿಜವಾದ ಬಿರುಗಾಳಿಯು ಈ ಮುಂದೆಯೇ ಬೀಸುವದಿದೆ.

ವಿಮರ್ಶೆ.

ಮಕ್ಕಳ ಪುಸ್ತಕ—ಬೆಂಗಳೂರಿನಿಂದ ಶ್ರೀ ಭಾರದ್ವಾಜರವರು ಚಿಕ್ಕ ಮಕ್ಕಳಿಗಾಗಿ ಹೊರಡಿಸುವ ಈ ಮಾಸಪತ್ರಿಕೆಯ ೨ ಸಂಚಿಕೆಗಳು ನಮ್ಮ ಕೈಸೇರಿವೆ. ಶ್ರೀ ಭಾರದ್ವಾಜರವರು ನಮ್ಮ ಕರ್ನಾಟಕಕ್ಕೆ ಮಾಡಿದರು. ಕನ್ನಡದಲ್ಲಿ ಇಂಥ ಉಪಯುಕ್ತವಾದ ಪತ್ರಿಕೆಗಳು ಹುಟ್ಟಿಕೊಂಡಿಲ್ಲ. ಪುಸ್ತಕದ ಆಕಾರ, ಅಕ್ಷರ, ವಿಷಯ ಮುಂತಾದ ವ್ಯವಸ್ಥೆಯು ಚಿತ್ತಾಕರ್ಷಕವಿದೆ. ಶ್ರೀ ಭಾರದ್ವಾಜರವರು ಈ ಮಾಸಪತ್ರಿಕೆಯಲ್ಲಿ ರಾಮಾಯಣ, ಮಹಾಭಾರತ, ಹಿತೋಪದೇಶ ಮುಂತಾದ ಸಂಸ್ಕೃತ ಗ್ರಂಥಗಳಿಂದಲೂ ಉದ್ಬೋಧಕವಾದ ಕಥೆಗಳನ್ನು ಚಿಕ್ಕಮಕ್ಕಳಿಗೆ ತಿಳಿಯುವಂತೆ ನಿರೂಪಿಸಬಹುದು. ಸರ್ವಜ್ಞ, ಪುರಂದರದಾಸ ಮುಂತಾದ ಕನ್ನಡ ಕವಿಗಳ ಸುಲಭವಾದ ಪದ್ಯಗಳನ್ನು ಚಿಕ್ಕ ಮಕ್ಕಳಿಗೆ ಬಾಯಿಪಾಠ ಮಾಡಿಸಬಹುದು. ಲೇಖಗಳು ಆದಷ್ಟು ಚಿಕ್ಕದಾಗಿರಬೇಕು. ಮಕ್ಕಳ ಪುಸ್ತಕದ ಭಾಷೆಯು ಸುಲಭವಾಗಿ ಪಠನೀಯವಿದೆ. ಅಲ್ಲಿನ ಮಾತುಗಳು ಕಥೆಗೆ ಬೋಧಪ್ರದವಾಗಿರುವವು. ಕನ್ನಡಿಗ ತಾಯಿ-ತಂದೆಗಳು ಚಿಕ್ಕ ಮಕ್ಕಳಿಗೆ ಈ ಮಾಸಪತ್ರಿಕೆಯನ್ನು ಮುದ್ದಾಂ ತರಿಸಿ ಆದರ ಕಥೆಯಿಂದ ಓದಿಸಿಕೊಳ್ಳಬೇಕಾಗಿ ನಮ್ಮ ಆಗ್ರಹವಿದೆ. ಮೇಲಾಗಿ ಶ್ರೀ ಭಾರದ್ವಾಜರವರು ರಾಷ್ಟ್ರೀಯರು. 'ರಾಷ್ಟ್ರಾಭಿಮಾನವನ್ನೂ' ಸ್ವಾಭಿಮಾನವನ್ನೂ ಚಿಕ್ಕ ಮಕ್ಕಳಲ್ಲಿ ಒಡಮೂಡಿಸಲು ಶ್ರೀ ಭಾರದ್ವಾಜರವರು ಈ ಮಾಸಪತ್ರಿಕೆಯದ್ವಾರಾ ಯತ್ನ ಮಾಡುವರು. ಅವರಿಗೆ ಕನ್ನಡಿಗರೆಲ್ಲರೂ ಆಶ್ರಯ ಕೊಟ್ಟು, ಚಿಕ್ಕಮಕ್ಕಳಿಗೂ ಬೋಧಪ್ರದವಾದ ಪುಸ್ತಕವನ್ನು ಸಂಗ್ರಹಿಸಿ ಕೊಡಬೇಕಾಗಿ ಬಿನ್ನಹ.

ಮಕ್ಕಳ ಪುಸ್ತಕ.

ಮಕ್ಕಳಿಗಾಗಿಯೇ ಪ್ರತಿ ತಿಂಗಳಲ್ಲಿಯೂ ಹೊರಡುವ ಮುದ್ದಾದ ಮಾಸಪತ್ರಿಕೆ ಮಕ್ಕಳ ಕಣ್ಣಿಗೆ ಹಬ್ಬವನ್ನುಂಟುಮಾಡುವ ಚಿತ್ರಗಳು. ಮಕ್ಕಳಿರುವ ಮನೆಯವರೂ, ಉಪಾಧ್ಯಾಯರೂ ಅವಶ್ಯವಾಗಿ ತರಿಸಬೇಕಾದ ಪತ್ರಿಕೆ. ವಾರ್ಷಿಕ ಚಂದಾ ರೂ. ೩-೦-೦. ಒಂದು ಸಂಚಿಕೆಗೆ ರೂ. ೦-೬-೦ ಮಾದರಿ ಸಂಚಿಕೆಯನ್ನು ತರಿಸಿ ನೋಡಿ.

ಕೃಷ್ಣ ಕಂಪೆನಿ,
ಬಳೇಪೇಟೆ, ಬೆಂಗಳೂರು ಸಿಟಿ

ಕಂದನ ಕಥೆಗಳು.

ಮುಖ್ಯ ಸಂಪಾದಕ — ಶ್ರೀ ದೇವುಡು ನರಸಿಂಹ ಶಾಸ್ತ್ರಿ, ಎಂ.ಎ , ಬೆಂಗಳೂರು.

ಈ ಬಗೆಯಾದ ಪ್ರಯತ್ನವು ಕನ್ನಡ ನಾಡಿನಲ್ಲಿ ಇದುವರೆಗೆ ಆಗಿಲ್ಲವೆಂದು ಇದನ್ನು ನೋಡಿದವರೆಲ್ಲರಿಗೂ ತಿಳಿಯುವದು. ಈ ಪ್ರಯತ್ನಕ್ಕೆ ಹೆಚ್ಚು ಪ್ರೋತ್ಸಾಹವು ದೊರೆತರೆ, ಇದನ್ನು ಇನ್ನೂ ಅಂದವಾಗಿಯೂ ಆಕರ್ಷಕವಾಗಿಯೂ ಮಾಡಬೇಕೆಂದು ನಮಗೂ ಆಸೆ. ಆ ಆಸೆಯನ್ನು ಕನ್ನಡಿಗರೆಲ್ಲರೂ ಇದಕ್ಕೆ ಪೋಷಕರೂ, ಚಂದಾದಾರರೂ ಆಗಿ ನೆರವೇರಿಸಬೇಕೆಂದು ಪ್ರಾರ್ಥನೆ.

ಇವುಗಳಲ್ಲಿ ಹಿಂದೊಂದರಲ್ಲೂ ನಾಲ್ಕಕ್ಕೆ ಕಡಿಮೆಯಿಲ್ಲದ ಚಿತ್ರಗಳಿರುತ್ತವೆ. ಪುಟಗಳು ೧೨ ರಿಂದ ೧೬ ರ ವರೆಗೂ ಇರುತ್ತವೆ.

ವರ್ಷಕ್ಕೆ (೧೨ ಕಥೆಗಳಿಗೆ) ಅಂಚೆವೆಚ್ಚ ಸೇರಿ ಪೋಷಕರಿಗೆ ರೂ. ೨-೦-೦
ಸಾಮಾನ್ಯರಿಗೆ ರೂ. ೧-೨-೦.

ತ್ವರೆಮಾಡಿರಿ! ತ್ವರೆ ಮಾಡಿರಿ!

ಜಾಹಿರಾತದಾರರು ತ್ವರೆಮಾಡಿರಿ.

ಬೆಗ್ಗೋಜಿ ರಾಜಾರಾಮ ಶಿವ್ಯರ್ಣ ಪಂಡಿತರಿಂದ ದೃಗ್ಗಣಿತ ಪ್ರಕಾರ ಗಣಿಸಿ ಪರಿಶೋಧಿಸಲ್ಪಟ್ಟ

ಪ್ರಭವ ಸಂವತ್ಸರದ ಪಂಚಾಂಗವು ಅಚ್ಚಿನಲ್ಲಿದೆ!

ಪಂಚಾಂಗದಲ್ಲಿ ಜಾಹಿರಾತು ಕೊಡುವವರಿಗೆ ಅನುಕೂಲತೆ ಮಾಡಿದೆ.

ಈ ಪಂಚಾಂಗವು ಕಾನಡಾ ಜಿಲ್ಲೆಯೊಳಗಿನ ಹಳ್ಳಿಹಳ್ಳಿಗಳಲ್ಲಿಯೂ, ಸಾಗರ-ಶಿವಮೊಗ್ಗಾ ಮೊದಲಾದ ಮೈಸೂರ ಪ್ರಾಂತದಲ್ಲಿಯೂ ಸುಪ್ರಸಿದ್ಧವಿದೆ. ಜಾಹಿರಾತು ಕೊಡಲಿಚ್ಛಿಸುವವರು ಬರುವ ಡಿಸೆಂಬರ ತಾರೀಖು ೩೦ ರೊಳಗೆ ಈ ಕೆಳಗಿನ ವಿಳಾಸದ ಮೇಲೆ ಪತ್ರವ್ಯವಹಾರ ಮಾಡಿ ದರವನ್ನು ತಿಳಕೊಳ್ಳಬಹುದು.

ಪತ್ತೆ - ಮೆನೇಜರ, "ಸ್ಟಾರ ಆಫ್ ಕೆನರಾ ಪ್ರೆಸ್," ಕುಮಟಾ. (ಉ. ಕಾನಡಾ.)

झंडूचें

द्राक्षासव-

एक रतलास किंमत १॥ रुपये;

रामबाण औषध

- सर्दि घालविणारें
- भूक वाढविणारें
- शौच्यास साफ करणारें
- झोंप आणणारें
- शक्ति देणारें
- तेजस्वीपणा आणणारें

विश्वास [illegible]

कंपाउंडास मागवा,

झंडुफार्मास्युटिकल वर्क्स लिमिटेड, मुंबई नं. १४

एजंट— मेसर्स पंडित आणी कंपनी, तीर्थहळी.

सिर्सि एजंट-एस. एल. भाकप्पा आणि ब्रदर

BATLIBOI'S
Accountancy Training Institute

Recognised by The G. D. A. Board

Offers best training in Accounting Banking, Company Management and Secretarial Work and Theory and Practice of Commerce.

Best staff, Individual attention fee moderate, and payable by instalments.

Send for Prospectus at Yusuf Buildings, Churchgate street, Fort, Bombay.

You are invited to make thorough enquiry before joining.

TUITION BY POST IS OUR SPECIALITY.

[ಆಯುರ್ವೇದೀಯ] ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ [ಮಲಬಾರಿ ಕೃತಿ]

ಅನುಭವಿಕ ಔಷಧಗಳು!

೧. ಮದನಕಾಮೇಶ್ವರಿ ಲೇಹ- ಧಾತುಪುಷ್ಟಿಕ, ವೀರ್ಯ-ಶಕ್ತಿವರ್ಧಕ, ಕಾಮೋತ್ತೇಜಕ.
೨. ಮದನ ಕಾಮೇಶ್ವರ- ಗುಣ ಮೇಲಿನಂತೆ. [illegible]
೩. ಉಪದಂಶ- (ಗರ್ಮಿ) ರೋಗಕ್ಕೆ ಮಾತ್ರೆ. ಇಂದ್ರಿಯದ ಹುಣ್ಣು ಪರಮಾ, ಯಾವದೇ ತರದ ಕಠಿಣ ರೋಗವಾದರೂ ಮರಣೋನ್ಮುಖ ಸ್ಥಿತಿಯಲ್ಲಿದ್ದರೂ ೭ ದಿವಸದಲ್ಲಿ ಗುಣಹೊಂದುವರು.
೪. ಗರ್ಮಿ ರೋಗಕ್ಕೆ ಮುಲಾಮು- ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿನಕ್ಕೆ ಗುಣ.
೫. ಯೋಗರಾಜ ಗುಗ್ಗುಳ- ಅರ್ಧಾಂಗವಾತ ಸಂಧಿವಾತ, ಕಿವಿಗೆ ೮೦ ತರದ ವಾತರೋಗಕ್ಕೆ ಸಿದ್ಧೌಷಧಿ. [illegible]
೬. ಕೆಮ್ಮಿನ ಗುಳಿಗೆ- ಕ್ಷಯ, ದಮ್ಮು, ಕೆಮ್ಮು, ಇ. ಮೇಲೆ ರಾಮಬಾಣ. [illegible]
೭. ವಾತ-ಪಿತ್ತ-ಕಫನಾಶಕ ಹುಲಿಯಬಿನ ಗುಳಿಗೆ- [illegible]
೮. ಸಂಜೀವನಿ- ಏಕಾಹಿಕ, ದ್ವ್ಯಹಿಕ, ತ್ರ್ಯಾಹಿಕ ಚಾತುರ್ಥಿಕ, ಸನ್ನಿಪಾತ, ಇ. ಜ್ವರಗಳ ಮೇಲೆ [illegible]
೯. ಚಂದ್ರಪ್ರಭಾ ವಟಿಕೆ - ೨೦ ತರದ ಮೇಹ, ಮೂತ್ರಕೃಚ್ಛ್ರ, ಅಶ್ಮರೀ, ಧಾತುಕ್ಷಯ, ಸ್ವಪ್ನದೋಷ, [illegible]
೧೦. ದಂತಮಂಜನ- ಹಲ್ಲು ನೋವು, ಹುಳ, ಕೀವು, ಅಲಗಾಡುವಿಕೆ ಪೂರ್ಣ ಗುಣವಾಗುವವು [illegible]
೧೧. ಜಂತುವಿನ ಔಷಧ- ಹೊಟ್ಟೆಹುಳಗಳ ಮೇಲೆ ರಾಮಬಾಣ [illegible]
೧೨. ಬಿಜ್ಜಿಯ ಮುಲಾಮು- [illegible]
೧೩. ವಾತಸಂಹಾರಿ ತೈಲ - ನಾರಾಯಣ ತೈಲ, ಅರ್ಧಾಂಗವಾಯುವಿನ ಅನೇಕ ವಾತ ರೋಗಕ್ಕೆ ಸಿದ್ಧ ತೈಲಗಳು. [illegible]
೧೪. ವಾಕ್ಸಂಜೀವನಿ ಗುಟಿಕಾ - ಮಾತು ತಡೆಯುವಿಕೆ, ತೊದಲುವಿಕೆ [illegible]
೧೫. ಪುತ್ರಜೀವನಲೇಹ - ಗರ್ಭಪಾತವಾಗುವ ಸ್ತ್ರೀಯರಿಗೆ ಸಿದ್ಧೌಷಧಿಯು. [illegible]

ಟಪಾಲ ಖರ್ಚು ಬೇರೆ. ಅನುಪಾನ ಪತ್ರ ಔಷಧದ ಸಂಗಡ. (ಆಯುರ್ವೇದ ಗುಣರತ್ನಮಾಲಾ ಪುಸ್ತಕ ಉಚಿತ) ಇವಲ್ಲದೆ ಅನೇಕ ತರದ ರೋಗಗಳ ಮೇಲೆ ಪಾಕ, ಲೇಹ, ಚೂರ್ಣ, ತೈಲ, ಮಾತ್ರೆಗಳ ಬಗ್ಗೆ ಸ್ಟ್ಯಾಂಪ ಇಟ್ಟು ಪತ್ರದ್ವಾರಾ ಯಾ ಸಮಕ್ಷ ತಿಳಕೊಳ್ಳಬಹುದು.

ಪತ್ತೆ:— ಮೇನೇಜರ, ಆಯುರ್ವೇಚಿಕಿತ್ಸಾಮಂದಿರ, ಪ್ರೋ. ಚಂಡಿಮು, ಕಾರವಾರ.

ಮುಂಬಯಿ ಏಜಂಟ.— R. C. KAMAT, *Teashop, Store Lane, Fort, Bombay.*

ಯಾವದೇ ಆಕಾರದ ನಂಬರಿನ ನಕ್ಷೆಯ ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂಪಾಯಿ ೧೪, ಅರ್ಧ ಬೆಲೆ ರೂಪಾಯಿ ೭;



ಬರೇ ಒಂದು ತಿಂಗಳ ಬಗ್ಗೆ ನಾವು ಈ ದರವನ್ನು ಹೊಸ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ದೋಷರಹಿತ ಯಂತ್ರರಚನೆ!! ಧರಿಸುವದಕ್ಕೆ ಯೋಗ್ಯ ಹಾಗು ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ ನಂಬರಿನ ಗಡಿಯಾರವು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂಪಾಯಿ ೭ ಮಾತ್ರ!

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **Swan House: P B 508 P T Madras.**

ಅತ್ಯಲ್ಪವಿದೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

"ತಾರಾ" ಲೀವರ ರಜಿಸ್ಟರ್ಡ್ ಪೊಕೆಟ್ ವಾಚು ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮಜಬೂತಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರದವರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಟಿ" ರಜಿಸ್ಟರ್ಡ್ ಟೈಂಪೀಸವನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಟೈಂಪೀಸ ಹಾಗು "ತಾರಾ" ಲೀವರ ರಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫.

CAPTAIN WATCH CO., P B 365, MADRAS.

ಸಬ್ ಅಸಿಸ್ಟಂಟ ಸರ್ಜನ್

ವ್ಹಾ. ಎಮ್. ವೈದ್ಯ

ಡೆಂಟಿಸ್ಟ ಮತು ಅಕ್ಯೂಲಿಸ್ಟ,

ಗವಳೀಗಲ್ಲಿ ಧಾರವಾಡ.

ಡಾಕ್ಟರ ಕೂಪರ ಎಲ್. ಸಿ. ಎಸ್ ಮುಂಬಯಿ ಇವರ ಮೊದಲನೇ ಅಸಿಸ್ಟಂಟ

ಹುಬ್ಬಳ್ಳಿ ಬ್ರಾಂಚ – ದುರ್ಗದಬೈಲ ಪ್ರತಿ ದಿವಸ ಮಧ್ಯಾಹ್ನ ೨ರಿಂದ ಸಂಜೆಯು ೭ ರ ವರೆಗೆ

ನೋಯಿಸದೆ ಹಲ್ಲುಗಳನ್ನು ತೆಗೆಯುತ್ತೇನೆ. ಕೃತ್ರಿಮ ಹಲ್ಲುಗಳನ್ನು ಯೋಗ್ಯವಾಗಿ ಕೂಡಿಸುತ್ತೇನೆ. [illegible] ಅಥವಾ ಭಂಗಾರದ ಸಿಮೆಂಟದಿಂದ ಹಲ್ಲುಗಳನ್ನು ಕೂಡಿಸುತ್ತೇನೆ. ಹಳೇ ಹಲ್ಲುಗಳನ್ನು [illegible] ಸ್ವಾಭಾವಿಕ ನೈಸರ್ಗಿಕ ಹಲ್ಲುಗಳನ್ನು ಸ್ವಚ್ಛವಾಗಿ ಮಾಡುವದು. ಇದಲ್ಲದೆ, [illegible] ದಂತಮಂಜನವನ್ನು ಉಪಯೋಗಿಸಿರಿ

ಬೆಲೆ [illegible]

ಕಣ್ಣಿನ ದಾವೇ

[illegible]

ಗಳನ್ನು [illegible] ಕೂಡಿಸುತ್ತೇನೆ

ಪ್ರಯಾಣಿಕರಿಗೆ

ವಿಶೇಷ ಅನುಕೂಲ

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ ಹಾಗೂ

ವಸತಿಗೆ, ಊಟ, ವಾಸದ ಬಗ್ಗೆ ಯೋಗ್ಯ ವ್ಯವಸ್ಥೆ ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ–

[illegible] ಕುಮಟಾ ಹೊನ್ನಾವರ [illegible], [illegible] ಹುಬ್ಬಳ್ಳಿ [illegible]

ವಿ. ಸೂ — ಟಿಕೇಟು ಮುಂದಾಗಿ ಪಡಕೊಂಡಲ್ಲಿ [illegible] ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು

ಅನಂತ ಮಂಗೇಶರಾವ [illegible]

ಮೋಟರ ಏಜಂಟ,

ಕುಮಟಾ (ಉತ್ತರ ಕನ್ನಡ

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

ಹೊಸದಾಗಿ ಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಿಗೆ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಪೀಡೆಪಟ್ಟ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಮಂದಿಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ವಿವರಕ್ಕೆ ಪುಸ್ತಕ ಕಳಿಸಲಾದೀತು

ಡಬ್ಬಿ ಒಂದಕ್ಕೆ ಕ್ರಯ ರೂ ೦ ೯ ೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩–೮–೦. ವ್ಹಿ. ಪಿ. ೦–೮–೦ ದಯವಿಟ್ಟು ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತೆ ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦, ಪೋರ್ಟ್ ಟೌನ, ಮದರಾಸ

ಪುಣೆ ಪ್ರದರ್ಶನದಲ್ಲಿ ಬಹುಮಾನ ಪದಕಗಳನ್ನು ಪಡೆದ

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳು.



ಸದ್ಯದ ಹಂಗಾಮಕ್ಕೆ ಒಕ್ಕಲಿಗರಿಗೆ ಉಪಯೋಗವಾಗುವಂತೆ ತಯಾರಿವೆ. ಮಾಹಿತಿ ಬಗ್ಗೆ ಪತ್ರ ಬರೆಯಿರಿ.

ಈ ವರ್ಷ ಈ ನೇಗಿಲುಗಳಲ್ಲಿ ಬೆಲೆಯಲ್ಲಿ ಕಡಿಮೆ ಮಾಡಿರುತ್ತೇವೆ. ಅಲ್ಲದೆ ಗಾಣಗಳಲ್ಲಿ ಸುಧಾರಣೆಯನ್ನೂ, ತಿದ್ದುಪಡಿಯನ್ನೂ ಮಾಡಿರುತ್ತೇವೆ. ಮುಂದಾಗಿ ಆರ್ಡರ್ ಕೊಟ್ಟಲ್ಲಿ ವೇಳೆಗೆ ಸರಿಯಾಗಿ ಮಾಲು ಸಿಗುವದು.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

S U Narayanacharya & CO
Chaukamba, BENARES CITY

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ ಜರಿ ಕಣ ಜರಿ ಸೀರೆ, ಶಾಲು, ರುದ್ರಾಕ್ಷಿ [illegible] ಲಿಂಗಗಳೂ [illegible] ಮೊದಲಾದವುಗಳು ಸಿಗುತ್ತವೆ [illegible] ಕೇಳುವವರಿಗೆ ಉಚಿತವಾಗಿ ಕಳಿಸಲಾದೀತು

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ ಮಠ, ಕಾಶಿ, ಚೌಕಂಬಾ, ಕಾಶೀಕ್ಷೇತ್ರ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ಚಮತ್ಕಾರವಾಗುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ನೋವು ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅನುಭವದಿಂದ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ ಪಿ ಖರ್ಚು ಬೇರೆ

ಅಮೃತಾಂಜನ ಡಿಪೋ, ಫೋರ್ಟ ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta

ವರ್ಷ ೧೧.

ಕಾನಡಾವೃತ್ತ.

ಸಂಚಿಕೆ ೧೦

THE KANARA NEWS.

ವೃತ್ತದ ವರ್ಗಣಿ.

ಈ ಊರಿನಲ್ಲಿ ಅಗಾವು ರೂಪಾಯಿ 2-4-0.

ವ ಸೆಯಸಾರ್ದಾರಿಯಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸಹಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

नृपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर್ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಜಾಹಿರಾತುಗಳ ದರ

ಕನ್ನಡ, ಇಂಗ್ಲೀಷ ಪ್ರ್ಯಾ ಪ್ಯಾಯಿನ (೧೫ ಎವ್ ಟೈಪ್) ೪ ಸಾಲುಗಳವರೆಗೆ ರೂ 1-0- ೪ ನಂತ್ರ ಪ್ರತಿಸಾಲಿಗೆ 0-2-0

ಹೆಚ್ಚಿಂಗದ ಸಾಲು ಎಷ್ಟು ಹೊತ್ತಿರುವದೋ ಅ ಪಾನ ದಿಂದ ಅಷ್ಟುಸಾಲುಗಳ ಕಿ ತ ಯಲ್ಪಡುವವು.

ಖಾಸಿ ಜಾಹಿರಾತುಗಳ ಬಗ್ಗೆ ಪತ್ರವ್ಯಾಪಾರ ಮೂ ಸಮಕ್ಷ ತಿ ಸಲ್ಪಡುವದು

(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೨೭ ಮಾಹೆ ಡಿಶಂಬರ ಸನ್ ೧೯೩೭ ನೇ ಇಸವಿ)

(ಬಹಿಶಃ) ನವ್ಯ ಶಾಸ್ತ್ರೀಯವಾದ (ಬಹಿಶಃ)

ಶಾರೀರಿಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮುಖ ನನ್ನ ೭ ವ್ಯಾಯಾಮ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುವವರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುವರು. ಟಪಾಲು ಹಾಸಲು ೨ ಆಣೆಯ ಸ್ಟ್ಯಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ತ್ವರಿತರಾಗಿ, ಇನ್ನೂ ಈ ಯೋಚನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD. B. A

Jewellers, KUMTA.

ಆರ್. ಎಸ್. ಕಾಸರಗೋಡ, ಬಿ ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಇನ್ನೂ ಗೊತ್ತೇ ಇಲ್ಲವೋ?

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿಯು,

ಬೆಳಗಾಂವ	ಕಾರವಾರ
ದಿಂದ	ದಿಂದ
ಕಾರವಾರಕ್ಕೆ	ಬೆಳಗಾಂವಕ್ಕೆ

ಕಳೆದ ಸಪ್ಟಂಬರ್ ೧ ನೇ ತಾರೀಖಿನಿಂದ ನಿಯಮಿತ ಡೇಲಿ ಮೋಟರ ಸರ್ವ್ಹಿಸ್ ಶುರುಮಾಡಿದ್ದು!

ಬೆಳಗಾಂವಕ್ಕೆ ಮುಂಬಯಿ ಮೇಲ ಬಂದ ನಂತರ ಬೆಳಿಗ್ಗಿನ ೧೦॥ ಘಂಟೆಗೆ ಬೆಳಗಾಂವ ಬಿಟ್ಟು, ಹಳಿಯಾಳ—ಯಲ್ಲಾಪುರ—ಅಂಕೋಲಾ ಮಾರ್ಗವಾಗಿ ಅದೇ ದಿವಸ ಸಾಯಂಕಾಲಕ್ಕೆ ಕಾರವಾರಕ್ಕೆ ಮುಟ್ಟುವಂತೆಯೂ, ಕಾರವಾರದಿಂದ ಬೆಳಿಗ್ಗಿನ ೭ ಘಂಟೆಗೆ ಹೊರಟು ಮುಂಬಯಿ ಮೇಲ ಟ್ರೈನಿಗೆ ಸರಿಯಾಗಿ ಬೆಳಗಾಂವಕ್ಕೆ ಮುಟ್ಟುವಂತೆಯೂ ಫಕ್ತ ಪ್ರಯಾಣಿಕರ ಸೋಯಿಗಾಗಿ ಡೇಲಿ ಮೋಟಾರ ಸರ್ವ್ಹಿಸ ಇಟ್ಟಿದ್ದಿರುತ್ತದೆ. ಟಿಕೀಟಿನ ದರಗಳು ವ ವಿಶೇಷ ಮಾಹಿತಿ ನಮ್ಮ ಅಲ್ಲಲ್ಲಿಯ ಏಜಂಟರ ಕಡಿಗೆ; ಅಥವಾ ನಮ್ಮ ಹೆಡ್ ಆಫೀಸಿನಲ್ಲಿ.

ದಿ ಬೆಳಗಾಂವ ಮೋಟಾರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ,
ಬೆಳಗಾಂವ.

" ಸು ವಾ ಸಿ ನಿ "

ಸಚಿತ್ರ ಮಾಸಪತ್ರಿಕೆ

ಪ್ರತಿ ತಿಂಗಳ ಅಂತ್ಯದಲ್ಲಿ ಪ್ರಕಟವಾಗುವದು

ವಾರ್ಷಿಕ ಚಂದಾ ರೂ ೩-೮-೦

ಆರು ತಿಂಗಳುಗಳಿಗೆ ರೂ ೧-೧೨-೦

ಮನೋರಂಜಕವಾದ ಕಥೆಗಳಿಂದ, ನೀತಿಬೋಧಕಗಳಾದ ಉಪನ್ಯಾಸಗಳಿಂದ, ಹಾಸ್ಯಗರ್ಭಿತವಾದ ಉಕ್ತಿಗಳಿಂದ ವಿರಾಮ ಕಾಲವನ್ನು ವಿನೋದದಿಂದ ಕಳೆಯಬೇಕಾದರೆ, "ಸುವಾಸಿನಿ"ಯೇ ತಕ್ಕ ಪತ್ರಿಕೆ. ಇದರ ಸಂಪುಟವು ಇದೇ ಜನವರಿಯಿಂದ ಪ್ರಾರಂಭ. ಚಂದಾದಾರರಾಗಲು ಇದೇ ತಕ್ಕ ಸಮಯ.

ವಿಳಾಸ " ಸುವಾಸಿನಿ " ಆಫೀಸ್,

ಮಂಗಳೂರ (ದ. ಕ.)



ಕಲ್ಲಚ್ಚಿನ ಮುದ್ರಣ ಯಂತ್ರ ... ಗಳನ್ನು ... ಸುಧಾರಿಸಿ ... ಗಳಾಗಿ ... ಯಂತ್ರ ... ರವರಿಗೆ ... ಸುಲಭ.

ನಮ್ಮಲ್ಲಿ ... ಯಂತ್ರಗಳ ಮೇಲೆ ಎಲ್ಲಾ ನಮೂನೆಯ ... ಕೆಲಸಗಳು ನಡೆಯುತ್ತ ... ಜಾಹಿರಾತ ತರಿಸಿ ನೋಡಿರಿ

ಪ್ರಭಾಕರ ಅಚ್ಚುಕಣೆ ಕಂಪನಿ,

ಮಂಗಳವಾರ ಪೇಟೆ, ಸಾಗರ (ಜಿಲ್ಲಾ ಶಿವಮೊಗ್ಗ)

ರಾಗದ ಪೆಟ್ಟಿಗೆಗಳು.

ನಾಟಕಿ ಸಾಮಾನು:-

ತಬಲೆ, ಡಕ್ಕೆ ವಗೈರೆ.



೧ ಕೈಪೆಟ್ಟಿಗೆ-ಸಿಂಗಲ ರೂ ೩೫, ೩೦, ೪೦, ೫೫, ೬೦

೨ ,, -ಡಬಲ ರೂ. ೪೦, ೪೫, ೫೦, ೬೦, ೧೦೦.

೩ ಕಾಲುಪೆಟ್ಟಿಗೆ ,, ರೂ ೬೫, ೭೫, ೧೦೦, ೧೨೦, ೧೪೦

೪ ತಬಲೆ (ತಾಮ್ರದ ಡಕ್ಕೆ ಸಹಿತ) ರೂ ೧೬, ೧೮, ೨೦

ಗ್ರಾಮೋಫೋನ ಪಿನ್ಸ ಗ್ರ್ಯಾಸ ಕಿಂ. ರೂ. ೧॥,

ತಬಲೆ ಗ್ರ್ಯಾಸ ಕಿಂ. ೧೨ ಆಣೆ

ಸಚಿತ್ರ ಪಟ್ಟಿ ಕ್ಯಾಟಲಾಗು ಪುಕ್ಕಟೆ ದೊರಕುವದು.

ಗೋಪಾಳ ಸಖಾರಾಮ ಮತ್ತು ಕಂಪನಿ

ನಂ. ೩೮೩, ವಿಠ್ಠಲವಾಡಿ ಎದುರಿಗೆ

ಕಾಳಬಾದೇವಿ ರೋಡ,

ಮುಂಬಯಿ.

೧೦೦೦ ರೂಪಾಯಿ ಇನಾಮು.

ಮಿರಜಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ,

ಇವರ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರಪಾಕ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳ, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತೆ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋದು, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋದು, ವೀರ್ಯವು ತೆಳುವಾಗುವದರಿಂದುಂಟಾದ ರೋಗಗಳು ಮತ್ತು ಬಾಲಕ ಸಂತತಿಯಾಗದಿರೋದು, ಎದೆನೋವು, ಹಾರ್ಟ (ಡಿಸೀಜ) ಜೀರ್ಣಜ್ವರ ಮೂಲವ್ಯಾಧಿ ... ಮತ್ತು ... ರಸಾಯನ ಸೇವನೆಯಿಂದಾದ ದುಷ್ಟ ವಿಕಾರಗಳು ... ಎಲ್ಲ ಪಿತ್ತವಿಕಾರಗಳು ನಿರ್ದೋಷವಾಗಿ ... ಇರೋದು ಮುಂತಾದ ವೃದ್ಧ ... ಶುಕ್ರವೃದ್ಧಿಯು ... ರಕ್ತವೃದ್ಧಿಯು ಆಗುತ್ತದೆ ... ವೀರ್ಯ ... ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ... ಸಂತತಿ ... ಸಹಾಯಕ ಆಗುತ್ತದೆ ಈ ಪ್ರಕಾರ ಅವರ್ಣನೀಯ ... ಅದರ ಸಂಬಂಧದ ರೋಗನಾಶಕ ಖಾತ್ರಿಯು ಮತ್ತು ... ಶಕ್ತಿಸಂಪನ್ನ ... ರತಿಸುಖ ಬಯಸುವಂಥವರು ಒಂದಾವರ್ತಿ ... ಈ ಪಾಕವನ್ನು ಬಹು ಪ್ರಯಾಸದಿಂದ ಅಮೌಲ್ಯ ಔಷಧ ... ತಯಾರಿಸಿದ್ದೇವೆ ಇದರಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ... ಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು ಮುಂಜಾನೆ ... ರಾತ್ರಿ ಭೋಜನ ನಂತರ ... ತೊಲಿ ... ತಕ್ಕೊಂಡು ... ಹಾಲನ್ನು ಕುಡಿಯಬೇಕು ... ದಿವಸ ... ಈ ಪಾಕದ ... ಡಬ್ಬಿಯು ಬರುತ್ತದೆ ... ರೂ. ೧ ಸಿಗುವದು ೩ ಡಬ್ಬಿಗೆ ೧೪॥ ರೂ ... ಡಬ್ಬಿಗೆ ... ರೂ. ... ರೂಪಾಯಿ ಅಡವಾನ್ಸ ಕಳಿಸಬೇಕು ...

... ಡಬ್ಬಿಗಳನ್ನು ... ಪೂರ್ಣ ... ದಿನಸುಗಳ ವಿವರವನ್ನು ...

ಪತ್ತೆ — ಮಾಲಿಕ ವೈದ್ಯ ವ್ಹಿ. ಎಸ್ ಕಾಪಸೆ, ಮು. ಪೋ. ಮಿರಜ

... ಲಾಭ ...] ಶ್ರೀ ಶಿವಯೋಗಿಯೇ ರಕ್ಷಿಸು [... ತಪ್ಪದೆ ಓದಬೇಕು

☞ ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳ ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯುಳ್ಳವರು ಮುಕ್ತರಾಗಿರಿ.

ಅನೇಕ ಜನ ಅನುಭವಿಕರಿಂದ ಸರ್ಟಿಫಿಕೇಟು, ಬಕ್ಷೀಸು, ಪದಕಗಳನ್ನು ದೊರಕಿಸಿ ಸುಪ್ರಸಿದ್ಧಿಯನ್ನು ಹೊಂದಿದ

ಬಾಲಗ್ರಹ ದೋಷ ನಿವಾರಕವೆಂಬ ಮಂತ್ರ ಯಂತ್ರದ ತಾಯಿತ್.

"ಈ ಕಲಿಯುಗದಲ್ಲಿ ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೊಳು ಸರಿಯಾಗಿ ಮುಟ್ಟಾಗದಿರುವಿಕೆ, ಮುಟ್ಟಾಗುವ ಸಮಯದೊಳು ಕೈಕಾಲು ಹರಿಯುವಿಕೆ, ದುಃಸ್ವಪ್ನಗಳು ಬೀಳುವಿಕೆ, ಹೊಟ್ಟೆಶೂಲೆ, ಬಿಳುಪು ಕೆಂಪು ಹೋಗಿ ಗರ್ಭಪತನವಾಗುವಿಕೆ, ವಾಂತಿ, ಸರ್ಪಶಾಪ ಮಾಜಾರ್ಲ ಶಾಪ, ಪಿಶಾಚಬಾಧೆಯಿಂದ ನರಳುವಿಕೆ, ಇವೇ ಮೊದಲಾದವುಗಳಿಂದ ಸಂತಾನ ಭಂಗಕ್ಕೆ ಕಾರಣಗಳು ಇದಲ್ಲದೆ ಸಣ್ಣ ಮಕ್ಕಳಿಗೆ ೧೨ ವರುಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ, ಮುಟ್ಟುದೋಷ, ಕಾಮಿಣಿ, ಗ್ರಹಪೀಡೆ, ದೃಷ್ಟಿದೋಷ, ಮುಟಕಿಬ್ಯಾನಿ, ವಿಶೇಷ ಅಳೋದು, ಭಯದಿಂದ ಜ್ವರಪೀಡೆ ಕ್ಷೀಣ ಹೊಂದುವಿಕೆ, ಮೊದಲಾದವುಗಳಿಂದ ಕಾಡುತಿರುವದು," ಗರ್ಭರಕ್ಷಾಕರ ವಿಧಿಯಲ್ಲಿ, ಸೂರ್ಯ ರಕ್ಷಾಕರ ವಿಧಿಯಲ್ಲಿ, ಇನ್ನೂ ಅನೇಕ ಗ್ರಂಥಗಳಲ್ಲಿ ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಮಹಾನ್ ಸಾಧು ಸತ್ಪುರುಷ ಸಹಾಯದಿಂದ ಮಂತ್ರದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಂಗಸರ ಮಕ್ಕಳಿಗಾಗುವ ಸಂತಾನಭಂಗವೂ, ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಯಾವತ್ತು ಪರಿಹಾರವಾಗುತ್ತದೆ. ಈ ತಾಯಿತ ಧರಿಸಿಕೊಂಡು ಗುಣವಿಲ್ಲೆಂದವರಿಗೆ ೧೦೦ ರೂಪಾಯಿ ಭಕ್ಷೀಸು ಕೊಡುತ್ತೇವೆ ಒಂದು ಸಲ ತರಿಸಿ ಅನುಭವ ತಿಳಿಯಿರಿ. ಕ್ರಯ ೧ಕ್ಕೆ ರೂ, ೨-೮-೦. ಪೋಷ್ಟ ಖರ್ಚ ಬೇರೆ

ವಿಳಾಸ—ಸಿದ್ಧಾಂತಿ ಬಿ. ಸಿ ಸಂಕಗಟ್ಟಿ ಪೋ. ಮು. ಅಥಣಿ, ಜಿಲ್ಲಾ ಬೆಳಗಾಂವ

The Karwar Convent.

To,
The Editor, Kanara News, Kumta.
Sir,

I would not have again appeared in the press, as the public have been sufficiently enlightened in the matter and I would like them to draw their own conclusions and form their own opinion from the correspondence that has been published so far. But I would like to further substantiate my assertion that Karwar would afford a cheap educational centre to Goa girls. The following passage from a monthly magazine published in Karachi under the name **"Dor-Mhuiniachi - Rotti"** will bear testimony.

"Karwar is a healthy place - situated as it is - close to the sea; not a malarious place - no epidemics or bubonic fevers have ever visited the place; very near Goa, only 36 miles from its centre; good transportation facilities, motors & steamers ply in fair weather in rainy season one can travel via Hubli or Cancon by motor; *the Goa girls can derive great advantage from the proposed Convent* as English and Portuguese will be taught there. *No more necessity to send them to Bombay*; besides this *it will afford facilities to grown-up girls to become Nuns.*"

Apart from this, one can perceive Mr. Coutinho's climb-down. He quietly relinquishes his claim to call it a "public" institution called at the instance of the "public." He cannot now deny that it is primarily meant for the education of the Christian girls and he has not tried to answer whether such a large sum (Rs 16000) as is proposed to be spent *on the Convent alone*, can be justified by the prevailing conditions of the Kanara Christian population. He admits that a Girls' English school was started a few years ago but for lack of funds, it has to be closed. Why could not Mr. Coutinho and his friends with the same munificence, provide funds for this dying and crumbling institution? Were not Ecclesiastical funds available then? The public cannot be hoodwinked by mere tall talk. I can say that the impelling motive for starting the Convent is the pressing necessity which the rich parents have felt of educating their children both here and in Goa. It might be ungenerous on my part to prove into the motives of others when the fruit of their labour will be reaped by poor and rich alike? But I want to bring home to the people at large that pressing solicitations from rich folk alone can rouse the Priests while the entreaties of the poor or the woeful educational and material condition can hardly move them. But they meet us with the arguments that there are other educational institutions and that the Kanara Christians do not avail themselves of them as they have no literary bias and an aptitude for learning. But no more fallacious arguments can be advanced. No

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಕಾಮಿನಿಯಾ ಆಯಿಲ್. (ರಜಿಸ್ಟರ್)

ಎಲ್ಲಾ ಔಷಧಿ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.
ಅಥವಾ
ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ಒಂದಕ್ಕೆ ರೂ. ೧—೦—೦
ಅಂಚೆವೆಚ್ಚ ,, ೦—೩—೦
೩ ಬಾಟ್ಲಿಗಳಿಗೆ ,, ೨—೧೦—೦
ಅಂಚೆವೆಚ್ಚ , ೦ ೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

——:0:——

೩ ಔನ್ಸಿಗೆ ರೂ. ೨—೦—೦
೪ ಔನ್ಸಿಗೆ ,, ೧—೪—೦
೧ ಡ್ರಾಮಿಗೆ ,, ೦-೧೪—೦
ಅಂಚೆವೆಚ್ಚ ,, ೦—೩—೦

ಒಟ್ಟೋ-ದಿಲ್ ಬಹಾರ ಕೇಳಲಿಕ್ಕೆ ಮರೆಯಬೇಡಿರಿ!

'ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್)

THE ANGLO INDIAN DRUG & CHEMICAL CO., LTD.
POST BOX, 2082. BOMBAY

people can be charged with an aver sion to learning The faculty [illegible] dormant in them Even the [illegible] under the liberalising influences of education have been shown wonderful progress Cannot then Kanara Christians be expected to rise to the level? Certainly they can But what they want is the help[illegible] hand that will drag them out of the abyss of ignorance and poverty and it has been so long withheld A mere pious exhortation to avail themselves of the educational faci lities without the means to do so [illegible] guidance from others cannot work the desired end Here then is the necessity to start denominational institutions (that will [illegible] edu cation for both the sexes) the capa city of which to do the [illegible] emancipation has been well recog nised The Aligarh Moslem [illegible] sity and like sectional educational institutions have done [illegible] to advance the cause of education and thus open up bright careers to [illegible] own people in all the walks [illegible] Much less difficult is the task [illegible] Christians with such an [illegible] teaching organisation as th[illegible] with its vast resources [illegible] Only those responsible [illegible] the torch of light and wisdom [illegible] ing must be imbued with the spirit of the times and the people will certainly respond to their reform[illegible] zeal and ardour.

Let me therefore end this contro versy by appealing to the good sense of those who decry the Christians of Kanara to give up their pessimism and strive for their uplift and afford *equal opportunities for the boys as well as the girls* **'A Catholic.'**

[THIS CORRESPONDENCE IS NOW CLOSED — Editor]

BATLIBOI'S

Accountancy Training Institute

Recognised by The G. D. A. Board

Offers best training in Accounting Banking, Company Management and Secretarial Work and Theory and Practice of Commerce

Best staff, Individual attention fees moderate, and payable by instalments

Send for Prospectus at Yusuf Buildings, Churchgate street Fort, Bombay

You are invited to make thorough enquiry before joining

TUITION BY POST IS OUR SPECIALITY

ಆಯುರ್ವೇದಿಕ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ [ಮಲಬಾರಿ ಕೃತಿ]

ಅನುಭವಿಕ ಔಷಧಗಳು!

೧ ಮದನಕಾಮೇಶ್ವರಿ ಲೇಹ [illegible]

೨ ಮದನ [illegible]

೩ [illegible] (ಗನೋರಿಯಾ) ರೋಗಕ್ಕೆ [illegible] ದಿವಸದಲ್ಲಿ ಗುಣಹೊಂದುವರು

೪ ಗರ್ಭಿಣಿ ರೋಗಕ್ಕೆ [illegible] (ಹುಣ್ಣು) [illegible]

೫ ಯೋಗರಾಜ ಗುಗ್ಗುಳ [illegible] ಸಿದ್ಧೌಷಧಿ [illegible]

೬ ಕೆಮ್ಮಿನ [illegible]

೭ ವಾತಪಿತ್ತ ಕಫನಾಶಕ [illegible] ಗುಳಿಗೆ [illegible]

೮ ಸಂಜೀವನಿ [illegible] ಜ್ವರಗಳ ಮೇಲೆ [illegible]

೯ ಚಂದ್ರಪ್ರಭಾ ವಟಿ [illegible]

೧೦ [illegible] ಗುಣವಾಗುವವು [illegible]

೧೧ [illegible] ಔಷಧ [illegible]

೧೨ [illegible]

೧೩ [illegible] ತೈಲ [illegible] ತೈಲಗಳು [illegible]

೧೪ [illegible] ಸಂಜೀವನಿ [illegible]

೧೫ [illegible] ಜೀವನಲೇಹ [illegible] ಸ್ತ್ರೀಯರಿಗೆ ಸಿದ್ಧೌಷಧಿಯು [illegible]

[illegible]

ಪತ್ತೆ — [illegible] ಆಯುರ್ವೇದ ಚಿಕಿತ್ಸಾ ಮಂದಿರ, [illegible]

[illegible] — R C KAMAT *Teashop Store Lane, Fort, Bombay.*

[illegible] ಆಕಾರದ ನಂಬರಿನ ನಕ್ಷೆಯು ಗಡಿಯಾರವನ್ನು

ಒರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

[illegible]



[illegible] ಗಡಿಯಾರ [illegible] ಯಂತ್ರರಚನೆ !! [illegible] ಗ್ಯಾರಂಟಿ [illegible] ರೂಪಾಯಿ ೭ ಮಾತ್ರ !

ಅಲ್ಪವೇ ಇವೆ; ಈಗಲೇ ಬರೆಯಿರಿ

ಪತ್ತೆ — **Swan House: P B 508 P T Madras.**

ಅತ್ಯಲ್ಪವಿದೆ!

ಕೇವಲ

ಉಚಿತ



ಉಚಿತ

ಉಚಿತ

ಕೇವಲ

ಉಚಿತ

[illegible] ಗಡಿಯಾರವನ್ನು [illegible] ಉಚಿತವಾಗಿ [illegible] ಗಡಿಯಾರಗಳಿಗೆ [illegible]

[illegible] ರೂಪಾಯಿ [illegible]

CAPTAIN WATCH CO , P B 385, MADRAS.

ವೃತ್ತಸಾರ.

— ಹೊನ್ನಾವರ ತಾಲೂಕಿನ ಚೇರೊಳ್ಳಿಯ ಕಟ್ಟೆಗೆ ಸರಕಾರವು ೧೫೦೦ ರೂಪಾಯಿಗಳನ್ನು ಕೊಟ್ಟಿರುವರು ಕಟ್ಟೆಗೆ ೩೦೦೦ ರೂಪಾಯಿ ಬೇಕು ಈ ತನಕ ೪೫೦೦ ರೂಪಾಯಿ ಪಟ್ಟಿ ಕೂಡಿದೆ ಇನ್ನು ೧೫೦೦ ರೂಪಾಯಿ ಬೇಕು

— ಶಿರಾಯ ರಾ। ಬಸಿಗಡ್ಡ ದೇವರ ಜಗದೇವರವರು ಎಲ್‌ಎಲ್ ಬಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರ.

— ಮಂಗಳೂರಿನಲ್ಲಿ ಆಯುರ್ವೇದದ ಚಿಕಿತ್ಸಾಲಯವನ್ನು ತೆರೆಯಬೇಕೆಂದು ಅಲ್ಲಿಯ ಮುನಿಸಿಪಾಲಿಟಿಯವರ ವಿಚಾರವಾಗಿದೆ.

— ಮಡಿಕೇರಿಯಲ್ಲಿ ಸತ್ಯಪ್ಪ ಎಂಬುವರು ಕ್ರೈಸ್ತರಾಗಿದ್ದರು. ಅವರಿಗೆ ಸ್ವಾಮಿ ವಿದ್ಯಾನಂದ ಒಡೆಯರವರು ಲಿಂಗ ದೀಕ್ಷೆಯನ್ನಿತ್ತು ಶುದ್ಧ ಮಾಡಿದರು

— ಆಸ್ಟ್ರೇಲಿಯಾದಲ್ಲಿ ಕಾಡಿಗೆ ಪ್ರಚಂಡ ಬೆಂಕಿ ಬಿದ್ದು ೩ ಕೋಟಿ ರೂಪಾಯಿ ನಷ್ಟ

— ಆಮರಾಸಿಯ ಕೋರ್ಟಿನವರೊಬ್ಬರು ೧೫ ವರ್ಷಗಳ ವರೆಗೆ ಪರಿಶ್ರಮಪಟ್ಟು ಹುಲ್ಲಿನ ಗಡಿಯಾರವನ್ನು ತಯಾರಿಸಿರುವರು ಗಡಿಯಾರವು ಸರಿಯಾಗಿ ಸಮಯವನ್ನು ತೋರಿಸುತ್ತದೆ "ಯೋಜಕಸ್ತತ್ರ ದುರ್ಲಭಃ"

— ಮುಂಬಯಿಯಲ್ಲಿ ಅಖಿಲ ಭಾರತೀಯ ಕ್ರಿಕೆಟ ಮಂಡಳಕ್ಕೂ, ಬ್ರಿಟಿಶ ಕ್ರಿಕೆಟ ಮಂಡಳಕ್ಕೂ ಪಂದ್ಯವಾಯಿತು ಬ್ರಿಟಿಶ ಕ್ರಿಕೆಟ ಪಟುಗಳು ೩೬೨ ರನ್ನುಗಳನ್ನು ತೆಗೆದರು ಅಖಿಲ ಭಾರತೀಯರು ೪೩೭ ರನ್ನುಗಳನ್ನು ತೆಗೆದರು.

— ಆರ್ವಿಯಲ್ಲಿ ಹಿಂದೂ-ಮುಸಲ್ಮಾನರ ದಂಗೆಯಾಗಿ ಮೂರು ಮುಸಲ್ಮಾನರು ಪ್ರಾಣಗಳೆದರು ತಂಟೆಯು ವಾದ್ಯಕ್ಕೋಸ್ಕರವಿತ್ತು. ಆ ಕೇಸಿನ ೧೫ ಮಂದಿ ಹಿಂದೂಗಳ ಮೇಲೆ ಖಟ್ಲೆಯಾಗಿ, ೧೩ ಮಂದಿಗಳಿಗೆ ಭಯಂಕರ ಶಿಕ್ಷೆಗಳಾಗಿವೆ ಆರ್ವಿಯ ದೊಡ್ಡ ಸಾಹುಕಾರರಾದ ದೇಶಪಾಂಡೆಯವರಿಗೆ ಕಾಲಾಪಾನಿ ಶಿಕ್ಷೆಯಾಗಿದೆ ಶ್ರೀ ಎಮ್ ದಾವರ್ ಎಂಬ ದೊಡ್ಡ ವ್ಯಾಪಾರಿ, ಎಲ್ ... ವರ್ಷ ಸಕ್ತ ಶಿಕ್ಷೆ, ... ಸಾವಿರ ರೂಪಾಯಿ ದಂಡ ಶ್ರೀ ವಸಂತರಾವ ಪಟೇಲರವರು ಮುನಿಸಿಪಾಲಿಟಿಯ ಅಧ್ಯಕ್ಷರು, ೬೦ ವರ್ಷ ವಯಸ್ಸಿನವರು, ಇವರಿಗೆ ೫ ವರ್ಷ ಸಾದಾ ಶಿಕ್ಷೆ, ೨೫ ಸಾವಿರ ರೂಪಾಯಿ ದಂಡ ಶ್ರೀ ... ಬಾಪೂಜಿ ... ಶ್ರೀ ... ಮುನಿಸಿಪಾಲಿಟಿಯ ಉಪಾಧ್ಯಕ್ಷರಿದ್ದರು. ಇವರಿಗೆ ೭-೭ ವರ್ಷಗಳ ಸಕ್ತ ಶಿಕ್ಷೆ ವಿಧಿಸಲಾಗಿದೆ. ೫ ಮಂದಿ ಆರೋಪಿಗಳಿಗೆ ೩-೩ ವರ್ಷಗಳ ಶಿಕ್ಷೆ ಉಳಿದವರಿಗೆ ೪-೪ ವರ್ಷಗಳ ಶಿಕ್ಷೆ.

— ಮುಂಬಯಿಯ ಸರಕಾರವು ಇನ್ನೂ ಮಂತ್ರಿಗಳನ್ನು ನೇಮಿಸಲಿಲ್ಲ ಸರ್ ಹಿದಾಯತುಲ್ಲಾ, ರಾ। ಅನಿಲಾಲ ... ಶ್ರೀ ... ಇವರು ಮಂತ್ರಿಪದಾರೂಢರಾಗುವರೆಂದು 'ಹೆರಲ್ಡ' ಪತ್ರಿಕೆಯ ಅಂಬೋಣ

— ಯೂರೋಪ ಖಂಡದಲ್ಲಿ ಹಿಂದುಸ್ಥಾನದ ಕಾರಿಕಾ ಚಿತ್ರ ವಿಶೇಷ ಪ್ರಶಂಸೆಯಾಗುತ್ತಿರುವದಾಗಿ ಕವಿಶ್ರೇಷ್ಠ ಟಾಗೋರರವರು ಅಭಿಪ್ರಾಯಪಟ್ಟಿರುವರು ಮಹಾತ್ಮಾ ಗಾಂಧಿ ಹಾಗೂ ಸರ್ ಜಗದೀಶಚಂದ್ರ ಬೋಸರವರ ವಿಷಯ ಹೆಚ್ಚು ಆದರವಿರುವದಾಗಿಯೂ ಕವಿಶ್ರೇಷ್ಠರ ಹೇಳಿಕೆ

— ಲಿಸ್ಬನದಲ್ಲಿ ಭೂಕಂಪವಾಗಿ ನಷ್ಟವಾಗಿದೆ

— ಕಳೆದ ಡಿಸೆಂಬರ ೧೯ ನೇ ರವಿವಾರಕ್ಕೆ ದಕ್ಷಿಣ ಆಫ್ರಿಕೆಯ ದಿನ ಮನ್ನಿಸಿ ಮುಂಬಯಿ ಶಹರದಲ್ಲಿ ಸಾರ್ವಜನಿಕ ಸಭೆ ಸೇರಿ, ಸಹಾನುಭೂತಿ ಸೂಚಿಸಲಾಯಿತು

— ಕಾಶೀ ವಿದ್ಯಾಪೀಠದ ಆಡಳಿತೆಯ ಮಂಡಳದ ಸಭಾಸದರಾದ ಶ್ರೀ ಪ್ರಕಾಶರವರು ಸಮಾಧಿಕಾರಿಗಳಿಗೆ ಸ್ವಾಗತ ಮಾಡಬಾರದಾಗಿ ಠರಾವು ಸೂಚಿಸಿದ್ದರು. ಶ್ರೀ ರಾಮುಲೀಲೆಯ ಪುರವಾಸಿಗಳು ಸಮಯ ಸರಕಾರವು ಕೈಕೊಂಡ ಧೋರಣದ ನಿಷೇಧವೆಂದು ಶ್ರೀ ಪ್ರಕಾಶರವರು ಈ ಸೂಚನೆಯನ್ನು ತಂದಿದ್ದರು ಪಂ. ಮದನ ಮೋಹನ ಮಾಲವೀಯರವರು ಈ ಠರಾವಿಗೆ ಕಾರಣ ಸರಕಾರಕ್ಕೆ ತಾವು ತೋರಿಸಿಕೊಂಡ ಭಿನ್ನತೆಯು ತಿರಸ್ಕರಿಸಲಾಗಿತ್ತು ಆದರೂ ಅಧ್ಯಕ್ಷರಾದ ಪಂಡಿತ ಮದನ ಮೋಹನ ಮಾಲವೀಯರವರು ಈ ಸೂಚನೆಯು ರಾಜಕೀಯವೆಂದು ತಿರಸ್ಕರಿಸಿಬಿಟ್ಟರು. ಮದನ ಮೋಹನ ಮಾಲವೀಯರವರ ಮನೋರಂಜನೆಯು ಗ್ರಹಿಸುವದೇ ಕಷ್ಟ ಸಮಾಧಿಕಾರಿಗಳಿಗೆ ಸ್ವಾಗತ ಮಾಡುವ ಸಮಾರಂಭಕ್ಕೆ ರಾಜಕೀಯ ಬಣ್ಣವಿಲ್ಲೆಂದು ಮಾಲವೀಯರವರು ತಿಳಿಯುತ್ತಾರೇನು?

— ಗದಗ ಹುಬ್ಬಳ್ಳಿ-ಬೆಳಗಾವಿ-ಅಥಣಿ-ಮಂಗಳೂರ-ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಗೀತಾ ಜಯಂತಿಯ ಮಹೋತ್ಸವವು ಕಳೆದ ಮಾರ್ಗಶೀರ್ಷ ಶು। ೧೧ಕ್ಕೆ ನೆರವೇರಿತು

— ವಿಜಾಪುರ ಜಿಲ್ಲೆಯ ಕಾಂಗ್ರೆಸ ಕಮಿಟಿಯವರು ಖಿಳಿಯ ಅಡಿಮಾರಿಯನ್ನು ಕೈಕೊಂಡಿರುವರು. ಪ್ರಜೆಗಳು ತೀರ್ವ ತೆರದು ಪ್ರತ್ಯಕ್ಷ ಸಿದ್ಧಮಾಡುವ ಯತ್ನವಿದು. ಅಭಿನಂದನೀಯವಿದೆ

— ವಾದ್ಯವನ್ನು ಪುರಾತನ ರೀತಿಯಂತೆ ಒಯ್ಯಲು ಪ್ರತಿಬಂಧವಾದ ಬಗ್ಗೆ ಬಂಗಾಲದ ಪುಟುವಾಲಿಯಲ್ಲಿ ಸತ್ಯಾಗ್ರಹ ನಡೆದದೆ ಜನ ಕಾರಾ ಸೆರೆಬಿದ್ದಿರುವರು. ಸತ್ಯಾಗ್ರಹ ಮಾಗುತ್ತಿದೆ ಮುಹಮ್ಮದೀಯರು ಸತ್ಯಾಗ್ರಹಕ್ಕೆ ವಿರೋಧವಾಗಿ ವೆರವಣಿಗೆಯನ್ನು ಹೊರಡಿಸುತ್ತಿರುವರು ಇನ್ನೂ ನಮ್ಮ ಗ್ರಹಗತಿಯು ತೀರಲಿಲ್ಲ

— ಪೂರ್ವ ಬಂಗಾಲದ ಲೋಹಾಗಂಜದಲ್ಲಿ ಬೆಂಕಿ ತಗಲಿ ೩ ಲಕ್ಷ ರೂಪಾಯಿಗಳ ನಷ್ಟ ೧೦೦ ಅಂಗಡಿಗಳೂ, ೫೦ ಮನೆಗಳೂ ಸುಟ್ಟು ಹೋದವು. ಲೋಹಾಗಂಜ ಪಟ್ಟಣವು ದೊಡ್ಡದೊಂದು ವ್ಯಾಪಾರ ಸ್ಥಳ

— ಸಿಂಧ ಪ್ರಾಂತದ ಕೈದರಾಬಾದದಲ್ಲಿ ಸ್ತ್ರೀ ಶಿಕ್ಷಣ ಪರಿಷತ್ತು ಸೇರಿತು. ಸಭಾಧ್ಯಕ್ಷರಾದ ಮಿಸೆಸ್ ಹಮೀದ ಅಲ್ಲಿಯವರು ಸ್ತ್ರೀಯರಿಗೆ ಧಾರ್ಮಿಕ ಶಿಕ್ಷಣವನ್ನೀಯಬೇಕೆಂದು ಪ್ರತಿಪಾದಿಸಿದರು. ಹಿಂದೂ-ಮುಸಲ್ಮಾನ-ಕ್ರಿಶ್ಚನ್ ಧರ್ಮಗಳೊಳಗಿನ ದೊಡ್ಡ ದೊಡ್ಡ ಮೂಲ ತತ್ವಗಳನ್ನು ಸ್ತ್ರೀಯರಿಗೆ ಕಲಿಸಿ, ಸ್ತ್ರೀ ಶಿಕ್ಷಣವನ್ನು ಉಪಯುಕ್ತವಾಗಿ ಕಲಿಸಬೇಕೆಂತಲೂ ಸ್ತ್ರೀಯರಿಗೆ ಶಾರೀರಕ ಶಿಕ್ಷಣವನ್ನು ಕೊಡಬೇಕೆಂದು ಗೊತ್ತಾಯಿತು

झंडूचे

द्राक्षासव- एक रसकास किंमत १॥ रुपये;

रामबाण औषध

भूक लावणारें
मूळ वाढविणारें
शोधन साफ करणारें
झोप आणणारें
शक्ति देणारें
तेजस्वीपणा आणणारें

विश्वास ठविक

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १४

एजंट— मेसर्स पंडित आणी कंपनी,
तीर्थहळ्ळी.

सिंएजट-एस. एल भाकप्पा आणि ब्रद्रर

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಶಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾ? ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗಿಯಾಗುವದು. ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ, ಉದರರೋಗ ಮೊದಲಾದ ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಜಾಸ್ತಿ ಆಗುವದು, ಇದರ ಅನುಭವವು ಮೊದಲನೇ ದಿವಸವೇ ಬರುವದು. ಕಾಂತಿ ಸುಧಾರಿಸುವದು. ಮೈಯಲ್ಲಿ ಎಷ್ಟೇ ದಿವಸದ ತಾಪ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ವಿಷಯದ ಕಾರಣವಿಲ್ಲ ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦—೦ ಮೂರು ಬಾಟಲಿಗಳನ್ನು ಒಂದೇ ಸಾರ್ಸಲಿನಲ್ಲಿ ಕಳಿಸುವೆವು ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಹನ್ನ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು ಪರಸ್ಥಳದ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೮—೦ ಪಡೆಯಿಂದ ೧೨—೦—೦

ಪತ್ತೆ:— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ವಿದ್ಯಾಶಂಕರ, ಜಿ ಬೆಳಗಾಂವ.

ಕಾನಡಾವೃತ್ತ.

ಮಿತಿ ಕ್ಷಯ ಸಂ। ಮಾರ್ಗಶಿರ ಬ॥ ೧೦, ಸೋಮವಾರ

ಪರಸ್ಪರ ಸಹಕಾರ.

(ಲೇಖಾಂಕ ೨.)

ಕುಚೇಷ್ಟೆಯು ಹೊರತು ಪ್ರತಿಷ್ಠೆಯಾಗುವದಿಲ್ಲೆಂದು ಒಂದು ನಾಣ್ಣುಡಿ ಇದೆ. ಈ ನಾಣ್ಣುಡಿಗೆ ಉದಾಹರಣೆ ಬೇಕಾದರೆ ಪರಸ್ಪರ ಸಹಕಾರವೆಂದು ಹೇಳಬಹುದು. ಸ್ವಪ್ರಕಾರರಂತೆ, ಧನಲೋಭಿಗಳಂತೆ ಕಠೋರ ಮನಸ್ಸಿನವರಂತೆ, ಸಾಲಗಾರರಂತೆ, ದೀನರಂತೆ, ಸಾವುಕಾರರು ಇವರಿಗೆ ಸುಲಿಯುತ್ತಾರಂತೆ, ಹೇರಳ ಬಡ್ಡಿ ದರವನ್ನು ಆಕರಿಸುತ್ತಾರಂತೆ, ದಣಿಸುತ್ತಾರಂತೆ, ಪೀಡಿಸುತ್ತಾರಂತೆ; ಪರಸ್ಪರ ಸಹಕಾರವಂತೆ! ಪರೋಪಕಾರವಂತೆ!! ಇತ್ಯಾದಿ ಪೂರ್ವರಂಗ—ಉತ್ತರರಂಗ ವೇಷಗಳನ್ನು ಕಲ್ಪನಾ ಸಾಮ್ರಾಜ್ಯದಲ್ಲಿಯೇ ಬರೆದು, ಪರಸ್ಪರ ಸಹಕಾರದ ಪರಸ್ಪರ ಸ್ತುತಿಯು ಲೋಕದಲ್ಲಿ ನಡೆದಿದೆ. ಈ ಸ್ತುತಿಯು ಹಾಗು ಸಾವುಕಾರರ ನಿಂದೆಯ ವಿಷಯವನ್ನು ಆಳವಾಗಿ ವಿಚಾರಿಸುವ.

ಪರಸ್ಪರ ಸಹಕಾರದ ಸಂಸ್ಥೆಗಳಿಗೆ ದೊರಕುವ ಭದ್ರತೆಯನ್ನು ನಾವು ಈ ಹಿಂದೆಯೇ ವರ್ಣಿಸಿರುವೆವು. ಸಾವುಕಾರರಿಗೆ ಬಾಯಿ ಮಾತಿನ ಭದ್ರತೆಯೇ ವಿಶೇಷವಾಗಿ ದೊರಕುತ್ತದೆ. ಗಿರಾಕಿಯ ಬಾಯಿ ಮಾತಿನ ಭದ್ರತೆಯನ್ನು ನೋಡಿ, ಅನುಮಾನದಿಂದ ಬಡ್ಡಿಯ ದರವು ಆಕರಿಸೋಣಾಗುತ್ತದೆ. ಉಂಡಾಡಿಗರಿಗೆ ಸಹಜವಾಗಿ ಬಡ್ಡಿಯ ದರ ಬೀಳುವದು ಹೆಚ್ಚು. ಇವರು ಯಾವದೇ ಉದ್ಯೋಗಕ್ಕೆ ಹಣವನ್ನೊಯ್ಯುವವರಲ್ಲ. ಉದ್ಯೋಗಕ್ಕೆ ಹಣವನ್ನೊಯ್ಯುವವರು ಹೇರಳ ಬಡ್ಡಿಯ ದರವನ್ನು ಕೊಡಲಿಕ್ಕೆಂದೂ ಒಪ್ಪುವದಿಲ್ಲ. ಉದ್ಯೋಗಿಗಳಿಗೆ, ವ್ಯವಹಾರಕುಶಲರಿಗೆ, ಬಾಯಿಮಾತಿನ ಬೆಲೆ ಇದ್ದವರಿಗೆ ಪತ್ತು ಇರುತ್ತದೆ, ಪತ್ತಿನ ಮೇಲೆ ಲಕ್ಷಾವಧಿ ರೂಪಾಯಿಗಳು ಸಾಲವಾಗಿ ದೊರೆಯುತ್ತವೆ. ಸಾವುಕಾರರನ್ನು ನಿಂದಿಸುವಾಗ, ಅವರ ಕಾರ್ಯವನ್ನು ರುಚಿಯಿಂದ ನಿರೂಪಿಸುವಾಗ, ಅವರ ವ್ಯವಹಾರದೊಳಗಿನ ಮರ್ಮಸ್ಥಾನಗಳ ಗ್ರಹಿಕೆಯಾಗುವದಿಲ್ಲ. ಬೇಕೆಂದು ಗ್ರಹಿಕೆ ಮಾಡಲ್ಪಡುವದಿಲ್ಲ. ಇದ. ಸಾವುಕಾರರ ಕಥೆಯು.

ಪರಸ್ಪರ ಸಹಕಾರದ ಕಥೆಯನ್ನು ಕೇಳಿರಿ. ಜಾಮೀನದಾರರ ಭದ್ರತೆ, ಕಾಯಿದೆಯ ಅನುಕೂಲ, ಮೇಲೆ ಪರೋಪಕಾರದ ವೇಷ, ಇಷ್ಟು ಸರಂಜಾಮು ಇದ್ದಾಗ್ಯೂ ಪರಸ್ಪರ ಸಹಕಾರ ಸಂಸ್ಥೆಗಳಲ್ಲಿ ಇನ್ನೂ ಹಣವು ಸಿಲ್ಕಿಬಿದ್ದಿರುವದು. ರಾ। ದೇವಧರರು ಪರಸ್ಪರ ಸಹಕಾರ ಸಂಸ್ಥೆಗಳ ಸಂಪಾದನೆಯ ಕಥೆಯನ್ನು ಹೇಳಿ, ಅವುಗಳ ಊರ್ಜಿತಾವಸ್ಥೆಯನ್ನು ನಾವು ಗ್ರಹಿಸಬೇಕೆಂದರು. ಹಾಗೆ ಗ್ರಹಿಸಲಿಕ್ಕೆ ನಾವು ತಯಾರು ಇದ್ದೇವೆ. ಆದರೆ ಈ ಸಂಸ್ಥೆಗಳ ಸಂಪಾದನೆಯನ್ನು ಹೇಳುವಾಗ, ಇಷ್ಟು ಬಡ್ಡಿಯ ದರದಿಂದ ಅಂದರೆ ೧೮॥ ಬಡ್ಡಿಯ ದರದಿಂದ ವಸೂಲಾದ ಬಡ್ಡಿ ಎಷ್ಟು? ೯ ರೂ. ೬ ಆಣೆಯಂತೆ ವಸೂಲಾದ ಬಡ್ಡಿಯೆಷ್ಟು? ಜಾಮೀನದಾರರು ಕೆತ್ತ ಬಡ್ಡಿ ಎಷ್ಟು? ಸಾಲಗಾರರು ಕೆತ್ತ ಹಣವೆಷ್ಟು? ಜಾಮೀನದಾರರು ಕೆತ್ತ ಹಣವೆಷ್ಟು? ಪರಸ್ಪರ ಸಹಕಾರ ಸಂಸ್ಥೆಯಲ್ಲಿಯೇ ಕೊಂಡ ಸಾಲಗಳಿಗೆ ಪುನಃ ಬಡ್ಡಿಯ ಸಹಿತ ಬರಕೊಟ್ಟ ಸಾಲಗಳೆಷ್ಟು? ಇವೆಲ್ಲ ಅಂಕಿಗಳನ್ನು ಪರ್ಯಾಲೋಚಿಸಿದರೆ, ಪರಸ್ಪರ ಸಹಕಾರದಿಂದ ಉಂಟಾದ ಕಲ್ಯಾಣವು ತಿಳಿಯುವ ಹಾಗಿದೆ. ನಮ್ಮ ಅಂದಾಜಿನಂತೆ ಸಾಲಗಾರರಿಗೆ ಸಾಲವನ್ನು ನಿಯಮಿತ ತೆರಲಿಕ್ಕಾಗದೆ, ಇಷ್ಟು ಕೆತ್ತ ಬಡ್ಡಿಯಿಂದಲೇ ಈ ಪರಸ್ಪರ ಸಹಕಾರಿ ಸಂಸ್ಥೆಗಳ ಹೊಟ್ಟೆಯುಬ್ಬಿ ಹೋಗಿದೆ. ಭದ್ರತೆಯು ಹೊರತು ಒಂದು ಪೈ ಸಾಲ ಸಿಗದಿದ್ದರೂ, ದಂಡನೀಯವಾದ ಕರ್ತುಗಳು ಸಾಲದ ಕರಾರುಗಳಲ್ಲಿ ಬೇಕಷ್ಟಿವೆ. ಸದ್ಯಕ್ಕೇನೋ ಇಷ್ಟು ಬಡ್ಡಿಯ ದರವಿದ್ದಾಗ್ಯೂ ೧೦೦ಕ್ಕೆ ೧೨॥ ಯಂತೆ ಬಡ್ಡಿಯ ದರವನ್ನು ಆಕರಿಸಿ, ಪರೋಪಕಾರ ಮಾಡಬೇಕೆಂದು ಗೊತ್ತಾಗಿರುವದು ತೀರ್ಪೆಯಷ್ಟು ಭದ್ರತೆ, ಮೇಲೆ ೬-೪ ಮಂದಿ ಸಂಪನ್ನ ಜಾಮೀನದಾರರು ಇದ್ದು, ಸಾಲಕ್ಕೆ ೧೨॥ ಬಡ್ಡಿಯನ್ನಾಕರಿಸುವ ದಯಾಘನತೆಯನ್ನೂ, ಲೋಕೋಪಕಾರವನ್ನೂ ಪರಸ್ಪರ ಸಹಕಾರದಲ್ಲಿಯೇ ಕಾಣಬೇಕು. ರಾ। ದೇವಧರರಂಥವರೇ ಅವನ್ನು ಪರಸ್ಪರ ಬಣ್ಣಿಸಬೇಕು, ಹೊರತು ಇಂಥ ಬಡ್ಡಿಯ ದರವು ತೀರ ಅಯೋಗ್ಯವೆಂದು ವ್ಯವಹಾರಜ್ಞಾನವಿದ್ದವರೆಲ್ಲರೂ ಹೇಳುವರು

ಮತ್ತೂ ಒಂದು ಆಪತ್ತು ಇದೆ. ಅದಕ್ಕೆ ಕಾರಣವಾದರೂ ಲೋಕೋಪಕಾರ ಬುದ್ಧಿಯೇ. ಪರಸ್ಪರ ಸಹಕಾರದಲ್ಲಿ ಎಲ್ಲ ವ್ಯವಹಾರವು ಪರಸ್ಪರ ನಡೆಯುತ್ತದೆ. ಪ್ರತ್ಯಕ್ಷ ವ್ಯವಹಾರದ ಸುದ್ದಿ ಕೇಳಬೇಡಿ. ಸಾಲಗಾರರಿಗೂ, ಸಾವುಕಾರರಿಗೂ ಇರುವ ಪ್ರತ್ಯಕ್ಷ ಸಂಬಂಧವು ಪರಸ್ಪರ ಸಹಕಾರದಲ್ಲಿ ಎಲ್ಲಿ ಹುಡುಕಿದರೂ ಕಂಡು ಬರುವದಿಲ್ಲ. ಈ ಪರಸ್ಪರ ವ್ಯಾಪಾರದಿಂದ ಒದಗುವ ಪರಿಣಾಮಗಳ್ಯಾವವು? ಸಾಲಗಾರರು ಸಾಲವನ್ನೊಯ್ಯುವ ಬೌಕಶಿಯನ್ನು ಪರಸ್ಪರ ಸಹಕಾರ ಸಂಸ್ಥೆಯು ಮಾಡುವದಿಲ್ಲ; ಮಾಡುವದು ಸಾಧ್ಯವೂ ಇಲ್ಲ. ಕಂಟಿನಲ್ಲಿ ಬರೆದಷ್ಟೇ ಸಂಸ್ಥೆಗೆ ಗೋಚರ. ಸಾಲಗಾರರ ಗುಣದೋಷಗಳನ್ನು ಸಂಸ್ಥೆಯು ವಿಚಾರಿಸುವದಿಲ್ಲ; ವಿಚಾರಿಸುವ ಕಾರಣವೂ ಇಲ್ಲ. ಯಾಕೆ? ಜಾಮೀನದಾರರಿದ್ದಾರೆ. ಭದ್ರ ಜಾಮೀನದಾರರ ಸಹಿಗಳಿವೆ. ಸಾಲಗಾರನು ಸಾಲವನ್ನೊಯ್ಯುವ ಹಕೀಕತನ್ನೆಲ್ಲ ಜಾಮೀನದಾರರೇ ವಿಚಾರಿಸಿದ್ದರಬೇಕು. ವಿಚಾರಿಸಿ ಸಹಿ ಮಾಡಿದ್ದರಬೇಕು. ಜಾಮೀನುದಾರರು ಸಾಲಗಾರನ ಸಾಲಕ್ಕೆ ಜವಾಬುದಾರರಿದ್ದಾರೆ. ನಮಗೇನು! ಎಂಬ ಬುದ್ಧಿಯಿಂದ ಸಾಲಗಳು ಮಂಜೂರಾಗುತ್ತವೆ. ಜಾಮೀನದಾರರಾದರೋ "ನಾವೇನು ಕಾಸು ಕೊಡಬೇಕಾಗಿಲ್ಲ; ಸಾಲಗಾರನು ಸಹಕಾರಿ ಕಾಯಿದೆಯ ಶಾಸ್ತ್ರದಂತೆ ಜಾಮೀನು ಬೇಡಬಂದಿದ್ದಾನೆ, ಒಂದು ಸಹಿ ಹಾಕಿದರೆ ಆತನ ಕೆಲಸವಾಗುತ್ತಿದೆ, ಹಣ ಕೊಡುವದು ಪರಸ್ಪರ ಸಹಕಾರ ಸಂಸ್ಥೆಯು ನಮ್ಮ ಕೈಯಿಂದ ಹಣ ಕೊಡುವ ಪ್ರಸಂಗವಿಲ್ಲದ ಬಳಿಕ, ನಾವೇಕೆ ಇದರ ಭೂತ-ಭವಿಷ್ಯ ವಿಚಾರಮಾಡಬೇಕು?" ಎಂಬ ಭಾವನೆಯಿಂದ ಜಾಮೀನದಾರರ ಸಹಿಗಳಾಗುತ್ತಿವೆ. ಅನೇಕ ಜಾಮೀನದಾರರಿಗೆ ಸಾಲಗಾರನ ಪರಿಚಯವೂ ಕೂಡ ಇರುವದಿಲ್ಲ. ಯಾಕಂದರೆ, ಒಬ್ಬ ಜಾಮೀನದಾರನ ಸಹಿ ನೋಡಿ ಇನ್ನೊಬ್ಬನು ಸಹಿ ಮಾಡಿದ್ದೂ ಉಂಟು. ಹೀಗೆಲ್ಲ ಪರಸ್ಪರ ಸಹಕಾರಿ ಸಂಸ್ಥೆಯು ಸಾಮಾನ್ಯ ವ್ಯವಹಾರವಿರುತ್ತದೆ. ಪ್ರಾಮಾಣಿಕ ಸಾಲಗಾರರು, ಪ್ರಾಮಾಣಿಕ ಜಾಮೀನದಾರರು ಇರಬಹುದು ಆದರೆ ಅವರು ಅಪವಾದಗಳೇ.

ಈ ಪ್ರಕಾರ ಪರಸ್ಪರ ವ್ಯವಹಾರ ನಡೆದದ್ದರಿಂದ ಕೊನೆಗೆ "ಇಂದ್ರಾಯ ತಕ್ಷಕಾಯ ಸ್ವಾಹಾ" ಎಂಬಂತೆ ಜಾಮೀನದಾರರಿಗೂ, ಸಾಲಗಾರರಿಗೂ ಒತ್ತಟ್ಟಿಗೆ ಸೇರಿಸಿ ಪಂಚಫೈಸಲೆಯಾಗುವಾಗ, ಪರಸ್ಪರ ಸಹಕಾರದ ಪರಸ್ಪರ ವೇಷವು ಪ್ರತ್ಯಕ್ಷವಾಗುತ್ತದೆ. ಪರಸ್ಪರ ವ್ಯವಹಾರ ಮಾಡಿದವರೆಲ್ಲರೂ ಪಂಚ-ಫೈಸಲೆಯಲ್ಲಿ ಪ್ರತ್ಯಕ್ಷರಾಗುತ್ತಾರೆ. ಜಾಮೀನದಾರರು, ಸಾಲಗಾರರು ಎಂಬ ಭೇದಭಾವವು ಪಂಚ-ಫೈಸಲೆಯಲ್ಲಿ ತೋರುವದಿಲ್ಲ. "ಶ್ವಾನಂ, ಯುವಾನಂ ಮಘವಾನಮಾಹ" ಎಂಬಂತೆ ಒಂದೇ ತರಗತಿಯವರಾಗುತ್ತಾರೆ. ಪರಸ್ಪರ ಸಹಕಾರವು ಯಾವಾಗಲೂ ಪರಸ್ಪರ ಸಾಲಗಾರರು ಸಾಲ ಕೆತ್ತರೇನು? ಜಾಮೀನದಾರರು ಕೆತ್ತರೇನು? ಪರಸ್ಪರ ಸಹಕಾರವು ಪರಸ್ಪರವಿರುತ್ತದೆ. ಸಹಕಾರ ಸಂಸ್ಥೆಯ ಆಡಳಿತೆಯುವರ ಸ್ವೇಚ್ಛೆಯಂತೆ ಜಾಮೀನದಾರರಿಂದಲೂ ಎಲ್ಲ ಹಣ ವಸೂಲಾಗುವದೂ ಉಂಟು. ಜಾಮೀನದಾರನು ಸಾಲ ತೆರಬೇಕು; ಅಥವಾ ಆಸ್ತಿ ಮಾರಬೇಕು. ಮತ್ತು ಪರಸ್ಪರ ಸಹಕಾರಕ್ಕೆ ತುಂಬಬೇಕು. ಹಾಗೂ ಹೀಗೆ ತುಂಬಬಹುದಾದ ಹಣವನ್ನು ವಸೂಲ ಮಾಡಿಕೊಳ್ಳಲು ದಿವಾಣಿ ಕೋರ್ಟುಗಳಲ್ಲಿ ಬರದಾಡಬೇಕು. ಸಾಲಗಾರನು ನಾದಾರಿಯಾ

ಕರ್ನಾಟಕವೃತ್ತ, ತಾ. ೨೭—೧೨—೧೯೨೬ ನೇ ಇಸ್ವಿ.

☞ ದಯವಿಟ್ಟು ಇದರ ಸಂಗಡ ಕಳುಹಿಸಿರುವ ಕಾಗದಗಳನ್ನು ಬೇರೆಯವರಿಗೆ ಕೊಡಬೇಕು, ಹರಿದು ಹಾಕಬಾರದು.

ಜ್ವರಗಡ್ಡೆ ಅಂದರೆ ಗುಲ್ಮ ಅಥವಾ ಅಡ್ಡಕ್ಕೆ ಇದರ ಮೇಲೆ ಗುಳಿಗೆ. ದಿವ್ಯ ಔಷಧಿ ಅತಿ ಶ್ರೇಷ್ಠ ಇದು ಹೊಟ್ಟೆಯಲ್ಲಿ ಎಡಬದಿಗೆ ಆಗುತ್ತದೆ.

ನಮ್ಮ ಜ್ವರಗಡ್ಡೆ ಗುಳಿಗೆಗಳು ಜಗತ್ಪ್ರಸಿದ್ಧ! **ಜಗದೀಶನು ಎಲ್ಲರಿಗೂ ಸುಖಕೊಡಲಿ!!!** ನಮ್ಮ ಕಷಾಯದ ಮಾಳ ಬಹು ಗುಣಕಾರಿ!!

ಗಿರಗಾಂವ, ಮುಂಬಯಿ.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ

೧೮೮೧ನೇ ಇಸವಿಯಲ್ಲಿ ಸ್ಥಾಪನೆಯಾದದ್ದು.

ಜಗಪ್ರಸಿದ್ಧ ಜ್ವರದ ಗುಳಿಗೆಗಳು, ಅನೇಕ ಪ್ರಕಾರದ ಜ್ವರಗಳ ಮೇಲೆ ಬಹುಗುಣಕಾರಿ,

ಜ್ವರಕ್ಕೆ ಸಂಜೀವನಿ, ಲಕ್ಷಗಟ್ಲೆ ಬಾಟ್ಲಿಗಳು ಖರ್ಚಾದವು!

ಅನೇಕ ಜಗಪ್ರಸಿದ್ಧ ಡಾಕ್ಟರರು ಸರ್ಟಿಫಿಕೇಟು ಕೊಟ್ಟಿರುತ್ತಾರೆ!

ಡಾಕ್ಟರ. ಕೇ. ಎಸ್. ಇಂಜಿನಿಯರ, ಎಲ್. ಎಮ್. ಎಸ್. (ಮುಂಬಯಿ) ಎಫ್. ಸೀ. ಎಸ್. (ಲಂಡನ) ಅಸಿಸ್ಟಂಟ ಸರ್ಜನ್, ... ಬಿ. ಎಮ್. ಎಸ್. ಆರ್. ಎಲ್:- ಕರ್ನಾಟಕದೊಳಗೆ ಕಾರವಾರ ಎಂಬಲ್ಲಿ ನಾನು ಸಿವ್ಹಿಲ್ ಸರ್ಜನ್ ಇರುವಾಗ ಕರ್ಕಿ ಮತ್ತು ಕಂ... ಇವರ ಜ್ವರದ ಗುಳಿಗೆಗಳನ್ನು ಕಾರವಾರ ಜಿಲ್ಹೆಯಲ್ಲಿ ವ್ಯಾಪಿಸಿರುವ ಅನೇಕ ಪ್ರಕಾರದ ಜ್ವರಗಳ ಮೇಲೆ (ಛಳಿಜ್ವರ, ಕೆಟ್ಟ ಹವೆಯ ಜ್ವರ ಮುಂತಾ...ವುಗಳ ಮೇಲೆ) ಜನರಿಗೆ ಕೊಟ್ಟಿರುತ್ತೇನೆ, ಹಾಗೂ ಈ ಗುಳಿಗೆಗಳು ಬಹಳ ಗುಣಕಾರಿ ಎಂತ ನನ್ನ ಅನುಭವದಿಂದ ಕಂಡುಬಂತು. ಈ ಗುಳಿಗೆಗಳಲ್ಲಿ...ನ ಔಷಧಿಗಳು ನನಗೆ ಗೊತ್ತಿವೆ. ಮತ್ತು ಅವು ಬಹಳೇ ವಿಶ್ವಸನೀಯವಾಗಿರುತ್ತವೆ.

ಶಕೆ ೧೮೪೮–೪೯ ಇ. ಸ. ೧೯೨೭

ಜನವರಿ	ಫೇಬ್ರವರಿ	ಮಾರ್ಚ	ಎಪ್ರಿಲ
ರ. … ೨ ೯ ೧೬ ೨೩ ೩೦	ರ. … ೬ ೧೩ ೨೦ ೨೭	ರ. … ೬ ೧೩ ೨೦ ೨೭	ರ. … ೩ ೧೦ ೧೭ ೨೪
ಸೋ. … ೩ ೧೦ ೧೭ ೨೪ ೩೧	ಸೋ. … ೭ ೧೪ ೨೧ ೨೮	ಸೋ. … ೭ ೧೪ ೨೧ ೨೮	ಸೋ. … ೪ ೧೧ ೧೮ ೨೫
ಮಂ. … ೪ ೧೧ ೧೮ ೨೫ ..	ಮಂ. ೧ ೮ ೧೫ ೨೨ ..	ಮಂ. ೧ ೮ ೧೫ ೨೨ ೨೯	ಮಂ. … ೫ ೧೨ ೧೯ ೨೬
ಬು. … ೫ ೧೨ ೧೯ ೨೬ ..	ಬು. ೨ ೯ ೧೬ ೨೩ ..	ಬು. ೨ ೯ ೧೬ ೨೩ ೩೦	ಬು. … ೬ ೧೩ ೨೦ ೨೭
ಗು. … ೬ ೧೩ ೨೦ ೨೭ …	ಗು. ೩ ೧೦ ೧೭ ೨೪ …	ಗು. ೩ ೧೦ ೧೭ ೨೪ ೩೧	ಗು. … ೭ ೧೪ ೨೧ ೨೮
ಶು. … ೭ ೧೪ ೨೧ ೨೮ …	ಶು. ೪ ೧೧ ೧೮ ೨೫ …	ಶು. ೪ ೧೧ ೧೮ ೨೫ …	ಶು. ೧ ೮ ೧೫ ೨೨ ೨೯
ಶ. ೧ ೮ ೧೫ ೨೨ ೨೯ …	ಶ. ೫ ೧೨ ೧೯ ೨೬ …	ಶ. ೫ ೧೨ ೧೯ ೨೬ …	ಶ. ೨ ೯ ೧೬ ೨೩ ೩೦

ಮೇ	ಜೂನ	ಜುಲಾಯಿ	ಅಗೋಸ್ತ
ರ. ೧ ೮ ೧೫ ೨೨ ೨೯	ರ. .. ೫ ೧೨ ೧೯ ೨೬	ರ. ೩ ೧೦ ೧೭ ೨೪ ೩೧	ರ. … ೭ ೧೪ ೨೧ ೨೮
ಸೋ. ೨ ೯ ೧೬ ೨೩ ೩೦	ಸೋ. … ೬ ೧೩ ೨೦ ೨೭	ಸೋ. ೪ ೧೧ ೧೮ ೨೫ ..	ಸೋ. ೧ ೮ ೧೫ ೨೨ ೨೯
ಮಂ. ೩ ೧೦ ೧೭ ೨೪ ೩೧	ಮಂ. … ೭ ೧೪ ೨೧ ೨೮	ಮಂ. ೫ ೧೨ ೧೯ ೨೬ …	ಮಂ. ೨ ೯ ೧೬ ೨೩ ೩೦
ಬು. ೪ ೧೧ ೧೮ ೨೫ …	ಬು. ೧ ೮ ೧೫ ೨೨ ೨೯	ಬು. ೬ ೧೩ ೨೦ ೨೭ …	ಬು. ೩ ೧೦ ೧೭ ೨೪ ೩೧
ಗು. ೫ ೧೨ ೧೯ ೨೬ ..	ಗು. ೨ ೯ ೧೬ ೨೩ ೩೦	ಗು. ೭ ೧೪ ೨೧ ೨೮ …	ಗು. ೪ ೧೧ ೧೮ ೨೫ …
ಶು. ೬ ೧೩ ೨೦ ೨೭ ..	ಶು. ೩ ೧೦ ೧೭ ೨೪ …	ಶು. ೧ ೮ ೧೫ ೨೨ ೨೯ …	ಶು. ೫ ೧೨ ೧೯ ೨೬ …
ಶ. ೭ ೧೪ ೨೧ ೨೮ ..	ಶ. ೪ ೧೧ ೧೮ ೨೫ …	ಶ. ೨ ೯ ೧೬ ೨೩ ೩೦ …	ಶ. ೬ ೧೩ ೨೦ ೨೭ …

ಸೆಪ್ಟಂಬರ	ಅಕ್ಟೋಬರ	ನವಂಬರ	ಡಿಸೆಂಬರ
ರ. … ೪ ೧೧ ೧೮ ೨೫	ರ. ೨ ೯ ೧೬ ೨೩ ೩೦	ರ. … ೬ ೧೩ ೨೦ ೨೭	ರ. … ೪ ೧೧ ೧೮ ೨೫
ಸೋ. … ೫ ೧೨ ೧೯ ೨೬	ಸೋ. ೩ ೧೦ ೧೭ ೨೪ ೩೧	ಸೋ. … ೭ ೧೪ ೨೧ ೨೮	ಸೋ. … ೫ ೧೨ ೧೯ ೨೬
ಮಂ. … ೬ ೧೩ ೨೦ ೨೭	ಮಂ. ೪ ೧೧ ೧೮ ೨೫ …	ಮಂ. ೧ ೮ ೧೫ ೨೨ ೨೯	ಮಂ. … ೬ ೧೩ ೨೦ ೨೭
ಬು. … ೭ ೧೪ ೨೧ ೨೮	ಬು. ೫ ೧೨ ೧೯ ೨೬ …	ಬು. ೨ ೯ ೧೬ ೨೩ ೩೦	ಬು. … ೭ ೧೪ ೨೧ ೨೮
ಗು. ೧ ೮ ೧೫ ೨೨ ೨೯	ಗು. ೬ ೧೩ ೨೦ ೨೭ …	ಗು. ೩ ೧೦ ೧೭ ೨೪ …	ಗು. ೧ ೮ ೧೫ ೨೨ ೨೯
ಶು. ೨ ೯ ೧೬ ೨೩ ೩೦	ಶು. ೭ ೧೪ ೨೧ ೨೮ …	ಶು. ೪ ೧೧ ೧೮ ೨೫ …	ಶು. ೨ ೯ ೧೬ ೨೩ ೩೦
ಶ. ೩ ೧೦ ೧೭ ೨೪ …	ಶ. ೧ ೮ ೧೫ ೨೨ ೨೯ …	ಶ. ೫ ೧೨ ೧೯ ೨೬ …	ಶ. ೩ ೧೦ ೧೭ ೨೪ ೩೧

R OF K P KUMTA

ನಮ್ಮ ಜ್ವರಗಡ್ಡೆಯ ಗುಳಿಗೆಗಳಿಂದ ಅನೇಕ ಜನರು ನಿರಾಶೆಯಾದವರು ಗುಣಹೊಂದಿರುತ್ತಾರೆ!

...ನಾಯಕ ಬಾಮ್. ತಲೆ ನೋವು, ಅರತಲೆ ನೋವು ತತ್‌ಕ್ಷಣವೇ ಗುಣ. ಇದರಿಂದ ಬೆನ್ನು ನೋವು, ಸಂಧು ನೋವು, ಉಳುಕು, ಕೈಕಾಲು ಮುಂತಾದ್ದು ...ನದು ... ಬಹುಕಾಲದ ನೋವು, ಪಟ್ಟೆನ ನೋವು ಮುಂತಾದವುಗಳು ಬಹುಗುಣ ಸುಖದಾಯಕ ಬಾಮನ್ನು ಅವಶ್ಯವಾಗಿ ತರಿಸಿ ನೋಡಿ!

ತನ್ನ ವಿವಾಹವನ್ನು ಸಾಗಿಸಿ ದೇಶದ ಹಿಂದಿನ ಭವಿಷ್ಯ... ...ದ್ಧಿ ಮಾಡುತ್ತಾರೆ. ವಿದ್ಯಾಕಂಠನನ್ನರು ಒಕ್ಕಲಿಗನಿ | ಜಿಲ್ಹೆಯಲ್ಲಿ ಸ್ಥಾಪಿಸಿರುವರು. ಮೈಸೂರ ಅರಮನೆ ಯಲ್ಲಿಯೂ, ಎಲ್ಲರೂ ಧರ್ಮಬುದ್ಧಿಯಿಂದ ಕೈರಾ | ...ರಿಗೆ ಭಗವಂತನು ಆಯುರಾರೋಗ್ಯವನ್ನೀಯಲಿ... ...ನು ನಾವು ಪ್ರಾರ್ಥಿಸುವೆವು.

, ಜಾಮೀನದಾರನು ಸಾದಾರಿಯಾ ನಿರ್ಧಾರಾಗಿದ್ದರೆ, ಪರೋಪಕಾರದ ಸಾಲನ್ನು ಕೊ... ಇತರ ಜಾಮೀನದಾರರ ಮೇಲೆ ಉಪಾಯೋಜನೆ ಮಾಡಬೇಕು. ಸಹಕಾರಕ್ಕೆ ...ರ್ಟಿನ ಬಾಧೆಯಿಲ್ಲದಿದ್ದರೂ, ಸಹಕಾರದ ಸೇರಿದವರಿಗೆ ಕೋರ್ಟು ತಪ್ಪುವದಿಲ್ಲ. ...ಕೋಪಕಾರಿ ಪರಸ್ಪರ ಸಹಕಾರದ ಸಹ...ದಿಂದ ಪ್ರತ್ಯಕ್ಷವಾದ ದಿವಾಣಿ ವ್ಯವಹಾರ...ು.

ಹೀಗೆ ಪರಸ್ಪರ ಸಹಕಾರದ ಪರಸ್ಪರ ವ್ಯ...ಾರದಿಂದ ಒದಗುವ ಅನರ್ಥ ಪರಂಪರೆ...ು. ಸಾವುಕಾರನು ಹೆಚ್ಚು ಬಡ್ಡಿ ತಿನ್ನಲಿ, ...ಮೆ ಬಡ್ಡಿ ತಿನ್ನಲಿ, ಸಾವುಕಾರನಿಗೂ ಸಾಲ...ರನಿಗೂ ಗಂಟು. ಸಾಲಗಾರನು ನಿರ್ಧಾರಿ...ಾದರೆ, ಸಾವುಕಾರನು ನಷ್ಟವನ್ನು ಸ್ವೀಕರಿಸ...ು. ಪರಸ್ಪರ ಸಹಕಾರದಲ್ಲಿ ಸಾಲಗಾರ...ಡನೆ ಜಾಮೀನದಾರರೂ, ಸಾಯಬೇಕಾಗು...ೆ. ದಿವಾಣಿ ಕೋರ್ಟುಗಳಲ್ಲಿ ವ್ಯವಹಾರವು...ು ಬೀಳುತ್ತದೆ. ದಿವಾಣಿ ಕೋರ್ಟಿನಲ್ಲಿ ...ಳೆಯಾದರೂ ಸಾಲಗಾರನ ಯಾ ಇತರ ...ಮೀನದಾರರ ಆಸ್ತಿಯ ಮೇಲೆ ತೀರ್ಪು...ಂತೆ ಹಣ ವಸೂಲ ಮಾಡುವ ಅಧಿಕಾರವು ...ಗೆ ವಸೂಲ ಕೊಟ್ಟ ಜಾಮೀನದಾರನಿಗೆ ...ಪ್ರತ್ಯವಾಗುವದಿಲ್ಲ. ಜಾಮೀನದಾರರ ಅವಸ್ಥೆ...ನ್ನೂ ಜವಾಬದಾರಿಯನ್ನೂ ಬಚ್ಚಿಟ್ಟು, ಪ...ಸ್ಪರ ಸಹಕಾರದ ಲೋಕೋಪಕಾರವನ್ನೇ ...ರಸ್ಪರ ಬಣ್ಣಿಸುವದು ಪ್ರಚಾರಕರ ಉದ್ಯೋ...ವಾಗಿರಬಹುದು. ಆದರೆ, ರಾ| ದೇವಧರರವ...ಂಥ ಲೋಕೋಪಕಾರಿ ನಾಗರಿಕರಿಗೆ ಇದು ...ರವಲ್ಲ. ಇನ್ನೂ ವಿಚಾರಿಸತಕ್ಕ ಹಲವು ವಿಷ...ಯಗಳಿವೆ.

ಸ್ಫುಟ ಸೂಚನೆಗಳು.

೧. ವಿಖ್ಯಾತ ದೇಶಸೇವಕರಾದ ಶ್ರೀ| ಚಕ್ರವ... ರಾಜಗೋಪಾಲಾಚಾರ್ಯರವರು ನಾಗಪುರ...ದೊಳಗಿನ ರಾಷ್ಟ್ರೀಯ ಕಾಲೇಜಿನ ವಿದ್ಯಾರ್ಥಿಗಳನ್ನು ...ದೇಶಿಸಿ ಆಡಿದ ಮಾತುಗಳು ಪ್ರಶಂಸನೀಯವಿವೆ. ಸ...ತ್ತರೆಂದು ಅಭಿಮಾನದಿಂದ ಹೇಳಿಕೊಳ್ಳುವವರೂ ಅವನ್ನು ಚನ್ನಾಗಿ ಮರಾಟಿಕೆಕೊಳ್ಳತಕ್ಕದ್ದು. ಪ್ರ...ತ ಶಿಕ್ಷಣ ಸಂಸ್ಕಾರದಿಂದ ವಿದ್ಯಾರ್ಥಿಗಳಲ್ಲುಂಟಾದ ...ವಸ್ಥಾಂತರವನ್ನು ಶ್ರೀ| ರಾಜಗೋಪಾಲಾಚಾರ್ಯರು ಬಲು ಮಾರ್ಮಿಕವಾಗಿ ನಿರೂಪಿಸಿದರು. "ಜ್ಞಾ...ನಕ್ಕಾಗಿ ಹೆಚ್ಚು ಖರ್ಚು ಮಾಡುತ್ತ ಹೋ...ವದೇ ಶಿಕ್ಷಣದ ಧ್ಯೇಯವಾಗಿರುವದಲ್ಲವೇ! ಶಿಕ್ಷಣ...ದ ಧ್ಯೇಯವೇನೆಂದು ಬಲ್ಲಿರಾ? ನಮ್ಮ ಶಿಕ್ಷಣದಿಂದ ...ದೇಶದೊಳಗೆ ಸಂಪದಭಿವೃದ್ಧಿಯಾಗಬೇಕು; ಕಲಿಗ...ಳಲ್ಲಿ ಯಾಗಬೇಕು; ಪಾರಮಾರ್ಥದ ವಿಚಾರವು ...ರೂಢವಬೇಕು. ಆದೀಗ ಮೋಲೆಗುಂಪಾಗಿದೆ ನ...ಮ್ಮ ವಿದ್ಯಾರ್ಜನೆಗೇ ಇದ್ದಷ್ಟು ಹಣ ಸಾಲದು. ನಮ್ಮ ...ನಮ್ಮ ಹುಡುಗರು ನೂರು ರೂಪಾಯಿಯೊಳಗೆ ...ಮ್ಮ ನಿರ್ವಾಹವನ್ನು ಸಾಗಿಸಿ ದೇಶದ ಸಂಪದಭಿವೃ...ದ್ಧಿ ಮಾಡುತ್ತಾರೆ. ವಿಖ್ಯಾತಂತನ್ನರು ಹುಡುಗರಿಗಿಂತ ಎಷ್ಟೋ ಹಾಲು ಹೆಚ್ಚಿಗೆ ದುಡಿಯುತ್ತಾರೆ. ಅವರೂ ನಿರ್ಮಲಜೀವಿಗಳಾಗರು. ಈ ಗೋಳು ಯಾಕೆ? ಶಿಕ್ಷಣದಿಂದ ನಮ್ಮ ಕೈ-ಕಾಲುಗಳ ಉಪಯೋಗಗಳಿಗೆ ನಾವು ಸಂಪೂರ್ಣವಾಗಿ ಅಪರಿಚಿತರಾಗಿದ್ದೇವೆ. ಶಾಲೆಯಿಂದ ನೀವು ಮನೆಗೆ ಹೋಗಿರಿ; ನಿಮ್ಮ ಅಕ್ಕ ಕೈ-ಕಾಲು ತೊಳೆಯಲು ನಿಮಗೆ ನೀರನ್ನು ತಯಾರು ಮಾಡಿಡುತ್ತಾಳೆ. ಊಟವಾದ ಬಳಿಕ ಮನೆಯೊಳಗಿನ ಕೆಲಸಗಳನ್ನೆಲ್ಲಾ ನೀವು ಅವರಿಗೆ ಬಿಡುವಿರಿ; ಅಂದರೆ ನಿಮಗಿಂತ ಹಿರಿಯರ ಮೇಲೆ ನೀವು ಹೊರುತ್ತೀರಿ. ಇವರೂ ನನ್ನ ವಯೋವೃದ್ಧ ತಿಗಪ್ಪನವರು ತಮ್ಮ ಬಟ್ಟೆಗಳನ್ನು ಸ್ವತಃ ಒಗೆಯುತ್ತಾರೆ; ನಾನಾದರೋ, ನಿಮ್ಮಂತೆ ಸುಶಿಕ್ಷಿತನು! ನನ್ನಿಂದ ಆ ಕೆಲಸ ಸಾಗದು. ಈಗ ನಿಮ್ಮ ವಿಚಾರದಲ್ಲಿ ಕ್ರಾಂತಿಯುಂಟಾಗಬೇಕು. ಹುಡುಗಿಯರಂತೆ ದಡಿಯಾಗದಿರಿ; ಸ್ವಾವಲಂಬನವಾಗಿ ನಿರ್ವಾಹ ಮಾಡಕಲಿಯಿರಿ; ಅಂದರೆ ನಿಮಗೆ ಸುಖವಾಗುವದು. ದೇಶಸೇವೆ ಮಾಡಲು ಬೇಕಷ್ಟು ಅವಕಾಶ ದೊರೆಯುವದು. ನಮ್ಮ ಜೀವನಕ್ರಮವು ಕೃತ್ರಿಮವಾಗಿದೆ. ಆದರಿಂದ ನಮಗ ಹೆಚ್ಚು ಖರ್ಚು ತಗಲುತ್ತದೆ; ಸಮಯವೂ ಅಪವ್ಯಯವಾಗುತ್ತದೆ. ಈ ಕೃತ್ರಿಮ ನಮ್ಮ ಬುದ್ಧಿಯನ್ನೂ ಸಂಸ್ಕಾರವನ್ನೂ ಪರಿಗಣಿಸಿ ನಾವು ಮಾರ್ಪಡಿಸಬೇಕಾಗುತ್ತದೆ. ಹುಡುಗರಿಂದಷ್ಟು ಕಷ್ಟ ಸಹಿಸಲುದ್ಯುಕ್ತರಾಗಿ ಸಾಮಾನ್ಯವಾಗಿ ಜೀವಿಸುತ್ತಿದ್ದರೆ, ದೇಶಸೇವೆಯನ್ನು ಮಾಡಲು ನಮಗೆ ಸಮಯವು ಸಿಕ್ಕೀತು; ಬುದ್ಧಿಯೂ ಪ್ರಾಪ್ತವಾಗುವದು." ಇತ್ಯಾದಿ ವಿಚಾರಗಳನ್ನು ಶ್ರೀ| ಚಕ್ರವರ್ತಿ ರಾಜಗೋಪಾಲಾಚಾರ್ಯರವರು ನುಡಿದು, ವಿದ್ಯಾರ್ಥಿಗಳಿಗೆ ಕಾಯಕಷ್ಟದ ಮಹಿಮೆಯನ್ನು ಸ್ಫುಟಗೊಳಿಸಿದರು. ವಿದ್ಯಾರ್ಥಿಗಳೆಲ್ಲರೂ ತಮ್ಮ ನಡಾವಳಿಯನ್ನೂ, ಹಿರಿಯರ ನಡಾವಳಿಯನ್ನೂ ತುಲನೆ ಮಾಡಿದರೆ, ಶ್ರೀ| ರಾಜಗೋಪಾಲಾಚಾರ್ಯರು ಕಲ್ಪಿಸಿದ ಮನೋಭೂಮಿಯ ಸಾಕ್ಷಾತ್ಕಾರವು ಅವರಿಗಾಗುವದು. ಹೊರತಾಗಿ ಮಿಗಿಲಾದಂತೆ, ಸುಖವು ಮಾತ್ರ ಸಿಗಲಾಗುವದಿಲ್ಲ. ಇದನ್ನೂ ವಿದ್ಯಾರ್ಥಿಗಳ ವಿಚಾರಿಸತಕ್ಕ ವಿಷಯ.

---

೨. ನಮ್ಮ ಮೈಸೂರು ಸಂಸ್ಥಾನದೊಳಗಿನ ಸಂಗತಿಗಳನ್ನು ಕೇಳಿ, ನಮಗೆ ಅತ್ಯಂತ ಸಂತೋಷವಾಗುತ್ತದೆ. ದರ್ಬಾರವು ಖಾದಿಯ ಪ್ರಚಾರವನ್ನು ಅಂತಃಕರಣಪೂರ್ವಕವಾಗಿ ಪುರಸ್ಕರಿಸುತ್ತಿದೆ. ವ್ಯಾಪಾರ-ಉದ್ಯೋಗಗಳ ಖಾತೆಗಳ ಅಧಿಪತಿಗಳಾದ ಮಿ|| ಬಹಿರುದ್ದೀನ ಮುಕಾಯಿಯವರು ಉತ್ಸಾಹದಿಂದ ದುಡಿಯುತ್ತಿರುವರು. ಚನ್ನಪಟ್ಟಣದಲ್ಲಿ ಸಹಕಾರ ಪರಿಷತ್ತು ಸೇರಿತ್ತು. ಆ ಸಮಯ ಖಾದಿ ಪ್ರಸಾರ ಮಾಡಲು ಪ್ರತಿನಿಧಿಗಳಿಗೆ ಮಿ|| ಮುಕಾಯಿಯವರು ಆಗ್ರಹಪೂರ್ವಕವಾಗಿ ಹೇಳಿದರು. "ಹತ್ತಿಯನ್ನು ಸಾಕಷ್ಟು ಸರಕಾರವು ಸಂಗ್ರಹಿಸುವದು; ನೂಲನ್ನು ಯೋಗ್ಯ ಬೆಲೆ ಕೊಟ್ಟು ಕೊಂಡುಕೊಳ್ಳುವದು. ಅವಶ್ಯವಿದ್ದರೆ, ನೂಲನ್ನು ಆದಷ್ಟು ಕಡಿಮೆ ಕೂಲಿಯಿಂದ ನೇಯುಕೊಡುವ ಏರ್ಪಾಟನ್ನೂ ಮಾಡುವದು." ಇದಕ್ಕೂ ಹೆಚ್ಚಿಗೆ ಖಾದಿಯ ಪ್ರಸಾರಕ್ಕೇನು ಬೇಕು? ಮಹಾರಾಜರು ಖಾದಿಯ ಕಮೀಶನರರಾದ ರಾ| ಅನಂತರಾಮರವರು ಹಿಂದು ಖಾದಿಯ ಮಂಡಳವನ್ನು ತಮ್ಮ ಚತ್ರಿಯಲ್ಲಿ ಸ್ಥಾಪಿಸಿರುವರು. ಮೈಸೂರ ಅರಮನೆಯವರೆಲ್ಲರೂ ಧರ್ಮಬುದ್ಧಿಯಿಂದ ಖಾದಿಯ ಸೇವೆ ಮಾಡುತ್ತಿರುವರು. ಖಾದಿಯ ಪ್ರಚಾರದ ಕಥೆಯನ್ನು ಕೇಳಿ ಕರ್ನಾಟಕದ ಬಂಧು-ಭಗಿನಿಯರೆಲ್ಲರೂ ಮಹಾರಾಜರಿಗೆ ಅಂತಃಕರಣಪೂರ್ವಕವಾಗಿ ಹರಸುವರು. ಹಿಂದೆ ಖಾದಿಗೆ ದರ್ಬಾರದವರು ಉಂಟುಮಾಡಿದ ವಿಘ್ನಗಳನ್ನೂ ಆನಂದದಿಂದ ಮರೆಯುವರು. "ರಾಜಾ ಬೋಲೇ ಸೋ ಖಾಲೇ" ಎಂಬಂತೆ, ಇಡೀ ಮೈಸೂರ ಸಂಸ್ಥಾನದಲ್ಲೀಗ ಖಾದಿಯ ಪ್ರಸಾರವೇ ಕೇಳಬರುತ್ತಿದೆ. ಇದು ನಿಜವಾಗಿ ಅಭಿನಂದನೀಯವು. ಖಾದಿಯ ಅಭ್ಯಾಸಕರಾದ ಮಹಾತ್ಮರಿಗಂತೂ ಇದನ್ನು ಕೇಳಿ ಪರಮಾನಂದವಾಗುವದು.

---

೩. ಮೈಸೂರ ಸರಕಾರವು ಇನ್ನು ಕೈಕೊಳ್ಳಲಿರುವ ...ದು ಯೋಜನೆಯನ್ನೂ ನಾವು ಕೊಂಡ...ಾಡು...ರ ಸಂಸ್ಥಾನದಲ್ಲಿ ಪುರಾತನ ಸನಾತನ ...ಂಪರೆಗನುಸಾರವಾಗಿ ಅಲ್ಲಲ್ಲಿ ಅನ್ನಛತ್ರಗಳಿದ್ದವು. ತೀರ್ಥಾಟನ, ದೇಶಾಟನ ಮಾಡುವವರ ಸೌಕರ್ಯಕ್ಕಾಗಿ ಇವುಗಳ ನಿರ್ಮಾಣವಾಗಿತ್ತು. ಈಗ ಪ್ರಯಾಣ ಸೌಕರ್ಯಗಳು ಕಲ್ಪನಾತೀತವಾಗಿ ಬೆಳೆದವೆ. ಉಗಿಬಂಡಿ—ಮೋಟಾರುಗಳಿಂದಂತೂ ದಿನ ಬೆಳಗಾಗುವದರೊಳಗೆ ನೂರಾರು ಹರದಾರಿಗಳ ಪ್ರಯಾಣವು ಹಿಂದಾಗಿಬರುತ್ತದೆ. ಅಲ್ಲಿ ನಿಲ್ಲುವ ಪ್ರಯಾಣಿಕರು ಬಹಳ ವಿರಳರು. ಇದನ್ನು ಆಲೋಚಿಸಿ, ಮೈಸೂರ ದರ್ಬಾರವು ಈ ಅನ್ನಛತ್ರಗಳನ್ನು ಮುಚ್ಚಬೇಕೆಂದು ತೀರ್ಮಾನ ಮಾಡಿದೆ. ಇದರಿಂದ ಸಂಸ್ಥಾನಕ್ಕೆ ಸುಮಾರು ೪೦೦೦೦ ರೂಪಾಯಿಗಳ ಉಳಿತಾಯವಾಗುವದು. ಅದನ್ನು ಆಯುರ್ವೇದ, ಯುನಾನಿ ಮೊದಲಾದ ವೈದ್ಯಶಾಲೆಗಳಿಗಾಗಿಯೂ, ಕುರುಡ-ಕುಂಟ-ಮೂಕ-ಅನಾಥರ ಪೋಷಣೆಕ್ಕಾಗಿಯೂ ವ್ಯಯ ಮಾಡಬೇಕೆಂದು ಮಹಾರಾಜರ ಸಂಕಲ್ಪವಿದೆ. ಸಂಕಲ್ಪವು ಸ್ತುತ್ಯವಿದೆ. ವಿಚಾರಶೀಲರೆಲ್ಲರೂ ಈ ಸಂಕಲ್ಪವನ್ನು ಹರಸುವರು. ಆದರೆ ಛತ್ರದೊಳಗಿನ ಬ್ರಾಹ್ಮಣರೇನೋ ಮಹಾರಾಜರಿಗೆ ಮೊರೆಯುತ್ತಿರುವರಂತೆ! ಇದು ಕೇವಲ ಸ್ವಾರ್ಥಪರಾಯಣತೆಯು. ಪ್ರಯಾಣಿಕರ ಅನುಕೂಲ್ಯಕ್ಕಾಗಿ ಛತ್ರವಿದೆ ಛತ್ರದ ಪಾರುಪತ್ಯಗಾರರ ಹೊಟ್ಟೆ ತುಂಬಲಿಕ್ಕಾಗಿ ಛತ್ರಗಳೊಳಗಿನ ಸಿಧಾ ಸಾಮಗ್ರಿಗಳ ಯೋಜನೆಯಾಗಲಿಲ್ಲ. ಪ್ರಯಾಣಿಕರೇ ಛತ್ರಾಶ್ರಯ ಕೊಳ್ಳುವ ಪ್ರಸಂಗವಿಲ್ಲದಾಗ, ಪಾರುಪತ್ಯಗಾರರು ಛತ್ರಕ್ಕಾಗಿ ಬಡಿದಾಡುವದೇಕೆ? ಈ ಬಡಿದಾಟದ ಮೇಲಿಂದ ಛತ್ರಗಳಲ್ಲಿ ವಂಚನೆಯಾಗುತ್ತದೆಂದು ನಾವು ಕಲ್ಪಿಸಬಹುದಲ್ಲವೇ! ಪ್ರಯಾಣಿಕರು ಛತ್ರಾಶ್ರಯಕೊಳ್ಳಲಿ, ಕೊಳ್ಳದಿರಲಿ; ಪ್ರಯಾಣಿಕರ ಸಂಖ್ಯೆಯು ಮಿಗಿಲಾಗಲಿ, ತಗ್ಗಲಿ; ಸಿಧಾ ಸಾಮಗ್ರಿಯ ವ್ಯಯವು ಸತತವಾಗಿ ನಡೆದಿದೆ! ಮೈಸೂರಿನಲ್ಲಿ ಹೀಗೆ ವಂಚನೆ ಮಾಡಿದ ಉದಾಹರಣೆಗಳಿರುವವು. ಇಂಥ ಸ್ಥಿತಿಯಲ್ಲಿ ಮಹಾರಾಜರು ಅನ್ನಛತ್ರಗಳನ್ನು ಮುಚ್ಚಲೇ ಬೇಕಾಗಿದ್ದು, ಲೋಕಸೇವೆಯನ್ನು ಮಾಡಿರುವರು. ಆ ಹಣವನ್ನು ದುರ್ದೈವಿಗಳ ಪೋಷಣೆಕ್ಕಾಗಿಯೂ, ವೈದ್ಯಶಾಲೆಗಳಿಗಾಗಿಯೂ ಉಪಯೋಗಿಸುವ ನಿರ್ಧಾರ ಮಾಡಿದ್ದು ಮಹಾಭೂಷಣವು. ಪ್ರಜಾಸೇವೆಯೇ ರಾಜಧರ್ಮವು ಧರ್ಮವನ್ನು ಅನುಸರಿಸಲುದ್ಯುಕ್ತರಾದ ಮಹಾರಾಜರಿಗೆ ಭಗವಂತನು ಆಯುರಾರೋಗ್ಯವನ್ನೀಯಲೆಂದು ನಾವು ಪ್ರಾರ್ಥಿಸುವೆವು.

ಸ್ಥಾನಿಕ ವೃತ್ತಾಂತ

ಕುಮಟಾ— ಚಳಿ ಸಾಮಾನ್ಯ ಜ್ವರ, ಇವ್ಯ ಮುಂತಾದವುಗಳ ಜೀತ [illegible] ಸವೆತ ಕೊಳ್ಳುವು ಅಧಿಕ ಹಂಗಾಮು ಕೇ-ಸು ಹೆಗಡೆಯಲ್ಲಿ ಹುಟ್ಟ ಮುಧಿವಾಳನ ೫-೬ ವರ್ಷ ಪ್ರಾಯದ ಹುಡುಗನ ಮೋಟಾರಿನ ಕಳಗೆ ಬಿದ್ದು, ಮಾರನೇ ದಿನ ಇಲ್ಲಿಯ ಆಸ್ಪತ್ರಿಯಲ್ಲಿ ಪ್ರಾಣೋತ್ಕ್ರಮಣ ಮಾಡಿದ ನು. ಮೊಟಾರ ಡ್ರೈವ್ಹರನ ಮೇಲೆ ಖಟ್ಲೆ ನಡೆಯುವ ತಯಾರಿ ನಡೆದದೆ. ಮೋಟಾರು ಹೊಸೆಯ ಮನಸು ಮನುಷ್ಯ ಸಂಚಾರವಿದ್ದ ಮಾರ್ಗದ ಮೇಲೆ ವಿಶೇಷ ಜಾಗ್ರತೆಯಿಂದ ಮೋಟಾರುಗಳನ್ನು ನಡೆಸಬೇಕು. ಈ ಮುಧಿವಾಳನಿಗೆ ಒಬ್ಬನೇ ಹುಡುಗನಿದ್ದನು [illegible] ಹಿಂದೆ ೨-೩ ಹುಡುಗ [illegible] ಘಾತವೇ!!!

ಕೃ॥ ಶಾಸ್ತ್ರಿಗಳ ನಿಧನದಿಂದ [illegible] ಬಿಟ್ಟಿದ್ದ ಸ್ಥಳಕ್ಕಾಗಿ [illegible] ದಾಸ ಲಂಗಿಸ್ಟವು ರಾ॥ ಮಾರ್ಗಪ್ಪ ಬಸ್ಸಯ್ಯನವರು, ಪಿಕೇಶ್ವರ ತಿಮ್ಮಣ್ಣ ಹೆಗಡೆ, ಮುಕುಂದ ಗೋವಿಂದ ಕಿಣಿ ಹೆಸರುಗಳು. ಡಿ ಕೋರ್ಟಿನಲ್ಲಿ ಸೂಚಿಸೋಣ [illegible] ವ ರಾ॥ ಮುಕುಂದ ಗೋವಿಂದರಿಗೆ ಈ ಸ್ಥಳ ದೊರೆಯಬಹುದು ಪ್ರಕಾಶದಲ್ಲಿ [illegible] ತ್ತಿಂದು. ಅವರಿಗೆ ದೊರೆಯದಿದ್ದರೆ ತಂಬಾಕು [illegible] ಯಿತು ರಾ॥ ಸ್ವ-ಹೆಗಡೆಯವರಿಗೆ ಅವರ ಸಾಮ ಮಲು ಭಿನ್ನ ಭಿನ್ನ ದೇವಸ್ಥಾನದಲ್ಲಿ ಮೊಕ್ತೆಸರ [illegible] ರುವದರಿಂದ, ಅವರೂ ಅದಾಲತರೆಂದು ಜನರ ಅಭಿಪ್ರಾಯವಿದ್ದರೆ ಈ ವಿಷಯವನ್ನು ವಿಚಾರಿಸಲು ಇನ್ನು ೨ ತಿಂಗಳ ವಾಯಿದೆ ಕೇಳ್ಳದು. ಈ ಮಧ್ಯದಲ್ಲಿ ಅವಶ್ಯವಿದ್ದವರು ಅರ್ಜಿ ಮಾಡಿಕೊಳ್ಳಬಹುದಾಗಿಯೂ ತಿಳಿಯುತ್ತದೆ.

ಇಲ್ಲಿಯ ಶಿರಸ್ತೇದಾರರಾದ ಮಿ॥ ಕೆ ಪಗಿ [illegible] ಸಾಂ ಕರವರಿಗೆ ಹಳಿಯಾಳಕ್ಕೆ ವರ್ಗವಾಗಿರುವದು ಅಂಕೋಲೆಯ ಶಿರಸ್ತೇದಾರರಾದ ಪಿ. ಸಾತಕರ್ಣಿಯವರು ಇಲ್ಲಿ ಬರುವರು

ಈ ಹೊತ್ತಿನ ಸಂಚಿಕೆಯೊಡನೆ ಹಂಚಿದ ಮಂಗಳೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿಯವರ ೧೯೨೭ ನೇ ಇಸ್ವಿಯ ಕೆಲೆಂಡರನ್ನು ವಾಚಕರು ಅವಶ್ಯ ನೋಡಬೇಕು.

ಸಾಭಾರ ಸ್ವೀಕಾರ

ಕನ್ನಡ ಪಂಚಾಂಗವು— ಉತ್ತಮ ಪ್ರಭಾಕರ ಮುದ್ರಣಾಲಯದ ರಾ॥ ಪ್ರಭುಗಳು ಈ ಪಂಚಾಂಗವನ್ನು ಮಿಶನರಿ ಪಂಚಾಂಗದ ಮಾದರಿ ಮೇಲೆ ಪ್ರಕಟಿಸುತ್ತಾರೆ ೧೯೨೭ ನೇ ಇಸ್ವಿಯ ಪಂಚಾಂಗವಿದು. ತಾರೀಖು, ತಿಥಿ, ಶಕಗಳ ಹೊಕ್ಕಾಣಿ ಪಟ್ಟಿ, ಸ್ಟ್ಯಾಂಪು ಹಾಸಲು, ಟಪಾಲು ಕ್ರಮಗಳು, ಬಡ್ಡಿ ಪಟ್ಟಿ, ತಾತ್ಕಾಲಿಕ ಜ್ಯೋತಿಷ್ಯ ಮುಂತಾದ ಉಪಯುಕ್ತವಾದ ಮಾಹಿತಿಯು ಈ ಪಂಚಾಂಗದಲ್ಲಿದೆ ಸರಕಾರಿ ಉದ್ಯೋಗಸ್ಥರಿಗೆ ಉಪಯುಕ್ತವಾದದ್ದು. ಬೆಲೆ ಬರೇ ೩॥ ಆಣೆ. ಪತ್ತೆ-ಪ್ರಭಾಕರಪ್ರೆಸ್, ಉಡುಪಿ

ಜಯಕರ್ನಾಟಕ— ಜೂನ್ನತಿಂಗಳ ಸಂಚಿಕೆ. ಸಂಪಾದಕರ :- ಶ್ರೀ॥ ಆಲೂರ ವೆಂಕಟರಾಯರು, ಧಾರವಾಡ, ವಾ ವ. ರೂ. ೫.

ಆಯುರ್ವೇದ— ವೈದ್ಯಕ ಸಂಬಂಧವಾದ ತೆಲಗನ್ನಡ ಮಾಸಪತ್ರಿಕೆ ವರ್ಷ ೧, ಸಂಚಿಕೆ ೧೧. ಸಂಪಾದಕರು.— ವಿದ್ವಾನ್ ಬಿ ಸೂರ್ಯನಾರಾಯಣ ಶಾಸ್ತ್ರಿ, ಆಯುರ್ವೇದ ಭೂಷಣ ಇತ್ಯಾದಿ. ಪ್ರಕಾಶಕರು.— ಜೀ ರಘುಪತಿರಾವ್ ಬ್ರದರ್ಸ, ಶಿರ್ಗಹಳ್ಳಿ ವಾ. ವ ರೂ ೨-೮ ೦

ಹಳಿಯಾಳ— ಚಳಿ ಬಹಳ, ಇಲಿಗಳು ಬೀಳುತ್ತಿದ್ದವು ಇದೀಗ ಕುಗ್ಗಿದೆ, ಮುನಿಸಿಪಾಲಿಟಿಯು ವರ ಪಂಜರಗಳನ್ನು ಜನರಿಗೆ ಕೊಟ್ಟು ಇಲಿಗಳಿಗೆ ಹಿಡಿಸುತ್ತಿದ್ದಾರೆ.

ಊರೊಳಗೆ ಎಲ್ಲೆಲ್ಲಿಯೂ ಮೋಟಾರುಗಳಿದ್ದಲ್ಲಿ ಧೂಳಿನ ರಾಶಿ ಜನರ ಕಷ್ಟ. ಮೋಟಾರು ನಿಲ್ಲಲು ಮುನಿಸಿಪಾಲಿಟಿಯವರು ಪ್ರತ್ಯೇಕ ಸ್ಥಳವನ್ನು ಏರ್ಪಡಿಸಿದರು. ಆದರೂ, ಮೋಟಾರುಗಳು ಅಲ್ಲಿ ನಿಲ್ಲಿಸಿದ್ದರೆ ಮುನಿಸಿಪಾಲಿಟಿಯವರು ಕಸ್ತ್ರೆಯಲಿ.

ಮುನಿಸಿಪಾಲಿಟಿಯವರಿಗೆ ಕಿವಿಹಿಡಿದು ಹೇಳುವ ಸ ಮಾಚಾರ ಮಾರ್ಗಗಳ ತೋಡಗಳ ಬಗೆಗೆ ಕೇಳುವ ಸ್ಥಳವಿದೆ ಅಲ್ಲಿ ತೆಂಗಿನ ಗಿಡಗಳನ್ನು ಜನರು ನೆಟ್ಟು ಉಪಯೋಗಿಸುತ್ತಿದ್ದರು ಈಗ ಮುನಸಿಪಾಲಿಟಿಯವರು ಆ ಗಿಡಗಳಿಗೆಲ್ಲ ಡಾಂಬರು ಹಚ್ಚಿ ನಂಬರುಗಳನ್ನು ಹಾಕಿರುವರು. ಗಿಡಗಳು ತಮ್ಮವೆಂದು ಮುನಿಸಿಪಾಲಿಟಿಯವರ ಸಾಧನೆ, ಜನರು ತಮ್ಮವೆಂದು ಸಾಧಿಸುತ್ತಾರೆ. ಊರೊಳಗಿನ ಪ್ರಬಲರು ಸಂಬಂಧಗಳನ್ನು ಹಾಕಿದರೂ, ಮುನಿಸಿಪಾಲಿಟಿಯವರಿಗೆ ಕಾಯಿ ಕೊಯ್ಯಲು ಬಿಡುವದಿಲ್ಲ. ಬಡಬಗ್ಗರಿಗೆ ಬಲಾತ್ಕಾರ ಮಾಡುವ ಸಾಹಸವಿದೆ. ಅದರಿಂದ ಅವರ ಮರಗಳ ಕಾಯಿಗಳು ಮಾತ್ರ ಮುನಿಸಿಪಾಲಿಟಿಯಲ್ಲಿ ಜಮೆಯಾಗುತ್ತವೆ. ಮುನಿಸಿಪಾಲಿಟಿಯವರು ಹೀಗೆ ಬಡಬಗ್ಗರಿಗೆ ಪಕ್ಷಪಾತವೇಕೆ? ಮುನಿಸಿಪಾಲಿಟಿಗೆ ಹಕ್ಕಿದ್ದರೆ ದಿವಾಣಿ ಕೋರ್ಟಿನಲ್ಲಿ ಸಿದ್ಧಪಡಿಸಿಕೊಳ್ಳಬಹುದಲ್ಲವೇ!

— ಇಮಾಮ ಜ ದಕರು ಬಹಳ ಅಸ್ವಸ್ಥರಿದ್ದರು. ಪ್ರಕೃತಿಯು ಸುಧಾರಿಸುತ್ತಿರುವದಾಗಿ ಈಚಿನ ಸುದ್ದಿ.

— ಚೀನ ದೇಶದಲ್ಲಿ ಇನ್ನೂ ಅಶಾಂತತೆಯಿದೆ. ಬ್ರಿಟಿಶರು ದೊಡ್ಡ ದೊಡ್ಡ ಹಡಗುಪಡೆಗಳನ್ನು ಕಳಿಸಿದ್ದರು. ಈಗ ಅವುಗಳಿಂದ [illegible] ದೆ ಕತ್ತ ಬಿದ್ದಿರುವದಿಲ್ಲೆಂದು, ಚೀನ ದೇಶದವರೊಡನೆ ಒಪ್ಪಂದ ಮಾಡಿಕೊಳ್ಳುವ ವಿಚಾರ ನಡೆದಿದೆ ಒಲ [illegible] ದಿದ ದೊರೆತು, ಬ್ರಿಟಿಶರು ಮಾಡಿಯುವದಿಲ್ಲ

ಧಾರವಾಡದ ಶ್ರೀ ತುಮ್ಮಿನಕಟ್ಟಿಯವರು ಅಮೇರಿಕೆಯಲ್ಲಿ ೫ ವರ್ಷಗಳ ನರಕ ವ್ಯವಸಾಯ ರಸಾಯನಶಾಸ್ತ್ರವನ್ನು ಕಲಿತು ಧಾರವಾಡಕ್ಕೆ ಮರಳಿ ಬಂದಿರುವರು. ಅವರ ಶ್ರಮಕ್ಕೆ ೨೦ ಸಾವಿರ ರೂಪಾಯಿಗಳ ವೆಚ್ಚವಾಯಿತು. ಮೋಟಾರ ಡೆಸ್ಟ್ರಸ್ ಕಂಪನಿಯ ಪ್ರಯೋಗಾಲಯದಲ್ಲಿ ಇವರು ಪ್ರಯೋಗಗಳನ್ನು ನಡಿಸಿ ಅನುಭವ ಪಡೆದಿದ್ದಾರೆ. ಕರ್ನಾಟಕದಲ್ಲಿಯೇ ಉದ್ಯೋಗವನ್ನು ಪ್ರವರ್ತಿಸುವ ವಿಚಾರದಲ್ಲಿರುವರು. ಅಭಿನಂದನೀಯವಿದೆ.

— 'ಸೇನಾಪತಿ' ಎಂಬ ಹೆಸರಿನ ಹಿಂದೀ ವಾರ ಪತ್ರಿಕೆಯು ಕಲಕತ್ತೆಯಲ್ಲಿ ಹೊರಡುತ್ತಿದೆ ವ್ಯವಸ್ಥಾಪಕರಾದ ಶ್ರೀ ನಾರಾಯಣ ಪ್ರಸಾದರವರು ಹಿಂದೀ ಭಾಷೆಯ ಪ್ರಚಾರಕ್ಕಾಗಿ ೨೦ ಸಾವಿರ ಪ್ರತಿಗಳನ್ನು ಉಚಿತವಾಗಿ ಹಂಚುವ ಸಂಕಲ್ಪ ಮಾಡಿರುವರು. ಅಪೇಕ್ಷಿಸಿದ್ದವರು ಟಪಾಲ ಹಾಸಲಿನ ಬಗ್ಗೆ ೧ ರೂಪಾಯಿಯನ್ನು ಶ್ರೀ ನಾರಾಯಣ ಪ್ರಸಾದ, ಬಾಗಬಜಾರ ಕಲಕತ್ತಾ ಈ ಪತ್ತೆಗೆ ಕಳಿಸಿ ತರಿಸಿಕೊಳ್ಳತಕ್ಕದ್ದು.

ರಾಷ್ಟ್ರೀಯ ಸಭೆ.

ಗೌಹತಿಯಲ್ಲಿ ಸಭೆಯ ತಯಾರಿ ನಡೆಯಿತು. ಪಾಂಡುನಗರದಲ್ಲಿ ರಚನೆಯಾದ ರಾಷ್ಟ್ರೀಯ ಸಭಾ ಮಂಟಪದ ವರ್ಣನೆಯನ್ನು ಬಣ್ಣಿಸಲಶಕ್ಯ. ಭವ್ಯವಾಗಿ, ಚಿತ್ತವೇಧಕವಾಗಿ ಮಂಟಪವು ಕಂಗೊಳಿಸುತ್ತದೆ. ಮೇಲ್ಛಾವಣಿಗೂ, ನಾಲ್ಕೂ ಪಕ್ಕಗಳಿಗೂ ಖಾದಿಯೇ ಆಚ್ಛಾದಿತವಾಗಿದೆ. ಇದೀ ಮಂಟಪಕ್ಕೇ ೩೦೦೦೦ ಗಜ ಖಾದಿಯು ಖರ್ಚಾಯಿತು. ಎಲ್ಲ ಖಾದಿಯು ಆಸಾಮಿನಲ್ಲೇ ತಯಾರಾಗಿತ್ತು. ಆಸಾಮು ಪ್ರಾಂತವು ಕೈಮಗ್ಗದ ತೌರಮನೆಯು. ಅಲ್ಲಿಯ ಮನೆಗಳಲ್ಲೆಲ್ಲ ಕೈರಾಟೆಯು ಇದ್ದೇ ಇದೆ. ಹುಡುಗಿಯರಿಗೆ ಮದುವೆಯಾಗಬೇಕಾದರೆ ನೂಲಲಿಕ್ಕೆ ಬರಬೇಕೆಂದಿದೆ. ಅದರಿಂದ ಅಲ್ಲಿ ಸಮಸ್ತರೂ, ಪ್ರಾಮುಖ್ಯವಾಗಿ ಸ್ತ್ರೀಯರೆಲ್ಲರೂ ಧರ್ಮಬುದ್ಧಿಯಿಂದ ನೂಲುತ್ತಾರೆ

ಇದು ಆಸಾಮು ಪ್ರಾಂತದಲ್ಲಿ ಸೇರುವ ಮೊದಲನೇ ರಾಷ್ಟ್ರೀಯ ಸಭೆ ಆಸಾಮು ಪ್ರಾಂತವು ತೀರ ಬಡತನದ್ದು. ಇದುವರೆಗೆ ಈ ತನಕ ರಾಷ್ಟ್ರೀಯ ಸಭೆಯನ್ನು ಬರಮಾಡಿಕೊಳ್ಳಲಾಗಲಿಲ್ಲ. ಹೊಸ ಕಾನ್ಪುರದಲ್ಲಿ ರಾಷ್ಟ್ರಸಭೆ ಯನ್ನು ಆಸಾಮಿನವರು ನಿಮಂತ್ರಿಸಿದರು. ವಿದುರನ ಮನೆಗೆ ಶ್ರೀ ಕೃಷ್ಣ ಪರಮಾತ್ಮನು ಅನುಗ್ರಹಿಸಿದಾಗ, ವಿದುರನಿಗುಂಟಾದ ಪರಮಾನಂದವೇ ಆಸಾಮಿನವರಿಗುಂಟಾಗಿದೆ, ಗೌಹತಿ-ಪಾಂಡು ಪಟ್ಟಣಗಳ ದರೆ ಬರೇ ೧೬೦೦೦ ಲೋಕಸಂಖ್ಯೆಯ ಪ್ರದೇಶ. ಅಂಥವರು ರಾಷ್ಟ್ರೀಯ ಸಭೆಯನ್ನು ನಿಮಂತ್ರಿಸಿ ಅತಿಥ್ಯ ಮಾಡುವದು, ಅದೊಂದು ದೊಡ್ಡ ಸಾಹಸ, ರಾಷ್ಟ್ರೀಯ ಸಭೆಯ ಇತಿಹಾಸದಲ್ಲಿ ಈ ಸಂಗತಿಯು ಶಾಶ್ವತವಾಗಿ ಹೇಳಲ್ಪಡುವದು. ಇತ್ತ ೬ ತಿಂಗಳಿನಿಂದ ಆಸಾಮು ಪ್ರಾಂತದ ಪ್ರಜೆಗಳೆಲ್ಲ ರಾಷ್ಟ್ರೀಯ ಸಭೆಗಾಗಿ ನೂಲುತ್ತಿದ್ದರು, ನೇಯುತ್ತಿದ್ದರು. ಗೌಹತಿಯು ಕಾಮರೂಪ ಜಿಲ್ಲೆಯಲ್ಲಿದೆ. ಈ ಜಿಲ್ಲೆಯು ಬಡ ಜಿಲ್ಲೆಯು ಆದರೂ, ಅರ್ಧ ಲಕ್ಷ ರೂಪಾಯಿಗಳನ್ನು ಚರಣಾರವಿಂದಗಳಲ್ಲಿ ಸಂತೋಷದಿಂದ ಅರ್ಪಿಸಿದೆ.

ಸ್ವಯಂಸೇವಕರೆಲ್ಲರೂ ಆಸಾಮಿನವರೇ. ಅತಿಥಿ ಸತ್ಕಾರದಲ್ಲಿ ಅವರಷ್ಟು ನಿರತರಾದವರು ಇನ್ನೆಲ್ಲಿಯೂ ದೊರೆಯರು. ಪ್ರೇಕ್ಷಕ-ಪ್ರತಿನಿಧಿಗಳೆಲ್ಲರೂ ಸ್ವಯಂಸೇವಕರ ವಿನಯವನ್ನು ನೋಡಿ, ಅತ್ಯಂತ ಸಂತೋಷಪಟ್ಟಿರುವರು.

ಚಿತ್ತರಂಜನಪುರವು ಪ್ರತ್ಯೇಕವಾಗಿ ಏರ್ಪಡಿಸಲ್ಪಟ್ಟಿದೆ. ಇಲ್ಲಿ ಲೋಕನಾಯಕರು ಇಳಿಕೊಳ್ಳುವರು. ವಿವಿಧ ಪ್ರಕೃತಿಯ ಲೋಕನಾಯಕರಿಗೆ ವಿಚಾರವಿನಿಮಯ ಮಾಡಲು ಅನುಕೂಲವಾಗಬೇಕೆಂದು ಚಿತ್ತರಂಜನಪುರದವರ ಯೋಜನೆಯಾಗಿದೆ.

ಮುಖಂಡರು ಗೊಂದಿಯಾದಿಂದ ೨೨ ನೇ ತಾರೀಖಿಗೆ ಹೊರಟರು. ಗೊಂದಿಯಾದ ಮ್ಯುನಿಸಿಪಾಲಿಟಿಯವರೂ, ಅಸ್ಪೃಶ್ಯರೂ, ಪ್ರಜೆಗಳೂ ಮಾನ ಪತ್ರಗಳನ್ನು ಮುಖಂಡರಿಗೆ ಅರ್ಪಿಸಿ ಸತ್ಕರಿಸಿದರು. ಪ್ರಜೆಗಳು ಖಾದಿಯ ಪ್ರಚಾರಕ್ಕಾಗಿ ೫೪೦೦ ರೂಪಾಯಿಗಳನ್ನು ಮುಖಂಡರಿಗೆ ಅರ್ಪಿಸಿದರು.

…ತ್ಮರು ಮಾರನೇ ದಿನ ಬೆಳಿಗ್ಗೆ ಕಲಕತ್ತೆಗೆ …ಟ್ಟಿದರು. ಹಾದಿಯ ಮೇಲಿ ಸ್ಟೇಶನುಗಳಲ್ಲೆಲ್ಲ ಮ…ತ್ಮರಿಗೆ ಉತ್ಸಾಹಪೂರ್ಣವಾಗಿ ಪ್ರಜೆಗಳು ಸ್ವಾಗ…ಸಿತ್ತರು. ಎಲ್ಲ ಕಡೆಯಲ್ಲಿಯೂ ಮಹಾತ್ಮರ …ನವನ್ನು ಕೇಳಲು ಲೋಕಸಮೂಹವು …ರದಿತ್ತು. ಮಹಾತ್ಮರು ಖಾದಿಯ ಸಂದೇಶವ… …ಳುತ್ತಿದ್ದರು. ಖಾದಿಯ ಪ್ರಸಾರಕ್ಕಾಗಿ ಬಹ…ನರು ಮಹಾತ್ಮರಿಗೆ ಕಾಣಿಕೆಯನ್ನು ಅರ್ಪಿಸು…ದ್ದರು. ಹೀಗೆ ಸುಮಾರು ೩೦೦ ರೂಪಾಯಿಗಳು …ಡಿದವು.

…ಕಲಕತ್ತೆಯಲ್ಲಿ ಪ್ರತಿಯೋಗಿ ಸಹಕಾರಿಗಳ ಗುಪ್ತ …ಲೋಚನೆಯ ಸಭೆ. ಗೌಹತಿಗೆ ಹೋಗಬೇಕೋ? …ಡವೋ ಎಂಬುದೇ ದೊಡ್ಡ ಪ್ರಶ್ನೆ. ಹೋಗುವದಾ… ಪ್ರತಿಯೋಗಿಗಳೇನು ಮಾಡಬೇಕು? ಎಂಬುದೂ …ದು ಪ್ರಶ್ನೆ. ಸ್ವರಾಜ್ಯ ಪಕ್ಷದವರೊಡನೆ ಒಪ್ಪಂದ…ನ್ನು ಮಾಡಿಕೊಂಡು ರಾಷ್ಟ್ರೀಯ ರಾಜಕಾರಣದ …ಟಾದ ಬುದ್ಧಿಭೇದವನ್ನು ನಿರ್ಮೂಲಿಸಬೇಕೆಂದು …ರ ಆಲೋಚನೆ ಇದೆ. ಪ್ರತಿಯೋಗಿಗಳು ತಮ್ಮ …ವನ್ನು ಬಿಡದೆ, ರಾಷ್ಟ್ರೀಯ ಸಭೆಯ ಮನ್ನಣೆಯ… ಸಂಪಾದಿಸುವ ಯತ್ನದಲ್ಲಿರುವರು. ಪ್ರತಿಸಹಕಾ…ಳು ರಾಷ್ಟ್ರೀಯ ಸಭೆಗೆ ಹೋಗಬೇಕೆಂದು ಕೊನೆಗೆ …ಯವಾಯಿತು. ಮುಂದಿನ ಯೋಜನೆ ಯಾವ… ನಿಶ್ಚಯವಾಗಲಿಲ್ಲ. ಮಹಾತ್ಮರಿಗೆ ವಾದಭೂಮಿ…ಲ್ಲಿ ಸೇರಿಸಿಕೊಳ್ಳಲು ಅನೇಕ ಯತ್ನಗಳು ನಡೆದ… ಆದರೆ ಮಹಾತ್ಮರು ಹಿಮಾಲಯ ಪರ್ವತದಂ… ಅಚಲವಾಗಿರುವರು. ತಮ್ಮ ಅಭಿಪ್ರಾಯವನ್ನು …ಲ್ಪವೂ ಸಡಿಲಿಸಲಿಲ್ಲವಾಗಿಯೂ ತಿಳಿಯುತ್ತದೆ. ಸ್ವರಾಜ್ಯ…ದ ನಾಯಕರಾದ ಪಂಡಿತ ನೆಹರುರವರು ಕಲಕ…ಯ ಮಾರ್ಗವಾಗಿ ಗೌಹತಿಗೆ ಹೋಗದೆ ಉಗೆಹಡ…ಂದಲೇ ಪಾಂಡು ನಗರಕ್ಕೆ ತೆರಳಿದ್ದರಿಂದ ಕಲಕತ್ತೆ…ಲ್ಲಿ ಯಾವದೂ ಯೋಜನೆಯನ್ನು ಕೈಕೊಳ್ಳಲು …ಶಕ್ಯವಾಗಲಿಲ್ಲ. ನಿಯೋಜಿತ ಅಧ್ಯಕ್ಷರಾದ ಶ್ರೀನಿವಾಸ ಅಯ್ಯಂಗಾರರೊಡನೆಯೂ ಶ್ರೀ… …ಯಕರರವರು ಮಾತುಕಥೆ ನಡಿಸಿದರು. ಐಕ್ಯವ… ಮಾಡಿಕೊಳ್ಳಲು ಅವರು ಅನುಕೂಲರಿರುವರೆಂ… ಶ್ರೀ| ಜಯಕರರವರ ಅಭಿಪ್ರಾಯವಾಗಿದೆ. ಅ… ಶ್ರೀನಿವಾಸ ಅಯ್ಯಂಗಾರರೂ, ಮಹಾತ್ಮರೂ, …ಹತಿಗೆ ಕಲಕತ್ತೆಯಿಂದ ೨೩ನೇ ತಾರೀಖಿಗೆ ಹೊ…ರು. ಅವರ ಜೊತೆಗೆ ಪಂಡಿತ ಮಾಲವೀಯ ಶ್ರೀ …ಮಾಲ, ಡಾ| ಮುಂಜೇ ಮುಂತಾದ ಪ್ರತಿಯೋಗಿ…ಗು ಸ್ವತಂತ್ರ ಕೊಂಗ್ರೆಸ ಪಕ್ಷದವರೂ ಗೌಹತಿ…ಹೊರಟರು. ಲಜಪತರಾಯರವರೂ, ಶ್ರೀ| ಜಯ…ರವರೂ ಅಸ್ವಾಸ್ಥ್ಯದ ಮೂಲಕ ಗೌಹತಿಗೆ …ಗುವ ಆಲೋಚನೆಯಲ್ಲಿದ್ದಿಲ್ಲ. ಆದರೂ, ರಾಷ್ಟ್ರ…ಯ ವಿಚಾರಕ್ಕಾಗಿ ೨೪ ನೇ ತಾರೀಖಿಗೆ ಕಲ…ಯಿಂದ ಗೌಹತಿಗೆ ಹೊರಡುವ ನಿರ್ಧಾರ…ಡಿರುವರಾಗಿ "ಫ್ರೀ ಪ್ರೆಸ್" ಎಂಬ ವಾರ್ತಾ…ರಕ ಸಂಸ್ಥೆಯು ಪ್ರಕಟಿಸುತ್ತಿದೆ.

…ಷ್ಟ್ರೀಯ ಸಭೆಯಲ್ಲಿ ಈಗಿನ ಮಟ್ಟಿಗೆ ಪ್ರತಿ…ಗಿ ಸಹಕಾರಿಗಳಿಗೆ ಅನುಕೂಲ ಫಲಪ್ರಾಪ್ತಿ…ಗುವ ಲಕ್ಷಣಗಳೇನು ಕಾಣುವದಿಲ್ಲ. ಸಭೆಯ …೦೦ ಪ್ರತಿನಿಧಿಗಳು ಅಖಿಲ ಭರತಖಂಡದಿಂದ …ಗಲಿರುವರು. ಶ್ರೀ|| ಜಯಕರ-ಕೇಳಕರ-ಮುಂ…ವರ ಮಹಾರಾಷ್ಟ್ರ,' ಹಾಗು ಪಂಡಿತ ಮಾಲವೀಯ-ಲಜಪತರಾಯರವರ ಪಂಜಾಬ ಪ್ರಾಂತಗಳಿಂದ ಸುಮಾರು ೬೦೦ ಪ್ರತಿನಿಧಿಗಳು ಗೌಹತಿಗೆ ಹೋಗಬಹುದು. ಬಂಗಾಲ, ಆಸಾಮ, ಮದ್ರಾಸ ಬಿಹಾರಗಳೊಳಗಿನ ಪ್ರತಿನಿಧಿಗಳೆಲ್ಲ ಸ್ವರಾಜ್ಯ ಪಕ್ಷದವರೇ. ಸ್ವಾಗತಾಧ್ಯಕ್ಷರಾದ ಶ್ರೀ|| ತರುಣರಾಮ ಫೂಕನರವರು ಮಹಾತ್ಮರ ಏಕನಿಷ್ಠ ಅನುಯಾಯಿಗಳು, ಕೌನ್ಸಿಲು ಸನ್ಯಾಸವನ್ನು ಕೈಕೊಳ್ಳುವ ವಿಚಾರದವರು. ಸ್ವರಾಜ್ಯ ಪಕ್ಷದವರು ಒಪ್ಪಂದಕ್ಕಾಗಿ ಬಹುಮಟ್ಟಿಗೆ ತ್ಯಾಗಮಾಡಿರುವರೆಂದೂ, ಇನ್ನೂ ಅವರು ತ್ಯಾಗ ಮಾಡಬಾರದೆಂದೂ, ಮಾಡಲಾರರೆಂದೂ ಅವರ ಅಭಿಪ್ರಾಯ. ಅರಸರೊಡನೆ ಹೊಂದಿಕೆಯಿಂದ ಸ್ವರಾಜ್ಯ ಕಾಯಿದೆಯನ್ನು ಪಡೆಯಬಯಸುವದು ಅಪ್ರಶಸ್ತವೆಂದು ಅವರ ಅಭಿಮತವಾಗಿದೆ. ಶ್ರೀ|| ಸಾಂಬಮೂರ್ತಿಗಳಾದಿ ಆಂಧ್ರ ದೇಶದ ಪ್ರತಿನಿಧಿಗಳು ಕೌನ್ಸಿಲಿನಲ್ಲಿ ತಮ್ಮ ಶ್ರದ್ಧೆ ಇರುವದಿಲ್ಲವಾಗಿಯೂ, ಸ್ವಾತಂತ್ರ್ಯ ಧ್ಯೇಯವನ್ನು ರಾಷ್ಟ್ರೀಯ ಸಭೆಯು ಸಾರಿ ಅಳವಡಿಸಿದೊಡನೆ ಬಿಡದಾಡಲು ತಯಾರಾಗಬೇಕೆಂದೂ ಅವರ ಹೇಳಿಕೆ. ಆಂಧ್ರ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ| ಪ್ರಕಾಶಂರವರು ಐಕ್ಯಮತ್ಯಕ್ಕಾಗಿ ತತ್ವಗಳನ್ನು ಬಿಡಬಾರದೆಂದು ಅಭಿಪ್ರಾಯಪಡುತ್ತಾರೆ. ಪ್ರತಿಯೋಗಿ ಸಹಕಾರಿಗಳಿಗೂ, ಸ್ವರಾಜ್ಯ ಪಕ್ಷದವರಿಗೂ ರಾಷ್ಟ್ರೀಯ ಬೇಡಿಕೆಯ ಬಗ್ಗೆ ಭೇದವಿರುತ್ತದೆ. ರಾಷ್ಟ್ರೀಯ ಬೇಡಿಕೆಯನ್ನು ರಾಷ್ಟ್ರೀಯ ಸಭೆಯು ಅಲ್ಲಗಳೆಯಬೇಕೆಂದು ಪ್ರತಿಸಹಕಾರಿಗಳು ಸಾಧಿಸುತ್ತಾರೆಂದೂ ಶ್ರೀ|| ಪ್ರಕಾಶಂರವರು ಉದ್ಗರಿಸುತ್ತಾರೆ.

ಅಂತು ಪ್ರತಿಸಹಕಾರಿಗಳ ಬೇಳೆಯು ಗೌಹತಿಯ ನೀರಿನಲ್ಲಿ ಬೇಯುವ ಚಿನ್ಹಗಳೇನು ಇಲ್ಲ.

ಲಾಲಾ ಲಜಪತರಾಯರು ಪಂಡಿತ ಮೋತಿಲಾಲರವರ ಮೇಲೆ ಒಂದು ಆರೋಪ ತಂದಿದ್ದರು. ಪಂಡಿತ ಮೋತಿಲಾಲರು ಹಿಂದುಸ್ಥಾನದಲ್ಲಿ ಅಫಗಾನರ ರಾಜ್ಯವನ್ನು ಪ್ರತಿಷ್ಠಾಪಿಸಬಯಸುತ್ತಾರೆಂದು ಲಜಪತರಾಯರ ಹೇಳಿಕೆ. ಪಂಡಿತ ಮೋತಿಲಾಲರವರು ಇದನ್ನು ನಿಷೇಧಿಸಿರುವರು. ಈ ಕುರಿತು ರಾಷ್ಟ್ರೀಯ ಸಭೆಯಲ್ಲಿ ತೀರ್ಮಾನ ಒಂದು ಲಜಪತರಾಯರ ಮೇಲೆ ನಿಂದೆಯು ಪ್ರದರ್ಶನವಾಗುವ ಸುದ್ದಿಯೂ ಇದೆ

ಪಂಡಿತ ಮೋತಿಲಾಲರವರು ೨೫ನೇ ತಾರೀಖು ಸಾಯಂಕಾಲಕ್ಕೆ ಪಂಡು ನಗರದಲ್ಲಿ ಪ್ರವೇಶ ಮಾಡಿರುವರು. ಮೌಲಾನಾ ಅಬುಲ್ ಕಲಮ ಆಝಾದ, ಡಾ| ಸೈಯ್ಯದ ಮಹಮೂದ, ಮೌಲಾನಾ ಮಹಮ್ಮದ ಅಲ್ಲಿ, ಶೌಕತ ಅಲ್ಲಿ ಮುಂತಾದ ಮಹಮ್ಮದೀಯ ಮುಂದಾಳುಗಳೂ ಪಂಡುನಗರಕ್ಕೆ ಹೋಗಿ ಮುಟ್ಟಿರುವರು. ಬೆ| ಜಿನ್ನಾರವರು ರಾಷ್ಟ್ರೀಯ ಸಭೆಯ ಮೇಲೆ ದೊಡ್ಡದೊಂದು ಆರೋಪ ಹಾಕಿರುವರು. "ರಾಷ್ಟ್ರೀಯ ಸಭೆಯು ಹಿಂದುಸ್ಥಾನದ ಪ್ರಾತಿನಿಧಿಕ ಸಂಸ್ಥೆ ಅಲ್ಲ. ಅದು ಒಂದು ಪಕ್ಷದ ಸಂಸ್ಥೆಯಾಗಿದೆ. ಮಹಮ್ಮದೀಯರಿಗೆ ಆ ಸಂಸ್ಥೆಯಲ್ಲಿ ಸ್ಥಾನವಿಲ್ಲ." ಇತ್ಯಾದಿ ಉದ್ಗಾರಗಳನ್ನು ಪ್ರಕಟಿಸಿರುವರು. ಮೌ| ಅಬುಲ ಕಲಮ ಆಝಾದಾದಿ ವಿಚಾರಶೀಲ ಮಹಮ್ಮದೀಯರು, ಆಚಾರದಿಂದಲೇ ಮಿ| ಜಿನ್ನಾರವರಿಗೆ ಉತ್ತರವನ್ನಿತ್ತಿರುವರು.

ಕಲಕತ್ತೆಯ ಮುನಸಿಪಾಲಿಟಿಯವರು ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ|| ಶ್ರೀನಿವಾಸ ಅಯ್ಯಂಗಾರರವರಿಗೆ ಸಭಾಕಾರ್ಯವನ್ನು ಮುಗಿಸಿ, ಗೌಹತಿಯಿಂದ ಮರಳುವಾಗ ಮಾನಪತ್ರವನ್ನು ಸಮರ್ಪಿಸಬೇಕೆಂದು ತೀರ್ಮಾನಿಸಿರುವರು.

ಮೊನ್ನೆ ವಿಷಯನಿಯಾಮಕ ಮಂಡಳದ ಚರ್ಚೆಯಾಗುವದಿತ್ತು. ನಿನ್ನೆಯಿಂದ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಪ್ರಾರಂಭವಾಗುವದಿತ್ತು. ಇಷ್ಟರಲ್ಲಿಗೆ ಸ್ವರಾಜ್ಯ-ಪ್ರತಿಸಹಕಾರಿ-ಸ್ವತಂತ್ರ ಪಕ್ಷಗಳೊಳಗಿನ ಮತಭೇದಗಳ ಚರ್ಚೆ ನಡೆದು ರಾಷ್ಟ್ರೀಯ ಸಭೆಯಲ್ಲಿ ಮುಂದಿನ ರಾಷ್ಟ್ರಕಾರ್ಯದ ತೀರ್ಮಾನವಾಗಬೇಕು. ಇದೆಲ್ಲ ಸಂಗತಿ ಮುಂದಿನ ವಾರಕ್ಕೆ.

ಸ್ವಾಮಿ ಶ್ರದ್ಧಾನಂದರವರ ಕೊಲೆ.

ವಿ… ಸೇವಕರಾದ, ಸ…ಮಾಜ …, ಸ್ವಾಮಿ ಶ್ರದ್ಧಾನಂದರವರಿಗೆ ಅವರ ಮನೆಯಲ್ಲಿಯೇ ಅಬ್ದುಲ್ ರಶೀದ ಎಂಬವನು ಗುಂಡುಹಾಕಿ ದಿಲ್ಲಿಯಲ್ಲಿ ಕೊಂದನು. ಇದೀ ದಿಲ್ಲಿಯಲ್ಲಿ ದೊಡ್ಡದೊಂದು ಕೋಲಾಹಲವೆದ್ದಿದೆ ಕೊಲೆಯು ಅದರ ಮೂಲಕ್ಕೆ ಒದಗಿರುವದು. ಅಬ್ದುಲ್ ರಶೀದನು ಶ್ರೀ ಸ್ವಾಮಿಗಳವರೊಡನೆ ಇಸ್ಲಾಮ ಧರ್ಮದ ಕುರಿತು ಚರ್ಚೆ ಮಾಡುವ ನೆವದಿಂದ ಶ್ರೀ ಸ್ವಾಮಿಗಳನ್ನು ಕಾಣಲು ಅಪೇಕ್ಷಿಸಿದನು. ಧರಮಸಿಂಗ ಎಂಬ ಸ್ವಾಮಿಗಳ ಸೇವಕನು ಆಗ ದ್ವಾರಪಾಲಕನಾಗಿದ್ದನು. ಅವನು ಅಬ್ದುಲನನ್ನು ಒಳಬಿಡಲಿಲ್ಲ. ಶ್ರೀ ಸ್ವಾಮಿಯವರು ಅದನ್ನು ನೋಡಿ ಧರಮಸಿಂಗನಿಗೆ ಅಬ್ದುಲ್ಲನನ್ನು ಒಳಬಿಡ ಹೇಳಿದರು. ಅಬ್ದುಲ್ಲನು ಬಂದಂಥ ಕಾರ್ಯವನ್ನು ಹೇಳಿದನು. ಶ್ರೀ ಸ್ವಾಮಿಯವರು ಆತ್ತ ಬೇನೆ ಬಿದ್ದಿದ್ದರು. ಡಾ|| ಅನಸಾರಿಯವರ ಔಷಧೋಪಚಾರದಿಂದ ಅವರು ವಾಸಿಯಾಗುತ್ತ ನಡೆದಿದ್ದರು. ತಮ್ಮಲ್ಲೇನೂ ಸಾಮರ್ಥ್ಯವಿಲ್ಲವಾಗಿಯೂ, ಅನ್ನೊಂದು ದಿನ ಬರಬೇಕಾಗಿಯೂ ಶ್ರೀ ಸ್ವಾಮಿಯವರು ಹೇಳಿದರು. ಅಬ್ದುಲ್ಲನು ನೀರಡಿಕೆಯಾಗುತ್ತದೆಂದನು. ಆತನಿಗೆ ನೀರು ಕೊಡಹೇಳಾಯಿತು. ಕುಡಿದ ಬಟ್ಟಲನ್ನು ಧರಮಸಿಂಗನು ಒಯ್ದನು. ಈ ಸಂಧಿ ಸಾಧಿಸಿ, ಅಬ್ದುಲ್ಲನು ಸ್ವಾಮಿಯವರಿಗೆ ಗುಂಡು ಹಾಕಿದನು. ಧರಮಸಿಂಗನು ತಡೆಯಹೋದನು. ಅಬ್ದುಲ್ಲನು ಧರಮಸಿಂಗನಿಗೂ ಗುಂಡು ಹಾಕಿದನು. ಸ್ವಾಮಿಗಳು ಅಲ್ಲಿಂದಲ್ಲೇ ಪ್ರಾಣೋತ್ಕ್ರಮಣ ಮಾಡಿದರು. ಚಿಕಿತ್ಸಾಲಯದಲ್ಲಿ ಧರಮಸಿಂಗನು ತೀರಿಕೊಂಡನು. ಅಬ್ದುಲ್ಲನಿಗೆ ಪೋಲೀಸರು ಸೆರೆಹಿಡಿದಿರುವರು. ಮಹಮ್ಮದೀಯ ಪ್ರಮುಖರಾದ ಡಾ|| ಅನಸಾರಿಯವರು ಈ ಕೊಲೆಯ ಕುರಿತು ನಿಷೇಧಪ್ರದರ್ಶನ ಮಾಡಿರುವರು; ತೀರ ಅಧಮತನವೆಂದೂ ಈ ಕೃತ್ಯವನ್ನು ಹಳಿದು ಮರುಗಿರುವರು. ಶ್ರದ್ಧಾನಂದರವರು ಹರಿದ್ವಾರದಲ್ಲಿ ಗುರುಕುಲವನ್ನು ಸ್ಥಾಪಿಸಿದವರು. ಹಿಂದೂ ಶುದ್ಧಿ ಸಂಘಟನೆಗಳ ಪ್ರವರ್ತಕರಿವರು. ಅಸ್ಪೃಶ್ಯೋದ್ಧಾರಕ್ಕಾಗಿ ಇವರು ಮಾಡಿದ ಯತ್ನಗಳನ್ನೂ ಉಪಾಯಗಳನ್ನೂ ಸನಾತನಿಗಳೆಂದೂ ಮರೆಯಲಾರರು. ನಿಧನ ಸಮಯ ಸ್ವಾಮಿಗಳ ಪ್ರಾಯವು ೭೦ ವರುಷ. ಎಂಥ ಅಧಮ ಕೊಲೆ ಇದು!

— ಕಾಶೀಕ್ಷೇತ್ರದೊಳಗಿನ ಹಿಂದು ವಿಶ್ವವಿದ್ಯಾಲಯಕ್ಕೆ ೧೩೨೦೦೦೦ ರೂಪಾಯಿಗಳ ವಾಗ್ದಾನಗಳು ದೊರಕಿವೆ ಒಂದು ಕೋಟಿ ೫ ಲಕ್ಷ ರೂಪಾಯಿಗಳು ವಸೂಲಾಗಿವೆ. ವಿಶ್ವವಿದ್ಯಾಲಯಕ್ಕೆ ೧೯ ಲಕ್ಷ ರೂಪಾಯಿ ಸಾಲವಿದೆ. ಅದರ ಬಡ್ಡಿಗಾಗಿಯೇ ಸಾಲಿಯಾನ ೮೮೧೦೦ ರೂಪಾಯಿಗಳನ್ನು ತೆರಬೇಕಾಗುತ್ತದೆ ಸ್ತ್ರೀ ಶಿಕ್ಷಣದ ವಿಭಾಗವು ಇನ್ನೂ ಆಗಲಿಲ್ಲ. ಈ ಕುರಿತು ಧನಾಢ್ಯ ಬಿರ್ಲಾರವರು ಅರ್ಧ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು. ಹಿಂದೀ ಭಾಷೆಯಲ್ಲಿ ಯೋಗ್ಯ ಪುಸ್ತಕಗಳನ್ನು ರಚಿಸುವದಕ್ಕಾಗಿಯೂ ಅರ್ಧ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು.

ಮಹಾತ್ಮರ ಆತ್ಮಚರಿತ್ರೆ

(೨) ಬಿರುಗಾಳಿ.

ಡಿಶಂಬರ ೧೮ನೇ ತಾರೀಖಿನ ಸುಮಾರಿಗೆ ೨ ಹಡಗಗಳು ದರ್ಬಾನ ಬಂದರದಲ್ಲಿ ಲಂಗರು ಹಾಕಿದ ಸಂಗತಿಯು ಈ ಮೊದಲೇ ಹೇಳಲ್ಪಟ್ಟಿದೆ. ಪ್ರಯಾಣಿಕರಿಗೆ ಸೂಕ್ಷ್ಮವಾಗಿ ಡಾಕ್ಟರರು ಪರೀಕ್ಷಿಸಿದ ಹೊರತು ದಕ್ಷಿಣ ಆಫ್ರಿಕೆಯ ಬಂದರುಗಳಲ್ಲಿ ಯಾರಿಗೂ ಇಳಿಯಗೊಡುವದಿಲ್ಲ. ಹಡಗದ ಮೇಲಿನ ಯಾರೊಬ್ಬ ಪ್ರಯಾಣಿಕನಿಗೆ ಸಾಂಸರ್ಗಿಕ ರೋಗವಾದರೆ ಇಡೀ ಹಡಗವೇ ಕೊರಂಟಿನಿನಲ್ಲಿ ಇರಬೇಕು. ಮುಂಬಯಿಯಲ್ಲಿ ನಾವು ಹೊರಟ ಸಮಯದಲ್ಲಿ ಪ್ಲೇಗು ಇತ್ತು, ಕೆಲವು ಸ… ಇರಬೇಕಾಗುವದೆಂದು ನಾವು ಹೆದರಿದ್ದೆವು… ಹಡಗವು ಡಾಕ್ಟರರ ಪರೀಕ್ಷೆಯಾಗುವ … ಹಳದಿ ಪತಾಕೆಯನ್ನು ಹಚ್ಚಬೇಕು; ಡಾಕ್ಟರರು ಹಡಗಕ್ಕೆ ಸರ್ಟಿಫಿಕೇಟು ಕೊಟ್ಟ ಬಳಿಕ ಆ ಪತಾಕೆಯನ್ನು ಕೆಳಗಿಳಿಸತಕ್ಕದ್ದು. ಆರೋಗ್ಯ ಪತಾಕೆಯನ್ನು ಕೆಳಗಿಳಿಸಿದ ನಂತರ ಪ್ರಯಾಣಿಕರ ಇಷ್ಟಮಿತ್ರರಿಗೆ ಹಡಗದ ಮೇಲೆ ಬರಗೊಡುವದಿಲ್ಲ.

ವಾಡಿಕೆಯಂತೆ ನಮ್ಮ ಹಡಗವು ಆರೋಗ್ಯ ಪತಾಕೆಯನ್ನು ಹಚ್ಚಿತು; ಡಾಕ್ಟರರು ಬಂದರು, ನಮ್ಮ ಪರೀಕ್ಷೆ ಮಾಡಿದರು. ೫ ದಿನಗಳ ವರೆಗೆ ಹಡಗಕ್ಕೆ ಕೊರಂಟಿನ ವಿಧಿಸಿದರು. ಪ್ಲೇಗಿನ ಕ್ರಿಮಿಗಳಿಗೆ ಅಭಿವೃದ್ಧಿಗೈಯ್ಯಲು ೨೩ ದಿನಗಳು ತಗಲುತ್ತವೆ. (ಹಡಗವು ೧೮ ದಿನಗಳಲ್ಲೇ ಮುಂಬಯಿಯಿಂದ ಬಂದು ಮುಟ್ಟಿತ್ತು.) ಆದ್ದರಿಂದ ಮುಂಬಯಿಯಿಂದ ಹೊರಟ ೨೩ ದಿನಗಳ ವರೆಗೆ ನಮ್ಮ ಹಡಗವನ್ನು ಕೊರಂಟಿನದಲ್ಲಿಡಲಾಯಿತು. ಆದರೆ ಈ ಕೊರಂಟಿನಿನ ಹುಕುಮಿಗೆ ಆರೋಗ್ಯಮೂಲಕವು ಮಾತ್ರವೇ ಕಾರಣವಾಗಿದ್ದಿಲ್ಲ.

ದರ್ಬಾನದ ಗೌರವರ್ಣೀಯರು ನಮಗೆ ಹಾಗೆಯೇ ಸ್ವದೇಶಕ್ಕೆ ಕಳುಹಬೇಕೆಂದು ಯತ್ನಮಾಡುತ್ತಿದ್ದರು. ಇದೂ ಒಂದು ಕೊರಂಟಿನಿನ ಹುಕುಮಿನ ಕಾರಣವಾಗಿತ್ತು. ಊರೊಳಗೆ ಕಂಭವಿಸ ಶ್ರಿದ್ಧ ಸಂಗತಿಗಳನ್ನು ದಾದಾ ಅಬ್ದುಲ್ಲಾ ಕಂಪನಿಯವರು ನಮಗೆ ಆಗಿಂದಾಗ ತಿಳಿಸುತ್ತಿದ್ದರು. ಯುರೋಪಿಯನ್ನರು ಪ್ರಚಂಡವಾದ ಸಭೆಗಳನ್ನು ನಿತ್ಯಕ್ಕೂ ಸೇರಿಸುತ್ತಿದ್ದರು, ವಿವಿಧರೀತಿಯಿಂದ ಬೆದರಿಸುತ್ತಿದ್ದರು. ಅನೇಕಾವರ್ತಿ ದಾದಾ ಅಬ್ದುಲ್ಲಾ ಕಂಪನಿಗೆ ಆಮಿಷಗಳನ್ನು ತೋರಿಸುತ್ತಿದ್ದರು. ೨ ಹಡಗಗಳನ್ನು ಹಾಗೆಯೇ ಕಳುಹಿದರೆ ಬರತಕ್ಕ ನಷ್ಟವನ್ನೂ ಕೊಡ ಕೊಡಲಿಕ್ಕೆ ಅವರು ತಯಾರಿದ್ದರು. ಆದರೆ ದಾದಾ ಅಬ್ದುಲ್ಲಾ ಕಂಪನಿಯವರು ಇಂಥ ಬೆದರಿಕೆಗಳಿಗೆ ಸೊಪ್ಪುಹಾಕುವವರಲ್ಲ. ಆ ಕಾಲಕ್ಕೆ ಶೇಟ ಅಬ್ದುಲ್ ಕರಿಮ ಹಾಜಿ ಆದಮರವರು ಕಂಪನಿಯ ಆಡಳಿತಗಾರರಾಗಿದ್ದರು. ದಂಡೆಗೆ ಹಡಗವನ್ನು ತಂದು ಪ್ರಯಾಣಿಕರನ್ನು ಇಳಿಸಲು ಅವರು ನಿರ್ಧರಿಸಿದ್ದರು. ಅದಕ್ಕಾಗಿ ಬೇಕಾದಷ್ಟು ನಷ್ಟ ಒದಗಿದರೂ ಅದನ್ನು ಸಹಿಸಲಿಕ್ಕೂ ಅವರು ತಯಾರು ಇದ್ದರು. ದಿನಾ ಅವರು ನನಗೆ ವಿಶದ ಪೂರ್ವಕವಾಗಿ ಪತ್ರಗಳನ್ನು ಬರೆಯುತ್ತಿದ್ದರು. ಸುದೈವದಿಂದ ಆ ಕಾಲಕ್ಕೆ ಮನಸುಖಲಾಲ ನಾಜರರವರು ದರ್ಬಾನದಲ್ಲಿದ್ದರು. ಅವರು ನನ್ನನ್ನು ಕಾಣಲು ಅಲ್ಲಿ ಬಂದಿದ್ದರು. ಅವರು ಜಾಣರಿದ್ದರು; ನಿರ್ಭಯರಿದ್ದರು. ಹಿಂದೀ ಸಮಾಜಕ್ಕವರು ಮಾರ್ಗದರ್ಶಕರಾದರು. ಭಾರತೀಯರ ವಕೀಲರಾದ ಮಿ| ಲಾಟನ್ ರವರೂ ನಿರ್ಭಯ ಪುರುಷರು. ಅವರೂ ಯುರೋಪಿಯನ್ ನಿಯಮಗಳ ವರ್ತನವನ್ನು ನಿಷೇಧಿಸಿದರು. ವಕೀಲಿ ಸಂಬಂಧಕ್ಕಿಂತ ಗೆಳೆಯನಂತೆ ಹಿಂದೀ ಸಮಾಜಕ್ಕೆ ಸಹಾಯ ನೀಡಿದರು.

ಹೀಗೆ ದರ್ಬಾನದಲ್ಲಿ ಒಂದು ಪ್ರಕಾರದ ದ್ವಂದ್ವವೇ ಬಿದ್ದಿತ್ತು. ಈ ದ್ವಂದ್ವದೊಳಗಿನ ಪಕ್ಷಗಳು ತುಲ್ಯಬಲವಾಗಿದ್ದಿಲ್ಲ. ಬಡ ಭಾರತೀಯರು, ಅವರ ಜೊತೆಗೆ ಕೆಲವು ಇಂಗ್ಲಿಷ ಗೆಳೆಯರು ಒಂದು ಪಕ್ಷದಲ್ಲಿ ಸೇರಿದ್ದರು, ಇನ್ನೊಂದು ಪಕ್ಷದಲ್ಲಿ ಐಶ್ವರ್ಯ, ಸಂಖ್ಯೆ, ಶಿಕ್ಷಣ, ಶಸ್ತ್ರಾಸ್ತ್ರಗಳಿಂದ ಯುಕ್ತರಾದ ಯುರೋಪಿಯನರಿದ್ದರು. ಯುರೋಪಿಯನರಿಗೆ ಸರಕಾರದ ಬೆಂಬಲವಿತ್ತು. ನಾತಾಲದ ಸರಕಾರವು ಸಾರ್ವಜನಿಕವಾಗಿ ಅವರಿಗೆ ನೆರವಾಗುತ್ತಿತ್ತು. ಪ್ರಧಾನ ಮಂಡಳದಲ್ಲಿ ಮಿ| ಹೆರಿ ಎಸ್ಕೊಂಬಿಯವರ ಪ್ರಾಬಲ್ಯವಿತ್ತು. ಅವರೇ ಯುರೋಪಿಯನರ ಸಭೆಗಳಲ್ಲಿ ಸೇರುತ್ತಿದ್ದರು.

ಪ್ರಯಾಣಿಕರಿಗೆ ಹೆದರಿಸಿ, ಅಥವಾ ಏಜಂಟರಿಗೆ ಹೆದರಿಸಿ, ಅವರನ್ನು ಹಿಂದುಸ್ಥಾನಕ್ಕೆ ಮರಳಿ ಕಳುಹುವ ಉದ್ದೇಶದಿಂದಲೇ ಕೊರಂಟಿನು ವಿಧಿಸಲಾಗಿತ್ತು. "ನೀವು ಮರಳಿ ಹೋಗದಿದ್ದರೆ, ನಿಮಗೆ ಸಮುದ್ರದೊಳಗೆ ನೂಕುವರು. ನೀವು ಮರಳಿ ಹೋಗಲೊಪ್ಪಿದರೆ ನಿಮಗೆ ಹಾದಿಯ ಖರ್ಚು ಸಿಗಬಹುದು." ಹೀಗೆ ನಮಗೂ ಬೆದರಿಕೆಯ ಸೂಚನೆಗಳು ಬರುತ್ತಿದ್ದವು. ನಾನು ಪ್ರಯಾಣಿಕರ ಕಡೆಗೆ ಹೋಗಿ ಆಗಿಂದಾಗ ಅವರಿಗೆ ಧೈರ್ಯಕೊಡುತ್ತಿದ್ದೆ. "ನಾದರೀ" ಹಡಗದ ಪ್ರಯಾಣಿಕರಿಗೂ ಸಮಾಧಾನದ ಸಂದೇಶಗಳನ್ನು ಕಳುಹುತ್ತಿದ್ದೆ. ಎಲ್ಲರೂ ಶಾಂತತೆಯಿಂದಲೂ, ಧೈರ್ಯದಿಂದಲೂ ಉಳಿದುಕೊಂಡರು.

ಪ್ರಯಾಣಿಕರ ಮನೋರಂಜನಕ್ಕಾಗಿ ನಾವು ಅನೇಕ ಬಗೆಯ ಆಟಗಳನ್ನು ಏರ್ಪಡಿಸಿದೆವು. ನಾತಾಲದ ಕ್ರಿಸ್ಮಸ್ ಹಬ್ಬದ ದಿನ ಕಪ್ತಾನರು ಮೊದಲನೇ ವರ್ಗದಲ್ಲಿಯ ಪ್ರಯಾಣಿಕರಿಗೆ ಭೋಜನಕ್ಕೆ ನಿಮಂತ್ರಿಸಿದರು. ನಾನೂ ನನ್ನ ಹೆಂಡತಿ ಮಕ್ಕಳೂ ಪ್ರಮುಖರಾದ ಅತಿಥಿಗಳು. ಭೋಜನವಾದ ಬಳಿಕ ಪಾಶ್ಚಾತ್ಯ ಸಂಸ್ಕೃತಿಯ ಮೇಲೆ ನಾನು ಭಾಷಣ ಮಾಡಿದೆನು. ಗಂಭೀರವಾದ ಭಾಷಣ ಮಾಡುವ ಸಮಯವು ಇದಾಗಿದ್ದಿಲ್ಲ. ಆದರೆ ನನಗೆ ಗಂಭೀರವಾದ ಭಾಷಣವನ್ನು ಬಿಟ್ಟು ಬೇರೆ ಮಾಡಲು ಬರುತ್ತಿದ್ದಿಲ್ಲ. ಮನೋರಂಜಕ ಸಮಯಗಳಲ್ಲಿ ನಾನು ಭಾಗವಹಿಸಿದ್ದೆನು, ನನ್ನ ಲಕ್ಷ್ಯವೆಲ್ಲ ದರ್ಬಾನದೊಳಗಿನ ಘಟನೆಗಳಲ್ಲಿ ನಿರತವಾಗಿತ್ತು. ನಾನೇ ಈ ದ್ವಂದ್ವದ ಮುಖ್ಯ ಲಕ್ಷ್ಯವಾಗಿದ್ದೆ. ನನ್ನ ಮೇಲೆ ೨ ಆರೋಪಗಳನ್ನು ಹೊರಿಸಿದ್ದರು. ಅವು ಯಾವವೆಂದರೆ —

(೧) ಹಿಂದುಸ್ಥಾನದಲ್ಲಿರುವಾಗ ನಾತಾಲದೊಳಗಿನ ಯುರೋಪಿಯನ್ನರಿಗೆ ನಾನು ಅನ್ಯಾಯವಾಗಿ ನಿಂದಿಸಿದ್ದೆನು.

(೨) ನಾತಾಲದಲ್ಲಿ ಭಾರತೀಯರ ಸಂಖ್ಯೆ ಹೆಚ್ಚಿಸಿ ಹೇಳಿಸುವ ದುರಾಲೋಚನೆಯಿಂದ ಬೇಕೆಂದು ನಾನು ೨ ಹಡಗ ತುಂಬ ಪ್ರಯಾಣಿಕರನ್ನು ತರಿಸಿರುವೆನು.

ನನಗೆ ನನ್ನ ಜವಾಬ್ದಾರಿಯು ತಿಳಿದಿತ್ತು. ದಾದಾ ಅಬ್ದುಲ್ಲಾ ಕಂಪನಿಗೆ ನನ್ನ ನಿಮಿತ್ತ ದೊಡ್ಡ ಸಂಕಟ ಒದಗಿರುವದಾಗಿ ನಾನು ಅರಿತಿದ್ದೆ. ಪ್ರಯಾಣಿಕರ ಮೇಲೂ ಆಪತ್ತು ಬಂದೊದಗಿತ್ತು. ಹೆಂಡತಿ-ಮಕ್ಕಳನ್ನು ಜೊತೆಗೆ ತಂದು ಅವರನ್ನೂ ನಾನು ಕಷ್ಟದಲ್ಲಿ ಒಳಪಡಿಸಿದೆನು.

ನಿಜವಾಗಿ ನನ್ನದೇನೂ ಅಪರಾಧವಿದ್ದಿಲ್ಲ. ನಾತಾಲಕ್ಕೆ ಹೋಗಲು ನಾನು ಯಾರಿಗೂ ಪ್ರೇರಿಸಿದ್ದಿಲ್ಲ. ಪ್ರಯಾಣಿಕರು ಹೊರಟದ್ದು ನನಗೆ ಗೊತ್ತು ಸಹ ಇದ್ದಿಲ್ಲ. ಹಡಗದ ಮೇಲೆ ನೂರಾರು ಪ್ರಯಾಣಿಕರಿದ್ದರು. ಒಬ್ಬಿಬ್ಬರ ಹೊರತು ಇನ್ನುಳಿದವರ ಹೆಸರು ಸಹ ನನಗೆ ಗೊತ್ತಿದ್ದಿಲ್ಲ. ನಾತಾಲದಲ್ಲಿ ಯುರೋಪಿಯನರ ವಿಷಯ ಆಡಿದ ಮಾತುಗಳನ್ನೇ ಹಿಂದುಸ್ಥಾನದಲ್ಲಿ ನಾನು ಮಾತಾಡಿದ್ದೆ. ನಾನು ಆಡಿದ ಮಾತುಗಳ ಕುರಿತು ನನಗೆ ಬೇಕಷ್ಟು ಆಧಾರವಿತ್ತು.

ಆದರಿಂದ ಪಾಶ್ಚಾತ್ಯ ಸಂಸ್ಕೃತಿಯ ಪ್ರತಿನಿಧಿಗಳಾದ, ಭೋಜನ ಸಮಯಕ್ಕೆ ಕೂಡಿದ ಗೌರವರ್ಣೀಯರ ಸಂಸ್ಕೃತಿಯನ್ನು ನಾನು ಖಂಡಿಸಿದೆನು. ಈ ಸಂಸ್ಕೃತಿಯನ್ನೇ ನಾನು ಭಾಷಣಕ್ಕೆ ವಿಷಯವಾಗಿ ತೆಗೆದುಕೊಂಡಿದ್ದೆ. ಆ ಚಿಕ್ಕ ಸಭೆಯಲ್ಲಿ ಈ ಸಂಸ್ಕೃತಿಯ ಕುರಿತು ವಿಚಾರಗಳನ್ನು ನಾನು ಪ್ರತಿಪಾದಿಸಿದೆನು. ಕಪ್ತಾನರೂ, ಇತರ ಗೆಳೆಯರೂ ನನ್ನ ಭಾಷಣವನ್ನು ಲಕ್ಷ್ಯಗೊಟ್ಟು ತನ್ಮಯರಾಗಿ ಕೇಳಿಕೊಂಡರು. ನನ್ನ ಭಾಷಣದಿಂದ ಅವರ ಜೀವನಕ್ರಮವೇನು ಬದಲಾಗಲಿಲ್ಲ. ಆದರೂ ಪಾಶ್ಚಾತ್ಯ ಸಂಸ್ಕೃತಿಯ ಕುರಿತು ಕಪ್ತಾನರು ಹಡಗದ ಮೇಲಿನ ಅಧಿಕಾರಿಗಳಿಗೂ, ನನಗೂ ಬಹು ಕಾಲದ ವರೆಗೆ ಮಾತುಕಥೆಯಾಗುತ್ತಿತ್ತು. ಪೌರಾತ್ಯ ಸಂಸ್ಕೃತಿಯು ಪೌರ್ವಾತ್ಯದಂತಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಮೂಲಾಧಾರವು ಬಲಾತ್ಕಾರವು. ಎಲ್ಲರೂ ನನ್ನ ಶ್ರದ್ಧೆಯನ್ನು ಪರೀಕ್ಷಿಸಲುದ್ಯುಕ್ತರಾದರು. ಒಬ್ಬರು (ಬಹಳ ಮಟ್ಟಿಗೆ ಕಪ್ತಾನರಾಗಿರಬೇಕು) ನುಡಿದದ್ದೇನಂದರೆ:—

"ಯುರೋಪಿಯನರು ಬೆದರಿಕೆ ಹಾಕಿದಂತೆ ನಡೆಸಿದರೆ, ನಿಮ್ಮ ಅಹಿಂಸಾ ತತ್ವವನ್ನು ನೀವು ಹ್ಯಾಗೆ ಕೈಕೊಳ್ಳುವಿರಿ?"

ಅದಕ್ಕೆ ನಾನು ನುಡಿದದ್ದೇನಂದರೆ "ಪರಮಾತ್ಮನು ನನಗೆ ಧೈರ್ಯಗೊಡುವನ; ಅವರಿಗೆ ಕ್ಷಮಿಸುವ ಹಾಗೂ ಆರೋಪವನ್ನು ಎಳೆಯದಿರಲಿಕ್ಕೆ ನನಗೆ ಆತನೇ ಬುದ್ಧಿ ಕೊಡುವನು. ಅವರ ಮೇಲೆ ನನಗೆ ಸಿಟ್ಟಿಲ್ಲ. ಅವರ ಅಜ್ಞಾನವನ್ನೂ, ಕ್ಷುದ್ರಬುದ್ಧಿಯನ್ನೂ ನೋಡಿ ನನಗೆ ವ್ಯಸನವಾಗುತ್ತದೆ. ಇಂದಿಗೆ ತಾವು ಕೈಕೊಂಡ ಆಚರಣೆಯು ಯೋಗ್ಯವಾದದ್ದು, ನ್ಯಾಯವಾದದ್ದು ಎಂದು ಅವರು ಅಂತಃಕರಣಪೂರ್ವಕವಾಗಿ ನಂಬಿರುವರು. ಇದರಿಂದ ಅವರ ಮೇಲೆ ಸಿಟ್ಟುಮಾಡಲು ನನಗೆ ಕಾರಣವಿಲ್ಲ."

ಪ್ರಶ್ನೆ ಕೇಳಿದವರು ನಸುನಕ್ಕರು. ನನ್ನ ಹೇಳಿಕೆಯ … ನಂಬಿದಂತೆ ತೋರಲಿಲ್ಲ.

ಹೀಗೆ ಹಾದು ಹಾದು ನಾವು ಬೇಸತ್ತೆವು. ಕೊರಂಟಿನ … ಇದು ಯಾವಾಗ ತೀರುವದೆಂದು ನನಗೆ ತಿಳಿಯಲಿಲ್ಲ. ಕೊರಂಟಿನಿನ ಅಧಿಕಾರಿಗೆ ಕೇಳಲು, ಅವರು ತಮ್ಮ ಕೈಯಲ್ಲೇನಿಲ್ಲೆಂದೂ ಸರಕಾರದಿಂದ ಹುಕುಮು ದೊರಕಿದ ಕೂಡಲೆ, ನಮಗೆ ಇಳಿಯಗೊಡುತ್ತೇವೆಂದು ಹೇಳಿದರು.

ಕಟ್ಟಕಡೆಗೆ ನನಗೂ, ಪ್ರಯಾಣಿಕರಿಗೂ ಸೂರಿ ಹೇಳೋಣವಾಯಿತು. ಜೀವದಿಂದುಳಿಯಬೇಕಾದರೆ ನಾವು ಅವರಿಗೆ ಶರಣು ಹೋಗಬೇಕಾಗಿ ನಮಗೆ ತಿಳಿಸಲಾಯಿತು. ನಾತಾಲ ಬಂದರದಲ್ಲಿ ಇಳಿಯುವ ಹಕ್ಕು ನಮ್ಮದು. ಆದರಂತೆ ನಾವು ಇಳಿದೇ ತೀರುವೆವು. ಬೇಕಾದ ಆಪತ್ತು ಬರಲಿ; ಎಂದು ನಾವು ಉತ್ತರ ಕೊಟ್ಟೆವು.

೨೩ ದಿನಗಳ ಮೇಲೆ ಹಡಗಗಳಿಗೆ ಬಂದರದಲ್ಲಿ ಪ್ರವೇಶ ಸಿಕ್ಕಿತು. ಪ್ರಯಾಣಿಕರಿಗೆ ಇಳಿಯಗೊಡಲು ಹುಕುಮುಗಳು ಹೊರಟವು.

ಜಾಹೀರ ವಿನಂತಿ.

ಸ್ವಾರ್ಥಕ್ಕಾಗಿ ಮತ್ತು ದೀನದಯಾರ್ಣವ ರಾವ ಅನಂತ ರಘುನಾಥ ಶೇಣ್ವಿ ಚೆಂಡಿಯೆ ಇವರಿಗೆ— ತಾ ವು ತಾ. ೬-೧೨-೨೬ ನೇ 'ಕಾನಡಾವೃತ್ತ'ದ ಪಂಚಿಕೆಯಲ್ಲಿ ಪ್ರಕಟಿಸಿದ ಜಾಹೀರ ನೋಟೀಸನ್ನು ಓದಿದೆನು. ಇದರ ಮೇಲಿಂದ ತಾವು ಕಾಯಿದೇಶೀರ ರೀತಿಯಂತೆ ಸ್ವಾರ್ಥತ್ಯಾಗಿಗಳೇನೋ ನಿಜವು. ಆದರೆ ನಿಮ್ಮ ಅಂತಃಕರಣಪೂರ್ವಕ ಆ ನೋಟೀಸಿನಲ್ಲಿ ಬರೆದ ಮಜಕೂರು ವಿಚಾರಿಸುತ್ತದೆಯೇನು? ಹಿಂದೆ ಸಂಗತಿಯ ಬಗ್ಗೆ ಊರೊಳಗೆ ಬಹಳೇ ಜನರು ಮಾತಾಡುವವರ ಮೇಲಿಂದಾಗಲಿ, ನನಗೂ ಗೊತ್ತಿದ್ದ ಕೆಲವು ಸಂಗತಿಗಳ ಮೇಲಿಂದಾಗಲಿ ನನಗೆ ತಮ್ಮ ಸ್ವಾರ್ಥತ್ಯಾಗದ ಬಗ್ಗೆ ಕೆಲವು ಶಂಕೆಗಳು ಬಂದಿರುವದರಿಂದ ತಾವು ತಮ್ಮ ಕುಟುಂಬಸ್ಥ ಮನೆತನಕ್ಕೆ ಕುಂದುಬಾರದಂತೆ ಪ್ರಮಾಣಪೂರ್ವಕವಾಗಿ ನಾನು ತಮಗೆ ಕೇಳುವಂಥ ಕೆಲವು ಶಂಕಾದಾಯಕವಾದ ಪ್ರಶ್ನೆಗಳಿಗೆ ಉತ್ತರಕೊಟ್ಟು ನನ್ನ ಶಂಕೆಗಳನ್ನು ನಿವಾರಿಸುವಿರಾಗಿ ತುಂಬಾ ಆಶಿಸುತ್ತೇನೆ.

1. ರಾ॥ ರಾಮಚಂದ್ರ ಶೇಣ್ವಿಯವರು ಸಿಕ್ಕ ಸಿಕ್ಕ ಹಣ್ಣಿ ಸಾಲದ ಹತ್ತಿದ ಕಾರಣ ಅವರ ಹೆಂಡತಿ ಕರ್ಜದಾರರು ತಮ್ಮ ಕಡೆಗೆ ಬಂದು ತಾವು ಶ್ರೀ ರಾಮಚಂದ್ರ ಶೇಣ್ವಿಯ ಕುಟುಂಬದವರಾಗಿದ್ದರೂ ಕೊಳಗೆ ಸಭ್ಯಗೃಹಸ್ಥರಲ್ಲೊಬ್ಬರಿದ್ದ ಕಾಲ ಆ ಆಸ್ತಿಯನ್ನು ತಾವು ಕಾಯಿದ ವರೆ ತಮ್ಮ ಹೆಸರಲ್ಲಿ ಕ್ರಯಮಾಡಿಟ್ಟ ಸಂಗತಿಯು ನಿಜವೋ?

2. ಸತ್ಯಭಾಮಾಬಾಯಿಯಿಂದ ತಮಗೆ ಆದ ಕ್ರಯಪತ್ರದ ದಸ್ತೈವಜುಗಳಲ್ಲಿ ತೋರಿಸಿದ ರಕ್ಕಂ ರೂಪಾಯಿ ರಲ್ಲಿ ಆಕೆಯ ಸಾಲ ಗತಿಂದ ವಜಾ ಕಳೆದ ಉಳಿದ ರಕ್ಕಂ ರೂಪಾಯಿ ಅವಳಿಗೆ ಸಬ್ ರಜಿಸ್ಟ್ರಾರರ ಮುಂದೆ ಕೊಟ್ಟದ್ದು ಅವಳಿಗೆ ನಿಜವಾಗಿ ಸಿಕ್ಕಿರುತ್ತವೆಯೋ? ಇಲ್ಲವೆ ಆ ರಕ್ಕಂ ಸಬ್‌ರಿಜಿಸ್ಟ್ರಾರ್‌ ಆಫೀಸಿನ ಹೊರಗೆ ಬಂದ ಕೆಲವು ಹೊತ್ತಿನಲ್ಲಿ ಪುನಃ ತಮ್ಮ ಕೈ ಸೇರಿರುತ್ತದೆಯೋ?

3 (೦) ಹೋದ ವರ್ಷ ಸದ್ರಿ ಆಸಿಯ ಸಂಬಂಧ ಜವಾಬ್ದಾರಿ ನೋಡುವರೆ ಸತ್ಯಭಾಮಾ ಬಾಯಿಯ ತರ್ಫೆಯಿಂದ ರಾ॥ ವಿಶ್ವನಾಥ ಅನಂತ ಹೆಗಡೆ ಅವ್ವರ್ಸ ಮತ್ತು ಅನಂತ ರಾಮಕೃಷ್ಣ ಪ್ರಭು ಅಂಕೋಲಾ ಇವರು ತಮ್ಮಲ್ಲಿ ಬಂದು ತಮ್ಮ ಜವಾಬ್ದಾರಿಯನ್ನು ನೋಡಿ ತಮಗೆ ಕೊಡತಕ್ಕ ಸಿಕ್ಕ ರಕ್ಕಂ ರೂಪಾಯಿ ೧೪೦ ಎಂತಾ ತರಾಯಿಸಿದ್ದು ನಿಜವೋ?

(ಬ) ನಿಜವಿದ್ದರೆ, ಆ ವರ್ಷ ತಮಗೆ ರೂಪಾಯಿ ೨೦೦ ಕೊಡಬೇಕೆಂತ ಹ್ಯಾಗೆ ಹೇಳಿದಿರಿ? ಒಂದು ವರ್ಷಕ್ಕೆ ೧೪೦ ರೂಪಾಯಿಗಳಿಗೆ ೧೭೦ ರೂಪಾಯಿ ಬಡ್ಡಿಯಾಗುತ್ತದೆಯೋ? ಆಹಾ ಇದೆಂಥ ಅದ್ಭುತ ಬಡ್ಡೀ ದರವು!

4. (ಅ) ತಾವು ಕ್ರಯ ಪಡೆದಾಗಿನಿಂದ ಈ ವರೆಗಿನ ಅಂದರೆ ೧೧ ವರ್ಷಗಳ ಆ ಆಸ್ತಿಯ ಪೂರ್ಣ ಜವಾಬ್ದಾರಿಯನ್ನು ಸತ್ಯಭಾಮಾಬಾಯಿಯು ಗಂಡ ರಾಮಚಂದ್ರ ಶೇಣ್ವಿಯು ಬೇಡಿದಾಗ, ಸತ್ಯಭಾಮಾ ಬಾಯಿಗೆ ತಾನು ತಿರುಗಿ ಕ್ರಯಮಾಡಿ ಕೊಟ್ಟನಂತರ ಅವರಿಗೆ ತೋರಿಸುತ್ತೇನೆಂದು ಕೆಲವು ಜನರ ಸಮಕ್ಷ ಹೇಳಿದ್ದು ನಿಜವೋ?

(ಬ) ನಿಜವಿದ್ದರೆ ತಾವು ಸತ್ಯಭಾಮಾಬಾಯಿಗೆ ತಿರುಗಿ ಕ್ರಯಕೊಟ್ಟ ತರುವಾಯ ರಾಮಚಂದ್ರ ಶೇಣ್ವಿಯು ತಮ್ಮ ಮಾತಿನ ಪ್ರಕಾರ ಜವಾಬ್ದಾರಿ ಬೇಡಿದಲ್ಲಿ ಬಳ್ಳೀ ಕ್ರೋಧಾವೇಶದಿಂದ ತಮ್ಮ ಅಂಗಡಿಯ ಮುಂದೆ ನಾಲ್ಕು ಜನರ ಮುಂದೆ ಜಾಹೀರ ರೀತಿಯಿಂದ ಅದನ್ನು ಸುಟ್ಟು ಬಿಡುವ ಕಾರಣವೇನು? ಆ ಜವಾಬ್ದಾರಿ ನಿಜವಿದ್ದರೆ ಮೊದಲಾಗಲಿ, ಕಡೆಗಾಗಲಿ, ಅವರಿಗಾಗಲಿ, ಅವರ ಹಿತಚಿಂತಕರಿಗಾಗಲಿ ತೋರಿಸಲಿಕ್ಕೇನು ಅಡ್ಡಿ ಇತ್ತು?

5 (ಅ) ತಾವು ಆ ಆಸ್ತಿಯನ್ನು ತಿರುಗಿ ಕ್ರಯಕೊಡಬೇಕಾದರೆ ಕ್ರಯ ದಸ್ತೈವಜಿನಲ್ಲಿ ಬರೆದಂತೆ ಕೊಟ್ಟ ರಕ್ಕಂ ರೂಪಾಯಿ ಕ್ಕಿಂತ ಸದ್ರಿ ದಸ್ತೈವಜು ಆಗುವ ಸ್ವಲ್ಪ ಮೊದಲು ರಾ॥ ವಿಷ್ಣು ಮಾಧವ ಶೇಣ್ವಿ ಕಾರವಾರ ಇವರ ದುಕಾನದಲ್ಲಿ ನಾಲ್ಕು ಜನರ ಸಮಕ್ಷ ತಮ್ಮ ದುರಾಗ್ರಹದಂತೆ ನಿರುಪಾಯವಾಗಿ ಸದ್ರಿ ಸತ್ಯಭಾಮಾಬಾಯಿಯು ತರ್ಫೆನಿಂದ ಯಾರಾದರೂ ಹೆಚ್ಚಿಗೆ ರೂಪಾಯಿ ೨೦೦ ಕೊಟ್ಟದ್ದು ನಿಜವೋ?

(ಬ) ನಿಜವಿದ್ದರೆ ಹೀಗೆ ಲೋಕದ ೨೦೦ ರೂಪಾಯಿ ಕೊಳ್ಳುವ ಕಾರಣವೇನು? ತಾನು ತಕೆಯ್ಯಂತ ಕಿಮ್ಮತ್ತಿಗೇ ಸದ್ರಿ ಆಸ್ತಿಯನ್ನು ಕ್ರಯಕ್ಕೆ ಕೊಟ್ಟಿರುತ್ತೇನೆಂದು ಜಾಹೀರಮಾಡಿ ತಮ್ಮ ಸ್ವಾರ್ಥತ್ಯಾಗವನ್ನು ಜನರಿಗೆ ತೋರಿಸಲಿಕ್ಕೊ ಹ್ಯಾಗೆ?

6. ತಾವು ತಕೆಯ್ಯಂತ ರಕ್ಕಂ ರೂ. ೨೦೦ರಲ್ಲಿ ಆಸ್ತಿಯ ವೈವಾಟ ನೋಡಿದ ಸಂಬಂಧ ಎಂತ ರೂ. ೫೦೦ ತಕೆಯ್ಯಂತಿರುತ್ತೇನೆಂತ ನಾಲ್ಕು ಜನರ ಸಮಕ್ಷ ಹೇಳಿದ್ದು ನಿಜವೋ? ನಿಜವಿದ್ದರೆ ಕ್ರಯ ಆದ ಆಸ್ತಿಗೆ ವೈವಾಟ ನೋಡಿದ ಸಂಬಂಧ ಎಂತ ಪಗಾರು ಕೊಳ್ಳುವ ಕಾರಣವೇನು?

7. ಒಂದು ತಿಂಗಳೊಳಗೆ ಅಂದರೆ ಹೋದ ನವಂಬರ ತಿಂಗಳ ಆಖೈರದ ವರೆಗೆ ತಾನು ಹೇಳಿದಷ್ಟು ರಕ್ಕಂ ಖಂಡಗುತ್ತಾಗಿ ರೀತಿಯಿಂದ ರೂಪಾಯಿ ೫೦೦ ಕೊಟ್ಟರೆ ಮಾತ್ರ, ಆ ಆಸ್ತಿಯನ್ನು ತಿರುಗಿ ಕೊಡುತ್ತೇನೆ; ಇಲ್ಲವಾದರೆ ಇನ್ನುಮುಂದೆ ಆ ಆಸ್ತಿಯನ್ನು ತಿರುಗಿ ಪಡಕೊಳ್ಳುವರ ತನ್ನ ಹತ್ತರ ಕೇಳುವದು ಅಗತ್ಯವಿಲ್ಲೆಂತ ರಾಮಚಂದ್ರ ಶೇಣ್ವಿಯವರಿಗೆ ನಾಲ್ಕು ಜನರ ಸಮಕ್ಷ ಹೇಳಿದ್ದು ನಿಜವೋ?

8. ಅವರು ಪರದೇಶಿಗಳಾಗಿರುತ್ತಾರೆ; ಅದರಿಂದ ಒಂದು ತಿಂಗಳೊಳಗೆ ಅಷ್ಟು ರಕ್ಕಂ ಕೂಡಿಸಲಿಕ್ಕಾಗಲಿಕ್ಕಿಲ್ಲೆಂದು ತಮ್ಮ ದೀನದಯಾರ್ಣವ ಅಂತಃಕರಣಕ್ಕೆ ತೋರಲಿಲ್ಲವೇನು?

9. ತಾವಾಗಲಿ, ತಮ್ಮ ತಂದೆಯವರಾಗಲಿ ಬೇರೆ ಯಾರ ಕಡೆಯಿಂದಾದರೂ ಹಿಂದೆ ಕ್ರಯಕ್ಕೆ ಪಡೆದ ಆಸ್ತಿಯನ್ನು, ತಾವು ಯಾರಿಂದ ಕ್ರಯಕ್ಕೆ ಪಡೆದಿರುತ್ತೀರೋ, ಅವರು ತಮ್ಮ ಉದರನಿರ್ವಾಹದ ಸಂಬಂಧ ಅಗದೀ ಕಠಿಣ ಸ್ಥಿತಿಯಲ್ಲಿದ್ದು ಅವರ ಆಸ್ತಿಯನ್ನು ತಮಗೆ ತಿರುಗಿ ಕ್ರಯಮಾಡಿಕೊಡಿರೆಂದು ತಮ್ಮ ಹತ್ತರ ಬೇಡಿಕೊಂಡರೆ, ತಾವು ಮೊದಲು ಕ್ರಯಕ್ಕೆ ಪಡೆದ ಕಿಮ್ಮತಿಗೇ ಆಸ್ತಿಯನ್ನು ಅವರಿಗೆ ತಿರುಗಿ ಕ್ರಯಕೊಡುವರೆ ಕಬೂಲ ಇದ್ದೀರೋ? ಇಲ್ಲದಿದ್ದರೆ ಅದರ ೧॥ ಪಟ್ಟು ಕಿಮ್ಮತ್ತಿಗಾದರೂ ಕೊಡಲಿಕ್ಕೆ ಕಬೂಲ ಇದ್ದೀರೋ ಹ್ಯಾಗೆ?

ಪ್ರಿಯರೇ, ಕಾಯದೇಶೀರ ರೀತಿಯಂತೆ ಸ್ವಾರ್ಥತ್ಯಾಗಿಗಳು ಜಗತ್ತಿನಲ್ಲಿ ಬಹಳೇ ಜನರು ಸಿಗಬಹುದು. ಅದ್ದರಿಂದ ಮೇಲಿನ ಸಂಗತಿಯು ನಿಜವಿದ್ದರೆ, ಜವಾಬ್ದಾರಿಯಂತೆ ನಿಜವಾಗಿ ತಮಗೆ ಹೆಚ್ಚಿಗೆ ಮುಟ್ಟಿದ ರಕಮನ್ನು ... ಸಾಗಿ ಸ್ವಾರ್ಥತ್ಯಾಗಿ ಎಂತ ... ಕೊಳ್ಳುವದು ಶ್ರೇಯಸ್ಕರವೆಂದು ನನಗೆ ತೋರುತ್ತದೆ. ತಮ್ಮ,

ರಘೂಪತಿ ಪುಂಡಲೀಕ ಶೇಣ್ವಿ,
ಚೆಂಡಿಯೆ.

ಟಿ. ಎಸ್ ಮೋಟರ ಸರ್ವಿಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ- ಕಾರವಾರ- (೨) ಹುಬ್ಬಳ್ಳಿ- ಮುಂಡಗೋಡ ಶಿರ್ಶಿ ಕುಮಟಾ- ಹೊನ್ನಾವರ ಭಟ್ಕಳ (೩) ಕುಮಟಾ ಶಿರ್ಶಿ- ಸಿದ್ದಾಪುರ- ಗೆರಸಪ್ಪಾ- ಜೋಗ (Gersappa Falls) ಸಾಗರ ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿಯೂ ವ್ಯವಸ್ಥೆ ಏರ್ಪಾಡು ಮಾಡಿದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa
PROPRIETOR.

ಜಾಹೀರಾತು.

ಇದರ ಮೂಲಕ ಯಾವತ್ತೂ ಜನರಿಗೆ ಜಾಹೀರ ಮಾಡುವದೇನಂದರೆ:—

ಮುಂಬಯಿಯ ಏಶಿಯಾಟಿಕ್ ಪೆಟ್ರೋಲಿಯಮ್ ಕಂಪನಿ (ಇಂಡಿಯಾ)-ಲಿಮಿಟೆಡ್ ಇವರು ಹೊನ್ನಾವರದ ತಮ್ಮ ಕಂಪನಿಯ ಏಜನ್ಸಿಯ ಅಧಿಕಾರವನ್ನು ಹೊನ್ನಾವರದ **ಮೆಸರ್ಸ ವೆಂಕಟರಮಣ ವಿಠ್ಠಲ ಶ್ಯಾನಭಾಗ ಮತ್ತು ಕಂಪನಿ** ಇವರಿಗೆ ಕಳೆದ ತಾರೀಖು ೧-೧೧-೧೯೨೬ ನೇಯಿಂದ ವಹಿಸಿರುತ್ತಾರೆ. ಭಟ್ಕಳ, ಶಿರಾಲಿ, ಮುರ್ಡೇಶ್ವರ, ಗೆರಸಪ್ಪೆ ಏಜನ್ಸಿಗಳು ಹೊನ್ನಾವರ ಏಜನ್ಸಿಗೆ ಒಳಪಟ್ಟಿದ್ದು, ಅವನ್ನೂ ಏಶಿಯಾಟಿಕ್ ಪೆಟ್ರೋಲಿಯಮ್ ಕಂಪನಿಯವರು ಮೇಲ್ಕಂಡ ಮೆ॥ ವಿ. ವಿ. ಶ್ಯಾನಭಾಗ ಮತ್ತು ಕಂಪನಿ ಇವರಿಗೇನೇ ವಹಿಸಿರುತ್ತಾರೆ.

ಕುಮಟೆಯ ಮಿ॥ ಮಂಗೇಶರಾವ ಸೊಯರೋಬಾ ಮಿರ್ಜಾನಕರ ಇವರಿಗೆ ತಾ. ೧-೧೧-೨೬ ನೇಯಿಂದ ಹೊನ್ನಾವರ ಏಜನ್ಸಿಯಲ್ಲಾಗಲಿ, ಭಟ್ಕಳ, ಶಿರಾಲಿ, ಮುರ್ಡೇಶ್ವರ ಹಾಗು ಗೆರಸಪ್ಪೆ ಏಜನ್ಸಿಗಳಲ್ಲಾಗಲಿ ಏನೊಂದೂ ಹಕ್ಕು ಸಂಬಂಧವಿರುವದಿಲ್ಲ.

ಈ ಕೆಳಗೆ ಕಾಣಿಸಿದ ಛಾಪುಗಳ ಕೆರೋಸಿನ ಎಣ್ಣೆಯು ಯಾವಾಗಲೂ ನಮ್ಮ ಹೊನ್ನಾವರ ಹಾಗು ಅದಕ್ಕೊಳಪಟ್ಟಿದ ಇತರೇ ಏಜನ್ಸಿಗಳಲ್ಲಿ ದೊರೆಯುವದು:—

ಲೆಸ್ ಕೇಸ, (೧೫೦°), ನಾಂಗರ ಛಾಪ, ಸೂರ್ಯ ಛಾಪ, ಹಂಸ ಛಾಪ

ದಿ ಏಶಿಯಾಟಿಕ್ ಪೆಟ್ರೋಲಿಯಮ್ ಕಂಪನಿ, ಮುಂಬಯಿ.

ಸಬ್ ಅಸಿಸ್ಟಂಟ ಸರ್ಜನ್

ವ್ಹಾ. ಎಮ್. ವೈದ್ಯ

ಡೆಂಟಿಸ್ಟ ಮತ್ತು ಅಕ್ಯೂಲಿಸ್ಟ,

ಗವಳೀಗಲ್ಲಿ, ಧಾರವಾಡ.

ಡಾಕ್ಟರ ಕೂಪರ, ಎಲ್. ಡಿ. ಎಸ್. ಮುಂಬಯಿ. ಇವರ ಮೊದಲನೇ ಅಸಿಸ್ಟಂಟ.

ಹುಬ್ಬಳ್ಳಿ ಕ್ರಿಂಹ- ಬುಧವಾರದಿವಸ ಪ್ರತಿ ದಿವಸ ಮಧ್ಯಾಹ್ನ ೨ರಿಂದ ಸಂಜೆ ೬ ರ ವರೆಗೆ.

ಎಲ್ಲಾ ನಮೂನೆಯ ಹಲ್ಲು ಗಳನ್ನು ತೆಗೆಯುತ್ತೇವೆ ಕೃತ್ರಿಮ ಹಲ್ಲು ಗಳನ್ನು ಯೋಗ್ಯವಾಗಿ ಕೂಡಿಸುತ್ತೇವೆ. ಬೆಳ್ಳಿ ಅಥವಾ ಭಂಗಾರದ ... ಹಲ್ಲು ಗಳನ್ನು ಕೂಡಿಸುತ್ತೇವೆ ... ದುರಸ್ತ ಮಾಡುತ್ತೇವೆ ... ನೈಸರ್ಗಿಕ ಹಲ್ಲುಗಳನ್ನು ... ನಮ್ಮ ದಂತಮಂಜನವನ್ನು ಉಪಯೋಗಿಸಿರಿ.

ಬೆಲೆ ಡಬ್ಬಿಗೆ ೪ ಆಣೆ.

ಕಣ್ಣು ಚಾಳೀಸ.

ಚಾಳೀಸಿನ ... ಕಲ್ಲುಗಳು. ಫ್ರೇಮ್ಸ ... ಇವುಗಳ ಜಾತಿಗಳು ಮತ್ತು ಚಾಳೀಸ ... ಗಳು ನಮ್ಮಲ್ಲಿ ಸಿಗುತ್ತವೆ. ... ದುರುಸ್ತ ಮಾಡುತ್ತೇವೆ. ಹಾಗೂ ಕೃತ್ರಿಮ ... ಗಳನ್ನು ಸಹ ಕೂಡಿಸುತ್ತೇವೆ.

ಪ್ರಯಾಣಿಕರಿಗೆ

ವಿಶೇಷ ಅನುಕೂಲ.

ನೇಮಿಸಿದ ಹೊತ್ತಿಗೆ ಮೋಟರಿನ ವ್ಯವಸ್ಥೆ

ಹಾಗೂ

ಅಡಿಗೆ, ಊಟ, ವಾಸದ ಒಳ್ಳೆ ಯೋಗ್ಯ ವ್ಯವಸ್ಥೆ ಈ ಕೆಳಗಿನಂತೆ ಮೋಟಾರ ವ್ಯವಸ್ಥೆಯಿದೆ- ಗೋಕರ್ಣದಿಂದ ಕುಮಟಾ, ಹೊನ್ನಾವರ, ಭಟ್ಕಳ, ಗೋಕರ್ಣದಿಂದ ಕುಮಟಾ ... ಗೋಕರ್ಣದಿಂದ ಅಂಕೋಲಾ, ಕಾರವಾರ.

ಟಿಪ್ಪು:— ಟಿಕೇಟು ಮುಂದಾಗಿ ಬೇಕಾಗಿದ್ದವರು ಈ ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡತಕ್ಕದ್ದು.

ಅನಂತ ವೆಂಕಟರಾವ ಶಿಶಿಲತ್ತಾಯ,

ಮೋಟರ ಏಜಂಟ,

ಕುಮಟಾ (ಉತ್ತರ ಕನ್ನಡ)

S. U. Narayanacharya & CO.
Chaukamba, BENARES CITY.

ನಮ್ಮಲ್ಲಿ ಎಲ್ಲಾತರದ ರೇಷ್ಮೆ ಪೀತಾಂಬರ, ಜರಿ ಕಣ ಜರಿ ಸೀರೆ, ಕಾಶ್ಮೀರ್ ಶಾಲು, ಹರಳು, ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ ಸ್ಫಟಿಕದ ಮೊದಲಾದವು ... ಸಿಗುತ್ತವೆ ಕ್ಯಾಟಲಾಗ ... ಕೊಡುವವರಿಗೆ ... ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಹ.ತ. ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

... **ಸುಲಭ ಕ್ರಯ!!**

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ

ಕರ್ನಾಟಕದಲ್ಲಿ ... ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು, ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಸುತ್ತು, ಕಣ್ಣಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಎಲ್ಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಬಟ್ಟಲನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ... ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ... ಹೀಗೆ ... ಕಳಿಸಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ. ೪ ಆಣೆ ಡಜನ್ ೧ಕ್ಕೆ ರೂ. ೩-೦-೦. ವ್ಹಿ. ಪಿ. ೦೮-೦ ಮಧ್ಯವರ್ತಿ ... ಕಮಿಶನ ... ವಿಳಾಸ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ

ಪತ್ತೆ—ಗುಂಟೂರಿನ ... ಕಂಪನಿ ಲಿಮಿಟೆಡ್ ಪೋ ಬಾ. ೫೧೦, ಸೌಕಾರಪೇಟ ಮದ್ರಾಸು

ಪುಣೆ ಪ್ರದರ್ಶನದಲ್ಲಿ ಬಹುಮಾನ ಪದಕಗಳನ್ನು ಪಡೆದ

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳು.



ಸಣ್ಣ ದೊಡ್ಡ ಒಕ್ಕಲಿಗರಿಗೆ ಉಪಯೋಗವಾಗುವಂತೆ ತಯಾರಿವೆ. ಮಾಹಿತಿ ಬಗ್ಗೆ ಪತ್ರ ಬರೆಯಿರಿ. ಈ ವರ್ಷ ಈ ನೇಗಿಲುಗಳ ಬೆಲೆಯಲ್ಲಿ ಕಡಿಮೆ ಮಾಡುತ್ತೇವೆ. ... ಗಾಣಗಳಲ್ಲಿ ಸುಧಾರಣೆ ... ಮಾಡುತ್ತೇವೆ ... ಆರ್ಡರ ಕೊಟ್ಟಲ್ಲಿ ವೇಳೆಗೆ ಸರಿಯಾಗಿ ಪೂರೈಸುವರು.

ಕಿರ್ಲೋಸ್ಕರ ಬಂಧು ಲಿಮಿಟೆಡ್;

ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ಮಾಡಿದ ... ತಲೆನೋವು, ... ಗಳ ಮೇಲೆ, ... ಉಪಯೋಗಿಸುತ್ತಿರುವರು ... ಎಲ್ಲ ವ್ಯಾಧಿಗಳ ... ಎಲ್ಲ ವ್ಯಾಧಿಗಳ ಮೇಲೆ ... ಪ್ರತ್ಯಕ್ಷ ಅನುಭವದಿಂದ ... ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ ಮುಂಬಯಿ.